ಸಂಪುಟ. 7

ವಿವಿಧ ವೃತ್ತ

೧೯೪೯ - ೫೦

ಪ್ರಾರಂಭ ದಿನಾಂಕ ೧೦-೧-೧೯೪೯

ಸಂಚಿಕೆಗಳು 1 ರಿಂದ 51

ಸಂಚಿಕೆ ೫೦ ಇಲ್ಲ

ಪುಟಗಳು ೧ರಿಂದ ೩೫೪

JAIHIND

12th Annual Numb

ನವಭಾರತ

೧೨ — ಸೋಮವಾರ ೧೦ ಜನವರಿ ೧೯೪೯ — ಸಂಚಿಕೆ ೧

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪ

ಉತ್ತಿಷ್ಠತ! ಜಾಗ್ರತ!
ಪ್ರಾಪ್ಯವರಾನ್ನಿಬೋಧತ!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

S Ltd.,

announce
that the
naiah has
er having
nufacture
or 12,000
Govern
nachinery
Japanese
Ancillary
y the end
will be
the Mills
Electricity
f Madras,
me

A. B L.,
Directors

From PONGAL 14—1—49 At PRABHAT

Rajkamal Kalamandir Presents

MATWALA SHAIR

RAM JOSHI

DIRECTED BY:- V. SHANTARAM

ing:-
NMOHAN
RISHNA &
HANSA
and
Others.

రాజకమల్ వారి
మత్వాలాషైర్
"రామ జోషి"
హంస & మన్‌మోహన్‌కృష్ణ నటించిన
డైరెక్టర్
శాంతారామ్

A Thrilling Picture
With
Heart Stirring
Devotional Songs

ರಾಜಕಮಲ ಕಲಾಮಂದಿರದವರ

ಉನ್ಮತ್ತಕವಿ ರಾಮ ಜೋಶಿ

ಸಿನೆಮಾರಂಗದ ಸುಪ್ರಸಿದ್ಧ ವಿ. ಶಾಂತಾರಾಮರವರಿಂದ ಸಂಚಾಲಿತವಾದುದು

ಮನೋಹರ ಘಟನೆ ಮತ್ತು ಸುಶ್ರಾವ್ಯ ಸಂಗೀತ

ಪೊಂಗಲ್ ಹಬ್ಬ 14-1-1949 ರಿಂದ ಪ್ರಭಾತದಲ್ಲಿ

ಸ ಬ್ಬನಾವು
ಸರ್ಕಾರದವರು
ಅವಶ್ಯ
ದ ವ್ಯವಸ್ಥೆ ಮಾ
ಸ್ತ್ರಿನ ನೆತ್ತ
ಗಳ ಸರಿ ಕಗೆ
ಸರ್ಕಾರದವರಿಂ
ಂತ್ರ ಸಾಮಗ್ರಿಗೆ
ಸಾಮಗ್ರಿಯು
ಶವಲ್ಲಿ ಒದಗಿವೆ.
ವಾಗಿ ಉತ್ಪನ್ನ
ಂಡಲದ ಪವರ್
ಶ್ಯಕ್ತಿಯನ್ನು

ಎ, ಬಿ. ಎಲ್.,
ರುಗಳ ಸಮಿತಿ.

ಟಿಡ

ವೆಂಕಟರಾವ (ಮದ್ರಾ
ಮಂತ್ರಿ) ಎಸ್. ಕೆ. ಪಾಟೀ
ಂಬಯಿ ಪ್ರಾ. ಕಾ. ಕ.)
(ಅಧ್ಯಕ್ಷ ಆಂಧ್ರ ಪ್ರಾ
ರಾಜ ನಾಡರ [ಅಧ್ಯಕ್ಷ
ಕಾಂ. ಕ.] ದೇವೇಶ್ವರ
ಆಸಾಂ ಪ್ರಾ. ಕಾಂ. ಕ.)
ರು (ಅಧ್ಯಕ್ಷ ಕರ್ನಾಟಕ

periment & be satisfied with

MODEL MURPH

Best available in the Market

RADIO-LECTRIC HOUSE, BELLARY.

INSURE WITH

The General Assurance Society, Ltd.

Established: 1907. **H. O. AJMER.**

RECOGNISED

AS STRONGHOLD OF

SERVICE, SAFETY & SECURITY.

THE FIGURES THAT SPEAK.

YEARS	1943	1945	1947
Business in force	5,41,00,000	10,75,58,400	13,08,01,400
Total Income over	33,00,000	53,42,000	70,26,900
Assets over	1,34,09,000	1,66,87,000	2,29,46,000

Patronise this popular, progressive and purely Swadeshi Life Office.

For Insurance and Agency Particulars please write to:-

Pt. BRAHMA DATTA, B. Sc., LL. B., F. S. S., (London) *General Manager.*

Or

K. M. Ramachar, *Branch Manager, Bellary.*

ಪ್ರಭಾತ ಚಿತ್ರಮಂದಿರದಲ್ಲಿ ರಾಮಜೋಶಿ

ಪೊಂಗಲ್ ಹಬ್ಬ ೧೪....೧--೪೯ ರಿಂದ ಪ್ರಭಾತ ಚಿತ್ರ ಮಂದಿರದಲ್ಲಿ ಮಹಾರಾಷ್ಟ್ರದ ಅತ್ಯಂತ ಜನಪ್ರಿಯ ಕವಿಯಾದ ರಾಮಜೋಶಿ ಇವರ ಚಿತ್ರಪಟದ ಪ್ರದರ್ಶನವಾಗಲಿದೆ. ೧೭ನೇ ಶತಮಾನದ ... ತನಿ ಪ್ರತಿಭಾ... ತ ಕುಟುಂಬದಲ್ಲಿ ಜನ್ಮಿಸಿ ಚಿಕ್ಕಂದಿನಿಂದಲೇ ಕಾವ್ಯರಚನೆಗೆ ರಾಮಜೋಶಿಯಾರಂಭಿಸಿದನು. ರಾಮಜೋಶಿ ರಚಿಸಿಗಾನಗಳು ಅತ್ಯಂತ ಜನಪ್ರಿಯವಿದ್ದ ಕಾರಣ ಸೋಲಾಪುರದ ಪ್ರದರ್ಶಕರಲ್ಲಿ ಈತನು ಹೆಸರುವಾಸಿ ಪಡೆದು ಸನಾತನಿ ಸಾರ್ವಜನಿಕ ರಂಗಕ್ಕಿಳಿದ ಕಾರಣ ಅಣ್ಣನು ಕೃದ್ಧನಾಗಿ ಇವನನ್ನು ಹೊರಗೆ ಹಾಕಿದನು. ಇದರಿಂದ ಇವನಿಗೆ ಮತ್ತಷ್ಟು ಸ್ವಾತಂತ್ರ್ಯವು ದೊರೆತು, ಧಾರಾಳವಾದ ರಚನೆಗೆ ಅವಕಾಶವಾಗಿ ಬಡವರು ಬಲ್ಲಿದರೆಂಬ ಭೇದವಿಲ್ಲದೆ ಜನತೆಯು ಇವನನ್ನು ಪ್ರೇಮಿಸಹತ್ತಿತು. ಆ ಕಾಲದ ಪೇಶ್ವೆಯ ದರ್ಬಾರಿನವರೆಗೂ ಇವನ ಕೀರ್ತಿಯು ಹಬ್ಬಿ "ಕವಿ ಮುಕುಟ" ನೆಂಬ ಬಿರುದು ಬಂದಿತು. ಇದರಿಂದ ಕವಿಯು ತಲೆತಿರುಗಿತು. ವಿಷಯಾಸಕ್ತನಾಗುವದರಲ್ಲಾಯಿತು. ಇದಾದನಂತರ ಅವನಿಗೆ ಮುಂದೇನು ಸಂಭವಿಸಿತೆಂಬುದನ್ನು ಚಿತ್ರದಲ್ಲಿ ನೋಡುವುದೊಳ್ಳೆಯದು.

—●—

Dt. Employment Office Bellary.

ಈ ಸಂಸ್ಥೆಯ ದ್ವಿತೀಯ ವಾರ್ಷಿಕೋತ್ಸವವು ೧೦—೧—೪೮ ಸೋಮವಾರ ಈ ಸಾಯಂಕಾಲ ಶ್ರೀ ಹೆಚ್. ಲಿಂಗಾರೆಡ್ಡಿಯವರಧ್ಯಕ್ಷತೆಯಲ್ಲಿ ನೆರವೇರಲಿದೆ ಸರ್ಕಾರೀ ಇಲಾಖೆಗಳು ತುಂಗಭದ್ರಯೋಜನೆ ಮತ್ತು ಇತರ ಖಾಸಗೀ ಶಾಖೆಗಳಲ್ಲಿ ನೌಕರರ ಖಾಲಿ ಇರುವ ಸ್ಥಾನಗಳನ್ನರಿತು ಕೆಲಸಗಳಿಲ್ಲದ ನಿರುದ್ಯೋಗಿಗಳಿಗೆ ಈ ಸಂಸ್ಥೆಯು ವ್ಯವಸ್ಥಿತವಾಗಿ ಕಾರ್ಡುಗಳನ್ನು ಕೊಟ್ಟು ಸಹಾಯ ಮಾಡುತ್ತಲಿದೆ. ಪ್ರತಿ ತಿಂಗಳೂ ನೌಕರಿಗಳಿಗಾಗಿ ಎಷ್ಟು ಜನ ಬಂದರು, ಎಷ್ಟು ಜನರಿಗೆ ಎಲ್ಲೆಲ್ಲಿ ಕೆಲಸ ದೊರಕಿಸಲಾಯ್ತೆಂಬ ಲೆಕ್ಕವೂ ಸ್ಪಷ್ಟವಾಗಿ ಪ್ರಕಟವಾಗುತ್ತಲಿದೆ. ಈ ಶಾಖೆಯಲ್ಲಿನ ಅಧಿಕಾರಿಗಳು ಉತ್ಸಾಹಿಗಳಾಗಿ ಶ್ರದ್ಧೆಯಿಂ ಕೆಲಸ ಮಾಡಿದರೆ ಇಂಡಿಯಾ ಸರ್ಕಾರದ ಈ ಲೇಬರ್ ಶಾಲೆಯಿಂದ ಜನತೆಗೆ ಬಹಳ ಸಹಾಯವಾಗುವದರಲ್ಲಿ ಸಂಶಯವಿಲ್ಲ.

—)0(—

ಬಟ್ಟೆಯ ಲೈಸನ್ಸು

ಮದ್ರಾಸ್ ಪ್ರಾಂತಕ್ಕೆ ಬರಬೇಕಾದುದಕ್ಕಿಂತಲೂ ಹೆಚ್ಚಿನ ಬಟ್ಟೆಯು ಬಂದಿರುವ ಕಾರಣ ಹಳೆಯ ಲೈಸನ್ಸುದಾರರಿಗೆಲ್ಲಾ ಅವರು ಚಿಲ್ಲರೆ ಮಾರಾಟಗಾರರಿರಲಿ ಸಟ್ಟಾದವರಿರಲಿ ಲೈಸನ್ಸು ಸಿಗುವ ಲಕ್ಷಣಗಳು ತೋರುತ್ತಲಿವೆ. ಬಟ್ಟೆಯು ಒಬ್ಬರಿಗೆ ಇಷ್ಟೇ ಕೊಡಬೇಕೆಂದು, ಮಾರಬೇಕೆಂದು ನಿಯಮವೂ ಇದ್ದಂತೆ ಕಾಣಲಿಲ್ಲ.

THE NAVABHARAT
ನವಭಾರತ
ಸಂಪಾದಕ-ಹ್ಯ. ಕೇಶವರಾವ್

ಸೋಮವಾರ ೧೦ ಜನವರಿ ೧೯೪೯.

ನವಭಾರತದ ೧೨ನೆಯ ವರ್ಷ

—O—

"ನವಭಾರತ" ವಾರ ಪತ್ರಿಕೆಗೆ ೧೧ ವರ್ಷಗಳು ತುಂಬಿ ೧೨ ನೆಯ ವರ್ಷ ಪ್ರಾರಂಭವಾದ ಈ ಶುಭಸಮಯದಲ್ಲಿ ಈ ಪತ್ರಿಕೆಯ ಪೋಷಣೆಗೆ ಕಾರಣರಾದ ಚಂದಾದಾರರಿಗೂ ಜಾಹೀರಾತುದಾರರಿಗೂ, ಇನ್ನು ಅನೇಕ ಹಿತೈಷಿಗಳಿಗೂ ನಮ್ಮ ಹಾರ್ದಿಕ ವಂದನೆಗಳನ್ನರ್ಪಿಸುತ್ತೇವೆ. ಕನ್ನಡರಂಗದಲ್ಲಿ ವೃತ್ತಪತ್ರಿಕೆಗಳ ಆಯುಸ್ಸು ನಿಶ್ಚಿತವಾದುದಲ್ಲವೆಂಬುದನ್ನು ಬಹುಜನರು ಮನಗಂಡಿರಲಿಕ್ಕೆ ಸಾಕು. ಅದರಲ್ಲೂ ಹಿಂದುಳಿದ ಬಳ್ಳಾರಿ ಜಿಲ್ಲೆಯಲ್ಲಿ ವೃತ್ತ ಪತ್ರಿಕಾಭಿರುಚಿಯು ಕಡಮೆಯಿರುವ ಕಾಲಕ್ಕೆ ಪ್ರಾರಂಭಿಸಿದಾಗ ಅನೇಕ ಬಾಲಗ್ರಹಗಳನ್ನು ಅನುಭವಿಸಬೇಕಾಯಿತು. ಜಾಗೃತಿ ಹೊಂದಿದ ಈಗಿನ ಸಮಯದಲ್ಲಿ ಜನಪ್ರಿಯ ವಾರ ಪತ್ರಿಕೆಗಳಿಗೂ, ದಿನ ಪತ್ರಿಕೆಗಳಿಗೂ ಸ್ವಾಗತ ದೊರೆಯುತ್ತಿರುವುದೊಂದು ಶುಭಸೂಚನೆ. ತಾನು ಮಾಡುತ್ತಿರುವ ಅತ್ಯಲ್ಪ ಸೇವೆಯನ್ನು ಸ್ವೀಕರಿಸಿ ಜನಜಾಗೃತಿಯ, ವೃಷ್ಟಿಯಿಂದ ಅಧಿಕವಾಗಿ ಸೇವಾಪರಾಯಣತೆಯ ವ್ರತವನ್ನವಲಂಬಿಸುವಂತೆ ಮಾಡುವುದು ತಮ್ಮ ಕೈಯಲ್ಲೇ ಇರುವುದೆಂದು ಸೂಚಿಸುತ್ತಾ, ನಮ್ಮನ್ನೆಲ್ಲಾ ಕಾಪಾಡುತ್ತಿರುವ ಪರಮಾತ್ಮನನ್ನು ಸ್ಮರಿಸಿ ಈ ಪ್ರಾರ್ಥನೆಯನ್ನಂತಗೊಳಿಸುತ್ತೇವೆ.

THE RAYALASEEMA MILLS Ltd.,

Victoriapet, ADONI.

ANNOUNCEMENT.

The Board of Directors are glad to announce to all Shareholders and well-wishers that the Secretary of the Company Sri Subbaramaiah has just returned from his trip to Japan after having made effective arrangements for the manufacture and shipment of Textile Machinary for 12,000 Spindles allotted to the Company by the Government of India (from their purchase of machinery for One Lakh of Spindles from the Japanese Government). The Machinery and all Ancillary Equipment are expected to be at site by the end of May 1949, and the erection work will be proceeded with soon after, to enable the Mills to commence production immediately Electricity is made available by the Government of Madras, from their Ceded Districts Power Scheme.

Adoni. | H LINGA REDDI, B A. B L.
2-1-1949 | Chairman, Board of Directors.

ದಿ ರಾಯಲಸೀಮ ಮಿಲ್ಸ್, ಲಿಮಿಟೆಡ್.

ವಿಕ್ಟೋರಿಯಾಪೇಟೆ, ಆದವಾನಿ

ಪ್ರಕಟನೆ.

ನಮ್ಮ ಕಂಪನಿಯ ಕಾರ್ಯದರ್ಶಿಗಳಾದ ಶ್ರೀಮಾನ್ ಸುಬ್ಬರಾಮಯ್ಯನವರು ಜಪಾನ್ ದೇಶಕ್ಕೆ ಹೋಗಿ ಅಲ್ಲಿ ಭಾರತ ಸರ್ಕಾರದವರು ನಮಗಾಗಿ ಕಾದಿರಿಸಿದ ೧೨೦೦೦ ಸಾವಿರ ಕದರುಗಳಿಗೆ ಅವಶ್ಯಕವಾದ ಯಂತ್ರದ ಉತ್ಪನ್ನ ಮತ್ತು ಅವರ ರವಾನೆಗೆ ಭದ್ರವಾದ ವ್ಯವಸ್ಥೆ ಮಾಡಿ ಹಿಂದಿರುಗಿ ಬಂದಿರುವರೆಂದು ನಮ್ಮ ಷೇರ ಹೋಲ್ಡರ್ ಮತ್ತು ಇತರ ಹಿತಚಿಂತಕರಿಗೆ ತಿಳುಹಿಸಲು ಡಾಯರೆಕ್ಟರುಗಳ ಸಮಿತಿಗೆ ಆನಂದವೆನಿಸುತ್ತದೆ. (ಈ ಭಾಗವು ನಾವು ಜಪಾನ್ ಸರ್ಕಾರದವರಿಂದ ಕೊಂಡ ಒಂದು ಲಕ್ಷ ಕದರುಗಳಿಗಾಗ ವಸ್ತ್ರ ಯಂತ್ರ ಸಾಮಗ್ರಿಗೆ ಸಂಬಂಧಿಸಿದದು.) ಯಂತ್ರ ಮತ್ತು ತತ್ಸಂಬಂಧ ಸಾಮಗ್ರಿಯು ೧೯೪೯ ನೆಯ ಮೇ ಅಖೈರಿನೊಳಗಾಗಿ ನಮ್ಮ ಪ್ರದೇಶದಲ್ಲಿ ಬರಲಿದೆ. ಅದು ಬಂದೊಡನೆಯೇ ಸ್ಥಾಪನಾಕಾರ್ಯಾರಂಭವಾಗಿ ಉತ್ಪನ್ನ ಕಾರ್ಯವು ಶೀಘ್ರವಾಗಿ ಸಾಗುವುದು. ದತ್ತಮಂಡಲದ ಪವರ್ ಸ್ಕೀಮಿನಲ್ಲಿ ಮದ್ರಾಸ್ ಸರ್ಕಾರದವರು ನಮಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಿರುವರು.

ಆದವಾನಿ. | ಹೆಚ್. ಲಿಂಗಾರೆಡ್ಡಿ, ಬಿ. ಎ., ಬಿ. ಎಲ್.,
೨-೧-೧೯೪೯ | ಅಧ್ಯಕ್ಷ-ಡಾಯರೆಕ್ಟರುಗಳ ಸಮಿತಿ.

ಅ. ಭಾ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನೂತನ ಸದಸ್ಯರು

ಮುಂಬರುವ ವರ್ಷಕ್ಕಾಗಿ ಅ. ಭಾ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಕೆಳಗಿನವರನ್ನು ಸದಸ್ಯರನ್ನಾಗಿ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರು ಆರಿಸಿಕೊಂಡಿದ್ದಾರೆ.

ಸಮಿತಿಯ ೧೯ ಜನ ನೂತನ ಸದಸ್ಯರ ಹೆಸರುಗಳು ಕೆಳಗಿನಂತಿವೆ.

ಶ್ರೀಗಳಾದ ಪಂಡಿತ ಜವಾಹರಲಾಲ ನೆಹರು, ಸರದಾರ ವಲ್ಲಭಭಾಯಿ ಪಟೇಲ ಮೌಲಾನಾ ಅಬುಲ್ ಕಲಾಂ ಆಝಾದ, ರಫಿ ಅಹಮ್ಮದ ಕಿದ್ವಾಯಿ, ಜಗಜೀವನ ರಾಮ, ಪಂಡಿತ ಗೋವಿಂದ ವಲ್ಲಭಪಂತ ಸರದಾರ ಪ್ರತಾಪಸಿಂಗ, ಡಾ. ರಾಜೇಂದ್ರ ಪ್ರಸಾದ, ಡಾ. ಪ್ರಫುಲ ಚಂದ್ರಘೋಷ, ಶಂಕರರಾವದೇವ, ಶ್ರೀಮತಿ ಸುಚೇತಾ ಕೃಪಲಾನಿ, ಕಲಾ ವೆಂಕಟರಾವ (ಮದ್ರಾಸಿ ಕಂದಾಯಮಂತ್ರಿ) ಎಸ್. ಕೆ. ಪಾಟೀಲ (ಅಧ್ಯಕ್ಷ ಮುಂಬಯಿ ಪ್ರಾ. ಕಾ. ಕ.) ಎನ್. ಜಿ ರಂಗಾ (ಅಧ್ಯಕ್ಷ ಆಂಧ್ರ ಪ್ರಾ. ಕಾ. ಕ.) ಕಾಮರಾಜ ನಾಡರ [ಅಧ್ಯಕ್ಷ ತಮಿಳುನಾಡು ಕಾಂ. ಕ.] ದೇವೇಶ್ವರ ಶರ್ಮ (ಅಧ್ಯಕ್ಷ ಆಸಾಂ ಪ್ರಾ. ಕಾಂ. ಕ.) ನಿಜಲಿಂಗಪ್ಪನವರು (ಅಧ್ಯಕ್ಷ ಕರ್ನಾಟಕ

ಲೋಕಪ್ರಸಿದ್ಧವಾದ ಧರ್ಮಾರ್ಥ
ಜ್ಯೋತಿಷ್ಯ ಪಾಠಶಾಲಾ ಸಹಾಯಕ್ಕಾಗಿ ಏರ್ಪಡಿಸಿರುವ
ಕುಟುಂಬ ರಕ್ಷಣ

ಮಕ್ಕಳ ಅಪೂರ್ವ ಜಾತಕ ಪತ್ರಿಕೆ

ಹುಟ್ಟಿದ ಮಕ್ಕಳ ಜನನ ಟಿಪ್ಪಣಿಗಳನ್ನು ಕಳಿಸಿದರೆ ನಾವು ಜನನ ಕಾಲವನ್ನು ಸ್ಥಿರಮಾಡಿಕೊಂಡು ಜನ್ಮ ಲಗ್ನಕುಂಡಲಿ. ಅಂಶ ಕುಂಡಲಿ, ಗ್ರಹಾದಶಾ ವಗೈರೆ ಮಾಡಿಕೊಂಡು ಜನನ ನಕ್ಷತ್ರ ದೋಷ, ಬಾಲಾರಿಷ್ಟವನ್ನು ಶೋಧಿಸಿ ಇದ್ದರೆ ಪರಿಹಾರವಾಗುವದಕ್ಕೆ ಮಾಡುವ ಶಾಂತಿ ಕ್ರಮವನ್ನು ಬಾಲಕನಿಗೆ ಎಷ್ಟೆಷ್ಟನೇ ವರುಷಗಳಲ್ಲಿ ಯಾವ ಯಾವ ಮೂಲಕ ರೋಗ ಪೀಡಾದಿ ಕಂಟಕಗಳುಂಟಾಗುವ ವಿಷಯವನ್ನು ಬಾಲಕನ ವಿದ್ಯೆ, ಬುದ್ಧಿ, ಧನ, ಭಾಗ್ಯರಾಜ್ಯಯೋಗಾದಿ ವಿಷಯಗಳನ್ನು ಪ್ರಯತ್ನವಿಲ್ಲದೆ ಅಕಸ್ಮಾತ ಧನಪ್ರಾಪ್ತಿಯಾಗುವ ವಿಷಯವನ್ನು, ಬಾಲಕನ ತಾಯಿಗೆ ಯಾರಯಾವ ಮೂಲಕ ದೇಹಪೀಡಾದಿ ಕಂಟಕಗಳುಂಟಾಗುವ ವಿಷಯವನ್ನು ಪರಿಹಾರವಾಗುವದಕ್ಕೆ ಮಾಡತಕ್ಕ ಶಾಂತಿಕ್ರಮವನ್ನು, ಬಾಲಕನ ತಂದೆಗೆ ಯಾವ ಯಾರ ಮೂಲಕ ಸುಖಸಂತೋಷ, ಲಾಭ, ನಷ್ಟ, ದೇಹಪೀಡಾದಿ ತೊಂದರೆಯುಂಟಾಗುವ ವಿಷಯವನ್ನು ಇನ್ನೂ ಮುಂತಾದ ಫಲಗಳನ್ನು ಬರೆದು ಜಾತಕ ಪತ್ರಿಕೆಯನ್ನು ತಯಾರುಮಾಡಿ ಕಳಿಸುತ್ತೇವೆ. ಮತ್ತು ಇದರ ಸಂಗತಿ ಬಾಲಕನ ತಂದೆಯು ಆಯಾಯ ತಿಂಗಳಲ್ಲಿ ಖರೀದಿ ಮಾಡಿದ ಪದಾರ್ಥಗಳು ಮುಂದೆ ತೇಜಿ ಮಂದಿ ಉಂಟಾಗುವದನ್ನು ತಾವೇ ಸ್ವತಃ ತಿಳಿದುಕೊಳ್ಳುವ ವಿಷಯವನ್ನು ವ್ಯಾಪಾರ ವ್ಯವಹಾರವನ್ನು ಮಾಡುವದಕ್ಕೆ ಮನೆಯಿಂದ ಹೊರಡುವಾಗ ಅವುಗಳಲ್ಲಿ ಲಾಭ ನಷ್ಟವುಂಟಾಗುವದನ್ನು ತಾವೇ ನಿಶ್ಚಿತವಾಗಿ ತಿಳಿದುಕೊಳ್ಳುವ ವಿಷಯವನ್ನು ಮನೆಯವರು ಸಾಗುಮಾಡುವ ಹೊಲ, ಗದ್ದೆ, ತೋಟಗಳಲ್ಲಿ ಬೆಳೆಯುವ ಪೈರು ಫಲವೃಕ್ಷಗಳಿಗಿರುವ ಚೋರ ಭಯ ಉಂಟಾಗದಂತೆ ಚನ್ನಾಗಿ ಫಲಿಸಲು ಸಿದ್ಧಿತೆ ಕಾಲವನ್ನು, ಗರ್ಭಿಣಿ ಸ್ತ್ರೀಯರು ಜನನ ಕಾಲದಲ್ಲಿ ಬದುಕನ್ನು ಪಡುತ್ತಿರುವಾಗ ಸುಖವಾಗಿ ಜಾಗ್ರತ ಜನನವಾಗುವದಕ್ಕೆ ಮಾಡುವ ಚಿಕಿತ್ಸಾ ಕ್ರಮವನ್ನು, ಮನೆಯಲ್ಲಿ ವಾಸವಾಗಿರುವವರಿಗೆ ಎಲ್ಲಾ ಜ್ವರ, ಪ್ಲೇಗ, ಮಹಾಮಾರಿ ಮುಂತಾದ ಅಂಟು ರೋಗಗಳು ತಗಲದೆ; ಸದಾ ಆರೋಗ್ಯವಾಗಿರುವದಕ್ಕೆ ಪ್ರತಿನಿತ್ಯ ಉಪಯೋಗಿಸುವ ಕಾಫಿ, ಚಹವನ್ನು ತಯಾರಿಸಿ ಸೇವಿಸುವ ಕ್ರಮವನ್ನು, ಮನೆಯಲ್ಲಿ ಹಾವು, ಚೇಳು, ಚೋರಭಯವುಂಟಾಗದಂತೆಯು ಸರ್ವರು ಸದಾ ಅತ್ಯಂತ ಪ್ರೀತಿಕರವಾಗಿರುವದಕ್ಕೆ ಮಾಡಿಕೊಳ್ಳುವ ವ್ರತಗಳ ಸಿದ್ಧಿ ಕ್ರಮವನ್ನು, ಜನನ ಟಿಪ್ಪಣಿ ಇಲ್ಲದವರು ಮುಂದೆ ಪ್ರತಿವರ್ಷದಲ್ಲಿ ಜರುಗುವ ಜಾತಕ ಫಲಗಳನ್ನು ತಿಳಿದುಕೊಳ್ಳುವ ವಿಷಯವನ್ನು ಚನ್ನಾಗಿ ಬರೆದುಕಳಿಸುತ್ತೇವೆ. ಬೇಗನೇ ಜನನ ಟಿಪ್ಪಣಿ ಕಳಿಸಿರಿ.

ಕುಟುಂಬ ರಕ್ಷಣೆ ಸಹಿತ ಜಾತಕ ಪತ್ರಿಕೆ ಛಾರ್ಜ ರು. ೧೨—೦—೦.

ವಿಳಾಸ—ಮೇನೇಜರ್ ಕುಟುಂಬ ರಕ್ಷಣ ಕಾರ್ಯಾಲಯ,
ಹರಪನಹಳ್ಳಿ. (ಬಳ್ಳಾರಿ ಜಿಲ್ಲಾ).

ಪ್ರಾಂ. ಕಾಂ. ಕ.] ಗೋಕುಲಭಾಯಿ ಹಾಗೂ [ಅಧ್ಯಕ್ಷ ರಾಜಪುತಾನಾ ಪ್ರಾಂ. ಕಾಂ. ಕ.] ರಾಮಸಹಾಯಿ.

ಶ್ರೀ ಸರದಾರ ವಲ್ಲಭಭಾಯಿ ಪಟೇಲರು ಕೋಶಾಧ್ಯಕ್ಷರಾಗಿಯೂ ಶ್ರೀಗಳಾದ ಕಲಾ ವೆಂಕಟರಾವ್ ಹಾಗೂ ಶಂಕರರಾವ ದೇವ ಅವರು ಜನರಲ್ ಸೆಕ್ರೆಟರಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಬಳ್ಳಾರಿ ವೀರಶೈವ ಕಾಲೇಜಿನಲ್ಲಿ ಒಂದು ವೈಚಿತ್ರ್ಯ.

ಜಿ. ಸದಾಶಿವ ಎಂಬ ವಿದ್ಯಾರ್ಥಿಯು ಮಡಕಶಿರಾ ಹೈಸ್ಕೂಲ್ ಮುಖ್ಯೋಪಾಧ್ಯಾಯರಿಂದ ಹೆಚ್ಚಿನ ತರಗತಿಗೆ ಸೇರಲರ್ಹನೆಂಬ ಪ್ರಮಾಣಪತ್ರ ಪಡೆದು ೧೯೪೭ನೆಯ ಜುಲೈದಲ್ಲಿ ಬಳ್ಳಾರಿ ವೀರಶೈವ ಕಾಲೇಜದಲ್ಲಿ ಜೂನಿಯರ್ ಇಂಟರ್ ತರಗತಿಗೆ ಸೇರಿದನು. ೧೯೪೭-೪೮ ಎರಡು ವರ್ಷಗಳು ಅಭ್ಯಸಿಸಿ, ಕೊನೆಯಲ್ಲಿ ಪರೀಕ್ಷೆಗೆ ಕೂಡುವ ಸಮಯದಲ್ಲಿ ಆ ವಿದ್ಯಾರ್ಥಿಯು SSLC ಯಲ್ಲಿ ಸಾಕಷ್ಟು ಅಂಕಗಳನ್ನು ಪಡೆದು ಉತ್ತೀರ್ಣನಾಗಿಲ್ಲವೆಂದೂ ಆ ಹುಡುಗನು ಯೂನಿವರ್ಸಿಟಿಯಿಂದ ಮೆಟ್ರಿಕುಲೇಶನ್ ಸರ್ಟಿಫಿಕೇಟ್ ಹೊಂದಲು ಅನರ್ಹನೆಂತಲೂ DPI ರವರ ಕಛೇರಿಯಿಂದ ಸೂಚಿತವಾದಂತೆ ತಿಳಿದು ಬಂದಿದೆ.

ಈಗ ಆ ವಿದ್ಯಾರ್ಥಿಯು ಗತಿಯೇನು? ಮತ್ತೆ SSLC ಗೆ ಕೂಡ್ರಬೇಕಾಯಿತಲ್ಲವೇ? ಇದು ಯಾರ ತಪ್ಪು? ಸರ್ಟಿಫಿಕೇಟ್ ಕೊಟ್ಟವರ ತಪ್ಪೇ? ಸಾಕಷ್ಟು ಆಧಾರಗಳಿಲ್ಲದೆ ಸೇರಿಸಿಕೊಂಡವರದು ತಪ್ಪೇ? ಇಂಥಾ ಕ್ಲಿಷ್ಟ ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ 'ಸಹಾಯವಾಗುವುದು ಅಪರೂಪ. ಅವರು ಶಿಕ್ಷೆಯಿಲ್ಲದೆ ಪಾರಾದರೆ ಸಾಕು.

ಶ್ರೀ ಸೀತಾರಾಮರೆಡ್ಡಿ

ಮದ್ರಾಸ್ ಸರ್ಕಾರದ ಔದ್ಯೋಗಿಕ ಮಂತ್ರಿ ಮಾನ್ಯ ಶ್ರೀ ಸೀತಾರಾಮರೆಡ್ಡಿಯವರು ಆದವಾನಿ, ಬಳ್ಳಾರಿಗಳಲ್ಲಿ ಸಂಚರಿಸಿ ಮದ್ರಾಸಿಗೆ ತೆರಳಿದರು. ಬಳ್ಳಾರಿಯಲ್ಲಿ ಸರ್ಕಾರಿ ನವಕರರ ನಿವೇಶನದಲ್ಲಿ ಗೃಹ ನಿರ್ಮಾಣ ಕಾರ್ಯದ ಅಡಿಗಲ್ಲನ್ನು ಹಾಕಿದರು.

ಪಚ್ಚಾರಹಳ್ಳಿ

(ಆಲೂರು ತಾಲೂಕ)

೨೭—೧೨—೪೮ ನೇ ದಿನಾಂಕ ಇಲ್ಲಿ ಕನ್ನಡದಲ್ಲಿ "ರುಕ್ಮಿಣಿ ಕಲ್ಯಾಣ" ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಲಾಯಿತ. ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಲಾ ಸಮಿತಿಯ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ವೈ. ಎಂ. ಚಂದ್ರಯ್ಯನವರು ಅಂದಿನ ನಾಟಕಕ್ಕೆ ಆಗಮಿಸಿದ್ದು ನಾಟಕ ವಿಷಯವಾಗಿ ತಮ್ಮ ಸಂತೋಷವನ್ನು ವ್ಯಕ್ತಗೊಳಿಸಿ ನಾಟಕ ಕಲಾ ಸಮಿತಿಯ ವಿಷಯಕವಾಗಿ ಚೊಕ್ಕಟವಾದ ಚಿಕ್ಕ ಭಾಷಣವನ್ನು ಮಾಡಿ ಸಮಿತಿಗೆ ಉದಾರ ಹಸ್ತದಿಂದ ಜಿಲ್ಲೆಯ ನಾಟಕ ಕಲಾ ಸಂಸ್ಥೆಗಳು ಸಹಾಯ ನೀಡಬೇಕಾಗಿ ಬಿನ್ನೈಸಿದರು. ನಾಟಕ ಸಂಘದವರು ಸಂತೋಷದಿಂದ ೫ ರೂಪಾಯಿಗಳನ್ನು ಸಮಿತಿಗೆ ಸಹಾಯ ನೀಡಿದರು. ಕಾರ್ಯದರ್ಶಿಗಳು ಸಮಿತಿಯ ಪರವಾಗಿ ಅಭಿನಂದನೆಗಳನ್ನು ಅರ್ಪಿಸಿದರು.

——(೦)

ಬಳ್ಳಾರಿ ವೃತ್ತ ಪತ್ರಿಕೋದ್ಯೋಗಿಗಳ ಸಂಘ ವಾರ್ಷಿಕೋತ್ಸವ

ಮದ್ರಾಸಿನ ಹಿಂದೂ ಪತ್ರಿಕೆಯ ಸಂಪಾದಕ ದಳದಲ್ಲಿರುವ ಸಹಾಯ ಸಂಪಾದಕರಾದ ಶ್ರೀ ಪಿ. ನರಸಿಂಹರವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ವೃತ್ತಪತ್ರಿಕೋದ್ಯೋಗಿಗಳ ಸಂಘದ ವಾರ್ಷಿಕೋತ್ಸವವು ಈ ತಿಂಗಳ ಆಖೈರಿನಲ್ಲಿ ೩೦—೧—೪೯ ನೇ ದಿನ ನೆರವೇರಲಿದೆ.

ಸಂಡೂರಿನಲ್ಲಿ ಕಬ್ಬಿಣ-ಉಕ್ಕಿನ ಕಾರ್ಖಾನೆ.

ಸಂಡೂರು ಪರ್ವತ ಪ್ರದೇಶದಲ್ಲಿ ದೊರೆಯುವ ಕಬ್ಬಿಣದ ಅದುರು ಶ್ರೇಷ್ಠವಾಗಿದ್ದು ಅಲ್ಲಿ ಕಾರ್ಖಾನೆಯನ್ನು ಪ್ರಾರಂಭಿಸಲು ಯೋಗ್ಯವಿರುವದೆಂದು ಔದ್ಯೋಗಿಕ ಮಂತ್ರಿಗಳು ಅಭಿಪ್ರಾಯಪಟ್ಟರು. ಸೇಲಂನಲ್ಲಿ ದೊರೆಯುವ ಅದುರಿಗಿಂತಲೂ ಸಂಡೂರಿನದು ಹೆಚ್ಚು ಶ್ರೇಷ್ಠವಿದ್ದರೆ ಸಂಡೂರಲ್ಲೇ ಕಾರ್ಖಾನೆ ಪ್ರಾರಂಭಿಸುವುದೊಳ್ಳೆಯದೆಂದು ಮದ್ರಾಸಿನ ಹಿಂದೂ ಪತ್ರಿಕೆಯು ಅಗ್ರಲೇಖ ಬರೆದಿದೆ.

- — 0——

ಭಾರತದ ರಾಷ್ಟ್ರಭಾಷೆಯ ಸಮಸ್ಯೆ

ಲೇಖಕ:—
ಡಾ॥ ರಾಜೇಂದ್ರಪ್ರಸಾದ

ಲೇಖಾಂಕ ೨

ಅಖಿಲ ಭಾರತಕ್ಕೆ ಒಂದು ಸಾಮಾನ್ಯ ಭಾಷೆಯ ಆವಶ್ಯಕತೆಯನ್ನೂ ಅದರ ಅರ್ಥವ್ಯಾಪ್ತಿಯನ್ನೂ ವಿವರಿಸಿದ ಬಳಿಕ ಆ ಸಾಮಾನ್ಯ ಭಾಷೆ ಯಾವುದಾಗಿರಬೇಕೆಂಬ ಪ್ರಶ್ನೆ ಏಳುತ್ತದೆ. ಇಂಗ್ಲೀಷು ಈಗಾಗಲೆ ಆ ಸ್ಥಾನವನ್ನು ಸಂಪಾದಿಸಿದೆಯೆಂದ ಬಳಿಕ ಅದನ್ನೇ ಉಳಿಸಿಕೊಂಡು ಹೋಗದೆ ಅದರ ಸ್ಥಾನದಲ್ಲಿ ಭಾರತೀಯ ಭಾಷೆಯೊಂದನ್ನು ತರಲು ಯಾವ ಕಾರಣವೂ ಇಲ್ಲವೆಂದು ಕೆಲವರ ಹೇಳಿಕೆಯುಂಟು. ಅಂಥ ಸಾಮಾನ್ಯ ಭಾಷೆಯಿಂದ ಅಪೇಕ್ಷಿಸಬಹುದಾದ ಉದ್ದಿಷ್ಟವನ್ನು ಇಂಗ್ಲೀಷು ಇಂದು ನೆರವೇರಿಸುತ್ತಿದೆಯೆಂಬುದು ಸತ್ಯ. ಸಮೃದ್ಧವೂ ಬೇಕಾದಂತೆ ಮಣಿಯಬಲ್ಲುದೂ ಆದ ಶಬ್ದಕೋಶ ಅದಕ್ಕಿದೆಯಲ್ಲದೆ ಜಗತ್ತಿನ ಅನೇಕ ಭಾಗಗಳಲ್ಲಿ ಅದು ವ್ಯಾಪಿಸಿದೆ. ಅದು ದೊರಕಿಸಿಕೊಂಡಿರುವ ಅಂತರಾಷ್ಟ್ರೀಯ ಸ್ಥಾನವನ್ನೂ ಉಪಯೋಗವನ್ನೂ ಸಾಧಿಸಲು ಯಾವ ಭಾರತೀಯ ಭಾಷೆಗೂ ಶಕ್ಯವಾದೀತು.

ಇಂಗ್ಲೀಷು ರಾಷ್ಟ್ರಭಾಷೆಯಾಗದು

ಇಷ್ಟೆಲ್ಲ ಇದ್ದರೂ ಈ ದೇಶದಲ್ಲಿ ಇಂಗ್ಲೀಷು ಇನ್ನೂ ಬೇರೂರಿ ನಿಂತಿಲ್ಲವೆಂಬ ಮಾತು ಸತ್ಯ. ಅದಕ್ಕೆ ಸಿಗುತ್ತಿದ್ದ ಸರಕಾರಿ [illegible] ಇಂಗ್ಲಿಷ [illegible] ದೊರೆಯುತ್ತಿರುವ [illegible] ವಾಗುವದು. ನಿಜವಾಗಿ ಯಾವುದೇ ವಿದೇಶಿ ಭಾಷೆ ಈ ದೇಶದ ಎಲ್ಲ ಭಾಗಗಳಿಗೂ ಪರಕೀಯವೇ ಆಗುವದರಿಂದ ಯಾವ ಪ್ರದೇಶವೂ ಅದನ್ನು ಸ್ವಂತ ಭಾಷೆಯಂತೆ ಬೆಳೆಸಿಕೊಳ್ಳಲಾರದು. ಆದುದರಿಂದ ಇಂಗ್ಲೀಷನ್ನು ಕೃತಕ ರಾಜಾಶ್ರಯದಿಂದ ಎತ್ತಿ ಹಿಡಿದು ಅದರ ಅಭ್ಯಾಸವನ್ನು ಪ್ರೋತ್ಸಾಹಿಸಬೇಕಾಗುವದು. ಅದು ಇಲ್ಲಿ ಬೇರೂರಲಾರದು ಮತ್ತು ಈ ದೇಶದ ಯಾವ ಭಾಗದಲ್ಲೂ ಜನರ ಭಾಷೆಯಾಗಿ ಸರ್ವಥಾನ್ವಿತವಾಗದು. ಭಾರತದಲ್ಲಿನ ಯಾವುದೊಂದು ಭಾಷೆಯನ್ನಾರಿಸಿಕೊಂಡರೂ ಅದು ಒಂದಲ್ಲೊಂದು ಪ್ರದೇಶದ ಭಾಷೆಯಾಗಿದ್ದು ಕನಿಷ್ಠಪಕ್ಷ ಆ ಪ್ರದೇಶದಲ್ಲಾದರೂ ಸಾಮಾನ್ಯ ಮತ್ತು ಉಚ್ಚವರ್ಗಗಳೆಲ್ಲರ ಸ್ವಂತ ಭಾಷೆಯಾಗುವದು. ಅದರೊಡನೆ ಇನ್ನೂ ಹಲವು ಪ್ರಾಂತಿಕ ಭಾಷೆಗಳಿಗೆ ನಿಕಟ ಸಂಬಂಧ ಇರುವುದರಿಂದ ಆ ಪ್ರಾಂತಗಳಲ್ಲಿಯೂ ಅದು ಸುಲಭಗ್ರಾಹ್ಯವಾಗುವದು. ಆದುದರಿಂದ ಯಾವುದಾದರೊಂದು ಭಾರತೀಯ ಭಾಷೆಯನ್ನೇ ನಾವು ಆಯ್ದುಕೊಳ್ಳಬೇಕು. ನಾವು ಇಂಗ್ಲೀಷು ಕಲಿಯುವದನ್ನು ಸರ್ವಥಾ ತ್ಯಜಿಸಿಬಿಡುವೆವೆಂದು ಇದರ ಅರ್ಥವಲ್ಲ. ಎಲ್ಲ ಅಂತರ್ರಾಷ್ಟ್ರೀಯ ಕಾರ್ಯಗೋಸ್ಕರ ಇಂಗ್ಲೀಷನ್ನು ಕಲಿಯಲೇಬೇಕಾಗುವದು. ಅದರಲ್ಲಿರುವ ವೈಜ್ಞಾನಿಕ, ದಾರ್ಶನಿಕ ಮತ್ತು ಸಾಹಿತ್ಯಕ ವಾಙ್ಮಯದ ಅಪಾರ ಸಂಗ್ರಹಕ್ಕೋಸ್ಕರವಾಗಿಯೂ ಅದರ ಅಭ್ಯಾಸ ಅಗತ್ಯ. ಆದರೂ ಅದರ ಅಭ್ಯಾಸ ಕೆಲವೇ ಜನರ ಮಟ್ಟಿಗೆ ಸೀಮಿತವಾಗಿರುವದು ಮತ್ತು ಆ ಅಭ್ಯಾಸದ ಗಾಢತೆಯು ಅದರಿಂದ ಪಡೆಯಬಹುದಾದ ವಿಶಿಷ್ಟ ಪ್ರಯೋಜನವನ್ನು ಅವಲಂಬಿಸುವದು. ಇಂದಾದರೂ ವೈಜ್ಞಾನಿಕ ಮತ್ತು ಸಂಶೋಧನಾತ್ಮಕ ವಾಙ್ಮಯದ ಅಭ್ಯಾಸಕ್ಕಾಗಿಯೂ ಇತರ ಉದ್ದೇಶಗಳಿಗಾಗಿಯೂ ಬೇರೆ ವಿದೇಶೀ ಭಾಷೆಗಳನ್ನು ಕಲಿಯುವ ಹಿಂದೀಯರೆಷ್ಟೋ ಜನರಿದ್ದಾರೆ.

ಹಿಂದೀ ಭಾಷೆಯ ಅಪರಿಪೂರ್ಣತೆ

ಭಾರತೀಯ ಭಾಷೆಗಳಲ್ಲಿ, ಸ್ವಾಭಾವಿಕವಾಗಿ, ದೇಶದಲ್ಲಿ ಎಲ್ಲಕ್ಕೂ ಹೆಚ್ಚು ಪ್ರಚುರವಾಗಿರುವ ಭಾಷೆಯು ನಮ್ಮ ಆಯ್ಕೆಗೆ ಅರ್ಹವೆನಿಸಬೇಕು. ಹಿಂದಿ ಅಥವಾ ಹಿಂದುಸ್ತಾನಿ [illegible] ಕರೆಯಿರಿ. ಆ ಭಾಷೆಯೆಂಬುದು ಸ್ವಯಂವೇದ್ಯವಾಗಿದೆ. ಅದರಲ್ಲಿ ಒಳ್ಳೆಯ ಸಾಹಿತ್ಯವಿದೆ, ಮೇಲಾಗಿ ಅದು ಉತ್ತರ ಹಿಂದುಸ್ತಾನದ ಎಲ್ಲ ಭಾಷೆಗಳ ಸಮೀಪ ಸಂಬಂಧಿಯಾಗಿರುವದರಿಂದ ಅವನ್ನು ಆಡುವವರೂ ಬಲ್ಲವರೂ ಇದನ್ನು ಸುಲಭವಾಗಿ ಕಲಿಯುವರು. ದಕ್ಷಿಣ ಭಾರತದ ಭಾಷೆಗಳಲ್ಲಿಯೂ ಮುಖ್ಯವಾಗಿ ತೆಲಗು, ಕನ್ನಡ ಮತ್ತು ಮಲೆಯಾಳಿಯಲ್ಲಿ ಸಂಸ್ಕೃತ ಶಬ್ದಗಳು ಹೇರಳವಾಗಿ ಸೇರಿಕೊಂಡಿವೆ. ಆದರೆ ಹಿಂದೀ ಅಥವಾ ಹಿಂದುಸ್ತಾನಿಯಲ್ಲಿ ಎಲ್ಲ ಬಗೆಯ ಆಧುನಿಕ ವಿಚಾರಗಳನ್ನು ವೈಜ್ಞಾನಿಕ, ದಾರ್ಶನಿಕ, ರಾಜ್ಯಶಾಸ್ತ್ರಾತ್ಮಕ, ರಾಜಕೀಯ, ಶಿಲ್ಪಶಾಸ್ತ್ರ, ಔದ್ಯೋಗಿಕ ಮೊದಲಾದ ವಿಷಯಗಳನ್ನು ಸರಿಯಾಗಿ ಅಭಿವ್ಯಕ್ತಗೊಳಿಸಲು ಸಾಧ್ಯವಾಗಬೇಕಾದರೆ ಅದರ ಶಬ್ದಸಂಪತ್ತಿಯನ್ನು ಬಹಳವಾಗಿ ಹೆಚ್ಚಿಸಬೇಕಾಗುವದೆಂದು ನಾವು ಮನಗಾಣುವದವಶ್ಯ. ಈ ಮಾತು ಉಳಿದ ಎಲ್ಲ ಭಾರತೀಯ ಭಾಷೆಗಳಿಗೂ ಅನ್ವಯಿಸುತ್ತದೆ. ಇದಲ್ಲದೆ ಭಾರತದ ರಾಷ್ಟ್ರಭಾಷೆಯನ್ನು ಅದರ ಪ್ರಸಾರವಿಲ್ಲದ ಪ್ರದೇಶಗಳ ಸಲುವಾಗಿ ಆದಷ್ಟು ಸರಳ ಸುಲಭವಾಗಿ ಮಾಡಬೇಕು. ಆದುದರಿಂದ ಭಾಷಾಶುದ್ಧಿಯ ಹಂಬಲು ಪರಕೀಯವೆಂದು ಅಥವಾ ಸಂಶಯಾಸ್ಪದ ಮೂಲದಿಂದ ಉದ್ಭವಿಸಿದವುಗಳೆಂದು ಪರಿಗಣಿಸಬಹುದಾದ ಶಬ್ದಗಳನ್ನು ಹಿಂದಿ ಅಥವಾ ಹಿಂದುಸ್ತಾನಿಯಿಂದ ಬಹಿಷ್ಕರಿಸುವದು ಸಲ್ಲದು. ಹೊಸ ಅಭಿಧಾನವೊಂದನ್ನು ನಿರ್ಮಿಸುವ ಪೂರ್ವದಲ್ಲಿ ಈಗಾಗಲೇ ಬಳಕೆಯಲ್ಲಿ [illegible] ಸುಲಭವಾಗಿ [illegible] ಶಬ್ದವನ್ನು ಹುಡುಕಲು ಪ್ರಯತ್ನಿಸತಕ್ಕದ್ದು. ಪ್ರಾಂತಿಕ ಭಾಷೆಗಳೂ ವಿಕಾಸಗೊಂಡ ಭಾಷೆಗಳಾಗಿದ್ದು ಹಿಂದೀ ಅಥವಾ ಹಿಂದುಸ್ತಾನಿಗೆ ಎಷ್ಟೋ ಶಬ್ದಗಳನ್ನು ಎರವು ಕೊಡಬಲ್ಲವು; ಅವುಗಳಲ್ಲಿ ಒಂದು ಅಥವಾ ಹೆಚ್ಚು ಭಾಷೆಗಳಲ್ಲಿ ಬಳಕೆಗೆ ಬಂದಿರುವ ಶಬ್ದಗಳು ಹಿಂದಿ ಅಥವಾ ಹಿಂದುಸ್ತಾನಿಗೆ ಅಸ್ವೀಕಾರ್ಯವಾಗಲು ಕಾರಣವೇನೂ ಇಲ್ಲ. ಗ್ರಂಥಕ್ಕೆ ಭಾಷೆಯಲ್ಲಿ ಪ್ರಯುಕ್ತವಾಗಿರುವ ಅಭಿಧಾನಗಳು ಕೂಡ ಈ ವಿಷಯದಲ್ಲಿ ಬಹಳ ಉಪಯೋಗಿಯಾಗಬಹುದು. ಪಂಡಿತ ರಾಮನರೇಶ ತ್ರಿಪಾಠಿಯವರು ತೋರಿಸಿಕೊಟ್ಟಿರುವಂತೆ ಹಳೆಯ ಅಪಭ್ರಂಶ ಅಥವಾ ಗ್ರಾಮ್ಯಭಾಷೆಗಳು, ಜೀವಂತ ಭಾಷೆಗಳಾಗಿದ್ದು, ಅವು ಹೊಸ ಹೊಸ ವಿಚಾರಗಳ ಅಭಿವ್ಯಕ್ತಿಗೆ ತಕ್ಕ ಹೊಸ ಅಭಿಧಾನಗಳನ್ನು ಮೇಲಿಂದ ಮೇಲೆ ಹುಟ್ಟಿಸುತ್ತಲೇ ಇರುತ್ತವೆ. ಹಿಂದೀ ಭಾಷೆಯ ಸ್ವಾಭಾವಿಕ ಪ್ರದೇಶಗಳ ಹಳ್ಳಿಮಾತಿನಲ್ಲಿ ನಾಮಪದಗಳನ್ನು ಕ್ರಿಯಾಪದಗಳಾಗಿ ಹೇಗೆ ಪರಿವರ್ತಿಸುವರೆಂಬುದನ್ನು ಈ ಸಂದರ್ಭದಲ್ಲಿ ಚೊಕ್ಕಟ್ಟ ತೋರಬಹುದು. ಇಂಥ ಸಂದರ್ಭಗಳಲ್ಲಿ ಗ್ರಂಥಸ್ಥ ಭಾಷೆಗಳಲ್ಲಿ ನಾಮಪದಕ್ಕೆ ಒಂದು ಕ್ರಿಯಾಪದವನ್ನು ಜೋಡಿಸುವ ರೂಢಿಯುಂಟು. ಹೀಗೆ "ಮಾಟಿ" (ಮಣ್ಣು) ಯಿಂದ "ಮಟಿಯಾನಾ" ಎಂಬ ಕ್ರಿಯಾಪದವನ್ನು ಅಚ್ಚು ಹಾಕಿ ಮಣ್ಣು ಹಚ್ಚಿ ಪಾತ್ರಗಳನ್ನು ತೊಳೆಯುವದು, ಯಾವುದಕ್ಕಾದರೂ ಮಣ್ಣು ಬಳಿಯುವದು, ಎಂಬರ್ಥದಲ್ಲಿ ಪ್ರಯೋಗಿಸಲಾಗುವುದು. ಹಾಗೆಯೆ "ಹಾಥ" (ಕೈ) ಎಂಬುದನ್ನು "ಹಥಿಯಾನಾ" (ಕೈಯಲ್ಲಿ ತೆಗೆದುಕೊಳ್ಳುವದು) ಎಂಬುದು ತಿದ್ದಿದರೂ ಅದನ್ನು ಹೆಚ್ಚಾಗಿ ಅಪಹರಿಸುವದು ಎಂಬರ್ಥದಲ್ಲಿ ಬಳಸಲಾಗುವದು. 'ಲಾತ" (ಕಾಲು) ಎಂಬುದರಿಂದ "ಲತಿಯಾನಾ"

ಹಿಂದೀ—ಹಿಂದುಸ್ತಾನಿ ವಾದ ವ್ಯರ್ಥ
ಭಾಷಾಶುದ್ಧಿಯ ಅತಿಮೋಹ ಬಿಡಬೇಕು
ಎಲ್ಲ ಭಾಷೆಗಳಿಂದ ಶಬ್ದಗಳನ್ನು ಸ್ವೀಕರಿಸೋಣ
ಪಾರಿಭಾಷಿಕ ಶಬ್ದಗಳಿಗೆ ಸಂಸ್ಕೃತದ ಶರಣು

ಹಬ್ಬಿದೆ. ಒದೆಯುವದೆಂದು ಅದರ ಅರ್ಥ "ಪೀರ' (ಬೆನ್ನು) ಎಂಬುದರಿಂದ "ಪಿಯಾನಾ' ಹುಟ್ಟಿ ಹಿಂದಿನಿಂದ ತಳ್ಳುವದು ಎಂದರ್ಥದಲ್ಲಿ ಪ್ರಯುಕ್ತವಾಗುತ್ತದೆ. ತನ್ನ ಶಬ್ದಭಂಡಾರದಲ್ಲಿ, ಯಾವದೇ ವಾಙ್ಮಯದಲ್ಲಿ, ಹೊಸ ಶಬ್ದಗಳನ್ನು ಸೇರಿಸಿಕೊಳ್ಳುವದರಿಂದ ಯಾವ ಭಾಷೆಗೂ ಹಾನಿಯಾಗದೆ ಲಾಭವೇ ಆಗುವದು. ವಿಕಾಸಶೀಲವಾದ ಭಾಷೆಯಲ್ಲಿ ವರ್ಷ ವರ್ಷವೂ ಅನೇಕ ಹೊಸ ಶಬ್ದಗಳ ಸೇರಿಕೆಯೇ ನಡೆಯುವದು. ಕಳೆದ [illegible] ವರ್ಷಗಳಿಂದ [illegible] ಚೇಂಬರ್ಸ ಡಿಕ್ಷನರಿಯ [illegible] ಇಂಗ್ಲೀಷು ಶಬ್ದಕೋಶದ [illegible] ಸಂಸ್ಕರಣಗಳನ್ನು [illegible] ವರ್ಷಗಳ ಹಿಂದೆ ಹೊರಬಿದ್ದ [illegible] ಸಂಸ್ಕರಣಗಳಿಗಿರುವ [illegible] ಭೇದವನ್ನು ಕಾಣಬಹುದು. [illegible] ತಾವಾಗ್ಯೆ [illegible] ಹೊಂದಿದ ಹೊಸ ಶಬ್ದಗಳಲ್ಲದೆ [illegible] [illegible] ಅವರಲ್ಲಿ [illegible] ಇನ್ನು [illegible] ಆಕಸ್ಮಾತ್ ಆಗದ ನೂರಾರ [illegible] [illegible] ಇವರ [illegible] ಕೆಳಗೆ [illegible] [illegible] ಕಾಲಾಂತರದಲ್ಲಿ [illegible] [illegible] ಅದರಲ್ಲಿ [illegible] ಆದರೆ ಈಗಲೆ ಅದಲ್ಲ [illegible], ಆದರ ಇತರ ಭಾರತೀಯ ಅಥವಾ ವಿದೇಶೀ ಭಾಷೆಗಳಲ್ಲಿ ಪ್ರಯುಕ್ತವಾಗಿರುವ, ಶಬ್ದಗಳನ್ನು ಬಹಿಷ್ಕರಿಸದೆ ಅವಕ್ಕೆ ಮುಕ್ತದ್ವಾರವೀಯಬೇಕೆಂಬ ನಿಯಮಮಾಡಿಕೊಳ್ಳಬೇಕು.

ಆದಕಾರಣ, ರಾಷ್ಟ್ರಭಾಷೆ ಹಿಂದಿಯಾಗಬೇಕೋ ಹಿಂದುಸ್ತಾನಿಯೋ ಎಂಬ ವಾದವೇ [illegible]. ತೋರುತ್ತದೆ ಒಂದು ಭಾಷೆಗೆ ಅದರ ವೈಶಿಷ್ಟ್ಯವನ್ನು ಕೊಡುವದು ಅದರ ವ್ಯಾಕರಣ, ಚಿಕ್ಕದ ಭೇದಗಳನ್ನು ಬಿಟ್ಟರೆ ಹಿಂದಿ ಮತ್ತು ಹಿಂದುಸ್ತಾನಿ ಇವೆರಡರ ವ್ಯಾಕರಣವೂ ಒಂದೇ. ಶಬ್ದಕೋಶದಲ್ಲಿ ಮಾತ್ರ ಭೇದವಿದೆ. ಈಗಿರುವದರಲ್ಲಿ ಏನನ್ನೂ ದೂರೀಕರಿಸದೆ ಇದ್ದ ಶಬ್ದ ಸಂಪತ್ತಿಯನ್ನಲ್ಲಿ ಪರಿಗ್ರಹಿಸಿದರೆ ಈ ಸಮಸ್ಯೆಯೂ ಬಗೆಹರಿದು ವಾದ ಕೊನೆಗೊಳ್ಳುವದು.

ಪಾರಿಭಾಷಿಕ ಶಬ್ದಗಳು

ಇಷ್ಟೆಲ್ಲ ಮಾಡಿದರೂ ಪಾರಿಭಾಷಿಕವಾದ ಅನೇಕಾನೇಕ ಶಬ್ದಗಳನ್ನು ಹೊಸದಾಗಿ ನಿಷ್ಪನ್ನಮಾಡಿಕೊಳ್ಳುವ ಅವಶ್ಯಕತೆ ಉಳಿದೇ ಉಳಿಯುತ್ತದೆ. ಅವು ಯಾವ ಭಾರತೀಯ ಭಾಷೆಯಲ್ಲಿಯೂ ಲಭ್ಯವಾಗುವದಿಲ್ಲ. ವಿದೇಶೀ ಭಾಷೆಗಳಿಂದ ತೆಗೆದುಕೊಂಡರೆ ಅವು ಕಠಿನವೂ ಭಾರಸ್ವರೂಪವೂ ಆಗಬಹುದು. ಭಾರತೀಯ ಮೂಲದ ಶಬ್ದ ಹೊಂದಾಣಿದ್ದರೂ ಅದು ಭಾಷೆಯಲ್ಲಿ ಬೇಗನೆ ಬೆರೆತುಹೋಗುವದು. ಈ ನವ ನಿಷ್ಪತ್ತಿಯು ಉಗಮ ಯಾವುದಿರಬೇಕು? ನನಗೆ ತೋರುವ ಮಟ್ಟಿಗೆ, ಉರ್ದು ಹಿಂದಿಗಳನ್ನು ಬಿಟ್ಟರೆ, ಎಲ್ಲ ಭಾರತೀಯ ಭಾಷೆಗಳು ಹಿಂದಿನಿಂದಲೂ ಶಬ್ದಗಳನ್ನು ಪಡೆಯುತ್ತ ಬಂದಿರುವ ಒಂದೇ ಒಂದು ಮೂಲಸ್ಥಾನವೆಂದರೆ ಸಂಸ್ಕೃತ. ಅದು ಪರಿಚಿತ, ಯೋಗ್ಯವಾದದ್ದು. ವಿಚಾರವನ್ನು ಪ್ರಕಟಿಸುವ ಶಬ್ದಗಳು ಈಗಾಗಲೆ ಭಾಷೆಯಲ್ಲಿದ್ದ ಸಂದರ್ಭಗಳಲ್ಲೆಲ್ಲ ಅವನ್ನು ಸಂಸ್ಕೃತದ ಅಪರಿಮಿತ ಶಬ್ದ ಭಂಡಾರದಿಂದ ಆರಿಸಿ ರೂಪಿಸಿಕೊಳ್ಳಬೇಕೆಂಬ ಮಾತು ನಿರ್ವಿವಾದ. ಇದು ಹೊರತು ಬೇರೆ ದಿಕ್ಕೇ ಇಲ್ಲ. ಹಿಂದೀವಾದಿಗಳೂ ಅಲ್ಲದೆ ಹಿಂದುಸ್ತಾನೀವಾದಿಗಳೂ ಅಲ್ಲದೆ [illegible] ಈ ಭಾಗದಲ್ಲಿ ಅರಬ್ಬೀ ಅಥವಾ ಪರ್ಶಿಯನ್ ಭಾಷೆಯನ್ನು ಆಶ್ರಯಿಸುವದು ಸಾಧ್ಯವಿಲ್ಲ.

ಹೀಗೆ ಈ ಕೆಳಗಿನ ಮಾತುಗಳು ಸಿದ್ಧವಾಗುತ್ತವೆ:—

೧) ಅಖಿಲ ಭಾರತೀಯ ವ್ಯವಹಾರಕ್ಕಾಗಿ ಒಂದು ಸಾಮಾನ್ಯ ಭಾಷೆ ಬೇಕು.

೨) ಆ ಸಾಮಾನ್ಯ ಭಾಷೆಯನ್ನು ಭಾರತದಲ್ಲೆಲ್ಲ, ತಮ್ಮ ಸ್ವಂತ ಭಾಷೆ ಯಾವದೇ ಇದ್ದರೂ, ಬಹಳ ಜನರು ಅಭ್ಯಸಿಸಬೇಕಾಗುವದು.

೩) ಆ ಭಾಷೆ ಇಂಗ್ಲೀಷಾಗಿರಬಾರದು. ಅದೊಂದು ಭಾರತೀಯ ಭಾಷೆಯೇ ಆಗಿರತಕ್ಕದ್ದು.

೪) ಭಾರತೀಯ ಭಾಷೆಗಳಲ್ಲಿ ಹಿಂದಿ ಅಥವಾ ಹಿಂದುಸ್ತಾನಿಯು ಇದಕ್ಕೆ ಅತ್ಯಂತ ಅರ್ಹವಾದದು.

೫) ಆದರೆ ಹಿಂದಿಯಾಗಲಿ ಹಿಂದುಸ್ತಾನಿಯಾಗಲಿ ಭಾರತೀಯ ಮೂಲದಿಂದ ಹುಟ್ಟಿದ ಶಬ್ದಗಳನ್ನು ತಿರಸ್ಕರಿಸದೆ ಬೇರೆ ಭಾಷೆಗಳ [illegible] ಸ್ವೀಕರಿಸಬೇಕು.

೬) ಈ ಹೊಸ ಶಬ್ದಗಳು ಮುಖ್ಯವಾಗಿ ವಿವಿಧ ಪ್ರಾಂತಿಕ ಭಾಷೆಗಳಿಂದಲೂ ಅಪಭ್ರಂಶಗಳಿಂದಲೂ ಬರತಕ್ಕವು. ಶುದ್ಧ ವಿದೇಶೀಮೂಲದ ಶಬ್ದಗಳನ್ನು ಕೂಡ ಪೂರ್ತಿ ಬಹಿಷ್ಕರಿಸಬಾರದು.

೭) ಮೇಲಿನ ಕಾರಣಗಳಿಂದ ಹಿಂದೀ ಹಿಂದುಸ್ತಾನಿವಾದ ನಿರರ್ಥಕವಾಗಿದೆ.

೮) ಇತರ ಭಾಷೆಗಳ ಸಹಾಯದಿಂದ ಶಬ್ದಕೋಶವನ್ನು ಬೆಳೆಸಿದರೂ ಆಧುನಿಕ ವಿಚಾರಗಳನ್ನು ಪ್ರಕಟಪಡಿಸಲು, ಮುಖ್ಯವಾಗಿ ಪಾರಿಭಾಷಿಕ ಸ್ವರೂಪದ ಶಬ್ದಗಳನ್ನು ರೂಪಿಸಿಕೊಳ್ಳಬೇಕಾಗುವದು. ಇಂಥ ಶಬ್ದಗಳನ್ನು ಸಂಸ್ಕೃತದಿಂದಲೇ ಆಯ್ದುಕೊಳ್ಳಬೇಕು. (ಹರಿಜನದಿಂದ)

ಕೇಂದ್ರ ಶಾಸನ ಸಭೆ

ಮತದಾರರಿಂದ ನೇರವಾಗಿ ಆಯ್ಕೆ ಹೊಂದಿ ೫೦೦ಕ್ಕಿಂತ ಹೆಚ್ಚಿನ ಸದಸ್ಯರು ಕೇಂದ್ರ ಶಾಸನ ಸಭೆಯಲ್ಲಿರಬಾರದೆಂದು ಹಿಂದುಸ್ತಾನ ಘಟನಾ ಸಮಿತಿಯು ನಿರ್ಧರಿಸಿತು. ೭॥ ಲಕ್ಷಕ್ಕೆ ಒಬ್ಬ ಪ್ರತಿನಿಧಿ ಇರಬೇಕು. ೫ ಲಕ್ಷ ಜನಸಂಖ್ಯೆಗೆ ಒಬ್ಬನಿಗಿಂತ ಹೆಚ್ಚು ಪ್ರತಿನಿಧಿ ಇರಬಾರದು. ಪ್ರಾಂತದ ತಳಹದಿಯ ಮೇಲೆ ಚುನಾವಣೆ ನಡೆಯಬೇಕು.

ಮದ್ರಾಸ್ ಕಾಂಗ್ರೆಸ್ ಮಂತ್ರಿಗಳ ರಾಜೀನಾಮೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸೂಚನೆಯಂತೆ ಮದ್ರಾಸ್ ಕಂದಾಯ ಮಂತ್ರಿ ಶ್ರೀ ಕಳಾ ವೆಂಕಟರಾಯರು [illegible] ರಾಜೀನಾಮೆಯನ್ನು [illegible]. ಸದ್ಯಕ್ಕೆ ಅವರ ಸ್ಥಾನದಲ್ಲಿ ಬೇರೊಬ್ಬರನ್ನು ನಿಯಮಿಸುವ ಸಂಭವವಿಲ್ಲ. ಮುಖ್ಯಮಂತ್ರಿಗಳೇ ಆ ಖಾತೆಯನ್ನು ವಹಿಸಿಕೊಳ್ಳುವರು.

ಹರಿಜನರ ಉದ್ಧಾರಕ್ಕೆ ಯುಕ್ತಿ ಸಿದ್ಧಿ.

ನೂತನ ಘಟನೆಯಲ್ಲಿ ಹರಿಜನರ ಸಂರಕ್ಷಣೆಗೆ, ಸರ್ವತೋಮುಖ ಏಳಿಗೆಗೆ ತಕ್ಕ ಶಾಸನ ನಿರ್ಬಂಧನೆಗಳಾಗಬೇಕು. ಮಹಾತ್ಮಗಾಂಧಿಯವರ ಆದರ್ಶಗಳನ್ನು ಎಲ್ಲರೂ ಮರೆತು ಬಿಟ್ಟರುವರು. ದಲಿತ, ಗಾಂಧೀಜೀಯವರ ಯತ್ನಗಳಿಂದಲೆ, ಸಮಗ್ರ ಹರಿಜನೋದ್ಧಾರ ಕಾರ್ಯಕ್ಕೆ ಪ್ರಾರಂಭವಾಯಿತು. ಎಲ್ಲ ಕಾಂಗ್ರೆಸಿಗರ ಹಿತಚಿಂತಕರು ಈ ವಿಷಯದಲ್ಲಿ ಶ್ರದ್ಧೆವಹಿಸಿ ಸಮಸ್ಯೆಯನ್ನು ಮುಂದೆ ತರಲು ಕೋರುತ್ತೇನೆ.
(ರಾಮದಾಸ್)

ಡಚ್ಚರ ಅತ್ಯಾಚಾರ ಏಶಿಯಾ ರಾಜ್ಯಗಳ ಸಭೆ

ಡಚ್ಚರು ಇಂಡೋನೆಸಿಯಾದಲ್ಲಿ ಪ್ರತಿರಾಜ್ಯಭಾರದ ಮೇಲೆ ಪ್ರಾರಂಭಿಸಿದ ದಾಳಿಯನ್ನು ಖಂಡಿಸಿ [illegible] ಮೇಲೆ ತಕ್ಕ ಕಾರ್ಯವನ್ನು ತೆಗೆದುಕೊಳ್ಳಲು ಪಂಡಿತ ಜವಾಹರಲಾಲ ನೆಹರೂರವರು ನವದಿಲ್ಲಿಯಲ್ಲಿ ಏಶಿಯಾ ರಾಜ್ಯಗಳ ಪರಿಷತ್ತನ್ನು ಕರೆದಿದ್ದಾರೆ.

ನಿಖಿಲ ಕರ್ನಾಟಕ ಆಯುರ್ವೇದ ಮಂಡಲ, ಬೆಳಗಾವಿ.

ಬೆಳಗಾಂವಿ ಯಿಂದ ವೈದ್ಯ [illegible] ಗದಗ ಸೆಕ್ರೆಟರಿ ನಿ. ಕ. ಆಯುರ್ವೇದ ಮಂಡಲ ಇವರು ಮೈಸೂರಿಗೆ ಹೋಗಿ ಮೊದಲಿನ ಸೆಕ್ರೆಟರಿಯವರಾದ ಪಂಡಿತ ಕೆ. ಪಿ. ಪುರಾಣಿಕರಿಂದ ಆಫೀಸ ಚಾರ್ಜ ತಾ॥ ೩-೧-೪೯ಕ್ಕೆ ತೆಗೆದುಕೊಂಡರು.

ಇನ್ನು ನಿಖಿಲ ಮಂಡಲದ ಆಫೀಸ ಬೆಳಗಾಂವಿಯಲ್ಲೇ ಇದ್ದು ಅದರ ಪತ್ರವ್ಯವಹಾರ [illegible] ಗುತ್ತಿರುತ್ತದೆ.

ಕಾರ್ಯದರ್ಶಿ
ನಿಖಿಲ ಕರ್ನಾಟಕ ಆಯುರ್ವೇದ
ಮಂಡಲ, [illegible] ಬೆಳಗಾಂವಿ.

ಉಪಾಧ್ಯಾಯರ ಏಳಿಗೆ

(ಡಿ. ಪಿ. ಐ. ರ ಕಛೇರಿಯಿಂದ)

ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ಕಲ್ಪಿಸಲು ಸರ್ಕಾರದ ಕಾರ್ಯಕ್ರಮಗಳು

ಶಿಕ್ಷಣ ಸುಧಾರಣೆಯಲ್ಲಿ ಯಾವ ಯೋಜನೆಯಾದರೂ ಯಶಸ್ವಿಯಾಗಬೇಕಾದರೆ ಆ ಯೋಜನೆಯಂತೆ ಕೆಲಸಮಾಡುವವರ ಮೇಲೆ ಆಧರಿಸಿಕೊಂಡಿದೆ. ಉಪಾಧ್ಯಾಯ ಹಾಗೂ ಇತರ ಸಂಬಂಧಪಟ್ಟ ಅಧಿಕಾರಿಗಳೇ ಶಿಕ್ಷಣ ಯೋಜನೆಯ ಜೀವನಾಡಿಗಳು ಆದುದರಿಂದ ಸರಕಾರವು ಇವರ ಸ್ಥಿತಿಗತಿಗಳನ್ನು ಸುಧಾರಿಸಿ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ಕಲ್ಪಿಸಲು ಮುಂದಾಗಬೇಕಾಯಿತು.

ಉಪಾಧ್ಯಾಯರಲ್ಲಿ ಅನರಿವರೆಂದಿಲ್ಲದೆ ಎಲ್ಲಾ ಬಗೆಯವರ ಸಂಬಳವನ್ನು ಹೆಚ್ಚಿಸಿ ಸಮಾಜದ ದೃಷ್ಟಿಯಿಂದ ಇವರ ಆರ್ಥಿಕ ಪರಿಸ್ಥಿತಿಯು [illegible]ರಿಸಿದೆಯನ್ನ[illegible]ಯಿತು. ಎಲ್ಲಾ ಏಡೆಡ್ ಎಲಿಮೆಂಟರಿ ಶಾಲೆಗಳಿಗೂ "ಗ್ರಾಂಟು" ಹೆಚ್ಚಿಸಿ ಅಧ್ಯಾಪಕರಿಗೆ ನಿಶ್ಚಿತವಾದ ಆದಾಯ ದೊರೆಯುವಂತೆ ಮೇನೇಜ್‌ಮೆಂಟಿನವರಿಗೆ ಪ್ರತ್ಯೇಕ ಗ್ರಾಂಟನ್ನೂ ಕೊಡಲಾಗಿದೆ. ಕೆಲವು ಶಾಲೆಗಳ ಮೇನೇಜ್‌ಮೆಂಟಿನವರು ವರ್ಷಕ್ಕೊಮ್ಮೆ ಅಥವಾ ಇಷ್ಟಬಂದಾಗ ತಮ್ಮ ಉಪಾಧ್ಯಾಯರಿಗೆ ಸಂಬಳಕೊಡುವ ರೂಢಿಯನ್ನು ಕಿತ್ತುಹಾಕಿ ತಿಂಗಳೂ ಅವರಿಗೆ ಸಂಬಳ ಹಂಚುವಂತೆ ಏರ್ಪಾಡುಮಾಡಲಾಗಿದೆ.

ಮೇಲಿನ ಪದವಿಗೆ ಅವಕಾಶ

ಎಲಿಮೆಂಟರೀ ಶಾಲೆಗಳ ಅಧ್ಯಾಪಕರು ತಮ್ಮ ವಿದ್ಯಾಯೋಗ್ಯತೆಯನ್ನು ಹೆಚ್ಚಿಸಿಕೊಂಡು ಅಭಿವೃದ್ಧಿಹೊಂದುವಂತೆ ಖಾಸಗಿಯಾಗಿ "ಸೆಕೆಂಡರೀ ಗ್ರೇಡ್" ಉಪಾಧ್ಯಾಯರಾಗಲು ಪರೀಕ್ಷೆಗಳಿಗೆ ಕುಳಿತುಕೊಳ್ಳುವ ಅವಕಾಶಕೊಡಲಾಗಿದೆ. ಆದುದರಿಂದ ಈಗ ಒಬ್ಬ ಎಲಿಮೆಂಟರಿ ಶಾಲಾಧ್ಯಾಪಕನಿಗೆ ತಾನೇ ಓದಿಕೊಂಡು ಪರೀಕ್ಷೆಗೆ ಕುಳಿತು ಬಿ. ಎ., ಬಿ. ಟಿ., ಇತ್ಯಾದಿ ಪದವಿಗಳನ್ನು ಪಡೆಯಲು ಅವಕಾಶವಿದೆ.

ಎಲಿಮೆಂಟರಿ ಶಾಲೆಗಳ ಅಧ್ಯಾಪಕರಿಗೆ ತುಟ್ಟಿಭತ್ತೆ ಕೊಡುವ ಜವಾಬ್ದಾರಿಕೆಯನ್ನು ಸರಕಾರವೇ ವಹಿಸುವುದಲ್ಲದೆ ಇತ್ತೀಚೆಗೆ ಸರಕಾರರಿಗೆ ತುಟ್ಟಿಭತ್ತೆ ಏರಿಸಿದಂತೆ ಎಲಿಮೆಂಟರಿ ಶಾಲೆಯ ಉಪಾಧ್ಯಾಯರಿಗೂ ಏರಿಸಲಾಗುವುದು. ಖಾಸಗಿ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಉಪಾಧ್ಯಾಯರಿಗೆ ಉತ್ತಮ ಸ್ಥಾನಗಳನ್ನು ದೊರಕಿಸುವ ಉದ್ದೇಶದಿಂದ ವಿದ್ಯಾ ಇಲಾಖೆಯಲ್ಲಿ ಶೇಕಡಾ ೪೦ ರಷ್ಟು ಜೂನಿಯರ್ ಡಿಪ್ಯೂಟೀ ಇನ್‌ಸ್ಪೆಕ್ಟರರ ಸ್ಥಾನಗಳಿಗೆ ಎಡೆಡ್ ಮತ್ತು ಸ್ಥಳೀಕ ಸಂಸ್ಥೆಗಳ ಕೈಕೆಳಗಿರುವ ಸೆಕೆಂಡರೀ ಶಾಲೆಗಳ ಉಪಾಧ್ಯಾಯರ ಪೈಕಿ ಸಮರ್ಥರಾದವರನ್ನು ತೆಕ್ಕೊಳ್ಳಲಾಗುವುದು.

ಏಡೆಡ್ ಸೆಕೆಂಡರೀಶಾಲೆಗಳ ಉಪಾಧ್ಯಾಯರ ಏಳಿಗೆಗಾಗಿ. ಸ್ಥಳೀಕ ಸಂಸ್ಥೆಗಳ ಕೆಳಗಿರುವ ಶಾಲೆಗಳಲ್ಲಿ ಕೆಲಸಮಾಡುತ್ತಿರುವ ಅಧ್ಯಾಪಕರಿಗೆ ದೊರೆಯುವ ದರದಲ್ಲೇ ಸಂಬಳ ಕೊಡಬೇಕೆಂದು ಮೇನೇಜ್‌ಮೆಂಟಿನವರನ್ನು ಸರಕಾರವು ಒತ್ತಾಯ ಮಾಡಿದೆ. ಹೀಗೆ ಸಂಬಳಕೊಡಲು ಅನುಕೂಲವಾಗುವಂತೆ ಸರಕಾರವು ಮೊದಲುಕೊಡುತ್ತಿದ್ದ ಅರ್ಧಾಂಶ ಗ್ರಾಂಟಿನ ಬದಲಿಗೆ 2/3 ಅಂಶದಷ್ಟು ಗ್ರಾಂಟ್ ಕೊಡಲು ಸಿದ್ಧವಾಗಿದೆ.

ಏಡೆಡ್ ಮೇನೇಜ್‌ಮೆಂಟಿನವರ ಮೇಲೆ ಅಪ್ಪೀಲ್ ಮಾಡುವುದಕ್ಕೆ ಅವಕಾಶಕೊಡಬೇಕೆಂದೂ ತಮ್ಮ ಭದ್ರತೆಯ ಬಗ್ಗೆ ಹೆಚ್ಚಿನ ಬಲ ಕೊಡುವಂತೆ ಮೇನೇಜ್‌ಮೆಂಟನೊಡನೆ ಮಾಡುವ ಕರಾರಿನ ರೀತಿಯನ್ನು ಬದಲಾಯಿಸಬೇಕೆಂದೂ ಎಷ್ಟೋ ಸಮಯದಿಂದ ಉಪಾಧ್ಯಾಯರು ಚಳವಳ ಹೂಡುತ್ತಿದ್ದರು. ಈ ವಿಷಯದಲ್ಲಿ ಸರಕಾರವು ಪ್ರಾಂತಿಕ ವಿದ್ಯಾಭ್ಯಾಸ ಸಲಹಾ ಸಮಿತಿ (ಪ್ರೊವಿನ್ಶಿಯಲ್ ಅಡ್ವೈಸರೀ ಬೋರ್ಡ್ ಆಫ್ ಎಜ್ಯುಕೇಷನ್) ಯೊಡನೆ ಚೆನ್ನಾಗಿ ವಿಚಾರ ನಡೆಸಿ ಕರಾರಿನ ಫಾರ್ಮುಗಳನ್ನು ತಿದ್ದುಪಡಿ ಮಾಡಿ ಕಾಯಮಾಗಿರುವುದಕ್ಕೂ ಇತರ ಭದ್ರತೆಯ ಬಗ್ಗೆ ಅವಕಾಶಕೊಟ್ಟಿದೆ.

ಸ್ಥಾನ-ಮಾನ ಹೆಚ್ಚಿದೆ

ಖಾಸಗಿ ಹೈಸ್ಕೂಲ್ ಉಪಾಧ್ಯಾಯರ ಪುರೋಭಿವೃದ್ಧಿಗಾಗಿ ಇವರಿಗೆ ವಿದ್ಯಾ ಇಲಾಖೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿ (ಡಿ. ಇ. ಓ.) ಗಳಾಗಿ ನೇಮಕ ಹೊಂದಲು ಅವಕಾಶಕೊಡಲಾಗಿದೆ. ತುಟ್ಟಿ ಭತ್ತೆಯ ವಿಷಯದಲ್ಲಿ ಸರಕಾರಿ ಶಾಲೆಗಳಲ್ಲಿ ಕೊಡಲಾಗುತ್ತಿರುವ ದರದಲ್ಲೇ ಕೊಡುವಂತೆ ಎಲ್ಲಾ ಮೇನೇಜ್‌ಮೆಂಟಿನವರಿಗೆ ತಿಳಿಸಿದೆಯಲ್ಲದೆ ಆ ಭಾಗದಲ್ಲಿ ಸರಕಾರವೂ ತನ್ನ ಅಂಶವನ್ನು ಕೊಡುತ್ತಿದೆ. ಅಲ್ಲದೆ ಖಾಸಗಿ ಕಾಲೇಜುಗಳಲ್ಲಿ ಕೆಲಸಮಾಡುತ್ತಿರುವ ಲೆಕ್ಚರರನ್ನು ಸರಕಾರಿ ಕಾಲೇಜುಗಳ ಪ್ರಿನ್ಸಿಪಾಲರನ್ನಾಗಿ ನೇಮಕಮಾಡುವ ವಿಷಯವನ್ನು ಪರ್ಯಾಲೋಚಿಸುತ್ತಿದೆ. ಹೇಗೂ ಎಲ್ಲಾ ವಿಧದಿಂದಲೂ ಇರುವ ಅನುಕೂಲತೆಗಳಲ್ಲೇ ಉಪಾಧ್ಯಾಯರ ಸ್ಥಾನ-ಮಾನಗಳನ್ನು ಹೆಚ್ಚಿಸುವುದೇ ಸರಕಾರದ ಧೋರಣೆಯಾಗಿದೆ.

ಇನ್ಸ್‌ಪೆಕ್ಟರ್ ವರ್ಗಕ್ಕೆ ಉತ್ತಮ ವ್ಯಕ್ತಿಗಳನ್ನು ದೊರಕಿಸಿಕೊಳ್ಳುವ ಉದ್ದೇಶದಿಂದ ಸರಕಾರವು ಇನ್ನೂ ಕೆಲವು ಏರ್ಪಾಡುಗಳನ್ನು ಕೈಗೊಂಡಿದೆ ಈವರೆಗೆ ಎಲ್. ಟಿ. ಅಥವಾ ಬಿ. ಟಿ. ತರಬೇತಿ ಹೊಂದಿದವರಿಗೆ ವಿದ್ಯಾ ಇಲಾಖೆಯಲ್ಲಿ ಸೇರಿಕೊಳ್ಳಬೇಕಾದರೆ ೩೦ ವರುಷವರೆಗೆ ಸಾಧ್ಯವಿತ್ತು. ಉತ್ತಮ ತರದ ಸ್ತ್ರೀ-ಪುರುಷರು ವಿದ್ಯಾ ಇಲಾಖೆಗೆ ಸೇರಲು ಆಸಕ್ತಿಪಡುವಂತೆ ಮಾಡಲು ಎಲ್. ಟಿ. ತರಬೇತಿಯಾಗದ ೩೫ ವರ್ಷ ಪ್ರಾಯದವರನ್ನು ಸೇರಿಸಿಕೊಂಡು ಅವರನ್ನು ತಿಂಗಳಿಗೆ ೫೦ ರೂಪಾಯಿಗಳ ಸಹಾಯ ಧನವಿತ್ತು ತರಬೇತಿಗೆ ಕಳುಹಿಸುವಂತೆ ಅಪ್ಪಣೆ ಕೊಡಲಾಗಿದೆ. ಶಾಲಾ ಶಾಲಾ ಸಹಾಯಕರಿಗೂ. ಡೆಪ್ಯೂಟೀ ಇನ್ಸ್‌ಪೆಕ್ಟರಿಗೂ ಹೆಚ್ಚಿನ ಅಭಿವೃದ್ಧಿ ದೊರಕಿಸಲು I ಗ್ರೇಡ್ ಬಡತಿಯ ಪ್ರಮಾಣವನ್ನು ಶೇಕಡಾ ೨೦ ರಿಂದ ೩೩-೧/೩ ಕ್ಕೆ ಏರಿಸಲಾಗಿದೆ. ಇವಲ್ಲದೆ ಇನ್ನೂ ಅನೇಕ ಕಾರ್ಯಕಲಾಪಗಳನ್ನು ಈ ವಿಷಯದಲ್ಲಿ ಕೈಕೊಂಡು ಶಿಕ್ಷಣ ಯೋಜನೆಯು ಪರಿಣಾಮಕಾರಿಯಾಗುವಂತೆ ಯತ್ನಿಸಲಾಗುವುದು.

—O—

ಕರ್ನಾಟಕದ ಪ್ರಾತಿನಿಧಿಕ ಸಭೆ

ದಾವಣಗೆರೆಯಲ್ಲಿ ಜನವರಿ ಎರಡನೆಯ ವಾರಾಂತ್ಯ ಕೂಡಲಿದೆ

ಧರ್ ಸಮಿತಿಯ ವರದಿ ಹಾಗೂ ತದನಂತರದ ಘಟನೆಗಳನ್ನು ಪರ್ಯಾಲೋಚಿಸಿ ಕರ್ನಾಟಕ ಏಕೀಕರಣ ಮಹಾಸಮಿತಿಯ ಮುಂದಿನ ಕಾರ್ಯವನ್ನು ನಿರ್ಧರಿಸುವದಕ್ಕಾಗಿ ಮಹಾಸಮಿತಿಯ ಸಭೆಯನ್ನು ಕೂಡಲೆ ಕರೆಯಬೇಕೆಂದು, ಅಧ್ಯಕ್ಷರಾದ ಶ್ರೀ ಎಸ್. ನಿಜಲಿಂಗಪ್ಪನವರೊಡನೆ ವಿಚಾರವಿನಿಮಯ ಮಾಡಲಾಗಿ ಅಧ್ಯಕ್ಷರು ಕೇಳಿದಂತೆ ತಿಳಿಸಿದ್ದಾರೆಂದು ಕ. ಏ. ಮಹಾಸಮಿತಿಯ ಪ್ರಧಾನ ಗೌ. ಕಾರ್ಯದರ್ಶಿಗಳಾದ ಶ್ರೀ ಅಂದಾನಪ್ಪ ದೊಡ್ಡಮೇಟಿಯವರು ಒಂದು ಪ್ರಕಟನೆ ಹೊರಡಿಸಿದ್ದಾರೆ.

"ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಏಕೀಕರಣ ಮಹಾಸಮಿತಿ, ಅಖಿಲ ಕರ್ನಾಟಕದ ಶಾಸನ ಸಭಾಸದಸ್ಯರೇ ಮೊದಲಾದವರ ದೊಡ್ಡ ಪ್ರಮಾಣದ ಪ್ರಾತಿನಿಧಿಕ ಸಭೆಯೊಂದನ್ನು ಇದೇ ಜನವರಿ ಎರಡನೆಯ ವಾರಾಂತ್ಯದಲ್ಲಿ ದಾವಣಗೆರೆಯಲ್ಲಿ ಕರೆದು, ಕನ್ನಡಿಗರ ಮುಂದಿನ ಕಾರ್ಯಧೋರಣೆಯ ಸ್ವರೂಪವನ್ನು ಗೊತ್ತುಪಡಿಸುವ ಕುರಿತು ಸಾಮಾನ್ಯವಾಗಿ ಮಾತುಕತೆ ನಡೆದಿದೆ." ನಿಶ್ಚಿತ ದಿನಾಂಕವನ್ನು ಶೀಘ್ರದಲ್ಲಿಯೇ ಪ್ರಸಿದ್ಧಿಸಲಾಗುವದು.

ವಸ್ತ್ರ ನಿಯಂತ್ರಣ

ಕಳ್ಳವ್ಯಾಪಾರಕ್ಕಾಗಲೀ ಅತ್ಯಧಿಕ ಬೆಲೆಗೆ ವಸ್ತ್ರ ಮಾರುವುದಕ್ಕಾಗಲೀ ಅವಕಾಶವಿಲ್ಲ.

(ಶ್ರೀ ಹೆಚ್. ಸೀತಾರಾಮರೆಡ್ಡಿ, ಔದ್ಯೋಗಿಕ ಮಂತ್ರಿ.)

ಈ ಪ್ರಾಂತದ ಪಾಲಿನಲ್ಲಿ ಒಂದು ಅಂಶವನ್ನು ಸಹಕಾರಿ ಸಂಸ್ಥೆಗಳು ಹಂಚಬೇಕಾಗಿರುವುದರಿಂದ ಮುಂಚಿನ ನಿಯಂತ್ರಣದ ಕಾಲದಲ್ಲಿ ಲೈಸನ್ಸು ಪಡೆದಿದ್ದ ಎಲ್ಲಾ ವ್ಯಾಪಾರಿಗಳನ್ನು ಈಗಿನ ಹೊಸ ಯೋಜನೆಯಲ್ಲಿ ಸೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಈ ಯೋಜನೆಯಲ್ಲಿ ರಖಂ ವ್ಯಾಪಾರಿಗಳನ್ನು ಎಲ್ಲಾ ಭಾಗಗಳಿಗೂ ಸಮಾನ ಸಂಖ್ಯೆಯಲ್ಲಿ ಹಂಚಲಾಗಿದೆ. ಹೀಗಿದ್ದು ಮುಂಚೆ ರಖಂ ವ್ಯಾಪಾರಿಗಳಿಲ್ಲದಿದ್ದ ಸ್ಥಳಗಳಲ್ಲಿ ಹೊಸ ವ್ಯಾಪಾರಿಗಳನ್ನು ಆರಿಸಬೇಕಾಯಿತು. ಇದೇ ರೀತಿ, ಮುಂಚೆ ಚಿಲ್ಲರೆ ಅಂಗಡಿಗಳಿಲ್ಲದಿದ್ದ ಕೆಲವು ಕಡೆಗಳಿಗೆ ಈಗ ಹೊಸ ಚಿಲ್ಲರೆ ವ್ಯಾಪಾರಿಗಳನ್ನು ಆರಿಸಲಾಗಿದೆ. ಮುಂಚೆ ೨,೦೬೪ ರಖಂ ವ್ಯಾಪಾರಿಗಳಿದ್ದರು. ಈಗ ೬೦೧ ಹಳೆ ರಖಂ ವ್ಯಾಪಾರಿಗಳೂ ೧೪೬ ಹೊಸಬರೂ ಇರುವರು. ಮುಂಚಿದ್ದ ೨೨,೧೭೭ ಚಿಲ್ಲರೆ ವ್ಯಾಪಾರಿಗಳ ಪೈಕಿ ಈಗ ೧೨,೪೪೬ ಮಂದಿಯನ್ನು ಮಾತ್ರ ಆರಿಸಲಾಗಿದೆ. ಇವರಲ್ಲದೆ ೧,೫೪೨ ಹೊಸ ವ್ಯಾಪಾರಿಗಳಿರುವರು. ಇವರು ಮಾತ್ರವಲ್ಲದೆ ಚಿಲ್ಲರ ವಸ್ತ್ರ ವಿತರಣೆಗಾಗಿ ೨,೫೫೮ ಪ್ರೈಮರಿ ಸಹಕಾರ ಸಂಘಗಳೂ ಇವೆ.

ನೂಲಿನ ಮಟ್ಟಿಗೆ ೬೭೫ ರಖಂ ವ್ಯಾಪಾರಿಗಳಿಗೂ ೨,೦೧೭ ಚಿಲ್ಲರೆ ವ್ಯಾಪಾರಿಗಳಿಗೂ ಲೈಸನ್ಸು ಕೊಡುವಂತೆ ಅಪ್ಪಣೆ ಕೊಡಲಾಗಿದೆ. ಇವರ ಪೈಕಿ ೫೫೯ ರಖಂ ವ್ಯಾಪಾರಿಗಳನ್ನೂ ೧,೧೨೪ ಚಿಲ್ಲರೆ ವ್ಯಾಪಾರಿಗಳನ್ನೂ ನೂಲು ಹಂಚುವ ಬಗ್ಗೆ ಈಗಾಗಲೇ ಆರಿಸಲಾಗಿದೆ. ಈ ೫೫೯ ರಖಂ ವ್ಯಾಪಾರಿಗಳಲ್ಲಿ ೧೪೬ ಮಂದಿ ಹೊಸಬರು. ಉಳಿದ ೪೧೩ ಮಂದಿಯನ್ನು ಮುಂಚೆ ಲೈಸನ್ಸು ಪಡೆದಿದ್ದ ವ್ಯಾಪಾರಿಗಳಿಂದ ಆರಿಸಲಾಗಿದೆ. ೧,೧೨೪ ಚಿಲ್ಲರೆ ವ್ಯಾಪಾರಿಗಳ ಪೈಕಿ ೩೧೭ ಮಂದಿ ಹೊಸಬರು, ಉಳಿದವರು ಹಳೆಯ ವ್ಯಾಪಾರಸ್ಥರು. ಮುಂಚಿನ ನಿಯಂತ್ರಣ ಕಾಲದಲ್ಲಿ ಸುಮಾರು ೫೫೩ ರಖಂ ವ್ಯಾಪಾರಿಗಳೂ ೧,೯೦೬ ಚಿಲ್ಲರೆ ವ್ಯಾಪಾರಿಗಳೂ ಇದ್ದರು.

ಹೆಚ್ಚು ಪಾಲಿಗಾಗಿ ಕೇಳಲಾಗಿದೆ.

ಈ ಪ್ರಾಂತಕ್ಕೆ ಹಂಚಿ ಹಾಕಿದ ವಸ್ತ್ರದ ೫೧,೦೦೦ ಬೇಲುಗಳನ್ನು ೬೬,೦೦೦ ಬೇಲುಗಳಷ್ಟಕ್ಕೆ ಹೆಚ್ಚಿಸಬೇಕೆಂದು ನಮ್ಮ ಸರಕಾರವು ಕೇಂದ್ರ ಸರಕಾರವನ್ನು ಕೇಳಿಕೊಂಡಿದೆ. ಹೆಚ್ಚಿಗೆ ಪ್ರಮಾಣವು ಮಂಜೂರಾದೊಡನೆಯೇ ದಾಮಾಶದಲ್ಲಿ ರಖಂ ಮತ್ತು ಚಿಲ್ಲರೆ ವ್ಯಾಪಾರಿಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು.

ಸಹಕಾರಿ ಇಲಾಖೆಯು ವಸ್ತ್ರವನ್ನು ಚಿಲ್ಲರೆಯಾಗಿ ಹಂಚುವಂತೆ ನೀಲಗಿರಿ ಹೊರತು ಇತರ ಎಲ್ಲಾ ಜಿಲ್ಲೆಗಳಲ್ಲಿಯೂ ಸೇರಿ ಒಟ್ಟು ೬೩೦ ಪ್ರೈಮರಿ ನೇಕಾರರ ಸಂಘಗಳನ್ನು ಆರಿಸಲಾಗಿದೆ. ಇಷ್ಟು ಮಾತ್ರವಲ್ಲದೆ ನೇಕಾರರ ಸಂಘಗಳಿಲ್ಲದ ಸ್ಥಳಗಳಲ್ಲಿಯೂ ಈಗಿರುವ ಸಂಘಗಳು ವಸ್ತ್ರದ ವಿತರಣೆ ಕಾರ್ಯಕ್ಕೆ ಯೋಗ್ಯವಾಗಿಲ್ಲದಿರುವ ಕಡೆಗಳಲ್ಲಿಯೂ ಪ್ರೊವಿನ್ಶಿಯಲ್ ಸೊಸೈಟಿಯು ೪೪ ಡಿಪೋಗಳನ್ನು ತೆರೆಯಲಾಗಿದೆ. ಅಕ್ಟೋಬರದ ನಂತರದ (ಅಂದರೆ ಶೇಕಡ ೫೦ ರಷ್ಟು) ಪಾಲನ್ನು ಹಂಚುವ ಬಗ್ಗೆ, ೩೩೬ ಪ್ರೈಮರಿ ನೇಕಾರರ ಸಂಘಗಳನ್ನೂ ಪ್ರೊವಿನ್ಶಿಯಲ್ ಸೊಸೈಟಿಯ ೨೭ ಡಿಪೋಗಳನ್ನು ಚಿಲ್ಲರೆ ಏಜಂಟರನ್ನಾಗಿ ಆರಿಸಲಾಗಿದೆ.

ಯೋಜನೆಯಲ್ಲಿ ಪ್ರಗತಿ

ಈ ಪ್ರಾಂತದ ಈಗಿನ ಪಾಲಿನಲ್ಲಿ ಸುಮಾರು ೬,೬೪೪ ಬೇಲುಗಳಷ್ಟು ಪ್ರಾಂತಿಕ ಗಿರಣಿಗಳಿಂದಲೂ ೪೦೦ ಬೇಲುಗಳಷ್ಟು ಪಾಂಡಿಚೇರಿ ಗಿರಣಿಗಳಿಂದಲೂ ೧೭೦ ಬೇಲುಗಳಷ್ಟು ಬೆಂಗಳೂರಿನ ಉಣ್ಣೆ ಗಿರಣಿಗಳಿಂದಲೂ ೧೭೦ ಬೇಲುಗಳಷ್ಟು ಬೆಂಗಳೂರಿನ ಉಣ್ಣೆ ಗಿರಣಿಗಳಿಂದಲೂ ದೊರೆಯಬೇಕಲ್ಲದೆ, ಉಳಿದುದು ಬೊಂಬಾಯಿ ಪ್ರದೇಶದಿಂದ ಬರಬೇಕು. ಕಳೆದ ನಾಲ್ಕು ತಿಂಗಳುಗಳಲ್ಲಿ ಬೊಂಬಾಯಿಯಿಂದ ಬರುವ ಪಾಲು ತಿಂಗಳಲ್ಲಿ ೯,೦೦೦ ರಿಂದ ೧೫,೨೦೦ ಬೇಲುಗಳವರೆಗೆ ಬದಲಾಗುತ್ತಿತ್ತು. ಆಗೋಸ್ಟಿನಿಂದ ನವಂಬರದವರೆಗಿನ ನಾಲ್ಕು ತಿಂಗಳುಗಳಲ್ಲಿ ಹಂಚಿಹಾಕಿದ್ದ ಒಟ್ಟು ಪಾಲು ೪೪,೬೬೨ ಬೇಲುಗಳಿತ್ತು. ಈ ಪ್ರಮಾಣದಲ್ಲಿ ಸುಮಾರು ೨೦,೦೦೦ ಬೇಲುಗಳಷ್ಟನ್ನು ನಿಜವಾಗಿ ಕೊಂಡುಕೊಳ್ಳಲಾಗಿತ್ತು: ಇದರಲ್ಲಿ ೧೨,೮೦೦ ಬೇಲುಗಳಷ್ಟು ಅಕ್ಟೋಬರ ತಿಂಗಳ ಅಂತ್ಯದವರೆಗೆ ಈ ಪ್ರಾಂತದಲ್ಲಿ ಬಂದು ತಲ್ಪಿರುತ್ತದೆ. ಲೈಸನ್ಸು ಕೊಡುವ ಯೋಜನೆಯು ಪೂರ್ಣವಾದುದು ಅಕ್ಟೋಬರ ತಿಂಗಳ ಅಂತ್ಯದೊಳಗೆ ಮಾತ್ರವೆ. ವ್ಯಾಪಾರಿಗಳಿಗೆ ಈಗತಾನೆ ವಸ್ತ್ರ ಸಾಗಿಸಲು ಆರಂಭವಾಗಿರುತ್ತದೆ. ಆಗೋಸ್ತು ತಿಂಗಳಲ್ಲಿ ಸಹಕಾರಿ ಸಂಘಗಳಿಗೆ ಹಂಚಿ ಹಾಕಿದ ವಸ್ತ್ರವು ಸೆಪ್ಟಂಬರ ತಿಂಗಳ ಅಂತ್ಯದೊಳಗೆ ಮಾತ್ರ ಪ್ರಾಂತದೊಳಕ್ಕೆ ಬರಲು ಆರಂಭಿಸಿದುದಾಗಿದೆ. ಸಾಗಿಸುವಿಕೆಯೂ ಅತಿ ನಿಧಾನವಾಗಿ ನಡೆಯುತ್ತದೆ. ಈವರೆಗೆ ೧೫,೪೧೫ ಬೇಲುಗಳಷ್ಟು ಬೊಂಬಾಯಿಯಿಂದ ರಖಂ ವ್ಯಾಪಾರದ ಸ್ಟೋರುಗಳಿಗೆ ಬಂದು ತಲ್ಪಿದೆ. ೧೫-೧೧-೪೮ ರೊಳಗೆ ಪ್ರೈಮರಿ ಸಂಘಗಳಿಗೆ ೬,೨೪೩ ಬೇಲುಗಳಷ್ಟು ಬಟ್ಟೆ ಮಾತ್ರ ಹಂಚಲಾಗಿತ್ತು.

ಪ್ರಾಂತಕ್ಕೆ ಗಿರಣಿ ವಸ್ತ್ರವು ಹೆಚ್ಚಿನ ಪ್ರಮಾಣದಲ್ಲಿ ಬರುವುದಿಲ್ಲ. ಇನ್ನು ಮುಂದೆ ಬೊಂಬಾಯಿಂದ ಹೆಚ್ಚು ಮಾಸಿಕ ಪ್ರಮಾಣವು ಬರಬಹುದು. ದೀಪಾವಳಿ ಮುಗಿದಿರುವುದರಿಂದ ವಸ್ತ್ರಕೊಂಡುಕೊಳ್ಳಲು ಜನರು ಗುಂಪುಕಟ್ಟುವ ಸಂಭವವಿಲ್ಲ. ಸರಬರಾಯಿ ಪರಿಸ್ಥಿತಿಯು ದಿನದಿಂದ ದಿನಕ್ಕೆ ಸುಧಾರಿಸಲ್ಪಡುತ್ತಿದೆ ಮುಂದೆ ವಸ್ತ್ರದ ಪಾಲು ಹೆಚ್ಚುವುದರಿಂದ ಕಳ್ಳ ವ್ಯಾಪಾರಕ್ಕೆ ಅಥವಾ ಅತ್ಯಧಿಕ ಬೆಲೆಗೆ ವಸ್ತ್ರ ಮಾರುವ ಸಂಭವವಿರಲಾರದು

ವಸ್ತ್ರದ ಬೆಲೆಯು ಕುರಿತಾದವಾದದ ವರದಿಯಿಂದ ಕಳೆದ ಆಗಸ್ಟು ತಿಂಗಳಲ್ಲಿ ದೊರಕಿದ ವಸ್ತ್ರಕ್ಕೆ ಮುಂಚೆ ನಿಯಂತ್ರಣದ ಸಮಯದಲ್ಲಿದ್ದ ಬೆಲೆಗಿಂತ ಶೇಕಡ ೧೦೦ ರಷ್ಟು ಅತಿ ನಾಜೂಕಾದ ವಸ್ತ್ರಗಳಿಗೆ ಶೇಕಡ ೨೦೦ ರಷ್ಟು ಬೆಲೆಗಳು ಬಂದಿರುವುದು ತೋರುತ್ತದೆ. ಅತಿ ನಾಜೂಕಾದ ಮಲ್ ವಸ್ತ್ರದ ಮಟ್ಟಿಗೆ ಬೆಲೆಯು ಶೇಕಡ ೪೨೦ ರಷ್ಟು ಏರಿತ್ತು. ಸೆಪ್ಟಂಬರ ತಿಂಗಳಲ್ಲಿ ದೊರಗು ವಸ್ತ್ರಕ್ಕೆ ಶೇಕಡ ೧೦೦ ರಷ್ಟೂ ನಾಜೂಕಾದ ಮತ್ತು ಮಧ್ಯಮ ತರದ ವಸ್ತ್ರಗಳಿಗೆ ಶೇಕಡ ೫೦ ರಷ್ಟೂ ಅತಿ ನಾಜೂಕು ವಸ್ತ್ರಗಳಿಗೆ ಶೇಕಡ ೩೦ ರಷ್ಟು ಬೆಲೆ ಹೆಚ್ಚಿತ್ತು. ಅಕ್ಟೋಬರ ತಿಂಗಳಲ್ಲಿ ಬೆಲೆಗಳು ಹೆಚ್ಚು ಕಡಿಮೆ ಸೆಪ್ಟಂಬರದಲ್ಲಿದ್ದಂತೆಯೇ ಇದ್ದುವು. ನವಂಬರದಲ್ಲಿ ಬೆಲೆಗಳು ಕೆಳಗಿಳಿಯಲು ಆರಂಭಿಸಿದವು. ಇದಕ್ಕೆ ಬೊಂಬಾಯಿಯಿಂದ ಕ್ರಮೇಣ ಹೆಚ್ಚೆಚ್ಚು ಪ್ರಮಾಣದಲ್ಲಿ ವಸ್ತ್ರಬಂದು ತಲ್ಪಿದುದೇ ಕಾರಣವೆನ್ನಬಹುದು.

ನೂಲು ವಿತರಣೆ

ಅಕ್ಟೋಬರದಿಂದ ಹಿಡಿದು ಈ ಪ್ರಾಂತದ ಪಾಲಿನಲ್ಲಿ ಹೆಚ್ಚೆಂದರೆ ಶೇಕಡ 50 ರಷ್ಟು ನೂಲಿನ ಪ್ರಮಾಣವನ್ನು ಮುದ್ರಾಸ್ ಕೈಮಗ್ಗ ನೇಕಾರರ ಪ್ರಾಂತಿಕ ಸಹಕಾರ ಸಂಘದ ಮೂಲಕವೂ ಉಳಿದ ಪ್ರಮಾಣವನ್ನು ಸಾಮಾನ್ಯ ವ್ಯಾಪಾರ ಸಂಸ್ಥೆಗಳ ಮೂಲಕವೂ ಹಂಚಲಾಗುತ್ತದೆ.

ಪೂರೈಕೆ

ನಿಯಂತ್ರಣ ಪದ್ಧತಿಯನ್ನು ತಿರುಗಿ ಜಾರಿಗೆ ತಂದನಂತರ, ಈ ಪ್ರಾಂತಕ್ಕೆ ಈ ವರೆಗೆ ಒಟ್ಟು 117,414 ಬೇಲುಗಳಷ್ಟು ನೂಲು ಹಂಚಿ ಹಾಕಲಾಗಿದೆ. 1,800 ಬೇಲು

ಗಳ ಪ್ರಮಾಣ ಬಿಟ್ಟು ಪ್ರೊವಿನ್ಶಿಯಲ್ ಟೆಕ್ಸ್‌ಟೈಲ್ ಕಮಿಷನರವರು ಸಹಕಾರ ಸಂಘಗಳ ಹಾಗೂ ಇತರ ವ್ಯಾಪಾರಿ ಸಂಸ್ಥೆಗಳ ಮೂಲಕ ನೂಲು ಹಂಚುವಂತೆ ಗಿರಣಿಗಳಿಗೆ ಈಗಾಗಲೇ ಪಾಲು ಹಂಚಿ ಹಾಕಿರುವರು. ಸಹಕಾರ ಸಂಘಗಳಿಗೋಸ್ಕರ ಈವರೆಗೆ ಹಂಚಿಹಾಕಿದ ೭೦,೮೬೧ ಬೇಲುಗಳಲ್ಲಿ ೫೦,೯೯೭ ಬೇಲುಗಳಿಗೆ ಬೆಲೆ ಕೊಡಲಾಗಿದೆ. ೪೭,೫೩೩ ಬೇಲುಗಳು ಈಗಾಗಲೇ ಸಾಗಿಸಲ್ಪಟ್ಟು ೪೧,೩೭೭ ಬೇಲುಗಳು ನಿಜವಾಗಿಯೂ ಸಂಘಗಳಿಗೆ ತಲ್ಪಿರುತ್ತವೆಂದು ರಿಜಿಸ್ಟ್ರಾರ್ ಆಫ್ ಕೋಆಪರೇಟಿವ್ ಸೊಸೈಟೀಸ್ ಇವರು ತಿಳಿಸುತ್ತಾರೆ. ಈ ಅಂಕೆ ಸಂಖ್ಯೆಗಳು ನವಂಬರು ೧೫ ನೇ ತಾರೀಕಿನದ್ದಾಗಿವೆ.

ನೂಲಿನ ಬೆಲೆ ನಿಯಂತ್ರಣ

ಅಕ್ಟೋಬರ ತಿಂಗಳವರೆಗೆ ಕೆಲವು ಮುಖ್ಯ ಕೌಂಟುಗಳು ಬೆಲೆಗಳು ಏರಿದ್ದುವು. ನವಂಬರದಲ್ಲಿ ಪೇಟೆಯಲ್ಲಿ ಬಹಿರಂಗವಾಗಿ ಮಾರಲು ದಾಸ್ತಾನೇ ಇರಲಿಲ್ಲ. ೬೦ ಕೌಂಟಿನ ಸ್ವಲ್ಪ ಪ್ರಮಾಣ ಮಾತ್ರ ಇತ್ತು. ಈ ತಿಂಗಳಲ್ಲಿ ಬೆಲೆಗಳು ಕಡಮೆಯಾಗಿದ್ದುವು. ಬೊಂಬಾಯಿಯು ಟೆಕ್ಸ್‌ಟೈಲ್ ಕಮಿಷನರು ಗಿರಣಿ ದರದಲ್ಲಿ ನೂಲನ್ನು ಹಂಚಿದುದರ ಪರಿಣಾಮವು ಪೇಟೆಯಲ್ಲಿ ತಿಳಿಯಲಾರಂಭವಾಗಿದೆ. ಇತರ ಎಲ್ಲಾ ಕೌಂಟು ನೂಲುಗಳ ಬೆಲೆಗಳೂ ಬೇಗನೇ ಇಳಿಯಬಹುದೆಂದು ನಿರೀಕ್ಷಿಸಲಾಗಿದೆ.

ಹೆಚ್ಚಿಗೆ ಕೌಂಟಿನ ನೂಲುಗಳ ಸರಬರಾಯಿಯ ಸ್ಥಿತಿಯು ಮುಂದೆ ಕಠಿಣವಾಗಿರಬಹುದೆಂದು ಇಲ್ಲಿ ಎಚ್ಚರಿಸಬೇಕಾಗಿದೆ. ಮುಂಚಿನ ನಿಯಂತ್ರಣ ಕಾಲದಲ್ಲಿ ೬೦ ಕೌಂಟಿನ ಸುಮಾರು ೮೦೦ ಬೇಲುಗಳಷ್ಟು, ೮೦ ಕೌಂಟಿನ ೩೫೦ ಬೇಲುಗಳಷ್ಟು ೧೦೦ ಕೌಂಟಿನ ೭೦ ಬೇಲುಗಳಷ್ಟು ನೂಲು ನಾವು ಪಡೆಯುತ್ತಿದ್ದೆವು. ಈಗ ನಮ್ಮ ಪಾಲಾಗಿ ೬೦ ಕೌಂಟಿನ ಸುಮಾರು ೮೮೦ ಬೇಲು ೮೦ ಕೌಂಟಿನ ೨೪೦ ಬೇಲು ದೊರೆಯುತ್ತಿದೆ. ೧೨೦ ಕೌಂಟಿನ ನೂಲೇ ದೊರೆಯುವುದಿಲ್ಲ. ಕಡಮೆ ಕೌಂಟಿನ ನೂಲನ್ನು ನೂಲುವಂತೆ ಬೊಂಬಾಯಿಯ ಟೆಕ್ಸ್‌ಟೈಲ್ ಕಮಿಷನರು ಈಗ ಅನೇಕ ಗಿರಣಿಗಳಿಗೆ ಒಪ್ಪಿಗೆ ಕೊಟ್ಟಿರುತ್ತಾರೆ. ಈ ಬಗ್ಗೆ ಆಮದು ಮಾಡುವ ಹತ್ತಿಗೆ ತುಂಬಾ ಬೆಲೆ ತರಬೇಕಾದುದೇ ಇದಕ್ಕೆ ಕಾರಣ ಪ್ರತಿಯೊಬ್ಬ ಕೈಮಗ್ಗ ನೇಕಾರನು ಗಿರಣಿಗಳೊಡನೆ ಸ್ಪರ್ಧಿಸಲು ಸಾಧ್ಯವಾಗಿದೆ. ಹೆಚ್ಚು ಕೌಂಟಿನ ನೂಲು ನೂಲಲು ಈಗ ಆಶಿಸುತ್ತಾನೆ. ಇದರಿಂದಾಗಿಯೇ ಬಹುಶಃ ಹೆಚ್ಚು ಕೌಂಟಿನ ನೂಲು ದೊರೆಯುವುದಿಲ್ಲವೆಂದು ಎಲ್ಲೆಲ್ಲೂ ಆರೋಪಗಳಿರುವುದು. ವಿತರಣೆಯು ಕೂಡ ಈಗ ಮಾತ್ರ ಸರಿಯಾಗಿ ನಡೆಯಲು ಆರಂಭವಾಗಿರುವುದು ಸಹ ಒಂದು ಕಾರಣವಾಗಿರಬಹುದು.

ಆದರೆ ಮುಂದೆ ಗಿರಣಿಗಳು ಹೆಚ್ಚು ಕೌಂಟುಗಳ ನೂಲನ್ನು ತಯಾರಿಸಲು ಒಪ್ಪದಿದ್ದರೆ ಈ ವಿಷಯದಲ್ಲಿ ಯಾರಿಗೂ ಏನೂ ಮಾಡಲು ಸಾಧ್ಯವಿಲ್ಲ.

ಗಿರಣಿ ವಸ್ತ್ರ ವಿತರಣೆ

ಇತ್ತೀಚಿಗೆ ಹೋಲ್ ಸೇಲ್ ಸಹಕಾರ ಸಂಘಗಳ ಪ್ರತಿನಿಧಿಗಳ ಪರಿಷತ್ತು ನಡೆದು ಅವರು ಮಂಜೂರು ಮಾಡಿದ ನಿರ್ಣಯದ ಮೇರೆಗೆ, ಉಳಿಕೆ ಪ್ರದೇಶಗಳಿಂದ ಈ ಪ್ರಾಂತಕ್ಕೆ ಆಮದು ಮಾಡಿದ ನವಂಬರ ಡಿಸಂಬರ ತಿಂಗಳುಗಳ ಗಿರಣಿ ವಸ್ತ್ರದ ಪಾಲನ್ನು ಲೈಸೆನ್ಸು ಪಡೆದು ವ್ಯಾಪಾರಿಗಳಿಗೆ ಹಂಚಲು ಪ್ರೊವಿನ್ಶಿಯಲ್ ಟೆಕ್ಸ್‌ಟೈಲ್ ಕಮಿಷನರು ಏರ್ಪಾಡು ಮಾಡಿರುವರು.

---

೧೮ ಗಜ ವಸ್ತ್ರ

—●—

ಯುದ್ಧಕ್ಕಿಂತ ಮುಂಚೆ ನೆಚ್ಚವಾಗುತ್ತಿದ್ದ ೧೨ ಗಜಗಳ ದರದಲ್ಲಿ ಈ ಪ್ರಾಂತ್ಯಕ್ಕೆ ಒಂದು ವರ್ಷದಲ್ಲಿ ೩೮೪,೦೦೦ ಬೇಲುಗಳಷ್ಟು ವಸ್ತ್ರ ಬೇಕಾಗುತ್ತದೆ. ಈ ಪ್ರಾಂತದಲ್ಲಿರುವ ಗಿರಣಿಗಳು ವರ್ಷದಲ್ಲಿ ೭೫,೭೦೦ ಬೇಲುಗಳಷ್ಟು ತಯಾರಿಸುತ್ತವೆ. ಪ್ರಾಂತದಲ್ಲಿರುವ ಕೈಮಗ್ಗಗಳಿಂದ ವರ್ಷಕ್ಕೆ ೨೮೮,೦೦೦ ಬೇಲುಗಳಷ್ಟು ವಸ್ತ್ರದೊರೆಯುತ್ತದೆ. ಹಿಂದುಸ್ಥಾನದಲ್ಲಿರುವ ಇತರ ಪ್ರಾಂತಗಳಿಂದ ಈ ಪ್ರಾಂತಕ್ಕೆ ವರ್ಷದಲ್ಲಿ ಸುಮಾರು ೮೦,೦೦೦ ಬೇಲುಗಳಷ್ಟು ವಸ್ತ್ರ ಆಮದುವಾಗುತ್ತದೆ. ವರ್ಷದಲ್ಲಿ ಖಾದಿ ವಸ್ತ್ರ ತಯಾರಾಗುವುದು ಎಷ್ಟೆಂದಾಗಲೀ ಪರದೇಶಗಳಿಂದ ಆಮದಾಗುವುದೆಷ್ಟೆಂದಾಗಲೀ ಖಂಡಿತ ಅಂಕೆ ಸಂಖ್ಯೆಗಳಿಲ್ಲ. ಇತ್ತೀಚೆಗೆ ಕೆಲವು ತಿಂಗಳುಗಳವರೆಗೆ ಪ್ರತಿ ತಿಂಗಳು ಸುಮಾರು ೪,೦೦೦ ಬೇಲುಗಳಷ್ಟು ವಸ್ತ್ರರಫ್ತಾಗುತ್ತಿತ್ತು, ಹೊರಗಿನ ಗಿರಣಿಗಳಿಂದ ಬದಲಿಗೆ ವಸ್ತ್ರ ಪಡೆಯುವುದರ ಮಟ್ಟಿಗೆ ಬಿನ್ನಿ ಗಿರಣಿಯವರ ೧೦೦ ಬೇಲುಗಳಷ್ಟಲ್ಲದೆ, ಗಿರಣಿ ವಸ್ತ್ರ ಈ ಪ್ರಾಂತದಿಂದ ರಫ್ತಾಗುವುದಿಲ್ಲ. ಹೊಸ ಗಿರಣಿಗಳನ್ನು ಸ್ಥಾಪಿಸಲು ಲೈಸನ್ಸು ಕೊಡಲಾಗಿದೆ. ವಿದೇಶೀ ವಸ್ತ್ರ ಮತ್ತು ನೂಲಿನ ಮಟ್ಟಿಗೆ ನಿಯಂತ್ರಣವಿಲ್ಲ. ಹಿಂದುಸ್ಥಾನ ಸರಕಾರವೂ ಸದ್ಯ ಯಾವ ನಿರ್ಬಂಧ ಹಾಕುವುದಿಲ್ಲ. ಹಿಂದುಸ್ಥಾನ ಸರಕಾರವು ಶಹರಿನಲ್ಲಿರುವವರಿಗೆ ೧೮ ಗಜಗಳಂತೆಯೂ ಹಳ್ಳಿಯಲ್ಲಿ ವಾಸಿಸುವವರಿಗೆ ೧೨ ಗಜಗಳಂತೆಯೂ ಗಿರಣಿ ವಸ್ತ್ರ ಹಂಚಿಹಾಕಿದೆ. ಈ ಪ್ರಮಾಣದಿಂದ ನಮಗೆ ಈವರೆಗೆ ದೊರೆಯುತ್ತಿದ್ದುದಕ್ಕಿಂತ ಹೆಚ್ಚು ಬೇಲು ಬರುವುದು.

ಅತಿಪ್ರಸರಣದ ನಿರ್ಮೂಲನ

ಹಿಂದುಸ್ಥಾನದಲ್ಲೀಗ ಸಾಕಷ್ಟು ಆಹಾರ ಬೆಳೆಸಬೇಕಾಗಿರುವದು. ಅದಕ್ಕಾಗಿ ಪ್ರತಿಯೊಬ್ಬರೂ ಶ್ರಮಿಸಬೇಕು. ರೈತರು ಒಂದು ಅಂಗುಲ ಭೂಮಿಯನ್ನು ಸಹ ಪಡಗೆಡುವದೇ ಉಪಯೋಗಿಸಿ ಕಾಯಿಪಲ್ಲೆ ಬೆಳೆಯುವಂತೆ ಪ್ರಯತ್ನಿಸಬೇಕು. ಅತಿ ಪ್ರಸರಣವನ್ನು ನಿರ್ಮೂಲಗೊಳಿಸಲು ಹೆಚ್ಚು ಉತ್ಪಾದಿಸಬೇಕು. ಆಹಾರ, ಬಟ್ಟೆ ಮತ್ತು ಇತರ ಬಳಕೆ ವಸ್ತುಗಳ ಕೊರತೆ ಇರುವುದರಿಂದ, ಬೆಲೆ ಏರುತ್ತಿದೆ. ಬೆಲೆ ಏರಿಕೆಯಿಂದ ಕೂಲಿ ಧರ ಹೆಚ್ಚುತ್ತದೆ. ಅದರಿಂದ ಜೀವನ ವೆಚ್ಚ ಬೆಳೆದು ಅತಿಪ್ರಸರಣದ ಹಾವಳಿ ಹೆಚ್ಚಾಗುವದು. ಆದುದರಿಂದ ಕೂಲಿ ದರ ಏರುವದನ್ನು ಮೊದಲು ನಿಲ್ಲಿಸಬೇಕಾಗಿದೆ. ಕೆಲಸಗಾರರ ಮುಂದಾಳುಗಳು ಮಾತ್ರ ಹೆಚ್ಚೆಚ್ಚು ಕೇಳಲು ಪ್ರಬೋಧಿಸುತ್ತಾರೆ. ಹೀಗೆ ಅತಿ ಪ್ರಸರಣದ ದುಷ್ಟಚಕ್ರವು ಗರಗರನೇ ತಿರುಗಿ ನಮ್ಮನ್ನು ಹಿಂಡುತ್ತಿರುವದು. ಅದರಿಂದ ಪಾರಾಗಲು ಮೊದಲು ಪ್ರತಿಯೊಬ್ಬನೂ ಪ್ರಯತ್ನಿಸಬೇಕು. ನಂತರ ತನ್ನಲ್ಲಿದ್ದ ಒಂದು ಕಾಳು, ಒಂದು ಗಜ ಬಟ್ಟೆ ಸಹ ಕೆಡದಂತೆ ಉಪಯೋಗಿಸಬೇಕು. ಕೆಲಸಗಾರರಿಗೆ ನಾವು ಹೆಚ್ಚು ಕೂಲಿ ಕೊಡಲು ಪ್ರಯತ್ನಿಸುತ್ತೇವೆ. ನೀವು ಕನಿಷ್ಠಪಕ್ಷ ಹೆಚ್ಚು ಉತ್ಪಾದಿಸಿರಿ. ಆದರೆ ಹೆಚ್ಚು ಕೂಲಿ ಪಡೆದು ಕಡಿಮೆ ಉತ್ಪಾದಿಸುವಂತೆ ಅವರಿಗೆ ಸಲಹೆ ಕೊಡಲಾಗುತ್ತಿದೆ.

—ಶ್ರೀ ವಲ್ಲಭಾಯಿ ಪಟೇಲ್.

ಹಳ್ಳಿಯವರ ಕಷ್ಟಗಳು ಹೆಚ್ಚಿದವು

ಕೊಟ್ಟೂರು ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಬಿ. ಯಂ. ಅಜ್ಜಯ್ಯನವರು ಹೀಗೆ ಬರೆಯುತ್ತಾರೆ.

"ಫಾರೆಸ್ಟು ಪಂಚಾಯಿತಿಗಳನ್ನು ಕಾಡಿನ ಪಾಲಿಸಿದೆ ಕಸಿದು ಅಯೋಗ್ಯರಿಗೆ ಕೊಟ್ಟ ಕಾರಣ, ರೈತರ ಬೆಳೆಯನ್ನು ಅವಶ್ಯಕವಾಗಿ ರಕ್ಷಿಸಬೇಕಾದ ಕಣದ ಬೇಲಿ, ಮುಳ್ಳು ಕಟ್ಟಿಗೆಗೆ ತೊಂದರೆಯಾದಗಿ-ದನಕರುಗಳು ಮೇಯಲು ಪರ್ಮಿಟ್ ಇಲ್ಲದೆ ಮಾಡಿಕಾಯುವವರಿಗೆ ಲಂಚದ ಮಾರ್ಗವನ್ನು ಕಲಿಸಿ ಕೊಟ್ಟಿರುವುದು ಪ್ರಜಾಪ್ರಭುತ್ವಕ್ಕೆ ಕಳಂಕ ಒದಗಿದಂತಿದೆ. ದೋಷಗಳಿಂದ ಕೂಡಿದ ಪಂಚಾಯಿತಿಗಳನ್ನು ಸರಿಪಡಿಸಲು ಬರುತ್ತಿದ್ದಿಲ್ಲವೆ? ಯಾರಲ್ಲಿದೋಷಗಳಿಲ್ಲ?

ಚಿಮ್ಣಿ ಎಣ್ಣೆ ಕೋಟಾದ ವಿಷಯಕ್ಕೆ ಪಟ್ಟಣಗಳಿಗಿರುವ ಸೌಲಭ್ಯವು ಹಳ್ಳಿಗಳಿಗಿರದೆ ಉಪೇಕ್ಷಿಸಲಾಗಿದೆ. ಈ ಭೇದಬುದ್ಧಿ ಏಕೆ? ಪಟ್ಟಣಗಳಲ್ಲಿರುವವರು ಮಾತ್ರ ಬೆಳಕಿನಲ್ಲಿರಬೇಕೆ? ಹಳ್ಳಿಗಳಿಗೇಕೆ ತಿಂಗಳಿಗೊಂದು ಸಲ ಹಂಚುವರು?

ಇವುಗಳನ್ನೆಲ್ಲಾ ಸರ್ಕಾರದವರು ಕೂಡಲೇ ಸರಿಪಡಿಸಬೇಕು.

ಜಗತ್ತಿನ ಶಕ್ತಿಗಳಲ್ಲಿ ಸ್ಪರ್ಧೆ ನಡೆದಿದೆ

ಮಹಾತ್ಮರ ಮಾರ್ಗವೇ ಯೋಗ್ಯವಾದದ್ದು

ಆರ್. ಎಸ್. ಎಸ್. ಸತ್ಯಾಗ್ರಹವು ಯೋಗ್ಯ ತತ್ವಗಳ ತಳಹದಿಯ ಮೇಲೆ ನಿಂತಿಲ್ಲ.

ಅಲಾಹಾಬಾದದಲ್ಲಿ ಪಂಡಿತ ಜವಾಹರರ ಭಾಷಣ



'ನಾವು ಇಂದು ಇಂಡೋನೇಶಿಯಾದಲ್ಲಿ ನಿರ್ಲಜ್ಜವಾದ, ಬತ್ತಲೆಯಾದ ದಬ್ಬಾಳಿಕೆಯ ತಾಂಡವ ನೃತ್ಯವನ್ನು ನೋಡುತ್ತಲಿದ್ದೇವೆ. ಶಸ್ತ್ರಾಸ್ತ್ರಗಳ ಬಲದಿಂದ ಒಂದು ಜನಾಂಗವನ್ನು ಒಂದು ಸರಕಾರವನ್ನು ಹತ್ತಿಕ್ಕಲು ಪ್ರಯತ್ನ ನಡೆದಿದೆ. ಮರಣೋನ್ಮುಖವಾದ ಸಾಮ್ರಾಜ್ಯವಾದವನ್ನು ಪುನರುಜ್ಜೀವನಗೊಳಿಸಲು ಪ್ರಯತ್ನ ನಡೆದಿದೆ. ಈ ಸಾಮ್ರಾಜ್ಯವಾದವು ಕೊನೆಗೊಳ್ಳುವದಂತೂ ನಿಶ್ಚಿತವೇ ಇದ್ದರೂ ಹಾಗೆ ಆಗುವಾಗ ಕೆಲವು ಗಂಡಾಂತರಗಳನ್ನು ತಂದೊಡ್ಡುವ ಸಂಭವವೂ ಉಂಟು" ಎಂದು ಇಂಡೋನೇಶಿಯಾದ ಬಗ್ಗೆ ಹೇಳುತ್ತ ಮುಖ್ಯ ಮಂತ್ರಿ ಪಂಡಿತ ಜವಾಹರರು ಈ ರೀತಿ ಹೇಳಿದರು.

ಅವರು ಮುಂದೆಸಾಗಿ- ಇಂಡೋನೇಶಿಯಾದಲ್ಲಿ ಅಷ್ಟೇ ಅಲ್ಲ, ಇಡೀ ಏಷಿಯಾ ಖಂಡದಲ್ಲಿಯೇ ಮಹತ್ವವಾದ ಘಟನೆಗಳು ನಡೆದಿವೆ. ಇದು ಜಗತ್ತಿನ ಪರೀಕ್ಷಾಕಾಲವಾಗಿದೆ ಜಗತ್ತಿನ ಬೇರೆಬೇರೆ ರಾಷ್ಟ್ರಗಳು ಇಂಡೋನೇಶಿಯಾದ ಬಗ್ಗೆ ಯಾವ ಧೋರಣೆ ತಳೆಯುವವೆಂಬ ಬಗ್ಗೆ ಈಗಷ್ಟೇ ಅಲ್ಲ ಬರೆಯಲಿರುವ ಇತಿಹಾಸವೂ ನಿರ್ಣಯಿಸುವದು ಇಂಡೋನೇಶಿಯಾದ ಸಮಸ್ಯೆಯನ್ನು ವಿಚಾರಿಸಲು ಏಶಿಯಾದ ಎಲ್ಲ ರಾಷ್ಟ್ರಗಳಿಗೂ ಆಮಂತ್ರಣ ಕಳಿಸಲಾಗಿದೆ.

ಜಾಗತಿಕ ಪರಿಸ್ಥಿತಿ

ಜಗತ್ತಿನಲ್ಲಿ ಬೇರೆ ಬೇರೆ ಶಕ್ತಿಗಳು ಸ್ಪರ್ಧೆ ನಡೆಸಿವೆ ಇವೆಲ್ಲವೂ ಯಾತರಸಲುವಾಗಿ? ಇಂಡೋನೇಶಿಯಾದ ಪ್ರಜಾರಾಜ್ಯದ ನಾಶಕ್ಕಾಗಿ ಈ ಶಕ್ತಿಗಳು ಉತ್ಪನ್ನವಾಗಿರುತ್ತವೆ? ಆದರೆ ಕೆಲವು ಶಕ್ತಿಗಳು ಇದರ ಬಗ್ಗೆ ಸಮ್ಮತಿಯನ್ನು ವ್ಯಕ್ತ ಮಾಡಿದ್ದು ವಿಷಾದದ ಸಂಗತಿ ಮಾರ್ಶಲ್ ಯೋಜನೆಯ ಮೇರೆಗೆ ನೆದರ್ಲಂಡಕ್ಕೆ ಹಣದ ಸಹಾಯವು ನಿಲ್ಲಿಸಲ್ಪಟ್ಟಿದೆ. ಆದರೆ ಹಾಲಂಡಕ್ಕೆ ಆ ಸಹಾಯವು ಸಲ್ಲುತ್ತಲೇ ಇರುವದು. ನಿರ್ಬಲವಾದ ಮತ್ತು ಅಸಂಪೂರ್ಣವಾದ ಗೊತ್ತುವಳಿಯನ್ನು ಭದ್ರತಾಮಂಡಲವು ಸ್ವೀಕರಿಸಿದೆ. ಆದರೆ ಇದೂ ಕಾರ್ಯರೂಪದಲ್ಲಿ ಬಂದಿಲ್ಲ.

ಮಹಾತ್ಮರ ಸುವರ್ಣಪಥ

"ಇಂದಿನ ಹೊಸ ವರುಷದ ಸುಮುಹೂರ್ತದಲ್ಲಿ ನಾವು ಮಹಾತ್ಮ ಗಾಂಧೀಯವರ ಸುವರ್ಣಮಾರ್ಗವನ್ನು ಅನುಸರಿಸಲು ಪ್ರತಿಜ್ಞೆ ಗೈಯ್ಯಬೇಕು. ಈ ವಿಷಯವಾಗಿ ಜಯಪುರ ಅಧಿವೇಶನವು ಗೊತ್ತುವಳಿಯನ್ನೊಂದು ಸ್ವೀಕರಿಸಿದೆ. ಅದರಂತೆ ಜನರು ನಡೆಯಬೇಕು. ಒಬ್ಬ ಮನುಷ್ಯನಾಗಲಿ, ಒಂದು ದೇಶವಾಗಲಿ, ತನ್ನ ಧ್ಯೇಯ ಸಾಧಿಸಲು ಅನ್ಯಾಯಮಾರ್ಗವನ್ನು ಅನುಸರಿಸಿದರೆ ಕೆಡುವ ಬಗ್ಗೆ ನಮಗೆ ಎಳ್ಳಷ್ಟೂ ಸಂಶಯವಿಲ್ಲ. ಆದ್ದರಿಂದ ನಮ್ಮ ರಾಷ್ಟ್ರವು ಉಚ್ಚಸ್ಥಾನವನ್ನು ಪಡೆಯಬೇಕೆಂದು ಇಚ್ಛಿಸಿದ್ದರೆ ಸಂಕುಚಿತ ಭಾವನೆಗಳಿಗೆ ಆಸ್ಪದ ಕೊಡಬೇಡಿರಿ. ಮಹಾತ್ಮ ಗಾಂಧಿಯವರ ಸತ್ಯ ಮಾರ್ಗವೇ ಯೋಗ್ಯವಾಗಿರುವದು. ಆರ್. ಎಸ್.ಎಸ್. ಸಂಸ್ಥೆಯವರು ಹೂಡಿದ ಸತ್ಯಾಗ್ರಹದ ಬಗ್ಗೆ ಬಹಳಷ್ಟು ವಿಚಾರ ಮಾಡಲು ನನಗೆ ಆಸ್ಪದ ದೊರೆತಿದೆ ಆ ಸಂಸ್ಥೆಯ ಮೂಲಭೂತ ತತ್ವಗಳೇ ತಪ್ಪು ತಳಹದಿಯ ಮೇಲೆ ನಿಂತಿರುವವೆಂದು ನಾನು ಮನಗಂಡಿದ್ದೇನೆ, ಅವರ ತತ್ವಗಳನ್ನು ನಾವು ಅನುಸರಿಸಿದರೆ ನಾವು ಸ್ವತಂತ್ರವಾಗಿ ಬಹಳ ದಿನ ಉಳಿಯಲಾರೆವು" ಎಂದು ಹೇಳಿದರು.

ಕಾಶ್ಮೀರ ರಣರಂಗದಲ್ಲಿ ಯುದ್ಧ ನಿಲ್ಲಿಸುವ ನಿರ್ಣಯವನ್ನು ಕೈಕೊಂಡು ಹೊಸ ವರುಷದ ಮೊದಲನೆಯ ದಿನವೇ ಅದನ್ನು ಕಾರ್ಯರೂಪದಲ್ಲಿ ತಂದದ್ದು ಜಮ್ಮು ಕಾಶ್ಮೀರ ವಿಭಾಗಗಳಲ್ಲಿ ಶಾಂತಿಯ ಮತ್ತು ಭಾರತ ಪಾಕಿಸ್ತಾನಗಳಲ್ಲಿ ಮಿತ್ರತ್ವವರ್ಧಕವಾಗಿದೆ ಎಂದು ಇಂದು ಲಾಹೋರ ಸಭೆಯಲ್ಲಿ ಭಾಷಣ ಮಾಡುತ್ತ ಪಂಡಿತ ನೆಹರೂ ಅವರು ಹೇಳಿದರು

——(o) —

ಕಾಶ್ಮೀರು ಅದಕ್
(ಮನೆಯ ವೈದ್ಯ)
ಎಲ್ಲರ ಮನೆಯಲ್ಲೂ ಇರಬೇಕಾದ ಆವಶ್ಯಕ ಔಷಧ
ಅಂಗಾಂಗಗಳ ನೋವುಗಳಿಗೆಲ್ಲಾ ರಾಮಬಾಣ, ತಲೆಶೂಲೆ, ಕೆಮ್ಮು, ನೆಗಡಿ, ಉಬ್ಬಸ, ಅಜೀರ್ಣ, ಶೀತಭೇದಿ ಕ್ರಿಮಿಕೀಟಗಳ ಕಡಿತಕ್ಕೆ ಶೀಘ್ರ ಗುಣಕಾರಿ, ಹೊರಗೂ ಹಚ್ಚಬಹುದು ಮತ್ತು ಒಳಗೂ ತೆಗೆದುಕೊಳ್ಳಬಹುದು. ಅನುಪಾನ ಔಷಧದ ಜೊತೆಯಲ್ಲಿ ಇರುವುದು
ಎಲ್ಲಾ ಷಾಪುಗಳಲ್ಲೂ ದೊರೆಯುತ್ತದೆ
ಹೆಚ್. ಎಸ್. ಅಂಡ್ ಸನ್ಸ್
ಬಳ್ಳಾರಿ.

—G.E.C.—
BATTERY RADIO
The finest set yet made for all world All way Listening.
ಜಿ. ಇ. ಸಿ.
ಬ್ಯಾಟರಿ ರೇಡಿಯೋ.
(ಆಕಾಶವಾಣಿ ಯಂತ್ರ ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟದ್ದು)
ನೀವು ಮನೆಯಲ್ಲಿ ಕೂತು
- ಪ್ರಪಂಚದ ಸುದ್ದಿಗಳೆಲ್ಲಾ ಕೇಳುವಿರಿ
- ಮುಂಬೈನ ದ್ರಾಕ್ಷ ಬಜಾರ ಧಾರಣೆಗಳು ,,
- ಸುಪ್ರಸಿದ್ಧ ಗಾಯಕರ ಸಂಗೀತವನ್ನು
- ಪ್ರಪಂಚದ ಬಿಸಿ ಬಿಸಿ ವಾರ್ತೆಗಳನ್ನು ,,
- ಶ್ರೇಷ್ಠವಾದ ಉಪನ್ಯಾಸಗಳನ್ನು ,,
- ಹರಿಕಥಾ, ಭಜನೆ ಪೂಜಾ ವಿಧಾನಗಳನ್ನು ,,
- ಹಾಸ್ಯರಸ ಪ್ರಧಾನವಾದ ನಾಟಕ ಭಾಗಗಳನ್ನು ,,

ಬ್ಯಾಟರಿಯಿಂದ ನಡೆಸತಕ್ಕ ಮತ್ತು ವಿದ್ಯುಚ್ಛಕ್ತಿ ರೇಡಿಯೋ ಬೆಲೆ ಸುಲಭ ಹೆಚ್ಚಿನ ವಿವರಗಳಿಗೆ ಬರೆಯಿರಿ.
— ಏಜಂಟ್ಸ್
ಹೆಚ್. ಎಸ್. ಅಂಡ್ ಸನ್ಸ್
ಬಳ್ಳಾರಿ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್.,   ಸ್ಥಾಪಿತ—193[illegible]

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ 22 ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತದೆ

3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 3½%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4%	,,

ಚಾಲ್ತಿ ಖಾತೆ (Current Account) 100 ರೂ. [illegible] ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ [illegible] ಬ್ಯಾಂಕ್ [illegible] ಗಳನ್ನು 5 ರೂ [illegible] ಪ್ರಾರಂಭಿಸಬಹುದು. ಅದಕ್ಕೂ [illegible] ಕನಿಷ್ಟ [illegible] ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ವರ್ಷ [illegible] ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8 4 [illegible] ಕೊಂಡು [illegible] ನಂತರ [illegible] ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ [illegible] ತಿಳಿಯಬಹುದು

ಮುಖ್ಯ ಕಾರ್ಯಾಲಯ—ಬಳ್ಳಾರಿ

ಬಿ ನಿ ಶೇಷಗಿರಿರಾವು ಬಿ. ಕಾಂ.,
ಕಾರ್ಯದರ್ಶಿ

ಕಾಶ್ಮೀರ ಯುದ್ಧ ನಿಂತಿತು

ನೂತನ ವರ್ಷಾರಂಭದ ಶುಭನಿರ್ಣಯ

ಭಾರತ-ಪಾಕಿಸ್ತಾನಗಳ ಸ್ನೇಹ ಸಂಬಂಧ

ಕಾಶ್ಮೀರದಲ್ಲಿ ಯುದ್ಧ ನಿಲಿಸುವ ಆಜ್ಞೆಯನ್ನು ಭಾರತ ಸರಕಾರವು ಹೊರಡಿಸಿದೆ ಈ ಆಜ್ಞೆಯನುಸಾರ [illegible] ರಾತ್ರಿಯಿಂದ ಯುದ್ಧ ನಿಲ್ಲುವುದು [illegible] ಆದೇಶದ ಮಾರ್ಗ ನಿರೀಕ್ಷಣೆ ಮಾಡದೆ ಈ ದಿವಸ ಯುದ್ಧ ನಿಲ್ಲಿಸುವ ನಿರ್ಣಯವನ್ನು [illegible] ಕಾಣಿಸಿತೆಂದು [illegible] ಶಾಖೆಯ ವಕ್ತಾರನು ಪತ್ರಿಕಾ ಪ್ರತಿನಿಧಿಗಳಿಗೆ ಈ ರೀತಿ ಹೇಳಿದರು. 'ಭಾರತ ಪಾಕಿಸ್ತಾನ ಸರಕಾರಗಳು ಒಂದು ಒಡಂಬಡಿಕೆಗೆ ಬಂದ ಮೇಲೆ ರಕ್ತಪಾತವನ್ನು ಒಂದು ಕ್ಷಣವಾದರೂ ಮುಂದುವರಿಸುವುದರಲ್ಲಿ ಏನು ಅರ್ಥವಿದೆ? ಅಲ್ಲದೆ ಇಂದು ನೂತನ ವರ್ಷಾರಂಭದ ಪ್ರಥಮ ದಿನವಾದುದರಿಂದ ಮುಂದಿನ ಭವಿಷ್ಯಕ್ಕೆ ಇದು ಶುಭಪ್ರಾರಂಭವಾಗುವದು. ಆದುದರಿಂದ ಈ ದಿವಸವನ್ನು ಆರಿಸಲಾಗಿದೆ''

ಸೂಚನೆಯ ಸ್ವರೂಪವೇನು

[illegible] ಶಾಖೆಯ ಕಚೇರಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗಿತ್ತ ಹೇಳಿಕೆಯಲ್ಲಿ, [illegible] ನೂರು ತಂದಿದ್ದ ಸೂಚನೆಗಳ ಸ್ವರೂಪವನ್ನು ಬಹಿರಂಗ ಪಡಿಸಲು ನಿರಾಕರಿಸಿದರು

ಯುದ್ಧ ನಿಲ್ಲಿಸುವ ಆಜ್ಞೆಯಿಂದ ಆಗಬಹುದಾದ ಪರಿಣಾಮವು ಕೆಳಗಿನಂತೆ ಆಗುವದೆಂದು ನಿರೀಕ್ಷಿಸಲಾಗಿದೆ.

ಪಾಕಿಸ್ತಾನ ಹಿಂದುಸ್ತಾನ ಸೈನ್ಯಗಳ ವರಿಷ್ಠ ಮಂಡಲಿಗಳ ನಡುವೆ ಚರ್ಚೆ ನಡೆದು, ಈ ಆಜ್ಞೆಯ ಪರಿಣಾಮವಾಗಿ ಉಂಟಾಗುವ ಸ್ಥಾನಿಕ ಒಡಂಬಡಿಕೆಗಳ ಬಗ್ಗೆ ವಿಚಾರ ಸವು.

ಆಜ್ಞೆಯು ಸರಿಯಾಗಿ ಪಾಲಿಸಲ್ಪಟ್ಟಿದೆಯೋ ಇಲ್ಲವೋ ಎಂಬುವನ್ನು ಪರೀಕ್ಷಿಸಲು ಸಂಯುಕ್ತ ರಾಷ್ಟ್ರ ಸಂಘದ ಸೈನಿಕ ನಿರೀಕ್ಷಕರನ್ನು ನಿಯಮಿಸಬಹುದು

ಯುದ್ಧ ನಿಲ್ಲಿಸುವ ಆಜ್ಞೆಯೊಡನೆ ಒಂದು ತಾತ್ಕಾಲಿಕ ಒಡಂಬಡಿಕೆ ಯಾಗಬೇಕು

[illegible] ಪಾಕಿಸ್ತಾನವು ಕಾಶ್ಮೀರ ಹಾಗೂ ಜಮ್ಮುವಿನಿಂದ ತನ್ನ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು

[illegible] ಯುದ್ಧವನ್ನು ಮಾಡುವ, ಬೊರಡೆಯ [illegible] ಕಾಶ್ಮೀರ ಸಂಸ್ಥಾನವನ್ನು ಪ್ರವೇಶಿಸಿದ ಪಾಕಿಸ್ತಾನಿ ಪ್ರಜೆಗಳನ್ನು ಹಿಂತೆಗೆ [illegible] ಪ್ರಯತ್ನಿಸಬೇಕು

ಭಾರತ [illegible] ಕ್ರಮೇಣ ತನ್ನ ಸೈನ್ಯವನ್ನು ಸಮಿತಿಯು ಸೂಚಿಸಿದ ಪ್ರಕಾರ [illegible] ಹಿಂತೆಗೆದುಕೊಳ್ಳುವುದು

)0(

ಬುದ್ಧನ ಶಿಷ್ಯರ ಅಸ್ಥಿ

[illegible] ನೆಹರೂರಿಂದ ಸ್ವೀಕಾರ

14-1-49 ರಂದು, ಪಂ ಜವಾಹರಲಾಲ ನೆಹರೂರವರು ಸಾರಿಪುತ್ರ ಮತ್ತು ಮೊಗ್ಗಲಾನ ಎಂಬ ಬುದ್ಧನ ಇಬ್ಬರು [illegible] ಭಾಗ [illegible] ಕಲಕತ್ತೆಯಲ್ಲಿ ಸ್ವೀಕರಿಸಿ ಮಹಾಬೋಧಿ ಸಂಘಕ್ಕೆ ಒಪ್ಪಿಸುವರು ಮಾಸ್ಟರ್ [illegible] ಮುಖರ್ಜಿಯವರು ಈ ಸಂಘದ [illegible] ಈ ಜಗತ್ [illegible] ಕೊಲೊಂಬೋದಿಂದ [illegible] ಲಾಗುತ್ತದೆ ಈ ಸ್ವೀಕಾರ [illegible] ಬರ್ಮಾ, ಚೈನಾ, ಸಯಾಂ, ಕಾಂಬೋಡಿಯಾ, ಸಿಕ್ಕಿಮ್, ಭೂತಾನ್ ದೇಶಗಳ ಪ್ರತಿನಿಧಿಗಳ ಸಮಕ್ಷಮದಲ್ಲಿ ಜರುಗುವುದು.

ABC

ಸಿಟಿ ಲಾಡ್ಜ್

ಊಟದ ಹೋಟೆಲ್,

ಬೆಂಗಳೂರು ರೋಡ್, ಬಳ್ಳಾರಿ.

- ಸುಂದರ ವಸತಿಸ್ಥಾನ
- ಗಾಳಿ ಬೆಳಕುಗಳ ಸ್ವಚ್ಛ ರೂಂಗಳು
- ತಣ್ಣೀರು, ಬಿಸಿನೀರಿನ ಸ್ನಾನ
- ವ್ಯಾಪಾರ, ಉದ್ಯಮಗಳಿಗೆ ಮಧ್ಯ ಸ್ಥಳ
- ರುಚಿ, ಆರೋಗ್ಯಕರ ಭೋಜನ ಮತ್ತು ಫಲಹಾರ.
- ವಿನಯಶೀಲ ನೌಕರವರ್ಗ.

ಪರ್ಮಿಟ್ ಕೊಟ್ಟಲ್ಲಿ ಸಂತೋಷ ಕೂಟಗಳಿಗೂ ಅಲ್ಪೋಪಹಾರಗಳಿಗೂ ಬೇಕಾದಂಥ ಪಕ್ವಾನ್ನ ಫಲಾಹಾರಗಳನ್ನು ಸರಿಯಾದ ದರಗಳಿಂದ ಒದಗಿಸುತ್ತೇವೆ.

ಬಳ್ಳಾರಿಗೆ ಬಂದರೆ ಇಲ್ಲಿಯೇ ವಸತಿಮಾಡಲು ಮರೆಯಬೇಡಿರಿ.

While At Bellary, Forget Not To Stay At

The best Boarding & Lodging House

City Lodge, BANGLORE ROAD, BELLARY

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ.

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡ್‌ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು: – ಪ್ರಾರಂಭಿಕ:—ಮಾಧ್ಯಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ.

ವೇಳೆ.—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ತಿಳಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

10—1—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri...

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಒಕ್ಕರಿಯ
ರಾಷ್ಟ್ರೀಯ ವಾರಪತ್ರಿಕೆ
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ:-
ಟಿ. ಬಿ. ಕೇಶವರಾವ್.

ವರ್ಷ ೧ | ... | ಸಂಚಿಕೆ ೨

ಭಾರತದಲ್ಲಿಯ ವಿದೇಶೀ ವಸಾಹತುಗಳು

ಜೈಪುರದ ಕಾಂಗ್ರೆಸ್ಸಿನ ಅಧಿವೇಶನದ ವಿಷಯ ನಿಯಾಮಕ ಸಭೆಯಲ್ಲಿ ವಿದೇಶೀ ವಸಾಹತುಗಳ ಸಂಬಂಧ ಒಂದು ಗೊತ್ತುವಳಿಯ ಬಗ್ಗೆ ಭಾರತ ಪ್ರಧಾನಮಂತ್ರಿ ಪಂಡಿತ ಜವಾಹರಲಾಲರು ಮಾತನಾಡುತ್ತ ಭಾರತ ಸರಕಾರದ ಒಂದು ಒಸು ... ಧೋರಣೆಯನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲಿಯೂ ಏಶಿಯಾ ಖಂಡದ ... ಭಾರತದ ... ತುಣುಕು ಪ್ರದೇಶವಾದರೂ, ... ಇರತಕ್ಕದ್ದಲ್ಲವೆಂದು ಖಂಡಿತವಾಗಿ ಹೇಳಿದ್ದಾರೆ. ಭಾರತದಲ್ಲಿ ಈಗಿರುವ ... ವಸಾಹತುಗಳೆಲ್ಲ ಭಾರತದಲ್ಲಿಯೇ ಕೂಡಿ ಹೋಗಬೇಕು. ಭಾರತ ಸರಕಾರದ ಇದೇ ಧೋರಣೆಯನ್ನು ತಳೆಯಬೇಕೆಂದು ಹೇಳುತ್ತ ಪಂಡಿತ ಜವಾಹರಲಾಲರು "ಈ ವಿದೇಶೀ ವಸಾಹತುಗಳು ನಿಶ್ಚಿತವಾಗಿ ಕೊನೆಗೆ ಅಪ್ಪ ಭಾರತದಲ್ಲಿ ಲೀನಹೊಂದುವುದು ಅನಿವಾರ್ಯ. ಇದೇ ಧೋರಣೆಯನ್ನೇ ಭಾರತವು ತಳೆಯಬೇಕು. ಏಕೆಂದರೆ ನಮ್ಮ ರಾಷ್ಟ್ರದಲ್ಲಿ ವಿದೇಶೀಯರಿಗೆ ರಾಜ್ಯವಾಳಲು ಎಂದಿಗೂ ಅವಕಾಶವನ್ನು ಕೊಡತಕ್ಕದ್ದಲ್ಲ. ಈ ಧೋರಣೆಯನ್ನು ತಳೆಯಬೇಕಾದರೆ ನಾವು ಅಂತರಾಷ್ಟ್ರೀಯ ಪದ್ಧತಿಯನ್ನು ಅನುಸರಿಸುವುದು ಅವಶ್ಯವಿರುತ್ತದೆ. ನಾವು ವಿದೇಶೀ ಸರಕಾರಗಳೊಡನೆ ವ್ಯವಹಾರ ನಡೆಸಬೇಕಾಗಿದೆ. ಭಾರತ ಸರಕಾರದ ಸಂಬಂಧವಿರುವ ಕಾಂಗ್ರೆಸ್ಸಿನಂತಹ ಮಹಾಸಂಸ್ಥೆ ... ಅನ್ಯವಹಾರಿಕವಾಗಿ ವರ್ತಿಸುವಂತಿಲ್ಲ ತಮಗೆ ಇಷ್ಟಬಂದಂತೆ ವರ್ತಿಸಲು ಆ ಪ್ರದೇಶಗಳ ನಿವಾಸಿಗಳು ಸ್ವತಂತ್ರರಿರುವರು" ಎಂದು ನುಡಿದಿದ್ದಾರೆ.

ಪಂಡಿತ ಜವಾಹರಲಾಲರು ಬರಿ ಭಾರತದಲ್ಲಿಯ ವಿದೇಶೀ ವಸಾಹತುಗಳ ಬಗ್ಗೆ ಅಷ್ಟೇ ಹೇಳದೆ ಇಡೀ ಜಗತ್ತಿನಲ್ಲಿಯೇ ಈ ಸಾಮ್ರಾಜ್ಯವಾದ ಮತ್ತು ವಸಾಹತು ವಾದಗಳ ನಿರ್ಮೂಲನಕ್ಕೇ ಭಾರತವು ಪ್ರಯತ್ನಿಸಬೇಕೆಂದು ಸ್ಪಷ್ಟಪಡಿಸುತ್ತ "ಸಾಮ್ರಾಜ್ಯವಾದ ಮತ್ತು ವಸಾಹತು ವಾದಗಳನ್ನು ಇಡೀ ಜಗತ್ತಿನಲ್ಲಿ ಮುಖ್ಯವಾಗಿ ಏಶಿಯಾದಲ್ಲಿ ನಾಶಗೊಳಿಸಬೇಕೆಂಬ ತತ್ವವೇ ನಮ್ಮದು. ಯಾವದನ್ನು ಮಾಡಿ ತೋರಿಸಲು ಅಸಾಧ್ಯವೋ ಅದನ್ನು ಆಡಿ ತೋರಿಸಬಾರದೆಂಬ ಪಂಥಕ್ಕೆ ನಾನು ಸೇರಿದವನು. ಭಾರತದ ಸ್ವಾತಂತ್ರ್ಯ ಹಾಗೂ ಜಾಗತಿಕ ಶಾಂತಿ ಇವುಗಳ ದೃಷ್ಟಿಯಿಂದ ಈ ಸಾಮ್ರಾಜ್ಯವಾದ ವಸಾಹತುವಾದಗಳು ನಾಶವಾಗಬೇಕೆಂದೂ ಈ ವಾದಗಳು ಜಗತ್ತಿನ ಯಾವದೇ ಭಾಗದಲ್ಲಿ ತಲೆದೋರಿದರೂ, ಅದರಿಂದ ಏಶಿಯಾಕ್ಕೆ ಗಂಡಾಂತರವಿದೆ" ಎಂದು ಸಾರಿದ್ದಾರೆ.

ಈ ಬಗ್ಗೆ ಕಾಂಗ್ರೆಸ್ಸಿನ ಕರ್ತವ್ಯವನ್ನು ನಿರ್ದೇಶಿಸುತ್ತ "ತನ್ನ ಕೈಲಾಗದ ವಿಷಯಗಳ ಬಗ್ಗೆ ಕಾಂಗ್ರೆಸ್ ಯಾವ ಮಾತುಗಳನ್ನೂ ಆಡಬಾರದು. ವಸಾಹತುವಾದ ಮತ್ತು ಸಾಮ್ರಾಜ್ಯವಾದ ಇವು ಎಲ್ಲಿಯೇ ಇರಲಿ ಅವುಗಳನ್ನು ನಿರ್ಮೂಲ ಮಾಡಬೇಕೆಂಬ ತತ್ವಕ್ಕೆ ಕಾಂಗ್ರೆಸ್ ಬದ್ಧವಾಗಿರಬೇಕು. ಏಶಿಯಾದ ಯಾವ ಭಾಗದಲ್ಲಿಯಾದರೂ, ವಿದೇಶೀಯರು ವಸಾಹತುಗಳನ್ನು ಸ್ಥಾಪಿಸದಂತೆ ನೋಡಿಕೊಳ್ಳುವುದೇ ಕಾಂಗ್ರೆಸ್ಸಿನ ಧ್ಯೇಯವಾಗಿರಬೇಕು. ಏಶಿಯಾದ ಉಳಿದ ಭಾಗಗಳು ಸ್ವತಂತ್ರವಾಗಲು ಕೆಲಕಾಲವೂ ಹಿಡಿಯಬಹುದು. ಆದ್ದರಿಂದ ನಾವು ಅವಸರ ಪಡಬಾರದು. ದುಡುಕಿನಿಂದ ನಡೆದರೆ ಗಂಡಾಂತರವಿದೆ. ಕಾರಣ ನಾವು ಮೊದಲು ಭಾರತದಲ್ಲಿಯ ವಿದೇಶೀ ವಸಾಹತುಗಳ ಕಡೆಗೆ ಲಕ್ಷ್ಯಗೊಡಬೇಕು. ನಾವು ಅನುಸರಿಸುವ ಪದ್ಧತಿಯು ಅಲ್ಲಿಯ ಜನಮತಕ್ಕೆ ಅನುಗುಣವಾದುದಿರಬೇಕು" ಎಂದು ಹೇಳಿದರು.

ಇಷ್ಟೇ ಅಲ್ಲದೆ ಭಾರತದಲ್ಲಿ ಅಲ್ಲಲ್ಲಿ ತುಣುಕು ತುಣುಕಾಗಿರುವ ... ಜನರ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ರಾಜಕೀಯದ ಬಗ್ಗೆ ವಿವರಿಸುತ್ತ ಈ ಪ್ರದೇಶಗಳ ಸಾಂಸ್ಕೃತಿಕ ಜೀವನದಲ್ಲಿ ... ಭಾರತವು ... ಶತಮಾನಗಳವರೆಗೆ ವಿದೇಶೀ ... ಈ ವಸಾಹತುಗಳು ನಾಲ್ಕು ಶತಮಾನಗಳಿಂದ ... ದ್ದುವು. ಆದ್ದರಿಂದ ಇವರ ಮೇಲೆ ನಮಗಿಂತಲೂ ವಿದೇಶೀಯರ ... ಅಧಿಕವಾಗಿರುತ್ತದೆ. ಇವರ ಸಾಂಸ್ಕೃತಿಕ, ಶೈಕ್ಷಣಿಕ, ರಾಜಕೀಯ ... ನಮಗಿಂತ ಬೇರೆಯಾಗಿರುತ್ತವೆ. ಭಾರತದಲ್ಲಿ ಕೂಡಿ ಹೋಗಿ ... ಜೀವವನ್ನು ಮಾರ್ಪಡಿಸುವಂತೆ ಇವರನ್ನು ಕೇಳಿಕೊಳ್ಳುವುದು ... ವಾಗಲಾರದು. ಭಾರತದಲ್ಲಿ ಈ ವಸಾಹತುಗಳು ಕೂಡಿ ಹೋದ ತಮ್ಮ ಫ್ರೆಂಚ ಅಥವಾ ಪೋರ್ತುಗೀಜ ಸಂಸ್ಕೃತಿಯನ್ನು ಬಿಟ್ಟುಕೊಡಬೇಕಿಲ್ಲವೇ ಅವನ್ನೇ ಹಾಗೇ ಸಾಗಿಸುವುದು ಅವರ ಮನಸ್ಸಿನ ಮೇಲೆಯೇ ಅವಲಂಬಿಸಿರುತ್ತದೆ" ಎಂದು ಹೇಳಿ ಆ ವಸಾಹತು ಸಂಬಂಧದ ಗೊತ್ತುವಳಿಯನ್ನು ಸ್ವೀಕರಿಸಲು ಸಭೆಗೆ ವಿನಂತಿಸಿದರು.

ಒಂದು ವರ್ಷ ತುಂಬಿ ಎರಡನೆಯ ವರ್ಷದಲ್ಲಿ ಕಾಲಿಡುತ್ತಿರುವ ಸ್ವತಂತ್ರ ಭಾರತದ ನಿಲುವೆಯ ಶ್ರೇಷ್ಠತೆಯನ್ನು ಪ್ಯಾರಿಸದಲ್ಲಿಯ ಸಂಯುಕ್ತ ಸಂಘದ ಸಭೆಯಲ್ಲಿ ಸೇರಿದ್ದ ಬಹುತರ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳ ... ದಿಂದ ಜಾಜ್ವಲ್ಯತೆಯಿಂದ ಮಂಡಿಸುತ್ತ ಜವಾಹರಲಾಲರು ... ರ ದೃಷ್ಟಿಯನ್ನು ಏಶಿಯಾ ಖಂಡದತ್ತ ಹೊರಳಿಸಲು ಅಧಿವೇಶನದ ವಿಷಯ ನಿಯಾಮಕ ಸಮಿತಿಯಲ್ಲಿಯೂ ವಸಾಹತು ಸಂಬಂಧವಾಗಿ ದಕ್ಷ ಪಾತ್ರವಹಿಸಿದರು. ಸಾಮ್ರಾಜ್ಯ ವಸಾಹತು ವಾದಿಗಳ ... ಶಾಂತಿಯ ದಾರಿಯ ... ಉಪಾಯವನ್ನು ಅತ್ಯಂತ ನಿಶ್ಚಿತತೆಯಿಂದ ... ಆ ದಾರಿಯಿಂದ ನಡೆಯಲು ಅವರ ಸದಸದ್ವಿವೇಕಕ್ಕೆ ... ದ್ದಾರೆ. ... ಸ್ಥಿತಿ ... ತನ್ನ ... ಕಾರ್ಯಕ್ರಮದ ರೀತಿ ... ಆ ... ಭಾರತದಲ್ಲಿ ... ಅಧಿಕಾರವಿರುವಾಗಿನಂತೆ ... ಹೋಗುವುದು ... ಮಾತ್ರ ಫ್ರೆಂಚರಿಗಾಗಲಿ, ಪೋರ್ತುಗೀಜರಿಗಾಗಲಿ ... ಆದರೂ, ಕೆಲವು ... ಅಧಿಕಾರ ಕೂಡಲೆ ಬಿಟ್ಟುಕೊಡ ... ಸ್ವಭಾವಕ್ಕೆ ಅನಪೇಕ್ಷಿತ ... ಬಹುದು ... ಆದರೆ ಪ್ರಸಂಗವೇ ಬಂದಾಗ ... ಇವೆಲ್ಲ ... ಫ್ರೆಂಚ ಮತ್ತು ಪೋರ್ತುಗೀಜರ ಆಡಳಿತಕ್ಕೆ ... ಭಾರತದ ... ಭಾಗಗಳು ಭಾರತದಲ್ಲಿ ಕೂಡಿಹೋಗದೆ ಗತ್ಯಂತರವಿಲ್ಲ.

ಪಂಡಿತ ಜವಾಹರಲಾಲರು ಈ ವಿದೇಶೀ ವಸಾಹತು ಮತ್ತು ಸಾಮ್ರಾಜ್ಯ ವಾದಗಳು ಖಂಡಿತವಾಗಿ ಜಾಗತಿಕ ಅಶಾಂತಿಗೆ ಕಾರಣ ಎಂಬ ... ಮತದವರಾಗಿದ್ದಾರಲ್ಲದೆ, ಜಾಗತಿಕ ಶಾಂತಿಯ ದೃಷ್ಟಿಯಿಂದ ಈ ... ಕಿತ್ತಿಸೆಯಲು ಪ್ರಾಮಾಣಿಕವಾಗಿ ಪ್ರಯತ್ನಿಸುವವರೂ ಆಗಿದ್ದಾರೆ. ಜವಾಹರಲಾಲರ ನೇತೃತ್ವದಲ್ಲಿ ಭಾರತ ಸರಕಾರದ ವಿದೇಶ ನೀತಿಯು ... ಯರ ಒಂದಂಗುಲ ಭೂಮಿಗೆ ಆಶೆ ಪಡದಂತಹದೂ, ತನ್ನ ಒಂದ ... ಭೂಮಿಯನ್ನು ಪರಕೀಯರಿಗೆ ಬಿಟ್ಟುಕೊಡುವ ಬಯಕೆಯಿಲ್ಲದ ... ಆಗಿರುತ್ತದೆ ಎಂದು ಎಂದೋ ಸ್ಪಷ್ಟವಾಗಿದೆ. ಇದರಂತೆ ಎಲ್ಲ ರಾಷ್ಟ್ರ

ಮಿಂಚೇರಿ ಕವಿಸನ್ಮಾನ.

ಕಳೆದ ಸೋಮವಾರ ಈ ಊರಲ್ಲಿ ಮೈಸೂರು ಆಸ್ಥಾನ ಪಂಡಿತ ಸರ್ವದರ್ಶನ ತೀರ್ಥ ಶ್ರೀ ವೈ. ನಾಗೇಶಶಾಸ್ತ್ರಿಗಳ ಸನ್ಮಾನವು ಶ್ರೀ ಷಡಕ್ಷರ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಾಯಿತು. ಈ ಸಮಾರಂಭಕ್ಕಾಗಿ ಬಂದ ಮಹನೀಯರ ಸ್ವಾಗತದ ನಂತರ ಕವಿಸನ್ಮಾನ ಕಾರ್ಯಕ್ರಮವಾರಂಭವಾಗಿ ಭಾಷಣಕಾರರು ಕವಿಗ್ರಂಥಗಳಾದ ಭಗವದ್ಗೀತೆ, ಕುಮಾರ ಸಂಭವ, ರಘುವಂಶ ಮುಂತಾದವುಗಳ ಪುರಾಣ ಇವುಗಳ ವಿಷಯವನ್ನೆತ್ತಿ ಪ್ರಶಂಸಿಸಿದರು. ಪಂಡಿತ ವರದಾಚಾರ್ಯನವರು ತಮ್ಮ ಗ್ರಾಮದ ಪರವಾಗಿ ೧೧೬ ರೂ.. ಶ್ರೀ ಮದನಗೌಡರು ತಮ್ಮ ಗ್ರಾಮದವರ ಪರವಾಗಿ ೧೦೨ ರೂ., ಓಬಳಾಪುರದವರು ತಮ್ಮ ಗ್ರಾಮದವರ ಕಡೆಯಿಂದ ೭೭೭ ರೂ., ಅರ್ಪಿಸಿದರು. ಶ್ರೀ ಶಾಸ್ತ್ರಿಗಳು ಇದಕ್ಕೆ ಉತ್ತರವೀಯುತ್ತಾ ಈ ಹಣವನ್ನು ಗವಿಸಿದ್ದೇಶ್ವರ ಪುರಾಣಕ್ಕೆ ವಿನಿಯೋಗಿಸುವುದಾಗಿ ಹೇಳಿ ತಮ್ಮ ಕೃತಿಯನ್ನು ಕವಿಸನ್ಮಾನ ಪುಸ್ತಕ ಪ್ರಕಟಣೆಗೆ ಧಾರೆಯೆರೆಯುವುದಾಗಿ ಹೇಳಿದರು. ಆ ರಾತ್ರಿ ಶ್ರೀಮಾನ್ ಜೋಳದರಾಶಿ ದೊಡ್ಡನಗೌಡ, ಈಶ್ವರಗೌಡರು ಶಾಸ್ತ್ರಿಗಳ ಕಾವ್ಯಗಾನವನ್ನು ಹೃದಯಂಗಮವಾಗಿ ಮಾಡಿದರು.

ತಮ್ಮ ಸಾಮ್ರಾಜ್ಯ ಮತ್ತು ವಸಾಹತುವಾದಗಳನ್ನು ತೊರೆದು ಅವರವರದನ್ನು ಅವರವರಿಗೇ ಬಿಟ್ಟುಕೊಟ್ಟು ತಮ್ಮದನ್ನು ತಾವಿಟ್ಟುಕೊಳ್ಳುವ ಧೋರಣೆಯನ್ನು ವಹಿಸಿದರೆ ಜಾಗತಿಕ ಅಶಾಂತಿ ಅಸಂಭವವೆಂದೇ ಹೇಳಬೇಕಾಗುತ್ತದೆ.

"ಅವು ಅಟ್ಟದಮೇಲೆ ಕರ ಜೆಟ್ಟವನೋಲೆ" ಎಂಬ ಗಾದೆಯಂತೆ ಎಲ್ಲಿಯ ಪಾಂಡಿಚೆರಿ ಎಲ್ಲಿಯ ಫ್ರಾನ್ಸ್ ವ್ಯಾಪಾರ ಸೌಲಭ್ಯಕ್ಕಾಗಿ ಒಂದುಕಾಲದಲ್ಲಿ ಆಕ್ರಮಣ ಮಾಡಿದುದು ಸಾಮ್ರಾಜ್ಯದ ತಳಹದಿಯಾಗಬೇಕೆ? ಮೊನ್ನೆ ಆದ ಪಾಂಡಿಚರಿ ಚಂದ್ರನಗರ ಮೊದಲಾದ ಸ್ಥಳಗಳಲ್ಲಿಯ ಗಲಭೆಗಳು ಅಲ್ಲಿಯ ಜನಗಳು ಭಾರತದೊಡನೆ ತಮ್ಮ ತಾಯಿನಾಡಿನೊಡನೆ ಬೆರೆಯಲು ಎಷ್ಟು ಆತುರರಾಗಿರುವುದೆಂಬುದನ್ನೇ ತೋರಿಸುತ್ತವೆಯೆಂದು ಹೇಳಬಹುದು.

ಪರಕೀಯ ಆಡಳಿತಕ್ಕೊಳಪಟ್ಟ ಒಂದು ಅಂಗುಲ ನೆಲವೂ ಏಶಿಯಾದಲ್ಲಿ ವಿಶೇಷವಾಗಿ ಭಾರತದಲ್ಲಿ ಇರಕೂಡದು ಎಂಬ ನಿಲುವೆಯನ್ನು ಭಾರತ ಕಾಂಗ್ರೆಸ್ ಸ್ವೀಕರಿಸಿದ್ದು ಸಕಾಲಿಕವೂ ಯಥಾಯೋಗ್ಯವೂ ಆಗಿದೆ ಎಂದು ಪಂಡಿತ ಜವಾಹರಲಾಲರ ವಿವರಣೆಯಿಂದ ತಿಳಿಯ ಬರದೆ ಇರಲಾರದು.

ಮೈಸೂರಿನಲ್ಲಿ ಸೈಕಲ್ ತಯಾರಿಕೆ

ಬೆಂಗಳೂರ — ಮೈಸೂರು ಸಂಸ್ಥಾನದಲ್ಲಿ ಸೈಕಲ್ಲುಗಳನ್ನು ತಯಾರಿಸುವ ಕಾರಖಾನೆಯೊಂದನ್ನು ಸ್ಥಾಪಿಸುವ ವಿಚಾರವನ್ನು ಮೈಸೂರು ಸರಕಾರವು ಯೋಚಿಸುತ್ತಿದ್ದು ಪ್ರಾಥಮಿಕ ಪರಿಶೀಲನೆಯ ಕಾರ್ಯವು ನಡೆದಿದೆಯೆಂದು ಮೈಸೂರಿನ ವಿಧಿಮಂಡಲದಲ್ಲಿ ಒಂದು ಪ್ರಶ್ನೆಗೆ ಉತ್ತರವೀಯುತ್ತ ಶ್ರೀ. ಕೆ. ಸಿ. ರೆಡ್ಡಿಯವರು ತಿಳಿಸಿದರು. ದಿನವೊಂದಕ್ಕೆ ೬೦೦೦ ಸೈಕಲ್ಲುಗಳನ್ನು ತಯಾರಿಸುವ ಹಂಚಿಕೆಯಿದೆ ಎಂದೂ ಅವರು ತಿಳಿಸಿದರು.

ಹೈದರಾಬಾದ ಸಂಸ್ಥಾನವನ್ನು ಭಾಷಾವಾರ ಪ್ರಾಂತಗಳಲ್ಲಿ ಹಂಚುವ ಗೊತ್ತುವಳಿ

ಸಿಕಂದರಾಬಾದ — ಹೈದರಾಬಾದ ಸಂಸ್ಥಾನವನ್ನು ಭಾಷಾವಾರ ಪ್ರಾಂತಗಳಲ್ಲಿ ಹಂಚಿಬಿಡಬೇಕೆಂಬ ಗೊತ್ತುವಳಿಯನ್ನು ಸ್ವಾಮಿ ರಮಾನಂದ ತೀರ್ಥರ ಧುರೀಣತ್ವದಲ್ಲಿರುವ ಕಾಂಗ್ರೆಸ್ ಸಿದ್ಧಪಡಿಸುತ್ತಿದೆಯೆಂದೂ ಹೈದರಾಬಾದ ಘಟನಾಸಭೆಯು ಕೂಡಿದಾಗ ಈ ಗೊತ್ತುವಳಿಯು ಸರ್ವಾನುಮತದಿಂದಲ್ಲವಿದ್ದರೂ ಬಹುಮತದಿಂದ ಪಾಸಾಗಬಹುದೆಂಬ ಆಶೆ ಇದೆಯೆಂದೂ ತಿಳಿದಿದೆ. ಈ ಗೊತ್ತುವಳಿಯ ಪ್ರಕಾರ ಭಾಷಾವಾರು ಪ್ರಾಂತರಚನೆಯಾಗುವವರೆಗೆ ಪ್ರಾದೇಶಿಕ ಕಮೀಶನರರ ಆಡಳಿತದಲ್ಲಿ ಬೇರೆ ಬೇರೆ ಭಾಷೆಗಳ ಭಾಗಗಳಿರಬೇಕೆಂದಿದೆ.

— ಹೈದರಾಬಾದದಲ್ಲಿ ಸರಕಾರಿ ನೌಕರಿ ಈ ಸಂಸ್ಥಾನದಲ್ಲಿ ಇನ್ನು ಮುಂದೆ ಹಿಂದೂ ಮುಸಲ್ಮಾನ ಸಂಖ್ಯಾನುಗುಣವಾಗಿ ಸರಕಾರಿ ನೌಕರಿ ಕೊಡಬೇಕೆಂದು ಸರಕಾರಿ ಆಜ್ಞೆಯಾಗಿದೆ.

ಕಾಂಗ್ರೆಸ್ ಜನರ ನೈರ್ಮಲ್ಯ

ಸಮಿತಿಗಳ ಸ್ಥಾನದಲ್ಲಿರುವ ಕಾಂಗ್ರೆಸ್ ಜನರೂ ಕಾಂಗ್ರೆಸ್ ಶಾಸನಸಭ್ಯರೂ ಸರಕಾರದ ಮೂಲಕ ಯಾವ ಕಂಟ್ರಾಕ್ಟ್ ಲೈಸನ್ಸ್ ಮತ್ತಿತರ ಯಾವ ಅನುಕೂಲ್ಯಗಳನ್ನೂ ಸ್ವತಃ ಪಡೆಯಬಾರದೆಂದೂ ಅಥವಾ ಅಪ್ರತ್ಯಕ್ಷರೀತಿಯಲ್ಲಿ ಹೊಂದಬಾರದೆಂದೂ ಇರುವರ್ಥದ ನಿರ್ದಿಷ್ಟ ಸೂಚನೆಗಳು ಕಾಂಗ್ರೆಸ್ ವರಿಷ್ಠರಿಂದ ಹೋಗಲಿವೆ. ಇವುಗಳನ್ನುಲ್ಲಂಘಿಸಿದವರು ಶಿಕ್ಷಾ ಪಾತ್ರರಾಗಲಿರುವರೆಂಬಂಶವನ್ನು ತಿಳಿಸಲಾಯಿತು.

— ಈ ತಿಂಗಳ ೧೫ ನೆಯ ದಿನಾಂಕ ಲೆಫ್ಟಿನೆಂಟ್ ಜನರಲ್ ಕಾರಿಯಪ್ಪನವರು ಅಖಿಲಭಾರತ ಸೈನ್ಯದ ಮುಖ್ಯಾಧಿಕಾರಿಯ ಹುದ್ದೆಯನ್ನು ವಹಿಸಿದರು.

— ಯಹೂದಿಯರ ರಾಜ್ಯವಾದ ಇಸ್ರಾಯಿಲ (ಪಾಲಿಸ್ಥಾನ) ದಲ್ಲಿ ಬ್ರಿಟೀಶರ ೫ ವಿಮಾನಗಳು ಪ್ರವೇಶಿಸಿದ ಕಾರಣ ಅವು ಕೆಳಗಿಳಿಸಲ್ಪಟ್ಟವು. ಇದರಿಂದ ಬ್ರಿಟನದಲ್ಲಿ ದೊಡ್ಡ ಆಂದೋಲನವುಂಟಾಗಿದೆ. ಇಸ್ರಾಯಿಲದಮೇಲೆ ಬ್ರಿಟನ್ನಿನ ಕಾರಸ್ಥಾನದ ಬಗ್ಗೆ ಇಸ್ರಾಯಿಲ ದೇಶವು ಭದ್ರತಾ ಮಂಡಲಕ್ಕೆ ಫಿರ್ಯಾದು ಮಾಡಿದೆ.

— ಚೀನದಲ್ಲಿ ಯುದ್ಧ ಕೆಂಪು ಸೇನೆಗಳು ಪಶ್ಚಿಮದಲ್ಲಿ ಮುನ್ನುಗ್ಗಿ ನಾನ್‌ಕಿಂಗ್ ಸಮೀಪಿಸುತ್ತಿವೆ. ಕಮ್ಯೂನಿಸ್ಟರು ಚೀನಾಧಿಪತಿ ಚಿಯಾಂಗ್ ಶೇಕರ ಶಾಂತಿಸಂಧಾನಕ್ಕೆ 'ಓ'ಗೊಡಲಿಲ್ಲ. ಚಿಂಗೀಶೇಕರು ತಮ್ಮ ಆಪತ್ತು ಆಸ್ತಿ ಪತ್ನಿ ಅಸ್ತ್ರದೊಂದಿಗೆ ಫರ್ಮೋಸಾ ದ್ವೀಪಕ್ಕೆ ಓಡಿ ಹೋಗಿರುತ್ತಾರೆಂಬ ಸುದ್ದಿ ಬಂದಿದೆ [illegible] ಕೈಬಿಟ್ಟಂತಾಗಿದೆ

— ದಿಲ್ಲಿಯಲ್ಲಿ ನಡೆಯುವ ಇಂಡೋನೇಶಿಯಾದ ವಿಷಯ ಭದ್ರತಾಮಂಡಲದ ಸ್ಥಾನವನ್ನು ಅತಿಕ್ರಮಿಸದೆ ಅದನ್ನು ಬಲಗೊಳಿಸುವ ಪರೆ-ದೂ ಏಶಿಯಾದ ರಾಜ್ಯಗಳು ಡಚ್ಚರ ಅತ್ಯಾಚಾರ ಖಂಡನೆಯ ಬಗ್ಗೆ ಎಂಥಾ ಭಾವವನ್ನು ಹೊಂದಿರುವವೆಂಬುದನ್ನು ತೋರಿಸಲು ಈ ಸಭೆಯು ಸಮಾವೇಶವೆ-ದೂ ಅಂತರ್ರಾಷ್ಟ್ರೀಯ ಶಾಖೆಯು ಪ್ರಕಟಿಸಿದೆ ಏಶಿಯಾದ ೧೯ ದೇಶಗಳು ಸಭೆಗೆ ಬರಲು ಸಮ್ಮತಿಸಿವೆ.

ಸಾಧುವೇಷಧಾರಿ ಆರ್. ಎಸ್. ಎಸ್. ಕಾರ್ಯಕರ್ತನ ಬಂಧನ

ಬನಾರಸ [illegible] ಘಾಟ ಕ್ಷೇತ್ರದಲ್ಲಿಯ ಒಂದು ಮಂದಿರದ ಸಮೀಪದಲ್ಲಿರುವ ಒಬ್ಬ ಸಾಧುವಿನ ಕೋಣೆಯನ್ನು ಸಿ ಐ ಡಿ ಯವರು ಶೋಧಿಸಿ ಆರ್ ಎಸ್ ಎಸ್. ದ ಸಂಘಟನೆಯ ಬಗ್ಗೆ ಪ್ರಚಾರವಾಗುವ ಹಸ್ತಪತ್ರಿಕೆಗಳನ್ನು ವಶಪಡಿಸಿಕೊಂಡರಲ್ಲದೆ ಆ ಸಾಧುವನ್ನು ಕೈದುಮಾಡಿದರು

ಓರ್ವ ತರುಣಿಯನ್ನು ಆನೆ ಅಪಹರಿಸಿತು

ಲಖನೌ ಇಲ್ಲಿಯ ಸಮೀಪದ ಒಂದು ಹಳ್ಳಿಯಲ್ಲಿ ನದಿಯ ದಂಡೆಯ ಹತ್ತಿರ ಇಬ್ಬರು ಚಿಕ್ಕ ಬಾಲಕರೊಂದಿಗೆ ಬಂದಿದ್ದ ತರುಣಿಯನ್ನು ಒಂದು ಕಾಡಾನೆಯು ಸೊಂಡಲಿಯಿಂದ ಎತ್ತಿಕೊಂಡು ಹೋಗಿ ಒಂದು ತಗ್ಗಿನಲ್ಲಿಳಿಸಿ ಮೇಲೆ ಉಸುಬು ಹಾಗೂ ಗಿಡದ ಟೊಂಗೆಗಳನ್ನು ಹಾಕಿತು. ಕೂಡಲೇ ಅವಳ ಸಂಗಡಿದ್ದ ಹುಡುಗರು ಹಳ್ಳಿಗೆ ಬಂದು ನಡೆದ ಸಂಗತಿಯನ್ನು ತಿಳಿಸಲು ಜನರು ಹೋಗಿ ಅವಳನ್ನು ಹುಡುಕಿ ಕರೆದುಕೊಂಡು ಬಂದರು. ಅವಳೀಗ ಇಲ್ಲಿಯ ಆಸ್ಪತ್ರೆಯಲ್ಲಿ ಶುಶ್ರೂಷ ಹೊಂದುತ್ತಿರುವಳು.

—(೦)—

ಹರಿಜನ ಲೇಖ

ಭಾರತಕ್ಕೊಂದು ರಾಷ್ಟ್ರಭಾಷೆ

ಕೆಲವು ಸಂಶಯಗಳಿಗೆ ಸಮಾಧಾನ

ಲೇಖಕರು ಡಾ. ರಾಜೇಂದ್ರ ಪ್ರಸಾದ

(ಡಾ. ರಾಜೇಂದ್ರ ಪ್ರಸಾದರು ರಾಷ್ಟ್ರಭಾಷೆಯ ಬಗ್ಗೆ ಬರೆದೆರಡು ಲೇಖಾಂಕಗಳು ನವಭಾರತದ ಹಿಂದಿನ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಈ ಲೇಖದಲ್ಲಿ ಅವರು ಕೆಲವು ಸಂಶಯಗಳಿಗೆ ಸರಿಯಾದ ಸಮಾಧಾನವನ್ನು ಕೊಟ್ಟಿದ್ದಾರೆ)

ಶ್ರೀ ಕಿ ಘ ಮಶ್ರುವಾಲರು "ಹರಿಜನ"ದಲ್ಲಿ ಪ್ರಸಿದ್ಧವಾದ ನನ್ನ ಲೇಖಗಳಿಂದ ಉದ್ಭವಿಸಿರುವ ಎರಡು ಪ್ರಶ್ನೆಗಳಿಗೆ ಸಮಾಧಾನ ಕೊಡಬೇಕೆಂದು ಕೇಳಿದ್ದಾರೆ.

೧ ಹೈಕೋರ್ಟು, ವಿಶ್ವವಿದ್ಯಾಲಯಗಳು ಇತ್ಯಾದಿಗಳ ಭಾಷೆ

ಮೊದಲನೆ ಪ್ರಶ್ನೆಯ ಬಗ್ಗೆ ಅವರು ಬರೆಯುತ್ತಾರೆ.

"ಹೈಕೋರ್ಟುಗಳ ಭಾಷೆ ಮತ್ತು ವಿಶ್ವವಿದ್ಯಾಲಯಗಳಲ್ಲಿನ ಬೋಧಭಾಷೆ ಇವುಗಳ ಸಂಬಂಧದಲ್ಲಿ ನೀವು ಹೇಳಿರುವ ಮಾತುಗಳ ಮೇಲಿಂದ ಆವೆರಡೂ ಸಂದರ್ಭಗಳಲ್ಲಿ ಭಾರತದ ಸಾಮಾನ್ಯ (ರಾಷ್ಟ್ರ) ಭಾಷೆಯೇ ಉಪಯೋಗಿಸಲ್ಪಡಬೇಕೆಂದು ನಿಮ್ಮ ಅಭಿಪ್ರಾಯವಿರುವದಾಗಿ ನಾನು ಗ್ರಹಿಸಬಹುದೇ?"

ಮುಂದೆ ಪುನರ್ವಿಚಾರಿಸುವಾಗ ಅಭಿಪ್ರಾಯ ಪರಿವರ್ತನೆಯಾಗಬಹುದಾದರೂ ಸದ್ಯಕ್ಕಂತೂ ನನ್ನ ಭಾವನೆ ಹೀಗಿದೆ.

(೧) ಹೈಕೋರ್ಟುಗಳಲ್ಲಾದ ತೀರ್ಪುಗಳಲ್ಲಿ ಅಪೀಲಾಗಿ ಮುಖ್ಯ ನ್ಯಾಯಾಲಯಕ್ಕೆ ಹೋಗುವ ಅಥವಾ ಕಾಯದೆಯ ಪತ್ರಿಕೆಗಳಲ್ಲಿ ಪ್ರಕಟವಾಗಲು ಅರ್ಹವಾದ ತೀರ್ಪುಗಳ ಸಂಖ್ಯೆ ಸಾಮಾನ್ಯವಾಗಿ ತೀರ ಕಡಿಮೆ. ಅಪೀಲುಗಳ ಸಂದರ್ಭದಲ್ಲಿ ಹೈಕೋರ್ಟಿನ ಕೆಳಗಿನ ಅವಶ್ಯ ಎಲ್ಲ ಕಾಗದ ಪತ್ರಗಳನ್ನು ರಾಷ್ಟ್ರಭಾಷೆಗೆ ಭಾಷಾಂತರಿಸುವದು ಅವಶ್ಯ. ಕಾರಣವಾದ ಮಾತೆಂದರೆ ಈಗಿನ ಸ್ಥಿತಿಯಲ್ಲಿಯಾದರೂ ಕೆಲ ನ್ಯಾಯಸ್ಥಾನಗಳಲ್ಲಿ ಹಾಜರು ಮಾಡಿದ ಪ್ರತಿಯೊಂದು ಮಹತ್ವದ ಪತ್ರ ಮತ್ತು ದಾಖಲೆಗಳನ್ನು ಭಾಷಾಂತರಿಸಲೇಬೇಕಾಗುತ್ತದೆ ಇವುಗಳನ್ನು ಇಂಗ್ಲೀಷಿಗಿಂತ ರಾಷ್ಟ್ರಭಾಷೆಗೆ ಭಾಷಾಂತರಿಸುವದು ಎಷ್ಟೋ ಸುಲಭ.

ಕಾಯದೆಯ ಪತ್ರಿಕೆಗಳಲ್ಲಿಯೂ ನನ್ನನ್ನು ಕೇಳಿದರೆ, ಉಲ್ಲೇಖಾರ್ಹವಾದ ತೀರ್ಪುಗಳನ್ನು ರಾಷ್ಟ್ರಭಾಷೆಗೆ ಅಧಿಕೃತವಾಗಿ ಭಾಷಾಂತರವಾಡಿ ಪ್ರಕಟಿಸಬೇಕು. ದಿನದಿನವೂ ಕೊಡಲ್ಪಟ್ಟ ಅನೇಕ ತೀರ್ಪುಗಳಲ್ಲಿ ವರದಿಯಾಗತಕ್ಕವು ತೀರ ವಿರಳ. ಭಾಷಾಂತರದಲ್ಲಾಗಬಹುದಾದ ತಪ್ಪುಗಳನ್ನು ದೂರೀಕರಿಸಲು ಮೂಲ ತೀರ್ಪುಗಳನ್ನು ವರದಿ ಮಾಡಬಹುದು, ಇಲ್ಲವೆ ಪ್ರಾಂತ ಭಾಷೆಯಲ್ಲೊಂದು ರಾಷ್ಟ್ರಭಾಷೆಯಲ್ಲೊಂದು ಹೀಗೆ ಎರಡು ಶ್ರೇಣಿಗಳಾಗಿ ಅವನ್ನು ಪ್ರಕಟಿಸಬಹುದು.

(೨) ಆದರೆ ಇದರಿಂದ ಹೈಕೋರ್ಟುಗಳಲ್ಲಿ ಪ್ರಾಂತ ಭಾಷೆಗಳಿಗೆ ಮಾತ್ರ ವ್ಯಾಪ್ತಿಯಿರಬೇಕೆಂದು ತಾತ್ಪರ್ಯವಲ್ಲ. ಹೈಕೋರ್ಟುಗಳಲ್ಲಿಯೂ ವಿಶ್ವವಿದ್ಯಾಲಯಗಳಲ್ಲಿಯೂ ಪ್ರಾಂತಿಕ ಭಾಷೆ ಮತ್ತು ರಾಷ್ಟ್ರಭಾಷೆ ಇವೆರಡಕ್ಕೂ ಸಮಾನ ವ್ಯಾಪ್ತಿಯಿರಬೇಕು. ವಿಶ್ವವಿದ್ಯಾಲಯಗಳಲ್ಲಿರುವ ವಿದ್ಯಾರ್ಥಿಗಳೂ ಅಧ್ಯಾಪಕರೂ ನ್ಯಾಯಸ್ಥಾನಗಳಲ್ಲಿರುವ ವಕೀಲರೂ ನ್ಯಾಯಾಧೀಶರೂ ಆ ಪ್ರಾಂತಿಕ ಭಾಷೆಯನ್ನಾಡುವಂಥವರಾಗಿದ್ದರೆ ಅವನ್ನು ಉಪಯೋಗಿಸಲು ಅವರಿಗೆ ಆತಂಕವಿರಕೂಡದು. ಆದರೆ ಪರಪ್ರಾಂತಗಳಿಂದ ಬಂದವರಿಗೆ, ಅವರು ಪ್ರಾಂತಿಕ ಭಾಷೆಗಳನ್ನು ಅರ್ಥಮಾಡಿಕೊಳ್ಳಬೇಕೆಂದು ಅಪೇಕ್ಷಿಸಲ್ಪಟ್ಟರೂ ರಾಷ್ಟ್ರಭಾಷೆಯಲ್ಲಿ ತಮ್ಮ ವಿಚಾರಗಳನ್ನು ಪ್ರಕಟಗೊಳಿಸುವ ಸ್ವಾತಂತ್ರ್ಯವಿರಬೇಕು. ಪ್ರಾಂತದಲ್ಲಿರುವ ವಿದ್ಯಾರ್ಥಿಗಳೂ ಇತರರೂ ರಾಷ್ಟ್ರಭಾಷೆಯಲ್ಲಿ ಗಣ್ಯಜ್ಞಾನವನ್ನು ಪಡೆದಿರಬೇಕೆಂದು (ಈಗ ಅವರಿಗಿರುವ ಇಂಗ್ಲೀಷ ಜ್ಞಾನಕ್ಕಿಂತಲೂ ಹೆಚ್ಚು) ನಿರೀಕ್ಷಿಸಲ್ಪಟ್ಟಿರುವದರಿಂದ ಅದನ್ನು ಅರ್ಥಮಾಡಿಕೊಳ್ಳಲು ಅವರಿಗೆ ಸ್ವಲ್ಪವೂ ಕಠಿಣವಾಗಲಾರದು. ಇದರಿಂದ ವಿಶ್ವವಿದ್ಯಾಲಯಗಳಿಗೂ ನ್ಯಾಯಸ್ಥಾನಗಳಿಗೂ ಇತರ ಪ್ರಾಂತಗಳಿಂದಲೂ ಸಮರ್ಥರನ್ನು ತರಿಸಿ ಉಪಯೋಗಿಸಿಕೊಳ್ಳಲವಕಾಶ ದೊರೆಯುವದು. ಅಖಿಲಭಾರತ ವಿಶೇಷಜ್ಞರು ಯಾವ ಪ್ರಾಂತದಲ್ಲೇ ಇರಲಿ, ಸಹಜವಾಗಿ ರಾಷ್ಟ್ರಭಾಷೆಯನ್ನೇ ಉಪಯೋಗಿಸಬೇಕು. ಪ್ರಾಂತಭಾಷೆಗಳೂ ರಾಷ್ಟ್ರಭಾಷೆಯೂ ಸಮಸಮವಾಗಿ ಉತ್ಕರ್ಷಗೊಳ್ಳುವವೊ ಅಥವಾ ಕೆಲ ಭಾಗಗಳಲ್ಲಿ ಮೊದಲನೆಯದು ಎರಡನೆಯದನ್ನು ಮೀರಿ ಮತ್ತು ಇನ್ನು ಕೆಲವೆಡೆಗಳಲ್ಲಿ ಎರಡನೆಯದು ಮೊದಲನೆಯದನ್ನು ಮೀರಿ ಪರಿವರ್ತನವಾಗುವದೊ ಎಂಬದನ್ನು ಕಾಲವೇ ನಿರ್ಣಯಿಸಬಲ್ಲದು. ಏನಾದರೂ ರಾಷ್ಟ್ರಭಾಷೆ ಉಪೇಕ್ಷೆಗೊಳಗಾಗದು.

(೩) ಇದು ಶಾಸನ ಸಭೆಗಳ ಸಮಸ್ಯೆಯನ್ನೂ ಬಿಡಿಸುವದು. ಒಕ್ಕೂಟದಾದ್ಯಂತವೂ ಎಲ್ಲ ಕಾಯದೆಗಳು ರಾಷ್ಟ್ರಭಾಷೆಯಲ್ಲೇ ಲಿಖಿತವಾದರೂ ಪ್ರಾದೇಶಿಕ ಭಾಷೆಗಳಲ್ಲಿ ಅವುಗಳನ್ನು ಸಾರ್ವಜನೀನ ಪರಿಜ್ಞಾನಕ್ಕಾಗಿ ಅನುವಾದಿಸಲೇಬೇಕಾಗುವದು. ವಿಶ್ವವಿದ್ಯಾಲಯದ ಛಾತ್ರರೂ ವಕೀಲರೂ ಮತ್ತು ಇತರ ಶಿಷ್ಟರೂ ರಾಷ್ಟ್ರಭಾಷೆಯಲ್ಲಿ ಪರಿಣತರಾಗಿರಬೇಕೆಂದು ನಿರೀಕ್ಷಿಸಬಹುದಾದರೂ ಎಲ್ಲ ಶಾಸನ ಸಭಾಸದರಿಂದ ಹಾಗೆ ನಿರೀಕ್ಷಿಸುವದು ಸಾಧ್ಯವಿಲ್ಲ. ಅವರ ಸೌಕರ್ಯಕ್ಕಾಗಿ ಪ್ರಾಂತಿಕ ಶಾಸನ ಸಭೆಗಳಲ್ಲಾಗುವ ಎಲ್ಲ ಮೂಲ ಕಾಯದೆಗಳು ಮೊದಲು ಪ್ರಾಂತಭಾಷೆಯಲ್ಲೇ ಇರುವದವಶ್ಯ. ಆದರೆ ಪ್ರತಿಯೊಂದು ಪ್ರಾಂತವೂ ರಾಷ್ಟ್ರಭಾಷೆಯಲ್ಲಿ ಅವುಗಳ ಅನುವಾದವನ್ನು ಪ್ರಕಟಿಸಬೇಕು. ಬಹುಭಾಷಾಪ್ರಾಂತಗಳಲ್ಲಿ ಅಥವಾ ರಾಷ್ಟ್ರಭಾಷೆಯಲ್ಲೇ ಮಾತಾಡಬೇಕೆಂದಿಚ್ಛಿಸುವ ಸಭಾಸದರ ಸಂದರ್ಭದಲ್ಲಿ, ಹಾಗೆ ಮಾಡಲು ಆಡ್ಡಿಯಿರತಕ್ಕದ್ದಲ್ಲ.

ಹೇಗೆ ಇದ್ದರೂ ಅನುವಾದಗಳು ನಿವಾರ್ಯವೇ. ಸಾರ್ವಜನಿಕರಿಗೋಸ್ಕರವಾದರೂ ಅನುವಾದಿಸಬೇಕು, ಅಥವಾ ಪರಪ್ರಾಂತಿಕ ಪ್ರಯೋಜನಗಳಿಗಾಗಿಯಾದರೂ ಅನುವಾದಿಸಬೇಕು.

ಮೊದಲನೆ ಲೇಖದಲ್ಲಿ ರಾಷ್ಟ್ರಭಾಷೆಯ ಅಭ್ಯಾಸವನ್ನು ತೀವ್ರಗೊಳಿಸಬೇಕೆಂದು ನಾನು ಸ್ಪಷ್ಟವಾಗಿ ಸೂಚಿಸಿರುವೆನೆಂದು ನೆನಪು. ಹಿಂದುಸ್ತಾನದಲ್ಲಿ ವಿದ್ಯಾವಂತನೆಂದೆನಿಸಿಕೊಳ್ಳುವ ಪ್ರತಿಯೊಬ್ಬ ನಾಗರಿಕನೂ ಕನಿಷ್ಠಪಕ್ಷ ಎರಡು ಭಾಷೆಗಳನ್ನಾದರೂ ಒಂದು ಪ್ರಾಂತ ಭಾಷೆ, ಇನ್ನೊಂದು ರಾಷ್ಟ್ರಭಾಷೆ ಪರಿಣತನಾಗಿರುವ ದಿವಸ ಬಂದೀತೆಂದು ಹಾರೈಸುವೆ. ಭಾರತದಂಥ ಹಲವು ಪ್ರಾಂತಗಳಿರುವ ದೇಶದಲ್ಲಿ ಏನಾದರೊಂದು ಬಗೆಯ ಏಕರೂಪತೆಯನ್ನು ಉಳಿಸಿಕೊಳ್ಳಬೇಕಾದರೆ ಅಷ್ಟೇ ಏಕೆ, ಪರಸ್ಪರ ವಿಭಿನ್ನವಾದ ಬೇರೆ ಬೇರೆ ಭಾಷೆಗಳನ್ನಾಡುವ ಹೆಚ್ಚು ಕಡಿಮೆ ಸ್ವತಂತ್ರ ಘಟಕಗಳಲ್ಲಿ ಈ ದೇಶ ಒಡೆದು ಹೋಗದಂತೆ ತಡೆಯಬೇಕಾದರೆ, ಮೇಲೆ ಹೇಳಿದ್ದೊಂದೇ ಉಪಾಯ. ಆದುದರಿಂದ ದೇಶದಲ್ಲಿ ರಾಷ್ಟ್ರಭಾಷೆಯ ಅಭ್ಯಾಸವನ್ನು ಹೆಚ್ಚು ಪ್ರಚುರಗೊಳಿಸಬೇಕು. ದೇಶದಲ್ಲೆಲ್ಲ ಕಡೆ ವಿಶ್ವವಿದ್ಯಾಲಯಗಳಲ್ಲಿ ರಾಷ್ಟ್ರಭಾಷೆಯನ್ನು ಶಿಕ್ಷಣಮಾಧ್ಯಮವಾಗಿ ಮಾಡುವದು ಸಾಧ್ಯವಾಗದಿದ್ದರೂ ಅನೇಕಾನೇಕ ವಿದ್ಯಾರ್ಥಿಗಳು, ದೇಶಸೇವೆ ಮಾಡುವ ಮತ್ತು ಸಮಸ್ತ ದೇಶಕ್ಕೂ ಸಂಬಂಧಿಸಿದ ಸಾಮಾನ್ಯ ಹಿತಾಹಿತ ಸಂಗತಿಗಳನ್ನು ಅರಿತುಕೊಳ್ಳುವ ಹಂಬಲ ಅವರಲ್ಲಿದ್ದರೆ, ರಾಷ್ಟ್ರಭಾಷೆಯನ್ನು ವಿಶೇಷ ಪರಿಶ್ರಮದಿಂದಲ

ಭ್ಯಸಿಸಬೇಕಾಗುವದು. ವಕೀಲರು, ನ್ಯಾಯಾಧಿಕಾರಿಗಳು, ಶಾಸನ ಸಭಾಸದರು ಮತ್ತು ಮೇಲ್ತರಗತಿಗಳ ಶಿಕ್ಷಕರು ತಮ್ಮ ಕರ್ತವ್ಯಗಳನ್ನು ತೃಪ್ತಿಕರವಾಗಿ ಪಾಲಿಸಬೇಕಾದರೆ ಅವರಿಗೆ ರಾಷ್ಟ್ರಭಾಷೆಯ ಜ್ಞಾನ ಅತ್ಯವಶ್ಯ. ಈಗಾಗಲೆ ಹೇಳಿರುವಂತೆ, ನಮ್ಮ ಸಂಶೋಧನಾತ್ಮಕ ಪತ್ರಿಕೆಗಳನ್ನು ಹತ್ತಾರು ಭಾಷೆಗಳಲ್ಲಿ ಪ್ರಕಟಿಸಲು ಅದಕ್ಕೆ ಹಿಡಿಯುವ ವೆಚ್ಚದ ಮಾತಿರಲಿ, ಅಂಥ ಪತ್ರಿಕೆಗಳಿಂದ ದೊರೆಯಬಹುದಾದ ಪ್ರಯೋಜನವೂ ಈ ದೇಶದ ಮಟ್ಟಿಗೆ ಕೂಡ ತೀರ ಕಡಿಮೆಯಾಗುವದು, ನಿಷ್ಪ್ರಯೋಜನವಾದರೂ ಆಗಬಹುದು; ಅನ್ಯದೇಶಗಳು ಅವುಗಳನ್ನುಪಯೋಗಿಸುವ ಸಂಗತಿ ದೂರವೆ ಉಳಿಯಿತು. ಅವು ರಾಷ್ಟ್ರಭಾಷೆಯಲ್ಲಿ ನಡೆಯಲ್ಪಟ್ಟರೆ, ಈ ದೇಶದ ಮಟ್ಟಿಗಾದರೂ ಎಲ್ಲ ಸಂಶೋಧನಪ್ರಸಕ್ತರಿಗೆ ಅವು ಲಭ್ಯವಾಗುವವಲ್ಲದೆ, ಅವು ವಿದೇಶಗಳ ವಿದ್ವಾಂಸರ ಗೌರವಕ್ಕೆ ಪಾತ್ರರಾಗುವಷ್ಟು ಉಚ್ಚ ಶ್ರೇಣಿಯವಾಗಿದ್ದರೆ, ಭಾರತದ ಸಂಶೋಧನ ಪತ್ರಿಕೆಗಳಲ್ಲಿ ಬರುವ ವಿಚಾರಗಳ ಅಧ್ಯಯನಕ್ಕಂತ, ಪರಿಚಯವನ್ನು ಸಂಪಾದಿಸುವಗೋಸ್ಕರ ವಿದೇಶೀಯರೂ ನಮ್ಮ ರಾಷ್ಟ್ರಭಾಷೆಯನ್ನು ಕಲಿಯುವರು. ಆದಕಾರಣ, ರಾಷ್ಟ್ರಭಾಷೆಯ ಅಭ್ಯಸನ ಆಳವಾಗುತ್ತ ಹೋದಂತೆ, ವಿಶಿಷ್ಟ ಕ್ಷೇತ್ರಕ್ಕಷ್ಟೇ ಸಂಕುಚಿತವಾಗಿರದೆ ಇಡಿ ದೇಶಕ್ಕೆ ಮನೋನೀತವಾಗಬೇಕಾಗಿರುವ ಎಲ್ಲ ಚಟುವಟಿಕೆಗಳಲ್ಲಿಯೂ ರಾಷ್ಟ್ರಭಾಷೆಯನ್ನುಪಯೋಗಿಸುವ ಪರಿಪಾಠವು ಬೆಳೆಯುತ್ತ ಹೋಗುವದೆಂದು ನನ್ನ ಊಹೆ. ಹೈಕೋರ್ಟುಗಳಿಗೆ ರಾಷ್ಟ್ರಭಾಷೆಯನ್ನು ಉಪಯೋಗಿಸಲು ಎಂದು ಸಾಧ್ಯವಾದೀತು ಎಂದಾದರೂ ಸಾಧ್ಯವಾದೀತೆ, ಎಂದು ನಾನೀಗಲೇ ಹೇಳಬಾರೆ. ಅವು ಅದನ್ನು ಸ್ವೀಕರಿಸದಿದ್ದರೆ ಆಗ ಕಾಯಿದೆಯ ಪ್ರಶ್ನೆಗಳಲ್ಲಿ ಅವು ಕೊಟ್ಟ ಮಹತ್ವದ ತೀರ್ಪುಗಳನ್ನೂ ಅವೇ ಪ್ರಕಾರ ವಿವಿಧ ಪ್ರದೇಶಗಳಲ್ಲಿ ಶಾಸನ ಸಭೆಗಳು ಮಾಡಿದ ಕಾಯಿದೆಗಳನ್ನೂ ದೇಶದ ಬೇರೆ ಪ್ರಾಂತಗಳಿಗಾಗಿ ರಾಷ್ಟ್ರಭಾಷೆಯಲ್ಲಿ ಅನುವಾದಿಸಿ ಪ್ರಕಟಿಸಲೇಬೇಕಾಗುವದೆಂಬಲ್ಲಿ ನನಗೆ ಸಂಶಯವಿಲ್ಲ. ಹಾಗಾದರೆ, ಆ ಅನುವಾದಗಳ ಸಾಧುತ್ವವನ್ನು ಕುರಿತು ಸಂಬಂಧಪಟ್ಟ ಅಧಿಕಾರಿಗಳು ಭರವಸೆ ಕೊಡಬೇಕಾಗುವದು. ಇಷ್ಟಾದರೂ ಮಾಡದೆ ಹೋದರೆ ಒಂದು ಪ್ರಾಂತದವರಿಗೆ ಇನ್ನೊಂದರ ಇರವು ತೆರವುಗಳ ವಿಚಾರದಲ್ಲಿ ಆದ್ಯಪರ್ಯಂತ ಪರಿಚಯ ದೊರಕುವದು ಅಸಂಭವ. ಪ್ರತಿಯೊಂದು ಪ್ರಾಂತದಲ್ಲಿಯೂ ಕೆಲವು ಪತ್ರಿಕೆಗಳು ರಾಷ್ಟ್ರಭಾಷೆಯಲ್ಲಿ ಪ್ರಕಟವಾಗುವವೆಂದೂ ಅವು ಇಂದಿನ ಇಂಗ್ಲೀಷ ಪತ್ರಿಕೆಗಳಂತೆ ದೇಶದಲ್ಲೆಲ್ಲ ಪ್ರಸಾರವಾಗುವವೆಂದೂ ನನ್ನೆಣಿಕೆ.

ಇದೆಲ್ಲ ಸಾಧ್ಯವಾಗಬೇಕಾದರೆ, ವಿಶ್ವವಿದ್ಯಾಲಯಗಳೂ ಇತರ ಶಿಕ್ಷಣ ಸಂಸ್ಥೆಗಳೂ ಉತ್ತಮ ಪ್ರತಿಯ ರಾಷ್ಟ್ರಭಾಷೆಯಲ್ಲಿ ಶಿಕ್ಷಣಕೊಡಲು ಸಮರ್ಥವಾಗುವದವಶ್ಯ. ಈ ಸಿದ್ಧಾಂತದಿಂದ ತಪ್ಪಿಸಿಕೊಳ್ಳುವದು ಸಾಧ್ಯವೇ ಇಲ್ಲ. ಹೀಗಾದರೆ, ಉಚ್ಚ ಆಡಳಿತದ ಅಧಿಕಾರಿಗಳಿಗೂ ರಾಜಕೀಯ ವ್ಯವಸಾಯಕ್ಕೂ ಉತ್ತಮ ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಾವೀಣ್ಯಕ್ಕೂ ಪತ್ರಿಕಾ ವ್ಯವಸಾಯವೇ ಮೊದಲಾದವುಗಳಿಗೂ ಅವಶ್ಯವಾದ ಅರ್ಹತೆಯನ್ನು ಪಡೆಯಬೇಕೆಂಬ ಆತುರವುಳ್ಳ ವಿದ್ಯಾರ್ಥಿಗಳಿಗೆ ರಾಷ್ಟ್ರಭಾಷೆಯಲ್ಲಿ ಹೆಚ್ಚಿನ ಪರಿಜ್ಞಾನವನ್ನು ಸಂಪಾದಿಸಲು ಅನುಕೂಲವಾಗುವದು. ಇದಕ್ಕೋಸ್ಕರ ಹೈಸ್ಕೂಲ್ ವರ್ಗಗಳಿಂದಾರಂಭಿಸಿ ಮುಂದಿನ ಅಭ್ಯಾಸದಲ್ಲಿ ರಾಷ್ಟ್ರಭಾಷೆಯನ್ನು ಒತ್ತಾಯದ ವಿಷಯವನ್ನಾಗಿ ಮಾಡಬೇಕಲ್ಲದೆ ಅದರ ಅಭ್ಯಾಸಕ್ಕೆ ಸರ್ವಪ್ರಕಾರಗಳಿಂದಲೂ ಉತ್ತೇಜನ ಕೊಡಬೇಕು.

ಇದರಿಂದ ಗಾಬರಿಯಾಗುವ ಕಾರಣವೇನೂ ಇಲ್ಲ. ಭಾರತೀಯರಿಗೆ ಭಾಷೆಗಳನ್ನು ಕಲಿಯುವ ಜನ್ಮಸಿದ್ಧ ಚಾತುರ್ಯವಿದೆಯೆಂದು ನಾನು ನಂಬುತ್ತೇನೆ. ಆದ್ದರಿಂದ ಒಮ್ಮೆ ಈ ಮಾತು ಮನದಟ್ಟಾದರೆ ಆ ಮೇಲೆ ತಮ್ಮ ಸ್ವಂತ ಭಾಷೆಯಾವುದೇ ಇರಲಿ, ರಾಷ್ಟ್ರಭಾಷೆಯಲ್ಲಿ ಪಾರಂಗತರಾಗಲು ಅವರಿಗೆ ಹೆಚ್ಚು ವೇಳೆ ಹಿಡಿಯಲಾರದು. ಇಂಗ್ಲೀಷು ನಮಗೆ ಸರ್ವಥಾ ಪರಕೀಯಭಾಷೆ. ಆದರೂ ಅದನ್ನು ಪ್ರವೇಶಗೊಳಿಸಿದಾಗಿನ ಮೊದಲನೆ ಪೀಳಿಗೆಯೇ ಅದರಲ್ಲಿ ಉತ್ತಮವಾದ ಪರಿಣತಿಯನ್ನು ತೋರಿಸಿತು. ಅಲ್ಲಿಂದೀಚೆಗೆ ಹಿಂದೀಯರ ಇಂಗ್ಲೀಷ್ ಭಾಷೆಯ ಪ್ರಸಾರ ಬೆಳೆಯಿತಲ್ಲದೆ ಅದರ ಪರಿಜ್ಞಾನದ ಆಳ ಹೆಚ್ಚಾಗಲಿಲ್ಲ. ಆದುದರಿಂದ, ಕ್ರಮದಿಂದ ಕಲಿಸಿದರೆ ರಾಷ್ಟ್ರಭಾಷೆಯ ಪ್ರಸಾರದಿಂದ ಯಾವುದೊಂದು ವಿಶಿಷ್ಟ ಪ್ರದೇಶದ ಜನರು ಜೀವನದ ಸ್ಪರ್ಧೆಯಲ್ಲಿ ಹಿಂದುಳಿದುಬಿಡಬಹುದೆಂಬ ಶಂಕೆಗೆ ಆಧಾರವಿಲ್ಲ. ಏನಾದರೂ ಶಂಕೆಯಿದ್ದರೆ, ಈ ವಿಚಾರದಲ್ಲಿ ಯಾವುದೊಂದು ವಿಶಿಷ್ಟ ಪ್ರದೇಶಕ್ಕೆ ಇರಬಹುದಾದ ಸೌಕರ್ಯವಿಶೇಷವನ್ನು ನಿವಾರಿಸುವ ಮೂಲಕ ಆ ಭಯವನ್ನು ನಿವಾರಿಸಬಹುದು.

೨ ಸಂಸ್ಕೃತದ ಉಪಯೋಗ

ಶ್ರೀ ಮಶ್ರುವಾಲರ ಎರಡನೆ ವಿಚಾರ ಹೀಗಿದೆ

"ನಿಮ್ಮ ಉತ್ಕೃಷ್ಟವಾದ ಸಿದ್ಧಾಂತಗಳಲ್ಲಿ ಎಂಟನೆಯದು ಗಡುಚಾದ ಮತ್ತು ವಿವಾದಾತ್ಮಕ ಕಲಮು. ವಿವಾದದ ವಿಷಯವೆಂದರೆ ಸಂಸ್ಕೃತದಿಂದ ಅನೇಕ ಶಬ್ದಗಳನ್ನು ತೆಗೆದುಕೊಳ್ಳಬೇಕೆಂಬುದಲ್ಲ, ಆ ಶಬ್ದಗಳ ಜಾತಿ ಮತ್ತು ಅವುಗಳನ್ನು ತೆಗೆದುಕೊಳ್ಳುವ ಇಲ್ಲವೆ ಇವುಗಳಿಂದ ಹೊಸ ಶಬ್ದಗಳನ್ನು 'ಅಚ್ಚುಹಾಕುವ' ಬಗ್ಗೆ ನಿಮ್ಮ ಸೂಚನೆಗಳು. "ಹರಿಜನ"ದ ೨೮-೧೧-೪೮ ರ ಸಂಚಿಕೆಯಲ್ಲಿ ಘಟನೆಯ ಕರಡಿನ "ಮೂರು ಅನುವಾದಗಳು" ಎಂಬ ಲೇಖದಲ್ಲಿ ನಾನು ಮಾಡಿದ ಟೀಕೆಯನ್ನು ನೀವು ನೋಡಿರಬಹುದು. ನಾವು ಅಚ್ಚುಹಾಕುವ ಹೊಸ ಶಬ್ದಗಳು ನಮ್ಮ ಮಾತಾಡುವ ಭಾಷೆಗಳ ಸ್ವರೂಪಕ್ಕೂ ಜಾತಿಗುಣಕ್ಕೂ ಹೊಂದಿಕೆಯಾಗಿರಬೇಕೆಂದು ನನ್ನ ದೃಢವಾದ ಅಭಿಪ್ರಾಯ. ಅಲ್ಲದೆ ಎಲ್ಲ ಪ್ರಾಂತಗಳ ಸಾಮಾನ್ಯ ಸ್ತ್ರೀ ಪುರುಷ ಬಾಲಕರಿಗೂ ಮೆಚ್ಚಿಗೆಯಾಗುವಂತೆ ಅವು ಸರಳವೂ ಉಚ್ಚಾರಸುಲಭವೂ ಮಧುರವೂ ಆಗಿರಬೇಕು. ಪಾಂಡಿತ್ಯಪ್ರದರ್ಶನ, ಆಡಂಬರದ ಮೋಹ ಇವುಗಳನ್ನು ಸಾಧ್ಯವಿದ್ದಷ್ಟು ದೂರೀಕರಿಸಬೇಕು"

ನನ್ನ ಸಿದ್ಧಾಂತದ ಎಂಟನೆ ವಿಭಾಗದಲ್ಲಿ ಹೊಸ ಶಬ್ದಗಳನ್ನು ನಿಷ್ಪನ್ನ ಮಾಡಿಕೊಳ್ಳುವ ಪ್ರಸಂಗದಲ್ಲಿ ಸಂಸ್ಕೃತಕ್ಕೆ ಕೈಯಿಕ್ಕಬೇಕೆಂದು ನಾನು ಸೂಚಿಸಿದ್ದೇನೆ. ಪಾಂಡಿತ್ಯ ಮೋಹವನ್ನು ಬಿಟ್ಟುಬಿಡಬೇಕೆಂದೂ ಸಾಧ್ಯವಾದ ಮಟ್ಟಿಗೆ ಬಾಯ್ಮಾತಿನ ಭಾಷೆಗಳ ಸ್ವರೂಪಕ್ಕೂ ಜಾತಿಗುಣಕ್ಕೂ ಅವು ಒಪ್ಪವಂತಿರಬೇಕೆಂದೂ ಅವು ಸರಳ ಸುಂದರವಾಗಿರಬೇಕೆಂದೂ ನಾನು ಒಪ್ಪುವೆ. ಇದು ಎಷ್ಟರಮಟ್ಟಿಗೆ ಸಾಧ್ಯವೊ ಹೇಳುವದು ಕಷ್ಟ. ಆದರೆ ನಾವು ಆ ದಿಸೆಯಲ್ಲಿ ಪ್ರಯತ್ನಿಸಬೇಕೆಂಬಲ್ಲಿ ಸಂದೇಹವಿಲ್ಲ

ಕಳ್ಳ ಪೇಟೆಯವರನ್ನು ಹಿಡಿಯುವದಕ್ಕಾಗಿ ಸ್ಪೆಶಲ್ ಪೋಲೀಸರು

ಮದರಾಸು ತಾ|| ೧೧ ಕಳ್ಳಪೇಟೆ ವ್ಯಾಪಾರಿಗಳನ್ನು ಶೋಧಿಸಿ ಬಂಧಿಸುವದಕ್ಕಾಗಿ ಮದರಾಸ ಪ್ರಾಂತದಲ್ಲೆಲ್ಲ ಸ್ಪೆಶಲ್ ಪೋಲೀಸರನ್ನು ಬೇಗನೇ ನಿಯಮಿಸಲಾಗುವದು.

ಮದರಾಸು ಮಂತ್ರಿಮಂಡಲದ ಆರ್ಥಿಕ ಸಮಿತಿಯಲ್ಲಿ ಈ ವಿಚಾರಕ್ಕೆ ಮನ್ನಣೆ ದೊರೆಯಿತು. ಮುಖ್ಯಮಂತ್ರಿಗಳು ಸಭೆಗೆ ಅಧ್ಯಕ್ಷರಾಗಿದ್ದರು.

ಹೊಸಪೇಟೆ

ಮದ್ರಾಸ ಪ್ರಾಂತದ ಕಬ್ಬು ಬೆಳೆಯುವವರ ಸಂಘದ ಯಾಜಮಾನ್ಯದಲ್ಲಿ ಕಳೆದ ವಾರ ಪ್ರಾಂತದ ವಿವಿಧ ಭಾಗದ ಪ್ರತಿನಿಧಿಗಳು ಶ್ರೀ ಎ. ಸಿ. ಸುಂದರರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದರು. ಡಾ. ನಾಗನಗೌಡರ, ವಿಜಯನಗರದ ಕಾಲದಿಂದ ಇಲ್ಲಿಯವರೆಗೆ ರೈತರ ಆಗುಹೋಗುಗಳನ್ನು ವಿವರಿಸಿ ೧೯೩೩ ರಲ್ಲಿ ಸ್ಥಾಪಿತವಾದ ಕಬ್ಬಿನ ಗಿರಣಿಯವರಿಂದಾದ ಅನುಕೂಲ ಅನಾನುಕೂಲಗಳನ್ನು ವಿವರಿಸಿದರು. ಸುಗರ್ ಕೇನ್ ಆಕ್ಟದಿಂದ ಪ್ರಯೋಜನವಿಲ್ಲೆಂತಲೂ ರೈತರು ಬೆಳೆಯುವ ಕಬ್ಬನ್ನೆಲ್ಲಾ ರಿಜಿಸ್ಟರಾದವರಿಗೂ ಆಗದಿದ್ದವರಿಗೂ ವ್ಯತ್ಯಾಸವಿಲ್ಲದಂತೆ ಬೆಲೆಯಲ್ಲೂ ವರ್ತನೆಯಲ್ಲೂ ಸರಿಯಾಗಿರಬೇಕೆಂದು ತೀರ್ಮಾನಗಳಾದವು.

——(೦)——

ಬಳ್ಳಾರಿ ಸ್ಮಾಲ್ ಕಾಜ್ ಕೋರ್ಟಿನಲ್ಲಿ

S. C. 651/48

ವಾದಿ:- ಶಿಂಗರಾಜನಹಳ್ಳಿ ಮುಂದರಿಂಟಿ ಕ್ರಿಷ್ಣಾರೆಡ್ಡಿ ತಂದೆ ಲಕ್ಷ್ಮಿರೆಡ್ಡಿ ಕಾಪು ಕುಲ ವ್ಯಾಪಾರಂ ಹಾಲಿ ಕಾಪುರ ಆದವಾನಿ

ವಿರುದ್ಧ

ಪ್ರತಿವಾದಿ:- ಜಂಗಮ ಶಂಕ್ರಯ್ಯ ತಂದೆ ಜಂಗಮ ಬಸಯ್ಯ ವೀರಶೈವ ಜಿರಾಯ್ತಿ ಸೂಗೂರು ಆದವಾನಿ ತಾಲೂಕು

ಪ್ರತಿವಾದಿಗೆ ತಿಳಿಸುವದು ಯೇನಂದರೆ ವಾದಿ ನಿನ್ನ ಮೇಲೆ ಪ್ರಾಂಸರಿನೋಟು ಬಾಕಿ ರೂ ೧೧೯-೪-೬ ಗಳಿಗೆ ದಾವಾ ಮಾಡಿರುತ್ತಾನೆ. ೧೯-- -೧೯ ತೇದಿ ವಾಯಿದಾ ಇರುತ್ತದೆ. ಆ ದಿವಸ ಸ್ವಂತ ಹಾಜರಾಗಿ ನಿನ್ನ ತಕರಾರು ಹೇಳಿಕೊಳ್ಳಬೇಕು. ಇಲ್ಲವಾದರೆ ಏಕಪಕ್ಷ ವಿಚಾರಣೆ ನಡೆದು ಡಿಕ್ರಿ ಆಗುತ್ತದೆ.

ಬಳ್ಳಾರಿ ಆರ್ ನಾರಾಯಣರಾವ್
೧೪-೧-೪೯ ವಾದಿ ವಕೀಲ

ನಿರುದ್ಯೋಗಿಗಳಿಗೆ ಕೆಲಸ

ಕಳೆದ ತಿಂಗಳು ಅಂದರೆ ಡಿಸೆಂಬರ್ ೧೯೪೮ ರಲ್ಲಿ ಡಿಸ್ಟ್ರಿಕ್ಟ್ ಎಂಪ್ಲಾಯ್ಮೆಂಟ್ ಆಫೀಸಿನವರು ೨೦೩೩ ಅರ್ಜಿಗಳನ್ನು ರಿಜಿಸ್ಟರ್ ಮಾಡಿ ೧೨೭೬ ಜನರಿಗೆ ಕೆಲಸ ಕೊಡಿಸಿದರು. ಇಬ್ಬರು ಸ್ತ್ರೀ ಉಮೇದುವಾರರಿಗೆ ಮಾರಾಟಗಾರರ ಕೆಲಸ ಸಿಕ್ಕಿತು.

ದ್ವಿತೀಯ ವಾರ್ಷಿಕೋತ್ಸವ

ಬಳ್ಳಾರಿ ಜಿಲ್ಲಾ ಎಂಪ್ಲಾಯ್ಮೆಂಟ್ ಎಕ್ಸ್‌ಛೇಂಜದ ದ್ವಿತೀಯ ವಾರ್ಷಿಕೋತ್ಸವವು ಶ್ರೀ ಹೆಚ್. ಲಿಂಗಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕಛೇರಿಯ ಆವರಣದಲ್ಲಿ ಉತ್ಸಾಹಪೂರ್ವಕವಾಗಿ ನಡೆಯಿತು. DEO. ಸಾಹೇಬರು ಎಲ್ಲಾ ಏರ್ಪಾಟುಗಳನ್ನು ವ್ಯವಸ್ಥಿತವಾಗಿ ಮಾಡಿದ್ದರು. ಚಹಾಪಾನದ ನಂತರ ಪ್ರಾರ್ಥನೆಯಾಗಿ ಸಾಹೇಬರು ನಡೆದ ಕಾರ್ಯದ ಸಂಕ್ಷಿಪ್ತ ವರದಿಯನ್ನೋದಿ ಎಲ್ಲರ ಸಹಕಾರ ಬೇಡಿದರು. ಡೈರೆಕ್ಟರ್ ಖಾದೀರ್‌ರವರು ಎಲ್ಲರನ್ನೂ ಸ್ವಾಗತಿಸುತ್ತಾ ಭಾರತ ಸರಕಾರವನ್ನು ಲೇಬರ್ ಶಾಖೆಯಧೀನದಲ್ಲಿ ಕ್ರಮಿಸುತ್ತಿರುವ ಈ ಸಂಸ್ಥೆಯ ಉದ್ದೇಶಗಳನ್ನರುಹಿ ಸಹಕಾರ ಬೇಡಿದರು, ಶ್ರೀ ಪಿ.ಕೆ. ಶ್ರೀನಿವಾಸಾಚಾರಿ, ಶ್ರೀ ಟಿ. ಬಿ. ಕೇಶವರಾವು ಡಿ. ಹೆಚ್. ವೆಂಕೋಬರಾವು ಇವರು ಸಂಸ್ಥೆಯ ಕಾರ್ಯವನ್ನು ಪ್ರಶಂಸಿಸಿ ಯಶಸ್ಸನ್ನು ಕೋರಿದರು. ಅಧ್ಯಕ್ಷರು ತಮ್ಮ ಪ್ರಾರಂಭ ಮತ್ತು ಅಂತ್ಯ ಭಾಷಣದಲ್ಲಿ ಸಂಸ್ಥೆಯಿಂದ ಆದ ಕೆಲಸದ ಉಪಯುಕ್ತತೆಯನ್ನೂ ರಾಷ್ಟ್ರ ನಿರ್ಮಾಣಕಾರ್ಯದಲ್ಲಿ ಇದರ ಭಾಗವನ್ನೂ ವಿಶದೀಕರಿಸಿದರು, ಅನಂತಪುರದ ಶಾಖೆಯ ಶ್ರೀ ಅರ್ಜುನ ರಾವರು ಎಲ್ಲರನ್ನು ಅಭಿವಂದಿಸಿದರು. ಈ ಸಮಾವೇಶಕ್ಕೆ ಕಲೆಕ್ಟರ್ ಮತ್ತು ಇತರ ಅಧಿಕಾರಿಗಳೇ ಅಲ್ಲದೆ ಇತರ ಗಣ್ಯನಾಗರೀಕರೂ ದಯಮಾಡಿಸಿದ್ದರು.

ತಾರಾನಾಥ ಆಯುರ್ವೇದ ವಿದ್ಯಾರ್ಥಿಗಳ ಮಹಾಸಭೆ

ಬಳ್ಳಾರಿಯಲ್ಲಿ ಜನವರಿ ೩ನೇಯ ವಾರದಲ್ಲಿ ತಾರಾನಾಥ ವಿದ್ಯಾರ್ಥಿಗಳ ಸಭೆಯನ್ನು ಸಮಾವೇಶಗೊಳಿಸುವುದು ನಿಶ್ಚಯವಾಗಿದೆ.

ಈಚೆಗೆ ಮಾನ್ಯತೆ ಪಡೆದಿರುವ

೧ ತಾರಾನಾಥ ವಿದ್ಯಾಪೀಠವನ್ನು ದಿವಂಗತ ತಾರಾನಾಥರ ಉದ್ದೇಶದಂತೆ ತೃಪ್ತಿಕರವಾಗಿ ನಡೆಸುವುದು. ಆಧುನಿಕ ಶಾಸ್ತ್ರಪದ್ಧತಿಯನ್ನೂ ಪ್ರಾಚೀನವನ್ನು ಬಿಡದೆ ನಮ್ಮ ಸಂಸ್ಕೃತಿ ವಾತಾವರಣಕ್ಕನುಗುಣವಾಗಿ ಆಯುರ್ವೇದದಲ್ಲಿ ಸಂಶೋಧನೆ ಒಳ್ಳೆಯ ಆಯುರ್ವೇದ ಫಾರ್ಮಸಿ ನಡೆಸುವದು. ಒಂದು ಮಾಸಿಕವನ್ನು ಸಂಚಾಲನಮಾಡಿ ಆಯುರ್ವೇದ ಸಾಹಿತ್ಯದ ಪ್ರಗತಿಗೆ ಸಹಾಯಮಾಡಿ ಹೈದರಾಬಾದ್, ಮೈಸೂರು, ಮದರಾಸ್ ಬೊಂಬಾಯಿ, ಪ್ರಾಂತಗಳಲ್ಲಿ ತಾರಾನಾಥ ಶಿಷ್ಯಕೋಟಿಯ ಹಕ್ಕುಗಳನ್ನು ಸಂರಕ್ಷಿಸುವದು ಮೊದಲಾದ ಸದುದ್ದೇಶಗಳನ್ನು ಸಾಧಿಸುವುದಿದೆ. ಈ ಕಾರಣ ಈ ಉದ್ದೇಶ ಸಾಧನೆಯಲ್ಲಿ ಆಸಕ್ತರಿರುವ ಸರ್ವ ಮಹನೀಯರೂ ಈ ಮಹತ್ಕಾರ್ಯದಲ್ಲಿ ಸಹಕರಿಸಲು ಕೋರಿಕೆ. ನಿಶ್ಚಿತ ದಿನಗಳನ್ನು ಮುಂದಿನ ಪ್ರಕಟನೆಯಲ್ಲಿ ತಿಳಿಸಲಾಗುವದು.

ವ್ಯವಸ್ಥಾಪಕ ಸಮಿತಿ
ತಾರಾನಾಥ ಆಯುರ್ವೇದ
ವಿದ್ಯಾಪೀಠ ಬಳ್ಳಾರಿ

ದೇವನೂರಲ್ಲಿ (ಸಿರಗುಪ್ಪ) ರೆವಿನ್ಯೂ ಇನ್ಸ್‌ಪೆಕ್ಟರರ ಅತ್ಯಾಚಾರ?

೧೧-೧-೪೯ ನೆಯ, ಮಂಗಳವಾರ ಸಾಯಂಕಾಲ ದೇವನೂರು ಗ್ರಾಮದ ಹಜ್ಜೇಲಿ ವೀರಣ್ಣ ಎಂಬಾತನ ಮನೆಗೆ ಗಂಡಸಿಲ್ಲದಾಗ ಸಿರುಗುಪ್ಪೆ ರೆವಿನ್ಯೂ ಇನ್ಸ್‌ಪೆಕ್ಟರ್ ಸೀತಾರಾಮ ರೆಡ್ಡಿ ಎಂಬಾತನು ಮನೆಹೊಕ್ಕು ಪ್ರವೇಶಮಾಡಿ ಪ್ರೊಕ್ಯೂರ್ಮೆಂಟು ಕಾಳು ಕೇಳುವ ನೆಪದೊಳಗಿದ್ದ ಹೆಣ್ಣವರು ಸ್ತ್ರೀಯರ ಮೇಲೆ ಬಲಾತ್ಕಾರಪ್ರಯೋಗ ಮಾಡಿದ ನಂತರ ಸದರಿ ವೀರಣ್ಣನು ಮುಖ್ಯಮಂತ್ರಿ ಆಹಾರಮಂತ್ರಿ ಕಲೆಕ್ಟರ್ ಡಿ.ಯಸ್.ಪಿ ಯರಿಗೆ ತಾರುಕೊಟ್ಟು ಅರ್ಜಿ ಇಟ್ಟುಕೊಂಡಿದ್ದಾನೆ. ತಾನು ವ್ಯವಸಾಯ ಕೂಲಿಇದ್ದು ತನಗೆ ಒಂದೆಕರೆ ಭೂಮಿಯೂ ಇಲ್ಲವೆಂಬ ಅರ್ಜಿಯಲ್ಲಿ ಹೇಳಿಕೊಂಡಿದ್ದಾನೆ. ಅಲ್ಲದೆ ಸರಕಾರಿ ಧಾನ್ಯಸಂಗ್ರಹಣ ಕಾರ್ಯಕ್ಕೆ ತನ್ನ ಆಕ್ಷೇಪಣೆ ಇಲ್ಲವೆಂದು ಹೇಳಿಕೊಂಡಿದ್ದಾನೆ. [ಇಬ್ರಾಹಿಂಪುರ ಮುಂತಾದ ಹಳ್ಳಿಗಳಿಂದಲೂ ಈ ದೌರ್ಜನ್ಯದ ವರದಿಗಳಾಗಿವೆ. ಧಾನ್ಯ ಸಂಗ್ರಹಣಾಧಿಕಾರಿಗಳು ಇದರಲ್ಲೇನಾದರೂ ನಿಜಾಂಶವಿದೆಯೇ ಎಂಬುದನ್ನು ತಕ್ಷಣ ವಿಚಾರಿಸಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು. ಸಂಪಾದಕ ನವಭಾರತ]

ಜಿಲ್ಲಾ ಮುನಿಸೀಫರ ಕೋರ್ಟು ಹೊಸಪೇಟೆ

S. C. 412/48

ವಾದಿ— ಎದುರುಮನಿ ಚನ್ನವೀರಪ್ಪ ಹಿರೆ ಮಲ್ಲಾಗಳಗೇರಿ. ಹರಪನಹಳ್ಳಿ ತಾ॥

ವಿರುದ್ಧ

ಪ್ರತಿವಾದಿ— ವಡ್ಡ ಯಂಕಪ್ಪ ಪುತ್ರ ಕೊಂಡಪ್ಪ ನಿರಿಬೊಮ್ಮನಹಳ್ಳಿ, ರಾಮಘಟ್ಟ ಮಜರ ಹರಪನಹಳ್ಳಿ ತಾ॥

ಪ್ರತಿವಾದಿ, ವಾದಿ ಹೆಸರ್ಲೆ ೩೦-೯-೪೬ ನೇ ತೇದಿ ರೂ ೧೦೦-೦-೦ ಕ್ಕೆ ಬರಿಸಿಕೊಟ್ಟ ಪ್ರೋನೋಟಿನ ಅಸಲು ಬಡ್ಡಿ ಮತ್ತು ತಗಾದಿ ಖರ್ಚಿಗಾಗಿ ರೂ ೧೧೫-೧೪-೦ ಗೆ ವಾದಿ ದಾವಾ ಮಾಡಿರುತ್ತಾನೆ ೨೯-೧-೪೯ ಕ್ಕೆ ವಾಯಿದಾ ಇರುತ್ತದೆ ಪ್ರತಿವಾದಿ ೨೯-೧-೪೯ನೇ ತೇದಿ ಹಗಲು ೧೧ ಘಂಟೆಗೆ ಖುದ್ದಾಗಲಿ ವಕೀಲರ ದ್ವಾರಾಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ ಡಿಕ್ರಿ ಆಗುತ್ತದೆ.

ಹೊಸಪೇಟೆ ಎ. ಆರ್. ಕೃಷ್ಣರಾವು
೧೩-೧-೪೯ ವಾದಿ ಅಡ್ವೋಕೇಟರು

ರಾಯಲಸೀಮೆ ಗ್ರಾಮೋದ್ಯೋಗಿಗಳ ಸಭೆ

ರಾಯಲಸೀಮೆ ಗ್ರಾಮೋದ್ಯೋಗಿಗಳ ಅಷ್ಟಮ ಮಹಾ ಸಭೆಯು, ೩-೨-೪೯ ನೇ ತೇದಿ ಮಹಾನಂದಿ ಕ್ಷೇತ್ರ [ಕರ್ನೂಲು ಜಿಲ್ಲಾ] ದಲ್ಲಿ ಶ್ರೀ ಕೆ. ಕಾಳಪ್ಪರೆಡ್ಡಿ, ಚಿತ್ತೂರ. ಇವರ ಅಧ್ಯಕ್ಷತೆಯಲ್ಲಿ ಸೇರುವದು. ಪ್ರತಿ ಫಿರ್ಕಾದಿಂದ ಇಬ್ಬರು ಪ್ರತಿನಿಧಿಗಳನ್ನು ಚುನಾಯಿಸಿ, ಅವರ ಹೆಸರುಗಳನ್ನು ೨೫-೧-೪೯ನೇ ತೇದಿ ಒಳಗಾಗಿ ಕಾರ್ಯದರ್ಶಿಗೆ ತಿಳಿಸಬೇಕು. ಪ್ರತಿನಿಧಿ ರುಸುಮು, ಪ್ರತಿಯೊಬ್ಬರಿಗು ರೂ. ೨ ಮಾತ್ರ ಪ್ರತಿನಿಧಿಗಳು ಮತ್ತು ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುವ ಗ್ರಾಮೋದ್ಯೋಗಿಗಳು, ಗುಂತಕಲ್ಲು, ಬೆಜವಾಡ ಮಾರ್ಗದಲ್ಲಿರುವ ನಂದ್ಯಾಲ ರೈಲ್ವೇ ಸ್ಟೇಷನಿಗೆ ೨-೨-೪೯ ತೇದಿ ಮಧ್ಯಾಹ್ನಕ್ಕೆ ಸೇರಬೇಕು ಅಲ್ಲಿಂದ ಮಹಾನಂದಿ ಸೇರಲು ಪ್ರಯಾಣ ಸೌಕರ್ಯಗಳು ಏರ್ಪಡಿಸಿರುತ್ತದೆ.

ಎ. ಸಂಜೀವರಾವ್ ಕಾರ್ಯದರ್ಶಿ
ಯೇರೂರು, Po. ಚಿಪ್ಪಿಗೆರೆ.

ಹರಿಜನ ಲೇಖ

ಸಮರಶಿಕ್ಷಣಕ್ಕಿಂತಲು ಮೇಲು

"ಭಾರತದ ಜೀವನದ ಗರ್ಭದಲ್ಲಿ ನಿಜವಾದ ಬಂಧುಭಾವ ಬೆಳೆಯುತ್ತಿದೆಯೆಂದು ಕೇಳಿ ನಿಜವಾಗಿ ಧೈರ್ಯವುಂಟಾಗುತ್ತಿದೆ. ನಾಗರಿಕರಾದ ನಾವು ಪಶ್ಚಾತ್ಯರ, ವಿಧಿ ವಿಧಾನದ ಜಂಜಾಟದಲ್ಲಿ ತೊಳಲುತ್ತ ಮಾನವರೀತಿಯ ವಿಷಯದಲ್ಲಿ ಎಷ್ಟು ಹಿಂದೆ ಬಿದ್ದಿದ್ದೇವೆ! ಯೇಸುಕ್ರಿಸ್ತನು ತನ್ನ ಅನುಯಾಯಿಗಳ ಹೃದಯದಲ್ಲಿ ಅವತರಿಸುವೆನೆಂದಂತೆ ಗಾಂಧೀಜಿಯೂ ಸಮಾನಧರ್ಮರಾದವರ ಹೃದಯದಲ್ಲಿ ಒಂದಲ್ಲ, ಕೋಟ್ಯಂತರ ಅವತಾರಗಳನ್ನು ಎತ್ತಿದ್ದಾರೆ. ಭಾರತದಲ್ಲಿದ್ದ ಬಿಶಪ್ ಫಿಶರರು ಗಾಂಧಿಯೊಬ್ಬನೇ ಭಾರತದಲ್ಲಿರುವ ನಿಜವಾದ ಕ್ರೈಸ್ತನೆಂದು ಹಿಂದೊಮ್ಮೆ ಹೇಳಿದ್ದರು. ಅದು ತೀರ ಉತ್ಪ್ರೇಕ್ಷೆಯ ಮಾತೆಂದು ನಾನು ಆಗ ಭಾವಿಸಿದ್ದರೂ ಈಗ ಅವರೆಂದುದು ಸತ್ಯಕ್ಕೆ ಅನತಿದೂರವೆಂದು ನನಗೆನಿಸುತ್ತಿದೆ....... ಯೇಸು ಕ್ರಿಸ್ತನ ಕತೆ ಪುನಃ ಭರತಭೂಮಿಯಲ್ಲಿ ಅಭಿನಯಿಸಲ್ಪಟ್ಟಿತೇನೋ. ಇಲ್ಲಿ ಗಾಂಧೀಯ ಬಗ್ಗೆ ಬುದ್ಧಿಶಾಲಿಗಳೆಲ್ಲರಲ್ಲಿಯೂ ಗಾಢವಾದ ಆದರವಿದೆ. ಆದರೂ ಶಸ್ತ್ರಸಂನ್ಯಾಸಕ್ಕೆ, ರಸ್ತ್ರಬಲವನ್ನು ಮಿತಿಗೊಳಪಡಿಸಲಿಕ್ಕೆ ಅಂಜುವ ಭ್ರಾಂತ ಚಿತ್ತರ ಸಂಖ್ಯೆ ಅದಕ್ಕಿಂತಲೂ ಹೆಚ್ಚಾಗಿದೆ. ಹದಿನೆಂಟು ವಯಸ್ಸಿನ ಹುಡುಗರಿಗೆಲ್ಲ ಸಾರ್ವತ್ರಿಕ ಸಮರಶಿಕ್ಷಣ ಕೊಡಬೇಕೆನ್ನುತ್ತಾರೆ ಅವರು."

ಹೀಗೆ ಬರೆಯುತ್ತಾರೆ ಭಾರತದ ಮಿತ್ರರೂ ಗಾಂಧೀಜಿಯ ಪ್ರಶಂಸಕರೂ ಆದ ವಿದೇಶೀಯರೊಬ್ಬರು. ನರಕ ದೃಶವಾದ ಯುದ್ಧಯಾತನೆಯಿಂದ ದೂರವಾದ ಶಾಂತಿಮಾರ್ಗದಲ್ಲಿ ಭಾರತದಿಂದ ಮಾರ್ಗದರ್ಶನವನ್ನು ಅಪೇಕ್ಷಿಸುವ ಸಾವಿರಗಟ್ಟಲೆ ಜನರು ಪಶ್ಚಿಮ ದೇಶಗಳಲ್ಲಿರುವರೆಂದು ಹೇಳಲು ಬೇಕಾದಷ್ಟು ಪ್ರಮಾಣಗಳು ದೊರೆಯಬಹುದು;

ಆದರೆ ನಮ್ಮ ಮುಂದಾಳುಗಳಲ್ಲಿಯೂ ಹಲವಾರು ಜನರು "ಭ್ರಾಂತಚಿತ್ತ"ರಾಗಿದ್ದಾರೆಂದು ತೋರುತ್ತದೆ. ಗತಕಾಲದ ಸಂಗತಿಗಳಿಂದ ತೀರ್ಮಾನಕ್ಕೆ ಬರುವ ಪ್ರಯತ್ನ ಬೇಡ. ಸನ್ಮಾರ್ಗದರ್ಶನವನ್ನು ಮಾಡಿದ ನಮ್ಮ ಮುಂದಾಳುಗಳನ್ನು ನಿಷ್ಕಾರಣವಾಗಿ ನಿಂದೆಗೆ ಗುರಿಮಾಡಲೂ ಬೇಡ. ಹೈದರಾಬಾದಿನ ವಿಷಯದಲ್ಲಿ ಭಾರತ ಸರಕಾರ ಅಹಿಂಸಾಪೂರ್ಣ ಸಮನೀಯನ್ನೆ ಅವಲಂಬಿಸಿತ್ತೆಂದು ನನ್ನೆಣಿಕೆ. ಸಾರ್ವಜನಿಕ ಅಭಿಪ್ರಾಯವೂ ಸ್ಥಿತಿಗತಿಗಳೂ ಉಲ್ಬಣಾವಸ್ಥೆಗೆ ಮುಟ್ಟಿದನಂತರವೇ ಹೈದರಾಬಾದ ಸಂಸ್ಥಾನದ ಗಡಿಯೊಳಗೆ ಸೈನ್ಯದ ಪ್ರವೇಶವಾಯಿತು. ಅಲ್ಲಾದರೂ ಪೂರ್ಣಸನ್ನಾಹದ ಬಲದಿಂದ ಎಂದು ತೋರುತ್ತದೆ, ಶೀಘ್ರವಾಗಿಯೂ ಸಾಧ್ಯವಿದ್ದಷ್ಟು ಕಡಿಮೆ ಹಿಂಸೆಯಿಂದಲೂ ಮಾಡಬೇಕಾದುದನ್ನು ಮಾಡಿ ಮುಗಿಸಿದರು. ಆದರೂ ಗಾಂಧೀಜಿ ಉಪದೇಶಿಸಿದಂತೆ ಅಹಿಂಸಾಮಾರ್ಗವನ್ನು ಅನುಕರಿಸಬೇಕೆಂಬವರಲ್ಲಿ ಒಬ್ಬನೆನಿಸುವ ನಾನು ಈ ಸಂದರ್ಭದಲ್ಲಿ ದೇಶಕ್ಕೆ ಯಾವ ಬಗೆಯ ಮಾರ್ಗವನ್ನು ಮಾಡಿದನೆಂದು ನಾನೇ ಶಂಕಿಸುತ್ತಿದ್ದೇನೆ! ಇಂಥ ಅವಸ್ಥೆಯಲ್ಲಿ ನಾವು ನಮ್ರನೆ ಆಗಿರಬೇಕಲ್ಲವೇ?

ಆದರೂ ಕಾಂಗ್ರೆಸ್ ಸರಕಾರವು ಮಾಡಿದ ಮಾರ್ಗದರ್ಶನ ನಿಶ್ಚಿತವಾಗಿ ಸಮರಾತ್ಮಕ ಮಾರ್ಗದರ್ಶನವೆಂದು ಮನಗಂಡು ನಾವು ವ್ಯಥಿತರಾಗುತ್ತೇವೆ ಅವರು ಉಪಯೋಗಿಸಿದ ವಾದಗಳೂ ಪಾಶ್ಚಿಮಾತ್ಯ ಸಮರವಾದಿಗಳು ಉಪಯೋಗಿಸಿದವುಗಳೂ ಒಂದೇ ಬಗೆಯವು. ಕೆಲಜನ ಶಿಕ್ಷಣಮಂತ್ರಿಗಳೂ ಇತರರೂ ಶಾಲೆಗಳಲ್ಲಿ ಸಮರಶಿಕ್ಷಣವನ್ನು ಪ್ರಾರಂಭಿಸಲು ಆಕಾರಣ ಆತುರವನ್ನು ಪ್ರದರ್ಶಿಸುತ್ತಿದ್ದಾರೆ. ಒಂದು ಸಂದರ್ಭದಲ್ಲಂತೂ ಸಮರಶಿಕ್ಷಣವನ್ನು ತಾತ್ವಿಕವಾಗಿ ವಿರೋಧಿಸುವ ಒಂದಾನೊಂದು ಶಾಲೆಯ ಅಧಿಕಾರಿಗಳು ಈ ವಿಚಾರದಲ್ಲಿ ಸರಕಾರದವರಿಂದ ತಮ್ಮಮೇಲೆ ಒತ್ತಾಯಬರಬಹುದೆಂದು ಚಿಂತೆಗೊಳಗಾಗಿದ್ದಾರಂತೆ.

ದೇಹದಾರ್ಢ್ಯವನ್ನೂ ಶಾರೀರಿಕ ನಿಯಮವನ್ನೂ ಸಾಧಿಸಬೇಕೆಂದರೆ ಸಮರಶಿಕ್ಷಣವಲ್ಲದೆ ಬೇರೆ ದಾರಿಗಳೂ ಇವೆ, ನಮಗೆ ಬೇಕಾಗಿದ ಪ್ರಜಾತಂತ್ರ ಸೈನಿಕ ಪದ್ಧತಿಯ ಗುಣಗಳೇನೇ ಇರಲಿ ಅದು ಪ್ರಜಾತಂತ್ರಕ್ಕೆ ಅತ್ಯಂತ ದೂರವಾದುದು. ಅದರಲ್ಲಿ ಶಿಸ್ತಿದೆ- ಆದರೆ ಅದು ಕರ್ತವ್ಯಕಾಲದಲ್ಲಿ ಮಾತ್ರ; ಒಮ್ಮೆ ಆ ಬಂಧನ ಸಡಿಲಿತೆಂದರೆ ಸಾಕು, ಅತ್ಯಂತ ಶಿಸ್ತುಗೆಟ್ಟ ವರ್ತನೆಯಲ್ಲಿ ಅದರ ಪ್ರತಿಕ್ರಿಯೆಯಾಗುತ್ತದೆ! ಮತ್ತಾರಲ್ಲಿಲ್ಲದ್ದರೂ ಸೈನಿಕರು. ಪಾಶ್ಚಿಮಾತ್ಯ ಸೈನಿಕರಾದವರೂ ಕರ್ತವ್ಯ ಬಂಧನದಿಂದ ಬಿಡುಗಡೆ ದೊರೆತಾಗ ನಡೆದುಕೊಳ್ಳುವ ರೀತಿಯನ್ನು ನೋಡಿರಿ. ಮೊನ್ನೆ ಮೊನ್ನೆ ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸಮಾಡಿ ಮರಳಿದ ಶ್ರೀ ಜೆ. ಸಿ. ಕುಮಾರಪ್ಪನವರು, ಅಮೇರಿಕನ್ ಸೈನಿಕರಮೇಲೆ ಬ್ರಿಟನ್ನಿನಲ್ಲಿ ಮೊದಲ್ಗೊಂಡು ಯುರೋಪದಲ್ಲೆಲ್ಲ ಹಬ್ಬಿದ ದ್ವೇಷಭಾವನೆಯನ್ನು ಕುರಿತು 'ಹೇಳುತ್ತಾರೆ. ಅಮೇರಿಕನ್ ಸೈನಿಕರು ಬಿಡುವಿನಲ್ಲಿ ಆಚರಿಸುವ ರೀತಿಯೆ ಇದಕ್ಕೆ ಕಾರಣ. ಅವರು ಬಿಡುವಿನಲ್ಲಿ ಹೊರಬಿದ್ದಾಗ ಎದುರಿಗೆ ಸಿಗುವ ಸ್ತ್ರೀಯರು ಸುರಕ್ಷಿತನಾಗಿರುವಂತಿಲ್ಲ! ಸದ್ಯದಲ್ಲಿ ಅವರಿಗಿಂತ ಹೆಚ್ಚು ಶಿಸ್ತುಳ್ಳ ನಮ್ಮ ಭಾರತೀಯ ಯುವಕರೂ ಇದೇ ಮಾದರಿಯ ನಡೆವಳಿಯವರಾಗಬೇಕೆಂದು ನಮ್ಮ ಬಯಕೆಯೇ? ಅನೇಕ ವರ್ಷಗಳ ಹಿಂದೆ, ಅಧ್ಯಕ್ಷ ರೂಜುವೆಲ್ಟರು ಪ್ರಾರಂಭಿಸಿದ ವೈರಿನ ಸಂರಕ್ಷಣೆಯ ಚಟುವಟಿಕೆಗಳ ಕಾಲದಲ್ಲಿ ಕಂಡು ಬಂದ ರಚನಾತ್ಮಕ ಶಿಸ್ತಿನ ನಡೆವಳಿಯಿಂದ ಅಮೇರಿಕನ್ ನಾಗರಿಕರಿಗೆ ಸಾನಂದಾಶ್ಚರ್ಯವಾಯಿತಂತೆ. ಕಾಡು ಬೆಳೆಸುವುದು, ಭೂಸಾರನಾಶದ ವಿರುದ್ಧ ಕ್ರಮಗಳನ್ನು ಕೈಕೊಳ್ಳುವದೇ ಮೊದಲಾದ ರಾಷ್ಟ್ರ ಹಿತಕಾರ್ಯಗಳಿಗಾಗಿ ಯುವಕರನ್ನು ನಿಯೋಜಿಸಲಾಗಿತ್ತು. ಅರ್ಥಪೂರ್ಣವಾದ ಆ ಶಾರೀರಕ ಪರಿಶ್ರಮದ ವೇಳೆಯಲ್ಲಿ ಅವರು ಉತ್ತಮವಾದ, ನಿಜವಾದ ಶಿಸ್ತನ್ನು ತೋರ್ಪಡಿಸಿದರು. ಅವರು ಸಂಯೋಗ ವಾತಾವರಣದಲ್ಲಿ ನಾಗರೀಕ ಕರ್ತವ್ಯಗಳನ್ನು ಕಲಿತರು. ಆ ಜ್ಞಾನವು ವಿಕಾಸದರ ವಾತಾವರಣದಲ್ಲಿ ಮತ್ತು ಶಿಕ್ಷಣದ ವರ್ಗಗಳಿಗೆ ಉತ್ತೇಜನ ಕೊಡಲಾಗುತ್ತಿತ್ತು. ಭಾರತವೂ ಕಾಲೇಜು ಶಿಕ್ಷಣದ ಅಂಗವಾಗಿ ಅಂಥ ಕ್ರಮವನ್ನು ಕೈಕೊಳ್ಳಬೇಕೆಂದು ಸೂಚಿಸಿದೆ. ಆದರೆ ಅದನ್ನು ತನ್ನಲ್ಲಿ ಕೈಕೊಳ್ಳಲಾಗಿದೆಯೆಂದು ಹೇಳಿಕೊಳ್ಳುವ ಸಂಸ್ಥೆಯ ಹೆಸರನ್ನು ನಾನಂತೂ ಇನ್ನು ಕೇಳಿಲ್ಲ. ಗಾಂಧೀ ಗ್ರಾಮದಲ್ಲಿ ನಾಳೆ ದೀರ್ಘರಜೆಯ ಕಾಲದಲ್ಲಿ ನಾವು ಒಂದು ಪರಿಶ್ರಮ ಶಿಬಿರವನ್ನು ಪ್ರಾರಂಭಿಸಬೇಕೆಂದಿದ್ದೇವೆ. ನಾವು ಸಂಕಲ್ಪಿಸಿರುವ ಸಹಕಾರಿ ಕೃಷಿ ನಿವೇಶನದಲ್ಲಿ ನಮಗೆ ಸಹಾಯ ಮಾಡಲು ಬರಬಯಸುವ ಕಾಲೇಜು ವಿದ್ಯಾರ್ಥಿಗಳಿಗೆ ಉತ್ತೇಜನ ಕೊಡಲಾಗುವದು, ಈ ನಿವೇಶನಕ್ಕೆ ಬಂದಿರುವ ಹಳ್ಳಿಗರ ಜತೆಯಲ್ಲಿ ಅವರು ಕೆಲಸ ಮಾಡಬೇಕಾಗುವದು. ಅವರು ಅಣೆಕಟ್ಟುಗಳನ್ನು ಭೂಸಾರನಾಶವನ್ನು ತಡೆಯುವ ಒಡ್ಡುಗಳನ್ನೂ ಕಟ್ಟುವರು. ಈಗಾಗಲೆ ನಟ್ಟಿರುವ ಹಣ್ಣಿನ ಗಿಡಗಳಿಗೆ ನೀರೆರೆವರು. ಅವರು ಭಾವೀ ಪೀಳಿಗೆಗಾಗಿ ಕೆಲಸ ಮಾಡುವ ಅವಶ್ಯಕತೆಯನ್ನು ಮನಸ್ಸಿನಲ್ಲಿ ಅಚ್ಚೊತ್ತಿಕೊಳ್ಳುವರು. ವಿರಾಮವೇಳೆಯಲ್ಲಿ ಅವರು ರಚನಾತ್ಮಕ ಕಾರ್ಯಕ್ರಮವನ್ನು ಅಭ್ಯಾಸಿಸುವರು. ಅವರು ಅಹಿಂಸೆಯ ಅರ್ಥ ವಿಶೇಷಗಳನ್ನೂ ಚರ್ಚಿಸುವರು. ಅವರನ್ನು ಶಾಂತಿಪಥಕವಾಗಿ ಸಂಘಟಿಸಲಾಗುವದು. ಅವರು ತಮ್ಮ ಕಾಲೇಜುಗಳಿಗೆ ಮರಳಿದಾಗ, ಕಳೆದ ವರ್ಷದ ಶಿಬಿರ ಸದಸ್ಯರು ಆಗ ಈ ಶಿಬಿರ ಪರಿಶ್ರಮ ಶಿಬಿರವಾಗಿದ್ದಿಲ್ಲ. ತಮ್ಮ ಕಾಲೇಜುಗಳಲ್ಲಿ ನಡೆಯುವ ಮತ್ತು ಇತರ ಕಾರ್ಯಗಳ ವರ್ಗಗಳನ್ನು ಸಂಘಟಿಸಿದಂತೆ ವಿಶೇಷ ವರ್ಗಗಳನ್ನು ಪ್ರಾರಂಭಿಸಬಹುದು ಈ ಶಿಬಿರಗಳಲ್ಲಿ ಅತ್ಯಂತಿಕ ಶಿಸ್ತು ಮತ್ತು ನೈಷ್ಠಿಕ ಜೀವನವಿದೆ ಆದರೆ ಆ ಶಿಸ್ತು ಬಾಂಧವ್ಯದಿಂದಲೇ ಮೊಳೆತು ಬೆಳೆದುದು ವಿದ್ಯಾರ್ಥಿಗಳು ತಮ್ಮದೇ ಆದ ಕಾರ್ಯ ಸಮಿತಿಯನ್ನು ಆರಿಸುವರು. ಯಾವಾಗಲು ಯುವಕರು ತಮ್ಮ ದೈನಂದಿನ ಕಾರ್ಯಕ್ರಮಗಳನ್ನು ಗೊತ್ತುಪಡಿಸುವರು. ಆದರೆ ಇದರ ಸೂಕ್ಷ್ಮ ವಿವರಣೆ ಅವಶ್ಯವಿಲ್ಲ.

ಸರಕಾರಗಳು ಈ ಬಗೆಯಲ್ಲಿ ವಿದ್ಯಾರ್ಥಿಗಳನ್ನು ಪ್ರವರ್ತಕ ತರಬೇತಿಗೊಳಪಡಿಸುವ ವಿಷಯದಲ್ಲಿ ಗಾಢಾಲೋಚನೆ ಮಾಡಬೇಕೆಂದಿಷ್ಟೇ ನಮ್ಮ ಸೂಚನೆ.

ನಾನು ಅಹಿಂಸಾನಿಷ್ಠನೆಂದಿಸಿಕೊಳ್ಳುತ್ತಿದ್ದರೂ ಹಿಂಸಾಕಾರ್ಯದಲ್ಲಿ ಪ್ರವೃತ್ತರಾಗಿದ್ದಾಗಲೂ ಅಹಿಂಸಾತ್ಮವಾಗಿರುವ ನೆಪರು ಪ್ರವೃತ್ತಿಗಳ ಕೃತಿಗಳನ್ನು ಖಂಡಿಸುವ ಗೋಜಿಗೆ ಹೋಗಲಾರೆ. ಆದರೆ ರಚನಾತ್ಮಕ ಕಾರ್ಯದಲ್ಲಿರಲಿ, ಸರಕಾರಿ ಅಧಿಕಾರ ಪದಗಳಲ್ಲಿರಲಿ. ಅಹಿಂಸೆಯಲ್ಲಿ ನಿಜವಾದ ಪ್ರಯತ್ನಗಳವು ನಮ್ಮಂಥವರೆಲ್ಲರೂ ಅದರ ಸಾಧನೆಗಾಗಿ ಹೆಚ್ಚು ಮನಃಪೂರ್ವಕವಾಗಿ ದುಡಿಯಬೇಕಾದ್ದು ಅವಶ್ಯವೆಂದು ಸೂಚಿಸುವೆ. ಶಾಲೆ ಕಾಲೇಜುಗಳಲ್ಲಿ ಸಮರ ಶಿಕ್ಷಣಕ್ಕಿಂತ ಹೆಚ್ಚು ರಚನಾತ್ಮಕವಾದ ಬೇರೊಂದು ಕ್ರಮನಿಯಮಿತವಾಗಿ ಅವಶ್ಯವಿದೆ. ಅದು ಸಾಮಾನ್ಯ ಆಟಪಾಟಗಳಿಗಿಂತ ಉದಾತ್ತವಾಗಿರಬೇಕು. ಅದರಲ್ಲಿ ವಾಸ್ತವಿಕತೆಯು ತಾನವಿರಬೇಕು. ಅದು ಜೀವನ ಸಮಸ್ಯೆಯೊಡನೆ ಸಂಗತವಾಗಿರಬೇಕು. ಅದು ಯುವಕರ ಧ್ಯೇಯವಾದವನ್ನು ಕೆರಳಿಸುವಂತಿರಬೇಕು. ಅರ್ಥಾತ್ ಅದಕ್ಕೆ ಒಂದು ಬಗೆಯ ಭವಿಷತ್ ಸಂಕೇತಾರ್ಥವಿರಬೇಕು. ಅದು ಜಗತ್ತಿಗೆ ಅರ್ಥವೆತ್ತವಿಸಬಹುದಾದ ಪ್ರವರ್ತಕ ಪ್ರಯತ್ನದಿಂದ ಗರ್ಭಿತವಾಗಿರಬೇಕು. ಒಂದು ಕಾಲದಲ್ಲಿ ಚೀನದ ಎಷ್ಟೋ ಯುವಕರನ್ನು ಹುರಿದುಂಬಿಸಿದ ನವಜೀವನ ಆಂದೋಲನದಂತೆ ಸ್ವಲ್ಪವಿಷ್ಟಾದರೂ ಧಾರ್ಮಿಕ ಆವೇಶ ಅದರಲ್ಲಿರಬೇಕು. ಈ ಭಾವನೆಯು ಸಂಗದ ಮತ್ತು ಅಖಂಡ ಜಗತ್ತನ್ನು ಕಟ್ಟುವ ಚಟುವಟಿಕೆಗಳೊಡನೆ ನಮ್ಮ ಶಾಲೆ ಕಾಲೇಜುಗಳಲ್ಲಿ ಬಡವರ ಆವಶ್ಯಕತೆಗಳನ್ನು ಗಮನಿಸುವ ಕಾರ್ಯಕ್ರಮಗಳು ಸಂಘಟಿತವಾಗಬೇಕು. ಅಲ್ಲಿಯ ಯುವಕರಿಗೆ ಅಹಿಂಸಾತ್ಮದ ಮನನವನ್ನೂ ಸತ್ಯಾಗ್ರಹ ಸಾಮರ್ಥ್ಯವನ್ನೂ ಅರಿಯುವ ಅವಕಾಶ ಕೊಡಬೇಕು. ಅವರು ಅಪೇಕ್ಷಿಸಿದರೆ ರಣರಂಗಗಳಿಗೆ ಅಥವಾ ಯುದ್ಧ ಪ್ರಸಕ್ತವಾದ ನಮ್ಮವೇ ಗಡಿನಾಡುಗಳಿಗೆ ಹೋಗಿ ಶಾಂತಿ ಸಿದ್ಧಿಗಾಗಿ ತಮ್ಮ ಪ್ರಾಣಕೊಡುವ ಕಾರ್ಯಕ್ಕಾಗಿ ಪೂರ್ವ ತರಬೇತಿ ಅವರಿಗೆ ದೊರೆಯುವಂತಿರಬೇಕು. ಇಂಥ ತರಬೇತಿಯ ಊಹೆಯು ಸಮರ ಶಿಕ್ಷಣಕ್ಕಿಂತ ಕಷ್ಟತರವೆಂದು ನಾಬಲ್ಲೆ. ಆದರೂ ಅವನ್ನು ಒಡನೆ ಪ್ರಾರಂಭಿಸಬೇಕು. ಖಾಸಗಿ ಮತ್ತು ಸರಕಾರಿ ಸಂಸ್ಥೆಗಳಿದರಲ್ಲಿ.

ಜಾಗತಿಕ ಶಾಂತಿವಾದಿಗಳ ಸಮಿತಿಯು ಭಾರತಕ್ಕೆ ಮುಂದಿನ ಜಾನೇವರಿ ಒಪ್ಪಿದಿತ್ತು. ಕೆಲ ತಿಂಗಳು ಅದನ್ನು ಮುಂದೆ ಹಾಕಲಾಗಿದೆ. ಆದರೆ ಅಖಿಲ ವಿಶ್ವದ ಶಾಂತತಾವಾದಿಗಳಿಗೆ, ಅಣುಬಾಂಬಿನ ಮೂಲಕ ಉಂಟಾಗಬಹುದಾದ ಬಿಕ್ಕಟ್ಟಿನ ಸಂದರ್ಭಗಳಿಗಾಗಿ ಹೊಸ ಉಪಾಯಯೋಜನೆಯ ಅಗತ್ಯ ಎನ್ನಿಸಹತ್ತಿದೆ. ಅವರೆಲ್ಲ ಗಾಂಧೀಜಿಯ ಮಾರ್ಗದರ್ಶನದ ಬಗ್ಗೆ ಆಶಾನ್ವಿತ ನಿರೀಕ್ಷೆಯಿಟ್ಟುಕೊಂಡಿದ್ದರು. ಇಂದು ಅವರ ಅನುಯಾಯಿಗಳತ್ತ ನೋಡುತ್ತಿದ್ದಾರೆ. ಅವರು ಭಾರತಕ್ಕೆ ಬಂದಾಗ ನಿರಾಶೆಗೊಂಡು ಮರಳುವಂತಾಗದಿರಲಿ. ನವರಾಷ್ಟ್ರ ನಿರ್ಮಾಪಕ ಕೇಂದ್ರಗಳಲ್ಲಿ ನಿಜವಾದ ಸತ್ವಯುತ ಕಾರ್ಯವು ಪ್ರತ್ಯಕ್ಷವಾಗಿ ನಡೆದಿದೆಯೆಂಬುದನ್ನೂ ಇದರ ತಳಹದಿಯ ಮೇಲೆಯೇ ಜಗತ್ತಿನ ಶಾಂತಿಸಾಧನೆಯು ಸಾಧಿಸಬಹುದೆಂಬುದನ್ನೂ ಅವರು ಮನಗಾಣಲಿ. ಜಗತ್ತಿನಲ್ಲಿ ಶಾಂತತೆಯು ಬಾಳಿಗೆ ಹೆಚ್ಚು ಸಂತಸ ರೀತಿಯಲ್ಲಿ ಸಾಗಿದ ತಮ್ಮ ರಾಷ್ಟ್ರಭಾರದ ಯೋಜನೆಗಳನ್ನು ಆಳುವವರ ಮುಖಾಂತರ ಅವರು ಕೇಳಿ ಅರಿಯುವಂತಾಗಲಿ. ಈ ದಿನಗಳಲ್ಲಿ ಭಾರತಕ್ಕೆ ಈ ದೃಷ್ಟಿಯಿಂದ ಅನೇಕ ಅಸಾಧಾರಣ ಸುಸಂಧಿಗಳು ಲಭಿಸಿವೆ. ಇದರ ಅರಿವು ನಮಗುಂಟೆ? ಇದಕ್ಕೆ ತಕ್ಕಂತೆ ನಾವು ನಡೆದುಕೊಳ್ಳುತ್ತಿರುವೆವೆ? ಈ ಬಗ್ಗೆ ವಿಶೇಷ ಆಸಕ್ತಿ ಇದ್ದವರು, ಇದೇ ಧೋರಣೆ ಇಟ್ಟುಕೊಂಡ ಪತ್ರಿಕೆಗಳ ಮುಖಾಂತರ ಸಾರ್ವಜನಿಕ ವಿಚಾರಪ್ರಸಾರ ಕೈಕೊಂಡು ಜಗತ್ತು ಮುಂದಿನದನ್ನು ಎದುರಿಸಬೇಕಾಗಿದೆ ಹಾಗೂ ಗಾಂಧೀಜಿಯ ನಿಷ್ಠಾವಂತ ಶಿಷ್ಯ ಅನುಯಾಯಿಗಳಾದ ನಮ್ಮಲ್ಲಿ ಯಾವ ನಿವಾರಣೋಪಾಯಗಳಿವೆ ಎಂಬುದನ್ನು ಸ್ಪಷ್ಟಪಡಿಸುವದು ಯುಕ್ತವೆಂದು ನಾನಿಲ್ಲಿ ಸೂಚಿಸಬಹುದೆ? ಅನೇಕ ವರ್ಷಗಳ ಹಿಂದೆ ನಾನೊಮ್ಮೆ ಗಾಂಧೀಜಿಗೆ, ತಮಗೆ ನಮ್ಮಿಂದ ಅತ್ಯುತ್ತಮ ನೆರವು ದೊರಕಲು ನಾವೇನು ಮಾಡಬೇಕು ಎಂದು ಕೇಳಿದೆ. ಅವರು ತುಸ ಹೆಚ್ಚು ಕಡಿಮೆ ಕೆಳಗಿನಂತೆ ಉತ್ತರ ಹೇಳಿದರು.

"ನಾನು ಅಹಿಂಸೆಯ ಬಗ್ಗೆ ಅತ್ಯಲ್ಪವನ್ನು ಮಾತ್ರ ಅರಿತಿದ್ದೇನೆ ಮತ್ತು ಅಹಿಂಸೆಯಿಂದ ಅತ್ಯಲ್ಪವನ್ನೇ ಸಾಧಿಸಿದ್ದೇನೆ. ಇನ್ನೂ ಅಪಾರ ಪ್ರಯೋಗ ನಡೆಯಬೇಕಾಗಿದೆ. ಈ ಅಚಿಂತ್ಯ ಅಸ್ತ್ರಶಕ್ತಿಯ ವಿಷಯಕ್ಕೆ ಭಾರತದಲ್ಲಿ ಸರ್ವತ್ರ ನೂರಾರು ಪ್ರಯೋಗ ಕೇಂದ್ರಗಳಾದರೂ ಆಗಬೇಕು. ಅಹಿಂಸಾ ಪ್ರಯೋಗ ಕೈಕೊಳ್ಳುವ ಮೂಲಕ ನನಗೆ ನಿಮ್ಮಿಂದ ಅನನ್ಯ ನೆರವು ದೊರಕಬಹುದು."

ರಚನಾತ್ಮಕ ಕಾರ್ಯಕರ್ತರಿಗೆ ಇದಕ್ಕಿಂತ ಹೆಚ್ಚು ಆಹ್ವಾನವು ಇನ್ನಾವುದಿದೆ? ನಾವೆಲ್ಲ ಇದನ್ನು ಎದುರಿಸೋಣ.

ರಾಲ್ಫ್ ರಿಚರ್ಡ್ ಕೈಥಾನ

— O

ಚೀನಾದೇಶದಧಿಪತಿ ಓಡಿದರೇ?

ಶಾಂಘಾಯಿ ಜನರಲಿಸ್ಸಿಮೊ ಚಿಯಾಂಗ ಕೈಶೇಕರವರು ಫೊರ್ಮೊಸಕ್ಕೆ ತೆರಳಿದ್ದಾರೆಂಬ ಸುದ್ದಿಗೆ ಬಲವಾದ ಆಧಾರ

ಬಳ್ಳಾರಿ ಜಿಲ್ಲಾ ಮುನಿಸೀಪರ ಕೋರ್ಟಿನಲ್ಲಿ

O S. 632/43, E. P. 498/48

Between—

ಟ್ರಾನ್ಸ್‌ಫರೀ ಡಿಕ್ರೀಹೋಲ್ಡರ್.— ಸವಾಡಶೆಟ್ಟಿ ಮಲಕಾಜಪ್ಪ

ವಿರುದ್ಧ

ಪ್ರತಿವಾದಿ (J D) ಕರಿಭೀಮಪ್ಪನ ಮಗ ಹನುಮಂತಪ್ಪ ಮೇಜರ್ ವೆಂಡಿಕಾಪು ಜರಾಯ್ತಿ ಗೋವಿಂದವಾಡ ಗ್ರಾಮ ರಾಯದುರ್ಗ ತಾಲೂಕು.

ನೋಟೀಸು

ಬಳ್ಳಾರಿ ಅಫಿಶಿಯಲ್ ರಿಸೀವರರ ಕಡೆಯಿಂದ ಹೋಲ್ಡಾಣಿಸಿದ ದಾವೆಯಲ್ಲಿ ರೂ [illegible] ಗಳಿಗಾಗಿ [illegible] ನೆಯ ದಿನ ಟ್ರಾನ್ಸ್‌ಫರೀ ಡಿಕ್ರಿ ಹೋಲ್ಡರ್ ಮಲಕಾಜಪ್ಪನವರು ಡಿಕ್ರಿಯನ್ನು ತಮ್ಮ ಕಡೆಗೆ ಮಾಡಿಸಿಕೊಂಡರು. ಇದಾದನಂತರ ಪ್ರತಿವಾದಿ (J. D) ಯ ಮೇಲೆ ಕೊನೆಯ ಡಿಕ್ರಿ ಆಯಿತು. ಈಗ ಸದರಿ ಟ್ರಾನ್ಸ್‌ಫರೀ ಡಿಕ್ರಿ ಹೋಲ್ಡರ್‌ರವರು ಅಡವಾಗಿದ್ದ ಆಸ್ತಿಯನ್ನು ಮಾರಾಟಕ್ಕೆ ತರಲು ಅಮಲಿನ ಅರ್ಜಿಯನ್ನು ಇಟ್ಟಿದ್ದು, ಅದರ ವಿಚಾರಣೆಯು ೭-೩-೪೯ಕ್ಕೆ ಇದೆ. ಸದರಿ ೭-೩-೪೯ ನೆಯ ದಿನ ನೀವಾಗಲಿ ನಿಮ್ಮ ವಕೀಲರಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದಲ್ಲಿ ನಿಮ್ಮನ್ನು ಏಕ್ಸ್ ಪಾರ್ಟೆಯಾಗಿ ಭಾವಿಸಲಾಗುವುದು.

ಎಸ್. ಕೆ. ರಾಮಚಂದ್ರನ್
ಬಿ. ಎ ಬಿ. ಎಲ್
ಜಿ. ನಾಗಭೂಷಣಂ
ಬಿ. ಎ. ಬಿ ಎಲ್
ವಕೀಲರು ಬಳ್ಳಾರಿ

ದೊರೆತಿವೆ. ಓ ಮೋಟರುಗಳು ಚಿಯಾಂಗ ಕೈಶೇಕರು ಮತ್ತು ಶ್ರೀಮತಿ ಚಿಯಾಂಗ ಎಲ್ಲ ಸರಂಜಾಮುಗಳನ್ನು ಹೇರಿಕೊಂಡು ಹೋಗಿವೆಯೆಂದು ತಿಳಿಯುತ್ತದೆ. ಅಧಿಕಾರಿಗಳ ಹೊರತಾಗಿ ಚಿಯಾಂಗರೊಂದಿಗೆ ಅತಿಯಾದ ಸಂಬಂಧವನ್ನು ಇಟ್ಟುಕೊಂಡವರು ಕೂಡ ಅವರು ಫೊರ್ಮೊಸಾಕ್ಕೆ ಹೋಗುತ್ತಾರೆಂಬುದನ್ನು ಅಲ್ಲಗಳೆಯಲಾರರು.

ಚಿಯಾಂಗರು ಕಮ್ಯೂನಿಸ್ಟರೊಂದಿಗೆ ನಡೆದ ಸಂಧಾನದ ನಿರೀಕ್ಷೆಯು ಕಡೆಗೂ ಲಕ್ಷ್ಯಕೊಡದೆ ಅತ್ತಕಡೆಗೆ ಹೋಗುತ್ತಾರೆಂದು ತಿಳಿದು ಬರುತ್ತದೆ.

ನವ ಭಾರತಕ್ಕೆ ಜಾಹೀರಾತುಗಳನ್ನು ಕೊಡಿರಿ

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1931

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3%	ವರ್ಷಕ್ಕೆ ಶೇಕಡ
ಒಂದು ವರ್ಷ „	ರೂ. 3½%	„
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ „	ರೂ 4%	„

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ.

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ಪಾರ್ವತಾ ಹೈಸ್ಕೂಲ್ ಕಟ್ಟಡ

ತರಗತಿಗಳು:—ಪ್ರಾರಂಭಿಕ —ಮಧ್ಯಮಿಕ ರಾಷ್ಟ್ರಭಾಷೆ. ಉನ್ನತ:—ವಿಶಾರದ ಪ್ರಚಾರಕ

ವೇಳೆ:—ಪ್ರಾತಃಕಾಲ 7ರಿಂದ9 ಸ ಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾರ್ಯಾಲಯದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

17—1—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿ ಬೋಧತ!!!

ಸಂಪಾದಕ ಮತ್ತು ಪ್ರಕಾಶಕ:---
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೪ ಜನವರಿ ೧೯೪೯ | ಸಂಚಿಕೆ ೩

ಕಾಂಗ್ರೆಸ್ಸಿಗರಿಗೆ ರಾಷ್ಟ್ರಪತಿ ಪಟ್ಟಾಭಿಯವರ ಸೂಚನಾಪ[ತ್ರ]

ಆಡಳಿತದಲ್ಲಿ ಕೈಹಾಕಬಾರದು

——(o) ——

ಮದ್ರಾಸ ತಾ. ೧೭- ಯಾವ ಕಾಂಗ್ರೆಸ್ಸಿಗನೂ, ಅದರಲ್ಲಿಯೂ ಆಯ್ಕೆ ಹೊಂದಿದ ಸಂಸ್ಥೆಗಳ ಸದಸ್ಯರು, ನೌಕರಿಗಳಿಗೆ ಹುರಿಯಾಳುಗಳನ್ನು ಸೂಚಿಸುವಲ್ಲಿ, ಆಯಾತ ನಿರ್ಯಾತ ಪರವಾನಗಿ ಪಡೆದುಕೊಳ್ಳುವಲ್ಲಿ, ತಮಗಾಗಿ ಇಲ್ಲವೆ ತಮ್ಮ ಸ್ನೇಹಿತರಿಗಾಗಿ ಅಂಗಡಿ ಲಾಯಸೆನ್ಸುಗಳನ್ನು ಸಂಪಾದಿಸುವಲ್ಲಿ ಆಸ್ಥೆವಹಿಸಬಾರದು, ಮತ್ತು, ನ್ಯಾಯಾಲಯಗಳಲ್ಲಿ ನಡೆದಿರುವ ದಿವಾಣಿ ಮತ್ತು ಫೌಜುದಾರೀ ಖಟ್ಲೆಗಳ ವಿಷಯದಲ್ಲಿ ಸಂಬಂಧಿಸಿದ ಪೋಲೀಸ ಇಲ್ಲವೆ ನ್ಯಾಯ ಖಾತೆಯ ಅಧಿಕಾರಿಗಳನ್ನು ಕಾಣಬಾರದು ಎಂದು ರಾಷ್ಟ್ರಪತಿಗಳಾದ ಡಾ. ಪಟ್ಟಾಭಿಯವರು ಕಾಂಗ್ರೆಸ್ಸಿಗರು ಮಾರ್ಗದರ್ಶನಕ್ಕಾಗಿ ಇಂದು ಒಂದು ಸೂಚನಾಪತ್ರವನ್ನು ಹೊರಡಿಸಿದ್ದಾರೆ.

ಆ ಸೂಚನಾ ಪತ್ರದಲ್ಲಿ ಇನ್ನೂ ಹೇಳಿದ್ದೇನೆಂದರೆ--

ಸಾರಿಗೆ ಸಮಿತಿ, ಬಸ್ಸಿ ಪರವಾನಿಗೆ ಮಂಡಳ ಮುಂತಾದ ಸಂಸ್ಥೆಗಳಲ್ಲಿ ದೊರೆತ ಸ್ಥಾನವನ್ನು ಆ ಮಂಡಳಗಳ ಸದಸ್ಯರಿಗೆ ಮತ್ತು ಅವರ ಮಿತ್ರರಿಗೆ ಲಾಭ ಸೌಕರ್ಯಗಳನ್ನು ಪಡೆದುಕೊಳ್ಳುವದಕ್ಕಾಗಿ ದುರುಪಯೋಗಿಸಿದ್ದು, ಕಾಂಗ್ರೆಸ್ ಸಮಿತಿಗಳಿಗೆ ತಿಳಿದು ಬಂದಿದೆ ಇಂಥದನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಬೇಕು ಇಲ್ಲವಾದರೆ ಇದನ್ನು ತಡೆಯಲು ಈ ಮಂಡಲಗಳಲ್ಲಿ ಸೇರದಿರುವಂತೆ ಕಾಂಗ್ರೆಸ್ಸಿಗರಿಗೆ ಆಜ್ಞೆ ಹೊರಡಿಸುವದೊಂದೇ ಉಳಿದ ದಾರಿ.

ಕಳ್ಳಪೇಟೆ, ಲಂಚಗುಳಿತನದ ಬಗ್ಗೆ ಎಲ್ಲೆಲ್ಲಿಯೂ ದೂರು ಕೇಳಬರುತ್ತವೆ ಸಾಧ್ಯವಿದ್ದಲ್ಲೆಲ್ಲ ಈ ದುರ್ವ್ಯಾಪಾರಿಗಳನ್ನು ಕಾಂಗ್ರೆಸ್ಸಿಗರು ಬಯಲಿಗೆಳೆಯಬೇಕು. ಈ ಮಾರ್ಗದಲ್ಲಿ ಕಾಂಗ್ರೆಸ್ಸಿಗರಿಗೆ ಯಶಸ್ಸು ದೊರೆಯಬೇಕಾದರೆ ಕಾಂಗ್ರೆಸ್ಸಿಗರ ಚಾರಿತ್ರ್ಯವು ಮೊದಲು ಸಂಶಯಾತೀತವಾಗಿರಬೇಕು ಲಂಚಗುಳಿತನ, ಕಳ್ಳಪೇಟೆ ಇದೆ ಎಂದು ದೂರಿಕೊಳ್ಳುವವರೇ ಅನೇಕ ಸಲ ಅವುಗಳಿಗೆ ಬಲಿಬೀಳುತ್ತಾರೆ. ಒಂದು ಫೌಂಟೆನ್ ಪೆನ್ ಮೊದಲು ಮಾಡಿ ಮೋಟಾರು ಕಾರಿನ ಖರೀದಿಯವರೆಗೆ ಕಾಂಗ್ರೆಸ್ಸಿಗರು ಈ ಎರಡು ದುಷ್ಟ ಸಂಗತಿಗಳಲ್ಲಿ ಒಂದಕ್ಕಾದರೂ ಬಲಿಬೀಳುತ್ತಾರೆ ಇದು ತಪ್ಪು ಎಂದು ಎಲ್ಲರಿಗೂ ತಿಳಿದಿರುತ್ತದೆ. ಆದರೆ ಪರಿಸ್ಥಿತಿಯು ಒತ್ತಾಯದ ಮೂಲಕ ಜನರು ಬಲಿಬೀಳುತ್ತಾರೆ. ಆದ್ದರಿಂದ ಒಮ್ಮೆ ಕೈಕೊಂಡ ಯೋಗ್ಯ ನಿರ್ಧಾರವು ನ್ಯಾಯಪಥದಿಂದ ನಾವು ತೊಲಗದಂತೆ ನೋಡಿಕೊಳ್ಳುವಂತೆ ಪೋಲೀಸರೂ ದಕ್ಷರಾಗಿರಬೇಕು.

ಕಾಂಗ್ರೆಸ್ಸಿಗರು ನಿಸ್ಸಂಶಯವಾಗಿ ಅಧಿಕಾರಿಗಳ ಹಾಗೂ ಮಂತ್ರಿಗಳ ಮೇಲೆ ಉಪಯೋಗಿಸಬಹುದಾದ ವರ್ಚಸ್ಸಿನ ಲಾಭಪಡೆದುಕೊಳ್ಳುವ ಪ್ರವೃತ್ತಿಯು ಹೆಚ್ಚುತ್ತಿದ್ದು ಇದನ್ನು ತಡೆಯಲು ಸುಸಂಘಟಿತ ಪ್ರಯತ್ನ ನಡೆಯಬೇಕಾದುದು ಅಗತ್ಯವಾಗಿದೆ. ನಮ್ಮ ಅಧಿಕಾರವನ್ನೂ ಕಾರ್ಯಕ್ಷೇತ್ರವನ್ನು ಅತಿಕ್ರಮಿಸುವ ಈ ಒಳದಾರಿಗಳಿಂದ ಅಧಿಕಾರಿಗಳು ಮುಖ ತಿರುಗಿಸಿ ಬಿಡಬೇಕು ಮತ್ತು ನ್ಯಾಯವಾದ ನಿಬಂಧನೆಗಳನ್ನು ಉಲ್ಲಂಘಿಸಿದ ಉದಾಹರಣೆಗಳನ್ನು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳ ಗಮನಕ್ಕೆ ತರಬೇಕು ಎಂದು ಅವರನ್ನು ಕೇಳಿಕೊಳ್ಳಲಾಗಿದೆ

ಕಾಂಗ್ರೆಸ್ಸಿನ ಘಟಕವು ವೈವಿಧ್ಯ ಪೂರ್ಣವಾಗಿದ್ದರೂ ಸ್ವಾತಂತ್ರ್ಯ ಸಮರದಲ್ಲಿ ಅದು ಬಹಳ ಸುಸಂಘಟಿತವಾದ ಒಕ್ಕಟ್ಟಿನಿಂದ ಕಾರ್ಯನಿರತವಾಗಿತ್ತು ಆದರೆ ಈಗ ಸ್ವಾತಂತ್ರ್ಯ ದೊರೆತೊಡನೆ ಕಾಂಗ್ರೆಸ್ಸಿನಲ್ಲಿ ಅನೇಕ ಪಕ್ಷಪಂಗಡಗಳು ಹುಟ್ಟಿಕೊಂಡು, ಚಿಕ್ಕ ದೊಡ್ಡ ವಿಷಯಗಳಲ್ಲಿ ಅಧಿಕಾರಿಗಳಿಗೆ ವಿರೋಧಾಭಿಪ್ರಾಯದ ಸಲಹೆ ಕೊಟ್ಟು, ತೊಂದರೆ ಉಂಟುಮಾಡುತ್ತಾರೆ. ಇದರಿಂದ ಚಟುವಟಿಕೆ ನಂದಿರ ಕಕ್ಷಿಯು, ನ್ಯಾ[...]ಕ್ಕೆ ಬಾಯುಪಸ್ಸ ಕೊಡುವ ಮುಂ[...] ಅನೇಕ ವಿಷಯಗಳಲ್ಲಿ ಆಡಳಿತದಲ್ಲಿ [...]ಯೂ ಮಂತ್ರಿಗಳಲ್ಲಿ ಮತಭೇದ ಉಂಟಾಗುತ್ತಿವೆ ಇಂಥ ಚಟುವಟಿಕೆಗಳಲ್ಲಿ ಕಾಂಗ್ರೆಸ್ಸಿಗರು ಭಾಗವಹಿಸದಿದ್ದರೆ ಬಹಳ ಸಹಾಯವು ಮಾಡಿದಂತಾಗುವದು.

ಮಂತ್ರಿ ಮಂಡಳಗಳ ರಚನೆಯು [...] ಕಾಂಗ್ರೆಸ್ಸಿನ ಐಕ್ಯ ಸಾಮರ್ಥ್ಯಗಳಿಗೆ ಧಕ್ಕೆ ಬಂದು. ಮಂತ್ರಿಮಂಡಳಗಳ ಹೊರಕ್ಕೆ ಉಳಿದವರೆಲ್ಲ ಕಾಂಗ್ರೆಸ್ಸಿನಲ್ಲಿ ತಮ್ಮದೇ ಆದ ವಿರೋಧಿ ಗುಂಪನ್ನು ಕಟ್ಟಿಕೊಂಡಿರುವದು ಕಂಡುಬರುತ್ತದೆ ಶಾಸನ ಸಭೆಗಳ ಪಕ್ಷದ ಕಾರ್ಯದಲ್ಲಿಯೂ ಇದು ಕಂಡು ಬರುತ್ತದೆ ವಿದೇಶದ ಹೊಣೆಗಾರ ಸರಕಾರಗಳು ದೀರ್ಘಕಾಲದ ಸಂಪ್ರದಾಯಗಳ ತಳಹದಿಯ ಮೇಲೆ ರಚಿತವ[ಾದ] ವಿರೋಧಿ ಪಕ್ಷದವರನ್ನು ಗೌರವಿಸು[ತ್ತವೆ] ವಿರೋಧಿ ಪಕ್ಷದವರು ಅಧಿಕಾರಾರೂಢ ಪಕ್ಷದವರನ್ನು ಗೌರವಿಸಲು ಕಲಿತಿರುತ್ತಾರೆ.

ಪರಿಸ್ಥಿತಿಯು ಹೀಗಿರುವಾಗ ಅಂತರಿಕ ಭೇದಗಳಿಂದ ಸರಕಾರದನ್ನು ಕುಗ್ಗಿಸದೆ ಒಗ್ಗಟ್ಟಿನಿಂದ ಮುಂದುವರಿಯಬೇಕಾದುದು ಕಾಂಗ್ರೆಸ ಪಕ್ಷಕ್ಕೆ ಅನಿವಾರ್ಯವಾಗಿದೆ. ಗುಂಪುಗಳನ್ನು ಕಟ್ಟುವಾಗ ಜಾತಿಯು ಅನೇಕ ಸಲ ನಿರ್ಣಾಯಕ ಅಂಶವಾಗುತ್ತದೆಂದು ಕಂಡುಬರುತ್ತದೆ. ಈ ಭೇದಗಳು ಕಾಂಗ್ರೆಸ್ಸಿನ ಪಾವಿತ್ರ್ಯವನ್ನು ದೇಶದ ಸಮಗ್ರತೆಯನ್ನೂ ಭಂಗಿಸದಂತೆ ನೋಡಿಕೊಳ್ಳಬೇಕಾದ ಕಾಲವೀಗ ಬಂದಿದೆ ಆದ್ದರಿಂದ ಕಾಂಗ್ರೆಸ್ಸಿನಲ್ಲಿ ಒಗ್ಗಟ್ಟನ್ನು ಸ್ಥಾಪಿಸಿ ಸಮರ್ಥತೆಯನ್ನು ಹೆಚ್ಚಿಸಬೇಕು. ಕಾಂಗ್ರೆಸ್ಸಿನಲ್ಲಿ ಮತಭೇದವಿದ್ದರೂ ಕೆಲ್ಲಿಕ್ಕೆ ಕಾರ್ಯಕ್ರಮ ಹಾಗು ಧೋರಣದಲ್ಲಿ ಸಂಸ್ಥೆಯೊಂದಿಗೆ ಸಹಕರಿಸಬೇಕು

—O—

ಹೈದರಾಬಾದಿನಲ್ಲಿ ತಾತ್ಕಾಲಿಕ ಸರಕಾರ

ಮದರಾಸು ಪ್ರಾಂತದಲ್ಲಿ ಬಹುಕಾಲ ಮುಖ್ಯಾಧಿಕಾರಿಗಳಾಗಿ ಒಳ್ಳೇ ಅನುಭವಿಗಳಾದ ಶ್ರೀ ಎಸ್. ವಿ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಹೈ[ದರಾಬಾ]ದಿನಲ್ಲಿ ತಾತ್ಕಾಲಿಕ ಸರಕಾರವು ರಚಿತವಾಗಲಿದೆಯೆಂದೂ, ಚುನಾವಣೆಯ ಸ್ಥಾಯೀ ಸರಕಾರವು ಅಸ್ತಿತ್ವದಲ್ಲಿ ಬರುವವರೆಗೂ ಈ ತಾತ್ಕಾಲಿಕ ಸರಕಾರ ಇರುವದೆಂದು ಆಧಾರ ಪೂರ್ವಕ ಬಾತ್ಮಿ ಬಂದಿದೆ

— ನವದೆಹಲಿಯಲ್ಲಿ ಸಮಾವೇಶವಾಗಲಿರುವ ಏಶಿಯಾ ಮಹಾಸಭೆಯಲ್ಲಿ ಏಶಿಯಾದ ೧೯ ರಾಷ್ಟ್ರಗಳು ಭಾಗವಹಿಸಲಿದ್ದು ಇವುಗಳಲ್ಲಿ ಚೀನಾ ಸಂ[...] ನ್ಯೂಜಿಲೆಂಡ ರಾಷ್ಟ್ರಗಳು ಪ್ರೇಕ್ಷಕರನ್ನು ಕಳುಹಿಸಲಿವೆ.

ಕಾಶ್ಮೀರದ ಭವಿತವ್ಯ

ಸಂಯುಕ್ತ ರಾಷ್ಟ್ರಸಂಘವು ನಿಯಮಿಸಿದ ಕಾಶ್ಮೀರ ಸಮಿತಿಯು ಡಿಲ್ಲಿ ಕರಾಚಿಗಳ ನಡುವೆ ಓಡಾಡಿ, ಹಿಂದುಸ್ಥಾನ ಪಾಕಿಸ್ತಾನಗಳ ನಡುವೆ ಕಾಶ್ಮೀರದ ಬಗ್ಗೆ ಒಪ್ಪಂದವು ಆಗುವಂತೆ ಪ್ರಯತ್ನಿಸಿ ಜಯಶೀಲವಾಗುವ ದಾರಿಯನ್ನು ಬಹುವಾಗಿ ಶ್ರಮಿಸಿದೆ ಎಂದು ಹೇಳಬಹುದು. ಪ್ರಜಾಪ್ರಭುತ್ವ ತತ್ವಕ್ಕನುಸರಿಸಿ, ಕಾಶ್ಮೀರದ ಭವಿತವ್ಯವನ್ನು ನಿರ್ಣಯಿಸುವವರು ಕಾಶ್ಮೀರಿಗಳೇ ಎಂಬ ಮಾತಿಗೆ ಹಿಂದುಸ್ಥಾನವು ಎಂದೋ ಒಪ್ಪಿಗೆ ಕೊಟ್ಟಿತ್ತಲ್ಲದೆ ಅದರಂತೆ ಆಚರಿಸಲೂ ಸಿದ್ಧವಿತ್ತು. ಆದರೆ ಪಾಕಿಸ್ತಾನವು ಮಾತ್ರ, ಆ ಬಗೆಯ ದಾರಿಯನ್ನು ಸಮಂಜಸ ದಾರಿಯನ್ನು ಶ್ರಮಿಸದೆ ಏನೇನೋ ಎದ್ವಾ ತದ್ವಾ ಉಪದ್ವ್ಯಾಪ ಹೂಡಿ ಕಾಶ್ಮೀರದಲ್ಲಿ ಕಾಳಗವನ್ನೂ, ಸಂಯುಕ್ತ ರಾಷ್ಟ್ರಸಂಘ ಭದ್ರತಾಮಂಡಲಗಳಲ್ಲಿ ತನ್ನ ಅಪಪ್ರಲಾಪವನ್ನೂ ಒಂದೇ ಸವನೇ ಸಾಗಿತ್ತು. ಕೊನೆಗೊಮ್ಮೆ ಪಾಕಿಸ್ತಾನವು ತಾನು ಕಾಶ್ಮೀರದಲ್ಲಿ ಕಾಳಗಹೂಡಿದ್ದು ನಿಜವೆಂದು ಒಪ್ಪಿಕೊಂಡಿತಲ್ಲದೆ, ಪ್ರಜಾಪ್ರಭುತ್ವ ತತ್ವಕ್ಕೆ ಬಗ್ಗಿ, ಕಾಶ್ಮೀರದಲ್ಲಿ ಕಾಶ್ಮೀರಿಗಳ ಸಾರ್ವತ್ರಿಕ ಮತಗಣನೆ ನಡೆದು ಈ ಪ್ರಶ್ನೆಯು ಕಾಶ್ಮೀರವು ಹಿಂದುಸ್ತಾನದಲ್ಲಿ ಸೇರಬೇಕೋ ಅಥವಾ ಪಾಕಿಸ್ತಾನದಲ್ಲಿ ಸೇರಬೇಕೋ ಎಂಬುದರ ನಿರ್ಣಯವನ್ನು ಕಾಶ್ಮೀರಿಗಳೇ ನಿರ್ಣಯಿಸಲೆಂದು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾಗಿ ಬಂದಿತು. ಅದರಂತೆ ಈಗ ಅಲ್ಲಿ ಯುದ್ಧವು ನಿಂತು, ಸಾರ್ವತ್ರಿಕ ಮತಗಣನೆಯು ಸಮಾಧಾನಕಾರಕವಾಗಿಯೂ ನಿಷ್ಪಕ್ಷಪಾತ ಕಪದಿಂದಲೂ ನಡೆಯುವಂತೆ ಯೋಜನೆಯನ್ನು ಸಿದ್ಧಗೊಳಿಸಲಾಗುತ್ತದೆ.

ಈ ವಿಷಯವಾಗಿ ಸಂಯುಕ್ತ ರಾಷ್ಟ್ರಸಂಘದ ಕಾಶ್ಮೀರ ಸಮಿತಿಯು ಜನವರಿ ೬ನೆಯ ದಿನಾಂಕದಲ್ಲಿ ಒಂದು ಪೂರಕ ಗೊತ್ತುವಳಿಯನ್ನು ಪ್ರಕಟಿಸಿರುತ್ತದೆ. ಹಿಂದುಸ್ತಾನವು ಆಕ್ಷೇಪಿಸಿದ ಭದ್ರತಾಮಂಡಲದ ಕಳೆದ ಏಪ್ರಿಲ ತಿಂಗಳ ಗೊತ್ತುವಳಿಗೂ ಮಹದಂತರವಿರುತ್ತದೆ. ಹಿಂದುಸ್ತಾನವು ಹಿಂದಕ್ಕೆ ಎತ್ತಿದ ಆಕ್ಷೇಪಗಳು ಈ ಗೊತ್ತುವಳಿಯಲ್ಲಿ ನಿವಾರಿಸಲ್ಪಟ್ಟಿವೆ. ಈ ಹೊಸ ಗೊತುವಳಿಯು ಅನ್ವಯ ಕೆಳಗೆ ಕಾಣಿಸಿದ ಮಹತ್ವದ ಅಂಶಗಳನ್ನೂ ನೋಡಬಹುದಾಗಿದೆ.

ಒಂದನೆಯದಾಗಿ ಮೊದಲು ಯೋಚಿಸಿದಂತೆ ಶೇಕ ಅಬ್ದುಲ್ಲಾರವರ ಸರಕಾರದ ಅಧಿಕಾರದ ವಿಷಯಕ್ಕೆ ಕೈ ಹಚ್ಚಿಲ್ಲ ಹಾಗೂ ಸಮ್ಮಿಶ್ರ ಸರಕಾರವನ್ನು ಸ್ಥಾಪಿಸಬೇಕೆನ್ನುವ ಸೂಚನೆಗಳನ್ನು ಬಿಟ್ಟು ಬಿಡಲಾಗಿರುತ್ತದೆ. ಎರಡನೆಯದಾಗಿ ಆಜಾದ ಕಾಶ್ಮೀರ ಸರಕಾರಕ್ಕೆ (ಇದು ಪಾಕಿಸ್ತಾನದ ಸಾಕುಮರಿ) ಯಾವದೇ ರೀತಿಯಿಂದ ಮನ್ನಣೆಯನ್ನು ಕೊಟ್ಟಿರುವದಿಲ್ಲ. ಸ್ವತಂತ್ರ ಜನಮತಗಣನೆಗೆ ಅನುಕೂಲವಾಗುವ ಆಜಾದ ಕಾಶ್ಮೀರ ಸೈನ್ಯವನ್ನು ನಿಶಸ್ತ್ರಗೊಳಿಸಿ ವಿಸರ್ಜಿಸಲಾಗುವದು. ಮೂರನೆಯದಾಗಿ ಸಾರ್ವಮತಾಧಿಕಾರಿಯು (ಇವನ ಸಂಯುಕ್ತ ರಾಷ್ಟ್ರಸಂಘದ ಸೂಚಿಸಲ್ಪಡುವನು) ತನ್ನ ಅಧಿಕಾರವನ್ನು ಕಾಶ್ಮೀರ ಸರಕಾರದಿಂದ ಪಡೆಯುತ್ತಾನೆ. ನಾಲ್ಕನೆಯದಾಗಿ ಈ ಸಾರ್ವಮತಾಧಿಕಾರಿಯು ಶಾಂತಿ ಪಾಲನೆಗಾಗಿ ಹಿಂದುಸ್ತಾನ ಅಥವಾ ಪಾಕಿಸ್ತಾನದ ಸೈನ್ಯ ಸಹಾಯ ಪಡೆಯುವ ಪ್ರಶ್ನೆಯೇ ಉಳಿದಿಲ್ಲ. ಈ ಕೆಲಸಕ್ಕೆ ಹಿಂದೀ ಸೈನಿಕರನ್ನು ಮಾತ್ರ ಕರೆಸಲಾಗುವುದು. ಐದನೆಯದಾಗಿ ಕಾಶ್ಮೀರದಲ್ಲಿ ಹಿಂದೀ ಸೈನ್ಯವನ್ನು ಹಿಂತೆಗೆದುಕೊಳ್ಳುವುದರ ಸಲುವಾಗಿ ಏಪ್ರಿಲ ಗೊತ್ತುವಳಿಯಲ್ಲಿ ಒತ್ತಿ ಹೇಳಲಾಗಿತ್ತು. ಈಗ ಆ ಪ್ರಶ್ನೆಯೇ ಇಲ್ಲ. ಪಾಕಿಸ್ತಾನದ ಮತ್ತು ಪಠಾಣ ಸೈನಿಕರು ಮೊದಲಾದವರನ್ನು ಹಿಂದಕ್ಕೆ ಕರೆಸಿದ ನಂತರ ಹಿಂದೀ ಸೈನ್ಯದ ಪ್ರಮಾಣದಲ್ಲಿ ಕಡಿಮೆ ಮಾಡಬಹುದು.

ಆರನೆಯದು ಮತ್ತು ಕೊನೆಯದಾಗಿ ಕಾಶ್ಮೀರ ಸಮಿತಿಯ ಆಗಸ್ಟ್ ಹದಿಮೂರನೆಯ ದಿನಾಂಕ ಗೊತ್ತುವಳಿಯ ಮೊದಲಿನ ಎರಡು ಭಾಗಗಳು ಪೂರ್ಣಕಾರ್ಯಕಾರಿಯಾದ ನಂತರ ಮಾತ್ರ ಜನಮತಗಣನೆಯು ನಡೆಯಬೇಕೆಂದು ಗೊತ್ತಾದದು ಬಹಳ ಮಹತ್ವದ ಸಂಗತಿಯಾಗಿರುತ್ತದೆ. ಈ ಜನಮತಗಣನೆಯ ವಿವರಗಳನ್ನು ಹಿಂದುಸ್ತಾನ ಮತ್ತು ಪಾಕಿಸ್ತಾನದ ಸರಕಾರಗಳು ಇನ್ನೂ ನಿರ್ಣಯಿಸಬೇಕಾಗಿರುತ್ತದೆ. ಉದಾಹರಣೆಗಾಗಿ ಜನಮತಗಣನೆಯನ್ನು ಇಡೀ ಸಂಸ್ಥಾನದ ತುಂಬೆಲ್ಲ ನಡೆಸಬೇಕೋ, ಅಥವಾ ಭಾಗಮಾಡಿ ಜರುಗಿಸಬೇಕೋ ಎಂಬುದು ನಿರ್ದಿಷ್ಟವಿಲ್ಲ. ಇಂತಹ ಪ್ರಶ್ನೆಗಳನ್ನೆಲ್ಲ ಹಿಂದುಸ್ತಾನ ಪಾಕಿಸ್ತಾನ ಸರಕಾರಗಳು ಕೂಡಿಕೊಂಡು ವಿಚಾರ ಮಾಡಿ ನಿರ್ಣಯಕ್ಕೆ ಬರಬೇಕಾಗಿದೆ.

ಅಲ್ಲದೆ ಬಹು ಮುಖ್ಯ ಪ್ರಶ್ನೆಯಾಗಿದ್ದ ಒಂದರಬಗ್ಗೆ ಹಿಂದುಸ್ತಾನ ಸರಕಾರವು ಕಾಶ್ಮೀರ ಸಮಿತಿಗೆ ಬಿಂಬಿಸಿಕೊಟ್ಟಿದೆ. ಅದೆಂದರೆ ಜನಮತಗಣನೆಯ ಪ್ರಚಾರದಲ್ಲಿ ಜಾತಿದ್ವೇಷ ಹಬ್ಬದಂತೆ ವ್ಯವಸ್ಥೆ ಮಾಡುವುದು. ಈ ಬಗ್ಗೆ ಕಾಶ್ಮೀರ ಸಮಿತಿಯು ಕೂಡ ಒಪ್ಪಿಕೊಂಡಿರುತ್ತದೆ. ಹೀಗೆ ಕಾಶ್ಮೀರದಲ್ಲಿ ಇನ್ನು ಮುಂದೆ ಜರುಗತಕ್ಕ ಸಂಗತಿಗಳು ಬಹಳ ಜಾಗರೂಕತೆಯಿಂದಲೂ, ನಿರ್ಣಯಾತ್ಮಕವಾಗಿಯೂ, ಮೊದಲು ವಿಶೇಷವಾಗಿ ಚರ್ಚಿಸಲ್ಪಟ್ಟು ನಡೆಯುವವಿವೆ. ಜಾತಿದ್ವೇಷದ ಪರಿಣಾಮವಾಗಿ ತಾಯಿನಾಡನ್ನೇ ತುಂಡುಮಾಡಬೇಕಾಗಿಬಂದು ಅದರ ದುಷ್ಫಲವನ್ನು ಹಿಂದುಸ್ತಾನ ಪಾಕಿಸ್ತಾನಗಳೆರಡೂ ಅನುಭೋಗಿಸುತ್ತಲಿರುವದು ಹಿಂದುಸ್ತಾನಿಗಳ ಮನವನ್ನು ಬಹಳ ನೋಯಿಸಿದೆ.

ಅದಕ್ಕಾಗಿ, ತಾತ್ಕಾಲಿಕ ಲಾಭಹಾನಿಗಳ ಕಡೆಗೆ ನೋಡದೆ, ಭಾರತ ರಾಷ್ಟ್ರಪಿತ ಬಾಪೂಜಿಯವರ ಹೇಳಿಕೆಯಂತೆ, ಜಾತ್ಯತೀತ ಹಾಗೂ ಪ್ರಜಾಪ್ರಭುತ್ವ ತತ್ವದ ಮೇಲೆಯೇ ಏನಾಗುವದೋ ಆಗಲೆಂದು ಹಿಂದುಸ್ತಾನಿಗಳ ನಿರ್ಧಾರವಾಗಿದೆ. ಹಿಂದುಸ್ತಾನ ಸರಕಾರವು ಯಾವ ಬಗೆಯ ಆಶೆಯನ್ನು ಇಟ್ಟುಕೊಳ್ಳದೆ ಕಾಶ್ಮೀರದಲ್ಲಿ ಕೇವಲ ಅಲ್ಲಿಯ ಪ್ರಜೆಗಳ ಹಿತದ ದೃಷ್ಟಿಯಿಂದ ಕಾರ್ಯಮಾಡುತ್ತ ಬಂದಿರುತ್ತದೆ. ಪಾಕಿಸ್ತಾನಿಗಳು ಕೇವಲ "ಹದವಿದ್ದಾಗ ಕದ ತೆಗೆಯುವವರು" ಎಂದು ಕಾಶ್ಮೀರಿಗಳಿಗೆ ಅನುಭವ ಬಂದು ಹೋಗಿದೆಯೆಂದೂ, ಹಿಂದುಸ್ತಾನದಲ್ಲಿಯೇ ಕೂಡಿಕೊಳ್ಳಲು ಕಾಶ್ಮೀರಿಗಳೆಲ್ಲರು ಹೆಬ್ಬಯಕೆ ಇರುವುದೆಂದೂ, ಈ ಮನವಿಗೇ ಗೆಲವು ದೊರೆಯದಿರದೆಂದೂ ಕಾಶ್ಮೀರದ ಮುಖ್ಯ ಮಂತ್ರಿ ಶೇಕ ಅಬ್ದುಲ್ಲಾರವರು ಪ್ರಕಟನೆಯ ಮೂಲಕ ಹೇಳಿದ್ದಾರೆ

ಆದರೆ ಈ ಬಗ್ಗೆ ಪಾಕಿಸ್ತಾನದ ನಿಲುಮೆ ಏನಿದೆಯೋ, ಅವರ ವಿಚಾರ ಲಹರಿ ಯಾವ ಮುಖವಾಗಿ ಹರಿಯುತ್ತಿದೆಯೋ, ಅದರ ಕಾರ್ಯಕ್ರಮಗಳ ವಿವರಗಳೇನಿರುವವೋ ಇನ್ನೂ ಎಲ್ಲಿಯೂ ಪ್ರಕಟವಾದಂತಿಲ್ಲ. ಬಹುಶಃ ಮಾತನಾಡಲಿಕ್ಕೆ ತನ್ನ ವಿಚಾರಗಳನ್ನು ಹೊರಗೆಡುವದಕ್ಕೆ ಅದಕ್ಕೆ ಬಾಯಿಯೇ ಬರದಂತಾಗಿರಬಹುದು, ಇದಕ್ಕೆ ಇಲ್ಲಿಯವರೆಗೆ ಸುಳ್ಳನ್ನೇ ಸಾಧಿಸಿದವೂ, ಬಹುಶಃ ಕಾರಣವಿರಬಹುದು ಆದರೂ, ತನ್ನ ಹಸ್ತಕರ ಮುಖಾಂತರವಾಗಿ (ಗುಡ್ಡಗಾಡು ಜನರು, ಆಜಾದ ಕಾಶ್ಮೀರ ಸರಕಾರ ಮೊದಲಾದವು) ಅದು ತನ್ನ ಬಯಕೆಯನ್ನು ಪೂರೈಸಿಗೊಳ್ಳಲು ಪ್ರಯತ್ನಿಸದೆ ಇರಲಿಕ್ಕಿಲ್ಲ

ಏನೇ ಆದರೂ ಕಾಶ್ಮೀರ ಸಮಸ್ಯೆಯು ಇಂದು ಒಂದು ದಾರಿಯನ್ನು ಹಿಡಿದುಸಾಗಿರುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯು ಹಿರಿತನದಲ್ಲಿ ಅಲ್ಲಿ ಯಾವ ಬಗೆಯ ಅನ್ಯಾಯ, ಗೂಢ ಚಟುವಟಿಕೆಗಳಿಗೆ ಅಸ್ಪದ ಸಿಗಲಾರದೆಂದು ನಂಬಬಹುದಾಗಿರುತ್ತದೆ. ಇಂದಿನ ವರೆಗೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ ಕಾಶ್ಮೀರಿಗಳೂ ಜಾಗೃತರಾಗಿದ್ದಾರೆ. ತಮ್ಮ ನಿಜವಾದ ಹಿತೈಷಿಗಳು ಯಾರೆಂಬುದು ಅವರಿಗೆ ಮನವರಿಕೆಯಾಗಿದೆ. ಈ ಎಲ್ಲ ಸಂಗತಿಗಳನ್ನು ನೋಡುತ್ತಿರಲಿಕ್ಕಾಗಿ ಕಾಶ್ಮೀರದ ಭವಿತವ್ಯವು ಭವ್ಯವೇ ಆಗಿದೆಯೆನ್ನಲು ಅಭ್ಯಂತರವಿಲ್ಲ.

ಬಳ್ಳಾರಿ ವೀರಶೈವ ಕಾಲೇಜು

ಕಾಲೇಜಿನ ವ್ಯವಸ್ಥಾಪಕ ಸಮಿತಿಯವರು ಕಾಲೇಜು ನಡೆಸುವ ಬಾಧ್ಯತೆಯನ್ನು ಹೊರಬಾರದೆಂದು ಮದ್ರಾಸ್ ವೀರಶೈವ ವಿದ್ಯಾವರ್ಧಕಸಂಘದ ಜನರಲ್‌ಬಾಡಿಗೆ ಶಿಫಾರಸು ಮಾಡಿರುತ್ತಾರೆ. ಇದರ ವಿಶೇಷ ಸಭೆಯು ೩೧-೧-೪೯ ನೆಯ ಸೋಮವಾರ ಸಾಯಂಕಾಲ ಸಂಘದ ಕಛೇರಿಯಲ್ಲಿ ಸಮಾವೇಶವಾಗುವದೆಂದೂ, ಸದಸ್ಯರೆಲ್ಲರೂ ಬರಲು ಕಾರ್ಯದರ್ಶಿಗಳಾದ ಶ್ರೀ ಟೆಂಗಿನಕಾಯಿ ಶಾಂತಪ್ಪನವರು ತಿಳಿಸುತ್ತಾರೆ. ತೀರ್ಮಾನದ ವಿವರ ಹೀಗಿದೆ.

ವೀರಶೈವ ಕಾಲೇಜಿನ ವ್ಯವಸ್ಥಾಪಕ ಸಮಿತಿಯು ತಾ|| ೩೧-೧೨-೧೯೪೮ ರಲ್ಲಿ ಸೇರಿ ಮಾನ್ಯರಾದ ಮುಖ್ಯಮಂತ್ರಿಗಳು ೧೯೪೮ ರ ಜೂನ್ ತಿಂಗಳಲ್ಲಿ ವೀರಶೈವ ಕಾಲೇಜಿಗಾಗಿ ಹೊಸಕಟ್ಟಡ ನಿರ್ಮಾಣಕ್ಕಾಗಿ ತಗಲುವ ಮೊತ್ತದಲ್ಲಿ ಅರ್ಧ ಮೊತ್ತವನ್ನು ಸರಕಾರದಿಂದ ಮಂಜೂರು ಮಾಡುವ ಆಶ್ವಾಸನ ಕೊಟ್ಟಿದ್ದರೂ, ಮತ್ತು ಸ್ಥಳೀಯ ಮಾನ್ಯಮಂತ್ರಿಗಳಾದ ಶ್ರೀ ಹ. ಸೀತಾರಾಮರೆಡ್ಡಿಯವರು ಗ್ರ್ಯಾಂಟು ದೊರಕಿಸಲು ಸಹಾಯ ಮಾಡುವುದಾಗಿ ಹೇಳಿದರ ವಿರುದ್ಧವಾಗಿ, ಕೊನೆಯಲ್ಲಿ ಸರಕಾರದವರು ಈ ಮುಂಚೆ ಮಂಜೂರು ಮಾಡಿರುವ ರೂ ೫೦,೦೦೦ - ಗಳಿಗಿಂತಲು ಹೆಚ್ಚಾಗಿ ಗ್ರ್ಯಾಂಟು ಕೊಡುವುದಿಲ್ಲವೆಂದು ತಿಳಿಸಿರುವದನ್ನು ವಿಷಾದದಿಂದ ಸಮಿತಿ ಲಕ್ಷ್ಯಮಾಡಿ ಅಧ್ಯಕ್ಷರು ಮೇನೇಜಿಂಗ್ ಬಾಡಿಯ ಗಮನಕ್ಕೆ ತಂದ ಕೆಳಗೆ ಕಾಣಿಸಿದ ಅಂಶಗಳನ್ನು ಆಲೋಚನೆಮಾಡಿ ಮದರಾಸು ವೀರಶೈವ ವಿದ್ಯಾವರ್ಧಕ ಸಂಘಕ್ಕೆ ವೀರಶೈವ ಕಾಲೇಜನ್ನು ನಿಲ್ಲಿಸಿ ಬಿಡಬೇಕೆಂದು ಗತ್ಯಂತರವಿಲ್ಲದೆ ಶಿಫಾರಸು ಮಾಡುವದಾಗಿ ತೀರ್ಮಾನಿಸಲ್ಪಟ್ಟಿತು.

ಅಂಶಗಳು:—

೧) ಕಾಲೇಜು ನಡೆಯಿಸುವದಾದರೆ, ಹೊಸ ಕಟ್ಟಡಕ್ಕಾಗಿ ರೂ ೩,೮೫,೦೦೦/- ಗಳನ್ನು ವೆಚ್ಚ ಮಾಡಲು ಸಿದ್ಧರಿರಬೇಕಾದುದು. (ಅಧಿಕಾರಿಗಳ ಸೂಚನೆ ಮೇರೆಗೆ ಸವರಣೆಮಾಡಿದ ಎಸ್ಟಿಮೇಟ್ ರೂ ೪,೩೫,೦೦೦/- ದಲ್ಲಿ ಮಂಜೂರು ಆಗಿರುವ ಗ್ರ್ಯಾಂಟು ರೂ ೫೦,೦೦೦/- ವಜಾ ಮಾಡಲಾಗಿ ಉಳಿದದ್ದು)

೨) ಕಾಲೇಜಿಗೆ ಹೊಸ ಕಟ್ಟಡ ಕಟ್ಟುವ ಹೊಣೆಯನ್ನು ಸಂಘವು ಕೈಕೊಂಡಿರಲಾಗಿಯೂ, ಸದ್ಯ ನಮ್ಮ ಕಾಲೇಜು ಎರಡನೆಯ ವರ್ಗದ್ದಾಗಿ ಮಾತ್ರ ಇರುತ್ತಿದ್ದರೂ ಈ ವರೆಗಾಗಿ ರೂ ೨,೪೧,೦೦೦ ಕ್ಕೆ ಸ್ಥಾವರ ಆಸ್ತಿಗಳ ಎಂಡೋಮೆಂಟ್ ಮಾಡಿದ್ದು ಇವರ ಆದಾಯವು ವರ್ಷಕ್ಕೆ ರೂ ೧೧,೦೦೦/- ಇರುತ್ತಿದ್ದರೂ, ಸದರಿ ಆಸ್ತಿಗಳ ಸದ್ಯದ ಹೆಚ್ಚಿನ ಬೆಲೆಯು ಮತ್ತು ಅವುಗಳ ಹೆಚ್ಚಿನ ವರಮಾನವು ಸುಮಾರು ರೂ ೫ ಲಕ್ಷದ ಮೂಲ ಧನವನ್ನು ಇರುತ್ತಿರುವದನ್ನು ಲಕ್ಷಿಸದೆ, ಮದ್ರಾಸು ಯೂನಿವರ್ಸಿಟಿಯವರು ೧೯೪೫ ರಲ್ಲಿ ಕಾಲೇಜಿಗೆ ಮನ್ನಣೆಯನ್ನು ಕೊಡುವಾಗ್ಗೆ ಐದು ಲಕ್ಷ ರೂಪಾಯಿಗಳ ಎಂಡೋಮೆಂಟ್ ಮಾಡತಕ್ಕದ್ದೆಂದು ವಿಧಿಸಿದ ನಿಬಂಧನೆಯ ಮೇರೆಗೆ ಈಗ ಎಂಡೋಮೆಂಟ್ ಮಾಡಲ್ಪಟ್ಟ ರೂ ೨,೪೧,೦೦೦ ಹೋಗಲಾಗಿ ಉಳಿದ ರೂ ೨,೫೯,೦೦೦/- ಗಳಿಗಾಗಿ ಸಂಘವನ್ನು ಹಣ ಸಂಗ್ರಹಿಸುವದಾಗಿ ಒತ್ತಾಯಪಡಿಸುತ್ತಿರುವದು.

೩) ಸದ್ಯದಲ್ಲಿ ಸಲಹೆಗಳನ್ನು ಕೊಡುವ ಕೇವಲ ಸೌಮ್ಯ ಸ್ವರೂಪದ ಸಮಿತಿಗಳಾಗಿ ಕೆಲಸಮಾಡುತ್ತಿದ್ದು ಕ್ರಮೇಣ ಕಾಲೇಜು ಸ್ಥಾಪಕರ ನ್ಯಾಯಯುತವಾದ ಹಕ್ಕು ಬಾಧ್ಯತೆಗಳಿಗೆ ಭಂಗ ತರುವಂತಹ "ಸಲಹಾ ಸಮಿತಿ"ಯೊಂದನ್ನು ಕಾಲೇಜಿಗೆ ರಚಿಸಿಕೊಳ್ಳುವದಾಗಿ ಅಧಿಕಾರಿಗಳು ಒತ್ತಾಯಪಡಿಸುತ್ತಿರುವದು.

೪) ಅನೇಕ ಪ್ರಯಾಸದಿಂದಲೂ, ಪರಿಶ್ರಮದಿಂದಲೂ ಸಾರ್ವಜನಿಕ ಸಂಘಗಳಿಗಾಗಿ, ದಾನರೂಪವಾಗಿ ಸಂಗ್ರಹಿಸಿದ ಹಣದಿಂದ ನಿರ್ಮಿಸಿದ ಕಟ್ಟಡಗಳನ್ನೂ ಇತರ ಉಪಯುಕ್ತ ಆಸ್ತಿಗಳನ್ನೂ ಸಂಘಗಳ ಸ್ಥಾಪಕರಿಂದ ಸರಕಾರವು ತಮಗೆ ಇಷ್ಟಬಂದ ವೇಳೆಯಲ್ಲಿ ಇಷ್ಟಬಂದ ಕಟ್ಟಡಗಳನ್ನು ವಶಪಡಿಸಿಕೊಳ್ಳುವಂಥಹ ವಿಶೇಷ ಅಧಿಕಾರ ಪಡೆದಿರುವದು, ಸಾರ್ವಜನಿಕ ಸೇವೆ ಮಾಡುತ್ತಿರುವವರನ್ನು ನಿರುತ್ಸಾಹ ಪಡಿಸುವಂತಹದ್ದಾಗಿರುವದಲ್ಲದೆ ಸಂಸ್ಥೆಗಳ ಪೋಷಕರಾದ ದಾತೃಗಳಿಗೆಲ್ಲ ಅಸಂತೃಪ್ತಿಕರವಾಗಿಯೂ ಇರುತ್ತಿರುವದು.

ಭಾಷೆ ತಿಳಿಯುವ ಅಧಿಕಾರಿಗಳನ್ನು ಕಳುಹಿಸಿರಿ.

ಶ್ರೀ ಬಿ. ಎಂ. ತಿಪ್ಪಯ್ಯನವರು

ಹೀಗೆ ಬರೆಯುತ್ತಾರೆ:—

"ಬಳ್ಳಾರಿ ಜಿಲ್ಲೆಯಲ್ಲಿ ತೆಲುಗು ಭಾಷೆಯ ಅಧಿಕಾರಿಗಳಿಂದ ಉದ್ದೇಶಗಳು ಜನತೆಗೆ ಅರ್ಥವಾಗದೆ ಜನರೆಲ್ಲರೂ ಸ್ವಲ್ಪ, ತಾಲೂಕುಗಳಲ್ಲಿ ಬಹಳ ಕಷ್ಟವಾಗುತ್ತಲಿದೆ. ಪ್ರೊಹಿಬಿಷನ್‌ದವರು ನಿರಪರಾಧಿಗಳನ್ನು ಮಾಡದ ನಾಗರಿಕರ ... ದೃಶ್ಯಗಳನ್ನು ಕಾಣಬಹುದು. ಜನತಾ ರಾಜ್ಯಭಾರದಲ್ಲಿ ಜನತಾ ಸರಕಾರವು ಹೇಗೆ ಲಭಿಸಬೇಕು? ಭಾಷಾವಾರ ದೃಷ್ಟಿಯಿಂದ ಪ್ರತ್ಯೇಕ ಪ್ರಾಂತಗಳಾಗುವವರೆಗೂ ಈ ಕೊರತೆಯು ಪೂರ್ಣ ನಿವಾರಣೆಯಾಗಲಾರದು. ಸರಕಾರವು ಹಳ್ಳಿಗಳ ಅಭಿವೃದ್ಧಿಗೆ ಏನುಮಾಡಲು ಅಶಕ್ತರಾದರೂ ಭಾಷೆ ತಿಳಿದ ಅಧಿಕಾರಿಗಳನ್ನೇ ಕಳುಹಿಸಲು ಬೇಡುತ್ತೇನೆ.

ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಲಾಸಮಿತಿ

೧ ಸಮಿತಿಗೆ ನಿಧಿ ಕೂಡಿಸುವ ವಿಚಾರ ಸಮಿತಿಗೆ ೫೦೦ ರೂಪಾಯಿಗಳಿತ್ತವರು ಮಹಾಪೋಷಕರು ೨೫೦ ರೂಪಾಯಿಗಳಿತ್ತವರು ಪೋಷಕರು. ೧೦೦ ರೂಪಾಯಿಗಳಿತ್ತವರು ಆಜೀವ ಸದಸ್ಯರು. ವರುಷಕ್ಕೆ ೬ ರೂಪಾಯಿಗಳಿತ್ತವರು ಸದಸ್ಯರೆಂತಲೂ ಗೊತ್ತು. ಜಿಲ್ಲೆಯ ನಾನಾ ಭಾಗಗಳಲ್ಲಿ ಪ್ರದರ್ಶಿಸುವ ನಾಟಕಕ್ಕೆ ೫ ರೂಪಾಯಿ ಬೈಲಾಟಕ್ಕೆ ೨ ರೂಪಾಯಿಯಂತೆಯೂ ಆಯಾ ಭಾಗದ ನಾಟಕ ಕಲಿಸುವವರು ನಾಟಕ ಸಾಮಾನುಗಳ ಬಾಡಿಗೆ ಕೊಡುವವರು ಸಮಿತಿಯ ಸದಸ್ಯರು, ಉಪಾಧ್ಯಾಯರು, ಗೌಡ ಶಾನುಭೋಗರನ್ನು ಅಭಿಮಾನದಿಂದ ಪ್ರದರ್ಶನಗಳಲ್ಲಿ ಸಮಿತಿಗೆ ಕಾಣಿಕೆ ವಸೂಲ್ಮಾಡಿ ಕೊಡಲು ಕೇಳಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

೨ ಪರಿಷತ್ತಿನ ವತಿಯಿಂದ ಪ್ರಕಟವಾಗುವ ಪುಸ್ತಕದ ವಿಚಾರ ಸಮಿತಿಯು ಆರ್ಥಿಕ ವಿಚಾರದಮೇಲೆ ಆಧಾರಪಟ್ಟು ೫೦೦ ಪ್ರತಿಗಳನ್ನು ಮಾತ್ರ ಪ್ರಿಂಟುಮಾಡಿಸಬೇಕೆಂತಲೂ ಇದಕ್ಕೆ ಸುಮಾರು ಸಾವಿರರೂಪಾಯಿಗಳು ಖರ್ಚು ಬೀಳಬಹುದೆಂದು ತೀರ್ಮಾನಿಸಲಾಯಿತು.

೩ ಸಮಿತಿಯ ವತಿಯಿಂದ ವರುಷಕ್ಕೆ ಜಿಲ್ಲೆಯ ಕೆಲವು ಭಾಗಗಳಲ್ಲಿ ಕನಿಷ್ಠ ೧೦ ನಾಟಕಗಳಾದರು ಜಿಲ್ಲೆಯ ನಾನಾಭಾಗದ ಉತ್ತಮ ಕಲಾವಿದರೊಂದಿಗೆ ಅಭಿನಯಿಸಬೇಕೆಂದು ತೀರ್ಮಾನ.

೪ ಪರಿಷತ್ತಿನ ಲೆಕ್ಕಗಳನ್ನು ಪರಿಶೀಲಿಸಿ ಲೆಕ್ಕಗಳು ಸರಿಯಾಗಿವೆಯೆಂದು ಒಪ್ಪಲಾಯಿತು.

ರೂ. ೪೧೭೫—೦—೦ ಆದಾಯ
ರೂ. ೨೪೭೮—೮—೬ ಖರ್ಚು
ರೂ ೧೬೯೬—೭—೬ ಸಿಲ್ಕು

ಹೇಳುವುದು ಶಾಸ್ತ್ರ ಹಾಕುವುದು ಗಾಳ!

"ಲೇಡೀಸ್ ಹೋಂ ಜನರಲ್" ಎಂಬ ಅಮೇರಿಕದ ಪತ್ರಿಕೆಯಲ್ಲಿ ಸಾಮಾನ್ಯ ಅಮೇರಿಕನ್ ಕ್ರಿಶ್ಚಿಯನರ ದೈವಶ್ರದ್ಧೆಯನ್ನು ತುಲನಮಾಡಿ ಬರೆಯಲಾಗಿದೆ. ಈ ತುಲನಕ್ಕೆ ಅದು ಕೆಲವು ಪ್ರಶ್ನೆಗಳನ್ನು ಹಾಕಿ ಒಂದು ಜನಮತಗಣನೆಯನ್ನು ಮಾಡಿತು.

ಅಮೇರಿಕನ್ನರಲ್ಲಿ ನೂರಕ್ಕೆ ೯೫ ಮಂದಿ ದೇವರಿದ್ದಾನೆ ಎನ್ನುತ್ತಾರೆ, ೭೬ ಮಂದಿ ಚರ್ಚಿನ ಸದಸ್ಯರೆಂದು ಹೇಳಿಕೊಳ್ಳುತ್ತಾರೆ, ೭೫ ಜನರು ಪದೇ ಪದೇ ತಾವು ಪ್ರಾರ್ಥನೆಗೆ ಹೋಗುವುದಾಗಿ ಹೇಳುತ್ತಾರೆ. ನೂರರಲ್ಲಿ ೮೧ ಜನರು ದೇವರು ತಮ್ಮ ಪಾಪಗಳ ನಿರ್ಣಾಯಕ ಎಂದು ಒಪ್ಪುತ್ತಾರೆ, ೭೩ ಜನರು ಪರಲೋಕವಾಸದಲ್ಲಿ ನಂಬಿಗೆಯುಳ್ಳವರಾಗಿದ್ದಾರೆ, ಪರಲೋಕದಲ್ಲಿ ತಮ್ಮ ಕುಟುಂಬದವರನ್ನು ಅಂತ್ಯದಲ್ಲಿ ಕಾಣುವುದಾಗಿ ಹೇಳುತ್ತಾರೆ. ಸ್ವರ್ಗದಲ್ಲಿ ವಿಶ್ವಾಸವುಳ್ಳವರಲ್ಲಿ ಇವರಲ್ಲಿ ಮೂರಂಶ

ಕ್ಕಿಂತ ಹೆಚ್ಚು ಜನರು ತಾವು ಅಲ್ಲಿಗೆ ಹೋಗುವೆನೆಂದು ನಿರೀಕ್ಷಿಸುತ್ತಿರುವ ರೆನ್ನುತ್ತಾರೆ.

ನೂರರಲ್ಲಿ ೯೧ ನಾಗರೀಕರು ಒಕ್ಕೆಯು ಬಾಳನ್ನೇ ನಾಗಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವೆವೆಂದರು. ಇವರಲ್ಲಿ ನೂರಕ್ಕೆ ೪೪ ಮಂದಿ ಆಧ್ಯಾತ್ಮಿಕ ಸಮರದ ನೆನಪು ತಮಗೆ ಸದಾ ಇದೆಯೆಂದರು. ಸಹಜವಿಗಳನ್ನು ಪ್ರೀತಿಸುವುದು ಇತ್ತೀಚೆಗೆ ಜನರಿಗೆ ಕಷ್ಟವಾಗುತ್ತಿರುವುದು ಶೋಚನೀಯ ಎಂದು ಅವರು ಅಭಿಪ್ರಾಯಪಟ್ಟರು. ಸ್ವಾರ್ಥಿಗಳು ಹೆಚ್ಚುತ್ತಿರುವುದು ಅನ್ಯಾಯವೆಂದರು. ಕ್ರಿಸ್ತನ ಪ್ರೇಮ ತತ್ವವನ್ನು ಅನುಸರಿಸಿದರೆ ನಿಜ ಜೀವನ ಹೇಗೆ ಬದಲಾಗುವುದೆಂದು ಹಾಕಿದ ಪ್ರಶ್ನೆಗೆ ಉತ್ತರ ಕೊಟ್ಟವರಲ್ಲಿ ಅರ್ಧಜನರ ಇಂದಿನ ತನ್ನ ಜೀವನವನ್ನು ಬದಲಿಸಬೇಕಿಲ್ಲ ವೆಂದರು. ಸುಮಾರು ಮೂರನೆಯ ಒಂದು ಜನರು ಕ್ರಿಸ್ತನ ಬೋಧೆಯಂತೆ ತಾವು ನಡೆದುಕೊಂಡಿದ್ದರೆ ತಮ್ಮ ನೆರೆಯವರಿಗಳೇ ಬೇರೆಯಾಗಿ ಇರುತ್ತಿತ್ತು ಎಂದೊಪ್ಪಿದರು. ಅದೇ ವೇಳೆಗೆ ನೂರಕ್ಕೆ ೮೨ ಮಂದಿ ಕ್ರಿಸ್ತನ ನೀತಿಯನ್ನು ಸಂಪೂರ್ಣವಾಗಿ ಆಚರಿಸುವವರು ಅತ್ಯಲ್ಪ ಎಂದು ವ್ಯಥೆಪಟ್ಟರು.

ಕಡೆಯಲ್ಲಿ ಪತ್ರಿಕೆ, ನಾಟ್ಯಶಾಲೆ, ಐದಂಶ ಜನರು ಶತ್ರುವನ್ನೂ ಪ್ರೀತಿಸುವ ಅತ್ಯುದಾತ್ತ ಪ್ರೇಮತತ್ವ ಸಾಧಕರೆನ್ನುವರಾದರೂ ಇಂದಿನ ಅಮೇರಿಕನ್ನರ ನಡತೆಯನ್ನು ಕಂಡರೆ ಅದೆಲ್ಲ ಸುಳ್ಳು ಎನ್ನಬೇಕಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಅಲ್ಲದೆ ಅವರು ಮಾಡುತ್ತಿರುವೆವೆಂಬುದಕ್ಕೂ ಮಾಡುವ ಕೆಲಸಕ್ಕೂ ಇರುವ ಭೂಮ್ಯಾಕಾಶದಷ್ಟು ಅಂತರ ಭಯವಾಗಿದೆ ಎಂದು ತೀರ್ಪು ಕೊಟ್ಟಿದೆ. ಇದೇ ಪರಿಸ್ಥಿತಿ ಪುಣ್ಯಭೂಮಿ ಎನಿಸಿದ ಭಾರತದಲ್ಲೂ ಇದೆ ಈಗ ಎನ್ನಬಹುದು. ಪ್ರಮಾಣ ಮತ್ತು ಸಂಖ್ಯೆಯಲ್ಲಿ ಅಲ್ಪಸ್ವಲ್ಪ ವ್ಯತ್ಯಾಸ ಇರಬಹುದಾದರೂ ಒಟ್ಟಿನಲ್ಲಿ ಆಡುವುದಕ್ಕೂ ಮಾಡುವುದಕ್ಕೂ ತಿಳಿದೂ ತಿಳಿದೂ ಅಂತರ ನಿಡುವವರೇ ಹೆಚ್ಚಿರುವುದು ಅನುಭವದ ಕಟುಸತ್ಯವಲ್ಲವೆ?

ಕಿವುಡರ ಜಾತಿ

ಬ್ರಿಟನ್ನಿನ ಜನಸಂಖ್ಯೆ ಸುಮಾರು ೪½ ಕೋಟಿ ಅವರಲ್ಲಿ ೫೦ ಸಾವಿರ ಜನರು ಸಾಮಾನ್ಯ ಸಂಭಾಷಣೆ ಕೂಡ ಕೇಳದಷ್ಟು ಕಿವುಡರಿರುವರು. ಇವರೀಗ ಮಹತ್ವದ ಅಲ್ಪ ಸಂಖ್ಯಾತರಾಗಿದ್ದಾರೆ ಆ ನಾಡಿನಲ್ಲಿ! ಆದುದರಿಂದ ಇವರ ಕಿವುಡನ್ನು ನಿವಾರಿಸಲು ಎಂದಿಗಿಂತ ಇಂದು ಅಲ್ಲಿಯ ತಜ್ಞರು ಹೆಚ್ಚು ಶ್ರಮವಹಿಸುತ್ತಿದ್ದಾರೆ. ಕಿವುಡರ ಸಮಸ್ಯೆಗಳನ್ನು ಅಭ್ಯಸಿಸಲು ಅವರು ಹೆಚ್ಚು ಆಸಕ್ತಿ ವಹಿಸುತ್ತಿದ್ದಾರೆ. ಈ ಜಾತೀಯತೆಯ ಯುಗದಲ್ಲಿ ಕಿವುಡರು ನಾಳೆ ತಮ್ಮ ಸಂಖ್ಯಾಬಲವನ್ನು ಹೆಚ್ಚಿಸಿಕೊಂಡರೆ ತಮಗಾಗಿ ಪ್ರತ್ಯೇಕ ಸ್ಥಾನವನ್ನು ವಿಶೇಷ ಹಕ್ಕುಬಾಧ್ಯತೆ ಮತ್ತು ಸಂರಕ್ಷಣೆಗಳನ್ನೂ ಕೇಳಬಹುದಲ್ಲವೆ? ಭಾರತದಲ್ಲಿ ಅಂಗಹೀನರಿಗೆ ಕಡಿಮೆಯಿಲ್ಲ. ಅವರಾರಿಗೂ ಗುಂಪುಕಟ್ಟಿಕೊಳ್ಳುವ ರಚನಾತ್ಮಕ ಹೋರಾಟವನ್ನು ಹೂಡಲು ಯುಕ್ತಿಸುವ ಬುದ್ಧಿ ಹುಟ್ಟಿರುವುದು ಆಶ್ಚರ್ಯವಲ್ಲವೆ?

BENEFIT PERFORMANCE

IN AID OF

THE HARIJANS BOYS' HOSTEL

RAYADRUG.

'BALARAJU'

K. B. PICTURE PALACE

28th January 1949 Friday

Patronage of all people requested

District Harijan Sevak Sangh, Bellary.

.... ಇಸೇ ವಾರ ....

ರಾ ಯ ದು ರ್ಗ

ಕೆ. ಬಿ. ಪಿಕ್ಚರ್ ಪ್ಯಾಲೇಸದಲ್ಲಿ ಬಾಲರಾಜು

೨೮—೧—೪೯ ಶುಕ್ರವಾರ

ಧರ್ಮಾರ್ಥ ರಾಯದುರ್ಗದ ಹರಿಜನ ವಿದ್ಯಾರ್ಥಿ ನಿಲಯಕ್ಕೆ

ಪಾಶ್ಚಾತ್ಯ ಸಮಾಜದ ಅ ಳಿ ಗಾ ಲ!

—(೧)—

ನಾಗರಿಕತೆ ಜನನವಾದುದು ಸಂಘ ಅಥವಾ ಸಮಾಜ ಜೀವನದಿಂದ ವ್ಯಕ್ತಿ, ಸ್ತ್ರೀಗಳ ಸಹಜೀವನಗಳಿಂದ ಇದಕ್ಕೆ ಪ್ರಥಮ ಘಟಕವೆನಿಸಿದ್ದು ಕುಟುಂಬ, ಇದರ ಬುಡಕ್ಕೆ ಪಾಶ್ಚಾತ್ಯ ನಾಗರಿಕತೆ ಕೊಡಲಿ ಹಾಕಿದೆ. ಅಂದ ಮೇಲೆ ಆದರ ಅವಸಾನ ಬಹಳ ದೂರ ಉ ಳಿ ಯಿ ತೆ ನ್ನ ಲು ಬಂದೀತೇ?

ವೆಸ್ಟ್ ಮಿನಿಸ್ಟರಿನಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಮಾನಸಿಕ ಆರೋಗ್ಯ ಪರಿಷತ್ತಿನಲ್ಲಿ ಈ ಸಂಗತಿ ಹೊರಬಿತ್ತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮದುವೆ ಆಗುವುದು ಕಡಿಮೆಯಾಗುತ್ತಿದೆ. ೧೦೦ ರಲ್ಲಿ ೨೫ ವಿವಾಹಗಳು ಅಯಶಸ್ವಿಯಾಗಿವೆ. ಕೆಲವು ನಾಡಿನಲ್ಲಿ ಐದರಲ್ಲಿ ಒಂದು ಕೆಟ್ಟು ಹೋಗಿದೆ. ಬ್ರಿಟನ್ನಿನಲ್ಲಿ, ಮೊದಲನೆಯ ಬಾರಿಗೆ ಮದುವೆಯಾದ ಬ್ರಿಟಿಷ್ ಹೆಂಗಸರಲ್ಲಿ ೪ ರಲ್ಲಿ ಒಬ್ಬಳು ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದವಳು ವಿಧಿಬಾಹಿರ ಶಸ್ತ್ರ ಚಿಕಿತ್ಸೆ, ಆ ಧಾರ್ಮಿಕ ಸಂಪರ್ಕ, ಅಯೋಗ್ಯ ಸಂಯೋಗ, ವೇಶ್ಯಾಯೋಗಗಳು ದಿನೇ ದಿನೇ ಅತಿರೇಕವಾಗುತ್ತಿವೆ.

೧೯೦೦ ರಲ್ಲಿ ಬ್ರಿಟನ್ನಿನಲ್ಲಿ ೫೦೦ ವಿವಾಹ ವಿಚ್ಛೇದ ಮತ್ತು ಪ್ರತ್ಯೇಕೀಕರಣದ ಪ್ರಕರಣಗಳಿದ್ದವು, ಈ ವರ್ಷ ಸುಮಾರು ೫೦೦೦೦ ದಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಇದಕ್ಕೆ ಆರ್ಥಿಕ ಅನಿಶ್ಚಿತತೆ, ಚಾರ್ಮಿಕ ಬುದ್ಧಿ, ಸಾಮಾಜಿಕ ವಿಷಯಾರ್ಗ, ರಚನಾತ್ಮಕ ಭಾವನೆಗೆ ಪ್ರಕಾಶನ ಸಾಧನವಿಲ್ಲದುದು ಮತ್ತು ಅಜ್ಞಾನಗಳು ಇವೇ ಕಾರಣ ಎಂದು ವಿವಾಹ ಮಂತ್ರಣ ಸಮಿತಿಯ ಪಂಡಿತ ಡಾ. ಇ. ಎಫ್ ಗ್ರಿಫಿತ್ತರು ಹೇಳಿದರು. ಅಲ್ಲದೆ ವ್ಯಕ್ತಿಗಳಿಗೆ ತಂತಮ್ಮ ಮತ್ತು ಸರಕಾರದ ಬಗ್ಗೆ ಇರಬೇಕಾದ ಹೊಣೆಯೇನೆಂಬುದನ್ನು ಕಲಿಸುವದೇ ಪರಿಷತ್ತಿನ ಉದ್ದೇಶವೆಂದೂ ಅವರು ಅರುಹಿದರು.

ಬಹಳ ಜನರಿಗೆ ಹಿಂದಿನ ನಡತೆ ಮರೆತುಹೋಗಿದೆ ಹೊಸದೇನೂ ಗೊತ್ತಿಲ್ಲ. ಕುಟುಂಬ ಅಳಿದ ಮೇಲೆ ಅದರ ಬದಲು ಅಷ್ಟು ಯೋಗ್ಯವಾದ ಯಾವ ತೃಪ್ತಿಕರ ಸೌಖ್ಯ ಕಲ್ಪನೆಯನ್ನೂ ನಮಗೆ ನಿರ್ಮಿಸಿ ಕೊಳ್ಳಲಾಗಲಿಲ್ಲ. ಆದುದರಿಂದ ವಿಸ್ತೃತ ಪ್ರಯತ್ನ ಮಾಡಬೇಕು. ಗರ್ಭಪಾತದ ಆಧಿಕ್ಯಕ್ಕೆ ಅವಿವಾಹಿತ ತಾಯಿಯ ಬಗ್ಗೆ ಸಮಾಜಕ್ಕುಂಟಾದ ಕ್ರೋಧವೇ ಕಾರಣ ಈ ಭಾವ ಬದಲಾದರೆ ಗರ್ಭಪಾತದ ಸಂಖ್ಯೆ ಕಡಿಮೆಯಾದೀತು ಎಂದು ಉಪ್ಸಲಾ ವಿಶ್ವವಿದ್ಯಾಲಯದ ಸಮಾಜನೀತಿ ಶಾಸ್ತ್ರದ ಪ್ರಾಧ್ಯಾಪಕರಾದ ತೋಗ್ನಿಸೀಜರ್ ಸ್ವಟರು ಅಭಿಪ್ರಾಯಪಟ್ಟರು.

ಆರು ನೂರು ವರ್ಷಗಳ ಹಿಂದ ಬೆಲೆ ನಿಯಂತ್ರಣ

ದಿಲ್ಲಿ ಸುಲ್ತಾನನೊಬ್ಬನ ಪ್ರಯೋಗ

ಎರಡನೆ ಮಹಾಯುದ್ಧದ ಜತೆಗೆ ಬಳುವಳಿಯಾಗಿ ಬಂದ ಬೆಲೆ ನಿಯಂತ್ರಣ ಮತ್ತು ಅದರ ಆಡಳಿತದಲ್ಲಿ ಕಾಣಬರುತ್ತಿರುವ ಅಕ್ರಮತೆ ಇವುಗಳನ್ನು ಕುರಿತು ನಾವು ಬಹಳ ಆಡುತ್ತೇವೆ ಕೇಳುತ್ತೇವೆ. ಆದರೆ ಆರು ಶತಕಗಳ ಹಿಂದೆ, ಇದೇ ಭಾರತದಲ್ಲಿ ಒಬ್ಬ ದೂರದರ್ಶಿ ಸುಲ್ತಾನ ಈ ಬಗೆಯ ಬೆಲೆ ನಿಯಂತ್ರಣಗಳನ್ನು ಸಫಲವಾಗಿ ಜಾರಿಗೆ ತಂದಿದ್ದನು. ಶ್ರೀ ಸತ್ಯನಾರಾಯಣ ಶ್ರೀವಾಸ್ತವರು "ಹಿಂದುಸ್ತಾನ ಟೈಮ್ಸ್" ಪತ್ರಿಕೆಯಲ್ಲಿ ಬರೆಯುತ್ತಾರೆ.

೧೨೯೬ ನೇ ಇಸವಿಯಲ್ಲಿ ದಿಲ್ಲಿಯ ಸಿಂಹಾಸನವನ್ನೇರಿದ ಅಲ್ಲಾ ಉದ್ದೀನ ಖಿಲಜಿ (?) ಬಲು ಹಿರಿಮೆಯ ಸ್ವರ್ಣಾರ್ಜನಾಗಿದ್ದನು. ಸಮರ ದೃಷ್ಟಿಯಲ್ಲಿ ಹೆಚ್ಚು ಸುರಕ್ಷಿತವಾದ ದಕ್ಷಿಣದ ದೊಡ್ಡ ನಗರಪ್ರಾಂತಕ್ಕೆ ತನ್ನ ರಾಜಧಾನಿಯನ್ನು ಸ್ಥಳಾಂತರಿಸಲು ಪ್ರಯತ್ನಿಸಿದ್ದೇ ಮೊದಲಾದ ಕಾರಣಗಳಿಂದ ಅವನನ್ನು ಕೆಲ ಇತಿಹಾಸಕಾರರು ಹುಚ್ಚನೆಂದೂ ಕೆಲವರು ಭಿನ್ನ ಕಾಲವನ್ನು ನಿರೀಕ್ಷಿಸುವ ಮಹಾ ಪ್ರತಿಭಾಶಾಲಿ ಎಂದೂ ಬಣ್ಣಿಸಿದ್ದಾರೆ. ಆದರೆ ಅವನು ಪ್ರಾರಂಭಿಸಿದ್ದ ಸುಧಾರಣೆಗಳಲ್ಲೆಲ್ಲ ಹೆಚ್ಚು ಯಶಸ್ವಿಯಾದುದು ಅವನ ಬೆಲೆ ನಿಯಂತ್ರಣ ಪದ್ಧತಿ.

ಸಾಮಯಿಕ ಅವಶ್ಯಕತೆ

ಅವನ ರಾಜ್ಯಕಾಲದ ಸಂರಕ್ಷಣದ ಅವಶ್ಯಕತೆಗಳೇ ಅವನ ಹಲವಾರು ಬಗೆಯಲ್ಲಿ ಬೆಲೆ ನಿಯಂತ್ರಣದ ಉಪಾಯದ ಆವಿಷ್ಕಾರಕ್ಕೆ ಕಾರಣವಾದವು. ಮಂಗೋಲರ ದಾಳಿಯ ಶಾಶ್ವತ ಭೀತಿಯ ಆ ಕಾಲದಲ್ಲಿ ಗಡಿಪ್ರದೇಶದಲ್ಲಿ ಅನೇಕಾನೇಕ ದುರ್ಗಗಳನ್ನು ಕಟ್ಟಿಸಿ ಸೈನ್ಯವನ್ನು ಕಾವಲಿರಿಸಬೇಕೆಂದು ಸುಲ್ತಾನನು ಯೋಚಿಸಿದನು. ಆದರೆ ಆ ದುರ್ಗಗಳನ್ನು ಸರಿಯಾಗಿ ರಕ್ಷಿಸಲು ಅಸಂಖ್ಯ ಸೈನಿಕರ ಅವಶ್ಯಕತೆಯಿತ್ತು. ಇಷ್ಟು ಜನರನ್ನು ಸಶಸ್ತ್ರರಾಗಿಡಬೇಕಾದರೆ ಅವನ ಖಜಾನೆಯಲ್ಲಿದ್ದ ಹೊನ್ನು ಐದುವರ್ಷಗಳಿಗೆ ಕೂಡ ಸಾಲುತ್ತಿರಲಿಲ್ಲ. ಅವರ ಸಂಬಳವನ್ನು ಕಡಿಮೆ ಮಾಡಿದರೆ ಅಸಂತೋಷ ಬೆಳೆದು ಕೆಲಸ ಕೆಡಬಹುದಾಗಿತ್ತು.

ಆದರೆ ಸೈನಿಕರಿಗೆ ಬೇಕಾದ ಆಹಾರ ಅಸ್ತ್ರಶಸ್ತ್ರ ಕುದುರೆಗಳು ಮೊದಲಾದ ಸಾಮಾನುಗಳು ಅಲ್ಲಿ ಅಗ್ಗವಾಗಿ ನಿರ್ದಿಷ್ಟ ಬೆಲೆಯಲ್ಲಿ ದೊರೆಯುತ್ತಾದರೆ ಅವರ ಸಂಬಳವನ್ನು ಇಳಿಸಿದರೂ ನಡೆಯಬಹುದೆಂದು ಸುಲ್ತಾನನಿಗೆನಿಸಿತು. ಇದಕ್ಕಾಗಿ ಇತಿಹಾಸದಲ್ಲೇ ಮೊದಲನೆ ಬಾರಿಯೋ ಏನೋ, ಸುಲ್ತಾನನು ಅವಶ್ಯ ವಸ್ತುಗಳ ನಿಯಂತ್ರಣವನ್ನು ಕೈಕೊಂಡನಲ್ಲದೆ ಅದನ್ನು ಯಶಸ್ವಿಯಾಗಿ ಊರ್ಜಿತದಲ್ಲಿಟ್ಟನೆಂದು ಅವನ ಚರಿತ್ರಕಾರನಾದ ಝಿಯಾಉದ್ದೀನ್ ಬರ್ನಿ ಬರೆದಿಟ್ಟಿರುವನು. ಸುಲ್ತಾನನ ಸಫಲ ರಕ್ಷಣಧೋರಣ ಮತ್ತು ದಕ್ಷಿಣದಲ್ಲಿ ಅಧಿಕತರ ಪ್ರದೇಶದ ವಿಜಯ, ಇವುಗಳನ್ನು ನೋಡಿದರೆ ಬರ್ನಿಯ ಹೇಳಿಕೆ ಸುಳ್ಳಲ್ಲವೆಂದು ವ್ಯಕ್ತವಾಗುವದು.

ಅನ್ನವಸ್ತ್ರ ಪ್ರಾಣಿಗಳ ನಿಯಂತ್ರಣ

ಸುಲ್ತಾನನು ಆಹಾರ ವಸ್ತುಗಳ ಬೆಲೆಯನ್ನು ಕೆಳಗೆ ನಮೂದಿಸಿದ ಈ ಬಗೆಯಾಗಿ ನಿಯಂತ್ರಿಸಿದ್ದನೆಂದು ಬರ್ನಿ ಉಲ್ಲೇಖಿಸುತ್ತಾನೆ.

ಗೋಧಿ	ಮಣಕ್ಕೆ	೭½	ಜಿತಾಲ
ಅಕ್ಕಿ	,,	೫	,,
ಉದ್ದು	,,	೫	,,
ಜವೆಗೋಧಿ	,,	೪	,,

ಇತ್ಯಾದಿ.

ಮಣ- ೨೮ ಪೌಂ, ಜಿತಾಲ- ೧ ಆಣೆ.

ಸುಲ್ತಾನನು ಕಂದಾಯವನ್ನು ಧಾನ್ಯರೂಪದಲ್ಲಿ ವಸೂಲು ಮಾಡುವ ಮತ್ತು ಯಮುನಾ ತೀರದಲ್ಲಿ ಧಾನ್ಯವನ್ನು ಕೊಳ್ಳಲು, ಕೆಲವೇಳೆ ಬಲವಂತವಾಗಿಯೆಂದ, ವ್ಯಾಪಾರಿಗಳನ್ನು ಸ್ಥಾಪಿಸುವ ... ಪ್ರತಿಯೊಂದು ಪ್ರದೇಶದಲ್ಲಿ ಕೆಲ ... ಧಾನ್ಯಗಳನ್ನು ಕೂಡಿಡುತ್ತಿದ್ದನು. ಪೇಟೆಯಲ್ಲಿ ಧಾನ್ಯ ಸಂಗ್ರಹದ ಕೊರತೆ ಕಂಡುಬಂದಾಗ ತನ್ನ ಸಂಗ್ರಹವನ್ನು ಹೊರತೆಗೆದು ನಿರ್ದಿಷ್ಟ ದರಗಳಲ್ಲಿ ಮಾರುತ್ತಿದ್ದನು. ಬರಬಿದ್ದಾಗಲೂ ಬೆಲೆಗಳು ಏರಲಿಕ್ಕೆ ಅವಕಾಶವಿರಲಿಲ್ಲ.

ಬಟ್ಟೆಯನ್ನು ಕೂಡ ನಿಯಂತ್ರಣಕ್ಕೊಳಪಡಿಸಲಾಗಿತ್ತು. ದಿಲ್ಲಿಯಲ್ಲಿ ಒಂದು ವಿಶಿಷ್ಟ ಬಟ್ಟೆ ಪೇಟೆಯನ್ನು ಕಟ್ಟಿಸಿ ಬಟ್ಟೆ ಅಂಗಡಿಗಳನ್ನೆಲ್ಲ ಅಲ್ಲಿಗೆ ವರ್ಗಾಯಿಸಿದ್ದಲ್ಲದೆ ಅದರ ಹೊರಗೆ ಬಟ್ಟೆ ಮಾರುವದನ್ನು ಪ್ರತಿಬಂಧಿಸಲಾಗಿತ್ತು. ಬಟ್ಟೆ ವ್ಯಾಪಾರಿಗಳೆಲ್ಲರೂ ತಮ್ಮ ಹೆಸರುಗಳನ್ನು "ದಿವಾನ್-ರಿಯಾಸತ್"ದಲ್ಲಿ ನೋಂದಿಸಿಕೊಳ್ಳಬೇಕಾಗುತ್ತಿತ್ತು. ಅಲ್ಲಿ ವ್ಯವಹಾರದ ಸಮಯವನ್ನು ಕೂಡ ನಿರ್ದಿಷ್ಟಪಡಿಸಲಾಗಿತ್ತು. ೨೦ ಲಕ್ಷ ಟಂಕೆಗಳನ್ನು ಕೆಲ ಮುಲ್ತಾನಿ ವ್ಯಾಪಾರಿಗಳಿಗೆ ಮುಂಗಡಕೊಟ್ಟು ಸುಲ್ತಾನನು ಕಡಿಮೆ ಬೆಲೆಗೆ ವಿಶಿಷ್ಟ ಬಟ್ಟೆಗಳನ್ನು ಸಂಗ್ರಹಿಸಿದ್ದನು.

ಕುದುರೆ ಮೊದಲಾದ ಪ್ರಾಣಿಗಳ ಬೆಲೆಗಳನ್ನು ಕೂಡ ನಿರ್ಧರಿಸಲಾಗಿತ್ತು. ಉದಾಹರಣೆಗೆ ಉತ್ತಮ ಜಾತಿಯ ಕುದುರೆಗೆ ೧೦೦–೧೨೦ ಟಂಕೆ. ಹಾಡಿಯೆತ್ತುಗಳಿಗೆ ೪–೫ ಟಂಕೆ, ಹಿಂಡುವ ದನಕ್ಕೆ ೩–೪ ಟಂಕೆ, ಎಮ್ಮೆಗೆ ೧೦–೧೨ ಟಂಕೆ, ಆಡಿಗೆ ೧೦–೧೪ ಜಿತಾಲು ಬೆಲೆಯೆಂದು ಗೊತ್ತಾಗಿತ್ತು. ಗುಲಾಮ ವ್ಯಾಪಾರವಿನ್ನೂ ನಡೆಯುತ್ತಿದ್ದ ಆ ಕಾಲದಲ್ಲಿ ಗುಲಾಮರ ಬೆಲೆಯನ್ನು ಕೂಡ ಅವರ ರೂಪ, ಲಿಂಗ, ವಯಸ್ಸುಗಳನ್ನನುಸರಿಸಿ ನಿರ್ಧರಿಸಲಾಗಿತ್ತು.

ದಂಡ ನೀತಿ

ನಿಯಂತ್ರಣವನ್ನು ಸಂಪೂರ್ಣವಾಗಿ ಆಚರಣೆಗೆ ತರುವ ಸಲುವಾಗಿ ಸುಲ್ತಾನ ... ಕಾರ್ಯವಿಧಾನವನ್ನು ... ಮಂಡಿ ಇಲ್ಲವೆ ಪೇಟೆ ನಿಯಂತ್ರಕನಾಗಿ ಸುಲ್ತಾನನು ನಿಯಮಿಸಿದ್ದನು. ಅವನು ಲಂಚಕ್ಕೆ ಕೈಯೊಡ್ಡದಂತೆ ಅವನಿಗೆ ಜಹಗೀರನ್ನು ದಯಪಾಲಿಸಲಾಗಿತ್ತು. ಅವನ ಕೈಕೆಳಗೆ ಒಳ್ಳೆಯ ಸಂಬಳ ಪಡೆಯುವ ನೂರಾರು ನಿಯಂತ್ರಣಾಧಿಕಾರಿಗಳು ಸತತವಾಗಿ ಶ್ರಮಿಸುತ್ತಿದ್ದರು. ಪ್ರತಿಯೊಬ್ಬ ನಾಗರಿಕನಿಗೆ ಬೆಲೆಗೆ ತಕ್ಕ ಪೂರ್ಣ ತೂಕವನ್ನು ಕೊಳ್ಳುವ ಹಕ್ಕಿತ್ತು. ಅವು ಮೋಸದಿಂದ ಅಥವಾ ಅವನ್ನು ಹೋಲಿಸಲು ತೊಂದರೆಯಾದಂತೆ ಕಂಡು ಬಂದರೆ ನಿಯಂತ್ರಣಾಧಿಕಾರಿಗಳನ್ನು ಹೊಣೆ ಹಿಡಿಯಲಾಗುತ್ತಿತ್ತು.

ಲಾಭ ಹೊಡೆಯುವ ಸಲುವಾಗಿ ವಸ್ತುಗಳನ್ನು ಸಂಗ್ರಹಿಸಿಟ್ಟವರಿಗೆ ಉಗ್ರವಾದ ಶಾಸನ ಮಾಡಲಾಗಿತ್ತು. ಸಾಮಾನ್ಯ ಜನರು ಕೂಡ ಧಾನ್ಯವನ್ನು ಸಂಗ್ರಹಿಸುವಂತಿರಲಿಲ್ಲ. ಅವರ ಅಧಿಕಾರಕ್ಷೇತ್ರದಲ್ಲಿ ಕಳ್ಳಸಂಗ್ರಹವೆಲ್ಲಿದ್ದರೂ ಸಿಕ್ಕಿದರೆ ಅವರೇ ಅದರ ಶಿಕ್ಷೆಗೆ ಬಾಧ್ಯರಾಗುತ್ತಿದ್ದರು.

ಬೆಲೆ ಹೆಚ್ಚಿಸಲಾದವ ಹೊಟ್ಟೆಕಿಚ್ಚಿಗೆ ಒಮ್ಮೊಮ್ಮೆ ವ್ಯಾಪಾರಿಗಳು ತೂಕದಲ್ಲಿ ತಗಲು ಮಾಡುತ್ತಿದ್ದರು. ಇದೂ ದಂಡನಾರ್ಹವಾಗಿ ಮಾಡಲ್ಪಟ್ಟಿತ್ತು. ಪದೇ ಪದೇ ತೂಕದಲ್ಲಿ ತಗಲುಮಾಡಿದ ಸಿಕ್ಕಿಬಿದ್ದವನು ತಗಲುಮಾಡಿದ ತೂಕಕ್ಕೆ ಸರಿದೂಗುವಷ್ಟು ಮಾಂಸವನ್ನು ತನ್ನ ದೇಹದಿಂದ ಕೊಡಬೇಕಾದ ಪ್ರಸಂಗಗಳೂ ಬಂದಿದ್ದವು.

ಈ ಪ್ರಕಾರವಾಗಿ ಯಶಸ್ವಿಯಾದ ಬೆಲೆ ನಿಯಂತ್ರಣವನ್ನು ಸುಲ್ತಾನನು ವ್ಯಾಪಕವಾಗಿ ವಿಸ್ತರಿಸುತ್ತ ಹೋಗಿ ರೊಟ್ಟಿ, ಮಿಠಾಯಿ, ಕಬ್ಬು, ಮೀನು, ಪೀಕುದಾನಿಗಳನ್ನು ಕೂಡ ನಿಯಂತ್ರಣಕ್ಕೊಳಪಡಿಸಲು ಸಮರ್ಥನಾದನೆಂದು ಉಲ್ಲೇಖವಿದೆ.

—o—

ಆಫ್ರಿಕಾದಲ್ಲಿ ಭಾರತೀಯರ ಕೊಲೆ

ಡರ್ಬಾನ ನಗರದಲ್ಲಿ ಭಾರತೀಯರನ್ನು ಅಮಾನುಷವಾಗಿ ಕೊಲೆಮಾಡುತ್ತಿರಲಾಗಿದೆ, ನೂರಾರು ಜನರು ಸತ್ತಿರುವರು, ಇಡೀ ಕುಟುಂಬಗಳೇ ನಾಶವಾಗುತ್ತಿರುವವು. ಆಫ್ರಿಕಾದ ನೇಟಿವ್ ಜನರ ಈ ಕೃತ್ಯವು ಅಲ್ಲಿನ ಮಂತ್ರಿಮಂಡಳದ ವರ್ಣದ್ವೇಷದ ಪರಿಣಾಮವೆಂದು ಹೇಳಲಾಗುತ್ತಿದೆ.

ನೋಟೀಸು

—೧—

ಮ॥ ರಾ॥ ಹೊಸಪೇಟೆ ಡಿ॥ ಮುನ್ಸೀಫ

ಕೋರ್ಟಿನಲ್ಲಿ

O. P. 1/1949

ಅರ್ಜಿದಾರಳು:— ಸಿಂಗನಾಥನಹಳ್ಳಿ ಹೊನ್ನೂರಮ್ಮ, ಗಂಡ ಲೇಟು ಹನುಮಂತಪ್ಪ, ಅನಂತಶಯನಗುಡಿ ತಾ॥ ಹೊಸಪೇಟೆ

ಮೇಲಿನ ಅರ್ಜಿದಾರಳು ತನ್ನ ಗಂಡ ಲೇಟು ಹನುಮಂತಪ್ಪನ Insurance Policy No. 6879 ರಲ್ಲಿ ದಿ ನ್ಯಾಷನಲ್ ಸ್ಟಾರ್ ಅಷ್ಯೂರೆನ್ಸ ಕಂಪೆನಿ ಲಿಮಿಟೆಡ್ ಮದರಾಸು. ಇವರಕಡೆಯಿಂದ ಬರತಕ್ಕ ರೂ ೬೦೦-೦-೦ ಗಳನ್ನು ತೆಗೆದುಕೊಳ್ಳಲು ತನಗೆ Succession certificate ಕೊಡಬೇಕೆಂದು ಅರ್ಜಿ ದಾಖಲು ಮಾಡಿರುತ್ತಾಳೆ, ಯಾರಾದರು ಇದಕ್ಕೆ ತಕರಾರು ಮಾಡುವವರಿದ್ದರೆ ಅವರು ಕೋರ್ಟಿನಲ್ಲಿ ೨೯-೧-೪೯ ನೇ ತಾರೀಖು ಉದಯ ೧೧ ಘಂಟೆಗೆ ಖುದ್ದಾಗಲಿ ಅಥವಾ ವಕೀಲರ ದ್ವಾರಾಗಲಿ ಹಾಜೂರು ಆಗತಕ್ಕದ್ದೆಂದು ಈ ಮೂಲಕ ಸಕಲರಿಗೂ ತಿಳಿಸುತ್ತದೆ. ಆರೀತಿ ಯಾರು ಹಾಜೂರು ಆಗದಿದ್ದಲ್ಲಿ ಅರ್ಜಿ ಮಂಜೂರು ಆಗುತ್ತದೆ.

ಹೊಸಪೇಟೆ ಸೊಂಡೂರು
ಶೇಷಗಿರಿ ಆಚಾರು
೨೫-೧-೪೯ ವಕೀಲು

ಗೃಹಿಣಿಯರಿಗೆ ಗಳಿಕೆಯ ಉಪಾಯ

—೨—

ಗೃಹಿಣಿಯಾದವಳಿಗೆ ಇಡೀ ದಿನ ಮನೆಗೆಲಸದಲ್ಲೇ ಕಳೆದು ಹೋಗುವದು. ಸ್ವತಂತ್ರವಾಗಿ ಗಳಿಸುವ ಅವಕಾಶ ಸಿಗದು ಎಂದು ಹಲಕೆಲ ವಿದ್ಯಾವತಿಯರೆಂದುಕೊಂಡ ಮಧ್ಯಮವರ್ಗದ ಸ್ತ್ರೀಯರು ಹೇಳ್ಬೇಕಾದ ಸಂಗತಿಗಳನ್ನು ಮುಂದೆ ಮಾಡಿ ಹೇಳುವುದುಂಟು. ಹಳ್ಳಿಯ ಹೆಣ್ಣುಮಕ್ಕಳ ಜೀವನದ ಪರಿಚಯವಿಲ್ಲದೆ ಇವರಿಗೆ ಗೃಹೋದ್ಯಮಗಳೊಂದರ ಕಲ್ಪನೆಯೂ ಇರದು, ಗೃಹಕಾರ್ಯಗಳ ಸೌಲಭ್ಯ ಮತ್ತು ವೇಳಾವಿಭಾಗದ ಅರಿವೂ ಇರದು. ಇಂಥವರು ಹಳ್ಳಿಯ ಉದಾಹರಣೆಯನ್ನು ಪಟ್ಟಣಿಗರು ಅನುಸರಿಸುತ್ತಿರುವದನ್ನು ಕೇಳಿಯಾದರೂ ಬುದ್ಧಿಯನ್ನು ತಿದ್ದಿಕೊಳ್ಳಬಹುದಲ್ಲವೆ?

ಅಮೇರಿಕ ಹೊಸದಾಗಿ ಹುಟ್ಟಿ ಬೆಳೆಯುತ್ತಿರುವ ಒಂದು ಜನಾಂಗ ಅಲ್ಲಿ ರೂಢಿ ಪರಂಪರೆಗಳು ಈಗ ತಾನೆ ರೂಪಿಸಲ್ಪಡುತ್ತಿವೆ. ಅಂಥಲ್ಲಿ ಗೃಹಿಣಿಯರು ಮೇಲಿನ ಪ್ರಶ್ನೆಯನ್ನು ಬಗೆಹರಿಸಲು ಒಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ. ಆ ಸಂಘದಲ್ಲಿ ಹೊಲಿಗೆ, ಕಸೂತಿ, ಆರೋಗ್ಯ, ರೋಗನಿದಾನ, ಚಿಕಿತ್ಸೆ, ಪಾಕ ವಿಧಾನ, ಬೇರೆ ಬೇರೆ ಕೈಗಾರಿಕೆಗಳು ಮುಂತಾದವುಗಳ ಜ್ಞಾನವಿರುವ ಮಹಿಳೆಯರಿದ್ದಾರೆ. ಅವರ ಕೆಲಸವೇನೆಂದರೆ, ಯಾವಳಾದರೊಬ್ಬಳು ಗರತಿ ಕುಟುಂಬದ ಆದಾಯವನ್ನು ಹೆಚ್ಚಿಸಲು ಪ್ರಯತ್ನಪಡಲು ಯಾವುದಾದರೊಂದು ಕರಕೌಶಲ್ಯವನ್ನು ಕಲಿಯಲು ಅಥವಾ ಕಲಿತದನ್ನು ಪ್ರದರ್ಶಿಸಲು ಇಚ್ಛಿಸಿದ್ದು, ಅದಕ್ಕೆ ಬೇಕಾದ ಸೌಕರ್ಯಗಳಿಲ್ಲದ ತೊಳಲುತ್ತಿದ್ದರೆ ಈ ಸಂಘಕ್ಕೆ ಅವಳು ಅರ್ಜಿಹಾಕಿದರೆ ಸಾಕು. ಅವಳಿಗೆ ತಕ್ಕ ಅನುಕೂಲವನ್ನು ಒದಗಿಸಿಕೊಡುವುದು. ಹೀಗೆ ಈ ಸಂಘ ೭ ಸಾವಿರ ಗರತಿಯರಿಗೆ ಸಹಾಯ ಮಾಡಿದೆ.

ಅಂಗಡಿ ಮತ್ತು ಕಾರಖಾನೆಗಳಲ್ಲಿ ತಯಾರಾಗುವ ಪದಾರ್ಥಗಳಿಗಿಂತ ಮನೆಯಲ್ಲಿ ತಯಾರಾಗುವ ಪದಾರ್ಥಗಳು ಶುಚಿಯಾಗಿಯೂ ರುಚಿಯಾಗಿಯೂ ಹಿತವಾಗಿಯೂ ಮಿತವಾಗಿಯೂ ಇರುವವೆಂಬುದು ಸರ್ವರ ಅನುಭವಕ್ಕೆ ಬಂದಿರುವ ಸಂಗತಿ. ಆದುದರಿಂದ ಗೃಹ ಪದಾರ್ಥಗಳಿಗೆ ಗಿರಾಕಿಯಿಲ್ಲವೆಂದು ಎಂದೂ ಆಗದು. ಇದನ್ನರಿತ ಗರತಿಯೊಬ್ಬಳು ಆರೋಗ್ಯಕರವೂ ರುಚಿಕರವೂ ಆದ ತಿನಿಸೊಂದನ್ನು ತಯಾರಿಸಬಲ್ಲವಳಾದರೆಂದುಕೊಳ್ಳೋಣ ಆಗ ಅದನ್ನು ಹೆಚ್ಚು ಪರಿಮಾಣದಿಂದ ಮಾಡಲು ಮತ್ತು ಮಾರಲು ತಕ್ಕ ಸೌಕರ್ಯ ಬೇಕಾದರೆ ಮೇಲಿನ ಸಂಘಕ್ಕೆ ಅವಳು ಬರೆದುಕೊಳ್ಳಬೇಕು. ಆ ಸಂಘದ ತಜ್ಞರು ಅದನ್ನು ಪರಿಶೀಲಿಸಿ ಯುಕ್ತವಾದ ಸಲಹೆಗಳನ್ನು ಕೊಟ್ಟು ಸ್ವತಃ ಅವಳ ಬಗ್ಗೆ ವ್ಯಾಪಾರಿಗರೊಡನೆ ಮಾತುಕತೆ ನಡೆಸಿ ಎಲ್ಲ ವ್ಯವಹಾರವನ್ನು ಸುಗಮ ಮಾಡಿಕೊಡುವರು. ಇದೇ ಮೇರೆಗೆ ಆಟಿಗೆ, ಬುಟ್ಟಿ, ಚಾಪೆ, ಕಸೂತಿ, ಹೆಣಿಗೆ, ಹಣ್ಣು, ತರಕಾರಿ ಮುಂತಾದ ಎಲ್ಲ ಸಾಮಾನುಗಳಿಗೂ ಮಾರುವ ಶಕ್ತಿಗೆ ಕಳಿಸುವಂತೆ ತಯಾರಿಸುವ ಬಗೆಯನ್ನೂ ಕೊಳ್ಳುವ ದಲಾಲರನ್ನೂ ಸಂಘವು ಗೃಹಿಣಿಯರಿಗೆ ಗೊತ್ತುಮಾಡಿಕೊಟ್ಟು ಮಹದುಪಕಾರವಾಗಿದೆ. ಹಿಂದುಸ್ತಾನದ ಅನೇಕ ನಗರ ಮತ್ತು ಪಟ್ಟಣಗಳಲ್ಲಿ ಮಹಿಳಾಸಮಾಜ, ವನಿತಾಸಮಾಜ, ಭಗಿನೀಸಮಾಜ ಮುಂತಾದ ಹೆಸರುಗಳನ್ನು ಹೊತ್ತು ಹಲವು ಗೃಹಿಣೀ ಸಂಘಗಳಿವೆ. ಅವುಗಳಲ್ಲಿ ಎಷ್ಟು ಸಂಘಗಳು ಇಂಥ ಉಪಯುಕ್ತ ಕೆಲಸವನ್ನು ನೆರವೇರಿಸುತ್ತಿವೆ? ಎಂಬುದನ್ನು ತನಿಖೆ ಮಾಡಹೋದರೆ. "ಕವಿಗಳು ಲೆಕ್ಕಿಸಲು ಪ್ರಾರಂಭಮಾಡಿ ಕಿರಿಬೆರಳ ಮಡಿಸಿದರು ಪಂಡಿತರಕೂಡಿ ಕಾಳಿದಾಸನ ಹೆಸರುಹಚ್ಚಿ ಸರಿನೋಡಿ ಯಾರಿಲ್ಲದಿರಲನಾಮಿಕೆ ಸಾರ್ಥ ನೋಡಿ"

ಎಂಬಂತೆ ಎಲ್ಲಾದರೂ ಒಂದು ಸಂಘವಾಗೆ ಕೆಲವಂಶದಲ್ಲಾದರೂ ಸಹಾಯವೀಯುತ್ತಿರುವದನ್ನು ಭಗೀರಥ ಯತ್ನದಿಂದ ಹುಡುಕಿ ತೆಗೆಯಬಹುದೆಂದು ತೋರುವುದು?

— ಹಿರಿಯಕ್ಕ

—●—

ಅಮೇರಿಕದ ವಿದ್ಯಾವತಿಯರು

ಅಮೇರಿಕದ ವಿದ್ಯಾವತಿಯರಲ್ಲಿ ಸ್ವಲ್ಪ ಕಲಿತ ಹೆಂಗಸರಿಗಿಂತ ಹೆಚ್ಚು ಕಲಿತವರಲ್ಲಿ ಸಂತಾನ ಸಂಪತ್ತು ಕಡಿಮೆಯಾಗಿದೆಯೆಂದು ಪರಿಶೀಲಕರು ವರದಿ ಮಾಡಿದ್ದಾರೆ. ಇದಕ್ಕೆ ಕಾರಣವೆಂದರೆ ವಿದ್ಯಾವತಿಯರು ಆಧುನಿಕ ಗರ್ಭನಿರೋಧಕ, ಗರ್ಭವಿನಾಶಕ ಸಾಧನಗಳನ್ನು ಬಳಸಿ ಸಂತಾನವನ್ನು ಸಂಯಮದಲ್ಲಿಡಲು ಕಲಿಸಿದ್ದಾರೆ. ಇದನ್ನು ಹಿಂದೀ ಧಾರ್ಮಿಕರು ಭ್ರೂಣಹತ್ಯೆ ಎಂದು ಹೇಳಿ ಅದನ್ನು ಘೋರಪಾತಕವೆಂದು ಗಣಿಸುತ್ತಾರೆ. ಸಂತತಿ ನಿರೋಧದ ಪಾಪ ಪುಣ್ಯವಿವೇಕವು ಅತ್ಯಂತಸೂಕ್ಷ್ಮವಾದನ್ಯಾಯದೃಷ್ಟಿಗೆ ಮಾತ್ರಗೋಚರವಾಗತಕ್ಕದ್ದಾಗಿದೆ ಕುಟುಂಬದಲ್ಲಿರುವ ಪತಿಪತಿಯರ ದುಡುಮೆಯ ಶಕ್ತಿಗನುಸಾರವಾಗಿ ಮಕ್ಕಳ ಸಂಖ್ಯೆಯನ್ನು ಮಿತಿಗೊಳಿಸಬೇಕೆಂಬುದು ಆಧುನಿಕವಾದವು. 'ಹುಟ್ಟಿ ಉಳಿದ ಮಕ್ಕಳ ದೃಷ್ಟಿಯಿಂದ ಬಹುಮುಖ್ಯವಾದದ್ದು ಎಷ್ಟು ಮಕ್ಕಳ ಪಾಲನೆ ಪೋಷಣೆಗಳನ್ನು ಸಮರ್ಥವಾಗಿ ಮಾಡಲು ತಾಯ್ತಂದೆಯರಿಗೆ ಶಕ್ತಿಯಿದೆಯೋ ಅಷ್ಟನ್ನೇ ಅವರು ಉಳಿಸಿಕೊಳ್ಳುವದು (ಅರ್ಥಾತ್ ಮಿಕ್ಕ ಜೀವ ಪ್ರವೇಶವಾಗದಿರುವ ಪಿಂಡಗಳನ್ನು ಪ್ರಾರಂಭದಲ್ಲಿಯೇ ನಾಶಮಾಡುವದು' ನ್ಯಾಯವಾದುದು. ಹಾಗಿಲ್ಲದೆ ಮನಃ ಸಂಯಮದಿಂದ ಹೋದರೂ (ಅಂಥವರೇ ಜಗತ್ತಿನಲ್ಲಿ ಹೆಚ್ಚು) ಕಾರಣ ವಿಘಟಕ ಸಾಧನಗಳಿಂದ ಬಹು ಸಂತಾನವನ್ನು ತಡೆಯದಿದ್ದಲ್ಲಿ ಹುಟ್ಟುವ ಮಕ್ಕಳ ಪಾಲನ, ಪೋಷಣೆ ವಿದ್ಯಾಭ್ಯಾಸ ಮುಂತಾದವು ಕಾಯದೆಗಳ ಅರ್ಥಶಕ್ತಿಯನ್ನು ಮೀರಿಹೋಗಿ ಅವು ತಬ್ಬಲಿಗಳಂತೆ, ದರಿದ್ರರಂತೆ, ಅನಾಥರಂತೆ, ಅಲಕ್ಷ್ಯಕ್ಕೊಳಗಾಗಿ ಜೀವನದಲ್ಲಿ ದೈಹಿಕ ಮತ್ತು ಮಾನಸಿಕವಾದ ವಿವಿಧ ರೋಗಗಳಿಗೂ ಗುರಿಯಾಗಿ ನರಳಬೇಕಾಗುತ್ತದೆ. ಆದರೆ ಸಂತತಿ ನಿರೋಧಕ್ರಮವನ್ನು ಅನುಸರಿಸಲು ಸಂಪೂರ್ಣ ನ್ಯಾಯ. ವಿವೇಕ. ದಯಾದೃಷ್ಟಿ, ಮತ್ತು ವೈಜ್ಞಾನಿಕ ಸಾಧನ ಇವು ಅತ್ಯವಶ್ಯ. ಅವುಗಳಿಲ್ಲದೆ ಜೀವಹತ್ಯೆಂದರೆ ಕೊಲೆ ನಿರ್ದಯತೆ ಪ್ರಚೋದಕವೂ ಕೇವಲ ವ್ಯಕ್ತಿಸ್ವಾರ್ಥಪರವೂ ಅವೈಜ್ಞಾನಿಕವೆನಿಸುವ ಅಪಾಯಕರ ಸಾಧನಬದ್ಧವೂ ಆಗುವುದರಿಂದ ಅಂಥ ಸಂತತಿ ನಿರೋಧವು ಖಂಡಿತವಾಗಿ ಪಾತಕರ, ಆತ್ಮಘಾತಕ ಎನ್ನುವುದನ್ನು ಮರೆಯತಕ್ಕದ್ದಲ್ಲ.

ಅಜ್ಞಾನಿಗಳು ಅವಿವೇಕದಿಂದ ಕೇವಲ ಸ್ವಾರ್ಥ ಮತ್ತು ಜೀವಹಿಂಸೆಗೆ ಕಾರಣರಾಗುವರೆಂಬ ಭಯದಿಂದಲೇ ನಮ್ಮ

ಹಿಂದಿನ ಧರ್ಮಜ್ಞರು ಸಂತತಿನಿರೋಧವನ್ನು ಬಾಹ್ಯೋಪಕರಣಗಳಿಂದ ಮಾಡುವುದನ್ನು ನಿಷೇಧಿಸಿ, ಕೇವಲ [ಜಿತೇಂದ್ರಿಯತ್ವ] ಮನಸ್ಸಂಯಮದಿಂದಲೇ ಬೇಡರೆ ಮಾಡಬಹುದು ಎಂದು ವಿಧಿಸಿದ್ದು. ಆದುದರಿಂದ ಸಾಮಾನ್ಯರು ಇಂಥ ಪ್ರಯೋಗಗಳನ್ನು ಗುಪ್ತ ರೀತ್ಯಾ ಅನುಸರಿಸದೆ, ಕಾಡಾಡಿತನದ ನಾಚಿಕೆಯನ್ನು ದೂರವಿಟ್ಟು, ಒಳ್ಳೆದರ ಸಲಹೆಯನ್ನು ಪಡೆದೇ ಅಗತ್ಯವಿದ್ದಲ್ಲಿ ಆಚರಿಸಬೇಕು. ಇದಕ್ಕೆ ತಪ್ಪಿದಲ್ಲಿ ಶಾಸ್ತ್ರದಲ್ಲಿರುವಂತೆ ಮನುಷ್ಯರು ಘೋರಪಾಪಿಗಳಾಗಿ ಸಮಾಜ ಘಾತಕರಾಗುತ್ತಾರೆ ಎಂಬುದನ್ನು ಎಲ್ಲರಿಗಿಂತ ಹೆಚ್ಚಾಗಿ ಮಹಿಳೆಯರು ಅರಿತುಕೊಳ್ಳಬೇಕಾಗಿದೆ

ಹೊಸಪೇಟೆ

(ಸ್ವಂತ ಸುದ್ದಿಗಾರ)

ಶ್ರೀ ವಿದ್ಯಾರಣ್ಯ ವಿಜ್ಞಾನ ಸಮಿತಿಯ ಯಜಮಾನ್ಯದಲ್ಲಿ ಸದರಿ ಸಮಿತಿಯ ಅಧ್ಯಕ್ಷರಾದ ಶ್ರೀ ಶಂಕರಾನಂದ ಸ್ವಾಮಿಗಳು ಇಲ್ಲಿಯ ಥಿಯಸಾಫಿಕಲ್ ಸೊಸೈಟಿ ಭವನದಲ್ಲಿ ಕಳೆದ ೧೫ ದಿನಗಳಿಂದ ಉದಯ ಮತ್ತು ಸಾಯಂಕಾಲ ಉಪನ್ಯಾಸ ಮಾಡಿದರು. ಆಖರಿ ದಿವಸ ಪಟ್ಟಣದ ಮುಖ್ಯ ಬೀದಿಗಳಲ್ಲಿ ಶ್ರೀ ಕೃಷ್ಣನ ವಿಶ್ವರೂಪ ಸಂದರ್ಶನ ಪಟವನ್ನು ರಥದಲ್ಲಿ ಅಲಂಕರಿಸಿ ಭಜನೆಗಳಿಂದ ವಿಜೃಂಭಣೆಯಿಂದ ಉತ್ಸವ ನಡೆಸಿದರು. ಭಕ್ತರು ಕೆಲವರು ಸಮಿತಿಯ ಸದಸ್ಯರಿಗೂ ಸಾಧುಗಳಿಗೂ ಸಂತರ್ಪಣೆ ಮಾಡಿದರು. ಗೀತಾಸೇವಾಶ್ರಮವು ಕಟ್ಟುವದಕ್ಕಾಗಿ ಅನೇಕ ಭಕ್ತರು ಅನೇಕ ವಿಧವಾಗಿ ಸಹಾಯ ಮಾಡಲು ವಾಗ್ದಾನವಿತ್ತರು, ಈ ಆಶ್ರಮವು ಬಳ್ಳಾರಿ ರೋಡ್ಡಿನಲ್ಲಿ ಕಟ್ಟಲ್ಪಡುವುದು.

ತುಂಗಭದ್ರಾ ಪ್ರಾಜೆಕ್ಟ್ ಸಂದರ್ಶನಕ್ಕೆ ಬರುವವರ ಸಲುವಾಗಿ ಕೊಟ್ಟೂರು ರೈಲು ಮಾರ್ಗದ ಸದರಿ ಕೆಲಸಗಳು ನಡೆಯುವ ಸ್ಥಳದಲ್ಲಿ ತುಂಗಭದ್ರಾ ಪ್ರಾಜೆಕ್ಟ್ ರೈಲು ಸ್ಟೇಷನ್ ಎಂಬುವ ಹೊಸದಿಂದ ದಾಗಿ ಒಂದು ಸ್ಟೇಷನ್ ಏರ್ಪಡಿಸಿ ಪ್ರಯಾಣಿಕರಿಗೆ ಕಳೆದ ೪-೫ ದಿನಗಳಿಂದ ಟಿಕೆಟ್ಟುಗಳನ್ನು ಕೊಡುತ್ತಾರೆ.

ತತ್ವಜ್ಞಾನ ಸಮಾಜದ ಪ್ರಚಾರಕರಾದ ಶ್ರೀ. ಎಸ್. ಕೃಷ್ಣಮೂರ್ತಿ ಇವರು ನಿನ್ನೆ ದಿನ ಇಲ್ಲಿಗೆ ಬಂದು ಇಲ್ಲಿಯ ದಿವ್ಯಜ್ಞಾನ ಸಮಾಜ ಸಂಘದಲ್ಲಿ ಹೃದಯ ಜ್ಯೋತಿ ಪೂಜೆಯನ್ನು ಮಾಡಿ ಸಾಯಂಕಾಲ ಇಂದಿನ ಭಾರತದ ಬಡತನ ವಿಷಯವಾಗಿ ಉಪನ್ಯಾಸಿಸಿದರು.

ತೆಕ್ಕಲಕೋಟೆ

ಶ್ರೀ ವಿವೇಕಾನಂದರ ಜನ್ಮದಿನೋತ್ಸವವು ವಿಜೃಂಭಣೆಯಿಂದ ನೆರವೇರಿತು. ಶ್ರೀಧರ ಘಟ್ಟಿಯ ಸಣ್ಣಸ್ವಾಮಿಯವರು ವಿವೇಕಾನಂದರ ವಿಷಯ ಹೇಳಿದರು. ಶ್ರೀನಿವಾಸಯ್ಯಂಗಾರ್ಯರ ಸಂಗೀತ ಕಛೇರಿಯಾಯಿತು

೯-೧-೪೯ ನೇ ದಿನಾಂಕ ಮಿಂಚೇರಿಯಲ್ಲಿ ಜರುಗಿದ ಮಹಾಕವಿ ಸನ್ಮಾನ ಸಮಾರಂಭದಲ್ಲಿ ವೇ|| ಪಂ|| ಶ್ರೀ ವೈ ನಾಗೇಶಶಾಸ್ತ್ರಿಗಳಿಗೆ ಅರ್ಪಿಸಿದ

ಪಂಚರತ್ನ ಪದ್ಯಮಾಲಾ

ಕಂ|| ಶ್ರೀನಾಗೇಶ್ವರ ಶಾಸ್ತ್ರಿಗ|
ಳೀನಾಡಂ ಕಾವ್ಯಸುಧಿ ಸೇವಿಸುತಿಹರ್ಗೆ ||
ಆ ನಾಗಭೂಷಣನು ತಾಂ|
ನಾನಾವಿಧದಿಂದ ಪೊರೆಗೆ ಪಂಡಿತವರನಂ ||೧||

ಷ|| ಸಕ್ಕದವೊಳಿಹಕಾವ್ಯ ಗಂಗೆಯು |
ನಕ್ಕರದಿ ಕನ್ನಡದೊಳಿಳಿಸಿಹೆ |
ಮಿಕ್ಕಮೆರೆದಿಹ ಕಾಳಿದಾಸನ ಭಾವಬೆಳಗಿಸಿಹ್ಯೆ ||
ಅಕ್ಕರದಿ ಸಂಘದೊಳು ದುಡಿಯುವೆ |
ತಕ್ಕವಿದ್ಯೆಯ ಜನತೆಗುಣಿಸುವೆ |
ಸಿಕ್ಕ ಸಮಯದ ಪರಹಿತಕೆ ಬಳಸುತ್ತಲಿರುತಿಹರ್ಗೆ ||೨||

ಷ|| ಬಹುಜನರ ಕಲ್ಯಾಣಕಾಗಿಯೆ |
ಮಹಿಮಾಮಹಿಸ್ವಾಮಿಗಳ ಚರಿತೆಯ |
ಗಹನವಾಗಿಹ ಕಾವ್ಯರೂಪದಿ ರಚಿಸಿಸಿಂ ಮೆರೆದ್ಯೆ ||
ತುಹಿನ ಗಿರಿವರ ಗವಿಯ ಸಿದ್ಧನ |
ಮಹಿಮೆಯನು ಭಕ್ತರಲಿ ಹರಡಿಪೆ |
ಅಹಹ, ನಿಮ್ಮಯ ಕಾರ್ಯ ಗುರುತರವೆಂತು ಬಣ್ಣಿಪ್ಯೆ ||೩||

ಕಂ|| ಪರತರ ರಘುವಂಶವನುಂ |
ಸರಿಮಿಗಿಪ ಕುಮಾರ ಸಂಭವಾಖ್ಯದ ಕೃತಿಯುಂ |
ಮೆರೆಯುವ ಭಗವದ್ಗೀತೆಯು |
ಸಿರಿಯಿಂ ಕನ್ನಡಿಸುತೆ ಜನಮುಂ ಪಡೆದ್ಯೆ ||೪||

ಷ|| ಇನ್ನು ಎನಿತೋ ಧರ್ಮಗ್ರಂಥಗ |
ಳನ್ನು ಶೋಧಿಸಿ ಒರೆದ ಶಕ್ತಿಯು
ಉನ್ನತೋನ್ನತವಾಗಲೆಂದೆಲ್ಲರದು ಹಂಬಲವು ||
ಸನ್ನ ಕವಿತಾಕಾರ್ಯ ಫಲಿಸಲಿ |
ಚೆನ್ನ ಪ್ರಜೆಗಳ ಪ್ರೇಮ ಹೆಚ್ಚಲಿ |
ಪನ್ನಗಾಧರ ವಿಜಯವೀಯುಗೆ ನಿಮ್ಮಕೃತಿಗಳ್ಗೆ ||೫||

ಆ ನಾಗಪ್ಪ — ಶಿಷ್ಯವೃಂದದ ಪರವಾಗಿ

ಬಹಿರಂಗ ಯಾಲಂ.

ಬಳ್ಳಾರಿ ಜಿಲ್ಲಾ ಬೋರ್ಡಿನ ಮಾವತ್ತು ಹರಗೋಲುಗಳು, ಮಾರ್ಕೆಟ್ಟು, ಕಮೇಲಾ ಮತ್ತು ಧಂಡಿಮೋಟಿನಲ್ಲಿ ರುಸುಮುಗಳು ವಸೂಲು ಮಾಡುವುದಕ್ಕೆ ಬಹಿರಂಗ ಯಾಲಾಂ ನಡೆಸಲ್ಪಡುವುದು

ಯಾಲಂ ಸ್ಥಳ	ತಾರೀಖು
ಆದವಾನಿ ಹೈವೆ ಅಸಿಸ್ಟೆಂಟು ಇಂಜನೀಯರ್ ಆಫೀಸು ಹಳೆ ತಾಲೂಕ ಬೋರ್ಡು ಆಫೀಸು.	22—1—49
ಶಿರಿಗುಪ್ಪಿ ಪಂಚಾಯಿತಿ ಬೋರ್ಡು ಆಫೀಸು	23—1—49
ಹೊಸಪೇಟೆ ಹೈವೆ ಅಸಿಸ್ಟೆಂಟ್ ಇಂಜನಿಯರ್ ಆಫೀಸು (ಹಳೇ ತಾಲೂಕು ಬೋರ್ಡು ಆಫೀಸು.)	31—1—49
ಹಡಗಲಿ ಬೋರ್ಡು ಹೈಸ್ಕೂಲು	8—2—49
ಹರಪನಹಳ್ಳಿ ಬೋರ್ಡು ಹೈಸ್ಕೂಲು	9—2—49
ಕೂಡ್ಲಿಗಿ ಬೋರ್ಡು ಪ್ರಾಥಮಿಕ ಪಾಠಶಾಲೆ ...	10—2—49

ಮೇಲ್ಪಟ್ಟವರ ಉತ್ತರವಂತೆ ಯಂ. ನಂಜುಂಡಯ್ಯ,
ಕಾರ್ಯದರ್ಶಿ, ಬಳ್ಳಾರಿ ಜಿಲ್ಲಾ ಬೋರ್ಡ್.

The Rayalaseema Bank Ltd., H. O. Bellary.

ದಿ ರಾಯಲಸೀಮಾ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193

ಮುಖ್ಯ ಕಾರ್ಯಾಲಯ—ಬಳ್ಳಾರಿ.

——]0[——

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲಿ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 6 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 3½%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ 4%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಗಳಿಂದ ಪ್ರಾರಂಭಿಸಬಹುದು. ಅವಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8 14 3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ—ಬಳ್ಳಾರಿ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ.

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲಿದ್ವಾರಾ ರಿಜಿಸ್ಟರ್ಡ)

ಮದ್ರಾಸ್ ಸರಕಾರದಿಂದ ಮಾನ್ಯ

ಸ್ಥಳ—ಮಾರ್ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು — ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ ಉನ್ನತ: — ವಿಶಾರದ ಪ್ರಚಾರಕ

ವೇಳೆ:—ಪ್ರಾತಃಕಾಲ 7ರಿಂದ 9 ಸಾಯಂಕಾಲ 6ರಿಂದ 8ರ ವರೆಗೆ ಖಾಸ ಪುಸ್ತಕ-ಪರೀಕ್ಷೆ ವರ್ಗಗಳು ಅವಶ್ಯ [illegible]

ವಗೈರೆ ವಿವರಗಳನ್ನು ವಿದ್ಯಾಲಯದ ಕಾರ್ಯಾಲಯದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪತ್ರಿಕೆ 0 2-0

ಪ್ರಧಾನಾಚಾರ್ಯ: —ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No.M. 4746)

ನವ ಭಾರತ ಬಳ್ಳಾರಿ. 24—1—49

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

[illegible]

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೭ ಫೆಬ್ರವರಿ ೧೯೪೯ | ಸಂಚಿಕೆ ೫

U. S. I. S. ನಿಂದ ಜಗತ್ತಿನ ತಿಳುವಳಿಕೆಗಾಗಿ ಪ್ರಸಿದ್ಧವಾದ

ಸಾಮ್ಯವಾದಿ ರಶಿಯಾದ ಹೊಲ ಸಾಗುವಳಿ ಕಾಯಿದೆ

‘ಕೋಲ್ ಕೋಝ್’

—O—

ಕ್ರಿಶ್ಚಿಯನ್ ಸೈನ್ಸ್ ಮೋನಿಟರ್‌ದಲ್ಲಿ R, H, ಮಾರ್ಗನ್ ಹೆಮ್‌ರವರಿಂದ ಬರೆಯಲ್ಪಟ್ಟ ಅಮೇರಿಕಾ ಪ್ರಭುತ್ವದ ಪ್ರಚಾರ ಶಾಖೆಯವರಿಂದ ಜಗತ್ತಿನ ಮುಂದಿಡಲ್ಪಟ್ಟ ರಶಿಯಾದ ಆಂತರೀಕ ರೈತ ಜೀವನವನ್ನು ಈ ಲೇಖನವು ಪ್ರತಿಪಾದಿಸುತ್ತಿದೆ. ವಿಶ್ವದ ಎಲ್ಲಾ ಭಾಗಗಳಲ್ಲಿ ಏಕ ಮುಖವಾಗಿ ಪ್ರಚಾರಗೊಳ್ಳುತ್ತಿರುವ ಕಾರ್ಮಿಕ ಸಂಸ್ಥೆಯು ರಶಿಯಾದ ಗುಪ್ತಾಂಗವೆಂದು ಪ್ರಭುತ್ವ ಸಿದ್ಧ[illegible]ವಾದ ಈ ಕಾಲದಲ್ಲಿ ಈ ಬಗೆಯ ಲೇಖನವು ಅಪಪ್ರಚಾರವೋ ಎಂಬ ಸಂಶಯವನ್ನುಂಟುಮಾಡುತ್ತಿರವುದಾದರೂ ಸಾಕಷ್ಟು ಆಧಾರಗಳಿಂದ ಸಪ್ರಮಾಣ ಪೂರ್ವಕವಾದ ಈ ವೃತ್ತಾಂತವು ನೈಜವನ್ನೇ ತೋರಿಸುವುದೆಂಬುದನ್ನು ಒಪ್ಪಲೇಬೇಕಾಗುತ್ತದೆ. ರಶಿಯಾವು ಸೀಮಿತವಾದ ತನ್ನ ರಾಜ್ಯದ ಗಡಿ[illegible] ಮಾತ್ರ ಈ ತತ್ವಪ್ರಚೋದನೆಯನ್ನು ಮಾಡಿ ಸುಮ್ಮನಿರುವುದನ್ನು ಬಿಟ್ಟು ವಿಶ್ವವಿಜಯದ ಕನಸು ಕಾಣುತ್ತಿದೆ. ತನ್ನ ತತ್ವಗಳಿಂದಲೇ ವಿಶ್ವದ ಐಕ್ಯತೆ [illegible] ಜಗತ್ತಿನ ಮುಂದೆ ಕಂಠೋಕ್ತವಾಗಿ ಸಾರುತ್ತಿದೆ. ಸ್ವತಂತ್ರ [illegible] ಸ್ಥಾನವಲ್ಲೂ ಅದು ಈ ತನ್ನ ಚಟುವಟಿಕೆಯನ್ನು ಸಾಗಿಸಿ[illegible] ಪ್ರಚಲಿತ ಪ್ರಭುತ್ವದ ವಿರುದ್ಧ ವಿಪ್ಲವವನ್ನೆಬ್ಬಿಸಿ[illegible] ಚೀನದಲ್ಲಿನ ಇತರ ಅತ್ಯುಗ್ರ ಆಕ್ರಮಣದಿಂದಾಗಿ ಚಿಕ್ಕವೇ ಕಂದು [illegible] ಸಂಗಡದ [illegible] ತನ್ನ ವಕ್ರದೃಷ್ಟಿಯಿಂದ ಬೇರೆ ಜನರನ್ನು ಈ ಮನೋವೃತ್ತಿಯಿಂದ ಬಿಡುಗಡೆ[illegible] ಸರ್ವರಿಗೂ ಸಮ ಭೂಮಿ—ಸಮ ಸೌಖ್ಯ [illegible]ತೆಯನ್ನು ಸಾರುವ ಈ ರಶಿಯಾದ ತತ್ವ [illegible] ನಂಬಿ [illegible] ಪರೀಕ್ಷಿಸಿದರೆ ಇಂದು ವಿಶ್ವದ ಎಲ್ಲಾ ಕಾರ್ಮಿಕರ ಅವಸ್ಥೆಗಿಂತಲೂ [illegible] ದ ಅವಸ್ಥೆಯಲ್ಲಿ ರಶಿಯಾದ ಕಾರ್ಮಿಕರಿರುವರೆಂಬುದನ್ನು ನಾವು ತಿಳಿಯಬೇಕಾಗುತ್ತದೆ. [illegible]ತ್ಯಾಸವೆಂದರೆ ರಶಿಯಾದ ಎಲ್ಲ ಜನರೂ [illegible] ದಿನ ಕಳೆಯುತ್ತಲಿದ್ದ [illegible] ಜನಗಳಿಗೆ [illegible] ಜೀವನವನ್ನು ಸಾಗಿಸುತ್ತಿವೆ ಎಂಬುದು [illegible] ಮಾತ್ರವೇ [illegible] ಇಂದು ಹಿಂದುಸ್ಥಾನದಲ್ಲಿ ಪ್ರಚಲಿತ ಪ್ರಭುತ್ವ [illegible] ಕಾಯಿದೆಯಲ್ಲಿ [illegible] ರೈತನ ಸರ್ವತೋಮುಖ ಅಭಿವೃದ್ಧಿಯನ್ನು [illegible] ವಾತಾವರಣವನ್ನು ಕಲ್ಪಿಸಿಕೊಡುತ್ತಿದೆ. ಭಾರತೀಯ ರೈತನು [illegible] ಪ್ರಭುತ್ವದ ಈ ಕಾಯಿದೆಯ [illegible] ಇನ್ನು [illegible] ಸಾಧ್ಯವಿದೆ. ಒಂದೇ ಒಂದು ವರ್ಷದಲ್ಲಿ ಪ್ರಭುತ್ವವು [illegible] ತುಂಬಾ ಹೆಣಗಿದೆ [illegible] ನಿರಾಶ್ರಿತ[illegible]ಗಳನ್ನು [illegible] ರೈತನಿಗೆ [illegible] ಭೂಮಿ [illegible] ಗೊಟ್ಟವರನ್ನು ಬದಗಿಸುವ ಕಾರ್ಯದಲ್ಲಿ ನಿರತವಾಗಿದೆ. ಆದರೆ [illegible] ಒಂದು [illegible] ಸಹಕರಿಸುವ [illegible] ಫಲವನ್ನು ಕೊಡುವುದೆಂ[illegible] ಸಾರನ್ನು ನೆನಪಿನಲ್ಲಿಟ್ಟು ಜನತೆಯು ಬೇರೆ ಯಾವ ಸಂಗಡಿಗರ ಪ್ರಚಾರಕ್ಕೆ [illegible] ಕಾರ್ಯಾರ್ಥಿಯಾದರೆ [illegible] ವರ ಸಮಯದಲ್ಲಿ ಭಾರತವು ಸ್ವರ್ಣಭೂಮಿಯಾಗಿ ಜನತೆಯ [illegible]ರ್ಯದ ಪಸಿ

[illegible]ಯಲ್ಲಿ ನೋಡಿಯಬಹುದೆಂಬುದನ್ನು [illegible]ವಾಗಿ ಹೇಳಬಹುದು. ಎಲ್ಲದಕ್ಕಿಂತ ತಾವೇ ಶ್ರೇಷ್ಠರೆಂಬ ನನ್ನು ಸಾರುವ ರಶಿಯಾನ್ ಹೊಲಸಾಗುವಳಿ ಕಾಯಿದೆ ಅಂತರ್ಯವು ಅನ್ಯ ಪ್ರಚಾರಕ್ಕೆ ಸೋತು ತಮ್ಮ ಕರ್ತವ್ಯದಿಂದ ವಂಚಿಸಲ್ಪಡಬಲ್ಲವರಿಗಾಗಿ ಈ ಕೆಳಗೆ ಯಾದಿಂದ ಬಂದ ಒಬ್ಬ ರೈತನಿಂದ ರಶಿಯನ್ ಕಾಯಿದೆಗಳನ್ನು ಸುಲಭ ತಿಳಿಯಬಹುದಾಗಿದೆ.

ಸಾಮ್ಯವಾದೀ ಸರ್ಕಾರದ [illegible] ಪಕ್ಕೆ ಒಳಗಾಗಿ ಅಲ್ಲಿಂದ ತಲೆ ಕೊಂಡು ಬಂದ ಓರ್ವ ರಶಿಯನ್ ರೈತನನ್ನು ಪತ್ರಿಕಾ ಪ್ರತಿನಿಧಿಯೊಬ್ಬ ಸಂಧಿಸಿ ರಶಿಯಾದ ಆಂತರೀಕ ಪರಿಸ್ಥಿತಿಯ ಬಗ್ಗೆ ಪ್ರಶ್ನೋತ್ತರಗಳನ್ನು ಮಾಡಿದನು. ಈ ರೈತನ ಹೆಸರನ್ನು ಪ್ರಕಟಿಸುವುದು ತಪ್ಪಾಗುವುದಾದ್ದರಿಂದ ಅವನನ್ನು “ಕ್ಲಿಮ್ ಇಂಚೆಂಕೊ” ಕರೆಯೋಣ. ಆತನು ಹೇಳಿಕೆಯಂತೆ—ರಶಿಯಾದ ವಿಸ್ತಾರವಾದ ಭೂಮಿಯೆಲ್ಲ ಸಾಮ್ಯವಾದಿ ಸರಕಾರದ ಸ್ವಾಧೀನದಲ್ಲಿರುತ್ತದೆ. ಹಾಗೂ ಈ ಭೂಮಿಯ ಉಪಯೋಗವನ್ನು ಕೆಲವೊಂದು ಗುಂಪುಗಳು ಪರಸ್ಪರ ಸಹಾಯಕ ಸಂಘಗಳ [illegible] ಉಪಯೋಗಮಾಡಿಕೊಳ್ಳುತ್ತವೆ. ಈ ಸಂಘಗಳ ಹೆಸರೇ ‘ಕೋಲ್ ಕೋಝ್’. ರೈತ ಹಾಗೂ ಅವನ ಅನುಯಾಯಿಗಳು ಸರಕಾರಕ್ಕಾಗಿ ಈ ಕೋಲ್ ಝ್‌ಗಳ ದ್ವಾರಾ ಕಾರ್ಯಮಾಡುವ ಒಂದು ಕಾರ್ಖಾನೆಯಂತೆಂದು ಹೇಳಲ್ಪಡುತ್ತದೆ. ಈ ಕೋಲ್ ಕೋಝುವು ರಶಿಯಾದ ಎಲ್ಲಾ ಕೆಲಸ ಮಾಡುವ ಭೂಮಿಯನ್ನು ಒಳಗೊಂಡಿದೆ. ಹಾಗೂ ಎಲ್ಲಾ ರೈತರು ಕೋಲ್ ಕೋಝಿನ ದ್ವಾರಾ ತಮ್ಮ ಜೀವನ ನಿರ್ವಹಣವನ್ನು ಮಾಡಿಕೊಳ್ಳುತ್ತಾರೆ ಮತ್ತು ಮಾಡಿಕೊಳ್ಳಲೇಬೇಕೆಂಬ ನಿಯಮವಿದೆ. [illegible] ಕೊಟ್ಟ ಹೇಳಿಕೆಯ ಒಂದು ಸಂಕ್ಷಿಪ್ತ ಸಾರವನ್ನು ಈ ಕೆಳಗೆ ಕೊಡಲಾಗಿದೆ.

ಎಲ್ಲಾ ಸೋವಿಯೆಟ್ ಹಳ್ಳಿಗಳೂ ಅವುಗಳ ಜನರೂ ಕೋಲ್ ಕೋಝ್ ಮುಖಾಂತರ ಜೀವನವನ್ನು ಸಾಗಿಸುತ್ತಾರೆ. ನನ್ನ ತಂದೆ ತಾಯಿ [illegible] ನಾಲ್ಕು ಜನ ಅಸ್ತಿತ್ವದಲ್ಲಿದ್ದರೂ ಇವನ್ನೇ ಮುಖ್ಯವೃತ್ತಿಯನ್ನಾಗಿ [illegible] ಸುತ್ತೇವೆ. ನಮಗೆ ನಮ್ಮದೆಂದು ಹೇಳಿಕೊಳ್ಳಬಹುದಾದ ಇಲ್ಲವೇ [illegible] ದೆಂದು ನಾವು ಬೇಕಾದಂತೆ ಮಾಡಲು—ಒಕ್ಕಲುತನಕ್ಕೆ ಅನುಕೂಲವಾದ ನಮ್ಮ ಸ್ವಂತ ಒಡೆತನದ ಜಮೀನು ನಮಗೆ ಯಾವುದೂ ಇಲ್ಲ. ನಮಗೆ ಮಾತ್ರವಲ್ಲ, ರಶಿಯಾದ ಯಾವನೊಬ್ಬನಿಗೂ ಈ ರೀತಿ ಭೂಮಿ ಇರುವುದಿಲ್ಲ. ನಮ್ಮ ಕುಟುಂಬವು ಒಂದು ಎಕ್ರೆಯ [illegible] ಅಂಶವನ್ನು [illegible] ತಮ್ಮ ಜೀವನ ನಿರ್ವಹಣಕ್ಕಾಗಿ ಕೋಲ್ ಕೋಝ್ ಮುಖಾಂತರ [illegible] ದುಡಿಯುತ್ತಿವೆ. ಇಷ್ಟು ಸಣ್ಣ ಭೂಮಿಯಲ್ಲಿ ನಾವು ಗೋಧಿ, ಕ್ಯಾಬಿಜ್, ಬಟಾಟೆ, ಮುಂತಾದವುಗಳನ್ನು ಬೆಳೆಸಿ ಮಾರುತ್ತೇವೆ. ಈ ಬಗ್ಗೆ [illegible] ಕೋಲ್ ಕೋಝ್ ಮುಖಾಂತರ ಎರಡು ರೂಬಲ್ ಹಾಗೂ 5 ಕೋಪೆಕ್‌ ನಮಗೆ ಸಿಕ್ಕುತ್ತವೆ.

ಒಬ್ಬನಿಗೆ ಒಂದೊಂದು ಹಸುವೂ ಹಂಚಲ್ಪಡುತ್ತದೆಯೋ ಎಂದು ಕೇಳಿದ್ದಕ್ಕೆ ಅವನು ಇಲ್ಲವೆಂದು ಹೇಳಿದನು. ದನಗಳನ್ನಾಗಲೀ ಹಂದಿಗಳನ್ನಾಗಲೀ ನಾವು ಕೋಲ್ ಕೋಝ್‌ನ ಮುಖಾಂತರ ಪಡೆಯುವುದಿಲ್ಲ. ಮಾತ್ರ

ನಮ್ಮೆಲ್ಲರಲ್ಲೂ ಹಾಲಿನ ವಿತರಣೆಯೇ ಇಲ್ಲ. ಬದಲಾಗಿ ವರ್ಷಕ್ಕೆ ನಾಲ್ಕು ಬಾರಿ ಸ್ವಲ್ಪ ಮಾಂಸವನ್ನೂ ಬೆಣ್ಣೆಯನ್ನೂ ಪಡೆಯುತ್ತೇವೆ. ಹಾಗೂ ಆಹಾರ ಯೋಗ್ಯ ಕೋಳಿಮರಿಗಳನ್ನೂ ಸಾಧಾರಣ ನಾಲ್ಕು ರಾತಲುಗಳಷ್ಟು ಚರ್ಬಿಯನ್ನೂ ಪ್ರತಿ ಜನವರಿ ತಿಂಗಳಲ್ಲಿ ಕೊಲ್‌ಕೋರ್ಝ್‌ನ ಮುಖಾಂತರ ಪಡೆಯುತ್ತೇವೆ. ಆಹಾರಕ್ಕಾಗಿ ಬಾರ್ಲಿ—ಗೋಧಿ—ಹಾಗೂ ಬಟಾಟೆಗಳನ್ನೂ ಹಾಗೂ ಮೂರು ಕಿಲೋಗಳಷ್ಟು ಹಾಲಿನ ಖೋವೆಯನ್ನೂ ನಾವು ಪ್ರತಿ ವರ್ಷ ಪಡೆಯುತ್ತೇವೆ. ಹೀಗಿದ್ದರೂ ಪ್ರತಿ ವರ್ಷದ ಹೆಚ್ಚಿನ ದಿನಗಳನ್ನು ನಾವು ಬರೇ ಬೇಯಿಸಿದ ಬಟಾಟೆಯನ್ನು ತಿಂದೇ ಜೀವಿಸುವ ಪ್ರಸಂಗ ಉಂಟಾಗುತ್ತದೆ.

ನನ್ನ ತಂದೆಯು ಮೂರು ಋತುಗಳಲ್ಲೂ ಪ್ರತಿ ದಿನ ಸರ್ವಸಾಧಾರಣ 12 ಗಂಟೆಗಳ ಕಾಲ ಹೊಲದಲ್ಲಿ ಕೆಲಸಮಾಡುತ್ತಾನೆ. ನನ್ನ ತಾಯಿಯು ವರ್ಷದಲ್ಲಿ 270 ದಿವಸಗಳಲ್ಲಿ ಕೆಲಸಮಾಡುತ್ತಾಳೆ ಹಾಗೂ ಶಾಲೆಯಿಲ್ಲದ ದಿನ ನನ್ನ ಚಿಕ್ಕತಮ್ಮಂದಿರೂ ಕೆಲಸಮಾಡುತ್ತಿದ್ದು ನಮ್ಮೆಲ್ಲರಿಗೂ ಒಟ್ಟು 250 ದಿವಸಗಳ ಒಗ್ಗೆರೇಶನ್ ಕೊಡಲಾಗುತ್ತದೆ. ಎಲ್ಲಿ ಮತ್ತು ಯಾವ ಸ್ಥಳದಲ್ಲಿ ಏನು ಕೆಲಸಮಾಡಬೇಕೆಂಬುದನ್ನು ಹೇಳಲು ಕೊಲ್‌ಕೋರ್ಝ್‌ನ ದ್ವಾರಾ ನಮಗೆ ಒಬ್ಬ ಯಜಮಾನನಿರುತ್ತಾನೆ. ಇವನು ಸಾಮ್ಯವಾದಿಯಾಗಿದ್ದು ಸರಕಾರದ ಆದೇಶದಂತೆ ನಮ್ಮೆಲರಿಂದ ದುಡಿಸಿಕೊಳ್ಳುತ್ತಾನೆ. ಆದರೆ ಇವನೂ ಸರಕಾರದ ಒಬ್ಬ ಸೇವಕನಂತಿರುವನಲ್ಲದೆ ಇವನಿಗೆ ಯಾವ ಸ್ವಂತ ಭೂಮಿಯೂ ಇರುವುದಿಲ್ಲ. ನಾವು ಕೆಲಸಮಾಡಿದುದರ ಪ್ರತಿಫಲವೆಂದು ಸರಕಾರವಾಗಲೀ ಕೋಲ್‌ಕೋರ್ಝ್ ಆಗಲಿ ನಮಗೆ ಹಣವನ್ನು ಕೊಡುವುದಿಲ್ಲ. ಬದಲು ನಮ್ಮೆಲ್ಲರಿಗೂ 250 ದಿವಸಗಳವರೆಗೆ ಸಾಕಾಗುವಷ್ಟು ಆಹಾರ ಸಾಮಗ್ರಿಗಳು ಸಿಕ್ಕುತ್ತವೆ. ಇನ್ನು ಬಟ್ಟೆಯು ಮತ್ತು ಪಾದರಕ್ಷೆಗಳು ಅತೀ ತುಟಾಗ್ರತೆಯುಳ್ಳದ್ದು ನಾನು ನನ್ನ ವಿದ್ಯಾಭ್ಯಾಸ ಕಾಲದಲ್ಲಿ ಪಾದರಕ್ಷೆಗಳಿಲ್ಲದೆ ಶಾಲೆಗೆ ಹೋಗಿಬರುತ್ತಿದ್ದೆ. ಆಹಾರ ಸಾಮಗ್ರಿಗಳ ವಿನಹ ಉಳಿದ ಎಣ್ಣೆ ಸಾಬೂನಗಳಿಗಾಗಿ ನಾವು ನಮ್ಮಲ್ಲಿನ ಕೋಳಿತತ್ತಿಗಳನ್ನು ಮಾರಿ ತರಬೇಕಾಗುತ್ತದೆ. ಕೋಲ್‌ಕೋರ್ಝ್ ಮುಖಾಂತರ ನಡೆಸಲ್ಪಡುವ ಎಷ್ಟೋ ಅಂಗಡಿಗಳಿವೆ. ಆದರೆ ನಾವು ಅಲ್ಲಿಂದ ವಸ್ತುಗಳನ್ನು ತರಬೇಕಾದರೆ ಅವುಗಳಿಗೆ ಹಣಕೊಡಬೇಕಾಗುತ್ತದೆ. ಹಾಗೂ ನಮಗೆ ಹಣವು ಇಕೀ ವರ್ಷದಲ್ಲಿ ಅತೀ ಅಲ್ಪವಾಗಿ ಸಿಕ್ಕುತ್ತದೆ. ನಮ್ಮ ಭೂಸಾಗುವಳಿಗಾಗಿ ನಮಗೆ ಯಾವುದೇ ಯಂತ್ರಗಳ ಸಹಾಯವಿಲ್ಲ. ಕಬ್ಬಿಣದ ನೇಗಿಲಿನಿಂದಲೇ ನಾವು ನಮ್ಮ ಭೂಮಿಯನ್ನು ಉಳುತ್ತೇವೆ. ಟ್ರಾಕ್ಟರುಗಳು ಪ್ರತೀ 27 ಹಳ್ಳಿಗಳಿಗೆ ನಾಲ್ಕರಷ್ಟಿವೆಯಾದರೂ ವರ್ಷದ ಬಹುದಿನಗಳಲ್ಲಿ ಅವು ಸುವ್ಯವಸ್ಥಿತವಾಗಿರುವುದಿಲ್ಲವಾದುದರಿಂದ ನಮಗೆ ಬೇಕಾದಂತೆ ಬೇಕಾದ ಸಮಯದಲ್ಲಿ ಅವುಗಳ ಸಹಾಯವನ್ನು ನಾವು ಪಡೆಯಲು ಅಸಮರ್ಥರಾಗುತ್ತೇವೆ.

ನಮ್ಮ ಹಳ್ಳಿಯಲ್ಲಿ 500 ಕುಟುಂಬಗಳಿದ್ದು ಅವು ಮೂರು ರೀತಿಯಲ್ಲಿ ವಿಭಾಜಿಸಲ್ಪಟ್ಟವೆ. ಶ್ರೀಮಂತ ಮಧ್ಯಮ ಹಾಗೂ ಬಡವನೆಂಬ ಮೂರು ಭೇದಗಳಿಂದ ಜನರ ವರ್ಗೀಕರಣವಾಗುತ್ತಿದ್ದು ನಮ್ಮನ್ನು ಮಧ್ಯಮವರ್ಗವೆಂದು ಪರಿಗಣಿಸಲ್ಪಟ್ಟು ನಮ್ಮ ಸ್ಥಿತಿಯು ಒಂದು ಕಬ್ಬಿಣದ ನೇಗಿಲು ಹಾಗೂ 5 ಕುರಿ ಮತ್ತು ಸ್ವಲ್ಪ ಕೋಳಿಮರಿಗಳು ಹಾಗೂ 15 ಎಕ್ರೆ ಸ್ಥಳವೆಂದು ನಿರ್ಧರಿಸಲಾಗಿದೆ— ಹಲವಾರು ಜೊಟ್ಯೇವಿಕ್ ಶಾಲೆಗಳಿದ್ದು ಚರ್ಚ್‌ಗಳೆಲ್ಲ ಕೋಲ್‌ಕೋರ್ಝ್ ಸ್ಟೋರುಗಳಾಗಿವೆ. ದೇವಾರಾಧನೆಯೇ ಇಲ್ಲ ಶ್ರೀಮಂತ ವರ್ಗದ 64 ಕುಟುಂಬಗಳಿವೆ. ಇದರ ಸ್ಥಿತಿಯು ಅರಿವು ತಮಗಿಲ್ಲ. ಸರಕಾರದ ವಿರುದ್ಧಾಚರಣೆಯಲ್ಲಿ ನಾವು ನಿರತರಾದರೆ ನಮ್ಮ ಈ ಸ್ಥಿತಿಯು ಸರಕಾರದಿಂದ ಜಪ್ತುಮಾಡಲ್ಪಟ್ಟು ನಾವು ಉಳುವ ಭೂಮಿಯನ್ನು ಕಸಿದಿಟ್ಟುಕೊಳ್ಳುತ್ತಾರೆ

ಇದು ರಶಿಯನ್ ರೈತನೊಬ್ಬನಿಂದ ಹೊರಗೆಡಹಲ್ಪಟ್ಟ ವಿಚಾರ— ಇದನ್ನು ಅಮೇರಿಕಾ ದೇಶದ ಪ್ರಭುತ್ವವು ತನ್ನ ಪ್ರಚಾರ ಶಾಖೆಯ ಮೂಲಕ ಜಗತ್ತಿನ ಮುಂದಿಟ್ಟಿದೆ. ಇದು ಯೋಗ್ಯವೋ ಅಯೋಗ್ಯವೋ ಎಂಬುದನ್ನು ಪರಿಶೀಲಿಸುವುದು ಅದನ್ನನುಸರಿಸುವ ಮಾನವನ ಇಚ್ಛೆಯಾದರೂ ಹೊರಗೆ ಥಳುಕನ್ನಿಟ್ಟು ಮೇಲೆ ಮೆರುಗನ್ನು ತೋರಿಸುವ ಕೆಲವೊಂದು ರಾಷ್ಟ್ರಗಳ ರಾಜನೀತಿಯ ಅವಲೋಕನವನ್ನು ಸರ್ವರೂ ಮಾಡಲೇಬೇಕು.

ಧುರೀಣ.

ಹರಿಜನ ಅಗ್ರಲೇಖ

ಸರ್ವೋದಯ ದಿನ

(ಧುಳೀದಲ್ಲಿ ಗಾಂಧೀ ತತ್ವಜ್ಞಾನ ಸಂಸ್ಥೆಯ ಆಶ್ರಯದಲ್ಲಿ ಜನೇವರಿ 7ನೇ ತಾರೀಕು ಸೇರಿದ ಪ್ರಾರ್ಥನಾ ಸಭೆಯಲ್ಲಿ ಶ್ರೀ ವಿನೋಬಾ ಇವರು ಸರ್ವೋದಯ ದಿವಸದ ಕಾರ್ಯಕ್ರಮವನ್ನು ವಿವರಿಸಿದರು

ಗಾಂಧೀಜಿ ಮರೆಯಾದ ದಿನ ಅಂದರೆ ಶುಕ್ರವಾರ ದಿನ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸುವುದು ಹಲವು ಕಡೆ ವಾಡಿಕೆಯಾಗಿದೆ. ಪ್ರಾರ್ಥನೆಯು ಪ್ರತಿ ಮನೆಯಲ್ಲಿ ಪ್ರತಿ ಗುಂಪಿನಲ್ಲಿ ಜೀವನದಲ್ಲಿ ಮಾಡತಕ್ಕ ಒಂದು ಕಾರ್ಯಕ್ರಮವಾಗತಕ್ಕದ್ದು. ಆದರೆ ಸ್ವಯಂ ಇಟ್ಟುಕೊಂಡ ಈ ಕಾರ್ಯಕ್ರಮವನ್ನು ಕಾರ್ಯಬಾಹುಳ್ಯದ ಮೂಲಕ ಆಚರಿಸಲು ಕಠಿನವೆನಿಸಹತ್ತಿದರೆ ವಾರಕ್ಕೊಂದು ಸಲವಾದರೂ ಅವರು ಒಂದೇ ಸಮ್ಮಿಲಿತರಾಗತಕ್ಕದ್ದು.

ಆದರೆ ಇಂದು ನಾನು ಬೇರೆ ವಿಷಯದ ಬಗ್ಗೆ ಮಾತಾಡಬಯಸುವೆ. ಜನವರಿ ಮೂವತ್ತನೆಯ ತಾರೀಕು ಗಾಂಧೀಜಿಯ ಕೊನೆಯ ಪ್ರಯಾಣ ದಿನವು. ಅಂದು ಅವರ ಮೊದಲನೆಯ ಪುಣ್ಯತಿಥಿ. ದೇಶದಲ್ಲಿಯ ಪ್ರತಿಯೊಂದು ಹಳ್ಳಿಯಲ್ಲಿ ಅಂದು ಒಂದಿಲ್ಲೊಂದು ಬಗೆಯ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗುವದು; ಹಾಗೆ ಮಾಡುವದು ನ್ಯಾಯವೇ ಆಗಿದೆ. ಪುಣ್ಯಪುರುಷರ ಸ್ಮರಣೆಯೆಂದರೆ ನಮ್ಮಂಥ ಪಾಮರರಿಗೆ ಒಂದು ಬಗೆಯ ಸ್ಫೂರ್ತಿಪ್ರದ ಶಕ್ತಿಯೇ: ಇಂಥ ಮಹಾತ್ಮರ ಪುಣ್ಯಸ್ಮರಣೆ ಮಾಡುವದು ಮತ್ತಷ್ಟು ಅವಶ್ಯವೇ. ಆದರೆ ಇದಕ್ಕೆ ಗಾಂಧಿದಿನವೆಂದು ಕರೆಯುವೆ, ಏಕೆಂದರೆ ಯಾವುದೊಂದು ವ್ಯಕ್ತಿಯನ್ನು ಲಕ್ಷ್ಯವಾಗಿಟ್ಟುಕೊಳ್ಳದೆ ಧ್ಯೇಯವನ್ನು ಮುಂದಿಟ್ಟುಕೊಂಡು ನಡೆಯುವದು ಹೆಚ್ಚು ಸಹಾಯಕವಾದುದು. ಕೆಲ ದಿನಗಳ ಹಿಂದೆಯಾದ ಸಮಾಜದ ಒಂದು ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಅಲ್ಲಿ ನನ್ನ ಗೆಳೆಯರಿಗೆ ನಾನು ಹೇಳಿದೆ, “ದಾಸನ ಹೆಸರು ಮಾಯವಾಗಿ ಪರಮಾತ್ಮನ ಹೆಸರು ಸ್ಥಿರವಾಗಿ ಉಳಿಯಲಿ'' ಎಂದು. ಇಲ್ಲಿಯೂ ಅದನ್ನೇ ನಾನು ಮತ್ತೆ ಹೇಳಬಯಸುವೆ. ಗಾಂಧೀಜಿ ಈ ಬಗ್ಗೆ ಬಹಳ ದಕ್ಷತೆ ವಹಿಸುತ್ತಿದ್ದರು. ಅವರ ಜನ್ಮದಿನಕ್ಕೆ ಗಾಂಧೀ ಜಯಂತಿ ಎಂದು ಕರೆಯಬೇಕೆಂದು ಜನ ಬಹಳ ಪ್ರಯತ್ನಪಟ್ಟರು. ಆದರೆ ಅದಕ್ಕೆ ಚರಕಾ ಜಯಂತಿ ಎಂದು ಕರೆಯಲು ಗಾಂಧೀಜಿ ಸಲಹೆ ಇತ್ತರು. ಏಕೆಂದರೆ ಹಾಗೆ ಕರೆಯುವದರಿಂದ ವ್ಯಕ್ತಿಯ ಸ್ಮರಣೆಗಿಂತ ಹೆಚ್ಚು ಮಹತ್ವದ್ದಾದ ಒಂದು ತತ್ವವನ್ನು ವ್ಯವಹಾರಿಕ ರೀತಿಯಲ್ಲಿ ಮನ್ನಿಸಿದಂತಾಗುವದೆಂದು ಅವರ ಅಭಿಪ್ರಾಯವಾಗಿತ್ತು. ಅವರು ದಕ್ಷಿಣ ಆಫ್ರಿಕೆಯಿಂದ ಬರೆದಿದ್ದ ಪತ್ರಗಳಲ್ಲಿ ಅವರು “ನನ್ನ ಹೆಸರು ಮಾಯವಾದ ಬಳಿಕವೇ ನನ್ನ ಧ್ಯೇಯವು ಪ್ರಗತಿ ಹೊಂದುವದು'' ಎಂದು ಬರೆದಿದ್ದಾರೆ. “ನನ್ನ ಹೆಸರು ಅಳಿದು ಹೋಗುವಂತೆ ವರವನ್ನು ದಯಪಾಲಿಸು'' ಎಂದು ಜ್ಞಾನೇಶ್ವರರು ಬೇಡಿಕೊಂಡಿರುವರು. ತಮ್ಮ

PUBLIC AUCTION.

(Panchayat Board Kampli Bellary Dt.)

NOTICE.

The right of collecting fees in the Panchayat Markets Slaughter House, Cart & Bus Stand and Kampli Tunga bhadra Ferry etc. for the year 1949-50 will be sold in public auction at the Panchayat Board Office, Kampli at 2 P. M. on 18—2—49. Particulars can be had from the Panchayat Board Office on any working day.

P. G. Venkataramanappa,
Executive Officer.

ಬಹಿರಂಗ ಯಾಲಂ.

ಪಂಚಾಯಿತಿ ಬೋರ್ಡ್, ಕಂಪ್ಲಿ. (ಬಳ್ಳಾರಿ ಜಿಲ್ಲಾ)

ಪಂಚಾಯ್ತಿ ಮಾರ್ಕೆಟ್ಟಿನ ಕಸಾಯಿಖಾನೆಯಲ್ಲಿ, ಗಾಡಿ ಮತ್ತು ಬಸ್ ಸ್ಟಾಂಡುಗಳಲ್ಲಿ ಮತ್ತು ತುಂಗಭದ್ರಾ ದೋಣಿ ವಗೈರೆ ಸ್ಥಾನಗಳಲ್ಲಿ ಶುಲ್ಕ ಯಾ ಫೀಸು ವಸೂಲಿಮಾಡುವ ಹಕ್ಕನ್ನು ಬಹಿರಂಗ ಯಾಲಮ್ಮಿನಿಂದ 18—2—49 ನೆಯ ಮಧ್ಯಾಹ್ನ ಎರಡು ಗಂಟೆಗೆ ಕಂಪ್ಲಿಯ ಪಂಚಾಯ್ತಿ ಬೋರ್ಡು ಆಫೀಸಿನಲ್ಲಿ ಮಾರಲಾಗುವುದು ಈ ವಿಷಯದಲ್ಲಿ ಹೆಚ್ಚಿನ ವಿವರಗಳನ್ನಪೇಕ್ಷಿಸುವವರು ಪಂಚಾಯ್ತಿ ಬೋರ್ಡಿನ ಕಾರ್ಯಾಲಯದಲ್ಲಿ ಕೆಲಸ ಮಾಡುವ ದಿನ ಯಾವಾಗಲಾದರೂ ಬಂದು ತಿಳಿಯಬಹುದು.

ಪಿ. ಜಿ. ವೆಂಕಟರಮಣಪ್ಪ,
ಎಕ್ಸಿಕ್ಯೂಟಿವ್ ಆಫೀಸರ್.

ಮಂತ್ರಿಗಳಿಂದ ಸರಕಾರೀ ವಿರೋಧ ಪ್ರಚಾರ

'ಸಂಪಾದಕ' ನವಭಾರತ

ಮದ್ರಾಸ್ ಹರಿಜನ ಶಾಖೆಯ ಮಂತ್ರಿಗಳಾದ ಶ್ರೀ ಕೂರ್ಮಯ್ಯನವರು, ಈ ತಿಂಗಳ 2-3 ನೆಯ ದಿನಾಂಕ ಗುಡೆಕಲ್ಲು ಎಮ್ಮಿಗನೂರು, ಕೋಸಿಗಿ ಸಂಚರಿಸಿ ಆದವಾನಿಯ ಹರಿಜನಕೇರಿಯಲ್ಲಿ ಮತ್ತು ಆಲೂರು ಸಭೆಯಲ್ಲಿ ಭಾಷಣಕೊಟ್ಟರು. ಈ ಸಭೆಗಳಲ್ಲಿ ಮಾಡಿದ ಭಾಷಣಗಳ ಧೋರಣೆಯೆಂದರೆ ಸರಕಾರವು ಸಾಹುಕಾರರಿಗೆ ಪ್ರೋತ್ಸಾಹ, ಉತ್ತೇಜನಗಳನ್ನೀಯುತ್ತಿವೆ ವ್ಯವಸಾಯ ಕೂಲಿಯನ್ನು ದರಿದ್ರರನ್ನೂ ರಕ್ಷಿಸುವಂತಿಲ್ಲ ಕೂಲಿಗಾರರೂ, ಒಕ್ಕಲಿಗರೂ ಕ್ರಾಂತಿಮಾಡಿ ಸರಕಾರವನ್ನು ಸ್ವಾಧೀನಪಡಿಸಿಕೊಳ್ಳಬೇಕು ಎಂದಿನವರೆವಿಗೆ ಜನತೆಯ ನಿಜವಾದ ಪ್ರತಿನಿಧಿಗಳು ಸರಕಾರದಲ್ಲಿರುವುದಿಲ್ಲವೋ ಅಲ್ಲಿಯವರೆವಿಗೆ ಸಾಮಾನ್ಯ ಜನತೆಯು ಸಂಕಟಪಡಬೇಕಾಗುತ್ತದೆ. ಅರ್ಜಿಗಳಿಂದ ಉಪಯೋಗವಿಲ್ಲ ನಿಮ್ಮ ಹಕ್ಕುಗಳನ್ನು ನೀವೇ ಸ್ಥಿರಪಡಿಸಿಕೊಳ್ಳಬೇಕು. ಶ್ರೀ ಕೂರ್ಮಯ್ಯನವರಿಗೆ ಏನೂ ಜವಾಬ್ದಾರಿಯಿಲ್ಲದ ಹೀನಾಯಸ್ಥಾನವನ್ನು ಕೊಟ್ಟು ಅಸ್ಪೃಶ್ಯರಂತೆ ನೋಡಿಕೊಳ್ಳುವ ವಿಷಯವು ಖಾಸಗಿ ಮಾತುಕಥೆಗಳಿಂದ ವ್ಯಕ್ತಪಟ್ಟಿತು. ಇವರು ಹೇಳುವದರಲ್ಲಿ ಎಷ್ಟು ನಿಜವಿದ್ದರೂ ಇವರ ಪ್ರಚಾರಕ್ಕೂ ಕಮ್ಯೂನಿಸ್ಟರ ಪ್ರಚಾರಕ್ಕೂ ಏನೂ ವ್ಯತ್ಯಾಸವಿಲ್ಲ ಹಳ್ಳಿಗಳ ಹರಿಜನರಾಗಲಿ, ಬಡವರಾಗಲಿ ಇವರ ಉಪದೇಶವನ್ನು ಕಾರ್ಯರೂಪಕ್ಕೆ ಎಳ್ಳಿದೆಯಲ್ಲೂ ಅಶಾಂತಿ ಹೊಡೆದಾಟಗಳಾಗುವುದು ಖಂಡಿತ

ತಿಳಿದವನೊಬ್ಬ.

—ಮದ್ರಾಸ್ ಮಂತ್ರಿ ಶ್ರೀ ಕೂರ್ಮಯ್ಯನವರು ಆದವಾನಿ ತಾಲೂಕು ಎಮ್ಮಿಗನೂರು ಗುಡೇಕಲ್ಲು, ಕೋಸಿಗಳಲ್ಲಿ ಸಂಚರಿಸಿ ಹರಿಜನರಲ್ಲಿ ಜಾಗೃತಿಯನ್ನುಂಟು ಮಾಡಿದರು ಆಲೂರಿನ ಹರಿಜನ ಸಭೆಯಲ್ಲಿ ತಮ್ಮ ತಮ್ಮ ಹಕ್ಕುಗಳಿಗಾಗಿ ಹೋರಾಟ ಹೂಡಬೇಕೆಂದರು

—(೦)—

ಆಹಾರ ಸಮಸ್ಯೆ

ದೊಡ್ಡ ನೀರಾವರಿ ಯೋಜನೆಗಳಿಲ್ಲದಿದ್ದರೆ ಆಹಾರ ಪರಿಸ್ಥಿತಿಯು ಸುಧಾರಿಸದು. ಅಲ್ಲದೆ ಸರಕಾರಕ್ಕೂ ಬೆಳೆಯುವ ರೈತನಿಗೂ ನೇರವಾದ ಸಂಬಂಧ ಉಂಟಾಗಬೇಕು ಎಂಬ ವಿಷಯವು ಡೆಲ್ಲಿ ಕೇಂದ್ರ ಸಭೆಯಲ್ಲಿ ವ್ಯಕ್ತವಾಯಿತು.

—೦—

ಸಾಲ ಕೊಡುವವರ ಸಂಸ್ಥೆ

ಅಂತರಾಷ್ಟ್ರೀಯ ಬ್ಯಾಂಕ್ ಮಿಷನ್

ಹಿಂದೂಸ್ಥಾನದಲ್ಲಿ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೆ ಪರದೇಶಗಳಿಂದ ಹಿಂದೂಸ್ಥಾನಕ್ಕೆ ಸಾಲ ಬೇಕಾಗಬಹುದು ಅಂತರಾಷ್ಟ್ರೀಯ ಬ್ಯಾಂಕು ಸಂಸ್ಥೆಯವರು ಸಾಲಕೊಡಬೇಕೆಂದು ಕೇಳಿದ್ದಾರೆ. ಅವರ ಪ್ರತಿನಿಧಿಗಳು ಈಗ ಹಿಂದೂಸ್ಥಾನಕ್ಕೆ ಬಂದು ಮುಖ್ಯ ನೀರಾವರಿಯೋಜನೆಗಳ ವಿವರಗಳನ್ನು ಪರಿಶೀಲಿಸಲಿದ್ದಾರೆ ತುಂಗಭದ್ರಾ ಯೋಜನೆಯೂ ಪರಿಶೀಲನೆಗೊಳಗಾಗಲಿದೆ

—)೦(—

ಪೆಟ್ರೋಲ್ ಸುಲಭವಾಯಿತು.

ಮದ್ರಾಸ್, ಬೊಂಬಾಯಿ, ಕಲ್ಕತ್ತ ಈ ನಗರಗಳಲ್ಲಿ ಮಾರ್ಚ್ 1 ರಿಂದ ಪೆಟ್ರೋಲ್ ವಿನಿಯಂತ್ರಣ ಮಾಡಬೇಕೆಂಬ ನಿಶ್ಚಯಕ್ಕೆ ಸರಕಾರವು ಬರಲಿರುವದಾಗಿ ಪ್ರಕಟವಾಗಿದೆ. ಇತರ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಿಗೆ ಸಾರಿಗೆಯ ವ್ಯವಸ್ಥೆಯು ಸರಿಯಾದೊಡನೆ ಅಲ್ಲಿಯೂ ವಿನಿಯಂತ್ರಣವಾಗಬಹುದು.

—

ಪ್ರತ್ಯೇಕ ಚುನಾವಣೆ ಬೇಕು

ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆಗಳು ಬೇಕೆಂಬಾಶಯದ ಗೊತ್ತುವಳಿಯು ಅಖಿಲ ಭಾರತ ಮುಸ್ಲಿಂ ಲೀಗಿನಲ್ಲಾಯಿತು ಇದರ ಅಧ್ಯಕ್ಷರು ಮಹಮ್ಮದ್ ಇಸ್ಮಾಯಿಲ್ ಮದ್ರಾಸ.

—

ಬರ್ಮಾದಲ್ಲಿ ದಂಗೆ

ಬರ್ಮಾದ ರಾಜಧಾನಿ ರಂಗೂನ್ 11 ಮೈಲಿ ಅಂತರದಲ್ಲಿನ ಇನ್‌ಸೀನ್ ನಗರವನ್ನು ಕರೇನರು ಆಕ್ರಮಿಸಿಕೊಂಡಿದ್ದರೆಂದೂ, ಆದರೆ ಸರ್ಕಾರದ ಸೈನ್ಯಗಳು ಅವರನ್ನು ಹಿಮ್ಮೆಟ್ಟಿಸಿ ನಗರವನ್ನು ಪುನಃ ಸ್ವಾಧೀನಪಡಿಸಿಕೊಂಡರೆಂದು ಗೊತ್ತಾಗಿದೆ ಸ್ತ್ರೀಯರೂ ಕೂಡ ಶಸ್ತ್ರಾಸ್ತ್ರ ಸುಸಜ್ಜಿತರಾಗಿ ಸರಕಾರಿ ಸೈನ್ಯಗಳೊಡನೆ ಹೋರಾಡುತ್ತಿರುವರಂತೆ.

—

ರೈತರಿಗೆ ಬಂಡಿ ಅಳಿಗಳು ಅಚ್ಚು ಎಲ್ಲಿ ದೊರೆಯುತ್ತವೆ?

ಹಳ್ಳಿಯ ರೈತರಿಗೆ ಬಂಡಿ ಅಳಿ, ಕುಳ ಅಚ್ಚು ವಗೈರೆ ಇಷ್ಟು ದಿನ ವ್ಯವಸಾಯ ಶಾಖೆಯವರ ಮೂಲಕ ಹಾಗೂ ಹೀಗೂ ದೊರೆಯುತ್ತಿದ್ದವು ಆದರೆ ಈ ಕಾರ್ಯವನ್ನು ವ್ಯವಸಾಯ ಶಾಖೆಯವರಿಂದ ಸರಕಾರದವರು ಕಿತ್ತುಕೊಂಡಿರುವರು. ಕಟ್ಟಿಗೆ ದಂಗಡಿಗಳವರಿಂದ ಬಡರೈತರಿಗೆ ನ್ಯಾಯವಾದ ದರಗಳಲ್ಲಿ ದೊರೆಯುವುದೇ ಕಷ್ಟ ಈ ಕಾರಣ ಹಳ್ಳಿಗಳವರ ಬೇಡಿಕೆಗಳನ್ನು ಲಕ್ಷಿಸಿ ಯಾವ ಮೂಲಕವಾಗಲಿ ಅವಶ್ಯಕ ವ್ಯವಸಾಯ ಸಾಮಗ್ರಿಗಳು ದೊರೆಯುವಂತೆ ಮಾಡುವರೆಂದು ನಂಬಿರುವ

ಒಬ್ಬ ರೈತ.

ಹೆಸರು ದೆಸೆ ಮತ್ತು ದೇಹ ಕೂಡ ಮಾಯವಾಗಿ ಹೋಗಲಿ ಎಂದು ಅವರು ಬಯಸಿದರು. ಮನುಷ್ಯ ಸಾಯಲೇಬೇಕಾದ್ದರಿಂದ ಅವನ ತತ್ವಗಳು ಮಾತ್ರ ಉಳಿಯಲಿ. ವ್ಯಕ್ತಿಗಳ ಸ್ಮರಣೆಯನ್ನು ನಾವು ಮಾಡುತ್ತ ನಡೆದರೆ, ಗೊಂದಲದಲ್ಲಿ ಬೀಳುವ ಸಂಭವವಿದೆ, ಸಂಕುಚಿತ ಭಾವನೆ ನಮ್ಮಲ್ಲಿ ಬೆಳೆದು ಸಮಾಜವು ಛಿನ್ನವಿಚ್ಛಿನ್ನವಾಗಿ ಹೋಗಬಹುದು. ಈಗಾಗಲೆ ನಮ್ಮ ದೇಶದಲ್ಲಿ ಒಂದಕ್ಕಿಂತ ಹೆಚ್ಚು ಜೀವಂತ ಇರುವ ಕಾಲದಿಂದಲೇ ಭಕ್ತರು ಅವರ ಪೂಜೆಯನ್ನು ಮಾಡುತ್ತ ಬಂದಿರುವರು. ಇದು ಯಾವ ರೀತಿಯಿಂದಲೂ ನ್ಯಾಯವಲ್ಲ.

ತಾವೊಬ್ಬ ಸಾಮಾನ್ಯ ಮಾನವ ಪ್ರಾಣಿಯೆಂದು ಗಾಂಧೀಜಿ ತಿಳಿದುಕೊಂಡಿದ್ದರು. ಅವರೂ ಒಬ್ಬ ಮನುಷ್ಯರೆಂದೇ ನಾವು ಭಾವಿಸಿಕೊಳ್ಳುವಾ, ಅದರಲ್ಲಿ ಗಾಂಭೀರ್ಯವಿದೆ, ಗೌರವವಿದೆ. ಆ ದಿನ ಪವಿತ್ರ ನಾಮಸ್ಮರಣೆ ಮಾಡುವದೇ ಆದರೆ, ಆ ಘಾತಕನ ಗುಂಡು ಗಾಂಧೀಜಿಯವರ ಎದೆಯಲ್ಲಿ ನಡುವಾಗ ಅವರ ಬಾಯಿಂದ ಸ್ವೇಚ್ಛೆಯಿಂದ ಮತ್ತು ಭಕ್ತಿಪೂರ್ವಕವಾಗಿ ಯಾವ ಪವಿತ್ರ ನಾಮವು ಹೊರಹೊಮ್ಮುತ್ತಿದ್ದಿತೋ ಅದೇ ನಾಮವನ್ನು ನಾವೇಕೆ ಆರಿಸಿಕೊಳ್ಳಬಾರದು? ಆದುದರಿಂದ ಅವರ ವರ್ಷಾಂತ್ಯ ದಿನಕ್ಕೆ ನಾನು ಸರ್ವೋದಯ ದಿನವೆಂದು ಕರೆಯುವೆ. ಕಾರ್ಯಕಾರಿಯಾದ ಧ್ಯಾನದಲ್ಲಿಯೆ ನಾವು ಆದಿನವನ್ನು ಕಳೆಯುವುದರಿಂದ ಹೆಚ್ಚು ಕಲ್ಯಾಣವಾಗಬಲ್ಲುದು. ನಮ್ಮ ಜೀವನದಲ್ಲಿ ನಿಷ್ಕ್ರಿಯ ಧ್ಯಾನಾಚರಣೆ ಬೇಕಾದಷ್ಟಿದೆ. ಕಾರ್ಯಮೂಲಕವೆ ಪೂಜಿಸಿರಿ, ಎಂಬುದು ಎಲ್ಲ ಧರ್ಮಗಳ ಸಂದೇಶ. ಆದರೆ ನಾವದನ್ನು ಮರೆಯುತ್ತಿದ್ದೇವೆ.

ಗಾಂಧೀಜಿ ಸಾಕ್ಷಾತ್ತಾಗಿ ಸಂದೇಶವಾಗಿದ್ದರು, ನಮ್ಮ ಜೀವನದಲ್ಲಿ ಅದನ್ನು ಅರಗಿಸಿಕೊಳ್ಳಬೇಕು. ಆದುದರಿಂದ ಆ ದಿನ ಎಲ್ಲರೂ ಸಾರ್ವಜನಿಕವಾಗಿ ಭಂಗಿ ಮತ್ತು ''ಸಫಾಯಿ'' ಕೆಲಸವನ್ನು ಮಾಡಬೇಕೆಂದು ನಾನು ಸೂಚಿಸುತ್ತೇನೆ. ನಾವೆಲ್ಲರೂ ಕಸಗುಡಿಸುವವರಾಗುವಾ ಮತ್ತು ದೇಶದಲ್ಲಿಯ ಹೊಲಸು ಮತ್ತು ಕೊಳೆಯನ್ನು ಹೋಗಲಾಡಿಸುವಾ. ಕಸಗುಡಿಸುವವರು ಅಸ್ಪೃಶ್ಯರು ಎಂದು ಭಾವಿಸಿ ನಾವು ಭಯಂಕರ ಪಾಪ ಮಾಡಿದ್ದೇವೆ ಮತ್ತು ಅದರಿಂದ ಯಾವ ನಾಗರಿಕ ರಾಷ್ಟ್ರದಲ್ಲಿಯೂ ಕಾಣಸಿಗಲಾರದಷ್ಟು ನಮ್ಮ ದೇಶದಲ್ಲಿ ಕೊಳೆಯನ್ನು ತುಂಬಿದ್ದೇವೆ. ಅದಕ್ಕಾಗಿ ನಾವು ಪ್ರಾಯಶ್ಚಿತ್ತವನ್ನು ತೆಗೆದುಕೊಳ್ಳಬೇಕಾಗಿದೆ. ಎಲ್ಲ ಹಿರಿಕಿರಿಯರು ವಿನಮ್ರರಾಗಿ, ಜಗತ್ತಿನಲ್ಲಿ ''ಪಾಮರರೊಳು ಪಾಮರ ನಾನೆಲೊ'' ಎಂಬ ಭಾವನೆಯಿಂದ ನಾವೀ ಕಾರ್ಯವನ್ನು ಮಾಡತಕ್ಕದ್ದು.

ಅದೇ ರೀತಿಯಾಗಿ ನಮ್ಮ ದೇಶದಲ್ಲಿ ಉತ್ಪಾದನೆಯನ್ನು ಹೆಚ್ಚಿಸುವದು ಅತ್ಯವಶ್ಯವಾಗಿದೆ. ಆದುದರಿಂದ ಪ್ರತಿಯೊಬ್ಬರು ನೂಲು ತೆಗೆಯಬೇಕು ಮತ್ತು ನಮ್ಮೆಲ್ಲರ ಹೃದಯಗಳು ಪ್ರೇಮದಿಂದ ಬದ್ಧವಾಗಿ ಕೂಡಿಕೊಳ್ಳಲಿ. ನೂಲುವದು ಜೀನೆಯಿಂದ ಬಳಲುವವರು ಹೊರತು ಪ್ರತಿಯೊಬ್ಬ ಹಿರಿಕಿರಿಯರು ಮಾಡತಕ್ಕ ಕರ್ತವ್ಯವು. ಆದುದರಿಂದ ಅದನ್ನು ಉತ್ಪಾದನೆಯ ಉದ್ಯೋಗದಲ್ಲಿ ಪರಿಗಣಿಸಲಿಕ್ಕೆ ಬೇಕು

ಮೇಲಿನ ಎರಡು ಕ್ರಿಯಾತ್ಮಕವಾದ ಕಾರ್ಯಕ್ರಮಗಳು. ಇವಲ್ಲದೆ ಸಾಮೂಹಿಕ ಪ್ರಾರ್ಥನೆಗಳನ್ನು ನಡೆಸಬೇಕು. ಅವುಗಳಲ್ಲಿ ನಾವೆಲ್ಲರೂ ಸೇರತಕ್ಕದ್ದು ಮತ್ತು ಪರಮಾತ್ಮನ ಸ್ಮರಣೆ ಮಾಡಿ ನಮ್ಮ ಅಂತಃಕರಣಗಳನ್ನು ವಿಶುದ್ಧಗೊಳಿಸಿ ನಮ್ಮ ಹೃದಯಗಳನ್ನು ಒಂದುಗೂಡಿಸಿಕೊಳ್ಳಬೇಕು.

ಈ ಕಾರ್ಯಕ್ರಮದಲ್ಲಿ ಸರ್ವೋದಯ ಧ್ಯೇಯದ ನಿದಿಧ್ಯಾಸನವನ್ನು ಕೂಡಿಸಬೇಕು ನಿದಿಧ್ಯಾಸದ ಮಾರ್ಗಗಳು ಒಂದಕ್ಕಿಂತ ಹೆಚ್ಚು ಇವೆ. ಸರ್ವೋದಯ ಶಬ್ದವು ಅತ್ಯಂತ ಅರ್ಥಪೂರ್ಣವಾಗಿದ್ದು ಅದರಲ್ಲಿ ಬೇಕಾದಷ್ಟು, ಆಳವಾಗಿ ವಿಹರಿಸಬಲ್ಲೆವು ಉದಾಹರಣಾರ್ಥವಾಗಿ ಯಾವದೊಂದೇ ವರ್ಗದ ಜನರ ಉದ್ಧಾರಕ್ಕಾಗಿ ಪ್ರಯತ್ನಿಸುವದು. ನಮ್ಮ ಧ್ಯೇಯವಲ್ಲ ಎಂಬುದು ನಮ್ಮ ಸ್ಮರಣೆಯಲ್ಲಿ ಇರಬಹುದು. ಸರ್ವಮಾನವ ಪ್ರಪಂಚದ ಹಿತಕ್ಕಾಗಿಯೆ ನಾವು ದುಡಿಯುತ್ತೇವೆ ತತ್ವತಃ ಸತ್ಯವಾಗಿರುವ ಹಿತಸಂಬಂಧಗಳಲ್ಲಿ ಯಾವದೇ ಬಗೆಯ ತಿಕ್ಕಾಟವಿಲ್ಲ ಎಂಬುದನ್ನು ನಾವು ನೆನಪಿನಲ್ಲಿಡತಕ್ಕದ್ದು. ಆಯಾ ವ್ಯಕ್ತಿಗಳ, ಮಾನಸಿಕ ಬೆಳವಣಿಗೆಗೆ ಅನುಸಾರವಾಗಿ ಸುಖದ ಕಲ್ಪನೆಯಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರುವವು ಚಿಂತನೆಯ ಮೂರನೆಯ ಮಾರ್ಗವೆ ಈ ಜೀವನದ ಏಕತೆಯನ್ನು ತಿಳಿದುಕೊಳ್ಳುವದು. ಮತ್ತು ಆದುದರಿಂದಲೆ ಸ್ವಾರ್ಥವನ್ನು ಮರೆತು ಎರಡನೆಯವರ ಸೇವೆಯಲ್ಲಿಯೇ ನಿರತರಾಗುವದು ಕರ್ತವ್ಯವಾಗಿದೆ. ಸತ್ಯಪ್ರತಿಜ್ಞರಾಗುವದು ಮತ್ತು ಎರಡನೆಯವರ ಮೇಲೆ ಆಕ್ರಮಣ ಮಾಡದಿರುವುದು ಇದಕ್ಕೆ ಮುಖ್ಯ ಸಾಧನಗಳೆಂಬುದು ಇದರಿಂದ ಹೊರಡತಕ್ಕ ದುರ್ನಿವಾರ್ಯವಾದ ನಿಷ್ಪತ್ತಿ. ಸಂಯಮವನ್ನೂ ಅನುಷ್ಠಾನದಲ್ಲಿ ಇಳಿಸಬೇಕು. ಈ ರೀತಿಯಾಗಿ ಈ ದಿನವು ಸರ್ವೋದಯ ಚಿಂತನೆಯಲ್ಲಿಯೇ ಕಳೆಯಲಿ

ಪರಮಾತ್ಮನು ಕರುಣಾಪೂರ್ಣನು. ಯುಗಯುಗಗಳಿಂದ ಅವನು ಕಾಲಕಾಲಕ್ಕೆ ನಮ್ಮ ದೇಶದಲ್ಲಿ ಸಾಧುಸಂತರನ್ನು ಕಳಿಸುತ್ತಿರುವನು. ಇಂದಿನ ನಿರಾಶಾಮಯ ಸ್ಥಿತಿಯಲ್ಲಿಯೂ ಅವನು ನಮ್ಮಲ್ಲಿ ಅನೇಕ ಸತ್ಪುರುಷರ ಮಳೆಗರೆದಿರುವನೆಂದು ಹೇಳಬಹುದು. ನಮ್ಮ ಹೃದಯವನ್ನು ತೆರೆದಿದ್ದಾರೆ ಅವರ ಚೈತನ್ಯವು ಒಳಹೊಕ್ಕು ನಮ್ಮ ಜೀವನವನ್ನೇ ಮಾರ್ಪಡಿಸುವದು. ಪರಮಾತ್ಮನ ಅನುಗ್ರಹವಿದ್ದರೆ ಯಾವುದು ತಾನೇ ಅಶಕ್ಯ?

ಡಿ ಎಂ

(ಹಿಂದುಸ್ತಾನೀ ಮೂಲದಿಂದ ಅನೂದಿತ)

—●—

ಬಳ್ಳಾರಿ ಜಿಲ್ಲಾ ವೃತ್ತಪತ್ರಿಕೋದ್ಯೋಗಿಗಳ ಸಂಘ

೧೪ನೆಯ ವಾರ್ಷಿಕೋತ್ಸವವು ೩೧ನೇ ದಿನಾಂಕ ಮದ್ರಾಸು ಹಿಂದೂ ಆಫೀಸಿನ ಸಂಪಾದಕೀಯ ವರ್ಗದಲ್ಲಿನ ಶ್ರೀ ವಿ ಕೆ ನರಸಿಂಹನ್ ಎಂ. ಎ. ಇವರಧ್ಯಕ್ಷತೆಯಲ್ಲಿ ಸಾಂಗವಾಯಿತು ಚಹಪಾನ ಮತ್ತು ಛಾಯಾಚಿತ್ರದನಂತರ ಕಾರ್ಯದರ್ಶಿಗಳು ವರದಿಯನ್ನೋದಿ ಶ್ರೀ ರಾಮಸ್ವಾಮಿ ರೆಡ್ಡಿ, ಗೋಪಾಲರೆಡ್ಡಿ, ಸೀತಾರಾಮರೆಡ್ಡಿ ಕಳಾವೆಂಕಟರಾವ್, ಭಾಷ್ಯಂ, ಮೈಸೂರು ಮಂತ್ರಿಗಳು, ದಿವಾಕರ ಕೇಂದ್ರ ಮಂತ್ರಿ ಕೆ. ಯಂ. ಮುನ್ಷಿಯವರು ಸಂದೇಶಗಳು ಕಳುಹಿಸಿದ್ದನ್ನು ಓದಲಾಯಿತು ಅಧ್ಯಕ್ಷರು ವೃತ್ತಪತ್ರಿಕೋದ್ಯೋಗಿಗಳ ಕಷ್ಟವನ್ನು ತಿಳಿಸಿ ಸಂಪಾದಕರು, ಸುದ್ದಿಗಾರರು ಇವರ ಕರ್ತವ್ಯ ಹೇಳಿದರು. ವೃತ್ತಪತ್ರಿಕಗಳು ಸಾಹುಕಾರೀ ಸಂಸ್ಥೆಗಳಾಗಬಾರದೆಂದರು ರೀತಿನೀತಿಗಳಲ್ಲಿ ಪೌರ್ವಾತ್ಯ ಆದರ್ಶ ಸ್ವಾತಂತ್ರ್ಯವಿರಬೇಕೆಂದರು. ವಂದನಾರ್ಪಣೆಯನಂತರ ವಿನೋದದ ಪ್ರದರ್ಶನವಾಗಿ ಸಭಾವಿಸರ್ಜನೆಯಾಯಿತು. ಶ್ರೀ ವಿ ಯಂ. ಗಿರಿಯಪರು ವೃತ್ತಪತ್ರಿಕೋದ್ಯೋಗಿಗಳಿಗೂ ಅತಿಥಿಗಳಿಗೂ ರಾತ್ರಿ ಭೋಜನ ಕೊಟ್ಟರು.

ಬದನೆಹಾಳು

ಗ್ರಾಮ ಕರ್ನಾಟಕ ಏಕೀಕರಣ ಸಂಘದವರು ಬದನೆಹಾಳಲ್ಲಿ ಗಾಂಧೀಜಿ ಪುಣ್ಯತಿಥಿಯನ್ನು ಆಚರಿಸಿದರು. ಡಾ|| ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀ ರಂಗನಗೌಡರು ಗಾಂಧೀ ತತ್ವವನ್ನು ಹೇಳಿದರು. ಶ್ರೀ ಚನ್ನಬಸವನಗೌಡರು ಗೀತಾಪಠನೆ, ಖಾಜಾಹುಸೇನ್ಸಾಬರು ಕುರಾನ್ ರಂಗನಾಥನ್ ಬೈಬಲ್ ಓದಿದರು, ಮೌನದಿಂದ ಪ್ರಾರ್ಥನೆಯಾಯಿತು.

ಆಗಸನೂರು [ಆಲೂರು ತಾ||]

25-1-49 ಇಲ್ಲಿಯ ''ಶಾರದಾ ಸಂಗೀತ ನಾಟಕ ಮಂಡಳಿ'' ಯವರು ''ಶಿವಜಲಂಧರ'' ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಶ್ರೀ ವೈ. ಯಂ. ಚಂದ್ರಯ್ಯನವರು ನಾರದ ಪಾತ್ರವಹಿಸಿದ್ದರು. ನಾಟಕ ಕೊನೆಯಲ್ಲಿ ಮಂಡಳಿಯ ಕಾರ್ಯದರ್ಶಿಗಳು ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಲಾ ಸಮಿತಿಗೆ ಎಲ್ಲರು ಸಹಕರಿಸಲು ಕೇಳಿಕೊಂಡಿದ್ದಲ್ಲದೆ ತಮ್ಮ ಮಂಡಳಿಯ ದ್ವಾರ ಉದಾರ ಹಸ್ತದಿಂದ ಸಮಿತಿಗೆ ರೂ. 10 ಗಳನ್ನು ಕಾಣಿಕೆಯಿತ್ತರು.

ಭಾರತದಲ್ಲಿ ದನಕರುಗಳ ಸುಧಾರಣೆ

ಕೃತಕ ಗರ್ಭಾಧಾನ—ಬೆರಕೆ ತಳಿ—ಮೇವಿನ ಅಭಿವೃದ್ಧಿ ಮೊದಲಾದ ಉಪಾಯಗಳ ಆವಶ್ಯಕತೆ—ಕೆಲವು ಸೂಚನೆಗಳು

ಕೆಲ ದಿನಗಳ ಹಿಂದೆ ಭಾರತದ ಘಟನಾ ಸಮಿತಿಯು ಶ್ರೀ ಠಾಕೂರು ದಾಸ ಭಾರ್ಗವರ ಸೂಚನೆಯ ಮೇರೆಗೆ ಘಟನೆಯ ನಿರ್ದೇಶಕ ತತ್ವಗಳ ಅಧ್ಯಾಯದಲ್ಲಿ ಪಶುಸಂಗೋಪನೆಯನ್ನೂ ಒಳಪಡಿಸಬೇಕೆಂದು ನಿರ್ಣಯಿಸಿತು. ಗೋರಕ್ಷಣೆ ಮಾಡಿರೆಂಬ ಕೂಗಿನ ಹಿಂದೆ ಸಾಮಾನ್ಯವಾಗಿ ಅಡಗಿರುವ ಅಂಧಶ್ರದ್ಧೆ, ಧಾರ್ಮಿಕ ಭಾವನೆಗಳ ಕಲಸು ಮೇಲೋಗರದಿಂದ ನಿರ್ಲಿಪ್ತವಾದ ಸ್ಫುಟಶಬ್ದಗಳಲ್ಲಿ ಈ ಕಲಮು ಬರೆಯಲ್ಪಟ್ಟಿರುವದು ಅಭಿನಂದನೀಯವೇ ಸರಿ. "ಸರಕಾರವು ಮುಖ್ಯವಾಗಿ, ದನಗಳ ಪೀಳಿಗೆಯನ್ನು ರಕ್ಷಿಸಲು ಮತ್ತು ಸುಧಾರಿಸಲು ಅವಶ್ಯವಾದ ಕ್ರಮಗಳನ್ನು ತೆಗೆದುಕೊಂಡು ಹಸುಗಳೇ ಮೊದಲಾದ ಉಪಯೋಗಿ ಜಾನುವಾರಗಳ, ಅದರಲ್ಲಿಯೂ ಹಯನದ ಮತ್ತು ಬೇಸಾಯದ ಜಾನುವಾರಗಳ ಮತ್ತು ಕರುಗಳ, ಸಂಹಾರವನ್ನು ಪ್ರತಿಬಂಧಿಸಬೇಕು" ಎಂದು ಅದರಲ್ಲಿ ನಿರ್ದೇಶಿಸಲಾಗಿದೆ.

ಲೆಕ್ಕ ಭರ್ತಿ ಪ್ರಾಪ್ತಿ ಶೂನ್ಯ

ನಮ್ಮ ದೇಶದಲ್ಲಿ ದನಕರುಗಳ ಸಂಖ್ಯೆ ಉಳಿದೆಲ್ಲ ದೇಶಗಳಿಗಿಂತ ಹೆಚ್ಚು. ಆದರೆ ಅವುಗಳ ಅಪ್ರಯೋಜಕತ್ವವೂ ಹಾಗೆಯೆ. ಇದೀಗ ನಮ್ಮ ಸಮಸ್ಯೆ. ಭಾರತದ ವಿಭಜನೆಗೆ ಮೊದಲು ಜಗತ್ತಿನ ಸೇಕಡಾ ೨೫ರಷ್ಟು ದನಕರುಗಳು ೨೧೨ ಲಕ್ಷ ಹಿಂದುಸ್ಥಾನದಲ್ಲಿದ್ದವು. ಅವುಗಳಲ್ಲಿ ಎಳೆಗರು ಮತ್ತು ಕೆಲಸಕ್ಕೆ ಬಾರದವುಗಳನ್ನು ಕಳೆದು ೧೪೨ ಲಕ್ಷ ಮಾತ್ರ ಏನಾದರೊಂದು ಕೆಲಸಕ್ಕೆ ಬರುವಂಥವು. ಆದರೆ ಇವುಗಳಲ್ಲಿಯೂ ನೂರಕ್ಕೆ ತೊಂಭತ್ತರಷ್ಟು ಪ್ರಾಣಿಗಳು ನಿಜವಾಗಿ ಲಾಭದಾಯಕವಾಗಿರಲಿಕ್ಕಿಲ್ಲ. ಬೇಸಾಯದ ಕೆಲಸವಲ್ಲಾಗಲಿ ಹಾಲು ಕೊಡುವದರಲ್ಲಾಗಲಿ ಅವು ತೀರ ನಿಕೃಷ್ಟವಾಗಿರುವದರಿಂದ ಅವುಗಳಿಂದಾಗುವ ಪ್ರಯೋಜನಕ್ಕೂ ಅವುಗಳಿಗಾಗುವ ವೆಚ್ಚಕ್ಕೂ ಅಲ್ಲಿಂದಲ್ಲಿಗೆ ತಗಲುತ್ತಿದ್ದರೆ ದೊಡ್ಡದು. ಈ ದುರ್ಬಲ ಜಂತುಗಳಿಂದ ಕಷ್ಟದ ನೇಗಿಲುಗಳನ್ನು ಜಗ್ಗುವದಾಗದ್ದರಿಂದ ದಕ್ಷಿಣ ತಪ್ಪಲು ಭೂಮಿಯಲ್ಲಿ ಆ ನೇಗಿಲುಗಳ ಪ್ರಚಾರ ಹಿಂದೆ ಬಿದ್ದದೆಯೆಂದು ಎಲ್ಲರಿಗೂ ಗೊತ್ತು. ಹಾಲು ಕೊಡುವದರಲ್ಲಿಯೂ ಅವು ಎಲ್ಲ ದೇಶದವುಗಳಿಗಿಂತ ಹಿಂದೆ. ಇಂಗ್ಲಂಡಿನಲ್ಲಿ ಸಾಮಾನ್ಯವಾಗಿ ಒಂದು ಸೂಲಕ್ಕೆ (ಅಂದರೆ, ಹಿಂಡುವ ಅವಧಿಗೆ) ದನಗಳು ಸರಾಸರಿ ೬೦೦ ಗ್ಯಾಲನ್ ಹಾಲನ್ನು ಕೊಡುತ್ತವೆ. ಆದರೆ ಇಲ್ಲಿ ೨೫ ವರ್ಷಗಳಿಂತಲೂ ಹೆಚ್ಚು ಕಾಲ ಸರಕಾರಿ ಪ್ರಯೋಗ ಕ್ಷೇತ್ರಗಳಲ್ಲಿ ತಳಿಸುಧಾರಣೆಯ ಯತ್ನಗಳಾದ ಮೇಲೆಯೂ ಸುಧಾರಿಸಿದ ಅತ್ಯುತ್ತಮ ದನಗಳು ಕೂಡ ಆ ಮಟ್ಟವನ್ನು ಮುಟ್ಟಲಿಲ್ಲವೆಂದು ಶ್ರೀ ವೆಸ್ಟ್ರಾಲರು ಹೇಳಿದ್ದಾರೆ.

ವಿಭಜನೆಯಿಂದ ಹಾನಿ

ದೇಶದ ವಿಭಜನೆಯಿಂದ ಒಕ್ಕೂಟ ಭಾರತದ ಪಾಲಿಗೆ ಪರಿಸ್ಥಿತಿ ಇನ್ನಷ್ಟು ಕೆಟ್ಟಿತು. ಕೆಂಪು ಸಿಂಧಿ, ಥರಪಾರಕರ, ಸಹೀವಾಲ ಜಾತಿಯ ದನಗಳು ಜಗತ್ತಿನ ಅತ್ಯುತ್ತಮ ತಳಿಗಳಲ್ಲಿ ಸೇರಿದ್ದು, ಅವು ಸಿಂಧ ಮತ್ತು ಪಶ್ಚಿಮ ಪಂಜಾಬದಲ್ಲಿ ಉಳಿದು ಹೋಗಿವೆ. ಇಷ್ಟಿದ್ದರೂ ಪಶ್ಚಿಮ ಪಾಕಿಸ್ತಾನದ ಗೋಕುಲಗಳಲ್ಲಿನ ದನಗಳ ಜಾತಿ ಉಳಿದ ಭಾರತದಲ್ಲಿರುವದಕ್ಕಿಂತ ಹಿರಿದು. ಬಿಹಾರ, ಬಂಗಾಲ, ಓಡಿಶಾ ಮತ್ತು ದಕ್ಷಿಣ ಭಾರತದ ಪಶ್ಚಿಮ ತೀರದಲ್ಲಿರುವ ದನಕರುಗಳು ತೀರ ಕಡಿಮೆ ತರಗತಿಯವು. ಬೀಜದ ಹೋರಿ. ಹಯನದ ಹಸುಗಳೆಂದು ನಮ್ಮ ಈ ಪ್ರಾಂತಗಳಲ್ಲಿ ೨೮೦ ಲಕ್ಷ ಇರಬಹುದು. ಅವುಗಳಲ್ಲಿ ಅರ್ಧ ಮಾತ್ರ ಇಡಿ ವರ್ಷ ಹಾಲು ಕರೆಯುತ್ತವೆ. ಈ ಪ್ರಮಾಣವೂ ತೃಪ್ತಿಕರವಾಗಿಲ್ಲ. ಕೆಲವು ಪ್ರಾಂತಗಳಲ್ಲಿ ಒಂದು ಹಸು ವರ್ಷಕ್ಕೆ ಸರಾಸರಿ ೩೦೦ ಪೌಂಡಿಗಿಂತ ಹೆಚ್ಚು ಹಾಲು ಕೊಡುವದಿಲ್ಲ. ಪೂರ್ವ ಪಂಜಾಬ ಹೊರತು ಮತ್ತೆಲ್ಲಿಯೂ ವರ್ಷಕ್ಕೆ ಪ್ರತಿ ದನದ ಸರಾಸರಿ ಹಾಲು ೧೫೦೦ ಪೌಂಡಿಗಿಂತ ಹೆಚ್ಚಿಗಿಲ್ಲ. ಪೂರ್ವ ಪಂಜಾಬದಲ್ಲಿ ಮಾತ್ರ ಈ ಸರಾಸರಿ ೩೫೦೦ ಪೌಂಡ್ ಇದೆ. ೬ ಲಕ್ಷ ಬೀಜದ ಹೋರಿಗಳಿದ್ದರೂ ಅವುಗಳಲ್ಲಿ ನೂರಕ್ಕೆ ೫ ಮಾತ್ರ ಯೋಗ್ಯ ಜಾತಿಯವಿದ್ದ ಕಾರಣದಿಂದ ನೂರಕ್ಕೆ ತೊಂಬತ್ತೈದು ಕರುಗಳು ಕೀಳು ಜಾತಿಯ ತಳಿಯಿಂದ ಜನಿಸಿ ದುರ್ಬಲವಾಗುತ್ತವೆ.

ಗೋವಧೆ ನಿಷೇಧ ಸಾಲದು

ಹೀಗೆ ನಮ್ಮ ವಿಪುಲವಾದ ಪಶುಸಂಪತ್ತಿಯಲ್ಲಿ ಉಪಯೋಗಕ್ಕೆ ಬರುವ ಪ್ರಾಣಿಗಳ ಸಂಖ್ಯೆ ತೀರ ಕಡಿಮೆ. ಹೀಗಿರುವಾಗ ನಿರ್ದೇಶಾಧ್ಯಾಯದಲ್ಲಿ ಹೇಳಿರುವಂತೆ ಪಶುಸಂಗೋಪನೆಯನ್ನು ಸಾಧಿಸುವ ಬಗೆ ಯಾವದು? ಗೋವಧೆಯ ಪ್ರತಿಬಂಧ ಮಾತ್ರದಿಂದ ಈಗಿರುವ ತಳಿ ಸುಧಾರಿಸದು. ಏಕೆಂದರೆ ಈಗ ವರ್ಷೇ ವರ್ಷೇ ಕಟುಕರ ಕೈಸೇರುವ ೪೦ ಲಕ್ಷ ದನಕರುಗಳು ಹೆಚ್ಚಾಗಿ ಅಪ್ರಯೋಜಕ ಜಂತುಗಳಾಗಿವೆ. ಅವನ್ನು ಉಳಿಸಿಕೊಂಡರೆ ಆಹಾರದಂಡ ಮಾತ್ರ, ಎಂದು ಶುದ್ಧ ಆರ್ಥಿಕ ದೃಷ್ಟಿಯಿಂದ ನೋಡುವವರು ಹೇಳುತ್ತಾರೆ. ಅಂದಮೇಲೆ ತರ್ಕಶುದ್ಧವಾದೊಂದು ಉಪಾಯವನ್ನು ನಾವು ಹುಡುಕಬೇಕು. ಅರ್ಥಾತ್ ಜೀವಂತ ಪ್ರಾಣಿಗಳು ಮೃತ ಪ್ರಾಣಿಗಳಿಗಿಂತ ಲಾಭದಾಯಕವಾಗುವಂತೆ ವ್ಯವಸ್ಥೆ ಮಾಡಬೇಕು.

ಈ ದೃಷ್ಟಿಯಲ್ಲಿ ಮುಂಬಯಿ ಸರಕಾರದವರು ಮಾಡಿದ ಪ್ರಾರಂಭ ಅನುಕರಣೀಯವಾಗಿದೆ. ನಗರಗಳ ಸಮೀಪದಲ್ಲಿ "ಗೋಕುಲ"ಗಳನ್ನು ಸ್ಥಾಪಿಸಿ ನಗರದೊಳಗಿನ ಕೊಟ್ಟಿಗೆಗಳನ್ನು ಅವೆಲ್ಲ ಮೆಲ್ಲಗೆ ಅಲ್ಲಿಗೆ ವರ್ಗಾಯಿಸುವದಲ್ಲದೆ, ದನಗಳು ಬತ್ತಿದಾಗ ಅವುಗಳಿಗಾಗಿ ಕಡಿಮೆ ಹುಲ್ಲುಬಸ್ಸಿ ತೆಗೆದುಕೊಂಡು ಹುಲ್ಲುಗಾವಲುಗಳನ್ನೊದಗಿಸುವದೂ ನಗರಗಳಿಗಾಗಿ ಹಾಲು ಮಾರಾಟದ ಸಂಘಗಳನ್ನು ಸ್ಥಾಪಿಸುವದೂ ಉಪಯುಕ್ತ ಜಾತಿಯ ಪ್ರಾಣಿಗಳು ಕಟುಕನ ಕೈ ಸೇರದಂತೆ ಮಾಡಲು ಬಹಳ ಸಹಾಯ ಮಾಡಬಹುದು.

ಎರಡು ಉಪಾಯ

ಗೋರಕ್ಷಣೆಯ ದೀರ್ಘಾವಧಿ ಧೋರಣೆಗೆ ಎರಡು ಮುಖ್ಯ ಅಂಗಗಳಿವೆ. ದನಗಕರುಗಳ ಮೇವಿನ ಸಂಪತ್ತಿಯನ್ನು ಹೆಚ್ಚಿಸುವದೊಂದು. ಅವುಗಳ ತಳಿಯನ್ನು ಸುಧಾರಿಸಿ ಅಪ್ರಯೋಜಕ ಬೀಜದ ಹೋರಿಗಳ ಸ್ಥಾನದಲ್ಲಿ ಜಾತಿ ಹೋರಿಗಳನ್ನು ಸ್ಥಾಪಿಸುವದು ಮತ್ತೊಂದು.

ಗೋಗ್ರಾಸ ಅಥವಾ ದನಕರುಗಳ ಆಹಾರ ಸಂಪತ್ತಿ ಸಮೃದ್ಧವಾಗಬೇಕಾದರೆ, ರೈತರು ಅನುಸರಿಸಬಹುದಾದ ಗೋಪಾಲನಾಗದ ಆದರ್ಶ ಉಪಾಯ. ಅವನು ಒಕ್ಕಲುತನ ಮತ್ತು ಗೋಪಾಲನೆಗಳನ್ನು ಅನ್ಯೋನ್ಯಾಶ್ರಯವಾಗಿ ಮಾಡಿಕೊಂಡು ಸಮಿಶ್ರ ಬೆಳೆಗಳನ್ನು ಬೆಳೆಸಬೇಕು. ಹಯನದ ಬೇಡಿಕೆ ಜನರ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿದ್ದರೂ ಯೋಗ್ಯ ದರದಲ್ಲಿ ಅದು ದೊರೆಯುವಂತಾದರೆ ನಗರಗಳಲ್ಲಿ ಸಾಕಷ್ಟು ಬೇಡಿಕೆ ಬಾರದೇ ಇರುವಲ್ಲಿ ಸಂಶಯವಿಲ್ಲ. ಇದಲ್ಲದೆ, ಹಳ್ಳಿಯಲ್ಲಿ ಅಡವಿಗಳ ಅಭಿವೃದ್ಧಿ, ಜರ್ಸೀವ, ನೇಪಿಯರ ಮೊದಲಾದ ಬೇಗನೆ ಬೆಳೆಯುವ ಹುಲ್ಲುಗಳ ಕೃಷಿ, ಸಂಘ ಹುಲ್ಲುಗಾವಲುಗಳಿಗೆ ನಗರಗಳ ಚರಂಡಿ ನೀರನ್ನು ಬಳಸುವದು, ಬೇಸಿಗೆಯಲ್ಲಿ ಹುಲ್ಲಿನ ಸಂರಕ್ಷಣೆ ಮೊದಲಾದವು ಗೋಗ್ರಾಸಾಭಿವೃದ್ಧಿಯ ಇತರ ಉಪಾಯಗಳು.

ಕೃತ್ರಿಮ ಗರ್ಭಾಧಾನ

ಇನ್ನು ತಳಿಯನ್ನು ಸುಧಾರಿಸುವ ಸಮಸ್ಯೆ. ಡಾ. ಕೋಠಾವಾಲರ ಅನುಮಾನದಂತೆ ಈ ದೇಶದಲ್ಲಿ ಉತ್ತಮ ತರದ ಬೀಜದ ಹೋರಿಗಳು ಬರಿ ೩೨,೦೦೦ ಇವೆ. ಒಂದು ಹೋರಿ ವರ್ಷಕ್ಕೆ ೬೦ ಕ್ಕಿಂತ ಹೆಚ್ಚು ದನಗಳನ್ನು ಕೊಡಲಾರದಾದ್ದರಿಂದ ನಮ್ಮ ೩೨೦೦ ಲಕ್ಷ ದನ ದರ ಎಮ್ಮೆಗಳಲ್ಲಿ ಕೇವಲ ೧೦೫ ಲಕ್ಷ ದನಗಳಿಗೆ ಮಾತ್ರ ಯೋಗ್ಯ ಎತ್ತು ದೊರೆಯುವವು. ಆದರೆ ಕೃತಕ ಗರ್ಭಾಧಾನದ ಪದ್ಧತಿಯಿಂದ ಒಂದು ಹೋರಿಯಿಂದ ವರ್ಷದಲ್ಲಿ ೧೦೦೦ ದನಗಳನ್ನು [illegible] ದ [illegible] ಸಿದ್ಧವಾಗಿದೆ [illegible] ತಿಯ [illegible] ಸಂಪಾದಿಸುವ [illegible] ಕ್ಕಿಗೆ [illegible] ದ ಕ್ಷೇತ್ರದ [illegible] ದ [illegible] ಸಮೃದ್ಧಿ ಫಲಕಾರಿಯಾಗಿದೆ. ಇಷ್ಟು ಮಾಡಿದರೂ ಈಗಿರುವದಕ್ಕಿಂತ ಎಷ್ಟೋಪಾಲು ಹೆಚ್ಚು ಬೀಜದ ಹೋರಿಗಳು ನಮಗೆ ಬೇಕಾಗುವವು. ಅದಕ್ಕಾಗಿ ಸರಕಾರದವರು ಅನೇಕ ಹಾಲು ಮತ್ತು ಹೋರಿ ಉತ್ಪಾದಕ ಕೇಂದ್ರಗಳನ್ನು ಸ್ಥಾಪಿಸಿ ಮಾರ್ಗದರ್ಶನ ಮಾಡಿಸಬಹುದು.

ತಳಿಯನ್ನು ಸುಧಾರಿಸುವ ವಿಷಯದಲ್ಲಿ ಕೆಲ ಸೂಚನೆಗಳನ್ನು ಮಾಡಬಹುದು. ಒಳ್ಳೆಯ ಜಾತಿಗಳು ಬಹುತ್ತು ಪಾಕಿಸ್ತಾನದ ಪಾಲಿಗೆ ಹೋಗಿದ್ದರೂ ಭಾರತದಲ್ಲಿ ಇನ್ನೂ ಹಲವು ಉತ್ತಮ ಜಾತಿಗಳಿವೆ. ಹಾಲಿನ ಸಲುವಾಗಿ ಪೂರ್ವ ಪಂಜಾಬದ ಹರಿಯಾನಾ ಮತ್ತು ಹಿಸ್ಸಾರ ದನಗಳೂ ಥ್ಹೊಟಕ ಜಿಲ್ಲೆ ಯಮುನಾ ಎಮ್ಮೆಗಳೂ, ಯುಕ್ತ ಪ್ರಾಂತದಲ್ಲಿ ಕೇನವಾರಿಯಾ, ಕೇರಿಗಢ, ಮೇವಾತಿ, ಪೋನವಾರ ಮೊದಲಾದವುಗಳೂ ಉಪಯುಕ್ತ ಜಾತಿಗಳೆಂದು ಹೆಸರುವಾಸಿಯಾಗಿವೆ. ಆಂಧ್ರದ ಓಂಗೋಲ ಜಾತಿಯಂತೂ ಜಗತ್ತಿನ ಉತ್ತಮ ಜಾತಿಗಳಲ್ಲಿ ಸೇರಿದ್ದು ಮುಂಬಯಿ ಕಾಠೇವಾಡಗಳಲ್ಲಿ ಜಫರ ಬಂದಿ ಮತ್ತು ಸುರ್ತಿ ಎಮ್ಮೆಗಳೂ ಗೀರದನಗಳೂ ಪ್ರಸಿದ್ಧವಾಗಿವೆಯಲ್ಲದೆ ಹೈದರಾಬಾದಿನ ದೇವನಿ ಜಾತಿಯೂ ಹಾಲಿಗೆ ಹೆಸರಾಗಿದೆ. ಇನ್ನು ಅಮೃತಮಹಾಲು, ಖಿಲಂಬಾಡಿ ಮೊದಲಾದ ಹಲವು ದುಡಿಯುವ ಜಾತಿಗಳೂ ಇವೆ.

ಸಂರಕ್ಷಿತ ಪ್ರದೇಶಗಳು

ಇಂಥ ಉತ್ತಮ ಜಾತಿಯ ದನಕರುಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಅವು ಸಾಮಾನ್ಯವಾಗಿ ವಿಪುಲವಾಗಿರುವ ಪ್ರದೇಶಗಳನ್ನು ಗುರ್ತಿಸಿ "ಸಂರಕ್ಷಿತ ಗೋ ಸಂಗ್ಗೋಪನ ವಲಯು"ಗಳೆಂದು ಸಾರತಕ್ಕದ್ದು ಉದಾಹರಣೆಗಾಗಿ ನೆಲ್ಲೂರು, ಗುಂಟೂರು ಜಿಲ್ಲೆಗಳನ್ನು "ಓಂಗೋಲ ಅಭಿವರ್ಧಕ ವಲಯು"ವೆಂದು ಸಾರಬಹುದು. ಇಷ್ಟಾದನಂತರ ಆ ಪ್ರದೇಶದಲ್ಲಿ ಅಧಿಕಾರಿ ಪಶುವೈದ್ಯ ಅನುಮತಿ ಚಿಹ್ನೆ ಇಲ್ಲದ ದನಕರುಗಳನ್ನು ಸಂಪರಿಸುವದು ಅಪರಾಧವೆಂದು ಪರಿಗಣಿಸಬಲ್ಲದೆ. ಪರೀಕ್ಷೆ ಮಾಡಿ ಸಂತಾನ ಸಂವರ್ಧನಕ್ಕೆ ಯೋಗ್ಯವೆಂದು ನಿರ್ಧರಿಸಲ್ಪಟ್ಟ ಹೋರಿಗಳನ್ನು ಬಿಟ್ಟು ಉಳಿದವು ಎಲ್ಲ "ಕಸಿ" ಮಾಡಿಸಬೇಕು. ಹೀಗೆ ಅಧಿಕಾರಿಗಳ ಅನುಮತಿಯ ಚಿಹ್ನೆಯಿಂದ ಅಂಕಿತವಾಗಿರದ "ಕಸಿ"ಮಾಡದ ಬೀಜದ ಹೋರಿಗಳನ್ನು ಇಟ್ಟುಕೊಂಡರೆ ಅಪರಾಧವೆಂದು ಸಾರಬೇಕು. [illegible] ಬೀಜದ ಹೋರಿಗಳ [illegible] ದ ಮೊದ ಮೊದಲು [illegible] ಯನ್ನು [illegible] ಮಾಡಬೇಕಾದರೆ [illegible] ಗಳನ್ನು ಅದಕ್ಕೆ ಸಾಕಷ್ಟು ಸಂತತಿ ನಿರ್ಮಾಣ [illegible] ಬೀಜದ ಹೋರಿ ಕೇಂದ್ರ ಕೃತಕ ಗರ್ಭಾಧಾನ ಕೇಂದ್ರ ಮೊದಲಾದವುಗಳನ್ನು ಸ್ಥಾಪಿಸಬೇಕು. ಕೃತಕ ಗರ್ಭಾಧಾನವನ್ನು ಜನಪ್ರಿಯವಾಗಿ ಮಾಡಲು ಸರಕಾರದವರು ಅದಕ್ಕೆ ಉತ್ತೇಜ ಕೊಡಬೇಕಾಗುವದು. ಈ ಕೇಂದ್ರಗಳಲ್ಲಿರುವ ಹೋರಿಗಳು ಅತ್ಯುತ್ತಮ ತಳಿಯವಾಗಿರಬೇಕು. ಪಾಕಿಸ್ತಾನದಿಂದ ಕೆಂಪು ಸಿಂಧಿ, ಥರಪಾರಕರ ಜಾತಿಯ ಗೋಗಳನ್ನೂ ಆಯಾತ ಮಾಡುವದೂ ಅವಶ್ಯವಾಗಬಹುದು. ಅವುಗಳನ್ನು ಉಪಯೋಗಿಸುವದರಿಂದ ತಳಿ ಸುಧಾರಣೆಯಾಗುವದೆಂದು ಅಸಾಮ ಬಂಗಾಲ ಮತ್ತು ದಕ್ಷಿಣ ಭಾರತದಲ್ಲ ನಡೆದ ಪ್ರಯೋಗಗಳಿಂದ ಸಿದ್ಧವಾಗಿದೆ. ಇದಲ್ಲದೆ ಉತ್ತಮ ಜಾತಿಯ ದನಸಾಕುವವರಿಗೆ ಬಹುಮಾನವನ್ನೂ ಸಹಾಯ ಧನವನ್ನೂ ಕೊಡಬಹುದು. ಬೀಜದ ಹೋರಿಗಳಾಗಿ ಉಪಯೋಗಿಸಲು ಯೋಗ್ಯವಾದ ಮೂರು ವರ್ಷ ಮೇಲ್ಪಟ್ಟ ಎಲ್ಲ ಗೂಳಿಗಳಿಗೆ ಯೋಗ್ಯ ಪ್ರತಿಫಲಕೊಟ್ಟು ಸರಕಾರವೇ ಕೊಳ್ಳಬಹುದು.

ಇಷ್ಟು ದೊಡ್ಡ ದೇಶಗಳಲ್ಲಿ ತಳಿ ಸುಧಾರಣೆಯ ಕೆಲಸಕ್ಕೆ ಅನೇಕ ದಶಕಗಳು ಹಿಡಿಯುವವೆಂಬುದು ನಿಜ. ಆದರೆ ಸರಕಾರದವರು ಪ್ರಾರಂಭವನ್ನು ಇಂದೇ ಮಾಡಬೇಕು, ಇದಕ್ಕಾಗಿ ಕೇಂದ್ರ ದನಕರುಗಳ ಮಂಡಲವೊಂದನ್ನು ಸ್ಥಾಪಿಸುವದವಶ್ಯವಾಗಿದೆ.

—

ಭಾರತದ ಸ್ವಾತಂತ್ರ ರಕ್ಷಣೆಯ ಉಪಾಯ

ಪುಣೆಯ ಗ್ರಾಮೋದ್ಧಾರದ ಪ್ರಮುಖ ಕಾರ್ಯಕರ್ತರಾದ ಪ್ರೊ. ಎಸ್. ಆರ್. ಭಾಗವತರು ಭಾರತದ ಸ್ವಾತಂತ್ರ ರಕ್ಷಣೆಯ ಬಗ್ಗೆ ಕೆಲ ಮಾತುಗಳನ್ನು ಹೇಳಿದ್ದು ಅವುಗಳ ಸಾರಾಂಶ ಹೀಗಿದೆ.

ಒಂದು ಕ್ಷಣವೂ ತಡಮಾಡದೆ ಹಿಂದುಸ್ತಾನವು ಎಲ್ಲ ಬಗೆಯ ನೈಸರ್ಗಿಕ ಮತ್ತು ಭೌಗೋಲಿಕ ಶಕ್ತಿ ಸಂಪದಗಳನ್ನು ಪರಮಾವಧಿ ಲಾಭದೃಷ್ಟಿಯಿಂದ ಒಟ್ಟುಗೂಡಿಸಬೇಕು, ಬೆಳಸಬೇಕು. ಈ ಮೂಲಕ ಅನ್ನ ವಸ್ತ್ರ ಮತ್ತು ಇನ್ನಿತರ ಜೀವನಾವಶ್ಯಕ ಪದಾರ್ಥಗಳ ವಿಷಯದಲ್ಲಿ ಭಾರತವು ಸ್ವಾವಲಂಬಿಯಾಗಿ ಪ್ರತಿಯೊಬ್ಬ ನಾಗರಿಕನ ಜೀವನವು ಸುಖ ಸಮೃದ್ಧವಾದ ಮಂತೆ ಮಾಡಬೇಕು.

೧) ಸುಶಿಕ್ಷಿತ ಭಾರತೀಯರು, ಅವರ [illegible] ಭೌತಿಕಶಾಸ್ತ್ರಜ್ಞರೂ ಯಂತ್ರಜ್ಞರೂ [illegible] ಅಸಿ [illegible] ತೋರಿದ [illegible] ವಿದೇಶಿಯ ಮೋಹಜಾಲವನ್ನು ಹರಿದು, ದೇಶದ ಹಿತ ಅಭಿವೃದ್ಧಿಗಳೇ ತಮ್ಮ ವೈಯಕ್ತಿಕ ಹಿತಸಂಬಂಧಗಳನ್ನು ಭಾರತದ ಅಸಂಖ್ಯಾತ ಜನಸಾಮಾನ್ಯರ ಹಿತದಲ್ಲಿ ವಿಲೀನಗೊಳಿಸಲು ಮುಂದೆ ಬರಬೇಕು.

೨) ಭಾರತೀಯರ ಬಡತನ, ಅಜ್ಞಾನ, ಶಾರೀರಕ ದೌರ್ಬಲ್ಯ, ದೇಶದ ನೈಸರ್ಗಿಕ ಉತ್ಪಾದಕ ಸಂಪದವನ್ನು ದುರ್ಲಕ್ಷಿಸುವಿಕೆ, ವಿಶಾಲ ದೃಷ್ಟಿಯ ಅಭಾವದಿಂದ ತಜ್ಞರು ಮೂಲೆಗುಂಪಾಗಿ ಕುಳಿತಿರುವ ದುಸ್ಥಿತಿ, ಇವುಗಳನ್ನೆಲ್ಲ ಅವಲೋಕಿಸಿ, ಪರೀಕ್ಷಿಸಿ, ಇವಕ್ಕೆ ಹೊಂದುಗೊಡುವಂತೆ ಕಾರ್ಯಪದ್ಧತಿಯನ್ನು ನಿರ್ಧರಿಸಬೇಕಲ್ಲದೆ ತಕ್ಕ ಶಾಸನಗಳನ್ನೂ ರಚಿಸಬೇಕು.

೪) ಈ ಕೆಳಗೆ ಕಾಣಿಸಿದ ದುಷ್ಟಕ್ರದಿಂದ ಪಾರಾಗಲು ನಿರ್ಧಾರದಿಂದಲೂ ಧೈರ್ಯದಿಂದಲೂ ಪರಮಾವಧಿ ಪ್ರಯತ್ನ ಮಾಡುವದು ಅಗತ್ಯ-

(ಅ) ಏರಿಕೆಯ ಬೆಲೆಗಳು ಹಾಗೂ ನೀಗಲಾರದ ವಿಪರೀತದ ಜೀವನದ ವೆಚ್ಚ

(ಆ) ಏರುತ್ತಿರುವ ಕೂಲಿ, ಸಂಬಳ, ಪ್ರತಿಫಲ

(ಇ) ದಿನದಿನಕ್ಕೂ ಹೆಚ್ಚುತ್ತಿರುವ ಕರಭಾರ.

(ಈ) ನಿಜವಾಗಿ ಸಂಪದಭಿವೃದ್ಧಿ ಮಾಡುವವರು ದಿನದಿನಕ್ಕೂ ಕೂಳಿಲ್ಲದೆ ಬಳಲುತ್ತಿರುವದನ್ನೂ ಸಂಘಟನಾ ಶಕ್ತಿಯಿಲ್ಲದೆ ನಿರುಪಯೋಗಿಗಳಾಗುತ್ತಿರುವದನ್ನೂ ತಡೆಗಟ್ಟುವದು.

(ಉ) ಫಲಪ್ರದ ಭೂಮಿಯನ್ನೂ ನೈಸರ್ಗಿಕ ಸಂಪದುತ್ಪಾದಕ ಸಾಧನಗಳನ್ನೂ ದಿನದಿನವೂ ಅಲಕ್ಷಿಸಲಾಗುತ್ತಿದ್ದು ಈ ಮೂಲಕ ಆಗುವ ನಾಡಿನ ಈ ಧನಕ್ಷಯವನ್ನೂ ಅನ್ನನಾಶವನ್ನೂ ತಡೆಗಟ್ಟಬೇಕು

(ಊ) ಜೀವನಾವಶ್ಯಕ ಪದಾರ್ಥಗಳ ಉತ್ಪಾದನೆಯು ದಿನದಿನಕ್ಕೂ ಕುಗ್ಗುತ್ತಿದ್ದನ್ನು ಪರಿಹರಿಸಬೇಕು.

ಇವುಗಳನ್ನು ನಿಯಂತ್ರಣದಲ್ಲಿ ತರಲು ಕೂಡಲೆ ತಾತ್ಪೂರ್ತಿಕ ಯೋಜನೆಗಳನ್ನು ಕೈಕೊಳ್ಳಬೇಕು. ಮನುಷ್ಯಬಲ

ಪಶುಬಲ, ವಿದ್ಯುಚ್ಛಲ, ಯಂತ್ರಬಲ ಇವನ್ನೆಲ್ಲ ಒಟ್ಟುಗೂಡಿಸಿ ನಾಡಿಗೆ ಒದಗುತ್ತಿರುವ ಹಾನಿಯನ್ನು ತಡೆಗಟ್ಟಬೇಕಲ್ಲದೆ ಕ್ರಮೇಣ ಯೋಗ್ಯವಾದ ದೀರ್ಘಾವಧಿ ಯೋಜನೆಗಳನ್ನೂ ಕೈಕೊಂಡು ಭದ್ರವಾದ ತಳಹದಿಯ ಮೇಲೆ ಗ್ರಾಮೋದ್ಧಾರ ಕಾರ್ಯವನ್ನು ಪುನರುಜ್ಜೀವನಗೊಳಿಸಬೇಕು.

೫) ವಿಶೇಷಜ್ಞತೆಯ ಹೆಸರಿನಲ್ಲಿ ಅನೇಕಾನೇಕ ಶಾಖೆ ಪ್ರಶಾಖೆಗಳನ್ನು ಸಿಡಿಸಿ ಆಳುವ ಈ ಸುತ್ತಾಟದ ಮುಂದಿನ ಕರ್ಮ ರಾಜ್ಯಪದ್ಧತಿಯೂ ಒಂದು ಶಾಖೆ ಇನ್ನೊಂದು ಶಾಖೆಯಲ್ಲಿ ಹಣಿಕಿ ಹಾಕದ ನೋಡಕೂಡದೆಂಬ ಅಭೇದ್ಯ ವಿಭಾಗವೂ ನಮ್ಮ ನಾಡಿನ ಇಂದಿನ ಜೀವನಕ್ಕೆ ಸಂಸ್ಕೃತಿಗೆ ಒಗ್ಗಿಕೊಳ್ಳಲಾರದು ಮತ್ತು ಇಷ್ಟೇ ಅಲ್ಲದು ಜನಸಾಮಾನ್ಯರ ಸಂಘಟನೆ ಸ್ವಾವಲಂಬನ ವೃತ್ತಿಗೂ ಅವರ ರಾಷ್ಟ್ರಾಭಿಮಾನ್ಯದ ಅಭಿವೃದ್ಧಿಗೂ ಅವರ ಕರ್ತವ್ಯನಿಷ್ಠ ನಾಗರೀಕತೆಗೂ ವಿಘಾತಕವಾಗಿದೆ.

ಮೇಲ್ಕಾಣಿಸಿದ ಸೂಚನೆಗಳನ್ನು ಕೃತಿಗಿಳಿಸಲು ಉತ್ಸುಕರಾದ ಎಲ್ಲ ಸಂಘ ಸಂಸ್ಥೆಗಳ ಪರಿಷತ್ತೊಂದನ್ನು ಪ್ರೊ. ಭಾಗವತರು ೯ನೇ ರ ಜಾನೇವರಿ ತಿಂಗಳ ಪ್ರಥಮಾರ್ಧದಲ್ಲಿ ಕರೆಯ ಬಯಸಿದ್ದಾರೆ. ಇದೇ ಮೊದಲು ಪ್ರೊ. ಭಾಗವತರು ತಾವು ಆಗಲೇ ಕೊಂಡು ಕಾರ್ಯಕ್ಷೇತ್ರದಲ್ಲಿ ತಿರುಗಾಡಿ ಅಲ್ಲಿ ಪರಿಸ್ಥಿತಿಯನ್ನು ಅಭ್ಯಸಿಸಲಿದ್ದಾರೆ.

ಈ ಬಗ್ಗೆ ಆಸಕ್ತಿಯುಳ್ಳವರು ಪ್ರೊ. ಭಾಗವತರೊಡನೆ, ತಿಲಕ, ಸದಾಶಿವಪೇಟೆ, ಪುಣಾ ೨ ಈ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು.

ಕಿಶೋರಿಲಾಲ ಮಶ್ರೂವಾಲಾ

ಗಾಂಧಿ ಪುಣ್ಯತಿಥಿ

ಮಹಾತ್ಮಾ ಗಾಂಧಿಜಿಯವರ ಪುಣ್ಯತಿಥಿಯು ಬಳ್ಳಾರಿ ಜಿಲ್ಲೆಯ ಎಲ್ಲಾ ಭಾಗಗಳಲ್ಲೂ ನಡೆಯಿತು. ಚಿತಾಭಸ್ಮದ ಅಸ್ಥಿ ಭಾಗವು ಬಳ್ಳಾರಿ ಕೊಟ್ಟೂರುವರೆವಿಗೂ ಹೋಗಿ ... ಗೆದುಕೊಂಡ ಯೋಗ್ಯ ಪಟ್ಟ ಸೋಮಿಸಿ ... ಬಂಡ್ರಿ, ಕೂಡ್ಲಿಗಿ, ಕೊಟ್ಟೂರು ... ಮೆರವಣಿಗೆ ಮಾಡಿದರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ... ಸುಬ್ರಹ್ಮಣ್ಯ ... ... ಗಾಂಧೀಜಿ ಜೀವಿತ ... ದರ್ಶಗಳ ಮೇಲೆ ಮಾತಾಡಿದರು.

— (೦) —

ಬರೋಡ-ಕೊಲ್ಲಾಪುರ ವಿಲೀನೀಕರಣ.

ಬರೋಡಾ-ಕೊಲ್ಲಾಪುರ ಸಂಸ್ಥಾನಗಳು ಬೊಂಬಾಯಿ ಪ್ರಾಂತದಲ್ಲಿ ವಿಲೀನೀಕರಣವಾಗುವವೆಂದು ಸರ್ಕಾರ ಸಂಸ್ಥಾನಗಳ ಖಾತೆಯು ಪ್ರಕಟಿಸಿದೆ. ಬರೋಡಾ ಜನ ಸಂಖ್ಯೆ 30 ಲಕ್ಷವಿದೆ ಕೊಲ್ಲಾಪುರದ್ದು ಸುಮಾರು 15 ಲಕ್ಷ. ದಕ್ಷಿಣೀ ಸಂಸ್ಥಾನಗಳಲ್ಲಿ ಕೊಲ್ಲಾಪುರವು ಮಾತ್ರ ಉಳಿದಿತ್ತು.

ನೋಟೀಸು

ಇದರ ಮೂಲಕ ಸರ್ವರಿಗೂ ತಿಳಿಸುವದೇನಂದರೆ ನನ್ನ ಮಗನಾದ ಶಿವನಗೌಡನು ಈಗ ಸುಮಾರು 15 ತಿಂಗಳು ಕೆಳಗೆ ತೀರಿಕೊಂಡು ಇರುತ್ತಾನೆ. ಆತನಿಗೆ ಶಿದ್ದಪ್ಪಯನ್ನುವ ಮೈನರು ಮಗನು, ತಾಯಿಯಾದ ನಾನು, ಹೆಂಡತಿಯಾದ ನರ್ಸಮ್ಮನೂ ವಾರ್ಸರು. ಇವರ ಕೆಳಗೆ ಕಾಣಿಸಿದ ಆಸ್ತಿ ಜಾಯಿಂಟ್ ಕಟ ಒದ ಆಸ್ತಿ ಅದರಲ್ಲಿ ನನ್ನಗೂ ಜೀವನಾಂಶ ಹಕ್ಕು ಇರುತ್ತದೆ. ಸದ್ರಿ ನರ್ಸಮ್ಮನು ಇತರರ ದುರ್ಬೋಧನೆಗೆ ಒಳಪಟ್ಟು ಸದರಿ ಆಸ್ತಿಯನ್ನು ಅನ್ಯಾಕ್ರಾಂತ ಮಾಡಲು ಯತ್ನಿಸುತ್ತಿದ್ದಾಳೆ. ಹಾಗೆ ಮಾಡುವದಕ್ಕೆ ಆಕೆಗೆ ಹಕ್ಕು ಆಗಲಿ ಅವಶ್ಯಕವಾಗಲಿ ಇರುವದಿಲ್ಲ. ಆ ಕಾರಣ ಯಾರೇ ಆಗಲಿ ಆಕೆಕಡೆಯಿಂದ ಸ್ವತಃ ಆಗಲಿ ಮೈನರು ನಿಗೇಮಾನ ಅಂತ ಆಗಲಿ ಮುಂಗಡ್ತಿಗಿ ಆಯಕ ಪಕ್ರಯ ವಗೈರಾ ತೆಗೆದುಕೊಳ್ಳಕೂಡದು. ಹಾಗೆ ಮಾಡಿದಲ್ಲಿ ನನ್ನ ಮತ್ತು ಮೈನರಿನ ದುಃಖಾಕ್ಕೆ ಬಾಧ್ಯರಾಗುತ್ತಾರೆ.

ಷೆಡ್ಯೂಲು

ಹಡಗಲಿ ತಾಲೂಕು ಹಾಗಿ ಗ್ರಾಮದ ಇನಾಂ ಸ I ನಂ 40C ತಂ 3 ! 4.0 ಟ ರೂ 160

ಬಾರಿಕರ ಬಂಗಾರಮ್ಮ,
ನಾರಣಾಪುರ ಆಲೂರು ತಾಲೂಕು

ವೀರಶೈವ ಕಾಲೇಜು ನೂತನ ಕಾಲೇಜಿನ ಯತ್ನಗಳು

- 10(---

ಬಳ್ಳಾರಿ ವೀರಶೈವ ಕಾಲೇಜಿನ ಸಂಸ್ಥಾಪಕರು ಸರ್ಕಾರದವರು ಆರ್ಥಿಕ ಸಹಾಯದ ವಿಷಯಕ್ಕೆ ತಂದೊಡ್ಡಿದ ಅಡಚಣೆಗಳನ್ನು ಎದುರಿಸಲು ಸಾಧ್ಯವಿಲ್ಲದ ಕಾರಣಕ್ಕೆ ಮುಚ್ಚುವದರಿಂದ ಬಳ್ಳಾರಿಯ ಉನ್ನತ ವಿದ್ಯಾಪ್ರೇಮಿಗಳಿಗೆ ವಿಷಾದವಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಕಾಲೇಜಿನಿಂದ ಎಲ್ಲಾ ಜಾತಿಯ ಜನಗಳಿಗೂ ಅನುಕೂಲವಾಗಿದೆ. ಕನ್ನಡ ಕಲಿಗು ವಿವಿಧ ಜಾತಿಗಳ ದೃಷ್ಟಿಯನ್ನಿಡದೆ ಈ ಹಿಂದುಳಿದ ಭಾಗದಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಈ ಕಾಲೇಜ್ ಸಂಚಾಲಕರು ಶ್ರಮಿಸಿರುವುದನ್ನು ಎಲ್ಲರೂ ಒಪ್ಪಲೇಬೇಕು. ... ಹೊರಗಿನಿಂದ ... ಹುಡುಗರು ವಿದ್ಯಾರ್ಥಿಗಳಿದ್ದರೂ ಪ್ರಾರಂಭದಿಂದಲೇ ಉದಾರ ಮನಸ್ಸಿನ ನಿಯಾಮಕವಾಯಿತು. ಈ ಕಾಲೇಜು ನಡಿಸಿದ ಸೇವೆಯು ಎಷ್ಟೇ ಇರಲಿ ಅದನ್ನು ಬಳ್ಳಾರಿಯವರು ಕೃತಜ್ಞತಾ ಪೂರ್ವಕವಾದ ವಂದನೆಗಳಿಂದ ಸ್ವೀಕರಿಸುವರೆಂದು ನಮ್ಮ ನಂಬಿಗೆ

ಕಾಲೇಜ್ ಸಂಚಾಲಕರು ತಮ್ಮ ವಿಧಿನಿಯಮಗಳ ವೃತ್ತದಿಂದ ಸಾರ್ವಜನಿಕರ ದ್ರವ್ಯ ಸಹಾಯವನ್ನು ಬೇಡಲು ಮುಂದೆ ಬರಲಿಲ್ಲ. ಸಾರ್ವಜನಿಕರಾದರೂ ಉದಾತ್ತಬುದ್ಧಿಯಿಂದ ಇಂಥ ಕಾಲೇಜುಗಳಿಗೆ ಸಹಾಯಮಾಡಿದಂತೆ ಇದಕ್ಕೆ ಸಹಾಯಮಾಡಲಿಲ್ಲ.

ಈಗ ಪುರಸಭಾಧ್ಯಕ್ಷರಾಗಿರುವ ಶ್ರೀ ಮುಂಡ್ಲೂರು ಗಂಗಪ್ಪನವರ ನೇತೃತ್ವದ ಪುರಸಭೆಯಲ್ಲಿ ಸ್ವೀಕೃತವಾದ ತೀರ್ಮಾನದಂತೆ ನೂತನ ಕಾಲೇಜಿಗಾಗಿ ಹಣ ಸಂಗ್ರಹವಾಗುತ್ತಲಿದೆ. ಬಳ್ಳಾರಿಯಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಯೀಗೊಳಿಸಲು ಎಲ್ಲರ ಸಹಕಾರವೂ ಅವಶ್ಯಕವಾಗಿದೆ. ಈ ದಿಶೆಯಲ್ಲಿ ಸಕಲರೂ ಶ್ರಮಿಸಬೇಕಾಗಿದೆ. ಹಿಂದಿನ ಅನುಭವ ಸರ್ಕಾರದ ಸಹಾಯದ ಪರಿಮಿತಿ ಕಟ್ಟಡದ ಅಭಾವ ಇವುಗಳನ್ನೆಲ್ಲಾ ಲಕ್ಷ್ಯದಲ್ಲಿಟ್ಟುಕೊಂಡು ಬಳ್ಳಾರಿಯ ಎಲ್ಲಾ ಜನರೂ ಸಹಕರಿಸಿ ಉನ್ನತ ವಿದ್ಯಾಭ್ಯಾಸಕ್ಕೆ ಅನುಕೂಲ ಒದಗಿಸಲೆಂದು ನಾವು ಕೋರುತ್ತೇವೆ.

ಶ್ರೀ ಹೆಚ್. ಲಿಂಗಾರೆಡ್ಡಿ

ಶ್ರೀ ಹರ್ದಿಗೆರೆ ಲಿಂಗಾರೆಡ್ಡಿ ಬಿ. ಎ. ಬಿ. ಎಲ್ ಇವರು ೩-೨-೪೯ ರ ದಿನಾಂಕ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ರ ಛಾರ್ಜು ವಹಿಸಿದರು. ಇವರ ಹಿಂದೆ ಜನಾಬ್ ಅಬ್ದುಲ್ ಬಾಸಿತ್‌ರು ಆ ಸ್ಥಾನದಲ್ಲಿದ್ದರು.

—o—

ರಾಜಘಾಟದಲ್ಲಿ ಗಾಂಧಿ ಪುಣ್ಯತಿಥಿ

ಡೆಲ್ಲಿ ಯಮುನಾತೀರದ ರಾಜಘಾಟದ ಗಾಂಧೀ ಸಮಾಧಿಬಳಿ ನೆಹರೂ ಪಟೇಲ ರಾಜಾಜಿ ಮತ್ತಿತರ ಕೇಂದ್ರಮಂತ್ರಿಗಳು ಶ್ರದ್ಧಾಂಜಲಿಗಳನ್ನು ಸಮರ್ಪಿಸಿದರು. ೩ ಗಂಟೆಗಳವರೆವಿಗೆ ನೂಲುವ ಕಾರ್ಯಕ್ರಮವೂ ಗೀತಾ ಪಠನೆಯೂ ನಡೆಯಿತು. ಸುಗಂಧ ದ್ರವ್ಯಗಳು ಉರಿಯುತ್ತಲೇ ಇದ್ದವು. ಆಚಾರ್ಯ ವಿನೋಬಾ ಭಾವೆಯವರು ಅಲ್ಲಿ ನೆರೆದಿದ್ದ ಲಕ್ಷಾಂತರ ಜನರಿಗೆ ಗಾಂಧೀಜಿ ತತ್ವಗಳಮೇಲೆ ಉಪದೇಶ ಕೊಟ್ಟರು.

ಚೀನದಲ್ಲಿ ಕಮ್ಯೂನಿಷ್ಟರ ಪ್ರತಿಭೆ

ಉತ್ತರಭಾಗದಿಂದ ಮುನ್ನುಗ್ಗಿ ಬರುತ್ತಿರುವ ಕಮ್ಯೂನಿಷ್ಟರು ಮುಖ್ಯ ನಗರಗಳನ್ನಾಕ್ರಮಿಸಿ ಹಿಂದಿನ ರಾಜಧಾನಿಯಾಗಿದ್ದ ಪೀಕಿಂಗ್ ನಗರವನ್ನು ಪ್ರವೇಶಿಸಿದರು. ಅವರ ಲಕ್ಷವು ನಾನ್‌ಕಿಂಗ್ ನಗರವಿದ್ದಂತೆ ಕಾಣುತ್ತದೆ. ಶಾಂತಿಯಾಗಬೇಕಾದರೆ ಯುದ್ಧಕ್ಕೆ ಕಾರಣರಾದ ಅಪರಾಧಿಗಳನ್ನೆಲ್ಲಾ ಬಂಧಿಸಲು ಇವರು ಒತ್ತಾಯಪಡಿಸುತ್ತಿರುವರು. ಈ ಅಪರಾಧಿಗಳಲ್ಲಿ ಚೆಂಗ್ ಕೈಶೇಕರೂ ಅವರ ಮಗನೂ ಸೂಂಗ್ ಸೋದರರೂ ಇದ್ದಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1935

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕಿನ ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ—ಮಾಧ್ಯಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

7—2—49

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0 6 ತಿಂಗಳಿಗೆ 3—0—0 ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	One Year 5—0—0 Six months 3—0—0 Subscription will not be accepted for less than 6 months.

To

Sri..

....

....

Printed at Vittal Press, Edited & Publishedby T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ಸ್ವಾತಂತ್ರ್ಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ.
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೧೪ ಫೆಬ್ರವರಿ ೧೯೪೯ | ಸಂಚಿಕೆ ೬

ಐದು ವರ್ಷಗಳಲ್ಲಿ

ಹಳ್ಳಿಹಳ್ಳಿಗಳೂ ವಿದ್ಯುಚ್ಛಕ್ತಿಯಿಂದ ಚೈತನ್ಯಪೂರ್ಣವಾಗುವುವು.

ಜನತೆಯ ಜೀವನ ಮಟ್ಟವನ್ನು ಏರಿಸುವ ಸಾಧನಗಳಲ್ಲಿ ವಿದ್ಯುತ್ ಯೋಜನೆಗಳು ಅತಿಪ್ರಮುಖವಾಗಿವೆ. ಅಭಿವೃದ್ಧಿ ಹಾಗೂ ಪುನರ್ನಿರ್ಮಾಣದ ಎಲ್ಲಾ ಹಂಚಿಕೆಗಳಿಗೆ ಸುಲಭದಲ್ಲಿ ಸಾಕಷ್ಟು ವಿದ್ಯುಚ್ಛಕ್ತಿಯ ಸರಬರಾಯಿಯು ಅತ್ಯಾವಶ್ಯಕ. ದೊಡ್ಡ ಕೈಗಾರಿಕೆಗಳನ್ನಾಗಲೀ ಸಣ್ಣ ಕೈಗಾರಿಕೆಗಳನ್ನಾಗಲೀ ನಡೆಸುವುದಕ್ಕೆ ವಿದ್ಯುತ್ ಇಲ್ಲದೆ ಸಾಧ್ಯವಿಲ್ಲ. ಹಳ್ಳಿಯ ಜೀವನವನ್ನು ಚೇತನಗೊಳಿಸುವುದಕ್ಕೂ ಹಳ್ಳಿಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕೂ ಹಳ್ಳಿಯ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದಕ್ಕೂ ವಿದ್ಯುಚ್ಛಕ್ತಿಗಿಂತ ಮಿಗಿಲಾದ ಸಾಧನವಿಲ್ಲವೆನ್ನಬಹುದು. ಸಾಮಾಜಿಕ ಪ್ರಗತಿಗೆ ಸಹಾಯವನ್ನೀಯಲು ಅದು ಅತಿ ಶಕ್ತಿಯುತ ಸಲಕರಣೆಯಾಗಿದೆ.

ಆದುದರಿಂದ ವಿದ್ಯುತ್ ಯೋಜನೆಗಳು ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳಲ್ಲೆಲ್ಲಾ ಪ್ರಥಮ ಸ್ಥಾನವಹಿಸಬೇಕು. ಈ ಪ್ರಾಂತದಲ್ಲಿಯೂ ಅವು ಅದೇ ಸ್ಥಾನದಲ್ಲಿವೆ. ಸರಕಾರವು ಒಂದು ಪಂಚವಾರ್ಷಿಕ ಯೋಜನೆಯನ್ನು ಮಂಜೂರು ಮಾಡಿರುತ್ತದೆ. ಹಲವು ಯೋಜನೆಗಳು ಈಗ ಕಾರ್ಯರೂಪಕ್ಕೆ ತರಲ್ಪಡುತ್ತಿವೆ.

"ಪವರ್ ಗ್ರಿಡ್"

ಇಡೀ ಪ್ರಾಂತಕ್ಕೋಸ್ಕರ "ಪವರ್ ಗ್ರಿಡ್"ನ ರೂಪದಲ್ಲಿ ಒಂದು ಅಪಾರ ವಿದ್ಯುತ್ ಯೋಜನೆಯು ರಚಿಸಲ್ಪಟ್ಟಿದೆ. ಗ್ರಿಡ್ ಎಂದರೆ ಅನೇಕ ವಿದ್ಯುದುತ್ಪಾದಕ ಕೇಂದ್ರ (ಪವರ್ ಹೌಸ್) ಗಳನ್ನು ಅತ್ತಿತ್ತ ಒಯ್ಯುವ (ಟ್ರಾನ್ಸ್‌ಮಿಶನ್) ಮತ್ತು ಹಂಚುವ (ಡಿಸ್ಟ್ರಿಬ್ಯೂಶನ್) ತಂತಿಗಳ ಮೂಲಕ ಜೋಡಿಸುವ ಹಾಗೂ ಬಹು ದೂರದ ಪಟ್ಟಣಗಳಲ್ಲಿಯೂ ವಾಸಿಸುವ ಜನರಿಗೆ ವಿದ್ಯುಚ್ಛಕ್ತಿಯನ್ನು ಕೊಂಡೊಯ್ಯುವ ಜಾಲಬಂಧ (ನೆಟ್‌ವರ್ಕ್) ವಾಗಿದೆ. ಕೆಲವು ವರ್ಷಗಳಿಂದೀಚೆಗೆ ಇಂತಹ ಗ್ರಿಡ್‌ಗಳು ರಚಿಸಲ್ಪಟ್ಟಿವೆ. ಈಗಲೂ ರಚಿಸಲ್ಪಡುತ್ತಿವೆ. ಆದರೆ ಅವು ಪ್ರತ್ಯೇಕ ಪ್ರತ್ಯೇಕ ಸ್ಥಳಗಳಿಗೋಸ್ಕರ ಅಲ್ಲಲ್ಲಿ ನಿರ್ಮಿಸಲ್ಪಟ್ಟವಾಗಿವೆ. ಮೊದಲನೆಯದಾಗಿ, ಪೈಕಾರ, ಮೆಟ್ಟೂರು, ಪಾಪನಾಶಂಗಳಲ್ಲಿ ಒಂದಕ್ಕೊಂದು ಜೋಡಿಸಲ್ಪಟ್ಟಿರುವ ಹೈಡ್ರೊ-ಪವರ್ ಸ್ಟೇಶನ್ (ವಿದ್ಯುಚ್ಛಕ್ತಿ ಉತ್ಪಾದಕ ಸ್ಥಾನ) ಗಳು, ಪ್ರಾಂತದ ದಕ್ಷಿಣ ಭಾಗದಲ್ಲಿ 13 ಜಿಲ್ಲೆಗಳಲ್ಲಿ ಹೆಚ್ಚಿನ ಅಂಶಕ್ಕೆ ಈ ಜಾಲಬಂಧವು ಪ್ರಯೋಜನಕಾರಿಯಾಗಿದೆ. ಎರಡನೆಯದಾಗಿ, ಮದ್ರಾಸ್ ಪ್ರದೇಶಕ್ಕೆ ಬೇಸಿನ್ ಬ್ರಿಡ್ಜಿನಲ್ಲಿ ಥರ್ಮಲ್ ಸ್ಟೇಶನ್ ಇದೆ. ಮೂರನೆಯದಾಗಿ, ವಿಶಾಖಪಟ್ಟಣ ಕೋಕನಾಡ, ವಿಜಯವಾಡ, ಕರ್ನೂಲುಗಳಲ್ಲಿರುವ ಥರ್ಮಲ್ ಸ್ಟೇಶನ್‌ಗಳು ಆಂಧ್ರ ಪ್ರದೇಶಕ್ಕೆ ವಿದ್ಯುತ್ ಒದಗಿಸುತ್ತವೆ. ಮುಂದೆ ಈ ಮೂರು ತುಂಡುಗಳನ್ನು ವಿಸ್ತರಿಸಿ ಎಲ್ಲವನ್ನು ಒಂದಕ್ಕೊಂದು ಜೋಡಿಸಿಕೊಳ್ಳಲಾಗುವುದು. ಈಗ ಇಡೀ ಪ್ರಾಂತಕ್ಕೆ ಒಂದೇ ಗ್ರಿಡ್ ಇದ್ದು ಹೈಡ್ರೊ ಅಥವಾ ಥರ್ಮಲ್ ವಿದ್ಯುದುತ್ಪಾದಕ ಸಾಧನಗಳಿಂದ ದೊರೆಯುವ ಎಲ್ಲಾ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸಿ ಪ್ರತಿಯೊಂದು ಹಳ್ಳಿಗೂ ಹಂಚಿಕೊಡುವುದು.

ಈಗಿರುವ ಗ್ರಿಡ್‌ಗಳು ಹೇಗಿವೆಯೆಂದು ನೋಡೋಣ. ಇದರ ಪವರ್ ಹೌಸ್‌ಗಳಲ್ಲಿ 1 8,000 ಕೆ. ಡಬ್ಲ್ಯು (ಕಿಲೊವಾಟ್) ಗಳಷ್ಟು ವಿದ್ಯುತ್ ತಯಾರಿಸುವ ಸಾಮರ್ಥ್ಯವಿದೆ. ಇದರ ಟ್ರಾನ್ಸ್‌ಮಿಶನ್ ಮತ್ತು ಡಿಸ್ಟ್ರಿಬ್ಯೂಶನ್ ಲೈನುಗಳು 6,300 ಮೈಲುಗಳಿಗಿಂತಲೂ ಹೆಚ್ಚು ಉದ್ದವಾಗಿವೆ. ಕಳೆದ ವರ್ಷ ಇವರಿಂದ 43½ ಮಿಲಿಯ ಯೂನಿಟ್‌ಗಳಷ್ಟು ವಿದ್ಯುತ್ ತಯಾರಿಸಲ್ಪಟ್ಟು 175,000 ಗ್ರಾಹಕರಿಗೆ ಹಂಚಲಾಗಿತ್ತು. ಈ ಪ್ರಾಂತದಲ್ಲಿ 12.. ಹಳ್ಳಿಗಳೂ ಪಟ್ಟಣಗಳೂ ವಿದ್ಯುತ್ ಸರಬರಾಯಿ ಇಂದು ಕೂಡಿವೆ.

ಗ್ರಿಡ್ ಶಕ್ತಿಯಿಂದ ನಡೆಯುತ್ತಿರುವ ದೊಡ್ಡ ಕೈಗಾರಿಕೆಗಳಲ್ಲಿ, ಬಟ್ಟೆ ಗಿರಣಿ, ಸಿಮೆಂಟ್, ರಾಸಾಯನಿಕ ದ್ರವ್ಯಗಳು, ಯಂತ್ರದ ಸಾಮಾನು, ರೈಲ್ವೆ ವರ್ಕ್‌ಶಾಪು, ಹಡಗ ನಿರ್ಮಾಣ, ಇವು ಮುಖ್ಯವಾದವುಗಳು.

ಬಾವಿಯಿಂದ ನೀರು ತೆಗೆದು ಗದ್ದೆಗಳಿಗೆ ಬಿಡುವ ಒಟ್ಟು ಸುಮಾರು 10,000 ಕ್ಕಿಂತಲೂ ಅಧಿಕ ಇಲೆಕ್ಟ್ರಿಕ್ ಪಂಪುಗಳಿವೆ. ಹತ್ತಿ ಬಿಡಿಸುವುದು, ಎಣ್ಣೆ ತೆಗೆಯುವುದು, ಕಬ್ಬು ಹಿಂಡುವುದು ಮೊದಲಾದ ಸುಮಾರು 1,1.. ಹಳ್ಳಿಗಳ ಕೈಗಾರಿಕೆಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತವೆ.

ಪಂಚವಾರ್ಷಿಕ ಕಾರ್ಯಕ್ರಮ

ಸರಕಾರವು ಮಂಜೂರು ಮಾಡಿದ ಪಂಚವಾರ್ಷಿಕ ಯೋಜನೆ ಪ್ರಕಾರ ಈಗಿರುವ ಗ್ರಿಡಿಗೆ 4 ಹೊಸ ಪವರ್ ಹೌಸುಗಳೂ 1,200 ಮೈಲುಗಳಷ್ಟು ಹೆಚ್ಚಿಗೆ ಟ್ರಾನ್ಸ್‌ಮಿಶನ್ ಲೈನುಗಳೂ ಸೇರಿಸಲ್ಪಡುವವು. ಇದಲ್ಲದೆ ಈಗಿರುವ ಮೂರು ಪವರ್ ಹೌಸ್‌ಗಳನ್ನು ವಿಸ್ತರಿಸಲಾಗುವುದು. ಒಟ್ಟು ಗ್ರಿಡಿನ ವಿದ್ಯುದುತ್ಪಾದಕ ಸಾಮರ್ಥ್ಯವನ್ನು 170 000 ಕೆ. ಡಬ್ಲ್ಯು ಗಳಷ್ಟು ಹೆಚ್ಚಿಸಲಾಗುವುದು. ಅಂದರೆ ಈಗಿರುವ ಸಾಮರ್ಥ್ಯವು ಇಮ್ಮಡಿಯಾಗುತ್ತದೆ. ಮಂಜೂರು ಮಾಡುವ ಕಾಲದಲ್ಲಿ ಈ ಯೋಜನೆಯ ವೆಚ್ಚ 12 ಕೋಟಿ ರೂಪಾಯಿಯೆಂದು ಅಂದಾಜು ಮಾಡಿತ್ತಾದರೂ ಯಂತ್ರ ಸಾಮಗ್ರಿಗಳ ಬೆಲೆ ಹಾಗೂ ಮಜೂರಿಯು ತುಂಬಾ ಹೆಚ್ಚಿರುವುದರಿಂದ ಕೊನೆಗೆ ಸುಮಾರು 24 ಕೋಟಿ ರೂಪಾಯಿ ವೆಚ್ಚ ಹಿಡಿಯಬಹುದು. ಎಲ್ಲ ಯೋಜನೆ (ಪ್ರೋಜೆಕ್ಟು) ಗಳಲ್ಲಿಯೂ ಕಟ್ಟಡ ಕೆಲಸವು ಭರದಿಂದ ನಡೆಯುತ್ತಿದೆ. ಯೋಜನೆಯು 1952 ರೊಳಗೆ ಪೂರ್ತಿಯಾಗುವುದು.

ದತ್ತಮಂಡಲ ಜಿಲ್ಲೆಗಳಿಗೋಸ್ಕರ (ಬಳ್ಳಾರಿ, ಕಡಪ, ಕರ್ನೂಲು, ಅನಂತಪುರ) ಎಂದು ನಿರ್ಣಯಿಸಲ್ಪಡುತ್ತಿದೆ. ಇದಕ್ಕೆ ತಾತ್ಕಾಲಿಕ ಏರ್ಪಾಡಾಗಿ ಮೈಸೂರಿನ ಜೋಗ್ ವಿದ್ಯುತ್ ಯೋಜನೆಯಿಂದ 4,000 ಕೆ. ಡಬ್ಲ್ಯು ಗಳಷ್ಟು ವಿದ್ಯುಚ್ಛಕ್ತಿ ಒದಗಿಸಲಾಗುವುದು. ಕೊನೆಗೆ ಈ ಪ್ರದೇಶಕ್ಕೆಲ್ಲಾ ತುಂಗಭದ್ರಾ ಹೈಡ್ರೊ ಇಲೆಕ್ಟ್ರಿಕ್ ಯೋಜನೆಯಿಂದ ಸರಬರಾಯಿ ದೊರೆಯುವುದು. ತುಂಗಭದ್ರಾ ಯೋಜನೆಯ ಕೆಲಸವು ಬೇಗನೇ ಆರಂಭವಾಗಲಿದೆ. ಕಡಪದಲ್ಲಿ 5000 ಕೆ. ಡಬ್ಲ್ಯು ಗಳಷ್ಟು, ಕರ್ನೂಲಿನಲ್ಲಿ 10 000 ಕೆ. ಡಬ್ಲ್ಯು ಗಳಷ್ಟು ಸಾಮರ್ಥ್ಯದ ಥರ್ಮಲ್ ಸ್ಟೇಶನ್‌ಗಳನ್ನು ನಿರ್ಮಿಸುವ ಕುರಿತು ಸಹ ಆಲೋಚಿಸಲಾಗುತ್ತದೆ.

ಈ ಯೋಜನೆಗಳೆಲ್ಲವೂ 1950-51 ರೊಳಗೆ ಪೂರ್ತಿಯಾಗಬೇಕೆಂದು ಯೋಚನೆ ಮಾಡಲಾಗಿತ್ತು. ಆದರೆ ಅವು 1952 ರ ಅಂತ್ಯಕ್ಕಿಂತ ಮುಂಚೆ ಸಿದ್ಧವಾಗಲಾರವು. ಇದಕ್ಕೆ ಆಮದು ಮಾಡಿದ ಯಂತ್ರಗಳು ದೊರೆಯದಿರುವುದು, ಬೇಕಾದಷ್ಟು ಪ್ರಮಾಣದಲ್ಲಿ ಉಕ್ಕು, ಸಿಮೆಂಟು, ವ್ಯಾಗನು ಮತ್ತು ಪೆಟ್ರೋಲುಗಳ ಕೊರತೆಯಿಂದಾಗಿ ಸಾಗಿಸುವುದರ ವಿಳಂಬ, ಸಿವಿಲ್ ಇಂಜಿನಿಯರ ಅಭಾವ, ಮೊದಲಾದ ಹಲವು ಕಾರಣಗಳಿವೆ. ಕಾಲವಿಳಂಬಿಸುವ ಈ ವಿಷಯಗಳೆಲ್ಲವೂ ವಿದ್ಯುತ್ ಯೋಜನೆಗಳಿಗೆ ಮಾತ್ರವಲ್ಲ. ಹಿಂದುಸ್ಥಾನದಲ್ಲಿ ಈಗ ಎಲ್ಲಾ ಪುನರ್ನಿರ್ಮಾಣ ಕಾರ್ಯ

ಳಿಗೂ ಬಾಧಿಸುತ್ತವೆ. ಇವು ಚಿಂತಾಸ್ಪದ ಸಂಗತಿಗಳಾದರೂ ಸದ್ಯ ಬೇರೆ ಉಪಾಯ ವಿಲ್ಲ.

ಭಾವೀ ಯೋಜನೆಗಳು

ಮುಂದಿನ ವಿದ್ಯುತ್ ಯೋಜನೆಗಳೇನು? ಜನರು ವಿದ್ಯುಚ್ಛಕ್ತಿಯ ಪ್ರಯೋಜನವನ್ನು ಹೆಚ್ಚೆಚ್ಚು ತಿಳಿಯುತ್ತಿದ್ದಾರೆ. ಆದರಿಂದ ಕೇಳಿಕೆಗಳೂ ಹೆಚ್ಚುತ್ತಿವೆ. ಹಳ್ಳಿ ಪ್ರದೇಶಗಳಲ್ಲಿ ಕೆಲವು ವರ್ಷಗಳಲ್ಲಿ ಮಳೆಯು ಸಾಕಷ್ಟು ಬಾರದೆ, ಕೃಷಿಗೆ ನೀರು ಹಾಯಿಸಲು ಇಲೆಕ್ಟ್ರಿಕ್ ಪಂಪುಗಳು ಹೆಚ್ಚಿನ ಅನುಕೂಲವಾಗಿವೆ. ಕೈಗಾರಿಕೆಗಳು ವಿಸ್ತರಿಸುವುದು ಖಂಡಿತ. ವಿದ್ಯುತ್ ಮೂಲಕ ಹೆಚ್ಚೆಚ್ಚು ರೈಲ್ವೇ ಸಾರಿಗೆಗಳನ್ನು ನಿರ್ಮಿಸುವ ಕುರಿತು ಆಲೋಚಿಸಲಾಗುತ್ತಿದೆ. ಮುಂಬರುವ ವರ್ಷಗಳಲ್ಲಿ ಇವುಗಳಿಗೆಲ್ಲಾ ತುಂಬಾ ವಿದ್ಯುಚ್ಛಕ್ತಿ ಬೇಕಾಗುವುದು. ಅದನ್ನು ಪೂರೈಸುವುದಕ್ಕಾ ಹೊಸ ಹೊಸ ಯೋಜನೆಗಳನ್ನು ವಿಚಾರಿಸಲಾಗುತ್ತಲಿದೆ.

ಈ ಪ್ರಾಂತದಲ್ಲಿರುವ ಯಾವತ್ತು ನೀರಿನ ಮತ್ತು ಲಿಗ್ನೈಟ್ ಮೂಲಾಶ್ರಯಗಳನ್ನು ಆದಷ್ಟು ಶೀಘ್ರದಲ್ಲಿ ಅಭಿವೃದ್ಧಿಗೊಳಿಸುವುದು ಸರಕಾರದ ಇಚ್ಛೆಯಾಗಿದೆ. ಕೈಗಾರಿಕೆ, ವ್ಯವಸಾಯ ಹಾಗೂ ಮನೆಗಳ ಉಪಯೋಗಗಳಿಗಾಗಿ ಬೇಕಾಗುವ ಹೇರಳ ವಿದ್ಯುತ್ ಪ್ರಮಾಣವನ್ನು ಈ ಮೂಲಕ ಪೂರೈಸಲು ಸರಕಾರವು ಯತ್ನಿಸುತ್ತಿದೆ. ಇದನ್ನು ಆಗಿಂದಾಗ ವಿಸ್ತರಿಸುತ್ತಾ ಬಂದು, ಕ್ರಮೇಣ ಪ್ರಾಂತದ ಪ್ರತಿಯೊಂದು ಹಳ್ಳಿಯು ವಿದ್ಯುತ್ತಿನಿಂದ ಬೆಳಗುವಂತಾಗುವುದು

ರಾಷ್ಟ್ರೀಕರಣ

ರಾಷ್ಟ್ರೀಕರಣದ ಕುರಿತು ಒಂದು ಮಾತು. ಈ ಪ್ರಾಂತದಲ್ಲಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯಲ್ಲಿ ಶೇಕಡ 99 ರಷ್ಟನ್ನು ಸರಕಾರವು ಈಗ ಅದರ ಸ್ವಂತ ಪವರ್ ಸ್ಟೇಷನ ಗಳಲ್ಲಿ ತಯಾರಿಸುತ್ತದೆ. ಹೀಗೆ ವಿದ್ಯುದುತ್ಪಾದನೆಯು ಹೆಚ್ಚು ಕಡಿಮೆ ರಾಷ್ಟ್ರಾಧಿಕಾರದಲ್ಲಿ ಶೇಕಡ 70 ರಷ್ಟು ಮಾತ್ರ ಸರಕಾರವು ತಾನು ತಯಾರಿಸುವ ಪ್ರಮಾಣದಿಂದ ಗ್ರಾಹಕರಿಗೆ ನೇರಾಗಿ ಹಂಚುತ್ತದೆ. ಉಳಿದ ಶೇಕಡ 30 ರಷ್ಟು ಪ್ರಮಾಣವನ್ನು ಖಾಸಗಿ ಮತ್ತು ಸ್ಥಳೀಕ ಸಂಸ್ಥೆಗಳ ಮೂಲಕ ಹಂಚಲಾಗುತ್ತದೆ. ಪರಿಸ್ಥಿತಿ ಅಷ್ಟು ತೃಪ್ತಿಕರವಾಗಿಲ್ಲ ಹಳ್ಳಿ ಪ್ರದೇಶಗಳಲ್ಲಿ ಇನ್ನು ಪ್ರಗತಿಯು ಭರದಿಂದ ಸಾಗುತ್ತಿಲ್ಲ ಆದುದರಿಂದ ವಿದ್ಯುತ್ ಸರಬರಾಯಿಯನ್ನು ಸಂಪೂರ್ಣ ರಾಷ್ಟ್ರಾಧಿಕಾರಕ್ಕೆ ತರುವ ಸಾರ್ವಜನಿಕ ಹಿತದೃಷ್ಟಿಯಿಂದ ಒಳ್ಳೇದೆಂದು ಸರಕಾರವು ನಿಶ್ಚಯಿಸಿದೆ. ಆ ಬಗ್ಗೆ ತಕ್ಕ ಏರ್ಪಾಡುಗಳೂ ನಡೆಯುತ್ತಿವೆ ವಿದ್ಯುತ್ತನ್ನು ಎಲ್ಲರೂ ಉಪಯೋಗಿಸುವುದರಲ್ಲಿ ಈ ಏರ್ಪಾಡು ಅತಿ ಸಹಾಯವಾಗುವುದು. ಈ ರಾಷ್ಟ್ರೀಕರಣವು ಜನತೆಗೆ ತುಂಬಾ ಪ್ರಯೋಜನವಾಗುವುದೆಂಬುದರಲ್ಲಿ ಸಂಶಯವಿಲ್ಲ.

—(o)—

ಸೊಂಡೂರು ಸಂಸ್ಥಾನದ ಸಂಪತ್ತು

ಖನಿಜ ದ್ರವ್ಯಗಳ ವಿಪುಲ ಸಂಗ್ರಹ.

ಬಳ್ಳಾರಿ ಜಿಲ್ಲೆಯಲ್ಲಿರುವ ಚಿಕ್ಕ ಸಂಸ್ಥಾನವಾದ ಸೊಂಡೂರಿನಲ್ಲಿ ವಿಪುಲವಾದ ಖನಿಜ ದ್ರವ್ಯಗಳಿವೆಯೆಂದು ಶೋಧವಾಗಿದೆ. ಹಿಂದುಸ್ಥಾನ ಸರಕಾರ ಭೂಗರ್ಭ ಶಾಸ್ತ್ರ ಸಂಶೋಧನೆ ಶಾಖೆಯ ಶ್ರೀ ಎಸ್. ಎನ್ ವೆಂಕಟರಾಮು ಹಾಗೂ ಶ್ರೀ ಎನ್. ವಿ. ಬಿ. ಎಸ್. ದತ್ತರವರು ಈ ಸಂಸ್ಥಾನದಲ್ಲಿ 13 ಕೋಟಿ ಟನ್ನುಗಳಷ್ಟಾದರೂ ಕಚ್ಚಾ ಕಬ್ಬಿಣವಿದೆಯೆಂದು ಅಂದಾಜು ಮಾಡಿದ್ದಾರೆ.

1927 ರಿಂದ 1946 ಏಪ್ರಿಲ್ಲಿಂದೂ 5 ಲಕ್ಷ ಟನ ಮೆಂಗೆನಿಸ್ ಧಾತುವನ್ನು ಸಂಸ್ಥಾನದಿಂದ ಹೊರಗೆ ಕಳಿಸಿರಬೇಕೆಂದು ಲೆಕ್ಕ ಹಾಕಲಾಗಿದೆ. ಬಂಗಾರು ಹಾಗು ತಾಮ್ರಗಳು ಸಹ ಈ ಸಂಸ್ಥಾನದಲ್ಲಿ ಸಿಗಬಹುದೆಂದು ಶ್ರೀ ವೆಂಕಟರಾಮು ಮತ್ತು ಶ್ರೀ ದತ್ತರ ಹೇಳಿಕೆಯಿದೆ ನೆರೆಹೊರೆಯ ಮೈಸೂರು ಮತ್ತು ಹೈದ್ರಾಬಾದ ಸಂಸ್ಥಾನಗಳಲ್ಲಿಂದ ಕೆಲವೊಂದರ ಕಚ್ಚಾ ಮಾಲಿನ ಪೂರೈಕೆಯಾದರೆ, ಇಲ್ಲಿ ಬಣ್ಣದ ಕಾರಖಾನೆಯೊಂದನ್ನು ನಡೆಸಬಹುದೆಂದು ಈ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ

ಈ ಸಂಸ್ಥಾನದಲ್ಲಿ 160 ಚದರು ಮೈಲು ಭೂಮಿಯಿದ್ದು ನೀರಿನ ಅಭಾವವಿದೆ. ಜನರು ಹೆಚ್ಚಾಗಿ ಒಕ್ಕಲಿತನ ವ್ಯವಸಾಯಗಾರರಾಗಿದ್ದು ಕನ್ನಡ ಮಾತನಾಡುವವರಾಗಿದ್ದಾರೆ.

—●—

— ವಿನಂತಿ —

ಬರುವ ವರ್ಷ ಪ್ರಾರಂಭದಿಂದ ತಾವು ನಡೆಸುತ್ತಿರುವ ಕಾಲೇಜನ್ನು ಮುಚ್ಚಿಬಿಡಬೇಕೆಂಬ ನಿರ್ಧಾರಕ್ಕೆ ಮದ್ರಾಸ್ ಪೀರಸ್ಸೆವ ವಿದ್ಯಾವರ್ಧಕ ಸಂಘದವರು ಬಂದಿರುತ್ತಾರೆ ಈ ಜಿಲ್ಲೆಯಲ್ಲಿ 26 ಹೈಸ್ಕೂಲ್‌ಗಳನ್ನು ಹೊಂದಿ ವರ್ಷಂಪ್ರತಿ 300 ಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ S S L C ಉತ್ತೀರ್ಣರಾಗುತ್ತಿದ್ದರೂ, ಮದ್ರಾಸ್ ಪ್ರಾಂತದಲ್ಲಿ ಕಾಲೇಜಿಲ್ಲದ ಜಿಲ್ಲೆಯೆಂದರೆ ಬಳ್ಳಾರಿಯೊಂದೇ ಎಂಬುದು ವಿಷಾದಾತ್ಮವಾಗಿ ಒಪ್ಪಬೇಕಾಗುತ್ತದೆ.

ಕೊನೆಯ ಪಕ್ಷ ಈ ಜಿಲ್ಲೆಯಲ್ಲಿ ಎರಡು ಲಕ್ಷ ರೂಪಾಯಿಗಳನ್ನಾದರೂ ಸಂಗ್ರಹಿಸಿ ಈ ವರ್ಷದ ಜೂನ್ ತಿಂಗಳಿಂದ ಸರ್ಕಾರದವರೇ ಕಾಲೇಜನ್ನು ನಡೆಸಲು ಕೇಳಿಕೊಳ್ಳುವ ಸಲುವಾಗಿ ಬಳ್ಳಾರಿ ಪುರ ಸಭೆಯವರು ಈ ವಿಷಯದಲ್ಲಿ ನೇತೃತ್ವ ವಹಿಸಿ ಇನ್ನೂ ಹೆಚ್ಚಿನ ಸದಸ್ಯರನ್ನು ಸೇರಿಸಿಕೊಳ್ಳುವಧಿಕಾರವನ್ನು ಕೊಟ್ಟು ನಮ್ಮನ್ನು ಸದಸ್ಯರನ್ನಾಗಿ ಆರಿಸಿದ್ದಾರೆ. ಹೊಸ ಕಟ್ಟಡವನ್ನು ಕಟ್ಟುವವರೆಗೆ ಕಾಲೇಜನ್ನು ನಡೆಸಲು ಯೋಗ್ಯವಾದ ಸರಕಾರದ ಕಟ್ಟಡಗಳು ಬಳ್ಳಾರಿಯಲ್ಲಿ ಸಾಕಷ್ಟಿವೆ, ಅಧಿಕಾಂಶ ಹಣವು ಸಂಗ್ರಹವಾದೊಡನೆಯೇ ಸಮಿತಿಯ ಸದಸ್ಯರು ಗೌರವನೀಯ ವಿದ್ಯಾಮಂತ್ರಿ ಮತ್ತು ಮದ್ರಾಸ್ ಯೂನಿವರ್ಸಿಟಿ ವೈಸ್‌ಛಾನ್ಸಲರೊಡನೆ ಈ ಯೋಜನೆಯನ್ನು ಕುರಿತು ವಿಮರ್ಶಿಸಲಿರುವರು.

ಸಮಿತಿಯು ಈಗಾಗಲೇ ರೂ. 50000 ಧನ ಸಂಗ್ರಹ ಮಾಡಿದೆ, ಮುಂಬರುವ ಬಡ್ಜೆಟ್ ಯಾ ಆಯವ್ಯಯ ಪಟ್ಟಿಯಲ್ಲಿ ಸಾಕಷ್ಟು ಹಣವನ್ನು ಕಾದಿರಿಸಲು ಮಾರ್ಚ 49 ರ ಒಳಗಾಗಿ ಎರಡು ಲಕ್ಷ ರೂಪಾಯಿಗಳನ್ನು ಶೇಖರಿಸಬೇಕಾಗಿದೆ. ಈ ನೂತನ ಕಾಲೇಜಿಗೆ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಹೆಸರಿಡಲು ನಿಶ್ಚಯವಾಗಿದೆ. ಈ ಜಿಲ್ಲೆಯಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮುಂದುವರಿಸಲು ಎಂಥಾ ತ್ಯಾಗವಾದರೂ ಅಲ್ಪವೇ? ಈ ಕಾರಣ ಜಿಲ್ಲೆಯ ಮಹಾಜನಗಳು ಈ ಮಹಾ ಉದ್ದೇಶವನ್ನು ಈಡೇರಿಸಲು ಉದಾರ ಹೃದಯದಿಂದ ಕೊಡಗೈಯಿಂದ ಮುಂದೆಬರಬೇಕೆಂದು ನಾವು ಸವಿನಯವಾಗಿ ಕೋರುತ್ತೇವೆ.

ಫ್ಯಾಕ್ಟರೀ ಜಿನ್ ಸಂಯುಕ್ತ ಮಾಲೀಕರಿಗೂ, ಕೋ-ಆಪರೇಟಿವ್ ಸೊಸೈಟಿ ಮುನಿಸಿಪಾಲಿಟಿ, ಲೋಕಲ್ ಬೋರ್ಡು ಸಂಸ್ಥೆಗಳು ಮತ್ತು ಎಲ್ಲಾ ವ್ಯಾಪಾರೀ ಸಂಸ್ಥೆಗಳಿಗೂ ಈ ನಿಧಿಗೆ ಉದಾರ ಸಹಾಯ ಮಾಡಲು ಬೇಡುತ್ತೇವೆ

ನಿಮ್ಮ ಸಹಾಯವನ್ನು ಶ್ರೀ ಎಂ. ಗಂಗಪ್ಪ, ಛೇರ್ಮನ್ ಮುನಿಸಿಪಲ್ ಹೈಸ್ಕೂಲ್ ಬಳ್ಳಾರಿ ಈ ವಿಳಾಸಕ್ಕೆ ಕಳುಹಿಸಿರಿ.

ಗಾಂಧಿಮೆಮೋರಿಯಲ್ - ಕಾಲೇಜ್
ಕಮಿಟಿ,
ಎಂ. ಗಂಗಪ್ಪ,
ಅಧ್ಯಕ್ಷ-ಮುನಿಸಿಪಲ್ ಕೌನ್ಸಿಲ್ ಬಳ್ಳಾರಿ
ಮುಲಂಗಿ ಗೂಳಪ್ಪ,
ಎಚ್. ಅಬ್ದುಲ್ ರಜಾಕ್ ಸಾಹೇಬ್.

ಹೈದರಾಬಾದು ಕಾಂಗ್ರೆಸ್ ಸಂಸ್ಥೆಗಳಲ್ಲಿ ಐಕ್ಯ

ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್‌ದ ಇಬ್ಬಣಗಳಲ್ಲಿ ಐಕ್ಯವಾಗಿದೆ. ಸ್ವಾಮಿ ರಮಾನಂದ ತೀರ್ಥರಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಾರ್ಯವು ನಿರ್ವಹಿಸಲಾಗುವುದು. ಸರ್ದಾರ ಪಟೇಲರ ಆಶ್ರಯದಲ್ಲಿ ಈ ಮಾತುಕತೆಗಳು ಸಾಗಿದವು. ಪಟೇಲರು ಹೈದರಾಬಾದಿಗೆ ತಿಂಗಳ ಕೊನೆಯಲ್ಲಿ ಬರುತ್ತಾರೆ

ವಿದ್ಯಾರ್ಥಿಗಳಿಗೆ ನೆಹರೂರ ಉಪದೇಶ

ಎಲ್ಲರೂ ರಾಜಕೀಯ ಕ್ಷೇತ್ರದಲ್ಲೇ ಆಸ್ಥೆ ವಹಿಸಿದರೆ ರಾಷ್ಟ್ರೀಯ ಆರ್ಥಿಕ ಕ್ಷೇತ್ರವು ಹಿಂದಾಗುವುದು

ನೂತನ ಹಿಂದುಸ್ಥಾನವನ್ನು ಕಟ್ಟುವ ಕಾರ್ಯದಲ್ಲಿ ಲಕ್ಷಾಂತರ ಜನರು ಭಾಗವಹಿಸಬೇಕು. ಸ್ವಾಭಾವಿಕವಾಗಿಯೇ ಈ ಮಹತ್ಕಾರ್ಯವು ದೈಹಿಕ ಮತ್ತು ಮಾನಸಿಕ ಶಿಕ್ಷಣ ಪಡೆದವರ ಮೇಲೆಯೇ ಬೀಳುವದು. ನಮ್ಮ ಎಲ್ಲ ಶಿಕ್ಷಣ ಸಂಸ್ಥೆಗಳು, ಕಾಲೇಜುಗಳು, ವಿಶ್ವವಿದ್ಯಾಲಯಗಳು ಇಂಥ ಶಿಕ್ಷಣ ಕೊಡುವುದಕ್ಕಾಗಿಯೇ ಇರುವೆವು. ಅವು ಈ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರೆ ಅವುಗಳಲ್ಲಿ ಶಿಕ್ಷಣ ಪಡೆದು ಹೊರಬೀಳುವ ವಿದ್ಯಾರ್ಥಿಗಳು ರಾಷ್ಟ್ರವನ್ನು ಕಟ್ಟುವ ಕಾರ್ಯವನ್ನಷ್ಟೇ ಅಲ್ಲ ನಾವು ಯೋಚಿಸುವಂತೆ ಮಾನವ ಸಮಾಜವನ್ನೇ ಹೊಸ ದೃಷ್ಟಿಯಿಂದ ಪುನರ್ಘಟಿಸಬಹುದು.

ಮಹತ್ವಾಕಾಂಕ್ಷೆ ಬೇಕು

ನೀವು ನಿಮ್ಮ ಮುಂದೆ ಇಂಥ ಕೆಲಸವಿರುವದೆಂದು ಅದನ್ನು ಪೂರೈಸುವ ವಿಚಾರ ಮಾಡುವಿರೋ? ಅಥವಾ ಯಾವದಾದರೊಂದು ಚಿಲ್ಲರೆ ನೌಕರಿ, ಅಧಿಕಾರಸ್ಥಾನ ದೊರೆತರೆ ಸಾಕೆಂದು ಭಾವಿಸುವಿರೋ? ಮಹತ್ವಾಕಾಂಕ್ಷೆಯಲ್ಲಿ ಒಳ್ಳಿತು, ಕೆಡಕು ಎರಡೂ ಅಂಶಗಳಿವೆ. ಕ್ಷುಲ್ಲಕ ವಿಷಯಗಳಿಗಾಗಿ ಮಹತ್ವಾಕಾಂಕ್ಷೆ ತಾಳುವದು ಯಾವಾಗಲೂ ಒಳ್ಳಿತಲ್ಲ. ಜೀವನದಲ್ಲಿ ಉದಾತ್ತವಾದ ಗುರಿ ಸಾಧಿಸುವ ಮಹತ್ವಾಕಾಂಕ್ಷೆಬೇಕು ಅಂದರೆ ನೀವು ಅಂಥ ಗುರಿಯನ್ನು ಕಣ್ಮುಂದೆ ಇಟ್ಟುಕೊಂಡು ಸಾಗುವಿರಿ. ನೀವು ಅಲ್ಪ ವಿಷಯಗಳ ಬಗ್ಗೆ ಮಹತ್ವಾಕಾಂಕ್ಷೆ ತಾಳಿದರೆ ನೀವು ಕೊನೆಯವರೆಗೂ ಅಲ್ಪರಾಗಿಯೇ ಉಳಿಯುವಿರಿ. ನೀವು ದೊಡ್ಡ ವಿಷಯಗಳನ್ನು ಸಾಧಿಸುವ ಮನಸ್ಸುಳ್ಳವರಾಗಿದ್ದರೆ ದೊಡ್ಡಸ್ತಿಕೆಯ ಛಾಯೆ ನಿಮ್ಮ ಮೇಲೆ ಬೀಳುವದು.

ಮಹಾತ್ಮ ಗಾಂಧಿಯವರು ಹಿಂದುಸ್ಥಾನದಲ್ಲಿ ರಾಜಕೀಯ ಮತ್ತು ಸಾಮಾಜಿಕ ಉತ್ಕ್ರಾಂತಿಯನ್ನೇ ಮಾಡಿದರು. ಅವರ ಪ್ರಭಾವದಿಂದ ಅನೇಕ ಜನರ ಜೀವನದಲ್ಲಿಯೇ ಕ್ರಾಂತಿಯಾಯಿತು. ಅದರ ಪರಿಣಾಮವೇನು? ನಾವು ಅವರಿತ್ತ ಸ್ಫೂರ್ತಿಯಿಂದ ದೊಡ್ಡ ಕಾರ್ಯ ಸಾಧಿಸಲು ಉದ್ಯುಕ್ತರಾದೆವು. ಆದರಿಂದ ನಾವು ಕೂಡಾ ದೊಡ್ಡಸ್ತಿಕೆ ಪಡೆದೆವು.

ನಾವು ಎಷ್ಟೇ ಅಲ್ಪ ಜೀವಿಗಳಿರಬಹುದು. ಆದರೆ ಮನುಷ್ಯನು ಕೈಕೊಂಡ ಕಾರ್ಯದಿಂದ ಅವನ ಯೋಗ್ಯತೆ ನಿರ್ಧರಿಸಲ್ಪಡುವದು. ಈ ಕಾರಣದಿಂದ ನೀವು ದೊಡ್ಡ ಕಾರ್ಯಸಾಧನೆಗೆ ಪ್ರಯತ್ನಮಾಡಹತ್ತಿದರೆ ದೊಡ್ಡಸ್ತಿಕೆ ನಿಮ್ಮನ್ನು ಅನುಸರಿಸಿ ತಾನೇ ಬರುವದು.

ವಿಶಾಲ ದೃಷ್ಟಿ ಬೇಕು

ನಾನು ಹೋದಲ್ಲೆಲ್ಲ ಈ ಕಾರಣದಿಂದಲೇ ಸಂಕುಚಿತ ಭಾವನೆ ತ್ಯಜಿಸಲು ಉಪದೇಶಿಸುತ್ತಿದ್ದೇನೆ. ಏನಾದರೊಂದು ಕಾರಣದಿಂದ ಸಂಕುಚಿತ ಭಾವನೆಯು ನಮ್ಮ ಜನರನ್ನು ಆವರಿಸಿದೆ. ಪ್ರಾಂತೀಯತೆ, ಜಾತೀಯತೆ, ಪರಧರ್ಮ ಅಸಹಿಷ್ಣುತೆ, ಅಥವಾ ಬೇಕಾದ ಹೆಸರಿನಿಂದ ನೀವು ಈ ಸಂಕುಚಿತ ಭಾವನೆಯನ್ನು ಕರೆಯಿರಿ. ಅದು ಜನರ ಮನಸ್ಸಿನ ಮೇಲೆ ತನ್ನ ಪ್ರಭುತ್ವ ಹೇರಲು ಜಾಗೃತವಾಗಿದೆ. ಇಂಥ ಸಂಕುಚಿತ ಭಾವನೆಗಳಿಗೆ ಒಳಗಾದರೆ ಅವು ನಮ್ಮನ್ನು ಮಹತ್ಕಾರ್ಯ ಸಾಧಿಸುವದರಿಂದ ಪರಾವೃತ್ತಗೊಳಿಸಿ ಸಂಕುಚಿತ ಕ್ಷೇತ್ರದಲ್ಲಿ ದೂಡಿಬಿಡುವದು ನಿಶ್ಚಿತ.

ನೀವು, ನಾನು ಮತ್ತು ಇದರಂತೆ ಇನ್ನಿತರರು ಸಂಕುಚಿತ ಭಾವನೆಯುಳ್ಳವರಾದರೆ ರಾಷ್ಟ್ರವೇ ಸಂಕುಚಿತ ಭಾವನೆಯುಳ್ಳದ್ದಾಗುವದು. ಹಿಂದುಸ್ಥಾನದ ಕ್ಷೇತ್ರವು ವಿಶಾಲವಾಗಿರಬಹುದು, ಆದರೆ ದೇಶದ ಘನತೆ ಅದರ ಆಕಾರದ ಮೇಲೆ ಅವಲಂಬಿಸಿರದೆ ಅದರಲ್ಲಿ ವಾಸಿಸುವ ಜನರ ಮನಸ್ಸಿನ ಯೋಗ್ಯತೆಯ ಮೇಲೆ ನಿರ್ಧರಿಸಲ್ಪಡುವದೆಂಬುದನ್ನು ಮರೆಯಕೂಡದು. ರಾಷ್ಟ್ರದ ಘನತೆ ಗೌರವ ಯೋಗ್ಯತೆಯನ್ನೇ ಅವಲಂಬಿಸಿರುವದೆಂಬುದು ಸ್ಪಷ್ಟವಿದೆ. ನಮ್ಮ ದೇಶದಲ್ಲಿ ತರುಣರು ಇಂದು ವಿಶ್ವವಿದ್ಯಾಲಯಗಳಿಂದ ಹೊರಬಿದ್ದು ಅವರು ಆ ಶಿಕ್ಷಣದ ಉಪಯೋಗವನ್ನು ಯಾವ ರೀತಿಯಿಂದ ಮಾಡಿಕೊಳ್ಳುವರೆಂಬುದರ ಮೇಲೆ ತರುಣರ ಯೋಗ್ಯತೆ ನಿರ್ಧರಿಸಲ್ಪಡುವದು.

ದುರ್ದೈವದಿಂದ ನಮ್ಮಲ್ಲಿಯ ಅನೇಕ ತರುಣರಲ್ಲಿ ರಾಜಕೀಯ ಮಹತ್ವಾಕಾಂಕ್ಷೆ ಬೇರೂರಿದೆ. ಅದರಲ್ಲಿ ದೋಷವೇನೂ ಇಲ್ಲ. ಆದರೆ ಎಲ್ಲರೂ ರಾಜಕೀಯ ಮುಖಂಡರಾಗಬೇಕೆಂದರೆ [illegible] ನಿಸ್ಸಂದೇಹವಾಗಿ ಇದು ಕೆಡಕು. ಎಲ್ಲರೂ ರಾಜಕೀಯ ಕ್ಷೇತ್ರದಲ್ಲಿಯೇ ಆಸ್ಥೆ ವಹಿಸಿದರೆ ರಾಷ್ಟ್ರೀಯ ಆರ್ಥಿಕ ಕ್ಷೇತ್ರವು ಹಿಂದೆ ಬೀಳುವದು. ಆದುದರಿಂದಲೇ ನಾನು ದೊಡ್ಡ ಕಾರ್ಯ ಸಾಧಿಸುವ ಮಹತ್ವಾಕಾಂಕ್ಷೆಯುಳ್ಳವರಾಗಿರಿ ಎಂದು ನಿಮಗೆ ಹೇಳುವದು. ಕೇವಲ ಮಹತ್ವಾಕಾಂಕ್ಷೆಯುಳ್ಳವರಾದರೆ ತೀರಲಿಲ್ಲ. ಅದನ್ನು ಸಾಧಿಸಲು ಕೈಕೊಳ್ಳಬೇಕಾದ ಕೆಲಸ ಮಾಡುವ ಯೋಗ್ಯತೆಯನ್ನು ಸಂಪಾದಿಸಲು ತಕ್ಕ ಶಿಕ್ಷಣ, ಅನುಭವ ಇವುಗಳನ್ನು ಪಡೆಯಬೇಕಾಗುವದು. ಸ್ವಾತಂತ್ರ್ಯವು ಹಿಂದುಸ್ಥಾನಕ್ಕೆ ಸುಲಭರೀತಿಯಲ್ಲಿ ದೊರೆತಿದ್ದರೆ ಅಷ್ಟೇ ಸುಲಭ ರೀತಿಯಲ್ಲಿ ಅದನ್ನು ಕಳೆದುಕೊಳ್ಳಬೇಕಾಗಿದೆ. ಆದುದರಿಂದ ಸುಲಭ ರೀತಿಯಲ್ಲಿ ಯಾವುದನ್ನು ದೊರಕಿಸಲು ಪ್ರಯತ್ನಿಸದೇ ಕಷ್ಟಪಟ್ಟು ನಿಮ್ಮ ಗುರಿ ಸಾಧಿಸಲು ದುಡಿಯುವದನ್ನು ಕಲಿಯಿರಿ. ಕಷ್ಟಪಟ್ಟು ದೊರಕಿಸಿದ್ದು ಎಂದೂ ಕೈಬಿಟ್ಟು ಹೋಗಲಾರದು.

ಒಳ್ಳಿತು — ಕೆಡುಕು

ಇಂದು ಜಗತ್ತಿನಲ್ಲಿ ಅನೇಕ ವಾದಗಳಿವೆ, ನಾಳೆಗೆ ಯಾವ "ವಾದ" ಗಳು ಪುನಃ ಹುಟ್ಟಬಹುದೋ ಅದನ್ನು ಹೇಳುವದು ಕಠಿಣ. ಈ 'ವಾದ' ಗಳಲ್ಲಿ ಯಾವುದು ಒಳ್ಳಿತು ಯಾವುದು ಕೆಡಕು ಇದನ್ನು ಹೇಳುವದೂ ಕಠಿಣ. ಪ್ರತಿಯೊಬ್ಬನಿಗೆ ಯಾವ ಮಾರ್ಗ ಅಥವಾ ಯಾವವಾದ ಒಳ್ಳೇದು ಎಂಬ ಸಂಶಯವು ಮನಸ್ಸಿನಲ್ಲಿ ಮೂಡಬಹುದು. ತನ್ನಲ್ಲಿ ಹುಟ್ಟಿದ ಸಂಶಯ ನಿವಾರಣೆಯನ್ನು ತಾನೇ ಮಾಡಿಕೊಳ್ಳಲು ಪ್ರಯತ್ನಿಸುವದು ಹಿತ. ಹಿರಿಯರು ತಮ್ಮ ಅನುಭವವನ್ನು ತಿಳಿಸಿ ಇಂಥ ಸಂಶಯ ನಿರಸನಕ ಮಾರ್ಗದರ್ಶನ ಮಾತ್ರ ಮಾಡಬಲ್ಲರು. ಈ ವಾದಗಳಲ್ಲಿ ಒಂದನ್ನು ಮಾತ್ರ ಕುರುಡನಾಗಿಯೂ ನೀವು ಒಪ್ಪಬಾರದು. ಅದೇ "ಸಂಧಿ ಸಾಧಿಸುವವಾದ" ಮನಸ್ಸಿಗೆ ಸ್ವಾರ್ಥ ಸಾಧನೆಗಾಗಿ ಸಂಧಿಸಾಧಿಸುವ ಪ್ರವೃತ್ತಿಯುಂಟಾದರೆ ಅವನು ಅದಕ್ಕಾಗಿ ಉಚ್ಚನೀಚ ಭೇದವಿಲ್ಲದೆ ಅದನ್ನು ಸಾಧಿಸಲು ಬೇಕಾದ ರೀತಿಯನ್ನು ಅನುಸರಿಸಬೇಕಾಗುವದು. ಹೀಗೆ ಸಾಧನೆ ಶುದ್ಧ ಅಲ್ಲದೆ ಕಾರ್ಯಸಾಧಿಸಿದರೆ ಸಾಧ್ಯವೂ ಪವಿತ್ರವಾಗಿ ಉಳಿಯಲಾರದು. ಯಾವ ಗುರಿ ಸಾಧಿಸಲೂ ಅದಕ್ಕೆ ಯೋಗ್ಯವಾದ ಸಾಧನಗಳನ್ನೇ ಉಪಯೋಗಿಸಬೇಕು. ನಾನು ನಿಮಗೆ ರಾಜಕಾರಣಿಯಂತೆ ಉಪದೇಶಿಸಿದರೂ ನಾನೊಬ್ಬ ಅನುಭವಿ ರಾಜಕಾರಣಿ ನನ್ನ ಅನುಭವದಿಂದಲೇ ನಾನು ಸಾಧನ ಪಾವಿತ್ರ್ಯದ ಮಹತ್ವವನ್ನು ನಿಮ್ಮ ಮೇಲೆ ಬಿಂಬಿಸಲು ಪ್ರಯತ್ನಿಸುವೆ. ನೀವು ಸದುದ್ದೇಶ ಸಾಧನೆಗಾಗಿ ದುಷ್ಟಸಾಧನೆಗಳನ್ನು ಉಪಯೋಗಿಸಿದರೆ ನಿಮ್ಮ ಗುರಿಯು ಒಳ್ಳೆಯದಾಗಿದ್ದರೂ ಕೊನೆಗೆ ಅದು ಸಾಧಿಸಿದಾಗ ಅದು ನಿರ್ದುಷ್ಟವಾಗಿರದು. ವಿದ್ಯಾರ್ಥಿಗಳಾದ ನೀವು ಈ ವಿಚಾರವನ್ನು ಮನವರಿಕೆ ಮಾಡಿಕೊಳ್ಳಬೇಕು. ಸಂಕುಚಿತ

ಮಹಾತ್ಮ ಗಾಂಧಿ ಕೊಲೆಯ ಖಟ್ಲೆಯ ತೀರ್ಪು

ನಥುರಾಂ ಗೋಡ್ಸೆ, ಆಪ್ಟೆಗೆ ಮರಣ ದಂಡನೆ

ಸಾವರಕರ ಮತ್ತು ಒಡಗೆ ಇವರ ಬಿಡುಗಡೆ

ಉಳಿದವರಿಗೆ ಜೀವಾವಧಿ ಗಡೀಪಾರು

ಆತ್ಮಚರಣರ ತೀರ್ಪು.

ಮಹಾತ್ಮಾ ಗಾಂಧೀಜಿಯ ಕೊಲೆಯ ಖಟ್ಲೆಯ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶರಾದ ಶ್ರೀ ಆತ್ಮಚರಣರು ಈ ದಿನ ೧೦-೨-೪೯ ಕ್ಕೆ ತಮ್ಮ ತೀರ್ಪನ್ನು ಸಾರಿದರು. ಕೊಲೆಗಡುಕನಾದ ನಾಥುರಾಮ ಗೋಡ್ಸೆ ಮತ್ತು ನಾರಾಯಣ ದತ್ತಾತ್ರೇಯ ಆಪ್ಟೆ ಇವರಿಗೆ ಮರಣದಂಡನೆ ವಿಧಿಸಲಾಗಿದೆ.

ವಿನಾಯಕ ದಾಮೋದರ ಸಾವರಕರರನ್ನು ನಿರ್ದೋಷಿಗಳೆಂದು ಬಿಡುಗಡೆ ಮಾಡಲಾಗಿದೆ. ಮಾಫಿ ಸಾಕ್ಷಿದಾರನಾದ ದಿಗಂಬರ ರಾಮಚಂದ್ರ ಒಡಗೆಯನ್ನು ಬಿಟ್ಟುಕೊಡಲಾಯಿತು.

ಈ ಖಟ್ಲೆಯಲ್ಲಿ ಒಟ್ಟು ಹನ್ನೆರಡು ಜನ ಆರೋಪಿಗಳ ಮೇಲೆ ಅಪರಾಧವನ್ನು ಹೇರಿ ವಿಚಾರಣೆಗೆ ಗುರಿಪಡಿಸಲಾಗಿತ್ತು. ಅವರಲ್ಲಿ ದಿಗಂಬರ ಒಡಗೆಯು ಪ್ರಾರಂಭದಲ್ಲಿಯೇ ಮಾಫಿ ಸಾಕ್ಷಿದಾರನಾಗಿ ಪರಿವರ್ತಿಸಿದನು. ಗಂಗಾಧರ ಎಸ್. ದಂಡವತೆ, ಗಂಗಾಧರ ಜಾಧವ ಮತ್ತು ಸೂರ್ಯದೇವ ಶರ್ಮಾ ಎಂಬವರೀರ್ವರು ಆರೋಪಿಗಳು ತಲೆಮರೆಸಿಕೊಂಡಿರುವರು. ವಿಚಾರಣೆಗೆ ಗುರಿಪಡಿಸಲಾದ ಆರೋಪಿಗಳಿಗೆ ಈ ಕೆಳಗಿನಂತೆ ಶಿಕ್ಷೆ ವಿಧಿಸಲಾಯಿತು.

ಐನೆಯ ಆರೋಪಿ ಶಂಕರ ಕಿಷ್ಟಯ್ಯನ ಗಡೀಪಾರ ಶಿಕ್ಷೆಯನ್ನು ಏಳು ವರುಷದ ಕಠಿಣ ಶಿಕ್ಷೆಗೆ ಇಳಿಸಬಹುದೆಂದು ನ್ಯಾಯಾಧೀಶರು ಸೂಚಿಸಿರುವರು.

ನ್ಯಾಯಾಧೀಶರು ತೀರ್ಪನ್ನು ಹೇಳುವಾಗ ಪ್ರತಿಯೊಬ್ಬ ಆರೋಪಿಯು ತನ್ನ ತೀರ್ಪನ್ನು ಎದ್ದುನಿಂತು ಕೇಳಿದನು. ಆರೋಪಿಗಳು ಪಂಜರದಿಂದ ಹೊರಬರುವಾಗ ಎಲ್ಲ ಆರೋಪಿಗಳು "ಹಿಂದೂ ಧರ್ಮಕೀ ಜಯ" ಹಾಗೂ "ತೋಡಕೆ ರಹೇಂಗೆ ಪಾಕಿಸ್ತಾನ" ಇತ್ಯಾದಿ ಘೋಷಣೆಗಳನ್ನು ಮಾಡಿದರು.

ತಮ್ಮ ಶಿಕ್ಷೆಯ ವಿರುದ್ಧ ಅಪೀಲು ಮಾಡಿಕೊಳ್ಳಲು ೧೫ ದಿನಗಳ ಅವಧಿಯನ್ನು ಆರೋಪಿಗಳಿಗೆ ಕೊಡಲಾಗಿದೆ.

ಆರೋಪಿಗಳು	ಶಿಕ್ಷೆ
೧] ನಾಥುರಾಮ ಗೋಡ್ಸೆ	ಮರಣದಂಡನೆ
೨] ನಾರಾಯಣ ದತ್ತಾತ್ರೇಯ ಆಪ್ಟೆ	ಮರಣದಂಡನೆ
೩] ವಿಷ್ಣು ರಾಮಚಂದ್ರ ಕರಕರೆ	ಜೀವಾವಧಿ ಗಡೀಪಾರು
೪] ಮದನಲಾಲ ಪಾಹ್ವಾ	ಜೀವಾವಧಿ ಗಡೀಪಾರು
೫] ಶಂಕರ ಕಿಷ್ಟಯ್ಯ	ಜೀವಾವಧಿ ಗಡೀಪಾರು
೬] ಗೋಪಾಲ ವಿನಾಯಕ ಗೋಡ್ಸೆ	ಜೀವಾವಧಿ ಗಡೀಪಾರು
೭] ದತ್ತಾತ್ರೇಯ ಸದಾಶಿವ ಪರಚುರೆ	ಜೀವಾವಧಿ ಗಡೀಪಾರು

ಪ್ರಾಂತೀಯ ಭಾವನೆ, ಜಾತೀಯ ಭಾವನೆಗಳಿಂದ ನೀವು ಅತೀತರಾಗಿರಬೇಕು. ನೀವು ಪರದೇಶಗಳಿಗೆ ಹೋದಾಗ ನಿಮ್ಮನ್ನು ಹಿಂದುಸ್ಥಾನದ ನಾಗರಿಕರೆಂದೇ ಅಲ್ಲಿಯ ಜನರು ಅರಿಯುವರು. ಹಿಂದುಸ್ಥಾನವು ಸ್ವತಂತ್ರ ರಾಷ್ಟ್ರವಾಗಿರುವದರಿಂದ ನಿಮಗೆ ಸ್ವತಂತ್ರ ರಾಷ್ಟ್ರದ ನಾಗರಿಕರಿಗೆ ಸಲ್ಲತಕ್ಕ ಗೌರವಾದರಗಳು ದೊರೆಯುವವು. ಅಲ್ಲಿಯ ಜನರಿಗೆ ಹಿಂದುಸ್ಥಾನದಲ್ಲಿ ಮಾತ್ರ ಆಸಕ್ತಿ ಇದೆ. ಹಿಂದುಸ್ಥಾನದ ಘನತೆ ಗೌರವಗಳು ಹೆಚ್ಚಿದರೆ ಅದರ ನಾಗರಿಕರಿಗೆ ಅದರ ಗೌರವ ಸಲ್ಲುವದು. ಆದುದರಿಂದ ಎಲ್ಲರೂ ಹಿಂದುಸ್ಥಾನದ ಘನತೆ ಹೆಚ್ಚುವಂತೆ ಸಕಲ ವಿಧದಿಂದ ಕಾರ್ಯ ಮಾಡಬೇಕು.

— ಪಂಡಿತ ನೆಹರು

)o(

ಸರಕಾರಿ ಪ್ರಕಟಣೆಗಳು

ವ್ಯವಸಾಯ ಸಲಕರಣೆ

ಪ್ರಾಂತದ ಎಲ್ಲಾ ಜಿಲ್ಲೆಗಳಲ್ಲಿಯೂ ವ್ಯವಸಾಯಿಕ ಸಲಕರಣೆಗಳ ವಿತರಣೆಯು ಈ ವರೆಗೆ ವ್ಯವಸಾಯ ಇಲಾಖೆಯ ಮೂಲಕ ನಡೆಯುತ್ತಿತ್ತು. ಇನ್ನು ಮುಂದೆ ಈ ಕೆಲಸವು ಸಹಕಾರ ಇಲಾಖೆಯ ಮೂಲಕ ನಡೆಯುವುದು. ವ್ಯವಸಾಯ ಇಲಾಖೆಯು ಈ ಸಲಕರಣೆಗಳಿಗೋಸ್ಕರ ಕಬ್ಬಿಣ ಮತ್ತು ಉಕ್ಕುಗಳನ್ನು ಸಂಗ್ರಹಿಸಿ ಸಲಕರಣೆ ತಯಾರಿಸುವವರಿಗೆ ಹಂಚುವುದು.

ಕಾಂಪೌಂಡರರ ಪ್ರಾಯ

ಲೋಕಲ್ ಫಂಡ್ ಆಸ್ಪತ್ರೆಗಳಲ್ಲಿಯೂ ಮುನಿಸಿಪಲ್ ವೈದ್ಯಕೀಯ ಸಂಸ್ಥೆಗಳಲ್ಲಿಯೂ ಕೆಲಸಮಾಡುವ ಒಗ್ಗೆ ನೇರಾಗಿ ನೇಮಿಸಲ್ಪಡುವ ಕಾಂಪೌಂಡರರಂತೆ ೩೦ ವರ್ಷಕ್ಕೆ ಮಿತಿಸಲಾಗಿದೆ.

ಸಿಮೆಂಟ್ ವಿತರಣೆ

ಪರದೇಶಗಳಿಂದ ಆಮದು ಮಾಡಿದ ಸಿಮೆಂಟನ್ನು ಪ್ರಾದೇಶಿಕ ಸಿಮೆಂಟ್ ಕಂಟ್ರೋಲರಿಂದ ಪರ್ಮಿಟ್ ಪಡೆದು ನಿಯಂತ್ರಿತ ಬೆಲೆಗೆ ಮಾರಬಹುದು. ಪಾಕಿಸ್ತಾನದಿಂದ ಬಂದ ಸಿಮೆಂಟಿಗೆ ಟನ್ನಿಗೆ ರೂ. ೧೩೪ (ಗುದಾಮು ಸಹಿತ) ಇತರ ದೇಶಗಳಿಂದ ಬಂದುದಕ್ಕೆ ಟನ್ನಿಗೆ ರೂ. ೧೫೭-೮-೦ ಈ ಸಿಮೆಂಟನ್ನು ಹಿಂದುಸ್ಥಾನದ ಸಿಮೆಂಟು ಮಾರುವವರಿಗೆ ಕೊಡಲಾಗುವುದು. ಆದರೆ ಅವರು ಕಂಟ್ರೋಲರಿಂದ ಅರ್ಜಿಮಾಡಿ ಪರ್ಮಿಟ್ ಪಡೆಯಬೇಕಾಗಿದೆ.

ನೆಲಗಡಲೆ ಹಿಂಡಿ

೧೯೪೬ರ ನೆಲಗಡಲೆ ಹಿಂಡಿ ತಯಾರಿಸುವವರ ಮೇಲಿದ್ದ ನಿಯಂತ್ರಣವನ್ನು ಹಿಂದಿನ ಪರವಾನಿಗೆ ಪದ್ಧತಿ ಕ್ರಮವನ್ನು ೧೯-೧-೪೯ರಿಂದ ರದ್ದುಪಡಿಸಲಾಗಿದೆ. ಆದರೆ ಈ ನಿಯಂತ್ರಣ ೧೯-೧-೪೯ರ ನಂತರ ಗಿರಣಿಗಳು ತಯಾರಿಸುವ ಹಿಂಡಿಗೆ ಮಾತ್ರ ಅನ್ವಯಿಸುವದು. ಆದರೆ ಇದರ ಉತ್ಪತ್ತಿಯು ಪ್ರಾಂತದಹೊರಗೆ ವಿಕ್ರಯಿಸಲ್ಪಡಬೇಕಿದ್ದರೆ ಹೊರಗೆ ರಫ್ತಾಗಕೂಡದು. ಮಾರಾಟದ ಬೆಲೆಯು ಟನ್ನಿಗೆ ರೂ. ೨೦೦ ಕ್ಕೆ ಮೀರಿದರೆ ಈ ನಿಯಂತ್ರಣಾಜ್ಞೆಯನ್ನು ರದ್ದುಪಡಿಸಿ ನಿಯಂತ್ರಣವನ್ನು ಜಾರಿಗೆ ತರಲಾಗುವುದು.

ರೈತರಿಂದ ಆಹಾರಧಾನ್ಯಗಳನ್ನು ಕೊಳ್ಳಬಾರದೇಕೆ?

ಸಂಪಾದಕ 'ನವಭಾರತ' ಇವರಿಗೆ

ಬಳ್ಳಾರಿ ಜಿಲ್ಲೆಯ ಭಾಗದಲ್ಲಿ ಇಂತಿಷ್ಟು ಆಹಾರ ಧಾನ್ಯಗಳನ್ನು ಸಂಗ್ರಹಿಸಬೇಕೆಂದು ಅಧಿಕಾರಿಗಳು ನಿಶ್ಚಯಿಸಿ ಸರ್ಕಾರಕ್ಕೆ ತಿಳಿಸಿದರು. ಸದರಿ ಧಾನ್ಯಗಳಿಗೆ ಬೆಲೆಯು ನಿಗದಿಯೂ ಆಗಿದೆ. ನಮ್ಮ ಜಿಲ್ಲೆಯ ಕೆಲ ಭಾಗಗಳಲ್ಲಿ ಸರಕಾರದವರು ಕೊಡುವಷ್ಟು ದರಗಳನ್ನೇ ಕೊಟ್ಟು ಖಾಸಗಿ ವರ್ತಕರು ಕೊಳ್ಳುತ್ತಿರುವುದು ಸರಕಾರದ ಗಮನಕ್ಕೆ ಬಂದಿರಲಿಕ್ಕಿಲ್ಲ. ಸರಕಾರದವರು ತಮಗೆ ಬೇಕಾದ ಸಂಗ್ರಹದ ಧಾನ್ಯವನ್ನು ಹಿಂಗ ಬಾಜಾರದಲ್ಲಿ ಏಕೆ ಕೊಳ್ಳಬಾರದು? ಇದಕ್ಕಾಗಿ ದೊಡ್ಡ ಸಿಬ್ಬಂದಿಯನ್ನಿಟ್ಟು ಅವರಿಗೆ ಸಂಬಳ ಭತ್ಯ ಕೊಟ್ಟು ಏಜಂಟರಿಗೆ ಕಮೀಶನ್ ಕೊಟ್ಟು ಈ ಕೆಲಸ ಮಾಡುತ್ತಿರುವುದು ಸರ್ಕಾರಕ್ಕೆ ಬಹಳ ನಷ್ಟದಾಯಕವಾದ ಕೆಲಸವಲ್ಲವೇ? ಈ ಸಿಬ್ಬಂದಿಗಾಗಿ ಖರ್ಚು ಮಾಡುವ ಹಣದಿಂದ ರೈತರ ಧಾನ್ಯಕ್ಕೆ ಒಳ್ಳೆಯ ದರ ಕೊಟ್ಟರೆ ರೈತರೇ ಗಾಡಿ ಕಟ್ಟಿಕೊಂಡು ಬಂದು ಗುದಾಮುಗಳಲ್ಲಿ ತಂದು ತುಂಬುವರು. ಧಾನ್ಯ ಸಂಗ್ರಹಣಾಧಿಕಾರಿಗಳು ಹಳ್ಳಿ ಹಳ್ಳಿಗಳಿಗೆ ಹೋಗಿ ದೊಡ್ಡ ಭೂಮಾಲೀಕರ ಆತಿಥ್ಯ ಆದರಗಳಿಗೋಸ್ಕರ ಸಣ್ಣ ರೈತರನ್ನು ಹಿಂಸಿಸುವ ಕಾರ್ಯವು ನಿಲ್ಲಲು ಸಾಧ್ಯವೇ ಇಲ್ಲವಾದ ಕಾರಣ ಈ ಸಲಹೆಯನ್ನೇಕೆ ಒಪ್ಪಬಾರದು?

ಈಗ ಹೊಸದಾಗಿ ಬಂದಿರುವ ಕಲೆಕ್ಟರವರು ಈ ರೀತಿ ಧಾನ್ಯ ಸಂಗ್ರಹಮಾಡಲೊಪ್ಪುವರೇ ತಿಳಿಸಿರಿ.

ತಮ್ಮ
ಗ್ರಾಮೀಣ ರೈತ.

ಪರದೇಶಗಳಿಂದ ಬಂದ ಧಾನ್ಯ

1948 ರಲ್ಲಿ 129 ಕೋಟಿ 59 ಲಕ್ಷ ರೂ. ಬೆಲೆ ಬಾಳುವ 2,84,000 ಟನ್ನು ಆಹಾರ ಧಾನ್ಯಗಳನ್ನು ಪರದೇಶಗಳಿಂದ ತರಿಸಲಾಯಿತು. ಜನತೆಗೆ ಈ ಧಾನ್ಯಗಳನ್ನು ಕಡಿಮೆದರಗಳಲ್ಲಿ ಒದಗಿಸಲು ಸರಕಾರದವರು 17 ಕೋಟಿ 12 ಲಕ್ಷ ರೂ. ಖರ್ಚುಮಾಡಬೇಕಾಯಿತು. ಕ್ರಮೇಣ ನಿಯಂತ್ರಣ ಪದ್ಧತಿಯಿಂದ ಧಾನ್ಯದ ಬೆಲೆಯನ್ನು ಹದ್ದಿನಲ್ಲಿಡಲಾಗುವದೆಂದು" ಆಹಾರ ಮಂತ್ರಿ ಜಯರಾಮದಾಸ ದೌಲತರಾಮರವರು ಹೇಳಿದರು.

—ಬಟ್ಟೆ ಗಿರಣಿಗಳವರು ಎಂಥ ಬಟ್ಟೆಯನ್ನಾದರೂ ತಯಾರಿಸಲು ಅನುಮತಿಯನ್ನೀಯಬೇಕೆಂದು ಗಿರಣಿಗಳವರ ಬಟ್ಟೆ ಉತ್ಪಾದಕ ನಿಯಂತ್ರಣಕ್ಕಾಗಿ ಏರ್ಪಟ್ಟ ಉಪಸಮಿತಿಯವರು ಕೇಂದ್ರ ಸರಕಾರಕ್ಕೆ ಶಿಫಾರಸುಮಾಡಿರುತ್ತಾರೆ.

—o—

—ಮಹಾತ್ಮಾ ಗಾಂಧಿ ಕೊಲೆಯಲ್ಲಿ ಅಪರಾಧಿಗಳಾಗಿದ್ದ ಶ್ರೀ ಪಿ. ಡಿ ಸಾವರ್ಕರರು ಬಿಡುಗಡೆ ಹೊಂದಿ ಬೊಂಬಾಯಿ ಸೇರಿದರು. ಅವರು 3 ತಿಂಗಳವರೆಗೆ ಡೆಲ್ಲಿಗೆ ಬರಬಾರದೆಂಬ ಆಜ್ಞೆಯಾಗಿತ್ತು.

ಚಿದಂಬರಂ

ಶ್ರೀಮಾನ್ ರಾಜಗೋಪಾಲಾಚಾರಿಯವರು ಟ್ಯೂಟಿಕೋರಿನ್‌ದಿಂದ ಶಿಲೋನಿಗೆ ಸಮುದ್ರಯಾನಕ್ಕನುಕೂಲವಾದ ಎಸ್. ಎಸ್. ಚಿದಂಬರಂ ಎಂಬ ಹಡಗದ ಉದ್ಘಾಟನ ಮಹೋತ್ಸವವನ್ನು ನೆರವೇರಿಸಿದರು. ಸುಮಾರು 40 ವರ್ಷಗಳ ಕೆಳಗೆ ಶ್ರೀ ವಿ. ಓ ಚಿದಂಬರ ಪಿಳ್ಳೆಯವರು ಎರಡು ಹಡಗುಗಳನ್ನು ಕೊಂಡು, ಸಮುದ್ರಯಾನಕ್ಕನುಕೂಲಮಾಡಿಕೊಡುವ ಪ್ರಯತ್ನದಲ್ಲಿ ಸರ್ಕಾರದ ಕೋಪಕ್ಕೊಳಗಾಗಿ ಸೆರೆಮನೆವಾಸ ಮಾಡಬೇಕಾಯಿತು. ಅವರ ಹೆಸರನ್ನೇ ಇಟ್ಟು ಅವರ ಪರಿಚಯಸ್ಥರಾದ ಮತ್ತು, ಇಂಡಿಯಾ ಸರ್ಕಾರದ ಮುಖ್ಯರಾದ ಶ್ರೀ ರಾಜಗೋಪಾಲಚಾರ್ಯರಿಂದ ಈ ಹಡಗಿನ ಪ್ರಾರಂಭಮಾಡಿಸಿದುದು ತಮಿಳುನಾಡಿನ ಇತಿಹಾಸದಲ್ಲಿ ವಿಶೇಷವಾಗಿದೆ. ಶಿಲೋನದಲ್ಲಿ ಇಂಡಿಯಾ ಹೈಕಮೀಶನರ್ ಶ್ರೀ ವಿ ವಿ ಗಿರಿಯವರು ಇವರಲ್ಲಿ ಟ್ಯೂಟಿಕೋರಿನ್‌ದಿಂದ ಶಿಲೋನಿಗೆ ಪ್ರಯಾಣಮಾಡಲಿದ್ದಾರೆ.

— ० —

ಸರದಾರ ಪಟೇಲರಿಗೆ ದೇಶವು ಕೃತಜ್ಞವಿದೆ

ದೇಶವನ್ನು ತುಂಡುತುಂಡಾಗುವ ಗಂಡಾತರದಿಂದ ಪಾರುಮಾಡಿದರು

"ಬ್ರಿಟಿಶರು ಭಾರತವನ್ನು ಬಿಟ್ಟು ಹೋಗಿದ ಮೇಲೆ ಭಾರತ ಸರಕಾರದ ಆಡಳಿತ ಶಾಖೆಗಳಲ್ಲಿ ಸಂಸ್ಥಾನ ಶಾಖೆಯೇ ಅತ್ಯಂತ ಚಾಳ್ಮೆಯಿಂದ ನಡೆದಿದೆ. ಭಾರತವು ಕೇವಲ ಇಬ್ಭಾಗವಾದ ದಲ್ಲದೆ ನೂರಾರು ತುಂಡು ತುಂಡಾಗುವ ಗಂಡಾಂತರವಿತ್ತು. ಆದರೆ ಹದಿನಾಲ್ಕು ತಿಂಗಳ ಅಲ್ಪಾವಧಿಯಲ್ಲಿ ಅಭೂತಪೂರ್ವವಾದ ಐಕ್ಯವನ್ನು ಸಾಧಿಸಿದ ಸರದಾರ ಪಟೇಲರಿಗೆ ದೇಶವು ಕೃತಜ್ಞವಾಗಿದೆ" ಹೀಗೆಂದು ಹಿಂದೀ ಪಾರ್ಲಿಮೆಂಟಿನಲ್ಲಿ 7 ನೆಯ ತಾ|| ಶ್ರೀ ವಿಶ್ವನಾಥದಾಸರು ಸರದಾರ ಪಟೇಲರು ತಂದ ಮೂಸಾವೆಯನ್ನು ಅಸಭ್ಯವಾದ ರೀತಿಯಲ್ಲಿ ಟೀಕಿಸಿದ ಮೌಲಾನಾ ಹಜರತ್ ಮೋಹಾನಿಯವರ ಭಾಷಣವನ್ನು ಪ್ರತಿಭಟಿಸುತ್ತ ಹೇಳಿದರು.

—●—

ಕಾಳಿನ ಸಂಗ್ರಹವು ಜಾರಿಯಲ್ಲಿದೆ

ಸುಳ್ಳುಸುದ್ದಿ ನಂಬಬೇಡಿರಿ

ಇಂಡಿಯನ್ ಎಕ್ಸಪ್ರೆಸ್ ಪೇಪರದಲ್ಲಿ ಕಾಳಿನ ಸಂಗ್ರಹವು ನಿಲ್ಲಿಸಲಾಗಿದೆಯೆಂದು ಪ್ರಕಟವಾಗಿತ್ತು. ಅದೇ ಪತ್ರಿಕೆಯಲ್ಲಿ ಮೂರನೆಯ ದಿನ ಇದು ಸುಳ್ಳೆಂದು ಪ್ರಕಟವಾಗಿತ್ತು.

ಈ ಸುದ್ದಿಯು ಅಚಾತುರ್ಯದಿಂದ ಪ್ರಕಟವಾಗಿ ಕಳೆದ ವರ್ಷಕ್ಕೆ ಸಂಬಂಧಿಸಿದುದಾಗಿತ್ತು. ಸರ್ಕಾರದವರು ಸೂಚಿಸಿದ ನಿಯಮಗಳ ಪ್ರಕಾರಕ್ಕೆ ಕಾಳಿನ ಸಂಗ್ರಹವು ಜಾರಿಯಲ್ಲಿದೆ ಎಂದು D.S.O ರು ತಿಳಿಸುತ್ತಾರೆ.

ಬಳ್ಳಾರಿಯಲ್ಲಿ ಕಾಲೇಜ್ ಪ್ರಯತ್ನ

—(o)—

ಬಳ್ಳಾರಿಯಲ್ಲಿ ಕಾಲೇಜ್ ಸ್ಥಾಪಿಸಲು ಒಂದು ಸಮಿತಿಯಾಗಿ 40 ಸಾವಿರ ವಾಗ್ದಾನದ ನಂತರ ಸಂಗ್ರಹ ಕಾರ್ಯವು ತಕ್ಷಣ ನಿಂತು ಹೋಗಿದೆ. ಭಿನ್ನಾಭಿಪ್ರಾಯಗಳೇನಾದರೂ ಇದ್ದಲ್ಲಿ ಪಾರಸ್ಪರಿಕವಾಗಿ ಸರಿಪಡಿಸಿಕೊಂಡು ಕಾರ್ಯಮಗ್ನರಾಗಬೇಕೆಂದೂ ಒಬ್ಬಿಬ್ಬ ವ್ಯಕ್ತಿಗಳ ಅಂತರ್ವಿರೋಧದಿಂದ ಈ ಮಹತ್ಕಾರ್ಯವನ್ನು ನಿಲ್ಲಿಸಬಾರದೆಂದೂ ಉನ್ನತ ವಿದ್ಯಾಭಿಲಾಷಿಗಳೂ ಹಿತಚಿಂತಕರೂ ಕೋರುತ್ತಾರೆ.

—ಬಳ್ಳಾರಿಯ ನೂತನ ಕಲೆಕ್ಟರ್ ಮಿ|| ಅಲೆಗ್ಸಾಂಡರರವರು ಕಳೆದವಾರ ಅಧಿಕಾರಾರೂಢರಾದರು.

—ತುಂಗಭದ್ರಾ ಕಾಲುವೆ ಭಾಗದ ಎಂಜನಿಯರ್ ಶ್ರೀ ಪದ್ಮನಾಭಯ್ಯನವರಿಗೆ ಮದ್ರಾಸಿಗೆ ವರ್ಗವಾಯಿತು.

ಹಿಂದುಸ್ತಾನಿ ಉಪಾಧ್ಯಾಯರು ಮತ್ತು ಹಿಂದೀ ಪ್ರಚಾರಕ ಶಿಕ್ಷಣ

ಉಪಾಧ್ಯಾಯ ಶಿಕ್ಷಣ ಸಂಬಂಧೀ ಎಲಿಮೆಂಟರಿ ಹೈಯರ್, ಸೆಕೆಂಡರಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಹಿಂದೀಯೋಗ್ಯತೆಯುಳ್ಳ, ಹಿಂದುಸ್ತಾನಿ ಅಧ್ಯಾಪಕರು ಪ್ರಚಾರಕ ಪರೀಕ್ಷೆಗೆ ಕೂಡಬೇಕಾಗಿಲ್ಲ. ಯಾ ಪ್ರಚಾರಕ ಟ್ರೇನಿಂಗ್ ಪಡೆಯಬೇಕಾಗಿಲ್ಲ. 1939ನೆಯ ಜೂನ್ ನಂತರ ಕೆಲಸಕ್ಕೆ ಸೇರಿ 1949 ನೆಯ ಜನವರಿ 1ಕ್ಕೆ ಐದು ವರ್ಷ ಸರ್ವಿಸ್ ಮುಗಿಸಿದವರು ಮಾತ್ರ ಟ್ರೇನಿಂಗ್‌ಗೆ ಹೋಗಬೇಕಾಗಿಲ್ಲ.

ಹರಿಜನ ಅಗ್ರಲೇಖ

ಅಪ್ರಾಮಾಣಿಕತೆಯ ಉಬ್ಬರ

ಲಂಚ ತೆಗೆದುಕೊಳ್ಳುವವ ಮತ್ತು ಕೊಡುವವ ಈ ಇಬ್ಬರೂ ಕಾಯಿದೆಯಂತೆ ಅಪರಾಧಿಗಳಾಗುವ ಹಾಗೆ ಕಳ್ಳಪೇಟೆಯ ದರದಲ್ಲಿ ಕೊಳ್ಳುವವ ಮತ್ತು ಮಾರುವವ ಈ ಇಬ್ಬರನ್ನೂ ಸಮಾಜಘಾತಕ ಕೃತ್ಯ ಮಾಡಿದ ಅಪರಾಧಿಗಳೆಂದು ಎಣಿಸಬೇಕು. ಎಂದು ಒತ್ತಿ ಒತ್ತಿ ಹೇಳಲಾಗುತ್ತಿದೆ. ವ್ಯಾಪಾರಿಯು ಪರ... ...ಳುವ ಈ ಬಿನ್ನಹ ಕೆಲವುಟ್ಟಿಗೆ ನ್ಯಾಯವೆನ್ನಬಹುದು. ಕಾಯಿದೆ ವಿಧಿಸಿದ್ದಕ್ಕಿಂತ ಹೆಚ್ಚು ಸರಕು ತೆಗೆದುಕೊಂಡು ಸ್ವಾರ್ಥಿಗಳಾದ ಗಿರಾಕಿಗಳು ವ್ಯಾಪಾರಗಾರರಿಗೆ ಕಳ್ಳಪೇಟೆಯ ದರದಂತೆ ದುಡ್ಡು ಕೊಟ್ಟ ಉದಾಹರಣೆಗಳನ್ನು ನಾನು ಕೇಳಿದ್ದೇನೆ.

ಆದರೆ ಬೆರಕೆಮಾಡುವುದರ ಬಗ್ಗೆ ಏನು ಹೇಳೋಣ? ಬೆರಕೆಯ ಪದಾರ್ಥಗಳ ಬಗ್ಗೆ ಮಾರಾಟಗಾರನಷ್ಟೇ ಬಳಕೆಗಾರನೂ ದೋಷಿಯಾಗುವನೇನು? ಬೆರಸಿ ಹಾಲು ಮಾರುವುದು ಬಹಳ ಕಾಲದಿಂದ ಬಂದ ಅಪ್ರಾಮಾಣಿಕ ವ್ಯವಹಾರ. ಆದರೆ ಸುದೈವದಿಂದ ಹಾಲಿನೊಡನೆ ಬೆರಸುವುದು ನೀರಾದುದರಿಂದ ಅದು ಅಷ್ಟೇನೂ ಅಪಾಯಕರ ವಸ್ತುವಾಗಿಲ್ಲ. ತುಪ್ಪ ಮತ್ತು ವನಸ್ಪತಿಗಳನ್ನು ಬೆರಕೆಮಾಡಿ ಮಾರುವುದು ಅಪ್ರಾಮಾಣಿಕವಷ್ಟೇ ಅಲ್ಲ. ಅಪಾಯಕರವೂ ಆಗಿದೆ. ಒಂದು ವೇಳೆ ಅದೇನೂ ಅಷ್ಟು ವಿಷಮಯವಲ್ಲ ಎಂದು ಹೇಳಬಹುದು ಅದಕ್ಕೆ ಎಣ್ಣೆಯು ಒಳ್ಳೆಯ ಬದಲಿಯಾಗಬಲ್ಲುದೆಂದು ಎಣಿಸಲಾಗಿತ್ತು. ಆದರೆ ಎಣ್ಣೆಯನ್ನು ಕೂಡ—ಅದೂ ತೀರಾ ತಿನ್ನಲು ಬರದ ವಿಷಮಯವಾದ "ಬಿಳಿಯೆಣ್ಣೆ" ಯೊಡನೆ - ಬೆರಸಿ ಮಾರುವುದು ಕೆಲವೊವೆಮ್ಮೆ ರೂಢಿಯಲ್ಲಿ ಬಂದಿದೆ ಅದು ಶುದ್ಧಮಾಡಿದ ಸೀಮೆ ಎಣ್ಣೆಯು ಒಂದು ಮಾದರಿ. ಶುದ್ಧ ತುಪ್ಪದಂತೆ ತಿನ್ನಲಿಕ್ಕೆ ಬರುವ ಶುದ್ಧ ಎಣ್ಣೆಯಾದರೂ ಸಿಗುವುದು ದುಸ್ತರ ಎಂದು ಮೇಲಿಂದ ಮೇಲೆ ನನಗೆ ಕಾಗದಗಳು ಬರುತ್ತಿವೆ.

ವ್ಯಾಪಾರಿಜಾತಿ ಧರ್ಮ, ನೀತಿಗಳೆಲ್ಲವನ್ನು ಕಳೆದುಕೊಂಡು ಬಿಟ್ಟಿತೇ? ವ್ಯಾಪಾರಿಗಳೇಕೆ ಅಷ್ಟು ಕ್ರೂರಿಗಳೂ ಸ್ವಾರ್ಥಿಗಳೂ ದೇಶಬಾಂಧವರ ಹಿತಾಹಿತಗಳನ್ನು ಅಲಕ್ಷ್ಯ ಮಾಡುವವರೂ ಪಶುಗಳಂತೆ ನಾಚಿಕೆಗೇಡಿಗಳೂ ಆಗಿ ಹೋದರು?

೧೯೪೬-೪೭ ರಲ್ಲಿ ಭಾರತವನ್ನು ಹಾಯ್ದು ಹೋದ ಭ್ರಾತೃಹತ್ಯಾತರಂಗವನ್ನು ನಾವೆಲ್ಲ ಬಲ್ಲೆವು. ಪೂರ್ವ ಬಂಗಾಲದಿಂದ ಕಾಶ್ಮೀರದವರೆಗೆ ಗಾಂಧಿಯವರ "ಮಾಡು ಇಲ್ಲವೆ ಮಡಿ" ಎಂಬ ವ್ರತಾಚರಣೆ ಅದಕ್ಕೆ ಅಗತ್ಯವೆನಿಸಿತು ಮತ್ತು ಅದನ್ನು ಹಿಡಿತಕ್ಕೆ ತರಲು ಎರಡು ಆಮರಣ ಉಪವಾಸ ಬೇಕಾಯಿತು. ಅವರು ಅದನ್ನು ಮಾಡಿಯೂ ಮಾಡಿದರು, ಅದಕ್ಕಾಗಿ ಜೀವನವನ್ನೂ ತೆತ್ತರು.

ಅಪ್ರಾಮಾಣಿಕತೆಯ ಉಬ್ಬರದ ವಿರುದ್ಧವಾಗಿ ಮತ್ತು ವ್ಯಾಪಾರಾದಿ ಜನವನದ ಬೇರೆ ಬೇರೆ ಕ್ಷೇತ್ರಗಳಲ್ಲಿಯ ಒಂದು ಬಗೆಯ ಸಮಾಜವಾದಕ್ಕಾಗಿ ಕೆಲ ನಿಷ್ಠಾವಂತ ಜೀವಿಗಳ ಆತ್ಮಬಲಿ ಮತ್ತು ಆತ್ಮಾಹುತಿ ಬೇಕಾಗಿರುವುದೇನು? ಜನರ ಯಾವನಾದರೊಬ್ಬ ನಿಷ್ಠಾವಂತ ಸೇವಕ ಬಲವಾಗಿ ಅಲುಗಾಡಿಸಿದಲ್ಲದೆ ವ್ಯಾಪಾರಿ ಜಾತಿಯ ಮನಸಾಕ್ಷಿಗೆ ಎಚ್ಚರವಾಗುವುದಿಲ್ಲವೇನು?

ಇಂದಿಗಿಂತ ಎತ್ತರದ ನೈತಿಕ ಮಟ್ಟಕ್ಕೆ ಏರಬೇಕೆಂಬುದನ್ನು ನಾವೆಲ್ಲರೂ ಅರಿತುಕೊಳ್ಳೋಣ. ನಮ್ಮ ಇಂದಿನ ಅಧಃಪಾತ ಕೇವಲ ಅಸ್ವಾಸ್ಥ್ಯ ಮತ್ತು ಸಾರ್ವತ್ರಿಕ ಅಧೋಗತಿಗಳಿಗೆ ನಮ್ಮನ್ನು ಒಯ್ಯದಿರದು. ಮೊದಲು ಆರ್ಥಿಕವಾಗಿ ಅಲ್ಲ, ನೈತಿಕವಾಗಿ ಸುಧಾರಿಸಿಕೊಂಡಲ್ಲದೆ ನಮ್ಮ ಗತಿ ಚೀನಾ ಗತಿಗಿಂತ ಎಷ್ಟರಮಟ್ಟಿಗೂ ಉತ್ತಮವೆನಿಸದು.

ಸರ್ವೋದಯದಲ್ಲಿ ಶ್ರದ್ಧೆಯುಳ್ಳವರೆಲ್ಲರೂ ಈ ಉದ್ದೇಶ ಸಾಧನೆಗಾಗಿ ನಿಷ್ಠಾಪೂರ್ವಕವಾಗಿಯೂ ಹೃದಯಪೂರ್ವಕವಾಗಿಯೂ ಕೆಲಸಮಾಡಬೇಕು. ನೂರರಲ್ಲಿ ಒಂದಂಗುಲದಷ್ಟಾದರೂ ಜನತೆಯು ನೈತಿಕ ಮತ್ತು ಸಾಮಾಜಿಕ ಬುದ್ಧಿಯನ್ನು ಉನ್ನತಗೊಳಿಸಲಾದರೆ ಅದಕ್ಕೆ ಯಾವ ತ್ಯಾಗವೂ ಹೆಚ್ಚಿನದೆನಿಸದು ಮತ್ತು ಗಾಂಧಿಯವರ ವರ್ಗಕ್ಕೆ ಬಹುಸಂಖ್ಯಾವಾಗಿ ಸೇರಿದ ವ್ಯಾಪಾರಿಗಳಿಗೆ ಅಂತರ್ಮುಖರಾಗಿ ಆತ್ಮಸಾಕ್ಷಿಯ ನುಡಿಯನ್ನು ಆಲಿಸಿರೆಂದು ನಾನು ಹೃತ್ಪೂರ್ವಕವಾಗಿ ಬಿನ್ನವಿಸಿಕೊಳ್ಳುತ್ತೇನೆ. ಪಾಪಿಷ್ಠರು ಅವರ ಅಪಕೃತ್ಯಗಳಿಂದ ನರಳುತ್ತಿರುವಾಗ ಅವರು ತಮ್ಮನ್ನು ಉಳಿಸಿಕೊಳ್ಳಲಾರರು.

ಮುಂಬಯಿ

೨೨-೧-೪೯ ಕಿ. ಘ. ಮಶ್ರುವಾಲಾ.

—)o(—

ಸಾರ್ವಜನಿಕ ವ್ಯಕ್ತಿ ಮತ್ತು ಅವರ ಖಾಸಗಿ ... ...

ಈ ಒಂದು ಚಿಕ್ಕ ಸರಳ ಮಾತಿನಲ್ಲಿ ಗಾಂಧಿಯವರ ಜೀವನದ ತತ್ವ ಪ್ರಣಾಲಿಯನ್ನು ಸಂಗ್ರಹಿಸಿ ಹೇಳಿಬಿಡಬಹುದು: "ಒಳಹೊರಗೆ ಒಂದೇ ಆಗಿರು" ಏಕೆಂದರೆ, "ಹೃದಯಶುದ್ಧಿ ಇದ್ದರೆ ಸ್ವಚ್ಛತೆ, ಶುದ್ಧಿ ಇರಬೇಕು" ಎಂಬ ಗಾದೆಯ ಸತ್ಯವನ್ನು ಅವರು ಹೃತ್ಪೂರ್ವಕವಾಗಿ ನಂಬಿರಬೇಕು. ಆ ಗಾದೆಯ ಔಚಿತ್ಯಕ್ಕೂ ಸತ್ಯತೆಗೂ ಅವರೇ ಒಂದು ಜೀವಂತ, ಉಜ್ವಲ ವ್ಯಾಖ್ಯಾನವೆನಿಸಿದ್ದರು.

ಆದುದರಿಂದ ಗಾಂಧಿಯವರು, ಪ್ರತಿಯೊಬ್ಬರೂ ಅದರಲ್ಲೂ ಸಾಮಾನ್ಯ ಜನರ ನೀತಿ ನಡತೆಗಳಿಗೆ ಮೇಲ್ಪಂಕ್ತಿ ಹಾಕಿಕೊಡುವ ಕಾರಣದಿಂದ ಸಾರ್ವಜನಿಕ ಕಾರ್ಯಮಗ್ನ ಸ್ತ್ರೀಪುರುಷರೂ ಅವರಿಗೆ ಸಂಬಂಧಿಸಿದ ಸಂಸ್ಥೆಗಳೂ ವಿಶೇಷತಃ- "ಸುಜನರ ಹೆಂಡತಿಯಂತೆ" ಯಾವುದೇ ತರಹದ ಒಳಹೊರಗಿನ ನೀಚತನ, ಕಲಂಕ, ಕಲ್ಮಷ, ಶಂಕೆಗಳು ಹತ್ತದಂತಿರಬೇಕು. ಎಂದಿದ್ದಾರೆ ಮತ್ತು ಅವರ ವ್ಯಕ್ತಿತ್ವದ (ಜಿಗುಟಾದರೂ) ಪ್ರಭಾವಿಯಾದ ಸ್ಪರ್ಶ ಪಡೆದ ಅನೇಕ ವ್ಯಕ್ತಿ ಮತ್ತು ಸಂಸ್ಥೆಗಳು ಅವರು ಜೀವಿಸಿದ್ದ ಕಾಲದಲ್ಲಿ ನೂರಕ್ಕೆ ನೂರಿರುವ ಶುದ್ಧತೆಯ ಧ್ಯೇಯವನ್ನು ಅನುಸರಿಸಲು ಹೆಣಗಿದವೆಂಬುದನ್ನು ಹೇಳುವುದು ಅನಗತ್ಯ.

ಆದರೆ ದುರ್ದೈವದಿಂದ ಅವರು ತೀರಿಹೋದಂದಿನಿಂದೀಚೆಗೆ ಒಂದು ವರ್ಷದಿಂದ ನಿಶ್ಚಿತವಾಗಿ ನೈತಿಕ ಮರ್ಯಾದೆ ಕೆಡುತ್ತ ಬದಿದೆ. ಅದರ ಫಲವಾಗಿ ಗಾಂಧಿಯವರ ಹೆಸರು ಹಿಡಿದು ಪ್ರತಿಜ್ಞೆ ತೆಗೆದುಕೊಂಡ ಕೆಲವರು ಕೂಡ, ಒಬ್ಬ ಪ್ರಸಿದ್ಧ ನಿಷ್ಪಕ್ಷಪಾತಿಯಾದ ವಿಮರ್ಶಕ ಒಮ್ಮೆ ಹೇಳಿದಂತೆ, ಅವರ ಪ್ರಭಾವ ಯ ಆತ್ಮದ ಹೆಬ್ಬೆಳಕು ತಮ್ಮ ಮೇಲೆ ಬೀಳುವುದರಿಂದ ಮಾತ್ರ ರಂಗಸ್ಥಳದ ಮೇಲೆ ಹೊಳೆಯುತ್ತಿದ್ದು, ಈಗ ನಿಸ್ತೇಜವಾದ ಬಣ್ಣದ ಬೊಂಬೆಗಳಂತೆ ತೋರುತ್ತಾರೆ.

ಸ್ವತಂತ್ರ ರಾಷ್ಟ್ರವಾಗಿ ಬದುಕಲು ಶುರು ಮಾಡಿದ ನಮ್ಮ ಈ ಬಾಲ್ಯಾವಸ್ಥೆಯಲ್ಲಿ ನಮ್ಮ ಖಾಸಗಿ ಜೀವನದಲ್ಲೂ ಗಾಂಧಿ ಮಾದರಿಯ ಪಾವಿತ್ರ್ಯ ಪ್ರಾಮಾಣಿಕತೆಗಳನ್ನು ನೆಟ್ಟುಕೊಳ್ಳುವುದರಲ್ಲಿ ನೆರವಾಗುವ ಪರಂಪರೆಗಳನ್ನು ಸ್ಥಾಪಿಸುವುದು ಅತ್ಯಂತ ಮುಖ್ಯವಾದುದಲ್ಲದೇ? ಕೇವಲ ಭೌತಿಕ ಸ್ಮಾರಕವೊಂದು ಅವರನ್ನು ಅಮರರನ್ನಾಗಿರಿಸದು. ಲಕ್ಷ್ಯಪೂರ್ವಕವಾಗಿ ಒಳಹೊರಗೆ ಚೊಕ್ಕವಾಗಿರುವ ಪ್ರಾಮಾಣಿಕತೆಯೆಂಬ ಗಾಂಧೀ ಧ್ಯೇಯವನ್ನು ಅನುಸರಿಸುವುದರ ಮೂಲಕ ನಾವು ನಮ್ಮ ಪ್ರತಿನಿತ್ಯದ ಕೆಲಸಕಾರ್ಯಗಳಲ್ಲಿ ಅಮರತ್ವದ ಮೂರ್ತಿಯಲ್ಲಿ ಅವರನ್ನು ಪುನಃ ಸೃಜಿಸಬೇಕಾಗಿದೆ.

—ಜೆ. ಎಂ.

ಯಂತ್ರಮಯ ಕೃಷಿಪದ್ಧತಿ

"ಹರಿಜನ" ದ ೧೯೪೯ರ ಸಂಚಿಕೆಯನ್ನು ನನ್ನ ಆಪ್ತ ಗೆಳೆಯರೊಬ್ಬರು ನನಗಿತ್ತರು. ಅದರಲ್ಲಿ ಶ್ರೀ ಡಿ ಕೆ. ಗುಪ್ತರ "ಟ್ರ್ಯಾಕ್ಟರುಗಳೇಕೆ ಹಾನಿಕಾರಕ?"

ಎಂಬ ಪ್ರಬಂಧವನ್ನು ಓದಿದೆ. ಟ್ರ್ಯಾಕ್ಟರಿನಿಂದಲೇ ಭಾರತೀಯ ಕೃಷಿಪದ್ಧತಿಯನ್ನು ಯಂತ್ರಮಯವನ್ನಾಗಿ ಮಾಡಬಹುದೆಂಬುದು ಬಹುಶಃ ಶ್ರೀ ಗುಪ್ತರಿಗೆ ತಿಳಿದಿರಲಿಕ್ಕಿಲ್ಲ. ಬೇರೆ ಬೇರೆ ದೇಶದ ಒಕ್ಕಲುತನದ ಅಭಿವೃದ್ಧಿಯಲ್ಲಿ ಹಾರೆ ನೇಗಿಲು, ಕೊಯ್ದು ಒಕ್ಕುವ ಯಂತ್ರ ಕೊಯ್ಯುವ ಯಂತ್ರ ಮತ್ತು ಪೆಂಡಿಗಟ್ಟುವ ಯಂತ್ರ ಇಂಥ ಉಪಕರಣಗಳೇ ಮುಖ್ಯ ಪಾತ್ರ ವಹಿಸುತ್ತವೆ. ಎತ್ತಿನ ಜೋಡುಗಳು, ದುಡಿಯುವ ಕುದುರೆಗಳು ಇವನ್ನು ಟ್ರ್ಯಾಕ್ಟರಿಗೆ ಬದಲಾಗಿ ನಾವು ಸುಖವಾಗಿ ಬಳಸಿಕೊಳ್ಳಬಹುದು. ಪೆಟ್ರೋಲು ನಮ್ಮಲ್ಲಿಲ್ಲವೆಂಬುದೊಂದು ಕಾರಣದಿಂದ ಸ್ವಲ್ಪವೇ ಕೀಲೆಣ್ಣೆ ಬೇಕಾಗುವ ಇಂಥ ಉಪಕರಣಗಳ ಕಡೆಗೆ ನಾವು ಕಣ್ಣು ಮುಚ್ಚಿ ಕುಳಿತುಕೊಳ್ಳಕೂಡದು. ಹಳೆಯ ಕಾಲದ ಅನಾಗರಿಕ ಪದ್ಧತಿಗಳನ್ನು ಬಿಟ್ಟು ಇಂದಿನ ಯಂತ್ರಮಯ ಕೃಷಿಪದ್ಧತಿಯನ್ನು ನಾವು ಬಳಕೆಗೆ ತರುವ ಕಾಲ ಬಂದಿದೆ.

ವಿಷಯದ ಅನುಕೂಲ ಪ್ರತಿಕೂಲ ಸಂಗತಿಗಳನ್ನು ಗಮನಿಸಿಯೇ ನಾನು ಈ ಅಭಿಪ್ರಾಯಕ್ಕೆ ಬಂದಿದ್ದೇನೆ. ಬಹುಜನರ ಅಜ್ಞಾನ ಮತ್ತು ಅವರು ಟ್ರ್ಯಾಕ್ಟರಿಗೆ ವಿಶೇಷ ಮಹತ್ವ ಕೊಡುವುದು ಇವನ್ನು ತೊಡೆದುಹಾಕಲು ಇದು ಸಹಾಯಕವಾಗಬಹುದೆಂದು ನನ್ನ ನಂಬಿಗೆ

ಮೊಯನ್ [ಆಸ್ಟ್ರೇಲಿಯ] ಎಸ್.ಪಿ.ದಾಸ್

—

ಗಾಂಧಿ ಉಪದೇಶ ಸಾರ

'ವಿಯೋಗ ಮತ್ತು ನಾಶಕ್ಕಾಗಿ ದುಃಖಿಸುವದೆಂಬುದು ಅಜ್ಞಾನದ ಪರಮಾವಧಿ, ಎಂಬ ಮಾತು ಹೆಚ್ಚೆಚ್ಚು ವಿಚಾರಮಾಡುತ್ತ ನಡೆದಂತೆ ನನಗೆ ಮನವರಿಕೆಯಾಗುತ್ತಿದೆ. ಅದು ಅಜ್ಞಾನದ ಪರಮಾವಧಿ ಎಂದು ತಿಳಿದುಕೊಳ್ಳುವದೇ ಮೋಕ್ಷವು. ಸಾರ ಭೂತವಸ್ತುವಿಗೆ ನಾಶವಿಲ್ಲ, ವಿಯೋಗವಿಲ್ಲ. ಮಿತ್ರರಲ್ಲಿಯ ಸಾರ ವಸ್ತುವಿಗಾಗಿ ನಾವವರನ್ನು ಪ್ರೀತಿಸುವೆವಾದರೂ ಕಲಕಾಲದ ವರೆಗೆ ಆ ಸಾರವಸ್ತುವಿನ ಅಮರಣ ಪಾವನ. ಸಂಸಾರವಸ್ತುವಿನನಾಶಕ್ಕಾಗಿ ದುಃಖಿಸುವೆವು. ಇದು ಶೋಕ ಪ್ರವಹಿಸುವಾದುದು. ಅಪೂರ್ಣತ್ವದಿಂದ ಪೂರ್ಣತ್ವವನ್ನು ಪಡೆಯುವುದಕ್ಕಾಗಿ ಮಿತ್ರತ್ವದ ಉಪಯೋಗಮಾಡಿಕೊಳ್ಳುವದು ಅವಶ್ಯವಾಗಿದೆ''--

ಮಹಾತ್ಮಾ ಗಾಂಧಿಯವರ ಇಡಿ ಜೀವನವೇ ತ್ಯಾಗದ ಇನ್ನೊಂದು ಹೆಸರು.

—ರವೀಂದ್ರನಾಥ ಠಾಕೂರ.

—

ಇತಿಹಾಸವು ಜನಜೀವನದ ಪ್ರತಿಬಿಂಬ

ಇತಿಹಾಸಕಾರರು ಜಗತ್ತಿನಲ್ಲಿಯ ಘಟನೆಗಳಲ್ಲಿ ವಿಘಾತುಕ ಹಾಗೂ ಸಹಕಾರ ಪ್ರವೃತ್ತಿಗಳಿಗೆ ಪ್ರಾಮುಖ್ಯತೆ ಕೊಡಬೇಕೇ ಹೊರತು ಜಗತ್ತಿನಲ್ಲಿಯ ವಿಧ್ವಂಸಕ ಹಾಗೂ ಪ್ರತ್ಯೇಕ ಚಟುವಭಾವನೆಯ ಟಿಕೆ ಹಾಗೂ ಘಟನೆಗಳಿಗೆ ಪ್ರಾಮುಖ್ಯತೆ ಕೊಡಬಾರದು. ಇನ್ನು ಸಾಧಿಸುವಾಗ ಸತ್ಯ, ಆಳವಾದ ಅಭ್ಯಾಸ, ಇವುಗಳನ್ನು ಕಡೆಗಣಿಸಕೂಡದು. ಇತಿಹಾಸವು ಕೇವಲ ಕೆಲವೊಂದು ಪಂಡಿತರ ಸಲುವಾಗಿ ಬರೆಯಲ್ಪಡದೆ ಜನಸಾಮಾನ್ಯರಿಗೂ ಅದರಲ್ಲಿ ಅಭಿರುಚಿ ಹುಟ್ಟುವಂತೆ ಬರೆಯಲ್ಪಡಬೇಕು. "ಇತಿಹಾಸವು ಜನಜೀವನದ ಪ್ರತಿಬಿಂಬವಾಗಿರಬೇಕು. ಅದೊಂದು ಘಟನೆಗಳನ್ನು ನಿರ್ಜೀವವಾದ ರೀತಿಯಲ್ಲಿ ವಿವರಿಸುವ ಪೊತ್ತಿಗೆಯಾಗಬಾರದು. ಇತಿಹಾಸವು ಮಾನವ ಜೀವನವು ಗೊತ್ತಿದ್ದ ಅಥವಾ ಗೊತ್ತಿಲ್ಲದ ಗುರಿಯನ್ನು ಸಾಧಿಸಲು ನಡೆದ ಹೋರಾಟದ ವೃತ್ತಾಂತವಾಗಿದೆ. ಈವರೆಗೆ ಇತಿಹಾಸವು ಕೇವಲ ಧಾರ್ಮಿಕ ಸಂಗತಿಗಳನ್ನೊಳಗೊಂಡಿತ್ತು. ಇತ್ತೀಚೆಗೆ ಆರ್ಥಿಕ ವಿಷಯವು ಮಹತ್ವದ್ದಾದರೂ ಇದೇ ಸರ್ವಸ್ವವಲ್ಲ. ಜಗತ್ತಿನ ಈ ಎಲ್ಲ ವಿಷಯಗಳನ್ನು ಒಂದೇ ವಾಕ್ಯ ವ್ಯಕ್ತಿಗಳ ಸಂಬಂಧ, ವ್ಯಕ್ತಿಗೂ ಸಮಾಜಕ್ಕೂ ಇರಬೇಕಾದ ಸಂಬಂಧ, ಸಮಾಜವು ಇನ್ನೊಂದು ಸಮಾಜದೊಡನೆ ಇಟ್ಟುಕೊಳ್ಳಬೇಕಾದ ಸಂಬಂಧ ಇದೇ ಇತಿಹಾಸದ ಮುಖ್ಯಾರ್ಥ, ಇದರಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಎಲ್ಲ ಸಮಸ್ಯೆಗಳೂ ಅಂತರ್ಭೂತವಾಗುವವು."

ಪಂ. ನೆಹರು

—o—

ಚಾರಿತ್ರಿಕ-ಭವ್ಯ ಸಂಗ್ರಾಮದಲ್ಲಿ ಭಾಗವಹಿಸಿರಿ

ನಾನಿನ್ನೂ ಹಿಂದುಸ್ಥಾನದ ಕುರಿತೆ ಮಾತಾಡುತ್ತಿದ್ದೇನೆ. ಹಿಂದುಸ್ಥಾನದಿಂದ ಅನೇಕ ಸಾಧನ ಸಾಮಗ್ರಿಗಳನ್ನು ಬಯಸುತ್ತಿದ್ದೇವೆ. ಆದರೆ ಹಿಂದುಸ್ಥಾನದ ಬಗ್ಗೆ ನಾವು ತೋರಿಸುವ ಔದಾರ್ಯವು ಎಲ್ಲಿದೆಯೆಂದು ನಮ್ಮನ್ನೇ ಪ್ರಶ್ನಿಸಬೇಕಾಗಿದೆ. ನಾವು ಹೇಗಿರುವೆವೊ ಹಾಗೆಯೇ ಹಿಂದುಸ್ಥಾನವೂ ಇರುವುದು. ನಮ್ಮ ಭಾವನೆ ಕಾರ್ಯಗಳ ರೂಪ ರೇಖೆಯೇ ಹಿಂದುಸ್ಥಾನ. ಅದು ಸಜೀವಿತ ಗರ್ಭದಲ್ಲಿ ನಾವು ಜನ್ಮತಾಳಿ ಅದರ ಮಕ್ಕಳು ಮರಿಗಳಾಗಿದೇವೆ. ಹೆಚ್ಚೇಕೆ? ನಾವು ಹಿಂದುಸ್ಥಾನದ ತುಂಡು ತುಣುಕುಗಳಾಗಿದ್ದು ಮುಂದಿನ ಹಿಂದುಸ್ಥಾನದ ನಿರ್ಮಾಪಕರೂ ಆಗಿರುವೆವು. ನಾವು ವಿಶಾಲ ದೃಷ್ಟಿಯುಳ್ಳವರಾಗಿದ್ದರೇ ಹಿಂದುಸ್ಥಾನವೂ ಮಹತ್ವದ್ದಾಗಿರುವುದು. ಸಂಕುಚಿತ ಭಾವನೆ-ದೃಷ್ಟಿಕೋನದವರಾಗಿದ್ದರೆ ಹಿಂದುಸ್ಥಾನವೂ ಅದರ ಪ್ರತಿಚ್ಛಾಯೆಯಾಗಿರಬಹುದು.

ಆದುದರಿಂದ ನಮ್ಮನ್ನು ಮುಂದುವರಿಯಬಿಡದೆ ಕೆಳತಳ್ಳುವ ಪ್ರತಿಯೊಂದನ್ನು ನಾವು ನಿರ್ಮೂಲಗೊಳಿಸಬೇಕು. ನಾವು ಮತ ಭಯ, ಜಾತೀಯತೆ, ಪ್ರಾಂತೀಯತೆಗಳನ್ನು ತೊರೆದು ಸ್ವತಂತ್ರವಾದ ಪ್ರಜಾಸತ್ತಾತ್ಮಕ ಹಿಂದುಸ್ಥಾನವನ್ನು ನಿರ್ಮಿಸೋಣ. ನಮ್ಮ ದೇಶದ ಭೂರಿ ಜನರ ಹಿತಕ್ಕೆ ಸದಾ ಪ್ರಥಮ ಸ್ಥಾನವಿರಲಿ. ಅದರ ಮುಂದೆ ಇತರ ಎಲ್ಲಾ ಹಿತಗಳೂ ತಲೆಬಗ್ಗಿಸಲಿ. ಸ್ವಾತಂತ್ರ್ಯವು ಈ ಜನತೆಯ ಮೇಲಿರುವ ಅಪಾರ ಹೊರೆಯನ್ನು ಇಳುಹಿ ಅವರಿಗೆ ಪರಿಹಾರವನ್ನು ನೀಡದಿದ್ದರೆ, ಅಂತಹ ಸ್ವಾತಂತ್ರ್ಯದಿಂದ ಪ್ರಯೋಜನವಿಲ್ಲವೆಂದರೆ ಹೆಚ್ಚಲ್ಲ.

ಯುದ್ಧೋತ್ತರ ಪರಿಣಾಮಗಳಿಂದಲೂ ಅತಿ ಪ್ರಸರಣದಿಂದಲೂ ಇಡೀ ಪ್ರಪಂಚವೇ ಇಂದು ಸಂಕಷ್ಟಪಡುತ್ತಿದೆ. ಏರುತ್ತಿರುವ ಬೆಲೆಗಳೂ ನಿರುದ್ಯೋಗವೂ ಜನತೆಯನ್ನು ಒಗ್ಗ ಒಡೆಯುತ್ತಿವೆ. ಹಿಂದುಸ್ಥಾನದಲ್ಲಿ ಇವೆಲ್ಲವೂ ಇವೆ ಇದಲ್ಲದೆ, ತಮ್ಮ ಮನೆ ಮಾರುಗಳಿಂದ ಓಡಿಸಲ್ಪಟ್ಟು ಬೇರೆ ಕಡೆಗಳಲ್ಲಿ ಹೊಸಜೀವನಕ್ಕಾಗಿ ಬಹು ಅತ್ಯಂತ ಕಷ್ಟದಿಂದ ಒಳಲುತ್ತಿರುವ ನಮ್ಮ ಸಹೋದರ ಸಹೋದರಿಯರ ಜಾಗ್ರತೆ ನೋಡಿಕೊಳ್ಳುವ ಇನ್ನೊಂದು ಹೆಚ್ಚಿಗೆ ಸಮಸ್ಯೆಯೂ ನಮ್ಮಲ್ಲಿದೆ. ಆರ್ಥಿಕ ಸಂದಿಗ್ಧ ಪರಿಸ್ಥಿತಿಗೆದುರಾಗಿ ಹೋರಾಟ ನಿರಾಶ್ರಿತರ ಪುನರ್ನಿವೇಶನದ ಹೋರಾಟ ಎಂದು ಎಲ್ಲೆಲ್ಲೂ ಹೋರಾಟಗಳೇ ಸುರಿಮಳೆ ಇವರಲ್ಲಿ ದ್ವೇಷ, ಮತ್ಸರ, ಹಿಂಸೆಗಳ ಎಡೆಯಿಲ್ಲದೆ ಯಶಸ್ವಿಯಾಗಲೇ ಬೇಕು ಏಕೆಂದರೆ ಈ ಹೋರಾಟವೂ ನಮ್ಮ ಜನತೆಯ ಸೇವೆಯಲ್ಲೇ ನೆರವಿದೆ.

ಈ ಹೋರಾಟದಲ್ಲಿ ಪ್ರತಿಯೊಬ್ಬ ಹಿಂದೀಯನೂ ಸೈನಿಕನಿದ್ದಾನೆ ವ್ಯಕ್ತಿಗಳಾಗಲಿ, ಪಂಗಡಗಳಿಗಾಗಲೀ ವಿಶಾಲ ದೃಷ್ಟಿಯಿಲ್ಲದೆ ಲೋಕ ಹಿತಕ್ಕೆ ತಿಲಾಂಜಲಿಯಿತ್ತು ಸಂಕುಚಿತವಾದ ಸ್ವಾರ್ಥ ಹಿತಗಳ ಕುರಿತು ಆಲೋಚಿಸುವ ಕಾಲವಲ್ಲ. ಕಚ್ಚಾಟ ಪಕ್ಷಪಂಗಡಗಳಿಗೆ ಎಡೆಯಿಲ್ಲ. ತಮ್ಮ ಹೃದಯಗಳಲ್ಲಿ ಹಿಂದುಸ್ಥಾನದ ಮೇಲೆ ಪ್ರೀತಿಯಿಂದ ಅದರ ಲಕ್ಷಗಟ್ಟಲೆ ಬಡಜನರನ್ನು ಉದ್ಧರಿಸುವ ಬುದ್ಧಿಯುಳ್ಳ ದೇಶದ ಸ್ತ್ರೀ-ಪುರುಷರೆಲ್ಲಾ ಮುಂದೆ ಬರಲಿ ಅಲ್ಲದ ಸಲ್ಲದ ಎಡೆತಡೆಗಳನ್ನು ಬಿಟ್ಟುಬಿಡಲಿ. ಮಹಾನುಭಾವಿಗಳಿಗೆ ಯೋಗ್ಯವೆನಿಸುವ ಈ ಚಾರಿತ್ರಿಕವಾದ ಭವ್ಯಕಾರ್ಯದಲ್ಲಿ ಒಂದಾಗಿ ಸೇರಬೇಕೆಂದು ಎಲ್ಲರಿಗೂ ವಿನಂತಿ.

—ಪಂ. ಜ. ನೆಹರು.

—ನಿರಾಶ್ರಿತರ ಪುನರ್ನಿವೇಶನಕ್ಕಾಗಿ ಭಾರತ ಸರಕಾರವು [illegible] ಕೋಟಿ [illegible] ಲಕ್ಷ ರೂಗಳನ್ನು ವೆಚ್ಚಮಾಡಿದೆಯೆಂದು ಪುನರ್ನಿವೇಶನ ಮಂತ್ರಿ ಶ್ರೀ ಮೋಹನಲಾಲ ಸ್ಯಾಕ್ಸೇನಾರವರು ಹೇಳಿದರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193[illegible]

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ ರೂ. 3½% ವರ್ಷಕ್ಕೆ ಶೇಕಡ
ಒಂದು ವರ್ಷ ,, ರೂ 4% ,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,, ರೂ. 4½% ,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—4—3 ಕ್ಕೆ ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು

ಮುಖ್ಯ ಕಾರ್ಯಾಲಯ:- ಬಳ್ಳಾರಿ

ಬಿ ವಿ. ಶೇಷಗಿರಿರಾವು ಬಿ ಕಾಂ.,
ಕಾರ್ಯದರ್ಶಿ

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲಿನಾಶ್ರಯ, ರಿಜಿಸ್ಟರ್ಡ್)

[illegible] 6 [illegible]

ಸ್ಥಳ—ಮಾಡರ್ಲಾ ಹೈಸ್ಕೂಲ್ ಕಟ್ಟಡ
ತರಗತಿಗಳು:—ಪ್ರಾರಂಭಿಕ:—ಪ್ರಥಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ
ವೇಳೆ:—ಪ್ರಾತಃಕಾಲ 7ರಿಂದ 9 ಸಾಯಂಕಾಲ 6ರಿಂದ 8ರ ವರೆಗೆ ಶಾಸ್ತ್ರೋಕ್ತ [illegible] ವರ್ಗಗಳ ಅವಧಿ ಕಾಲಾವಧಿ ವಗೈರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ತಿಳಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ: - ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ. 14—2—49

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

....

Printed at Vittal Press, Edited & Publishedby T. B. Keshava Rao.

JAI-HIND.

ಒಳ್ಳೆದಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ ''

ಸಂಪಾದಕ ಮತ್ತು ಪ್ರಕಾಶಕ:
ಟಿ. ಜಿ. ಕೇಶವರಾವ್.

ವರ್ಷ ೧೨ | ಸೋಮವಾರ [illegible] ಫೆಬ್ರವರಿ [illegible] | ಸಂಚಿಕೆ [illegible]

ಅಸಹಾಯ ಶೂರತೆ

[ಕೈಲಾಸನಾಥ ಕಟ್ಜೂ, ಗವರ್ನರ್ ಪಶ್ಚಿಮ ಬಂಗಾಳ]

೧೯೪೧ರಲ್ಲಿ ನಾನು ಸೆರೆಮನೆಯಲ್ಲಿ ಇದ್ದಾಗ ನನಗೆ ಮತ್ತು ನನ್ನ ಸಹೋದ್ಯೋಗಿಗಳ ಬಿಡುಗಡೆಗಾಗಿ ... ಅಹಿಂಸೆಯನ್ನು ಧರ್ಮವೆಂದು ತಿಳಿಯುವವರ ಬಗ್ಗೆ ಕೆಲವು ವಿಚಾರಗಳನ್ನು ಬರೆದೆನು. [illegible] ಅಹಿಂಸಾ ಧೋರಣೆಗೆ ಅಸಹಾಯ ಶಿಕ್ಷೆ ಎಂಬ [illegible] ನನ್ನ ಎಲ್ಲ ವಾದಗಳ ಸಾರವಾಗಿತ್ತು. ಅದಕ್ಕೆ ಜಯಶೀಲವಾದರೆ [illegible] ಸಮಾಜವು ಅದನ್ನು ಧರ್ಮವೆಂದು ತಿಳಿದು ಆ ಪ್ರಕಾರ ಆಚರಿಸಬೇಕು. ಅಹಿಂಸೆಯ ಅರ್ಥವನ್ನು ಗಾಂಧಿಯವರೇ ಸ್ವತಃ ಹೇಳಿ ವಿವರಿಸಿದ್ದಾರೆ. ಆದರೆ ಇನ್ನೂ ಕೆಲವರಿಗೆ ಅಸ್ಪಷ್ಟತೆ ಉಳಿದಿತ್ತು. ಅವರ ನಿರ್ವಾಣಾನಂತರ ಪ್ರಕಟವಾದ ಯಾರಾದರೂ ಪತ್ರ ಹೇಳಿಕೆಗಳನ್ನು ಆಧರಿಸಿ [illegible] ಮತ್ತು ಗಾಂಧೀಜಿಯವರು ಎಣಿಸಿದಂತೆ ದುಷ್ಟ ಸತ್ವಗಳೊಡನೆ ಅಸಹಕಾರದಿಂದ ಇರುವುದರ ಒಂದು ಸಂಪೂರ್ಣ ಚಿತ್ರವನ್ನು ಜಗತ್ತಿನವರು ಇಚ್ಛಿಸಿದರೆ ಚೆನ್ನಾಗಿರುತ್ತಿತ್ತು ಎಂದು ಸಲಹೆ ಕೂಡ ಕೊಟ್ಟೆ. ನಾನು ಜೇಲಿನಿಂದ ಬಿಡುಗಡೆ ಹೊಂದಿದ ಮೇಲೆ ಗಾಂಧಿಯವರ ಅನುಯಾಯಿಗಳೆಂದು ಹಸ್ತಪ್ರತಿಯನ್ನು ಕಿಶೋರಲಾಲ ಭಾಯಿಯವರ ಮೂಲಕ ಅವರಿಗೊಪ್ಪಿಸಿದೆ. ಅವರು ಪತ್ರಿ ಅದರ ಒಂದು ಭಾಗವನ್ನು ತಮ್ಮ ಟಿಪ್ಪಣಿಯೊಂದಿಗೆ [illegible] ಪತ್ರಿಕೆಯಲ್ಲಿ ಅದನ್ನು ಪ್ರಕಟಿಸಿದರು. ಪತ್ರ್ಯಾದವರ ಭಾಷ್ಯದಿಂದ ನನ್ನ ಸಲಹೆಯ ಬಗ್ಗೆ ಅವರ ಅದನ್ನು ನಾನೇ ಮಾಡುವುದೊಳಿತೆಂದು ನನಗೆ ಹೇಳಿದರು. ಆನಂತರ ಸ್ವಾತಂತ್ರ್ಯವಾದ ಆ "ಚಲೇಜಾವ್" ಚಳವಳಿ ಪ್ರಾರಂಭವಾಯಿತು. ಮತ್ತೆ ನಾವೆಲ್ಲರೂ ಪುನಃ ಜೇಲನ್ನು ಹೊಕ್ಕೆವು.

ಕಳೆದ ೭ ವರ್ಷಗಳು ಒಂದೊಂದು ಶತಕಗಳಂತೆ ತೋರುತ್ತವೆ. ನಡೆದ ಸಂಗತಿಗಳು ಅಷ್ಟು ತೀವ್ರ ಗತಿಯವು. ಜಗತ್ತಿನ ಇತಿಹಾಸವನ್ನು [illegible] ಮಾಡುವಂಥವು ಆಗಿವೆ, ನಮ್ಮ [illegible] ಕಣ್ಣೆದುರಿಗೆ ಬದಲಾದಂತೆ ತೋರುತ್ತವೆ. [illegible] ಜಗತ್ತು [illegible] ಸೋತ ನೋಡುತ್ತ [illegible] ಹೋದವು [illegible] ಬೇರೆ ಬೇರೆ ವರ್ಗಗಳೂ ಜನರ ಬಲಿಗೆ ತುತ್ತಾದವು. [illegible] ಇನ್ನು ಅಹಿಂಸೆಯು ವಾಸ್ತವಿಕವೇ ಎಂಬ ಪ್ರಶ್ನೆ ಜಗತ್ತಿನ [illegible] ದಯನೀಯವಾಗಿ ಬೆಳೆದಿದೆ.

ಕಡೆಯ ವರೆಗೆ ಗಾಂಧಿಯವರು ತಮ್ಮ ತತ್ವಗಳನ್ನು [illegible] ಸುತ್ತಿದ್ದರು. ಅದರ ಬಗೆಯವರಿಗೆ ಹೇಗೆ ಸಾಧಿಸಬೇಕು [illegible] ಅವರ ಮರಣದ [illegible] ಪ್ರತಿಯೊಂದು [illegible] (ಸತ್ಯ [illegible]) ಸತ್ಯದೊಡನೆ [illegible] ಇವುಗಳ ಬಗ್ಗೆ [illegible] ಕೊಡುತ್ತಿದ್ದ [illegible] ನಾನು [illegible] ಮಾಡಿದ [illegible] ಇವನ್ನು [illegible] ಸಮಾಜಕ್ಕೆ [illegible] ಗಾಂಧೀಜಿ [illegible] ಒಂದು ಇಡಿಯ ಅನ್ಯಪಕ್ಷೀಯ [illegible] ಭಾಗಗಳಿಂದ [illegible] ಒಂದು ಭಾಗ ಸ್ವತಂತ್ರವಾಗಿ ಉಳಿದ ಆದಕ್ಕೆ ಅವರ [illegible] ಬೇಕಿಲ್ಲ.

ಇದು ನಿಜವಾಗಿಯೂ ಒಂದು [illegible] ಸ್ವತಂತ್ರ [illegible] ಜಾಗತಿಕ ಕಲಹದ ಸಂಭವ ಮತ್ತು ಅನಿವಾರ್ಯತೆಗಳ ಬಗ್ಗೆ ಹಲವರು [illegible] ಆ ನನ್ನ [illegible] ಅಹಿಂಸಾತ್ಮಕ ಹೋರಾಟ [illegible] ಪ್ರಮಾಣದ ಪಾತ್ರವನ್ನು [illegible] ವ್ಯಾಪಾರ [illegible] ಮತ್ತು [illegible] ಕೈಗಾರಿಕೆ [illegible] ಮತ್ತು [illegible] ಜಗತ್ತಿನವರು [illegible] ಸ್ವಾತಂತ್ರ್ಯ [illegible] ಬೇಕಾದರೆ ಮತ್ತು ಶಾಂತಿ ಸ್ವತಂತ್ರತೆಗಳನ್ನು [illegible] ನೆಲೆಗೊಳಿಸಬೇಕಾದರೆ ಅದು ಶಸ್ತ್ರಬಲದಿಂದಲ್ಲ ಎಂದು ತಾತ್ಪರ್ಯದಿಂದ ಸಾರುತ್ತ [illegible] ಧೋರಣೆ [illegible] ಸಮಾಜದ [illegible] ರಾಷ್ಟ್ರದ [illegible]. ತಮ್ಮ ಎಣಿಕೆಯ ಅಹಿಂಸೆಗೆ ಅತ್ಯುತ್ತಮವಾದ ಆದರ್ಶ ಮತ್ತು ಸಿದ್ಧಿಗಳು [illegible] ಎಂದು ಗಾಂಧಿಯವರು ಸದೇವದೇ [illegible] ಜನರನ್ನು ಗಾಂಧಿಯವರ ಮಾದರಿಯ ಅಹಿಂಸಾವಾದಿಗಳನ್ನಾಗಿ [illegible] ಮನಗಳ ಉತ್ತೇಜಿಸಬೇಕು. ಕಂಡ ಗಳಿಗೆಯಲ್ಲಿ ಆಹಿತಕರ ಸಮಾಜವನ್ನು [illegible] ಕಾಲದಿಂದ ಇದ್ದ [illegible] ಹಿಂಸೆಯನ್ನು [illegible] ಮತ್ತು ಧೀರರ ಅಹಿಂಸೆ ಮತ್ತು ಅದರಿಂದಾಗಿ ಆಗಬೇಕಾದ [illegible] ಅಸಹಕಾರ [illegible] ಕೂಡ [illegible]

[illegible] ಕರಣದ ಮಾತುಗಳಲ್ಲಿ [illegible] ಎಣಿಸಲಾಗುತ್ತದೆ. [illegible] ರಾಷ್ಟ್ರವು [illegible] ಸಾಮೂಹಿಕ ನಿರ್ಣಯವನ್ನು ತಂದುಕೊಳ್ಳಲಿ [illegible] ಮತ್ತು [illegible] ಪರಿಣಾಮ ಸ್ವೀಕರಣವಾಗುವುದು [illegible] ತೋರುತ್ತದೆ.

ನಮಗೆ ಸಾಧ್ಯ ಸಹಮತಿಯಿಂದ ಪಡೆದುಕೊಳ್ಳಬೇಕೆಂದರೆ, [illegible] ಸಂಘಟಿತವಾದ [illegible] ಎದುರಿಸಬೇಕೆಂದು ನನ್ನ ಎಣಿಕೆ [illegible] ಸಾರ್ವಜನಿಕ ಕಾಯ್ದೆ, ಸೈನಿಕ ಮತ್ತು ಭೌತಿಕ ವಿನಾಶದಿಂದ [illegible] ಒಂದೇ ಒಂದು ಮಾರ್ಗವೆಂದರೆ [illegible] ಯಾವುದಾದರೊಂದು ದೇಶವು [illegible] ಆಗ ಅದು [illegible] ಆ ದಾರಿಯಲ್ಲಿ ಹೋಗಬೇಕಾಗಿ [illegible] ಅವಶ್ಯಕತೆಗನುಸಾರವಾಗಿ [illegible] ತತ್ವಗಳನ್ನು ಕೈಕೊಳ್ಳಬೇಕು. [illegible] ಸರಳವಾದ ಕೆಲಸವಲ್ಲ. ನಾವು [illegible] ಸಮಾಜದ [illegible] ಯೋಗ್ಯವಾದ [illegible] ಬಳಸಬೇಕು. ನವ ಆರ್ಥಿಕ ಪ್ರಗತಿಯು [illegible] ಆಗಬೇಕು. [illegible] ಅದೊಂದು ಅಪ್ಪಟವಾದ [illegible] ಅದನ್ನು ಮಾಡಲು ನಾವು [illegible] ನಾವು ಅಹಿಂಸೆ [illegible] ಪೂರ್ಣ [illegible] ಕಾಣುತ್ತದೆ [illegible] ಕಂಡಿತು.

[illegible] ಅಹಿಂಸಾತ್ಮಕ [illegible] ಸಂಪೂರ್ಣ ಚಿತ್ರ [illegible] ಎಂದ ನನ್ನ ಆಸೆ [illegible] ಸಮಾಜದಲ್ಲಿ ಸಾಧ್ಯ [illegible] ಸಾಗಬೇಕು. ಅಹಿಂಸೆಯು [illegible] ಇದೆ [illegible] ಸಾಧ್ಯ [illegible] ಯಾವುದರಲ್ಲಿ, ಅಗಲಿ, [illegible] ಕೊಟ್ಟಿದೆನೆಂದರೆ ಆಗ [illegible] ಸಾಧನಗಳ ಪಾವಿತ್ರ್ಯಕ್ಕೆ [illegible] ಕೊಟ್ಟಂತಾಗುತ್ತದೆ [illegible] ಅದು [illegible] ವಾದೇ [illegible]

ನೋಟೀಸು

ಬಳ್ಳಾರಿ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S C 418/48

ವಾದಿ ಚಿಕ್ಕನಗೌಡ ಶೀವನಗಡ್ಡ

ಪ್ರತಿವಾದಿ - ದಡಿ ಅಯ್ಯನಗೌಡ

ಪ್ರತಿವಾದಿಗೆ ನಾನಾ ನೋಟೀಸು

ಸಿರಗುಪ್ಪ ತಾಲೂಕು ಮಂಡೇನೂರು ವಾಸಸ್ಥ ಈಗ ರೆಡ್ಡಿ ಕೆಲಸದಲ್ಲಿರುವ ಚಿಕ್ಕನಗೌಡ ... ರೆಡ್ಡಿ ಅಯ್ಯನಗೌಡರಾದ ನಿಮಗೆ ತಿಳಿಸುವದೇನಂದರೆ ಮೇಲ್ಕಂಡಿಸಿದ ನಂಬರಿನ ದಾವೆಯು ಅಂತಿಮ ಫೈಸಲ್ಯಾಗಿ (final disposal) 28-2-49 ಕ್ಕೆ ವಿಚಾರಣೆಗೆ ಹಾಕಲಾಗಿದೆ. ಅಂದು ನೀವಾಗಲಿ ನಿಮ್ಮ ವಕೀಲರಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆ ತಿಳಿಸದಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗುವದೆಂದು ತಿಳಿಯಬೇಕು.

ಹೆಚ್. ಹನುಮಂತರಾವ.
ವಾದಿಯ ವಕೀಲರು.

'ANDHRA JYOTHI'

A new Telugu Drama entitled "Andhra Jyothi" or "Rural Uplift" was put on boards on the night of Tuesday last in the Indian Railway Institute, Guntakal, by Navya Kala Mandali, an amateurs' Association of the place Mr C Chelapathi Rao D. T. S. (Power), presided.

The drama, while laying stress on the urgent need for an Andhra Province, condemned certain malpractices perpetrated on the masses and the rich by some bogus patriots.

The cast included Mr K Meenakshi Naidu, ably assisted by Srimathi, Sakuntala & Nagaratnam in the female roles. Drs. Satyanathan, I. Govindarajulu Naidu and Lingam acquitted themselves well. Poet and Telugu Pandit Pullamraju's songs, poems and histrionic talents were of a high order.

Kumari Indrani, a nine-year old girl of Bellary gave three dance recitals which received applause. Mrs. Chelapathi Rao presented her with a medal. With an appreciative speech by the president the entertainment concluded.

ಮದರಾಸ್ ಸರಕಾರದ ಪ್ರಕಟಣೆಗಳು

ಎಲ್ಲೆಲ್ಲಿ ಗಾಂಧೀಜೀಯವರ ಹೆಸರು

ಶ್ರೀಯವರ ನಾಮವನ್ನು ಕಳಂಕಗೊಳಿಸಬೇಡಿರಿ

ಸ್ಥಳೀಯ ಸಂಸ್ಥೆಗಳು ... ಸಾರ್ವಜನಿಕ ಕಟ್ಟಡ ಇತ್ಯಾದಿಗಳಿಗೆ ಮಹಾತ್ಮಾ ಗಾಂಧಿಯವರ ಹೆಸರನ್ನಿಡುವ ಕುತೂಹಲದ ... ಸರಕಾರದ ಗಮನಕ್ಕೆ ಬಂದಿದೆ. ಈ ವಿಷಯದಲ್ಲಿ ಹಿಂದೂಸ್ಥಾನದ ಪ್ರಧಾನ ಮಂತ್ರಿ ಪಂಡಿತ ನೆಹರೂ ಅವರ ಹೇಳಿಕೆಯ ಕಡೆಗೆ ಸ್ಥಳೀಯ ಸಂಸ್ಥೆಗಳ ಗಮನವನ್ನು ಸೆಳೆಯಲಾಗಿದೆ. ಆ ಹೇಳಿಕೆಯು ನೈತಿಕ ... ಪ್ರಕಟಿಸಲ್ಪಟ್ಟಿದೆ. ಈ ಕಾಲದಲ್ಲಿ ಮಹಾತ್ಮಾ ಗಾಂಧಿಯವರ ಹೆಸರನ್ನು ಸೇರಿಸುವ ಪದ್ಧತಿಯನ್ನು ಅವರು ಖಂಡಿಸಿದ್ದಾರೆ. ಆದುದರಿಂದ ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಮುನಿಸಿಪಲ್ ಕೌನ್ಸಿಲ್‌ಗಳನ್ನೂ ಸ್ಥಳೀಯ ಸಂಸ್ಥೆಗಳನ್ನೂ ಮದರಾಸ ಸರಕಾರವು ಕೇಳಲಾಗಿದೆ.

ಮದರಾಸ್ ಸರಕಾರದ ಪ್ರಕಟಣೆ.

ಹೊಸ ಕಾಲೇಜುಗಳೂ ತರಗತಿಗಳೂ

ಹೊಸ ಕಾಲೇಜುಗಳನ್ನಾಗಲೀ ಈಗ ಇರುವ ಕಾಲೇಜುಗಳಲ್ಲಿ ಹೊಸ ತರಗತಿಗಳನ್ನಾಗಲೀ ತೆರೆಯುವ ಬಗ್ಗೆ ಖಾಸಗಿ ಯಜಮಾನರು ಸಂದರ್ಭಕ್ಕನುಸಾರವಾಗಿ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರಿಗೆ ಅಥವಾ ಇನ್ಸ್‌ಪೆಕ್ಟರ್ ಆಫ್ ಗರ್ಲ್ಸ್ ಸ್ಕೂಲ್ ಇವರಿಗೆ ಹೊಸದಾಗಿ ತೆರೆಯುವ ಶಾಲಾ ವರ್ಷದ ಮುಂಚಿನ ವರ್ಷದ ಡಿಸಂಬರ 31 ರೊಳಗೆ ಅರ್ಜಿ ಕಳುಹಿಸತಕ್ಕದ್ದು. ಟ್ರೈನಿಂಗ್ ಶಾಲೆಗಳ ಮಟ್ಟಿಗೆ ಅರ್ಜಿಯು ಆಗೋಸ್ಟು 1 ನೇ ತಾರೀಕಿನೊಳಗೆ ಮುಟ್ಟಬೇಕು. ಈ ತಾರೀಕುಗಳು 1950-51 ನೇ ವರ್ಷದಿಂದ ಕಳುಹಿಸುವ ಅರ್ಜಿಗಳಿಗೆ ಮಾತ್ರ ಅನ್ವಯಿಸುತ್ತವೆ. 1949-50 ರಲ್ಲಿ ತೆರೆಯುವಂತೆ ಹಾಲಿ ವರ್ಷದಲ್ಲಿ ಬಂದಿರುವ ಅರ್ಜಿಗಳನ್ನು ಈವರೆಗಿದ್ದ ಕ್ರಮದಲ್ಲಿ ತೀರ್ಮಾನಿಸಲಾಗುವದು.

ಖಾದಿ

ಕಟ್ಟು ಕಟ್ಟಿನದ ... ಉತ್ಪನ್ನದ ಇಲಾಖೆ ... ಸರಕಾರಿ ಇಲಾಖೆಗಳು ಇನ್ನು ಮುಂದೆ ಖಾದಿ ವಸ್ತ್ರ ಉಪಯೋಗಿಸಬೇಕೆಂದೂ ಈ ಉದ್ದೇಶಗಳಿಗೆ ಖಾದಿ ಉಪಯೋಗಿಸುವುದರಿಂದ ವೆಚ್ಚ ಹೆಚ್ಚಾಗುತ್ತದೆಂದು ತಿಳಿಯಲಾಗಿದೆ.

ಬಿರುದು

ಅಧಿಕೃತ ಪತ್ರ ... ಹಿಂದಿನ ಸರಕಾರ ... ಬಿರುದುಗಳನ್ನು ... ಉಪಯೋಗಿಸಕೂಡದೆಂದು ಹಿಂದೂಸ್ಥಾನ ಸರಕಾರವು ನಿರ್ಧರಿಸಿರುತ್ತದೆ. ಹೀಗೆ ... ಬಿರುದುಗಳನ್ನು ಹಿಂದೆ ... ದಲ್ಲಿ ಅಧಿಕಾರದ ದಾಖಲೆ ಪತ್ರಗಳಲ್ಲಿ ಅವನ್ನು ಉಪಯೋಗಿಸಬಾರದು ಮಾತ್ರ.

— 31-12-48 ರ ವರೆಗೆ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಸಂಗ್ರಹವಾದ ಹಣ ರೂ 2,14,21,122-8-6 ಧನಕ ಹಣ ಸಂಗ್ರಹಿಸುವ ಕಾಲ ಮಿತಿಯನ್ನು 31-1-49 (ರಿಂದ 30-4-49) ರ ವರೆಗೆ ಮುಂದರಿಸಲಾಗಿದೆ.

— ಸಂಯುಕ್ತ ಪ್ರಾಂತವು ದೇವನಾಗರಿ ಲಿಪಿಯಿಂದ ಕೂಡಿದ ಹಿಂದುಸ್ಥಾನಿ ಭಾಷೆಯನ್ನು ಸರಕಾರದ ವ್ಯವಹಾರಿಕ ಭಾಷೆಯನ್ನಾಗಿ ಅಂಗೀಕರಿಸಿದೆ.

— ನಮ್ಮ ಗವರ್ನರ್ ಜನರಲ್‌ರ ಸಂಬಳವನ್ನು ವರ್ಷಕ್ಕೆ ರೂ 2,50,800 ರಿಂದ ತಿಂಗಳಿಗೆ ರೂ 5,500 ರಷ್ಟಕ್ಕೆ ತಗ್ಗಿಸಲು ಗವರ್ನರ್ ಜನರಲರೂ ಮಂತ್ರಿಮಂಡಲವೂ ಒಪ್ಪಿರುತ್ತಾರೆ. ಈ ತಗ್ಗಿಸಿದ ಸಂಬಳವನ್ನು ಆದಾಯ ತೆರಿಗೆ ಹಾಗೂ ಸೂಪರ ತೆರಿಗೆಯಿಂದ ವಿನಾಯಿತಿಗೊಳಿಸುವ ಒಂದು ಪರೀಕ್ಷಾ ... ಯನ್ನು ಯೋಚಿಸಲಾಗಿದೆ.

ವಿದೇಶಿ ಬಂಡವಾಳ

ಹಿಂದುಸ್ಥಾನದಲ್ಲಿ ಈಗ ಸುಮಾರು 800 ರಿಂದ 1,100 ಕೋಟಿ ರೂಪಾಯಿಗಳಷ್ಟು ವಿದೇಶೀ ಬಂಡವಾಳವು ಇದೆಯೆಂದು ಅನಧಿಕೃತವಾಗಿ ಅಂದಾಜು ಮಾಡಲಾಗಿದೆ. ಇದರಲ್ಲಿ ಹೆಚ್ಚಿನಾಂಶವು ಬ್ರಿಟಿಷರದು. ಅಮೇರಿಕದ ಬಂಡವಾಳವು ಮೊತ್ತದ ಶೇಕಡ ಒಂದು ಪಾಲಿನಷ್ಟಿದೆ. ಕಳೆದ ಎರಡು ವರ್ಷಗಳಲ್ಲಿ 60-70 ಕೋಟಿ ರೂಪಾಯಿಗಳಷ್ಟು ವಿದೇಶಿ ಬಂಡವಾಳವು ಇಲ್ಲಿಂದ ಆಯಾಯ ದೇಶಗಳಿಗೆ ಹಿಂದೆ ಹೋಗಿರುತ್ತದೆಂದೂ ಅಂದಾಜು ಮಾಡಲಾಗಿದೆ.

ಶಿಕ್ಷಣ ಮತ್ತು ಶಿಕ್ಷಕ

೧೯೪೭ ನೇ ಆಗಸ್ಟ ೧೫ ನೇ ದಿನವು ನಮ್ಮ ರಾಷ್ಟ್ರದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯಬೇಕಾದಂತಹದು. ಅರವತ್ತು ವರ್ಷಗಳಿಗೆ ಮಿಕ್ಕಿ ಮಾಡಿದ ತ್ಯಾಗಸಾಹಸಗಳು ಅದಿನ ಫಲಿಸಿದವು. ಅದಿನ ಭಾರತಕ್ಕೆ ಆನಂದದ ದಿನ. ಆದರೆ ಮದ್ದೈವದಿಂದ ಅದು ಅಖಂಡವಾದ ಆನಂದವಾಗಿ ಪರಿಣಮಿಸಲಿಲ್ಲ. ಸ್ವಾತಂತ್ರ್ಯದ ಕೂಡ ಸಂಕಟ ಪರಂಪರೆಗಳು ನಮ್ಮೆದುರು ಅದ್ಭುತಾಕಾರವನ್ನು ತಳೆದು ನಿಂತವು. ಅವೆಲ್ಲ ನಮ್ಮ ಸ್ಮೃತಿಪಥದಲ್ಲಿ ಇನ್ನೂ ಅಚ್ಚಳಿಯದೆ ಉಳಿದಿರುವದರಿಂದ ಅವುಗಳ ನಾಮ ನಿರ್ದೇಶವನ್ನು ನಾನು ಮಾಡಬಯಸುವದಿಲ್ಲ. ನಮ್ಮ ರಾಷ್ಟ್ರದ ಸುದೈವದಿಂದ ನಮಗೆ ಪಂಡಿತ ಜವಾಹರಲಾಲ ಹಾಗೂ ಸರದಾರ ವಲ್ಲಭಭಾಯಿಯವರಂತಹ ಮುಖಂಡರು ದೊರೆತಿದ್ದರಿಂದ ನಮ್ಮ ರಾಷ್ಟ್ರನೌಕೆಯು ಒಂದೊಂದೇ ಸಂಕಟದಿಂದ ಪಾರಾಗುತ್ತ ದಂಡೆಯ ಸನಿಯಕ್ಕೆ ಸುರಕ್ಷಿತವಾಗಿ ಬರಹತ್ತಿರುವದು. ಹೊರಗಿನ ಹಾಗೂ ಒಳಗಿನ ಶತ್ರುಗಳಿಂದ ಮುಕ್ತರಾದ ಮೇಲೆ ಇತರ ವಿಷಯಗಳನ್ನು ನಿರ್ವಿಕಾರ ಮನಸ್ಸಿನಿಂದ ಬಿಡಿಸಬಹುದು. ಈಗ ನಾವು ಎದುರಿಸಬೇಕಾದ ಪ್ರಶ್ನೆಗಳಲ್ಲಿ ಊಟ ಉಡಿಗೆಗಳ ಪ್ರಶ್ನೆ ಎಲ್ಲಕ್ಕೂ ಮಹತ್ವದ್ದು. ಎಲ್ಲರ ಲಕ್ಷ್ಯವೂ ಅದರ ಕಡೆಗೇ, ಹಗಲಿರುಳು ಅದರ ಚಿಂತೆಯೇ ಚಿಂತೆ. ಪದಾರ್ಥಗಳ ಬೆಲೆಗಳು ಕೈಗೆ ನಿಲುಕದಷ್ಟು ಏರಿಹೋಗಿವೆ. ರೊಕ್ಕಹಿಡಿದುಕೊಂಡು ತಿರುಗಿದರೂ ಪೇಟೆಯಲ್ಲಿ ಆಹಾರ ಪದಾರ್ಥಗಳು ದೊರಕುವದಿಲ್ಲ. ಈ ಅಂತರಿಕ ಪರಿಸ್ಥಿತಿಯು ದಿನದಿನಕ್ಕೂ ಬಹಳ ಗಂಭೀರಸ್ವರೂಪವನ್ನು ತಾಳಹತ್ತಿದೆ. ಸರಕಾರದವರು ಇದನ್ನು ಬಿಡಿಸಲು ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿರುವರು ಅವರ ಪ್ರಯತ್ನಕ್ಕೆ ದೊರಕಬೇಕಾದಷ್ಟು ಯಶಸ್ಸು ದೊರಕಲೊಲ್ಲದಾಗಿದೆ.

ಸರಕಾರದವರೂ ನೌಕರರಿಗೆ ತುಟ್ಟಿಭತ್ತೆಯನ್ನು ಕೊಟ್ಟಿರುವರು. ಅದನ್ನು ಇನ್ನೂ ಹೆಚ್ಚಿಸುವ ಆಲೋಚನೆಯಲ್ಲಿಯೂ ಇರುವರು. ಆದರೂ ಅದು ರಾವಣನ ಹೊಟ್ಟೆಗೆ ಕಾಸಿನ ಮಜ್ಜಿಗೆ ಎಂಬಂತೆ ಯಾತಕ್ಕೂ ಮುಟ್ಟಲೊಲ್ಲದು. ಅದರಲ್ಲಿಯೂ ಶಿಕ್ಷಕನ ಸ್ಥಿತಿ ಏತಕ್ಕೂ ಬೇಡಾಗಿದೆ. ಮೊದಲೇ ಕಡಿಮೆ ಸಂಬಳ ತುಟ್ಟಿಭತ್ತೆಯೂ ಅಷ್ಟಕ್ಕಷ್ಟೇ. ಹೀಗಾಗಿ ಮಾಸ್ತರನಾಗಿ ಬದುಕಿ ಬಾಳುವದೇ ಕಠಿಣವಾದ ಸಮಸ್ಯೆಯಾಗಿದೆ. ಇಂಥ ಪ್ರಸಂಗದಲ್ಲಿಯೂ ನಮ್ಮ ಸರಕಾರಕ್ಕೆ ಕನಕಯುಗವನ್ನು ಬೆಳಗಿಸಲು ಹವ್ಯಾಸ. ಈ ಉದ್ದೇಶವು ಸ್ತುತ್ಯವೂ ಸ್ವಾಗತಾರ್ಹವೂ ಆಗಿದ್ದರೂ ಅದರ ಕಾರ್ಯಪದ್ಧತಿಯನ್ನು ನೋಡಿದಾಗ ಅದರ ಪರಿಣಾಮಗಳನ್ನು ಅನುಭವಿಸುವಾಗ ಸರಕಾರಕ್ಕೆ ಇಷ್ಟು ಉತಾವಳಿತನವೇಕೆ? ದೇವರು ನಿತ್ಯವೂ ಬೆಳಕು ಮಾಡುತ್ತಾನೆ, ಸ್ವಲ್ಪ ಕೊತ್ತೇಕೆ ಮುಳುಗಬಾರದು? ಎಂದು ಪ್ರತಿಯೊಬ್ಬನಿಗೂ ಎನಿಸದೆ ಇರದು. ಇದಕ್ಕೆ ನಮ್ಮ ಶಿಕ್ಷಣ ವಿಭಾಗವೇನೂ ಅಪವಾದವಿಲ್ಲ. ಒಮ್ಮೆಲೇ ಹಾಯಸ್ಕೂಲುಗಳ ಕೆಳಗಿನ ಇಯತ್ತೆಗಳಿಂದ ಇಂಗ್ಲೀಷನ್ನು ಹಾರಿಸಿದರೂ, ಎರಡು ಟರ್ಮುಗಳನ್ನು ಮೂರಾಗಿ ಹಿಗ್ಗಿಸಿದರು. ಕೈಕೆಲಸವನ್ನು ಎಲ್ಲ ಶಾಲೆಗಳಲ್ಲಿ ಕೂಡಲೇ ಆರಂಭಿಸಬೇಕೆಂದು ಸಾರಿದರು. ಈ ತಿದ್ದುಪಡೆಯಿಂದ ಗೊಂದಲ ಉಂಟಾಗಲು ಅವುಗಳ ಬಗ್ಗೆ ವಿಚಾರಮಾಡಿ ಈ ಗೊಂದಲದಿಂದ ಪಾರಾಗುವ ಹಂಚಿಕೆಗಳನ್ನು ಹುಡುಕಲು ಒಂದೊಂದು ವಿಷಯಕ್ಕೂ ಒಂದೊಂದು ಸಮಿತಿಯನ್ನು ನೇಮಿಸುತ್ತ ನಡೆದಿರುವರು ಆವರ ಮನಸ್ಸಿನಲ್ಲಿ ಸ್ವರ್ಗವನ್ನೇ ಭೂಮಿಗಿಳಿಸುವದು ಇರಬಹುದು. ಸ್ವರ್ಗವು ಯಾರಿಗೆ ಬೇಡ? ಆದರೆ ಭೂಮಿಯಲ್ಲಿ ಸ್ವರ್ಗವು ಹಿಡಿಸಬಹುದೇ? ಎಂಬ ಮಾತನ್ನು ಸ್ವಲ್ಪಾದರೂ ವಿಚಾರ ಮಾಡಬೇಕಲ್ಲವೇ? ಸ್ವಲ್ಪ ವ್ಯವಹಾರಿಕ ದೃಷ್ಟಿ ಇಟ್ಟುಕೊಂಡು ಹೆಜ್ಜೆ ಇಡುತ್ತ ಹೋದರೆ ಈ ಅನಾವಶ್ಯಕ ಗೊಂದಲವು ತಪ್ಪಿ ಪುನಃ ಸ್ವಸ್ಥ್ಯವಾದರೂ ಉಳಿಯಬಹುದಾಗಿತ್ತಲ್ಲ ಎಂದು ಎಂತಹರಿಗೂ ಅನಿಸುವದು

ಸಮಾಜದಲ್ಲಿ ಶಿಕ್ಷಕರ ಸ್ಥಾನ

ಸಮಾಜದಲ್ಲಿ ಶಿಕ್ಷಕರಿಗೆ ಪ್ರಥಮಸ್ಥಾನ ಸಲ್ಲತಕ್ಕದ್ದೆಂಬ ಮಾತಿನ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಶಿಕ್ಷಕರ ವೃತ್ತಿಯನ್ನು ಎಲ್ಲರೂ ಕೊಂಡಾಡುವರು. ಆದರೆ ವ್ಯವಹಾರದಲ್ಲಿ ಇದಕ್ಕೆ ವಿಪರೀತವಾದ ರೀತಿಯು ಕಂಡುಬರುವದು ಅನಾದಿಕಾಲದಿಂದಲೂ ನಮ್ಮ ದೇಶದ ಸಂಸ್ಕೃತಿಯಲ್ಲಿ ಶಿಕ್ಷಕರಿಗೆ ಅರಸರಿಗಿಂತಲೂ ಶ್ರೇಷ್ಠವಾದ ಸ್ಥಾನಮಾನಗಳು ಇದ್ದವೆಂಬ ಮಾತು ಕಿಂಚಿತ ಇತಿಹಾಸ ಜ್ಞಾನವಿದ್ದವನಿಗೆ ತಿಳಿದಿದ್ದಾಗಿದೆ. ರಾಜಾಧಿರಾಜರುಗಳು ಕೂಡ ಅವರ ಕೂಡ ಭಯ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಆಗಿನ ಗುರುಗಳಿಗೆ ವೇತನವಿರಲಿಲ್ಲ. ಆದರೂ ಅವರು ಶಾಂತಿ ಸಮಾಧಾನಗಳಿಂದ ಯುಕ್ತರಾಗಿ ತಮ್ಮ ಮನಸ್ಸಿನ ತೂಕವನ್ನು ಕಾಯ್ದುಕೊಂಡು ನಡೆಯುತ್ತಿದ್ದರು. ಇದರ ಗುಟ್ಟೇನು? ಆಗಿನ ಕಾಲಕ್ಕೆ ಸರಕಾರವೂ ಸಮಾಜವೂ ಶ್ರೀಮಂತರೂ ಕೂಡಿಯಾಗಲಿ, ಬೇರೆ ಬೇರೆಯಾಗಲಿ ಶಿಕ್ಷಕರ ಉಪಜೀವನದ ಭಾರವನ್ನು ಸಮಾಜದ ಹಿತದ ದೃಷ್ಟಿಯಿಂದ ಪ್ರೇಮಿತರಾಗಿ ಹೊರುತ್ತಿದ್ದರು. ಆದ್ದರಿಂದ ಹಿಂದಿನ ಕಾಲದಲ್ಲಿ ಗುರುಗಳಾಗಿ ವಿದ್ಯಾದಾನ ಮಾಡುತ್ತಿದ್ದ ಶಿಕ್ಷಕ ವರ್ಗಕ್ಕೆ ತಮ್ಮ ಹಾಗೂ ತಮ್ಮ ಕುಟುಂಬದ ಉದರಂಭರಣದ ಚಿಂತೆಯೇ ಇರುತ್ತಿರಲಿಲ್ಲ. ಇವತ್ತಿಗೆ ಬೇಕು ನಾಳಿಗೆ ಬೇಕು ಎಂಬ ಚಿಂತೆ, ಅವರನ್ನು ದಹಿಸುತ್ತಿರಲಿಲ್ಲ. ಆದ್ದರಿಂದ ಶಾಂತಚಿತ್ತರಾಗಿ ಅವರು ವಿದ್ಯಾಧಾನ ಮಾಡುತ್ತ, ಸಮಾಜದ ಕಲ್ಯಾಣವನ್ನೇ ಚಿಂತಿಸುತ್ತ ಸ್ವಕರ್ತವ್ಯ ನಿರತರಾಗಿರುತ್ತಿದ್ದರು. ಅವರ ಯೋಗ್ಯತೆಯೂ ದರೂ ಅಷ್ಟೇ ದೊಡ್ಡದಿರುತ್ತಿತ್ತು. ಶಾಪಾದಪಿ ಶರಾದಪಿಯಾಗಿ ಪರಿಸ್ಥಿತಿಯನ್ನು ಅವರು ಎದುರಿಸಬಲ್ಲವರಾಗಿದ್ದರು.

ಮುಂದೆ ಜರಜರುತ್ತ ಸರಕಾರವೂ ಸಮಾಜವೂ ಶಿಕ್ಷಕರ ಕೈಬಿಡುತ್ತ ಬಂದಹಾಗೆ ಶಿಕ್ಷಕರ ಅವನತಿಯೂ ಅದರ ಪರಿಣಾಮವಾಗಿ ಸಮಾಜದ ಅವನತಿಯೂ ಉಂಟಾಗುತ್ತ ನಡೆಯಿತು. ಇದು ಹಿಂದಿನ ಕಾಲದ ಮಾತು. ಸದ್ಯಕ್ಕೆ ಶಿಕ್ಷಕರ ಸ್ಥಾನಮಾನವೇನೆಂಬುದನ್ನು ನೋಡಿದರೆ ಪ್ರತಿನಿತ್ಯವೂ ಅವರು ಕಷ್ಟಗಳನ್ನು ಅನುಭೋಗಿಸುತ್ತಲೇ ಇರುವರು. ಆದರೆ ಭಟ್ಟಂಗಿಗಳಂತೆ ಹಿಂದಿನ ಶಿಕ್ಷಕರ ಗೌರವವನ್ನೂ ವೈಭವವನ್ನೂ ನಿತ್ಯ ಪಠಿಸುತ್ತ ಕುಳಿತರೆ ನಾವೇನು ಅವರಂತೆ ಶಕ್ತಿಸಂಪನ್ನರಾಗಲಾರೆವು ಗೌರವವನ್ನೂ ಪಡೆಯಲಾರೆವು ಈಗಿನ ದುರಸ್ಥಿತಿಯನ್ನು ನೆನೆದು ಅಳುತ್ತ ಕುಳಿತರೂ ನಮ್ಮ ಮೇಲೆ ಯಾರೂ ಕರುಣೆತೋರಿ ನಮ್ಮ ಉದ್ಧಾರಮಾಡುವದಿಲ್ಲ. ಸ್ವಾಮಿ ವಿವೇಕಾನಂದರು ಹೇಳಿದಂತೆ "ಎಚ್ಚರಿಸಿರಿ, ಏಳಿರಿ, ಕರ್ತವ್ಯಪರಾಯಣರಾಗಿರಿ" ಎಂಬ ಗುರಿಯನ್ನು ಸಾಧಿಸುವವರೆಗೆ ನಮ್ಮ ಸ್ಥಿತಿಯು ಸುಧಾರಿಸಲಾರದು. ನಮ್ಮ ಮೇಲೆ ಹಿಂದೆ ಎಂದೂ ಇಲ್ಲದಷ್ಟು ಹೊಣೆಯು ಈಗ ಬಿದ್ದಿದೆ. ಅದನ್ನು ಅರಿತು, ನಾವು ವರ್ತಿಸಿದರೆ ನಮ್ಮ ಪೂರ್ವಜರಾದ ಋಷಿಗಳು ಪಡೆದ ಸ್ಥಾನಮಾನಗಳನ್ನು ಪಡೆಯಲು ಯಾವ ಸಂಶಯವೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು

ನಮ್ಮ ಪೂರ್ವದ ಋಷಿಗಳ ಆಚಾರ ವಿಚಾರ ಹಾಗೂ ಧ್ಯೇಯಗಳನ್ನು ನಾವಾದರೂ ನಮ್ಮ ಮುಂದೆ ಇಟ್ಟುಕೊಂಡು ನಡೆಯಬೇಕು ಅವರಂತೆ ನಿಸ್ವಾರ್ಥ ಬುದ್ಧಿಯಿಂದ ಸಮಾಜ ಸೇವಾತತ್ಪರರಾಗಬೇಕು. ಉದ್ಧರೇದಾತ್ಮ ನಾತ್ಮಾನಂ ಎಂಬ ಗೀತಾವಚನವನ್ನು ನಿತ್ಯವೂ ಪಠಣ ಮಾಡಬೇಕು. ಮಧ್ಯಕಾಲದಲ್ಲಿ ನಮ್ಮ ಸಂಸ್ಕೃತಿಗೆ ಚ್ಯುತಿಯುಂಟಾಗಿ ದೇಶದಲ್ಲಿ ದುರವಸ್ಥೆಯುಂಟಾಯಿತು. ಇವತ್ತು ನಾವು ಸ್ವತಂತ್ರರು. ನಮ್ಮ ಭವಿಷ್ಯವನ್ನು ನಾವೇ ನಿರ್ಮಿಸಬಲ್ಲೆವು. ಅಂತೆಯೇ ರಾಷ್ಟ್ರ ನಿರ್ಮಾಪಕರಾದ ನಮ್ಮ ಮೇಲೆ ದೊಡ್ಡ ಹೊಣೆ ಬಿದ್ದಿದೆ. ಇಂದು ಪ್ರತಿಯೊಬ್ಬ ಪ್ರಜೆಯೂ ಸಮಾನಾಧಿಕಾ

ರಿಯು ಅಧಿಕಾರದ ಜೊತೆಗೆ ಪ್ರತಿಯೊಬ್ಬ ಪ್ರಜೆಯೂ ತನ್ನ ಹೊಣೆಗಾರಿಕೆಯನ್ನು ಅರಿತು ಸಮಾಜದ ಹಿತದ ದೃಷ್ಟಿಯಿಂದ ರಾಷ್ಟ್ರದ ಐಶ್ವರ್ಯಾಭಿವೃದ್ಧಿಗಳ ದೃಷ್ಟಿಯಿಂದ ಆಚರಿಸಬೇಕಾಗಿದೆ, ಇಲ್ಲವಾದರೆ ಈ ಸ್ವಾತಂತ್ರ್ಯದ ಹಣ್ಣು ಹಣ್ಣಾಗಿ ಪರಿಣಮಿಸುವದು. ರಾಷ್ಟ್ರದ ಪ್ರತಿಯೊಬ್ಬ ಪ್ರಜೆಯೂ ಅಷ್ಟು ಬುದ್ಧಿವಂತನಾಗಬೇಕಾದರೆ ಅವರಿಗೆ ಅದಕ್ಕೆ ತಕ್ಕ ಶಿಕ್ಷಣವು ದೊರೆಯಲೇಬೇಕು. ಅಂಥ ಶಿಕ್ಷಣವನ್ನು ಕೊಡಲು ಯೋಗ್ಯರಾದ ಶಿಕ್ಷಕರು ಬೇಕೇ ಬೇಕು. ಅಂಥ ಶಿಕ್ಷಕರಿದ್ದರೇನೇ ನಾವು ಬಲಿಷ್ಟವಾದ ಐಶ್ವರ್ಯ ಸಂಪನ್ನವಾದ, ವಿವೇಕಿಯಾದ, ಭೂತದಯಾಪರಾಯಣವಾದ ರಾಷ್ಟ್ರವನ್ನು ಕಟ್ಟಬಲ್ಲೆವು. ಹಗಲಿರುಳೂ ಕೂಳು ಕೂಳೆಂದು ಹಲುಬುವ ಶಿಕ್ಷಕರ ಸೈನ್ಯವನ್ನು ನಿರ್ಮಿಸಿದರೆ ಅದರಿಂದ ಯಾವ ಕಾರ್ಯವೂ ಸಾಧಿಸದು. ಅಯೋಗ್ಯ ಶಿಕ್ಷಕರು ರಾಷ್ಟ್ರಕ್ಕೆ ಗಂಡಾಂತರವೆಂದು ಹೇಳುವದುಂಟು, ಅತೃಪ್ತರಾದ ಶಿಕ್ಷಕರು ಅವಕ್ಕಿಂತ ಹೆಚ್ಚು ಗಂಡಾಂತರ ಪ್ರಾಯರಾಗಿರುವರೆಂಬ ಮಾತನ್ನು ನಮ್ಮ ಸರಕಾರದವರು ನೆನಪಿನಲ್ಲಿಟ್ಟು, ಶಿಕ್ಷಕರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವದು ತಮ್ಮ ಆದ್ಯ ಕರ್ತವ್ಯವೆಂದು ತಿಳಿಯಬೇಕು.

ಶಿಕ್ಷಕ ವೃತ್ತಿಯು ಯಾವ ದೇಶದಲ್ಲಿಯೇ ಆಗಲಿ ಯಾವ ಕಾಲದಲ್ಲಿಯೇ ಆಗಲಿ ಐಶ್ವರ್ಯವನ್ನುಂಟುಮಾಡುವ ವೃತ್ತಿಯಲ್ಲ. ಶಿಕ್ಷಕರಾದವರು ಸಿರಿಲೋಲರಾಗಬೇಕೆಂದು ಬಯಸುತ್ತಲೂ ಇಲ್ಲ. ಕಾಲಕ್ಕನುಗುಣವಾಗಿ, ಸುಸೂತ್ರವಾಗಿ ಜೀವಿತಾರ್ಥ ಸಾಗಿಸುವಷ್ಟಾದರೂ ವೇತನವು ದೊರೆಯಬೇಕೆಂದು ಇಂದು ಬೇಡುತ್ತಿದ್ದಾರೆ. ರಾಷ್ಟ್ರದ ಶಿಕ್ಷಣದ ಆರ್ಥಿಕ ಹೊಣೆಯನ್ನು ಸರಕಾರವೇ ಸಂಪೂರ್ಣವಾಗಿ ಹೊರಬೇಕು. ದುಡ್ಡಿನ ಕೊರತೆಯ ನೆವದಿಂದ ಶಿಕ್ಷಣದ ವಿಭಾಗವನ್ನು ಸೊರಗಿಸಿದರೆ ರಾಷ್ಟ್ರವೇ ಸೊರಗಿ ಸಾಯಲಾಗುವದು. ಈ ಬಗ್ಗೆ ಮೊದಲೇ ಜಾಗರೂಕರಾಗಿ ಕೆಲಸಮಾಡಬೇಕಾಗಿದೆ. ಕೈಮೀರಿದ ಮೇಲೆ ಔಷಧೋಪಚಾರಮಾಡಿ ಫಲವೇನು?

ರಾಷ್ಟ್ರದ ಹಿತದ ದೃಷ್ಟಿಯಿಂದ ಶಿಕ್ಷಣವು ರಾಜಕಾರಣ ಘೋಷಣೆಯಿಂದ ಸಂಪೂರ್ಣವಾಗಿ ಸ್ವತಂತ್ರವಾಗಿರಬೇಕು. ಇಲ್ಲದಿದ್ದರೆ ಆ ರಾಷ್ಟ್ರದ ಅಧಃಪತನವು ಕಟ್ಟಿಟ್ಟದ್ದೇ. ಇದಕ್ಕೆ ಕ್ಷಣಿಕ ಪ್ರಾಬಲ್ಯವನ್ನು ಪಡೆದು ಹೇಳ ಹೆಸರಿಲ್ಲದಂತಾದ ಜರ್ಮನಿ ಜಪಾನ ಇಟಲಿಗಳೇ ಸಾಕ್ಷಿ. ಅದ್ದರಿಂದ ರಾಜಕಾರಣಿಗಳೂ ಸಮಾಜದ ಧುರೀಣರೂ ಯಾವಾಗಲೂ ಈ ಮಾತನ್ನು ನೆನಪಿನಲ್ಲಿಟ್ಟು ವರ್ತಿಸಬೇಕು. ಶಿಕ್ಷಣ ಹೊಣೆಯನ್ನು ಸಂಪೂರ್ಣವಾಗಿ ಸರಕಾರ ಹಾಗೂ ಸಮಾಜಗಳು ಹೊತ್ತು, ಶಿಕ್ಷಣದ ಧೋರಣೆ, ಕ್ರಮ, ಆಡಳಿತೆಗಳಲ್ಲಿ ಕೈ ಹಾಕದೆ ಸಂಪೂರ್ಣವಾಗಿ ಸದಾ ಸಮಾಜ ಹಿತ ಚಿಂತಕರಾದ ಶಿಕ್ಷಣ ತಜ್ಞರಿಗೆ ಮತ್ತು ಶಿಕ್ಷಕರಿಗೆ ಆ ಕ್ಷೇತ್ರವನ್ನು ಬಿಟ್ಟುಕೊಡಬೇಕು.

ರಾಷ್ಟ್ರ ನಿರ್ಮಾಣದ ಹಾಗೂ ಅದರ ಕಲ್ಯಾಣದ ಮತ್ತು ಸಮಾಜದ ಅಖಂಡ ಹಿತದ ಹೊಣೆಯು ಸಾಮಾನ್ಯವಾದುದಲ್ಲ. ಆ ಕಾಲದ ಸರಕಾರದ ಮೇಲಿರುವದಕ್ಕಿಂತ ಹೆಚ್ಚಿನ ಹೊಣೆಯು ಅವನ ಮೇಲೆ ಇರುವದು. ಕಾರಣ ಶಿಕ್ಷಕರು ಯಾವದೊಂದು ಸರಕಾರದ ಕೈಗೊಂಬೆಯಂತೆ ವರ್ತಿಸಬಾರದು. ನಿರ್ಭಯದಿಂದ ನಿಸ್ಪೃಹತೆಯಿಂದ ಖ್ಯಾತಿವಂತರಾಗಿ ನಾವು ಬಾಳಬೇಕು. ಸಾರ್ವಭೌಮನಾದ ಅರಸನೇ ನಮ್ಮ ಮತ್ತು ನಿನ್ನಲ್ಲಿ ಏನೂ ಅಂತರವಿಲ್ಲ ಇಬ್ಬರೂ ಸಮಾನಸ್ಕಂಧರು. ನೀನು ನಮ್ಮಲ್ಲಿ ಅಗೌರವವನ್ನು ತೋರಿದರೆ ನಿಸ್ಪೃಹರಾದ ನಮಗೆ ನಿನ್ನದಾದರೂ ಏನು ದಾಕ್ಷಿಣ್ಯ? ಎನ್ನುವ ಯೋಗ್ಯತೆಯನ್ನು ಯಾವದಿನ ನಾವು ಪಡೆಯುವೆವೋ ಆದಿನ ನಾವು ಯಾರಿಗೂ ದಾಸರಾಗುವ ಕಾರಣವು ಉಳಿಯಲಿಕ್ಕಿಲ್ಲ. ನಮ್ಮ ಪೂರ್ವಜರಲ್ಲಿದ್ದ ಇದೇ ತರಹದ ಯೋಗ್ಯತೆಯನ್ನು ನಾವು ಪಡೆದು ನಮ್ಮ ರಾಷ್ಟ್ರ ಜನನಿಯು ಜಗತ್ತಿಗೇ ಗುರುವಾಗುವ ಯೋಗವನ್ನು ತಂದುಕೊಡಬೇಕು. ಅದೇ ನಮ್ಮ ಸಂಸ್ಕೃತಿಯು, ಅದನ್ನು ಪುನರುಜ್ಜೀವನಗೊಳಿಸುವದೇ ಪ್ರತಿಯೊಬ್ಬ ಶಿಕ್ಷಕನ ಆದ್ಯಕರ್ತವ್ಯ.

(ಜಯಹಿಂದ್)

—●—

ಬಳ್ಳಾರಿಯಲ್ಲಿ ಕಾಲೇಜ್ ಸ್ಥಾಪನೆ

ಶ್ರೀ ಎನ್. ಆರ್. ಗಂಗಾಪತಿಯವರು ಕಳೆದವಾರ ಬಳ್ಳಾರಿ ಸಾರ್ವಜನಿಕರ ಸಭೆಯನ್ನು ಕರೆದು ಶ್ರೀ ರೇವಣಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ವೀರಶೈವ ಕಾಲೇಜು ವ್ಯವಸ್ಥಾಪಕರಿಗೆ ಕೃತಜ್ಞತಾವಂದನೆ ಸೂತನ ಕಾಲೇಜು ಸ್ಥಾಪಿಸಲುದ್ದೇಶಿಸಿರುವವರಿಗೆ ಸಹಾಯ ಸಹಕಾರ, ಹೇಗಾದರೂ ಮಾಡಿ ಸರಕಾರದವರು ಬಳ್ಳಾರಿಯಲ್ಲಿ ಕಾಲೇಜು ಉಳಿಸಬೇಕೆಂದು ತೀರ್ಮಾನಗಳನ್ನು ಮಾಡಿದುದು ಸಮಯೋಚಿತ್ಯವೇ ಅಲ್ಲದೆ ಉನ್ನತ ವಿದ್ಯಾಭ್ಯಾಸ ದೃಷ್ಟಿಯಿಂದ ಸಾಧುವೂ ಹಿತಕರವೂ ಆಗಿದೆ. ಕಳೆದ 4 ವರ್ಷಗಳಿಂದ ಎಲ್ಲಾ ಜಾತೀಯ ವಿದ್ಯಾಕಾಂಕ್ಷಿಗಳಿಗೆ ಉನ್ನತ ವಿದ್ಯಾಸೌಕರ್ಯಗಳನ್ನೊದಗಿಸಿದವರಿಗೆ ಅವಶ್ಯವಾಗಿ ಬಳ್ಳಾರಿ ಜಿಲ್ಲೆಯ ಪ್ರನಸಭೆಗಳವರೆಲ್ಲಾ ಕೃತಜ್ಞತೆಯನ್ನರ್ಪಿಸಬೇಕಲ್ಲದೆ ಸರಕಾರಕ್ಕೂ ಅವರಿಗೂ ಮಧ್ಯದಲ್ಲಿ ಆಕಸ್ಮಿಕವಾಗಿ ಒದಗಿದ ಭಿನ್ನಾಭಿಪ್ರಾಯ ಎಡರು ತೊಡರುಗಳನ್ನು ನಿವಾರಿಸಲೆತ್ನಿಸಬೇಕು. ಇದು ಸಾಧ್ಯವಾಗದಿದ್ದರೆ ಹೊಸ ಪ್ರಯತ್ನಗಳಿಗೆ ಯಶಸ್ಸು ಕೋರಬೇಕು. ಮದರಾಸ್ ಸರಕಾರವೇ ಕಡಪಾದಲ್ಲಿ ನಡೆಸಿದಂತೆ, ಬಳ್ಳಾರಿಯಲ್ಲೂ ಕೂಡಾ ಕಾಲೇಜು ನಡೆಸಲು ನಿಶ್ಚಯಿಸುವದು ಸರ್ವೋತ್ತಮ ಮಾರ್ಗ. ಸರಕಾರದವರ ಈ ದಿಶೆಯ ಕಾರ್ಯವನ್ನು ಫಲಲಿತಗೊಳಿಸಲು ಎಲ್ಲರೂ ಯತ್ನಿಸಬೇಕು.

ವಿದ್ಯಾಧಿಕ ವರ್ಗವಾದ ವಕೀಲರು ಮತ್ತು ಇತರರು ತಮ್ಮ ಶಕ್ತ್ಯಾನುಸಾರ ದುಡಿಯಬೇಕಾದುದು, ನುಡಿಯಂತೆ ನಡೆಯಬೇಕಾದುದು ನ್ಯಾಯವೆಂದು ಎಲ್ಲರೂ ಒಪ್ಪುತ್ತಾರೆ. ಆದರೆ ಈ ಕಠಿಣ ಪರಿಸ್ಥಿತಿಯಲ್ಲಿ ಶ್ರೀಮಂತ ವರ್ಗದೊಡನೆ ಪ್ರೋ[illegible] ಮಾಡುವ ಆರ್ಥಿಕ ಶಕ್ತಿಯು ಅವರಿಗಿಲ್ಲೆಂಬುದನ್ನು ಎಲ್ಲರು, ಆದರಲ್ಲು ವರ್ತಕ ಮಹಾಶಯರು ಅರಿತರೆ ಬಹಳ ಕಲ್ಯಾಣವಾದೀತು.

ಮುಖ್ಯವಾಗಿ ಪ್ರಥಮದಿಂದಲೂ ಈ ಕಾರ್ಯದಲ್ಲಿ ಮಹಾನ್ ಉದ್ದೇಶ ಸಾಧನೆಯಲ್ಲಿ ತೊಡಗಿರುವ ಶ್ರೀ ಮುಂಡ್ಲೂರು ಗಂಗಪ್ಪನವರು ಮತ್ತು ಇತರ ಮಿತ್ರರು ಕಾಲೇಜು ಸ್ಥಾಪನೆಯನ್ನು ಮಾಡದೇ ತೀರರೆಂದು ನಮ್ಮ ನಂಬಿಕೆ.

ನೋಟೀಸು

ಬಳ್ಳಾರಿ ಸ್ಮಾಲ್ ಕಾಜ್ ಜಡ್ಜರ
ಕೋರ್ಟಿನಲ್ಲಿ

S. C. 691/48

Between

ವಾದಿ- ವಿ. ಯಸ್. ವೆಂಕಟರಮಣರಾವ್

ವಿರುದ್ಧ

ಪ್ರತಿವಾದಿ - ಶಫಸಾಬ್ ಲ್ಯಾಂಡ್ ಹೋಲ್ಡರ್

ನೋಟೀಸ್

೧) ಆಲೂರ ತಾಲೂಕು ಇಸ್ಲಾಂಪುರ ಗ್ರಾಮದ ಅಬ್ದುಲ್ ನಬಿಸಾಬರ ಮಗ ಶಫಸಾಬರಿಗೆ

೨) ಬಳ್ಳಾರಿ ಮಿಲ್ಲರಪೇಟೆಯಲ್ಲಿರುವ ಯೇರೂರು ಲಕ್ಷ್ಮಣ್ಣನ ಮಗ ಪೆದ್ದ ರಂಗಯ್ಯ ಇವರಿಗೆ

ನಿಮ್ಮಿಂದ ಬರಬೇಕಾದ ಬಾಕಿ ರೂ 292-6-3 ಪಡೆಯಲು ನಮ್ಮ ಕಕ್ಷಿದಾರರಾದ ವಿ. ಯಸ್. ವೆಂಕಟರಮಣರಾವ್ ಮರ್ಚೆಂಟ್ ತಾಡಪತ್ರಿ ಇವರು ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾರೆ. ಇದರ ವಿಚಾರಣೆಯು 8-3-49 ಕ್ಕೆ ಇದೆ. ಆದಿನ ನೀವಾಗಲಿ ನಿಮ್ಮಪರ ವಕೀಲರಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದಲ್ಲಿ ನಿಮ್ಮನ್ನು ಎಕ್ಸಪಾರ್ಟಿ ಮಾಡಲಾಗುವದೆಂದು ಈ ಮೂಲಕ ತಿಳಿಸಲಾಗಿದೆ

ಬಳ್ಳಾರಿ — ಆರ್. ರಾಮರಾವ್
16-2-49 — ವಾದಿಯ ಅಡ್ವೋಕೇಟರು

ವ್ಯಕ್ತಿಯಲ್ಲಿ ಒಂದು ಪದದಿಯನ್ನು ಬರೆಯುವಷ್ಟು ಸಾಹಿತ್ಯಕ ಸಾಮರ್ಥ್ಯವಿದೆಯೋ (Literary ability) ಎಂದು ಪರೀಕ್ಷಿಸುವ ಹಲವು ಪ್ರಶ್ನೆಗಳೂ ಇವೆ. ಅರ್ಥರಹಿತವಾದ ಪದ ಸಮುದಾಯವೊಂದನ್ನು ಕ್ರಮಗೊಳಿಸಿ ಅರ್ಥಪೂರ್ಣ ವಾಕ್ಯವನ್ನು ರಚಿಸುವಂತೆ ಹೇಳುವದು ಒಂದು ತೆರ. ಉದಾ: ಮತ್ತು ನಿಂತುಹೋಗಿದೆ ಕಟ್ಟಿಸುವ ದೊರೆಯದೆ ಸಾಮಗ್ರಿಗಳು ಮನೆ ಕೆಲಸ ಕೆಲಸಗಾರರು. ಕೆಲವು ಶಬ್ದಗಳನ್ನು ಕೊಟ್ಟು, ಅವುಗಳಿಗೆ ವಿರುದ್ಧ ಅರ್ಥ ಕೊಡುವ ಶಬ್ದಗಳನ್ನು ಕೇಳುವದು ಇನ್ನೊಂದು ತೆರ. ಉದಾ: ಕಪ್ಪು, ಒದ್ದೆ, ಗಟ್ಟಿ, ಕ್ರಮೇಣ, ಕಟ್ಟು ಇವುಗಳಿಗೆ ವಿರೋಧ ಪದಗಳಾವುವು?

ಮಾತಿಗೆ ಸೋಲುವ ಮಹಾನುಭಾವರು

ಆದರೆ ಬೇರೆ ಎಲ್ಲ ವಿಷಯಗಳಲ್ಲಿ ಚತುರರಿದ್ದು ಶಬ್ದಗಳಿಗೆ ಸೋಲುವ ಮಹಾನುಭಾವರೂ ಇದ್ದಾರೆ. ಅಂಥವರ ಕೈಗೆ ವಿಶಿಷ್ಟ ಬಗೆಯ ಸಾಧನ ಸಲಕರಣೆಗಳನ್ನಿತ್ತು, ಅವರ ಕೈವಾಡವನ್ನು ಪರೀಕ್ಷಿಸಿಯಾಗಲೀ ಇತರ ವಿಧಾನಗಳಲ್ಲಾಗಲೀ ಬುದ್ಧಿಶಕ್ತಿಯನ್ನು ಅಳೆಯುತ್ತಾರೆ. ಒಂದರಹಿಂದೆ ಒಂದರಂತೆ ಕೆಲವು ಅಂಕೆಗಳನ್ನು ಹೇಳಿ, ಆ ಅಂಕೆಗಳನ್ನು ಕೂಡಲೇ ಯಥಾಕ್ರಮದಲ್ಲಿ ಪುನರುಚ್ಚರಿಸುವಂತೆ ಹೇಳುವುದು ಉತ್ತಮ ತರದ ಒಂದು ಬುದ್ಧಿವಂತಿಕೆಯ ಪ್ರಶ್ನೆಯಾಗಿದೆ. ವ್ಯಕ್ತಿಯ ಬುದ್ಧಿಶಕ್ತಿ ಅತಿ ಚುರುಕಾಗಿರುವ ಪ್ರಾಯವೆಂದರೆ ಹದಿನಾಲ್ಕನೆಯ ವರ್ಷ. ಆಗ ಒಬ್ಬನು ೮ ಅಂಕೆಗಳನ್ನು ಕ್ರಮತಪ್ಪದೆ ಪುನರುಚ್ಚರಿಸಬಲ್ಲನಾದರೆ ಅವನ ಬುದ್ಧಿಶಕ್ತಿ ತಕ್ಕಮಟ್ಟಿಗಿದೆಯೆಂದು ಅರ್ಥವಾಗುವುದು. ಅವೇ ಅಂಕೆಗಳನ್ನು ವಿರುದ್ಧ ಕ್ರಮದಲ್ಲಿ ಪುನರುಚ್ಚರಿಸಲಿಕ್ಕೆ ಇನ್ನೂ ಹೆಚ್ಚಿನ ಬುದ್ಧಿಶಕ್ತಿ ಬೇಕಷ್ಟೇ! ಅನುಮಾನವಿದೆಯಾದರೆ ಪ್ರತ್ಯಕ್ಷ ಪ್ರಯತ್ನಮಾಡಿ ನೋಡಿ.

ಬುದ್ಧಿಮಾಪಕ ವಿಧಾನಗಳು ರೂಢಿಯಲ್ಲಿ ಬಂದು ಸುಮಾರು ೪೦ ವರ್ಷಗಳಾದುವು. ಫ್ರಾನ್ಸ್ ದೇಶದ ಡಾ. ಬಿನೆಟ್ ಎಂಬಾತನೇ ಅಂತಹ ಪ್ರಯೋಗಗಳ ಜನಕನೆನ್ನಬಹುದು. ಮಕ್ಕಳಲ್ಲಿ ಮಂದಮತಿಗಳನ್ನು ಆರಿಸಿ ತೆಗೆದು ಕೆಲವು ವಿಶಿಷ್ಟ ಶಾಲೆಗಳಿಗೆ (Special Schools) ಕಳುಹಿಸಿ ಕೊಡುವ ಪ್ರಸಂಗ ಬಂದಾಗ, ಬುದ್ಧಿಮಾಪಕ ಪ್ರಶ್ನೆಗಳು ಮೊತ್ತಮೊದಲು ಉಪಯೋಗಿಸಲ್ಪಟ್ಟವು. ಈಗಲಾದರೋ ಮಹತ್ವದ ಜವಾಬ್ದಾರಿ ಕೆಲಸಗಳಿಗೆ ವ್ಯಕ್ತಿಗಳನ್ನು ಆರಿಸುವಾಗಲೂ ಅವರ ಬುದ್ಧಿಶಕ್ತಿಯನ್ನು ಅಳೆಯುವ ಕ್ರಮವನ್ನಿಟ್ಟುಕೊಂಡಿದ್ದಾರೆ. ವಿದ್ಯಾರ್ಥಿ ವೇತನಗಳಿಗೆ ಅರ್ಹತೆಯನ್ನು ನಿರ್ಣಯಿಸುವಲ್ಲಿಯೂ ಬುದ್ಧಿಮಾಪಕ ಪ್ರಶ್ನೆಗಳನ್ನು ಕೇಳುವುದುಂಟು. ಸರಕಾರಿ ಮತ್ತು ಸೈನಿಕ ಇಲಾಖೆಗಳು ಹಾಗೂ ವಾಣಿಜ್ಯ ಕಚೇರಿಗಳು ಉದ್ಯೋಗಾಪೇಕ್ಷಿಗಳ ಬುದ್ಧಿಶಕ್ತಿಯನ್ನು ಅಳೆದುಕೊಂಡ ಬಳಿಕವೇ ಅವರನ್ನು ಸ್ವೀಕರಿಸುತ್ತಾರೆ. ೧೯೧೪-೧೮ರ ಮಹಾಯುದ್ಧದ ಸಮಯದಲ್ಲಿ, ಅಮೇರಿಕದ ಸೇನಾಧಿಕಾರಿಗಳು ಎರಡು ಮಿಲಿಯ ಉಮೇದವಾರರ ಬುದ್ಧಿಶಕ್ತಿಯನ್ನು ಅಳೆದು ಆರಿಸಿದಂದಿನಿಂದ ಬುದ್ಧಿಮಾಪಕ ಪ್ರಯೋಗಗಳಿಗೆ ಮಹತ್ವ ಬಂತು. ಈಗಿನ ಯುದ್ಧಕಾಲದಲ್ಲಿ ಸೈನಿಕರಾಗಿದ್ದವರು ಪ್ರಜಾಸಂಸ್ಥೆಗಳಲ್ಲಿ (Civil appointments) ಕೆಲಸಮಾಡಲು ಯೋಗ್ಯರೋ ಅಲ್ಲವೋ ಎಂಬುದನ್ನು ಕೂಡ ಬುದ್ಧಿಮಾಪನದಿಂದ ಕಂಡುಹಿಡಿಯಲುಪಕ್ರಮಿಸಿದ್ದಾರೆ.

ಒಬ್ಬೊಬ್ಬರರೀತಿ ಒಂದೊಂದು

ಆದರೆ, ವ್ಯಕ್ತಿಗೆ ಕೆಲವು ಪ್ರಶ್ನೆಗಳನ್ನು ಕೇಳುವ ಮೂಲಕವೇ ಅವನ ಬುದ್ಧಿಶಕ್ತಿಯನ್ನು ಅಳೆಯಲಾಗುವುದೆಂದು ಭಾವಿಸಬಾರದು. ವ್ಯಕ್ತಿ ಮತ್ತು ಸಂದರ್ಭಕ್ಕೆ ತಕ್ಕಂತೆ, ಎಂಥವೇ ಪರೀಕ್ಷೆ ಆವಶ್ಯವೆಂಬುದನ್ನು ನಿರ್ಣಯಿಸಲಿಕ್ಕೆ ಪರಿಣತರ ನೆರವು ಬೇಕಾಗುವುದು. ಬಾಯ್ದೆರೆ ಪರೀಕ್ಷೆಗೆ ತಗು ನಾಚುವ ಹುಡುಗರು ಬರವಣಿಗೆಯಲ್ಲಿ ಜಾಣರಿರುತ್ತಾರೆಂತಲೂ ಬರೆಯಲಿಕ್ಕೆ ಅಳುಕುವ ಹುಡುಗಿಯರು ಬಾಯ್ದೆರೆ ಪರೀಕ್ಷೆಯಲ್ಲಿ ಚಾತುರ್ಯ ತೋರಿಸುವರೆಂತಲೂ ತೀರ ಎಳೆಯ ಮಕ್ಕಳು ಬರವಣಿಗೆಯಿಂದೊಡನೆ ದಿಗಿಲು ಬೀಳುವರೆಂತಲೂ ಪಾಶ್ಚಾತ್ಯ ಮನೋವಿಜ್ಞಾನಿಗಳ ಅಭಿಪ್ರಾಯ. ಹೀಗೆ ವ್ಯಕ್ತಿಯ ಒಲವು, ಆರಿಸುವ ಸಂದರ್ಭ, ಯಾವ ಕೆಲಸಕ್ಕೆ ಆರಿಸಲಿದೆಯೋ ಅದಕ್ಕೆ ಬೇಕಾದ ಯೋಗ್ಯತೆ—ಮುಂತಾದವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬುದ್ಧಿಶಕ್ತಿಯನ್ನು ಅಳೆಯುವ ಪ್ರಯತ್ನ ಮಾಡಬೇಕು. ಅಷ್ಟೇ ಅಲ್ಲ, ಮಹತ್ವದ ನಿರ್ಧಾರಗಳನ್ನು ಕೈಕೊಳ್ಳುವ ಮುಂಚೆ, ತರಗೊಮ್ಮೆ ಸವಿವರವಾದ ವ್ಯಕ್ತಿ ಪರೀಕ್ಷೆ (personal examination ಮಾಡಿಯೇ ಒಬ್ಬನನ್ನು ಆರಿಸಬೇಕಾಗುವದು.

ಬೇರೆ ಯಾವ ವಿಧಾನದಿಂದಲೂ ಬೆಳಕಿಗೆ ಬರಲು ಅಸಾಧ್ಯವೆಂಬಂತಿದ್ದ ವಿಶೇಷ ಸಾಮರ್ಥ್ಯಗಳು ಬುದ್ಧಿಮಾಪನದ ಮೂಲಕ ಬಯಲಿಗೆ ಬಂದ ಕೆಲವು ನಿದರ್ಶನಗಳೂ ಇವೆ. ಉದಾ: ಸಾಫರ್ಡ್ ಎಂಬಲ್ಲಿಯ ಒಬ್ಬ ಮಜೂರನ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲೇ ಶಾಲೆಬಿಟ್ಟಿದ್ದ, ಸೇನೆಗೆ ಸೇರಿಸುವ ಮುನ್ನ ಅವನ ಬುದ್ಧಿಶಕ್ತಿಯನ್ನು ಪರೀಕ್ಷಿಸಲಾಯಿತು. ಆಗ ಅವನಲ್ಲಿ ಉಚ್ಚತರದ ಪ್ರಾಕೃತಿಕ ಸಾಮರ್ಥ್ಯವಿದೆಯೆಂದು (natural ability) ಗೊತ್ತಾಯಿತು. ಅವನನ್ನು ಸೈನಿಕ ಶಾಲೆಗೆ ಕಳಿಸಿದರು. ಅವನು ಆ ಶಾಲೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಹೊಂದಿ ಕಳೆದ ಮಹಾಯುದ್ಧದ ವೇಳೆ ಮರುಭೂಮಿಯ ಕಾಳಗಗಳಲ್ಲಿ ಉಚ್ಚವರ್ಗದ ಸೇನಾಧಿಪತಿಯೆಂದು ಹೆಸರುಗಳಿಸಿದನಂತೆ. ಸಾಮಾನ್ಯ ತರದ ಶೈಕ್ಷಣಿಕ ಪರೀಕ್ಷೆಯಲ್ಲಾದರೆ, ಪ್ರಾಯಶಃ ಅವನು ಮೂಲ ಪರೀಕ್ಷೆಯಲ್ಲೇ ತೇರ್ಗಡೆ ಹೊಂದುತ್ತಿರಲಿಲ್ಲ.

ಕೊನೆಯದಾಗಿ ಬುದ್ಧಿಶಕ್ತಿಯೇ ಸರ್ವಸ್ವವೆಂದು ತಿಳಿಯಬಾರದು. ಅದು ಒಂದು ನಿರ್ದಿಷ್ಟ ಮಿತಿಯನ್ನು ಸೂಚಿಸುತ್ತದಷ್ಟೆ. ಆ ಮಿತಿಯನ್ನು ಮುಟ್ಟುವದು ಯಾವ ಮುಟ್ಟದಿರುವದು ನಮ್ಮನ್ನೇ ಅವಲಂಬಿಸಿದೆ ಮಾತ್ರವಲ್ಲ, ಆ ಮಿತಿಯನ್ನು ಮುಟ್ಟಿದವರೆಲ್ಲಾ ಅತ್ಯಂತ ಬುದ್ಧಿವಂತರೆಂದು ಭಾವಿಸಲು ಬಾರದು.

ಉತ್ತರಗಳು

ಅವನು ಮೊದಲು ದೊಡ್ಡ ಪಾತ್ರೆಯಲ್ಲಿ ನೀರನ್ನು ತುಂಬಿ ಅದರಿಂದ ಸಣ್ಣಪಾತ್ರೆಯನ್ನು ತುಂಬಿಸುವನು. ಆಗ ದೊಡ್ಡಪಾತ್ರೆಯಲ್ಲಿ ೨ ಪಾವು ನೀರು ಉಳಿಯುವುದಷ್ಟೆ. ಸಣ್ಣ ಪಾತ್ರೆಯನ್ನು ಬರಿದುಮಾಡಿ, ಅದರಲ್ಲಿ ಆ ೨ ಪಾವುಗಳನ್ನು ಸುರಿಯುವನು. ಅನಂತರ ಪುನಃ ದೊಡ್ಡ ಪಾತ್ರೆಯನ್ನು ನೀರಿನಿಂದ ತುಂಬಿ ಎರಡೂ ಪಾತ್ರೆಗಳನ್ನು ಮನೆಗೆ ಕೊಂಡೊಯ್ಯುವನು. ದೊಡ್ಡ ಪಾತ್ರೆಯಲ್ಲಿ ೪ ಮತ್ತು ಸಣ್ಣದರಲ್ಲಿ ೨ ಹೀಗೆ ಒಟ್ಟು ೬ ಪಾವು ತಂದ ಹಾಗಾಯಿತಲ್ಲವೇ

ಮೊದಲನೆಯ ಸಂಕೇತ ೧ ರಿಂದ ೫ ಅಂಕೆಗಳನ್ನು ಅನುಕ್ರಮವಾಗಿ ಮೊದಲಿನ ಐದು ಸ್ವರಾಕ್ಷರಗಳಿಂದ ಸೂಚಿಸಲಾಗಿದೆ. ಅರ್ಥಾತ್, ೧-ಅ ೨-ಆ ೩-ಇ ೪-ಈ ೫-ಉ ಆದುದರಿಂದ ಇ ಆ ಈ ಉ ಅ ಎಂಬುದು ೩೨೪೫೧ನ್ನು ಸೂಚಿಸುತ್ತದೆ.

ಎರಡನೆಯ ಸಂಕೇತ ಪ್ರತಿ ಅಕ್ಷರವು ವರ್ಣಮಾಲೆಯಲ್ಲಿ ತನ್ನ ನಂತರ ಬರುವ ಅಕ್ಷರವನ್ನು ಸೂಚಿಸುವದು. ಆದುದರಿಂದ 'ಭಯು ಥಥ' ಅಂದರೆ ಮರಣದ

ಸಾಮಗ್ರಿ ಮತ್ತು ಕೆಲಸಗಾರರು ದೊರೆಯದೆ ಮನೆಕಟ್ಟಿಸುವ ಕೆಲಸ ನಿಂತುಹೋಗಿದೆ

ವಿರೋಧಾರ್ಥ ಸೂಚಿಸುವ ಪದಗಳು ಬಿಳಿ, ಒಣ, ಮೆತ್ತಗೆ, ಒಮ್ಮೆಲೇ, ಬಿಚ್ಚು.

(R. F. Lambert ರ Measuring Intelligence) ಎಂಬುದನ್ನು ಆಧರಿಸಿ ಬರೆದದು)

ಭಗವಾನ ಬುದ್ಧನ ಶಿಷ್ಯರ ಅವಶೇಷ

ಕಳೆದ ಶತಮಾನದಲ್ಲಿ ಭೂಪಾಲದ ಬಳಿ ಪಂಣನಾಥದಲ್ಲಿ ದೊರಕಿದ ಭಗವಾನ ಬುದ್ಧನ ಇಬ್ಬರು ಶಿಷ್ಯರು ಸಾರಿಪುತ್ತ ಮೊಗ್ಗಲಾಯನ ಇವರ ಅವಶೇಷಗಳು ಲಂಡನ್ನಿನ ಪ್ರದರ್ಶನಕ್ಕೆ ಕೊಂಡೊಯ್ಯಲಾಗಿದ್ದವು. ಈಗ ಅವನ್ನು ಹಿಂದೂಸ್ಥಾನಕ್ಕೆ ತಂದು ಕಲ್ಕತ್ತಾದಲ್ಲಿ ಪಂ. ನೆಹರೂರವರಿಂದ ಸ್ವೀಕೃತವಾಗಿ ಪೂಜ್ಯಸ್ಥಾನದಲ್ಲಿಡಲಾಗುತ್ತವೆ.

ದಿನಬಳಕೆಯ ಮನೋವಿಜ್ಞಾನ

ಬುದ್ಧಿ ಶಕ್ತಿಯನ್ನು ಅಳೆಯಬಹುದೇ

(ಬರೆದವರು: ಶ್ರೀ ಕೆ. ವಿಠ್ಠಲ ಶೆಣೈ, ಬಿ.ಎ., ಎಲ್.ಟಿ., ಉಡುಪಿ.)

ಮಂದಮತಿಗಳ ಯುಗ!

ಸರ್ ಸಿರಿಲ್ ಬರ್ಟ್ ಎಂಬುವರು ಲಂಡನ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರು. ಹೆಸರಾಂತ ಮನಃಶಾಸ್ತ್ರಜ್ಞರು ಮನೋವಿಜ್ಞಾನದ ಅನೇಕ ಸಂಶೋಧನೆಗಳನ್ನು ಮಾಡಿದ್ದಾರೆ. ಅವರು ತಮಗೆ ದೊರೆತ ಹಲವು ಸಾಕ್ಷ್ಯಗಳ ಆಧಾರದಿಂದ ಹೇಳುವುದೇನೆಂದರೆ ಮಾನವ ಜನಾಂಗದ ಬುದ್ಧಿಶಕ್ತಿಯು ದಿನಹೋದಂತೆ ಕುಂದುತ್ತಾ ಇದೆ. ಪ್ರಚಲಿತ ವೇಗದಲ್ಲೇ ಅದು ಕ್ಷಯಿಸುತ್ತ ಹೋದರೆ, ಇನ್ನು ಐವತ್ತು ವರ್ಷಗಳೊಳಗೆ, ಜಗತ್ತಿನಲ್ಲಿ ಮಂದಮತಿಗಳ (Mental defectives) ಸಂಖ್ಯೆ ಈಗಿರುವುದರ ಇಮ್ಮಡಿಯಾಗುವುದು. ವೇತನ ಪಡೆಯುವ ಅರ್ಹತೆಗೆ ಬೇಕಾಗುವಷ್ಟು ಕನಿಷ್ಠ ಬುದ್ಧಿವಂತಿಕೆಯ ಹುಡುಗ ಹುಡುಗಿಯರ ಸಂಖ್ಯೆ ಅರ್ಧದಷ್ಟಾಗುವುದು.

ಏನಿದು ಇಷ್ಟು ವೇಗದಿಂದ ನಮ್ಮ ಬುದ್ಧಿಶಕ್ತಿ ಕುಂದುತ್ತಿದೆಯೆ? ಎಂದು ಆಶ್ಚರ್ಯ ಪಡಬೇಡಿರಿ. ಡಾ. ರೇಮಂಡ್ ಕಾಟೆಲ್ ಎಂಬ ಮತ್ತೋರ್ವ ಮನಶ್ಶಾಸ್ತ್ರಜ್ಞರು ಇದಕ್ಕಿಂತಲೂ ನಿರಾಶಾಜನಕ ಚಿತ್ರ ಬರೆಯುತ್ತಾರೆ. ಮಾನವ ಜನಾಂಗವು ಮಾನಸಿಕ ದಿವಾಳಿತನದತ್ತ ನಾಗಾಲೋಟದಿಂದ ಧಾವಿಸುತ್ತಿದೆ. ಎನ್ನುವಷ್ಟು ಮುಂದುವರಿದಿದ್ದಾರೆ. ಅವರು ಕಳೆದ ತಲೆಮಾರಿನಲ್ಲೇ ಮಂದಮತಿಗಳ ಸಂಖ್ಯೆ ನೂರಕ್ಕೆ ೨೦ ಏರಿದೆಯೆಂದು ಅವರ ಅಂದಾಜು. ಮಾನವನ ಬುದ್ಧಿಶಕ್ತಿ ಈ ರೀತಿಯ ಕಠಿನ ಕ್ಷಯಕ್ಕೆ ತುತ್ತಾಗಿರುವದು ನಿಜವೇ. ಆದರೆ, ಮಕ್ಕಳ ಶಿಕ್ಷಣದ ಅವಧಿಯನ್ನು ಒಂದೆರಡು ವರ್ಷ ವರ್ಧಿಸುವಂತಹ ಚಿಲ್ಲರೆ ವಿಧಾನಗಳಿಂದ ಆ ಕ್ಷಯವನ್ನು ತಡೆಗಟ್ಟುವದು ಅಸಾಧ್ಯವೇ ಸರಿ. ಅರ್ಥಾತ್, ಇನ್ನು ಎರಡೇ ಶತಮಾನಗಳಲ್ಲಿ ಜಗತ್ತೆಲ್ಲ ಮಂದಮತಿಗಳ ರಾಜ್ಯವಾಗುವದು ನಿಶ್ಚಿತ.

ಇದೆಲ್ಲಾ ಸುಮ್ಮಗೆ ಬಾಯಿಪಟಾಕಿ ಎನ್ನಬೇಡಿರಿ. ಇದೂ ಒಂದು ನಂಬತಕ್ಕ ಮಾತೇ? ಎಂದು ಮೂಗು ಮುರಿಯಬೇಡಿ. ಉದ್ದ, ಎತ್ತರ, ಭಾರ ಮೊದಲಾದವುಗಳನ್ನು ಅಳೆದಷ್ಟೇ ನಿಷ್ಕೃಷ್ಟವಾಗಿ ಬುದ್ಧಿಶಕ್ತಿಯನ್ನೂ ಅಳೆಯುವ ವಿಧಾನಗಳನ್ನು ಕಂಡುಹಿಡಿದಿದ್ದಾರೆ ಮನೋವಿಜ್ಞಾನಿಗಳು. ಒಬ್ಬೊಬ್ಬರಲ್ಲಿ ಒಂದೊಂದು ಬಗೆಯ ಸಾಮರ್ಥ್ಯಗಳನ್ನು ಹೋಲಿಸುವುದು ಅಸಾಧ್ಯವೆಂಬಂತೆ ನಮಗೆ ತೋರುವುದು ನಿಜ. ಆದರೆ, ಮನಶ್ಶಾಸ್ತ್ರಜ್ಞರ ಹೇಳಿಕೆಯಂತೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ವಿಶಿಷ್ಟವಾದ ಕೆಲವು ಸಾಮರ್ಥ್ಯಗಳಿರುವಂತೆಯೇ ಎಲ್ಲ ವ್ಯಕ್ತಿಗಳಲ್ಲಿ (ಅಸಾಧಾರಣ ಪ್ರತಿಭಾಶಾಲಿಗಳಲ್ಲಿ ಕೂಡ) ಸಾಮಾನ್ಯವಾದ ಒಂದು ಬುದ್ಧಿಸಾಮರ್ಥ್ಯವೂ ಇದೆ. ಯಾವ ವ್ಯಕ್ತಿಯೇ ಇರಲಿ, ತನ್ನ ಆ ಸಾಮಾನ್ಯ ಬುದ್ಧಿಶಕ್ತಿಗೆ ಮೀರಿದ ಯಾವ ಕೆಲಸವನ್ನೂ ಮಾಡಲಾರ. ಆದಕಾರಣ, ಅಂತಹ ಸಾಮಾನ್ಯಬುದ್ಧಿಶಕ್ತಿಯನ್ನು (general-intelligence) ನಿಷ್ಕೃಷ್ಟವಾಗಿ ಅಳೆಯಲಿಕ್ಕೆ ಸಹಾಯಕವಾದ ಕೆಲವು ಬಗೆಯ ಪರೀಕ್ಷಾವಿಧಾನಗಳನ್ನು ಪಾಶ್ಚಾತ್ಯ ಮನಶ್ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ. ವ್ಯಕ್ತಿಗಳ ಮತ್ತು ಮಾನವ ಗುಂಪುಗಳ ಬುದ್ಧಿಶಕ್ತಿಯನ್ನು ಹೋಲಿಸುವ ವ್ಯವಸ್ಥಿತ ಪ್ರಯತ್ನಗಳು ಆರಂಭವಾಗಿ ಹಲವು ವರ್ಷಗಳಾಗಿವೆ.

ಮಕ್ಕಳ ಬುದ್ಧಿಮಾಪನ

ಕಿರಿ ಎಳೆಯ ಮಕ್ಕಳ ಬುದ್ಧಿಶಕ್ತಿಯ ಅಳೆಯುವ ಒಂದು ಉಪಾಯವನ್ನು ಹೇಳುತ್ತೇವೆ, ಕೇಳಿ. ಅಸಂಗತವಾದ (Absurd) ಅಥವಾ ತರ್ಕವಿರುದ್ಧವಾದ (illogical) ಒಂದು ಮಾತನ್ನು ಹೇಳಿ, ಅದರಲ್ಲಿ ಅಸಂಗತಿ ಅಥವಾ ತರ್ಕವಿರುದ್ಧ ಅಂಶವನ್ನು ಸೂಚಿಸುವಂತೆ ಮಗುವಿಗೆ ಹೇಳುವುದು. ಉದಾ: ಒಬ್ಬನು ಒಂದು ಅಂಗಡಿಯಲ್ಲಿ ಜಾಹಿರಾತಿನ ಬೋರ್ಡನ್ನು ಕಂಡ. ಅದರಲ್ಲಿ, ನಮ್ಮ ಹೊಸ ಮಾದರಿಯ ಒಂದು ಒಲೆಯನ್ನು ಕೊಂಡು ಕೊಂಡು ಅರ್ಧಾಂಶ ಕಲ್ಲಿದ್ದಲನ್ನು ಉಳಿಸಿರಿ, ಎಂದಿತ್ತು. ಎಲ್ಲಾ ಕಲ್ಲಿದ್ದಲನ್ನು ಉಳಿಸುವ ಆಸೆಯಿಂದ ಅವನು ಎರಡು ಒಲೆಗಳ ಕೊಂಡು ಕೊಂಡ. ಇಲ್ಲಿ ಅಸಂಗತವಾದ ಅಂಶವೇನು?

ಸಾಧಾರಣ ಇಷ್ಟೇ ಕಠಿನವಾದ ಮತ್ತೊಂದು ಪ್ರಶ್ನೆ ಕೇಳಿರಿ 'ಒಬ್ಬ ಮುದುಕನಿದ್ದ. ಅವನು ಪಾರ್ಕಿನ ಒಂದು ಇಡಿ ಸುತ್ತು ಬರುವಷ್ಟು ಶಕ್ತಿ ತನಗಿಲ್ಲವೆನ್ನುತ್ತಿದ್ದ. ಆದರೆ ಪಾರ್ಕಿನ ಅರ್ಧ ಸುತ್ತು ನಡೆದು ಪುನಃ ಹೊರಟಲ್ಲಿಗೇ ಬರಲು ಅವನಿಂದಾಗುತ್ತಿತ್ತು. ಇಲ್ಲಿ ಅಸಂಗತವಾದ ಅಂಶವಾವುದು?

ಮೇಲಿನ ಪ್ರಶ್ನೆಗಳು ಕಿರಿ ಕ್ಷುಲ್ಲಕವೆಂಬಂತೆ ತೋರುತ್ತವಲ್ಲವೆ? ಮನೆಯಲ್ಲಿ ಮಕ್ಕಳಿದ್ದರೆ, ಅವರಿಗೆ ಆ ಪ್ರಶ್ನೆಗಳನ್ನು ಹಾಕಿನೋಡಿ.

ಸುಮಾರು ಆರು ಇಲ್ಲವೆ ಏಳು ವರ್ಷದ ಮಕ್ಕಳ ಬಗ್ಗೆ ರಚಿತವಾದ ಇದೊಂದು ಪ್ರಶ್ನೆಯನ್ನು ನೀವಾದರೆ ಒಂದೇ ಕ್ಷಣದಲ್ಲಿ ಉತ್ತರಿಸಲಿಕ್ಕೆ ಸಾಕು. ರಾಮನು ಕೃಷ್ಣನಿಗಿಂತ ವೇಗವಾಗಿ ಓಡುತ್ತಾನೆ. ಕೃಷ್ಣನು ಗೋವಿಂದನಿಗಿಂತ ನಿಧಾನವಾಗಿ ಓಡುತ್ತಾನೆ. ಹಾಗಾದರೆ, ರಾಮ, ಕೃಷ್ಣ, ಗೋವಿಂದ ಇವರಲ್ಲಿ ಯಾರ ವೇಗ ಅತಿ ಹೆಚ್ಚಿನದು?

ಹನ್ನೆರಡ ವರ್ಷ ವಯಸ್ಸಿನ ಮಕ್ಕಳಿಗೆ ಹಾಕುವ ಪ್ರಶ್ನೆಗಳಾದರೋ ಇವಕ್ಕಿಂತ ಸ್ವಲ್ಪ ಕಠಿನವಾಗಿರುತ್ತವೆ. ಉದಾ: ರೈಲು ಹೊರಡಲು ತಡವಾದರೆ ಪರವೂರಲ್ಲಿನ ತನ್ನ ಮಿತ್ರನನ್ನು ಅವನು ಭೆಟ್ಟಿಯಾಗಲಾರ. ರೈಲು ಹೊರಡಲು ತಡವಾಗದಿದ್ದರೆ, ರೈಲು ಹತ್ತಲು ಅವನಿಂದ ಸಾಧ್ಯವಿಲ್ಲ. ರೈಲು ಹೊರಡಲು ತಡವಾಯಿತೋ ಇಲ್ಲವೋ ಗೊತ್ತಿಲ್ಲ. ಅವನು ತನ್ನ ಮಿತ್ರನನ್ನು ಭೆಟ್ಟಿಯಾದನೋ ಇಲ್ಲವೋ?

ಉಚ್ಚ ಬುದ್ಧಿಶಕ್ತಿ

ಬುದ್ಧಿಮಾಪಕ ಪ್ರಶ್ನೆಗಳೆಲ್ಲ ಇಷ್ಟೇ ಕಠಿನವೆಂದು ಭಾವಿಸಬೇಡಿ. ಸೇವೆಗೆ ವ್ಯಕ್ತಿಗಳನ್ನು ಸೇರಿಸುವಾಗ ಉಚ್ಚ ಬುದ್ಧಿಶಕ್ತಿಯ ವಯಸ್ಕರ (Superior adult) ರನ್ನು ಆರಿಸಲೋಸುಗ, ಈ ಕೆಳಗಿನ ಮಾದರಿಯ ಬಹಳ ಕಠಿನ ಪ್ರಶ್ನೆಗಳನ್ನೂ ಕೇಳುತ್ತಾರೆ. ಅವುಗಳಿಗೆ ಉತ್ತರವೀಯಲು ಸಾಮಾನ್ಯ ಬುದ್ಧಿಶಕ್ತಿ ಸಾಲದು. ನಿಮ್ಮಲ್ಲಿಯೂ ಉಚ್ಚ ಬುದ್ಧಿಶಕ್ತಿಯಿದೆಯೋ ಎಂದು ತಿಳಿಯುವ ಕುತೂಹಲವಿದ್ದರೆ ಇವನ್ನು ಮೊದಲು ಉತ್ತರಿಸಿ, ಲೇಖನದ ಕೊನೆಯಲ್ಲಿ ಕೊಟ್ಟ ಉತ್ತರಗಳೊಂದಿಗೆ ನಿಮ್ಮವನ್ನು ಹೋಲಿಸಿ ನೋಡಿರಿ. (ದಯವಿಟ್ಟು ಪ್ರಯತ್ನ ಮಾಡುವ ಮುನ್ನ ಉತ್ತರಗಳನ್ನು ನೋಡದಿರಿ.)

ಅಮೇರಿಕದ ಸೇನಾಪಡೆಗೆ ವ್ಯಕ್ತಿಗಳನ್ನು ಆರಿಸುವಾಗ ಕೇಳುವ ಮಾದರಿಯ ಪ್ರಶ್ನೆಯಿದು 'ರಾಮುವಿನ ತಾಯಿ ಅವನ ಕೈಯಲ್ಲಿ ೩ ಪಾವಿನದೊಂದು ೫ ಪಾವಿನದೊಂದು, ಹೀಗೆ ಎರಡು ಪಾತ್ರೆಗಳನ್ನಿತ್ತು ಏಳು ಪಾವು ನೀರು ತರುವಂತೆ ಅವನಿಗೆ ಹೇಳಿದಳು. ಅವೆರಡೇ ಪಾತ್ರೆಗಳನ್ನು ಪಯೋಗಿಸಿ, ಸರಿಯಾಗಿ ೭ ಪಾವು ನೀರು ತರುವ ಬಗ್ಗೆ ಹೇಗೆ?

ಕೆಲವು ಪ್ರಶ್ನೆಗಳಲ್ಲಿ, ಕೇವಲ ಸಂಕೇತಗಳನ್ನು (code) ಕಂಡುಹಿಡಿಯುವದಷ್ಟೇ ಕೆಲಸವಾಗಿರುತ್ತದೆ. ಉದಾ: [illegible]ನ್ನು 'ಓಲ ಇ ಆ ೭' ಎಂಬುದು ಸೂಚಿಸುವುದಾದರೆ, [illegible]ನ್ನು 'ಲ ಉ ಅ[illegible]' ಎಂಬುದು ಸೂಚಿಸುವುದಾದರೆ. [illegible] ಅ ಈ ಉ ಲ ಎನ್ನುವುದು ಏನನ್ನು ಸೂಚಿಸುತ್ತದೆ?

ಇದಕ್ಕಿಂತಲೂ ತುಸು ಕಠಿನವಾದ ಈ ಕೆಳಗಿನ ಪ್ರಶ್ನೆಯನ್ನು ಉತ್ತರಿಸಲು ಸ್ವಲ್ಪ ಹೆಚ್ಚಿಗೆ ಸಹನೆ ಬೇಕಷ್ಟೇ. 'ಛಥ ಖಥ' ಎಂಬುದು 'ಜನಗಣ' ಎಂಬುದನ್ನು ಸೂಚಿಸುವುದಾದರೆ ಛ ಯ ಥ ಧ ಎಂಬುದು ಏನನ್ನು ಸೂಚಿಸುವುದು?

ಸಂಸ್ಕೃತ ಮತ್ತು ಪುಶ್ತೋ

—)0(—

ಕೆಲ ದಿನಗಳ ಹಿಂದೆ ಕಾಬೂಲಿನ ವಿಶ್ವವಿದ್ಯಾನಿಲಯದಲ್ಲಿ ಸಂಸ್ಕೃತ ಭಾಷೆಯನ್ನು ನಿರ್ಬಂಧದಿಂದ ಕಲಿಸುವ ಏರ್ಪಾಡು ಮಾಡಲಾಗಿದೆಯೆಂದು ಸುದ್ದಿ ಬಂದಿತ್ತು. ಭಾರತದಲ್ಲಿಯ ಮುಸ್ಲಿಮರಲ್ಲನೇಕರು ಅರಬ್ಬೀಯ ಉರ್ದುವಿಗೆ ಅಂಟಿಕೊಳ್ಳುವ ಹಟತೊಟ್ಟಿರುವಾಗ ಮುಸ್ಲಿಂ ರಾಷ್ಟ್ರವೊಂದು ಸಂಸ್ಕೃತವನ್ನು ಕಡ್ಡಾಯವಾಗಿ ಕಲಿಸುವ ಕೆಲಸಕ್ಕಿಳಿದುದು ಅನೇಕರನ್ನು ಆಶ್ಚರ್ಯಗೊಳಿಸಿರಬಹುದು. ಭಾರತದಲ್ಲಿ ಅಫಗಾಣಿಸ್ತಾನದ ರಾಯಭಾರಿಗಳು ಈ ಬಗ್ಗೆ ವಿವರಿಸುತ್ತ ಅಫಗಾಣಿಸ್ತಾನದಲ್ಲಿನ ಪ್ರಶ್ತೋಭಾಷೆ ಸಂಸ್ಕೃತ ಕುಲದ ಭಾಷೆಯಾಗಿದ್ದು ಆ ಪ್ರಾಚೀನ ಭಾಷೆಯ ಅಭ್ಯಾಸದಿಂದ ಪ್ರಶ್ತೋದ ಬೆಳವಣಿಗೆಗೆ ಅನುಕೂಲವಾದೀತೆಂದು ಅಭಿಪ್ರಾಯಪಟ್ಟಿದ್ದರು.

ಅಫಗಾಣಿಸ್ತಾನವೆಂದರೆ ಭಾರತದ ಹಿಂದಿನ ಗಾಂಧಾರವೆಂದು ಎಲ್ಲರಿಗೂ ಗೊತ್ತು. ನಿಜವಾಗಿ ಕೇಳಿದರೆ ಅಕ್ಸಸ್ ನದಿಯ ವರೆಗಿನ ಪ್ರದೇಶ ಮೊಗಲರ ಕಾಲದವರೆಗೂ ಭಾರತದ ಭಾಗವಾಗಿತ್ತು. ಆಸ್ತೀಕ್ಷೆ, ಇರಾಣದಲ್ಲಿ ಕಾಸ್ಪಿಯನ್ ಅಥವಾ ಕಶ್ಯಪ ಸಮುದ್ರದ ವರೆಗೂ ಸಂಸ್ಕೃತದ ಪ್ರಭಾವವಿತ್ತು. ಪರ್ಶಿಯನ್ ಮತ್ತು ಸಂಸ್ಕೃತ ಭಾಷೆಗಳು ತೀರ ಸಮೀಪವಾಗಿದ್ದವು. ಇಸ್ಲಾಮದ ವಿಸ್ತೀರ್ಣದ ನಂತರವೇ ಅರಬೀ ಪ್ರಭಾವದಿಂದ ಪರ್ಶಿಯನ್ ಮತ್ತು ಪುಶ್ತೋ ಭಾಷೆಗಳು ತಮ್ಮ ಸಂಸ್ಕೃತ ಸಾಮೀಪ್ಯವನ್ನು ಒಹಳ ಮಟ್ಟಿಗೆ ಕಳೆದುಕೊಂಡವು. ಅಫಗಾಣಿಸ್ತಾನದ ಕಾಬೂಲ ನದಿವೇದ ಕಾಲದ ಕುಭಾ ನದಿಯೆಂದೂ ಗೊಮೆಲನದಿ ಗೋಮತಿ ನದಿಯೆಂದೂ ಡಾ. ರಘುವೀರರು ಹೇಳುತ್ತಾರೆ.

ಭಾರತದಲ್ಲಿ ಸಂಸ್ಕೃತದ ಅಪಭ್ರಂಶಗಳು ನಾನಾ ರೂಪ ಧರಿಸಿರುವಂತೆ ಪುಶ್ತೋಭಾಷೆಯಲ್ಲಿ ಉಳಿದಿರುವ ಅನೇಕ ಸಂಸ್ಕೃತಶಬ್ದಗಳೂ ವಿಕೃತವಾಗಿವೆ. ಅದರೂ ಅವುಗಳ ಮೂಲವನ್ನು ಈಗಲೂ ಕಂಡು ಹಿಡಿಯಬಹುದಾಗಿದೆ. ಉದಾಹರಣೆಗಾಗಿ ಕಶ್ಯಪ (ಆಮೆ) ಶಬ್ದ ಪುಶ್ತೋವಿನಲ್ಲಿ ಕಶ್ಪ ಅಥವಾ ಕಶಪ ಆಗಿ ಉಳಿದಿದೆ. ಸಂಸ್ಕೃತದ ಕುಜ ಅಂದರೆ ಗೂಡು ಬೆನ್ನಿನವ ಎಂಬುದು ಕೋಝ ಎಂದಾಗಿದೆ.

ಮೊನ್ನೆ ನೆನ್ನೆಯ ಕಡೆ ಇಬ್ಬರು ಅಫಗಾಣರು ಭೆಟ್ಟಿಯಾದರೆ ಕರುಣೆ ಎಂದು ಕೇಳುವ ರೂಢಿ ಮೊನ್ನೆ ಮೊನ್ನೆಯವರೆಗೂ ಇತ್ತು. ಈ ಕರುಣ ಸಂಸ್ಕೃತದ ಕರುಣವೇ ಹೊರತು ಬೇರೆ ಅಲ್ಲ.

ಸಾಮ್ಯವುಳ್ಳ ಇನ್ನೂ ಹಲ ಶಬ್ದಗಳನ್ನು ಉಲ್ಲೇಖಿಸಬಹುದು. ಸಂಸ್ಕೃತದ ಪ್ರಹರ (ಹೆಟ್ಟು) ಪುಶ್ತೋದಲ್ಲಿ ಪರಹಾರ ಆಗಿದೆ ಘೋಟಕ ಎಂದರೆ ಪುಶ್ತೋದಲ್ಲಿ ಸಗ್. ಅದರ ಸಂಸ್ಕೃತದ ಮೂಲ ಗೋಷ್ಠ. ಕೃತ ಸಂಸ್ಕೃತದ ಮುಸಿಕ (ಇಲಿ) ಮುಹಾರವಾಗಿದೆ ಸಂಸ್ಕೃತದ ಪೇಸ (ಕರು) ಪೇಯು ಆಗಿದೆ. ಭಾರತದ ರಾತ್ರಿಗೆ ಅನೇಕ ಬಾರತೀಯ ಭಾಷೆಗಳಲ್ಲಿರುವಂತೆ ರಾತ್ ಎಂದೇ ಪ್ರಶ್ತೋದಲ್ಲಿ ಹೇಳುವರು. ಸಂಸ್ಕೃತದ ರಂಧ ಎಂದೂ ಸೀಮಾ ಎಂದರೆ ಅರ್ಜಿಯ ಪಕ್ಕ ಎಂಬರ್ಥದಲ್ಲಿ ಸಿಮ್ ಎಂದೂ ಶೃಂಖಲಾ ಎಂಬುದು ಕುದುರೆಯ ಕಾಲು ಕಟ್ಟುವ ಹಗ್ಗ ಎಂಬರ್ಥದಲ್ಲಿ ಕ್ಷೀಲ ಎಂದೂ ಸಂಸ್ಕೃತದ ಜ್ಯಾ (ಬಿಲ್ಲಿನ ಹೆದೆ) ಎಂಬುದು ಜ್ಹೂಯ್ ಎಂದೂ ಪಯ (ಹಾಲು) ಎಂಬುದು ಪೈ ಎಂದೂ ಘನ ಎಂಬುದ ಪಗ ಎಂಬರ್ಥದಲ್ಲಿ ವಾಂದನಹ್ ಎಂದೂ ಸೂಕ್ಷ್ಮ ಸೋಂಜದ ಪತ್ರಿಕೆ ಪೆಕಯ್ ಎಂದೂ ಮಯೂರ ಮೋರ್ ಎಂದೂ ಮಾರ್ಪಟ್ಟಿವೆ.

ಕ್ರಿಯಾಪದಗಳು ನಾಮಪದಗಳಿಗಿಂತಲೂ ಬಹಳ ಸಾಮ್ಯವನ್ನು ಕಾಣುತ್ತೇವೆ. ಮುಸುಕು ... (ಪಕ್ಷಿಯು) ...

ಡಾ. ರಘುವೀರರು ಇನ್ನೂ ಅನೇಕ ಶಬ್ದಗಳನ್ನು ಧಾತುಗಳನ್ನು ಉದಾಹರಿಸಿ ... ಒಟ್ಟಿನವಾಗಿವೆ. ಉಚ್ಚ, ಪ್ರಚಾತ್ ಗಿರಿ ಘಾತ ತವರ್ ತದು ತುಲ ಸ್ಥಲ ಅನೇಕ ಪದಗಳಲ್ಲಿ ದ ಎಂಬ ವ್ಯಂಜನ ಲ ಆಗಿ ಮಾರ್ಪಡುವದುಂಟು ಪೇದರ ಲೇಪ್ಸೆ (ಭಾವನಂಟು) ನರ್ದ ನರು (ಕೂಗು) ಎಂದಾಗಿವೆ, ಮರಣಹೋಗಿ ಮ್ರಾಮವಾಗಿದ್ದರೆ ವರ್ಷಾಕಾಲ ವಿದ್ದುದು ಪಾಶಕಾಲವಾಗಿದೆ. ವಿಷವೆಂಬುದು ವೇಶವಾಗಿದೆ ಸಂಸ್ಕೃತದ ಶ್ಲಾಘ ಪುಶ್ತೋವಿನಲ್ಲಿ ಶಾಘಲವಾಗಿ ಪರ್ಯವಸ್ಯವಾಗಿದೆ.

ಈ ಪ್ರಕಾರ ಭಾಷಾಸಾಮ್ಯವೇ ಮೊದಲಾದವುಗಳನ್ನು ಅರಿತುಕೊಂಡರೆ ನಮ್ಮ ನೆರೆ ಹೊರೆಯ ರಾಷ್ಟ್ರಗಳೊಡನೆ ನಮ್ಮ ಸೌಹಾರ್ದ ಒಂದಿಸಿಬಿಗಿಯಾಗಲು ಅನುಕೂಲವಾಗುವದು.

— (o) —

ನೋಟೀಸು

ಹೊಸಪೇಟೆ ಡಿ|| ಮು|| ಕೋರ್ಟಿನಲ್ಲಿ

O. S. 418/20 E. P. 112/48

ವಾದಿ:- ಚಂದುಬಾಯಿ D H

ವಿರುದ್ಧ

ಪ್ರತಿವಾದಿಗಳು - ಗುರುರಾವ ವಗೈರೆ J D.

ಮೇಲಿನ ಸಂಬಂಧದಲ್ಲಿ ಚಂದುಬಾಯಿ ತನ್ನ ಜೀವನಾರ್ಥದ ಡಿಕ್ರಿ ಮೊತ್ತವನ್ನು ವಸೂಲುಮಾಡಿ ಕೊಳ್ಳಲು ಜೇಟು ಗುರುರಾವ ಇವರ ಆಸ್ತಿಯನ್ನು ಯಾಲಂ ಕೋರಿರುತ್ತಾಳೆ. ಸದರಿ ಗುರುರಾಯನ ಹೆಂಡತಿ ಗಂಗಾಬಾಯಿ ಮತ್ತು ಆಸ್ತಿ ಸ್ವಾಧೀನದಲ್ಲಿ ಇಟ್ಟುಕೊಂಡು ಬಾಗಲಕೋಟೆ ಶ್ಯಾಮಸುಂದರರಾವ ಇವರಿಗೆ ಸದರಿ ಯಾಲಂ ವಿಷಯ ಆಗಲಿ ಸದರಿ ಯಾಲಂನಲ್ಲಿ ಚಂದುಬಾಯಿ ಸವಾಲು ಮಾಡುವ ಒಪ್ಪಯದಲ್ಲಿ ಆಗಲಿ ತಕರಾರು ಇದ್ದರೆ 1-3-49 ಕ್ಕೆ ಕೋರ್ಟಿಗೆ ಹಾಜರು ಆಗತಕ್ಕದ್ದು.

ಹೊಸಪೇಟೆ ಎಸ್ ನಾರಾಯಣರಾವ

15-2-49 ಪ್ಲೀಡರ್ for D. H.

ನೋಟೀಸು

ಬಳ್ಳಾರಿ ಅಡಿಷನಲ್ ಸ್ಮಾಲ್‌ಕಾಜ್ ಕೋರ್ಟಿನಲ್ಲಿ

S. C 715/48

Between

ವಾದಿ:- ನಾರಾಯಣರೆಡ್ಡಿಯ ಮಗ ವಿ. ಎ. ನಾಗರೆಡ್ಡಿ ಅದವಾನಿ

ವಿರುದ್ಧ

ಪ್ರತಿವಾದಿ:- ರಾಜಯ್ಯನ ಮಗ ಪುರಪತಿ ಪಿಡುಪಯ್ಯ ಕವ್ವಾಳೇದು ಅದವಾನಿ ತಾ||

ನೀವು ವಾದಿಗೆ ಕೊಡಬೇಕಾದ ಪ್ರೋನೋಟಿನ ಬಾಬತು 70-0-0 ಅಕ್ಷರದಲ್ಲು ಎಪ್ಪತ್ತು ರೂಪಾಯಿ ಮತ್ತು ಅದರ ಬಡ್ಡಿ ಕೋರ್ಟು ಖರ್ಚು ಕೊಡಲು ನಿನ್ನ ಮೇಲೆ ದಾವಾ ವಿಚಾರಣೆಯು 8-3-1949 ಕ್ಕೆ ಹಾಕಲಾಗಿದೆ. ಆ ದಿನ ನೀವಾಗಲಿ ಸ್ವಿಮ್ಮವರ ವಕೀಲರಾಗಲಿ ಹಾಜರಾಗಿರದಿದ್ದರೆ ಆಕ್ಷೇಪಣೆ ಇಲ್ಲದೆ ಎಕ್ಸಪಾರ್ಟಿಯಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಬಿ. ಕಲ್ಲುರಾವ್

ವಾದಿಯ ವಕೀಲರು

ನೋಟೀಸು

ಹೊಸಪೇಟೆ ಡಿ| ಮು| ಕೋರ್ಟಿನಲ್ಲಿ

S. C 492/48

ವಾದಿ - ಕೆ ಹುಸೇನ ಬಿ alias ಕಿಟ್ಟಿಮಾ

ಪ್ರತಿವಾದಿ - ಮರಾದಿಗರ ಸಾಹೆಬ್ಬನ ಮಗಳು ಮುಲ್ಲಿನ್ಸ ಕಾವುರಿಸಿದ

ವಾದಿಯು ರೂ 89-3-0 ಗೋಸ್ಕರ ನಿನ್ನ ಮೇಲೆ ದಾವಾ ಹೂಡಿದ್ದಾಳೆ. ದಾವಾ ತಾ 28-2-49 ಕ್ಕೆ ಇರುತ್ತದೆ. ಆ ದಿನ ನೀನು ಕೋರ್ಟಿಗೆ ಹಾಜರಾಗತಕ್ಕದ್ದು. ಇಲ್ಲವಾದರೆ ನಿನ್ನ ಪರೋಕ್ಷದಲ್ಲಿ ವಿಚಾರಣೆಯಾಗಿ ಡಿಕ್ರಿಮಾಡಲ್ಪಡುವದು ತಿಳಿಯತಕ್ಕದ್ದು.

ಹೊಸಪೇಟೆ ಎಸ್ ಚಕ್ರಪಾಣಾಚಾರು

17-2-49 ವಕೀಲ

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ -1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4½%	,

ಚಾಲ್ತಿ ಖಾತೆ (Current Account) 100 ರೂ ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ ಬ್ಯಾಂಕ್ ಲೆಕ್ಕಗಳನ್ನು 5 ರೂ ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8-14-3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ -ಬಳ್ಳಾರಿ.

ಬಿ ವಿ ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ— ಮಾರ್ಕಲಾ ಫೈಸ್ಕ್ಯಾಲ್ ಕಟ್ಟಡ

ತರಗತಿಗಳು —ಪ್ರಾರಂಭಿಕ —ಮಾಧ್ಯಮಿಕ ರಾಷ್ಟ್ರಭಾಷೆ ಉತ್ಕೃತ — ವಿಶಾರದ ಪ್ರಚಾರಕ

ವೇಳೆ —ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ ಪುಸ್ತಕ ಪರೀಕ್ಷೆ ವರ್ಗಗಳ ಅವಧಿ ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ. 21—2—49

(Nationalist Weekly)

ಚಂದಾದರಗಳು	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3- 0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri……………………

……………………

……………………

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಒಸ್ತೆ ೦೦೩.
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೮ ಫೆಬ್ರವರಿ ೧೯೪೯ | ಸಂಚಿಕೆ ೨

ಮದ್ರಾಸದಲ್ಲಿ ಸರ್ದಾರ ಪಟೇಲರ ಭಾಷಣ

ಸರಕಾರಕ್ಕೆ ಸಹಕಾರ-ರಾಷ್ಟ್ರವಿಘಾತಕ ದುಷ್ಟಶಕ್ತಿಗಳ ನಾಶ.

——)|(——

"ಜನತೆಯು ಸರಕಾರದೊಡನೆ ಸಹಕರಿಸಿದರೆ ದುಷ್ಟ ಶಕ್ತಿಗಳಿಗೆ ಸ್ಥಾನವಿರಲಾರದು. ದೇಶದಲ್ಲಿ ಶಾಂತಿಯು ನೆಲೆಗೊಳ್ಳುವದು. ಆಂಧ್ರ ದೇಶದ ಒಂದೆರಡು ಜಿಲ್ಲೆಗಳಲ್ಲಿ ೩೦೦-೩೦೦ ಜನ ಕಾಂಗ್ರೆಸಿಗರ ಕೊಲೆ ಕಮ್ಯೂನಿಸ್ಟರಿಂದ ಆದುದಕ್ಕೆ ಕಾರಣವೇನು? ನಾವು ಈ ಸ್ವಾತಂತ್ರ್ಯಕ್ಕಾಗಿಯೇ ಹೋರಾಡಿದ್ದು? ಕಾರಣ ಆ ಬಗ್ಗೆ ಮುಂಜಾಗ್ರತೆ ವಹಿಸಿ ನಾವು ತಪ್ಪು ಮಾರ್ಗ ಹಿಡಿದಿದ್ದೇವೆ. ಗಾಂಧೀಜಿಯವರು ಒಲಿಸಿದ್ದು ಅದಲ್ಲ. ನಾವು ಮಂತ್ರಿಮಂಡಳವನ್ನು ರಚಿಸುತ್ತೇವೆ, ಉರುಳಿಸುತ್ತೇವೆ. ಅದರಲ್ಲಿ ತಮ್ಮ ಪಾಲನ್ನು ತೆಗೆದುಕೊಳ್ಳುತ್ತೇವೆ. ಆದರೆ ಇದೀಗ ಮನೆಗೆ ಬೆಂಕಿ ಹತ್ತಿದೆ. ಅದನ್ನು ಆರಿಸಿರಿ, ನೀವು ಆರಿಸಬಲ್ಲಿರಿ; ಆದರೆ ಪೋಲೀಸರಿಂದ ಸಾಧ್ಯವಿಲ್ಲ." ಎಂದು ಉಪಮುಖ್ಯ ಪ್ರಧಾನರಾದ ಸರದಾರ ವಲ್ಲಭಭಾಯಿ ಪಟೇಲರು ಕಮ್ಯೂನಿಸ್ಟರ ಗಂಡಾಂತರದ ಬಗ್ಗೆ ಕಾಂಗ್ರೆಸಿಗರ ಹೊಣೆ ಏನೆಂಬುದರ ಬಗ್ಗೆ ಇಂದು ಮದ್ರಾಸಿನಲ್ಲಿ ಮಾತನಾಡುತ್ತ ಹೇಳಿದರು.

ಅವರಿನ್ನೂ ಹೇಳಿದ್ದೇನೆಂದರೆ:-

ಕಮ್ಯುನಿಸ್ಟರು

ದಕ್ಷಿಣ ಹಿಂದುಸ್ತಾನದ ಕಾಂಗ್ರೆಸಿಗರು ಕಮ್ಯುನಿಸ್ಟರನ್ನು ಹತ್ತಿಕ್ಕಲು ತಮ್ಮ ಪೂರ್ಣ ಜವಾಬ್ದಾರಿಯನ್ನು ಅರಿತುಕೊಳ್ಳಬೇಕು. ಕಮ್ಯುನಿಸ್ಟರ ಚಟುವಟಿಕೆಗಳಿಗೆ ಕಾಂಗ್ರೆಸಿಗರು ಆಸ್ಪದ ಕೊಟ್ಟರೆ, ದಕ್ಷಿಣ ಹಿಂದುಸ್ತಾನದ ಹೆಸರು ಕೇಳಲು ಇಲ್ಲದಂತಾಗುವುದು. ಕಮ್ಯೂನಿಜಂ ಸಂಸ್ಕೃತಿ, ನಾಗರಿಕತೆ ಸ್ವಾತಂತ್ರ್ಯ ಯಾವುದನ್ನೂ ಬಿಡುವುದಿಲ್ಲ.

ಪತ್ರಿಕೆಗಳು

ಜನತೆಯಲ್ಲಿ ವಿಷಪ್ರಚಾರ ಮಾಡುತ್ತಿರುವ ಕೆಲ ಪತ್ರಿಕೆಗಳನ್ನು ನೋಡಿ ನನಗೆ ವಿಷಾದವಾಗಿದೆ. ಇಂದು ನಮಗೆ ಪತ್ರಿಕಾ ಸ್ವಾತಂತ್ರ್ಯವಿದೆ. ಆದರೆ ಸ್ವಾತಂತ್ರ್ಯವನ್ನು ಸ್ವತಂತ್ರ ರಾಷ್ಟ್ರದ ಸ್ಥಾನಮಾನಕ್ಕೆ ಸರಿಹೋಗುವಂತೆ ಉಪಯೋಗಿಸಿಕೊಳ್ಳಬೇಕು. ಆತ್ಮಹತ್ಯೆ ಮಾಡಿಕೊಳ್ಳುವ ಸ್ವಾತಂತ್ರ್ಯ ಅಪಾಯಕರವಾದುದು. ಕೊಲೆ, ಪಾತಕಗಳನ್ನೆಸಗುವ ಸ್ವಾತಂತ್ರ್ಯವು ಇನ್ನೂ ಹೇಯವಾದುದು. ಆ ರೀತಿಯ ವಾತಾವರಣ ಹುಟ್ಟದಂತೆ ನೋಡಿಕೊಳ್ಳುವ ಹೊಣೆ ಸಮಾಜದ ಮೇಲಿದೆ. ಶಾಸನ ಸಭಾ ಸದಸ್ಯರಮೇಲೂ ವಿಶೇಷ ಹೊಣೆ ಇದೆ.

ಯೋಜನೆಗಳು

ದೊಡ್ಡ ದೊಡ್ಡ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಇನ್ನೂ ಸಮಯಬೇಕು. ಸದ್ಯದ ಆರ್ಥಿಕ ದುಃಸ್ಥಿತಿಯನ್ನು ಸುಧಾರಿಸಿ ನಾವು ಹೋಗಬೇಕು. ದೇಶವು ಹಾಳಾಗದಂತೆ ಮೇಲೆ ಜೋಪಾನವಾಗಿ ನಡೆಸಬೇಕು. ಬೊಕ್ಕಸದಲ್ಲಿ ಹಣವಿಟ್ಟು ಹಣವಿಲ್ಲ. ನಾನು ನಿರಾಶಾವಾದಿಯಲ್ಲ. ಎಲ್ಲಾ ವಿಷಯಗಳನ್ನು ನಾನು ನಿಮ್ಮ ಮುಂದಿಟ್ಟಿರುವೆನು.

ಭಾಷಾವಾರ ಪ್ರಾಂತಗಳು

ನಿಮ್ಮ ನಿಮ್ಮೊಳಗೆ ಸಹಕಾರ ರೀತಿಯಿಂದ ಒಡಂಬಡಿಕೆ ಮಾಡಿಕೊಂಡು ಪ್ರಾಂತಗಳನ್ನು ರಚಿಸಿಕೊಳ್ಳುವುದುತ್ತಮ. ಪ್ರತ್ಯೇಕೀಕರಣವು ನಿಲ್ಲುವಂತಾಗಬೇಕು. ದೇಶದಲ್ಲಿ ಅಶಾಂತಿ ಹುಟ್ಟಿಸಿ ಅದರ ಸದುಪಯೋಗ ಪಡೆದುಕೊಳ್ಳುವ ಭಾರತದ ಶತ್ರುಗಳ ಮೇಲೆ ಕಣ್ಣಿಡಿರಿ.

ದೇಶದ ಬಹು ದೊಡ್ಡ ಭಾಗವು ತುಂಡಾಗಿಹೋಯಿತು.

ಭಾರತಮಾತೆಯ ದೇಹದಿಂದ ರಕ್ತ ಸುರಿಯುತ್ತಿತ್ತು. ಇದು ಸ್ವಲ್ಪ ಸಮಯ ಆ ರಕ್ತ ಸುರಿಯುವುದನ್ನು ನಿಲ್ಲಿಸಲಾಗಿದೆ. ಭಾರತಕ್ಕೆ ಕ್ಷಯರೋಗ ಹತ್ತಿದೆ. ದೇಹದ ಯಾವುದೆ ಭಾಗದಿಂದ ರಕ್ತ ಸುರಿಯುತ್ತಿದ್ದರೆ, ದೇಹವು ಬಲಹೀನವಾಗುವುದು. ಕಾರಣ ದೇಶದ ಎಲ್ಲಾ ಭಾಗಗಳ ಬಲಪಡಿಸೋಣ. ದೇಹವನ್ನು ಬಲಹೀನಗೊಳಿಸದಂಥ ರೀತಿಯಲ್ಲಿ ಪ್ರಾಂತರಚನೆಗಳನ್ನು ಮಾಡಿಕೊಳ್ಳೋಣ.

ಆಹಾರ

ಹೆಚ್ಚು ಆಹಾರ ಬೆಳೆಯುವುದು ಧಾರ್ಮಿಕ ಕಾರ್ಯವೆಂಬ ಮನೋವೃತ್ತಿಯನ್ನು ರೈತರಲ್ಲಿ ಹುಟ್ಟಿಸುವುದು ಕಾಂಗ್ರೆಸ್ಸಿಗರ ಕರ್ತವ್ಯ.

ಕೂಲಿಕಾರರು

ಕೂಲಿಕಾರರು ಯೋಗ್ಯ ಮಾರ್ಗ ಹಿಡಿದು ಹೋಗುವಂತೆ ಆ ಹೊಣೆಯ ಬಗ್ಗೆ ಕಾಂಗ್ರೆಸ್ಸಿಗರು ಬೋಧಿಸಬೇಕು. ಕಾಂಗ್ರೆಸ್ಸು ಕೂಲಿ ಮಧ್ಯವರ್ಗದ ಹಾಗೂ ಬಂಡವಾಳಗಾರರ ಶತ್ರುವಲ್ಲ, ಎಲ್ಲರ ಬಂಧು.

ರೈಲ್ವೆ ಕೆಲಸಗಾರರು

ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನರಿಯದೆ ರೇಲ್ವೆಯವರು ವಿವಾದನೀಯರಾದ ನಿರಾಶ್ರಿತರಿಗೆ ಮತ್ತು ಕಾಶ್ಮೀರ ಯುದ್ಧಕ್ಕಾಗಿ ಸರಕಾರವು ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಲಿದೆ. ಯುದ್ಧ ನಿಂತರೂ ನಾವು ಅಲ್ಲಿ ಸೈನ್ಯವನ್ನಿಡಬೇಕಾಗಿದೆ. ರೈಲ್ವೆ ಜನರಿಗೆ ಸಂಬಳ ಕೊಡಲು ಹಣ ಎಲ್ಲಿಂದ ಕೊಡಬೇಕು? ಕೂಲಿಕಾರರ ಪರಿಸ್ಥಿತಿಯಿಂದ ಯಾರಿಗೂ ಯಿಲ್ಲ. ರೈಲ್ವೆ ಜನರಿಗಿಂತ ಕೇಳು ಮಟ್ಟದಲ್ಲಿ ಲಕ್ಷಾನು ಲಕ್ಷ ಜನರಿರುವರೆಂಬುದು ನಿಮಗೆ ಗೊತ್ತಿಲ್ಲವೇ? ರೈಲ್ವೆ ಜನರಿಗಿಂತ ಕಡಿಮೆ ತೆಗೆದುಕೊಳ್ಳುತ್ತಿರುವ ಲಕ್ಷಾವಧಿ ಜನರನ್ನು ನಾನು ನೋಡಿದ್ದೇನೆ. ಮುಷ್ಕರ ಕೆಲಸಮಾಡುವದಕ್ಕಾಗಿರುವ ರೈಲ್ವೆ ಜನರ ಬಗ್ಗೆ ನನಗೆ ಸಹಾನುಭೂತಿ ಇದೆ.

ಇಂದು ಆಹಾರ, ಕೆಲಸವಿಲ್ಲದೆ ಎಷ್ಟೋ ಜನರಿದ್ದಾರೆ. ರೈಲ್ವೆಯವರಿಗೆ ಹೆಚ್ಚಿನ ಸಂಬಳ ಕೊಡಬೇಕಾದರೆ, ಜನ ತೆರಿಗೆಗಳಿಂದ ಕೊಡಬೇಕಾಗುತ್ತದೆ. ತೆರಿಗೆಗಳಿಲ್ಲದಿದ್ದರೆ, ಅವರ ನೋಟು ಮುದ್ರಿಸಿಯಾದರೂ ಕೊಡಬೇಕಾಗುತ್ತದೆ. ಕಾರಣ ರೈಲ್ವೆ ಜನರ ಈ ವಿಚಿತ್ರ ವರ್ತನೆಯನ್ನು ಕಂಡು ನನಗೆ ವಿಷಾದವಾಗಿದೆ. ರೈಲ್ವೆ ಜನರಿಗೆ ಸಂಪು ಹೂಡುವ ಹಕ್ಕು ಇರುವುದು ನಿಜ. ಗೋಡೆಗೆ ಹಾಯುವುದಕ್ಕೆ.

ಸಮಿತಿಗಳು

ತಾವು ಸರಿಮನೆಗೆ ಹೋಗಿರುವುದರಿಂದ ತಮಗ ಬಿಟ್ಟು ಹಂ... ಸಮಿತಿಗಳು ಬೇಕೆಂದು ಕಾಂಗ್ರೆಸಿಗರು ಕೇಳುವುದು ... ಕೃತ್ಯಗಳ ದ ಕಾಂಗ್ರೆಸಿಗರು ತಮ್ಮ ಹೆಸರಿಗೆ ಕಳಂಕ ತಂದುಕೊಳ್ಳುತ್ತಿ...

ಪುರಂದರದಾಸ ಮಹಾತ್ಮೆ

(ಧಾಟಿ: ಕೇಳೋ ವಿಜಯ ದಿವ್ಯ ಸಾಲಿಗ್ರಾಮದ ಮಹಿಮೆ
ಪೇಳುವೆ ನಿಮಗತಿ ಪ್ರೀತಿಯಿಂದ)

ಬಣ್ಣಿಸಲೆಂತು ನಾ ದಾಸರಾಯರೆ ನಿಮ್ಮ ಮುಕ್ತಿಯಂ ಪಡೆದಂಥ ಚರಿತೆಯನು
ಕಣ್ಣಿಗಗೋಚರನಾದ ಶ್ರೀಹರಿಯ ಪ್ರಸನ್ನತೆಯಂ ಪಡೆದ ಕೌತುಕವನು॥
ಅತಿಕೃಪಣನತಿ ಧನವನಾಗಿ ಇದಿರಲಿ ಸತಿಸಾಧ್ವಿಯೆನಿಪ ಉಪದೇಶಿಸಿರೆ ತಿರಲು
ಪತಿ ಶ್ರೀ ಲಕ್ಷ್ಮಿಯ ಬಂದು ಬ್ರಾಹ್ಮಣವೇಷದಿ ನಿನ್ನಾಶ್ರಯಿಸುವ ಸಂಕಲ್ಪವೆಸೆನುತ॥
ಕಾಣದೆ ಪೃಥಿವಿಯೊಳ್ ಸಿರಿ ಶ್ರೀಪತಿ ತರ ನಾಯಕನಾದವ ನಿನ್ನೆಡೆಗೆ ಬಂದೆನಲು
ಪ್ರಾಣಹೋದರು ಎನ್ನ ಹಣಕಾಸುಗಳ ಮಾತ್ರ ಕೊಡಲಾರೆನೆಂದು ನೀ ನುಡಿದಿಯಾಗ
ಕರುಣಾ ಮೂರುತಿಯದ ಕೇಳ್ ತಳ್ಳಿ-ದ ಹೋಟ್ಟು ತನಸತಿಯನು ಬೇಡಲಾಗ
ಹರುಷದಿಂದಲಿ ಬೇರೆ ಕಾಣದೆ ಕೊಡಲಿದು ಮುತ್ತಿನ ಮೂಗುತಿಯನು ತೆಗೆದಿತ್ತಳು॥
ಕೊಂಡದನತಿ ಹರುಷದಿ ಶ್ರೀಪತಿ ತಾ ಹಣ ಪಡೆಯಲೆಂದು ನಿನಗೆ ತಂದಿತ್ತನು
ಕಂಡಕೂಡಲೆ ತನ ಸತಿಯದೆಂದರಿತು ಕೊಂಡದ ಪೋಗಿ ವಿಚಾರಿಸೀಯುವಳ॥
ಬೇಗ ತರ ಪೇಳೆಂದು ಒಳಹೋಗಿ ತಾ ದಾರಿಕಾಣದೆ ವಿಷಪಾನ ಮಾಡುವೆನೆಂದೆನೆ
ತ್ಯಾಗ ಭಕ್ತಿಗೆ ಮೆಚ್ಚಿ ಶ್ರೀಕರಿತಾ ಮೂಗುತಿ ತೋರಿದ ವಿಷದ ಬಟ್ಟಲೊಳು॥
ಓಡುತ ಹರುಷದಿ ಯಾಸಾಧ್ವಿ ನಿನ್ನೆಡೆ ಬಂದದ ನಿಯ್ಯಲು ವಿನಯದಿಂದ
ನೋಡ ಪೇಳೆನುತ ನೀ ಹುಡಕೆ ನಿನ್ನೆಡೆ ಇದ್ದ ಮೂಗುತಿ ಕಾಣದೆ ಬೆದರಿ ಬಿದ್ದೆ॥
ಕರ್ಮವು ಸವೆಯೆ, ಸತ್ಯದ ಮಾರ್ಗವನರಿತು ಶ್ರೀಪತಿ ಲೀಲೆಯಿದೆಂದು ತಿಳಿಯುತನೀ
ನಿರ್ಮಲ ಹೃದಯಿಯಾಗಿ ಪರಮಾತ್ಮನ ಕಾಣಲೆಂದು ಹೊರಟು ಕಾನನದೊಳಲೆದೆ॥
ಭಕ್ತರಕ್ಷಕ ಪರಮಾತ್ಮನು ತಾ ಮೆಚ್ಚಿ ತವ ಭಕ್ತಿಗೆ ಬಂದು ದರುಶನವಿತ್ತು
ಮುಕ್ತನಾಗಿ ಭವ ಬಂಧನದಿಂದೀ ಯಾತ್ಮಸಾಕ್ಷಾತ್ಕಾರವಂ ಪಡೆದೆ ಜಗ॥
ಹುಚ್ಚುಭಾವನೆಯಿಂದ ಜನರು ಓದು ಬಳಲುತೆ ಅಚ್ಯುತನನು ಮೆಚ್ಚಿಸಲಾಗದಿರೆ
ಹುಚ್ಚು ಹೋಗುವಂತೆ ಯುಕ್ತದಾರಿಯ ತೋರಿ ಸತ್ಯದ ಬೆಳಕನ್ನು ಅರುಹಿದೆ ಲೋಕಕ್ಕೆ॥
ಇಂತು ನೀನುದ್ಧರಿಸಲು ಪಾಮರರನ್ನು ಹರಿಕೀರ್ತನೆಗಳ ಮಾಡಿ ಪಾವನನಾಗಿ
ಕಂತುಪಿತನಾಜ್ಞೆಯಂತೆ ಪಂಪಾಕ್ಷೇತ್ರದಿ ತುಂಗೆಯ ದಡದಲ್ಲಿ ಬಂದು ನೀನೆಲೆಸಿದೆ॥

(ರಾ. ಪ್ರಹ್ಲಾದಾಚಾರ್ಯರು, ಹಂಪಿಯಲ್ಲಿ ಪುರಂದರ ದಾಸರ ಪುಣ್ಯದಿನ ಇದನ್ನು ರಚಿಸಿದರು.)

ಆಮಂತ್ರಣ ಪತ್ರಿಕೆ.

ಅಖಿಲ ಕರ್ನಾಟಕ ಏಕೀಕರಣ ಪರಿಷತ್ತು

೧೨ನೆಯ ಅಧಿವೇಶನ ಕಲಬುರ್ಗಿ.

ಮಾರ್ಚ ತಿಂಗಳ ೬ ನೇ ತಾರೀಖು ರವಿವಾರ

ಉದ್ಘಾಟಕರು:- ಶ್ರೀ. ಟಿ. ಸುಬ್ರಹ್ಮಣ್ಯಂ. ಅವರು

(ಮೈಸೂರು ಘಟನಾ ಸಮಿತಿಯ ಅಧ್ಯಕ್ಷರು)

ಅಧ್ಯಕ್ಷರು:- ಶ್ರೀ ಎಸ್. ನಿಜಲಿಂಗಪ್ಪ ಅವರು

(ಅ. ಭಾ. ಕಾಂಗ್ರೆಸ ವರ್ಕಿಂಗ ಕಮಿಟಿಯ ಸದಸ್ಯರು)

ಪರಿಷತ್ತಿನ ಕಾರ್ಯವು ಮಾರ್ಚ ೬ ನೇ ತಾರೀಖು ರವಿವಾರ ಉದಯ ೮ ಗಂಟೆಗೆ ಧ್ವಜವಂದನೆಯೊಡನೆ ಪ್ರಾರಂಭವಾಗುವದು. ೫ನೇ ತಾರೀಖು ಶನಿವಾರ ಅಖಿಲ ಕರ್ನಾಟಕ ಕನ್ನಡ ಸಾಹಿತ್ಯ ಸಮ್ಮೇಲನದ ಕಾರ್ಯವು ಪ್ರಾರಂಭವಾಗುವದು. ಅಂದು ಉದಯ ೮ ಗಂಟೆಗೆ ಅಖಿಲ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷರಾದ ಶ್ರೀ ನೂನ್ ಜಿನರಾಜ ಹೆಗಡೆಯವರು ಧ್ವಜಾರೋಹಣ ಮಾಡುವರು. ಸಾಹಿತ್ಯ ಸಮ್ಮೇಳನ, ಪರಿಷತ್ತು ಮತ್ತು ಗೋಷ್ಠಿಗಳ ಕಾರ್ಯಕ್ರಮಗಳು ತಾ॥ ೫-೬-೭ ಈ ಮೂರು ದಿವಸ ಒಳ್ಳೇ ವಿಜೃಂಭಣೆಯಿಂದ ನಡೆಯುವವು. ತ್ರಿಮೂರ್ತಿಗಳ ವರದಿ ಹೊರಡುವ ಸಮಯದಲ್ಲಿ ಮತ್ತು ದೊಡ್ಡ ದೊಡ್ಡ ಸಂಸ್ಥಾನಗಳು ಒಂದರ ಹಿಂದೊಂದು ವಿಲೀನವಾಗ ತೊಡಗಿರುವ ಕಾಲದಲ್ಲಿ ಪರಿಷತ್ತಿನ ಈ ಅಧಿವೇಶನವು ಕೂಡಲಿರುವದರಿಂದ ಈ ಅಧಿವೇಶನಕ್ಕೆ ಒಳ್ಳೇ ಮಹತ್ವ ಬಂದಿದೆ. ಕಾರಣ ಕನ್ನಡಿಗರೆಲ್ಲರೂ ಬರಬೇಕೆಂದು ಈ ಬಹಿರಂಗ ಆಮಂತ್ರಣ ಕೊಡಲಾಗಿದೆ. ಈ ನಮ್ಮ ಆಮಂತ್ರಣಕ್ಕೆ ಮನ್ನಣೆಯಿತ್ತು, ಎಲ್ಲರೂ ಬರಬೇಕಾಗಿ ಬಿನ್ನಹ.

ವಲ್ಲಭಭಾಯಿ ನಗರ, ಕಲಬುರ್ಗಿ — ಮಹದೇವಪ್ಪ, ಪ್ರ. ಕಾರ್ಯದರ್ಶಿ — ಶರಣಗೌಡ ಇನಾಮದಾರ, ಸ್ವಾಗತಾಧ್ಯಕ್ಷ

ಸರ್ದಾರ ಪಟೇಲರಲ್ಲಿ ಕರ್ನಾಟಕದ ಶಿಷ್ಟಮಂಡಳ

ಕೆ. ಪ್ರಾ. ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಆರ್. ಕಾರಂತ, ಬಿ. ಅನಂತಾಚಾರ್ಯ, ಬಳ್ಳಂ..ರಾವ ದಾತಾರ, ಮಂಗಳವೇಢ ಶ್ರೀನಿವಾಸ ರಾವ್, ಟೀ. ಸುಬ್ರಹ್ಮಣ್ಯಂ, ಶಿರಸಪ್ಪ ಐಜಾರಿ ಮೊದಲಾದವರಾಗಿದ್ದ ಇವರು, ಮೈಸೂರ ನೊಡನೆಗೂಡಿದ ಬೃಹತ್ಕರ್ನಾಟಕ ರಚನೆಯಾಗಬೇಕೂ ಸಂಸ್ಥಾನಿಕ ವಿಲೀನೀಕರಣವು ಪೂರ್ಣವಾಗಬೇಕೆಂದೂ ಮದ್ರಾಸಿನಲ್ಲಿ ಸರ್ದಾರ ಪಟೇಲರೊಡನೆ ಕಲೆತು ಬಿನ್ನವಿಸಿಕೊಂಡರು.

ಆಹಾರದ ಕಳ್ಳಸಾಗಾಟ

ಕಳ್ಳಸಾಗಾಟದಲ್ಲಿ ಉಪಯೋಗಿಸುವ ಗಾಡಿ ಎತ್ತು ಇತರವಾಹನಗಳು ಅದರಲ್ಲಿ ಸಾಮಾಗ್ರಿಗಳನ್ನು ಜಪ್ತಿಮಾಡುವ ಅಧಿಕಾರವನ್ನು ಹಿಂದೂಸ್ತಾನದ ಕೋರ್ಟುಗಳಿಗೆ ಕೊಡುವ ಕಾಯ್ದೆಯು ಪಾಸಾಯಿತು.

೬೨ ಲಕ್ಷ ಎಕರೆ ಸಾಗುವಳಿ

ಇನ್ನು ೭ ವರ್ಷಗಳಲ್ಲಿ ೬೨ ಲಕ್ಷ ಎಕರೆ ಭೂಮಿಯು ಸಾಗುವಳಿಯಾಗಬಹುದೆಂದೂ ಅದಕ್ಕಾಗಿ ಅಂತರಾಷ್ಟ್ರೀಯ ಬ್ಯಾಂಕಿನಿಂದ ಸಾಲತೆಗೆಯಲಾಗುವದೆಂದೂ ಒಕ್ಕಲತನದ ಮಂತ್ರಿ ಜಯರಾಮದಾಸರು ಹೇಳಿದರು.

ದೊಡ್ಡ ಕಾರಖಾನೆಗಳು

ಹಿಂದೂಸ್ತಾನದಲ್ಲಿ ಸೈಕಲ್ ತಯಾರಿಸುವ ಎರಡು ಕಾರಖಾನೆಗಳಿವೆ ಚಿತ್ತರಂಜನದಲ್ಲಿ (ಬಂಗಾಳ) ವರ್ಷಕ್ಕೆ ೧೨೦ ರೈಲ್ವೆ ಎಂಜಿನುಗಳ ತಯಾರಿಸುವ ಕೆಲಸವು ೧೯೫೦ ನೆಯ ಜನವರಿಯಿಂದ ಪ್ರಾರಂಭವಾಗುವದು ಎಂದು ಕೇಂದ್ರದ ಮಂತ್ರಿಗಳು ಮಹಾ ಶಾಸನ ಸಭೆಯಲ್ಲಿ ಹೇಳಿದರು.

ಸಂಚಾಲಕ ಸಿನೆಮಾಗಳು

30.000 ಜನಸಂಖ್ಯೆಯಿಂದ ಹಾಗೂ ಶಾಶ್ವತವಾಗಿ ಸಿನೆಮಾ ಮಂದಿರಗಳು ಸ್ಥಾಪಿಸಲ್ಪಟ್ಟಿರುವ ಸ್ಥಳಗಳಲ್ಲಿ ಸಂಚಾಲಕ ಸಿನೆಮಾಗಳನ್ನು ತೋರಿಸುವಂತೆ ಲೈಸನ್ಸು ಕೊಡಕೂಡದೆಂದು ದಕ್ಷಿಣ ಭಾರತ ಫಿಲ್ಮ್ ಚೇಂಬರ್ ಆಫ್ ಕಾಮರ್ಸ ಇವರು ವಿನಂತಿಸಿದ್ದಾರೆ. ಸರಕಾರವು ಆಲೋಚಿಸುತ್ತಿದೆ

ಸುಂಕ ವಸೂಲಿ

ಕೆಲವು ಕಡೆಗಳಲ್ಲಿ ನಿರ್ಮಿಸಬಹುದಾದ ಸುಂಕಗಳ ಮೇಲಿಂದ ಹಾದು ಹೋಗುವ ವಾಹನಗಳಿಂದ ಸುಂಕ ವಸೂಲಿ ಮಾಡುವ ಸೂಚನೆಯೊಂದು ಸರಕಾರದ ಪರ್ಯಾಲೋಚನೆಯಲ್ಲಿದೆ

— :0: —

ಕಾಂಗ್ರೆಸು ಮತ್ತು ರಚನಾತ್ಮಕ ಕಾರ್ಯಕರ್ತರು

೧೯೪೮ ನೆ ಇಸ್ವಿಯ ಡಿಸೆಂಬರ ೫ ನೇ ತಾರೀಕಿನ ಹರಿಜನದಲ್ಲಿ ಶ್ರೀ ಜೆ. ಸಿ. ಕುಮಾರಪ್ಪನವರು "ಅಖಿಲಭಾರತ ಸರ್ವ ಸೇವಾಸಂಘ" ಎಂಬ ಶಿರೋನಾಮದಲ್ಲಿ ಲೇಖವೊಂದನ್ನು ಬರೆದಿದ್ದರು. ಕಾಂಗ್ರೆಸ್ಸಿನ ಹೊಸ ಘಟನೆಯ ಕರಡಿಗೆ ಬರೆದ ಕೊನೆಯ ಬರೆಹದಲ್ಲಿ ಗಾಂಧೀಜಿಯವರು ಬಯಸಿದಂತೆ ಕಾರ್ಯವಾಗಲು ಸದ್ಯದ ಧುರೀಣರು ನಿರಾಕರಿಸಿದರು ಎಂದು ಅವರು ಆ ಬರೆಹದಲ್ಲಿ ಅಭಿಪ್ರಾಯಪಟ್ಟಿದ್ದರು. ಅಲ್ಲದೆ ಗಾಂಧೀಜಿಯ ಈ ಬಯಕೆಯನ್ನು ಈಡೇರಿಸಲು ರಚನಾತ್ಮಕ ಕಾರ್ಯಕರ್ತರು ಅಖಿಲ ಭಾರತ ಸರ್ವ ಸೇವಾ ಸಂಘವನ್ನು ಸಂಸ್ಥಾಪಿಸಿಕೊಂಡು ಪ್ರಯತ್ನಿಸುತ್ತಿರುವರೆಂದೂ ಅವರು ಬರೆದಿದ್ದರು. ಶ್ರೀ ಕುಮಾರಪ್ಪನವರು ತಮ್ಮ ಬರೆಹದ ಪ್ರಾರಂಭದಲ್ಲಿ ಇಂತು ಬರೆದಿದ್ದರು.

"ಕಾಂಗ್ರೆಸ್ಸಿನ ಹಿಂದಿನ ರಾಜಕೀಯ ಚಟುವಟಿಕೆಗಳ ಪರಿಣಾಮವಾಗಿ ಹಿಂದೀ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಇನ್ನು ಮುಂದೆ ಅದು ಲೋಕಸೇವಕ ಸಂಘವಾಗಿ ಮಾರ್ಪಡಬೇಕು. ಮತ್ತು ಹಳ್ಳಿಗಳನ್ನೆಲ್ಲ ಸ್ವಾವಲಂಬಿಗಳನ್ನಾಗಿ ಜನಸಾಮಾನ್ಯರಿಗೆಲ್ಲ ಸ್ವರಾಜ್ಯವನ್ನು ಕಲ್ಪಿಸಿಕೊಡುವದಕ್ಕಾಗಿ ರಚನಾತ್ಮಕ ಕಾರ್ಯಕ್ಷೇತ್ರದಲ್ಲಿ ದುಡಿಯಬೇಕು. ಧೋರಣ ಮತ್ತು ಘಟನೆಯಲ್ಲಿ ಈ ಬಗೆಯ ಬದಲಾವಣೆಯು ಕಾಂಗ್ರೆಸ್ಸಿಗೆ ಒಪ್ಪಿಗೆಯಾಗಲಿಲ್ಲ. ಗಾಂಧೀಜಿಯ ಬಯಕೆಗಳನ್ನೆಲ್ಲ ಕಾರ್ಯಕಾರಿ ಮಾಡುವದಕ್ಕಾಗಿ ಮತ್ತು ಅವರಿಂದ ಸ್ಥಾಪಿಸಲ್ಪಟ್ಟ ಸಂಸ್ಥಾಪಿತವಾದ ಎಲ್ಲ ಸಂಸ್ಥೆಗಳ ಸಂಘಟಿತ ಕಾರ್ಯವನ್ನು ಸಾಗಿಸುವದಕ್ಕಾಗಿ ಅಖಿಲಭಾರತ ಸೇವಾಸಂಘವು ಸಂಸ್ಥಾಪಿತವಾಗಿದೆ" ಗಾಂಧೀಜಿಯ ಮರಣದ ನಂತರ ಕಾಂಗ್ರೆಸ್ಸಿನ ಸೂತ್ರಧಾರತ್ವವು ಯಾರ ಕಡೆಗೆ ಬಂದಿತೋ ಅವರು ಬೇಕಂತಲೆ ಗಾಂಧೀಜಿಯ ಕೊನೆಯ ಬಯಕೆಯನ್ನು ಕಾರ್ಯರೂಪದಲ್ಲಿ ತರುವದಕ್ಕಾಗಿ ರಚನಾತ್ಮಕ ಕಾರ್ಯಕರ್ತರು ಅಣಿಯಾದುದರ ಪರಿಣಾಮವಾಗಿಯೇ ಅಖಿಲಭಾರತ ಸರ್ವ ಸೇವಾಸಂಘವು ಸಂಸ್ಥಾಪಿತವಾಗಿದೆಯೆಂದೂ ಮೇಲಿನ ಬರೆಹದಿಂದ ವಾಚಕರೂ ತಿಳಿದುಕೊಳ್ಳಬಹುದಾಗಿದೆ. ಆದರೆ ಶ್ರೀ ಕುಮಾರಪ್ಪ ಇವರು ಉಲ್ಲೇಖಿಸಿದ ಸಂಗತಿಗಳು ಸತ್ಯಪೂರ್ಣವಾಗಿರುವವೆ? ಸದ್ಯದಂಥ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ರಾಷ್ಟ್ರದ ಮತ್ತು ಕಾಂಗ್ರೆಸ್ಸಿನ ನೌಕೆಯನ್ನು ನಡೆಸಲು ಪ್ರಯತ್ನಿಸುತ್ತಿರುವ ಈ ಮಹನೀಯರು ಶ್ರೀ ಕುಮಾರಪ್ಪನವರಂಥ ಕ[illegible] ಪಾಲಿಗಳಾದ ಗೆಳೆಯರಿಂದ ಈ ಬಗೆಯ ನಿಷೇಧಕ್ಕೆ ಅರ್ಹರಾಗಿರುವರೋ?

ತಾವು ಸಂಸ್ಥಾಪಿಸಿದ ಎಲ್ಲ ರಚನಾತ್ಮಕ ಸಂಸ್ಥೆಗಳನ್ನು ಒಟ್ಟುಗೂಡಿಸಿ ಒಂದೇ ಬಗೆಯ ಯೋಜನೆ ಮತ್ತು ದಿಕ್ಕಿನಲ್ಲಿ ರಚನಾತ್ಮಕ ಕಾರ್ಯವು ಸಾಗಬೇಕೆಂತ ಸಾಧಬೇಕೆಂದು ಗಾಂಧೀಜಿ ತಮ್ಮ ದುರಂತ ಮರಣಕ್ಕಿಂತ ಮೊದಲು ಬಹಳ ದಿನಗಳಿಂದ ಗಂಭೀರವಾಗಿ ವಿಚಾರಿಸುತ್ತಿದ್ದರೆಂಬುದು ನಿಜ. ವಿವಿಧ ರಚನಾತ್ಮಕ ಚಟುವಟಿಕೆಗಳಲ್ಲಿ ಸಹಕರಿಸುತ್ತಿದ್ದ ರಚನಾತ್ಮಕ ಮತ್ತು ರಾಜಕೀಯ ಕಾರ್ಯಕರ್ತರಿಗೆ ನಾನಾ ಬಗೆಯ ಮನೋಭಾವಗಳನ್ನು ಅರಿತವರಿಗೆ ತಿಳಿದ ವಿಷಯವಾಗಿದೆ. ಆಯಾ ಸಂಸ್ಥೆಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಉಪಯುಕ್ತ ರಚನಾತ್ಮಕ ಕಾರ್ಯವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದರೂ ಅವುಗಳಲ್ಲಿ ಯಾವ ಸಂಬಂಧವೂ ಇಲ್ಲ. ಇದರಿಂದ ಕಾರ್ಯಕರ್ತರಲ್ಲಿ ಸಂಕುಚಿತತೆಯ ಭಾವನೆಯುಂಟಾಗುತ್ತಿದೆಯೆಂದೂ ಇದರಿಂದ ಅವರು ತಮ್ಮ ಕ್ಷೇತ್ರವನ್ನಷ್ಟೇ ನೋಡಿಕೊಂಡು ಉಳಿದವುಗಳನ್ನು ಅಲಕ್ಷಿಸುತ್ತಿರುವರೆಂದು ಗಾಂಧೀಜಿಯವರಿಗೆ ಅನುಭವವಾಗುತ್ತಲಿತ್ತು. ತಾನು ಯಾವ ಕಾರ್ಯದಲ್ಲಿ ತೊಡಗಿರುವನೋ ಅದನ್ನೊಂದು ಬಿಟ್ಟು ಉಳಿದ ಎಲ್ಲ ರಚನಾತ್ಮಕ ಚಟುವಟಿಕೆಗಳನ್ನು ಕಾರ್ಯಕರ್ತರು ಅಲಕ್ಷಿಸುತ್ತಿದ್ದರಲ್ಲದೇ ಅಲ್ಲಲ್ಲಿ ಪರಸ್ಪರ ಅವುಗಳಿಗೆ ವಿರೋಧಿಗಳಾಗಿ ಹಾನಿಯನ್ನೂ ಉಂಟುಮಾಡುತ್ತಿದ್ದರೆಂಬುದು ಕಂಡು ಬಂದಿತು. ಹಳ್ಳಿಗಳಲ್ಲಿ ಗ್ರಾಮೋದ್ಯೋಗದ ಸಾಮಾನುಗಳನ್ನೇ ಉಪಯೋಗಿಸಬೇಕಾದುದು ಕರ್ತವ್ಯವೆಂಬುದನ್ನು ಖಾದಿ ಕಾರ್ಯಕರ್ತನು ಭಾವಿಸುತ್ತಿರಲಿಲ್ಲ. ಅದೇ ರೀತಿಯಾಗಿ ಜನತೆಯ ಸೇವೆ ಮಾಡಬಯಸಿದವನು ಖಾದೀ ಉಡುಪನ್ನು ಧರಿಸುವದು ತನ್ನ ಕರ್ತವ್ಯವಾಗಿದೆಯೆಂದು ಎಣಿಸುತ್ತಿರಲಿಲ್ಲ. ರಚನಾತ್ಮಕ ಕಾರ್ಯಕರ್ತರಲ್ಲಿಯ ಈ ಅಜ್ಞಾನ ಮತ್ತು ಉದಾಸೀನತೆಯ ಪರಿಣಾಮವಾಗಿ ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮವು ಮೂಲ ಉದ್ದೇಶಕ್ಕೆ ವಿರೋಧಕವಾಗಿ ಸರಿಯಾದ ಸಂಘಟನೆಯಿಲ್ಲದ ಚಟುವಟಿಕೆಯಾಗಿ ಪರಿಣಮಿಸಿತು. ತನ್ನ ರಚನಾತ್ಮಕ ಕಾರ್ಯಕ್ರಮದ ಹಿಂದಿನ ಅಹಿಂಸಾತ್ಮಕ ಸಾಮಾಜಿಕ ಕ್ರಾಂತಿಯಾಗಲಿ, ವ್ಯಕ್ತಿತ್ವ ಪೂರ್ಣವಾದ ಶಕ್ತಿಯಾಗಲಿ ದು ಗಾಂಧೀಜಿ ಬಯಸಿದ್ದರಲ್ಲವೆ? ಸಾಮಾಜಿಕ ಸುಧಾರಣೆಯಲ್ಲಿ [illegible] ಕಾರಣವಾಗಬೇಕೆಂದು ಅವರ ಅಭಿಪ್ರಾಯವಾಗಿರಲಿಲ್ಲ. ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮವನ್ನು ಇಡಿಯಾಗಿ ಸ್ವೀಕರಿಸಿ ನಮ್ಮ ಅಹಿಂಸಾತ್ಮಕ ಸಮಾಜ ರಚನೆಯು ಶೀಘ್ರದಿ ಆದೀತು. ಇದು ಅದನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸಿದರೇನೇ ಅದರಲ್ಲಿಯ ಕ್ರಾಂತಿಕಾರಕ ತತ್ತ್ವಗಳು ಗೋಚರವಾಗುವವು. ರಚನಾತ್ಮಕ ಕಾರ್ಯಕ್ರಮದಲ್ಲಿಯ ಈ ಅಂತಸ್ಸನ್ನು ರಚನಾತ್ಮಕ ಕಾರ್ಯಕರ್ತರು ಅಲಕ್ಷಿಸಬಾರದೆಂದು ಗಾಂಧೀಜಿ ಬಯಸಿದ್ದರು. ಪ್ರತ್ಯೇಕ ಸಂಸ್ಥೆಗಳ ಸ್ಥಾಪನೆಯಿಂದ ಈ ಬಗೆಯ ಅನಿಷ್ಟ ಪರಿಣಾಮವುಂಟಾಗುತ್ತಿದೆಂದು ಅವರಿಗೆ ಕಂಡುಬರುತ್ತಿದ್ದರಿಂದಲೆ ಅವು ಒಂದೇ ಸಂಸ್ಥೆಯ ಮುಖಾಂತರ ವಿವಿಧ ಚಟುವಟಿಕೆಗಳನ್ನು ಸಾಗಿಸುವದು ಅತ್ಯಂತ ಉಪಾಯವೆಂದು ನಿರ್ಣಯಿಸಿದರು.

೧೯೪೨ ನೇ ಇಸ್ವಿಯ ಹೋರಾಟದಿಂದ ಉಂಟಾದ ಹಿಂಸಾತ್ಮಕ ವಾತಾವರಣದಿಂದ ಈ ಬಗೆಯ ಏಕಸಂಸ್ಥೆಯನ್ನು ನಿರ್ಮಿಸುವದು ಅತ್ಯವಶ್ಯವೆಂದು ಅವರು ನಿರ್ಧರಿಸಬೇಕಾಯಿತು. ಅವರು ಬಿಡುಗಡೆಯಾಗಿ ಬಂದಕೂಡಲೆ ತಮ್ಮ ಈ ಸಮಗ್ರ ಗ್ರಾಮಸೇವೆಯ ಯೋಜನೆಯನ್ನು ಸೇವಾಗ್ರಾಮದಲ್ಲಿ ೧೯೪೪ ನೇ ಇಸ್ವಿಯ ಸಪ್ಟೆಂಬರ ತಿಂಗಳಲ್ಲಿ ಕೂಡಿದ ಪ್ರಮುಖ ರಚನಾತ್ಮಕ ಕಾರ್ಯಕರ್ತರ ಮುಂದೆ ಮಂಡಿಸಿದರು. ಅಲ್ಲದೆ ಅಖಿಲಭಾರತ ರಚನಾತ್ಮಕ ಸಂಸ್ಥೆಗಳ ಪ್ರತಿನಿಧಿಗಳನ್ನೊಳಗೊಂಡ ಸಮಿತಿಯೊಂದನ್ನು ಅವರು ಸ್ಥಾಪಿಸಬೇಕೆಂದು ಸೂಚಿಸಿದರು. ಆದರೆ ಈ ವಿಚಾರಕ್ಕೆ ಪೂರ್ತಸ್ವರೂಪ ಬರುತ್ತ ನಡೆದಂತೆ ಈ ಎಲ್ಲ ಸಂಘಗಳು ಒಂದೇ ಸಂಸ್ಥೆಯಲ್ಲಿ ವಿಲೀನವಾಗದೆ ಯಶಸ್ವಿಯಾಗಿ ಕಾರ್ಯವು ನಡೆಯಲಾರದೆಂದು ಕಂಡುಬಂದಿತು. ಅವರ ಮರಣದ ಮುಂಚೆ ಕೆಲದಿನ ವಿವಿಧ ರಚನಾತ್ಮಕ ಸಂಸ್ಥೆಗಳ ಸದಸ್ಯರು ದಿಲ್ಲಿಯಲ್ಲಿ ತಮ್ಮ ಕಾಲಿಕ ಸಭೆಗಳಿಗಾಗಿ ಬಂದಿದ್ದರು. ಇದರ ಸಂಧಿಯನ್ನು ಸಾಧಿಸಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ರಚನಾತ್ಮಕ ಶಾಖೆಯವರು ಈ ಕಾರ್ಯಕರ್ತರ ಅನೌಪಚಾರಿಕ ಸಭೆಯನ್ನು ಕರೆದರು. ಗಾಂಧೀಜಿಯೂ ಈ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಈ ಎಲ್ಲ ರಚನಾತ್ಮಕ ಸಂಘಗಳನ್ನು ಒಂದೇ ವಿಶಾಲ ಸಂಘದಲ್ಲಿ ವಿಲೀನಗೊಳಿಸಬೇಕೆಂಬ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು. ಗಾಂಧೀಸೇವಾಸಂಘದ ಆಶ್ರಯದಲ್ಲಿ ದೇಶದಲ್ಲಿ ಪ್ರಮುಖ ಕಾರ್ಯಕರ್ತ ಪರಿಷತ್ತೊಂದನ್ನು ವರ್ಧಾದಲ್ಲಿ ಕರೆಯು

ಬೇಕೆಂದೂ ಈ ಸಭೆಯಲ್ಲಿ ಗಾಂಧೀಜಿ ಸ್ವತಃ ಉಪಸ್ಥಿತರಾಗಿ ಕೊನೆಯ ನಿರ್ಣಯವನ್ನು ಕೈಕೊಳ್ಳಬೇಕೆಂದೂ ಗೊತ್ತುಮಾಡಲಾಯಿತು. ಈ ರೀತಿಯಾಗಿ ಸ್ವತಂತ್ರ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ಸಿನ ಹೊಸ ಘಟನೆಯೆಂದು ಇರಬೇಕೆಂಬ ಬಗೆಯ ಲೋಕಸೇವಕ ಸಂಘವನ್ನಾಗಿ ಅದನ್ನು ಮಾರ್ಪಡಿಸಬೇಕೆಂಬ ಪ್ರಶ್ನೆ ಉಪಸ್ಥಿತವಾಗುವಾಗುವ ಬಹಳ ದಿನಗಳ ಮುಂಚೆಯೇ ಎಲ್ಲ ಸಂಸ್ಥೆಗಳನ್ನು ಒಟ್ಟುಗೂಡಿಸಿ ಒಂದು ವಿಶಾಲ ಸಂಘವನ್ನು ಸಂಸ್ಥಾಪಿಸಬೇಕೆಂಬ ವಿಚಾರವು ಮಹಾತ್ಮಾ ಗಾಂಧೀಯವರ ಮನಸ್ಸಿನಲ್ಲಿ ಸುಳಿದಿತ್ತೆಂಬುದು ಮೇಲಿನ ವಿವೇಚನೆಯಿಂದ ಕಂಡುಬರುವದು.

ಶಂಕರರಾವ ದೇವ

Don't Strike
Help Peace & Security

—(o)—

ಸಂಪಿನ ಭಾವನೆ ತೊಡೆಯಿರಿ

ರೈಲ್ವೆ ಮತ್ತು ಪೋಸ್ಟ್ ಟೆಲಿಗ್ರಾಫ್ಸ್ ಶಾಖೆಗಳಲ್ಲಿ ಕಮ್ಯುನಿಸ್ಟರಿಂದ ಪ್ರೇರೇಪಿತರಾದ ಜನರು ಮಾರ್ಚ 9 ರಿಂದ ಸಂಪು ಮಾಡಲು ಯತ್ನಿಸುತ್ತಿರುವದು ದೇಶ ವಿಘಾತಕವಾದುದಾಗಿದೆ. ಸ್ವಾತಂತ್ರ್ಯ ಪ್ರಾಪ್ತವಾದ ಈ ಅಲ್ಪಕಾಲದಲ್ಲಿ ಸ್ವಾತಂತ್ರ್ಯವನ್ನು ಸುಸಂಘಟಿಸುವದನ್ನು ಬಿಟ್ಟು ದೇಶದಲ್ಲಿ ಅಶಾಂತಿ ಮತ್ತು ಅನಾಯಕತ್ವವನ್ನು ಹೆಚ್ಚಿಸುವ ಈ ಕಾರ್ಯವು ಸಾಮಾನ್ಯ ಪ್ರಜಾಕ್ಷೇಮಕ್ಕೆ ಗಂಡಾಂತರ ತರುವಂಥದಾಗಿದೆ. ಶ್ರೀ ಜಯಪ್ರಕಾಶ ನಾರಾಯಣರು ತಮ್ಮ ಅಧ್ಯಕ್ಷಸ್ಥಾನದಿಂದ ದೆಹಲಿ ಜನರಿಗೆ ಸರಿಯಾದ ಉಪದೇಶ ಕೊಟ್ಟು ಕಮ್ಯೂನಿಸ್ಟರ ಅನುಕರಣೆ ಮಾಡಬಾರದೆಂದು ಕಮ್ಯೂನಿಸ್ಟ ಸಂಘಗಳನ್ನು ಹೆದರಿಸಿರುತ್ತಾರೆ. ಮದರಾಸಿನಲ್ಲಿ ಸರ್ದಾರ ವಲ್ಲಭಭಾಯಿ ಪಟೇಲರು ವ್ಯಾಪಾರೀಜನರ ಸಭೆಯಲ್ಲಿ ಮಾತಾಡುತ್ತ ಈ ಸಂಪುಗಳಿಂದ ದೇಶದಲ್ಲಿ ಗಲಾಟೆಗಳೆದ್ದು ದೇಶದ ಜನತೆಯು ಕಷ್ಟಕ್ಕೊಳಗಾಗುವದೆಂದು ಸೂಚಿಸಿರುತ್ತಾರೆ.

ದೇಶದಲ್ಲಿ ಆಹಾರ ಬಟ್ಟೆಗಳ ಕೊರತೆಯಿದೆ. ಇನ್ನೂ ಸಾರಿಗೆಯ ವ್ಯವಸ್ಥೆಯು ಸರಿಯಾಗಿಲ್ಲ. ವಾಗೀನುಗಳ ಅಭಾವದಿಂದ ಒಂದು ಕಡೆಯಿಂದ ಇನ್ನೊಂದು ಕಡೆ ಮಾಲು ಸಾಗಿಸುವ ಕಾರ್ಯವು ಕಠಿಣವಿದೆ. ಬಡವರಿಗೂ ಮಧ್ಯಮವರ್ಗದವರಿಗೂ ಜೀವನ ಸೌಕರ್ಯಗಳು ದೊರೆಯುವಂತಿಲ್ಲ ಜೀವನ ಮಟ್ಟವು ಏರಿದೆ. ಸರಕಾರದವರು ಬಿಡಿಸಬೇಕಾದ ಸಮಸ್ಯೆಗಳು ಎಷ್ಟೋ ಇರಬೇಕಾದರೆ ಈ ಸಂಪಿನ ಗಾಳಿಯಿಂದ ಸರಕಾರದ ಶಾಂತಿಸ್ಥಾಪನಾಕಾರ್ಯವೇ ಬುಡಮೇಲಾಗುವದು. ಕಮ್ಯೂನಿಸ್ಟರ ಈ ಕುತಂತ್ರಕ್ಕೊಳಗಾಗದಂತೆ ಎಲ್ಲಾ ಕೆಲಸಗಾರರು ತಮ್ಮ ತಮ್ಮ ಉದ್ಯೋಗಗಳಲ್ಲಿ ತೊಡಗಿರುವಂತೆ ಮಾಡಬೇಕಾದದು ಎಲ್ಲಾ ದೇಶಹಿತೈಷಿಗಳ ಕರ್ತವ್ಯವಾಗಿದೆ.

ಮದರಾಸದಲ್ಲಿ ಸರದಾರ ಪಟೇಲರ ವಿವಿಧ ಕಾರ್ಯಕ್ರಮಗಳು

ಮದರಾಸ ೨೩ "ಆಂಧ್ರ ಮತ್ತು ತಮಿಳರಿಗೆ ಪ್ರತ್ಯೇಕ ಪ್ರಾಂತಗಳು ಬೇಕಿದ್ದರೆ, ಅವರು ತಮ್ಮ ತಮ್ಮಲ್ಲಿ ಈ ಮಾತನ್ನು ಸೌಹಾರ್ದಪೂರ್ಣವಾಗಿ ನಿರ್ಣಯಿಸಿಕೊಂಡರೆ, ಈ ನಿರ್ಣಯಕ್ಕೆ ಯಾರು ಅಡ್ಡಬರಲಾರರು. ಆದರೆ ಕಾರಣವಿಲ್ಲದೆ, ಪತ್ರಿಕೆ ಹಾಗೂ ಸಭೆಗಳಲ್ಲಿ ಈ ವಿಷಯದ ಬಗ್ಗೆ ಚಳವಳಿ ನಡೆದುದನ್ನು ಕಂಡು ನನಗೆ ವಿಚಾರವಾಗುತ್ತದೆ. ಏಕೆಂದರೆ ಈ ಚಳವಳಿಯಿಂದ ಮಂತ್ರಿ ಮಂಡಳದ ಹಾಗೂ ಸರಕಾರದ ಆಡಳಿತೆಯ ಮಾರ್ಗದಲ್ಲಿ ಆತಂಕ ಉಂಟಾಗಿ ಸಮರ್ಥವಾದ ಆಡಳಿತಕ್ಕೆ ಭಂಗ ಬರುವದು. ಹೀಗಾಗದಂತೆ ದಕ್ಷತೆ ವಹಿಸುವದು ಜನತೆಯ ಆದ್ಯ ಕರ್ತವ್ಯವಾಗಿದೆ." ಹೀಗೆಂದು ಭಾರತದ ಉಪಮುಖ್ಯ ಪ್ರಧಾನರಾದ ಸರ್ದಾರ ಪಟೇಲರು ಮದರಾಸಿನ ವಣಿಕ ಸಂಘ ಮತ್ತು ಇತರ ಅನೇಕ ಸಂಘ ಸಂಸ್ಥೆಗಳು ಸಂಯುಕ್ತವಾಗಿ ಅರ್ಪಿಸಿದ ಮಾನಪತ್ರಕ್ಕೆ ಉತ್ತರೀಯವಾಗಿ ಹೇಳಿದರು.

ರಾಷ್ಟ್ರೀಕರಣ ಸದ್ಯಕ್ಕಿಲ್ಲ

ಅವರು ಮುಂದುವರಿದು "ಸದ್ಯದ ಯಾವ ಅವಧಿಯು ರಾಷ್ಟ್ರೀಕರಣವನ್ನು ಸರಕಾರವು ಮಾಡಲಾರದು. ರಾಷ್ಟ್ರೀಕರಣಕ್ಕೆ ಯಾರೂ ಹೆದರಕೂಡದು.

"ರಾಷ್ಟ್ರೀಕರಣದ ವಿಷಯದಲ್ಲಿ ಯಾರಾದರೂ ಮಾತನಾಡುತ್ತಿದ್ದರೆ, ಅವರು ತಮ್ಮ ಮುಖಂಡರಿಗಾಗಿ ಮಾತನಾಡುತ್ತಾರೆ. ಅಂಥ [illegible] ನನಗೆ ನಂಬಿಕೆ ಇಲ್ಲ.

ಪುನರ್ನಿಯಂತ್ರಣವೇಕೆ?

ಮತ್ತೆ ನಿಯಂತ್ರಣ ಹಾಕಿದ್ದಕ್ಕೆ ನೀವೆಲ್ಲಾ ದೂಷಿಸುತ್ತಿರುವಿರಿ. ನಿಯಂತ್ರಣವನ್ನು ತೆಗೆದನಂತರ ಏನು ಸಂಭವಿಸಿತೆಂಬ ಪ್ರಶ್ನೆಯನ್ನು ನೀವು ನಿಮ್ಮ ಆತ್ಮಕ್ಕೆ ಹಾಕಿಕೊಳ್ಳಿರಿ. ನಿಂದೆಗೆ ಪಾತ್ರರಾರು? ಸರಕಾರವೇನು ಮಾಡಬಲ್ಲದು? ನಿಯಂತ್ರಣವನ್ನು ತೆಗೆದೊಡನೆ ಕಳ್ಳಸಂತೆಯ ಹಾವಳಿ ಹೆಚ್ಚಾಯಿತು. ಆಗ ಜನತೆಯಲ್ಲಿ ಉದ್ವೇಗವೂ ಹೆಚ್ಚಾಯಿತು. ಸರಕಾರವು ಅನಿವಾರ್ಯವಾಗಿ ಮತ್ತೆ ನಿಯಂತ್ರಣವನ್ನು ಹಾಕಬೇಕಾಯಿತು.

ಜನತೆಯ ನೀತಿಮಟ್ಟ ಬಹಳೇ ಕೆಳಗಿಳಿದಿದೆ. ನೀತಿಯ ಮಟ್ಟ ಸುಧಾರಿಸದ ಹೊರತು ನಮ್ಮ ಅವನತಿ ತಪ್ಪಿದ್ದಲ್ಲ. ಆದುದರಿಂದ ಎಲ್ಲ ವಿಭಾಗದ ಜನತೆ ಸಾರ್ವಜನಿಕರು, ವ್ಯಾಪಾರಿಗಳು, ರೈತರು ಕಾಂಗ್ರೆಸ್ಸಿಗರು ಎಲ್ಲರೂ ಸರಕಾರದ ಭದ್ರತೆಗಾಗಿ ಹೆಣಗಬೇಕು.

ಉತ್ಪಾದನೆ ಹೆಚ್ಚಿಸಿರಿ

ಭಾರತವು ಇಂದು ಸ್ವತಂತ್ರವೇನೋ ಆಗಿದೆ. ಆದರೆ ನಿಜವಾದ ಅರ್ಥದಲ್ಲಿ ಅದು ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕಿನ್ನ ಬೇಕು. ನಮ್ಮಲ್ಲಿಯ ಶಕ್ತಿ ಸಾಮಗ್ರಿಗಳನ್ನೆಲ್ಲ ಉಪಯೋಗಿಸಿ ಜಗತ್ತಿನ ಉಳಿದ ರಾಷ್ಟ್ರಗಳ ಮಾಲಿಕೆಯಲ್ಲಿ ಭಾರತ ಯೋಗ್ಯಸ್ಥಾನಪಡೆಯುವಂತೆ ಒಗ್ಗಟ್ಟಿನಿಂದ ಪ್ರಯತ್ನಿಸಬೇಕು. ಅಂದರೇನೇ ನಮಗೆ ದೊರಕಿದ ಸ್ವಾತಂತ್ರ್ಯದ ಯೋಗ್ಯ ಉಪಯೋಗ ಮಾಡಿಕೊಂಡಂತೆ. ಆದ್ದರಿಂದ ನಮಗೆ ಅವಶ್ಯವಿರುವದಕ್ಕಿಂತ ಹೆಚ್ಚಿಗೆ ಉತ್ಪಾದನೆ ಮಾಡುವದನ್ನು ನಾವು ಕಲಿಯಬೇಕು. ಇದೇ ಸರಿಯಾದ ಮಾರ್ಗವು. ಕೇವಲ ಮಾತನಾಡುವವರು, ತಂಟೆ ಮಾಡುವವರು, ನಾಶ ಮಾಡುವವರು ಇವರೆಲ್ಲ ದೇಶದ ವೈರಿಗಳೆಂದು ಭಾವಿಸಬೇಕು. ಜಗಳಾಡುತ್ತ ಕೂಡ್ರುವ ಸಮಯವಿದಲ್ಲ. [illegible] ಮಾತನಾಡಿ ಹೆಚ್ಚಿಗೆ ಉತ್ಪಾದನೆ ಮಾಡುವ ಸಮಯವಿದು. ನಾವು ಹೆಚ್ಚಿಗೆ ಯೋಗ್ಯತಾವಂತರಾದಂತೆ ನಮ್ಮ ರಾಷ್ಟ್ರವು ಸ್ವತಂತ್ರವಾಗಿ ಉಳಿಯಲು ಹೆಚ್ಚಿಗೆ ಯೋಗ್ಯವಾಗುವದು. ಈ ವಿದ್ಯಾಲಯಕ್ಕೆ ಸಂಬಂಧವಿರುವ ಮಹಾತ್ಮಾ ಗಾಂಧಿ, ರಾಜಾಜಿ, ಠಕ್ಕರ ಬಾಪಾ ಈ ತ್ರಿಮೂರ್ತಿಗಳ ಆಶೀರ್ವಾದದ ಸ್ಫೂರ್ತಿಯಿಂದ ನೀವು ಯೋಗ್ಯತಾವಂತರಾಗಲು ಪರಮಾತ್ಮನು ನಿಮಗೆ ಶಕ್ತಿಯನ್ನೀಯಲಿ.

ಠಕ್ಕರ ಬಾಪಾ ವಿದ್ಯಾಲಯದ ಪರಿಚಯ

ಸರದಾರ ಪಟೇಲರನ್ನು ವಿದ್ಯಾಲಯದ ಎಲ್ಲ ಸ್ಥಾನಗಳಿಗೂ ಕರೆದೊಯ್ಯಲಾಯಿತು. ಈ ವಿದ್ಯಾಲಯವು ಕೇವಲ ಹರಿಜನ ಬಾಲಕರಿಗಾಗಿ ಇದ್ದು ಸದ್ಯಕ್ಕೆ ಒಂದು ನೂರು ವಿದ್ಯಾರ್ಥಿಗಳು ಮುಂದಿನ ತಮ್ಮ ಜೀವನಮಾನವನ್ನು ಸಾಗಿಸುವದಕ್ಕೆ ಅನುಕೂಲವಾಗುವಂತೆ ಬಡಿಗತನ, ಕಮ್ಮಾರಿಕೆ, ಹೊಲಿಗೆ ಕೆಲಸ ಮತ್ತು ಕಾಗದ ತಯಾರಿಸುವದು ಮೊದಲಾದವುಗಳಲ್ಲಿ ಶಿಕ್ಷಣ ಕೊಡಲಾಗುವದು.

ಈ ವಿದ್ಯಾಲಯದ ಅಡಿಗಲ್ಲಿನ್ನಿಡುವ ಕಾರ್ಯವನ್ನು ಮಹಾತ್ಮಾ ಗಾಂಧೀಯವರು ೧೯೪೬ ರಲ್ಲಿ ನೆರವೇರಿಸಿದ್ದರು. ವಿದ್ಯಾಲಯದ ಅಂಗಳದ ಒಂದು ಭಾಗದಲ್ಲಿ ಸ್ಮಾರಕವಾಗಿ ಮಹಾತ್ಮಾ ಗಾಂಧಿಯವರ ಚಿತಾಭಸ್ಮವನ್ನು ಇಡಲಾಗಿದೆ. ಶ್ರೀ ಠಕ್ಕರ ಬಾಪಾ ಅವರ ಹರಿಜನ ಕಾರ್ಯವನ್ನನುಲಕ್ಷಿಸಿ ಮಹಾತ್ಮಾ ಗಾಂಧಿಯವರೇ ಈ ವಿದ್ಯಾಲಯಕ್ಕೆ ಠಕ್ಕರ ಬಾಪ್ಪು ವಿದ್ಯಾಲಯ ಎಂದು ಹೆಸರಿಟ್ಟಿದ್ದರು.

ಹರಿಜನದ ಅಗ್ರಲೇಖ

ನವಭಾರತ ಸ್ಪೆಷಲ್ ಸಂಚಿಕೆ ೨೮-೨-೪೯

ಗುಂತಕಲ್ ಕ್ಲಬ್ ಮತ್ತು ರೀಡಿಂಗ್ ರೂಂ

ಸ ಹಾ ಯಾ ರ್ಥ ವಾ ಗಿ

ಶ್ರೀಮತಿ ಟಿ. ಸೂರ್ಯಕುಮಾರಿ.

ಇವರು

೫—೩—೪೯ ನೆಯ ಶನಿವಾರ ಸಾಯಂಕಾಲ ೬ ಗಂಟೆಗೆ ರೀಗಲ್ ಟಾಕೀಸ್‌ನಲ್ಲಿ

.... ತಮ್ಮ ಸಂಗೀತ ಕಚೇರಿ ನಡೆಸಲೊಪ್ಪಿರುವರು ....

ಅನಂತಪುರದ ಜಿಲ್ಲಾ ಕಲೆಕ್ಟರ್ ಶ್ರೀ ವಿವೇಕಾನಂದಮೂರ್ತಿ ಬಿ. ಎ. ರವರ ಸಮ್ಮುಖದಲ್ಲಿ

ಟಿಕೇಟಿನ ದರಗಳು:- ರೂ. 100, 50, 25, 15, 10, 5.

ಎಲ್ಲರು ಪ್ರೋತ್ಸಾಹಿಸಲು ವಿನಂತಿ

ಕಾರ್ಯದರ್ಶಿ ಗುಂತಕಲ್ ಕ್ಲಬ್

ರುವ ಕಂಪೆ, ತಾಯಿ, ಗುರುಗಳ ಸಾಕ್ಷಿ ದೊಡ್ಡವರನ್ನಾಗಿ ಮಾಡುತ್ತಾರೆ. ಕಮ್ಯೂನಿಸ್ಟರಿಗೂ ಜಾತೀಯವಾದಿಗಳಿಗೂ ... ಯಾವ ವ್ಯತ್ಯಾಸವಿದ್ದರೂ ... ತ್ಯ, ದ್ವೇಷ, ದಂಗೆ ಕೊಲೆ, ... ವಿಧ್ವಂಸಕ ಚಟುವಟಿಕೆ ... ಹಿಂಸಾತ್ಮಕ ಕ್ರಮಗಳಲ್ಲಿ ಶ್ರ... ಇಲ್ಲಿ ಇಬ್ಬರೂ ಏಕಾಭಿಪ್ರಾಯಗಿದ್ದಾರೆ. ಇಬ್ಬರಿಗೂ ... ಪ್ರೇಮ, ಸಂಯಮ, ಮೊ... ಗಳನ್ನು ಅಸಹ್ಯ ಮಾ... ಗುಪ್ತ ಚಳವಳಿಗಳ ಪ್ರಸಾರ ... ವಿಸ್ತರಿಸನ್ನೂ ... ಕಾಂ... ಗ ಹಚಿಸಿಲ್ಲ. ಅವರು ... ಎಂದು ಹೇಳುವಂತಿಲ್ಲ ... ನಾನೇ ... ಆ ಕೂಡಲೆ ... ಒಬ್ಬರು ದೇವರನ್ನು ... ನೆಂದು ಹೇಳಿ ಈ ದುರ್ಗಾ... ಮಾಡುತ್ತಾರೆ. ಮತ್ತೊಬ್ಬರು ... ನಲ್ಲಿ ದೇವರಿಗಾಗಿ ಎಂದು ... ಹೇಳಲು ಅನಕ್ತರಾದ.

... ಸರ್ಕಾರವೇ ... ಆದಕ್ಕೆ ... ಪಿಸಿಕ್ಕವಿಲ್ಲ. ... ಕಾಂಗ್ರೆಸ್ ಚಳ... ಗ್ರೆಸ್ ಕೆಲಸಗಾರರಿಗೆ ಕಾಂ... ಸಹಾನುಭೂತಿಯ ... ದು ಅಡಗಿಕೊಂಡಿದ್ದರು. ... ಕೊಳ್ಳ ಹೊಂದಿಟಾಗತ್ತಿ... ಬಹಳ ಮಟ್ಟಿಗೆ ನಿಜವಾಗಿ ನನಗೆ ಗೊತ್ತಿದೆ. ತಮ್ಮ ... ತಿಯುಳ್ಳ ಸರಕಾರೀ ನೌಕ... ಂದ ... ಕನ್ಯಾನೂ ... ಮಾಡ... ರೆ. ಇಂಥ ಸಂದರ್ಭಗಳ ... ಎನ್ನೋನೇಳ ...

ಕರದಲ್ಲಿ ಹೊಂದೆ... ... ಸಾಮಾನ್ಯವಾಗಿ ... ವರಿಸುತ್ತಾರೆ. ... ಕಾಂ-

ಇದೆ. ಭಾರತದಲ್ಲಿರುವ ನಾವು ಸಂಸ್ಕೃತಿ ಮತ್ತು ವೇದಗಳನ್ನು ಅಸಬಿಸಿರುತ ಹಿಂದು ಧರ್ಮದ ಸಂಪ್ರದಾಯನ್ನು ಭಾರತೀಯ ರಾಷ್ಟ್ರೀಯತೆ, ಭಾಷೆ ಮತ್ತು ಸಂಸ್ಕೃತಿಗಳು ತಳೆಸಿರಬೇಕು ಎಂಬ ಭಾವವನ್ನು ಬಿಕಟಾದನಾಗಿದೆ. ಜೈನ, ಸಿಖ, ಲಿಂಗಾಯತರೇ ಮೊದಲಾದ ಅವೈದಿಕ ಭಾರತೀಯರಂತೆ ಭಾರತದ ಮುಸಲ್ಮಾನ, ಕ್ರೈಸ್ತ ಮತ್ತು ಪಾರಸಿಕರು ಕೂಡ ಭಾರತದ ಜನತೆಯ ಮತ್ತು ಸಂಸ್ಕೃತಿಗಳ ಅವಿ-

ಭಾಜ್ಯ ... ಏಕತೆಯಲ್ಲಿ ... ಭೇದಭಾವವಿಲ್ಲದ ತಾನೇ ಒಂದಾಗಿ ... ನಡೆಯುತ್ತದೆ.

ನನ್ನ ... ಮತ್ತು ಸಾರ್ವಜನಿಕ ... ಮಾಡುವುದು ಎಂದರೆ ... ನನ್ನ ಹಲವು ... ಜಾತಿ ... ಕೆಲವರ ... ಜಾತೀಯ ಪ್ರವೃತ್ತಿ ... ಕಂಡುಬಂದಿತು.

ಗ್ರೆಸ್ ಕೆಲ... ಸ್ವಲ್ಪ ವಿಲ್ಲ ... ಒಂದೇ ರೂಪವಾಗಿ ಇಲ್ಲದೇ ... ಇರುವುದು ಈ ವರ್ಗದವರು ... ಮಾನ, ... ಯಿಗಳು ಮತ್ತು ಇತರರು ... ಗಲಿ ... ವಾಗಿ ಅವರು ತಮ್ಮ ... ಚಾರಿಗಳ ... ಮಾಡಿಬಿಡುತ್ತಾರೆ. ... ದಂಗೆಗಳ

ಬೇಕೆಂದೂ ಈ ಸಭೆಯಲ್ಲಿ ಗಾಂಧೀಜಿ ಸ್ವತಃ ಉಪಸ್ಥಿತರಾಗಿ ಕೊನೆಯ ನಿರ್ಣಯವನ್ನು ಕೈಕೊಳ್ಳಬೇಕೆಂದೂ ಗೊತ್ತಾಯಿತು. ಈ ರೀತಿಯಾಗಿ ಹಿಂದೂಸ್ಥಾನದಲ್ಲಿ ಕಾಂಗ್ರೆಸ್ಸಿನ ಘಟನೆಯೊಂದು ಇರಬೇಕೆಂದೂ, ಬಿ... ಕಸೇವಕ ಸಂಘವನ್ನಾಗಿ ಅದನ್ನು ... ಡಿಸಬೇಕೆಂದೂ ಬ... ಪ್ರಸ್ತುತ ಉಪಸ್ಥಿತವಾದ ಬಹಳ ದಿನಗಳಮುಂಚೆಯೇ ... ಸ್ಥೆಗಳನ್ನು ಒಟ್ಟುಗೂಡಿಸಿ ಒಂದು ... ಸಂಘವನ್ನು ಸಂಸ್ಥಾಪಿಸಬೇಕಾದವು ಮಹಾತ್ಮಾ ಗಾಂಧಿಯವರ ... ನಸ್ಸಿನಲ್ಲಿ ಸುನಿಶ್ಚಿತ್ತೆಂಬುದು ... ವೇಚನೆಯಿಂದ ಕಂಡುಬರುವದು.

ಶಂಕರರಾವ

Don't Strike

Help Peace & Secu...

—(o)—

ಸಂಪಿನ ಭಾವನೆ ತೊ...

ರೈಲ್ವೆ ಮತ್ತು ಪೋಸ್ಟ್ ಟೆ... ಖಾತೆಗಳಲ್ಲಿ ಕಮ್ಯುನಿಸ್ಟರಿಂದ ... ರಾದ ಜನರು ಮಾರ್ಚ 9 ರಿಂ... ಮಾಡಲು ಯತ್ನಿಸುತ್ತಿರುವರು. ವಿಘಾತಕವಾದುದಾಗಿದ್ದ ಸ್ವಾತಂತ್ರ್ಯವಾದ ಈ ಅಲ್ಪಕಾಲದಲ್ಲಿ ಸ... ವನ್ನು ಸುಸಂಘಟಿಸುವದನ್ನು ... ಶದಲ್ಲಿ ಅಶಾಂತಿ ಮತ್ತು ಅನ... ನ್ನು ಹೆಚ್ಚಿಸುವ ಈ ಕಾರ್ಯವು ... ನ್ನ ಪ್ರಜಾಪ್ರಭುತ್ವಕ್ಕೆ ಗಂಡಾಂತರ ... ಧದ ಗಿವೆ. ಶ್ರೀ ಜಯಪ್ರಕಾಶ ನಾರಾ... ರು ತಮ್ಮ ಅಧ್ಯಕ್ಷಸ್ಥಾನದಿಂದ ರೈ... ಲಿಗೆ ... ಉಪದೇಶ ... ಕಮ್ಯುನಿಸ್ಟರ ಅನುಕರಣೆ ಮಾಡ... ದು ಕಮ್ಯುನಿಸ್ಟ ಸಂಸ್ಥೆಗಳನ್ನು ... ಕಿರುತ್ತಾರೆ. ಮದರಾಸಿನಲ್ಲಿ ಸರ್ದಾರ ... ಭಭಾಯಿ ಪಟೇಲರು ವ್ಯಾಪಾರೀ ... ಭೆಯಲ್ಲಿ ಮಾತಾಡುತ್ತ ಈ ಸಂಸ್ಥೆ ... ದೇಶದಲ್ಲಿ ಗಲಾಟೆಗಳೆದ್ದು ದೇಶದ ... ಯು ಕಷ್ಟಕ್ಕೊಳಗಾಗುವದೆಂದು ... ಸಿರುತ್ತಾರೆ.

ದೇಶದಲ್ಲಿ ಆಹಾರ ಬಟ್ಟೆಗಳ ... ಯಿದೆ. ಇನ್ನೂ ಸಾರಿಗೆಯ ವ್ಯವಸ್ಥೆ ಸರಿಯಾಗಿಲ್ಲ ಪಾಗೀನುಗಳ ಅಭಾವದ ಒಂದು ಕಡೆಯಿಂದ ಮತ್ತೊಂದು ಕಡೆ ಮಾಲು ಸಾಗಿಸುವಕಾರ್ಯವು ಕಠಿಣವಿದೆ. ಬಡವರಿಗೂ ಮಧ್ಯಮವರ್ಗದವರಿಗೂ ಜೀವನ ಸೌಕರ್ಯಗಳು ದೊರೆಯುವದಿಲ್ಲ ಜೀವನ ಮಟ್ಟವು ಏರಿದೆ. ಸರಕಾರದವರು ಬಿಡಿಸಬೇಕಾದ ಸಮಸ್ಯೆಗಳು ಎಷ್ಟೋ ಇರಬೇಕಾದರೆ ಈ ಸಂಪಿನ ಗಾಳಿಯಿಂದ ಸರಕಾರದ ಶಾಂತಿಸ್ಥಾಪನಾಕಾರ್ಯವೇ ಬುಡಮೇಲಾಗುವದು. ಕಮ್ಯೂ...

...ನಿಸ್ಟರ ಈ ಕುತಂತ್ರಕ್ಕೊಳಗಾಗದಂತೆ ಎಲ್ಲಾ ಕೆಲಸಗಾರರು ತಮ್ಮ ತಮ್ಮ ಉ...

...ಹೋರಿದು ನಮ್ಮ ಅವನತಿ ತಪ್ಪಿದ್ದಲ್ಲ. ಇದು ದೇಶದ ...

NAVA BHARAT SPECIAL SUPPLEMENT 28—2—49

In Aid of Guntakal Club & Reading Room

Srimathi T. Suryakumari

has kindly agreed to give a

MUSIC PERFORMANCE

On 5-3-1949 Saturday At 6 P. M. At REGAL TALKIES

Sri Vivekananda Murthi Collector Anantapur

will be present on special invitation.

RATES:-RS. 100, RS. 50, RS. 25, RS. 15, RS. 10, RS. 5.

Secretary: GUNTAKAL CLUB.

All are requested to patronise.

... ಗ ಪಾತ್ರರಾರು? ಸರಕಾರವೇನು ಮಾಡಬಲ್ಲದು? ನಿಯಂತ್ರಣವನ್ನು ತೆಗೆದೊಡನೆ ಕಳ್ಳಸಂತೆಯ ಹಾವಳಿ ಹೆಚ್ಚಾಯಿತು ಆಗ ಜನತೆಯ ... ಉದ್ವೇಗವೂ ಹೆಚ್ಚಾಯಿತು ಸರಕಾರವು ಅನಿವಾರ್ಯವಾಗಿ ಮತ್ತೆ ನಿಯಂತ್ರಣವನ್ನು ಹಾಕಬೇಕಾಯಿತು.

ಜನತೆಯ ನೀತಿಮಟ್ಟ ಬಹಳೇ ಕೆಳಗಿಳಿದಿದೆ. ನೀತಿಯ ಮಟ್ಟ ಸುಧಾರಿಸದ...

...ರ್ಯವನ್ನು ಮಹಾತ್ಮಾ ಗಾಂಧೀಯವರು ... ರಲ್ಲಿ ನೆರವೇರಿಸಿದ್ದರು. ವಿದ್ಯಾಲಯದ ಅಂಗಳದ ಒಂದು ಭಾಗದಲ್ಲಿ ಪತ್ನೀ ಕಸ್ತೂರಿ ಮಹಾತ್ಮಾ ಗಾಂಧಿಯವರ ಚಿತಾಭಸ್ಮವನ್ನು ಇಡಲಾಗಿದೆ. ಶ್ರೀ ಠಕ್ಕರ ಬಾಪಾ ಅವರ ಹರಿಜನ ಕಾರ್ಯವನ್ನನು ಲಕ್ಷಿಸಿ ಮಹಾತ್ಮಾ ಗಾಂಧಿಯವರೇ ಈ ವಿದ್ಯಾಲಯಕ್ಕೆ ಠಕ್ಕರ ಬಾಪಾ ವಿದ್ಯಾಲಯ ಎಂದು ಹೆಸರಿಟ್ಟಿದ್ದರು.

ಹರಿಜನದ ಅಗ್ರಲೇಖ

ಜಾತೀಯತೆಯನ್ನು ಗೆಲ್ಲುವುದು

ಜಾತೀಯತೆಯನ್ನು ಗೆಲ್ಲಲು ನಿಶ್ಚಿತವಾದ ಕ್ರಮಗಳನ್ನು ಸೂಚಿಸಬೇಕೆಂದು ಪತ್ರಕರ್ತ ಸ್ನೇಹಿತರು ಕೇಳುತ್ತಾರೆ, ಮತ್ತು "ಸಮನ್ವಯವಾದ" ಎಂಬ ಹೊಸ ತತ್ವದ ಆಧಾರದ ಮೇಲೆ "ಸಾರ್ವಜನಿಕ ಸ್ಥಾಪಕ" ವೆನಿಸುವ ವಿಶೇಷ [illegible] (ಸ್ವಯಂಸೇವಕ ಸಂಘದ) ನವ ಸಂಸ್ಥೆಯೊಂದನ್ನು ನಿರ್ಮಿಸಬೇಕೆಂದು ಸಲಹೆ ಮಾಡುತ್ತಾನೆ

ನನ್ನ ನಮ್ರ ಮತವೇನೆಂದರೆ, ನಮ್ಮ ಕಾರ್ಯವಾಡಲು ಅಷ್ಟಾಗಿ ಅನವಶ್ಯಕ ಸಂಘಾರಣೆಯನ್ನು ತರಲು ಹೊಸ ಹೊಸ ಸಂಘ ಸಮಿತಿ, ಸ್ವಯಂಸೇವಕದಳ, ತತ್ವ [illegible] ವಾದವನ್ನು ಸ[illegible]ವ [illegible] ಮೇಲೆ [illegible] ನಿರ್ಮಿಸುತ್ತಾ ಹೋಗುವುದೇ ನಮ್ಮ ಒಂದು [illegible]ಗಿದೆ ಎಂದು ತೋರುತ್ತದೆ, ಆಗಲೇ ನಮ್ಮಲ್ಲಿ ಜಾತೀಯತೆಯನ್ನು ಸಂಬಂಧಿಸಿದ ಅನೇಕ ಸಂಸ್ಥೆಗಳಿವೆ, ಅವುಗಳಲ್ಲಿ ನಾವು ಸ್ಥಾಪಿಸಿದ ಕೇಂದ್ರ, ಪ್ರಾಂತಗಳ ಚುನಾಯಿತ ಸರಕಾರಗಳು, ಕಾಂಗ್ರೆಸ್, ಉದಾರವಾದಿಗಳು, ಸೋಶಲಿಸ್ಟರು, ಮತ್ತು ರಚನಾತ್ಮಕ ಕಾರ್ಯಕ್ರಮದ ಸಂಸ್ಥೆಗಳು ಮುಖ್ಯವಾದವು. ಜಾತೀಯತೆಯು ನಿರ್ಮೂಲ ಹೊಂದಬೇಕಾದರೆ ಈ ಸಂಸ್ಥೆಗಳು [illegible] ಇದ್ದರೆ ಸಾಕು; ಅದು ಅವಶ್ಯಕ

ಆದರೆ ಸ್ವಾರ್ಥಪ್ರಾಯಗಳಿದ್ದರೆ, ಈ ವಿಷಯದಲ್ಲಿ ಸಾಕಷ್ಟು ಸರ್ವಗ್ರಾಹಿಯಾದ ಭಾವನೆಗಳಿಲ್ಲದ ಜನರು ಈ ಸ್ಥಿತಿಯೊಂದು ಸಂಸ್ಥೆಯಲ್ಲೂ ಇರುವುದು ಇವುಗಳಲ್ಲಿ ನಾನು ಕಂಡ ಪ್ರಸಂಗ [illegible]

ಒಬ್ಬ ಸುಲ್ತಾನನಿಗೆ ಒಬ್ಬ ಗುಲಾಮನಿದ್ದ. ಸುಲ್ತಾನನು ತನ್ನ ಕುಮಾರನೊಡನೆ ಆಟವಾಡಲು ಒಬ್ಬ ಯೋಗ್ಯ ಗೆಳೆಯನ ಹುಡುಕಿಕೊಂಡು ಬಾ ಎಂದು ಗುಲಾಮನಿಗೆ ಹೇಳಿದ. ಗುಲಾಮನಿಗೆ ತನ್ನ ಮಗನಿಗಿಂತ ಯೋಗ್ಯನಾದವನು ಯಾರೂ ಸಿಗಲಿಲ್ಲವಂತೆ. ನಮ್ಮಲ್ಲಿಯೂ ಪ್ರತಿಯೊಬ್ಬನ ಕತೆಯೂ ಹೀಗೆಯೇ ಇದೆ. ಭಾರತದಲ್ಲಿರುವ ನಾವು ಸಂಸ್ಕೃತ ಮತ್ತು ವೇದಗಳನ್ನು ಆಧರಿಸಿದ ಹಿಂದು ಧರ್ಮದ ಸಂಸ್ಕೃತಿಯನ್ನು ಭಾರತೀಯ ರಾಷ್ಟ್ರೀಯತೆ, ಭಾಷೆ ಮತ್ತು ಸಂಸ್ಕೃತಿಗಳು ತಳಹದಿಯಾಗಬೇಕು ಎಂಬ ಭಾವನೆಯನ್ನು ಬಿಡಲಾರೆವು [illegible] ಜೈನ, ಸಿಖ್, ಲಿಂಗಾಯತರೇ ಮೊದಲಾದ ಅವೈದಿಕ ಭಾರತೀಯರಂತೆ ಭಾರತದ ಮುಸಲ್ಮಾನ, ಕ್ರೈಸ್ತ ಮತ್ತು ಪಾರಸಿಕರೂ ಕೂಡ ಭಾರತದ ಪರಂಪರೆಯ ಮತ್ತು ಸಂಸ್ಕೃತಿಗಳ ಅವಿಭಾಜ್ಯ ಅಂಗಗಳೆಂಬುದನ್ನು ನಾವು ಅರಿಯಬೇಕಾದವರಾಗಿದ್ದೇವೆ. ಪಾಕಿಸ್ತಾನದಲ್ಲಿ ಮುಸಲ್ಮಾನರೂ ಹೀಗೇ ಭಾವಿಸುತ್ತಾರೆ. ಪಾಕಿಸ್ತಾನವೆಂಬ ಪ್ರತ್ಯೇಕ ರಾಜ್ಯವನ್ನು ಇಟ್ಟುಕೊಂಡು ಬಿಟ್ಟಮಾತ್ರಕ್ಕೆ ಹಿಂದು ಮುಸಲ್ಮಾನ ಜನಗಳ ಮತ್ತು ಅವರ ನಾಗರಿಕತೆಗಳ ಮಿಶ್ರಣವನ್ನು ನಿಲ್ಲಿಸಲು ಸಾಧ್ಯವಿಲ್ಲವೆಂಬುದನ್ನು ಅವರಾದರೂ ಅರಿಯಲು [illegible] ಏಕೆಂದರೆ, ಹಿಂದುಗಳ [illegible] ಹಿಂದೂಸ್ಥಾನವನ್ನು [illegible] ಯಾವ [illegible] ಹಿಂದುಗಳಾಗುತ್ತಾರೆ ಎಂದು [illegible] ಹೇಳುತ್ತಿದ್ದೆ. ಅವರು ನಮ್ಮವರೇ ಆಗಿರುತ್ತಾರೆ. ಹಿಂದುಗಳಲ್ಲಿರುವ ಭಾಷೆ, ಸಂಸ್ಕೃತಿ, ಸಾಹಿತ್ಯ ಅವರ ಮತ, ಮತ್ತು ಇತರ ಭಾರತೀಯ ಮತ ಅಂಶಗಳೊಡನೆ ಬೆರೆತು ಹೋಗಿದ್ದರೂ ಈ ಭಾರತೀಯ ನೆಲದಲ್ಲಿಯೇ [illegible] ಭಾರತ ಮತ್ತು ಭಾರತದ ಒಡೆತನಕ್ಕೆ ಸೇರಿದವೇ ಆಗಿವೆ. ಕಾಂಗ್ರೆಸ್ಸಿನಲ್ಲಿರುವ ಹಿಂದುಗಳಾಗಲಿ ಜಾತೀಯ ಸಂಸ್ಥೆಗಳಲ್ಲಿರುವ [illegible] ಅವರ, ಅವರ ಅಭಿಪ್ರಾಯಕ್ಕೂ ಹಿಂದು ಮಹಾಸಭೆ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘಗಳ ಅಭಿಪ್ರಾಯಕ್ಕೂ ವಿರೋಧವಿಲ್ಲವೆಂದು ನನಗನಿಸುತ್ತದೆ. ಈ ಸಂಸ್ಥೆಗಳು ಕೂಡ ಹಿಂದುಗಳಲ್ಲದವರಿಗೆ ಗೌಣವಾದದ್ದಾದರೂ ಯೋಗ್ಯವಾದ ಸ್ಥಾನವನ್ನು ಕೊಟ್ಟು, ಅವರನ್ನು ತಾಳ್ಮೆಯಿಂದ ನೋಡಲು ಸಿದ್ಧವಾಗಿವೆ.

[illegible] ಭಾರತವರ್ಷವು ಹಿಂದು ಸಂಸ್ಕೃತಿ ತನ್ನ [illegible] ಪ್ರಥಮ ಸ್ಥಾನವನ್ನು ಅಂಗೀಕರಿಸಬೇಕು ಮತ್ತು ಅದನ್ನು [illegible] ಅಂಗೀಕರಿಸಿದ ಬಳಿಕ [illegible] ಸಂಬಂಧಿಸಿದ ಅಂಶಗಳೊಡನೆ [illegible] ತನ್ನೊಡನೆ [illegible] ಪ್ರತಿಯೊಂದು ಹಿಂದು [illegible] ಮನೋಭಾವವನ್ನು [illegible] ಹೊಂದಿರುವ [illegible] ಕರ್ತವ್ಯ [illegible] ನಾವು [illegible] ಮಾತ್ರ ಹೇಳಿದರೆ. [illegible] ತತ್ವವಿಲ್ಲದೆ [illegible] ಜಾತೀಯ [illegible]

[illegible] ಇದಕ್ಕೆ ಮತ್ತು [illegible] ಕೊಡುವುದು [illegible] ನನ್ನ ಹಲವು [illegible] ಜಾತೀಯತೆಯ ಪ್ರ[illegible] ಕೆಲವರಿಗಳಲ್ಲಿ [illegible] ಜಾತೀಯ [illegible] ತುಂಬಿಕೊಂಡಿರುವ ತಂದೆ, ತಾಯಿ, ಗುರುಗಳು ನಮ್ಮ ದೊಡ್ಡವರನ್ನಾಗಿ ಮಾಡುತ್ತಾರೆ. [illegible] ನಿಷ್ಠರಿಗೂ ಜಾತೀಯ ತಾಪಾದಿಗಳಿಗೂ ಧರ್ಮಗಳಲ್ಲಿ [illegible] ಮತಾಂಧರಿದ್ದರೂ ಸರಿಯೆ, ಅಸತ್ಯ, ದ್ವೇಷ, ದಂಗೆ ಕೊಲೆ, ಕುತಂತ್ರಬುದ್ಧಿ ವಿಧ್ವಂಸಕ ಚಟುವಟಿಕೆ ಮುಂತಾದ ಹಿಂಸಾತ್ಮಕ ಕ್ರಮಗಳಲ್ಲಿ [illegible] ಪಾಡುವವರಲ್ಲಿ ಇದ್ದರೂ ಪಕ್ಷಪಾತಿಗಳಾಗಿದ್ದಾರೆ. ಇಷ್ಟೇ ಅಲ್ಲದೆ ಸತ್ಯ, ಅಹಿಂಸೆ, ಪ್ರೇಮ, ನ್ಯಾಯ ಮೊದಲಾದ ಸದ್ಗುಣಗಳನ್ನು ಅವಹೇಳನ ಮಾಡುತ್ತಾರೆ. [illegible] ಚಳವಳಿಗಳ ಸ್ಥಾ[illegible]ದಲ್ಲಿ (ಸೋಶಲಿಸ್ಟರನ್ನು ಒಳಗೊಂಡು) ಕಾಂಗ್ರೆಸ್ಸಿಗರು ಭಾಗವಹಿಸಿಲ್ಲ. ಅವರು [illegible] ಯೋಗ್ಯರು ಎಂದು ಹೇಳಬರುವಂತಿಲ್ಲ [illegible] ನಾನೇ ಅದರಲ್ಲಿ [illegible] ಕೂಡ [illegible] ಮತ್ತೆ [illegible] ಒಬ್ಬರು ದೇವರನ್ನು ನೋಡಲು ಇಲ್ಲವೆಂದು ಹೇಳಿ ಈ ಮಾರ್ಗಗಳನ್ನು ಪಸರಿಸುತ್ತಾರೆ, ಮತ್ತೊಬ್ಬರು ದೇವರ ಹೆಸರಿನಲ್ಲಿ ದೇವರಿಗಾಗಿ ಎಂದು ಹೇಳಿ ಇದನ್ನು ಹರಡಲು ಉಪಕ್ರಮಿಸುತ್ತಾರೆ!

ಸರಕಾರೀ ನೌಕರರಿಗೆ [illegible] ಯಾಗಿ [illegible] ವಿಶ್ವಸ್ತ [illegible] ದ [illegible] ಪ್ರತ್ಯೇಕ ಸರಕಾರೀ ನೌಕರರು [illegible] ತಿಳಿದುಕೊಂಡರೆ ಅದಕ್ಕೆ [illegible] ಯನ್ನು ಸಿಕ್ಕುವದಿಲ್ಲ. [illegible] ಸರಕಾರದ ವಿರುದ್ಧ ಎದ್ದ ಕಾಂಗ್ರೆಸ್ ಚಳವಳಿಗಳಲ್ಲಿ ಕಾಂಗ್ರೆಸ್ ಜನಗಳಿಗೆ ಕಾಂಗ್ರೆಸ್ಸಿನ ಬಗೆ [illegible] ಸರಕಾರೀ ನೌಕರರು ಅಡಗಿಕೊಂಡಿರಲಿ, ಹಿಡಿಯಲು ಬಂದಾಗ ತಪ್ಪಿಸಿಕೊಳ್ಳಲು, ಅಲ್ಲಿ ಪರಿಹರಿಸಿಕೊಳ್ಳ [illegible] ಅನೇಕ ವೇಳೆ ಒಳಗೆ ಮಟ್ಟಿಗೆ ನೆರವಾಗಿದ್ದರೆಂಬುದು ನಮಗೆ ಗೊತ್ತಿದೆ. ತಮ್ಮಲ್ಲಿ ಸಮಾನ ಭೂತಿಯುಳ್ಳ ಸರಕಾರೀ ನೌಕರರ ಸಹಾಯದಿಂದ ಜನರು [illegible] ಪ್ರಶ್ನೆಗಳನ್ನು [illegible] ಒಪ್ಪವಾಗಿ [illegible] ಇಂಥ ಸಂದರ್ಭಗಳಲ್ಲಿ ಮಂತ್ರಿಗಳು ಎಚ್ಚರಿಕೆಯಿಂದ ಅನ್ಯಾಯ [illegible] ಮಾಡುತ್ತಾರೆ,

ಸರಕಾರೀ ನೌಕರರಲ್ಲಿ ಹೆಚ್ಚಿನ [illegible] ಸ್ಥಾನಗಳಲ್ಲಿರುವವ[illegible] ಮುಖ್ಯವಾಗಿ [illegible] ವರ್ಗದವರಿರುತ್ತಾರೆ ಅದರಲ್ಲಿ ಕಾಂಗ್ರೆಸ್ ಕೆಲಸ [illegible] ಸಂಬಂಧ [illegible] ಇಲ್ಲ. ಅ[illegible] "[illegible] ತರು" ಒಂದೇ ರೀತಿಯಾಗಿ ಇಲ್ಲವೇ [illegible] ಆಗಿ ಇರುವವರು ಈ ವರ್ಗದವರು [illegible] ಮಾನ ಪ್ರೇರಿತರು ಪಾತ್ರ [illegible] ಯಿಗಳು ಮತ್ತು ಇತರ [illegible] ಗಾವಿ ಪ ಬಾಧವರ ಗಿರುತ್ತಾರೆ [illegible] ನವಾಗಿ ಅವರು ತನ್ನ [illegible] ನಿರೋಧಿ ಶಾಸಿಗಳ ಅ[illegible] ಗಳನ್ನು [illegible] ಮಾಡಿಬಿಡುತ್ತಾರೆ ಜಾತೀಯ ದಂಗೆಗಳ

ಲ್ಲಿ ಸಂಕಟಕ್ಕೆ ಬಹಳವಾಗಿ ಗುರಿಯಾಗುವವರು ಈ ಜನರು ಮತ್ತು ನೌಕರಿಯಲ್ಲಿರುವ ಇವರ ಸಂಘಗಳೇ. ದಂಗೆಗಳನ್ನು ಮಧ್ಯಮ ವರ್ಗದವರೇ ನಡೆಸಿದಾಗಲೂ ಅನಾಗರಿಕ ಕೃತ್ಯಗಳನ್ನು ನಡೆಸಲು ಉತ್ತೇಜನ ಪಡೆದವರೂ ಈ ವರ್ಗದವರೇ. ಕಡೆಯ ಪಕ್ಷ ಗಾಯ ಹೊಂದಿಯಾದರೂ ಎಲ್ಲರಿಗಿಂತ ಹೆಚ್ಚಾಗಿ ಇವರೇ. ಆದುದರಿಂದ ತಮ್ಮ ಶತ್ರುಗಳೆಂದು ತಿಳಿಯಲು ಕಲಿಸಲಾದ ಇತರ ವಿರೋಧಿವರ್ಗ ಅಥವಾ ಜಾತಿಯ ಬಗ್ಗೆ ಇವರು ಬಹಳ ಕ್ರುದ್ಧರಾಗಿರುತ್ತಾರೆ. ಹೀಗಿದ್ದರೂ ಇವರ ಕ್ರೋಧವು ಆಳವಾಗಿ ಬೇರೂರಿಲ್ಲವಲ್ಲ, ಚಿರಕಾಲ ಇರತಕ್ಕದ್ದಲ್ಲ. ಏಕೆಂದರೆ ಯಾವುದಾದರೊಂದು ಧರ್ಮ ಅಥವಾ ಸಂಸ್ಕೃತಿಯ ಬಗ್ಗೆ ಧರ್ಮಾಂಧ ಬುದ್ಧಿಯ ಪಕ್ಷಪಾತ ಇವರ ಮನಸ್ಸಿನಲ್ಲಿ ಇರುವದಿಲ್ಲ. ಆ ಪಕ್ಷಪಾತವಿರುವದು ಕಲಿತವರ ಲಕ್ಷಣ. ಆ ವಿಷವನ್ನು ಮೊದಲನೆಯವರ ಮನಸ್ಸಿನಿಂದ ಬಹುಬೇಗ ತೊಡೆದು ಹಾಕಿ ಬಿಡಬಹುದು, ಆದರೆ ಎರಡನೆಯವರ ಮನಸ್ಸಿನಿಂದ ತೊಡೆದು ಹಾಕುವದು ಅಷ್ಟು ಸುಲಭವಲ್ಲ. ಆದಕಾರಣ ನಮ್ಮ ಮತ್ತು ವಿದ್ಯಾವಂತರ ಮನಸ್ಸನ್ನು ಶುದ್ಧಗೊಳಿಸುವುದೂ ಶಾಲೆ ಕಾಲೇಜುಗಳ ವಾತಾವರಣವನ್ನು ಶುಚಿಯಾಗಿಡುವದೂ ಮೊದಲನೆಯ ಅವಶ್ಯಕತೆ. ಬೇರೆ ಬೇರೆ ಕಾಲಗಳಲ್ಲಿ ಭಾರತವನ್ನು ಹೊಕ್ಕ ವಿದೇಶೀ ಧರ್ಮ ಮತ್ತು ಸಂಸ್ಕೃತಿಗಳು ನಮ್ಮಲ್ಲಿಯ ಅನೇಕ ದೇಶಬಾಂಧವರ ಜೀವನದ ಅವಿಭಾಜ್ಯ ಅವಯವಗಳಾಗಿವೆ, ಎಂದು ನಾವು ಭಾವಿಸಬೇಕು. ಆ ಧರ್ಮಗಳನ್ನು ಸ್ವೀಕರಿಸದವರ ಮೇಲೂ ಅವು ಪರಿಣಾಮವನ್ನುಂಟುಮಾಡಿವೆ. ಮತ್ತು ಒಟ್ಟಿನ ಮೇಲೆ [illegible] ಭಾರತದ ಒಳ್ಳೆಯದಕ್ಕಾಗಿಯೇ. [illegible] ಹಿಂದು ಧರ್ಮವು ಗ್ಲಾನಿ ಹೊಂದಿತ್ತು. ಆದರಿಂದ ಸುಧಾರಣೆಯೊಂದಲು ಅದಕ್ಕೆ ಒಂದು ವಿದ್ಯುದಾಘಾತ ಅವಶ್ಯಕವಾಯಿತು. ನಮ್ಮ ಉಡಿಗೆತೊಡಿಗೆ, ಮನೆಮಾರು ಮತ್ತು [illegible]ಗಳಂತೆಯೇ, ಸ್ವತಃ ಸಂಸ್ಕೃತ [illegible], ನಮ್ಮ ಭಾಷೆಗಳೂ ಮುಸಲ್ಮಾನ ಮತ್ತು ಕ್ರೈಸ್ತ ಸಂಸ್ಕೃತಿ ಧಾರೆಗಳಿಂದ ಅಭಿವೃದ್ಧಿಯನ್ನು ಹೊಂದಿವೆ. ಮಧ್ಯಯುಗದ ಕಾಲಕ್ಕಿಂತ ಹಿಂದಿನ ಶುದ್ಧ ನಾಗರಿಕತೆಯ ಬಗ್ಗೆ ಇರುವ ಅಂಧಪಕ್ಷಪಾತವನ್ನು ಬೆಳೆಸಿಕೊಳ್ಳುವುದರಲ್ಲಿ ನಾವು ಮೊದಲು ಹೆಜ್ಜೆಯನ್ನಿಟ್ಟಂತಾಯಿತು.

[illegible] ಕಿ. ಘ. ಮಶ್ರುವಾಲಾ

ಭಿಕ್ಷುಕರೂ ವ್ಯಭಿಚಾರಿಗಳೂ

ರಾಜ್ಯ ವ್ಯವಸ್ಥೆಯು ಮಾನವೀಪ್ರಾಣಿಯ ಉನ್ನತಿಯನ್ನು ಸಾಧಿಸಲಿಕ್ಕೆ ಮತ್ತು ಸರ್ವರೂ ಸಾಧ್ಯವಿದ್ದಷ್ಟು ಸುಖ ಸಮಾಧಾನಗಳಲ್ಲಿ ಜೀವಿಸುವಂತೆ ನೋಡಲು ಅಸ್ತಿತ್ವದಲ್ಲಿ ಬಂದಿತೆಂಬುದು ಸ್ಪಷ್ಟವಿದೆ. ಆದರೆ ಯಾವುದೇ ಕಾರ್ಯದಲ್ಲಿ ಸ್ವಾರ್ಥಿಗಳ ಕೈವಾಡವು ಕಾಲಕಾಲಕ್ಕೆ ನಡೆಯುವುದು ಸ್ವಾಭಾವಿಕವಾದುದರಿಂದ ಅಂತಹ ಘಟನೆಗಳು ಈ ರಾಜಕೀಯ ಕ್ಷೇತ್ರದಲ್ಲಿ ಆಗಾಗ್ಗೆ ಬೇಕಾದಷ್ಟು ನಡೆದಿವೆ.

ಇಂದಿನ [illegible]ಯುಗದವರೂ ತಮ್ಮ ಬುದ್ಧಿಶಕ್ತಿಗಳನ್ನು ಉಪಯೋಗಿಸಿ ಸಾರ್ವತ್ರಿಕ ಉನ್ನತಿಯನ್ನು ಸಾಧಿಸಲು ಆಲೋಚಿಸುತ್ತಿದ್ದಾರೆ. ರಾಜಕಾರಣವು ಈಗಿನಷ್ಟು ಎಂದೂ ಕೆಟ್ಟಿರಲಿಲ್ಲವೆಂದು ಹೇಳಿದರೂ ತಪ್ಪಾಗಲಾರದು. ಅದರಂತೆ ಅದನ್ನು ಸುಧಾರಿಸುವ ಬಗ್ಗೆ ಮತ್ತು ಎಲ್ಲಕ್ಕೂ ಶ್ರೇಷ್ಠಮಟ್ಟದಲ್ಲಿ ಅದನ್ನು ಇರಿಸುವದಕ್ಕೆ ಈಗ ನಡೆದಷ್ಟು ಪ್ರಯತ್ನಗಳು ಹಿಂದೆ ಯಾವ ಕಾಲಕ್ಕೂ ನಡೆದಿಲ್ಲವೆಂದೂ ಹೇಳಿದರೆ ಅದು ಅವಾಸ್ತವವೇನೂ ಆಗಲಾರದು.

ಮಾನವನ ಸೌಖ್ಯವು ರಾಜಕಾರಣ, ಸಮಾಜ, ಸಂಪತ್ತು, ಶಿಕ್ಷಣ, ಉದ್ಯೋಗಧಂಧೆ ಮೊದಲಾದ ಅನೇಕ ವಿಷಯಗಳನ್ನು ಅವಲಂಬಿಸಿದೆ. ಇವೆಲ್ಲ ಕ್ಷೇತ್ರಗಳಲ್ಲಿಯ ವಾತಾವರಣವನ್ನು ಸುಧಾರಿಸುವದು ರಾಜ್ಯವ್ಯವಸ್ಥೆಗಾರರಿಂದಲೇ ಹೆಚ್ಚಾಗಿ ನಡೆಯಬೇಕಾಗುತ್ತದೆ.

ಒಬ್ಬನೂ ಅನಾಥನಾಗಿ ರಾಜ್ಯದಲ್ಲಿ ಕಷ್ಟಪಡಬಾರದು, ಒಬ್ಬನೂ ಹೊಟ್ಟೆಗೆ ಕೂಳಿಲ್ಲದೆ ಸಾಯಬಾರದು. ಎಂಬ ಮಾತನ್ನು ಯಾವ ರಾಜ್ಯದಾಡಳಿತವು ಸಾಧಿಸುವದೋ ಅದು ಶ್ರೇಷ್ಠವ್ಯವಸ್ಥೆಯೆಂದು ನಾವು ಹೇಳುತ್ತೇವೆ. ಅಂತಹ ರಾಜ್ಯವ್ಯವಸ್ಥೆಗಳು ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿಯೇ ಇದ್ದವೆಂಬುದನ್ನು ನಾವು ಪುರಾಣಗಳಲ್ಲಿ ಓದುತ್ತೇವೆ. ರಾಮರಾಜ್ಯವನ್ನು ನಾವು ಈ ಬಗ್ಗೆ ಉದಾಹರಣೆಗಾಗಿ ಆಗಾಗ್ಗೆ ತೆಗೆದುಕೊಳ್ಳುತ್ತಿರುತ್ತೇವೆ.

ಈಗ ಅಂತಹ ವ್ಯವಸ್ಥೆಯನ್ನು ಕಣ್ಣಮುಂದಿಟ್ಟುಕೊಂಡು ಹೊರಟಿರುವ ದೇಶವೆಂದರೆ ರಶಿಯಾ ಆಗಿದೆ. ಅದು ಆ ಕಾರ್ಯದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದು ಒಂದು ವಾದಗ್ರಸ್ತ ಪ್ರಶ್ನೆಯಾಗಿದ್ದರೂ, ಆ ದಿಶೆಯಲ್ಲಿ ಆ ದೇಶವು ಪ್ರಯತ್ನವನ್ನಾದರೂ ನಡೆಸಿದೆ ಎಂದು ಹೇಳಲು ಏನೂ ಅಭ್ಯಂತರವಿಲ್ಲ.

ಭಿಕ್ಷುಕರ ಬಗ್ಗೆ ಅದು ಒಂದು ಅನುಕರಣೀಯ ಪ್ರಯತ್ನ ಮಾಡಿದ ವರದಿಯಾಗಿದೆ. ಮಾಸ್ಕೋಪಟ್ಟಣದಲ್ಲಿ ಭಿಕ್ಷುಕರ ಕಾಟವು ಬಹಳವಾಗಿತ್ತು. ಚಿಕ್ಕ, ತರುಣ ಹುಡುಗರು ಆ ವ್ಯವಸಾಯಕ್ಕೆ ಸಿಲುಕಿದ್ದರು. ಅಲ್ಲಿಯ ಸರಕಾರವು, ಮಾನಸಶಾಸ್ತ್ರಿಗಳನ್ನು ಆ ಕಾರ್ಯಕ್ಕೆ ನಿಯಮಿಸಿ ಅವರಿಂದ ಉತ್ತಮ ಫಲಗಳನ್ನು ಹೊಂದಿದ್ದಾರೆ. ಇಂದು ಅಲ್ಲಿಯ ಸರ್ವ ಭಿಕ್ಷುಕರನ್ನು ಅವರಿಗಾಗಿಯೇ ನಿರ್ಮಿಸಲ್ಪಟ್ಟ ಒಂದು ಗ್ರಾಮದಲ್ಲಿ ಇರಿಸಿದ್ದಾರೆ. ಅವರಿಗೆ ಸರ್ವ ತರಹದ ಸುಖ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಆ ಸ್ಥಳದಲ್ಲಿ ಬಂದ ಜನರು ತಿರುಗಿ ಭಿಕ್ಷಾವೃತ್ತಿಗೆ ಹೋಗಲು ಇಚ್ಛಿಸುತ್ತಿಲ್ಲ. ಹೊಸದಾಗಿ ಭಿಕ್ಷಾವೃತ್ತಿಗೆ ಇಳಿಯುವದಕ್ಕೆ ಆ ದೇಶದಲ್ಲಿ ವಿಶೇಷತಃ ಮಾಸ್ಕೋ ಪಟ್ಟಣದಲ್ಲಿ ಆಸ್ಪದವೇ ಇಲ್ಲ.

ಎಲ್ಲ ಕಡೆಗೆ ಭಿಕ್ಷುಕರ ಪ್ರಶ್ನೆಯು ಸರಕಾರಗಳ ತಲೆತಿನ್ನುತ್ತಿದೆ, ಅವು ಬಹಳವಾಗಿ ಈ ಬಗ್ಗೆ ವಿಚಾರಮಾಡುತ್ತಿವೆ. ಇಂದಿಲ್ಲ ನಾಳೆ ಈ ಪ್ರಶ್ನೆಯು ಬಿಡಿಸಲ್ಪಡದಿದ್ದರೆ ದೇಶೋನ್ನತಿಯ ಕಾರ್ಯವು ಸಂಪೂರ್ಣವಾಗಲಾರದು.

ಅಷ್ಟೇ ಮಹತ್ವದ ಮತ್ತೊಂದು ಪ್ರಶ್ನೆಯೆಂದರೆ, ವ್ಯಭಿಚಾರಿಗಳದು, ಅಥವಾ ಸೂಳೆಯರದು. ಇವರಬಗ್ಗೆ ಯಾವ ವ್ಯವಸ್ಥೆಯನ್ನು ಮಾಡಬೇಕೆಂಬುದರ ಬಗ್ಗೆ ಇಂದು ಸರಕಾರದವರು ಬಹಳವಾಗಿ ವಿಚಾರ ಮಾಡುತ್ತಿದ್ದಾರೆ.

ಸೂಳೆತನಕ್ಕೆ ಬೀಳುವವರಿಗೆ ಎರಡು ಪರಿಸ್ಥಿತಿಗಳು ಕಾರಣವಾಗುತ್ತಿವೆ. ಒಂದನೆಯದೆಂದರೆ ದುಷ್ಟಸಂಗತಿ, ಎರಡನೆಯದೆಂದರೆ ಆರ್ಥಿಕ ಪರಿಸ್ಥಿತಿ. ಮೊದಲನೆಯ ಕಾರಣವನ್ನು ನಿವಾರಿಸಬೇಕಾದರೆ ಬಹಳ ದುಡಿಯಬೇಕಾಗಿಲ್ಲ. ಅಂತಹ ದುಷ್ಟಮಾರ್ಗಿಗಳ ಮೇಲೆ ಕಣ್ಣಿಟ್ಟು ಅವರ ಬಲೆಗೆ ಇತರರು ಬೀಳದಂತೆ ನೋಡಿಕೊಳ್ಳಬೇಕಾಗುವದು.

ಆರ್ಥಿಕ ಪರಿಸ್ಥಿತಿಯ ಮೂಲಕ ಆಕ್ಷೇಪಾರ್ಹವಾದ ಜೀವನಕ್ಕೆ ಎಳೆಯುವವರ ಬಗ್ಗೆ ಸರಕಾರವು ಬಹಳವಾಗಿ ದುಡಿಯಬೇಕಾಗುವದು. ಮತ್ತು ಯಾರಾದರೂ ಆ ಪರಿಸ್ಥಿತಿಗೆ ಸಿಲುಕಿದ್ದು ಕಂಡುಬಂದರೆ ಅವರನ್ನು ಅದರಿಂದ ಮುಕ್ತಮಾಡುವ ಬಗ್ಗೆ ವ್ಯವಸ್ಥೆ ಮಾಡಬೇಕಾಗುವದು.

ಹಿಂದುಸ್ತಾನವು ವಿಭಾಗವಾದನಂತರ ಅನೇಕ ಸ್ತ್ರೀಯರು, ಹಿಂದುಸ್ತಾನದಲ್ಲಿ ಮತ್ತು ಪಾಕಿಸ್ತಾನದಲ್ಲಿ ದುರ್ದೆಸೆಗೀಡಾಗಿ ಓಡಾಡುತ್ತಿದ್ದಾರೆ. ಇವರೆಲ್ಲರಿಗೆ ಜೀವನದ ವ್ಯವಸ್ಥೆ ಮಾಡಿ ಕೊಡದಿದ್ದರೆ ಅವರಲ್ಲಿ ಅನೇಕರು ಆಕ್ಷೇಪಾರ್ಹವಾದ ಜೀವನಕ್ಕೆ ಬೀಳುವ ಭೀತಿಯುಂಟು. ಈ ಬಗ್ಗೆ ಕೂಡ ಹಿಂದುಸ್ಥಾನ ಪಾಕಿಸ್ತಾನ ಸರಕಾರಗಳು ಗಂಭೀರವಾಗಿ ಆಲೋಚಿಸುವ ಕಾಲವು ಈಗ ಒದಗಿದೆ.

ಸ್ವತಂತ್ರ-ವಾತಾವರಣದಲ್ಲಿ ಮುಂದೆ ಸಾಗುತ್ತಿರುವ ಹಿಂದುಸ್ತಾನ ಮತ್ತು ಪಾಕಿಸ್ತಾನಗಳಿಗೆ ಇಂದು ಇಂತಹ ಅನಿಷ್ಟ ವಾತಾವರಣಗಳನ್ನು ನಿವಾರಿಸುವುದಕ್ಕೆ ಕಷ್ಟವಾಗುವ ಕಾರಣವಿಲ್ಲ. ಅವರು ಬೇಕಾದ ವ್ಯವಸ್ಥೆಯನ್ನು ಬೇಕಾದಕಾಲಕ್ಕೆ ಮಾಡಬಲ್ಲರು.

ದುಡ್ಡಿನ ದೃಷ್ಟಿಯಿಂದ ಕೂಡ ಈ ಪ್ರಶ್ನೆಗಳು ಗಡುಚಾಗಿಲ್ಲ. ಮೊದಲು ಮಾತ್ರ ಕೆಲವು ಹಣವನ್ನು ಸರಕಾರವು ವೆಚ್ಚ ಮಾಡಬೇಕಾಗುವದು. ಆ ಮೇಲೆ ಆ ಹಣವನ್ನು ತಿರುಗಿ ಹುಟ್ಟಿಸಿಕೊಳ್ಳಲು ಅವಕ್ಕೆ ಸಾಧ್ಯವಿದೆ. ಭಿಕ್ಷುಕರು ಮತ್ತು ವ್ಯಭಿಚಾರಿಗಳಿಗಾಗಿ ವಸತಿ ಸ್ಥಾನಗಳನ್ನು ಕಲ್ಪಿಸಿ ಅವರಿಂದ ದುಡಿಸಿಕೊಂಡರೆ ಅವರ ಉಪಜೀವನವು ಅವರ ದುಡಿಮೆಯಿಂದಲೇ ನಡೆಯುವುದರಲ್ಲಿ ಸಂಶಯವಿಲ್ಲ.

ಒಂದು ಕಾಯಕಕ್ಕೆ ಕೈ ಹಾಕಿದರೆ ಅದನ್ನು ಕೊನೆಯವರೆಗೆ ಒಯ್ದು ಮುಟ್ಟಿಸಬೇಕಾಗುವದು. ಈ ಜನರಿಗೆ ಹೊಟ್ಟೆಗೆ ಹಾಕಿದರೆ, ವಸತಿಯ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಕಾರ್ಯ ಮುಗಿಯುವುದಿಲ್ಲ. ಅವರ ಲಗ್ನ, ಮುಹೂರ್ತ, ಕೌಟುಂಬಿಕ ಜೀವನ, ಸಾಮಾಜಿಕ ಮಟ್ಟ ಇವೆಲ್ಲವುಗಳ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕಾಗುವುದು. ಅಂದರೆ, ಅದಕ್ಕಾಗಿ, ಸರಕಾರೀ ಒಂದು ವಿಭಾಗವು ಅವ್ಯಾಹತವಾಗಿ ಕಾರ್ಯಸಾಗಿಸಬೇಕಾಗುವದು.

ಇಷ್ಟೆಲ್ಲ ಆದರೂ ವ್ಯಭಿಚಾರದಂತಹ ವರ್ತನೆಯು ಜಗತ್ತಿನಿಂದ ಸಂಪೂರ್ಣವಾಗಿ ಹೋಗಬಲ್ಲುದೇ? ಎಂಬುದೊಂದು ಪ್ರಶ್ನೆಯೇ ಆಗಿದೆ. ಬೇಕಾದಷ್ಟು ಶಿಕ್ಷೆ ದಂಡಗಳನ್ನು ಮಾಡಿದರೂ ಕಳವು ಮಾಡುವ ಪ್ರವೃತ್ತಿಯು ಸಂಪೂರ್ಣವಾಗಿ ಹೋಗದಿರುವಂತೆ ವ್ಯಭಿಚಾರವೂ ಜನ್ಮಸಿದ್ಧವಾಗಿ ಬಂದ ಗುಣವಾದುದರಿಂದ ಅದು ಸಮೂಲವಾಗಿ ಹೋದೀತೆಂಬ ಭರವಸೆಯನ್ನು ಯಾರೂ ಇಟ್ಟುಕೊಳ್ಳುವಂತಿಲ್ಲ.

ಆದರೂ ಇಂತಹ ಅಪರಾಧೀ ಮನೋವೃತ್ತಿಗಳು ಆದಷ್ಟು ಕಡಿಮೆಯಾಗಬೇಕೆಂಬ ಬಗ್ಗೆ ಪ್ರಯತ್ನಗಳು ಎಂದಿನಿಂದಲೂ ನಡೆಯುತ್ತ ಬಂದಿವೆ. ಮತ್ತು ಇನ್ನು ಮುಂದೆಯೂ ನಡೆಯುವುದು ಕ್ರಮಪ್ರಾಪ್ತವೇ ಆಗಿದೆ.

—:0:—

ಸುಂದರ ನೆಹರು

ಇತ್ತೀಚೆಗೆ ಭಾರತದ ಮುಖ್ಯಮಂತ್ರಿ ನೆಹರುಗಳು ಕಡೆ ಪಾಶ್ಚಾತ್ಯರ ಲಕ್ಷ ಹೆಚ್ಚುತ್ತಿದೆ. ಅನೇಕ ಪತ್ರಿಕೆಗಳು ಅವರ ಭಾವಚಿತ್ರವನ್ನು ಪ್ರಕಟಿಸಿವೆ. ಮೊನ್ನೆ ಮೊನ್ನೆ ಪ್ರಕಟವಾದದ್ದು "ಇಕಾನಮಿಸ್ಟ್" ಎಂಬ ಪ್ರಭಾವಿಯೂ ತೂಕವುಳ್ಳದ್ದೂ ಎನಿಸಿದ ಪತ್ರಿಕೆಯಲ್ಲಿ ಕೆಲವು ವಾಕ್ಯಗಳು ಇಂತಿವೆ. ತೋರಿಕೆಯಲ್ಲಿ ದೃಢರಾದರೂ ಒಳಗೆ ನೆಹರು ಕೋಮಲ ಸ್ವಭಾವದವರೂ ಬೇಗ ಮನನೊಂದುಕೊಳ್ಳುವವರೂ ದಯಾವಂತರೂ ಆಗಿದ್ದಾರೆ. ಇತರರಿಗೆ ನೋವಾದೀತೆಂಬ ಭಯದಿಂದ ಅವರು ಯಾರಿಗೂ ಯಾವುದನ್ನೂ ಇಲ್ಲ ಎಂದು ಹೇಳಲಾರರು. ಬಾಲಬಡಕರಿಂದ ಸುತ್ತುವರಿಯಲ್ಪಟ್ಟ ನ್ಯುತ್ಪದ್ದಿಯಲ್ಲಿ ಇದೊಂದು ನ್ಯೂನತೆ. ಏಕೆಂದರೆ ಅವರ ಸಂಬಂಧಿಕರೆಲ್ಲರೂ ಕಾರ್ಯದಕ್ಷರೆನಿಸರು. ಅವರ ಪ್ರಾಮಾಣಿಕತೆ ಮಿತಿಮೀರಿದ್ದು. ಅದರಿಂದ ಅವರು ಒಮ್ಮೊಮ್ಮೆ ಹೇಳಬಾರದ್ದನ್ನೂ ಹೇಳಿಬಿಡುತ್ತಾರೆ. ಆಲಸ್ಯವಾದುವ ಬುದ್ಧಿಯೇ ಇಲ್ಲದ ಅವರು, ಅವರೇ ಹೇಳಿಕೊಂಡಂತೆ, ಸ್ತೋತ್ರಪ್ರಿಯರಾಗಿದ್ದಾರೆ.

ನೆಹರುಗಳ ವ್ಯಕ್ತಿಸೌಂದರ್ಯ ಅದ್ಭುತವಾದುದು. ಅವರ ತೇಜಃಪುಂಜವಾದ ಕಣ್ಣುಗಳೂ ಸೊಗಸಾದ ನರನಾಡಿಗಳ ಲಕ್ಷಣವೂ ನಿಜವಾದ ಅನಂತವಾದ ಗುಹಾಂತರ್ದೇವಾಲಯಗಳಲ್ಲಿಯ ವರ್ಣರಂಜಿತ ಭಿತ್ತಿ ಚಿತ್ರಗಳಲ್ಲಿಯ ಆಕೃತಿಗಳ ಅಂಗೋಪಾಂಗಗಳ ಮಾದರಿಯಾಗಿವೆ. ಆದರೆ ಅವರು ಆ ಕಾರಣದಿಂದ ಡಾಂಭಿಕರಾಗಿಲ್ಲ. ಇಂದು ಅವರ ಮುಖದಲ್ಲಿ ಆಧ್ಯಾತ್ಮಿಕ ಸೌಂದರ್ಯ ಸೂಸುತ್ತಿದೆ. ಗಾಂಭೀರ್ಯ ಖೇದಭಾವಗಳು ಅವರ ಮುಖವನ್ನು ಆವರಿಸಿವೆ. ಭಾರತದ ಸ್ವಾತಂತ್ರ್ಯಕ್ಕಾಗಿ ಜಾತಿ ನಿರ್ಮೂಲನಕ್ಕಾಗಿ ಮತ್ತು ಮಾನವ ಕುಲದ ಗೌರವ ಗಾಂಭೀರ್ಯಗಳ ಸಂರಕ್ಷಣೆಗಾಗಿ ತಮ್ಮ ಆಯುಷ್ಯ, ಪಿತ್ರಾರ್ಜಿತ ಆಸ್ತಿ ಮತ್ತು ತಮ್ಮ ಮನಃಶಾಂತಿ ಈ ಎಲ್ಲವನ್ನೂ ಅವರು ಬಲಿದಾನ ಮಾಡಿಬಿಟ್ಟಿದ್ದಾರೆ!

ಹ ಡ ಗ ಲಿ

ಹಡಗಲಿ ತಾಲೂಕು ಹಂಪಾಪಟ್ಟಣ ಗ್ರಾಮಕ್ಕೆ ಮೂರು ಮೈಲು ದೂರದಲ್ಲಿರುವ ಹಳ್ಳಾಪುರ ಗ್ರಾಮದ ಹೊರಗಿನಭಾಗದಲ್ಲಿರುವ ಹೆಣ್ಣುದೇವತೆಯ ಗುಡಿ ಮುಂಭಾಗದಲ್ಲಿ ಒಬ್ಬ ಮಹಾತ್ಮನು ಈಗ ಆರು ವರ್ಷದಿಂದಲೂ ಒಂದೇ ಸ್ಥಳದಲ್ಲಿ ಶವಾಸನ ಹಾಕಿ ಮಲಗಿರುವನು. ಆತನ ಮೇಲೆ ಯಾವ ತರಹವಾದ ಚಪ್ಪರ ಅಥವಾ ಗುಡಿಸಲು ಹಾಕಿಲ್ಲ. ಬೈಲಿನಲ್ಲಿಯೇ ಮಲಗಿರುವನು, ಬಹಳ ಹುಡಿಯಿಂದ ಹಿಡಿದು ಪಾದಗಳ ಹಿಮ್ಮಡದವರೆಗಿನ ನರಗಳು ಬಿಗಿಯಾಗಿ ಹಿಡಿದುಬಿಟ್ಟಿವೆ. ಏಳಲು ಬರುವಂತೆಯೇ ಇಲ್ಲ. ಕೆಲವು ಅಂತಃಕರುಣ ಪ್ರಾಣಿಗಳು ಆಹಾರ ತಂದು ಇಡುತ್ತಿರುವರು. ಆತನಿಗಾಗಿ ತಿಳಿದಲ್ಲಿ ಒಂದೋ ಅಥವಾ ಎರಡು ಕವಳಗಳನ್ನು ತೆಗೆದುಕೊಳ್ಳುತ್ತಿರುವನು. ಮಲ ಮೂತ್ರ ವಿಸರ್ಜನೆ ಇಲ್ಲವೇ ಇಲ್ಲ. ಯಾರಾದರೂ ಸನ್ಯಾಸಿಗಳು ಕಂಡಲ್ಲಿ ಮಾತನಾಡುವನು. ಈತನನ್ನು ನೋಡಲು ನಿಜವಾದ ಹಠಯೋಗಿ ಎಂದು ಮತ್ತು ಸಿದ್ಧಿಪುರುಷನೆಂದು, ಬ್ರಹ್ಮಜ್ಞಾನಿ ಎಂದು ಹೇಳಲು ಯಾವ ಸಂಶಯವೂ ಇಲ್ಲ.

ಬಳ್ಳಾರಿ ಜಿಲ್ಲಾ ಸಮಾಜವಾದೀಪಕ್ಷ
ಹೊಸಪೇಟೆ

ದಿನಾಂಕ ೯-೨-೪೯ ಮಧ್ಯಾಹ್ನ ೨-೩೦ ಗಂಟೆಗೆ ಪಕ್ಷದ ಕಚೇರಿಯಲ್ಲಿ ಬಳ್ಳಾರಿ ಜಿಲ್ಲಾ ಸಮಾಜವಾದೀಪಕ್ಷದ ಕಾರ್ಯಕಾರಿ ಸಭೆಯು ಜಿಲ್ಲಾಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಸಾಥಿ ಜಿ. ಸುಂದಿ ತಿರುಮಲರಾವ ಇವರ ಅಧ್ಯಕ್ಷತೆಯಲ್ಲಿ ಸೇರಿತು. ೯ ಜನ ಸದಸ್ಯರೊಳಗೆ ೭ ಜನ ಸದಸ್ಯರು ಹಾಜರಿದ್ದರು. ಈ ಕೆಳಗಿನ ತೀರ್ಮಾನಗಳನ್ನು ಒಮ್ಮತದಿಂದ ಮಂಜೂರುಮಾಡಲಾಯಿತು. ೧) ಮೈಸೂರು ಸರಕಾರವು ಸೋಶಲಿಸ್ಟ ಪಾರ್ಟಿಯ ಪ್ರಾಂತೀಯ ಪ್ರಧಾನಕಾರ್ಯದರ್ಶಿಗಳಾದ ಸಾಥೀ ನಾಗಭೂಷಣ ಹಾಗೂ ಇತರ ಕಾರ್ಯಕರ್ತರನ್ನು ಬಂಧಿಸಿದ್ದನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ೨) ಬರುವ ಎಪ್ರಿಲ್ ತಿಂಗಳಲ್ಲಿ ಬಳ್ಳಾರಿಯಲ್ಲಿ ಬಳ್ಳಾರಿ ಜಿಲ್ಲಾ ಸಮಾಜವಾದೀ ಕಾರ್ಯಕರ್ತರ ಸಮ್ಮೇಳನವನ್ನು ಸೇರಿಸಬೇಕೆಂದು ತೀರ್ಮಾನಿಸಲಾಯಿತು. ಹಾಗೂ ಸಭೆಯ ಅಧ್ಯಕ್ಷಸ್ಥಾನಕ್ಕೆ ಸಮಾಜವಾದೀ ಮುಂದಾಳುಗಳಾದ ಸಾಥೀ ಅಶೋಕ ಮೇಹತಾ ಅಥವಾ ಡಾ. ರಾಮಮನೋಹರ ಲೋಹಿಯಾ ಇವರನ್ನು ಆಹ್ವಾನಿಸಬೇಕೆಂದು ನಿಶ್ಚಯಿಸಲಾಯಿತು. ೩) ಜಿಲ್ಲೆಯಲ್ಲಿ ಪಕ್ಷದ ಪರವಾಗಿ ರೈತ ಮತ್ತು ಮಜದೂರ ಪಂಚಾಯಿತಿಗಳನ್ನು ಸ್ಥಾಪಿಸಬೇಕೆಂತಲೂ, ರೈತ ಮತ್ತು ಮಜದೂರ ಜಾಗೃತಿಗಾಗಿ ಪಕ್ಷವು ಹೆಚ್ಚು ಆಸ್ಥೆವಹಿಸಬೇಕೆಂದು ತೀರ್ಮಾನಿಸಲಾಯಿತು.

ನಂತರ ಆಯಾ ತಾಲೂಕುಗಳ ಪ್ರತಿನಿಧಿಗಳು ಪಕ್ಷದ ಧೋರಣೆ ಸಂಘಟನೆ ಮೊದಲಾದವುಗಳ ಬಗ್ಗೆ ದೀರ್ಘವಾಗಿ ಚರ್ಚಿಸಿ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

●

ಹೈದರಾಬಾದ ಬಿಕ್ಕಟ್ಟು ಇನ್ನೂ ಬಗೆಹರಿದಿಲ್ಲ

ಹೈದರಾಬಾದ- ೨೨ ಹೈದರಾಬಾದ ಸಂಸ್ಥಾನದ ಕಾಂಗ್ರೆಸ್ಸಿನ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಮತ್ತು ಪ್ರತಿ ಕಾಂಗ್ರೆಸ್ಸಿನ ಅಧ್ಯಕ್ಷರಾ ಶ್ರೀ ಜನಾರ್ದನರಾವ ದೇಸಾಯರು ಈ ದಿನ ಒಟ್ಟಿಗೆ ಸೇರಿ ಈ ಎರಡೂ ಸಂಸ್ಥೆಗಳಲ್ಲಿ ಇನ್ನೂ ಉಳಿದಿರುವ ಮತಭೇದವನ್ನು ಹೋಗಲಾಡಿಸುವ ಕವಾಗಿ ಒಟ್ಟಿಗೆ ಸೇರಿ ಮಾತುಕತೆ ನಡೆಯಿಸಿದರು. ದಿಲ್ಲಿಯಲ್ಲಿ ಮಾತುಕತೆ ನಡೆಯಿಸಿ ಒಗ್ಗೂಡಿ ಕೆಲಸ ಮಾಡುವ ತೀರ್ಮಾನಕ್ಕೆ ಬಂದಿದ್ದರೂ ಮತ್ತೆ ಬಿಕ್ಕಟ್ಟು ಉಂಟಾಯಿತು. 'ಒಡಂಬಡಿಕೆಯ ದಿಶೆಯಲ್ಲಿ ಏನೂ ಪ್ರಗತಿಸಾಧಿಸಿಲ್ಲ. ಬಿಕ್ಕಟ್ಟು, ಹಾಗೆ ಮುಂದರಿದಿದೆ' ಎಂದು ದೇಶ-ಮುಖಂಡರು ಹೇಳಿದರು.

ಮದರಾಸ ಅಂಚೆ ತಂತಿ ನೌಕರರ ನಿರ್ಣಯ

ಮದರಾಸ ೨೩. ಮದರಾಸ ಪ್ರಾಂತಿಕ ಅಂಚೆ ತಂತಿ ರ.ಮೆ.ಮೈ. ನೌಕರರ ಸಂಘದ ಕಾರ್ಯಕಾರಿ ಸಮಿತಿಯ ಸಭೆ ಸಂಪನ್ನು ಹಿಂತೆಗೆದುಕೊಳ್ಳುವ ನಿರ್ಣಯಮಾಡಲು ಕೇಂದ್ರಸಮಿತಿಗೆ ಸೂಚಿಸಿತು.



The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

——]0[——

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ, ಬಳ್ಳಾರಿ

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—ವಾರ್ಡ್‌ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು.—ಪ್ರಾರಂಭಿಕ —ಮಧ್ಯಮಿಕ ರಾಷ್ಟ್ರಭಾಷೆ. ಉನ್ನತ—ವಿಶಾರದ ಪ್ರಚಾರಕ

ವೇಳೆ:—ಪ್ರಾತಃಕಾಲ 7ರಿಂದ 9 ಸಾಯಂಕಾಲ 6ರಿಂದ 8ರ ವರೆಗೆ ಹಾಗೆ ಪುಸ್ತಕ-ಪರೀಕ್ಷೆ ವರ್ಗಗಳ ಅವಧಿ ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ: —ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4740)

ನವ ಭಾರತ ಬಳ್ಳಾರಿ. 28-2-49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri.......................................

....

....

Printed at Vittal Press, Edited & Published by T. B. Keshava Rao

JAI-HIND.

ನವಭಾರತ

ಒಕ್ಕಾಲಿಯ
[illegible] ರಾಷ್ಟ್ರೀಯ ವಾರಪತ್ರಿ
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ.
ಟಿ. ಬಿ. ಕೇಶವ[illegible].

ವರ್ಷ ೧೨ | ಸೋಮವಾರ — ಮಾರ್ಚ್ [illegible] | ಸಂಚಿಕೆ [illegible]

ಭಾರತದ ವೀರಮಹಿಳೆ ಸರೋಜಿನಿಯ ನಿರ್ಯಾಣ

ಶ್ರೀಮತಿ ಸರೋಜಿನಿದೇವಿ ನಾಯುಡುರವರು ೨ನೇ ತಾ॥ ಮುಂಜಾನೆ ೩ ೧೬ ಗಂಟೆಗೆ ಹೃದಯಕ್ರಿಯೆ ನಿಂತು ಮರಣವನ್ನೈದಿದರು.

ಫೆಬ್ರುವರಿ ೧೫ನೇ ತಾರೀಖಿಗೆ ದಿಲ್ಲಿಯಿಂದ ಬಂದ ನಂತರ ಹಾಸಿಗೆ ಹಿಡಿದವರು ಡಾಕ್ಟರರ ಅಭಿಪ್ರಾಯದ ಮೇರೆಗೆ ಯಾವ ಕಾರ್ಯಕ್ರಮಗಳಿಗೂ ಹಾಜರಾಗುತ್ತಿದ್ದಿಲ್ಲ. ವೈದ್ಯ ಸಲಹಾ ಮಂಡಲದವರು ಫೆಬ್ರುವರಿ ೨೬ನೇ ತಾರೀಖಿಗೆ ಪ್ರಥಮ ಸಲ ಪ್ರಾಣವಾಯುವನ್ನು ಹಾಕಿದರು. ಆದರಿಂದ ಸ್ವಲ್ಪ ಸಮಾಧಾನವಾಯಿತು. ಮಾರ್ಚ್ ಮೊದಲನೇ ತಾರೀಖಿಗೆ ಭಯಂಕರ ತಲೆನೋವಿನಿಂದ ವಿಶ್ರಾಂತಿಯಿಲ್ಲದೇ ಹೋಯಿತು. ೧ನೇ ತಾ॥ ರಾತ್ರಿ ಹೊಸ ರಕ್ತವನ್ನು ೯-೩೦ಕ್ಕೆ ಕೊಡಲಾಯಿತು. ೧೦ ಗಂಟೆಗೆ ನಿದ್ರೆಯ [illegible] ಕೊಡಲಾಯಿತು. ೧೧-೩೦ ರಿಂದ ೨-೩೦ ರ ವರೆಗೆ ನಿದ್ದೆ ಹೋದವರು ನಂತರ [illegible] ಸುರುವಾಗಿ, ಗಟ್ಟಿಯಾಗಿ ಕೆಮ್ಮುತ್ತ [illegible] ಕೆಮ್ಮುತ್ತಿದ್ದರು.

ಅವರು ಭಾರತದ ಬಗ್ಗೆ ಜನಪ್ರಿಯ ಗಣ್ಯರಾಗಿದ್ದರು. ಮಹಾತ್ಮ ಗಾಂಧೀಜಿಯ ಸತ್-ಶಿಷ್ಯರಲ್ಲೊಬ್ಬರಾಗಿ, ನಿಕಟವಾಗ ನಡೆಗೆನಿಸುವ ಜಾಗ, [illegible]. ಕಾಂಗ್ರೆಸ್ ಕಾರ್ಯಕಾರೀ ಮಂಡಲದ ಸದಸ್ಯರಾಗಿ ಬಹುಕಾಲ ಸೇವೆ ಸಲ್ಲಿಸಿದರು. ರಾಜಕೀಯ ವಿಪ್ಲವದ ಎಲ್ಲ ವಿಷಯಗಳಲ್ಲೂ ಇವರ ಅಭಿಪ್ರಾಯಕ್ಕೆ ಒಂದು ಮನ್ನಣೆಯಿತ್ತು. ಸಂಯುಕ್ತ ಪ್ರಾಂತದ ಗವರ್ನರರಾಗಿ ನಿರಾಶ್ರಿತ ಜನರಿಗಾಗಿ ಸಲ್ಲಿಸಿದ ಸೇವೆ ಅಪಾರವಾದದ್ದು. ಪ್ರಾಂತದ [illegible] ಯುದ್ಧ ಸಮಯ ಮಹಾ ಸಂತೆ ಪ್ರಚೋದನೆ [illegible] ಮತ್ತು ನಿರಾಶ್ರಿತರಿಗಾಗಿ ಅನ್ನ ವಸ್ತ್ರದ [illegible] ಮಾಡ [illegible]. ಅವರು [illegible] ಕೊನೆಯ ಸಾರ್ವಜನಿಕ ಸಮಾರಂಭವೆಂದರೆ [illegible] ವಿಶ್ವವಿದ್ಯಾನಿಲಯದ [illegible] ಉತ್ಸವದಲ್ಲಿ ಭಾಗವಹಿಸಿ [illegible]. [illegible] ಪಂಡಿತ ಜವಾಹರಲಾಲರಿಗೆ ಡಿಲಿಟ್ ಪದವಿ ಕೊಟ್ಟರು. ಅವರ ತಮ್ಮ ಸದಾ [illegible] ನಗೆಮಾತು ಮತ್ತು [illegible] ಹಾಸ್ಯದಿಂದ ಬಹು ಜನರ ಮನಸ್ಸನ್ನು ಸೆಳೆದಿದ್ದರು.

ಅವರಿಗೆ ಸಾಯುವಾಗ ಎಪ್ಪತ್ತು ವರ್ಷಗ[illegible] [illegible] ಮರಣ ಸಮಯದಲ್ಲಿ ಅವರ ಆಪ್ತರಾರೂ ಸಮೀಪದಲ್ಲಿರಲಿಲ್ಲ. [illegible] ಅವರ ಪುತ್ರಿ [illegible] ನಾಯುಡುರವರು ಅಲ್ಲಿಗೆ [illegible]. ಅವರ ಗಂಡ [illegible] ಎಂ. ಜಿ. ನಾಯುಡು ಅವರಿಗೆ [illegible] ಸಿಂದ [illegible] ಕಳಿಸಲಾಯಿತು.

ಭಾರತದ ಕವಿ-ಕೋಕಿಲೆ ಕಣ್ಮರೆಯಾದಳು

ಹಕ್ಕಿ ದಿಗಂತದಾಚೆಗೆ ಹಾರಿತು. ತನ್ನ ಕೊಕ್ಕಿನಿಂದ ಜೀವದ ಸುಪ್ತ ಚೇತನವನ್ನು ಕುಕ್ಕಿ ಜಾಗ್ರತಗೊಳಿಸುತ್ತಿ[illegible] ಹಾರಿತು. ತನ್ನ ಸ್ವರ್ಣ ಪಕ್ಕಗಳ [illegible] ಗಾಳಿಯಲ್ಲಿ ಹೊಸ ಚೇತನ, ಹೊಸ ಸ್ಫೂರ್ತಿಯನ್ನು ನಾಡಿನ ತುಂಬ ತುಂಬುತ್ತಿದ್ದ ಹಕ್ಕಿ ಅದೃಶ್ಯವಾಯಿತು. ಅಲೆ ಅಲೆಯಾಗಿ ಹೊಳೆಯುತ್ತಿದ್ದ ತನ್ನ [illegible] ಇಂಪಿನಿಂದ ಭಾರತೀಯರೆಲ್ಲರನ್ನು [illegible] ಕಣ್ಮರೆಯಾಯಿತು. ತನ್ನ ಕನಸಿನ [illegible] ಕನಸನ್ನು ಕಟ್ಟಲು ಇಳಿದು ಬಂದ [illegible] ಸರೋಜಿನಿ ನಮ್ಮನ್ನು ಅಗಲಿದಳು.

ಪ್ರಶಾಂತ [illegible] ಜೀವನವು ಸ್ವಪ್ನಾವಸ್ಥೆಯ ಕಾಲನು ಎದೆಯಾಳ, ಬಹು ಧೈರ್ಯದಿಂದ ಈಕೆಯನ್ನು [illegible] ಇಲ್ಲವಾದರೆ. ಆ ಮಹಾಸಿಗೂ ಎಲ್ಲಿಯ ಧೈರ್ಯ, ಈ ಸಿಡಿಲು [illegible] ವಜ್ರ [illegible], ಕಾಲನಿಗೆ ವಶವಾಗುವ ಮೊದಲೇ [illegible] ನನ್ನ ರಾಷ್ಟ್ರಕ್ಕಿಂದು ನಾನ[illegible] ಗಿದೆ. ನನ್ನ [illegible] ದಿಂದ ದೂರವಾಗಿದೆ. ಬಾಪೂಜಿಯವನ್ನು ಕಟ್ಟಲು ನನ್ನ ಪ್ರತಿಜ್ಞೆಯನ್ನು ಸ್ವೀಕರಿಸಿರುವೆನು. ನನಗೆ ತನ್ನ [illegible] ಕೊಡಬೇಕಾಗಿದೆ', ಎಂದು ಗುಡುಗಾಡಿ [illegible] ಹಿಡಿಸಿದ್ದಳು. ಮಹಾ ಪುರುಷರನ್ನೇ ಆರಿಸಿ ಆರಿಸಿ ತನ್ನ [illegible]. ಈ ಕಾಲನಿಗೆ ಬಹು ಕಾಲದ ಅಭ್ಯಾಸವಾಗಿದೆ [illegible] ಕಾಲ ಪುರುಷನಿಗೆ ಭಾರತದ ಬ[illegible] ಕಾಣುತ್ತಿವೆ. ಕವಿ ರವೀಂದ್ರರನ್ನು ಕಸಿದುಕೊ[illegible] ಆರಂಭ, ಮಹಾ ಪುರುಷರ ಮಂಗಳ ಮುಕ್ತಾಯಕ್ಕೆ [illegible] ಆಹುತಿ [illegible] ತೀವ್ರವಾಗದಿರಲಾಗಲೇ ಈ ಸರೋಜಿನಿಯ [illegible] ಇರಲಾರದ[illegible]

ಕವಯಿತ್ರಿಯು ಕಳೆದ ತಿಂಗಳ ಹದಿಮೂರನೇ ದಿನಾಂಕದಲ್ಲಿ [illegible] ಆ ಶುಭ ಸಂತೋಷದಲ್ಲಿ ಸರೋಜಿನಿ[illegible] ವಿಶಾಲ ಹೊಳೆಗಿತು. [illegible] ನವ [illegible] ಈ [illegible] ಜೀವ [illegible] ಈ ಸಂತೋಷ [illegible] ಕವಿ [illegible] ನಾಡಿನ [illegible] ಭಾರತೀಯ [illegible] ಭಾರತೀಯ [illegible] ಬರದವರು ಎಂ[illegible] "ಬುಲ್ ಬುಲ್" ಎಂದ[illegible] ಸರೋಜಿನಿಯ ಇತಿಹಾಸ, [illegible] ಚಿರನೂತನವಾಗಿದೆ

[illegible] ಈಕೆಯನ್ನು ಸಂಧಿಸಿದ [illegible] ಎಂ[illegible] ತನ್ನ [illegible] ಈಕೆಯು [illegible] ಕಾಂತಿ[illegible] ಸೌಂದರ್ಯವನ್ನು [illegible] ಎಂದು ಹೇಳಿದ್ದಾರೆ. ಈಕೆಯು

ವೆಲ್ಲವೂ ಅಂತೆಯೇ ಇವೆ. ಮೊದಲು ಏನನ್ನಾದರೂ ಬರೆಯಬೇಕು, ಯಾವುದು ಎಂತಿದೆ ಯೆಂಬುದನ್ನು ಕೋಕಿಲೆಯಾಗಿ ಹಾಡಿದಳು. ಆ ಮೇಲೆ ಪ್ರಸಿದ್ಧ ವಾಗ್ಮಿಯಾಗಿ ಭೈರವ ನಿನಾದಕ್ಕೆ ಮೊಳಗಿದಳು. "ಸ್ತ್ರೀಯರ ಸನ್ನಿಧಿಗೆ, ವಿಶ್ವಾಸದ ಬೆಳಗೆ, ಸ್ವಾತಂತ್ರ್ಯದೆಡೆಗೆ ದರ್ಶಿಸುವ ಜೀವನವೇ ರಾಷ್ಟ್ರೀಯ ಜೀವನ" ಎಂಬುದೀಕೆಯ ಸೂತ್ರ. ಸ್ವತಂತ್ರ ಭಾರತದಲ್ಲಿ ಈ ಸೂತ್ರವನ ಸಾಧಿಸಲು ರಾಜಕೀಯ ರಂಗದಲ್ಲಿ, ಶಾಲೆ, ವಿದ್ಯಾಪೀಠಗಳಲ್ಲಿ ಸ್ವತಂತ್ರ ವಿಮೋಚನ ಮಾರ್ಗದಲ್ಲಿ ಸ್ವಾತಂತ್ರ್ಯದ ಪಿತರಾಳದ ಸೋಲಿನಿಂದ ಎದೆ ಒತ್ತಿ ಕೊಂಡು ನಿಂತವಳಾಗ ಸ್ವತಂತ್ರದ ಎರಡನೆ ವರ್ಷ ಬಂದಲ್ಲೇ ಸ್ವಾತಂತ್ರ್ಯ ಸ್ವಪ್ನ ದೇವತೆ ಸರೋಜಿನಿ ಇಲ್ಲವಾಗಬೇಕೆ? ಇದೆಂತಹ ದುರ್ಭಾಗ್ಯ.

ಬಹುದಿನ ಸಾವಿನ ಸಂಕಟದಲ್ಲಿ ಅಘೋರವಾಗಿ ಕುಳಿತಿದ್ದ ಕೋಟಿ ಭಾರತೀಯರನ್ನು ಕಂಡು, ತನ್ನ ಎದೆಯ ನೋವನ್ನು ಬಚ್ಚಿಟ್ಟು ನೋವಿನ ಸಮಯ ತೀರಿತು. ಮೇಲೇಳಿ ಕರ್ತವ್ಯವು ಕರೆಯುತ್ತಿದೆ ಎಂದು ಭಾರತೀಯರಿಗೆ ಧೈರ್ಯ ತುಂಬಿದ ಸಿಂಹವು ಸಾವಿನ ತೆಕ್ಕೆಗೆ ಹೋದಾಗ, ನಮ್ಮನ್ನು ಸಂತೈಸುವರಾರು? ಸಾಹಿತ್ಯ, ರಾಜಕೀಯ ಕ್ಷೇತ್ರದಲ್ಲಿ ಈಕೆಯಿಂದ ತೆರವಾದ ಜಾಗವೆಂತು ತುಂಬುವುದು? ತುಂಬುವರೆಲ್ಲಿ? ಕವಿ ರವೀಂದ್ರ, ಬಾಪೂಜಿ, ಸರೋಜಿನಿ ಅವರ ಜಾಗವನ್ನು ತುಂಬಬಲ್ಲ ರತ್ನಗಳು ಭಾರತದ ಮಡಿಲಿನಲ್ಲಿ ಮೂಡಿರುವವೆ? ಮೂಡುವವೆ?

ಸರೋಜಿನಿಯು ತಾಯಿ ವರದ ಸುಂದರಿಯೂ ಕವಯಿತ್ರಿ. ತಂದೆ ಅಘೋರನಾಥ ಚಟ್ಟೋಪಾಧ್ಯಾಯರು ಆಗಿನ ಕಾಲದ ವಿದ್ಯಾತಜ್ಞರಲ್ಲಿ ಹಿರಿಯರಾಗಿದ್ದರು. ತಂದೆಯ ವಿದ್ಯಾಪ್ರೌಢಿಮೆ, ತಾಯಿಯ ಕವಿತಾ ಸ್ಫೂರ್ತಿ ಇವೆರಡರ ಮಿಲನದಿಂದ ಸರೋಜಿನಿ ಹುಟ್ಟುವಾಗಲೇ ಕವಯಿತ್ರಿಯಾಗಿ ಹುಟ್ಟಿದಳು. ಈ ಸಂಸ್ಕಾರ ಬೆಳೆದು ಬಲಿತು ಹದಿಮೂರು ವರುಷ ತುಂಬುವುದರೊಳಗಾಗಿ ಕವನ ಕಟ್ಟಲಾರಂಭಿಸಿದಳು. ಈಕೆಯು ವಿದೇಶದ ಅಭ್ಯಾಸದಲ್ಲೂ ಕವನ ಕಟ್ಟುವುದರಲ್ಲೇ ಹೆಚ್ಚು ಕಾಲಕಳೆದಳು. ಎಡ್ಮೊಂಡ್ ಗೋಸ್‌ರವರು ಈಕೆಯ ಕವಿತಾ ದೃಷ್ಟಿಯನ್ನು ಪ್ರಕೃತಿ ಸೌಂದರ್ಯದ ಕಡೆಗೆ ತಿರುಗಿಸಿ, ಸ್ವದೇಶಕ್ಕೆ ಕಳುಹಿಸಿಕೊಟ್ಟರು.

ರಾಜಕೀಯ ರಂಗಕ್ಕೆ ಕಾಲಿಡುವ ಸ್ಫೂರ್ತಿಯನ್ನು ಈಕೆಗಿತ್ತವರು ದಿವಂಗತ ಗೋಪಾಲಕೃಷ್ಣ ಗೋಖಲೆಯವರು. ೧೯೧೬ ರಲ್ಲಿ ಈಕೆ ಲಖನೌ ಕಾಂಗ್ರೆಸ್ ಅಧಿವೇಶನದಲ್ಲಿ ಹರಿಜನರ ಹಕ್ಕು ಬಾಧ್ಯತೆಗಳಬಗ್ಗೆ ಮಾಡಿದ ಭಾಷಣವು ಈಗಲೂ ಜನರ ಎದೆಯಲ್ಲಿ ಪ್ರತಿಧ್ವನಿತವಾಗುತ್ತಿದೆ. ಕಾನಪುರ ಅಧಿವೇಶನದಲ್ಲಿನ ಈಕೆಯ ಅಧ್ಯಕ್ಷ ಭಾಷಣವು ಕಾಂಗ್ರೆಸ್ಸಿನ ಇತಿಹಾಸದ ಒಂದು ಮೈಲಿಗಲ್ಲಾಗಿದೆ.

ಹಿಂದೂ ಮುಸ್ಲಿಮರ ಐಕ್ಯದ ಸಂದೇಶವನ್ನು ಬರಿ ಹಿಂದುಸ್ಥಾನವೂ ಜನತೆಯ ಮನಕ್ಕೆ ಮುಟ್ಟಿಸಿದವರಲ್ಲಿ ಈಕೆಯೇ ಮುಂದಾಳು. ಸ್ವಾತಂತ್ರ್ಯ ಸಾಧನೆಯ ಹೋರಾಟದಲ್ಲಿ ಕ್ಲಿಷ್ಟ ಪರಿಸ್ಥಿತಿ ಬಂದು ಒದಗಿದಾಗಲೆಲ್ಲಾ ಈಕೆ ಮುಂದೆ ಬಂದು ನಿಂತು, ವೀರದಂಡನಾಯಿಕೆಯ ನಿರ್ಧಾರದ ಗಂಭೀರತೆಯನ್ನು ತೋರಿಸುತ್ತಿದ್ದಳು. ಮಹಾತ್ಮರೊಂದಿಗೂ ಏಕಮನಸ್ಸಿನಿಂದೊಡನೆಯೇ ರಾಜಕೀಯ, ಆಧ್ಯಾತ್ಮಿಕ, ಸ್ಫೂರ್ತಿ ಸ್ಫುರಿಸುತ್ತಿದ್ದಿತಂತೆ.

ಯಕ್ತಪ್ರಾಂತದ ಗವರ್ನರಾಗಿ ಈಕೆ ನೇಮಿತರಾದ ರಾಜಕೀಯ ಘಟನೆಯಾಗಿರುವುದು ಮಾತ್ರವಲ್ಲದೆ, ದೇಶದ ಸ್ತ್ರೀಯರ ಮತ್ತು ಸಮಾಜಿಕ ಜೀವನದ ಮೇಲೆ ಎಂತಹ ಪ್ರತಿಷ್ಠೆ ಪ್ರಭಾವವನ್ನು ಸ್ತ್ರೀಯು ಬೀರಬಲ್ಲಳು ಎಂಬುದನ್ನು ದೃಢಪಡಿಸಿಕೊಟ್ಟಳು. ಯಾವ ಸಮಾಜದಲ್ಲಿ ಸ್ತ್ರೀಯರೆಂದರೆ ಪುರುಷನ ಭೋಗದ ವಸ್ತು, ಪುರುಷನ ಸ್ಥಾನಮಾನ ಸ್ತ್ರೀಯರಿಗಿಲ್ಲ ಆಕೆಯು ಜೀತದಾಳು ಎಂಬ ಭಾವನೆ ಇದ್ದಿತೋ ಅದೇ ದೇಶದಲ್ಲಿ ಅದೇ ಸಮಾಜದಲ್ಲಿ, ಅದೇ ಪುರುಷರ ಮಧ್ಯೆ ಸರೋಜಿನಿಯು ಜನ್ಮವೆತ್ತಿ, ಸ್ತ್ರೀಯರ ವಿಷಯದಲ್ಲಿ ಕೀಳು ಭಾವನೆಯನ್ನು ತಳೆದುಕೊಂಡಿದ್ದ ಪುರುಷರ ಗುಂಡಿಗೆಯನ್ನು ಅದರಿಸಿಬಿಟ್ಟಳು. ರಾಜಕೀಯ ಕ್ಷೇತ್ರದಲ್ಲಿ ಯಾರಿಗೂ ಮಿಗಿಲೆಯ ದಂತಹ ಅಗ್ರಸ್ಥಾನವನ್ನು ಪಡೆದಳು. ದುಂಡುಮೇಜಿನ ಪರಿಷತ್ತಿನ ಪ್ರತಿನಿಧಿಯಾಗಿದ್ದಳೀಕೆ. ದಕ್ಷಿಣ ಆಫ್ರಿಕದ ಹಿಂದೀ ಕಾಂಗ್ರೆಸ್ಸಿನ ಅಧ್ಯಕ್ಷಣಿಯಾಗಿದ್ದಳು. ರಾಷ್ಟ್ರದ ಉನ್ನತ ಗೌರವವಾದ ರಾಷ್ಟ್ರಪತಿಯ ಪೀಠವನ್ನು ಅಲಂಕರಿಸಿದ್ದಳು. ದೇಶದ ಮಹತ್ವದ ಸ್ಥಾನವಾದ ಗವರ್ನರ ಪದವಿಯನ್ನು ಪಡೆದಿದ್ದಳು. ಸ್ತ್ರೀಯರ ಗೌರವ ಘನತೆಗಳನ್ನು ಗೌರವಶಿಖರಕ್ಕೇರಿಸಿದ್ದಳು.

ಹೀಗೆ ಸರ್ವತೋಮುಖವಾಗಿ ಸರ್ವಸಿದ್ಧಿಯನ್ನು ಪಡೆದ ಸರೋಜಿನಿಯನ್ನು ಕಳೆದುಕೊಂಡ ನೋವನ್ನು ಧ್ವನಿಸಲು ಮಾತುಗಳು ಸಾಲವು. ಆಕೆಯ ಜೀವನದಿಂದ ಹೊರಬಿದ್ದ ಸ್ಫೂರ್ತಿಯು ನಮ್ಮೆಲ್ಲರ ಎದೆಯಲ್ಲಿ ನಿಂತು ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವ ದಕ್ಷತೆಯನ್ನು ಕೊಡಲಿ ಎಂದಾಶಿಸುವೆವು. ಶಾಂತಿದೇವತೆಯಾದ ಈಕೆಯ ಆತ್ಮಕ್ಕೆ ಶಾಂತಿ ಕೋರುವದು ಸಾಹಸದ ಮಾತಾಗುವದು. ಭಾರತದ ಬಗ್ಗೆ ಅಪಳ ಪ್ರೇಮವಿರುವ ಈಕೆಗೆ ಶಾಂತಿಯಲ್ಲಿ ಮತ್ತೊಂದು ಶಕ್ತಿಯಿಂದ, ಮತ್ತೊಂದು ರೂಪದಲ್ಲಿ ಈಕೆಯ ಅವತಾರವಾಗುವದೆಂಬುದನ್ನು ಪುನರ್ಜನ್ಮದಲ್ಲಿ ನಂಬಿಕೆಯಿರುವ ನಾವು ಧಾರಾಳವಾಗಿ ನಂಬಬಹುದು. ಈ ನಂಬಿಕೆಯಿಂದ ನಮ್ಮ ಕಣ್ಣಿನ ಹನಿಗಳನ್ನು ತಡೆಹಿಡಿಯೋಣ. (ನವಯುಗ)

ನೋಟೀಸು

ಬಳ್ಳಾರಿ ಸ್ಮಾಲ್‌ಕಾಜ್ ಕೋರ್ಟಿನಲ್ಲಿ

S. C. 738/48

Between

ವಾದಿ:- ಸೀತಾರಾಮರೆಡ್ಡಿ ತಾ॥ ನೇಮಕಲ್ಲು (ಆಲೂರು)

and

ಪ್ರತಿವಾದಿ:- ತಿಮ್ಮನಗೌಡ ಕೊ. ಶಿವರಾಮರೆಡ್ಡಿ ಸಾ। ಬೊಮ್ಮಲಾಪುರಂ (ಸಿರಗುಪ್ಪ)

ಮೇಲಿನನಂಬರಿನಲ್ಲಿ ವಾದಿ, ಪ್ರತಿವಾದಿಯ ಮೇಲೆ ಪ್ರಾಂಸರಿನೋಟು ಬಾಬುತು ರೂ 170-0-0 ವಸೂಲುಮಾಡಿ ದಾವಾ ದಾಖಲು ಮಾಡಿರುತ್ತಾನೆ. ಸದರಿ ದಾವಾ ತಾ॥ 16-3-49 ನೆ ತಾರೀಖ ಇರುವದು. ನೀವಾಗಲಿ ವಕೀಲರ ದ್ವಾರಾಗಲಿ ಸದರಿ ತಾರೀಕಿಗೆ 11 ಗಂಟೆಗೆ ಹಾಜರು ರಾಗಬೇಕು ಇಲ್ಲದಿದ್ದರೆ ಎಕ್ಸಪಾರ್ಟಿ ಮಾಡಿ ಸದರಿ ದಾವಾ ತೀರ್ಮಾನ ಮಾಡುವರು

ಸಿ. ನಾರಾಯಣಸ್ವಾಮಿ

ನಾಯುಡು

ವಾದಿಯ ವಕೀಲರು

ಸರಕಾರದ ವೆಚ್ಚ

ಸಾರ್ವಜನಿಕ ವೆಚ್ಚವನ್ನು ಆದಷ್ಟು ಕಡಿಮೆಮಾಡುವ ಬಗ್ಗೆ ಆಫೀಸರೆಲ್ಲರೂ ಸರ್ಕೀಟಿಗೆ ಹೋಗುವುದನ್ನು ಕಡಮೆಮಾಡಬೇಕೆಂದೂ ಕೆಳ ನೌಕರರನ್ನು ಅತ್ಯಾವಶ್ಯಕವೆಂದಾದ ಸಂದರ್ಭದಲ್ಲಿ ಮಾತ್ರ ವರ್ಗಾಯಿಸಬೇಕೆಂದೂ ಆಜ್ಞೆ ಕೊಟ್ಟಿದೆ. ಅಲ್ಲದೆ ಆಫೀಸರ ಸಾದಿಲ್‌ವಾರು ವೆಚ್ಚಗಳನ್ನು ಆದಷ್ಟು ತಗ್ಗಿಸಬೇಕೆಂದು ಕೇಳಲಾಗಿದೆ.

ಮುನಿಸಿಪಾಲಿಟಿಗಳು

ಬಳ್ಳಾರಿ, ಎಲ್ಲೂರು, ಕುಂಭಕೋಣ ಮುನಿಸಿಪಾಲಿಟಿಗಳನ್ನು ಮೊದಲನೆ ವರ್ಗದವುಗಳನ್ನಾಗಿಯೂ ಅನಕಪಳ್ಳಿ, ಪಾಲಕೋಲ, ಗುಡಿಯಾತಂ, ಮಯೂರಂ ಮುನಿಸಿಪಾಲಿಟಿಗಳನ್ನು ಎರಡನೆ ವರ್ಗದವುಗಳನ್ನಾಗಿಯೂ ಸರಕಾರವು ವರ್ಗೀಕರಿಸಿದೆ.

ಎಲ್. ಐ. ಎಂ ಕೋರ್ಸು

ಹಿಂದೀಯ ವೈದ್ಯ ಕಲಾಶಾಲೆಯಲ್ಲಿಯೂ ಶಾಲೆಯಲ್ಲಿಯೂ ಎಲ್. ಐ. ಎಂ ಕೋರ್ಸನ್ನು ಆರರಿಂದ ೪ ವರ್ಷಕ್ಕೆ ತಗ್ಗಿಸಲಾಗಿದೆ.

— ಭಾರತದ ಪರವಾಗಿ ಪಾಕಿಸ್ತಾನದಲ್ಲಿ ಸಂಯುಕ್ತ ಪ್ರಾಂತದ ನಾಗರಿಕರಾದ ಡಾಕ್ಟರ್ ಸೀತಾರಾಮ್ ಎಂಬುವರನ್ನು ಹೈಕಮೀಶನರನ್ನಾಗಿ ಮಾಡಿದೆ.

……

THE NAVA BHARAT
ನವಭಾರತ
ಸಂಪಾದಕ-ಟಿ.ಎಂ.ಕೇಶವರಾವ್

ಸೋಮವಾರ ೭ ಮಾರ್ಚ್ ೧೯೪೯

ಕೇಂದ್ರ ಮತ್ತು ಪ್ರಾಂತಗಳ ಆಯವ್ಯಯ

ಕೇಂದ್ರ ಮತ್ತು ಮದರಾಸ್ ಪ್ರಾಂತದ ವಾರ್ಷಿಕ ಆಯವ್ಯಯಗಳ ಪರಿಶೀಲನೆಯಿಂದ ಹೊಸದಾಗಿ ಜನತೆಯಮೇಲೆ ಕರಭಾರವಾಗಲಿದೆ. ಆಹಾರ ಧಾನ್ಯಗಳಷ್ಟೇ ಅಲ್ಲದೆ ಸಾಮಾನ್ಯ ನಿತ್ಯಾಹಾರವಾದ ಉಳ್ಳೆಗಡ್ಡಿ ಮೆಣಸಿನಕಾಯಿ ಮೇಲೂ ಕೂಡ ಟ್ಯಾಕ್ಸ್ ಹಾಕಲಿದ್ದಾರೆ. ಈ ಕಾರಣ ಈ ವಸ್ತುಗಳ ಬೆಲೆ ಏರುವದರಲ್ಲಿ ಸಂಶಯವೇ ಇಲ್ಲ. ಉತ್ಪಾದಕನು ಬೆಲೆಯೇರಿಸಿ ಮಾರುವನು. ವ್ಯಾಪಾರಗಾರನು ತನ್ನ ಲಾಭದೊಂದಿಗೆ ಸರಕಾರದ ಕರವನ್ನೂ ಕೂಡಿಸಿ ಮಾರುವನು. ವಸ್ತುವಿನ ಬಳಕೆ ಮಾಡುವವನು ಕೊಳ್ಳುವನು. ಹೊತ್ತಿಗೆ 3-4 ವ್ಯಾಪಾರಿಗಳ ಕೈಮಾರಿದ್ದರೆ ಅವರೆಲ್ಲರೂ ಈ ಕರದ ಲಾಭ ಹೊಂದುವರು. ಇದರ ಫಲಿತಾಂಶ ಸ್ವರೂಪವಾಗಿ ಜೀವನದ ಮಟ್ಟವು ಮತ್ತಷ್ಟು ಏರುವದು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳು ಅತಿ ಪ್ರಸರಣವನ್ನು ತಗ್ಗಿಸಿ ಜನತೆಯ ಜೀವನದ ಮಟ್ಟವನ್ನು ಇಳಿಸಬೇಕೆಂದು ಕೆಲ ಯೋಜನೆಗಳನ್ನು ತೆಗೆದುಕೊಂಡಿವೆ. ಇದರಿಂದ ಹಣದ ಉಬ್ಬರವು ತಗ್ಗುತ್ತಾ ಬಂದಿದೆಯಾಗಲಿ, ಆಹಾರಧಾನ್ಯಗಳ ಬೆಲೆಯು ಏರುತ್ತಲೆ ಇದೆ. ವಿದೇಶಗಳಿಂದ ಬರುವ ಕೆಲ ಅನಾವಶ್ಯಕ ಮತ್ತು ಶ್ರೀಮಂತರ ವಸ್ತುಗಳ ಬೆಲೆ ಸ್ವಲ್ಪ ಇಳಿತವಾಗಿದೆ. ಆದರೆ ಅತ್ಯಾವಶ್ಯಕ ವಸ್ತುಗಳ ಬೆಲೆಯಲ್ಲಿ ಏನೂ ಪರಿವರ್ತನೆಯಾಗಿಲ್ಲ.

ಒಂದು ನಿಶ್ಚಿತ ಆದಾಯವಿರುವ ಮನುಷ್ಯನಿಗೆ ಹೊಸ ಕರಭಾರದಿಂದ ಜೀವನದ ಖರ್ಚ ಶೇಕಡ ೧೦ ರೂ ಹೆಚ್ಚಿತೆನ್ನೋಣ. ಆತನು ಆ ಹತ್ತು ರೂಗಳ ಸಾಲ ಮಾಡಬೇಕು. ಇಲ್ಲವೇ ಆ ಹತ್ತು ರೂ. ಅಧಿಕವಾಗಿ ಸಂಪಾದನೆ ಮಾಡುವ ಮಾರ್ಗಗಳನ್ನು ಹುಡುಕಬೇಕು. ಖಾಸಗಿ ಉದ್ಯೋಗಗಳಲ್ಲಿರುವವರು ಉತ್ಪನ್ನದ ಸಂಬಂಧಿ ಮಾರ್ಗಗಳನ್ನು ಹುಡುಕಲೇ ಬೇಕಾಗುತ್ತದೆ. ಇಲ್ಲವೇ ಅವರ ಸಾಲವಂದಿಗರಾಗುತ್ತಾರೆ. ಸರಕಾರೀ ನೌಕರರಿಗೆ ಸಾಲ ದೊರಕುವದಿಲ್ಲವಾದ ಕಾರಣ ಅವರು ಉತ್ಪತ್ತಿಮಾರ್ಗವಿಲ್ಲದೂ ಇಲ್ಲದು. ಈ ಕಾರಣ ಸರಕಾರವೇ ನಂತರ ತಮ್ಮ ನೌಕರರನ್ನು ದುರ್ಮಾರ್ಗಕ್ಕೆ ಹಚ್ಚಿದಂತಾಗುತ್ತದೆ. ಅಲ್ಲದೆ ಸರಕಾರದ ಲಂಚ ನಿರ್ಮೂಲನ ಪದ್ಧತಿಗಳಿಗೆ ಯಶಸ್ಸು ಸಿಗಲಾರದು. ಈ ಕರ ವಸೂಲಿಗಾಗಿ ಹೊಸ ಹೊಸ ಇಲಾಖೆ ಅಧಿಕ ನೌಕರರ ನಿಯುಕ್ತಿ ಆಗಬೇಕಲ್ಲವೇ? ಅವರೂ ಮನುಷ್ಯರು ತಪ್ಪಿಸಿಕೊಳ್ಳುವವರಿಗೆ ಸಹಾಯ ಮಾಡುವವರೆಷ್ಟೋ ಜನ ಸರಕಾರದಲ್ಲೇ ಸಿಗುತ್ತಾರೆ.

ಮಧ್ಯಮ ವರ್ಗದ ಕನಿಷ್ಠ ಕರಗತಿಯು ಮೊದಲೆ ವೃಥಾ ಸಂಕಟಗಳನ್ನನುಭವಿಸುವ ಕಾಲಬಂತು. ಇದರಿಂದ ಕ್ರಾಂತಿಯುಗದ ಎಣ್ಣೆ ಹಾಕಿದಂತಾಗುವದು. ಸರಕಾರದವರು ಅನಾವಶ್ಯಕವಾದ ಡಿಪಾರ್ಟಮೆಂಟುಗಳನ್ನೂ, ಅನಾವಶ್ಯಕ ಹೆಚ್ಚಿನ ಸಂಬಳದ ನೌಕರರನ್ನೂ 'ರದ್ದು' ಮಾಡಿದ್ದರೆ ಎಷ್ಟೋ ಹಣ ಉಳಿಯುತ್ತಿತ್ತು. ಇದರಿಂದ ಅಶಾಂತಿ ಹೆಚ್ಚುವುದೆಂದು ನಮ್ಮ ಭಯ

—(೦)—

ಗಾಂಧಿ ನೆಹರು ಭಾವಚಿತ್ರ ಅನಾವರಣ

ಬಳ್ಳಾರಿ ತಾಲೂಕ, ಕಜೇರಿಯಲ್ಲಿ ಗ್ರಹರಕ್ಷಕ ದಳದವರಿಂದ ಪಾರಿತೋಷಕ ರೂಪವಾಗಿ ಕೊಡಲ್ಪಟ್ಟ ಗಾಂಧೀಜಿ ಭಾವಚಿತ್ರವನ್ನು ಶ್ರೀ ಸುಬ್ರಹ್ಮಣ್ಯಂರವರೂ, ನೆಹರೂರವರ ಭಾವಚಿತ್ರವನ್ನು ಜಿಲ್ಲಾ ಕಲೆಕ್ಟರ ಎ. ಅಲಾಉದ್ದೀನ್‌ರವರೂ ೧ನೇ ದಿನಾಂಕ ಅನಾವರಣ ಮಾಡುತ್ತಾ ನಾಯಕರ ಗುಣಗಾನ ಮಾಡಿದರು. ಶ್ರೀ ಡಿ. ಎ. ಚಾರಿಯವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಡಿ. ಯಲ್. ಗಂಗಾಧರನ್‌ರವರು ವಂದನಾರ್ಪಣೆ ಮಾಡಿದರು.

—

ಅರಳೆ ವ್ಯಾಪಾರಿಗಳು

ಅರಳೆ ವ್ಯಾಪಾರಿಗಳು ತಮ್ಮಲ್ಲಿರುವ ಅರಳೆಯ … ಸಂಬಂಧಿಸಿದ ಜಿಲ್ಲಾ ಕಲೆಕ್ಟರರಿಗೆ … ಬೇಕು. ದಕ್ಷಿಣ ಭಾರತ … ಸಂಘದವರ … ಗಳಿಗೆ … ಬೇಡಿಕೆಗಳನ್ನು ಬರೆದು ಕೇಳಬೇಕ … ನಂತರ ಪೂರ್ವಕ ವ್ಯವಸ್ಥೆಯಾಗುವುದು. ಇನ್ನು ಸ್ವಲ್ಪ ಅರಳೆ ವ್ಯಾಪಾರಿಗಳಿಗೂ ಕಷ್ಟಬಂದಿತು. ಒಟ್ಟಿನಲ್ಲಿ ಈ ಕಾಯ್ದೆಯಿಂದ ಅರಳೆಯ ವ್ಯಾಪಾರವು ತಗ್ಗಬಹುದು.

—

ಮದ್ರಾಸ್ ಪ್ರಾಂತದಲ್ಲಿ ಹರಿಜನಾಭಿವೃದ್ಧಿ ಶಾಖೆ

ಮದರಾಸ್ ಸರಕಾರದವರು ಹರಿಜನಾಭಿವೃದ್ಧಿ ಶಾಖೆಯನ್ನು ಬೇರ್ಪಡಿಸಿ ನಿವೃತ್ತ ನ್ಯಾಯಾಧೀಶರಾದ ಶ್ರೀ ಪರ್ವತಾಸ್ಯಂ ಅಯ್ಯಂಗಾರರನ್ನು ಪ್ರಾಂತದ ಪ್ರಮುಖರನ್ನಾಗಿ ನಿಯುಕ್ತಿ ಮಾಡಿದರವರು.

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಬಾಮ್
ದಂತಮಣಿ
ತಲೆನೋವು, ಹಲ್ಲುನೋವು, ಮೈಕೈನೋವು,
ಕೆಮ್ಮು, ನೆಗಡಿ ಜ್ವರ, ಮುಂತಾದುದಕ್ಕೆ
ಪ್ರಕಾಶ ದಾಸವಾಣಿ …

ದೆಹಲಿ ಮಹಾನಗರ

ಡೆಲ್ಲಿ ಮಹಾನಗರದ ವಿವಿಧ ಭಾಗಗಳನ್ನು ಕೂಡಿಸಲು ೩೯ ಮೈಲಿ ಹೊರಭಾಗದ ರೈಲು, ಎರಡೂವರೇ ಮೈಲಿ ಭೂಗತ ರೈಲು ಹಾಕಲು ೧೦ ಕೋಟಿ ರೂ ಅಂದಾಜು ಮಾಡಲಾಗಿದೆಯೆಂದು ಕೇಂದ್ರಮಂತ್ರಿ ಗಾಡ್ಗೀಳರವರು ಪಾರ್ಲಿಮೆಂಟದಲ್ಲಿ ಹೇಳಿದರು

—

ಬಳ್ಳಾರಿ ಜಿಲ್ಲಾ ಅಧಿಕಾರಿಗಳು ಕಾಂಗ್ರೆಸ್ ಅಧಿಕಾರಿಗಳು ಇತ್ತ ನೋಡುವಿರಾ?

೧ ರೈತರ ಸುಲಿಗೆ
೨ ಕೊಳೆತ ನಾರುವ ಧಾನ್ಯಗಳ ಸೀದಾ.

ಗೌರವನೀಯ ಮಹಾಶಯರೇ,

ಹಡಗಲಿ ತಾಲೂಕು ಸೀಗನಹಳ್ಳಿ ಗ್ರಾಮದ ಭೂಮಿದಾರ ಪಡೆದ ರೈತರಿಂದ ನೂರಕ್ಕೆ (ಶೇಕಡಾ) ಒಂದು ರೂಪಾಯಿಯಂತೆ ಒಸರಕೋಡು ಗ್ರಾಮದಲ್ಲಿ ಎಕರೆ ಒಂದಕ್ಕೆ ಎರಡು ರೂಪಾಯಿಯಂತೆ ವಸೂಲಿ ಮಾಡುತ್ತಿರುವದು ತಿಳಿದು ಬಂದಿದೆ. ಇತರ ಗ್ರಾಮಗಳಲ್ಲಿ ನಮೂನೆ ಇದೆ. ಸರಕಾರ ಖಜಾನೆಯಲ್ಲ … ಜನತೆಗೆ ಬಹಳ ಕಷ್ಟವಿದೆ. ಪ್ರಾ. ಗಾಂಧಿ ಭಕ್ತರು, ದೇಶಸೇವಾ … ಹೆಸರು ಪಡೆದವರು, ಈ … ಸುಲಿಗೆಗಳನ್ನಾದರೂ … ದೋಷಿಗಳನ್ನು ದಂಡಿಸಬಾರದೇನೋ.

ನಮ್ಮ ಭಾಗದಲ್ಲಿ … ನಾರುವ ಹುಳ ಹಿಪ್ಪಿ ತೊಟಿಗಳಿದ ಆಹಾರ ಧಾನ್ಯ ಸೀದಾ ಅಂಗಡಿಗಳಲ್ಲಿ ಮಾರಲ್ಪಡುತ್ತವೆ. ಆ ಧಾನ್ಯಗಳು ಸರಕಾರ ರೂಪಾಯಿ ಒಂದಕ್ಕೆ ಒಂದು ಸೇರು …, ರೂಪಾಯಿ ಒಂದಕ್ಕೆ ಎರಡು ಸೇರು ಕೊಟ್ಟು ಸಹಾ ದಾನಮಾಡ … ಇಂಥಾ ನಿಕೃಷ್ಟ ದಾರುಣ … ಸ್ಥಿತಿಯನ್ನು ತಪ್ಪಿಸಲಾರದೇನೋ?

ತಿ. ವೆ. ದೇಸಾಯಿ.

—— ಕಮಲಾಪುರ ಆಸ್ಪತ್ರೆ … ದಿನದಲ್ಲಿ ಗವರ್ನರ್ ಜನರಲ್ ರಾಜಾಜಿಯವರು ಬೇಗಂ … ದ ಪ್ರಾರಂಭೋತ್ಸವವನ್ನು ನೆರವೇರಿಸಿದರು.

64

ದೇವಸ್ಥಾನ ಧಾರ್ಮಿಕ ಸಂಸ್ಥೆಗಳ ದುರುಪಯೋಗ

ಸರ್ಕಾರದ ಪ್ರಕಟನೆ.

ಈ ಪ್ರಾಂತ ದ್ದಿರುವ ಹಿಂದೂ ದೇವಾಲಯ ಹಾಗೂ ಧಾರ್ಮಿಕ ಸಂಸ್ಥೆಗಳ ಹಣವು ನಾನಾ ರೀತಿಯಿಂದ ದುರುಪಯೋಗವಾಗುತ್ತಿದೆ. 65 ದೇವಾಲಯಗಳು ಇಂತಹ ಅಪವಾದಗಳಿಗೆ ತುತ್ತಾಗಿವೆ. ಟ್ರಸ್ಟಿಗಳು ಟ್ರಸ್ಟ್ ನಿಧಿಗಳನ್ನು ದುರುಪಯೋಗಪಡಿಸಿದುದು, ದೇವಾಲಯದ ಆಸ್ತಿಯನ್ನು ಅತಿ ಕಡಿಮೆ ಗೇಣಿಗೆ ಕೊಟ್ಟು ದೇವಾಲಯಕ್ಕೆ ನಷ್ಟವನ್ನುಂಟುಮಾಡಿದುದು, ಟ್ರಸ್ಟಿಗಳು ದೇವಾಲಯದ ಆಸ್ತಿಯನ್ನು ಸ್ವಂತಕ್ಕೆಂದು ಉಪಯೋಗಿಸಿದುದು, ಪ್ರತಿನಿಧಿಗಳು ಮರಕ್ಕೆಂದು ಪ್ರೋನೋಟುಗಳ ಮೇಲೆ ಸಾಲಪಡೆದದು, ಟ್ರಸ್ಟಿಗಳು ದೇವಾಲಯದ ಆಭರಣ ಅಡವಿಟ್ಟದುದು, ಅಥವಾ ವಿಕ್ರಯಿಸಿದುದು, ಬೊಕ್ಕಸಕ್ಕೆ ತರಬೇಕಾದ ಹಣವನ್ನು ಪಾವತಿಮಾಡದುದರಿಂದ ರೆವಿನ್ಯೂ ಅಧಿಕಾರಿಗಳು ದೇವಾಲಯಗಳ ಸ್ಥಿರಾಸ್ತಿಗಳನ್ನು ವಿಕ್ರಯಿಸಿದುದು ಇತ್ಯಾದಿ ನಿದರ್ಶನಗಳಿವೆ ಇವರಲ್ಲಿ ಅಡಕವಾದ ಮೊಬಲಗುಗಳು ಸುಮಾರು 200 ರಿಂದ 1,75,000 ರೂಪಾಯಿಗಳಷ್ಟಿವೆ.

ಟ್ರಸ್ಟ್ ನಿಧಿಗಳನ್ನು ದುರುಪಯೋಗಪಡಿಸಿದುದು

ವಿಶಾಖ ಪಟ್ಟಣ

1) ಶ್ರೀ ವೆಂಕಟೇಶ್ವರಸ್ವಾಮಿ ದೇವಾಲಯ, ಬೈರಾಗಿಪೇಟೆ, ಚಿಕಾಕೋಲ್.

2) ಶ್ರೀ ಲಕ್ಷ್ಮೀನಾರಾಯಣಸ್ವಾಮಿ ಮಠ ಸರಿಯಪಳ್ಳಿ, ಸೋಂಪೇಟೆ,

3) ಶ್ರೀ ಉಮಾರಾಮೇಶ್ವರ ಸ್ವಾಮಿ ದೇವಾಲಯ, ಬೆಂಕಿಲಿ, ಸೋಂಪೇಟೆ,

4) ಶ್ರೀ ಕೋದಂಡರಾಮಸ್ವಾಮಿ ದೇವಾಲಯ, ಚಿಕಾಕೋಲ್.

5) ಶ್ರೀ ಸೂರ್ಯನಾರಾಯಣಸ್ವಾಮಿ ದೇವಾಲಯ, ಅರಸವಿಳ್ಳಿ, ಚಿಕಾಕೋಲ್

6) ಶ್ರೀ ರಘುನಾಥಸ್ವಾಮಿ ದೇವಾಲಯ, ಬೆಸಿ ರಾಮಚಂದ್ರಪುರಂ, ಸೋಂಪೇಟೆ.

7) ಶ್ರೀ ರಾಧಾಕಾಂತಸ್ವಾಮಿ ಮಠ ಜಲಂದ್ರಪೇಟೆ, ಸೋಂಪೇಟೆ.

8) ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ, ಪನಸಲವಲಸ, ಪಾಲಕೊಂಡ.

9) ಶ್ರೀ ಗೋಕರಣ ಮಠ, ಪಾಲಕೊಂಡ.

10) ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯ, ಸುಬ್ರಮಣ್ಯಪುರ, ಚಿಕಾಕೋಲ್

11) ಶ್ರೀ ಜಗನ್ನಾಥಸ್ವಾಮಿ, ದೇವಾಲಯ, ಪಾಲಕೊಂಡ,

12) ಶ್ರೀ ವರದಸ್ವಾಮಿ ದೇವಾಲಯ, ರಾಜಯ್ಯಪೇಟ, ಪಾಲಕೊಂಡ.

13) ಶ್ರೀ ಚೈತನ್ಯ ನಿತ್ಯಾನಂದಸ್ವಾಮಿ. ಮಠ, ಪೂರ್ಣಪಸನಂ, ಸೋಂಪೇಟೆ.

ಪೂರ್ವ ಗೋದಾವರಿ

14) ಶ್ರೀ ವೀರವೆಂಕಟ ಸತ್ಯನಾರಾಯಣ ಸ್ವಾಮಿ ದೇವಾಲಯ ಅನ್ನಾವರಂ,

15) ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ, ಅಂತರ್ವೇದಿ.

ಪಶ್ಚಿಮ ಗೋದಾವರಿ

16) ಶ್ರೀ ಕೇಶವಸ್ವಾಮಿ ಮತ್ತು ಮಹಲಕ್ಷ್ಮಿ ದೇವಾಲಯಗಳು, ತನಕು,

ಕೃಷ್ಣ

17) ಶ್ರೀ ವೆಂಕಣ್ಣ ಪಂಟಲು ದೇವಾಲಯ, ಗುಡಿವಾಡ, ಬಂದರ ತಾಲೂಕು.

18) ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಸಿಂಗರಾಯಪಾಲ್ಯಂ.

ಗುಂಟೂರು

19) ಶ್ರೀ ವೇಣುಗೋಪಾಲಸ್ವಾಮಿ ದೇವಾಲಯ, ನಲ್ಲಪಡ.

ಚಿತ್ತೂರು

20) ಶ್ರೀ ಹಥಿರಾಂಜಿ ಮಠ, ತಿರುಪತಿ,

ಬಳ್ಳಾರಿ

21) ಶ್ರೀ ಚೈತನ್ಯಸ್ವಾಮಿ ಮಠ, ಗೌರಿಪುರ

22) ಶ್ರೀ ವೀರಗಪ್ಪ ಮಠ ಬ್ರೂಸುಪೇಟೆ

ಅನಂತಪುರ

23) ಶ್ರೀ ರಾಮಸ್ವಾಮಿ ಮತ್ತು ನರಸಿಂಹಸ್ವಾಮಿ ದೇವಾಲಯಗಳು, ಗೂಟಿ.

ಕರ್ನೂಲ

24) ಶ್ರೀ ಬುಗ್ಗ ರಾಮಸ್ವಾಮಿ ದೇವಾಲಯ, ಕಾಲ್ವ.

ಚೆಂಗಲ್ಪಟ್

25) ಶ್ರೀ ದೇಶಾಂತ್ರಿ ಕಟ್ಟಳೈ [ಪಟಬಾಡಿ] ನರಸಿಂಹಸ್ವಾಮಿ ದೇವಾಲಯ ಸಿಂಗಪೆರುಮಾಳ್ ಕೋಯಿಲ್ ಸೇರಿದುದು.

26) ಶ್ರೀ ಬ್ರಹ್ಮೋತ್ಸವಂ ಕಟ್ಟಳೈ (ಶ್ರೀ ಏಕಾಂಬರೇಶ್ವರರ್ ದೇವಾಲಯ ಕಾಂಚಿಪುರ ಇದಕ್ಕೆ ಸೇರಿದುದು).

27) ಶ್ರೀ ವರದರಾಜಪೆರುಮಾಳ್ ದೇವಾಲಯ, ಚಿನ್ನಾಪೇಟೆ,

ದಕ್ಷಿಣ ಆರ್ಕಾಟು

28) ಶ್ರೀ ತಿರುಮಲಸ್ವಾಮಿ ದೇವಾಲಯ ಕರ್ಮಂಗಡಿ.

29) ಶ್ರೀ ವರದರಾಜಪೆರುಮಾಳ್ ದೇವಾಲಯ, ಕರ್ಮಂಗಡಿ.

ಮದ್ರಾಸ್ ನಗರ

30 ಶ್ರೀ ಪಾರ್ಥಸಾರಥಿ ದೇವಾಲಯ ಟ್ರಿಪ್ಲಿಕೇನ್,

ತಂಜಾವೂರು

31) ಶ್ರೀ ಪ್ರಾಕಾಶ ಕಟ್ಟಳೈ (ಮಾರ್ಗಸಹಾಯಸ್ವಾಮಿ ದೇವಾಲಯ, ಮೂವಲೂರು, ಇದಕ್ಕೆ ಸೇರಿದುದು.

32) ಶ್ರೀ ಸ್ವರ್ಗಪುರಂ ಮಠ,

33) ಶ್ರೀ ಸುಬ್ರಮಣ್ಯಸ್ವಾಮಿ. ದೇವಾಲಯ ಎಣ್ಣ್‌ಗನ್

34) ಶ್ರೀ ತಿರುವಾಡುದುರೈ ಮಠ, ತಿರುವಾಡುದುರೈ.

35) ಶ್ರೀ ಧರ್ಮಪುರಂ ಮಠ,

36) ಶ್ರೀ ರತ್ನಗಿರೀಶ್ವರ್ ದೇವಾಲಯ ತಿರುಮರುಗಲ್, ನನ್ನಿಲಂ,

37) ಶ್ರೀ ಭಾಸ್ಕರೇಶ್ವರಸ್ವಾಮಿ ದೇವಾಲಯ; ಪರತಿಯಪ್ಪರ್ ಕೋಯಿಲ್.

38) ಶ್ರೀ ಕೈಲಾಸನಾಥಸ್ವಾಮಿ ದೇವಾಲಯ, ನಿಮಿಯಮ ಹಾದೇವಿ ನಾಗಪಟ್ಟಣ.

39) ಶ್ರೀ ನವನೀತೇಶ್ವರರ್ ದೇವಾಲಯ ಸಿಕ್ಕಿಲ್,

40 ಶ್ರೀ ಅನುರಾವಿ ಪೆರುಮಾಳ್ ದೇವಾಲಯ, ಟಿರಸುಂಡರು,

41 ಶ್ರೀ ಪಸುಪತೀಶ್ವರರ್ ದೇವಾಲಯ, ಪಂಡನಲ್ಲೂರು,

42 ಶ್ರೀ ಸೂರ್ಯನಾರ್ ಕೋಯಿಲ್ ಮಠ.

43 ಶ್ರೀ ಪರಹೂರ್ ದೇವಾಲಯಗಳು,

44 ಶ್ರೀ ವೇದಾರಣ್ಯೇಶ್ವರರ್ ದೇವಾಲಯ

ಮಧುರ

45 ಶ್ರೀ ಮೂಂಗಿಲಾನಿ ಕಾಮಾಕ್ಷಿಯಮ್ಮನ್ ದೇವಾಲಯ, ದೇವದಾನ ಪಟ್ಟಿ.

46 ಶ್ರೀ ಗೋಪಿನಾಥಸ್ವಾಮಿ ದೇವಾಲಯ, ಕಮಾಕ್ಷಿಪುರಂ.

47) ಶ್ರೀ ಪುಟ್ಟಜಾತ್ರೆ ಕಟ್ಟಳೈ [ಶ್ರೀ ಮಧುರ ದೇವಸ್ಥಾನಗಳಿಗೆ ಸೇರಿದುದು].

ತಿರುನಲ್ವೇಲಿ

48) ಶ್ರೀ ವೃಷಸ್ಥಾನನಾಥಸ್ವಾಮಿ ದೇವಾಲಯ, ದಾರಕಾಪುರಂ.

49) ಶ್ರೀ ಕೈಲಾಸನಾಥರ್ ದೇವಾಲಯ, ಪಸುವಂಧನೈ. ಕೋವಿಲ್ಪಟ್ಟಿ.

50) ಕಟ್ಟಳೈ (ಶ್ರೀ ಮನೋನ್ಮಣೀಶ್ವರರ್ ದೇವಾಲಯಕ್ಕೆ ಸೇರಿದುದು) ವಿಜಯನಾರಾಯಣಂ, ನಂಗುನೇರಿ.

51) ತಿರುಪ್ಪನಿ ಕಟ್ಟಳೈ (ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯಕ್ಕೆ ಸೇರಿದುದು), ವಳ್ಳಿಯೂರ್,

52) ಶ್ರೀ ಕಲುಗಾಚಲಪತಿ ದೇವಾಲಯ ಕಲುಗುಮಲೈ

ಕೊಯಂಬತ್ತೂರು

53) ಶ್ರೀ ಗುರುಸ್ವಾಮಿ ದೇವಾಲಯ, ಪುದುಪಾಲಯಂ. ಭವಾನಿ,

54) ಶ್ರೀ ಮಾರಿಯಮ್ಮನ್ ದೇವಾಲಯ ಕವಲೂರ್,

ಉತ್ತರ ಆರ್ಕಾಟ್

55) ಆರ್ನಿ ಜಹಗೀರ್ದಾರರ ಅಧಿಕಾರದಲ್ಲಿರುವ ದೇವಾಲಯಗಳು.

ಮಲಬಾರು

56) ಶ್ರೀ ಕಾಚನ್‌ಕುರಿಚಿ ದೇವಾಲಯ ಪಾಲ್ಘಾಟ್,

57) ಶ್ರೀ ಕೃಷ್ಣ ದೇವಾಲಯ, ಗುರುವಾಯೂರ್,

(7ನೇ ಪುಟವನ್ನು ನೋಡಿರಿ)

ಸಿನೆಮಾದಲ್ಲಿ ಶಿಶುಹತ್ಯೆ

—)o —

ಸಿನೆಮಾ ತಯಾರಿಸುವಸ್ಟುಡಿಯೋ ಅಥವಾ ಚಿತ್ರಾಲಯುಗಳಲ್ಲಿ ನಡೆದ ಕೆಲ ಅಂಶಗಳು ಚಿತ್ರ ಪರಿಪೂರ್ಣವಾಗಿ ಪರದೆಯ ಮೇಲೆ ಬಿದ್ದಾಗ ಅದರಲ್ಲಿ ಕಾಣಿಸುವದಿಲ್ಲ. ಆ ಅಂಶಗಳು ನಡೆಯುವದು ಪರದೆಯ ಮರೆಯಲ್ಲಿ ಎಂಬುದನ್ನು "ಫಿಲ್ಮಿಂಡಿಯ"ದ ಸಂಪಾದಕರು ಬಯಲಿಗೆಳೆದಿದ್ದಾರೆ.

ನಿರ್ಮಾಪಕರು ಬಂಡವಾಲಸ್ಥರು. ತಮಗೆ ಬೇಕಾದವರನ್ನು ಬೇಕಾದಷ್ಟು ಸಂಬಳ ಕೊಟ್ಟು ಬೇಕಾದ ಕೆಲಸಕ್ಕೆ ಇಟ್ಟುಕೊಳ್ಳಬಲ್ಲರು. ಆದುದರಿಂದ ಎಂಥಶ್ರೇಷ್ಠ ನಟನಟಿಯರಿದ್ದರೂ ಅವರು ಅವರಿಗೆ ಅನಿವಾರ್ಯರಲ್ಲ. ಹೀಗಿರುವಾಗ ಚಿಲ್ಲರೆಯವರ ಮಾತೇನ್ನಿರದು! "ಎತ್ತುಗಳು ಸತ್ತರೆ ಬೇರೆಯವನ್ನು ಕೊಳ್ಳುವೆ. ಗಾಡಿ ಹಾಳಾದರೆ ಬೇರೆಯದನ್ನು ಮಾಡಿಸುತ್ತೇನೆ. ನೀನು ಸತ್ತರೆ ನಿಮಪ್ಪ ಒರುತ್ತಾನೆ ಸಂಬಳ ಕೊಟ್ಟರೆ" ಎಂದು ತನ್ನ ಗಾಡಿಯವನಿಗೆ ಗಾಡಿಯನ್ನು ಗೊಡೆಯಮೇಲೆ ಹಾಯಿಸೆಂದು ಆಜ್ಞಾಪಿಸಿದ ಶ್ರೀಮಂತನ ದರ್ಪ ಕೆಲವು ನಿರ್ಮಾಪಕರಿಗಿರುತ್ತದೆ. ಆದುದರಿಂದಲೇ ಅವರು ಕಥಾಸಂದರ್ಭದಲ್ಲಿ ಶಿಶು ಬೇಕೆನಿಸಿದರೆ ಆಚೀಚಿನ ಕೂಲಿಕುಂಬಳಿಯ ಹೆಂಗಸರಿಗೆ ೫-೧೦ ರೂಪಾಯಿಗಳನ್ನಿತ್ತು ಅವರ ಕಂದನನ್ನು ತಂದು ಚಿತ್ರನಿರ್ಮಿತಿಕೆ ಬಳಸಿಕೊಳ್ಳುತ್ತಾರೆ. ಹಾಗೆ ಬಳಸಿಕೊಳ್ಳುವಾಗ ಮಾತ್ರ ಕೇವ್ರೋಪೂರ್ವಭವ ಪ್ರಶಂಸೆಗೆ ಕೃತಯುಗದಲ್ಲಿ ಪಾತ್ರರಾಗಿದ್ದ ಲಿಂಗಕ್ಕೆ ಸೇರಿದ ನಟಿಯರ ಮತ್ತು ಇತರರ ಅಜಾಗ್ರತೆಯಿಂದ ಅದಕ್ಕೆ ಏಷ್ಟೋವೇಳೆ ಮರಣಾಂತಿಕ ಅಪಘಾತಗಳು ಸಂಭವಿಸುತ್ತವೆ. ಆಗ ಡಾಕ್ಟರಿಂದ ಅದು ಸ್ವಾಭಾವಿಕ ಮರಣವೆಂದು ಹೇಳಿಕೆಯನ್ನು ಬರೆಸಿಕೊಂಡು ಅವುಗಳ ತಾಯ್ತಂದೆಯರಿಗೆ ಅಲ್ಪ ಸ್ವಲ್ಪ ಕಾಸು ಕೊಟ್ಟು ಕಳಿಸಿಬಿಟ್ಟರೆ ಕೆಲಸ ಮುಗಿಯಿತು. ಇಂಥ ಸಂಗತಿಗಳು ಗುಪ್ತವಾಗಿ ಪ್ರತಿನಿತ್ಯವೂ ಒಂದಲ್ಲ ಒಂದು ಕಡೆ ನಡೆಯುತ್ತಿದೆ ಎಂಬುದು ಚಿತ್ತವನ್ನು ನಿರ್ವೃತಿಗಾಗಿ ಹೋಗುವ ಸಿನೆಮಾ ಪ್ರೇಕ್ಷಕರಿಗೇನು ಗೊತ್ತು? ಈ ಮಕ್ಕಳನ್ನು ಹೆತ್ತ ಹೊಟ್ಟೆಗಳ ದನಿ ಶೀಘ್ರ ಕ್ಷೀಣವಾದದ್ದರಿಂದ ಅದು ನ್ಯಾಯಾಲಯ, ಸರಕಾರ ಮತ್ತು ಜನತೆಯ ಕಿವಿಗಳಿಗೆ ಮುಟ್ಟುವದು ಅಸಾಧ್ಯ.

ಆದರೆ ಈ ಶಿಶುಗಳ ಸಾವು ಯಾವಾಗಲೂ ಆಕಸ್ಮಿಕವೆಂಬುದಾದರೂ ನಿಜವೇ? ನಿಜವಾಗುವದು. ಅದಕ್ಕೆ ಸಾಮಾನ್ಯ ಕಾರಣಗಳು ಕೆಳಗಿನೆ.

೧) ಬಡವಾದ ಕಾಹಿಲೆಯುಳ್ಳ ಮತ್ತು ಅಪುಷ್ಟ ಮಕ್ಕಳನ್ನೇ ಹೆಚ್ಚು ಪಕ್ಷ (ಸುಲಭಸಾಧ್ಯವೆಂದು) ತರುವುದರಿಂದ ಅವಕ್ಕೆ ಸಿನೆಮಾ ಕೆಲಸದ ಶ್ರಮವನ್ನು ಸಹಿಸಲು ಸಾಧ್ಯವಾಗುವುದಿಲ್ಲ.

೨) ದುರ್ಬಲವಾದ ಮಕ್ಕಳಿಗೆ ಚಿತ್ರಗ್ರಹಣಕ್ಕೆ ಉಪಯೋಗಿಸುವ ಪ್ರಖರವಾದ ವಿದ್ಯುದ್ದೀಪಗಳ (ಸುಮಾರು ೧೦ ೦೦೦ ಕ್ಯಾಂಡಲ್ ಪವರಿನ) ಪ್ರಭೆಯನ್ನು ತಡೆದುಕೊಳ್ಳಲು ಅಶಕ್ಯವಾಗುತ್ತದೆ.

೩) ಅಳುವ ಮಕ್ಕಳು ಸಿನೆಮಾದ ಮಾತುಕತೆಗಳಿಗೆ ವಿಘ್ನಕಾರಿಗಳೆನಿಸುವುದರಿಂದ ಅವನ್ನು ಗ್ರಾಹವನ್ನಾಗಿ ಮಾಡಲು ಬಡತಾಯಂದಿರು ಅವಕ್ಕೆ ಚೆನ್ನಾಗಿ ಅಫೀಮು ತಿನ್ನಿಸಿ ಬಿಡುತ್ತಾರೆ. ಇದರಿಂದ ಎಷ್ಟೋವೇಳೆ ಅವು ದೀರ್ಘನಿದ್ರೆ ಹಿಡಿಯುತ್ತವೆ. ಬಡತನದ ಹೆಂಡತಿ ಅಜ್ಞಾನವೆಂದ ಮೇಲೆ ಅವು ಒಂದನ್ನೊಂದು ಬಿಟ್ಟಿರಬಲ್ಲವೇ?

೪) ಕೈಯಿಂದ ಕೈಗೆ ಯುದ್ಧಾತದ್ದಾ ಎತ್ತಿ, ಇಳಿಸಿ ಮಾಡುವುದರಿಂದ ಸಂಜೆಯೊಳಗೆ ಮಕ್ಕಳು ದಣಿದು ಬಾಡಿ ಬಸವಳಿದು ಹೋಗುತ್ತವೆ.

೫) ಯಾವಾಗಲು ಮಕ್ಕಳಿಗೆ ಒಳ್ಳೆಯ ಗಾಳಿ ಬೇಕಾಗುವದು. ಆದರೆ ಚಿತ್ರಾಲಯಗಳಲ್ಲೆಲ್ಲ ಸಾಮಾನ್ಯವಾಗಿ ವಾಯುವಿಗೆ ದಿಗ್ಬಂಧನ ಹಾಕಿರುತ್ತವೆ. ಆದುದರಿಂದ ಅಲ್ಲಿಯ ಕೆಟ್ಟ ವಾತಾವರಣ ಮಕ್ಕಳನ್ನು ಅನಾರೋಗ್ಯಕ್ಕೆ ಗುರಿಪಡಿಸುವದು.

೬) ಮಕ್ಕಳ ಆರೋಗ್ಯ ನಿರೀಕ್ಷಣೆಗಾಗಿ ಯಾವ ಚಿತ್ರಾಲಯದಲ್ಲಿಯೂ ಡಾಕ್ಟರು ಅಥವಾ ನರ್ಸಮ್ಮಂದಿರನ್ನು ಇಟ್ಟಿರುವುದಿಲ್ಲ. ಬಡವರಿಗೆ ವಿಧಿಯೇ ವರ್ಗವನ್ನು, ಯಮನೇ ವೈದ್ಯರಾಜ. ಈ ಬಗ್ಗೆ ಸಿನೆಮಾ ನಿರ್ಮಾತೃಗಳು ಸಂಪೂರ್ಣ ಅಲಕ್ಷ್ಯ ಮಾಡುತ್ತಾರೆ.

ಮೇಲಿನ ಕಾರಣಗಳನ್ನು ನಿವಾರಿಸುವುದು ಅಸಾಧ್ಯವಲ್ಲ. ಹಾಗೆ ನಿರ್ಮಾತೃಗಳಿಂದ ಪರಿಹಾರ ಮಾಡಿಸಲು ಸರಕಾರ ಸೊಂಟಕಟ್ಟಿ ನಿಲ್ಲಬೇಕು. ಏಕೆಂದರೆ, ಕವಿತೆಯೊಂದರಲ್ಲಿ

ಕೋಳಿಯ ಕೊಯ್ದರೆ ಕೇಳುವರುಂಟು,
ಕುರಿಯನು ಕಡಿದರೆ ಕೇಳುವರುಂಟು.
ಗುಬ್ಬಿ ಮಾನವನ ಕೊಯ್ದರು ಕೊಂದರು
ಕಡಿದರು ಏನು?

ಎಂದು ಯುದ್ಧವನ್ನು ವಿಡಂಬಿಸಿದಂತೆ ಈ ಶಿಶುಹತ್ಯಾಕಾಂಡವು ಯಾವ ಪ್ರಾಣಿದಯಾ ಸಂಘಕ್ಕೂ ಅಹಿಂಸಾವ್ರತಿಗಳಿಗೂ ಲಕ್ಷ್ಯಕ್ಕೆ ಬೀಳಿಲ್ಲ. ಬಂದರೂ ನಿಲ್ಲಿಸುವುದು ದುಃಸಾಧ್ಯ.

(ಕರ್ಮವೀರದಿಂದ)

ಕುಡುಕತನಕ್ಕೊಂದು ರಾಮಬಾಣ!

ಕುಡಿಯುವ ಚಟವನ್ನು ಬಿಟ್ಟುಕೊಡಲಾರದೆ ತೊಳಲುವವರು ಅನೇಕರಿದ್ದಾರೆ. ಕುಡುಕತನ ಕೆಡುಕೆಂದು ಅವರಿಗೆ ಗೊತ್ತಿರುತ್ತದೆ. ಆದರೆ ಆ ಹೊತ್ತು ಬಂದಾಗ ಅವರ ಬುದ್ಧಿ ಸ್ವಾಧೀನದಲ್ಲಿ ಉಳಿಯುವದಿಲ್ಲ. ಗಡಂಗಿನ ಸೆಳೆತ ದುರ್ನಿವಾರವಾಗುತ್ತದೆ. ಅಂಥವರಿಗೆ ಕೊಪೆನ್ ಹೇಗನ (ಡೆನ್‌ಮಾರ್ಕ) ಡಾಕ್ಟರರೊಬ್ಬರ ಹೊಸ ಶೋಧ ಬಹಳ ಸಹಾಯ ಮಾಡಬಹುದು.

ಅವರ ಹೆಸರು ಡಾ. ಎರಿಕ್ ಜಾಕೋಬ್ಸನ್ ಯಾವುದಾದರೊಂದು ಹೊಸ ಔಷಧವನ್ನು ತಮ್ಮ ರೋಗಿಗಳ ಮೇಲೆ ಪ್ರಯೋಗಿಸುವ ಮೊದಲು ಸ್ವಂತದ ಮೇಲೆ ಅದನ್ನು ಉಪಯೋಗಿಸಿ ನೋಡುವದು ಅವರ ರೂಢಿ. ಒಂದು ರಾತ್ರಿ ಅವರು ಒಂದು ಭೋಜನಕೂಟಕ್ಕೆ ಹೊರಡು ಮೊದಲು ಟೆಟ್ರಾಥಿಲ್ ಥ್ಯುರಮ್ ಡೈಸಲ್ಫೈಡ್ (Tetraethyl thiuramdisultide) ಎಂಬ ಔಷಧದ ಎರಡು ಗುಳಿಗೆಗಳನ್ನು ನುಂಗಿದರು. ಅದು ಹೊಟ್ಟೆ ಹುಳ(ಜಂತು)ಕ್ಕೆ ಉತ್ತಮ ಔಷಧವೆಂದು ಪ್ರತೀತಿ. ಆದರೆ ಭೋಜನ ಸಮಾರಂಭಕ್ಕೆ ಹೋಗಿ ಡಾ. ಜಾಕೋಬರು ಅನುಭವಿಸಿದ್ದೇನು! ಬೀರಿನ ಕಪ್ಪನ್ನು ಬಾಯಿಗೆ ಹಚ್ಚಿರ ಒಯ್ದರೆ ಸಾಕು, ಯಾಕೋ ಏನೋ, ಓಕರಿಕೆ ಬರುತಿತ್ತು. ಅದರ ವಾಸನೆ ಕೇಳಿದರೆ ಮುಖ ಕೆಂಪೇರಿ, ಎದೆಗುಂಡಿಗೆ ಧಕ್‌ಧಕ್ಕೆಂದು ಹಾರತೊಡಗುತಿತ್ತು. ಉಸಿರಾಡಿಸುವದು ಕೂಡ ಕಠಿನ ಹೋಗುತಿತ್ತು.

ಹಾ! ಕುಡಿಯುವ ಚಟ ಹತ್ತಿದ ರೋಗಿಗಳಿಗೆ ಇದೊಂದಿತ್ತು ಉಪಾಯ! ಆ ಚಟದಿಂದ ಮುಕ್ತರಾಗ ಬಯಸಿದ ೫೦೦ ಜನ ರೋಗಿಗಳಿಗೆ ಆ ಔಷಧವನ್ನು ಡಾ. ಜಾಕೋಬ್ಸನ್ನರು ಕಳೆದ ವರ್ಷ ಕೊಟ್ಟಿದ್ದರು. ಈ ವರ್ಷ ಅವರಲ್ಲಿ ೪೫೦ ಜನರಿಗೆ ಇನ್ನೂ ಮದ್ಯ ಕಂಡರೆ ಓಕರಿಕೆ ಬರುತಿತ್ತು. ಅವರಿಗೆ ಡಾಕ್ಟರರು ಕೊಟ್ಟಿದ್ದುದು ಕೇವಲ ಒಂದೇ ಡೋಜು ಔಷಧ. ಡಾಕ್ಟರರು ಅದಕ್ಕೆ ಅಂಟಾಬಸ್ ಅಂದರೆ ದುರಭ್ಯಾಸನಿವಾರಕ ಎಂದು ಹೆಸರಿಟ್ಟಿದ್ದಾರೆ.

ಈ ಸುದ್ದಿ ಅಮೇರಿಕೆಯ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ನಂತರ ನಡೆದ ಸಂಗತಿಗಳು ಸ್ವಾರಸ್ಯವೂ ಉದ್ಬೋಧಕವೂ ಆಗಿವೆ. ಅವು ಈ ಚಟದಿಂದ ನಿವೃತ್ತಿ ಹೊಂದ ಬಯಸುವ ಲಕ್ಷಾಂತರ ಜನರಿರುವರೆಂದು ತೋರಿಸಿಕೊಟ್ಟವು. ಏಕೆಂದರೆ ಅದು ಪ್ರಕಟವಾದ ಒಂದೇ ವಾರದೊಳಗೆ ಡಾಕ್ಟರ ಜಾಕೋಬ್ಸನ್ನರಿಗೆ ಔಷಧವನ್ನು ಕಳಿಸಲು ಲಕ್ಷಾಂತರ ಪತ್ರಗಳು ಬಂದವಂತೆ, ಕುಡುಕರು, ಅವರ ಹೆಂಡತಿ ಮಕ್ಕಳು, ಸಂಬಂಧಿಕರು ಬರೆದ ಪತ್ರಗಳಾಗಿದ್ದವು ಅವು. ಅವುಗಳಿಗೆ ಉತ್ತರ ಬರೆಬರೆದು ಡಾಕ್ಟರರ ಕಾರ್ಯದರ್ಶಿಗಳಿಗೆ ಕೈಸೋಲತೊಡಗಿತು.

ಅವರವರ ಡಾಕ್ಟರರ ಮೂಲಕವೇ ಈ ಔಷಧವನ್ನು ಪಡೆಯಬೇಕು ಹೊರತು ಪ್ರಕರಣದ ತಿಳುವಳಿಕೆಯಿಲ್ಲದೆ ಔಷಧ ಕೊಡುವದು ಸಮಂಜಸವಲ್ಲೆಂದು ಡಾ. ಜಾಕೋಬ್ಸನ್ನರ ಪತ್ರಲೇಖಕರಿಗೆ ತಿಳಿಸಿದರು.

—ಕೊಲ್ಹಾಪುರ ಸಂಸ್ಥಾನವು 1-3-49 ರಿಂದ ಮುಂಬಯಿ ಪ್ರಾಂತದಲ್ಲಿ ವಿಲೀನವಾಯಿತು. ಭೂ ಗಂದಾಯದಲ್ಲಿ ಶೇಕಡ 10 ಭಾಗ ಮಾಫಿ ಮಾಡಲಾಗಿದೆ.

ದಕ್ಷಿಣ ಹಿಂದುಸ್ಥಾನದ

ಮೂರು ದೇವಾಲಯಗಳು

ಸಮುದ್ರ ಮಟ್ಟಕ್ಕಿಂತ 1.500 ಅಡಿ ಎತ್ತರವಾದ 'ಶ್ರೀಶೈಲ' ಪರ್ವತವು ಪೂರ್ವಪಶ್ಚಿಮವಾಗಿ ಮೂರು ಅಥವಾ ನಾಲ್ಕು ಮೈಲುಗಳಷ್ಟು ವಿಸ್ತೀರ್ಣವಾಗಿದೆ, ಉತ್ತರದಿಂದ ದಕ್ಷಿಣಕ್ಕೆ ಆರು ಅಥವಾ ಏಳು ಮೈಲು ಚಾಚಿಕೊಂಡಿದೆ. ಈ ಪರ್ವತವು ಕರ್ನೂಲು ಜಿಲ್ಲೆಯ ನಂದಿಕೊಟ್ಕೂರು ತಾಲೂಕಿನ ಈಶಾನ್ಯದಿಕ್ಕಿನಲ್ಲಿದೆ. ನಲ್ಲಮಲೆ ಗುಡ್ಡಗಳ ಗೊಂಡಾರಣ್ಯದಲ್ಲಿ ಈ ಪರ್ವತವು ಎದ್ದು ಕಾಣುತ್ತಿದೆ. ಪಶ್ಚಿಮ ಉತ್ತರ ಪೂರ್ವ ದಿಕ್ಕುಗಳಲ್ಲಿ ಕೃಷ್ಣಾ ನದಿಯು ಸುತ್ತಿಕೊಂಡಿದೆ. ದಕ್ಷಿಣಕ್ಕಿರುವ ಆಳವಾದ ಕಣಿವೆಯು ಇದನ್ನು ಮಿಕ್ಕ ಅರಣ್ಯದಿಂದ ಬೇರೆಯಾಗಿಸುತ್ತಿದೆ. ಈ ಕಣಿವೆಯು ಮಾರ್ಗವಾಗಿ ಭೀಮುನಿಕೊಳವು ಹರಿಯುತ್ತಿದೆ.

ಈ ಪರ್ವತದ ಶಿಖರದಲ್ಲಿ ಸುಪ್ರಸಿದ್ಧವಾದ ಮಲ್ಲಿಕಾರ್ಜುನ ದೇವಾಲಯ ಮತ್ತು ಭ್ರಮರಾಂಬಾ ದೇವಾಲಯಗಳಿವೆ. ಈ ದೇವಾಲಯಗಳಿಗೆ 22 ಅಡಿ ಎತ್ತರವಾದ ಸುಮಾರು 600 ಅಡಿ ಉದ್ದ 500 ಅಡಿ ಅಗಲದ ಪ್ರಾಕಾರವಿದೆ.

ಗುಪ್ತರಾಜಕುಮಾರಿ ಚಂದ್ರಾವತಿಯು ಶ್ರೀಶೈಲ ಪರ್ವತದಲ್ಲಿ ಶಿವನನ್ನು ಅರ್ಜುನ ಪುಷ್ಪದ ಬಣ್ಣವಿರುವ ಮಲ್ಲಿಗೆ ಹೂವಿನಿಂದ ಪೂಜಿಸಿದುದರಿಂದ ಇಲ್ಲಿ ಶಿವನಿಗೆ ಮಲ್ಲಿಕಾರ್ಜುನ ಎಂಬ ಹೆಸರು ಬಂತು. ವಸುಮತಿಯೆಂಬ ಒಬ್ಬ ಋಷಿ ಕುಮಾರಿಯು ತನಗೆ ಶ್ರೀ ದೇವಿಯೆಂಬ ಸುಂದರ ಹೆಸರಾಗಬೇಕೆಂದು ಬ್ರಹ್ಮನನ್ನು ಕುರಿತು ತಪಸ್ಸು ಮಾಡಿದಳು. ಇದರಿಂದ ಶ್ರೀ ಪರ್ವತ ಎಂದು ಹೆಸರಾಯಿತು. ಅದೇ ಶ್ರೀಶೈಲವಾಯಿತು.

ಕೈಲಾಸವನ್ನು ಬಿಟ್ಟು ಇಲ್ಲಿ ಶಿವನು ಲಿಂಗರೂಪದಿಂದ ನೆಲಸಿದ್ದಾನೆಂದು ಪುರಾಣ. ಈ ಲಿಂಗಕ್ಕೆ ಪರ್ವತಲಿಂಗವೆಂದು ಹೆಸರು.

ಭಾರತದಲ್ಲಿರುವ ಪ್ರಖ್ಯಾತವಾದ ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ ಲಿಂಗವೂ ಒಂದು. ಇದರಿಂದ ಸಾಮಾನ್ಯವಾಗಿ ಹಿಂದುಗಳೆಲ್ಲಾ ಈ ಲಿಂಗಕ್ಕೆ ಭಕ್ತಿ, ಗೌರವಗಳನ್ನರ್ಪಿಸುತ್ತಿದ್ದಾರೆ. ವೀರಶೈವರಿಗೆ ಇದೊಂದು ಮಹಾಪುಣ್ಯಕ್ಷೇತ್ರವಾಗಿದೆ.

ಇಲ್ಲಿ ಪೂಜಾರಿಗಳ ಮೂಲಕ ಪೂಜಿಸಬೇಕಾಗಿಲ್ಲ. ಪ್ರತಿಯೊಬ್ಬ ಹಿಂದುವಿಗೂ ತಾನೇ ಪೂಜಿಸುವ ಅವಕಾಶವಿದೆ. ಮಲ್ಲಿಕಾರ್ಜುನ ದೇವರ ನಿತ್ಯಪೂಜೆಯನ್ನು ಮಾತ್ರ ಒಬ್ಬ ಜಂಗಮ ಪೂಜಾರಿಯು ಮಾಡುತ್ತಿದ್ದಾನೆ. ಭ್ರಮರಾಂಬಾ ದೇವಾಲಯವು ಭಾರತದಲ್ಲಿ ಪ್ರಖ್ಯಾತವಾದ ಹದಿನೆಂಟು ಶಕ್ತಿ ದೇವತಾಲಯಗಳಲ್ಲಿ ಒಂದಾಗಿದೆ. ಇಲ್ಲಿಯ ಅರ್ಚಕರು ಬ್ರಾಹ್ಮಣರು.

ಶ್ರೀಶೈಲಂ

ಇಲ್ಲಿಯ ದೇವಾಲಯಗಳ ಪ್ರಾಚೀನತೆಯು ಮಹಾಭಾರತ ಹಾಗೂ ಸ್ಕಾಂದಪುರಾಣಗಳ ಕಾಲದವರೆಗೆ ಊಹಿಸಲಾಗಿದೆ. ಇಲ್ಲಿರುವ ಐದು ಚಿಕ್ಕ ದೇವಾಲಯಗಳನ್ನು ಪಾಂಡವರ ದೇವಾಲಯಗಳು ಎನ್ನುತ್ತಿರುವುದೇ ಇದಕ್ಕೆ ಸಾಕ್ಷಿಯೆನ್ನುತ್ತಾರೆ. ಚಾರಿತ್ರಿಕ ದೃಷ್ಟಿಯಿಂದ ಚೀನಾ ದೇಶದ ಬುದ್ಧ ಭಿಕ್ಷು ಫಾಹಿಯಾನ, ಹ್ಯೂನ್ ತ್ಸಾಂಗ್ ಇವರು ಶ್ರೀಪರ್ವತದ ಕುರಿತು ಉಲ್ಲೇಖಿಸಿದ್ದಾರೆ. ಮಹಾಯಾನ ಪಂಥದ ನಾಗಾರ್ಜುನನ ಕುರಿತು ಹೇಳಿದ್ದಾರೆ. ಇವನು ಕ್ರಿಸ್ತಶಕದ ಮೊದಲು ಶತಮಾನಕ್ಕೆ ಸೇರಿದವನು. ಇದರಿಂದ ಈ ದೇವಾಲಯಗಳು ಸುಮಾರು 2 000 ವರುಷಗಳ ಹಿಂದಿನವುಗಳೆಂದರೂ ತಪ್ಪಾಗದು. ದ್ರಾವಿಡ ಶೈಲಿಯಲ್ಲಿ ಕಟ್ಟಲ್ಪಟ್ಟ ಈ ದೇವಾಲಯವು ಚಿತ್ತಾಕರ್ಷಕವಾಗಿದೆ. ದೇವಾಲಯದಿಂದ ಕಡಿದಾದ ಮೆಟ್ಟಿಲುಗಳಲ್ಲಿ ಕೆಳಗಿಳಿದರೆ ಪಾತಾಳಗಂಗೆಯಿಂದ ಕರೆಯಲ್ಪಡುವ ಮನೋಹರವಾದ ಕೃಷ್ಣಾ ನದಿಯಿದೆ.

ಶ್ರೀಶೈಲವು ಭಾರತದ ಪ್ರಖ್ಯಾತ ಯಾತ್ರಾಸ್ಥಳಗಳಲ್ಲಿ ಒಂದಾಗಿದೆ. ಮಹಾಶಿವರಾತ್ರಿಯ ದಿನ ಇಲ್ಲಿಯ ವಾರ್ಷಿಕ ಜಾತ್ರೆ ನಡೆಯುವುದು. ಸಾವಿರಾರು ಯಾತ್ರಿಕರು ದೇಶದ ನಾನಾಭಾಗಗಳಿಂದ ಬರುವರು. ಚೈತ್ರ ಪೂರ್ಣಿಮೆಯ ದಿನ ಭ್ರಮರಾಂಬೆಯ ಪೂಜೆಗಾಗಿ ಸಾವಿರಾರು ವೀರಶೈವರು ಮೈಸೂರು, ಮದರಾಸು ಮುಂಬಯಿ ಪ್ರಾಂತಗಳಿಂದ ಬರುತ್ತಿರುವರು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಶ್ರೀಶೈಲ ರಾಜ್ಯವು ಅತ್ಯಂತ ವೈಭವದಿಂದ ರಾರಾಜಿಸುತ್ತಿತ್ತು.

ಮಹಾನಂದಿ

ಇದು ನಲ್ಲಮಲೆಯಲ್ಲಿರುವ ಇನ್ನೊಂದು ಸುಂದರ ದೇವಾಲಯ. ಇದು ಪರ್ವತದ ಬುಡದಲ್ಲಿದೆ. ಇಲ್ಲಿರುವ ನಂದಿಯ ಅಡಿಯಿಂದ ಐದು ಊಟೆಗಳು ಹರಿಯುತ್ತಿವೆ. ದೇವಾಲಯದ ಮುಂದಿನ ಕೆರೆಯ ಪೂರ್ವಕ್ಕೆ ಬಂದ ಕಲ್ಲಿನಲ್ಲಿ ಕೊರೆದ ನಂದಿಯಿದೆ. ಇದರ ಬಾಯಿಯಿಂದ ಮುಖ್ಯ ಊಟೆಯು ಹರಿದು ಬಂದು ಕೆರೆಗೆ ಸೇರುತ್ತದೆ.

ಹತ್ತು ಮೈಲು ಚದರದಲ್ಲಿರುವ ಒಂಭತ್ತು ದೇವಾಲಯಗಳಲ್ಲಿ ಮಹಾನಂದಿಯೂ ಒಂದು. ಇದರ ಗರ್ಭಗುಡಿಯು ಬುದ್ಧನ ಕಾಲದ ಕಟ್ಟಡಗಳ ಶೈಲಿಯಲ್ಲಿದೆ. ವಿಜಯನಗರದ ಕೃಷ್ಣದೇವರಾಯನ ಕಾಲದ ತಾಮ್ರ ಶಾಸನದಲ್ಲಿ ಈ ದೇವಾಲಯದ ಕುರಿತು ಉಲ್ಲೇಖವಿದೆ. ಶಿವನಂದಿ ದೇವಾಲಯವು ಕ್ರಿ. ಶ. 1046 ರ ಶಾಸನದ ಮಹಾನಂದಿ ತೀರ್ಥದ ಪ್ರಸ್ತಾಪವಿದೆ. ಇದನ್ನೆಲ್ಲಾ ನೋಡಿದರೆ ಈ ದೇವಾಲಯವೂ ಅನೇಕ ಶತಮಾನಗಳ ಹಿಂದಿನದೆಂದು ಗೊತ್ತಾಗುತ್ತಿದೆ

ಮಹಾನಂದಿಯು ಎಲ್ಲಾ ಜಾತಿ ಪಂಥಗಳ ಜನರಿಗೆ ಯಾತ್ರಾಸ್ಥಳವಾಗಿದೆ. ಇಲ್ಲಿಯ ಕೆರೆಗಳು ಸಾವಿರಾರು ಜನರನ್ನು ಸ್ನಾನಕ್ಕಾಗಿ ತಮ್ಮೆಡೆಗೆ ಸೆಳೆಯುತ್ತಿವೆ. ಈ ಸ್ಥಳವನ್ನು ಸುತ್ತಲೂ ಗಗನ ಚುಂಬಿತಗಳಾದ ಮಾವು, ತೆಂಗು, ಹುಣಸೆ ಮೊದಲಾದ ಮರಗಳು ವರ್ಷದ ಎಲ್ಲಾ ಋತುಗಳಲ್ಲೂ ಉತ್ತಮ ಹವೆಯುಳ್ಳದನ್ನಾಗಿ ಮಾಡಿವೆ. ಇಲ್ಲಿಯ ಮುಖ್ಯ ಕೆರೆಯು 60 ಚದುರ ಅಡಿ ವಿಸ್ತೀರ್ಣವುಳ್ಳದಾಗಿ ಮಧ್ಯದಲ್ಲಿ ಸುಂದರ ಮಂಟಪದಿಂದ ಕಂಗೊಳಿಸುತ್ತಿದೆ. ಇಲ್ಲಿಯ ಮಹಾರಣ್ಯವು ಜಿಂಕೆ, ನವಿಲು ಮೊದಲಾದ ವನ್ಯ ಜಂತುಗಳಿಂದ ಅದೆಷ್ಟು ಅತಿ ರಮಣೀಯವಾಗಿದೆಯೋ ಅಷ್ಟೇ ಭಯಂಕರವೂ ಆಗಿದೆ. ಬಗೆಬಗೆಯ ಹುಲಿ, ಚಿರತೆಗಳನ್ನು ಇಲ್ಲಿ ಕಾಣಬಹುದು, ಕಪಿಗಳ ಮಹಾ ಸೇನೆಯೇ ಇಲ್ಲಿದೆ. ಇದನ್ನು ತಪೋವನವೆಂದೂ ಕರೆಯುತ್ತಾರೆ. ಇಲ್ಲಿಯ ಗೋರಕ್ಷಣ ಶಾಲೆಯಲ್ಲಿ ಅನೇಕ ಕರೆಯುವ ದನಗಳಿವೆ. ವರ್ಷಕ್ಕೆ ಸಾವಿರಾರು ಜನರು ಧರ್ಮಾರ್ಥ ಹಾಲು ಪಡೆಯುತ್ತಿದ್ದಾರೆ. ಶಿವಭಕ್ತರಿಗೆ ಇದೊಂದು ಮಹಾ ಪುಣ್ಯಕ್ಷೇತ್ರವಾಗಿದೆ.

ಅಹೋಬಿಲಂ

ಇದು ನಲ್ಲಮಲೆಯಲ್ಲಿರುವ ನರಸಿಂಹ ದೇವಾಲಯ. ಇಲ್ಲಿ ಭಗವಾನ ನರಸಿಂಹನ ಒಂಭತ್ತು ವಿಧವಾದ ದೇವಾಲಯಗಳನ್ನು ಕಾಣಬಹುದು. ನರಸಿಂಹ ದೇವಾಲಯಗಳಲ್ಲಿ ಇದು ಅತಿ ಪ್ರಾಚೀನವಾದುದೆಂಬ ಪ್ರತೀತಿ ಇದೆ. ಈ ದೇವಾಲಯವು ದ್ರಾವಿಡ ಶೈಲಿಯಲ್ಲೇ ರಚಿಸಲ್ಪಟ್ಟಿದೆ. ಉಗ್ರ ನರಸಿಂಹಾವತಾರದ ಕಥೆಯು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಕ್ರಿ. ಶ. 1076 ರಿಂದ 1126 ರ ವರೆಗೆ ಆಳಿದ ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನು ಈ ಪುಣ್ಯಸ್ಥಳವನ್ನು ಸಂದರ್ಶಿಸಿದಂತೆ ತಿಳಿದುಬರುತ್ತದೆ. ವಿಜಯನಗರದ ಕೃಷ್ಣದೇವರಾಯನು ಈ ದೇವರಿಗೆ ಸಾವಿರ ಚಿನ್ನದ ಚೂಡುಗಳಿಂದ ಕೂಡಿದ ಹಾರವನ್ನೂ ವಜ್ರದ ಕರ್ಣ ಕುಂಡಲವನ್ನೂ ಕೊಟ್ಟಿದ್ದಾನೆ. ಇಲ್ಲಿಗೆ ಸಮೀಪದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ.

—(೦)—

— ಮೈಸೂರನ್ನು ಮುಂದುವರಿದ ಸಂಸ್ಥಾನವೆಂಬರೀತಿಯಲ್ಲಿ ಆಡಳಿತ ನಡೆಸುತ್ತಿರುವ ನಿಮಗೂ, ನಿಮ್ಮ ಸರಕಾರಕ್ಕೂ ನನ್ನ ವಂದನೆ ಎಂದು ಸರ್ದಾರ ಪಟೇಲರು ಮೈಸೂರು ರಾಜರಿಗೆ ಸಂದೇಶ ಕೊಟ್ಟಿರುವರು

ಆಲ್ ಇಂಡಿಯಾ ಜಂಗಿ ಕುಸ್ತಿಗಳು.



ಬ್ರೂಸಪೇಟೆ ಬಳ್ಳಾರಿ ಬಿ. ಡಿ. ಎ. ಎ. ಗ್ರೌಂಡಿನಲ್ಲಿ ಮಾರ್ಚ್ ತಾ॥ 6 ರಿಂದ ಮೇ 31 ರ ವರೆಗೆ ಜಂಗಿ ಕುಸ್ತಿಗಳು ಆಡಿಸುವ ಏರ್ಪಾಟು ಮಾಡಿರುತ್ತಾರೆ ಯಾವ ಪೈಲ್ವಾನರಾಗಲಿ, ಕರ್ನಾಟಕದವರಾಗಲಿ, ಆಂಧ್ರದವರಾಗಲಿ, ಇನ್ನೂ ಯಾವ ಇಲಾಖೆಯವರಾಗಲಿ ಈ ನೋಟೀಸು ನೋಡಿದ ಕೂಡಲೆ ಬಳ್ಳಾರಿಗೆ ಬಂದು ಕುಸ್ತಿ ಏರ್ಪಾಟುಮಾಡಿಕೊಂಡು ಹೋಗಬಹುದು. ನಿಮ್ಮ ಜೋಡಿನ ಪ್ರಕಾರ ಗೆದ್ದವರಿಗೆ ಮತ್ತು ಬಿದ್ದವರಿಗೆ ಸಹ ಹಣ ಕೊಡುತ್ತೇವೆ. ಬೆಳ್ಳಿ ಕಪ್ಪು, ..., ಮೆಡಲ್‌ಗಳು ಸಹ ಕೊಡುತ್ತೇವೆ. ಇದು ಆಲ್ ಇಂಡಿಯಾ ಜಂಗಿ ಕುಸ್ತಿಗಳು. ದೊಡ್ಡ ಮತ್ತು ಸಣ್ಣ ಪೈಲ್ವಾನರು ಬಂದು ಕುಸ್ತಿಗಳು ಏರ್ಪಾಟು ಮಾಡಿಕೊಂಡು ಹೋಗಬೇಕು. ಏರ್ಪಾಟಾದ ತೇದಿಗೆ ನೀವು ಬಂದು ಕುಸ್ತಿಗಳು ಆಡಬೇಕು. ನಮ್ಮ ರೂಲ್ಸಿಗೆ ಒಳಪಟ್ಟಿರಬೇಕು.

ಈ ಸಭೆಗೆ ಗಾರ್ಡಿಯನ್ಸ್:—

1) ಶ್ರೀ. ಖಾಜಾ ... ಸಾಬು, ಫರ್ನಿಚರ್ ಕಂಟ್ರಾಕ್ಟರು. ಬಳ್ಳಾರಿ.
2 ಶ್ರೀ ಅಬ್ದುಲ್ ಗಫೂರ್ ಸಾಬು, ಟಿಂಬರ್ ಮರ್ಚೆಂಟ್, ಬಳ್ಳಾರಿ.

ರೆಫರೀಸ್:—(ಕುಸ್ತಿ ಆಡಿಸತಕ್ಕವರು).

1) ಕಲೀಫ ಇಬ್ರಾಹಿಂ ಸಾಹೇಬು, ಬ್ರೂಸುಪೇಟೆ, ಬಳ್ಳಾರಿ.
2) ಕಲೀಫ ಅಬ್ದುಲ್ ರಜಾಕ್ ಸಾಹೇಬು, ಬ್ರೂಸುಪೇಟ ಬಳ್ಳಾರಿ.
3) ಕಲೀಫ ಮುಚ್ಚಿಗಿ ಹುಲೆಪ್ಪ, ಕೌಲುಬಜಾರು ಬಳ್ಳಾರಿ.
4) ಕಲೀಫ ನಾಲುಬಂದು ನಬೀಸಾಬು, ಕೌಲುಬಜಾರು ಬಳ್ಳಾರಿ.

ಕುಸ್ತೀ ನಿಕಾಲಿ ಆಗದಿದ್ದರೆ ಏನಾದರೂ ತಕರಾರು ಬಂದರೆ ಈ 2 ಜನ ಗಾರ್ಡಿಯನ್ಸ್ ಮತ್ತು 4 ಜನ ರೆಫರೀಸ್ ಕೊಟ್ಟ ತೀರ್ಮಾನಕ್ಕೆ ಎಲ್ಲಾ ಪೈಲ್ವಾನರು ನಡೆಯತಕ್ಕದ್ದು.

4ನೇ ಪುಟದಿಂದ ಬಂದದ್ದು.

58) ಕಲ್ಲಿಕೋಟೆಯ ಜಾಮೋರಿನ್ ಅವರ ಅಧಿಕಾರದಲ್ಲಿರುವ 28 ದೇವಾಲಯಗಳು.
59) ತಿರುಮುನ್ನಾರ್‌ಕೊನ್ನ ದೇವಾಲಯಗಳು, ಅಂಗಡಿಪುರಂ.

ದಕ್ಷಿಣ ಕನ್ನಡ

60) ಶ್ರೀ ಪೇಜಾವರ ಮಠ ಉಡಿಪಿ.
61) ಶ್ರೀ ಶಿರೂರು ಮಠ. ಉಡಿಪಿ.
62) ಶ್ರೀ ಪುತ್ತಿಗೆ ಮಠ, ಉಡಿಪಿ.
63) ಶ್ರೀ ಕೃಷ್ಣಾಪುರ ಮಠ, ಉಡಿಪಿ.
64) ಶ್ರೀ ಪಲಿಮಾರ್ ಮಠ, ಉಡಿಪಿ.
65) ಶ್ರೀ ಗುರೂರ್ ಜಂಗಮ್ ಮಠ.

ಟ್ರಸ್ಟಿಗಳು ದೇವಾಲಯದ ಹಣ ದುರುಪಯೋಗ ಪಡಿಸಿದುದು

1) ಶ್ರೀ ನವನೀತಸ್ವಾಮಿ ದೇವಾಲಯ, ಸಿಕ್ಕಿಲ್, ತಂಜಾವೂರು.

ದೇವಾಲಯದ ಆಸ್ತಿಯನ್ನು ಅತಿ ಕಡಮೆ ಗೇಣಿಗೆ ಕೊಟ್ಟು ದೇವಾಲಯಕ್ಕೆ ನಷ್ಟ ಮಾಡಿದರು

1) ಶ್ರೀ ಕೇಶವಸ್ವಾಮಿ ದೇವಾಲಯ ಪಲ್ಲರೇವು, ಕಾಕಿನಾಡ
2) ಶ್ರೀ ವೈದ್ಯನಾಥಸ್ವಾಮಿ ದೇವಾಲಯ ವೈದೀಶ್ವರನ್‌ಕೋಯಿಲ್.
3) ಶ್ರೀ ವ ... ದೇವಾಲಯ, ... ತಿರುನೆಲ್ವೇಲಿ.
4) ಶ್ರೀ ಪವಿತ್ರ ಲಿಂಗನಾಥಸ್ವಾಮಿ ದೇವಾಲಯ, ತಿರು ... ಮಾಯವರಂ
5) ಶ್ರೀ ... ದೇವಾಲಯ, ಪಂತನಲ್ಲೂರು.
6) ಶ್ರೀ ... ದಾನಧರ್ಮ (ಶ್ರೀ ... ದೇವಾಲಯ, ... ಇದಕ್ಕೆ ಸೇರಿದುದು
7) ಶ್ರೀ ಕರ್ಪೂರನಾಥಸ್ವಾಮಿ ಉತ್ಸವ ಸೋಳಾಪುರಂ ಸೇಲಂ.
8) ಕ್ರುಟಕ್ರಿಶ್ನ ರಾಮೇಶ್ವರಸ್ವಾಮಿ ದೇವಾಲಯ, ಗುಡಿಮೂಲ ರಾಮೇಶ್ವರಂ ಪೂರ್ವ ಗೋದಾವರಿ.

ಟ್ರಸ್ಟ್ ಆಸ್ತಿಯನ್ನು ಸ್ವಂತಾಸ್ತಿಯೆಂದು ಉಪಯೋಗಿಸಿದುದು

1) ಗವಿ ಮಠ, ಉರವಕೊಂಡ ಗೂಟಿ ಅನಂತಪುರ.
2) ಶ್ರೀ ನಾಚ್ಚಡಿಥವಿಥು ಅರುಲಿಯಸ್ವಾಮಿ ದೇವಾಲಯಗಳು, ರಾಮ್ನಾಡು.

ಮಠಾಧಿಪತಿಗಳು ಮಠದ ಹೆಸರಿನಲ್ಲಿ ನೋಟು ಬರೆದುಕೊಟ್ಟು ಸಾಲಪಡೆದುದು

1) ಶ್ರೀ ತಿರುಜ್ಞಾನ ಸಂಬಂಧ ಸ್ವಾಮಿಗಳ ಮಠ, ಮಧುರ.
2) ಶ್ರೀ ಪುಷ್ಪಗಿರಿ ಮಠ, ಕಡಪ.
3) ಶ್ರೀ ಶಿರೂರು ಮಠ, ಉಡಿಪಿ.
4) ಶ್ರೀ ಕೃಷ್ಣಾಪುರ ಮಠ, ಉಡಿಪಿ.

ದೇವಾಲಯದ ಆಭರಣ ವಿಕ್ರಯಿಸಿದುದು - ವಾ - ಅಡವಿಟ್ಟದುದು.

1) ಶ್ರೀ ಸುಬ್ರಮಣ್ಯಸ್ವಾಮಿ ದೇವಾಲಯ, ತಿರುವಿಡಕಾಸಿ, ಮಾಯವರಂ.
2) ಶ್ರೀ ಜ್ಞಾನಪ್ರಕಾಶ ದೇಶಿಕರ್ ಮಠ, ಕಾಂಚೀಪುರಂ.
3) ಶ್ರೀ ಪೇಜಾವರ ಮಠ, ಉಡಿಪಿ,

ಧರ್ಮ ಸಂಸ್ಥೆಗಳ ಸ್ಥಿರಾಸ್ತಿಗಳನ್ನು ರೆವೆನ್ಯೂ ಅಧಿಕಾರಿಗಳು ವಿಕ್ರಯಿಸಿದುದು

1) ಶ್ರೀ ಎರಂಗವಣ್ಣ ದೇವಾಲಯ ಎರ್ನಾಡ್
2) ಶ್ರೀ ನಟ್ಟೇರಿ ದೇವಾಲಯ ಮಲಬಾರ
3) ಶ್ರೀ ಸ್ವರ್ಗಪುರಂ ಮಠ, ನನ್ನಿಲಂ.
4) ಶ್ರೀ ಪುಕ್ಕಟ್ಟಿಯೂರ್ ದೇವಾಲಯ ಪೊನ್ನಾನಿ ತಾಲೂಕು.

ವಿದ್ಯಾ ನಿಧಿ

ಸಾಕಷ್ಟು ಹಣವಿಲ್ಲದೆ ಆರಂಭಿಸಿದ ಶಾಲೆಗಳು ಶಾಲಾ ವರ್ಷದ ಮಧ್ಯದಲ್ಲಿ ಮುಚ್ಚಿಲ್ಪಟ್ಟು ವಿದ್ಯಾರ್ಥಿಗಳನ್ನು ಸಂಕಷ್ಟದಲ್ಲಿರಿಸಿದ ಹಾಗೂ ಉಪಾಧ್ಯಾಯರಿಗೆ ಕಡಮೆ ಸಂಬಳ ಕೊಟ್ಟು ಅವರಿಂದ ಹೆಚ್ಚು ಸಂಬಳಕ್ಕೆ ರಶೀದಿ ಪಡೆದ ... ದೃಷ್ಟಾಂತಗಳು ಸರಕಾರದ ಗಮನಕ್ಕೆ ಬಂದಿವೆ. ಆದುದರಿಂದ ಹೊಸ ಶಾಲೆಗಳಿಗೆ ಸಾಕಷ್ಟು ಹಣವಿದ್ದು, ಮೋಕ್ಷ ... ವಾಗಿ ನಡೆಯುವಂತೆ ಮಾಡುವುದೇ ಈ ಹೊಸ ... ಉದ್ದೇಶ ಈ ನಿಧಿ ... ಆಜ್ಞೆಯು 1910 ... ಆರಂಭಿಸಲ್ಪಟ್ಟ ಶಾಲೆಗಳಿಗೆ ಅನ್ವಯಿಸುವುದಿಲ್ಲ. 1910 ರ ನಂತರ ಆರಂಭಿಸಿದ ಶಾಲೆಗಳ ಮಟ್ಟಿಗೆ ಕೂಡ 5 ವರ್ಷಗಳ ಸಮಯ ಕೊಡಲಾಗಿದೆ. ಕಾಲಕ್ಕೆ ತಕ್ಕ ... ನಲ್ಲಿ ಇನ್ನೂ ಹೆಚ್ಚು ... ಮಾಡಬೇಕಾದರೆ ಸರಕಾರವು ... ಆಲೋಚಿಸುತ್ತಿದೆ.

ಹಳ್ಳಿಯ ಮಾತು

ಚನ್ನಪ್ಪ:- ಪುಟ್ಟಣ್ಣಾ, ಯಾರೋ ನಿಮ್ಮ ಶಾಲಿ ಮನಿಯೊಳಗೆ ಈ ದಿನಸ ನಸ್ತ್ರಿನಮಾಡಿದಂತೆ ಕಂಡಿತು. ಬನರು ಹೋಗೋಣ, ಬರೋಣ ಕೂಡ ನಡೆಸೇಯಿತ್ತು

ಪುಟ್ಟಣ್ಣ:- ಯಾಲಾ ನಿನ್ನ ಮನಿಸನ್ನು ಹೀಂಗೆ ಕೇಳ್ತಿಯಲ್ಲಪ್ಪಾ, ಆಫೀಸರ ಮಂದಿಯಲ್ಲೇನೋ! ಇವೇನು ಹೊಸಮಾತ ಈಗ ೧೦ ವರ್ಷಗಳಿಂದಲೂ ನಡಿಯಿದೆ. ಅದರೊಳಗೆ ಈ ಕಂಟ್ರೋಲು ಬಂದಲಾಗಾಯ್ತು ಮತ್ತೂ ಜೋರು.

ಚನ್ನಪ್ಪ:- ಅಲ್ಲಪ್ಪಾ, ಹೀಂಗೆ ಆದರೆ ಶಾಲಿ ನಡೆಯುವದು ಹೆಂಗೆ! ಊರಜನರಾದರೂ ಹೇಗೆ ಸುಮ್ಮನಿರುತ್ತಾರೊ!

ಪುಟ್ಟಣ್ಣ:- ಊರ ಜನರದು ಯೇನೊ ದೋ ಅವರೊಳಗೇ. ಯಲ್ಲಾ ಕಟ್ಟಿಸಿರುವವನು ನಾನು. ಅದರೊಳಗೂ ನನ್ನ ಜಾಗಾದಲ್ಲಿ, ಯೇನೋ ಶಾಲಿಮನಿ ಕಟ್ಟಿಸುತ್ತೇನಂತ ಕಲ್ಲು, ಮಣ್ಣು, ಕಟ್ಟಿಗಿ ಹಾಂಗು ಹೀಂಗು ಕೊಡಕೊಂಡೆ, ಕುರ್ಚಿ, ಬೆಂಚಿ, ಮೇಜು ಕೂಡ ನನ್ನವಲ್ಲೇನೊ.

ಚನ್ನಪ್ಪ:- ಆದರೇನಾತಪ್ಪಾ ಹುಡುಗರು ಓದ ಬೇಡವೇನೊ.

ಪುಟ್ಟಣ್ಣ:- ಯಾರು ಬೇಡ ಅಂತಾರೋ ಆಫೀಸರ ಮಸ್ತಿಯಿಲ್ಲದಾಗ ಓದಲಿ ಆಫೀಸರ ಮಸ್ತಿಯಿದ್ದಾಗ ಮಾತ್ರ ಹುಡುಗರಿಗೂ ರಜಾ, ಮಾಸ್ತರಿಗೂ ರಜಾ.

ಚನ್ನಪ್ಪ:- ಯಿದು ಬಲು ಅನ್ಯಾಯವಪ್ಪ, ಆಫೀಸರ ಮಂದಿಗಾದರೂ ತಿಳಿಬಾರದೇನೋ,

ಪುಟ್ಟಣ್ಣ:- ಛೇ, ನಿನಗೆ ಬುದ್ಧೀಯಿಲ್ಲ. ಶಾಲಿಗಂತ ಮನಿಕಟ್ಟಿಸಿ ಅದರೊಳಗೆ ನಾಲ್ಕು ಬೆಂಚಿ ಕುರ್ಚಿ ಮೇಜು ಹಾಕಿದ್ದು ಯಂಥಾ ಕೆಲ್ಸ ಮಾಡಿದೆ ಈಗ ೧೦ ವರ್ಷಗಳಿಂದ ಕಂಟ್ರೋಲು ಬಂದಲಾಗಾಯ್ತು ಬಲ್ಯಾ.

ಚನ್ನಪ್ಪ:- ಯಿಲ್ಲಪ್ಪಾ, ಅದೇನು ಹೇಳು ಸ್ವಲ್ಪ ಕೇಳೋಣ ಬಾಳ ಸ್ವಾರಸ್ಯ ಇದ್ದ ಹಾಂಗಿದೆ.

ಪುಟ್ಟಣ್ಣ:- ಮೊದಲು ಆಫೀಸರಮಂದಿ ಬಂದವರು, ಮಠ, ಗುಡಿ ಗುಂಡಾರದೊಳಗೆ ಯಿಳುಕೊಳ್ಳುತ್ತಿದ್ದರು, ಊರ ಮಾಡೋ ಗೌಡರು ಅವರಿಗೆ ಊಟ ಉಪಚಾರ ಮಾಡಿಸುತ್ತಿದ್ದರು, ಆಗ ಈ ಕಂಟ್ರೋಲು ಬಂತಲ್ಲ. ಆವಾಗ ಅವರನ್ನ "ಬರ್ರಿ ಸಾರ್ ನಮ್ಮ ಶಾಲಿಮನಿ ಚೆನ್ನಾಗಿದೆ ಅಂತ ಕರಕೊಂಡು ಬರಲು ಶುರುಮಾಡಿದೆ ಗದ್ದಿಯೊಳಗೆ ಬೆಳೆದ ಸಣ್ಣ ಭತ್ತ ಒಂದುವ ಯಿಮ್ಮಿಗಳು ಯಾವುದಕ್ಕೇನು ಕಮ್ಮಿಯಿಲ್ಲೇನು. ಯಾ ಆಫೀಸರು ಬರಲಿಕ್ಕಿಲ್ಲ. ಈಗಂತು ನೋಡು ಚನ್ನಪ್ಪ ಸೀದ ಅಲ್ಲಿಗೆ ಬರ್ತಾರಪ್ಪ ಯಾರಾದರೂ ಹೊಸಬರು ಗೊತ್ತಿಲ್ಲದವರು ಬಂದು ಗುಡಿಯೊಳಗೆ ಯಿಳಕೊಂಡರೆ ಕೂಡ್ಲೆ ಹೋಗಿ ಬರ್ರಿ ಸಾರ್ ಅಂತ ಕರಕೊಂಡು ಬಂದು ಒಮ್ಮೆ ರುಚಿ ತೋರಿಸುತ್ತೇನೆ. ತೀರೆ ಹೋಯಿತ್ತು.

ಚನ್ನಪ್ಪ:- ಅಲ್ಲ ಪುಟ್ಟಣ್ಣಾ, ಯಿದರಿಂದ ನಿನಗೇನು ಲಾಭವಪ್ಪ ಗೌಡರಂತು ಸಂಬಳ ತಿನ್ನುತ್ತಾರೆ, ಅಂದಮೇಲೆ ಬಂದ ಆಫೀಸರಿಗೆ ಊಟ, ಉಪಚಾರ, ಅವರಿಗೆ ಗಾಡಿಯೆತ್ತು ಜೋಡಿಸಲೇಬೇಕು. ಅವರಿಗೆ ಬಟ್ಟಿಗಲ್ಲಿ ಹಾಪ ಒರುವ ೨೦ ರೂಪಾಯಿ ಸಂಬಳ ಗೌಡರಿಗೆ ಈಗಂತು ಗೌಡರು ವಿನ್ನನ್ನು ನೆನಸುತ್ತಿಲಬಹುದು ಹಗುರಾತಲ್ಲ ಅಂತ.

ಪುಟ್ಟಣ್ಣ:- ಛೀ ಚನ್ನಪ್ಪ ನನ್ನನ್ನೇನು ಹುಂಬಗ ಅಂತ ತಿಳಕೊಂಡಿಯೋನೋ ಲುಕ್ಸಾನಿದ್ದರೆ ಯಾರು ಮಾಡ್ತಾರಪ್ಪ ಯೀ ಕೆಲ್ಸ.

ಚನ್ನಪ್ಪ:- ಯೇನಪ್ಪ ನಿನ್ನಗೆ ಲಾಭ!

ಪುಟ್ಟಣ್ಣ: ಒಂದೊಂದೇ ಯೆಷ್ಟಂತ ಹೇಳಲಪ್ಪಾ ಈ ಕಂಟ್ರೋಲು ಬಂದಲಾಗಾಯ್ತು ಯಷ್ಟೋ ಭತ್ತ ಜೋಳ ಬೆಳೀತೀನಿ. ಕೈತುಂಬ ರೊಕ್ಕ ಸೇರಿಹೋಯ್ತು ಕಂಟ್ರೋಲಿಗೆ ಯೆಷ್ಟು ಕೊಡು ಅಂತ ಹಚ್ಚಿ ಕೇಳುವವರು ಯಾರು? ಕೂಳಿನ ಹಂಗು ಸಣ್ಣದೇನೋ? ಅದಲ್ಲದೆ ತೀರ ದೊಡ್ಡದು ಅನ್ನೋರಿಗೆ ಹೋಗುವಾಗ ಗಾಡಿಯೊಳಗೆ ೫೦ ಸೇರು ಸಣ್ಣ ಭತ್ತ ವಗೆದರಾಯ್ತು ಕೆಲ್ಸ ಮುಗಿದೇ ಹೋಯ್ತು ಯೆದುರಿಗೆ ಯಾರು ೫೦ ರೂಪಾಯಿಗೆ ಚೀಲದಂತೆ ಖರೀದಿಲ್ಲಾ ಯೆಷ್ಟು ಬಂದಿತೋ, ಒಂದು ಚೀಲ ಭತ್ತ ದಾಗೈತೆ.

ಚನ್ನಪ್ಪ:- ಯಿಷ್ಟೆತಾನೆ ಪುಟ್ಟಣ್ಣ.

ಪುಟ್ಟಣ್ಣ:- ಸಾಕಾರಗಟ್ಲೆ ಆಪ ಚನ್ನಪ್ಪಾ ಯಾವ್ಯಾವಂತೆ ಹೇಳಲಿಬಳ್ಳಾಂತನಕ ನನ್ನ ಹೆಸರ ಜೋಳ ಅಳಸಿ ಚೀಲ ಹೊಲಿಯುವ ಯೆಜಂಟೂ ಕೂಡ ನಾನೇ ಕಾಣೋ ಸಣ್ಣ ಕೆಲಸ ಏನಪ್ಪ? ಅಲ್ಲದೆ ಶಾಲಿ ವಸೂಲಿಗೆ ಆಫೀಸರು ಮಂದಿ ನನ್ನ ಶಾಲಿಮನಿಗೆ ಬಂದು ಯಿಳಕೊಂಡ್ರು ಅಂದರೆ ಸುತ್ತಲಿನ ಹಳ್ಳಿಯವರನ್ನೆಲ್ಲ ಹಗ್ಗ ಹಚ್ಚಿ ಯಳದಾಂಗಾಗ್ತದೆ. ಮೊದಲು ಅವರು ನನ್ನನ್ನು ಕಾಣಬೇಕು.

ಚನ್ನಪ್ಪ:- ಅಲ್ಲಿ ಪುಟ್ಟಣ್ಣ ನಿನ್ನನ್ನು ಯಾಕೆ ಕಾಣಬೇಕೋ ಹಳ್ಳಿಮಂದಿ ನೀನೇನು ಶಾಲು ವಸೂಲು ಮಾಡೋ ಆಫೀಸರ ಯೇನು.

ಪುಟ್ಟಣ್ಣ:- ಯೇನು ಬುದ್ಧೀ ಚನ್ನಪ್ಪನಿಂದ. ಯಿಷ್ಟು ತಿಳಿವಲ್ಲದಾ ನನ್ನ ಮಾತು ಹ್ಯಾಗೆ ಮಿಕ್ಕುತಿರೋ ಆಫೀಸರಮಂದೀ ನಮ್ಮ ಮಂದೀನ ೫೦ ಸೇರು ಜೋಳದ ಮೇಲೆತಡಾಸಿದೇನಿ ಕಾಣೋ ಯೇನೋ ಖಂಡಗ ಅವರ ಹತ್ತಿರವಿರಲಿ, ಮತ್ತೇ ನೋಡು ನನ್ನಗೆ ಆಗದವರನ್ನ ತಿನ್ನಲಿಕ್ಕೆ ಕೂಳು ಕೂತ ಯಿಲ್ಲದಹಾಂಗೆ ಮಾಡೀದೇನಿ. ಯಾರು ಹೆದರಾಕಿಲ್ಲ ನನ್ನಗೆ ಕೇಳು. ದೊಡ್ಡ ದೊಡ್ಡ ರೈತರು ಅನ್ನೋರು ಕಸಹೂಡೀವಾರ ನನ್ನ ಮನೇಗ ಯಿನ್ನು ಬೇಕಾದರೆ ಕೆಲ್ಸಕ್ಕೆ ಬೇಕಾದಾಗ ಯೆತ್ತುಗಳು ಗಾಡಿಗಳು, ಜನರು ಯಾವುದಕ್ಕೆ ಕಮ್ಮಿ ಹೇಳಿಕಳ್ಸೋ ದೊಂದೇತಡ ನಿನಗೆ ಗೊತ್ತಿಲ್ಲೇನಪ್ಪಾ ನಾನು ಈಗ ಮುಖಂಡರ ಪಟ್ಟಿಯಲ್ಲಿ ಸೇರಿದ್ದೇನೆ, ನೊನ್ನೆ ಪತ್ರ ಸಂಚಿಕೆಯಲ್ಲಿ ಬರೆದಿದ್ದರು ನೋಡು "ರೋಲ್ಡು ಗೋಲ್ಡು" ಮುಖಂಡರು ಅಂತ. ಅವರು ಕೂಡ ನಮ್ಮವರೇ ಕಾಣೋ. ಆದವರು ಅಸೂಯೆಯಿಂದ ಮುಂದೆ ಬರ್ತಾರಲ್ಲ ಅಂತ ಹೀಂಗೆ ಬರೀತಾರೆ.

ಚನ್ನಪ್ಪ:- ಈಗ ತಿಳೀತಪ್ಪ, ನಿಮ್ಮಂಥ ದೇಶಭಕ್ತ ಮುಖಂಡರು ಸ್ವತಂತ್ರ ಬಂದಲಾಗಾಯ್ತಂತೂ ತೀರ ಜಾಸ್ತಿ ಆಗ ದಾರಿ ಕಾಣುತ್ತದೆ. ನಿಮ್ಮಂಥವರಿಗೆ ದಿನ್ನ ಕಾಣಪ್ಪ.

ಪುಟ್ಟಣ್ಣ:- ಹಾಗೆ ಯಿದ್ದರೆ ಕಾಣೋ ಈಗ ಕಾಲ. ನಾನು ವಷ್ಕತೆನ ನೋಡು ಯೇನು ಪಾಪ ಅರಿಯದೆ ಒಳ್ಳೇ ಕೆಲ್ಸ ಮಾಡಿದವರನ್ನು ಬ್ಲಾಕು ಮಾಡಿರುತ್ತಾರಂತ ನಾವೇ ಸಿಗ್ಗಿ ಹುಯಿಲು ಕೆಡಪ್ಪೋರು ನಮ್ಮ ದರ್ಬಾರೇ ದರ್ಬಾರು, ನಮ್ಮ ಆಫೀಸರ ಸಂಗಡ ಕೂಡ ಶಾಲಿಮನೇಗೆ ಕೂತು ಒಳಗೆ ವಿಚಾರಮಾಡಿಸಿ ಮಾರುದ್ದ ಒರಿಸಿದ್ರೆ ಕಾಣೋ, ನಾವೇನು ಸಾಧಾರಣ ಮಂದಿ ಅಲ್ಲ

ಚನ್ನಪ್ಪ:- ಭಲೇ, ನೀವು, ನಿಮ್ಮ ಆಫೀಸರು ಚಲೋ ಕೆಲ್ಸ ಮಾಡಿದ್ದೀರಪ್ಪ ಮುಂದೆನಾತಪ್ಪಾ. ನೀವು ಬಿಟ್ಟಬಿಟ್ಟದ್ದು ದೇವರಾದರೂ ಕಣ್ಣು ತೆರದು ನೋಡಿದ್ದಾನು.

ಪುಟ್ಟಣ್ಣ:- ಯೇನೋ ಆಯ್ತಪ್ಪ ಮೇಲಿನ ಆಫೀಸರು ಬಿಟ್ಟು ಬಿಟ್ಟರಂತೆಪಾಪ ಅವರೇನು ಮಾಡ್ಯಾರು. ಅವರು ಒಂದುಸಾರಿ ಅವರೂ ಬಂದು ನಮ್ಮ ಶಾಲಿ ಮನಿಯೊಳಗೆ ಯಿಳಕೊಂಡು ರುಚಿನೋಡಿದ್ದರೆ ಕಿವಿ ಹಿಡಿದು ನೀರು ಕುಡಿಸುತ್ತಿದ್ದೆ. ಚನ್ನಪ್ಪಾ ಯಿನ್ನು ಮುಂದೆ ಅದೇ ಪ್ರಯತ್ನದಾಗೆ ಯಿದ್ದೀನಿ. ನೋಡೋಣ ನಮ್ಮ ಮುಖಂಡರು ಯಿದ್ದಾರೆ. ಅವರೇನು ಸಾಧಾರಣರಲ್ಲ ಕಲೆಕ್ಟರ ಹತ್ತಿರ ಹೋಗಿ ಮಾತಾಡಿ ಬರುತ್ತಾರೆ. ಅಲ್ಲದೆ ಯಿಗೇನೋ ಜಾತಿಯವರು ಬಂದಿದಾರಂತೆ ಕಲೆಕ್ಟರಾಗಿ ಅಪೇಕ್ಷ. ನಮ್ಮ ಮುಖಂಡರಿಗೆ ನೋಡು ಚನ್ನಪ್ಪ "ರೋಲ್ಡು ಗೋಲ್ಡು" ಮುಖಂಡರು ಅಂತ ಬರೀತಾರೆ. ಯಿಲ್ಲಾ ಹೊಟ್ಟೆಕಿಚ್ಚು ಯಿಲ್ಲದೆ ಹೋದರೆ ಹೋದಲ್ಲೆಲ್ಲ ಹಾರಹಾಕಿ ಜೈ ಅನ್ನುತ್ತಿದ್ದರೇನಪ್ಪ ಜನರು.

ಚನ್ನಪ್ಪ:- ಹೌದಪ್ಪಾ ಯಿಲ್ಲದೆ ಹೋದರೆ ಹ್ಯಾಗ ಬೀತು, ರೋಲ್ಡು ಗೋಲ್ಡು ಮುಖಂಡರ ಗುಂಪು ದಿನಾಲು ಬೆಳೀತಾನೆಯಿದೆ. ಮುಂದೇನಾಗ್ತದೋ ತಿಳೀದು.

ಪುಟ್ಟಣ್ಣ:- ಮುಂದೇನು ಚನ್ನಪ್ಪಾ ನನ್ನಗೆ ನಮ್ಮಲ್ಲಿಂದ ಜೋಳ ಅಳಿಸಿ ಚೀಲ ಹೊಲಿಯೋ ಅಧಿಕಾರ ಸಿಕ್ಕೇಬಿಟ್ಟಿದೆ ಇನ್ನು ಒಂದು ಊರ್ಪು ಸಿಗಬೇಕಾಗಿದೆ, ಆಗಲೆ ಮೊನ್ನೆ ಆಫೀಸರ ಕಿವಿಮೇಲೆ ಹಾಕಿದೇನೆ. ಇನ್ನ ನಮ್ಮ ಮುಖಂಡರಿಗಿಷ್ಟು ತಿಳಿಸಿದರೆ ಆಗೆಹೋಯ್ತು ಕೆಲ್ಸ ಆತುರದಿಂದಲೆ.

ಕಮ್ಯೂನಿಸ್ಟರ ಪುಂಡಾಟ

ಪಂ. ಜವಾಹರರ ಸ್ಪಷ್ಟೋಕ್ತಿ

"ಭಾರತದ ಕಮ್ಯೂನಿಸ್ಟ ಪಕ್ಷದವರು ಕಳೆದ ವರುಷದಲ್ಲಿ ಸರಕಾರ ವಿರುದ್ಧವಾದ ಘೋರಣೆಯನ್ನು ತಳೆದರಲ್ಲದೆ ಬಹಿರಂಗ ಬಂಡಾಯವೆಬ್ಬಿಸುವ ಚಟುವಟಿಕೆಗಳನ್ನು ನಡೆಯಿಸಿದರು. ತಮ್ಮ ಈ ಧೋರಣೆಯನ್ನು ಭಾರತದ ಕೆಲ ಭಾಗದ ಮಟ್ಟಿಗೆ ಜಾರಿಯಲ್ಲಿ ತಂದಿರುವರು. ಕೊಲೆ, ಸುಲಿಗೆ, ಹಾಗೂ ವಿಧ್ವಂಸಕ ಚಟುವಟಿಕೆಗಳಿಇದರ ಪರಿಣಾಮವಾಗಿದೆ. ಭಾರತದ ನೆರೆಹೊರೆಯ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರು ಕೈಕೊಂಡ ಬಂಡಾಯದ ಅರಿವು ಭಾರತದ ಮಹಾ ಶಾಸನಸಭೆಯ ಸದಸ್ಯರಿಗೆ ಇದೆ. ಅವುಗಳಂತೆಯೇ ಭಾರತದಲ್ಲಿಯೂ ಜನತೆಯನ್ನು ಉದ್ರೇಕಿಸುವ ಪ್ರಯತ್ನಗಳು ಕೈಕೊಳ್ಳಲ್ಪಟ್ಟಿವೆ" ಹೀಗೆಂದು ಭಾರತದ ಪ್ರಧಾನ ಮಂತ್ರಿ ಪಂ. ಜವಾಹರಲಾಲರು ಈ ದಿನ ಶ್ರೀ ದೇಶಬಂಧು ಗುಪ್ತರು ಕೇಳಿದ ಅಲ್ಪಾವಧಿ ಪ್ರಶ್ನೆಗೆ ಉತ್ತರಕೊಡುತ್ತ ಭಾರತ ಸರಕಾರವು ಕಮ್ಯೂನಿಸ್ಟರ ಬಗ್ಗೆ ತಡೆಯುವ ಧೋರಣೆಯನ್ನು ವಿವರಿಸಿದರು.

—

ಹೈದರಾಬಾದ ಬಿಕ್ಕಟ್ಟು ಒಮ್ಮೆ ಬಗೆಹರಿಯಿತು

ಕಳೆದ ಮೂರು ತಿಂಗಳಿಂದ ಹೈದರಾಬಾದ ಕಾಂಗ್ರೆಸ್ಸಿನಲ್ಲಿ ಉಂಟಾಗಿದ್ದ ಬಿಕ್ಕಟ್ಟು ಬಗೆಹರಿಯಿತು. ಸ್ವಾಮಿ ರಮಾನಂದ ತೀರ್ಥ ಮತ್ತು ಜನಾರ್ಧನರಾವ ದೇಸಾಯಿಯವರು ಒಟ್ಟಿಗೆ ಸೇರಿ ದೆಹಲಿಯ ನಿವಾಸಕ್ಕೆ ಹೋಗಿ ಸರದಾರ ಪಟೇಲರು ತಮ್ಮಲ್ಲಿ ಒಮ್ಮತವಾದುದನ್ನು ತಿಳಿಸಿದರೆಂದು ವರದಿಯಾಗಿವೆ.

ಸ್ವಾಮಿ ರಮಾನಂದ ತೀರ್ಥರ ನೇತೃತ್ವದ ಕೆಳಗೆ ಒಕ್ಕಟ್ಟಿನಿಂದ ಕಾರ್ಯಮಾಡಲು ನಿರ್ಧರಿಸಿದ ವದಾಗಿ ಜನಾರ್ಧನರಾವ ಪಕ್ಷದ ವಕ್ತಾರನು ಹೇಳಿದನು. ಅವರ ನಡುವೆ ಆದ ಒಡಂಬಡಿಕೆಯ ಪೂರ್ಣ ವಿವರಗಳು ಇನ್ನೂ ದೊರತಿಲ್ಲ.

ಸ್ವಾಮೀ ರಮಾನಂದ ತೀರ್ಥರು ಇಷ್ಟರಲ್ಲಿಯೇ ಒಂದು ಪ್ರಕಟನೆ ತೆಗೆಯಲಿರುವರು.

ಚನ್ನಪ್ಪ:- ಆ ಊರು ನಿನಗೇ ಹುಟ್ಟಿಗ್ಲ.

ಪುಟ್ಟಣ್ಣ:- ಹಾಗಂದರೇನು ಆ ಊರಲ್ಲಿ ನನ್ನಗ ಬೇಕಾದವರು ದೊಡ್ಡ ರೈತರು ಯಿದ್ದಾರೆ, ಅವರಿಂದ ಯೆಷ್ಟು ಕೆಲ್ಸಗಳಾಗ್ತವು ಬಲ್ಲ್ಯಾ ನೂರಾರು ಚೀಲ ಕಾಳು ವಸೂಲಾಗ ಬೇಕತ್ತ. ಅಂಥಾದ್ದು ಚಿಲ್ಲರ ಪಟ್ಟಿ ಮುಂದಿನೇಲೆ ತಪ್ಪಿಸ್ಯು ಹಾಕಿಸಿ ೧೦-೨೦ ಚೀಲದಮೇಲೆ ಮುಗಿಸಿದ್ದೇನೆ, ಆಗೋ ಯಿರೋ ಆಫೀಸರ ಗಾಡಿ ಶಾಲಿ ಮನಿ ಹತ್ತಿರ ಬಂದದೇ ಬಿಡ್ತು. ಹುಡುಗರಿಗೂ, ಮಾಸ್ತರಿಗೂ ಸುತ್ತೆ ರಜಾ ನಾವು ಹೋಗ್ದೇನಪ್ಪ.

ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ

O. P. 6/49.

ಅರ್ಜದಾರರು:—

1) ಕಲಾಯಗಾರು ಕರಮುತುಲ್ಲಾ ಖಾನ್
2) „ ಓಬೆದುಲ್ಲಾ ಖಾನ್.
3) „ ಅವಾಸುಲ್ಲಾ ಖಾನ್

ಮೈನರುಗಳು ಸಿಗೇವಾಸಿ ತಂದೆ ಕೆ. ಅಹಮದ ಖಾನ್ ಪೋಲೀಸ್ ಸಬ್ ಇನ್ಸ್‌ಪೆಕ್ಟರರು, ಹಿರೇಭಾಸ್ಕರ, ಶಿವಮೊಗ್ಗ ಜಿಲ್ಲಾ

ಮತ್ತು

ಎದುರು ಅರ್ಜದಾರರು:—

1) ಕಲಾಯಗಾರು ಮಕ್ತುಂಸಾಬು.
2) „ ಬಿಯಮಾಬೀ.

ಹುವ್ವಿನಹಡಗಲಿ.

ಮೈನರು ಅರ್ಜದಾರರ ತಾಯಿಯಾದ ಜಮಾಲಬೀಯು ಮೈಸೂರು ಸಂಸ್ಥಾನ ಕಡೂರು ಜಿಲ್ಲಾ ಮೂಡುಗೆರೆ ತಾಲೂಕು ಟ್ರೆಜರಿಯಲ್ಲಿ S. B. Account No. 858 ರಲ್ಲಿ ರು. 1010/- ಗಳನ್ನು ಡಿಪಾಜಿಟ ಮಾಡಿ ಗತಿಸಿರುವಳು. ಮೈನರು ಅರ್ಜದಾರರು ತಾವು ಜಮಾಲಬೀ ಮಕ್ಕಳೂ ಮತ್ತು ವಾರಸರು ಎಂದು ಸದ್ರಿ ಹಣವನ್ನು ಬರಮಾಡಿಕೊಳ್ಳಲು ತಮ್ಮ ಪರ Indian succession Act 1925. Sections 372, 374 ಪ್ರಕಾರ Succession Certificate ಕೊಡುವಂತೆ ಅರ್ಜಿ ಇಟ್ಟಿರುವರು. ವಾಯಿದಾ 16 3-49 ಕ್ಕೆ ಇರುವದು. ಇದಕ್ಕೆ ಯಾರದಾದರೂ ತಕರಾರು ಇದ್ದಲ್ಲಿ 16-3-49 ಕ್ಕೆ ಬೆಳಿಗ್ಗೆ 10 ಗಂಟೆಗೆ ಖುದ್ದಾಗಲಿ ವಕೀಲು ದ್ವಾರಾಗಲಿ ಹಾಜರು ಆಗಿ ತಕರಾರು ತಿಳಿಸತಕ್ಕದ್ದು.

ಇಜಾರಿ ಟಾಕಪ್ಪ,
ಅರ್ಜದಾರರ ವಕೀಲು, ಹೊಸಪೇಟೆ.

ಸರ್ದಾರ-ನಿಜಾಮರ ಸಂಭಾಷಣೆ

"ನಿಮ್ಮ ನಗೆಮುಖವನ್ನು ಕಂಡೊಡನೆಯೇ ಭಾರತಾದ್ಯಂತ ನಿಮ್ಮ ಸಂಸ್ಥಾನದಲ್ಲಿ ಆದ ಬದಲಾವಣೆಗೆ ಒಪ್ಪಿಗೆ ಸೂಚಿತವಾಯಿತೆಂದುಕೊಂಡೆನು. ಬ್ರಿಟಿಷರು ಬ್ರಿಟಿಶ ಭಾರತ, ಸಂಸ್ಥಾನ-ಭಾರತವೆಂದು ಗೆರೆ ಎಳೆದದ್ದು, ದೇಶದ ಸ್ವಾತಂತ್ರ್ಯದ ಜೊತೆಗೆ ಅಳಿಸಿ ಹೋಗಿ ದೇವ ನಿರ್ಮಿತ ಅಖಂಡ ಭಾರತವು ಕಂಗೊಳಿಸುತ್ತಿದೆ. ಇಂಥ ಉಜ್ವಲ ಸ್ವಾರ್ಥತ್ಯಾಗಕ್ಕಾಗಿ ಸಂಸ್ಥಾನಿಕರಿಗೆ ನಾವು ಋಣಿಯಾಗಿದ್ದೇವೆ. ಅವರ ಸಹಕಾರವಿಲ್ಲದೇ ಹೋಗಿದ್ದರೆ, ಹೀಗೆ ಒಂದುಗೂಡುವದು ಶಕ್ಯವಿರಲಿಲ್ಲವೆಂಬುದನ್ನು ಮರೆಯಲಾಗದು" ಎಂದು ಶ್ರೀ ವಲ್ಲಭಭಾಯಿಯವರು ನಿಜಾಮರೊಡನೆ ಮಾತನಾಡುತ್ತ ಹೇಳಿದರೆಂದು ಗೊತ್ತಾಗುತ್ತದೆ.

ಪೆಟ್ರೋಲ್ ನಿಯಂತ್ರಣ ಇನ್ನೂ ತೆಗೆಯುವದಿಲ್ಲ

ಸದ್ಯಕ್ಕೆ ಪೆಟ್ರೋಲ ನಿಯಂತ್ರಣವನ್ನು ರದ್ದುಗೊಳಿಸುವದು ಸಾಧ್ಯವಿಲ್ಲವೆಂದು ಸಾರಿಗೆ ಶಾಖೆಯ ಸಹಾಯಕ ಮಂತ್ರಿಗಳಾದ ಶ್ರೀ ಕೆ. ಸಂತಾನಂರು ಶ್ರೀ ಹೆಚ್ ವಿ. ಕಾಮತರು ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಹಿಂದೀ ಶಾಸನ ಸಭೆಯಲ್ಲಿ ಹೇಳಿದರು.

ಸದ್ಯದ ಪೆಟ್ರೋಲು ಪೂರೈಕೆ, ಒಳನಾಡಿನಲ್ಲಿ ಸಾಗಿಸಬೇಕಾದ ಸಾಗಾಟವೆಂದರೆ ಹಂಚುವಿಕೆಯ ತೊಂದರೆ ಇತ್ಯಾದಿ ಕಾರಣಗಳನ್ನು ಅವರು ಕೊಟ್ಟಿರುವರು. 150 ದಶಲಕ್ಷ ಗ್ಯಾಲನು ಮಾತ್ರ ಪೆಟ್ರೋಲು ಹೊರಗಿನಿಂದ ದೊರೆತಿದೆ, ಆದರೆ ದೇಶಕ್ಕೆ 260 ದಶಲಕ್ಷ ಗ್ಯಾಲನ್ನು ಬೇಕು.

ಜಾತೀಯತೆಯ ಪುಸ್ತಕಗಳಿಗೆ ನಿರ್ಬಂಧ

ಮದ್ರಾಸ ಪ್ರಾಂತದ ಶೈಕ್ಷಣಿಕ ಸಂಸ್ಥೆಗಳ "ಜಾತೀಯ ರಾಜಕಾರಣ" ಹಾಗೂ ತರ್ಕಕ್ಕೆ ಎಡೆಕೊಡುವಂಥ ಪುಸ್ತಕಗಳನ್ನು ಪುಸ್ತಕ ಭಂಡಾರಗಳಲ್ಲಿ ಇಡಬಾರದೆಂದು ಮದ್ರಾಸ ಸರಕಾರವು ತಿಳಿಸಿದೆ. ಆ ತರದ ಸಾಹಿತ್ಯವಿದ್ದರೆ ಅದನ್ನು ಯಾವದೇ ರೀತಿಯಿಂದಾದರೂ ನಾಶಮಾಡಲು ಸ್ಥಳೀಕ ಸಂಸ್ಥೆಗಳಿಗೆ ಸಲಹೆ ಕೊಡಲಾಗಿದೆ.

ಶೈಕ್ಷಣಿಕ ಸಂಸ್ಥೆಗಳು ಜಾತೀಯ ವಾಂಗ್ಮಯಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗಾಗಿ ಪ್ರಕಟಿಸಬಾರದೆಂದು ಒಂದು ಸುತ್ತೋಲೆಯನ್ನು ಕಳಿಸಿ ಒತ್ತಾಯಪಡಿಸಿದೆ.

ನೋಟೀಸು

ಬಳ್ಳಾರಿ ಸ್ಮಾಲ್‌ಕಾಜ್ ಕೋರ್ಟಿನಲ್ಲಿ

S. C. 721/48

Between

ವಾದಿ:- ಬಾದ್ಮಿ ಲಕ್ಷ್ಮಿದೇವಮ್ಮ Wife of ಬಾದ್ಮಿ ಲಕ್ಷ್ಮಿಪತೆಪ್ಪ ವೈಶ್ಯ ವ್ಯಾಪಾರ ಬಳ್ಳಾರಿ.

and

ಪ್ರತಿವಾದಿ:- ಜಾರಿಕರ ನಾಗಪ್ಪ Son of ಗುರಪ್ಪ ಬಾರಿಕರ ಕುಲ ಜವಾಯ್ತಿ ಮೋಕೆ ಗೊನಾಳು ಬಳ್ಳಾರಿ ತಾಲೂಕು

ಪ್ರತಿವಾದಿಗೆ ತಿಳಿಸುವದು ಯೇನಂದರೆ,

ವಾದಿಯು, ಪ್ರತಿವಾದಿಯಾದ ನಿನ್ನ ಮೇಲೆ ಪ್ರಾಂಸರಿನೋಟು ಬಾಕಿ ರೂ 221-12 6 ಗಳಿಗೆ ದಾವಾ ಮಾಡಿರುತ್ತಾಳೆ, 8-3-49 ನೇ ತೇದಿ ವಾಯಿದಾ ಇರುತ್ತದೆ, ಆ ದಿವಸ ನೀನು ಹಾಜರಾಗಿ ನಿನ್ನ ತಕರಾರು ಹೇಳಿಕೊಳ್ಳಬೇಕು ಇಲ್ಲವಾದರೆ ಏಕಪಕ್ಷ ವಿಚಾರಣೆ ನಡೆದು ಡಿಕ್ರಿ ಆಗುತ್ತದೆ.

ಆರ್. ನಾರಾಯಣರಾವ್
ವಾದಿ ವಕೀಲು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1934

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ. ಉನ್ನತ:—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ.

7—3—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri...

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ರ್ಷ ೧೨ | ಸೋಮವಾರ ೧೪ ಮಾರ್ಚ ೧೯೪೯ | ಸಂಚಿಕೆ ೧೦

Guntakal's Future.

Anantapur Collector's Appeal at Concert.

An impassioned appeal to the leaders of iuntakal to sink petty differences if any, among them i the interests of the prosperity of the place and rive with civic conscience for the speedy onversion of the Union into a beautiful municipality as made by Mr C. Vivekanandamurthy. Collector f Anantapur, speaking in a crowded Concert Hall : Guntakal.

The occasion was the benefit musical concert iven by Srimathi Tanguturi Suryakumari, the elebrated songstress of the Andhra, in aid of the iuntakal Club Building Fund

The Concert attracted a record gathering from l over the Rayalaseema in view of the equidistance f Cuntakal The organisers of the Concert merit pecial felicitations for so timing the function as to cilitate convenient travel by trains.

A tea-party was given in honour of Srimathi uryakumari, before the function, at the local raveller's Bunglow. Prominent among those present ere Mrs. and Mr. Vivekanandamurthy Mrs and Mr. helapathi Rao, D T.S. (Power), Guntakal, Ravappa, I. L. A. T. B. Keshava Rao, Editor Navabharath nd T. V. Krishna Rao, Journalist Bellary

Srimathi Suryakumari treated Rayalaseemites ter in the Regal Talkies to her delightful music oth Classical and modern in three languages Telugu, lindi and Tamil amidst frequent applause

Mr. G. Nagasayanam, the founder-secretary of e Club, traced briefly the history of the Club since s inception and stressed the great need felt for the te and building for it. Paying glowing tributes to e songstress, he said that her munificence in giving e benefit concert for the club at Guntakal the heart of Rayalaseema, forged a fresh link in the chai the Rayalaseema Circars amity. He appealed to Collector to grant a four-acres-site near Regal Tal for the Club.

Mr Rustomji, President of the Club who thanked and garlanded on the occasion for ha lent the Hall free, spoke next appealing to the pu of Guntakal to contribute liberally for the C Building-Fund.

Mrs. Rustomji garlanded Srimathi Suryakum Mr. Vivekanandamurthy who presided over the C cert replying to the Secretary's appeal, promise do his best to get the site alienated in favour of Club by the Government. "My God help me to the site for you", he said.

Describing Srimathi Suryakumari's music divine nector he said that the rendering of the T songs by her was superb and unequalled even by Tamilians themselves. He concluded by paying the tribute that she not only helped the Rayalase Circars amity, but, by her multi-lingual mu strengthened the unity of the whole of India. (F longed cheers).

Mrs. Vivekanandamurthy presented to the c brated songstress with a memento.

Accompaying Srimathi Suryakumari on this were Messrs. T. Rama Rao her brother and Devagu Suryaprakasa Rao, Advocate, Madras, her brother law

Drs K V G. Rajulu, G. R. Lingam and Sat natham and Messrs. G. Nagasayanam. Venkateswar K V Jagadesham and M Narayanappa were respo ble among others for the success of the Concert.

- ಸರ್ ಮೌಂಟ ಬ್ಯಾಟನ್ ರ ಆಸ್ತಿ ಅವರ ತಂದೆಯಿಂದ ಬಂ
ಸುಮಾರು ೧೦ ಕೋಟಿ ರೂ. ಗಳಷ್ಟೂ ಸರಕಾರವು ಅನೇಕ ತೆರಿ
ಮೂಲಕ ಅವರ ಕುಟುಂಬದ ಆಸ್ತಿಯನ್ನು ಕಡಿಮೆ ಮಾಡಿ ಜೀವನದ
ತ್ರ ಕೆಲಸಗಳಿಗೆ ತಡೆಯಾಗಿರುವ ಕಾರಣ ಅವರಿಗಾಗಿಯೇ ಪಾರ್ಲಿಮೆಂ
ಒಂದು ಬಿಲ್ಲು ಪಾಸಾಗಲಿದೆ. ಇದರಿಂದ ವಿಶ್ವದತ್ತ ಆಸ್ತಿಯಲ್ಲಿ ಅ
ನಾಶಕ್ಕೆ [illegible] ಉಳಿಯಲಿದೆ.

ನಗರ ಗೊಬ್ಬರ

— ೧ —

ನಗರ ಗೊಬ್ಬರವನ್ನು ಉಪಯೋಗಿಸಿ ಬೆಳೆ ಹೆಚ್ಚಿಸಿರಿ

ನಗರ ಗೊಬ್ಬರವು ಸಗಣಿ ಗೊಬ್ಬರಕ್ಕಿಂತ ಶ್ರೇಷ್ಠವಾದದ್ದು.

—(೦)—

ಸೇಂದ್ರಿಯ ಗೊಬ್ಬರದ ಅವಶ್ಯಕತೆ

ಒಕ್ಕಲತನದಲ್ಲಿ ಉತ್ತಮವಾದ ಬೆಳೆ ಬರಬೇಕಾದರೆ ಸೇಂದ್ರಿಯ (Organic) ಗೊಬ್ಬರವು ಅತ್ಯವಶ್ಯವೆಂಬುದು ಎಲ್ಲರಿಗೂ ತಿಳಿದಿದೆ. ಈಗ್ಗೆ ಒಕ್ಕಲಿಗರು ಭೂಮಿಗೆ ಸಾಕಷ್ಟು ಸೇಂದ್ರಿಯ ಗೊಬ್ಬರವನ್ನು ಹಾಕುವದಿಲ್ಲ. ಹೀಗಾಗಿ ಭೂಮಿಯ ಸಾರವು ಕ್ರಮೇಣ ಕಡಿಮೆಯಾಗಹತ್ತಿ ಅಲ್ಪ ಬೆಳೆಗೆ ಕಾರಣವಾಗಿದೆ. ಸಾಕಷ್ಟು ಸೇಂದ್ರಿಯ ಗೊಬ್ಬರವನ್ನು ಭೂಮಿಗೆ ಉಪಯೋಗಿಸಿದಲ್ಲಿ, ಕಳೆದುಕೊಂಡ ಭೂಮಿಯ ಕಸುವನ್ನು ಪುನಃ ಪಡೆಯಬಹುದಲ್ಲದೆ, ಹೆಚ್ಚು ಬೆಳೆಯನ್ನು ತೆಗೆಯಬಹುದು ಆದ್ದರಿಂದ ರೈತರು ತಮಗೆ ಸಿಗುವ ಎಲ್ಲಾ ವಿಧವಾದ ಸೇಂದ್ರಿಯ ಗೊಬ್ಬರವನ್ನು ಭೂಮಿಗೆ ಹಾಕಬೇಕು. ಇದರಿಂದ ಈಗಿನ ಆಹಾರ ಪದಾರ್ಥಗಳ ಅಭಾವ ಪರಿಸ್ಥಿತಿಯು ಬಹುಮಟ್ಟಿಗೆ ಸುಧಾರಿಸುವದು ಮತ್ತು ಆಹಾರ ಪದಾರ್ಥಗಳಿಗೆ ಈಗ ವಿಪರೀತ ಬೆಲೆಯಾಗಿರುವದರಿಂದ ರೈತರಿಗೆ ವಿಶೇಷವಾದ ಲಾಭವು ಉಂಟಾಗುವದು.

ಸಗಣಿ ಗೊಬ್ಬರ ಮತ್ತು ಅದರ ಕೊರತೆ

ಈಗ ಉಪಯೋಗದಲ್ಲಿರುವ ಸೇಂದ್ರಿಯ ಗೊಬ್ಬರವೆಂದರೆ—ದನಗಳ ಮಲ ಮೂತ್ರ ಮತ್ತು ಕಸ್ಪಾದಿ ಇವುಗಳು. ಈ ಗೊಬ್ಬರವು, ಬಹಳ ಅಗ್ಗವಾಗಿಯೂ ಮತ್ತು ಎಲ್ಲೆಲ್ಲಿಯೂ ಅನಾಯಾಸವಾಗಿ ಸಿಗುವದರಿಂದ, ನಮ್ಮ ದೇಶದಲ್ಲಿ ಬಹು ಕಾಲದಿಂದ ರೂಢಿಯಲ್ಲಿದೆ. ಆದರೆ ಈ ಗೊಬ್ಬರವು ಈಗ ನಮಗೆ ಬೇಕಾದಷ್ಟು ಸಿಗುವದಿಲ್ಲ. ಯಾಕೆಂದರೆ ಸಗಣಿಯನ್ನು ಬಹಳವಾಗಿ ಉರುವಲಕ್ಕೆ ಉಪಯೋಗಿಸುತ್ತಾರೆ. ಇದಲ್ಲದೆ ದನಗಳ ಮೂತ್ರವನ್ನು ಒಟ್ಟುಗೂಡಿಸಿ ಗೊಬ್ಬರದ ಗುಂಡಿಗೆ ಸೇರಿಸುವದಿಲ್ಲ. ಈ ಕಾರಣಗಳಿಂದ ಈಚೆಗೆ ನಮ್ಮಲ್ಲಿ ಸಗಣಿ ಗೊಬ್ಬರವು ಕೀಳತರಗತಿಯದಾಗಿರುವದಲ್ಲದೆ ಅದು ಸಾಕಷ್ಟು ಸಿಗುವದು ಕಷ್ಟವಾಗಿದೆ.

ನಗರ ಗೊಬ್ಬರವು ಸಗಣಿ ಗೊಬ್ಬರದ ಪೂರಕ

ಆದ್ದರಿಂದ ಸೇಂದ್ರಿಯ ಗೊಬ್ಬರವನ್ನು ರೈತರಿಗೆ ಹೆಚ್ಚಾಗಿ ದೊರಕಿಸುವ ದೃಷ್ಟಿಯಿಂದ, ಸರಕಾರವು ಪಟ್ಟಣಗಳಲ್ಲಿನ ಕಚರಾದ ಗೊಬ್ಬರವನ್ನು ತಯಾರಿಸಲು ಪ್ರಾರಂಭಿಸಿದೆ. ಇದಕ್ಕೆ "ಬೆಂಗಳೂರ ಗೊಬ್ಬರದ ವಿಧಾನ" ಎಂಬ ಹೆಸರನ್ನು ಉಪಯೋಗಿಸಿದ್ದಾರೆ. ಈ ವಿಧಾನದಿಂದ ಎಲ್ಲ ಮುನಿಸಿಪಾಲಿಟಿಗಳೂ ಬಹು ಸುಲಭ ರೀತಿಯಿಂದ ಮತ್ತು ಹೆಚ್ಚು ಖರ್ಚಿಲ್ಲದೆ ಈ ಗೊಬ್ಬರವನ್ನು ತಯಾರಿಸಬಹುದು. ಊರೊಳಗಿನ ಎಲ್ಲ ತರದ ಕಸಕಡ್ಡಿ, ಶೌಚ, ಶೌಚಕುಂಡದ ನೀರು ಗಟಾರದ ನೀರು, ಕಟುಗರ ಮನೆಯ ಕಚರಾ ಇತ್ಯಾದಿ ಪದಾರ್ಥಗಳನ್ನು ಒಟ್ಟುಗೂಡಿಸಿ ಇಂಥ ಗೊಬ್ಬರವನ್ನು ತಯಾರಿಸಬಹುದು. ಈ ಪ್ರಥಮವಾದ ಗೊಬ್ಬರಕ್ಕೆ "ನಗರ ಗೊಬ್ಬರ" ವೆಂಬ ಹೆಸರು. ಈ ಗೊಬ್ಬರವು ಸಗಣಿ ಗೊಬ್ಬರಕ್ಕಿಂತ ಶ್ರೇಷ್ಠತರಗತಿಯದಾಗಿರುವದಲ್ಲದೆ ಅದಕ್ಕಿಂತ ಬೆಲೆಯಲ್ಲಿ ಬಹಳ ಅಗ್ಗವಾಗಿ ತಯಾರಿಸಬಹುದು.

ನಗರ ಗೊಬ್ಬರವು ಯಾವ ರೀತಿಯಿಂದಲೂ ಅಪಾಯವಿಲ್ಲ

ಈ ನಗರ ಗೊಬ್ಬರವನ್ನು ತಯಾರಿಸುವಾಗ ಸುಮಾರು 65° ಸೆಂಟಿ ಡಿಗ್ರಿಗಳಷ್ಟು ಉಷ್ಣ ಜನಕವಾಗುವದು, ಈ ಕಾವಿನ ಪರಿಣಾಮದಿಂದ, ಅದರಲ್ಲಿರುವ ಕಳೆಯ ಬೀಜಗಳೂ, ಸೂಕ್ಷ್ಮರೋಗ ಜಂತುಗಳೂ ನಾಶಹೊಂದುವವು ಸುಮಾರು ಆರು ತಿಂಗಳಾದ ಮೇಲೆ ಯಾವ ವಿಧವಾದ ದುರ್ವಾಸನೆಯಾಗಲೀ ಅಥವಾ ಅಪಾಯವಾಗಲೀ ಇಲ್ಲದಂತಹ ಉತ್ತಮ ಗೊಬ್ಬರವು ತಯಾರಾಗುವದು. ಆಗ್ಗೆ ಈ ಗೊಬ್ಬರವನ್ನು ನಿರ್ಭೀತಿಯಾಗಿ ಭೂಮಿಗೆ ಉಪಯೋಗಿಸಬಹುದು.

ನಗರ ಗೊಬ್ಬರವು ಸಗಣಿ ಗೊಬ್ಬರಕ್ಕಿಂತ ಶ್ರೇಷ್ಠವಾದದ್ದು

ನಗರ ಗೊಬ್ಬರವು ನೋಡಲಿಕ್ಕೆ ಸಗಣಿ ಗೊಬ್ಬರದಂತೆಯೇ ಇದೆ. ಆದರೆ ಇದರಲ್ಲಿ ಸೇಂದ್ರಿಯ ದ್ರವ್ಯವು (Humus) ಹೆಚ್ಚು. ಜಮೀನಿನ ಭೌತಿಕ (Physical). ರಾಸಾಯನಿಕ (Chemical) ಮತ್ತು ಸೂಕ್ಷ್ಮ ಜೀವಾಂಶಕ (Microbiological) ಸ್ಥಿತಿಗಳನ್ನು ಉತ್ತಮಗೊಳಿಸಿ ಭೂಮಿಯ ಕಸುವನ್ನು ಬಹಳಮಟ್ಟಿಗೆ ವೃದ್ಧಿ ಮಾಡುತ್ತದೆ. ಸಾರಜನಕ (Nitrogen) ಮತ್ತು ಸ್ಫುರಕಾಮ್ಲ (Phosphoric acid) ಇವು ನಗರ ಗೊಬ್ಬರಕ್ಕಿಂತ ಇಮ್ಮಡಿಯಷ್ಟಾಗಿವೆ, ಒಂದು ಟನ್ (2 ಗಾಡಿ) ನಗರ ಗೊಬ್ಬರದಲ್ಲಿ 15 ರಿಂದ 20 ಪೌಂಡಿ ಸಾರಜನಕವೂ 12 ರಿಂದ 15 ಪೌಂಡ ಸ್ಫುರಕಾಮ್ಲವೂ ಮತ್ತು 300 ದಿಂದ 400 ಪೌಂಡಿನಷ್ಟು ಸೇಂದ್ರಿಯವೂ [Humus] ಇರುತ್ತದೆ

ನಗರ ಗೊಬ್ಬರದ ಬೆಲೆ ಕಡಿಮೆ

ಇಷ್ಟು ಉತ್ತಮ ತರದ ನಗರ ಗೊಬ್ಬರದ ಬೆಲೆಯು ಟನ್ 1ಕ್ಕೆ ಸುಮಾರು ರೂ. 1ರಿಂದ 3 ಮಾತ್ರ ಆಗುತ್ತವೆ. ಅದರಲ್ಲಿರುವ ಸಾರಜನಕ (Nitrogen) ಮತ್ತು ಸ್ಫುರಕಾಮ್ಲ (Phosphoric acid) ಇವುಗಳ ಪ್ರಮಾಣದ ಮೇಲೆ ಲೆಕ್ಕ ಹಾಕಿದಲ್ಲಿ ರೂ 10 ರ ವರೆಗೂ ಬೆಲೆ ಕಟ್ಟಬಹುದು, ಆದ್ದರಿಂದ ಈ ಗೊಬ್ಬರವನ್ನು ಮುನಿಸಿಪಾಲಿಟಿಗಳಿಂದ ಜಮೀನಿಗೆ ಸಾಗಿಸುವದಕ್ಕೆ ಗಾಡಿ ಬಾಡಿಗೆ ಮತ್ತು ಇತರ ಖರ್ಚುಗಳಾದರೂ ಈ ಗೊಬ್ಬರದ ಬೆಲೆಯು ಅಷ್ಟೇನು ಹೆಚ್ಚಾಗುವದಿಲ್ಲ.

ನಗರದ ಗೊಬ್ಬರವನ್ನು ಉಪಯೋಗಿಸುವ ಪ್ರಮಾಣ

ಒಳ್ಳೆ ಮಳೆಯಾಗುವ ಅಥವಾ ಬಾಗಾಯತ ಪೀಕ ಬೆಳೆಯುವ ಪ್ರದೇಶಗಳಲ್ಲಿ ಎಕರೆ ಒಂದಕ್ಕೆ ೧೫ ರಿಂದ ೨೦ ಗಾಡಿ ನಗರ ಗೊಬ್ಬರವನ್ನು ಉಪಯೋಗಿಸಬಹುದು. ಕಡಿಮೆ ಮಳೆ ಪ್ರದೇಶಗಳಲ್ಲಿ ೫ರಿಂದ ೧೦ ಗಾಡಿಗಳು ಸಾಕು, ಇನ್ನೂ ಅಲ್ಪವೃಷ್ಟಿ ಪ್ರದೇಶಗಳಲ್ಲಿ (೩೦ ಇಂಚಿಗಿಂತ ಕಮ್ಮಿ) ೩ರಿಂದ ೫ ಗಾಡಿಗಳು ಮಾತ್ರ ಸಾಕು. ರೈತರು ತಮ್ಮ ಹೊಲಗಳನ್ನು ಮೂರು ಭಾಗಗಳನ್ನಾಗಿ ವಿಂಗಡಿಸಿ ಸರತಿಯ ಮೇಲೆ ನಗರ ಗೊಬ್ಬರವನ್ನು ಹಾಕುವದು ಒಳ್ಳೆಯದು ಜಮೀನಿನ ಮೇಲೆ ಈ ಗೊಬ್ಬರದ ಪರಿಣಾಮವು ಹಾಕಿದ ಮೂರು ವರುಷ ಉತ್ತಮವಾಗಿ ಕಂಡುಬರುವದು. ಕ್ರಮವಾಗಿ ಮೇಲೆ ಹೇಳಿದ ರೀತಿಯಲ್ಲಿ ಈ ನಗರ ಗೊಬ್ಬರವನ್ನು ಉಪಯೋಗಿಸಿದರೆ ಕಡಿಮೆಯಾಗಿರುವ ನಮ್ಮ ಭೂಮಿಗಳ ಕಸವು ಪುನರುಜ್ಜೀವಿತವಾಗಿ ಧಾನ್ಯದ ಉತ್ಪತ್ತಿಯು ಅಭಿವೃದ್ಧಿ ಹೊಂದುತ್ತದೆ

ರಾಯದುರ್ಗದ ಹಳ್ಳಿಗಳಲ್ಲಿ ಹೆಚ್ಚಿನ ಪೋಲೀಸರು

ರಾಯದುರ್ಗ ತಾಲೂಕಿನ ಮುರಡಿ ಹನುಮಾಪುರ ಮತ್ತು ೫ ಹಳ್ಳಿಗಳಲ್ಲಿ ಪಾರ್ಟಿ ವ್ಯಾಜ್ಯಗಳಿದ್ದು ಶಾಂತಿಭಂಗದ ಕಾರಣಗಳಿದ್ದ ಕಾರಣ ೧೯೪೮ ರಿಂದ ಹೆಚ್ಚಿನ ಪೋಲೀಸು ಪಡೆಯನ್ನಿಡಲಾಗಿದೆ ಯೆಂದೂ ೧೯೪೮ ರಿಂದ ೪೭ ರ ವರೆಗೆ ಇದಕ್ಕಾಗಿ ಹೆಚ್ಚಿನ ತೆರಿಗೆ ಹಾಕಲಿಲ್ಲವೆಂದೂ ೧೯೪೮ ರಲ್ಲಿ ಕಿತ್ತ ೧೩೦೨ ರೂ ತೆರಿಗೆಯನ್ನು ಬಡವರೆಂಬ ಕಾರಣ ಹಿಂದೆ ಕೊಡಲಾಯ್ತೆಂದೂ ಕೌನ್ಸಿಲದಲ್ಲಿ ತಿಳಿಸಲಾಯಿತು.

೧೧ ಮಹಿಮೆಗಳ ಗುಣ
ಉತ್ತಮ ಪಾನ್ ಮಸಾಲ
ದಶಗುಣ
ತಂಪುಕಾರಿ, ಹಲ್ಲುಕಾರಿ, ಮುಖಕಾರಿ,
ಕ್ಷಯಾಪಹಾರಕ, ನಗೆ ಜ್ವರ, ಮಲಬದ್ಧ
ಪ್ರಕಾಶ ಔಷಧಾಲಯ

ಬಳ್ಳಾರಿ ಬೀದಿಗಳಲ್ಲಿ ಪಂಢರಪುರ ಯಾತ್ರಿಕರ ಮೆರವಣಿಗೆ

ಪಂಢರಿಪುರದ ಯಾತ್ರಿಕರು ಶ್ರೀಪುರು ಷಭಕ್ತರ ಸಮೇತ ಬಳ್ಳಾರಿ ಬೀದಿಗಳಲ್ಲಿ ಭಜನವಾದ್ಯಗಳಿಂದ ಹೊರಟಾಗ ಕೆರೆಕಟ್ಟೆ ಬೀದಿಯ ಮಸೀದಿಯಮುಂದೆ ಹೋಗಬಾರದೆಂದು ಅವರನ್ನು ವಾರ್ಡ್‌ಲಾ ಶಾಲೆಯ ರಸ್ತೆಯಿಂದ ತಿರುಗಿಸಿದ್ದರು. ಪಾಕಿಸ್ಥಾನ ಹಿಂದೂಸ್ಥಾನಗಳೆಂದು ವಿಭಜಿತವಾದ ಮೇಲೂ ಪಬ್ಲಿಕ್‌ರಸ್ತೆಯಲ್ಲಿ ಭಜನೆಯಿಂದ ಹೋಗಬಾರದೆನ್ನುವ ಕ್ರಮವು ಅನ್ಯಾಯವಾದುದೆಂದು ಪ್ರತಿಭಟಿಸುತ್ತಾ ಬಳ್ಳಾರಿ ನಗರದ ಗೃಹರಕ್ಷಕದಳದವರು ಮತ್ತು ಇತರ ಯುವಕರು ದೊಡ್ಡ ಮೆರವಣಿಗೆಯನ್ನು ವಾದ್ಯಗಳಿಂದಲೂ ಸದರಿ ಪಂಢರಿಪುರ ಭಜನೆಯವರಿಂದಲೂ ಅದೇ ಬೀದಿಯಲ್ಲಿ ಯಾವ ತಡೆ ಆತಂಕಗಳಿಲ್ಲದೆ ಯಶಸ್ವಿಯಾಗಿ ಕೊನೆಗಾಣಿಸಿದರು. ಈ ಮೆರವಣಿಗೆಯಲ್ಲಿ ಸುಮಾರು ಐದುಸಹಸ್ರ ಜನರು ಬಹಳ ಉತ್ಸಾಹದಿಂದ ಭಾಗವಹಿಸಿದ್ದರು. ಪಂಢರಪುರ ಯಾತ್ರಿಕರ ನಾಯಕರಾದ ಶ್ರೀಮತಿ ಗಯಾಬಾಯಿಯವರ ಹರಿಕೀರ್ತನೆಗಳು (ಕೋಟೆಮಲ್ಲೇಶ್ವರ ದೇವಾಲಯದಲ್ಲಿ) ಭಕ್ತರನ್ನಾಕರ್ಷಿಸುತ್ತಲಿವೆ.

ಹರಿಜನರಿಗೆ ಊಟ ಹಾಕದ್ದಕ್ಕೆ ಹೋಟಿಲ್ ಮಾಲಿಕರ ಬಂಧನ

ಮದರಾಸಿನ ಜಾರ್ಜ್‌ಟೌನ್‌ನಲ್ಲಿನ ಮಾಡರ್ನ್‌ಕೆಫೆದಲ್ಲಿ ಶಿಟಿಕೌನ್ಸಿಲ ಸದಸ್ಯರಾದ ಶ್ರೀ ವಿ. ಮುನಿಸ್ವಾಮಿಯವರಿಗೆ ಒಂದು ಪ್ರತ್ಯೇಕ ಜಾತಿಯವರಿಗಾಗಿ ಕಾದಿಟ್ಟ ಸ್ಥಳದಲ್ಲಿ ಊಟಕ್ಕೆ ಬಡಿಸಲಿಲ್ಲವೆಂಬ ಕಾರಣದಿಂದ ಹೋಟೆಲ ಮಾಲಿಕರಾದ ಶ್ರೀ ಕೆ.ಶೀತಾರಾಮರಾಯರನ್ನು ಮೇನೇಜರ್ ಎ. ಎ. ಭಟ್ಟರನ್ನು ಬಂಧಿಸಲಾಗಿತ್ತು. ಅವರನ್ನು ಈಗ ಜಾಮೀನಿನ ಮೇಲೆ ಬಿಟ್ಟಿರುವರು. ಇಷ್ಟರಲ್ಲೇ ಅವರ ಮೇಲೆ ಕೇಸು ನಡೆಯಲಿದೆ.

ಕರ್ನಾಟಕ ಏಕೀಕರಣ

ಮೈಸೂರು ಮತ್ತು ಕೆ. ಪಿ. ಸಿ. ಸಿ. ಸಂಧಾನ ಸಮಿತಿಗಳು ಅಖಿಲ ಮೈಸೂರು ಕಾಂಗ್ರೆಸ್ಸಿನವರಿಂದ ನಿಯುಕ್ತರಾದ ಮೈಸೂರು ಸಂಧಾನಸಮಿತಿ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನಿಂದ ಏರ್ಪಟ್ಟ ಸಮಿತಿಯವರು ಸಂಡೂರು ಹೊಸಪೇಟೆ ಬಳ್ಳಾರಿ ಅನಂತಪುರಗಳನ್ನು ಸಂದರ್ಶಿಸಿ ಕೈಕ್ಷಣಿಕ ಸಮಿತಿಗಳಿಗೂ, ತುಂಗಭದ್ರ ಯೋಜನೆ ಮ್ಯಾಂಗನೀಸ್ ಕಬ್ಬಿಣದ ಗಣಿ ಪ್ರದೇಶಗಳಿಗೆ ಭೇಟಿ ಇತ್ತು ಕಾರ್ಯಕರ್ತರೊಡನೆ ಪರಾಮರ್ಶಿಸಿ ಅನಂತಪುರಕ್ಕೆ ತೆರಳಿದರು.

ಮೈಸೂರಿನವರ ಪರವಾಗಿ ಶ್ರೀ ಸುಬ್ರಹ್ಮಣ್ಯಂರವರು ಹೀಗೆ ಅಪ್ಪಣೆ ಕೊಡಿಸಿದರು.

"ಮೈಸೂರು ಸಂಸ್ಥಾನವು ಬೊಂಬಾಯಿ -ಯೂ- ಮದರಾಸ್ ಪ್ರಾಂತದಲ್ಲಿ ವಿಲಯನವಾಗುವ ಪ್ರಶ್ನೆಯೇ ಇಲ್ಲ. ಮೈಸೂರಲ್ಲಿ ರಾಜರು ಘಟನಾತ್ಮಕವಾಗುಳಿದು ಸರ್ವ ಅಧಿಕಾರವನ್ನೂ ಬಿಟ್ಟುಕೊಟ್ಟಿದ್ದಾರೆ. ಮೈಸೂರಿನವರ ಅಭಿಪ್ರಾಯವು ರಾಜರನ್ನುಳಿಸಿ ಕೇಂದ್ರಕ್ಕೆ ಸ್ಪಷ್ಟವಾದ ಪ್ರಾಂತವನ್ನು ರಚಿಸಬೇಕೆಂದಿದೆ. ನಾವು ಮೈಸೂರನ್ನೊಳಗೊಂಡ ಕರ್ನಾಟಕ ಪ್ರಾಂತರಚನೆಗೆ ಬೆಂಬಲವೀಯುತ್ತೇವೆ. ಪಕ್ಕಾಟ ಭಾಗದವರು ಆಂದೋಳನ ಮಾಡಿ ಸದ್ಯದ ಪರಿಸ್ಥಿತಿಯಲ್ಲಿ ಮೈಸೂರಲ್ಲಿ ಸೇರಿದರೆ ಪ್ರಾಂತನಿರ್ಮಾಣ ಪ್ರಶ್ನೆಯು ಶೀಘ್ರವಾಗಿ ಬಗೆಹರಿಯುವದು. ಮೈಸೂರಿನಲ್ಲಿ ಒಳ್ಳೆಯರಾಜ್ಯ ಭಾರವಿದ್ದು ಕೇಂದ್ರದವರ ಧೀನಸ್ಥನಾಗಿ ಕಾರ್ಯ ಸಾಗಿದೆ." ಕಾರ್ಯಕರ್ತರೆಲ್ಲಾ ಮೈಸೂರನ್ನೊಳಗೊಂಡ ವಿಶಾಲಕರ್ನಾಟಕ ಪ್ರಾಂತರಚನೆಯಾಗಬೇಕೆಂದೂ ಅದಕ್ಕೆ ತಕ್ಕ ಚರ್ಯೆಗಳನ್ನು ತೆಗೆದುಕೊಳ್ಳಬೇಕೆಂದೂ ಅಭಿಪ್ರಾಯ ಕೊಟ್ಟರು.

ಬಳ್ಳಾರಿಯ ವೀರಶೈವ ಕಾಲೇಜು

ಮದರಾಸ್ ಕೌನ್ಸಿಲದಲ್ಲಿ ಸದಸ್ಯರಾದ ಶ್ರೀ ಬಿ. ಬೀಮರಾಯರ ಪ್ರಶ್ನೆಗೆ ಉತ್ತರಿಸುತ್ತಾ ವಿದ್ಯಾಮಂತ್ರಿಗಳಾದ ಶ್ರೀ ಅವಿನ ಶಿಲಿಂಗಂ ಚೆಟ್ಟಿಯಾರ್ ರವರು ಹೀಗೆ ಹೇಳಿದರು.

"ಮುಂಬರುವ ಜೂನಿನಿಂದ ಕಾಲೇಜನ್ನು ನಡೆಸಬಾರದೆಂದು ವೀರಶೈವ ಕಾಲೇಜಿನ ವ್ಯವಸ್ಥಾಪಕ ಸಮಿತಿಯವರು ನಿಶ್ಚಯಿಸಿದ್ದು ಸರಕಾರಕ್ಕೆ ಗೊತ್ತಾಗಿದೆ. ಬಳ್ಳಾರಿ ಮುನಿಸಿಪಾಲಿಟಿಯವರು ಒಂದು ತೀರ್ಮಾನವಮಾಡಿ ಸಾರ್ವಜನಿಕರಿಂದ ೨ ಲಕ್ಷರೂ ಸಂಗ್ರಹಿಸಿ ಸರಕಾರದವರೇ ಇದನ್ನು ಫಸ್ಟ್‌ಗ್ರೇಡ್ ಕಾಲೇಜಾಗಿ ನಡೆಸಲು ಕೇಳಿರುತ್ತಾರೆ. ಇಲ್ಲವೇ ಮುನಿಸಿಪಾಲಿಟಿಯವರೇ ನಡೆಸಲು ಅಪ್ಪಣೆಬೇಡಿರುತ್ತಾರೆ. ಈ ತೀರ್ಮಾನವನ್ನು ಪರಿಶೀಲಿಸುತ್ತಲಿದೆ. ಬಳ್ಳಾರಿಯ ಪುರಜನರ ನಿಕ್ಷನುಂಡಳವು ಬಂದು ಮಂತ್ರಿಗಳೊಡನೆ ಚೆಟ್ಟಿಯಾಗಲಿದೆ. ಅವರು ಹೇಳುವಂಶಗಳನ್ನನುಲಕ್ಷಿಸಿ ಪರಿಸ್ಥಿತಿಗನುಗುಣವಾಗಿ ಈ ಪ್ರಶ್ನೆಯು ವಿಮರ್ಶಿಸಲ್ಪಡುವದು."

— ಕೌನ್ಸಿಲ ಸದಸ್ಯರಿಗೆ ಜೀವದಾನ:- ಮದರಾಸಿನ ೧೫ ಕೌನ್ಸಿಲ ಸದಸ್ಯರಿಗೆ ೧೯೫೦ ರವರಿಗೆ ಸದಸ್ಯತ್ವದ ಅವಧಿ ದೊರೆತಿದೆ. ಬಳ್ಳಾರಿ ಎಂ. ಎಲ್. ಸಿ. ಗಳಾದ ಶ್ರೀ ಬಿ. ಭೀಮರಾಯರೂ ಅವರಲ್ಲೊಬ್ಬರು.

ತುಂಗಭದ್ರಾಯೋಜನೆ

ಬುನಾದಿಯನ್ನು ಹಾಕಿದ ೪ ವರುಷಗಳಲ್ಲಿ ಕೆರೆಯ ಬುನಾದಿಯನ್ನಗಿಯುವ ಕಾರ್ಯವು ಮುಗಿದಂತಾಗಿದೆ. ಮದರಾಸು ಭಾಗದಲ್ಲಿ ಮೂರು ಸಾವಿರ ಕೂಲಿಕಾರರು ಕೆಲಸಮಾಡುತ್ತಲಿದ್ದು ಕಟ್ಟಡವು ಶೀಘ್ರದಲ್ಲೇ ಪ್ರಾರಂಭವಾಗಲಿದೆ ಸಿಮೆಂಟಿನ ಅಭಾವವೊಂದಿದೆ.

175 ಮೈಲುಗಳಂತರದ ಕಾಲುವೆಯಲ್ಲಿ 50 ಮೈಲುಗಳಷ್ಟು ಮುಗಿದಿದ್ದು ಈ ಕಾರ್ಯದಲ್ಲಿ ಇಪ್ಪತ್ತುಸಾವಿರ ಕೂಲಿಕಾರರು ಕೆಲಸದಲ್ಲಿ ತೊಡಗಿದ್ದಾರೆ. ಮದ್ಯನಿಷೇಧದಕ್ಕೆ ಕೈದಿಗಳನ್ನು ಈ ಕೆಲಸಕ್ಕೆ ಹಚ್ಚುವದಿದು 2000 ಕೈದಿಗಳಿಗಾಗಿ ಕಗ್ಗಲ್ಲಿನಲ್ಲಿ ತಾತ್ಕಾಲಿಕ ಸೆರೆಮನೆಯು ಕಟ್ಟಲ್ಪಡುವದು.

ವಿದ್ಯುಚ್ಛಕ್ತಿಯ ಉತ್ಪತ್ತಿಗಾಗಿ ಪವರ್ ಕ್ಯಾನಾಲ್ ಬುಕ್ಕಸಾಗರದವರೆಗೂ ಹೋಗಿ 110 ಅಡಿ ಕೆಳಗೆ ಜಲಪಾತವಾಗುವದು ಪ್ರಾರಂಭದಲ್ಲಿ 65 ಅಡಿ ಬೀಳುವುದು. 1952—53 ರ ಸುಮಾರಕ್ಕೆ ತುಂಗಭದ್ರಾದ ವಿದ್ಯುತ್ತೇ ಉಪಯೋಗಕ್ಕೆ ಬೀಳುವದು ವಿದ್ಯುಚ್ಛಕ್ತಿಯ ಉತ್ಪನ್ನಕ್ಕಾಗಿ ಜಲಾಶಯ ನಿರ್ಮಾಣದ ಬಗ್ಗೆ ಕಮಲಾಪುರದಲ್ಲಿ ಭೂಗರ್ಭಶಾಖೆಯವರಿಂದ ತಕರಾರಿದೆ. ಡೆಲ್ಲಿಯ ಮುಖ್ಯರು ಬರಲಿದ್ದು ಯಾವ ಸ್ಥಳವು ಅನುಕೂಲದ್ದೆಂಬುದು ನಿಶ್ಚಯಿಸಲಾಗುವದು.

— ಅಸಾಧ್ಯವಾದುದನ್ನು ನಾವು ಸಾಧಿಸಿದ್ದೇವೆ. ನಾವು ಸ್ವತಂತ್ರವಾಗಿರುವೆವು ಮಾತ್ರವಲ್ಲ. ಪ್ರಬಲವಾದ ಭೂಸೇನೆ, ನೌಕಾ ಪಡೆಗಳಿಲ್ಲದಿದ್ದರೂ ನಮ್ಮ ರಾಷ್ಟ್ರವು ಪ್ರಬಲವಾಗಿದ್ದು ಜಗತ್ತಿನಲ್ಲಿ ಪ್ರತಿಷ್ಠೆಯನ್ನು ಗಳಿಸಿಕೊಂಡಿರುವೆವು. ಮಹಾತ್ಮರ ಮಾರ್ಗದರ್ಶನದಲ್ಲಿ ಅಡಕವಾದ ಸತ್ಯದಿಂದಲೇ ನಮಗೆ ಈ ಸಾಮರ್ಥ್ಯ ಉಂಟಾಗಿದೆ. ಅಹಿಂಸೆಯಿಂದ ಸ್ವರಾಜ್ಯವನ್ನು ಸಂಪಾದಿಸುವುದಾಗಿ ಗಾಂಧೀಜಿಯವರು ಹೇಳಿದ್ದರು. ಅದು ಸತ್ಯವಾಯಿತು. ಒಬ್ಬರನ್ನೊಬ್ಬರು ಪ್ರೀತಿಸಬೇಕೆಂದು ಗಾಂಧೀಜಿಯವರು ಹೇಳಿದ್ದಾರೆ. ನಾವು ಪ್ರಯತ್ನಿಸಿದರೆ ಅದು ಸಾಧ್ಯವಾಗಬಲ್ಲದು. ಗಾಂಧೀಜಿಯವರು ನಮ್ಮೊಡನಿದ್ದರೆಂದು ಹೆಮ್ಮೆಪಟ್ಟರೆ ಸಾಲದು. ಅವರ ಉಪದೇಶವನ್ನು ನೆರವೇರಿಸುವುದು. ನಮ್ಮ ಕರ್ತವ್ಯ. ಹಾಗೆ ನಾವು ಕರ್ತವ್ಯಶೀಲರಾದರೆ ಅವರ ಆತ್ಮಕ್ಕೆ ಸಂತೋಷ.

— ರಾಜಾಜೀ

— ಕಳೆದ ೬ ತಿಂಗಳಲ್ಲಿ ಮದರಾಸ ಪ್ರಾಂತದಿಂದ ಶೇಕಡ ೩.೬ ಜನರು ಭಾರತ ಸೈನ್ಯದಲ್ಲಿ ಭರ್ತಿಯಾಗಿರುವರೆಂದು ರಕ್ಷಣಾ ಶಾಖಾ ಮಂತ್ರಿಗಳಾದ ಸರ್ದಾರ ಬಲದೇವಸಿಂಗರು ಭಾರತ ಪಾರ್ಲಿಮೆಂಟಿನಲ್ಲಿ ರಂಗರಾವರ ಪ್ರಶ್ನೆಗೆ ಉತ್ತರ ವಿತ್ತರು.

ನಮ್ಮ ನೀತಿಮತ್ತೆ

(ಜಯ ಹಿಂದ)

‘ನೀತಿ ಮತ್ತೆ ಕೆಳಮಟ್ಟಕ್ಕೆ ಬಂದಿದೆ, ಎಲ್ಲರೂ ಸುಳ್ಳು ತಿರುಗು ತಗಲುತನಗಳಿಗೆ ನಿಂತರೆ ರಾಜ್ಯವಾಳುವುದು ಹೇಗೆ? ಎಲ್ಲರೂ ಆತ್ಮನಿರೀಕ್ಷಣೆ ಮಾಡಿಕೊಳ್ಳುವುದು ಅವಶ್ಯವಿದೆ’ ವೈಯಕ್ತಿಕ ಹಾಗೂ ಸಾಮಾಜಿಕ ನೀತಿ ಮತ್ತೆ ಹಾಳಾಗಿ ಹೋಗಿದೆ. ನೀತಿ ಮತ್ತೆಯ ಮಟ್ಟವನ್ನು ಮೇಲಕ್ಕೆತ್ತಿದರೆ ದೇಶದ ಉದ್ಧಾರ ಪ್ರತಿಯೊಬ್ಬನೂ ತನ್ನ ಚಾರಿತ್ರವನ್ನು ಸಂವರ್ಧಿಸಿಕೊಂಡು ಎದುರುಬಂದ ಎಲ್ಲ ಗಂಡಾಂತರಗಳನ್ನು ಎದುರಿಸಬೇಕು. ಮಹಾತ್ಮಾ ಗಾಂಧೀಜೀಯವರು ತೋರಿದ ಮಾರ್ಗದಿಂದ ಸಾಗಿದರೆ ಮಾತ್ರ ನಾವು ಗಳಿಸಿದ ಸ್ವಾತಂತ್ರ್ಯ ಚಿರಕಾಲ ಬಾಳುವದು ಆತ್ಮನಿರೀಕ್ಷಣೆಯಿಂದ ಆತ್ಮವನ್ನು ಪರಿಶುದ್ಧಗೊಳಿಸಿ ಪ್ರತಿಯೊಬ್ಬನೂ ಸಮಾಜ ವಿಘಾತಕ ಶಕ್ತಿಯನ್ನು ನಿರ್ಮೂಲನಗೊಳಿಸುವದೇ ಪ್ರತಿಯೊಬ್ಬನ ಕರ್ತವ್ಯ ಇತ್ಯಾದಿ ಉಪದೇಶಕರ ಉಪನ್ಯಾಸಗಳ ಮಾಲಿಕೆಯೇ ಈಗ ಸಭೆ, ಸಮ್ಮೇಲನ, ಪರಿಷತ್ತುಗಳಲ್ಲಿ ನಡೆದಿದೆ.

ಜನ ಜೀವನದಲ್ಲಿ ಉಂಟಾದ ಬಿಕ್ಕಟ್ಟಿನ ಪರಿಸ್ಥಿತಿಯಿಂದ ನೀತಿಮತ್ತೆ ಕೆಳಮಟ್ಟಕ್ಕೆ ಬಂದಿದೆ ಎಂಬುದು ಜನಸಾಮಾನ್ಯರ ಅನುಭವಕ್ಕೆ ಬಂದ ಮಾತು. ಅದನ್ನು ಸರ್ವಶ್ರುತವಾಗುವಂತೆ ವ್ಯಕ್ತಮಾಡಿ ಪ್ರಕಟಿಸಲು ಸಾಧನ ಸಂಪತ್ತುಗಳಿಲ್ಲದ್ದರಿಂದ ಜನಾಭಿಪ್ರಾಯದ ಕೂಗು ಗಾಳಿಯಲ್ಲಿ ತೇಲಿ ಹೋಗುವದು. ಈಗ ಮುಂದಾಳುಗಳ ಮುಖದಿಂದಲೇ ಮೂರ್ತಸ್ವರೂಪಹೊಂದಿ ಅದು ಮುಂದೆ ಬಂದದ್ದು ಶುಭಲಕ್ಷಣ

ಪರೋಪದೇಶದಲ್ಲಿ ಪಾಂಡಿತ್ಯವನ್ನು ಪ್ರದರ್ಶನ ಮಾಡುವದಕ್ಕಿಂತ ನೀತಿಯು ಕೆಳಮಟ್ಟಕ್ಕೆ ಬರಲು ಕಾರಣಗಳೇನಾದರೂ ಇದ್ದರೆ ಅವುಗಳನ್ನೂ ನೀತಿ ಸುಧಾರಿಸಲು ಉಪಾಯಗಳನ್ನೂ ಕಂಡುಹಿಡಿದು ಸುಧಾರಿಸುವ ಪ್ರಯತ್ನವನ್ನು ಮನಃಪೂರ್ವಕವಾಗಿ ಮಾಡಿದರೆ ಒಳಿತಾಗುವದು

ಕೇವಲ ಉಪದೇಶಪರ ಉಪನ್ಯಾಸಗಳಿಂದ ಕೆಟ್ಟಿದ ನೀತಿಯನ್ನು ಸುಧಾರಿಸಲು ಶಕ್ಯವಿದೆಯೇ? ನೀತಿಮತ್ತೆ ಕೆಟ್ಟಿದೆಯೆಂದು ಸರಕಾರದ ಅಧಿಕಾರ ಸ್ಥಾನದಲ್ಲಿದವರು ಅನ್ನುತ್ತಿರುವರು. ಮುಂದಾಳುಗಳು ನೀತಿಮತ್ತೆ ಕೆಳಮಟ್ಟಕ್ಕೆ ಬಂದಿದೆ. ಆತ್ಮನಿರೀಕ್ಷಣೆ ಮಾಡಿಕೊಂಡು ಆತ್ಮೋದ್ಧಾರ ದೇಶೋದ್ಧಾರಗಳನ್ನು ಸರಕಾರದ ಕೂಡ ಸಹಕರಿಸಿ ಸಾಧಿಸಬೇಕೆಂದು ಉಪದೇಶ ಮಾಡುವರು. ಪ್ರಜಾಜನರಾದರೂ ನೀತಿ ಮತ್ತೆ ಕೆಟ್ಟಿದೆ, ಆದರೆ ಸರಕಾರದ ಧೋರಣೆಯಿಂದ ಸಾಮಾಜಿಕ ವೈಯಕ್ತಿಕ ನೀತಿಮತ್ತೆ ಕೆಳಮಟ್ಟಕ್ಕೆ ಬಂದಿದೆಯೆಂದು ಚಡಪಡಿಸುವರು ಹೀಗೇ ಜನತಾ ಮುಂದಾಳು, ಸರಕಾರಗಳು ನೀತಿಯು ಮಟ್ಟ ಕೆಳಗೆ ಬಂದಿದೆಯೆಂದೇ ಅನ್ನುವವರಾದ ಮೇಲೆ ಇದ್ದ ‘ಮೂವರಲ್ಲಿ ಕಷ್ಟವರಾರೆಂಬಂತೆ ಇದಕ್ಕೆ ಹೊಣೆಗಾರರು ಯಾರು? ತಿದ್ದಿಕೊಳ್ಳಲು ಯಾರು ಯಾರಿಗೆ ಹೇಳಬೇಕು?

ನಯಭಯ, ಭೂತದಯೆ, ಪಶ್ಚಾತ್ತಾಪ ಸರಳತನ, ಪ್ರಾಮಾಣಿಕತನ, ಸತ್ಯ, ಅಹಿಂಸೆ, ಅಸ್ತೇಯ ಇವುಗಳೇ ನೀತಿಮಟ್ಟವನ್ನಳೆಯುವ ಅಳತೆಗೋಲಿನ ತ್ರಿಕಾಲಾಬಾಧಿತ ಚಿನ್ಹಗಳು. ಮ|| ಗಾಂಧೀಜಿಯವರಾದರೂ ಇಂಥ ಅಳತೆಗೋಲಿಗೇ ಮುದ್ರೆಯೊತ್ತಿದ್ದರಷ್ಟೇ? ಹಾಗಾದರೆ ಬಹುಮತದ ಬಲದಿಂದ ಯಾವದೊಂದು ವಿಷಯವನ್ನು ನಿರ್ಣಯಿಸುವ ಈ ಕಾಲದಲ್ಲಿ ತೂಕ, ಮಾಪು, ಗಜ ಕಟ್ಟಿಗೆಗಳ ಆಕಾರ ಉದ್ದಳತೆಗಳಲ್ಲಿ ಹೆಚ್ಚು ಕಡಿಮೆ ಮಾಡಿದಂತೆ ಈ ನೀತಿಮಟ್ಟದ ಅಳತೆಗೋಲಿನಲ್ಲಿಯೂ ಹೆಚ್ಚು ಕಡಿಮೆಯಾಗಿಲ್ಲವಷ್ಟೇ? ಸಂಶಯ ನಿವಾರಣೆಯಾದಾಗಲೇ ಎಲ್ಲವೂ ಸರಿಹೋಗುವದು.

ಕೇವಲ ತತ್ವನಿಷ್ಠೆಯಿಂದಲೇ ಈ ವ್ಯವಹಾರಿಕ ಜಗತ್ತಿನಲ್ಲಿ ಬಾಳುವದು ಶಕ್ಯವಿಲ್ಲ. ಕೇವಲ ವ್ಯವಹಾರಿಕ ದೃಷ್ಟಿಯೊಂದನ್ನೇ ಇಟ್ಟುಕೊಂಡರೆ ತತ್ವಕ್ಕೆ ಬಾಧೆ ಬಂದು ಇಹಪರಗಳೆರಡರಲ್ಲಿಯೂ ಗತಿಯಿಲ್ಲ. ತತ್ವಕ್ಕೂ ವ್ಯವಹಾರಕ್ಕೂ ಇರುವ ಬಹುಸೂಕ್ಷ್ಮ ಅಂತರವನ್ನು ಲಕ್ಷ್ಯದಲ್ಲಿಟ್ಟು ಬಾಳಿದರೇನೇ ಮಾನವನಿಗೆ ಸ್ವಂತಕ್ಕೂ ಬಹುಜನ ಸಮಾಜಕ್ಕೂ ಶ್ರೇಯಸ್ಸು ಅನ್ಯೋನ್ಯ ಪ್ರೀತಿ ವಿಶ್ವಾಸ ನಯಭಯ ಪ್ರಾಮಾಣಿಕತೆ ಹಾಗೂ ಸರಳತೆಯ ವ್ಯವಹಾರಿಕ ಬಂಧನದಿಂದ ಸಂಘಟಿತವಾದ ಅನೇಕ ಘಟಕಗಳದೇ ಒಂದು ಸಮಾಜ ಸಮಾಜದ ಘಟಕಗಳಲ್ಲಿ ಸೂತ್ರಬದ್ಧ ಸುಖಜೀವನವೇ ವ್ಯಕ್ತಿಗೂ ಸಮಾಜಕ್ಕೂ ಹಿತಕರ. ಬಂಧನಗಳು ಸಡಿಲಾದವೆಂದರೆ ಅರ್ಥಾತ್ ಪ್ರೀತಿ ವಿಶ್ವಾಸ ನಯಭಯೇತ್ಯಾದಿಗಳು ಮಾಯವಾದರೆ ಸಮಾಜವು ವಿಸ್ಖಲಿತವಾಗುವದು. ವಿಸ್ಖಲಿತ ಸಮಾಜದಿಂದ ರಾಷ್ಟ್ರಕ್ಕೆ ಹಾನಿ. ಸಮಾಜದಲ್ಲಿಯ ಈ ಪರಸ್ಪರ ಪ್ರೀತಿ ವಿಶ್ವಾಸಾದಿಗಳನ್ನು ವರ್ಧಿಸುತ್ತ ಹೋದರೇನೇ ರಾಷ್ಟ್ರಕ್ಕೆ ಸ್ಥೈರ್ಯ. ಇಲ್ಲದಿದ್ದರೆ ಆಡಳಿತೆಯಲ್ಲಿ ಅನೇಕ ಸಣ್ಣ ದೊಡ್ಡ ಕೋಲಾಹಲಗಳೆದ್ದು ರಾಜ್ಯಕ್ಕೆ ನೆಮ್ಮದಿಯಿಲ್ಲ. ಪ್ರಜೆಗೆ ಸೌಖ್ಯವಿಲ್ಲ.

ಇಂಥ ಪರಿಸ್ಥಿತಿ ಈಗ ನಿರ್ಮಾಣವಾಗಿದೆ, ಶೇತಕಿ, ವ್ಯವಹಾರ, ಉದ್ಯೋಗ, ವ್ಯವಸಾಯ ಆಡಳಿತೆ ಎಲ್ಲದರಲ್ಲಿಯೂ ಅಸಂತೃಪ್ತಿ ಅಸಂತೋಷ. ಆರ್ಥಿಕ ವಿಷಮತೆಯೇ ಎಲ್ಲಕ್ಕೂ ಕಾರಣವೆಂದು ಹೇಳುವರು. ಹೋಗಲಾಡಿಸಲು ಕಾನೂನುಗಳು ಪಾಸಾದವು, ಪಾಸಾಗುತ್ತಿವೆ. ಆದರೆ ಪರಿಸ್ಥಿತಿಯು ಸುಧಾರಿಸುವದರಬದಲು ದಿನದಿನಕ್ಕೆ ಮತ್ತಿಷ್ಟು ಉಲ್ಬಣಾವಸ್ಥೆಗೆ ಬರುತ್ತಿದೆ. ತಾತ್ವಿಕ ದೃಷ್ಟಿಯಿಂದ ಇಂಥ ಕಾಯಿದೆ ಕಾನೂನುಗಳು ಜನತೆಯಲ್ಲಿಯ ಅನೀತಿಯನ್ನು ಉಚ್ಚಾಟನೆಮಾಡಿ ನೀತಿಯ ಮಟ್ಟವನ್ನು ಮೇಲಕ್ಕೆತ್ತಲು ಸಹಾಯಕಗಳಾಗಿವೆಯೇ ಎಂದು ವಿಚಾರ ಮಾಡಿದರೆ ಇಲ್ಲವೆಂದೇ ನಿಸ್ಸಂಶಯ ಹೇಳಬರುವದು. ಅಪ್ರಾಮಾಣಿಕತೆಯ ಒಂದಂಶವನ್ನು ಬಯಲಿಗೆಳೆದು ದಂಡಿಸಲು ಮಾಡಿದ ಕಾಯಿದೆಯಿಂದ ಲಕ್ಷ ಸಂಖ್ಯೆಯಿಂದ ಎ[illegible] ಪ್ರಮಾಣದಿಂದ ಅಪ್ರಾಮಾಣಿಕತೆ ಬೆಳೆದು ನಿಂತಿತು. ಅನ್ನಬಟ್ಟೆಯ ಧೋರಣೆಯಿಂದ ಕಳ್ಳಪೇಟೆ ಲಂಚಗುಳಿತನವು ದೇಶದಲ್ಲಿ ಸ್ಥಾನಮಾನ ಮಾಡುವದು ಎಲ್ಲರೂ ಅರಿತ ಮಾತೆ. ನಿಯಂತ್ರಣದಿಂದ ನೀತಿ ಕೆಡುವದೆಂದು ಮ|| ಗಾಂಧೀಜಿಯವರು ನಿಯಂತ್ರಣ ಬೇಡವೆಂದರು. ನಿಯಂತ್ರಣವು ಇಡೀ ದೇಶವನ್ನೇ ನೀತಿಗೆಡಿಸುತ್ತದೆ. ನೀತಿಗೇಡಿತನವು ನಿರಾಹಾರ ನಿರ್ವಸ್ತ್ರತೆಗಳಿಗಿಂತಲೂ ಕೇಡಾದ ಸಂಗತಿ ಎಂದು ಮ|| ಗಾಂಧೀಜಿಯವರ ಪರಮ ಶಿಷ್ಯರಾದ ಶ್ರೀ ಕೆ. ಜಿ. ಮಶ್ರೂವಾಲಾ ಇವರು ಹೇಳಿರುವರು.

ಪರಿಸ್ಥಿತಿಯೇ ಮಾನವನ ಮನಃಪ್ರವೃತ್ತಿಗೆ ಕಾರಣ. ಸ್ವಾತಂತ್ರ್ಯೋದಯವಾದ ಕೂಡಲೇ ಭಾವನಾವಶರಾದ ಅಧಿಕಾರಾರೂಢರು ಮಾಡಿದ ಹಲಕೆಲವು ಯೋಜನೆಗಳಿಂದ, ವಹಿಸಿದ ಧೋರಣೆಯಿಂದ ಪ್ರಜೆಯ ಹಿತಕ್ಕೆ ಬಾಧೆ ಬರುತ್ತದೆ. ತಮಗೆ ಬಂದ ಸಂಕಷ್ಟಗಳನ್ನು ಸರಕಾರದ ಲಕ್ಷಕ್ಕೆ ತಂದು ನೋಡುವದು ತಪ್ಪಲ್ಲವಷ್ಟೇ? ಉಪವಾಸ ಮಾರಿಯನ್ನು ಎದುರಿಸಲು ಹೆದರಿ ಅಡ್ಡಮಾರ್ಗಬಿದ್ದು ಜೀವವುಳಿಸಿಕೊಳ್ಳಲು ಓಡಿಹೋಗಬೇಕಾದ ಪರಿಸ್ಥಿತಿಗೆ ಕಾರಣ ಎಂದರೆ ಸರಕಾರದ ಈ ಅನ್ನಧೋರಣ.

ಸರಕಾರದ ಉದ್ದೇಶ ಘೋಷಣೆಗಳ ಮೂಲಘಟನದ ಸಹಾಯದಿಂದ ಪೂರ್ವಗ್ರಹದೂಷಿತ ಮನೋವ್ಯಾಪಾರಕ್ಕೆ ಈಗ ಅ[illegible]ವಾಗಿದೆ. ಪ್ರತಿಷ್ಠಿತರೆನಿಸಿದ ಕೆಲವು ಸ್ವಯಂ-ಮಾನ್ಯ ಮುಂದಾಳುಗಳಿಂದ ಹಳ್ಳಿಹಳ್ಳಿಗಳ ಪರಿಸ್ಥಿತಿಯು ಹದಗೆಡುತ್ತಿದೆ ಇದು ಯಾರಿಗೆ ಗೊತ್ತಿಲ್ಲ? ಸರಕಾರಕ್ಕೆ, ಕಾಂಗ್ರೆಸ್ ಸಂಸ್ಥೆಗೆ, ಗಣ್ಯಪ್ರತಿನಿಧಿಗಳಿಗೆ, ಎಲ್ಲರಿಗೂ ಗೊತ್ತಿದೆ. ಅಧಿಕಾರಸ್ಥಾನದಲ್ಲಿದ್ದವರ ಕಿವಿಯವರೆಗೂ ಎಷ್ಟೋ ದೂರುಗಳು ಹೋಗಿರಲು ಸಾಕು. ಕಾಂಗ್ರೆಸ್ ಅಧ್ಯಕ್ಷರು ಕಾಂಗ್ರೆಸ್ಸಿಗರ ನಡವಳಿಕೆಯ ಕುರಿತು ಆದೇಶ ಪತ್ರವನ್ನು ಹೊರಡಿಸಿರುವರು. ಆದರೆ ಆದರಂತೆ ನಡೆಯದಿದ್ದವರನ್ನು ಹುಡುಕಿ ತೆಗೆದು ಅಂಥವ

ರ ಮೇಲೆ ಯೋಗ್ಯಕ್ರಮ ತೆಗೆದುಕೊಳ್ಳಬಾಗಿದೆಯೇ? ಮ|| ಗಾಂಧೀಜಿಯವರ ಜೀವಮಾನದಲ್ಲಿಯೇ ದೇಶಭಕ್ತ ಕೊಂಡಾ ವೆಂಕಟಪ್ಪನವರಿಂದ ಕಾಂಗ್ರೆಸ್ಸಿನಲ್ಲಿಯ ಕೊಳೆಯುಬಗ್ಗೆ ಹಾಗೂ ಅಧಿಕಾರ ವಹಿಸಿದ ಕಾಂಗ್ರೆಸ್‌ಗರ ವಿಷಯವಾಗಿ ಸುಸ್ಪಷ್ಟ ಹಾಗೂ ನಿರ್ದಾಕ್ಷಿಣ್ಯ ಶಬ್ದಗಳ ಲೇಖನವೊಂದು ಪ್ರಸಿದ್ಧವಾಯಿತು. ಅದರ ಪರಿಣಾಮ? ದುಡ್ಡಿಗೆ ಮೂರೇ ಸ್ಸೆ. ಅಗ್ರಗಣ್ಯವ್ಯಕ್ತಿಗಳ ಲೇಖನದ ಪರಿಣಾಮವೆ? ಇಂತಾದವೆಂಲಿ ಉಳಿದವರದೇನು ಪಾಡು. ಎಲ್ಲವೂ ಅರಣ್ಯರೋದನ.

ಮನುಷ್ಯರಾದ ಮೇಲೆ ಯಾರಿಂದಲಾದರೂ ತಪ್ಪಾಗುವದುಂಟು. ಮುಂಬಯಿ ಕೂಲಿಕಾರ ಮಂತ್ರಿಗಳಾದ ಶ್ರೀ ಗುಲ್ಜಾರಿಲಾಲ ನಂದಾ ಇವರು ಮೊನ್ನೆ ೧೩ ನೇ ದಿನಾಂಕದಲ್ಲಿ ಮನಮಾಡದ ಕೂಲಿಕಾರ ಸಭೆಯಲ್ಲಿ ಮಾತಾಡುವಾಗ ತಪ್ಪು ತಿದ್ದಿಕೊಳ್ಳಲಿಕ್ಕೆ ಸರಕಾರಕ್ಕೆ ಅವಕಾಶ ಕೊಡಬೇಕು. ಸ್ವಾತಂತ್ರ್ಯದಿಂದ ಅಂಧಶ್ರದ್ಧೆ ಮಾಯವಾಗದು. ಎಂದು ಹೇಳಿರುವರೆಂದು ವರ್ತಮಾನ ಪತ್ರಗಳಲ್ಲಿ ವರದಿಯಾಗಿದೆ. ಎಲ್ಲ ಮಂತ್ರಿಗಳೂ ಇದರಂತೆ ತಮ್ಮ ತಮ್ಮ ಪೂರ್ವ ಗ್ರಹದೂಷಿತ ಅಭಿಪ್ರಾಯಗಳನ್ನು ಬದಿಗಿರಿಸಿ ತಮ್ಮ ಈಗಿಟ್ಟುಕೊಂಡ ಧೋರಣೆಯನ್ನು ಜನಾಭಿಪ್ರಾಯವನ್ನು ಕೇಳಿಕೊಂಡು ಬದಲಿಸಲು ಪ್ರಯತ್ನಮಾಡಬಹುದೆಂದು ಆಶಿಸಬಹುದೇ? ಹೀಗಾದಲ್ಲಿ ಜನರ ನೀತಿಮಟ್ಟವೇಲಕ್ಕೇರಲಿಕ್ಕೆ ಬಹು ಸಹಾಯವಾಗುವದು.

ಆತ್ಮ ನಿರೀಕ್ಷಣೆಯಿಂದ ಕೃತಕರ್ಮದ ಪಶ್ಚಾತ್ತಾಪವಾದಾಗ ಆತ್ಮ ಶುದ್ಧಿಯಾಗುವದು. ತದ್ವಾರಾ ದೇಶದ ಉದ್ಧಾರವೂ ಆಗುವದು, ಮ|| ಗಾಂಧೀಜಿಯವರು ಆತ್ಮ ನಿರೀಕ್ಷಣೆಯಿಂದ ತಮ್ಮ ಬಾಲ್ಯ ಮತ್ತು ಯೌವನದಲ್ಲಿ ತಮ್ಮಿಂದ ಘಟಿಸಿದ ಕೆಲವು ಅನೈತಿಕ ವರ್ತನೆಯ ವಿಷಯಗಳನ್ನು ಅವರ ವಯಸ್ಸಿನಲ್ಲಿ ಕಂಡುಕೊಂಡು ಆತ್ಮೋದ್ಧಾರಕ್ಕೆ ಬಿಚ್ಚುಮನಸ್ಸಿನಿಂದ ತಮ್ಮ ಆತ್ಮ ಚರಿತ್ರೆಯನ್ನು ಬರೆದು ಜನತೆಯ ಎದುರಿಗೆ ಇಟ್ಟು ತೋರಿಸಿದ ನೈತಿಕ ಧೈರ್ಯ ಎಂಥಹದು! ಅದರಿಂದಲೇ ಅವರು ಜಗದ್ವಂದ್ಯ ವಿಭೂತಿಗಳೆನಿಸಿಕೊಂಡರು ತನ್ನನ್ನುಳಿದು ಎಲ್ಲರ ಅನೀತಿ ಮತ್ತೆಯನ್ನೆತ್ತಿ ತೋರಿಸುವ ಪ್ರತಿಯೊಬ್ಬನೂ ಆತ್ಮನಿರೀಕ್ಷಣೆಯಿಂದ ತನ್ನಿಂದ ಏನೇನು ಘಟಿಸಿದೆಯೆಂಬುದನ್ನು ತಿಳಿದುನೋಡಿ ಪ್ರಾಂಜಲಬುದ್ಧಿಯಿಂದ ಮ|| ಗಾಂಧಿಜಿಯವರಂತೆ ಜನತೆಯ ಮುಂದಿರಿಸುವ ನೈತಿಕ ಧೈರ್ಯ ತೋರಿಸಿದಾಗ ಅವರಲ್ಲಿ ಉಪದೇಶ ಮಾಡುವ ಅಧಿಕಾರವಾಣಿ ಹುಟ್ಟುವದು.

ವೈಯಕ್ತಿಕ ಹಾಗು ಸಾಮಾಜಿಕ ನೀತಿಮತ್ತೆಯನ್ನು ತಿದ್ದುವ ಅಧಿಕಾರವು ಅರಸನ ಹಾಗೂ ಗುರುಮನೆಗೆ ಮೊದಲು ಸೇರಿತ್ತು. ದೇಶದ ಆಡಳಿತ ಸೂತ್ರ ವಹಿಸಿದ ಸತ್ತಾಧಾರಿಯೂ, ಆ ಸಮಾಜದ ಗುರುಪೀಠವನ್ನಲಂಕರಿಸಿದ ಗುರುಗಳೂ ಪರಸ್ಪರ ಸಹಾಯಕರಾಗಿ ಪ್ರಜರ ನೀತಿಮತ್ತೆಯ ವಿಷಯದಲ್ಲಿ ಸಂಪೂರ್ಣ ಅಧಿಕಾರ ನಡೆಸುತ್ತಿದ್ದರಂತಲೇ ಭಾರತದ ಸಂಸ್ಕೃತಿಯು ಜಗತ್ತಿನಲ್ಲಿ ಬೆಳಗಿತು. ರಾಜಕಾರಣವೂ ಧರ್ಮವೂ ಸಮನ್ವಯಿಸಿರುವಾಗ ಪ್ರಜರ ನೀತಿ ನಡಾವಳಿ, ಆಚಾರ ವಿಚಾರ ಮೊದಲಾದ ಮನುಷ್ಯನ ಊರ್ಜಿತಾವಸ್ಥೆಗೆ ಕಾರಣಗಳಾದ ಉತ್ತಮೋತ್ತಮ ಗುಣಗಳ ಕ್ರಮಬದ್ಧ ಕರ್ತವ್ಯವೇ ಧರ್ಮವೆಂದು ವ್ಯಾಖ್ಯೆಯಿತ್ತು. ಧರ್ಮಗುರುಗಳಿಗೆ ರಾಜಕಾರಣದಲ್ಲಿ ಸ್ಥಾನ ಹಾಗೂ ಅವರ ಅಭಿಪ್ರಾಯಕ್ಕೆ ಮನ್ನಣೆ ಇತ್ತು. ಬರಬರುತ್ತ ಧರ್ಮದ ವ್ಯಾಖ್ಯೆ ಬದಲಾಗಿ ಜಾತಿ ಪಂಗಡ ವಾಚಕವಾಗಿ ಧರ್ಮಕ್ಕೆ ರಾಜಕಾರಣದಲ್ಲಿ ಪ್ರವೇಶವೇ ತಪ್ಪಿಹೋಯಿತು. ಈಗೀಗ ಧರ್ಮಕ್ಕೂ ರಾಜಕಾರಣಕ್ಕೂ ಏನೂ ಸಂಬಂಧ ಬರಬಾರದೆಂದು ಒಂದು ಪಕ್ಷವಾದರೆ, ಧರ್ಮ ರಾಜಕಾರಣಗಳು ಸಮನ್ವಯವಾಗುವದೇ ವಿಹಿತವೆಂದು ಇನ್ನೊಂದು ಪಕ್ಷ ಹೇಳತೊಡಗಿದೆ ಮ|| ಗಾಂಧೀಜಿಯವರು ಈ ಎರಡನೇ ಪಕ್ಷವನ್ನೇ ಪ್ರತಿಪಾದಿಸುತ್ತಿದ್ದರು.

ಆದರೆ ಧರ್ಮ ಶಬ್ದವನ್ನು ಜಾತಿ, ಪಂಗಡ ವಾಚಕವಾಗಿ ಗ್ರಹಿಸಿದಂದಿನಿಂದ ಎಲ್ಲ ಧರ್ಮ ಗುರುಗಳಿಗೂ ರಾಜಾಶ್ರಯ ತಪ್ಪಿಹೋಗಿದೆ, ಅವರ ಅಭಿಪ್ರಾಯಕ್ಕೆ ಸಹ ಮನ್ನಣೆಯಿಲ್ಲ. ಯಾವ ಧರ್ಮದ ಗುರುಗಳೇ ಆಗಲಿ ತಮ್ಮ ಶಿಷ್ಯ ವರ್ಗದಲ್ಲಿ ಅನೀತಿವಂತರನ್ನು ತಮ್ಮ ಶಾಸ್ತ್ರಗಳನ್ನನುಸರಿಸಿ ದಂಡಿಸಲು ಅಶಕ್ತರಾದ್ದರಿಂದ ಗುರು ಶಿಷ್ಯ ಭಾವದಲ್ಲಿ ಯಥಾ ತಥಾ ಸಂಪ್ರದಾಯವೇ ನಡೆದಿದೆ. ಧರ್ಮ ಗುರುಗಳಿಗೆ ಶಾಸ್ತ್ರದ ಜೊತೆಗೆ ಬಹಿಷ್ಕಾರವೆಂಬ ಶಸ್ತ್ರದ ಜತೆಯೂ ಇದ್ದರೆ ಶಿಷ್ಯರು ಅಂಜುವರಷ್ಟೇ? ಆದರೆ ಅನೀತಿವಂತ ಶಿಷ್ಯರನ್ನು ಸನ್ಮಾರ್ಗಕ್ಕೆ ಹಚ್ಚಿ ಧರ್ಮ ಗುರುಗಳ ಕರ್ತವ್ಯದಲ್ಲಿ ಬಹಿಷ್ಕಾರವೆಂದು ಬಾಯಿಂದ ಬಂದರೆ ಸಾಕು ಆ ಗುರುಗಳೇ ಜ್ಞಾನ ಮಂಟಪದಲ್ಲಿ ಕೂಡುವ ವೇಳೆಬಂದಿದೆ ಈಗ ಧರ್ಮ ಗುರುಗಳಿಗೆ ರಾಜಾಶ್ರಯ ತಪ್ಪಿಹೋಗಿರುವದೂ ಪ್ರಜರ ನೀತಿಮತ್ತೆ ಕೆಳಮಟ್ಟಕ್ಕೆ ಬರಲು ಕಾರಣಗಳಲ್ಲೊಂದೆಂದು ಹೇಳಬಹುದು. ಒಟ್ಟಿನಲ್ಲಿ ವಾತಾವರಣವು ಬಿಸಿಯಾಗಹತ್ತಿದೆ. ದಿಟ್ಟತನವು ದಿನದಿನಕ್ಕೆ ಬೆಳೆಯುತ್ತಿದೆ. ಇದಕ್ಕೆ ಹೊಣೆಗಾರರಾರು?

ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷ ಸೋಶಿಯಲಿಸ್ಟ್ ಪಾರ್ಟಿ ವಾರ್ತೆಗಳು

ತಾ|| ೬ ರಿಂದ ೧೦ ರ ವರಿಗೆ ಪಾಟ್ನಾದಲ್ಲಿ ನಡೆಯುವ ಅಖಿಲಭಾರತ ರೈತಕಾರ್ಯ ಕರ್ತರ ಸಮ್ಮೇಲನಕ್ಕೆ ಶ್ರೀ ಶಿ. ವೆ. ದೇಸಾಯಿಯವರು ಶಿಕಂದರಾಬಾದ ಮಾರ್ಗವಾಗಿ ಹೊರಟರು.

ನೋಟೀಸು

ಮ|| ರಾ|| ಹೊಸಪೇಟೆ ಡಿ|| ಮು|| ಕೋರ್ಟಿನಲ್ಲಿ

O. P. 8/49

ಅರ್ಜದಾರರು:- ಕೂಡ್ಲಿಗಿ ವೆಂಕಮ್ಮ

In the matter of the debts of K u d e i g i Srnivasa char (deceased)

ಲೇಟು ಕೂಡ್ಲಿಗಿ ಶ್ರೀನಿವಾಸಾಚಾರ್ಯರ ಬಾಬತು ಮರಣಫಂಡು ಹಣಮತ್ತು ಡಿಪಾಜಿಟ್ಟು ಬಾಬತು ಹಣ ವಸೂಲು ಮಾಡಿಕೊಳ್ಳಲು ಆತನ ಹೆಂಡತಿ ವೆಂಕಮ್ಮ ವಾರಸ ಅರ್ಜಿ ಹಾಕಿರುತ್ತಾಳೆ. ಸದ್ರಿ ಅರ್ಜ ವಾಯಿದಾ 24-3-49 ಕ್ಕೆ ಇರುತ್ತದೆ ತಕರಾರು ಇದ್ದವರ ಆ ದಿನ ಕೋರ್ಟಿಗೆ ಹಾಜರು ಆಗತಕ್ಕದ್ದು

ಹೊಸಪೇಟೆ ಎಸ್. ನಾರಾಯಣರಾವ
8-3-49 ಪ್ಲೀಡರ್

ಫಿಬ್ರವರಿ ೨೭-೨೮ ಕ್ಕೆ ಜಿಲ್ಲಾ ಸೋಶಿಯಲಿಸ್ಟ್ ಪಾರ್ಟಿ ಕಾರ್ಯದರ್ಶಿ ಶ್ರೀ ಆರ್. ವಿ ದೇಶಾಯಿಯವರು ಮದ್ರಾಸಿನಲ್ಲಿ ಭಾಯಿ ಅಶೋಕ ಮೇಥಾರವರನ್ನು ಕಂಡು ರೈತ ಸಮಸ್ಯೆಗಳನ್ನು ಚರ್ಚಿಸಿ ಸಲಹೆ ಪಡೆದರು.

ರೈತ ಸಮಸ್ಯೆಗಳಿಗೆ ಸರಕಾರವೂ ಸಾರ್ವಜನಿಕರೂ ಸಾಕಷ್ಟು ಲಕ್ಷ್ಯಕೊಟ್ಟಿಲ್ಲ. ಎಲ್ಲರೂ ಪಟ್ಟಣಗಳಾಭಿವೃದ್ಧಿಯಲ್ಲೇ ತೊಡಗಿರುವರು. ರೈತ ಜೀವನವನ್ನು ಸುಧಾರಿಸಿ ಅವನ ಜೀವನ ಮಟ್ಟವನ್ನು ಮರ್ಯಾದಿತ ಕೇಂದ್ರಕ್ಕೇರಿಸಿ ತನ್ಮೂಲಕ ಸಾಮಾನ್ಯ ಜನತೆಯ ಸುಖಕೋರಲು ಅಖಿಲಭಾರತ ದೃಷ್ಟಿಯ ಕೇಂದ್ರ ಸಂಘವು ಬೇಕು. ಅಖಿಲಭಾರತ ಸೋಶಿಯಲಿಸ್ಟ್ ಪಾರ್ಟಿ ಕಾರ್ಯಕಾರಿ ಸಮಿತಿಯು ಇದಕ್ಕಾಗಿ ಒಂದು ಉಪಸಮಿತಿಯನ್ನು ನಿರ್ಮಿಸಿದೆ. ಇದಕ್ಕೆ ಪ್ರತಿಯೊಂದು ಪ್ರಾಂತದಿಂದಲೂ ಪ್ರತಿನಿಧಿಗಳು ನಿಲ್ಲಬಹುದು. ಕಿಸಾನ ಕಾರ್ಯಕರ್ತರೂ ವ್ಯವಸಾಯಶಾಸ್ತ್ರ ಅರ್ಥಶಾಸ್ತ್ರ ನಿಪುಣರೂ ಪ್ರತಿನಿಧಿಗಳಾಗಲು ಅರ್ಹರು. ಮಾರ್ಚ ೧೦ ಕ್ಕೆ ಕೇಂದ್ರ ಸಂಘದ ರಚನೆಯಾಗಲಿದೆ

ಭೈರವನ ತಿಪ್ಪಾ ನೀರಾವರಿ ಯೋಜನೆ

೧೯೪೯ ರಲ್ಲಿ ಭೈರವನ ತಿಪ್ಪಾ ನೀರಾವರಿ ಯೋಜನೆಯು ಪ್ರಾರಂಭಿಸಲ್ಪಡಬಹುದೆಂದು ಲಕ್ಷಣಗಳು ತೋರಿಬರುತ್ತಲಿವೆ. ಈಗ ಮಾಡಿರುವ ಅಂದಾಜಿನಂತೆ ಅದಕ್ಕೆ ೬೦ ಲಕ್ಷ ರೂ ಖರ್ಚು ತಗಲಬಹುದೆಂದು ಮುಂಗಡ ಪಟ್ಟಿಯಲ್ಲಿ ಹಣವನ್ನು ತೆಗೆದಿಟ್ಟಿದ್ದಾರೆ.

ರಾಯದುರ್ಗದ ತಾಲೂಕಿನಲ್ಲಿರುವ ಈ ನೀರಾವರಿ ಯೋಜನೆಯಿಂದ ಬಳ್ಳಾರಿ ಅನಂತಪುರ ಜಿಲ್ಲೆಗಳಲ್ಲಿ ೧೦ ಸಾವಿರ ಎಕ್ರೆ ತರಿಯಾಗಲಿದೆ.

ಸಾಮಾಜಿಕ ಶಿಕ್ಷಣ

ನಮಗೆ ಬೇಕಾದುದು ಬರೇ ಓದುಬರಹವಲ್ಲ ವಯಸ್ಕರ ಮನಸ್ಸು ವಿಕಾಸಗೊಂಡ ತಮ್ಮ ದೇಶದ ಹಾಗೂ ಪ್ರಪಂಚದ ಆಗುಹೋಗುಗಳಲ್ಲಿ ಶ್ರದ್ಧೆವಹಿಸಿ ವಿಚಾರಿಸುವಂತಾಗಬೇಕು. ಆದುದರಿಂದ ವಯಸ್ಕರ ಶಿಕ್ಷಣದ ಅವಕಾಶಗಳನ್ನು ವಿಸ್ತರಿಸಲಾಗಿದೆ, ಈ ಬದಲಾವಣೆಯಿಂದ ವಯಸ್ಕರ ಶಿಕ್ಷಣವನ್ನು ಇನ್ನು ಮುಂದೆ ಸಾಮಾಜಿಕ ಶಿಕ್ಷಣವೆಂದು ಕರೆಯಲಾಗುವುದು.

ಮೂಲ ಹಾಗೂ ಸಾಮಾಜಿಕ ಶಿಕ್ಷಣದ ಕಾರ್ಯಕ್ರಮವು ಅದನ್ನು ಬೇಗನೆ ಹಳ್ಳಿಗಳಲ್ಲಿ ಹೆಚ್ಚಿನ ಉಪಯೋಗಕ್ಕೆ ಬೀಳುವಂತೆ, ಹಳ್ಳಿಯ ಶಾಲೆಗಳು ಅಲ್ಲಿಯ ಮಕ್ಕಳಿಗೆ ವಿದ್ಯಾಭ್ಯಾಸವನ್ನೀಯುವ ಸ್ಥಳಗಳು ಮಾತ್ರವಲ್ಲದೆ, ಹಳ್ಳಿಗಳಲ್ಲಿ ಸಾಮೂಹಿಕ ಜೀವನದ ಕೇಂದ್ರಗಳಾಗಿಯೂ ಇರುವಂತೆ ಸರಕಾರವು ನಿಶ್ಚಯಿಸಿದೆ ಈ ಶಾಲೆಗಳು ಚಿಕ್ಕ ಮಕ್ಕಳಿಗೂ, ಯುವಕರಿಗೂ, ಪ್ರಾಪ್ತ ವಯಸ್ಕರಿಗೂ ಶಿಕ್ಷಣವನ್ನೀಯುವುದು ಇದಲ್ಲದೆ, ಅವು ವಿನೋದ ಕ್ರೀಡೆಗಳ ಸ್ಥಳಗಳಾಗಿಯೂ ಇರುವವು, ಹಳ್ಳಿಗರ ಆರ್ಥಿಕ ಮಟ್ಟವು ಸುಧಾರಿಸುವಂತೆ ಅವರಿಗೆ ಯಾವುದಾದರೊಂದು ಕಸಬು ಕೈಗಾರಿಕೆಯಲ್ಲಿ ಕಾರ್ಯತಃ ತರಬೇತಿ ಕೊಡುವ ಅಭಿಪ್ರಾಯವಿದೆ. ಅವರ ಸಾಮಾಜಿಕ ಮತ್ತು ಸಾಮೂಹಿಕ ಭಾವನೆಯನ್ನು ವೃದ್ಧಿಗೊಳಿಸುವುದಕ್ಕೋಸ್ಕರ ಆಟಗಳನ್ನೂ ಇತರ ನವಜನಿಗಳ ಮನೋರಂಜಕ ವಿನೋದಗಳನ್ನೂ ವ್ಯವಸ್ಥೀಕರಿಸಲಾಗುವುದು.

ಸಾಮಾಜಿಕ ಮತ್ತು ಮೂಲಶಿಕ್ಷಣದ ಕಾರ್ಯಕ್ರಮದಲ್ಲಿ ಈ ಕೆಳಗಿನ ೧೨ ವಿಷಯಗಳು ಅಡಕವಾಗಿವೆ. ೧) ಹಳ್ಳಿಯ ಶಾಲೆಯು ಇಡೀ ಹಳ್ಳಿಗೆ ವಿದ್ಯೆ, ಸುಧಾರಣಾ ಕೆಲಸ, ಆಟ, ವಿನೋದಗಳ ಕೇಂದ್ರವಾಗಿರುವುದು ೨) ಮಕ್ಕಳಿಗೆ, ಯುವಕರಿಗೆ, ವಯಸ್ಕರಿಗೆ ಪ್ರತ್ಯೇಕ ಶಿಕ್ಷಣ ಕಾಲಗಳಿರುವವು ೩) ವಾರದಲ್ಲಿ ಕೆಲವು ದಿನಗಳನ್ನು ಪ್ರತ್ಯೇಕವಾಗಿ ಹೆಣ್ಮಕ್ಕಳಿಗೂ ಹೆಂಗಸರಿಗೂ ಮೀಸಲಾಗಿರಿಸಲಾಗುವುದು. ೪) ಹಳ್ಳಿಯ ಶಾಲೆಗಳನ್ನು ಸಂದರ್ಶಿಸುವ ಬಗ್ಗೆ ಧ್ವನಿಪ್ರಸರಣ ಯಂತ್ರಗಳಿಂದ ಕೂಡಿದ ಅನೇಕ ಮೋಟಾರ್ ವಾಹನಗಳನ್ನು ಒದಗಿಸಲಾಗುತ್ತಿದೆ. ಚಲಚ್ಚಿತ್ರಗಳನ್ನು ಪ್ರದರ್ಶಿಸಲಾಗುವುದಲ್ಲದೆ ಭಾಷಣಗಳ 'ರಿಕಾರ್ಡು'ಗಳನ್ನಿಡಲಾಗುವುದು, ಶಾಲೆಯನ್ನು ವಾರಕ್ಕೆ ಒಂದು ಸಾರಿಯಾದರೂ ಸಂದರ್ಶಿಸುವ ಸೂಚನೆಯಿದೆ. ೫) ಶಾಲೆಗಳಿಗೆ ರೇಡಿಯೊ ಸೆಟ್ಟುಗಳನ್ನು ಒದಗಿಸಲಾಗುವುದು, ಶಾಲಾ ಮಕ್ಕಳಿಗೂ, ಯುವಕರಿಗೂ, ಪ್ರಾಪ್ತ ವಯಸ್ಕರಿಗೂ ಸಾಮಾಜಿಕ ಶಿಕ್ಷಣದ ಯೋಜನೆಗನುಸಾರವಾಗಿ ಪ್ರತ್ಯೇಕ ಕಾರ್ಯಕ್ರಮಗಳನ್ನು ಬ್ರಾಡ್‌ಕಾಸ್ಟು ಮಾಡುವ ಏರ್ಪಾಡು ಮಾಡಲಾಗುವುದು ೬) ಜನಪ್ರಿಯ ನಾಟಕಗಳನ್ನು ಶಾಲೆಗಳಲ್ಲಿ ವ್ಯವಸ್ಥೀಕರಿಸಲಾಗುವದು. ಅತ್ಯುತ್ತಮ ನಾಟಕಗಳಿಗೆ ಆಗಿಂದಾಗ ಬಹುಮಾನ ಕೊಡಲಾಗುವುದು. ೭) ರಾಷ್ಟ್ರೀಯ ಹಾಗೂ ಸಾಮೂಹಿಕ ಗೀತೆಗಳನ್ನು ಕಲಿಸುವ ಅವಕಾಶವಿರುವುದು. ೮) ಆಯಾಯಾ ಸ್ಥಳಕ್ಕೆ ಯೋಗ್ಯವಾದ ಕಸಬನ್ನಾಗಲೀ ಕೈಗಾರಿಕೆಯನ್ನಾಗಲೀ ಕಲಿಸುವ ಏರ್ಪಾಡಿರುವದು. ೯) ನೈರ್ಮಲ್ಯ, ಆರೋಗ್ಯ, ವ್ಯವಸಾಯ, ಗುಡಿಕೈಗಾರಿಕೆ ಇತ್ಯಾದಿ ಸಾಮಾನ್ಯ ವಿಷಯಗಳಲ್ಲಿ ಹಳ್ಳಿಗರಿಗೆ ಭಾಷಣ ಕೊಡಲಾಗುವದು. ೧೦) ಹಳ್ಳಿಗಳಲ್ಲಿ ಯೋಗ್ಯವಾದ ಚಲಚಿತ್ರಗಳನ್ನೂ ಸ್ಲೈಡ್‌ಗಳನ್ನೂ ಆಗಿಂದಾಗ ಪ್ರದರ್ಶಿಸಲಾಗುತ್ತಿರುವದು. ಮುಖ್ಯ ರಾಷ್ಟ್ರೀಯ ಸಮಸ್ಯೆಗಳ ಕುರಿತು ಹಳ್ಳಿಗರಿಗೆ ಮುಂದು ಭಾಷಣಮಾಡುವಂತೆ ಧುರೀಣರು ಹಳ್ಳಿಗಳನ್ನು ಸಂದರ್ಶಿಸುವ ಏರ್ಪಾಡು ಮಾಡಲಾಗುವದು. ೧೧) ವಿವಿಧ ಶಾಲೆಗಳೊಳಗೂ ಸಾಮೂಹಿಕ ಆಟ, ಸ್ಪರ್ಧೆಗಳು ನಡೆಯುವ ಏರ್ಪಾಡು ಮಾಡಲಾಗುವದು. ೧೨) ಆಗಿಂದಾಗ ವಸ್ತುಪ್ರದರ್ಶನ, ಸಂತೆ ಮೊದಲಾದವುಗಳನ್ನು ವ್ಯವಸ್ಥೀಕರಿಸಲಾಗುವದು.

ಮಾನ್ಯ ಶ್ರೀ ಮೌಲಾನ ಅಬುಲ್ ಕಲಮ್ ಅಜಾದ್, ಕೇಂದ್ರ ಸರಕಾರದ ವಿದ್ಯಾಮಂತ್ರಿ

... .

ಆಹಾರ ಪರಿಸ್ಥಿತಿ

೧೯೪೭–೪೮ ರಲ್ಲಿ ನಮ್ಮ ದೇಶದಲ್ಲಿ ಮುಖ್ಯ ಆಹಾರ ಧಾನ್ಯಗಳ ಉತ್ಪತ್ತಿ ೪೨.೬ ಮಿಲಿಯ ಟನ್ನುಗಳಷ್ಟಿತ್ತು. ಈ ವರ್ಷದಲ್ಲಿ ೩.೮ ಮಿಲಿಯ ಟನ್ನುಗಳಷ್ಟು ಸಂಗ್ರಹಿಸಬೇಕೆಂದು ನಿಶ್ಚಯಿಸಲಾಗಿತ್ತಾದರೂ ನಿಜವಾಗಿ ದೊರೆತದ್ದು ೨.೫ ಮಿಲಿಯ ಟನ್ನು ಮಾತ್ರ. ೧೯೪೮ ನೇ ವರುಷದಲ್ಲಿ ೧೨೯.೫೯ ಕೋಟಿ ರೂಪಾಯಿ ಬೆಲೆ ತೆತ್ತು ೨,೨೮೪,೦೦೦ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಲಾಗಿತ್ತು. ಅವು ಗ್ರಾಹಕರಿಗೆ ಕಡಮೆ ಬೆಲೆಗೆ ದೊರೆಯುವಂತೆ ಧನ ಸಹಾಯಕೊಡಲು ಸರಕಾರವು ೬೧.೨ ಕೋಟಿ ರೂಪಾಯಿ ವೆಚ್ಚಮಾಡಿದೆ. ೧೯೪೭ ನೇ ನವಂಬರ ತಿಂಗಳ ನಂತರ ಆಹಾರ ಧಾನ್ಯ ಕೊಳ್ಳುವ ಕುರಿತು ಮಾತುಕತೆ ನಡೆಸುವ ಬಗ್ಗೆ ೧೮ ನಿಯೋಗ ಮಂಡಲಗಳ ವಿವಿಧ ದೇಶಗಳಿಗೆ ಕಳುಹಿಸಲ್ಪಟ್ಟಿವೆ. ಈ ವಿಷಯದಲ್ಲಿ ಸರಕಾರದೊಡನೆ ಸರಕಾರವು ವ್ಯಾಪಾರ ನಡೆಸುವುದಾಗಿದೆ. ಆಫ್ರಿಕದಿಂದ ಮಾತ್ರ ಕೆಲವು ಸಾವಿರ ಟನ್ನುಗಳಷ್ಟು ಆಹಾರ ಧಾನ್ಯಗಳನ್ನು ಖಾಸಗಿ ವ್ಯಾಪಾರಸ್ಥರ ಮೂಲಕ ಪಡೆಯಲಾಗಿತ್ತು. ಮೂಲ ದೇಶನಿವಲ್ಲಿಯೂ ಸಂಗ್ರಹಣ ಕಾರ್ಯಕ್ರಮದಲ್ಲಿಯೂ ದ್ವಿದಳ ಧಾನ್ಯಗಳನ್ನು ಸೇರಿಸಿಕೊಳ್ಳಲಾಗುವುದು. ಪೂರ್ವ ಪಂಜಾಬಿನಿಂದ ಈ ಧಾನ್ಯಗಳನ್ನು ಪಡೆದು ಹಿಂದುಸ್ಥಾನದ ಎಲ್ಲಾ ಭಾಗಗಳಿಗೂ ಕಳುಹಿಸುವ ಕೆಲಸ ನಡೆಯುತ್ತದೆ. ಮಧ್ಯಪ್ರಾಂತವು ಪಡಿತರ ಪದ್ಧತಿಯನ್ನು ಜಾರಿಗೆ ತರಲಿಚ್ಛಿಸುವುದಿಲ್ಲ. ಹಿಂದುಸ್ಥಾನ ಸರಕಾರವು ಒತ್ತಾಯಿಸುವುದೂ ಇಲ್ಲ. ಆಹಾರ ಧಾನ್ಯಗಳ ಕೇಂದ್ರ ಮೂಲ ಕ್ರಯವನ್ನು ನಿರ್ಣಯಿಸುವುದು ಹಿಂದುಸ್ಥಾನ ಸರಕಾರದ ಧೋರಣೆಯಾಗಿದೆ. ೧೯೪೮ ರಲ್ಲಿ ಇದು ಸಾಧ್ಯವಾಗಲಿಲ್ಲವಾದರೂ ೧೯೪೯ ರಲ್ಲಿ ಇದಕ್ಕೆ ಯತ್ನಿಸಲಾಗುವುದು. ೧೯೪೮ ರಲ್ಲಿ ೪೪೫೮೩೩ ಎಕ್ರೆಗಳಷ್ಟು ಭೂಮಿಯನ್ನು ಎರಡು ಕೋಟಿಯಷ್ಟು ರೂಪಾಯಿ ವೆಚ್ಚಮಾಡಿ ಸಾಗುವಳಿಯೋಗ್ಯವನ್ನಾಗಿ ಮಾಡಲಾಗಿದೆ, ಬಿಹಾರ, ಸಂಯುಕ್ತಪ್ರಾಂತ, ಮಧ್ಯಪ್ರಾಂತ, ಅಸ್ಸಾಮು, ಮದರಾಸು, ಪೂರ್ವ ಪಂಜಾಬುಗಳಲ್ಲಿರುವ ಈ ಭೂಮಿಗಳಲ್ಲಿ ಬೆಳೆ ಬೆಳೆಸುವುದಕ್ಕೆ ಒಟ್ಟು ರೂ ೩೪೪ ಲಕ್ಷವೆಚ್ಚಮಾಡಲ್ಪಟ್ಟಿದೆ. ೧೯೪೯ ನೇ ಜೂನ್ ತಿಂಗಳ ಅಂತ್ಯದೊಳಗೆ ಕೇಂದ್ರ ಟ್ರಾಕ್ಟರ್ ಸಂಸ್ಥೆಯು ಒಂದು ಲಕ್ಷ ಎಕ್ರೆ ಭೂಮಿಯನ್ನು ಸಾಗುವಳಿಯೋಗ್ಯವನ್ನಾಗಿ ಮಾಡಲು ಇಚ್ಛಿಸಿದೆ.

ಕೇಂದ್ರ ಶಾಸನ ಸಭೆಯಲ್ಲಿ ಆಹಾರ ಮಂತ್ರಿ ಮಾನ್ಯ ಶ್ರೀ ಜಯರಾಮ್‌ದಾಸ್ ದೌಲತ್‌ರಾಮ್

ಮುಷ್ಕರ ಭಂಡವಾಳಗಳೆರಡೂ ದೇಶಕ್ಕೆ ಹಾನಿಕರಗಳು

ಬ್ರಿಟಿಷ್ ಸಾಮ್ರಾಜ್ಯಶಾಹಿಯು ಇಲ್ಲಿಂದ ಕಣ್ಮರೆಯಾದರೂ ನಮ್ಮ ಸಮಸ್ಯೆಗಳು ಇನ್ನೂ ಬಗೆಹರಿದಿಲ್ಲ ನಮ್ಮ ದೇಶವು ಖನಿಜಸಂಪತ್ತಿನಿಂದ ತುಂಬಿತುಳುಕಿದೆ. ಅದನ್ನೆಲ್ಲಾ ಹೊರತೆಗೆದು ಜನತೆಯ ಉಪಯೋಗಕ್ಕೆ ಒದಗಿಸಬೇಕಾಗಿದೆ. ಜನತೆಯಲ್ಲಿ ಯಾವ ತರಗತಿಗಳಿಗೂ ಅವಕಾಶವಿಲ್ಲದಂತಾಗಿ ಆರ್ಥಿಕ ಪ್ರಜಾಪ್ರಭುತ್ವವು ನೆಲೆಯೂರಬೇಕು. ಹೀಗಾಗಬೇಕಿದ್ದರೆ ಪ್ರತಿಯೊಬ್ಬನೂ ತನ್ನ ಕರ್ತವ್ಯವನ್ನು ನಿರ್ವಹಿಸಲೇಬೇಕು, ಇಂದಿನ ಪರಿಸ್ಥಿತಿಯಂತೆ ನಾವು ಹೆಚ್ಚಿಗೆ ಉತ್ಪತ್ತಿ ಮಾಡಬೇಕು. ಎಲ್ಲೆಲ್ಲಿಯೂ ಮುಷ್ಕರದ ಕೂಗು ಕೇಳುತ್ತಿದೆ. ಮುಷ್ಕರ ಹೂಡುವ ಹಕ್ಕನ್ನು ನಾವು ಅಲ್ಲಗಳೆಯುತ್ತಿಲ್ಲ. ಇಂದಿನ ತರಗತಿ ಭೇಧ ಇತರ ಸಂಕಷ್ಟಗಳು ಪರಿಹಾರವಾಗುವವರೆಗೆ ಮುಷ್ಕರವು ಮಜೂರರ ಆಯುಧವಾಗಿ ಮುಂದುವರಿಯಬಹುದು. ಆದರೆ ಇಂದು ಸರಕಾರವು ಅವರದ್ದೇ ಆಗಿದೆ. ಇಂದಿನ ಪರಿಸ್ಥಿತಿಯಲ್ಲಿ ಮುಷ್ಕರವು ನಮ್ಮ ರಾಷ್ಟ್ರೀಯ ಜೀವನಕ್ಕೆ ಹಾನಿಯಾದೀತು, ಈಗಿನ ದುಸ್ಥಿತಿಯನ್ನು ಭಂಡವಾಳ ಶಾಹಿಗಳು ತಮ್ಮ ಸಂಪತ್ತನ್ನು ಹೆಚ್ಚಿಸಲು ಸುವರ್ಣ ಸಂದರ್ಭವಾಗಿ ಮಾಡಿಕೊಂಡರು, ಅವರು ತಮ್ಮ ಮನೋವೃತ್ತಿಯನ್ನು ಬದಲಾಯಿಸಿ ಕಾಲಪರಿಸ್ಥಿತಿಗೆ ಸರಿಯಾಗಿ ಅಳವಡಿಸಿಕೊಳ್ಳಬೇಕು. (ಪಂಡಿತ ನೆಹರು)

ಪಂಜಾಬ ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ಸರದಾರ ಪಟೇಲರ ಭಾಷಣ

ಅಂಬಾಲಾ:- ಪಂಜಾಬದ ಶೀಖರಿಗೆ ಒದಗಿದ ಕಷ್ಟನಷ್ಟಗಳ ಬಗ್ಗೆ ನನಗೆ ಮಾಸ್ಟರ ತಾರಾಸಿಂಗರಿಗಿಂತಲೂ ಹೆಚ್ಚು ಕಳವಳವಾಗಿದೆ. ಆದರೆ ಅವರು ಈಗ ನಡೆಸಿರುವ ಚಳವಳಿಯ ಅರ್ಥವೇ ನನಗೆ ಆಗದಾಗಿದೆ ಹೀಗೆಂದು ಭಾರತದ ಉಪಮುಖ್ಯ ಪ್ರಧಾನರಾದ ಸರದಾರ ಪಟೇಲರು ಪಂಜಾಬ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾತಾಡುತ್ತ ಹೇಳಿದರು.

ಅವರು ಇನ್ನೂ ಈ ರೀತಿ ಹೇಳಿದರು. "ಕಾಂಗ್ರೆಸ್ ಮತ್ತು ದೇಶವು ಹೋರಾಟ ನಡೆಯಿಸಿದ್ದು ಕೇವಲ ಪ್ರತ್ಯೇಕತೆಯನ್ನು ಸಾಧಿಸುವದಕ್ಕೇನು? ಶೀಖರ ಧ್ಯೇಯ ಶೌರ್ಯಗಳ ಬಗ್ಗೆ ನನಗೆ ತುಂಬಾ ಆದರವಿದೆ ಅಭಿಮಾನವಿದೆ ವಿಧಾಯಕ ರೀತಿಯಲ್ಲಿ ಒಕ್ಕಟ್ಟನ್ನು ಸಾಧಿಸುವ ಬದಲು ಬಿಕ್ಕಟ್ಟನ್ನುಂಟುಮಾಡಲೆತ್ನಿಸುವದು ತಾರಾಸಿಂಗರಿಗೆ ಯೋಗ್ಯವೆ?

ಉಜ್ವಲ ಭವಿಷ್ಯವು ಕಾದು ನಿಂತಿದೆ ಎಲ್ಲರಿಗೂ ಸರಿಸಮವಾದ ಸಮಯಗಳು ತೊಲಕತೆಗಳಿವೆ. ಬೇಕಷ್ಟು ಕೆಲಸವಿದೆ ಪಶ್ಚಿಮ ಪಂಜಾಬದಲ್ಲಿ ಕಳೆದುಕೊಂಡದ್ದನ್ನೆಲ್ಲ ಪೂರ್ವ ಪಂಜಾಬದಲ್ಲಿ ಅವರು ಪಡೆಯಬಹುದು

ಈ ವಿಶ್ವ ವಿದ್ಯಾಲಯ ನನಗೆ ಪದವೀದಾನದ ಆಮಂತ್ರಣವಿತ್ತಾಗ ನಾನೇನು ಮಾಡಬೇಕೆಂಬುವ ಗೊಂದಲದಲ್ಲಿ ಬಿದ್ದೆ. ಪದವಿಗಳನ್ನು ಸ್ವೀಕರಿಸಿದವರಲ್ಲಿ ಅನೇಕರು ಅವುಗಳನ್ನು ಪರಿಶ್ರಮಬಟ್ಟು ಸಂಪಾದಿಸಿರುವರು ಅವರಿಗೆ ಸಲ್ಲಬೇಕಾದದನ್ನು ಅವರು ಪಡೆದದ್ದಕ್ಕಾಗಿ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಗೌರವ ಪದವಿಗಳನ್ನು ಕೊಡಲು ನೀವು ಮೂವರನ್ನು ಆರಿಸಿರುವಿರಿ. ಅವರಲ್ಲಿ ಇರ್ವರು ಈ ಪ್ರಾಂತದ ಸೇವೆಯನ್ನು ಒಳ್ಳೇ ಕಠಿಣಕಾಲದಲ್ಲಿ ಮಾಡಿರುವರು. ನಿಮ್ಮ ವಿಶ್ವವಿದ್ಯಾಲಯದ ಉಪ ಕುಲ ಪತಿಗಳು ಗೌರವ ಪದವಿಯನ್ನು ಹಕ್ಕಿನಿಂದ ಪಡೆಯಬಲ್ಲವರಾಗಿರುವರು. ಆದರೆ ನನಗೆ ಅಂತಹ ಯಾವ ಆಧಾರವೂ ಇಲ್ಲ. ಇದೇ ಕಾರಣಕ್ಕಾಗಿ ನಾನು ಹಿಂದೆ ಮುಂದೆ ನೋಡಿದೆ.

ನಾನು ಅನೇಕ ವಿಶ್ವವಿದ್ಯಾಲಯಗಳನ್ನು ಸಂದರ್ಶಿಸಿದ್ದೇನೆ. ಆದರೆ ನಿಮ್ಮ ವಿಶ್ವವಿದ್ಯಾಲಯದ ತರಹದನ್ನು ನೋಡಿಲ್ಲ ನಿಮ್ಮ ವಿಶ್ವವಿದ್ಯಾಲಯಕ್ಕೆ ತಲೆಯಮೇಲೆ ನೆರಳಿಲ್ಲ ನಿಲ್ಲಲು ನೆಲವಿಲ್ಲ. ವಿಭಜನೆಯ ಪರಿಣಾಮವಾಗಿ ನಿಮ್ಮ ವಿಶ್ವವಿದ್ಯಾಲಯವು ಬಹಳ ಕಷ್ಟನಷ್ಟವನ್ನು ಅನುಭವಿಸಿತು. ಈ ಪರಿಸ್ಥಿತಿಯನ್ನು ಮನದಂದು ನನ್ನ ಅನುಕಂಪನದ ವ್ಯಕ್ತಗೊಳಿಸುವ ದೃಷ್ಟಿಯಿಂದ ಇಂದು ನಾನು ನಿಮ್ಮ ವಿಶ್ವವಿದ್ಯಾಲಯದ ಆಮಂತ್ರಣ ಸ್ವೀಕರಿಸಲಾಯಿಸಿದೆ.

ನಾವು ಯಾರು ಎಂಬುದನ್ನು ಅರಿತುಕೊಂಡು ನಮ್ಮ ಕರ್ತವ್ಯವೇನು ಎಂಬುದನ್ನು ತಿಳಿದುಕೊಳ್ಳುವ ಕಾಲವೀಗ ಬಂದಿದೆ. ಈ ಮಾತನ್ನು ನಿಮಗೆ ವಿವರಿಸಲು ನಾನಿಲ್ಲಿ ಬಂದಿದ್ದೇನೆ.

ನಾವೀಗ ಭಾವೀ ಪಂಜಾಬದ ಹೊಸಿಲಲ್ಲಿದ್ದೇವೆ. ಪಂಜಾಬು ಯಾವಾಗಲು ಭಾರತದ ಮುದುಳಿನಂತಿದೆ ಅವರು ಮುದುಳಿನಾಗಿಯೇ ಇರುವದು. ನಮ್ಮ ಮುದುಳಿಗೆ ಆಘಾತವಾಗಿದೆ. ಗಾಯವಾಗಿದೆ. ಪೂರ್ವದ ಪರಿಸ್ಥಿತಿಯೊದಗುವವರಿಗೂ ಭಾರತವು ತಳಮಳಗೊಳ್ಳುವದು ಹಾಗೂ ಕಷ್ಟಪಡುವದು ತಪ್ಪಿದ್ದಲ್ಲ ಮೊದಲಿನ ಪರಿಸ್ಥಿತಿಯೊದಗಿದ ಮೇಲೆ ಭಾರತವು ತನ್ನ ಕರ್ತವ್ಯಗಳನ್ನು ನಿರ್ವಹಿಸಬಲ್ಲದು ಅದುದರಿಂದ ಈಗುಂಟಾಗಿರುವ ಅಸ್ತವ್ಯಸ್ತವನ್ನು ಹೋಗಲಾಡಿಸಿ ನಿಮ್ಮ ಮನೆಯನ್ನು ಸ್ವವಸ್ಥಿತಗೊಳಿಸುವದು ನಿಮ್ಮ ಹೊಣೆಯಾಗಿದೆ.

ಕಲಬುರ್ಗಿಯಲ್ಲಿ ಕನ್ನಡಸಾಹಿತ್ಯ ಸಮ್ಮೇಲನ ಪ್ರಾರಂಭದ ವಿಷರಗಳು

—(೧)—

ಕಲಬುರ್ಗಿ ಜಾಗತಿಕ ಶಾಂತಿಯ ದ್ಯೋತಕವು ನಮ್ಮ ರಾಷ್ಟ್ರೀಯ ಧ್ವಜವಾಗಿದೆ. ಎಲ್ಲ ರಾಷ್ಟ್ರಗಳ ಧ್ವಜಕ್ಕಿಂತಲೂ ಇದು ಎತ್ತರದಲ್ಲಿ ಹಾರುತ್ತಿರಬೇಕು, ಹೀಗೆಂದು ಶ್ರೀ ಜಿನರಾಜ ಹೆಗಡೆಯವರು ಈ ದಿನ ಬೆಳಗ್ಗೆ ಇಲ್ಲಿ ೩೨ ನೆಯ ಕನ್ನಡಸಾಹಿತ್ಯ ಸಮ್ಮೇಲನದ ಪ್ರಾರಂಭದಲ್ಲಿ ಧ್ವಜಾರೋಹಣವನ್ನು ಮಾಡುತ್ತಾ ಹೇಳಿದರು. ರಾಷ್ಟ್ರಧ್ವಜದ ಮಾಹಿತಿಯನ್ನು ಚನ್ನಾಗಿ ತಿಳುಹಿಸಿಕೊಟ್ಟು, ಪ್ರದರ್ಶನವನ್ನು ಉದ್ಘಾಟಿಸಿದರು.

ಪರಿಷತ್ತು ಸರಿಯಾಗಿ ೧೧ ೩.೦ ಕ್ಕೆ ಪ್ರಾರಂಭವಾಯಿತು. ಈ ಪರಿಷತ್ತಿನ ಉದ್ಘಾಟಕರಾದ ಶ್ರೀ ಶೇಷಾದ್ರಿಯವರನ್ನು ಶ್ರೀ. ತಾರಕಶರ್ಮರವರು ಸಭೆಗೆಪರಿಚಯ ಮಾಡಿಕೊಟ್ಟರು. ಹೈದರಾಬಾದ ಕನ್ನಡಿಗನ ಸಂಸ್ಕೃತಿಯನ್ನು ಈ ಪರಿಷತ್ತು ಪುನರುಜ್ಜೀವನಗೊಳಿಸುತ್ತಿದೆ. ಕನ್ನಡ ಸಾಹಿತ್ಯವು ಹೊಂದಬೇಕಾದಷ್ಟು ಪ್ರಗತಿಯನ್ನು ಹೊಂದಿಲ್ಲ ಎಲ್ಲ ದಿಕ್ಕಿನಲ್ಲಿ ಪ್ರಯತ್ನ ಕೈಕೊಳ್ಳಬೇಕು ಎಂದು ಶ್ರೀ ಶೇಷಾದ್ರಿಯವರು ಉದ್ಘಾಟನೆಯ ಭಾಷಣದಲ್ಲಿ ಹೇಳಿದರು.

ಸ್ವಾಗತಾಧ್ಯಕ್ಷರ ಭಾಷಣ

ಸ್ವಾಗತಾಧ್ಯಕ್ಷರಾದ ಶ್ರೀ ಸಿದ್ಧಯ್ಯ ಪುರಾಣಿಕರು ಸ್ವಾಗತ ಭಾಷಣವನ್ನು ಮಾಡಿದರು. ಸಾಹಿತ್ಯ ಸೇವೆಯ ಅಗತ್ಯವನ್ನು ಅವರು ಒತ್ತಿ ಹೇಳಿದರು. ಶ್ರೀ ಶೇಷಾದ್ರಿ ಮತ್ತು ಶ್ರೀ ಉತ್ತಂಗಿಯವರು ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಹಿರಿಯನ ವಹಿಸಿದ್ದಕ್ಕಾಗಿ ಆಭಾರ ಮನ್ನಣೆಮಾಡಿದರು.

ವ್ಯಾಕರಣತೀರ್ಥ ಶ್ರೀ ಚಂದ್ರಶೇಖರ ಶಾಸ್ತ್ರಿಗಳು ಪರಿಷತ್ತಿನ ಅಧ್ಯಕ್ಷರಾದ ಶ್ರೀ ಚನ್ನಪ್ಪ ಉತ್ತಂಗಿಯವರ ಪರಿಚಯ ಮಾಡಿಕೊಟ್ಟರು.

ಪರಿಷತ್ತಿಗೆ ಬಂದ ಸಂದೇಶಗಳು

ಪರಿಷತ್ತಿಗೆ ಶ್ರೀ ಆನಂದಜ್ಯೋತಿ. ಮದರಾಸರ ಮುಖ್ಯಮಂತ್ರಿಗಳು ಶ್ರೀ ಡಿ ವ್ಹಿ ಮೋತದಾರರೂ ಶ್ರೀ ಭ ಪುರಿ, ಶ್ರೀ ನಂದೀಮಠ ಶ್ರೀ ಕೆ ವಿ ನಿವಾಸನ್, ಶ್ರೀ ಸಿ ಕೆ ವೆಂಕಟರಾಯರು ಸ್ವಾಮಿ ರಮಾನಂದ ತೀರ್ಥ ಅಖಿಲಭಾರತ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರು, ಮುಂಬೈ ವಿಶ್ವವಿದ್ಯಾಲಯ ಹಾಗು ಮುಂಬಯಿ ಗವರ್ನರರು ಸಂದೇಶ ಕಳಿಸಿದ್ದರು, ಎಲ್ಲ ಸಂದೇಶಗಳನ್ನು ಓದಲಾಯಿತು.

ಅಧ್ಯಕ್ಷರ ಭಾಷಣ

ಅಧ್ಯಕ್ಷರಾದ ಚನ್ನಪ್ಪಾ ಉತ್ತಂಗಿಯವರು ತಮ್ಮ ಭಾಷಣವನ್ನು ಓದಿದರು ಅನುಭವ ಮಂಟಪದ ಸಭಾಗ್ರಹದಲ್ಲಿ ಎಲ್ಲ ಭಾಗದ ಪ್ರತಿನಿಧಿಗಳೂ ಬಂದು ನೆರೆದಿದ್ದರು. ಅಧ್ಯಕ್ಷರು ಪರಿಷತ್ತಿನ ಉದ್ದೇಶವನ್ನು ಈಡೇರಿಸುವ ಆಶ್ವಾಸನವಿತ್ತರು.

ಶ್ರೀ ಜಿನರಾಜ ಹೆಗಡೆ, ಶ್ರೀ ತಾತಾಚಾರ್ಯ ಶರ್ಮಾ, ಶೇಷಾದ್ರಿಯವರೂ ಮಾತನಾಡಿದರು. ವೇದಿಕೆಯ ನೋಟವೂ ಇತರೆಡೆಗಳಲ್ಲಿನ ವ್ಯವಸ್ಥೆ ಚನ್ನಾಗಿತ್ತು. ವಲ್ಲಭನಗರದಲ್ಲಿ ರಚಿಸಲಾದ ಈ ಅನುಭವ ಮಂಟಪದಲ್ಲಿ ಮಹಿಳೆಯರು ಬಹುಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ವಲ್ಲಭನಗರವು ಬಸವೇಶ್ವರ ಕಾಲದ ಸಂಸ್ಕೃತಿಯಲ್ಲಿಡಲಾಗಿತ್ತು ದ್ವಾರದ ಮಹಾದ್ವಾರಗಳಿದವು. ಜನ ಬಹಳ ಉತ್ಸಾಹಭರಿತರಾಗಿದ್ದರು.

ತಮ್ಮ ಉಳಿದ ಕನ್ನಡ ಬಾಂಧವರೊಂದಿಗೆ ಕೂಡಿಕೊಳ್ಳುವ ಈ ಶುಭ ಪ್ರಸಂಗವು ಹೈದರಾಬಾದ ಕನ್ನಡಿಗರಿಗೆ ಬಹಳೇ ಸಮಾಧಾನವಾದುದು ಕಂಡುಬಂದಿತು. ವಿದ್ಯಾರ್ಥಿಗಳಲ್ಲಿ ಶಿಸ್ತು ಪ್ರದರ್ಶನವಾಗಿತ್ತು.

—)(—

ರಶಿಯಾದ ವಿದೇಶ ಮಂತ್ರಿ

ರಶಿಯಾದ ವಿದೇಶಮಂತ್ರಿ ಸ್ಥಳಕ್ಕೆ ಎಂ ಮೊಲೋಟೋವರ ಬದಲು ಮಂತ್ರಿ ವಿಶಿನಸ್ಕಿಯವರನ್ನು ನೇಮಿಸಿದನ್ನು ಆಕಾಶವಾಣಿಯು ಸಾರಿದಕೂಡಲೇ ಜಗತ್ತು ಆಶ್ಚರ್ಯ ಹಾಗ ತರ್ಕವಿತರ್ಕಗಳಲ್ಲಿ ಮುಳುಗಿಹೋಯಿತು. ಮಾರ್ಶಲ ಸ್ಟಾಲಿನ್ನರ ಕೆಲಸ ನಿರ್ವಹಿಸಿಕೊಳ್ಳುವದಕ್ಕಾಗಿ ಮೊಲೋಟೋವರನ್ನು ವಿದೇಶಮಂತ್ರಿ ಪದದಿಂದ ಮುಕ್ತಮಾಡಲಾಗಿದೆಯೆಂದೂ ಹೇಳಬರುತ್ತದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	„	ರೂ. 4%	„
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	„	ರೂ. 4½%	„

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟುಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ಮಾರ್ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ. ಉನ್ನತ:—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—**ಹಿಂದೀ ಮಹಾ ವಿದ್ಯಾಲಯ.**

NAVA BHARAT BELLARY. (Reg. No M. 4746)

ನ ವ ಭಾ ರ ತ ಬ ಳ್ಳಾ ರಿ.

21—3—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri...

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿ ಬೋಧತ!!!

ಸಂಪಾದಕ ಮತ್ತು ಪ್ರಕಾಶಕ:--
ಟಿ. ಬಿ. ಕೇಶವರಾವ್.

ವರ್ಷ ೧೩ | ಸೋಮವಾರ ೨೧ ಮಾರ್ಚ ೧೯೪೯ | ಸಂಚಿಕೆ ೧೧

ಬಡತನ—ರೋಗ—ಅಜ್ಞಾನ

ನಮ್ಮ ಜನಾಂಗದ ಏಳಿಗೆಗೆ ಜನತೆಯ ಆರೋಗ್ಯವೇ ಆಧಾರ. ಆರೋಗ್ಯವಿಲ್ಲದ ಜನತೆಯು ಏನನ್ನೂ ಸಾಧಿಸಲಾರದು.

ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿ.

ನಮ್ಮ ಸಾಮಾನ್ಯ ರೋಗಗಳಲ್ಲಿ ಹೆಚ್ಚಿನವು ಆರೋಗ್ಯ ಸೂತ್ರಗಳ ತಿಳುವಳಿಕೆಯಿಲ್ಲದೆ ಬರುತ್ತವೆ. ನಮ್ಮ ಪ್ರಾಂತದ ೮೭% ಮಂದಿಯೂ ನಿರಕ್ಷರ ಕುಕ್ಷಿಗಳು. ಹೆಚ್ಚಿನವರು ಬಡವರು. ನಮ್ಮ ಆರೋಗ್ಯ ಪರಿಸ್ಥಿತಿಯು ಇಷ್ಟು ಕೆಳಮಟ್ಟದಲ್ಲಿರಲು ಈ ಬಡತನವೇ ಮುಖ್ಯ ಕಾರಣ. ಬಡತನ ರೋಗ, ಅಜ್ಞಾನಗಳು ಒಟ್ಟೊಟ್ಟಿಗೆ ಇರತಕ್ಕವು. ನಮ್ಮ ದೇಶದಲ್ಲಿ ಮರಣ ಸಂಖ್ಯೆಯು ಮಿತಿಮೀರಿದೆ. ಅತಿ ಬಡವರಲ್ಲೂ ನಿರಕ್ಷರ ಕುಕ್ಷಿಗಳಲ್ಲೂ ರೋಗಗಳು ಮನೆಮಾಡಿಕೊಂಡಿವೆ. ನಾವು ವಾಸಿಸುವ ಮನೆ ತಿನ್ನುವ ಆಹಾರ, ಕುಡಿಯುವ ನೀರು, ಮಾಡುವ ಕೆಲಸ, ಆರೋಗ್ಯ ವಿಷಯದಲ್ಲಿರುವ ನಮ್ಮ ತಿಳುವಳಿಕೆ, ಇವುಗಳೇ ನಮ್ಮ ಆರೋಗ್ಯ ಪರಿಸ್ಥಿತಿಗೆ ಸಾಕ್ಷಿಗಳು. ನಾವು ವಾಸಿಸುವ ಅನೇಕ ಮನೆಗಳಲ್ಲಿ ಸಾಕಷ್ಟು ಬೆಳಕಿರುವುದಿಲ್ಲ, ಗಾಳಿ ಸುಳಿಯುವುದಿಲ್ಲ. ಸುತ್ತಮುತ್ತಲಲ್ಲಿ ಸಾಕಷ್ಟು ಶುಚಿತ್ವವಿಲ್ಲ. ವಾಸಕ್ಕೆ ಬೇಕಾದಷ್ಟು ಸ್ಥಳವಿಲ್ಲ. ನೀರು ಕೆಡದಂತೆ ತಯಾರಿಸಲ್ಪಟ್ಟ ಕೆಲ ಭಾವಿಗಳೆಲ್ಲಾ ನಿರ್ಮೂಲವಾಗಿಲ್ಲ. ಬಡವರಿಗೆ ಅರೆಹೊಟ್ಟೆಯುಂಡೇ ಜೀವನ. ಮಧ್ಯಮ ತರಗತಿಯವರಿಗೂ ಸಾಕಷ್ಟು ಉತ್ತಮ ಆಹಾರವಿಲ್ಲ. ಆಹಾರವು ಕಡಿಮೆಯಾಗಿ ದೇಹಪೋಷಣೆಗೆ ಯೋಗ್ಯವಾಗಿಲ್ಲವಿದ್ದರೆ ದೇಹವು ಸರಿಯಾಗಿ ಬೆಳೆಯದು. ಮನಸ್ಸೂ ವಿಕಾಸವಾಗದು. ದೇಹದಲ್ಲಿ ರೋಗನಿರೋಧಕ ಶಕ್ತಿಯು ಕುಂದುವುದು. ಶರೀರ ಬಲವೂ ತಗ್ಗುವುದು. ಅನೇಕ ಮನೆಗಳಲ್ಲಿ ಮಲಮೂತ್ರಗಳನ್ನು ವಿಸರ್ಜಿಸಲು ಸರಿಯಾದ ಪಾಯಖಾನೆಗಳಿಲ್ಲ. ಇದ್ದರೂ ಅವುಗಳನ್ನು ಸರಿಯಾಗಿ ಕಟ್ಟಿರುವುದಿಲ್ಲ ಕಟ್ಟಿದ್ದರೂ ಶುಚಿಯಾಗಿಟ್ಟುಕೊಳ್ಳುವುದಿಲ್ಲ. ಅನಾರೋಗ್ಯಕರವಾದ ಅನೇಕ ದುರಭ್ಯಾಸಗಳು ನಮ್ಮ ಜನರನ್ನು ಅಂಟಿಕೊಂಡಿವೆ. ಗಲ್ಲಿಗಳಲ್ಲೂ, ರಸ್ತೆಗಳ ಓವಿಗಳಲ್ಲೂ ಮಲಮೂತ್ರ ವಿಸರ್ಜಿಸಲು ನಾವು ಹಿಂದುಮುಂದು ನೋಡುವುದಿಲ್ಲ ನದೀತೀರ, ಕೆರೆಕಟ್ಟೆ, ಗದ್ದೆ, ತೋಟ ಇವೇ ಹೆಚ್ಚಿನವರ ಪಾಯಖಾನೆಗಳು. ಇದರಿಂದ ಭೂಮಿ ಕೊಳಕಾಗುವುದು ಮಾತ್ರವಲ್ಲ. ನೀರೂ ಕೆಟ್ಟುಹೋಗುವುದು. ತಿಂಡಿ ತಿನಸುಗಳನ್ನೂ, ಪಾನೀಯಗಳನ್ನೂ ಬೀದಿಯ ಬದಿಗಳಲ್ಲಿ ತೆರೆದಿಟ್ಟು ಮಾರುವುದು ಸಂಪ್ರದಾಯವಾಗಿದೆ. ಧೂಳು ದಾರಿ ನೊಣಗಳು ಮುತ್ತಿ ಆರೋಗ್ಯಕ್ಕೆ ಇದರಿಂದ ಎಷ್ಟು ಹಾನಿಕರವೆಂದು ನಮ್ಮಲ್ಲಿ ಅನೇಕರಿಗೆ ಇನ್ನೂ ತಿಳಿದಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿ ಜನರು ಚಿರಕಾಲ ಬಾಳಿ ಸಂತೋಷದಿಂದ ಹಾಡಿ ಕುಣಿಯುತ್ತಿದ್ದರೆ, ನಮ್ಮ ದೇಶದಲ್ಲಿ ಅನಾರೋಗ್ಯ ಅಕಾಲ ಮರಣ ಇವೇ ನಮ್ಮ ದಿನದಿನದ ಹಾಡಾಗಿದೆ.

ಮಲೇರಿಯಾ

ನಮ್ಮ ದೇಶದಲ್ಲಿ ತಡೆಯಬಹುದಾದ ಅನೇಕ ದೊಡ್ಡ ರೋಗಗಳಿವೆ. ಮಲೇರಿಯವಂತೂ ನಮಗೆ ಒಂದು ದೊಡ್ಡ ಸಮಸ್ಯೆಯೇ ಆಗಿದೆ. ಪ್ರತಿವರ್ಷವೂ ನಾಲ್ವರಲ್ಲಿ ಒಬ್ಬರಿಗೆ ಇದು ಅಂಟುತ್ತಿದೆ. ಇದನ್ನು ತಡೆಯಬೇಕಾದರೆ ಸೊಳ್ಳೆಗಳು ಹೆಚ್ಚದಂತೆ ತಡೆಮಾಡುವುದರಿಂದಲೂ, ಗುಣಪಡಿಸುವ ಮತ್ತು ತಗಲದಂತೆ ಮಾಡುವ ಔಷಧಗಳನ್ನು ಉಪಯೋಗಿಸುವುದರಿಂದಲೂ ಮಲೇರಿಯವನ್ನು ಹತೋಟಿಗೆ ತರಬಹುದು. ಡಿ. ಡಿ. ಟಿ. ಯನ್ನು ಮನೆಗಳಿಗೆಲ್ಲಾ ಚಿಮುಕಿಸುವುದರಿಂದ ಮಲೇರಿಯಾ ಸೊಳ್ಳೆಗಳು ನಾಶವಾಗುವವು. ಈಗ ಮಪಾಕ್ರಿನ್ (Mapacrine) ಪಾಲುಡ್ರಿನ್ (Paludrine) ಮೊದಲಾದ ಹೊಸ ಔಷಧಗಳು ಹೆಚ್ಚಿನ ಪರಿಣಾಮಕಾರಿಗಳಾಗಿವೆ. ಪುತ್ತೂರು ತಾಲೂಕಿನ ಅನೇಕ ಕಡೆಗಳಲ್ಲಿ ಈಗಾಗಲೇ ಮಲೇರಿಯಾವನ್ನು ತಡೆಯಲು ಸರಕಾರದ ಪ್ರಯತ್ನ ನಡೆಯುತ್ತಿದೆ. ಹಾಗೆಯೇ ಮಲೇರಿಯದ ಹಾವಳಿಯಿಂದ ಪೀಡಿಸಲ್ಪಡುವ ಕಾರ್ಕಳ ಮತ್ತು ಮಲೆನಾಡಿನ ಇತರ ತಾಲೂಕುಗಳಲ್ಲೂ ಇಂತಹ ನಿರೋಧಕ ಕಾರ್ಯವನ್ನು ಕೈಕೊಳ್ಳಬೇಕಾಗಿದೆ.

ಕ್ಷಯರೋಗ

ಇನ್ನೊಂದು ಭಯಂಕರ ರೀತಿಯಲ್ಲಿ ಹುಟ್ಟುತ್ತಿರುವ ಮಹಾರೋಗವೆಂದರೆ ಕ್ಷಯ ಇದರೊಡನೆ ಹೋರಾಟವೆಂದರೆ ಸಾಮಾನ್ಯವಲ್ಲ. ರೋಗವನ್ನು ಆರಂಭದಲ್ಲೇ ಕಂಡುಹಿಡಿದು, ರೋಗ ತಗಲಿದವರನ್ನು ಪ್ರತ್ಯೇಕವಾಗಿರಿಸುವುದೂ, ಅವರಿಗೆ ಆಸ್ಪತ್ರೆಗಳಲ್ಲಿ ಇಲ್ಲವೇ ಆರೋಗ್ಯ ಕೇಂದ್ರಗಳಲ್ಲಿ ತಕ್ಕ ಚಿಕಿತ್ಸೆ ದೊರೆಯುವಂತೆ ಮಾಡುವುದೂ ಇದಕ್ಕೆ ಪರಿಹಾರವಾಗಿದೆ. ಪ್ರಾಂತೀಯ ಹಿತರಕ್ಷಣಾ ನಿಧಿಯ ಸಮಿತಿಯು (Committe of Provincia Welfare Fund) ಮಂಗಳೂರಿಂದ ೬ ಮೈಲು ದೂರದ ಮೂಡುಶೆಡ್ಡೆಯಲ್ಲಿ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ನಿಧಿ ಸಂಗ್ರಹಮಾಡುತ್ತಿದೆಯಲ್ಲದೆ ಸರಕಾರದ ಸಹಾಯವನ್ನೂ ಕೇಳಿದೆ. ಬಿ. ಸಿ. ಜಿ ದಾಕ ಹಾಕುವುದರಿಂದ ರೋಗ ತಡೆಯುವ ಶಕ್ತಿ ಉಂಟಾಗುವುದಲ್ಲದೆ ಕ್ಷಯರೋಗವು ಹಬ್ಬಿಕೊಂಡಿರುವ ಪ್ರದೇಶಗಳಲ್ಲಿ ಮಕ್ಕಳಿಗೆ ತಗಲದಂತೆ ಮಾಡಲು ಈ ದಾಕ ಅತ್ಯಗತ್ಯವಾಗಿದೆ. ಮದ್ರಾಸುನಗರದಲ್ಲಿ ಫೆಬ್ರವರಿ ತಿಂಗಳ ಹದಿನೈದನೆ ತಾರೀಕಿನಿಂದ ಅಮೇರಿಕಾ ಯೂರೋಪುಗಳಂತೆ ಬಿ. ಸಿ. ಜಿ. ದಾಕು ಹಾಕುವ ಕಾರ್ಯವು ಆರಂಭವಾಗಿದೆ.

ಕುಷ್ಠರೋಗ

ಕುಷ್ಠ ರೋಗವು ನಮ್ಮ ಪ್ರಾಂತದಲ್ಲಿ ಹಬ್ಬುತ್ತಿರುವ ಇನ್ನೊಂದು ಮಹಾವ್ಯಾಧಿ. ನಮ್ಮಲ್ಲಿಯ ಚಿಕೆಲವು ಹಳ್ಳಿಗಳು ಕುಷ್ಠರೋಗದ ತವರುಮನೆಗಳಾಗಿವೆ. ಮಕ್ಕಳನ್ನು ರೋಗ ತಗಲಿದವರಿಂದ ದೂರವಾಗಿರಿಸುವುದೇ ಇದರ ಹುಟ್ಟುವಿಕೆಯನ್ನು ತಡೆಯುವ ಮುಖ್ಯ ಉಪಾಯವಾಗಿದೆ. ಕುಷ್ಠವು ಹೆಚ್ಚಾಗಿ ಮನೆಯಲ್ಲೇ ಅಂಟಿಕೊಳ್ಳುವುದು. ರೋಗ ತಗಲಿದವರ ಸಾಮೀಪ್ಯ, ಸಂಬಂಧಗಳೇ ಇದಕ್ಕೆ ಮುಖ್ಯ ಕಾರಣ. ದೊಡ್ಡವರಿಗಿಂತಲೂ

ಚಿಕ್ಕಮಕ್ಕಳೇ ಈ ರೋಗಕ್ಕೆ ತುತ್ತಾಗುವು ದು ಹೆಚ್ಚು. ಕುಷ್ಠರೋಗದ ಲಕ್ಷಣದ ವಿಷಯದಲ್ಲಿ ಸರಿಯಾದ ಅಭಿಪ್ರಾಯ ಹುಟ್ಟಿಸಬೇಕು. ಇದರ ಹಬ್ಬುವಿಕೆಯನ್ನು ತಡೆಯುವ ಯುಕ್ತ ಉಪಾಯವನ್ನು ಜನರಿಗೆ ತಿಳಿಸಬೇಕು. ನಾಳೆಯೇ ಶಿರ್ವದಲ್ಲಿ ಒಂದು ಕುಷ್ಠ ನಿರೋಧ ಕಾರ್ಯಕ್ಷೇತ್ರವನ್ನು ಪ್ರಾರಂಭಿಸಲು ನಿರ್ಧರಿಸಿದ್ದು ನಿಜವಾಗಿಯೂ ಸಂತೋಷದ ವಿಷಯ.

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಡೋಸ್
ತಲೆಶೂಲೆ, ಹಲ್ಲುಶೂಲೆ, ಮೈಕೈಶೂಲೆ, ಕೈಕಾಲುಬಳತ, ನೆಗಡಿ ಜ್ವರ, ಮಲೇರಿಯಕ್ಕೆ
ಪ್ರಕಾಶ ವಾಷನಾಲಯ, ಹೊಸಪೇಟೆ

ಗುಹ್ಯರೋಗ

ಗನೋರಿಯಾ (Gonorrheoa), (Syphilis) ಇತ್ಯಾದಿ ಗುಹ್ಯರೋಗಗಳು ನಮ್ಮ ಹಳ್ಳಿ, ಪಟ್ಟಣಗಳಲ್ಲಿ ಸಾಮಾನ್ಯವಾಗಿವೆ. ಇವುಗಳಿಂದ ರೋಗಿಗಳು ಮಾತ್ರ ನಾಶವಾಗುವುದಲ್ಲ. ಅವರ ಸಂತಪಾರಂಪರ್ಯವೂ ವಿಪತ್ತಿಗೆ ಗುರಿಯಾಗುವುದೆಂಬುದನ್ನು ಖಡಾಖೂ ಮರೆಯಬಾರದು. ಹೊಸದಾಗಿ ಕಂಡುಹಿಡಿದ ಕೆಲವು ಸಲ್ಫಡ್ರಗ್ಸ್ (Sulpha-drugs) ಪೆನ್ಸಿಲಿನ್ (Pencillin) ಸ್ಟ್ರೆಪ್ಟೋಮಿಸಿನ್ (Streptomycin) ಇವುಗಳಂತೆ ಪರಿಹಾರಕ ಔಷಧಗಳಿಂದ ಈ ರೋಗದಿಂದ ನರಳುತ್ತಿರುವವರು ಒಡನೆ ಯೋಗ್ಯ ಡಾಕ್ಟರರಿಂದ ಸರಿಯಾದ ಚಿಕಿತ್ಸೆ ಪಡೆಯಬೇಕು. ಹೀಗೆ ಮಾಡುವುದರಿಂದ ಗಂಡ ಹೆಂಡರು ಈ ರೋಗಕ್ಕೆ ತುತ್ತಾಗದೆ ಮಕ್ಕಳೂ ಈ ಪೀಡೆಯಿಂದ ದೂರವಾಗಿರಬಹುದು.

ಆನೆಕಾಲು

ಆನೆಕಾಲು (Filarisis) ವಿರೂಪಗೊಳಿಸುವ ಇನ್ನೊಂದು ರೋಗ. ಇದು ತಗಲಿದರೆ ಮನುಷ್ಯನು ನಿರುಪಯೋಗಿಯಾಗುವುದು ಮಾತ್ರವಲ್ಲ, ಹೆಚ್ಚಿನ ಕಷ್ಟವನ್ನೂ ತಂದೊಡ್ಡುವುದು. ನಮ್ಮ ಜಿಲ್ಲೆಯ ಕೆಲವು ಭಾಗಗಳಲ್ಲಿ ಅದರಲ್ಲೂ ಮಂಗಳೂರು, ಕಾಸರಗೋಡುಗಳಲ್ಲಿ ಇದರ ಪ್ರಭಾವವು ಹೆಚ್ಚಿದೆ. ಇದಕ್ಕೆ ಪರಿಣಾಮಕಾರಿಯಾದ ಯಾವ ಔಷಧವನ್ನೂ ಈ ವರೆಗೆ ಕಂಡುಹಿಡಿಯಲು ಸಾಧ್ಯವಾಗಲಿಲ್ಲ. ಒಬ್ಬರಿಂದೊಬ್ಬರಿಗೆ ರೋಗವನ್ನು ಹಬ್ಬಿಸುವ ಸೊಳ್ಳೆಗಳನ್ನು ನಾಶಮಾಡುವುದರಿಂದ ಈ ರೋಗದಿಂದ ದೂರವಾಗಿರಬಹುದು. ಡಿ. ಡಿ. ಟಿ. ಯನ್ನು ಚಿಮಿಕಿಸುವದರಿಂದ ಇದನ್ನು ತಡೆಯಬಹುದು.

ಕೇನ್ಸರ್

ಮಾನವ ಕೋಟಿಯನ್ನು ನಾಶಮಾಡುವ ಇನ್ನೊಂದು ಮಹಾವ್ಯಾಧಿಯೆಂದರೆ ಕೇನ್ಸರ್ (Cancer). 35 ವರುಷ ಪ್ರಾಯವಾದ ಮೇಲೆ ಈ ರೋಗವು ಬರುವುದು. ಇದು ದೇಹದ ಯಾವ ಭಾಗದಲ್ಲೂ ತಲೆದೋರಬಹುದು. ಸಾಮಾನ್ಯವಾಗಿ ಸ್ತ್ರೀಯರ ಗರ್ಭಕೋಶ, ಸ್ತನಗಳಲ್ಲಿ ಈ ರೋಗ ಉಂಟಾಗುವುದು. ಪ್ರಾರಂಭದಲ್ಲಿ ಇದರಿಂದ ಏನೂ ನೋವಾಗುವುದಿಲ್ಲ. ರೋಗವು ಬಲವಂತವಾದ ಮೇಲೆ ತಡೆಯಲಾರದ ನೋವಾಗುವುದು. ಆರಂಭ ಸ್ಥಿತಿಯಲ್ಲಿಯೇ ಉತ್ತಮ ಡಾಕ್ಟರರಿಂದ ಪರೀಕ್ಷೆ ಮಾಡಿಸಿ ಆಧುನಿಕ ಪದ್ಧತಿಗಳಾದ ಎಕ್ಸರೇ, ರೇಡಿಯಂ ಮತ್ತು ಶಸ್ತ್ರಪ್ರಯೋಗಗಳಿಂದ ಚಿಕಿತ್ಸೆ ನಡೆಸಿದರೆ ರೋಗಿಗಳಲ್ಲಿ ನೂರಕ್ಕೆ ಬಹುಮಂದಿ ಗುಣಹೊಂದಬಹುದು. ಸರಕಾರವು ರೋಗದ ಪರೀಕ್ಷೆ ಮತ್ತು ಚಿಕಿತ್ಸೆಗಳಿಗೆ ಪ್ರತಿಯೊಂದು ಜಿಲ್ಲೆಯ ಮುಖ್ಯ ಆಸ್ಪತ್ರೆಗಳಲ್ಲಿ ಉತ್ತಮ ಸೌಕರ್ಯಗಳನ್ನು ಒದಗಿಸಬೇಕಾಗಿದೆ.

ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷ, ಹೊಸಪೇಟೆ.

ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಸಹ ಕಾರ್ಯದರ್ಶಿಗಳಾದ ಸಾಥೀ ಆರ್. ವಿ. ದೇಸಾಯಿಯವರು ಸಮಾಜವಾದಿ ಪಕ್ಷದ ಮತ್ತು ರೈತರ ಸಂಘಟನೆ ಮತ್ತು ಪ್ರಚಾರಕ್ಕಾಗಿ ಈ ಕೆಳಗಿನ ತಾರೀಕುಗಳಲ್ಲಿ ಆಯಾ ಗ್ರಾಮಗಳನ್ನು ಸಂದರ್ಶಿಸುವರು ಆ ಕಾಲಕ್ಕೆ ಅಲ್ಲಲ್ಲಿಯ ಕಾರ್ಯಕರ್ತರು ರೈತರ ಸಭೆ, ಸಾರ್ವಜನಿಕ ಸಭೆ, ಖಾಸಗಿ ಸಭೆಗಳನ್ನು ಏರ್ಪಡಿಸಿ ಅವರೊಡನೆ ಚರ್ಚಿಸಿ ಅವರ ಉಪಯೋಗವನ್ನು ತೆಗೆದುಕೊಳ್ಳಬೇಕಾಗಿ ವಿನಂತಿ.

24-3-40 ನೀಲಗುಂದ ಹರಪನಹಳ್ಳಿ ತಾಲೂಕು.
26-3-49 ತೆಲಿಗಿ ,,
26-3-49 ಹಲವಾಗಲು ,,
27-3-49 ಕಾಂಚೂರು ,,
28-3-49 ಕುರುವತ್ತಿ ,,
29-3-49 ,, ,,
30-3-49 } ಮಾಗಳ ಹಡಗಲಿ
31-3-49 } ತಾಲೂಕು
1-4-49 ಹಡಗಲಿ.

ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಸಭೆಯು ಹೊಸಪೇಟೆಯಲ್ಲಿ ಪಕ್ಷದ ಕಚೇರಿಯಲ್ಲಿ 16-3-49 ಸಾಯಂಕಾಲ 6 ಗಂ. ಬಳ್ಳಾರಿ ಜಿಲ್ಲಾ ಸಮಾಜವಾದಿ ಪಕ್ಷದ ಪ್ರಧಾನ ಕಾರ್ಯದರ್ಶಿಗಳಾದ ಸಾಥೀ ಅಸುಂಡಿ ತಿರುಮಲರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗಿನ ಗೊತ್ತುವಳಿಯನ್ನು ಸ್ವೀಕರಿಸಲಾಯಿತು.

ಗೊತ್ತುವಳಿ:— "ಆಜಾದ್ ಹಿಂದ್ ಸರಕಾರದಲ್ಲಿ ಮಂತ್ರಿಗಳಾಗಿದ್ದು ಆಜಾದ್ ಹಿಂದ್ ಫೌಜಿನಲ್ಲಿ ಮೇಜರ್ ಜನರಲ್ ಆಗಿ ಮೆರೆದು ಶಾಹಿದ್ ಮತ್ತು ಸ್ವರಾಜ್ ದ್ವೀಪಗಳ ಗವರ್ನರರಾಗಿ, ಹಿಂದುಸ್ಥಾನದ ಸ್ವಾತಂತ್ರ್ಯ ಸಂಪಾದನೆಯಲ್ಲಿ ನೇತಾಜಿ ಸುಭಾಷ ಚಂದ್ರಬೋಸರ ಬಲಗೈಯಂತಿದ್ದು, ಕೆಂಪುಕೋಟೆಯು ದ್ವಾರವಾಗಿ ನಾಡಿಗೆ ಹಿಂತಿರುಗಿ ನಾಡಿನ ಶ್ರೇಯಸ್ಸಿಗಾಗಿ, ಆಜಾದ್ ಹಿಂದ್ ಸೈನಿಕರ ಹಿತಕ್ಕಾಗಿ ಕೆಲಸಮಾಡುತ್ತಿರುವಾಗಲೇ ಸ್ವರ್ಗಸ್ಥರಾದ ನಮ್ಮ ಈ ಹೊಸಪೇಟೆಯವರೇ ಆದ ಶ್ರೀ ಮೇಜರ್ ಜನರಲ್ ಎ. ಡಿ. ಲೋಗನಾಥನ್‌ರವರ ಅಕಾಲ ನಿಧನಕ್ಕಾಗಿ ಈ ಸಭೆಯು ತನ್ನ ಸಂತಾಪವನ್ನು ಸೂಚಿಸುತ್ತದೆ. ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಪ್ರಾರ್ಥಿಸುತ್ತದೆ." ಗೊತ್ತುವಳಿ ಸ್ವೀಕೃತವಾದನಂತರ ಎರಡು ನಿಮಿಷ ಎದ್ದು ನಿಂತು ಅವರ ಆತ್ಮಕ್ಕೆ ಶಾಂತಿಯು ಸಿಗಲೆಂದು ಪರಮಾತ್ಮನನ್ನು ಕೋರಲಾಯಿತು.

ಶಿಕ್ಷಣ ಗ್ರಾಂಟು

ಏಡೆಡ್ ಎಲೆಮೆಂಟರಿ ಶಾಲೆಗಳ ಈಗಿನಂತೆ ತ್ರೈಮಾಸಕೊಮ್ಮೆ ಗ್ರಾಂಟು ಹಂಚುವ ಬದಲಿಗೆ ತಿಂಗಳು ತಿಂಗಳಿಗೆ ಕೊಡುವ ಯೋಜನೆಯು ಮಾರ್ಚ ತಿಂಗಳಿಂದ ಜಾರಿಗೆ ಬರುತ್ತದೆ. ೧೯೪೯ ನೇ ಜನವರಿ ತಿಂಗಳ ಗ್ರಾಂಟನ್ನು ಮಾರ್ಚಯಲ್ಲಿ ಕೊಡಲಾಗುತ್ತದೆ. ಮಕ್ಕಳಿಗೆ ಟೆಕ್ಸ್ಟು ಪುಸ್ತಕಗಳನ್ನು ತಯಾರಿಸುವ ಕುರಿತು ವಿಷಯವನ್ನು ವಿಚಾರಿಸುವಂತೆ ಸರಕಾರವು ೨೪-೧-೪೯ ರಿಂದ ಒಂದು ಸಮಿತಿಯನ್ನು ನೇಮಿಸಿದೆ. ೫-೨-೪೯ ರಿಂದ ತಿರೂರ್ ಎಂಬಲ್ಲಿ ವಯಸ್ಕರ ಶಾಲಾ ಅಧ್ಯಾಪಕರಿಗೋಸ್ಕರ ಸರಕಾರದ ತರಬೇತಿ ಶಾಲೆಯು ತೆರೆಯಲ್ಪಟ್ಟಿದೆ. ತರಬೇತಿಯು ಆರುವಾರಗಳ ತನಕ ನಡೆಯುತ್ತಿ (ವಿದ್ಯಾ ಇಲಾಖೆ)

ಫಿರ್ಕಾಭಿವೃದ್ಧಿ

ಆರಿಸಲ್ಪಟ್ಟ ಫಿರ್ಕಾಗಳಲ್ಲಿ ರಸ್ತೆ, ಭಾವಿ ತೋಡುವದು, ಶಾಲಾ ಕಟ್ಟಡಗಳನ್ನು ಒದಗಿಸುವದು, ರಾತ್ರಿ ಶಾಲೆ ತೆರೆಯುವುದು, ಆರೋಗ್ಯ ನೈರ್ಮಲ್ಯ ಚಳವಳ ಇತ್ಯಾದಿ ಹಲವು ಕಾರ್ಯ ಕಲಾಪಗಳು ಜರಗುತ್ತವೆ. ಇವುಗಳ ಪೈಕಿ ಬಳ್ಳಾರಿ ಜಿಲ್ಲೆಯ ಆಲೂರು ಫಿರ್ಕಾದಲ್ಲಿ ಒಂದು ಹೊಸ ಭಾವಿ ತೋಡಲಾಗಿದೆಯಲ್ಲದೆ ಮೆಟ್ಟಿಲುಗಳಲ್ಲಿ ಇಳಿದು ನೀರು ತೆಗೆಯಬೇಕಾಗಿರುವ ೪ ಭಾವಿಗಳನ್ನು ನೀರು ಸೇದುವಂತೆ ಮಾರ್ಪಡಿಸಲಾಗಿದೆ. ನೀರು ಸೇದುವ ಏರ್ಪಾಡಿನ ೪ ಭಾವಿಗಳ ದುರುಸ್ತಿ ಕೆಲಸ ನಡೆದಿದೆ, ೩ ರಸ್ತೆಗಳಲ್ಲಿ ಕೆಲಸ ನಡೆಯುತ್ತದೆ. ೩॥ ಮೈಲು ಉದ್ದವಾದ ರಸ್ತೆ ನಿರ್ಮಿಸಲಾಗಿದೆ. ರೂ ೩೦೦೦ ವೆಚ್ಚವಾಡಿ ೨ ಫರ್ಲಾಂಗ್ ಉದ್ದದ ಒಂದು ರಸ್ತೆಯನ್ನು ದುರುಸ್ತಿ ಮಾಡಲಾಗಿದೆ. ನೀಲಗಿರಿ ಜಿಲ್ಲೆಯ ಕುಂಡ ಫಿರ್ಕಾದಲ್ಲಿ ೩ ರಾತ್ರಿ ಶಾಲೆಗಳು ತೆರೆಯಲ್ಪಟ್ಟಿವೆ. ತಾನಿಕಾಡಿನಿಂದ ಕಿನ್ನಕೊರೈ ಎಂಬಲ್ಲಿಗೆ ರಸ್ತೆ ನಿರ್ಮಿಸುವ ಕೆಲಸ ಹೆಚ್ಚು ಕಡಮೆ ಪೂರ್ತಿಯಾಗಿದೆ.

ಬಳ್ಳಾರಿಯ ಸುಪ್ರಸಿದ್ಧ ವೃತ್ತಪತ್ರಿಕೋದ್ಯೋಗಿಯ ಮರಣ

ಶ್ರೀ ವಟ್ಟಂ ಶಾಮರಾವ್

ಬಳ್ಳಾರಿಯ ವೃತ್ತ ಪತ್ರಿಕೋದ್ಯೋಗಿಗಳಾದ ಶ್ರೀ ವಟ್ಟಂ ಶಾಮರಾಯರು ತಮ್ಮ ೬೫ ನೆಯ ವಯಸ್ಸಿನಲ್ಲಿ ಮಧುಮೇಹದಿಂದ ೧೩-೩-೪೯ ನೇಯ ಭಾನುವಾರ ರಾತ್ರಿ ದಿವಂಗತರಾದರೆಂದು ತಿಳಿಸಲು ನಾವು ವಿಷಾದಿಸುತ್ತೇವೆ. ಇವರಿಗೆ ಮೂವರು ಹೆಣ್ಣುಮಕ್ಕಳು ಇಬ್ಬರು ಪುತ್ರರು ಅನೇಕ ಬಂಧುಮಿತ್ರರೂ ಇರುತ್ತಾರೆ. ಇವರ ಕುಟುಂಬಕ್ಕೆ ಸಹಾನುಭೂತಿಯನ್ನೂ ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತೇವೆ,

ಬಳ್ಳಾರಿಯಲ್ಲೂ ಅವರ ಇತರ ಪರಿಚಿತ ವರ್ಗಗಳಲ್ಲೂ ಇವರು "ವಟ್ಟಂ" ಎಂಬ ಅಭಿದಾನದಿಂದ ಹೆಸರುವಾಸಿಯಾಗಿದ್ದರು. ಸುಸಂಸ್ಕೃತ ವರ್ಗವನ್ನು ಉತ್ಪ್ರೇಕ್ಷೆಯ ಹಾಸ್ಯವ್ಯಂಗ್ಯ ಘಟನೆಗಳ ವರ್ಣನೆಯಿಂದ ನಗೆಗಡಲಿಗೆ ಹಾಕುತ್ತಿದ್ದರು. ಕೇಳುವವರು ಹೊಟ್ಟೆಯುಬ್ಬರವಾಗುವಂತೆ ನಗುತ್ತಿದ್ದರೂ ಇವರು ಗಂಭೀರವಾಗಿ ಕೂಡುತ್ತಿದ್ದರು. ಇವರು ಪದವೀಧರರಲ್ಲೂ ಆಂಗ್ಲಭಾಷೆಯ ಮೇಲಿನ ಅಧಿಕಾರವು ಉಚ್ಚ ತರಗತಿಯದಿದ್ದು ಕಳೆದ ೩೫ ವರ್ಷಗಳಿಂದ ಮದರಾಸು ಮೇಲ್ ಮತ್ತು ಬೊಂಬಾಯಿಯ ಟೈಂಸ್ ಆಫ್ ಇಂಡಿಯಾ ಪತ್ರಿಕೆಗಳಿಗೆ ಸುದ್ದಿಗಾರರಾಗಿ ಉತ್ತಮ ಸೇವೆ ಮಾಡಿದರು. ಆಂಧ್ರ ನಾಟಕ ಪಿತಾಮಹರೆನಿಸಿದ ಧರ್ಮವರಂ ಕೃಷ್ಣಮಾಚಾರ್ಯರ ನಾಟಕಗಳಲ್ಲಿ ಪಾತ್ರಧಾರರಾಗಿ ದಿವಂಗತ ಟಿ. ರಾಘವಾಚಾರ್ಯರ ಸಹಕಾರ್ಯಕರ್ತರೂ, ಅವರ ರಂಗದಲ್ಲಿನ ಪ್ರಮುಖರೂ ಆಗಿದ್ದರು. ಬಳ್ಳಾರಿ ಜಿಲ್ಲಾ ವೃತ್ತಪತ್ರಿಕೋದ್ಯೋಗಿಗಳ ಸಂಘಕ್ಕೆ ಕೆಲಕಾಲ ಅಧ್ಯಕ್ಷರಾಗಿ ಈ ವೃತ್ತಿಯನ್ನು ಮರ್ಯಾದಿತವಾಗಿಡಲು ಸಹಾಯ ಮಾಡಿದರು. ಇವರು ಅನೇಕ ವಿಧವಾಗಿ ಸಾರ್ವಜನಿಕ ಸೇವೆ ಮಾಡಿದುದನ್ನು ಗುರ್ತಿಸಿ ಸರ್ಕಾರವು ಅವರಿಗೆ ಕೈಸರಿಹಿಂದ್ ಮೆಡಲನ್ನು ಪ್ರದಾನ ಮಾಡಿತ್ತು. ಅಧ್ಯಾಪಕ ವೃತ್ತಿಯಲ್ಲಿ ಮಿಷನ್ ಗರ್ಲ್ಸ್ ಸ್ಕೂಲ್ ಮುನಿಸಿಪಲ್ ಹೈಸ್ಕೂಲದಲ್ಲಿ ೩೭ ವರುಷ ಸೇವೆಮಾಡಿ ಅನೇಕ ಪ್ರಶಂಸ ಪತ್ರಗಳನ್ನು ಪಡೆದರು. ಈ ಶಾಲೆಗಳು ಅವರ ಜ್ಞಾಪಕಾರ್ಥವಾಗಿ ಮುಚ್ಚಲಾಗಿದ್ದವು. ಬಳ್ಳಾರಿಯ ಸಾರ್ವಜನಿಕ ಜೀವನಕ್ಕೆ ಇವರ ನಿಧನದಿಂದ ತುಂಬಲಾರದ ಹಾನಿಯಾಗಿದೆ

ದಾಳಿಂಬರದ ಸಾಗುವಳಿಯು

ಭೂಮಿಯು:—ಬಣ್ಣದಲ್ಲಿ ಕಪ್ಪಗೆ ಅಥವಾ ಕೆಂಪಗಿದ್ದ ಗರಸು ಇಲ್ಲವೆ ಉಸುಕು ಕೂಡಿದ್ದಿರಬೇಕು. ಬಹಳ ಸುಣ್ಣದ ಹರಳು ಕೂಡಿದ್ದ ಭೂಮಿಯಲ್ಲಿ ದಾಳಿಂಬರದ ಗಿಡಗಳು ವಿಶೇಷವಾಗಿ ನೆಟ್ಟಗೆ ಬರುತ್ತವೆ.

ಹವೆಯು:- ಉಷ್ಣ ಮತ್ತು ನಿರಾದ್ರತೆಯುಳ್ಳದ್ದಿರಬೇಕು. ತಂಪಾದ ಹವೆಯಲ್ಲಿ ಇವು ನೆಟ್ಟಗೆ ಬರುವದಿಲ್ಲ

ಭೂಮಿಯನ್ನು ಹಸನು ಮಾಡುವದು ಕಲಮುಗಳನ್ನು (ಬೇರೊಡೆದ ಟೊಂಗೆಗಳನ್ನು) ಹಚ್ಚುವ ಮೊದಲು ಎರಡು ಸಾರಿ ರೆಂಟೆ ಹೊಡೆದು ಹರಗಿ ಮಣ್ಣು ಮಾಡಬೇಕು.

ಗೊಬ್ಬರ. ಕಲಮುಗಳನ್ನು ಹಚ್ಚುವದಕ್ಕೆ ಮಾಡಿದ ಕುಣಿ (ತಗ್ಗು)ಗಳಲ್ಲಿ ಮನೆಯೊಳಗಿನ ಕಸಕಡ್ಡಿ, ಸೆಗಣಿ, ಬೂದಿ ಮುಂತಾದ ಅಡೆಯು ಗೊಬ್ಬರವನ್ನು ಪ್ರತಿಯೊಂದು ಕುಣಿಗೆ ೧ ಬುಟ್ಟಿಯಂತೆ (ಒಂದು ಬುಟ್ಟಿಯಲ್ಲಿ ಸುಮಾರು ೨೦ ಪೌಂಡು ಸೆಗಣಿಯ ಗೊಬ್ಬರ ಹಿಡಿಯುತ್ತದೆ) ಹಾಕಬೇಕು. ಮುಂದೆ ಪ್ರತಿ ವರುಷ ಗಿಡ ಸಣ್ಣ ದೊಡ್ಡವಿದ್ದಂತೆ ನೋಡಿ, ೫-೬ ಬುಟ್ಟಿ ಸೆಗಣಿ ಗೊಬ್ಬರವನ್ನು ಹಾಕುತ್ತ ಹೋಗಬೇಕು.

ಹಚ್ಚುವ ಕ್ರಮ:- ದಾಳಿಂಬರ ಕಲಮುಗಳನ್ನು ೧-೧ವರೆ ಫೂಟು ಆಳವಾದ ಮತ್ತು ಅಷ್ಟೇ ಅಗಲುಳ್ಳ ಕುಣಿಗಳಲ್ಲಿ ಬು ಗೊಬ್ಬರಹಾಕಿ ಮಳೆಗಾಲದಲ್ಲಿ ಹಚ್ಚಬೇಕು. ಅವು ಒಂದು ವರ್ಷವಿರಬೇಕು. ಕುಣಿಗಳು ೧೨ ರಿಂದ ೧೫ ಫೂಟಿನ ಅಂತರದ ಮೇಲೆ ಇರಬೇಕು ಮತ್ತು ಇಷ್ಟು ಅಂತರದ ಮೇಲೆ ಹಚ್ಚಿದರೆ ಒಂದು ಎಕರೆ ನೆಲದಲ್ಲಿ ಸುಮಾರು ೨೩೦ ರಿಂದ ೩೦೦ ಗಿಡಗಳು ಹಿಡಿಯುತ್ತವೆ.

ನೀರು:- ಹಚ್ಚಿದ ಕೂಡಲೆ ಒಮ್ಮೆ ನೀರು ಹಾಕಬೇಕು. ಎರಡನೇಸಾರಿ ಹಚ್ಚಿದ ೪—೫ದಿವಸಕ್ಕೆ ಮುಂದೆ ಹವೆಯು ಹಾಗೂ ಗಿಡಗಳ ಸ್ಥಿತಿಯನ್ನು ನೋಡಿಕೊಂಡು ಎಂಟು ಇಲ್ಲವೆ ಹತ್ತು ದಿವಸಕೊಮ್ಮೆ ನೀರು ಕುಡಿಸಬೇಕು. ನೀರು ಕೆಚ್ಚಾದರೆ ಗಿಡಗಳಿಗೆ ಬೇಗನೆ ಕಾಯಿಗಳಾಗುವದಿಲ್ಲ.

ಹಣ್ಣಿನ ಧರವು- ದಾಳಿಂಬರ ಗಿಡಕ್ಕೆ ವರುಷಕ್ಕೆ ಮೂರುಸಾರೆ 'ಬಹಾರು' ಅಂದರೆ ಹೂವಿನ ಧರವು ಬರುತ್ತದೆ.

೧) ಅಂಬೇಬಹಾರ ಫೆಬ್ರವಾರಿ ಇಲ್ಲವೆ ಮಾರ್ಚ ತಿಂಗಳಲ್ಲಿ ಮಾವಿನ ಗಿಡಗಳಿಗೆ ಹೂವುಗಳಾಗುವಾಗ ಈ ಬಹಾರು ಬರುವದರಿಂದ ಇದಕ್ಕೆ ಮಹಾರಾತದೊಳಗಿನ ಒಕ್ಕಲಿಗರು ಅಂಬೇಬಹಾರ ಎಂದೆನ್ನುತ್ತಾರೆ.

೨) ಮೃಗಬಹಾರು-ಇದು ಮೃಗ ಮಳೆಯು ಪ್ರಾರಂಭವಾಗುವ ಸುಮಾರಕ್ಕೆ ಬರುವದರಿಂದ ಈ ಹೆಸರು ಬಂದಿದೆ

೩) ಹಸ್ತೀ ಬಹಾರ-ಸಪ್ಟಂಬರ ತಿಂಗಳಲ್ಲಿ ಹಸ್ತಮಳೆಯು ಪ್ರಾರಂಭವಾಗುವ ಸುಮಾರಕ್ಕೆ ಈ ಬಹಾರು ಬರುವದರಿಂದ ಇದಕ್ಕೆ ಹಸ್ತೀ (ಹಸ್ತೀ) ಬಹಾರು ಎಂದೆನ್ನುತ್ತಾರೆ.

ಈ ಮೂರು ಬಹಾರುಗಳಲ್ಲಿ ದಾಳಿಂಬರದ ಗಿಡಗಳಿಗೆ ಹೂಗಳಾಗಬಹುದೂ, ಮತ್ತು ಪ್ರತಿಯೊಂದು ಬಹಾರದೊಳಗಿನ ಹೂವುಗಳು ಹಾಗೆ ಕಾಯ್ದರೆ ಅವುಗಳಿಂದ ಬಹಳ ಕಾಯಿಗಳಾಗುವದಿಲ್ಲ ಮತ್ತು ಅವೆಲ್ಲ ನೆಟ್ಟಗೆ ಮೈಗುಂಬಿರುವದಿಲ್ಲ. ಆದರಿಂದ ವರ್ಷಕ್ಕೆ ಯಾವದಾದರೊಂದೇ ಬಹಾರನ್ನು ಕಾಯದಿಡಬೇಕು.

ಗಿಡಗಳು ಹಚ್ಚಿ ಮೂರು ವರ್ಷಗಳಾದನಂತರ ಅವುಗಳಿಗೆ ಹೂವುಗಳಾಗುತ್ತವೆ ಮತ್ತು ಹೂವಾಗಿ ೬—೭ ತಿಂಗಳಿಗೆ ಕಾಯಿಗಳು ಪಕ್ವವಾಗುತ್ತವೆ.

ಅಂಬೇಬಹಾರು:- ಹಳೇ ಅಂಬೇಬಹಾರಿನ ಕಾಯಿಗಳನ್ನು ಜುಲೈ ಆಗಷ್ಟ ತಿಂಗಳಗಳಲ್ಲಿ ಕೊಯ್ದುಕೊಂಡ ನಂತರ, ಡಿಸೆಂಬರ ಆಖೇರದ ವರೆಗೆ ಗಿಡಗಳಿಗೆ ನೀರು ಹಾಕದೆ ಅಥವಾ ಅವುಗಳನಡುವೆ ಬೆಳೆದ ಕಳೆ ಕಸ ಮುಂತಾದ್ದನ್ನೆಲ್ಲ ತೆಗೆದುಹಾಕದೆ ಹಾಗೆಯೇ ವಿಶ್ರಾಂತಿಗೆಂದು ಬಿಟ್ಟುಬಿಡಬೇಕು. ಅಷ್ಟೊತ್ತಿಗೆ ಗಿಡಗಳ ಎಲೆಗಳೆಲ್ಲ ಉದುರಿಹೋಗುತ್ತವೆ. ಹೀಗೆ ಎಲ್ಲ ಗಿಡಗಳ ಎಲೆಗಳು ಉದುರಿಹೋದ ಮೇಲೆ ಭೂಮಿಯನ್ನು ಅಗಿಸಿ ಅಲ್ಲವೆ ರೆಂಟೆಯನ್ನು ಹೊಡಸಿ ಇಡಬೇಕು. ಗಿಡಗಳ ಬುಡಗಳಲ್ಲಿರುವ ಮಣ್ಣನ್ನು ಅಗಿದು ತೆಗೆದು ಗಿಡಗಳ ಬೇರಿಗೆ ಬಿಸಲು ಬಡಿಯುವಂತೆ ಅವುಗಳನ್ನು ೧೦-೧೫ ದಿವಸಗಳ ವರೆಗೆ ತೆರೆದಿಡಬೇಕು. ಬಳಿಕ ಸಣ್ಣಗಿರುವ ಬೇರುಗಳನ್ನೆಲ್ಲ ಕತ್ತರಿಸಿ, ಸೆಗಣೀ ಗೊಬ್ಬರ ಹಾಕಿ ಮಣ್ಣೇರಿಸಬೇಕು ಮತ್ತು ನೀರು ಹಾಯಿಸುವದಕ್ಕಾಗಿ ಗಿಡಗಳ ಸುತ್ತ ದುಂಡನ ಮಡಿಗಳನ್ನು ಮಾಡಬೇಕು. ಮಡಿಗಳನ್ನು ಮಾಡುವಾಗ ಗಿಡದ ಬೊಡ್ಡೆಯಿಂದ ಸುಮಾರು ೩ ರಿಂದ ೫ ಫೂಟಿನ ವರೆಗೆ ಅಂತರ ಬಿಟ್ಟು ಫೂಟು ಅಗಲವಾದ ವರ್ತುಳಾಕಾರ ಮಡಿಯನ್ನು ಮಾಡಿ ಅದರೊಳಗೆ ನೀರು ತುಂಬಬೇಕು. ಮೊದಲನೇ ಸಾರೆ ಫೆಬ್ರವರಿ ತಿಂಗಳದ ಮಧ್ಯದ ಸುಮಾರಕ್ಕೆ (ಶಿವರಾತ್ರಿಗೆ) ನೀರು ಹಾಯಿಸಬೇಕು ಮುಂದೆ ಅವಶ್ಯಕತೆ ಬಿದ್ದಂತೆ ಗಿಡಗಳಿಗೆ ನೀರು ಉಣಿಸಬೇಕು. ಕಾಯಿಗಳು ಅಡಿಕೆಯಷ್ಟಾದವೆಂದರೆ ತಿಂಗಳಿಗೊಮ್ಮೆ ಭೂಮಿಯನ್ನು ಸ್ವಲ್ಪ ಮಟ್ಟಿಗೆ ಅಗಿದು ಮಣ್ಣೆಲ್ಲ ಸಡಲು ಮಾಡಬೇಕು. ಹೂವಾದ ೬-೭ ತಿಂಗಳಿಗೆಂದರೆ ಕಾಯಿಗಳು ಪಕ್ವವಾಗಿ ಕೊಯ್ಯಲಿಕ್ಕೆ ತಯಾರವಾಗುತ್ತವೆ.

ಮೃಗ ಬಹಾರು:- ನವೆಂಬರ ಡಿಸೆಂಬರ ತಿಂಗಳಲ್ಲಿ ಹಳೇ ಕಾಯಿಗಳನ್ನು ಕೊ

ಯ್ಯುವದಾದ ಬಳಿಕ, ಮಾರ್ಚ ಎಪ್ರಿಲ ತಿಂಗಳ ವರೆಗೆ ತೋಟವನ್ನು ಅದರೊಳಗಿರುವ ಗಿಡಗಳಿಗೆ ನೀರು ಹಾಕದೆ ಅಥವಾ ಅವುಗಳ ನಡುವೆ ಬೆಳೆದ ಕಳೆ, ಕಸ ಮುಂತಾದ್ದನ್ನೆಲ್ಲ ತೆಗೆದು ಹಾಕದೆ ಹಾಗೆಯೇ ವಿಶ್ರಾಂತಿಗೆ ಬಿಟ್ಟು ಗಿಡಗಳ ಎಲೆಗಳೆಲ್ಲ ಉದರುವಂತೆ ಮಾಡಬೇಕು. ಮುಂದೆ ಅಂಬೇ ಬಹಾರದಂತೆ ಬೇರುಗಳಿಗೆ ಬಿಸಲು ಬಡಿಯುಬೇಕೆಂದು ಅವುಗಳನ್ನು ತೆರೆ ವಿಡಬೇಕು. ಬಳಿಕ ಗೊಬ್ಬರ ಹಾಕಿ ಮಣ್ಣೇರಿಸಬೇಕು ಮತ್ತು ಮೊದಲನೇ ನೀರು ಮೇ ತಿಂಗಳಲ್ಲಿ (ಅಕ್ಷತೃತಿಯಗೆ) ಹಾಯಿಸಬೇಕು. ಮುಂದೆ ಸುಮಾರು ಒಂದು ತಿಂಗಳಿಗೆ ಹೂವು ಬರಹತ್ತಿ ಕಾಯಿಗಳಾಗಲಿಕ್ಕೆ ಪ್ರಾರಂಭವಾಗಿ ೬-೭ ತಿಂಗಳಿಗೆ ಹಣ್ಣುಗಳು ಕೊಯ್ಯಲಿಕ್ಕೆ ಬರುವವು.

ಹತ್ತೀಬಹಾರು- ಈ ಬಹಾರು ಬರುವ ಮೊದಲು ೪-೫ ತಿಂಗಳವರೆಗೆ ಗಿಡಗಳಿಗೆ ನೀರು ಕಟ್ಟುಮಾಡಿ ಅವುಗಳ ಎಲೆಗಳನ್ನು ಉದರಿಸುವದು ಮತ್ತು ಗಿಡಗಳ ಬೇರುಗಳನ್ನು ತೆರೆದಿಡುವದು ಮುಂತಾದ್ದನ್ನು ಮಾಡಲಿಕ್ಕೆ ಬರುವಂತೆ ಇಲ್ಲ. ಯಾಕಂದತೆ ಈ ಬಹಾರು ಬರುವ ಮೊದಲು ಮಳೆಗಾಲವಿರುವ ಕಾರಣ ಗಿಡಗಳು ಸ್ವಲ್ಪವಾದರೂ ಚಿಗಿಯುತ್ತಲೇ ಇರುತ್ತವೆ. ಅದ್ದರಿಂದ ಇವನ್ನು ಬಹಳಮಾಡಿ ಯಾರು ಕಾಯುತ್ತಿರುವದಿಲ್ಲ. ಕಾಯಬೇಕಾದರೆ ಸಪ್ಟಂಬರ ಸುಮಾರಕ್ಕೆ ಮಳೆಯು ಹೊರಪಾದಾಗ ಗಿಡದ ಬೊಡ್ಡಿ ಸುತ್ತ ಅಗಿದು, ಹೊಸ ಮಡಿಗಳನ್ನು ಮಾಡಿ ಸ್ವಲ್ಪ ಹೆಚ್ಚಿಗೆ ಗೊಬ್ಬರಹಾಕಿ ನೀರು ಹಾಯಿಸಿದರೆ ಬಹಾರು ತಕ್ಕಮಟ್ಟಿಗೆ ಬಂದು ಮಾರ್ಚ ತಿಂಗಳ ಸುಮಾರಕ್ಕೆ ಹಣ್ಣುಗಳು ತಯಾರ ವಾಗುವವು.

ಕಲಮುಗಳು- ಚಲೋಜಾತಿಯ ಗಿಡಗಳಿದ್ದರೆ ಅವುಗಳಿಂದ ಕಲಮುಗಳನ್ನು ತಯಾರಿಸಲಿಕ್ಕೆ ಬರುತ್ತದೆ.

ದಾಳಿಂಬರ ತೋಟದ ಬಾಳಿಕೆ- ಹಚ್ಚಿದನಿಂದ ೧೨-೧೫ ವರ್ಷಗಳ ವರೆಗೆ ದಾಳಿಂಬರ ಗಿಡಗಳಿಗೆ ಬಹಳ ಕಾಯಿಗಳಾಗುತ್ತವೆ ಇದರ ಮುಂದೆ ಬರಬರುತ್ತ ಅವುಗಳ ಫಲಿಸುವ ಶಕ್ತಿಯು ಕಡಿಮೆಯಾಗುತ್ತ ಹೋಗುವದು.

ದಾಳಿಂಬರ ಗಿಡಗಳಿಗೆ ತಗಲುವ ಕ್ರಿಮಿರೋಗಗಳು.

ಸುರಸಾ (ಮರಾಠೀ ಹೆಸರು)- ಒಂದು ಜಾತಿಯ ಸಂಣ ಕೀಡಿಗಳು ಕಾಯಿಗಳಿಗೆ ತೂತು ಕೆಡುವುತ್ತವೆ. ತೂತುಗಳು ಬಿದ್ದ ಕಾಯಿಗಳನ್ನು ಒಡೆದು ನೋಡಿದರೆ ಇಂಥ ತೂತುಗಳ ತಳದಲ್ಲಿ ಕೀಡಿಗಳು ಸಿಗುವವು. ಗಿಡಗಳಿಗೆ ಹೂವುಗಳಾದಾಗ ಇಲ್ಲವೆ ಕಾಯಿಗಳು ಅಡಿಕೆಯಷ್ಟಿರುವಾಗ ಅವುಗಳ ಮೇಲೆ ಒಂದು ತರದ ಸಂಣ ಪತಂಗವು (ಪಕ್ಕದಬೆಳ) ಬಿಳೀ ತತ್ತಿಗಳನ್ನಿಡುತ್ತದೆ. ಮುಂದೆ ಅವು ಒಡೆದು ಅವುಗಳಿಂದಾಗುವ ಸಣ್ಣ ಕೀಡಿಗಳು ಕಾಯಿಗಳಿಗೆ ತೂತುಗಳನ್ನು ಕಡಿದು ಒಳಗೆ ಹೋಗುತ್ತವೆ. ಮತ್ತು ದೊಡ್ಡಾಗುತ್ತ ಹೆಮೇಗುವ ಕಾಯಿಗಳೊಳಗೆಯೇ ಅವುಗಳ ಬೆಳವಣಿಗೆ ಸಂಪೂರ್ಣವಾವಾಗುತ್ತದೆ ಮತ್ತು ಈ ಕಾರಣದ ದೆಸೆಯಿಂದ ಕಾಯಿಗಳು ತಿನ್ನಲಿಕ್ಕೆ ಬಾರದಂತೆ ಆಗುತ್ತವೆ.

ಈ ರೋಗಕ್ಕೆ ಉಪಾಯ- ೧) ಹೂವು ಮಿಡಿಗಳನ್ನು ಆಗಾಗ್ಗ ನೋಡಿ ಅವುಗಳ ಮೇಲೆ ತತ್ತಿಗಳಿದ್ದರೆ ಅವುಗಳನ್ನು ಒರಸಿ ತೆಗೆಯಬೇಕು (೨) ತೂತಾದ ದೊಡ್ಡ ಕಾಯಿಗಳನ್ನು ತೆಗೆದು ಸುಟ್ಟು ಬಿಡಬೇಕು (೩) ಕಾಯಿಗಳು ಸಣ್ಣವಿದ್ದರೆ ತೂತುಗಳಲ್ಲಿ ಕಡ್ಡಿಯನ್ನಾಗಲೀ ದಬ್ಬಣವನ್ನಾಗಲೀ ಚುಚ್ಚಿ ತೂತಿನೊಳಗಿರುವ ಹುಳವನ್ನು ಕೊಂದುಬಿಡಬೇಕು (೪) ಹೂವು ಮತ್ತು ಸಣ್ಣ ಕಾಯಿಗಳ ಮೇಲೆ ಪತಂಗವು ತತ್ತಿಗಳನ್ನು ಹಾಕುವ ಮೊದಲು ಅವುಗಳ ಮೇಲೆ ಅರಿವೆ ಚೀಲಗಳನ್ನು ಹಾಕಬೇಕು. ಈ ಅರಿವೆಯ ಚೀಲಗಳನ್ನು ಮಾಡಲಿಕ್ಕೆ ಪ್ರತಿಯೊಂದಕ್ಕೆ ೨ ಪೈಗಳಂತೆ ಖರ್ಚ ಹಿಡಿಯುತ್ತದೆ. ಮತ್ತು ಚೀಲಗಳನ್ನು ಜೋಕೆಯಿಂದಿಟ್ಟರೆ ಅವು ಎರಡು ಮೂರು ವರುಷಗಳವರೆಗೆ ತಡಿಯುತ್ತವೆ. ಚೀಲಗಳನ್ನು ಹಾಕಿದ ಗಿಡಗಳ ಮೇಲಿನ ಕಾಯಿಗಳಲ್ಲಿ ನೂರಕ್ಕೆ ತೊಂಬತ್ತೆರಡು (೯೨) ಹಣ್ಣುಗಳು ಚಲೋ ಹೊರಡುತ್ತವೆ. ಚೀಲಗಳು ಹಾಕದಿದ್ದರೆ ನೂರಕ್ಕೆ ನಾಲ್ವತ್ತೇಳು (೪೭) ಚಲೋ ಹೊರಡುತ್ತವೆ.

ಜಿಗಿರೋಗವು (ಮರಾಠಿ ಹೆಸರು ಚಿಕ್ಟಾ) ಇದೊಂದು ಎರಡನೇ ತರದ ರೋಗವು. ಎಲೆಗಳ 'ಕೆಳಭಾಗದಲ್ಲಿ ಬಿಳೇ ನೂರಾರು ಸಣ್ಣ ಸಣ್ಣ ಹುಳಗಳ ಗುಂಪು ಜಿಗಿಯಂತೆ ಹತ್ತಿಕೊಂಡಿರುತ್ತದೆ. ಈ ರೋಗವು ಕೀಟಕಶಾಸ್ತ್ರದಲ್ಲಿ (Aleuroides) ಎಂಬ ಹೆಸರಿನಿಂದ ಕರೆಯಲ್ಪಡುವ ಹುಳಗಳಿಂದುಂಟಾಗಿರುತ್ತದೆ. ಇದರಿಂದ ಅಷ್ಟೇನೂ ಹಾನಿಯಾದದ್ದು ಇನ್ನೂ ಕಂಡು ಬಂದಿಲ್ಲ.

ಈ ರೋಗಕ್ಕೆ ಉಪಾಯ- ಕೆಳಗೆ ವಿವರಿಸಿದಂತೆ ರಾಳದ ಮಿಶ್ರಣವನ್ನು ಮಾಡಿ ಎಲೆಗಳ ಕೆಳಭಾಗಕ್ಕೆ ಹತ್ತುವಂತೆ ಅದನ್ನು ಸಿಂಪಡಿಸಬೇಕು.

ರಾಳದ ಮಿಶ್ರಣ ಮಾಡುವ ಕೃತಿ- ೧ ಪೌಂಡು 'ವಾಶಿಂಗಸೋಡಾ' (ಅರಿವೆಗೆ ಹಚ್ಚುವ ಸೌಳುಕಾರ) ತಕ್ಕೊಂಡು ಅದನ್ನು ೧ ಗ್ಯಾಲನ್ ಅಂದರೆ ೧೦ ಪೌಂಡು ನೀರಲ್ಲಿ ಕೂಡಿಸಿ ಕರಗಿಸಬೇಕು. ಮತ್ತು ಕುದಿಯುತ್ತಿರುವಾಗ ೨ ಪೌಂಡುತೂಕದಷ್ಟು ರಾಳದ ಪುಡಿಯನ್ನು ಹಾಕಿ ತಿರವಬೇಕು. ಮಿಶ್ರಣವು ಸ್ವಚ್ಛ ಕಾಣುವವರೆಗೆ ಕುದಿಸಿ ನಂತರ ಆರಗೊಡಬೇಕು. ಆರಿದ ಮೇಲೆ ಇದಕ್ಕೆ ೩೦ ಪೌಂಡು ನೀರು ಕೂಡಿಸಿ ಇಡಬೇಕು. ಮತ್ತು ಗಿಡಗಳ ಮೇಲೆ ಸಿಂಪಡಿಸಲಿಕ್ಕೆ ಬೇಕಾದಾಗ ಈ ಮಿಶ್ರಣದಲ್ಲಿ ೧ಕ್ಕೆ ೬ ಪಟ್ಟು, ಈ ಪ್ರಮಾಣದಂತೆ ನೀರು ಕೂಡಿಸಿ ಉಪಯೋಗಿಸಿದರೆ ಹುಳಗಳೆಲ್ಲ ಸಾಯುವವು.

—)o'—

ಸೋಶಿಯಲಿಸ್ಟ್ ಪಾರ್ಟಿ ತೀರ್ಮಾನ

ತಾ|| 30-3-49 ಪಾಟ್ನಾದಲ್ಲಿ ಕಿಸಾನ ಮುಂದಾಳುಗಳಾದ ಇಂದುಲಾಲ ಯಾಜ್ಞಿಕ್ ಇವರ ಅಧ್ಯಕ್ಷತೆಯಲ್ಲಿ ಇಂಡಿಯಾದ ಅನೇಕ ಪ್ರಾಂತಗಳಿಂದ ಬಂದ ಕಿಸಾನ ಪ್ರತಿನಿಧಿಗಳ ಸಭೆಯು ಸೇರಿ ನವೀನವಾದ "ಹಿಂದ್ ಕಿಸಾನ್ ಪಂಚಾಯತ್" ಎಂಬ ಕೇಂದ್ರ ಸಂಘವನ್ನು ರಚಿಸಲಾಯಿತು. ಈ ಸಂಘದ ಉದ್ದೇಶಗಳು ದೇಶದಲ್ಲಿಯ ಕಿಸಾನ್‌ರನ್ನು ಸಂಘಟಿಸುವದು. ಅವರ ಕಷ್ಟ ದುಃಖ ನಿವಾರಣೆಗಾಗಿ ಹೋರಾಡುವದು. ಮತ್ತು ಅಧಿಕಾರವನ್ನು ಹೊಂದಲು ಪ್ರಯತ್ನಿಸುವದು. ಈ "ಹಿಂದ್ ಕಿಸಾನರ ಪಂಚಾಯತ್" ಗೆ ಸಾಥೀ ಡಾ|| ರಾಮಮೋಹನರ ಲೋಹಿಯಾ ಇವರನ್ನು ಅಧ್ಯಕ್ಷರನ್ನಾಗಿ ಆರಿಸಲಾಯಿತು. ಪರಿಷತ್ತಿನಲ್ಲಿ 20 ಜನ ಸದಸ್ಯರುಳ್ಳ ಕಮಿಟಿಯೊಂದನ್ನು ಸಂಘದ ಘಟನೆ ನಿಯಮಾವಳಿ ಉದ್ದೇಶಗಳು, ರೈತರ ಬೇಡಿಕೆಗಳು ಕಾರ್ಯಕ್ರಮದ ಸ್ವರೂಪ ಮುಂತಾದವುಗಳ ಕರಡನ್ನು ಬರೆಯಲು ನಿಯಮಿಸಲಾಯಿತು

ರೇಶನ್ ಪ್ರಮಾಣ

6-3-49 ರಿಂದ ನಮ್ಮ ಪ್ರಾಂತದಲ್ಲಿ ಈ ಕೆಳಗಿನಂತೆ ರೇಶನ್ ಪ್ರಮಾಣವು (ವಯಸ್ಕನಿಗೆ ದಿನಕ್ಕೆ 12 ಔನ್ಸು) ಜಾರಿಗೆ ಬಂದಿದೆ.

ಅಕ್ಕಿ ತಿನ್ನುವವರು;-

8 ಔನ್ಸುಗಳಷ್ಟು ಅಕ್ಕಿ

2 ಔನ್ಸುಗಳಷ್ಟು ಸಮೊಲಿನ(ದಪ್ಪರವೆ

2 ಔನ್ಸುಗಳಷ್ಟು ಜೋಳ, ಮಿಲೊ, ಗೋಧಿ, ಸಮೊಲಿನ ಮತ್ತು ಅಥವಾ ಸ್ಥಳಿಕ ಇತರ ಧಾನ್ಯಗಳು.

ಮಿಶ್ರಾಹಾರ ತಿನ್ನುವರು:-

4 ಔನ್ಸುಗಳಷ್ಟು ಅಕ್ಕಿ

2 ಔನ್ಸುಗಳಷ್ಟು ಸಮೊಲಿನ

6 ಔನ್ಸುಗಳಷ್ಟು ಗೋಧಿ, ಸಮೊಲಿನ ಜೋಳ, ಮಿಲೊ, ಮತ್ತು ಅಥವಾ ಸ್ಥಳೀಕ ಇತರ ಧಾನ್ಯಗಳು.

ಧಾನ್ಯ ತಿನ್ನುವವರು;-

2 ಔನ್ಸುಗಳಷ್ಟು ಅಕ್ಕಿ

2 ಔನ್ಸುಗಳಷ್ಟು ಸಮೋಲಿನ

8 ಔನ್ಸುಗಳಷ್ಟುಗೋಧಿ ಸಮೊಲಿನ, ಜೋಳ, ಮಿಲೊ ಮತ್ತು ಅಥವಾ ಸ್ಥಳೀಕ ಧಾನ್ಯ

ಚೀನದಲ್ಲಿಯ ಗೊಂದಲ

ಈಗೆರಡು ಮೂರು ವರುಷಗಳಿಂದಲೂ ಚೀನದಲ್ಲಿ ಆಂತರಿಕ ಕಿಕ್ಕಾಟವು ಪ್ರಾರಂಭವಾಗಿದ್ದು ಅದು ಈಗ ಕೊನೆಯ ಘಟ್ಟಕ್ಕೆ ಬಂದಿರುತ್ತದೆ. ಈ ಆಂತರಿಕ ಕಿಕ್ಕಾಟದಲ್ಲಿ ಪ್ರಮುಖ ಪಾತ್ರವಹಿಸಿದ್ದ ಕಮ್ಯೂನಿಸ್ಟ, ಕೋಮಿಂಟಾಂಗ ಈ ಎರಡೂ ಪಕ್ಷಗಳೂ ಇಂದು ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ವಾತಾವರಣದಲ್ಲಿ ಹಿಂದು ಮುಂದು ತೂಗಾಡುತ್ತಿದ್ದರೆ ಈ ಎರಡು ಪಕ್ಷಗಳಲ್ಲಿ, ಅಮೇರಿಕೆಯ ಬೆಂಬಲದ ಮೇಲೆ [illegible] ಹಾಕುತ್ತಿದ್ದ ಕೋಮಿಂಟಾಂಗವು ನಿರ್ಬಲವಾಗಿ ಕೈಹೂಡಿದೆ; ರಶಿಯದ ಬೆಂಬಲದಿಂದ ಗಟ್ಟಿಯಾಗುತ್ತಿದ್ದ ಕಮ್ಯೂನಿಸ್ಟ ಪಕ್ಷವು ಕಾಲು ಕೆದರುತ್ತಿದೆ. ಕಮ್ಯೂನಿಸ್ಟರ ಪ್ರಾಬಲ್ಯವು ದಿನಕ್ಕೊಂದು ಚಂದದಿಂದ ಏರಿಯುತ್ತಲೇ ಬಂದುದರಿಂದ ಅವರ ಕುದುರೆ ಮುಂದೆ ಸಂಧಾನಕ್ಕಾಗಿ ಅಸ್ಪೋಂದ [illegible] ದ, ಅಥವಾ ಸೇಡು ತೀರಿಸಿಕೊಳ್ಳುವ ಬುದ್ಧಿಯ ನಿಯಮ ನಿರ್ಬಂಧಗಳನ್ನು ಅವರು ಮುಂದೆ ಮಾಡುತ್ತಿದ್ದಾರೆ. ಕೋಮಿಂಟಾಂಗದವರು ಅವುಗಳನ್ನು ಅವಶ್ಯ [illegible] ತೆಗಿಳಿಸಲು ಪ್ರಯತ್ನಿಸುತ್ತಿದ್ದರಲ್ಲದೆ ಶಾಂತಿಗಾಗಿ ಸಂಧಾನಾತುರತೆಯಿಂದ ಹೆಚ್ಚು ಕಡಿಮೆಯಾದರೂ, ಮಾನಾಭಿಮಾನಗಳ ಪ್ರಶ್ನೆಯನ್ನೂ ಕೆಲವೇಳೆ ಹಿಂದೆ ಸರಿಸಿ ಒಪ್ಪವಮಾಡಿಕೊಳ್ಳು [illegible] ಮಟ್ಟಕ್ಕೆ ಬಂದಿದ್ದಾರೆ.

ಹೀಗಾಗಿ ಚೀನದಲ್ಲಿ ಸದ್ಯಕ್ಕಂತೂ ಅನಿಶ್ಚಿತ ಪರಿಸ್ಥಿತಿಯೇ ಇರುತ್ತದೆಂದು ಹೇಳಬಹುದಾಗಿದೆ. ಏಕೆಂದರೆ ಒಂದು ಪಕ್ಷದ ಜೋರು ಇದ್ದಷ್ಟು [illegible] ಇದ್ದೊಂದ. [illegible] ಜೋರು ಇಳಿಮುಖವಾದಾಗ ಈ ಬಗೆಯ ಅನಿಶ್ಚಿತತೆ ಉದ್ಭವಿಸುವುದು ಇತಿಹಾಸ ಪ್ರಸಿದ್ಧ ವಿಷಯವಾಗಿದೆ. [illegible] ಮಾಡಿಕೊಂಡದ್ದು, ತನಗೆ ಸೂಚಿಸಬಹುದು [illegible] ನಿಯಮಗಳನ್ನೇ [illegible] ಮಾತಲು ಈ ಸಂಧಾನ ಪ್ರಶ್ನೆಗಳಲ್ಲಿ ಪ್ರಬಲ ಪಕ್ಷವು [illegible] ಡಿಸುವದು ಸ್ವಾಭಾವಿಕವೇ. ಇಲ್ಲಿ ಆತ ತನ್ನ ಶತ್ರುಗಳೆಂಬವರನ್ನು ಮುಂದಿನ [illegible] ಯನ್ನು ಹಾಕಲೂ ಇದರು [illegible] ಸಾಧ್ಯವಿಲ್ಲ. ಇದರಂತೆಯೇ ಚೀನದಲ್ಲಿ ಒಂದು ಕಡೆ ಶಾಂತಿಸ್ಥಾಪನ ಮಾತುಕತೆಗಳು ನಡೆದಿದ್ದರೆ ಇನ್ನೊಂದು ಕಡೆ ಕಮ್ಯೂನಿಸ್ಟರು ಯಾಂಗತ್ಸೆ ನದಿಯನ್ನು ದಾಟಿ [illegible] ಪ್ರಮಾಣದ [illegible] ಯನ್ನು [illegible] ಬರುತ್ತದೆ. ಹೀಗೆ ಇತ್ತ ಸಂಧಾನ ಅತ್ತ ಸಮರ ಈ ಎರಡು ಕತ್ತಿಯ ಪ್ರಯಾಣದಿಂದ ಯಾವುದೂ ಸ್ಪಷ್ಟವಾಗಿ ನಿಶ್ಚಯವಾಗದೆ ಪರಿಸ್ಥಿತಿಯು ಗಲಿಬಿಲಿಯಿದ್ದು ಯಾವುದೂ ತಿಳಿಯದಾಗಿರುವುದು.

ಸರಕಾರಿ ಅಥವಾ ಕೋಮಿಂಟಾಂಗ ಪಕ್ಷದವರ ಬೇಗನೇ ಶರಣು ಬರಬೇಕೆಂಬ ಒತ್ತಾಯದಿಂದ ಕಮ್ಯೂನಿಸ್ಟರು ಹೀಗೆ ನಿಷ್ಠೆಯನ್ನು ನಡೆಸಿದಂತೆ ತೋರಿಸುತ್ತಿರುವರೋ, ಅಥವಾ ನಿಜವಾಗಿಯೇ ದಾಳಿಯನ್ನು ಮಾಡಬೇಕೆಂದು ಅವರ ಉದ್ದೇಶವಿರುವದೋ ಎಂಬುದು ನಿಶ್ಚಿತವಾಗಿ ತಿಳಿಯದಂತೆ ಈ ಕಮ್ಯೂನಿಸ್ಟ ಪಕ್ಷದ ಚಲನವಲನಗಳ ರೀತಿಯಿರುತ್ತದೆ. ಕಮ್ಯೂನಿಸ್ಟರು ಯಾಂಗತ್ಸೆ ನದಿಯ ಉತ್ತರ ದಂಡೆಯಲ್ಲಿ ಕೋಮಿಂಟಾಂಗದ ವಶದಲ್ಲಿರುವ ಸ್ಥಳಗಳ ಮೇಲೆ ದಾಳಿಮಾಡಿದ್ದಾರೆ. ಈ ದಾಳಿಯ ಭಾಗವು ನಾಂಕಿಂಗದಿಂದ ಕೇವಲ ನಾಲ್ವತ್ತು ಐವತ್ತು ಮೈಲುಗಳಷ್ಟು ಮಾತ್ರ ದೂರದಲ್ಲಿದೆ. ಕಮ್ಯೂನಿಸ್ಟರು ಈ ಭಾಗದಲ್ಲಿ ಸಂಗ್ರಹಿಸಿದ ಸೈನ್ಯದ ಸಂಖ್ಯೆ ಸುಮಾರು ಮೂರು ಲಕ್ಷಕ್ಕೆ ಏರಬಹುದೆಂದು ಪ್ರಕಟನೆಯೊಂದರಿಂದ ತಿಳಿದುಬರುತ್ತದೆ. ಇದರೊಡನೆ ನಾಂಕಿಂಗ ಶಾಂಘಾಯ ಹಂಗಚೋ ನಗರಗಳ ಬಲಪತ್ತಿಗಳ [illegible] ಜನರೆಲ್ಲ ಟಾಂಗಸ್ರೋ: ಅವರು ಶತ್ರುಗಳನ್ನು ತಡೆಗಟ್ಟಲು ಸಹಾಯ ಕವಲಗಳನ್ನು ಈ ಭಾಗಕ್ಕೆ ಕಳುಹಿಸಿದ್ದಾರೆಂದೂ ತಿಳಿಯುತ್ತದೆ.

ಅತ್ತ ಈ ರೀತಿ ಕುರುಪಿನ ಕಿಕ್ಕಾಟದ ಹಿಂದು ಮುಂದು ನಡೆದಿರುವಾಗ ಇತ್ತ ಶಾಂತಿ ಸಂಧಾನಸಮಿತಿಯು ಹತ್ತು ಜನರ ಸಭೆ ಸಂಧಾನದ ಕರಡನ್ನು ಒರೆಯುತ್ತಿರುವದು, ಅನೇಕ ವಿವಾದಾಸ್ಪದ ವಿಷಯದಲ್ಲಿ ಅವರಲ್ಲಿಯೂ ವಿಶೇಷತಃ ಯುದ್ಧಾಪರಾಧಿಗಳ ವಿಚಾರಣೆ ಮತ್ತು ಸೈನ್ಯದ ಪುನರ್ಘಟನೆ ಈ ವಿಷಯಗಳಲ್ಲಿ ಒಮ್ಮತವಾಗಿರುವದೆಂದು ಇಲ್ಲಿಯವರೆಗೆ ನಡೆದ ಮಾತುಕತೆಗಳ ಪರಿಣಾಮದಿಂದ ತಿಳಿದುಬರುತ್ತದೆ. ಇದರ [illegible] ಚೀನೀ ಸರಕಾರದಿಂದ ಓಡಿಹೋಗಿ ಕಮ್ಯೂನಿಸ್ಟರನ್ನು ಕೂಡಿಕೊಂಡ ಒಂದು ಚೀನೀ ಕ್ರೂಝರ ಹಡಗವು (ಅದರ ತೂಕ ೫೨೭೦ ಟನ್ನು ಇರುತ್ತದೆ) ರಶಿಯನ ನಿಯಂತ್ರಣದಲ್ಲಿರುವ ಡೈರನ ಬಂದರವನ್ನು ತಲುಪಿರುತ್ತದೆಯೆಂದೂ ಸುದ್ದಿ ಬಂದಿದೆ.

ಕಮ್ಯೂನಿಸ್ಟರ ಒತ್ತಾಯಕ್ಕೊಳಪಟ್ಟು ಚೀನ ಸರಕಾರವು ಚಿಯಾಂಗರನ್ನು ಚೀನದಿಂದ ತೆರಳಿಸಲು [illegible] ಎಚ್ಚರಿಕೆಯನ್ನು ಕೊಡಲಾಗಿದೆ. [illegible] ಚಿಯಾಂಗ [illegible] ಚೀನೀ ಸರಕಾರವು ಈ ಎಚ್ಚರಿಕೆಯನ್ನು ನಿರಾಕರಿಸಿದ್ದಾರೆಂದೂ [illegible]. ಈ ಎಚ್ಚರಿಕೆಯನ್ನು [illegible] ಚಿಯಾಂಗರ ಕಡೆಗೆ [illegible] ಚಾಂಗರು ನಾಂಕಿಂಗಕ್ಕೆ [illegible]. ಚೀನದ ಉಪಮಂತ್ರಿಗಳಾದ ಉ [illegible] ಡಚೆನ್ನ ಅವರು ಸದ್ಯಕ್ಕೆ ಚೀನೀ ಸರಕಾರವು ಸಂಧಾನಕ್ಕಾಗಿ ನಡೆಸಿದ ಪ್ರಯತ್ನಗಳಲ್ಲಿ ಚಿಯಾಂಗರು ಅಡ್ಡಬರದೆ ಇರಬೇಕು ಎಂದು ಚಿಯಾಂಗ [illegible] ಬಿನ್ನವಿಸಿಕೊಂಡಿದ್ದಾರೆ.

ಇತ್ತ ಕಮ್ಯೂನಿಸ್ಟರೂ ಸಂಧಾನಕ್ಕಾಗಿ ಕೆಲವೇಳೆ ಹಿಂದೆಸರಿದಂತೆ ತೋರಿಸಿಕೊಳ್ಳುತ್ತಿದ್ದಾರೆ. ಈ ಮೊದಲೇ ಚಿಯಾಂಗ ಕೈಶೇಕ ಮೊದಲಾದ ಯುದ್ಧಾಪರಾಧಿಗಳನ್ನೂ ಬಂಧಿಸಿ ದಂಡಿಸಬೇಕೆಂದು ಕಮ್ಯೂನಿಸ್ಟರು ನಿರ್ಬಂಧವನ್ನು ಹಾಕಿದ್ದರು. ಈಗ ಆ ನಿಯಮವನ್ನು [illegible] ಕೊಂಡ ಈ ಯುದ್ಧಾಪರಾಧಿಗಳು ಕೊನೆಯವರೆಗೂ ಸಂಯುಕ್ತ ಸರಕಾರದಲ್ಲಿ ಭಾಗವಹಿಸಬಾರದೆಂದು ನಿರ್ಬಂಧ ಹಾಕುವಂತೆ ತೋರುತ್ತದೆ. ಹೀಗೆ ಇತ್ತಂಡಗಳಲ್ಲಿಯೂ ಮಾತುಕತೆಗಳ ಕಿಕ್ಕಾಟವು ನಡೆದು ಒಪ್ಪಂದದ ಪ್ರಾಸ್ತಾವಿಕ ಕರಡು, ಸಂಧಾನಕ್ಕಾಗಿಯೇ ನಿಯಮಿತವಾಗಿರುವ ಆ ಹತ್ತು ಜನರ ಸಮಿತಿಯಿಂದ ಸಿದ್ಧಗೊಳಿಸಲ್ಪಟ್ಟಿದೆಯೆಂದು ತಿಳಿದುಬರುತ್ತದೆ.

ಆಂತರಿಕ ಯುದ್ಧ ಪರಿಣಾಮದಿಂದಾಗಿ ಮೊದಲೇ ಹದಗೆಟ್ಟಿದ್ದ ಚೀನದ ವಾತಾವರಣವು ಸದ್ಯಕ್ಕೆ ಶಾಂತಿ ಪ್ರಯತ್ನಗಳ ಭರದಿಂದ [illegible] ಪ್ರಬಲ ಮತ್ತು ನಿರ [illegible] ಪಕ್ಷಗಳಿಂದ ಸೂಚಿತ ಮತ್ತು ನಿರಾಕರಿಸಲ್ಪಡುವ ನಿಯಮ ನಿರ್ಬಂಧಗಳಿಂದ ಅನಿಶ್ಚಿತತೆಗೆ ಇಟ್ಟು ಚೀನಿಯರಲ್ಲಿ ಗೊಂದಲವೆದ್ದಿದೆ. ಯಾವ ಕಾಲಕ್ಕೆ ವಾತಾವರಣದಲ್ಲಿ ಹೇಗೆ ಬಿಸಿಯೇರುವುದೋ ಹೇಳಲು ಬರುವಂತಿಲ್ಲ. ಆದರೂ ಪ್ರಬಲ ಪಕ್ಷವಾದ ಕಮ್ಯೂನಿಸ್ಟರ ಕೈ ಮೇಲಾಗುವ ಲಕ್ಷಣಗಳು ಸ್ಪಷ್ಟವಾಗಿ ತೋರಿಬರುತ್ತಲಿವೆ. ಕೋಮಿಂಟಾಂಗ ಪಕ್ಷದ ಸರಕಾರಿ ಪಕ್ಷವು ತನ್ನ [illegible] ಅಧ [illegible] ಲಿಂಚಗ್ಲೆತನ ಮೊದಲಾದವುಗಳಿಂದ ಮೊದಲೇ ಚೀನಿಯ ಜನಸಾಮಾನ್ಯರ ಸಹಾನುಭೂತಿ [illegible] ದ [illegible] ಪರಿಣಾಮವೇ ಇದಾಗಿರುತ್ತದೆಯೆಂದ [illegible]. ಹೀಗೆ ಇದ್ದರೂ ಚೀನದ ಕದಡಿದ ವಾತಾವರಣ ಈ ಸಂಧಾನದ ಪ್ರಯತ್ನದಿಂದ ತಿಳಿಯಾಗುವ ಮುಸಮುಸುಕು ಚಿಹ್ನೆಗಳು ತೋರಿಬರುತ್ತಲಿವೆಯೆಂದರೆ ತಪ್ಪಾಗದು.

(ಜಯ ಹಿಂದ)

ಹೊಸಪೇಟೆ

ಆರೋಗ್ಯ ಶಿಬಿರವು ನಡೆಸಲು ಶ್ರೀ [illegible] ಮಾನಿಸಲಾಯಿತು. ‘[illegible]’ ಒಕ್ಕದ ಮಾಸಪತ್ರಿಕೆಯನ್ನು ನಡೆಸಲು ಮಿತ್ರರು ನಿಶ್ಚಯಿಸಿದ್ದಾರೆ. ಬಳ್ಳಾರಿ ರೋಡ್ [illegible] ರೋಡ್‌ಗಳಲ್ಲಿ ಎರಡು ಬಸ್‌ಸ್ಟ್ಯಾಂಡುಗಳನ್ನು ಎಬ್ಬಿಸಲಿರುವ ನಿರ್ಧಾರವೆಂದು ರೇಟ್‌ಪೇಯರ್ಸ್ ಅಸೋಸಿಯೇಶನ್‌ರವರು ಮೇಲಾಧಿಕಾರಿಗಳಿಗೆ ಕಳುಹಿಸಿದರು.

ಹಸಿ ಮೇವಿನ ಪೈರುಗಳು ನಂಬರು

—)o(—

ಸುಂಧಿಯಾ ಎಂಬ ಜೋಳವು

ಸಾಮಾನ್ಯ ಮಾಹಿತಿ.

ಅನುಕೂಲವಾದ ಪ್ರದೇಶಗಳಲ್ಲಿ ಬೆಳೆಯಲಿಕ್ಕೆ ಇದೊಂದು ಅತ್ಯುತ್ತಮವಾದ ಹಸಿ ಮೇವಿನ ಪೈರಾಗಿರುತ್ತದೆ. ಇದರಲ್ಲಿ ಘಾರಫರಿಯಾ ಮತ್ತು ಅಮಾರಿಯಾ ಎಂಬ ಎರಡು ಜಾತಿಗಳು ಇದ್ದು ನೋಡಲಿಕ್ಕೆ ಒಂದೇ ಸಮನಾಗಿರುತ್ತವೆ. ಪೈರು ಹೂವಾಗಿದಾಗ್ಯೆ ೧೧ ಫೂಟು ಎತ್ತರಾಗಿಯೂ ದಟ್ಟಾಗಿಯೂ ಇದ್ದರೆ ಅದಕ್ಕೆ ಒಳ್ಳೇ ಬೆಳೆ ಎಂದೆನ್ನಲಿಕ್ಕೇನು ಅಡ್ಡಿ ಇಲ್ಲ. ಮೇವಿನ ಸಲುವಾಗಿ ಕೊಯ್ಯುವದಕ್ಕೆ ಇದೇ ಯೋಗ್ಯವಾದ ಸಮಯವು.

ಈ ಜಾತಿಯ ಜೋಳಗಳನ್ನು ಬೆಳೆದುಕೊಳ್ಳುವದರಿಂದಾಗುವ ಲಾಭಗಳು:--

೧) ಉತ್ಪನ್ನದಲ್ಲಿ ಮೇಲಾದದ್ದು.

೨) ದಂಟುಗಳು ಸಣ್ಣಾಗಿದ್ದು ರವದಿ ಬಹಳ.

೩) ಇದು ಬಹು ಬೇಗ (ಅಂದರೆ೨-೩ ತಿಂಗಳಲ್ಲಿ) ಬರುವ ಪೈರಾಗಿರುತ್ತದ್ದೆ ಆದ್ದರಿಂದ ದುಷ್ಕಾಳದಲ್ಲಿ ಇದರ ಒಳ್ಳೇ ಉಪಯೋಗವಾಗುತ್ತದೆ. ಇದರಿಂದಲೇ ಸನ್ ೧೮೯೯ ಮತ್ತು ೧೯೦೦ ಇಸವಿಗಳಲ್ಲಿಯ ದುಷ್ಕಾಳದಲ್ಲಿ ಗುಜರಾಥದಲ್ಲಿಯ ರೈತರು ತಮ್ಮ ದನಕರಗಳನ್ನು ಬದುಕಿಸಿಕೊಂಡರು

೪) ದನಗಳು ಇದರ ಚಪ್ಪಾಡಿಯನ್ನು ಸಹ ಬಿಡುವದಿಲ್ಲ.

೫) ಇದು ಒಳ್ಳೇ ಪೌಷ್ಟಿಕವಾದದ್ದಿರುತ್ತದೆ.

೬) ಇದನ್ನು ಹಿಂಗಾರಿಯಂತೆ ಬಿತ್ತಿ ಬೆಳೆಯಬಹುದು. ಒಂದು ವೇಳೆ ಶಜ್ಜೆ ಮುಂತಾದ ಮುಂಗಾರೀ ಪೈರುಗಳು ಮಳೆಯಾಗದೆ ಇಲ್ಲವೆ ಅತಿ ಮಳೆಯಿಂದ ಚನ್ನಾಗಿ ಬಾರದೆ ಕೇಡಾದರೆ ಈ ಪೈರನ್ನು ಹಿಂದಿನಿಂದ ಅಂದರೆ ಆಗಸ್ಟ ತಿಂಗಳಲ್ಲಿ ಬಿತ್ತಿ ತೆಗೆದುಕೊಳ್ಳಬಹುದು.

೭) ಇದರ ಹಸಿ ಇಲ್ಲವೇ ಒಣಮೇವನ್ನು ದನ ಮತ್ತು ಕುದುರೆಗಳು ಒಳ್ಳೇ ಆಕ್ಕರತೆಯಿಂದ ತಿನ್ನುವವು.

ಸಾಗುವಳಿಯು:—

ಇದರ ಮೂಲಸ್ಥಾನವಾದ ಅಹಮ್ಮದಾಬಾದ, ಖೇಡಾ ಮತ್ತು ಬಡೋದೆ ಸಂಸ್ಥಾನದ ಸಮೀಪದಲ್ಲಿಯ ಉಸುಬು ಮಿಶ್ರಿತವಾದ ಭೂಮಿಯಲ್ಲಿ ಇದನ್ನು ಮಳೆಗಾಲದಲ್ಲಿಯೂ ಮತ್ತು ಬೇಸಿಗೆಯಲ್ಲಿ ನೀರು ಹಾಯಿಸಿ ಬೆಳೆಯುವದು. ಮಳೆಗಾಲದಲ್ಲಿ ಇದು ಉಸುಬು ಮಿಶ್ರಿತವಾದ ಭೂಮಿಯಲ್ಲಿ ಚನ್ನಾಗಿ ಬೆಳೆಯುತ್ತದೆ. ಸುಮಾರು ೩೦ ರಿಂದ ೩೫ ಇಂಚು ಮಳೆ ಬೀಳುವ ಪ್ರದೇಶಗಳಲ್ಲಿ ಸಾಧಾರಣವಾದ ಭೂಮಿಯಲ್ಲಿ ಸಹ ಇದು ಚನ್ನಾಗಿ ಬರುತ್ತದೆ. ಮಿಶ್ರ ಹವೆಮಾನದ ವಿಷಯವಾಗಿ ವಿಚಾರಿಸಲಾಗಿ ಮುಂಬಯಿ ಇಲಾಖೆಯಲ್ಲಿ ಇದನ್ನು ಬೇಗಾದಲ್ಲಿ ಬೆಳೆಯಬಹುದು.

ಮಳೆಗಾಲದ ಬೆಳೆ

ಬಿತ್ತುವದು:- ಮಳಗಾಲದಲ್ಲಿ ಅಂದರೆ ಮಘಾ ಮಳೆಗೆ ಅಂದರೆ ಆಗಸ್ಟ ತಿಂಗಳ ಆರ್ಧ ಗಳೆದನಂತರ ಇದನ್ನು ಬಿತ್ತಬೇಕು. ಯಾಕಂದರೆ ದೊಡ್ಡ ದೊಡ್ಡ ಮಳೆಗಳು ಸುರಿಯುವದರೊಳಗಾಗಿಯೇ ಪೈರು ಎತ್ತರಾಗಿ ಬೆಳೆದಿದ್ದರೆ ಮಳೆಯ ಹೊಡತಕ್ಕೆ ಪೈರು ನೆಲಕ್ಕೆ ಬಿದ್ದು ಎಲೆಗಳೆಲ್ಲ ಉದುರಿ ಹಾನಿಯಾಗುವದು. ಒಂದು ವೇಳೆ ಅದಕ್ಕೆ ರೋಗವಾಗಿ ಎಲೆಗಳು ಕೆಂಪಾಗುವವು. ಕಾಳಿನ ಸಲುವಾಗಿ ಬೆಳೆಯುವದಿದ್ದರೆ ಅಶ್ಲೇಷಾ ಮಳೆಗೆ ಅಂದರೆ ಆಗಸ್ಟ ತಿಂಗಳ ಪ್ರಾರಂಭದಲ್ಲಿ ಬಿತ್ತಬೇಕು. ಈಡಮಾಡಿ ಬಿತ್ತುವ ಹಂಗಾಮುವಿರುವದರಿಂದ ಭೂಮಿಯನ್ನು ಚನ್ನಾಗಿ ಹಸನ ಮಾಡಲಿಕ್ಕೆ ಸವಡು ದೊರೆಯುತ್ತದೆ. ಯಾಕಂದರೆ ಅದಕ್ಕೆ ಹಸನಾದ ಮತ್ತು ಚನ್ನಾಗಿ ತಯಾರಿಸಿದ ಭೂಮಿಯು ಬೇಕು. ಒಂದು ಎಕರೇಕ್ಕೆ ೬೦ ಪೌಂಡಿನಂತೆ ಬೀಜವನ್ನು ಎರಡೂ ಮೈ ಬಿತ್ತಬೇಕು.

ಬೇಸಿಗೆಯ ಪೈರು

ಬೀಜವನ್ನು ಮಾರ್ಚ ಇಲ್ಲವೆ ಎಪ್ರೀಲ ತಿಂಗಳ ಪ್ರಾರಂಭದಲ್ಲಿ ಬಿತ್ತಬೇಕು. ಈ ಕಾಲಕ್ಕೆ ಇದರ ಬೆಳೆಯನ್ನು ತೆಗೆದುಕೊಳ್ಳುವದರಲ್ಲಿ ಮುಖ್ಯವಾದ ಮೂರು ಕಾರಣಗಳುಂಟು:—

(ಅ) ಮೇವಿನ ಕೊರತೆ ಇದ್ದು ತುಟ್ಟಿಯಾದಾಗ್ಯೆ ಹಸಿಮೇವು ಬೆಳೆಯುವದು.

(ಬ) ಎಪ್ರೀಲ ಮತ್ತು ಮೇ ತಿಂಗಳುಗಳಲ್ಲಿ ದನಗಳಿಗೆ ಮತ್ತು ಆಕಳುಗಳಿಗೆ ಕೆಲಸವಿರುವದಿಲ್ಲ. ಆಗ್ಯೆ ಅವುಗಳ ಉಪಯೋಗವನ್ನು ಮಾಡಿಕೊಳ್ಳುವದು.

(ಕ) ಪ್ರತಿ ವರ್ಷ ಒಂದೇ ಭೂಮಿಯಲ್ಲಿ ತಂಬಾಕವನ್ನು ಬೆಳೆಯುವ ಹೊಲಕ್ಕೆ ನೀರಿನ ಸೋಯಿ ಇದ್ದಲ್ಲಿ ಬೇಸಿಗೆಯಲ್ಲಿ ಪಾಲೆಗ್ಯೆ ಮಾಡುವದು.

೧) ಭೂಮಿಯು ಚನ್ನಾಗಿ ತಯಾರಾದ ಬಳಿಕ ಒಂದು ಎಕರೆಕ್ಕೆ ೧೨೦ ರಿಂದ ೧೫೦ ಪೌಂಡಿನ ವರೆಗೆ ಬೀಜವನ್ನು ಎರಡೂ ಮೈ ಬಿತ್ತಿ ಕಾಲವೆ ಮಾಡಿ ಮಡಿಕಟ್ಟಿ ನೀರು ಉಣಿಸಬೇಕು

೨) ಹೊಲವು ಹಸನಾಗಿರದಿದ್ದರೆ ಮೊದಲು ನೀರುಣಿಸಿ ನೆಲವು ಸ್ವಲ್ಪ ಆರಿದನಂತರ ಮೇಲೆ ರಂಟೆ ಹೊಡೆದು ಹರಗಿ ಕೂರಿಗೆಯಿಂದ ಎರಡೂ ಮೈ ಬಿತ್ತಿ ಮಡಿಕಟ್ಟಬೇಕಾದಾಗ ನೀರು ಉಣಿಸಬೇಕು,

ಮೂರು ವಾರಗಳಾದ ಬಳಿಕ ಅಂದರೆ ಆಗಿಗಳು ಸುಮಾರು ೬ ಇಂಚು ಎತ್ತರದಾಗ್ಯೆ ೨ನೇ ಸಾರಿ ನೀರು ಉಣಿಸಬೇಕು. ಅನಂತರ ಹತ್ತು ದಿವಸಕ್ಕೊಮ್ಮೆ ಇಲ್ಲವೆ ವಾರಕ್ಕೊಮ್ಮೆ ನೀರು ಕೊಡುತ್ತಾ ಹೋಗಬೇಕು.

ಉತ್ಪನ್ನ

ಚನ್ನಾಗಿ ತಯಾರಿಸಿದ ಭೂಮಿಯಲ್ಲಿ ನೀರು ಹಾಯಿಸಿ ಬೆಳೆತಕ್ಕೊಂಡರೆ ಒಂದು ಎಕರೆಕ್ಕೆ ೧೫೦೦೦ ಪೌಂಡು ಇಲ್ಲವೆ ಅದಕ್ಕೂ ಹೆಚ್ಚು ಒಣ ಮೇವು ಬರಬಹುದು. ಗುಜರಾಥದಲ್ಲಿ ಮಳೆಗಾಲದೊಳಗೆ ವಿಶೇಷವಾಗಿ ಈ ಜೋಳವನ್ನು ಕಾಳು ಮತ್ತು ಮೇವಿನ ಸಲುವಾಗಿ ಬಿತ್ತುತ್ತಾರೆ. ಮತ್ತು ಆಗ್ಯೆ ಸಾಧಾರಣವಾಗಿ ಒಂದು ಎಕರಕ್ಕೆ ೫೦೦ ಪೌಂಡು ಕಾಳು ಮತ್ತು ೬೦೦ ಪೌಂಡು ಒಣಮೇವು ಬರುತ್ತದೆ. ಅವುಗಳ ಬೆಲೆ ಅಜಮಾಸು ೫೦ ರೂ ಯಾಗುವದು. ಮತ್ತು ಅಂಥ ಬೆಳೆಯ ಸಾಗುವಳಿಯ ಖರ್ಚು ಒಂದು ಎಕರಕ್ಕೆ ೨೫ ರೂ ಆಗುವದು. ಬೇಸಿಗೆಯಲ್ಲಿ ಬೆಳೆಯುವ ಪೈರಿನ ಉತ್ಪನ್ನವು ಒಣ ಮೇವು ೧೦೦೦೦ ಪೌಂಡು ಎಂದು ತಿಳಿದರೆ ಅದರ ಬೆಲೆ ೧೦೦ ರೂ ಖರ್ಚು ಸುಮಾರು ೬೦ ರೂ ವರೆಗೆ ಬರುವದು.

ಅನೀತಿಯನ್ನು ತೊಲಗಿಸುವುದು ಹೇಗೆ

—)0(—

ಸರಕಾರದಲ್ಲಿಯೂ ಸಾರ್ವಜನಿಕದಲ್ಲಿಯೂ ಒಳಗೆಬಗೆಯ ಅನೀತಿಗಳೂ ದುಷ್ಕೃತನಗಳೂ ಬೆಳೆದುಕೊಂಡು ಬರುತ್ತವೆ ಎಂಬ ಕೂಗು ಈಗ ದೇಶದಲ್ಲಿ ಎಲ್ಲಲ್ಲಿಯೂ ಕೇಳಬರುತ್ತಿವೆಯಷ್ಟೇ? ಜಯಪುರದಲ್ಲಿ ಕಳೆದ ಡಿಶಂಬರ್ ೧೯ ರಲ್ಲಿ ನಡೆದ ಕಾಂಗ್ರೆಸ್ ಸಭೆಯು ಈ ವಿಚಾರದಲ್ಲಿ ಒಂದು ನಿರ್ಣಯವನ್ನು ಅಂಗೀಕರಿಸಿತು ಕಾಂಗ್ರೆಸ್ ಸಂಸ್ಥೆಯ ಸದಸ್ಯರೂ ದೇಶದ ಮಹಾಜನರೂ ನಮ್ಮ ರಾಜಕೀಯದಲ್ಲಿ ತಲೆಹಾಕಿರುವ ಕಶ್ಮಲಗಳನ್ನು ತೊಳೆಯುವದರಲ್ಲಿ ಸಹಕರಿಸಬೇಕೆಂದು ಆ ನಿರ್ಣಯದ ತಾತ್ಪರ್ಯ ಆದರಲ್ಲಿ ಕಾಂಗ್ರೆಸ್ಸಿನ ನಿರ್ಣಯವು ಸಾರ್ಥಕವಾಗಬೇಕಾದರೆ ಯಾವ ಯಾವ ಕಾರ್ಯಗಳು ನಡೆಯಬೇಕೆಂಬುದನ್ನು ಸೂಚಿಸಿದೆ. ಆ ಸೂಚನೆಗಳನ್ನು ಈ ಕೆಳಗೆ ಸಂಗ್ರಹಿಸಿದೆ.

೧) ಲಂಚ ಅಧಿಕಾರದ ದುರುಪಯೋಗ ಮೊದಲಾದ ದೋಷಗಳನ್ನು ಆಪಾದನೆ ಮಾಡತಕ್ಕ ತಿಳುವಳಿಕೆಯನ್ನು ಯಾವ ಜವಾಬ್ದಾರಿ ಮನುಷ್ಯನಾದರೂ ಸರಕಾರದ ಗಮನಕ್ಕೆ ತಂದದ್ದೇ ಆದರೆ ಅಂಥ ಸಂದರ್ಭದ ಸಂಗತಿಗಳನ್ನು ಆದ್ಯಂತವಾಗಿ ವಿಚಾರಿಸಿ ಬಹಿರಂಗಪಡಿಸಲು ಒಂದು ನಿಷ್ಪಕ್ಷಪಾತವಾದ ಸಮರ್ಥ ಸಮಿತಿಯನ್ನು ಕೂಡಲೇ ನಿಯಮಿಸುವುದಾಗಿ ಸರಕಾರ ಒಪ್ಪಿ ಆ ಭರವಸೆಯನ್ನು ಮೊದಲು

ಪ್ರಕಟ ಮಾಡಬೇಕು.

೨) ಕಾಂಗ್ರೆಸ್ಸಿನ ಸದಸ್ಯರು ಯಾರೇ ಆಗಲಿ ಶಾಸನ ಸಭೆಯ ಸದಸ್ಯರಾಗಲಿ, ಕಮಿಟಿಗಳ ಮೆಂಬರರಾಗಲಿ, ಮಂತ್ರಿಗಳೇ ಆಗಿರಲಿ ಅವರು ಸರಕಾರದ ನಿತ್ಯವೃತ್ತಿಯ ಉದ್ಯೋಗಿಗಳ ಅಧಿಕಾರಮೊಳಕ್ಕೆ ಅಕ್ರಮ ಪ್ರವೇಶ ಮಾಡಿದ ಸಂದರ್ಭ ಯಾರಿಂದಲಾದರೂ ತಿಳಿದುಬಂದಾಗ, ಅಂಥ ನಡತೆ ವಿವರಗಳನ್ನು ಕುರಿತು ವಿಚಾರ ನಡೆಸಿ ವರದಿಮಾಡಲು ಒಂದು ಸ್ವತಂತ್ರ ಸಮಿತಿಯನ್ನು ನಿಯಮಿಸಲು ಕಾಂಗ್ರೆಸ್ ಸಿದ್ಧನಾಗಿದೆಯೆಂದು ಆ ಸಂಸ್ಥೆಯ ಕಾರ್ಯನಿರ್ವಾಹಕರು ಪ್ರಕಟಪಡಿಸಬೇಕು.

೩) ಮಂತ್ರಿಗಳಾದವರು ಉದ್ಯೋಗಗಳನ್ನೂ ಕಂಟ್ರಾಕ್ಟು, ಲೈಸನ್ಸ್ ಮೊದಲಾದವರ ಪ್ರಸಾದಗಳನ್ನೂ ಹಂಚುವ ಜವಾಬ್ದಾರಿಯನ್ನು ಸಂಬಂಧಪಟ್ಟ ಇಲಾಖೆಗಳ ಮುಖ್ಯಾಧಿಕಾರಿಗಳಿಗೂ ಅವರಿಗೆ ಸಲಹೆ ಕೊಡಲು ಶಾಸನ ಸಭೆ ನಿಯಮಿಸಬಹುದಾದ ಸಮಿತಿಗಳಿಗೂ ವಹಿಸಿಕೊಡಬೇಕು. ಮಂತ್ರಿಗಳ ಹೆಸರು ಕೆಡುವದು ಈ ಪ್ರಸಾದವಿನಿಯೋಗದ ಕಾರಣದಿಂದ ಅವುಗಳನ್ನು ಹಂಚುವ ನ್ಯಾಯದ ವಿಷಯದಲ್ಲಿ ಪ್ರಜಾ ಪ್ರತಿನಿಧಿಯಾದ ಶಾಸನ ಸಂಸ್ಥೆಯೇ ಕೆಲವು ಸೂತ್ರಗಳನ್ನು ಗೊತ್ತುಮಾಡಿ, ಆ ಸೂತ್ರಗಳಿಗನುಸಾರವಾಗಿ ಹಂಚಿಕೆ ನಡೆಸುವ ಕಾರ್ಯವನ್ನು ಮಂತ್ರಿಯು ಒಂದು ಸಮಿತಿಗೆ ವಹಿಸಿಕೊಡಬಹುದುದೆಂದು ವಿಧಾಯಕವಾಗಬೇಕು. ಅಂಥ ಕಟ್ಟುಪಾಡು ಆದರಲ್ಲಿ, ನೌಕರರನ್ನು ನಿಯಮಿಸಿಕೊಳ್ಳುವ ಮತ್ತು ಕಂಟ್ರಾಕ್ಟರು ಮೊದಲಾದವರಿಂದ ಚಾಕರಿತೆಗೆದುಗೊಳ್ಳುವ ಜವಾಬ್ದಾರಿ ಯಾವ ನಿತ್ಯವೃತ್ತಿಯ ಅಧಿಕಾರಿಗೆ ಸೇರಿರುತ್ತದೆಯೋ ಆತನು ಆ ಸಮಿತಿಯ ಸಹಾಯದಿಂದ ಕೆಲಸ ನಡೆಸುವವನಾಗಿ, ಮಂತ್ರಿಗಳಿಗೆ ಅಪವಾದ ಬರುವದನ್ನು ತಪ್ಪಿಸುತ್ತಾನೆ.

೪) ದೇಶದ ಎಲ್ಲ ನ್ಯಾಸ್ಥಾನಗಳೂ ಸಂಪೂರ್ಣವಾಗಿ ಹೈಕೋರ್ಟಿನ ಅಧೀನದಲ್ಲಿ ಎಂದರೆ ಕಾರ್ಯಾಂಗದ ವಶವಾಗದಂತೆ ಇರಬೇಕು. ಮತ್ತು ಹೈಕೋರ್ಟು ನ್ಯಾಯದ ವಿಷಯದಲ್ಲಿ ಪರಿಪೂರ್ಣಾಧಿಕಾರವುಳ್ಳದ್ದಾಗಿಯೂ, ಸ್ವತಂತ್ರವಾಗಿಯೂ, ಕಾರ್ಯಾಂಗದ ಎಂದರೆ ಮಂತ್ರಿಸಂಪುಟದ ಹಂಗಿಗೂ ಒಡೆತಕ್ಕೂ ಸಿಗದಂತೆ ಇರಬೇಕು. ನ್ಯಾಯಾಧಿಕಾರಿ (ಜಡ್ಜಿ)ಗಳ ಏಳುಬೀಳುಗಳು ಕಾರ್ಯಾಂಗ ಎಂದರೆ ಮಂತ್ರಿವರ್ಗದ ಕೈವಾಡಕ್ಕೆ ಒಳಗಾಗಿದ್ದಲ್ಲಿ ಆ ಮಂತ್ರಿಗಳ ರಾಜಕೀಯ ಪಕ್ಷಕ್ಕೆ ಸೇರಿರುವ ಲಾಯರುಗಳ ಮತ್ತು ನೌಕರುಗಳ ಪ್ರಭಾವಕ್ಕೆ ನ್ಯಾಯಾಸ್ಥಾನ (ಕೋರ್ಟು)ಗಳ ಒಳಗಾದಾವೆಂಬ ಶಂಕೆ ಅವಕಾಶವಿರುತ್ತದೆ. ನ್ಯಾಯವು ನಿರ್ಮಲವಾಗಿರಬೇಕಾದರೆ ಕಕ್ಷಿ ಪಕ್ಷಗಳ ಸೋಂಕು ಅದಕ್ಕೆ ತಾಕಬಾರದು.

('ಸಾರ್ವಜನಿಕ' ಡಿ. ವಿ. ಜಿ.)

ಕಬ್ಬಿಣದ ರಂಟೆಗಳು

ಪೃಥ್ವಿಯ ಎಲ್ಲ ಭಾಗಗಳಲ್ಲಿ ರಂಟೆಯು ಭೂಮಿಯ ಸಾಗುವಳಿಯ ಮುಖ್ಯವಾದ ಸಾಧನವಾಗಿರುವದು. ರಂಟೆ ಹೊಡೆಯುವದರಿಂದ ಭೂಮಿಯು ಒಡೆದು ಮಣ್ಣು ಬೈಲಿಗೆ ಬಿದ್ದು ಹವೆಯೊಳಗಿನ ತನುವನ್ನೂ, ಗಾಳಿಯನ್ನು, ಬಿಸಿಲನ್ನೂ ತಿನ್ನುತ್ತದೆ. ಈ ಗಾಳಿ ಬಿಸಿಲು ಮೊದಲಾದವುಗಳು ಸಸ್ಯಾದಿಗಳ ಪೋಷಣೆಗೆ ಬೇಕಾಗುವ ಪದಾರ್ಥಗಳನ್ನು ಹುಟ್ಟಿಸುತ್ತವೆ. ಇದಲ್ಲದೆ ರಂಟೆಯಿಂದ ಹೊಲದೊಳಗಿನ ಗಿಡಗಸಗಳು ಕಿತ್ತಿ ಬಿದ್ದು ಸಾಯುತ್ತವೆ. ರಂಟೆಯ ಮಹತ್ವವನ್ನು ಎಲ್ಲರೂ ಬಲ್ಲರು. ಆದರೆ ಆ ಮಹತ್ವವು ಮುಖ್ಯವಾಗಿ ರಂಟೆಯ ತರದ ಮೇಲಿಂದಲೂ, ಅದನ್ನು ಜಾಣತನದಿಂದ ತಯಾರಿಸಿ ಹೂಡಿಸುವದರಲ್ಲಿಯೂ ಇರುವದು. ಹಿಂದುಸ್ಥಾನದಲ್ಲಿ ವಾಡಿಕೆಯಾಗಿ ಕಟ್ಟಿಗೆಯ ರಂಟೆಗಳನ್ನು ಮಾಡುತ್ತಾರೆ. ಆದರೆ ಎರಡನೇ ದೇಶಗಳಲ್ಲಿ ಕಬ್ಬಿಣದ ರಂಟೆಗಳನ್ನು ಉಪಯೋಗಿಸುವರು.

ವಿಲಾಯತಿಯ ರಂಟೆಗಳು ಹಿಂದುಸ್ಥಾನದೊಳಗಿನ ರಂಟೆಗಳಿಗಿಂತಲೂ ನೆಟ್ಟಗಾಗುವವರೆಗೆ ಅಲ್ಲಿಯವರು ಪರಿಶ್ರಮವನ್ನು ತಕ್ಕೊಂಡು ಅವುಗಳನ್ನು ಈಗ್ಯೆ ಇಲ್ಲಿಯ ರಂಟೆಗಳಿಗಿಂತಲೂ ಉತ್ತಮ ಮಾಡಿರುತ್ತಾರೆ. ಯಾಕೆಂದರೆ ಆ ರಂಟೆಗಳಿಂದ ಸ್ವಲ್ಪು ಖರ್ಚಿನಲ್ಲಿ ನಮ್ಮ ರಂಟೆಗಳಿಗಿಂತಲೂ ಹೆಚ್ಚು ಮತ್ತು ಮೇಲಾದ ಕೆಲಸವಾಗುತ್ತದೆ.

ನಮ್ಮಲ್ಲಿಯ ರಂಟೆಯನ್ನು ಹೊಡೆಯುವಾಗ್ಯೆ ಆದರೆ ಕುಳವು ಮಾತ್ರ ನೆಲದಲ್ಲಿ ಶೇರಿ ರಂಟೆಯ ಉಳಿದ ಭಾಗವು ಒಳಗೆ ಹೋಗದೆ ಭೂಮಿಯನ್ನು ಸವರುತ್ತ ಹೋಗುತ್ತದೆ. ನಮ್ಮ ರಂಟೆಯಿಂದ ಹೊಡೆದ ಮಣ್ಣು ಮತ್ತು ಹೆಂಟೆಗಳು ಸಾಲಿನ ಎರಡೂ ಮಗ್ಗಲಿಗೂ ಬೀಳುತ್ತವೆ. ಆದರೆ ವಿಲಾಯತಿ ರಂಟೆಯ ಹದನಾದ ಕುಳದಿಂದ ಮಣ್ಣು ಕತ್ತರಿಸಿ ಹೆಂಟೆಗಳು ರಂಟೆಯ ಡೊಂಕಾದ ಕೊಪ್ಪರಿಗೆಯಮೇಲೆ ಏರಿ ರಂಟೆಯ ಸಾಲಿನ ಒಂದೇ ಮಗ್ಗಲಿಗೆ ಹೊರಳಿ ಬೀಳುತ್ತವೆ. ಹೀಗೆ ಹೊರಳಿ ಬೀಳುವದರಿಂದ ಆ ಮಣ್ಣಿನ ಮೇಲೆ ಗಾಳಿ, ಹವೆಯಲ್ಲಿಯ ತನವು ಮತ್ತು ಬಿಸಿಲು ಇವುಗಳ ಪರಿಣಾಮವು ಹೆಚ್ಚಿಗೆ ಆಗುತ್ತದೆ. ವಿಲಾಯತಿ ರಂಟೆಯ ಕುಳದ ಕೆಳಗಿನ ತುದಿಯು ನೆಲವನ್ನು ಕತ್ತರಿಸುತ್ತ ಸಮನಾಗಿ ಹೋಗುವದರಿಂದ ನಮ್ಮ ರಂಟೆಯಿಂದ ಹೊಡೆದ ಸಾಲುಗಳ ನಡುವೆ ಬದ್ದಿಗೆ ಉಳಿವಂತೆ ಆದರಿಂದ ಉಳಿಯುವದಿಲ್ಲ.

ನಮ್ಮಲ್ಲಿಯ ನೇಗಿಲ ಮುಂತಾದ ದೊಡ್ಡ ರಂಟೆಗಳಿಗೆ ೪ ರಿಂದ ೧೬ ವರೆಗೆ ಎತ್ತುಗಳನ್ನು ಹೂಡುತ್ತಾರೆ ಮತ್ತು ಹೊಡೆಯುವದಕ್ಕೆ ಎರಡರಿಂದ ನಾಲ್ಕರವರೆಗೆ ಆಳುಗಳು ಬೇಕಾಗುತ್ತವೆ. ಅದೇ ಭೂಮಿಗೆ ವಿಲಾಯತಿ ರಂಟೆಯನ್ನು ಹೂಡಿದರೆ ಅದಕ್ಕೆ ನಾಲ್ಕರಿಂದ ಆರು ಎತ್ತುಗಳೂ ಒಂದು ಇಲ್ಲವೆ ಎರಡು ಆಳುಗಳು ಸಾಕು.

ನಮ್ಮ ರಂಟೆಯಿಂದ ಒಂದು ಎಕರೆ ಭೂಮಿಯನ್ನು ಹೊಡೆಯಬೇಕಾದರೆ ಸಾಧಾರಣವಾಗಿ ೩ ದಿವಸ ಹಿಡಿಯುತ್ತದೆ. ಆದರೆ ವಿಲಾಯತಿ ರಂಟೆಗೆ ೨ ದಿವಸ ಸಾಕು.

ಎಂಟು ಎತ್ತಿನ ದಕ್ಷಿಣೀ ನೇಗಿಲದಿಂದ ೧ ಎಕರೆ ಭೂಮಿಯನ್ನು ಹೊಡೆಯಲಿಕ್ಕೆ ರೂ ೮-೪-೦ ಖರ್ಚು ಹಿಡಿಯುತ್ತದೆ. ಆದರೆ ಕಬ್ಬಿಣದ ರಂಟೆಯಿಂದ ಅಷ್ಟೇ ಖರ್ಚಿನಲ್ಲಿ ಸುಮಾರು ದುಪ್ಪಟ್ಟು ಕೆಲಸವಾಗುತ್ತದೆಂದು ಪುಣೆಯಲ್ಲಿಯ ಸರಕಾರಿ ಹೊಲದಲ್ಲಿ ಅನುಭವಕ್ಕೆ ಬಂದಿರುತ್ತದೆ.

ವಿಲಾಯತಿ ರಂಟೆಯನ್ನು ಸಡಿಲು ಅಥವಾ ಬಿಗಿದು ಮಾಡಬೇಕಾದರೆ ರಂಟೆಯ ತುದಿಯಲ್ಲಿಯ ಸರಪಳಿ ಅಥವಾ ಹಗ್ಗದ ಉದ್ದ ಅಥವಾ ಕಿರಿದು ಮಾಡಬೇಕು, ಮತ್ತು ಗಾಲಿಯನ್ನು ಏರಿಸಿ ಇಲ್ಲವೆ ತಗ್ಗಿಸಿ ಇಡಬೇಕು. ರಂಟೆಯನ್ನು ಹೊಡೆಯುವದರಲ್ಲಿ ಅದನ್ನು ಕಡದು ಅಥವಾ ಬಳದು ಇಡುವದು ಬಹು ಮಹತ್ವವಾದದ್ದು, ಯಾಕಂದರೆ ಗರಸಿನ ಭೂಮಿಯಲ್ಲಿ ರಂಟೆಯನ್ನು ತಗ್ಗಿಸಿ ಹೊಡೆದರೆ ಗರಸು ಮೇಲಕ್ಕೆ ಬಂದು ಭೂಮಿಯು ಕೆಡುವದು. ಮೇಲೆ ಹೇಳಿದಂತೆ ರಂಟೆಯನ್ನು ಸಡಿಲು ಬಳದು ಮಾಡುವದರಿಂದ ಈ ತರದ ಹಾನಿಯನ್ನು ತಪ್ಪಿಸಬಹುದು.

ವಿಲಾಯತಿ ರಂಟೆಗಳಲ್ಲಿ "ಟರ್ನರೆಸ್ಟ" 'ಆರ್ಲಿಂಗಟನ್' ಮುಂತಾದ ಅನೇಕ ತರದ ಒಪ್ಪಾರಿಯ ರಂಟೆಗಳುಂಟು. ಅವುಗಳ ಬೆಲೆ ೩೦ ರೂಪಾಯಿಗಳ ವರೆಗೆ ಬೀಳುತ್ತವೆ. ಅವುಗಳ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಮಾ॥ ಡಾಯರೆಕ್ಟರ ಸಾಹೇಬ ಶೇತಕೀ ಖಾತೆ ಇವರಿಗೆ ಬರೆದು ತರಿಸಿಕೊಳ್ಳಬಹುದು.

ಶ್ರೀಮಾನ್ ವಿಠಲ್ ಶೇಷಪ್ಪನವರು

ಬಳ್ಳಾರಿಯ ಸುಪ್ರಸಿದ್ಧ ವರ್ತಕರಾದ ಶ್ರೀಮಾನ್ ವಿಠಲ್ ಶೇಷಪ್ಪನವರಿಗೆ (ಜನ್ಮ ೭-೪-೬೯) ೧-೪-೪೯ಕ್ಕೆ ೮೦ ವರುಷ ತುಂಬುತ್ತೆ. ಸನಾತನ ಧರ್ಮೀ ಹಿಂದೂಸಂಸ್ಕೃತಿಯ ಆಚಾರ ವಿಚಾರಗಳಲ್ಲಿ ನಿಷ್ಠರಾದ ಇವರು ಫಾಲ್ಗುಣ ಶು॥ ೧ ರಿಂದ ೧೩ರ ವರೆಗೆ ಭಾಗವತ ಅಷ್ಟಮ ಸ್ಕಂಧ ವಾಮನವತಾರ ಭಾಗದಲ್ಲಿ ಪಯೋವ್ರತ ಸಮಾರಂಭವನ್ನು ಹವನ ಹೋಮ, ದಂಪತಿಪೂಜೆ ಬ್ರಾಹ್ಮಣ ಭೋಜನದಿಂದ ಸಮಾಪ್ತಗೊಳಿಸಿದರು. ಅಲಂಕೃತ ಗೋದಾನವಾಯಿತು.

ಇನ್ನು ಕೆಲತಿಂಗಳಲ್ಲಿ ಸಹಸ್ರ ಚಂದ್ರ ದರ್ಶವು ಸಾಂಗವಾಗಿ ಮುಗಿದು ನಂತರ ವಿಶೇಷವ್ರತಗಳು ನಡೆಯಲಿವೆಯೆಂದು ತಿಳಿಸಿದರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ.

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—ವಾರ್ಡ್ಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ. ಉನ್ನತ:—ವಿಶಾರದ ಪ್ರಚಾರಕ.
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

21—3—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri...

....

....

Printed at Vittal Press, Edited & Published by T. B. Keshava Rao

JAI-HIND.

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ-
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೮ ಮಾರ್ಚ ೧೯೪೯ | ಸಂಚಿಕೆ ೧೨

ಮುಂಬರುವ ಮಹಾಚುನಾವಣೆಯಲ್ಲಿ ೧೭॥ ಕೋಟಿ ಜನರ ಮತದಾನ

ಮತದಾರರ ಪಟ್ಟಿಯ ಮುದ್ರಣಕ್ಕಾಗಿ ೧೩೦೦ ಟನ್ ಕಾಗದ ಬೇಕು

ಮಹಾಚುನಾವಣೆಯ ಮಹಾಕಾರ್ಯ

ಬೃಹದಾಕಾರದ ಸಮಸ್ಯೆ

ಭಾರತದ ಸಂವಿಧಾನ ಘಟನೆಯನ್ನು ನಡೆಯಲಿರುವ ಪ್ರೌಢ ಮತದಾನದ ಬಗ್ಗೆ ಘಟನಾಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಅಂಕೆ- ಸಂಖ್ಯೆಗಳನ್ನು ವಿವರಿಸಿ, ಅದೆಷ್ಟು ಬೃಹದಾಕಾರದ ಸಮಸ್ಯೆಯಾಗಿದೆಯೆಂಬುದನ್ನು ಸ್ಪಷ್ಟಪಡಿಸಿದ್ದಾರೆ. ಅದರಲ್ಲಿ ಕೆಲವು ಮನೋರಂಜಕ ವಿಷಯಗಳನ್ನು ಇಲ್ಲಿ ಕೊಡಲಾಗಿದೆ.

೧೯೪೧ ನೇ ಜನಗಣತಿಯ ಮೇರೆಗೆ ಭಾರತದಲ್ಲಿ ೩೧ ಕೋಟಿ ೮ ಲಕ್ಷ ಜನಸಂಖ್ಯೆ ಇದೆ. ಅದರಲ್ಲಿ ೧೦೦ ಕ್ಕೆ ೧೨ ರಂತೆ ಹೆಚ್ಚಾಗಿದೆಯೆನ್ನಬಹುದು. ಅಂದರೆ ಸುಮಾರು ೩೫ ಕೋಟಿ. ೧೦೦ ಕ್ಕೆ ೫೦ ರಂತೆ ಪ್ರೌಢರು ಮತ ಕೊಡತಕ್ಕವರೆಂದು ಹಿಡಿದರೂ ೧೭॥ ಕೋಟಿ ಮತದಾರರಾಗುವರು. ಒಂದು ಹಾಳೆಯಲ್ಲಿ ಸುಮಾರು ೫೫ ಮತದಾರರ ಹೆಸರು ಹಿಡಿಸಿದರೂ ಸರ್ವ ಮತದಾರರ ಯಾದಿಗೆ ೩೨ ಲಕ್ಷ ಹಾಳೆ ಛಾಪಿಸಬೇಕಾಗುವದು. ಇತರ ಪುಸ್ತಕದ ೨೦೦ ಪ್ರತಿಗಳನ್ನು ಛಾಪಿಸಲು ೧೩೦೦ ಟನ್ ಪೇಪರ ಬೇಕಾಗುವದು. ಪ್ರಾಂತೀಕ ಸರಕಾರಗಳಿಗೇನೋ ಈ ಹಾಳೆಗಳನ್ನು ಛಾಪಿಸಿ ಪೂರೆಸಬಹುದು. ಆದರೆ ೩೨ ಲಕ್ಷ ಪುಟಗಳನ್ನು ಪ್ರಿಂಟ್ ಮಾಡುವದೊಂದು ಸಮಸ್ಯೆಯೇ ಸರಿ.

ಪ್ರಚಂಡ ಕೆಲಸ

ಮತಗಣನೆಯ ರೀತಿಯ ಲೆಕ್ಕಾಚಾರ ಹಾಕಿದಂತೂ ಅದೇ ಒಂದು ಪ್ರಚಂಡ ಕೆಲಸವೇ ಆಗಿದೆ. ಒಂದು ಮತಗಣನೆಯ ಕೇಂದ್ರಕ್ಕೆ ಒಬ್ಬ ಮೇಲ್ವಿಚಾರಕ ಅಧಿಕಾರಿಗೆ ಇಬ್ಬರು ಸಹಾಯ ಎಂದು ಗಣಿಸಿದರೆ (ಒಬ್ಬರು ಮತದಾರರ ಹೆಸರನ್ನು ಪರಿಶೀಲಿಸಿದರೆ, ಮತ್ತೊಬ್ಬರು ಮತ ಪತ್ರಿಕೆ ಕೊಡಲು) ೧ ಲಕ್ಷ ೭೫ ಸಾವಿರ ಮೇಲ್ವಿಚಾರಕ ಅಧಿಕಾರಿಗಳೂ ೩ ಲಕ್ಷ ೫೦ ಸಾವಿರ ಪೋಲಿಂಗ ಆಫೀಸರರೂ ಬೇಕಾಗುವರು. ಇದು ಒಂದು ದಿನದ ಕಾರ್ಯಕ್ರಮವೆಂದಿಟ್ಟುಕೊಂಡರೆ ಅವಸ್ಥೆ! ಎಂಟು ದಿವಸ ನಡೆಸಿದರೆ ೨೨ ಸಾವಿರ ಮೇಲ್ವಿಚಾರಕ ಅಧಿಕಾರಿಗಳೂ ೪೪ ಸಾವಿರ ಪೋಲಿಂಗ ಆಫೀಸರರೂ ಬೇಕಾಗುವರು. ಶಾಂತತೆ ಸುವ್ಯವಸ್ಥೆಯನ್ನು ಕಾಯುಕೊಳ್ಳಲು ಪೋಲೀಸ ಅಧಿಕಾರಿ ಹಾಗೂ ಜನ ಪೋಲೀಸರಿಂದ. ಹಿಡಿದರೂ ೨೨ ಸಾವಿರ ಅಧಿಕಾರಿಗಳೂ, ೪೪ ಸಾವಿರ ಪೋಲೀಸರೂ ಬೇಕಾಗುವರು. ಪೋಲೀಸರರಾಗಲಿ ಸಬ್ ಇನಸ್ಪೆಕ್ಟರರನ್ನಾಗಲಿ ದೊರಕಿಸುವದು! ಆದರೊಂದು ದುರ್ಮಿಳವಾಗದಿದ್ದರೂ ಯೋಗ್ಯ ಮೇಲ್ವಿಚಾರಕ ಅಧಿಕಾರಿಯನ್ನು ದೊರಕಿಸುವದು ಸುಲಭ ಸಾಧ್ಯವಲ್ಲ. ಮೇಲ್ವಿಚಾರಕನ ಹೊಣೆ ಸಣ್ಣದಲ್ಲ. ಮತದಾರರ ಹುರಿಯಾಳುಗಳು ಅವರ ಪರವಾಗಿ ಬರುವ ಏಜೆಂಟರು ಪೋಲೀಸು ಮತ್ತು ಅಧಿಕಾರಿಗಳನ್ನು ಸಂಬಾಳಿಸಿಕೊಂಡು ಅನ್ಯಾಯಕ್ಕೆ ಎಡೆಗೊಡದಂತೆ ಪಕ್ಷಪಾತತನ ತೋರದೆ ನಡೆದುಕೊಂಡು ಹೋಗಬೇಕಾಗುವದು. ಸರಕಾರೀ ನೌಕರರಿಗೆ ಇಷ್ಟೊಂದು ಪ್ರಮಾಣದ ಜವಾಬುದಾರೀ ಜನಸಿಗುವದು ವಿರಳ. ಆದ್ದರಿಂದ ಸರಕಾರೇತರ ಜನರನ್ನು ಆರಿಸಿಕೊಳ್ಳಬೇಕಾಗುವದರಿಂದ ಒದಗುವ ಆಯ್ಕೆ ಕೊಳ್ಳುವಾಗ ಬಹಳ ಕಾಳಜಿ ವಹಿಸಬೇಕಾಗಿ ಬರುವದು.

ಸರಕಾರದ ಕೆಲಸದಷ್ಟು ಜೊತೆಗೆ ಹುರಿಯಾಳುಗಳು ತಮಗಾಗಿ ಪ್ರಚಾರ ಕಾರ್ಯಾದಿಗಳಿಗೆ ಪ್ರಯತ್ನಪಡುವರು. ಬೇರೆ. ಇವಕ್ಕಾಗಿ ಬೇಕಾದ ಮೋಟರಾದಿ ವಾಹನ ಆ ಪೆಟ್ರೋಲ ಮೊದಲಾದವುಗಳ ಪ್ರಮಾಣ ಹೇಳಬಾರದು. ಇದಕ್ಕಾಗಿ ಕೋಟಿಗಟ್ಲೆ ರೂಪಾಯಿಗಳು ಖರ್ಚು ಬರುವಾಗಿದೆ.

ಮಹಾತ್ಮರ ಮೃತ್ಯು ಪತ್ರ

ಹರಿಜನ ಸೇವೆಗೆ ಮೀಸಲು

ಅಹಮ್ಮದಾಬಾದ:- ಮಹಾತ್ಮಾ ಗಾಂಧೀಜಿಯವರು, ತಮ್ಮ ಎಲ್ಲ ಪುಸ್ತಕಗಳು ಪ್ರಕಟನೆಗಳ, ಮತ್ತು ಪ್ರಕಟವಾಗದೆ ಉಳಿದವುಗಳ ಒಡೆತನವನ್ನು ನವಜೀವನ ಟ್ರಸ್ಟಿಗೆ ೧೯೪೦ ನೇ ಫೆಬ್ರುವರಿ ೨೦ ನೇ ದಿನಾಂಕ ಮೃತ್ಯು ಪತ್ರವನ್ನು ಶ್ರೀ ನರಹರಿ ಪರೀಖರು ಅಹಮ್ಮದಾಬಾದ ಜಿಲ್ಲಾ ನ್ಯಾಯ ಕಟೆರೆದುರು ಹಾಜರ ಮಾಡಿದರು.

ಮೊನ್ನೆ ಬಾರ್ಡೋಲಿಯಲ್ಲಿ ಟ್ರಸ್ಟಿನ ಚಾಲಕರಾದ ಸರದಾರ ವಲ್ಲಭ ಪಟೇಲ ಅಧ್ಯಕ್ಷ) ಶ್ರೀಗಳಾದ ಮ. ರಾವಜಿ ದೇಸಾಯಿ, (ವ್ಯವಸ್ಥಾಪಕ) ಸೇರಿ, ಮಹಾತ್ಮರ ಆಶಯದಂತೆ, ಎಲ್ಲ ಹಕ್ಕು ಬಾಧ್ಯತೆಗಳನ್ನು ಕಾಯಿದೆ ಪ್ರಕಾರ ಕಾದಿರಿಸುವ ಯೋಜನೆ ಮಾಡಲಾಗಿದೆ.

ಮಹಾತ್ಮರ ಮರಣ ಶಾಸನದ ಮೂಲ ಲೇಖನವು ಗುಜರಾಥಿಯಲ್ಲಿದ್ದು ಅದರ ಪೂರ್ತಿ ಪಾಠವಿಂತಿದೆ.

ಇದು ನನ್ನ ಕೊನೆಯ ಮೃತ್ಯು ಪತ್ರವೆಂದು ತಿಳಿಯಬೇಕು. ಹಿಂದೆ ಮಾಡಿದ ಮೃತ್ಯು ಪತ್ರಗಳನ್ನೆಲ್ಲ ರದ್ದು ಮಾಡಲಾಗಿದೆ. ನನಗೆ ಆಸ್ತಿಯೂ ಇಲ್ಲವೆಂದೆನಿಸಿದರೂ, ೧೯೨೯ ನೇ ನವಂಬರ ೧೬ ನೇ ದಿನ ಶ್ರೀ ಮೋಹನಲಾಲ, ಮಗನಲಾಲ ಭಟ್ಟರೊಂದಿಗೆ ನಾನಾ ಕಾಯಿದೆಬದ್ಧವಾಗಿ ಸೇರುವ ಯಾವತ್ತೂ ವಸ್ತುಗಳ ಒಡೆತನವನ್ನು ನವಜೀವನ ವಿಶ್ವಸ್ತ ಮಂಡಲಿಗೆ ಬಿಟ್ಟುಕೊಟ್ಟಿದ್ದೇನೆಂದು ಸಾರುತ್ತೇನೆ. ಸರದಾರ ವಲ್ಲಭಭಾಯಿ ಪಟೇಲ, ಶ್ರೀ ಮಹದೇವ ಹರಿಭಾಯಿ ದೇಸಾಯಿ, ಮತ್ತು ಶ್ರೀ ನದ್ವಾರಕಾದಾಸ ಪಾರೇಖರನ್ನು ವಿಶ್ವಸ್ಥರನ್ನಾಗಿ ನಿಯಮಿಸಿದ್ದೇನೆ. ನಾನು ಬರೆದ ಎಲ್ಲ ಪುಸ್ತಕಗಳ ಬರೆಯಲಿರುವದರ ಮತ್ತು ಪ್ರಕಟವಾದ ಅಥವಾ ಅಪ್ರಕೃತ ಎಲ್ಲ ಲೇಖನಗಳ ಒಡೆತನವನ್ನೂ ವಿಶ್ವಸ್ತ ಮಂಡಲಕ್ಕೆ ಒಪ್ಪಿಸಿರುವದು ಸಾರುತ್ತೇನೆ. ಹರಿಜನ ಸೇವೆಗಾಗಿ ಹರಿಜನ ಸೇವಕ ಸಂಘಕ್ಕೆ ಈ ಪುಸ್ತಕಗಳ ಮಾರಾಟದಿಂದ ಬಂದ ಲಾಭ ಮತ್ತು ಒಡೆತನದಿಂದ ಬರುವ ಭಾಗದಲ್ಲಿ ೧೦೦ ಕ್ಕೆ ೨೫ ರಷ್ಟು ನಿವಳ ಹಣವನ್ನು ನವಜೀವನದ ಆಡಳಿತದಂತೆ ವಿಶ್ವಸ್ಥ ಮಂಡಲಿಯು ಕೊಡಬೇಕು. ಮೃತ್ಯು ಪತ್ರ ನಡೆಸಿಕೊಂಡು ಹೋಗಲು ಶ್ರೀ ಮಹದೇವ ದೇಸಾಯಿ ಮತ್ತು ನರಹರಿ ಪರೀಖರನ್ನು ನಿಯಮಿಸಿದ್ದೇನೆ. ಅವರಿಬ್ಬರಲ್ಲೊಬ್ಬರ ಗೈರಹಾಜರಿ ಮರಣ ಅಥವಾ ಇನ್ನಾವ ಸಂಭವವಿದ್ದಲ್ಲಿ ಇನ್ನೊಬ್ಬರು ನೋಡಿಕೊಳ್ಳುವರು.

ಬಳ್ಳಾರಿ ನೀರಸ ಜಾತ್ರೆ

ಬಳ್ಳಾರಿ ನೀರಿನ ಜಾತ್ರೆ
ನಾನೊಲ್ಲೆ ತಂಗೆಮ್ಮ ಈ ಗಂಗಾಯಾತ್ರೆ
ಕೊಡಗಳ ಪರ್ವತಶ್ರೇಣಿಯ ನೋಡಮ್ಮ
ಒಡಕುಡಬ್ಬಗಳೇನು ಹಂಡೆಗಳೇನು!
ನೂಕು ನುಗ್ಗುಗಳೇನು, ಹಟದ ಪಂಥಗಳೇನ
ಓಕುಳಿಯಾಡುವ ಸಂರಂಭವೇನು!
ಒಬ್ಬಳ ತುರುಬು ಮತ್ತೊಬ್ಬಳ ಕೈಯಲ್ಲಿ
ಅಬ್ಬಬ್ಬ ಇವರಿಗೆ ಈಡೇನೆ ನಾವು?
ಘಟಗಳು ಒಡೆವವು ಬಳೆಗಳು ಸಿಡಿದವು
ಹಟಮಾರಿಜನಗಳ ಮುಷ್ಟಿಯ ನೋಡೆ!
ಸ್ತ್ರೀಯರ ಪುರುಷರ ವಾಗ್ವಾದ ಕೇಳಮ್ಮ
ನ್ಯಾಯಸ್ಥಾನದ ದೊಡ್ಡ ತೀರ್ಪು ನೋಡಮ್ಮ!
ಸಂತೆಯ ರೈತನು ಬಾಯಾರಿ ಬಂದರೆ
ಪಂತಿಲ್ಲ ನಡೆಯೆಂದು ನೂಕುತಲಿಹರು!
ಪ್ರಾಣಸಂಕಟವಾಗಿ ನಾಲಿಗೆ ಕಳೆದರು
ನೀರಾಳಿಗರು ಹನಿ ನಿಲ್ಲೆಂಬರವರು.
ದಯೆಯಿಲ್ಲ ಒಂದಿನಿತು ದಾಕ್ಷಿಣ್ಯ ಮೊದಲಿಲ್ಲ
ನಯವಿಲ್ಲ ಭಯವಿಲ್ಲ ಗಂಗೆಯ ಮುಂದೆ
ಆಳತೆಯ ಪತ್ರವನುಣ್ಣಲು ಬಹುದಮ್ಮ.
ತಿಳಿನೀರ ಭವಣೆಯು ಬೇಡಮ್ಮ
ಅಣಕವಾಡಿದಳೆಂದು ಮುನಿಸುಗೊಳ್ಳುವರೇನೊ
ಜನಕಜೆ ಯತ್ನವೆ ಕವಿತೆಯ ತಡೆವುದು

[ಜಿ. ಜಾನಕಮ್ಮ ದಿವಂಗತ]

ರಜಾ

ಉಗಾದಿ ಪ್ರತಿಪದೆಯ ನಿಮಿತ್ತ ೪—೪—೪೯ ಸೋಮವಾರದ ದಿನ 'ನವಭಾರತ'ವು ಹೊರಡುವುದಿಲ್ಲ.

ವ್ಯವಸ್ಥಾಪಕ

ಕೊಚೀನ ತ್ರಾವಣಕೋರಗಳ

ರಾಜಮನೆತನದವರಿಗೆ ಪರಿಹಾರ ಧನ

ಎರ್ನಾಕುಲಂ ತ್ರಾವಣಕೋರ ಮತ್ತು ಕೋಚೀನ ಸಂಸ್ಥಾನಗಳು ಸಮೀಕರಣವಾದರೆ ಅಲ್ಲಿಯ ರಾಜಮನೆತನದವರಿಗೆ ಅವರು ಜೀವಾವಧಿಯವರೆಗೆ ಈಗ ದೊರೆಯುತ್ತಿರುವ ಎಲ್ಲ ತರದ ಭತ್ತೆಗಳನ್ನು ಕೊಡುವದಾಗಿ ಆಶ್ವಾಸನ ನೀಡಲಿರುವದಾಗಿ ತಿಳಿದುಬರುತ್ತದೆ.

ಈ ಎರಡೂ ಸಂಸ್ಥಾನಗಳಲ್ಲಿ ತಾಯಿಯ ಸಂತತಿಯ ಜನರು ರಾಜ್ಯವಾಳುವ ಪದ್ಧತಿಯುಂಟು. ಕೋಚೀನ ಸಂಸ್ಥಾನದ ಅರಸು ಮನೆತನದಲ್ಲಿ ಒಟ್ಟು 654 ಜನರಿದ್ದು 223 ರಾಜಕುಮಾರರೂ 231 ರಾಜಕುಮಾರಿಯರೂ ಇರುವರು.

ರಾಜಕುಮಾರರು ಅವರವರಿಗೆ ನಿರ್ದಿಷ್ಟಪಡಿಸಿದಂತೆ ಸದ್ಯಕ್ಕೆ ಪ್ರತಿ ತಿಂಗಳ 14,500 ರಿಂದ 100 ರ ವರೆಗೆ ಹಣವನ್ನು ಪಡೆಯುತ್ತಿರುವರು. ರಾಜಕುಮಾರಿಯರಿಗೆ ಅವರ ಮೂರು ಲಕ್ಷ ರೂಪಾಯಿಯ ಖಾಸಗೀ ಉತ್ಪನ್ನವಲ್ಲದೆ, ಸಂಸ್ಥಾನ ಸರಕಾರವು ಪ್ರತಿ ವರ್ಷ 15 ಲಕ್ಷ ರೂಪಾಯಿಗಳನ್ನು ಮಂಜೂರ ಮಾಡುವದು.

ರಾಜಕುಮಾರನಾಗಲಿ, ಕುಮಾರಿಯಾಗಲಿ, ಈಗ ಪಡೆಯುತ್ತಿರುವ ಹಣವನ್ನು ಪಡೆಯಬೇಕೆಂಬುದೇ ಯೋಜನೆಯಾಗಿದೆ. ಆದರೆ ಈ ಹಣವು ಅವರ ಸಂತತಿಗೆ ದೊರೆಯುವದಿಲ್ಲ. ಇನ್ನು ಮುಂದೆ ಕೇಂದ್ರ ಸರಕಾರವು ಈ ನಿಷ್ಟೆಯನ್ನು 'ವಹಿಸುವದೆಂದು ತಿಳಿದು ಬರುತ್ತದೆ. ತಾಯಿ ಸಂತತಿ ಪಡೆದು ಬಂದ ಅಧಿಪತ್ಯದಲ್ಲಿ ಇದೊಂದೇ ಯೋಗ್ಯ ಹಾಗು ನ್ಯಾಯ ಮಾರ್ಗವೆಂದು ತಿಳಿಸಲಾಗುತ್ತಿದೆ.

ಕೋಚೀನದ ಮುಖ್ಯ ಮಂತ್ರಿಗಳಾದ ಶ್ರೀ ಪನಂಪಿಳ್ಳೆ ವಾರಿಯರ್‌ರು ಮುಂದಿನ ಸೋಮವಾರ ಸಂಸ್ಥಾನದ ಭವಿತವ್ಯದ ವಿಷಯವನ್ನು ಚರ್ಚಿಸಲು ದಿಲ್ಲಿಗೆ ಹೋಗಲಿರುವರು. ಕೋಚೀನ ಸಂಸ್ಥಾನದ ಮುಖ್ಯ ಕಾರ್ಯದರ್ಶಿಗಳೂ, ಅಡ್ವೊಕೇಟ್ ಜನರಲ್‌ರೂ ಅವರೊಡನೆ ಹೋಗಲಿರುವರು.

ಇದೇ ಸಮಯದಲ್ಲಿ ತ್ರಾವಣಕೋರದ ಮುಖ್ಯ ಮಂತ್ರಿ ಹಾಗು ಅವರ ಸಲಹೆಗಾರರು ದಿಲ್ಲಿಗೆ ಆಗಮಿಸಬಹುದೆಂದು ನಿರೀಕ್ಷಣೆಯಿದೆ.

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಬಾಮ್
ದಶನಪಾಣಿ
ತಲೆಶೂಲೆ, ಹಲ್ಲುಶೂಲೆ, ಮೈಕೈ ಶೂಲೆ,
ಕೈಕಾಲು ಸೆಳೆತ, ನೆಗಡಿ ಜ್ವರ, ಕೆಮ್ಮು, ಉರಿಯುತ್ತೆ
ಪ್ರಕಾಶ ದಾಸ ದಾಬಾಯು, ಹೊಸಪೇಟೆ

National Savings Week

ಹಣವನ್ನು ಉಳಿಸಿರಿ

—)c —

ಬಳ್ಳಾರಿ ನಗರದಲ್ಲಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ "ರಾಷ್ಟ್ರೀಯ ದೃಷ್ಟಿಯಿಂದ ಹಣವನ್ನು ಉಳಿಸಿರಿ" ಎಂಬ ವಾರದ ಸಮಾರಂಭೋತ್ಸವದ ಪ್ರಾರಂಭವು ಸಾಂಬಮೂರ್ತಿ ಮೈದಾನದ ಸಭೆಯಲ್ಲಾಯಿತು. ಶ್ರೀ ನಾಗಭೂಷಣಂ, ಡಿ. ಯಜ್. ವೆಂಕೋಬರಾವು ಯ. ಸ್ ಉಪಾಧ್ಯಾಯರು ಈ ಯೋಜನೆಯ ಮಹತ್ವವನ್ನು ತಿಳಿಯ ಹೇಳಿ ಎಲ್ಲರೂ ಸಹಕರಿಸಿದರೆ ದೇಶದ ಆರ್ಥಿಕ ಸಂಪತ್ತು ಬೆಳೆಯುವುದೆಂದರು.

ಹಿಂದೀ ಮಹಾವಿದ್ಯಾಲಯ ಬಳ್ಳಾರಿ ಪ್ರಮಾಣ ಪತ್ರವಿತರಣ

ಶ್ರೀ ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಪ್ರಮಾಣ ಪತ್ರ ವಿತರಣೋತ್ಸವವು ೨೬-೩-೪೯ ಶನಿವಾರ ನಡೆಯಿತು. ಪಿಶಾರದ ವಿದ್ಯಾರ್ಥಿಗಳು ವಿವಿಧ ವಿಷಯಗಳ ಮೇಲೆ ಮಾತಾಡಿದರು. ವಿದ್ಯಾಲಯದ ಅಭಿವೃದ್ಧಿ ಆರ್ಥಿಕ ವಿಷಯ ಕುರಿತು ಪರದಿಯೋದಲ್ಪಟ್ಟು ಸಾರ್ವಜನಿಕರು ಸಹಕರಿಸಲು ಕೋರಲಾಯಿತು.

ಸಿಂಹದ ಪಂಜರದಲ್ಲಿ ಮನುಷ್ಯ ಮರಣ

ಮದ್ರಾಸಿನ ಮೃಗಶಾಲೆಯಲ್ಲಿ ೨೪ ವರುಷದ ಶಂಕರರಾವ್ ಎಂಬಾತನು ೨೩ನೇಯ ಮಧ್ಯಾಹ್ನ ಒಂದು ಸಿಂಹ ಎರಡು ಸಿಂಹಿಣಿಗಳಿರುವ ಪಂಜರವನ್ನು ಹೊಕ್ಕನು ಸಿಂಹವು ಭಯಂಕರ ಕೋಪದಿಂದ ಅವನ ಮೇಲೆ ದಾಳಿಮಾಡಿ ಕಡಿದಿತು. ಇಷ್ಟರಲ್ಲಿ ಗದ್ದಲವಾಗಿ ಮೃಗಶಾಲೆಯ ಕೂಲಿಯವರು ಬಿಡಿಸಿ ಆಸ್ಪತ್ರೆಗೆ ಕಳುಹಿಸಿದರು ಅಲ್ಲಿ ಅವನು ಸತ್ತನು.

ಹೈನದ ಅಭಿವೃದ್ಧಿಯ ಸಮಸ್ಯೆ

ಹಿಂದುಸ್ಥಾನದ ಸರ್ವತೋಮುಖವಾದ ಅಭಿವೃದ್ಧಿಯು ಸಾಧಿಸಲ್ಪಡಬೇಕೆಂಬ ದೃಷ್ಟಿಯಿಂದ ನಮ್ಮ ಸರಕಾರವು ಕಾರ್ಯ ನಡೆಸಿದೆ. ಆಹಾರ, ಬಟ್ಟೆ, ಶಿಕ್ಷಣ ಉದ್ಯೋಗ, ಕಲೆ ಮೊದಲಾದ ಸರ್ವ ವಿಷಯಗಳ ಕಡೆಗೆ ಅವರ ಲಕ್ಷವು ಹರಿಯುತ್ತಿದೆ.

ಆಹಾರವೆಂದರೆ ಕೇವಲ ಕಾಳು ಅಲ್ಲ. ನಮ್ಮ ದೇಶದ ಜನತೆಯ ಶಕ್ತಿಯನ್ನು ಪೂರ್ವಕಾಲದಿಂದ ರಕ್ಷಿಸುತ್ತ ಬಂದ ವಸ್ತುವೆಂದರೆ ಹೈನ, ಹಾಲು, ಮೊಸರು, ತುಪ್ಪ ಬೆಣ್ಣೆ ಇವುಗಳ ವಿಪುಲತೆಯು ನಮ್ಮಲ್ಲಿ ಎಂದಿನಿಂದಲೂ ಇದ್ದದ್ದೇ.

ಹೈನ ವಿರಬೇಕೆಂದರೆ ಎಮ್ಮೆ ಆಕಳುಗಳ ಸಂಪತ್ತು ವಿಪುಲವಾಗಿ ಇರಬೇಕೆಂಬ ಮಾತು ತಾನಾಗಿಯೇ ಹಿಂಬಾಲಿಸುವುದು. ಈ ಪ್ರಾಣಿಗಳು ಸಾಕಷ್ಟು ಇದ್ದವೆಂದರೆ, ನಮ್ಮ ಒಕ್ಕಲುತನಕ್ಕೆ ಬೇಕಾದ ಎತ್ತು ಕೋಣಗಳು ಅನಾಯಾಸವಾಗಿ ಉತ್ಪನ್ನವಾಗುವವು.

ಭರತ ಖಂಡವು ಒಕ್ಕಲುತನ ಪ್ರಧಾನವಾದ ದೇಶವಾಗಿದೆ. ಅದಕ್ಕಾಗಿಯೇ ನಮ್ಮ ಪೂರ್ವದ ಜನರು ಗೋಮಾತೆಗೆ ಧಾರ್ಮಿಕ ಸ್ವರೂಪದ ಮಹತ್ವವನ್ನು ಕೊಟ್ಟಿದ್ದಾರೆ. ಆಕಳು ಇಲ್ಲದ ಮನೆಯು ಅಶುಭಸ್ಥಾನವೆಂದು ಹೇಳಿದ್ದಾರೆ. ಸಗಣಿಯಿಲ್ಲದೆ ಸ್ಥಳಶುದ್ಧಿಯಾಗಲಾರದೆಂದು ಅವರ ಕಟ್ಟುಮಾಡಿದ್ದಾರೆ.

ಇತ್ತ ಕಡೆಗೆ ಯಂತ್ರಯುಗವು ಪ್ರಾರಂಭವಾಗಿದೆ. ಪರಕೀಯ ರಾಜ್ಯವು ನಮ್ಮಲ್ಲಿ ಬಂದು ನಮ್ಮ ಧಾರ್ಮಿಕ ಭಾವನೆಯು ಕುಂದುಹತ್ತಿತು. ಗೋಮಾತೆಯ ಬಗ್ಗೆ ಇರಬೇಕಾದ ನಮ್ಮ ಭಕ್ತಿಯು ಕಡಿಮೆಯಾಗಹತ್ತಿತು. ಮಾಂಸಾಹಾರದ ಲೋಲುಪತೆಯು ಹೆಚ್ಚಾಗಿ, ದನಗಳ ಸಂಹಾರವು ಅಳತೆಯಿಲ್ಲದ ನಡೆಯಹತ್ತಿತು.

ಒಕ್ಕಲುತನಕ್ಕೆ ಯಾಂತ್ರಿಕ ಸಾಮಗ್ರಿಯು ಹೆಚ್ಚು ಅನುಕೂಲವೆಂಬ ಭಾವನೆಯು ಪ್ರಚಾರ ಹೊಂದಹತ್ತಿತು. ಅದೂ ಕೂಡ ಪಾಶ್ಚಾತ್ಯ ಸಂಸ್ಕೃತಿಯ ಫಲವೇ. ಏಕೆಂದರೆ ಇಂಗ್ರಜರ ಕಲ್ಪನೆಗೆ ದನಗಳ ಮಹತ್ವವು ನಿಲುಕುವ ಸಂಭವವೇ ಇಲ್ಲ. ಅವರ ದೇಶದಲ್ಲಿ ಒಕ್ಕಲುತನಕ್ಕೆ ದನಗಳು ಅವಶ್ಯ ಬೀಳುವದಿಲ್ಲ. ಅಲ್ಲಿ ಕುದುರೆಗಳನ್ನು ಒಕ್ಕಲುತನಕ್ಕೆ ಉಪಯೋಗಿಸುತ್ತಾರೆ. ಎತ್ತಿಗಿಂತ ಕುದುರೆಯು ಚಲಾಕು ಪ್ರಾಣಿಯಾದ್ದರಿಂದ ಅದಕ್ಕಿಂತ ಹೆಚ್ಚಿನ ಕೆಲಸ ಕೊಡುವ ಯಂತ್ರದ ಕಡೆಗೆ ಅವರ ಲಕ್ಷ್ಯ ಹೋಯಿತು.

ನಮ್ಮ ದೇಶದಲ್ಲಿ ಕೂಡ ರಂಟೆ ಹೊಡೆಯುವದಕ್ಕೆ ಯಂತ್ರಗಳನ್ನು ಬಳಸುವ ಕ್ರಮವು ಈಗ ಪ್ರಾರಂಭವಾಗಿದೆ. ಆದರೆ ಅದು ನಮ್ಮ ಒಕ್ಕಲಿಗರನ್ನು ಇನ್ನೂ ಆಕರ್ಷಿಸುತ್ತಿಲ್ಲ. ಕೈ ಮತ್ತು ಎತ್ತುಗಳಿಂದ ಆದ ಕೆಲಸಕ್ಕೆ ಯಂತ್ರದಿಂದ ಆದ ಕೆಲಸವು ಸರಿಬಾರದೆಂದು ಅವರು ಅನ್ನುತ್ತಿದ್ದಾರೆ.

ಅಷ್ಟೇ ಅಲ್ಲದೆ ನಮ್ಮ ದೇಶದ ವಿಸ್ತೃತ ಭೂಮಿಯನ್ನು ಯಾಂತ್ರಿಕ ರಂಟೆಗಳು ಉಳಲಾರವೆಂದು ಸರಕಾರದವರೇ ಒಪ್ಪಿಕೊಳ್ಳುತ್ತಿದ್ದಾರೆ.

ಏನೇ ಇದ್ದರೂ ಹಿಂದುಸ್ಥಾನವು ಹೈನವಿಲ್ಲದಿದ್ದರೆ ಸದೃಢ ಉಳಿಯಲಾರದೆಂಬ ಮಾತಿಗೆ ಸರಕಾರೀ ತಜ್ಞರು ಬಂದು ಮುಟ್ಟಿದ್ದಾರೆ. ಆದ್ದರಿಂದ ಅವರು ಈಗ ಈ ಬಗ್ಗೆ ದುಷ್ಟ ವೆಚ್ಚವಾಡಿ ದನಗಳನ್ನು ಬೆಳೆಸುವ ಅವುಗಳ ಮೂಲಕ ಒಳ್ಳೇ ಜಾತಿಯ ಮತ್ತು ಶಕ್ತಿಯ ಹೋರಿಗಳನ್ನು ಒಕ್ಕಲುತನಕ್ಕಾಗಿ ಒದಗಿಸುವ ಮತ್ತು ಹಾಲು ತುಪ್ಪಗಳು ಜನರಿಗೆ ಸಾಕಷ್ಟು ಮತ್ತು ಯೋಗ್ಯ ಬೆಲೆಗೆ ದೊರೆಯುವಂತೆ ಮಾಡುವ ಕಾರ್ಯಕ್ರಮವನ್ನು ಕೈಕೊಳ್ಳುತ್ತಿದ್ದಾರೆ.

ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಹೈನದ ತಾಪತ್ರಯವು ಇನ್ನೂ ಭಯಂಕರವಾಗಿ ಗೋಚರವಾಗುತ್ತದೆ. ಮುಂಬಯಿಯಂತಹ ಪಟ್ಟಣಗಳಲ್ಲಿ ಅದನ್ನು ಚನ್ನಾಗಿ ನೋಡಬಹುದು. ಆದ್ದರಿಂದ ಮುಂಬಯಿ ಸರಕಾರದವರು ಆ ಪಟ್ಟಣದ ಈ ಕೊರತೆಯನ್ನು ನೀಗಿಸಲು ಈಗ ಯೋಜನೆಯನ್ನು ಕೈಕೊಂಡಿದ್ದಾರೆ.

ಮುಂಬಯಿಯ ಜನಸಂಖ್ಯೆಯು ಈಗ ೨೦ ಲಕ್ಷಕ್ಕೆ ಬಂದು ಮುಟ್ಟಿದೆ. ಅದಕ್ಕೆ ಸಾಕಷ್ಟು ಹಾಲು ಸಿಗುತ್ತಿಲ್ಲ ಮತ್ತು ಈಗ ಸಿಗುತ್ತಿರುವಷ್ಟು ಹಾಲು ಯೋಗ್ಯ ರೀತಿಯಲ್ಲಿ ಸಿಗ್ಗವಾಗುತ್ತಿಲ್ಲ. ಆದ್ದರಿಂದ ಅದನ್ನು ಉಪಯೋಗಿಸುತ್ತಿರುವ ನಾಗರೀಕರು ಆರೋಗ್ಯದ ದೃಷ್ಟಿಯಿಂದ ಬಳಲುತ್ತಿದ್ದಾರೆ. ಈ ಪಟ್ಟಣವು ಪ್ರತಿವರ್ಷ ೨-೩ ಕೋಟಿ ರೂಪಾಯಿಗಳ ಮತ್ತು ಎಮ್ಮೆ ಆಕಳುಗಳನ್ನು ತರುತ್ತಿದೆ. ಈ ದನಗಳು ಕ್ಷೀಣವಾಗುತ್ತಲೇ ಹೋಗುತ್ತವೆ ಮತ್ತು ಅವುಗಳಲ್ಲಿ ಅನೇಕ ದನಗಳು ಪ್ರತಿವರ್ಷ ಸಾಯುತ್ತವೆ. ಪ್ರತಿವರ್ಷ ೫೦ ಸಾವಿರ ಕರುಗಳು ಸಾಯುತ್ತವೆ.

ಹಿಂದೀ ಜನರ ಪ್ರಮುಖ ಆಹಾರವು ಹಾಲು ಆಗಿದೆ. ಪ್ರತಿಯೊಬ್ಬನಿಗೆ ಪ್ರತಿದಿವಸ ೨೦ ಔನ್ಸು ಹಾಲು ಬೇಕಾಗುತ್ತದೆ. ಆದರೆ ಈಗ ಅವನಿಗೆ ೩ ಔನ್ಸು ಸಿಗುತ್ತಿದೆ.

ಜಗತ್ತಿನಲ್ಲಿ ಬೇರೆ ಬೇರೆ ಪಟ್ಟಣಗಳಲ್ಲಿ ಇರುವ ಹಾಲಿನ ಬೆಲೆಯನ್ನು ನೋಡಿದರೆ ಮುಂಬಯಿಯಲ್ಲಿಯ ಬೆಲೆಯು ಎಲ್ಲಕ್ಕೂ ಹೆಚ್ಚು ಇರುವುದೆಂದು ಗೊತ್ತಾಗುತ್ತದೆ. ನ್ಯೂಯಾರ್ಕಿನಲ್ಲಿ ಒಂದು ಸೇರಿಗೆ (೮೦ ರೂ ತೂಕ) ಒಂದು ರೂಪಾಯಿ ಬೆಲೆಯಿದೆ. ಲಂಡನ್ನಿನಲ್ಲಿ ಒಂದು ಸೇರಿಗೆ ೧೨|| ಆಣೆ ಇದೆ. ಆಸ್ಟ್ರಿಯಾ ಮತ್ತು ನ್ಯೂಝಿಲಂಡಿನಲ್ಲಿ ಒಂದು ಸೇರಿನ ಬೆಲೆಯು ಇನ್ನೂ ಕಡಿಮೆಯಿದೆ.

ಒಮ್ಮೆ ಈ ಪ್ರಶ್ನೆಯನ್ನು ಬಿಡಿಸಬೇಕೆಂಬ ದೃಷ್ಟಿಯಿಂದ ಮುಂಬಯಿ ಸರಕಾರದವರ, ಮುಂಬಯಿ ಪಟ್ಟಣದ ಕೋಟೆಯ ಭಾಗದಿಂದ ೨೦ ಮೈಲುಗಳ ಮೇಲೆ ಇರುವ ಆರೇ ಎಂಬ ಭಾಗದಲ್ಲಿ ಒಂದು ದನದ ದೊಡ್ಡಿಯನ್ನು ಪ್ರಾರಂಭಿಸಿದ್ದಾರೆ. ಇದರ ಉದ್ಘಾಟನಾ ಸಮಾರಂಭವು ಮೊನ್ನೆ ೧೨ನೇ ತಾರೀಖು ಆದಿತ್ಯವಾರ ದಿವಸ ಡಾ, ರಾಜೇಂದ್ರಪ್ರಸಾದರವರಿಂದ ನೆರವೇರಿಸಲ್ಪಟ್ಟಿತು.

ಈ ದೊಡ್ಡಿಗಾಗಿ ೬೦೦ ಎಕರೆ ಭೂಮಿಯನ್ನು ದೊರಕಿಸಿದ್ದಾರೆ. ಅಲ್ಲಿ ೫೦೦೦ ಹಿಂಡುವ ದನಗಳುಳ್ಳ ೩೦ ವಿಭಾಗಗಳನ್ನು ನಿರ್ಮಿಸುವವರಿದ್ದಾರೆ. ಈಗ ಏಳು ವಿಭಾಗಗಳನ್ನು ಪ್ರಾರಂಭಿಸಿದ್ದು ೩೦೦ ದನಗಳನ್ನು ಅವುಗಳಲ್ಲಿ ಇಟ್ಟಿದ್ದಾರೆ.

ದೊಡ್ಡಿಯ ಕೆಲಸವು ಸಂಪೂರ್ಣತೆಗೆ ಹೋಗುವದೆಂದರೆ ಮುಂಬಯಿಯಲ್ಲಿಯ ಸರ್ವ ಹಿಂಡುವ ದನಗಳನ್ನು ಅಲ್ಲಿಗೆ ಒಯ್ಯುವದಾಗಿದೆ. ಅಲ್ಲಿ ಆ ದನಗಳಿಗೆ ಬೇಕಾಗುವ ಮೇವನ್ನು ಬೆಳೆಸುವರು. ಅವುಗಳಿಗೆ ಔಷಧೋಪಚಾರದ ವ್ಯವಸ್ಥೆ ಮಾಡುವರು. ಆ ದನಗಳಿಂದ ಬರುವ ಹಾಲನ್ನು ಸರಕಾರದವರೇ ತೆಗೆದುಕೊಂಡು ಅದನ್ನು ಮುಂಬಯಿಯಲ್ಲಿ ಯೋಗ್ಯ ಬೆಲೆಗೆ ಮಾರುವರು. ಶುದ್ಧ ಮತ್ತು ಆರೋಗ್ಯಕರವಾದ ಹಾಲು ಮುಂಬಯಿ ನಾಗರೀಕರಿಗೆ ಸಿಗುವಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸರಕಾರವು ಈ ಯೋಜನೆಗೆ ೧|| ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದೆ. ಇದೇ ಮಾದರಿಯ ಇನ್ನು ೨-೩ ದೊಡ್ಡಿಗಳನ್ನು ಮುಂಬಯಿಯ ಎಡಬಲದಲ್ಲಿ ಪ್ರಾರಂಭಿಸುವವರಿದ್ದಾರೆ. ಹಾಗಾದಲ್ಲಿ ಬೃಹನ್ಮುಂಬಯಿಯ ಸರ್ವ ಹಿಂಡುವ ದನಗಳನ್ನು ಅಲ್ಲಿಗೆ ಒಯ್ದು ಇಡುವ ವ್ಯವಸ್ಥೆ ಮಾಡುವುದರಲ್ಲಿ ಬರುವುದು.

ಇಂತಹ ಯೋಜನೆಯಿಂದ ಮುಂಬಯಿ ಪಟ್ಟಣಕ್ಕಷ್ಟೇ ಅಲ್ಲದೆ ಇಡೀ ಪ್ರಾಂತಕ್ಕೆ ಉಪಯೋಗವಾಗದೆ ಇರಲಾರದೆಂದು ಸರಕಾರದವರು ನಂಬುತ್ತಿದ್ದಾರೆ. ಇದರ ಯಶಸ್ವಿತೆಯನ್ನು ಕಂಡು ಪ್ರಾಂತದಲ್ಲಿ ಕೂಡ ಬೇರೆ ಬೇರೆ ಕಡೆಗೆ ಇಂತಹವೇ ದೊಡ್ಡಿಗಳನ್ನು ಸರಕಾರದವರು ಲೋಕಲ್ ಬೋರ್ಡು ಮುನಿಸಿಪಾಲ್ಟಿಗಳಂತಹ ಸಂಸ್ಥೆಯವರು ವೈಯಕ್ತಿಕ ಇಲ್ಲವೆ ಸಹಕಾರಿ ಸಂಘಗಳವರು ಪ್ರಾರಂಭಿಸಬಹುದಾಗಿದೆ. ಮತ್ತು

ಈ ಪ್ರಾಂತಿಕ ಡೊಡ್ಡಿಯಲ್ಲಿ ಉತ್ಪನ್ನವಾಗುವ ಮತ್ತು ಒಳ್ಳೇ ಜಾತಿಯ ಹೋರಿಗಳನ್ನು ಪ್ರಾಂತದ ಬೇರೆ ಬೇರೆ ಪ್ರದೇಶಗಳ ಉಪಯೋಗಕ್ಕಾಗಿ ಕಳುಹಿಸುವ ಉದ್ದೇಶವನ್ನೂ ಪ್ರಾಂತಿಕ ಸರಕಾರದವರು ಇಟ್ಟುಕೊಂಡಿದ್ದಾರೆ.

ಪ್ರಪಂಚದಲ್ಲಿ ಸರಕಾರದವರು ಕೊಂಡಿದ್ದ ಹಾಲಿನ ಉತ್ಪಾದನೆಯಾವುದೇ ಕೇಂದ್ರಕ್ಕಿಂತ, ಮುಂಬಯಿ ಸರಕಾರದವರು ಪ್ರಾರಂಭಿಸಿದ ಈ ಕೇಂದ್ರವು ದೊಡ್ಡದಾಗಿದೆ. ಇದು ಯಶಸ್ವಿಯಾದರೆ ಇದು ಜಗತ್ತಿಗೇ ಮಾದರಿಯದಾಗುವದೆಂದು ತಿಳಿದುಕೊಂಡಿದ್ದಾರೆ.

ಹೀಗೆ ನಮ್ಮ ದೇಶವು ಹಾಳಾದ ಸ್ಥಿತಿಯಿಂದ ಅನೇಕ ರೀತಿಗಳಿಂದ ಮೇಲಕ್ಕೇರಬೇಕಾಗಿದೆ. ನಿಜವಾದ ದೇಶದ ಹಿತವನ್ನು ಸಾಧಿಸುವ ಇಚ್ಛೆಯುಳ್ಳ ರಾಷ್ಟ್ರೀಯ ಸರಕಾರವು ಕಾರ್ಯಮಾಡುತ್ತಿದ್ದಾಗ್ಗೆ ಅದರ ಫಲವು ಯಾವರೀತಿ ಸಿಗುವದೆಂಬ ಮಾತನ್ನು ಇಂತಹ ಯೋಜನೆಗಳಿಂದ ಚನ್ನಾಗಿ ಕಾಣಬಹುದಾಗಿದೆ.

ನಮ್ಮ ಸರಕಾರವು ಇನ್ನೀಗ ಹುಟ್ಟಿದೆ. ಅದು ಇಚ್ಛಿಸಿದಷ್ಟು ತ್ವರಿತ ಗತಿಯಿಂದ ಸಾಗುವದಕ್ಕೆ ಇನ್ನೂ ಸಮರ್ಥವಾಗಿಲ್ಲ. ಅದಕ್ಕೆ ನಮ್ಮ ದೇಶದಲ್ಲಿ ಹುಟ್ಟಿದ ಕ್ಷಣಿಕ ಅವ್ಯವಸ್ಥೆ ಮತ್ತು ಜನತೆಯು ಮನಬಂದಂತೆ ನಡೆಯುತ್ತಿರುವುದು ಕಾರಣವಾಗಿವೆಯೆಂಬುವ ಧಾರಾಳವಾಗಿ ಒಪ್ಪಬೇಕಾದ ವಿಷಯವಾಗಿದೆ.

ಪ್ರಗತಿಯು ತೃಪ್ತಿಕರವಾಗಿ ಸಾಗಲು ಇನ್ನೂ ಕೆಲವು ಕಾಲಬೇಕು. ಜನತೆ ಮತ್ತು ಸರಕಾರ ಇವುಗಳ ಪರಸ್ಪರ ಸಂಘಟನೆಯಿಂದ ಹುಟ್ಟಿದ ಅವ್ಯವಸ್ಥೆಯು ಕೊನೆಗೊಮ್ಮೆ ನಿಲ್ಲಲೇ ಬೇಕು. ಅಲ್ಲಿಯವರೆಗೆ ಇಂತಹ ಯೋಜನೆಗಳು ಕೂಡ ಹೇಳಿಕೊಳ್ಳುವಂತಹ ಫಲಗಳನ್ನು ತೋರಿಸಲಾರವು. ಆದರೆ ನಾಳಿನ ಸುಧಾರಿತ ವಾತಾವರಣದ ಕಲ್ಪನೆಯಿಂದ ನಾವು ಈ ಯೋಜನೆಗಳೊಂದಿಗೆ ಮುಂದೆ ಸಾಗಲೇಬೇಕಾಗಿದೆ.

ಮುಖಂಡರು

ಸೇವಾಪರರಾಗಲಿ

(ಡಾ ಹರ್ಡೀಕರರ ಸ್ಪಷ್ಟೋಕ್ತಿ)

)0—

ಅಮರಗೋಳ ಗ್ರಾಮದ ಸೇವಾಟ್ರಸ್ಟಿನವರಿಂದ ಕಟ್ಟಿಸಲ್ಪಡಲಿರುವ ಚಿಕಿತ್ಸಾಲಯ ಕಟ್ಟಡದ ಶಂಕು ಶಿಲಾ ಸ್ಥಾಪನೆಯ ಕಾರ್ಯವು ಧಾರವಾಡದ ಹುಬ್ಬಳ್ಳಿ [illegible]ಕ್ಕೆ ಅಮರಗೋಳದ ಹತ್ತಿರ ಇರುವ ಸ್ಥಳದಲ್ಲಿ ಅದಕ್ಕಾಗಿ ದೊರೆತ ಸ್ಥಳ ೧೦-೩-೪೯ ಗುರುವಾರ ದಿವಸ ಮುಂಜಾನೆ ೧೦ ಗಂಟೆಗೆ ಡಾ ನಾ. ಸು ಹರ್ಡೀಕರರ ಹಸ್ತದಿಂದ ನಡೆಯಿತು. ಆ ಕಾಲಕ್ಕೆ ಡಾ ಹರ್ಡೀಕರರು ಮಾಡಿದ ಭಾಷಣದ ಸಾರವು ಈ ಕೆಳಗಿನಂತಿದೆ.

ಈ ಗ್ರಾಮಸೇವಾ ಟ್ರಸ್ಟು ಅಸ್ತಿತ್ವದಲ್ಲಿ ಬರಲಿದ್ದ ಕಾಲದಿಂದ ಇದರ ವಿಷಯವನ್ನು ಟ್ರಸ್ಟಿಗಳನ್ನೂ ನಾನು ಬಲ್ಲೆ. ಅವರ ಬಯಕೆಯ ಮೇರೆಗೆ ಅವಶ್ಯಕ ಸಲಹೆ ಸೂಚನೆಗಳನ್ನು ನಾನು ಕೊಡುತ್ತ ಬಂದಿದ್ದೇನೆ.

ಇದರ ಕಾರ್ಯವು ಪ್ರಾರಂಭವಾಗಲು ಅನೇಕ ಸಂಗತಿಗಳು ಅನುಕೂಲತೆಗಳನ್ನು ಒದಗಿಸಿದವು. ಇದರಿಂದ, ಇಂದು ನಾವು ನೋಡುತ್ತಿರುವ ಭೂಮಿಯು ಚಿಕಿತ್ಸಾಲಯ ಕಟ್ಟಡಕ್ಕಾಗಿ ಓರ್ವ ಉದಾರ ಗೃಹಸ್ಥರಿಂದ ದೊರೆತಿದೆ. ಸರಕಾರದವರು, ಮೋಟಾರು ಕಂಪನಿಗಳು, ಜಿಲ್ಲಾ ಲೋಕಲ್ ಬೋರ್ಡಿನವರು ಮತ್ತು ಇತರ ವ್ಯಕ್ತಿಗಳ ಸಹಾಯದ ಮೂಲಕ ಕೆಲವು ಮಟ್ಟಿಗೆ ದುಡ್ಡು ದೊರೆತಿದೆ. ಟ್ರಸ್ಟಿನ ಕಾರ್ಯವು ಜನತೆಗೆ ಉಪಯುಕ್ತವಾಗಿದೆಯೆಂದು ಕಂಡಬಂದಲ್ಲಿ ಇನ್ನೂ ಹೆಚ್ಚು ಹಣವು, ಅಷ್ಟೇ ಏಕೆ ಸಾಕಷ್ಟು ಹಣವು ಸಿಗುವದರಲ್ಲಿ ಏನೂ ಸಂಶಯವಿಲ್ಲ.

ಸೇವಾ ಮತ್ತು ಅಧಿಕಾರ ಭಾವನೆಗಳು

ಸಾರ್ವಜನಿಕ ಕಾರ್ಯಮಾಡುವದು ಬಹಳ ಮಹತ್ವದ್ದು ಮತ್ತು ಅಷ್ಟೇ ಜಿಗಿಯಾದುದೂ ಆಗಿದೆ. ನಾನು ಅದನ್ನು ಮಾಡುತ್ತೇನೆ ಎಂದು ಕೂಗುವವರು ಬಹಳ ಜನರು ದೊರೆಯುತ್ತಾರೆ. ಆದರೆ ಹಾಗೆ ಕೂಗುವದರಿಂದ ಕಾರ್ಯವಾಗುತ್ತಿರುವದಿಲ್ಲವೆಂಬುದನ್ನು ಜನತೆಯು ಮರೆಯಬಾರದು. ನಿಜವಾದ ಕಾರ್ಯಕರ್ತ ಹೆಚ್ಚು ಕೂಗುವುದಿಲ್ಲ. ಕೂಗುವುದಕ್ಕೆ ವೆಚ್ಚಮಾಡುವ ಶಕ್ತಿಯನ್ನು ಅವನು ಕಾರ್ಯಮಾಡುವುದರಲ್ಲಿ ತೊಡಗಿಸುತ್ತಾನೆ.

ಇತ್ತಕಡೆಗೆ ನಾವು ಅಧಿಕಾರಸ್ಥರಾಗಿದ್ದೇವೆ. ಕಾಂಗ್ರೆಸ್ ಸಂಸ್ಥೆಯ ಕೈಯಲ್ಲಿ ದೇಶದ ರಾಜಸೂತ್ರಗಳು ಸಿಕ್ಕಿರುವದರಿಂದ ಕಾಂಗ್ರೆಸ್ಸಿಗರು ಒಳ್ಳೇ ಅಥ್ಯತೆಯಿಂದ ಓಡಾಡುವ ದೃಶ್ಯವು ಇಂದು ಕಂಡುಬರುತ್ತಿದೆ.

ಅಧಿಕಾರವು ಎಷ್ಟು ಮಹತ್ವದ್ದು ಹೋ ಅಷ್ಟೇ ಘಾತಕವೂ ಆಗಿದೆ. ಅದರ ಸದುಪಯೋಗವಾದರೆ ಮಾತ್ರ ಅದರಿಂದ ಜನತೆಗೆ ಕಲ್ಯಾಣವಾಗುವದು. ಇಲ್ಲವಿದ್ದರೆ ಅದು ನಮ್ಮ ಅವನತಿಯನ್ನು ಒದಗಿಸುವ ಸಾಧನವಾಗಿ ಪರಿಣಮಿಸದೆ ಇರಲಾರದು.

ನಮ್ಮ ದೇಶದಲ್ಲಿ ಇಂದು ನಡೆದಿರುವ ಚಟುವಟಿಕೆಗಳನ್ನು ನೋಡಿದರೆ ನಾಚಿಗೆಯಿಂದ ತಲೆಬಗ್ಗಿಸುವಂತಾಗುತ್ತಿದೆ. ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಧಿಕಾರಲಾಲಸೆಯು ಹೆಚ್ಚಾಗುತ್ತಿದ್ದು ಅವರಲ್ಲಿದ್ದ ಸೇವಾ ಬುದ್ಧಿಯು ಮಾಯವಾಗುತ್ತಿದೆ. ನಾನು ಅಧಿಕಾರದಲ್ಲಿದ್ದೇನೆ. ನನ್ನ ಈಗ ಕರ್ತೃತ್ವ ಶಕ್ತಿಬಂದಿದೆ. ಸರಕಾರೀ ಅಧಿಕಾರಸ್ಥರು ನಾವು ಹೇಳಿದಂತೆ ಕೇಳಬೇಕು, ಎಂಬ ಭಾವನೆಯು ನಮ್ಮಲ್ಲಿ ಉಂಟಾಗಿದೆ. ಮಾಮಲೇದಾರರು ಕಲೆಕ್ಟರರನ್ನು ನಾವು ಮನಬಂದಂತೆ ಎಳೆದಾಡುತ್ತಿದ್ದೇವೆ.

ಹೀಗೆ ನಡೆದ ಕಾರ್ಯಕಲಾಪಗಳಿಂದ ನಾವು ದೇಶದಲ್ಲಿ ಹಾಹಾಕಾರವನ್ನು ಹುಟ್ಟಿಸಿದ್ದೇವೆ. ಇದು ಸೇವಾ ಭಾವವಲ್ಲ ನಮಗೆ ಆ ಮುದಕನು ದೇಹವನ್ನು ಸವೆಸಿ ತಂದುಕೊಟ್ಟ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವ ಮಾರ್ಗವಲ್ಲ. ಇದೇರೀತಿ ನಾವು ಸಾಗಿದರೆ, ಇಂದಿಲ್ಲ ನಾಳೆ, ನಮ್ಮ ಸ್ವಾತಂತ್ರ್ಯವು ಪುನಃ ಪರರ ಪಾಲಾಗುವುದರಲ್ಲಿ ಏನೂ ಸಂಶಯವಿಲ್ಲ. ಹಾಗಾದಮೇಲೆ ಪಶ್ಚಾತ್ತಾಪ ಪಡುವದಕ್ಕಿಂತ, ಇಂದೇ ನಾವು ನಮ್ಮ ಅಂತಃ ಪರೀಕ್ಷೆಯನ್ನು ಮಾಡಿಕೊಂಡು ಮೊದಲು ವಹಿಸಿದ್ದ ನಿಜವಾದ ಸೇವಾವೃತ್ತಿಯನ್ನು ಪುನಃ ಸ್ವೀಕರಿಸುವದು ಅವಶ್ಯ.

ಅಮರಗೋಳ ಗ್ರಾಮ ಸೇವಾಟ್ರಸ್ಟಿನ ಸಭಾಸದರು ಪ್ರಾಮಾಣಿಕರಿದ್ದಾರೆ, ಕಷ್ಟಸಹಿಷ್ಣುಗಳಿದ್ದಾರೆ, ತ್ಯಾಗಿಗಳಿದ್ದಾರೆ. ಅವರಲ್ಲಿ ಸೇವಾ ಭಾವವಿದೆ. ಅಂತೆಯೇ ನಾನು ಅವರೊಡನೆ ಇದುವರೆಗೆ ಸಹಕರಿಸುತ್ತ ಬಂದಿದ್ದೇನೆ. ಅವರಲ್ಲಿ ಈ ಭಾವನೆಗೆ ಕೊರತೆಯುಂಟಾದಾಗ್ಗೆ ಅವರನ್ನು ಎಚ್ಚರಿಸುವುದಕ್ಕೂ ನಾನು ತಪ್ಪಿಲ್ಲ. ಎಲ್ಲಿಯವರೆಗೆ ಅವರು ನಿಜವಾದ ಸೇವಾಬುದ್ಧಿಯಿಂದ, ಹಿಡಿದ ಕಾರ್ಯವನ್ನು ಅವಿಶ್ರಾಂತವಾಗಿ ಮುಂದುವರಿಸಲು ತಪ್ಪುವುದಿಲ್ಲವೋ ಅಲ್ಲಿಯವರೆಗೆ ನನ್ನ ಸಹಕಾರವು ಅವರಿಗೆ ಇದ್ದೇ ಇದೆ. ಆದಕೆ, ವ್ಯಕ್ತಿಯ ವಾದಲ್ಲಿ ಅದರ ಸಂಬಂಧವು ನನ್ನೊಡನೆ ಉಳಿಯಲಿಕ್ಕಿಲ್ಲ

ಇನ್ನು ಈ ಟ್ರಸ್ಟಿನ ಕಾರ್ಯದ ಮುಖ್ಯ ಭಾಗವಾದ ಈ ಚಿಕಿತ್ಸಾಲಯದ ಮಹತ್ವವನ್ನು ಈ ಹಳ್ಳಿಗರು ಮರೆಯಬಾರದು. ಇಂದು ನಮ್ಮ ದೇಶದಲ್ಲಿ ಔಷಧೋಪಚಾರದ ಅಭಾವವು ಬಹಳವಿದೆ. ಅದರಿಂದ ಹಳ್ಳಿಗರು ಬಹಳ ಹಾನಿಹೊಂದುತ್ತಿದ್ದಾರೆ

ಈ ಚಿಕಿತ್ಸಾಲಯದಂತಹ ಸಂಸ್ಥೆಗಳು ಎಷ್ಟು ಆದರೂ ನಮಗೆ ಬೇಕು. ಇತ್ತ ಹುಬ್ಬಳ್ಳಿ ಅತ್ತ ಧಾರವಾಡಗಳವರೆಗಿನ ಹಳ್ಳಿಗರು ಈ ಸಂಸ್ಥೆಯ ಲಾಭವನ್ನು ಪಡೆಯುವಂತಾಗಬೇಕು. ಇನ್ನೂ ಹೆಚ್ಚಿನ ಚಿಕಿತ್ಸೆಯು ಬೇಕಾದಲ್ಲಿ ಮಾತ್ರ ಪಟ್ಟಣಗಳಲ್ಲಿಯ ನಿಷ್ಣಾತರಾದ ಡಾಕ್ಟರರು ತಮ್ಮ ಕೆಲವು ವೇಳೆಯನ್ನು ವೆಚ್ಚಮಾಡಿ ಈ ಸಂಸ್ಥೆಯ ರೋಗಿಗಳಿಗೆ ಹೆಚ್ಚಿನ ಚಿಕಿತ್ಸೆಯನ್ನು ಒದಗಿಸುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ

ಸಹಾಯಕ್ಕೆ ಕೊರತೆಯಿಲ್ಲ

ಕೆಲಸವು ಉಪಯುಕ್ತವಾದದ್ದೆಂದು ಕಂಡು ಬಂದರೆ ಮತ್ತು ಅದನ್ನು ಕೈಕೊಂಡವರು ಪ್ರಾಮಾಣಿಕರೂ ಮತ್ತು ನಿಜವಾದ ಜನಹಿತದವರೂ ಎಂದು ಗೊತ್ತಾದಲ್ಲಿ ಸರ್ಕಾರದಿಂದ ಸಹಾಯವು ಹಾಗಾ ಅನ್ನುವದರಲ್ಲಿ ಸಿಗುವದು ಖಂಡಿತ. ಹಣಕ್ಕೆ ಕೊರತೆಯಿಲ್ಲ ಅದನ್ನು ಆಕರ್ಷಿಸಬಲ್ಲ ಯೋಗ್ಯ ಕಾರ್ಯವನ್ನು ಮಾಡಿ ತೋರಿಸುವ ಸಾಮರ್ಥ್ಯವು ನಮ್ಮಲ್ಲಿ ಬೇಕು.

ಹಳ್ಳಿಗರಲ್ಲಿ ಪಕ್ಷ ಪಂಗಡಗಳು ಬಹಳ ಅಮರಗೋಳದಲ್ಲಿ ಕೂಡ ಎರಡು ಪಕ್ಷಗಳಿರುವದನ್ನು ನಾನು ಬಲ್ಲೆ. ಈ ಪಕ್ಷಗಳ ತಿಕ್ಕಾಟವನ್ನು ಇಂತಹ ಹಿತಕಾರಿ ಸಂಸ್ಥೆಗಳಲ್ಲಿ ತಂದು ಹಾಕುವದು ಹಾನಿಕರವಾದದ್ದು ಈ ಸಂಸ್ಥೆಯ ಸುತ್ತಮುತ್ತಲಿನ ಸರ್ವರೂ ಇದರ ಏಳ್ಗೆಗಾಗಿ ಮತ್ತು ಅದರಿಂದ ಪೂರ್ಣ ಪ್ರಯೋಜನವನ್ನು ಹೊಂದುವುದಕ್ಕಾಗಿ ತಮ್ಮಲ್ಲಿಯ ಸರ್ವ ಮತಭೇದ ಪಕ್ಷ, ಜಗಳ, ತಂಟೆಗಳನ್ನು ಬದಿಗಿಟ್ಟು ಸಹಕರಿಸುವುದು ಅವಶ್ಯವಿದೆ.

ಸಂಸ್ಥೆಯವರೂ ಕೂಡ ಪಕ್ಷಾತೀತರಾಗಿ ಕಾರ್ಯಮಾಡುವುದು ಅವಶ್ಯವಿದೆ. ನಮ್ಮ ವೈರಿಯು ಬಂದರೂ ಕೇವಲ ಭೂತದಯೆಯಿಂದ, ಚಿಕಿತ್ಸೆಯನ್ನು ಅವರಿಗೆ ಈ ಸಂಸ್ಥೆಯು ಒದಗಿಸಲು ಎಳ್ಳಷ್ಟು ತಪ್ಪಬಾರದು.

ಹೀಗಾದಲ್ಲಿ ಈ ಸಂಸ್ಥೆಯು ಒಂದು ಆದರ್ಶ ಸಂಸ್ಥೆಯಾಗುವುವರಲ್ಲಿ ಏನೂ ಸಂಶಯವಿಲ್ಲ.

ರೇಲ್ವೆ ಗಾಡಿಗಳಲ್ಲಿ ಪೋಲೀಸ ಕಾವಲು

ಹೊಸದಿಲ್ಲಿ ತಾ॥ ೨೨ ಗಳಿಗೆ ಕ ಮಾರ್ಚಿಗೆ ಮುಗಿಯುವ ಆರ್ಥಿಕ ವರುಷದಲ್ಲಿ, ಹಿಂದುಸ್ತಾನ ಸರಕಾರದ ರೇಲ್ವೆಗಳಲ್ಲಿ ೨೪ ಸಹಸ್ರ ದರೋಡೆಗಳು ಸಂಭವಿಸಿದ್ದು, ಅವುಗಳಿಂದ ೮ ಜೀವನಗಳು ಮತ್ತು ೩೧,೦೦೦ ರೂ ಗಳ ಆಸ್ತಿಪಾಸ್ತಿಗಳ ಹಾನಿಯಾಗಿದೆಯೆಂದು ಇಂದು ಹಿಂದೀ ಮಹಾಶಾಸನ ಸಭೆಯಲ್ಲಿ ಡಾ ಮೊಸಮೋಹನ ದಾಸರವರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತ, ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ತಿಳಿಸಿದರು.

ರೇಲ್ವೆಗಳ ಮಂತ್ರಿಗಳು ಮುನ್ನೆಚ್ಚರಿಕೆಯನ್ನು ತೆಗೆದುಕೊಂಡ ಬಗ್ಗೆ ವಿವರಿಸುತ್ತ ಕೆಲವೊಂದು ಗಾಡಿಗಳಲ್ಲಿ ಪೋಲೀಸು ಕಾವಲಗಾರರನ್ನು ಇಡಲಾಗಿದ್ದು ಈ ವಿಷಯದಲ್ಲಿ ವಿಶೇಷ ಗಂಡಾಂತರದ ಸ್ಥಳಗಳ ಯಾದಿಯೊಂದನ್ನು ಸಿದ್ಧಗೊಳಿಸಲು ರೈಲ್ವೆ ಆಡಳಿತಗಳಿಗೆ ತಿಳಿಸಲಾಗಿದೆ. ಎಂದು ಹೇಳಿದರು. ಆಡಳಿತೆಗಳಿಂದ ಯಾವಾಗಲು ಬಂದಿದ್ದು ದರೋಡೆಗಳ ಬಗ್ಗೆ ವಿಶೇಷ ಕ್ರಮಗಳನ್ನು ಕೈಕೊಳ್ಳಲಾಗುತ್ತಿದೆ. ಪ್ರವಾಸದ ಸಂದರ್ಭದಲ್ಲಿ ಸ್ತ್ರೀಯರ ಕಂಪಾರ್ಟಮೆಂಟುಗಳ ಯೋಗಕ್ಷೇಮ ನೋಡಿಕೊಳುವಂತೆ ಪೋಲೀಸರಿಗೆ ತಿಳಿಸಲಾಗಿದೆ.

ಜಿ. ಆಯ್. ಪಿ. ಮಾರ್ಗದಲ್ಲಿಯೇ ದೊಡ್ಡ ಸಂಖ್ಯೆಯಲ್ಲಿ ದರೋಡೆಗಳು ನಡೆದವೆಂದೂ ಅವರು ತಿಳಿಸಿದರು.

ಜಗತ್ತಿನ ಕಾಮನ್‌ವೆಲ್ತದ ಮಹತ್ವ

ಮಿ. ಈಡನ್ನರ ಭಾಷಣ

ಹೊಸದಿಲ್ಲಿ ೨೨- ಬ್ರಿಟಿಶ್ ಹುಜೂರಾಸ್ತ್ರ ಶಾಖೆಯು ಹಿಂದಿನ ಕಾರ್ಯದರ್ಶಿಗಳಾದ ಮಿ. ಆ್ಯಂಥನಿ ಈಡನರು ಇಂದಿಲ್ಲಿ ಜಾಗತಿಕ ರಾಜಕಾರಣದ ಹಿಂದೀ ಮಂಡಳಿದ ಸಭೆಯೊಂದರಲ್ಲಿ ಭಾಷಣಮಾಡುತ್ತ ಇಂದಿನ ಪ್ರಾಸ್ತ ಪರಿಸ್ಥಿತಿಯಲ್ಲಿ ನಾವು ಬ್ರಿಟಿಶ ಕಾಮನವೆಲ್ತ ಎಂದು ಹೇಳಿಕೆದಳ್ಳುವ ರಾಷ್ಟ್ರಗಳ ಸ್ವತಂತ್ರ ಸಂಸ್ಥೆಯು ತುಂಬ ಮಹತ್ವವುಳ್ಳದಾಗಿದೆ. ಅಂಥದೊಂದು ಪ್ರಭಾವವು ಜಗತ್ತಿಗೆ ಅವಶ್ಯವಾಗಿದೆ. ಎಂದು ಹೇಳಿದರು.

ಬ್ರಿಟನದಲ್ಲಿಂದ ಹಿಂದುಸ್ತಾನದ ಬಗ್ಗೆ ಅನೇಕ್ಕು ಸದಿಚ್ಛೆ ಉಂಟಾಗಿದೆ. ಭವಿಷ್ಯದ ಬಗ್ಗೆ ಹಿಂದುಸ್ತಾನವೇ ತನಗೆ ಸರಿದೋರದಂತೆ ಯಾವುದೇ ನಿರ್ಧಾರಕ್ಕೆ ಬರಬಹುದಾಗಿದೆ. ನೀವು ನಮ್ಮೊಂದಿಗೆ ಹಾಗು ನಮ್ಮ ಕಾಮನವೆಲ್ತದ ಒಂದು ರಾಷ್ಟ್ರದೊಂದಿಗೆ ನಿಕಟವಾದ ಸಂಬಂಧ ಬೆಳೆಸಿಕೊಂಡ ನಮಗೆ ಹೆಚ್ಚು ಸುಖವಾದೀತೆಂದೇ ಹೇಳುತ್ತಿದ್ದೇನೆ ಎಂದು ಮುಂತಾಗಿ ತಮ್ಮ ಭಾಷಣದಲ್ಲಿ ಹೇಳಿದರು

ಪಂಡಿತ ಹೃದಯನಾಥ ಕುಂಜರರವರು ಸಭೆಯ ಅಧ್ಯಕ್ಷಸ್ಥಾನ ವಹಿಸಿದ್ದರಲ್ಲದೆ, ಮಹಾಶಾಸನ ಸಭೆಯ ಅನೇಕ ಸದಸ್ಯರೂ ಮಂತ್ರಿಗಳೂ ಸಭೆಯಲ್ಲಿ ಉಪಸ್ಥಿತರಿದ್ದರು.

ಉತ್ತಂಗಿ (ಹಡಗಲಿ)

ತಾ॥ ೧೭-೩-೪೯ ನೇ ಗುರುವಾರ ಹುವ್ವಿನಹಡಗಲಿ ತಾಲೂಕು ಉತ್ತಂಗಿ ಗ್ರಾಮದ ಏಡೆಡ್ ಎಲಿಮೆಂಟರಿ ಶಾಲೆಯಲ್ಲಿ ಹೆತ್ತವರ ಸಂಘವನ್ನು ಶ್ಯಾನಭೋಗರ ಮುದುಕಪ್ಪನವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಭೆಯನ್ನು ಏಡೆಡ ಶಾಲೆಯ ಮೇನೇಜರ್‌ರವರಾದಂಥ ಡಿ ನಾಗನಗೌಡ ಮತ್ತು ಯಸ್. ಎಂ. ರೇವಣಸಿದ್ದಯ್ಯನವರೂ ಈರ್ವರೂ ಸೇರಿ ಕರೆದಿದ್ದರು. ಸಭೆಯಲ್ಲಿ ಧರ್ಮದಾತರ ದಂಥ ಶ್ರೀಮಾನ್ ಗುಡೇಕೋಟೆ ಕರಿಬಸಪ್ಪನವರು ಶಾಲೆಗಾಗಿ ಕಟ್ಟಡವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಡಲು ನಾಗಪ್ಪನವರಾಡಿ ಕಟ್ಟಡ ಪ್ರಾರಂಭಿಸಿರುವರು, ಮತ್ತು ರೆಡ್ಡಿ ದ್ಯಾವಪಗೌಡರೂ ಬಿಗಟೇರಿ ಜವಳಿ ಶಾಂತಪ್ಪ ಇನ್ನು ಮುಂತಾದ ರೈತ ಮಹಾನೀಯರು ಹಾಜರಿದ್ದರು. ಶ್ರೀಮಾನ್ ಸೊನ್ನದ ಮರಡಿ ಮಠದ ವಿರುಪಾಕ್ಷಯ್ಯನವರು ಹೆತ್ತವರ ಸಂಘದಬಗ್ಗೆ ಕೆಲವು ಮಾತುಗಳನ್ನು ಭಾಷಣಮೂಲಕ ಸಭಿಕರಿಗೆ ಮುಂದಿಟ್ಟಾಗುವಂತೆ ತಿಳಿಸಿದನಂತರ ವಿದ್ಯೆ ಮತ್ತು ಶಾಲಾಭಿವೃದ್ಧಿ, ಮಿಲಿಟರಿಯ ಶಿಸ್ತು, ಹೊತ್ತಿಗೆ ಸರಿಯಾಗಿ ಕೆಲಸಮಾಡುವ ವಿಷಯಗಳನ್ನು ಬೋಧಿಸುತ್ತಾ ಶಾಲೆಗೆ ಬಾಲ ಬಾಲಕಿಯರನ್ನು ತಪ್ಪದಲೇ ಸರಿಯಾಗಿ ಕಳುಹಿಸುತ್ತಾ ಉಪಾಧ್ಯಾಯರಿಗೆ ತುಂಬಾ ಪ್ರೋತ್ಸಾಹ ಕೊಡಬೇಕೆಂದು ತಿಳಿಸಿದರು.

ಬಳ್ಳಾರಿ ಜಿಲ್ಲಾ ಮದ್ಯನಿಷೇಧ ಸಭೆ.

"ಸಾರಾಯಿ ಭಟ್ಟಿ ಇಳಿಸಲು ಪ್ರೇರೇಪಿಸುವ ರೊಕ್ಕಸ್ಥರು ಹಿಂದೆ ಇದ್ದು ಅನೇಕ ಸಂದರ್ಭಗಳಲ್ಲಿ ಕೂಲಿಯವರು ಬಂಧಿತರಾಗುತ್ತಿದ್ದಾರೆ. ಕೋರ್ಟುಗಳಲ್ಲಿ ಅಪರಾಧದ ಸಮರ್ಥನೆಯಾಗಬೇಕು, ಇಂಥವನೇ ಸಾರಾಯಿ ಭಟ್ಟಿ ಇಳಿಸಲು ಸಹಾಯ ಮಾಡುತ್ತಾನೆಂದು ಊರಿನ ಮರ್ಯಾದಸ್ಥರೆಲ್ಲಾ ಹೇಳಿದರೂ ಹೇಳಿಕೆಯನ್ನು ಬರಹ ಮೂಲಕ ಕೊಟ್ಟರೂ ಅವರನ್ನು ಬಂಧಿಸಲು ಶಾಸನವು ಸಮರ್ಥವಾಗಿಲ್ಲ ಈ ಕಾರಣ ಕಲೆಕ್ಟರವರು ಸರ್ಕಾರಕ್ಕೆ ಬರೆದು ಸಾರಾಯಿ ಭಟ್ಟಿ ಇಳಿಸಲು ಮೂಲ ಕಾರಣರಾದವರನ್ನು ಅನುಮಾನದ ಮೇಲೆ ಬಂಧಿಸುವ ಅಧಿಕಾರವನ್ನು ಪಡೆಯಬೇಕು" ಎಂಬುದಾಗಿ 22 ನೆಯ ತಾ॥ ಸೇರಿದ ಸಭೆಯಲ್ಲಿ ಶ್ರೀ ಕೇಶವರಾಯರು ಕಲೆಕ್ಟರರಿಗೆ ಸೂಚನೆ ಮಾಡಿದರು. ಶ್ರೀ ಟೇಕೂರರು "ನಾವು ಸರ್ಕಾರಕ್ಕೆ ಈ ಪ್ರಕಾರ ಪ್ರಾಂತೀಕ ಸಮಿತಿಯಲ್ಲಿ ಸೂಚಿಸಿದ್ದೇವೆ" ಎಂದು ಹೇಳಿದರು. ಸಾರ್ವಜನಿಕ ಕಾರ್ಯಕರ್ತರ ಸಹಕಾರವು ಈ ಕಾರ್ಯಗಳಲ್ಲಿ ಹೆಚ್ಚು ಹೆಚ್ಚಾಗಿ ಬೇಕೆಂದು ಕಲೆಕ್ಟರವರು ಕೋರಿದರು.

ಚನ್ನಹಳ್ಳಿ ತಾಂಡ

(ಹಡಗಲಿ)

ನವಂಬರ ತಿಂಗಳಲ್ಲಿ ತಾಂಡದ ಹಟ್ಟಿಗಳು ಸುಟ್ಟುಹೋದವು. ಅಂದಿನಿಂದ ಸರ್ಕಾರದ ಸಹಾಯಕ್ಕಾಗಿ ಕೇಳುತ್ತಿದ್ದಾರೆ ಇವರಿಗೆ ಸಹಾಯಬೇಡವೆಂದೂ ಮನೆಕಟ್ಟಿಕೊಳ್ಳಲು ಜಿಂಕ್ ಶೀಟ್ ಕೊಟ್ಟರೆ ಸಾಕೆಂದೂ ತಹಶೀಲ್ದಾರರು ಕಲೆಕ್ಟರವರಿಗೆ ವರದಿಮಾಡಿರುವಂತೆ ಕಾಣುತ್ತದೆ. ಈ ತಾಂಡಕ್ಕಾಗಿ 200 ಜಿಂಕ್ ಶೀಟ್‌ಗಳನ್ನು ಕಲೆಕ್ಟರವರು ಸ್ಯಾಂಕ್ಷನ್ ಮಾಡಿದ್ದಾರೆ

ಮಹಾತ್ಮ ಗಾಂಧಿ ಕೊಲೆಯ ಕಟ್ಲೆಯ ಸರ್ವ ವೆಚ್ಚವನ್ನು ಭಾರತ ಸರ್ಕಾರವೇ ವಹಿಸಲಿರುವದೆಂದು ಪ್ರಕಟನೆಯಾಗಿದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—:0:—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ನೂರಕ್ಕೆ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ನೂರಕ್ಕೆ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿಸಿ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ನೂರಕ್ಕೆ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಕ್ಕೆ ಕ್ರಯ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಳದವರಿಂದ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡ್‌ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:– ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ. ಉನ್ನತ—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ. 28—3—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಒಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ.—
ಟಿ. ಬಿ. ಕೇಶವರಾವ್.

ವರ್ಷ ೧೩ | ಸೋಮವಾರ ೧೦ ಏಪ್ರಿಲ್ ೧೯೪೮ | ಸಂಚಿಕೆ ೧೩

ವಿದೇಶೀಯ ಉದ್ಯಮಗಳಿಂದ ರಾಷ್ಟ್ರಕ್ಕೆ ಗಂಡಾಂತರವಿ[illegible]

ಮುಂದುವರಿಯುತ್ತ ಅವರ ಈ ರೀತಿಯಾಗಿ ಹೇಳಿದರು, "ಈ ಧೋರಣವು ಕಾರ್ಯಕಾರಿಯಾಗುವಂತೆ ಶಾಸನ ಬದ್ಧವಾದ ಏರ್ಪಾಡನ್ನು ಮಾಡುವುದು ಮಸೂದೆಯ ಉದ್ದೇಶವಾಗಿದೆ. ಔದ್ಯೋಗಿಕ ನ್ಯಾಯ ನಿವಾರಣ ಮಸೂದೆಯಲ್ಲಿ ಕೂಡ ತಿದ್ದುಪಡೆಯಾಗುವದು. ದೇಶದ ಔದ್ಯೋಗಿಕಗಳಲ್ಲಿ ಈ ಶಾಸನವು ಮಹತ್ವದ್ದಾಗುವದು. ವ್ಯವಸಾಯ, ವಿದ್ಯಾಭ್ಯಾಸ, ಆರೋಗ್ಯ ಮುಂತಾದವುಗಳನ್ನು ಲಕ್ಷಿಸದೆ ಹೋದಲ್ಲಿ ದೇಶದಲ್ಲಿ ಸಾರ್ವತ್ರಿಕವಾದ ಅಭಿವೃದ್ಧಿಯಾಗದೆ ಹೋಗುವದು ಈಗ ಹಾಗೆ ಮಾಡುವದು ಸಾಧ್ಯವಾಗದಿದ್ದರೂ ಶೀಘ್ರದಲ್ಲಿಯೇ ದೇಶದ ಶಾಂತಿ ಸಮೃದ್ಧಿಗೆ ಅನುಕೂಲವಾದ ಸೂಚನೆಗಳನ್ನು ಮಾಡಲು ಸರಕಾರಕ್ಕೆ ಸಾಧ್ಯವಾಗುವದೆಂದು ನನಗೆ ನಂಬಿಗೆಯಿದೆ

ಅಂಜಿಕೆ ಬೇಡ

ಸುಸಂಘಟಿತವಾದ ಹಾಗು ಕ್ರಮವಾದ ಅಭಿವೃದ್ಧಿ ಯೋಜನೆಯ ವಿಚಾರವು ದೇಶಕ್ಕೇನೂ ಹೊಸತಲ್ಲ. ಈಗಿನ ಮಸೂದೆಯಲ್ಲಿ ಕ್ರಾಂತಿಕಾರದ ಅಂಶವೇನೂ ಇಲ್ಲ. ಈ ವಿಚಾರದಲ್ಲಾದರೂ ಭಯ-ಸಂದೇಹಗಳನ್ನು ತಾಳಬೇಕಾಗಿಲ್ಲ. ಕಳೆದ ವರ್ಷ ಸರಕಾರವು ತನ್ನ ಹೊಣೆಯನ್ನು ಈ ಸಭೆ ಅಂಗೀಕರಿಸಲು ಸಮರ್ಥವಾಗುವಂತೆಯೂ ಈ ಧೋರಣವು ಯಶಸ್ವಿಯಾಗಿ ಕಾರ್ಯಕಾರಿಯಾಗುವಂತೆಯೂ ಕೆಲವೊಂದು ಅಧಿಕಾರವನ್ನು ಈ ಮಸೂದೆಯು ಸರಕಾರಕ್ಕೆ ಕೊಡುತ್ತದೆ. ಕೆಲವೊಂದು ಅಖಿಲ ಭಾರತ ಉದ್ಯಮಗಳನ್ನು ಆಳಿಸಿಕೊಂಡು ಅವುಗಳ ನಿಯಮಿತ ಪ್ರಗತಿಯನ್ನು ಸಾಧಿಸುವ ವಿಧಾನವನ್ನು ಏರ್ಪಡಿಸುವದು. ಮಸೂದೆಯ ಉದ್ದೇಶವಾಗಿದೆ. ಉದ್ಯಮಗಳನ್ನಾರಿಸುವಾಗ ದೇಶದ ಆವಶ್ಯಕತೆ, ಕಚ್ಚಾಮಾಲಿನ ವಿಚಾರಗಳನ್ನು ಗಮನಿಸಲಾಗಿದೆ. ಆದರೆ ಎಲ್ಲ ಉದ್ಯಮಗಳ ವಿಚಾರದಲ್ಲೂ ಈ ನೀತಿಯನ್ನು ಅನುಸರಿಸುವದು ಸಾಧ್ಯವಾಗುವಂತಿಲ್ಲವಾದ್ದರಿಂದ ಯಾವದೊಂದು ಉದ್ಯಮವನ್ನು ಈ ಯಾದಿಯಿಂದ ತೆಗೆದುಹಾಕಲು ಮಸೂದೆಯು ಸರಕಾರಕ್ಕೆ ಅಧಿಕಾರವನ್ನೀಯುತ್ತದೆ.

ಹೆಚ್ಚಿನ ಅಧಿಕಾರ

ಮಸೂದೆಯು ಸರಕಾರಕ್ಕೆ ವ್ಯಾಪಕವಾದ ಅಧಿಕಾರವನ್ನೀಯುವದೆಂದು ಟೀಕೆ ಮಾಡಲಾಗಿದೆ. ಮಸೂದೆಯನ್ನು ಸಿದ್ಧಪಡಿಸುವಾಗ ಪ್ರಾಂತ ಸರಕಾರಗಳು ಮತ್ತು ಉದ್ಯಮಗಳ ಮಾಲಕರು ಹಾಗೂ ಕೂಲಿಕಾರರ ಪ್ರತಿನಿಧಿಗಳ ಸಂಗಡ ವಿಚಾರ ವಿನಿಮಯ ಮಾಡಲಾಗಿದೆ ಪರಿಶೀಲಕ ಸಮಿತಿಯು ಹಾಗು ಸಭೆಯ ಸೂಚನೆಗಳನ್ನು ಸರಕಾರವು ಗಮನಿಸುವದು.

ಈ ಮಸೂದೆಯ ಮೂಲಕ ಸರಕಾರವು ಹೊರುತ್ತಿರುವ ಗಂಭೀರ ಹೊಣೆಯ ಸಂಪೂರ್ಣ ಅರಿವು ನನಗಿದೆ ದೇಶದ ಸಂಪತ್ತಿನ ಉಪಯೋಗವನ್ನು ಶೀಘ್ರದಲ್ಲಿ ಮಾಡಿಕೊಳ್ಳಲು ಸರಕಾರವು ಪ್ರಯತ್ನಿಸಿದ್ದು ಸಕಲರೂ ತಂತಮ್ಮ ವೈಯಕ್ತಿಕ ರಾಜಕೀಯ ತತ್ವಧ್ಯೇಯಗಳನ್ನು ಬದಿಗಿರಿಸಿ ಸರಕಾರದೊಡನೆ ಸಹಕರಿಸುವರೆಂದು ಆಶಿಸಿದ್ದೇನೆ.

ಮಹಾಶಾಸನ ಸಭೆಯಲ್ಲಿ ಔದ್ಯೋಗಿಕ ಮಸೂದೆಯ ಬಗ್ಗೆ ಚರ್ಚೆ.

ದೇಶದ ಕೆಲವೊಂದು ಉದ್ಯಮಗಳ ನಿಯಂತ್ರಣ ಹಾಗೂ ಪ್ರಗತಿಯ ವಿಚಾರದಲ್ಲಿ ಸರಕಾರಕ್ಕಧಿಕಾರವೀಯುವ ಮಸೂದೆಯನ್ನು ಪರಿಶೀಲಕ ಸಮಿತಿಗೊಪ್ಪಿಸಬೇಕೆಂದು ಮಹಾಶಾಸನ ಸಭೆಯಲ್ಲಿಂದು ಸೂಚಿಸುತ್ತ ಹಿಂದುಸ್ಥಾನ ಸರಕಾರದ ಉದ್ಯೋಗ ಮಂತ್ರಿಗಳಾದ ಡಾ. ಶ್ಯಾಮಪ್ರಸಾದ ಮುಕರ್ಜಿಯವರು "ಕಳೆದ ವರ್ಷ ಎಪ್ರಿಲ್ ತಿಂಗಳಲ್ಲಿ ಸರಕಾರವು ಸಾರಿದ ಔದ್ಯೋಗಿಕ ನೀತಿಯನ್ನು ಕಾರ್ಯಕಾರಿಯನ್ನಾಗಿ ಮಾಡಬೇಕೆಂಬುದೇ ಮಸೂದೆಯ ಉದ್ದೇಶವಾಗಿದೆ" ಎಂದು ಹೇಳಿದರು.

ಸದಸ್ಯರ ಅಭಿಪ್ರಾಯ

ಅ. ಭಾ. ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಹರಿಹರನಾಥ ಶಾಸ್ತ್ರಿಯವರು ಮಸೂದೆಗೆ ಪಾಠಿಂಬಲವನ್ನಿತ್ತರು ಅದರಂತೆ ಕೆಲವು ವಿಚಾರಗಳನ್ನು ಸರಕಾರವು ಗಮನಿಸಬೇಕೆಂದೂ ಹೇಳಿದರು. "ನಿಯಂತ್ರಣವು ನಮ್ಮ ದೇಶದಲ್ಲಿ ಸಫಲಕಾರಿಯಾಗಿಲ್ಲ ಏಕೆಂದರೆ ಅದು ಹಂಚುವಿಕೆಗೆ ಮಾತ್ರ ಸಂಬಂಧಪಟ್ಟಿರುವದಲ್ಲದೆ ಉತ್ಪಾದನೆಗೆ ಬಂಧಪಟ್ಟಿಲ್ಲ ಆ ಪ್ರಕಾರ ಉದ್ಯಮಗಳ ವೆಚ್ಚದ ವಿಚಾರವೂ ಗಮನಿಸಲ್ಲಿಲ್ಲ. ಕೂಲಿಕಾರರನ್ನು ಕಡಮೆ ಮಾಡಿದ್ದರೂ ಆಡಳಿತ ವರ್ಗದವರ ಸಂಖ್ಯೆ ಬೆಳೆದಿದೆ ಅವರಿಗೆ ಕೈತುಂಬಾ ಸಂಬಳವೂ ದೊರೆಯುತ್ತಿದೆ. ವೆಚ್ಚದ [illegible] ಅಂಶಗಳು ಅವಶ್ಯಕವಾದವುಗಳಾಗಿವೆ. ಇವೆಲ್ಲ ವಿಚಾರಗಳನ್ನು ಗಮನಿಸದೆ ದೇಶದ ಔದ್ಯೋಗಿಕ ಪ್ರಗತಿಯಾಗಲಾರದು" ಎಂದು ಅವರು ಹೇಳಿದರು.

ಡಾ. ಪಂಜಾಬರಾವ ದೇಶಮುಖರು ಮಸೂದೆಯನ್ನು ಸ್ವಾಗತಿಸುತ್ತ "ಯೋಗ್ಯವಾದ ಅಧಿಕಾರ ವಿರದ ಹೊರತು ಭಾರತದಲ್ಲಿ ಔದ್ಯೋಗಿಕ ಹಾಗೂ ಆರ್ಥಿಕ ಪ್ರಗತಿಯಾಗಲು ಸಾಧ್ಯವಿಲ್ಲ. ನಿಜವಾದ ಅಧಿಕಾರವನ್ನು ಕೇಂದ್ರ ಸರಕಾರವು ಮಾತ್ರ ನಡಿಸಬಲ್ಲದು. ಆದಾದರೂ ಪೂರ್ಣ ರಾಷ್ಟ್ರೀಕರಣವಾಗಬೇಕು ಎಂದು ಬಾಯಿಯಿಂದ ಹೇಳುವದರಿಂದ ಅಪಾಯ ಸಂಭವಿಸುವದೇ ಹೊರತು ಕಲ್ಯಾಣವೇನೂ ಆಗುವದಿಲ್ಲ. ಆದ್ದರಿಂದ ಮಸೂದೆಯು ಯೋಗ್ಯರೀತಿಯಿಂದ ಕಾರ್ಯಕಾರಿಯಾಗುವಂತೆ ಪ್ರಯತ್ನಿಸಬೇಕು ಎಂದು ಅಭಿಪ್ರಾಯಪಟ್ಟರು.

ವಿ. ಮೋದಿಯವರು ಮಸೂದೆಯ ತತ್ವವನ್ನು ಒಪ್ಪಿಕೊಂಡ "ಉದ್ದಿಮೆದಾರರು ಮತ್ತು ಸರಕಾರದ ನಡುವೆ ಇರುವ ಭಿನ್ನಾಭಿಪ್ರಾಯವೇನೆ ಸರಕಾರದ ಈ ಯೋಜನೆಗಳು ತೀರ ಮುಂದುವರಿದವುಗಳಾಗಿವೆ. [illegible] ಮಸೂದೆಯಿಂದ ಸರಕಾರಕ್ಕೆ ನಿಯಂತ್ರಣ ಹಾಗು ಉದ್ಯಮಗಳನ್ನು ಕ್ರಮಗೊಳಿಸಲು ಏನನ್ನೂ ಮಾಡಲು ಅಧಿಕಾರವು ಪ್ರಾಪ್ತವಾಗುವದು. ಇದೇ ಸರಕಾರ ಔದ್ಯೋಗಿಕ ಧೋರಣೆಯಾಗಿರುವಲ್ಲಿ ಇದು ಉದ್ದಿಮೆದಾರರಿಗೆ ಅಪಾಯಕಾರಕವಾಗಿರುವದೆಂದು ಹೇಳಬಯಸುವೆ. ಆದ್ದರಿಂದ ಪರಿಶೀಲಕ ಸಮಿತಿಯು ಮಸೂದೆಯಲ್ಲಿ ಯೋಗ್ಯ ಬದಲಾವಣೆಗಳನ್ನು ಮಾಡುವದೆಂದು ಆಶಿಸುವೆ" ಎಂದರು

ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು "ಈ ಮಸೂದೆಯು ವಿಷಯವು ಎಲ್ಲ ಉದ್ಯಮಗಳಿಗೆ ಸಂಬಂಧಿಸುವದರಿಂದ ಪ್ರಾಂತಿಕ ಉದ್ಯಮಗಳಿಗೆ ತೀರ ಅಪಾಯವಾಗುವದು. ಪ್ರಾರಂಭದಲ್ಲಿ ಇಪ್ಪತ್ತೈದು ಉದ್ಯಮಗಳ ವಿಷಯವಾಗಿ ವಿಚಾರಿಸುವ ಬದಲು, ಎಂಟು ಉದ್ಯಮಗಳನ್ನು ಸ್ವಾಧೀನಪಡಿಸಿಕೊಳ್ಳಬೇಕು. ಎಲ್ಲ ಉದ್ಯಮಗಳನ್ನು ಕೇಂದ್ರವು ನಿಯಂತ್ರಿಸುವದರಿಂದಲೇ ಆರ್ಥಿಕ ಪ್ರಗತಿಯಾಗುವದೆಂಬ ವಿಷಯವನ್ನು ನಾನು ಒಪ್ಪಿಕೊಳ್ಳುವೆ. ಆದರೆ ಕೇಂದ್ರ ಸರಕಾರವು ಆಡಳಿತ ದೃಷ್ಟಿಯಿಂದ ಎಲ್ಲ ಉದ್ಯಮಗಳನ್ನು ನಿಯಂತ್ರಿಸಲು ಸಮರ್ಥವಾಗಿಲ್ಲವೆಂದು ನನಗೆ ಅನಿಸುತ್ತಿದೆ" ಎಂದು ಹೇಳಿದರು.

ಪಂಡಿತ ಹೃದಯನಾಥ ಕುಂಜ್ರು ಅವರು ಮುಂದಿನ ಐದು ವರ್ಷಗಳ ಅವಧಿಯಲ್ಲಿ ಔದ್ಯೋಗಿಕ ಪ್ರಗತಿಯನ್ನು ಸಾಧಿಸಲು ಸರಕಾರವು ಯಾವ ಯೋಜನೆಗಳನ್ನು ಕೈಕೊಂಡಿದೆ ಎಂದು ಕೇಳಿದರು.

ಭಾರತ ವಿದೇಶೀ ಧೋರಣೆಯ ಬಗ್ಗೆ ಮುಖ್ಯ ಮಂತ್ರಿಗಳು ಕೊಟ್ಟ ಹೇಳಿಕೆಯ ವಿಷಯವನ್ನೆತ್ತಿ ಪಂಡಿತ ಕುಂಜ್ರು ಅವರು "ಈ ಧೋರಣೆಯಿಂದ ರಾಷ್ಟ್ರದ ಅರ್ಥಶಾಸ್ತ್ರದಲ್ಲಿ ವಿದೇಶಿಯರಿಗೆ ತಕ್ಕಮಟ್ಟಿಗೆ ನಿಯಂತ್ರಣವನ್ನು ಪಡೆಯುವರೆಂದು ನನಗೆ ಅನಿಸುತ್ತದೆ. ಈಗಿನ ಮಟ್ಟಿಗೆ ಹೇಳಬೇಕೆಂದರೆ, ವಿದೇಶಿಯ ಬಂಡವಾಳ ತಾಂತ್ರಿಕ ಜ್ಞಾನ ಹಾಗು ಅನುಭವಗಳಿಲ್ಲದೆ ನಮ್ಮ ಔದ್ಯೋಗಿಕ ಪ್ರಗತಿಯು ಸರಿಯಾಗಿ ಆಗುವದಿಲ್ಲವೆಂಬದು ನನಗೆ ತಿಳಿದಿದೆ ಯಾರಾದರೂ, ವಿದೇಶಿಯ ಉದ್ದಿಮೆದಾರರು ಯಾವ ಯಾವ ಉದ್ದಿಮೆಗಳಲ್ಲಿ ಯಾವರೀತಿಯಿಂದ ಪಾಲುಗಾರರಾಗುವರೆಂಬ ವಿಷಯವನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಕೇಂದ್ರ ಸರಕಾರದ ಅಧೀನದಲ್ಲಿರುವ ಮುಖ್ಯ ಉದ್ಯಮಗಳಲ್ಲಿ ವಿದೇಶಿಯ ಬಾಂಡವಲು ತೊಡಗದಂತೆ ನೋಡಿಕೊಳ್ಳಬೇಕು ಎಂದರು

ಮಂತ್ರಿಗಳ ಉತ್ತರ

ಚರ್ಚೆಗೆ ಉತ್ತರ ಕೊಡುತ್ತ ಉದ್ಯೋಗ ಮಂತ್ರಿಗಳಾದ ಡಾ. ಶಾಮಪ್ರಸಾದ ಮೂಕರ್ಜಿಯವರು ಈ ರೀತಿ ಹೇಳಿದರು.

"ಔದ್ಯೋಗಿಕ ತಂಟೆಯ ಕಾರಣಗಳಿಂದ ಕೇಂದ್ರ ಸರಕಾರವು ಉದ್ಯಮಗಳ ಕಾರ್ಯವನ್ನು ನಿಯಂತ್ರಿಸಲು ಇಚ್ಛಿಸುವದೇನೆಂದು ಡಾ. ಹರಿಹರನಾಥ ಶರ್ಮರು ಕೇಳುತ್ತಾರೆ. ಆದರೆ ಈ ವಿಷಯವು ಸ್ಥೂಲಮಾನವಾಗಿ ಮಸೂದೆಯಲ್ಲಿಯೇ ಒಳಗೊಂಡಿರುವದು. ಕೇಂದ್ರದಿಂದ ನಿಯಂತ್ರಿಸಲ್ಪಟ್ಟ ಉದ್ಯಮಗಳನ್ನು ನಡೆಸುವಲ್ಲಿ ಪ್ರಾಂತಿಕ ಸರಕಾರಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಶ್ರೀ ಕೃಷ್ಣಮಾಚಾರಿಯವರು ಕೇಳುತ್ತಾರೆ. ನಿಜವಾದ ಸಂಗತಿಯೆಂದರೆ, ಕೇಂದ್ರವು ಪ್ರಾಂತಿಕ ಸರಕಾರಗಳನ್ನು ಉದ್ಯಮಗಳನ್ನು ಸಾಗಿಸಲು ಪ್ರತಿಬಂಧಿಸುವದೇ ಇಲ್ಲ ಆದರೆ ಪ್ರಾಂತಿಕ ಸರಕಾರಗಳು, ಹಾಗೆ ಮಾಡುವ ಮೊದಲು, ಕೇಂದ್ರ ಸರಕಾರದ ಒಪ್ಪಿಗೆ ಪಡೆಯಬೇಕು. ಇದು ಯೋಗ್ಯವಾದ ರಕ್ಷಣೆಯೆಂದು ತಿಳಿಯಬಹುದಾಗಿದೆ.

"ವಿದೇಶಿ ಬಂಡವಲದ ಬಗ್ಗೆ ಹೇಳಬೇಕೆಂದರೆ ಈ ಬಗ್ಗೆ ಹೊರಟ ಮುಖ್ಯ ಮಂತ್ರಿಗಳ ಹೇಳಿಕೆಯು ಸ್ಪಷ್ಟವಾಗಿದೆ. ವಿದೇಶಿಯ ಬಂಡವಲಿನ ವಿರುದ್ಧವಾಗಲಿ, ಅನುಕೂಲವಾಗಲಿ, ಯಾವ ರೀತಿಯ ಭೇದಭಾವವಿರಕೂಡದೆಂದು ಅದರಲ್ಲಿ ಹೇಳಲಾಗಿದೆ. ಅದರಂತೆ ಯಾವ ರೀತಿಯ ವಿಶೇಷ ಸವಲತ್ತುಗಳನ್ನು ಕೊಡಲಾಗುವದಿಲ್ಲ. ಪ್ರತಿಬಂಧವನ್ನೂ ಮಾಡುವದಿಲ್ಲ ವಿದೇಶಿ ಭಾಂಡವಲಿಗೆ ಒಪ್ಪಿಗೆ ಕೊಟ್ಟರೆ ರಾಷ್ಟ್ರಕ್ಕೆ ಅಪಾಯವಾಗುವದೆಂಬ ಪ್ರಕಾರ ಟೀಕೆಯನ್ನು ನಾನು ಒಪ್ಪುವದಿಲ್ಲ. ನಮ್ಮ ರಾಷ್ಟ್ರವು ಈಗ ಸ್ವತಂತ್ರವಾಗಿರುವದರಿಂದ



ಇಲ್ಲಿ ಕಾರ್ಯಮಾಡಲಿರುವ ಎಲ್ಲ ವಿದೇಶಿ ಉದ್ಯಮಗಳಿಗೆ ನಾವು ಅಪ್ಪಣೆಯನ್ನು ಕೊಡಬೇಕಾಗುವದು. ಆದರೆ ವಿದೇಶಿಯ ಉದ್ಯಮಗಳ ಅಸ್ತಿತ್ವದಿಂದ ನಮ್ಮ ರಾಷ್ಟ್ರದ ಪ್ರಗತಿಗೆ ಅಡ್ಡ ಬರಲಾರದೆಂದು ನಾನು ಸಭೆಗೆ ಆಶ್ವಾಸನ ಕೊಡುತ್ತೇನೆ'.

ಹೊಸಪೇಟೆ

ದಿನಾಂಕ 4-4-49 ಸಾಯಂಕಾಲ 6 ಗಂಟೆಗೆ ಐ. ಯಸ್. ಆರ್. ಲೇಬರ್ ಯೂನಿಯನ್ ಅಧ್ಯಕ್ಷರಾದ ಶ್ರೀ ಡಿ. ಮುದ್ದು ಕೃಷ್ಣ ಯವರ ಅಧ್ಯಕ್ಷತೆಯಲ್ಲಿ ಯೂನಿಯನ್ ಕಾರ್ಯಕಾರಿ ಸಮಿತಿಯ ಅವಸರದ ಸಭೆಯು ಸೇರಿ ಈ ಕೆಳಗಿನ ಠರಾವುಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

1. ಸಮಾಜವಾದಿ ಮತ್ತು ಕೂಲಿಕಾರ ಮುಂದಾಳುಗಳಾದ ಭಾಯಿ ಜಯಪ್ರಕಾಶ ನಾರಾಯಣರೂ ಮತ್ತು ಅವರ ಪತ್ನಿ ಶ್ರೀಮತಿ ಪ್ರಭಾವತಿ ದೇವಿಯವರೂ ಕಾರಿನ ಅಪಘಾತದಿಂದ ಪಾರಾದುದಕ್ಕೆ ಅಭಿನಂದನೆಯನ್ನರ್ಪಿಸುತ್ತ ಅವರಿಗೆ ಬೇಗನೇ ಆಯುರಾರೋಗ್ಯವನ್ನೀಯಲೆಂದು ಈ ಸಭೆಯು ಪರಮಾತ್ಮನನ್ನು ಪ್ರಾರ್ಥಿಸುತ್ತದೆ.

2. ಡಾಲ್ಮಿಯಾ ನಗರದ ಕೂಲಿಕಾರ ಮುಖಂಡರಾದ ಶ್ರೀ ಬಸವನಸಿಂಗ್ ಯವರು ಪ್ರಾರಂಭಿಸಿದ ಉಪವಾಸವು ಯಶಸ್ವಿಯಾಗಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತಾ ಅವರ ಬೇಡಿಕೆಗಳನ್ನು ಬೇಗನೇ ಪೂರೈಸಿ ಅವರ ಪ್ರಾಣವನ್ನುಳಿಸಬೇಕೆಂದು ಇಂಡಿಯಾದ ಪ್ರಧಾನ ಮಂತ್ರಿಗಳಾದ ಶ್ರೀ ಜವಹರಲಾಲ ನೆಹರವರನ್ನು, ಕೂಲಿಕಾರ ಮಂತ್ರಿಗಳಾದ ಶ್ರೀ ಜಗಜೀವನರಾಮ ಯವರನ್ನು ಈ ಸಭೆಯು ಕೇಳಿಕೊಳ್ಳುತ್ತಿದೆ

— —

— ಶ್ರೀ ಕೆ ಯಸ್. ವೇದಾಂತಂ — ಕಳೆದ 30 ವರ್ಷಗಳಿಂದ ಮ್ಯುನಿಸಿಪಲ್ ಹೈಸ್ಕೂಲಿನಲ್ಲಿ ಅಧ್ಯಾಪಕವೃತ್ತಿಯನ್ನು ಯಶಸ್ವಿಯಾಗಿ ನಿರ್ವಹಿಸಿ, ಮುಖ್ಯೋಪಾಧ್ಯಾಯಸ್ಥಾನದಿಂದ ನಿವೃತ್ತರಾದ ಶ್ರೀ ಕೆ. ಯಸ್. ವೇದಾಂತಂ ರವರಿಗೆ ಶಾಲೆಯ ಅಧ್ಯಾಪಕರೂ ವಿದ್ಯಾರ್ಥಿಗಳೂ 8-4-49 ನೆಯ ದಿನಾಂಕ ಸಾಯಂಕಾಲ ಶ್ರೀ ಆರ್. ಟಿ. ಭೀಮಾಚಾರ್ಯರ ಅಧ್ಯಕ್ಷತೆಯಲ್ಲಿ ಮಾನಪತ್ರವನ್ನರ್ಪಿಸಿದರು. ಅವರ ಭಾವಚಿತ್ರದ ಅನಾವರಣವಾಗಿ ಭಾಷಣಕಾರರನೇಕರು ಅವರ ಗುಣಗಳನ್ನು ಹೊಗಳಿದರು. ಶ್ರೀ ವೇದಾಂತಂರವರು ಸೂಕ್ತವಾದ ಉತ್ತರವಿತ್ತು, ತಮ್ಮ ಕೃತಜ್ಞತಾಪೂರ್ವಕ ವಂದನೆಗಳನ್ನರ್ಪಿಸಿದರು.

ತ್ರಿಮೂರ್ತಿಗಳ ವರದಿ

ಪ್ರಾಂತನಿರ್ಮಾಣ

ಮದ್ರಾಸಿನ ಮಂತ್ರಿಗಳಪ್ರತಿಕ್ರಿಯೆ

ಔದ್ಯೋಗಿಕ ಮಂತ್ರಿ

ಎಚ್. ಸೀತಾರಾಮ ರೆಡ್ಡಿ

ಮದ್ರಾಸ್ ನಗರದಲ್ಲಿ ವಾಸಿಸುತ್ತಿರುವ ಆಂಧ್ರರ ಅಭಿಪ್ರಾಯ ಹಾಗು ಪ್ರತಿಕ್ರಿಯೆಯನ್ನು ಗಣಿಸದೆ ಮದ್ರಾಸ ನಗರದ ಭವಿತವ್ಯದ ಬಗ್ಗೆ ಯಾವ ನಿರ್ಣಯವನ್ನು ತೆಗೆದುಕೊಳ್ಳಲಾಗದು. ತಮಿಳುನಾಡಿನಕ್ಕಿಂತ ಆಂಧ್ರ ಸಂಸ್ಕೃತಿಯೆ ಮದ್ರಾಸಿನಲ್ಲಿ ಹೆಚ್ಚಾಗಿ ಕಂಡುಬರುತ್ತಿದೆ.

ಹಣಕಾಸಿನ ಮಂತ್ರಿ

ಬಿ. ಗೋಪಾಲರೆಡ್ಡಿ

ಆಂಧ್ರರು ಮದ್ರಾಸು ನಗರದ ತಮ್ಮ ಹಕ್ಕನ್ನು ಬಿಡಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿರ್ಣಯಿಸಿದರೆ, ಆಂಧ್ರರು ಆ ನಿರ್ಣಯಕೊಪ್ಪಿ ಅದರಂತೆ ನಡೆದುಕೊಳ್ಳುವರು. ಡಾ. ಪಟ್ಟಾಭಿಯವರಿಗೆ ಮದ್ರಾಸ ನಗರದ ಇತಿಹಾಸ ಹಾಗೂ ಅಂಕೆ ಸಂಖ್ಯೆಗಳು ಗೊತ್ತಿವೆ.

ಆಂಧ್ರ ಪ್ರಾಂತ ಹಾಗೂ ಮದ್ರಾಸು ನಗರ ಎರಡೂ ಏಕಕಾಲಕ್ಕೆ ಆಂಧ್ರರಿಗೆ ಸಿಗಲಾರವು. ಏಕೆಂದರೆ ತಮಿಳರು ಮದ್ರಾಸು ನಗರವನ್ನು ಕೇಳುತ್ತಿದ್ದಾರೆ.

ಆಂಧ್ರ ಪ್ರಾಂತ ಮಾಡಿಕೊಳ್ಳುವ ಆತುರದಲ್ಲಿ ಆಂಧ್ರರು ಮದ್ರಾಸು ನಗರಕ್ಕಿರುವ ತಮ್ಮ ಹಕ್ಕನ್ನು ಬಿಟ್ಟುಕೊಡಬಾರದು ಎಂದು ಸ್ಥಾನಿಕ ಸ್ವರಾಜ್ಯ ಮಂತ್ರಿ ಕೆ. ಚಂದ್ರಮೌಳಿಯವರು ಹೇಳಿದರು.

ಆಂಧ್ರ ಪ್ರಾಂತದಲ್ಲಿ ರಾಯಲಸೀಮೆಯವರಿಗೆ ಯೋಗ್ಯ ಹಕ್ಕು ಹಾಗೂ ಶಾಸನ ಸಭೆಯಲ್ಲಿ ಯೋಗ್ಯ ಪ್ರಾತಿನಿಧ್ಯ ಕೊಡಬೇಕೆಂದು ಪಾನನಿರೋಧ ಮಂತ್ರಿ ಸಂಜೀವರೆಡ್ಡಿಯವರು ರಾಯಲಸೀಮೆ ಪರವಾಗಿ ಹೇಳಿದರು.

ತಮಿಳು, ಕೇರಳ, ಕರ್ನಾಟಕದವರ ಬೇಡಿಕೆಗಳನ್ನು ಅನುಕ್ರಮವಾಗಿ ಈಡೇರಿಸುವುದು ಸಾಧ್ಯವಿಲ್ಲೆಂದು ವರದಿಯಿಂದ ಕಂಡುಬಂದರೂ ಆಂಧ್ರಪ್ರಾಂತ ರಚನೆಗೆ ಒಪ್ಪಿಗೆ ಸಿಕ್ಕಿದ್ದು ಯೋಗ್ಯವೇ ಸರಿ ಎಂದು ತಮಿಳುನಾಡಿನ ಮಂತ್ರಿ ಭಕ್ತವತ್ಸಲಂರು ಹೇಳಿದರು.

THE NAVA BHARAT
ನವಭಾರತ
ಸಂಪಾದಕ-ಟಿ.ವಿ.ಕೀಲವರಾವ್

11 ಸೋಮವಾರ ಏಪ್ರಿಲ್ 1949

ಆಂಧ್ರ ಪ್ರಾಂತ ನಿರ್ಮಾಣವಾಗುವುದೇ?

ಒಂದೇ ಪ್ರಾಂತ ನಿರ್ಮಾಣವು ನ್ಯಾಯ ಸಮ್ಮತವಲ್ಲ

ಅಖಿಲಭಾರತ ಕಾಂಗ್ರೆಸ ಸಮಿತಿಯು ಜಯಪುರ ಅಧಿವೇಶನದಲ್ಲಿ ಪಂಡಿತ ಜವಹರಲಾಲರ ನೆಹರು, ಸರ್ದಾರ ವಲ್ಲಭಭಾಯಿ ಪಟೇಲ, ಕಾಂಗ್ರೆಸ್ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯನವರನ್ನೊಳಗೊಂಡ ತ್ರಿಮೂರ್ತಿಗಳ ಸಮಿತಿಯು ರಚಿತವಾಗಿ ಭಾಷಾವಾರ ಪ್ರಾಂತನಿರ್ಮಾಣದ ವಿಷಯಕ್ಕೆ ತಮ್ಮ ನಿಶ್ಚಿತಾಭಿಪ್ರಾಯವನ್ನು ತಿಳಿಸಬೇಕೆಂದು ಆದೇಶಿಸಲಾಗಿತ್ತು. ಮಾರ್ಚ 31 ರೊಳಗಾಗಿ ಈ ವರದಿಯು ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ಅರ್ಪಿಸಲ್ಪಟ್ಟಿದ್ದು ತ್ರಿಮೂರ್ತಿಗಳು ಏಕಮತದ ನಿರ್ಣಯಕ್ಕೆ ಬಂದಿರುವರೆಂದು ಪ್ರಕಟವಾಗಿದೆ ಮದರಾಸಿನ ಹಿಂದೂ ಪತ್ರಿಕೆಯ ಪ್ರಕಾರಕ್ಕೆ ಆಂಧ್ರಪ್ರಾಂತವು ಶೀಘ್ರವಾಗಿ ನಿರ್ಮಿಸಲ್ಪಡುವ ಲಕ್ಷಣಗಳು ತೋರಿಬರುತ್ತಲಿವೆ. ಆಂಧ್ರಪ್ರಾಂತ ನಿರ್ಮಾಣಕ್ಕೆ ಗವರ್ನರ ಜನರಲ್‌ರ ಒಪ್ಪಿಗೆಯು 2 ತಿಂಗಳೊಳಗಾಗಿ ದೊರಕಿಸಲ್ಪಡಬಹುದೆಂದು ಹೇಳಲಾಗಿದೆ. ವಿಭಜನೆಯ ಭಾಗಗಳು ಒಂದೇ ಪ್ರಾಂತದಲ್ಲಿದ್ದು ಅಂತರ್ ಪ್ರಾಂತೀಯ ಆಡಳಿತಗಳಿಗೆ ತೊಂದರೆಯಾಗದಂತೆ ಪರಸ್ಪರ ಘರ್ಷಣೆ ಸರಹದ್ದಿನ ನಿರ್ಣಯದ ತಂಟೆಗಳಿಗೊಳಗಾದಂತೆ ನವೀನ ವಿಭಜನೆಗೊಳಗಾಗಿ ರಚಿತವಾಗಲು ಸಧ್ಯವಿರುವ ಪ್ರಾಂತವೆಂದರೆ ಆಂಧ್ರವೊಂದೇ ಘೋಷಿಸಲಾಗಿದೆ ಇದು ನಿಜವಿರಬಹುದು.

ಆದರೆ ಪ್ರಸ್ತುತ ಈ ನಿರ್ಣಯದಿಂದ ಕರ್ನಾಟಕ ಪ್ರಾಂತದಲ್ಲಿ ವಿಶೇಷ ಅಶಾಂತಿಯಾಗದಿರದು. ಬಳ್ಳಾರಿ ಜಿಲ್ಲಾ ವಿಭಜನೆಯಾಗುವುದಾದರೆ ಅದನ್ನಾರೂ ಒಪ್ಪಲಾರರು, ಎಲ್ಲಾ ಪ್ರಾಂತಗಳೂ ಒಮ್ಮೆಲೆ ರಚನೆಯಾಗಬೇಕಾದುದು ಯೋಗ್ಯವೂ ಪ್ರಜಾತಂತ್ರ ಸೂತ್ರಕ್ಕನುಗುಣವೂ ಆಗಿದೆ ಈ ಕಷ್ಟಗಳನ್ನು ಯಾವಾಗಲಾದರೂ ಎದುರಿಸಲೇ ಬೇಕಲ್ಲವೆ? 'ಶುಭಸ್ಯ ಶೀಘ್ರಂ' ಎಂಬಂತೆ ಈಗಲೇ ಸಮಸ್ಯೆಯ ಪರಿಹಾರವು ಒಟ್ಟಿಗೆ ಮಾಡಬೇಕೆಂದು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಕರ್ನಾಟಕದಲ್ಲಿರುವ ಕಷ್ಟಗಳು ಇನ್ನಾವ ಪ್ರಾಂತಕ್ಕೂ ಇರಲಿಕ್ಕಿಲ್ಲವೆಂದು ಹೇಳುವವರಾದರೂ ದಕ್ಷಿಣ ಭಾರತದ ಈ ಕಠಿಣ ಸಮಸ್ಯೆಯನ್ನು ಪರಿಹರಿಸಿ ಅಖಂಡಭಾರತದ ಪ್ರಾಂತ ಪ್ರಾಂತದ ನಿರ್ಮಾಣವಾಗುವದು ಈಗಿನ ಸಂದರ್ಭದಲ್ಲಿ ಅತ್ಯಂತಾವಶ್ಯಕವಾಗಿದೆ. ಹಾಗಿಲ್ಲವೆ ಒಂದೇ ಒಂದು ಪ್ರಾಂತದ ನಿರ್ಮಾಣದಿಂದ ಮತ್ತೆ ಅಶಾಂತಿಯು ಜನತೆಗೆ ಎಷ್ಟೋ ಹೊಸ ತೊಡಕುಗಳುಂಟಾಗುವವೆಂದು ನಾವು ಎಚ್ಚರಿಸುತ್ತೇವೆ.

ಈಗ ಸಮಯವು ಅನುಕೂಲವಿಲ್ಲದಿದ್ದರೆ ಯಾವ ಪ್ರಾಂತದ ನಿರ್ಮಾಣದ ಗೊಡವೆಗೂ ವರಿಷ್ಠರು ಹೋಗಬಾರದೆಂದು ಸೂಚಿಸುತ್ತೇವೆ

ಮದರಾಸಿನ ನೂತನ ಮಂತ್ರಿವರ್ಗ

ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ ಪ್ರಧಾನಮಂತ್ರಿ
,, ಎಂ. ಮಾಧವಮೆನನ್
,, ಕೆ. ಚಂದ್ರಮೌಳಿ
,, ಹೆಚ್. ಸೀತಾರಾಮರೆಡ್ಡಿ
,, ಡಾಕ್ಟರ್ ಟಿ. ಎಸ್. ಎಸ್. ರಾಜನ
,, ಬಿ. ಗೋಪಾಲರೆಡ್ಡಿ
,, ಭಕ್ತವತ್ಸಲಂ,
,, ಎ. ಬಿ. ಶೆಟ್ಟಿ
,, ಎನ್. ಸಂಜೀವರೆಡ್ಡಿ
,, ಬಿ. ಪರಮೇಶ್ವರನ್ (ಹರಿಜನ)

ಕೊನೆಯವರಿಬ್ಬರು ಹೊಸಬರು ಇನ್ನುಳಿದ ಹೆಸರುಗಳನ್ನು ಮುಂದೆ ಪ್ರಕಟಿಸಲಾಗುವುದೆಂದು ಗೊತ್ತಾಗಿದೆ. 31-3-49 ನೆಯ ದಿನ ಕಾಂಗ್ರೆಸ ಪಾರ್ಟಿ ಸಭೆಯಲ್ಲಿ ಹಿಂದಿನ ಪ್ರಧಾನಮಂತ್ರಿಗಳ ಬದಲು ಶ್ರೀ ಕುಮಾರಸ್ವಾಮಿ ರಾಜಾ ರವರು ಪಾರ್ಟಿ ಮುಖಂಡರಾಗಿ ಆರಿಸಲ್ಪಟ್ಟಿದ್ದರು ಕಾಂಗ್ರೆಸ್ ಪಕ್ಷದ ಸದಸ್ಯರಲ್ಲಿ ಪಂಗಡಗಳು ಹುಟ್ಟಿ ಅಧಿಕಾರ ಲಾಲಸೆಯು ಹೆಚ್ಚಾಗಿದೆಯೆಂಬುದು ಇದರಿಂದ ಧ್ವನಿಸುತ್ತದೆ.

ಜಾತೀಯತೆಯ ಬೆಳವಣಿಗೆ

—(0)—

ಮಂತ್ರಿವರ್ಗ

ಮದರಾಸು ಪ್ರಾಂತದಲ್ಲಿ ಜಾತೀಯತೆಗೆ ಸ್ಥಾನವನ್ನು ಕೊಡಲು ಅದನ್ನು ಪೋಷಿಸಲು ಮಂತ್ರಿ ವರ್ಗವೇ ಪ್ರೋತ್ಸಾಹಕೊಡುತ್ತಲಿರುವದನ್ನು ಖಂಡಿಸಿ ಸರ್ದಾರ ವಲ್ಲಭಭಾಯಿ ಪಟೇಲರು ಬಂದಾಗ ಸೂಕ್ತ ಉಪದೇಶವನ್ನು ಕೊಟ್ಟಿರುತ್ತಾರೆ. ನೌಕರಿಗಳು ಒಂದು ವಿಶಿಷ್ಟ ಜಾತಿಯವರಿಗೆ ದೊರೆಯುವಂತೆಯೇ ಇಲ್ಲಿ ಒಂದು ಶಾಖೆಯಲ್ಲಿ ಹೆಚ್ಚಿಗಿದ್ದರೆ ಅದನ್ನು ಕಡಿಮೆ ಮಾಡಲಿ ಅವರು ಹೆಚ್ಚಿಗಿದ್ದರೆ ಏನಾರತಪ್ಪು? ಬೇರೆಯವರು ದೊರಕದ ಆ ಜಾತಿಯಲ್ಲೇ ಹೆಚ್ಚು ತರಬೇತಾದವರು ಇದ್ದ ಕಾರಣ ಶಾಖೆಯಲ್ಲಿ ಅವರನ್ನೇ ತೆಗೆದುಕೊಳ್ಳಬೇಕಾದ ಅವಶ್ಯ ಸ್ಪಷ್ಟವಾಯಿತು ಪೋಲೀಸ್ ಇಲಾಖೆಯು ಕೆಟ್ಟಿದೆಂದೂ, ಲಂಚಕೋರರಾಗಬೇಕೆಂದೂ ಒಗೆದು ಇತರ ಹಿಂದೂ ಸಮಾಜದವರು ತುಚ್ಛೀಕರಿಸಿ ಇದಕ್ಕೆ ಕಾರಣ ಅಲ್ಪಸಂಖ್ಯಾಕರಾದ ಒಂದು ವರ್ಗದವರು ಅದರಲ್ಲಿ ತುಂಬಿದ್ದು ದೀರ್ಘಕಾಲ, ಪರಿಸ್ಥಿತಿಗಳಿಂದ ಈ ಹಿಂದೆ ಸರಕಾರವು ಮಾಡಿದ ಕಾರ್ಯಗಳಿಗಾಗಿ ಈಗಿನವರನ್ನು ಹಿಂಸಿಸುವದು ಉಚಿತವಲ್ಲ. ಸ್ವಾತಂತ್ರರಾಜ್ಯದ ಲಕ್ಷ್ಯದಲ್ಲಿ ಈ ದೃಷ್ಟಿಯಿಂದ "ಬ್ರಾಹ್ಮಣೇತರ ಜಾತೀಯತೆಯನ್ನು ತೊಲಗಿಸಿರಿ" ಎಂಬ ಶ್ರೀ ಗೋಪಾಲರೆಡ್ಡಿಯವರ ಅಭಿಪ್ರಾಯವು ಹಿಂದಿನದಾಗಿದೆ ಒಂದು ಜಾತಿಗೆ ನೌಕರಿಗಳು ಬೇಡ, ಆದರೆ ಅವರ ಮಕ್ಕಳಿಗೆ ವಿದ್ಯೆ ಬೇಡವೇ? ನಾಗರಿಕತೆಯು ಹೆಚ್ಚಿದ ಪ್ರಪಂಚದ ಯಾವ ದೇಶದಲ್ಲಾಗಲಿ ಎಲ್ಲಾ ಜಾತಿಯ ಮಕ್ಕಳಿಗೂ ಸಮಾನ ವಿದ್ಯಾಭ್ಯಾಸ ಸೌಕರ್ಯಗಳುಂಟು ಗುಣಕ್ಕೆ, ಬುದ್ಧಿ ಚಾತುರ್ಯಕ್ಕೆ ಮನ್ನಣೆಯುಂಟು ಆದರೆ ನಮ್ಮದ ಪ್ರಿಯ ದೇಶದಲ್ಲಿ ಜಾತೀಯತೆಯ ವಿಷವ್ಯಾಪ್ತಿಯಿಂದ ಕಾಲೇಜುಗಳಲ್ಲಿ ಸ್ಥಾನಪಡೆಯುವದು ಒಂದು ಜಾತಿಯ ಪಾಲಿಗೆ ಭಗೀರಥ ಯತ್ನವಾಗುತ್ತದೆ

ಈ ಜಾತೀಯತೆಯನ್ನು ಖಂಡಿಸುವಾಗ ಜಾತಿ ಭೇದದ ಟೀಕೆ ಮಾಡಿ ಅದರ ದುಷ್ಪರಿಣಾಮಗಳ ವ್ಯಾಪನೆಯು ಅನಿವಾರ್ಯವೆಂದು ಹೇಳುತ್ತಾ ಹಾಗೆ ಮಾಡಬಾರದೆಂದು ಶಬ್ದಾಡಂಬರದಿಂದ ಹೇಳುವುದು ಜಾತೀಯತೆಯನ್ನು ಪೋಷಿಸಿದಂತಾಗುತ್ತದೆ, ಇದರಿಂದ ಸಮಾಜಕ್ಕೆ ಹೇಗೆ ಉಪಕಾರವಾದೀತು?

ಅಧಿಕಾರ ಯಂತ್ರಣಾ ಕಾರ್ಯದಲ್ಲಿ ತೊಡಗಿ ಹಗಲಿರುಳು ಗುಪ್ತಮಂತ್ರವನ್ನು ಹೂಡಿ ದಿಲ್ಲಿಯ ವರಿಷ್ಠರ ಬಳಿ ಹೋಗಿ ತಮಗೆ ಸಮಾನರಾದ ರಾಷ್ಟ್ರಭಕ್ತರು ಬೇರೊಬ್ಬರಿಲ್ಲವೆಂದು ಪ್ರಮಾಣ ಪತ್ರಗಳನ್ನು ಒಗಿಸುತ್ತಿರುವರು. ಈ ಕಾರ್ಯಕ್ಕಾಗಿ ವಿಮಾನಯಾತ್ರೆಯನ್ನು ಎಡೆಬಿಡದೆ ಕೈಕೊಳ್ಳುತ್ತಿರುವದೂ ನಿತ್ಯದ ಪಾಠವಾಗಿದೆ.

ಮಂತ್ರಿವರ್ಗದಲ್ಲಿ ಸ್ಥಾನಗಳನ್ನು ಹೆಚ್ಚಿಸಿ ಒಳಗುಂಪಿನ ಪ್ರತಿನಿಧಿಗಳನ್ನು ಸಮಾಧಾನ ಮಾಡುವದರಿಂದ ಶಾಸನ ನಿಷ್ಠರಿಗೆ ಶಾಂತಿಯಾದೀತು ಪ್ರಜೋಪಕಾರೀ ಆರ್ಥಿಕ ಯೋಜನೆಗಳು ಇಲ್ಲದಿರುವಾಗ ಜನತೆಗೆ ಸಮಾಧಾನವಾಗಬೇಕು ಹೇಗೆ? ಈಗ ಖಾದಿಯೇ ದೊರೆಯುವದಿಲ್ಲ. ಅಲ್ಪಸ್ವಲ್ಪ ಉತ್ಪನ್ನದ ಮಾರ್ಗಗಳೂ ಕುಂದಿತವಾಗುತ್ತಲಿವೆ ಫಿಕಾರ ಅಭಿವೃದ್ಧಿ ಯೋಜನೆಯು ಕಾಗದದ ಮೇಲಿವೆ ಹಳ್ಳಿಗಳು ಹಾಳು ಸುರಿಯುತ್ತಿವೆ ನೀರಿಲ್ಲದೆ ಬೆಳಕಿಲ್ಲದೆ ಆರೋಗ್ಯಕರ ವಾತಾವರಣವಿಲ್ಲದ ಪಟ್ಟಣಗಳು ರೋಗ ರುಜಿನಗಳಿಂದ ತುಂಬಿವೆ. ಸಾಕಷ್ಟು ಒಳ್ಳೆಯ ಆಹಾರ

ಧಾನ್ಯಗಳಿಲ್ಲ. ಇನ್ನೂ ಎಷ್ಟೋ ಅಸೌಕರ್ಯಗಳುಂಟು ಇದಕ್ಕೆ ಎಲ್ಲ ಜನರ ಸಹಕಾರವು ಪ್ರಾಂತೀಯತೆ ಮತ್ತು ಅಧಿಕಾರ ಲಾಲಸೆಯಿಂದ ರಾಷ್ಟ್ರ ನಿರ್ಮಾಣದ ಮಹತ್ಕಾರ್ಯ ಹೇಗೆ ಸಾಧ್ಯವಾದೀತು? ಅಧಿಕಾರ ರೂಢವಾಗಿರುವ ನವೀನ ಮಂತ್ರಿವರ್ಗವು ಜನತೆಯ ಸಹಕಾರವನ್ನು ಪಡೆಯಲು ಹೇಗೆ ಯತ್ನಿಸುವದೆಂಬುದನ್ನು ನೋಡಬೇಕಾಗಿದೆ.

ದಾಳಿಂಬದ ಹಣ್ಣುಗಳನ್ನು ಸುರಸಾ ಎಂಬ ಹುಳದಿಂದ ಕಾದುಕೊಳ್ಳುವ ಸುಲಭವಾದ ಉಪಾಯವು

—)0(—

ದಾಳಿಂಬದ ಹಣ್ಣುಗಳ ಮೇಲೆ ಮರಾಠಿ ಭಾಷೆಯಲ್ಲಿ "ಸುರಸಾ" ಎಂದು ಕರೆಯುವ ಹುಳವು ಬೀಳುತ್ತದೆ. ದಾಳಿಂಬಕ್ಕೆ ಈ ಹುಳದಷ್ಟು ಭಯಂಕರವಾದ ಶತ್ರುವು ಇನ್ನೊಂದಿಲ್ಲ. ಗಿಡಗಳ ಮೇಲೆ ಹೂವುಗಳು ಅರಳಿದ ಕೂಡಲೇ ಆಸಿಲಿ, ಕಾಯಿಗಳು ಸುಮಾರು ಅಡಿಕೆಯಷ್ಟು ದೊಡ್ಡವಾದ ಕೂಡಲೇ ಆಗಲಿ ಒಂದು ತರದ ಪತಂಗ ಹೂವು ಅವುಗಳಮೇಲೆ ತತ್ತಿಗಳನ್ನಿಡುತ್ತದೆ. ತತ್ತಿಗಳು ಒಡೆದಬಳಿಕ ಹೊರಬೀಳುವ ಕಿಡೀಹುಳವು ಕಾಯಿಗಳಲ್ಲಿ ತೂತು ಕೆಡವಿ ಒಳಗೆ ಸೇರಿ ಕಾಯಿಗಳ ಸಂಗಡಲೇ ಅದು ಬೆಳೆಯುತ್ತದೆ. ಈ ಹುಳಗಳಿರುವದರಿಂದ ಕಾಯಿಗಳು ತೀರ ಉಪಯೋಗಕ್ಕೆ ಬಾರದಂತಾಗುತ್ತವೆ. ಮಹಾರಾಷ್ಟ್ರದಲ್ಲಿಯ ಎಷ್ಟೋ ತೋಟಗಳಲ್ಲಿ ಈ ಹುಳಗಳಿಂದ ನೂರಕ್ಕೆ ತೊಂಬತ್ತರವರೆಗೆ ಕಾಯಿಗಳ ಹಾನಿಯಾಗುತ್ತದೆ. ಈ ಹುಳಗಳು ಕಾಯಿಗಳ ಒಳಗೆ ಬೆಳೆಯುತ್ತಿರುವದರಿಂದ ಇವುಗಳ ಮೇಲೆ ವಿಷಾರಿ ಔಷಧಗಳ ಉಪಯೋಗವಾಗುವದಿಲ್ಲ.

ಈ ಹುಳಗಳ ಮೇಲೆ ಉಪಾಯವು ಯಾವದೆಂದರೆ, ಯಾವ ಕಾಯಿಗಳ ಮೇಲೆ ಇನ್ನೂ ಪತಂಗಗಳು ತತ್ತಿಗಳನ್ನಿಟ್ಟಿರುವದಿಲ್ಲವೋ ಅಂಥ ಕಾಯಿಗಳಿಗೆ ಕಾಗದದ ಚೀಲಗಳನ್ನು ಕಟ್ಟಿಬಿಡಬೇಕಾಗುತ್ತದೆ. ಕಳೆದ ೫ ವರ್ಷಗಳಲ್ಲಿ ಪುಣೆಯ ಶೇತಕೀ ಕಾಲೇಜದ ಪೋದೀಭಾಗವೆಂಬ ಹಣ್ಣಿನ ತೋಟದಲ್ಲಿ ದೊರೆತ ಅನುಭವದಿಂದ ಈ ಉಪಾಯವು ದೊಡ್ಡದೊಡ್ಡ ತೋಟಗಳಲ್ಲಿ ಸಹ ಮಾಡಲಿಕ್ಕೆ ಬರುವಂಥಾದ್ದಾಗಿರುತ್ತದೆಂದು ಖಾತ್ರಿಯಿಂದ ಹೇಳಬಹುದು. ಚೀಲಗಳನ್ನು ತಯಾರಿಸುವದು ಹ್ಯಾಗಂದರೆ:—

ಚೀಲಗಳ ಸಲುವಾಗಿ "ಕ್ರಾಫ್ಟ್" ಪೇಪರ ಎಂಬ ಹೆಸರಿನ ತೆಳ್ಳನ್ನ ಒಳ್ಳೇ ಬಾದಾಮಿ ಕಾಗದವನ್ನು ಉಪಯೋಗಿಸಬೇಕು. ಈ ಕಾಗದದ ಗಡ್ಡಿಯಲ್ಲಿ (ರೀಮಿನಲ್ಲಿ) 500 ಹಾಳೆಗಳಿರುತ್ತವೆ. ಈ ಕಾಗದದ ಗಡ್ಡಿಗಳು ಅಜಮಾಸು 5 ರೂಪಾಯಿಗೊಂದರಂತೆ ಮುಂಬೈಯಲ್ಲಿ ಯಾವದೊಂದು ದೊಡ್ಡ ಕಾಗದದ ಅಂಗಡಿಯಲ್ಲಿ ಸಿಗುತ್ತವೆ. ಒಂದೊಂದು ಕಾಗದವು 40 ಇಂಚು ಉದ್ದ, 27 ಇಂಚು ಅಗಲ ಇರುತ್ತದೆ. ಪ್ರತಿಯೊಂದು ಕಾಗದದಿಂದ 8 ಇಂಚು ಉದ್ದ 6 ಇಂಚು ಅಗಲ ಇರುವ ಎಂಟು ಚೀಲಗಳನ್ನು ತಯಾರಿಸಲಿಕ್ಕೆ ಬರುತ್ತದೆ. ಈ ಆಕಾರದ ಚೀಲಗಳಲ್ಲಿ ಎಂಥ ದೊಡ್ಡ ಕಾಯಿಯಾದರೂ ಹಿಡಿಸುತ್ತದೆ. ಒಂದು ಗಡ್ಡಿ ಕಾಗದದಿಂದ 4,000 ಚೀಲಗಳಾಗುತ್ತವೆ. ಒಂದೊಂದು ಕಾಗದದ ಸರಿಯಾದ 8 ತುಂಡುಗಳನ್ನು ಕತ್ತರಿಸಿಕೊಂಡು, ಒಂದೊಂದು ತುಂಡನ್ನು ಮಡಿಚಿ, ಎರಡೂ ಬದಿಗಳನ್ನು 'ಜಿಗಟಾದ ಅಂಟಿನಿಂದ ಜೋಡಿಸಿ ಚೀಲವನ್ನು ತಯಾರ ಮಾಡಬೇಕು. ಒಮ್ಮೊಮ್ಮೆ ಮಳೆಯು ಜೋರಿನಿಂದ ಬಂದರೆ, ಅಂಟು ಕರಗಿ ಹೋಗಿ, ಚೀಲವು ಬಿಚ್ಚಿ ಹೋಗಬಹುದಾದ್ದರಿಂದ, ಅಂಟಿಸಿದ ಭಾಗಗಳ ಮೇಲೆ ಎರಡು ಹೊಲಿಗೆಗಳನ್ನು ಹಾಕಬೇಕು. ಚೀಲಗಳನ್ನು ಅಂಟಿಸುವದಕ್ಕೆ ಜಾಲಿಯ ಅಂಟನ್ನು ಉಪಯೋಗಿಸಬೇಕು. ಈ ಪ್ರಕಾರ ಚೀಲಗಳನ್ನು ತಯಾರಿಸಬೇಕು. ಆ ಮೇಲೆ ಕೆಡದಿದ್ದಂಥ ಅಥವಾ ಇನ್ನೂ ತತ್ತಿ ಇಡದಿದ್ದಂಥ ಹೂವು ಕಾಯಿಗಳನ್ನು ಚೀಲಗಳಲ್ಲಿ ಹಾಕಿ ಹುರಿಯಿಂದ ಅಥವಾ ನೂಲಿನಿಂದ ಕಟ್ಟಿಬಿಡಬೇಕು. ಹಣ್ಣುಗಳನ್ನು ಹರಿಯುವಾಗ ಚೀಲಗಳನ್ನು ಜಾಗ್ರತೆಯಿಂದ ಬಿಡಿಸಿಕೊಂಡರೆ, ಎಷ್ಟೋ ಚೀಲಗಳು ಮುಂದಿನ ವರ್ಷದ ಉಪಯೋಗಕ್ಕೆ ಬರುವವು.

ಮೇಲಿನ ಎಲ್ಲ ಸಂಗತಿಗಳಿಂದ ಈ ಕೆಲಸವು ದೊಡ್ಡದೂ ಕಷ್ಟದಾಯಕವೂ ಆಗಿರುತ್ತದೆಂದು ತೋರಬಹುದಾದರೂ, ನಿಜವಾಗಿ ಹಾಗಿರುವದಿಲ್ಲ. ಕೆಳಗೆ ಕಾಣಿಸಿದ ಲೇಖದಿಂದ ಈ ಕೆಲಸಕ್ಕೆ ಹತ್ತುವ ಆಳು ಹೋಳುಗಳು ಮತ್ತು ಎರಡನೇ ಖರ್ಚು ಅದರಿಂದ ಆಗುವ ಫಲಗಳ ಉತ್ಪನ್ನವು ಸ್ಪಷ್ಟವಾಗುವವು.

2,000 (ಸಾವಿರ ಚೀಲಗಳನ್ನು ತಯಾರಿಸಲಿಕ್ಕೆ ಬೇಕಾಗುವ ಖರ್ಚು.

1) ಕ್ರಾಫ್ಟ ಪೇಪರು ½ ಗಡ್ಡಿ	2	6	0
2) ಒಳ್ಳೇ ಜಾಲಿಯ ಅಂಟು 2 ಪೌಂಡು	0	12	0
3) ಚೀಲಗಳನ್ನು ತಯಾರಿಸುವ ಕೂಲಿ, 5 ಜನರು 1 ದಿವಸ	3	2	0
4) ಚೀಲಗಳನ್ನು ಕಟ್ಟುವ ಕೂಲಿ, 10 ಹೆಂಗಸರು 1 ದಿವಸ	3	0	0
5) ನೂಲಿನ ಧಾರ (ಟ್ವಾಯಿನ) ಅಥವಾ ಹುರಿ, 4 ಗುಂಡಿಗಳು	0	10	0
ಒಟ್ಟು ರೂ	10	0	0

ಹೀಗೆ ಹತ್ತು ರೂಪಾಯಿಗಳಿಂದ ಎರಡು ಸಾವಿರ ಕಾಯಿಗಳನ್ನು ಉಳಿಸಿಕೊಳ್ಳಬಹುದು. ಹೆಚ್ಚೆಚ್ಚು ಚೀಲಗಳನ್ನು ಕಟ್ಟಿದಂತೆ ಹೆಚ್ಚೆಚ್ಚು ಕಾಯಿಗಳು ಚನ್ನಾಗಿ ಉಳಿಯುತ್ತವೆ. ಚೀಲಗಳನ್ನು ಕಟ್ಟುವದರಿಂದ ಹಣ್ಣುಗಳ ಬಣ್ಣವು ಮಾತ್ರ ಅಷ್ಟು ಮೋಹಕವಾಗಿ ತೋರುವದಿಲ್ಲ. ಆದರೆ ಬಣ್ಣವನ್ನು ದುರ್ಲಕ್ಷಿಸಿ ಹಣ್ಣುಗಳನ್ನು ಮಾತ್ರ ಚನ್ನಾಗಿ ಉಳಿಸಿಕೊಳ್ಳಬಹುದು.

ಸಾಮಾನ್ಯ ಚುನಾವಣೆ

ಸಾಧ್ಯವಾದರೆ ಹಿಂದೂಸ್ಥಾನದಲ್ಲಿ ಸಾಮಾನ್ಯ ಚುನಾವಣೆಯು 1951 ರಲ್ಲಿ ಜರಗುಬಹುದು. ಖಂಡಿತ ಹೇಳಲು ಸಾಧ್ಯವಿಲ್ಲ. ಪ್ರಾಥಮಿಕ ಮತದಾರರ ಪಟ್ಟಿಗಳು ತಯಾರಾಗುತ್ತಿವೆ. ಚುನಾವಣೆ ಕ್ಷೇತ್ರಗಳು ಇನ್ನೂ ವಿಭಾಗಿಸಲಾಗಿಲ್ಲ.

ರೈಲ್ವೇ ಇಂಜನ್

ಪಶ್ಚಿಮ ಬಂಗಾಳದಲ್ಲಿ ರೂ 14 ಕೋಟಿ ವೆಚ್ಚ ಮಾಡಿ ರೈಲ್ವೇ ಕಾರ್ಖಾನೆ ನಿರ್ಮಿಸಲಾಗುತ್ತಿದೆ. ಇಲ್ಲಿ ವರ್ಷಕ್ಕೆ 120 ಇಂಜನಿಗಳೂ 50 ಬಾಯಿಲರುಗಳೂ ತಯಾರಿಸಲ್ಪಡುವವು.

— ಭಾರತಕ್ಕೆ ಬರ್ಮಾದೇಶದಿಂದ ೨೫ ಸಾವಿರ ಟನ್ ಅಕ್ಕಿಯನ್ನು ತೆಗೆದುಕೊಂಡು ಕಾರೋವಾ ಎಂಬ ಹಡಗು ಮದರಾಸ್ ಬಂದರಕ್ಕೆ ಬಂದಿಳಿದಿದೆ. ಇದರಲ್ಲಿ ಒಂದು ಸಾವಿರ ಟನ್ ಮೈಸೂರಿಗೆ ಕಳುಹಿಸಬೇಕಾಗಿದೆ.

— ಹೈದರಾಬಾದಿನ ಕೆಲ ಓಣಿಗಳಲ್ಲಿ ಮುಂದೆ ಯಾವದೇ ತರಹದ ದಂಗೆಯಾಗದಂತೆ ಮುಂಜಾಗ್ರತೆಗಾಗಿ ಸಾಮೂಹಿಕ ದಂಡ ಹೇರುವ ವ್ಯವಸ್ಥೆಯು ನಡೆದಿದೆ.

ನೆಹರೂರರ ಲಂಡನ್ ಪ್ರಯಾಣ

ಪಂಡಿತ ನೆಹರೂರವರು ವಸಾಹತು ಮಂತ್ರಿಗಳ ಪರಿಷತ್ತಿಗಾಗಿ ಈ ತಿಂಗಳು 19 ನೆಯ ತಾ. ಹೊರಡಲಿದ್ದಾರೆ.

— ಧ್ವಂಸಕ ಚಟುವಟಿಕೆಗಳನ್ನು ಸಾಗಿಸಲು ಗೋವಾದಿಂದ ಕಳ್ಳ ಶಸ್ತ್ರಾಸ್ತ್ರಗಳನ್ನು ತರಿಸಿ ಮುಖಂಡರ ಕೊಲೆ ಮಾಡಲು ಆರ್. ಯಸ್. ಯಸ್. ರವರು ಒಳಸಂಚು ನಡೆಸಿದ್ದರೆಂದು ಬೊಂಬಾಯಿ ಮಂತ್ರಿ ಮಾನ್ಯ ಮುರಾರಜಿಯವರು ಹೇಳಿದರು.

— ಯುಕ್ತ ಪ್ರಾಂತದ ಗವರ್ನರರಾದ ಶ್ರೀಮತಿ ಸರೋಜಿನಿ ದೇವಿಯವರ ನಿಧನದಿಂದ ಖಾಲಿಯಾದಸ್ಥಳದಲ್ಲಿ ಬೊಂಬಾಯಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಎಚ್. ಪಿ. ಮೋಡಿಯವರು ನಿಯುಕ್ತರಾಗಿರುತ್ತಾರೆ.

ರಾಜಸ್ಥಾನ

ಅಖಂಡ ರಾಜಸ್ಥಾನ ರಚನೆಯ ಪ್ರಾರಂಭೋತ್ಸವವನ್ನು ಸರ್ದಾರ ವಲ್ಲಭಭಾಯಿ ಪಟೇಲರು ನೆರವೇರಿಸಿದಮೇಲೆ 9 ಜನ ಮಂತ್ರಿಗಳ ಅಧಿಕಾರ ಗ್ರಹಣ ಸಮಾರಂಭವು ರಾಮನವಮಿ ದಿನ ನಡೆಯಿತು.

ನಮ್ಮ ಸಂಕಲ್ಪ ಶುದ್ಧಿ

ಪಡೆದುಕೊಂಡ ಸ್ವಾತಂತ್ರ್ಯ ಉಳಿಯಬೇಕು. ಮುಂದೆ ಎಂದೆಂದೂ ದಾಸ್ಯದ ಶೃಂಖಲೆ ನಮ್ಮನ್ನು ಬಂಧಿಸದಂತೆ ನೋಡಿಕೊಳ್ಳಬೇಕು.

ನಮ್ಮ ಸರಕಾರವು ಕಳೆದ 18 ತಿಂಗಳಲ್ಲಿ ಏನು ಮಾಡಿದೆ, ಮತ್ತು ಏನು ಮಾಡಲು ತಪ್ಪಿದೆಯೆಂಬುದರ ಅರಿವು ನನಗಿದೆ. ಆದರೆ ನಮ್ಮ ಸರಕಾರವು ಮಾಡದಿರುವ ಕೆಲಸದ ಬಗ್ಗೆ ಕ್ಷಮೆ ಕೋರಲು ನಾನು ಇಚ್ಛಿಸುವುದಿಲ್ಲ. ನಮ್ಮ ಸರಕಾರವು ಸಾಧಿಸಿದ ಕೆಲಸದ ಬಗ್ಗೆ ನನಗೆ ಹೆಮ್ಮೆಯೆನಿಸುತ್ತದೆ. ಹಲವಾರು ಸರಕಾರಗಳನ್ನು ಉರುಳಿಸಬಹುದಂಥ ಅನೇಕ ಕಠಿಣ ಸಮಸ್ಯೆಗಳನ್ನು ನಾವು ಧೈರ್ಯದಿಂದ ಎದುರಿಸಿರುವೆವು. ನಾವು ಕೆಲವು ಕೆಲಸಗಳನ್ನು ಮಾಡದಿರಲಿಕ್ಕಿಲ್ಲ. ಇನ್ನೂ ಕೆಲವುಗಳಲ್ಲಿ ತಪ್ಪು ಮಾಡಿರಬಹುದು. ಆದರೆ ಒಟ್ಟಿನ ದೃಷ್ಟಿಯಿಂದ ನೋಡಿದರೆ ನಮ್ಮ ಕಾರ್ಯ ಯಶಸ್ವಿಯಾಗಿದ್ದು ರಾಷ್ಟ್ರವು ಭರದಿಂದ ಪ್ರಗತಿ ಹೊಂದದಿರಲಾರದು.

ಪಂ|| ನೆಹರು.

ಜನತೆಯ ಜೀವನದ ಅಂತಸ್ತು ಅಭಿವೃದ್ಧಿಯಾಗಬೇಕು. ಬಡತನ, ಅಭಾವ ಕಡಿಮೆಯಾಗಬೇಕು. ಜನತೆಯಲ್ಲಿ ಸಂಪತ್ತು ಹೆಚ್ಚಿಸಬೇಕು. ಭಾರತದ ಜನತೆ ಹೆಚ್ಚಿನ ಸಂತೋಷದಿಂದ ಬಾಳಬೇಕು. ಪರಕೀಯ ಆಳ್ವಿಕೆಯಲ್ಲಿ ಇದು ಆಗದ ಮಾತು. ಇದಕ್ಕಾಗಿಯೇ ಭಾರತ ಸ್ವತಂತ್ರವಾಗಬೇಕಾಗಿತ್ತು. ಅರವತ್ತು ವರುಷಗಳ ಕಾಲ ಕಾಂಗ್ರೆಸು ಈ ಸ್ವಾತಂತ್ರ್ಯಕ್ಕಾಗಿ ಹೆಣಗಾಡಿತು. ಈಗ ದೇಶ ಸ್ವತಂತ್ರದ ಎರಡನೆಯ ಮೆಟ್ಟಲಲ್ಲಿದೆ. ಭಾರತದ ರಾಜ್ಯಸೂತ್ರಗಳನ್ನು ಕಾಂಗ್ರೆಸು ತನ್ನ ಕೈಯಲ್ಲಿ ಹಿಡಕೊಂಡು ಇನ್ನೂ ಎರಡು ವರುಷ ತುಂಬಿಲ್ಲ. ತಮಗೆಲ್ಲಾ ಸ್ವರ್ಗವೃಷ್ಟಿ ಬರಹುದೆಂದು ನಿರೀಕ್ಷಿಸಿದ ಅನೇಕರಿಗೆ ನಿರಾಶೆಯಾಗಹತ್ತಿದೆ. ಜಿಗುಪ್ಸೆ ಉಂಟಾಗಹತ್ತಿದೆ. ಟೀಕಾಕಾರರ ಪಿಡುಗು ಊರೂರಿಗೂ ಕಾಣಬರುವಂತಾಗಿದೆ. ಅಂಥಾ ನಮಗೆ ಸಾಕಷ್ಟು ಸಹನೆಯಿಲ್ಲ.

ಅಪ ಪ್ರಚಾರ

ಬ್ರಿಟಿಷರು ಆಳುವ ಕಾಲದಲ್ಲಿ ಎಲ್ಲಿಯೋ ಮುದುಡಿಕೊಂಡಿದ್ದ ಸಂಘಗಳು, ಈಗ ಸ್ವತಂತ್ರ ಭಾರತದಲ್ಲಿ ತಲೆಯೆತ್ತಲಾರಂಭಿಸಿರುವವು. ವರ್ಗದೃಷ್ಟಿಯಿಂದ ಹುಟ್ಟಿರುವ ಪಕ್ಷಗಳು ಕೆಲವು, ಜಾತೀಯ ದೃಷ್ಟಿಯಿಂದ ತಲೆಯೆತ್ತಲು ಪ್ರಯತ್ನಿಸುತ್ತಿರುವ ಗುಂಪುಗಳು ಮತ್ತೆ ಕೆಲವು. ಅಂತು ಕಾಂಗ್ರೆಸು ಅಧಿಕಾರದಲ್ಲಿರುವದು ಈ ಗುಂಪುಗಳಿಗೆ ಸಹನೆಯಿಲ್ಲ. ಪರಿಣಾಮವಾಗಿ ಕಾಂಗ್ರೆಸಿನ ಮೇಲಣ ಅಪಪ್ರಚಾರ ಸಾಕಷ್ಟು ನಡೆಯುತ್ತಲಿವೆ. ಈ ತೆರನಾದ ಸಂಘರ್ಷಣ ಬಹು ಜನರ ಮನಸ್ಸಿನಲ್ಲಿ ತಾಂಡವ ಮಾಡುತ್ತಿದೆ. ಇದು ಭಾರತದ ಭಾವಿ ಅಭ್ಯುದಯಕ್ಕೆ ಅತ್ಯಂತ ಘಾತಕವಾದುದು. ಇದು ಬಹು ಬೇಗನೆ ಹೋಗಬೇಕಾಗಿದೆ. ಹೋಗದೆ ಹಾಗೆಯೇ ಒಳಗೊಳಗೆ ಉಳಿದುಕೊಂಡರೆ ಭಾರತದ ಅಡಿಗಲ್ಲೇ ಅದಿರಿ ಕೊಳ್ಳಬಹುದು.

ಹೃತ್ಪೂರ್ವಕ ಬೆಂಬಲ

ಪಡೆದುಕೊಂಡ ಸ್ವಾತಂತ್ರ್ಯ ಉಳಿಯಬೇಕು. ಪಡೆದ ಸ್ವಾತಂತ್ರ್ಯವನ್ನು ಸಾರ್ಥಕಗೊಳಿಸಬೇಕು. ಮತ್ತೆ ಯಾವ ಕಾಲಕ್ಕೂ ನಮ್ಮನ್ನು ದಾಸ್ಯದ ಶೃಂಖಲೆ ಬಂಧಿಸದಂತೆ ಕಾಪಾಡಿಕೊಳ್ಳಬೇಕು. ಈ ಸ್ವಾತಂತ್ರ್ಯ ಉಳಿಯಬೇಕಾದರೆ, ಪ್ರಪಂಚದಲ್ಲಿ ಭಾರತಕ್ಕೆ ಅಗ್ರಸ್ಥಾನ ಬರಬೇಕಾದರೆ, ನಮ್ಮಲ್ಲಿ ಒಂದು ಹುರುಪು, ಒಂದು ವಿಶಾಲತೆ, ಒಂದು ಆಸೆ ಉದಿಸಬೇಕಾಗಿದೆ. ಒಂದು ಹೊಸಬಾಳು — ಅದುವೂ ಉತ್ತಮ ಬಾಳು — ಬದುಕಬೇಕೆಂಬ ಆಸೆ, ನಮ್ಮ ಜೀವನ ಬೆಳಗಿ ಬಾಳಬೇಕೆಂಬ ತೃಷೆ, ನಮ್ಮ ಭಾರತ ಸರ್ವತೋಮುಖವಾಗಿ ಬೆಳೆಯಬೇಕೆಂಬ ವಿಶಾಲ ದೃಷ್ಟಿ, ನಮ್ಮಲ್ಲಿ ಉದಿಸಬೇಕಾಗಿದೆ. ಇದು ಸಾಧ್ಯವಾಗಬೇಕಾದರೆ ಈ ಹಿರಿಯಾಸೆ ಈಡೇರುವಲ್ಲಿ ಅಡ್ಡಬರುವ ಮುಳ್ಳುಗಳ್ಳಿಗಳನ್ನು ಸಮೂಲಾಗ್ರ ನಾಶಮಾಡಬೇಕು. ಈ ಮುಳ್ಳುಗಳ್ಳಿಗಳನ್ನು ವ್ಯವಸ್ಥಾನುಸಾರ ನಾಶಮಾಡಲು ಶ್ರಮಿಸುತ್ತಿರುವ ಕಾಂಗ್ರೆಸು ಸರಕಾರಕ್ಕೆ ಜನತೆ ತನ್ನ ಹೃತ್ಪೂರ್ವಕ ಬೆಂಬಲ ಕೊಡಬೇಕಾಗಿದೆ. ನಾವು ಅಸಡ್ಡೆ ಆಲಸ್ಯ ತೋರಿಸಿದೆವೆಂದರೆ ಮತ್ತೆ ಕಷ್ಟದ ದಿನಗಳೇ ಮುಂದಿರುವವು.

ಪ್ರೀತಿ ಸತ್ಯದಿಂದ

ನಾವು ಶತಮಾನಗಳ ನಿದ್ರೆಯಿಂದ ಎಚ್ಚೆತ್ತಿದ್ದೇವೆ. ಅದುವೂ ಕಾಂಗ್ರೆಸಿನಿಂದಾಗಿ. ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಎಚ್ಚೆತ್ತ ನಾವು ಮತ್ತೆ ತಲೆಯೆತ್ತಿ ಬಾಳಬೇಕಾಗಿದೆ. ಇಡಿಯ ಮಾನವ ವರ್ಗಕ್ಕೆ ಭಾರತ ತನ್ನ ಸಂದೇಶ ನೀಡಬೇಕಾಗಿದೆ. ನೀತಿಯಲ್ಲಿ, ಸಂಕಲ್ಪದಲ್ಲಿ, ಹಿಂದೆ ಮಹಿಮೆ ಪಡೆದಿದ್ದ ಭಾರತ ಈಗ ಮತ್ತೆ ಸ್ವತಂತ್ರವಾಗಿ, ನೀತಿ, ಧರ್ಮ, ಅಹಿಂಸೆಯ ಪರಿಪೂರ್ಣತೆಯ ಪಾಠವನ್ನು ಜಗತ್ತಿಗೆ ಸಾರಬೇಕಾಗಿದೆ. ಈ ಪಾಠವನ್ನು ಕಾಂಗ್ರೆಸ್ ಅಧಿಕಾರಕ್ಕೆ ಬಂದನಂತರದ ಎರಡು ವರುಷಗಳಲ್ಲಿ ಪ್ರಪಂಚದ ಕೆಲವು ರಾಷ್ಟ್ರಗಳಿಗೆ ಕಲಿಸಿದೆ. ಸೂಕ್ಷ್ಮವಾಗಿ ನೋಡಿದೆವೆಂದರೆ — ಇಂದು ಪೌರ್ವಾತ್ಯ ರಾಷ್ಟ್ರಗಳ ನಾಯಕತ್ವ ಭಾರತ ಸ್ವೀಕರಿಸಿದೆ. ಅದು ಹಿಂಸೆಯಿಂದಲ್ಲ, ಅತ್ಯಸ್ತ್ರಿಯಿಂದ ದಬ್ಬಾಳಿಕೆಯಿಂದಲ್ಲ; ಪ್ರೀತಿ, ಸತ್ಯದಿಂದ.

ಉರುಳಿಸುವ ಮನೋವೃತ್ತಿ

ಇಂದು ಪ್ರಪಂಚದ ಮುಂದೆ ಅತಿದೊಡ್ಡ ಸಮಸ್ಯೆಯೆಂದರೆ ತಂತಮ್ಮ ಹಕ್ಕುಗಳಿಗಾಗಿ ಸೆಣಸುವ ವ್ಯಕ್ತಿ ರಾಷ್ಟ್ರಗಳ ನಡುವೆ ಸೌಹಾರ್ದ ನೆಲಸಬೇಕಾದುದು. ಒಂದತ್ತ ವ್ಯಕ್ತಿಗತ ಅನಾಯಕತ್ವ ಇನ್ನೊಂದತ್ತ ಸಮಷ್ಟಿಗಳು, ವ್ಯಕ್ತಿ ಸಮುದಾಯಗಳು ಸಮನ್ವಯದ ಧೋರಣೆಯಿಂದ ಅನುಸರಿಸಬೇಕು. ಅದುವೇ ಒಟ್ಟು ಲೋಕದ ಶ್ರೇಯಸ್ಸಿಗೆ ಸಾಧನ. ಭಾರತ ಹೊತ್ತು ಕಾಪಾಡಿಕೊಂಡು ಬಂದಿರುವ ಆತ್ಮವಿದ್ಯೆ, ಪ್ರಪಂಚದ ರಾಷ್ಟ್ರಗಳ ಇಂದಿನ ಈ ದೊಡ್ಡ ಸಮಸ್ಯೆಗೆ ಸಂಜೀವನದಂತಹ ಮದ್ದು. ಗಾಂಧಿಜೀಯವರು ದಾರಿ ಕಲ್ಪಿಸಿಕೊಟ್ಟಿದ್ದಾರೆ. ಕಾಂಗ್ರೆಸು ತನ್ನ ಆಳ್ವಿಕೆಯಲ್ಲಿ ಭಾರತವನ್ನು ಅಂತೆ ಮುಂದೆ ಸಾಗಿಸಲು ಪ್ರಯತ್ನಿಸುತ್ತಾ ಇದೆ. ಅಂತಹ ಕಾಂಗ್ರೆಸು ಅಧಿಕಾರದಲ್ಲಿದ್ದರೆ, ಅದನ್ನು ಉರುಳಿಸುವ ಮನೋವೃತ್ತಿಯ ಸಣ್ಣತನದ ಗುಂಪುಗಳನ್ನು ಪ್ರಜೆ ಅಲ್ಲಗಳೆಯದೇ ಇದ್ದರೆ, ಭಾರತ ಶಾಶ್ವತ ಸುಖ ಪಡೆಯಲಾರದು.

ನಾಡಿನ ಪ್ರತಿಯೊಬ್ಬನಿಗೂ

ಶ್ರೀ ಅರವಿಂದ ಯೋಗಿಗಳು ತಮ್ಮ ಆಶ್ರಮವಾಸಿಗಳನ್ನು ಉದ್ದೇಶಿಸಿ ಈ ರೀತಿ ಹೇಳಿದ್ದರು;—

"If we allow a falsehood, however small, to express itself thrugh our mouth or pen, how can we hope to become perfect messengers of Truth? A perfect servant of Truth should abstain even from the slightest inexactitude exaggeration or deformation."

"ಸುಳ್ಳು ಎಷ್ಟು ಸಣ್ಣದಿದ್ದರೂ, ಅದನ್ನು ನಮ್ಮ ಬಾಯಿ ಮಾತಿನಿಂದ, ಬರಹದಿಂದ ವ್ಯಕ್ತಪಡಿಸಲು ಅವಕಾಶ ಕೊಟ್ಟೆವೆಂದರೆ, ನಾವು ಹೇಗೆ ಪರಿಪೂರ್ಣರಾದ ಸತ್ಯ ಸಂದೇಶ ವಾಹಕರಾಗಲೆಳಸಬಲ್ಲೆವು? ಸತ್ಯದ ಪರಿಪೂರ್ಣ ಸೇವಕನು ಅತ್ಯಂತ ಸೂಕ್ಷ್ಮ ತಪ್ಪು, ಅತ್ಯುಕ್ತಿ, ಅಥವಾ ವಿಕೃತಿಗಳಿಂದ ದೂರವಾಗಿರಲೇಬೇಕು.

ಶ್ರೀ ಅರವಿಂದ ಯೋಗಿಗಳ ಈ ಹಿತವಾಕ್ಯಗಳು ಅವರ ಆಶ್ರಮವಾಸಿಗಳಿಗೆ ಎಷ್ಟು ಅನ್ವಯಿಸುವುದೋ ಅಷ್ಟೇ ನಾಡಿನ ಪ್ರತಿಯೊಬ್ಬನಿಗೂ ಅನ್ವಯಿಸುವದು

ಸುತ್ತಲೂ ಕಣ್ಣೆತ್ತಿ ನೋಡಿ

ಗಿಡ ನೆಟ್ಟ ಎರಡು ದಿನಗಳಲ್ಲಿಯೇ ಅದು ಫಲಬಿಡಲಾರದು. 'ಸ್ವಾತಂತ್ರ್ಯದ ಈ ಗಿಡ ಫಲಕೊಡಬೇಕಾದರೆ ಅದನ್ನು ಚನ್ನಾಗಿ ಉಳಿಸಿ, ಬೆಳಸಬೇಕು. ಒಕ್ಕಟ್ಟಿನ ಸುಂದರವಾದ ಏಕತೆ, ಶೀಲ, ಸೇವಾ, ಇವು ನೀರು, ಗೊಬ್ಬರವಾಗಿ ಸ್ವಾತಂತ್ರ್ಯ ಸಸಿಗೆ ಪೌಷ್ಟಿಕವಾಗಬೇಕು. ಅಂದರೆ ತಾನೇ ಸಸಿ ಬೆಳೆದೀತು. ಬೆಳೆದು ಉಳಿದೀತು. ನಾವು ಮೂವತ್ತುನಾಲ್ಕು ಕೋಟಿ ಸಂಖ್ಯೆಯುಳ್ಳ ಪ್ರಜಾವರ್ಗ ಅತಿ ಪ್ರಾಚೀನ ನಾಡಕಲೆ, ಸಂಸ್ಕೃತಿ, ಸಾಧನೆ ಸಿದ್ಧಿಗಳ ಚರಿತ್ರೆಯನ್ನು ಹಿನ್ನಲೆಯಾಗಿ ನಮಗೆ ಸುತ್ತಲು ಪ್ರಪಂಚದ ತುಸು ನೋಡೋಣ. ಆಂತರಿಕ ಕಲಹಗಳಿಂದ ಚೀನಾದೇಶದ ಇಂದಿನ ಪಾಡು. ಪಕ್ಕದ ದೇಶ ಬರ್ಮಾ ನವಿರುಲು ಪ್ರಾರಂಭಮಾಡುತ್ತಿರುವ ಒಳ ಜಗಳ. ಇವನ್ನು ಸಾವಧಾನದಿಂದ ನೋಡಿ ನಾವು ಮುಂದುವರಿಯಬೇಕಾಗಿದೆ.

ರಾಜ್ಯ ಆಡಳಿತದಲ್ಲಿ ಹೆಚ್ಚಿನ ಅನುಭವವಿಲ್ಲದ ಕಾಂಗ್ರೆಸು ತಪ್ಪುಗಳನ್ನು ಮಾಡಿಲ್ಲವೆನ್ನಲಾರೆ. ಮಾಡಿರಬಹುದು, ಆತ್ಮಸಾಕ್ಷಿಯಾಗಿ ಕೆಲಸಗಳನ್ನು ಪೂರೈಸುವಾಗ ಆಗುವ ತಪ್ಪು ಅದು ತಪ್ಪಲ್ಲ. ತಪ್ಪುಗಳನ್ನು ಮಾಡಿದ್ದರೂ ಉದ್ದೇಶ ಪೂರ್ವಕವಾಗುತ್ತಿದೆ ಎಂದು ಯಾರೂ ಹೇಳಲಾಗದು. ಆ ಸಂಸ್ಥೆ ಅಷ್ಟು ಪವಿತ್ರವಿದೆ. ಗಂಗಾನದಿ ಇದ್ದಂತೆ. ನಾರುವ ಕೊಚ್ಚು ಆ ನದಿಯನ್ನು ಸೇರಬಹುದು. ಅಂದರೆ ಅದರ ಪಾವಿತ್ರ್ಯ ಕುಂದಿದೆ ಎನ್ನಲೆ? ವಿವೇಕಕ್ಕೆ ಜನ ಒಲಿಯಬೇಕು. ಗುಣವನ್ನು ಮೆಚ್ಚುವ ದೊಡ್ಡತನಬೇಕು. ಮನಸ್ಸು ನಯವಾಗಿ ಹೃದಯ ವಿಶಾಲವಾಗಿರಬೇಕು. ಇಡಿಯ ಭಾರತಕ್ಕೆ ನಿಷ್ಠೆಯಿಂದಿರುವ ಗುಣವನ್ನು ಗೂಡಿಸಿಕೊಳ್ಳಬೇಕು. ಆಗ ತಾನೆ ನಾವು ಬೆಳೆವೆವು. ನಮ್ಮ ಭಾಗ್ಯವನ್ನು ಸಹಿಸಲಾಗದೆ ಮಹಾತ್ಮಾಜಿಯವರನ್ನು ನಾವು ಕಳೆದುಕೊಂಡೆವು. ಅಂತೆ ನಮ್ಮ ಯೋಗ್ಯತೆಯನ್ನು ಸಹಿಸಲಾಗದೆ ನಮ್ಮ ಏಕಮೇವ ಸಂಸ್ಥೆ ಕಾಂಗ್ರೆಸನ್ನು ಟೀಕೆ ಮಾಡಲು ಹೊರಟಿವೆಂದರೆ ಅದನ್ನೂ ಅಧಿಕಾರದಿಂದ ಉರುಳಿಸಲು ಪ್ರಯತ್ನಿಸುವ ಕೆಟ್ಟ ಶಕ್ತಿಗಳಿಗೆ ಬೆಂಬಲಕೊಟ್ಟೆವೆಂದರೆ ಬೆಳಕನ್ನು ದೂಡಿ ಕತ್ತಲೆಗೆ ಮಣೆ ಮಾಡಿದಂತಾಗಬಹುದು.

ವಿಶೇಷ ಕಾಣಿಕೆ

ಪ್ರತಿಯೊಬ್ಬನೂ ಉತ್ತಮಗೊಂಡು ಮನಶ್ಶಕ್ತಿಯಿಂದ ಭಾರತದ ಸೌಭಾಗ್ಯಕ್ಕೆ ತನ್ನದೆ ಆದ ವಿಶೇಷ ಕಾಣಿಕೆಯನ್ನು ಸಲ್ಲಿಸಬೇಕು. ಹಾಗೆ ಆಗದ ಹೊರತು ದೇಶದ ಬದುಕು ಪುಷ್ಟಿಗೊಳ್ಳಲಾರದು. ವ್ಯಕ್ತಿಯ ಸ್ವಂತಶಕ್ತಿ ಬಲಿತಂತೆಲ್ಲ ಅವನ ಸುತ್ತಲು ಆವರಣ ಮೇಲಾಗಲು ಸಾಧ್ಯವಾಗುವದು. ಆವರಣದ ತುಂಬಿವಿನಿಂದ ವ್ಯಕ್ತಿಯ ಶಕ್ತಿಗುಣ ಬೆಳೆಯುವುದು. ಇವೆರಡರ ಅನ್ಯೋನ್ಯ ಸಹಾಯಕತೆಯಿಂದ ಒಟ್ಟು ಒಂದು ದೇಶದ ಬದುಕು ರೂಪಿಸಲ್ಪಡುವದು. ಪ್ರಧಾನ ಮಂತ್ರಿ ಪಂಡಿತ ನೆಹರು ಇವರು ದೆಕ್ಕನ ಆಕಾಶವಾಣಿ ಭಾಷಣದಲ್ಲಿ ಹೀಗೆ ಅಂದಿರುವರು.

"Let us contend against each other in service and good will, let each one of us think more of his duties and obligations to another than his rights. Rights flow from duties discharged and obligations rendered."

ನನಗೆ ನಮ್ಮ ಹಕ್ಕಿನ ಜೊತೆಯಲ್ಲಿ ನಮ್ಮ ಕರ್ತವ್ಯದ ಅರಿವಿರಬೇಕು. ನನ್ನ ಸುಖವನ್ನೇ ನಾನು ನೋಡಿಕೊಂಡಿರುವದಾದರೆ ಈ ಬದುಕನ್ನು ಅಂಗೀಕರಿಸಿದಂತಾಗಲಿಲ್ಲ. ಹಾಗಿದ್ದರೆ ತಾಯಿ, ಮಗನನ್ನು ಸಾಕಬೇಕೇಕೆ? ಮನುಷ್ಯನು ತನ್ನ ಸುಖದ ಜೊತೆಯಲ್ಲಿ ಪಕ್ಕದವನ ಸುಖ ಒಳಿತನ್ನು ಬಗೆಯಬೇಕು. ಅಂದರೆ ಮಾತ್ರ ನಮ್ಮ ಜನರಲ್ಲಿ ಅಭಿಮಾನ, ವಿಶ್ವಾಸ ನಾಳಿನ ಮಂಗಳದ ಕಡೆಗೆ ದೇಶದ ಜನತೆಯನ್ನು ಒಂದೇ ದೃಢದಿಂದ ನಡೆಸಬೇಕೆಂಬ ಪ್ರತಿಜ್ಞೆ, ಈ ಭಾಗ್ಯ ಎಲ್ಲೆಡೆಯಲ್ಲಿ ಉಂಟಾದೀತು. ಇದು ಸಾಧ್ಯವಾಗಬೇಕಾದರೆ ನಮ್ಮ ಘನತೆ, ಶೀಲ ಉತ್ತಮಗೊಳ್ಳಬೇಕು. ನಮ್ಮ ಸಂಕಲ್ಪ ಸಿದ್ಧಿಯಾಗಬೇಕು.

ನಮ್ಮ ಯುಗಾದಿ

ಮೊನ್ನೆ ತಾ|| ೩೦-೩-೪೯ ಕ್ಕೆ ನಮ್ಮ ಯುಗಾದಿಯಾಯಿತು. ಸರ್ವಧಾರಿ ಸಂವತ್ಸರವನ್ನು ದಾಟಿ ವಿರೋಧಿ ಸಂವತ್ಸರಕ್ಕೆ ನಾವು ಕಾಲಿಟ್ಟಿದ್ದೇವೆ.

ಈ ಸಂವತ್ಸರದ ಹೆಸರು "ವಿರೋಧಿ" ಎಂದು ಇದ್ದುದನ್ನು ನೋಡಿದರೆ ಸ್ವಲ್ಪ ಗಾಬರಿಯೆನಿಸುತ್ತದೆ. ಆದರೆ ಈ ಮೊದಲು ನಮಗೆ ಗಾಬರಿಯುಪಸ್ಥಿತಿಯಿದ್ದರಷ್ಟೇ ಈ ಸಂವತ್ಸರವು ನಮ್ಮನ್ನು ಹೆದರಿಸುವದು?

ಜ್ಯೋತಿಷಿಗಳು ಈ ವರ್ಷದಲ್ಲಿ ಹಲಕೆಲವು ತೊಂದರೆಗಳುಂಟೆಂದು ಹೇಳುತ್ತಿದ್ದರೂ, ನಮ್ಮ ಜಗತ್ತಿನಲ್ಲಿ ಬಹು ಮರ್ಯಾದೆಯಿಂದ ತಲೆಯೆತ್ತುವ ಭೋಗವಿದೆಯೆಂದು ಹೇಳಿ ಧೈರ್ಯಕೊಡುತ್ತಿದ್ದಾರೆ.

ಏನೇ ಇರಲಿ, ಗ್ರಹಚಾರವು ದುರ್ಬಲವನ್ನು ಕಂಡು ಹೆಚ್ಚು ಕಾಡುತ್ತದೆಯೆಂಬುದನ್ನು ನಾವು ಮರೆಯಬಾರದು. ಪುರಂದರದಾಸರು "ಯಾರು ಒಲಿದರೇನು? ನಮಗಿನ್ನಾರು ಮುನಿದರೇನು?" ಎಂಬ ಪದದಲ್ಲಿ ಕೊನೆಗೆ 'ಭಾನು-ನಂದನ ಬುಧ ಮಂಗಳರ ಒಲವು ತಪ್ಪಿದರೇನು?' ಎಂದು ಹೇಳಿದ್ದಾರೆ. ಅಂಥವರಿಗೆ ಗ್ರಹಚಾರದ ಭಯವೆಲ್ಲಿದೆ?

ನಾವು ಪುರಂದರ ದಾಸರಷ್ಟು ಧೈರ್ಯವಂತರು ಆಗದಿದ್ದರೂ, ಮೋಕ್ಷವನ್ನೇ ಸಂಪಾದಿಸಿ ಉಳಿದ ತೊಂದರೆ ತೊಡಕುಗಳಿಗೆ ಸೊಪ್ಪುಹಾಕುವ ಅವಶ್ಯಕತೆಯನ್ನು ಮೀರಿದ ಅವರಂತೆ 'ಯೋಗ್ಯತಾಸಂಪನ್ನರಾಗಿರದಿದ್ದರೂ, ನಮ್ಮ ದೈನಂದಿನ ಜೀವನವನ್ನು ಯಶಸ್ವಿಯಾಗಿ ಸಾಗಿಸಿಕೊಳ್ಳಲು ಶಕ್ತರಾದರೂ ಆಗಲಿಕ್ಕಿಲ್ಲವೇ?

ಜಾಗತಿಕ ರಣಕುಂಡವು ಉರಿದು ಉರಿದು ಕಪ್ಪಿಡುತ್ತಿದೆ. ಅದರ ಕಾರಣದಿಂದ ಒಡ್ಡರಾಷ್ಟ್ರಗಳು ವಿಮೋಚನೆ ಹೊಂದುತ್ತಿವೆ. ಕಲೆನಾಯಕರು ಹೊಡೆದಾಡಿ ಹೊಡೆದಾಡಿ ನಿರ್ವೀರ್ಯರಾಗುತ್ತಿದ್ದಾರೆ.

ಈ ಪರಿಸ್ಥಿತಿಯ ಮೂಲಕವೇ ಮುಕ್ತವಾಗಿ ಪ್ರಾಂದರಿಯುತ್ತಿದ್ದ ಹಿಂದುಸ್ಥಾನವು ಈ ವರ್ಷ ಹೆಚ್ಚಿನ ಹುರುಪು ಹುಮ್ಮಸಗಳಿಂದ ಮುನ್ನುಗ್ಗಲು ಯಾವ ಆತಂಕವಿದೆ?

ಆದರೂ ನಾವು ಅದರ ಫಲವನ್ನು ತಿಳಿದುಕೊಳ್ಳಲು ಇನ್ನೂ ಮುಂದೆ ಬರುತ್ತಿಲ್ಲ. ಅವರು ಹಾಗೆ ಮಾಡುತ್ತಾರೆ ಎಂದು ಎದುರಿನವರ ಜೀವನದ ವಿಮರ್ಶೆ ಮಾಡಲು ಹೋಗುತ್ತಿದ್ದೇವೆ. ನಾವು ಏನು ಮಾಡುತ್ತಿದ್ದೇವೆ? ಎಂಬ ಬಗ್ಗೆ ನಾವು ಆಲೋಚಿಸುತ್ತಿಲ್ಲ.

ಆ ಶಕ್ತಿಯನ್ನು ಸಂಪಾದಿಸಿಕೊಂಡು ನಾವು ಸಾಗೋಣ. ಆಗ ಈ ವರ್ಷವು ನಮಗೆ ಶುಭದಾಯಕವಾಗದೆ ಇರದು.

[ಜಯಹಿಂದ್]

ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ

ಕೃಷಿ ಸಂಶೋಧನೆಯ ಫಲಿತಾಂಶ

ದತ್ತಮಂಡಲದ ಜಿಲ್ಲೆಗಳಾದ ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಜಿಲ್ಲೆಗಳು ಆರ್ಥಿಕವೃಷ್ಟಿಯಿಂದ ಹಿಂದುಳಿದವುಗಳೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದರಿಂದ ಈ ಜಿಲ್ಲೆಗಳ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರೂ ಸಾರ್ವಜನಿಕರೂ ಪ್ರಾಧಾನ್ಯ ಕೊಟ್ಟಿದ್ದಾರೆ. ಈ ಜಿಲ್ಲೆಗಳ ಆರ್ಥಿಕಾಭಿವೃದ್ಧಿಗೆ ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ಕೃಷಿ ಸುಧಾರಣೆಯು ಮೊತ್ತ ಮೊದಲನೆಯದಾಗಿದೆ.

ಮುಖ್ಯವಾಗಿ ಉತ್ತಮವಾದ ಸುಧಾರಿತ ಬೀಜಗಳನ್ನೊದಗಿಸುವುದು, ಮಳೆಯ ಕೊರತೆಗೆ ಅನುಸಾರವಾಗಿ ದತ್ತಮಂಡಲದಲ್ಲಿ ರೂಢಿಯಲ್ಲಿರುವ ನಾನಾಬಗೆಯ ಬೆಳೆಗಳನ್ನು ಬೆಳೆಸುವುದು, ಮಳೆಯಿಲ್ಲದೆ ಆಗುವ, ಬೇಸಲೇ ಬೆಳೆಯುವ ಬೆಳೆಗಳನ್ನು ರೂಢಿಗೆ ತರುವುದು, ಇತ್ಯಾದಿಗಳನ್ನು ಕೈಕೊಳ್ಳಲಾಗಿದೆ. ಇದಲ್ಲದೆ ಭೂಮಿಯ ತೇವವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಯತ್ನಮಾಡುವುದರಿಂದ ಕೃಷಿಕರಿಗೆ ಹೆಚ್ಚಿನ ಲಾಭದಾಯಕವಾಗಿದೆ. ಮೇಲಿನ ವಿಷಯಗಳಲ್ಲಿ ಹಗರಿಯ ಕೃಷಿ ಸಂಶೋಧನಾಕ್ಷೇತ್ರವು ಹೆಚ್ಚಿನ ಸಹಾಯಕವಾಗಿದೆ. ಇಲ್ಲಿಂದ ಸುಧಾರಿತ ಬೀಜಗಳು, ಬೇಗನೇ ಬೆಳೆಯುವ ಹತ್ತಿ, ಜೋಳ, ಕೊರ್ರ ಇವು ರೈತರಿಗೆಲ್ಲಾ ಅಚ್ಚುಮೆಚ್ಚಿನವುಗಳಾಗಿವೆ. ಕೆಲವು ಹೊಸ ತರದ ಹತ್ತಿ ಮತ್ತು ಜೋಳದ ಸುಧಾರಿತ ಬೀಜಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ ಉಪಯೋಗಿಸಿ ನೋಡಲಾಗುತ್ತಿದೆ. ಕೆಳಗಿನ ಪಟ್ಟಿಯಿಂದ ಈ ಸಂಶೋಧನಾ ಕ್ಷೇತ್ರದ ಪ್ರಯೋಜನವು ವ್ಯಕ್ತವಾಗಬಹುದು;—

ಬೆಳೆಯ ಹೆಸರು	ಬಳ್ಳಾರಿ-ಅನಂತಪುರ ಜಿಲ್ಲೆಗಳಲ್ಲಿ ವಿಸ್ತೀರ್ಣ (ಎಕರೆಗಳು)	ಸುಧಾರಿತ ಬೀಜಗಳನ್ನು ಉಪಯೋಗಿಸುವ ವಿಸ್ತೀರ್ಣ (ಎಕರೆಗಳು)	ಪ್ರತಿವರ್ಷ ಲಾಭ ರೂಪಾಯಿಗಳು	ಪರಮಾರ್ಥಿಕ ಉತ್ಪತ್ತಿ ರೂಪಾಯಿಗಳು
ಹತ್ತಿ (ಎಚ್ 1)	6 ಲಕ್ಷಗಳು	4 ಲಕ್ಷಗಳು	40 ಲಕ್ಷಗಳು	60 ಲಕ್ಷಗಳು
ಜೋಳ (ಎಚ್ 1 ಮತ್ತು ಎಂ 47-3)	6·1 ,,	3 ,,	11·1 ,,	25·5 ,,
ನವಣೆ (ಎಚ್.1 ಮತ್ತು ಎಂ 2)	13·7 ,,	88·6 ಸಾವಿರಗಳು	2·2 ,,	34 ,,
ರಾಗಿ (ಎಚ್.1 ಮತ್ತು ಎಂ.1)	3 ,,	11·4 ,,	1·5 ,,	40·5 ,,
ಚಿಟ್ಟು ವ್ಯವಸಾಯದ ವಿಸ್ತರಣೆಯಿಂದ	12 ,,	....	....	40 ,,
		ಜಮಾ ...	54·8 ಲಕ್ಷಗಳು	200 ಲಕ್ಷಗಳು
			55 ,,	2 ಕೋಟಿ

ನೆಲ್ಲೂರು ಮತ್ತು ಗುಂಟೂರು ಜಿಲ್ಲೆಗಳ ವಿಸ್ತೀರ್ಣ ಸಹಿತ

— ರಾಷ್ಟ್ರದ ವಿಭಜನೆ, ಅದರಿಂದ ಉಂಟಾದ ಆರ್ಥಿಕ ಸಮಸ್ಯೆಗಳು ಇವುಗಳಿಂದ ಜನರ ಆರ್ಥಿಕ ಪರಿಸ್ಥಿತಿ ಕಷ್ಟದಾಯಕವಾಗಿದ್ದರೂ ಜಾತೀಯ ಸೌಹಾರ್ದವು ದೇಶದಲ್ಲಿ ನೆಲೆಸಿದ್ದನ್ನು ಕಂಡು ನನಗೆ ಆನಂದವಾಗಿದೆ. ಆದರೆ ಪ್ರಾಂತೀಯತೆ ಹಾಗೂ ಇತರ ರಾಜಕೀಯ ತತ್ವಗಳ ವಿಷಮಯ ಪ್ರಚಾರದಿಂದ ದುಷ್ಟ ಶಕ್ತಿಗಳು ತಲೆ ಎತ್ತಿವೆ. ಈಗ ಜನಗಮನೇ ಹೆಚ್ಚಿನ ಕೊಣೆ ಬಿದ್ದಿದೆ. ರಾಷ್ಟ್ರದ ಭದ್ರತೆಗೆ ಸಂಪೂರ್ಣವಾದ ಐಕ್ಯ ಮತ್ತು ಶಾಂತಿ ಅಗತ್ಯ. ಇಂಥ ಸಂದರ್ಭದ ರಾಜಕೀಯ ವಾದವಿವಾದದಲ್ಲಿ ವ್ಯರ್ಥ ಶಕ್ತಿ ವ್ಯಯ ಮಾಡದೆ ಜನರಿಗೆ ಆಹಾರ ಮತ್ತು ಇತರ ಆವಶ್ಯಕ ವಸ್ತುಗಳು ದೊರೆಯುವಂತೆ ಮಾಡಲು ಮನಮುಟ್ಟಿ ಪ್ರಯತ್ನಿಸಬೇಕು. ಇದೇ ಮಹಾತ್ಮರ ಅನುಯಾಯಿಗಳೆಂದು ಹೇಳಿಕೊಳ್ಳುವವರ ಕರ್ತವ್ಯವಾಗಿದೆ.

ಪಟೇಲ್

ಸಕ್ಕರೆ ಕಾರ್ಖಾನೆ

ಹಿಂದೂಸ್ಥಾನದಲ್ಲಿ ಒಟ್ಟು ಇರುವ 155 ಸಕ್ಕರೆ ಕಾರ್ಖಾನೆಗಳು ವರ್ಷಕ್ಕೆ ಸುಮಾರು ಒಂದು ಮಿಲಿಯ ಟನ್ನುಗಳಷ್ಟು ಸಕ್ಕರೆ ತಯಾರಿಸುತ್ತವೆ. ವರ್ಷಕ್ಕೆ ನಮ್ಮಗ ಪ್ರಮಾಣ 16 ಲಕ್ಷ ಟನ್ನು. ಇದರಲ್ಲಿ ಒಂದು ಲಕ್ಷ ಟನ್ನು ರಫ್ತುಮಾಡುವದಕ್ಕೆ ಈ ಬಗ್ಗೆ ದಿನಕ್ಕೆ 800 ರಿಂದ 1,000 ಟನ್ನುಗಳಷ್ಟು ಕಬ್ಬು ಹಿಂಡಬಹುದಾದ ಸುಮಾರು 45 ಕಾರ್ಖಾನೆಗಳನ್ನು ದೇಶದ ಯೋಗ್ಯ ಸ್ಥಳಗಳಲ್ಲಿ ಸ್ಥಾಪಿಸಿ, ಸಕ್ಕರೆ ಕೈಗಾರಿಕೆಯನ್ನು ವಿಸ್ತರಿಸಲು ಸರಕಾರವು ನಿಶ್ಚಯಿಸಿದೆ.

— ಸರಕಾರದವರು ಕೂಲಿಕಾರರ ಹಕ್ಕುಗಳಿಗೆ ಮನ್ನಣೆ ಕೊಡಲು ಸಿದ್ಧರಿದ್ದಾರೆ. ಆದರೆ ಹಿಂಸೆಗೆ ಅಥವಾ ಪ್ರತ್ಯಕ್ಷ ಬಂಡಾಯಕ್ಕೆ ಇಲ್ಲವೆ, ಹೊರಗಿನವರು ಕೊಡುವ ಉತ್ತೇಜನಕ್ಕೆ ಕೂಲಿಕಾರರು ಬಲಿಬಿದ್ದು ಅದರಂತೆ ಬೆದರಿಕೆ ಹಾಕಲು ಯತ್ನಿಸಿದರೆ ಮಾತ್ರ ಸರಕಾರವು ತಲೆಬಾಗದು. ಸರಕಾರದವರು ಮುಂಜಾಗ್ರತೆಯ ಉಪಾಯವೆಂದು ಹಿಂಸೆ, ವಿಧ್ವಂಸಕ ಕೃತಿಗಳ ಪ್ರಚೋದನೆಮಾಡುವ ಕಮ್ಯೂನಿಷ್ಟರನ್ನು ಬಂಧಿಸಿದ್ದಾರೆ. ಹೀಗೆ ಬಂಧಿಸಲು ಪ್ರಜಾಪ್ರಭುತ್ವ ತತ್ವದಲ್ಲಿ ವಿಶ್ವಾಸವಿದ್ದ ಹಾಗೂ ಹಿಂಸಾಚಾರವನ್ನು ಖಂಡಿಸುವ ಈ ದೇಶದ ಸರ್ವಜನತೆಯ ಬೆಂಬಲವು ಸರಕಾರಕ್ಕಿದೆ ಎಂದು ನಾನು ಭಾವಿಸುತ್ತೇನೆ.

ನೆಹರು.

"ಸುಳ್ಳು ಎಷ್ಟು ಸಣ್ಣದಿದ್ದರೂ, ಅದನ್ನು ನಮ್ಮ ಬಾಯಿ ಮಾತಿನಿಂದ, ಬರಹದಿಂದ ವ್ಯಕ್ತಪಡಿಸಲು ಅವಕಾಶ ಕೊಟ್ಟೆವೆಂದರೆ, ನಾವು ಹೇಗೆ ಪರಿಪೂರ್ಣರಾದ ಸತ್ಯ ಸಂದೇಶ ವಾಚಕರಾಗಲೆಳಸಬಲ್ಲೆವು? ಸತ್ಯದ ಪರಿಪೂರ್ಣ ಸೇವಕನು ಅತ್ಯಂತ ಸೂಕ್ಷ್ಮ ತಪ್ಪು, ಅತ್ಯುಕ್ತಿ, ಅಥವಾ ವಿಕೃತಿಗಳಿಂದ ದೂರವಾಗಿರಲೇಬೇಕು.

ಶ್ರೀ ಅರವಿಂದ ಯೋಗಿಗಳ ಈ ಹಿತವಾಕ್ಯಗಳು ಅವರ ಆಶ್ರಮವಾಸಿಗಳಿಗೆ ಎಷ್ಟು ಅನ್ವಯಿಸುವುದೋ ಅಷ್ಟೇ ನಾಡಿನ ಪ್ರತಿಯೊಬ್ಬನಿಗೂ ಅನ್ವಯಿಸುವದು

ಸುತ್ತಲೂ ಕಣ್ಣಿಟ್ಟುನೋಡಿ

ಗಿಡ ನಟ್ಟ ಎರಡು ದಿನಗಳಲ್ಲಿಯೇ ಅದು ಫಲಬಿಡಲಾರದು. 'ಸ್ವಾತಂತ್ರ್ಯದ ಈ ಗಿಡ ಫಲಕೊಡಬೇಕಾದರೆ ಅದನ್ನು ಚನ್ನಾಗಿ ಉಳಿಸಿ, ಬೆಳಸಬೇಕು. ಒಕ್ಕಟ್ಟಾದ ಸಂಪೂರ್ಣವಾದ ಏಕತೆ, ಶೀಲ, ಸೇವಾ, ಇವು ನೀರು, ಗೊಬ್ಬರವಾಗಿ ಸ್ವಾತಂತ್ರ್ಯ ಸಸಿಗೆ ಪೌಷ್ಟಿಕವಾಗಬೇಕು. ಅಂದರೆ ತಾನೇ ಸಸಿ ಬೆಳೆದೀತು. ಬೆಳೆದು ಉಳಿದೀತು. ನಾವು ಮೂವತ್ತುನಾಲ್ಕು ಕೋಟಿ ಸಂಖ್ಯೆಯುಳ್ಳ ಪ್ರಜಾವರ್ಗ ಅತಿ ಪ್ರಾಚೀನ ವಾದ ಕಲೆ, ಸಂಸ್ಕೃತಿ, ಸಾಧನೆ ಸಿದ್ಧಿಗಳ ಚರಿತ್ರೆಯನ್ನು ಹಿನ್ನಲೆಯಿದೆ ನಮಗೆ ಸುತ್ತಲು ಪ್ರಪಂಚದತ್ತ ನೋಡೋಣ. ಅಂತರಿಕ ಕಲಹಗಳಿಂದ ಚೀನಾದೇಶದ ಇಂದಿನ ಪಾಡು. ಪಕ್ಕದ ದೇಶ ಬರ್ಮಾ ಸವಿಯಲು ಪ್ರಾರಂಭಮಾಡುತ್ತಿರುವ ಒಳ ಜಗಳ. ಇವನ್ನು ಸಾವಧಾನದಿಂದ ನೋಡಿ ನಾವು ಮುಂದುವರಿಯಬೇಕಾಗಿದೆ.

ರಾಜ್ಯ ಆಡಳಿತದಲ್ಲಿ ಹೆಚ್ಚಿನ ಅನುಭವವಿಲ್ಲದ ಕೊಂಗ್ರೆಸು ತಪ್ಪುಗಳನ್ನು ಮಾಡಿಲ್ಲವೆನ್ನಲಾರೆ. ಮಾಡಿರಬಹುದು, ಆತ್ಮಸಾಕ್ಷಿಯಾಗಿ ಕೆಲಸಗಳನ್ನು ಪೂರೈಸುವಾಗ ಆಗುವ ತಪ್ಪು ಅದು ತಪ್ಪಲ್ಲ. ತಪ್ಪುಗಳನ್ನು ಮಾಡಿದ್ದರೂ ಉದ್ದೇಶ ಪೂರ್ವಕವಾಡುತ್ತಿದೆ ಎಂದು ಯಾರೂ ಹೇಳಲಾಗದು. ಆ ಸಂಸ್ಥೆ ಅಷ್ಟು ಪವಿತ್ರವಿದೆ ಗಂಗಾನದಿ ಇದ್ದಂತೆ ನಾರುವ ರೊಚ್ಚು ಆ ನದಿಯನ್ನು ಸೇರಬಹುದು. ಅಂದರೆ ಅದರ ಪಾವಿತ್ರ್ಯ ಕುಂದಿದೆ ಎನ್ನಲೆ,? ವಿವೇಕಕ್ಕೆ ಜನ ಒಲಿಯಬೇಕು ಗುಣವನ್ನು ಮೆಚ್ಚುವ ದೊಡ್ಡತನಬೇಕು ಮನಸ್ಸು ನಯವಾಗಿ ಹೃದಯ ವಿಶಾಲವಾಗಿರಬೇಕು ಇಡಿಯ ಭಾರತಕ್ಕೆ ನಿಷ್ಠೆಯಿಂದಿರುವ ಗುಣ ಮೈಗೂಡಿಸಿಕೊಳ್ಳಬೇಕು. ಆಗತಾನೆ ನಾವು ಬೆಳೆದೇವು ನಮ್ಮ ಭಾಗ್ಯವನ್ನು ಸಹಿಸಲಾಗದೆ ಮಹಾತ್ಮಾಜಿಯವರನ್ನು ನಾವು ಕಳೆದುಕೊಂಡೆವು. ಅಂತೆ ನಮ್ಮ ಯೋಗ್ಯತೆಯನ್ನು ಸಹಿಸಲಾಗದೆ ನಮ್ಮ ಏಕಮೇವ ಸಂಸ್ಥೆ ಕೊಂಗ್ರೆಸನ್ನು ಟೀಕೆ ಮಾಡಲು ಹೊರಟೆವೆಂದರೆ ಅದನ್ನೂ ಅಧಿಕಾರದಿಂದ ಉರುಳಿಸಲು ಪ್ರಯತ್ನಿಸುವ ಕೆಟ್ಟ ಶಕ್ತಿಗಳಿಗೆ ಬೆಂಬಲಕೊಟ್ಟೆವೆಂದರೆ ಬೆಳಕನ್ನು ದೂಡಿ ಕತ್ತಲೆಗೆ ಮುಖ ಮಾಡಿದಂತಾಗಬಹುದು.

ವಿಶೇಷ ಕಾಣಿಕೆ

ಪ್ರತಿಯೊಬ್ಬನೂ ಉತ್ತಮಗೊಂಡು ಮನಶ್ಶಕ್ತಿಯಿಂದ ಭಾರತದ ಸೌಭಾಗ್ಯಕ್ಕೆ ತನ್ನದೆ ಆದ ವಿಶೇಷ ಕಾಣಿಕೆಯನ್ನು ಸಲ್ಲಿಸಬೇಕು ಹಾಗೆ ಆಗದ ಹೊರತು ದೇಶದ ಬದುಕು ಪುಷ್ಟಿಗೊಳ್ಳಲಾರದು ವ್ಯಕ್ತಿಯ ಸ್ವಂತಶಕ್ತಿ ಬಲಿತಂತೆಲ್ಲ ಅವನ ಸುತ್ತಲಿನ ಆವರಣ ಮೇಲಾಗಲು ಸಾಧ್ಯವಾಗುವದು ಆವರಣದ ತುಂಬಿನಿಂದ ವ್ಯಕ್ತಿಯ ಶಕ್ತಿ ಗುಣ ಬೆಳೆಯುವುದು. ಇವೆರಡರ ಅನ್ಯೋನ್ಯ ಸಹಾಯಕತೆಯಿಂದ ಒಟ್ಟು ಒಂದು ದೇಶದ ಬದುಕು ರೂಪಿಸಲ್ಪಡುವದು. ಪ್ರಧಾನ ಮಂತ್ರಿ ಪಂಡಿತ ನೆಹರು ಇವರು ಡೆಕ್ಕನ ಆಕಾಶವಾಣಿ ಭಾಷಣದಲ್ಲಿ ಹೀಗೆ ಅಂದಿರುವರು.

"Let us contend against each other in service and good will, let each one of us think more of his duties and obligations to another than his rights. Rights flow from duties discharged and obligations rendered."

ನಮಗೆ ನಮ್ಮ ಹಕ್ಕಿನ ಜೊತೆಯಲ್ಲಿ ನಮ್ಮ ಕರ್ತವ್ಯದ ಅರಿವಿರಬೇಕು ನನ್ನ ಸುಖವನ್ನೇ ನಾನು ನೋಡಿಕೊಂಡಿರುವದಾದರೆ ಈ ಒಪಕನ್ನು ಅಂಗೀಕರಿಸಿದಂತಾಗಲಿಲ್ಲ. ಹಾಗಿದ್ದರೆ ತಾಯಿ, ನಗನನ್ನು ಸಾಕಬೇಕೇಕೆ? ಮನುಷ್ಯನು ತನ್ನ ಸುಖದ ಜೊತೆಯಲ್ಲಿ ಪಕ್ಕದವನ ಹಿತ ಒಳಿತನ್ನು ಬಗೆಯಬೇಕು ಅಂದರೆ ಮಾತ್ರ ನಮ್ಮ ಜನರಲ್ಲಿ ಅಭಿಮಾನ, ವಿಶ್ವಾಸ ನಾಳಿನ ಮಂಗಳದ ಕಡೆಗೆ ದೇಶದ ಜನತೆಯನ್ನು ಒಂದೇ ಪಥದಿಂದ ನಡೆಸಬೇಕೆಂಬ ಪ್ರತಿಜ್ಞೆ, ಈ ಭಾಗ್ಯ ಎಲ್ಲೆಡೆಯಲ್ಲಿ ಉಂಟಾದೀತು. ಇದು ಸಾಧ್ಯವಾಗಬೇಕಾದರೆ ನಮ್ಮ ಘನತೆ, ಶೀಲ ಉತ್ತಮಗೊಳ್ಳಬೇಕು ನಮ್ಮ ಸಂಕಲ್ಪ ಶುದ್ಧಿಯಾಗಬೇಕು.

ನಮ್ಮ ಯುಗಾದಿ

ಮೊನ್ನೆ ತಾ|| ೩೦-೩-೪೯ ಕ್ಕೆ ನಮ್ಮ ಯುಗಾದಿಯಾಯಿತು ಸರ್ವಧಾರಿ ಸಂವತ್ಸರವನ್ನು ದಾಟಿ ವಿರೋಧಿ ಸಂವತ್ಸರಕ್ಕೆ ನಾವು ಕಾಲಿಟ್ಟಿದ್ದೇವೆ

ಈ ಸಂವತ್ಸರದ ಹೆಸರು "ವಿರೋಧಿ" ಎಂದು ಇದ್ದದ್ದನ್ನು ನೋಡಿದರೆ ಸ್ವಲ್ಪ ಗಾಬರಿಯೆನಿಸುತ್ತದೆ. ಆದರೆ ಈ ಮೊದಲು ನಮಗೆ ಗಾಬರಿಯಿಲ್ಲದಿದ್ದರಷ್ಟೇ ಈ ಸಂವತ್ಸರವು ನಮ್ಮನ್ನು ಹೆದರಿಸುವದು?

ಜ್ಯೋತಿಷಿಗಳು ಈ ವರ್ಷದಲ್ಲಿ ಹಲಕೆಲವು ತೊಂದರೆಗಳುಂಟೆಂದು ಹೇಳುತ್ತಿದ್ದರೂ, ನಮ್ಮ ಜಗತ್ತಿನಲ್ಲಿ ಬಹು ಮರ್ಯಾದೆಯಿಂದ ತಲೆಯೆತ್ತುವ ಭೋಗವಿದೆಯೆಂದು ಹೇಳಿ ಧೈರ್ಯಕೊಡುತ್ತಿದ್ದಾರೆ.

ಏನೇ ಇರಲಿ, ಗ್ರಹಾಚಾರವು ದುರ್ಬಲವನ್ನು ಕಂಡು ಹೆಚ್ಚು ಕಾಡುತ್ತದೆಯೆಂಬುದನ್ನು ನಾವು ಮರೆಯಬಾರದು. ಪುರಂದರದಾಸರು "ಯಾರು ಒಲಿದರೇನು? ನಮಗಿನ್ನಾರು ಮುನಿದರೇನು?" ಎಂಬ ಪದದಲ್ಲಿ ಕೊನೆಗೆ "ಭಾನು ನಂದನ ಬುಧ ಮಂಗಳರ ಒಲವು ತಪ್ಪಿದರೇನು?" ಎಂದು ಹೇಳಿದ್ದಾರೆ. ಅಂಥವರಿಗೆ ಗ್ರಹಾಚಾರದ ಭಯವೆಲ್ಲಿದೆ?

ನಾವು ಪುರಂಧರ ದಾಸರಷ್ಟು ಧೈರ್ಯವಂತರು ಆಗದಿದ್ದರೂ. ಮೋಕ್ಷವನ್ನೇ ಸಂಪಾದಿಸಿ ಉಳಿದ ತೊಂದರೆ ತೊಡಕುಗಳಿಗೆ ಸೊಪ್ಪುಹಾಕುವ ಅವಶ್ಯಕತೆಯನ್ನು ಮೀರಿದ ಅವರಂತೆ ಯೋಗ್ಯತಾಸಂಪನ್ನರಾಗಿರದಿದ್ದರೂ, ನಮ್ಮ ದೈನಂದಿನ ಜೀವನವನ್ನು ಯಶಸ್ವಿಯಾಗಿ ಸಾಗಿಸಿಕೊಳ್ಳಲು ಶಕ್ತರಾದರೂ ಆಗಲಿಕ್ಕಿಲ್ಲವೇ?

ಜಾಗತಿಕ ರಣಕುಂಡವು ಉರಿದು ಉರಿದು ಕಪ್ಪಿಡುತ್ತಿದೆ ಅದರ ಕಾರಣದಿಂದ ದೊಡ್ಡರಾಷ್ಟ್ರಗಳು ವಿಮೋಚನೆ ಕೊಂಡುತ್ತಿವೆ. ತಲೆನಾಯಕರು ಹೊಡೆದಾಡಿ ಹೊಡೆದಾಡಿ ನಿರ್ವೀರ್ಯರಾಗುತ್ತಿದ್ದಾರೆ.

ಈ ಪರಿಸ್ಥಿತಿಯ ಮೂಲಕವೇ ಮುಕ್ತವಾಗಿ ಮುಂದರಿಯುತ್ತಿದ್ದ ಹಿಂದುಸ್ಥಾನವು ಈ ವರ್ಷ ಹೆಚ್ಚಿನ ಹುರುಪು ಹುಮ್ಮಸದಿಂದ ಮುನ್ನಗ್ಗಲು ಯಾವ ಆತಂಕವಿದೆ?

ಆದರೂ ನಾವು ಅದರ ಫಲವನ್ನು ತೆಗೆದುಕೊಳ್ಳಲು ಇನ್ನೂ ಮುಂದೆ ಬರುತ್ತಿಲ್ಲ ಅವರು ಹಾಗೆ ಮಾಡುತ್ತಾರೆ ಎಂದು ಎದುರಿನವರ ಜೀವನದ ವಿಮರ್ಶೆ ಮಾಡಲು ಹೋಗುತ್ತಿದ್ದೇವೆ. ನಾವು ಏನು ಮಾಡುತ್ತಿದ್ದೇವೆ? ಎಂಬ ಬಗ್ಗೆ ನಾವು ಆಲೋಚಿಸುತ್ತಿಲ್ಲ.

ಆ ಶಕ್ತಿಯನ್ನು ಸಂಪಾದಿಸಿಕೊಂಡು ನಾವು ಸಾಗೋಣ ಆಗ ಈ ವರ್ಷವು ನಮಗೆ ಶುಭದಾಯಕವಾಗದೆ ಇರದು.

[ಜಯಹಿಂದ್]

ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ

ಕೃಷಿ ಸಂಶೋಧನೆಯ ಫಲಿತಾಂಶ

ದತ್ತಮಂಡಲದ ಜಿಲ್ಲೆಗಳಾದ ಬಳ್ಳಾರಿ, ಅನಂತಪುರ, ಕಡಪ, ಕರ್ನೂಲು ಜಿಲ್ಲೆಗಳು ಆರ್ಥಿಕದೃಷ್ಟಿಯಿಂದ ಹಿಂದುಳಿದವುಗಳೆಂದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇದರಿಂದ ಈ ಜಿಲ್ಲೆಗಳ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸರಕಾರದವರೂ ಸಾರ್ವಜನಿಕರೂ ಪ್ರಾಧಾನ್ಯ ಕೊಟ್ಟಿದ್ದಾರೆ. ಈ ಜಿಲ್ಲೆಗಳ ಆರ್ಥಿಕಾಭಿವೃದ್ಧಿಗೆ ಸಂಬಂಧಪಟ್ಟ ಅನೇಕ ವಿಷಯಗಳಲ್ಲಿ ಕೃಷಿ ಸುಧಾರಣೆಯು ಮೊತ್ತ ಮೊದಲನೆಯದಾಗಿದೆ.

ಮುಖ್ಯವಾಗಿ ಉತ್ತಮವಾದ ಸುಧಾರಿತ ಬೀಜಗಳನ್ನೊದಗಿಸುವುದು, ಮಳೆಯ ಕೊರತೆಗೆ ಅನುಸಾರವಾಗಿ ದತ್ತಮಂಡಲದಲ್ಲಿ ರೂಢಿಯಲ್ಲಿರುವ ನಾನಾಬಗೆಯ ಬೆಳೆಗಳನ್ನು ಬೆಳೆಸುವುದು, ಮಳೆಯಿಲ್ಲದೆ ಆಗುವ, ಮೊದಲೇ ಬೆಳೆಯುವ ಬೆಳೆಗಳನ್ನು ರೂಢಿಗೆ ತರುವುದು, ಇತ್ಯಾದಿಗಳನ್ನು ಕೈಕೊಳ್ಳಲಾಗಿದೆ. ಇದಲ್ಲದೆ ಭೂಮಿಯ ತೇವವನ್ನು ಉಳಿಸಿಕೊಳ್ಳುವುದಕ್ಕಾಗಿ ಪ್ರಯತ್ನಮಾಡುವುದರಿಂದ ಕೃಷಿಕರಿಗೆ ಹೆಚ್ಚಿನ ಲಾಭದಾಯಕವಾಗಿದೆ. ಮೇಲಿನ ವಿಷಯಗಳಲ್ಲಿ ಹಗರಿಯ ಕೃಷಿ ಸಂಶೋಧನಾಕ್ಷೇತ್ರವು ಹೆಚ್ಚಿನ ಸಹಾಯಕವಾಗಿದೆ. ಇಲ್ಲಿಂದ ಸುಧಾರಿತ ಬೀಜಗಳು, ಬೇಗನೇ ಬೆಳೆಯುವ ಹತ್ತಿ, ಜೋಳ, ಕೊತ್ರ ಇವು ರೈತರಿಗೆಲ್ಲಾ ಅಚ್ಚುಮೆಚ್ಚಿನವುಗಳಾಗಿವೆ. ಕೆಲವು ಹೊಸ ತರದ ಹತ್ತಿ ಮತ್ತು ಜೋಳದ ಸುಧಾರಿತ ಬೀಜಗಳನ್ನು ಬಳ್ಳಾರಿ ಜಿಲ್ಲೆಯಲ್ಲಿ ಈ ವರ್ಷ ಉಪಯೋಗಿಸಿ ನೋಡಲಾಗುತ್ತಿದೆ. ಕೆಳಗಿನ ಪಟ್ಟಿಯಿಂದ ಈ ಸಂಶೋಧನಾ ಕ್ಷೇತ್ರದ ಪ್ರಯೋಜನವು ವ್ಯಕ್ತವಾಗಬಹುದು;—

ಬೆಳೆಯ ಹೆಸರು	ಬಳ್ಳಾರಿ-ಅನಂತಪುರ ಜಿಲ್ಲೆಗಳಲ್ಲಿ ವಿಸ್ತೀರ್ಣ (ಎಕರೆಗಳು)	ಸುಧಾರಿತ ಬೀಜಗಳನ್ನು ಉಪಯೋಗಿಸುವ ವಿಸ್ತೀರ್ಣ (ಎಕರೆಗಳು)	ಪ್ರತಿವರ್ಷ ಲಾಭ ರೂಪಾಯಿಗಳು	ಪರಮಾರ್ಥಿಕ ಉತ್ಪತ್ತಿ ರೂಪಾಯಿಗಳು
ಹತ್ತಿ (ಎಚ್ 1) ..	6 ಲಕ್ಷಗಳು	4 ಲಕ್ಷಗಳು	40 ಲಕ್ಷಗಳು	60 ಲಕ್ಷಗಳು
ಜೋಳ (ಎಚ್ 1 ಮತ್ತು ಎಂ 47-3)	6-1 ,,	3 ,,	11-1 ,,	25-5 ,,
ನವಣೆ (ಎಚ್.1 ಮತ್ತು ಎಂ 2)	13-7 ,,	88-6 ಸಾವಿರಗಳು	2-2 ,,	34 ,,
ರಾಗಿ (ಎಚ್.1 ಮತ್ತು ಎಂ.1	3 ,,	11-4 ,,	1-5 ,,	40-5 ,,
ಬೆಟ್ಟ ವ್ಯವಸಾಯದ ವಿಸ್ತರಣೆಯಿಂದ	12 ,,	....	....	40 ,,
		ಜಮಾ	54-8 ಲಕ್ಷಗಳು 55 ,,	200 ಲಕ್ಷಗಳು 2 ಕೋಟಿ

ನೆಲ್ಲೂರು ಮತ್ತು ಗುಂಟೂರು ಜಿಲ್ಲೆಗಳ ವಿಸ್ತೀರ್ಣ ಸಹಿತ

— ರಾಷ್ಟ್ರದ ವಿಭಜನೆ, ಅದರಿಂದ ಉಂಟಾದ ಆರ್ಥಿಕ ಸಮಸ್ಯೆಗಳು ಇವುಗಳಿಂದ ಜನರ ಆರ್ಥಿಕ ಪರಿಸ್ಥಿತಿ ಕಷ್ಟದಾಯಕವಾಗಿದ್ದರೂ ಜಾತೀಯ ಸೌಹಾರ್ದವು ದೇಶದಲ್ಲಿ ನೆಲೆಸಿದ್ದು ಕಂಡು ನನಗೆ ಆನಂದವಾಗಿದೆ. ಆದರೆ ಪ್ರಾಂತೀಯತೆ ಹಾಗೂ ಇತರ ರಾಜಕೀಯ ತತ್ವಗಳ ವಿಷಮಯ ಪ್ರಚಾರದಿಂದ ದುಷ್ಟ ಶಕ್ತಿಗಳ ತಲೆ ಎತ್ತಿವೆ. ಈಗ ಜನರಮೇಲೆ ಹೆಚ್ಚಿನ ಹೊಣೆ ಬಿದ್ದಿದೆ. ರಾಷ್ಟ್ರದ ಭದ್ರತೆಗೆ ಸಂಪೂರ್ಣವಾದ ಐಕ್ಯ ಮತ್ತು ಶಾಂತಿ ಅಗತ್ಯ. ಇಂಥ ಸಂದರ್ಭದಲ್ಲಿ ರಾಜಕೀಯ ವಾದವಿವಾದದಲ್ಲಿ ವ್ಯರ್ಥ ಶಕ್ತಿ ವ್ಯಯ ಮಾಡದೆ ಜನರಿಗೆ ಆಹಾರ ಮತ್ತು ಇತರ ಅವಶ್ಯಕ ವಸ್ತುಗಳು ದೊರೆಯುವಂತೆ ಮಾಡಲು ಮನಮುಟ್ಟಿ ಪ್ರಯತ್ನಿಸಬೇಕು. ಇದೇ ಮಹಾತ್ಮರ ಅನುಯಾಯಿಗಳೆಂದು ಹೇಳಿಕೊಳ್ಳುವವರ ಕರ್ತವ್ಯವಾಗಿದೆ.

ಪಟೇಲ್

ಸಕ್ಕರೆ ಕಾರ್ಖಾನೆ

ಹಿಂದೂಸ್ಥಾನದಲ್ಲಿ ಒಟ್ಟು ಇರುವ 155 ಸಕ್ಕರೆ ಕಾರ್ಖಾನೆಗಳು ವರ್ಷಕ್ಕೆ ಸುಮಾರು ಒಂದುಮಿಲಿಯ ಟನ್ನುಗಳಷ್ಟು ಸಕ್ಕರೆ ತಯಾರಿಸುತ್ತವೆ. ವರ್ಷಕ್ಕೆ ನಮ್ಮ ಗುರಿ ಪ್ರಮಾಣ 16 ಲಕ್ಷ ಟನ್ನು. ಇದರಲ್ಲಿ ಒಂದು ಲಕ್ಷ ಟನ್ನು ರಫ್ತುಮಾಡುವದಕ್ಕೆ. ಈ ಬಗ್ಗೆ ದಿನಕ್ಕೆ 800 ರಿಂದ 1,000 ಟನ್ನುಗಳಷ್ಟು ಕಬ್ಬು ಹಿಂಡಬಹುದಾದ ಸುಮಾರು 45 ಕಾರ್ಖಾನೆಗಳನ್ನು ದೇಶದ ಯೋಗ್ಯ ಸ್ಥಳಗಳಲ್ಲಿ ಸ್ಥಾಪಿಸಿ, ಸಕ್ಕರೆ ಕೈಗಾರಿಕೆಯನ್ನು ವಿಸ್ತರಿಸಲು ಸರಕಾರವು ನಿಶ್ಚಯಿಸಿದೆ.

— ಸರಕಾರದವರು ಕೂಲಿಕಾರರ ಹಕ್ಕುಗಳಿಗೆ ಮನ್ನಣೆ ಕೊಡಲು ಸಿದ್ಧರಿದ್ದಾರೆ. ಆದರೆ ಹಿಂಸೆಗೆ ಅಥವಾ ಪ್ರತ್ಯಕ್ಷ ಬಂಡಾಯಕ್ಕೆ ಇಲ್ಲವೆ, ಹೊರಗಿನವರು ಕೊಡುವ ಉತ್ತೇಜನಕ್ಕೆ ಕೂಲಿಕಾರರು ಬಲಿಬಿದ್ದು ಆದರಂತೆ ಬೆದರಿಕೆ ಹಾಕಲು ಯತ್ನಿಸಿದರೆ ಮಾತ್ರ ಸರಕಾರವು ತಲೆಬಾಗದು. ಸರಕಾರದವರು ಮುಂಜಾಗ್ರತೆಯ ಉಪಾಯವೆಂದು ಹಿಂಸೆ, ವಿಧ್ವಂಸಕ ಕೃತಿಗಳ ಪ್ರಚೋದನೆಮಾಡುವ ಕಮ್ಯುನಿಸ್ಟರನ್ನು ಬಂಧಿಸಿದ್ದಾರೆ. ಹೀಗೆ ಬಂಧಿಸಲು ಪ್ರಜಾಪ್ರಭುತ್ವ ತತ್ವದಲ್ಲಿ ವಿಶ್ವಾಸವಿದ್ದ ಹಾಗೂ ಹಿಂಸಾಚಾರವನ್ನು ಖಂಡಿಸುವ ಈ ದೇಶದ ಸರ್ವಜನತೆಯ ಬೆಂಬಲವು ಸರಕಾರಕ್ಕಿದೆ ಎಂದು ನಾನು ಭಾವಿಸುತ್ತೇನೆ.

ನೆಹರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193[illegible]

ಮುಖ್ಯ ಕಾರ್ಯಾಲಯ— ಬಳ್ಳಾರಿ.

—:0:—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ವತ್ತು ಗಡುವಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು

ಮುಖ್ಯ ಕಾರ್ಯಾಲಯ-ಬಳ್ಳಾರಿ. ಬಿ. ವಿ. ಶೇಷಗಿರಿರಾವು ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931 ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ- [illegible] ಹೈಸ್ಕೂಲ್ ಕಟ್ಟಡ
ತರಗತಿಗಳು — ಪ್ರಾರಂಭಿಕೆ — ಮಾಧ್ಯಮಿಕ ರಾಷ್ಟ್ರಭಾಷೆ ಉನ್ನತ — ವಿಶಾರದ ಪ್ರಚಾರಕ
ವೇಳೆ — ಪ್ರಾತಃಕಾಲ 7ರಿಂದ 9½ ಸಾಯಂಕಾಲ 6ರಿಂದ 8ರ ವರೆಗೆ ಪಾಠ. ಪುಸ್ತಕ-ಪರೀಕ್ಷೆ ವರ್ಗಗಳ ಅವಧಿ ೨ ಲಾಕ ಪ್ಲಿ ವಿಸ್ತೃತ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0-0-6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:— ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg No M. 4746

ನವ ಭಾರತ ಬಳ್ಳಾರಿ. 11-4-49

(Nationalist Weekly)

To

Sri ....

ಚಂದಾದರಗಳು	Subscription Rates
ವರ್ಷಕ್ಕೆ 5 0 0	One Year 5—0—0
6 ತಿಂಗಳಿಗೆ 3- 0 - 0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಏಕೈಕ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ [illegible] ಏಪ್ರಿಲ್ [illegible] | ಸಂಚಿಕೆ ೧೪

ಹಿಂದಿ ಅಥವಾ ಹಿಂದುಸ್ತಾನಿಯೇ ಏಕೆ?

ಸಮೃದ್ಧತೆಯೂ ಅಲ್ಲ ಸರಳತೆಯೂ ಅಲ್ಲ ಅನುಕೂಲತೆಯೆ ಅದರ ಸ್ಥಾನಮಾನಕ್ಕೆ ಕಾರಣ

ಆಚಾರ್ಯ ವಿನೋಬಾ ಭಾವೆಯವರ ಮನನೀಯ ವಿಚಾರಗಳು

ರಾಷ್ಟ್ರಭಾಷೆಯ ಲಿಪಿ, ಹೆಸರು, ಸ್ವರೂಪಗಳನ್ನು ಕುರಿತು ದೇಶದಲ್ಲಿ ಉದ್ರಿಕ್ತವಾದ ವಾದವಿವಾದಗಳು ಎದ್ದಿವೆಯೆಂದು ಎಲ್ಲರಿಗೂ ಗೊತ್ತು. ಪಂ. ನೆಹರೂ ಅವರಂಥವರು ಕೂಡ ಈ ಚರ್ಚೆಯಲ್ಲಿ ಸೇರಿಯುಳ್ಳಿಸ್ಸಿದ್ದಾರೆ. ಆಚೆಯ ವಾರ "ಹರಿಜನ" ಸಂಪಾದಕರಾದ ಶ್ರೀ ಕಿಶೋರಿಲಾಲರು, ನೆಹರೂ, ಸರದಾರ ಪಟೇಲರು, ರಾಜೇಂದ್ರಬಾಬು ಇವರಲ್ಲೊಬ್ಬರ ಕಡೆಗೆ ಈ ಪ್ರಶ್ನೆಯು ಮಧ್ಯಸ್ಥಿಯ ನ್ನೊಪ್ಪಿಸಬೇಕೆಂದು ವಾದಿಸಿದರು. ಇಲ್ಲಿ ಕೊಟ್ಟಿರುವದು ಗಾಂಧೀಜಿಯವರ ಶಿಷ್ಯಶ್ರೇಷ್ಠರಾದ ಶ್ರೀ ವಿನೋಬಾ ಭಾವೆಯವರು ವರ್ಧಾದಲ್ಲಿ ತಾ. ೨೯ ಫೆಬ್ರುವರಿಗೆ ಕೂಡಿದ ರಾಷ್ಟ್ರಭಾಷಾ ಸಮ್ಮೇಲನದಲ್ಲಿ ಮಾಡಿದ ಭಾಷಣ.

ರಾಷ್ಟ್ರಭಾಷೆಯ ವಿಷಯದಲ್ಲಿ ನಾನು ಯಾವುದೊಂದು ಛಲವಾದವನ್ನಿಟ್ಟುಕೊಂಡಿಲ್ಲವೆಂದು ಮೊದಲೇ ಹೇಳಿಬಿಡುತ್ತೇನೆ. ರಾಷ್ಟ್ರಭಾಷೆಯ ಪ್ರಶ್ನೆ ಜನತೆಗೆ ಸೇರಿದ್ದು ಅದು ಅನವರತ ರೂಢಿಯಿಂದ ರೂಪುಗೊಳ್ಳುತ್ತದೆ. ಆದುದರಿಂದ ನಮ್ಮ ರಾಷ್ಟ್ರಭಾಷೆ ಯಾವ ರೂಪವನ್ನು ಪಡೆಯುವದೆಂಬ ಮಾತನ್ನು ಭವಿಷ್ಯತ್ತೇ ನಿರ್ಣಯಿಸಬಲ್ಲದು. ಹಿಂದೀ ಹಿಂದೂಸ್ತಾನಿಗಳೆರಡರ ಅನುಯಾಯಿಗಳೂ ಒಮ್ಮತಕ್ಕೆ ಬಂದು ರಾಷ್ಟ್ರದ ಮುಂದೆ ಅವಿರೋಧವಾದ ನಿರ್ಣಯವನ್ನು ಮಂಡಿಸಬೇಕೆಂದು ನನ್ನ ಅಭಿಪ್ರಾಯ. ಈ ಪ್ರಶ್ನೆಯ ಮೇಲೆ ಉಗ್ರವಾದಾತ್ಮಕ ಚರ್ಚೆಗಳಾಗುತಿರುವದು ಶೋಚನೀಯವಾಗಿದೆ. ನಮಗೊಂದು ರಾಷ್ಟ್ರಭಾಷೆಯಾದರೂ ಏಕೆ ಬೇಕೆಂಬುವದನ್ನು ಮೊದಲು ವಿಚಾರಿಸೋಣ. ಇಷ್ಟು ಪ್ರಚಂಡ ಜನಸಂಖ್ಯೆಯುಳ್ಳ ವಿಸ್ತಾರವಾದ ದೇಶದಲ್ಲಿ ನಾವು ಐಕ್ಯವನ್ನು ಸ್ಥಾಪಿಸಬಯಸುವೆವಾದುದರಿಂದಲೇ ಅದು ಬೇಕಾಗಿದೆಯೆಂದು ಸ್ವಯಂವೇದ್ಯ. ಅಂದ ಮೇಲೆ ಐಕ್ಯಸಾಧಕವಾದ ರಾಷ್ಟ್ರಭಾಷೆಯ ಮೇಲೆ ಇಷ್ಟು ಹೋರಾಟವೇಕೆ? ಈ ವಿಷಯದಲ್ಲಿ ಜನರಲ್ಲಿ ಭಿನ್ನಾಭಿಪ್ರಾಯಗಳಿರುವದೊಂದು ವಿಚಿತ್ರವಲ್ಲ. ಆದರೆ ಆ ಭಿನ್ನಾಭಿಪ್ರಾಯಗಳಿಂದುಂಟಾಗುವ ಮನಃಕಷಾಯ ಮಾತ್ರ ತುಂಬ ವಿಷಾದಕರವೇ ಸರಿ.

ಸಮೃದ್ಧಿಯಲ್ಲ

ಅದು ಹಿಂದಿಯಿರಲಿ ಹಿಂದುಸ್ತಾನಿಯೇ ಇರಲಿ ನಮ್ಮ ರಾಷ್ಟ್ರಭಾಷೆಯ ಹೆಗ್ಗಳಿಕೆಯೇನು? ಹಿಂದಿಯನ್ನು ನಾವು ನಮ್ಮ ರಾಷ್ಟ್ರಭಾಷೆಯೆಂದೇಕೆ ಭಾವಿಸುತ್ತೇವೆ? ಹಿಂದಿ ಇತರ ಭಾಷೆಗಳಿಗಿಂತ ಹೆಚ್ಚು ಸಮೃದ್ಧವಾಗಿದೆಯೆಂದೇ? ಅಂಥ ಹೆಗ್ಗಳಿಕೆಯನ್ನು ಹಿಂದಿಯ ಪರವಾಗಿ ನಾವು ಹೇಳಿಕೊಳ್ಳುವದೂ ಇಲ್ಲ. ಆ ಹೆಗ್ಗಳಿಕೆ ಇರಲೂ ಎಡೆಯಿಲ್ಲ. ಬಂಗಾಲಿಗಳು ತಮ್ಮ ಭಾಷೆ ಹಿಂದಿಯಷ್ಟೇ, ಏಕೆ, ಅದಕ್ಕಿಂತಲೂ ಸಮೃದ್ಧವಾದ ಭಾಷೆಯೆಂದು ಹೇಳಿಕೊಳ್ಳುತ್ತಾರೆ. ಅವರ ಹೆಗ್ಗಳಿಕೆಯಲ್ಲಿ ಸತ್ಯವೂ ಇದೆಯೆಂದು ತೋರುತ್ತದೆ. ತಮಿಳು ಸಾಹಿತ್ಯ ಎರಡು ಸಾವಿರ ವರ್ಷಕ್ಕೆ ಪ್ರಾಚೀನವಾಗಿದೆ. ಎರಡು ಸಾವಿರ ಹತ್ತಿರ ಹತ್ತಿರವಾಗುವಷ್ಟು ಧಾತುಗಳ ಯಾದಿ ಕನ್ನಡ ಭಾಷೆಯಲ್ಲಿರುವದು ನನಗೆ ಗೊತ್ತಿದೆ. ಇದೂ ಅಲ್ಲದೆ ಸಂಸ್ಕೃತ ಭಾಷೆಯ ಎಲ್ಲ ಧಾತುಗಳನ್ನೂ ಅರಗಿಸಿಕೊಂಡು ಗದ್ಯಪದ್ಯಗಳೆರಡರಲ್ಲೂ ಅವನ್ನು ನಿರಾಯಾಸವಾಗಿ ಉಪಯೋಗಿಸಿಕೊಳ್ಳುವ ಶಕ್ತಿ ಕನ್ನಡದಲ್ಲಿದೆ. ಕನ್ನಡದಲ್ಲಿ 'ನಾನು ಧ್ಯಾನಿಸುತ್ತೇನೆ' ಎಂದು ಸಹಜವಾಗಿ ಹೇಳಬಹುದು. ಆದರೆ ಹಿಂದಿಯಲ್ಲಾಗಲಿ ಮರಾಠಿಯಲ್ಲಾಗಲಿ ಅದು ಸಾಧ್ಯವಿಲ್ಲ. ಅವೆರಡರಲ್ಲೂ "ನಾನು ಧ್ಯಾನ ಮಾಡುತ್ತೇನೆ" ಎಂದು ವಿಂಗಡವಾಗಿಯೆ ಹೇಳಬೇಕಾಗುತ್ತದೆ. ("ಮೈಂ ಧ್ಯಾನತಾ ಹೂಂ" ಎನ್ನದೆ "ಮೈಂ ಧ್ಯಾನ ಕರತಾ ಹೂಂ" ಎನ್ನಬೇಕಾಗುವದು.) ಅದೇ ಪ್ರಕಾರ ಸ್ನೇಹಿಸು, ದ್ವೇಷಿಸು ಎಂದು ಕನ್ನಡದಲ್ಲಿ ಹೇಳಬಹುದಾದರೆ ಉಳಿದೆರಡು ಭಾಷೆಗಳಲ್ಲಿ "ಸ್ನೇಹ ಮಾಡು", "ದ್ವೇಷ ಮಾಡು" (ಸ್ನೇಹ ಕರನಾ, ದ್ವೇಷ ಕರನಾ, ಎಂದೇ ಹೇಳ)ಬೇಕಾಗುತ್ತದೆ. ಸಂಸ್ಕೃತ ವಾಕ್ಯ[illegible] ವಾಕ್ಯರಚನೆಯನ್ನು ಬದಲಿಸದೆ ಇದ್ದದ್ದಂತೆ ಕನ್ನಡದಲ್ಲಿಳಿಸಬಹುದು. ತೆಲುಗು ಭಾಷೆಗೂ ಇದೇ ಮಾತು ಅನ್ವಯಿಸುತ್ತದೆ. ತನ್ನದೇ ಆದ ಸಾವಿರಗಟ್ಟಲೆ ಧಾತುಗಳೂ ಎಲ್ಲ ಸಂಸ್ಕೃತ ಧಾತುಗಳನ್ನು ಸುಲಭವಾಗಿ ಉಪಯೋಗಿಸಿಕೊಳ್ಳುವ ಸಾಮರ್ಥ್ಯವೂ ಉಳ್ಳ ಭಾಷೆ ತಾನು ಸಮೃದ್ಧಭಾಷೆಯೆಂದು ಹೇಳಿಕೊಂಡರೆ ತಪ್ಪೇನು?

ಸೌಲಭ್ಯವಲ್ಲ

ಇನ್ನು, ಇತರ ಭಾಷೆಗಳಿಗಿಂತ ಕಲಿಯಲು ಅದು ಸುಲಭವೆಂದು ಹೇಳಬಹುದೆ? ಅದು ಮರಾಠಿಗಿಂತ ಸುಲಭವಾಗಿದ್ದರೂ ತೀರ ಸುಲಭವೆಂದು ಹೇಳುವದು ಸರಿಯಾಗದು. ವ್ಯಾಕರಣ ದೃಷ್ಟಿಯಿಂದ ಹಿಂದಿಗಿಂತ ಬಂಗಾಲಿಯೆ ಎಷ್ಟೋ ಸುಲಭ. ಬಂಗಾಲಿಯಲ್ಲಿ ಧಾತುಗಳು ಲಿಂಗಭೇದದಿಂದ ಬದಲಾಗುವದಿಲ್ಲ. ಹಿಂದೀ ವ್ಯಾಕರಣವನ್ನು ಕಲಿಯಲು ಏಳು ದಿನ ಹಿಡಿದರೆ ಬಂಗಾಲಿಯನ್ನು ಕಲಿಯಲು ಒಂದೇ ದಿನ ಸಾಕು. ದಕ್ಷಿಣ ಭಾರತದ ಭಾಷೆಗಳಲ್ಲಿ ಮರಾಠಿಯ ಕ್ರಿಯಾಪದಗಳು ಬಹಳ ಸರಳವಾಗಿವೆ. ವರ್ತಮಾನ, ಭೂತ, ಭವಿಷ್ಯತ್ ಕಾಲ ಭೇದಗಳಿಂದಾಗಲಿ ಲಿಂಗಭೇದದಿಂದಾಗಲಿ ಅದರ ಕ್ರಿಯಾಪದಗಳ ರೂಪ ಮಾರ್ಪಡುವದಿಲ್ಲ. ದಕ್ಷಿಣ ಭಾರತದ ಯಾವ ಭಾಷೆಯಲ್ಲಿಯೂ ಲಿಂಗವ್ಯವಸ್ಥೆ ಜಟಿಲವಾಗಿಲ್ಲ. ಪ್ರಾಣಿಗಳಲ್ಲಿ ಹೆಣ್ಣುಗಳಿಗೆ ಸ್ತ್ರೀಲಿಂಗ, ಗಂಡುಗಳಿಗೆ ಪುಲ್ಲಿಂಗವಿದ್ದರೆ ಉಳಿದೆಲ್ಲ ನಾಮಪದಗಳು ನಪುಂಸಕಲಿಂಗಕ್ಕೇ ಸೇರಿರುವವು. ಆದರೆ ಹಿಂದಿಯಲ್ಲೊ, "ಪತ್ಥರ" (ಕಲ್ಲು) ಪುಲ್ಲಿಂಗ, ಆದರೆ ಕಲ್ಲಿನಿಂದ ಮಾಡಿದ "ದೀವಾಲ" (ಗೋಡೆ) ಸ್ತ್ರೀಲಿಂಗ. ಇವೆಲ್ಲ ದಕ್ಷಿಣ ಭಾರತದ ಜನರಿಗೆ ತುಂಬ ವಿಚಿತ್ರವೆಂದು ಭಾಸವಾಗುತ್ತದೆ. ಆದುದರಿಂದ ಅವರು ಹಿಂದಿ ಕಠಿನವೆಂದು ಬಗೆಯುತ್ತಾರೆ.

ಹಾಗಾದರೆ ಹಿಂದಿಯ ಹೆಗ್ಗಳಿಕೆಯೇನೆಂದು ನಮ್ಮ ಹೇಳಿಕೆ? ಅದು ಹದಿನೈದು ಕೋಟಿ ಜನರಿಗೆ ಸಹಜವಾಗಿ ಅರ್ಥವಾಗುತ್ತದೆ. ಉಳಿದ ಆರು ಕೋಟಿ ಜನಗೆ ಮಾತೃಭಾಷೆಯೆಂಬುದೆ, ಅದು ಸ್ವಲ್ಪ ಕಷ್ಟವೆನಿಸಿದರೂ ತುಸು ಪ್ರಯತ್ನದಿಂದ ಅದನ್ನು ಕಲಿಯಬಹುದು. ಅನುಪದಿಂದ ಅತಿ ಕಡಿಮೆ ಪ್ರಯತ್ನದಿಂದ ತಾನು ರಾಷ್ಟ್ರಭಾಷೆಯಾದೇನೆಂಬುದೊಂದೇ ಹಿಂದಿಯ ನಮ್ಮ ಅಭಿಮಾನ. ಹಿಂದಿಯ ಪರವಾದ ಅಭಿಮಾನವನ್ನು ಹೀಗೆ ನಮ್ರವಾಗಿ ಹೇಳಿಕೊಳ್ಳುವ ನಾವು ಅದರ ನಾಮರೂಪಗಳ ಬಗ್ಗೆ ಇಷ್ಟು ಜಗಳಾಡುವದು ಒಳಿತಲ್ಲ. ನಾಮರೂಪಗಳ ಬಗ್ಗೆ ಇಷ್ಟೆಲ್ಲ ತೀಕ್ಷ್ಣ ಮತಭೇದ

ಳಾದರೂ ಏಕೆ? ಹಿಂದಿಗೂ ಹಿಂದುಸ್ತಾನಿಗೂ ಅಂಥ ಭೇದವಿಲ್ಲ. ಆದುದರಿಂದ ನಾನು ಹೆಸರನ್ನು ಕುರಿತು ಇಲ್ಲಿ ವಾದಕ್ಕಿಳಿಯುವದಿಲ್ಲ. ಆದರೆ ರಾಷ್ಟ್ರಭಾಷೆಯ ರೂಪದ ಬಗ್ಗೆ ನನ್ನಲ್ಲಿ ನನ್ನವೇ ವಿಚಾರಗಳಿವೆ. ಅವನ್ನು ಇದೇ ಈಗ ನಿಮ್ಮ ಮುಂದಿರಿಸುತ್ತೇನೆ. ಈ ವಿಚಾರದಲ್ಲಿ ಕೂಡ ನನ್ನ ಛಲವಿಲ್ಲ. ಅಂದಾಕ್ಷಣ ವಿರೋಧಿಗಳ ಹೇಳಿಕೆಯಲ್ಲಿ ನನಗೆ ಒಪ್ಪಿಗೆಯೆಂದರ್ಥವಲ್ಲ. ಆದರೆ ಇನ್ನು ಛಲಹಿಡಿಯದಿರಲು ಕಾರಣವೆಂದರೆ, ಹಿಂದಿಯ ರೂಪವನ್ನು ನಿರ್ಣಯಿಸುವವರು, ನೀವೂ ಅಲ್ಲ, ನಾನು ಅಲ್ಲ. ಅನವರತ ರೂಢಿಯೇ ನಿರ್ಣಾಯಕ ಹೇತು.

ಭಾಷೆಯ ರೂಪ

ಹಿಂದಿಯ ರೂಪವನ್ನು ಕುರಿತು ನನ್ನನ್ನು ಕೇಳಿದರೆ, ಅದು ಸಂಸ್ಕೃತ, ಅರಬ್ಬಿ ಅಥವಾ ಪರ್ಶಿಯನ್ ಶಬ್ದಗಳನ್ನು ಬಹಿಷ್ಕರಿಸಲೂ ಕೂಡದು, ಅವುಗಳಿಂದಲೇ ಕಿಕ್ಕಿರಿದು ಹೋಗುವದೂ ಸಲ್ಲದು. ಈಗಾಗಲೇ ಭಾಷೆಯೊಳಗೆ ಬೆರೆತು ಹೋಗಿರುವ ಅಥವಾ ಸುಲಭವಾಗಿ ಬೆರೆಯಬಹುದಾದ ಮತ್ತು ಆ ಮೂಲಕ ಭಾಷೆಯಲ್ಲಿ ಐಕ್ಯ ಹೊಂದಬಹುದಾದ ಶಬ್ದಗಳನ್ನು ಅಂಗೀಕರಿಸಬೇಕು. ನಮ್ಮ ರಾಷ್ಟ್ರಭಾಷೆ ಸಾಗರದಂತಿರಬೇಕಲ್ಲದೆ ಇಕ್ಕಟ್ಟಾದ ನದಿಯಂತಲ್ಲ. ಪ್ರಾಂತಿಕ ಭಾಷೆಗಳು ನದಿಗಳಂತಿವೆ. ಅವುಗಳ ಪ್ರವಾಹ ಬೇರೆ ಬೇರೆ ದಿಕ್ಕುಗಳಲ್ಲಿ ಹರಿಯುವವು. ನಮ್ಮ ರಾಷ್ಟ್ರಭಾಷೆ ಹಲಬಗೆಯ ಅಂತಃಪ್ರವಾಹಗಳಿಗೆ ಆಶ್ರಯವಾಗುವಷ್ಟು ವಿಸ್ತಾರವಾದ ಸಾಗರದಂತಾಗಬೇಕು. ಬೇರೆ ಬೇರೆ ಪ್ರಾಂತಿಕ ಭಾಷೆಗಳಿಂದ ಬಂದ ಹಲವು ಶಬ್ದಗಳನ್ನೂ ವಿವಿಧ ವ್ಯಾಕರಣ ರಚನೆಗಳನ್ನೂ ಅದು ಒಳಗೊಂಡಿರಬೇಕು. ಲಿಂಗಗಳನ್ನು ಕುರಿತ ನಿಯಮಗಳು ಸುಲಭವಾಗಿ ತಿಳಿಯುವಂತೆ ಮಾಡಬೇಕು. ಅನೇಕ ಶಬ್ದಗಳನ್ನು ಉಭಯಲಿಂಗಗಳೆಂದು ಒಪ್ಪಿಕೊಳ್ಳಬೇಕು. ಹಿಂದಿಯ ಸ್ವರೂಪವನ್ನು ಸಾಗರದಂತೆ ಅಪಾರವಾಗಿ ಮಾಡಬೇಕೆಂದು ನಾನು ಹೇಳಿದಷ್ಟಕ್ಕೆ ಭಾಷಾಶುದ್ಧಿ ಕೆಡಬಹುದೆಂದು ಕೆಲವರು ಭಯಪಡುತ್ತಾರೆ. ಆದರೆ ಹಿಂದಿ ನದಿಯಂತೆ ತನ್ನ ಪಾರಿಶುದ್ಧ್ಯವನ್ನು ಕಾಯ್ದುಕೊಳ್ಳಬಯಸುತ್ತಿದ್ದರೆ ಅದು ಪ್ರಾಂತಿಕ ಭಾಷೆಯಾಗಿ ಉಳಿಯುವದು ಕ್ರಮ ಪ್ರಾಪ್ತವಾದೀತು. ಅಂದ ಮೇಲೆ ಭಯವೇಕೆ? ಸಮುದ್ರವು ನದಿಗಳಿಗೆ ಭಯಪಟ್ಟರೆ ಹೇಗೆ? ಬರಿ ಹಳ್ಳವಾದರೆ ಹೊಳೆಯ ಭಯಕ್ಕೊಳಗಾಗುವದು ಸರಿ. ಆ ಭಯ ಕೂಡ ನಿರರ್ಥಕವೆ. ಏಕೆಂದರೆ ಹೇಗಾದರೂ ಹೊಳೆಯ ಪ್ರವಾಹದಲ್ಲಿ ಅದು ಲೀನವಾಗಲೇಬೇಕಾಗುವದು. ಆದುದರಿಂದ ಅನ್ಯಭಾಷೆಗಳಿಂದ ಬಂದ ಎಷ್ಟು ಶಬ್ದಗಳನ್ನು ಬೇಕಾದರೂ ಹಿಂದಿ ಸಂತೋಷದಿಂದ ಸ್ವೀಕರಿಸಬೇಕು. ಆದರೆ ಆ ವಿಶಿಷ್ಟ ಶಬ್ದಗಳು ಹಿಂದಿಗೆ ಹೊಂದಿಕೆಯಾಗಿ ಕೂಡಿಕೊಳ್ಳಬಲ್ಲವೊ ಇಲ್ಲವೊ ಎಂಬದನ್ನು ವಿವೇಕದಿಂದ ನಿರ್ಧರಿಸಬೇಕೆಂದು ನಾನು ಒಪ್ಪುವೆ. ಅಂಥ ವಿವೇಕಕ್ಕೊಳಪಟ್ಟು ನಾವು ಸಂಸ್ಕೃತ, ಅರಬ್ಬಿ ಮತ್ತು ಪರ್ಶಿಯನ್ ಭಾಷೆಗಳಿಂದು ಸುಲಭ ಶಬ್ದಗಳನ್ನು ಮಾತ್ರವಲ್ಲ, ಪ್ರಾಂತಿಕ ಭಾಷೆಗಳಿಂದಲೂ ಅಂಥವನ್ನು ಅಂಗೀಕರಿಸಬೇಕು. ದಿಲ್ಲಿಯಲ್ಲಿ ಹಿಂದೀ ಭಾಷಣಗಳನ್ನು ಮಾಡುವಾಗ ನಾನು "ಶಿಸ್ತು" ಎಂಬ ಪದವನ್ನು ಪಯೋಗಿಸುತ್ತಿರುತ್ತೇನೆ. ಅದಕ್ಕಿಂತ ಉಚಿತವಾದ ಶಬ್ದ ಹಿಂದಿಯಲ್ಲಿ ನನಗೆ ಸಿಗಲಿಲ್ಲ. "ಶಿಸ್ತು" ಶಬ್ದ ಮರಾಠಿಯದೆಂದು ನಂಬಲಾಗಿದೆ. ಅದು ಮೊಟ್ಟ ಮೊದಲು ಎಲ್ಲಿಂದ ಬಂತೋ ಗೊತ್ತಿಲ್ಲ. ಆದರೆ ನನ್ನ ಭಾಷಣ ಕೇಳುವವರಿಗೆ ಅದು ತಿಳಿಯುತ್ತದೆ. ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡಬೇಕೆಂದು ನಮ್ಮ ಅಭಿಮತವಿದ್ದರೆ ಮಡಿವಂತಿಕೆ ಹಚ್ಚಿಕೊಂಡು ಫಲವಿಲ್ಲ. ಇತರ ಭಾಷೆಗಳಿಂದ ಅನೇಕ ಶಬ್ದಗಳನ್ನು ನಾವು ಸಂಸ್ಕೃತದಿಂದಲೇ ತೆಗೆದುಕೊಳ್ಳಬೇಕಾಗುವದು. ಸಂಸ್ಕೃತ ಭಾಷೆಯಲ್ಲಿ ನನಗೆ ತುಂಬ ಆದರ; ಡಾಕ್ಟರ ಕಟಜು ಅವರು ಸಂಸ್ಕೃತವೇ ರಾಷ್ಟ್ರಭಾಷೆಯಾಗಬೇಕೆಂದು ಒತ್ತಾಯಪಡಿಸುವಾಗ ರೂಪಾಯಿಯಲ್ಲಿ ಏಳಾಣೆಯ ಮಟ್ಟಿಗೂ ನನ್ನ ಮನಸ್ಸು ಅತ್ತ ಒಲಿಯುತ್ತದೆ. ಒಂಬತ್ತಾಣೆಯಷ್ಟು ಒಲಿಯದಿರಲು ಕಾರಣವೆಂದರೆ, ಅದು ಅಸಾಧ್ಯ ಪ್ರಮೇಯವೆಂಬ ಅರಿವೇ. ನಮ್ಮ ಪಾರಿಭಾಷಿಕ ಶಬ್ದಾವಲಿ ಮುಖ್ಯವಾಗಿ ಸಂಸ್ಕೃತವನ್ನೆ ಆಧರಿಸುವದೆಂಬದು ನಿಸ್ಸಂಶಯ. ಅಂದೊಂದನೆ ಪರ್ಶಿಯನ್ ಅಥವಾ ಮತ್ತಾವ ಭಾಷೆಗಳಿಂದ ಸುಲಭ ಶಬ್ದಗಳು ದೊರೆಯುತ್ತಿದ್ದರೆ ಅವನ್ನು ತೆಗೆದುಕೊಳ್ಳಬಾರದೆಂದಲ್ಲ. ಸಂತ ತುಲಸೀದಾಸಜಿಯವರ ಉದಾಹರಣೆಯನ್ನು ಈ ಸಂಬಂಧದಲ್ಲಿ ಅನುಸರಿಸುವದು ಒಳ್ಳೇದು. ಅವರು ತಮ್ಮ ರಾಮಾಯಣದಲ್ಲಿ ಸಾವಿರಾರು ಸಂಸ್ಕೃತ ಶಬ್ದಗಳನ್ನು ಬಳಸಿದ್ದಾರೆ. ಆದರೂ ಅವರಲ್ಲಿ ಅನುಪಮ ಕೌಶಲದಿಂದ ಸರಳ ಶಬ್ದಗಳನ್ನು ಆರಿಸಿ ಅಳವಡಿಸಿಕೊಂಡಿದ್ದಾರೆ. ಅದೇ ಪ್ರಕಾರ ನಾವೂ ಸಂಸ್ಕೃತ, ಅರಬ್ಬಿ, ಪರ್ಶಿಯನ್ ಮತ್ತು ಇತರ ಪ್ರಾಂತಿಕ ಭಾಷೆಗಳಿಂದ ಸರಳ ಶಬ್ದಗಳನ್ನು ಆರಿಸಿಕೊಳ್ಳಬೇಕು. "ಕೇಸರಿ" ಯಲ್ಲಿ ಬರೆಯುತ್ತಿದ್ದಾಗ ತಿಲಕ ಮಹಾರಾಜರಿಗೆ, ಅನೇಕ ಹೊಸ ಶಬ್ದಗಳನ್ನು ನಿಷ್ಪನ್ನ ಮಾಡಿಕೊಳ್ಳುವ ಆವಶ್ಯಕತೆ ಬಿತ್ತು. ಅಧಿಕಾರಿವರ್ಗದ ಸತ್ತೆ (ಬ್ಯೂರಾಕ್ರಸಿ) ಎಂಬರ್ಥದಲ್ಲಿ ಅವರು ನೋಕರಶಾಹಿ ಎಂಬ ಶಬ್ದವನ್ನು ನಿರ್ಮಾಣಿಸಿದರು. ಆ ಶಬ್ದ ಸಂಸ್ಕೃತವೂ ಅಲ್ಲ, ಮರಾಠಿಯೂ ಅಲ್ಲ. ಒಂದು ರೀತಿಯಲ್ಲಿ ಅದು ಉರ್ದು ಶಬ್ದವೆಂದೇ ಹೇಳಬೇಕು. ತಿಲಕ ಮಹಾರಾಜರಿಗೆ ಅದೃಷ್ಟವಶಾತ್ ಅದು ಸಿಕ್ಕಿತು. ಅಂದಿನಿಂದ ಅದು ದೇಶದಲ್ಲೆಲ್ಲ ಮನೆಮಾತಾಗಿಬಿಟ್ಟಿದೆ. ಅದೇ ಪ್ರಕಾರ ಸ್ವರಾಜ್ಯ ಸಿದ್ಧಿಗೆ ತುಂಬ ಸಹಾಯ ಮಾಡಿದ ಅವರ ಪ್ರಸಿದ್ಧ ಮಂತ್ರವಾದ-- "ಸ್ವರಾಜ್ಯ ಹಾ ಮಾಝಾ ಜನ್ಮಸಿದ್ಧ ಹಕ್ಕ ಆಹೇ"- ಎಂಬದರಲ್ಲಿ ಅವರು "ಹಕ್" ಎಂಬ, ಕುರಾಣದಲ್ಲಿ ಬಹಳವಾಗಿ ಬಳಸಲ್ಪಟ್ಟ ಅರಬ್ಬೀ ಶಬ್ದವನ್ನು "ಜನ್ಮಸಿದ್ಧ" ಎಂಬ ಸಂಸ್ಕೃತ ಪದದ ಜೊತೆಗೆ ಇಟ್ಟರು. ತಿಲಕ ಮಹಾರಾಜರು ದೊಡ್ಡ ಸಂಸ್ಕೃತ ವಿದ್ವಾಂಸರು, ದೇಶಾಭಿಮಾನಿಗಳು, ಭಾಷೆಯ ಮೇಲೆ ಪ್ರಭುತ್ವವಿದ್ದವರು. ಆದರೂ ಭಿನ್ನ ಮೂಲವಾದ ಈ ಎರಡು ಶಬ್ದಗಳನ್ನು ಸಮಸ್ತವಾಗಿಡುವುದರಿಂದ ಭಾಷಾಸಂಕರವಾದೀತೆಂದು ಅವರು ಬಗೆಯಲಿಲ್ಲ. ಆ ಮಹಾಮಂತ್ರ ಇಡಿ ದೇಶದಲ್ಲಿ ಹಬ್ಬಿತು. ಸರಳ ಸುಲಭ ಶಬ್ದಗಳನ್ನು ಎಲ್ಲ ಕಡೆಯಿಂದ ಇತರ ಭಾಷೆಗಳಿಂದ ಸೇರಿಸಿಕೊಂಡರೆ ರಾಷ್ಟ್ರಭಾಷೆಯಾದ ಹಿಂದಿ ಹೆಚ್ಚು ಸಮೃದ್ಧವಾಗುವದೆಂದೇ ಇದರಿಂದ ಸಿದ್ಧವಾಗುತ್ತದೆ. (ಮುಂದುವರಿಯುವದು)

ಬಳ್ಳಾರಿಯಲ್ಲಿ ಕಂದಾಯ ಮಂತ್ರಿ ಶ್ರೀ ಹೆಚ್. ಸೀತಾರಾಮರೆಡ್ಡಿ

ಮದ್ರಾಸ್ ರೆವಿನ್ಯೂ ಮಂತ್ರಿ ಮಾನ್ಯ ಶ್ರೀ ಹೆಚ್. ಸೀತಾರಾಮರೆಡ್ಡಿಯವರು ೧೨ನೆಯ ಪ್ರಾ. ಆಗಮಿಸಿ ಅಂದು ರಾಘವಾಸ್ಮಾರಕದ ಮೂರನೆಯ ವಾರ್ಷಿಕದಲ್ಲಿ ಅಧ್ಯಕ್ಷಸ್ಥಾನ ವಹಿಸಿ ೧೪ನೆಯ ದಿನಾಂಕ ಮದ್ರಾಸ್ ಸರ್ಕಾರದ ಹೊಸ ಭಾವಿ ತೆಗೆಯುವ ಯೋಜನೆಗೆ ಸಂಬಂಧಿಸಿದ ಭಾವಿಗಳನ್ನು ಆಲೂರು ತಾ. ಹೊಳಗುಂದಿ, ಕೋಗಿಲತೋಟ ಪೆದ್ದಕಟಂ ಈ ಭಾಗಗಳಲ್ಲಿ ಸಂಚರಿಸಿ ಬಳ್ಳಾರಿಗೆ ಮರಳಿದರು ೧೫ನೆಯ ತಾ ಸಾಯಂಕಾಲ ರಾಜಕೀಯ ಕೈದಿಗಳಾಗಿದ್ದ ಕಾಂಗ್ರೆಸಿಗರೊಡನೆ ಸಂಭಾಷಿಸಿ ಅವರಿಗೆ ಸರಕಾರವು ಕೊಡಬಯಸಿದ ಭೂಮಿಗಳನ್ನು ಶೀಘ್ರವಾಗಿ ಪಟ್ಟಾ ಕೊಡಲು ಏರ್ಪಡಿಸುವೆವೆಂದರು. ಶ್ರೀ ಮೈ ಮಹಾಬಲೇಶ್ವರಪ್ಪ, ಶ್ರೀ ಜಿ ನಾ ಭೂಷಣಂರವರು ಬಳ್ಳಾರಿ ಜಿಲ್ಲೆಯ ದನ ರಾಸುಗಳಿಗೆ ಹುಲ್ಲಿನ ಕಷ್ಟವಾಗಿರುವ ಕಾರಣ ಅವುಗಳು ಹೊರಹೋಗದಂತೆ ಮಾಡಬೇಕೆಂದರು. ಶ್ರೀ ಟಿ ವಿ. ಕೃಷ್ಣರಾವ್, ಶ್ರೀ ಬಿ ಪಿ. ಯಸ್. ರಾಯರು ಬಳ್ಳಾರಿಯನ್ನು ವಿಮಾನ ಕೇಂದ್ರ ಮಾಡಲು, ವಿಮಾನ ಕಂಪನಿಗೆ ತಿಳಿಸತಕ್ಕ ಸೌಕರ್ಯ ಕಲ್ಪಿಸಲು ಕೇಳಿಕೊಂಡರು. ೧೬ನೆಯ ತಾ ಸಾಯಂಕಾಲ ಮದ್ರಾಸಿಗೆ ತೆರಳಿದರು.

ಗಾಂಧಿ ಸ್ಮಾರಕ ನಿಧಿ

ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದರವರು ಗಾಂಧೀ ನಿಧಿಯ ವಸೂಲಿಗಾಗಿ ದಕ್ಷಿಣ ದೇಶವನ್ನು ಸಂಚರಿಸಲಿದ್ದಾರೆ. ಏಪ್ರೈಲ್ ೨೮ರ ದಿನ ಅವರು ಮದ್ರಾಸಿನಲ್ಲಿ ಇರುವರು.

THE NAVA BHARAT

ಸೋಮವಾರ 18 ಏಪ್ರಿಲ್ 1949.

ದನಗಳ ಮುಖ್ಯಾಹಾರವು (ಹತ್ತೀಕಾಳು) ಮಾಯವಾಗುತ್ತಲಿದೆ.

ಮೂರು ವರ್ಷಗಳ ಕೆಳಗೆ ಬಳ್ಳಾರಿ ಜಿಲ್ಲೆಯ ಕಲೆಕ್ಟರ್‌ರವರು ಶ್ರೀ ಆರ್. ಡಿ ಪಾಲರಿದ್ದಾಗ ದನಗಳ ಮುಖ್ಯಾಹಾರವಾದ ಹತ್ತೀಕಾಳನ್ನು ಜಿಲ್ಲೆಯ ಹೊರಗೆ ಹೋಗದಂತೆ ಪ್ರತಿಬಂಧಿಸಿ ನಿಯಮ ಮಾಡಿದ್ದರು. ಪ್ರಾಂತೀಯ ಸರಕಾರದವರು ಜಿಲ್ಲಾ ಕಲೆಕ್ಟರವರಿಗೆ ಇಂಥಾ ಅಧಿಕಾರವನ್ನು ಕೊಟ್ಟಿದ್ದು, ಅವರು ಅಭಾವದ ಸಮಯದಲ್ಲಿ ಉಪಯೋಗಿಸುವುದು ನ್ಯಾಯವೂ, ಉಚಿತವೂ ಆಗಿದೆ. ರೈತನ ಜೀವಾಳವು ದನದ ಒಳ್ಳೆಯ ದಾಸುಗಳನ್ನವಲಂಬಿಸಿದೆ. ಈಗ ಜಿಲ್ಲೆಯಲ್ಲಿ ಹತ್ತೀಕಾಳಿನ ಅಭಾವವಾಗಿ ದನಗಳು ಜೀವತ್ರವವಾಗುತ್ತಲಿವೆ.

ಕರ್ನಾಟಕ ಛೇಂಬರ್ ಆಫ್ ಕಾಮರ್ಸ ಅಧ್ಯಕ್ಷರಾದ ಶ್ರೀ ವೈ. ಮಹಾಬಳೇಶ್ವರಪ್ಪನವರು, ರಾಯದುರ್ಗ ತಾಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಜಿ. ನಾಗಭೂಷಣಂ ಮತ್ತು ಇತರರು ವರ್ತಕರ ಪರವಾಗಿಯೂ, ರೈತರ ಪರವಾಗಿಯೂ ಕುದಾಯ ಮಂತ್ರಿಗಳ ಬಳಿ ಶಿಷ್ಟಮಂಡಳಿ (ನ್ನೊಯ್ದು) ಇವರನ್ನು ಸಹಾಯಕ್ಕೆ ಎತ್ತಲಿಸಿದರೆಂದು ಕೇಳುತ್ತೇವೆ. ಇವರ ಹೇಳಿಕೆಯ ಪ್ರಕಾರಕ್ಕೆ ಬೊಂಬಾಯಿ ಮತ್ತು ಗುಜರಾತಿನ ವರ್ತಕರು 'ವನಸ್ಪತಿ' ಯ ತಯಾರಿಕೆಗಾಗಿ ಕೇಳಿದಷ್ಟು ಬೆಲೆಯನ್ನು ಕೊಟ್ಟು ಒಯ್ಯುತ್ತಿರುವರು

ಈ ಕಾರಣ ಜಿಲ್ಲಾಧಿಕಾರಿಗಳು, ತಕ್ಷಣವೇ ನಿಯಮವನ್ನು ಮಾಡಿ ಇವನ್ನು ಹೊರ ಹೋಗದಂತೆ ಮಾಡಿ ಹತ್ತೀಕಾಳನ್ನು ದನ ಮತ್ತು ಹೈನಸಿದ್ದವರಿಗೆ ಕೊಡಲೇ ನಿರ್ಣಯಿತವರದರೆ ನಿಲ್ಲಿಸಗಿಸಲು ಸೂಚಿಸುತ್ತೇವೆ.

ಭಾರತವು ಯಾವ ಗುಂಪಿಗೆ ಸೇರಬೇಕು?

ಪಂ. ನೆಹರೂರ ಭಾಷಣ

ಭಾರತವು ಸ್ವತಂತ್ರ ರಾಷ್ಟ್ರವಾದಮೇಲೆ ಯಾವ ಗುಂಪಿಗೆ ಸೇರಬೇಕೆಂಬುದರ ಬಗ್ಗೆ ಊಹಾಪೋಹಗಳೂ, ತರ್ಕವಿತರ್ಕಗಳೂ ಆಗುತ್ತಲಿವೆ. ಸದ್ಯದ ಪರಿಸ್ಥಿತಿಯಲ್ಲಿ ಭಾರತವು ಕಾಮನ್‌ವೆಲ್ತ ರಾಷ್ಟ್ರಗಳ ಗುಂಪಿನಲ್ಲಿ ವಸಾಹತು ರಾಷ್ಟ್ರವಾಗಿದೆ. ಆಸ್ಟ್ರೇಲಿಯಾ, ಕಾನಡಾ, ಆಫ್ರಿಕಾ, ನ್ಯೂಜಿಲೆಂಡ್‌ಗಿರುವ ಸ್ಥಾನಮಾನಗಳು ಇದಕ್ಕೂ ಇವೆ. ಇಂಗ್ಲೆಂಡಿನ ಸಂಬಂಧ ಕಳೆದ ಎರಡು ಶತಮಾನಗಳಿಂದಿದ್ದು ಭಾರತದ ಸಂಸ್ಕೃತಿ ಭಾಷೆಗಳಲ್ಲಿ ಆಂಗ್ಲ ಪ್ರಭಾವವು ಇರುವ ಕಾರಣ ಇದು ವಸಾಹತು ರಾಷ್ಟ್ರವಾಗಿರಬೇಕೆಂದು ಕನ್ಸರ್ವೇಟಿವ್ ಪಕ್ಷದವರ ವಾದ. ಭಾರತವು ಪ್ರಜಾಸತ್ತಾತ್ಮಕ (ರಿಪಬ್ಲಿಕ್) ರಾಷ್ಟ್ರವಾಗುವದಿದ್ದು ಸ್ವತಂತ್ರ ರೂಪವನ್ನು ಹೊಂದಿ ಇಂಗ್ಲೆಂಡಿನೊಡನೆ ಸ್ನೇಹ ಸಂಬಂಧವಿಟ್ಟುಕೊಳ್ಳುವದೆಂದೂ, ಆ ಸಂಬಂಧವು ಯಾವ ರೀತಿಯಲ್ಲಿ ಇರಬೇಕೆಂಬುದರ ಬಗ್ಗೆ ನೆಹರೂರವರು ಆಂಗ್ಲ ಸರ್ಕಾರದೊಡನೆ ವಿಚಾರ ವಿನಿಮಯ ಮಾಡಿ ನಿರ್ಣಯಿಸಲಿರುವರೆಂದೂ ಪ್ರಕಟವಾಗಿವೆ.

ಭಾರತವು ಹೊಸದಾಗಿ ಸ್ವಾತಂತ್ರ್ಯವನ್ನು ಹೊಂದಿದ ರಾಷ್ಟ್ರ. ಯಂತ್ರಸಾಮಗ್ರಿಗಳಲ್ಲಿ ಆಹಾರಧಾನ್ಯಗಳಲ್ಲಿ ಆಧುನಿಕ ವೈಜ್ಞಾನಿಕ ಪ್ರಪಂಚದ ಸಾಧನಗಳಲ್ಲಿ ಇನ್ನೂ ಬಾಲ್ಯದಲ್ಲಿಯೇ ಇದೆ. ಇಂಗ್ಲೆಂಡ್ ಅಮೆರಿಕಾ ಸಂಬಂಧವು ವಾಂಛನೀಯವೆಂದು ಈ ಪ್ರಸಂಗದಲ್ಲಿ ಹೇಳಬಹುದು. ನಮಗೆ ಅವರಿಂದ ಹಣಬೇಕು ವಿಶ್ವದ ವ್ಯಾಪಕಿಗೆ ಈಗಾಗಲೇ ಕಾಲ ಕೇಳಲಾಗಿದೆ. ಇನ್ನೂ ಕೆಲ ವರ್ಷಗಳು ಆಹಾರ ಧಾನ್ಯಗಳು ಬೇಕು. ಕೊನೆಗೆ ಇನ್ನು 10 ವರ್ಷಗಳಾದರೂ ಜಲ, ಸ್ಥಳ, ಆಕಾಶದ ಯುದ್ಧಕ್ಕೆ ಬೇಕಾದ ಮದ್ದುಗುಂಡುಗಳು ಆಕಾಶ ವಿಮಾನಗಳು ಬೇಕು. ಆಟಾಮಿಕ್ ಶಕ್ತಿಯ ಉಪಯೋಗವೇನೂ ಗೊತ್ತಿಲ್ಲ. ಅಲ್ಲದೆ ಸ್ವಾಭಾವಿಕವಾಗಿ ಹಿಂಸೆ-ದೌರ್ಜನ್ಯ ಶಸ್ತ್ರಸಿದ್ಧ ಶೂನ್ಯ ಕಮ್ಯೂನಿಸಂದ ರಂಗದಿಂದ ಭಾರತವು ದೂರ ಉಳಿಯುವುದು. ಹಿಂದುಳಿದ ಮತ್ತು ಆರ್ಥಿಕರೀತ್ಯಾ ಪರತಂತ್ರದಲ್ಲುಳಿದಿರುವ ನಮ್ಮ ರಾಷ್ಟ್ರಕ್ಕೆ ಅಮೇರಿಕಾದಂತಹ ಸಂಪದ್ಯುಕ್ತ ರಾಷ್ಟ್ರದಿಂದ ಸಹಾಯ ಬೇಕಾದರೆ ಅವರಿಗಿಷ್ಟವಾದ ಪರಂಪರೆಯ ನೀತಿಗೆ ಒಳಪಡಬೇಕಾಗಿವೆಯೆಂಬುದು ಅನಿವಾರ್ಯ.

ಇನ್ನು ಸಮಾಜ ರಚನೆಯ ಕಾರ್ಯ ಸಾಮ್ಯವಾದ ದೃಷ್ಟಿಯಿಂದ ಸಮಾಜ ರಚನೆಗಾಗದೆ ಗತ್ಯಂತರವಿಲ್ಲ. ಇಂಗ್ಲೆಂಡಿನಲ್ಲಿಯೂ ದೊಡ್ಡ ದೊಡ್ಡ ಉದ್ದಿಮೆಗಳನ್ನು ರಾಷ್ಟ್ರೀಕರಣ ಮಾಡಲಾಗುತ್ತಿದೆ. ಭಾರತದಲ್ಲಿ ರಾಷ್ಟ್ರೀಕರಣಕ್ಕೆ ಸಾಧಕವಾದ ಯೋಗ್ಯತೆಯುಳ್ಳ ಜನರಾಗಲಿ ಸರಕಾರಕ್ಕೆ ಈಗಿನ ಪರಿಸ್ಥಿತಿಯಲ್ಲಿ ಸಾಕಷ್ಟು ಸಾಮರ್ಥ್ಯವಾಗಲಿ ಇಲ್ಲವೆಂದು ಸರ್ದಾರ ಪಟೇಲರು ಹೇಳಿರುವುದಾದರು, ರಾಷ್ಟ್ರೀಕರಣದ ಪ್ರಾರಂಭವು ಒಂದು ಕಡೆಯಿಂದ ಆಗಲೇಬೇಕು. ಜಮೀಂದಾರಿ ನಿರ್ಮೂಲನವಾದರೂ, ಜಾಗೀರಾದರೂ, ದೊಡ್ಡ ದೊಡ್ಡ ಭೂಮಾಲೀಕರೂ ಉಳಿದಿದ್ದಾರೆ. ಭೂಮಿಯನ್ನು ಸಣ್ಣ ತುಂಡುಗಳಾಗಿ ವಿಭಜಿಸಿ ಹಂಚಬೇಕು. ಜಾತ್ಯಾತೀತ ನೀತಿಯು ಅನುಸರಿಸಲ್ಪಡಬೇಕು. ಹೀಗಾದಲ್ಲಿ ಪರರಾಷ್ಟ್ರ ಸಹಾಯ ಸಹಕಾರಗಳಿಂದ ಒಳದೇಶದ ಸಾಮ್ಯವಾದೀ ನೀತಿಯ ಅನುಕರಣೆಯಿಂದ ಬಲಿಷ್ಠ ರಾಷ್ಟ್ರದ ನಿರ್ಮಾಣವಾಗುವುದು. ನೆಹರೂರ ಇಂಗ್ಲೆಂಡಿನ ಯಾತ್ರೆಯು ಫಲಕಾರಿಯಾಗಲೆಂದು ನಮ್ಮ ಆಶೆ.

—(0)—

ಶಿವಮೊಗ್ಗೆಯಲ್ಲಿ ಸೋಶಿಯಲಿಸ್ಟ್ ಪಾರ್ಟಿಯ ತೃತೀಯಾಧಿವೇಶನ

ಮೇ ತಿಂಗಳ ಗಳ ಮತ್ತು ಗಂ ಂದು ಮೈಸೂರು ಶೀಮೆಯ ಶಿವಮೊಗ್ಗೆಯಲ್ಲಿ ತೃತೀಯಾಧಿವೇಶನವು ನಡೆಯಲಿದೆ. ಪ್ರೇಕ್ಷಕರ ಸದಸ್ಯರು ಪ್ರತಿನಿಧಿಗಳಾಗಿ ಪ್ರತಿನಿಧಿ ಶುಲ್ಕ ೩ ರೂ. ಪ್ರೇಕ್ಷಕ ಶುಲ್ಕ ೩ ರೂ ಸಲ್ಲಿಸಬೇಕು. ನಿರ್ಣಯಗಳನ್ನು ಕಳುಹಿಸಲಿಚ್ಛಿಸುವವರು ಈ ತಿಂಗಳ ೩೦ ರೊಳಗಾಗಿ ಕಳುಹಿಸತಕ್ಕದ್ದೆಂದ, ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಪಾಕಿಸ್ತಾನ ಅಪ್ಘಾನಿಸ್ತಾನ ದ್ವೇಷ

ಪಾಕಿಸ್ತಾನ ಅಪ್ಘಾನಿಸ್ತಾನಗಳ ಸಂಬಂಧವು ವಿಷಮಯವಾಗುತ್ತಲಿವೆ. ಅಪ್ಘಾನಿ ರಾಯಭಾರಿಯನ್ನು ಕರಾಚಿಯಿಂದ ಹಿಂದೆ ಕರೆಸಿಕೊಳ್ಳಲಾಗಿದೆ. ಪಾಕಿಸ್ತಾನಿ ಸರಕಾರವು ಗಡಿ ಪ್ರದೇಶದಲ್ಲಿರುವ ಸ್ವತಂತ್ರ ಜನರ ಮೇಲೆ ಗುಂಡಿನ ಮಳೆಗರೆಸುವೆಂದೂ ಅತ್ಯಾಚಾರಗಳನ್ನೆಸಗುತ್ತಲಿರುವರೆಂದೂ ಪಠಾಣರ ಆಪಾದನೆಯಿದೆ.

ಮಹಿಳೆಯರ ಶಿಕ್ಷಣ ಶಾಲೆ

ಕೌಲ್ ಬಜಾರದಲ್ಲಿ ಗವರ್ನಮೆಂಟ್ ಟ್ರೈನಿಂಗ್ ಸ್ಕೂಲ್ ಫಾರ್ ವುಮನ್ ಸಂಸ್ಥೆಯ ವಾರ್ಷಿಕೋತ್ಸವವು ಜಿಲ್ಲಾ ಜಡ್ಜ ಶ್ರೀ ಪಿ ಬಾಲಚಂದ್ರ ಕೋಮನ್‌ರ ಅಧ್ಯಕ್ಷತೆಯಲ್ಲಿ ನೆರವೇರಿತು. ವಿದ್ಯಾಸಂಬಂಧೀ ಪ್ರದರ್ಶನವು ನಡೆದು ಎಲ್ಲರಿಂದಲು ಪ್ರಶಂಸೆಗೆ ಪಾತ್ರವಾಯಿತು. ಶ್ರೀಮತಿ ಜಾನಕಿಯವರು ವಂದನಾರ್ಪಣೆ ಮಾಡಿದರು.

ಮಹಾತ್ಮರ ಚಿತ್ರಪಟ ಅನಾವರಣ

ತಾ॥ 14-4-49 ಗುರುವಾರ ಸಾಯಂಕಾಲ 6 ಗಂಟೆಗೆ ಗವರ್ನಮೆಂಟ್ ಸೆಕೆಂಡರಿ ಟ್ರೈನಿಂಗು ಪಾಠಶಾಲೆಯ ಆವರಣದಲ್ಲಿ ಆ ಶಾಲೆಯ ಹಳೆಯ ವಿದ್ಯಾರ್ಥಿ ಸಂಘದವರು ಆ ಶಾಲೆಗೆ ಬಹುಮಾನವಾಗಿ ಕೊಟ್ಟ ಮಹಾತ್ಮರ ಚಿತ್ರಪಟವನ್ನು ಡಾ. ಡಿ. ಗುರುಮೂರ್ತಿ, M. A. Ph D. ಯವರು ಅನಾವರಣ ಮಾಡಿದರು. ಸುಮಾರು

5 ನೂರು ನೂರು ಮಂದಿ ನಾಗರಿಕರು ಹಾಜರಿದ್ದರು ಊರ ಶ್ರವಣಯಂತ್ರದ ವ್ಯವಸ್ಥೆಯೂ ಮಾಡಲ್ಪಟ್ಟಿತ್ತು.

ಚಿತ್ರಪಟದ ಆವಿಷ್ಕರಣದ ತರುವಾಯ ಡಾ ಗುರುಮೂರ್ತಿಯವರು ತಮ್ಮ ಸಹಜ ಗಂಭೀರವಾಣಿಯಿಂದ ಮಹಾತ್ಮರ ಜೀವನ ವೈಶಿಷ್ಟ್ಯವನ್ನು ಭಾರತೀಯರ ಪರಿವರ್ತನೆಯಲ್ಲಿ ಅವರ ಪ್ರಮುಖ ಪಾತ್ರವನ್ನು ವಿಶದಿಗೊಳಿಸಿ ದೇಶದ ಭೌತಿಕ ಸಂಪತ್ತಿಯ ನೆಲ್ಲಗಿಂತಲೂ ನೈತಿಕ ಮತ್ತು ಮಾನಸಿಕ ಸಂಪತ್ತಿನ ಅಭಿವೃದ್ಧಿಯ ಅವಶ್ಯಕತೆಯನ್ನು ಸ್ಪಷ್ಟೀಕರಿಸಿದರು. ಮಹಾತ್ಮರು ಕೇವಲ ರಾಜಕಾರಣಿಗಳೇ ಅಲ್ಲದೆ ಭಾರತೀಯತೆಯ ನವಸಂದೇಶವನ್ನು ಬೀರಿದ ಯುಗಪ್ರವರ್ತಕರೆಂದು ಸಾರಿದರು.

ಅವರನ್ನು ವಂದಿಸುವದರಿಯುತ್ತಮಹಾತ್ಮರ ಚಿತ್ರಪಟ ಆವಿಷ್ಕರಣಗಳು ಹೆಚ್ಚಾಗಿದ್ದು ಅವರ ಹಾಕಿಕೊಟ್ಟ ಕಾರ್ಯಾನುಸರಣೆಯು ಮಾಯವಾಗುತ್ತಿರುವುದೆಂದು ತಿಳಿಸಿದರು. ಈಗಿನ ಯುದ್ಧ ಪೀಡಿತ ಪ್ರಸಂಚಕ್ಕೆ ಶಾಂತಿಬೇಕೆಂದರೆ ಗಾಂಧೀಜೀಯವರ ತತ್ತ್ವಾನುಸರಣೆಯ ವಿನಹ ಬೇರೊಂದು ಮಾರ್ಗವಿಲ್ಲೆಂದು ಬಿನ್ನವಿಸಿದರು.

ಸಂಘ ಸಂಚಾಲಕರಾದ ಶ್ರೀ ಜೆ.ಹೆಚ್. ಶಾಸ್ತ್ರಿ ಮತ್ತು ಶ್ರೀ ಟಿ ಪಾಲ್ ರಾಜ್‌ರವರು ತವಗೆ ಸಹಕಾರ ನೀಡಿದ ಹಳೆಯ ವಿದ್ಯಾರ್ಥಿಗಳಿಗೆ ತಮ್ಮ ವಂದನೆಗಳನ್ನು ಅರ್ಪಿಸಲು ಶ್ರೀ ಅಪ್ಪಣ್ಣನವರ ಧನ್ಯವಾದಗಳಿಂದ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಸಂಗೀತ ಮತ್ತು ವೀಣಾವಾದ್ಯಗಳು ನೊಂಪಾಗಿದ್ದವು.

ಬಳ್ಳಾರಿ ವಾರ್ತೆ

ಅಕ್ಕಿ ಮಾರಿದ್ದಕ್ಕೆ ಶಿಕ್ಷೆ

ಬ್ರಾಹ್ಮಣ ಬೀದಿಯ ವರ್ತಕರೊಬ್ಬರಿಗೆ ಅಕ್ಕಿ ಮಾರಿದ್ದಕ್ಕೆ ಶಿಕ್ಷೆಯಾಗಿ ಕಠಿಣಸೆರೆವಾಸವನ್ನನುಭವಿಸಬೇಕಾಗಿದೆ.

ಬಳ್ಳಾರಿ ಜಿಲ್ಲಾ ಸಪ್ಲೈ ಆಫೀಸರ್ ಶ್ರೀ ದೊರೆಸ್ವಾಮಿಯವರು ತಮ್ಮ ಪದವಿಯಿಂದ ನಿವೃತ್ತರಾದ ಕಾರಣ ಆದವಾನಿಯಲ್ಲಿ ಡೆಪ್ಯೂಟಿ ಕಲೆಕ್ಟರಾಗಿದ್ದ ಶ್ರೀ ರಾಘವರಾಯರು ಜಿಲ್ಲಾ ಸಪ್ಲೈ ಆಫೀಸರರಾಗಿ ನಿಯುಕ್ತರಾಗಿದ್ದಾರೆ.

ಹಂಪಿರಥೋತ್ಸವ

13-4 49 ನೆಯ ದಿನ ಪ್ರಾಚೀನ ವಿಜಯ ನಗರದಲ್ಲಿ ರಥೋತ್ಸವವು ಅತ್ಯಂತ ವೈಭವವಾಗಿ ನಡೆಯಿತು. ಈ ಸಲ ಸುಮಾರು ಒಂದು ಲಕ್ಷ ಜನರು ಕಲೆತಿದ್ದರೆಂದು ಹೇಳಲಾಗಿದೆ. ಇಷ್ಟು ಜನರಿಗೂ ಊಟಕ್ಕೆ ಕಷ್ಟವಾಗಲಿಲ್ಲವೆಂದರೆ ಈ ಪ್ರದೇಶದಲ್ಲಿ ಅಕಷ್ಟು ಅಕ್ಕಿಯ ಸಂಗ್ರಹವಿತ್ತೆಂತಲೂ ಬಂದ ಜನರು ಆಹಾರ ಸಾಮಗ್ರಿಗಳನ್ನು ತಂದಿದ್ದರೆಂತಲೂ ಊಹಿಸಲಾಗಿದೆ.

ನೀರಿಗಾಗಿ ಕದನ

ಬರೋಡ ನಗರದ ಸಾರ್ವಜನಿಕ ಕೊಳಾಯಿ ಹತ್ತಿರ ನೀರಿಗಾಗಿ ಜಗಳವಾಗಿ ಇಬ್ಬರು ಇರಿಯಲ್ಪಟ್ಟಿರುತ್ತಾರೆ. ಈ ಸಂದರ್ಭದಲ್ಲಿ ಬಂಧಿಸಲಾಗಿದೆ.

ಬಳ್ಳಾರಿ ನಗರದಲ್ಲೂ ಇಂಥಾ ಪರಿಸ್ಥಿತಿ ಏರ್ಪಡುವ ಲಕ್ಷಣಗಳಿವೆ. ಕುಡಿಯುವ ನೀರಿಗೆ ಬಹಳ ಕಷ್ಟವಿದೆ.

ಶಿಸ್ತಿನ ಅಭಾವ

ಯಾವ ಸಂಸ್ಥೆಯಲ್ಲಿ ಶಿಸ್ತು - ಯಾ - ಅನುಶಾಸನವಿಲ್ಲವೋ ಅಂಥ ಸಂಸ್ಥೆಯು ಬದುಕಿ ಬಾಳಲಾರದು. ಆ ಸಂಸ್ಥೆ ಯಾ ಸಮಾಜವಿರುವ ಪ್ರದೇಶವು ರಾಷ್ಟ್ರವಾಗಲಾರದು. ನೂತನ ಪ್ರಾಪ್ತ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸಾಕಷ್ಟು ಶಿಸ್ತು ನಮ್ಮಲ್ಲಿಲ್ಲವೆಂದೇ ದುಃಖದಿಂದ ಒಪ್ಪಿಕೊಳ್ಳಬೇಕಾಗಿದೆ ಏಪ್ರಿಲ್ 2ನೆಯ ತಾ. ಪಂ° ತ ಜವಹರಲಾಲರು ಬಿಹಾರ ಪ್ರಾಂತೀಯ ರಾಜಕೀಯ ಸಭೆಯಲ್ಲಿ ಮಾತನಾಡಲೆತ್ನಿಸಿದಾಗ ಹಳ್ಳಿಗಳ ಕಡೆಯಿಂದ ಬಂದ 5 ಲಕ್ಷ ಜನಸ್ತೋಮವು ಶಿಸ್ತಿನಭಂಗಮಾಡಿದ ಕಾರಣ ಒಂದು ಸಾವಿರ ಕಾನ್ಸ್ಟೇಬಲ್‌ರು ಮತ್ತು ಕಾಂಗ್ರೆಸ್ ಸ್ವಯಂಸೇವಕರು ನಿರುಪಾಯರಾದರು ಡಾಕ್ಟರ್ ರಾಜೇಂದ್ರ ಪ್ರಸಾದರು ಸಭಾಮಂಟಪಕ್ಕೆ ಒರಲು ಪೋಲೀಸರೆಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲೇ ಇಲ್ಲ. ಉಪಮಂತ್ರಿಗಳಾದ ಕೇಸ್ಕರ್ ರವರು ಪ್ರಯಾಸದಿಂದ ಪಾರಾದರು. ಬೀಹಾರ್ ಗವರ್ನರ್ ಆಜೆಯವರು ಗುಂಪಿನಲ್ಲಿ ಸಿಕ್ಕಿಬಿದ್ದು ಲ್ಪಟ್ಟರು ಅವರನ್ನು ಪೋಲೀಸರು ಹೊತ್ತುಕೊಂಡು ಬಂದರು ನೆಹರೂರ ಮೇಲೆ ಜನತೆಗೆ ಸುಚ್ಚು ಪ್ರೇಮವಿರಬಹುದು. ಆದರೆ ಶಿಸ್ತು ಸಂಪನ್ನ ಸ್ಥಿತಿ ಸಮಾಜ ರಚನೆ ರಾಷ್ಟ್ರ [illegible] ತ.? ಶಿಸ್ತು ಸಂಯಮ [illegible] ಕಾರಣ 40 ಕೋಟಿ ಜನಾಂಗ [illegible] 00 ವರ್ಷದಾಸ್ಯದಲ್ಲಿರಬೇಕಾಯಿತು. ಶಿಸ್ತು ಅನುಶಾಸನ ನಿಯಮ ಬಂಧನೆಗಳ ನಿಕ್ಷೆಯನ್ನು ಕಲಿಯ್ದುಕೊಂಡು ಬಂದ ಇಂಗ್ಲೆಂಡು ಪ್ರಪಂಚದಲ್ಲೇ ಒಲಾಢ್ಯವಾದ ಸಾಮ್ರಾಜ್ಯವನ್ನು ಕಟ್ಟಿತು ಜನಸಂಖ್ಯೆಯ ಆಧಿಕ್ಯದಿಂದಲೇ ನಮ್ಮ ಅಭಿವೃದ್ಧಿ ಈಡೇರುವುದಿಲ್ಲ. ಕಾರ್ಯತತ್ಪರತೆ ಕರ್ತವ್ಯನಿಷ್ಠೆ ರಾಷ್ಟ್ರಪ್ರೇಮ ಮತ್ತು ಶಿಸ್ತು ಸಂಯಮಗಳಿದ್ದ ಸ್ವಲ್ಪೇ ಜನರಿದ್ದರೂ ಅದು ರಾಷ್ಟ್ರವಾಗಲು ಯೋಗ್ಯವಾದೀತು. ಸ್ವಿಟ್ಸರ್ಲೆಂಡ್ ದೇಶವು ಬಹಳ ಚಿಕ್ಕದಾಗಿದ್ದರೂ ಮೇಲಿನ ಗುಣಗಳಿಂದ ಪ್ರಪಂಚದಲ್ಲೇ ಗಣ್ಯಸ್ಥಾನವನ್ನು ಪಡೆದಿದೆ ಹಾಲೆಂಡು ಪೋರ್ಚುಗಲ್‌ಗಳು ಮೈಸೂರ ಸಂಸ್ಥಾನದಷ್ಟಾದರೂ ದೊಡ್ಡವಿಲ್ಲ ಆದರೂ ಅವುಗಳಿಗೆ ಯೂರೋಪ ಖಂಡದಲ್ಲಿ ಮಾನ್ಯತೆಯುಂಟು. ಈ ಕಾರಣ ಭಾರತೀಯರು ಶಿಸ್ತು ಸಂಯಮಗಳಿಗೆ ಧ್ಯಾನ ಕೊಡಬೇಂದು ನಮ್ಮ ಪ್ರಾರ್ಥನೆ.

ಹಿಂದೀ ಪುಸ್ತಕಗಳು

ಕನ್ನಡ - ಹಿಂದೀ ಸ್ವಬೋಧಿನಿ	1—8—0
ತೆಲುಗು - ಹಿಂದೀ	1—8—0
ಆಂಗ್ಲ - ಹಿಂದೀ	1—8—0
ಹಿಂದೀ - ಆಂಗ್ಲ ನಿಘಂಟು	9—0—0

ಮತ್ತು

ಪ್ರಾಥಮಿಕ - ಮಧ್ಯಮಾ - ರಾಷ್ಟ್ರಭಾಷೆ ಮತ್ತು ಉನ್ನತ ಪರೀಕ್ಷೆಗಳ ಪುಸ್ತಕಗಳೆಲ್ಲಾ ನಮ್ಮಲ್ಲಿ ದೊರೆಯುತ್ತವೆ

ಹಿಂದೀ ಮಂದಿರ್, ಬಳ್ಳಾರಿ.

ಆಂಧ್ರ ಪ್ರಾಂತದ ಬೇಡಿಕೆ ಕನ್ನಡ ಮುಖಂಡರ ಒಪ್ಪಿಗೆ

ಆಂಧ್ರ ಪ್ರಾಂತದ ಬೇಡಿಕೆಯನ್ನು ಕನ್ನಡ ಮುಖಂಡರು ಮನ್ನಿಸಿದನಂತರವೇ ಆಂಧ್ರ ಪ್ರಾಂತೀಕರಣಕ್ಕೆ ಪ್ರಾಶಸ್ತ್ಯದೊರೆಯಿತೆಂದು ಕಾಂಗ್ರೆಸ್ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಬೊಂಬಾಯಿಯಲ್ಲಿ ಹೇಳಿದರು.

—)0(—

ಬರ್ಮಾ ಪ್ರಧಾನ ಮಂತ್ರಿ

ಥಾಕಿನ್‌ನೂರವರು ಡೆಲ್ಲಿಯಲ್ಲಿ ಪಂಡಿತ ನೆಹರೂರವರನ್ನು ಕರಾಚಿಯಲ್ಲಿ ಲಿಯಾಖತಲಿಖಾನರನ್ನು ಕಂಡು ತಮ್ಮ ದೇಶದ ಪರಿಸ್ಥಿತಿಯ ಬಗ್ಗೆ ವಿಚಾರ ವಿನಿಮಯ ಮಾಡಿದರು. ತಮಗೆ ಆರ್ಥಿಕ ಸಹಾಯ ಬೇಕೆಂದೂ ಮುಗ್ಗುಲ ರಾಷ್ಟ್ರಗಳ ಮೈತ್ರಿಯುಗತ್ಯವೆಂದೂ ನೂರವರು ಹೇಳಿದರು. ಒರ್ಮಾವು ಬ್ರಿಟಿಷ್ ವಸಾಹತು ರಾಷ್ಟ್ರಗಳಿಂದ ಹೊರಗುಳಿದಿರುವ ಕಾರಣ ಪುನಃ ಒಳಬರಲು ಸಾಧ್ಯವೇ ಎಂದು ವಿಚಾರಿಸಲಾಗಿ 'ಸಾಧ್ಯವಿಲ್ಲೆಂತ' ಉತ್ತರವಿತ್ತರು.

— ತಿರುವಾಂಕೂರಿನ ದಕ್ಷಿಣ ಪ್ರದೇಶದಲ್ಲಿರುವ ತಮಿಳು ಭಾಗಗಳನ್ನು ಮದ್ರಾಸ್ ಪ್ರಾಂತದಲ್ಲಿ ವಿಲೀನಗೊಳಿಸಲು ನಾಗರಕೋಯಿಲ್ ದಲ್ಲಿ ಸತ್ಯಾಗ್ರಹವು ಆರಂಭವಾಗಿದೆ

— ಚೀನದಲ್ಲಿ ಅಧ್ಯಕ್ಷರಾಗಿದ್ದ ಚಂಗೇಶೇಕರು ಸೈನ್ಯಕ್ಕೆ ಆಜ್ಞೆಮಾಡಿ ಪ್ರತಿದಾಳಿ ಆರಂಭಿಸಿದ ಕಾರಣ ಕಮ್ಯೂನಿಸ್ಟರಿಗೆ ಸೋಲುಂಟಾಗುತ್ತಿರುವದೆಂದು ಪ್ರಕಟವಾಗಿದೆ. ಯಾಂಗ್ಸಟಿನದಿಯ ಉತ್ತರ ಭಾಗದ ಕೆಲ ಪ್ರದೇಶಗಳನ್ನು ಸರ್ಕಾರೀ ಸೈನ್ಯಗಳು ಮತ್ತೆ ಆಕ್ರಮಿಸಿವೆ.

ಜಾತೀಯತೆಯ ಆಸುರೀ ಪ್ರವಾಹ

"ಜಾತಿಹೀನರ ಮನೆಯ ಜ್ಯೋತಿ ತಾ ಹೀನವೆ" ಎಂದು ಆಹ್ವಾನ ಕೊಟ್ಟ ಕಾಲ ಒಂದಿದ್ದರೆ ಈಗ "ಜಾತಿವಂತನ ಮನೆಯ ಸಂಸ್ಕೃತಿಯು ತ್ಯಾಜ್ಯವೇ" ಎಂದು ಕೇಳಬೇಕಾದ ಕಾಲ ಬಂದು ಬಿಟ್ಟಿದೆ. ಅದೊಂದು ತುದಿಯಾದರೆ ಇದಿನ್ನೊಂದು ತುದಿ. ಸಮಾಜದಲ್ಲಿ ಈ ಎರಡೂ ಸ್ಥಿತಿಗಳು ಸಂಭವಿಸಲು ಅಜ್ಞಾನ ಮಾತ್ಸರ್ಯಗಳೇ ಬೀಜಗಳು. ಇವರಿಂದ ಮಾನವ ಕಟ್ಟಿದ ಸಂಸ್ಕೃತಿಯ ಕಲಶ ಮಸುಳದಿರದು. ಧರ್ಮದ ತಿರುಳನ್ನು ಮರೆತು ಸಿಪ್ಪೆಯಿಂದಲೇ ಹೆಮ್ಮೆಗಟ್ಟು ಅಜ್ಞಾನಿಗಳನ್ನು ಅವಹೇಳನ ಮಾಡಿದ ಬ್ರಾಹ್ಮಣರಿಗೆ ವಿರುದ್ಧವಾಗಿ ಈಗ ಬರಬೇಕಾದುದೇನು? ಅಜ್ಞಾನಿಗಳು ಜ್ಞಾನಿಗಳಾಗಿ ನಿಜ ಬ್ರಾಹ್ಮಣಿಕೆಯನ್ನು ಸಜ್ಜನಿಕೆಯನ್ನು ಶಿಷ್ಟತೆಯನ್ನು ಗುಣಜ್ಞಾನಗಳ ನೈತಿಕ ಸೌಂದರ್ಯವನ್ನು ಬೆಳೆಸಿಕೊಂಡು ಡಾಂಭಿಕರಿಗೆ ಪ್ರತ್ಯುತ್ತರ ಕೊಡಬೇಕಾದುದು. ಅದರ ಬದಲು ಅಜ್ಞಾನಿಗಳು ಅಜ್ಞಾನವೇ ಜ್ಞಾನವೆಂಬ ಕಾತ್ಯವನ್ನು ಅಳವಡಿಸಿಕೊಂಡು ವಿದ್ವೇಷಾವಿಷ್ಟರಾಗಿ ಅಲ್ಪಸ್ವಲ್ಪವಾದರೂ ಉಳಿದಿರುವ ನಿಜ ಬ್ರಾಹ್ಮಣಿಕೆಯ ನಿಜ ಹಿಂದುತ್ವದ, ನಿಜ ಭಾರತೀಯತೆಯ ಸಂಸ್ಕಾರಾವಶೇಷಗಳನ್ನು ವಿನಾಶಮಾಡಲು ಕಂಕಣತೊಡುವುದು ಕಂಡು ಬರುತ್ತಿದೆ. ಇದು ಭಾರತೀಯ ಪ್ರಜೆ ನಿಜವ ಯಾವನಿಗೇ ಆಗಲಿ ಆತ್ಮಘಾತಕವೆನಿಸದಿರದು.

ಗಾಂಧಿಯವರು ಜಾತ್ಯತೀತ ಹಿಂದು ಧರ್ಮದ ಕನಸನ್ನು ಕಂಡರು. ಕಾಂಗ್ರೆಸ ಸರಕಾರವು ಜಾತ್ಯತೀತ ಸರಕಾರವನ್ನು ರೂಪಿಸಿತು. ಆದರೆ ತಿಳಿದವರೆನಿಸಿಕೊಂಬುವರಿಂದು ಬಾಯಲ್ಲಲ್ಲದೆ ಕಾರ್ಯದಲ್ಲಿ ಜಾತ್ಯತೀತತೆಯನ್ನು ಆಚರಿಸುವುದು ದುರ್ಲಭವೆನಿಸಿದೆ. ಮದ್ರಾಸ ಸರಕಾರ ಇದಕ್ಕೊಂದು ಉತ್ತಮ ನಿದರ್ಶನವಾಗಿದೆ. ಜಾತೀಯತೆಯ ಸರಕಾರೀ ಆದೇಶವನ್ನು ಮೊನ್ನೆ ಎತ್ತಿಹಿಡಿದ ಗೋಪಾಲರೆಡ್ಡಿಯವರ ಭಾಷಣ ಯಾವ ಕಾಂಗ್ರೆಸ್ಸಿಗನನ್ನಾದರೂ ನಾಚಿಕೆಗೀಡು ಮಾಡದಿರದು. ಕಲಬುರ್ಗಿ ಸಾಹಿತ್ಯ ಸಮ್ಮೇಳನದ ಮಹಿಳಾ ಗೋಷ್ಠಿಯಲ್ಲಿ ಆರ್ಯ ಗೌರಾದೇವಿ ಇಂಚಲಮಳತು 32 ಸಾಹಿತ್ಯ ಸಮ್ಮೇಳನಗಳಾದರೂ ಹೆಂಗಸೊಬ್ಬಳಿಗೆ ಅಧ್ಯಕ್ಷಸ್ಥಾನ ಕೊಡಲಿಲ್ಲವೆಂದು ವೃಥಾ ದೂರಿಕೊಂಡಂತೆ ಬ್ರಾಹ್ಮಣೇತರರು, ಆದರ್ಶ ಬ್ರಾಹ್ಮಣಿಕೆಯ ಗುಣ ಧರ್ಮ ವಿದ್ಯಾವಿವೇಕಾದಿಗಳನ್ನು ಸಂಪಾದಿಸಿಕೊಳ್ಳದೆ ಸ್ವಂತಯೋಗ್ಯತೆಯಿಂದ ಎಲ್ಲಿಯೋ ಕೆಲ ಬ್ರಾಹ್ಮಣರು ಉಚ್ಚಸ್ಥಾನವನ್ನು ಅಲಂಕರಿಸಿದ್ದರೆ ಅದ[illegible] ಹಟ್ಟು ಅವಸ್ಥಾರಕ್ಕೆ [illegible]ಘಿಸುವುದು ಕಣ್ಣುಮುಚ್ಚಿಕೊಂಡು [illegible] ಯಾರೂ ಕಾಣರೆಂದು ತಿಳಿದುಕೊಂಡಂತೆ ಸಾಗಿದೆ.

ದಕ್ಷಿಣ ಹಿಂದುಸ್ತಾನದಲ್ಲಿ ಶ್ರೀ ರಾಮಸ್ವಾಮಿ ನಾಯ್ಕರ "ದ್ರಾವಿಡಕಳಗಂ" ಶಕ್ತಿ ಉರಿಯತೊಡಗಿದ್ದು ಸ್ಪಷ್ಟವೇ ಇದೆ. ಆ ಹಾಲಾಹಲದ ಬೀಜಗಳು ಮೊಳೆತು ಪ್ರಕಾಶಂ ಅವರ ಮಂತ್ರಿತ್ವದ ಪೀಠವನ್ನು ಉರುಳಿಸಿದ್ದು ಸರ್ವವಿದಿತವಾಗಿದೆ. ಒಂದು ಸರಕಾರೀ ಅಥವಾ ತದಿತರ ಕಾರ್ಯಾಲಯದಲ್ಲಿ ಕೇವಲ ಛಲದಿಂದ ಅನರ್ಹ ಬ್ರಾಹ್ಮಣೇತರರನ್ನು ನಿಯಮಿಸಿದ್ದಕ್ಕೆ ಅನೇಕ ಉದಾಹರಣೆಗಳಿಂದು ಸಿಗುತ್ತವೆ. ಅವರ ಅರ್ಹತೆಯನ್ನು ಹೆಚ್ಚಿಸಬೇಕಾದ ಸೌಲಭ್ಯಗಳನ್ನು ಕಲ್ಪಿಸಿ ಮಿಕ್ಕವರಿಗೆ ಸರಿಗಟ್ಟುವಂತೆ ಮಾಡಿ ನಿಯೋಜಿಸಿಕೊಂಡರೆ ಅದರಿಂದ ಆಡಳಿತೆಯು ಕಾರ್ಯಸುಗಮವಾಗುವುದೂ ಹಿಂದುಳಿದವರು ಮುನ್ನಡೆಯುವುದೂ ಒಟ್ಟೊಟ್ಟಿಗೇ ಸಾಗುವುದು. ಹಾಗೆ ಮಾಡದೆ ನ್ಯಾಯಯುತ್ತವಾದ ಉದ್ಧಾಜಾತತೆಯ ದೋಷವನ್ನೇ ಗುಣವೆಂದು ಗ್ರಹಿಸಿ ಜಾತೀಯವಾಗಿ ಅಧಿಕಾರಗಳನ್ನು ಹಂಚಿದರೆ ಮೊದಲಿನ ಅನುವಂಶಿಕತೆಯ ತತ್ವವನ್ನೇ ಇನ್ನೊಂದು ಜಾತಿಯವರಿಗೆ ಅನ್ವಯಿಸಿದಂತಾಗುವುದಿಲ್ಲ, ಅಲ್ಲದೆ ಅದಕ್ಕಿಂತ ಹೆಚ್ಚಿನ ನಷ್ಟ ರಾಷ್ಟ್ರದ ಮತ್ತು ಸಮಾಜದ ಏಳಿಗೆಯ, ಪ್ರತಿಷ್ಠೆಯ ಮತ್ತು ಸಂಸ್ಕೃತಿ ನಾಗರಿಕತೆಗಳ ದೃಷ್ಟಿಯಿಂದ ಉಂಟಾಗುತ್ತದೆ.

ಈ ವಿಷ ಕೇವಲ ದಕ್ಷಿಣ ಹಿಂದುಸ್ತಾನದಲ್ಲಿ ಮಾತ್ರ ಇದೆಯೆಂದು ತಿಳಿದರೆ ತಪ್ಪಾಗುವುದು. ಸಂಯುಕ್ತ ಪ್ರಾಂತದಲ್ಲಿಯೂ ಪ್ರಾರಂಭವಾಗಿದೆಯೆಂಬುದನ್ನು ಅಲ್ಲಿಯ ಬ್ರಾಹ್ಮಣೇತರ ಮಂತ್ರಿಗಳಲ್ಲೊಬ್ಬರಾದ ಶ್ರೀ ಸಂಪೂರ್ಣಾನಂದರು ಇತ್ತೀಚೆಗೆ ಹೊರಗೆಡಹಿದ್ದಾರೆ.

"ಪೆರಿಯಾರ್ ರಾಮಸ್ವಾಮಿ ನಾಯ್ಕರ ಬ್ರಹ್ಮನಿಂದಕ ಕರಿಯಂಗಳ ಅವತಾರಗಳು ಉತ್ತರದಲ್ಲೂ ಇವೆ ..... . ಕೋಟಿತ ಸಂಘ ಎಂಬುದು ಇದಕ್ಕೆ ನಿದರ್ಶನವಾಗಿದೆ. ಇದು ಚೆನ್ನಾಗಿ ಸಂಘಟಿತವಾಗಿಲ್ಲವಾದರೂ ಇಡೀ ಬಿಹಾರ ಮತ್ತು ಸಂಯುಕ್ತ ಪ್ರಾಂತಗಳಲ್ಲಿ ಶಿಥಿಲವಾಗಿ ಹರಡಿಕೊಂಡಿದೆ.

ಬ್ರಾಹ್ಮಣ ಕ್ಷತ್ರಿಯ ಲಾಲಾ
ಇನ್ಕೋ ಬೇಚ್ ಸಿರ ಲಾ

ಎಂಬುದೇ ಸಂಘದ ಘೋಷ. ಇದರಲ್ಲಿ ಲಾಲಾ ಎಂದರೆ ವೈಶ್ಯ, ಬನಿಯ ಅಥವಾ ಕಾಯಸ್ಥ ಎಂದರ್ಥ. ಮೂರು ದಾರದ ಜನರನ್ನು ನಾವೆಂದೂ ಸಹಿಸೆವೆಂದು ಅವರು ಪ್ರಕಟವಾಗಿ ಸಾರುತ್ತಾರೆ. ಸಂಘದಲ್ಲಿ ಅಹೀರರು, ಕುರ್ಮಿಗಳು, ಕೋಯಿರಿಗಳು ಮುಂತಾದವರಿದ್ದಾರೆ. ಹಿಂದುಳಿದ ವರ್ಗದವರು ತಮಗಿಂತ ಕೀಳೆಂದು ಭಾವಿಸಿ ಅವರನ್ನು ದೂರವಿಡುತ್ತಾರೆ. ಇವರದು ಹರಿಜನರಿಗೂ ದ್ವಿಜರಿಗೂ (ಮೂರು ದಾರದವರಿಗೂ ನಡುವೆ ಬರುವ ಜಾತಿ. ಇತ್ತೀಚಿನ ಗ್ರಾಮಪಂಚಾಯತಿಯ ಆಯ್ಕೆಯಲ್ಲಿ ಇವರ ಹಾವಳಿ ಬೆಳಕಿಗೆ ಬಂದಿದೆ. ನಾಳೆ ವಯಸ್ಕ ಮತದಾನಪದ್ಧತಿ ಜಾರಿಗೆ ಬಂತೆಂದರೆ ಇಂಥವರಿಂದ ಆಗುವ ಸಂಸ್ಕೃತಿಘಾತಕ ಚಟುವಟಿಕೆಗಳನ್ನು ಎಣಿಸಬಹುದೇ? ನಮ್ಮ ಮುಖಂಡರು ಕ್ರಾಂತಿ ಕಹಳೆಯನ್ನು ಊದಿದರು. ಆದರೆ ಆ ಕ್ರಾಂತಿಯ ಓಟಕ್ಕೆ ಸರಿಯಾದ ಮಾರ್ಗದರ್ಶನ ಮಾಡಿಲ್ಲ. ಇದರಿಂದ ಸರ್ವನಾಶ ಸಂಭವಿಸಲಿದೆ. ನಾನೇನೂ ಬ್ರಾಹ್ಮಣನಲ್ಲ. ಆದರೆ ನಾನು ಮನುವಿನ ಬಗ್ಗೆ ಪೂಜ್ಯಬುದ್ಧಿಯುಳ್ಳವನು. ಅವನು ಸಂಗ್ರಹಿಸಿ ಬರೆದ ಅಂಶಗಳಲ್ಲಿ ಎಲ್ಲವೂ ನ್ಯಾಯವಲ್ಲವಿದ್ದರೂ ಅರ್ಧಾಂಶವಾದರೂ ಸಾರ್ವಕಾಲಿಕ ಎನಿಸುವ ನೀತಿಗಳಾಗಿವೆ. ದ್ವಿಜತ್ವ ಅಥವಾ ಬ್ರಾಹ್ಮಣಿಕೆ ಒಂದು ವಿಷವೆಂದೇ ಒಂದು ವೇಳೆ ಒಪ್ಪಿಕೊಂಡು ಅದನ್ನು ನಿರ್ನಾಮಗೊಳಿಸಿದೆವೆಂದು ಕೊಳ್ಳೋಣ, ಆದರೆ ಆದರಿಂದ ಎಲ್ಲ ಜನರಲ್ಲೂ ವ್ಯಾಪಿಸಿರುವ ಅಸಾಮಂಜಸ್ಯ, ಅಂಧಶ್ರದ್ಧೆ ಸಂಕುಚಿತ ಮನೋವೃತ್ತಿಗಳು ಕೊನೆಗೊಳ್ಳಲಾರವು. ಅದರಿಂದ ರಕ್ತಪಾತ, ಹಿಂಸೆ ನೋವುಗಳಲ್ಲದೆ ಮತ್ತೇನೂ ಸಾಧಿಸಲ್ಪಡವು".

ಮೇಲಿನ ಅಭಿಪ್ರಾಯಾನುಸಾರ ಭಾರತೀಯರಾದ ನಮಗೊಂದು ಎಚ್ಚರಿಕೆಯಿಂತಿದೆ. ಹುಬ್ಬಳ್ಳಿಯ ಒಂದು ಕೋರ್ಟಿನಲ್ಲಿ ಒಮ್ಮೆ ಆಕಾಶವಾಣಿ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಜಾತಿಯನ್ನು ಹೇಳಿರೆಂದು ಕೇಳಿದಾಗ ಹೇಳಲೊಲ್ಲೆವೆಂದು ನಿಜವಾದ ಪ್ರಜಾಸತ್ತೆಯ ಜಾತ್ಯತೀತ ನಡತೆಗೆ ಒಂದು ಮಾದರಿ ಹಾಕಿಕೊಟ್ಟದ್ದು ಪತ್ರಿಕಾವಾಚಕರೆಲ್ಲರಿಗೂ ತಿಳಿದ ವಿಷಯ. ಕಾಗದ, ಪತ್ರ ಮತ್ತು ವಾರ್ಷಿಕ ವ್ಯವಹಾರಗಳಲ್ಲಲ್ಲದೆ ಕೋರ್ಟು, ಕಚೇರಿ, ಸಂಘ, ಸಂಸ್ಥೆ ಮತ್ತು ಇತರ ಸಾರ್ವಜನಿಕ ಸಾಮಾಜಿಕ ಸಭೆ ಸಮಾರಂಭ ಊಟ, ಆಟ ಮುಂತಾದ ಸರ್ವ ಕಾರ್ಯಕ್ಷೇತ್ರಗಳಲ್ಲೂ ಜಾತ್ಯತೀತವೂ ಸರ್ವಸಾಧಾರಣವೂ ಆದ ನಡೆ ನುಡಿ ಆಚಾರ ಅನುಷ್ಠಾನಗಳನ್ನು ಅನುಸರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಆಗ ಮಾತ್ರ ಗಾಂಧಿಯವರ ಜಾತ್ಯತೀತ ಹಿಂದುಧರ್ಮದ ಕನಸು ನನಸಾದೀತು; ಹಿಂದು ಸಂಸ್ಕೃತಿಯಲ್ಲಿ ಹೊಕ್ಕ ಕೊಳೆ ಬೆಂಕೆಗಳು ನಾಶವಾಗಿ ಶುದ್ಧವೂ ತೇಜೋಮಯವೂ ಆಗಿ ಪುನಃ ಅದು ಜಗತ್ತಿಗೆ ಶಾಂತಿ ಪಾಠವನ್ನು, ಶಾಂತಿ ಮಂತ್ರವನ್ನು ಉಪನಿಷದಿಕ ಶೈಲಿಯಿಂ

ದ ಕಲಿಸಲು ಸಮರ್ಥವಾಗೀತು. ಅಸ್ಪೃಶ್ಯತೆಯನ್ನು ನಿವಾರಿಸಲೆಂದು ಒಮ್ಮೆ ತದಿತರರು ಅಶುಚಿತವಂತರಾಗಿದ್ದ ಕೆಲ ಹರಿಜನರೊಡನೆ ಸಹಪಂಕ್ತಿಭೋಜನ ಮಾಡಿದರು. ಇದನ್ನು ಕಂಡು ಗಾಂಧೀಜಿ ನಕ್ಕರಂತೆ. ಅವರಿಗೆ ಆದರ್ಶ ದ್ವಿಜತ್ವದದೃಷ್ಟಿಕ ಮತ್ತು ಮಾನಸಿಕ ಶಿಕ್ಷಣವನ್ನು ಕೊಟ್ಟು ಮೇಲಕ್ಕೆತ್ತುವುದನ್ನು ಬಿಟ್ಟು ಆ ದ್ವಿಜಂಮನ್ಯರು ತಾವೇ ಅಶುಚಿಗಳಾಗಿಬಿಟ್ಟದ್ದು ಹಾಸ್ಯಾಸ್ಪದವಲ್ಲವೆ? ಅದೇ ಮೇರೆಗೆ ಹಿಂದುಳಿದವರು ಕೇವಲ ಅಧಿಕಾರಸ್ಥಾನಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಹೋದರೆ ಅವರಿಗೆ ನಿಜವಾದ ವಿದ್ಯೆ, ಯೋಗ್ಯತೆ, ಕಲಾವಂತಿಕೆ ಮತ್ತು ಕೀರ್ತಿಗಳು ಎಂದಿಗೂ ಹಸ್ತಗತವಾಗಲಾರವು; ಅವರ ಬದಲು ದೇಶದಲ್ಲಿ ಉಳಿದ ಅಲ್ಪಸ್ವಲ್ಪ ಸಂಸ್ಕೃತಿಯೂ ಶೋಚನೀಯ ಹೇಳಹೆಸರಿಲ್ಲವಾದೀತು.

(ಏಕಲವ್ಯ—ಜಯ ಹಿಂದ್)

—)0(—

ಅಂತರ್ ಜಾತೀಯ ವಿವಾಹ.

ಮೊನ್ನೆ ೮ನೇ ತಾರೀಖಿನ ದಿವಸ, ಹಿರಿಯೋಲಗದಲ್ಲಿ ಅಂತರ್ಜಾತೀಯ ವಿವಾಹಕ್ಕೆ ಮನ್ನಣೆಕೊಡುವ, ಬಾಲಕಬಾಲಿಕೆಯರನ್ನು ಅಪಹರಿಸಿದರೆ ಆಗುವ ಅಪರಾಧಗಳಿಗೆ ಸಂಬಂಧಪಟ್ಟ ಹುಡುಗರ ವಯಸ್ಸನ್ನು ನಿರ್ಣಯಿಸುವ, ಮತ್ತು ಮಕ್ಕಳ ಲಗ್ನವು ಎಷ್ಟು ವರ್ಷಕ್ಕೆ ಆಗಬೇಕೆಂಬುದನ್ನು ಹೇಳುವ ನಿರ್ಣಯಗಳು ಸ್ವೀಕರಿಸಲ್ಪಟ್ಟವು. ಈ ವಿಷಯದಲ್ಲಿ ಅನೇಕರು ದುಃಖಪಡುವ ಸಂಭವವಿದೆ.

ಇದುವರೆಗೆ ಅಂತರ್ಜಾತೀಯ ವಿವಾಹಗಳಿಗೆ ಕಾಯಿದೆಯ ಮನ್ನಣೆಯಿದ್ದಿಲ್ಲ. ಅಂದರೆ ಆ ಬಗ್ಗೆ ಆಗುವ ಧಾರ್ಮಿಕವಿಧಿಗನುಸರಿಸಿದ ಬಂಧನಕ್ಕೆ ಕಾಯಿದೆಯು ಒಪ್ಪುತ್ತಿದ್ದಿಲ್ಲ. ಅಂತಹ ವಿವಾಹಗಳು ಆಗಬೇಕಾಗಿದ್ದರೆ, ಸರಕಾರದ ರೀತಿಯಲ್ಲಿ ಮನ್ನಣೆ ಪಡೆಯಬೇಕಾಗುತ್ತಿತ್ತು. ಆ ಲಗ್ನಗಳಿಗೆ ರಿಜಿಸ್ಟರ ಲಗ್ನಗಳೆಂದು ಅನ್ನುತ್ತಿದ್ದಾರೆ.

ಈ ಕಾಯಿದೆಯು ಸ್ವೀಕೃತವಾದಂದಿನಿಂದ ಬೇರೆ ಬೇರೆ ಜಾತಿಗಳಲ್ಲಿ ಆಗುವ ಧಾರ್ಮಿಕ ವಿಧಿಯ ಲಗ್ನಗಳಿಗೂ ಸರಕಾರೀ ಮನ್ನಣೆಯು ಸಿಕ್ಕಂತಾಗಿದೆ.

ಹೊಸದಾಗಿ ಈ ತಿದ್ದುಪಡೆಯು ಆದದ್ದನ್ನು ಕಂಡು ಅನೇಕರಿಗೆ ಬೆದರಿಕೆಯಾಗಿರುವುದು ಆಶ್ಚರ್ಯದ ಮಾತೇನೂ ಆಗಬಾರದು. ಅವರ ಬೆದರಿಕೆಗೆ ವರ್ಣಸಂಕರದ ಕಲ್ಪನೆಯು ಕಾರಣವಾಗಿದೆ.

ವರ್ಣಸಂಕರವನ್ನು ಮಾಡುವವರು ಪರಿಸ್ಥಿತಿಯ ಅನುಕೂಲತೆಯಿಲ್ಲದೆ ಆ ಕೆಲಸಕ್ಕೆ ಕೈಹಾಕರೆಂಬುದನ್ನು ಯಾರೂ ಮರೆಯಕೂಡದು. ಇಂತಹ ಕಾಯಿದೆಯು ನ್ನು ಈಗೊಂದು ಐವತ್ತು ವರ್ಷಗಳ ಹಿಂದೆ ಮಾಡಬೇಕೆಂದರೆ ಬಹು ಕಠಿಣವಾಗದೆ ಇರುತ್ತಿದ್ದಿಲ್ಲ.

ಜೀವನದ ರೀತಿ ನೀತಿಗಳು ಇತ್ತ ಕಡೆಗೆ ಬಹಳ ವ್ಯತ್ಯಾಸಗಳನ್ನು ಹೊಂದಿವೆ. ಇವುಗಳ ಸಾಮೂಹಿಕ ಸ್ವರೂಪಕ್ಕೆ ಕ್ರಾಂತಿಯೆಂದೆನ್ನುತ್ತಾರೆ.

ನಮ್ಮ ದೇಶದಲ್ಲಿ ಇಂತಹ ಕ್ರಾಂತಿಯುಂಟಾಗಲು ಕಾರಣಗಳು ಆಗಿಯೇ ಇದವು. ನಮ್ಮ ರಾಜಕೀಯ ಅಧಿಕಾರವು ಪರರಸ್ವಾಧೀನಕ್ಕೆ ಹೋಗಿಬಿಟ್ಟಿತು. ಅದೊಂದು ಕೊರತೆಯುಂಟಾಯಿತೆಂದರೆ ಆ ದೇಶದ ಏಳಿಗೆಯು ಯಾವುದೇ ರೀತಿಯಿಂದ ಆಗಲು ಕಷ್ಟವಾಗುತ್ತದೆ. ಆದ್ದರಿಂದ ನಮ್ಮ ಅವನತಿಯು, ಇತರ ದೃಷ್ಟಿಗಳಲ್ಲಿ ಆದಂತೆ ಧಾರ್ಮಿಕ ಕ್ಷೇತ್ರದಲ್ಲಿಯೂ ಆಯಿತು. ಆ ರಾಜಕೀಯ ಪಾರತಂತ್ರ್ಯವು ಇಂದು ನಮಗೆ ನಿಲ್ಲದಿದ್ದರೂ, ನಮ್ಮ ದೇಶದಲ್ಲಾದ ಸಾಮೂಹಿಕ ಸ್ಥಿತ್ಯಂತರದ ಮೂಲಕ ಹಿಂದೆ ನಮ್ಮ ದೇಶದಲ್ಲಿದ್ದ ಧಾರ್ಮಿಕ ಭಾವನೆ ಮತ್ತು ವ್ಯವಸ್ಥೆಯ ಸ್ವರೂಪಗಳು ಅದೇ ಸ್ಥಿತಿಯಲ್ಲಿ ಇಂದು ಕಾಣುವುದು ಸಾಧ್ಯವಿಲ್ಲದಾಗಿದೆ.

ವಾತಾವರಣದ ಮೂಲಕ ಆಗಬೇಕಾದ ಸ್ಥಿತ್ಯಂತರಗಳು ಆಗಿಯೇ ಹೋಗಿವೆ. ಅವುಗಳ ದೃಷ್ಟಿಯಿಂದ, ಅವಶ್ಯಕ ಕಟ್ಟುಗಳನ್ನು ಸರಕಾರವು ಹಾಕುವುದು ಈಗ ಅಗತ್ಯದ ಮಾತಾಗಿದೆ. ಅದಕ್ಕಾಗಿಯೇ ಈ ತರಹದ ಕಾಯಿದೆಗಳು ಇಂದು ಮುಂದೆ ಬರುತ್ತಿವೆಯೆಂದು ಹೇಳದೆ ಗತ್ಯಂತರವಿಲ್ಲ.

ಅಂತರ್ಜಾತೀಯ ವಿವಾಹಗಳನ್ನೇ ತೆಗೆದುಕೊಂಡರೆ, ಅವು ನಮ್ಮ ದೇಶದಲ್ಲಿ ಬೇಕಾದಷ್ಟು ಈಗಾಗಲೇ ನಡೆದು ಹೋಗಿವೆ. ಮೊದಮೊದಲು ಅಂತಹ ಹೊಸ ದಾರಿಯನ್ನು ಹಿಡಿಯುವವರಿಗೆ ಸಮಾಜದಿಂದ ಕಷ್ಟಗಳಾದರೂ ಈಗ ಆ ಪರಿಸ್ಥಿತಿಯು ಉಳಿದಿರುವುದಿಲ್ಲ. ಅಂಥವರ ಕೂಡ ಕೆಲವರು ಧಾರ್ಮಿಕ ಮತ್ತು ಸಾಮಾಜಿಕ ರೀತಿಯಿಂದ ಸಹಕರಿಸುತ್ತಿಲ್ಲ. ಆದರೆ ಈ ಅಸಹಕಾರವು ಬರಬರುತ್ತ ಕಡಿಮೆಯಾಗುತ್ತಿದೆ. ಮತ್ತು ಹೀಗೆ ಇತರ ಜಾತಿಯವರೊಡನೆ ಲಗ್ನವಾಗುವವರ ಸಂಖ್ಯೆಯು ಬರಬರುತ್ತ ಹೆಚ್ಚಾಗುತ್ತಿದ್ದುದರಿಂದ ಮತ್ತು ಸಾಮಾನ್ಯ ಜನತೆಯು ಆ ಘಟನೆಗಳ ಕಡೆಗೆ ಮೊದಲಿನಂತೆ ಅಷ್ಟೊಂದು ವಿರೋಧ ಭಾವದಿಂದ ನೋಡುತ್ತಿದ್ದರಿಂದ ಹಾಗೆ ಮಾಡುವವರಿಗೆ ಅಷ್ಟು ಕಷ್ಟವೂ ಈಗ ಆಗುತ್ತಿಲ್ಲ.

ಅಂದಮೇಲೆ ಈ ರೀತಿಯಾಗಿ ಈಗಾಗಲೇ ನಮ್ಮಲ್ಲಿ ಪ್ರಚಾರಕ್ಕೆ ಬಂದ ಘಟನೆಗೆ ಕಾಯಿದೆಯು ಬೆಂಬಲ ಕೊಟ್ಟದ್ದಕ್ಕಾಗಿ ದುಃಖಪಡಬೇಕಾದ ಅವಶ್ಯಕತೆಯೇನೂ ಇಲ್ಲ.

ಹಾಗೆ ಮಾಡದೆ ಈ ವಿವಾಹಗಳು ಆಗದಂತೆ ಕಾಯಿದೆಮಾಡಬೇಕಾಗಿತ್ತೆಂದು ಕೆಲವರು ಹೇಳಬಹುದು. ಆದರೆ ಅಂಥವರು ಇಂದಿನ ವಾತಾವರಣದ ಕಡೆಗೆ ಸ್ವಲ್ಪ ಲಕ್ಷಗೊಡಬೇಕು. ಕಾಯಿದೆ ಮಾಡುವವರೇ ಈ ವಿವಾಹಗಳಿಗೆ ಅಷ್ಟೊಂದು ಮಹತ್ವ ಕೊಡದ ಸ್ಥಿತಿಗೆ ಬಂದಿದ್ದಾರೆಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ. ಹಾಗಿರುವಾಗ ಉಳಿದವರು ದುಃಖಪಡುವುದರಲ್ಲಿ ಅರ್ಥವಿದೆ?

ಆನಂದದೇವನಹಳ್ಳಿ

[ಹಡಗಲಿ]

ಈ ಗ್ರಾಮದ ಆಂತರಿಕ ದ್ವೇಷಾಸೂಯೆಗಳಿಂದ ಮತ್ತು ಪಾನನಿರೋಧಾಧಿಕಾರಿಗಳ ಕಾರಿನ್ಯದಿಂದ ಒಬ್ಬನ ಮರಣ ಮತ್ತು ವೃತನ ಮಗನಿಗೆ ಘಾಯಗಳು ಸಂಭವಿಸಿ ಚಿಂತಾಜನಕ ಪರಿಸ್ಥಿತಿಯಲ್ಲಿರುವುದು ತಿಳಿದು ಬಂದಿದೆ. ತಂಬ್ರಹಳ್ಳಿಯಲ್ಲಿ ಸಾರ್ವಜನಿಕ ಸಭೆಸೇರಿ ಇದರ ಬಗ್ಗೆ ಯೋಗ್ಯ ವಿಚಾರಣೆ ನಡೆಸಲು ತೀರ್ಮಾನವಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಕೋರಲಾಗಿದೆ. ಶ್ರೀ ಶಿವದೇಸಾಯಿಯವರು ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಎಲ್ಲಾ ಮಾಹಿತಿ ಸಂಗ್ರಹಿಸಿ ಸಂಬಂಧಿಸಿದಧಿಕಾರಿಗಳಿಗೆ ಕಳುಹಿಸಿದ್ದಾರೆ

ಶ್ರೀ ಟಿ. ರಾಘವರ ಸ್ಮಾರಕ

ಶ್ರೀ ಟಿ. ರಾಘವರ ಮೂರನೆಯ ವಾರ್ಷಿಕವು 13ನೆಯ ತಾ ರಾಘವ ಸ್ಮಾರಕ ಸಮಿತಿಯಿಂದ ಮುನಿಸಿಪಲ್ ಹೈಸ್ಕೂಲಿನಲ್ಲಿ ಮದ್ರಾಸ್ ರೆವಿನ್ಯೂ ಮಂತ್ರಿ ಶ್ರೀ ಹೆಚ್. ಸೀತಾರಾಮರೆಡ್ಡಿಯವರಧ್ಯಕ್ಷತೆಯಲ್ಲಿ ನೆರವೇರಿತು. ಪ್ರಭಾತ ಟಾಕೀಸ್‌ದಿಂದ ಮು. ಹೈ. ಶಾಲೆಯವರೆಗೆ ರಾಘವರ ಭಾವ ಚಿತ್ರದ ಮೆರವಣಿಗೆ ಏರ್ಪಟ್ಟಿತ್ತು. ಶ್ರೀಗಳಾದ ರಾ. ವೆಂಕಟರಮಣಶಾಸ್ತ್ರಿ (ತೆಲುಗು), ಶ್ರೀ ದೊಡ್ಡನಗೌಡ (ಕನ್ನಡ) ಶ್ರೀ ಗುರುಮೂರ್ತಿ (ಇಂಗ್ಲ) ಇವರು ರಾಘವರನ್ನು ಕುರಿತು ಸಂಭಾಷಿಸಿಯೋಗ್ಯ ಸ್ಮಾರಕವಾಗಬೇಕೆಂದರು. ಶ್ರೀ ಕಂದಾಯ ಮಂತ್ರಿಗಳಾದ ಶ್ರೀ ಸೀತಾರಾಮರೆಡ್ಡಿಯವರು "ರಾಘವ" ದಕ್ಷಿಣ ಹಿಂದೂಸ್ತಾನದಲ್ಲಿ ಹೆಸರುವಾಸಿಯಾದ ವ್ಯಕ್ತಿಯೆಂದು ಅವರ ಹುಟ್ಟೂರಾದ ಬಳ್ಳಾರಿಯಲ್ಲಿ ಅವರ ಸ್ಮಾರಕಕ್ಕಾಗಿ ಸ್ಥಳವನ್ನು ಸರ್ಕಾರವು ಉಚಿತವಾಗಿ ಒದಗಿಸಲಿದೆಯೆಂದೂ ಹೇಳಿದರು. ವಿವಿಧ ವಿನೋದಾವಳಿಗಳನಂತರ ಸಮಾವೇಶವು ಮುಗಿಯಿತು.

೧೦ ಮಿನಿಟದಲ್ಲಿ ಗುಣ
ಉತ್ತಮ ಪೌಡರ್
ದಶನಗುಣ
ತಲೆಶೂಲಿ, ಹಲ್ಲುಶೂಲಿ, ಪಿತ್ತಶೂಲಿ,
ಕ್ಷಯ ಕಾಲುಹಂತ, ನಗಡಿ ಜ್ವರ, ಮಲಬದ್ಧತೆ

ಈ ಯಂತ್ರದ ಮುಂದೆ ನಿಮ್ಮ ಮಿದುಳು ಬರಿ ಮಗು!

ಸೆಕೆಂಡಿಗೆ ೩೫೦೦ ಅಂಕೆಗಳನ್ನು ಕೂಡಿಸಬಲ್ಲ ಯಂತ್ರ.

ಗಣಿತಶಾಸ್ತ್ರದಲ್ಲಿ ನನ್ನದು ಎತ್ತಿದ ಕೈ ನನ್ನ ಬುದ್ಧಿ ಅತ್ಯಂತ ವೇಗದಿಂದ ಲೆಕ್ಕಗಳನ್ನು ಮಾಡುತ್ತದೆ, ಎಂಬ ಹೆಮ್ಮೆ ನಿಮಗೆ ಏನಾದರೂ ಇದ್ದರೆ ಗಡಿಯಾರವನ್ನು ಮುಂದಿಟ್ಟುಕೊಂಡು ಈ ಕೆಳಗಿನ ಸಂಖ್ಯೆಗಳನ್ನು ಗುಣಿಸಿರಿ:

೪೧೩೭೨೪೭೭೭೭೯೮೭೪೫೩೪೯ ×
೯೭೭೭೪೮೩೫೭೪೭೧೩

ನೀವು ಬಹಳ ಚುರುಕಾಗಿದ್ದರೆ ಇದನ್ನು ೩೦ ಮಿನಿಟುಗಳಲ್ಲಿ ಪೂರೈಸಬಹುದು. ಇಲ್ಲವಾದ್ದರೆ ಅರ್ಧಗಂಟೆ ಹಿಡಿಯಬಹುದು. ಆದರೂ ನಿಮಗೆ ಬಂದ ಉತ್ತರ ಖಾತ್ರಿಯೆಂದು ಹೇಳುವ ಧೈರ್ಯ ನಿಮಗೂ ಇರಲಿಕ್ಕಿಲ್ಲ.

ಇದೇ ಲೆಕ್ಕವನ್ನು ಅಮೇರಿಕೆಯ ಅಂತರ್ರಾಷ್ಟ್ರೀಯ ವ್ಯಾಪಾರ ಯಂತ್ರಗಳ ಕಂಪನಿಯವರು ತಯಾರಿಸಿದ ಒಂದು ಯಂತ್ರ ಒಂದು ಸೆಕಂಡಿನ ೫೦ ರಲ್ಲೊಂದಂಶದಲ್ಲಿ ಮಾಡಿ ಒಗೆಯುವದು. ಅದು ಸಿದ್ಧ ಮಾಡಿದ ಉತ್ತರ ಸರ್ವಥಾ ತಪ್ಪಾಗಲಾರದು.

ಹದಿನಾಲ್ಕು ಸ್ಥಾನಗಳ ಎರಡು ಸಂಖ್ಯೆಗಳ ಭಾಗಹಾರ ಮಾಡಲು ನಿಮಗೆ ತುಸು ಹೆಚ್ಚು ಹೊತ್ತೇ ಬೇಕಾಗಬಹುದು ಆದರೆ ಈ ಯಂತ್ರಕ್ಕೆ ಇಷ್ಟೇ ಎಂದರೆ ೧/೫೦ ಸೆಕೆಂಡು ಮಾತ್ರ ಸಾಲುತ್ತದೆ. ಕೂಡಿಸುವ ಕಳೆಯುವ ಲೆಕ್ಕಗಳನ್ನಂತೂ ಅದು ಲೀಲಾಜಾಲವಾಗಿ ಮಾಡಿಬಿಡುತ್ತದೆ. ೧೯ ಸ್ಥಾನಗಳಿಂದ ಕೂಡಿದ ಕೂಡಿಸುವ ಕಳೆಯುವ ಲೆಕ್ಕಗಳನ್ನು ಅದು ಒಂದು ಸೆಕಂಡಿಗೆ ೩೫೦೦ ರೀತಿ ಮಾಡಿಕೊಡಬಲ್ಲದು

ಅಂದಾಕ್ಷಣ ನೀವು ದಡ್ಡರೆಂದು ನನ್ನ ಆರೋಪವಲ್ಲ. ತಪ್ಪು ನಿಮ್ಮದಲ್ಲ. ನಿಮ್ಮ ಬುದ್ಧಿಯೆಷ್ಟು ಓಡಿದರೂ ನಿಮ್ಮ ನರಗಳಲ್ಲಿ ಪ್ರೇರಣಾಶಕ್ತಿಯ ಓಟವನ್ನು ಮೀರಿ ಓಡಲಾರದು. ಅದು ಬಹಳಾದರೆ ಸೆಕಂಡಿಗೆ ೧೩೦ ಗಜದಂತೆ ಹರಿದಾಡಬಹುದು ಆದರೆ ಈ "ವಿಚಾರಿಸುವ" ಯಂತ್ರದಲ್ಲಿ ವಿದ್ಯುತ್ಕಣ (ಇಲೆಕ್ಟ್ರಾನ್‌ಗಳ) ವೇಗವಾದ ಸೆಕಂಡಿಗೆ ೮೬೨೦೦ ಮೈಲುಗಳಂತೆ "ವಿಚಾರಶಕ್ತಿ" ಓಡಾಡುತ್ತದೆ. ಆದರಿಂದ ಅದರ ಮುಂದೆ ನಿಮ್ಮ ಬುದ್ಧಿ ಬರಿ ಮಗು.

ಈ ಹೊಸ ಯಂತ್ರದ ಅದ್ಭುತ ಸಾಮರ್ಥ್ಯದ ಕಲ್ಪನೆಗೆ ನಿಮಗೊಂದು ಉದಾಹರಣೆ ಹೇಳುವೆ: ಇಂದಿನಿಂದ ಹಿಂದೊಂದು ಶತಮಾನ ಮುಂದೊಂದು ಶತಮಾನಗಳಲ್ಲಿ ಪ್ರತಿದಿನ ಮಧ್ಯಾಹ್ನ ಹಾಗು ಮಧ್ಯರಾತ್ರಿ ಹೊತ್ತಿನಲ್ಲಿ ಚಂದ್ರನು ಭೂಚಕ್ರದಲ್ಲಿ ಸ್ಥಾನವೆಲ್ಲಿದ್ದನೆಂದು ಗುಣಿಸಿ ಹೇಳಬೇಕಾಗಿದೆಯೆಂದು ತಿಳಿಯಿರಿ. ಪ್ರತಿಯೊಂದು ಸ್ಥಾನವನ್ನು ಸ್ಫುಟಮಾಡಬೇಕಾದರೆ ೧೧೦೦೦ ಸಂಕಲನ ವ್ಯವಕಲನಗಳೂ ೯೦೦ ಗುಣಾಕಾರ ಭಾಗಹಾರಗಳೂ ೨೦೦೦ ಬಾರಿ ಜಂತ್ರಿಗಳನ್ನು ನೋಡುವ ಸಂದರ್ಭಗಳೂ ಬರುವವು. ಇದೊಂದಕ್ಕೇ ತೀಕ್ಷ್ಣಬುದ್ಧಿಯ ಗಣಿತಜ್ಞನಿಗೆ ಮೂರು ನಾಲ್ಕು ವಾರಗಳು ಬೇಕಾಗಬಹುದು. 'ವಿಚಾರಿಸುವ' ಯಂತ್ರಕ್ಕೆ ಎಲ್ಲ ಕೆಲಸಕ್ಕೆ ಒಟ್ಟು ಏಳು ಮಿನಿಟು ಸಾಲುತ್ತದೆ. ಇಡೀ ಲೆಕ್ಕ ಮುಗಿಸಲು ಅನೇಕ ಗಣಿತಜ್ಞರು ಜೀವಮಾನವೇ ಹಿಡಿಯಬಹುದು. ಯಂತ್ರದಿಂದ ಬರಿ ೬ ವರ್ಷಗಳಲ್ಲಿ ಇದು ಸಾಧ್ಯವಾಗುವದು.

ಭಾರೀ ಯಂತ್ರ

ಜೀವಂತ ಮಾನವನ ವಿಚಾರಿಸುವ ಯಂತ್ರವಾದ ಮೆದುಳಿನಂತೆ ಇದೂ ಗೇಣುದ್ದ ಗೇಣಗಲ ಸ್ಥಳದಲ್ಲಿ ಕೂಡ್ರುವ ಟೈಪ್‌ರೈಟರನಂಥ ಯಂತ್ರವೆಂದು ಮಾತ್ರ ತಿಳಿದುಕೊಳ್ಳಬೇಡಿರಿ. ನೂರು ಜನರಿಗೆ ಒಟ್ಟರೆ ಹೇಗಲು ಇನ್ನೊಬ್ಬರಿಗೆ ತಗಲದಂತೆ ನಿಲ್ಲಲು ಸಾಲುವಷ್ಟು ಸ್ಥಳವುಳ್ಳ ದೊಡ್ಡಮನೆಯಲ್ಲಿ ನ್ಯೂಯಾರ್ಕಿನಲ್ಲಿ ಇದನ್ನಿರಿಸಿದ್ದಾರೆ ಅದರೊಳಗಿರುವ ಅವಯವಗಳಲ್ಲಿ ಕೆಲವನ್ನು ಲೆಕ್ಕಿಸಿದರೇನೇ ನಿಮ್ಮ ತಲೆ ತಿರುಗಬಹುದು. ಅದರಲ್ಲಿ ೧೩೫೦೦ ವಿದ್ಯುಲ್ಲವ ವಾಲ್ವುಗಳು, ೪೨೦೦೦ ಪ್ಲಗ್ ಜೋಡಣೆಗಳು, ೪೫೦ ಮೈಲುದ್ದ ತಂತಿ ಮತ್ತು ಅದರ "ಹಣೆ"ಯ ಜ್ವರ ಇಳಿಸಲು ದಿವಸಕ್ಕೆ ೫೦ ಟನ್ ನೀರನ್ನು ಮಂಜುಗಡ್ಡೆಯಾಗಿ ಪೂರೈಸುವ ಸಾಧನಗಳು ಅಳವಡಿಸಲಾಗಿವೆ. ಅದು ೪ ಲಕ್ಷ ಸಂಖ್ಯೆಗಳನ್ನು "ನೆನಪಿನಲ್ಲಿಟ್ಟುಕೊಳ್ಳ" ಬಲ್ಲದು.

ಆದರೂ ಅದರ ಬುದ್ಧಿ ಕೊಂಚ ದಡ್ಡತನದ್ದೆ. ಅದು ಗುಣಿಸುವ ಭಾಗಿಸುವ ಕಳೆಯುವ ಲೆಕ್ಕಗಳನ್ನು ಮಾಡಿದರೂ ಬಿನ್ನಿಯ ಶಾಲಾ ಹುಡುಗನಂತೆ ಎಲ್ಲವನ್ನೂ ಕೂಡಿಸುವ ಮೂಲಕವೇ ಮಾಡಬೇಕು ೭ ಕ್ಕೆ ೭ ರಿಂದ ಗುಣಿಸುವದೆಂದರೆ ೭ ನ್ನು ೭ ಬಾರಿ ಕೂಡಿಸುವದೇ.

ಅದಕ್ಕೆ ನೀವು ಹೇಳಿಕೊಡಬೇಕಾದರೆ ಉಪಯೋಗಿಸುವ "ಪಂಚ" ಲಿಪಿಯಂತೆ ಇದಕ್ಕೆ ಕಾರ್ಡುಗಳ ಮೇಲೆ ಪಂಚಮಾಡಿ ಅಂಕಗಳನ್ನೊ ಮಾಡಬೇಕಾದ ಕೆಲಸವನ್ನೂ ತೋರಿಸಿ ಆ ಕಾರ್ಡುಗಳನ್ನು "ತಿನಿಸ" ಬೇಕು. ಆಗ ಅದು ವಿದ್ಯುತ್ತಿನ ಹಸ್ತದಿಂದ ಅದನ್ನೋದಿಕೊಂಡು ಪರಿಣಾಮವನ್ನು ಬರೆದುಕೊಡುತ್ತದೆ. ಒಂದು ಲೆಕ್ಕದ ಪರಿಣಾಮವನ್ನು ನೆನಪಿನಲ್ಲಿಟ್ಟುಕೊಂಡು ಕೂಡಲೆಯೋ ಅಥವಾ ಮುಂದೆ ಯಾವಾಗಲಾದರೂ ಸಂದರ್ಭ ಬಂದಾಗ ನೆನೆದುಕೊಳ್ಳಬೇಕೆಂದಿದ್ದರೆ ಅದು ಪಟ್ಟಿಗಳ ಮೇಲೆ ಅದನ್ನು ಟಿಪ್ಪಣೆಮಾಡಿಕೊಂಡಿಟ್ಟು, ಕೇಳಿದಾಗ್ಗೆ ಪುನಃ ಲೆಕ್ಕಮಾಡದೆ ತನ್ನ "ನೆನಪಿನ ನಿಧಿ" ಯಿಂದಲೇ ನಿಮಗೆ ಎತ್ತಿಕೊಡುವದು. ಎಲ್ಲ ಉತ್ತರಗಳನ್ನೂ ಅದು ಮುದ್ರಿಸಿಕೊಡುವದು.

ಇದರಿಂದ ಗ್ರಹಗಣಿತ, ಜ್ಯೋತಿರ್ಗಣಿತ, ರಸಾಯನಶಾಸ್ತ್ರ, ಪದಾರ್ಥವಿಜ್ಞಾನ ಶಾಸ್ತ್ರಗಳೇ ಮೊದಲಾದವುಗಳ ಮೇಲೆ ಬಹಳ ತೀವ್ರ ಪರಿಣಾಮವಾಗದಿರದು. ಲೆಕ್ಕ ಮಾಡುವದರಲ್ಲಿ ಬಹಳ ಹೊತ್ತು ಕಳೆಯಬೇಕಾಗಿದ್ದ ವೈಜ್ಞಾನಿಕರ ಸಮಯ ಉಳಿದು ಅವರು ವಿಚಾರದಲ್ಲಿ ತಮ್ಮ ಬುದ್ಧಿಯನ್ನುಪಯೋಗಿಸಬಲ್ಲರು.

'ಹೈದರಾಬಾದ ಕರ್ನಾಟಕ'

(ವಾರದಲ್ಲಿ ಮೂರು ಸಲ ಪ್ರಕಟವಾಗುತ್ತದೆ).

ಸಂಪಾದಕ ಪ್ರಕಾಶಕ:—
ಶ್ರೀ ಪಿ ಆರ್. ಕಂಠಿ, ಹುಬ್ಬಳ್ಳಿ.

ವಿಶೇಷ ಸಂಚಿಕೆಯು ಹಸ್ತಗತವಾಗಿದೆ. ಹೈದರಾಬಾದ ಕನ್ನಡ ಭಾಗದ ಸಮಗ್ರ ವಿವರಗಳು ಇವೆ. ಅಖಂಡ ಕರ್ನಾಟಕ ನಿರ್ಮಾಣದ ಸಾಧನೆಗಳನ್ನು ಕುರಿತು ಬಲ್ಲವರು ಚನ್ನಾಗಿ ವಿವೇಚಿಸಿದ್ದಾರೆ. ಬಹುಕಾಲದ ದಾಸ್ಯಾಂಧಕಾರದಿಂದ ಪಾರಾಗಿ ಸ್ವಾತಂತ್ರ್ಯ ಪ್ರಕಾಶವನ್ನು ಕಂಡ ಹೈದರಾಬಾದ ಸಂಸ್ಥಾನದ ಕಲಬುರ್ಗಿಯಲ್ಲಿ 12ನೆಯ ಏಕೀಕರಣ ಪರಿಷತ್ತು ಸಮಾವೇಶವಾದುದು ಯೋಗ್ಯವೂ ಉಚಿತವೂ ಆಗಿದೆ. ಇದರ ವಿವರಗಳು ಪರಿಶ್ರಮಿಸಿದವರ ಭಾವಚಿತ್ರಗಳಿಂದ ಪ್ರಕಟವಾಗಿದೆ.

ಹೈದರಾಬಾದ ಕನ್ನಡಿಗರಿಗೂ, ಹೈದರಾಬಾದ ಒಳಗೊಂಡ ಕರ್ನಾಟಕದಲ್ಲಿ ಆಸಕ್ತರಿರುವ ಕನ್ನಡಿಗರಿಗೂ ಇದು ಸಾಕಷ್ಟು ಮಾಹಿತಿಯನ್ನೊದಗಿಸಿ ಅಖಂಡ ಕರ್ನಾಟಕದ ರಚನೆಗೆ ಸಾಧಕವಾಗಲೆಂದು ಕೋರಿ ಕನ್ನಡ ಪತ್ರಿಕಾ ಪ್ರಪಂಚಕ್ಕೆ ಇದನ್ನು ಸ್ವಾಗತಿಸುತ್ತೇವೆ.

ಲಂಬಾಣಿ ಸಭೆ

ಬಳ್ಳಾರಿ ಜಿಲ್ಲಾ ಕೂಡ್ಲಿಗಿ ತಾಲೂಕು ಲಂಬಾಣಿ ಸಭೆ ಇದು ಹೊಸಪೇಟೆ ಡೆಪ್ಯೂಟಿ ಕಲೆಕ್ಟರ್ ಶ್ರೀ ಭಗವಾನದಾಸರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿತ್ತು. ಶ್ರೀ ಟಿ. ಸುಬ್ರಹ್ಮಣ್ಯಂ ಮತ್ತು ಇತರ ಸಮಾಜ ಸೇವಕರು ಅವರ ಅಭಿವೃದ್ಧಿಯನ್ನು ಕುರಿತು ಮಾತಾಡಿದರು. ಹಿಂದುಳಿದ ಈ ಜನಾಂಗದ ಆರ್ಥಿಕ ಮತ್ತು ವಿದ್ಯಾಪರಿಸ್ಥಿತಿಗಳನ್ನು ಸುಧಾರಿಸಲು ಸೂಕ್ತ ಠರಾವುಗಳಾದವು.

—(0)—

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವು. ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 00 6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ. 18—4—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೪ ಏಪ್ರಿಲ್ ೧೯೪೯ | ಸಂಚಿಕೆ ೧.

ಇಂಗ್ಲೆಂಡಿಗೆ ಹೋಗುವಮುನ್ನ

ಪಂಡಿತ ಜವಹರಲಾಲರ ಸಂದೇಶ

ಪರರಾಷ್ಟ್ರ ಧೋರಣೆ

ಪಂಡಿತ ನೆಹರೂರವರು ಹಿಂದುಸ್ಥಾನದ ಪರರಾಷ್ಟ್ರ ಧೋರಣೆಯನ್ನು ಸ್ಪಷ್ಟವಾಗಿಯೇ ಮತ್ತೊಮ್ಮೆ ನೆನಪಿಗೆ ತಂದುಕೊಡುತ್ತ ಈ ರೀತಿ ಹೇಳಿದರು:

"ನಾವು ಒಂದಕ್ಕೊಂದು ಕಿತ್ತಾಡುತ್ತಿರುವ ಬಲಾಬಲ ಗುಂಪುಗಳಿಗೆ ಹೊಂದಿಕೊಳ್ಳಲಾರೆವು. ಇದೇನೂ ಬರೇ ತಟಸ್ಥವೃತ್ತಿಯ ಧೋರಣೆಯಾಗಿಲ್ಲದಿದ್ದರೂ, ನಾವು ರಾಷ್ಟ್ರರಾಷ್ಟ್ರಗಳಲ್ಲಿ ಶಾಂತಿ ಮತ್ತು ಸ್ನೇಹಸೌಹಾರ್ದಗಳನ್ನು ಪ್ರಸ್ಥಾಪಿಸಬಹುದಾದ ಆಶೆಯಿಂದ ಜಾಗತಿಕ ಸಮಸ್ಯೆಗಳನ್ನೆದುರಿಸುವ ಉಚಿತವಾದ ಮಾರ್ಗವಾಗಿದೆ. ಈ ವಿಷಯದಲ್ಲಿ ಹಿಂದುಸ್ಥಾನವು ಏಶಿಯಕ್ಕೆ ಮಾತ್ರವೇ ಅಲ್ಲದೆ, ಜಗತ್ತಿಗೂ ಸೇವೆ ಸಲ್ಲಿಸುವುದೆಂದು ನನಗೆ ನಂಬಿಗೆಯಿದೆ. ಈ ಹಿನ್ನೆಲೆಯಿಂದಲೇ ನಾವು ಸಮಸ್ತ ಪರರಾಷ್ಟ್ರ ಸಮಸ್ಯೆಗಳನ್ನು ಎದುರಿಸಲು ಪ್ರಯತ್ನಿಸಿದ್ದೇವೆ.

ರಾಷ್ಟ್ರಪಿತನ ಮಾರ್ಗಾವಲಂಬನದಿಂದಲೇ ಭಾರತಕ್ಕೆ ಮಹತ್ವದ ಸ್ಥಾನ. ನಾವು ಬಲಾಬಲ ಗುಂಪುಗಳಿಗೆ ಮಾರು ಹೋಗಲಾರೆವು

"ನಾನು ಈ ವಿಷಯದಲ್ಲಿ ನನಗಿತ್ತ ನಿರ್ದೇಶನಗಳಿಗೆ ಹಾಗು ನಮ್ಮ ಸ್ಫೂರ್ತಿ ತುಂಬಿದ ತತ್ವಗಳಿಗೆ ಅಂಟಿಕೊಳ್ಳುವೆನು" ಹೀಗೆಂದು ಪ್ರಧಾನಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ತಾವು ಇಂಗ್ಲೆಂಡಿಗೆ ತೆರಳುವ ಮುನ್ನಾದಿನ ಹಿಂದೀ ಜನತೆಗಿತ್ತ ಚಿಕ್ಕದಾದ ಸಂದೇಶವೊಂದರಲ್ಲಿ ಹೇಳಿದರು.

ಕಾಮನವೆಲ್ತ್ ದೇಶಗಳೊಂದಿಗೆ ಹಿಂದುಸ್ಥಾನದ ಭಾವೀ ಸಂಬಂಧದ ಬಗೆಗೆ ಚರ್ಚಿಸುವುದೇ ನಾನು ಇಂಗ್ಲಂಡಿಗೆ ಹೋಗುವದರ ಉದ್ದೇಶವಾಗಿದೆ. ಈಗಾಗಲೇ ನಾನು ಈ ವಿಷಯದಲ್ಲಿ ಮಹಾ ಶಾಸನ ಸಭೆ, ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನ ಮತ್ತು ಬೇರೆಡೆಗಳಲ್ಲಿ ಬಿಚ್ಚುಮನಸ್ಸಿನಿಂದಲೇ ಚರ್ಚಿಸಿ ನಮ್ಮ ಮೂಲಭೂತವಾದ ಪರಿಸ್ಥಿತಿಯೇನೆಂಬುದನ್ನು ನಿವೇದಿಸಿದ್ದೇನೆ.

"ಹಿಂದುಸ್ಥಾನವು ನಮ್ಮನ್ನು ಸ್ಫೂರ್ತಿಗೊಳಿಸಿದ ಮಹಾ ತತ್ವಗಳಿಗೆ ಯಾವಾಗಲೂ ಅಂಟಿಕೊಂಡದ್ದೇ ಆದರೆ ಮಹಾ ರಾಷ್ಟ್ರಪಿತನು ನಮಗೆ ಕಲಿಸಿಕೊಟ್ಟ ಪಾಠಗಳನ್ನು ಅನುಸರಿಸಿದ್ದೇ ಆದರೆ ಭವಿಷ್ಯದಲ್ಲಿ ಹಿಂದುಸ್ಥಾನವು ತನ್ನ ಪಾತ್ರವನ್ನು ನಿಸಂಶಯವಾಗಿಯೂ ವಹಿಸಿಕೊಳ್ಳುವದು.

"ನಮ್ಮ ಸ್ಥಾನ ಮಹಾತ್ಮ್ಯದಿಂದ ಮಾತ್ರ ಇಂದಿನ ಜಗತ್ತಿನಲ್ಲಿ ಏನೇನು ಸಂಭವಿಸುತ್ತಿದೆಯೋ ಅವುಗಳ ಬಗೆಗೆ ವಿಶಾಲವಾದ ಆಸ್ಥೆ ವಹಿಸಬೇಕಾಗಿದೆ. ಜಾಗತಿಕ ಶಾಂತಿಪ್ರಗತಿಗಳಿಗಾಗಿ ನಾವು ನಮ್ಮ ಕರ್ತವ್ಯ ಕರ್ಮಗಳನ್ನು ನಿರ್ವಹಿಸಬೇಕಾಗಿದೆ.

"ಇತಿಹಾಸವು ಮುನ್ನಡೆದಿರುವಾಗ ನಾವದರಗುಂಟ ಹೋಗಬೇಕಾಗುವದು ಮಾತ್ರವೇ ಅಲ್ಲದೆ, ನಾವದನ್ನು ರೂಪುಗೊಳಿಸಲು ಹೆಣಗಾಡುತ್ತಿರಬೇಕಾಗಿದೆ. ಅಂತೆ ರಾಷ್ಟ್ರವೊಂದರ ಧೋರಣೆಯು ಅದರ ಅಂತರಿಕ ಬಲವನ್ನವಲಂಬಿಸಿರುವದು. ನಮ್ಮ ಅಂತರಿಕ ಶಕ್ತಿ ಬೆಳೆದಿರುವುದರಿಂದಾಗಿಯೇ ಜಾಗತಿಕ ವಿಚಾರದಲ್ಲಿ ಭಾರತಕ್ಕೆ ಹೆಚ್ಚೆಚ್ಚಿನ ಸ್ಥಾನ ದೊರೆಯುತ್ತಿದೆ.

ರಾಷ್ಟ್ರಗಳಲ್ಲಿ ನೈತಿಕತೆ

"ಇತ್ತೀಚಿಗೆ ಲಂಡನ್ನಿನ ಪತ್ರಿಕೆಯೊಂದರಲ್ಲಿ ರಾಷ್ಟ್ರ ರಾಷ್ಟ್ರಗಳಲ್ಲಿ ನೈತಿಕತೆಯ ಅಭಾವವಿದೆಯೆಂದೂ ನಾನು ಹೇಳಿದಂತೆ ಕೆಲವೊಂದು ತಪ್ಪಿನಿಂದ ವರದಿಯಾಗಿದೆ. ಸತ್ಯ ಸಂಗತಿಯೆಂದರೆ, ರಾಷ್ಟ್ರದ ಆಂತರಿಕ ಹಾಗು ಪರರಾಷ್ಟ್ರೀಯ ವ್ಯವಹಾರ ಧೋರಣೆ ನೈತಿಕ ಆಧಾರವಿಲ್ಲದಿದ್ದರೆ, ಅಂಥ ರಾಷ್ಟ್ರವೇ ಪತನಗೊಳ್ಳುವದಲ್ಲದೆ ಜಗತ್ತೂ ನಷ್ಟಗೊಳ್ಳುವದೆಂಬ ಅಭಿಪ್ರಾಯವುಳ್ಳವನಾಗಿದ್ದೇನೆ.

"ತಪ್ಪಾದರೀತಿಯಿಂದ ಹಬ್ಬಿಸಲ್ಪಟ್ಟ ಕೆಲವು ಜನರಿಗೆ ತಾತ್ಕಾಲಿಕವಾಗಿ ಸಫಲವಾಗಿ ತೋರಿಬಂದರೂ, ಹಿಂದುಸ್ಥಾನವೆಂದೂ ಅನೈತಿಕವಾದುದೇನನ್ನೂ ಮಾಡಲಾರದೆಂದೂ ನಾನು ಆಶಿಸುತ್ತೇನೆ".

"ಸದ್ಯಕ್ಕೆ ನಾನು ಸಾಮಾನ್ಯ ವ್ಯಕ್ತಿಯಾಗಿ ಪರದೇಶಕ್ಕೆ ಹೋಗುತ್ತಿಲ್ಲ. ಜನತೆಯ ಸದ್ಭಾವನೆಯುಳ್ಳ ಮಹಾರಾಷ್ಟ್ರವೊಂದರ ಪ್ರತಿನಿಧಿಯಾಗಿ ಹೋಗುತ್ತೇನೆ. ಅದರಂತೆ ಇತರ ರಾಷ್ಟ್ರಗಳನ್ನು ಸ್ನೇಹ ಸಾಹಾರ್ದತೆಯಿಂದ ಕಾಣುವ ಇಚ್ಛೆಯಿಂದ ಹೊರಟ್ಟಿದ್ದೇನೆ ಜೈ ಹಿಂದ್!"

ಪತ್ರಿಕಾ ಪರಿಷತ್ತಿನ ನಂತರ ಪಂಡಿತ ನೆಹರೂರವರು ಅಲ್ಲಿ ನೆರೆದಿದ್ದ ಛಾಯಾಕಾರರ ಸಮಾಧಾನಕ್ಕಾಗಿ ಪೋಸ್ ಮಾಡಿ ತಮ್ಮ ಯಾತ್ರೆಯ ಯಶಸ್ಸಿಯ ಬಗ್ಗೆ ಹರಿಸಲು ಕೇಳಿಕೊಂಡರು.

ಪತ್ರಿಕೋದ್ಯಮಿಗಳ ಮಧ್ಯದಲ್ಲಿ

ಪತ್ರಿಕೋದ್ಯಮಿಗಳ ತಮ್ಮನ್ನುದ್ದೇಶಿಸಿ ಭಾಷಣಮಾಡಬೇಕೆಂದು ಕೇಳಿಕೊಂಡಾಗ ತತಕ್ಷಣವೇ ಪಂಡಿತ ನೆಹರೂರವರು ಮುಂದೆಬಂದು ಈ ರೀತಿ ಹೇಳಿದರು.

"ನಾನು ಯಾವಾಗಲೂ ಹಿಂದೀ ಜನತೆಯ ಸದ್ಭಾವನೆ, ಪ್ರೀತಿ, ಸಹಕಾರಗಳನ್ನು ಕೇಳಿಕೊಂಡಾಗಲೆಲ್ಲ ನನಗೆ ಅವರಿಂದ ಉದಾರವಾದ ಉಪಾಯಯೋಜನೆಗಳು ದೊರೆತಿವೆ. ನಾನೇನಾದರೂ ನನ್ನ ಜೀವನದಲ್ಲಿ ಸಾಧಿಸಿದ್ದಾದರೆ ಅದು ಜನತೆಯ ಸಂಘ ಪ್ರೀತಿ ಮತ್ತು ಸದ್ಭಾವನೆಯಿಂದಲೇ ಆಗಿದೆ. ಭವಿತವ್ಯವನ್ನು ನಿರ್ಧರಿಸುವಂತಹ ಸಮಸ್ಯೆಗಳನ್ನು ವಿಚಾರಿಸಲು ನಾನು ಹೊರಡುತ್ತಿರುವ ಈ ಸಂದರ್ಭದಲ್ಲಿ ನಿಮಗೆಲ್ಲರಿಂದ ಇಂತಹ ಸದ್ಭಾವನೆ ಮತ್ತು ಪ್ರೀತಿಗಳು ತೀರ ಅವಶ್ಯವಾಗಿವೆ.

"ಹಿಂದಿನ ವರ್ಷಗಳಲ್ಲಿ ಹಿಂದೀಯರಾದ ನಾವೆಲ್ಲರೂ ಇತಿಹಾಸ ರಚಿಸುವದರಲ್ಲಿ ಭಾಗಿಗಳಾದೆವು. ಇತಿಹಾಸವು ಈ ದಿವಸದಲ್ಲಿ, ಏಶಿಯಾದಲ್ಲಿ ಮತ್ತು ಜಗತ್ತಿನ ತೀವ್ರಗತಿಯಿಂದ ಮುನ್ನಡೆದಿದೆ. ಇತಿಹಾಸವಿದನ್ನು ರಚಿಸಲಾಗುತ್ತಲಿದ್ದು, ಜಗತ್ತಿನಲ್ಲಿ ಮಹತ್ವದ ಬದಲಾವಣೆಗಳು ಮತ್ತು ಅಲ್ಲೋಲಕಲ್ಲೋಲಗಳು ಸಂಭವಿಸುತ್ತಲಿವೆ.

"ಸ್ವತಂತ್ರ ಭಾರತವು ಇವುಗಳನ್ನೆಲ್ಲ ಆತ್ಮವಿಶ್ವಾಸದಿಂದಲೇ ಎದುರಿಸುತ್ತದೆ. ನಾವು ಆದೆಷ್ಟೋ ಗಂಡಾಂತರಗಳನ್ನು ಎದುರಿಸಿಯೂ ಬದುಕಿಕೊಂಡು ಬಂದಿದ್ದಂತೆ, ಭವಿತವ್ಯವನ್ನಾದರೂ ಎದುರಿಸಲು ನಮ್ಮ ಆತ್ಮವಿಶ್ವಾಸವುಂಟಾಗಿದೆ.

——)O(——

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ.

— ಪ್ರಕಟನೆ —

ಈ ಕೆಳಗೆ ಕಾಣಿಸಿದ ವಿದ್ಯಾರ್ಥಿಗಳು 1949 ನೆಯ ಫೆಬ್ರವರಿ ಪರೀಕ್ಷೆಗಳಲ್ಲಿ ಬಳ್ಳಾರಿ ಕೇಂದ್ರದಿಂದ ಉತ್ತೀರ್ಣರಾಗಿರುವರು.

ರಾಷ್ಟ್ರಭಾಷಾ ಪ್ರವೀಣ.

೧) ಕಿ. ಯಂ. ತಿರುಮಲರಾವ್, II-IV ಭಾಗ
೨) ಪಿ. ಯಂ. ಪಂಚಾಕ್ಷರಶರ್ಮ, II ,,
೩) ಕೆ. ಕೃಷ್ಣಮೂರ್ತಿ, I ಭಾಗ
೪) ಕೆಂ. ರೇವಣ್ಣ, VI ಭಾಗ.
೫) ಪುಲ್ಲಯ್ಯನಾಯ್ಡು, I ಭಾಗ

ವಿಶಾರದ

೧) ಹೆಚ್. ವೇಣುಗೋಪಾಲರಾವ್
೨) ರಾ. ವಿಜಯೀಂದ್ರಶರ್ಮ

ಪ್ರವೇಶಿಕ

೧) ಬಿ. ಅಶ್ವಥನಾರಾಯಣ
೨) ಶಾ. ಶಂಕರಪ್ಪ
೩) ತಂ. ನರಸಿಂಹಶಾಸ್ತ್ರಿ
೪) ಕಾ. ಮಲ್ಲಿಕಾರ್ಜುನಶರ್ಮ.

ರಾಷ್ಟ್ರಭಾಷಾ

ವಿದ್ಯಾರ್ಥಿನಿಯರು:—

೧) ಕೆ. ಶಾರದಾ
೨) ಯಂ. ಮಲ್ಲಮ್ಮ
೩) ಬಿ. ಆರ್. ಯಶೋದಾ
೪) ವಿ. ಲಕ್ಷ್ಮೀದೇವಿ

ವಿದ್ಯಾರ್ಥಿಗಳು

೧) ಹೆಚ್. ಯಂ. ಚನಬಸವರಾಜಶರ್ಮ
೨) ಗುರುರಾವ್
೩) ವಿಜಯರಾಘವನ್
೪) ಬಿ. ವೆಂಕಟರಾಮರೆಡ್ಡಿ
೫) ಎ. ಯಂ. ಯನ್. ಚನವೀರಯ್ಯ
೬) ಬಿ. ಲಕ್ಷ್ಮೀನಾರಾಯಣ
೭) ಚ. ಮಲ್ಲಿಕಾರ್ಜುನಶಾಸ್ತ್ರಿ

ಮಧ್ಯಮಾ

ವಿದ್ಯಾರ್ಥಿನಿಯರು:-

೧) ಪಿ. ದೇವಕಮ್ಮ, ಪ್ರಥಮ ಶ್ರೇಣಿ
೨) ಪಿ. ಲೋಕಮ್ಮ ,,
೩) ಕೆ. ಸುಂದರೀ II
೪) ಪಿ. ಪಾರ್ವತಮ್ಮ II

ವಿದ್ಯಾರ್ಥಿಗಳು.

೧) ಯಸ್. ಯಂ. ಶಿದ್ಧೇಶ್ವರ್
೨) ಜಿ. ಯಂ. ಕೊಟ್ರಬಸಯ್ಯ
೩) ಕೆ. ಸಿದ್ಧಲಿಂಗನಗೌಡ
೪) ಓಂಪ್ರಕಾಶ
೫) ಶಿವಪಾಲಶಿಂಹ
೬) ಕೆ. ಶ್ರೀನಿವಾಸಮೂರ್ತಿ
೭) ಆರ್. ನಾಗಭೂಷಣಂ
೮) ಎ. ರಾಮಚಂದ್ರರಾವ್
೯) ಬಿ. ಶ್ರೀನಿವಾಸರಾವ್
೧೦) ಎ. ಸೋಮಪ್ಪ
೧೧) ಎಸ್. ಕೆ. ಪಂಕಜನಾಭ್
೧೨) ಯಂ. ಪಾಪಯ್ಯಶೆಟ್ಟಿ
೧೩) ಯಂ. ಹನುಮಂತರಾವ್
೧೪) ಜ. ಕ್ರಿಷ್ಟಯ್ಯನಾಯುಡು
೧೫) ಯಸ್. ನಾರಾಯಣಪ್ಪ
೧೬) ಆರ್. ವಿ. ಸುಬ್ರಹ್ಮಣ್ಯಂ
೧೭) ಪಿ ಅನಂತರಾಮಶಾಸ್ತ್ರಿ
೧೮) ಯಂ. ದಸ್ತಗೀರಿಸಾಹೇಬ್
೧೯) ಕೆ. ಸತ್ಯನಾರಾಯಣರಾವ್
೨೦) ವೈ. ಮರಿಪ್ಪ
೨೧) ಬಿ. ಮಲ್ಲೇಶಪ್ಪ
೨೨) ಜಿ. ಅಬ್ದುಲ್ ಹೈ.
೨೩) ಎ. ಆಲೀ
೨೪) ಕೆ ಯಂ. ಪಂಪಾಪತಿಶರ್ಮ

ಪ್ರಾಥಮಿಕ ಪರೀಕ್ಷೆ

ವಿದ್ಯಾರ್ಥಿನಿಯರು:-

೧) ಕೆ ಇ. ಸಾರಮ್ಮ ಪ್ರಥಮ ಶ್ರೇಣಿ
೨) ಎನ್. ಗ್ರೇಸ್ ಮನೋಹರಂ
೩) ಎನ್. ಡಿ. ಮಾರ್ಗರೆಟ್ ಕಲ್ಯಾಣಿ
೪) ಕಮಲಮ್ಮ
೫) ಸರಸಮ್ಮ

ವಿದ್ಯಾರ್ಥಿಗಳು

೧) ಕೆ. ಸೋಮಶೇಖರ್ ಪ್ರಥಮ ಶ್ರೇಣಿ
೨) ಹೆಚ್. ಜಿ. ಚನಬಸವನಗೌಡ ಪ್ರಥಮ ಶ್ರೇಣಿ
೩) ಪಿ ವಿರುಪಾಕ್ಷಗೌಡ ,,
೪) ಕೆ. ವೀರಭದ್ರಗೌಡ ,,
೫) ಎಸ್. ಗಾದಿಲಿಂಗನಗೌಡ ,,
೬) ಕೆ. ಅಯ್ಯಣ್ಣ ,
೭) ಬಿ. ಗೋಪೀನಾಥ ,,
೮) ಆರ್. ಸೂರ್ಯನಾರಾಯಣ
೯) ಎಂ. ಗೋವಿಂದರಾವ್
೧೦) ಜಿ. ವೈ. ದೇವಶಿಖಾಮಣಿ
೧೧) ಪಿ. ವೆಂಕಟೇಶ್ವರುಲು
೧೨) ಹೆಚ್. ಸೂರ್ಯನಾರಾಯಣ
೧೩) ಯಂ. ಪಿ. ರಾಮಸುಬ್ಬಾರೆಡ್ಡಿ
೧೪) ಪಿ. ಮರುಳಸಿದ್ಧನಗೌಡ
೧೫) ಶಿ. ಕೆ. ತಿಪ್ಪನಗೌಡ
೧೬) ಎಸ್. ಎಸ್. ವಿಜಯೀಂದ್ರರಾವ್
೧೭) ಕೆ. ನಾಗರಾಜರಾವ್
೧೮) ಕೆ. ವಿಠಲಮೂರ್ತಿ
೧೯) ಕೆ. ರುದ್ರಣ್ಣ
೨೦) ಎಸ್. ಎಂ. ಚನ್ನಬಸವಶರ್ಮ
೨೧) ಎಂ. ದೊಡ್ಡಬಸಯ್ಯ
೨೨) ಜೋಗೇಂದ್ರಕುಮಾರ್
೨೩) ಎನ್. ವಿ. ಗಣೇಶ
೨೪] ಡಿ ಶೇಷಗಿರಿರಾವ್

ಜಿಲ್ಲಾ ಮುನ್ಸೀಫ್ ಕೋರ್ಟು ಹೊಸಪೇಟೆ

O. P. 14/49

ಅರ್ಜಿದಾರಳು: — ಮೂಲಾಗೌರಮ್ಮ

1 ಮೂಲಾ ಲಕ್ಷ್ಮೀನಾರಾಯಣಸ್ವಾಮಿ
2 ,, ರಘುರಾಮಯ್ಯ.
3 ,, ಮೈನರ್ ದೇವದಾಸ್ ಗಾರ್ಡಿಯನ್ ಮುರಾರಿ ವೆಂಕಟಸ್ವಾಮಿ.

ಮೇಲ್ಕಾಣಿಸಿದ ಒ. ಪಿ. ಯಲ್ಲಿ ವಾರಸು ಅಧಿಕಾರ ಪತ್ರಕ್ಕಾಗಿ ಸಕ್ಸೆಶನ್ ಸರ್ಟಿಫಿಕೇಟಿಗಾಗಿ ಮೇಲೆ ನಮೂದಿಸಿದ ಮೂಲಾ ಗೌರಮ್ಮನು ಅರ್ಜಿ ಇಟ್ಟಿದ್ದು 3—6—49 ಕ್ಕೆ ವಾಯ್ದೆ ಇದೆ. ಈ ವಿಷಯಕ್ಕೆ ಯಾರಿಗಾದರೂ, ಏನಾದರು ತಕರಾರು ಇದ್ದಲ್ಲಿ 3—6—49 ಕ್ಕೆ ಕೋರ್ಟಿಗೆ ತಾವಾಗಲಿ ವಕೀಲರ ಮುಖಾಂತರವಾಗಲಿ ಹಾಜರಾಗಿ ಆಕ್ಷೇಪಣೆ ತಿಳಿಸತಕ್ಕದ್ದು.

ಎಂ. ರಂಗನಾಥಾಚಾರ್
ಅರ್ಜಿದಾರರ ವಕೀಲ

ಹಂಪೆಯ ಭವ್ಯತೇರು ದಗ್ಧವಾಯಿತು.

ಈ ವರ್ಷ ರಜಾಕಾರರ ಹಾವಳಿ ಇಲ್ಲೆಂದು ಸುಮಾರು 1½ ಲಕ್ಷ ಜನರು ದೇಶದ ಎಲ್ಲಾಕಡೆಗಳಿಂದಲೂ ಬಂದು ರಥೋತ್ಸವವನ್ನು ಸಾಂಗೋಪಾಂಗವಾಗಿ 13-4-49 ಮುಗಿಸಿದರು. 16-4-49 ನೆಯ ದಿನ ವಿಚಿತ್ರರೀತಿಯಿಂದ ಮಧ್ಯಾಹ್ನ 1 ಗಂಟೆಗೆ ಕಳಶ ಪ್ರದೇಶದಲ್ಲಿ ಬೆಂಕಿಹತ್ತಿ ಕೆಳಗಿನವರೆಗೆ ಸುಟ್ಟುಹೋಯಿತು. ಇನ್ನು ಜಾತ್ರೆಗಾಗಿ ಬಂದಿದ್ದ ಸಾವಿರಾರು ಯಾತ್ರಿಕರು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ, ಅಗ್ನಿ ಶಾಮಕದಳದವರು ಬಂದನಂತರ ಸಾಯಂಕಾಲದ ಹೊತ್ತಿಗೆ ಅಗ್ನಿಯು ಶಮನವಾಯಿತು. ಸುಮಾರು 50—60 ಸಾವಿರ ರೂಪಾಯಿಗಳು ಲುಕ್ಸಾನಾಗಿದೆ. ಇದು ಅಪಶಕುನ ವೆನ್ನುತ್ತಾರೆ.

—)o(—

THE NAVA BHARAT
ನವಭಾರತ
ಸಂಪಾದಕ—ಟಿ. ಬಿ. ಕೇಶವರಾವ್

ಸೋಮವಾರ 25 ಏಪ್ರಿಲ್ 1949.

ಜನತೆಯ ಜೀವನ ಮಟ್ಟವು ಹೇಗೆ ಏರುವುದು?

ಭಾರತದ ಮುಖ್ಯ ಮಂತ್ರಿ ಪಂಡಿತ ನೆಹರೂರವರು ಜನತೆಯ ಜೀವನ ಮಟ್ಟವು ಏರಬೇಕೆಂದೂ ಸದ್ಯದ ಆರ್ಥಿಕ ದುರವಸ್ಥೆಯು ಮಾಯವಾಗಬೇಕೆಂದೂ ಹೇಳುತ್ತಿರುವರು. ಕೇಂದ್ರದ ಮತ್ತು ಪ್ರಾಂತಗಳ ಆರ್ಥಿಕ ಪರಿಷತ್ತುಗಳಲ್ಲಿ ಇದೇರಾಗವೇ ಹಾಡಲ್ಪಡುತ್ತಿರುವುದು. ಇದರ ಒಂದು ಪರಿಣಾಮವೆಂದರೆ ಕಾಗದಗಳ ಮೇಲೆ ಅನೇಕ ನೀರಾವರಿಯೋಜನೆಗಳು ವಿದ್ಯುತ್ ಯೋಜನೆಗಳು ಸಹಸ್ರಾರು ಕೋಟಿ ಅಂದಾಜಿನಿಂದ ನಿರ್ಮಿತವಾಗಬೇಕೆಂದ ವಿವರಗಳೊಂದಿಗೆ ಪ್ರಕಟವಾಗಿವೆ.

ಭಾರತವು ಮುಖ್ಯವಾಗಿ ಹಳ್ಳಿಗಳ ಪ್ರದೇಶ. ಹಳ್ಳಿಗಳು ಬ್ರಿಟಿಷರ ಆಳ್ವಿಕೆಯಲ್ಲಿ ದುರ್ಲಕ್ಷಿಸಲ್ಪಟ್ಟಿದ್ದವು. ಆದರೆ ಪ್ರಜಾತಂತ್ರಯುಗದಲ್ಲಿ ಅವುಗಳ ಮೋಕ್ಷವು ಸಮೀಪಿಸಿದಂತೆ ಕಾಣಲಿಲ್ಲ. ಮನೆ ಕಟ್ಟಿಕೊಳ್ಳಲು ಆರೋಗ್ಯಕರ ನಿವೇಶನ ಕುಡಿಯುವ ನೀರಿನ ವ್ಯವಸ್ಥೆ, ವ್ಯವಸಾಯ ಸಾಧನೆಗಳ ಮತ್ತು ಒಳ್ಳೆಯ ಬೀಜ, ಗೊಬ್ಬರಗಳ ಶೀಘ್ರ ಸರಬರಾಯಿ, ಕಂಪಾಯದಲ್ಲಿ ಕಡಿತ, ಮಧ್ಯಸ್ಥಿಕೆಯವರ, ಅಸ್ಪೃಶ್ಯತೆ ಅನುಕೂಲ್ಯಗಳನ್ನು ಇನ್ನೂ ಹಳ್ಳಿಗರು ಕಾಣಲು ಬಹು ವರ್ಷಗಳು ಬೇಕೆಂಬುದು. ಅವರಿಗೇ ಮನಸಿನಾಗ ತ್ತಿದೆ ಬೆಳೆದ ಧಾನ್ಯಗಳು ಪಟ್ಟಣದ ಬಾಜಾರಕ್ಕೆ ಬರುವಂತಿಲ್ಲ ಒಳ್ಳೆಯ ಧಾರಣೆ ಹಳ್ಳಿಗಳಲ್ಲಿ ದೊರೆಯುವಂತೆಯೇ ಇಲ್ಲ. ಅವರ ಗಾಡಿಗಳಿಗೆ ಅಚ್ಚು ತಳಿಗಳು ದೊರೆಯುವಂತಿಲ್ಲ ಒಳ್ಳೆಯ ದನಕರುಗಳನ್ನು ಕೊಳ್ಳಲು ವ್ಯವಸಾಯ ಬ್ಯಾಂಕುಗಳಿಲ್ಲ ಸಹಕಾರೀ ಬ್ಯಾಂಕುಗಳ ಸಹಾಯಕ್ಕೆ ಬರುವಂತಿಲ್ಲ.

ಈ ಪ್ರಜಾತಂತ್ರ ಸರ್ಕಾರವು ಕೈಗೊಳ್ಳಲಿರುವ ಯೋಜನೆಗಳಿಂದ ಹಳ್ಳಿಯವರ ಜೀವನವು ಸಂಘಟಿಸಬಹುದೆಂದು ನಂಬಬಹುದಂತಿಲ್ಲ. ಹಳ್ಳಿಗಳು ಪಾಳಾಗಿ ಜನರು ಹಳ್ಳಿಯನ್ನು ಪಟ್ಟಣವು ಸೇರುತ್ತಿರುವ ಪ್ರವೃತ್ತಿಯು ಹೆಚ್ಚಾಗುತ್ತಲಿದೆ. ಇದು ಸ್ವದೇಶಾಭಿವೃದ್ಧಿಯ ದೃಷ್ಟಿಯಿಂದ ಹಿತಕರವೇ ಎಂಬುದನ್ನು ಮುಖಂಡರಾಲೋಚಿಸಬೇಕು. ಎಷ್ಟೋ ಹಳ್ಳಿಗಳಲ್ಲಿ ರೈತ ಕೂಲಿಗಳು ದೊರೆಯುವುದೇ ಕಠಿಣವಾಗಿ ಹೋಗಿದೆ.

ಆಧುನಿಕ ವೈಜ್ಞಾನಿಕ ಆವಿಷ್ಕಾರದ ಪ್ರತಿಫಲವಾಗಿ ನಮಗೆ ವಿದ್ಯುಚ್ಛಕ್ತಿಯು ದೊರಕಿದೆ. ಅದರ ವ್ಯಾಪಕ ಉಪಯೋಗವಾಗಬೇಕು. ಜೋಗಫಾಲ್ಸಿನ ಶಕ್ತಿಯು ಮದ್ರಾಸ್ ಭಾಗಕ್ಕೆ ಬಳ್ಳಾರಿ ಜಿಲ್ಲೆಗೆ ದೊರೆಯಲಿದೆ. ಇದು ಹಳ್ಳಿಗಳಿಗೆಲ್ಲಾ (ಕೊನೆಗೆ ದಾರಿಯಲ್ಲಿರುವ) ಅಲ್ಪ ಬೆಲೆಯಲ್ಲಿ ದೊರೆಯುವಂತಾಗಬೇಕು. ಆಗ ನೀರಾವರಿ ಕಾರ್ಯವು ಸುಲಭವಾದೀತು. 'ಹಳ್ಳಿಗಳ' ಅಭಿವೃದ್ಧಿ ಯೋಜನೆ ಫಲಕಾರಿಯಾದೀತು. ಇದರಿಂದ ಜನಜೀವನಮಟ್ಟವು ಏರೀತು ಭಾರತದ ಎಲ್ಲಾ ಭಾಗಗಳಲ್ಲೂ ಇದರ ವ್ಯಾಪಕ ಉಪಯೋಗವಾಗಲೆಂದಾಶಿಸುತ್ತೇವೆ

ಶ್ರೀ ದಿವಾಕರ್ ಶಿ. ಆರ್ ರೆಡ್ಡಿ ಬಳ್ಳಾರಿಗೆ ಬರಲಿರುವರು

ಕಾಮಲಾಪುರ (ಹೊಸಪೇಟೆ) ದ ಬಳಿ ಪುರಾತನ ವಿಜಯನಗರದ ಅವಶೇಷಗಳು ತುಂಗಭದ್ರಾ ವಿದ್ಯುಚ್ಛಕ್ತಿಯಿಂದ ಮುಳುಗಿ ಹೋಗುವವೆಂಬ ಕಾರಣದಿಂದ ಭಾರತದ ಶಿಲ್ಪಕಲಾ ಶಾಖೆಯವರು ತಕರಾರುಮಾಡಿದ್ದರು. ಈಗ ಅದಕ್ಕಾಗಿಯೇ ಒಂದು ಸಮಿತಿಯು ನಿರ್ಮಿಸಲ್ಪಟ್ಟಿದೆ. ಈ ಸಮಿತಿಯು ಎಲ್ಲ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಲು 22-23 ರಲ್ಲಿ ಹಂಪಿಯನ್ನು ಸಂದರ್ಶಿಸಲಿರುವರು. ಸಮಿತಿಯಲ್ಲಿ ಶ್ರೀಗಳಾದ ದಿವಾಕರ್ ಶಿ. ಆರ್. ರೆಡ್ಡಿ ವಗೈರೇ ಮುಖಂಡರಿರುವರು.

ಡಾಕ್ಟರ್ ಬಾಬು ರಾಜೇಂದ್ರ ಪ್ರಸಾದ್

ಮಹಾತ್ಮ ಗಾಂಧಿ ಸ್ಮಾರಕ ನಿಧಿಯ ವಸೂಲಿಗಾಗಿ ಬಾಬು ರಾಜೇಂದ್ರ ಪ್ರಸಾದರು ಹೊಸಪೇಟೆ ಬಳ್ಳಾರಿಗಳನ್ನು ಸಂದರ್ಶಿಸಲಿರುವರೆಂದು ಪ್ರಕಟವಾಗಿದೆ. ಬರುವ ವಾರದಲ್ಲಿ ದಿನಗಳು ನಿಶ್ಚಯವಾಗುತ್ತಿವೆ ಬಳ್ಳಾರಿಯ ಪುರಸಭೆಯವರು ಡಾ ಪ್ರಸಾದರಿಗೂ, ಮಾನ್ಯ ದಿವಾಕರರಿಗೂ ಮಾನಪತ್ರಗಳನ್ನರ್ಪಿಸಲಿರುವರು.

ವ್ಯವಸಾಯಾಭಿವೃದ್ಧಿಗಾಗಿ ಹೆಚ್ಚು ಹಣ ವ್ಯಯಮಾಡಿರಿ

ವ್ಯವಸಾಯ ಇಲಾಖಾ ಡೈರೆಕ್ಟರರ ಸಮ್ಮೇಳನವು ನವದೆಹಲಿಯಲ್ಲಿ ಸಮಾವೇಶವಾದಾಗ ವಿವಿಧ ಪ್ರಾಂತಗಳು ವ್ಯವಸಾಯಾಭಿವೃದ್ಧಿಗಾಗಿ ಬಹಳ ಕಡಿಮೆ ಹಣ ವೆಚ್ಚಮಾಡುತ್ತಿರುವುದು ಗೊತ್ತಾಗಿದೆ ಈ ಕಾರಣ ಪ್ರಾಂತಗಳು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗಲು ಇನ್ನು ಮೇಲೆ ವ್ಯವಸಾಯದ ಉಪಕರಣಗಳಿಗಾಗಿ ಹೆಚ್ಚು ವ್ಯಯಮಾಡಬೇಕೆಂದು ಕೇಂದ್ರದಿಂದ ಆಜ್ಞೆಯಾಗಿದೆ.

೧೧ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಡೋಜ್
ದಶಮೂಲ
ತಲೆನೋವು, ಹಲ್ಲುನೋವು, ಮೈಕೈ ನೋವು,
ಕ್ರಮ ಜ್ವರ, ನೆಗಡಿ ಜ್ವರ, ಮೈಗ್ರೇಯಿಕ್ಕೆ
ಡಿಪೋ ದಶಮೂಲ, ಹೊಸಪೇಟೆ

ವಿದೇಶಗಳಲ್ಲಿನ ಭಾರತ ರಾಯಭಾರಿಗಳ ಖರ್ಚು

ಈ ವರ್ಷ ಮಾರ್ಚಿ ತಿಂಗಳಿಗೆ ಅಂತ್ಯವಾದ ವರ್ಷದಲ್ಲಿ ವಿದೇಶಗಳಲ್ಲಿರುವ ನಮ್ಮ ರಾಯಭಾರಿ ಕಚೇರಿಗಳ ವೆಚ್ಚ ಈ ಕೆಳಗಿನಂತಿವೆ. ಲಂಡನ್—ರು. ೪೫.೪೦ ಲಕ್ಷ, ಅಮೇರಿಕಾ—ರು. ೨೨.೮೬ ಲಕ್ಷ, ರಷ್ಯಾ—ರು. ೮೪.೧ ಲಕ್ಷ, ಚೈನ—ರು. ೬.೮ ಲಕ್ಷ, ಬ್ರುಸೆಲ್ಸ್— ರು. ೩.೯೮ ಲಕ್ಷ, ಈಜಿಪ್ಟ್—ರು. ೭.೨೩ ಲಕ್ಷ, ಇರಾನ್—ರು. ೬.೫೨ ಲಕ್ಷ, ನೇಪಾಳ್—ರೂ. ೨.೯೩ ಲಕ್ಷ, ಅಫ್ಘಾನಿಸ್ಥಾನ್—ರು ೪.೫೪ ಲಕ್ಷ, ಬ್ರೆಸಿಲ್ —ರು. ೪.೩೭ ಲಕ್ಷ, ಟರ್ಕಿ—ರು ೬.೭೪ ಲಕ್ಷ, ಪ್ರೇಗ್—ರು. ೯.೯೩ ಲಕ್ಷ, ಇಟಲಿ —ರು. ೧.೨೦ ಲಕ್ಷ ರಂಗೂನ್—ರು. ೪.೩೮ ಲಕ್ಷ, ಬರ್ನ್—ರು. ೪.೯೩ ಲಕ್ಷ, ಬೇಂಕೋಕ್—ರೂ. ೨.೪೭ ಲಕ್ಷ, ಸ್ಟಾಕ್‌ಹೋಮ್—ರೂ. ೧.೩೧ ಲಕ್ಷ, ಬಗ್ದಾದ್—ರೂ. ೪.೧೨ ಲಕ್ಷ ಕೆಂಬೆರ್ರ —ರೂ. ೨.೧೭ ಲಕ್ಷ, ಕೊಲಂಬೊ— ರೂ. ೨.೦೮ ಲಕ್ಷ, ಕರಾಚಿ—ರೂ. ೫.೩೮ ಲಕ್ಷ, ಜೋಹಾನ್ಸ್‌ಬರ್ಗ್—ರೂ. ೧.೩೪ ಲಕ್ಷ, ಲಾಹೋರ್—ರೂ. ೨.೯೩ ಲಕ್ಷ, ಢಕ್ಕಾ— ರೂ. ೧.೪೨ ಲಕ್ಷ, ಟೋಕಿಯೋ—ರೂ ೩.೩೬ ಲಕ್ಷ.

ಪ್ರಾಥಮಿಕ ಶಾಲೆಗಳ ಪರೀಕ್ಷೆ

1-1 41 ರಿಂದ ಒಂದು ವರ್ಷದ ಮಟ್ಟಿಗೆ 66 ಸಿನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರನ್ನು 65 ಜೂನಿಯರ್ ಡೆಪ್ಯುಟಿ ಇನ್ಸ್‌ಪೆಕ್ಟರರನ್ನು ಹೆಚ್ಚಿಗೆ ನೇಮಿಸಲಾಗುವದು ಎಲಿಮೆಂಟರಿ ಶಾಲೆಗಳ ಹಾಗೂ ಪುಸ್ತಕ ಭಂಡಾರ ಶಾಸನ ಪ್ರಕಾರ ಕೆಲಸ ನಡೆಯುವ ಅನೇಕ ಪುಸ್ತಕ ಭಂಡಾರಗಳ ಮೇಲ್ವಿಚಾರವು ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡುವುದೇ ಇದರ ಉದ್ದೇಶ.

ಬಾವಿ

ಎಲ್ಲಾ ಪ್ರಾಂತಗಳಲ್ಲಿಯೂ ಸೇರಿ ಸುಮಾರು 124,490 ಬಾವಿಗಳು ಹೆಚ್ಚು ಆಹಾರ ಬೆಳೆಸುವ ಯೋಜನೆ ಪ್ರಕಾರ ತೋಡಲ್ಪಟ್ಟಿವೆ. ಈ ವೆಚ್ಚದಲ್ಲಿ ಅರ್ಧಾಂಶವನ್ನು ಬಾವಿ ಯಜಮಾನರೂ ಉಳಿದುದನ್ನು ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳೂ ವಹಿಸುತ್ತವೆ.

ಪುನರುಜ್ಜೀವನ

(ಶ್ರೀ ಮಶರೂವಾಲಾರು "ಹರಿಜನ" ದಲ್ಲಿ ಬರೆದುದು)

ಆದರೆ ಭಂಗಿಗಳ ಅವಸ್ಥೆಯಷ್ಟೇ ದಾರುಣವೂ ಸದ್ಯೋಭವಿಷ್ಯತ್ತಿನಲ್ಲಿ ಆಗಬಹುದಾದ ಸುಧಾರಣೆಗಳನ್ನು ಎಣಿಸಿದರೆ ಬಹುಶಃ ಅಷ್ಟೇ ನಿರಾಶಾಮಯವೂ ಆದ ಸ್ಥಿತಿಗತಿಯುಳ್ಳ ಇನ್ನೂ ಕೆಲ ಕಸಬುಗಳಿವೆ. ಉದಾಹರಣೆಗಾಗಿ, ಭೂಮಿಯಿಲ್ಲದ ಒಕ್ಕಲುತನದ ಕೂಲಿಕಾರರು, ಬಹಳ ಚಿಕ್ಕ ಹೊಲಗಳನ್ನು ಸಾಗುಮಾಡುವ ಬಡ ಗೇಣಿಯ ಒಕ್ಕಲಿಗರು, ಕೈಯಲ್ಲಿ ಕಾಸಿಲ್ಲದ ನಿರಾಶ್ರಿತರು, ಕೆಳಗಿನ ದುರ್ಲಕ್ಷ್ಯಕ್ಕೊಳಗಾದ ಸರಕಾರೀ ನೌಕರರು ಮತ್ತು ಪ್ರಾಥಮಿಕ ಶಾಲೆಗಳ ಶಿಕ್ಷಕರು ಇವರೆಲ್ಲರ ಅವಸ್ಥೆಯೂ ಭಂಗಿಗಳದಕ್ಕಿಂತ ಕಡಿಮೆ ದುಃಖಕರವಾಗಿಲ್ಲ. ಅವರು ಭಂಗಿಗಳಂತೆ ಸಾಮಾಜಿಕ ತುಚ್ಛೀಕಾರಕ್ಕೆ ಮಾತ್ರ ಒಳಗಾಗಿಲ್ಲ, ಅಷ್ಟೇ. ಮೇಲೆ ಹೇಳಿದವರಲ್ಲಿ ಕಡೆಯ ಎರಡು ವರ್ಗಗಳು ಒಂದು ವಿಧದಲ್ಲಾದರೂ ಸ್ವಲ್ಪ ಭಾಗ್ಯಶಾಲಿಗಳಾಗಿವೆಯೆನ್ನಬಹುದು—ಅವರು ಕಾಯಂ ನೌಕರರಾಗಿರುವದರಿಂದ ಸಂಪು ಹೂಡುವ ಬೆದರಿಕೆ ಹಾಕಿ ಕೆಲಮಟ್ಟಿಗಾದರೂ ತಮ್ಮ ದೂರಗಳನ್ನು ನೀಗಿಸಿಕೊಳ್ಳಬಲ್ಲರು. ಆದರೆ ಭೂಮಿಯಿಲ್ಲದ ಕೂಲಿಕಾರನಾಗಲಿ, ಬಡ ಗೇಣಿಯೊಕ್ಕಲಾಗಲಿ, ನಿರಾಶ್ರಿತನಾಗಲಿ ಯಾರ ವಿರುದ್ಧ ಸಂಪು ಹೂಡಬೇಕು? ನಿರಾಶ್ರಿತನನ್ನು ಸದ್ಯಕ್ಕೆ ಸರಕಾರದವರು ಪೋಷಿಸಬಹುದು. ಆದರೆ ಭೂಮಿಯಿಲ್ಲದ ಹೊಲದ ಆಳು ಸಂಪು ಹೂಡಿದರೆ ಅವನ ಹೊಟ್ಟೆಹೊರೆಯುವವರಾರು? ಈ ವರ್ಗದ ಜನರಿಗೆ ತಮ್ಮ ದುರವಸ್ಥೆಯನ್ನು ಹೋಗಲಾಡಿಸಲು ಬೇರಾವ ಉಪಾಯವೂ ಕಾಣದಿರುವದೇ ಅವರಲ್ಲಿ ಹಿಂಸಾತ್ಮಕ ಚಳವಳಿ ಹಬ್ಬಲು ಕಾರಣವೆಂದು ನನ್ನ ಅಭಿಪ್ರಾಯ. ಅವರು ಗಳಿಸುವ ಹಣ ನಿತ್ಯದ ನಿರ್ವಾಹಕ್ಕೆ ಸಾಲುವದಿಲ್ಲ. ಅದನ್ನೂ ಅವರು ಬಿಟ್ಟುಕೊಟ್ಟರೆ ಅವರಿಗೆ ಜೀವನಕ್ಕೆ ಮಾರ್ಗವೇ ಇಲ್ಲವಾಗುವದು. ಅಲ್ಲದೆ ಅವರು ಸಂಪು ಹೂಡಿದರೆ ಕೂಡ, ಅವರ ಸೇವೆ ಅತ್ಯವಶ್ಯವೇ ಆಗಿದ್ದರೂ ಅದರ ತಾತ್ಕಾಲಿಕ ನಿಲುಗಡೆಯಿಂದ ಹೊಲಸು ಕೂಡ ಬೀಳುವದೂ ಇಲ್ಲ, ನಿತ್ಯ ಸಾವಿರಗಟ್ಲೆ ರೂಪಾಯಿ ಹಾನಿಯಾಗುವಂತೆ ಕಾರಖಾನೆಗಳು ನಿಂತು ಹೋಗುವದೂ ಇಲ್ಲವಾದುದರಿಂದ ಅದನ್ನು ಅವಸರದ ಸಂಗತಿಯೆಂದು ಯಾರೂ ಬಗೆಯುವದಿಲ್ಲ. ಶಿಕ್ಷಕರಿಗೆ ಕೂಡ ಸಂಪು ಹೂಡುವದು ಸುಲಭವೆನಿಸುವದಿಲ್ಲ. ಏಕೆಂದರೆ ಕೆಲ ದಿನಗಳ ವರೆಗೆ ಶಾಲೆಗಳು ಮುಚ್ಚಿದರೂ ಶೌಚಕೂಪಗಳನ್ನು ಸ್ವಚ್ಛಮಾಡದಿರುವಷ್ಟು, ಇಲ್ಲವೆ ಕಾರಖಾನೆಗಳೊ ರೇಲ್ವೆಗಳೋ ಟಪಾಲೋ ನಿಂತು ಹೋದಷ್ಟು ತೀಕ್ಷ್ಣವಾದ ಅಸೌಕರ್ಯವಾದ ಅದರಿಂದಾಗುವದಿಲ್ಲ.

ಜನರು ಮನಸಾ ಹಿಂಸೆಯನ್ನು ಮೆಚ್ಚುವದಿಲ್ಲ. ಹಿಂಸೆಯಿಂದ ಅವರಿಗೆ ಕೊನೆಗೆ ಸುಖವೂ ದೊರಕುವದಿಲ್ಲ. ಏಕೆಂದರೆ ಹಿಂಸೆಯಿಂದ ಅಧಿಕಾರದಲ್ಲಿರುವ ಸರಕಾರವನ್ನು ಉರುಳಿಸಿ ಅವ್ಯವಸ್ಥೆ ಪ್ರಕ್ಷೋಭಗಳನ್ನುಂಟುಮಾಡಬಹುದಾದರೂ ಅದರಲ್ಲಿ ಅನೇಕ ತಲೆಮಾರುಗಳ ಪ್ರಚಂಡಶ್ರಮದಿಂದ ನಿರ್ಮಿಸಲ್ಪಟ್ಟ ಸೊತ್ತುಗಳು ನಾಶವಾಗಿ ಸಾವಿರಗಟ್ಲೆ ಜನರು ಮನೆಮಾರು ಕಳೆದುಕೊಂಡು ಪರದೇಶಿಗಳಾಗುವರು. ನೂರಾರು ಬಲಿಷ್ಠ ಪುರುಷರು ಅಪಮೃತ್ಯುವಿಗೀಡಾಗುವರು. ಉಳಿದ ಉಳಿದವರು ಹೆಚ್ಚಾಗಿ ಮುದುಕರೂ ನಿರ್ಬಲರೂ ತಬ್ಬಲಿಗಳೂ ಆಗುರುವರು. ಆದರೆ ಪಾಮರ ಜನತೆಗೆ ತಿಳಿವಳಿಕೆಯೂ ಇಲ್ಲ ವಿಚಾರಶೀಲತೆಯೂ ಇಲ್ಲ. ಅದು ಕ್ಷಣಿಕ ಆವೇಶದ ಶೀಘ್ರವ್ಯಾಪಿಯಾದ ಹುಚ್ಚಿನ ಭರದಲ್ಲಿ ಹಿಂಸೆಯನ್ನೂ ಹಾನಿಯನ್ನೂ ಉಂಟುಮಾಡಿ, ಕೊನೆಗೆ ಸಾಯುವವರೆಗೆ ಪಶ್ಚಾತ್ತಪಿಸುವದುಂಟು. ಜನತೆಯಲ್ಲಿ ಹಿಂಸಾಚಾರಕ್ಕಿಳಿಯುವವರೆಂದರೆ ಮೇಲೆ ಹೇಳಿದ ಒಂದಲ್ಲ ಒಂದು ಕಸಬಿಗೆ ಸೇರಿದವರೆಂಬುದು ಅನುಭವದ ಮಾತು.

ಅವರಿಗೆ ಸುಖತರವಾದ ಭವಿತವ್ಯದ ಆಸೆಯನ್ನು ಹುಟ್ಟಿಸಿ, ತಮ್ಮ ಸ್ವಂತ ಶಕ್ತಿಯ ಅರಿವನ್ನು ಮಾಡಿಕೊಟ್ಟು ಭವಿಷ್ಯತ್ತು ತಮ್ಮ ಕೈಯಲ್ಲೆ ಇದೆಯೆಂಬ ಆತ್ಮವಿಶ್ವಾಸವನ್ನುಂಟುಮಾಡುವ ಅಹಿಂಸಾತ್ಮಕ ಉಪಾಯವೊಂದು ಕಾಣಿಸದಿದ್ದರೆ ಅವರು ಹಿಂಸಾಚಾರದ ಪಿಡುಗಿಗೆ ತುತ್ತಾಗುವ ಸಂಭವವೇ ಹೆಚ್ಚು. ಜಾತೀಯತೆಯ ಮತ್ತು ಕಮ್ಯುನಿಜಮಿನ ಪ್ರಚಾರವನ್ನು ಹಿಂಸಾಪ್ರಚೋದನೆಯ ಸಹಿತವಾಗಿ, ಸುವ್ಯವಸ್ಥಿತವಾಗಿ ಶಿಕ್ಷಿತರ ಮೂಲಕವೇ ನಡೆಸಲಾಗಿದೆಯೆಂಬ ಸಂಗತಿಯನ್ನು ಈಗಾದರೂ ಮನವರಿತುಕೊಳ್ಳಲಾಗಿದೆಯೋ ಇಲ್ಲವೋ ನಾನರಿಯೆ. ಯಾರಾದರೂ ಭಾವಿಸಬಹುದಾದಂತೆ ಇದನ್ನು ಸರಕಾರದ ಧೋರಣೆಯನ್ವಯ ಮಾಡದೆ, ಸ್ವೇಚ್ಛೆಯಿಂದ, ಅವಶ್ಯವಿದ್ದರೆ ಗುಟ್ಟಾಗಿಯೂ ಸ್ವಾರ್ಥತ್ಯಾಗಪೂರ್ವಕವಾಗಿಯೂ ಮಾಡಲಾಗುತ್ತಿದೆ.

ಇದನ್ನು ಪರಿಹರಿಸಿ ಇಷ್ಟಿಕವನ್ನು ನೆರವೇರಿಸುವ ನಿಶ್ಚಿತವೂ ಅಹಿಂಸಾತ್ಮಕವೂ ಆದ ಒಂದೇ ಒಂದು ಉಪಾಯವೆಂದರೆ, ನಾವು ತಿಳಿದಿರುವ ಮಟ್ಟಿಗೆ ಚರಕ ಮತ್ತು ಅದರ ಬಂಧುವಾದ ಕೈಮಗ್ಗ. ತನ್ನ ಈಗಿನ ಅವಸ್ಥೆ ದೀನವಾಗಿದೆಯೆಂದು ಬಗೆಯುವ ಪ್ರತಿಯೊಬ್ಬನೂ ಅದನ್ನುದ್ಧರಿಸಿ ಯಥಾಶಕ್ತಿ ಹೆಣಗಾಡುತ್ತ ಸಂಗಡಲೆ ಕೈನೂಲು ತೆಗೆಯುವ ಮತ್ತು ಕೈಮಗ್ಗ ನಡೆಸುವ ಕೆಲಸದಲ್ಲಿ ತೊಡಗಲಿ. ಹಿಂದೆ ಹೇಳುತ್ತಿದ್ದಂತೆ ಕೆಲ ಕಾಸು ಹೆಚ್ಚು ಗಳಿಸುವ ಸಲುವಾಗಿ ಅವನಿದನ್ನು ಕೈಕೊಳ್ಳದೆ ಸ್ವಂತದ ಬಟ್ಟೆಗಾಗಿ ಕೈಕೊಳ್ಳಲಿ. ಅಂದ ಮೇಲೆ ಅವನು ತನ್ನ ನಿತ್ಯದ ಉದ್ಯೋಗವನ್ನು ಬಿಟುಕೊಡಬೇಕಾಗಿಲ್ಲ. ಅದರಲ್ಲಿ ಹೆಚ್ಚಿನ ಸೌಕರ್ಯಗಳನ್ನು ಸಂಪಾದಿಸುವ ಅಥವಾ ಅದಕ್ಕಿಂತ ಲಾಭದಾಯಕವಾದ ಬೇರೆ ಉದ್ಯೋಗವನ್ನು ಹುಡುಕುವ ಪ್ರಯತ್ನಗಳನ್ನು ಬಿಟ್ಟುಬಿಡಬೇಕಾಗಿಯೂ ಇಲ್ಲ. ಆದರೆ ಅವನು ತನ್ನ ವಿರಾಮವೇಳೆಯನ್ನು ನೂಲುವ ನೇಯುವ ಕೆಲಸಕ್ಕೆ ವಿನಿಯೋಗಿಸಬೇಕು ಮತ್ತು ಖಾದಿಯನ್ನು ನೂಲುವ ನೇಯುವವರ ಒಂದು ಬಳಗವನ್ನು ಸ್ಥಾಪಿಸಲು ಯತ್ನಿಸಬೇಕು. ಕೆಲ ದಿನಗಳ ಮೇಲೆ ತಾನೂ ತನ್ನ ಬಳಗದವರೂ ನೂತು ನೇಯ್ದುದ್ದು ತಮಗೆಲ್ಲರಿಗೂ ಸಾಕಾಗಿ ಮತ್ತೂ ಉಳಿಯುವದೆಂದು ಅವನಿಗೆ ಕಂಡು ಬಂದೀತು. ಇದರಿಂದ ಅವರಲ್ಲಿ ಹಿಂದೆಂದೂ ಅರಿಸಿರದಷ್ಟು ಆತ್ಮವಿಶ್ವಾಸ ಹುಟ್ಟುವದು. ಸರ್ವ ಸುಲಭವಾದೊಂದು ಕಲೆಯಲ್ಲಿ ತಾವು ಪಾರಂಗತರಾಗಿರುವದನ್ನೂ ಅವರು ಕಂಡುಕೊಳ್ಳುವರು. ಅಲ್ಲದೆ, ಚರಕವನ್ನು-ಅದೂ ತಮ್ಮ ಜೀವನದ ಈ ನಿಟ್ಟಿನಲ್ಲಿ-ಆಶ್ರಯಿಸಿದರೆ ಅವರಲ್ಲಿ ಅವಶ್ಯಕವಾದ ಇತರ ಸಾಮಾಜಿಕ ಮತ್ತು ನೈತಿಕ ಸುಧಾರಣೆಯನ್ನು ಕೈಕೊಳ್ಳಲು ಅನುಕೂಲವಾದ ಭಾವನೆಯನ್ನೂ ಸಂವಿಧಾನವನ್ನೂ ನಿರ್ಮಿಸಿದಂತಾಗುವದು. ಬರಿ ಕೆಲಸಗಾರ ಸಂಘದ ಸದಸ್ಯತ್ವದಿಂದ ಬರಬಹುದಾದುದಕ್ಕಿಂತ ಬಲಿಷ್ಠವೂ ಗೂಢಮೂಲವೂ ಆದ ಐಕ್ಯವನ್ನು ಅದು ಅವರಲ್ಲಿ ಸ್ಥಾಪಿಸುವದು. ಇವೆಲ್ಲ ಸಂಗತಿಗಳಿಂದ ಅವರಿಗೆ ತಮ್ಮ ವೃತ್ತಿಯಲ್ಲಿ ಹೆಚ್ಚು ಉತ್ತಮವಾದ ಸೌಕರ್ಯಗಳನ್ನು ಸಂಪಾದಿಸಲು ಅಥವಾ ಅದು ಸಾಧ್ಯವಾಗದಿದ್ದರೆ ಆ ವೃತ್ತಿಗೆ ಸದಾಕಾಲ ಶರಣು ಹೊಡೆಯಲು ಸಹಾಯವಾಗುವದು. ಅವರು ಸತತ ಖಾದಿ ಉತ್ಪಾದಕರಾಗಿಯೂ ವ್ಯವಹರಿಸಬಲ್ಲವರಾಗುವರು. ನಿಜವಾದ ಅಖಿಲ ಭಾರತ ಚರಕ ಸಂಘ ಆಗ ಅಸ್ತಿತ್ವಕ್ಕೆ ಬಂದಂತಾದೀತು. ಅದರ ಸದಸ್ಯಸಂಖ್ಯೆಯೂ ಎಲ್ಲ ಕೂಲಿಕಾರ ಸಂಘ ಮತ್ತು ರಾಜಕೀಯ ಸಂಸ್ಥೆಗಳನ್ನು ಸೇರಿಸಿದ್ದಕ್ಕಿಂತಲೂ ಹೆಚ್ಚಾದೀತು. ಅದು ತನ್ನದೇ ಕ್ಷೇತ್ರದಲ್ಲಿ ಒಡೆಯರೆಂಬುವರ ಹಂಗಿಲ್ಲದೆ ಇರಬಲ್ಲದು. ಅದು ಅವರದೇ ಆದ ಬಾಂಧವ್ಯವಾದೀತು, ಕೂಲಿಕಾರ ಸಂಘವಾದೀತು. ಸಂಗಡಲೇ ಅದು ಜೀವನದ ಇತರ ಅನೇಕ ಗ್ರಾಮೀಣ ಮತ್ತು ನಾಗರಿಕ ಯಾಂತ್ರಿಕ ಮತ್ತು ದೈಹಿಕ, ಉತ್ಪಾದಕ ಮತ್ತು ವಿಕಾರಿಕ ಪರಿಶ್ರಮಗಳೊಡನೆ ನಿಕಟವಾದ ಸಂಬಂಧವನ್ನೂ ಇಟ್ಟುಕೊಳ್ಳುವದು. ಅದು ಪೂರ್ಣವಾಗಿ ಅಹಿಂಸಾತ್ಮಕ ಆಂದೋಲನವಾಗಿರುವದಲ್ಲದೆ, ಒಂದು

ವೃತ್ತಿಯನ್ನು ಸಂಪೂರ್ಣ ತೊರೆದು ಬಿಡುವ ಪ್ರಸಂಗದಲ್ಲಿ ಕೂಡ ಸಾಮೂಹಿಕ ಉತ್ಪಾತಗಳಿಲ್ಲದೆ ನಡೆಯಬಲ್ಲದು.

ಕೈನೂಲು ಮತ್ತು ಕೈಮಗ್ಗದ ಕೆಲಸದಿಂದಲೇ ಬಡವರ, ದಲಿತರ ಮತ್ತು ದುಃಖಿಗಳ ಉದ್ಧಾರವಲ್ಲದೆ ಬೇರೇತರದಿಂದಲೂ ಸಾಧ್ಯವಿಲ್ಲೆಂದು ನನ್ನ ನಂಬಿಕೆ.

ಕಿ. ಘ. ಮಶ್ರೂವಾಲಾ,
ವರ್ಧಾ.

—)0(—

ಮಂತ್ರಿಮಂಡಲಗಳ ಪತನ

ಮಧ್ಯಭಾರತ, ಮದರಾಸು ಮತ್ತು ಪೂರ್ವ ಪಂಜಾಬ ಪ್ರಾಂತಗಳ ಮುಖ್ಯಮಂತ್ರಿಗಳು ತಮ್ಮ ಪಕ್ಷದ ಸಾಕಷ್ಟು ಬೆಂಬಲ ಸಿಕ್ಕದಿದ್ದುದರಿಂದ ಇತ್ತೀಚೆ ರಾಜೀನಾಮೆ ಸಲ್ಲಿಸಬೇಕಾಯಿತು. ಮದರಾಸ ಪ್ರಾಂತ ಮತ್ತು ಪಶ್ಚಿಮ ಬಂಗಾಲದಲ್ಲಿ ಹಿಂದೊಮ್ಮೆ ಇದೇ ಬಗೆಯಾಗಿ ಮಂತ್ರಿಮಂಡಲಗಳು ರಾಜೀನಾಮೆ ಕೊಡುವ ಪ್ರಸಂಗ ಬಂದದ್ದುಂಟು. ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಸುದ್ದಿಗಳನ್ನು ನೋಡಿದರೆ ಈ ಬದಲಾವಣೆಗೆ ಅಧಿಕಾರಲಾಲಸೆ ವರ್ಚಸ್ವೀ ರಾಜಕಾರಣಿಗಳ ಗತ್ತುಗಾರಿಕೆಯ ಹೊರತು ಬೇರೆ ಮಹತ್ವದ ಕಾರಣಗಳು ತೋರುವದಿಲ್ಲ. ಒಂದು ಪಂಗಡ ನಿವೃತ್ತವಾಗಿ ಮತ್ತೊಂದು ಪಂಗಡ ಅಧಿಕಾರದಲ್ಲಿ ಬರುವದರಿಂದ ಧೋರಣದಲ್ಲಿ ಬದಲಾವಣೆಯಾಗಲಿ ಆಡಳಿತೆಯಲ್ಲಿ ಸುಧಾರಣೆಯಾಗಲಿ ಇವಾವ ಪ್ರಾಂತಗಳಲ್ಲಿ ಯಾದರೂ ಆಗುವ ಸಂಭವ ತೀರ ಕಡಮೆ. ಏನೂ ಕೆಲಸವಿಲ್ಲದಾಗ ಇದೊಂದು ಹರಟೆಯ ವಿಷಯ ಮಾತ್ರವಾಗುವದಲ್ಲದೆ ಜನತೆಯ ಸುಖಸೌಕರ್ಯಗಳ ದೃಷ್ಟಿಯಿಂದ ವಿಶೇಷ ಮಹತ್ವವೇನೂ ಈ ಬದಲಾವಣೆಯಲ್ಲಿ ಇರುವುದಿಲ್ಲ. ಬಹಳಾದರೆ ಜನತೆಯ ದೈನಂದಿನ ಕಾರ್ಯಕಲಾಪಗಳಲ್ಲಿ ಇಷ್ಟರಂಗೆ ಹೆಚ್ಚು ಮಹತ್ವ ಸಿಕ್ಕಬಹುದು. ಬ್ರಿಟಿಶ ಪ್ರಭುತ್ವಕಾಲದಲ್ಲಿ ಹಿಂದೀ ಸಂಸ್ಥಾನಗಳಲ್ಲಿ ನಡೆದಿದ್ದ ರಾಜಕಾರಣದ ಚದುರಂಗದಾಟವು ಮತ್ತೊಮ್ಮೆ ಪ್ರಾರಂಭವಾದಂತೆ ತೋರುತ್ತದೆ.

ಪ್ರತಿವರುಷ ಧುರೀಣರ ಆಯ್ಕೆ ನಡೆಯಬೇಕೆಂದು ಕಾಂಗ್ರೆಸ ಶಾಸನ ಸಭಾಪಕ್ಷದವರು ನಿಯಮ ಮಾಡಿಕೊಂಡಿರುವರೆಂದು ನನಗೆ ತಿಳಿದುಬರುತ್ತದೆ. ಈ ನಿಯಮವು ಜಾಣತನದ್ದು ಹೇಗೋ ಎಂದು ನನಗೆ ಹೊಳೆಯದು. ಇದೆಷ್ಟೊಂದು ಹಡಿಗೇಡಿತನದ್ದಾಗಿದೆಯೆಂಬುದನ್ನು ತಿಳಿಯುವದೇನು ಕಠಿಣವಲ್ಲ. ಶಾಸನ ಸಭೆಯ ಆಯುಷ್ಯ ನಾಲ್ಕು ಇಲ್ಲವೆ ಐದು ವರುಷಗಳಿಗೊಮ್ಮೆ ಆಗುತ್ತಿರುವಾಗ ಧುರೀಣರ ಆಯ್ಕೆ ಮಾತ್ರ ಪ್ರತಿವರುಷ ಆಗುವುದರ ಅರ್ಥವೇನು? ಇದರಿಂದ ಧುರೀಣರ ಅಧಿಕಾರಾವಧಿ ಅನಿಶ್ಚಿತವಾಗಿ ವಿಶಿಷ್ಟ ಹಿತಸಂಬಂಧಗಳ ಪಕ್ಷ ಸಂತೋಷಿಸುವ ಹಾಗು ಅಧಿಕಾರದ ಮತ್ತು ಸ್ಥಾನಮಾನಗಳ ದುರುಪಯೋಗ ಮಾಡಿಕೊಳ್ಳುವ ಪ್ರವೃತ್ತಿಯುಂಟಾಗುವದಲ್ಲದೆ ತಮ್ಮ ಶಾಖೆಯ ಕಾರ್ಯಕಲಾಪಗಳತ್ತ ಹೆಚ್ಚು ಲಕ್ಷ ವಹಿಸದೆ ಸಂಚಾರ, ವ್ಯಾಖ್ಯಾನ ಮತ್ತು ಸಂತೋಷ ಕೂಟ ಮೊದಲಾದವುಗಳಲ್ಲಿ ಹೆಚ್ಚು ವೇಳೆ ಕಳೆಯುವ ಪ್ರವೃತ್ತಿ ಬೆಳೆಯುವದು. ಶಾಸನ ಸಭೆ ಉರ್ಜಿತವಲ್ಲಿರುವಾಗ ಗಂಭೀರ ಕಾರಣಗಳಿಗಾಗಿಯಲ್ಲದೆ, ಮಧ್ಯಾವಧಿಯಲ್ಲಿ ಒಮ್ಮೆ ಆರಿಸಲ್ಪಟ್ಟ ಧುರೀಣರನ್ನು ರದ್ದು ಹಾಕತಕ್ಕದ್ದಲ್ಲ. ಮೇಲೆ ಉಲ್ಲೇಖಿಸಿದ ಯಾವ ಸಂದರ್ಭಗಳಲ್ಲಿಯೂ ಅಂಥ ಬಲವತ್ತರವಾದ ಗಂಭೀರ ಕಾರಣಗಳು ಇದ್ದಂತೆ ತೋರುವದಿಲ್ಲ.

ಈ ಮೂರು ಮಂತ್ರಿಮಂಡಲಗಳಲ್ಲಿಯ ಹಲವಾರು ಸದಸ್ಯರು ಧ್ಯೇಯನಿಷ್ಠರೂ ಶೀಲಸಂಪನ್ನರೂ ಆಗಿದ್ದರಲ್ಲದೆ ಸಮರ್ಥ ಮತ್ತು ಅನುಭವಶಾಲಿಗಳಾದಿದ್ದರೆಂಬುದು ಖಚಿತವಾಗಿದೆ. ಆಡಳಿತೆಯ ಸೂತ್ರಗಳು ಅವರ ಕೈಬಿಟ್ಟು ಹೋದುದು ಜನಹಿತಕಾರಕವಲ್ಲ. ಆದರೆ ಸಾಮಾನ್ಯ ಮನುಷ್ಯನಿಗೆ ತಿಳಿಯದಿದ್ದಂಥ ವಿಶಿಷ್ಟ ದೃಷ್ಟಿಯಿಂದ ರಾಜಕಾರಣಿಗಳು ಇಲ್ಲಿನೆವನ್ನು ವಿಚಾರ ಮಾಡುತ್ತಿರಬಹುದು. ನಾನೇನು ಈ ಸಂಬಂಧದಲ್ಲಿ ಅಷ್ಟೊಂದು ತಜ್ಞನಲ್ಲ. ಆದರೆ ಇವೆಲ್ಲ ಘಟನೆಗಳು ದೇಶಕ್ಕಾಗಲಿ ಕಾಂಗ್ರೆಸ್ ಸಂಸ್ಥೆಗಾಗಲಿ ಕ್ಷೇಮಕರವಲ್ಲ ಎಂಬುದು ಮಾತ್ರ ನಾನು ಹೇಳಬಲ್ಲೆ.

ಕಿ. ಮ. ಮಶ್ರೂವಾಲಾ, ವರ್ಧಾ.

ಮದ್ರಾಸಿಗೆ ೭ ಲಕ್ಷ ಟನ್ನು ಅಕ್ಕಿಯ ಕೊರತೆ.

ಆಹಾರ ಮಂತ್ರಿಗಳ ಹೇಳಿಕೆ

ಮದ್ರಾಸ್ ಪ್ರಾಂತದ ಅಕ್ಕಿ ಬೇಡಿಕೆಯು 49 62 000 ಟನ್ನುಗಳಷ್ಟಿರುವಾಗ ನಮ್ಮ ಪ್ರಾಂತದಲ್ಲಿ 4,296,000 ಟನ್ನುಗಳಷ್ಟು ಅಕ್ಕಿ ಈ ವರ್ಷ ಬೆಳೆಯಬಹುದು. ಆದುದರಿಂದ ನಮಗೆ ಕೊರತೆ ಬೀಳುವ 7 ಲಕ್ಷ ಟನ್ನು ಅಕ್ಕಿಯನ್ನು ಪೂರೈಸಬೇಕಾಗಿ ಕೇಂದ್ರ ಸರಕಾರವನ್ನು ಭಿನ್ನವಿಸಲಾಗಿದೆ.

ನಮ್ಮ ಪ್ರಾಂತದ ಜನಸಂಖ್ಯೆಯ ಪ್ರಮಾಣವು ಪ್ರತಿ ವರ್ಷ ನೂರಕ್ಕೆ 7 ರಂತೆ ಏರುತ್ತಿದೆ. ಇದನ್ನು ಗಮನಿಸಿಯೆ ನಮ್ಮ ಅಕ್ಕಿ ಪ್ರಮಾಣವನ್ನು ನಿರ್ಧರಿಸಲಾಗಿದೆ.

ಕೇಂದ್ರ ಸರಕಾರವು ಸದ್ಯಕ್ಕೆ ನಮಗೆ 80 ಸಾವಿರ ಟನ್ ಅಕ್ಕಿಯನ್ನು ನೀಡಿದೆ. ಇದನ್ನು ತರಿಸಿಕೊಳ್ಳಲು ನಾವು 29 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಬೇಕಾಗುತ್ತದೆ. 1948 ರಲ್ಲಿ ನಾವು ಸುಮಾರು 110 ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ 260,500 ಟನ್ ಅಕ್ಕಿಯನ್ನು ತರಿಸಲಾಯಿತು.

ಕೆರೆ ಬಾವಿಗಳ ಜೀರ್ಣೋದ್ಧಾರಕ್ಕಾಗಿ ಸರಕಾರವು ಬಹಳ ಹಣ ಕೊಟ್ಟಿದೆ. ಈ ಯೋಜನೆಗಳೆಲ್ಲ ಪೂರೈಸಿದರೂ ನಮ್ಮ ಕೊರತೆ ಭರ್ತಿಯಾಗುವದಿಲ್ಲ. ಆದರೆ ಕಡಿಮೆಯಾಗುವುದು. ನಮ್ಮ ದೊಡ್ಡ ನೀರಾವರಿ ಯೋಜನೆಗಳು ಪೂರ್ಣವಾದರೆ ನಮ್ಮ ಪ್ರಾಂತವು ಅಕ್ಕಿಯ ವಿಷಯದಲ್ಲಿ ಸ್ವಾವಲಂಬಿಯಾಗುವದು. ಆದರೆ ಆ ಯೋಜನೆಗಳು ಇನ್ನೂ ಕಾಗದದಲ್ಲಿಯೆ ಉಳಿದಿವೆ.

ವ್ಯಾಪಾರೀ ಬೆಳೆಗಳಿಂದ ಆಹಾರ ಧಾನ್ಯದ ಬೆಳೆಗಳಿಗೇನೂ ಹಾನಿಯಾಗಿಲ್ಲ.

ಹರಿಜನೋದ್ಧಾರ ಶಾಖೆ

ಸರಕಾರವು 1-4-49 ರಿಂದ "ಹರಿಜನೋದ್ಧಾರ ಶಾಖೆ" ಎಂಬ ಒಂದು ಇಲಾಖೆಯನ್ನು ರಚಿಸಿದೆ. ನಿವೃತ್ತ ಹೈಕೋರ್ಟ ಜಡ್ಜ ಶ್ರೀ ವಿ. ಭಾಷ್ಯಂ ಅಯ್ಯಂಗಾರರವರು ಈ ಇಲಾಖೆಯ ಗೌರವ ಡೈರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ. ಈಗ ಲೇಬರ್ ಕಮಿಷನರು ನಿರ್ವಹಿಸುತ್ತಿರುವ ಹರಿಜನ ಹಾಗೂ ಇತರ ಹಿಂದುಳಿದ ಜಾತಿಗಳ ಸ್ಥಿತಿಗತಿಗಳ ಸುಧಾರಣಾ ಕಾರ್ಯಗಳನ್ನು ಇನ್ನು ಮುಂದೆ ಈ ಇಲಾಖೆಯು ನೋಡಿಕೊಳ್ಳುವುದು. ಹರಿಜನೋದ್ಧಾರ ಸಮಿತಿಯ ಶಿಫಾರಸಿನ ಮೇರೆಗೆ ಈ ಶಾಖೆಯು ಸ್ಥಾಪಿತವಾದುದಾಗಿದೆ.

—ಹಿಂದುಸ್ತಾನದಲ್ಲಿ ಕಳೆದ ವರ್ಷ 1229,691 ಟನ್ನು ವನಸ್ಪತಿ ತುಪ್ಪ ತಯಾರಾಗಿದೆ. ಇದೇ ರೀತಿ ಶುದ್ಧ ತುಪ್ಪ -- 11.4 ಮಿಲಿಯ ಮಣ, ಬೆಣ್ಣೆ—2.8 ಮಿಲಿಯ ಮಣ, ಉಪ್ಪು —645 ಲಕ್ಷ ಮಣ. ಇಲ್ಲಿಗೆ ಆಮದಾಗುವ ಉಪ್ಪು ವರ್ಷಕ್ಕೆ ಸುಮಾರು ಒಂದು ಕೋಟಿ ಮಣ

೩ನೇ ವರ್ಗದಲ್ಲಿ ವಿದ್ಯುತ್ ಬೀಸಣಿಗೆ

ರೈಲ್ವೇಯು ಹೊಸ 3ನೇ ತರಗತಿಯ ಗಾಡಿಗಳಿಗೆಲ್ಲಾ ವಿದ್ಯುತ್ ಬೀಸಣಿಗೆಗಳನ್ನಿಡಲು ಸರಕಾರವು ನಿಶ್ಚಯಿಸಿದೆ. ಹಿಂದುಸ್ಥಾನದಲ್ಲಿ ಇಂತಹ 274 ಗಾಡಿಗಳನ್ನು ನಿರ್ಮಿಸಲಾಗುತ್ತದೆ. ಸಾಮಾಗ್ರಿ ದೊರೆತರೆ ಸ್ಟೀಯರ ಹಳೆಯ 3ನೇ ತರಗತಿಗೂ ವಿದ್ಯುತ್ ಬೀಸಣಿಗೆ ಇರಿಸಲಾಗುವುದು.

ಮದ್ರಾಸ್ ಸರ್ಕಾರದ ಪ್ರಕಟನೆಗಳು

ಕಬ್ಬಿನ ಬೆಲೆ

ರಿಜಿಸ್ಟರಿಯಾದ ಕಬ್ಬಿಗೆ ಈ ಕೆಳಗಿನಂತೆ ಕನಿಷ್ಠ ಬೆಲೆ ಗೊತ್ತುಪಡಿಸಲಾಗಿದೆ. 300 ಟನ್ನಿಗಿಂತ ಕಡಮೆ ಕಬ್ಬು ಹಿಂಡುವ ಕಾರ್ಖಾನೆಗೆ ಟನ್ನಿಗೆ ರೂ. 42. 300 ಟನ್ನಿಗಿಂತ ಮೇಲೆ 1,200 ಕ್ಕಿಂತ ಕಡಮೆ ಕಬ್ಬು ಹಿಂಡುವ ಕಾರ್ಖಾನೆಗೆ ಟನ್ನಿಗೆ ರೂ. 46-12-0, 1,200 ಟನ್ನಿಗಿಂತ ಹೆಚ್ಚಿಗೆ ಕಬ್ಬು ಹಿಂಡುವ ಕಾರ್ಖಾನೆಗೆ ರೂ. 47-4-0.

ಮದ್ರಾಸ್ ಮಂತ್ರಿಗಳು

ಉಪಾಧ್ಯಾಯರಿಗೆ ಕೊಟ್ಟ ಉಪದೇಶ

ಪ್ರಾಥಮಿಕ ಶಿಕ್ಷಣವನ್ನು ಮೂಲ ಶಿಕ್ಷಣ ಪದ್ಧತಿಯಲ್ಲಿ ನಡೆಸಬೇಕೆಂಬುವೇ ಸರಕಾರದ ಧೋರಣೆಯಾಗಿದೆ. ಮೂಲ ಶಿಕ್ಷಣವು ಜನಾಂಗ ಜನಕರಾದ ಮಹಾತ್ಮಾ ಗಾಂಧಿಯವರು ಭಾರತಕ್ಕೆ ಅರ್ಪಿಸಿದ ಹೊಸ ಕಾಣಿಕೆಯಾಗಿದೆ. ಮಕ್ಕಳಿಗೆ ಪುಸ್ತಕಗಳು ಇಲ್ಲವೇ ಪ್ರತ್ಯಕ್ಷ ಕಲಿಕೆಯುವದ ಮೂಲಕ ಒಂದಿಷ್ಟು ಜ್ಞಾನವನ್ನೊದಗಿಸಿದರೆ ಸಲ್ಲದು. ಮಕ್ಕಳನ್ನು ಸಮರ್ಥರನ್ನಾಗಿ ಮಾಡಲಾರದು ಮಾತ್ರವಲ್ಲ. ಸಮಾಜದ ಹೊಣೆಯನ್ನು ವಹಿಸಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳನ್ನಾಗಿಯೂ ಮಾಡಲಾರದೆಂದು ಗಾಂಧೀಜಿಯವರು ತಿಳಿದಿದ್ದರು. ಮಕ್ಕಳ ತರಬೇತಿಯಲ್ಲಿ ಗುಣನಡತೆಗಳ ತರಬೇತಿಗೆ ಅಗ್ರಸ್ಥಾನ ಸಲ್ಲಬೇಕು. ಸಹಕಾರ ಬುದ್ಧಿಯಿಂದ ಇತರರೊಡನೆ ವರ್ತನೆ ಆರೋಗ್ಯಕರವಾದ ಉನ್ನತ ಜೀವನ, ಜೀವನ ಸಾಗಿಸಲು ಬೇಕಾದ ಸಾಮರ್ಥ್ಯ ಇವು ಅತ್ಯಾವಶ್ಯಕವಾಗಿವೆ.

ಹೆಚ್ಚಿನ ತರಬೇತಿ

ಮೂಲ ಶಿಕ್ಷಣವೆಂದರೆ ಕೇವಲ ಮೂಲ ಕಸಬುಗಳನ್ನು ಮಾತ್ರ ಕಲಿಸುವುದಲ್ಲ. ಶಾಲೆಯನ್ನು ಶುಚಿಯಾಗಿರಿಸುವುದು, ಶಾಲೆಗಳಿಗೆ ಕುಡಿಯುವ ನೀರನ್ನೊದಗಿಸುವುದು, ತೋಟಗಳನ್ನು ಬೆಳೆಸಿ ಕಾಪಾಡಿಕೊಳ್ಳುವುದು ಇತ್ಯಾದಿ ಕಾರ್ಯಕಲಾಪಗಳೂ ಮೂಲ ಶಿಕ್ಷಣದಲ್ಲೇ ಸೇರಿವೆಯಲ್ಲದೆ ಮಕ್ಕಳಿಗೆ ಕಲಿಸಲು ಬೇಕಾದ ಕಸಬು ಹಾಗೂ ಇತರ ಚಟುವಟಿಕೆಗಳನ್ನು ಶಾಲೆಗಳಲ್ಲೇ ದೊರೆಯುವಂತೆ ಮಾಡಬೇಕಾಗಿದೆ. ಆದುದರಿಂದ ಉಪಾಧ್ಯಾಯರಿಗೆ ಈಗಿನ ವಿದ್ಯಾಭ್ಯಾಸಕ್ಕಾಗಿ ದೊರೆಯುವ ತರಬೇತಿಗಿಂತಲೂ ಹೆಚ್ಚಿನ ತರಬೇತಿಯು ಅತ್ಯಾವಶ್ಯಕವಾಗಿದೆ

ಉಪಾಧ್ಯಾಯರಿಗೆ ಮನ್ನಣೆ

ಯಾವ ಶಿಕ್ಷಣವಾದರೂ ಅದು ಪರಿಣಾಮಕಾರಿಯಾಗಿ ಯಶಸ್ವಿಯಾಗಬೇಕಾದರೆ ಅನುಭವಶಾಲಿಗಳಾದ ಉಪಾಧ್ಯಾಯರೇ ಕಾರಣ. ಉಪಾಧ್ಯಾಯರ ಯೋಗ್ಯತೆಯ ಮೇರೆಗೆ ವಿದ್ಯಾಭ್ಯಾಸವು ಟೀಕಿಸಲಾಗುತ್ತಿದೆ. ಪ್ರಾಥಮಿಕ ಶಾಲೆಗಳೇ ವಿದ್ಯಾಭ್ಯಾಸದ ತಳಹದಿಗಳಾಗಿರುವುದರಿಂದ ಇಲ್ಲಿ ಸಮರ್ಥರಾದ ಉತ್ತಮ ಉಪಾಧ್ಯಾಯರು ಬೇಕೇ ಬೇಕು. ಈ ಸಂದರ್ಭದಲ್ಲಿ ಸ್ಥಳೀಕ ಸಂಸ್ಥೆಗಳನ್ನು ಇತರ ಮ್ಯಾನೇಜ್‌ಮೆಂಟಿನವರೂ ಉಪಾಧ್ಯಾಯರನ್ನು ಹೆಚ್ಚಿನ ಮರ್ಯಾದೆಯಿಂದ ನಡೆಸಿಕೊಳ್ಳಬೇಕೆಂಬುದನ್ನು ಒತ್ತಿ ಹೇಳಬೇಕಾಗಿದೆ. ಉಪಾಧ್ಯಾಯ ವೃತ್ತಿಗೆ ನಾವು ಗೌರವ ತೋರಿಸದಿದ್ದರೆ ಆತ್ಮಾಭಿಮಾನವುಳ್ಳ ಯಾವ ಸ್ತ್ರೀ ಪುರುಷರೂ ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳಲಿಕ್ಕಿಲ್ಲ.

ಚಿಕ್ಕ ಮಕ್ಕಳಿಗೆ ಕಲಿಸುವುದರಲ್ಲಿ ಪುರುಷರಿಗಿಂತಲೂ ಸ್ತ್ರೀಯರೇ ಸಮರ್ಥರೆಂದು ಪ್ರಪಂಚದಲ್ಲೇ ಲೆಕ್ಕಿಸಲಾಗಿದೆ. ಸ್ತ್ರೀ ವಿದ್ಯಾಭ್ಯಾಸವು ಹೆಚ್ಚಿದಂತೆ ಅನೇಕ ಹೆಂಗಸರು ಉಪಾಧ್ಯಾಯ ವೃತ್ತಿಯನ್ನು ಕೈಕೊಳ್ಳುವರೆಂಬುದರಲ್ಲಿ ಸಂದೇಹವಿಲ್ಲ. ಆದರೆ ಸ್ತ್ರೀಯರು ಹೆಚ್ಚಾಗಿ ಈ ವೃತ್ತಿಗೆ ಸೇರುವುದು ನಾವು ನಮ್ಮ ಶಾಲೆಗಳಲ್ಲಿ ಅವರಿಗೆ ಒದಗಿಸುವ ವಾತಾವರಣದ ಮೇಲೆ ಆಧರಿಸಿಕೊಂಡಿದೆ.

ಉತ್ಕೃಷ್ಟ ವೃತ್ತಿ

ಪ್ರಾಥಮಿಕ ಶಾಲೆಗಳ ವಿಷಯದಲ್ಲಿ ಸಾರ್ವಜನಿಕರೂ ಮ್ಯಾನೇಜ್‌ಮೆಂಟಿನವರು ಹೆಚ್ಚಿನ ಆಸಕ್ತಿವಹಿಸುವುದು ಅಗತ್ಯವಾದರೂ ಅಗತ್ಯವಿಲ್ಲದಂತೆ ಕೈಹಾಕಿದರೆ ವಿದ್ಯಾಭ್ಯಾಸಕ್ಕೆ ಅದರಿಂದ ಅಡ್ಡಿಯಾದೀತು. ಉಪಾಧ್ಯಾಯರಿಗೆ ಮನ್ನಣೆ ದೊರೆಯಬೇಕಲ್ಲದೆ ಅವರಿಗೆ ತಕ್ಕ ಜವಾಬ್ದಾರಿಕೆಯನ್ನೂ ಕೊಡಬೇಕು. ಕೆಲಸದ ವಿಷಯದಲ್ಲಿ ಭದ್ರತೆ ಇರಬೇಕು. ಉಪಾಧ್ಯಾಯ ವೃತ್ತಿಯು ಉತ್ಕೃಷ್ಟ ವೃತ್ತಿಯೆಂಬ ಭಾವನೆ ಅವರಲ್ಲಿ ಹುಟ್ಟುವಂತೆ ಮಾಡಬೇಕು. ಇಂತಹ ಭಾವನೆಯು ಅವರಲ್ಲಿ ಹುಟ್ಟುವುದು ನಮ್ಮ ವರ್ತನೆಯನ್ನು ಹೊಂದಿಕೊಂಡಿದೆ. ಎಲ್ಲಾ ಮ್ಯಾನೇಜ್‌ಮೆಂಟಿನವರೂ ವಿದ್ಯಾ ಇಲಾಖೆಯ ಎಲ್ಲಾ ಅಧಿಕಾರಿಗಳೂ ಪ್ರತಿಯೊಬ್ಬ ಉಪಾಧ್ಯಾಯನನ್ನೂ ಹೆಚ್ಚಿನ ಗೌರವದಿಂದ ನೋಡಿಕೊಳ್ಳಬೇಕೆಂದು ಕೇಳುತ್ತಿದ್ದೇನೆ. ಉಪಾಧ್ಯಾಯರೇ ಜನಾಂಗವನ್ನು ರೂಪಿಸುವವರೆಂದು ಎಲ್ಲರೂ ನೆನಪಿನಲ್ಲಿರಿಸಬೇಕಾದ ವಿಷಯವಾಗಿದೆ. ಶಾಲೆಗಳಲ್ಲಿ ಉಪಾಧ್ಯಾಯರಿಗೆ ಮನ್ನಣೆ ದೊರೆಯಬೇಕಾದರೆ ಸಾರ್ವಜನಿಕರೂ ಪರೀಕ್ಷಾಧಿಕಾರಿಗಳೂ ಅವರಿಗೆ ಮನ್ನಣೆಕೊಡಬೇಕು. ಉಪಾಧ್ಯಾಯರಲ್ಲಿ ಆತ್ಮವಿಶ್ವಾಸ ಆದರ್ಶತೆಗಳು ಇರಬೇಕಾದರೆ ನಾವೂ ಅವರಲ್ಲಿ ದೃಢವಿಶ್ವಾಸವಿಡಬೇಕು. ಉಪಾಧ್ಯಾಯವೃತ್ತಿಗೆ ಹೆಚ್ಚು ಜನರು ಅದರಲ್ಲೂ ಸ್ತ್ರೀಯರು ಸೇರಬೇಕಾದರೆ ಉತ್ತಮ ಮನ್ನಣೆ ದೊರಕಿಸಿದರೇನೇ ಈ ಉತ್ಕೃಷ್ಟವೃತ್ತಿಗೆ ಶ್ರೇಷ್ಠತರದ ವ್ಯಕ್ತಿಗಳು ಪ್ರವೇಶಿಸಬಲ್ಲರು. ಉಪಾಧ್ಯಾಯರೂ ತಮ್ಮ ನಡತೆ, ಕರ್ತವ್ಯಗಳನ್ನು ಪರಿಪಾಲಿಸಿಕೊಂಡು ಅಂತಹ ಮನ್ನಣೆಗೆ ಪಾತ್ರರಾಗಬೇಕು.

ನಮ್ಮ ಮಕ್ಕಳು ಸರಿಯಾದ ಶಿಕ್ಷಣ ಕೊಟ್ಟರೆ ಪ್ರಪಂಚದಲ್ಲೇ ಪ್ರಥಮಸ್ಥಾನ ಪಡೆಯುವದರಲ್ಲಿ ಸಂಶಯವಿಲ್ಲ. ಈ ಶಿಕ್ಷಣವು ಶಾಲೆಯಲ್ಲಿ ಮಾತ್ರವಲ್ಲ ಮನೆಮನೆಯಲ್ಲೂ ನಡೆಯಬೇಕು. ನಮ್ಮ ದೇಶದ ಮುಂದಿನ ಭವಿಷ್ಯವೆಲ್ಲಾ ನಮ್ಮ ಮಕ್ಕಳಿಗೆ ನಾವು ಕೊಡುವ ಶಿಕ್ಷಣದ ಮೇಲೆಯೇ ಆಧರಿಸಿದೆ.

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

O. P. No 13/49.

ಲೇಟ್ ಕೋರಗಲ್ಲು ನಾರಾಯಣಪ್ಪನವರಿಗೆ ಬರಬೇಕಾದ ಜೀವ ವಿಮಾದ ಸಾಲ (Insurance Amount)

ಅರ್ಜಿದಾರ:— ಕೋರಗಲ್ಲು ವೆಂಕಣ್ಣ ಕುಟುಂಬದ ಮ್ಯಾನೇಜರು.

ಮೇಲಿನ ನಂಬರಿನಲ್ಲಿ ಅರ್ಜಿದಾರ ಕೋರಗಲ್ ವೆಂಕಣ್ಣನು ತನ್ನ ಅವಿಭಕ್ತ ಅಣ್ಣ ಲೇಟ್ ಕೋರಗಲ್ ನಾರಾಯಣಪ್ಪನು ಕೆನರಾ ಮ್ಯೂಚಿಯಲ್ ಇನ್ಶೂರೆನ್ಸು ಕಂಪನಿ ಲಿಮಿಟೆಡ್ ಉಡಿಪಿ ಇವರಲ್ಲಿ ಪಾಲಿಸಿ ನಂಬರು 14921 ರಲ್ಲಿ ರು 1000 ಬರಮಾಡಿಕೊಳ್ಳಲು ಕುಟುಂಬದ ಮ್ಯಾನೇಜರಾಗಿ ವಾರಸು ಸರ್ಟಿಫಿಕೇಟು ಕೊಡಲು ಅರ್ಜಿ ಇಟ್ಟಿರುತ್ತಾನೆ. ಸದ್ರಿ ಅರ್ಜಿ ವಾಯಿದಾ ತಾ|| 3—6—1949ಕ್ಕೆ ಇರುತ್ತದ ಇದರ ವಿಷಯಕ್ಕೆ ಯಾರಿಗಾದರೂ ತಕರಾರು ಇದ್ದಲ್ಲಿ ಸದ್ರಿ ವಾಯಿದಕ್ಕೆ ಸ್ವತಃ ವಾಗಲಿ, ವಕೀಲರ ದ್ವಾರವಾಗಲಿ ಹಾಜರಾಗಲು ತಪ್ಪಿದಲ್ಲಿ ಎಕ್ಸ್‌ಪಾರ್ಟಿ ಮೇಲೆ ವಾರಸ ಸರ್ಟಿಫಿಕೇಟನ್ನು ಅರ್ಜಿದಾರಗೆ ಕೊಡೋಣವಾಗುತ್ತದೆ.

ಟಿ. ಹೆಚ್. ಎಂ. ಶಿದ್ದಯ್ಯ,
ಅರ್ಜಿದಾರನ ವಕೀಲು ಹೊಸಪೇಟೆ

ಹಿಂದುಸ್ಥಾನದ ಜಾತ್ಯತೀತ ಸ್ವರೂಪ ಬಿಟ್ಟುಕೊಡಬಾರದು

ಹಿಂದುಸ್ಥಾನದ ಜಾತ್ಯತೀತ ಸ್ವರೂಪವನ್ನು ಏನಾದರೂ ಉಳಿಸಿಕೊಳ್ಳಬೇಕು. ಹಾಗೆಂದರೆ ನಾವು ಅಧರ್ಮಿಗಳಾಗಬೇಕು, ಇಲ್ಲವೇ ನಾಸ್ತಿಕರಾಗಬೇಕು ಎಂದು ಅರ್ಥವಲ್ಲ. ಪ್ರತಿಯೊಬ್ಬನಿಗೂ ಧಾರ್ಮಿಕ ಸ್ವಾತಂತ್ರ್ಯವಿದ್ದು ಅವನ ವಿಶಿಷ್ಟ ಧರ್ಮದ ಮೂಲಕ ಅವನಿಗೆ ಯಾವ ವಿಧದ ಅಪಾತ್ರತೆಯೂ ಉಂಟಾಗದಿರುವುದೇ ಜಾತ್ಯತೀತ ರಾಷ್ಟ್ರದ ಲಕ್ಷಣ.

—ಪಂ. ಜ. ನೆಹರು.

ಪುರುಷ-ಸ್ತ್ರೀ ಭೇದ

ಸೃಷ್ಟಿಯ ನಿಯಮದ ಪ್ರಕಾರ, ಸ್ತ್ರೀ ಪುರುಷ ಭೇದಗಳು ಹುಟ್ಟಿವೆ. ಭೇದವು ಇವೆಯೆಂದ ಮೇಲೆ ಆ ಪ್ರಕಾರಗಳಲ್ಲಿ ವೈವಿಧ್ಯವಿರುವುದು ಅನಿವಾರ್ಯವಾದದ್ದು.

ಇಂದು ಸ್ತ್ರೀ ಪುರುಷರಲ್ಲಿ ಸಮಾನತೆ ಇರಬೇಕೆಂಬ ಆಂದೋಲನವು ನಡೆದಿದೆ. ಆ ಆಂದೋಲನದ ಧ್ಯೇಯಧೋರಣೆಗಳೇನು? ಎಂಬ ಮಾತನ್ನು ಈ ಭೇದದ ಸ್ಪಷ್ಟ ಕಲ್ಪನೆಯಿಲ್ಲದೆ ತಿಳಿದುಕೊಳ್ಳಲು ಆಗದು.

ಮೊದಲು ಈ ಅಸಮಾನತೆ ಇದೆಯೇ? ಎಂಬುದನ್ನು ನೋಡುವುದು ಅವಶ್ಯವಿದೆ. ಸ್ತ್ರೀಯರು ಮನೆಯಲ್ಲಿಯೇ ಇರಬೇಕು. ಪುರುಷರು ಬೇಕಾದಲ್ಲಿ ಹೋಗಲು ಆಸ್ಪದವಿದೆ, ಸ್ತ್ರೀಯರು ಪುರುಷರನ್ನು ಅವಲಂಬಿಸಿದ್ದಾರೆ, ಪುರುಷರು ಸ್ವತಂತ್ರರಿದ್ದಾರೆ, ಪುನರ್ವಿವಾಹ ಮಾಡಿಕೊಳ್ಳಲು ಸ್ತ್ರೀಯರಿಗೆ ಆಸ್ಪದವಿಲ್ಲ, ಪುರುಷರಿಗೆ ಆ ನಿರ್ಬಂಧವಿಲ್ಲ. ತಂದೆಯ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಮಾತ್ರ ಭಾಗವು ಸಿಗುವುದರಿಂದ ಸ್ತ್ರೀಯರು ತಂದೆಯ ಮೇಲಾಗಲಿ, ಗಂಡನ ಮೇಲಾಗಲಿ, ಮಗನ ಮೇಲಾಗಲಿ ಅವಲಂಬಿಸಬೇಕಾಗಿದೆ. ಇನ್ನೇ ಮೊದಲಾದ ಕಾರಣಗಳ ಮೂಲಕ ಸ್ತ್ರೀಯರಿಗೆ ಮುಂದರಿಯಲು ಆಸ್ಪದವಿಲ್ಲ. ಆದ್ದರಿಂದ ಈ ಅಸಮಾನತೆಯು ಹೋಗಬೇಕು ಎಂಬುದು ಸ್ತ್ರೀಸ್ವಾತಂತ್ರ್ಯ ಪುರಸ್ಕರ್ತರವಾದವಾಗಿದೆ.

ಈ ಭೇದಗಳು ಭೇದಗಳೇ? ಎಂಬ ಬಗ್ಗೆ ನಾವು ವಿಚಾರಮಾಡಬೇಕಾಗಿದೆ. ಇವು ಭೇದಗಳು ಮತ್ತು ಸ್ತ್ರೀಯರ ಅವನತಿಗೆ ಕಾರಣವಾದ ಭೇದಗಳು ಎಂದು ಸ್ತ್ರೀಸ್ವಾತಂತ್ರ್ಯ ಪ್ರತಿಪಾದಕರು ಹೇಳುತ್ತಿದ್ದಾರೆ. ಮತ್ತು ಈ ನಿಯಮಗಳನ್ನು ಪುರುಷರೇ ಮಾಡಿದರಿಂದ, ಅವರು ತಮಗೆ ಅನುಕೂಲವಾಗುವ ರೀತಿಯಲ್ಲಿ ಮತ್ತು ಸ್ತ್ರೀಯರು ಸದಾಕಾಲ ತಮ್ಮ ಕೈಗೆ ಸಿಕ್ಕಿರುವಂತೆ ಮಾಡುವ ಹಾಗೆ ಅವುಗಳನ್ನು ರಚಿಸಿದ್ದಾರೆ ಎಂದೂ ಅವರ ಅಂಬೋಣವಿದೆ.

ಹಾಗೆ ನೋಡಿದರೆ, ಈ ಸ್ತ್ರೀ ಸ್ವಾತಂತ್ರ್ಯದ ವಿಚಾರವನ್ನು ಮೊದಲು ಪ್ರಾರಂಭಮಾಡಿದವರೂ ಪುರುಷರೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಪುರುಷರು ಮಾಡಿದ ಹಿಂದಿನ ನಿಯಮ ನಿರ್ಬಂಧಗಳ ಬಗ್ಗೆ ಸ್ತ್ರೀಯರಿಗೆ ಸಂಶಯ ಬರುವುದಾದರೆ ಈಗ ಅವರು ಮಾಡಬಯಸುತ್ತಿರುವ ಈ ಹೊಸ ನಿಯಮಗಳಿಂದ ತಮಗೆ ಹಿತವಾದೀತೆಂದು ತಿಳಿಯುವುದಾದರೂ ಏಕೋ ತಿಳಿಯದಾಗಿದೆ.

ಮತ್ತು ಪೂರ್ವದ ನಿಯಮಗಳು ಪ್ರಕೃತಿಗಾಮಿ ಸ್ವರೂಪದವಾಗಿದ್ದವೇ? ಅಥವಾ ಈಗ ಕೇಳುತ್ತಿರುವ ಸ್ವಾತಂತ್ರ್ಯದಿಂದ ಸ್ತ್ರೀ ವರ್ಗಕ್ಕೆ ಹಿತವಾಗುವುದಿದೆಯೇ? ಎಂಬುದನ್ನು ನೋಡುವುದು ಅವಶ್ಯವಿದೆ.

ಪೂರ್ವಜರು ಸರ್ವರ ಸ್ವಭಾವ, ಭೇದ ಯೋಗ್ಯತೆಗಳನ್ನು ಅನುಲಕ್ಷಿಸಿ ನಿಯಮ ಮಾಡಿದ್ದಾರೆ. ಆಗ ಅವರು ಸ್ತ್ರೀಯರಿಗೆ ಅನ್ಯಾಯಮಾಡುವ ದೃಷ್ಟಿಯನ್ನು ಇಟ್ಟುಕೊಂಡಿದ್ದರೆಂದು ಅನ್ನುವುದಂತೂ ತೀರ ಅಸಂಬದ್ಧವಾದ ವಿಚಾರ.

ಒಂದು ವೇಳೆ ಪುರುಷನು ತನ್ನ ಹೆಂಡತಿಯನ್ನು ತನ್ನ ಅಂಕಿತದಲ್ಲಿ ಇಟ್ಟುಕೊಳ್ಳಬೇಕೆಂದು ಇಚ್ಛಿಸಿದನೆಂದು ತಿಳಿದರೂ ಅವನು ತನ್ನ ತಾಯಿಯನ್ನು, ಅಕ್ಕತಂಗಿಯರನ್ನು ಮತ್ತು ಮಗಳನ್ನು ಅದೇ ಪಾರತಂತ್ರ್ಯದಲ್ಲಿ ದೂಡಲು ಎಂದೂ ಇಚ್ಛಿಸುವುದು ಸಾಧ್ಯವಿಲ್ಲ. ಹೀಗಿದ್ದರೆ ಅವನು ಹೆಂಡತಿಗೊಂದು ಉಳಿದವರಿಗೊಂದು ನಿಯಮವನ್ನು ಮಾಡಬೇಕಾಗಿತ್ತು. ಹಾಗೆ ಮಾಡಿಲ್ಲ. ಆದ್ದರಿಂದ ಆ ದೃಷ್ಟಿಯು ಅವನದಿದ್ದಿಲ್ಲ ಎಂದು ಧಾರಾಳವಾಗಿ ಹೇಳಬಹುದು.

ನಮಗೆ ಇಂದಿನ ನಿಯಮಗಳಿಂದ ಕಷ್ಟವಾಗಿದೆಯೇ? ಎಂದು ಸ್ತ್ರೀ ವರ್ಗವನ್ನು ಕೇಳಿದರೂ ಈ ಮಾತಿನ ತಥ್ಯವು ಚನ್ನಾಗಿ ಹೊರಬೀಳದೆ ಇರಲಾರದು. ಇಂದಿನ ಸ್ಥಿತಿಯನ್ನು ರೂಪಾಂತರಗೊಳಿಸಲು ಯಾವ ಗೃಹಿಣಿಯೂ ಸಿದ್ಧವಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಅವರನ್ನು ಅಶಿಕ್ಷಿತರನ್ನಾಗಿ ಇಟ್ಟಿದುದರಿಂದ ಅವರು ಈ ಅಭಿಪ್ರಾಯವನ್ನು ಕೊಡುತ್ತಿದ್ದಾರೆ ಎಂದು ಈ ಸ್ವಾತಂತ್ರ್ಯವಾದಿಗಳು ಹೇಳುತ್ತಿದ್ದಾರೆ. ಶಿಕ್ಷಣವೆಂದರೇನು? ಬಿ.ಎ., ಎಂ.ಎ., ಪರೀಕ್ಷೆಯನ್ನು ದಾಟಿದವರೇ? ಅಂಥವರು ಸ್ವಾತಂತ್ರ್ಯದ ಹವ್ಯಾಸವನ್ನು ಇಟ್ಟುಕೊಂಡದ್ದು ನಿಜ.

ಇಂಥವರ ಜೀವನವನ್ನು ಇಂದು ನಾವು ನೋಡಬಹುದು. ಅವರಿಗೆ ಲಗ್ನವಾಗುವುದು ಕಠಿಣವಾಗುತ್ತದೆ. ಮುಂದೆ ಅವರು ಅಸ್ತವ್ಯಸ್ತ ಜೀವನವನ್ನು ಸಾಗಿಸಿ ಮನೋವಿಕೃತಿಗಳಲ್ಲಿ ಕಾಲಕಳೆಯುವ ಪ್ರಸಂಗ ಬರುವುದೇ ಬಹಳ.

ಪ್ರಯೋಗದ ದೃಷ್ಟಿಯಿಂದ ಈಗ ಸರ್ವ ಸ್ಥಿತ್ಯಂತರಗಳು ಸಾಗಿವೆ. ಮೊದಲಿನದು ಬೇಕು ಆಗಿತ್ತೆಂದು ಅದರಲ್ಲಿ ವ್ಯತ್ಯಾಸ ಮಾಡಬೇಕಾಗಿಲ್ಲ. ಮೂಲದಲ್ಲಿ ಇವಾವ ಸ್ಥಿತಿಗಳೂ ಗ್ರಾಹ್ಯ, ಅಗ್ರಾಹ್ಯಗಳಾಗಿಲ್ಲ. ಹೊತ್ತು ಬಂದಂತೆ ನಮ್ಮ ರೀತಿನೀತಿಗಳನ್ನು ಸರಿಪಡಿಸಿಕೊಳ್ಳಬೇಕೆಂಬ ಮಾತಿಗೆ ಸಾಕ್ಷಿ ಈ ಘಟನೆಗಳು ಸಾಗಿವೆ.

ಆದ್ದರಿಂದ, ಸ್ಥಿತ್ಯಂತರಗಳನ್ನು ಸೂಚಿಸುವವರಿಗೂ ನಮ್ಮ ವಿರೋಧವಿಲ್ಲ. ಅವರಿಗೆ ಯೋಗ್ಯ ಕಂಡ ಸ್ಥಿತ್ಯಂತರಗಳನ್ನು ಅದಕ್ಕೆ ಅವಕಾಶವಿದ್ದರೆ, ಅವಶ್ಯವಾಗಿ ಮಾಡಿಕೊಳ್ಳಲಿ. ಆದರೆ ಯಾವುದೇ ವಿಷಯವನ್ನು ಚರ್ಚಿಸುವುದಾದರೆ, ಅದರ ಮೂಲದಲ್ಲಿ ಹೊಕ್ಕು ವಿಚಾರಮಾಡುವುದು ಅವಶ್ಯವಿದೆ. ಸ್ಥಿತ್ಯಂತರವಾಗುವುದನ್ನು ಕಂಡು, ಪೂರ್ವ ಸಾಂಪ್ರದಾಯವಾದರೂ ಬಿಡುವ ಕಾರಣವಿಲ್ಲ. ಯಾವ ವಿಚಾರವೂ ಇಂದಿನಂತೆ ಕೊನೆಯವರೆಗೆ ಇರಲಾರದು, ಅನುಭವದಿಂದ, ಪರಿಸ್ಥಿತಿಗೆ ತಕ್ಕಂತೆ ವ್ಯತ್ಯಾಸಗಳಾಗುವುದು ಸಹಜವೂ ಅನಿವಾರ್ಯವೂ ಆಗಿದೆ.

ಸ್ತ್ರೀಯರಿಗೂ ವ್ಯಾಯಾಮ ಮಾಡಿಸಬೇಕು ಮತ್ತು ಅವರಲ್ಲಿ ಸ್ತ್ರೀ ಪುರುಷರೊಳಗೆ ಭೇದಗಳನ್ನು ಕಲ್ಪಿಸುವ ಅವಶ್ಯಕತೆಯಿಲ್ಲ ಎಂದು ಅಭಿಪ್ರಾಯ ಪಡುವವರೂ ಇದ್ದಾರೆ, ಅಂಥವರಿಗೆ ಆ ವಿಷಯದ ಜ್ಞಾನವುಳ್ಳವರು ಹಲಕೆಲವು ಮಾತುಗಳನ್ನು ಹೇಳಿದ್ದಾರೆ:—

"ಸ್ತ್ರೀಯರು ಮತ್ತು ಪುರುಷರಲ್ಲಿ ಸ್ವಾಭಾವಿಕ ಭೇದವಿದೆ. ಆ ವಿಷಯವನ್ನು ಸಂಪೂರ್ಣವಾಗಿ ಗಮನಿಸಿ ನಮ್ಮ ಹೆಜ್ಜೆಗಳನ್ನು ಇಡುವುದು ಅವಶ್ಯವಿದೆ. ಇಲ್ಲದಿದ್ದರೆ ಅನರ್ಥಗಳಾಗದೆ ಇರದು.

ದೈಹಿಕ ರಚನೆಯನ್ನು ನೋಡಿದರೆ ಸಾಮಾನ್ಯಸ್ವರೂಪದ ಸ್ತ್ರೀಯರ ಟೊಂಕವು ಅವಳ ಚಪ್ಪೆಗಳಿಗಿಂತ ಉದ್ದವಿರುತ್ತದೆ ಮತ್ತು ಅದರ ಸುತ್ತು ಹೆಚ್ಚಿನ ಮಾಂಸದ ಆವರಣವಿರುತ್ತದೆ. ಅವಳ ಜನನೇಂದ್ರಿಯದ ಸುತ್ತಲು ಇರುವ ಎಲುವುಗಳು ಹೆಚ್ಚು ಅಗಲವಾದ ಕೋನಗಳಲ್ಲಿ ರಚಿಸಲ್ಪಟ್ಟಿರುತ್ತವೆ ಮತ್ತು ದುರ್ಬಲವಿರುತ್ತವೆ. ಸ್ತ್ರೀಯ ಪುಪ್ಪುಸ, ಎದೆ, ಸ್ನಾಯು ಮೊದಲಾದ ಚಿಕ್ಕವು ಮತ್ತು ದುರ್ಬಲವಾದಂಥವು ಇರುತ್ತವೆ. ಆದ್ದರಿಂದ ಸ್ತ್ರೀಯರಲ್ಲಿ ಹೆಚ್ಚಿನ ದೈಹಿಕ ಶ್ರಮವನ್ನು ಸಹಿಸಲು ಸಾಮರ್ಥ್ಯವು ಇರುವುದಿಲ್ಲ."

ಮಾನಸಿಕ ದೃಷ್ಟಿಯಿಂದ ನೋಡಿದರೂ ಈ ಭೇದಗಳು ಕಾಣುತ್ತವೆ. ಇವುಗಳ ದೃಷ್ಟಿಯಿಂದ ವಿಚಾರಮಾಡಿ, ಸಮಾಜದಲ್ಲಿ ಸ್ತ್ರೀಯ ಕಾರ್ಯಗಳೇನು? ಸ್ಥಾನಮಾನಗಳೇನು? ಎಂಬ ಬಗ್ಗೆ ನಮ್ಮ ಪೂರ್ವಜರು ನಿರ್ಧಾರಮಾಡಿದ್ದಾರೆ. ಅವುಗಳನ್ನು ಲಕ್ಷಿಸಿ ನಾವು ನಡೆಯುವುದು ಅವಶ್ಯ

ಶ್ರೀ ರಾಜಗೋಪಾಲಾಚಾರಿ.

ಹಿಂದುಸ್ಥಾನದ ಗವರ್ನರ್ ಜನರಲರ ಸಂಬಳವು ವರ್ಷಕ್ಕೆ ೩॥ ಲಕ್ಷ ರೂಪಾಯಿಗಳಿದ್ದುದನ್ನು ಈಗ ತಿಂಗಳಿಗೂ 5,500 ರೂಪಾಯಿಗಳಿಗೆ ಕಡಿಮೆ ಮಾಡಲ್ಪಟ್ಟಿದೆ. ಈ ಸಂಬಳವನ್ನು ಆದಾಯ ತೆರಿಗೆಯಿಂದ ವಿನಾಯಿತಿಗೊಳಿಸುವ ಮಸೂದೆಯು ಅಂಗೀಕರಿಸಲ್ಪಟ್ಟಿತು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—)0(—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್)

ಮದ್ರಾಸ್ ಸರಕಾರದಿಂದ ಮಾನ್ಯ

ಸ್ಥಳ—:ಮಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ.

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0 0 6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ. 25—4—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨ ನೇ ೧೯೪೯ | ಸಂಚಿಕೆ ೧೬

ಕಾಮನವೆಲ್ಥ ಪರಿಷತ್ತಿನ ಯಶಸ್ವಿ ಮುಕ್ತಾಯ

ಭಾರತವು ಪ್ರಜಾಸತ್ತಾತ್ಮಕವಾದ ರೂ ಕಾಮನವೆಲ್ಥ ರಾಷ್ಟ್ರಗಳ ಸಂಪೂರ್ಣ ಮತ್ತು ಸರಿಸಮಾನ ಸದಸ್ಯ ರಾಷ್ಟ್ರವಾಗಿ ಉಳಿಯಬೇಕೆಂಬ ಪೂರ್ಣ ಒಡಂಬಡಿಕೆಗೆ ತಾವು ಬಂದಿರುವದಾಗಿ ಪಸಾಹತು ಮುಖ್ಯ ಮಂತ್ರಿಗಳು ಜಾರ್ಜ ಅರಸರಿಗೆ ಇಂದು ಮುಂಜಾನೆ ತಿಳಿಸಿದರು

ಈ ನಿರ್ಣಯವನ್ನು ನಿನ್ನೆ ರಾತ್ರಿ ಕೂಡಿದ ಗುಪ್ತ ಸಭೆಯಲ್ಲಿ ಕೈಕೊಳ್ಳಲಾಯಿತು. ಮುಖ್ಯ ಮಂತ್ರಿಗಳು ಐದು ದಿನಗಳವರೆ ಮೇಲಾಡಿ ಈ ನಿರ್ಣಯವನ್ನು ಹುಡುಕಿದ್ದಾರೆ. ರಾಜಸತ್ತಾತ್ಮಕ ಮತ್ತು ಪ್ರಜಾಸತ್ತಾತ್ಮಕ ರಾಷ್ಟ್ರಗಳೆರಡಕ್ಕೂ ಕಾಮನವೆಲ್ಥನಲ್ಲಿ ಸಮಾನತೆಯನ್ನೀಯುವ ಸೂತ್ರವೊಂದನ್ನು ಹುಡುಕಲು ಮುತ್ಸದ್ದಿಗಳು ಈ ಐದು ದಿವಸಗಳನ್ನು ಕಳೆದಿದ್ದರು.

ಮುತ್ಸದ್ದಿಗಳು ಕೈಕೊಂಡ ಈ ಕರಾರುಗಳ ಮೇರೆಗೆ ಸರ್ವ ಕಾಮನವೆಲ್ಥದ ಆಧಿಪತ್ಯವಹಿಸಿದ ಅರಸರನ್ನು ಸದಸ್ಯ ರಾಷ್ಟ್ರಗಳ ಸ್ವತಂತ್ರ ಸಮ್ಮಂಧದ ಚಿನ್ಹೆಯಾಗಿ ಭಾರತವೂ ಭಾವಿಸಬೇಕಾಗುವದು.

ಉಳಿದ ರಾಷ್ಟ್ರಗಳು ತಮ್ಮ ರಾಜ ಭಕ್ತಿಯನ್ನು ಪುನಃ ಶಾಶ್ವತಗೊಳಿಸುವವೆಂದು ನಿರೀಕ್ಷಿಸಲಾಗಿದೆ. ಅವರ ಜೊತೆಗೆ ಪ್ರಜಾಸತ್ತಾತ್ಮಕ ಭಾರತವನ್ನು ಕಾಮನವೆಲ್ಥದ ಸರಿಸಮಾನ ಸಹಭಾಗಿಯನ್ನಾಗಿಯೂ ಒಪ್ಪಿಕೊಳ್ಳಲಾಗುವದು. ಆದರೆ ಭಾರತಕ್ಕೆ ರಾಜಭಕ್ತಿ ಪ್ರದರ್ಶನವು ಅನ್ವಯಿಸುವದಿಲ್ಲ.

ಈ ಹೊಸ ಕರಾರಿನನ್ವಯ, ಕಾಮನವೆಲ್ಥ ಸಂಬಂಧದ ಒಡನಾಟ ಸ್ವರೂಪದ ಚಿನ್ಹೆಯಾದ ಅರಸನ ಸ್ಥಾನಮಾನವನ್ನು ಭಾರತವು ಅಧಿಕೃತವಾಗಿ ಒಪ್ಪಿಕೊಳ್ಳುವದ, ಈ ರೀತಿಯಾಗಿ ಇತರ ಸದಸ್ಯ ರಾಷ್ಟ್ರಗಳ ಸಾಲಿಯಲ್ಲಿ ತನ್ನನ್ನು ಜೋಡಿಸಿಕೊಳ್ಳುವದು.

ಭಾರತದ ಪ್ರಜಾಸತ್ತಾತ್ಮಕ ಅವಸ್ಥೆಯಲ್ಲಿ ಅರಸನು ಈಗಿನಂತೆ ಭಾರತದ ರಾಜನಾಗಿರಲಾರನು. ಭಾರತದ ವಿಷಯಕ್ಕಂತೂ ಅರಸನ ಕಾರ್ಯವೇನೂ ಇಲ್ಲವೇ ಇಲ್ಲ. ಆದರೆ ಭಾರತವು ಪ್ರಜಾಸತ್ತಾತ್ಮಕವಾದ ಮೇಲೂ ಕಾಮನವೆಲ್ಥದ ಇತರ ಸದಸ್ಯರಾಷ್ಟ್ರಗಳೊಡನೆ ಈಗಿರುವ ಸಂಬಂಧವು ಏನೂ ಬದಲಾವಣೆ ಇಲ್ಲದೆ ಇದಕ್ಕಿದ್ದಂತೆಯೇ ಉಳಿಯುವದ

ಪ್ರಜಾಸತ್ತಾತ್ಮಕ ಭಾರತದ ಮುಂದೆ ಆರಿಸಲಿರುವ ಅಧ್ಯಕ್ಷನು ಅರಸನ ಪ್ರತಿನಿಧಿಯಾಗಲಾರನು ಅಧ್ಯಕ್ಷನೇ ಭಾರತದ ಜನತೆಯ ಆಶೋತ್ತರಗಳನ್ನು ಅಧಿಕೃತವಾಗಿ ವ್ಯಕ್ತಪಡಿಸುವನು; ಅಂತರಾಷ್ಟ್ರೀಯ ಒಪ್ಪಂದಗಳಿಗೆ ಸಹಿ ಹಾಕುವನು.

ಇನ್ನು ಕೆಲವೇ ದಿವಸಗಳಲ್ಲಿ ಕರಾರು ಪತ್ರವನ್ನೊಂದು ಘೋಷಣೆಗಳು ಪ್ರಸಿದ್ಧಿಗೆ ಬರಬಹುದು. ಆದರೆ ತಾವು ಕೈಕೊಂಡ ನಿರ್ಣಯವನ್ನು ಮುತ್ಸದ್ದಿಗಳು ಅರಸನಿಗೆ ತಿಳಿಸಿಕೊಡುವದು ಅಗತ್ಯವಾಗಿದೆ.

ಭಾರತದ ಮುತ್ಸದ್ದಿತನಕ್ಕೆ ಕಾಮನವೆಲ್ಥ ತಲೆಬಾಗಿತು

ಭಾರತದ ಭಾವೀ ಪ್ರಜಾಸತ್ತಾತ್ಮಕ ಸ್ಥಾನಕ್ಕೆ ಎಷ್ಟೋ ಕೊರತೆಯುಂಟಾಗದಂತೆ ಭಾರತ ಕಾಮನವೆಲ್ಥ ಸಮ್ಮಂಧ ಸೂತ್ರವೊಂದು ರಚಿತವಾಗಿದೆ. ಅರಸನ ಆಧಿಪತ್ಯವು ಭಾರತದ ಮೇಲೆ ಉಳಿಯಲ್ಲಾದಾದರೂ ಕಾಮನವೆಲ್ಥ ಸಮ್ಮಂಧದ ಸಾಂಕೇತಿಕ ಚಿನ್ಹವಾಗಿ ಅರಸರು ಉಳಿಯುವರು. ಪ್ರಜಾಸತ್ತಾತ್ಮಕ ಭಾರತದ ಆಧಿಪತ್ಯವೆಲ್ಲ ಭಾರತ ಜನತೆಯ ಪ್ರತಿನಿಧಿಯಾದ ಅಧ್ಯಕ್ಷನಿಗೇ ಸೇರಿದ್ದು. ಅಧ್ಯಕ್ಷನು ಅರಸನ ಪ್ರತಿನಿಧಿಯಾಗುವದಿಲ್ಲ.

★

ಭಾರತದ ಪ್ರಧಾನ ಮಂತ್ರಿ ಪಂ. ಜವಾಹರಲಾಲ ನೆಹರೂರವರೂ ಉಳಿದ ಮುಖ್ಯ ಮಂತ್ರಿಗಳ ಜೊತೆ ನಿರ್ಣಯದ ಪ್ರತಿಯನ್ನು ಅರಸರಿಗೆ ಅರ್ಪಿಸಲು ಈ ಹೊತ್ತು ಮುಂಜಾನೆ ೧೧-೩೦ ಘಂಟೆಗೆ ಲಂಡನ್ ಟೈಮು) ಬಕಿಂಗಹ್ಯಾಮ್ ಅರಮನೆಗೆ ತೆರಳಿರುವರು. ಅದಕ್ಕೆ ಮೊದಲು ಮುಖಂಡರು ಡೌನಿಂಗ್‌ಸ್ಟ್ರೀಟ್ ನಂಬರ ಹತ್ತರಲ್ಲಿ (ಮುಖ್ಯ ಮಂತ್ರಿಯ ನಿವಾಸ) ಕೂಡುವರು.

ಕಾಮನವೆಲ್ಥ ಪ್ರತಿನಿಧಿಗಳಂತೂ ಈ ಪರಿಷತ್ತಿನ ಯಶಸ್ವಿ ಮುಕ್ತಾಯವೆಂದರೆ ಭಾರತದ ಮುಂದಾಳುವಿನ ಮುತ್ಸದ್ದಿತನಕ್ಕೆ ಅರ್ಪಿಸಿದ ಸಾಂಕೇತಿಕ ಕಪ್ಪವೆಂದು ಕಾಮನವೆಲ್ಥ ಸಂಘಟನೆಯು ಆ ದಾವು ತಲೆಬಾಗಿತೆಂದೂ ಒಪ್ಪಿಕೊಳ್ಳುತ್ತಿದ್ದಾರೆ.

ಪಂ. ಜವಾಹರಲಾಲ ನೆಹರೂರವರು ದ. ಆಫ್ರಿಕೆಯ ಡಾ. ಮಾಲನ್‌ಗೆ ಇಂದು ಭೋಜನ ಸಮಾರಂಭವನ್ನೇರ್ಪಡಿಸಿದ್ದಾರೆ. ಆಯರಲೆಂಡ ಪ್ರಜಾಸರಕಾರದ ಆಮಂತ್ರಣದ ಮೇರೆಗೆ ಅವರು ಗುರುವಾರ ಮುಂಜಾನೆ ಡಬ್ಲಿನ್ ನಗರಕ್ಕೆ ಹಾರುವರು. ಅಲ್ಲಿ ಒಂದು ದಿನದ ಮಟ್ಟಿಗೆ ಉಳಿಯುವರು.

ಬಳ್ಳಾರಿಯಲ್ಲಿ ಬಾಬುರಾಜೇಂದ್ರ ಪ್ರಸಾದರು

ಬಳ್ಳಾರಿ ನಗರಕ್ಕೆ ಬಾಬುರಾಜೇಂದ್ರ ಪ್ರಸಾದರು ೩ನೆಯ ದಿನಾಂಕ ಸಾಯಂಕಾಲದ ರೈಲಿಂದ ೨೦ ನಿಮಿಷಗಳು ಸಭೆಗಾಗಿ ಬಂದು ನಿಧಿಯನ್ನು ಸ್ವೀಕರಿಸಿ ತೆರಳಿದರು. ಪುರಸಭೆಯ ಪರವಾಗಿ ಶ್ರೀ ಮುಂಡ್ಲೂರು ಗಂಗಪ್ಪನವರು ಮಾನಪತ್ರವನ್ನರ್ಪಿಸಿದರು ನಾಗರೀಕರು ಮತ್ತು ರಾಯದುರ್ಗ (೧೬೦೦) ದ ಪರವಾಗಿ ಒಟ್ಟಿಗೆ ೧೩೧೦೧ ರೂ. ಸಮರ್ಪಿತವಾಯಿತು.

ಬಾಬು ಪ್ರಸಾದರ ಭಾಷಣ

"ಕೊಡುವವರಿಗೆ ಕಡಿಮೆಯಿಲ್ಲ. ಆದರೆ ಸಂಗ್ರಹಿಸುವವರ ಕೊರತೆ ಇದೆ. ಇದರಲ್ಲಿ ಇನ್ನೊಂದು ಮುಖ್ಯ ವಿಷಯವೆಂದರೆ ಪ್ರತಿ ಬಡವನಿಂದ ಕೂಡ ಸಂಗ್ರಹಿಸುವ ಅವಶ್ಯಕತೆ. ಇಲ್ಲಿ ಹಣದ ಬಾಹುಳ್ಯವು ಪ್ರಾಮುಖ್ಯವಲ್ಲ. ಆದ್ದರಿಂದ ಗಾಂಧಿ ಸಂದೇಶವು ಪ್ರತಿ ಮನೆಗೂ ಹೋಗುವುದು. ಅವರು ಮಹಾತ್ಮರಿಗೆ ರೈಲು ನಿಂತ ನಿಲ್ದಾಣದಲ್ಲೆಲ್ಲಾ ಕೈಯೊಡ್ಡಿ ಬೇಡುತ್ತಿದ್ದರೆಂದರೆ ಅವರ ಜನೋದ್ಧಾರದ ಸಂದೇಶವು ಸರ್ವ ವ್ಯಾಪ್ತವಾಯಿತು. ನಾನು ಬಿಹಾರದ ಬಾಧಿತ ಕೂಲಿಕಾರರಿಂದ ೩ ದಿನದೊಳಗಾಗಿ ೯ ಲಕ್ಷ ಸಂಗ್ರಹಿಸಿದೆನು. ಬಹಳ ಕೊಡುವ ಧನಿಕರ ಪ್ರವೃತ್ತಿಗಿಂತಲೂ, ಅಲ್ಪ ಕೊಡುವ ಬಡವರ ಪ್ರವೃತ್ತಿಗೆ ಪ್ರಾಮುಖ್ಯವಾದುದು.

ಮಹಾತ್ಮಗಾಂಧಿಯವರಿಗಾಗಿ ಸ್ಮಾರಕಗಳನ್ನೇರ್ಪಡಿಸುವದಕ್ಕಿಂತ ಅವರ ತತ್ವ ಪ್ರಸಾರಕ್ಕಾಗಿ ಶಾಶ್ವತ ಏರ್ಪಾಟುಗಳನ್ನು ಮಾಡಬೇಕಾದ ಅವಶ್ಯಕವಾಗಿದೆ ಅದನ್ನೇ ಈಗ ಮಾಡಲಿರುವೆವು.

ಹಿಂದೀ ಪರೀಕ್ಷೆಗಳು

ಹಿಂದೀ ಮಹಾವಿದ್ಯಾಲಯ

—ಪ್ರಕಟನೆ—

ನೀವು ೧೯೪೯ ತಿಂಗಳೊಳಗಾಗಿ ನೀವು ತರಗತಿಗಳಲ್ಲಿ ಸೇರದಿದ್ದರೆ ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಮತ್ತು ವಿಶಾರದ ಪರೀಕ್ಷೆಗಳಿಗೆ ಕೂಡಿಸಲಾಗುವುದಿಲ್ಲ. ಪುಸ್ತಕಗಳು, ಪಾಠ್ಯಕ್ರಮ ಶಾಲಾಶುಲ್ಕ ವ ವಿದ್ಯಾಲಯದ ವೇಳೆಯಲ್ಲಿ ಅಧ್ಯಾಪಕರಿಂದ ಅರಿಯಬಹುದು

ಪ್ರಧಾನಾಧ್ಯಾಪಕ,
ಹಿಂದೀ ಮಹಾ ವಿದ್ಯಾಲಯ,
ಬಳ್ಳಾರಿ.

ಬಾಬು ರಾಜೇಂದ್ರರ ಜೊತೆಯಲ್ಲಿ ಕೆ. ಪಿ. ಸಿ. ಸಿ. ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪ, ಮಾಗಡಿ, ಹಳ್ಳಿಕೇರಿಯವರು ಬಂದಿದ್ದರು.

ಹೊಸಪೇಟೆ

ಶ್ರೀ ಬಾಬು ರಾಜೇಂದ್ರ ಪ್ರಸಾದರು ಇಂದಿನ ಮಧ್ಯಾಹ್ನದ ಗಾಡಿಗೆ ಇಲ್ಲಿಗೆ ಬಂದು, ಇಲ್ಲಿಯ ಮುನಿಸಿಪಾಲಿಟಿಯವರು ಅರ್ಪಿಸಿದ ಸನ್ಮಾನ ಪತ್ರವನ್ನು ಮತ್ತು ನಾಗರೀಕರು, ಶ್ರೀ ಗಾಂಧೀ ಸ್ಮಾರಕ ನಿಧಿಗೆ ಅರ್ಪಿಸಿದ 15 ಸಾವಿರ ರೂಪಾಯಿಗಳ ಚೆಕ್ಕನ್ನು ಸ್ವೀಕರಿಸಿ ಸನ್ಮಾನ ಪತ್ರಕ್ಕೆ ಬಹಳ ಸಂಕ್ಷಿಪ್ತವಾಗಿ ಸಮಾಧಾನವನ್ನು ಕೊಟ್ಟು ತಾವು ಬಂದ-ಗಾಡಿಗೆ ಬಳ್ಳಾರಿಗೆ ಹೋದರು. ಇವರ ಸಂಗಡ ಶ್ರೀ ನಿಜಲಿಂಗಪ್ಪ ವಗೈರಾ ಪ್ರಭೃತಿಗಳು ಆಗಮಿಸಿದ್ದರು. ಸಭೆಯು ಮುನಿಸಿಪಲ್ ಆವರಣದಲ್ಲಿ ನಡೆಯಿತು ಮುನಿಸಿಪಾಲಿಟಿಯವರು ಇವರಕ್ಕಾಗಿಯೆ ಒಂದು ದೊಡ್ಡ ಹಂದ್ರವನ್ನು ನಿರ್ಮಿಸಿ ಅದನ್ನು ಚನ್ನಾಗಿ ಅಲಂಕರಿಸಿ ಇದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ಸಂಡೂರಿನ ವಿಲಯನ

ತಮ್ಮ ಸಂಸ್ಥಾನವು ಏಪ್ರಿಲ್ 1, 1949 ರಿಂದ ಮದ್ರಾಸ್ ಪ್ರಾಂತದಲ್ಲಿ ವಿಲಯನವಾಗಲು ಒಪ್ಪಿಗೆಯಿತ್ತು ಪಮ್ಮತಿಪತ್ರಕ್ಕೆ ರಾಜರು ಸಹಿ ಹಾಕಿದರೆಂದು ಪ್ರಕಟವಾಗಿದೆ. ಕಳೆದ ವರ್ಷ ಮದ್ರಾಸ್ ಸರ್ಕಾರವು ಇಂಡಿಯಾ ಸರ್ಕಾರದ ಆದೇಶಪ್ರಕಾರಕ್ಕೆ ಸಂಡೂರಿನ ಆಡಳಿತವನ್ನು ವಹಿಸಿ ಬಳ್ಳಾರಿ ಜಿಲ್ಲಾ ಕಲೆಕ್ಟರವರ ಅಧೀನ ಮಾಡಿತ್ತು. ಈಗ ರಾಜರು ಸಮ್ಮತಿಪತ್ರಕ್ಕೆ ಸಹಿ ಹಾಕಿರುವ ಕಾರಣ ಸಂಡೂರು, ಬಳ್ಳಾರಿ ಜಿಲ್ಲೆಯ ಭಾಗವಾಗುವುದು.

ಶ್ರೀ ಸೀತಾರಾಮರೆಡ್ಡಿ ಯವರು ಬ್ರೆಜಿಲ್ ದೇಶಕ್ಕೆ

ಮದ್ರಾಸ್ ಪ್ರಾಂತ್ಯದ ಕಂದಾಯ ಮಂತ್ರಿಗಳಾದ ಶ್ರೀ ಕಾಲಹಸ್ತಿ ಸೀತಾರಾಮರೆಡ್ಡಿಯವರು ಒಂದು ತಿಂಗಳು ಬ್ರೆಜಿಲ್ ದೇಶದಲ್ಲಿ ಸಮಾವೇಶವಾಗಲಿರುವ ಪ್ರಪಂಚದ ಕೂಲಿಕಾರರ ಸಭೆಗೆ ಭಾರತ ಸರ್ಕಾರದ ಪರವಾಗಿ ಪ್ರತಿನಿಧಿಯಾಗಿ ಹೋಗಲಿದ್ದಾರೆ. ಕೇಂದ್ರ ಮಂತ್ರಿ ಜಗಜೀವನರಾಂ ಅವರ ವತಿಯಿಂದ ಘೋಷಿಸಲ್ಪಟ್ಟಿದೆ

ವಸಾಹತು ಮಂತ್ರಿಗಳ ಮಾತುಕತೆ

ಘೋಷಣೆಯ ಸಿದ್ಧತೆ

ಲಂಡನ ವಸಾಹತು ಪ್ರಧಾನ ಮಂತ್ರಿಗಳು ಇಂದಿಲ್ಲಿ ತಮ್ಮ ಗೌಪ್ಯವಾದ ಮಾತುಕತೆಗಳನ್ನು ಮುಂದರಿಸಿದ್ದು, ಹಿಂದುಸ್ತಾನವನ್ನು ಅದರ ಭಾವೀ ಪ್ರಜಾರಾಜ್ಯದ ಸ್ವಾತಂತ್ರ್ಯದ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳುವ ರೀತಿಯಲ್ಲಿ, ಸಮಾನತೆಯ ತಳಹದಿಯಲ್ಲಿ ಅದನ್ನು ಕಾಮನ್ ವೆಲ್ಥದಲ್ಲಿ ಉಳಿಸಿಕೊಳ್ಳುವ ಯೋಜನೆಯೊಂದರ ಬಗ್ಗೆ ಕೊನೆಯ ಒಡಂಬಡಿಕೆಯು ಮುಗಿಯುತ್ತ ಬಂದಿದೆಯಾಗಿ ನಂಬಲಾಗಿದೆ.

ಎಲ್ಲ ಏಶಿಯಾ ದೇಶಗಳ ಮುಕ್ತವಾದ ಹಾಗು ಸಮಾನತೆಯ ಪಾಲುಗಾರಿಕೆಯನ್ನು ಸಂಯುಕ್ತವಾಗಿ ಘೋಷಿಸಿ ಇದನ್ನು ಸಾಧಿಸಬಹುದಾಗಿದೆಯೆಂದು ಅವರ ಆಶೆಯಾಗಿದೆ.

ಈ ಪಾಲುಗಾರಿಕೆಯ ವಿಷಯದಲ್ಲಿ ಹಿಂದುಸ್ಥಾನ ಮತ್ತು ಇತರ ಸದಸ್ಯ ದೇಶಗಳಲ್ಲಿ ತಾರತಮ್ಯವನ್ನು ಮಾಡಲಾಗುವದಿಲ್ಲ ಹಿಂದುಸ್ಥಾನವು ಪ್ರಜಾರಾಜ್ಯವಾಗಿ ಅರಸನ ಅರಸೊತ್ತಿಗೆಯನ್ನು ಒಪ್ಪಿಕೊಳ್ಳುವುದಿಲ್ಲವಾದರೆ ಇತರ ಸದಸ್ಯ ದೇಶಗಳ ರಾಜ ಮುಕುಟಕ್ಕೆ ತಮ್ಮ ರಾಜನಿಷ್ಠೆಯನ್ನು ಪುನಃ ದೃಢೀಕರಿಸಿಕೊಳ್ಳುವವು.

ಆದರೆ, ಮುಕ್ತವಾದ ಕೂಡುವಿಕೆಯ ಪ್ರತೀಕವೆಂದು ಹಿಂದುಸ್ತಾನವನ್ನೊಳಗೊಂಡು ಸದಸ್ಯ ದೇಶಗಳೆಲ್ಲ ರಾಜರ ಸ್ಥಾನವನ್ನು ಒಪ್ಪಿಕೊಳ್ಳುವುದಿಲ್ಲ. ಹೀಗಾಗುವುದರಿಂದ ಪಾಲುಗಾರಿಕೆಗೆ ಅವಶ್ಯವಾದ ಸಂಬಂಧವುಂಟಾಗುವದು.

ವಸಾಹತು ರಾಜಕಾರಣಿಗಳು ಘೋಷಣೆಯ ಕರಡನ್ನು ಇಂದು ಮುಂಜಾನೆ ೧೦ ಡಾನಿಂಗ ಬೀದಿಯಲ್ಲಿ ಸೇರಿದ ಸಭೆಯಲ್ಲಿ ಅಭ್ಯಸಿಸುತ್ತಿದ್ದಾರೆ

ಘೋಷಣೆಯ ಕರಡು ಸಾಧಾರಣವಾಗಿ ಒಪ್ಪಿಕೊಳ್ಳುವಂತಾಗುವ ಪೂರ್ವದಲ್ಲಿ ಇನ್ನೂ ಕೆಲವೊಂದು ಮುದ್ದೆಗಳ ವಿಷಯದಲ್ಲಿ ಸ್ಪಷ್ಟತೆಯುಂಟಾಗಬೇಕಾಗಿದೆ.

ಚೀನದ ಯುದ್ಧ ರಂಗ

ಚಿಯಾಂಗರು ಮತ್ತೆ ಪ್ರವೇಶಿಸಿದರು

ಕಳೆದ 3 ತಿಂಗಳಿಂದ ಏಕಾಂತದಲ್ಲಿದ್ದ ಜನರಲಿಸ್ಸಿಮೊ ಚಿಯಾಂಗ ಕೈ ಶೇಕರು ರೇಡಿಯೋ ಮುಖಾಂತರ ಕಮ್ಯೂನಿಸ್ಟರ ದಬ್ಬಾಳಿಕೆಯನ್ನು ಕೊನೆಗಾಣಿಸಲು 2/ನಯ ದಿನಾಂಕ ಮತ್ತೆ ಗರ್ಜಿಸಿದರು. ಅವರು ಶಾಂಘಾಯಿಯದಲ್ಲಿರುವರೋ ಇಲ್ಲವೋ ಗೊತ್ತಿಲ್ಲ. ಆದರೂ ಶಾಂಘಾಯಿ ನಗರವು ಸುತ್ತುವರಿಯಲ್ಪಟ್ಟಿದೆ. "ಅವರು ಯಾಂಗ್ಸಿಟೆ ನದಿಯನ್ನು ದಾಟಿ ನಾನಕಿಂಗ್ (ನಗರವನ್ನು ಕ್ರಮಿಸಿಕೊಟ್ಟಿದ್ದರಿಂದ) ಅವರಿಗ ಜಯವಾಗಲಾರದು, ಅವರು ಸರ್ಕಾರಿ ಸೈನ್ಯಗಳೊಡನೆ ಯುದ್ಧಮಾಡಬೇಕಾಗುತ್ತದೆ. ಅವರ ಆಳಿಗಾಲ ಕಟ್ಟಿದ್ದು ಎಲ್ಲಿಯವರಗೆ ಜಗತ್ತಿನಲ್ಲಿ ನ್ಯಾಯವು ಇರುವುದೋ ಅಲ್ಲಿಯವರಗೆ ಕಮ್ಯೂನಿಸ್ಟರೊಡನೆ ಹೋರಾಡುತ್ತಿರುವ ನಾವು ಒಂಟಿಯೆಂದು ಅಳಲು ಕಾರಣವಿಲ್ಲ.

—)U(—

ಬೊಂಬಾಯಿ ಶಾಸನಸಭೆ

ಸೋಶಿಯಾಲಿಸ್ಟರ ವಿಜಯ

ಬೊಂಬಾಯಿ ಶಾಸನಸಭೆಯ ಉಪಚುನಾವಣೆಯಲ್ಲಿ ಶ್ರೀ ಪುರುಷೋತ್ತಮದಾಸ್ ತ್ರಿಕಾಮದಾಸರು ಇಬ್ಬರನ್ನು ಸೋಲಿಸಿಗೆದ್ದರು.

ತ್ರಿಕಮದಾಸ್	೧೨೫೩೬
ಬೋರ್ಕರ್	೯೭೩೩ (ಹಿಂದುಳಿದ ಜಾತಿ)
ಮುಸ್ಕರ್	೯೪೩೪ (ಕಾಂಗ್ರೆಸ್)

ಕಮ್ಯೂನಿಸ್ಟರ ದರೋಡೆ

ಮಚಲೀ ಪಟ್ಟಣದ ಸಮೀಪದ ಹಳ್ಳಿಯಲ್ಲಿ ೩೦೦ ಸಶಸ್ತ್ರ ದಾಳಿಗಾರರು ೨೬ನೆಯ ತಾ|| ಇಬ್ಬರು ಕಾಂಗ್ರೆಸ್ ಜನರನ್ನು ಕೊಂದು ಊರಿನ ಸಾಹುಕಾರರ ಮನೆಗಳನ್ನು ಲೂಟಮಾಡಿ ನೋಟು ವಜ್ರ ವಡವೆ ತೆಗೆದುಕೊಂಡು ಹೋಗಿದ್ದಾರೆ. ಅಧಿಕಾರಿಗಳು ಅಲ್ಲಿಗೆ ಹೋಗಿದ್ದಾರೆ

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಡ್ರಾಪ್ಸ್

ಗಡ್ಡೆಗಳ ಮೇಲಿನ ಸಡಿಲಾದ ಪರೆಗಳನ್ನು ತೆಗೆದು ಕೆಟ್ಟಂಥ ಮತ್ತು ನಷ್ಟಭಂಗವಾಗಿದ್ದಂಥ ಗಡ್ಡೆಗಳನ್ನು ಬೇರೆ ಬೇರೆ ಆರಿಸಿ ತೆಗೆದು ಪೇಟೆಗೆ ಕಳಿಸಲಿಕ್ಕೆ ತಯಾರು ಮಾಡಬೇಕು.

ಉತ್ಪನ್ನವೂ ಲಾಭವೂ.- ಮಧ್ಯಮ ತರದ ಭೂಮಿಗಳಲ್ಲಿ ಸಾಧಾರಣವಾಗಿ ೧೫,೦೦೦–೨೧,೦೦೦ ಪೌಂಡು ಉತ್ಪನ್ನ ಬರುವದು. ಆದರೆ ಇದಕ್ಕಿಂತ ಉತ್ತಮವಾಗಿದ್ದ ಪರಿಸ್ಥಿತಿಯಲ್ಲಿ ೩೦,೦೦೦ ಪೌಂಡಿನಕಿಂತಲೂ ಹೆಚ್ಚು ಉತ್ಪನ್ನವೂ ಬಂದದ್ದು ಇರುವದು. ಉಳ್ಳಾಗಡ್ಡಿಗಳು ಒಂದು ರೂಪಾಯಿಗೆ ೬೦-೮೦ ಪೌಂಡುಗಳವರೆಗೆ ಮಾರುವವು. ಪಟ್ಟಿಗಳ ಮೇಲೆ ಬೆಳೆದರೆ ಹೆಚ್ಚು ಬರುವದು. ಆದರೆ ಸಪಾಟಾದ ಮಡಿಗಳೊಳಗಿನ ಸಣ್ಣಾಗಿಯೂ, ಗಟ್ಟಿಯಾಗಿಯೂ ಮತ್ತು ಸೀಳದೇ ಇದ್ದಂಥ ಗಡ್ಡೆಗಳು ಸಂಗ್ರಹಿಸಿಡಲಿಕ್ಕೆ ನೆಟ್ಟಗಾದ್ದರಿಂದ ಪೇಟೆಯೊಳಗೆ ಅವಕ್ಕೆ ಹೆಚ್ಚು ಬೆಲೆಯು ಬರುವದೆಂದು ಅನುಭವ ಬಂದಿರುವದು ಆದ್ದರಿಂದ ಸಪಾಟಾದ ಮಡಿಗಳಲ್ಲಿ ಬೆಳೆದ ಪೈರಿನ ಉತ್ಪನ್ನವು ಕಡಿಮೆ ಬಂದರೂ ಅದಕ್ಕೆ ಬರುವ ಹೆಚ್ಚಿನ ಬೆಲೆಯಿಂದ ಅದು ತುಂಬಿ ಬರಬಹುದು.

ಬಾವಿಯ ನೀರನ್ನು ಹಾಯಿಸಿ ಬೆಳೆದ ಒಂದು ಎಕರೆ ಉಳ್ಳಾಗಡ್ಡಿಯ ಪೈರಿಗೆ ಸಾಧಾರಣವಾಗಿ ೭೦ ಗಂಡಾಳುಗಳು, ೧೦೮ ಹೆಣ್ಣಾಳುಗಳು ಮತ್ತು ೭೨ ಎತ್ತುಗಳ ಕೆಲಸದ ಖರ್ಚು ಬರುವದು. ಕೈಯತ್ತಿ ಸಾಮಾನುಗಳನ್ನು ಕೊಳ್ಳಲಿಕ್ಕೆ ೫೦ ರೂಪಾಯಿಗಳ ಖರ್ಚು ಮಾಡಬೇಕಾಗುವದು. ೨೧,೦೦೦ ಪೌಂಡಿನ ಉತ್ಪನ್ನದಿಂದ ಒಂದು ರೂಪಾಯಿಗೆ ೬೦ ಪೌಂಡುಗಳಂತೆ ಮಾರಿದರೆ ೩೫೦ ರೂಪಾಯಿಗಳು ದೊರೆಯುವವು. ಇದರಿಂದ ಭೂಮಿ, ಕೂಲಿ ವಗೈರೆಯ ಬಗ್ಗೆ ೧೭೦ ರೂಪಾಯಿಗಳ ಉಳಿತಾಯವಾಗುವದು. ಈ ಪೈರು ಬೇರೆ ಎಷ್ಟೋ ಸಾದಾ ಪಲ್ಯಾಕಾಯಿಗಳ ಪೈರುಗಳ ಉತ್ಪನ್ನಕ್ಕಿಂತ ನೆಟ್ಟಗಾದದ್ದು.

ಸಂಗ್ರಹಿಸಿಡುವದು.- ಪೈರು ತೆಗೆಯುವ ಕಾಲಕ್ಕೆ ಪೇಟೆಯಲ್ಲಿ ಉಳ್ಳಾಗಡ್ಡಿಗಳು ಬಹಳೇ ಬರುವದಾದ್ದರಿಂದ ಅವಕ್ಕೆ ಬೆಲೆಯು ಬಹಳ ಕಡಿಮೆ ಬರುವದು. ಆದ್ದರಿಂದ ಕೆಲವು ದಿವಸಗಳವರೆಗೆ ಸಂಗ್ರಹಿಸಿಟ್ಟು ಪೇಟೆಯೊಳಗಿನ ಬೆಲೆಯನ್ನು ನೋಡುತ್ತಿದ್ದರೆ ಲಾಭವಾಗುವದು. ಬಹಳಷ್ಟು ಉಳ್ಳಾಗಡ್ಡಿಗಳನ್ನು ತಂಪಾದ ಒಣ ಹವೆಯಲ್ಲಿ ಸುತ್ತಲೂ ಚನ್ನಾಗಿ ಗಾಳಿಯಾಡುವಂಥ ಸ್ಥಳದಲ್ಲಿ ಸಂಗ್ರಹಿಸಿಡಲಿಕ್ಕೆ ಬರುವದು. ಸಂಗ್ರಹಿಸಿಡುವ ಮೊದಲು ೩-೪ ದಿವಸಗಳವರೆಗೆ ಗಾಳಿಯಲ್ಲಿ ಗಡ್ಡೆಗಳನ್ನು ಚನ್ನಾಗಿ ಒಣಗಿಸಿಟ್ಟಲ್ಲಿ ಅವರೊಳಗಿನ ಹೆಚ್ಚಿನ ಹಸಿಯೆಲ್ಲ ಆರಿ ಹೋಗುವದು. ಆದರೂ ಮೇಲಿಂದ ಮೇಲೆ ಅವುಗಳನ್ನು ನೋಡಿ ಕೆಟ್ಟಂಥವುಗಳನ್ನು ಆರಿಸಿ ಉಳ್ಳಾಗಡ್ಡಿಯ ರಾಶಿಗಳನ್ನು ಅಗಲವಾಡಿಸಿ ಮೇಲೆ ಕೆಳಗೆ ಮಾಡುವದು ಅಗತ್ಯದ ಮಾತು. ರಾಶಿಗಳನ್ನು ಮೂರು ಫೂಟಿನಕಿಂತ ಹೆಚ್ಚು ಎತ್ತರ ಹಾಕಬಾರದು. ಹವೆಯಾಡದೆ ಇದ್ದಂಥ ಮನೆಗಳಲ್ಲಿ ಉಳ್ಳಾಗಡ್ಡಿಗಳನ್ನು ಸಂಗ್ರಹಿಸಿಟ್ಟರೆ ೧೦೦ಕ್ಕೆ ೩೦-೪೦ ರಂತೆ ಕೆಟ್ಟು ಹೋಗುವವು. ಹೆಚ್ಚು ಕಾಳಜಿ ಪೂರ್ವಕವಾಗಿ ಚನ್ನಾಗಿ ಹವೆಯಾಡುವಂಥ ಸ್ಥಳದಲ್ಲಿ ಸಂಗ್ರಹ ಮಾಡಿಟ್ಟರೆ ೧೦೦ಕ್ಕೆ ೧೫-೨೦ ರಂತೆ ಮಾತ್ರ ಕೆಡುವವು. ರಾಶಿಗಳು ಎಷ್ಟು ತೆಳಗಿದ್ದಷ್ಟು ಹಾನಿಯು ಕಡಿಮೆ. ಇದರ ಹೊರ್ತು ಅವಕ್ಕೆಲ್ಲ ಚನ್ನಾಗಿ ಗಾಳಿಯಾಡುವದಲ್ಲದೆ ಮೇಲಿಂದ ಮೇಲೆ ಪರೀಕ್ಷಿಸಲಿಕ್ಕೂ ಸುಲಭವಾಗುವದು. ಆದ್ದರಿಂದ ಶಕ್ಯವಿದ್ದಾಗ ಒಂದರ ಮೇಲೊಂದು ಸಮೀಪದಲ್ಲಿರುವಂತೆ ಅಟ್ಟಗಳನ್ನು ಕಟ್ಟಿದ್ದರೆ ಸ್ಥಳವು ಕಡಿಮೆ ಹತ್ತುವದಲ್ಲದೆ ಉಳ್ಳಾಗಡ್ಡಿಗಳು ಚನ್ನಾಗಿರುವವು.

ಇದಕ್ಕೆ ಹತ್ತುವ ರೋಗಗಳು-ಕೀಟಕಗಳೂ.-ಉಳ್ಳಾಗಡ್ಡಿಯ ಬೆಳೆಗೆ "ಥ್ರಿಪ್ಸ್" ಎಂಬ ತೀರ ಸಣ್ಣಾದ ಕೀಟಕಗಳಿಂದ ಕೇಡು ತಟ್ಟಿದಂತೆ ಕಂಡುಬಂದಿದೆ. ಇದು ಎಲೆಗಳಲ್ಲಿಯ ರಸವನ್ನು ಶೋಷಿಸುವದರಿಂದ ಅವು ಬೆಳ್ಳಗಾದಂತೆ ತೋರುತ್ತವೆ. ಮುಂದೆ ಕೆಲವು ದಿವಸಗಳಲ್ಲಿ ಎಲೆಗಳು ನೀರಿಗೆ ಗಟ್ಟಿದಂತಾಗಿ ಒಣಗಿ ಹೋಗುವವು. ಹೀಗಾದ್ದರಿಂದ ಬೆಳೆಯ ಉತ್ಪನ್ನವು ಬಹಳ ಕಡಿಮೆಯಾಗುವದು.

ಚಿಮಣೀ ಎಣ್ಣೆಯ ಮಿಶ್ರಣ ಮತ್ತು ಮೀನವೆಣ್ಣೆಯ ಸಾಬೂನುಗಳನ್ನು ಚನ್ನಾಗಿ ಗಿಡಗಳ ಮೇಲೆ ತುಷಾರವಾಗಿ ಚಿಮ್ಮಿಸಿದರೆ ಈ ರೋಗವು ತಕ್ಕಮಟ್ಟಿಗೆ ಕಡಿಮೆಯಾಗುವದೆಂದು ಕಂಡುಬಂದಿದೆ.

ಬೀಜಗಳ ಬೆಳೆಯಿಂದ ಉಳ್ಳಾಗಡ್ಡಿಗಳನ್ನು ಬೆಳೆಯುವದು - ಉಳ್ಳಾಗಡ್ಡಿಯ ಬೀಜಗಳಿಂದ ಬೆಳೆದ ಗಿಡಗಳಿಗೆ ಅದೇ ಹಂಗಾಮಿನಲ್ಲಿ ಭಲೋ ಬೀಜಗಳು ಬರುವದಿಲ್ಲ. ಗಿಡಗಳಿಗೆ ಹೂವುಗಳು ಬಂದರೂ ಅದರಿಂದ ತಯಾರಾದ ಬೀಜಗಳಿಂದ ಮುಂದೆ ಬರುವ ಗಡ್ಡೆಗಳು ಚನ್ನಾಗಿ ಪೋಷಿಸುವದಿಲ್ಲ. ಮುಂದೆ ದೊಡ್ಡ ಗಡ್ಡೆಗಳಾಗುವಂಥ ಬೀಜಗಳು ಬೇಕಾದಲ್ಲಿ, ಒಂದು ಹಂಗಾಮಿನಲ್ಲಿ ಕಿತ್ತಿ ತೆಗೆದ ಗಡ್ಡೆಗಳನ್ನು ಕೆಲವು ತಿಂಗಳುಗಳವರೆಗೆ ಸಂಗ್ರಹಿಸಿಟ್ಟು ಎರಡನೇ ಹಂಗಾಮಿನಲ್ಲಿ ಅಂದರೆ ಆಕ್ಟೋಬರ ಅಥವಾ ನವಂಬರ ತಿಂಗಳಲ್ಲಿ ಚನ್ನಾಗಿ ಹರಗಿ ತಯಾರಮಾಡಿ ಎಕರೆಯೊಂದಕ್ಕೆ ೨೦ ಗಾಡಿ ರಣೀ ಗೊಬ್ಬರವನ್ನು ಹಾಕಿದ ಭೂಮಿಯಲ್ಲಿ ಹಚ್ಚಬೇಕು. ಹಚ್ಚುವಾಗ ಮೇಲಿನ ಅರ್ಧ ಭಾಗವನ್ನು ಅಡ್ಡ ಕೊಯ್ದು ತೆಗೆದು ಕೆಳಗಿನ ಅರ್ಧವನ್ನು ಅದರ ಬೇರಿನ ಭಾಗವನ್ನು ನೆಲಕ್ಕೆ ಹತ್ತಿ ಇಡಬೇಕು. ಸುತ್ತು ಮುತ್ತ ೨೪ ಇಂಚು ಅಂತರವನ್ನಿಟ್ಟು ನೆಲದಲ್ಲಿ ಊರಿ ಬಿತ್ತಬೇಕು. ಮುಂದೆ ಸ್ವಲ್ಪೇ ದಿವಸಗಳಲ್ಲಿ ಹೂವಿನ ಗೊನೆಗಳು ಬರಲಿಕ್ಕೆ ಪ್ರಾರಂಭವಾಗುವವು. ಮತ್ತು ಅವು ಐದು ತಿಂಗಳಲ್ಲಿ ತಯಾರಾಗುವವು. ನೀರು ಹಾಯಿಸೋಣ, ಕಳೇ ತೆಗೆಯೋಣ ಮೊದಲಾದ ಕೆಲಸಗಳನ್ನು ವೇಳೆಗೆ ಸರಿಯಾಗಿ ಮಾಡುತ್ತಿರಬೇಕು. ಸರ್ವಸಾಧಾರಣವಾದ ಪೈರಿನಿಂದ ಒಂದು ಎಕರೆಗೆ ೩೦೦-೪೦೦ ಪೌಂಡು ಬೀಜಗಳು ದೊರೆಯುವವು. ಬೀಜಗಳ ಬೆಲೆಯು ಒಂದು ಪೌಂಡಿಗೆ ಎಂಟು ಆಣೆಯಿಂದ ಒಂದು ರೂಪಾಯಿಯವರೆಗೆ ಬರುವದು. ಬೀಜಗಳನ್ನು ಚೀಲಗಳಲ್ಲಿ ತುಂಬಿ ತಂಪಾಗಿದ್ದ ಸ್ಥಳದಲ್ಲಿ ಸಂಗ್ರಹಿಸಿಡಬೇಕು. ಹವಾಮಾನದಲ್ಲಿಯ ಹೆಚ್ಚು ಉಷ್ಣತೆಯು ಅಥವಾ ಥಂಡಿಯು ಬೀಜಗಳಿಗೆ ಅಪಾಯಕರವಾದದ್ದು. ಉಳ್ಳಾಗಡ್ಡಿಯ ಬೀಜಗಳು ೧೨-೧೮ ತಿಂಗಳುಗಳವರೆಗೆ ಚನ್ನಾಗಿ ತಾಳುತ್ತವೆ. ಆ ಮೇಲೆ ಅದರ ಹುಟ್ಟುವಿಕೆಯ ಶಕ್ತಿಯು ಶೀಘ್ರವಾಗಿ ಕಡಿಮೆಯಾಗುತ್ತದೆ. ಆದ್ದರಿಂದ ಬೀಜಗಳನ್ನು ಕೊಂಡುಕೊಳ್ಳುವಾಗ ಅವು ಬಹಳ ಹಳೇವಿರುವದಿಲ್ಲವೆ ಆ ಬಗ್ಗೆ ಪೂರ್ಣ ಖಾತ್ರೀ ಮಾಡಿಕೊಳ್ಳಬೇಕು.

ಉಳ್ಳಾಗಡ್ಡಿಯ ಜಾತಿಗಳು.- ಈ ಇಲಾಖೆಯೊಳಗೆ ಮುಖ್ಯವಾಗಿ ಎರಡು ಜಾತಿಗಳಿರುವವು (೧) ಬಿಳೇದು, (೨)ಕೆಂಪಾದದ್ದು. ಬಿಳೇ ಉಳ್ಳಾಗಡ್ಡಿಯು ಖಾರ ಕಡಿಮೆ ಇದ್ದು ಉತ್ಪನ್ನದಲ್ಲಿಯೂ ಕೂಡ ಕೆಂಪು ಜಾತಿಯಕ್ಕಿಂತ ಕಡಿಮೆ ಬರುವದು. ಮೂರನೇ ತರದ ಹಳದೀ ಬಣ್ಣದ ಉಳ್ಳಾಗಡ್ಡಿಯು ಪೇಟೆಯೊಳಗೆ ಕಂಡುಬರುತ್ತದೆ. ಆದರೆ ಅದಕ್ಕೆ ಬೆಲೆ ಕಡಿಮೆ ಇದ್ದದರಿಂದ ಅದರ ಪೈರನ್ನು ಯಾರೂ ಮಾಡುವದಿಲ್ಲ.

ರಾಯಲಸೀಮ ಪೋಲಿಟೆಕ್ನಿಕ್ ಯೂನಿಯನ್

೨೫ ನೆಯ ದಿನಾಂಕ ಸಾಯಂಕಾಲ ೬ ಗಂಟೆಗೆ ವಾರ್ಷಿಕೋತ್ಸವವು ವೀರಶೈವ ಕಾಲೇಜ್ ಪ್ರಿನ್ಸಿಪಾಲರಾದ ಡಾಕ್ಟರ್ ಗುರುಮೂರ್ತಿಯವರಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಮತಿ ಗುರುಮೂರ್ತಿಯವರು ಬಹುಮಾನಗಳನ್ನು ಹಂಚಿದರು.

ಚೀನದಲ್ಲಿ ಕೆಂಪುಸೇನೆಗಳ ಪ್ರಗತಿ

ಚೀನದ ಕೆಂಪುಸೇನೆಗಳು ಯಾಂಗ್ಸೆ ನದಿಯನ್ನು ದಾಟಿ ನಾನ್‌ಕಿಂಗ್ ನಗರವನ್ನು ಆಕ್ರಮಿಸಿ ಚೀನದಲ್ಲೇ ಸಂಪದ್ಯುಕ್ತ ಪಟ್ಟಣವಾದ ಹಾಂಗ್ಚೈನಗರಕ್ಕೆ ಮಾರ್ಗ ಸೌಕರ್ಯ ಇಲ್ಲದಂತೆ ಮಾಡಿವೆ. ಸರಕಾರಿ ಸೇನೆಗಳು ದಕ್ಷಿಣಕ್ಕೆ ಹಿಂದೆ ಸರಿಯುತ್ತಲಿವೆ. ದಕ್ಷಿಣಭಾಗವನ್ನೆಲ್ಲಾ ಕೆಂಪು ಸೈನ್ಯಗಳು ಆಕ್ರಮಿಸಬಹುದು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತದೆ

3 ರಿಂದ 9 ತಿಂಗಳವರಿಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವದಿ ,,	ರೂ 4½%	,,

ಚಾಲ್ತಿ ಖಾತೆ (Current Account) 100 ರೂ ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ ರೀವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ - ಬಳ್ಳಾರಿ.

ಬಿ ವಿ ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ. ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ— ವಾರ್ಡಲಾ ಹೈಸ್ಕೂಲ್ ಕಟ್ಟಡ
ತರಗತಿಗಳು.—ಪ್ರಾರಂಭಿಕ —ಪ್ರಾಥಮಿಕ ರಾಷ್ಟ್ರಭಾಷೆ ಉನ್ನತ —ವಿಶಾರದ ಪ್ರಚಾರಕ
ವೇಳೆ.—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ ಪರೀಕ್ಷೆ ವರ್ಗಗಳ ಅವದಿ ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0 0 6 ವಿವರ ಪಟ್ಟಿ 0-2 0

ಪ್ರಧಾನಾಚಾರ್ಯ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ. 2—5—49

(Nationalist Weekly)

ಚಂದಾದರಗಳು	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri .. ..

.. ..

....

Printed at Vittal Press, Edited & Published by T. B Keshava Rao

ಕಾಫೀ, ಟೀ, ಕೋಕೊ.

(ಮಹಾತ್ಮ ಗಾಂಧಿಯವರ ಅಭಿಪ್ರಾಯ)

ಶರೀರದ ಬೆಳವಣಿಗೆಗೆ ಆವಶ್ಯಕವಾದ ವಸ್ತುಗಳು ಇವಲ್ಲ "ಟೀ' ಯ ಬಳಕೆ ಪ್ರದಮಕ್ಕೆ ಚೀನಾದಲ್ಲಿ ಪ್ರಾರಂಭವಾಯಿತು ಆ ದೇಶದಲ್ಲಿ ಅದಕ್ಕೆ ಒಂದು ಪ್ರತ್ಯೇಕತೆಯುಂಟು ಚೀನದಲ್ಲಿ ಕುಡಿಯುವ ಶುದ್ಧ ನೀರು ದೊರಕುವದು ಕಷ್ಟ ಈ ಕಾರಣ ಅಪಾಯ ವಿಲ್ಲದಂತಿರಲು ಚೈನೀಯರು ನೀರನ್ನು ಮರಳಿಸಿ ಟೀ ಸೊಪ್ಪು ಹಾಕಿ ಕುಡಿಯುವ ಅಭ್ಯಾಸವನ್ನು ಜಾರಿಯಲ್ಲಿ ತಂದರು ಚನ್ನಾಗಿ ಮರದಾಗ ಈ ಸೊಪ್ಪು ಹಾಕುವದರಿಂದ ಒಂದು ತರದ ಬಣ್ಣ ಬರುತ್ತದೆ ನೀರು ಮರಳಿದಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಇದೊಂದು ಉಪಾಯ ಕಾಸಿದ ನೀರನ್ನೇ ಕುಡಿಯುವವರ ಒದಲು ಮರಳುವ ನೀರಲ್ಲದ, ಸಾಧಾರಣ ಪಾನೀಯವಾಗಿ ತಯಾರಿಸಿ ತೆಗೆದುಕೊಳ್ಳುವ "ಟೀ' ಬಹಳ ಅಪಾಯಕಾರಿ ಆ ಎಲೆಗಳಲ್ಲಿ 'ಟಾನಿಕ್' ಎಂಬ ವಸ್ತುವಿದ್ದು ಜೀರ್ಣಕ್ರಮವನ್ನು ಕೆಡಿಸಿ ಅಜೀರ್ಣ ರೋಗವನ್ನು ತಂದೊಡ್ಡುವದು

ಹಾಲಿಗೆ ಸಕ್ಕರೆ ಹಾಕಿ, ಅದು ನೀರು ಹಾಲಿದ್ದರೂ ತೆಗೆದುಕೊಳ್ಳುವುದೊಳ್ಳೆಯದು. ನಾನು ಹೇಳಿರುವುದು ಕಾಫೀಗೆ ಕೂಡ ಅನ್ವಯಿಸುತ್ತದೆ ಕಾಫಿಯು ಹಸಿವನ್ನು ಹೋಗಲಾಡಿಸಿ, ಉಬ್ಬಸವನ್ನು ಕಡಮೆ ಮಾಡುವುದೆಂದು ಹೇಳುವರು. ಆದರೆ ಇದರಿಂದ ಶರೀರ ಬಲವು ತಗ್ಗಿ ಧಾತು ಕ್ಷೀಣವಾಗುತ್ತಿ ರಕ್ತವು ನೀರಾಗುತ್ತೆ ಒಂದು ಸದ್ಗುಣವಿದ್ದರೆ ನಾಲ್ಕು ದುರ್ಗುಣಗಳಿವೆ

ಕೋಕೊ ವಿಷಯಕ್ಕು ಕೂಡ ನನ್ನದು ಇದೇ ಅಭಿಪ್ರಾಯ ಜೀರ್ಣಶಕ್ತಿ ಇದ್ದ ಮಾನಲಾಗಿ ಕೆಲಸಮಾಡುವವರಿಗೆ ಟಿ ಕಾಫಿ ಕೋಕೊಗಳಿಂದ ಕೆಲಸವಿಲ್ಲ. ಸಾಧಾರಣ ಆಹಾರಗಳಿಂದಲೇ ಬೇಕಾದಷ್ಟು ಶಕ್ತಿಯೂ, ತೃಪ್ತಿಯೂ ಉಂಟಾಗುತ್ತೆ ಈ ಮೂರನ್ನೂ ನಾನು ಯಥೇಚ್ಛವಾಗಿ ಬಳಸಿದ್ದೇನೆ, ಇವುಗಳನ್ನು ಬಳಸುವಾಗ ಯಾವುದೋ ಅನಾರೋಗ್ಯದಿಂದ ಬಾಧೆಪಡುತ್ತಿದ್ದೆ ಅವುಗಳನ್ನು ಬಿಟ್ಟ ಕಾರಣ ನನಗೇನೂ ನಷ್ಟವಾಗಿಲ್ಲ ನನಗೆ ಆರೋಗ್ಯವು ಚನ್ನಾಗಿದ ಕಾಫಿ, ಟೀಗಳಿಂದ ಹೊಂದಬಹುದಾದ ತೃಪ್ತಿಗಿಂತಲೂ ಹೆಚ್ಚಿನ ಸುಖ, ತೃಪ್ತಿಗಳನ್ನು ಕಾಯಿ-ಪಲ್ಯಗಳ ನೀರಿನಿಂದ ಹೊಂದುತ್ತಿರುವೆನು. ಪಾನೀಯಗಳಿಗೆ ಬದಲಾಗಿ ಬಿಸಿನೀರನ್ನು ಜೇನುತುಪ್ಪ, ನಿಂಬೆಹುಳಿ ಆರೋಗ್ಯಕರವಾದ ಪಾನೀಯಗಳು.

CENTRAL BOARD
OF
INDIAN MEDICINE

Diploma Holders' Constituency

PLEASE VOTE

For

V. Sankara Sastry, *A.M.A.C.*

(*Ayurveda Bhushana & Bhishagvara*)

ರಿಜಿಷ್ಟರಾಗದ ಆಯುರ್ವೇದ ವೈದ್ಯರಿಗೆ ಎಚ್ಚರಿಕೆ

★

೧೯೪೭ನೆಯ ಸಂವತ್ಸರ ನಾವಸಂತರ ರಿಜಿಸ್ಟರಿಗಾಗಿ ಕಳುಹಿಸಿದ ಅರ್ಜಿಗಳನ್ನೆಲ್ಲಾ ಸಂಟ್ರಲ್ ಬೋರ್ಡಿನವರು ಪರಿಶೀಲಿಸಿ ರಿಜಿಸ್ಟರು ಮಾಡುತ್ತಿರುವರು ರಿಜಿಸ್ಟರಾದ ವೈದ್ಯರಿಗೆ ಕಳೆದೆರಡು ವರ್ಷಗಳಿಂದ ಸರ್ಟಿಫಿಕೇಟ್ ಬರದಿರುವುದು ಬೋರ್ಡಿನವರ ಅಶ್ರದ್ಧೆಯೆಂದೇ ಹೇಳಬೇಕು ಇದಕ್ಕಾಗಿ ಆತುರಪಡುವುದೂ ವ್ಯರ್ಥ ಕೆಲ ಮಂದಿ ಬೋರ್ಡ್ ಸದಸ್ಯರು ಈ ಅವಕಾಶವನ್ನು ನೋಡಿಕೊಂಡು ತಾವು ಸ್ವತಃ ಬೋರ್ಡು ಮೀಟಿಂಗುಗಳಲ್ಲಿ ಆಸ್ಥೆವಹಿಸಿ, ರಿಜಿಸ್ಟ್ರೇಷನ್ ಸರ್ಟಿಫಿಕೇಟುಗಳನ್ನು ಶೀಘ್ರವಾಗಿ ಬರುವಂತೆ ಮಾಡುವೆವೆಂದೂ, ವಿಚಾರಣೆ ಇಲ್ಲದೆ ಮೂಲೆಗೆ ಬಿದ್ದ ಅರ್ಜಿಗಳನ್ನು ಹೊರಗೆ ತೆಗೆದು ತಕ್ಕ ಚರ್ಯೆ ತೆಗೆದುಕೊಳ್ಳುವಂತೆ ಮಾಡುತ್ತೇವೆಂದೂ ಹೇಳಿ ವೈದ್ಯರಿಂದ ಲಂಚ ತೆಗೆದುಕೊಳ್ಳುತ್ತಿರುವುದು ತಿಳಿದು ಬಂದಿದೆ ನಮ್ಮ ರಾಯಲಸೀಮೆ (ದತ್ತಮಂಡಲದಲ್ಲಿನ) ಯಲ್ಲಿರುವ ಅಮಾಯಕರಾದ ವೈದ್ಯರೇ ಈ ದುಷ್ಟಕಾರಕರ್ಮಗಳಿಗಾಗಿ ಅಧಿಕವಾಗಿ ನಷ್ಟಪಡುತ್ತಿರುವ ಕಾರಣ ಕೆಲ ಕಾಲ ತಾಳ್ಮೆಯಿಂದ ಹೊಸ ಎಲೆಕ್ಷನ್ ನಡೆಯುವವರೆಗೆ ಸುಮ್ಮನಿರುವುದೊಳ್ಳೆಯದೆಂದೂ, ಈ ಮೋಸಗಾರರಿಂದ ದೂರವಿರಬೇಕೆಂದೂ ಎಚ್ಚರಿಸುತ್ತೇನೆ

ಇಸುಕಪಲ್ಲಿ ಸುಬ್ರಹ್ಮಣ್ಯಶರ್ಮ, ಗುಂಟೂರು.

ವೈ[illegible]ಕ್ರ[illegible]ಪು

೧೯೪೭-ನೇ ಸಾ॥ ಮದ್ರಾಸು ಷಾಪು

ಮತ್ತು

ಎಸ್ಟಾಬ್ಲಿಷ್‌ಮೆಂಟು ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರ[illegible] ಬಿಡತಕ್ಕ ರಿಜಿಸ್ಟರುಗಳು ಫಾರಮುಗಳು ವಗೈರ ನಮ್ಮಲ್ಲಿ ದೊರೆಯುತ್ತವೆ,

ವಿಠಲ್ ಪ್ರೆಸ್ ತೇರುಬಜಾರ್, ಬಳ್ಳಾರಿ

ಕೋಡಿಹಳ್ಳಿ

ದಿನಾಂಕ [illegible] ನೇ ಭಾನುವಾರ ಬಸವಜಯಂತಿಯ ದಿವಸ ಗ॥ ಕೋಡಿಹಳ್ಳಿ ಮಲ್ಲರೆಡ್ಡಿ ಚಂದ್ರಶೇಖರ ಗೌಡರೇ ನೂತನ ಗ್ರಾಮಾಧಿಕಾರಿ ಹುದ್ದೆಯನು ಸ್ವೀಕರಿಸುವ ಸಮಾರಂಭವು ಬಹು ವೈಭವದಿಂದ ಜರುಗಿತು ಬೆಳಿಗ್ಗೆ ಶ್ರೀ ಪಾಟೀಲರಿಂದ ಧ್ವಜಾರೋಹಣವಾಯಿತು. ನಂತರ ಹಳ್ಳಿಯ ಸಮಸ್ತ ರೈತರೆಲ್ಲಾ ಅಲಂಕೃತವಾಗಿದ್ದ ಗ್ರಾಮ ಚಾವಡಿಯ ಮುಂದೆ ಸಮ್ಮಿಲಿತರಾಗಿ ಹಾರಗಳನ್ನು ಅರ್ಪಿಸಿ ರಾಷ್ಟ್ರೀಯ ಜಯಘೋಷಗಳನ್ನು ಮಾಡಿದರು ನಂತರ ಪಾಟೀಲರು ಹಳ್ಳಿಗಳ ಉದ್ಧಾರವೇ ಭಾರತೀಯರ ಉದ್ಧಾರ ನಮ್ಮ ಹಳ್ಳಿ ಆದರ್ಶ ಹಳ್ಳಿಯಾಗಲು ನೀವೆಲ್ಲಾ ಸಮಷ್ಟಿ ದುಡಿಯುವ ರೈತ ಸೇವೆಗಾಗಿ ತಮ್ಮ ದೇಹವನ್ನು ಸವೆಯಿಸುವದಾಗಿ ಹೇಳಿ ಭಾಷಣ ಮುಗಿಸಿದರು ನಂತರ ಮೋರಿಗೇರಿ ರೆಡ್ಡಿ ಹೆಚ್. ದಾಸಪ್ಪ ಗೌಡರು ಗ್ರಾಮಾಧಿಕಾರಿಗಳು ಮತ್ತು ರೈತರು ಅವರ ಕರ್ತವ್ಯದ ಬಗ್ಗೆ ಮಾತನಾಡಿದರು. ಮೃತ್ಯುಂಜಯಸ್ವಾಮಿ ಹಳ್ಳಿಗಳ ಬಗ್ಗೆ ಮಾತನಾಡಿದರು ಕೊನೆಗೆ ಕರಣಂ ಶಂಕರರಾವ್ ಇವರು ರೈತರೆಲ್ಲ ತಮ್ಮೊಡನೆ ಸಹಕರಿಸಲು ವಿನಂತಿಸಿಕೊಂಡು ತಮ್ಮ ಭಾಷಣ ಮುಗಿಸಿದರು. ದೇವರ ಅಭಿಷೇಕ ಮುಗಿದನಂತರ ಹಳ್ಳಿಯ ರೈತರಿಗೆಲ್ಲಾ ಉಪಹಾರ [illegible] ಸಂಜೆ [illegible] ರಘುಪತಿರಾಘವ ರಾಜಾರಾಮ್ ಪತಿತ ಪಾವನ ಸೀತಾರಾಂ, ಭಜನೆಯೊಡನೆ ಅಂದಿನ ಕಾರ್ಯಕ್ರಮ ಕೊನೆಗೊಂಡಿತು

—ನಮ್ಮ ಪ್ರಾಂತದ ಸರಸದ್ದಿನಲ್ಲಿ ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಂದಾಗಿ ಕೂಡಿಕೊಳ್ಳಲು ನಿಶ್ಚಯಿಸಿರುತ್ತವೆ.

ನಮ್ಮ ಮಕ್ಕಳು

ವ್ಯಕ್ತಿತ್ವವನ್ನು ರೂಪಿಸಬೇಕು, ಮನಸ್ಸನ್ನು ಅರಳಿಸಬೇಕು. ಸರ್ವಾಂಗ ವಿಕಾಸದಿಂದ ಮಾನವ ಜೀವಿತವನ್ನು ಸುಖಮಯವಾಗಿ ಮಾಡಬೇಕು.

—)O(—

ಶ್ರೀ ಸಿ. ಕೆ. ತಿರುಮಲೇಶ

ಇಂದಿನ ಮಕ್ಕಳೇ ಮುಂದಿನ ಜನಾಂಗವೆಂದು ಹೇಳುತ್ತೇವೆ. ಆದರೆ ಮುಂದಿನ ಜನಾಂಗವು ಸುಖ ಸೌಭಾಗ್ಯಗಳಿಂದ ಬದುಕಿ ಬಾಳಬೇಕೆಂದು ನಾವು ಯುಕ್ತಿ ಸುವದಿಲ್ಲ. ಮಕ್ಕಳಿಲ್ಲವೆಂದು ಹರಕೆ ಹೊರುತ್ತೇವೆ. ಮಕ್ಕಳಿಲ್ಲದ ಮನೆ ಮನೆಯಲ್ಲವೆಂದು ತಿಳಿಯುತ್ತೇವೆ. ಹೆಚ್ಚೇಕೆ? ಮಕ್ಕಳೇ ಜೀವನದಲ್ಲಿ ಸರ್ವಸ್ವವೆಂದು ನಂಬುತ್ತೇವೆ. ಚಿಕ್ಕಂದಿನಲ್ಲಿ ಆಡಿ, ಓಡಿ, ನಕ್ಕು ನಲಿದು ತಂದೆ ತಾಯಿಗಳಿಗೆ ಆನಂದದಾಯಕರಾದರೆ ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ತಮ್ಮ ಪೋಷಕರೆಂದು ತಿಳಿಯುತ್ತೇವೆ. ಮುಪ್ಪಿನಲ್ಲಿ ಮಕ್ಕಳೇ ಆಧಾರ, ಇದು ಇಂದು ನಿನ್ನೆಯ ರೂಢಿಯಲ್ಲಿ ಅನಾದಿಕಾಲದಿಂದಲೇ ಇಳಿದು ಬಂದ ದೃಢವಿಶ್ವಾಸ ಮಾನವರಲ್ಲಿ ಮಾತ್ರವಲ್ಲ ಪಶುಪಕ್ಷಿಗಳಲ್ಲೂ ತಮ್ಮ ಮರಿಗಳೆಂದರೆ ಅತಿ ಮಮತೆ, ಆಸಕ್ತಿ, ಎಚ್ಚರ.

ಮಮತೆಯ ಹುಚ್ಚು

ಮಕ್ಕಳು ಹುಟ್ಟಿದರೆಂದರೆ ಒಮ್ಮೆಗೆ ತಂದೆ ತಾಯಿಗಳಿಗೆ ಹಿಡಿಯಲಾರದ ಆನಂದವಾಗುತ್ತೆ. ಭಾವೀ ಸುಖಸಾಮ್ರಾಜ್ಯದ ಕನಸಿನಲ್ಲಿ ಅವರು ಬಳೆಯುತ್ತಾ ಬಂದಂತೆ ಅವರಲ್ಲಿರುವ ದುರ್ನಡತೆಗಳ ಕಡೆಗೆ ಗಮನವೇ ಹರಿಯುವುದಿಲ್ಲ. ಆಶ್ಚರ್ಯ ಮಿತಿಮೀರಿ ತಮ್ಮ ಮಕ್ಕಳು ಏನು ಮಾಡಿದರೂ ಸರಿಯೆಂಬ ಭಾವನೆ ಹುಟ್ಟುತ್ತದೆ. ಮಮತೆಯ ಹುಚ್ಚು ಸ್ವಾರ್ಥದ ಅವತಾರ ತಾಳಿ ಬೇರೆಯವರ ಮಕ್ಕಳೆಂದರೆ ಕಸಕ್ಕಿಂತಲೂ ಕಡೆಯೆಂಬ ಭೇದ ಭಾವನೆಯೂ ಹಲವರಲ್ಲಿ ಮೂಡುತ್ತದೆ.

ನಿತ್ಯ ದುಃಖ

ಮಕ್ಕಳು ಕ್ರಮತಪ್ಪಿ ಬಳೆದು ತಾಯಿಗಳಿಗೆ ನಿತ್ಯ ದುಃಖಕ್ಕೆ ಕಾರಣರಾಗುವುದು ಕಮ್ಮಿಯಿಲ್ಲ. ಅವರ ಮನೋವಿಕಾಸದ ಕಡೆಗೆ, ಅವರ ಶಾರೀರಿಕ ಬಳೆವಣಿಗೆಯ ಕಡೆಗೆ ಗಮನ ಕೊಡದೆ ಅವರು ರೋಗನಿಧಿಗಳಾದಾಗ, ತಂಟೆ, ಉಪದ್ರವ, ಪರಪೀಡನೆಗಳಲ್ಲಿ ತೊಡಗಿದಾಗ ತಂದೆ ತಾಯಿಗಳಿಗೆ ಆಗುವ ಪಶ್ಚಾತ್ತಾಪಕ್ಕೆ ಮೇರೆ ಇರದು. ಮಕ್ಕಳು ಹುಟ್ಟದಿದ್ದರೂ ಒಳ್ಳೆದಿತ್ತು ಎನ್ನುವ ಪರಿಸ್ಥಿತಿ ಬರುತ್ತವೆ. ಮುದುಕರಾದಾಗ ಮಕ್ಕಳು ತಂದೆತಾಯಿಗಳಿಂದ ಬೇರಾಗಿ ವೃದ್ಧ ಮಾತಾಪಿತೃಗಳನ್ನು ದುಃಖದಲ್ಲಿಡುವುದೂ ಕಮ್ಮಿಯಲ್ಲ. ತಂದೆ ಮಕ್ಕಳು ಕಡಿದಾಡಿಕೊಂಡ ತಾಯಿ ಮಕ್ಕಳು ಹೊಡೆದಾಡಿಕೊಂಡ ಸಂದರ್ಭಗಳೂ ಇಲ್ಲದೆ ಇಲ್ಲ. ಅಕ್ರಮವಾಗಿ ಮಕ್ಕಳ ಮನಸ್ಸು ವಿಕಾಸ ಹೊಂದಿ ಅವರು ಪಶುಪ್ರಾಯರಾಗಿ ಸಮಾಜಕಂಟಕರಾಗುವುದೂ ಇದೆ. ಇಂತಹ ದುಸ್ಥಿತಿಯನ್ನು ನೀಗಬೇಕಾದರೆ ನಮ್ಮ ಮಕ್ಕಳ ವಿಷಯದಲ್ಲಿ ನಾವು ಹೆಚ್ಚಿನ ಜಾಗ್ರತೆ ವಹಿಸಲೇಬೇಕು.

ಇಂದಿನ ಪರಿಸ್ಥಿತಿ ಬೇರೆ

ನಮಗೆ ರಾಜಕೀಯ ಸ್ವಾತಂತ್ರ್ಯ ಬರುವವರೆಗೆ ತಮ್ಮ ಮಗನಿಗೊಂದು ಕನಿಷ್ಠಪಕ್ಷ ಸರಕಾರಿ ಗುಮಾಸ್ತಿಕೆ ಸಿಕ್ಕಿದರಾದರೂ ಸಾಕೆಂದು ಕೆಲವರಿದ್ದರೆ ಇನ್ನು ಕೆಲವರಿಗೆ ನಿರುದ್ಯೋಗದ ಸಮಸ್ಯೆಯನ್ನು ಕಂಡು ಅವನ ಮಗ ಅಷ್ಟು ಓದಿದ್ದಾನೆ. ಆದರೆ ದುಗ್ಗಣೆಯ ಸಂಪಾದನೆಯೂ ಇಲ್ಲ. ಓದೇಕೆ? ಯಾವುದೇಕೆ? ನೋಡಿ ನಾನು ಬರಹವಿಲ್ಲದಿದ್ದರೂ ಇಷ್ಟೆಲ್ಲಾ ಸಂಪಾದಿಸಿದ್ದೇನೆ ಎಂದು ಹೆಮ್ಮೆ ಪಡಬಹುದಿತ್ತು. ಇಂದಿನ ಪರಿಸ್ಥಿತಿಯೇ ಬೇರೆ. ನಾವೂ ಪ್ರಪಂಚದ ಜನಾಂಗದಲ್ಲಿ ಒಂದು ಜನಾಂಗದವರೆಂದು ತಲೆಯೆತ್ತಿ ನಿಲ್ಲುವ ಭಾಗ್ಯ ದೊರತಿದೆ. ನಮ್ಮ ದೇಶ- ನಮ್ಮ ಭಾಷೆ ನಮ್ಮ ಜನರು ಎಂಬ ಅಭಿಮಾನ ಹುಟ್ಟಿಕೊಡಗಿದೆ. ನಮ್ಮ ಜೀವನವನ್ನು ನಾವೇ ರೂಪಿಸಿಕೊಳ್ಳಬೇಕಾಗಿದೆ.

ಎಚ್ಚರ ಬೇಕು

ನಮ್ಮ ಆಡಳಿತೆಯ ಸೂತ್ರಗಳು ನಮ್ಮ ಜನರ ಕೈಗೆ ಬಂದಿವೆ. ನಮ್ಮನ್ನು ನಾವೇ ಆಳುತಿದ್ದೇವೆ. ದೇಶದಲ್ಲಿ ಸ್ತ್ರೀಪುರುಷರನ್ನದೆ ಪ್ರತಿಯೊಬ್ಬರಿಗೂ ತನ್ನ ದೇಶದ ಆಗುಹೋಗುಗಳಲ್ಲಿ ಭಾಗವಹಿಸುವ ಅವಕಾಶದೊರೆತಿದೆ. ಈ ಸನ್ನಿವೇಶದಲ್ಲಿ ಮುಂದೆ ನಮ್ಮನ್ನು ಆಳಿ ನಮ್ಮ ಜೀವನವನ್ನು ಸುಖಮಯವಾಗಿ ಮಾಡುವ ಹೊಣೆಗಾರಿಕೆಯುಳ್ಳ ಮಕ್ಕಳ ವಿಷಯದಲ್ಲಿ ಪ್ರತಿಯೊಬ್ಬನೂ ಎಚ್ಚರ ವಹಿಸಬೇಕಾಗಿದೆ.

ಮನೆಯೇ ಮೊದಲ ನೆಲೆ

ಮಕ್ಕಳ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗೆ ಮನೆಯೇ ಮೊದಲ ನೆಲೆ ತಂದೆ ತಾಯಿ ಬಂಧು ಬಳಗಗಳೇ ಅವರ ಮೊದಲ ಅಧ್ಯಾಪಕರೂ. ಮನೆಯಲ್ಲಿ ಮಗು ಶಿಸ್ತು, ಸುಗುಣ, ಸಚ್ಛೀಲಗಳನ್ನು ಸಂಪಾದಿಸಿದ್ದಾದರೆ ಮುಂದೆ ಶಾಲೆಯಲ್ಲೂ ಅದೇ ತಳಹದಿಯಲ್ಲಿ ಮಗುವಿನ ವ್ಯಕ್ತಿತ್ವವು ರೂಪಿತವಾಗುವುದು. ಚಿಕ್ಕಂದಿನಲ್ಲಿ ಎಳೆಮನಸಿಗೆ ಅಂಟಿದ ಯಾವ ವಿಷಯವಾದರೂ ಅದು ಅಳಿಸದು. ಆದುದರಿಂದ ಮನೆಗಳಲ್ಲಿ ಮಕ್ಕಳ ವಿಷಯದಲ್ಲಿ ಹಿರಿಯರು ಆದೆಷ್ಟು ಆಸಕ್ತಿವಹಿಸಿದರೂ ಸಾಲದು. ಚಿಕ್ಕಂದಿನಲ್ಲೇ ಮಕ್ಕಳ ಸ್ವಭಾವ ಶೀಲಗಳು ಬೇರೂರುವುವೆಂಬುದನ್ನು ಯಾರು ಮರೆಯಬಾರದು.

ಮನಸ್ಸೇ ಕಾರಣ

ಹೆಚ್ಚಾಗಿ ತಂದೆತಾಯಿಗಳು ತಮ್ಮ ಮಕ್ಕಳ ವಿಷಯದಲ್ಲಿ ಅವರು ಆಡಿ ಓಡಿ ಬೀಳದಂತೆ, ಅಂತೂ ಅವರ ಶರೀರ, ಪ್ರಾಣಗಳಿಗೆ ಹಾನಿಯಾಗದಂತೆ ಮಾತ್ರ ನೋಡಿಕೊಳ್ಳುವುದು ರೂಢಿಯಾಗಿದೆ. ಮಕ್ಕಳ ಮಾನಸಿಕ ವ್ಯಾಪಾರಗಳ ಕಡೆಗೆ ಅವರ ಗಮನ ಹರಿಯುತ್ತಿಲ್ಲ. ಮಗುವಿಗೆ ಹೊಡೆದರೆ ನೋವಾದೀತೆಂದು ತಿಳಿದರೂ ಅದನ್ನು ಬೈದರೆ ಅದರ ಮನೋವ್ಯಾಪಾರಕ್ಕೆ ಅಡ್ಡಿಬಂದರೆ ಅದರ ಮನಸ್ಸಿಗೆ ಅಷ್ಟೇ ನೋವಾದಿತೆಂದು ಭಾವಿಸುವುದಿಲ್ಲ. ಹೆಚ್ಚಿನವರು ಮನುಷ್ಯರಿಗೆ ಮನಸ್ಸು ಹೃದಯ ಇವು ಇವೆಯೆಂದು ತಿಳಿದಿರುವದಿಲ್ಲ. ಇದರಿಂದಲೇ ಅನೇಕ ಮಕ್ಕಳು ಬೆಳೆದು ದೊಡ್ಡವರಾದಾಗ ಅತಿ ಕೆಟ್ಟವರಾಗಿ ಕುಲಕಂಟಕರಾಗುತ್ತಾರೆ. ದೇಶದ್ರೋಹಿಗಳಾಗಿ ಮಾರ್ಪಡುತ್ತಾರೆ. ಮನಸ್ಸೇ ಇದಕ್ಕೆಲ್ಲಾ ಕಾರಣವಾಗಿದ್ದರೂ ಮನಸ್ಸು ಕಾರಣ ಆದುದರಿಂದ ಮನಸ್ಸಿನ ಕಡೆಗೆ ಹೆಚ್ಚಿನ ದೃಷ್ಟಿ ಇಡಬೇಕೆಂಬ ತಿಳುವಳಿಕೆ ಮಾತ್ರ ಅನೇಕ ತಂದೆ ತಾಯಿಗಳಲ್ಲಿ ಇಲ್ಲವೇ ಇಲ್ಲ ಎನ್ನಬಹುದು.

ತಂದೆ ತಾಯಿಗಳಿಗೆ

ಮಕ್ಕಳು ಕೆಟ್ಟವರಾಗಲು ಹೆಚ್ಚಿನ ಮಟ್ಟಿಗೆ ತಂದೆತಾಯಿಗಳೇ ಕಾರಣ. ಮಕ್ಕಳ ತಪ್ಪಿಗಾಗಿ ಅವರನ್ನು ಶಿಕ್ಷಿಸುವ ಬದಲು ತಂದೆತಾಯಿಗಳನ್ನು ಶಿಕ್ಷಿಸಿದರೆ ಎಷ್ಟೋ ತಪ್ಪುಗಳು ಸಂಭವಿಸಲೇ ಎಡೆಯಿಲ್ಲ. ತಂದೆ ತಾಯಿಗಳು ತಮ್ಮ ಸೋಲನ್ನು ಮಕ್ಕಳ ತಪ್ಪೆಂದು ಬೈಗಳು ಹೊಡೆತಗಳಿಂದ ತೋರಿಸಿ ತಮ್ಮ ಹಿರಿಮೆಯನ್ನು ಉಳಿಸಿಕೊಳ್ಳುತ್ತಾರೆ. ಸ್ವಾಭಾವಿಕವಾಗಿಯೇ ಮಗು ಕೆಟ್ಟದೆಂದು ಅವರು ತಿಳಿಯುತ್ತಾರೆ. ಆದರೆ ಹುಟ್ಟಿದಾಗ ಯಾವ ಮಗುವಿನ ಮನಸ್ಸೂ ಕೆಟ್ಟದಾಗಿಲ್ಲವೆಂದು ಎಲ್ಲರೂ ನೆನಪಿನಲ್ಲಿಡಬೇಕಾದುದು.

ಪ್ರಗತಿಯಲ್ಲಿ ವಿಶ್ವಾಸ

ಮಕ್ಕಳ ಭವಿಷ್ಯದ ಹೊಣೆಗಾರಿಕೆಯು ತಂದೆ ತಾಯಿಗಳಲ್ಲಿರುವುದರಿಂದ ಅವರು ತಿಳುವಳಿಕೆಯುಳ್ಳವರಾಗಬೇಕು. ತಮ್ಮಲ್ಲಿ ಈವರೆಗೆ ದೃಢವಾಗಿ ಅಂಟಿರುವ ಸ್ವಯಂಶ್ರೇಷ್ಠತಾಭಾವನೆಯನ್ನು ಸ್ವಲ್ಪ ದೂರವಿರಿಸಿ, ವಿಚಾರಕ್ಕೆ ಎಡೆಕೊಡಬೇಕು. ತಾವೇ ಸರ್ವಜ್ಞರೆಂದು ತಿಳಿಯಬಾರದು. ಇತರರ ಮಾತಿನಲ್ಲಿ ಹುರುಳಿದೆಯೇ ಅದರ ತಿರುಳನ್ನು ಸವಿದು ನೋಡೋಣವೇ ಎಂಬ ವಿಶಾಲ ಹೃದಯ ಬೇಕು. ಹೃದಯ ಪರಿವರ್ತನೆ ಯಾಗಬೇಕು. ಜೀವನದಲ್ಲಿ ಶ್ರದ್ಧೆಯಿರಬೇಕು ಪ್ರಗತಿಯಲ್ಲಿ ವಿಶ್ವಾಸ ಬರಬೇಕು.

ಪಾಶ್ಚಾತ್ಯ ದೇಶಗಳಲ್ಲಿ ಸಾಮಾಜಿಕ ಸುರಕ್ಷಿತತೆ

ಚಿ ಶ್ರೀ

ಸರ್ವರಿಗೂ ಆರ್ಥಿಕಸಹಾಯ-ಸರಕಾರದ ಹೊಣೆ-ಸಾಮಾಜಿಕ ವಿಮಾಪದ್ಧತಿ-ಕೂಲಿಕಾರರಿಗೆ ವಿವಿಧ ಸೌಕರ್ಯ

"ತೊಟ್ಟಿಲಿಂದ ಸುಡುಗಾಡಿನ ವರೆಗೆ" ಸಾಮಾನ್ಯ ಪ್ರಜೆಗೆ ಆರ್ಥಿಕ ಸುರಕ್ಷಿತತೆಯನ್ನು ಒದಗಿಸಿಕೊಟ್ಟ ಬ್ರಿಟನ್ನಿನ ಅಪ್ರತಿಮ ಸಾಹಸವನ್ನು ಮೆಚ್ಚದವರು ದುರ್ಲಭ. ಅದೇ ಮೇರೆಗೆ ಆ ಮಟ್ಟಕ್ಕೆ ಹೋಗದಿದ್ದರೂ ಸಾಕಷ್ಟು ಮಟ್ಟಿಗೆ ಫ್ರಾನ್ಸ್, ಜರ್ಮನಿ, ರಶಿಯಾ ಮುಂತಾದ ರಾಷ್ಟ್ರಗಳೂ ಕೂಲಿಕಾರರ, ದರಿದ್ರರ, ಬಾಲ ವೃದ್ಧಾತುರರ ಯೋಗಕ್ಷೇಮಕ್ಕಾಗಿ ವಿವಿಧ ಯೋಜನೆಗಳನ್ನು ಮಾಡಿ ಜನಸೇವೆ ಸಾಗಿಸುತ್ತಿರುವುದನ್ನು "ಯು. ಎಸ್. ನ್ಯೂಸ್ ಎಂಡ್ ವರ್ಲ್ಡ್ ರಿಪೋರ್ಟ್"ನಲ್ಲಿ ವರದಿ ಮಾಡಲಾಗಿದೆ. ಭಾರತ ಅಂಥ ಸುದಿನವನ್ನು ಕಾಣುವುದು ಸನಿಹದಲ್ಲಿ ಒದಗೀತೇ?

ಜೀವನದಲ್ಲಿಯ ಆಕಸ್ಮಿಕ ಆಪತ್ತುಗಳಿಂದ ತಮ್ಮನ್ನು ಸರಕಾರ ರಕ್ಷಿಸಬೇಕೆಂದು ಜಗತ್ತಿನ ಜನರು ಅಪೇಕ್ಷಿಸುತ್ತಾರೆ. ಎಲ್ಲೆಲ್ಲೂ ಖಾತ್ರಿಯಾದ ಸುರಕ್ಷಿತತೆಗೆ ಜನ ಬಹಳ ಬೆಲೆ ತೆರಬೇಕಾಗಿದೆ. ಮತ್ತು ಎಲ್ಲ ದೊಡ್ಡ ರಾಷ್ಟ್ರಗಳಲ್ಲೂ ಅಂಥ ಸುರಕ್ಷಿತತೆಯನ್ನು ಕೊಡುವ ಪದ್ಧತಿ ಹೆಚ್ಚು ಕಡಿಮೆ ಒಂದೇ ತೆರನಾಗಿದೆ.

ಬ್ರಿಟನ್ನಿನ ವ್ಯವಸ್ಥೆ

ಬ್ರಿಟನ್ನು ಪ್ರತಿಯೊಬ್ಬನಿಗೂ ಉಚಿತ ವೈದ್ಯೋಪಚಾರ ಮತ್ತು ದಂತ ಚಿಕಿತ್ಸೆಗಳನ್ನು ಒದಗಿಸಿದೆ. ಒಬ್ಬ ತಾಯಿಗೆ ಮಗು ಹುಟ್ಟಿದರೆ ೧೬ ಡಾಲರುಗಳನ್ನು ಖರ್ಚಿಗೆ ಕೊಡಲಾಗುತ್ತದೆ. ಅವುಗಳಿಗೆ ಕೆಲಸ ಹೋಗಿದರೆ ೧೩ ವಾರಗಳವರೆಗೆ ವಾರವೊಂದಕ್ಕೆ ೭-೨೦ ಡಾಲರುಗಳನ್ನು ಕೊಡುವ ವ್ಯವಸ್ಥೆಯಿದೆ. ಒಂದು ಮಗುವಾದ ನಂತರ ೨ನೆಯದರಿಂದ ಪ್ರತಿಯೊಂದು ಮಗುವಿಗೂ ಅದಕ್ಕೆ ೧೫ ವರ್ಷ ವಯಸ್ಸಾಗುವವರೆಗೆ ಅದಕ್ಕಾಗಿ ವಾರಕ್ಕೆ ೧ ಡಾಲರಿನಂತೆ ಕುಟುಂಬಗಳು ಸಂಗ್ರಹಿಸುತ್ತವೆ. ಕೆಲಸಗಾರನೊಬ್ಬನು ಕೆಲಸ ಕಳೆದುಕೊಂಡರೆ ಅವನಿಗೆ ೨೬ ವಾರಗಳ ವರೆಗೆ ಪರಿಹಾರ ಧನವನ್ನು ಸಲ್ಲಿಸಲಾಗುವುದು, ಕಾಹಿಲೆ ಬಿದ್ದರೆ ಐದು ವರ್ಷದವರೆಗೆ ಅವನಿಗೆ ಖರ್ಚಿಗೆ ಕೊಡಲಾಗುವುದು. ಒಬ್ಬ ಗಂಡಸು ತನ್ನ ೬೫ನೆಯ ವರ್ಷ ವಯಸ್ಸಿನಲ್ಲಿ ಮತ್ತು ಒಬ್ಬ ಹೆಂಗಸು ತನ್ನ ೬೦ನೆಯ ವಯಸ್ಸಿನಲ್ಲಿ ವಾರಕ್ಕೆ ೫.೨೦ ಡಾಲರುಗಳ ಮೇರೆಗೆ ನಿವೃತ್ತರಾಗುತ್ತಾರೆ. ಒಬ್ಬ ಕೆಲಸಗಾರ ಸತ್ತರೆ ಅವನ ಉತ್ತರಕ್ರಿಯೆಗಾಗಿ ಅವನ ಮನೆಯವರಿಗೆ ೮೦ ಡಾಲರುಗಳನ್ನು ಕೊಡಲಾಗುತ್ತದೆ.

ಇಂಥ ರಕ್ಷಣೆಯ ವೆಚ್ಚಕ್ಕಾಗಿ ಪ್ರತಿವಾರ ೪೫ ಸೆಂಟುಗಳಿಂದ ೧.೨೫ ಡಾಲರುಗಳ ವರೆಗೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ೧೬ನೆಯ ವರ್ಷ ವಯಸ್ಸಿನಿಂದ ನಿವೃತ್ತಿಹೊಂದುವತನಕ ಕಂತು ಕಟ್ಟುತ್ತಾನೆ. ಸಾಮಾನ್ಯ ಕೂಲಿಕಾರನು ವಾರಕ್ಕೆ ಸುಮಾರು ೧ ಡಾಲರಿನಷ್ಟು ಕಟ್ಟುತ್ತಾನೆ. ಒಡೆಯರು ಸರಾಸರಿ ೮೫ ಸೆಂಟುಗಳಷ್ಟನ್ನು ಕೂಲಿಕಾರನ ಕಂತಿಗೆ ಸೇರಿಸುತ್ತಾರೆ. ಈ ತೆರಿಗೆಗಳನ್ನು ಸಂಬಳ ಕೊಡುವಾಗಲೇ ವಸೂಲು ಮಾಡಲಾಗುತ್ತದೆ. ಸ್ವತಂತ್ರೋದ್ಯೋಗಿಗಳಿಂದ ವಸೂಲು ಮಾಡಲು ಸ್ಟ್ಯಾಂಪ್ ಯೋಜನೆಯನ್ನು ಮಾಡಲಾಗಿದೆ. ಆದರೆ ಈ ಸಾಮಾಜಿಕ ಸಹಾಯ ಯೋಜನೆಯ ವೆಚ್ಚದ ಅರ್ಧಕ್ಕಿಂತ ಹೆಚ್ಚು ಅಂಶವನ್ನು ಸರಕಾರ ಒಟ್ಟು ವಸೂಲು ಮಾಡಿದ ಸಾಮಾನ್ಯ ತೆರಿಗೆಯ ಹಣದಿಂದಲೇ ನಿರ್ವಹಿಸಬೇಕಾಗುತ್ತದೆ. ಬ್ರಿಟನ್ನಿನ ಈ ವಿಸ್ತೃತ ಕಾರ್ಯಕ್ರಮಕ್ಕೆ ಸುಮಾರು ೬,೭೦,೦೦೦,೦೦ ಕೋಟಿ ಡಾಲರುಗಳು, ಅಂದರೆ ಸಂಸಾರದ ಎಲ್ಲ ವೆಚ್ಚದ ನಾಲ್ಕನೆಯ ಒಂದಂಶದಷ್ಟು ಬೇಕಾಗುತ್ತದೆ.

ರಶಿಯಾದ ಯೋಜನೆ

ರಶಿಯಾದಲ್ಲಿ ಸರಕಾರವು ಎಲ್ಲರಿಗೂ ಕೆಲಸ ಕೊಡುತ್ತದೆ. ಅವರ ಸಂಬಳ ಮತ್ತು ಕೂಲಿಯ ಒಟ್ಟಿನಲ್ಲಿ ನೂರಕ್ಕೆ ೬ ರಷ್ಟನ್ನು ಸಾಮಾಜಿಕ ಸಹಾಯಕ್ಕಾಗಿ ತೆಗೆದಿಡುತ್ತದೆ. ಕಲಾಪ್ರಧಾನ ಉದ್ಯಮಗಳಲ್ಲಿ ನೂರಕ್ಕೆ ೩.೭ ಮತ್ತು ರಾಸಾಯನಿಕ ಉದ್ಯಮಗಳಲ್ಲಿ ೧೦.೭ ರ ದರವಿದೆ. ಸಹಾಯವು ಆಯಾ ಕೆಲಸಗಾರನ ಪಂಕ್ತಿಯ ಪ್ರಮಾಣವನ್ನವಲಂಬಿಸಿದೆ. ಕಾಹಿಲೆ ಬಂದಾಗ ಖರ್ಚಿಗೆ ಕೊಡುವ, ಅಂಗಹೀನ ವೃದ್ಧಾತುರರಿಗೆ ಉದರಂಭರಣ ದಕ್ಷಿಣೆ ಇವೂ ಆ ಸಹಾಯದಲ್ಲಿ ಸೇರಿವೆ.

ಸರಕಾರೀ ವೈದ್ಯಕೀಯ ಶಾಖೆಯು ಸರ್ವರಿಗೂ ಉಚಿತ ಚಿಕಿತ್ಸೆಯನ್ನು ಒದಗಿಸುತ್ತದೆ. ಕೆಲವು ವರ್ಗದ ವ್ಯಕ್ತಿಗಳಿಗೆ ವಿಶ್ರಾಮ [illegible] ಮೊದಲು ಅದನ್ನು ಒದಗಿಸಲಾಗುತ್ತದೆ. ೩ ತಿಂಗಳು ಕೆಲಸ ಮಾಡಿದ ಹೆಂಗಸು ಗರ್ಭಿಣಿಯಾದಾಗ ಮತ್ತು ಬಾಣಂತಿಯಾದಾಗ ಮಾತೃತ್ವವೇತನವನ್ನು ಪಡೆಯುತ್ತಾಳೆ. ಹಾಲು ಮುಂತಾದ ಪೋಷಕ ವಸ್ತುಗಳನ್ನು ಕೊಳ್ಳಲು ಸಂಬಳ ಕಡಿಮೆ ಇದ್ದವಳಿಗೆ ಬೇರೆ ಭತ್ತೆಯನ್ನು ಸರಕಾರ ಕೊಡುವದು. ೩ನೆಯ ಮಗುವಿನ ನಂತರ ಹುಟ್ಟಿದ ಒಂದೊಂದು ಮಗುವಿಗೂ ಸಾಕಷ್ಟು ಹೆಚ್ಚು ಭತ್ತೆಯನ್ನು ಕೊಡಲಾಗುವದು.

ಫ್ರಾನ್ಸಿನ ಪರಿಸ್ಥಿತಿ

ಫ್ರಾನ್ಸಿನಲ್ಲಿ ಕೂಲಿಕಾರರ ಒಟ್ಟು ಕೂಲಿಯಲ್ಲಿ ೧೦೭೧ ಡಾಲರುಗಳನ್ನು ಮೊದಲು ಸಾಮಾಜಿಕ ಸಹಾಯಕ್ಕಾಗಿ ತೆಗೆದಿಡಲಾಗುತ್ತದೆ. ಒಡೆಯನಿಂದ ನೂರಕ್ಕೆ ೨೯ರಷ್ಟನ್ನು ವಸೂಲು ಮಾಡಿ ಅದಕ್ಕೆ ಸೇರಿಸಲಾಗುತ್ತದೆ. ಕೆಲಸವಿಲ್ಲದಾಗ ಕೂಲಿಕಾರರಿಗೆ ಕೊಡುವ ದಕ್ಷಿಣೆಯನ್ನು ಸಾಮಾನ್ಯ ತೆರಿಗೆಯಿಂದ ಬಂದ ಆದಾಯದಿಂದ ತೆಗೆಯಲಾಗುವದು.

ಪ್ರೌಢರು ತಾಯಂದಿರಾದವರಿಗೆ ಸಂಪೂರ್ಣವಾಗಿ ಉಚಿತ ಔಷಧೋಪಚಾರವನ್ನು ಕೊಡುವರು. ಗರ್ಭಿಣಿಯಿರುವಾಗ ಅರ್ಧ ಸಂಬಳ ಸಲ್ಲುತ್ತದೆ. ಮೊದಲು ಮಗು ಹುಟ್ಟಿದಾಗ ಬೋನಸ್ ಕೊಡಲಾಗುವುದು. ಮುಂದೆ ಹುಟ್ಟುವ ಒಂದೊಂದು ಮಗುವಿಗೂ ಭತ್ತೆಯನ್ನು ಕೊಡುವ ವ್ಯವಸ್ಥೆಯಿದೆ. ಕಾಹಿಲೆಯವರಿಗೆ ಭತ್ತೆಯೂ ಅಂಗಹೀನರಿಗೂ ವಯೋವೃದ್ಧರಿಗೂ ದಕ್ಷಿಣೆಯೂ ಸಿಗುತ್ತವೆ.

ಜರ್ಮನಿಯಲ್ಲಿ

ಜರ್ಮನಿಯಲ್ಲಿ ನಾಲ್ಕು ವಲಯಗಳ ಆಕ್ರಮಕ ಅಧಿಕಾರಿಗಳು ಸುರಕ್ಷಿತತೆಯ ಕಾರ್ಯಕ್ರಮವನ್ನು ಪುನರುಜ್ಜೀವನಗೊಳಿಸಿದರು. ನಾಝಿಗಳು ಸಾಮಾಜಿಕ ಸುರಕ್ಷಿತತೆಯ ನಿಧಿಯನ್ನು ಯುದ್ಧಕ್ಕೆ ಬಳಸಿಕೊಂಡರು. ಸಹಾಯಕ ಭತ್ತೆಗಳನ್ನು ಬಹಳ ಮಟ್ಟಿಗೆ ಇಳಿಸಿದ್ದರು. ಅಮೇರಿಕದ ವಲಯದಲ್ಲೀಗ ಕೂಲಿಕಾರರು ತಮ್ಮ ವಾರ್ಷಿಕ ಆದಾಯವಾದ ೩೬೦೦ ಮಾರ್ಕುಗಳಲ್ಲಿ ನೂರಕ್ಕೆ ೯ ರಷ್ಟನ್ನು ಈ ನಿಧಿಗೆ ಕೊಡುತ್ತಾರೆ. ಒಡೆಯರು ಸಂಬಳದ ೧೦ನೆಯ ಒಂದಂಶವನ್ನು ಅದಕ್ಕೆ ಸಲ್ಲಿಸುತ್ತಾರೆ. ಇದರಿಂದ ರೋಗದ ಕಾಲದಲ್ಲಿಯ ವೆಚ್ಚಕ್ಕೆ, ಆಕಸ್ಮಿಕ ಅಪಘಾತದ ವಿಮೆಗೆ ಮತ್ತು ಉದ್ಯೋಗ ಕಳೆದುಕೊಂಡಾಗ ಉದರಂಭರಣಕ್ಕೆ ಧನಸಹಾಯ ಮಾಡಲಾಗುತ್ತದೆ. ಮಿಕ್ಕ ಸರಕಾರೀ ನಿಧಿಗಳನ್ನು ವೃದ್ಧರಿಗೆ ವರ್ಷಕ್ಕೆ ೪೬-೮೦ ಡಾಲರುಗಳಿಗೆ ಕಡಿಮೆಯಿಲ್ಲದಂತೆ ನಿವೃತ್ತಿವೇತನ ಕೊಡಲು ಬಳಸಲಾಗುತ್ತದೆ.

ಯುರೋಪಿನ ಮಿಕ್ಕ ನಾಡುಗಳಲ್ಲೂ ಸಾಮಾಜಿಕ ಸುರಕ್ಷಿತತೆಯ ಕಾರ್ಯಕ್ರಮ ಹಬ್ಬುತ್ತಿದೆ. ೧೯೫೦ ಜುಲೈ ೧ರಿಂದ ಸ್ವೀಡನ್ನು ಒತ್ತಾಯದ ಆರೋಗ್ಯವಿಮೆ

ಸ್ವತಂತ್ರ ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ

ಮೂಲ Prof:- S. N. Agarwal ಅನುವಾದಕ:- ಜೆ. ಹ. ಶಾಸ್ತ್ರಿ

ಸ್ವಾತಂತ್ರ್ಯ ಸಂಪಾದನೆ ಯೊಂದಿಗೆ ಭಾರತೀಯ ವಿದ್ಯಾಕ್ಷೇತ್ರದಮೇಲೆ ಒಂದು ಗುರುತರವಾದ ಬಾಧ್ಯತೆಯು ಬಿದ್ದಿತು. ವಿದೇಶೀಯರು ತಮ್ಮ ಪರಿಪಾಲನಾ ಸೌಕರ್ಯಕ್ಕಾಗಿಯೇ ನಮ್ಮ ಯುವಕರಿಗೆ ವಿದ್ಯಾಸೌಕರ್ಯಗಳನ್ನು ಒದಗಿಸಿದರು. ವಿದ್ಯಾರ್ಥಿಗಳ ದೈಹಿಕ ಮಾನಸಿಕ, ಆಧ್ಯಾತ್ಮಿಕ ಶಕ್ತಿಗಳನ್ನು ಬೆಳೆಸಿ ಅವುಗಳಿಗೆ ವೈಶಿಷ್ಟ್ಯತೆಯನ್ನು ಕಲ್ಪಿಸಬೇಕೆಂಬ ಅಭಿಲಾಷೆ ವಿದೇಶೀಯರಿಗೆ ಇಲ್ಲದೆ ಹೋಯಿತು. ಆದಕಾರಣ ಸ್ವತಂತ್ರ ಭಾರತದಲ್ಲಿ ವಿದ್ಯಾವಿಧಾನವು ಮಾರ್ಪಾಟಾಗಲೇಬೇಕು. ಭಾರತದೇಶವು ಮತ್ತೊಮ್ಮೆ ಸ್ವಸ್ವರೂಪಹೊಂದಿ ಇಡೀ ಪ್ರಪಂಚಕ್ಕೆ ಆಧ್ಯಾತ್ಮಿಕ ನಾಯಕತ್ವವನ್ನು ವಹಿಸಬೇಕೆಂದರೆ ಅದಕ್ಕೊಂದು ಬೇರೆ ರಾಷ್ಟ್ರೀಯ ಶಿಕ್ಷಣ ವಿಧಾನವನ್ನು ಪುನರ್ನಿರ್ಮಾಣ ಮಾಡಬೇಕು. ನಮ್ಮ ದೇಶದ ಸಂಸ್ಕೃತಿ, ಸಾಂಪ್ರದಾಯ, ಆಚಾರಗಳಿಗೆ ಅನುಗುಣವಾದ ವಿದ್ಯಾ ವಿಧಾನವನ್ನವಲಂಬಿಸದೇ ವಿನಃ ಭಾರತ ದೇಶವನ್ನು ದೃಢವಾದ ತಳಹದಿಯ ಮೇಲೆ ಪುನರ್ರಚಿಸುವುದು ಅಸಾಧ್ಯವೇ ಸರಿ.

ಸ್ವತಂತ್ರ ಭಾರತದಲ್ಲಿ ನಡೆಯಬೇಕಾದ ವಿದ್ಯಾ ವಿಧಾನದ ಮೂಲಸೂತ್ರಗಳಾವುವು? ಎಂಥಹವು? ಎಂತಹ ಉತ್ತಮ ವಿಧಾನವಾಗಲಿ ಒಂದು ದೇಶದಿಂದ ಮತ್ತೊಂದು ದೇಶವು ಅನುಕರಿಸಲಾಗದು, ಪ್ರತಿ ದೇಶಕ್ಕು ತನ್ನದೇ ವಿಶಿಷ್ಟ ಸಂಸ್ಕೃತಿ ಆಚಾರ ವಿರುತ್ತವೆ. ಅವುಗಳಿಗೆ ಅನುಗುಣವಾಗಿ ವಿದ್ಯಾ ಪದ್ಧತಿಯು ನೆಲೆಗೊಳ್ಳಬೇಕು. ಯಾವ ವಿಧವಾಗಿ ಒಂದು ಪುಷ್ಪಜಾತಿಯು ಸ್ವಕ್ಷೇತ್ರದಿಂದ ತೆಗೆದು ಭಿನ್ನಕ್ಷೇತ್ರದಲ್ಲಿ ಹಾಕಿದಾಗ ಸುಗಂಧ ಪುಷ್ಪಗಳನ್ನು ಕೊಡಲಾರದೋ ಅದೇ ವಿಧವಾಗಿ ಒಂದು ದೇಶದ ವಿದ್ಯಾವಿಧಾನವು ಮತ್ತೊಂದು ದೇಶದಲ್ಲಿ ಅವಲಂಬಿಸಲ್ಪಡಲು ಯೋಗ್ಯವಾಗಲಾರದು. ಆದಕಾರಣ ಭಾರತವು ತನ್ನ ಸಂಸ್ಕೃತಿ, ನಾಗರೀಕತೆಗಳಿಗನುಗುಣವಾದ ಮತ್ತು ಸ್ವದೇಶೀ ಪದ್ಧತಿಗಳಮೇಲೆ ತನ್ನದೇ ಆದ ವಿದ್ಯಾವಿಧಾನವನ್ನು ಸೃಷ್ಟಿಸಿಕೊಳ್ಳಬೇಕು. ಗತಶತಾಬ್ದದಲ್ಲಿ ಬ್ರಿಟಿಷರ ಆಳಿಕೆಯಲ್ಲಿ ನಡೆದ ವಿದ್ಯಾ ವಿಧಾನಕ್ಕೆ ಅಧಿಕ ಪ್ರಾಮುಖ್ಯವನ್ನು ಕೊಡಬಾರದು ಪ್ರಾಚೀನಕಾಲದಲ್ಲಿ ನಮ್ಮ ದೇಶದಲ್ಲಿ ಅತ್ಯುತ್ತಮವಾದ ವಿದ್ಯಾಕ್ರಮವು ಅವಲಂಬಿಸಲ್ಪಟ್ಟಿತ್ತೆಂಬ ವಿಷಯವನ್ನು ನಾವು ವಿಸ್ಮರಿಸಲಾಗದು. ಅದನ್ನು ಪರಪ್ರಭುತ್ವ ಕೊನೆಗಾಣಿಸಿತು, ಪುನಃ ನಾವು ಆ ಸಾಂಪ್ರದಾಯವನ್ನು ಅನುಸರಿಸಬೇಕು. ಇದರಿಂದ ಬೇರೆ ದೇಶಗಳಿಂದ ಒಳ್ಳೆಯ ವಿಷಯಗಳನ್ನು ಗ್ರಹಿಸಬೇಡವೆಂಬುದನ್ನು ಹೇಳುತ್ತಿರುವೆನೆಂದು ಸಂಶಯಬೇಡ. ಬ್ರಿಟಿಷರ ಕೆಲವು ಉತ್ತಮ ಲಕ್ಷಣಗಳು ಅವರ ವಿದ್ಯಾವಿಧಾನದಲ್ಲಿ ದ್ಯೋತಕವಾಗುತ್ತಿವೆ. ಅಂತಹ ಸುವಿಷಯಗಳನ್ನು ನಾವು ಗ್ರಹಿಸಬೇಕು. ಆದರೆ ಪೂರ್ತಿಯಾಗಿ ಅನುಕರಿಸಿದರೆ ನಮ್ಮ ವಿದ್ಯಾ ವಿಧಾನವು ನಿರ್ಜೀವವಾಗುವದು.

ನಮ್ಮ ಸನಾತನ ವಿದ್ಯಾ ವಿಧಾನದ ಮುಖ್ಯಲಕ್ಷಣಗಳಾವುವು? ವಿದ್ಯಾಬೋಧಕನಿಗೆ ಗೌರವನೀಯಸ್ಥಾನವೊಂದಿತ್ತು. ಆತನೇ ಜಾತೀಯ ಸಂಸ್ಕೃತಿಗೆ, ಆಧ್ಯಾತ್ಮಿಕ ಪ್ರವೃತ್ತಿಗೆ ಪುರೋಗಾಮಿಯಾಗಿದ್ದನು. ತಕ್ಷಶಿಲೆ ನಳಂದ ಮೊದಲಾದ ವಿಶ್ವವಿದ್ಯಾಲಯಗಳಲ್ಲಿ ರಾಜರು ಬಂದರೆ ಎಷ್ಟು ಗೌರವ ಕೊಡುವ ಸಭಿಕರು ವಿದ್ಯಾಗುರುಗಳು ಬಂದೊಡನೆ ರಾಜನುಸಹಾ ಎದ್ದುನಿಂತು ನಿಶ್ಶಬ್ದವಾಗಿ ಸ್ವಾಗತಿಸುತ್ತಿದ್ದರು. ಗುರುವಿಗೆ ಇಂತಹ ಸಾಂಘಿಕ ನೈತಿಕ ಆಧ್ಯಾತ್ಮಿಕ ಗೌರವವಿದ್ದುದರಿಂದಲೇ ಭಾರತದ ಸಂಸ್ಕೃತಿ ಪ್ರಕಾಶವು ದಿಗಂತ ವಿಶ್ರಾಂತಿವಾಗಿತ್ತು. ಅಕ್ಷರಾಭ್ಯಾಸದ ಮೊದಲು ಅತ್ಯುನ್ನತ ವಿದ್ಯೆಯ ಹೊಣೆಯು ಯಾವ ಅಧ್ಯಾಪಕರ ಮೇಲಿರುತ್ತದೆಯೋ ಅವರ ಪ್ರತಿಭೆ, ಸಾಮರ್ಥ್ಯಗಳಮೇಲೆ ಆಧಾರಪಟ್ಟಾಗಲೇ ಭಾರತವು ತನ್ನ ಗತಕೀರ್ತಿಯನ್ನು ಪುನಃ ಪ್ರತಿಷ್ಠಿಸಿಕೊಳ್ಳುವುದು.

ಸ್ವತಂತ್ರ ಭಾರತಕ್ಕೆ ರಾಷ್ಟ್ರೀಯ ಶಿಕ್ಷಣ ವಿಧಾನವನ್ನು ನಿರ್ಧರಿಸುವಾಗ ನಾವು ಉಪಾಧ್ಯಾಯರ ನಿಯಾಮಕದಲ್ಲಿ ಅವರ ಶಿಕ್ಷಣದಲ್ಲಿ ಅತ್ಯಂತ ಶ್ರದ್ಧೆಯನ್ನು ವಹಿಸಬೇಕಾಗಿರುತ್ತದೆ. ಡಿಗ್ರಿಗಳಿಗೆ ಅತ್ಯಂತ ಪ್ರಾಮುಖ್ಯತೆಯನ್ನು ಕೊಡದೆ ಅಧ್ಯಾಪಕನ ಶೀಲಸಂಪತ್ತಿಗೆ ಪ್ರಾಧಾನ್ಯವನ್ನೀಯಬೇಕು. ಇದಲ್ಲದೆ ವಿದ್ಯಾಬೋಧನೆಯಲ್ಲಿ ವಿಶೇಷ ಆಸಕ್ತಿ ಅಭಿಮಾನವುಳ್ಳವರನ್ನೇ ಶಾಲೆ, ಕಾಲೇಜುಗಳಲ್ಲಿ ಅಧ್ಯಾಪಕರಾಗಿ ನಿಯಮಿಸಬೇಕು. ಈಗ ಉಪಾಧ್ಯಾಯ ವೃತ್ತಿಯು ಕೇವಲ ನಿರುದ್ಯೋಗಿ ವಿದ್ಯಾವಂತರ ಕೊನೆಯ ಶರಣ್ಯವಾಗಿದೆ. ಈ ದುಸ್ಥಿತಿಗೆ ಕಾರಣ ಸ್ವಲ್ಪಮಟ್ಟಿಗೆ ಅಧ್ಯಾಪಕರ ಕೊಂಚ ಸಂಬಳಗಳೇ ಕಾರಣವಲ್ಲದೆ ಇನ್ನೂ ಅನೇಕ ಕಾರಣಗಳುಂಟು. ವಿದ್ಯಾವ್ಯಾಪ್ತಿಯಲ್ಲಿ ಗೌರವ ಮರ್ಯಾದೆಗಳಿಲ್ಲ ಸಮರ್ಥರು ಈ ವೃತ್ತಿಯನ್ನು ಅಪೇಕ್ಷಿಸುವುದಿಲ್ಲ. ನಮ್ಮ ನಾಯಕರು ದೇಶಭಕ್ತಿಯುಳ್ಳ ಯುವಕರನ್ನು ಸೈನಿಕ ಶಾಖೆಗಳೊಳಗೆ ಯಾವ ವಿಧವಾಗಿ ಆಹ್ವಾನಿಸುತ್ತಿರುವರೋ ಅದೇ ರೀತಿಯಾಗಿ ದೇಶದ ಪುನರ್ನಿರ್ಮಾಣದಲ್ಲಿ ಅಧ್ಯಾಪಕರಾಗಬೇಕೆಂದು ಕುಶಾಗ್ರಬುದ್ಧಿಗಳಾದ ಯುವತೀ ಯುವಕರನ್ನು ಆಹ್ವಾನಿಸಬೇಕು.

ನಮ್ಮ ಪ್ರಾಚೀನ ವಿದ್ಯಾ ವಿಧಾನದಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಗುರುಶಿಷ್ಯ ಸಂಬಂಧ ಅದು ಇಂದು ಲುಪ್ತವಾಗಿದೆ. ತಿಂಗಳ ವೇತನಕ್ಕಾಗಿ ಉಪಾಧ್ಯಾಯನು ಪಾಠಹೇಳಿ ಶಾಲೆ ಬಿಟ್ಟಾಕ್ಷಣವೇ ಮನೆಗೆ ಹೋಗುತ್ತಾರೆ ವಿನಃ ತಮ್ಮ ಬಳಿಯಲ್ಲೋದುವ ವಿದ್ಯಾರ್ಥಿಗಳ ಶಾಲಾಭಿವೃದ್ಧಿಯಲ್ಲಿ ಎಳ್ಳಷ್ಟಾದರೂ ಕೃಷಿಮಾಡುವುದಿಲ್ಲವೆಂದು ಹುಡುಗರಿಗೆ ತಿಳಿಯುತ್ತದೆ. ನಿಜ ಹೇಳಬೇಕಾದರೆ ಅಧ್ಯಾಪಕರು ತಮ್ಮ ವಿದ್ಯಾರ್ಥಿಗಳ ದೈಹಿಕ ಮಾನಸಿಕ, ಆಧ್ಯಾತ್ಮಿಕ ಕ್ಷೇಮವನ್ನು ಕುರಿತು ಯೋಚಿಸುವದಿಲ್ಲ. ಪ್ರಾಚೀನ ಆಶ್ರಮಗಳಲ್ಲಿ ಗುರುಶಿಷ್ಯರು ಒಂದೇ ಕುಟುಂಬದಲ್ಲಿದ್ದು ಕಷ್ಟ ಸುಖಗಳನ್ನು ಭಾಗಿಸಿಕೊಳ್ಳುತ್ತಿದ್ದರು, ಗುರುಗಳು ಶಿಷ್ಯರ ಶೀಲಪ್ರವರ್ತನೆಗಳನ್ನು ಗಮನಿಸುತ್ತಿದ್ದರು. ಈ ಆಶ್ರಮಗಳನ್ನು ರಾಜರು ಪೋಷಿಸುತ್ತಿದ್ದರು. ಅಲ್ಲಿಯ ಜೀವನ ನಿರಾಡಂಬರದಿಂದಿದ್ದು ನಿತ್ಯಾವಶ್ಯಕತೆಗಳಲ್ಲಿ ಸ್ವಯಂ ಪೂರ್ಣವಾಗಿದ್ದಿತು. ಆದರೆ ನಮ್ಮ ಈಗಿನ ಪರಿಸ್ಥಿತಿಗಳಲ್ಲಿ ಪಾಶ್ಚಾತ್ಯ ದೇಶಗಳಂತೆ ವಸತಿ ವಿಶ್ವವಿದ್ಯಾಲಯಗಳನ್ನು ನಿರ್ಮಿಸುವದು ಅಸಾಧ್ಯವಾದದ್ದು. ಗಾಂಧೀಜಿಯವರ ಸೂಚನೆಯಂತೆ ಬೇಸಿಕ್ ವಿದ್ಯಾಲಯಗಳಲ್ಲೂ, ಕಾಲೇಜುಗಳಲ್ಲೂ ಆಶ್ರಮ ವಿಧಾನವನ್ನು ಅವಲಂಬಿಸಬಹುದು. ಆದಕಾರಣ ಬೇಸಿಕ್ ವಿದ್ಯಾ ವಿಧಾನಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು. ಆಯಾ ಶಾಲಾ ಕಾಲೇಜುಗಳಿಗೆ ಸಂಬಂಧಿಸಿದ ವಸತಿಗೃಹಗ

ಯನ್ನು ಅನುಲಿಸಲ್ಲಿ ತರಲಿವೆ. ವಾರ್ಧಿಕ್ಯ ವೇತನವನ್ನು ಈಗಾಗಲೇ ಹೆಚ್ಚು ಮಾಡಲಾಗಿದೆ. ಬೆಲ್ಜಿಯಮ್ಮಿನಲ್ಲಿ ವೇತನದ ನೂರರಲ್ಲಿ ೨೩½ ರಷ್ಟು ತೆರಿಗೆ ಮತ್ತು ದಾನಗಳಿಂದ ಸಾಮಾಜಿಕ ಸಹಾಯ ವನ್ನು ನೀಡಲಾಗಿದೆ.

ಅಮೇರಿಕ ಖಂಡದ ಅರ್ಜೆಂಟೈನ, ಉರುಗ್ವೆಮುಂತಾದ ದೇಶಗಳಲ್ಲೂ ಈ ಕಾರ್ಯಕ್ರಮವನ್ನು ಅನುಸರಿಸಲಾಗುತ್ತಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡುಗಳೂ ಈ ದಿಶೆಯಲ್ಲಿ ಮುನ್ನಡೆಯಲಾರಂಭಿಸಿವೆ. ಅಮೇರಿಕದ ಸಂಯುಕ್ತ ಸಂಸ್ಥಾನ ಇವರಲ್ಲಿ ಹೇಳಿದ ದೇಶಗಳಷ್ಟು ಪ್ರಗತಿಯನ್ನು ಸಾಧಿಸಿಲ್ಲ. ಆದರೆ ಈಗೀಗ ಆ ಬಗ್ಗೆ ಹೆಚ್ಚು ಪ್ರಯತ್ನ ಮಾಡಲಾಗುತ್ತಿದೆ. ಸಾಮಾಜಿಕ ವಿಮೆ, ಅಂಗಹೀನರಿಗೆ ದಕ್ಷಿಣೆ, ವೃದ್ಧರಿಗೆ ನಿವೃತ್ತಿವೇತನದ, ಮಕ್ಕಳಿಗೆ ಭತ್ತೆ ಮುಂತಾದವನ್ನು ಒದಗಿಸಲು ೧೭೦ ಕೋಟಿ ಡಾಲರುಗಳನ್ನು ಈಗ ವೆಚ್ಚ ಮಾಡಲಾಗುತ್ತಿದೆ ಇನ್ನೂ ಹೆಚ್ಚು ಹಣವನ್ನು ಸಂಗ್ರಹಿಸಲು ಯೋಜನೆ ಮಾಡಲಾಗಿದೆ. ಇದರ ಪ್ರಕಾರ ಬೇರೆಯ ದೇಶಗಳಲ್ಲಿರುವಂತೆ ಕೂಲಿಯು ನೂರಕ್ಕೆ ೧೫ ರಷ್ಟು ತೆರಿಗೆ ಹಾಕಿ ಎಲ್ಲ ವ್ಯವಸ್ಥೆಯನ್ನು ಮಾಡಲು ಇನ್ನು ೪೦ ವರ್ಷಗಳ ಅವಧಿ ಬೇಕು.

—)0(—

ಳಲ್ಲಿ ಉನ್ನತ ಶೀಲವಂತರೂ, ಆದರ್ಶಪ್ರಾಯರೂ ಆದವರನ್ನು ಪರ್ಯವೇಕ್ಷಕರಾಗಿ ನಿಯುಕ್ತ ಮಾಡಲಾಗುವದು

ವಸತಿ ಗೃಹ ಪರ್ಯವೇಕ್ಷಣವು ವಿಶ್ವ ವಿದ್ಯಾಲಯದ ಒಂದು ಪ್ರಮುಖ ಭಾಗವಾಗಬೇಕು

ವಸತಿ ಗೃಹಜೀವನವು ನಿರಾಡಂಬರ, ಆತ್ಮೋನ್ನತಿ, ಪರಸ್ಪರ ಸಹಕಾರ ವಿರಾಮದ ಸದ್ವಿನಿಯೋಗ ಮೊದಲಾದ ಅಂಶಗಳಿಂದ ಕೂಡಿದ್ದು ಕಾಯಕಷ್ಟಕ್ಕೂ ಸಂಯಮಕ್ಕೂ ಪ್ರೋತ್ಸಾಹಕಾರಣವಾಗಿರಬೇಕು. ಈ ಶರೀರ ಶ್ರಮ ಸಂಯಮಗಳಿಂದ ವಿದ್ಯಾರ್ಥಿಗಳ ಸಹಜ ಪ್ರೇರಣೆ ಗಮನಿಸದೆ ಭಾವೀ ಗೃಹಸ್ಥ ಪೌರಜೀವನಕ್ಕೆ ಅನುಕೂಲಿಸಬೇಕು.

ಪ್ರಾಚೀನ ವಿದ್ಯಾ ವಿಧಾನದಲ್ಲಿ ಎಣಿಸಬೇಕಾದ ಮೂರನೆಯ ಅಂಶವೆಂದರೆ ಜಾತೀಯ ಸಂಸ್ಕೃತಿಯ ರಕ್ಷಣೆಯಾಗಿ ಪರಿಣತಿಯನ್ನು ಹೊಂದುವಿಕೆ ಭಾರತದೇಶದಲ್ಲಿ ಆಂಗ್ಲ ವಿದ್ಯಾ ಪ್ರಚಾರದ ಬಗ್ಗೆ ಗೌರವ ವಿಶ್ವಾಸಗಳು ಮಾಯವಾಗಿವೆ, ಇಂಗ್ಲೀಷ ಭಾಷೆಯಲ್ಲಿ ವಿದ್ಯಾ ಬೋಧನೆ ಮತ್ತು ವಿದ್ಯಾ ಕ್ರಮದಲ್ಲಿ ಪಾಶ್ಚಾತ್ಯ ಭಾವಗಳಿಗೆ ಸಂಸ್ಕೃತಿಗೆ ಪ್ರಾಬಲ್ಯ ಹೆಚ್ಚಿ ರಾಷ್ಟ್ರೀಯ ಭಾವ ಮತ್ತು ಸಾಹಿತ್ಯಗಳಿಗೆ ಆಶ್ರಯವಿಲ್ಲದೆ ಇಂದಿನ ಸ್ಥಿತಿಯು ಏರ್ಪಟ್ಟಿತು, ಬ್ರಿಟಿಷರ ಆಳಿಕೆಯಿಂದ ಭಾರತೀಯ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸವು ನಶಿಸಿತು, ಇಂದು ಸ್ವರಾಜ್ಯಬಂದಿದೆ ಕಾರಣ ಭಾವದಾಸ್ಯವು ತೊಲಗಬೇಕು. ರಾಷ್ಟ್ರೀಯ ಸಂಸ್ಕೃತಿಯ ಪುನರುತ್ಥಾನವು ಭಾರತೀಯ ಸಂಸ್ಥೆಗಳಿಗೆ ಕೆಲವು ಸೂಚನೆಗಳು ಕೊಡಬಯಸುತ್ತೇನೆ,

(ಅ) ವಿದ್ಯಾ ಪ್ರಣಾಳಿಕೆಯಲ್ಲಿ ಭಾರತೀಯ ಭಾವನೆಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಬೇಕು. ಸಾಹಿತ್ಯ ಚರಿತ್ರೆ ತತ್ವ ಶಾಸ್ತ್ರ, ಅರ್ಥಶಾಸ್ತ್ರ ರಾಜಕೀಯ ಶಾಸ್ತ್ರ, ವಾಣಿಜ್ಯ, ಕಲೆ ಮೊದಲಾದವುಗಳು ಭಾರತೀಯ ದೃಷ್ಟಿಯಲ್ಲಿ ಬೋಧಿಸಲ್ಪಡಬೇಕು. ಪಾಶ್ಚಾತ್ಯ ಭಾವನೆಗಳನ್ನು ತಾರತಮ್ಯ ಪರೀಕ್ಷೆಗಾಗಿ ಮಾತ್ರವೇ ವಿದ್ಯಾರ್ಥಿಗಳು ತಿಳಿದುಕೊಳ್ಳಬೇಕೇ ವಿನಃ ವಿದ್ಯಾ ಪ್ರಣಾಳಿಕೆ ಭಾರತೀಯ ಭಾವ ಸಂಸ್ಕೃತಿಗಳ ಮೇಲೆಯೇ ಆಧಾರ ಪಡಬೇಕು.

(ಆ) ಅಂತಹ ಪರಿವರ್ತನೆಗೆ ಗುಣವಾಗಿ ಪಠ್ಯ ಪುಸ್ತಕಗಳು ಹೊಸ ರೀತಿಯಲ್ಲಿ ರಚಿಸಲ್ಪಡಬೇಕು.

(ಇ) ವಿದ್ಯಾಭ್ಯಾಸವು ಪ್ರಾಂತೀಯ ಭಾಷೆಯಲ್ಲೇ ಜರುಗಬೇಕು. ಇಂಗ್ಲೀಷು ಭಾಷಾಮೂಲ ವಿದ್ಯಾಭ್ಯಾಸದಿಂದ ಪ್ರಾಂತೀಯ ಭಾಷೆಗಳ ಬೆಳವಣಿಗೆಯು ನಿಂತು ಹೋಗಿ ವಿದ್ಯಾರ್ಥಿಗಳಲ್ಲಿ ಪಾಶ್ಚಾತ್ಯ ಭಾವಬೀಜಗಳು ನಾಟಿಕೊಳ್ಳುತ್ತವೆ. ಆದರೆ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವಿದ್ಯೆಯನ್ನು ಕಲಿಯುವವರಿಗೆ ಇಂಗ್ಲೀಷ್ ನಿರ್ಬಂಧ ಮಾಡಬಹುದು.

(ಈ) ವಿದ್ಯಾರ್ಥಿಗಳು ಭಾರತೀಯರು ರಚಿಸಿದ್ದ ಪುಸ್ತಕಗಳೊಡನೆ ಮಹಾಭಾರತ ಚಾಣಕ್ಯರ ಅರ್ಥಶಾಸ್ತ್ರ ಮೊದಲಾದ ಪ್ರಾಚೀನ ಗ್ರಂಥಗಳನ್ನು ರಚಿಸಬೇಕು.

(ಉ) ವಿಶ್ವವಿದ್ಯಾಲಯಗಳು ಪ್ರಾಚೀನ ಭಾರತ ಕಲೆಗಳನ್ನು ಆದರಿಸಿ ವಿದ್ಯಾರ್ಥಿಗಳು ಸಂಗೀತ ಚಿತ್ರಲೇಖನ, ಶಿಲ್ಪ, ವಾಸ್ತುಕಲೆ, ನೃತ್ಯ ಮೊದಲಾದವುಗಳನ್ನು ಅಭ್ಯಸಿಸಿ ಆನಂದಪಡುವಂತೆ ಮಾಡಬೇಕು

(ಊ) ವಿಶ್ವವಿದ್ಯಾಲಯಗಳಲ್ಲಿ ಮತ್ತು ಕಾಲೇಜುಗಳಲ್ಲಿ ಜರುಗುವ ಸ್ನಾತಕೋತ್ಸವ ಮೊದಲಾದ ಸಮಾವೇಶಗಳಲ್ಲಿ ಭಾರತೀಯ ಸಂಸ್ಕೃತಿಸಂಪ್ರದಾಯಗಳನ್ನು ಪ್ರತಿ ಬಿಂಬಿಸಬೇಕು. ಸ್ನಾತಕ ಸಭೆಗಳಲ್ಲಿ ಪಟ್ಟಭದ್ರರು ಧರಿಸು ಗೌನುಗಳು ಟೋಪಿಗಳು ಮುಂತಾದವು ಭಾರತೀಯ ದೃಷ್ಟಿಯಲ್ಲಿ ವಿಕೃತವಾಗಿ ಕಾಣುತ್ತವೆ ಅದಕ್ಕಿಂತ ಅಂದವಾದ ಶಾಲು ಮತ್ತು ಶಿರೋಭೂಷಣಗಳನ್ನು ಆಚಾರವಾಗಿಡುವದು ಒಳ್ಳೆಯದು.

ಇವು ನಾವು ಆಲೋಚಿಸತಕ್ಕ ಅಂಶಗಳು ಇದಕ್ಕಿಂತಲೂ ಹೆಚ್ಚಾಗಿ ಚರ್ಚಿಸಲು ಇದು ತರುಣವಲ್ಲ. ಕೊನೆಗೆ ಭಾರತ ಪ್ರಭುತ್ವಕ್ಕೆ ನನ್ನ ವಿನಂತಿ ಇಷ್ಟೇ. ಭಾರತ ರಾಷ್ಟ್ರೀಯ ಸಂಸ್ಕೃತಿ ಸಾಂಪ್ರದಾಯಗಳಿಗೆ ಅನುಕೂಲವಾಗಿ ವಿದ್ಯಾಸಮಸ್ಯೆಯನ್ನು ಪರೀಶೀಲಿಸಬೇಕು. ಭಾರತದಲ್ಲಿ ಸ್ವದೇಶೀಪದ್ಧತಿಗಳಲ್ಲಿ ವಿದ್ಯಾ ವಿಧಾನವೇರ್ಪಡಾಗುವುದು ಅತ್ಯವಸರವು ಭಾರತ ದೇಶದ ಸ್ವಾತಂತ್ರ್ಯವು ವಿಲಾಸಕ್ಕಾಗಿ ಒದಗಲಿಲ್ಲ. ನೂತನ ಪ್ರಪಂಚದ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾಗಿದೆ. ಆದುದರಿಂದಲೇ ನಮ್ಮ ದೇಶವು ಕೇವಲ ಅಂಧಶ್ರದ್ಧೆಯಿಂದ ಪಾಶ್ಚಾತ್ಯ ದೇಶಗಳನ್ನು ಅನುಕರಿಸಬಾರದು ಗಾಂಧೀಜಿಯವರ ಬೋಧನೆಗಳನ್ನು ಉದಾತ್ತ ಉಪನಿಷತ್ತುಗಳ ಆದೇಶಗಳನ್ನು ಅನುಕರಿಸಿ ವಿಶ್ವದ ಪುನರ್ವ್ಯವಸ್ಥೆಯಲ್ಲಿ ಭಾರತವು ಮಾರ್ಗದರ್ಶಿಯಾಗಬೇಕು.

— ಎಚ್. ಪಿ. ಮೋಡಿಯವರು ಸಂಯುಕ್ತ ಪ್ರಾಂತದ ಗವರ್ನರಾಗಿ ನೇಮಿಸಲ್ಪಟ್ಟಿದ್ದಾರೆ. ಇವರು ಸ್ವಲ್ಪ ಸಮಯ ಬೊಂಬಾಯಿ ಗವರ್ನರಾಗಿ ಬದಲಿ ನೋಡಿದ್ದರು.

ದಶಮಣಿ

— ಮದರಾಸು ಸರಕಾರದ ಜಮೀನ್ದಾರಿ ನಿರ್ಮೂಲನ ಶಾಸನಕ್ಕೆ ಹಿಂದುಸ್ಥಾನದ ಗವರ್ನರ್ ಜನರಲವರ ಅಂಗೀಕಾರ ದೊರೆತಿದೆ. ಹಿಂದುಸ್ಥಾನದಲ್ಲಿ ಇಂತಹ ಶಾಸನಕ್ಕೆ ಗವರ್ನರ್ ಜನರಲವರ ಅಂಗೀಕಾರ ದೊರೆತುದು ಇದು ಮೊದಲು ಇದರಿಂದ ೧೪ ಮಿಲಿಯ ಎಕ್ರೆ ವಿಸ್ತೀರ್ಣದಿಂದ ಕೂಡಿದ ಪ್ರಾಂತದ ೨,೮೦೦ ಜಮೀನ್ದಾರಿ ಆಸ್ತಿಗಳೂ ೩,೦೦೦ ಇನಾಮ್ ಆಸ್ತಿಗಳೂ ಸರಕಾರದ ಸ್ವಾಧೀನಕ್ಕೆ ಬರುತ್ತವೆ ಯಜಮಾನರಿಗೆ ಸುಮಾರು ೧೭॥ ಕೋಟಿ ರೂಪಾಯಿ ಪರಿಹಾರ ದ್ರವ್ಯ ಕೊಡಲಾಗುವುದು.

— ಬೊಂಬಾಯಿ ನ್ಯಾಯ ವಿಧಾಯಕ ಸಭೆಯಲ್ಲಿ ಜಾತಿ ಬಹಿಷ್ಕಾರ ನಿರೋಧ ಮಸೂದೆಯು ಅಂಗೀಕರಿಸಲಾಗಿದೆ. ಹಿಂದುಸ್ಥಾನದಲ್ಲಿ ಇದೊಂದು ಪ್ರಗತಿಶೀಲ ಶಾಸನವಾಗಿದೆ

— ಬೊಂಬಾಯಿ ಪ್ರಾಂತದಲ್ಲಿ ಸಾಗುವಳಿ ಭೂಮಿಯು ಒಂದು ಎಕ್ರೆಯಷ್ಟಾದರೂ ಕೃಷಿ ಇಲ್ಲದೆ ಇರಕೂಡದೆಂದು ಅಲ್ಲಿಯ ಸರಕಾರವು ನಿಶ್ಚಯಿಸಿ ತಕ್ಕ ಏರ್ಪಾಡು ಕೈಗೊಳ್ಳಲಿದೆ. ಈ ಕುರಿತು ವಿಚಾರಿಸಿ ವರದಿಕೊಡಲು ಎಲ್ಲಾ ಕಲೆಕ್ಟರರಿಗೂ ಅಪ್ಪಣೆಕೊಡಲಾಗಿದೆ,

— ೧೯೫೦ ರಿಂದ ಕರ್ನಾಟಕ ವಿಶ್ವವಿದ್ಯಾಲಯವನ್ನು ಪ್ರಾರಂಭಿಸುವ ಮಸೂದೆಯನ್ನು ಬೊಂಬಾಯಿ ಶಾಸನ ಸಭೆಯು ಅಂಗೀಕರಿಸಿದೆ. ಇದರಿಂದ ಕರ್ನಾಟಕ ಜನತೆಯು ದೀರ್ಘಕಾಲದ ಬೇಡಿಕೆಯು ಪೂರೈಸುತ್ತದೆನ್ನಬಹುದು, ಬೆಳಗಾವಿ, ವಿಜಾಪುರ, ಕಾರವಾರ, ಧಾರವಾಡ ಜಿಲ್ಲೆಗಳಿಗಾಗಿ ಈ ವಿಶ್ವ ವಿದ್ಯಾಲಯವಿರುವುದು,

— ಬಾಲಿಕೆಯ ವಿವಾಹದ ಕನಿಷ್ಠ ವಯಸ್ಸು ೧೫ ಇರಬೇಕು ಮತ್ತು ಬಾಲಕರ ವಯಸ್ಸು ೧೮ ಇರಬೇಕು ಎಂಬ ಮಸೂದೆ ಹಿಂದೂ ಸಿಕ್ ಜೈನ ಮುಂತಾದ ಅಂತರ್ಜಾತೀಯ ವಿವಾಹಗಳಿಗೆ ಮನ್ನಣೆಯಿರಬೇಕೆಂಬ ಮಸೂದೆ, ಹಾಗೂ ೧೮ ವರ್ಷದ ಒಳಗಿನ ಬಾಲಿಕೆಯರನ್ನು ಅಪಹರಿಸುವುದು ಅಪರಾಧವಾಗುವುದು ಮತ್ತು ವಿವಾಹ ಬಾಹಿರ ಸಂಬಂಧ ಸಮ್ಮತಿ ಅವಧಿ ೧೬ಕ್ಕೇರಬೇಕೆಂಬ ಮಸೂದೆ ಎಂಬ ಮೂರು ಮಸೂದೆಗಳನ್ನು ಕೇಂದ್ರ ಸರಕಾರವು ಅಂಗೀಕರಿಸಿದೆ.

— ಕೇಂದ್ರ ಸರಕಾರದ ನೌಕರಿಗಳ ಬಗ್ಗೆ ಮದರಾಸು ಸರಕಾರದ ಎಸ್ ಎಸ್ ಎಲ್ ಸಿ ಪರೀಕ್ಷೆಯನ್ನು ಮನ್ನಣೆ ಹೊಂದಿದ ವಿಶ್ವ ವಿದ್ಯಾಲಯದ ಮ್ಯಾಟ್ರಿಕ್ ಪರೀಕ್ಷೆಗೆ ಸಮಾನವಾಗಿ ಗಣಿಸಲಾಗುವುದೆಂದು ಹಿಂದುಸ್ಥಾನ ಸರಕಾರವು ಪ್ರಕಟಿಸಿದೆ

— ಗಾಂಧೀ ಸ್ಮಾರಕ ನಿಧಿಗೆ ಈ ವರೆಗೆ ಹತ್ತು ಕೋಟಿ ರೂಪಾಯಿಗಳಿಗಿಂತ ಹೆಚ್ಚು ಸಂಗ್ರಹವಾಗಿದೆಯೆಂದು ಡಾ॥ ರಾಜೇಂದ್ರ ಪ್ರಸಾದವರು ಹೇಳಿದ್ದಾರೆ.

ರಾಷ್ಟ್ರಕೂಟ ಸಂಬಂಧದಿಂದ ಭಾರತದ ವೈಶಿಷ್ಟ್ಯ ಹೆಚ್ಚಿತು

ಅರಸರು ಕೇವಲ ರಾಷ್ಟ್ರಕೂಟ ಸಂಬಂಧದ ಕುರುಹಾಗಿ ಉಳಿಯುವರು

ರಾಷ್ಟ್ರಕೂಟ ಸಂಬಂಧ ಕುರಿತು ಸರದಾರ ಪಟೇಲರ ಹೇಳಿಕೆ

)0(——

"ರಾಷ್ಟ್ರಕೂಟ ವಿಷಯದ ಬಗೆಗಿನ ಲಂಡನ್ ನಿರ್ಣಯವು ಧೈರ್ಯ ಹಾಗೂ ಮಹತ್ವದ್ದಾಗಿದೆ. ಕೇವಲ ಪರಸ್ಪರ ಸೌಹಾರ್ದ ಮತ್ತು ಸ್ನೇಹದಿಂದಲೇ ನಾವು ನಿರ್ಧರಿಸಿದ ರಾಷ್ಟ್ರಕೂಟ ಸಂಬಂಧವು ಅಸ್ತಿತ್ವದಲ್ಲಿ ಬರುವುದು. ಆ ಸಂಬಂಧದ ಬಗ್ಗೆ ನಾವೆಲ್ಲರೂ ಕಾರ್ಯ ಮಾಡಬೇಕೆಂದು ಆಶಿಸುವೆ" ಎಂದು ಸರದಾರ ವಲ್ಲಭಭಾಯಿ ಪಟೇಲರು ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ಹೇಳಿದರು.

●

ಅವರಿನ್ನೂ ಹೀಗೆ ಹೇಳಿದರು:- ತನ್ನ ಪ್ರಜಾಪ್ರಭುತ್ವ ಸ್ಥಾನಮಾನಗಳಿಗೆ ಧಕ್ಕೆ ಬಾರದಂತೆ, ರಾಷ್ಟ್ರಕೂಟದಲ್ಲಿ ಭಾರತಕ್ಕೆ ಸಮಾನಸ್ಥಾನವನ್ನು ಗಳಿಸುವಂಥ ಒಂದು ಮಾರ್ಗವನ್ನು ಶೋಧಿಸಲು ಭಾರತದ ಮುಖ್ಯಮಂತ್ರಿಗಳನ್ನು ತನ್ನ ಸ್ನೇಹ ಸೌಹಾರ್ದ ಹಾಗೂ ಕೌಶಲ್ಯದಿಂದ ಇತ್ತೀಚಿನ ಮುಖ್ಯಮಂತ್ರಿಗಳ ಪರಿಷತ್ತಿನ ಕಾರ್ಯಕಲಾಪಗಳಲ್ಲಿ ವ್ಯಕ್ತಪಡಿಸಿದರು.

ಇನ್ನು ಮುಂದೆ ರಾಷ್ಟ್ರಕೂಟ ಎಂಬ ಶಬ್ದವೇ ಬಳಕೆಯಾಗುವುದು. ಅದರ ಬದಲು, ರಾಷ್ಟ್ರಗಳ ಕೂಟವೆಂದು ಇನ್ನು ಮುಂದೆ ಕರೆಯಲಾಗುವುದು. ಬದಲಾಗುತ್ತಿರುವ ಅದರ ರಚನೆಯಿಂದ ಆ ಶಬ್ದದ ಬದಲಾವಣೆಯು ಅವಶ್ಯಕ.

ರಾಷ್ಟ್ರಕೂಟ ಸಂಬಂಧದಿಂದ ಹಾನಿಯಿಲ್ಲ

ಭಾರತದ ಸಾರ್ವಭೌಮ ಸ್ವತಂತ್ರ ಪ್ರಜಾಪ್ರಭುತ್ವದ ಸ್ಥಾನಮಾನಗಳಿಗೆ ಯಾವವಿಧದಿಂದಲೂ ಧಕ್ಕೆ ತಟ್ಟುವುದಿಲ್ಲ. ಏಕೆಂದರೆ ರಾಜರಿಗೆ ನಿಷ್ಠೆಯಿಂದ ಇರಬೇಕೆಂಬ ಪ್ರಶ್ನೆಯೇ ಇಲ್ಲ. ಇತರ ಸದಸ್ಯ ರಾಷ್ಟ್ರಗಳಂತೆ ಅರಸರು ನಮ್ಮ ಸಂಬಂಧದ ಕುರುಹಾಗಿ ಉಳಿಯುವರು. ಭಾರತವು ರಾಷ್ಟ್ರವಾಗುವದರಲ್ಲಿ ಸರ್ವ ರಾಷ್ಟ್ರಕೂಟವಾಗುವುದಾದರೂ ಯಾವ ಸಂದೇಹವೂ ಇಲ್ಲ.

ಅಂತರಿಕ ಹಾಗೂ ಬಹಿರಂಗಗಳಲ್ಲಿ ಭಾರತದ ಘಟನೆಯು ಪ್ರಜಾಪ್ರಭುತ್ವ ಘಟನೆಯಾಗಿಯೇ ಉಳಿಯುವುದು. ಭಾರತವು ರಾಷ್ಟ್ರಕೂಟದೊಡನೆ ಮಾಡಿಕೊಂಡ ಒಪ್ಪಂದವು ಪಂ ನೆಹರೂರ ವೈಯುಕ್ತಿಕ ವಿಜಯವೆಂದು ಹೇಳಬಹುದು.

ಅರಸರ ಅಧಿಕಾರ

ನಮ್ಮ ಮೇಲೆ ಅರಸರ ಅಧಿಕಾರವೇನೂ ಇರುವುದಿಲ್ಲ. ಆದರೆ ರಾಷ್ಟ್ರಕೂಟ ರಾಷ್ಟ್ರಗಳ ಸಂಬಂಧದ ಕುರುಹಾಗಿ ಮಾತ್ರ ಅರಸರು ಉಳಿಯುವರು.

ಪ್ರಶ್ನೆ:- ಕುರುಹಿನ ಅರ್ಥವೇನು?

ಸರದಾರ ಪಟೇಲ್:—ವೆಬ್‌ಸ್ಟರ್ ಡಿಕ್ಷನರಿ ತೆಗೆದು ನೋಡಿರಿ (ನಗೆ) ಈ ಒಪ್ಪಂದದನ್ವಯ ಒಂದು ಸದಸ್ಯ ರಾಷ್ಟ್ರವು ತನಗೆ ಇಚ್ಛೆಬಂದಾಗ ರಾಷ್ಟ್ರಕೂಟದಿಂದ ಹೊರಗೆ ಬೀಳಬಹುದು.

ಈ ಒಪ್ಪಂದಕ್ಕೆ ಘಟನಾ ಸಮಿತಿಯು ತನ್ನ ಒಪ್ಪಿಗೆಯನ್ನು ಕೊಡಬೇಕಾಗುವುದು. ಮುಖ್ಯ ಮಂತ್ರಿಗಳು ಆಗಮಿಸಿದ ಕೂಡಲೆ ತಮ್ಮ ವರದಿಯನ್ನು ಮಂತ್ರಿಮಂಡಲಕ್ಕೆ ತಿಳಿಸುವರು.

ಒಪ್ಪಂದವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಅ. ಭಾ. ಕಾಂಗ್ರೆಸ್ ಸಮಿತಿಯೆದುರು ಇಡಲಾಗುವುದು.

ಪ್ರಶ್ನೆ:—ಕಮ್ಯೂನಿಸ್ಟರು ಮತ್ತು ಸೋಸಿಯಾಲಿಸ್ಟರ ಒಪ್ಪಂದವನ್ನು ವಿರೋಧಿಸಿದರೆ, ಅವರೊಡನೆ ಹೇಗೆ ವರ್ತಿಸುವಿರಿ?

ಸರದಾರ ಪಟೇಲರು:-ಅವರಿಗೆ ಸಾಮಾನ್ಯಜ್ಞಾನ ಉಂಟೆಂದು ನಾನು ತಿಳಿಯುವೆನು.

ಪ್ರಶ್ನೆ:- -ಹೀಗೆ ಸ್ಥಾನವು ರಾಷ್ಟ್ರಕೂಟದಲ್ಲಿ ಉಳಿಯುವದರಿಂದ ರಾಷ್ಟ್ರಕೂಟದ ಹೊರಗಿರುವ ಬೇರೆ ರಾಷ್ಟ್ರದೊಡನೆ ಸೈನಿಕ ಒಪ್ಪಂದ ಮಾಡಿಕೊಳ್ಳಲು ಆತಂಕ ಉಂಟಾಗುವದೋ?

ಸರದಾರ ಪಟೇಲರು:--ಆತಂಕ, ನಿರ್ಬಂಧನಾವುದೂ ಇಲ್ಲ. ಹಿಂದುಸ್ಥಾನವು ತನಗೆ ಇಚ್ಛೆ ಬಂದುದನ್ನು ಮಾಡಲು ಸ್ವತಂತ್ರವಿದೆ. ಆದರೆ ರಾಷ್ಟ್ರಕೂಟದ ಇತರ ರಾಷ್ಟ್ರಗಳು ಭಾರತಕ್ಕೆ ಬೆಂಬಲಕೊಡಬೇಕಾಗುತ್ತದೆ. ವ್ಯಾಪಾರಿ ಸಂಬಂಧದ ಪ್ರಶ್ನೆ ಒಪ್ಪಂದದಲ್ಲಿ ಬಂದಿಲ್ಲ. ಅದನ್ನು ಪ್ರತ್ಯೇಕವಾಗಿ ವಿಚಾರಿಸಲಾಗುವುದು.

ಪ್ರಶ್ನೆ:—ರಾಷ್ಟ್ರಕೂಟ ಸಂಬಂಧದಿಂದ ಉದ್ಭೂತವಾಗುವ ಕಟ್ಟುಗಳೇನಾದರೂ ಇವೆಯೆ?

ಸರದಾರ ಪಟೇಲ್;—ಸ್ನೇಹ, ಸಂಬಂಧ, ಲಾಭಗಳ ಕಟ್ಟುಗಳಿವೆ.

ಹಿಂದುಸ್ಥಾನವು ಯಾವಾಗಲೂ ಅನಾಕ್ರಮಣ ಹಾಗೂ ಶಾಂತಿಯ ಪಕ್ಷಪಾತಿಯಾಗಿ ಉಳಿಯುವುದು.

ಪ್ರಶ್ನೆ:—ಯಾವುದಾದರೊಂದು ರಾಷ್ಟ್ರವು ಫ್ಯಾಸಿಸ್ಟ ಮನೋವೃತ್ತಿಗಿಳಿದರೆ, ರಾಷ್ಟ್ರಕೂಟದಲ್ಲಿ ಅದಕ್ಕೆ ಸ್ಥಾನ ಸಿಗುವುದೋ?

ಸರದಾರ ಪಟೇಲ್:- ಯಾವ ರಾಷ್ಟ್ರವೂ ಫ್ಯಾಸಿಸ್ಟ್ ಮನೋವೃತ್ತಿಗಿಳಿಯುವುದೆಂದು ನಾನು ನಂಬಲಾರೆ.

ಪ್ರಶ್ನೆ:— ಈ ಒಪ್ಪಂದದಿಂದ ಬೇರೆ ವಸಾಹತುಗಳಲ್ಲಿರುವ ಭಾರತೀಯರ ಸ್ಥಾನವು ಉತ್ತಮಗೊಳ್ಳುವುದೆ?

ಸರದಾರ ಪಟೇಲ್: -ಅವರ ಸ್ಥಾನವು ಹಾಳಾಗದಂತೆ ಅದು ತಡೆಯುವುದು. ಹಿಂದುಸ್ಥಾನವು ಸಾರ್ವಭೌಮ ಸ್ವತಂತ್ರ ರಾಷ್ಟ್ರವಾದಮೇಲೆ ರಾಷ್ಟ್ರಕೂಟದ ಪೌರಹಕ್ಕಿನ ಪ್ರಶ್ನೆಯ ಬಗೆಗೆ ಶಾಸನವಾಗಿ ಅದನ್ನು ಎಲ್ಲ ರಾಷ್ಟ್ರಗಳೂ ಪಾಸು ಮಾಡಬೇಕು.

ಸರದಾರ ವಲ್ಲಭಭಾಯಿ ಪಟೇಲರ ಹೇಳಿಕೆಯು ಹೀಗಿದೆ--

ರಾಷ್ಟ್ರಕೂಟದಲ್ಲಿ ಭಾರತದ ಭವಿತವ್ಯದ ಬಗ್ಗೆ ಕಳೆದ ಒಂದು ವಾರದಿಂದ ಲಂಡನ್ನಿನಲ್ಲಿ ನಡೆಯುತ್ತಿರುವ ಚರ್ಚೆಗಳ ಬಗ್ಗೆ ಇಂದು ಮುಂಜಾನೆ ಪತ್ರಿಕೆಗಳಲ್ಲಿ ಪ್ರಸಿದ್ಧವಾದ ಪತ್ರಿಕಾ ಪ್ರಕಟನೆಯನ್ನು ನೀವೆಲ್ಲರೂ ಓದಿರುವಿರೆಂದು ನನಗೆ ಭರವಸೆಯಿದೆ.

ರಾಷ್ಟ್ರಕೂಟದ ಇತರ ರಾಷ್ಟ್ರಗಳಂತೆ ನಾವೂ ಅರಸರಿಗೆ ವಿಧೇಯತೆಯನ್ನು ತೋರಿಸಿದ್ದೇವೆ.

ನಾವು ಇದನ್ನು ಒಪ್ಪಿಕೊಂಡಾಗ ಅದು ಕೆಲ ಸಮಯದವರೆಗೆ ಮಾತ್ರ ಇರುವುದೆಂದು ನಾವು ನಿಶ್ಚಳವಡಿಸಿದ್ದೇವೆ. ಭಾರತದ ಮುಂದಿನ ಸ್ಥಾನಮಾನಗಳ ಬಗೆಗೆ ಘಟನಾ ಸಮಿತಿಯೇ ನಿರ್ಧರಿಸುವುದು.

——

ಐರ್ಲಂಡದಲ್ಲಿ ನೆಹರೂ

ಅಲ್ಲಿ ನೆಹರೂರವರಿಗೆ ಅದ್ಭುತವಾದ ಸ್ವಾಗತವೀಯಲಾಯಿತು. ಅಲ್ಲಿ ಪ್ರಜಾತಂತ್ರದ ಅಧ್ಯಕ್ಷರು ಮುಖ್ಯಮಂತ್ರಿಗಳು ಅವರನ್ನು ಸ್ವಾಗತಿಸಿ ಔತಣವೇರ್ಪಡಿಸಿದ್ದರು. ನೆಹರೂರವರು ಆಕಾಶವಾಣಿಯ ಮೂಲಕ ಐರ್ಲಂಡದ ಜನರಿಗೆ ಸದ್ಬೋಧಕರ ಸಂದೇಶವಿತ್ತರು.

—ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವು ಮೇ ತಿಂಗಳಲ್ಲಿ ಡೆಹರಾಡೂನದಲ್ಲಿ ನಡೆಯಲಿದೆ.

ಮದ್ಯೋಲ್ಲಾಸ

—o—

ಗಾಂಧೀಯುಗದಲ್ಲಿ ಕುಡಿಯುವುದು ನಮ್ಮಲ್ಲಿ ನಿಷಿದ್ಧವಾಗಿದೆಯಲ್ಲದೆ ಮಿಕ್ಕ ಯುಗಗಳಲ್ಲಿ "ಯಂಡ ಯೆತ್ತಿ" ಒಂದೇ ಯೋಗ್ಯತೆಯುಳ್ಳ ಸುಖ ಸಾಧನೆಗಳೆಂದು ತಿಳಿಯಲ್ಪಡುತ್ತಿದ್ದವು. ಹೆಂಡಂದಿರಾದರೂ ಅದೇ ತಮಗೆ ಗೌರವವೆಂದು ಆ ಸ್ಥಾನವನ್ನೇ ಬಹು ಪ್ರೀತಿಯಿಂದ, ಗರ್ವದಿಂದ ಅಲಂಕರಿಸುತ್ತಿದ್ದರು. ತಾವು ಮಾದಕರೆಂಬುದು ಅವರ ನೀಚೋಹಂಬುದ್ಧಿಗೆ ತಣಿವನ್ನುಂಟು ಮಾಡುತ್ತಿತ್ತು.

ಹೊಸಹುರುಪಿನ ಹುಡುಕುತನದ ಅಮೇರಿಕದ ನಾಗರಿಕತೆ ಭಾರತೀಯರು ನಡೆಸುತ್ತಬಂದು ಎಲ್ಲ ಸಾಮಾಜಿಕ ಪ್ರಯೋಗಗಳನ್ನು ನಡೆಸಿ ನಷ್ಟಹೊಂದಿ ನಾಗರೀಕತೆಯಲ್ಲಿ ನಮ್ಮ ಮಟ್ಟದ ಅನುಭವ ಗಾಂಧೀಯ್ವವನ್ನು ಪಡೆಯಲು ಮೊದಲು ಹೆಜ್ಜೆಯಿಡತೊಡಗಿದ್ದಾರೆ, ಕುಡುಕತನ ಅಲ್ಲಿ ಪ್ರಾಚೀನ ಭಾರತದಲ್ಲಿದ್ದಂತೆ ಒಂದು ವಿಲಾಸ ಹೆಂಗಸರು ಸಿಗರೇಟುಗಳನ್ನು ಸೇದುವುದು ಹೇಗೆ ಅಲ್ಲಿ ಸಾಮಾನ್ಯವೋ ಕಾಲೇಜು ಹುಡುಗಿಯರು ಮದ್ಯ ಸೇವಿಸುವುದು ಹಾಗೇ ಸಾಮಾನ್ಯವಾಗಿ ಬಿಟ್ಟಿದೆ.

೩೩೭ ಕಾಲೇಜು ಹುಡುಗಿಯರನ್ನು ಅಭ್ಯಸಿಸಲಾಯಿತು. ಅನೇನಂದು ಸಹವಿದ್ಯಾಭ್ಯಾಸ ಕೇಂದ್ರ, ಅಲ್ಲಿ ಹೆಂಗಸರನ್ನು ಐದು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಕುಡಿಯದವರು, ಆಗಾಗ ಕುಡಿಯುವವರು, ಪರೀಕ್ಷೆಗೆ ೩ ವಾರದ ಹಿಂದಿನಿಂದ ಕುಡಿಯದವರು, ವಿರಳವಾಗಿ ಕುಡಿಯುವವರು ಮತ್ತು ಒಮ್ಮೆ ಕುಡಿದವರು ಎಂದು. ಪರೀಕ್ಷೆಯಲ್ಲಿ ಮೂರನೆಯ ಎರಡಂಶದಷ್ಟು ಹೆಂಗಸರು ಖಾಯಂ ಕುಡಿಯುವವರೆಂದು ತಿಳಿದು ಬಂದಿತು. ವಿರಳವಾಗಿ ಕುಡಿಯುವವರು ತಮ್ಮ ೧೯ ನೆಯ ವರ್ಷ ವಯಸ್ಸಿನಿಂದ ಕುಡಿಯಲಾರಂಭಿಸಿದವರು. ಸದಾಮದ್ಯಪಾಯಿಗಳು ೧೭ ನೆಯ ವರ್ಷದಿಂದ ಸ್ವಲ್ಪ ಕುಡಿಯುವ ಮತ್ತು ಏನೂ ಕುಡಿಯದ ಹುಡುಗಿಯರು ಚರ್ಚೆಗೆ ಸರಿಯಾಗಿ ಹೋಗುತ್ತಿದ್ದರು ಕುಡಿಯುವವರಲ್ಲಿ ಬಹಳ ಜನರು ಮನೆಯವರಿಗೆ ಗೊತ್ತಾಗುವಂತೆ ಕುಡಿಯುತ್ತಿದ್ದರು. ಯಾವಾಗಲೂ ಕುಡಿಯುವವರಿಗೆ ಕುಡಿಯಲು ಕ್ರಮದಂತೆ ನಿರ್ಣೀತ ದಿನಗಳಿದ್ದವು. ಈ ಮಧ್ಯಮ ವರ್ಗದ ಸ್ತ್ರೀಯರು ಕುಡಿಕತನದಿಂದ ತಮ್ಮ ವರ್ಗದ ಜೀವನಮಟ್ಟವನ್ನು ಬದಲಾಯಿಸಿದ್ದಾರೆ. ಆದರೆ ಈ ಬದಲಾವಣೆ ಕೆಳಗೋ ಮೇಲೋ ಎಂಬುದನ್ನು ವಾಚಕರೇ ಊಹಿಸಿಕೊಳ್ಳಬಹುದು.

ಮನೋಜ ಸಂಧಿವಾತ

"ಕ್ಲೀಬೇ ಕೌಸ್ಯಂ ಮದ್ಯಪೇ ತತ್ವಚಿಂತಾ" ಎಂಬ ಶ್ಲೋಕಪಾದ ಹೇಳುವಂತೆ ಮದ್ಯಪಾಯಿಗಳ ಬುದ್ಧಿ ನಾಗರೀಕವಾಗಿ ಉಳಿಯುವುದು ಸಾಧ್ಯವೇ? ಇದರಿಂದಲೇ ಅಮೇರಿಕದಲ್ಲಿ ಅವರಿಂದ ಪೀಡಿತರಾದ ಭ್ರಮಿಷ್ಟರ ಸಂಖ್ಯೆ ಕರುಣಾಜನಕವಾಗಿ ಬೆಳೆಯುತ್ತಿದೆ. ಅವರಲ್ಲಿ ಮಾನಸಿಕ ವೇದನೆಯ ದೆಸೆಯಿಂದ ದೈಹಿಕ ವೇದನೆಗೆ ತುತ್ತಾಗುವವರೂ ಇದ್ದಾರೆಂದು ಮನಃಶಾಸ್ತ್ರಕಾರರು ಕಂಡಿದ್ದಾರೆ. ಅದಕ್ಕೆ Psychogenic Rheumatism—ಮನೋಜ ಸಂಧಿವಾತ ಎಂದು ಹೆಸರು. ಇದರಲ್ಲಿ ನೋವಿನ ಕಾರಣ ಮಾನಸಿಕ, ಆದರೆ ನೋವು ಮಾತ್ರ ದೈಹಿಕ.

ರೋಗಿಯ Mood ಸಂಚಾರಿ ಭಾವ ಬದಲಾಗದಂತೆ ಈ ನೋವು ಬದಲಾಗತ್ತದೆ. ಆಯಾಸ ಅವನಲ್ಲಿ ಅಶಕ್ತಿಯನ್ನು ಉಂಟುಮಾಡುತ್ತದೆ. ನೋವಲ್ಲದೆ ಬಿಗಿತ, ಅಶಕ್ತಿ, ಸಂವೇದನಾಶೂನ್ಯತೆ, ಸಳೆತಗಳು ಉದಯಿಸುವುದು ಮನೋಜಸಂಧಿವಾತದ ಚಿನ್ಹವೆನಿಸುತ್ತದೆ. ಮೈ ತುಂಬ ಗುದ್ದಿಬಿಟ್ಟಹಾಗಿದೆ ಎನ್ನುತ್ತಾರೆ ರೋಗಿಗಳು ಮಾನಸಿಕ ಕೆಲಸ ಮಾಡುತ್ತಿದ್ದರೇನೋ ಅದು ಕಡಿಮೆಯಾಗುವುದು. ಆದರೆ ಕಡೆಗದು ಮತ್ತೆ ಸಮಯಸಾಧಿಸಿ ತನ್ನ ಕೈಚೋರಿಸಿಯೇ ಬಿಡುವುದು.

ಮದ್ಯಮದಂತೆ 'ಅನ್ನಮದ ಅರ್ಥಮದ ಅಖಿಲ ವೈಭವದ ಮದ, ಮುನ್ನ ಪ್ರಾಯದ ರೂಪಮದವು" ಎಂಬಂತೆ ಅಷ್ಟಮದಗಳಲ್ಲಿ ಒಂದು ಎರಡು ಮೂರು ಅಥವಾ ಅಷ್ಟೂ ಇರುವ ಮನುಷ್ಯರು ಸಹಜೀವಿಗಳಿಗೆ ತೊಂದರೆಕೊಟ್ಟು ಅವರಲ್ಲಿ ಮೇಲಿನ ರೋಗ ಹುಟ್ಟಲು ಕಾರಣರಾಗುತ್ತಾರೆ. ಅಂಥವರಲ್ಲಿ, ಮಗುವಿನ ಸಾಮಾಜಿಕ ಬೆಳವಣಿಗೆಯಲ್ಲಿ ಅಧಿಕ ಪ್ರಸಂಗಕ್ಕೆ ಕೈಹಾಕುವ ಉಗ್ರ ಮಾತಾಪಿತೃಗಳು, ಕುರೂಪಿಣಿಯಾದ ಮಗಳ ಮೇಲೆ ಅತ್ಯಧಿಕಾರ ಚಲಾಯಿಸುವ ಮಹಾಮಾಯಿಯಾದ ತಾಯಿ, ಅಪ್ರಾಮಾಣಿಕ, ಅಲಕ್ಷ್ಯಮಾಡುವ ಕುಡಿಯುವಗಂಡ ಅಥವಾ ಹೆಂಡತಿ ಮತ್ತು ತಮ್ಮನ್ನು ಅವಲಂಬಿಸಿ ಜೀವಿಸುವ ತಾಯ್ತಂದೆಯರಿಗಾಗಿ ಮನಸ್ಸಿಲ್ಲದ ಮನಸ್ಸಿನಿಂದ ವಿವಾಹಮಾಡಿಕೊಳ್ಳದ ಸ್ತ್ರೀ ಪುರುಷರು ಮುಖ್ಯರು ಎಂದು ಡಾ. ಫಿಲಿಪ್ ಹೆಂಚರು ಲೆಕ್ಕ ಹಾಕಿದ್ದಾರೆ.

ಸ್ವದೇಹ ಪ್ರಿಯತೆ

ಕುಡಿಕತನದಂತೆಯೇ Fashion ವಿಲಾಸದಲ್ಲಿ ಅತ್ಯಾಸಕ್ತವಾಗುವುದೂ ಒಂದು ದುರಭ್ಯಾಸ, ಅಮೇರಿಕ ಇದಕ್ಕೂ ಬಹಳ ?ರಾಗಿದೆ. ಅಲ್ಲಿ ಪುರುಷರಿಗಿಂತ ಸ್ತ್ರೀಯರು ಹೀಗೆ ಆಟದಲ್ಲಿ ಬರುವ ವೇಷಗಳಂತೆ ತಿರುಗುವುದು ಸ್ತ್ರೀ ಪುರುಷರಿಬ್ಬರೂ ಅಪೇಕ್ಷಣೀಯವೆಂದು ತಿಳಿದಿದ್ದಾರೆ. ಮರ್ಯಾದೆಯೆಂದು, ಸೌಂದರ್ಯವೆಂದು ಗ್ರಹಿಸಿದ್ದಾರೆ. ಇದರ ಮೇಲೆ ಈ ವಿಲಾಸಪ್ರಿಯರಿಗೆ ಮೂಲದ್ರವ್ಯಪೂರಕರೆಂದರೆ ಧನಪಿಶಾಚ ಹಿಡಿದ ಸಾಹುಕಾರರು ಅವರು ತಮ್ಮ ಮರ್ಕಟಮತಿಯ ಕಲ್ಪನಾವಿಲಾಸಕ್ಕೆ ಹೊಳೆದ ಎಲ್ಲ ಭಂಗಿಗಳನ್ನು ಅದೇ ಉದ್ದೇಶಕ್ಕೆ ಮೀಸಲಾದ ಪತ್ರಿಕೆಗಳಲ್ಲಿ ಪ್ರಕಟಿಸಿ ಎಳವೆಗೆಯನ್ನು ಸಂಹಿಡಿಯುತ್ತಾರೆ ಅವರು ಅಪ್ಪನನ್ನೂ ಗಂಡಂದಿರನ್ನೂ ಪೀಡಿಸಿ ಸ್ವದೇಹ ಪ್ರಿಯತೆ ಬೆಳೆಸಿಕೊಳ್ಳುವಂತೆ ಅಲಂಕಾರ ಮಾಡಿಕೊಂಡು ಸರಪ್ರೇಮ ಶಕ್ತಿಯನ್ನು ಕಳೆದುಕೊಂಡು ಭ್ರಾಂತ, ಅರಸಿಕ ಜೀವನ ನಡೆಸುವ Beauty Girls ಬಣ್ಣದ ಕುದಿಕೆಗಳು ಎನಿಸಿ ಸಮಾಜದಲ್ಲಿ ಪಿಡುಗುಗಳಾಗಿ ಬಾಳುತ್ತಾರೆ. ಎಂಬುದು ವೋಗ್ ಮತ್ತು ವಿಮೆನ್ಸ್ ಹೋಂ ಕಂಪಾನಿಯನ್ ಎಂಬ ಪತ್ರಿಕೆಗಳಿಂದ ತಿಳಿಯಲು ಬರುತ್ತದೆ.

ಭಾವರೋಗ ಭೇಷಜ [ಕರ್ಮವೀರ]

ಡಿಸ್ಟ್ರಿಕ್ಟ್ ಬೋರ್ಡುಗಳ ಸದಸ್ಯರು

ಈ ಕೆಳಗಿನ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಬರುವ ಚುನಾವಣೆಯಲ್ಲಿ ಇರಿಸಲ್ಪಡುವ ಸದಸ್ಯರು ೨-೭-೪೯ ರಂದು ಅಧಿಕಾರ ಸ್ವೀಕರಿಸುವರು. ದಕ್ಷಿಣ ಕನ್ನಡ, ಬಳ್ಳಾರಿ, ವಿಶಾಖಪಟ್ಟಣ, ಪೂರ್ವಗೋದಾವರಿ, ಪಶ್ಚಿಮ ಗೋದಾವರಿ, ಕೃಷ್ಣಾ, ಗುಂಟೂರು ತಿರುನೆಲ್ವೇಲಿ, ಮಧುರ, ಸೇಲಂ, ನೆಲ್ಲೂರು ಕಡಪ, ಕರ್ನೂಲು, ಅನಂತಪುರ, ತಿರುಚಿರಪಳ್ಳಿ, ಕೊಯಿಂಬತ್ತೂರು, ನೀಲಗಿರಿ, ಚಂಗಲ್ಪಟ್, ಉತ್ತರ ಅರ್ಕಾಟು, ದಕ್ಷಿಣ ಅರ್ಕಾಟು, ತಂಜಾವೂರು, ರಾಮನಾಡು, ಮಲಬಾರು.

ಮದ್ಯ ನಿಷೇಧ ಪ್ರಚಾರಕರು

ಹಳ್ಳಿಗಳಲ್ಲಿ ಮದ್ಯಪಾನ ನಿರೋಧದ ಕುರಿತು ತಕ್ಕಪ್ರಚಾರ ನಡೆಸುವ ಬಗ್ಗೆ ಸರಕಾರವು ೪೪೪ ಪ್ರಚಾರಕರನ್ನು ನೇಮಿಸಿದೆ ಇವರು ಕಲ್ಲುಪಟ್ಟಿ, ಗಾಂಧಿ ಗ್ರಾಮಗಳಂತಿರುವ ಅಂಗೀಕೃತ ಗ್ರಾಮ ಕೇಂದ್ರಗಳಲ್ಲಿ ಆರು ವಾರಗಳ ತರಬೇತಿ ಪಡೆಯುವರು. ಕುಡಿತದ ದುಷ್ಪರಿಣಾಮಗಳನ್ನು ವಿವರಿಸುವುದು ಮಾತ್ರವಲ್ಲದೆ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಇವರು ಯತ್ನಿಸುವರು.

ಸ್ಥಳೀಕ ಸಂಸ್ಥೆಗಳಿಗೆ ಚುನಾವಣೆ

ಹೊಸ ಸದಸ್ಯರಿಗೆ ೨-೭-೪೯ ಕ್ಕೆ ಅಧಿಕಾರ ವಹಿಸಲು ಅನುಕೂಲವಾಗುವಂತೆ ಪಂಚಾಯತಿಗಳಿಗೂ ಡಿಸ್ಟ್ರಿಕ್ಟ್ ಬೋರ್ಡುಗಳಿಗೂ ಈಗಿರುವ ಮತದಾನ ಪಟ್ಟಿಗಳಿಗೆ ಹಾಗೂ ಚುನಾವಣಾಕ್ಷೇತ್ರ-ವಾರ್ಡುಗಳಿಗೆ ಅನುಸಾರವಾಗಿ ಚುನಾವಣೆಗಳು ನಡೆಯಬೇಕಾಗಿದೆ.

ಬಾವಿ ತೋಡಲು ಧನ ಸಹಾಯ

ಬಾವಿ ತೋಡಲು ಧನ ಸಹಾಯತೆರುವ ಹೊಸ ಯೋಜನೆ [೧೯೪೮-೪೯] ೩೧-೩-೪೯ ವರೆಗೆ ಜಾರಿಯಲ್ಲಿರಬೇಕಾಗಿತ್ತು. ಆದರೆ ಆಹಾರೋತ್ಪತ್ತಿಗೆ ಪ್ರೋತ್ಸಾಹವನ್ನೀಯುವುದು ಇನ್ನೂ ಅಗತ್ಯವಾಗಿರುವುದರಿಂದ ಈ ಯೋಜನೆಯನ್ನು ೧೯೪೯-೫೦ ರಲ್ಲಿ ನಿರ್ವಹಿಸುವಂತೆ ಮುಂದರಿಸಲಾಗಿದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ಬೆಂಗಳೂರುಗಳಲ್ಲದೆ ರಾಯಲಸೀಮೆಯ ೨೨ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4½%	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ರೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ, ಕೊಂಡು ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು.

ಇತರ ವಿವರಗಳನ್ನು ನಮ್ಮ ಬ್ಯಾಂಕಿನ ಯಾವ ಶಾಖೆಯಿಂದಾದರೂ ತಿಳಿಯಬಹುದು.

ಮುಖ್ಯ ಕಾರ್ಯಾಲಯ:-ಬಳ್ಳಾರಿ.

ಬಿ. ವಿ. ಶೇಷಗಿರಿರಾವ್. ಬಿ. ಕಾಂ.,
ಕಾರ್ಯದರ್ಶಿ,

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ಮಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು: — ಪ್ರಾರಂಭಿಕ:—ಮಾಧ್ಯಮಿಕ ರಾಷ್ಟ್ರಭಾಷೆ ಉನ್ನತ:—ವಿಶಾರದ ಪ್ರಚಾರಕ.

ವೇಳೆ:— ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 00 6. ವಿವರ ಪಟ್ಟಿ 0-2-0.

ಪ್ರಧಾನಾಚಾರ್ಯ: —ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4745)

ನವ ಭಾರತ ಬಳ್ಳಾರಿ. 9—5—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಟಿ. ಬಿ. ಕೇಶವರಾವ್.

ಪತ್ರವ್ಯವಹಾರ :...

ಡಾಕ್ಟರ್ ಪಟ್ಟಾಭಿಯವರ ಹೇಳಿಕೆ

ಆಂಧ್ರಪ್ರಾಂತ ನಿರ್ಮಾಣ - ಬಳ್ಳಾರಿಯ ಮೂರು ತಾಲೂಕುಗಳ ಸೇರ್ಪಡೆ

"ಆಗಸ್ಟ್ ೧೯೪೯ ರೊಳಗಾಗಿ ಆಂಧ್ರಪ್ರಾಂತ ನಿರ್ಮಾಣದ ಘೋಷಣೆಯಾಗಬೇಕು. ಮಹಾತ್ಮಾಗಾಂಧಿಯವರು ಈ ಹಿಂದೆ ನನಗೊಂದು ಸಲ ಹೇಳಿದಂತೆ ನಿರ್ವಿವಾದ ಭಾಗಗಳನ್ನು ಕೂಡಿಸಿ ಆಂಧ್ರಪ್ರಾಂತ ನಿರ್ಮಾಣವಾಗಬೇಕು. ಕೆಲ ವರ್ಷಗಳನಂತರ - ಪಕ್ಷಾತೀತ - ಸಮಿತಿಯನ್ನು ನಿರ್ಮಿಸಿ ಉಳಿದ ಭಾಗಗಳ ಸೇರ್ಪಡೆ ಸಾಧ್ಯವಾದರೆ ಆಗಬಹುದು ...." ವಗೈರೆ ಹೇಳುತ್ತಾ ಆಂಧ್ರ ಪ್ರಾಂತದ **'ನಿರ್ವಿವಾದ'** ಭಾಗಗಳಲ್ಲಿ ಬಳ್ಳಾರಿಯ ಮೂರು ತಾಲೂಕುಗಳನ್ನು ಸೇರಿಸಿರುವರು. ಇದಕ್ಕೆ ಕೇಳ್ಕರ ಹೇಳಿಕೆಯ ಆಧಾರ ಕೊಟ್ಟಿರುವರು.

ಪಟ್ಟಾಭಿಯವರಾಗಲಿ, ಕೇಳ್ಕರರಾಗಲಿ ಬಳ್ಳಾರಿ - ಆದವಾನಿಗಳನ್ನು ಹೊರತಾಗಿ ಮೂರು ತಾಲೂಕುಗಳ ಹಳ್ಳಿಗಳನ್ನು ಅಲ್ಲಿಯ ಭಾಷೆ, ಜನರ ನಡೆ ನುಡಿಗಳನ್ನು ನೋಡಿಲ್ಲ. ಅವರು ಅಭ್ಯಸಿಸಿರುವುದು ತಮ್ಮ ಪಕ್ಷದವರು ಕೊಟ್ಟ ಅಂಕೆ ಸಂಖ್ಯೆಗಳು. ರಾಜಕೀಯದಲ್ಲಿ ಸ್ಥಾನಗಳಿಸಿದವರು ಸತ್ಯವಾದ ಅಂಶಗಳನ್ನು ನೋಡದೆ ಅಂಧರಾಗುವರು. ಸಾಧಾರಣ ಜನತೆಯ ಆಶೋತ್ತರಗಳು ಅವರಿಗೆ ಅರ್ಥವಾಗುವದಿಲ್ಲ. ಏತಕ್ಕೆಂದರೆ ಅವರಿಗೆ ಜನಸಾಮಾನ್ಯರ ಸಂಬಂಧ - ಸಂಪರ್ಕಗಳು ಕಡಿಮೆ.

ಆದವಾನಿ - ಆಲೂರು - ರಾಯದುರ್ಗ ತಾಲೂಕುಗಳನ್ನು ಆಂಧ್ರದಲ್ಲಿ ವಿಲಯನ ಮಾಡಬೇಕೆಂದರೆ - ಆದವಾನಿ - ಆಲೂರುಗಳನ್ನು ಕರ್ನೂಲು ಜಿಲ್ಲೆಗೂ ರಾಯದುರ್ಗವನ್ನು - ಅನಂತಪುರ ಜಿಲ್ಲೆಗೂ ಸೇರಿಸಬೇಕಾಗುತ್ತದೆ ಅಲ್ಲಿ ನೆಲೆಸಿರುವ ಅಧಿಕಾಂಶ ಕನ್ನಡಿಗರಮಾತು ಹಾಗಿರಲಿ ಆಂಧ್ರರೆಂಬುವರೂ ಕೂಡ ಈ ಸೂಚನೆಗಳನ್ನು ಎಂದಿಗೂ ಒಪ್ಪಲಾರರು. ೧೦೦ ಮೈಲಿಗಳಿಗಿಂತಲೂ ಹೆಚ್ಚು ದೂರದಲ್ಲಿರುವ ಜಿಲ್ಲಾ ಕೇಂದ್ರವನ್ನಾರು ಒಪ್ಪುವರು? ಬಳ್ಳಾರಿಯ ಅತಿಪ್ರಾಚೀನಸಂಬಂಧ - ಇಲ್ಲಿಯ ಅನುಕೂಲತೆಗಳು - ಮೂರು ತಾಲೂಕುಗಳವರಿಗೆ ಚನ್ನಾಗಿ ಪರಿಚಯವುಂಟು. ಈ ಮೂರು ತಾಲೂಕುಗಳಲ್ಲಿ ಕನ್ನಡಿಗರೇ ಇಲ್ಲವೆಂದು - ಡಾಕ್ಟರ್ ಪಟ್ಟಾಭಿಯವರಾದರೂ ಹೇಳಲಾರರು. ಅಲ್ಲಿರುವ ತೆಲುಗರಿಗೆ ಕನ್ನಡಭಾಷೆಯ ಪರಿಚಯವುಂಟು ಆದರೆ ಕನ್ನಡಿಗರಿಗೆ - ತೆಲುಗು ಭಾಷೆಯ ಶುದ್ಧಾಂಗ ಪರಿಚಯವಿಲ್ಲದೆ - ಕನ್ನಡಿಗರು ಅಲ್ಪಸಂಖ್ಯಾಕರಾಗುಳಿದು - ಅವರ ಸಾಂಸ್ಕೃತಿಕ ಅಸ್ತಿತ್ವವೇನಾಶವಾಗುವುದು. ರಕ್ಷಣೆಗಳನ್ನೂ ಒದಗಿಸುವ ಮಾತು - ಅಮಾವಾಸ್ಯೆಯದಿನ ಚಂದ್ರಪ್ರಕಾಶವನ್ನು ತೋರಿಸುವೆನೆಂದು ಹೇಳಿದಷ್ಟು ನಿಜವಾಗುವುದು.

ಆಂಧ್ರ ವಿಶ್ವವಿದ್ಯಾನಿಲಯ ಕೇಂದ್ರವನ್ನು ಸೇರಬೇಕೆಂದರೆ - ಕಲ್ಕತ್ತಾ ನಗರವನ್ನು ನೋಡಹೋರಟಂತೆ - ಈ ಮೂರು ತಾಲೂಕುಗಳ ವಿದ್ಯಾರ್ಥಿಗಳ ಪೋಷಕರು - ಅವರು ಯಾರೇ ಇರಲಿ - ಮದ್ರಾಸ್ ಕ್ಷೇತ್ರವನ್ನು ತ್ಯಜಿಸಿ - ವಿಶಾಖಪಟ್ಟಣಕ್ಕೆ ಹೊಂದಿಕೊಳ್ಳಲು ಸಿದ್ಧರಿರುವರೋ? ಇನ್ನು ಕೋರ್ಟು ಕಛೇರಿ - ಮೊಕದ್ದಮೆಗಳಿಗೆ ಸಂಬಂಧಿಸಿದ - ವಕೀಲರ ವಂಶಪಾರಂಪರ್ಯ ಸಂಬಂಧ - ಬಾಂಧವ್ಯ ಈ ಎಲ್ಲಾದೃಷ್ಟಿಗಳಿಂದ - ಮೂರು ತಾಲೂಕಿನ ಜನರು ಈಗಿನ ಸಂಬಂಧವನ್ನು ಎಂದಿಗೂ ಹರಿದುಕೊಳ್ಳಲಾರರು. ಬೇಕಿದ್ದರೆ ಡಾಕ್ಟರ್ ಪಟ್ಟಾಭಿಯವರು ಜನಮತ ತೆಗೆದುಕೊಳ್ಳಲಿ ಮೂರು ತಾಲೂಕುಗಳವರು ಯಾವಜಿಲ್ಲೆಯಲ್ಲಿರಲು ಒಪ್ಪುವರೆಂಬುದು ಆಗ ವೇದ್ಯವಾಗುತ್ತದೆ.

(ಜನಮತವನ್ನರಿತವ)

— ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ —

ಹಿಂದೂ - ಮುಸಲ್ಮಾನ್ - ಕ್ರಿಶ್ಚಿಯನ್ನರು ಹೆಚ್ಚಾಗಿರುವ ಶಾಲೆಗಳಲ್ಲಿ ಯಾವ ಧರ್ಮದನೀತಿಗಳನ್ನು ಬೋಧಿಸಬೇಕೆಂಬ ಬಗ್ಗೆ - ಚರ್ಚೆಯು ನಡೆದಿದೆ. ಸರ್ಕಾರದವರಾದರೂ - ಹಿಂದೂ ಧರ್ಮವನ್ನೇ - ತಮ್ಮ ಧರ್ಮವೆಂದು ಆಚರಿಸಲಾರರು. ಭಾರತದ ಸರ್ಕಾರಕ್ಕೆ ವಿಶಿಷ್ಟ ಧರ್ಮದ ಸಂಬಂಧವಿಲ್ಲ. ಭಾರತದೇಶವು ಸರ್ವಧರ್ಮದವರಿಗೂ ಸಮನ್ವಯವಾದ ನೀತಿತತ್ವಗಳ ಅವಲಂಬನೆಗೆ ಸಹಕಾರವೀಯುವದು. ಈಗ ಪ್ರಕಟವಾಗುತ್ತಿರುವ ಪಾಠ್ಯ ಪುಸ್ತಕಗಳಲ್ಲಿ ಸರ್ವಧರ್ಮಗಳ ಪ್ರಬೋಧಕರ ಸರ್ವಗ್ರಾಹ್ಯ ನೀತಿಗಳು ಪಡೆಕ್ತನಾಗಿವೆ. ಕ್ರಿಶ್ಚಿಯನ್ ಸಂಸ್ಥೆಗಳಿಂದ ಸ್ಥಾಪಿತವಾದ ಶಾಲೆಗಳಲ್ಲಿ ಬೈಬಲನ್ನು ಮಾತ್ರ ಬೋಧಿಸುವುದು ಹಿಂದೂ ಧಾರ್ಮಿಕ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳಲ್ಲಿ ಹಿಂದೂ ಧರ್ಮಗ್ರಂಥಗಳ ತತ್ವಗಳನ್ನು ತಿಳಿಸುವುದು ನಿಲ್ಲಬೇಕು. ರಾಮಾಯಣ ಭಾರತದ ಕಥೆಗಳು ಯಾರ ಧಾರ್ಮಿಕ ಭಾವನೆಗಳಿಗೂ ಹಾನಿಕರವಾಗಿಲ್ಲ ಹಾಗೆಯೇ ಬೈಬಲದ ಮತ್ತು ಕುರಾನಿನ ಮುಖ್ಯ ಉಕ್ತಿಗಳ ಪಠನೆಯಿಂದ ಲಾಭವೇ ಇದೆ. ಈ ಕಾರಣ ಮದ್ರಾಸ್ ಸರ್ಕಾರದವರು ಹೊರಡಿಸಿರುವ ಆಜ್ಞೆಯು ಸ್ಪಷ್ಟೀಕರಣವಾದರೆ ಎಲ್ಲಾ ಉಪಾಧ್ಯಾಯರಿಗೂ ಮಾರ್ಗದರ್ಶಿಯಾಗುವುದು.

ಒಬ್ಬ ಉಪಾಧ್ಯಾಯ.

ಜಿಲ್ಲಾ ಬೋರ್ಡು ವೈದ್ಯಶಾಲೆಗಳಲ್ಲಿ ಔಷಧಗಳಿಲ್ಲ

ಜಿಲ್ಲಾ ಬೋರ್ಡು ವೈದ್ಯಶಾಲೆಗಳಿಗೆ ಕೊಡುವ ವಾರ್ಷಿಕ ಧನಸಹಾಯವು ಬಹಳ ಸ್ವಲ್ಪ. ಅದರಿಂದ ಔಷಧಗಳ ಖರ್ಚಿಗಾಗಿ ಒಂದೆರಡು ತಿಂಗಳು ಕೂಡ ಸಾಲುವುದಿಲ್ಲ. ಜನಸಂಖ್ಯೆಯು ಹೆಚ್ಚಿ ರೋಗಿಗಳು ಹೆಚ್ಚಿರುವರು ಅಲ್ಲದೆ ಔಷಧಗಳ ಬೆಲೆಯೂ ಹೆಚ್ಚಿದೆ. ಹೀಗಿದ್ದು ಪರಿಸ್ಥಿತಿಗನುಗುಣವಾಗಿ ಗ್ರಾಂಟನ್ನು ಹೆಚ್ಚಿಸಲಿಲ್ಲ. ಈ ಕಾರಣ ಹಳ್ಳಿಗರಿಗೆ ಯುದ್ಧ ಪೂರ್ವದಲ್ಲಿ ದೊರೆಯುತ್ತಿರುವ ಸೌಕರ್ಯಗಳಲ್ಲಿ ನಾಲ್ಕರಲ್ಲೊಂದು ಪಾಲು ದೊರೆಯುತ್ತಲಿಲ್ಲ.

ಗ್ರಾಮಾಭಿವೃದ್ಧಿ ಯೋಜನೆಗಳು ಕಾಗದಗಳಲ್ಲಿ ಉಳಿದ್ದರೆ ಏನುಪಯೋಗ, ವ್ಯರ್ಥವಾದ ಖರ್ಚನ್ನು ಬೆಳೆಸುವದಕ್ಕಿಂತ ಹಳ್ಳಿಗಳಲ್ಲಿ ರೋಗಗ್ರಸ್ತರಾಗಿರುವವರಿಗೆ ಈ ಭಾಗದಿಂದಲಾದರೂ ಚಿಕಿತ್ಸೆಯೊದಗಿಸಬಾರದೇ?

—ಒಬ್ಬ ರೋಗಿ

ರೇಷನ್ ತಪ್ಪಿತಗಳಿಗೆ ಹೆಚ್ಚಿನ ಶಿಕ್ಷೆ

ಬಳ್ಳಾರಿಗೆ ೩-೪ ಸೇರು ಆಹಾರ ಧಾನ್ಯ ತರುತ್ತಿರುವ ಪ್ರಯಾಣಿಕರಿಗೂ ಹಳ್ಳಿಗರಿಗೂ ರೇಷನ್ ತಪ್ಪಿತಗಳಿಗಾಗಿ ಕೊಡಲ್ಪಡುತ್ತಿರುವ ಹೆಚ್ಚಿನ ಶಿಕ್ಷೆಯು ಯೋಗ್ಯವಲ್ಲೆಂದೂ ಈ ನಿಯಮ ಬಂಧನೆಗಳನ್ನು ಸಡಲಿಸಬೇಕೆಂದು ನಮ್ಮ ಸುದ್ದಿಗಾರರೊಬ್ಬರು ತಿಳಿಸುತ್ತಾರೆ.

ಕೆಂಪು ಮಸಾರಿ ಭೂಮಿಯಲ್ಲಿ ಮುಂಗಾರಿ ಕ್ಯಾಂಬೋಡಿಯ ಹತ್ತಿಯ ಸಾಗುವಳಿಯು

ಸದ್ಯಕ್ಕೆ ಮುಂಗಾರಿ ವಿಲಾಯಿತಿ ಅಂದರೆ (ದೊಡ್ಡ ಹತ್ತಿಯು) ಬೆಳೆಯುವಂಥ ಕೆಂಪು ಮಸಾರಿ ಭೂಮಿಯಲ್ಲಿ ಮುಂಗಾರಿ ಕ್ಯಾಂಬೋಡಿಯಾ ಹತ್ತಿಯು ಉತ್ತಮವಾಗಿ ಬೆಳೆಯುತ್ತದೆಂದು ಕಳೆದ ನಾಲ್ಕು ವರ್ಷಗಳಿಂದ ಒಕ್ಕಲತನದ ಖಾತೆಯವರು ರೈತರ ಹೊಲಗಳಲ್ಲಿ ಮಾಡಿದ ಪ್ರಯೋಗದಿಂದ ಗೊತ್ತಾಗುತ್ತದೆ. ಕಳೆದ ನಾಲ್ಕು ವರ್ಷಗಳಲ್ಲಿ ಹಾವೇರಿ ತಾಲೂಕಿನ ರೈತರು ತಮ್ಮ ಹೊಲಗಳಲ್ಲಿ ಈ ಕ್ಯಾಂಬೋಡಿಯಾ ಹತ್ತಿಯನ್ನು ಸ್ವಲ್ಪ ಪ್ರಮಾಣದಿಂದ ಪರೀಕ್ಷಿಸಿದ್ದರಿಂದಲೂ ಶೇತಕೀ ಖಾತೆಯ ಮುಖಾಂತರ ಹುಬ್ಬಳ್ಳಿ ಮತ್ತು ಗದಗ ಈ ಸ್ಥಳಗಳಲ್ಲಿ ಮಾಡಿದ ಯಾಲವಿನಲ್ಲಿ ಈ ಹೊಸ ಜಾತಿಯ ಹತ್ತಿಗೆ ಹೆಚ್ಚಿನ ಬೆಲೆ ಬಂದದ್ದರಿಂದಲೂ ಇದುವರೆಗೆ ಮುಂಗಾರಿ ಹತ್ತಿಯನ್ನು ಬಿತ್ತದಿದ್ದ ಪ್ರದೇಶದ ರೈತರು ಸಹ ಈ ಹತ್ತಿಯನ್ನು ಹೆಚ್ಚಿನ ಪ್ರಮಾಣದಿಂದ ಬೆಳೆಯ-ಹತ್ತಿದ್ದಾರೆ. ಈ ಹತ್ತಿಯನ್ನು ಬೆಳೆಯುವ ಕ್ಷೇತ್ರವು ದಿನದಿನಕ್ಕೆ ಹೆಚ್ಚಾಗುತ್ತನಡೆದದೆ. ಈ ಕೆಳಗಿನ ಟಿಪ್ಪಣಿಗಳು ಕೆಂಪು ಮಸಾರಿ ಭೂಮಿಯುಳ್ಳ ರೈತರ ಸಲುವಾಗಿ ಕೊಡಲ್ಪಟ್ಟಿರುತ್ತವೆ.

ಭೂಮಿ ಹಾಗೂ ಮಳೆ:- ಮುಂಗಾರಿ ಕ್ಯಾಂಬೋಡಿಯಾ ಹತ್ತಿಗೆ ಮಲೆನಾಡಿನ ಕೆಂಪು ಹಕ್ಕಲಗಳೂ, ಜೂನ ಮತ್ತು ಜೂಲೈ ತಿಂಗಳಲ್ಲಿ ಖಾತ್ರಿಯಿಂದ ಮಳೆಬೀಳುವ ಎರೆನಾಡಿನ ಮಸಾರಿಗಳೂ ಯೋಗ್ಯವಾಗಿರುತ್ತವೆ. ಆದರೆ ಮಲ್ನಾಡದ ಭೂಮಿಗಳಿಗೆ ಗೊಬ್ಬರವು ಅವಶ್ಯವಾಗಿ ಬೇಕು. ಮಳೆಯು ಹೆಚ್ಚಾಗಿ ಭೂಮಿಯು ಚವಳು ಹತ್ತಬಾರದಂತೆ, ಇಳಿಜ್ಯಾರಾದ ಹಕ್ಕಲಗಳಲ್ಲಿ ಈ ಹತ್ತಿಯನ್ನು ಬಿತ್ತಿದರೆ ಹೆಚ್ಚಿನ ನೀರೆಲ್ಲ ಕೆಳಗೆ ಹರಿದುಹೋಗಿ ಬೆಳೆಗೆ ಹಾನಿತಟ್ಟುವದಿಲ್ಲ. ಜೂನದಿಂದ ಸಪ್ಟಂಬರದ ಕೊನೆಯವರೆಗೆ ೨೫ ರಿಂದ ೩೦ ಇಂಚಿನವರೆಗೆ ಮಳೆ ಬಿದ್ದರೆ ಈ ಪೈರಿಗೆ ಸಾಕು.

ಬೇಸಿಗೆಯಲ್ಲಿ ಮಾಡತಕ್ಕ ಕೆಲಸ ಮತ್ತು ಗೊಬ್ಬರ:- ಮುಂಗಾರಿ ಕ್ಯಾಂಬೋಡಿಯ ಹತ್ತಿಯು ಉತ್ತಮ ಬೆಳೆಯು ಬೇಕಾದರೆ ಬೇಸಿಗೆಯಲ್ಲಿ ಒಂದು ದೊಡ್ಡ ಮಳೆಯಾದ ಕೂಡಲೆ ಕಟ್ಟಿಗೆಯ ಇಲ್ಲವೆ ಸಾಬೂನ ರೆಂಟೆಯಿಂದಾ ಭೂಮಿಯನ್ನು ಚನ್ನಾಗಿ ಹೊಡೆದು ಒಂದು ಕೂರಿಗೆಗೆ ೨೦ ಚಕ್ಕಡಿ ಸಗಣಿಯ ಗೊಬ್ಬರವನ್ನು ಹಾಕಬೇಕು. ಗೊಬ್ಬರವನ್ನು ಮೇ ತಿಂಗಳ ಕೊನೆಗೆ ಹಾಕಿ ಅದು ಮಣ್ಣೊಳಗೆ ಚನ್ನಾಗಿ ಕೂಡುವಂತೆ ೨-೩ ಸಾರೆ ಹರಗಬೇಕು.

ಬಿತ್ತುವ ಕಾಲ ಮತ್ತು ಅದರ ಕ್ರಮ ವಾಡಿಕೆಯಾಗಿ ವಿಲಾಯತಿಯ ಹತ್ತಿಯನ್ನು ವೃಗತಿ ಮರುಳೆಯುಕೊನೆಗೆ ಬಿತ್ತುವಂತೆ ಮುಂಗಾರಿ ಕ್ಯಾಂಬೋಡಿಯಾ ಹತ್ತಿಯನ್ನಾದರೂ ಅದೇ ವೇಳೆಗೆ ಬಿತ್ತತಕ್ಕದ್ದು. ಬಿತ್ತುವ ಪೂರ್ವದಲ್ಲಿ ೨-೩ ದಿವಸ ಮೊದಲು ಹೊಲವನ್ನು ಒಪ್ಪೆ ಹರಗಿದರೆ ಬಿತ್ತಲಿಕ್ಕೆ ಚನ್ನಾಗಿ ಹದವಾಗುತ್ತದೆ. ಕೂರಿಗೆ ಹಿಂದೆ ಎಳೆಕಡ್ಡಿಯಿಂದ ಕೈಯಿಂದ ಕಾಳು ಬಿತ್ತಿದರೆ ಅಲ್ಲಲ್ಲಿಗೆ ಸಾಲು ಹಾರಿ ಪೈರು ಅಂಗಳಾಗುವದರಿಂದ, ಗುಜರಾಥ ದೇಶದ ೨ ತಾಳಿನ ಕಡ್ಡಿಯು ಬಟ್ಟಲುಳ್ಳ ಕೂರಿಗೆಯಿಂದ ಬಿತ್ತಬೇಕು, ಅಂದರೆ ಸಾಲುಗಳಲ್ಲಿ ಬೀಜವು ಹೆಚ್ಚುಕಡಿಮೆ ಅಂತರದಮೇಲೆ ಬೀಳುವದಿಲ್ಲ. ಎರಡು ಸಾಲುಗಳ ನಡುವಿನ ಅಂತರವು ೨೪-೩೦ ಇಂಚಿನ ವರೆಗೆ ಅವಶ್ಯವಾಗಿ ಇರಬೇಕು. ಅಂದರೆ ಗಿಡಗಳು ಎತ್ತರವಾಗಿ ಬೆಳೆದು ಚನ್ನಾಗಿ ಬಗಲು ಒಡೆಯುತ್ತವೆ.

ಬೀಜದ ಪ್ರಮಾಣ:- ಯೋಗ್ಯರೀತಿಯಿಂದ ಬಿತ್ತಿದರೆ ಒಂದು ಎಕರೆಗೆ ಏಳು ಅಥವಾ ಎಂಟು ಪೌಂಡು ಬೀಜವು ಸಾಕಾಗುತ್ತವೆ. ಆದರೆ ಕೈಯಿಂದ ಬಿತ್ತಿದ ಬೀಜವು ನಿಯಮಿತ ಅಂತರದಮೇಲೆ ಬೀಳುವದು ಕಠಿಣವಿರುವದರಿಂದ ಒಂದು ಎಕರೆಗೆ ಹತ್ತು ಪೌಂಡು ಬೀಜವನ್ನು ತೆಗೆದುಕೊಂಡು ದಟ್ಟವಾಗಿ ಬಿತ್ತಿ ಹಿಂದಿನಿಂದ ನಡುವಿನ ಅಗಿಗಗಳನ್ನು ಕಿತ್ತಿ ಉಳಿದ ಗಿಡಗಳನ್ನು ಬೇಕಾದಷ್ಟು ನಿಯಮಿತ ಅಂತರದ ಮೇಲೆ ಇಡಬೇಕು. ೬ ರಿಂದ ೮ ಇಂಚು ಎತ್ತರವಾದ ಮೇಲೆ ಗಿಡಗಳನ್ನು ಸಾಲುಗಳಲ್ಲಿ ೧೨-೧೫ ಇಂಚಿಗೆ ಒಂದರಂತೆ ಇಟ್ಟು ಉಳಿದವುಗಳನ್ನು ಕಿತ್ತಿ ಚಲ್ಲಬೇಕು. ತೀರ ಸಣ್ಣ ಪ್ರಮಾಣದಲ್ಲಿ ಬಿತ್ತುವದೆಂದರೆ ಕೈಯಿಂದ ಬೀಜವನ್ನು ಎರಡೂ ಮಗ್ಗಲಿಗೆ ೨೪ ಇಂಚು ಅಂತರ ಇಟ್ಟು ನೆಡುವದು ನೆಟ್ಟಗೆ,

ಎಡೆ ಹೊಡೆಯುವದು:- ಹತ್ತಿಯ ಸಾಗುವಳಿಯಲ್ಲಿ ಇದೊಂದು ಮಹತ್ವವಾದ ಕೆಲಸವು. ಹತ್ತಿಯನ್ನು ಬಿತ್ತಿ ಬಿಡಿಸುವ ತನಕ ಭೂಮಿಯನ್ನು ಮೇಲಿಂದ ಮೇಲೆ ಎಡೆ ಹೊಡೆದು ಹಸಿಯನ್ನು ಕಾಯ್ದಿಟ್ಟು ನೆಲವನ್ನು ಪೊಳ್ಳಾಗಿ ಇಡುವದು ಮುಖ್ಯವಾದದ್ದು ಕೂಡಲೆ ಎಡೆಯನ್ನು ತಪ್ಪದೆ ಹೊಡೆಯಬೇಕು

ಹತ್ತಿಯನ್ನು ಬಿಡಿಸುವದು; ವಿಲಾಯತಿ ಹತ್ತಿಗಿಂತ ಕ್ಯಾಂಬೋಡಿಯಾ ಹತ್ತಿಯ ಕಾಯಿಗಳು ದೊಡ್ಡವಿದ್ದು ತೊಳೆಗಳಾದರೂ ದೊಡ್ಡವಿರುತ್ತವೆ. ಆದುದರಿಂದ ಮುಂಜಾನೆ ಈ ಹತ್ತಿಯನ್ನು ಎಲೆ, ಕಸರು ಹತ್ತದಂತೆ ಸ್ವಚ್ಛವಾಗಿ ಬಿಡಿಸಲಿಕ್ಕೆ ಸುಲಭವಾಗುತ್ತದೆ. ಪ್ರತಿವಾರಕ್ಕೊಮ್ಮೆ ಹತ್ತಿಯನ್ನು ಬಿಡಿಸಬೇಕು. ಉತ್ತಮ ಬೆಳೆಯಿಂದ ನಾಲ್ಕು ಬೀಡು ಹತ್ತಿಯು ಬರಬಹುದು.

ಉತ್ಪನ್ನ:- ಮುಂಗಾರಿಯ ವಿಲಾಯತಿ ಹತ್ತಿಯು ಸಾಧಾರಣ ಚಲೋ ಪೈರಿನಿಂದ ಒಂದು ಕೂರಿಗೆಗೆ (ಅಂದರೆ ೪ ಎಕರೆ) ೧,೦೦೦ ಪೌಂಡು ಹತ್ತಿಯು ಬರುವಂತೆ ಕ್ಯಾಂಬೋಡಿಯಾ ಹತ್ತಿಇಂದ ಸಹ ಅಷ್ಟೇ ಬೆಳೆಯು ಬರುತ್ತದೆ. ಆದರೆ ಉತ್ತಮವಾಗಿ ಸಾಗುವಳಿಮಾಡಿದ ಭೂಮಿಯಿಂದ ಒಂದು ಕೂರಿಗೆಗೆ ೧,೩೪೪ ಪೌಂಡು (ಒಂದು ನಗ) ಸಹ ಕ್ಯಾಂಬೋಡಿಯಾ ಹತ್ತಿಯು ಬರುವದು. ಆದರೆ ಕ್ಯಾಂಬೋಡಿಯಾ ಹತ್ತಿಯ ಹರಳೆಯು ಉತಾರವು ವಿಲಾಯತಿಯ ಹತ್ತಿಯ ಉತಾರಕ್ಕಿಂತ ನೂರಕ್ಕೆ ನಾಲ್ಕರಿಂದ ಐದರವರೆಗೆ ಹೆಚ್ಚಿರುತ್ತದೆ. ಕೆಲ ವರ್ಷಗಳ ಕೆಳಗೆ ಹುಬ್ಬಳ್ಳಿಯಲ್ಲಿ ಆದ ಯಾಲವಿಗೆ ಬಂದ ಕ್ಯಾಂಬೋಡಿಯಾ ಹತ್ತಿಯ ಅರಳೆಯ ಉತಾರವು ನೂರಕ್ಕೆ ೩೬|| ಯಂತೆ (ಅಂದರೆ ಒಂದು ನಗಗ್ಗೆ ಮಣ) ಇದ್ದು ಲಿಲಾವಿನಲ್ಲಿ ಅದಕ್ಕೆ ಒಂದು ನಗಕ್ಕೆ ೪೮೦ ರೂಪಾಯಿ ಬೆಲೆ ಬಂದಿತ್ತು. ಆದರೆ ವಿಲಾಯತಿಯ ಹತ್ತಿಯ ಧಾರಣೆಯು ಅದೇ ದಿವಸ ಒಂದು ನಗಕ್ಕೆ ೩೫೫ ರೂಪಾಯಿ ಇತ್ತು. ಶುದ್ಧ, ಮತ್ತು ಉತ್ತಮವಾದ ಬೀಜಗಳನ್ನು ದೊರಕಿಸಿ ಬಿತ್ತಿ, ಬೆಳೆಯನ್ನು ಮಿಶ್ರಣವಾಗದಂತೆ ಶುದ್ಧವಾಗಿ ಇಟ್ಟ ಹತ್ತಿಯ ಉತಾರವು ಇದಕ್ಕೂ ಹೆಚ್ಚು ಬರಬಹುದು. ವಿಲಾಯತಿಯ ಹತ್ತಿಯನ್ನು ಬೆಳೆಯದೆ ಕ್ಯಾಂಬೋಡಿಯಾ ಹತ್ತಿಯನ್ನು ಬೆಳೆಕೊಂಡರೆ ಪ್ರತಿ ಎಕರೆಗೆ ೧೫ ರಿಂದ ೨೦ ರೂಪಾಯಿಗಳವರೆಗೆ ಹೆಚ್ಚು ಲಾಭವಾಗುತ್ತದೆಂದು ಹೇಳಬಹುದು. ಮತ್ತು ಮಲ್ನಾಡಕ್ಕೆ ಹೊಂದಿದ ದೊಡ್ಡ ಕ್ಷೇತ್ರವು ಈ ಹತ್ತಿಗೆ ಯೋಗ್ಯವಾಗಿರುತ್ತದೆ.

— ಮದರಾಸು ಮಂತ್ರಿಗಳು ೮೫೦ ರೂ ಸಂಬಳ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಪೂರಾ ೧೦೦೦ ತೆಗೆದುಕೊಳ್ಳಲು ನಿಶ್ಚಯಿಸಿರುವರು. ಅವರು ಖರ್ಚುಗಳು ಹೆಚ್ಚಿವೆಯಂತೆ.

— ಮಲಯ ಸರಕಾರದವರು ಗಣಪತಿ (ಅಧ್ಯಕ್ಷ ಮಲಯಕೂಲಿಕಾರ ಸಂಘ) ಯನ್ನು ಗಲ್ಲಿಗೇರಿಸಿ ದೊಡ್ಡತಪ್ಪು ಮಾಡಿದರೆಂದೂ ಈ ವಿಷಯವಾಗಿ ಸರಕಾರದವರು ತೀಕ್ಷ್ಣ ಚರ್ಯೆಯನ್ನು ತೆಗೆದುಕೊಳ್ಳಲಿರುವರೆಂದೂ ಪಂಡಿತ ನೆಹರೂರವರು ತಿಳಿಸಿದರು.

— ಬರ್ಮಾಕ್ಕೆ ಸಹಾಯ ಮಾಡುವದರಿಂದ ಅದರ ಒಳ ಆಡಳಿತದಲ್ಲಿ ಕೈಹಾಕಿದಂತಾಗುವದಿಲ್ಲೆಂದು ಭಾರತ ಪ್ರಧಾನಿಗಳು ತಿಳಿಸಿದರು.

ಸೋಶಿಯಾಲಿಸ್ಟ ಪಾರ್ಟೀ ವಾರ್ಷಿಕ ಸಭೆ

ವಾರ್ಷಿಕ ಸಭೆಯು ಶಿವಮೊಗ್ಗದಲ್ಲಿ ಮೇ ತಿಂಗಳ ೨೦-೨೧ ಕ್ಕೆ ಕೂಡಲಿರುವದೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಹಿಂದೀ ಸಾಹಿತ್ಯ

ಕಲಾಪ್ರಪೂರ್ಣ ಪ್ರೇಮಚಂದ್

— —

ಜೆ ಹ, ಶಾಸ್ತ್ರಿ

ಪ್ರೇಮ್‌ಚಂದ್, ರವೀಂದ್ರರಿಬ್ಬರೀ ದೇಶವಿದೇಶಗಳಲ್ಲಿ ಖ್ಯಾತಿಯನ್ನು ಪಡೆದ ಉತ್ತಮ ಕಥಾ ಲೇಖಕರೆಂಬುದು ನಿರ್ವಿವಾದ ವಿಷಯವು. ರವೀಂದ್ರರ ಕವಿತಾ ಪ್ರತಿಭೆಯು ಬಹು ವಿಸ್ತೃತವಾದದ್ದು. ಆದರೆ ಪ್ರೇಮಾಚಂದರ ಪ್ರತಿಭೆಯು ಸೀಮಿತವಿದ್ದು ಕಥಾಸಾಹಿತ್ಯದಲ್ಲಿಯೇ ಅದರ ವಿನಿಯೋಗವಾಯಿತು. ಆತನ ಲೇಖನಿಯು ಕಥೆ ಮತ್ತು ಕಾದಂಬರಿಗಳಿಗೇ ಪರಿಮಿತವಾಗಿ ಆ ಕ್ಷೇತ್ರದಲ್ಲಿ ಆತನು ಅದ್ವಿತೀಯ ಪ್ರೇಮಾಚಂದನ ಅನೇಕ ಕಥೆಗಳು ಐರೋಪದ ಅನೇಕ ಭಾಷೆಗಳಲ್ಲಿಯೂ ಭಾರತದ ಪ್ರತಿಯೊಂದು ಭಾಷೆಯಲ್ಲಿಯೂ ಅನುವಾದಿತವಾಗಿವೆ

ಪ್ರೇಮ್‌ಚಂದ ಸಹಾ ಶರತ್‌ಬಾಬುವಿನಂತೆ ಒಂದು ಬಡ ಕುಟುಂಬದಲ್ಲಿ ಹುಟ್ಟಿದವನು. ಸ್ವಯಂ ಕೃಷಿಯಿಂದ ಪ್ರೈವೇಟಾಗಿ ಬಿ. ಎ. ಪರೀಕ್ಷೆ ಪಾಸ್ ಮಾಡಿ ಉದ್ಯೋಗದಲ್ಲಿದ್ದು, ದೇಶದ ಕರೆಗೆ ಕಿವಿಗೊಟ್ಟು ಸ್ವಾತಂತ್ರ್ಯದ ಹೋರಾಟದಲ್ಲಿ ಸೇರಿ ಉದ್ಯೋಗ ಬಿಟ್ಟುಕೊಟ್ಟನು ಮೊದಲಿನಲ್ಲಿ ತೀವ್ರ ರಾಜಕೀಯ ಲೇಖನಗಳನ್ನು ಬರೆಯುತ್ತಿದ್ದನು. ಪೋಲೀಸರ ಕಾಟ ತಪ್ಪಿಸಿಕೊಳ್ಳುವದಕ್ಕಾಗಿ 'ಪ್ರೇಮ್‌ಚಂದ್' ಎಂಬ ಹೆಸರಿನಿಂದ ಬರೆಯತೊಡಗಿದನು. ಅಸಲು ಹೆಸರು ಮುನ್ಷೀ ಗಣಪತರಾಯ್ ಆತನು ಮೊದಲು ಉರ್ದೂಭಾಷೆಯಲ್ಲಿ ಬರೆಯುತ್ತಿದ್ದನು. ಹಿಂದೀಭಾಷೆಯನ್ನು ಲೋಕೋಕ್ತಿ, ಅಲಂಕಾರ (ಮುಹಾವರ್) ಗಳಿಂದ ಪುಷ್ಟೀಕರಿಸಿ ಸುಸಜ್ಜಿತ ಮಾಡುವದರಲ್ಲಿ ಕೃತ ಕೃತ್ಯನಾದವನೆಂದರೆ. ಭಾಷೆಯನ್ನು ಸರಳ ಮತ್ತು ಸಹಜವಾದ ಪ್ರವಾಹದಲ್ಲಿ ತೇಲಿಸುತ್ತಾ ರಚಿಸುವ ಸಾಹಿತಿಯೆಂದರೆ ಪ್ರೇಮ್‌ಚಂದ್ ಒಬ್ಬನೇ! ಹಿಂದೀಭಾಷೆಗೆ ಬಂದಿರುವ ಗೌರವದ ಕಾರಣಕರ್ತರಲ್ಲಿ ಪ್ರಮುಖ ಪ್ರೇಮಚಂದ್ ಆತನ ಕಥಾಸಾಹಿತ್ಯವು ಅಪರಿಮಿತ. ಮನೋವಿಜ್ಞಾನದಲ್ಲಿ ಪರಿಪೂರ್ಣ ಪಂಡಿತ ಮನಸ್ತತ್ವ ಗ್ರಂಥಪಠನೆಗಿಂತ ಆತನ ರಚನೆಗಳನ್ನೋದುವುದರಿಂದ ಮನೋವಿಜ್ಞಾನವು ಕ್ಷುಣ್ಣವಾಗಿ ಅವಗತವಾಗುತ್ತದೆ. ದೃಷ್ಟಿಗಗೋಚರವಾಗಿ ಗಾಢಾಂಧಕಾರದಲ್ಲಡಗಿರುವ ಅತಿ ಸೂಕ್ಷ್ಮ ವಿಭಾವಾನುಭಾವಗಳನ್ನು ಕವಿಹೃದಯವು ಮಾತ್ರವೇ ಗ್ರಹಿಸಬಲ್ಲದು. ರವಿಯು ಸೇರದ ಪ್ರದೇಶದಲ್ಲಿ ಕವಿಯು ಸೇರುವನೆಂಬ ಮಾತು ಅಸತ್ಯವಾದೀತೇ?

ಗಾಂಧೀವಾದದ ಪ್ರಭಾವವು ಆತನ ರಚನೆಗಳಲ್ಲಿ ಪ್ರತಿಬಿಂಬಿಸುತ್ತದೆ. ಸ್ವತಃ ರಾಜಕೀಯದಲ್ಲಿ ಪಾಲ್ಗೊಂಡುದುದರಿಂದ ಆತನ ರಾಜಕೀಯ ಕಥೆಗಳು ಉದ್ರೇಕೋತ್ಸಾಹಗಳನ್ನು ಉಕ್ಕಿಸುತ್ತವೆ. ಗ್ರಾಮ ಜೀವನದ ಚಿತ್ರಣದಲ್ಲಿ ಆತನ ಪ್ರತಿಭೆಯು ಅನನ್ಯವಾದದ್ದು. ಗ್ರಾಮಸ್ಥರ ಹೃದಯವನ್ನು ಇಷ್ಟು ಮಾರ್ಮಿಕವಾಗಿ ಅವರ ಹಾವಭಾವಗಳನ್ನು ವೇಷ ಭೂಷಣಗಳನ್ನು, ಆಚಾರ ವಿಚಾರಗಳನ್ನು, ಮಾನಸಿಕ ಪ್ರವೃತ್ತಿಗಳನ್ನು ಇಷ್ಟು ವಿಶದವಾಗಿ, ಸೂಕ್ಷ್ಮವಾಗಿ ನಿಪುಣತೆಯಿಂದ ಸ್ಪಷ್ಟೀಕರಿಸಿದವರು ಬಹಳ ಕಡಿಮೆ. ಧನಿಕರ ಆಡಂಬರ, ಬಡವರ ನಿಸ್ಸಹಾಯತೆ, ಸಂಘ ದುರಾಚಾರಗಳು ಮೊದಲಾದವುಗಳನ್ನು ಆತನು ಚಿತ್ರಿಸಿದ್ದಾಗ್ಯೂ ಗ್ರಾಮ ಜೀವನದ ಚಿತ್ರಣದಲ್ಲಿಯೇ ಆತನ ಕಲೆಯ ಚರಮ ಲಕ್ಷ್ಯವನ್ನು ಕಾಣಬಹುದು.

ಆತನ ರಚನೆಯ ಪ್ರತ್ಯೇಕತೆಯೆಂದರೆ ಭಾವಾನುಗುಣವಾದ ಭಾಷೆ, ಅಲ್ಲಲ್ಲಿ ಮಾರ್ಮಿಕ ಮತ್ತು ಅನುಭವೈಕವೇದ್ಯವಾದ ಸೂಕ್ತಿಗಳಿರುತ್ತವೆ. ಜೀವನ ತತ್ವದ ಪರಿಭಾಷೆಗಳಿಂದ ಈ ಸೂಕ್ತಿಗಳನ್ನೇ ಸಂಕಲನ ಮಾಡುವಲ್ಲಿ ಒಂದು ಉತ್ತಮ ಮನಸ್ತತ್ವ ಶಾಸ್ತ್ರವೇ ಹೊರಬೀಳುವದು

ನಿರ್ಮಲಾ, ರಂಗಭೂಮಿ, ಕರ್ಮಭೂಮಿ, ಗಬನ್, ಗೋದಾನ, ಸೇವಾಸದನ ಕಾಯಕಲ್ಪ ಇವುಗಳು ಆತನ ಪ್ರಮುಖ ಕಾದಂಬರಿಗಳು. ವೃದ್ಧವಿವಾಹ ಕುರೀತಿಯು ಆತನ 'ನಿರ್ಮಲ' ಕಾದಂಬರಿಯಲ್ಲಿ ಅತ್ಯಂತಹೃದಯ ದ್ರಾವಕವಾಗಿ ಚಿತ್ರಿಸಲ್ಪಟ್ಟಿದೆ ಮೂರು ಮಕ್ಕಳ ತಂದೆಯಾದ ಮುನ್ಷೀ ತೋತಾರಾಮ್ ವೃದ್ಧಾಪ್ಯದಲ್ಲಿ ಯೌವನ ಸುಖವನ್ನು ಅನುಭವಿಸುವದಕ್ಕಾಗಿ ನಿರ್ಮಲೆಯೆಂಬ ಅಪ್ರಾಯಕಳಾದ ಕನ್ಯೆಯನ್ನು ಮದುವೆಯಾಗುತ್ತಾನೆ. ಹುಟ್ಟಾಗಿ ಪವಿತ್ರಮೂರ್ತಿಯಾದ ತನ್ನ ಹಿರಿಯ ಮಗ ಮಂಸಾರಾಮ್ ನಿರ್ಮಲೆಯೊಡನೆ ಸರಳವಾಗಿರುವದನ್ನು ಕಂಡು ಅನುಮಾನಿಸುತ್ತಾನೆ. ನಿರ್ಮಲೆ ಈ ವಿಷಯವನ್ನು ಗ್ರಹಿಸಿ ವೃದ್ಧ ವಿವಾಹದಿಂದ ತನ್ನ ಸುಖಶಾಂತಿಗಳು ಮಾಯವಾಗಿರುವದರ ಜೊತೆಗೆ, ಉರಿಯುವ ಬೆಂಕಿಯ ಮೇಲೆ ಉಪ್ಪು ಸೀರೆದಂತೆ ಅನ್ಯಾಯವಾದ ಈ ಅನುಮಾನದಿಂದ ಚಿಂತಿಸುತ್ತಿದ್ದಳು. ಇಲ್ಲದ ಪ್ರೀತಿಯನ್ನು ಗಂಡನಲ್ಲಿ ವ್ಯಕ್ತಪಡಿಸುವದು ಸೋದರ ಪ್ರಾಯನಾದ ಮಂಸಾರಾಮ (ಯುವಕಪುತ್ರ)ನಲ್ಲಿ ಕಾಠಿಣ್ಯ ನಟಿಸುವದು, ಮನ್ಸಾರಾಮ್ ತನ್ನ ಮೇಲಿನ ಅನ್ಯಾಯವಾದ ಘೋರಕಳಂಕ ನಿವಾರಣೆಗಾಗಿ ಶತವಿಧ ಯತ್ನಿಸುವದೂ, ಕೊನೆಗೆ ಕೃಶಿಸಿ ನಿರ್ಮಲೆ ಪಾದಗಳ ಮೇಲೆಬಿದ್ದು ಪ್ರಾಣಬಿಡುವದು, ಒಬ್ಬರೊಬ್ಬರಾಗಿ ಕುಟುಂಬದವರೆಲ್ಲ ವೃದ್ಧವಿವಾಹ ಪಿಶಾಚಕ್ಕೆ ಬಲಿಯಾಗಿ ಸರ್ವನಾಶವಾಗುವದೂ ಮೊದಲಾದ ಭಯಂಕರ ಘಟನೆಗಳಿಂದ ಕಾದಂಬರಿಯು ದುಃಖ ಭೂಯಿಷ್ಠವಾಗಿದೆ ಪ್ರೇಮ್‌ಚಂದನ ಕಾದಂಬರಿಗಳಲ್ಲಿ ಇದೊಂದೇ ದುಃಖಾಂತ. ಇಷ್ಟು ಮನೋವೇದಕವಾಗಿರುವುದರಿಂದಲೇ ಇದು ಹೆಚ್ಚು ಪ್ರೀತಿಪಾತ್ರವಾಗಿದೆ ಮನ್ಸಾರಾಮನ ನಿಷ್ಕಲಂಕ ಭಾವನೆ, ನಿರ್ಮಲೆಯು ಭಗ್ನಜೀವಿಯಾದರೂ ಪರಿವಾರ ಸುಖಕ್ಕಾಗಿ ಪಡುವ ಕಷ್ಟಪರಂಪರೆ, ತೋತಾರಾಮನ ಅಮಾನುಷತನವನೆ ಮನೋವೇದಕಗಳಾಗಿವೆ. ಮಗನು ಆಸ್ಪತ್ರೆಯಲ್ಲಿ ಮೃತ್ಯುಶಯ್ಯೆಯ ಮೇಲೆ ಮಲಗಿದ್ದಾನೆ. ಮನೆಗೆ ಕಾರಣ ವಿನಃ ಅವನು ಬದುಕುವ ಆಸೆಯಿಲ್ಲ ಆದರೂ ಮನೆಗೆ ಬಂದಲ್ಲಿ ನಿರ್ಮಲೆ ಅವನಿಗೆ ಉಪಚಾರ ಮಾಡುವಳು, ಇಂತಹ ಸ್ಥಿತಿಯಲ್ಲೂ ಸಹಾ ನಿರ್ಮಲೆ ಮಗನ ಬಳಿಯಲ್ಲಿರುವದು ಅವನಿಗೆ ಸರಿ ತೋರಲಿಲ್ಲ. ಈ ಘಟ್ಟವು ಎಷ್ಟು ಮರ್ಮಸ್ಪರ್ಶಿಯಾಗಿರುವುದೆಂಬುದನ್ನು ವಾಚಕರೇ ಗ್ರಹಿಸಬಲ್ಲರು. ನಿರ್ಮಲ, ಪ್ರೇಮ್‌ಚಂದನ ಅಮರಕೃತಿಯು.

ಇತರ ಕಾದಂಬರಿಗಳಲ್ಲಿ ಅಲ್ಲಲ್ಲಿ ಕಾಣಬರುವ ದೋಷಗಳನ್ನು ಪ್ರೇಮಚಂದರ ಕಥೆಗಳಲ್ಲಿ ಎಲ್ಲೂ ಕಾಣಲಾರೆವು. ಆತನ ಒಂದೊಂದು ಕಥೆಯು ಉದ್ಯಾನದ ಕುಸುಮ ತರುವಂತೆ ಕ್ರಮವಿಕಾಸದಿಂದಿರುತ್ತದೆ ಅರಣ್ಯದಲ್ಲಿಯ ಅಸ್ತವ್ಯಸ್ತತೆ ಅಲ್ಲಿ ಕಾಣಬರುವದಿಲ್ಲ, ನೂರಾರು ಕಥೆಗಳನ್ನು ಬರೆದಿರುವನು. ಸಕಲಮಾನವ ಪ್ರವೃತ್ತಿಗಳನ್ನು ಚಿತ್ರಿಸುವ ವಿಶಾಲ ವಿಹಂಗಮ ದೃಷ್ಟಿಯಿರುವುದರಿಂದಲೇ ಆತನು ಮಹಾರಾಜರ ಅಭಿಜಾತ್ಯ ಗುಣಗಳನ್ನು ಸಂಬಲಾಗದ ಧಾರ್ಮಿಕ ವಿಷಯಗಳನ್ನು ಸ್ವತಃ ಸಾಮ್ಯವಾದಿಯಾದರೂ ವರ್ಣಿಸಲು ಪರಿಪೂರ್ಣನಾದನು. ಪಾಠಕರ ಮನವನ್ನು ಆಕರ್ಷಿಸಿ ಅವರನ್ನು ಅಜ್ಞಾತ ಅನುಭವದಲ್ಲಿಯೂ ಪರವಶರನ್ನಾಗಿ ಮಾಡುವದೇ ಆತನ ಕಲಾಪ್ರತಿಭೆ ಆತನ ಕಥೆಯಲ್ಲಿಯ ಒಂದೊಂದು ವಾಕ್ಯವೂ ಸ್ವಯಂಸಂಪೂರ್ಣವೇ ಈ ವಿಷಯವು ರವೀಂದ್ರ, ಶರತ್ ಬಾಬುಗಳಲ್ಲಿ ಕಾಣುವದಿಲ್ಲ. ಅವರ ರಚನೆಗಳನ್ನು ಪ್ರತ್ಯೇಕಿಸಿ ಓದುವಲ್ಲಿ ಆಕರ್ಷಣೆಯಲ್ಲಿ ಅವರ ಕೃತಿಗಳನ್ನು ಸಮಗ್ರವಾಗಿ ಓದದೆ ವಿನಃ ಗ್ರಹಿಸುವದು ಕ್ಲಿಷ್ಟ.

ಆತನ ಭಾವಪ್ರದರ್ಶನಾಶಕ್ತಿ ಅಪೂರ್ವವಾದದ್ದು, ಅತಿಕ್ಲಿಷ್ಟ ವಿಷಯವನ್ನೂ ಅತ್ಯಂತ ಸರಳವಾಗಿ ಒಂದೇ ಚಿಕ್ಕವಾಕ್ಯದಲ್ಲಿ ಅಡಗಿಸಬಲ್ಲನು. ಆತನು ವಿಚಾರ

ಸದೇಬಿಟ್ಟ ಗಂಭೀರ ವಿಷಯಗಳೇ ಇಲ್ಲ. ಪ್ರತಿಯೊಂದು ಘಟ್ಟವು ಅವಶ್ಯಂಭಾವಿಯಾಗಿಯೇ ತೋರುತ್ತದೆ. ಮುಂಬರುವ ವಿಷಯದ ಸೂಚನೆಯನ್ನು ಕ್ರಮಬದ್ಧವಾಗಿ ಮೊದಲೇ ಸೂಚಿಸುವದರಿಂದ ಆಮೂರ್ಮಿಕ ಸ್ಥಳಗಳಲ್ಲಿ ಅಕಸ್ಮಾತ್ತಾದ ಆಘಾತವಾಗಲಿ ಹೆಚ್ಚಾದ ಭಾವಾವೇಶವಾಗಲಿ ಹೃದಯಕ್ಕಾಗುವದಿಲ್ಲ. ಈ ವಿಷಯ ಅನ್ಯಾಯವೆಂಬುದನ್ನು, ಆತನ ರಚನೆಯಲ್ಲಿ ನೋಡಲಾರೆವು ಸ್ವಸ್ಥತೆಯೇ ಆತನ ರಚನೆಗಳಲ್ಲಿಯ ಅಲಂಕಾರ.

ರಾಜಕೀಯ ಕ್ಷೇತ್ರದಲ್ಲಿದ್ದು ರಾಷ್ಟ್ರಸೇವೆ ಮಾಡದಿದ್ದರೂ ಆತನ ಕರುಣಾಭರಿತ ಲೇಖನಿಯು ದೀನ ದುಃಖಿಗಳ ಅಂತರಂಗದ ಮೂಕವೇದನೆಯನ್ನು ವ್ಯಕ್ತಪಡಿಸುತ್ತದೆ. ಕಲಾಸೌಷ್ಠವ ಕೆಡಿಸದೇ ಜನತೆಯ ಹೃದಯವನ್ನು ಜರ್ಜರಿಸಿದ ವನೀತನೇ ಈತನಿಲ್ಲದಿದ್ದಲ್ಲಿ ಹಿಂದಿ ಇಷ್ಟು ಪರಿಪೂರ್ಣವಾಗುತ್ತಿರಲಿಲ್ಲ ಎಂದು ಮತ್ತೊಮ್ಮೆ ಹೇಳಿದರೆ ತಪ್ಪಾಗಲಾರದು. ಕಲೆಗೆ ಮತ್ತು ರಾಷ್ಟ್ರೀಯತೆಗೆ ಸಖ್ಯತೆಯನ್ನು ಬೆಳೆಸಿದ ಪ್ರಮುಖನೀತನು ಸಮಸ್ತ ಭಾರತೀಯರು ಈತನ ಅಪಾರ ದೇಶಭಕ್ತಿಗೂ ಸಾಹಿತ್ಯ ಸೇವೆಗೂ ಚಿರಋಣಿಗಳಾಗಿರಬೇಕಾದುದು ಅವಶ್ಯ.

ಕರ್ನಾಟಕಪ್ರಾಂತನಿರ್ಮಾಣ ಶೀಘ್ರವಾಗಿ ಆಗಬೇಕು.

ಕೆ. ಪಿ. ಸಿ. ಸಿ. ನಿರ್ಣಯ

೮ ನೆಯ ದಿನಾಂಕ ಹುಬ್ಬಳ್ಳಿಯಲ್ಲಿ ಸಮಾವೇಶವಾದ ಸಭೆಯು ಕರ್ನಾಟಕ ಪ್ರಾಂತನಿರ್ಮಾಣದ ಆವಶ್ಯಕತೆ ಮತ್ತು ಶೀಘ್ರತೆಯನ್ನು ಕುರಿತು ಕಾಂಗ್ರೆಸ ವರಿಷ್ಠರಿಗೆ ತಿಳಿಸಲು ಒಂದು ಶಿಷ್ಟಮಂಡಳವನ್ನು ದಿಲ್ಲಿಗೆ ಕಳುಹಿಸಲು ತೀರ್ಮಾನಿಸಿತು. ಈ ಶಿಷ್ಟಮಂಡಳದಲ್ಲಿ ಶ್ರೀಗಳಾದ ದಿವಾಕರ್, ನಿಜಲಿಂಗಪ್ಪ, ಎಂ. ಪಿ. ಪಾಟೀಲ್, ಕೆ. ಆರ್. ಕಾರಂತ, ದೊಡ್ಡಮೇಟಿ, ವೀರನಗೌಡರು, ಡಿ. ಪಿ. ಕರ್ಮರಕರ್, ಟೇಕೂರು ಸುಬ್ರಹ್ಮಣಂ ಇವರಿದ್ದು ಜೂನ್ ೧೦ ರೊಳಗಾಗಿ ಇವರು ಕೆ. ಪಿ. ಸಿ. ಸಿ. ಗೆ ತಮ್ಮ ವರದಿಯನ್ನೊಪ್ಪಿಸಬೇಕಾಗಿದೆ.

ಪ್ರತ್ಯೇಕ ಪ್ರಾಂತವಾಗದಿದ್ದರೆ ಶಾಸನ ಸಭೆಗಳಲ್ಲಿನ ಸದಸ್ಯರು ರಾಜೀನಾಮೆ ಕೊಡಬೇಕೆಂಬ ಕಾರಂತರ ನಿರ್ಣಯವು ೮ ಗಂಟೆಗಳ ವರೆಗೆ ಚರ್ಚಿತವಾಯಿತು. ಕಾರ್ಯದರ್ಶಿಗಳ ಸೂಚನೆಯಿಂದ ಜೂನ್ ೧೦ ಈ ವಿಷಯದ ಪುನರ್ವಿಮರ್ಶೆಯಾಗಬೇಕೆಂದಾಯಿತು.

ಆಂಧ್ರಪ್ರಾಂತ ನಿರ್ಮಾಣ

ಆಂಧ್ರಪ್ರಾಂತೀಕ ಕಾಂಗ್ರೆಸ್ ಸಭೆಯಲ್ಲಿ ತ್ರಿಮೂರ್ತಿಗಳ ವರದಿಯು ವಿಮರ್ಶೆಯಾಗಿ ಈಗಿರುವ ೧೦ ಜಿಲ್ಲೆಗಳನ್ನೊಳಗೊಂಡ ಮತ್ತು ಬಳ್ಳಾರಿಜಿಲ್ಲೆಯ ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳುಳ್ಳ ಆಂಧ್ರಪ್ರಾಂತವು ನಿರ್ಮಾಣವಾಗಿ ಮದರಾಸು ಮುಖ್ಯ ಪಟ್ಟಣವಾಗಿರಬೇಕೆಂದು ತೀರ್ಮಾನವಾಯಿತು.

ಬುದ್ಧನ ಅವಶೇಷಗಳನ್ನು ಗಯೆಗೆ ತರಲಾಯಿತು,

ಗಯಾ:-ಭಗವಾನ ಬುದ್ಧನ ಅವಶೇಷಗಳನ್ನು ನಿನ್ನೆ ರಾತ್ರಿ ಬನಾರಸದಿಂದ ವಿಶೇಷ ಗಾಡಿಯಲ್ಲಿ ತರಲಾಯಿತು. ಅವಶೇಷವಿದ್ದ ಡಬ್ಬಿಯನ್ನು ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಪ್ರಸಂಚಡ ಸ್ವಾಗತದೊಂದಿಗೆ ಅವಶೇಷಗಳನ್ನು ಇಳಿಸಿ ಆನೆ ಕುದುರೆಗಳ ಮೆರವಣಿಗೆಯೊಂದಿಗೆ ಒಯ್ದು ಸಾರ್ವಜನಿಕ ನಿರೀಕ್ಷಣೆಗಾಗಿ ಜವಾಹರ ಹಾಲಿನಲ್ಲಿರಿಸಲಾಯಿತು.

ನಾಳೆ ಶ್ರೀ ಆನೆಯವರು ಬಂದು ಭಗವಾನ ಬುದ್ಧನ ಜನ್ಮ ದಿನೋತ್ಸವವನ್ನು ಉದ್ಘಾಟಿಸುವರು. ಡಾ|| ರಾಜೇಂದ್ರಪ್ರಸಾದರು ಸಾರ್ವಜನಿಕ ಅಧ್ಯಕ್ಷತೆ ವಹಿಸಿರುವರು.

ಬುದ್ಧನಿಗೆ ಜ್ಞಾನೋದಯವಾದ ಬೌದ್ಧ ಗಯಾದೇವಾಲಯವನ್ನು ದೀಪಗಳೊಂದಿಗೆ ಅಲಂಕರಿಸಿ, ಬಡಬಗ್ಗರಿಗೆ ದಾನಧರ್ಮ ಮಾಡಲಾಗುವದು. ನಾನಾದೇಶಗಳಿಂದ ಬುದ್ಧ ಬಿಕ್ಷುಗಳು ಉತ್ಸವಕ್ಕಾಗಿ ಆಗಮಿಸಿದ್ದಾರೆ

ಭಯಂಕರ ಪ್ಲೇಗ ಬೇನೆ ಹಬ್ಬುವ ಭಯ

ಕಲಕತ್ತಾ ಜನತೆಯು ಮುಂಜಾಗ್ರತೆ ವಹಿಸದಿದ್ದರೆ ಈಗ ಭಾರತದಲ್ಲಿ ಹರಡಿದ ಪ್ಲೇಗ ಬೇನೆಯು ೧೯೪೮ ನೆಯ ಇಸ್ವಿಯ ಭಯಂಕರ ಸ್ವರೂಪವನ್ನು ತಾಳುವ ಸಂಭವವಿರುವದೆಂದು ಪ್ರೊ. ಸೀಲರು ಕಲಕತ್ತೆಯ ಮೆಡಿಕಲ್ ಕ್ಲಬ್‌ದಲ್ಲಿ ಭಾಷಣ ಮಾಡುತ್ತ ಹೇಳಿದರು

ಅವರು ಮುಂದೆ ಸಾಗಿ ಈ ರೋಗದ ಬಗ್ಗೆ ಇಂದಿನ ಡಾಕ್ಟರರಿಗೆ ಹೆಚ್ಚಿನ ವಿವರಗಳು ಗೊತ್ತಾಗಿರುವದು ತೀರ ಮಹತ್ವದ ಸಂಗ್ತಿಯಾಗಿದೆ. ಈ ವರ್ಷದಲ್ಲಿ ಹದಿನಾಲ್ಕು ಪುಪ್ಪಸ ಗಂಟು ಬೇನೆಯ ಉದಾಹರಣೆಗಳು ನಮ್ಮ ಕಣ್ಣಿಗೆ ಬಿದ್ದಿವೆ. ಆದರೆ ೧೯೪೮ ರಲ್ಲಿ ನೂರರಲ್ಲಿ ಮೂರರಷ್ಟು ಈ ಪುಪ್ಪಸ ಪ್ಲೇಗ ಬೇನೆಯ ರೋಗಿಗಳೇ ಇದ್ದರು. ಆದರೆ ಸಾದಾ ಪ್ಲೇಗ ಬೇನೆಗಿಂತ ಈ ಪುಪ್ಪಸ ಪ್ಲೇಗ ಬೇನೆಯನ್ನು ಹಿಡಿತದಲ್ಲಿ ತರುವದು ಸರಳವಾದದ್ದು. ಯಾಕೆಂದರೆ ಸಾದಾ ಪ್ಲೇಗು ಬೇನೆಯು ಇಲಿಗಳ ಮುಖಾಂತರ ಬರುವದರಿಂದ ಅದನ್ನು ತಡೆಯಲು ಕಠಿಣವಾಗುವದು. ಪುಪ್ಪಸ ಪ್ಲೇಗ ಬೇಗನೆ ಮನುಷ್ಯನೇ ಜವಾಬುದಾರನಿರುತ್ತಾನೆ ಎಂದು ಹೇಳಿದರು.

ಮದರಾಸ ವೀರಶೈವ ವಿದ್ಯಾವರ್ಧಕ ಸಂಘ

ಬಳ್ಳಾರಿ:- ಇಲ್ಲಿ ಮದರಾಸು ವೀರಶೈವ ವಿದ್ಯಾವರ್ಧಕ ಸಂಘ ಸಭೆ ಗೂಡಿ ತಾ|| ೫-೫-೪೯ ರಲ್ಲಿ ಈ ಕೆಳಗಿನಂತೆ ವಿಷಯಗಳ ತೀರ್ಮಾನವಾಯಿತು.

ಮದರಾಸ ಪ್ರಭುತ್ವದವರು ವೀರಶೈವ ಕಾಲೇಜು ಕಟ್ಟಡಕ್ಕೆ ತಗಲಬಹುದಾದ ೪,೩೫,೧೦೦ ರೂಪಾಯಿಗಳ ಗ್ರ್ಯಾಂಟು ಕೊಡುವದಾಗಿ ತಿಳಿಸಿ ಕಾಲೇಜನ್ನು ನಡೆಸಿಕೊಂಡು ಹೋಗಬೇಕೆಂದು ಸೂಚಿಸಿರುವದನ್ನು ದೀರ್ಘವಾಗಿ ಆಲೋಚಿಸಿ, ಪ್ರಭುತ್ವದವರ ಅಪೇಕ್ಷೆಯಂತೆ ಕಾಲೇಜು ನಡೆಯಿಸಲು ಕೆಳಗಿನ ಅಂಶಗಳಿಗೆ ಸರಕಾರದಿಂದಲೂ ಯುನಿವ್ಹರ್ಸಿಟಿಯಿಂದಲೂ ಮನ್ನಣೆ ದೊರೆತಲ್ಲಿ ಮಾತ್ರ ವೀರಶೈವ ಕಾಲೇಜನ್ನು ನಡೆಸಿಕೊಂಡು ಹೋಗಬಹುದೆಂದು ಈ ಸಭೆಯು ಸಮ್ಮತಿಸುತ್ತಿದೆ.

೧) ಹೊಸ ಕಟ್ಟಡಕ್ಕೆ ತಗಲುವ ಹಣದಲ್ಲಿ ಅರ್ಧ ಮೊತ್ತಕ್ಕೆ ಕಡಿಮೆಯಾಗದಷ್ಟು ಪ್ರಭುತ್ವದವರು ಗ್ರ್ಯಾಂಟು ಕೊಡತಕ್ಕದ್ದು. (೨) ಕಾಲೇಜಿಗೆ ಅವುಗಳ ಆಡಳಿತ, ವಿದ್ಯಾರ್ಥಿಗಳ ಸೇರ್ಪಡೆ, ಮೊದಲಾದ ವಿಷಯಗಳಲ್ಲಿ ಸಲಹೆ ಸಮ್ಮತಿಗಳನ್ನು ರಚಿಸಿಕೊಳ್ಳಬೇಕೆಂಬುವ ಕಟ್ಟನ್ನು ನಮ್ಮ ಸಂಸ್ಥೆಗೆ ಸರಕಾರವು ಎಂದಿಗೂ ಒತ್ತಾಯಪಡಿಸಬಾರದು. ಸರಕಾರವು ಸಹ ಸದ್ಯ ಅಂತಹ ಸಮಿತಿಯ ರಚನೆಯ ಕುರಿತು ಒತ್ತಾಯಪಡಿಸುವದಿಲ್ಲವೆಂದು ಸಭಿಕರ ಗಮನಕ್ಕೆ ಬಂದಿದೆ. (೩) ಮದರಾಸ ಯುನಿವ್ಹರ್ಸಿಟಿಯವರು ಕಾಲೇಜಿಗೆ ಈ ವಳಗಾಗಿ ಎಂಡೋಮೆಂಟ ಮಾಡಿರುವರಂತೆ ತೃಪ್ತಿಪಟ್ಟು ಹೆಚ್ಚು ಹಣವನ್ನು ಬೇಡಬಹುದು, ಹೊಸ ಕಟ್ಟಡ ಮುಗಿದು ಕಾಲೇಜಿನಲ್ಲಿ ಬಿ. ಎ. ಮುಂತಾದ ಹೆಚ್ಚಿನ ತರಗತಿಗಳನ್ನು ಪ್ರಾರಂಭಿಸುವ ಪ್ರಸಂಗದಲ್ಲಿ ಯುನಿವ್ಹರ್ಸಿಟಿಯು ೧೯೪೫ ನೇ ವರ್ಷದ ಕರಾರಿನಂತೆ ಹೆಚ್ಚು ಹಣ ಬೇಡುವ ಮೊದಲು ಈಗ ಬೇಡುವ ಎಂಡೋಮೆಂಟು ಆಸ್ತಿಗಳ ಬೆಲೆಯು ಮತ್ತು ಆದರ ಉತ್ಪನ್ನವು ೪,೦೧,೦೦ ರೂಪಾಯಿಗಳ ಮೂಲ ಧನದಷ್ಟು ಇರುವದರಿಂದ ಅವುಗಳ ಬೆಲೆಯನ್ನು ಈಗಿನ ಕಾಲಮಾನದ ಬೆಲೆಗೆ ಮಾರ್ಪಡಿಸಿ ಸ್ಥಿರಗೊಳಿಸಲು ಒಂದು ಕಮಿಷನ್ ಯುನಿವ್ಹರ್ಸಿಟಿಯವರು ಕಳುಹಿಸಿ ಆ ಕಮಿಷನದ ವರದಿಯ ಮೇರೆಗೆ ಬೆಲೆಯನ್ನೂ ನಿರ್ಧರಿಸಿ ೫,೦೦೦೦೦ ರೂ ಗಳಿಗೆ ಕಡಿಮೆ ಬೀಳಬಹುದಾದ ಮೊತ್ತವನ್ನು ಸಂಘದಿಂದ ಆದಷ್ಟು ಸಮಾಧಾನದಿಂದ ಬರಮಾಡಿಕೊಳ್ಳತಕ್ಕದು.

ಹರಿಜನೋದ್ಧಾರ

ಎಲ್ಲರೂ ತಿಳಿಯಬೇಕಾದ ಅಂಶಗಳು.

"ರೈತ" ವಾರ ಪತ್ರಿಕೆಯ ೮ ನೆಯ ದಿನಾಂಕದ ಸಂಪಾದಕೀಯ ಲೇಖನದಲ್ಲಿ ಸಂಪಾದಕರು ತಮ್ಮ ಸುಬುದ್ಧಿಗೆ ತೋರಿದ ಸಲಹೆಗಳನ್ನು ಟೀಕಾತ್ಮವಾಗಿ ಕೊಟ್ಟಿರುತ್ತಾರೆ. ' ಆ ಲೇಖನದಲ್ಲಿ ಉಪಯುಕ್ತ ಅಂಶಗಳಿಗೆ ಕಾರ್ಯಪ್ರವೃತ್ತರಾದವರು ಋಣಿಗಳೆಂದು ಬೇರೆ ಹೇಳಬೇಕಾಗಿಲ್ಲ.

ಹರಿಜನೋದ್ಧಾರವು ಭಾಷಣ ನೀತಿಯ ಉಪದೇಶಗಳಲ್ಲೇ ಇಲ್ಲೆಂಬುದನ್ನು ಅನುಭವವುಳ್ಳ ಕಾರ್ಯಕರ್ತರೆಲ್ಲಾ ಅರಿತಿದ್ದಾರೆ ಈ ಕಾರಣದಿಂದಲೇ ೧೯೩೨ ರಲ್ಲಿ ಗಾಂಧೀಜಿ ಉಪವಾಸದ ನಂತರ ಅಸ್ತಿತ್ವದಲ್ಲಿ ಬಂದ ಹರಿಜನ ಸೇವಕ ಸಂಘವು ನಿಶ್ಚಿತ ಕಾರ್ಯಕ್ರಮವನ್ನಿಟ್ಟುಕೊಂಡಿದೆ. ಗಾಂಧೀಜೀಗೆ ಪರಮ ಆಪ್ತರಾದ ಮತ್ತು ತಮ್ಮ ಇಡೀ ಜೀವನವನ್ನೇ ದೀನಜನೋದ್ಧಾರಕ್ಕಾಗಿ ಮೀಸಲಾಗಿಟ್ಟ ಥಕ್ಕರ್ ಬಾಪಾರ ನೇತೃತ್ವದಲ್ಲಿ ಮಾರ್ಗದರ್ಶನದಲ್ಲಿ ಅಖಿಲ ಭಾರತದ ಕಾರ್ಯವು ನಡೆದಿದೆ, ರಾಷ್ಟ್ರದ ಯಾವ 'ಭಾಗದಲ್ಲಾದರೂ ಪ್ರಗತಿ ಇಲ್ಲವೆ ಆಡಂಬರದ ಬಾಹ್ಯರೂಪವಿದ್ದರೆ ಅದು ಕಾರ್ಯಕರ್ತರ ಲೋಪದೋಷಗಳ ಕಾರಣವಾಗಲಿ ಮೂಲ ಉದ್ದೇಶದ ಪವಿತ್ರಸಾಧನೆಗೆ ಕುಂದಿಲ್ಲ.

ದೇವಾಲಯ, ಊರುಭಾವಿಗಳಲ್ಲಿನ ಪ್ರವೇಶ ಸಾಮಾಜಿಕ ಹಕ್ಕುಗಳನ್ನು ಸ್ಥಿರಪಡಿಸುವ ಚಟುವಟಿಕೆಗಳು ಸೇವಕ ಸಂಘದ ಕಾರ್ಯಕ್ರಮದಲ್ಲಿರುವುದಾದರೂ ಅವುಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. ಬಳ್ಳಾರಿ ಜಿಲ್ಲೆಯಲ್ಲಂತೂ ಸಂಘದ ಕಾರ್ಯಕರ್ತರೆನಿಸಿಕೊಂಡವರು ದೇವಸ್ಥಾನ, ಭಾವಿಗಳಲ್ಲಿ ಪ್ರವೇಶದ ಹಕ್ಕು ಇದ್ದರೂ ನುಗ್ಗಿಸುವ ಕಾರ್ಯವನ್ನು ಕಳೆದ ೩೦ ವರ್ಷಗಳಲ್ಲಿ ಎಲ್ಲಿಯೂ ಮಾಡಿಲ್ಲ ಸಮಾಜದ ಸಮಾನ ಹಕ್ಕುಗಳ ಆಚರಣೆಗಾಗಿ ಸರ್ಕಾರದವರು ಜಾರಿಯಲ್ಲಿ ತಂದ ಶಾಸನವನ್ನು ಪ್ರಯೋಗಿಸುವ ಕಾರ್ಯವನ್ನೂ ಹರಿಜನ ಸೇವಕ ಸಂಘವು ಇಟ್ಟುಕೊಂಡಿಲ್ಲ. ಹಿಂದುಳಿದ ಹಳ್ಳಿಗಳಲ್ಲಿ ವೃಥಾ ಗೊಂದಲವನ್ನೆಬ್ಬಿಸಿ ಹರಿಜನ ಸವರ್ಣೀಯ ಘರ್ಷಣೆಗಳನ್ನು ಹೆಚ್ಚು ಮಾಡಲು ಯಾರೂ ಅಪೇಕ್ಷಿಸುವುದಿಲ್ಲ, ಇದು ಹೃದಯ ಪರಿವರ್ತನೆಯ ಕೆಲಸ ಇದಕ್ಕೆ ಪಾರಸ್ಪರಿಕ ಸಹಾಯವು ಆವಶ್ಯಕ, ಬಳ್ಳಾರಿ ಜಿಲ್ಲೆಯ ವಿಷಯವನ್ನು ಹೇಳಬೇಕೆಂದರೆ ಹರಿಜನ ಕಾರ್ಯಕರ್ತರು ತಾವಾಗಿ ಸಹ ಭೋಜನವನ್ನು ಎಲ್ಲಿಯೂ ಕಳೆದ ಎರಡು ದಶಕಗಳಲ್ಲಿ ಏರ್ಪಡಿಸಿಲ್ಲ. ೧೯೩೭ ರ ನಂತರ ಈ ವರೆವಿಗೆ ಮಂತ್ರಿಗಳು ಬಂದಾಗ ಕೆಲಸಲ ಹೃದಯ ಪರಿವರ್ತನೆಯಿಲ್ಲದ ವತ್ತಾಯದ ಭೋಜನಗಳನ್ನು ಲಾಭ ಹೊಂದಿದ ಅಥವಾ ಹೊಂದಲಿದ್ದ ವ್ಯಕ್ತಿಗಳು ಏರ್ಪಡಿಸಿದ್ದರು. ಅದರಲ್ಲಿ ಹರಿಜನ ಕಾರ್ಯಕರ್ತರೂ ಆಹ್ವಾನದಿಂದ ಹೋಗಿ ಊಟಮಾಡಿದ್ದುಂಟು ೩೦-೪-೪೯ ರ ಸಮಾರಂಭವು ಅಧಿಕಾರಿಗಳದು. ಅವರ ಪ್ರತಿಭೆಯಿಂದಾದುದು. ಆ ದಿನದ ಕಾರ್ಯಕಲಾಪಗಳ ಸಕಲ ಶ್ರೇಯಸ್ಸು ಅವರದೇ! ಸರ್ಕಾರದವರು ಕೊಟ್ಟ ಕಾರ್ಯಕ್ರಮದಲ್ಲಿ ಸಹ ಭೋಜನವೂ ಒಂದು ಭಾಗವೆಂದು ಅದಕ್ಕೆ ಕೈಹಾಕಿದರು.

ಹರಿಜನರ ಇಂದಿನ ಅಧೋಗತಿಗೆ ಅವರ ಆರ್ಥಿಕ ದುಸ್ಥಿತಿಯು ಬಹು ಮುಖ್ಯ ಕಾರಣವೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅವರ ದುಸ್ಥಿತಿಗೆ ಬಹಳ ಕಾರಣಗಳವೆ, ಆರ್ಥಿಕವಲ್ಲುತ್ತಮವಾಗಿದ್ದರೂ ಕೆಲ ಸಂದರ್ಭಗಳಲ್ಲುಪಯೋಗವಿಲ್ಲ. ೮೦-೧೦೦ ಮಾಸಿಕ ಸಂಬಳವಿರುವ ಕೆಲ ಹರಿಜನ ರೆವಿನ್ಯೂ ಇನ್ಸ್‌ಪೆಕ್ಟರಿರುವರು. ಇತರರಿಗಿಂತಲೂ ಹೆಚ್ಚಿಗೆ ಬಾಡಿಗೆ ಕೊಟ್ಟರೂ ಅವರಿಗೆ ಮನೆ ಕೊಡುವಂತಿಲ್ಲ ಅವರು ತಲೆ ಮರಿಸಿಕೊಂಡು ಕ್ರಿಶ್ಚಿಯನ್ನರೆಂದು ಹೇಳಿ ಜೀವಿಸುತ್ತಿರುವರು. ಹೊಸಪೇಟೆ ತಾಲೂಕು ಮತ್ತು ಜಿಲ್ಲೆಯ ಕೆಲ ಭಾಗಗಳಲ್ಲಿ ಸಾಲವಿಲ್ಲದ ಕಳಂಕ ರಹಿತ ಜೀವನ ಸಾಗಿಸುತ್ತಿರುವ ದೊಡ್ಡ ಭೂಮಾಲೀಕ ಹರಿಜನರಿಯತ್ತಾರೆ. ಶುಭ್ರ ವಸ್ತ್ರಧಾರಿಗಳಾಗಿ ಶುಚಿ - ರುಚಿಯಾದ ಖಾದ್ಯ ಪದಾರ್ಥಗಳನ್ನು ಭುಂಜಿಸುತ್ತಿರುವರು. ಅವರನ್ನು ಕೇರಿ ಬಿಟ್ಟು ಸವರ್ಣ ಹಿಂದೂಗಳ ಮನೆಯ ಬಳಿ ಮನೆ ಕಟ್ಟಿಸಿಕೊಳ್ಳಲು ಬಿಟ್ಟಿರುವರೇ? ಅವರೊಡನೆ ಇತರ ದರಿದ್ರರಿಗಿಂತಲೂ ಒಳ್ಳೆಯ ವ್ಯವಹಾರವನ್ನಿಟ್ಟುಕೊಂಡಿರುವರೇ? ಕೆಲ ತಿಂಗಳ ಕೆಳಗೆ ಅಂಥ ಭೂಮಾಲೀಕ ಹರಿಜನ ಸದ್ಗೃಹಸ್ಥನು ಇತರರಂತೆ ಹೋಟಲಿಗೆ ಹೋದಾಗ ನಾದ ರಕ್ಷಾ ಪ್ರಹಾರ ಮಾಡಿ ಹೊರದೂಡಿದರು, ಆರ್ಥಿಕ ಪ್ರಗತಿಯೊಂದಾಗಿ ಸವರ್ಣೀಯರ ಹೃದಯ ಪರಿವರ್ತನೆಯಾಗದಿದ್ದರೆ ಹರಿಜನರ ಪರಿಸ್ಥಿತಿ ಇದ್ದಂತೆಯೇ ಇರುತ್ತದೆ. ಅವರ ಜೀವನ ಮಟ್ಟವು ಏರಬಹುದಾಗಲಿ ಸಮಾಜದಲ್ಲಿ ಅವರಿಗೆ ಸ್ಥಾನವಿಲ್ಲ ಈ ಕಾರಣವೇ ಇದಕ್ಕಿಂತಲೂ ಹೆಚ್ಚಿನ ಕಾರ್ಯವು ವಿದ್ಯಾಭ್ಯಾಸವೆಂಬುದನ್ನರಿತು ಹರಿಜನ ಸೇವಕ ಸಂಘವು ವಿದ್ಯಾಭ್ಯಾಸದ ಕಡೆ ಹೆಚ್ಚಿಗೆ ಗಮನವನ್ನೀಯುತ್ತಲಿದೆ. ಬಳ್ಳಾರಿ ಜಿಲ್ಲೆಯ ಒಂದೂವರೆ ಲಕ್ಷ ಹರಿಜನರಲ್ಲಿ ೫ ಸಾವಿರ ಬಾಲಬಾಲೆಯರು ಪ್ರಾಥಮಿಕ ಶಾಲೆಗಳಲ್ಲೂ, ೩೦೦ ಮಾಧ್ಯಮಿಕ ಶಾಲೆಗಳಲ್ಲೂ ಇರುವರೆಂದರೆ ಇತರ ವರ್ಗಗಳ ಸಂಖ್ಯೆಗನುಗುಣವಾಗಿ ಇದೇನೂ ಕನಿಷ್ಠವಾದುದಲ್ಲ. ಬಾಲಿಕಾ ವಿದ್ಯಾನಿಲಯವೊಂದು ಬಾಲಕರ ವಿದ್ಯಾನಿಲಯಗಳು ಆರು ಜಿಲ್ಲೆಯಲ್ಲಿದ್ದು ಉಚಿತ ಊಟ ವಿದ್ಯಾಭ್ಯಾಸದ ವ್ಯವಸ್ಥೆಯಿದ್ದು ಸುಮಾರು ೧೫೦ ಯೋಗ್ಯ ಬಾಲಕರು ಶಿಕ್ಷಣ ಹೊಂದುತ್ತಿರುವರು, ಓದಿದವರಿಗೆಲ್ಲಾ ನಿರುದ್ಯೋಗವಿಲ್ಲದಂತೆ ನೌಕರಿಗಳನ್ನು ಕೊಡಿಸುತ್ತಿರಲಾಗಿದೆ. ಕಡಮೆ ಓದಿದವರಿಗೆ ಕಡಿಮೆ ದರ್ಜೆಯ ವೃತ್ತಿಗಳಲ್ಲಿ ಸೇರಿಸಲಾಗುತ್ತಿದೆ. ಇತರ ವರ್ಗಗಳಲ್ಲಿರುವಂತೆ ನಿರುದ್ಯೋಗ ಸಮಸ್ಯೆಯು ಇವರನ್ನು ಬಾಧಿಸುತ್ತಿರುವುದಿಲ್ಲ.

ಬಡವರ ಆರ್ಥಿಕ ಸುಧಾರಣೆಯ ಕಾರ್ಯಕ್ರಮವು ಸರ್ಕಾರದ್ದು. ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ ಈ ದಿಶೆಯಲ್ಲಿ ಏನನ್ನೂ ಮಾಡಲು ಸಾಧ್ಯವಿಲ್ಲ. ಮದ್ರಾಸ್ ಸರ್ಕಾರವು ಹರಿಜನೋದ್ಧಾರಕ್ಕಾಗಿ ಒಂದು ಕೋಟಿ ರೂಪಾಯಿ ತೆಗೆದಿಟ್ಟು ೩ ವರ್ಷಗಳಾಯ್ತು ಅದರ ಯೋಜನೆಯು ಕಾರ್ಯರೂಪಕ್ಕೆ ಬರಲಿಲ್ಲ. ಕೊನೆಗೆ ಮನೆಕಟ್ಟಲು ನಿವೇಶನಗಳನ್ನಾದರೂ ಉಚಿತವಾಗಿ ಒದಗಿಸಲಾಗಿಲ್ಲ ಹರಿಜನ ರೈತರಿಗೆ ಇತರರಂತೆ ತಕಾವಿ ಸಾಲ, ಎತ್ತುಗಳಿಗೆ ಸಾಲ, ಗೊಬ್ಬರ ಗೂಡುಗಳ ಅನುಕೂಲತೆ, ಭೂದಾನ ನಿರುದ್ಯೋಗಿಗಳಿಗೆ ಕೆಲಸ ಇವಕ್ಕೆಲ್ಲಾ ಸರ್ಕಾರವೇ ಮುಂದೆ ಬಂದು ಏರ್ಪಡಿಸಬೇಕಾಗಿದೆ ಪ್ರಪಂಚದ ಪ್ರತಿಯೊಂದು ದೇಶದಲ್ಲೂ ಇದೇ ಕ್ರಮ ಜಾರಿಯಲ್ಲಿದೆ.

ದಾರಿದ್ರ್ಯ ನಿವಾರಣೆಗಾಗಿ ಆರ್ಥಿಕ ಪ್ರಗತಿಬೇಕು ಸಾಗುವಳಿಗೆ ಯೋಗ್ಯವಾದ ಭೂಮಿಯೇ ಕಡಮೆ. ಹರಿಜನರಿಗೆ ಕೊಟ್ಟರೂ ಗುಡ್ಡಗಾಡು ಪ್ರದೇಶಗಳಲ್ಲಿ ಕೆಲಸಕ್ಕೆ ಬಾರದ ಭೂಮಿ ಕೊಡುತ್ತಾರೆ. ಅದು ಯೋಗ್ಯವಾಯ್ತೆಂದರೆ ಊರ ದೇವತೆಗಳು ಕಸಿದುಕೊಳ್ಳುತ್ತಾರೆ ಪ್ರತಿಭಾಶಾಲಿಗಳಾದ ೨೫೦ ರಾಜಕೀಯ ಬಾಧಿತರಲ್ಲಿ ೧೫ ಜನರಿಗಾದರೂ ಇನ್ನೂ ಭೂದಾನವಾಗಿಲ್ಲ. ಇನ್ನು ಹರಿಜನರನ್ನು ಯಾರು ಕೇಳಬೇಕು? ಅದರೂ ಸಂಘದ ಪ್ರಯತ್ನಗಳಿಂದ ಈವರೆವಿಗೆ ೧೬,೦೦೦ ಎಕರೆ ... ಬೇಕು ಭೂಮಿ ಬಡ ಹರಿಜನರಿಗೆ ಕೊಡಿಸಲಾಗಿದೆ. ೧೯೪೭-೪೮ ರಲ್ಲಿ ೧೫೦ ಎಕರೆ ಭೂಮಿ ರಾಯದುರ್ಗ, ಹೊಸಪೇಟೆ ತಾಲೂಕುಗಳಲ್ಲಿ ೬೨ ಎಕರೆ ಆದವಾನಿ ತಾಲೂಕಿನಲ್ಲಿ ಕೊಡಿಸಲಾಗಿದೆ. ವ್ಯವಸಾಯಕ್ಕೆ ಭಾವಿಗಳನ್ನು ತೆಗೆಸಲು ೪೮ ಹಳ್ಳಿಗಳಲ್ಲಿ ಸಹಾಯ್ಯ ಹಣ ೩ ವರ್ಷಗಳಲ್ಲಿ ಕೊಡಿಸಲಾಗಿವೆ

ವ್ಯವಸಾಯದ ಸಲಕರಣೆ [ಅಳಿ ...] ಕೊಡಿಸುವುದು. ಬಟ್ಟೆ ಲೈಸನ್ಸ್ ಕೊಡಿಸಿ ಬಟ್ಟೆ ದೊರೆಯುವಂತೆ ಮಾಡುವುದು. ಡಿಪೋದ ಲೈಸನ್ಸ್ ಕೊಡಿಸಿ ೩೦ ಳಿನ ವ್ಯವಸ್ಥೆ ಮಾಡುವುದು. ಅವರ ಸಾಲಗಳನ್ನು ಶಾಂತವಾಗಿ ಬಗೆಹರಿಸುವುದು ವಸ್ತ್ರೆ

...ರ್ಯ ಅಲ್ಪ ಪ್ರಮಾಣದಲ್ಲಿ ನಡದೇ ...ದೆ, ದುರಾಕ್ರಮಣ ಮಾಡಿದ ಭೂಮಿಗಳ ...ನ್ನು ಅಸಮಾಧಾನವಿಲ್ಲದೆ ಬಿಡಿಸುವ ...ಲಸವು ಸಾಗಿದೆ.

ಹರಿಜನರಿಗಾಗಿ ದುಡಿಯುವವರು ಕೈ ...ರಳಲ್ಲೆಣಿಸುವಷ್ಟು ಮಂದಿಯೂ ಇಲ್ಲ. ...ೇರೆಯುವರಿಗೆ ಸ್ಥಾನ ಕೊಡದಂತೆ ಇದಕ್ಕೆ ...ಂಟಿಕೊಂಡು ಇದ್ದಾರೆಂಬ ಭಾವನೆಯು ...ಣೇರಿಬರುವ ಲೇಖನದ ಆಶಯವುಂಟು. ...ವು ಕರೆದ ಸಭೆಗಳಿಗೆಷ್ಟು ಜನರು ಬರು...ತ್ತಿರೊ, ಅದರಲ್ಲಿ ಹತ್ತರಲ್ಲೊಂದು ಭಾಗ ... ಜನರೂ ಹರಿಜನ ಸಭೆಗಳಿಗೆ ಸಮಿತಿ...ಯ ಕರೆಗೆ ಬರುವುದಿಲ್ಲ. ಯಾರಿಗೂ ...ಸಕ್ತಿಯಿಲ್ಲ. ಇದು ಯಾರಿಗೂ ಬೇಡ...ದ ಕೆಲಸ ಅಲ್ಲದೆ ಈ ಕೆಲಸದಿಂದ ...ಯಾರಿಗೂ ಲಾಭವಿಲ್ಲ. ಪ್ರತಿಷ್ಠೆಯೂ ...ಲ್ಲ. ಈ ಜನರಿಗಾಗಿ ದುಡಿಯುವವರ...ನ್ನು ಹಳ್ಳಿಗರು ಸ್ವಾಗತಿಸುವದಿಲ್ಲ ಈ ...ರ್ಯದಲ್ಲಿ ಪ್ರವೃತ್ತರಾದರೆ ತಮ್ಮ ರಾಜ...ೀಯ ಭವಿಷ್ಯ ಕೆಡುವುದೆಂಬ ಪರಿವೆಯಿಂ... ಎಲ್ಲರೂ ಸಾಕಷ್ಟು ದೂರವಿದ್ದಾರೆ ಇನ್ನು ...ಾಂಧೀ ತತ್ವ ಅವರ ರಚನಾತ್ಮಕ ಕಾರ್ಯ...ಮ ಪ್ಲಾಟ್ ಫಾರಂ ಮೇಲೆ ಸಮಯ...ದಗಿದಾಗ ಶಂಖ ಬಜಾಯಿಸಿದರಾ...ಯಿತು.

ಹರಿಜನ ಕಾರ್ಯಕರ್ತರಾಗಿ ಇಂಥಾ 'ಸಮಾಜ-ಬಾಹಿರ'' ಕೆಲಸಗಳಿಗ್ಯಾರು ...ರುವರು? ತಾವು ಎಂದಾದರೂ ಅಷ್ಟಿ-...ಷ್ಟಿ ಯಾವ ಹಳ್ಳಿಗಾದರೂ ಹೋದರೆ ...ರಿಜನ ಕೇರಿಗೆ ಹೋಗಿ ವಿಚಾರಿಸಿಕೊಂ...ು ಬರುವ ಕಾಂಗ್ರೆಸ್ ಕಾರ್ಯಕರ್ತರು ...ದ್ದಾರೆಯೋ? ಬೇಡ, ತಾವಿರುವ ನಗರ ...ಪ್ರದೇಶಗಳಲ್ಲಿವರ್ಷಕ್ಕೊಂದುಸಲವಾದರೂ ...ಾದ್ರಿ-ಉಪದೇಶ ಮಾಡುವ ಮಹನೀಯ...ು ಅಲ್ಲಿಗೆ ಹೋಗಿದ್ದುಂಟೋ? ತಮ್ಮ ...ಾಯಿಖಾನೆ ಸ್ವಚ್ಛಮಾಡುವವನ ಹೆಸರಾದ...ೂ ಗೊತ್ತಿದೆಯೇ? ಅವನು ಎಲ್ಲಿದ್ದಾನೆ? ...ಂಥ ಜೀವನ ಯಾವ ಪರಿಸ್ಥಿತಿಗಳಲ್ಲಿದ್ದಾ...ನೆಂಬುದನ್ನು ಕಂಡುಕೊಂಡಿದ್ದಾಗೆಯೋ? ...ಜವಾದ ಹರಿಜನೋದ್ಧಾರಕನು ಭಗವಂ...ನೇ? ಮಾನುಷ ಮಾತ್ರಕ್ಕೆ ಸಾಧ್ಯವೇ ...ಲ್ಲ ತಾವು ಹರಿಜನೋದ್ಧಾರಕರೆಂದು ...ಕಿಸಿಕೊಂಡು ಹರಿಜನರು ದರಿದ್ರರಾ...ಳಿದು ತಮ್ಮ ಹೆಸರು ಶಾಶ್ವತನಾಗಿಡ...ಯಿಸಿದ ಸೀಟಂಗೆ ಇತರ ಪರಗಳೆಂದರಲ್ಲೂ ...ರೋಕ್ಷವಿಲ್ಲ.

ತಮ್ಮ ಮರ್ಯಾದೆಯನ್ನರಿತು ತಮ್ಮ ...ೋಷದೋಷಗಳನ್ನು ಗುರ್ತಿಸಿ ಬೇರೆಯ...ವನ್ನು ಟೀಕೆಗೊಳಪಡಿಸುವ ಸ್ವಜಗುಣ...ವು ಅಪರೂಪವಾಗಿ ಹೊಣೆಯಿಲ್ಲದ ಟೀಕೆ...ಳಿಂದ ಬೇಜವಾಬ್ದಾರಿ ಲೇಖನಗಳಿಂದ ...ಪ್ರಥಾಪ್ರಹಾರ ಮಾಡುವುದು ಯಾರಿಗೆ ಕೆ...ಡಕೆಂಬುದು ಅನುಭವದಿಂದಲೇ ವೇದ್ಯ...ವಾಗುತ್ತದೆ.

ಹರಿಜನರ ಮೇಲೆ ಹೇರಿದ ...ಳ್ಳುಸಾಲ, ಸಂಬಳ ವಿಲ್ಲದೆ ದುಡಿಸುವ...ಮು. ಅವರ ಹೊಲಗಳನ್ನು ಕಸಿದುಕೊಂಡಿರುವುದು, ಮನೆ ಕಟ್ಟಿಕೊಳ್ಳಲು ಸ್ಥಳವಿದ್ದರೂ ಸ್ಥಳಕೊಡದಿರುವುದು, ಕೊಡಿಸಬೇಕೆಂಬ ಸದುದ್ದೇಶದಿಂದ ಸರ್ಕಾರಿ ಅಧಿಕಾರಿಗಳನ್ನು ಕರೆದೊಯ್ದರೆ ಅವರನ್ನು ಹಿಂಸೆಗೆ ಗುರಿಮಾಡುವುದು, ಬಂದ ಚಿಪ್ಪು ಎಣ್ಣೆ ಎಲ್ಲಾ ತಾವೇ ಮಾರಿಕೊಂಡು ಅವರನ್ನು ಕತ್ತಲಲ್ಲಿ ಕೆಡವಿರುವುದು. ಹೊಲದಲ್ಲಿ ದಾರಿ ಕೊಡದಿರುವುದು, ಹೋದರೆ ಎಲುಬು ಮುರಿಯುವಂತೆ ಹೊಡೆಯುವುದು, ಹರಿಜನರ ಹೊಲದಲ್ಲಿ ದನಗಳನ್ನು ಬಿಟ್ಟು ಮೇಯಿಸುವುದು, (ಉದಾಹರಣೆ ೩ ತಿಂಗಳ ಕೆಳಗೆ ಸಿರುಗುಪ್ಪೆಯ ಹರಿಜನರ ಹೊಲದ ಬೆಳೆಮೇಯಿಸಿ ರೂ ೫೦೦ ಲುಕ್ಸಾನುಮಾಡಿದರು) ಹರಿಜನರಿಗಾಗಿ ಮೀಸಲಾಗಿಟ್ಟ (Reserved for depressed classes) ಭೂಮಿಯನ್ನು ಗೌಡ ಶಾನುಭೋಗರ ಕೈ ಬೆಚ್ಚಗೆ ಮಾಡಿ ತಾವೇ ಸ್ವಾಧೀನ ಪಡಿಸಿಕೊಂಡು ಅನುಭವಿಸುತ್ತಿರುವುದು. ತಾವೇ ಕೇರಿಯಲ್ಲಿ ಭಜನೆಮಾಡುತ್ತಿದ್ದರೆ ''ಸೂಳೆಮಕ್ಕಳು! ಭಜನೆಮಾಡುತ್ತೀರಾ!'' ಎಂದು ಮೇಲೇರಿ ಹೋಗಿ ಹೊಡೆದಿರುವುದು, ಹೊಡೆಯುತ್ತಿರುವುದು ತಮ್ಮ ಹೊಲದಲ್ಲಿರುವ ಮರಗಳನ್ನು ತಾವು ಕಡಿಯದಂತೆ ನಾನಾ ರೀತಿಯಿಂದ ಹಿಂಸಿಸುತ್ತಿರುವುದು ಸುಳ್ಳು ಸಾಲಕೊಡಲಿಕ್ಕಾಗದ ಹರಿಜನನನ್ನು ಊರ ಮಧ್ಯದ ಕಂಭಕ್ಕೆ ಸೇದಭಾವಿಯ ಹಗ್ಗದಿಂದ ಕಟ್ಟುವುದು (ಉದಾ- ದೇವಲಾಪುರ, ಹೊನ್ನೂರಪ್ಪ. ಜಿಲ್ಲಾ ಲೇಬರ್ ಆಫೀಸರ ಮತ್ತು ಸಂಘದ ಕಾರ್ಯದರ್ಶಿ ಹೋಗಿ ಬಿಡುಗಡೆ ಮಾಡಿದರು) ಮದುವೆಗಳಾದರೆ ಮೇಳಬೇಡವೆನ್ನುವುದು. ಕತ್ತೆ, ಕುದುರೆ, ಮೋಟಾರ್ ಬಸ್ ಸರ್ವಿಸ್ ಹೋಗುವ ರಸ್ತೆಯಲ್ಲಿ ಮೆರವಣಿಗೆ ಹೋದರೆ ಕಲ್ಲಿನ ಮಳೆಗರೆಯುವುದು. ಇಷ್ಟೇ ಅಲ್ಲದೆ ಮಾತುಕೇಳದಿದ್ದರೆ ಸುಳ್ಳುಕೇಸ್ ಮಾಡಿ ಪೋಲೀಸರನ್ನೊಳಪಡಿಸಿಕೊಂಡು 1st Class ಕೇಸುಮಾಡಿ ೬೫ ವರ್ಷದ ಮುದುಕಿಯಾದರೂ ಜೈಲಿಗೆ ಕಳುಹಿಸಲಿಕ್ಕಿಸುವುದು. ಅವರಿಗೆ ಹಣವಿಲ್ಲ, ಜನಸಹಾಯವಿಲ್ಲ, ಸಾಕ್ಷಿ ಇಲ್ಲವೆಂದು ಸಾಹುಕಾರನ ಗೋದಲಲ್ಲೇ ದಿನಗಟ್ಲೆ ಕಟ್ಟಿ ಹೊಡೆದು ಉಪವಾಸಹಿಡಿವುದು ವಗೈರ ಎಷ್ಟೋ ಅಸಹ್ಯ ಕೃತ್ಯಗಳು ಇನ್ನೂ ನಡೆಯುತ್ತಲಿವೆ. ಈ ಶೋಷಣೆಯನ್ನು ಒಬ್ಬಿಬ್ಬರು ತಪ್ಪಿಸಲಿಕ್ಕಾದೀತೇ? ಎಷ್ಟೋ ಜನ ಬೇಕು. ಉಪದೇಶಮಾಡುವವರು ಕೊನೆಗೆ ತಿಂಗಳಿಗೊಂದುಸಲವಾದರೂ ಬಾಧಿತ ಹಳ್ಳಿಗೆ ಹೋಗಿ ನಿವಾರಣೋಪಾಯ ಹುಡುಕಿದರೆ ಒಳ್ಳೆಯದಾದೀತು. ಉಪದೇಶಮಾಡಿ ಬಿಳೇ ಕಾಗದದಲ್ಲಿ ಕಠಿಣ ಭಾಷೆಯ ನಾಲ್ಕು ಮಾತು ಛಾಪಿಸಿದರೆ ಕಾರ್ಯವಾದೀತೇ!? ಇದು ರಾಷ್ಟ್ರನಿರ್ಮಾತರಾದವರ ಕರ್ತವ್ಯವೇ?

ಬಾಧಿತ ಹಳ್ಳಿಗಳಿಗೆ ಬರಬೇಕೆಂದು ಬೇಡಿಕೊಂಡರೂ ಬರುವದಿಲ್ಲ. ಕಾಲು ಹಿಡಿದರೂ "ಹುಂ'' ಎನ್ನುವದಿಲ್ಲ. ಈ ಕೆಲಸದ ಹುಚ್ಚುಹಿಡಿದವರು ಹಾಗೆ ಹೋದರೂ 'ಇವನಿಗೇನೊ ಲಾಭವಿರಬೇಕು ಹಳ್ಳಿ ಹಳ್ಳಿ ಗೂಳಿಯಂತೆ ತಿರುಗುತ್ತಾನೆ" ಎಂಬ ಬಿರುದು ಬಂತೇ!! ತನಗೆ ಬೇಡವಾದ ವ್ಯಕ್ತಿಯಿದರೆ ಸಂದರ್ಭ ಸಿಕ್ಕಾಗ ಯಾವ ಚಿತ್ತದಿಂದಲಾದರೂ ಹೊಡೆಯುವುದು ಸರಾಸರಿ ಮಾನವನ ಸ್ವಜಗುಣವಾಗಿದೆ.

ತನ್ನ ತಾನರಿಯದೆ ಪರರ ರಂಧ್ರಾನ್ವೇಷಣ ಕಾರ್ಯದಲ್ಲಿಳಿಯುವವನು ದೇವಮಾನುಜನಾಗಲಾರನು. ಬುದ್ಧಿಬಲದಿಂದ ಊಹಿಸಬೇಕು. ಪರರ ಕಷ್ಟಗಳನ್ನರಿಯಬೇಕು. ಆದ ಕಾರ್ಯವನ್ನು ಪರಿಶೀಲಿಸಬೇಕು ಆಗದುದನ್ನು ಮಾಡೆಂದು ಸೋದರ ಪ್ರೇಮದಿಂದ ತಿಳಿಸಬೇಕು. ಸಹಕರಿಸಬೇಕು. ಅವರ ಸುಖದುಃಖಗಳನ್ನು ತಾನನುಭವಿಸಬೇಕು. ಆಗಲೇ ನಿಜತ್ವವು ಬಯಲಿಗೆ ಬಿದ್ದು ಸ್ವಾಭಾವವಾಗುವುದು

ನೋಟೀಸು.

೧೯೪೭ನೇ ಸಂ|| ಮದ್ರಾಸು ಷಾಪು ಮತ್ತು ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಿಜಿಸ್ಟರುಗಳು ಫಾರಮುಗಳು ವಗೈರ ನಮ್ಮಲ್ಲಿ ದೊರೆಯುತ್ತವೆ.

ವಿಠಲ್ ಪ್ರಿಂಟಿಂಗ್ ಪ್ರೆಸ್,
ತೇರುಬಜಾರ್, ಬಳ್ಳಾರಿ

ರಾಯಲಸೀಮ ಆರ್ಥಿಕಾಭಿವೃದ್ಧಿ

ಮದರಾಸು ರೆವಿನ್ಯೂಮಂತ್ರಿ ಶ್ರೀ ಸೀತಾರಾಮರೆಡ್ಡಿಯವರಧ್ಯಕ್ಷತೆಯಲ್ಲಿ ದತ್ತಮಂಡಲದ ಆರ್ಥಿಕಾಭಿವೃದ್ಧಿಯ ಸಮಿತಿಯು ಪುನರ್ನಿರ್ಮಾಣವಾಗಲಿದೆ. ಜಿಲ್ಲಾ ಕಲೆಕ್ಟರ್ ಪದವಿಯವರೊಬ್ಬರು ಸಮಿತಿಯ ಕಾರ್ಯದರ್ಶಿಗಳಾಗುವರು. ಹತ್ತು ಜನ ಸಭ್ಯರಲ್ಲಿ ಐವರು ಶಾಸನ ಸಭಾಸದಸ್ಯರು ಮತ್ತೈವರು ಜಿಲ್ಲೆಗೊಬ್ಬರಂತೆ ಬಳ್ಳಾರಿ ಕಡಪ, ಕರ್ನೂಲು, ಅನಂತಪುರ, ಚಿತ್ತೂರುಗಳಿಂದ ಆರಿಸಲ್ಪಡುವರು ವ್ಯವಸಾಯ ಉದ್ಯೋಗ ಸಹಕಾರ ಶಾಖೆಗಳ ಅಧಿಕಾರಿಗಳು ಈ ಸದಸ್ಯರೊಂದಿಗೆ ಸಹಕರಿಸುವರು ಡೆವಲಪ್‌ಮೆಂಟ್ ಕಮೀಶನರ್‌ರವರು ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ಶೀಘ್ರವಾಗಿ ತರಲು ಸಮಿತಿಯ ಒಪ್ಪಿಗೆ ಪಡೆಯುವರು.

— ಘಟನಾಸಮಿತಿಯು ಮೇ ೧೬ಕ್ಕೆ ಸಮಾವೇಶವಾಗಿ ಪಂಡಿತ ನೆಹರೂರವರು ಲಂಡನ್ನಿನಲ್ಲಿ ಮಾಡಿಕೊಂಡ ಕಾಮನ್‌ವೆಲ್ತ ಒಪ್ಪಂದದ ವಿಮರ್ಶೆಯಾಗಿ ಸಮಿತಿಯ ಒಪ್ಪಿಗೆ ಪಡೆಯಲಿದೆ.

ಪ್ರಜಾರಾಜ್ಯದ ಪ್ರಥಮ ವೈರಿ—ಕಮ್ಯೂನಿಸ್ಟ

ರಶಿಯಾವೆಂದರೆ ಶ್ರಮಜೀವಿಗಳ ಸುಖದ ಬೀಡು ಎಂಬ ತಪ್ಪು ಕಲ್ಪನೆಯನ್ನು ಮಾಡಿಕೊಂಡ ಜಗತ್ತಿನ ಅನೇಕ ರಾಷ್ಟ್ರಗಳ ಶ್ರಮಜೀವಿಗಳು ಕಮ್ಯೂನಿಸ್ಟರ ಅಪಪ್ರಚಾರಗಳಿಗೆ ಬಲಿಬಿದ್ದು ಆಯಾ ರಾಷ್ಟ್ರಗಳ ರಾಜ್ಯ ಶಕಟವು ಸುಸೂತ್ರವಾಗಿ ಸಾಗದಂತೆ ಅಡ್ಡ ಆತಂಕಗಳನ್ನು ತಂದೊಡ್ಡುತ್ತ ಸಾಗಿರುವರು. ಆದರೆ ಈ ಸುಖದ ಬೀಡಿ (?) ನಲ್ಲಿ ಶ್ರಮಜೀವಿಗಳು ಹೇಳಲ ಸದಳವಾದ ದುಃಖ ಪರಂಪರೆಯನ್ನು ಅನುಭವಿಸುತ್ತಲಿದ್ದಾರೆ. ಕಮ್ಯೂನಿಸ್ಟರು ಹೇಳಿಕೊಳ್ಳುವಂತೆ ರಶಿಯಾವು ಶ್ರಮಜೀವಿಗಳ ಸುಖದ ಬೀಡು ಆಗಿರುವದು ನಿಜವೇ ಆಗಿದ್ದರೆ, ಸಂಯುಕ್ತರಾಷ್ಟ್ರ ಸಂಘದ ಸಭೆಯಲ್ಲಿ "ಜಗತ್ತಿನಲ್ಲಿ ಶ್ರಮಜೀವಿಗಳ ಜೀವನವು ಹೇಗೆ ಸಾಗಿದೆ" ಎಂಬುದನ್ನು ಪರಿಶೀಲಿಸಲಿಕ್ಕಾಗಿ ಮುಂದೆ ಬಂದ ಗೊತ್ತುವಳಿಯನ್ನು ಅದು ವಿರೋಧಿಸಿತೇಕೆ? ಇದರ ಮೇಲಿಂದ ರಶಿಯಾವು ಶ್ರಮಜೀವಿಗಳ ಕುರಿತು "ಪರೋಪದೇಶ ಪಾಂಡಿತ್ಯ"ದ ಮಾರ್ಗವನ್ನನುಸರಿಸಿರುವುದೆಂಬುದು ಹೊಳೆಯದಿರದು.

ಅಟ್ಲಾಂಟಿಕ ಘೋಷಣೆಯಲ್ಲಿ ಹೇಳಲಾದ ಉದ್ದೇಶಗಳ ಸಾಧನೆಗಾಗಿ ಹಾಗು ಕೊರತೆ ಬೆದರಿಕೆಗಳಿಂದ ಅಲಿಪ್ತವಿರುವ ಸಮಾಜದ ರಚನೆಗಾಗಿ ಎರಡನೆಯ ಮಹಾಯುದ್ಧವನ್ನು ಹೂಡಲಾಗಿತ್ತು! ಈ ಯುದ್ಧದಲ್ಲಿ ಜಗತ್ತಿನ ಶ್ರಮಜೀವಿಗಳು ನಾಝೀ ತತ್ವವನ್ನು ಮೂಲೆಗೊತ್ತುವದಕ್ಕಾಗಿ ತನುಮನಧನಗಳಿಂದ ಅಹೋರಾತ್ರಿ ದುಡಿದರು. ಸಂಯುಕ್ತ ರಾಷ್ಟ್ರಗಳು ಶ್ರಮಜೀವಿಗಳ ಸಹಾಯದಿಂದ ವಿಜಯವನ್ನು ಸಂಪಾದಿಸಿದ ಮರುಕ್ಷಣ ತಮ್ಮ ಧ್ಯೇಯ ಧೋರಣೆಗಳನ್ನು ಮರೆತುಬಿಟ್ಟವು. ಯಾವುದರ ನಿರ್ಮೂಲನೆಗಾಗಿ ಎರಡನೆಯ ಮಹಾಯುದ್ಧವನ್ನು ಹೂಡಲಾಗಿತೋ ಅದು ಯುದ್ಧ ಮುಗಿದ ನಾಲ್ಕೈದು ವರ್ಷಗಳು ಸಂದುವಾದರೂ ಆ ಯುದ್ಧದಲ್ಲಿ ಸಂಯುಕ್ತ ರಾಷ್ಟ್ರಗಳಿಗೆ ಜಯವು ದೊರಕಿತಾದರೂ ಇನ್ನೂ ಹಾಗೇಯೇ ಇದೆ. ರಶಿಯಾದಲ್ಲಿರುವ ದಾಸ್ಯ ಶ್ರಮಜೀವಿ ಕೇಂದ್ರಗಳೇ ಇದಕ್ಕೆ ಸಾಕ್ಷಿ. ಸರಕಾರದ ವಿರುದ್ಧ ತುಟಿ ಎರಡು ಮಾಡಿದುದಕ್ಕಾಗಿ ರಶಿಯಾದಲ್ಲಿ ಜನತೆಯನ್ನು ವಿಚಾರಣೆ ಇಲ್ಲದೇನೇ ದಾಸ್ಯ ಶ್ರಮಜೀವೀ ಕೇಂದ್ರಗಳಿಗೆ ಅಟ್ಟಲಾಗುತ್ತಿದೆ. ಈ ಕೇಂದ್ರಗಳಲ್ಲಿ ಅವರನ್ನು ಕಳ್ಳಕಾಕರಿಗಿಂತಲೂ ನಿಕೃಷ್ಟಾವಸ್ಥೆಯಲ್ಲಿ ನೋಡಿಕೊಳ್ಳಲಾಗುತ್ತದೆ. ಈ ಶ್ರಮಜೀವಿಗಳ ಕುರಿತು ಈ ವಿಚಿತ್ರ ಧೋರಣೆಯನ್ನು ತಳೆದ ರಶಿಯಾವು ಒಂದೇಕೆ ಹತ್ತು ಪಂಚವಾರ್ಷಿಕ ಯೋಜನೆಗಳನ್ನು ಏಕ ಕಾಲಕ್ಕೆ ಕೈಕೊಂಡರೆ ಅದರಲ್ಲಿ ಆಶ್ಚರ್ಯವೇನಿದೆ? ಕೂಲಿಯವರ ಕೊರತೆಯುಂಟಾಯಿತೆಂದರೆ ನಾಗರೀಕರನ್ನು ಹಿಡಿದು ತಂದರಾಯಿತು! ರಶಿಯಾದಲ್ಲಿಯ "ಶ್ರಮಜೀವಿಗಳ ಸುಖದ ಬೀಡು," ಈ ರೀತಿ ಸಾಗಿದೆ.

ರಶಿಯಾದ ಧೋರಣೆ

ಪರಕೀಯರ ದೃಷ್ಟಿಯು ತನ್ನ ಮೇಲೆ ಬೀಳದಂತೆ ಉಕ್ಕಿನ ಕವಚವನ್ನು ಹಾಕಿಕೊಂಡು ರಶಿಯಾವು ಜಗತ್ತನ್ನು ಗೊಂದಲದಲ್ಲಿ ತೂರಿ ತನ್ನ ಬೇಳೆ ಬೇಯಿಸಿಕೊಳ್ಳುವ ಮಾರ್ಗವನ್ನು ಇಂದು ತುಳಿಯುತ್ತಿದೆ. ಪ್ರಜಾರಾಜ್ಯ ತತ್ವಕ್ಕೆ ಕಮ್ಯೂನಿಸ್ಟ ತತ್ವವು ಬದ್ಧ ವಿರೋಧಿಯಾಗಿದೆ. ಪ್ರಜಾರಾಜ್ಯ ಪದ್ಧತಿಯೆಂದರೆ ಧನಿಕರ ಕೈಗೊಂಬೆಯೆಂದು ಹೆಸರಿಟ್ಟು ಶ್ರಮಜೀವಿಗಳ ಉದ್ಧಾರದ ಸೋಗಿನ ಮರೆಯಲ್ಲಿ ಆ ರಾಜ್ಯ ಪದ್ಧತಿಯನ್ನು ನಿರ್ಮೂಲಗೊಳಿಸಲು ರಶಿಯಾವು ಇಂದು ಟೊಂಕಕಟ್ಟಿದೆ. ಜಗತ್ತಿನ ಇತರ ರಾಷ್ಟ್ರಗಳಲ್ಲಿ ಇರಬಹುದಾದ ಅಲ್ಪಪ್ರಮಾಣದ ಅಸಂತುಷ್ಟತೆಗೆ ಬೆಂಬಲಕೊಟ್ಟು ಅತೃಪ್ತ ಪ್ರಜೆಗಳ ಕಲ್ಯಾಣಸಾಧನೆಯ ಸೋಗನ್ನು ಹಾಕಿಕೊಂಡು ಪ್ರಜಾರಾಜ್ಯ ಪದ್ಧತಿಯನ್ನುರುಳಿಸುವುದು ರಶಿಯಾದ ಜಾಗತಿಕ ಪರರಾಷ್ಟ್ರ ಧೋರಣೆಯಾಗಿರುವುದೆಂದರೆ ಅತಿಶಯೋಕ್ತಿಯಾಗಲಾರದು. ಈ ಧ್ಯೇಯಸಾಧನೆಗಾಗಿ ಕಮ್ಯೂನಿಸ್ಟರು ಪ್ರಜಾರಾಜ್ಯ ಪದ್ಧತಿಯನ್ನು ಕೆಲವೊಮ್ಮೆ ಪುರಸ್ಕರಿಸಿ ತಮ್ಮ ಕೆಲಸವು ಕೈಗೂಡಿದನಂತರ ಅದರ ಅವಹೇಲನವನ್ನು ಮಾಡಲು ಹಿಂದೆ ಮುಂದೆ ನೋಡುವುದಿಲ್ಲ. ಯಾವುದಾದರೊಂದು ಪ್ರಜಾರಾಜ್ಯ ಪದ್ಧತಿಯ ಸಂಘ ಸಂಸ್ಥೆಯಲ್ಲಿ ತಮಗೆ ಅವಕಾಶವು ಸಿಕ್ಕೊಡನೆ ತಮ್ಮ ಸರ್ವಾಧಿಕಾರಿ ತತ್ವವನ್ನು ಆ ಸಂಸ್ಥೆಯಲ್ಲಿ ಪ್ರತಿಷ್ಠೆ ಮಾಡುವದಕ್ಕಾಗಿ ಬೇಕಾದ ಕೃತಿಗಳನ್ನು ನಡೆಸಲು ಕಮ್ಯೂನಿಸ್ಟರು ಹೇಸುವುದಿಲ್ಲ. ಪಿತೃಭೂಮಿಯ ಕಡೆಗೆ ದೃಷ್ಟಿಯಿಟ್ಟೇ ಕಮ್ಯೂನಿಸ್ಟರು ಅವರು ಯಾವ ರಾಷ್ಟ್ರದಲ್ಲೇ ಇರಲಿ ತಮ್ಮ ಚಟುವಟಿಕೆಗಳನ್ನು ಸಾಗಿಸುವರು.

ಸರ್ವಾಧಿಕಾರಿ ಸ್ಟಾಲಿನನ ಬಲಗೂಸಾದ ಪಾಲಿಟ ಬ್ಯೂರೋದಿಂದ ಹೊರಹೊರಟು ಕೇಂದ್ರ ಕಮ್ಯೂನಿಸ್ಟ ಪಕ್ಷದ ದ್ವಾರಾ ಹೊರಬೀಳುವ ಆದೇಶಗಳಂತೆ ಜಗತ್ತಿನ ಎಲ್ಲ ಕಮ್ಯೂನಿಸ್ಟರೂ ಕಮ್ಯೂನಿಸ್ಟ ಪಕ್ಷಗಳೂ ತಮ್ಮ ಕಾರ್ಯಕಲಾಪಗಳನ್ನು ಸಾಗಿಸುತ್ತಿವೆ. ಆ ಆದೇಶವೇ ವೇದವಾಕ್ಯ ಎಂದ ಮೇಲೆ ಕಮ್ಯೂನಿಸ್ಟ ತತ್ವದಲ್ಲಿ ಪ್ರಜಾರಾಜ್ಯ ಪದ್ಧತಿಗೆ ಪುರಸ್ಕಾರವು ಹೇಗೆ ದೊರೆಯಬೇಕು? ಸೋವಿಯೆಟ ರಶಿಯಾದ ವರ್ಚಸ್ಸನ್ನು ಜಗತ್ತಿನ ತುಂಬ ಹರಡಲು ನಿರ್ಧಾರಮಾಡಿ ಆ ನಿಟ್ಟಿನಿಂದ ದುಡಿಯುತ್ತಿರುವ ಕಮ್ಯೂನಿಸ್ಟರು ವಿಚಾರ ಆಚಾರಗಳ ಬಗ್ಗೆ ಚಿಂತನೆಯನ್ನು ಕೂಡ ಮಾಡುತ್ತಿಲ್ಲ. ತಾವು ಮಾಡುತ್ತಿರುವ ನೀತಿ ನಿಯಮಗಳನ್ನು ಹೊಂದಿಕೊಂಡಿರುವವೇ? ಎಂಬುದನ್ನು ನೆನೆಹಲು ಕೂಡ ಅವರಿಗೆ ಅವಕಾಶವಿಲ್ಲ. ಕಮ್ಯೂನಿಸ್ಟರೆಂದರೆ "ಗ್ರಾಮಫೋನ" ರಿಕಾರ್ಡುಗಳಿದ್ದಂತೆ ಎಷ್ಟು ಬಾರಿ ಹೇಳಿದರೂ ಅವರ ಸೊಲ್ಲು ಒಂದೇ. ಪ್ರತಿಯೊಂದು ರಾಷ್ಟ್ರದ ಪ್ರಜಾರಾಜ್ಯ ಪದ್ಧತಿಯ ಕೂಗೆಬ್ಬಿಸಿ ಒಳಹೊಕ್ಕು ಹರಡಿ ಕಮ್ಯೂನಿಸ್ಟ ತತ್ವದ ಅಂಟುರೋಗವನ್ನು ಸಮಯ ಸಾಧಿಸಿ ಅವುಗಳನ್ನು ಮುರಿದು ಗೊಂದಲವೆಬ್ಬಿಸಿ ಆ ಗೊಂದಲಮಯ ವಾತಾವರಣದಲ್ಲಿ ಅಧಿಕಾರವನ್ನು ಕಸಿದುಕೊಳ್ಳುವುದು ಕಮ್ಯೂನಿಸ್ಟರ ಇಂದಿನ ಗುರಿಯಾದ್ದಂತಿದೆ.

ಮತಭೇದದ ಮೂಲ

ವಿಚಾರ ವಿನಿಮಯಗಳ ಪರಿಶ್ರಮದಿಂದ ತಂತಮ್ಮ ರಾಜ್ಯದ ಆಗು ಹೋಗುಗಳ ನಿರ್ಧಾರಕ್ಕೆ ಬಂದನಂತರ ಕೆಲವೊಮ್ಮೆ ಆಯಾ ರಾಷ್ಟ್ರಗಳ ಮುಖಂಡರಿಗೆ ತಮ್ಮ ನಿರ್ಧಾರಗಳನ್ನು ಬದಲಿಸಬೇಕಾಗಿ ಬರುತ್ತಿರುವಾಗ ಸೋವಿಯೆಟ ರಶಿಯಾದಿಂದ ನಿರ್ದೇಶಿಸಲ್ಪಟ್ಟ ನೀತಿಯಂತೆ ಜಗತ್ತಿನ ಎಲ್ಲ ರಾಷ್ಟ್ರಗಳೂ ನಡೆಯುವುದು ಹೇಗೆ ಸಾಧ್ಯ? ಪರಿಸ್ಥಿತಿಯು ಹೀಗಿದ್ದರೂ ಕಮ್ಯೂನಿಸ್ಟರು ಈ ವಿಚಾರದ ಗೊಂದಲದಲ್ಲಿ ಮೇಲೆ ಹೇಳಿದ ಕಾರಣಗಳಿಗಾಗಿ ಬೀಳುವುದಿಲ್ಲ. ಕೇಂದ್ರ ಕಮ್ಯೂನಿಸ್ಟ ಪಕ್ಷದ ಆದೇಶದಂತೆ ನಡೆಯಲು ಸಾಧ್ಯವಾಗುವುದಿಲ್ಲವೆಂದು ಕಂಡು ಬಂದೊಡನೆ ಕಮ್ಯೂನಿಸ್ಟರು ಕ್ರಾಂತಿಯ ಹುಯಿಲೆಬ್ಬಿಸಿ ಪ್ರಜಾರಾಜ್ಯ ಪದ್ಧತಿಯ ಇತಿಶ್ರೀಯನ್ನೇ ಮಾಡಿ ಬಿಡುವರು. ಒಂದೇ ಮಾತಿನಲ್ಲಿ ಹೇಳುವುದಿದ್ದರೆ ಪ್ರಜಾರಾಜ್ಯ ಪದ್ಧತಿಯ ಪ್ರಥಮ ವೈರಿಯೇ ಕಮ್ಯೂನಿಸ್ಟ.

— ಅರ್ಜೆಂಟಾಯಿನದಿಂದ ೯,೧೯೮ ಟನ್ನು ಗೋದಿಯನ್ನು ಹಿಂದುಸ್ಥಾನಕ್ಕಾಗಿ ಹೇರಿಕೊಂಡು ಬಂದ "ರೊನಾಲ್ಡ್ ಎಮ್ ಸ್ಕೋಬಿ" ಎಂಬ ಹಡಗವು ಮದರಾಸಕ್ಕೆ ತಲಪಿ ಮದರಾಸ ಪ್ರಾಂತಕ್ಕಾಗಿದ್ದ ೨,೫೦೦ ಟನ್ನು ಗೋದಿಯನ್ನು ಇಳಿಸಿ ಮುಂದೆ ಸಾಗಿದೆ.

— ೧೯೪೭-೪೮ ರಲ್ಲಿ ಹಿಂದೀಯ ಒಕ್ಕೂಟದಲ್ಲಿ ೩,೬೪೫,೦೦೦ ಎಕರೆ ಭೂಮಿಯಲ್ಲಿ ಕಬ್ಬು ಬೆಳೆಸಲಾಗಿ ೪,೯೮೪,೦೦೦ ಟನ್ ಬೆಲ್ಲದ ಉತ್ಪತ್ತಿಯಾಗಿದೆ.

ದಶನ
ತಲೆನೋವು, ಹಲ್ಲುನೋವು, ಮೈಕೈನೋವು,
ಕೈಕಾಲು ಸೆಳೆತ, ನೆಗಡಿ ಜ್ವರ, ಮುಂತಾದವುಕ್ಕೆ

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು. ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—**ಪ್ರಾರಂಭಿಕ:**—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷಾ. **ಉನ್ನತ**·—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—**ಹಿಂದೀ ಮಹಾ ವಿದ್ಯಾಲಯ.**

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ. 16—5—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..
....
....

Printed at Vittal Press, Edited & Published by T, B, Keshava Rao,

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!

ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨ ಮೇ ೧೯೪೯ | ಸಂಚಿಕೆ ೧೯

INDIAN REPUBLIC

ಭಾರತ ಪ್ರಜಾರಾಜ್ಯ

ಕಾಮನ್‌ವೆಲ್ತಿನ ಸದಸ್ಯತ್ವಕ್ಕೆ ಇತರ ರಾಷ್ಟ್ರಗಳ ಮನ್ನಣೆ

[ಭಾರತವು ಹೊಸ ರಾಜ್ಯಾಂಗ ಘಟನೆಯ ಪ್ರಕಾರ ಸ್ವತಂತ್ರ ಪ್ರಜಾರಾಜ್ಯವಾಗಿ ಪರಿಣಮಿಸುವುದು. ಆದರೂ ಅದು ಕಾಮನವೆಲ್ತಿನ ಸದಸ್ಯತ್ವವನ್ನು ಹೊಂದಿರುವುದು. ಬ್ರಿಟಿಷ್ ಸಾರ್ವಭೌಮರು ಸ್ವತಂತ್ರರಾಷ್ಟ್ರ ಸಂಘದ ಪ್ರತೀಕನಾಗಿರುವಂತೆ ಕಾಮನ್‌ವೆಲ್ತಿನ ಮುಖ್ಯಸ್ಥರೂ ಆಗಿರುವನು. ಇದನ್ನು ಭಾರತ ಸರಕಾರವು ಒಪ್ಪಿಕೊಂಡಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನಮಂತ್ರಿಗಳ ಅಧಿವೇಶನದಲ್ಲಿ ಕೆಳಗಿನ ವಿಷಯಗಳು ಚರ್ಚಿಸಲ್ಪಟ್ಟವೆ]

ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜಿಲೆಂಡ, ದಕ್ಷಿಣಆಫ್ರಿಕಾ, ಹಿಂದುಸ್ಥಾನ, ಪಾಕಿಸ್ಥಾನ ಮತ್ತು ಸಿಲೋನುಗಳ ಮುಖ್ಯ ಮಂತ್ರಿಗಳು ಹಾಗೂ ಕಾನಡಾದ ವಿದೇಶ ಮಂತ್ರಿಗಳು ಕಳೆದವಾರ ಲಂಡನ್ನಿನಲ್ಲಿ ಹಿಂದುಸ್ಥಾನವು ಸಾರ್ವಭೌಮ ಪ್ರಜಾರಾಜ್ಯದ ಘಟನೆಯನ್ನು ಸ್ವೀಕರಿಸಿ ಕಾಮನ್‌ವೆಲ್ತಿನ ಸದಸ್ಯನಾಗುಳಿಯುವ ನಿರ್ಧಾರವನ್ನು ಮಾಡಿದುದರಿಂದ ಉದ್ಭವಿಸಿದ ಮಹತ್ವದ ಘಟನಾತ್ಮಕ ಪ್ರಶ್ನೆಯ ವಿಚಾರಕ್ಕಾಗಿ ಸಭೆ ಸೇರಿದ್ದರು

ಹಿಂದುಸ್ಥಾನವು ಈ ನೂತನ ನಿಲುವಿನಿಂದ ಕಾಮನವೆಲ್ತಿನ ಈಗಿನ ಘಟನೆಯ ಮೇಲಾಗುವ ಪರಿಣಾಮ ಹಾಗೂ ಅದರ ಸದಸ್ಯ ರಾಷ್ಟ್ರಗಳಲ್ಲಿಯ ಘಟನಾತ್ಮಕ ಸಂಬಂಧ ಇವುಗಳೇ ಚರ್ಚೆಯ ವಿಷಯಗಳಾಗಿದ್ದವು

ಚರ್ಚೆಯು ಪರಸ್ಪರ ಸೌಹಾರ್ದ, ತಿಳಿವಳಿಕೆಯ ವಾತಾವರಣದಲ್ಲಿ ನಡೆಯಿತು. ಬದಲಾದ ಪರಿಸ್ಥಿತಿಗನುಗುಣವಾಗಿ ಕಾಮನ್‌ವೆಲ್ತ್ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುವರೆಗಿನ ಧೋರಣೆಯೇ ಚರ್ಚೆಗೆ ತಳಹದಿಯಾಗಿತ್ತು

ಕಾಮನವೆಲ್ತಿನ ಸರಕಾರಗಳ ಪ್ರತಿನಿಧಿಗಳು ಸಂಪೂರ್ಣ ಚರ್ಚೆಯ ನಂತರದಲ್ಲಿ ಮಾಡಿದ ನಿರ್ಧಾರವನ್ನು ಕೆಳಗಿನಂತೆ ಪ್ರಕಟಿಸಲು ಒಪ್ಪಿಕೊಳ್ಳಲಾಯಿತು.

"ಬ್ರಿಟಿಷ್ ರಾಜರಿಗೆ ನಿಷ್ಠರಾಗಿರುವ ಹಾಗೂ ಅವರೆಂದು ಭಾವಿಸಿರುವ ಬ್ರಿಟಿಷ್, ಕನಡಾ, ಆಸ್ಟ್ರೇಲಿಯಾ, ಪಾಕಿಸ್ಥಾನ ಮತ್ತು ಸಿಲೋನಗಳು ಹಿಂದುಸ್ಥಾನದ ಮುಂಬರುವ ಘಟನಾತ್ಮಕ ಬದಲಾವಣೆಗಳನ್ನು ವಿಚಾರಿಸಿರುತ್ತಾರೆ. ಹಿಂದೀಯರು ಬೇಗ ಸ್ವೀಕರಿಸಲಿರುವ ಹೊಸ ರಾಜ್ಯ ಘಟನೆ ಪ್ರಕಾರ ಸ್ವತಂತ್ರ ಪ್ರಜಾರಾಜ್ಯ ಸ್ಥಾಪಿಸುವ ಅಭಿಪ್ರಾಯವನವರಿದ್ದಾರೆಂದು ಹಿಂದುಸ್ಥಾನ ಸರಕಾರವು ಸಮಾಹಿತ ಸರಕಾರಗಳಿಗೆ ತಿಳಿಸಿರುತ್ತದೆ. ಆದರೆ ಹಿಂದುಸ್ಥಾನ ಸರಕಾರವು ಕಾಮನ್‌ವೆಲ್ತಿನ ಪೂರ್ಣ ಸದಸ್ಯನಾಗುಳಿಯುವ ಹಾಗೂ ಬ್ರಿಟನ್ ಅರಸರು ಸ್ವತಂತ್ರ ರಾಷ್ಟ್ರಗಳ ಸಂಘದ ಪ್ರತೀಕ ಮತ್ತು ತತ್ಪರಿಣಾಮ 'ಕಾಮನ್‌ವೆಲ್ತಿನ ಮುಖ್ಯಸ್ಥರು ಎಂದು ಒಪ್ಪಿಕೊಳ್ಳುವ ಇಚ್ಛೆಯನ್ನು ಸಾರಿರುವದು

ಈ ಸಾರುವಿಕೆಯಿಂದ ಕಾಮನ್‌ವೆಲ್ತಿನ ಇತರ ಸದಸ್ಯ ರಾಷ್ಟ್ರಗಳ ಸದಸ್ಯತ್ವದ ತಳಹದಿಯಲ್ಲಿ ಯಾವ ಬದಲಾವಣೆ ಆಗಿರದಿದ್ದರೂ ಅವು ಹಿಂದುಸ್ಥಾನದ ಹೇಳಿಕೆಗನುಗುಣವಾಗಿ ಅದು ಕಾಮನ್‌ವೆಲ್ತಿನ ಸದಸ್ಯನಾಗುಳಿಯುವದಕ್ಕೆ ಒಪ್ಪಿಗೆಯನ್ನೂ ಮನ್ನಣೆಯನ್ನೂ ಇತ್ತಿವೆ. ಇದಕ್ಕನುಗುಣವಾಗಿ ಶಾಂತಿ, ಸ್ವಾತಂತ್ರ್ಯ ಮತ್ತು ಪ್ರಗತಿಸಾಧನೆಗಾಗಿ ಬ್ರಿಟನ್, ಕಾನಡಾ, ಆಸ್ಟ್ರೇಲಿಯಾ, ನ್ಯೂಜಿಲೇಂಡ್, ದಕ್ಷಿಣ ಆಫ್ರಿಕಾ, ಹಿಂದುಸ್ಥಾನ, ಪಾಕಿಸ್ಥಾನ ಮತ್ತು ಸಿಲೋನುಗಳು ತಾವು ಕಾಮನವೆಲ್ತಿನಲ್ಲಿ ಸಮಾನ ಸ್ವತಂತ್ರ ಸದಸ್ಯರಾಗುಳಿಯುವೆವೆಂದು ಈ ಮೂಲಕ ಸಾರುತ್ತವೆ. ಮುಖ್ಯ ಮಂತ್ರಿಗಳ ಪರಿಷತ್ತಿನಲ್ಲಿ ಈ ಘಟನಾತ್ಮಕ ಪ್ರಶ್ನೆಗಳೇ ಚರ್ಚೆಯ ಮುಖ್ಯಾಂಶಗಳಾಗಿದ್ದವು.

ಕಾಮನ್‌ವೆಲ್ತ್ ಮುಖ್ಯ ಮಂ[ತ್ರಿ] ಪರಿಷತ್ತಿನ ಅಧಿಕೃತ ಹೇಳಿಕೆಯಲ್ಲಿ ಕೆ[ಳಗಿನ] ಮಹತ್ವದ ಅಂಶಗಳೂ ಒಳಗೊಳ್ಳು[ತ್ತವೆ]

೧) ವ್ಯಾಪಾರ ವಿಚಾರಗಳಲ್ಲಿ ಹಿ[ಂದು]ಸ್ಥಾನವು ಪೂರ್ಣ ರೀತಿಯಲ್ಲಿ ಸಾಮ[ಾನ್ಯ] ಪ್ರಾಶಸ್ತ್ಯ ಪಡೆಯುವುದು.

೨) ಕೆಲಕಾಲದಿಂದ ಅನಧಿಕೃತ[ವಾಗಿ] ಉಪಯೋಗಿಸದಿರುವ ಸಾರ್ವಭೌಮ[ತ್ವದ] ಬಿರುದು ಪ್ರಯೋಗವನ್ನು ಇನ್ನು ಮು[ಂದೆ] ಶಾಶ್ವತವಾಗಿ ಬಿಡಬಹುದು

೩) ಕಾಮನ್‌ವೆಲ್ತಿನಲ್ಲಿ ಹಿಂದೀ[ಯ ನಾಗ]ರಿಕರಿಗೆ ಈಗಿರುವ ಸಕಲ ಹಕ್ಕು[ಗಳು] ಪ್ರಾಪ್ತವಾಗುವವು

೪) ಈ ಹೇಳಿಕೆಯು ಕಾರ್ಯಕಾರಿ[ಯಾ]ಗುವದಕ್ಕೆ ಕಾಮನ್‌ವೆಲ್ತ ರಾಷ್ಟ್ರಗ[ಳ] ಶಾಸಕವಾಗುವ ಅವಶ್ಯಕತೆ ಇರಲಾರ[ದು]

೫) ಹಿಂದುಸ್ಥಾನವು ಸಾರ್ವಭೌ[ಮ] ಪ್ರಜಾರಾಜ್ಯವಾದ ಬಳಿಕ ಅರಸರ ಪ್ರತಿ[ನಿಧಿ] ರೂಪದಲ್ಲಿರುವ ಗವರ್ನರ ಜನರಲ್ ಸ್ಥಾನವು ಅಳಿದು ಹೋಗುವದು.

೬) ಕಾಮನ್‌ವೆಲ್ತ ರಾಜಧಾನಿಗಳಲ್ಲಿ ಹಿಂದುಸ್ಥಾನದ ಪ್ರತಿನಿಧಿಗ[ಳು] ಈಗ ಹೈಕಮೀಶನರ್ ಎಂದು ಕರೆಯಲ್ಪಡುತ್ತಿದ್ದು ಮುಂದೆ ಅವರ[ನ್ನು] ಏನೆಂದು ಕರೆಯಬೇಕೆನ್ನುವದು ಇನ್ನೂ ನಿರ್ಧಾರವಾಗಿಲ್ಲ.

ಪ್ರಕಟಣೆಯಲ್ಲಿಯ ಈ ಅಂಶಗಳಿಗೆ ಕಾಮನ್‌ವೆಲ್ತ್ ಸರಕಾರಗಳ [ಹಾ]ಗೂ ಬ್ರಿಟಿಷ್ ಮಂತ್ರಿ ಮಂಡಲದ ಒಪ್ಪಿಗೆ ದೊರೆತಿದೆಯೆಂದು ತಿಳಿದಿದೆ.

ಬ್ರಿಟಿಸ್ ಸರಕಾರವು ಇದಕ್ಕೆ ಬೇಗನೇ ಪಾರ್ಲಿಮೆಂಟಿನ ಒಪ್ಪಿಗೆ [ಪ]ಡೆಯಲಿದೆ. ಕಾಮನ್‌ವೆಲ್ತ ಪಾರ್ಲಿಮೆಂಟುಗಳಲ್ಲೆಲ್ಲ ಇದೇ ರೀತಿಯಾಗಿ ಒ[ಪ್ಪಿ]ಗೆ ಪಡೆಯಲಾಗುವದು.

— ಬ್ರಿಟಿಷ್ ಪ್ರಧಾನ ಮಂತ್ರಿ.

— ನಾನು ಸಮ್ಮತಿಯಿತ್ತ ಒಪ್ಪಂದವು ಭಾರತ, ಬ್ರಿಟನ್ ಕಾಮನ್‌ವೆಲ್ತ್ ಹಾಗೂ ಪ್ರಪಂಚಕ್ಕೆ ಹಿತಕರವಾಗಿದೆ ಭಾರತದ ಬಹುಮಂದಿ ಅ[ಲ್]ಲಿಯೂ ಈ ವಿಷಯದಲ್ಲಿ ಪರ್ಯಾಲೋಚಿಸುತ್ತಿರುವವರೆಲ್ಲಾ ಈ ನಿರ್ಣಯವನ್ನು ಸ್ವಾಗತಿಸುವದರಲ್ಲಿ ಸಂಶಯವಿಲ್ಲ. ನನ್ನ ಸಹೋದ್ಯೋಗಿಗಳನ್ನೇ ವಿವರವಾಗಿ ಕೇಳಿ ವಿಚಾರಿಸಿಕೊಳ್ಳಲು ಸಾಧ್ಯವಾಗದಿದ್ದರೂ ವಿಶಾಲ ದೃಷ್ಟಿಯ ಭಾರತದ ಈ ಧೋರಣೆಯು ಜಯಪುರ ಕಾಂಗ್ರೆಸ್‌ನಲ್ಲಿ ಮಂಜೂರಾಗಿದೆ. ಭಾರತ ಸ್ವಾತಂತ್ರ್ಯದ ಕುರಿತು ಭಾರತದ ಕೋಟಿಗಟ್ಟಲೆ ಜನರೊಡನೆ ನಾನು ಮಾಡಿದ ಪ್ರತಿಜ್ಞೆಯನ್ನು ನಾನು ಸಂಪೂರ್ಣ ಪರಿಪಾಲಿಸಿದ್ದೇನೆಂದು ಭಾವಿಸುತ್ತೇನೆ

— ಪಂಡಿತ ನೆಹರು

— ರಜಾ —

ಬರುವವಾರ ನವಭಾರತವು ಹೊರಡದೆ
೬—೬—೪೯ಕ್ಕೆ ಹೊರಡುವುದು.

ಬಂಗಾಲದ ಕವಯಿತ್ರಿ ತಾರುದತ್ತ

(ಜೆ ಹ. ಶಾಸ್ತ್ರಿ)

ಸರ್ವ ಪ್ರಪಂಚವು ನಿದ್ರಿಸುತ್ತಿರುವಾಗ [illegible] ಭಾರತವು ತನ್ನ ಕಾರ್ಯಕಲಾಪಗಳನ್ನೆ [illegible] ಧೈರ್ಯ, ಸಾಹಸ, ಉತ್ಸಾಹಗಳಿಂದ [illegible]ಗಿಸಿ, ಗತವೈಭವದ ಸವಿನೆನಪುಗಳ [illegible] ಕನಸಿನಲ್ಲಿ ಕಾಣುತ್ತಾ ಎಚ್ಚರವಾ[illegible]ತು: ಆ ಜಾಗೃತಿಯ ಸಾಕಾರ ರೂಪ [illegible] ೧೮೫೭ ನೇ ವರ್ಷದ ಸಿಪಾಯಿಯರ ದಂ[illegible]

ಅದು ಸಿಪಾಯಿಗಳ ದಂಗೆಯೋ ಅಥ[illegible] ಭಾರತದ ನವಚೇತನವೋ ಎನ್ನುವ [illegible]ವಾದವಿದ್ದಲ್ಲಿ ಅದಕ್ಕೆ ಒಂದೇ ಉತ್ತರ [illegible]ಸ್ವರಂಗ ಭೂಮಿಯಲ್ಲಿ ಭಾರತದ ಪುನಃ[illegible]ಪ್ರವೇಶ.

ಅದೊಂದು ಯುಗ ಸಂಧಿ ಕೇವಲ ಆಶಾ[illegible]ವಾದವೋ ಅಥವಾ ಅಸ್ಪಷ್ಟವಾದಲ್ಲಿಯೋ [illegible]ಹರಿಸುತ್ತಿದ್ದ ಭಾರತೀಯ ಆತ್ಮವು ಪಾಶ್ಚಾ[illegible]ತ್ಯವಾದವನ್ನು ಅನುಕರಿಸತೊಡಗಿತು.

ಬಂಗಾಳವು ಭಾರತದ ನೇಪಥ್ಯಭೂಮಿ [illegible]ರಾಮಕೃಷ್ಣರ ಆಧ್ಯಾತ್ಮಿಕ ಬೋಧನೆಯ [illegible]ರವೀಂದ್ರರ, ಭಾರತೀಯ ಸಂಸ್ಕೃತಿಯ [illegible]ಪುನರುತ್ಥಾನದ ನೇತಾಜಿ ಬೋಸರಸಿರಂ[illegible]ರ ಕೃಷಿಯ ಕರ್ಮಭೂಮಿ ಬಂಗಾಲ.

ಅಲ್ಲಿಯೇ ತಾರೂಳ ಜನನ ಅಬಂಗಗಗ[illegible]ನದಲ್ಲಿ ತಾರೆಯು ತೋರಿದಳು, ಹಗಲು [illegible]ಪೂರ್ಣವಾಗದಿರುವ ಮುನ್ನ ತಾರೆ ತಲೆ [illegible]ದೋರಿತು. ರಾತ್ರಿಯು ಪೂರ್ಣವಾಗಿ [illegible]ಅಲಂಕೃತವಾಗವ ಮುನ್ನ ಆ ತಾರೆ [illegible]ಆಕಾಶಪಥದಿಂದ ಅದೃಶ್ಯವಾಯಿತು. ಕೃಶಿ[illegible]ಸಿ ವ್ಯಥಿಸಿ, ಅಬಲೆಯಂತೆ ಸಾಯಲಿಲ್ಲ. ಹಂಸವು ತನ್ನ ಅಂತ್ಯ ನೃತ್ಯಗೀತವನ್ನು ಆಲಾಪಿಸಿತು. ಆ ಆಲಾಪನೆಯ ಪ್ರತಿರೂ[illegible]ಪವು ಕಾವ್ಯಲಹರಿಯಾಯಿತೆನ್ನಬಹುದು.

"ವಂಗಭೂಮಿಯ ವರಪುತ್ರಿಯಾಗಿ ತಾರೆ ಅವತರಿಸಿದಳು ಆಚಾರ, ಸಾಂಪ್ರದಾಯಗಳಲ್ಲಿ ಹಿಂದು, ಮಾನಸಿಕ ಪ್ರವೃತ್ತಿಯಲ್ಲಿ ಫ್ರೆಂಚ್ ಪುರುಷ ಕವನದಲ್ಲಿ ತುಂಬಿ ತುಳುಕುವ ರಚನಾವೈಶಿಷ್ಟದಿಂದ ಆಂಗ್ಲವ[illegible]ನಿತೆ..........ಹದಿನೆಂಟು ವರ್ಷದ ಕಿರು ಪ್ರಾಯದಲ್ಲೇ ಫ್ರೆಂಚ್ ಕವಿಗಳನ್ನು ಭಾರತಕ್ಕೆಪರಿಚಯಮಾಡಿಕೊಟ್ಟಳು. ತ್ರಿಪಥಾಚಾರಗಳನ್ನು, ತ್ರಯಿಾವಿಧಗಳನ್ನು ಮೇಳವಿಸಿದ ನವನವೋನ್ಮೇಷಿತ ರಚನಾಶಕ್ತಿ, ನವಯೌವನದಲ್ಲೇ ಇಪ್ಪತ್ತೆರಡು ವರುಷದಲ್ಲಿಯೇ ಮಾಯವಾಯಿತು." ಎಂದವರಾರು? ನಮ್ಮವನಲ್ಲ, ಸಾಮಾನ್ಯನಲ್ಲ. ಆತನು ಪ್ರಖ್ಯಾತ ಫ್ರೆಂಚ ಸಾಹಿತ್ಯ ವಿಮರ್ಶಕ ಡಾರ್ಮೆಸ್ಟೀನ್.

ದತ್ತರ ಕುಟುಂಬ ಬಹು ಪ್ರಾಚೀನವಾದದ್ದು. ಅದರಲ್ಲಿ ಗೋವಿಂದ ಚಂದ್ರ ಪ್ರಮುಖ ಸರಕಾರಿ ನೌಕರಿಯನ್ನು ಬಿಟ್ಟು ಸಾಹಿತ್ಯ ಸೇವೆಮಾಡತೊಡಗಿದ ೧೮೬೯ ರಲ್ಲಿ ಆತನು ಕುಟುಂಬ ಸಹಿತವಾಗಿ ಕ್ರೈ[illegible]ಸ್ತಮತವನ್ನು ಸ್ವೀಕರಿಸಿದ ಅದಕ್ಕೆ ಕಾರಣ ಹಿಂದವ ಮತದ್ವೇಷವಲ್ಲ, ರಾಜಮತವೆಂಬ ಹುಚ್ಚು ಅನುರಾಗವಲ್ಲ. ಆಂಗ್ಲ ಭಾಷೆಯು ಪ್ರಪಂಚ ವಿಜ್ಞಾನಕ್ಕೆ ಮಾರ್ಗದರ್ಶಕವೆಂಬ ಭಾವನೆಯೇ ವಿನಃ ಬೇರಲ್ಲ

ನೆಜ್ಜಿನ ಮೂವರು ಮಕ್ಕಳು ಅವರಲ್ಲಿ ಕಿರಿಯವಳು ನಮ್ಮ ತಾರೆ ಮಾರ್ಚಿ ೪,೧೮೫೬ ರಲ್ಲಿ ಕಲಕತ್ತೆಯ ಮಾನಿಕ್ ತೋಲಾ ಬೀದಿಯ ಹನ್ನೆರಡನೆಯ ಮನೆಯಲ್ಲಿ ಅವಳ ಉದಯ ಪ್ರಭಾತದ ಸೂರ್ಯನೊಂದಿಗೆ ಉದ್ಯಾನದ ತರುಲತಾ ಶುಕ ಪಿಕಗಳೊಂದಿಗೆ ಬೆಳೆದಳು.

೧೩ ನೇ ವರುಷದಲ್ಲಿ ತಾಯಿತಂದೆ ಅಕ್ಕನವರೊಂದಿಗೆ ಯೂರೋಪ್ ಸಂಚಾರಕ್ಕೆ ಹೊರಟಳು ಫ್ರಾನ್ಸಿನಲ್ಲಿ ಅಕ್ಕ ಅರೂಳೊಂದಿಗೆ ವಿದ್ಯಾಭ್ಯಾಸ ನಡೆಸಿದಳು.

೧೮೭೧ ರಲ್ಲಿ ಕೆಬ್ರಿಡ್ಜ್ ವಿಶ್ವವಿದ್ಯಾನಿಲಯದ, ಸ್ತ್ರೀಯರಿಗಾಗಿ ಪ್ರತ್ಯೇಕವಾದ ಉಪನ್ಯಾಸಗಳಿಗೆ ಅಕ್ಕತಂಗಿಯರಿಬ್ಬರು ಹಾಜರಾಗುತ್ತಿದ್ದರು.

೧೮೭೩ ರಲ್ಲಿ ಜನ್ಮಭೂಮಿ ಬಂಗಾಳದ ಪುನರ್ದರ್ಶನ ೧೮೭೭ ರಲ್ಲಿ ಜನ್ಮಭೂಮಿ ಸ್ಮಶಾನವಾಯಿತು.

ಈ ಮಧ್ಯಕಾಲವೇ ಆಕೆಯ ಕವಿತ್ವದ ಯೂಟವನ್ನು ಸಿದ್ಧಪಡಿಸಿದ ಕಾಲ ಆರೋಗತಿಸಿದಳು. ತಾರೂಗೆ ಬಹಳ ತಾಪವನ್ನುಂಟುಮಾಡಿತು. ಅವಳ ಜೀವನದಲ್ಲಿ ನಿರಾಶೆ, ನಿಸ್ಪೃಹಗಳು ಆವೇಶಿಸಿ ವೇದಾಂತವಾಗಿ ಪರಿಣಮಿಸಿದವು. ಭಾರತೀಯ ಪೌರಾಣಿಕ ಪಾತ್ರಗಳೆಂದರೆ ತಾ ರೂ ಗೆ ಬಹು ಪ್ರೇಮ. ಕೆಲವರ ವಿಮರ್ಶನೆಗೆ ಉತ್ತರವಾಗಿ

Absurd may be the tale I tell
Ill suited the marching times
I loved the lips from which if fell
So let it stnad among my rhymes ಎಂದರೆ

ಬೆಂಗಾಲ್ ಪತ್ರಿಕೆಗಳಲ್ಲಿ ಆಕೆಯ ಲೇಖಗಳು ಪ್ರಚುರವಾಗುತ್ತಿದ್ದವು ೧೮೭೬ ರಲ್ಲಿ "A sheal gleaed in the French fields" ಎಂಬ ಗ್ರಂಥವು ಭವಾನಿ ಪೂರ್ ಮುದ್ರಣಾಲಯದಲ್ಲಿ ಪ್ರಚುರವಾಯಿತು. ಸಮಾಲೋಚನೆಗಾಗಿ ಲಂಡನ್ನಿನ ಎಕನಾಮಿಕ್ ಪತ್ರಿಕೆಗೆ ಕಳಿಸಲಾಯಿತು. ಸಂಪಾದಕ ಎಡ್ಮಂಡ್‌ಗಾರ್ ಇಂಡಿಯನ್ ಮುದ್ರೆಯ ಚಿಕ್ಕಪಾರ್ಸಲನ್ನು ನೋಡಿ ಕಸದಪುಟ್ಟಿಯಲ್ಲಿ ಹಾಕಬೇಕೆಂದುಕೊಂಡ ಆದರೂ ನೋಡೋಣವೆಂದು ನಿರ್ಲಕ್ಷ್ಯವಾಗಿ ತೆಗೆಯಲು ....

Still Barred gates ! The far east glow[illegible]
The morning wind makes fresh and fre[illegible]
Should not the hour that wakes the ros[illegible]
Awaken also the[illegible]

ಸ್ತಬ್ಧನಾದ ಓದಿದ-ಮತ್ತೊಮ್ಮೆ ಓದಿ[illegible] ಕೂಡಲೇ ಇಂಗ್ಲೆಂಡಿಗೆ ತಾರೂಳನ್ನು [illegible] ಪ್ಯಾನಿಸಿದ ಫ್ರೆಂಚ್ ಕವಿಗಳ ಅನೇ[illegible] ಗ್ರಂಥಗಳನ್ನು ಇಂಗ್ಲೀಷಿಗೆ ಅನುವಾದಿ[illegible]ದಳು ಮೂಲ ಗ್ರಂಥಗಳೆಲ್ಲ ಮಾಯ[illegible]ವಾದಲ್ಲಿ ಇವುಗಳಿಂದಲೇ ಮೂಲಗಳನ[illegible] ಸೃಷ್ಟಿಸಬಹುದು. ಎಂದ ಒಬ್ಬ ವಿಖ್ಯಾ[illegible] ವಿಮರ್ಶಕ.

ಆಕೆಯ ಕೊನೆಯ ಪುಸ್ತಕ "Th[illegible] Ancient legends and Bale[illegible] of Hindusthan" ಎಡ್ವರ್ಡ್ ಥಾಂ[illegible]ನ್ ಈಕೆಯನ್ನು ಶಾಪೋ ಮತ್ತು ಎಮಿ[illegible] ಬ್ರಾಂಟೆಯವರ ಜತೆ ಸೇರಿಸುತ್ತಾನೆ.

ಇಂಗ್ಲೆಂಡಿಗೆ ಮತ್ತೊಮ್ಮೆ ಹೋಗ[illegible]ನ್ನುವಷ್ಟರಲ್ಲಿಯೇ ಬಿರುಗಾಳಿ ಬೀಸಿತು. ಆ ಗಾಳಿಯಡೆ ಹೊಡತದಲ್ಲಿ ಕುಸುಮವು ನೆಲಸಮವಾಯಿತ. ಆಗಸ್ಟ್ ತಿಂಗಳ ೧೮೭೭ ಅಮರ್ ನಾಥಾ ಝೂರವರು ಆಕೆಯ ಗುಣಗಾನಮಾಡುತ್ತಾ Her race was run ಎಂದರು)

[೧೫-೧೦-೪೮ ಆಂಧ್ರಪತ್ರಿಕೆಯ ಆಧಾರ]

ನೋಟೀಸು.

೧೯೪೭ನೇ ಸಂ॥ ಮದ್ರಾಸು ಷಾಪು ಮತ್ತು ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಿಜಿಸ್ಟರುಗಳು ಫಾರಮುಗಳು ವಗೈರ ನಮ್ಮಲ್ಲಿ ದೊರೆಯುತ್ತವೆ,

ವಿಠಲ್ ಪ್ರಿಂಟಿಂಗ್ ಪ್ರೆಸ್,
ತೇರುಬಜಾರ್, ಬಳ್ಳಾರಿ

-- ಆಯುರ್ವೇದ ಡಾಕ್ಟರರಾಗಿ ಕೆಲಸ ಮಾಡುತ್ತಿರುವವರು ಡಾಕ್ಟರು ಎಂದು ಬರೆದು ಆ ಮೇಲೆ ಇಡ್ ಸೇರಿಸ ಬೇಕೆಂದಿದ್ದ ಸರಕಾರಿ ಪ್ರಕಟಣೆಯನ್ನು ತಿದ್ದಿ ಹೊಸದಾಗಿ ಮೊದಲು ಡಾಕ್ಟರೆಂದು ಆ ಮೇಲೆ ಕೊನೆಗೆ ಎಲ್. ಐ. ಯಮ್. ಎಂದು ಸೇರಿಸಬೇಕೆಂದು ಸರಕಾರವು ತಿಳಿಸುತ್ತಿದೆ.

ಹೊಸ ಪಂಚಾಯತಿ ಬೋರ್ಡ್

ಜನಾಭಿಪ್ರಾಯವನ್ನು ಸರಕಾರವು ಸ್ವಾಗತಿಸುತ್ತಿದೆ

ಅಧಿಕಾರವಿಲ್ಲ

ನಮ್ಮ ಪ್ರಾಂತದಲ್ಲಿ ಸು. ಮಾರು ...೨೦೦ ಹಳ್ಳಿ ಪಂಚಾಯತಿಗಳು ಇವೆ. ಈ ಪಂಚಾಯತಿಗಳಲ್ಲಿ ಸುಮಾರು ಹತ್ತು ...ಲಿಯ ಜನರು ವಾಸಮಾಡುತ್ತಾರೆ. ಮದರಾಸು ಲೋಕಲ್ ಬೋರ್ಡ್ಸ್ ಅಕ್ಟಿನ ಪ್ರಕಾರ, ಈ ಪಂಚಾಯತಿಗಳು ಕಾರ್ಯ ನಡೆಸುತ್ತವೆ. ಈ ಆಕ್ಟಿನ ಪ್ರಕಾರ ಪಂಚಾಯತಿ ಬೋರ್ಡುಗಳು ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಅದರ ಪ್ರಸಿಡೆಂಟರ ಅಧೀನಕ್ಕೊಳಗಾಗಿರುತ್ತವೆ. ಡಿಸ್ಟ್ರಿಕ್ ಬೋರ್ಡಿಗೆ ಪಂಚಾಯತಿ ಬೋರ್ಡಿನ ಮುಖ್ಯ ಕಾರ್ಯಗಳಲ್ಲಿ ಕೈಹಾಕುವ ಅಧಿಕಾರವಲ್ಲದೆ, ದಿನನಿತ್ಯದ ಕಾರ್ಯಕಲಾಪಗಳಲ್ಲೂ ಕೈಹಾಕುವ ಅಧಿಕಾರವಿದೆ. ಉದಾಹರಣೆಗಾಗಿ ಡಿಸ್ಟ್ರಿಕ್ಟ್ ಬೋರ್ಡಿನ ಸಮ್ಮತಿ ಇಲ್ಲದೆ ಯಾವ ಮಾರ್ಕೆಟನ್ನಾಗಲೀ, ಮಾಂಸ ಕಡಿಯುವ ಜಾಗೆಯನ್ನಾಗಲೀ, ಮುಚ್ಚುವ ಅಥವಾ ತೆಗೆಯುವ ಅಧಿಕಾರವು ಪಂಚಾಯತಿ ಬೋರ್ಡಿಗೆ ಇರುವುದಿಲ್ಲ. ಪಂಚಾಯತಿಯ ವಾರ್ಷಿಕ ಆಯವ್ಯಯ ಪಟ್ಟಿಯನ್ನು ಡಿಸ್ಟ್ರಿಕ್ ಬೋರ್ಡು ಒಪ್ಪಿದನಂತರವೇ ಅದು ಕಾರ್ಯಾಚರಣೆಗೆ ಬರುವುದು. ಹೊಸ ತೆರಿಗೆ ಮತ್ತು ದರಗಳನ್ನು ಎತ್ತಬೇಕಾದರೂ ಡಿಸ್ಟ್ರಿಕ್ಟ್ ಬೋರ್ಡಿನ ಸಮ್ಮತಿ ಬೇಕು. ಡಿಸ್ಟ್ರಿಕ್ಟ್ ಬೋರ್ಡಿಗೆ ಸಮ್ಮತಿ ಇಲ್ಲದ ಯಾವ ಠರಾವನ್ನೂ ಪಂಚಾಯತಿಗಳು ಮಂಜೂರು ಮಾಡಬಾರದು. ಹೀಗಾಗಿ ಪಂಚಾಯತಿಗಳಿಗೆ ಸ್ವತಂತ್ರಾಧಿಕಾರವೆನ್ನುವುದು ಇಲ್ಲವೇ ಇಲ್ಲ.

ಕೆಲಸಮಾಡುವುದಿಲ್ಲ

ಎರಡನೆಯದಾಗಿ ಬರೇ ಕೆಲವು ಪಂಚಾಯತಿಗಳು ಆಕ್ಟಪ್ರಕಾರ ಹಂಚಲ್ಪಟ್ಟ ಕಾರ್ಯಗಳನ್ನು ನಿರ್ವಹಿಸಲು ಶಕ್ತವಾಗಿವೆ. ತೆರಿಗೆಗಳನ್ನು ಹೊರಿಸಲು ಉತ್ಸಾಹಪಡಿಸದಿದ್ದಲ್ಲಿ ಅನೇಕ ಪಂಚಾಯತಿಗಳು ತೆರಿಗೆ ವಸೂಲಿಮಾಡುವುದೇ ಇಲ್ಲ. ಅವರ ಉತ್ಪನ್ನವೆಂದರೆ ಭೂಕಂದಾಯವಾಗಿ ಆ ಹಳ್ಳಿಯಲ್ಲಿ ವಸೂಲಾದ ಹಣದ ಪೈಕಿ ಒಂದು ನಾಲ್ಕಾಂಶ ಸಿಗುವ ಸರಕಾರಿ ಹಣಮಾತ್ರ. ಹೀಗಾಗಿ ಹೆಚ್ಚಿನ ಪಂಚಾಯತಿಗಳ ಆಡಳಿತೆಯು ಹಣದ ತೊಂದರೆಗಳಿಂದಾಗಿ ನಿಂತುಹೋಗಿ ತೀರ ಆವಶ್ಯಕ ವಸ್ತುಗಳಾದ ಕುಡಿಯುವ ನೀರು, ಸ್ವಚ್ಛವಾದ ಬೀದಿಗಳು, ಉತ್ತಮವಾದ ಮಾರ್ಗ, ಇವುಗಳನ್ನು ಸಹ ಹಳ್ಳಿಗರಿಗೆ ಒದಗಿಸಲಾರದವುಗಳಾಗಿವೆ. ಹೀಗಾಗಿ ಈಗ ಇರುವಂತೆ ಪಂಚಾಯತಿಗಳು ಅಪ್ರಯೋಜಕ ಮತ್ತು ಅಧಿಕಾರ ಹೀನವಾಗಿರುತ್ತವೆ. ವರ್ಷಕ್ಕೆ ರೂ ೩,೦೦೦ ಮತ್ತು ಹೆಚ್ಚು ಉತ್ಪನ್ನವಿರುವ ಪಂಚಾಯತಿಗಳಿಗೆ ಒಬ್ಬ ಎಕ್ಸಿಕ್ಯೂಟಿವ್ ಆಫೀಸರನನ್ನು ನೇಮಿಸುತ್ತಾರೆ. ಇಂಥಹ ಪಂಚಾಯತಿಗಳಲ್ಲಿ ಹೆಚ್ಚಾಗಿ ಸ್ವಲ್ಪ ಜನೋಪಯೋಗಿಕಾರ್ಯಗಳು ನಡೆಸಲ್ಪಡುವುವು. ಆದರೆ ಸಣ್ಣ ಪಂಚಾಯತಿಗಳು ಏನೂ ಕೆಲಸಮಾಡುವುದಿಲ್ಲವೆಂದೇ ಹೇಳಬೇಕು.

ಕಾಯಿದೆಯಾಯಿತು

ಪಂಚಾಯತಿ ಬೋರ್ಡುಗಳನ್ನು ಲೋಕಲ್ ಬೋರ್ಡು ಆಕ್ಟಿನಿಂದ ಹೊರಪಡಿಸಿ, ಅವುಗಳಿಗೆ ಪ್ರತ್ಯೇಕ ಕಾಯಿದೆಯೊಂದನ್ನು ನಿರ್ಮಿಸಬೇಕೆಂದು ಸರಕಾರವು ೧೯೪೦ ನೇ ಇಸವಿಯಿಂದಲೂ ಆಲೋಚಿಸುತ್ತಿತ್ತು. ಇದರಿಂದಾಗಿ ೧೯೪೬ ನೇ ಇಸವಿಯಲ್ಲಿ ಒಂದು ಬಿಲ್ ತಯಾರಿಸಿ, ಜನಾಭಿಪ್ರಾಯಕ್ಕಾಗಿ ಮುದ್ರಿಸಿ ಹಂಚಲಾಯ್ತು. ಹಳ್ಳಿಗಳ ಆಡಳಿತೆಗಳಲ್ಲಿ ಅನುಭವವುಳ್ಳ ಮತ್ತು ಆ ಶಕ್ತಿಯುಳ್ಳ ಶಿಷ್ಟರ ಮಂಡಲಿಯೊಂದು, ಈ ಮಸೂದೆಯನ್ನೂ, ಮಸೂದೆಯ ಬಗ್ಗೆ ಬಂದ ಜನಾಭಿಪ್ರಾಯವನ್ನೂ ಚೆನ್ನಾಗಿ ಪರಿಶೀಲಿಸಿತು. ತಜ್ಞರ ಪರಿಶೀಲನೆಯನಂತರ ತಕ್ಕ ಮಾರ್ಪಾಡುಗಳೊಡನೆ ಪಂಚಾಯತ ಬಿಲ್ಲನ್ನು ೧೯೪೭ ನೇ ಏಪ್ರಿಲಿನಲ್ಲಿ ಕಾಯಿದೆಯನ್ನಾಗಿ ಮಾಡಲಾಯ್ತು. ಆದರೆ ಅದನ್ನು ಜಾರಿಗೆತರುವ ವಿಚಾರವನ್ನು ಹೊಸ ಮಂತ್ರಿ ಮಂಡಳಿಗೆ ಬಿಟ್ಟು ಬಿಡಲಾಯ್ತು. ಇಷ್ಟರವರೆಗೆ ಆಕ್ಟನ್ನು ಜಾರಿಮಾಡಿಲ್ಲ. ಜನತಾ ಸರಕಾರವು ಹೊಸ ಮಸೂದೆಯೂ ಸಾಕಷ್ಟು ಪರಿಣಾಮಕಾರಿಯಾಗಿಲ್ಲವೆಂದು ಗಣಿಸಿತು. ಸರಕಾರೀ ಆಫೀಸರರು ಅನಗತ್ಯವಾಗಿ ಪಂಚಾಯತಿಯ ಕಾರ್ಯದಲ್ಲಿ ಕೈಹಾಕಲು ಸಾಧ್ಯವಿರುವ ಮತ್ತು ಹಳ್ಳಿಯ ಎಲ್ಲಾಕಾರ್ಯಗಳನ್ನೂ ಪಂಚಾಯತಿಗೆ ಒಪ್ಪಿಸಿದ ಈ ಶಾಸನ ಪೂರ್ಣವಲ್ಲವೆಂದು ಕಂಡುಬಂತು.

ಸಂಪೂರ್ಣ ಸ್ವಾತಂತ್ರ್ಯ

ಪಂಚಾಯತಿ ಬೋರ್ಡುಗಳನ್ನು ಯಾರ ಅಧೀನಕ್ಕೂ ಒಳಪಡಿಸದೆ ಇರುವ, ಆದರೆ ಉತ್ತಮ ಆಡಳಿತೆ ಇರುವಂತೆ ನೋಡಿಕೊಳ್ಳಲು ಅನುಕೂಲವಾಗುವ ಶಾಸನವು ಅಗತ್ಯವೆಂದು ಹೊಸ ಮಂತ್ರಿ ಮಂಡಳವು ತೀರ್ಮಾನಿಸಿತು. ಅವು ಸಂಪೂರ್ಣ ಸ್ವತಂತ್ರವಾಗಿ ಇರಬೇಕೆಂಬುದೇ ಉದ್ದೇಶವಾಗಿದ್ದಿತು. ಈ ಬಗ್ಗೆ ಮಾನ್ಯ ಹಣಕಾಸಿನ ಮಂತ್ರಿಗಳು, ಆರೋಗ್ಯಮಂತ್ರಿಗಳು, ಪಾನನಿರೋಧ ಮಂತ್ರಿಗಳು, ಸ್ಥಳೀಕ ಸಂಸ್ಥೆಗಳ ಮಂತ್ರಿಗಳು ಮತ್ತು ಸಾರ್ವಜನಿಕ ಕಾರ್ಯ ಮಂತ್ರಿಗಳನ್ನೊಳಗೊಂಡ ಒಂದು ಉಪಸಮಿತಿಯವರು ಈ ವಿಚಾರದಲ್ಲಿ ಒಪ್ಪಿಸಿದ ವರದಿಯನ್ನು ಪೂರ್ಣ ಮಂತ್ರಿಮಂಡಲಿಯು ಒಪ್ಪಿ ಕೆಳಗಿನ ನಿರ್ಣಯಗಳಿಗೆ ಬರಲಾಗಿದೆ. ಈ ನಿರ್ಣಯದಪ್ರಕಾರ ಹೊಸ ಪಂಚಾಯತಿ ಬಿಲ್ ತಯಾರಿಸಿ, ಜನಾಭಿಪ್ರಾಯವನ್ನು ಸಂಗ್ರಹಿಸಿ, ಶಾಸನಸಭೆಯಲ್ಲಿ ಇಡಲಾಗುವುದು. ಹೊಸ ಪಂಚಾಯತಿ ಬಿಲ್ಲಿನ ಉದ್ದೇಶವೇನೆಂದರೆ ಪಂಚಾಯತಿಗಳಿಗೆ ಹಳ್ಳಿಯ ಆಡಳಿತದ ಬಗ್ಗೆ ಸಂಪೂರ್ಣ ಅಧಿಕಾರವನ್ನು ಕೊಡುವುದಲ್ಲದೆ, ಅದಕ್ಕೆ ತಕ್ಕ ಹಣವನ್ನು ಎತ್ತಲೂ ಅನುಕೂಲಮಾಡಿಕೊಡಲಾಗುವುದು. ಇದಲ್ಲದೆ ಹೊರಗಿನಿಂದ ಯಾರೂ ಪಂಚಾಯತಿ ಆಡಳಿತದಲ್ಲಿ ಕೈಹಾಕದಂತೆ ನೋಡಿಕೊಳ್ಳುವುದು. ಆದರೆ ಆಡಳಿತೆಯು ಸರಿಯಾಗಿರುವಂತೆ ನೋಡಲು ಸರಕಾರಕ್ಕೆ ಅಧಿಕಾರವಿದೆ.

ಹಳ್ಳಿ ಹಳ್ಳಿಗೂ

೫೦೦ ಜನರ ಮೇಲ್ಪಟ್ಟು ವಾಸಿಸುವ ಪ್ರತಿಯೊಂದು ಹಳ್ಳಿಯಲ್ಲಿಯೂ ಪಂಚಾಯತಬೋರ್ಡು ಸ್ಥಾಪಿಸಲ್ಪಡುವುದು. ಅಲ್ಪಜನ ಸಂಖ್ಯೆಯಿರುವ ಹಳ್ಳಿಗಳನ್ನು ಒಂದುಗೂಡಿಸಿ ಪಂಚಾಯತನ್ನು ಸ್ಥಾಪಿಸಲಾಗುವುದು. ಪ್ರತಿ ಹಳ್ಳಿಗೂ ಕಡ್ಡಾಯವಾಗಿ ಪಂಚಾಯತಿಯು ಸ್ಥಾಪಿಸಲ್ಪಡುವುದಲ್ಲದೆ, ಜನರ ಅಥವಾ ಆಫೀಸರರ ಇಷ್ಟಕ್ಕೆ ಬಿಡುವುದಿಲ್ಲ. ಹೊಸ ಬಿಲ್ ಪಾಸಾದ ೨ ವರ್ಷಗಳಲ್ಲೇ ಪ್ರಾಂತದ ಎಲ್ಲಾ ಹಳ್ಳಿಗಳಲ್ಲಿಯೂ ಪಂಚಾಯತಿಗಳು ಸ್ಥಾಪಿಸಲ್ಪಡುವವೆಂದು ನಂಬಲಾಗಿದೆ. ೫,೦೦೦ಕ್ಕೆ ಮೇಲ್ಪಟ್ಟ ಜನಸಂಖ್ಯೆ ಇರುವ ಪಂಚಾಯತಿಗಳು ಪ್ರಥಮ ತರಗತಿಯ ಪಂಚಾಯತಿಗಳೆಂದು ಗಣಿಸಲ್ಪಡುವವಲ್ಲದೆ, ಇವುಗಳಿಗೆ ಎಕ್ಸಿಕ್ಯೂಟಿವ್ ಆಫೀಸರರನ್ನು ನೇಮಿಸುವ ಹಕ್ಕು ಸರಕಾರಕ್ಕೆ ಇರುವುದು. ಆದರೆ ಎಕ್ಸಿಕ್ಯೂಟಿವ್ ಆಫೀಸರನು ಪಂಚಾಯತಿ ಬೋರ್ಡಿನ ಅಧೀನಕ್ಕೊಳಪಟ್ಟಿರುತ್ತಾನೆ. ಪಂಚಾಯತಿ ಸಭೆಯು ಹಳ್ಳಿಗರು ಆರಿಸಿದ ಪ್ರತಿನಿಧಿಗಳಿಂದ ಕೂಡಿರುತ್ತದೆ. ಗುಪ್ತಮತದಾನ ಪದ್ಧತಿಯ ಮೇರೆಗೆ, ಪ್ರಾಪ್ತ ವಯಸ್ಕರೆಲ್ಲರೂ ತಮ್ಮ ವಾರ್ಡಿನ ಪ್ರತಿನಿಧಿಯನ್ನು ಆರಿಸುವರು. ಊರಿನ ಗೌಡನು ಸಭೆಯ ಗೌರವ ಸದಸ್ಯನಾಗುತ್ತಾನೆ. ಆದರೆ ಆತನಿಗೆ ಮತ ಕೊಡುವ ಹಕ್ಕು ಇರುವುದಿಲ್ಲ. ಈಗಿರುವಂತೆ ಅಧ್ಯಕ್ಷರನ್ನು ಚುನಾಯಿತ ಪ್ರತಿನಿಧಿಗಳು ಆರಿಸದೆ, ಊರಿನ ಸರ್ವ ಮತದಾರರೇ ನೇರವಾಗಿ ಆರಿಸಬೇಕು. ಯಾವ ಜಾತಿಗೆ ಅಥವಾ ಪಂಗಡಕ್ಕೆ ಪಂಚಾಯತಿಯಲ್ಲಿ ಸ್ಥಾನಗಳನ್ನು ಕಾದಿರಿಸಲಾಗುವುದಿಲ್ಲ. ಎಸೆಂಬ್ಲಿ ಚುನಾವಣೆಗೆ ತಯಾರಿಸಿದ ಮತದಾರರ ಪಟ್ಟಿಯ ಪ್ರಕಾರವೇ ಹಳ್ಳಿಯವರು ಮತಕೊಡುವರು. ಸರಕಾರವು ಯಾರನ್ನೂ ಸಭೆಗೆ ನೇಮಿಸಿ ಕಳುಹಿಸುವುದಿಲ್ಲ. ಜನರಿಂದ ಆರಿಸಿ ಬಂದ ಪ್ರತಿನಿಧಿಗಳು ತಮ್ಮೊಳಗೆ ಒಬ್ಬ ಉಪಾಧ್ಯಕ್ಷನನ್ನು ಆರಿಸಬೇಕು.

(ಮುಂದುವರಿಯುವುದು)

ಭಾರತದ ಆರ್ಥಿಕ ಅಭಿವೃದ್ಧಿ

ಒಕ್ಕಲತನದ ಪ್ರಗತಿಗೆ ಪ್ರಥಮ ಸ್ಥಾನ

ನಮ್ಮ ರಾಷ್ಟ್ರೀಯ ಉತ್ಪನ್ನದ ಸರಿಯಾದ ಅಂಕೆ ಸಂಖ್ಯೆಗಳನ್ನು ಸಂಗ್ರಹಿಸಲು ಕೇಂದ್ರ ಸರಕಾರದ ಹಣಕಾಸಿನ ಶಾಖೆಯವರು ಬೇಗನೆ ಕ್ರಮಗಳನ್ನು ಕೈಕೊಳ್ಳುವರೆಂದು ಕೇಳಬರುತ್ತದೆ. ಆದರೆ ಈ ದೇಶದ ದಾರಿದ್ರ್ಯದ ಪರಮಾವಧಿಯನ್ನು ತೋರಿಸಿಕೊಡಲು ಬೇರೆ ಬೇರೆ ಬೆಳೆಗಳನ್ನು ಬೆಳೆಯುವ ಸಾಗುವಳಿ ಭೂಮಿ, ದನಕರುಗಳ ಸಂಖ್ಯೆ, ಅವುಗಳು ಕೊಡುವ ಹೈನ, ಅಡವಿಗಳಿಂದಲೂ ಗಣಿಗಳಿಂದಲೂ ದೊರಕುವ ಉತ್ಪನ್ನ ವಿವಿಧ ವರ್ಗಗಳ ಆದಾಯ ಮೊದಲಾದ ಅಂಶಗಳನ್ನು ಜಾಗರೂಕತೆಯಿಂದ ಲೆಕ್ಕ ಮಾಡಬೇಕಾಗುವದಿಲ್ಲ, ಅದು ಕೆಲವೇ ಅಂಶಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ.

ಭಾರತ-ಬ್ರಿಟಿಶ್

ಉದಾಹರಣೆಗಾಗಿ, ಬ್ರಿಟನ್ನು ಒಕ್ಕಲತನದ ರಾಷ್ಟ್ರವಲ್ಲ, ಔದ್ಯಮಿಕ ರಾಷ್ಟ್ರ. ಆದರೂ ೧೯೪೫ ರಿಂದ ೧೯೪೮ ರ ಅವಧಿಯೊಳಗೆ ಅದು ಹೊರಗಿಂದ ತರಿಸುವ ಆಹಾರವಸ್ತುಗಳ ಪ್ರಮಾಣವನ್ನು ಕ್ರಮಶಃ ತಗ್ಗಿಸುತ್ತ ಬಂದು ದೇಶದಲ್ಲೇ ಆಹಾರವನ್ನು ಹೆಚ್ಚಾಗಿ ಬೆಳೆಯುತ್ತಿದೆ. ಆದರೆ ನೂರಕ್ಕೆ ೭೦ ರಷ್ಟು ಜನರು ಹೊಲಗಳಲ್ಲಿ ದುಡಿಯುತ್ತಿರುವ ಭಾರತದಲ್ಲಿ ನಾವು ಕಾಣುತ್ತಿರುವದೇನು? ೧೯೪೬ ರಲ್ಲಿ ೧೫ ಲಕ್ಷ, ೧೯೪೭ ರಲ್ಲಿ ೨೦ ಲಕ್ಷ, ೧೯೪೮ ರಲ್ಲಿ ೩೦ ಲಕ್ಷ ಟನ್ ಆಹಾರವನ್ನು ನಾವು ಆಯಾತ ಮಾಡಿಕೊಂಡೆವು. ೧೯೪೯ ರಲ್ಲಿ ೪೫ ಲಕ್ಷ ಟನ್ ಆಹಾರವನ್ನು ೨೦೦ ಕೋಟಿ ರೂಪಾಯಿಯ ಅಗಾಧ ವೆಚ್ಚದಿಂದ ತರಿಸುವವರಿದ್ದೇವೆ.

ಇದು ನಮ್ಮ ಅರ್ಥಿಕ ವ್ಯವಸ್ಥೆಯನ್ನು ನಡೆಸಿದವರ ಶುದ್ಧ ಆಯೋಗ್ಯತೆಯನ್ನು ತೋರಿಸುತ್ತದೆ. ಹಾಲು, ಮೀನು, ಬಟಾಟೆ, ಕಾಯಿಪಲ್ಲೆ ಮತ್ತು ಧಾನ್ಯ ಜನ ಪದಾರ್ಥಗಳ ತಲಾ ಉಪಯೋಗದ ಪ್ರಮಾಣ ಬ್ರಿಟನ್ನಿನಲ್ಲಿ ೧೯೪೬-೪೮ ರಲ್ಲಿ ಯುದ್ಧ ಪೂರ್ವಕ್ಕಿಂತ ಹೆಚ್ಚಿಗಿದ್ದು ಉಳಿದ ಆಹಾರವಸ್ತುಗಳ ಬಳಿಕೆ ಹೆಚ್ಚು ಕಡಿಮೆ ಮೊದಲಿನಷ್ಟೇ ಇದೆ. ಇದು ಬ್ರಿಟಿಶರ ಕಾರ್ಯಕ್ಷಮತೆಗೆ ನಿದರ್ಶನವಾಗಿದೆ. ಹಾಲನ್ನಂತೂ ಬ್ರಿಟಿರ ಇಂದು ಯುದ್ಧ ಪೂರ್ವಕ್ಕಿಂತ ಒಂದುವರೆ ಪಟ್ಟು ಬಳಸುತ್ತಿದ್ದಾರೆ. ಆದರೆ ಆಹಾರ ಹೆಚ್ಚು ಬೆಳೆಯುವದಕ್ಕಾಗಿ ೩೧ ಕೋಟಿ ರೂಪಾಯಿಗಳನ್ನು ಸುರಿದ ಮೇಲೂ ಇಂದು ಧಾನ್ಯದ ತಲಾ ಉಪಯೋಗ ಭಾರತದಲ್ಲಿ ೧೦-೧೨ ಔಂಸ್ [ದಿನಕ್ಕೆ] ಇದೆ. ಯುದ್ಧ ಪೂರ್ವದಲ್ಲಿ ಇದು ಒಂದು ಪೌಂಡಿಗಿಂತಲೂ ಹೆಚ್ಚಾಗಿತ್ತು.

ಯುದ್ಧದ ಹೊಡೆತ

ಎರಡನೆ ಮಹಾಯುದ್ಧಕ್ಕಿಂತ ಮೊದಲೇ ಭಾರತದ ಅರ್ಥಿಕ ಸ್ಥಿತಿ ಸಮರ್ಪಕವಾಗಿದ್ದಿಲ್ಲ ಯುದ್ಧಕಾಲದಲ್ಲಂತೂ ಅದರ ಮೇಲೆ ಅಸಹ್ಯ ಭಾರಬಿದ್ದು ಅದರ ಮೂಳೆ ಮುರಿದು ಹೋಗಿದೆ. ಮೊದಲೇ ಈ ದೇಶದ ಅಸಂಖ್ಯ ಪ್ರಜೆಗಳಿಗೆ ಏನೂ ಸಾಲದಿದ್ದ ರಾಷ್ಟ್ರೀಯ ಉತ್ಪನ್ನ ಯುದ್ಧ ಕಾಲದಲ್ಲಿ ಇನ್ನಷ್ಟು ಸೊರಗಿಹೋಯಿತು, ಭೂಮಿ, ದುಡಿಮೆ ಮತ್ತು ಬಂಡವಳಗಳ ಸಹಯೋಗದಿಂದ ಉತ್ಪನ್ನವಾದ ವಸ್ತು ಮತ್ತು ಸೇವೆಗಳೇ ರಾಷ್ಟ್ರೀಯ ಉತ್ಪನ್ನದ ಸೆಲೆಗಳು. ಆದರೆ ಯುದ್ಧಕಾಲದಲ್ಲಿ ಕೃಷಿಭೂಮಿಗೆ ಸಾಕಷ್ಟು ಗೊಬ್ಬರ ಸಿಗಲಿಲ್ಲ. ಅಡವಿಗಳನ್ನು ಸಿಕ್ಕಾಬಟ್ಟೆ ಕಡಿದುದರಿಂದ ಮಳೆಯೂ ಸರಿಯಾಗಿ ಬರದಾಗಿದೆ, ಕೃಷಿಗೆ ಬೇಕಾದ ಸಲಕರಣೆಗಳೂ ದುರ್ಲಭವಾಗಿಬಿಟ್ಟವೆ.

ಅತ್ತ ಉದ್ದಿಮೆಯ ರಂಗದಲ್ಲಿ ಕೂಲಿಕಾರರಿಗೆ ಕೂಲಿ ಹೆಚ್ಚು ದೊರೆತರೂ ಅತಿ ಪ್ರಸರಣದ ದೆಸೆಯಿಂದ ಸರಕುಗಳು ತುಟ್ಟಿಯಾದುದರಿಂದ ಅವರ ಕೂಲಿಯ ನಿಜವಾದ ಬೆಲೆ ಕಡಿಮೆಯೆ ಆಯಿತು. ಬಂಡವಾಳಗಾರರಿಗೇನೋ ಧಾರಾಳವಾಗಿ ಹಣ ದೊರೆಯಿತು. ಆದರೆ ಸವೆದುಹೋದ ಯಂತ್ರಗಳೇ ಮೊದಲಾದ ಸಾಧನಗಳ ಪುನರ್ನವೀಕರಣಕ್ಕೆ ಅವಕಾಶವೇ ಇರಲಿಲ್ಲವಾಗಿ ದೇಶದಲ್ಲಿದ್ದ ನಿಜವಾದ ಬಂಡವಳವೂ ಕರಗುತ್ತಲೇ ಬಂತು.

ಭ್ರಾಂತಿವಿಲಾಸ

ಸಂಗಡಲೇ ನಮ್ಮ ಮನಸ್ಸು ಕೆಲ ಭ್ರಾಂತಿಗಳಿಂದ ಮಬ್ಬಾಗಿತ್ತು. ರಾಜಕೀಯ ಸ್ವಾತಂತ್ರಸಾಧನೆಯೇ ನಮ್ಮಲ್ಲಿ ಅತ್ಯುತ್ತಮರಾದವರ ಮನಸ್ಸನ್ನು ಆಕ್ರಮಿಸಿತ್ತು. ಆ ಸ್ವಾತಂತ್ರ್ಯ ಕೈಗೂಡಿದೊಡನೆ ಅರ್ಥಿಕ ಉದ್ಧಾರ ತಂತಾನೆ ಬರುವದೆಂಬೊಂದು ಮಸುಕಾದ ಕಲ್ಪನಾರಾಜ್ಯದಲ್ಲಿ ನಾವು ಓಲಾಡುತಿದ್ದೆವು. ವಸ್ತುಸ್ಥಿತಿಯ ನೈಜವನ್ನು ಮನಗಾಣಲು ಇದರಿಂದ ಆತಂಕವಾಯಿತು. ಸಾಲದ್ದಕ್ಕೆ ನಮಗೆ ಬ್ರಿಟನ್ನಿನಿಂದ ಬರಬೇಕಾಗಿದ್ದ ಸ್ಟರ್ಲಿಂಗ್ ಶಿಲ್ಕಿನ ಅದ್ಭುತ ಅಂಕೆಯೂ ನಮ್ಮಲ್ಲಿ ಒಂದು ಕೃತಕ ಶ್ರೀಮಂತಿಕೆಯ ಕಲ್ಪನೆಯನ್ನು ಹುಟ್ಟಿಸಿತು ಅನೇಕರು ಅನೇಕ ವಿಧವಾದ ಕಾಗದದ ಅರ್ಥಿಕ ಯೋಜನೆಗಳನ್ನು ಈ ಸ್ಟರ್ಲಿಂಗ್ ಶಿಲ್ಕಿನ ಭರವಸೆಯಿಂದಲೇ ಪ್ರಚುರಗೊಳಿಸಿದರು.

ಇವೆಲ್ಲ ಸಂಗತಿಗಳಿಂದ, ಅರ್ಥಿಕ ಬಿಕ್ಕಟ್ಟನ್ನು ಎದುರಿಸುವದಕ್ಕಾಗಿ ನಾವೆಲ್ಲರೂ ತುಟಿಬಿಗಿದು ಉದ್ಯುಕ್ತರಾಗಬೇಕಾಗಿದ್ದಾಗ ನಮ್ಮ ಸರಕಾರಿ ವರ್ಗಗಳಲ್ಲಿನ ನಮ್ಮ ಅರ್ಥಿಕ ಸುರಕ್ಷಿತತೆಯ ಭ್ರಾಮಕ ಕಲ್ಪನೆಯಿಂದ ಆಲಸ್ಯವೇ ಕಾಣಬರುತಿತ್ತು. ಇಂಗ್ಲಂಡಿನಲ್ಲಿ ಸರಕಾರ ಮೊದಲ್ಗೊಂಡು ಎಲ್ಲ ಹೊಣೆಗಾರ ವ್ಯಕ್ತಿಗಳೂ ಪರಿಸ್ಥಿತಿಯ ಗಂಭೀರತೆಯನ್ನು ಒತ್ತಿ ಹೇಳುತಿದ್ದಾಗ್ಗೆ ನಾವು ಸಂತುಷ್ಟ ಮನೋವೃತ್ತಿಯಲ್ಲಿದ್ದೆವು. ಕೂಲಿಕಾರರಾದರೂ ಈ ಸಂತುಷ್ಟತೆಯಿಂದ ಮೋಸಹೋಗಿ ಸಡಿಲುತನ ತೋರಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಅರ್ಥಿಕ ಬಿಕ್ಕಟ್ಟನ್ನು ದೃಢನಿರ್ಧಾರದಿಂದ ಸರ್ವತೋಮುಖವಾಗಿ ಎದುರಿಸದೆ ಹಾದಿಯೇ ಇಲ್ಲವೆಂಬ ಸತ್ಯ ಸರಕಾರಕ್ಕೆ ಮನದಟ್ಟಾಗಿ ಇನ್ನು ಎಳೆಂಟು ತಿಂಗಳು ಮಾತ್ರ ಆಗಿವೆ.

ಸುದೈವದಿಂದ ಬಲಾಢ್ಯವಾದ ಕಾಂಗ್ರೆಸ್ ಸಂಸ್ಥೆಯೂ ನೆಹರೂ ಪಟೇಲರಂಥ ಮಹಾವ್ಯಕ್ತಿಗಳ ತೇಜಸ್ಸೂ ಈ ದೇಶವನ್ನು ಸ್ಥಿರವಾದ ಕೆಲಕಟ್ಟಿನ ಮೇಲೆ ನಿಲ್ಲಿಸಲು ಸಹಾಯಕವಾಗಿವೆ. ಸಂಸ್ಥಾನಗಳ ಸಮೀಕರಣದಿಂದ ಅರ್ಥಿಕ ಸ್ಥೈರ್ಯಕ್ಕೆ ಅನುಕೂಲವೂ ಆಗಿದೆ. ಈ ಸಂಧಿಯಲ್ಲಿ ನಮ್ಮ ಅರ್ಥಿಕ ಮುತ್ಸದ್ದಿತನವೂ ದೇಶದ ಜನಕೋಟಿಗೆ ಅನ್ನ ವಸ್ತ್ರ ವಸತಿಗಳನ್ನು ಒದಗಿಸಿಕೊಟ್ಟು [illegible] ಗಂಡಾಂತರವನ್ನು ನೀಗಿಸಲು ಮುಂದಾಗುವದು ಅವಶ್ಯ.

ಒಕ್ಕಲತನ ಮೊದಲು

ನಮ್ಮ ಅರ್ಥಿಕ ಪುನರುಜ್ಜೀವನಕ್ಕಾಗಿ ಕೈಕೊಳ್ಳಬೇಕಾದ ಕ್ರಮಗಳನ್ನು ವಿವೇಚಿಸುವಾಗ, ಮೊಟ್ಟಮೊದಲು ನಾವು ಗಣಾನುಕ್ರಮವಾಗಿ ನಮ್ಮ ಯೋಜನೆಗಳನ್ನು ವ್ಯವಸ್ಥಿತಗೊಳಿಸುವದು ಅತ್ಯಾವಶ್ಯವೆಂದು ಮನಗಾಣಬೇಕು. ಮೊದಲಾಗಬೇಕಾದುದಕ್ಕೇ ಮೊದಲು ಸ್ಥಾನಕೊಡಬೇಕಲ್ಲದೆ ಗೌಣವನ್ನು ಮಹತ್ವಾಗಿಯೂ ಮಹತ್ತನ್ನು ಗೌಣವಾಗಿಯೂ ಮಾಡುವದು ಸಲ್ಲದು. ಕೃಷಿಗೇ ಸರ್ವಪ್ರಾಧಾನ್ಯ ದೊರೆಕಬೇಕೆನ್ನಲು ಒಂದಕ್ಕಿಂತ ಹೆಚ್ಚು ಕಾರಣಗಳಿವೆ. ನಮ್ಮ ದೇಶದಲ್ಲಿ ನೂರಕ್ಕೆಪ್ಪತ್ತರಷ್ಟು ಜನ ಒಕ್ಕಲತನವನ್ನವಲಂಬಿಸಿದ್ದಾರೆ. ಇಷ್ಟು ಜನ ಒಕ್ಕಲತನದಲ್ಲಿ ಪ್ರಸಕ್ತರಾಗಿದ್ದರೂ ದೇಶದಲ್ಲಿ ಆಹಾರಾಭಾವ ಬೆಳೆಯುತ್ತಲೇ ಇರುವ ನಾಚಿಕೆಗೇಡಿನ ಸಂಗತಿಯನ್ನು ನಾವು ನಿವಾರಿಸಬೇಕಾಗಿದೆ. ಮಾತ್ರವಲ್ಲ, ಒಕ್ಕಲತನದ ಉತ್ಪಾದನೆಯನ್ನು ಹೆಚ್ಚಿಸುವದು ಅತಿ ಕಠಿಣಕಾರ್ಯವೆಂದೂ ನಮಗೆ ಈಚೆಗಿನ ಅನುಭವದಿಂದ ವಿದಿತವಾಗಿದೆ.

ಮೂರೇ ವರ್ಷಗಳಲ್ಲಿ ಭಾರತವನ್ನು ಆಹಾರ ವಿಷಯದಲ್ಲಿ ಸ್ವಯಂಪೂರ್ಣವಾಗಿ ಮಾಡುವ ನಿರ್ಧಾರವನ್ನು ಕೇಂದ್ರ ಸರಕಾರ ಮಾಡಿದ್ದೇನೋ ಸರಿ. ಇದರ ಅರ್ಥ

೧೯೫೧ರೊಳಗೆ ನಾವು ಈಗಿದ್ದದ್ದಕ್ಕಿಂತ ವರ್ಷಕ್ಕೆ ೪೫-೫೦ ಲಕ್ಷ ಟನ್ ಧಾನ್ಯಗಳನ್ನು ಹೆಚ್ಚು ಬೆಳೆಯಲು ಸಮರ್ಥರಾಗಬೇಕೆಂದಾಗುವದು. ಇದು ಮಾತಿನಲ್ಲಿ ಕಾಣುವಷ್ಟು ಕೃತಿಯಲ್ಲಿ ಸುಲಭವಾಗದು. ಪಂಜಾಬ ಸಿಂಧಗಳಂಥ ಆಹಾರ ಉಳಿಕೆಯ ಪ್ರಾಂತಗಳು ಭಾರತದಲ್ಲಿದ್ದಾಗಲೇ ಕೊರತೆಯನ್ನು ನೀಗಿಸಲು ಹತ್ತು ವರ್ಷಗಳಲ್ಲಿ ಕೂಡ ಸಾಧ್ಯವಾಗಲಿಲ್ಲ. ಈಗ ಅವು ಕೈಬಿಟ್ಟ ಮೇಲೆ ೩ ವರ್ಷಗಳಲ್ಲಿ ಪರಿಸ್ಥಿತಿಯನ್ನು ಹದಕ್ಕೆ ತರಬೇಕಾದರೆ ಮಹಾ ಪ್ರಯತ್ನಗಳೇ ಬೇಕಾದಾವು. ೧೯೪೭-೪೮ರಲ್ಲಿ ೯ ಲಕ್ಷ ಟನ್ ಆಹಾರವನ್ನು ಹೆಚ್ಚಿಗೆ ಬೆಳೆಯಬೇಕೆಂದು ಗುರಿಯಿಟ್ಟುಕೊಳ್ಳಲಾಗಿತ್ತು. ಆದರೆ ೭ ಲಕ್ಷ ಟನ್ ಹೆಚ್ಚಿಸಬೇಕಾದರೆ ನಾಕೋನಾಕಾಯಿತು. ೧೯೪೮-೪೯ಕ್ಕೆ ೧೭।। ಲಕ್ಷ ಟನ್ ಹೆಚ್ಚಿಗೆ ಬೆಳೆಯಬೇಕೆಂದು ಸರಕಾರ ನಿರ್ಧರಿಸಿತ್ತು. ಆದರೆ ಈ ವರೆಗಿನ ವರದಿಗಳಿಂದ ಈ ಗುರಿಯ ಕಾಲುಭಾಗ ಕೂಡ ಈಡೇರುವದೆಂದು ಹೇಳಬರುವದಿಲ್ಲ. ಭತ್ತದ ಬೆಳೆಯಂತೂ ಹಿಂದಿನ ವರ್ಷಕ್ಕಿಂತ ಕಡಿಮೆಯೇ ಆಗುವದು. ಇದಕ್ಕೆ ಮಳೆಗಾಳಿಗಳ ಅಪ್ರಸನ್ನತೆಯೂ ಕಾರಣವಾಗಿರಬಹುದು. ಆದರೂ ಈ ಎರಡು ವರ್ಷಗಳಲ್ಲಿ ಆಹಾರೋತ್ಪಾದನೆಯನ್ನು ಹೇಳಿಕೊಳ್ಳುವಷ್ಟು ಹೆಚ್ಚಿಸಲು ನಮ್ಮಿಂದಾಗಿಲ್ಲವೆಂದು ಸಿದ್ಧವಾಗಿದೆ. ಸ್ಥಿತಿಗತಿ ಹೀಗೆಯೇ ಉಳಿದರೆ ಆ ಅಂತರ್ರಾಷ್ಟ್ರೀಯ ಆಹಾರ ತಜ್ಞರಾದ ಮಿ. ಡಾಡರು ಹೇಳಿದಂತೆ ಇನ್ನು ಹತ್ತು ವರ್ಷಗಳ ನಂತರವೂ ಭಾರತವು ವರ್ಷ ವರ್ಷವೂ ೧೦—೧೫ ಲಕ್ಷ ಟನ್ ಆಹಾರ ನಮ್ಮಗೆ ಆಯಾತಮಾಡಿಕೊಳ್ಳುತ್ತಲೇ ಹೋಗಬೇಕಾಗುವದು.

ಹಳ್ಳಿಗಳ ಮೇಲೆ ಅಶ್ರದ್ಧೆ

ನೂರಕ್ಕೆ ೧೩ ರಷ್ಟು ಜನರು ಮಾತ್ರ ಒಕ್ಕಲಿಗರಾಗಿರುವ ಅಮೇರಿಕೆಯಲ್ಲಿ ದೇಶಕ್ಕೆ ಬೇಕಾದಷ್ಟು ಆಹಾರ ಬೆಳೆದು ಹೊರಗೂ ಕಳಿಸಲು ಸಾಧ್ಯವಾಗುತ್ತಿದೆ. ಆದರೆ ಬಹುಸಂಖ್ಯರು ಒಕ್ಕಲಿಗರಾಗಿರುವ ಈ ದೇಶದ ಗತಿ ಹೀಗಾಗಲು ಬ್ರಿಟಿಶರು ತಮ್ಮ ಆಳಿಕೆಯಲ್ಲಿ ಹಳ್ಳಿಗಳನ್ನು ಪೂರ್ತಿಯಾಗಿ ಕಡೆಗಣಿಸಿದ್ದೇ ಕಾರಣ. ಹಳ್ಳಿಗಳ ಸಮಷ್ಟಿ ಜೀವನವನ್ನು ಅವರು ಕಿತ್ತು ಕೆಡಹಿರುವದರಿಂದ ಹಳ್ಳಿಗರನ್ನು ಸಂಘಟಿಸಲು ಯೋಗ್ಯ ಮಾರ್ಗದರ್ಶನ ಮಾಡಿಸುವದು ಅಸಾಧ್ಯಪ್ರಾಯವಾಗಿಬಿಟ್ಟಿದೆ. ಅಂದು ಹಳ್ಳಿಗಳ ಸ್ಫೂರ್ತಿಯನ್ನು ಹಾಳುಗೆಡಹಿದುದೇ ಇಂದು ಸರಕಾರದ ಸದುದ್ದೇಶಗಳು ಹಳ್ಳಿಗಾಡಿನ ಪ್ರಗತಿಯಲ್ಲಿ ರೂಪುಗೊಳ್ಳದಿರಲು ಕಾರಣವಾಗಿದೆ.

ಒಕ್ಕಲತನದ ಸಮಸ್ಯೆಗಳನ್ನು ಬಿಡಿಸುವಾಗ ದೀರ್ಘಾವಧಿ ಮತ್ತು ಅಲ್ಪಾವಧಿ ಯೋಜನೆಗಳಲ್ಲಿ ಸ್ಪಷ್ಟವಾಗಿ ಭೇದವನ್ನು ಮಾಡತಕ್ಕದ್ದು. ದೀರ್ಘಾವಧಿ ಯೋಜನೆಗಳು ಎಷ್ಟೇ ರಮ್ಯವಾಗಿ ಕಂಡರೂ ಅವುಗಳಲ್ಲಿ ತುಂಬಾ ಹಣ ತೊಡಗಿಸಿಡುವದು ಸೂಕ್ತವಾಗಲಾರದು. ಸ್ಥಾನಿಕ ಆಹಾರೋತ್ಪಾದನ ಸಾಮರ್ಥ್ಯವನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳುವ ಸಲುವಾಗಿ ಅಲ್ಪಾವಧಿ ಯೋಜನೆಗಳನ್ನು ರಭಸದಿಂದ ಸಾಗಿಸಬೇಕು. ಕೇಂದ್ರ ಸರಕಾರವೇ ಆಹಾರಯೋಜನೆಯ ಮೇಲ್ವಿಚಾರಣೆ ನಡೆಸಬೇಕಾದ್ದು ಹಿತವಾಗಿದ್ದರೂ ಕೇಂದ್ರೀಯ ಆಡಳಿತೆಯಿಂದ ಆಹಾರ ವಿಷಯದಲ್ಲಿ ಪ್ರಾಂತಗಳ ಸ್ವಾವಲಂಬನಬುದ್ಧಿ ಸಡಿಲಾಗಿ ಬಿಟ್ಟಿದೆ. ತಮಗೆ ಇಷ್ಟು ಧಾನ್ಯಬೇಕು, ಇಷ್ಟು ಬೇಕೆಂದು ಕೇಂದ್ರಕ್ಕೆ ಪ್ರಾಂತಿಕ ಸರಕಾರಗಳು ಬೇಡಿಕೆಗಳನ್ನು ಕಳಿಸುವದೇನೋ ಸರಿ. ಆದರೆ ಎಕರೆಗೆ ಜಪಾನದಲ್ಲಿ ೩೦೦೦ ಪೌಂಡು, ಚೀನದಲ್ಲಿ ೨೫೦೦ ಪೌಂಡು ಭತ್ತ ಬೆಳೆಯುವಾಗ ಇಲ್ಲೇಕೆ ಬರಿ ೮೦೦ ಪೌಂಡು ಬೆಳೆಯುಬೇಕೆಂದು ಪ್ರಾಂತಿಕ ಸರಕಾರಗಳು ಎಂದಾದರೂ ತಮ್ಮನ್ನೇ ಕೇಳಿಕೊಂಡಿವೆಯೆ?

ಹಳ್ಳಿಗಾಡುಗಳನ್ನು ಕಡೆಗಣಿಸಿದ್ದೇ ನಮ್ಮ ಎಲ್ಲ ತೊಂದರೆಗಳ ಮೂಲ. ಹಳ್ಳಿಗಳಲ್ಲಿ ಜೀವ ತುಂಬಿ ಸುಸಂಘಟಿತವಾಗಿ ಮಾಡುವದೇ ನಮ್ಮ ಮೊಟ್ಟಮೊದಲು ಕೆಲಸವಾಗಬೇಕು. ಚೀನ ಜಪಾನಗಳಲ್ಲಿ ಸಾಧ್ಯವಾದುದು ಇಲ್ಲಿಯೂ ಹೆಚ್ಚುಕಡಿಮೆ ಸಾಧ್ಯವಾಗಲೇ ಬೇಕು. ಧ್ಯೇಯಗಳೂ ಸಿದ್ಧಾಂತಗಳೂ ಕೇಳಲು ಎಷ್ಟೇ ರಮ್ಯವಾಗಿದ್ದರೂ ಅವನ್ನು ಅನುಸರಿಸುವಲ್ಲಿ ನಾವು ದುಡುಕಿದ ಪರಿಣಾಮವಾಗಿ ಹಳ್ಳಿಗಾಡಿನಲ್ಲಿ ಆರ್ಥಿಕ ಸುರಕ್ಷಿತತೆಯ ಭಾವನೆ ಅಳಿದು ಹೋಗಬಹುದು. ಆದುದರಿಂದ ಇದ್ದ ಸ್ಥಿತಿಗತಿಯಲ್ಲಿ ವಿವಿಧ ಹಿತಸಂಬಂಧಗಳೊಳಗೆ ಆದಷ್ಟು ಮಟ್ಟಿಗೆ ಸಾಮರಸ್ಯವನ್ನು ತಂದು, ಎಲ್ಲರಿಗೂ ಒಪ್ಪಿಗೆಯಾದ ಅಂಶಗಳ ಮೇಲೆ ಕಾರ್ಯಮಾಡಿ ಭೂಮಿಯ ಹುಟ್ಟುವಳಿಯನ್ನು ಹೆಚ್ಚಿಸಬೇಕು. ಜಮೀನುದಾರಿಯ ನಿರ್ಮೂಲನದಲ್ಲಿಯೆ ಆಗಲಿ ಸಾಗುವಳಿಯ ಕಾಯಿದೆಯಲ್ಲಿಯೆ ಆಗಲಿ ಲಭ್ಯವಾಗುವ ದೂರ ಭವಿಷ್ಯತ್ತಿನ ಪರಿಣಾಮದ ಮೇಲೆ ಕಣ್ಣಿಟ್ಟು ಅದ್ಯತನ ಭವಿಷ್ಯತ್ತಿನಲ್ಲಿ ಉತ್ಪಾದನೆಯ ಮೇಲೆ ಆಗಬಹುದಾದ ದುಷ್ಪರಿಣಾಮವನ್ನು ಕಡೆಗಣಿಸುವ ಪ್ರವೃತ್ತಿಯನ್ನು ನಾವು ಸದ್ಯಕ್ಕಾದರೂ ಹತ್ತಿಕ್ಕಿಕೊಳ್ಳಬೇಕು. ಕೃಷಿವಿಜ್ಞಾನ ಶಾಲೆಗಳಲ್ಲಿ ಮಾಡಿದ ಪ್ರಯೋಗಗಳ ಫಲಿತಾಂಶವನ್ನು ವಿಶಾಲ ಪ್ರಮಾಣದಲ್ಲಿ ಆಚರಣೆಗೆ ತರುವದೂ ಅವಶ್ಯವಾಗಿದೆ.

ಪಡಬಿದ್ದ ಕೃಷಿಯೋಗ್ಯ ಭೂಮಿಗಳನ್ನು ಸಾಗು ಮಾಡುವ ದೊಡ್ಡ ಯೋಜನೆಗಳನ್ನು ಸರಕಾರ ಪ್ರಾರಂಭಿಸಿದೆ. ಲಕ್ಷಗಟ್ಟಲೆ ಎಕರೆ ಭೂಮಿ ಹೀಗೆ ಕೃಷಿಗೆ ಅಣಿಗೊಳಿಸಲ್ಪಡುತ್ತಿದ್ದರೆ ಇತ್ತ ಕೃಷಿಭೂಮಿಗಳು ಹೊಸತಾಗಿ ಪಡಬೀಳುತ್ತಿರುವ ಸುದ್ದಿಗಳೂ ಬರುತ್ತಿವೆ. ಮಧ್ಯಪ್ರಾಂತ ವರ್ಹಾಡದಲ್ಲಿ ಈಗ ೫-೬ ವರ್ಷಗಳಿಂದ ೭ ಲಕ್ಷ ಎಕರೆ ಭೂಮಿ ಪಡಬಿದ್ದಿದೆಯಂತೆ, ಸರಕಾರದ ಯೋಜನೆಗಳು ಹೇಗೆ ಸೋರಿ ಹೋಗುತ್ತಿವೆಯೆಂಬದಕ್ಕೆ ಇದೊಂದು ನಿದರ್ಶನ. ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ನಮ್ಮ ಕಣ್ಣುಗಳು ಎಲ್ಲ ಕಡೆಗಳಲ್ಲೂ ಹರಿಯಬೇಕು.

ಬಂಡವಳದ ಸಮಸ್ಯೆ

ಉದ್ದಿಮೆಗಳ ರಂಗದಲ್ಲಾದರೂ ಸ್ಥಿತಿಗತಿ ಇದಕ್ಕಿಂತ ತೃಪ್ತಿಕರವಾಗಿಲ್ಲ. ಯುದ್ಧದ ಒತ್ತಡದಿಂದ ಬ್ರಿಟಿಶ ಸಾಮ್ರಾಜ್ಯದ ಇತರ ಅನೇಕ ರಾಷ್ಟ್ರಗಳು ಉದ್ಯಮಗಳನ್ನು ವಿಸ್ತರಿಸಿ ತಮ್ಮ ಆರ್ಥಿಕ ಸ್ಥಿತಿಯನ್ನು ದೃಢತರವಾಗಿ ಮಾಡಿಕೊಂಡವು. ಆದರೆ ಭಾರತದ ಸ್ಥಿತಿ ತದ್ವಿಪರೀತವಾಗಿ ಶೋಚನೀಯವಾಗಿದೆ. ಮೊದಲನೆಯದಾಗಿ, ಬಂಡವಳದ ಕೊರತೆಯಿದೆ. ಆಧುನಿಕ ಅರ್ಥಪ್ರಣಾಲಿಯಲ್ಲಿ ಬಂಡವಲಕ್ಕೆ ಮಹತ್ವದ ಸ್ಥಾನವಿದೆ. ಬಂಡವಾಳಗಾರನು ಉತ್ಪಾದನದ ಸಾಧನಗಳನ್ನು ಒದಗಿಸಿ ತಕ್ಕಮಟ್ಟಿನ ಹಾನಿಯ ಸಂಭವವನ್ನು ಎದುರಿಸುತ್ತಾನೆ. ಹಿಂದುಸ್ಥಾನದಲ್ಲಿ ಉತ್ಪಾದನೆ ಕಡಿಮೆ ಮಟ್ಟದಲ್ಲಿರುವದರಿಂದ ಬಂಡವಳದ ಸಂಗ್ರಹದ ಪ್ರಮಾಣವೂ ಕಡಿಮೆ. ನೂರಾರು ಕೋಟಿ ರೂಪಾಯಿಗಳ ಯೋಜನೆಗಳನ್ನು ಸಿದ್ಧಪಡಿಸುವದರಿಂದಲೇ ಉದ್ದಿಮೆಗಳ ವಿಸ್ತರಣವಾದೀತೆಂದು ಬಗೆದಿದ್ದ ಮುಂದಾಳುಗಳಿಗೆ ಯಂತ್ರಾದಿ ಸಾಮಗ್ರಿಗಳನ್ನು ತರಿಸಲು ವಿದೇಶೀ ವಿನಿಮಯ ಹಣವೂ ದೇಶೀ ಬಂಡವಳವೂ ಎಷ್ಟು ದುರ್ಲಭವಾಗಿವೆಯೆಂದು ಇದೀಗ ತಿಳಿದು ಬಂದಿದೆ. ಮೇಲಾಗಿ ಕೂಲಿಕಾರರ ಅಸಂತೋಷವೂ ಉತ್ಪಾದನೆಯ ಹೆಚ್ಚಳಕ್ಕೆ ಅಡ್ಡಿಮಾಡಿದೆ. ಉತ್ಪಾದನೆಯನ್ನು ಹೆಚ್ಚಿಸದ ಹೊರತು ಕೂಲಿಯನ್ನು ಹೆಚ್ಚಿಸಿ ಯಾವ ಪುರುಷಾರ್ಥವೂ ಇಲ್ಲೆಂದು ಕೂಲಿಕಾರರಿಗೆ ಮನವರಿಕೆ ಮಾಡಿಕೊಡಬೇಕು.

ಬಂಡವಳದ ಕೊರತೆಯನ್ನು ನೀಗಿಸಲು ವಿದೇಶೀ ಬಂಡವಳದ ಪ್ರವೇಶಕ್ಕೆ ಉತ್ತೇಜನ ಕೊಡುವ ಧೋರಣವನ್ನು ಪಡಿಸಿದ್ದು ಯೋಗ್ಯವೇ ಆಗಿದೆ. ಆದರೆ ಇದರಲ್ಲಿಯೂ ನಾವು ಪೂರ್ತಿ ಭರವಸೆಯಿಟ್ಟು ನಿಶ್ಚಿಂತರಾಗುವಂತಿಲ್ಲ. ಸ್ಟರ್ಲಿಂಗ್ ಶಿಲ್ಕುಗಳ ಮೇಲಿಟ್ಟ ವ್ಯರ್ಥ ಭರವಸೆ ನಮ್ಮನ್ನು ನಿಷ್ಕ್ರಿಯರಾಗಿ ಮಾಡಿದಂತೆ ವಿದೇಶೀ ಬಂಡವಳದ ಮೇಲಿನ ಅತಿಭರವಸೆಯೂ ನಮ್ಮನ್ನು ನೈಗಳ್ಳರನ್ನಾಗಿ ಮಾಡಿ ಮೋಸಗೊಳಿಸಬಹುದು. ಇಂದು ವಿದೇಶಗಳಲ್ಲಿ ಹಣ ತೊಡಗಿಸಬಲ್ಲ ಶ್ರೀಮಂತ ದೇಶವೆಂದರೆ ಅಮೇರಿಕೆಯೊಂದೇ. ಅಮೇರಿಕೆಗೆ ವರ್ಷಕ್ಕೆ ೨೦೦ ಕೋಟಿ ಡಾಲರುಗಳನ್ನು ವಿದೇಶಗಳಲ್ಲಿ ತೊಡಗಿಸುವ ಸಾಮರ್ಥ್ಯ ಇದೆಯೆಂದು ಗಣಿಸಲಾಗಿದೆ. ಆದರೆ ಇದರಲ್ಲಿ ಪಶ್ಚಿಮ ಯುರೋಪ, ದಕ್ಷಿಣ ಅಮೇರಿಕೆ, ಮಧ್ಯಪೂರ್ವ, ತುರ್ಕಿ, ಚೀನ, ಜಪಾನ, ಆಗ್ನೇಯ ಏಶಿಯ ಇವುಗಳಿಗೆ ಕ್ರಮಾನುಗತ ಪ್ರಾಧಾನ್ಯ

ದಿನರೆತ್ತು, ಮತ್ತೇನಾದರೂ ಉಳಿದರೆ ಮಾತ್ರ ಭಾರತಕ್ಕೆ ಹರಿದುಬರಬಲ್ಲದು. ಆದ್ದರಿಂದ ಅಮೆರಿಕೆಯು ಬಂಡವಳ ನಾವು ಕರೆದಾಕ್ಷಣ ಇತ್ತಬರುವರೆಂದು ನಂಬಿ ಸುಮ್ಮನಿದ್ದರೆ ನಮ್ಮಂಥ ದಡ್ಡರು ನಾವೇ ಸರಿ. ಅದರೆ ಬದಲಿಗೆ ಆಹಾರದ ಆಯಾತಕ್ಕಾಗಿ ವರ್ಷಕ್ಕೆ ನಾವೀಗ ತೆರುತ್ತಿರುವ ೧೩೦ ಕೋಟಿ ರೂಪಾಯಿಗಳಲ್ಲಿ, ಆಹಾರೋತ್ಪಾದನೆಯನ್ನು ಹೆಚ್ಚಿಸುವ ಸಲುವಾಗಿ ಹಟದಿಂದ ದುಡಿದು, ಉಳಿತಾಯ ಮಾಡಿ ಔದ್ಯೋಗಿಕ ವಿಸ್ತರಣಕ್ಕೆ ಉಪಯೋಗಿಸುವದು ಶ್ರೇಯಸ್ಕರ. ಎಲ್ಲ ಬಗೆಯ ವ್ಯರ್ಥ ಮತ್ತು ವಿಲಾಸದ ವೆಚ್ಚಗಳನ್ನು ನಿಲ್ಲಿಸಿ ದೇಶದ ಆರ್ಥಿಕ ಸ್ಥಿತಿಯ ಸುಧಾರಣೆಗಾಗಿ ಎಲ್ಲ ವರ್ಗಗಳ ಜನರನ್ನೂ ಒಂದು ಗೂಡಿಸಲು ನಮ್ಮ ಮುಂದಾಳುಗಳು ಟೊಂಕ ಕಟ್ಟಬೇಕು.

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ

S. C. 765/48

ವಾದಿ:—ಕಲ್ಲುಭಾವಿ ಗಿಡ್ಡರೆಡ್ಡಿ ತಂದೆ ನರಸರೆಡ್ಡಿ ಕಾಪು ವಯಸ್ಸು 50 ಮರ್ಚಂಟ್ ಆದವಾನಿ

ಪ್ರತಿವಾದಿ:—ಗುಡಿಸಾಲು ಚೌಡಪ್ಪ ತಂದೆ ಗಿರಿಯಪ್ಪ ಗೊಲ್ಲ ವಯಸ್ಸು 50 ವ್ಯಾಪಾರಿ ಶಂಕನೂರು ಪತ್ತಿಕೊಂಡ ತಾ॥

ಮೇಲಿನ ನಂಬರಿನಲ್ಲಿ ವಾದಿಗೆ ಪ್ರತಿವಾದಿಯು ಕೊಡಬೇಕಾದ ಪ್ರಾಮಿಸರಿ ನೋಟಿನ ಬಾಬತು ಅಸಲು ಬಡ್ಡಿ ಸೇರಿ 197 ರೂ ಗಳಿಗೆ ಈ ಕೋರ್ಟಿನಲ್ಲಿ ದಾವಾದಾಖಲಾಗಿದೆ. ಸದರಿ ನಂಬರಿನ ವಾಯ್ದೆ 8—6—49 ಕ್ಕೆ ಇದೆ ನಿಮಗೇನಾದರೂ ತಕರಾರಿದ್ದಲ್ಲಿ ಆದಿನ ನೀವಾಗಲಿ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ತಕರಾರು ತಿಳಿಸಬೇಕು. ಇಲ್ಲವಾದರೆ ನಿಮ್ಮಮೇಲೆ ಎಕ್ಸಪಾರ್ಟೆ ಡಿಕ್ರಿಯಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ ಓ. ಪ್ರಹ್ಲಾದರಾವ್
18-5-49 ವಾದಿ ಅಡ್ವೋಕೇಟ್

ಖಡ್ಗಕ್ಕಿಂತಲೂ ಭಯಂಕರ

ಲೇಖನಿಯು ಖಡ್ಗಕ್ಕಿಂತಲೂ ಭಯಂಕರನಾದ ಆಯುಧವಾಗಿದೆ. ಇವನ್ನು ಪತ್ರಿಕೆಗಳು ಜಾಗ್ರತೆಯಿಂದ ಉಪಯೋಗಿಸಬೇಕಾದುದು ಮಾತ್ರವಲ್ಲ ಸದುದ್ದೇಶದಿಂದ ಶಸ್ತ್ರವೈದ್ಯರು, ರೋಗಪರಿಹಾರದ ಘನೋದ್ದೇಶದಿಂದ ಕತ್ತಿಯನ್ನುಪಯೋಗಿಸುವಂತೆ ಅತಿ ಶ್ರದ್ಧೆಯಿಂದ ಉಪಯೋಗಿಸಬೇಕು ಕಟುಕನ ಕೈಕತ್ತಿಯಂತೆ ವಿನಾಕಾರಣ ಎಂದೆಂದೂ ಉಪಯೋಗಿಸಬಾರದು.

[ಕುಮಾರಸ್ವಾಮಿ ರಾಜ]

ಕರ್ನಾಟಕ ಪ್ರಾಂತ ಸೋಶಿಯಾಲಿಸ್ಟ್ ಪಾರ್ಟಿ

ಶಿವಮೊಗ್ಗಾ:- ಇಲ್ಲಿ ಸೇರಲಿರುವ ಕರ್ನಾಟಕ ಪ್ರಾಂತ ಸೋಶಿಯಾಲಿಸ್ಟ ಪಾರ್ಟಿಯತ್ರೈತಿಯ ಅಧಿವೇಶನವು ೨೮ ೨೯ ಶನಿವಾರ ಮತ್ತು ಭಾನುವಾರ ಸೇರುವದು. ಸೋಶಿಯಾಲಿಸ್ಟ ನಾಯಕರಾದ ಶ್ರೀ ಅಶೋಕ ಮೆಹತಾರವರು ಅಧಿವೇಶನದ ಅಧ್ಯಕ್ಷತೆಯನ್ನು ವಹಿಸಲು ಒಪ್ಪಿರುತ್ತಾರೆ ಕಾರ್ಯಕ್ರಮಗಳು ಈ ಕೆಳಗಿನಂತಿವೆ. ದಿ ೨೮ ರಂದು ಬೆಳಿಗ್ಗೆ ೮ ಗಂಟೆಗೆ ಧ್ವಜಾರೋಹಣ (ಶ್ರೀ ಅಶೋಕ ಮೆಹತಾರ ಹಸ್ತದಿಂದ) ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧೨ ರ ವರೆಗೆ ಪ್ರತಿನಿಧಿಗಳ ಸಭೆ ಮಧ್ಯಾಹ್ನ ೨-೩೦ ರಿಂದ ೫ ರ ವರೆಗೆ ಕಾರ್ಮಿಕ, ರೈತ, ಹಾಗೂ ಯುವಕ ಪ್ರತಿನಿಧಿಗಳ ಸಭೆ, ೫-೩೦ ಕ್ಕೆ ಅಧ್ಯಕ್ಷರ ಮೆರವಣಿಗೆ ಸಂಜೆ ೭ ಗಂಟೆಗೆ ಬಹಿರಂಗ ಅಧಿವೇಶನ ದಿ. ೨೯ ರಿಂದ ಬೆಳಿಗ್ಗೆ ೮ ಗಂಟೆಗೆ ಧ್ವಜಾರೋಹಣ, ೯ ರಿಂದ ಮಧ್ಯಾಹ್ನ ೨ ರ ವರೆಗೆ ಪ್ರತಿನಿಧಿಗಳ ಸಭೆ ಸಂಜೆ ೬ ರಿಂದ ಬಹಿರಂಗ ಅಧಿವೇಶನ ಎಂದು ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಹಿಂದುಸ್ತಾನದ ಹೊಸ ನಾಣ್ಯಗಳ ನಮೂನೆಗಳು

ದಿಲ್ಲಿ:- ಸ್ವತಂತ್ರ ಭಾರತದ ಹೊಸ ಆಕಾರದ ನಾಣ್ಯಗಳನ್ನು ತಯಾರಿಸುವ ಬಗ್ಗೆ ಭಾರತ ಸರಕಾರವು ದೀರ್ಘವಾಗಿ ವಿಚಾರಿಸುತ್ತಿದೆಯೆಂದು ತಿಳಿದು ಬಂದಿದೆ.

ನಾಣ್ಯಗಳ ಒಂದು ಬದಿಯಲ್ಲಿ ಅರಸರ ಚಿತ್ರದ ಬದಲು ಅಶೋಕ ಸ್ತಂಭವನ್ನು ಚಿತ್ರಿಸಿ, ಅದರ ಕೆಳಗೆ ಸತ್ಯಮೇವ ಜಯತೆ ಎಂಬ ವಾಕ್ಯವನ್ನು ಬರೆಯಲಾಗುವು. ಬೇರೆ ನಾಣ್ಯಗಳ ಮೇಲೆ ಭಾರತೀಯ ಜೀವನ ಮತ್ತು ಸಂಸ್ಕೃತಿಯ ಗುರುತುಗಳನ್ನು ಚಿತ್ರಿಸಲು ಸೂಚನೆ ಮಾಡಲಾಗಿದೆ.

ಬಹುಸಂಖ್ಯಾಕ ಹಿಂದೀ ಜನತೆಯ ಮುಖ್ಯ ಉದ್ಯೋಗವಾದ ಒಕ್ಕಲತನದ ದ್ಯೋತಕವಾದ ಧಾನ್ಯದ ತೆನೆಗಳನ್ನು ರೂಪಾಯಿ ನಾಣ್ಯಗಳಲ್ಲಿ ಚಿತ್ರಿಸಲಾಗುವದು. ಅರ್ಧರೂಪಾಯಿ ನಾಣ್ಯಗಳಮೇಲೆ ಬಹುಕ ಮಂಜೂರದ ಗುರುತನ್ನು ಚಿತ್ರಿಸಲಾಗುವದು. ತಾಮ್ರದ ನಾಣ್ಯಗಳಮೇಲೆ ನಂದಿಯ ಗುರುತನ್ನು ಚಿತ್ರಿಸುವ ಸ್ತಂಭವವಿದೆ.

ಈ ನಾಣ್ಯಗಳ ಹೊಸ ಆಕಾರಗಳ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲು ಇನ್ನೂ ಕೆಲಕಾಲ ಬೇಕಾಗುವುದೆಂದು ಭಾವಿಸಲಾಗಿದೆ.

— ಬದ್ರಿನಾಥದ ಸುತ್ತಲಿರುವ ೨೦,೦೦೦ ಅಡಿ ಎತ್ತರದ ಹಿಮಾಲಯದ ಶಿಖರಗಳನ್ನೇರಲು ಈ ತಿಂಗಳಲ್ಲಿ ಒಂದು ಭಾರತೀಯ ಪರ್ವತಾರೋಹಣ ಸಮಿತಿಯು ರಚಿಸಲ್ಪಡುವುದು.

ಸ್ಟಾಲಿನ್ ಗ್ರಾಡಿನಿಂದ ನ್ಯೂಯಾರ್ಕಿಗೆ ಬಾಂಬು?

ವಾಷಿಂಗಟನ್ನಿನಲ್ಲಿ ಸಿಕ್ಕಿದ ಗುಪ್ತವಾರ್ತೆಯ ಮಾತಿಗೆ ರಶಿಯದ ಹತ್ತಿರ ಎಲ್ಲ ವಿಧದ ಅಣುಶಕ್ತಿಯ ಶಸ್ತ್ರಗಳು ಇವೆ ಎಂದು ತಿಳಿಯುತ್ತದೆ ಅದರಲ್ಲೂ ಅಣುಬಾಂಬು ಅದರ ಹತ್ತಿರ ಬೇಕಾದಷ್ಟಿದೆ ಎಂಬುದಾಗಿ ಗೊತ್ತಾಗಿದೆ. ಈ ತಯಾರಿಕೆ ರಶಿಯಕ್ಕೆ ಕರೆತರಲಾಗಿದ್ದ ಜರ್ಮನ್ ವಿಜ್ಞಾನಿಗಳ ಬುದ್ಧಿಮತ್ತೆಯೇ ಕಾರಣವೆಂದು ಹೇಳಲಾಗಿದೆ.

ರಶಿಯದಲ್ಲೀಗ ಒಂದು ವಿಶಿಷ್ಟ ಶಸ್ತ್ರವಿದೆ. ೩೫ ಪೌಂಡ ತೂಕದ ಗೋಲಿಗಳು ಸ್ಟಾಲಿನ್ ಗ್ರಾಡಿನಿಂದ ನ್ಯೂಯಾರ್ಕಿನ ಎಂಪೈರ್ ಸ್ಟೇಟ ಬಿಲ್ಡಿಂಗಿಗೆ ನೇರವಾಗಿ ಹೊಡೆಯುವಂತೆ ಅದನ್ನು ಬಿಡಬಹುದು. ಯುದ್ಧಕ್ಕೆ ಮೊದಲು ಜರ್ಮನಿಯಲ್ಲಿದ್ದುದರ ೧॥ ಪಟ್ಟು ವಿಮಾನಬಲ ರಶಿಯದಲ್ಲಿದೆ. ಇದಲ್ಲದೆ ಸೈನಿಕರ ಉಪಯೋಗಕ್ಕಾಗಿ ಜರ್ಮನರಂತೆ ರಶಿಯನ್ ವಿಜ್ಞಾನಿಗಳಾದರೂ ಆಹಾರ ಘಟಿಕೆಗಳನ್ನು ತಯಾರಿಸಿದ್ದಾರೆ. ಹಸಿವೆ ನೀರಡಿಕೆಗಳಿಗೆ ಭಿನ್ನ ರೀತಿಯ ಗುಳಿಗೆಗಳಿವೆಯಂತೆ. ಅವನ್ನು ಆಯಾಕಾಲದಲ್ಲಿ ತಿಂದರೆ ಪೇಯಖಾದ್ಯಗಳಿಂದಾಗುವ ಪ್ರಯೋಜನ ಲಭಿಸುವುದೆಂದು ತಿಳಿದು ಬರುತ್ತದೆ.

— ಹಿಂದುಸ್ಥಾನವು ಜಾತ್ಯತೀತ ರಾಷ್ಟ್ರವಾಗಿರುವದರಿಂದ ಸರ್ವರಿಗೂ ಧಾರ್ಮಿಕ ಸ್ವಾತಂತ್ರ್ಯವಿದೆ. ನಮ್ಮಲ್ಲಿ ಹಿಂದುಗಳು ಬಹು ಸಂಖ್ಯಾಕರಾಗಿದ್ದರೂ ಯಾವದೊಂದು ಧರ್ಮಕ್ಕೆ ವಿಶೇಷ ಪ್ರೋತ್ಸಾಹವು ಸಿಗಲಾರದು. ನಮ್ಮ ದುರ್ದೈವದಿಂದ ಭಾರತವು ಜಾತೀಯತೆಯ ತಳಹದಿಯ ಮೇಲೆ ವಿಚ್ಛೇದಿಸಲ್ಪಟ್ಟಿದ್ದರೂ ಇನ್ನೂ ಈಗ ಕೂಡ ಹಿಂದುಸ್ಥಾನದಲ್ಲಿ 3 ಕೋಟಿ ಮುಸ್ಲಿಮರಿದ್ದಾರೆಂಬುದನ್ನು ಮರೆಯಬೇಡಿರಿ. ಬೌದ್ಧರೂ ಕ್ರಿಶ್ಚಿಯನರೂ, ಸ್ವಿಜರ್ಲಂಡದಲ್ಲಿರುವಷ್ಟು ಕ್ಯಾಥೋಲಿಕರೂ ಈಗಲಾದರೂ ಹಿಂದುಸ್ಥಾನದಲ್ಲಿದ್ದಾರೆ. ಹಿಂದುಸ್ಥಾನವು ಎಲ್ಲ ರಾಷ್ಟ್ರಗಳೊಡನೆಯೂ ಸ್ನೇಹದಿಂದಿರುವದಲ್ಲದೆ ರಾಷ್ಟ್ರಗಳಲ್ಲಿ ಸೌಹಾರ್ದ ಸ್ಥಾಪಿಸಲು ನೆರವಾಗುವದು.

— ನೆಹರು

ಸಣ್ಣ ಮನುಷ್ಯರು

ಆಧುನಿಕ ನಾಗರಿಕತೆ ಎಂದರೆ ಅಮೇರಿಕದ ನಾಗರಿಕತೆ ಎಂಬ ತಪ್ಪುತಿಳಿವಳಿಕೆ ಹಿಂದುಸ್ತಾನದ ಹಲವರ ತಲೆಹೊಕ್ಕಿದೆ. ಪೂರ್ವದಲ್ಲಿ ವೇದಾಭ್ಯಾಸ ಜಡತ್ವವಿದ್ದರೆ ಈಗ ಪಾಶ್ಚಾತ್ಯಾಭ್ಯಾಸ ಜಡತ್ವ ನಮ್ಮಲ್ಲಿ ತಲೆದೋರಿದೆ. ಮೊನ್ನೆ ಮೊನ್ನೆ ಬರ್ನಾರ್ಡ್ ಇಡ್ಡಿಂಗ್ಸ್‌ಬೆಲ್ ಎಂಬ ಅಮೇರಿಕನ್ ಶಿಕ್ಷಣ ತಜ್ಞರು ಬರೆದು ಪ್ರಕಾಶ ಪಡಿಸಿದ "ವಿದ್ಯಾಭ್ಯಾಸದಲ್ಲಿಯ ಬಿಕ್ಕಟ್ಟು" ಎಂಬ ಪುಸ್ತಕದಲ್ಲಿ ಅವರು ಅಲ್ಲಿಯ ಸಾಮಾನ್ಯ ಬಾಲಿಕ ಬಾಲಿಕೆಯರು "ಅಶ್ಲೀಲತೆಯಿಂದ ಪ್ರಭುದ್ಧಮಾನರಾಗುತ್ತಿದ್ದಾರೆ. ನಿಯಮ ಸಂಯಮಬಾಹಿರರೂ, ಹಟಮಾರಿಗಳೂ ಜೀವನವನ್ನು ಕಂಡು ಕಂಗಾಲಾಗುವವರೂ, ಸಾಮಾಜಿಕ ಅಥವಾ ಕಲಾಗತ ವಿಷಯಗಳ ಬಗ್ಗೆ ನಿರ್ಣಯವಮಾಡುವ ಬುದ್ಧಿಯಿಲ್ಲದವರೂ ಧರ್ಮರಹಿತರೂ ಆಗಿದ್ದಾರೆ" ಎಂದು ಹೇಳಿದ್ದಾರೆ.

ಇಂದು ಸಣ್ಣ ಮನುಷ್ಯರಾಗಿ ಕಾಣುವ ವಿದ್ಯಾರ್ಥಿಗಳು ಮುಂದೆ ದೊಡ್ಡಮನುಷ್ಯರಾಗಿ ದೊಡ್ಡ ದೊಡ್ಡ ಒಳ್ಳೆಯ ಅಥವಾ ಕೆಟ್ಟಕೆಲಸಗಳನ್ನು ಮಾಡುವುದು ಸಹಜ. ಕಲಕತ್ತದಲ್ಲಿ ವಿದ್ಯಾರ್ಥಿಗಳು ನಡೆಸಿದ ಕೋಲಾಹಲ, ಅದರಿಂದ ಶಿಕ್ಷಣ ತಜ್ಞರಿಗಾದ ಗಡಿಬಿಡಿ ಇವು ಎಲ್ಲರಿಗೂ ತಿಳಿದ ಸಂಗತಿ. ತಾಯಿಯಂತೆ ಕರುನಾಯಿಯಂತೆಬಾಲ್ ಎಂಬ ಗಾದೆಯ ಪ್ರಕಾರ ತಾಯ್ತಂದೆಯವರ ಗುಣ, ಶೀಲ, ಬುದ್ಧಿಗಳೇ ಮಕ್ಕಳು ಹೀಗಾಗಲು ಕಾರಣ. ಇದೇ ಮಾತನ್ನು ಶ್ರೀ ಬೆಲ್ಲರೂ ಹೇಳುತ್ತಾರೆ. ಅಮೇರಿಕದ ಮಾತಾಪಿತೃಗಳು "ಸ್ವತಂತ್ರ ಸ್ತ್ರೀಪುರುಷರಲ್ಲ ನೀಚ ಯಾಂತ್ರಿಕ ಮಾನವರು, ಸಾಮೂಹಿಕ ವ್ಯವಸ್ಥೆಯ ಪುತ್ರ ಪುತ್ರಿಯರೂ ಪೋಷಕರೂ ಆಗಿದ್ದಾರೆ" ಎಂದಿದ್ದಾರೆ. ಅವರ ಶಿಕ್ಷಣ ಕೇವಲ ವೃತ್ತಿಪ್ರಧಾನವೂ ವ್ಯಾಪಾರಬುದ್ಧಿಯದೂ ಆಗಿದೆ ಇದನ್ನು ನವಯುಗದ ನೀತಿಯೆಂದು ನಮ್ಮಲ್ಲಿಯ ಹಲ ಪಟ್ಟಣಿಗ ವಿದ್ವನ್ಮಣಿಗಳು ತಿಳಿದಿರುವುದು ದೇಶಹಿತಕ್ಕೆ ಹಾನಿಕರವಾಗಿದೆ.

ಭಾರತೀಯ ನಗರಕ್ಷರ ಸುತ್ತುಮುತ್ತಲಿನ ಬಾಲಬಾಲೆಯರನ್ನು ಕಂಡರೆ ಅವರೀಗ ಅಮೇರಿಕದ ಮಾದರಿಯನ್ನೇ ಅನುಸರಿಸುವವರಂತೆ ತೋರುತ್ತದೆ. ಹಳಗಾಲವನ್ನು ಬಯ್ಯುವ, ಪಾಂಡಿತ್ಯವನ್ನು ಹೀಯಾಳಿಸುವ, ಪುರ್ವಾತ್ಯ ಸೌಂದರ್ಯವನ್ನು ಆರಾಧಿಸುವ ಪ್ರವೃತ್ತಿಯನ್ನೇ ಆಧುನಿಕವೆಂದೂ ಪ್ರಗತಿಶೀಲವೆಂದೂ ಅವರು ತಿಳಿದಿರುವುದು ಅವರ ನಡತೆಯಲ್ಲಿ ಕಂಡುಬರುತ್ತದೆ. ಆಡುವುದೊಂದು ಮಾಡುವುದಿನ್ನೊಂದು ಎಂಬ ನಡತೆ ಅವರ ನಿತ್ಯವ್ರತವಾಗುತ್ತಿದೆ. ಇದು ಹೀಗೆ ಬೆಳೆದರೆ ನಾಳಿನ ದೊಡ್ಡ ಮನುಷ್ಯರೆನಿಸುವ ಈ ಸಣ್ಣ ಮನುಷ್ಯರು ಇಂದು ಸರಕಾರಗಳಲ್ಲೂ ಇತರ ಸ್ಥಳಗಳಲ್ಲೂ ಕಂಡುಬರುವ ಭ್ರಷ್ಟಾಚಾರಕ್ಕೆ ಇನ್ನೂ ಹೆಚ್ಚಾಗಿ ನೀರೆರೆದು ದೇಶವನ್ನು ದುರ್ದಶೆಗೀಡುಮಾಡದಿದ್ದಾರೇ? "ಲಾಲಯೇತ್ ಪಂಚವರ್ಷಾಣಿ ದಶವರ್ಷಾಣಿ ದಾಸವತ್" ಎಂಬ ಮಾತಿನಲ್ಲಿ ಅತಿಶಯೋಕ್ತಿಯಿದ್ದರೂ ಸತ್ಯದ ಅಂಶ ಪ್ರಾಮುಖ್ಯವಾಗಿದೆ ಎಂಬುದೀಗ ವಿಚಾರವಂತರಿಗೆ ಸ್ಪಷ್ಟವಾಗುವುದಿಲ್ಲವೆ?

— ಶಿಕ್ಷಣಮಿತ್ರರಿಂದ

ಮುನಿರಾಬಾದಿನಲ್ಲಿ ರೈತ ಪರಿಷತ್ತು

ದನಗಳ ಮತ್ತು ಕಲಾ ಕೈಗಾರಿಕೆಗಳ ಪ್ರದರ್ಶನ

ಕೊಪ್ಪಳ ತಾ॥ ೧೬— ಕರ್ನಾಟಕದ ಕ್ಷೇತ್ರಗಳಲ್ಲೊಂದಾಗಿಯೂ, ಹೈದರಾಬಾದ ಹೋರಾಟದಲ್ಲಿ ಐತಿಹಾಸಿಕ ಸ್ಥಳವಾಗಿಯೂ ತುಂಗಭದ್ರ ಆಣೆಕಟ್ಟು ಕಟ್ಟದ ಅನುವಾಗಿ ಭೂಗೋಲಿಕ ಪ್ರಖ್ಯಾತವಾಗಿಯೂ ಹೆಸರುವಾಸಿಯಾದ ಮುನಿರಾಬಾದದಲ್ಲಿ ಇದೇ ತಿಂಗಳ ತಾ॥ ೨೨-೨೩ ರವಿವಾರ ಸೋಮವಾರ ಈ ಎರಡು ದಿವಗಳಲ್ಲಿ ಕೊಪ್ಪಳನಾಡ ರೈತ ಪರಿಷತ್ತು ಜರುಗುವದು.

ಈ ಪರಿಷತ್ತಿನ ಪ್ರಾರಂಭೋತ್ಸವವನ್ನು ನೆರವೇರಿಸಲು ಹೈದರಾಬಾದಿನ ಪ್ರಮುಖ ಕಾಂಗ್ರೆಸಿಗರಾದ ಶ್ರೀಮಾನ್ ಬಿ. ರಾಮಕೃಷ್ಣನ್‌ರಾಯರು ಬರುವರು ಸಭೆಗೆ ಅಧ್ಯಕ್ಷಸ್ಥಾನವನ್ನು ಶ್ರೀ ತಲ್ಲೂರ ರಾಯನಗೌಡರು ವಹಿಸಲು ಒಪ್ಪಿರುವರು ಹಾಗೂ ಅನೇಕ ಪ್ರಮುಖರು ಬರುವ ಭರವಸೆಯನ್ನಿತ್ತಿರುವರು. ನಮ್ಮ ನಾಡಿನಲ್ಲಿ ಮೊದಲನೆಯದಾಗಿ ನಾವೆಲ್ಲರೂ ಕೂಡಿ ನಮ್ಮ ಸುಖ ದುಃಖಗಳಬಗ್ಗೆ ವಿಚಾರ ವಿನಿಮಯಮಾಡುವ ಸಮಯವಿದು. ಈ ಪ್ರಸಂಗದಲ್ಲಿ ಎತ್ತುಗಳ ಪ್ರದರ್ಶನ ಕೈಗಾರಿಕೆ ಕಲಾಪ್ರದರ್ಶನಗಳ ಏರ್ಪಾಡು ಮಾಡಲಾಗಿದ್ದು ಉತ್ತಮವೆನಿಸಿದವುಗಳಿಗೆ ಬಹುಮಾನ ಕೊಡಲಾಗುವದು. ಹಾಗೂ ನೂಲುವ ಸ್ಪರ್ಧೆಯನ್ನು ಇಡಲಾಗಿದೆ. ತಾ॥ ೨೩ ನೇ ದಿನ ಮಹಿಳಾಸಭೆಯನ್ನು ನೆರವೇರಿಸಲಾಗುವದು.

ಅಲ್ಲದೆ ರಾಷ್ಟ್ರಗೀತೆಗಳ ೧೧ ೧೧ ಪದಗಳನ್ನು ಹೇಳುವಲ್ಲಿ ಪ್ರಸಿದ್ಧರಾದ ಮಾಳಾಡ ಮ್ಯಾಳದವರನ್ನೂ ಹಾಗೂ ಮೈಸೂರಿನ ಪ್ರಸಿದ್ಧ ಲಾವಣಿಪದಗಳ ಹಾಡುಗಾರರಾದ ಶ್ರೀ ವಿಷಕಂಠದಾಸರೂ ಬರಲಿರುವರೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ

ಮೊಳ್ಳು ಕರಗಲು ವ್ಯಾಯಾಮ

ಕೆಳ ಹೊಟ್ಟೆ ಜೋತು ಬೀಳುವುದೇ ಬೊಜ್ಜಿನ ಲಕ್ಷಣ. ಇದು ಕರಗಬೇಕಾದರೆ ಪ್ರತಿನಿತ್ಯ ಈ ಕೆಳಗೆ ಹೇಳಿದ ವ್ಯಾಯಾಮವನ್ನು ಸಂಬಂಧಪಟ್ಟ ವ್ಯಕ್ತಿಗಳು ತಪ್ಪದೆ ಮಾಡಬೇಕು.

ಮೊದಲು ಮಗುವಿನಂತೆ ಅಂಬೆಗಾಲು ಹಾಕಿ ನಿಲ್ಲಬೇಕು. ಕೈಗಳನ್ನು ನೆಟ್ಟಗೆ ನೆಲಕ್ಕೆ ಚಾಚಬೇಕು. ಹೊಟ್ಟೆಯನ್ನು ಒಳಗೆಳೆದುಕೊಳ್ಳತಕ್ಕದ್ದು. ಅನಂತರ-

೧. ಎಡಗಾಲನ್ನು ಹಿಂದಕ್ಕೆ ಎತ್ತು.

೨. ಮುಂಡವನ್ನು ಬಿಲ್ಲಿನಂತೆ ಬಾಗಿಸಿ ನಡುಬೆನ್ನನ್ನು ಮೇಲೆತ್ತು ಹೊಟ್ಟೆಯನ್ನು ಹ್ರಸ್ವಗೊಳಿಸು. ಎಡ ಮೊಣಕಾಲನ್ನು (ಮಂಡಿಯನ್ನು) ಹಣೆಗೆ ತಗಲಿಸಲು ಯತ್ನಿಸು.

೩. ಎಡಗಾಲನ್ನು ಹಿಂದಕ್ಕೆ ಎಳೆದುಕೊ

೪. ಮತ್ತೆ ಅಂಬೆಗಾಲು ಹಾಕಿನಿಲ್ಲು ಇದೇ ಮೇರೆಗೆ ಬಲಗಾಲನ್ನು ಮಡಿಸಿ ವ್ಯಾಯಾಮಮಾಡಿಸು. ಆರು ಸಲ ಮಾಡಿದರೆ ಒಂದು ದಿನದ ವ್ಯಾಯಾಮವಾಗುವದು.

ಸಂಪೂರ್ಣ ಸ್ವರಾಜ್ಯ ಬೇಕಿದ್ದರೆ ಸಮಾಜವಾದಿಗಳಾಗಿರಿ

ಪುರುಷೋತ್ತಮ ದಾಸರ ಕರೆ

ಬಡೋದಾ: "ಮಹಾತ್ಮರು ಇಚ್ಛಿಸಿದ ಸಂಪೂರ್ಣ ಸ್ವರಾಜ್ಯ ಬೇಕಿದ್ದರೆ ನೀವೆಲ್ಲರೂ ಸಮಾಜವಾದಕ್ಕೆ ಬೆಂಬಲಕೊಡಿರಿ ಕಾಂಗ್ರೆಸ್ಸಿನವರು ಬಂಡವಲ ಶಾಹಿಯ ಬೆನ್ನು ಹತ್ತಿರುವದರಿಂದ ಅವರಿಗೆ ಜನತೆಯ ಪರಿಸ್ಥಿತಿಯನ್ನು ಸುಧಾರಿಸಲು ಶಕ್ಯವಾಗಲಾರದು" ಎಂದು ಇಲ್ಲಿಯ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮುಂಬೈ ಸಮಾಜವಾದಿ ಧುರೀಣರಾದ ಶ್ರೀ ಪುರುಷೋತ್ತಮ ದಾಸ ತ್ರಿಕಮದಾಸರು ಹೇಳಿದರು.

ಹಿಮಾಲಯಾರೋಹಣ

ನಂಗ ಪ್ರಭಾತವೆಂಬ ಹಿಮಾಲಯದ ಶಿಖರವು ಸಮುದ್ರ ಮಟ್ಟದಿಂದ ೨೬೬೨೯ ಅಡಿ ಎತ್ತರದಲ್ಲಿದೆ. ಅದನ್ನೇರಲು ನಾರ್ವೇ ದೇಶದ ಸಾಹಸಿಗಳೀಗ ಪ್ರಯತ್ನಮಾಡಲು ಸಿದ್ಧತೆ ನಡೆಸಿದ್ದಾರೆ. ಇದಕ್ಕಾಗಿ ಅನಾರ್ವೆಜಿಯರನ್ನು ೧೯ ತಿಂಗಳ ತರಬೇತು ಪಡೆದಿದ್ದಾರೆ. ಇಷ್ಟರವರೆಗೆ ಅನೇಕ ಸಲ ಜರ್ಮನರು ಈ ಶಿಖರವನ್ನೇರಹೋಗಿ ವಿಫಲ ಪ್ರಯತ್ನರಾಗಿದ್ದಾರೆ. ಒಂದು ಪ್ರಯತ್ನ ೧೯೩೨ ರಲ್ಲಿ ನಡೆಯಿತು. ೨೨೬೫೦ ಅಡಿಯವರೆಗೆ ಹತ್ತಿ ಅವರು ಮುಂದೆ ಹೋಗಲಾರದಾದರು. ೨ ನೇ ಸಲ ೧೯೩೪ ರಲ್ಲಿ ಹೆರ್ ಮರ್ಕ್ಲನ ಪಕ್ಷದವರು ೨೬೦೦೦ ಅಡಿಯ ವರೆಗೆ ಏರಿದಾಗ ಮೇಲಿನ ತಂಗಾಳಿಯ ಹೊಡೆತಕ್ಕೆ ಸಿಕ್ಕಿ ಕೆಳಗಿಳಿಯಬೇಕಾಯಿತು. ಆಗ ೭ ಜನರು ಸತ್ತರು. ಆ ಮೇಲೆ ೧೯೩೭ ರಲ್ಲಿ ೩೮ ಮತ್ತು ೩೯ ರಲ್ಲಿ ಪ್ರಯತ್ನ ನಡೆದರೂ ಸಾಫಲ್ಯ ಹೊಂದಲಿಲ್ಲ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರಿಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ.ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—**ಹಿಂದೀ ಮಹಾ ವಿದ್ಯಾಲಯ.**

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ.

23—5—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೬ ಜೂನ್ ೧೯೪೯ | ಸಂಚಿಕೆ ೩೦

★ ಲಂಚಗುಳಿತನ ಅಳಿಯಬಲ್ಲದೆ? ★

ಮಂತ್ರಿಗಳೂ ಅಧಿಕಾರಿಗಳೂ, ದೊಡ್ಡ ಪ್ರಮಾಣದಲ್ಲಿ ಲಂಚಗುಳಿತನಕ್ಕೂ ಅನೀತಿವ್ಯತ್ತಿಗೂ ಇಳಿದಿದ್ದಾರೆ, ಎಂದು ತಾವು ಒಬ್ಬ ಸಂದರ್ಶಕನಿಗೆ ಹೇಳಿದ್ದೆಂದು ಪ್ರಕಟವಾದುದನ್ನು ಅಲ್ಲಗಳೆಯುವ ಒಂದು ಹೇಳಿಕೆಯನ್ನು ಡಾ॥ ರಾಜೇಂದ್ರ ಪ್ರಸಾದರು ಹೊರಡಿಸಿದ್ದಾರೆ, ಅಲ್ಲದೆ ಅ ನೀ ತಿ ಮತ್ತೆ ಮತ್ತು ಲಂಚಗುಳಿತನಗಳು ಇದ್ದುದೇ ನಿಜವಾಗಿದ್ದರೆ ಅದರ ದೋ ಷ ವು ನಮ್ಮೆಲ್ಲರ ಪದರಿನಲ್ಲಿಯೂ ಬರುವುದು. ವೈಯಕ್ತಿಕವಾಗಿ ಸುಧಾರಿಸಿಕೊಳ್ಳುವುದೇ ಈ ಲಂಚಗುಳಿತನ ಮತ್ತು ಅನೀತಿವುತ್ತಿಗಳಿಂದ ಪಾರಾಗುವ ಹಾದಿಯಾಗಿರುತ್ತದೆ ಎಂದೂ ಡಾ॥ ರಾಜೇಂದ್ರ ಪ್ರಸಾದರು ಹೇಳಿದ್ದಾರೆ.

ಉತ್ಪತ್ತಿ ವ್ಯಾಪ್ತಿ

ಈ ಲಂಚಗುಳಿತನ, ಅನೀತಿವುತ್ತಿಗಳು ಎಲ್ಲಿ, ಏಕೆ ಮತ್ತು ಹೇಗೆ ನಡೆಯುತ್ತಿವೆಯೆಂಬುದನ್ನು ನಾವು ವಿಚಾರಮಾಡಬೇಕಾಗುತ್ತದೆ. ಜೀವನ ಸಂಗ್ರಾಮದಲ್ಲಿ ನಾವೇ ವೈಯಕ್ತಿಕವಾಗಿ ಮಾಡಲಾರದ-ಮಾಡಿಕೊಳ್ಳಲು ಬಾರದ ಅನೇಕ ವಿಷಯಗಳು ಇರುತವೆ ಎ ಬ ದು ಒಪ್ಪಬೇಕಾದ ಮಾತಾಗಿರುತ್ತದೆ. ಆಗ ನಾವು ಎರಡನೆಯದವರ ನೆರವಿನಿಂದ ಆ ವಿಷಯಗಳನ್ನು ಬಗೆಹರಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿಯೇ ಪರಸ್ಪರ ನೆರವು ಅವಶ್ಯವಾದ ವಿಷಯವಾಗಿರುತ್ತದೆ. ಒಬ್ಬರಿಂದ ಒಂದರಬಗ್ಗೆ ನಾವು ನೆರವು ಪಡೆಯಬೇಕಾದಲ್ಲಿ ಇನ್ನೊಂದು ಬಗ್ಗೆ ಅವರಿಗೆ ನಾವು ನೆರವು ನೀಡಬೇಕಾಗುವುದು ಅವಶ್ಯಕ ಮಾತಾಗುತ್ತದೆ. ಈ ರೀತಿ ಪರಸ್ಪರ ನೆರವಿನಿಂದಲೇ ಸಂಗಜೀವಿಯಾದ ಮಾನವನು ತನ್ನ ಜೀವನ ಸಂಗ್ರಾಮವನ್ನು ಬಾಳ ಹೋರಾಟವನ್ನು ನಡೆ ಬೇಕಾಗುತ್ತದೆ

ಈ ನೆರವೇ, ಪ್ರಮಾಣಮೀರಿದಲ್ಲಿ, ಅಕ್ರಮವಾದಲ್ಲಿ, ಅ ದು ಲಂಚಗುಳಿತನ ಎನಿಸಿಕೊಳ್ಳುತ್ತದೆ. ಕೆಲಕೆಲವರಂತೂ, ಈ ನೆರವಿನಿಂದಲೇ ಜೀವನವನ್ನು ಸಾಗಿಸುತ್ತಿರುವುದನ್ನು ನಾವು ಹಳ್ಳಿಯಿಂದ ದಿಲ್ಲಿಯವರೆಗೂ ಕಾಣಬಹುದಾಗಿರುತ್ತದೆ. ಕಾ

ಅಧಿಕಾರಿಗಳು ಮತ್ತು ಅಧಿಕಾರೇತರರು, ಧುರೀಣರೆಂದು ಹೇಳಿಸಿಕೊಳ್ಳುವವರು ಮತ್ತು ಸಾಮಾನ್ಯರು, ತಿಳಿದವರೆನಿಸಿಕೊಳ್ಳುವವರು ಮತ್ತು ತಿಳಿಗೇಡಿಗಳೆಂದೆನಿಸಿಕೊಳ್ಳುವವರು, ಈ ಬಗೆಯ ಜನತೆಯ ನಡುವೆ ಸ್ವಾರ್ಥಸಾಧನೆಗಾಗಿ, ಕಾರ್ಯ ಹಟ, ಈರ್ಷೆ, ದ್ವೇಷ, ಇವುಗಳ ಸಾಧನೆಗಾಗಿ ವಾಮಮಾರ್ಗದಿಂದಾಗುವ ಹಣದ ಅಥವಾ ವಸ್ತುವಿನ ವ್ಯವಹಾರವೇ ಲಂಚಗುಳಿತನ, ಒಡ್ಡು ಹಾಕಿದಷ್ಟೂ ಮಿಕ್ಕಿ ಹರಿಯುವ ನೀರಿನಂತೆ, ಕಾಯಿದೆ ಕಾನೂನುಗಳಿದ್ದಷ್ಟೂ ಇದಕ್ಕೆ ಉಕ್ಕು ಹೆಚ್ಚು. ಲಂಚಗುಳಿತನವು ಅಳಿಯಬೇಕಾದರೆ, ಸಾಮಾನ್ಯ ಮಾ ನ ವ ನ ನಿತ್ಯಜೀವನಾವಶ್ಯಕ ವ್ಯವಹಾರಗಳು ನಿರಾಂತಕವಾಗಿ ನಡೆಯುವಂತಾಗಬೇಕು, ಮುಖ್ಯವಾಗಿ ಅನ್ನ ಬಟ್ಟೆಗಳ ವ್ಯವಹಾರವು ಅತಡೆಯಿಲ್ಲದೆ ಸಾಗಬೇಕು, ಈ ದಿಶೆಯಲ್ಲಿ ಜನತೆಯೂ ಜನತಾ ಧುರೀಣರೂ, ಜನತಾ ಸರಕಾರವೂ, ಪ್ರಾಮಾಣಿಕವಾಗಿ ಪ್ರಯತ್ನಿಸಿದಲ್ಲಿ ಲಂಚಗುಳಿತನವು ಅಳಿಯಬಲ್ಲದು.

卐

ಯಿದೆ ಕಾನೂನುಗಳ ಸಲಹೆ ಕೊಡುವುದು. ಕೋರ್ಟು ಕಚೇರಿಗಳಿಗೆ ಎಡತಾಕುವುದು ತಮ್ಮ ಗುರುತು, ಗೆಳೆತನ, ಬಾಂಧವ್ಯಗಳ, ಪ್ರಭಾವದಿಂದ ಕಾರ್ಯ ಮಾಡಿಸಿಕೊಡುವುದು, ತನ್ನ ಗುಂಪಿನ ಹಾಗೂ ಸಂಘದ ಬಲದಿಂದ ಬೇಕಾದಲ್ಲಿ ಹೋದರೂ ಕಾರ್ಯ ಸಿದ್ಧಿಯನ್ನು ಪಡೆದೇಬರುವವನೆಂದು ಪ್ರಸಿದ್ಧಿಯಿರುವುದು ಇವುಗಳೆಲ್ಲ ಈ ಲಂಚಗುಳಿತನಗಳು ನಡೆಯುತಕ್ಕ ಸ್ಥಾನಗಳಾಗಿವೆಯೆಂದು ಬಲ್ಲವರಿಗೆ ತಿಳಿಯದಿರದು.

ತನ್ನ ಕಾರ್ಯ ಹಟ, ಈರ್ಷೆ, ದ್ವೇಷ ಮೊದಲಾದವುಗಳನ್ನು ಸಾಧಿಸಲಿಕ್ಕೆ ನೆರವನ್ನು ಪಡೆಯುವ ಒಬ್ಬನು, ನೆರವನ್ನು ಯಾರಿಂದ ಪಡೆಯುವನೋ ಅವನಿಗೆ ಕೆಲವೊಂದು ಹಣವನ್ನೋ, ವಸ್ತುಗಳನ್ನೋ, ಅವನಿಗೆ ಯಾವುದರ ಅವಶ್ಯಕತೆಯಿರುವುದೋ ಅವುಗಳನ್ನು ಕೊಟ್ಟು ತನ್ನದನ್ನು ಸಾಧಿಸಿಕೊಳ್ಳುವುದು ಬಹು ಕಾಲದಿಂದಲೂ ನಡೆದು ಬಂದ ರೀತಿಯಾಗಿರುತ್ತದೆ. ಈ ರೀತಿಯೂ ಸರಿಯಾದ ಮಾರ್ಗವನ್ನು ತೊರೆದು ವಾಮಮಾರ್ಗವನ್ನು ಹಿಡಿದಾಗಲೇ, ಲಂಚಗುಳಿತನ ನೀತಿವುತ್ತಿಗಳ ಅವತಾರವಾಗುತ್ತವೆ. ಉದಾಹರಣೆಯನ್ನೇ ಹೇಳಬೇಕಾದರೆ, ಬೇಕಾದಷ್ಟು ಹೇಳಬಹುದು, ಆದರೆ ಅದರ ಅವಶ್ಯಕತೆಯಿಲ್ಲ ಏಕೆಂದರೆ ಪ್ರತಿಯೊಬ್ಬ ವ್ಯಕ್ತಿಯ ಜೀವನದಲ್ಲಿಯೂ, ಈ ಘಟನೆಗಳು ಇವೇ ಇರುವುದರಿಂದ ತನ್ನನ್ನು ತಾ ಪರೀಕ್ಷಿಸಿಕೊಂಡರೆ ಅವನಿಗೆ ಅದರ ಪ್ರತೀತಿಯಾಗದಿರದು

ನಿವಾರಣೋಪಾಯ

ನೇಲಿನ ಮಾತುಗಳಿಂದ ಈ ಲಂಚಗುಳಿತನ ಅನೀತಿವುತ್ತಿಗಳು ಎಲ್ಲಿ, ಏಕೆ ಮತ್ತು ಹೇಗೆ ಪ್ರಾರಂಭವಾಗುವುದೆಂಬುದು ಸ್ಪಷ್ಟವಾಗುತ್ತದೆ. ಈ ಪ್ರಕರಣಗಳಲ್ಲಿ ಕಾಡುವವ, ಕೊಡಿಸುವವ ಹಾಗು ತೆಗೆದುಕೊಳ್ಳುವವ, ಈ ಮೂರು ಘಟಕಗಳಿಂದ ಈ ಕಾರ್ಯವು ನಡೆಯುತ್ತಿದೆ. ಇದರಲ್ಲಿ ಕೊಡುವವ ಮತ್ತು ತೆಗೆದುಕೊಳ್ಳುವವ ಈ ಇಬ್ಬರಿಗಿಂತ ಕೊಡಿಸುವವನ ಪಾತ್ರವೇ ಹೆಚ್ಚು ಮಹತ್ವವುಳ್ಳದ್ದಾಗಿರುತ್ತದೆ. ಈ ಪಾತ್ರಧಾರಿಗಳೇ ಇಂದು ನೋಡಿದಲ್ಲೆಲ್ಲ ಕಂಡುಬರುವಷ್ಟು ಹೆಚ್ಚಿಹೋಗಿದ್ದಾರೆ. ಅದು ಕಾರಣವೇ ಎಲ್ಲ ಕಡೆಗಳಿಂದಲೂ, ' ಈ ಲಂಚಗುಳಿತನ ಅತಿಯಾಗಿದೆ. ಇದು ಅಳಿಯಬೇಕು" ಎಂದು

ಕೂಗೆದ್ದಿರುತ್ತದೆ. ಈ ಕೂಗಿನ ದನಿ ಹೆಚ್ಚಿದಷ್ಟೂ ಲಂಚಗುಳಿತನ ಅನೀತಿವುತ್ತಿಗಳು ಹೆಚ್ಚು ಹೆಚ್ಚು ಆಳಕ್ಕಿಳಿಯುತ್ತ ದಿರುತ್ತವೆ.

ಇವುಗಳ ನಾಶವನ್ನು ಹೇಗೆ ಮಾಡಬೇಕು ಎಂಬ ಬಗ್ಗೆ, ನಮ್ಮ ಜನತಾ ಸರಕಾರವೂ ಜನತಾ ಧುರೀಣರೂ, ಕೂಡಿ ಸರ್ವ ಬಗೆಯಿಂದ ಪ್ರಯತ್ನಿಸುತ್ತಲಿದ ಸರಕಾರವು ಲಂಚ ನಿರ್ಮೂಲನ ಯೊಂದನ್ನೇ ಪ್ರತ್ಯೇಕವಾಗಿ ನಿರ್ಮಾ ಮಾಡಿರುತ್ತದೆ. ಜನತಾ ಧುರೀಣರು ಹೋದಕೋದಲ್ಲೆಲ್ಲ ಇವುಗಳ ನಾಶ ಡಿರೆಂದು ಜನರಿಗೆ ಉಪದೇಶದ ಮಾತುಗಳನ್ನು ಹೇಳುತ್ತಿದ್ದಾರೆ. ಆದರೆ ಅಧಿ ಮತ್ತು ಅನಧಿಕಾರಿಗಳ ನಡುವೆ ಸ್ವಾರ್ಥ ಸಾಧನೆಗಾಗಿ ಅಕ್ರಮರೀತಿಯಲ್ಲಿ ನಡೆಯುತ್ತಿರುವ ಈ ಲಂಚಗುಳಿತನ ಅನೀತಿವುತ್ತಿಗಳು ಅವ್ಯಾಹತವಾಗಿ ನಡವೇ ಇವೆ ದಿನಕ್ಕೂ ಹೆಚ್ಚುತ್ತಲೇ ಇವೆಯೆಂದು, ಕಾರ ಮತ್ತು ಧುರೀಣರ ಮಾತುಗಳಿಂದ ತಿಳಿದುಬರುತ್ತದೆ,

ಲಂಚಗುಳಿತನ ಅನೀತಿವುತ್ತಿಗಳು ಯಬೇಕಾದರೆ-ಸಂಪೂರ್ಣವಾಗಿ ನಾಶವಾಗಬೇಕಾದರೆ ಜನತೆಯು, ನೀತಿವಂತರಾಗಬೇಕು. ಸುಧಾರಿಸಬೇಕು, ಲಂಚವ ಕೊಡುವದಿಲ್ಲ ಮತ್ತು ತೆಗೆದುಕೊಳ್ಳುವುದಿಲ್ಲ ಎಂದು ದೃಢನಿರ್ಧಾರ ಮಾಡಬೇ ಎಂದು ಹೇಳುವುದನ್ನೂ ನಾವು ಅಲ್ಲಗಳೆಯುತ್ತಿದ್ದೇವೆ ಆದರೆ ಇದರಲ್ಲಿ ತಥ್ಯವೆಂದು ಪ್ರತಿಯೊಬ್ಬನ ಅನುಭವವು ಳುತ್ತಿದೆ. ಏಕೆಂದರೆ ಕಾಳು ಹುಳುಕಾಗುತ್ತವೆಂದು ಹೊಲವನ್ನು ಸುಧಾರಿಸ ಹದರೆ ಸಾಧ್ಯವೇ? ಕಾಳುಗಳು ಹುಳುಕಾಗದಂತೆ ಆಗಬೇಕಾದರೆ, ಅವುಗಳ ಯು ಹುಳುಕು ಕಾಳನ್ನು ಹೊರಗೆ ಒಗೆಯುವುದು ಮೊದಲ ಕೆಲಸ. ಬಳಿಕ ಉಳಿದ ಕಾಳಿಗೆ ಹುಳುಹಿಡಿಯುವಂತೆ ಅವುಗಳಿಗೆ ಬೂದಿಯನ್ನೋ ಗೋಳಲಿಯನ್ನೋ ಬೆರೆಸಬೇಕಾಗುತ್ತದೆ. ಅಂದರೆ ಕಾಳಿಗೆ ಹುಳು ಹಿಡಿಯುವ ಹೆದರಿಕೆ ತಪ್ಪುತ್ತದೆ. ರಿಂದ ಲಂಚಗುಳಿತನ ಅನೀತಿವುತ್ತಿ

ಹುಳು ಹಿಡಿದ 'ಕಾಳು'ಗಳನ್ನು ಮೊದಲು ಸ್ಥಾನಭ್ರಷ್ಟ ಮಾಡಬೇಕು ಜನಜಂಗುಳಿಯಲ್ಲಿ ಈ ಲಂಚಗುಳಿತನ ಅನೀತಿಮತ್ತೆ ಬಗ್ಗೆ ಭಯ ಹುಟ್ಟುವಂತೆ ಆ ಹುಳು ಹಿಡಿದ ಕಾಳುಗಳು ಶಿಕ್ಷಿಸಲ್ಪಡಬೇಕು.

ದೈನಂದಿನ ಜೀವನ ನಿರಾತಂಕವಾಗಬೇಕು.

ಬಳಿಕ ಜನ ಜಂಗುಳಿಯಲ್ಲಿ ಅವರು ಅಧಿಕಾರಿಗಳಿರಲಿ ನೀತಿಮತ್ತೆಯು ಉದ್ಭವಿಸುವಂತೆ ಪ್ರಯತ್ನಗಳು ನಡೆಯಬೇಕು. ಈ ಬಗೆಯ ನೀತಿಮತ್ತೆಯ ಪ್ರಯತ್ನ ಮತ್ತು ಅದಕ್ಕೆ ಜನತೆಯ ಮನಃಪೂರ್ವಕ ಸಹಾನುಭೂತಿ ಇವುಗಳ ಬೆಂಬಲದಿಂದಲೇ ಕಾಂಗ್ರೆಸ್ ಸ್ವಾತಂತ್ರ್ಯವನ್ನು ಸಂಪಾದಿಸಿತೆಂಬ ಮಾತನ್ನು ಮರೆಯಲಾಗದು. ಸದಾ ಹೆದೆಬಿಗಿದ ಬಿಲ್ಲು ತನ್ನ ಸ್ಥಿತಿಸ್ಥಾಪಕತ್ವವನ್ನು ಕಳೆದುಕೊಳ್ಳುವ ಭಯವು ಸ್ವಾಭಾವಿಕವಾಗಿಯೇ ಬರುವಂತೆ ಕಾಂಗ್ರೆಸದ ಸ್ಥಿತಿಯಾಗುತ್ತಲಿದೆಯೇ ಎಂದೂ ಸಂಶಯವು ಬರುವಂತಿದೆ. ಏಕೆಂದರೆ ಅದರ ಹೆಸರಿನಲ್ಲಿಯೇ ಈ ಕೋಲಾಹಲ ನಡೆಸುವವರಿಗೂ ಕಡಿಮೆಯಿಲ್ಲ. ಹೀಗೆಂದು ಸುಧಾರಿಸುವ ಪ್ರಯತ್ನ ಮಾಡದಿರುವುದೂ ಮಂಕುತನವೇ ಪ್ರಯತ್ನವು ಸರ್ವತೋಮುಖದಿಂದ ನಡೆಯಲೇಬೇಕು.

ಜೀವನಾವಶ್ಯಕ ವಿಷಯಗಳಲ್ಲಿ ಅನ್ನ ಬಟ್ಟೆಗಳ ವ್ಯವಹಾರದಲ್ಲಿ ಯಾವ ಪ್ರಮಾಣದಿಂದ ಅಧಿಕಾರದ ಅಧಿಕಾರಿಗಳ ಚಂಚುಪ್ರವೇಶವು ಕಡಿಕಡಿಮೆಯಾಗುತ್ತ ಹೋಗುವುದೋ ಆ ಪ್ರಮಾಣದಿಂದಲೇ ಈ ಲಂಚಗುಳಿತನ ಅನೀತಿಮತ್ತೆಗಳು ಕಡಿಮೆಯಾಗುವವು. "ಭುಭುಕ್ಷಿತಃ ಕಿನ್ನಕರೋತಿಪಾಪಂ" ಎಂಬಂತೆ ಇಂದಿನ ಸ್ಥಿತಿಯಿದೆ. ಇದು ಮೊದಲು ಅಳಿಯಬೇಕು. ನಿತ್ಯಜೀವನಕ್ಕೆ ಸಂಬಂಧಿಸಿದ ವ್ಯವಹಾರಗಳು ನಿರಾಂತಕವಾಗಿ ನಡೆಯುವಂತಾಗಬೇಕು. ಈ ಮಾರ್ಗವಾಗಿ ಇಂದು ಜನತೆಯೂ ಜನತಾಧುರೀಣರೂ ಜನತಾ ಸರಕಾರವೂ ಪ್ರಮಾಣಿಕವಾಗಿ ಪ್ರಯತ್ನಿಸಬೇಕಾಗಿರುತ್ತದೆ. ಪ್ರಯತ್ನಕ್ಕೆ ತಕ್ಕಫಲ ದೊರೆಯುವುದೂ ನಿಸರ್ಗನಿಯಮ.

—)0(—

ಪ್ರಕಟನೆ

ಶಿ: ವೆ. ದೇಸಾಯಿ ಚಿಮ್ಮನಹಳ್ಳಿ ಆದ ನಾನು ಎಲ್ಲಾ ರಾಜಕೀಯಪಕ್ಷಸಂಗಡಗಳಿಂದಲು ಜಾತೀಯ ಪಕ್ಷಸಂಗಡಗಳಿಂದಲೂ ಹೊರಗಾಗಿ "**ಶಿವಪ್ರಕಾಶಾನಂದನಾಥ**"ನೆಂಬ ಹೆಸರಿನಿಂದ ವ್ಯವಹರಿಸುತ್ತೇನೆಂಬುದನ್ನು ಸರ್ವರ ಅವಗಾಹನೆಗೆ ತರಲಿಚ್ಛಿಸುತ್ತೇನೆ.

ತಮ್ಮ
ಶಿ. ವೆ. ದೇಸಾಯಿ
ಉರ್ಫ್ ಶಿವಪ್ರಕಾಶಾನಂದನಾಥ
ಹೊಸಪೇಟೆ ೧-೬-೪೯

SCHOEARSHIPS TO VYSYA STUDENTS

Scholorships will be granted to the deserving vysya students who take up industrial and tcehnical courses anywhere in India. Such of of the students w h o g o t scholorships last year as well as new students must apply in the prescribed .printed form which will be sent at requst Applications must reach the undersigned on or before 15-6-49.

D. L. Gangadhara Chetty.
General Secretary,
P. V. E. Fund. BELLARY

ವಿದ್ಯಾರ್ಥಿ ವೇತನಗಳು

ಹಿಂದೂಸ್ಥಾನದ ಯಾವ ಭಾಗದಲ್ಲಾದರೂ ಔದ್ಯೋಗಿಕ ಮತ್ತು ಸಾಂಕ್ರಾಮಿಕ ಶಿಕ್ಷಣಕ್ಕಾಗಿ ಅರ್ಹರಾದ ವೈಶ್ಯ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವು ಕೊಡಲಾಗುತ್ತದೆ. ಕಳೆದವರ್ಷ ವೇತನಹೊಂದಿದ್ದ ವಿದ್ಯಾರ್ಥಿಗಳೂ, ಹೊಸ ವಿದ್ಯಾರ್ಥಿಗಳೂ ನಿಯಮಿತ ಫಾರಂಗಳಲ್ಲಿ ಅರ್ಜಿಗಳನ್ನು ೧೫—೬—೪೯ ರೊಳಗಾಗಿ ನಮಗೆ ಮುಟ್ಟುವಂತೆ ಕಳುಹಿಸಬೇಕು ಅರ್ಜಿಫಾರಂಗಳನ್ನು ಬೇಡಿದವರಿಗೆ ಕಳುಹಿಸಲಾಗುತ್ತೆ.

ಡಿ. ಯಲ್. ಗಂಗಾಧರಶೆಟ್ಟಿ
ಪ್ರಧಾನಕಾರ್ಯದರ್ಶಿ
ಪ್ರಾಂತೀಯ ವೈಶ್ಯ ವಿದ್ಯಾನಿಧಿ

ರಾಜೀನಾಮೆ

ಶಿವಮೊಗ್ಗೆಯಲ್ಲಿ ಜರುಗಿದ ಅ. ಕ. ಪ್ರಾಂ. ಸೋಶಿಯಾಲಿಸ್ಟ್ ಪಾರ್ಟಿಯ ಅಧಿವೇಶನದ ಕಾರ್ಯಕ್ರಮಗಳೂ, ಪಾಸಾದ ನಿರ್ಣಯಗಳೂ ಹೊಸ ಅಧಿಕಾರವರ್ಗವೂ ಸಂಸ್ಥಾನದ ದೃಷ್ಟಿಯಿಂದ ಜರುಗಿರುವುದರಿಂದ ಶಿ ವೆ. ದೇಸಾಯಿ ಮತ್ತು ಕುಂಚೂರು ಸಿದ್ಧಪ್ಪ ಇವರೂ ಜೊತೆಯಾಗಿ ಸದ್ಯದ ಪ್ರಾಂತೀಯ ಸಮಾಜವಾದ ಪಕ್ಷಕ್ಕೆ ರಾಜೀನಾಮೆ ಕೊಟ್ಟಿರುತ್ತೇವೆಂದು ಪ್ರಕಟಿಸಿರುವರು.

—ಮುಂಬಯಿಯಲ್ಲಿ ಸ್ತ್ರೀ ಪೋಲಿಸರ ಪಡೆಯು ಕಮ್ಯುನಿಸ್ಟ ಸಂಗಡದ ಹಿಂಸ ಚಿಂತಕರು ಹಾಗೂ ಬಂಧುಗಳೆಂದು ಹೇಳಲಾದ ಸ್ತ್ರೀಯರನ್ನು ಚದರಿಸಲು ಉಪಯೋಗಿಸಲ್ಪಟ್ಟಿತು. ಇದೇ ಮೊಟ್ಟ ಮೊದಲ ಸಲ ಸ್ತ್ರೀಪೋಲಿಸ್ ಪಡೆಯನ್ನು ಉಪಯೋಗಿಸಿದ್ದಾಗಿದೆ.

Local Administration Department.

Applications are invited from qualified candidates in B. Sc., (Agriculture) who can teach in Kannada for the post of Instructor in Board High School, Siruguppa (Bellary Dt)in the scale of Rs75 5-145 plus the allowance admissible. Candidates should state age. community, and previous experience. Applications should reach this office on or before 15-6-1949.

P. V Ramanaiah,
for Special Officer,
Dt Board Office Bellary.
31—5—49.

ಸ್ಥಾನಿಕ ಆಡಳಿತೆಯ ಶಾಖೆ

ಬಳ್ಳಾರಿ ಜಿಲ್ಲಾ ಸಿರುಗುಪ್ಪೆ ಬೋರ್ಡು ಹೈಸ್ಕೂಲದಲ್ಲಿ ಕನ್ನಡದಲ್ಲಿ ಶಿಕ್ಷಣವನ್ನು ಕೊಡಲು ವ್ಯವಸಾಯ ಶಾಸ್ತ್ರದ B. Sc ಪದವೀಧರರು ಬೇಕಾಗಿದೆ. ಅವರಿಗೆ ೭೫—೫—೧೪೫ ಕ್ರಮದಂತೆ ವೇತನ ಕೊಟ್ಟು ಸರಕಾರದಿಂದ ನಿರ್ದಿಷ್ಟಪಾದ ವೇತನವನ್ನೂ ಕೊಡಲಾಗುವುದು. ಅರ್ಜಿಗಳನ್ನು ೧೫-೬-೪೯ ರೊಳಗಾಗಿ ನಮ್ಮ ಆಫೀಸಿಗೆ ತಲುಪುವಂತೆ ಕಳುಹಿಸಬೇಕು

ಪಿ. ವಿ. ರಮಣಯ್ಯ
ಸ್ಪೆಶಲ್ ಆಫೀಸರ್ ಪರವಾಗಿ
ಜಿಲ್ಲಾಬೋರ್ಡು ಆಫೀಸ್ ಬಳ್ಳಾರಿ
೩೧—೫—೪೯

—ಭಾರತ ಮತ್ತು ಪಾಕಿಸ್ಥಾನಗಳಲ್ಲಿ ಒಟ್ಟು ನಾಲ್ಕು ಲಕ್ಷ ಎಕರೆಗಳಲ್ಲಿ ಅಡಿಕೆ ಬೆಳೆಯುತ್ತಿದೆ. ಈ ಪೈಕಿ ಪಾಕಿಸ್ಥಾನದಲ್ಲಿ ಅಂದರೆ ಪೂರ್ವ ಬಂಗಾಳದಲ್ಲಿ ಒಂದು ಲಕ್ಷದ ಎಂಭತ್ತೇಳು ಸಾವಿರ ಎಕರೆಗಳು ಸೇರಿವೆ ೧೯೩೪-೩೫ ರಿಂದ ೧೯೪೪-೪೫ ರ ವರೆಗೆ ಸರಾಸರಿ ವರ್ಷಕ್ಕೆ ೩೦ ಕೋಟಿ ಬೆಲೆ ಬಾಳುವ ಒಂಭತ್ತು ಲಕ್ಷ ಖಂಡಿ ಅಡಿಕೆಯು ತಿಂದು ಹೋಗಿಯಿತು. ಈಗ ಭಾರತದಲ್ಲಿ ಸುಮಾರು ನಾಲ್ಕೂವರೆ ಲಕ್ಷ ಖಂಡಿ ಅಡಿಕೆ ತಿನ್ನಲಿಕ್ಕೆ ಬೇಕಾಗುವದು. ನಾವು ಬೆಳೆಸುವ ಅಡಿಕೆ ಇದರ ಅರ್ಧಿಕೆ ಇವರ ಅರ್ಧಾಂಶ ಮಾತ್ರವಾಗಿದೆ.

—ಕೇಂದ್ರ ಸರ್ಕಾರದ ಮಜೂರ ವಸತಿ ಯೋಜನೆಯಂತೆ ಹತ್ತು ವರ್ಷಗಳಲ್ಲಿ ಹತ್ತು ಲಕ್ಷ ಮನೆಗಳು ಕಟ್ಟಲ್ಪಡುವುವು. ೩೦೦ ಕೋಟಿ ರೂಪಾಯಿಗಳ ವೆಚ್ಚವಾಗಬಹುದು.

ವಿಶ್ವಶಾಂತಿ

ದಲಿತರಾಷ್ಟ್ರಗಳ ಸ್ವಾತಂತ್ರ್ಯ, ವರ್ಣದ್ವೇಷದ ಉಚ್ಚಾಟನೆ, ಇತರ ರಾಷ್ಟ್ರಗಳೊಡನೆ ಮಿತ್ರತ್ವ ಇವೇ ಭಾರತಕ್ಕೆ ಬೇಕಾಗಿವೆ

ಜಗತ್ತಿನಲ್ಲಿ ದ್ವೇಷ-ಅಸೂಯೆ-ಕಲಹಗಳ ವಾತಾವರಣವು ಹೆಚ್ಚುತ್ತಿದ್ದು ಭಾರತದ ಮುಂದಿನ ಭವಿಷ್ಯವನ್ನು ಭದ್ರವಾಗಿಸುವುದೇ ಸರಕಾರದ ಧೋರಣೆಯಾಗಿದೆ. ಭಾರತದ ಗೌರವಕ್ಕೆ ಹಾನಿತರುವ ಯಾವ ಒಪ್ಪಂದವನ್ನೂ ಮಾಡಿಲ್ಲ. ಈ ಒಪ್ಪಂದದಿಂದ ಜಗತ್ತಿನಲ್ಲೇ ಭಾರತದ ಸ್ಥಾನಮಾನಗಳು ಹೆಚ್ಚಿವೆ. ರಾಷ್ಟ್ರ ರಾಷ್ಟ್ರಗಳೊಡನೆ ಪರಸ್ಪರ ಮೈತ್ರಿಯಿದ್ದು ಜಗತ್ತಿನಲ್ಲಿ ಶಾಶ್ವತ ಶಾಂತಿಯು ನೆಲೆಗೊಳ್ಳಬೇಕು. ಮಾನವಕೋಟಿಯು ಸುಖಶಾಂತಿಗಳಿಂದ ಬಾಳಬೇಕು. [ಪ. ಜವಹರಲಾಲ ನೆಹರು

ಲಂಡನದಲ್ಲಾದ ನಿರ್ಣಯವನ್ನು ಹಿಂದುಸ್ಥಾನದ ಘಟನಾ ಸಮಿತಿಯು ಮುಂದೆ ಇಟ್ಟು ಅದರ ಒಪ್ಪಿಗೆ ಪಡೆಯಬೇಕಾಗುವದು. ಕಳೆದ ಅನೇಕ ವರ್ಷಗಳಿಂದ ಸ್ವಾತಂತ್ರ್ಯದ ಜ್ಯೋತಿಯನ್ನು ದೇಶದಲ್ಲಿ ಪಸರಿಸಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಒಪ್ಪಿಗೆ ಪಡೆಯಲು ಅದರ ಸಭೆಯಲ್ಲಿಯೂ ಮಂಡಿಸ ಬೇಕಾಗುವದು. ಲಂಡನ ಪರಿಷತ್ತಿನ ನಿರ್ಣಯಕ್ಕೆ ಅಂತಿಮ ಒಪ್ಪಿಗೆ ಕೊಡುವ ಅಧಿಕಾರ ಈ ಎರಡೂ ಪ್ರಾತಿನಿಧಿಕ ಸಂಸ್ಥೆಗಳಿಗೇ ಸೇರಿದೆ

ಭಾರತದ ಗೌರವಕ್ಕೆ ಹಾನಿಯಿಲ್ಲ

ಲಂಡನ ಪರಿಷತ್ತಿನಲ್ಲಾದ ನಿರ್ಣಯದ ಅಧಿಕೃತಘೋಷಣೆಯನ್ನು ನೀವು ಈಗಾಗಲೇ ಓದಿರುವಿರಿ. ಬಹು ಸಂಖ್ಯಾಕರಾದ ಜನರು ಲಂಡನ ಪರಿಷತ್ತಿನ ನಿರ್ಣಯವನ್ನು ಸ್ವಾಗತಿಸಿರುವರೆಂಬದು ಇಲ್ಲಿ ಬಂದ ನಂತರ ನನಗೆ ಮನವರಿಕೆಯಾಗಿವೆ ಆದರೆ ಕೆಲವರು ಲಂಡನ ಪರಿಷತ್ತಿನಲ್ಲಾದ ನಿರ್ಣಯವನ್ನು ಉಗ್ರವಾಗಿ ಟೀಕಿಸಿದ್ದೂ ಉಂಟು. ನಾನು ಲಂಡನದಲ್ಲಿ ನಿರ್ಣಯಕ್ಕೆ ಒಪ್ಪಿಕೊಟ್ಟಿದ್ದು ದೊಡ್ಡ ಪ್ರಮಾದವೆಂದೂ ಲಂಡನ ನಿರ್ಣಯವು ಹಿಂದೂಸ್ಥಾನದ ಜನತೆಯ ರಾಷ್ಟ್ರೀಯ ಭಾವನೆಗಳಿಗೆ ಭಂಗ ತರುವಂತಹದಾಗಿದೆ ಎಂದೂ ಈ ಟೀಕಾಕಾರರು ಅಭಿಪ್ರಾಯಪಟ್ಟಿದ್ದಾರೆ. ಹಿಂದೂಸ್ಥಾನದ ಸೇವೆಯಲ್ಲಿಯೇ ಕಳೆದ ನನ್ನ ಆಯುಷ್ಯದ ಸುದೀರ್ಘಕಾಲದಲ್ಲಿ ನನ್ನಿಂದ ಅನೇಕ ತಪ್ಪುಗಳಾಗಿವೆ ಎಂದು ಅನೇಕ ಪ್ರಸಂಗಗಳಲ್ಲಿ ಟೀಕೆಗೆ ಗುರಿಯಾಗಿರುವೆ. ಆದರೆ ಹಿಂದೂಸ್ಥಾನದ ಅಥವಾ ಜನತೆಯ ಆದ್ಯಗೌರವ ಹಾಗೂ ಮರ್ಯಾದೆಗೆ ಹಾನಿ ತರುವಂಥ ಕೃತಿಮಾಡಿದ ಒಂದು ಆರೋಪಕ್ಕೆ ನಾನು ಈವರೆಗೂ ಗುರಿಯಾಗಿಲ್ಲ. ನಾನು ಹಿಂದೂಸ್ಥಾನಕ್ಕೆ ದ್ರೋಹ ಬಗೆದಿರುವೆನೆಂದು ಕೆಲವೇ ಜನರು ಆರೋಪಿಸಿದರೂ ಅದು ಗಂಭೀರ ಸ್ವರೂಪದ ಆರೋಪವಾದುದರಿಂದ ನಾನು ಅಂಥವರ ಅಭಿಪ್ರಾಯಕ್ಕೆ ಬೆಲೆ ಕೊಡಬೇಕಾಗಿದೆ.

ಪ್ರತಿಜ್ಞಾ ಪಾಲನೆ

ಹಿಂದೂಸ್ಥಾನದ ಸ್ವಾತಂತ್ರ್ಯಕ್ಕಾಗಿ ನಾನೂ ಪ್ರತಿಜ್ಞಾ ಬದ್ಧನಾಗಿ ಕಳೆದ ೨೦ ವರ್ಷಗಳಿಂದ ಆ ಪ್ರತಿಜ್ಞೆಯನ್ನು ಅಕ್ಷರಶಃ ಪಾಲಿಸುತ್ತ ಬಂದಿರುವೆನೆಂದು ಹೇಳಬಯಸುವೆ. ಈಗ ಲಂಡನದಲ್ಲಿ ನಾನು ಒಪ್ಪಿಗೆಕೊಟ್ಟ ನಿರ್ಣಯದಿಂದ ಹಿಂದೂಸ್ಥಾನದ ಗೌರವ ಹಾಗೂ ಅದರ ಹಿತಸಂಬಂಧಗಳಿಗೆ ಹಾನಿ ತಗಲದೆ ಅದರ ಗೌರವ ಮತ್ತಿಷ್ಟು ಪ್ರಕಾಶಮಾನವಾಗಿರುವದೆಂದೂ ಜಗತ್ತಿನಲ್ಲಿ ಹಿಂದೂಸ್ಥಾನದ ಸ್ಥಾನಮಾನ ಹೆಚ್ಚಿರುವದೆಂದೂ ನನ್ನ ದೃಢವಾದ ಅಭಿಪ್ರಾಯವಾಗಿದೆ.

ಗುಪ್ತ ಒಪ್ಪಂದಗಳಿಲ್ಲ

ಗುಪ್ತವಾಗಿ ನಾವು ಯಾವುದನ್ನೂ ಮಾಡಿಲ್ಲ. ನಮ್ಮ ಸಾರ್ವಭೌಮಾಧಿಕಾರವನ್ನು ಪರಿಮಿತಿ ಗೊಳಿಸುವಂಥ ಇಲ್ಲವೆ ನಮ್ಮ ಆಂತರಿಕ ಅಥವಾ ಅಂತರರಾಷ್ಟ್ರೀಯ ಧೋರಣೆಯನ್ನು ನಿರ್ಧರಿಸಲು ನಮಗಿರುವ ಸಂಪೂರ್ಣ ಸ್ವಾತಂತ್ರ್ಯಕ್ಕೆ ಅಡ್ಡಬರುವಂಥ ಯಾವ ಕರಾರುಗಳನ್ನು ಮಾಡಲಾಗಿಲ್ಲ ನಮ್ಮ ವಿದೇಶ ಧೋರಣವು ಜಗತ್ತಿನ ಪ್ರಬಲ ರಾಷ್ಟ್ರಗಳ ಪಕ್ಷ ಪಂಗಡಗಳಲ್ಲಿ ಬೀಳದೆ ಜಾಗತಿಕ ಶಾಂತಿಗಾಗಿ ಹಾಗೂ ಎಲ್ಲ ರಾಷ್ಟ್ರಗಳೊಡನೆ ಮಿತ್ರತ್ವ ಭಾವನೆಯಿಂದ ಇರುವದೇ ಆಗಿರುವದೆಂದು ನಾನು ಅನೇಕ ಸಲ ಈ ಮೊದಲೇ ಸ್ಪಷ್ಟಪಡಿಸಿರುವೆ ಇನ್ನು ಮುಂದಾದರೂ ನಾವು ಈ ಧೋರಣೆಯನ್ನೇ ಅನುಸರಿಸುತ್ತಾ ಹೋಗುವೆವು ದಲಿತವಾದ ರಾಷ್ಟ್ರಗಳ ಸ್ವಾತಂತ್ರ್ಯ ಪ್ರಾಪ್ತಿ ವರ್ಣದ್ವೇಷದ ಉಚ್ಚಾಟನೆ, ಇವುಗಳಿಗಾಗಿ ಪ್ರಯತ್ನಿಸುವದೂ ನಮ್ಮ ಧೋರಣೆಯಾಗಿದೆ. ಸಾರ್ವಭೌಮಾಧಿಕಾರವುಳ್ಳ ಪ್ರಜಾರಾಜ್ಯವಾದ ಹಿಂದೂಸ್ಥಾನವು ಈ ಧೋರಣೆಯನ್ನು ಕಾಮನವೆಲ್ತ್ ರಾಷ್ಟ್ರಗಳ ಸಂಬಂಧವನ್ನಿಟ್ಟುಕೊಂಡರೂ, ಅನುಸರಿಸಲು ಸಂಪೂರ್ಣ ಸ್ವತಂತ್ರವಾಗಿರುವುದಲ್ಲದೆ ಈ ಧೋರಣೆಯನ್ನು ಅದು ಕಾಮನವೆಲ್ತಿನಲ್ಲಿರುವದರಿಂದ ಹೆಚ್ಚಿನ ವರ್ಚಸ್ಸಿನಿಂದ ಅನುಸರಿಸಲು ಶಕ್ಯವಾಗುವದೆಂಬದು ನನಗೆ ಮನದಟ್ಟಾಗಿದೆ.

ಪೂರ್ವ ಸ್ವರಾಜ್ಯದ ಪ್ರತಿಜ್ಞೆಯನ್ನು ನಾವು ಅನೇಕ ವರ್ಷಗಳ ಹಿಂದೆ ಸ್ವೀಕರಿಸಿದಂತೆ ಇಂದು ಪೂರ್ಣ ಸ್ವರಾಜ್ಯಪಡೆದಿರುವೆವು. ಸಂಪೂರ್ಣ ಸ್ವಾತಂತ್ರ್ಯ ಪಡೆದ ರಾಷ್ಟ್ರವು ಬೇರೆ ರಾಷ್ಟ್ರಗಳೊಡನೆ ಮಿತ್ರತ್ವ ಸಂಬಂಧವನ್ನಿಟ್ಟುಕೊಂಡಲೇ ಅದರ ಸ್ವಾತಂತ್ರ್ಯವು ಅಳಿದು ಹೋಗುವದೇ? ಮಿತ್ರತ್ವ ಸಂಬಂಧವೆಂದರೆ ಪರಸ್ಪರ ಸಹಾಯ ಮಾಡಬೇಕಾಗುವದು, ಸಾಮಾನ್ಯವಾದ ಮಾತು. ಆದರೆ ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರಗಳು ಕಾಮನವೆಲ್ತ್ ಸಂಬಂಧವನ್ನಿಟ್ಟುಕೊಳ್ಳುವಾಗ ಈ ಸಾಮಾನ್ಯ ವಿಷಯದ ಹೊಣೆಯೂ ಇಲ್ಲ.

ಕಾಮನವೆಲ್ತಿನಿಂದ ಹಾನಿಯಿಲ್ಲ

ಕಾಮನವೆಲ್ತಿನ ಬಲವು ಅದರಲ್ಲಿರುವ ಸಂಪೂರ್ಣ ಸ್ವಾತಂತ್ರ್ಯ ಹಾಗೂ ಪ್ರಸಂಗಕ್ಕೆ ತಕ್ಕಂತೆ ಹೊಂದಿಕೆಯಾಗುವಂಥ ಗುಣದಲ್ಲಿಯೇ ಇದೆ. ಕಾಮನವೆಲ್ತಿನಿಂದ ಬೇಕಾದಾಗ ಹೊರಬೀಳಲು ಸದಸ್ಯ ರಾಷ್ಟ್ರಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ ಇದು ಸರ್ವಶ್ರುತವಾದ ಮಾತು.

ಕಾಮನವೆಲ್ತ್ ಸ್ವತಂತ್ರ ರಾಷ್ಟ್ರಗಳಾದ ಸದಸ್ಯ ರಾಷ್ಟ್ರಗಳ ಮೇಲೆ ಏನೂ ಅಧಿಕಾರ ನಡೆಸಬಲ್ಲಂಥ ವರಿಷ್ಠ ರಾಷ್ಟ್ರವಲ್ಲ ಸ್ವೇಚ್ಛೆಯಿಂದ ಈ ಸಂಘಟನೆಯ ಸಾಂಕೇತಿಕ ವರಿಷ್ಠನು ಅರಸನೆಂದು ನಾವಾಗಿಯೇ ಭಾವಿಸಲು ಒಪ್ಪಿಕೊಂಡಿದ್ದರೂ ಕಾಮನವೆಲ್ತಿನಲ್ಲಿ ಸ್ಥಾನಬಲದಿಂದ ಮಾಡಲಿಕ್ಕೆ ಯಾವ ಅಧಿಕಾರವೂ ಅರಸನಿಗಿಲ್ಲ. ಹಿಂದೂಸ್ಥಾನದ ಮಟ್ಟಿಗೆ ಹೇಳುವದಾದರೆ ನಮ್ಮ ಘಟನೆಯಲ್ಲಿ ಅರಸನಿಗೆ ಸ್ಥಾನವೇ ಇಲ್ಲ ಮೇಲಾಗಿ ಅರಸನಿಗೆ ನಾವು ಬಿಧೇಯರಾಗಿರುವ ಬಂಧನವಂತೂ ಇಲ್ಲವೇ ಇಲ್ಲ.

ಮುಂದುವರಿಯುವದು

ನೋಟೀಸು.

೧೯೪೭ನೇ ಸಂ|| ಮದ್ರಾಸು ಷಾಪು
ಮತ್ತು
ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಿಜಿಸ್ಟರುಗಳು ಫಾರಮುಗಳು ವಗೈರೆ ನಮ್ಮಲ್ಲಿ ದೊರೆಯುತ್ತವೆ.

ಎಳಿಲ್ ಪ್ರಿಂಟಿಂಗ್ ಪ್ರೆಸ್,
ತೇರುಬಜಾರ್, ಬಳ್ಳಾರಿ.

ಹೊಸ ಪಂಚಾಯತಿ ಬೋರ್ಡು

(ಕಳೆದ ಸಂಚಿಕೆಯಿಂದ ಬಂದದ್ದು)

ಸರಕಾರದ ಅಧಿಕಾರ

ಪಂಚಾಯತ ಸಭೆಯು ಮಂಜೂರು ಮಾಡಿದ ಪ್ರತಿಯೊಂದು ಗೊತ್ತುವಳಿಯನ್ನು ಅಧ್ಯಕ್ಷನು ಜಾರಿಗೆ ತರಲೇಬೇಕು. ಯಾವುದಾದರೊಂದು ಮಸೂದೆಯನ್ನು, ಸದ್ಯಕ್ಕೆ ಜಾರಿಮಾಡಕೂಡದೆಂದು ಅಧ್ಯಕ್ಷನ ಅಭಿಪ್ರಾಯವಿದ್ದಲ್ಲಿ ಅದನ್ನು ಆತನ್ನು ಸರಕಾರದ ಅಭಿಪ್ರಾಯಕ್ಕೆ ಕಳುಹಿಸಬಹುದು. ಸರಕಾರದ ನಿರ್ಣಯವು ಅಂತ್ಯ ನಿರ್ಣಯವಾಗಿದ್ದು, ಅಧ್ಯಕ್ಷನು ಮತ್ತು ಸಭೆಯು ಅದನ್ನು ಒಪ್ಪಲೇಬೇಕು. ಹಣದ ದುರುಪಯೋಗ ಮತ್ತು ಕೆಟ್ಟ ನಡತೆಗೆ ಅಧ್ಯಕ್ಷನನ್ನು ತೆಗೆಯುವ ಅಧಿಕಾರವೂ, ಕೆಲವು ಪ್ರಸಂಗಗಳಲ್ಲಿ ಪಂಚಾಯತ ಸಭೆಯನ್ನು ರದ್ದುಗೊಳಿಸಿ ಹೊಸ ಚುನಾವಣೆಗಳನ್ನು ನಡೆಸುವ ಅಧಿಕಾರವೂ ಸರಕಾರಕ್ಕೆ ಇರುತ್ತದೆ. ಈ ರೀತಿ ತೆಗೆಯಲ್ಪಟ್ಟ ಅಧ್ಯಕ್ಷನು ಒಂದು ವರ್ಷದವರೆಗೆ ಮರು ಚುನಾವಣೆಗೆ ನಿಲ್ಲಲು ಅನರ್ಹನಾಗುತ್ತಾನೆ. ಕ್ರಿಮಿನಲ್ ಕೋರ್ಟಿನಲ್ಲಿ ಅವನಿಗೆ ಶಿಕ್ಷೆಯಾದಲ್ಲಿ ೫ ವರ್ಷಗಳವರೆಗೆ ಅವನು ಮರು ಚುನಾವಣೆಗೆ ನಿಲ್ಲಕೂಡದು. ಅಧ್ಯಕ್ಷರು ಉಪಾಧ್ಯಕ್ಷನಿಗೆ ಯಾವುದಾದರೂ ಅಥವಾ ಎಲ್ಲಾ ಅಧಿಕಾರಗಳನ್ನೂ ವಹಿಸಿಕೊಡಬಹುದು. ಅಧ್ಯಕ್ಷನ ಗೈರ ಹಾಜರಿಯ ಸಮಯ ಅವನ ಅಧಿಕಾರಗಳು ಸಹಜವಾಗಿ ಉಪಾಧ್ಯಕ್ಷನಿಗೆ ಬರುವುವು.

ಪಂಚಾಯಿತಿಗಳು ನಡಸತಕ್ಕ ಕಾರ್ಯಗಳು

೧) ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗುವ ಎಲ್ಲಾ ಮಾರ್ಗಗಳನ್ನು ನಿರ್ಮಿಸುವುದು, ಸೇತುವೆ, ಸಂಕಗಳನ್ನು ಕಟ್ಟಿಸುವುದು, ಅವುಗಳ ದುರಸ್ತಿ ಮತ್ತು ಮೇಲ್ವಿಚಾರಣೆ.

೨) ಹಳ್ಳಿಯ ಬೀದಿಗಳಿಗೆ ದೀಪಗಳನ್ನು ಇಡಿಸುವುದು ಸಾರ್ವಜನಿಕ ಸ್ಥಳಗಳಲ್ಲಿ ದೀಪಗಳನ್ನು ಇಡಿಸುವುದು.

೩) ಚರಂಡಿಗಳನ್ನು ಕಟ್ಟಿಸುವುದು, ನೀರು ಹರಿದು ಹೋಗುವಂತೆ ಮಾಡುವದು, ಕೊಳಕು ನೀರು ನಿಲ್ಲದಂತೆ ನೋಡಿಕೊಳ್ಳುವುದು.

೪) ಸ್ವಚ್ಛತೆ ಬೀದಿಗಳನ್ನು ಗುಡಿಸುವುದು, ಮತ್ತು ಕೊಳೆಯ ತಿಪ್ಪೆಗಳನ್ನು ತೆಗೆಸುವುದು. ಸಾರ್ವಜನಿಕ ಪಾಯಿಖಾನೆಗಳನ್ನು ನಿರ್ಮಿಸುವುದು, ಸಾರ್ವಜನಿಕ ಮತ್ತು ಖಾಸಗಿ ಪಾಯಿಖಾನೆಗಳನ್ನು ತೊಳೆಸುವುದು.

೫) ದಫನ ಮತ್ತು ದಹನ ಸ್ಥಾನಗಳನ್ನು ನಿರ್ಮಿಸುವುದು, ಅವುಗಳ ಮೇಲ್ವಿಚಾರಣೆ.

೬) ಸ್ವಚ್ಛವಾದ ಕುಡಿಯುವ ನೀರಿನ ಪೂರೈಕೆ, ಸ್ನಾನಕ್ಕೆ, ಒಗೆಯಲಿಕ್ಕೆ ಯೋಗ್ಯವಾದ ಭಾವಿ, ಕೆರೆಗಳನ್ನು ಕಟ್ಟಿಸುವುದು. ರಿಪೇರಿಮಾಡಿಸುವುದು, ವಿರಾಮ ಕೆಲಸಗಳನ್ನು ಕೈಕೊಳ್ಳುವುದು.

೭) ರೋಗ ಪ್ರತಿಬಂಧಕ ಮತ್ತು ನಿವಾರಕ ಉಪಾಯಗಳನ್ನು ಕೈಕೊಳ್ಳುವುದು.

ಪಂಚಾಯತಿಯ ಅಧಿಕಾರಗಳು

ಸಿವಿಲ್ ಮತ್ತು ಕ್ರಿಮಿನಲ್‌ನ್ಯಾಯಾಧಿಕಾರಗಳಲ್ಲಿ ಈಗಿನ ಪಂಚಾಯತಿ ಕೋರ್ಟುಗಳಿಗಿಂತ ಹೆಚ್ಚಿನ ಅಧಿಕಾರವನ್ನು ಪಂಚಾಯತಿ ಬೋರ್ಡುಗಳಿಗೆ ಕೊಡಬೇಕೆಂದು ತೀರ್ಮಾನಿಸಲಾಗಿದೆ.

ರಿಜಿಸ್ಟ್ರೇಷನ್ ಆಫೀಸ್ ಇಲ್ಲದ ಸ್ಥಳಗಳಲ್ಲಿ ಪ್ರಥಮ ತರಗತಿಯ ಪಂಚಾಯತಿ ಬೋರ್ಡು ಎಕ್ಸಿಕ್ಯೂಟಿವ್ ಆಫೀಸರನಿಗೆ ನೂರು ರೂಪಾಯಿ ಒಳಗಿನ ಮೌಲ್ಯದ ಪತ್ರಗಳನ್ನೂ, ಸ್ಟಾಂಪಡ್ಯೂಟಿಯ ಅವಶ್ಯವಿಲ್ಲದ ಕಾಗದಗಳನ್ನೂ ರಿಜಿಸ್ಟರ್ ಮಾಡುವ ಅಧಿಕಾರ ಕೊಡಲಾಗುವುದು.

ನೀರಾವರಿಗಳ ಆಡಳಿತೆ:—ಪಂಚಾಯತಿಗಳು ಹಳ್ಳಿಯಲ್ಲಿರುವ ನೀರಾವರಿಯ ಯೋಜನೆಗಳ ಆಡಳಿತೆಯನ್ನು ನೋಡಿಕೊಳ್ಳಬೇಕಲ್ಲದೆ, ಅವುಗಳ ದುರಸ್ತಿಯನ್ನೂ ಮಾಡಬೇಕು. ಇದಕ್ಕಾಗಿ ಎಕ್ರೆಗೆ ೪ ರಿಂದ ೮ ಆಣೆಗಳಷ್ಟು ತೆರಿಗೆ ವಸೂಲು ಮಾಡುವ ಹಕ್ಕನ್ನು ಕೊಡಲಾಗುವುದು.

ಮೀನು ಹಿಡಿಯುವ ಹಕ್ಕು:—ಊರಿನ ಕೆರೆ, ಭಾವಿಗಳಲ್ಲಿ ಮೀನು ಹಿಡಿಯುವ ಹಕ್ಕನ್ನು, ಪಂಚಾಯತಿಗಳಿಗೆ ಏಲಂ ಮಾಡಲು ಅಧಿಕಾರ ಕೊಡಲಾಗುವುದು. ಸಾರ್ವಜನಿಕರು ಇಷ್ಟಬಂದಂತೆ ಮೀನು ಹಿಡಿಯುವ ಹಕ್ಕನ್ನು ರದ್ದು ಗೊಳಿಸಲಾಗುವುದು.

ಧರ್ಮ ನಿಧಿಗಳ ಮತ್ತು ಉಂಬಳಿಗಳ ಆಡಳಿತೆ—ಹಳ್ಳಿಯ ಎಲ್ಲಾ ಧರ್ಮನಿಧಿಗಳ ಉಂಬಳಿಗಳ ಆಡಳಿತೆಯನ್ನು ಪಂಚಾಯತ ಬೋರ್ಡಿಗೆ ಒಪ್ಪಿಸಲಾಗುವುದು.

ಶಾಲೆಗಳು:—ಪಂಚಾಯತ ಬೋರ್ಡುಗಳು ಪ್ರಾಥಮಿಕ ಶಾಲೆಗಳನ್ನು ನಡೆಸುವ ಹಕ್ಕು ಉಳ್ಳವುಗಳಾಗುತ್ತವೆ, ಇದಕ್ಕೆ ತಕ್ಕ ಧನಸಹಾಯವನ್ನು ಸರಕಾರದವರು ಮಾಡುವರು. ಇದಲ್ಲದೆ, ರಿಸರ್ವ ಕಾಡುಗಳು, ಹುಲ್ಲುಗಾವಲುಗಳು, ಪರಂಬೋಕು ದರಖಾಸ್ತು ಜಾಗೆಗಳ ಆಡಳಿತೆಯನ್ನು ಪಂಚಾಯತಿ ಬೋರ್ಡಿಗೆ ಒಪ್ಪಿಸಲಾಗುವುದು.

ಪಂಚಾಯಿತಿಗಳು ಯುಕ್ತಕಂಡಲ್ಲಿ ಕೆಳಗಿನ ಸುಧಾರಣೆಗಳನ್ನು ನಡಿಸಬಹುದು

೧) ಮಾರ್ಗಗಳ ಬದಿಯಲ್ಲಿ ಗಿಡಗಳನ್ನು ನಡಿಸುವುದು ಮತ್ತು ರಕ್ಷಿಸುವುದು.

೨) ಮಾರ್ಕೆಟುಗಳನ್ನು ಕಟ್ಟಿಸುವುದು.

೩) ಊರಿನ ಜಾತ್ರೆ ಹಬ್ಬಗಳನ್ನು ನಡೆಸುವುದು.

೪) ಊರಿನಲ್ಲಿ ದನಗಳಿಗೆ, ಭಂಡಿಗಳಿಗೆ, ಕೊಟ್ಟಿಗೆಗಳನ್ನು ಕಟ್ಟಿಸುವುದು.

೫) ಬೇಸಾಯದ ಪದ್ಧತಿಗಳನ್ನೂ, ಸಾಮಾನುಗಳನ್ನೂ ಅಭಿವೃದ್ಧಿಗೊಳಿಸುವುದು ಕೃಷಿಕರ ಪರಿಷತ್ತುಗಳನ್ನು ಕೂಡಿಸುವುದು.

೬) ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹಿಸುವುದು.

೭) ಸಾರ್ವಜನಿಕ ಪುಸ್ತಕಾಲಯ ವಾಚನಾಲಯಗಳನ್ನು ತೆರೆಯುವುದು.

೮) ರೇಡಿಯೋ ಯಂತ್ರಗಳನ್ನು ಸ್ಥಾಪಿಸುವುದು, ಸಾರ್ವಜನಿಕ ಆಟದ ಬಯಲು ವ್ಯಾಯಾಮಶಾಲೆಗಳನ್ನು ನಿರ್ಮಿಸುವುದು.

೯) ಆಸ್ಪತ್ರೆಗಳನ್ನು ಸ್ಥಾಪಿಸುವುದು, ಮಕ್ಕಳ ಮತ್ತು ಹೆಂಗಸರ ಆಸ್ಪತ್ರೆಗಳನ್ನು ಸ್ಥಾಪಿಸುವುದು.

೧೦) ಜನರ ಆರೋಗ್ಯ, ವಿದ್ಯೆ ಮತ್ತು ಸೌಕರ್ಯಗಳನ್ನು ಹೆಚ್ಚಿಸುವ ಇತರ ಯಾವ ಕೆಲಸಗಳನ್ನಾದರೂ ಮಾಡಬಹುದು.

ಆರ್ಥಿಕ ವ್ಯವಸ್ಥೆ

(೧) ತೆರಿಗೆಗಳು:—

ಮನೆ ತೆರಿಗೆ, ವಾಹನ ತೆರಿಗೆ, ವ್ಯಾಪಾರಿ ತೆರಿಗೆಗಳು ಕಡ್ಡಾಯವಾಗಿ ವಸೂಲು ಮಾಡಲ್ಪಡಬೇಕು. ಆದರೆ ಪಂಚಾಯತ ಬೋರ್ಡಿಗೆ ಸರಿಕಂಡಲ್ಲಿ ಮನೆತೆರಿಗೆಯನ್ನು ಕೆಲವು ಪ್ರಸಂಗಗಳಲ್ಲಿ, ಅಂದರೆ, ಹುಲ್ಲು ಹೊದಿಸಿದ ಮನೆಗಳು, ಅತಿ ಬಡವರ ಮನೆಗಳು ಇತ್ಯಾದಿಗಳಿಗೆ ಮಾಫಿ ಮಾಡಬಹುದು. ಈ ತೆರಿಗೆಗಳು ಹೆಚ್ಚೆಂದರೆ ಎಷ್ಟಿರಬೇಕು, ಕಮ್ಮಿ ಎಂದರೆ ಎಷ್ಟು ಇರಬೇಕೆಂಬುದನ್ನು ಸರಕಾರವು ನಿಶ್ಚಯಿಸುವುದು, ಪಂಚಾಯಿತಿಗೆ ಸರಿಕಂಡ ಇತರ ಯಾವ ತೆರಿಗೆಯನ್ನಾದರೂ ವಿಧಿಸಬಹುದು.

(೨) ಸರಕಾರಿ ಹಣದ ಪಾಲುಕೊಡುವಿಕೆ:—

ಎ) ಸರಕಾರವು ಆ ಹಳ್ಳಿಯಲ್ಲಿ ವಸೂಲು ಮಾಡುವ ಭೂಕಂದಾಯದ ಎಲ್ಲಾ ಅಥವಾ ಸ್ವಲ್ಪ ಹಣವನ್ನು ಪಂಚಾಯತಿಗೆ ಕೊಡುವರು.

ಬಿ) ಇದಲ್ಲದೆ, ಪಂಚಾಯತಿಗೆ ಇಷ್ಟೆಂದು ಹಂಚಲು ಪ್ರಾಂತದ ಭೂಕಂದಾಯದ ೧೨% ಹಣವನ್ನು ಸರಕಾರವು ತೆಗೆದು ಇಡುವುದು, ವರ್ಷಕ್ಕೆ ೧೦,೦೦೦ ಕ್ಕಿಂತ ಕಡಿಮೆ ಉತ್ಪನ್ನವಿದ್ದು ೫,೦೦೦ ಜನಸಂಖ್ಯೆ ಇರುವ ಪಂಚಾಯತಗಳಿಗೆ ಇದನ್ನು ಹಂಚಲಾಗುವದು.

ಸಿ) ಈಗಿರುವಂತೆ, ಪಂಚಾಯತಿಗಳು ಸಾರ್ವಜನಿಕೋಪಯೋಗಿ ಕೆಲಸಗಳನ್ನು ನಡೆಸಲು ಸಾಧ್ಯವಾಗಲು ಬೇಕಾಗುವ ಹಣವನ್ನು ಸರಕಾರವು ಕಾಲಕಾಲಕ್ಕೆ ಕೊಡುವುದು

ಲೆಕ್ಕ ಪರಿಶೋಧನೆ

ಪ್ರತಿ ಪಂಚಾಯತಿಯ ಲೆಕ್ಕ ಪರಿಶೋಧನೆಯನ್ನು ವರ್ಷಕ್ಕೆ ಒಮ್ಮೆ ಮಾಡಲೇಬೇಕು. ಲೆಕ್ಕ ಪರಿಶೋಧನೆಯನ್ನು ಪಂಚಾಯತಿಯ ಮೇಲ್ವಿಚಾರಕರಲ್ಲದವರು ನಡೆಸುವರು. ಇದರ ಖರ್ಚನ್ನು ಸರಕಾರವು ನೋಡುವುದು.

ಮೇಲಧಿಕಾರಿ

ಡಿಸ್ಟ್ರಿಕ್ ಬೋರ್ಡುಗಳಿಗೆ ಯಾವ ತರದ ಮೇಲಧಿಕಾರವಾಗಲೀ ವಿಚಾರಣೆ ಮಾಡು

ಹಕ್ಕಾಗಲೀ ಇರುವದಿಲ್ಲ, ಊರಿನ ಶಾಂತಿರಕ್ಷಣೆ ಇತ್ಯಾದಿ ಪ್ರಸಂಗಗಳಲ್ಲಿ ಅಲ್ಲದೆ ಜಿಲ್ಲಾ ಕಲೆಕ್ಟರರಿಗೆ ಸಹ ಪಂಚಾಯತಿಯ ಮೇಲೆ ಏನೂ ಅಧಿಕಾರ ಇರುವುದಿಲ್ಲ ಪಂಚಾಯತ ಬೋರ್ಡುಗಳ ಕಾರ್ಯ ವಿಚಾರಣೆಯನ್ನು ಸರಕಾರವು ಲೋಕಲ್ ಬೋರ್ಡು ಇನ್ಸ್‌ಪೆಕ್ಟರುಗಳ ಮುಖಾಂತರ ನಡೆಸುವುದು.

ಇದನ್ನು ಪ್ರಕಟಿಸಿದ ಒಂದು ತಿಂಗಳೊಳಗೆ ಸಂಸ್ಥೆಗಳು, ಜನರು, ಈ ಮಸೂದೆ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಕಳುಹಿಸಿದಲ್ಲಿ ಸಂಕಾರದವರು ಆನಂದದಿಂದ ಸ್ವೀಕರಿಸುವರು.

—

ಸರದಾರ ಪಟೇಲರ ಉಪದೇಶ

ದೇಶ ಸೇವೆ ಮಾಡುವವರಿಗೆ ಸರಕಾರದ ಹೊರಗೆ ಇದ್ದು ಕೊಂಡು ಕೆಲಸಮಾಡಲು ಬೇಕಾದಷ್ಟು ಅವಕಾಶವಿರುವುದು ಈ ಸಂದರ್ಭದಲ್ಲಿ ಇನ್ನು ಒಂದು ನೆನಪಿನಲ್ಲಿಡಬೇಕಾದ ಸಂಗತಿಯೆಂದರೆ ಅಧಿಕಾರವು ಹುಡುಕಿದರೆ ಬರುವುದಿಲ್ಲ. ಗಾಂಧಿಜಿಯವರು ಮಂತ್ರಿಗಳಾದಿದ್ದರೂ ಹಿಂದುಸ್ಥಾನದಲ್ಲಿಯೇ ಹೆಚ್ಚಿನ ಪುರುಷರಾಗಿದ್ದರು. ನನಗಾದರೂ ಅಧಿಕಾರದ ಹೊರಗೆ ಇರುವ ಇಚ್ಛೆ ಇರುವುದು. ಯಾಕೆಂದರೆ ಅದರಿಂದ ಹೆಚ್ಚು ಸೇವೆ ಮಾಡಬಹುದು ಎಂದು ನನಗೆ ಅನ್ನಿಸುತ್ತದೆ. ಆದರೆ ನನ್ನ ಜೊತೆಗಾರರು ನನ್ನನ್ನು ಬಿಡಲು ಸಿದ್ಧರಿಲ್ಲ. ನಾನು ಅಧಿಕಾರದಿಂದ ಹೊರಗೆ ಬಂದದ್ದಾದರೆ ಕಾಂಗ್ರೆಸ್ಸನ್ನು ಅಧಿಕಾರ ಲಾಲಸೆ ಬಿಟ್ಟುಬಿಡುವ ಸಂಸ್ಥೆಯಾಗುವಂತೆ ಸಂಘಟಿಸುವೆನು

ಹೆಚ್ಚು ಬೆಳೆಯಿರಿ

ಮಹಾತ್ಮರ ಮರಣದ ನಂತರ ಜನರು ಅವರ ತತ್ವಗಳನ್ನು ಮರೆತು ನಡೆಯಹತ್ತಿರುವರು. ಪರಕೀಯ ಪ್ರಭುತ್ವವನ್ನು ಹೊಡೆದೋಡಿಸುವಷ್ಟಕ್ಕೆ ನಮ್ಮ ಕಾರ್ಯ ಮುಗಿದಂತಾಗಿಲ್ಲ ನಾವು ಇನ್ನು ಮಹಾತ್ಮರ ರಾಮರಾಜ್ಯ ಸ್ಥಾಪಿಸಬೇಕಾಗಿದೆ. ಸ್ವಾತಂತ್ರ್ಯದ ಬೆಳಕು ಇನ್ನೂ ಎಲ್ಲಾ ಕಡೆಗೂ ಮುಟ್ಟಿಲ್ಲ ಸ್ವಾತಂತ್ರ ಪೂರ್ವದಲ್ಲಿ ದೇಶವು ಬ್ರಿಟಿಷರಿಂದ ಹಿಂದೆ ಹಿಪ್ಪೆ ಮಾಡಲ್ಪಟ್ಟಿದ್ದರಿಂದ ಇಂದ ಜನರಿಗೆ ಸಾಕಷ್ಟು ಅನ್ನ ಹಾಗು ಬಟ್ಟೆ ಇಲ್ಲದಂತೆ ಆಗಿದೆ ಅದ್ದರಿಂದ ಎಲ್ಲರೂ ಈಗ ಹೆಚ್ಚಿನ ಉತ್ಪಾದನೆಯಲ್ಲಿ ವಿಶೇಷತಃ ಹೆಚ್ಚು ಆಹಾರ ಧಾನ್ಯ ಬೆಳೆಯುವುದರಲ್ಲಿ ತೊಡಗಬೇಕು ಹೀಗೆ ಮಾಡದೆ ಹೋದರೆ ಜನರ ಕಷ್ಟಗಳು ಕಡಿಮೆಯಾಗಲಾರವು ಕಮ್ಯುನಿಸ್ಟರ, ಸಾಮ್ಯವಾದಿಗಳು ಮೊದಲಾದವರ ಮಾತುಗಳಿಗೆ ಕಿವಿಗೊಡದೆ ಪರಿಶ್ರಮ ಪೂರ್ವಕವಾಗಿ ಕೆಲಸ ಮಾಡಬೇಕು.

ರೈತರು ಹಾಗು ಕೆಲಸಗಾರರಲ್ಲಿ ನನ್ನ ವಿಶ್ವಾಸವಿದೆ. ರೈತರು ತಮ್ಮ ತೊಂದರೆ ಹಾಗ ಅಡಚಣೆಗಳನ್ನು ಕೆಲವು ದಿನಗಳಿಗೆ ಮರೆತು, ಹಿಂದೂಸ್ಥಾನದ ಹಿತವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು, ಹೆಚ್ಚು ಉತ್ಪಾದನೆಮಾಡಿ, ಧಾರಣೆ ಮೊದಲಾದವುಗಳ ಕಡೆಗೆ ಗಮನಿಸದೆ ಸರಕಾರಕ್ಕೆ ಸಹಾಯ ಮಾಡಬೇಕು ಪೂರೈಕೆಗಳನ್ನು ತಡೆಹಿಡಿಯುವುದರಿಂದ ರೈತರಿಗೆ ಹೆಚ್ಚು ಹಣ ದೊರೆಯಬಹುದು ಆದರೆ ಕೃಷಿಯು ಆಗಲಾರದು.

ಮಜೂರರಿಗೆ

ಕೂಲಿಕಾರರಲ್ಲಿಯೂ ನನ್ನ ವಿಶ್ವಾಸವಿರುವುದು ಆದರೆ ಅವರೆಲ್ಲ ಒಂದೇ ಸಂಸ್ಥೆಯಲ್ಲಿ ಸಂಘಟಿತರಾಗಿಲ್ಲ, ಕೆಲವರು ಯಾವ ಕಾರಣವೂ ಇಲ್ಲದೆ ಸಂಪು ಹೂಡುವರು ಕೂಲಿಕಾರರು ಚೆನ್ನಾಗಿ ವಿಚಾರಮಾಡಬೇಕು. ಕೂಲಿಕಾರರ ನ್ಯಾಯವಾದ ಬೇಡಿಕೆಗಳನ್ನು ಒಡೆಯರು ಪೂರೈಸದಿದ್ದರೆ ಸರಕಾರವು ಕೈಹಾಕಿ ಪೂರೈಸಿ ಕೊಡುವುದು ಅದೂ ದೊರೆಯದಿದ್ದರೆ ಮಾತ್ರ ಸಂಪು ಹೂಡಬೇಕು. ಆದರೆ ಗಿರಣಿಯಲ್ಲಿ ಉತ್ಪಾದನೆ ನಡೆಯಗ ಕೆಲಸಮಾಡುತ್ತಹೋಗಿ ನಿಮ್ಮ ಬೇಡಿಕೆಯ ವಿಷಯವನ್ನು ಸರಕಾರಕ್ಕೆ ಬಿಡಬೇಕು ಸರಕಾರವು ನಿಮ್ಮದೇ ಇರುವುದು ಕಳೆದ ಎರಡು ವರ್ಷಗಳಲ್ಲಿ ನಾವು ಕೂಲಿಕಾರರ ಹಿತ ದೃಷ್ಟಿಯಿಂದ ಅನೇಕ ಕಾಯ್ದೆಗಳನ್ನು ಮಾಡಿರುವೆವು.

ಕಾಂಗ್ರೆಸ್ಸರಿಗೆ

ಕಾಂಗ್ರೆಸ್ಸಿಗರನ್ನು ನಾನು ಎಚ್ಚರಿಸಬಯಸುತ್ತೇನೆ. ನೀವು ನಿಮ್ಮ ಕಾರ್ಯವನ್ನು ಮಾಡದೆ ಹೋದರೆ, ಇತರರು ನಿಮ್ಮ ಸ್ಥಳದಲ್ಲಿ ಬರುವರು ಹಿಂದೂಸ್ಥಾನದ ಧುರೀಣತ್ವವು ದುರ್ಬಲರ ದುರೀಣತ್ವವಲ್ಲ ತನಗೆ ಬೇಕಾದದರ ಅರಿವು ಅದಕ್ಕೆ ಇದ್ದು. ಅದನ್ನು ಅವಶ್ಯಬಿದ್ದಲ್ಲಿ ಅದು ಎರಡನೆಯವರ ಸಹಾಯದಿಂದ ಪೂರೈಸಿಕೊಳ್ಳುವುದು. ದೇಶವು ತನ್ನ ಪ್ರಗತಿಯನ್ನು ತಡೆದು ಹಿಂಬಾಳಿಯಬಾರದು ಪ್ರಗತಿಯತ್ತ ಅದು ಸಾಗಬೇಕು.

—

ಎಲಿಮೆಂಟರಿ ಶಾಲೆಗಳಿಗೆ ಧನ ಸಹಾಯ

ಕಳೆದ ೭ ವರ್ಷಗಳಲ್ಲಿ ಶಾಲೆಗಳನ್ನು ಕಟ್ಟಿಸಲು ಇಚ್ಛಿಸುವ ಸಂಸ್ಥೆಗಳಿಗೆ ಸ್ಥಳೀಕ ಬೋರ್ಡುಗಳಿಗೆ ಧನ ಸಹಾಯ ಮಾಡಲು ಸಾಧ್ಯವಾಗಲಿಲ್ಲ ಇದರಿಂದಾಗಿ ಅನೇಕ ಶಾಲೆಗಳು ಹೊಸ ಕಟ್ಟೋಣಗಳನ್ನು ಕಟ್ಟಿಸಲು ಸಾಧ್ಯವಿಲ್ಲದೆ, ಇದ್ದುದರಲ್ಲಿಯೇ ಸುಧಾರಿಸಿಕೊಂಡು ಹೋಗುತ್ತಿದ್ದವು ಹೊಸ ಕಟ್ಟೋಣಗಳನ್ನು ಕಟ್ಟಿಸುವ, ಇರುವ ಕಟ್ಟೋಣಗಳನ್ನು ದುರಸ್ತಿಮಾಡುವ ಅನೇಕ ಕೆಲಸಗಳನ್ನು ಮುಂದೆ ಹಾಕಬೇಕಾಯಿತು. ಇದರಿಂದಾಗಿ ಸರಕಾರದವರು ಪ್ರಾಥಮಿಕ ಶಾಲೆಗಳನ್ನು ಕಟ್ಟಿಸಲು ಈ ವರ್ಷ ಹತ್ತು ಲಕ್ಷ ರೂಪಾಯಿಗಳ ಧನಸಹಾಯ ಮಾಡಬೇಕೆಂದು ನಿರ್ಧರಿಸಿರುತ್ತಾರೆ. ಈ ಹಣವನ್ನು ಜನಸಂಖ್ಯೆಯ ಪ್ರಕಾರ ಪ್ರತಿ ಡಿಸ್ಟ್ರಿಕ್ಟಿಗೆ ಹಂಚಲಾಗದೆ ಸಣ್ಣ ಎಲಿಮೆಂಟರಿ ಶಾಲೆಗಳಿಗೆ ಕಟ್ಟೋಣದ ಅರ್ಧ ಖರ್ಚನ್ನು ೪ ಸಾವಿರಕ್ಕೆ ಮೀರದಂತೆ ಕೊಡುವುದು ಹಾಯರ್ ಎಲಿಮೆಂಟರಿ ಶಾಲೆಗಳಾದರೆ ೭ ಸಾವಿರ ರೂಪಾಯಿಗಳಿಗೆ ಹೆಚ್ಚಾಗದಷ್ಟು ಹಣವನ್ನು ಸರಕಾರದವರು ಕೊಡಲು ನಿಶ್ಚಯಿಸಿರುತ್ತಾರೆ. ಕಟ್ಟೋಣಗಳನ್ನು ಕಟ್ಟಿಸಿಯಾದನಂತರ ಗ್ರಾಂಟು ಕೊಡಲಾಗುವುದು. ಈ ವರ್ಷದಲ್ಲಿ ಆರಂಭಿಸಿ ಮುಗಿಸಲ್ಪಡುವ ಕಟ್ಟೋಣಗಳಿಗೆ ಈ ನಿಧಿಯಿಂದ ಧನಸಹಾಯ ಸಿಗುವುದು ಶಾಲೆ ಕಟ್ಟೋಣಗಳನ್ನು ಕಟ್ಟಿಸಲು ಇಚ್ಛಿಸುವ ಸಂಸ್ಥೆಗಳು, ಧನಸಹಾಯಕ್ಕೆ ಜೂನ್ ೧ ನೇ ತಾರೀಕಿನೊಳಗೆ, ಡೈರೆಕ್ಟರ್ ಒಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಇವರಿಗೆ ಅರ್ಜಿಗಳನ್ನು ಕಳುಹಿಸಬೇಕು.

—

ಸರಕಾರಿ ನೌಕರರ ಸಂಬಳ

1949 ನೇ ಇಸ್ವಿ ಅಗಸ್ಟ 1 ರಿಂದ ಡಿಸೆಂಬರ 31 ರ ವಳಗೆ ಕೆಳತರಗತಿಯ ಸರಕಾರಿ ಕೆಲಸಗಾರರು, ರಜೆ ತೆಗೆದುಕೊಂಡು ಇದ್ದಲ್ಲಿ, ಆ ಸಮಯದಲ್ಲಿ ಅವರು ಕೆಲಸದಲ್ಲಿ ಇದ್ದರೆ, ತಾತ್ಕಾಲಿಕ ಹೆಚ್ಚಿನ ಸಂಬಳಕ್ಕೆ ಹೇಗೆ ಅರ್ಹತೆ ಬರುತ್ತಿತ್ತೊ ಅದನ್ನು ಅವರ ಹೊಸ ವೇತನ ದರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು. ಆದರೆ ಅವರಿಗೆ ಆ ಕಾಲದ ಸಂಬಳಕೊಡಲಾಗುವುದಿಲ್ಲ. ಈ ಹೊಸ ತಿದ್ದುಪಡಿಯು 1947 ನೇ ಇಸವಿಯ ಜನವರಿ 1 ರಿಂದ ಜಾರಿಗೆ ಬಂದಿದೆ ಎಂದು ತಿಳಿಯತಕ್ಕದ್ದು.

ಬೇಸಾಯ ಪ್ರಚಾರಕಾರ್ಯ

ಮದರಾಸ್ ಸರಕಾರದವರು ಒಂದು ವರ್ಷದವರೆಗೆ ೩೪ (೨ ನೇ ದರ್ಜೆಯ) ಫೀಲ್ಡ್ ಮ್ಯಾನಗಳನ್ನು ಆರಿಸಿರುವ ೩೪ ಕೇಂದ್ರಗಳಲ್ಲಿ ಪ್ರಚಾರಕಾರ್ಯ ಮಾಡಲಿಕ್ಕಾಗಿ ನೇಮಿಸಬೇಕೆಂದು ನಿರ್ಧರಿಸಿರುತ್ತಾರೆ.

ಹರಿಜನೋದ್ಧಾರ ಸಮಿತಿ

ಹರಿಜನೋದ್ಧಾರ ಕಾರ್ಯದಲ್ಲಿ ಡೈರೆಕ್ಟರರಿಗೆ ಸಲಹೆಕೊಡಲು ಸರಕಾರದವರು ಶ್ರೀ ವಿ. ಕೂರ್ಮಯ್ಯ ಎಂ ಎಲ್ ಎ ಶ್ರೀ ಎಸ್ ಸಿ ಬಾಲಕೃಷ್ಣ, ಎಂ ಎಲ್ ಎ ಮತ್ತು ಶ್ರೀಮತಿ ಕುಟ್ಟಿಮಾಡಲು ಅಮ್ಮಾಲ್, ಎಂ ಎಲ್ ಎ ಇವರನ್ನು ಸಮಿತಿಯ ಸಹ ಸದಸ್ಯರನ್ನಾಗಿ ನಿಯಮಿಸಿರುತ್ತಾರೆ.

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಪೌಡರ್
ತಲೆನೋವು, ಹಲ್ಲುನೋವು, ಮೈಕೈನೋವು,
ಕ್ಷಯ ... ನೆಗಡಿ ಜ್ವರ, ಮಲೇರಿಯಕ್ಕೆ

ಕರ್ಣಾಟಕ ಪ್ರಾಂತೀಯ ಸೋಷಲಿಸ್ಟ ಪಾರ್ಟಿಯ ನಿರ್ಣಯಗಳು.

ಪಾರ್ಟಿಯ ಮೂರನೆಯ ವಾರ್ಷಿಕ ಅಧಿವೇಶನವು ಶಿವಮೊಗ್ಗದಲ್ಲಿ ೨೮, ೨೯—೫—೪೯ ಕೂಡಿದಾಗ ಆದ ನಿರ್ಣಯಗಳು

೧. ಪಾರ್ಟಿಯ ಸದಸ್ಯರೂ, ಆಪ್ತ ಗೆಳೆಯರೂ ಆಗಿದ್ದ ಕಾರವಾರದ ರೈತ ಮುಂಖಂಡ ಹೊನ್ನಪ್ಪನಾಯಕ, ಬೆಂಗಳೂರಿನ ಚಂದ್ರಶೇಖರ್, ಧಾರವಾಡದ ಅವ್ವಕ್ಕ ಅಂಗಡಿ ಇವರುಗಳ ಅಕಾಲ ನಿಧನಕ್ಕಾಗಿ ಈ ಅಧಿವೇಶನವು ಅನುತಾಪವನ್ನು ಸೂಚಿಸುತ್ತದಲ್ಲದೆ ಅವರ ಕುಟುಂಬಗಳ ದುಃಖದಲ್ಲಿ ಸಹಭಾಗಿಯಾಗಿದೆ.

೨. ಭಾರತವು ಕಾಮನ್‌ವೆಲ್ತಿನಲ್ಲಿ ಉಳಿಯಬೇಕೆಂದು ನೆಹರೂ ಸರಕಾರ ಮಾಡಿರುವ ನಿರ್ಧಾರದಿಂದ ಹಿಂದೂಸ್ತಾನದ ಜನತೆ ತ್ಯಾಗ, ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯವನ್ನು ಪುನಃ ಕಳೆದುಕೊಂಡಂತಾಗಿದೆ. ನೆಹರೂ ಸರಕಾರದ ಈ ನಿರ್ಧಾರ ಜನತೆಯ ಸ್ವಾತಂತ್ರ್ಯದ ಹೋರಾಟದ ಪರಂಪರೆಗೂ, ರಾಷ್ಟ್ರೀಯ ಆಂದೋಲನದ ಆದರ್ಶವಾದ ಪೂರ್ಣ ಸ್ವಾತಂತ್ರ್ಯದ ಕಲ್ಪನೆಗೂ ತೀರಾ ವ್ಯತಿರಿಕ್ತವಾಗಿದೆ. ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಹಿಂದೂಸ್ತಾನ ಉಳಿಯಬೇಕೆಂಬ ನಿರ್ಧಾರದಿಂದ ಸ್ವಾತಂತ್ರ್ಯದ ಅಪಹರಣವಷ್ಟೇ ಅಲ್ಲದೆ, ನಾಡಿನ ಲಕ್ಷಾಂತರ ಯುವಕರ ಜೀವ, ಬ್ರಿಟಿಷ್ ಮತ್ತು ಅಮೇರಿಕಾಗಳು ತಮ್ಮ ಸಾಮ್ರಾಜ್ಯ ರಕ್ಷಣೆಗೆ ಹೂಡಬಹುದಾದ ಮಹಾಯುದ್ಧದಲ್ಲಿ ಹೋಮವಾಗುವ ಸಂದಿಗ್ಧ ಸನ್ನಿವೇಶವನ್ನು ಉಂಟುಮಾಡಿದೆ. ಆಸ್ಟ್ರೇಲಿಯಾ ನ್ಯೂಜೀಲೆಂಡುಗಳ ರಕ್ಷಣೆಗೆ ಪೆಸಿಫಿಕ್ ಸಾಗರವನ್ನು ರಕ್ಷಿಸುವ ಭಾರ, ಈ ಒಪ್ಪಂದದ ಪೆಸೆಯಿಂದ ಭಾರತದ ಮೇಲೆ ತಾನಾಗಿಯೇ ಬಿದ್ದಂತಾಗಿದೆ. ಆದ್ದರಿಂದಲೇ ಹಿಂದೂಸ್ತಾನ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ಉಳಿದು ಕಾಮನ್‌ವೆಲ್ತಿನೊಡನೆ ಇರುವ ಎಲ್ಲಾ ಸಂಬಂಧವನ್ನು ಕಡಿದುಕೊಂಡು, ಸ್ವತಂತ್ರ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ನೀತಿಯನ್ನು ಅನುಸರಿಸಬೇಕೆಂದು ಈ ಸಮ್ಮೇಳನವು ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

೩. ಕರ್ಣಾಟಕ ಪ್ರಾಂತೀಯ ಸೋಷಲಿಸ್ಟ ಪಾರ್ಟಿಯು ಕರ್ಣಾಟಕ ಪ್ರಾಂತ ರಚನೆಯಾಗಬೇಕೆಂದು ಮೊದಲಿನಿಂದಲೂ ಪ್ರತಿಪಾದಿಸುತ್ತಾ ಬಂದಿದೆ. ಅಲ್ಲದೆ ಈ ಕಾರ್ಯಸಾಧನೆಯಾಗಬೇಕಾದರೆ, ಮೊದಲು, ಮೈಸೂರಿನ ಅರಸೊತ್ತಿಗೆ ಅಳಿಯಬೇಕು. ಹೈದರಾಬಾದು ಛಿನ್ನವಾಗಿ ವಿಭಜನವಾಗಬೇಕೆಂದು ಸ್ಪಷ್ಟಗೊಳಿಸುತ್ತಾ ಬಂದಿದೆ. ಮೈಸೂರು ಮತ್ತು ಕರ್ಣಾಟಕದ ಕಾಂಗ್ರೆಸ್ ಹಾಗೂ ಇತರ ಪ್ರತಿಗಾಮಿಗಳು ಮೈಸೂರಿನ ರಾಜರನ್ನು ಅಖಿಲ ಕರ್ಣಾಟಕದ ಅರಸರನ್ನಾಗಿ ಮಾಡಬೇಕೆಂಬ ಪ್ರಜಾಪ್ರಭುತ್ವಕ್ಕೆ ವಿರುದ್ಧವಾದ ಪ್ರಯತ್ನವನ್ನು ಕುರಿತು ಜನರಿಗೆ ಸೋಷಲಿಸ್ಟ ಪಾರ್ಟಿಯು ಸತತವಾಗಿ ಎಚ್ಚರಿಸುತ್ತಾ ಬಂದಿದೆ. ಈ ಪ್ರಯತ್ನಕ್ಕೆ ಕರ್ಣಾಟಕದ ಸಾಮಾನ್ಯ ಜನತೆಯ ವಿರೋಧ ರೂಪಗೊಂಡಿರುವುದು ಗುಲ್ಬರ್ಗದಲ್ಲಿ ಸೇರಿದ್ದ ಏಕೀಕರಣ ಸಮ್ಮೇಳನದ ನಿರ್ಣಯದಲ್ಲಿ ಸ್ಪಷ್ಟವಾಗಿದೆ. ತಮ್ಮ ಈ ಪ್ರಯತ್ನ ವಿಫಲವಾದುದನ್ನರಿತು, ಪ್ರತಿಗಾಮಿ ನಾಯಕರು ಈ ಪ್ರಾಂತರಚನೆಯ ಸಹಜ ಮತ್ತು ಸರಳ ಪ್ರಶ್ನೆಯನ್ನು ಗೊಂದಲಕ್ಕೀಡುಮಾಡಿ ಜನತೆಯ ಮನಸ್ಸನ್ನು ಕದಡುತ್ತಿದ್ದಾರೆ. ಇಲ್ಲವೆ ಮಹಾರಾಜರುಳ್ಳ ಮೈಸೂರೇ ಪ್ರತ್ಯೇಕ ಪ್ರಾಂತವಾಗುಳಿಯಬೇಕೆಂಬ ಹೊಸ ಕೂಗನ್ನು ಎಬ್ಬಿಸಿ ಇಡೀ ಕನ್ನಡ ಜನತೆಯ ಹಾಗೂ ಹಿಂದೂಸ್ತಾನದ ಪ್ರಜಾಸತ್ತಾತ್ಮಕ ಬೆಳವಣಿಗೆಗೆ ಧಕ್ಕೆ ತರಲು ಯತ್ನಿಸುತ್ತಲಿದ್ದಾರೆ. ಆದರೆ, ಸಮಗ್ರ ಕನ್ನಡ ಪ್ರಾಂತ ರಚನೆಯಾಗಲು ಅನುಕೂಲವಾಗುವಂತೆ ಮೈಸೂರಿನ ವಿಲೀನೀಕರಣವೂ, ಹೈದರಾಬಾದಿನ ಭಾಷಾನುಗುಣ ವಿಭಜನೆಯೂ ನಡೆಯಬೇಕಾದ ಕಾಲ ಈಗ ಒದಗಿ ಬಂದಿದೆಯೆಂದು ಈ ಸಮ್ಮೇಳನವು ಖಚಿತವಾಗಿ ಘೋಷಿಸುತ್ತದೆ.

೪. ಸ್ವತಂತ್ರ ಭಾರತದ ಆಧಾರ ಸ್ತಂಭಗಳಲ್ಲಿ ಒಂದಾದ ನಾಗರಿಕ ಸ್ವಾತಂತ್ರ್ಯದ ಮೇಲೆ ಕಾಂಗ್ರೆಸ್ ಸರಕಾರಗಳು ಅಧಿಕಾರಕ್ಕೆ ಬಂದ ಮರುಗಳಿಗೆಯಿಂದಲೇ ಸತತವಾಗಿ ಧಾಳಿ ನಡಿಸುತ್ತಿವೆ. ಆಡಳಿತ ಪಕ್ಷದ ಅನುಕೂಲಕ್ಕಾಗಿಯೂ ಎಲ್ಲಾ ರೀತಿಯ ನ್ಯಾಯಬದ್ಧ ವಿರೋಧವನ್ನು ಹತ್ತಿಕ್ಕುವುದಕ್ಕಾಗಿಯೂ, ಜನತಾಭಿಪ್ರಾಯವನ್ನು ಧಿಕ್ಕರಿಸಿ ಕರಾಳ ಶಾಸನಗಳನ್ನೂ, ವಿಶೇಷ ಕಾನೂನುಗಳನ್ನೂ ಜಾರಿಗೆ ತಂದಿವೆ. ಸಮಾಜ ದ್ರೋಹಿಗಳನ್ನು ಶಿಕ್ಷಿಸುವದಕ್ಕೆಂದು ಜಾರಿಮಾಡಿದ ಸಾರ್ವಜನಿಕ ರಕ್ಷಣಾ ಶಾಸನಗಳನ್ನು ರಾಜಕೀಯ. ಹಾಗೂ ಕಾರ್ಮಿಕ ಕಾರ್ಯಕರ್ತರ ಮೇಲೆ ಪ್ರಯೋಗಿಸುತ್ತಿವೆ ಆದರೆ ಕಾಳಸಂತೆಕೋರರೂ ಲಾಭಬಡುಕರೂ ಸ್ವೇಚ್ಛೆಯಿಂದ ವರ್ತಿಸುತ್ತಲೇ ಇದ್ದಾರೆ. ಪತ್ರಿಕಾ ಸ್ವಾತಂತ್ರ್ಯ ಆಡಳಿತ ಪಕ್ಷಕ್ಕೆ ಬೆಂಬಲ ನೀಡುವವರ ಸ್ವತ್ತಾಗಿದೆ.

ಮುಂಬಯಿ ಸರಕಾರ ಗೆಳೆಯ ಗರುಡ ಶರ್ಮರ ಮೇಲೆ ಹಾಕಿರುವ ಗಡೀಪಾರಾಜ್ಞೆಯನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ. ಮೈಸೂರು ಸರಕಾರ ಸ್ವಾತಂತ್ರ್ಯೋದಯವನ್ನು ಪ್ರತಿಬಂಧಿಸಿರುವದನ್ನೂ, ಕಾಲಚಕ್ರ, ಕೇಸರಿ, ಕಹಳೆಗಳಿಗೆ ಠೇವಣಿ ಕೇಳಿರುವದನ್ನೂ, ಜನಶಕ್ತಿಗೆ ಸೋಕಾಸ್ ನೋಟೀಸು ಜಾರಿ ಮಾಡಿರುವದನ್ನೂ ಈ ಸಮ್ಮೇಳನವು ತೀವ್ರವಾಗಿ ಖಂಡಿಸುತ್ತದೆ.

೫. ಕೇಂದ್ರ, ಪ್ರಾಂತೀಯ ಮತ್ತು ಸಂಸ್ಥಾನಗಳ ಕಾಂಗ್ರೆಸ್ ಸರಕಾರಗಳು ಬಂಡವಾಳಗಾರರ ಪರವಾಗಿ ಕಾರ್ಮಿಕರ ವಿರೋಧವಾಗಿ ಅನುಸರಿಸುತ್ತಿರುವ ಕಾರ್ಮಿಕ ನೀತಿಯನ್ನು ಈ ಸಮ್ಮೇಳನವು ಖಂಡಿಸುತ್ತದೆ. ಕಾಂಗ್ರೆಸ್ ಸರಕಾರಗಳು ಪ್ರಜಾಪ್ರಭುತ್ವದ ಮೇಲೆ ನಿರ್ಮಿತವಾದ ಸ್ವತಂತ್ರ ಕಾರ್ಮಿಕ ಚಳವಳಿಗೆ ಅಡ್ಡಿ ಆತಂಕಗಳನ್ನು ತಂದೊಡ್ಡಿ, ದಬ್ಬಾಳಿಕೆಯನ್ನು ನಡಿಸುತ್ತಿರುವುದನ್ನೂ ಈ ಸಮ್ಮೇಳನವು ಟೀಕಿಸಿದೆ. ಔದ್ಯೋಗಿಕ ವಿವಾದಗಳನ್ನು ಸುಗಮವಾಗಿ ತೀರಿಸಲಾಗದ ಪಂಚಾಯತಿಯನ್ನು ಕಡ್ಡಾಯವಾಗಿ ಹೇರುವ ಮುಷ್ಕರವನ್ನು ಕಾನೂನು ಬಾಹಿರ ಮಾಡುವ, ಎಲ್ಲಾ ಕಾರ್ಮಿಕ ಶಾಸನಗಳನ್ನು ರದ್ದುಗೊಳಿಸಬೇಕೆಂದು ಈ ಸಮ್ಮೇಳನವು ಒತ್ತಾಯಪಡಿಸುತ್ತದೆ. ಮುಷ್ಕರವು ಕಾರ್ಮಿಕ ವರ್ಗದ ಜನ್ಮಸಿದ್ಧ ಹಕ್ಕೆಂದು ಈ ಅಧಿವೇಶನವು ಎಚ್ಚರಿಸುತ್ತದೆ. ನಮ್ಮ ಪ್ರಾಂತದ ಕಾರ್ಮಿಕ ವರ್ಗವನ್ನು, ಮಾಲಿಕರ ಮತ್ತು ಕಾಂಗ್ರೆಸ್ಸಿನ ಕೈಗೊಂಬೆಯಾದ I. N. T. U. C. ಯ ಬಗ್ಗೆ ಈ ಸಮ್ಮೇಳನವು ಎಚ್ಚರಿಸುತ್ತದೆ. ನಾಡಿನ ಅಸಂಖ್ಯಾತ ಕಾರ್ಮಿಕರನ್ನು ಸಂಘಟಿಸಿ ನಾಳಿನ ಹೊಣೆಗಾರಿಕೆಯನ್ನು ಹೊರಲು ಸಿದ್ಧಪಡಿಸಲು ದುಡಿಯುವ ಕಾರ್ಮಿಕ ಕಾರ್ಯಕರ್ತರನ್ನೂ, ಕಾರ್ಮಿಕ ಸಂಸ್ಥೆಗಳನ್ನೂ, ಸಮಾಜವಾದದ ಭವ್ಯ ಭವಿಷ್ಯತ್ತನ್ನು ಕಾರ್ಯಗತ ಮಾಡಲಿರುವ "ಹಿಂದ್ ಮಜದೂರ್" ಸಭೆಗೆ ಸೇರಬೇಕೆಂದು ಈ ಸಮ್ಮೇಳನವು ಮನವಿಮಾಡಿಕೊಳ್ಳುತ್ತದೆ

೬. ಇಂದಿನ ಕಾಂಗ್ರೆಸ್ ಸರ್ಕಾರಗಳ ಕೈಗಾರಿಕಾ ನೀತಿಯಲ್ಲಿ ಯೋಜನೆಗೆ ಸ್ಥಾನವಿಲ್ಲ ದುಡಿಯುವ ಕಾರ್ಮಿಕರಿಗೆ ಪ್ರಾತಿನಿಧ್ಯವಿಲ್ಲ. ಸಮಾಜದ್ರೋಹದಿಂದ ಸಂಗ್ರಹಿಸಿದ ಸಂಪತ್ತಿನ ಸಹಾಯದಿಂದ, ಸರಕಾರದಿಂದ ರಿಯಾಯತಿಗಳನ್ನು ಪಡೆಯಲು ಯತ್ನಿಸುತ್ತಿರುವ ಬಂಡವಾಳಗಾರರ

ನ್ನು ತೃಪ್ತಿಪಡಿಸುವ ನೀತಿಯನ್ನು ಕಾಂಗ್ರೆಸ್ ಸರಕಾರಗಳು ಅನುಸರಿಸುತ್ತಿವೆ. ವೈಯಕ್ತಿಕ ಲಾಭಕ್ಕೆ ಆಸ್ಪದ ಕೊಡದೆ ದೃಢನಿರ್ಧಾರದಿಂದ ಲಾಭಬಡುಕತನವನ್ನು ಮಟ್ಟ ಹಾಕಿ, ಕೈಗಾರಿಕೆಗಳನ್ನು ರಾಷ್ಟ್ರೀಕರಿಸಿ ಜನತೆಯ ಆವಶ್ಯಕತೆಗಳನ್ನು ಪೂರೈಸುವ ಕೈಗಾರಿಕೆಗಳ ಯೋಜನಾಬದ್ಧ ಅಭಿವೃದ್ಧಿಯ ನೀತಿಯನ್ನು ಅನುಸರಿಸಿದರೆ ಮಾತ್ರ ದಿನೇ ದಿನೇ ಹದಗೆಡುತ್ತಿರುವ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಾಧ್ಯವೆಂದು ಈ ಸಮ್ಮೇಳನವು ಸ್ಪಷ್ಟಪಡಿಸುತ್ತದೆ.

೭. ಕನ್ನಡನಾಡಿನ ರೈತರಲ್ಲಿ ವ್ಯವಸಾಯಿಕ ಕಾರ್ಮಿಕರಲ್ಲಿ ಹಾಗೂ ಸಣ್ಣ ಹಿಡುವಳಿದಾರರಲ್ಲಿ ದಿನದಿನಕ್ಕೂ ಬೆಳೆದು ಬರುವ ಅತೃಪ್ತಿಯನ್ನು ಈ ಸಮ್ಮೇಳನವು ಗಮನಿಸಿದೆ. ಭೂಮಾಲಿಕ, ದಲ್ಲಾಳಿ, ಸಾಹುಕಾರ ಮೊದಲಾದ ಮಧ್ಯವರ್ತಿ ಜನರ ಪ್ರಭಾವವನ್ನು ತೊಡೆದು ಹಾಕುವಂತಹ ಪ್ರಗತಿದಾಯಕ ಕಾನೂನುಗಳನ್ನು ಜಾರಿಗೆ ತರದೆಯೂ, ದುರ್ಬಲ ಹಾಗೂ ಅಸಮರ್ಥ ಆಹಾರ ಮತ್ತು ವ್ಯವಸಾಯ ನೀತಿಯ ಫಲವಾಗಿಯೂ, ಕ್ಷೀಣವಾಗುತ್ತಿರುವ ಹಳ್ಳಿಯ ಆರ್ಥಿಕ ಪರಿಸ್ಥಿತಿಯ ಬಗ್ಗೆ ಕಾಂಗ್ರೆಸ್ ಸರಕಾರಗಳಿಗೆ ಈ ಸಮ್ಮೇಳನವು ಎಚ್ಚರಿಕೆಯನ್ನೀಯುತ್ತದೆ. ರೈತರ ಶಾಂತಿಯುತ ಸಂಘಟನೆಯನ್ನು ನ್ಯಾಯಬದ್ಧವಾದ ಹೋರಾಟವನ್ನೂ ಹತ್ತಿಕ್ಕುತ್ತಿರುವ ಕಾಂಗ್ರೆಸ್ ಸರಕಾರಗಳ ದಮನನೀತಿಯನ್ನು ಈ ಸಮ್ಮೇಳನವು ಖಂಡಿಸುತ್ತದೆ. ಕಾನೂನಿನ ಆಸರೆ ಪಡೆದಾಗಲೀ ಅಥವಾ ಬಲಾತ್ಕಾರದಿಂದಾಗಲೀ ಒಕ್ಕಲು ಬಿಡಿಸುವುದನ್ನು ತಡೆಗಟ್ಟುವ, ರೈತರ ಕನಿಷ್ಠ ಬೇಡಿಕೆಗಳನ್ನು ಈಡೇರಿಸುವ ಕಾನೂನುಗಳನ್ನು ಕೂಡಲೇ ಜಾರಿಗೆ ತರಬೇಕೆಂದು ಈ ಸಮ್ಮೇಳನವು ಸರಕಾರಗಳನ್ನು ಒತ್ತಾಯಪಡಿಸುತ್ತದೆ. ಎಚ್ಚೆತ್ತ ರೈತರ ಏಕಮಾತ್ರ ಪ್ರಗತಿಪರ ಸಂಸ್ಥೆಯಾದ "ಹಿಂದ್ ಕಿಸಾನ ಪಂಚಾಯತಿನ" ಸಂಘಟನೆಯ ಮೂಲಕ ತಮ್ಮ ನ್ಯಾಯಬದ್ಧ ಹಕ್ಕುಗಳಿಗಾಗಿ ಹೋರಾಡಬೇಕೆಂದು ಕರ್ನಾಟಕದ ರೈತ ವರ್ಗವನ್ನು ಈ ಸಮ್ಮೇಳನವು ಮನವಿಮಾಡಿಕೊಳ್ಳುತ್ತದೆ

೮. ಪ್ರಜಾಸತ್ತಾತ್ಮಕ ತತ್ವಕ್ಕೆ ವಿರುದ್ಧವಾಗಿ ನಾಮಕರಣದ ಮೂಲಕ, ಶಾಸನಾತ್ಮಕ ಅಧಿಕಾರವಿಲ್ಲದ ಗ್ರಾಮಾಭಿವೃದ್ಧಿ ಸಮಿತಿಗಳನ್ನು ರಚಿಸಿರುವ ಮೈಸೂರು ಸರಕಾರದ ಪ್ರತಿಗಾಮಿ ನೀತಿಯನ್ನು ಈ ಸಮ್ಮೇಳನವು ಖಂಡಿಸುತ್ತದೆ. ಆಡಳಿತ ಪಕ್ಷಕ್ಕೆ ಬೆಂಬಲಿಗರನ್ನು ಪಡೆಯಲು ಸರಕಾರ ನಡೆಸಿರುವ ಪ್ರಯತ್ನವಿದು ಎಂಬುದು ಈ ಸಮ್ಮೇಳನದ ಸ್ಪಷ್ಟ ಅಭಿಪ್ರಾಯವಾಗಿದೆ. ಪ್ರಜೆಗಳಿಗೆ ಅನುಕೂಲವಾಗದಂತಹ ಈ ಸಂಗತಿಗಳ ದೆಸೆಯಿಂದ ಸಾರ್ವಜನಿಕ ಧನದ ಸದುಪಯೋಗವಾಗದಿರುವುದರಿಂದ ಈ ಸಮಿತಿಗಳನ್ನು ಕೂಡಲೇ ರದ್ದುಗೊಳಿಸಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯಪಡಿಸುತ್ತದೆ.

ಹಳ್ಳಿಗಳ ಉದ್ಧಾರವಾಗಬೇಕಾದರೆ ಗ್ರಾಮಪಂಚಾಯತ, ಜಿಲ್ಲಾ ಬೋರ್ಡು ಮೊದಲಾದ ಸ್ಥಳೀಯ ಸಂಸ್ಥೆಗಳ ಪುನರ್ವ್ಯವಸ್ಥೆಯಿಂದಲೇ ಸಾಧ್ಯವೆಂದು ಈ ಸಮ್ಮೇಳನವು ಅಭಿಪ್ರಾಯ ಪಡುತ್ತದೆ ಆದ್ದರಿಂದ ಈ ಸಂಸ್ಥೆಗಳು ನಿರ್ದಿಷ್ಟ ಯೋಜನಾಬದ್ಧ ಕಾರ್ಯಕ್ರಮಗಳನ್ನು ನಡೆಸುವಂತಹ ಮತ್ತು ಅದಕ್ಕೆ ತಗಲುವ ಹಣ ಸಂಗ್ರಹಿಸಲು ಸಹ ಅಧಿಕಾರವುಳ್ಳ ಸಂಪೂರ್ಣ ಸ್ಥಳೀಯ ಸ್ವಾತಂತ್ರ್ಯಪಡೆದ ಸಂಸ್ಥೆಗಳಾಗುವಂತೆ ಪರಿವರ್ತಿಸಬೇಕೆಂದು ಈ ಸಮ್ಮೇಳನವು ಸರಕಾರವನ್ನು ಒತ್ತಾಯಪಡಿಸುತ್ತದೆ.

೯. ತಮ್ಮ ಆ ಜನ್ಮಸಿದ್ಧ ಹಕ್ಕಾದ ಪ್ರಜಾರಾಜ್ಯ ಸ್ಥಾಪನೆಗಾಗಿ ಹೋರಾಟ ಹೂಡಿ ಕಾರಾಗೃಹವಾಸ ಅನುಭವಿಸುತ್ತಿರುವ ನೇಪಾಳದ ಸ್ವಾತಂತ್ರ್ಯ ವೀರರಿಗೆ ಈ ಸಮ್ಮೇಳನವು ತನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಕಳುಹಿಸುತ್ತದೆ. ಪ್ರಜಾಪ್ರಭುತ್ವದ ಈ ಯುಗದಲ್ಲಿ ಪಾಳೆಯಗಾರಿಕೆಯ ಪ್ರಭುತ್ವವನ್ನು ಉಳಿಸಿಕೊಳ್ಳಲು ಹವಣಿಸುತ್ತಿರುವ ರಾಜತ್ವದ ವಿರುದ್ಧ ಹೋರಾಡುತ್ತಿರುವ ನೇಪಾಳದ ಜನತೆಗೆ ಸೋಶಲಿಸ್ಟ್ ಪಾರ್ಟಿಯ ಸಂಪೂರ್ಣ ಸಹಕಾರ ಸಹಾನುಭೂತಿ ನೀಡುವುದೆಂದು ಈ ಸಮ್ಮೇಳನವು ಭರವಸೆ ನೀಡುತ್ತದೆ.

ನೇಪಾಳ ದಿನಾಚರಣೆಯ ಸಂಬಂಧದಲ್ಲಿ ಕೇಂದ್ರ ಸರಕಾರ ಸೋಶಲಿಸ್ಟ್ ನಾಯಕರಾದ ಶ್ರೀ ರಾಮಮನೋಹರ್ ಲೋಹಿಯಾ, ಪ್ರೇಮ ಭಾಸಿನ್ ಮತ್ತಿತರ ೪೭ ಜನರನ್ನು ಬಂಧಿಸಿದ್ದನ್ನು ಈ ಸಮ್ಮೇಳನವು ಖಂಡಿಸುತ್ತದೆ. ಮತ್ತು ಅವರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತದೆ.

ಕರ್ನಾಟಕ ಸೋಶಲಿಸ್ಟ್ ಪಾರ್ಟಿ ಅಧಿವೇಶನವು ಮೈಸೂರಿನ ಮೇಲಾಟ

ಬೊಂಬಾಯಿಯ ಶ್ರೀ ಅಶೋಕ ಮೇಹತಾರವರ ಅಧ್ಯಕ್ಷತೆಯಲ್ಲಿ ೨೮, ೨೯-೫-೪೯ ನೆಯ ದಿನಾಂಕ ಶಿವಮೊಗ್ಗದಲ್ಲಿ ಪಾರ್ಟಿಯ ಮೂರನೆಯ ಅಧಿವೇಶನವು ಸಮಾವೇಶವಾಗಿದ್ದಿತು ಊಟ ಉಪಚಾರಗಳ ವ್ಯವಸ್ಥೆಯನ್ನು ಮಾತ್ರ ಚೆನ್ನಾಗಿ ಮಾಡಿದ್ದರು. ಬಳ್ಳಾರಿ ಮಂಗಳೂರು ಬೆಳಗಾವಿ ಧಾರವಾಡಗಳ ಕಡೆಯಿಂದ ಪ್ರತಿನಿಧಿಗಳು ಹೋಗಿದ್ದರು, ಕಾರ್ಯಕಾರೀ ಸಮಿತಿಯ ಲಕ್ಷ್ಯವೇ ಇಲ್ಲದೆ ಅಧಿವೇಶನದ ಕಾರ್ಯಕಲಾಪಗಳಲ್ಲೆಲ್ಲಾ ಮೈಸೂರಿನವರ ಮೇಲಾಟವೇ ಅಧಿಕವಾಗಿದ್ದಿತು. ನಿರ್ಣಯಗಳ ಕರಡನ್ನು ಛಾಪಿಸಿ ಪ್ರತಿನಿಧಿಗಳ ಕೈಯಲ್ಲಿ ಕೊಟ್ಟು ಒಂದಕ್ಷರವನ್ನೂ ತಿದ್ದದೆ ಸ್ವೀಕರಿಸಲು ಕಾರ್ಯದರ್ಶಿ ನಾಗಭೂಷಣ [illegible] ಇತರ ಗೆಳೆಯರು ಹಟ ಹಿಡಿದರು. 'ಸಮಾಜವಾದದ ಶ್ರೇಷ್ಠ ಜ್ಞಾನಿಗಳು ನಾವು. ನಮ್ಮ ಅನುಭವ ಯಾರಿಗೂ ಇಲ್ಲ ನಾವು ಮಾಡಿದ್ದೇ ನ್ಯಾಯ ಮತ್ತು ಉಚಿತ. ನೀವೆಲ್ಲಾ ತಿಳುವಳಿಕೆಯಿಲ್ಲದ ಹುಡುಗರು' ಎಂಬ ಪ್ರವೃತ್ತಿಯು ಅವರ ನಡೆನುಡಿಗಳಲ್ಲಿ ಸ್ಪಷ್ಟವಾಗುತ್ತಿತ್ತು ಬೇರೆ ಯಾರ ಯಾವ ತಿದ್ದುಪಡಿಗಳೂ ಸ್ವೀಕೃತವಾಗಲಿಲ್ಲ. ಲೆಕ್ಕ ಪತ್ರ ಮತ್ತು ವರದಿಯ ಅಂಶಗಳಲ್ಲಿ ಏನಾದರೂ ಸ್ಪಷ್ಟೀಕರಣ ಕೇಳಿದರೆ ಸಿಟ್ಟಿಗೇಳುತ್ತಿದ್ದರು. ಅಧಿಕಾರವರ್ಗದ ಆಯ್ಕೆಯಲ್ಲಿ ಹೆಸರುಗಳ ಪಟ್ಟಿಯನ್ನು ಕೊಟ್ಟು ಇವರನ್ನಾರಿಸದಿದ್ದರೆ ನಾವೆಲ್ಲಾ ರಾಜೀನಾಮೆ ಕೊಡುತ್ತೇವೆಂದು ಹೆದರಿಸಿದರು. ಕೊನೆಗೆ ತಮಗೆ ಬೇಕಾದವರನ್ನಾರಿಸಿಕೊಳ್ಳಲು ಸಮರ್ಥರಾದರು ಸೋಶಿಯಲಿಸ್ಟ್ ಪಾರ್ಟಿಯು ಜನತಾಸಂಘವಾಗುವ ಮೊದಲೇ ಸರ್ವಾಧಿಕಾರೀ ಪ್ರವೃತ್ತಿಯ ಲಕ್ಷಣಗಳು ತೋರಿಬರುತ್ತಲಿವೆ ಕಾರ್ಯಕರ್ತರು ತ್ಯಾಗಿಗಳಿರಬಹುದು. ಆದರೆ ಉಳಿದ ಕಾರ್ಯಕರ್ತರ ಸಲಹೆ ಸಹಕಾರಗಳನ್ನೇ ಅಪೇಕ್ಷಿಸದಿದ್ದರೆ ಪಾರ್ಟಿಯು ಬೆಳೆಯಬೇಕೆಂತು? ಕಾಂಗ್ರೆಸ್ ಕರಗುತ್ತಿರಬೇಕಾದರೆ ಜನತೆಯನ್ನು ಸಂಘಟಿಸಲು ಮತ್ತೊಂದು ರಾಜಕೀಯ ಪಕ್ಷವು ಬೇಕು. ಜನರು ಈ ಪಾರ್ಟಿಯಲ್ಲಿ ವಿಶ್ವಾಸವಿಡುತ್ತಿರುವ ಈ ಪರ್ವಕಾಲದಲ್ಲಿ ಸರ್ವಾಧಿಕಾರೀ ಪ್ರವೃತ್ತಿಯ ಲಕ್ಷಣಗಳು ಹೋಗಬೇಕು.

ಅಖಿಲಭಾರತ ಸಮಾಜವಾದೀ ನಾಯಕರ ಶ್ರೇಷ್ಠ ಉದಾಹರಣೆಯ ಅನುಕರಣೆ ಸಾಧಿಸದಿದ್ದರೆ ಈ ಪಾರ್ಟಿಗೆ ಕರ್ನಾಟಕದಲ್ಲಿ ಭವಿಷ್ಯವೇ ಇಲ್ಲ.

ಅಶೋಕ ಮೇಹತಾರವರು ತಮ್ಮ ಸಲಹೆಗಳಲ್ಲಿ ಸಂಘಟನೆ ಪ್ರಚಾರಕಾರ್ಯದ ಮಹತ್ವ ಹೇಳಿ ಆಂದೋಳನದ ಸಿಡಿಲಮಾತುಗಳನ್ನು ಪದೇ ಪದೇ ಎತ್ತಬಾರದೆಂದರು

— ನಿಮ್ಮ ಸಂಪತ್ತನ್ನು ವಿನಿಯೋಗ ಮಾಡಲು ನೀವು ಕಲಿಯಬೇಕು. ಕಬ್ಬಿಣದ ಪೆಟ್ಟಿಗೆಗಳಲ್ಲಿ ಸಂಗ್ರಹಿಸಿಡುವುದು ಸುರಕ್ಷಿತವಲ್ಲ. ತಾಯಿನಾಡಿಗೊದಗಿರುವ ಗಂಡಾಂತರವನ್ನು ನೀವು ಎಲ್ಲರೊಂದಿಗೆ ಸಮಾನತೆಯಿಂದ ಅನುಭವಿಸಬೇಕು. ದೇಶದ ಹಿತಕ್ಕಾಗಿ ನಿಮ್ಮ ಸಂಪತ್ತನ್ನು ವೆಚ್ಚ ಮಾಡಬೇಕು. ನೀವು ಗಳಿಸಿದ ಸಂಪತ್ತನ್ನು ನಿಮ್ಮ ಸಂಗಡ ಒಯ್ಯಲಾರಿರಿ ಸತ್ಕಾರ್ಯ ದೇಶ ಸೇವೆಗಳಿಂದ ನೀವು ಯೋಗ್ಯರಾದರೆ ನಿಜವಾದ ಸಂಪತ್ತನ್ನು ಗಳಿಸಿದಂತೆಯೆ.

ಸರದಾರ್ ಪಟೇಲ್

ಇಂಜನೀಯರಿಂಗ್ ಕಾಲೇಜ್

ಹರಿಜನ ವಿದ್ಯಾರ್ಥಿಗಳು ೨೨ ವರ್ಷ ಮೀರಿದವರಿದ್ದರೂ ಇಂಜನಿಯರಿಂಗ್ ಕಾಲೇಜಿಗೆ ಪ್ರವೇಶ ಕೊಡಲಾಗುವುದು. ಈಗ ಇರುವಂತೆ ಅವರಿಗೆ ೩ ವರ್ಷಗಳ ರಿಯಾಯಿತಿ ತೋರಿಸಲಾಗುವುದು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರಿಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತವೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—ಪಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು: – ಪ್ರಾರಂಭಿಕ—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಉನ್ನತ—ವಿಶಾರದ
ವೇಳೆ: —ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅಥವ ಶಾಲಾಶುಲ್ಕ ವಗೈರೆ ವಿವರಗಳನ್ನು ಶಾಲೆಯ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4746)

ನವ ಭಾರತ ಬಳ್ಳಾರಿ.

(Nationalist Weekly)

6 - 6—49

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..................................

....

....

Printed at Vittal Press. Edited & Published by T. B. Keshava Rao

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್

ವರ್ಷ ೧೨ | ಸೋಮವಾರ ೧೩ ಜೂನ್ ೧೯೪೯ | ಸಂಚಿಕೆ ೩೧

ಕಲಕತ್ತೆಯ ಜನತೆಗೆ ಪಂಡಿತ ಜವಾಹರಲಾಲರ ಸಂದೇಶ.

"ಸ್ವತಂತ್ರ ಜನತೆಯಂತೆ ನಾವು ಸ್ವಾತಂತ್ರ್ಯದ ಹೊಣೆ ಹೊರಬೇಕಾಗುವುದಲ್ಲದೆ, ಆ ಹೊಣೆಗಳು ಘಟನೆಗಳ ಬಗ್ಗೆ ಸಮತೋಲ ಬುದ್ಧಿಯನ್ನಿಟ್ಟುಕೊಳ್ಳಬೇಕಾಗುವದು. ಬರೇ ತೆಗಳಿಕೆಯ ಮನೋಭಾವನೆಯಿಂದ ನಾವು ಆ ಹೊಣೆ ಹೊತ್ತಂತಾಗಿದೆ." ಹೀಗೆಂದು ಹಿಂದುಸ್ಥಾನದ ಪ್ರಧಾನ ಮಂತ್ರಿ ಪಂಡಿತ ನೆಹರೂರವರ ಕಲಕತ್ತೆಯ ಜನತೆಗೆ ಕಳಿಸಿಕೊಟ್ಟ ಸಂದೇಶವೊಂದರಲ್ಲಿ ಹೇಳಿದ್ದಾರೆ.

ಚೀನಾ ರಣರಂಗ ಕ್ಯಾಂಟನ್‌ದಲ್ಲಿ ಕಮ್ಯುನಿಸ್ಟ ಪಡೆಗಳ ಮುನ್ನಡೆ

ಹತ್ತು ದಿನಗಳ ತಟಸ್ಥತೆಯ ನಂತರ ಜನರಲ್ ಲಿನ್ ಪ್ಯಿಯೋನರ ನಾಯಕತ್ವದಲ್ಲಿಯ ಕಮ್ಯುನಿಸ್ಟ ಪಡೆಗಳು ಹಾಂಕಾಂ ಕ್ಯಾಂಟನ್ ರೇಲ್ವೆಯಿಂದ ಕ್ಯಾಂಟನ್ ನತ್ತ ಮುನ್ನುಗ್ಗುತ್ತಿವೆಯೆಂದು ಇಂದು ಕ್ಯಾಂಟನ್‌ಗೆ ಬಂದ ವರದಿಗಳು ಸಾರುತ್ತವೆ.

ಒದೆಸ್ಸ್ಯಾ ಮುನ್ನುಗ್ಗುತ್ತಿರುವ ಸೈನ್ಯಗಳೀಗ ಹುನಾನ್ ಪ್ರಾಂತವನ್ನು ಪ್ರವೇಶಿಸಿವೆ.

ರಷ್ಯಾ ಸಂದರ್ಶನ

ಪಾಕಿಸ್ತಾನದ ಮುಖ್ಯ ಮಂತ್ರಿ ಅಲಿಖಾನರು ತಮ್ಮ ಪತ್ನಿಯೊಡನೆ ಅತಿ ಶೀಘ್ರದಲ್ಲಿ ಮಾಸ್ಕೋ ಪಟ್ಟಣಕ್ಕೆ ತೆರಳಲಿರುವರು, ರಷ್ಯಾ ಸರಕಾರವು ಇವರನ್ನಾಹ್ವಾನಿಸಿದೆಯಂತೆ.

—ಭಾರತದಕ್ಷಿಣ ಫ್ರೆಂಚ ಸ್ವಾಸ್ಥಗಳು ಭಾರತವನ್ನು ಸೇರಬೇಕೋ, ಈಗಿದ್ದಂತೆ ಉಳಿಯಬೇಕೊ ಎಂಬ ಪ್ರಶ್ನೆಯನ್ನು ನಿರ್ಧರಿಸಲು ಜೂನ್ 19 ಕ್ಕೆ ಚುನಾವಣೆಯಾಗಲಿದೆ, ಇದನ್ನು ಮುಂದಕ್ಕೆ ಹಾಕಲು ಫ್ರೆಂಚ ಸರಕಾರವು ಸಲಹೆ ಇತ್ತಿದೆಯಾದರೂ ಅಲ್ಲಿಯ ಮುನಿಸಿಪಾಲಿಟಿಯವರು ಚುನಾವಣೆ ನಡೆಸಲು ಕೃತನಿಶ್ಚಯ ಮಾಡಿರುವರು

ಭೂಮಿಯ ಪಟ್ಟಾ ಕೊಡುವದು ೧೯೪೩ ರಿಂದ ಇದ್ದ ನಿರ್ಬಂಧ ದೂರಾಯಿತು.

ಸರ್ಕಾರಿ ಪ್ರಕಟನೆ

ಸರ್ಕಾರದವರು ಒಂದು ಪ್ರಕಟನೆಯಲ್ಲಿ ಹೀಗೆ ಹೇಳಿರುವರು:- ಭೂಮಿಗಳನ್ನು ಪಟ್ಟಾ ಕೊಡಲು ತಮ್ಮ ನೀತಿಯನ್ನು ನಿರ್ಧರಿಸುವ ಸಲುವಾಗಿ 1943 ರಿಂದ ಭೂಮಿಗಳಿಗೆ ಪಟ್ಟಾ ಕೊಡಬಾರದೆಂದು ಸರ್ಕಾರವು ನಿರ್ಬಂಧವನ್ನು ಹಾಕಿದ್ದಿತು. ಈಗ ಅದರ ತತ್ವವನ್ನು ನಿಶ್ಚಯಿಸಲಾಗಿದೆ. ಅದು ಈ ಕೆಳಗಿನಂತಿದೆ.

ಸರ್ಕಾರದ ಅಧೀನದಲ್ಲಿರುವ ಭೂಮಿಯನ್ನು ಈ ಪ್ರಕಾರವಾಗಿ ಹಂಚಲಾಗುವುದು. (i) ರಾಜಕೀಯ ಬಾಧಿತರು ಇವರ ನಂತರ (ii) ದ್ವಿತೀಯ ಮಹಾಯುದ್ಧದಲ್ಲಿ ಭಾಗವಹಿಸಿದ ಮತ್ತು I. N. A. ಯೋಧರು, iii) ಭೂಮಿಗಳಿಲ್ಲದ ಹರಿಜನರು ಮತ್ತು ಹಿಂದುಳಿದ ವರ್ಗದವರು.

ಈ ಕೆಳ ಶರ್ತುಗಳ ಪ್ರಕಾರ ಭೂಮಿಗನ್ನು ಪಟ್ಟಾಕೊಡುವರು:-

[1] ಈಗಿರುವ ಬೆಲೆಯನ್ನು ಗಣಿಸದೆ ಪಟ್ಟಾ ಕೊಡಲಾಗವುದು. ಅದರಲ್ಲಿರುವ ಕಟ್ಟಡ, ಭಾವಿ, ಮರಗಳ ಬೆಲೆಯನ್ನು ಮತ್ತು ಅಳತೆ ಮಾಡಿದ ಖರ್ಚನ್ನು ಪಟ್ಟಾದಾರನಿಂದ ವಸೂಲಿ ಮಾಡಲಾಗುವುದು.

[2] ಪಟ್ಟಾ ಮಾಡಿದ ಭೂಮಿಯನ್ನು ಹತ್ತು ವರ್ಷಗಳವರೆಗೆ ಮಾರಬಾರದು. ಬೇರೆಯವರ ಹೆಸರಲ್ಲಿ ವರ್ಗಾಯಿಸಬಾರದು.

[3] ಪಟ್ಟಾ ಕೊಟ್ಟ ಮೂರು ವರ್ಷಗಳಲ್ಲಿ ಸಾಗುಮಾಡಬೇಕು. ಇಲ್ಲವಾದರೆ ಕಸಿದುಕೊಳ್ಳಲಾಗುವುದು

[4] ಭೂಕಂದಾಯ ಮೂರು ವರ್ಷಗಳವರೆಗೆ ವಸೂಲಿಮಾಡುವುದಿಲ್ಲ, ಸರ್ಕಾರಿ ಕಾಲುವೆಯಿಂದ ನೀರಾವರಿ ಮಾಡಿದರೆ ಗದ್ದೆಯ ಟ್ಯಾಕ್ಸ ಕೊಡಬೇಕಾಗುತ್ತೆ.

[5] ಪಟ್ಟಾ ಕೊಟ್ಟ ಭೂಮಿಯನ್ನು ತಾನಾಗಲಿ, ತನ್ನ ಬಂಧುಗಳಾಗಲಿ ಇಲ್ಲವೆ ಕೂಲಿಯಿಂದಾಗಲಿ ಮಾಡಿಸಬೇಕು.

ಸರ್ಕಾರದ ಭೂಮಿಗಳನ್ನು ಅಪ್ಪಣೆ ಇಲ್ಲದೆ ಆಕ್ರಮಿಸಿಕೊಂಡವರ ವಿಷಯಕ್ಕೆ ಈ ಕೆಳ ಚರ್ಯೆ ತೆಗೆದುಕೊಳ್ಳಲಾಗುತ್ತೆ.

[1] 5 ಎಕರೆ ತರಿ, 10 ಎಕರೆ ಖುಶ್ಕಿ ಭೂಮಿಯಾದರೂ ಇಲ್ಲವಿದ್ದವರು ಭೂಮಿಯನ್ನನುಭವಿಸುತ್ತಿದ್ದರೆ, ಅಂಥಾ ಭೂಮಿಯನ್ನು ಪಟ್ಟಾ ಕೊಡಲು ಆಕ್ಷೇಪವಿಲ್ಲದಿದ್ದರೆ ಪಟ್ಟಾಕೊಡಲಾಗುವುದು. 5 ಎಕರೆ ತರಿ ಅಥವಾ 10 ಎಕ್ರೆ ಖುಶ್ಕಿ ಭೂಮಿ ಇದ್ದೂ ಕೂಡ ಸರ್ಕಾರಿ ಭೂಮಿ ಆಕ್ರಮಿಸಿ ಕೊಂಡವರನ್ನು ಬಿಡಿಸಲಾಗುವುದು,

[2] 25 ಸೆಂಟ್ ತರಿ ಅಥವಾ 50 ಸೆಂಟ ಖುಶ್ಕಿ ಭೂಮಿಯನ್ನು ಆಕ್ರಮಿಸಿಕೊಂಡಿರುವವರಿಗೆ ಆಕ್ಷೇಪಣೆ ಇಲ್ಲದಿದ್ದರೆ ಪಟ್ಟಾಕೊಡಲಾಗುತ್ತೆ.

[3] ಸರ್ಕಾರದ ಭೂಮಿಗಳನ್ನು ಆಕ್ರಮಿಸಿಕೊಂಡು ಅವನ್ನು ಸಾಗುಮಾಡಲು ಖರ್ಚು ಮಾಡಿದ್ದರೆ, ಅವರಿಗೆ ಬಹಳ ಕಾಲದವರೆಗೆ ಸಾಗುಕೊಡಬಹುದು. ಆಕ್ಷೇಪವಿಲ್ಲದಿದ್ದರೆ ಪಟ್ಟಾಕೊಡಬಹುದು, ಎಂತೂ ಅವರು ಖರ್ಚು ಮಾಡಿ ಕಾಲವಾದರೂ ಸಾಗುಕೊಡಬ ಹಳ್ಳಿಯ ಹತ್ತರವಿರುವ 5 ಎಕರೆ ಭೂಮಿಯನ್ನು ಯಾರಿಗೂ ಪಟ ಕೊಡುವುದಿಲ್ಲ, ಶಾಲಾ ಬಾಲಕರ ಮೈದಾನಕ್ಕೆ ಶಾಲೆಗಾಗಿ ಸಾರ್ವ ಕಾರ್ಯಕ್ಕೆ ಬೇಕಾಗುತ್ತದೆ, ಇಂಥಾ ಯಗಳಿಗಾಗಿ ತೆಗೆದಿಟ್ಟ ಭೂಮಿಗಳ ಥಾ ಕಾರ್ಯಗಳಿಗೆ ಬೇಕಿಲ್ಲವಾದರೆ ಕೊಡಲಾಗುತ್ತೆ, ರಿಸರ್ವ ಫಾರೆಸ್ಟು ಮರಗಳಿಲ್ಲದಿದ್ದರೆ ಸವರಿ ಕಾಲ ಸಲಹೆ ತೆಗೆದುಕೊಂಡು ಪಟ್ಟಾಕ್ಕೆ ಬಾಗುತ್ತೆ, ಒಂದೇ ಕಡೆಯಲ್ಲಿರುವ ರಿನ ಭೂಮಿಗಳು ರಾಜಕೀಯ ಬಾ ನ್ನೊಳಗೊಂಡ ಕೋ-ಆಪರೇಟಿವ್ ಟಿಗಳಿಗೆ ಪಟ್ಟಾಕೊಡಲಾಗುತ್ತೆ.

ಪುಸ್ತಕಗಳಿಲ್ಲ-ಪರೀಕ್ಷೆ ನಡೆಸುತ್ತಾರೆ

ಪ್ರಾಥಮಿಕ ಉನ್ನತ ಶಾಲೆಗಳಲ್ಲಿ ಡು ತರಗತಿಯಿಂದ ಮೇಲ್ತರಗತಿಗೆ ರ್ಥಿಗಳು ಹೋದಾಗ ಅವರಿಗೆ ಪುಸ್ತಕಗಳು ಸಿಗುವುದು ಅತಿ ಪುಸ್ತಕ ಪ್ರಕಾಶನ ಕಂಪನಿಯವರ ತಾಳಲಾರದೆ ಪುಸ್ತಕಗಳ ಪರಿವರ್ತ ಗುತ್ತಲೇ ಇರುತ್ತದೆ. ವಿದ್ಯಾಭ್ಯಾಸ ದಲ್ಲೂ ಕೂಡ ಅನಿಶ್ಚಿತ ವಾತಾವ ಹೆಚ್ಚುತ್ತಲಿದೆ. ಕೊನೆಗೆ 3 ವರ್ಷ ರೆಗಾದರೂ ಪುಸ್ತಕಗಳನ್ನು ಬದಲಾ ದಿದ್ದರೆ ವಿದ್ಯಾರ್ಥಿಗಳು ಹಳೆಯ ಪು ಳನ್ನಾದರೂ ಕೊಳ್ಳಬಹುದು. ಇದ ವಿದ್ಯಾಧಿಕಾರಿಗಳು ಮನ್ನಿಸುವರೋ?

—ಒಬ್ಬ ಪ್ರೊ

"ಮಾನವಿ"

ಬಳ್ಳಾರಿ ಜಿಲ್ಲಾ ಕರ್ನಾಟಕ ಸಮಿತಿಯು ಹೊರಡುವ ಪುಸ್ತ ಅಚ್ಚಿನ ಕೆಲಸವು ಧಾರವಾಡದಲ್ಲಿ ಭವಾಗಿದೆ. ಈ ತಿಂಗಳು 25ನೇ ಕದೊಳಗಾಗಿ ಜಿಲ್ಲೆಯ ಕಲಾವಿ ತಮ್ಮ ಫೋಟೋಗಳೊಂದಿಗೆ ತಮ್ಮ ಜೀವನದ ಸಂಕ್ಷಿಪ್ತ ಚರಿತ್ರೆಯನ್ನು ಸಮಿತಿಗೆ ಕಳಿಸಿಕೊಡಬೇಕು. ಫೋ ದೊಂದಿಗೆ ಬ್ಲಾಕು ಮಾಡಿಸಲು 6 ಯಿಗಳನ್ನು ಕಳಿಸಬೇಕು. ಬಾಕು

ವರು ತಮ್ಮ ಬ್ಲಾಕುಗಳನ್ನು ಕಳಿಸಬಹುದು. ಅವುಗಳನ್ನು ಅಚ್ಚು ಕಟ್ಟಾಗಿ ಪುಸ್ತಕದಲ್ಲಿ ಪ್ರಸಿದ್ಧಿಸಲಾಗುವುದು. ಅವಧಿ ಮೀರಿ ಬಂದ ಬ್ಲಾಕುಗಳು ಲೇಖನಗಳನ್ನು ಸ್ವೀಕರಿಸಲಾಗುವುದಿಲ್ಲ.

ಕೆ. ದೊಡ್ಡನಗೌಡ,
ಅಧ್ಯಕ್ಷ,
ಬ. ಕ. ನಾ. ಕಳಾ ಸಮಿತಿ

ಹಾಳ್ವ

ಇಲ್ಲಿ ಹೈಯರ್ ಎಲಿಮೆಂಟರಿ ಶಾಲೆಯಾಗಬೇಕೆಂದು ವಿದ್ಯಾಧಿಕಾರಿಗಳು ಸಿಫಾರ್ಸು ಮಾಡಿರುತ್ತಾರೆ. ಈಗಿರುವ ವಿದ್ಯಾರ್ಥಿಗಳ ಸಂಖೆಯು ಅತ್ಯಧಿಕವಿದ್ದು ಹೆಚ್ಚಿನ ಉಪಾಧ್ಯಾಯರ ಅವಶ್ಯಕವಿದೆ ಆದರೆ ಜಿಲ್ಲಾ ವಿದ್ಯಾಧಿಕಾರಿಗಳು ಹೈಯರ್ ಎಲಿಮೆಂಟರಿ ಶಾಲೆ ತೆಗೆಯಲು ಅಪ್ಪಣೆಕೊಡದ ಕಾರಣ ಇದು ಸ್ಥಗಿತವಾಗಿದೆ. ಇಲ್ಲಿ ಹರಿಜನರ ಸಂಖೆಯೂ ಹೆಚ್ಚಿದೆ. 8ನೆಯ ತರಗತಿಯ ವರೆಗೆ ಓದಲು ಹಳ್ಳಿಯವರು ಪಟ್ಟಣಗಳಿಗೆ ಹೋಗಿ ಅಲ್ಲಿಯ ಖರ್ಚು ಭರಿಸಲು ಸಾಧ್ಯವಿಲ್ಲ. ಇಲ್ಲಿ ಕಟ್ಟಡದ ಅನುಕೂಲತೆಯೂ ಉಂಟು. ನಮಗೆ ಅನುಕೂಲತೆಯನ್ನೇಕೆ ಒದಗಿಸಬಾರದು.

(ನರಸಪ್ಪ)

(ಮದ್ರಾಸ್ ಸರ್ಕಾರದ ವಿದ್ಯಾಶಾಖೆಯವರು 500 ಜನ ಸಂಖೆಯ ಪ್ರತಿ ಹಳ್ಳಿಯಲ್ಲೂ ಪ್ರಾಥಮಿಕ ಶಾಲೆಗಳಾಗುವವರೆಗೆ ಉನ್ನತ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡಬಾರದೆಂದು ಸರ್ಕ್ಯುಲರ್ ಹೊರಡಿಸಿದ ಕಾರಣ ಆದರ ಪ್ರಕಾರಕ್ಕೆ D. E. O. ರು ಸಿಫಾರ್ಸು ಮಾಡಲಾಗಲಿಲ್ಲವೆಂದು ತಿಳಿದು ಬಂದಿದೆ. ಆದರೂ ಮೇಲಧಿಕಾರಿಗಳಲ್ಲಿ ಅಂಶ ತಿಳಿಸಿ ಅನುಕೂಲಪಡೆಯ ಬಹುದು. ಸಂಪಾದಕ)

ಹರಜನರನ್ನು ಹೋಟಲದಲ್ಲಿ ಬಿಡದಿದ್ದುದಕ್ಕೆ ಜುಲ್ಮಾನೆ.

ಹೊಸಪೇಟೆ ಹರಿಜನ ಸಂಘದ ಕಾರ್ಯದರ್ಶಿ ಶ್ರೀ ಡಿ. ನರಸಿಂಹದಾಸರನ್ನು ಹಡಗಲಿ ತಾಲೂಕು ಮಗಿ ಮಾವಿನಹಳ್ಳಿಯ ಹೋಟೆಲದಲ್ಲಿ (ಮಾಲೀಕರು:- ರಾಚಪ್ಪ ಈರಪ್ಪ) ಬಿಡದೆ ಕಾಫಿ ಕೊಡಲು ನಿರಾಕರಿಸಿದ ಕಾರಣ 9—6—49 ನೆಯ ದಿನ ಹೊಸಪೇಟೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು ಹೋಟಲದವರಿಗೆ ಜುಲ್ಮಾನೆ ಹಾಕಿದರು.

ಸಿರುಗುಪ್ಪೆ ಹರಿಜನರ ಮೆರವಣಿಗೆ

ಬಳ್ಳಾರಿ ಜಿಲ್ಲಾ ಸಿರುಗುಪ್ಪೆಯಲ್ಲಿ ಶಾಲಿವಾಹನ ಶಕೆ ೧೮೭೧ಕ್ಕೆ ಸರಿಯಾದ ಶ್ರೀ ವಿರೋಧಿನಾಮ ಸಂವತ್ಸರದ ಜೇಷ್ಠಮಾಸ ಶುಕ್ಲ ಪಕ್ಷ ೫ ಬುಧವಾರ (1-6-1949) ಸಾಯಂಕಾಲ ಆರು ಲಗ್ನಗಳ ಮೆರವಣಿಗೆಯು ಹರಿಜನರ ಕೇರಿಯಿಂದ (ಮಾದಿಗರ) ಪಂಚಕಲಶದ ಪಂಚ ಮುತ್ತೈದೆಯರಿಂದಲೂ ಸಿರುಗುಪ್ಪೆಯ ಎರಡು ಬ್ಯಾಂಡ್‌ಸೆಟ್ ವಾದ್ಯಗಳಿಂದಲೂ ಮುಖ್ಯ ಬೀದಿಯಲ್ಲಿ ಹೊರಟು ಸಾಂಗವಾಗಿ ನೆರವೇರಿತು. ತಮ್ಮ ಸಹಾನುಭೂತಿ ಮತ್ತು ಸ್ನೇಹವನ್ನು ವ್ಯಕ್ತಪಡಿಸಲು, ಊರಿನ ದೊಡ್ಡ ಮನುಷ್ಯರು ಬೇಗಾರೀ ಮುಖಂಡರೂ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಅಲಂಕೃತಗಾಡಿಗಳಲ್ಲಿ ಗಗನ ವಿಭೇದೀ ಗುಂಡಿನ (ಟೆಟ್) ಶಬ್ದದಿಂದ ಹೊರಟ ಇಂಥಾ ಅದ್ಭುತ ಮೆರವಣಿಗೆಯಲ್ಲಿ ಸುಮಾರು ಮೂರು ಸಾವಿರ ಸ್ತ್ರೀ ಪುರುಷರು ಇದ್ದು ಬೀದಿಗಳಲ್ಲಿ ಎಳ್ಳು ಚೆಲ್ಲಲು ಜಾಗಾ ಇದ್ದಿಲ್ಲ. ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಟಿ ಬಿ ಕೇಶವರಾಯರು ಎಲ್ಲರ ಸಹಕಾರ ಪಡೆಯಲು ಯತ್ನಿಸಿ ಯಶಸ್ವಿಯಾಗಿ ಸಹಾಯಮಾಡಿದರು. ಬಳ್ಳಾರಿಯಿಂದ ಬಂದ ರಿಸರ್ವ ಪೋಲೀಸ್ ಮತ್ತು ಹಚ್ಚೊಳ್ಳಿ, ಸಿರುಗುಪ್ಪೆಗಳ ಸಬ್ ಇನ್ಸ್‌ಪೆಕ್ಟರುಗಳು, ಸರ್ಕಲ್ ಇನ್ಸ್‌ಪೆಕ್ಟರ್ ವೇಣುಗೋಪಾಲ ನಾಯಿಡುರವರು ಎಲ್ಲಾ ವ್ಯವಸ್ಥೆಯನ್ನು ಸರಿಯಾಗಿಟ್ಟಿದ್ದರು. ಹರಿಜನರ ಎಲ್ಲಾ ಸಾಮಾಜಿಕ ಹಕ್ಕುಗಳನ್ನು ಕಾಪಾಡುವುದಾಗಿಯೂ ಅವರಿಗೆ ಎಲ್ಲಾ ವಿಧಗಳಲ್ಲಿಯೂ ಸಹಾಯ ಮಾಡುವುದಾಗಿಯೂ ಮುಖಂಡರು ಭರವಸೆಯಿತ್ತರು.

ಚುನಾವಣೆಗಳು ಮತ್ತು ಕಾಂಗ್ರೆಸ್

ಕಲ್ಕತ್ತಾ ನಗರದಲ್ಲಿ ಖಾಲಿ ಬಿದ್ದ ಅಸೆಂಬ್ಲಿ ಸ್ಥಾನಕ್ಕೆ ಸೋಶಿಯಲಿಸ್ಟ್ ರಿಪಬ್ಲಿಕ್ ಪಾರ್ಟಿ ಪರವಾಗಿ ಶರಚಂದ್ರಬೋಸರು ಕಾಂಗ್ರೆಸ್ ಪರವಾಗಿ ಸುರೇಶಚಂದ್ರದಾಸರು, ಸ್ವತಂತ್ರ ಡಿ ಕೆ. ರಾಯಚೌಧರಿ ಮತ್ತು ಎಸ್. ಶಿ. ರಾಯರು ಸ್ಪರ್ಧಿಸುತ್ತಲಿರುವರು.

ಚುನಾವಣೆಯ ಕಾರ್ಯಕ್ರಮದಲ್ಲಿ ತಮ್ಮ ತಮ್ಮ ಧ್ಯೇಯನೀತಿಗಳ ಪ್ರಚಾರಕ್ಕೆ ಸ್ಥಾನವಿರಬೇಕಾಗಲಿ, ಹಿಂಸಾಚಾರಗಳಿಗೆ ಡೆಯಿರಬಾರದು. ಈ ದೃಷ್ಟಿಯಿಂದ ಕಲ್ಕತ್ತೆಯಲ್ಲಿ ನಡೆದ ಹಿಂಸಾಕೃತ್ಯಗಳನ್ನು ಖಂಡಿಸದೆ ವಿಧಿಯಿಲ್ಲ. ಕೇಂದ್ರದಿಂದ ನೆಹರು ಪಟೇಲರು ಸಂದೇಶಗಳನ್ನು ಕಳುಹಿಸಿ ಕಾಂಗ್ರೆಸ್ ಉಮೇದುವಾರರನ್ನು ಗೆಲಿಸಲು ಕೇಳಿಕೊಂಡಿದ್ದಾರೆ.

ಈಗ ಶ್ರೀ ಶರಚಂದ್ರಬೋಸರು ಸ್ವಿಟ್ಸರ್ಲ್ಯಾಂಡ್‌ದಲ್ಲಿದ್ದು ಅವರ ಪರವಾಗಿ ಅವರ ಮಿತ್ರರು ಚುನಾವಣೆ ಪ್ರಚಾರವನ್ನು ಕೈಗೊಂಡಿದ್ದಾರೆ. "ಇತ್ತೀಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಕೊಳೆಯಧಿಕವಾಗುತ್ತಾನಡೆದಿದೆ. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಸದಸ್ಯರು ಬಾಧ್ಯತೆ ಇಲ್ಲದೆ ವರ್ತಿಸುತ್ತಾ ಲಂಚ, ರುಶ್ವತ್ತು ಮತ್ತು ಸ್ವಾರ್ಥ ಸಾಧನೆಯ ಕೆಲಸಗಳಲ್ಲಿ ತೊಡಗಿರುತ್ತಾರೆ. ಪ್ರಜಾತಂತ್ರ ಹೆಸರಿನಿಂದ ರಾಜ್ಯಭಾರನಡೆಸಿ ಬಡವರ ಸೂರೆಯಾಗುತ್ತಲಿದೆ. ಈ ಸರಕಾರವು ಕೆಲ ಸಾಹುಕಾರರ ಕೈಗೊಂಬೆಯಾಗಿವೆ. ಈ ಪರಿಸ್ಥಿತಿಯು ನಿರ್ಮೂಲವಾಗಬೇಕೆಂದರೆ ಕಾಂಗ್ರೆಸ್ ಮೂಲಕ ಸಾಧ್ಯವಾಗುವುದಿಲ್ಲ ಹೊರಗಿನವರೇ ಇದನ್ನು ಸಾಧಿಸಬಲ್ಲರು.'' ಎಂದು ಶ್ರೀ ಶರತ್‌ಬೋಸರು ತಮ್ಮ ಚುನಾವಣೆ ಪ್ರಚಾರಪತ್ರದಲ್ಲಿ ಹೇಳಿರುತ್ತಾರೆ. ಇದು ಅಕ್ಷರಶಃ ನಿಜವೆಂಬುದು ಪ್ರಜೆಗಳಿಗೇಗೊತ. ಬಂಗಾಳದಲ್ಲೇಕೆ ಇಡೀ ಹಿಂದೂಸ್ಥಾನದಲ್ಲೇ ನಾಯಕಮಣಿಗಳಲ್ಲಿ ಶ್ರೇಷ್ಠನೆನಿಸಿದ ಸ್ವಾತಂತ್ರ್ಯ ವೀರ ಸುಭಾಸಚಂದ್ರಬೋಸ್‌ರ ಸೋದರ, ಶರತಚಂದ್ರಬೋಸ ಚುನಾವಣೆಯ ಪರಿಣಾಮವೇನಾಗುತ್ತೆಂಬುದು ಎಲ್ಲರಿಗೂ ಗೊತ್ತು ಇಬ್ಬರೇ ನಿಂತರೆ ಕಾಂಗ್ರೆಸ್‌ಗೆ ಸೋಲು ಖಂಡಿತವೆಂದು ಮತ್ತಿಬ್ಬರು ಅನಾಮಧೇಯರನ್ನು ನಿಲ್ಲಿಸಿ ವೋಟುಗಳನ್ನು ಚಲ್ಲಾಪಿಲ್ಲಿ ಮಾಡುವದೊಂದು ಚುನಾವಣೆ ಕಾಲದ ಹೀನ ಪದ್ಧತಿಯು ಇಲ್ಲಿಯು ಜಾರಿಗೆ ಬಂದಿದೆ.

ನೆಹರೂ, ಪಟೇಲರ ವ್ಯಕ್ತಿತ್ವದಿಂದ ಮಾತ್ರ ಕೇಂದ್ರ ಸರಕಾರವುಳಿದಿದೆ. ಆದರೆ ಕಾಂಗ್ರೆಸ್ ಸಂಸ್ಥೆಯಲ್ಲಿ ಗೆದಲು ಪ್ರಾರಂಭವಾಗಿದೆ. ಅದನ್ನು ಹುಳುಗಳು ತಿನ್ನಹತ್ತಿವೆ. ಪರಿಣಾಮವೇನಾಗುತ್ತೋ, ಭವಿಷ್ಯವೇ ಹೇಳಬೇಕು ಇನ್ನು ಮೇಲೆ ಜನತೆಯು ನಾಯಕಮಣಿಗಳ ಹೆಸರನ್ನುಪಯೋಗಿಸಿದರೂ ಮೋಸ ಹೋಗುವುದಿಲ್ಲ, ಇದಕ್ಕೆ ಬೊಂಬಾಯಿ ಚುನಾವಣೆಗಳೇ ಸಾಕ್ಷಿ.

—)0(—

ಕಾಂಗ್ರೆಸ್ ಸೋತರೆ ಅದರ ಕಾರಣವು ಸಂಸ್ಥೆಯ ಅರ್ಹತೆಯೇ?

ಮಹಾತ್ಮ ಗಾಂಧಿಯವರ ಪ್ರಮುಖ ಶಿಷ್ಯರಲ್ಲೊಬ್ಬರೂ ಹರಿಜನ ಪತ್ರಿಕೆಯ ಸಂಪಾದಕರೂ ದೀರ್ಘ ಲೇಖನವೊಂದನ್ನು ಬರೆದು ಕಾಂಗ್ರೆಸ್ ಸಂಸ್ಥೆಯ ಕೊಳೆಯನ್ನು ಹೊರಗೆಡವಿದ್ದಾರೆ. ಮುಖ್ಯಾಂಶಗಳು ಹೀಗಿವೆ.

"........ಜನಗಳ ಪರಿಸ್ಥಿತಿಯು ಕರುಣಾಜನಕವಾಗಿವೆ, ಶಾಸನ ಸಭೆಯ ಮಂದಿರಗಳಲ್ಲಿ ಸಂತೋಷಕೂಟ ವ್ಯರ್ಥ ಚರ್ಚೆಗಳಿಗಾಗಿ ಈ ಪ್ರತಿನಿಧಿಗಳನ್ನು ಪ್ರಜೆಗಳು ಆರಿಸಲಿಲ್ಲ ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಹೆಸರುಗಳಿಂದ ಇವರನ್ನಾರಿಸಿ ತರಬೇಕೆಂದು ಪ್ರಜೆಗಳಿಗೆ ಹೇಳಲಾಗಿತ್ತು. ಪ್ರಜೆಗಳು ಇವರಿಂದ ದೊಡ್ಡ ಆಶೋತ್ತರಗಳು ನೆರವೇರುತ್ತವೆಯೆಂದು ಭಾವಿಸಿದ್ದರು. ಅವರ ಸಮಸ್ಯೆಗಳೆಲ್ಲಾ ಉಲ್ಬಣಿಸಲ್ಪಟ್ಟಿವೆ. ಕಾಂಗ್ರೆಸ್ ಸೋತರೆ ಯಾರಿಗೂ ದುಃಖವಿಲ್ಲ. ರಾಜಕೀಯ ದುರಾಡಳಿತದಿಂದಲೂ ಆರ್ಥಿಕ ಹೀನತೆಯಿಂದಲೂ ಜನತೆಯು ಕುಗ್ಗಿ ಬೆಂಡಾಗುತ್ತಲಿದೆ. ಆಸಹ್ಯದಿಂದ ಅವರು ಹೊರಬೀಳಬೇಕು. ಇಲ್ಲವೇ ಅನುಮಾನದಿಂದ ಹೊರದೂಡಲ್ಪಡಬೇಕು.

ನಿಜಾಮರು ೫೦ ಕೋಟಿ ರೂ ಭಾರತ ಸರಕಾರಕ್ಕೆ ಕೊಡುವರೋ?

೫೦ ಕೋಟಿ ಭಂಗಾರ ಉಳಿಸಿಕೊಳ್ಳುವ ಪ್ರಯತ್ನ

ಭಾರತ ಸರಕಾರವು ಹೈದರಾಬಾದ ನಿಜಾಮರ ಖಾಸಗಿ ಆಸ್ತಿಯೆಷ್ಟಿದೆಯೆಂಬುದರ ಅಂದಾಜು ಮಾಡಲು ನಿಯಮಿಸಿರುವುದು ಸರಿಯಷ್ಟೆ. ಪ್ರಪಂಚದಲ್ಲೇ ಮೊದಲನೆಯ ಶ್ರೀಮಂತನಾದ ನಿಜಾಮನು ತನ್ನಲ್ಲಿ ಇಟ್ಟಿಗೆಗಳಂತೆ ಮಾಡಿಟ್ಟಿರುವ ೫೦೦ ಕೋಟಿ ರೂ. ಬೆಲೆಯ ಭಂಗಾರವು ಹೋಗುವುದಲ್ಲಾ ಎಂಬ ದುಃಖದಿಂದ ಇಂಡಿಯಾ ಗವರ್ನಮೆಂಟ್ ಬಾಂಡುಗಳನ್ನು ೫೦ ಕೋಟಿ ರೂ ಗಳಿಗೆ ಕೊಂಡುಕೊಳ್ಳುವೆನೆಂಬೂ, ತನ್ನ ಭಂಗಾರ ಆಭರಣಗಳನ್ನು ತನಗೇ ಬಿಟ್ಟು ಬಿಡಬೇಕೆಂದೂ ಭಾರತ ಸರಕಾರಕ್ಕೆ ಹೇಳಿ ಕಳುಹಿಸಿರುವುದಾಗಿ ಒಬ್ಬ ಸುದ್ದಿಗಾರರು ತಿಳಿಸುತ್ತಾರೆ.

ಟಪಾಲಾಫಿಸಿನಲ್ಲಿ ಕಳ್ಳತನ

ಪರದೇಶಗಳಿಂದ ಬರುವ ೭೦ ಸಾವಿರ ಮಾಸಪತ್ರಿಕೆಗಳಲ್ಲಿ ಅರ್ಧದಷ್ಟು ಪೋಸ್ಟ ಆಫೀಸುಗಳಲ್ಲಿ ಕಳುವಾಗಿ ರೈಲ್ವೆ ಬುಕ್‌ಸ್ಟಾಲ್‌ಗಳನ್ನು ಸೇರುವವೆಂದು, ಅಲ್ಲಿ ಅವರು ಅವನ್ನು ಅರ್ಧ ಕ್ರಯಕ್ಕೆ ಮಾರುವರೆಂದೂ ತಿಳಿದುಬಂದಿದೆ.

ಡಾ॥ ಲೋಹಿಯಾರಿಗೆ ಮಾವಿನ ಹಣ್ಣುಗಳ ಕಾಣಿಕೆ

ಪಂಡಿತ ನೆಹರುರವರಿಂದ

ಹೊಸದಿಲ್ಲಿ ದಿಲ್ಲಿ ಜಿಲ್ಲಾ ಜೇಲಿನಲ್ಲಿ ಸ್ಥಾನಬದ್ಧತೆಯಲ್ಲಿ ಇಡಲ್ಪಟ್ಟಿರುವ ಸೋಶಾಲಿಸ್ಟ ಧುರೀಣ ಡಾ॥ ರಾಮ ಮನೋಹರ ಲೋಹಿಯಾ ಅವರಿಗೆ ಸೋಮವಾರ ಮುಖ್ಯ ಮಂತ್ರಿ ಪಂಡಿತ ಜವಾಹರಲಾಲ ನೆಹರು ಹಾಗೂ ಅವರ ಮಗಳು ಶ್ರೀಮತಿ ಇಂದಿರಾ ಗಾಂಧಿಯವರು ಮಾವಿನ ಹಣ್ಣಿನ ಬುಟ್ಟಿಯೊಂದನ್ನು ಕಳಿಸಿಕೊಟ್ಟರು.

ಮುಖ್ಯ ಮಂತ್ರಿಗಳ ವೈಯಕ್ತಿಕ ನೌಕರರಲ್ಲೊಬ್ಬನು ಈ ಬುಟ್ಟಿಯನ್ನು ಜೇಲಿನಲ್ಲಿರುವ ಡಾ॥ ಲೋಹಿಯಾರಿಗೆ ಒಯ್ದು ಕೊಟ್ಟನು.

ಹೈದರಬಾದಿನಲ್ಲಿ ಅಡಗಿಸಿಟ್ಟ ಶಸ್ತ್ರಾಸ್ತ್ರಗಳು

ಇನ್ನೂ ದೊರೆಯುತ್ತಲಿವೆ

ಹೈದರಾಬಾದ — ಹೈದರಾಬಾದ ನಗರ ಪೋಲೀಸರು ಕಳೆದೆರಡು ತಿಂಗಳಲ್ಲಿ ನಡೆಸಿದ ಶೋಧನೆಯಿಂದ ಅಡಗಿಸಿಟ್ಟಿದ್ದ ಸ್ಟೆನ್‌ಗನ್ ರಿವಾಲ್ವರ ಮತ್ತು ರೈಫಲ್ಲುಗಳು ಕೂಡಿ ೫೦ ಆಯುಧಗಳು ದೊರೆತಿವೆ. ಸುಮಾರು ೫೦೦೦ ಕಾಡತೂಸುಗಳು ಖಡ್ಗ ಮತ್ತು ಬರ್ಚಿಗಳು, ಬಂದೂಕಗಳು ಬಿಡಿ ಭಾಗಗಳು ದೊರೆತಿವೆ. ಗುಪ್ತವಾಗಿಟಲ್ಪಟ್ಟ ಇಂಥ ಶಸ್ತ್ರಗಳು ಕಮ್ಯುನಿಸ್ಟರ ಕೈಗೆ ಬೀಳಬಾರದೆಂಬುದೂ ಶೋಧದ ಕಾರಣಗಳಲ್ಲೊಂದಾಗಿದೆ.

ಚಿನ್ನಬಸಪ್ಪನನ್ನು ಗುಂಡಿನಿಂದ ಹೊಡೆದು ಕೊಂದರು

ಬಳ್ಳಾರಿ ನಗರದ ವಾಸಿ ಈಡಿಗರ ಶ್ರೀ ಚಿನ್ನಬಸಪ್ಪನನ್ನು ೭ ತಾ॥ ಖೂನಿ ಮಾಡಿದರು

ಮಂಗಳವಾರ ರೂಪನಗುಡಿಯಿಂದ ಬರುತ್ತಿರಬೇಕಾದರೆ ಹಗರಿ ನದಿಯ ಮರಳಲ್ಲಿ ಮತ್ತೊಂದು ಗಾಡಿಯು ಎದುರಾಗಿ ಅದರಲ್ಲಿದ್ದವರು ಗುಂಡು ಹಾರಿಸಿದ ಪರಿಣಾಮವಾಗಿ ಆತನು ಮರಣ ಹೊಂದಿದನೆಂದು ಹೇಳಲಾಗಿದೆ. ಚಿನ್ನಬಸಪ್ಪನ ಶತ್ರುಗಳು ಗುಂಡು ಹಾರಿಸಿದನಂತರವೂ ಆಯುಧಗಳಿಂದ ಶರೀರದ ವಿವಿಧಭಾಗಗಳನ್ನು ತಿವಿದು ಘಾಯಗೊಳಿಸಿದರಂತೆ. ಆಸ್ಪತ್ರೆಯಲ್ಲಿ ಮೃತದೇಹದ ಪರೀಕ್ಷೆಯನಂತರ ೮ ನೆಯ ತಾ॥ ಬುಧವಾರ ಬೆಂಗಳೂರು ರಸ್ತೆ ಕೋಟೆಬೀದಿಗಳ ಮುಖಾಂತರ ಸ್ಮಶಾನಯಾತ್ರೆಗಾಗಿ ಮೆರವಣಿಗೆ ತೆಗೆಯಲಾಗಿ ಸಾವಿರಾರು ಬಂಧುಮಿತ್ರರು ಭಾಗವಹಿಸಿದ್ದರು.

ಸಿಕ್ಕಿಮದ ಆಡಳಿತ ಕೇಂದ್ರಕ್ಕೆ

ಡಿಲ್ಲಿ- ಶಾಂತಿಸುವ್ಯವಸ್ಥೆಗಾಗಿ ಭಾರತ ಸರಕಾರವು ಇಂದಿನಿಂದ ಸಿಕ್ಕಿಮದ ಆಡಳಿತೆಯ ಹೊಣೆ ಹೊತ್ತಿದೆ ಎಂದು ಸರಕಾರೀ ಘೋಷಣೆ ಹೊರಟಿದೆ.

ಸ್ಟೇಟ ಕಾಂಗ್ರೆಸ್ ಮತ್ತು ಸಿಕ್ಕಿಮ ಮಹಾರಾಜರ ನಡುವೆ ಮತಭೇದವಾಗಿದ್ದು ಆಡಳಿತೆ ವಹಿಸಲು ಭಾರತ ಸರಕಾರವನ್ನು ಕೇಳಿಕೊಂಡಿದ್ದರಿಂದ ಶ್ರೀ ಕೇಸಕರರ ಆದೇಶದ ಮೇರೆಗೆ ಸಿಕ್ಕಿಮದ ರಾಜಧಾನಿಗೆ ಸೈನ್ಯ ಕಳಿಸಲಾಗಿತ್ತು. ಪರಿಸ್ಥಿತಿ ಸುಧಾರಿಸಿದ್ದರಿಂದ ಪೂರ್ಣ ಆಡಳಿತೆ ವಹಿಸಿಕೊಂಡಿದೆ.

ಭಾರತ ಹೊಸ ಘಟನೆಯ ಘೋಷಣೆ

೧೯೫೦ ಜನವರಿ ೨೬ಕ್ಕೆ

ದಿಲ್ಲಿ- ಇಂದು ಸಂಜೆ ಕಾಂಗ್ರೆಸ್ ಪಕ್ಷದ ಸಭೆ ಸೇರಿ ರಚಿಸಿದ ಕಾರ್ಯಕ್ರಮದ ಮೇರೆಗೆ ಭಾರತದ ಹೊಸ ಘಟನೆಯು ೧೯೫೦ ರ ಜನವರಿ ೨೬ ಕ್ಕೆ (ಸ್ವಾತಂತ್ರ ದಿನ) ಘೋಷಿಸಲ್ಪಡಬಹುದೆಂದು ನಿರೀಕ್ಷಿಸಲಾಗಿದೆ.

ಘಟನೆಯನ್ನು ಮಹಾತ್ಮರ ಜನ್ಮದಿನವಾದ ಅಕ್ಟೋಬರ ೨ಕ್ಕೆ (೧೯೪೯) ಪಾಸು ಮಾಡಬಹುದು.

ಘಟನಾ ಸಭೆಯನ್ನು ಮುಂದುವರಿಸಬಾರದೆಂದು ನಿರ್ಣಯವಾಯಿತು.

—)0(—

ಅಂಬಾಲಾ ತುರಂಗಕ್ಕೆ ಗೋಡಸೇನ ಸ್ಥಾನಾಂತರ

ಅಂಬಾಲಾ ಮಹಾತ್ಮಾ ಗಾಂಧಿಯವರನ್ನು ಕೊಲೆ ಮಾಡಿದ ನಥುರಾಮ ಗೋಡಸೇನನ್ನು ಸಿಮ್ಲಾದಿಂದ ಮರಳಿ ಅಂಬಾಲಾ ಕೇಂದ್ರ ತುರಂಗಕ್ಕೆ ತಂದಿಡಲಾಯಿತು. ಗಾಂಧಿ ಕೊಲೆಯ ಖಟ್ಲೆಯಲ್ಲಿ ಆರೋಪಿಗಳಾದ ಆಪಟೆ ಹಾಗೂ ಇನ್ನುಳಿದ ಐವರನ್ನು ಈ ಮೊದಲೇ ಇಲ್ಲಿಯ ಜೇಲಿನಲ್ಲಿ ಬಂಧಿಸಲಾಗಿತ್ತು.

ಬಳ್ಳಾರಿಗೆ ಕಳ್ಳ ಸಾಗಾಟ

ಗಂಗಾವತಿಯಲ್ಲಿ ಮಾಲಿನ ಪತ್ತೆ

ಚಿಕ್ಕ ಜಂತಗಲ್ಲ (ಗಂಗಾವತಿ) ಕಳೆದ ಎರಡು ತಿಂಗಳಿಂದಲೂ ಈ ಮಾರ್ಗವಾಗಿ ಕಳ್ಳತನದಿಂದ ಜೋಳ ಗೋಧಿ, ಹತ್ತಿಕಾಳು, ಹಳೆಬೆಲ್ಲ (ಸರೆಗಾಗಿ) ಇತ್ಯಾದಿ ಕಂಪ್ಲಿ (ಬಳ್ಳಾರಿ ಜಿಲ್ಲಾ) ಗೆ ಕಳಿಸಲಾಗುತ್ತಿತ್ತು ಈ ಸಮಾಚಾರ ತಿಳಿದ ಕೂಡಲೇ ಗಂಗಾವತಿಯ ಡೆಪ್ಯೂಟಿ ಕಲೆಕ್ಟರ ಬಿಲ್ಮೋರಿಯಾ ಇವರು ತಾ॥ ೪ ರಂದು ಇಲ್ಲಿಗೆ ಬಂದು, ಕಳವೇಯಲ್ಲಿ ಹೆಸರಾದ ಬಟಾರಿ ಹನುಮಂತ ಎಂಬವನ ಮನೆಯನ್ನು ಶೋಧಿಸಿದರು. ಆದರೆ ಈ ಮೊದಲೇ ಅವನಲ್ಲಿಯ ಮಾಲು ಹೋದದ್ದರಿಂದ ಅವನ ಹೇಳಿಕೆ ತೆಗೆದುಕೊಂಡು ಬಟಾರಿಯ ವಿರುದ್ಧ ಕ್ರಮ ತೆಗೆದುಕೊಂಡಿದ್ದಾರೆ ಇದಲ್ಲದೆ ಬರಗೂರ ಬಸವಣ್ಣ, ಪಿ. ವೆಂಕಣ್ಣ ಇವರು ಅಧಿಕಾರಿಗಳು ಬಂದಕೂಡಲೇ ಫರಾರಿಯಾದ್ದರಿಂದ ಅವರ ಮನೆ ಶೋಧಿಸಲಾಗಿ ಕಂಪ್ಲಿಗೆ ಕಳಿಸುವ ಉದ್ದೇಶದಿಂದ ತಂದಿಟ್ಟ ೧೫೦ ಚೀಲ ಹತ್ತಿಕಾಳು ದೊರೆತವು. ಅವನ್ನು ಗೌಡನ ಸ್ವಾಧೀನಕ್ಕೆ ಒಪ್ಪಿಸಿದರು. ಕಲೆಕ್ಟರರು ಜನತೆಯನ್ನು ಉದ್ದೇಶಿಸಿ ಇಂತಹ ದೇಶ ದ್ರೋಹಿಗಳನ್ನು ಹಿಡಿದಳಿದು, ಸರಕಾರದೊಂದಿಗೆ ಸಹಕಾರ ಮಾಡಬೇಕೆಂದು ಉಪದೇಶ ಮಾಡಿದರು.

ಬಳ್ಳಾರಿ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

S C 74 49.

ವಾದಿ.— ಎ. ದೇವೇಂದ್ರಸ್ವಾಮಿ.ಡು.

ಪ್ರತಿವಾದಿಗಳು:— ೧. ಪದ್ಮಾವತಮ್ಮ

೨. ರುದ್ರಪ್ಪ.

ನೋಟೀಸು.

ನಿಮ್ಮಿಂದ ಬಾಡಿಗೆಯ ಬಾಕಿ ವಸೂಲಿ ಮಾಡಿಕೊಳ್ಳಲು ಮಾಡಿದ ದಾವೆಯು 21-6-49ಕ್ಕೆ ವಿಚಾರಣೆಯಿದೆ.ಅಂದು ನೀವಾಗಲಿ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ಆಕ್ಷೇಪಣೆ ತಿಳಿಸದಿದ್ದರೆ ಎಕ್ಸಪಾರ್ಟಿಯಾಗುವದೆಂದು ಈ ಮೂಲಕ ತಿಳಿಸಲಾಗಿದೆ

ಪಿ. ಪ್ರಹ್ಲಾದರಾವ್,

ವಾದಿಯ - ಅಡ್ವೊಕೇಟ್,

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ಸುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚಾರಿತ್ರರಾದ S. S. L C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ಆಯುರ್ವೇದ ವಿದ್ಯಾಪೀಠ
P O. ಸಂಗನಕಲ್ಲು ಬಳ್ಳಾರಿ.

ಮದರಾಸು ಸರಕಾರದ ಮೂರು ಕರ ಯೋಜನೆಗಳು

ಜಾಹೀರಾತ ಮೇಲೆ ೧೦೦೦ ಕ್ಕೆ ೧೦ ರಷ್ಟು ತೆರಿಗೆ

ಮದರಾಸು ಸರಕಾರದವರು ಇಂದು ಗ್ಯಾಜಟದಲ್ಲಿ ಜಾಹೀರಾತುಗಳ ಮೇಲಿನ ಕರವನ್ನು ಒಳಗೊಂಡು ಮೂರು ಕರಗಳ ಮಸೂದೆಗಳನ್ನು ಪ್ರಸಿದ್ಧಿಸಿದ್ದು ಈ ಮೂರೂ ಯೋಜನೆಗಳಿಂದ ಕೂಡಿ ಪ್ರಾಂತದ ಉತ್ಪನ್ನವು ೧೩೪ ಲಕ್ಷ ರೂಪಾಯಿ ಹೆಚ್ಚಾಗುವದೆಂದು ಎಣಿಸಲಾಗಿದೆ. ಈ ವರ್ಷದ ಮುಂಗಡ ಪತ್ರವು ೪ ಕೋಟಿ ರೂಪಾಯಿ ಕೊರತೆಯುದಿದ್ದು ಮೇಲಿನ ಯೋಜನೆಗಳಿಂದ ಕೊರತೆಯು ಅಂಶತಃ ತುಂಬುವದು.

ವೃತ್ತ ಪತ್ರಗಳು ಜಾಹಿರಾತುಗಳ ಪ್ರಕಟನೆಗಾಗಿ ತೆಗೆದುಕೊಳ್ಳುವ ಹಣದ ಮೇಲೆ ೧೦೦ ಕ್ಕೆ ೧೦ ರಂತೆ ಜಾಹೀರಾತು ಕರ ವಸೂಲ ಮಾಡಲ್ಪಡುವದು. ಮತ್ತು ಜಾಹೀರಾತ ಏಜಂಟ ಹಾಗು ಏಜನ್ಸಿಗಳಿಗೆ ಜಾಹೀರಾತ ಪ್ರಕಟನೆಗಳಿಗೆ ತಗಲುವ ವೆಚ್ಚದ ಮೇಲೆಯೂ ಮೇಲಿನಷ್ಟೆ ಕರ ಬೀಳುವದು. ವೃತ್ತಪತ್ರಗಳ ಪ್ರಕಾಶಕರು ಹಾಗು ಜಾಹೀರಾತ ಏಜಂಟರು ಲಾಯಸೆನ್ಸನ್ನೂ ಜಾಹೀರಾತುಗಳ ಉಳಿದ ಪ್ರಕಾಶಕರು ಪರಮಿಟನ್ನೂ ಪಡೆದುಕೊಳ್ಳಬೇಕಾಗುವುದು.

ಮದರಾಸ ಕಾರ್ಪೊರೇಶನವು ಜಾಹೀರಾತ ಕರ ವಸೂಲ ಮಾಡುವ ಕಾಯದೆಯು ರದ್ದುಗೊಳಿಸಲ್ಪಟ್ಟು ಅದರಿಂದ ಅದಕ್ಕಾಗುವ ಹಾನಿಯನ್ನು ತುಂಬಿಕೊಡಲಾಗುವದು.

ಕರವನ್ನು ಕೊಡಲು ಇಲ್ಲವೆ ಸರಕಾರಿ ಲಾಯಸನ್ಸು ತೆಗೆದುಕೊಳ್ಳಲು ತಪ್ಪಿದವರಿಗೆ ೧೦೦೦ ರೂ ವರೆಗೆ ದಂಡ ವಿಧಿಸಲಾಗುವದು ಈ ಕರದಿಂದ ೨೦ ಲಕ್ಷ ರೂ ಉತ್ಪನ್ನ ಬರುವದು.

ಮತ್ತೊಂದು ಕರ ಯೋಜನೆಯಿಂದ ಗೋಡಂಬಿ, ಮೆಣಸಿನಕಾಯಿ, ತೆಂಗಿನಕಾಯಿ, ಕೊಬ್ಬರಿ, ಕಾಫಿ, ಎಣ್ಣೆಕಾಳು (ಸೆಂಗಾ ಒಳಗೊಂಡು) ಮೆಣಸು, ಬಟಾಟೆ, ಕಬ್ಬು, ಹುಣಿಸಿಹಣ್ಣು ಮೊದಲಾದ ಕೆಲವು ಆಹಾರ ಪದಾರ್ಥಗಳ ಮೇಲಿನ ಮಾರಾಟ ಕರವನ್ನು ರೂಪಾಯಿಗೆ ೩ ಪೈಯಿಂದ ೪॥ ಪೈಗೆ ಹೆಚ್ಚಿಸಲಾಗಿರುವದು. ಇದಲ್ಲದೆ ಈ ವರೆಗೆ ಮಾರಾಟ ಕರದ ಕ್ಷೇತ್ರದ ಹೊರಗೆ ಇದ್ದ ಹತ್ತಿ ಮೇಲೆ ರೂಪಾಯಿಗೆ ೩ ಪೈ ಕರ ಹೇರಲಾಗಿರುವದು ಇದರಂತೆ ಪ್ರಾಂತದಲ್ಲಿ ಬೆಳೆದು ಹೊರಗೆ ನಿರ್ಯಾತವಾಗುವ ಚಹಾದ ಮೇಲೆ ರೂಪಾಯಿಗೆ ೪॥ ಪೈ ಕರ ಹಾಕಲಾಗಿರುವದು ಈ ಕರಗಳಿಂದ ೧ ಕೋಟಿ ರೂಪಾಯಿ ಉತ್ಪನ್ನ ಬರಬಹುದೆಂದು ಅಂದಾಜಿರುವದು.

ಮೂರನೆ ಕರ ಭಾರವು ಪ್ರತಿಯೊಂದು ಸಿನೇಮಾ ಪ್ರದರ್ಶನ ಮೇಲೆ ಕರ ಹೇರುವದಿದ್ದು ಈ ಕರದಿಂದ ೧೪ ಲಕ್ಷ ರೂಪಾಯಿ ಉತ್ಪನ್ನ ಬರುವದೆಂದು ಎಣಿಸಲಾಗಿರುವದು.

ಅರ್ಥ ಮಂತ್ರಿಗಳಾದ ಮಾನ್ಯ ಬಿ ಗೋಪಾಲರೆಡ್ಡಿಯವರು ಈ ಮೂರು ಮಸೂದೆಗಳು ಜೂನ ೧೩ ರಿಂದ ಪ್ರಾರಂಭವಾಗುವ ಶಾಸನ ಸಭೆಯಲ್ಲಿ ಮಂಡಿಸಲ್ಪಟ್ಟು ಅಕ್ಟೋಬರ ೧ ರಿಂದ ಜಾರಿಯಲ್ಲಿ ತರಲ್ಪಡುವದೆಂದು ಹೇಳಿದರು.

ಜಾಗ್ರತ ಜನತೆಯನ್ನು ಮೋಸಗೊಳಿಸುವದು ಸಾಧ್ಯವಿಲ್ಲ

ನೇಪಾಳ ಕಾಂಗ್ರೆಸ ಅಧ್ಯಕ್ಷರ ಹೇಳಿಕೆ

ನೇಪಾಳ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀ ಮಾತ್ರಿಕಾ ಪ್ರಸಾದ ಕೊಯಿರಲಾ ಅವರು ಇಂದು ಇಲ್ಲಿ ಸಂದರ್ಶನವೊಂದರಲ್ಲಿ ಜನರಿಂದ ಅಧಿಕವಾದ ಪ್ರೋತ್ಸಾಹನ ದೊರೆಯುತ್ತಿದ್ದ ಈ ಸಮಯದಲ್ಲಿ ನೇಪಾಳದ ಸತ್ಯಾಗ್ರಹವನ್ನು ನಿಲ್ಲಿಸಿರುವ ನನ್ನ ಕೃತಿಯನ್ನು ಅರ್ಥಮಾಡಿಕೊಳ್ಳುವದು ಕೆಲ ಮಿತ್ರರಿಗೆ ಕಠಿಣ ಹೋಗುತ್ತಿದೆ ಎಂದು ಹೇಳಿದರು.

ಸತ್ಯಾಗ್ರಹ ನಿಂತೊಡನೆ ನೇಪಾಳದ ಅರಸರು ಜನರಿಗೆ ಘಾತವನ್ನೆಸಗುವರೆಂದು ಈ ಮಿತ್ರರ ಅಭಿಪ್ರಾಯವಾಗಿದೆ. ಆದರೆ ಎಚ್ಚೆತ್ತ ಜನತೆಯನ್ನು ಮೋಸಗೊಳಿಸುವದಾಗಲಿ ಧ್ಯೇಯಪರಾವೃತ್ತವನ್ನಾಗಿ ಮಾಡುವದಾಗಲಿ ಸಾಧ್ಯವಿಲ್ಲ ಎಂದು ಅವರು ಹೇಳಿದರು.

ಹೈದರಾಬಾದ್ ಸಮಾಚಾರ

ಹೈದರಾಬಾದ (ದ) ೭ ಹೈದರಾಬಾದ ಸರಕಾರದವರು ಇಂದು ಗ್ಯಾಜಿಟದಲ್ಲಿ ಒಂದು ಪ್ರಕಟನೆ ಕೊಟ್ಟು ನವಾಬ ಮೋಯಿನ ನವಾಜ ಜಂಗರನ್ನು ಅರ್ಥ ಮಂತ್ರಿಪದ ಹಾಗು ಸಿವಿಲ ಸರ್ವಿಸದಿಂದ ಮಾರ್ಚ ೧೫ ರಿಂದ ತಳ್ಳಿದ್ದನ್ನು ಘೋಷಿಸಿದ್ದಾರೆ. ಸರಕಾರಿ ಹಣವನ್ನು ದುರುಪಯೋಗಗೊಳಿಸಿದ ಹಾಗು ಸರಕಾರದ ಮತ್ತು ನಿಜಾಮರ ಆಜ್ಞೆಗಳಿಗೆ ಅವಿಧೇಯರಾಗಿ ನಡೆದ ಆರೋಪ ಅವರ ಮೇಲಿರುವವು.

ಪೋಲೀಸರು ಮತ್ತೆ ಅವಧಿ ಬೇಡಿದ್ದರಿಂದ ಶೋಬುಲ್ಲಾಖಾನರ ಕೊಲೆಯ ಖಟ್ಲೆಯ ವಿಚಾರಣೆಯು ಜೂನ ೧೩ ಕ್ಕೆ ಮುಂದುವರಿಸಲ್ಪಟ್ಟಿದೆ.

ಮಕ್ಕಳನ್ನು ಕೊಲ್ಲುವ ಕರೆದೆವ್ವನ ಕಾಟ

ಆಸಾಮ ಚಹಾ ತೋಟದಲ್ಲಿ

ಗೌಹಾತಿ, ಉತ್ತರ ಆಸಾಮದ ಒಂದು ಚಹಾ ತೋಟದಲ್ಲಿ ಕರೆದೆವ್ವವೊಂದು ಸಂಚರಿಸುತ್ತಿದೆಯೆಂದೂ ಅದು ತೋಟದ ಕೆಲಸ ನಿಲ್ಲಿಸಲು ಬೆದರಿಕೆ ಹಾಕುತ್ತಿದೆಯೆಂದೂ ವರದಿಯಾಗಿದೆ.

ದೆವ್ವವನ್ನು ಹೊರಡಿಸದಿದ್ದರೆ ಸಂಪು ಹೂಡುವದಾಗಿ ತೋಟದ ಕಾರ್ಮಿಕರು ತೋಟದ ಮ್ಯಾನೇಜರರಿಗೆ ತಿಳಿಸಿದ್ದಾರೆಂದು ಇಲ್ಲಿಗೆ ಬಂದ ವರದಿಯಿಂದ ತಿಳಿದುಬಂದಿದೆ.

ಈ ದೆವ್ವವು ಮಕ್ಕಳನ್ನು ಎತ್ತಿಕೊಂಡು ಹೋಗಿ ಕೊಲ್ಲುತ್ತಿದೆಯೆಂದು ಕೂಲಿಕಾರರು ಹೇಳುತ್ತಿದ್ದಾರೆ. ಸಶಸ್ತ್ರ ಪೋಲೀಸು ಈಗ ಚಹಾತೋಟ ಕಾಯುತ್ತಿದ್ದಾರೆ.

ಕೈಮಗ್ಗಗಳಿಗೆ ನೂಲು

ಸಹಕಾರಿ ಸಂಘವು ಪ್ರಾಂತದಲ್ಲಿ ನೂಲಿನ ವಿತರಣೆಯನ್ನು ಕೈಕೊಳ್ಳಬೇಕೆಂದು ಸರಕಾರದ ಇಚ್ಛೆಯಾಗಿದೆ

ನಮ್ಮ ಪ್ರಾಂತದಲ್ಲಿ ಬೇಸಾಯದ ನಂತರ ಕೈಮಗ್ಗದ ಉದ್ಯೋಗವೇ ಎರಡನೇ ದೊಡ್ಡ ಉದ್ಯೋಗವೆಂಬುದು ನಿಮಗೆ ಗೊತ್ತಿದೆ. ಕೈಮಗ್ಗದ ಬಟ್ಟೆಗಳನ್ನು ತಯಾರಿಸುವುದರಲ್ಲಿ ನಮ್ಮ ಪ್ರಾಂತವೇ ಇಡೀ ದೇಶದಲ್ಲಿ ಮೊದಲನೆಯದು. ೫ ಲಕ್ಷಕ್ಕಿಂತಲೂ ಹೆಚ್ಚು ಮಗ್ಗಗಳು ನಮ್ಮ ಪ್ರಾಂತದಲ್ಲಿ ಇರುವುವು. ಸಾಧಾರಣ ೫ ಲಕ್ಷ ಕುಟುಂಬಗಳು ಅಂದರೆ ಹೆಚ್ಚು ಕಡಿಮೆ ೨೫ ಲಕ್ಷ ಜನರು ತಮ್ಮ ಜೀವನಕ್ಕೆ ಈ ಉದ್ಯೋಗವನ್ನು ಅವಲಂಬಿಸಿಕೊಂಡಿದ್ದಾರೆ. ಕೈಮಗ್ಗಗಳಿಗೆ ಅಗತ್ಯವೇಕವ ನೂಲನ್ನು ಒದಗಿಸುವುದು ಸರಕಾರದ ಮುಖ್ಯ ಸಮಸ್ಯೆಯಾಗಿದೆ. ಯುದ್ಧಕ್ಕೆ ಮೊದಲು ಇದು ಹೆಚ್ಚು ಕಷ್ಟವಾಗಿರಲಿಲ್ಲ. ನಮ್ಮ ಉತ್ಪನ್ನವಾದ ನೂಲು ಕಡಿಮೆಯಾದಲ್ಲಿ, ಪರದೇಶದಿಂದ ಬೇಕಾದಷ್ಟು ನೂಲನ್ನು ತರಿಸಬಹುದಿತ್ತು. ಬಟ್ಟೆಯ ವಿಷಯವೂ ಅದೇ ರೀತಿ ಇದ್ದಿತು. ನಮ್ಮಲ್ಲಿಯ ಬಟ್ಟೆ ಸಾಕಾಗದೆ ಇದ್ದುದಲ್ಲಿ ಇಂಗ್ಲೆಂಡ, ಜಪಾನುಗಳಿಂದ ಬೇಕಾದಷ್ಟು ಬಟ್ಟೆಯನ್ನು ತರಿಸಬಹುದಿತ್ತು.

ಸಾಕಷ್ಟು ನೂಲಿಲ್ಲ

ಯುದ್ಧದಿಂದಾಗಿ, ಈ ಎಲ್ಲಾ ಅನುಕೂಲಗಳು ಇಲ್ಲದಂತಾಗಿ, ಪರಿಸ್ಥಿತಿ ಸಂಪೂರ್ಣ ಬದಲಾಯಿತು. ಸೈನಿಕರಿಗೆ ಮತ್ತು ಇತರ ಯುದ್ಧಕಾರ್ಯಗಳಿಗೆ ಸರಕಾರದ ಬಟ್ಟೆಯ ಕೇಳಿಕೆಯು ವಿಪರೀತವಾಗಿ ಹೆಚ್ಚಿದ್ದರಿಂದಲೂ, ಪರದೇಶದಿಂದ ಬಟ್ಟೆಯನ್ನು ತರಿಸುವ ಅನುಕೂಲತೆಗಳು ನಿಂತು ಹೋದುದರಿಂದಲೂ, ಕೈಮಗ್ಗದ ಉದ್ಯೋಗಕ್ಕೆ ಬಹಳ ಪ್ರೋತ್ಸಾಹ ದೊರಕಿತು. ಸಾರ್ವಜನಿಕರು, ತಮ್ಮ ಬಟ್ಟೆಯ ಅವಶ್ಯಕತೆಗಳಿಗೆ ಕೈಮಗ್ಗದ ಬಟ್ಟೆಯನ್ನೇ ಹೊಂದಿಕೊಂಡು ಇರಬೇಕಾಯಿತು. ಕೈಮಗ್ಗದ ಬಟ್ಟೆಯ ಕ್ರಯವು ಬಹಳ ಏರಿದ್ದರಿಂದ, ಇನ್ನೂ ಹೆಚ್ಚು ಜನ ಈ ಉದ್ಯೋಗವನ್ನು ಕೈಕೊಂಡರು. ಆದರೆ ನಮ್ಮ ದೇಶದಲ್ಲಿ ಉತ್ಪನ್ನವಾಗುವ ನೂಲು ಕೈಮಗ್ಗಗಳ ಅವಶ್ಯಕತೆಯನ್ನು ಪೂರೈಸಲು ಸಾಧ್ಯವಾಗಲಿಲ್ಲ. ಇದರಿಂದಾಗಿ ಮನೆಯುಳ್ಳ ಅನೇಕ ವ್ಯಾಪಾರಿಗಳು ನೂಲಿನ ಕ್ರಯವನ್ನು ತಮಗೆ ಇಷ್ಟಬಂದಂತೆ ಹೆಚ್ಚಿಸಿ ಬಿಟ್ಟರು. ಇದರಿಂದಾಗಿ ಬಡ ನೇಯ್ಗೆಯವನಿಗೆ ನೂಲನ್ನು ಯೋಗ್ಯವಾದ ಬೆಲೆಗೆ ಪಡೆಯುವುದು ಅಸಾಧ್ಯವಾಯಿತು. ಹೀಗಾಗಿ ಅನೇಕ ಸ್ವತಂತ್ರನಾದ ನೇಕಾರನು ವ್ಯಾಪಾರಿಯ ಕೂಲಿಯವನಾಗಬೇಕಾಯಿತು. ಅವನಿಂದ ನೂಲು ಪಡೆದುಕೊಂಡು, ನೆಯ್ದ ಬಟ್ಟೆಯನ್ನು ಅವನಿಗೆ ಹಿಂದೆ ಕೊಟ್ಟು ಕೂಲಿಯನ್ನು ಮಾತ್ರ ಅವನು ಪಡೆಕೊಳ್ಳತೊಡಗಿದನು. ಈ ಸಮಯದಲ್ಲಿ ಸರಕಾರದವರು ನೂಲು ನಿಯಂತ್ರಣ ಆಜ್ಞೆಯನ್ನು ಜಾರಿಗೆ ತಂದು (೧೯೪೪ರಲ್ಲಿ) ನೂಲು ಹಂಚುವಿಕೆಯನ್ನು ರೇಶನ್ ಪದ್ಧತಿಗೆ ಒಳಪಡಿಸಿದರು. ಇದರಿಂದಾಗಿ ನೇಯ್ಗೆಯವರಿಗೆ ನಿಯಂತ್ರಿತ ಬೆಲೆಗೆ ನೂಲು ಸಿಗಲು ಅನುಕೂಲವಾಯಿತಾದರೂ, ಎಲ್ಲರಿಗೂ ಬೇಕಾಗುವಷ್ಟು ನೂಲಿನ ಪೂರೈಕೆ ಇರಲಿಲ್ಲ. ಇದರಿಂದಾಗಿ ನೂಲನ್ನು ಕಳ್ಳಸಂತೆಯಲ್ಲಿ ಹೆಚ್ಚು ಬೆಲೆಗೆ ಮಾರುತ್ತಿದ್ದರು. ಮುಂದೆ ನೂಲಿನ ಪೂರೈಕೆಯು ಹೆಚ್ಚಾಗುತ್ತಾ ಬಂದದ್ದರಿಂದಲೂ, ಗಿರಣಿಗಳು ನ್ಯಾಯವಾದ ಬೆಲೆಗೆ ನೂಲು ಪೂರೈಸಲು ಒಪ್ಪಿದ್ದರಿಂದಲೂ ಸರಕಾರವು ೧೯೪೭ ನೇ ಮಾರ್ಚಿಯಲ್ಲಿ ನೂಲು ನಿಯಂತ್ರಣವನ್ನು ರದ್ದುಗೊಳಿಸಿತು. ನಿಯಂತ್ರಣವನ್ನು ತೆಗೆದ ಕೂಡಲೇ ನೂಲಿನ ಬೆಲೆಗಳು ತಿರುಗಿ ವಿಪರೀತವಾಗಿ ಏರಿದವು. ಇದಲ್ಲದೆ ಕೆಲವು ಗಿರಣಿಗಳಲ್ಲಿ ಕೂಲಿಕಾರರ ಮುಷ್ಕರದಿಂದಾಗಿ ಗಿರಣಿಗಳು ಮುಚ್ಚಲ್ಪಟ್ಟು, ನೂಲಿನ ಉತ್ಪಾದನೆಯು ಕುಂಠಿತವಾಯಿತು. ನೂಲಿನ ಸಂಪರ್ಕವಿದ್ದ ವ್ಯಾಪಾರಿಗಳು ವಿಪರೀತ ಬೆಲೆಗೆ ಮಾರತೊಡಗಿದರು. ಬಡನೇಯ್ಗೆಯವರಿಗೆ ತಮ್ಮ ಜೀವನದ ಆಧಾರವಾದ ನೂಲನ್ನು ಕೊಂಡುಕೊಳ್ಳಲು ಸಾಧ್ಯವಿಲ್ಲದೆ ಬಹಳ ಕಷ್ಟಕ್ಕೆ ಒಳಗಾದರು. ನೇಯ್ಗೆಯವರ ಅಸಂತುಷ್ಟಿ ಚಳವಳಿ ಬಲವಾಗತೊಡಗಿದ್ದರಿಂದ ಅವರಿಗೆ ಸರಿಯಾದ ಬೆಲೆಗೆ ತಕ್ಕಷ್ಟು ನೂಲು ಹಂಚುವ ಉಪಾಯಗಳನ್ನು ಸರಕಾರವು ಯೋಚಿಸತೊಡಗಿತು.

ಸಮರ್ಥವಾದ ಸಂಸ್ಥೆ ಬೇಕಾಯಿತು

ಹಿಂದೂಸ್ಥಾನ ಸರಕಾರದವರು ನೂಲು ಮತ್ತು ಬಟ್ಟೆಯ ನಿಯಂತ್ರಣವನ್ನು ಇನ್ನಷ್ಟು ಕ್ರಿಯಾಶೀಲವಾಗುವಂತೆ ಯೋಚಿಸಿ ಮದರಾಸ ಸರಕಾರವನ್ನು ನೂಲು ಮತ್ತು ಬಟ್ಟೆಯ ವಿತರಣ ಕಾರ್ಯವನ್ನು ಸಹಕಾರಿ ಸಂಘಗಳ ಮೂಲಕ ಮತ್ತು ನಂಬಿಗೆಯುಳ್ಳ ವ್ಯಾಪಾರಿಗಳ ಮುಖಾಂತರ ನಡೆಸಬೇಕೆಂದು ಕೇಳಿಕೊಂಡಿತು. ಇದರಂತೆ ಮದರಾಸ್ ಸರಕಾರವು ನೂಲು ನಿಯಂತ್ರಣವನ್ನು, ಹಂಚುವಿಕೆ ಮತ್ತು ಯೋಗ್ಯವಾದ ದರ ಜಾರಿಗೆ ತಂದಿತು. ಒಮ್ಮೆಲೇ ಸರಕಾರಕ್ಕೆ ಹಂಚುವ ಮತ್ತು ಮೇಲ್ವಿಚಾರಕ ಜನರನ್ನು ಆರಿಸಲು ಸಾಧ್ಯವಾಗಿಲ್ಲ. ಆದ್ದರಿಂದ ಈ ಕಾರ್ಯವನ್ನು ಯೋಗ್ಯ ರೀತಿಯಿಂದ ನಡೆಸಲು ಸಮರ್ಥವಾದ ಸಂಸ್ಥೆಯೊಂದನ್ನು ಕಂಡುಹಿಡಿಯುವುದು ಅವಶ್ಯವಾಯಿತು. ಚೆನ್ನಾಗಿ ವಿಚಾರಮಾಡಿ ಸರಕಾರದವರು ಮದರಾಸು ಕೈಮಗ್ಗ ನೇಕಾರರ ಪ್ರಾಂತಿಕ ಸಹಕಾರಿ ಸಂಘ ("ಮದರಾಸ್ ಹ್ಯಾಂಡ್‌ಲೂಮ್ ವೀವರ್ಸ್ ಪ್ರಾವಿನ್ಸಿಯಲ್ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್") ಮತ್ತು ಅದರ ಶಾಖೆಗಳನ್ನು ಈ ಕಾರ್ಯಕ್ಕೆ ಆರಿಸಿದರು. ಸರಕಾರವು ಬೇರೆ ಯೋಗ್ಯ ವ್ಯವಸ್ಥೆ ಮಾಡುವವರೆಗೆ ಸೊಸೈಟಿಗಳು ಈ ಕಾರ್ಯ ನಡೆಸಬೇಕೆಂದು ಇಚ್ಛಿಸಿತು. ಸಹಕಾರಿ ಸಂಘಗಳು ರೈತರಿಗೆ ಸಾಲಕೊಡುವುದು, ಕೂಲಿಕಾರರಿಗೆ ಧನಸಹಾಯ ಮಾಡುವುದು, ಕಡಿಮೆ ಸಂಬಳದ ನೌಕರರಿಗೆ ಸಹಾಯ ಮಾಡುವುದು ಇವೆಲ್ಲ ವಿಷಯಗಳು ನಿಮಗೆ ಗೊತ್ತಿವೆ. ಅದೇ ರೀತಿ ನೇಯ್ಗೆಯವರಿಗೂ ಸಹಾಯ ಮಾಡಲು ಸಂಘಗಳು ಇರುವುವು.

೯೦೦ ಸಹಕಾರಿ ಸಂಘಗಳು

ಮದರಾಸ್ "ಹ್ಯಾಂಡ್ ಲೂಮ್ ವೀವರ್ಸ್ ಪ್ರಾವಿನ್ಸಿಯಲ್ ಕೋ-ಆಪರೇಟಿವ್ ಸೊಸೈಟಿ"ಯು ಅತಿ ದೊಡ್ಡ ನೇಯ್ಗೆ ಕೆಲಸಗಾರರ ಸಹಕಾರಿ ಸಂಘವಾಗಿದೆ. ಪ್ರಾಂತದಲ್ಲಿನ ಸುಮಾರು 900 ಸಂಘಗಳು ಇದರ ಆಡಳಿತೆಯಲ್ಲಿ ಇರುವುವು. ಪ್ರಾಂತದಲ್ಲಿರುವ 5 ಲಕ್ಷ ಮಗ್ಗಗಳ ಪೈಕಿ 130 ಲಕ್ಷ ಮಗ್ಗಗಳು ಈ ಸಹಕಾರಿ ಸಂಘದ ಅಧೀನದಲ್ಲಿರುತ್ತವೆ. ನೇಯ್ಗೆಯವರು ಈ ಸಂಘದ ಸದಸ್ಯರಾಗಬಹುದು, ಸಂಘ ಅವರಿಗೆ ನೂಲನ್ನು ಪೂರೈಸಿ, ನೇಯ್ದ ಬಟ್ಟೆಯನ್ನು ಅವರಿಂದ ಪಡೆಕೊಂಡು, ತಕ್ಕ ಕೂಲಿಯನ್ನು ಅವರಿಗೆ ಕೊಡಲಾಗುವುದು. ಪ್ರಾಂತದಲ್ಲಿರುವ ನೇಕಾರರ ಸಂಘಗಳೆಲ್ಲಾ ಇದರ ಸಹ ಸದಸ್ಯತೆ ಹೊಂದಿರುವುವು. ಸಾಮಾನ್ಯವಾಗಿ ತಿಂಗಳೊಂದಕ್ಕೆ 5,400 ಬೇಲುಗಳಷ್ಟು ನೂಲನ್ನು ಸೊಸೈಟಿಗಳಿಗೆ ಹಂಚಲಿಕ್ಕಾಗಿ ಪ್ರಧಾನ ಕಚೇರಿಯು ಪಡೆಯುತ್ತಿದ್ದಿತು. ನಿಯಂತ್ರಣ ಯೋಜನೆಯನಂತರ 14,000 ಬೇಲು ನೂಲು ವಿತರಣೆಗೆ ಜಾಸ್ತಿ ಸಿಗತೊಡಗಿತು. ಈ ನೂಲನ್ನು ಸದಸ್ಯರಲ್ಲದ ನೇಯ್ಗೆಯವರಿಗೆ ಹಂಚಬೇಕಿದ್ದಿತು. ಸಹಕಾರಿ ಸಂಘಗಳು ಸದಸ್ಯರಲ್ಲದ ನೇಕಾರರಿಗೆ ನೂಲು ಹಂಚು

ವುದು ಅಗತ್ಯವಿಲ್ಲವೆಂದು ಇದ್ದರೂ, ಸರಕಾರದ ಆಜ್ಞೆಯ ಮೇರೆಗೆ ಈ ಕಾರ್ಯವನ್ನು ಸೊಸೈಟಿಯು ಒಪ್ಪಿಕೊಂಡಿತು. ಹೀಗಾಗಿ 1948 ನೇ ಜುಲೈ ತಿಂಗಳಿಂದ ಸಪ್ಟೆಂಬರ ತಿಂಗಳವರಿಗೆ ಪ್ರಾಂತಕ್ಕೆ ಬೇಕಾದ ನೂಲನ್ನು ಹಂಚುವ ಸಂಪೂರ್ಣ ಅಧಿಕಾರವು ಸಂಘದ ಕೈಯಲ್ಲಿ ಇದ್ದಿತು. ಅದರ ಮುಂದೆ ಶೇಕಡಾ 50 ರಷ್ಟನ್ನು, ಅಂದರೆ 9,236 ಬೇಲುಗಳನ್ನು ಹಂಚುವ ಕಾರ್ಯವು ಸಂಘಕ್ಕೆ ಕೊಡಲ್ಪಟ್ಟಿದೆ.

ಯೋಗ್ಯ ಬೆಲೆಗೆ ನೂಲು

ಸಂಘವು ಪ್ರಾಂತದ ಎಲ್ಲಾ ಭಾಗಗಳಲ್ಲಿ ಹರಡಿರುವ ತನ್ನ ಸದಸ್ಯ ಸಂಘಗಳಲ್ಲಿ 63 ರನ್ನು ಚಿಲ್ಲರೆ ವ್ಯಾಪಾರಿಗಳನ್ನಾಗಿಯೂ, ನಿಯಮಿಸಲಾಯಿತು. ಇವಲ್ಲದೆ ಬಹಳ ಜನ-ದಿನಲ್ಲಿ ವಾಸಿಸುವ ನೇಕಾರ ಅನುಕೂಲಕ್ಕಾಗಿ 44 ಹೊಸ ಅಂಗಡಿಗಳನ್ನು ಸಹ ಸಂಘವು ತೆರೆಯಿತು. ಈ 647 ಚಿಲ್ಲರೆ ಅಂಗಡಿಗಳು ಪ್ರಾಂತದ ಎಲ್ಲಾ ನೇಕಾರರಿಗೂ ಯೋಗ್ಯಬೆಲೆಗೆ ನೂಲನ್ನು ಒದಗಿಸುತ್ತಿವೆ.

ಸರಕಾರದ ಏರ್ಪಾಡು

ಸಂಘಗಳ ಮೂಲಕ ಹಂಚುತ್ತಿರುವ ನೂಲನ್ನು ಈ ರೀತಿ ಸಂಗ್ರಹಿಸಲಾಗುತ್ತದೆ. ಬೊಂಬೈಯಲ್ಲಿರುವ ಟೆಕ್ಸ್‌ಟೈಲ್ ಕಮಿಶನರ್ ಈ ಪ್ರಾಂತದಲ್ಲಿ ಮತ್ತು ಹೊರಗೆ ಇರುವ ಕೆಲವು ಗಿರಣಿಗಳು ಮದರಾಸ್ ಪ್ರಾಂತಕ್ಕೆ ಅವುಗಳು ಉತ್ಪನ್ನ ಮಾಡುವ ನೂಲನ್ನು ಕೊಡಲು ಆಜ್ಞಾಪಿಸಿದ್ದಾರೆ. ಸಂಘವು ಗಿರಣಿಗಳಿಂದ ಈ ನೂಲನ್ನು ಪಡಕೊಂಡು, ಸ್ಥಳೀಕ ಸಂಘಗಳ ಮೂಲಕ ನೇಯ್ಗೆಯವರಿಗೆ ಹಂಚುವುವು. ನೇಯ್ಗೆಯವರಿಗೆ ಸಾಕಷ್ಟು ನೂಲನ್ನು ಹಂಚುವುದಾದರೂ, ಒಬ್ಬನು ಒಮ್ಮೆ ಹೆಚ್ಚು ನೂಲು ಕೊಂಡುಕೊಳ್ಳದಂತೆ ತಡೆ ಇದೆ. 20 ಕೌಂಟಿನ 10 ಪೌಂಡ ಭಾರವಿರುವ 3 ಕಟ್ಟುಗಳು 20 ಕೌಂಟಿಗಿಂತ ಹೆಚ್ಚು, 10 ಪೌಂಡ ಭಾರದ 2 ಕಟ್ಟುಗಳು 60 ಮತ್ತು 80 ಕೌಂಟು 10 ಪೌಂಡಿನ 1 ಕಟ್ಟು ಇವುಗಳು ಮಿಲ್‌ನಿಂದ ಪಡೆಕೊಂಡ ಬೆಲೆಗಿಂತ 3 ಜಾಸ್ತಿಬೆಲೆಗೆ ಮಾರಲ್ಪಡುವುವು. 1948 ನೇ ಅಕ್ಟೋಬರದಿಂದ ಪ್ರಾಂತದ ಬೇಡಿಕೆಯ ಶೇಕಡಾ 50 ರಷ್ಟು ನೂಲನ್ನು ಮಾತ್ರ ಸಂಘಗಳು ಹಂಚುತ್ತಿದ್ದು, ಉಳಿದ ಅರ್ಧವನ್ನು ವ್ಯಾಪಾರಿಗಳು ದುರ್ವ್ಯವಹಾರ ಮಾಡದಂತೆ ಸಂಘಗಳು ತಡೆಯಾಗಿರುತ್ತವೆ.

ವ್ಯಾಪಾರಿಗಳೇ ಮಾರುತ್ತಾರೆ

ಹೊಲಿಯುವ ನೂಲುಗಳನ್ನೂ, ಮೀನು ಹಿಡಿಯುವವರಿಗೆ ಆಗತ್ಯವಿರುವ ನೂಲು ಮೊದಲಾದವುಗಳನ್ನೂ ಈಗಲೂ ವ್ಯಾಪಾರಿಗಳೇ ಮಾರುತ್ತಾರೆ. ನೇಕಾರರಿಗೆ ಯಾವ ನಿರ್ಬಂಧವೂ ಇಲ್ಲದೆ ನೂಲನ್ನು ತೆಗೆದುಕೊಳ್ಳಲು ಸಾಧ್ಯವಿದೆಯಾದರೂ, ಕೈಮಗ್ಗದ ಬಟ್ಟೆಗಳ ಬೇಡಿಕೆ ಕಡಿಮೆಯಾಗಿರುವುದರಿಂದ ಅವರು ನೂಲನ್ನು ಹೆಚ್ಚು ತೆಗೆದುಕೊಳ್ಳುತ್ತಿಲ್ಲ. ಸಹಕಾರಿ ಸಂಘವು ಪ್ರಾಂತದಲ್ಲಿ ನೂಲಿನ ವಿತರಣೆಯನ್ನು ಕೈಕೊಳ್ಳಬೇಕೆಂದು ಸರಕಾರದ ಇಚ್ಛೆಯಾಗಿದೆ. ಇದಕ್ಕೋಸ್ಕರ ಸರಕಾರವು ಎರಡು ಕೋಟಿ ರೂಪಾಯಿ ಸಾಲವನ್ನು ಶೇಕಡಾ 3 ರ ಬಡ್ಡಿಯಲ್ಲಿ ಕೊಡಲು ಒಪ್ಪಿದೆ. ಸಂಘಗಳು, ವಿತರಣೆಯ ಕಾರ್ಯವನ್ನು ಕೈಕೊಂಡರೆ ನೇಕಾರರಿಗೆ ಯೋಗ್ಯ ಬೆಲೆಯಲ್ಲಿ ನೂಲು ಸಿಕ್ಕಲು ಸಹಾಯವಾಗುವುದು ಸರಕಾರದ ಉದ್ದೇಶವಾಗಿದೆ. ನೇಕಾರರಿಗೆ ನೂಲು ಸಿಕ್ಕುವುದು ದುರ್ಲಭವಾಗಿದ್ದಾಗ ಸಂಘವು ಅವರಿಗೆ ನೂಲು ಒದಗಿಸಿದೆ. ಆದ್ದರಿಂದ ಪ್ರತಿಯೊಬ್ಬ ನೇಕಾರನೂ ಸಂಘದ ಸದಸ್ಯನಾಗಿ ಅದರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಿ ಅದನ್ನು ಚಿರಕಾಲ ಬಾಳುವಂತೆ ಮಾಡಬೇಕು.

ವಿಶ್ವ ಶಾಂತಿ

(ಕಳೆದ ಸಂಚಿಕೆಯಿಂದ ಬಂದದ್ದು)

ಜಾಗತಿಕ ಶಾಂತಿ

ಇಂದು ಜಗತ್ತಿನಲ್ಲಿ ಕಲಹದ ವಾತಾವರಣವಿದ್ದು ವಿನಾಶವು ಇಣಿಕಿ ನೋಡುತ್ತಿದೆ. ಜನರಲ್ಲಿ ದ್ವೇಷ ಅಸೂಯೆ, ಭೀತಿ ಸಂಶಯಗಳ ಭಾವನೆ ತುಂಬಿರುವದರಿಂದ ಅವರು ದಿಕ್ಕು ಕಾಣದೆ ಸಾಗುತ್ತಿರುವರು. ಆದುದರಿಂದ ಈ ಘರ್ಷಣೆಯನ್ನು ಕಡಿಮೆ ಮಾಡುವಂಥ ಯಾವದೇ ಕ್ರಮವು ಸ್ವಾಗತಾರ್ಹವಾಗುವದುದೇ ಸರಿ. ಇಂಗ್ಲಂಡ್ ಹಿಂದೂಸ್ಥಾನಗಳಲ್ಲಿದ್ದ ಹಿಂದಿನ ಘರ್ಷಣೆ ಮಾಯವಾಗಿ ಅವು ಸೌಹಾರ್ದದಿಂದ ಇರಲು ಈ ರೀತಿ ಮಿತ್ರತ್ವ ಭಾವನೆಯಿಂದ ನಿರ್ಧರಿಸಿದ್ದು ಎರಡೂ ರಾಷ್ಟ್ರಗಳ ಗೌರವಕ್ಕೆ ಹಾನಿ ತಗಲದಂತೆ ನಿರ್ಧರಿಸಿದ್ದು ಒಂದು ಶುಭಚಿಹ್ನೆ. ಜಗತ್ತಿನಲ್ಲಿ ಈಗಾಗಲೇ ಅನೇಕ ವಿನಾಶಕಾರಕ ಪ್ರವೃತ್ತಿಗಳು ತಲೆಯೆತ್ತುತ್ತಿರುವಾಗ ನಾವು ಅವುಗಳಿಗೆ ಪುಟ ಕೊಡುವಂಥ ಯಾವ ಕೃತಿಯನ್ನೂ ಮಾಡದೇ ಹಳೆಯ ಗಾಯಗಳನ್ನು ಗುಣಪಡಿಸುವ ಹಾಗೂ ಸರಕಾರದ ಮಾರ್ಗವನ್ನು ಬಲಪಡಿಸುವ ಸಂದರ್ಭಬಂದಾಗ ಅದನ್ನು ಸ್ವಾಗತಿಸುವದು ಯೋಗ್ಯವಾದ ಹೆಜ್ಜೆ.

ಕಾಮನವೆಲ್ತ್ ರಾಷ್ಟ್ರಗಳಲ್ಲಿ ನಮಗೆ ಅತ್ಯಂತ ವೇದನೆ ಕೊಡುವಂಥ ಅನೇಕ ಕೃತಿಗಳು ನಡೆದಿವೆ ಎಂಬದು ನನಗೆ ಗೊತ್ತಿದೆ. ಇಂಥ ಕೃತಿಗಳನ್ನು ಪ್ರತಿಭಟಿಸಿ ನಾವು ಹೋರಾಟ ನಡೆಸುತ್ತ ಬಂದಿರುವದೂ ಉಂಟು ಈಗ ಇಂಥ ವಿಷಯಗಳ ಬಗ್ಗೆ ಸಾರ್ವಭೌಮಾಧಿಕಾರವುಳ್ಳ ಸ್ವತಂತ್ರ ರಾಷ್ಟ್ರದಂತೆ ನಾವು ಯೋಗ್ಯಕ್ರಮ ಕೈಕೊಳ್ಳಬಹುದು. ಪ್ರತ್ಯೇಕವಾಗಿರಬೇಕಾದಂಥ ವಿಷಯಗಳನ್ನು ನಾವು ಕೂಡಿಸಬೇಕಾದುದಿಲ್ಲ.

ಭಾರತದ ಭಾಗ್ಯ

ಹಿಂದಿನಿಂದಲೂ ಅನೇಕ ಸಂಸ್ಕೃತಿಗಳ ಸಂಗಮಸ್ಥಳವು ಭಾರತವೇ ಆಗಿರುವ ಭಾಗ್ಯವು ನಮಗಿದೆ. ಯುದ್ಧೋನ್ಮುಖ ಪಂಗಡಗಳಲ್ಲಿ ಸೌಹಾರ್ದವನ್ನುಂಟುಮಾಡಿ ಇಂದಿನ ಮತ್ತು ಭಾವೀ ಜಾಗತಿಕ ಶಾಂತಿ ಅತ್ಯವಶ್ಯವಾಗಿರುವ ಇದನ್ನು ಕಾಯ್ದುಕೊಂಡ ಹೋಗುವದೂ ಭಾರತದ ಇಂದಿನ ಮತ್ತು ಭಾವೀ ಭಾಗ್ಯವಾಗಬಹುದು. ಜಗತ್ತಿನಲ್ಲಿಯ ದ್ವೇಷ ಮತ್ತು ಘರ್ಷಣೆಗಳನ್ನು ತಗ್ಗಿಸಿ ಸ್ವಾತಂತ್ರ್ಯ ಮತ್ತು ಶಾಂತಿಗಳನ್ನು ಪ್ರೋತ್ಸಾಹಿಸುವ ಧೋರಣೆಯನ್ನು ಯಶಸ್ವಿಯಾಗಿ ಮುಂದುವರಿಸಲು ಸಹಾಯವಾಗುವದೆಂಬ ನಂಬುಗೆಯಿಂದಲೇ ನಾನು ಲಂಡನ ಒಪ್ಪಂದಕ್ಕೆ ಒಪ್ಪಿದ್ದೇನೆ.

ಲಂಡನದಲ್ಲಿ ಮುಖ್ಯ ಮಂತ್ರಿಗಳು ಸ್ವೀಕರಿಸಿದ ನಿರ್ಣಯಗಳು ನಮ್ಮ ದೇಶಕ್ಕೆ ಮತ್ತು ಜಗತ್ತಿಗೆ ಯೋಗ್ಯವಾದ ನಿರ್ಣಯಗಳೆಂಬ ನಂಬುಗೆಯಿಂದಲೇ ನಾನು ಅವುಗಳಲ್ಲಿ ಸಮಭಾಗಿಯಾಗಿದ್ದೇನೆ. ಹಿಂದೀ ಜನತೆಯು ಇವುಗಳನ್ನು ಇದೇ ದೃಷ್ಟಿಕೋನದಿಂದ ನೋಡಿ ಭಾರತದ ಸಂಸ್ಕೃತಿ ಮತ್ತು ನಿಲುವಿಗೆ ತಕ್ಕಂತೆ ನಮ್ಮ ಭವಿಷ್ಯದಲ್ಲಿ ಪೂರ್ಣ ವಿಶ್ವಾಸವಿಟ್ಟು ಈ ನಿರ್ಣಯಗಳನ್ನು ಸ್ವೀಕರಿಸುವರೆಂದು ನಾನು ನಂಬುತ್ತೇನೆ.

ಜಗತ್ತಿನ ಇತಿಹಾಸದಲ್ಲಿಯೇ ಮಹತ್ವಪೂರ್ಣವಾದ ಈ ಪ್ರಸಂಗದಲ್ಲಿ ನಾವು ನಮ್ಮ ಶಕ್ತಿಯನ್ನು ಪೊಳ್ಳು ಚರ್ಚೆಯಲ್ಲಿ ವ್ಯರ್ಥವಾಗಿ ವ್ಯಯಿಸದೆ ಭಾರತವು ಏಸ್ಯಾ ಮತ್ತು ಜಗತ್ತಿನಲ್ಲಿ ವಹಿಸಬೇಕಾದ ಮಹತ್ವವನ್ನು ಸಂಪಾದಿಸಲು ಬಲಶಾಲಿಯಾಗುವಂತೆ ಹೆಣಗುವುದು ನಮ್ಮ ಕರ್ತವ್ಯವಾಗಿದೆ.

ನಿಷ್ಕಾಮ ಸೇವೆ.

ಡಾ. ಹರ್ಡೀಕರ ಅವರಿಂದ

ಯಾರಿಂದಲೂ ಕೇಳಲ್ಪಡದೆ ತನ್ನ ಸೇವೆಯನ್ನು ಸ್ವ ಸಂತೋಷದಿಂದ ಮತ್ತು ಯಾವುದೇ ಸ್ವರೂಪದ ಪ್ರತಿಫಲಾಪೇಕ್ಷೆಯಿಲ್ಲದೆ ನೀಡುವವನು ನಿಸ್ವಾರ್ಥ ಅಥವಾ ನಿಷ್ಕಾಮ ಸೇವಕನು. ಪೌರಾಣಿಕ ಕಾಲದ ಅಂತಹ ಸೇವಕರಲ್ಲಿ ಹನುಮಂತನು ಅಗ್ರಗಣ್ಯನು.

ತಮ್ಮ ವರ್ತನೆಯಿಂದ ನಿಸ್ವಾರ್ಥದ ಮಹತ್ವವನ್ನು ತೋರಿಸಿದ ಅದೇ ತರಗತಿಯ ನಿಷ್ಕಾಮ ಸೇವಕರು ಇತರ ಯುಗಗಳಲ್ಲಿಯೂ ಆಗಿಹೋಗಿದ್ದಾರೆ. ಸದ್ಯದ ಕಾಲದ ಅಂಥವರಲ್ಲಿ ಗಾಂಧೀಜಿಯವರೇ ಸರ್ವಶ್ರೇಷ್ಠರು.

ಆದರೆ, ಅವರೆಲ್ಲರೂ ನಡೆದುದನ್ನು ಮತ್ತು ನಮಗೆ ಕಲಿಸಿದುದನ್ನು ನಾವು ಇಂದು, ಮರೆತಂತೆ ಕಾಣುತ್ತಿದೆ. ಸೇವೆಯು ಇಂದು ತನ್ನ ನೈತಿಕ ಬೆಲೆಯನ್ನು

ಚೀನ ಮತ್ತು ಜಪಾನುಗಳಲ್ಲಿ ಗಾಂಧಿಯವರ ಪ್ರಭಾವ

ನಾವು (ಅಂದರೆ ಲೇಖಕ ಮತ್ತು ಅವನ ಹೆಂಡತಿ) ಎಪ್ರಿಲ್ ೧೮ ರಲ್ಲಿ ಶಾಂಘಾಯಿಗೆ ತಲುಪಿದೆವು ಮತ್ತು ಅಲ್ಲಿ ಎರಡು ದಿನ ನಿಂತೆವು. ನಾವು ೬ ದಿನಗಳನ್ನು ಟೋಕಿಯೋದಲ್ಲಿ ಕಳೆದೆವು. ಡಾ. ಜೇಯವರು ಅಧ್ಯಕ್ಷರಾಗಿರುವ ಜಾಗತಿಕ ಬುದ್ಧಿ ಸಂಘವು ನನ್ನನ್ನು ಆಮಂತ್ರಿಸಿತು. ಮತ್ತು ಅಲ್ಲಿಯ ನನ್ನ ಭಾಷಣದಲ್ಲಿ ನಾನು ಚೀನ ಮತ್ತು ಭಾರತಗಳಲ್ಲಿ ಹೆಚ್ಚಿನ ಸಾಂಸ್ಕೃತಿಕ ಸಂಪರ್ಕವಾಗಬೇಕೆಂದು ಒತ್ತಿ ಹೇಳಿದೆನು. ನಾನು ಸರ್ವೋದಯ ಸಮಾಜದ ಬಗ್ಗೂ ಅಲ್ಲಿ ಹೇಳಿದೆನು ಅವರು ಆ ವಿಚಾರವನ್ನು ಮೆಚ್ಚಿಕೊಂಡರು ಮತ್ತು ಡಾ. ಜೇ ಅದರ ಸದಸ್ಯರಾದರು. ಶಾಂಘಾಯಿಯ ಪಾಶ್ಚಾತ್ಯ ವಿಚಾರದ ಪುಸ್ತಕ ಭಂಡಾರದ ಅಧ್ಯಕ್ಷರಾದ ಡಾ. ಲಿನ್ನರಿಂದಲೂ ನಮಗೆ ಆಮಂತ್ರಣ ಬಂದಿತು. ಅಲ್ಲಿ ನಾನೊಂದು ಪುಟ್ಟ ಭಾಷಣ ಮಾಡಿದೆನು ಚೀನದಲ್ಲಿ ಗಾಂಧೀಸಾಹಿತ್ಯಕ್ಕೆ ಹೆಚ್ಚಿನ ಪ್ರಕಟಣೆ ಅವಶ್ಯಕ ಎಂದು ಎಲ್ಲರೂ ಅಪೇಕ್ಷಿಸಿದರು. ಜಪಾನಿನಲ್ಲಿ ನಾವು ಅನೇಕ ಜಪಾನೀ ಪ್ರಾಧ್ಯಾಪಕರನ್ನೂ ಡಯಟ್ಟಿನ (Diet) ಸದಸ್ಯರನ್ನೂ ಭೆಟ್ಟಿಯಾದೆವು. ಅವರು ಗಾಂಧೀತತ್ವದಲ್ಲಿ ಬಹಳ ಆಸಕ್ತಿಯನ್ನು ತೋರಿದರು. ಬಹಳ ಕಾಲದಿಂದ ಜಪಾನಿನಲ್ಲಿ ಒಂದು ಗಾಂಧೀ ಸಂಘ ನಡೆದುಬಂದಿದೆ. ಅದಕ್ಕೆ ಬಹಳ ಜನರು ಸದಸ್ಯರಾಗಿದ್ದಾರೆ. ಟೋಕಿಯೋದಿನ ಹೊಂಗಾಂಜಿ ಬೌದ್ಧ ದೇವಾಲಯದ ಮುಖ್ಯಾರ್ಚಕರಾದ ಶ್ರೀ ನಾಕಯಾಮರು ಆ ಗಾಂಧೀ ಸಂಘದ ಕಾರ್ಯದರ್ಶಿಗಳು ಅವರ. ಒಳ್ಳೆಯ ಉತ್ಸಾಹಿಗಳಾದ ಕಾರ್ಯಕರ್ತರು. ಬಾಪುವಿನ ಮರಣವಾದ ಕೆಲ ದಿನಗಳ ಬಳಿಕ ಅವರು ಮೂರುದಿನ ಉಪವಾಸಮಾಡಿದರು. ಬುದ್ಧನ ವಾರ್ಷಿಕೋತ್ಸವದ ದಿನವಾದ ಫೆಬ್ರುವರಿ ೧೫ ರಲ್ಲಿ ಗಾಂಧಿಯವರ ಮೊದಲನೆಯ ವಾರ್ಷಿಕ ಪುಣ್ಯತಿಥಿಯನ್ನು ಸಂಘದವರು ಆಚರಿಸಿದರು. ಅಂದು ಅವರು ಟೋಕಿಯೋದಿನ ಅತಿ ದೊಡ್ಡದಾದ ಬೌದ್ಧ ದೇವಾಲಯವೆನಿಸಿದ ಆ ಹೊಂಗಾಂಜಿ ಬೌದ್ಧ ದೇವಾಲಯದಲ್ಲಿಯ ಬುದ್ಧವಿಗ್ರಹದ ಬದಿಯಲ್ಲಿ ಗಾಂಧೀಯವರ ಭಾವಚಿತ್ರವನ್ನಿಟ್ಟರು. ನಿನ್ನೆ ಹೊಂಗಾಂಜಿ ದೇವಾಲಯದಲ್ಲಿ ಗಾಂಧೀಸಂಘ ಜಪಾನ್ ಬುದ್ಧಸಂಘ, ಅಂತಾರಾಷ್ಟ್ರೀಯ ಧಾರ್ಮಿಕ ಸಂಘ ಮತ್ತು ಅಂತಾರಾಷ್ಟ್ರೀಯ ಸಾಂಸ್ಕೃತಿಕ ಸಂಘ ಇವುಗಳ ಆಶ್ರಯದಲ್ಲಿ ನಾನು ಒಂದು ಭಾಷಣಕೊಟ್ಟೆ. ಸರ್ವೋದಯದ ಕಲ್ಪನೆಯ ಬಗ್ಗೂ ಹೇಳಿದೆ ನಿನ್ನೆ ನನ್ನ ಮಾತಿಗೆ ಸ್ವಲ್ಪ ಮುಂಚೆ ಭಾರತೀಯ ಸಂಪರ್ಕ ಸಮಿತಿಯ ಮುಖ್ಯಸ್ಥರಾದ ಶ್ರೀ ಮುಲ್ಲೇರರು ಭಾರತ ಸರಕಾರದ ಪರವಾಗಿ ಅಲ್ಲಿಯ ಗಾಂಧೀಸಂಘಕ್ಕೆ ಒಂದು ಗಾಂಧೀ ಸಾಹಿತ್ಯ ಸಂಗ್ರಹವನ್ನು ಬಹುಮಾನವಾಗಿ ಕೊಟ್ಟರು. ಶ್ರೀಮತಿ ಮದಾಲಸಾ ಕೂಡ (ಲೇಖಕನ ಹೆಂಡತಿ) ಹಸ್ತಿದಂತದಿಂದ ಮಾಡಿದ ಬಾಪುವಿನ ಒಂದು ಚಿಕ್ಕ ಪ್ರತಿಮೆಯನ್ನು ಅದಕ್ಕೆ ಕೊಟ್ಟಳು. ಎರಡು ದಿನಗಳ ಹಿಂದೆ ಅವಳೂ ಒಂದು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದಳು. ಅವಳು ಚೆನ್ನಾಗಿ ಮಾತಾಡಿದಳು.

ಟೋಕಿಯೋದಿನಲ್ಲಿ ಮೇಜರ್ ಕೂಶಿಕ ಮತ್ತು ಮೇಜರ್ ಫ್ಯುಜಿವಾರ ಎಂಬಿಬ್ಬರು ಸೈನಿಕರನ್ನು ಭೆಟ್ಟಿಯಾದೆವು. ಅವರು ಮೊದಲಿಂದ ಕಡೆಯವರೆಗೆ ಭಾರತೀಯ ರಾಷ್ಟ್ರೀಯ ಸೈನ್ಯದಲ್ಲಿ ಸುಭಾಷ ಬಾಬುಗಳೊಂದಿಗೆ ಕೆಲಸ ಮಾಡಿದವರು. ಅವರು ಸ್ವಾರಸ್ಯವಾದ ಬಹಳ ಸಂಗತಿಗಳನ್ನು ನಮಗೆ ಹೇಳಿದರು. ಅವರಿಂದ ನಾವು ಸುಭಾಷ ಬಾಬು ಹೇಗೆ ಸತ್ತರೆಂಬುವದನ್ನೂ ತಿಳಿದೆವು. ಈಗಲೂ ಅವರು ಬದುಕಿದ್ದಾರೆಂದು ತಿಳಿಯುವದು ಹುಚ್ಚುತನವೇ ಸೈ

ಚೀನ ಮತ್ತು ಜಪಾನುಗಳಲ್ಲಿ ಜನರು ವಿವಿಧ ಮಾದರಿಯ ಚರಕಗಳನ್ನು ಬಳಸುತ್ತಾರೆ ಟೋಕಿಯೋದಿನಲ್ಲಿ ನಮ್ಮನ್ನು ಭೆಟ್ಟಿಯಾದ ಮುಂಬಯಿಯ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಶ್ರೀ ಪ್ರಾಣಜೀವನ ಕಪಾಡಿಯವರು ಇವುಗಳ ಬಗ್ಗೆ ತಕ್ಕಮಟ್ಟಿನ ಸಂಗತಿಗಳನ್ನು ಕಲೆಹಾಕಿದ್ದಾರೆ ಈ ಚರಕಗಳ ಕೆಲ ಮಾದರಿಗಳನ್ನು ಅವರು ಸ್ವಲ್ಪಕಾಲದಲ್ಲಿ ಭಾರತಕ್ಕೆ ಒಯ್ಯಲಿರುವರು ಈ ಜಪಾನೀ ಚರಕಗಳ ನಾಲ್ಕು ಪಟ್ಟು ನೂಲುಗಳನ್ನು ತೆಗೆಯಬಲ್ಲವು ನಾವು ಚೀನದಲ್ಲಿಯೂ ಒಂದು ಬಗೆಯ ಚರಕವನ್ನು ಕಂಡೆವು ಅದನ್ನು ಒಂದು "ಪೆಡಲಿ"ನಿಂದ (Pedal) ತಿರುಗಿಸುತ್ತಾರೆ ಮತ್ತು ಅದಕ್ಕೆ ೧೨ ಕದಿರುಗಳಿವೆ. ಅದನ್ನು ಕಾಲಿನಿಂದ ಒತ್ತಿ ತಿರುಗಿಸುತ್ತಾರೆ' ವಿದ್ಯುತ್ತಿನಿಂದಲ್ಲ. ಅದರ ಒಂದು ಮಾದರಿಯನ್ನು ಕೊಡುವೆಂದು ನಾನು ಕೇಳಿದ್ದೇನೆ. ಶ್ರೀಯುತರಾದ ಕೃಷ್ಣದಾಸರು, ನಂದಲಾಲರು ಮತ್ತು ಇತರರು ಚೀನ ಮತ್ತು ಜಪಾನುಗಳನ್ನು ಒಮ್ಮೆ ಸಂದರ್ಶಿಸುವುದು ಉತ್ತಮವೆಂದು ನನಗನಿಸುತ್ತದೆ. ಅದು ನಮ್ಮ ಸಂಶೋಧನಕಾರ್ಯಕ್ಕೆ ಸಹಾಯಕವಾಗುವುದು,

ನಮ್ಮ ರಾಯಭಾರಿಗಳೆಲ್ಲರೂ ತಂತಮ್ಮ ಕಚೇರಿಯಲ್ಲಿ ಸಾಕಷ್ಟು ಗಾಂಧೀ ಸಾಹಿತ್ಯವನ್ನು ಇಟ್ಟುಕೊಂಡಿರಬೇಕು. ಮತ್ತು ಹರಿಜನಕ್ಕೆ ಚಂದಾದಾರರಾಗಬೇಕು ಎಂದು ನನಗೆ ತೋರುತ್ತದೆ.

ಎಸ್. ಎನ್. ಅಗರವಾಲಾ

—ಹಿಂದೂಸ್ಥಾನ ಒಕ್ಕೂಟದಲ್ಲಿ ವಿಲೀನವಾದ ಸಂಸ್ಥಾನಗಳಲ್ಲಿಯ ಶಾಲೆಗಳಲ್ಲಿ ಹಿಂದೀ ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸವನ್ನು ಹಚ್ಚಬೇಕೆಂದು ಮಧ್ಯಪ್ರಾಂತ ಸರಕಾರದ ಕ್ರಮಿಕ ಪುಸ್ತಕ ಸಮಿತಿಯು ಶಿಫಾರಸ ಮಾಡಿದೆ.

ಕಳೆದುಕೊಂಡು, ಒಂದು ಸಾಮಾನ್ಯ ವಸ್ತುವಾಗಿ ಪರಿಣಮಿಸಿದೆ. ಈ ಮಾತಿಗೆ ಉದಾಹರಣೆಗಳು ಅಸಂಖ್ಯವಾಗಿವೆ. (೧) ಹೊಟ್ಟೆಯ ಕೆಲಸಗಳನ್ನು ವಾಮಮಾರ್ಗದಿಂದ ದೊರಕಿಸುವವರಿಗಾಗಿ ಸಹಾಯ ಮಾಡುವುದು. (೨) ಸಂಬಂಧಪಟ್ಟ ಅಧಿಕಾರಿಗಳದ್ವಾರ ಅಪರಾಧಿಗಳನ್ನು ಉಳಿಸಿಕೊಳ್ಳುವುದು, (೩) ಲಂಚಗುಳಿಗಳನ್ನು ಮತ್ತು ಕಳ್ಳಪೇಟೆಗಾರರನ್ನು ಕಾಯಿದೆಗಳ ಹಿಡಿತದಿಂದ ಪಾರುಮಾಡಿ ಅವರ ಮಾನ ಹಣ, ಕೀರ್ತಿಗಳನ್ನು ರಕ್ಷಿಸುವುದು, (೪) ಎಲ್ಲ ರೀತಿಯಿಂದ ಬೆದರಿಸಿ ತಮ್ಮ ಸ್ವಾರ್ಥಕ್ಕಾಗಿ ಹಣವನ್ನು ಗಳಿಸುವವರಿಗೆ ಸಹಾಯ ಮಾಡುವುದು, (೫) ಆಹಾರ ಬಟ್ಟೆ ಅಥವಾ ಇತರ ವಸ್ತುಗಳನ್ನು ಮಾಮೂ ಮತ್ತು ನಿಯಮ ಬಾಹ್ಯ ಮಾರ್ಗಗಳಿಂದ ಸಂಪಾದಿಸುವುದಕ್ಕೆ ಸಹಾಯ ಮಾಡುವುದು, (೬) ಎಲ್ಲ ತರಹದ ಯುಕ್ತಿ ಪ್ರಯುಕ್ತಿಗಳನ್ನು ಮತ್ತು ಕಾಯಿದೆಯ ಸಾಮಾನ್ಯ ದೃಷ್ಟಿಯಿಂದ ನೀತಿ ಮತ್ತು ನಿಯಮ ಬಾಹ್ಯವಾಗಿರುವ ಮಾರ್ಗಗಳನ್ನು ಉಪಯೋಗಿಸಿ, ಓರ್ವ ಹುರಿಯಾಳುವನ್ನು ಒಂದಿಲ್ಲೊಂದು ಸಂಸ್ಥೆಯ ಸಭಾಸದನನ್ನಾಗಿ ಮಾಡುವುದಕ್ಕೆ ಸಹಾಯಮಾಡುವುದು ಇವೇ ಮೊದಲಾದವು ಅವುಗಳಲ್ಲಿ ಕೆಲವಾಗಿವೆ

ಈ ತರಹದ ಸಹಾಯವನ್ನು ಮಾಡುವವರು, ಸೇವಾಬುದ್ಧಿ ಮತ್ತು ನಿಜವಾದ ಸ್ವಯಂಸೇವಕತ್ವವಿಲ್ಲದವರು ಎನಿಸುವರು.

ಹಾಗಾದರೆ ಮೇಲೆ ಹೇಳಿದಂತಹ ಕಾರ್ಯಗಳಿಗೆ ಸಹಾಯ ಮಾಡುವುದು ನಿಷ್ಕಾಮಸೇವೆಯೇ? ಇದಕ್ಕೆ ನಿಷ್ಕಾಮಸೇವೆಯೆನ್ನುತ್ತಿದ್ದರೆ, ಎಲ್ಲ ಪ್ರಾಮಾಣಿಕ ಮತ್ತು ಮನಃಪೂರ್ವಕವಾದ ಕಾರ್ಯಗಳಿಗೆ ನಾವು ಶರಣು ಹೊಡೆಯುವುದೇ ಲೇಸು

ಆದ್ದರಿಂದ ಸೇವೆಯ ನಿಜಸ್ವರೂಪವನ್ನು ನಾವು ಅರಿತುಕೊಂಡು ನಮ್ಮ ದೇಶಕ್ಕೆ ಮತ್ತು ಜನತೆಗೆ ನಾವು ನಿಜವಾದ ಸೇವೆ ಸಲ್ಲಿಸುವುದಿದ್ದರೆ, ಪೌರಾಣಿಕ ಕಾಲದ ಹನುಮಂತನಂತೆ ಅಥವಾ ನಮ್ಮ ಕಾಲದ ಗಾಂಧೀಜಿಯವರಂತೆ ನಾವು ನಿಷ್ಕಾಮ ಸೇವಕರಾಗಬೇಕು.



The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—**ಪ್ರಾರಂಭಿಕ**:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ:—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—**ಹಿಂದೀ ಮಹಾ ವಿದ್ಯಾಲಯ.**

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

(Nationalist Weekly)

13—6—49

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೦ ಜೂನ್ ೧೯೪೯ | ಸಂಚಿಕೆ ೨೨

ತ್ರಿಮೂರ್ತಿ ವರದಿ ಒಪ್ಪದಿದ್ದರೆ ಸದ್ಯಕ್ಕೆ ಆಂಧ್ರಪ್ರಾಂತ ಶಕ್ಯವಿಲ್ಲ

ನನ್ನ ಪರಮಾವಧಿಯನ್ನೆಲ್ಲ ಮುಗಿಸಿದ್ದೇನೆ

ಬಳ್ಳಾರಿ ಜಿಲ್ಲೆಯು ಬೆಳಕು ಕಂಡಿತು

ಮದ್ರಾಸು-ಮೈಸೂರು ಒಪ್ಪಂದದ ಪ್ರಕಾರಂಕ್ಕೆ ಜೋಗ ಜಲಪಾತದ ವಿದ್ಯುಚ್ಛಕ್ತಿಯನ್ನು ಬಳ್ಳಾರಿ ಜಿಲ್ಲೆಗೂ, ತುಂಗಭದ್ರಾ ಯೋಜನೆಗೂ ಒದಗಿಸುವ ಕಾರ್ಯದ ಪ್ರಪ್ರಥಮವಾಗಿ ಹಗರಿ ಬೊಮ್ಮನಹಳ್ಳಿ (ಹೊಸಪೇಟೆ ತಾಲೂಕು) ವನಸ್ಪತಿ ಕಾರ್ಖಾನೆಗೆ ವಿದ್ಯುತ್ತನ್ನೊದಗಿಸುವ ಪ್ರಾರಂಭೋತ್ಸವವು 11-6-49ನೆಯ ದಿನವಾಯಿತು. ಈ ಮಾಸಾಂತ್ಯದೊಳಗಾಗಿ ಹೊಸಪೇಟೆಯು ತುಂಗಭದ್ರಾಯೋಜನೆಗೂ ಹೊಸಪೇಟೆಗೂ ಸರಬರಾಯಿಯಾಗುವದರಲ್ಲಿ ಸಂದೇಹವಿಲ್ಲ.

ಹೊಸಪೇಟೆಯಿಂದ ಬಳ್ಳಾರಿ ನಗರಕ್ಕೆ, ಬಳ್ಳಾರಿ ನಗರದಿಂದ ಮೋಕ ಮಾರ್ಗವಾಗಿ ಆದವಾನಿಗೆ ಮತ್ತು ಬಳ್ಳಾರಿ-ಗುಂತಕಲ್‌ಗೆ ವಿದ್ಯುತ್ಸ್ತಂಭಗಳು ತಯಾರಾಗಿ ನಿಂತಿವೆ. ಇನ್ನು ತಂತಿಗಳನ್ನು ಹಾಕಬೇಕಾಗಿವೆ. ವಿದ್ಯುಚ್ಛಕ್ತಿಯು ಒದಗುವಿಕೆಯಿಂದ ಜಿಲ್ಲೆಯಲ್ಲಿ ಹೊಸ ಮನ್ವಂತರವೇ ಪ್ರಾರಂಭವಾಗಲಿದೆ. ಶಕ್ತಿಯು ಸಾಕಷ್ಟು ಒದಗುವ ಕಾರಣ ಉದ್ಯೋಗ-ಕಾರ್ಖಾನೆಗಳಿಗೆ ಅನುಕೂಲವಾಗಿ ಈಗಿರುವ ಕೂಲಿಕಾರ ಸಮಸ್ಯೆಯು ನಿವಾರಣೆಯಾಗುತ್ತೆ. ಇದ್ದಿಲು ಚೀಲಕ್ಕೆ ರು. 5 ಕೊಡಬೇಕು. ಬಳ್ಳಾರಿ - ಆದವಾನಿ ಹೊಸಪೇಟೆ ಮುನಿಸಿಪಾಲಿಟಿಗಳಲ್ಲಿ

ಅನುಕೂಲ ಪರಿಸ್ಥಿತಿ ಇನ್ನೂ ಕೈವಶವಾಗಿಲ್ಲ

ಆಂಧ್ರರಿಗೆ ಡಾ. ಪಟ್ಟಾಭಿಯವರ ಕೊನೆಯ ಎಚ್ಚರಿಕೆ

"ಭಾಷಾನುಗುಣ ಪ್ರಾಂತ ರಚನೆಯ ವಿಚಾರಕ್ಕಾಗಿ ಕಾಂಗ್ರೆಸ್ಸಿನಿಂದ ನಿಯಮಿಸಲ್ಪಟ್ಟಿದ್ದ ತ್ರಿಮೂರ್ತಿ ಸಮಿತಿಯ ವರದಿಯನ್ನು ಜನತೆಯು ಒಪ್ಪಲಾರರಾದರೆ ಆಂಧ್ರಪ್ರಾಂತದ ರಚನೆ ಸದ್ಯಕ್ಕೆ ಶಕ್ಯವಿಲ್ಲ' ಎಂದು ಕಾಂಗ್ರೆಸ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯನವರು ಇಂದಿಲ್ಲಿ ಹೇಳಿದರು.

ಅವರಿನ್ನೂ ಹೇಳಿದ್ದೇನಂದರೆ, "ನನ್ನ ಮನಸ್ಸಂತೂ ಇದು ನಿಶ್ಚಳವಿದೆ. ಈ ವಿಷಯದಲ್ಲಿ ಹೆಚ್ಚಿನ ಆಸ್ಥೆ ನನಗಿಲ್ಲ. ಕೊನೆಯ ಘಳಿಗೆಯವರೆಗೂ ಈ ವಿಷಯವನ್ನು ಪ್ರಾಂತಿಕ ಮುಖಂಡರ ಕೈಯಲ್ಲಿಯೇ ಬಿಟ್ಟಿದ್ದೇನೆ, ಈಗಾದರೂ ಸಹ ನಾನು ಅದಕ್ಕೇ ಅಂಟಿಕೊಂಡಿದ್ದೇನೆ. ಪ್ರಾಂತವನ್ನು ದೊರಕಿಸುವವರೂ ಅಥವಾ ಕಳೆದು ಕೊಳ್ಳುವವರೂ ಅವರೇ. ಆ ವಿಷಯದಲ್ಲಿ ನನ್ನ ಮುಂದಿನ ಸಂಬಂಧವಿಲ್ಲ. ನಾನು ಮಾಡಲು ಶಕ್ಯವಿದ್ದದ್ದನ್ನು ಮಾಡಿಬಿಟ್ಟಿದ್ದೇನೆ. ನಾನು ಮಾಡಿದ್ದು ಕೆಲವರಿಗೆ ಕಡಿಮೆ ಬೆಲೆಯದಾಗಿ ಕಾಣಬಹುದು. ನಾನು ನನ್ನ ಪರಮಾವಧಿಯನ್ನೆಲ್ಲ ಮುಗಿಸಿದ್ದೇನೆ. ಇದಕ್ಕಿಂತ ಹೆಚ್ಚಿಗೆ ಇನ್ನಾರಾದರೂ ಮಾಡಲು ಶಕ್ತರಾದರೆ, ನಾನವರಿಗೆ ತಲೆ ಬಾಗುವೆ".

ತ್ರಿಮೂರ್ತಿ ವರದಿಯನ್ನೊಪ್ಪಿಕೊಂಡು ಆಂಧ್ರಪ್ರಾಂತ ರಚಿಸಲು ಕೇಳಿಕೊಳ್ಳುವ ಕಾಲ ಮೀರಿದೆಯೋ? ಎಂದು ಕೇಳಿದ್ದಕ್ಕೆ ಡಾ. ಪಟ್ಟಾಭಿಯವರು "ನಿಜವಾಗಿಯೂ ಇಲ್ಲ. ತ್ರಿಮೂರ್ತಿಗಳ ವರದಿಯು ಶಿಫಾರಸಿನೊಂದಿಗೆ ಹೊಂದಿಕೊಂಡು ಪ್ರತ್ಯೇಕ ಆಂಧ್ರಪ್ರಾಂತ ರೂಪಿಸಲು ಕೇಳಿಕೊಳ್ಳಲಿಕ್ಕೆ ಕಾಲವಿನ್ನೂ ಮೀರಿಲ್ಲ" ವೆಂದರು.

—)o(—

ನೀರು ಕಾಸಲಿಕ್ಕೂ ವಿದ್ಯುತ್ತನ್ನು ಯೋಗಿಸುವದಾದರೆ ಇದ್ದಿಲು ಚೀಲನ್ನು ಕೇಳುವವರೇ ಇಲ್ಲದಂತಾಗು ವ್ಯವಸಾಯ-ನೀರಾವರಿ ಕಾರ್ಯದಿಂದ ಅಭಿವೃದ್ಧಿಯಾಗುತ್ತದೆ. ವಿದ್ಯುತ್ ಲೈನು ಹಾದುಹೋಗುವ ಹಳ್ಳಿಗಳು ಅನೇಕ ವಿಧದಿಂದ ಲಾಭ ಹೊಂದಬಹುದು. ಬಡವರಿಗೆ ಸಾಧ್ಯವಾದ ಸುಲಭಬೆಲೆಯಿಂದ ಅದನ್ನು ಒದಗಿಸಬಹುದೆಂದು ಆಶಿಸುತ್ತೇವೆ.

— —

ಶರತಬೋಸರ ವಿಜಯ

ಕಲ್ಕತ್ತಾ ನಗರದ ದಕ್ಷಿಣ ಭಾಗ ಕ್ಷೇತ್ರಕ್ಕೆ ಕಾಂಗ್ರೆಸ್ ಪರವಾಗಿ ಸುರೇಶಮೋಹನದಾಸರೂ ರಿಪಬ್ಲಿಕನ್ ಸೋಶಿಯಲಿಸ್ಟ್ ಪಾರ್ಟಿಪರವಾಗಿ ಶ್ರೀ ಶರತ್‌ಚಂದ್ರಬೋಸರೂ ಉಮೇದ್ವಾರರಾಗಿದ್ದರು. ಕಾಂಗ್ರೆಸ್ ಪಾರ್ಟಿ ಅಭ್ಯರ್ಥಿಯನ್ನು ಗೆಲ್ಲಿಸಬೇಕೆಂದು ನೆಹರೂ-ಪಟೇಲರು ವಿನಂತಿ ಮಾಡಿಕೊಂಡಿದ್ದರು. ಆದರೆ ಶರತ್‌ಬೋಸರು ಅತ್ಯಧಿಕ ಸಂಖ್ಯೆಯಿಂದ ಗೆದ್ದರು. ಶ್ರೀ ಶರತಚಂದ್ರಬೋಸ್ ೧೯,೧೯೦ ಶ್ರೀ ಸುರೇಶಮೋಹನದಾಸ್ ೫,೭೩೩

ಶ್ರೀ ಶರತಚಂದ್ರ ಬೋಸರು ಈ ಸ್ಥಿತ್ಯಂತರದಲ್ಲಿದ್ದಾರೆ. ಅವರ ಬೆಂಬಲಿಗರು ಸುಭಾಸಚಂದ್ರರ ಭಾವಚಿತ್ರದೊಂದಿಗೆ ದೊಡ್ಡ ಮೆರವಣಿಗೆ ತೆಗೆದಿದ್ದರು.

— —

THE NAVA BHARAT
ನವ ಭಾರತ
ಸಂಪಾದಕ-ಟಿ.ಟಿ.ಕೇಶವರಾವ್
ಸೋಮವಾರ ೨೦ ಜೂನ್ ೧೯೪೯

ಹಿಂದುಸ್ಥಾನದಲ್ಲಿ ಸಾಹುಕಾರರ ಸಂಘಟನೆ

ವೃತ್ತಪತ್ರಿಕೆಗಳನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುತ್ತಿರುವರು.

ಪ್ರಪಂಚದ ಎಲ್ಲಾ ಭಾಗಗಳಲ್ಲೂ ಹಿಂಸಾಚಾರೀ ಕಮ್ಯೂನಿಸ್ಟರ ಹಾವಳಿಯ ಹೆದರಿಕೆ ಹುಟ್ಟುತ್ತಲಿದೆ. ಚೀನಾ ದೇಶವನ್ನೆಲ್ಲಾ ಅವರು ಆಕ್ರಮಿಸಿದರು. ಕೊನೆಗೆ ಫಾರ್ಮೋಸಾ ದ್ವೀಪವನ್ನಾದರೂ ತಮ್ಮ ಕಾಸಿನ ಗುಲಾಮ ಚಿಂಗ-ಕೈ-ಶೇಕರಿಗೆ ಉಳಿಸಬೇಕೆಂದು ಶ್ರೀಮಂತ ರಾಷ್ಟ್ರವಾದ ಅಮೆರಿಕೆಯು ಯೋಚಿಸುತ್ತಲಿದೆ. ಮಲಯಾ-ಇಂಡೋನೇಶಿಯಾ ಸಯಾಂ ದೇಶಗಳಲ್ಲಿ ಆಗಾಗ್ಯೆ ಗಲಭೆಗಳಾಗುತ್ತಲೇ ಇವೆ. ಮಧ್ಯ ಪೂರ್ವದ ಇಸ್ಲಾಮೀ ದೇಶಗಳನ್ನು ಇಂಗ್ಲೆಂಡು ಅಮೆರಿಕಾಕ್ಕೆ ಬಿಟ್ಟು ಯಹೂದಿ ಜನರಿಗೆ ಪ್ರೋತ್ಸಾಹ ಕೊಟ್ಟ ಕಾರಣ ಅವು ರಷ್ಯಾ ದಳದತ್ತ ತಮ್ಮ ಒಲವನ್ನು ಕೊಡುತ್ತಲಿವೆ. ಯೂರೋಪದಲ್ಲಿ ಜರ್ಮನ್ ರಾಜಧಾನಿ ಬರ್ಲಿನ್‌ಗೆ ಪೂರ್ವದ ರಾಷ್ಟ್ರಗಳೆಲ್ಲಾ ರಷ್ಯಾದ ಪ್ರಭಾವಕ್ಕೆ ಒಳಪಟ್ಟಿವೆ. ಜಗತ್ತಿನಲ್ಲಿ ಉಳಿದ ಶಕ್ತಿಗಳೆರಡೇ! ಸಾಹುಕಾರೀ ರಾಷ್ಟ್ರವಾದ ಅಮೆರಿಕಾ ಅದರ ಮಿತ್ರ ಇಂಗ್ಲೆಂಡ್ ಮತ್ತಿತರ ಅಮೆರಿಕಾದ ಲಂಬೀ ರಾಷ್ಟ್ರಗಳು. ಈ ಎರಡರಲ್ಲಿ ತಿಕ್ಕಾಟವು ನಡೆದೇ ಇದೆ.

ಭಾರತದ ಸಂಸ್ಕೃತಿ, ಜನತೆಯ ಸಭ್ಯತೆ ಪ್ರಾಚೀನದಿಂದ ರೂಢವಾದ ಆಚಾರ ವಿಚಾರಗಳಿಂದ ಹಿಂಸಾಚಾರೀ ಕಮ್ಯೂನಿಸ್ಟರ ಪ್ರಾಬಲ್ಯಕ್ಕೆ ಎಡೆಯಿಲ್ಲ. ದೇಶ ಘಾತವಾದ ಅದನ್ನು ಬೆಳೆಯಗೊಡದಂತೆ ಮಾಡುವುದು ಎಲ್ಲ ದೇಶಭಕ್ತರ ಕರ್ತವ್ಯವಾಗಿದೆ. ಏಕೆಂದರೆ ಕಮ್ಯೂನಿಸ್ಟರಿಗೆ ತತ್ವವಿಲ್ಲ. ರಾಜಕೀಯ ವಿರೋಧಿಗಳ ಮೇಲೆ ಕರುಣೆಯಿಲ್ಲ. ಅವರ ನೀತಿ ಧ್ಯೇಯಗಳು ಸ್ಪಷ್ಟವಿಲ್ಲ. ಹೊರಗೆ ಹೇಳುವುದೊಂದು ಒಳಗೆ ಮಾಡುವುದೊಂದು.

ಈ ಕಾರಣ ಗೆಳೆಯ ಜಯಪ್ರಕಾಶನಾರಾಯಣರ ನೇತೃತ್ವದಲ್ಲಿ ಕಾಂಗ್ರೆಸ್ ಸಂಸ್ಥೆಯಿಂದ ಸಿಡಿದು ಬಂದ ಸೋಶಿಯಲಿಸ್ಟ ಪಾರ್ಟಿ - ಯಾ - ಸಮಾಜವಾದೀ ಪಕ್ಷದಿಂದಲೇ ಭಾರತ ರಾಷ್ಟ್ರಕ್ಕೆ ಮುಂದೆ ಮುಕ್ತಿಯು ದೊರೆಯಬೇಕು. ಕಾಂಗ್ರೆಸ್ ಸಂಸ್ಥೆಯು ಸಾಹುಕಾರರ ಕೈಗೊಂಬೆಯಾಗಿದ್ದು ಅದರಲ್ಲಿನ ಶಾಸನ ಸಭ್ಯರು ತಮ್ಮ ಸ್ವಾರ್ಥಸಾಧನೆ ಲಾಭಗಳ ಕಾರ್ಯದಲ್ಲಿ ತೊಡಗಿದ್ದು ರೈತರನ್ನೂ ಬಡಜನರನ್ನೂ ಪೂರ್ಣವಾಗಿ ಮರೆತಿರುವರು. ಹಳ್ಳಿಗಳ ಹಿತಗಳನ್ನು ಪೂರ್ಣವಾಗಿ ಅಲಕ್ಷಿಸಿರುವರು. ಹಳ್ಳಿಗರಿಂದಲೇ ಕಾಳು ಸಂಗ್ರಹ ಮಾಡಿ ಅವರಿಗೇ ಆಹಾರ ಧಾನ್ಯಗಳು ದೊರೆಯದಂತೆ ಮಾಡಿರುವರು. ಅನೇಕ ನಿಯಂತ್ರಣಗಳನ್ನು ಮಾಡಿ ಸಾಹುಕಾರರನ್ನು ಬಿಟ್ಟು ಬಡವರನ್ನೇ ಶಿಕ್ಷೆಗೆ ಗುರಿಮಾಡುತ್ತಿರುವರು. ಈ ಕಾರಣ ಜನತೆಗೆ ಕಾಂಗ್ರೆಸ್ ಮೇಲೆ ಅಸಹ್ಯ ಮತ್ತು ಹೇಸಿಕೆಯ ಭಾವನೆಗಳು ಹುಟ್ಟುತ್ತಿರುವುದು ಸ್ವಾಭಾವಿಕವಾಗಿದೆ. ಬೊಂಬಾಯಿಯಲ್ಲಿ ನಡೆದ ಮೂರು ಉಪಚುನಾವಣೆಗಳು ಕಲ್ಕತ್ತಾದಲ್ಲಿ ಮೊನ್ನೆ ನಡೆದ ಚುನಾವಣೆಯೇ ಇದಕ್ಕೆ ಸಾಕ್ಷಿ. **ಆದರೂ ಸಾಹುಕಾರರ ಸಂಘಟನೆ - ಅವರ ಹಣದ ಬಲದ ಮುಂದೆ ಬಡವರು ಇನ್ನೂ ಕೆಲ ಕಾಲ ತಲೆತಗ್ಗಿಸಬೇಕಾಗುತ್ತದೆ.**

ಹಿಂದೂಸ್ಥಾನದಲ್ಲಿ ಪತ್ರಿಕಾ ಪ್ರಪಂಚದಲ್ಲಿ ಹೆಚ್ಚು ವ್ಯಾಪ್ತಿಯಿರುವ ಮುಖ್ಯ ದಿನಪತ್ರಿಕೆ, ವಾರಪತ್ರಿಕೆಗಳೆಲ್ಲಾ ಸಾಹುಕಾರರಿಂದ ಸಾಹುಕಾರೀ ಸಂಸ್ಥೆಗಳಿಂದ ನಡೆಸಲ್ಪಡುತ್ತಿವೆ. ಹಿಂದೂಸ್ಥಾನದಲ್ಲೇ ಪ್ರಸಾರದಲ್ಲಿ ಮೊದಲನೇ ಸ್ಥಾನವಿರುವ ಬೊಂಬಾಯಿಯ ಟೈಂಸ್ ಆಫ್ ಇಂಡಿಯಾ, ಇಲಸ್ಟ್ರೇಟೆಡ್ ವೀಕ್ಲಿ ಪತ್ರಿಕೆಯ ಮುಕ್ಕಾಲು ಭಾಗದ ಶೇರುಗಳನ್ನು ಶೇಠ ಡಾಲ್ಮಿಯಾರವರು ಕೊಂಡರು. 'ಮದ್ರಾಸ್ ಮೇಲ್' ಪತ್ರಿಕೆಯನ್ನು ಒಬ್ಬ ದೊಡ್ಡ ಸಾಹುಕಾರರು ಕೊಂಡರು. ಡೆಲ್ಲಿಯ ಹಿಂದೂಸ್ಥಾನ ಟೈಮ್ಸ್, ಅಲಹಾಬಾದಿನ ಲೀಡರ್, ಕಲ್ಕತ್ತಾದ ಅಮೃತ ಬಜಾರ ಪತ್ರಿಕ, ಮದ್ರಾಸಿನ ಹಿಂದೂ, ಎಕ್ಸಪ್ರೆಸ್, ಆಂಧ್ರ ಪ್ರಭ, ದಿನಮಣಿ, ಸ್ವದೇಶಮಿತ್ರನ್, ಆನಂದ ವಿಗಡನ್ ಈ ಪತ್ರಿಕೆಗಳು ಅತಿ ದೊಡ್ಡ ಸಾಹುಕಾರರ ಸ್ವತ್ತುಗಳಾಗಿವೆ. ಹುಬ್ಬಳ್ಳಿಯಂಥ ಸಣ್ಣ ನಗರಗಳಲ್ಲೂ ಸಾಹುಕಾರೀ ಪದ್ಧತಿ, ಆಡಂಬರ, ಧನಿಷ್ಟ ಘನಿಷ್ಟ ಪತ್ರಿಕೆಗಳು ಇರುವುದನ್ನು ಜನರು ಅನುಭವಿಸಿ ನೋಡಿರುವರು. ಜಿಲ್ಲೆ ಜಿಲ್ಲೆಗಳಲ್ಲೂ ತಮ್ಮ ರಾಜಕೀಯ ಭವಿಷ್ಯದ ಕಲ್ಯಾಣಕ್ಕಾಗಿ ಸಾಹುಕಾರರು ಬಡವರ ಪತ್ರಿಕೆಗಳನ್ನು ಕೊಳ್ಳುವ ಯತ್ನದಲ್ಲಿರುವರು. ಇಲ್ಲವೇ ತಮ್ಮ ಗುಂಪಿನವರ ಶೇರುಗಳನ್ನು ಹೆಚ್ಚು ಮಾಡಿ ಅಂಥ ಪತ್ರಿಕೆಗಳ ಸಂಚಾಲನೀತಿಯ ಸೂತ್ರಧಾರತ್ವವನ್ನು ವಹಿಸುತ್ತಲಿರುವರು. ಧನವಂತರಲ್ಲದ ಸಂಪಾದಕರು ಭಾರತದ ಎಲ್ಲಾ ಕಡೆಗಳಲ್ಲೂ ಈ ಬಲೆಗೆ ಬೀಳುತ್ತಿರುವರು. ಪತ್ರಿಕೆಯೇ ಜನಜಾಗೃತಿಯ ಮುಖ್ಯ ಸಾಧನವೆಂಬುದನ್ನರಿತು ಅದನ್ನು ತನ್ನಧೀನವಲ್ಲಿಟ್ಟುಕೊಂಡು ಕಾರ್ಯಸಾಧನೆ ಮಾಡಿಕೊಳ್ಳುವ ಹೊಂಚು ಹಾಕಿದ್ದಾನೆ! ಸಾಹುಕಾರ ಸಂಪಾದಕನು ಅಧಿಕ ಸಂಖ್ಯಾಕ ಶೇರುದಾರರ ಗುಲಾಮನಾಗಿರದಿದ್ದರೆ, ತನ್ನ ಸಂಪಾದಕತ್ವಕ್ಕೆ ಶರಣು ಹೊಡೆಯಬೇಕು. ತಮ್ಮ ಸ್ವಾತಂತ್ರ್ಯಾಭಿಪ್ರಾಯಗಳಿಗೆ ಸ್ಥಾನವಿಲ್ಲದೆ, ಮದ್ರಾಸಿನ ಸುಪ್ರಸಿದ್ಧ ಸಂಪಾದಕರಾದ ಶ್ರೀ ಖಾಸಾ ಸುಬ್ಬರಾಯರು 'ಎಕ್ಸಪ್ರೆಸ್' ಪತ್ರಿಕೆಯಿಂದ ದೂರವಾಗಿ 'ಸ್ವತಂತ್ರ' ಪತ್ರಿಕೆಯನ್ನಾರಂಭಿಸಿದರು. ಒಂದು ಪತ್ರಿಕೆಯನ್ನು ಬೆಳೆಸಿ ಜನಪ್ರಿಯ ಮಾಡಿ ಸ್ವಲ್ಪ ಪ್ರಾಪ್ತವಾಯ್ತೆಂದರೆ ಸಾಹುಕಾರರು ತಮ್ಮ ಪ್ರಭಾವದಲ್ಲಿ ಕಡಮೆಯಾದೀತೆಂದು ಅದನ್ನು ನುಂಗಿ ನೀರು ಕುಡಿಯುವರು.

ಜನತೆಯು ಇಂಥಾ ಮೋಸದಿಂದ ದೂರವಿರಬೇಕಾದುದು ಅವಶ್ಯಕ. ಬಡವರ ರೈತರ ಹೆಸರಲ್ಲಿ ಪ್ರಚಾರ, ಆದರೆ ಇದರ ಲಾಭ, ಶಾಸನಸಭೆಯ ಪ್ರತಿನಿಧಿತ್ವ ಸ್ಥಾನಗಳ ಆಕ್ರಮಣ ರೊಕ್ಕಸ್ಥರಿಗೆ. ಮುಂಬರುವ ಚುನಾವಣೆಗಳಲ್ಲಿ ಉಳಿಯುವ ಪಕ್ಷಗಳು ಎರಡೇ. ಕಾಂಗ್ರೆಸ್ ಸೋಗಿನಲ್ಲಿ ಬರುವ ಸಾಹುಕಾರರ ಪಕ್ಷವೊಂದು. ಸಮಾಜವಾದೀ ಬಡವರ ಪಕ್ಷ, ಇನ್ನೊಂದು. ಜನತೆಯು ಈಗಿನಿಂದಲೇ ಎಚ್ಚರವಾಗಿರಬೇಕು.

ಬರ್ಮಾದಲ್ಲಿ ವಿರೋಧಿಗಳ ಮಂತ್ರಿಮಂಡಲ.

ಬರ್ಮಾ ಸರಕಾರದ ವಿರುದ್ಧವಾಗಿ, ಬಂಡೆದ್ದ ಗುಡ್ಡಗಾಡ ಜನರಾದ ಕರೆನ್‌ರು ಮಂತ್ರಿಮಂಡಲವೊಂದನ್ನು ರಚಿಸಿದಬಗ್ಗೆ ನಿನ್ನೆ ರಾತ್ರಿ ಸಾರಲಾಯಿತೆಂದು ಇಂದಿಲ್ಲಿಯ ಬರ್ಮೀಯ ವೃತ್ತಪತ್ರಿಕೆಗಳು ಹೇಳಿವೆ. ಕರೆನ್ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾದ ೪೪ ವರ್ಷಗಳ ವಯಸ್ಸಿನ ಸಾ ಬಾ ಯು ಗೈರವರು ಪ್ರಧಾನ ಮಂತ್ರಿಗಳಾಗಿದ್ದು ಗೃಹ ಮತ್ತು ಸಾರಿಗೆಯ ಮಂತ್ರಿಗಳಾಗಿದ್ದು, ಯುದ್ಧ, ಗೃಹ ಮತ್ತು ಸಾರಿಗೆಯ ಮಂತ್ರಿಗಳನ್ನೂ ನೇಮಿಸಲಾಗಿದೆ.

ಈ ಹೊಸ ಕರೆನ್ ಮಂತ್ರಿಮಂಡಲವು ಅದು ಹೇಗೆ ತಾನೆ, ಕೆಲಸ ಮಾಡುವುದೋ ಎಂಬ ಬಗ್ಗೆ ಇಲ್ಲಿಯ ನಿರೀಕ್ಷಕರಿಗೆ ಸ್ಪಷ್ಟವಾಗಿಲ್ಲ. ಸರಕಾರಿ ಸೈನ್ಯಗಳು ಇನ್‌ಸೀನ್‌ವನ್ನು ಕರೆನ್ನರಿಂದ ವಶಪಡಿಸಿಕೊಂಡಾಗ್ಗೆ ಬಾ ಯು ಗ್ಯಿಯು ಪಾರಾಗಿ ಹೋಗಿದ್ದ. ಪ್ರಮುಖ ಕರೆನ್ ದಳಗಳು ಉತ್ತರಕ್ಕೆ ೬೦ ಮೈಲುಗಳ ಅಂತರದಲ್ಲಿ ಚ್ಯಾಂಗೂ ಪ್ರದೇಶದಲ್ಲಿದ್ದು, ಅಲ್ಲಿ ಅವರು ಕಳೆದ ತಿಂಗಳು ಕರೆನ್ ರಾಷ್ಟ್ರವೊಂದನ್ನು ಸಾರಿದ್ದಾಗಿ ವರದಿಯಾಗಿದೆ. ಮಾನ ಸೀಲ್ಡ್ ಹಿನ್ ಗೃಹಮಂತ್ರಿ, ಸಾಹಿತೋ ಯುದ್ಧ ಮಂತ್ರಿ ಮತ್ತು ಜಾನ್ಸನ್ ಪ್ರಮಿನ್ ಸಾರಿಗೆ ಮಂತ್ರಿ ಹೀಗೆ ಮಂತ್ರಿಗಳನ್ನು ನೇಮಿಸಲಾಗಿದೆ.

—ಬರ್ಮಾದ ಆರಕಾನ್ ಪ್ರದೇಶದಲ್ಲಿ ಮತ್ತೆ ದಂಗೆಗಳು ಪ್ರಾರಂಭವಾಗಿವೆ. ಅಲ್ಲಿಯ ಮಿಲಿಟರಿ ಪೋಲೀಸರು ಕಮ್ಯೂನಿಸ್ಟರನ್ನು ಕೂಡಿಕೊಂಡಿರುವರೆಂದು ಗೊತ್ತಾಗಿದೆ.

ನೋಟೀಸು.

—)0(—

ಹೊಸಪೇಟೆ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 16/49.

ಪೂಜಾರು ಬಸವ್ವ .... ಅರ್ಜಿದಾರಳು

ಸದರಿ ಅರ್ಜಿದಾರಳು ತನ್ನ ತಂದೆಯಾದ ಲೇಟ್ ತುಮಿನಪ್ಪಗೆ ಬರತಕ್ಕ ಪ್ರೋನೋಟು ಬಾಬತು 109—13—0 ಬಾಕಿ ವಸೂಲು ಮಾಡುವುದಕ್ಕೆ ವಾರಸುದಾರ ಸರ್ಟಿಫಿಕೇಟ್ (Succession Certificate) ಗಾಗಿ ಅರ್ಜಿ ಹಾಕಿರುತ್ತಾಳೆ. ಸದರಿ ಅರ್ಜಿಗೆ ಯಾರಾದಾದರು ತಕರಾರು ಇದ್ದಲ್ಲಿ 27—6—49 ಕ್ಕೆ ಹಾಜರಾಗತಕ್ಕದ್ದು. ಇಲ್ಲದಿದ್ದಲ್ಲಿ ಏಕಪಕ್ಷ (Exparte) ಉತ್ತರವು ಮಾಡಲ್ಪಡುವದ.

ಜೆಚ್. ಗೋವಿಂದಾಚಾರ್,

ಅಡ್ವೊಕೇಟು, ಹೊಸಪೇಟೆ

ಬಳ್ಳಾರಿ ಜಿಲ್ಲೆಯ ಈ ವರ್ಷದ ಎಸ್. ಎಸ್. ಎಲ್. ಸಿ. ಪರೀಕ್ಷಾ ಫಲಿತಾಂಶ

ಆದವಾನಿ ಮುನಿಸಿಪಲ್ ಹೈಸ್ಕೂಲ್	5	ಉತ್ತೀರ್ಣರಾದವರು
ಆಲೂರು ಬೋರ್ಡು ಹೈಸ್ಕೂಲ್	6	”
ಬಳ್ಳಾರಿ ಮುನಿಸಿಪಲ್ ”	21	”
” ವಾರ್ಡಲಾ ”	22	”
” ಸೆಂಟ್ ಜಾನ್ ”	28	”
” ನೆಟ್ಟಿಗುರುಶಾಂತಪ್ಪ ಹೈಸ್ಕೂಲ್	10	”
” ಗವರ್ನಮೆಂಟ್ ಸೆಕಂಡರಿ ಸ್ಕೂಲ್ ಫಾರ್ ಗರ್ಲ್ಸ್	5	”
” ಮುಸ್ಲಿಂ ಹೈಸ್ಕೂಲ್	7	”
ರಾಯದುರ್ಗ ಬೋರ್ಡು ಹೈಸ್ಕೂಲು	12	”
ಹೊಸಪೇಟೆ ಮುನಿಸಿಪಲ್ ಹೈಸ್ಕೂಲ್	30	”
ಕೊಟ್ಟೂರು ಬೋರ್ಡು ಹೈಸ್ಕೂಲ್	8	”
ಹಡಗಲಿ ಬೋರ್ಡು ಹೈಸ್ಕೂಲ್	5	”
ಹರಪನಹಳ್ಳಿ ಬೋರ್ಡು ಹೈಸ್ಕೂಲ್	12	”
ಕಂಪ್ಲಿ ಮಿಯಾಚಂದ್ ಬೋರ್ಡು ಹೈಸ್ಕೂಲ್	6	”
ಯಮ್ಮಿಗನೂರು ಬೋರ್ಡು ಹೈಸ್ಕೂಲ್	1	”
ಕೂಡ್ಲಿಗಿ ಬೋರ್ಡು ಹೈಸ್ಕೂಲ್	4	”

ಜಿಲ್ಲೆಯಲ್ಲಿ ಸುಮಾರು 600 ವಿದ್ಯಾರ್ಥಿಗಳು ಈ ಪರೀಕ್ಷೆಗೆ ಕೂತಿದ್ದು ನಾಲ್ಕರಲ್ಲೊಂದು ಪಾಲು ಜನರು ಈ ವರ್ಷ ಉತ್ತೀರ್ಣರಾಗಿರುವರು.

ಅಖಿಲ ಭಾರತ ಸಮಾಜವಾದಿ ಸಂಘದ ಅಧಿವೇಶನ

ಅಖಿಲ ಭಾರತ ಸೋಷಿಯಾಲಿಸ್ಟ ಪಾರ್ಟಿಯ 2ನೇ ಅಧಿವೇಶನವು ಅಚ್ಯುತ ಪಟವರ್ಧನರ ಅಧ್ಯಕ್ಷತೆಯಲ್ಲಿ ಇಂದು ಇಲ್ಲಿ ಕೂಡಿತ್ತು.

ಕಳೆದ ಮಾರ್ಚದಲ್ಲಿಯ ಪರಿಷತ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಸುಮಾರು ನಾಲ್ಕು ತಾಸುಗಳವರೆಗೆ ಚರ್ಚೆಯಾಯಿತು. ಜಯಪ್ರಕಾಶ ನಾರಾಯಣ (ಜನರಲ್ ಸಕ್ರೆಟರಿ) ಸುರೇಶ ದೇಸಾಯಿ, ಪ್ರೊ. ಮುಕುಂದ ದಾಸ, ಜಿ... ಭಾಯಿ ಪ್ರಾಂಜೆಕ, ಜಿಸಿನ' ಮಾಲದಾಸ (ಅಸ್ಸಾಮ), ಸರೇಂದ್ರದಾಸ (ಬಂಗಾಲ), ಮಂಗಲಾಲ ಬಾಗಡಿ, ಡಾ. ಕೆ ಬಿ. ಮೆನನ್ (ಮದ್ರಾಸ), ಪಿ ಎಂ. ನಾರಾಯಣ ಟೈರ (ಕೇರಳ), ರಮಾನಂದ ಮಿಶ್ರ ಮುನ್ಸಿ ಅಹಮದ್ದೀನ ಮೊದಲ ಜನರು ಆಗಮಿಸಿದ್ದರು.

ಶ್ರೀಮತಿ ಅರುಣಾ ಅಸಫ ಅಲಿ ಮತ್ತು ಅಶೋಕ ಮೆಹತಾ ಇವರು ಅನಾರೋಗ್ಯದ ಸಲುವಾಗಿ ಉಪಸ್ಥಿತರಿದ್ದರು.

ಜನತೆಯೊಡನೆ ಸಂಪರ್ಕ ಬೇಕು

ನೆಹರೂರ ಹಿತವಚನ

ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರೂರವರು ಘಟನಾ ಸಭೆಯ ಕಾಂಗ್ರೆಸ ಪಕ್ಷವನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಕಲ್ಕತ್ತೆಯ ದಕ್ಷಿಣ ಭಾಗದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಉಮೇದವಾರರ ಸೋಲಿನ ಕಾರಣಗಳನ್ನು ವಿಶ್ಲೇಷಿಸಿ, ಇದು ಜನತೆಯ ತೀರ್ಪಾಗಿದೆಯೆಂ ತಿಳಿಯಬೇಕೆಂದು ನಾಂದಿಸಿಂದು ಹೇಳಲಾಗಿದೆ.

ಪಕ್ಷದ ಪ್ರತಿಯೊಬ್ಬ ಸದಸ್ಯನೂ ಜನತೆಯೊಂದಿಗೆ ಹಾಸುಹೊಕ್ಕಾಗಿ ಬೆರೆತುಕೊಂಡು ಅವರನ್ನು ಸುಶಿಕ್ಷಿತರನ್ನಾಗಿ ಮಾಡಬೇಕು ಎಂದು ಪಂಡಿತರು ಉಪದೇಶಿಸಿದರು.

ಸೇರಿಗೆ ಸವ್ವಾಸೇರು

'ಮೂರ್ಖನು ತಾನು ಮಾಡಿದ್ದೆ ಸತ್ಯವೆಂದು ತಿಳಿಯುತ್ತಾನೆ"

—ಹರಿ

'ಇಸ್ಲಾಂ ಧರ್ಮಕ್ಕೆ ಗಂಡಾಂತರ' ಎಂಬ ಕೂಗನ್ನು ಎಬ್ಬಿಸಿ ಪಾಕಿಸ್ತಾನ ಕಟ್ಟಿದ ಪಾಕಿಸ್ತಾನಿಗಳೇ ಈಗ ಇಸ್ಲಾಂ ಧರ್ಮಕ್ಕೆ ಅನ್ಯಾಯ ಬಗೆದಿರುವರೆಂಬ ಟೀಕೆಯೊಂದು ಅಫಘಾನಿಸ್ಥಾನದ ರಾಜ್ಯಭಾರಿಗಳಿಂದ ಇದೀಗ ಬಂದಿರುವುದು. ದಿನಾಂಕ ಹನ್ನೆರಡರಂದು ಅಫಘಾನ ಪ್ರದೇಶದ ಮೊಘಲಗಾಯಿಯ ಮೇಲೆ ಪಾಕಿಸ್ಥಾನವು ಅನ್ಯಾಯದಿಂದ ದಾಳಿಮಾಡಿ ಐದು ಬಾಂಬುಗಳನ್ನು ಒಗೆದು ಹದಿನೈದು ಜನರ ಆಹುತಿಯನ್ನು ತೆಗೆದುಕೊಂಡಿತು. ಅನ್ಯಾಯವಾಗಿ ದಾಳಿ ಮಾಡಿ ಜನರ ಕೊಲೆ ಮಾಡುದು ಇಸ್ಲಾಂ ಧರ್ಮಕ್ಕೆ ವಿರುದ್ಧವಾಗಿರುವದೆಂದು, ಸೂಚಿಸುತ್ತಾ ಅಫಘಾನಿಸ್ಥಾನದ ವಿದೇಶ ಮಂತ್ರಿ ಅಲಿ ಮಹಮ್ಮದರು ಪಾಕಿಸ್ಥಾನದ ರಾಯಭಾರಿಯನ್ನು ನಿನ್ನೆ ಕಾಬುಲದಲ್ಲಿ ಕಂಡು ತಮ್ಮ ತೀವ್ರವಾದ ನಿಷೇಧವನ್ನು ಅರುಹಿರುವರು.

ಪಾಕಿಸ್ತಾನವು ಬಾಂಬುಗಳನ್ನು ಹಾಕಿದ್ದಕ್ಕೆ ಕೊಟ್ಟ ಕಾರಣವನ್ನು ಅಫಘಾನಿಸ್ತಾನವು ಬಲವಾಗಿ ಅಲ್ಲಗಳೆದು ಗುಡುಗು ಹಾಕಿರುವುದು. ಪಾಕಿಸ್ತಾನದ ಗಡಿ ಪ್ರದೇಶದಲ್ಲಿ ಅಫಘಾನಿಗಳು ಶಾಂತಿಗೆ ಗಂಡಾಂತರವನ್ನುಂಟು ಮಾಡಲೆತ್ನಿಸಿದ್ದರ ಫಲವಾಗಿ ತಾವು ಸ್ವಸಂರಕ್ಷಣೆಗಾಗಿ ಬಾಂಬುಗಳನ್ನು ಎಸೆಯಬೇಕಾಯಿತೆಂದು ಪಾಕಿಸ್ತಾನವು ಸೂಚಿಸಿರುವುದು. ಅಫಘಾನಿಸ್ತಾನದ ನಿಷೇಧವನ್ನು ನಿರಾಕರಿಸುತ್ತ ಪಾಕಿಸ್ತಾನವು ಇಪಿಫಕೀರನ ಅನುಯಾಯಿಗಳೊಂದಿಗೆ ಅಫಗಾನಿಸ್ತಾನವು ಮುಂದೊತ್ತಬಹುದಾಗಿದ್ದ ಸಂಚನ್ನು ಎತ್ತಿ ಹಿಡಿದು ತನ್ನ ದಾಳಿಯನ್ನು ಸಮರ್ಥಿಸಿಕೊಂಡಿರುವುದು.

'ಸೇರಿಗೆ ಸವ್ವಾಸೇರು' ಎನ್ನುತ್ತ ಪಾಕಿಸ್ತಾನದ ಪ್ರದೇಶವಾದ ಉತ್ತರ ವಝಿರಿಸ್ತಾನದಲ್ಲಿ ವಿಮಾನೊಡ್ಡಾಣದ ಮೇಲೆ ಅಫಗಾನರ ದಾಳಿಯೂ ಆಯಿತೆಂದು ರಾವಲಪಿಂಡಿಯಿಂದ ಬಂದ ವರ್ತಮಾನವು ಅಫಗಾನ ಪಾಕಿಸ್ತಾನಗಳ ನಡುವೆ ಏಳಬಹುದಾದ ಗಂಡಾಂತರ ಪರಿಸ್ಥಿತಿಯನ್ನು ಸಾರುತ್ತಿರುವುದು. ಈಗಾಗಲೇ ಪ್ಯಾರಿಸಿನ ಅನಿಶ್ಚಿತ ಧೋರಣೆಯಿಂದ ಹದಗೆಟ್ಟ ಅಂತರಾಷ್ಟ್ರೀಯ ಪರಿಸ್ಥಿತಿಯು ಈ ಹೊಸ ಕಲಹದಿಂದ ಇನ್ನೂ ಕೆಡಬಹುದೆಂದೂ, ಇದರಿಂದ ಜಾಗತಿಕ ಶಾಂತಿಗೇ ಆತಂಕಬರಬಹುದೆಂದೂ ಬ್ರಿಟಿಶ ರಾಜಕಾರಣಿಗಳು ಊಹಿಸುತ್ತಿದ್ದಾರೆ.



ಹುಲಿಯ ಸನ್ಯಾಸ

'ತ್ಯಾಗ ಬುದ್ಧಿಯನ್ನು ನಟಿಸುವ ಕೆಟ್ಟ ಮನುಷ್ಯನನ್ನು ನೀನು ಯಾವಾಗಲೂ ನಂಬಬೇಡ"

. ಜೇಕನ್

ಶಾಂಘಾಯಿ ಬಿದ್ದ ಮೇಲೆ ಚೀನಾದಲ್ಲಿ ಕಮ್ಯುನಿಸ್ಟರ ಆಡಳಿತ ಮೇಲುಗೈ, ಅವನ್ನು ಎಲ್ಲರೂ ಬಲ್ಲರು. ಈ ಹೊಸ ಆಡಳಿತದ ಪದ್ಧತಿಯನ್ನು ಸೂಕ್ಷ್ಮ ದೃಷ್ಟಿಯಿಂದ ನೋಡುತ್ತಿರುವವರಿಗೆ ಇತ್ತೀಚಿಗೆ ಪ್ಯಾರಿಸಿನ 'ಲೇಮೊಂಡೇ' ಎಂಬ ಪತ್ರಿಕೆಯಲ್ಲಿ ಅದರ ಸುದ್ದಿಗಾರನು ಹೊಸ ಕಮ್ಯುನಿಸ್ಟರ ಆಡಳಿತವನ್ನು ಕುರಿತು ಬರೆದ ಸುದ್ದಿಯು ಬಹು ಆಶ್ಚರ್ಯವನ್ನುಂಟುಮಾಡುವಂತಹದಾಗಿರುವುದು.

ಬ್ರಿಟಿಶ ಮತ್ತು ಅಮೇರಿಕೆಯ ಪತ್ರಗಳು ಶಾಂಘಾಯಿಯ ರಾಜಕಾರಣಕ್ಕೆ ಅಷ್ಟು ಮಹತ್ವವನ್ನು ಕೊಟ್ಟು ಪ್ರಸಿದ್ಧಿಸುತ್ತಿಲ್ಲ ಆದರೆ ಪ್ಯಾರಿಸಿನ 'ಲೇಮಂಡೇ' ಎಂಬ ಪತ್ರಿಕೆಯು ಪ್ರಸಿದ್ಧಿಸುತ್ತಿರುವ ಸುದ್ದಿಯು ಲಂಡನ್ ಟಾಯಿಮ್ಸಕ್ಕೆ ತದ್ವಿರುದ್ಧವಾಗಿರುವದು ಶಾಂಘಾಯಿಯಿಂದ 'ಲೇಮೊಂಡೇ' ಪತ್ರಿಕೆಗೆ ಸುದ್ದಿ ಕಳಿಸುತ್ತಿರುವ ಪತ್ರಿಕೋದ್ಯಮಿಯು ಹೀಗೆ ಬರೆಯುತ್ತಾನೆ

'ಚೀನೀ ಕಮ್ಯುನಿಸ್ಟ ಸೈನಿಕರನ್ನು ಜನರು ನೆಲದ ಮೇಲೆ ಮೂಡಿದ ನಕ್ಷತ್ರಗಳೇ ಎಂದು ತಿಳಿದುಕೊಂಡಿರುವರು. ಯುದ್ಧಕಲಾ ವಿಶಾರದರಾದ ಈ ಸೈನಿಕರು ಯುದ್ಧದಲ್ಲಿ ವಿಜಯಗಳಾದ ಮೇಲೆ ಸ್ಥಿತಿಸ್ಥಾಪನಾ ಕಾರ್ಯದಲ್ಲಿ ತೋರುತ್ತಿರುವ ಕೌಶಲವು ಶ್ಲಾಘನೀಯವಾಗಿವೆ. ಹಳ್ಳಿಗಳನ್ನು ಹಾಳು ಮಾಡದೆ, ಮನೆಗಳನ್ನು ಲೂಟಿ ಮಾಡದೆ ಈ ಚೀನಿ ಕಮ್ಯುನಿಸ್ಟ ಪಡೆಯು ರಾತ್ರಿ ಬಂದಾಗ ಬೀದಿಯಲ್ಲಿ ಮಲಗುತ್ತಾರೆ. ಹಸಿದಾಗ ಅನ್ನ ಬೇಡದೆ ಕೊಟ್ಟಿದ್ದನ್ನು ಸ್ವೀಕರಿಸದೆ ಮೌನದಿಂದ ಹಸಿವಿಯ ಬಾಧೆಯನ್ನು ಸಹಿಸುತ್ತಾರೆ ಟ್ರಾಮ್ ಬಸ್ಸುಗಳಲ್ಲಿ ಕುಳಿತು ಹೋಗುತ್ತಿರುವಾಗ ಜನರು ಬಂದರೆ ಅವರಿಗೆ ತಕ್ಷಣ ಸ್ಥಾನ ಕೊಡುತ್ತಾರೆ" ಅವರು ನಡಿಸಿರುವ ಆಪ್ರಿಕೆಯ ಪದ್ಧತಿ ಮಾದರಿಯಾಗಿದೆ ಎಂದು ಪ್ರತಿಕೆಯು ಪ್ರಕಟಿಸಿರುವ ಸುದ್ದಿಗೆ ಬ್ರಿಟಿಶ ಪತ್ರಿಕೆಗಳು ಹಾಸ್ಯ ಮಾಡುತ್ತಿವೆ.

ಇದು ಹುಲಿಯ ಸನ್ಯಾಸದ ಕತೆಯಂತೆ ಇದೆಯೆಂದು ಅವರಲ್ಲಿ ನಂಬುತ್ತಿದ್ದಾರೆ. ಚೀನಾದ ಕಮ್ಯುನಿಸ್ಟರ ಆದರ್ಶ ಪ್ರಚಾರದ ಸೋಗು ಇದೇ ಎಂದು ಅವರ ಅಭಿಪ್ರಾಯದಾಗಿದೆ.

.. ಪಾಕಿಸ್ತಾನವು ಅಫಗಾನಿಸ್ತಾನದ ಸರಹದ್ದೀನಗರದ ಮೇಲೆ ದಾಳಿಮಾಡಿದ ಕಾರಣ 21 ಜನರು ಮರಣ ಹೊಂದಿದ್ದು 26 ಜನರಿಗೆ ಗಾಯಗಳಾಗಿವೆಯೆಂದು ಅಫಗಾನ ಸುದ್ದಿ ಸಂಸ್ಥೆಯು ಬಿತ್ತರಿಸಿದೆ.

ಮಂತ್ರಿಪದಕ್ಕೆ ಸರದಾರ ಪಟೇಲರರಾಜೀನಾಮೆಯೇ?

—●—

ಕಾಂಗ್ರೆಸ್ ಕೊಳೆಯೇ ಕಾರಣ

ಭಾರತದ ಉಪಮುಖ್ಯ ಮಂತ್ರಿಗಳಾದ ಸರದಾರ ವಲ್ಲಭಭಾಯಿ ಪಟೇಲರು ತಮ್ಮ ಮಂತ್ರಿ ಪದಕ್ಕೆ ರಾಜೀನಾಮೆಯಿತ್ತು ಕಾಂಗ್ರೆಸದ ಮುಖಂಡತ್ವ ವಹಿಸಲು ಸನ್ನದ್ಧರಾಗಿರುವರೆಂದು ವಿಶ್ವಸನೀಯವಾಗಿ ತಿಳಿದು ಬರುತ್ತದೆ ಸದ್ಯದ ಕಾಂಗ್ರೆಸ್ ಸಂಸ್ಥೆಯ ಧ್ಯೇಯ ಹಾಗು ಕಾರ್ಯಕ್ರಮಗಳು ಹದಗೆಟ್ಟಿರುವದರಿಂದ ಅವನ್ನು ಸುಧಾರಿಸಲು ಸ್ವತಃ ಮುಂದೆ ಬರುವವರಿರುವರೆಂದು ಹೇಳಲಾಗುತ್ತದೆ. ಮೊನ್ನಿನ ಎರಡು ಪ್ರಾಂತಗಳಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ಸು ಅಯಶಸ್ವಿಯಾದದ್ದು, ಅದರಲ್ಲಿಯ ದೋಷಗಳ ಮೂಲಕವೇ ಎಂದು ಸರದಾರರ ಅಭಿಪ್ರಾಯವಾಗಿದೆ. ಈ ಬಗ್ಗೆ ಅವರು ಬಹಳಷ್ಟು ವಿಚಾರ ಮಾಡಿರುವರೆಂದೂ ಪ್ರಾಂತಿಕ ಮಂತ್ರಿಮಂಡಳಗಳಲ್ಲಿ ಕಂಡು ಬರುತ್ತಿರುವ ಅನ್ಯಾಯ, ಲಂಚಗೊಳಿತನಗಳೇ ಕಾಂಗ್ರೆಸ್ ಅಪಜಯಕ್ಕೆ ಕಾರಣಗಳಾಗಿರುವವೆಂದು ಅವರು ನಂಬುತ್ತಾರೆಂದು ತಿಳಿದುಬರುತ್ತದೆ ಕಾಂಗ್ರೆಸ್ ಸಂಸ್ಥೆಯಲ್ಲಿಯ ಇಂಥ ಜನರನ್ನು ತಳ್ಳಿಹಾಕುವ ವಿಷಯವನ್ನು ಕಾಂಗ್ರೆಸ್ ವರಿಷ್ಠರು ಅತ್ಯಂತ ಗಂಭೀರವಾಗಿ ವಿಚಾರಿಸುತ್ತಿರುವರೆಂದು ತಿಳಿದುಬರುತ್ತದೆ ಮೊನ್ನಿನ ಸರತ್ ಬೋಸರ ವಿಜಯದಿಂದಾದ ಕಾಂಗ್ರೆಸ್ ಪಕ್ಷದ ಸೋಲು ವ್ಯಾಯಕ್ತಿಕ ಸೋಲೆಂದು ಸರದಾರರು ತಿಳಿದಿರುವರೆಂದು ಹೇಳಲಾಗುತ್ತದೆ.

ಸರದಾರ ಪಟೇಲರು ತಮ್ಮ ಮಂತ್ರಿಪದಕ್ಕೆ ರಾಜೀನಾಮೆ ಕೊಡುವದಾದರೆ ಪ್ರಾಂತಿಕ ಕಾಂಗ್ರೆಸ್ ರಾಜಕಾರಣದಲ್ಲಿ ವಿಶೇಷ ಬದಲಾವಣೆಗಳಾಗುವ ಸಂಭವವಿದೆ. ತೆರವಾಗಲಿರುವ ಕೇಂದ್ರದ ಸ್ಥಳವನ್ನು ತುಂಬಲು ಪ್ರಾಂತಿಕ ಮುಖಂಡರಿಗೂ ಕರೆಹೋಗಬಹುದು. ಮುಂಬೈ ಮೇಯರರಾದ ಶ್ರೀ ಎಸ್. ಕೆ. ಪಾಟೀಲರ ಹೆಸರೂ ಕೇಳಬರುತ್ತದೆ

....)0(...

ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ.

33 ನೆಯ ವಾರ್ಷಿಕ ಸಭೆಯು 24-6-49 ನೆಯ ಶುಕ್ರವಾರ ಸಾಯಂಕಾಲ 5 ಗಂಟೆಗೆ ಬಳ್ಳಾರಿ ನಗರದ ಸಂಘದ ಮಹಲಿನಲ್ಲಿ ಸಮಾವೇಶವಾಗಿ ವಾರ್ಷಿಕ ಲೆಕ್ಕ, ವರದಿ, ಆಯವ್ಯಯ ಪಟ್ಟಿ ವ್ಯವಸ್ಥಾಪಕ ಸಮಿತಿ ಸದಸ್ಯರ ಆಯ್ಕೆಯ ವಿಷಯಗಳು ವಿಮರ್ಶಿತವಾಗಲಿವೆ, ಎಲ್ಲ ಸದಸ್ಯರೂ ಚಂದಾದಾರರೂ ಸಕಾಲಕ್ಕೆ ಆಗಮಿಸಲು ಕಾರ್ಯದರ್ಶಿ ಶ್ರೀ ಟೆಂಗಿನಕಾಯಿ ಶಾಂತಪ್ಪನವರು ಕೋರುತ್ತಾರೆ.

4-30 ಕ್ಕೆ ಉಪಹಾರ.

ಚೀನ

ಕಮ್ಯುನಿಸ್ಟರು ದಕ್ಷಿಣ ಭಾಗದಲ್ಲಿ ಮುಖ್ಯ ನಗರವಾದ ಕ್ಯಾಂಟನ್ ನಗರವನ್ನು ಸ್ವಾಧೀನ ಪಡಿಸಿಕೊಳ್ಳಲು ಜೋರಾಗಿ ನುಗ್ಗುತ್ತಿರುವರು. ಪೂರ್ಣವಾಗಿ ಚೀನವು ವಶವಾಗಬಹುದು.

— ಹೊಸ ಘಟನೆಯು ಮಹಾತ್ಮರ ಹುಟ್ಟು ಹಬ್ಬದದಿನ 2-10-1949 ಭಾರತದಲ್ಲಿ ಜಾರಿಗೆಬರುವುದು.

— ಕಲ್ಕತ್ತಾ ನಗರದಲ್ಲಿ ಕಮ್ಯುನಿಸ್ಟರ ಮೇಲೆ ಅತ್ಯುಗ್ರಕಾರ್ಯಕ್ರಮ ತೆಗೆದುಕೊಳ್ಳಲು ಪುನಃ ಗಳಹನೆಯ ಕಲಮಿನ ಪ್ರಯೋಗವಾಗಿದೆ.

— ಬರುವ ಭಾನುವಾರ ಚಂದ್ರನಗರದಲ್ಲಿ ಮತಗಣನೆಯಾಗಿ ಅದು ಫ್ರಾನ್ಸಿಗೆ ಸೇರಬೇಕು ಭಾರತಕ್ಕೆಸೇರಬೇಕು ಎಂಬುದು ನಿರ್ಧಾರವಾಗುತ್ತದೆ.

ಗೀತಾಶ್ಲೋಕಗಳ ಗ್ರಾಮಫೋನ್ ರಿಕಾರ್ಡು

ಗೀತೆಯಲ್ಲಿನ ಮುಖ್ಯ ಶ್ಲೋಕಗಳು, ಸ್ಥಿತಪ್ರಜ್ಞನ ವರ್ಣನೆ ವಗೈರೆ ಮೂಲ ಸಂಸ್ಕೃತ ಶ್ಲೋಕಗಳಲ್ಲಿ ಹೇಳಿ ಅದರ ಇಂಗ್ಲಿಷ ಅನುವಾದವನ್ನು ಕೊಡುವ ಗ್ರಾಮಾಫೋನ್ ರಿಕಾರ್ಡುಗಳನ್ನು ಅಮೆರಿಕಾದ ಎಥನಿಕ್ ಫೋಕ್ ವೇಯ್ಸ ರಿಕಾರ್ಡ್ಸ್ ಕಂಪನಿಯವರು ತಯಾರಿಸಿದ್ದಾರೆ ಭಾರತದ ಪ್ರೊಫೆಸರ್ ಶ್ರೀ ಟಿ. ಎಮ್. ಮಹದೇವನ್‌ರವರು ಇಂಗ್ಲಿಷ್ ಅನುವಾದಕರು.

— ತಾಳೆ ಬೆಲ್ಲದ ಉತ್ಪತ್ತಿಯಿಂದ ಭಾರತದ 50 ಲಕ್ಷ ಕುಟುಂಬೀಕರಿಗೆ ಉದ್ಯೋಗವು ದೊರೆಯುವುದಾದ ಕಾರಣ ಇದರ ಬಗ್ಗೆ ಸರಕಾರ್ವು ಧ್ಯಾನಕೊಡಬೇಕೆಂದು ಭಾರತ ಸರಕಾರವು ಆಶಿಸುತ್ತದೆ, ಭಾರತದಲ್ಲಿ 4 ಕೋಟಿ ತಾಳೆ ಮರಗಳೂ 1 ಕೋಟಿ ಈಚಲು ಮರಗಳೂ ಇರುವವೆಂದೂ ಅಂದಾಜಾಮಾಡಲಾಗಿದೆ.

ಶರತಬೋಸರ ಜಯಕ್ಕೆ ಬಂಗಾಲ ಕಾಂಗ್ರೆಸಿಗರಲ್ಲಿರುವ ಬಣಗಳೇ ಕಾರಣವೆಂದು ಪ್ರಧಾನ ಕಾರ್ಯದರ್ಶಿ ಶ್ರೀ ಕಲಾ ವೆಂಕಟರಾಯರು ಹೇಳಿಕೆ ಕೊಟ್ಟಿರುವರು.

ನೋಟೀಸು.

೧೯೪೭ನೇ ಸಂ॥ ಮದ್ರಾಸು ಷಾಪು ಮತ್ತು ಎಸ್ಟ್ಯಾಬ್ಲಿಷ್‌ಮೆಂಟ್ ಆಕ್ಟು ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇರತಕ್ಕ ರಿಜಿಸ್ಟರುಗಳು ಫಾರಮುಗಳು ವಗೈರೆ ನಮ್ಮಲ್ಲಿ ದೊರೆಯುತ್ತವೆ,

ವಿಠಲ್ ಪ್ರಿಂಟಿಂಗ್ ಪ್ರೆಸ್,
ಶೇರುಬಜಾರ್, ಬಳ್ಳಾರಿ

ಕಾಂಗ್ರೆಸ-ಕಾಂಗ್ರೆಸಿಗರ-ಆಡಳಿತ ★

ಲಾಲಸೆ ಮತ್ತು ಲೋಲುಪತೆಗಳು, ಬೆಳೆದು ಬರಲು ಅಧಿಕಾರವು ತಕ್ಕ ಕ್ಷೇತ್ರವಾಗಿದೆ. ಎಂತೆಂತಹ ಸಂಯಮಿಗಳೂ, ಅದರ ಹೊದೆತಕ್ಕೆ ಕೊಚ್ಚಿಕೊಂಡು ಹೋಗಿ ಲಾಲಸೆ ಮತ್ತು ಲೋಲುಪತೆಗಳ ಅಡಿಯಾಳದ ಉದಾಹರಣೆಗಳು ಅನೇಕವಿರುವವು. ಇದೂ ಒಂದು ಸ್ವಾಭಾವಿಕವಾತ, ಬಹು ದಿನಗಳಿಂದಲೂ ನಡೆದು ಬಂದ, ಮಾತೇ ಆಗಿರುವುದಾದರೂ, ಕೇವಲ ತ್ಯಾಗ ಮತ್ತು ಸೇವಾ ಭಾವ ಪ್ರಧಾನತೆಯಿಂದ, ಸತ್ಯ ಅಹಿಂಸೆಗಳ ಕಠಿಣದಾರಿಯಲ್ಲಿ ಸಾಗಿ, ನಿರಸ್ತ್ರ ಹಾಗೂ ರಕ್ತರಹಿತ ಕ್ರಾಂತಿಯಿಂದ, ಬಲಾಢ್ಯ ಸಾಮ್ರಾಜ್ಯವಾದವನ್ನು ಸೋಲಿಸಿದ ದಿವ್ಯವನ್ನು ಮಾಡಿ ಮಾಡಿ ತೋರಿಸಿದ ಕಾಂಗ್ರೆಸ್ಸು, ಧ್ರುವನಕ್ಷತ್ರದಂತೆ ನಿತ್ಯ ಜಾಜ್ವಲ್ಯ ಕೀರ್ತಿಯಿಂದ ಬೆಳಗುತ್ತಿರುವ ಕಾಂಗ್ರೆಸ್ಸು, ಬರಲಿರುವ ಭಾರತ ಸಂತಾನದ ಹೃದಯದಲ್ಲಿ, ತನ್ನ ಉಜ್ವಲ ಸ್ಥಾನಮಾನಗಳನ್ನು ಕಾಯ್ದುಕೊಳ್ಳಬೇಕಾದರೆ, ಮಹಾತ್ಮಾಗಾಂಧಿಜಿಯವರು ಒಮ್ಮೆ ಹೇಳಿದಂತೆ, ವಿಸರ್ಜಿತವಾಗುವುದೇ ಒಳ್ಳೆಯದೆಂದು ಎನಿಸಿದರೆ ಆಶ್ಚರ್ಯವೆನಿಸಲಾರದು.

ಮಹಾತ್ಮಾ ಗಾಂಧಿಯವರು, ಭಾರತವು ಸ್ವಾತಂತ್ರ್ಯವನ್ನು ಪಡೆದೊಡನೆಯೆ, ಕಾಂಗ್ರೆಸಿನ ಕಾರ್ಯವು ಇನ್ನು ಮುಗಿದಂತಾಯಿತೆಂದೂ, ಕಾಂಗ್ರೆಸದ ವಿಸರ್ಜನೆಯನ್ನು ಮಾಡಿಬಿಡುವುದೇ ಸೂಕ್ತವಾಗಿದೆಯೆಂದೂ, ಒಮ್ಮೆ ಸೂಕ್ಷ್ಮವಾಗಿ ಮುಂದೆ ವಿಶೇಷ ಚಟುವಟಿಕೆ ನಡೆಯದೆ ಹೋಯಿತು. ಏಕೆಂದರೆ ಸ್ವಾತಂತ್ರ್ಯ ದೊರೆತು ಆರು ತಿಂಗಳು ಕಳೆಯುವಷ್ಟರಲ್ಲಿಯೇ ಬಾಪೂಜಿಯವರು ತಮ್ಮ ಜೀವನ ಯಾತ್ರೆಯನ್ನು ಮುಗಿಸಿದರು.

ಈ ವಿಷಯದ ಬಗ್ಗೆ ಲಂಡನದ ಎಡಪಕ್ಷದ ವಾರ ಪತ್ರಿಕೆಯಾದ "ನ್ಯೂ ಸ್ಟೇಟ್ಸ್ ಮನ್" ಎಂಬುದು ಒಂದು ತುಂಬು ಪುಟದ ಸಂಪಾದಕೀಯವನ್ನು ಬರೆದಿದೆ. ಅದರಲ್ಲಿ "ಭಾರತದ ಕಲ್ಯಾಣಕ್ಕಾಗಿ, ಹಾಗೂ, ಅಧಿಕೃತ ಪ್ರಜಾಪ್ರಭುತ್ವದ ದೈನಂದಿನ ಕಾರ್ಯವು ಸುಸೂತ್ರವಾಗಿ ಸಾಗುವಂತೆ ಆಗುವುದಕ್ಕಾಗಿ, ಎಲ್ಲರನ್ನೂ ಅಪ್ಪಿಕೊಳ್ಳುವ ಧೋರಣೆಯ ಕಾಂಗ್ರೆಸು ವಿಸರ್ಜಿತವಾಗಬೇಕೆಂಬುದು ಸುಸ್ಪಷ್ಟವಾದ ಮಾತಾಗಿರುತ್ತದೆ. ಸ್ವಾತಂತ್ರ್ಯ ಸಂಪಾದನೆಯಾದೊಡನೆಯೆ ಕಾಂಗ್ರೆಸದ ಕಾರ್ಯವು ಮುಗಿದಂತಾಯಿತು.

ಸಮಾಜವಾದ

ಸಮಾಜವಾದೀ ಪಕ್ಷವು ಕಾಂಗ್ರೆಸದಿಂದ ಸಿಡಿದು ಹೊರಗೆ ಹೋದುದು, ಭಾರತದ ಇತಿಹಾಸದಲ್ಲಿ ಕೇವಲ ಇತ್ತೀಚಿನ ಘಟನೆ. ಇದೂ ಒಂದು ರೀತಿಯಿಂದ ಒಳ್ಳೆಯದೇ ಆಗಿರುತ್ತದೆ. ಆದರೆ ಸಮಾಜವಾದಿಗಳು, ತಮ್ಮ ಇದ್ದ ತುಸು ಬಂಡವಲದಿಂದ ಇತ್ತ ಕಾಂಗ್ರೆಸಿನೊಡನೆಯೂ, ಅತ್ತ ಕಮ್ಯೂನಿಷ್ಟರೊಡನೆಯೂ, ಹೋರಾಡಬೇಕಾಗಿರುತ್ತದೆ. ಗಾಂಧೀ ತತ್ವದಿಂದ ಸಮಾಜವಾದೀ ತತ್ವವು ಬೇರೆಯದೇ ಆಗಿದ್ದರೂ ಗಾಂಧೀಜಿಯವರಿಂದ ಅವರು ಅನೇಕ ಮಾತುಗಳನ್ನು ಕಲಿತಿದ್ದಾರೆ, ವೈಯಕ್ತಿಕ ತ್ಯಾಗೀ ಕರ್ತವ್ಯ, ಹಾಗೂ ದೈನಂದಿನ ಜೀವನದ ನಿರಾಟಂಬತೆಗಳು ಸಮಾಜವಾದಿಗಳು ಗಾಂಧೀಜಿಯವರಿಂದ ಕಲಿತ ಗುಣಗಳಾಗಿವೆ. ಇವರಿಗೇ ಗೆಲವೂ ಸಂಪೂರ್ಣತೆಯೂ ಸಿಗುವುದು ಪೂರ್ಣ ಸಂಭವನಿದೆ.

ಈ ಸಮಾಜವಾದಿಗಳೊಡನೆ, ಸಮಾಜವಾದಕ್ಕೆ ಅಂಟಿಕೊಂಡಿದ್ದ ಪಂಡಿತ ಜವಾಹರಲಾಲ ನೆಹರು ಅವರು, ಕೂಡಿಕೊಂಡಿದ್ದರೆ, ಭಾರತದ ಭವಿತವ್ಯವು ಇನ್ನೂ ಭವ್ಯದಿವ್ಯವಾಗುತ್ತಿತ್ತು. ಜವಾಹರರ ವೈಯಕ್ತಿಕ ಸ್ಥಾನಮಾನವೂ, ಅವರ ಆಕರ್ಷಕತೆಯೂ, ಜಾಗತಿಕ ರಾಜಕಾರಣ ಪ್ರಸಂಗದಲ್ಲಿ ಅವರಿಗೆ ಒಂದು ಸ್ಥಾನವನ್ನು ತಂದು ಕೊಟ್ಟಿವೆ. ಆದರೆ, ಒಂದು ಕಾಲದಲ್ಲಿ ಸ್ಫೂರ್ತಿದಾಯಕವಾಗಿದ್ದ ಆ ಆದರ್ಶಗಳಿಗೆ ಅಂಟಿಕೊಳ್ಳಲು, ಈಗ ಅವರ ಹಿಂದೆ ಇದ್ದ ಹಾಗೂ ಅವರಿಂದ ನಿಯಂತ್ರಿಸಲಾಗಲಾರದ ಕಾಂಗ್ರೆಸು ಇರುವವರೆಗೆ, ಜವಾಹರರಿಗೆ ಅವಕಾಶವೆಲ್ಲಿದೆ?

ಭಯ

ಭಾರತದಲ್ಲಿ ಸಾಮಾಜಿಕ ಸ್ವಾತಂತ್ರ್ಯವಾಗದೆ ಕೋಟ್ಯಾನುಕೋಟಿ ಭಾರತೀಯ ಸ್ತ್ರೀ ಪುರುಷರು ಬಯಸುತ್ತಿರುವ ಇದು ಉಪ್ಪವಿಸದೆ - ಭಾರತವು ತಾನು ಗೆದ್ದುಕೊಂಡ - ಗಳಿಸಿಕೊಂಡ - ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳುವುದು ಕಠಿಣವಿರುತ್ತದೆ. ಸದ್ಯದ ಚಲನವಲನದಿಂದ ಕಾಂಗ್ರೆಸು ಒಂದು ಏಕತಂತ್ರೀಯ ಸಂಸ್ಥೆಯಾಗಿ ಚೀನದ ಕೋಮಿಂಟಂಗದ ಧ್ವನಿಯನ್ನೇ ಪ್ರತಿಧ್ವನಿಸುತ್ತಿರುವಂತೆ ಕಾಣುವುದರಿಂದ ಭಯವೆನಿಸುತ್ತದೆ. ಈ ದಾರಿಯಲ್ಲಿಯೇ ಕಾಂಗ್ರೆಸು ಮುನ್ನಡೆದರೆ, ಬಡತನದಿಂದ ಬಳಲುತ್ತಿರುವ ಹಾಗೂ ಭ್ರಮೆಯಲ್ಲಿ (ಕಾಂಗ್ರೆಸ್ಸೇ ತಾರಕವೆಂಬ) ರುವ ಜನತೆಯ ಮೇಲೆ ಬೇಗನೆಯಾಗಲಿ ಅಥವಾ ತಡವಾಗಿಯಾಗಲಿ, ಕಮ್ಯೂನಿಸ್ಟರು ವಿಜಯವನ್ನು ಸಂಪಾದಿಸುವುದರಲ್ಲಿ ಸಂಶಯವಿಲ್ಲ.

ಸದ್ಯದ ಭಾರತ ಸರಕಾರವು, ಅನೇಕ ಸ್ತುತ್ಯ ಮತ್ತು ಒಳ್ಳೆಯ ಕೃತಿಗಳನ್ನು ಆಚರಣೆಯಲ್ಲಿ ತಂದಿದೆ. ಆದರೆ ಅಪೇಕ್ಷಿಸಿದಂತೆ ಔದ್ಯೋಗಿಕ ಉನ್ನತಿಯನ್ನು ಸಮಾತ್ರ ಅದರಿಂದ ಸಾಧಿಸಲಾಗಿಲ್ಲ. ಡಾಲರದ ಕೊರತೆಯೂ, ಯಂತ್ರ ಸಾಮಗ್ರಿಗಳನ್ನು ದೊರಕಿಸುವುದರಲ್ಲಿಯ ತೊಡಕು ತೊಂದರೆಗಳೂ, ಕಾರಣವೆಂದು ಹೇಳಲಾಗುತ್ತದೆ. ಆದರೆ ಒಂದು ಕಾಲದಲ್ಲಿ ಅಮೇರಿಕನ್ನ ಮೂಲಧನವಾದಿಗಳು ಆಡಿದ ಕಣ್ಣು ಮುಚ್ಚಾಲೆಯನ್ನೇ ಈ ವಿಷಯದಲ್ಲಿ ಇಂದು ಭಾರತೀಯ ಮೂಲಧನವಾದಿಗಳು ಆಡುತ್ತಲಿದ್ದಾರೆ. ಇವರ ಸಂತುಷ್ಟತೆಗೆ, ಉದ್ಯೋಗ ವ್ಯವಸಾಯಗಳು ಬೆಳೆಯುವಂತೆ ಕಾಂಗ್ರೆಸು ಸಾಕಷ್ಟು ಪ್ರಯತ್ನಿಸದಿದ್ದರೂ, ಕೂಲಿಕಾರರೂ, ಕೆಲಕೆಲವು ಪ್ರದೇಶದಲ್ಲಿ ಒಕ್ಕಲಿಗರೂ, ಅಸಂತುಷ್ಟರಾಗಿದ್ದಾರೆ. ಕಾಂಗ್ರೆಸ್ಸಿನಲ್ಲಿಯ ಅವರ ನಂಬಿಗೆಯು ಮಾಯವಾಗುತ್ತ ನಡೆದಿದೆ. ಅವರ ಈ ಭ್ರಮನಿರಸನೆಯಾಗುವುದು ಅನಿವಾರ್ಯವಿದೆ. ಇದರ ಹೊಣೆಯೂ ಕಾಂಗ್ರೆಸಿನ ಮೇಲೆಯೇ ಇದೆ.

ಕಾಂಗ್ರೆಸು ಆಡಳಿತದ ಅಧಿಕಾರ ಸ್ಥಾನಗಳನ್ನು ಸಂಪಾದಿಸಿದೊಡನೆಯೇ, ಪ್ರತಿಸ್ಪರ್ಧಿಗಳ ಹಾಗೂ ವಿಮರ್ಶಕರ ಅಭಾವದಿಂದ, ಗಾಂಧೀಜಿಯವರಿಂದ ಕಲಿತುಕೊಂಡ ಶಿಸ್ತನ್ನು ಮರೆತುಬಿಟ್ಟಿತು. ದುಡುಕಿನಿಂದ ಹಾರಿಹೋಗಿ ಅಧಿಕಾರ ಸ್ಥಾನದಲ್ಲಿ ಕುಳಿತು, ಪ್ರತಿಫಲಕ್ಕಾಗಿ ಪ್ರತಿಯೊಂದು ಕ್ಷೇತ್ರದಲ್ಲಿಯೂ, ಅಂಜಿಗಾಲಿನಿಂದ ಹರಿದಾಡ ತೊಡಗಿತು" ಎಂದು ಆ ಪತ್ರಿಕೆ ಅಭಿಪ್ರಾಯ ಪಟ್ಟಿದೆ.

ಆಗ

ಆಗ, ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ, ಸುಮಾರಾಗಿ ೨೦ನೆಯ ಶತಮಾನದ ಪ್ರಾರಂಭದಿಂದಲೂ ಜನಜಾಗೃತಿಯು ದಿನಕ್ಕೊಂದು ತಂದದಿಂದ ಮೆಟ್ಟಲು ಮೆಟ್ಟಲಾಗಿ ಏರುತ್ತಲೇ ನಡೆದಿತ್ತು. ಸಮಾಧಾನ, ಸತ್ಯನಿಷ್ಠೆ, ಅಹಿಂಸೆಗಳು, ಪ್ರತಿಯೊಬ್ಬ ಭಾರತೀಯನಲ್ಲಿ, ಜಾತಿ, ಲಿಂಗ, ವಯಗಳ ಭೇದಭಾವಗಳಿಲ್ಲದೆ, ಕ್ರಮೇಣವಾಗಿ ಮೂಡುತ್ತಲಿದ್ದವು. "ಭಾರತ ಮಾತಾಕೀ ಜೈ" ಎಂಬ ಕೂಗು ಕಿವಿಗೆಬಿದ್ದೊಡನೆ ಪ್ರತಿಯೊಬ್ಬ ಭಾರತೀಯನ ಮೈನವಿರೇಳುತ್ತಿತ್ತು. ಮೈದುಂಬುತ್ತಿತ್ತು. ದೇಶಕ್ಕಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ, ಬೇಕಾದಂತಹ ತ್ಯಾಗವನ್ನು ಬೇಕಾದಂತಹ ಕಷ್ಟನಷ್ಟಗಳನ್ನೂ, ಅನುಭವಿಸಲು ಭಾರತೀಯರು ಸಿದ್ಧರಾಗಿದ್ದರು. ಗುಂಡಿಗೆ ಎದೆಗೊಡುವುದು ಒಂದು ಆಟವೆನಿಸಿತ್ತು. ಸೆರೆಮನೆಯಂತೂ ನೆರೆಮನೆಯಾಗಿತ್ತು. ಯಾವ ಪ್ರಸಂಗ ಬಂದರೂ

ಅನುಭವಿಸುತ್ತ, ಸ್ವಾತಂತ್ರ್ಯ ಗುರಿಯ ನ್ನು ಸಾಧಿಸಲು ಬಾಪೂಜಿಯವರ ನೇತೃತ್ವದಲ್ಲಿ ಭಾರತೀಯರು ಸಾಗುತ್ತ ಕೊನೆಗೆ ಗುರಿಯನ್ನು ಸಾಧಿಸಿದರು.

೧೯೪೬ ರಲ್ಲಿಯೇ ಆಯ್ಕೆಗಳು ಭಾರತದ ತುಂಬೆಲ್ಲ ನಡೆದು ದೇಶದ ಬಹುಭಾಗದಲ್ಲಿ ಕಾಂಗ್ರೆಸಿಗರು ಆರಿಸಿಬಂದು ಆಡಳಿತ ಸಾಗಿಸುವಂತಾಗಿತ್ತು. ೧೯೪೭ ರ ಆಗಸ್ಟ ಹದಿನೈದನೆಯ ಭಾಗ್ಯವಾರ, ಭಾರತಕ್ಕೆ ಸ್ವತಂತ್ರತೆಯು ದೊರೆತು ಕೇಂದ್ರದಲ್ಲಿಯೂ ಕಾಂಗ್ರೆಸದ ಆಡಳಿತವು ಪ್ರಾರಂಭವಾಗಿ, ಜನನಾಯಕರೇ ಭಾರತದ ರಾಜಕಾರಣದ ಆಗುಹೋಗುಗಳನ್ನು ನೋಡಿಕೊಳ್ಳುವಂತಾಯಿತು. ಇದರಿಂದ, ೧೯೪೬ ರಲ್ಲಿಯೇ ಜನನಾಯಕರೊಳಗೆ ಕೆಲವರಲ್ಲಿ ಮೊಳಕೆಯೊಡೆದ ಸ್ವಾರ್ಥ, ಶ್ರೀಕರಣ ಪೂರ್ವಕತೆಯ ಅಭಾವ, ನಿಷ್ಠಾಚ್ಯುತಿ, ಅಸ್ತವ್ಯಸ್ತತೆ, ಮೊದಲಾದ ಗುಣಗಳು ೧೯೪೭ ರ ಬಳಿಕಂತೂ ಭರದಿಂದ ಚಿಗಿಯುತ್ತ ನಡೆದವು. ೧೯೪೮ ರ ಜನವರಿಯ ಕೊನೆಗೆ ಭಾರತದ ರಾಷ್ಟ್ರಪಿತ ಬಾಪೂಜಿಯವರ ನಿಧನದ ನಂತರವಂತೂ ಬಹಳಷ್ಟು ಕಾಂಗ್ರೆಸಿಗರಲ್ಲಿ ಈ ಗುಣಗಳು ಮರವಾಗುತ್ತ ನಡೆದವು.

ಈಗ

ಈಗ ಅಧಿಕಾರದ ಹಸ್ತಾಂತರ, ಅಭಾವದ ಪ್ರಾಬಲ್ಯ, ಕ್ರಾಂತಿಕಾಲದ ಅನುಕೂಲ ವಾತಾವರಣ, ಜಾತೀಯತೆಯ ಬೇಗೆ, ಯುದ್ಧನಿಮಿತ್ತದಿಂದಾಗಿ, ಅಸ್ತಿತ್ವದಲ್ಲಿದ್ದ ಅನ್ನ ಬಟ್ಟೆಗಳ ನಿಯಂತ್ರಣ, ಈ ಐದು ಬಗೆಯ ವಿಷಯಗಳು ಬಹುಜನ ಕಾಂಗ್ರೆಸಿಗರಲ್ಲಿ ಸಂಧಿಸಾಧಿಕತೆಯನ್ನು ಹೊಡೆದೆಬ್ಬಿಸಿದವು. ಹಳ್ಳಿಯಿಂದ ಹಿಡಿದು ದಿಲ್ಲಿಯವರೆಗೂ, ಪ್ರತಿಯೊಂದು ಕಡೆಗೆ ಕಾಂಗ್ರೆಸ ಸಾಮುಧಾರಿಗಳು, ಜನತೆಯ ತೊಡಕು ತೊಂದರೆಗಳನ್ನು ಮುಂದು ದೂಡಿಕೊಂಡು ಸರಕಾರದ ದೈನಂದಿನ ಆಡಳಿತ ಕ್ರಮದಲ್ಲಿಯೂ ಕೈಹಾಕುವುದಕ್ಕೆ ಮೊದಲಾಯಿತು. ಈ ಕಾರ್ಯಕ್ಕಾಗಿಯೇ ಲಂಚಗುಳಿತನ ಅನೀತಿಗಳು ಕ್ರಮಕ್ರಮ ಬಹುಜನ ಕಾಂಗ್ರೆಸಿಗರಲ್ಲಿ ಪ್ರವೇಶಿಸ ತೊಡಗಿದವು. ಜನತೆಯಾದರೂ, ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ, ಈ ಕಾಂಗ್ರೆಸಿಗರನ್ನು ಭರದಿಂದ ಹಿಂಬಾಲಿಸ ತೊಡಗಿದರಲ್ಲದೆ, ಲಂಚಕೊಡು ತೆಗೆದುಕೊಳ್ಳುವುದಕ್ಕೂ ಪ್ರಾರಂಭಿಸಿದರು.

ಬಹುಕಾಲದಿಂದಲೂ ನಡೆಯುತ್ತ ಬಂದ ಹಣಕಾಸಿನ, ಅನ್ನ ಅರಿವೆಗಳ, ಉಳಿದ ಜೀವನಾವಶ್ಯಕ ವಸ್ತುಗಳ ಅನಿರ್ಬಂಧ ಕೊಡುಕೊಳ್ಳುವ ವ್ಯವಹಾರಗಳು ಕಾಯಿದೆ ಕಕ್ಷೆಯಲ್ಲಿ ಬಂದು, ಒಂದು ರೀತಿಯಿಂದ ನಿರ್ಬಂಧಿಸಿಲ್ಪಟ್ಟುದ್ದೂ, ಅನೀತಿ, ಲಂಚ ಈ ಗುಳಿತನಕ್ಕೆ ಮಹಾಪೂರ ಬರಲು ಕಾರಣವಾಗಿ ಸಧ್ಯಕ್ಕೆ ಅಧಿಕಾರದಲ್ಲಿರುವ ಕಾಂಗ್ರೆಸದ ಪೆಸರಿನಿಂದಲೇ ಕೆಲವರು ಈ ಬಗೆಯ ವ್ಯವಹಾರಕ್ಕೆ ಉದ್ಯುಕ್ತರಾಗಿದ್ದಾರೆ.

ಇದರಿಂದಲೇ ದೇಶದ ತುಂಬ ಗೊಂದಲವೋ ಗೊಂದಲವಾಗಿ ಪರಿಸ್ಥಿತಿಯು ಅಸ್ತವ್ಯಸ್ತವಾಗಿದೆ. ಇದು ಸನುವಾದ ಅಳಿಯದೆ ಗತ್ಯಂತರವಿಲ್ಲ. ಹೀಗಾಗಬೇಕಾದರೆ ಕಾಂಗ್ರೆಸು ರಾಜಕೀಯ ಕ್ಷೇತ್ರದಿಂದ ವಿಸರ್ಜಿತವಾಗಿ ವಿಧಾಯಕ ಕ್ಷೇತ್ರದಲ್ಲಿ ಕಾರ್ಯ ಮಾಡುವುದು ಒಳಿತು.

ಜಾತೀಯ ಚುನಾವಣೆಗಳ ನಿರ್ಮೂಲನ

ಶಾಸನ ಸಭೆಗಳ ಚುನಾವಣೆಗಳಲ್ಲಿ ಅಲ್ಪಸಂಖ್ಯಾ ಜಾತಿಯವರಿಗೆ ಸ್ಥಳಗಳನ್ನು ಕಾಯ್ದಿಡುವುದನ್ನು ನಿಲ್ಲಿಸಿಬಿಟ್ಟದ್ದು ಹಿಂದುಸ್ಥಾನ ಸ್ವತಂತ್ರವಾದಂದಿನಿಂದ ಸಂಭವಿಸಿದ ಮಹತ್ವದ ಅನೇಕ ಸಂಗತಿಗಳಲ್ಲಿ ಒಂದಾಗಿದೆ. ಅಲ್ಪಸಂಖ್ಯಾ ಸಲಹೆ ಸಮಿತಿಯವರು ಘಟನಾ ಸಮಿತಿಗೆ ಒಪ್ಪಿಸಿದ ವರದಿಯಲ್ಲಿ ಈ ತತ್ವವನ್ನು ಪೂರ್ಣವಾಗಿ ಬಿಟ್ಟುಗೊಡಲು ಸಮರ್ಥವಾಗಿರಲಿಲ್ಲ. ಈಗ ಹಾಗೆ ಮಾಡುವದು ಸಾಧ್ಯವಾಯಿತೆಂಬುದನ್ನು ನೆನೆದರೆ ಸ್ವಾತಂತ್ರ್ಯ ಸಂಪಾದಿಸಿದ ಎರಡೇ ವರುಷಗಳಲ್ಲಿ ರಾಷ್ಟ್ರವು ಎಷ್ಟೊಂದು ಪ್ರಗತಿಯನ್ನು ಸಾಧಿಸಿದೆ ಎಂಬುದರ ಮನವರಿಕೆಯಾಗುವದು. ಹರಿಜನರಿಗೆ (ಪರಿಶಿಷ್ಟ ವರ್ಗದವರಿಗೆ) ಮಾತ್ರ ಹತ್ತು ವರುಷಗಳವರೆಗೆ ಸ್ಥಳಗಳನ್ನು ಕಾದಿಡಲಾಗಿದೆ.

ಗೊತ್ತುವಳಿಯು ಬಹ್ವಂಶದಿಂದ ಸರ್ವಾನುಮತದಿಂದ ಸ್ವೀಕೃತವಾದುದನ್ನು ಮತ್ತು ಅಲ್ಪಸಂಖ್ಯವರ್ಗದ ಅನೇಕ ಧುರೀಣರು ತಮ್ಮ ಹಾರ್ದಿಕ ಸಮಾಧಾನ ವ್ಯಕ್ತಪಡಿಸಿದುದನ್ನು ನೋಡಿದರೆ ಸಧ್ಯದ ಸರಕಾರಕ್ಕೆ ಬಹಳ ಬೆಂಬಲವಿದೆಂಬುದು ಕಂಡುಬರುವದು. ಈ ಬಗೆಯ ಗೊತ್ತುವಳಿಯಾಗುವದರ ಸಂಪೂರ್ಣ ಶ್ರೇಯಸ್ಸು ಸರದಾರ ಪಟೇಲರ ವಿಧಾಯಕ ಮುತ್ಸದ್ದಿತನಕ್ಕೆಸಲ್ಲುವದು. ಹಿರಿಯೋಲಗದಲ್ಲಿಯ ಪ್ರತಿಯೊಂದು ಪಕ್ಷದ ಸದಸ್ಯರು ಸರದಾರರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಿದ್ದುಂಟು. ಸಂಸ್ಥಾನಗಳ ವಿಲೀನೀಕರಣದ ಜೊತೆಗೆ ಸರದಾರರು ಜಾತಿಗಳ ವಿಲೀನೀಕರಣವನ್ನೂ ಸಾಧಿಸಿದರು. ಪಂಡಿತ ಜವಾಹರಲಾಲರು ಹೇಳಿದಂತೆ ಈ ಗೊತ್ತುವಳಿಯೆಂದರೆ ನಮ್ಮ ಇತಿಹಾಸದಲ್ಲಿ ಚಿರಸ್ಥಾಯಿಯಾದ ಬದಲಾವಣೆಯೆಂದು ಹೇಳಬಹುದು. ಇನ್ನು ಮುಂದೆ ಆಯಾ ಜಾತಿಯವರು ತಮ್ಮ ಹೊಣೆಗಾರಿಕೆಯನ್ನು ತಿಳಿದುಕೊಂಡು ವರ್ತಿಸಬೇಕೆಂದು ಅವರು ಹೇಳಿದ್ದನ್ನು ಎಲ್ಲರೂ ನೆನೆದುಕೊಳ್ಳಬೇಕಾಗಿದೆ.

“ ನಮ್ಮ ಭವಿತವ್ಯದಮೇಲೆ ಬಹಳ ಮಟ್ಟಿಗೆ ಪರಿಣಾಮಕಾರಿಯಾಗಬಲ್ಲ ಈ ಮಹತ್ವದ ಗೊತ್ತುವಳಿಯನ್ನು ಶಾಸನ ಸಭೆ ಸ್ವೀಕರಿಸುವ ಈ ಸಮಯದಲ್ಲಿ ನಾವೆಲ್ಲರೂ ಅಲ್ಪಸಂಖ್ಯರು, ಬಹುಸಂಖ್ಯರು, ಆಯಾ ಗುಂಪು ಪಕ್ಷಸಂಗಡಗಳು ಮತ್ತು ವ್ಯಕ್ತಿಗಳ ಸ್ನೇಹ ಸಂಪಾದನೆಯನ್ನು ಸಾಧಿಸುವ ರೀತಿಯಲ್ಲಿ ವರ್ತಿಸಿ ಭಾವೀ ಪ್ರಗತಿಯನ್ನು ಸಾಧಿಸುವಾ.

“ ಮಹಾತ್ಮಾ ಗಾಂಧಿಯವರು ಪ್ರತಿಯೊಂದು ವ್ಯಕ್ತಿ ಇಲ್ಲವೆ ಗುಂಪಿನಲ್ಲಿ ಸದ್ಭಾವನೆಯನ್ನು ತಾಳಿ ಅದರಿಂದ ಒಳಿತನ್ನು ಪಡೆದು ಶಕ್ತಿಮಾರಿ ಒಳಿತನ್ನು ಮಾಡಲು ಅವರನ್ನು ಪ್ರವರ್ತಿಸಿದ್ದುಂಟು. ಪ್ರಗತಿಯನ್ನು ಸಾಧಿಸುವ ಮಾರ್ಗ ಇದೊಂದೇ ಆಗಿದೆ. ಶಾಸನಸಭೆಯೆದುರಿಗಿರುವ ಈ ಮಸೂದೆಯೆಂದರೆ ಎಲ್ಲರ ವಿಶೇಷತಃ ಬಹುಸಂಖ್ಯ ಜಾತೀಯ ಜನರ ನಿಷ್ಠೆಯ ವರೆಗಲ್ಲಾಗಿದೆ ಎಂದು ಅಯ್ಯಂಗಾರರು ನಮಗೆ ಎಚ್ಚರಿಕೆ ಕೊಟ್ಟದ್ದಾರೆ. ಏಕೆಂದರೆ ಅವರು ಉಳಿದವರೊಡನೆ ಔದಾರ್ಯದಿಂದ ನ್ಯಾಯವಾಗಿ ನಡೆಯಬೇಕಾಗುತ್ತದೆ. ಈ ಬಗೆಯ ನಿಷ್ಠೆಯಿಂದ ನಾವೆಲ್ಲರೂ ಬಾಳೋಣ.”

ಸರದಾರ ಪಟೇಲರು ಅಲ್ಪಸಂಖ್ಯರ ಬಗ್ಗೆ ವಿಶೇಷತಃ ಹರಿಜನರ ಬಗ್ಗೆ ಬಹುಸಂಖ್ಯ ಜಾತಿಯವರು ಮಾಡಬೇಕಾದ ಕರ್ತವ್ಯದ ಬಗ್ಗೆ ಎಚ್ಚರಿಕೆ ಕೊಟ್ಟರು. ಹರಿಜನರ ಬಗ್ಗೆ ಮಾಡಬೇಕಾದ ಕರ್ತವ್ಯವನ್ನು ಕುರಿತು ಅವರು ಹೀಗೆ ಹೇಳಿದರು.

“ ಮದರಾಸಿನ ಹರಿಜನ ಸದಸ್ಯರಾಗಿರುವ ಶ್ರೀ ನಾಗಪ್ಪಾ ಇವರು ಹಿಂದುಸ್ಥಾನವು ತಮ್ಮದೆಂದು ಹೇಳಿದ್ದರೂ ತಮ್ಮ ಮನೆಯೆಂದು ಹೇಳಿಕೊಳ್ಳುವಂಥ ಯಾವುದೊಂದು ಸ್ಥಳವು ಹರಿಜನರಿಗಿದೆಯೆ? ನಾಗಪ್ಪನವರು ಹಾಗೆ ಹೇಳಿದ್ದಕ್ಕೆ ನನಗೊಳ್ಳೆ ಅಭಿಮಾನ. ಆದರೆ ಒಂದೇ ಸವನೆ ಹತ್ತಿಕ್ಕಲ್ಪಡುತಿರುವ ಆ ಬಡ ಜನರ ಗತಿಯೇನು? ಅವರಿನ್ನೂ ನಮ್ಮ ರಕ್ಷಣೆಯಲ್ಲಿ ಸುರಕ್ಷಿತರಾಗಿರುವದಿಲ್ಲ. ಪುಣೆಯ ಒಡಂಬಡಿಕೆಯನ್ವಯ ನಾವವರಿಗೆ ವಚನಕೊಟ್ಟದ್ದೇವೆ. ನಾವು ಆ ವಚನದಂತೆ ನಡೆದುಕೊಂಡಿರುವೆವೋ? ನಾವು ಅಪರಾಧಿಗಳಾಗಿರುವೆವೆಂಬುದನ್ನು ಒಪ್ಪಲಿಕ್ಕೆಬೇಕು ದೇಶದ ಇತರ ಭಾಗಗಳಿಂದ (ಪಾಕಿಸ್ತಾನಕ್ಕೆ ಇದು ಅನ್ವಯಿಸುವದೆಂಬುದು ಸುಸ್ಪಷ್ಟ) ಸಾವಿರಾರು ಜನ ಹರಿಜನರು ಇಲ್ಲಿಗೆ ತಿರುಗಿ ಬರಹತ್ತಿದ್ದಾರೆ. ಆದರೆ ಅವರಿಗೆ ಹಾಗೆ ಮಾಡಗೊಡಲಾಗುವದಿಲ್ಲ. ದುರ್ದೈವದಿಂದ ನಾವವರಿಗೆ ಸಹಾಯ ಮಾಡಲು ಸಮರ್ಥರಾಗಿಲ್ಲ. ಹರಿಜನ ವರ್ಗದವರ ದುಃಸ್ಥಿತಿ ಹೀಗಿದೆ.”

ಈ ಮಹತ್ವದ ಕಾರ್ಯವನ್ನು ಸಾಧಿ

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚರಿತ್ರರಾದ S. S. L C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಸೆಕ್ರೆಟರಿ

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟಾಂಪಿನೊಂದಿಗೆ ಬರೆಯಿರಿ.

ತಾರಾನಾಥ ಆಯುರ್ವೇದ ವಿದ್ಯಾಪೀಠ
P. O. ಸಂಗನಕಲ್ಲು ಬಳ್ಳಾರಿ.

ಸುವಲ್ಲಿ ಸಹಕರಿಸಿದ್ದಕ್ಕಾಗಿ, ಅಲ್ಪಸಂಖ್ಯ ವರ್ಗದವರನ್ನಭಿನಂದಿಸುತ್ತ ಅವರು ಈ ಇತಿಹಾಸ ಪ್ರಸಿದ್ಧ ಮಾತುಗಳನ್ನಾಡಿದರು.

"ನಿಮಗೆ ಕೊಡಲಾದ ಸೌಕರ್ಯಗಳ ಬಗ್ಗೆ ನೀವು ಉಪಕಾರವನ್ನು ಸ್ಮರಿಸುತ್ತಿದ್ದರೂ ನಾನು ನಿಮಗೆ ಬಹಳ ಉಪಕಾರಿಯಾಗಿದ್ದೇನೆ. ಏಕೆಂದರೆ ಈ ದೇಶದಲ್ಲಿ ಸಂಶಯ ಮತ್ತು ಅವಿಶ್ವಾಸದ ವಾತಾವರಣ ಅಳಿದು ಶಾಂತಿ ಮತ್ತು ಸದ್ಭಾವನೆಯ ವಾತಾವರಣವುಂಟಾಗುವದು ಅವಶ್ಯವಾಗಿದೆ.

"ಹಿಂದುಸ್ತಾನವೀಗ ಪರಿಪುಷ್ಟವಾಗಬೇಕಾಗಿದೆ. ಅದೀಗ ಪೂರ್ಣವಾಗಿ ರಕ್ತ ವಿಹೀನತೆಯಿಂದ ಬಳಲುತಿದೆ ಮೊದಲು ನಾವು ಅದರ ನಾಳನಾಳಗಳಲ್ಲಿ ರಕ್ತವನ್ನು ಹಾಕಬೇಕಾಗಿದೆ ದೇಶವನ್ನು ಅಭಿವೃದ್ಧಿಪಡಿಸಿ ಭವಿಷ್ಯತ್ತಿನ ಭವ್ಯ ತಳಹದಿಯನ್ನು ಹಾಕಬೇಕಾಗಿದೆ.

"ನಮ್ಮ ಘಟನೆಯಲ್ಲಿದ್ದ ಮೊದಲಿನ ಕಲಂಕವನ್ನು ತೆಗೆದುಹಾಕಲು ನಾವಿಂದು ಸಮರ್ಥರಾದುದಕ್ಕಾಗಿ ನನಗೆ ಸಮಾಧಾನವೆನಿಸುತ್ತದೆ ಮತ್ತು ನಾವಿಂದು ಪರಮಾತ್ಮನ ದಯೆಯಿಂದ ಮತ್ತು ಜಗಚ್ಚಾಲಕನ ಅನುಗ್ರಹದಿಂದ ನಿಜವಾದ ಜಾತ್ಯತೀತ ಪ್ರಜಾರಾಜ್ಯದ ಅಡಿಗಲ್ಲನ್ನಿಡುತ್ತೇವೆ. ಈ ರಾಜ್ಯದಲ್ಲಿ ಪ್ರತಿಯೊಬ್ಬನಿಗೆ ಸಮನಾದ ಸ್ಥಾನ ಮಾನ ಮತ್ತು ಸೌಕರ್ಯಗಳಿವೆ. ನಮ್ಮ ಘಟನೆಯಲ್ಲಿ ಹೇಳಿದಂತೆ ಎಲ್ಲ ಜನರಿಗೆ ನ್ಯಾಯವನ್ನು ದಯಪಾಲಿಸುವಂಥ ಜಾಣತನ ಮತ್ತು ಧೈರ್ಯವನ್ನು ಪರಮಾತ್ಮನು ನಮಗೆ ಅನುಗ್ರಹಿಸಲಿ."

ತಾರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ.

ಪ್ರಿನ್ಸಿಪಾಲರು ಈ ಕೆಳಗಿನ ಪ್ರಕಟನೆಯನ್ನು ಕಳುಹಿಸಿದ್ದಾರೆ.

ಇಡೀ ಕರ್ನಾಟಕದಲ್ಲಿ, ನಮ್ಮ ರಾಯಲಸೀಮೆಯಲ್ಲಿ ಸಹ ಮೊನ್ನೆ ಮೊನ್ನೆಯವರೆಗೆ ಸರಕಾರ ಮಾನ್ಯತೆ ಪಡೆದ ಆಯುರ್ವೇದ ಕಾಲೇಜ್‌ಗಳೇ ಇರಲಿಲ್ಲ. ಬಹು ದಿನಗಳಿಂದ ಬಂದಿರುವ ಈ ಕೊರತೆಯನ್ನು ದೂರಮಾಡಿ, ತಾರಾನಾಥ ವಿದ್ಯಾಪೀಠವು ಸರಕಾರ ಮಾನ್ಯತೆಯನ್ನು ಪಡೆದುಕೊಂಡು ನಮ್ಮ ಬಳ್ಳಾರಿಯಲ್ಲೇ ನೆಲೆಯಾಗಿ ನಿಂತು ಯೋಗ್ಯರೀತಿಯಿಂದ ಆಯುರ್ವೇದ ಕಾಲೇಜ್ ನಡೆಯಿಸುತ್ತಿರುವುದು ಎಲ್ಲರಿಗೂ ಹೆಮ್ಮೆಯ ವಿಷಯವೇ ಸರಿ. ಈ ಕಾಲೇಜಿನಲ್ಲಿ ವ್ಯಾಸಂಗ ಮಾಡಿದವರು ಹಳ್ಳಿಗಳಲ್ಲಿ ಪಟ್ಟಣಗಳಲ್ಲಿ ಹಿತ ಜನಸೇವೆ ಮಾಡುತ್ತಾ, ತೃಪ್ತಿಕರವಾಗಿ ಧನಮಾನಗಳಿಸುತ್ತಾ ಸ್ವತಂತ್ರ ಜೀವಿಗಳಾಗಿರಬಲ್ಲರು. ಗುಲಾಮಗಿರಿಯ ನೌಕರಿಗಾಗಿ ಅರ್ಜಿಹಿಡಕೊಂಡು ಅಲೆಯುವುದಕ್ಕಿಂತ, ಸ್ವತಂತ್ರ ಜೀವಿಗಳಾಗ ಬಯಸುವವರು ಈ ಕಾಲೇಜಕ್ಕೆ ಸೇರಿ ತಮ್ಮ ಜೀವನ ಸಮಸ್ಯೆಯನ್ನು ಸುಲಭವಾಗಿ ಸುಗಮವಾಗಿ ಬಿಡಿಸಿಕೊಳ್ಳಬಹುದೆಂದು ಇಂದಿನ ಯುವಕ ವರ್ಗಕ್ಕೆ ಹೇಳಬಯಸುತ್ತೇವೆ. ಈ ವಿದ್ಯಾಪೀಠವು (1) ಹಳ್ಳಿಗೋಸ್ಕರ ವೈದ್ಯರನ್ನೂ ಕಾರ್ಯಕರ್ತರನ್ನೂ ತಯಾರುಮಾಡುತ್ತಲಿದೆ. (2) ವಿದೇಶಿ ಔಷಧಿಗಾಗಿ ಹರಿದು ಹೋಗುತ್ತಲಿರುವ ಕೋಟ್ಯಾವಧಿ ರೂಪಾಯಿಗಳನ್ನು ನಮ್ಮಲ್ಲಿಯೇ ಉಳಿಸಿ. ನಮ್ಮ ಔಷಧಿ ಕಲಾ ವಿಜ್ಞಾನವನ್ನು Medical Industry ಬೆಳೆಸುತ್ತದೆ. ಸರ್ವೋದಯ ಕಾರ್ಯಕರ್ತರೂ, ವಿಧಾಯಕ ಕಾರ್ಯಕರ್ತರೂ ಮಾಡಬೇಕಾಗಿರುವ ಕೆಲಸವನ್ನೇ ಯಾವ ಹೆಸರಿನ ಗಲಾಟೆ ಇಲ್ಲದೆ ಈ ವಿದ್ಯಾಪೀಠವು ನಡೆಸುತ್ತಲಿದೆ. ನಗರ ಪ್ರಮುಖರೂ ನಾಡನಾಯಕರೂ, ಧನಿಕರೂ ಮುಂದೆ ಬಂದು ಸಹಾಯಮಾಡಬೇಕಾಗಿಯೂ, ಯುವಕ ವರ್ಗವು ವಿದ್ಯಾಪೀಠದ ಲಾಭ ಪಡೆಯಬೇಕಾಗಿಯೂ ಇನ್ನೊಮ್ಮೆ ಸೂಚಿಸಬಯಸುತ್ತೇವೆ. ಕಾಲೇಜ್ ಪ್ರವೇಶ ವಿಷಯದಲ್ಲಿ ಯಾವತರ ಪಕ್ಷಪಾತವಾಗುತ್ತಿಲ್ಲವೆಂಬುದೂ ಮತ್ತು ಹೆಚ್ಚಾಗಿ ವೀರಶೈವ ವಿದ್ಯಾರ್ಥಿಗಳೇ ಈ ಕಾಲೇಜದ Concession ಪಡೆದಿರುವರೆಂಬುದು ವಿದ್ಯಾಪೀಠದ ವ್ಯವಸ್ಥಾಪಕರ ಅಧಿಕೃತ ವಿವರಣೆಯಿಂದ ಸ್ಪಷ್ಟವಾಗುತ್ತಲಿದೆ.

ಬಳ್ಳಾರಿ ಜಿಲ್ಲೆಯಿಂದ ಬಂದ ಅರ್ಜಿದಾರರ ಪ್ರತಿಯೊಬ್ಬ ವಿದ್ಯಾರ್ಥಿಗೂ ಸೀಟು ಕೊಡಲಾಗಿದೆ. ರಿಯಾಯ್ತಿ ಪಡೆದವರಲ್ಲಿ ಬಳ್ಳಾರಿಯವರು 78 ಜನರು, ಇತರರು 22 ಜನರಿದ್ದಾರೆ. ನಮ್ಮ ವಿದ್ಯಾಪೀಠದಲ್ಲಿ 65 ವೀರಶೈವರು ಇದ್ದಾರೆ.

ಭಾರತದಲ್ಲಿ ಕ್ಷಯದ ಹಾವಳಿ

ನಿಮಿಷಕ್ಕೊಬ್ಬನ ಮರಣ

"ದೇಶದ ಪ್ರತಿ ಹನ್ನೆರಡು ಜನರಿಗೊಬ್ಬನಿಗೆ ಕ್ಷಯರೋಗವು ಮರಣವನ್ನುಂಟು ಮಾಡುವುದು. ಪ್ರತಿವರ್ಷ ಈ ದೇಶದಲ್ಲಿ ಈ ರೋಗದಿಂದ ೫ ಲಕ್ಷ ಜನರು ಸಾಯುತ್ತಾರೆ. ಅಂದರೆ ಪ್ರತಿದಿನ ೧೪೦೦ ಜನರು ಅಥವಾ ಪ್ರತಿನಿಮಿಷಕ್ಕೆ ಒಬ್ಬರು ಅರೋಗ್ಯದಿಂದ ಇಹಲೋಕಯಾತ್ರೆ "ಮುಗಿಸುತ್ತಾನೆ."

ಎಂದು ಭಾರತದ ಕ್ಷಯರೋಗ ಸಂಘದವರು ವರದಿ ಮಾಡಿದ್ದಾರೆ.

ಕ್ಷಯರೋಗದ ಆಸ್ಪತ್ರೆಗಳಲ್ಲಿ ಕ್ಷಯರೋಗಿಗಳಿಗಾಗಿ ಕೇವಲ ಎಂಟುಸಾವಿರ ಹಾಸಿಗೆಗಳಿವೆ.

೧೫ರಿಂದ ೩೦ ವಯಸ್ಸಿನ ಜನರ ಸಾವಿಗೆ ಬಹುತರವಾಗಿ ಕ್ಷಯವೇ ಕಾರಣವಾಗಿದೆ.

ಔದ್ಯೋಗಿಕರಣ ಬೆಳೆದಂತೆಲ್ಲ ಇದಕ್ಕೆ ಹೆಚ್ಚಿನ ಅನುಕೂಲತೆಗಳಾಗುತ್ತವೆಯೆಂದು ವರದಿಯಲ್ಲಿ ಹೇಳಲಾಗಿದೆ.

ಇಡ್ಲಿ ದೋಸೆಗಳ ಮೇಲೆ ಮೈಸೂರಿನ ಗದೆ

ಮೈಸೂರು ಸರ್ಕಾರವು ಇಂದು ಪ್ರಕಟಿಸಿರುವ ಗ್ಯಾಝೆಟಿನ ಒಂದು ವಿಶೇಷ ಆಜ್ಞೆಯಲ್ಲಿ ಮೈಸೂರು ಸಂಸ್ಥಾನದ ಹೊಟೇಲುಗಳಲ್ಲಿ ಇನ್ನುಮೇಲೆ ಇಡ್ಲಿ ದೋಸೆಗಳನ್ನು ತಯಾರಿಸಕೂಡದೆಂದು ಸಾರಿದೆ. ಮೈಸೂರಿನವರ ನೆಚ್ಚಿನ ಉಪಹಾರವಾದ ಇದು ಅದೃಶ್ಯನಾಗಿರುವದರಿಂದ ಅನೇಕರಿಗೆ ಕಳವಳವೆನಿಸಿದೆ ಇಡ್ಲಿ ದೋಸೆಗಳಿಂದಲೇ ಅಂತಸ್ತಿನಮೇಲೆ ಅಂತಸ್ತು ಕಟ್ಟುತ್ತಿದ್ದ ಹೋಟೆಲು ಮಾಲಕರಿಗೂ ಬಹಳ ವ್ಯಥೆಯಾಗಿದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಆದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ. 20—6—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮುದ್ರಕ ಪ್ರಕಾಶಕ—
ವಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೭ ಜೂನ್ ೧೯೪೯ | ಸಂಚಿಕೆ ೨೩

ಸುಂದರ ಕಾಶ್ಮೀರ

ಕಾಶ್ಮೀರಿಗಳಿಗೆ ಅತಿ ಪುರಾತನವಾದ ಸಾಹಿತ್ಯವಿದೆ. ಈ ಸಾಹಿತ್ಯಕ ಹಾಗೂ ಸಾಂಸ್ಕೃತಿಗೆ ಕಾಶ್ಮೀರದಲ್ಲಿ ಭಿನ್ನಭಿನ್ನ ಕಾಲದಲ್ಲಿ ನಡೆದ ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಚಳವಳವೇ ಕಾರಣ. ಮೊತ್ತ ಮೊದಲ ಹಿಂದೂಗಳ ಕಾಲದಲ್ಲಿ ಸಂಸ್ಕೃತ ಸಾಹಿತ್ಯವು ಅಭಿವೃದ್ಧಿ ಹೊಂದಿದರೆ ಆ ಮೇಲೆ ಪರ್ಶಿಯನ್, ಕೊನೆಗೆ ಅಫಘಾನ್ ಮತ್ತು ಸಿಖ್ಖರ ಕಾಲದಲ್ಲಿ ಉರ್ದು ಸಾಹಿತ್ಯವು ಅಭಿವೃದ್ಧಿ ಹೊಂದಿತ್ತು. ಮುಸ್ಲಿಮರ ಮತ್ತು ಮೊಗಲರ ಕಾಲದಲ್ಲಿ ಪರ್ಶಿಯನ್ ಭಾಷೆಯು ರಾಜಸ್ಥಾನದ ಭಾಷೆಯಾಗಿ ನಾಗರಿಕರ ಮಾತಾಯಿತು. ಸಿಖ್ಖರ ಕಾಲದ ಆರಂಭದಲ್ಲಿಯೂ ಪರ್ಶಿಯನ್ ಭಾಷೆಯು ಅಭಿವೃದ್ಧಿ ಹೊಂದುತ್ತಿದ್ದು ಆ ಬಳಿಕ ಬರಬರುತ್ತಾ ಆ ಸ್ಥಾನವನ್ನು ಉರ್ದು ಭಾಷೆಯು ಆವರಿಸಿತು. ಮೇಲಾಡಳಿತೆಯ ಕ್ಷೇತ್ರದಲ್ಲಿ ಇಂಗ್ಲೀಷ್ ಈಗ ರೂಢಿಯಲ್ಲಿದ್ದರೂ ಉರ್ದು ಭಾಷೆಯು ಹೆಚ್ಚಾಗಿ ಬಳಕೆಯಲ್ಲಿದೆ. ಜನರು ಮಾತಾಡುವ ಭಾಷೆ ಕಾಶ್ಮೀರಿ. ಇದನ್ನು ಮೊತ್ತ ಮೊದಲು ಶಾರದಾ ಲಿಪಿಯಲ್ಲಿ ಬರೆಯುತ್ತಿದ್ದರು. ಈಗ ಆ ಲಿಪಿಯೇ ಇಲ್ಲದಾಗಿದೆ. ಅನೇಕ ಕಾಲದಿಂದ ಈ ಭಾಷೆಗೆ ಪರ್ಶಿಯನ್ ಲಿಪಿಯೇ ಉಪಯೋಗಿಸಲ್ಪಡುತ್ತದೆ. ಇತ್ತೀಚೆಗೆ ಈ ಭಾಷೆಯ ಸಾಹಿತ್ಯ ಬೆಳವಣಿಗೆಯಲ್ಲಿ ಜನರಿಗೆ ಆಸಕ್ತಿ ಹೆಚ್ಚಿದೆ. ಆದುದರಿಂದ ಇದು ಶಾಸ್ತ್ರೀಯವಾಗಿ ಅಭಿವೃದ್ಧಿ ಹೊಂದಲು ಯತ್ನಿಸಲಾಗುತ್ತಿದೆ

ಸಂಸ್ಕೃತ ವಿದ್ಯಾಪೀಠ

ಕಾಶ್ಮೀರದಲ್ಲಿ ಹಿಂದೂಗಳ ಕಾಲದಲ್ಲಿ ...ಬೆಳೆದು ಮುಟ್ಟಿದ ಸಂಸ್ಕೃತ ಸಾಹಿತ್ಯವೇ ...ಸಮಗ್ರ ಭಾರತದ ಸಂಸ್ಕೃತಿಗೆ ಮೂಲಾ...ಧಾರವಾಗಿದೆ. ಎಷ್ಟೋ ದೀರ್ಘ ಕಾಲದಿಂ... ಕಾಶ್ಮೀರವು ಭಾರತದ ತಲೆಮೇಲಿಂದ ...ಪ್ರಬಲವಾದ ಸಾಹಿತ್ಯಕ ಹಾಗೂ ಸಾಮಾ...ಜಿಕ ಚಳವಳವು ಬರಬರುತ್ತಾ ಭಾರತದ ...ಇತರ ಭಾಗಗಳಿಗೆ ಮಾತ್ರ ಹಬ್ಬದಲ್ಲದೆ ...ಭಾರತದ ಗಡಿಯಲ್ಲಿರುವ ಟಿಬೇಟ, ಹಾಗು ...ಇತರ ದೇಶಗಳಿಗೂ ಪಸರಿಸಿತು. ಕಾಶ್ಮೀ...ರದಲ್ಲಿ ಬುದ್ಧನ ತತ್ವೋಪದೇಶಗಳಿಗೂ ...ವೇದಾಂತಕ್ಕೂ ದೊರೆತಷ್ಟು ಪ್ರೋತ್ಸಾಹ ...ವು ಇನ್ನಾವುದಕ್ಕೂ ಇಲ್ಲವೆನ್ನಬಹುದು. ...ಇಂದು ಟಿಬೇಟಿನ ಬೌದ್ಧ ಮತದಲ್ಲಿ ಸೇರಿ...ರುವ ತಾಂತ್ರಿಕ ಕ್ರಿಯೆಗಳೆಲ್ಲಾ ಭಾರತದಿಂ...ದಲೇ ಕಾಶ್ಮೀರಿ ಕಣಿವೆಯ ಮೂಲಕ ...ಸಾಟಿಹೋದವುಗಳಾಗಿವೆ. ಇಷ್ಟಲ್ಲದೆ ...ಶೈವ ವೇದಾಂತಕ್ಕೂ ಇಲ್ಲಿ ಅತ್ಯಂತ ...ಪ್ರೋತ್ಸಾಹ ದೊರೆತಿದೆ. ಈ ಪುರಾತನ ...ಸಾಹಿತ್ಯದಲ್ಲಿ ಹೆಚ್ಚಿನ ಭಾಗಗಳು ರಕ್ಷಿಸಲ್ಪ...ಡವೆ ಈ ಕಾಲದ ಕ್ರಮವಾದ ಸಂಸ್ಕೃತಿ ...ಸಾಹಿತ್ಯಗಳ ಪ್ರಗತಿಯನ್ನು ಕಂಡು ಹಿಡಿ...ಯಲಾರೆವು. ಆದರೂ ಕಾಶ್ಮೀರವು ಅತಿ ...ಪುರಾತನ ಕಾಲದಿಂದಲೇ ಪ್ರಾಚೀನ ಹಿಂ...ದೂ ಸಂಸ್ಕೃತಿಯ ನೆಲೆವೀಡಾಗಿತ್ತು. ...ಕಾಶ್ಮೀರದ ಸಾಹಿತ್ಯ ಸೌಭಾಗ್ಯದ ಪ್ರತೀಕ...ವೆಂಬಂತೆ ನಮಗೆ ದೊರೆತ ಮಹಾ ಪುಸ್ತ...ಕವೆಂದರೆ ಕಲ್ಹಣ ಕವಿಯ ರಾಜತರಂಗಿಣಿ ... ಕಾಲದ ಅತಿ ಪುರಾತನವಾದ ಚಾರಿತ್ರಿ...ಕ ಆಧಾರವೆಂದರೆ ಇದೊಂದೇ ಪುಸ್ತಕವಾ...ಗಿದೆ.

ಕಾಶ್ಮೀರಿ ಭಾಷೆಯ ಮೂಲ

ಮುಸ್ಲಿಮರ ಕಾಲಕ್ಕೆ ಬಂದರೆ ಜೈನು...ಲ್-ಉಲ್-ಅಬಿಡೀನ್ ರಾಜನ ಹೆಸರೆತ್ತದೆ ...ಕಾಶ್ಮೀರದ ಸಾಹಿತ್ಯ ಚರಿತ್ರೆಯು ಸಂಪೂ...ರ್ಣವಾಗದು. ಇವನು ಕ್ರಿ. ಶ 1420 ...ರಿಂದ 1470 ರ ವರೆಗೆ ಆಳಿದ್ದನು. ಇವ...ನು ಧಾರ್ಮಿಕ ಹಾಗೂ ರಾಜಕೀಯ ...ಕ್ಷೇತ್ರದಲ್ಲಿ ಶಾಂತಿಯನ್ನು ಮಾತ್ರ ನೆಲೆ...ಗೊಳಿಸಿದ್ದಲ್ಲ. ಸಾಹಿತ್ಯ ಕ್ಷೇತ್ರದಲ್ಲೂ ...ತನ್ನ ಸಹನೆ-ವಿಶಾಲ ಹೃದಯಗಳನ್ನು ...ವ್ಯಕ್ತಪಡಿಸಿದ್ದಾನೆ. ಈ ಚಕ್ರವರ್ತಿಯು ...ಕವಿಗಳನ್ನೂ ಲೇಖಕರನ್ನೂ ತನ್ನ ಆಸ್ಥಾನ...ಕ್ಕೆ ಕರೆದು ಮುಸ್ಲಿಮರಿಗೂ ಹಿಂದುಗಳ...ಿಗೂ ಯೋಗ್ಯವಾದ ರಾಜಾಶ್ರಯವು ಕೊ...ಡಲಾಗುತ್ತಿತ್ತು. ಪರ್ಶಿಯನ್ ಭಾಷೆಯು ...ರಾಜಭಾಷೆಯಾಗಿದ್ದರೂ ಸಂಸ್ಕೃತ-ಪರ್ಶಿಯ...ನ್ ಭಾಷೆಗಳನ್ನು ಸಮಾನವಾಗಿ ಕಾಣುತ್ತಿದ್ದ... ಇದಕ್ಕೆ ಉದಾಹರಣೆಯೆಂಬಂತೆ ಆ ...ಕಾಲದ ಸುಪ್ರಸಿದ್ಧ ಚರಿತ್ರಕಾರರಾದ ...ಜೋನರಾಜ ಮತ್ತು ಮುಲ್ಲಾ ಅಹಮದ್ ...ಎಂಬುವರು ಕಾಶ್ಮೀರಿ ಭಾಷೆಯಲ್ಲಿದ್ದ ಕಲ್ಹ...ಣನ ರಾಜತರಂಗಿಣಿಯನ್ನು ಕ್ರಮವಾಗಿ ಸಂ...ಸ್ಕೃತ ಹಾಗೂ ಪರ್ಶಿಯನ್ ಭಾಷೆಗಳಲ್ಲಿ ಬ...ರೆದರು. ಇವರಲ್ಲದೆ ಆತನ ಆಸ್ಥಾನದ... ಇನ್ನೊಬ್ಬ ಸುಪ್ರಸಿದ್ಧ ಹಿಂದೂ ಪಂಡಿತ...ನಾದ ಶ್ರೀ ಭಟ್ಟ ಅಥವಾ ಶಿರಭಟ್ಟನೆಂ...ಬುವನು ಇದ್ದನು. ದೇಶ ಭಾಷೆಯಾದ ಕಾ...ಶ್ಮೀರಿಯನ್ನು ಅಭಿವೃದ್ಧಿಗೊಳಿಸಿದ ಕೀರ್ತಿ... ಇವನಿಗೇ ಸಲ್ಲಬೇಕು. ಆತನ ಆಶ್ರಯ...ದಲ್ಲಿ ಕಾಶ್ಮೀರಿ ಸ್ವಪುಣ್ಯ ಅತ್ಯುನ್ನತ ಸ್ಥಿ...ತಿ ತಲುಪಿತು. ಗೋಪ್ಯ ವಿಚಾರಗಳು, ...ಗಳು, ಬುದ್ಧಿವಾದಗಳು, ಇವನ್ನೆ... 'ಋಷಿನಾಮ' ಎಂಬ ಹೆಸರಿಂದ ಸಂಗ್ರ...ಹಿಸಲಾಗಿದೆ. ಇದು ನಂದ ಋಷಿ ಎಂ...ಬ ಹೆಸರಿಂದ ಸಂಗ್ರಹಿಸಲಾಗಿದೆ. ಇದು ...ನಂದ ಋಷಿ ಎಂದು ಪ್ರಸಿದ್ಧವಾಗಿದೆ. ಈ ...ಗ್ರಂಥವು ಹಿಂದೂ ಮುಸ್ಲಿಂ ಐಕ್ಯಮ...ತ್ಯದ ಪ್ರತೀಕವಾಗಿದೆ. ಒಬ್ಬ ಭಟ್ಟರ ...ಚರಿತವು ಬಾದಶಹ ಜೀವನ ಚರಿತ್ರೆ...ಯಾಗಿದೆ. ಉನ್ನಟನ ಜೈನ ವಿಲಾಸ ...ರಾಜನ ಜೀವನ ಚರಿತೆಯನ್ನೇ ಸೂಚಿಸು...ವ ರಸಭರಿತ ನಾಟಕವಾಗಿದೆ.

ಪರ್ಶಿಯನ್ ಭಾಷೆಯ ಪ್ರಭಾ...

ಧರ್ಮ ಹಾಗೂ ಸಾಹಿತ್ಯದಲ್ಲಿ ಹಿಂ...ದೂ ಮುಸ್ಲಿಂ ಏಕಮತ್ಯವನ್ನು ಸಾಧಿಸ...ಲು ಯತ್ನಿಸಿದವರಲ್ಲಿ ಅಕ್ಬರನ ಉದಾಹ...ರಣೆಯು ಅತಿ ಚೆನ್ನಾಗಿದೆ. ಕ್ರಿ. ಶ. 15... ರಲ್ಲಿ ಪ್ರಾಜ್ಯ ಭಟ್ಟನೆಂಬವನು ಅಕ್ಬರನ ...ಕಾಲದಲ್ಲಿ ಕಲ್ಹಣನ ರಾಜತರಂಗಿಣಿಯ...ನ್ನು ಸಂಪೂರ್ಣ ಮಾಡಿದನು. ಪರ್ಶಿಯ...ನ್ ರಾಜಭಾಷೆಯಾಗಿದ್ದರೂ ಸಂಸ್ಕೃತಕ್ಕೆ ...ಉತ್ತಮ ಗೌರವವು ಸಲ್ಲುತ್ತಲೇ ಇ...

ಮುಸ್ಲಿಂ, ಅಫಘಾನ್ ಮತ್ತು ಸಿ...ಖ್ ರಾಜರ ಆಳಿಕೆಯಲ್ಲಿ ಕಾಶ್ಮೀರದ ಸಾ...ಹಿತ್ಯ ಚರಿತೆಯೆಂದರೆ ಪರ್ಶಿಯನ್ ಸಾಹಿತ್ಯ ...ಚರಿತೆಯೇ ಆಗಿದೆ. ಆದರೂ ಪುರಾ...

ಹಿಂದುಸ್ಥಾನದ ಭರವಸೆ

ಕಾಶ್ಮೀರ ಸಂಬಂಧದಲ್ಲಿ ಹಿಂದುಸ್ಥಾನದ ನಿಲುವೆಯನ್ನು ಸ್ಪಷ್ಟೀಕರಿಸಲೇ ಬೇಕು. ಕಾಶ್ಮೀರದ ಭವಿತವ್ಯವು ಕಾಶ್ಮೀರ ಜನರನ್ನೇ ಕೂಡಿರುವದು. ಹಿಂದುಸ್ಥಾನವು ನಿಷ್ಪಕ್ಷಪಾತವಾದ ಸಾರ್ವತ್ರಿಕ ಮತಗಣನೆಗೆ ಬದ್ಧವಾಗಿದೆ. ಸಂಸ್ಥಾನದಲ್ಲಿಯ ಪ್ರಮುಖ ರಾಜಕೀಯ ಪಕ್ಷವಾದ ರಾಷ್ಟ್ರೀಯ ಪರಿಷತ್ತು ಶೇಖ್ ಅಬ್ದುಲ್ಲಾರವರ ನೇತೃತ್ವದಲ್ಲಿ ಹಿಂದುಸ್ಥಾನದೊಡನೆ ಸೇರಿಕೊಂಡದ್ದರಿಂದ ಹಿಂದುಸ್ಥಾನವು ಎಂದೂ ಅದರ ಕೈಬಿಡಲಾರದು.

— ನೆಹರು.

ನೋಟೀಸು.

೧೯೪೭ನೇ ಸಂ|| ಮದ್ರಾಸು ಷಾಪು
ಮತ್ತು
ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಜಿಷ್ಟರುಗಳು ಪಸ್ಸೈರ ನಮ್ಮಲ್ಲಿ ದೊರೆಯುತ್ತವೆ,

ವಿಠಲ್ ಪ್ರಿಂಟಿಂಗ್ ಪ್ರೆಸ್ ತೇರುಬಜಾರ್, ಬಳ್ಳಾರಿ.

ವಾದ ಸಂಸ್ಕೃತ ಸಾಹಿತ್ಯ ವಾಹಿನಿಯು ತನ್ನ ಪ್ರವಾಹವನ್ನು ಕಳಕೊಂಡಿದ್ದಿಲ್ಲ. ಲಾಲನೂರಿ ಅಥವಾ ಸುಪ್ರಸಿದ್ಧನಾದ ಲಲ್ಲಾ ಡೇಟ್ ಇವಳ ಗ್ರಂಥಗಳಿಂದ ಈ ವಿಚಾರ ತಿಳಿಯಬಹುದು. ಇವನ ಕಾಲ ಕ್ರಿ. ಶ. 14ನೆಯ ಶತಮಾನ, ಈಕೆಯು ಪ್ರಾಚೀನ ಸಂಸ್ಕೃತ ಸಾಹಿತ್ಯಕ್ಕೂ ಆಧುನಿಕವಾದ ಪರ್ಶಿಯನ್ ಸಾಹಿತ್ಯಕ್ಕೂ ಮಧ್ಯ ಸೇತುವೆ ಇದ್ದಂತೆ ಇದ್ದಳು, ಆಕೆಯ ವ್ಯಕ್ತಿತ್ವದಲ್ಲಿ ಸಂಸ್ಕೃತ ಪರ್ಶಿಯನ್ ಸಂಸ್ಕೃತಿ-ಭಾಷೆಗಳು ಒಂದಾಗಿ ಮೂರ್ತೀಭವಿಸಿದಂತೆ ಕಾಣುತ್ತಿತ್ತು. ಆ ಕಾಲದ ಇತರ ಸುಪ್ರಸಿದ್ಧ ಕೃತಿರತ್ನಗಳೆಂದರೆ ಜಗದ್ಧರ ಭಟ್ಟನ ಸ್ತುತಿ ಕುಸುಮಾಂಜಲಿ (ಕ್ರಿ. ಶ 1350), ಶಿತಿಕಂಠನ ಬಾಲಬೋಧಿನಿ (ಕ್ರಿ. ಶ. 1475), ವಲ್ಲಭದೇವನ ಪದ್ಯಾವಳಿ (ಕ್ರಿ. ಶ, 1550), ಶಿವೋಪಾಧ್ಯಾಯನ ವಿಜ್ಞಾನ ಭೈರವ (ಕ್ರಿ ಶ. 1775) ಇವೆ ಆಗಿವೆ. ಈ ಕಾಲದಲ್ಲಿ ಮುಸ್ಲಿಮರಲ್ಲದೆ ಹಿಂದುಗಳೂ ಪರ್ಶಿಯನ್ ಭಾಷೆಯನ್ನು ಕಲಿತು ಉದ್ದಾಮ ಪಂಡಿತರಾಗಿದ್ದರು. ಅವರಂಗಜೇಬನ ಕಾಲದಲ್ಲಿ ಮುಹಮುದ್ ತಾಹಿರ್ ಗನಿ ಎಂಬವನು ಪರ್ಶಿಯನ್ ಕವಿಗಳಲ್ಲಿ ರತ್ನಪ್ರಾಯನಾಗಿದ್ದನು. ಹಾಗೆಯೇ ಆಫ್ಘಾನರ ಕಾಲದಲ್ಲಿದ್ದ ಮುನ್ಶಿ ಭವಾನಿದಾಸ ಕಚ್ರು ಎಂಬವನೂ ಸುಪ್ರಸಿದ್ಧ ಪಂಡಿತನೇ ಆಗಿದ್ದನು. ಆತನ ಭಾಟ-ಇ-ತಾವಿಲ್ ಎಂಬ ಪರ್ಶಿಯನ್ ಕಾವ್ಯವು ಅತ್ಯುತ್ತಮವಾಗಿದೆಯೆಂದು ಲೆಕ್ಕಿಸಲಾಗಿತ್ತು. ಈ ಸಂದರ್ಭದಲ್ಲಿ ಇತರ ಕಾಶ್ಮೀರೀ ಪಂಡಿತರ ಹೆಸರುಗಳನ್ನು ಮರೆಯಲಾರೆವು, ಇದರಲ್ಲಿ ತಾಬಾರಾಮ್ ತುರ್ಕಿ ''ಬೇತಾಬ್'' (ಕ್ರಿ. ಶ. 1840) ಇವನ ''ಜಂಗ್ ನಾಮೆ''. ಇವು ಫಿರ್ದೌಸಿಯ ''ಶಹನಾಮ'' ದಷ್ಟೇ ಪ್ರಸಿದ್ಧ ಗ್ರಂಥವಾಗಿದೆ. ಪಂಡಿತ ರಾಜಕೌಲ ಅರ್ಸ ಬೇಗಿ ''ದೈರಿ'' (ಕ್ರಿ ಶ. 1887) ಇವನೂ ಸಾಹಿತ್ಯಜ್ಞರಲ್ಲಿ ಘನಿಗಿಂತ ಎರಡನೆಯವನಾಗಿದ್ದನು ಇವರಲ್ಲದೆ ''ಫರೂಖ್'' ಎಂದು ಪ್ರಸಿದ್ಧರಾಗಿದ್ದ ಪಂಡಿತ್ ರಾಜಕಾಕ ಧರ ಎಂಬವರೂ ಉತ್ತಮ ವಿದ್ವಾಂಸರಾಗಿದ್ದರು, ಇವರು ಮಹಾರಾಜ ಗುಲಾಬ್ ಸಿಂಗನ ಆಳ್ವಿಕೆಯ ಮೊದಲ ಭಾಗದಲ್ಲಿ ತೀರಿಕೊಂಡರು.

ಕಾಶ್ಮೀರೀ ಕಾವ್ಯ

ಕಾಶ್ಮೀರೀ ಲೇಖಕರಿಗೂ ಕವಿಗಳಿಗೂ ಪರ್ಶಿಯನ್ ಭಾಷೆಯೇ ಗ್ರಂಥಸ್ಥ ಭಾಷೆಯಾಗಿತ್ತು. ಕವಿತೆಗಳೆಲ್ಲಾ ಪರ್ಶಿಯನ್ ಛಂದಸ್ಸನ್ನು ಅನುಸರಿಸಿ ರಚಿಸಲ್ಪಡುತ್ತಿದ್ದುವು ಉದಾಹರಣೆಗಳೆಲ್ಲಾ ಪರ್ಶಿಯನ್ ಗ್ರಂಥಗಳಿಂದಲೇ ಬರುತ್ತಿದ್ದುವು. ಆದರೂ ಕಾಶ್ಮೀರಿಗಳದೇ ಆದ ಒಂದು ವೈಶಿಷ್ಟ್ಯವೂ ಎದ್ದು ಕಾಣಿತ್ತಿತ್ತು. ಮುಸ್ಲಿಂ ಆಗಲಿ ಹಿಂದು ವಾಗಲಿ ಕಾಶ್ಮೀರದ ಕವಿಗಳು ಪುರಾತನವಾದ ದೇಶೀಯ ಸಂಸ್ಕೃತಿ ಹಾಗೂ ಸುತ್ತಮುತ್ತಲ ವಾತಾವರಣದ ಕಡೆಗೆ ಗಮನಕೊಡದೆ ಇರಲಾರರು. ಈ ಕಾಲದ ಕಾವ್ಯಗಳಲ್ಲಿ ನಾಡಿನ ಕಲೆ, ಕಟ್ಟು ಕತೆಗಳು ತಿರುತಿರುಗಿ ಬಣ್ಣಿಸಲ್ಪಟ್ಟಿವೆ. ಕವಿತೆಯ ಸ್ಫೂರ್ತಿಯೆಲ್ಲಾ ಸರ್ವ ಸಾಮಾನ್ಯವಾದ ವಿಷಯಕೆಳಿಂದಲೇ ಉಂಟಾಗಿದೆ.

ಆಧುನಿಕ ಸಾಹಿತ್ಯ

ಆಧುನಿಕವಾದ ಕಾಶ್ಮೀರೀ ಭಾಷೆಯ ಸಾಹಿತ್ಯವನ್ನು ನೋಡಿದರೆ ಅದು ಮೊದಲಲ್ಲಿ ಪ್ರಾಕೃತ ರೂಪವಾಗಿಯೇ ಇದ್ದಂತೆ ಕಾಣುತ್ತಿದೆ. ಮುಸ್ಲಿಮರ ಆಳಿಕೆಯಲ್ಲಿ ಪರ್ಶಿಯನ್ ಭಾಷೆಯಿಂದ ಪೋಷಿಸಲ್ಪಟ್ಟು ಆಧುನಿಕ ಕಾಲದಲ್ಲಿ ಉರ್ದುವಿನ ಪ್ರಭಾವಕ್ಕೆ ತುತ್ತಾಗಿದೆ. ಆದರೂ ಪುರಾತನವಾದ ಸಂಸ್ಕೃತಿ - ಐಕಮತ್ಯಗಳನ್ನೇ ಇಂದು ಇಲ್ಲಿ ಕಾಣುತ್ತಿದ್ದೇವೆ ಕಾಶ್ಮೀರೀ ಸಾಹಿತ್ಯದಲ್ಲಿ ಈ ವರೆಗೆ ದೊರೆತ ಅತಿ ಪುರಾತನ ಗ್ರಂಥವೆಂದರೆ ಶಿತಿಕಂಠನ ಮಹಾಜ್ಞೇಯ ಪ್ರಕಾಶವೆಂಬುದು. ಇದು ಕ್ರಿ. ಶ. 13 ಅಥವಾ 14ನೇ ಶತಮಾನಕ್ಕೆ ಸೇರಿದ್ದೆಂದು ಊಹಿಸಲಾಗಿದೆ, ಆಧುನಿಕ ಕಾಲವು ಮಹಮುದ್ ಗನಿಯಿಂದ ಅಂದರೆ ಕ್ರಿ ಶ. 1855 ರಿಂದ ಮುಖ್ಯವಾಗಿದೆ, ಇವನೇ ಪಂಚ್ ಗಂಜ್ ಎಂಬ ಕಾಶ್ಮೀರೀ ಗ್ರಂಥವನ್ನು ಬರೆದವನು, ಹಿಮಾಲ್ ಕತೆಯನ್ನು ಬರೆದವರು ವಾಲಿ ಉಲ್ಲಾಹ್ ಮೊಟ್ಟು ಎಂಬವನು, ಗುಲೆರಸ್ ಎಂಬ ಪ್ರೇಮ ಕಾವ್ಯವನ್ನು ಬರೆದು ಪೀರ್ ಮುಖ್ ಒಲ್ ಶಾಹ ಕ್ರಾಲ್‌ವಾರಿಯು ಸುಪ್ರಸಿದ್ಧನಾಗಿದ್ದಾನೆ. ಫಿರ್‌ದೌಸಿಯ 'ಶಾಹ್‌ನಾಮ' ವನ್ನು ಪುನಃ ಬರೆದು ವಾಹಬ್‌ಪಾರೆ ಎಂಬವನು ಪ್ರಖ್ಯಾತನಾಗಿದ್ದಾನೆ, ಹಿಂದುಗಳಲ್ಲಿ ವಿಖ್ಯಾತ ಲೇಖಕನೆಂದರೆ ಪರಮಾನಂದ್. ಇವನಿಗೆ ಲಕ್ಷ್ಮಣ್ ಪ್ರಕಾಶರಾಮ್, ಕೃಷ್ಣದಾಸರೆಂಬ ನಾಲ್ವರು ಶಿಷ್ಯರು, ಈ ಹೊಸ ಕವಿಗಳು ಅನೇಕ ಪರ್ಶಿಯನ್ ಪದಗಳನ್ನು ತಮ್ಮ ಕಾವ್ಯಗಳಲ್ಲಿ ಉಪಯೋಗಿಸಿದ್ದಾರೆ ಹಾಗೆಯೇ ಸಂಸ್ಕೃತ ಪದಗಳನ್ನು ತಮ್ಮ ಕಾವ್ಯಗಳಲ್ಲಿ ಉಪಯೋಗಿಸಿದ್ದಾರೆ. ಹಾಗೆಯೇ ಸಂಸ್ಕೃತ ಪದಗಳನ್ನು ತತ್ಸಮವಾಗಿ ಇಲ್ಲವೇ ತದ್ಭವವಾಗಿ ಧಾರಾಳ ಉಪಯೋಗಿಸಿದ್ದಾರೆ. ಈಗ ಜೀವಿಸಿರುವ ಕವಿಗಳಲ್ಲಿ ಮಹಜೂರ ಎಂಬವರು ಸುಪ್ರಸಿದ್ಧ ಕವಿಗಳು. ಇವರ ಕವಿತೆಗಳೆಲ್ಲಾ ಹೆಚ್ಚಾಗಿ ರಾಜಕೀಯ ಆರ್ಥಿಕ ವಿಚಾರಗಳಲ್ಲಿ ಬರೆಯಲ್ಪಟ್ಟಿವೆ. ಅಬ್ಬಾಸ್ ಸತ್ತಾರ್ ಗುಜ್ರಿ ಎಂಬವರು ಇನ್ನೊಬ್ಬರು ''ಆಶಿ" ಎಂದು ಇವರ ಪ್ರಸಿದ್ಧ ನಾಮ. ಇವರು ಕೆಳಮಟ್ಟದಿಂದ ಮೇಲೇರಿದವರು. ಕಾಶ್ಮೀರದ ನವ ಚೈತನ್ಯವನ್ನು ಇವರ ಕವಿತೆಗಳಲ್ಲಿ ಕಾಣಬಹುದು. ಇವರನ್ನು ಜನತಾಕವಿಯೆಂದು ಹೇಳಬಹುದು. ಇವರು ಕವಿತೆಗಳ ಮೂಲಕ ಸಮಾಜದಲ್ಲಿರುವ ತಾರತಮ್ಯವನ್ನು ಹೋಗಲಾಡಿಸಿ - ಆರ್ಥಿಕ ಹಾಗೂ ಸಾಮಾಜಿಕ ಸುಲಿಗೆಗಳನ್ನು ನಿರ್ನಾಮಗೊಳಿಸಲು ಹಗಲಿರುಳೂ ದುಡಿಯುತ್ತಿದ್ದಾರೆ. ಹಿಂದೂ-ಮುಸ್ಲಿಂ ಐಕಮತ್ಯಕ್ಕಾಗಿ ಇವರ ಕವಿತೆಗಳು ಹೋರಾಡುತ್ತಿದೆ.

ಜಾನಪದ ಗೀತ

ಅದ್ಭುತವಾದ ಕಥೆಗಳಿಗೂ ಜಾನಪದ ಗೀತಗಳಿಗೂ ಕಾಶ್ಮೀರವು ಪ್ರಸಿದ್ಧಿ ಪಡೆದಿದೆ ಇಲ್ಲಿ ಪುರಾತನದ ಸಂಸ್ಕೃತಿ-ಸಂಪ್ರದಾಯಗಳ ಭಂಡಾರವೇ ಕಾಣುತ್ತಿದೆ, ವಜೀರ್ ಮಾಲ್ ಮತ್ತು ಲಾಲ್‌ಮಾಲ್ ಇವು ಕಾಶ್ಮೀರೀ ಭಾಷೆಯಲ್ಲಿ ಸುಪ್ರಸಿದ್ಧಗಳಾದ ಕಥಾ ಸಂಕಲನಗಳಾಗಿವೆ. ಇವೆಲ್ಲಾ ಇಲ್ಲಿಯ ಹಳ್ಳಿಗರಿಂದ ಕರ್ಣಾಕರ್ಣಿಕೆಯಾಗಿ ಉಳಿಸಲ್ಪಟ್ಟ ಸಾಹಿತ್ಯ ಸಂಪತ್ತುಗಳು. ಈ ಗೀತಗಳು ವಿಷಯ ವಸ್ತುಗಳಲ್ಲಿ ಋತು, ಹಬ್ಬ, ವೃತ್ತಿ ಇತ್ಯಾದಿಗಳಿಂದ ಬಿನ್ನಭಿನ್ನವಾಗಿದ್ದರೂ ಇವುಗಳಲ್ಲಿ ಹಾಸುಹೊಕ್ಕಾಗಿರುವ ಸಂಸ್ಕೃತಿಯ ಸೂತ್ರವು ಒಂದೇ ಆಗಿದೆ. ಈ ಗೀತೆಗಳಲ್ಲಿ ಕೆಲವು ಚಿನರ್ ವೃಕ್ಷದ ಕುರಿತಾಗಿದ್ದರೆ ಕೆಲವು ಜೇಲಂನದಿಯ ಬಣ್ಣನೆ ಶ್ಲಾಘನೆಗಳಿಂದ ತುಂಬಿರುವುವು ಕೆಲವು ಗೀತೆಗಳು ಕುಂಕುಮ ಕೇಸರಿಯ ಮೈದಾನುಗಳ ಅಥವಾ ಚರಕದ ಕುರಿತು ರಚಿಸಲ್ಪಟ್ಟಿವೆ. ಈ ಗೀತೆಗಳಲ್ಲಿ ವ್ಯಕ್ತವಾಗುವ ಭಾವನೆಗಳು ಸಾಮಾಜಿಕವಾಗೂ ರಸಾತ್ಮಕವಾದ ಅನುಭವಗಳೇ ಆಗಿರುವುವು. ಹಬ್ಬಗಳಲ್ಲಿ ಕಾಶ್ಮೀರಿ ಹೆಂಗಸರು ಹಾಡುವ ''ರೂಫ್'' ಎಂಬ ನಾಟ್ಯ ಗೀತಗಳನ್ನು ನೋಡಿದರೆ ಸಾಂಸ್ಕೃತಿಕ ಐಕಮತ್ಯವು ಮರಳಿ ಸ್ಮರಣೆಗೆ ಬರುತ್ತಿರುವುದು. ಇದರಿಂದ ಕಾಶ್ಮೀರದ ಹಿಂದುಗಳೂ ಮುಸ್ಲಿಮರೂ ಮಾನಸಿಕ ಹಾಗೂ ಆಧ್ಯಾತ್ಮಿಕವಾದ ಒಂದೇ ಸಂಸ್ಕೃತಿಯ ಪ್ರವಾಹದಲ್ಲಿ ತೇಲುತ್ತಿರುವರೆಂಬುದರಲ್ಲಿ ಸಂದೇಹವಿಲ್ಲ.

....)0(...

ವೀರಶೈವ ಕಾಲೇಜು ಬಳ್ಳಾರಿ

ಇಂಟರ್ಮೀಡಿಯೆಟ್ ಪರೀಕ್ಷಾ ಫಲಿತಾಂಶ

ಈ ಕೆಳಗಿನ ವಿದ್ಯಾರ್ಥಿಗಳು 1949 ನೆಯ ಮಾರ್ಚಿನಲ್ಲಿ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು.

ಪ್ರಥಮ ಶ್ರೇಣಿ—8 ಜನರು.

1 ಡಿ ವೆಂಕೋಬರಾವ್.
2 ಹೆಚ್. ಕೆ. ಕೃಷ್ಣಮೂರ್ತಿ.
3 ಪಿ ಪಾಂಡುರಂಗ ವಿಠಲ್.
4 ಯು. ರಾಮಚಂದ್ರರಾವ್.
5 ಬಿ. ಶಂಕರಭಟ್ಟ.
6 ಪಿ. ವಿ. ವೆಂಕಟರಮಣ.
7 ಕೆ. ಕೆ, ಮಾಳವೀಯ,
8 ಜೆ. ಎಂ. ಬಸವರಾಜು.

ದ್ವಿತೀಯ ಶ್ರೇಣಿ:—25 ಜನರು,

1 ಪಿ. ಬಾಲಗಂಗಾಧರ,
2 ಹೆಚ್, ಚಕ್ರಪಾಣಿ,
3 ಡಿ, ಮಲ್ಲಿಕಾರ್ಜುನರಾವ್.

ಅರಣ್ಯ ಸಂಪತ್ತು

ದೇಶದ ಪುರೋಭಿವೃದ್ಧಿಗೆ ಸೋಪಾನ

ಈಗಿರುವ ಕಾಡುಗಳನ್ನು ರಕ್ಷಿಸಬೇಕು, ಹೊಸ ಕಾಡುಗಳನ್ನು ಬೆಳೆಸಬೇಕು

"ಅಪರಿಮಿತವಾದ ಕರುಣೆಯ ಸಮುದ್ರ, ಸರ್ವ ಪ್ರಾಣಿಗಳ ರಕ್ಷಕ, ತನ್ನನ್ನು ಕಡಿಯುವ ಮರ ಕಡಿಯುವವನಿಗೂ ತಂಪದ ನೆಳಲೀಯುವ ಉದಾರಿಯೆಂದರೆ ಅರಣ್ಯ"....ಗೌತಮ ಬುದ್ಧ.

ಅರಣ್ಯವೆಂದರೆ ಮಾನವನಿಗೆ ಪ್ರಕೃತಿದತ್ತವಾದ ಅಮೂಲ್ಯ ನಿಧಿಯಾಗಿದೆ. ಜಗತ್ತಿನಲ್ಲಿ ಕೋಟಿ ಗಟ್ಟಲೆ ಜನರು ತಮ್ಮ ದೈನಂದಿನದ ಆಹಾರ, ಆಶ್ರಯ, ಸೌದೆ, ಬಟ್ಟೆ, ಇತರ ವನ್ಯಸಂಪತ್ತುಗಳೆಂದು ಸಹಾಯವನ್ನು ಅರಣ್ಯಗಳಿಂದ ಪಡೆಯುತ್ತಿದ್ದಾರೆ. ಹಣಕಾಸುಗಳ ರೂಪದಲ್ಲಿಲ್ಲವಾದರೂ ಅರಣ್ಯಗಳ ಪ್ರಭಾವವು ಹೊಳೆ, ನೆರೆ, ಭೂಮಿ ಸವೆಯುವುದು, ಹಿಮವನ್ನು ತಡೆಯುವುದು ಇತ್ಯಾದಿಗಳ ಮೇಲೆ ಚೆನ್ನಾಗಿ ಹಬ್ಬಿದೆ. ಅರಣ್ಯ ಸಂಪತ್ತು ನಾಶರಹಿತವೆಂದು ಹೇಳುವುದರಲ್ಲಿ ಸಂಶಯವಿಲ್ಲ. ಮೊದಲನೆಯ ಪ್ರಪಂಚ ಯುದ್ಧ ಕಾಲದಲ್ಲಿ ಎಷ್ಟು ನಾಶವಾದರೂ ಎರಡನೆಯ ಯುದ್ಧದ ಮಧ್ಯಕಾಲದಲ್ಲಿ ಅರಣ್ಯಗಳು ಯಥಾಸ್ಥಿತಿಗೆ ತಲಪಿದ್ದವು. ಆದರೆ ಎರಡನೆಯ ಪ್ರಪಂಚ ಯುದ್ಧವು ಅರಣ್ಯ ಸಂಪತ್ತಿನ ಮೇಲೆ ಹೆಚ್ಚಿನ ಆಘಾತ ಎತ್ತಿದೆ. ಇದರ ಪರಿಣಾಮವಾಗಿ ಅರಣ್ಯ ಸಂಪತ್ತಿನ ಪ್ರತಿಯೊಂದರಲ್ಲೂ ನಮಗೆ ಕೊರತೆ ಕಾಣುತ್ತಿದೆ. ಉರಿಸಲು ಸೌದೆ ಇಲ್ಲ, ಕಟ್ಟಡಕ್ಕೆ ಮರಗಳಿಲ್ಲ, ವ್ಯವಸಾಯದ ಅನುಕೂಲವಿಲ್ಲವೆ ಅನ್ನ-ಬಟ್ಟೆಗಳ ಕೊರತೆಯೂ ಕಡಮೆಯಾಗಿಲ್ಲ.

ಮನುಷ್ಯನು ಆಹಾರ ದೊರಕಿಸಲು ಸಮರ್ಥನಾದಂತೆ ಅವನ ಯೋಗ್ಯತೆಯು ಬೆಳೆಯುತ್ತದೆ. ಕೊರತೆಗಳಿಂದ ಪಾರಾಗಬೇಕೆನ್ನುವುದೇ ಎಲ್ಲರ ಗುರಿ. ಹಿಂದುಸ್ಥಾನದ ಸಂಪತ್ತು ಹೆಚ್ಚಬೇಕಾದರೆ ಅದರ ಬೇಸಾಯವು ಉತ್ತಮಗೊಳ್ಳುವುದು ಅವಶ್ಯ. ಆರೋಗ್ಯ ಉತ್ತಮಗೊಳ್ಳಬೇಕಾದರೆ ಉತ್ತಮ ಆಹಾರ ಅವಶ್ಯ. ಉತ್ತಮ ಪುಷ್ಕರಳ ಆಹಾರ ಧಾನ್ಯವು ದೇಶದಲ್ಲಿ ಬೆಳೆಯಬೇಕಾದರೆ, ದೇಶದ ಭೂಮಿಗಳ ಫಲವತ್ತಾಗಿರಬೇಕು.

ದೇಶದ ಭೂಮಿಗಳ ಸಾರವನ್ನು ಹೆಚ್ಚಿಸಬೇಕಾದರೆ, ದೇಶದಲ್ಲಿ ಉತ್ತಮ ಕಾಡುಗಳು ಅಗತ್ಯ. ಗುಡ್ಡಬೆಟ್ಟಗಳಲ್ಲಿ ಪ್ರಬಲವಾದ ಕಾಡು ಬೆಳೆದಿದ್ದಲ್ಲಿ, ಅದು ಹೊಲಗಳನ್ನು ನೀರಿನ ಪ್ರವಾಹದಿಂದ ರಕ್ಷಿಸುವುದು. ಕಾಡುಗಳು, ಮಳೆಯ ನೀರು ಭೂಮಿಯಲ್ಲಿ ಚೆನ್ನಾಗಿ ಇಂಗಲು ಸಹಾಯ ಮಾಡಿ, ನದಿಗಳ ಉಗಮಕ್ಕೆ ಕಾರಣವಾಗುತ್ತವೆ. ಕಾಡುಗಳಿಲ್ಲದ ಬೋಳು ಗುಡ್ಡೆಗಳ ಮೇಲೆ ಮಳೆಸುರಿದರೆ ನೀರೆಲ್ಲವೂ ಒಂದು ಗಂಟೆಯೊಳಗೆ ಹರಿದುಹೋಗಿ ಯಾರಿಗೂ ಉಪಯೋಗವಿಲ್ಲದಂತಾಗುವುದು. ಮೊದಲು ದೇಶದಲ್ಲಿ ದೊಡ್ಡ ಕಾಡುಗಳು ಇದ್ದಾಗ್ಗೆ ನದಿಗಳು ಏರೀತಿಯಿಂದ ಗಂಭೀರವಾಗಿದ್ದೂ, ಬೇಸಗೆಯಲ್ಲಿ ಅತಿ ಸಣ್ಣದಾಗಿಯೂ ಹರಿಯತೊಡಗಿವೆ. ನೀರು ರಭಸದಿಂದ ಹರಿದರೆ ಫಲವತ್ತಾದ ಮಣ್ಣನ್ನು ಕೊಚ್ಚಿಕೊಂಡು ಹೋಗುವುದು. ನೀಲಗಿರಿಯ ವಿಭಾಗದಲ್ಲಿ ಹರಿಯುವ ಸುಮಾರು 5 ವರ್ಷಗಳಲ್ಲಿ 3 ಇಂಚುಗಳಷ್ಟು ಮಣ್ಣನ್ನು ಹೊಲಗಳಿಂದ ಕೊಚ್ಚಿಕೊಂಡು ಹೋಗಿದೆ ಎಂದರೆ, ನೆರೆಯಿಂದ ಉಂಟಾಗುವ ಹಾವಳಿಯು ಎಷ್ಟೆಂದು ತಿಳಿಯಬಹುದು. ಈ ರೀತಿ ಭೂಮಿಗಳ ಫಲವತ್ತಾದ ಮಣ್ಣು ಹಾಳಾದಲ್ಲಿ, ಕೆಲವೇ ವರ್ಷಗಳಲ್ಲಿ ಭೂಮಿಯು ಸಂಪೂರ್ಣ ನಿರುಪಯೋಗಿಯಾಗಿಬಿಡುವುದು.

ಗಿಡಮರಗಳ ಉಪಯೋಗವು ಮನುಷ್ಯನಿಗೆ ಎಷ್ಟಿದೆ ಎಂದು ಜನರು ಸರಿಯಾಗಿ ತಿಳಿದುಕೊಂಡಿಲ್ಲ. ಮನುಷ್ಯರು ಮತ್ತು ಪ್ರಾಣಿಗಳು ತಮ್ಮ ಆಹಾರ, ವಸತಿಗಳಿಗೆ ಮತ್ತು ಇತರ ಅನೇಕ ನಿತ್ಯ ಉಪಯೋಗಗಳಿಗೆ ಕಾಡುಗಳನ್ನು ಹೊಂದಿ ಕೊಂಡಿರುವರು.

ನಮ್ಮ ಮೊದಲನೆ ಕರ್ತವ್ಯವೆಂದರೆ ಈಗ ಇರುವ ಕಾಡುಗಳನ್ನು ರಕ್ಷಿಸುವುದು, ಎರಡನೆಯೆಂದರೆ ಹೊಸ ಕಾಡುಗಳನ್ನು ಬೆಳೆಸುವುದು.

ನಮ್ಮ ಹಳ್ಳಿಗಳಿಗೆ ಸಹ ಕಟ್ಟಿಗೆಯ ಅಭಾವವು ತಗಲಿದೆ. ಕಾಡುಗಳನ್ನೂ ಕಡಿದು, ಕಟ್ಟಿಗೆಯು ಇಲ್ಲದಂತಾಗಿರುವುದರಿಂದ ಹಳ್ಳಿಗರು, ಅತಿ ಉತ್ತಮ ಗೊಬ್ಬರವಾದ ಸಗಣಿಯನ್ನು, ಉರುವಲಾಗಿ ಉಪಯೋಗಿಸುತ್ತಿರುವರು. ಸಗಣಿಯು ಭೂಮಿಗೆ ಅತಿ ಅಗತ್ಯವಿರುವ ನೈಟ್ರೋಜನ್ ಗೊಬ್ಬರವನ್ನು ಒದಗಿಸುತ್ತದೆ. ಇಂಥಹ ಗೊಬ್ಬರವನ್ನು ಕಟ್ಟಿಗೆಯಾಗಿ ಉಪಯೋಗಿಸುವುದರಿಂದ ದೇಶಕ್ಕೆ ಬಹಳ ಇದೆ. ಇದನ್ನು ತಪ್ಪಿಸಲು ಇರುವ ಉಪಾಯವೆಂದರೆ ಹಳ್ಳಿಗರು 2-3 ವರ್ಷಗಳಲ್ಲಿ ಕಡಿಯಲಿಕ್ಕೆ ಬರುವ ಕಾಡುಗಳನ್ನು ಬೆಳೆಸುವುದು. ಬೇಸಾಯಗಾರರು ತಮ್ಮ ಬಿಡುವೇಳೆಯಲ್ಲಿ ಈ ಕೆಲಸವನ್ನು ಸುಲಭವಾಗಿ ಮಾಡಬಹುದು. ಇದರಿಂದ ಅವರಿಗೆ ಕಟ್ಟಿಗೆ, ಗದ್ದೆಗೆ ಬೇಕಾಗುವ ಸೊಪ್ಪು, ಸಣ್ಣ ಕೆಲಸಗಳಿಗೆ ಉಪಯೋಗವಾಗುವ ಮರಮುಟ್ಟು, ದನಗಳಿಗೆ ಮೇಯುವ ಜಾಗೆ, ಹಣ್ಣು ಹಂಪಲುಗಳು ಇತ್ಯಾದಿ ಸಿಗುತ್ತವೆ. ಅಲ್ಲದೆ ಕಾಡು ಹತ್ತಿರವಿದ್ದಲ್ಲಿ ಸುತ್ತುಮುತ್ತಲಿನ ಭೂಮಿ, ಗದ್ದೆ, ತೋಟಗಳಲ್ಲಿ, ಯಾವಾಗಲೂ ತಂಪು ಇದ್ದು, ಬೆಳೆಗಳಿಗೆ ಬಹಳ ಅನುಕೂಲವಾಗುತ್ತದೆ.

ನಾವು ನಮ್ಮ ಕಾಡುಗಳನ್ನು ಬಹಳ ಅಜಾಗ್ರತೆಯಿಂದ ಕೆಡಿಸಿರುತ್ತೇವೆ. ದೇಶದ ಒಳ್ಳಿತಿಗೆ, ಅತಿ ಅಗತ್ಯವಿರುವ ಇಂಥಹ ಕಾಡುಗಳನ್ನು ಸರಿಯಾಗಿ ಕಾಪಾಡುವುದು ಅತಿ ಅಗತ್ಯ. ನಮ್ಮ ದೇಶದ ಎಲ್ಲಾ ಕಟ್ಟಿಗೆಯ ಪೂರೈಕೆಯು ಕಾಡುಗಳಿಂದ ಆಗಬೇಕಾದರೆ, ದೇಶದ ಭೂಭಾಗದಲ್ಲಿ 20 ರಿಂದ 25% ಜಾಗೆಯಲ್ಲಿ ಕಾಡುಗಳು ಇರಬೇಕು, ಮುಖ್ಯ ವಿಷಯವೆಂದರೆ ಆ ಕಾಡುಗಳನ್ನು ಅತಿ ಜಾಗ್ರತೆಯಿಂದ ಕಾಪಾಡಬೇಕು.

ಇಂದು ನಾವು ಬೆಳೆಸುವ ಕಾಡು ನಮಗಲ್ಲದಿದ್ದರೆ ನಮ್ಮ ಮುಂದಿನವರಿಗೆ ಉಪಯೋಗ ಬೀಳುವುದಾದ್ದರಿಂದ, ನಮ್ಮ ಉಪಯೋಗಗಳನ್ನು ಲಕ್ಷಿಸದೆ ಉತ್ತಮ ಕಾಡುಗಳನ್ನು ಬೆಳೆಸಬೇಕು. ಒಳ್ಳೆಯ ಕಾಡುಗಳು ರಾಷ್ಟ್ರದ ಉತ್ಕೃಷ್ಟ ಸಂಪತ್ತಾಗಿವೆ.

---

4 ಎಸ್. ಜಯರಾಮರಾವ್.
5 ಪಿ. ರಾಮಮೂರ್ತಿ.
6 ಕೆ. ವೆಂಕಟರಮಣ.
7 ಕೆ. ಕೆ. ಹನುಮಂತರಾವ್.
8 ಎಂ. ರಾಧಾಮಾಧವಶರ್ಮ.
9 ಕೆ. ರಾಮಚಂದ್ರರಾವ್.
10 ಕೆ. ವಿ. ರಾಮಚಂದ್ರವಿಠಲ್.
11 ಆರ್. ಗಣೇಶರಾವ್.
12 ಜೆ. ಶಂಕರಭಟ್.
13 ಕೆ. ಸತ್ಯನಾರಾಯಣರಾವ್.
14 ಪಿ ವಿ. ರಂಗರಾವ್.
15 ಬಿ. ಹನುಮಂತರಾವ್.
16 ಎಸ್. ಪರಶುರಾಮಭಟ್.
17 ಕೆ. ವಾಸುದೇವಗುಪ್ತ.
19 ಶಿ. ನಾರಾಯಣಶೆಟ್ಟಿ.
20 ಎಫ್. ಎಂ. ಮಾರ್ಟಿನ್.
21 ಕೆ. ರಾಮಚಂದ್ರರೆಡ್ಡಿ.
22 ಪಿ. ಪೆದ್ದ ಪೋಟ್ಲೂರು.
23 ಎಸ್. ರಾಜಸೇಖರ.
24 ಎಂ. ಯಸ್. ಮಹಂತಯ್ಯ.
25 ಎಸ್. ಶ್ರೀಶೈಲ.

ವಿವಿಧ ಗ್ರೂಪುಗಳಲ್ಲಿಯೂ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ.

ಈ ವರ್ಷದ ಫಲಿತಾಂಶ ತೃಪ್ತಿಕರವಾಗಿಯೂ, ಆಶಾದಾಯಕವಾಗಿಯೂ ಇದೆ.

ಇಪಿ ಫಕೀರ

ಪುಸ್ತು ಭಾಷೆ ಮಾತಾಡುವವರೆಲ್ಲರೂ ಪಠಾಣರು: ಒಂದೇ ಜನಾಂಗಕ್ಕೆ ಸೇರಿದವರು. ತಮಗೆ ಒಂದು ಸ್ವತಂತ್ರ ಪ್ರಾಂತ ಬೇಕು ಎಂದು ಅನೇಕ ಬಹಳ ದಿವಸಗಳಿಂದ ಪಠಾಣಿಸ್ತಾನದ ಆಂದೋಲನವನ್ನು ಸರಹದ್ದ ಪ್ರಾಂತದಲ್ಲಿ ಎಬ್ಬಿಸಿದ್ದಾರೆ. ಅಹಿಂಸೆಯ ಮಾರ್ಗದಿಂದ ಇದನ್ನು ಸಂಪಾದಿಸಲು ಪ್ರಯತ್ನಿಸುವ ಓರ್ವ ಪಠಾಣ ಮುಂದಾಳುಗಳಾದ ಅಬ್ದುಲಗಫರ (ಬಾದಶಾಹಾ) ಖಾನರು (ಸರಹದ್ದ ಗಾಂಧಿ) ಈಗ ಪಂಜಾಬದ ಮೌಂಟಗುಮರಿ ಕಾರಾಗೃಹದಲ್ಲಿದ್ದಾರೆ. ಇದೇ ಆಂದೋಲನ ಇದರಲ್ಲೊಬ್ಬ ಮುಂದಾಳು ಇಪಿ ಫಕೀರರು. ಇವರು ಹಿಂಸೆಯ ಮಾರ್ಗವನ್ನು ಅನುಸರಿಸಿ ಪಾಕಿಸ್ತಾನದವರಗೂಡ ಹೋರಾಟ ನಡೆಸಿದ್ದಾರೆ. ಇವರಿಬ್ಬರ ಹಿಂದೆ ಅರವತ್ತು ಲಕ್ಷ ಪಠಾಣರಿದ್ದಾರೆ. ಆಫಗಾನರ ಸಹಾನುಭೂತಿಯೂ ಇವರಿಗಿದೆ. ಪಠಾಣರು ಹಿಂದುಸ್ತಾನದ ಸ್ವಾತಂತ್ರ್ಯ ಸಮರದಲ್ಲಿ ಸದಾ ಭಾಗವಹಿಸಿರುತ್ತಾರೆ. ೧೯೩೦ರ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಸರಹದ್ದಿನ ಹಾಜಿಅವ್ ತರಂಗಜಯಿ, ಎಂಬವನು ಬ್ರಿಟಿಷರ ವಿರುದ್ಧ ಬಂಡು ಹೂಡಿದನು. ಮಹಾತ್ಮರನೆರೆ ಪೇಶಾವರದ ಗುಂಡಿನ ಮಳೆಗಳಿಂದ ರೊಚ್ಚಿಗೆದ್ದ ಆಫರೀಡಿ ಟೋಳಿಯವರು ಲುಂಗಬಾಬಾ (ಮಹಾತ್ಮಾ)ರವರನ್ನು ಬಿಡಿರಿ, ಹಿಂದಿಯರ ಬೇಡಿಕೆಗಳನ್ನು ಪೂರ್ಣಮಾಡಿರಿ, ಎಂದು ಯುದ್ಧವನ್ನು ಆರಂಭಿಸಿದರು. ಹಾಜಿಸಾಹೇಬರು ದಿವಂಗತರಾದರು. ಇಪಿಫಕೀರರು ಮಾತ್ರ ಜೀವಂತರಿದ್ದು ಬ್ರಿಟಿಷರಿಗೂ, ಪಾಕಿಸ್ತಾನಕ್ಕೂ ತಲೆನೋವಾಗಿ ಬಿಟ್ಟಿದ್ದಾರೆ.

ಪೂರ್ವ ಜೀವನ

ಫಕೀರ ಸಾಹೇಬರು ಸರಹದ್ದ ಪ್ರಾಂತದ ಬನ್ನು ಜಿಲ್ಲೆಯಲ್ಲಿಯ 'ಇಪಿ, ಹೆಸರಿನ ಹಳ್ಳಿಯವರು: ಇದು ಬನ್ನೂದಿಂದ ಬರೇ ನಾಲ್ಕು ಮೈಲಿನ ಮೇಲಿರುವುದು. ಹಾಜಿ ಮಿರ್ಜಾ ಅಲಿ ಖಾನ ಎಂಬುದು ಇವರ ಹೆಸರು. ಪಠಾಣರೆಲ್ಲರು ಸಾಮಾನ್ಯವಾಗಿ ಬ್ರಿಟಿಷರ ವಿರೋಧಿಗಳಾಗಿದ್ದಾರೆ ಅದರಂತೆ ಫಕೀರ ಸಾಹೇಬರು ಬಾಲ್ಯದಲ್ಲಿಯೇ ಬ್ರಿಟಿಷರ ವೈರಭಾವದವರಾಗಿದ್ದರು. ಧರ್ಮಾಚರಣೆಯಲ್ಲಿ ಇವರ ಆಸಕ್ತಿ ಬಹಳ. ಮಿರ್ಜಾ ಅಲಿಖಾನರು ಹದಿನೈದು ವರುಷದವರಿದ್ದಾಗ ಹಿಂದುಸ್ತಾನದ ಪ್ರವಾಸ ಕೈಕೊಂಡಿದ್ದರು. ಎಲ್ಲ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳನ್ನು ಸಂಚರಿಸಿ ಜಮಿಯತ ಉಲೆಮಾ ಸಂಘದ ಪ್ರಸಿದ್ಧ ಮುಂದಾಳುಗಳನ್ನು ಬೆಟ್ಟಿಯಾದರು. ಪ್ರಸಿದ್ಧ ಉಲೆಮಾರವರಗೂಡ ಸಂಬಂಧ ಬೆಳೆಸಿದರು. ಮೌಲಾನಾ ಹುಸೇನ ಅಹಮದ ಮದನಿ ಮತ್ತು ಅವರ ಗುರುಗಳಲ್ಲಿ ಇವರ ನಿಕಟ ಸಂಬಂಧವಿತ್ತು. ಇವರಿಬ್ಬರ ಸಹವಾಸದಿಂದ ಫಕೀರ ಸಾಹೇಬರು ಕಾಂಗ್ರೆಸಿನ ಬಗ್ಗೆ ಸಹಾನುಭೂತಿಯುಳ್ಳವರಾದರು. ಸರಹದ್ದ ಪ್ರಾಂತದ ಕಾಂಗ್ರೆಸ್ಸಿನ ಆಂದೋಲನಕ್ಕೆ ಇವರ ಸಹಾನುಭೂತಿ ಇತ್ತು.

ತಮ್ಮ ಕ್ರಾಂತಿಕಾರಕ ಚಟುವಟಿಕೆಗಳ ಮೂಲಕ 'ಇಪಿ, ಯಲ್ಲಿರುವದು ಇವರಿಗೆ ಕಠಿಣವಾಯಿತು. ಆದ್ದರಿಂದ ಮದಸೂದಿ ಟೋಳಿಯವರ ಪ್ರದೇಶವಾದ ವಜೀರಿಸ್ತಾನದಲ್ಲಿ ಇವರು ಆಮೇಲೆ ಇರಹತ್ತಿದರು. ಇವರು ತಮ್ಮ ಧಾರ್ಮಿಕ ನಿಷ್ಠೆ, ಆಚರಣೆಗಳ ಪ್ರಭಾವದಿಂದ ಸ್ವಲ್ಪೇ ದಿವಸಗಳಲ್ಲಿ ಎಲ್ಲರ ಪ್ರೀತಿಗೆ ಪಾತ್ರರಾದರು ೧೯೩೭ರಲ್ಲಿ ಬ್ರಿಟಿಷ ಸರಕಾರವು ರಜಿಯಾಮದವರ ದಾಳಿಗಂಜಿ ವಜೀರಿಸ್ತಾನದಲ್ಲಿ ರಾಜಮಾರ್ಗಗಳನ್ನು ಮಾಡಿಸಲು ಸಿದ್ಧರಾದಾಗ ಐರೋಡಿನ ಮದಸೂದಿಯರು ಫಕೀರ ಸಾಹೇಬರ ಮುಂದಾಳುತನದಲ್ಲಿ ಒಂದು ದೊಡ್ಡ ದಂಡಿನ ಸಹಾಯದಿಂದ ಯುದ್ಧವನ್ನಾರಂಭಿಸಿದರು. ಇವರನ್ನು ಹಿಂದಕ್ಕಟ್ಟಲು ಬ್ರಿಟಿಷರು ವಿಮಾನಗಳ ಮೂಲಕ ಬಾಂಬಿನ ಮಳೆಗರೆದರು. ಬಂದೂಕಿನ ಯುದ್ಧದಲ್ಲಿ ಇವರನ್ನು ಸರಿಗಟ್ಟುವದು ಬ್ರಿಟಿಷರಿಗೆ ಶಕ್ಯವಿದ್ದಿಲ್ಲ. ಕೇಂದ್ರ ಅಸೆಂಬ್ಲಿಯಲ್ಲಿ ಈ ಬಗ್ಗೆ ಪ್ರಶ್ನೆ ಕೇಳಲು, ಇಪಿಫಕೀರನು ಧರ್ಮಾಂಧನಾಗಿ ಹಿಂದುಗಳಮೇಲೆ ವಿಪರೀತ ಜುಲುಮೆಮಾಡಹತ್ತಿದ್ದರಿಂದ ನಿರುಪಾಯರಾಗಿ ಹೀಗೆಮಾಡಬೇಕಾಯಿತೆಂದು ಉತ್ತರಕೊಡಲಾಯಿತು. ಅದೇ ಫಕೀರನು ಪಾಕಿಸ್ತಾನದ ಬಲವನ್ನು ಕುಗ್ಗಿಸುವದಕ್ಕಾಗಿ ಹಿಂದೂ ಮತ್ತು ಸಿಖರುವರ ಸಹಾಯದಿಂದ, ತನ್ನ ಆಂದೋಲನವನ್ನು ನಡೆಯಿಸುತ್ತಿರುವನೆಂದು ಪಾಕಿಸ್ತಾನದವರು ಈಗ ಸುಳ್ಳು ಸುದ್ದಿ ಎಬ್ಬಿಸಿದ್ದಾರೆ.

ಅನೇ ಮಂತ್ರ

ಮುಸ್ಲಿಮ ಲೀಗವು ಕಾಂಗ್ರೆಸ್ಸಿನಿಂದ ಸ್ವಯಂನಿರ್ಣಯದ ಅಧಿಕಾರ ಬೇಡಿದಂತೆ ಸರಹದ್ದು ಪಠಾಣಿಸ್ತಾನದ ಸಲುವಾಗಿ ಅದೇ ಅಧಿಕಾರವನ್ನು ಪಾಕಿಸ್ತಾನದಿಂದ ಬೇಡಹತ್ತಿರುವರು. ಪಾಕಿಸ್ತಾನದ ಬೆಂಬಲವಾಗಿ ಆಂಗ್ಲೋ ಅಮೇರಿಕನ್ ಪಕ್ಷವು ನಿಂತಿದೆ. ಇವರ ಬೆಂಬಲದಿಂದ ಪಠಾಣಿಸ್ತಾನದ ಆಂದೋಲನವನ್ನು ಹತ್ತಿಕ್ಕುವ ಸಾಹಸ ನಡೆದಿದೆ. ಈ ಆಂದೋಲನವು ಸಫಲವಾದಲ್ಲಿ ಈ ಭಾಗದಲ್ಲಿ ಅವರಿಗೆ ತಳವೂರಲು ಸ್ಥಾನವಿಲ್ಲದಂತಾಗುವದು. ಕಾಶ್ಮೀರದಲ್ಲಿಯೂ ಅವರ ಕನಸು ಪೂರ್ಣವಾಗುವಂತಿಲ್ಲ. ಇವರಿಗೆ ರಶಿಯನ್ನರ ವಿರುದ್ಧ ಉಪಯೋಗಿಸಲು ಸರಹದ್ದಿನಲ್ಲಿ ಕೆಲವು ವಿಮಾನ ನಿಲ್ದಾಣಗಳ ಅವಶ್ಯಕತೆಯಿದೆ.

ವಿರೋಧ ಬೆಳೆಯುತ್ತಿದೆ

ಸರಹದ್ದಿನ ಪಠಾಣರು ರಾಜಕಾರಣದಲ್ಲಿ ಪಾಕಿಸ್ತಾನದ ಮುಸ್ಲಿಮರಿಗಿಂತ, ಎಷ್ಟೋ ಪಟ್ಟು ಹೆಚ್ಚು ಅನುಭವಿಕರಿರುವರು. ಹಲವಾರು ವರುಷ ಬ್ರಿಟಿಶರ ವಿರುದ್ಧ ಹೋರಾಡಿದವರಿರುವದರಿಂದ, ಅವರ ರಾಜಕೀಯ ಕಪಟ ನಾಟಕವನ್ನು ಚನ್ನಾಗಿ ಬಲ್ಲವರಾಗಿದ್ದಾರೆ.

ಕಾಶ್ಮೀರದಲ್ಲಿ ನಡೆದ ಯುದ್ಧವು ಧರ್ಮಯುದ್ಧವಲ್ಲ ಏಕೆಂದರೆ ಎರಡೂ ಪಕ್ಷದವರು ಮುಸಲ್ಮಾನರೇ ಇರುವರು. ಪಾಕಿಸ್ತಾನವು ಇದಕ್ಕೆ ಧರ್ಮಯುದ್ಧವೆನ್ನುತ್ತಿದ್ದರೆ, ಪಠಾಣ ಟೋಳಿಯವರ ಹಿಂದೇ ಇಸ್ಲಾಮ್, ವೈದಾನಿನಲ್ಲಿ ಮುಂದೆ ಬಂದು ಹೋರಾಡಬೇಕು, ಎಂದು ಇಪಿಫಕೀರರು ಒಂದು ಪ್ರಕಟನೆ ಹೊರಡಿಸಿದ್ದರು.

ಅಂತೂ ಪಠಾಣರ ಮೇಲೆ ಇಪಿಫಕೀರರ ವರ್ಚಸ್ಸು ಬಹಳಿರುವದು "ಡೆವರೆಂಡ ಲಾಯಿನ್" ನಿರ್ಮಿಸಿ ಪಠಾಣರ ದೇಶ ಇಬ್ಭಾಗಮಾಡಿದ್ದನ್ನು ತೆಗೆದು ಹಾಕಿ ಪುನಃ ಅಖಂಡ ಪಠಾಣಸ್ತಾನವನ್ನು ನಿರ್ಮಿಸಲು ಬಾದಶಹಾ ಖಾನ, ಮತ್ತು ಇಪಿಫಕೀರ ಇವರು ಟೊಂಕಕಟ್ಟಿರುವರು. ಎಲ್ಲ ಪಠಾಣರನ್ನು ಒಂದು ಗೂಡಿಸಿ, ಅವರನ್ನು ಏಳ್ಗೆಯಮಾರ್ಗಕ್ಕೆ ಹಚ್ಚಿ ಸುಧಾರಿಸಿದ ರಾಷ್ಟ್ರಗಳ ಬದಿಯಲ್ಲಿ ನಿಲ್ಲಲು ಅವರನ್ನು ಅರ್ಹರನ್ನಾಗಿ ಮಾಡುವದೇ ಇವರ ಮುಖ್ಯೋದ್ದೇಶ. ಸ್ವಲ್ಪೇ ಕಾಲದಲ್ಲಿ ಇವರು ತಮ್ಮ ಉದ್ದೇಶದಲ್ಲಿ ಸಫಲರಾಗುವ ಲಕ್ಷಣಗಳಿವೆ. ಸದ್ಯಕ್ಕೆ ಸರಹದ್ದಿನಲ್ಲಿ ಪರಸ್ಪರ ಘರ್ಷಣೆ ನಡದೇ ಇದೆ. ಕೆಂಪಂಗಿಯವರನ್ನು ಹಿಡಿದು ಸೆರೆಮನೆಗಳಿಗಟ್ಟುವ ಕಾರ್ಯವೂ ಸಾಗಿದೆ. ಆದರೂ, ಪಠಾಣಿಸ್ತಾನದ ಆಂದೋಲನವು ಕಡಿಮೆಯಾಗದೆ, ಬೆಳೆಯುತ್ತಲೇ ಇದೆ. ಇದರ ಮೇಲಿಂದ ಈ ಆಂದೋಲನವು ಸಾಮಾನ್ಯರ ಹೃದಯದಲ್ಲಿ ಎಷ್ಟು ಆಳವಾಗಿ ಸೇರಿಕೊಂಡಿದೆಯೆಂಬುದು ಸ್ಪಷ್ಟವಾಗದಿರದು,

— ಜಯ ಹಿಂದ್

ಪ್ರಾಥಮಿಕ ವಿದ್ಯಾಭ್ಯಾಸ

500 ಜನ ಸಂಖ್ಯೆಯ ಪ್ರತಿಯೊಂದು ಹಳ್ಳಿಯಲ್ಲೂ ಪ್ರಾಥಮಿಕ ಶಾಲೆಯು ಆರಂಭವಾಗದ ವಿನಹ ಇರುವ ಪ್ರಾಥಮಿಕ ಶಾಲೆಗಳಲ್ಲಿ ಯಾವುದನ್ನೂ ಪ್ರಥಮ ದರ್ಜೆಯ ಪ್ರಾಥಮಿಕ ಶಾಲೆಗಳಾಗಿ ಮಾಡಬಾರದೆಂದು ಸರ್ಕಾರದವರು ಉತ್ತರ ಮಾಡಿರುತ್ತಾರೆ. ಇದರಿಂದ ತಮ್ಮ ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದಲ್ಲಿ ಆಸಕ್ತರಾದ ಬಡ ಕುಟುಂಬಿಕರಿಗೆ ಬಹಳ ಕಠಿಣವಾಗಿದೆ. ಇದನ್ನು ಅನುಸರಿಸುವುದರಲ್ಲಿ ಸರ್ಕಾರದವರು ಕೆಲ ಊರುಗಳಿಗೆ ರಿಯಾಯ್ತಿ ತೋರಿಸಬೇಕಾದುದವ್ಯಕ.



ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚರಿತ್ರರಾದ S. S. L C, ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಸೆಕ್ರೆಟರಿ

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟಾಂಪಿನೊಂದಿಗೆ ಬರೆಯಿರಿ

ತಾರಾನಾಥ ಆಯುರ್ವೇದ ವಿದ್ಯಾಪೀಠ
P O. ಸಂಗನಕಲ್ಲು ಬಳ್ಳಾರಿ.

ಪಂಡಿತ ಜವಾಹಿರಲಾಲರ ಆವೇಶಯುಕ್ತ ಭಾಷಣ

ನಾವು ಜನತೆಯ ಪ್ರತಿನಿಧಿಗಳಾಗಿರದಿದ್ದರೆ ರಾಜೀನಾಮೆ ಕೊಡುವೆವು.

"ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸುವದು ನಮ್ಮಿಂದ ಸಾಧ್ಯವಾಗದಿದ್ದರೆ ಆ ಸಂಸ್ಥೆಯು ಚೂರು ಚೂರಾಗಲು ಆಸ್ಪದ ಕೊಡುವದಕ್ಕಿಂತ ಅದನ್ನು ನಿಲ್ಲಿಸುವುದು ಲೇಸು. ಕಾಂಗ್ರೆಸ್ ಸಂಸ್ಥೆಯ ಸ್ಥಳವನ್ನು ಆಕ್ರಮಿಸಲು ಭಾರತದ ಬೇರೆ ಯಾವ ಸಂಸ್ಥೆಗಳೂ ಸಮರ್ಥವಿರುವದಿಲ್ಲವೆಂದು ನನಗೆ ಅನಿಸುತ್ತದೆ. ಕಾಂಗ್ರೆಸ್ಸು ಬಲಹೀನವಾದರೆ ಭಾರತದಲ್ಲೆಲ್ಲ ಗೊಂದಲ ಹಾಗು ಅವ್ಯವಸ್ಥೆಗಳು ತಲೆದೋರುವ ಸಂಭವವಿರುವದು" ಎಂದು ಭಾರತ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂ ಅವರು ದಿಲ್ಲಿ ರಾಜಕೀಯ ಪರಿಷತ್ತಿನ ಅಧಿವೇಶನದಲ್ಲಿ ಮಾತಾಡುತ್ತ ಒಳ್ಳೇ ಆವೇಶದಿಂದ ಹೇಳಿದರು.

ಅವರು ತಮ್ಮ ಎಂಭತ್ತು ನಿಮಿಷಗಳ ಭಾಷಣದಲ್ಲಿ ಈ ರೀತಿ ಹೇಳಿದರು.

ಭಾರತದ ಜನತೆಯೊಡನೆ ಹೆಚ್ಚು ಹೆಚ್ಚು ಸಂಬಂಧ ಬೆಳಸಿಕೊಂಡು ಅವರ ಕಷ್ಟನಷ್ಟಗಳನ್ನು ಕೇಳಿಕೊಂಡು ನನಗೆ ಹೇಳಬೇಕಾದದ್ದನ್ನು ಹೇಳಬೇಕೆಂದು ನನಗೆ ಅನಿಸುತ್ತದೆ.

"ಮೊನ್ನಿನ ಕಲಕತ್ತೆಯ ಉಪಚುನಾವಣೆಯ ಪರಿಣಾಮವನ್ನು ಅಲ್ಲಗಳೆಯುವನು ತಪ್ಪಾದದ್ದು. ಮತದಾನ ವಿಭಾಗದ ಜನರು ಅಲ್ಲಿಯ ಕಾಂಗ್ರೆಸ್ ಸಮಿತಿಯೊಡನಾಗಲಿ, ಅಥವಾ ಅಲ್ಲಿಯ ಸರಕಾರದೊಡನೆಯಾಗಲಿ ಸಿಟ್ಟಾಗಿರುವರೆಂಬುದು ಚುನಾವಣೆಯ ಪರಿಣಾಮದಿಂದ ತಿಳಿದು ಬರುತ್ತದೆ. ಪಶ್ಚಿಮ ಬಂಗಾಲದ ಉಳಿದ ವಿಭಾಗಗಳ ಜನರೂ ಅದೇ ಅಭಿಪ್ರಾಯದವರಿರುವರೇನೆಂಬುದನ್ನು ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರು ತಿಳಿದುಕೊಳ್ಳಬೇಕು

ಕಾಂಗ್ರೆಸ್ ಸಂಸ್ಥೆಯನ್ನು ಬಲಪಡಿಸಲು ಉಚಿತವಾದ ಪ್ರಯತ್ನಗಳನ್ನು ಮಾಡುವ ಸಮಯವೀಗ ಬಂದಿದೆ. ಕೆಲವು ಪ್ರಾಂತಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷಪಂಗಡಗಳ ಜಗಳದಲ್ಲಿ ತೊಡಗಿದ್ದಾರೆ, ತಪ್ಪು ಮಾರ್ಗ ಹಿಡಿದ ಕಾರ್ಯಕರ್ತರನ್ನು ಮಹಾತ್ಮಾ ಗಾಂಧಿಯವರಂತೆ ಅವರ ಮನವೊಲಿಸಿ ಯೋಗ್ಯ ಮಾರ್ಗಕ್ಕೆ ಹಚ್ಚುವದನ್ನು ಬಿಟ್ಟು ಅವರನ್ನು ಕಾಂಗ್ರೆಸ್ಸಿನಿಂದ ಹೊರಗೆ ಹಾಕುವ ಕಾರ್ಯ ನಡೆದಿದೆ.

ಯೋಗ್ಯ ಟೀಕೆಯಿರಲಿ

ಕಾಂಗ್ರೆಸಿನ ಮೇಲೆ ಮಾಡಲಾಗುತ್ತಿರುವ ಟೀಕೆಯನ್ನು ನಾನೇ ಸ್ವಾಗತಿಸುತ್ತೇನೆ. ಆದರೆ ಟೀಕೆಯು ಯೋಗ್ಯವಾದದ್ದಿರಲಿ ನಾವು ಈಗ ಜನತೆಯ ಪ್ರತಿನಿಧಿಗಳಾಗಿಯೇ ಸರಕಾರದಲ್ಲಿದ್ದೇವೆ. ಆ ಪ್ರತಿನಿಧಿತ್ವವು ನಮಗಿಲ್ಲವೆಂದು ಗೊತ್ತಾದ ಕೂಡಲೇ ನಾವು ರಾಜೀನಾಮೆ ಸಲ್ಲಿಸುವೆವು. ಜನತೆಯು ಸರಕಾರದೊಂದಿಗೆ ಸಹಕರಿಸಬೇಕು. ಸರಕಾರವು ಕೇವಲ ಅವರವರ ಕಷ್ಟಗಳನ್ನು ದೂರಮಾಡಬೇಕೆಂದು ನಿರೀಕ್ಷಿಸುತ್ತ ಕೂಡ್ರಬಾರದು.

ಸ್ವತಂತ್ರ ಭಾರತದ ಘೋಷಣೆ

೧೯೫೦ ನೆಯ ಜನವರಿ ೨೬ ನೆಯ ದಿನ ಭಾರತವು ಸ್ವತಂತ್ರ ಪ್ರಜಾರಾಜ್ಯವೆಂದು ಸಾರಲಾಗುವದು. ಇದೇ ವರ್ಷದ ಅಕ್ಟೋಬರದಲ್ಲಿ ಭಾರತದ ಹೊಸ ಘಟನೆಯು ಸ್ವೀಕೃತವಾಗುವದು. ಸಾರ್ವತ್ರಿಕ ಚುನಾವಣೆಯ ಸಿದ್ಧತೆ ಒಳ್ಳೇ ಭರದಿಂದ ಸಾಗಿದೆ. ಮಹಾ ಚುನಾವಣೆಯು ೧೯೫೦ ನೆಯ ಇಸ್ವಿಯ ಚಳಿಗಾಲಕ್ಕೆ ಮೊದಲು ನಡೆಯಲಿಕ್ಕಿಲ್ಲ. ಆದರೂ ಇನ್ನೂ ಮೊದಲು ನಡೆಯಲು ಸಾಧ್ಯವಿದ್ದ ಪ್ರಯತ್ನವನ್ನೆಲ್ಲ ಮಾಡಲಾಗುವದು.

ಕಮ್ಯುನಿಸ್ಟರು ರಾಷ್ಟ್ರದ ಶತ್ರುಗಳು

ಭಾರತ ಕಮ್ಯುನಿಸ್ಟ ಪಕ್ಷವು ಅನುಸರಿಸುತ್ತಿರುವ ಧೋರಣೆಯು ನಮ್ಮ ಧೋರಣಕ್ಕೆ ವಿರೋಧವಾಗಿದೆ. ರಾಷ್ಟ್ರದಲ್ಲಿ ಗೊಂದಲವೆಬ್ಬಿಸಿ ಅಶಾಂತಿಯನ್ನು ಹುಟ್ಟಿಸಿ ಸರಕಾರವನ್ನು ನಿರ್ಬಲಗೊಳಿಸುವದೇ ಅವರ ಉದ್ದೇಶವಾಗಿದೆ. ಕಮ್ಯುನಿಸ್ಟರು ಮೊನ್ನೆ ನೆಟ್ಟ ಸ್ವಾತಂತ್ರ್ಯ ಸಸಿಯನ್ನು ಕಿತ್ತು ಹಾಕುವ ರಾಷ್ಟ್ರದ ವೈರಿಗಳಾಗಿದ್ದಾರೆ.

ಮೂವರ ಮರಣ

ಎಚ್ಚರಿಕೆ!

ವಿದ್ಯುತ್ಸ್ತಂಭಗಳ ಮೇಲಿನ ತಂತಿ ಮುಟ್ಟಬೇಡಿರಿ.

ಮೈಸೂರು ಭಾಗದಿಂದ ಕೂಡ್ಲಿಗಿ ಮಾರ್ಗವಾಗಿ ಸದ್ಯಕ್ಕೆ ಹಗರಿಬೊಮ್ಮನಹಳ್ಳಿ ವರೆಗೆ ಬಂದಿರುವ ವಿದ್ಯುತ್ ಲೈನಿನ ತಂತಿಗಳನ್ನು ಕೌತೂಹಲ ಪರನಾಗಿ ದನ ಕಾಯುವ ಹುಡುಗನೊಬ್ಬನು ಹಗರಿಬೊಮ್ಮನಹಳ್ಳಿ ಹತ್ತಿರ ಮುಟ್ಟಿ ತಕ್ಷಣವೇ ಸತ್ತುಬಿದ್ದನು. ಹಾಗೆಯೇ ಆ ಪ್ರದೇಶದಲ್ಲಿ ತಂತಿ ಮುಟ್ಟಿದ ಮತ್ತಿರ್ವರ ಮರಣವಾಯಿತೆಂದು ವಾರ್ತೆ ಬಂದಿದೆ. ಸಂಬಂಧಿಸಿದ ಹಳ್ಳಿಗಳ ಗ್ರಾಮಾಧಿಕಾರಿಗಳು ಈ ಅಪಾಯವನ್ನು ಕುರಿತು ಡಾಂಡಾಂ ಮೂಲಕ ಎಚ್ಚರಿಸಬೇಕು.

ಮದ್ರಾಸ್ ಮಂತ್ರಿಗಳ ಮೇಲೆ ಆಪಾದನೆ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಶಂಕರರಾವ್ ದೇವರು ಮದ್ರಾಸ ಮಂತ್ರಿಗಳ ಮೇಲಿನ ಆಪಾದನೆ ವಿಚಾರಿಸುತ್ತಿರುವರು. ಆದರೆ ಆಪಾದನೆ ಮಾಡಿದವರಿಗೆ ಮಂತ್ರಿಗಳು ಬದಲುತ್ತರ ಏನು ಕೊಟ್ಟಿರುವರೆಂಬುದನ್ನು ತಿಳಿಸಿಲ್ಲವಂತೆ. ಇದು ವಿಚಿತ್ರವಾಗಿದೆ.

ಮಾವೋನು ರಶಿಯಾದ ಹಾದಿ ತುಳಿಯಲಾರನೇ?

ಲೇಖಕರು: — ಲುಯಿ ಫಿಶರ.

ಚೀನದಲ್ಲಿ ಕಮ್ಯುನಿಸ್ಟರ ವಿಜಯವು ವಿಶ್ವದ ಐತಿಹಾಸಿಕ ಘಟನೆಯನ್ನು ಪೂರ್ವಡಿಸಿದ್ದು, ೧೯೧೭ನೇ ನವಂಬರದಲ್ಲಾದ ರಶಿಯಾದ ಕ್ರಾಂತಿಯನ್ನು ನೆನಪಿಗೆ ತಂದು ಕೊಡುತ್ತದೆ. ಇನ್ನು ಮುಂದೆ ೪೦ ಕೋಟಿ ಜನ ಭಾಂಡವಲಶಾಹೀ ವಿರೋಧಿ ರಾಜ್ಯದಲ್ಲಿ ಕಾಲಹಾಕುವರು. ಯುರೋಪದಲ್ಲಿನ ಸೋವಿಯೆಟ್ ರಾಜ್ಯವನ್ನು ಕೂಡಿಸಿದರೆ ಪೃಥ್ವಿಯ ಮೂರರಲ್ಲೊಂದು ಪಾಲು ಜನ ಕಮ್ಯುನಿಸ್ಟ ರಾಜ್ಯದಲ್ಲಾಗುವರು. ಪಾಶ್ಚಿಮಾತ್ಯ ನಾಗರಿಕರು ಹಾಗೂ ರಾಜಕಾರಣ ಪಟುಗಳು ಈ ಗಂಭೀರ ವಿಷಯವನ್ನು ತೀವ್ರ ಆಲೋಚಿಸುವದುತ್ತಮ. ಪ್ರಜಾಪ್ರಭುತ್ವದ ಕರೆನ್ಸಕಿ ಹಾಗೂ ಝಾರಶಾಹೀ ರಾಜ್ಯದ ದುರ್ಬಲತೆಯಿಂದ ಬೋಲ್ಶೆವಿಜಂ ಹುಟ್ಟಿತು. ಹಾಗೆಯೇ ಜ. ಚಿಯಾಂಗ ಕೈ ಶೇಕರ ಅಪಜಯವೇ ಚೀನದ ಕಮ್ಯುನಿಸ್ಟರ ಯಶಕ್ಕೆ ಕಾರಣವಾಗಿದೆಯೆಂದು ಜಾಗತಿಕರಂಗದಲ್ಲಿ ಖ್ಯಾತಿವೆತ್ತ ಪ್ರಕೃತ ಲೇಖಕರು ಕೃತಪಡಿಸಿದ್ದಾರೆ

ಕ್ಯಾಂಟನದಲ್ಲಿಯ ವ್ಯಾಂಪೋ ಸೈನಿಕ ಶಿಕ್ಷಣಾಲಯದ ತರುಣ ಸೇನಾನಿಯಾದ ಚಿಯಾಂಗನು ೧೯೨೬ ನೇ ಇಸ್ವಿಯಿಂದ ಪ್ರಸಿದ್ಧಿ ಪಡೆಯ ಹತ್ತಿದನು. ಚೀನದ ಭಾಗ್ಯವಿಧಾತನಾದ ಡಾ. ಸನ್ ಯತ್ ಸೇನರ ಅಧೀನ ಚೀನದ ಜನತೆಯ ಹಿತ ಮಾಡುವ ವಿಶ್ವಾಸದಿಂದ ದೇಶದ ಬಹು ಭಾಗವನ್ನು ಗೆದ್ದುಕೊಂಡನು. ಆ ನಂಬಿಗೆಯನ್ನು ಉಲ್ಲಂಘಿಸಿ ಆಶ್ವಾಸನವನ್ನು ಮುರಿದುದರ ಫಲವಾಗಿ ಅವನಿಗಿಂದು ಸೋಲು.

ಚಿಯಾಂಗರು ೨೮ ವರುಷದ ಅವ್ಯಾಹತಯಾದವೀ ಯುದ್ಧ (೧೯೩೧ ನೇ ಸಪ್ಟಂಬರ ೧೮ರಲ್ಲಿ ಜಪಾನು ಮುಕಡೇನ ಆಕ್ರಮಿಸಿದಂದಿನಿಂದ ೧೯೪೫ ರಲ್ಲಿ ಟೋಕಿಯೋದ ಶರಣಾಗತಿಯ ವರೆಗೆ ಮತ್ತು ನಿಪ್ಪೋನಿಯ ಸೈನಿಕರ ಚೀನದ ದೊಡ್ಡ ತುಕುಡಿಗಳನ್ನು ಹಿಡಿದುದು) ದಿಂದ ಅತಿ ವೆಚ್ಚದ ಸೈನಿಕ ಚಟುವಟಿಕೆ ನಡೆಯಿಸಬೇಕಾಗಿ ಬಂತು, ಎಂದು ವಾದಿಸಬಹುದು. ೧೯೪೫ ಲ್ಲಿ ಯಾಲ್ಟಾ ಪರಿಷತ್ತಿನಲ್ಲಿ ಪ್ರೆ. ರೂಝವೆಲ್ಟ ಹಾಗೂ ಮುಖ್ಯ ಮಂತ್ರಿ ವಿ. ಚರ್ಚಿಲ್‌ರು ಜ. ಸ್ಟಾಲಿನರ ಇಚ್ಛೆಯ ಮೇರೆಗೆ ರಶಿಯಾಕ್ಕೆ ಚೀನದಲ್ಲಿಯ ಪೋರ್ಟ ಆರ್ಥರ ಎಂಬ ಬಂದರ ದರಾಯನ್‌ದಲ್ಲಿ ವಿಶೇಷ ಸವಲತ್ತುಗಳು, ಮಂಚೂರಿಯಾದ ರೇಲ್ವೆಮಾರ್ಗದ ನಿಯಂತ್ರಣವನ್ನು ಬಿಟ್ಟುಕೊಡಲು ಚೀನಕ್ಕೆ ಒತ್ತಾಯಪಡಿಸಿದರು, ಕೊಡಿಸಿಯೂ ಬಿಟ್ಟರು ಎಂಬುದು ನಿಜ. ಚಿಯಾಂಗರ ಈ ದೂರುಗಳು ನ್ಯಾಯಸಮ್ಮತ ಆದರೆ ರಾಜಕಾರಣವು ತಪ್ಪುಗಳನ್ನು ಮನ್ನಿಸುವದಿಲ್ಲ.

ಅಮೇರಿಕೆಯ ಸಹಾಯ

ಬಹು ಜನ ಚೀನೀಯರು ಅಮೇರಿಕೆಯ ಸರಕಾರವನ್ನು ತೆಗಳುತ್ತಾರೆ. ಅದರಂತೆ ಅನೇಕ ಅಮೇರಿಕನ್ನರು, ವಿಶೇಷವಾಗಿ ರಿಪಬ್ಲಿಕನರು ಚಿಯಾಂಗರಿಗೆ ಅತ್ಯಲ್ಪ ಸಹಾಯಮಾಡಿ, ಕೆಳನೂಕುವ ಪ್ರೆ. ಟ್ರೂಮನ್ನರ ಆಡಳಿತೆಯನ್ನು ದೂರುತ್ತಾರೆ. ನಿಜವಾಗಿ ಅಮೇರಿಕೆ ತಾನು ಸಹಾಯಮಾಡಿದೆ. ಪೂರೈಸಬೇಕೆಂದ ಆದೆಷ್ಟೋ ಮಾಲು ಚೀನವನ್ನೇ ಸೇರಿಲ್ಲ. ಅಮೇರಿಕೆಯಿಂದ ಚೀನಕ್ಕೆ ದೊರೆತ ಮಾಲು ರಾಷ್ಟ್ರೀಯ ಸೈನಿಕರ ಸೋಲಿನ ಪರಿಣಾಮವಾಗಿಯೋ ಅಥವಾ ಕಳ್ಳ ವ್ಯಾಪಾರದಿಂದಲೋ ಕಮ್ಯುನಿಸ್ಟರ ಬಾಯಿಗೆ ಬಿದ್ದುದೇ ಹೆಚ್ಚು. ಮಾವೋ-ತ್ಸೆ-ಟುಂಗ ಹಾಗೂ ಕಮ್ಯುನಿಸ್ಟ ಸೈನ್ಯಕ್ಕೆ ಮಾಸ್ಕೋ ಸಹಾಯ ಮಾಡಿರುವದಕ್ಕಿಂತ ಹೆಚ್ಚಿಗೆ ಅಮೇರಿಕೆ ಚಿಯಾಂಗರಿಗೆ ಸಹಾಯ ಮಾಡಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಹೋರಾಟದ ಅಮೇರಿಕೆಯ ಸೇನಾನಿಗಳ ವರದಿಯನ್ವಯ ಚಿಯಾಂಗ ಕೈಶೇಕರ ರಾಜ್ಯದ ಜನಪ್ರಿಯತೆ ಮತ್ತು ಸಾಮರ್ಥ್ಯದ ಬಗೆಗೆ ವಾಶಿಂಗ್ಟನದ ವಿಶ್ವಾಸ ಕಡಿಮೆಯಾಯಿತು. ಚೀನದಲ್ಲಿ ಅಮೇರಿಕೆಯ ಪತ್ರಿಕಾ ಪ್ರತಿನಿಧಿಗಳ ವರದಿಗಳೆಲ್ಲ ಚೀನದ ಕಮ್ಯುನಿಸ್ಟರು ಸಮಸಾಧಾರಣವಾದಿಗಳೆಂಬ ಭಾವನೆ ಹುಟ್ಟಿಸಿದರು. ಇವೆಲ್ಲ ಘಟನೆಗಳ ಜೊತೆಗೆ ಅಮೇರಿಕೆಯ ಯುದ್ಧಾನಂತರ ಭಾವನೆ ಚೀನದಲ್ಲಿಯ ಯಾದವೀ ಕಲಹ ಮುಗಿಯದ ಲಕ್ಷಣ ಕಂಡು ಶಾಂತಿ ನಿರ್ಣಯವನ್ನು ಅರಸಲು ಹಚ್ಚಿದವು. ಅದರ ಫಲವಾಗಿ ೧೯೪೬ರಲ್ಲಿ ಜ. ಜಾರ್ಜ ಸಿ ಮಾರ್ಶಲರ ಶಿಷ್ಟಮಂಡಲ ಕಾಣಿಸಿತು.

ಚೀನದಲ್ಲಿ ಮಾರ್ಶಲರ ಒಂದು ವರ್ಷವು ನಿರರ್ಥಕವಾಯಿತು. ಅಂತರಿಕ ತಿಕ್ಕಾಟವು ರಾಷ್ಟ್ರವನ್ನು ಒಂದು ಗತಿಯತ್ತ ಸಾಗಿಸಿ ಅತಿರೇಕವನ್ನು ಒಪ್ಪಂದದೆಡೆ ತಿರುಗಿಸುವ ಮಧ್ಯಮಾರ್ಗವನ್ನು ಅಳಿಸಿ ಬಿಡುತ್ತದೆ. ಕುಮಿಂಟಾಂಗ ಹಾಗೂ ಕಮ್ಯುನಿಸ್ಟರ ಸಮ್ಮಿಶ್ರ ಸರಕಾರ ಸ್ಥಾಪಿಸಬೇಕೆಂಬ ಮಾರ್ಶಲರ ಗುರಿಯನ್ನು ಇಬ್ಬರೂ ಅಷ್ಟೇ ತೀವ್ರವಾಗಿ ವಿರೋಧಿಸಿದರು. ಅಲ್ಲದೆ ಕುಮಿಂಟಾಂಗ ಮುಖಂಡರು ಅಮೇರಿಕೆಯು ಕಮ್ಯುನಿಸ್ಟ ಕಟ್ಟರ ವಿರೋಧಿಯಿದ್ದು, ತಮ್ಮನ್ನು ಬಿಟ್ಟು ಕಮ್ಯುನಿಸ್ಟ ವಿಜಯಕ್ಕೆ ಮಾರ್ಗ ಮಾಡಿಕೊಡುವದಿಲ್ಲವೆಂದು ನಂಬಿದ್ದರು. ಆದಕೆ ಟ್ರೂಮನ್ನರ ಧೋರಣೆ ಹೀಗಿದೆ.

ಅಮೇರಿಕೆಯ ಸರಕಾರವು ಸದ್ಯಕ್ಕೆ ಚೀನದ ವಿಷಯದಲ್ಲಿ ತಡೆದು ನೋಡೋಣವೆಂಬ ಧೋರಣೆ ವಹಿಸುವದು. ವಾಶಿಂಗ್ಟನ್ನವು ದಕ್ಷಿಣ ಅಥವಾ ಪಶ್ಚಿಮ ಚೀನದ ಭಾಗದಲ್ಲಿ ಪ್ರಜಾಪ್ರಭುತ್ವ ಸರಕಾರಕ್ಕೆ ನಿರ್ದಿಷ್ಟ ಸಹಾಯ ಸಲ್ಲಿಸಬಹುದು. ಅಲ್ಲಿಯ ಸಾರಿಗೆ ಸಂಪರ್ಕ ಹಾಗೂ ಇನ್ನಿತರ ಅಡಚಣೆಯ ಮೂಲಕ ಕಮ್ಯುನಿಸ್ಟರು ಭೇದಿಸಿಲ್ಲ. ಆದರೆ ಅದಕ್ಕೂ ಡಚ್ಚಿನ ಒತ್ತಾಸೆ ಬರುವ ಸಂಭವವಿದೆ

ಚೀನದ ದೈವಕ್ಕೆ ವ್ಯತಿರಿಕ್ತವಾಗಿ ವಾಶಿಂಗ್ಟನ ಉಳಿಯಬಾರದು. ಧಾರ್ಮಿಕ, ಆರ್ಥಿಕ ಭಾವನೆ ಮತ್ತು ವಿದೇಶ ರಾಜಕಾರಣದಲ್ಲಿ ಚೀನದ ಸ್ಥಾನಮಾನದ ಬಗೆಗೆ ಅಮೇರಿಕೆಯು ಬಹಳ ಆಸ್ಥೆ ವಹಿಸಿದೆ. ಚೀನದ ಪ್ರಗಾಢಸ್ಥಿತ್ಯಂತರಗಳು ಜಾಗತಿಕ ರಾಜಕಾರಣದ ಮೇಲೆ ವಿಶೇಷ ಪ್ರಭಾವ ಬೀಳುವದೆಂಬುದನ್ನು ಅಲ್ಲಗಳೆಯಲಾರರು

ಚಿಯಾಂಗರ ದುರ್ಬಲತೆ

ಮೂರು ಮುಖ್ಯ ವಿಷಯಗಳು ಅಮೇರಿಕೆಯನ್ನು ತಡೆದು ನಿಲ್ಲಿಸಿವೆ. ಚೀನದಲ್ಲಿ ಪ್ರಜಾಪ್ರಭುತ್ವದ ವಿಜಯ ದೊರಕಿಸಲು ಚಿಯಾಂಗರ ರಾಜಕೀಯ ಹಾಗೂ ಸಾಮಾಜಿಕ ದಿವಾಳಿಗಿರಿ, ಸೈನಿಕರಲ್ಲಿ ಒಕ್ಕಟ್ಟಿಲ್ಲದಿರುವದರಿಂದಲೇ ಕಮ್ಯುನಿಸ್ಟರು ಪ್ರಬಲರಾದರು. ಇಲ್ಲವಾದರೆ ಅವರ ಯಶಸ್ಸು ಶಕ್ಯವಾಗುತ್ತಿರಲೇ ಇಲ್ಲ. ಚೀನದಲ್ಲಿ ಅಮೇರಿಕೆಯ ಸೈನ್ಯವನ್ನು ಕಳಿಸಲು ಸ್ವತಃ ಅಮೇರಿಕನ್ನರೇ ವಿರೋಧಿಸುತ್ತಾರೆ. ಮೂರನೆಯದಾಗಿ ಚೀನದ ಕಮ್ಯುನಿಸ್ಟರು ಮಾಸ್ಕೋ ಬಿಟ್ಟು ಸ್ವತಂತ್ರ ಧೋರಣೆ ವಹಿಸುವ ಆಶೆಯಿದೆ. ಚೀನದ ಕಮ್ಯುನಿಸ್ಟರೆಲ್ಲ ಬಹು ಭಾಗವನ್ನು ಆಕ್ರಮಿಸಿರುವದರಿಂದ ಮೂರನೆಯ ವಿಷಯದತ್ತ ಎಲ್ಲ ಚಿತ್ರವೆನಿಸಿದೆ.

ಯುಗೋಸ್ಲಾವದ ಮಾರ್ಶಲ ಟಿಟೋನ ಸ್ವಾಮಿದ್ರೋಹವು ಎಲ್ಲ ಕಡೆಗೂ ಹೆಚ್ಚಿನ ಪ್ರಭಾವ ಬೀರಿದೆ. ಸೋವಿಯೆಟ್ ಸಾಮ್ರಾಜ್ಯದ ಹೊರಗೆಲ್ಲ ಮಾರ್ಶಲ ಟಿಟೋ ಕಟ್ಟಾ ಕಮ್ಯುನಿಸ್ಟನೆಂದು ಪರಿಗಣಿಸಲಾಗಿದೆ. ಅವರೂ ಮಾಸ್ಕೋದ ಸಂಬಂಧ ಕಡಿದುಕೊಂಡು ಬಹುಶಃ ಮಾವೋನು ಹಾಗೆಯೇ ಮಾಡಬಹುದು. ಹೇಗೆಂದರೂ ಕ್ರಿಶ್ಚಿಯನ್ ರಾಷ್ಟ್ರಗಳೆಲ್ಲ ಒಂದನ್ನೊಂದು ತಿರಸ್ಕರಿಸಿ, ಹೊಡೆದಾಡಿ ಗಾಯಗೊಳ್ಳುತ್ತಿವೆ: ಕಮ್ಯುನಿಸ್ಟ ರಾಷ್ಟ್ರಗಳೂ ಹಾಗೇಕೆ ಮಾಡಬಾರದು?

ಚೀನದ ಕಮ್ಯುನಿಸ್ಟರು ತಮ್ಮ ಅಧೀನವಿರುವ ಪ್ರದೇಶದಲ್ಲಿ ಏಕಪಕ್ಷೀಯ ಸತ್ತಾಧಿಕಾರ ನಡೆಯಿಸಿದ್ದಾರೆ. ಅದರಂತೆ ಟಿಟೋ

ನು ಕೂಡ, ಚೀನದ ಕಮ್ಯುನಿಸ್ಟರು ತಮ್ಮ ವಿದೇಶ ಧೋರಣೆಯನ್ನು ಮಾಸ್ಕೋ ಅನುಗುಣವಾಗಿ ಹೊರಡಿಸಿ ಪಶ್ಚಿಮದ ಯುದ್ಧ ಪ್ರಚೋದಕರನ್ನು ಜರಿದಿದ್ದಾರೆ. ಅದರಂತೆ ಟಿಟೋ ಆದರೂ ಸ್ಟಾಲಿನ್ ಹಾಗೂ ಟಿಟೋನನ ನಡುವೆ ಹಬ್ಬಿದ ಭಿನ್ನಾಭಿಪ್ರಾಯದ ಕೊಡಲು ಹೆಚ್ಚು ಅಗಲವಾಗುತ್ತಲೇ ನಡೆದಿದೆ. ಸ್ಟಾಲಿನ್ನರು ರಶಿಯಾದ ಟಿಟೋ ಆದರೆ, ಟಿಟೋನು ಯುಗೋಸ್ಲಾವದ ಸ್ಟಾಲಿನನಾಗಿದ್ದಾನೆ. ಇಬ್ಬರೂ ಸಂಕುಚಿತ ರಾಷ್ಟ್ರೀಯ ಭಾವನೆಯುಳ್ಳವರಾಗಿ, ಅಂತರರಾಷ್ಟ್ರೀಯ ಪ್ರತಿಕ್ರಿಯೆಯನ್ನು ಬಿಟ್ಟುಬಿಡತ್ತಾರೆ. ಅದ್ದರಿಂದ ಇಬ್ಬರದೂ ತಿಕ್ಕಾಟ.

ಮಾವೋನು ಚೀನದ ಟಿಟೋನೇ? ಹಾಗಿದ್ದರೆ ಇತಿಹಾಸದಲ್ಲಿ ಬಹು ಬದಲಾವಣೆಯಾಗುವದು.

ಮಾಸ್ಕೋದ ಸಂಬಂಧ

ಮಾಸ್ಕೋದ ಸಂಬಂಧವಿಟ್ಟುಕೊಂಡ ಕಮ್ಯುನಿಸ್ಟ ಸತ್ತೆ ನಡೆಯುವ ದೇಶಗಳಲ್ಲಿ ಬೊಲ್ಶೆವಿಕ್ ಕ್ರಾಂತಿಯ ಪ್ರಚಾರವೇ ದೊಡ್ಡದೊಂದು ಸಾಧನವಾಗಿದೆ. ಆದರೆ ಪೂರ್ವ ಯುರೋಪ ರಾಷ್ಟ್ರಗಳಲ್ಲಿಯ ಕಮ್ಯುನಿಸ್ಟ ರಾಜ್ಯಗಳಲ್ಲೆಲ್ಲ ರಶಿಯವು ಪೇಚಿನಲ್ಲಿ ಸಿಗಿಸುವದಾಗಿದೆ. ಯಾಕಂದರೆ ತಾನು ಕೊಡುವದಕ್ಕಿಂತ ಹೆಚ್ಚಾಗಿ ತೆಗೆದುಕೊಂಡು, ತನ್ನ ಪ್ರಭುತ್ವವನ್ನು ಬೆಳೆಸುವ ಇಚ್ಛೆದೋರಿದೆ. ಕಮ್ಯುನಿಸ್ಟರ ವರ್ಚಸಿನ ದೇಶಗಳಲ್ಲಿ ರಶಿಯವು ಉಪಾರತಮವಾದಿಯಂತೆ ಚಿತ್ರಿಸಲಾಗಿದೆ. ಪೂರ್ವ ಯುರೋಪದ ಪ್ರತಿಯೊಬ್ಬನೂ ಈ ವೇಷದಲ್ಲೇ ಕಾಣುತ್ತಾನೆ.

ಕಮ್ಯುನಿಸ್ಟ ಚೀನವು ಯಂತ್ರೋಪಕರಣ, ಕಚ್ಚಾ ಮಾಲು ಹಾಗೂ ಇನ್ನಿತರ ಸರಕುಗಳನ್ನು ರಶಿಯಾದಿಂದ ಬೇಡುತ್ತದೆ. ಯುದ್ಧೋತ್ತರ ಪುನರ್ರಚನೆಯಲ್ಲಿ ತೊಡಗಿದ ರಶಿಯವು ಕಮ್ಯುನಿಸ್ಟ ಚೀನದೊಡನೆ ಆರ್ಥಿಕ ಸಂಬಂಧವಿಟ್ಟುಕೊಳ್ಳುವದು ಫಲಕಾರಿಯಾಗದು. ಅಲ್ಲದೆ ಈಗಾಗಲೇ ಮಂಚೂರಿಯಾದಲ್ಲಿ ಸಿಕ್ಕ ಸವಲತ್ತು ಸಿಂಕಿಯಾಂಗದಲ್ಲಿ ದೊರೆತ ಅಸಮರ್ಥ ಸಂರಕ್ಷಣೆಯು ಮಾಸ್ಕೋ ಹಾಗೂ ಮಾವೋನ ನಡುವೆ ತಿಕ್ಕಾಟವನ್ನು ಹುಟ್ಟಿಸಬಹುದು. ಚೀನ ರಾಷ್ಟ್ರೀಯ ಸರಕಾರದೊಡನಾದ ಮಾತುಕತೆಯ ಮೇರೆಗೆ ಮಂಚೂರಿಯದ ಮತ್ತು ಸಿಂಕಿಯಾಂಗದಲ್ಲಿ ರಶಿಯವು ಸ್ಥಾನಾಪನ್ನವಾಗಿದೆ. ಕಮ್ಯುನಿಸ್ಟ ಚೀನವು ಬಲವಾಗಿ ಮತ್ತು ಕೇಂದ್ರೀಕರಣದ ದೃಷ್ಟಿಯಿಂದ ರಶಿಯಾದ ಈ ಒಳಸೋಸುವ ಕಾರ್ಯವನ್ನು ಬಿಡಿಸಲು ಶಕ್ಯವಾಗುವದೋ? ರಶಿಯಾಕ್ಕೆ ಅಬಲ ಕುಮಿಂಟಾಂಗಕ್ಕಿಂತ ಈ ಬಲಯುತ ಕಮ್ಯುನಿಸ್ಟ ಚೀನವು ಹೆಚ್ಚು ಅಸಹ್ಯಕರವಾಗಬಹುದು.

ಭವಿಷ್ಯದ ಕೀಲಿ

ಮಂಚೂರಿಯಾವು ಮುಂದಿನ ಭವಿಷ್ಯದ ಕೀಲಿಯಾಗಿದೆ. ಅದೀಗ ರಶಿಯಾದಿಂದ ಮಾಡಲ್ಪಟ್ಟದ್ದರೂ, ಇನ್ನೂ ದೊಡ್ಡ ಔದ್ಯೋಗಿಕ ಕೇಂದ್ರವಾಗಿದೆ. 3 ಕೋಟಿ ಜನ ಬಲದ ಈ ನಾಡಿನ ಮೇಲೆ ಕಮ್ಯುನಿಸ್ಟರ ಆರ್ಥಿಕ ಪುನರ್ರಚನೆಯಾಗಬೇಕು. ಮಾವೋನು ರಶಿಯಾದೊಡನೆ ಸ್ನೇಹಿತನಾದರೆ ಮಂಚೂರಿಯಾದಲ್ಲಿ ತೊಂದರೆ ಬಂದು, ಚೀನದ ಆರ್ಥಿಕ ದುರಂತವನ್ನು ಸರಿಪಡಿಸುವದರಲ್ಲಿ ಹೆಚ್ಚು ಕೊಡಲು ಬೀಳುವುದು. ಮಂಚೂರಿಯಾದಲ್ಲಿ ವರ್ಚಸ್ಸಿರುವವರೆಗೆ ಕೆನೆಸ್ ವು ಚೀನವು ಆರ್ಥಿಕ ಟಿಟೋ ಆಗುವದು. ಇದು ಮಾವೋನನ್ನು ಸಿಟ್ಟಿಗೆಬ್ಬಿಸಬಹುದಾದರೂ, ಅದು ಅವನನ್ನು ಅಧೀನಯುತನನ್ನಾಗಿ ಮಾಡಬಹುದು.

ಇನ್ನೊಂದು ದೃಷ್ಟಿಯಿಂದ ಹೇಳುವದಾದರೆ ಮಂಚೂರಿಯಾವು ಮಾವೋನಿಗೆ ಟಿಟೋನನ್ನಾಗಿಸಲು ಬಿಡಲಿಕ್ಕಿಲ್ಲ. ಸಹಕರಿಸಿದ ಮಾವೋಸಿಂಕಿ ಯಾಂಗಿಗೂ ಅಷ್ಟೇ ಬೆಲೆಕೊಡಬೇಕಾಗಿ ಬರಬಹುದು.

ಚೀನದ ಕಮ್ಯುನಿಸ್ಟರು ತಮ್ಮ ದೇಶದ ಪುನರ್ರಚನೆಯ ಕಾಲಕ್ಕೆ ಮಾಸ್ಕೋದೊಡನೆ ಸಂಬಂಧವಿಟ್ಟುಕೊಳ್ಳುವರೋ ಅಥವಾ ಕಡಿದುಕೊಳ್ಳುವರೋ ಎಂಬುದನ್ನು ನಿರ್ಣಯಿಸಲು ಕಾಲಾವಕಾಶಬೇಕು. ರಶಿಯಾದ ಮಾದರಿಯ ಮೇಲೆ ರಚಿಸುವರೋ ಜಾಗತಿಕ ರಾಜಕಾರಣ ಒಂದು ಅಂಗವೆಂದು ರಚಿಸುವರೋ ಹೇಳಲು ಇನ್ನೂ ಕೆಲ ವರುಷಗಳು ಬೇಕು. ಚೀನದಲ್ಲಿಯ ಅಂತರಿಕ ಕಲಹ ತಗ್ಗಬಹುದೇ ಹೊರತು ಮುಗಿಯುವ ಯೋಗವಿಲ್ಲ. ಪ್ರಾಂತಿಕ ಯುದ್ಧ ಮುಖಂಡರನ್ನೂ ಉತ್ತರ ಹಾಗೂ ಪಶ್ಚಿಮ ಚೀನದವರು ದಕ್ಷಿಣ ಚೀನದಲ್ಲಿಯಂತೆ ತಮ್ಮ ನೀತಿಯನ್ನು ವರ್ಜಿಸಿಲ್ಲ.

ಲಂಡನ ಹಾಗೂ ವಾಶಿಂಗ್ಟನದಲ್ಲಿ ಚೀನದ ಬಗೆಗೆ ಶಾಂತ ಹಾಗೂ ತಾತ್ಪೂರ್ತಿಕ ದೃಷ್ಟಿ ಕೋನವಿಟ್ಟುಕೊಂಡಂತಿದೆ. ಚೀನದ ಕಮ್ಯುನಿಸ್ಟರು ಯಶಸ್ವಿಯಾದರೂ ಜಾಗತಿಕ ಸಮತೋಲ ಶಕ್ತಿ ತಿರುವು ಮುರುವಾಗದೆಂದು ನಿರೀಕ್ಷಿಸಿದ್ದಾರೆ.

ಏಶಿಯಾ ಹಾಗೂ ಅಮೇರಿಕೆ

ಚೀನದಲ್ಲಿ ಪಾಶ್ಚಿಮಾತ್ಯದ ವರ್ಚಸ್ಸು ಕಡಿಮೆ ಅಥವಾ ಸೊನ್ನೆಯಾಗಬಹುದು. ಆದರೆ ಪೂರ್ವ ಯುರೋಪದ ಪೋಲಂಡ ರುಮಾನಿಯಾ, ಹಂಗರಿಯನ್ನು ರಶಿಯಾದ ಕಪಿಮುಷ್ಟಿಯಿಂದ ಬಿಡಿಸಲು ಪಶ್ಚಿಮದವರು ಯುದ್ಧಕ್ಕಿಳಿಸಲಾರರು. ಫ್ರಾನ್ಸ್, ಇಟಲಿ ಗ್ರಿಸ ಟರ್ಕಿನ ಮುಂತಾದುವುಗಳಿಗೆ ಅಮೇರಿಕೆಯು ಸಹಾಯ ಒದಗಿಸಿದಂತೆ ಏಶಿಯಾಕ್ಕೂ ಅದೇತೆರನಾಗಿ ಒದಗಿಸುವದೋ? ಇದೇ ಅಮೇರಿಕೆಯ ಸರಕಾರ ಹಾಗೂ ವ್ಹಾಯಟ ಹೌಸಿನಲ್ಲಿ ಗೌಪ್ಯವಾಗಿ ಚರ್ಚಿತವಾಗುತ್ತಲಿವೆ. ಮಾವೋ ಟಿಟೋನಂತಾಗಲಿ ಅಥವಾ ಬಿಡಲಿ, ಒಂದು ವಿಷಯ ಮಾತ್ರ ಸ್ಪಷ್ಟವಾಗಿದೆ. ಚೀನದಲ್ಲಿಯ ಅವನ ಪ್ರಯತ್ನವು, ಇಂಡೋಚೀನ, ಮಲಯಾ, ಸಯಾಮ, ಇಂಡೋನೇಶಿಯಾ, ಮತ್ತು ವಿಶೇಷವಾಗಿ ಬರ್ಮಾದಲ್ಲಿ ಪ್ರತಿಕ್ರಿಯೆಯನ್ನು ಮಾಡಿವೆ.

ಚೀನದ ಕಮ್ಯುನಿಸ್ಟರ ಪ್ರಗತಿಯು ಆಗ್ನೇಯಏಶಿಯಾಕ್ಕೆ ಅಮೇರಿಕೆಯು ಏನಾದರೂ ಮಾಡಲು ಒತ್ತಾಯ ಪಡಿಸುತ್ತದೆ. ಅಥವಾ ಮಂಚೂರಿಯಾದಿಂದ ಬಂಗಾಲ ಉಪಸಾಗರದವರೆಗೂ ಕಮ್ಯುನಿಸ್ಟ ಚಟುವಟಿಕೆ ಹಬ್ಬಗೊಡಬೇಕಾಗಿದೆ.

ಯುರೋಪು ವಾಶಿಂಗ್ಟನದ ಉತ್ಸಾಹವನ್ನು ಹಿಡಿದಿದೆ. ಈ ಕ್ಷಣ ವಿದೇಶ ಕಾರ್ಯದರ್ಶಿ ಆಚೆಸನರ ಕುತ್ತಿಗೆಗೆ ಜರ್ಮನ ಸಮಸ್ಯೆ ಗಂಟು ಬಿದ್ದಿದೆ. ಯಾವರೂ ಈ ಬೇಸಿಗೆಯಲ್ಲಿ ಏಶಿಯಾದ ವಿಷಯಗಳತ್ತ ತಮ್ಮ ಗಮನವನ್ನೀಯುವರು. ಅವರಿಗಾಗ ಅತಿ ಜಾಣ ಉಪದೇಶ ಬೇಕಾಗುವದು.

....)0(..

ಭಾರತದಲ್ಲಿ ಚಂದ್ರನಗರದ ವಿಲಯನ

ಕಲ್ಕತ್ತೆಗೆ ಸಮೀಪದಲ್ಲಿರುವ ಫ್ರೆಂಚರ ಸ್ವಾಮಿತ್ವವಾದ ಚಂದ್ರನಗರವು ಭಾರತದಲ್ಲಿ ಸೇರಬೇಕೋ-ಫ್ರಾನ್ಸದ ವಸಾಹತ ಭಾಗವಾಗುಳಿಯಬೇಕೋ ಎಂಬುದನ್ನು ನಿರ್ಣಯಿಸಲು ಕಳೆದ ರವಿವಾರ ಮತಗಣನೆಯು ಅತ್ಯಂತ ಶಾಂತರೀತಿಯಲ್ಲಿ ನಡೆಯಿತು. ಮತಗಣನೆಯಲ್ಲಿ ೭೪೬೩ ಜನರು ಅನುಕೂಲವಾಗಿಯೂ ೧೧೪ ಮತಗಳು ವಿರೋಧವಾಗಿಯೂ ಬಂದವು.

ಚಂದ್ರನಗರವು ಕಲ್ಕತ್ತೆಯಿಂದ ಇಪ್ಪತ್ತೆರಡು ಮೈಲುಗಳ ಮೇಲಿದ್ದು ಮೂರು ಚೌರಸ್ ಮೈಲು ಕ್ಷೇತ್ರವಿರುವ ಭಾರತದಲ್ಲಿಯ ಫ್ರೆಂಚ ವಸಹಾತು ಇರುವದು. ಇಲ್ಲಿಯ ಜನಸಂಖ್ಯೆಯು ಐವತ್ತು ಸಾವಿರವಿದ್ದು ೧೨ ಸಾವಿರ ಮತದಾರರಿರುವರು. ಇಲ್ಲಿ ಫ್ರೆಂಚರು ೧೬೮೮ ರಿಂದ ನೆಲೆಸಿದ್ದು ನೆಪೋಲಿಯಾನಿಕ್ ಯುದ್ಧವು ಕೊನೆಗೊಂಡನಂತರ, ಎಂದರೆ ೧೮೧೬ ರಿಂದ ಚಂದ್ರನಗರವು ಸಂಪೂರ್ಣ ಫ್ರೆಂಚರ ಸ್ವಾಧೀನದಲ್ಲಿ ಉಳಿಯಿತು.

ಬಿರ್ಲಾ ಭವನ ಪುಣ್ಯಕ್ಷೇತ್ರವಾಗಲಿ

ರಾಷ್ಟ್ರಪಿತ ಮಹಾತ್ಮಾ ಗಾಂಧಿಜಿಯವರು ಮರಣವನ್ನಪ್ಪಿದ ಸ್ಥಳವಾದ ಬಿರ್ಲಾಭವನವನ್ನು ಕ್ಷೇತ್ರಸ್ಥಳವನ್ನಾಗಿ ಮಾರ್ಪಡಿಸಲು ರಾಷ್ಟ್ರಕ್ಕಾಗಿ ಬಿಟ್ಟುಕೊಡಬೇಕೆಂದು ಇಂದು ಕೂಡಿದ್ದ ದಿಲ್ಲಿ ಪ್ರಾಂತಿಕ ರಾಜಕೀಯ ಪರಿಷತ್ತು ತನ್ನೊಂದು ಗೊತ್ತುವಳಿ ಮೂಲಕ ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿ ಮತ್ತು ಗಾಂಧಿ ರಾ. ಸ್ಮಾರಕ ನಿಧಿ ಸಮಿತಿ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರಿಗೆ ಒತ್ತಾಯಪಡಿಸಿದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು, ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ

ಹೆಚ್. ಲಿಂಗಾರೆಡ್ಡಿ ಬಿ. ಎ., ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಉನ್ನತ—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

27—6—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. ' y

JAI HIND.

ನವಭಾರತ

ಬೆಂಗಳೂರಿನ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೪ ಜುಲೈ ೧೯೪೯ | ಸಂಚಿಕೆ ೨೪

ಗೋಡ್ಸೆಗೆ ದಯೆ ತೋರಿಸಬಹುದೇ?

ಪಾಪಿಯನ್ನು ದಂಡಿಸದಿದ್ದರೆ ದೇಶಕ್ಕೆ ದ್ರೋಹ ಬಗೆದಂತಾಗುವದು.

—ಪ್ರಾಡ್

ನಾಡಿನ ಭಾಗ್ಯದೇವತೆಯು ಎದೆಗೆ ಗುಂಡಿಕ್ಕಿ ಆವನೆದೆಯಿಂದ ಚಿಮ್ಮಿದ ರಕ್ತ ಸಿಂಚನೆಯಿಂದ ಕೃತಕೃತ್ಯನೆಂದೆನಿಸಿದ ಭಾರತೀಯರ ಆದೇಕೆ ಜಗತ್ತಿನ ಕಣ್ಣೀರಿನಿಂದ ಅಭಿಷೇಕಿಸಿಕೊಂಡು ನಾಡಿನ ಎದೆಯ ಗುಂಡಿನಿಂದ ಎಂದೂ ಮರೆಯಾಗದಂತಹ ಮಾನವರಕ್ಕಸನಿಗಿಂದು ಜೀವದಾನ ಕೊಡಿಸಲು ಹಿಂದೂ ಮಹಾ ಸಭೆಯು ಹವಣಿಸುತ್ತದೆ ಎಂಬ ಸುದ್ದಿಯನ್ನು ಕೇಳಿದಾಗ, ನನಗೆ ಮರೆತಿದ್ದ ದುಃಖವು ಮರುಕಳಿಸಿತು.

ಯಾರಿಗೆ ದಯೆ ನೀಡಬೇಕು ಅಥವಾ ಯಾರು ದಯೆಯನ್ನು ಯೋಚಿಸಬಹುದು ಎಂಬುವರ ವಿಚಾರವನ್ನು ಹಿಂದೂ ಮಹಾ ಸಭೆಯ ಕಾರ್ಯದರ್ಶಿಗಳು ಒಂದು ನಿಮಿಷ ಮಾಡಿದ್ದರೆ ಈ ಮಹಾ ಕೆಲಸಕ್ಕಾಗಿ ಅಂಬಾಲದ ಜೇಲಿಗೆ ಹೋಗಿ ಗೋಡ್ಸೆಯನ್ನು ಕಾಣುವ ಶ್ರಮವನ್ನು ತೆಗೆದುಕೊಳ್ಳುತ್ತಿರಲಿಲ್ಲ.

ದಯೆ ಎಂಬ ಪವಿತ್ರ ಶಬ್ದದ ಅರ್ಥವು ಸ್ವಲ್ಪ ಮಟ್ಟಿಗಾದರೂ ಗೋಡ್ಸೆಗೆ ಆಗಿದ್ದಲ್ಲಿ ದಯಾಮೂರ್ತಿಯ ನಿಮಗೊಲಿ ಮಾಡುವ ನಿರ್ದಯತನವನ್ನು ತೋರಿಸುತ್ತಿರಲಿಲ್ಲ. ದೇಶಪ್ರೇಮವೆಂಬುವರ ಗಾಳಿಯನ್ನು ಒಂದು ಸಾರಿ ಆಘ್ರಾಣಿಸಿದ್ದರೂ ಸಹ ದೇಶದ ದೇವತೆಯಾದ ಗಾಂಧೀಜಿಯ ಎದೆಗೆ ಗುಂಡಿಕ್ಕುವ ಸಾಹಸ ಈತನಿಗೆ ಬರುತ್ತಿರಲಿಲ್ಲ. ಎಲ್ಲಕ್ಕೂ ಸಿದ್ಧವಾಗಿ ಭೂತ ದಯಾ ದೃಷ್ಟಿಯಿಂದ ದೂರವಾಗಿ ಮಾನತ್ವವನ್ನು ಹೊರತಳ್ಳಿ ಭಾರತದ ಜ್ಯೋತಿಯನ್ನು ಅದೃಶ್ಯವಾಗಿಸಿದ ಈ ನಿರ್ದಯನಿಗೆ ದಯೆ ತೋರಬೇಕೆ? ಯಾವ ದೃಷ್ಟಿಯಿಂದ? ಈ ಸಂದರ್ಭದಲ್ಲಿ ನಮಗೆ ಹೈದರಾಬಾದಿನ ರಕ್ಕಸ ನಾಯಕ ರಜವಿಯು ದೇಶದ್ರೋಹಿಯಲ್ಲ. ದೇಶಪ್ರೇಮಿ ಅವನಿಗೆ ದಯೆ ತೋರಿ ಎಂದು ಅವನ ಬೇಗಂ ಇಟ್ಟ ಮೊರೆ ಜ್ಞಾಪಕಕ್ಕೆ ಬರುವುದು. ಆಕೆಗೆ ನಾವು ಕೊಟ್ಟ ಕಟು ಉದಾರವನ್ನೆ ಗೋಡ್ಸೆಗಾಗಿ ಭಿಕ್ಷೆ ಬೇಡುವ ಹಿಂದೂ ಮಹಾ ಸಭೆಯವರಿಗೂ ಕೊಡಬೇಕಾಗುವುದು.

ಗೋಡ್ಸೆಯಾದರೂ ತಾನು ಗೈದ ಕೃತ್ಯದಿಂದಲೇ ದಯೆಯನ್ನು ಬೇಡುವ ಹೇಡಿಯಲ್ಲವೆಂದು ಕಾಣುವುದು. ಯಾಕೆಂದರೆ ತನ್ನ ಪಾಪಕ್ಕೆ ತಾನೇ ಪಶ್ಚಾತ್ತಾಪ ಪಡದಿರುವ ಈ ಪಾಪ ಪ್ರಿಯನಿಗೆ ದಯೆಯ ಯೋಚನೆ ಹೊಳೆಯುವದಿಲ್ಲ. ಆದ್ದರಿಂದ ಹಿಂದೂ ಮಹಾ ಸಭೆಯು ಈ ಪ್ರಶ್ನೆಯನ್ನು ತಲೆಗೆ ಹಾಕಿಕೊಂಡು ತನ್ನ ಅಸ್ತಿತ್ವಕ್ಕೇ ಕೊಡಲಿ ಪೆಟ್ಟು ಹಾಕಿಕೊಳ್ಳಬಾರದೆಂದು ಸೂಚಿಸುತ್ತೇವೆ.

ಗೋಡ್ಸೆಗೆ ಕ್ಷಮೆ?

ಸದ್ಭಾವ ಸಮಿತಿಗೆ ಪ್ರಯತ್ನ

ವಿದೇಶಿ ಸದ್ಭಾವ ಸಮಿತಿಗಳ ಪ್ರತಿನಿಧಿಗಳು, ಮಹಾತ್ಮರ ಕೊಲೆಗೈದು ಮರಣ ದಂಡನೆಗೆ ಗುರಿಯಾದ ಗೋಡ್ಸೆ ಮತ್ತು ಆಪ್ಟೆ ಇವರಿಗೆ ದಯೆತೋರಲು ಭಾರತ ಸರಕಾರವನ್ನು ಕೇಳುತ್ತಿರುವದಾಗಿ ತಿಳಿದುಬಂದಿದೆ. ಹೈಕೋರ್ಟ ತೀರ್ಪನ್ನು ಮುಂದಿಟ್ಟುಕೊಂಡು ಇವರ ಕೇಳಿಕೆಯನ್ನು ಸರಕಾರವು ವಿವೇಚಿಸಲಿದೆ. ಆದರೆ ಮರಣದಂಡನೆಯನ್ನು ಕಡಿಮೆ ಮಾಡುವ ವಿಚಾರವನ್ನೇ ಬದಿಗಿರಿಸಿ ಕೈದಿಗಳನ್ನು ಗಲ್ಲಿಗೆ ಹಾಕುವ ಸಂಭವವೇ ಹೆಚ್ಚಾಗಿದೆ.

ನಾಥುರಾಮ ಗೋಡಸೆ ತನ್ನ ಪಾಪವನ್ನು ಸಮರ್ಥಿಸುವಾಗ್ಗೆ ತೀರ್ಪು ಘೋಷಣೆಯಾದ ಕೂಡಲೆ ಮಹಾನ್ಯಾಯದಲ್ಲಿ ತನ್ನನ್ನು ಗಲ್ಲಿಗೇ[illegible]ದು ಹೈಕೋರ್ಟಿಗೆ ಬಿನ್ನವಿಸಿಕೊಂಡಿದ್ದಾನೆ.

ಆಹಾರ ಸಮಸ್ಯೆ ಮತ್ತು ಹೋಟೆಲ್‌ಗಳು

ಬೆಂಗಳೂರು-ಮದ್ರಾಸು ವಗೈರೆ ಮುಖ್ಯ ನಗರಗಳಲ್ಲಿ ಹೋಟೆಲ ಮಾಲೀಕರು ತಮ್ಮ ಮೇಲೆ ಸರ್ಕಾರದವರು ಹೇರಿದ ನಿರ್ಬಂಧಗಳಿಂದ ಸಂಕಟಪಡುತ್ತಿರುವರು. ಪರಸ್ಥಳಗಳಿಂದ ಕೋರ್ಟ ಕೆಲಸ, ವ್ಯಾಪಾರ-ವ್ಯವಹಾರಗಳಿಗಾಗಿ ಪಟ್ಟಣಗಳಿಗೆ ಬರುವ ಜನರ ಸೌಕರ್ಯಕ್ಕಾಗಿ ಪಟ್ಟಣಗಳಲ್ಲಿ ಮನೆಗಳು ದೊರೆಯದೆ ಒಬ್ಬೊಂಟಿಗರಾಗಿರುವವರ ಅನುಕೂಲ್ಯಕ್ಕಾಗಿ ಹೋಟೆಲ್‌ಗಳ ಅಗತ್ಯವಿದೆ. ಇದಲ್ಲದೆ ಸರ್ಕಾರದವರು ಕೊಡುವ ಆಹಾರವು ಸಾಲದೆ ಜನರು ಹಸಿವೆಯನ್ನಾರಿಸಲು ಹೋಟೆಲುಗಳ ಶರಣು ಹೋಗುತ್ತಿರುವರು.

ಮತ್ತೊಂದು ಪಾಪವೆಂದರೆ ಈ ವರ್ಷಗಳಲ್ಲಿ ಹೋಟೆಲ್‌ಗಳು ತಿಪ್ಪೆಯ ಕೊಡೆಗಿಡಗಳಂತೆ ಬೆಳೆಯುತ್ತ ಬಂದಿವೆ. ಕೇಳಿದವರಿಗೆಲ್ಲಾ ಲೈಸೆನ್ಸ ದೊರೆಯುತ್ತಲಿವೆ. ಹಳ್ಳಿಗಳಲ್ಲೂ ಕೂಡ ಕಾಫಿ-ಚಹಾದ ಚಟವು ಹೆಚ್ಚಿ ಹೋಟೆಲ್‌ಗಳ ಸಂಖ್ಯೆ ಹೆಚ್ಚುತ್ತಲಿದೆ. ಇದರಿಂದ ಕಠಿಣವಾದ ಆಹಾರ ಸಮಸ್ಯೆಯು ಮತ್ತು ಕ್ಲಿಷ್ಟವಾಗುತ್ತ ನಡೆದಿದೆ. ಇಡ್ಲಿ-ದೋಸೆಗಳಿಗಾಗಿ ಅನೇಕರು ಬ್ಲಾಕ್ ಮಾರ್ಕೆಟಿನಿಂದ ಅಕ್ಕಿ ಕೊಳ್ಳಬೇಕಾದ ಪ್ರಸಂಗವಿದೆ. ಆಹಾರ ವಸ್ತುಗಳ ಗುಣ ಪ್ರಮಾಣದ ಅಭಾವದಿಂದ ಬೇರೆ ವಸ್ತುಗಳ ಮಿಶ್ರಣವಾಗಿ ಒಳ್ಳೆಯ ಫಳಾರವು ದೊರೆಯುವುದು ಅಸಾಧ್ಯವಾಗಿದೆ. ಅದರಲ್ಲೂ ಹಾಲು-ಮೊಸರುಗಳ ಅಭಾವವಂತೂ ತೀರ ಕಠಿಣವಾಗಿ ಬಿಟ್ಟಿದೆ. ಊರಲ್ಲಿನ ಅಧಿಕ ಪ್ರಮಾಣದ ಹಾಲೆಲ್ಲಾ ಹೋಟೆಲ್‌ಗಳಿಗೇ ವಿನಿಯೋಗವಾಗುತ್ತಿದೆ. ಇದರಿಂದ ನಾಗರೀಕರಿಗೆ ಚಿಕ್ಕಿಯ ಮಕ್ಕಳಿಗೆ ಶುದ್ಧವಾದ ಹಾಲು ದೊರೆಯುವಂತೆಯೇ ಇಲ್ಲ. ಕೆಲ ಹೋಟೆಲುಗಳು ರೋಗಗಳ [illegible]ದಾಗಿವೆ [illegible]ತದ

ಈ ಕಾರಣ ಅಗತ್ಯವಾಗಿ ಕೆಲ ಹೋಟೆಲ್‌ಗಳಿಗೆ ಮಾತ್ರ ಲೈ[illegible] ಕೊಟ್ಟು ಶುಚಿತ್ವಕ್ಕೆ ಹೆಚ್ಚಿನ ಗಮನವನ್ನೀಯಬೇಕಾದುದು ಉಚಿತವಾಗಿದೆ. ಪುರಸಭೆಯಾಗಲಿ, ಸರ್ಕಾರವಾಗಲಿ, ಉಚಿತ ನಿರ್ಬಂಧಗಳನ್ನೇರ್ಪಡಿಸಿ ಹೋಟೆಲ್‌ಗಳ ಸಂಖ್ಯೆಯನ್ನು ಪರಿಮಿತಿಗೊಳಿಸುವುದು ಅಗತ್ಯವೆಂದು ಸೂಚಿಸಬಯಸುತ್ತೇವೆ.

ಅತಿ ಇಲ್ಲದೆ ಎಲ್ಲವೂ ಮಿತವಾಗಿದ್ದರೆ ಜನಜೀವನಕ್ಕೆ ಸೌಖ್ಯವುಂಟು. ಇಲ್ಲವಾದರೆ ದೇಶಕ್ಕೆ ಆಪತ್ತು ತಪ್ಪಿದ್ದಲ್ಲ. ಒಂದೆರಡು ವರ್ಷಗಳಲ್ಲಿ ನಮ್ಮ ರಾಷ್ಟ್ರವು ಆಹಾರ ದೃಷ್ಟಿಯಿಂದ ಸ್ವಾವಲಂಬಿಯಾಗಬೇಕೆಂದು ಬಯಸುವುದಾದರೆ ಈ ದಿಶೆಯಲ್ಲೂ ಸುಧಾರಿಸಬೇಕು.

೨೦೦ ಮಕ್ಕಳನ್ನು ಹಿಡಿಯಲು ಪೋಲೀಸರು

೩೦ ನೆಯ ಜೂನ್‌ದ ದಿನ ಬೊಂಬಾಯಿಯ ವಿಕ್ಟೋರಿಯಾ ಟರ್ಮಿನಸ್ ಸ್ಟೇಷನ್ ಹತ್ತಿರ ಊರಿನ ಎಲೆಕ್ಟ್ರಿಕ್ ರೈಲುಗಳಲ್ಲಿ ಟಿಕೆಟ್ ಇಲ್ಲದೆ ಪ್ರಯಾಣಮಾಡುತ್ತಲಿದ್ದ ಮುನಿಸಿಪಲ್ ಪ್ರಾಥಮಿಕ ಶಾಲೆಗಳ ೨೦೦ ಬಾಲಕರನ್ನು ಹಿಡಿಯುವುದಕ್ಕೆ ಪೋಲೀಸರಿಗೆ ಸಾಕುಸಾಕಾಗಿ ಹೋಯಿತು. ಬೊಂಬಾಯಿ ಮುನಿಸಿಪಾಲಿಟಿಯವರು ಶಾಲಾ ಶುಲ್ಕವನ್ನು ಹೆಚ್ಚಿಸಿದ ಕಾರಣ ಕಮ್ಯೂನಿಸ್ಟ ಪ್ರಭಾವಕ್ಕೊಳಗಾದ ವಿದ್ಯಾರ್ಥಿ ಸಂಘವು ಈ [illegible]ವನ್ನು ಏರ್ಪಡಿಸಿದ್ದಿತು.

—ವೃತ್ತ ಪತ್ರಿಕೆಗಳ ಮೇಲೆ ವಿಧಿಸಲಾಗುತ್ತಿರುವ ಜಾಹೀರಾತ ತೆರಿಗೆಯಿಂದ ಸಣ್ಣ ಪುಟ್ಟ ಪತ್ರಿಕೆಗಳನ್ನು ಹೊರತು ಮಾಡುವರೆಂಬ ಸೂಚನೆಗಳಿವೆ.

— ಚೀನದ ಶಾಂಘಾಯಿ ನಗರದ ಮೇಲೆ ಸರ್ಕಾರದ ವಿಮಾನವೊಂದು ಎರಡು ಗಂಟೆ ಬಾಂಬು ಹಾಕಿ ಅತಿಯ ನಷ್ಟವನ್ನುಂಟು ಮಾಡಿತು.

ಆಂಧ್ರಪ್ರಾಂತ ಖಂಡಿತ

—●—

ಮದ್ರಾಸದ ಮೋಹವಳಿಯಬೇಕು

ರಾಜಮಹೇಂದ್ರ, ಒಂದುವೇಳೆ ಆಂಧ್ರರು ಮದ್ರಾಸದ ಮೋಹವನ್ನು ತೊರೆದು, ಪಟ್ಟಾಭಿ ಪಟೇಲ ನೆಹರು ವರದಿಯನ್ನು ಸ್ವೀಕರಿಸಿದಲ್ಲಿ "ತೀವ್ರದಲ್ಲಿಯೇ" ಆಂಧ್ರ ಪ್ರಾಂತ ಪಡೆಯುವಲ್ಲಿ ಎಳ್ಳಷ್ಟೂ ಸಂಶಯ ವಿಲ್ಲವೆಂಬುದಾಗಿ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತ ಕಾಂಗ್ರೆಸ್‌ನ ಕಾರ್ಯದರ್ಶಿಗಳಾದ ಶ್ರೀ ಕಲಾ ವೆಂಕಟರಾಯರವರು ಇಂದಿಲ್ಲಿ ಹೇಳಿದರು.

ಕಾಂಗ್ರೆಸ್ ಅಧ್ಯಕ್ಷ ಡಾ. ಪಟ್ಟಾಭಿ ಸೀತಾರಾಮಯ್ಯ ಮತ್ತು ತಾನು ಈ ಇಬ್ಬರಿಂದಲೇ ಆಂಧ್ರದಿಂದ ಮದರಾಸ ನಗರವನ್ನು ಬೇರ್ಪಡಿಸಬೇಕೆಂದು ಒತ್ತಾಯಪಡಿಸಲಾಗಿದೆ ಎಂಬಮಾತನ್ನು ಅಲ್ಲಗಳೆದು, ತ್ರಿಮೂರ್ತಿ ಸಮಿತಿಯೇ ಆ ರೀತಿ ಮಾತಿನೆಯಾಗಿ ತಿಳಿಸಿದರು.

ಈಗ ಸದ್ಯಕ್ಕೆ ತಮಿಳ ಮತ್ತು ಆಂಧ್ರ ಪ್ರಾಂತದ ಮದ್ರಾಸವನ್ನೇ ರಾಜಧಾನಿಯನ್ನಾಗಿ ಮಾಡಲು ಮದ್ರಾಸ ನಗರದಲ್ಲಿಯ ತಮಿಳರು ಒಪ್ಪಿಯೇ ಒಪ್ಪುವರು ಎಂಬುದಾಗಿಯೂ ಶ್ರೀ ಕಲಾ ವೆಂಕಟರಾಯರವರು ಹೇಳಿದರು.

ನೋಟೀಸು

ಮ|| ರಾ|| ಶ್ರೀ ಬಳ್ಳಾರಿ ಡಿ. ಮು|| ಕೋರ್ಟಿನಲ್ಲಿ

S. O. S. 94/49

ವಾದಿ:— ಪೆಟ್ಲಕೋಟೆ ನಾರಪ್ಪ ಹನುಮಂತಪ್ಪನ ಮಗ—ವೈಶ್ಯ—ವ್ಯಾಪಾರ ಬಳ್ಳಾರಿ. ವಿರುದ್ಧ

ಪ್ರತಿವಾದಿಗಳು 1. ಅಲಿವೇಲಿ ಅಂಜಿನಪ್ಪ ವೆಂಕಪ್ಪನ ಮಗ 2. ಅಲಿವೇಲಿ ವೆಂಕಟೇಶಪ್ಪ ಅಂಜಿನಪ್ಪನ ಮಗ ಶೆಟ್ಟಿ ಬಲಿಜಿಗ, ಒಕ್ಕಲುತನದಾರರು, ಹೊಸೂರು ಗ್ರಾಮ ಯೇಳಂಜ ಮಜಿರಾ ರಾಯದುರ್ಗದ ತಾಲೂಕು.

ವಾದಿಯು ಪ್ರತಿವಾದಿಗಳ ಮೇಲೆ ಪ್ರಾಮಿಸರೀನೋಟು ಬಾಬತು ಬಾಕಿ 688-6-6 ವಸೂಲಿಗಾಗಿ ಮೇಲ್ಕಂಡ ಸಮ್ಮರಿ ದಾವಾ ಮಾಡಿರುತ್ತಾನೆ. ಪ್ರತಿವಾದಿಗಳಿಗೆ ತಕರಾರು ಇದ್ದರೆ ವಾಯಿದಾ 5—7—49 ನೇ ತೇದಿ ಉದಯ 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗದೇ ಹೋದರೆ ಪ್ರತಿವಾದಿಗಳ ಪರೋಕ್ಷದಲ್ಲಿ ಡಿಕ್ರಿ ಆಗುತ್ತದೆಂದು ಈ ಮೂಲಕ ತಿಳಿಸಲಾಗಿದೆ.

ಬಳ್ಳಾರಿ ಆರ್. ನಾರಾಯಣರಾವ್

27-6-49 ವಾದಿ ವಕೀಲ

"ಸತ್ಯಮೇವ ಜಯತೆ"

ವಾದವಿವಾದದ ಮುಕ್ತಾಯ

ಭಾರತದ ಮುದ್ರೆ ಮತ್ತು ಚಿನ್ಹದಲ್ಲಿ ಸೇರಿಸಬೇಕೆಂದಿದ್ದ ಆದರ್ಶವಾಕ್ಯದಲ್ಲಿ "ಸತ್ಯ ಮೇವಜಯತೆ" ಇರಬೇಕೊ ಅಥವಾ "ಸತ್ಯಮೇವ ಜಯತಿ" ಇರಬೇಕೊ ಎಂಬ ಬಗ್ಗೆ ಇದ್ದ ವಾದವಿವಾದವು ಕೊನೆಗೊಂಡಿತು.

ಅನೇಕ ಸಂಸ್ಕೃತ ವಿದ್ವಾಂಸರು ವೇದ ಉಪನಿಷತ್ತುಗಳಲ್ಲಿ "ಜಯತೆ" ಎಂಬ ಶಬ್ದವೇ ಉಲ್ಲೇಖಿಸಲ್ಪಟ್ಟಿರುವದರಿಂದ ಅದೇ ಸರಿಯಾದುದೆಂದು ಅಭಿಪ್ರಾಯ ಪಟ್ಟಿದ್ದಾರೆ.

ಸರಕಾರದವರೂ ಜಯತೆ ಎಂಬ ಪರವಾಗಿಯೇ ಅಭಿಪ್ರಾಯಪಟ್ಟಿದ್ದು ಇವರ ಬಗ್ಗೆ ಅಧಿಕೃತ ಪ್ರಕಟನೆಯನ್ನು ಮಾಡಿದ್ದಾರೆ.

ನಾಲ್ಕು ಕೈಗಳುಳ್ಳ ಮಗುವಿನ ಜನನ

ರಾಜಕೋಟೆ ಸಂಸ್ಥಾನದಲ್ಲಿ

ರಾಜಕೋಟೆ ಜಯಪುರದ ಸಮೀಪದಲ್ಲಿರುವ ಗೋಪಾಲಧರ ಎಂಬ ಹಳ್ಳಿಯೊಂದರಲ್ಲಿ ಓರ್ವ ರಜಪೂತ ಮಹಿಳೆಯು ಎರಡು ತಲೆ. ನಾಲ್ಕು ಕೈ ಹಾಗೂ ಎರಡೇ ಎರಡು ಕಾಲುಗಳುಳ್ಳ ವಿಚಿತ್ರ ಮಗುವಿಗೆ ಜನನವಿತ್ತಿದ್ದಾಳೆ.

ದಾವಣಗೆರೆಯಲ್ಲಿ

ಲೋಹಿಯಾ ದಿನಾಚರಣೆ

ದಾವಣಗೆರೆ ಸೋಷಲಿಸ್ಟ ಪಾರ್ಟಿ ಆಶ್ರಯದಲ್ಲಿ ಲೋಹಿಯಾ ದಿನಾಚರಣೆಯ ನಿಮಿತ್ತ ೨೬ ನೆಯ ದಿವಸ ಸಂಜೆ ಇಲ್ಲಿ ಭಾರಿ ಸಾರ್ವಜನಿಕ ಸಭೆ ಧಾರವಾಡದ ವಕೀಲರಾದ ಶ್ರೀ ವಿ. ರೂ. ಪಾಟೀಲರ ಅಧ್ಯಕ್ಷತೆಯಲ್ಲಿ ಜರುಗಿ, ಕರ್ನಾಟಕ ಪ್ರಾಂತ ಸೋಷಲಿಸ್ಟಪಾರ್ಟಿ ಕಾರ್ಯದರ್ಶಿ ಸಾಥೀ ಎಸ್. ನಾಗಭೂಷಣರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಸರಕಾರಗಳ ನೀತಿ ಮತ್ತು ಧೋರಣೆಗಳನ್ನು ತೀವ್ರವಾಗಿ ಟೀಕಿಸಿದರು. ಅಲ್ಲದೆ ಅನವಶ್ಯಕವಾಗಿ ಮತ್ತು ಅನ್ಯಾಯವಾಗಿ ಕಾಂಗ್ರೆಸ್ ಸರಕಾರಗಳು ನಾಗರೀಕ ಹಕ್ಕುಗಳ ಮೇಲೆ ನಡೆಸಿರುವ ಅವ್ಯಾಹತ ದಾಳಿಯನ್ನು ಖಂಡಿಸಿದರು. ಡಾಕ್ಟರ್ ಲೋಹಿಯಾ ಮತ್ತು ಇತರ ಸೋಷಲಿಸ್ಟ ನಾಯಕರ ಬಂಧನ ಮತ್ತು ಶಿಕ್ಷೆಯನ್ನು ಕುರಿತು ಖಂಡನಾತ್ಮಕ ನಿರ್ಣಯ ಅವಿರೋಧವಾಗಿ ಪಾಸಾಯ್ತು. ಸಭೆಯಲ್ಲಿ ಮಂಗಳೂರಿನ ಸಮಾಜವಾದಿ ಧುರೀಣರಾದ ಸಾಥೀ ಸಿ. ಗೋವಿಂದರು ಮತ್ತು ಸಾಥೀ ಸದಾಶಿವರಾಯರು ಸಹಾ ಮಾತನಾಡಿದರು.

ಅಮೇರಿಕೆಯಲ್ಲಿ ಗಾಂಧಿ ಸ್ಮಾರಕ ನಿಧಿ

ನಾಲ್ಕು ಕೋಟಿ ರೂಪಾಯಿ

ನ್ಯೂಯಾರ್ಕ —ಅಮೇರಿಕೆಯಲ್ಲಿ ಇಂಡಿಯಾಲೀಗಿನ ಅಧ್ಯಕ್ಷರಾದ ಜೆ ಜೆ ಸಿಂಗನು ಮಹಾತ್ಮಾಗಾಂಧೀ ಸ್ಮಾರಕಕ್ಕಾಗಿ ೧೦ ಲಕ್ಷ ಡಾಲರ (ಸುಮಾರು ೪ ಕೋಟಿ) ಕೂಡಿಸುವ ಭರವಸೆಯುಳ್ಳವರಾಗಿರುವೆವೆಂದು ಪಿ. ಟಿ. ಆಯ್. ದ ಪ್ರತಿನಿಧಿ ಡಿ. ಪಿ. ವಾಗಳೆಯವರಿಗೆ ಕೊಟ್ಟ ಸಂದರ್ಶನದಲ್ಲಿ ವ್ಯಕ್ತಪಡಿಸಿದರು.

ಗಾಂಧಿ ಸ್ಮಾರಕಭವನದಲ್ಲಿ ಗ್ಯಾಲರಿಗಳನ್ನು ಕಟ್ಟಿಸಿ ಭಾರತದ ಐತಿಹಾಸಿಕ ಹಾಗೂ ಭಾರತೀಯ ವಿಶಿಷ್ಟ ಕಲಾತ್ಮಕ ಸಂಗ್ರಹವನ್ನು ಮಾಡಲಾಗುವದು. ಮಹಾತ್ಮಾ ಗಾಂಧೀಜಿಯವರ ಮೂಲ ಧ್ಯೇಯ "ವಿಶ್ವಬಾಂಧವ್ಯ"ದ ವಿಚಾರಗಳ ಸಂಗ್ರಹವನ್ನು ಕಾಯ್ದಿರಿಸಲಾಗುವದು. ಭಾರತೀಯ ಪರಿಸ್ಥಿತಿಯನ್ನು ಶಕ್ಯವಿದ್ದಷ್ಟು ತರುವ ದೃಷ್ಟಿಯಿಂದ ಭಾರತದ ವೈಶಿಷ್ಟ್ಯ ಪೂರ್ಣ ಗಿಡಗಳನ್ನು ಹಚ್ಚಬೇಕೆಂಬ ಸೂಚನೆ ಬಂದಿದೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಹುಬ್ಬಳ್ಳಿ

ಪ್ರ ಕ ಟ ನೆ

ಹುಬ್ಬಳ್ಳಿ ತಾ|| ೧ ದಿನಾಂಕ ೨೭-೨೮ ಕ್ಕೆ ಪ್ರಾಂತಾಧ್ಯಕ್ಷ ಶ್ರೀ ಎಸ್ ನಿಜಲಿಂಗಪ್ಪನವರು ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ನಿಧಿ ಸಂಗ್ರಹಕ್ಕಾಗಿ ಸಂಚರಿಸಿದಾಗ ಈ ಕೆಳಗಿನ ಗ್ರಾಮಗಳಿಂದ ರೋಖ ಬಂದ ನಿಧಿ ಸಂಗ್ರಹವಿದೆ. ಎಂದು ಪ್ರಧಾನ ಕಾರ್ಯದರ್ಶಿಗಳು ತಿಳಿಸುತ್ತಾರೆ,

ನಾರಾಯಣದೇವರಕೆರೆ ೧೫೧ ರೂ, ತಾಂಬ್ರಹಳ್ಳಿ ೮೬ ರೂ ಹಂಪಸಾಗರ ೭೦೦ ರೂ, ಹಡಗಲಿ ೪೩೩ ರೂ, ಕೊಟ್ಟೂರ ೧೩೦ ರೂ, ಯಮ್ಮಿಗನೂರು ೨೦೧ ರೂ ಕುರುಗೋಡು ೨೦೨ ರೂ, ಒಟ್ಟು ೧೪೦೩ ರೂ.

ಒಂದು ವಾರದಲ್ಲಿ ದೇಣಿಗೆ ಕೊಡಲು ವಾಗ್ದಾನಿಸಿದ ಗ್ರಾಮಗಳ ವಿವರ:—

ಹಂಪಸನಹಳ್ಳಿ ೧೦೦೧ ರೂ, ಕೊಟ್ಟೂರು ೧೪೦೧ ರೂ. ಕೂಡ್ಲಿಗಿ ೨೫೧ ರೂ, ಹೊಸಪೇಟೆ ೨೦೦೧ ರೂ, ಕಂಪಲಿ ೧೦೦೧ ರೂ.

ಬಳ್ಳಾರಿ ಜಿಲ್ಲೆಯಲ್ಲಿ ಮೇಲ್ಕಾಣಿಸಿದ ಗ್ರಾಮನಿವಾಸಿಗಳು ನಮ್ಮ ಸಮಿತಿಗೆ ಮುಕ್ತ ಹಸ್ತದಿಂದ ದೇಣಿಗೆಯ ಸಹಾಯ ನೀಡಿ ಕಾಂಗ್ರೆಸ ಸಂಘಟನೆಯ ಕಾರ್ಯಕ್ಕೆ ಪ್ರೋತ್ಸಾಹಿಸಿದ್ದಕ್ಕಾಗಿ ಈ ಎಲ್ಲ ಪುರನಿವಾಸಿಗಳಿಗೆ ನಮ್ಮ ಸಮಿತಿಯ ವತಿಯಿಂದ ಮತ್ತು ಪ್ರಾಂತಾಧ್ಯಕ್ಷರ ವತಿಯಿಂದ ನನ್ನ ಹೃತ್ಪೂರ್ವಕ ವಂದನೆಗಳನ್ನರ್ಪಿಸುವೆನು.

---

೧೦ ಮಿನಿಟನಲ್ಲಿ ಗುಣ
ಉತ್ತಮ ಪೇನ್ ಡೋಜ್
ದಶಮಣಿ
ತಲೆಶೂಲೆ, ಹಲ್ಲುಶೂಲೆ, ಮೈಕೈಶೂಲೆ, ಕೈಕಾಲುಸೆಳೆತ, ನೆಗಡಿಜ್ವರ, ಮಲೇರಿಯಕ್ಕೆ
ಪ್ರಕಾಶ ದಿವಾಖಾನೆ ಹೊಸಕೋಟೆ

ಜಲ ಶಕ್ತಿ

ಕೃಷಿ-ಕೈಗಾರಿಕೆಗಳಿಗೆ ಅನುಕೂಲ; ಸುಖ ಸೌಕರ್ಯಗಳಿಗೆ ಮೂಲ

ಡಾಕ್ಟರ್ ಕೆ. ಎಲ್. ರಾವ್, ಡಿಸೈನ್ ಇಂಜಿನಿಯರ್,
ರಾಮಪಾದಸಾಗರ ಅಣೆಕಟ್ಟು.

ಹಿಂದಿನ ಕಾಲದಲ್ಲಿ ಮನುಷ್ಯ, ಎತ್ತು, ಕುದುರೆ ಇವು ಶಕ್ತಿಯ ಮೂಲಗಳಾಗಿದ್ದುವು. ಹಿಂದೂಸ್ಥಾನದಲ್ಲಿ ಇಂದಿಗೂ ಹಾಗೆಯೇ ಇದೆಯಾದರೂ ಪಾಶ್ಚಾತ್ಯ ದೇಶಗಳಲ್ಲಿ ಯಾಂತ್ರಿಕ ಶಕ್ತಿಯು ಈ ಸ್ಥಾನವನ್ನು ವಹಿಸಿದೆ. ಉದಾಹರಣೆಗಾಗಿ ಹಿಂದೂಸ್ಥಾನದಲ್ಲಿ ಒಂದು ಕಾಲುವೆಯನ್ನು ಮನುಷ್ಯರು ಅಗೆಯಬೇಕಾದರೆ ಅಮೇರಿಕದಲ್ಲಿ ಈ ಕೆಲಸವು ಯಂತ್ರಗಳಿಂದ ನಡೆಯುತ್ತದೆ. ಇಂಗ್ಲೆಂಡಿನಲ್ಲಿ ಎತ್ತುಗಳಿಲ್ಲ ಅಮೇರಿಕದಲ್ಲಿ ಕುದುರೆಗಳು ಬಳಕೆಯಲ್ಲಿಲ್ಲ. ಆಧುನಿಕ ನಾಗರಿಕತೆ ಹಾಗೂ ಭರದಿಂದ ಹೆಚ್ಚುತ್ತಿರುವ ಜನತೆಯು ದೊಡ್ಡ ದೊಡ್ಡ ಉದ್ಯಮಗಳನ್ನು ಕೈಕೊಳ್ಳಬೇಕಾಗಿರುವುದರಿಂದಲೂ ಅದಕ್ಕೆ ತುಂಬಾ ಶಕ್ತಿ ಅವಶ್ಯವಿರುವದರಿಂದಲೂ ಈ ರೀತಿಯಲ್ಲಿ ಮನುಷ್ಯರ ಶಕ್ತಿಯನ್ನು ಯಾಂತ್ರಿಕ ಶಕ್ತಿಯ ಮೂಲಕ ಪೂರಕಗೊಳಿಸುವುದು ಅನಿವಾರ್ಯ. ವಿದ್ಯುತ್ತಿನಂತಹ ಚಲನಶಕ್ತಿಯನ್ನು ಅಭಿವೃದ್ಧಿಗೊಳಿಸಿದುದು ಆಧುನಿಕ ವೈಜ್ಞಾನಿಕನಿಗೆ ಒಂದು ದೊಡ್ಡ ಗೌರವವೇ ಸರಿ. ದೀಪ, ಬೀಸಣಿಗೆ (Fan) ಶೀತ ಯಂತ್ರ (Refregerator) ವಸ್ತ್ರಕ್ಷಾಲನ ಯಂತ್ರ, ಗಣನಾ ಯಂತ್ರ ಹಾಗೂ ಇನ್ನಿತರ ನೂರಾರು ವಸ್ತುಗಳ ರೂಪದಲ್ಲಿ ವಿದ್ಯುತ್ತನ್ನು ಉಪಯೋಗಿಸದಿದ್ದರೆ ಆಧುನಿಕ ಜೀವನವು ನಿರರ್ಥಕ, ಹೆಚ್ಚೇಕೆ ದುಃಖಮಯವಾಗುವುದೆಂಬುದರಲ್ಲಿ ಸಂಶಯವಿಲ್ಲ.

ನಾಗರೀಕತೆಯ ಮಟ್ಟವನ್ನು ಪ್ರತಿ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನು ಉಪಯೋಗಿಸುವ ವಿದ್ಯುತ್ತಿನ ಪ್ರಮಾಣದ ಮೇಲೆ ಲೆಕ್ಕಿಸಲಾಗುತ್ತದೆ. ಇಂದು ಅಮೇರಿಕದಲ್ಲಿ ಒಬ್ಬನಿಗೆ 1,586 ಯೂನಿಟುಗಳಷ್ಟೂ, ಬ್ರಿಟನಿನಲ್ಲಿ ಈ ಪ್ರಮಾಣದಷ್ಟೂ ವಿದ್ಯುತ್ ದೊರೆಯುತ್ತದೆ. ಆದರೆ ಹಿಂದೂಸ್ಥಾನದಲ್ಲಿ ದೊರೆಯುವ ಪ್ರಮಾಣವು ಇದರ ನೂರರಲ್ಲಿ ಒಂದು ಪಾಲಷ್ಟೆನ್ನಬಹುದು. ದೇಶದ ಅಭಿವೃದ್ಧಿ ಸಾಧನವಾದ ವಿದ್ಯುತ್ತಿನ ಈ ಕ್ಷಾಮವನ್ನು ನಾವು ಆದಷ್ಟು ಬೇಗನೇ ಹೋಗಲಾಡಿಸಬೇಕಾಗಿದೆ.

ಮುಗಿಲು, ನೀರು, ಅಣುಗಳ ವಿಭಜನೆ

ವಿದ್ಯುತ್ತನ್ನು ಉತ್ಪತ್ತಿಮಾಡುವ ಕ್ರಮಗಳಾವುವೆಂದೂ ತುಂಬಾ ಪ್ರಮಾಣಗಳಲ್ಲಿ ಈ ಶಕ್ತಿಯನ್ನು ಉತ್ಪತ್ತಿ ಮಾಡಬಹುದಾದ ಮೂಲಗಳು ನಮ್ಮಲ್ಲಿವೆಯೇ ಎಂದೂ ನೋಡುವ. ಅನೇಕ ವಿಧಾನಗಳಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಹುದು. ಮುಗಿಲು ನೀರು ಹಾಗೂ ಅಣುಗಳ ವಿಭಜನೆಯಿಂದ ಅದನ್ನು ಉತ್ಪತ್ತಿ ಮಾಡಲು ಮನುಷ್ಯನು ಪ್ರಯತ್ನಿಸುತ್ತಿದ್ದಾನೆ. ಈ ಕ್ರಮಗಳು ಇನ್ನೂ ಸ್ಥಿರವಾಗಿಲ್ಲ. ವಿದ್ಯುತ್ತನ್ನು ಉತ್ಪಾದನೆ ಮಾಡುವ ಬೇರೆ ಕ್ರಮಗಳು ಮೂರು ಇವೆ. ಮೊದಲನೆಯದು ಕಲ್ಲಿದ್ದಲನ್ನು ಉರಿಸುವುದರಿಂದ ಉಗಿಯು ದೊರೆಯುತ್ತದೆ. ಇದನ್ನು ಸೂಜಿಕಾಂತಿಯ ಕ್ಷೇತ್ರದಲ್ಲಿ ಚಕ್ರಗಳನ್ನು ತಿರುಗಿಸುವುದಕ್ಕೆ ಉಪಯೋಗಿಸಿದರೆ ವಿದ್ಯುಚ್ಛಕ್ತಿ ದೊರೆಯುತ್ತದೆ. ದುರಾದೃಷ್ಟವಶಾತ್ ಹಿಂದೂಸ್ಥಾನದಲ್ಲಿ ಸಾಕಷ್ಟು ಕಲ್ಲಿದ್ದಲಿಲ್ಲ. ನಮ್ಮಲ್ಲಿರುವ ಪ್ರಮಾಣದಲ್ಲಿ ಸಹ ಹೆಚ್ಚಿನಾಂಶವು ಉತ್ತಮತರದ್ದಾಗಿರುವುದರಿಂದ ಅದನ್ನು ಉಕ್ಕಿನ ಹಾಗೂ ಇತರ ಕೈಗಾರಿಕೆಗಳಿಗೆ ಉಪಯೋಗಿಸಬೇಕಲ್ಲದೆ, ಈ ರೀತಿಯಲ್ಲಿ ವಿದ್ಯುದುತ್ಪಾದಕಕ್ಕೋಸ್ಕರ ವೆಚ್ಚಮಾಡಲು ಸಾಧ್ಯವಿಲ್ಲ. ಕಲ್ಲಿದ್ದಲಿನ ಬದಲಿಗೆ ಎಣ್ಣೆಯನ್ನು ಉಪಯೋಗಿಸಲಾಗುತ್ತದೆ. ಕಾಲಿಫೋರ್ನಿಯಾ ಹಾಗೂ ಎಣ್ಣೆ ಧಾರಾಳವಾಗಿ ದೊರೆಯುವ ಇತರ ಪ್ರದೇಶಗಳಲ್ಲಿ ಪ್ರತಿಯೊಂದಕ್ಕೂ ಎಣ್ಣೆಯನ್ನು ಉಪಯೋಗಿಸಲು ಸಾಧ್ಯವಿದೆ. ಆದರೆ ಹಿಂದೂಸ್ಥಾನದಲ್ಲಿ ಎಣ್ಣೆಯು ಒಂದು ಅಪೂರ್ವ ವಸ್ತುವಾಗಿದೆ. ಆದುದರಿಂದ ವಿದ್ಯುಚ್ಛಕ್ತಿ ತಯಾರಿಸುವುದಕ್ಕೋಸ್ಕರ ಅದನ್ನು ಎಷ್ಟು ಪ್ರಮಾಣದಲ್ಲಾದರೂ ವೆಚ್ಚಮಾಡಲಾಗದು.

ಮುಚ್ಕುಂದ್ ಯೋಜನೆ

ಜಲಶಕ್ತಿಯನ್ನು ಉಪಯೋಗಿಸಿ ವಿದ್ಯುತ್ತನ್ನು ಉತ್ಪಾದನೆ ಮಾಡುವುದೇ ಮೂರನೆಯ ಕ್ರಮ. ಈ ಶಕ್ತಿಯನ್ನು ಎರಡು ವಿಧಗಳಿಂದ ದೊರಕಿಸಿಕೊಳ್ಳಬಹುದು. ಮಚ್ಕುಂಡ್ ಎಂಬುದು ಒಂದು ಸಣ್ಣ ನದಿ. ಇದು ಇನ್ನೊಂದು ನದಿಗೆ ಬಿದ್ದು, ಕೊನೆಗೆ ಗೋದಾವರಿಗೆ ಹೋಗಿ ಸೇರುತ್ತದೆ. ಮಚ್ಕುಂಡ್ ನದಿಯು ಸಮುದ್ರ ಮಟ್ಟಕ್ಕಿಂತ ಸುಮಾರು 27,00 ಅಡಿ ಎತ್ತರದಲ್ಲಿದೆ. ಡಮ್‌ಡುಮ ಎಂಬ ಸ್ಥಳದಲ್ಲಿ ಈ ನದಿಯು ನೇರವಾಗಿ 800 ಅಡಿಗಳಷ್ಟು ಕೆಳಗೆ ದುಮುಕುತ್ತದೆ. ಈ ಜಲಪಾತದಲ್ಲಿ ತುಂಬಾ ಶಕ್ತಿ ವ್ಯರ್ಥವಾಗುತ್ತದೆ. ಈ ರೀತಿ ವ್ಯರ್ಥವಾಗಿ ಹೋಗುವ ಶಕ್ತಿಯನ್ನು ಸದುಪಯೋಗಗೊಳಿಸುವುದಕ್ಕಾಗಿಯೇ ಮದರಾಸು ಸರಕಾರವು ಮಚ್ಕುಂಡ್ ಯೋಜನೆಯನ್ನು ಮಂಜೂರು ಮಾಡಿದುದು. ಜಲಪಾತದ ಮೇಲ್ಭಾಗದಲ್ಲಿ ನದಿಗೆ ಅಡ್ಡವಾಗಿ ಒಡ್ಡನ್ನು ಕಟ್ಟಿ ಉಕ್ಕಿನ ಕೊಳವೆಗಳ ಮೂಲಕ ನೀರನ್ನು ಜೋಗಿನ ಕೆಳಭಾಗದಲ್ಲಿಟ್ಟಿರುವ ಯಂತ್ರಗಳೊಳಕ್ಕೆ ಬಿಡಲಾಗುತ್ತದೆ. ಭರದಿಂದ ಹರಿಯುವ ನೀರು ಯಂತ್ರವನ್ನು ನಡೆಸಿ, ವಿದ್ಯುಚ್ಛಕ್ತಿ ಉತ್ಪಾದನೆ ಮಾಡುತ್ತದೆ. ಹೀಗೆ ಈ ಮಚ್ಕುಂಡ್ ಯೋಜನೆಯು ಅಭಿವೃದ್ಧಿಗೊಂಡರೆ ಇದರಿಂದ ಸುಮಾರು 100,000 ಕಿಲೋವಾಟ್‌ಗಳಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ದೊರೆಯುವುದು. ನಮ್ಮ ಪ್ರಾಂತದಲ್ಲಿ ಇದು ಅಲ್ಪ ಪ್ರಮಾಣವಲ್ಲ.

ಜಲಪಾತಗಳಿಂದ ವಿದ್ಯುತ್ ತಯಾರಿಸುವ ನಿದರ್ಶನಗಳೆಂದರೆ, ಉದಕಮಂಡಲದಲ್ಲಿ ಪೈಕಾರ ಯೋಜನೆ. ಮೈಸೂರಿನಲ್ಲಿ ಶಿವಸಮುದ್ರ ಯೋಜನೆ. ಬೊಂಬಾಯಿಯಲ್ಲಿ ಟಾಟಾ ಯೋಜನೆ, ಇವು ಹಿಂದೂಸ್ಥಾನದಲ್ಲಿವೆ. ಅಮೇರಿಕದಲ್ಲಿ ನಿಯಾಗರ ಜಲಪಾತದಿಂದ ಅಪಾರ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ತಯಾರಾಗುತ್ತದೆ. ಈ ರೀತಿಯಲ್ಲಿ ನೀರಿನಿಂದ ವಿದ್ಯುತ್ ತಯಾರಿಸುವುದು ಅತಿ ಸುಲಭವೆನ್ನುವುದು ನಿಜ. ಆದರೆ ಎಲ್ಲಾ ಕಡೆಗಳಲ್ಲಿಯೂ ಸ್ವಾಭಾವಿಕ ಜಲಪಾತಗಳು ಇಲ್ಲದಿರುವುದರಿಂದ ಮೇಲೆ ಸೂಚಿಸಿದ ಎರಡನೆಯ ಕ್ರಮವನ್ನು ಹೆಚ್ಚಾಗಿ ಉಪಯೋಗಿಸಲಾಗುತ್ತದೆ.

ಒಬ್ಬ ಇಂಜನಿಯರನಿಗೆ ಜಲಪಾತದ ಮುಖ್ಯ ಉಪಯೋಗವೆಂದರೆ, ಮೇಲ್ಮಟ್ಟದಲ್ಲಿರುವ ಜಲಪಾತವನ್ನು ಕೆಳಮಟ್ಟದಲ್ಲಿರುವ ಯಂತ್ರದೊಳಕ್ಕೆ ಕೊಂಡೊಯ್ಯಲು ಅವನಿಗೆ ಅವಕಾಶಗಳು ದೊರೆಯುತ್ತವೆ. ಇದಕ್ಕೊಂದು ಸಾಮಾನ್ಯ ಉದಾಹರಣೆಯನ್ನು ಕೊಡಬಹುದು. ಮನೆಯ ಮಾಡಿನ ಮೇಲೆ ನೀರು ಶೇಖರಿಸಿಡುವುದಕ್ಕೋಸ್ಕರ ಒಂದು ಕೆರೆಯನ್ನು ನಿರ್ಮಿಸಿ ಅದರಲ್ಲಿ ಮಳೆಯು ಇಲ್ಲವೇ ಬಾವಿಯಿಂದ ಪಂಪಿನ ಮೂಲಕ ನೀರು ತುಂಬಿಸಿ ಅದನ್ನು ಒಂದು ಕೊಳವೆಯ ಮೂಲಕ ಕೆಳಗೆ ನೆಲದ ಮಟ್ಟದಲ್ಲಿ ಹೊರಬಿಡೋಣ. ಈ ನೀರು ಅತಿ ರಭಸದಿಂದ ಹೊರ ಬೀಳುತ್ತದೆ. ಈ ನೀರು ಜಲಚಕ್ರ ಮೊದಲಾದ ತನ್ನ ದಾರಿಯಲ್ಲಿರುವ ಯಾವ ವಸ್ತುವನ್ನೂ ಸುತ್ತುವಂತೆ ಮಾಡುತ್ತದೆ. ಜಲಪಾತದಲ್ಲಿರುವ ಶಕ್ತಿಯು ಇದೇ ನಮೂನೆಯದ್ದು. ಈ ಶಕ್ತಿಯನ್ನು ಅಳೆಯುವ ಕ್ರಮವು ಸಹ ಅತಿ ಸುಲಭವಾದ್ದು. ವಿದ್ಯುಚ್ಛಕ್ತಿಯ ಶಕ್ತಿ R.X.H /15 ಯೂನಿಟ್‌ಗಳಷ್ಟಿರುತ್ತವೆ, ಇಲ್ಲಿ R ಎಂದರೆ ಪ್ರತಿ ಸೆಕೆಂಡಿನಲ್ಲಿ ಹೊರ ಬೀಳುವ ನೀರಿನ ಪ್ರಮಾಣ (ಘನ ಅಡಿಗಳಲ್ಲಿ) H ಎಂದರೆ ಯಂತ್ರವನ್ನಿಟ್ಟಿರುವ

ಮಟ್ಟದಿಂದ ನೀರು ಎಷ್ಟು ಎತ್ತರದಲ್ಲಿದೆಯೋ ಆ ಎತ್ತರ (ಅಡಿಗಳಲ್ಲಿ) ನಾವು ಮಚ್ಕುಂದ್ ಯೋಜನೆಯ ಉದಾಹರಣೆಯನ್ನು ತೆಗೆದುಕೊಳ್ಳೋಣ. ಮಚ್ಕುಂದ್ ನದಿಯಿಂದ ಸೆಕೆಂಡಿಗೆ 2 000 ಘನ ಅಡಿಗಳಷ್ಟು ನೀರನ್ನು ಉಪಯೋಗಿಸಲು ಸಾಧ್ಯವಿದೆಯೆಂದು ಅಂದಾಜು ಮಾಡಲಾಗಿದೆ. ಈ ನೀರು 800 ಅಡಿಗಳಷ್ಟು ಕೆಳಗೆ ಬೀಳುತ್ತದೆ. ಆದುದರಿಂದ ಈ ನದಿಯ ಶಕ್ತಿ 106,000 ಯೂನಿಟ್‌ಗಳಷ್ಟು ಹೆಚ್ಚು ಕಡಿಮೆ ಇಷ್ಟೇ ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ದೊರೆಯುತ್ತದೆನ್ನಬಹುದು.

ಮೆಟ್ಟೂರು-ರಾಮಪಾದಸಾಗರ

ಮೇಲಿನ ಯೋಜನೆಯಲ್ಲಿ ನೀರಿನ ಪ್ರಮಾಣ ಕಡಮೆ, ಆದರೆ ಎತ್ತರ ಹೆಚ್ಚು. ನೀರಿನಿಂದ ವಿದ್ಯುತ್ ತಯಾರಿಸುವ ಇತರ ಯೋಜನೆಗಳಲ್ಲಿ ನೀರಿನ ಪ್ರಮಾಣವು ಅತ್ಯಧಿಕವಾಗಿರುವುದು. ಹೀಗೆ ಮೆಟ್ಟೂರು ಯೋಜನೆಯಲ್ಲಿ ಸೆಕೆಂಡಿಗೆ ಹೆಚ್ಚೆಂದರೆ 5,000 ಘನ ಅಡಿಗಳಷ್ಟು ನೀರನ್ನು ಜಲಚಕ್ರಗಳೊಳಗಿಂದ ಕಳುಹಿಸಲಾಗುತ್ತದೆ. ಕೊಳವೆಗಳ ಎತ್ತರ ಬರೇ 135 ಅಡಿ. ಇದೇ ರೀತಿ ರಾಮಪಾದಸಾಗರ ಅಣೆಕಟ್ಟಿನಲ್ಲಿ ಸೆಕೆಂಡಿಗೆ 6,000 ಘನ ಅಡಿಗಳಷ್ಟು ನೀರನ್ನು ನೀರಾಶ್ರಯದ ಮಟ್ಟಕ್ಕನುಸಾರವಾಗಿ 70 ರಿಂದ 120 ಅಡಿಗಳಷ್ಟು ಎತ್ತರದಿಂದ ಬಿಟ್ಟು ಸುಮಾರು 250,000 ಕಿಲೋವಾಟ್‌ಗಳಷ್ಟು ವಿದ್ಯುತ್ತನ್ನು ತಯಾರಿಸಲು ನಿಶ್ಚಯಿಸಲಾಗಿದೆ.

ಮೇಲೆ ಸೂಚಿಸಿದಂತೆ ಪ್ರಪಂಚದಲ್ಲಿ ನೀರಿನಿಂದ ವಿದ್ಯುತ್ ತಯಾರಿಸುವುದು ಹೆಚ್ಚಾಗಿ ಎರಡನೆಯ ಕ್ರಮದಿಂದಲೇ. ನದಿಗೆ ಅಡ್ಡವಾಗಿ ಅಣೆಕಟ್ಟು ಕಟ್ಟುವುದು, ನೀರಾಶ್ರಯ ನಿರ್ಮಿಸುವುದು, ನೀರಿನ ಮಟ್ಟವನ್ನು ಏರಿಸುವುದು, ಕೊನೆಗೆ ತಳದಲ್ಲಿಟ್ಟಿರುವ ಯಂತ್ರದೊಳಕ್ಕೆ ನೀರಾಶ್ರಯದಿಂದ ನೀರುಬಿಡುವುದು. ಆದ್ದರಿಂದಾಗಿ ವಿದ್ಯುಚ್ಛಕ್ತಿಯನ್ನು ಪಡೆಯುವುದು ಇಂತಹ ನಮೂನೆಯ ಯೋಜನೆಗಳು ನಮ್ಮ ದೇಶದಲ್ಲಿ ಹೆಚ್ಚಿಲ್ಲ

ಅನೇಕ ಯೋಜನೆಗಳು ಮಂಜೂರಾತಿ ಹೊಂದಿವೆ. ಕೆಲವುಗಳ ವಿಚಾರಣೆಯು ನಡೆಯುತ್ತಿದೆ. ಪೂರ್ವ ಪಂಜಾಬಿನಲ್ಲಿ ಭಕ್ರ ಪ್ರೊಜೆಕ್ಟು, ಒರಿಸ್ಸಾದಲ್ಲಿ ಹಿರಾಕುಡ್ ಪ್ರೊಜೆಕ್ಟು, ಪಶ್ಚಿಮ ಬಂಗಾಳದಲ್ಲಿ ದಾಮೋದರ ಕಣಿವೆ ಪ್ರೊಜೆಕ್ಟು, ಮೊದಲಾದ ಯೋಜನೆಗಳು ಮಂಜೂರಾಗಿವೆ. ಇವುಗಳಲ್ಲಿ ಅಣೆಕಟ್ಟು ಕಟ್ಟಿ ನೀರಾಶ್ರಯ ನಿರ್ಮಿಸಿ, ಅದರ ನೀರನ್ನು ಉಪಯೋಗಿಸಿ ವಿದ್ಯುಚ್ಛಕ್ತಿ ತಯಾರಿಸಲಾಗುವುದು.

ಪಾಶ್ಚಾತ್ಯ ದೇಶಗಳ ನಿದರ್ಶನ

ಮುಗಿದ ಕೆಲಸಗಳ ಬಗ್ಗೆ ನಾವು ಪಾಶ್ಚಿಮಾತ್ಯ ದೇಶಗಳ ಕಡೆಗೆ ನೋಡಬೇಕಾಗಿದೆ. ಕೆಲಸಗಳು ಪ್ರಚಂಡವಾದುವುಗಳು, ಫಲಿತಾಂಶಗಳು ಸಹ ಅಮೋಘವಾದುವುಗಳು. ಇಂತಹ ಯೋಜನೆಗಳು ಪೂರ್ಣವಾದೊಡನೆಯೇ ಈ ದೇಶಗಳ ಅಭಿವೃದ್ಧಿಯು ಹೆಚ್ಚಿರುತ್ತದೆ. ಉದಾಹರಣೆಗಾಗಿ ನಾವು ಅಮೇರಿಕಾ ದೇಶವನ್ನು ತೆಗೆದುಕೊಳ್ಳೋಣ. ಪಶ್ಚಿಮಕ್ಕೆ ಶಾಂತ ಸಾಗರದ ಕರಾವಳಿಯಲ್ಲಿರುವ ಪ್ರದೇಶಗಳಲ್ಲಿ ಮಳೆ ಅತಿ ಕಡಮೆ. ಕೆಲವೆಡೆಗಳಲ್ಲಿ 6 ಇಂಚಿಗಿಂತಲೂ ಕಡಮೆ ಮಳೆ ಬೀಳುತ್ತದೆ. ಆದರೂ ಅಲ್ಲಿಯ ಭೂಮಿ ಫಲವತ್ತಾಗಿದೆ. ಕೊಲಂಬಿಯಾ ಎಂಬ ಒಂದು ದೊಡ್ಡ ನದಿ ಇದೆ. ಇದು ನೆಲದಡಿಯಲ್ಲಿ ಸುಮಾರು 100 ಅಡಿ ಆಳದಲ್ಲಿ ಹರಿಯುತ್ತದೆ. ನೀರು ಭರದಿಂದ ಓಡುತ್ತದೆ. ಮೇಲೆ ಭೂಮಿಯು ಒಣಗಿ ನೀರಿಲ್ಲದೆ ಬಾಯ್ಬಿಡುತ್ತದೆ. ಅಮೇರಿಕದ ಇಂಜಿನಿಯರರು ಒಂದು ನಿರ್ಧಾರಕ್ಕೆ ಬಂದ ಸ್ಪರ್ಧೆಯಲ್ಲಿದ್ದರು. ನದಿಗೆ ಅಡ್ಡವಾಗಿ "ಗ್ರಾಂಡ್ ಕೌಲೆ" ಎಂಬ ಹೆಸರಿನ ಅತಿ ದೊಡ್ಡ ಅಣೆಕಟ್ಟು ಕಟ್ಟಿದ್ದರು. ಅದಕ್ಕೋಸ್ಕರ ಹೇರಳ ಹಣ ವೆಚ್ಚವಾಯಿತು. ಇಲ್ಲಿ ಮೆಟ್ಟೂರಿಗಿಂತ 4 ಪಾಲಷ್ಟು ರಾಮಪಾದಸಾಗರದಲ್ಲಿರಬಹುದಾದಕ್ಕಿಂತ ಒಂದುವರೆ ಪಾಲಷ್ಟು ಹೆಚ್ಚಿಗೆ ಕಲ್ಲು ಕೆಲಸ ನಡೆಯಿತು. ನದಿಯೊಡನೆ ಪ್ರಚಂಡ ಸಮರವನ್ನು ನಡೆಸಬೇಕಾಯಿತೆಂದರೆ ಅತಿಶಯೋಕ್ತಿಯಾಗಲಾರದು. ಇಂಜನಿಯರರ ಯತ್ನವು ಸಫಲವಾಯಿತು. 550 ಅಡಿ ಆಳದ ಒಂದು ನೀರಾಶ್ರಯವನ್ನು ನಿರ್ಮಿಸಿ ಅದರಿಂದ 20 ಲಕ್ಷ ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಿದರು. ಇಡೀ ಹಿಂದೂಸ್ಥಾನದಲ್ಲಿ ನೀರಿನಿಂದ ತಯಾರಿಸಲ್ಪಡುವ ವಿದ್ಯುಚ್ಛಕ್ತಿಯ ಒಟ್ಟು ಪ್ರಮಾಣವು ಬರೆ 5 ಲಕ್ಷ ಯೂನಿಟ್‌ಗಳೆನ್ನುವಾಗ ಈ ಶಕ್ತಿಯ ಪ್ರಮಾಣವು ಎಷ್ಟೆಂದು ನಾವೇ ಊಹಿಸಿಕೊಳ್ಳಬಹುದು. ಈ ಗ್ರಾಂಡ್ ಕೌಲೆ ಅಣೆಕಟ್ಟಿನಲ್ಲಿ ಉತ್ಪಾದಿಸಲಾಗುವ ವಿದ್ಯುಚ್ಛಕ್ತಿಯ ಪ್ರಮಾಣದಲ್ಲಿ ಒಂದಂಶವು ಇದರ ಸುತ್ತಮುತ್ತ ಸುಮಾರು 300—400 ಅಡಿಗಳಷ್ಟು ಎತ್ತರದಲ್ಲಿರುವ ಜಮೀನುಗಳಿಗೆ ನೀರಾಶ್ರಯದಿಂದ ನೀರನ್ನು ಪಂಪುಗಳ ಮೂಲಕ ಹಾಯಿಸುವುದಕ್ಕೋಸ್ಕರ ಉಪಯೋಗಿಸಲಾಗುತ್ತದೆ. ಈ ರೀತಿಯಲ್ಲಿ 1 ಲಕ್ಷ ಎಕ್ರೆ ವಿಸ್ತೀರ್ಣಕ್ಕೆ ನೀರು ಹಾಯಿಸಬೇಕಾಗಿದೆ. ನಮಗೆ ಇದೊಂದು ಮುಖ್ಯ ಪಾಠವಾಗಿದೆ. ದೇಶದಿಂದ ಬಡತನವನ್ನು ಹೋಗಲಾಡಿಸಬೇಕಾದರೆ ನಾವು ಧೈರ್ಯದಿಂದ ಇಂತಹ ಕಾರ್ಯಗಳಿಗೆ ಕೈಯೊಡ್ಡಬೇಕು. ಭೂಮಿಯು ಎತ್ತರದಲ್ಲಿರಲಿ ತಗ್ಗಿನಲ್ಲಿರಲಿ, ಅದು ಫಲವತ್ತಾಗಿರುವವರೆಗೆ ನೀರಾಶ್ರಯಗಳನ್ನು ರಚಿಸಿಯಾಗಲೀ ಪಂಪುಗಳಮೂಲಕ ನೀರು ಹಾಯಿಸಿಯಾಗಲೀ ಅದಕ್ಕೆ ನೀರು ಒದಗಿಸಬೇಕು. ನಮ್ಮ ಪ್ರಾಂತದಲ್ಲಿ ರಾಯಲಸೀಮೆಯು ಗೋದಾವರಿ ಕೃಷ್ಣ ನದಿ ಮುಖಭೂಮಿಗಳಂತೆ ಫಲ ಸಮೃದ್ಧಿ ಪ್ರದೇಶವಾಗುವಂತೆ ಮಾಡುವ ಕ್ರಮವೆಂದರೆ, ಫಲವತ್ತಾದ ಭೂಮಿಗಳ ಬಗ್ಗೆ ಕ್ರಮವಾಗಿ ವಿಚಾರಣೆ ನಡೆಸುತ್ತಿದ್ದು, ಅವುಗಳಿಗೆ ಕೃಷ್ಣ, ಪೆನ್ನಾರ್ ಅಥವಾ ಸಮೀಪದಲ್ಲಿರುವ ಇನ್ನಾವುದೇ ನದಿಯಿಂದ ನೀರು ಹಾಯಿಸುವುದು ಒಂದು ಪ್ರತ್ಯೇಕ ಕಾರ್ಯದ ಮೂಲಕ ಮಾಡುತ್ತದೆ.

ನಮ್ಮ ಪ್ರಾಂತದಲ್ಲಿ ವಿದ್ಯುಚ್ಛಕ್ತಿಯು ಒಂದು ಪ್ರತ್ಯೇಕ ಕೆಲಸವನ್ನು ನಿರ್ವಹಿಸಬೇಕಾಗಿದೆ. ಅದರ ಮೂಲಕ ಇತರ ಸೌಕರ್ಯಗಳನ್ನು ಗಳಿಸಿಕೊಳ್ಳಬಹುದು ಮಾತ್ರವಲ್ಲ ಎತ್ತರದಲ್ಲಿರುವ ವಿಸ್ತಾರಭೂಮಿಗಳಿಗೆ ನೀರನ್ನು ಹಾಯಿಸಬೇಕು.

ಕೊಲಂಬಿಯಾದಿಂದ ಕೆಳಗೆ ಗ್ರಾಂಡ್ ಕೌಲೆ ಅಣೆಕಟ್ಟಿನಿಂದ 400 ಮೈಲು ದೂರದಲ್ಲಿ ಬಗ್ಗೆ ವಿಲ್ಲೆ ಎಂಬ ಇನ್ನೊಂದು ಅಣೆಕಟ್ಟಿದೆ. ಇಲ್ಲಿ ಅರ್ಧ ಮಿಲಿಯ ಕಿಲೋವಾಟ್‌ಗಳಷ್ಟು ವಿದ್ಯುತ್ ತಯಾರಾಗುತ್ತದೆ. ಅಮೇರಿಕನರು ಹೈಡ್ರೊ ಇಲೆಕ್ಟ್ರಿಕ್ ಶಕ್ತಿಯ ಉಪಯೋಗವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಕೊಲಂಬಿಯಾ ನದಿಗೆ ಇನ್ನೂ ಕೆಲವು ಅಣೆಕಟ್ಟುಗಳನ್ನು ಕಟ್ಟಿ ಹೆಚ್ಚು ವಿದ್ಯುಚ್ಛಕ್ತಿ ಪಡೆಯಬೇಕೆಂದು ಪ್ರೆಸಿಡೆಂಟ್ ಟ್ರೂಮನರು ಸೂಚಿಸಿದ್ದಾರೆ. ಸ್ನೇಕ್ ನದಿಯಿಂದ ಸಹ ವಿದ್ಯುತ್ತನ್ನು ಪಡೆವ ಇನ್ನೊಂದು ನಿದರ್ಶನವೆಂದರೆ ಕೊಲೊರೆಡೊ ನದಿಗೆ ಅಡ್ಡವಾಗಿ ಕಟ್ಟಿರುವ ಬೌಲ್ಡರ್ ಅಣೆಕಟ್ಟು. ನಮ್ಮ ದೇಶದ ಅನೇಕ ನದಿಗಳಿಗೆ ಹೋಲಿಸಿದರೆ ಇದೊಂದು ಸಣ್ಣ ನದಿಯಾಗಿದೆ. ಇದು ಕಾವೇರಿಯ 1/2 ರಷ್ಟಿದೆ. ಹೀಗಿದ್ದರೂ 726 ಅಡಿ ಎತ್ತರದ ಅಣೆಕಟ್ಟನ್ನು ಅದಕ್ಕೆ ಕಟ್ಟಿ 10 ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಪಡೆಯಲಾಗುತ್ತದೆ. ಇದೇ ರೀತಿ ಅನೇಕ ಅಣೆಕಟ್ಟುಗಳನ್ನು ನಿರ್ಮಿಸಲಾಗಿದೆ. ಇನ್ನೂ ಕೆಲವನ್ನು ನಿರ್ಮಿಸುವ ಆಲೋಚನೆ ಇದೆ

ಟಿ.ವಿ.ಎ ಯೋಜನೆ

ಅಮೇರಿಕದಲ್ಲಿ ಪ್ರಖ್ಯಾತ ಟಿ. ವಿ. ಎ. ಯೋಜನೆಯ ಕುರಿತು ನಾವೆಲ್ಲರೂ ಕೇಳಿರುವೆವು. ಇದು ಟೆನ್ನೆಸ್ಸೀ ನದಿಗೂ ಅದರ ಶಾಖೆಗಳಿಗೂ ಒಟ್ಟು 22 ನೀರಾಶ್ರಯಗಳನ್ನು ನಿರ್ಮಿಸಿದುದಲ್ಲದೆ ಹೆಚ್ಚೇನಿಲ್ಲ. ಟೆನ್ನೆಸ್ಸೀ ನದಿಯು ಮಿಸ್ಸಿಸ್ಸಿಪೀ ನದಿಯ ಶಾಖೆಯಾಗಿದೆ. ಈ ನದಿಯು ಸುಮಾರು ಕಾವೇರಿ ನದಿಯಷ್ಟಿದೆಯಾದರೂ ಈ ನದಿಗೆ ಕಟ್ಟಿದ ಅಣೆಕಟ್ಟುಗಳಿಂದ ತಯಾರಿಸುವ ವಿದ್ಯುತ್ತಿನ ಪ್ರಮಾಣ 20 ಲಕ್ಷ ಯೂನಿಟ್. ಹೀಗೆ ಅಮೇರಿಕಾ ದೇಶದ ಈಗಿನ ಅಭ್ಯುದಯವು ಸ್ವಾಭಾವಿಕ ಮೂಲಗಳ ಫಲವಲ್ಲ. ಅದರೆ ಅಲ್ಲಿಯ ಜನರು ಅಪೂರ್ವ ಯೋಜನೆಗಳನ್ನು ತಯಾರಿಸಿ ಧೈರ್ಯದಿಂದ ಹಾಗೂ ಕಷ್ಟಪಟ್ಟು ಕಾರ್ಯರೂಪಕ್ಕೆ ತಂದುದಾಗಿದೆ.

ನಮ್ಮ ದೇಶದ ಹನ್ನೆರಡರಲ್ಲಿ ಒಂದು ಪಾಲಷ್ಟು ವಿಸ್ತೀರ್ಣವಿರುವ ಇಂಗ್ಲೆಂಡಿನಲ್ಲಿ ಏನು ಮಾಡಲಾಗುತ್ತದೆಂದು ನೋಡೋಣ. ನದಿಗಳು ಅತಿ ಚಿಕ್ಕವು. ಕೆಲವೇ ಅಡಿಗಳಷ್ಟು ಅಗಲವಾಗಿವೆ. ವರ್ಷ ಇಡೀ

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚರಿತ್ರರಾದ S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಸೆಕ್ರಟರಿ

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟಾಂಪಿನೊಂದಿಗೆ ಬರೆಯಿರಿ

ತಾರಾನಾಥ ಆಯುರ್ವೇದ ವಿದ್ಯಾಪೀಠ
P O ಸಂಗನಕಲ್ಲು ಬಳ್ಳಾರಿ.

ವಿದ್ಯುತ್ತನ್ನು ಪಡೆಯಲು ನೀರು ಸಾಕಷ್ಟಿಲ್ಲ. ಆದರೂ ಧೈರ್ಯದಿಂದ ಯೋಜನೆಗಳನ್ನು ಕೈಕೊಂಡು ಅತಿ ಸುಲಭವಲ್ಲಿ ವಿದ್ಯುತ್ತನ್ನು ಒದಗಿಸಿಕೊಳ್ಳಲಾಗುತ್ತದೆ. ಜನ ಸಂಖ್ಯೆಯು ಕಡಮೆಯಿರುವ ಹಾಗೂ ಪರ್ವತ ಪ್ರದೇಶವಾಗಿರುವ ಸ್ಕಾಟ್‌ಲೆಂಡಿನಲ್ಲಿ ನೀರಾಶ್ರಯಗಳನ್ನು ಕಟ್ಟಿ ವಿದ್ಯುತ್ತನ್ನು ಉತ್ಪಾದನೆ ಮಾಡಲಾಗುತ್ತದೆ. ಹೀಗೆ ಗ್ರ್ಯಾಂಪಿಯನ್ ಯೋಜನೆಯಲ್ಲಿ ಸುಮಾರು ಒಂದು ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದನೆ ಮಾಡಿ ಫೋರ್ಟ್ ವಿಲ್ಲಿಯಮ್ಸನಲ್ಲಿ ಅಲ್ಯುಮಿನಿಯಂ ತಯಾರಿಸಲು ಉಪಯೋಗಿಸಲಾಗುತ್ತದೆ. ಈ ಯೋಜನೆಯಲ್ಲಿ ಹಲವಾರು ಇಂಜನಿಯರಿಂಗ್ ಸಂಬಂಧವಾದ ಕಷ್ಟಗಳಿದ್ದವು. ಬ್ರಿಟನ್‌ನಲ್ಲಿ ಅತಿ ಎತ್ತರವಾದ ಬೆನ್ ನೆವಿಸ್ ಪರ್ವತದೊಳಗಿಂದಾಗಿ ಸುಮಾರು 13 ಮೈಲು ಉದ್ದದ ದೊಡ್ಡ ಸುರಂಗವನ್ನು ಕೊರೆಯಬೇಕಾಗಿತ್ತು. ಆದರೆ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಯಿತು. ಇದೇ ರೀತಿ ಗೇಲೋವೇ ಯೋಜನೆಯು ಗ್ಲಾಸ್ಗೋನಗರಕ್ಕೆ ಬೇಕಾದ ಯಾವತ್ತು ವಿದ್ಯುಚ್ಛಕ್ತಿಯನ್ನು ಪೂರೈಸುತ್ತದೆ. ಈ ಯೋಜನೆಯಲ್ಲಿ ತಯಾರಿಸಲ್ಪಡುವ ವಿದ್ಯುತ್ ಪ್ರಮಾಣವು ಹೆಚ್ಚಿಲ್ಲವಾದರೂ ಅಷ್ಟಕೋಸ್ಕರ 10—12 ಮೈಲುಗಳಿಗಿಂತ ಉದ್ದವಿಲ್ಲದ ಚಿಕ್ಕ ಪುಟ್ಟ ನದಿಗಳಿಗೆ ಅನೇಕ ಒಡ್ಡುಗಳನ್ನು ಹಾಕಬೇಕಾಯಿತ. ಈಗ ಇದು ಅಲ್ಲಿಯವರಿಗೆ ಒಂದು ದೊಡ್ಡ ವರ ಪ್ರಸಾದವಾಗಿದೆ. ಸ್ಕಾಟ್‌ಲೆಂಡನಲ್ಲಿಯೂ ಅನೇಕ ಯೋಜನೆಗಳು ವಿದ್ಯುದುತ್ಪಾದನೆಗೋಸ್ಕರ ಸಿದ್ಧವಾಗಿವೆ.

ರಷ್ಯಾ ದೇಶದ ಇಂದಿನ ವೈಭವಕ್ಕೆ ಡ್ನೀಪರ್‌ಸ್ಟ್ರೋಯಿ ಅಣೆಕಟ್ಟಿನಿಂದ ಪಡೆಯುವ ವಿದ್ಯುಚ್ಛಕ್ತಿಯೇ ಕಾರಣ. ಈ ಅಣೆಕಟ್ಟನ್ನು 20 ವರ್ಷಗಳ ಹಿಂದೆ ನಿರ್ಮಿಸಲಾಗಿತ್ತು. ಇಲ್ಲಿ ಸುಮಾರು 5 ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ ತಯಾರಾಗುತ್ತದೆ.

ಬಿಳಿ ಇದ್ದಿಲು

ಸ್ವಿಜರ್‌ಲೇಂಡ್, ಸ್ವೀಡನ್‌ಗಳು ಅತಿ ಚಿಕ್ಕ ದೇಶಗಳು. ಜನಸಂಖ್ಯೆ ಅತಿ ಕಡಮೆ. ಇಡೀ ಸ್ವೀಡನಿನ ಜನ ಸಂಖ್ಯೆ 60 ಲಕ್ಷಕ್ಕಿಂತಲೂ ಕಡಮೆ. ಯಾವದೂ ಸುಲಭವಾಗಿ ದೊರೆಯುವ ವಸ್ತುಗಳಲ್ಲಿ ಅನೇಕವು ಆ ದೇಶಗಳಲ್ಲಿ ನಿರ್ಮಿಸಲ್ಪಡುವವುಗಳಾಗಿವೆ. ಜನರು ತುಂಬಾ ಅಭಿವೃದ್ಧಿ ಹೊಂದಿದವರಾಗಿರುವರು. ಅತಿ ಸುಲಭವಲ್ಲಿ ವಿದ್ಯುಚ್ಛಕ್ತಿ ದೊರೆಯುವುದೇ ಕಾರಣ. ಸ್ವಿಜರ್‌ಲೇಂಡಿನಲ್ಲಿ ಹೈಡ್ರೋ ಇಲೆಕ್ಟ್ರಿಕ್ ಪವರು ಎಷ್ಟು ಜನಪ್ರಿಯವಾಗಿದೆಯೆಂದರೆ ಅವನ್ನು ಬಿಳಿ ಇದ್ದಲು ಎಂದು ಕರೆಯುತ್ತಾರೆ. ನಮ್ಮ ದೇಶದ ಸ್ಥಿತಿ ಹೇಗಿದೆ? ನಮ್ಮಲ್ಲಿ ಕಲ್ಲಿದ್ದಲು ಹೆಚ್ಚಿಲ್ಲ. ಎಷ್ಟೋ ಇಲ್ಲ. ಆದರೆ ಬಿಳಿ ಇದ್ದಲು ಬೇಕಾದಷ್ಟು ಇದೆ. ಇದು ಬೇರೆ ದೇಶಗಳನ್ನು ಅತಿ ಅಭಿವೃದ್ಧಿಗೊಳಿಸಿದೆ. ಈ ದೇಶದಲ್ಲಿ ಸುಲಭವಾಗಿ 401 ಲಕ್ಷ ಯೂನಿಟ್‌ಗಳಷ್ಟು ವಿದ್ಯುತ್ತನ್ನು ನೀರಿನಿಂದ ತಯಾರಿಸಬಹುದೆಂದು ಅಂದಾಜು ಮಾಡಲಾಗಿದೆ. ಈವರೆಗೆ ನಾವು ಪಡೆಯುತ್ತಿರುವುದು ಒಟ್ಟು 5 ಲಕ್ಷ ಯೂನಿಟ್ ಮಾತ್ರ. ನಮ್ಮ ಜನಾಂಗವನ್ನು ಅಭಿವೃದ್ಧಿಗೊಳಿಸಬೇಕಾದರೆ ಎಷ್ಟು ಅಪಾರ ಅವಕಾಶಗಳಿವೆ ಎಂಬುದಕ್ಕೆ ಇದೊಂದು ಸಾಕ್ಷಿ. ಅದನ್ನು ಅನುಕೂಲಾಗ್ರವಾಗಿ ವಿಚಾರಿಸಿ, ಶೀಘ್ರದಲ್ಲಿ ಕಾರ್ಯರೂಪಕ್ಕೆ ತರಬೇಕಾಗಿದೆ ಮಾತ್ರ.

ನೀರಿನಲ್ಲಿ ಶಕ್ತಿ ಇದೆ

ಜಲಶಕ್ತಿ ಎಂದರೂ ವಿದ್ಯುಚ್ಛಕ್ತಿಯೆಂದರೂ ಒಂದೇ. ಮನುಷ್ಯನಿಗಿರುವ ಅತ್ಯಗತ್ಯ ಕೆಲಸಗಳಿಗೆ ವಿದ್ಯುಚ್ಛಕ್ತಿ ಪ್ರತಿಯೊಂದಕ್ಕೂ ಅದನ್ನು ಉಪಯೋಗಿಸಬಹುದು. ಆದರೆ ಅದನ್ನು ಬಳಕೆಗೆ ತರಬೇಕು ಮತ್ತು ಕಾಪಾಡಬೇಕು. ಕೃಷ್ಣಾ, ಗೋದಾವರಿ ನದಿಗಳೂ ಅವುಗಳ ಶಾಖೆಗಳೂ ಹೇರಳ ವಿದ್ಯುಚ್ಛಕ್ತಿ ಕೊಡುವಂಥವುಗಳು. ಈ ವರೆಗೆ ಅವನ್ನು ನಾವು ಮುಟ್ಟಿಲ್ಲ. ದಡದಲ್ಲಿ ಎತ್ತರವಾಗಿರುವ ಭೂಮಿಗಳು ಸಾಗುವಳಿಗೆ ಅತ್ಯುತ್ತಮ ಸ್ಥಳಗಳಾಗಿವೆ. ಹರಿಯುತ್ತಿರುವ ನೀರಿನಿಂದ ವಿದ್ಯುಚ್ಛಕ್ತಿಯನ್ನು ಪಡೆಯಬಹುದು. ನೀರನ್ನು ಮೇಲೆ ಏರಿಸಿ ಕಾಲುವೆಯ ಮೂಲಕ ಆ ಭೂಮಿಗಳಿಗೋಸ್ಕರ ಸಾಗಿಸಬಹುದು. ಆಗ ಎಲ್ಲೆಲ್ಲೂ ಅಭಿವೃದ್ಧಿಯಾಗುವುದು. ರಾಯಲಸೀಮೆಯು ಗದ್ದೆಗಳಾಗುವವು? ಕೃಷ್ಣ ಗೋದಾವರಿ ನದಿ ಮುಖಭೂಮಿಗಳು ಯಥೇಚ್ಛವಾಗಿವೆ ಎಂದು ಕೇಳಿ. ಇದಿಯಲು ಸಾಧ್ಯವಾಗಲಾರದು. ಈ ಸುಖ ಸಮೃದ್ಧಿಗಾಗಿ ಆಗಿನ ಜನರು ಕಾಯ್ಕೊಳ್ಳಬೇಕು. ಆಗಲೇ ಸಾಮಾನ್ಯ ಮನುಷ್ಯನು ನೀರಿನಲ್ಲಿ ಶಕ್ತಿಯಿದೆಯೆಂದು ನಾವು ಹೇಳಿದರೆ ಒಪ್ಪುವರು.

ಆದವಾನಿ

ಆದವಾನಿ ತಾಲೂಕ ಆದವಾನಿ ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಂಘದ ಪ್ರಚಾರ ಕಾರ್ಯಕ್ಕಾಗಿ ಆಲೂರು ತಾಲೂಕು ತಾಲೂಕಿನಲ್ಲಿ ಈ ಸಂಘದವರಿಂದ ಶ್ರೀ ಜಿ. ನಾಗಲಿಂಗನಗೌಡರು ... ರಂಗನಗೌಡರು ಪಿ. ವೀರನಗೌಡರು ಕೋ. ಹನುಮಂತಪ್ಪನವರು ವಿ. ವೆಂಕಟಯ್ಯನವರು ಮೊದಲಾದವರು ಹಳ್ಳಿಗಳಲ್ಲಿ ಕರ್ನಾಟಕ ಏಕೀಕರಣದ ಬಗ್ಗೆ ಮುದ್ರಿತ ಪತ್ರಗಳನ್ನು ಕೊಡುತ್ತಿರುವರು.

ಪ್ರಚಾರಕ್ಕಾಗಿ ಆಲೂರು, ಆದವಾನಿ, ಪತ್ತಿ, ರಾಯದುರ್ಗ ತಾಲೂಕುಗಳಲ್ಲಿ ಹೋದಾಗ್ಗೆ ಕೆಳಕಂಡ ಮಹನೀಯರು ಉದಾರ ಹಸ್ತದಿಂದ ದೇಣಿಗೆ ಕೊಟ್ಟಿರುವರಾಗಿ ತಿಳಿದಿದೆ.

ಶ್ರೀ. ಪಿಣ್ಣಾಪ ಚೆನ್ನರೆಡ್ಡಿ ನಾಗನಾಥನಹಳ್ಳಿ ೧೦೧ ರೂ ಶ್ರೀ ವೆಂಕಟರೆಡ್ಡಿ ಯವರು ೧೦೧ ರೂ ಶ್ರೀ ಗೌಡ್ರ ನಾಗಿರೆಡ್ಡಿಯವರು ೧೦೧ ರೂ ಶ್ರೀ ಪಾಟೀಲ ಬಸನಗೌಡರು ಯಳ್ಳಾರ್ತಿ ೫೧ ರೂ ಶ್ರೀ ರಂಗಾರೆಡ್ಡಿಯವರು ೫೦ ರೂ ಶ್ರೀ ಗಿರಿರೆಡ್ಡಿಯವರು ೧೦೧ ರೂ ಶ್ರೀ ಕರಿಬಸನಗೌಡರು ೧೦೧ ರೂ ಶ್ರೀ ಗಡ್ಡಿ ರುದ್ರಪ್ಪನವರು ೧೦೧ ರೂ ಶ್ರೀ ಬಸವರಾಜ ಗೌಡರು ವಿರುಪಾಕ್ಷ ೧೦೧ ರೂ ಶ್ರೀ ಎಚ್. ಕರಿಬಸನಗೌಡರು ೫೧ ರೂ ಶ್ರೀ ಪಾಟೀಲ ನಾಗನಗೌಡರು ೫೧ ರೂ ಶ್ರೀ ಹಿರೇಗೌಡರು ಬಸವರಾಜಗೌಡರು ೫೧ ರೂ ಶ್ರೀ ಎ ಬಸವನಗೌಡರು ೨೦ ರೂ ದಾಸಗೌಡ್ರು ಬಸವನಗೌಡ್ರು ೫೧ ರೂ ಶ್ರೀ ವಾಸನಗೌಡರು ದೊಡ್ಡ ಬಸನಗೌಡ್ರು ೨೫ ರೂ ಶ್ರೀ ಆರ್ ಬಸನಗೌಡರು ಸುಳುವಾಯಿ ೫೦ ರೂ ಸಿ. ಬಸವನಗೌಡರು ಒಟ್ಟು ೧೦೫೧ ರೂ ಎಂದು ವೆಂಕಟಯ್ಯ ಬಿ. ಜಿ. ಕೆ. ಪಿ. ಸಂ. ಕಾರ್ಯದರ್ಶಿ ಇವರು ತಿಳಿಸುತ್ತಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ ಎ ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

(1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ.

4—7—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B. Keshava Rao.

JAI-HIND.

ನವಭಾರತ

ಒಬ್ಬರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೧೧ ಜುಲೈ ೧೯೪೯ | ಸಂಚಿಕೆ ೨೫

ನಮಗೆ ಬರಬೇಕಾದ ಸಾಲ

ಕಳೆದ ಮಹಾಯುದ್ಧವು ಅನೇಕ ಪ್ರಬಲ ರಾಷ್ಟ್ರಗಳನ್ನು ಹಣ್ಣು ಮಾಡಿರುವುದನ್ನು ನಾವು ನೋಡುತ್ತಿದ್ದೇವೆ. ಸೋತ ರಾಷ್ಟ್ರಗಳಂತೂ ನೆಲಕ್ಕೇ ಹತ್ತಿದ್ದವು ಗೆದ್ದ ರಾಷ್ಟ್ರಗಳು ಕೂಡ ಅದರ ಪೆಟ್ಟಿನಿಂದ ಇನ್ನೂ ಸವರಿಸಿಕೊಂಡು ಪೂರ್ಣಸ್ಥಿತಿಗೆ ಬಂದು ಮುಟ್ಟಿಲ್ಲ.

ಇದೇ ಕಾರಣದಿಂದ ಬ್ರಿಟನ್ನವು ತನ್ನ ಸ್ಥಿತಿಯನ್ನು ಇನ್ನೂ ಸುಧಾರಿಸಿಕೊಳ್ಳುತ್ತಿದೆ. ಅದು ಹಿಂದುಸ್ಥಾನದಿಂದ ಅನೇಕ ವಸ್ತು ಒಡವೆಗಳನ್ನು ಯುದ್ಧದ ಕಾಲದಲ್ಲಿ ಉಪಯೋಗಿಸಿದ್ದರಿಂದ ಸುಮಾರು 1500 ಕೋಟಿ ರೂಪಾಯಿಗಳನ್ನು ಈ ದೇಶಕ್ಕೆ ಕೊಡಬೇಕಾಯಿತು. ಹಿಂದುಸ್ಥಾನದಲ್ಲಿ ಎರಡು ಭಾಗವಾದ್ದರಿಂದ ಪಾಕಿಸ್ತಾನಕ್ಕೆ ಈ ಬರತಕ್ಕ ಹಣದಲ್ಲಿಯ ಕೆಲವು ಭಾಗವು ಹಂಚಿಹೋಯಿತು. 1200 ಕೋಟಿ ರೂಪಾಯಿಗಳು ಈ ಲೆಕ್ಕದ ನಂತರ ಹಿಂದುಸ್ಥಾನಕ್ಕೆ ಬರಬೇಕಾಯಿತು.

ಇಷ್ಟು ಹಣವನ್ನು ಕೊಡಬೇಕೆಂದಿರುವಾಗ ಬ್ರಿಟನ್ನವು ಸ್ವಲ್ಪ ಹೊಟ್ಟೆ ಕಚ್ಚಿಕೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಅಲ್ಲಿಯ ಹಲಕೆಲವು ಮಂಡಿಗರು, ವಿಶೇಷತಃ ಚರ್ಚಿಲ್ಲರ ಮನೋವೃತ್ತಿಯವರು, 'ಹಿಂದುಸ್ಥಾನದ ಹಿತದ ದೃಷ್ಟಿಯೂ ಈ ಯುದ್ಧದಲ್ಲಿತ್ತು, ಅಂದ ಮೇಲೆ ಆ ಸಂಬಂಧವಾಗಿ ವೆಚ್ಚವಾದ ಹಣವನ್ನು ಹಿಂದುಸ್ಥಾನವು ಬ್ರಿಟನ್ನಿನಿಂದ ಹೇಗೆ ಕೇಳಬಲ್ಲದು?' ಎಂಬಂತಹ ಮಾತಾಡಿದರು. ಆದರೆ ಅವರ ವಿಚಾರಕ್ಕೆ ಜಯಸಿಗಲಿಲ್ಲ. ಹಿಂದುಸ್ಥಾನದ ಮೇಲೂ ಈ ಯುದ್ಧವು ಭಾರವಾಗಿತ್ತು. ಆದರೆ ಸಾಮ್ರಾಜ್ಯವಾದಿಗಳು ತಮ್ಮ ಹಿತಸಂರಕ್ಷಣೆಗಾಗಿ ಮಾಡಿಕೊಂಡ ಕಾರ್ಯಕ್ಕೆ ಸಂಬಂಧವಾದ ವೆಚ್ಚವು ಅದರ ಮೇಲೆಯೇ ಬೀಳಬೇಕೆಂಬ ಮಾತನ್ನು ಬ್ರಿಟಿಶ ಮುತ್ಸದ್ದಿಗಳು ಒಪ್ಪಲೇ ಬೇಕಾಯಿತು. ಆದ್ದರಿಂದ ಅವರು ಮೇಲೆ ಹೇಳಿದ ಸಾಲವನ್ನು ಹಿಂದುಸ್ಥಾನಕ್ಕೆ ಕೊಡಲು ಒಪ್ಪಿದರು.

ವಸ್ತುಗಳ ರೂಪದಲ್ಲಿ

ಈ ಹಣವನ್ನು ನಗದು ಕೊಡಲು ಮಾತ್ರ ಆಗುವುದಿಲ್ಲವೆಂದು ಬ್ರಿಟನ್ನವು ಹೇಳಿತು. ಹಿಂದುಸ್ಥಾನವು ತನಗೆ ಬೇಕಾದ ಸಾಮಾನನ್ನು ಬ್ರಿಟನ್ನದಿಂದ ತರಿಸಿಕೊಂಡು ಅದನ್ನು ಮುಟ್ಟಿಸಿಕೊಳ್ಳಬೇಕೆಂದು ನಿರ್ಧಾರವಾಯಿತು.

ಬ್ರಿಟಿಶರು ಈ ಮಾತಿನಿಂದ ಒಂದು ಲಾಭವನ್ನೇ ಸಾಧಿಸಿಕೊಂಡರು ಎಂಬ ಮಾತು ಸ್ಪಷ್ಟವಿದೆ. ಇಷ್ಟು ದೊಡ್ಡ ಹಣದ ಬಗ್ಗೆ ಅದರ ವಸ್ತುಗಳು ಹಿಂದುಸ್ಥಾನಕ್ಕೆ ಮಾರಾಟವಾಗಬೇಕೆಂದಾದ ಮೇಲೆ ಅವರ ವ್ಯಾಪಾರಕ್ಕೆ ಒಂದು ದೊಡ್ಡ ಪೇಟೆ ಸಿಕ್ಕಂತಾಯಿತು ಮತ್ತು ಈ ವ್ಯಾಪಾರದಿಂದ ಅವರಿಗೆ ಆಗುವ ಲಾಭದಲ್ಲಿಯೇ ಅವರು ಸಾಲದಲ್ಲಿಯ ಕೆಲವು ಭಾಗವನ್ನು ಹಗುರು ಮಾಡಿಕೊಳ್ಳುವುದಾಗಿ ಎಣಿಸಿದರು.

ದುಡ್ಡು ಬರುಗಿ ಬರಬೇಕೆಂಬ ದೃಷ್ಟಿಯಿಂದ ಹಿಂದುಸ್ಥಾನವು ಈ ಮಾತನ್ನು ಒಪ್ಪಿಕೊಂಡಿತು. ಮತ್ತು ಪ್ರತಿವರ್ಷ ಎಷ್ಟು ಹಣದ ಸಾಮಾನುಗಳನ್ನು ತಾನು ಬ್ರಿಟನ್ನಿನಿಂದ ಕೊಂಡುಕೊಳ್ಳಬೇಕು ಎಂಬುದೇ ಮೊದಲಾದ ಮಾತುಗಳನ್ನು ಗೊತ್ತುಮಾಡಿಕೊಂಡಿತು.

ಸದ್ಯಕ್ಕೆ ನಡೆದದ್ದು

ಪ್ರತಿವರ್ಷ ಮುಂದಿನ ಮೂರು ವರ್ಷಗಳವರೆಗೆ 120 ಕೋಟಿ ರೂಪಾಯಿಗಳ ಸರಕುಗಳನ್ನು ಹಿಂದುಸ್ಥಾನವು ತನ್ನಿಂದ ತರಿಸಿಕೊಳ್ಳಬಹುದೆಂದು ಬ್ರಿಟನ್ನು ಹೋದ ವರುಷ ಜೂನ ತಿಂಗಳಲ್ಲಿ ಮಾತು ನಡೆದ ಕಾಲಕ್ಕೆ ಒಪ್ಪಿಕೊಂಡಿತು. 1948-49 ನೇ ವರ್ಷದಲ್ಲಿ ಹಿಂದುಸ್ಥಾನವು 120 ಕೋ. ರೂ. ಗಳ ಸಾಮಾನುಗಳನ್ನು ಅಲ್ಲಿಂದ ತರಿಸಿಕೊಂಡಿದೆ. ಅಷ್ಟೇ ಅ ಅದಕ್ಕಿಂತ 4 ಕೋಟಿ 20 ಲಕ್ಷ ರೂಪಾಯಿಗಳ ಸಾಮಾನುಗಳನ್ನು ಹೆಚ್ಚು ತರಿಸಿದೆ.

ಹೀಗೆ ಹೆಚ್ಚು ತರಿಸಿಕೊಳ್ಳುವದಕ್ಕೆ ಬ್ರಿಟನ್ನವು ಒಪ್ಪಿಗೊಂಡಿತು ಏಕೆಂದರೆ, ಅದರಿಂದ ತನ್ನ ಸರಕು ಹೆಚ್ಚಾಗಿ ಹೊರಗೆ ಹೋಗಿ ತನಗೆ ಲಾಭವೇ ಆಗುವುದೆಂಬುದನ್ನು ಅದು ಕಂಡುಕೊಂಡಿತು. ಹಿಂದುಸ್ಥಾನಕ್ಕಾದರೂ ಎಷ್ಟು ಹೆಚ್ಚು ಸರಕುಸಿಕ್ಕರೂ ಅದು ಬೇಕೇಬೇಕು ಎಂಬ ಪರಿಸ್ಥಿತಿ ಇಂದಿನ ಇಲ್ಲಿಯ ಅತಿಪ್ರಸರಣ, ಸರ್ವ ಕ್ಷೇತ್ರಗಳಲ್ಲಿರುವ ತುಟಾಗ್ರತೆ ಮೂಲಕ ಇದರ ಹಸಿವು ಹೆಚ್ಚೇ ಇದೆ.

ಮತ್ತೊಂದು ಮಾರ್ಗ

ಮತ್ತೊಂದು ರೀತಿಯಿಂದ ಬ್ರಿಟನ್ನವು ತನ್ನ ಸಾಲವನ್ನು ಹಿಂದುಸ್ಥಾನಕ್ಕೆ ಮುಟ್ಟಿಸಬಲ್ಲದಾಗಿದೆ. ಅದರ ವ್ಯವಹಾರವು ಅಮೇರಿಕೆಯಂತಹ ಡಾಲರ್ ಕ ದೇಶಗಳೊಡನೆ ಇದೆ ಆ ದೇಶಗಳಿಗೆ ತನ್ನ ಹೊಣೆಹೇರಿಸಿ ಹಿಂದುಸ್ಥಾನಕ್ಕೆ ಸರಕುಗಳನ್ನು ಒದಗಿಸಿಕೊಡಬಹುದಾಗಿದೆ. ಇದನ್ನೂ ಅದು ಮಾಡುತ್ತಿದೆ. ಈ ರೀತಿಯಾಗಿ ಅದು 1948-49 ನೇ ವರ್ಷದಲ್ಲಿ 22½ ಕೋ. ರೂಪಾಯಿಗಳ ಸರಕನ್ನು ಹಿಂದುಸ್ಥಾನಕ್ಕೆ ಕೊಡಿಸಿದೆ. ಆದರೆ ಇದು ಹಿಂದುಸ್ಥಾನಕ್ಕೆ ಸಾಲಲಿಲ್ಲ ಆ ವರ್ಷದಲ್ಲಿ ಹಿಂದುಸ್ಥಾನವು ಸುಮಾರು ಕೋಟಿ ರೂಪಾಯಿಗಳ ಸಾಲವನ್ನು ಅಂತರರಾಷ್ಟ್ರೀಯ ನಿಧಿಯಿಂದ ತೆಗೆಯಬೇಕಾಯಿತು. ನಡೆಯುವ ವರ್ಷ ಇದಕ್ಕೂ ಹೆಚ್ಚಿನ ಸಾಲವ ಅದು ಮಾಡಬೇಕಾದ ಪ್ರಸಂಗವಿದೆ. ಹಾಗೆ ಸಾಲವನ್ನು ಬೇಕಾದಷ್ಟು ಮಾಡಲು ಬರುವಂತಿಲ್ಲ ಮತ್ತು ಅದು ಸಿಗುವಂತಿಲ್ಲವಾದ್ದರಿಂದ, ಬ್ರಿಟನ್ನವು ಹೆಚ್ಚು ವಿಧದ ಸರಕನ್ನು ಬೇರೆ ದೇಶಗಳಿಂದ ಹಿಂದುಸ್ಥಾನವು ಕೊಳ್ಳುವ ಪರಿಸ್ಥಿತಿಯನ್ನು ಹುಟ್ಟಿಸಬೇಕೆಂಬ ಮಾತುಕತೆಗಳು ಈಗ ನಡೆಯುತ್ತಿವೆ.

ಎಂಥ ಸರಕು ನಮಗೆ ಬೇಕು

ಬ್ರಿಟನ್ನಿನಿಂದಾಗಲಿ, ಇತರ ದೇಶಗಳಿಂದಾಗಲಿ ಎಂತಹ ಸರಕು ಹಿಂದುಸ್ಥಾನವು ತರಿಸಿಕೊಳ್ಳುವುದು ಯೋಗ್ಯವಾಗುವುದು? ಎಂಬ ವಿಚಾರ ಈಗ ನಿರ್ಧರಿಸಲ್ಪಡಬೇಕಾಗಿದೆ. ಜನರ ಉಪಯೋಗಕ್ಕೆ ಬೇಕಾಗುವ ಸರಕನ್ನು ತರಿಸುವುದನ್ನು ಈಗಾಗಲೇ ಹಿಂದುಸ್ಥಾನವು ಮಾಡಿದೆ. ಆದರೆ ಅದುವರೆಗೆ ನಮ್ಮ ದೇಶದಲ್ಲಿ ಬೆಳೆಯಬೇಕಾದ ಉದ್ಯೋಗಗಳಿಗೆ ಭಂಗವುಂಟಾಗುವುದು ಎಂಬ ಮಾತು ಅದರ ಲಕ್ಷ್ಯಕ್ಕೆ ಬಂದಿತು. ಆದ್ದರಿಂದಲೇ ಅದು ನಡವೆ ಐಷಆರಾಮಿನ ಮತ್ತು ಸಾಯಕಲ್ಲುಗಳಂತಹ ವಸ್ತುಗಳನ್ನು ಹೊರಗಿನಿಂದ ತರಿಸುವುದಕ್ಕೆ ಅಡ್ಡಿ ಹಾಕಿತು. ಅದರಿಂದ ನಮ್ಮ ಸಾಲದ ಹಣವನ್ನು ಸಾಕಷ್ಟು ಉಪಯೋಗಿಸುವುದಕ್ಕೆ ಅಡ್ಡಿಯಾಗಹತ್ತಿತು.

ಯಂತ್ರಗಳು, ಆಹಾರಧಾನ್ಯ ಇವುಗಳನ್ನು ಹೆಚ್ಚಾಗಿ ತರಿಸಲು ಹಿಂದುಸ್ಥಾನವು ಇಚ್ಛಿಸಿತು. ಆದರೆ ನಮ್ಮ ದೇಶದಲ್ಲಿಯ ಉದ್ಯೋಗಗಳನ್ನು ನಡೆಸುತ್ತಿರುವ ಶ್ರೀಮಂತರು ಈ ಸಂಬಂಧವಾಗಿ ಹೆಚ್ಚಾಗಿ ಮುಂದೆ ಬರಲಿಲ್ಲ. ಆಹಾರ ಧಾನ್ಯಗಳ ಮೂಲಕವೇ ಆ ಹಣವನ್ನು ವೆಚ್ಚಮಾಡುವುದು ಸಾಧ್ಯವೂ ಆಗಲಿಲ್ಲ. ಆದ್ದರಿಂದ ಹಿಂದುಸ್ಥಾನ ಸರಕಾರವು ಮೆಲ್ಲನೆ ಐಷಆರಾಮವೇ ಮೊದಲಾದ ವಸ್ತುಗಳನ್ನು ಹೊರಗಿನಿಂದ ಬಿಡಲು ಪ್ರಾರಂಭಿಸಿತು.

ಮುಂದಿನ ಯೋಜನೆ

ಇವೆಲ್ಲ ಮಾತುಗಳ ಬಗ್ಗೆ ನಮ್ಮ ಅರ್ಥಶಾಸ್ತ್ರದಲ್ಲಿ ಕೇಂದ್ರದ ಮಂತ್ರಿಗಳು ಬ್ರಿಟನ್ನಿನೊಡನೆ ಮಾತಾಡುತ್ತಿದ್ದಾರೆ. ಏನೇ ಇರಲಿ ಈಗ ಹಿಂದುಸ್ಥಾನದ ಮುಂ

ಇರುವ ಪ್ರಶ್ನೆಯೆಂದರೆ, ನಮಗೆ ಬರಬೇಕಾದ ಸಾಲದ ಹಣವನ್ನು ನಾವು ಉಪಯೋಗಿಸಿಕೊಂಡಂತಾಗಬೇಕು. ಮತ್ತು ಅದು ನಮ್ಮ ದೇಶದ ಉದ್ಯೋಗಾಭಿವೃದ್ಧಿಗೆ ಅತಂಕವಾಗದಂತೆ ನಡೆಯಬೇಕು ಎಂಬ ಬಗ್ಗೆ ಒಂದು ಮಾರ್ಗವನ್ನು ಶೋಧಿಸುವುದಾಗಿದೆ

ಕೇವಲ ಯಂತ್ರಸಾಮಗ್ರಿಗಳನ್ನು ಮತ್ತು ಆಹಾರಧಾನ್ಯಗಳನ್ನು ಪರದೇಶದಿಂದ ವಿಶೇಷತಃ ಬ್ರಿಟನ್ನಿನಿಂದ ಹಿಂದುಸ್ಥಾನವು ತರಿಸಿಕೊಳ್ಳಬೇಕು ಎಂದು ಅರ್ಥಶಾಸ್ತ್ರಜ್ಞರು ಹಿಂದುಸ್ಥಾನ ಸರಕಾರಕ್ಕೆ ಸಲಹೆಯನ್ನೀಯುತ್ತಿದ್ದಾರೆ. ಈ ಸಾಮಗ್ರಿಗಳನ್ನು ಕೂಡ ನಾವು ಸಂಪೂರ್ಣವಾಗಿ ಹೊರಗಿನಿಂದ ತರಿಸುವಂತಿಲ್ಲ.

ನಮ್ಮಲ್ಲಿ ಯಂತ್ರ ನಿರ್ಮಾಣದಲ್ಲಿ ಕೂಡ ಈಗ ಪ್ರಗತಿಯಾಗಬೇಕೆಂಬ ಮಾತು ನಡೆದಿದೆ. ಸರಕಾರವು ಅಲ್ಲಲ್ಲಿ ಆ ಸಂಬಂಧವಾದ ಕಾರ್ಖಾನೆಗಳನ್ನು ತೆರೆಯುತ್ತಿದೆ, ಮತ್ತು ಹೆಚ್ಚು ಆಹಾರವನ್ನು ಬೆಳೆಯಬೇಕೆಂಬ ಬಗ್ಗೆಯೂ ವಿಶ್ವಪ್ರಯತ್ನ ನಡೆಸಿದೆ. ದೇಶದಲ್ಲಿಯ ಒಂದು ಇಂಚು ಸ್ಥಳ [ಸಾಗು ಮಾಡಲ್ಪಡಬಲ್ಲ] ವೂ ಕೂಡ ಬೀಳುಬೀಳದಂತಹ ವ್ಯವಸ್ಥೆ ಮಾಡಲು ನಮ್ಮ ದೇಶದ ಪೂರೈಕೆ ಶಾಖೆಯು ಯತ್ನಿಸುತ್ತಿದೆ. ಹೀಗಿರುವಾಗ ಹೊರಗಿನಿಂದ ಈ ಸಂಬಂಧವಾಗಿ ಕೂಡ ಯಾವ ಸಾಮಗ್ರಿಯನ್ನು ಎಷ್ಟರ ಮಟ್ಟಿಗೆ ತರಿಸಿಕೊಳ್ಳಬೇಕೆಂಬ ಬಗ್ಗೆ ಹಿಂದುಸ್ಥಾನ ಸರಕಾರವು ಈಗ ಆಲೋಚಿಸಬೇಕಾದ ಪ್ರಸಂಗವಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಕಸ್ತೂರಿಬಾ ಸ್ಮಾರಕ ಕೇಂದ್ರ ವಿಚಾರ.

.... ಪ್ರಕಟನೆ ....

ತಾ. 17-7-49 ರವಿವಾರ ಸಾಯಂಕಾಲ 5 ಗಂಟೆಗೆ ಶ್ರೀ ವೇಣುಗೋಪಾಲಾಚಾರಿಯವರ ಆಫೀಸಿನಲ್ಲಿ ಕಸ್ತೂರಬಾ ಶಿಬಿರವನ್ನು ನಮ್ಮ ಜಿಲ್ಲೆಯಲ್ಲಿ ಪ್ರಾರಂಭಿಸುವ ಸಲುವಾಗಿ ಆಲೋಚನೆ ಸಭೆ ಕೂಡುವದು. ತಾವು ಸಕಾಲಕ್ಕೆ ಬರಬೇಕೆಂದು ವಿನಂತಿ.

ಬಾರದೇ ಇರುವವರು ಸೂಕ್ತ ಸಲಹೆಗಳನ್ನು ಕಳಿಸತಕ್ಕದ್ದು.

ಆದರೆ ಯಾವ ಹಳ್ಳಿಯಲ್ಲಿ ಕಸ್ತೂರಬಾ ಗ್ರಾಮಸೇವಾ ಕೇಂದ್ರ ತೆರೆಯಬೇಕೆಂದಿದೆಯೋ ಆ ಹಳ್ಳಿಯ ಬಗ್ಗೆ ಕೆಲವು ನಿಯಮ ನಿಬಂಧನೆಗಳಿವೆ. ಅವುಗಳು:- ಹಳ್ಳಿಯು ಪಟ್ಟಣದಿಂದ [ಪಟ್ಟಣವೆಂದರೆ 10 ಸಾವಿರಕ್ಕೆ ಮೇಲ್ಪಟ್ಟ ಜನಸಂಖ್ಯೆಯ ಊರು] ಕನಿಷ್ಠ 10 ಮೈಲು ದೂರಬೇಕು. ಆ ಹಳ್ಳಿಯ ಜನಸಂಖ್ಯೆ 2 ಸಾವಿರಕ್ಕಿಂತ ಹೆಚ್ಚಿಗಿರಬಾರದು ಗ್ರಾಮದವರು ಕೇಂದ್ರದ ವಾರ್ಷಿಕ ವೆಚ್ಚದಲ್ಲಿ ಕೆಳಗಿನಂತೆ ತಮ್ಮ ಪಾಲನ್ನು ಕೊಡಬೇಕು. ಮೊದಲನೇ ವರ್ಷ 100 ಕ್ಕೆ 15, ಎರಡನೇ ವರ್ಷ ಮತ್ತು ಮೂರನೇ ವರ್ಷ 25, ನಾಲ್ಕನೇ ವರ್ಷ ನೂರಕ್ಕೆ 50 ಮತ್ತು 5ನೇ ವರ್ಷ 75, ಆರನೇ ವರ್ಷದಿಂದ ಕೇಂದ್ರವು ಖರ್ಚಿನ ಮಟ್ಟಿಗೆ ಸ್ವಾವಲಂಬಿಯಾಗಬೇಕು ಎಂಬುದೇ ಮಹಾತ್ಮಾ ಗಾಂಧಿಯವರ ಉದ್ದೇಶವಾಗಿದ್ದಿತು.

ಡಿ. ವೇಣುಗೋಪಾಲಾಚಾರ್.

ಪಾಕ-ಅಫಗಾಣಿಸ್ಥಾನ ಜಗಳದ ಹಿನ್ನೆಲೆ

(ಲೇ— ಕೆ. ಎ ಶೇಖ ಪಾಚ್ಛಾಪುರ)

ಪಾಕ-ಅಫಗಾನಿಸ್ತಾನ ಜಗಳವು ಹೊಸದಲ್ಲ. ಅದು ೧೮೯೩ ರಲ್ಲೇ ಹಬ್ಬಿತ್ತು. ಆಗಿನ ಸಾಮ್ರಾಜ್ಯವಾದಿ ಆಳರಸರು ಹಿಂದುಸ್ತಾನದ ವಾಯವ್ಯ ಸರಹದ್ದನ್ನು ನೆರೆಹೊರೆಯವರಿಂದ ಬೇರಿಡುವ ನೀತಿಯನ್ನು ಸ್ವೀಕರಿಸಿದ್ದರು. ಇಷ್ಟೇ ಅಲ್ಲ, ನೆರೆಯ ಪ್ರದೇಶದಲ್ಲಿಯೂ ಮೂರು ಭಾಗಗಳನ್ನು ಮಾಡಿ ಅವರು ಎಂದೂ ಒಂದಾಗದಂತೆ ಜಾಗ್ರತೆ ವಹಿಸಿದ್ದಾರೆ ಅವುಗಳಲ್ಲಿ ಒಂದನೆಯ ಭಾಗವು ಸದ್ಯದ ಅಫಗಾಣಿಸ್ತಾನ, ಎರಡನೆಯದು ಸ್ವತಂತ್ರ ಗುಡ್ಡಗಾಡು ಪ್ರದೇಶ, ಮೂರನೆಯದು ಸರಹದ್ದು ಪ್ರಾಂತವಾಗಿದ್ದವು. ಸರಹದ್ದು ಪ್ರಾಂತವನ್ನು ಒಂದನೆಯ ಎರಡನೆಯ ಭಾಗಗಳಿಂದ ಬೇರಿಡಲು ನಕಾಶೆಯಲ್ಲಿ ಒಂದು ಗೆರೆ ಹೊಡೆಯಲ್ಪಟ್ಟಿತು. ಅದಕ್ಕೆ "ಡ್ಯೂರೆಂಡ ಲಾಯಿನ್" ಎಂಬ ಹೆಸರು.

ರಾಜ್ಯವ್ಯವಸ್ಥೆ

ಇನ್ನೂ ಆಯಾ ಭಾಗಗಳ ರಾಜ್ಯವ್ಯವಸ್ಥೆ ಆದರೆ ಅಫಗಾಣಿಸ್ತಾನಕ್ಕೆ ಸ್ವತಂತ್ರ ದೇಶವೆಂದು ಮಾನ್ಯಮಾಡಿದ್ದರಿಂದ ಅದು ತನ್ನ ದೇಶದ ವ್ಯವಸ್ಥೆ ತಾನೇ ನೋಡಿಕೊಳ್ಳುವದು, ೧೯೧೭ ರ ಮುಂಚೆ ಈಗಿನ ರಶಿಯದ ಅಂಜಿಕೆಯಿಂತೆಯೇ ಝಾರರ ಕಡೆಗೆ ಅಫಗಾನರು ಒಲಿಯದಂತೆ ಸ್ವತಂತ್ರರಿದ್ದರೂ, ಅಪ್ರತ್ಯಕ್ಷ ರೀತಿಯಿಂದ ಅವರ ರಾಜ್ಯವ್ಯವಸ್ಥೆಯಲ್ಲಿ ಬ್ರಿಟಿಶರ ಕೈವಾಡ ನಡೆದೇ ಇತ್ತು. ಮೂರನೆಯ ಭಾಗವಾದ ಸರಹದ್ದುಪ್ರಾಂತವು ಹಿಂದುಸ್ತಾನದ ಒಂದು ಅಂಗವಾಗಿದ್ದರಿಂದ ಅದರ ವ್ಯವಸ್ಥೆ ಇವರ ಕೈಯಲ್ಲಿತ್ತು. ಆದರೂ, ೧೯೩೦ ರ ವರೆಗೆ ಈ ಪ್ರಾಂತವು ಕಾನೂನಿಲ್ಲದ ಪ್ರಾಂತವೆಂದು ಪ್ರಸಿದ್ಧಿ ಪಡೆದಿತ್ತು, ಅಂದರೆ, ಅಲ್ಲಿಯ ರಾಜ್ಯವ್ಯವಸ್ಥೆಯು ಸೈನ್ಯಾಧಿಕಾರಿಗಳ ಕೈಯಲ್ಲಿತ್ತು.

ಎರಡನೆಯ ಭಾಗವಾದ ಸ್ವತಂತ್ರ ಗುಡ್ಡಗಾಡು ಪ್ರದೇಶದ ವ್ಯವಸ್ಥೆ ಮಾತ್ರ ಕಠಿನವಾಗಿತ್ತು. ಆದರೂ ಬ್ರಿಟಿಶರು ಅದಕ್ಕೆ ಒಂದು ದಾರಿ ಹುಡುಕಿ ತೆಗೆಯದೆ ಬಿಡಲಿಲ್ಲ. ಈ ದೇಶವು ಗುಡ್ಡಗಾಡುಪ್ರದೇಶವಾಗಿದ್ದರಿಂದ, ಒಕ್ಕಲುತನಕ್ಕೆ ತೀರ ಅಯೋಗ್ಯವಾಗಿದೆ ಕೈಗಾರಿಕೆಗೆ ಎಷ್ಟೇ ಅಸ್ಪದವಿದ್ದರೂ, ಆ ದಿಶೆಗೆ ಅವರನ್ನು ಒಯ್ಯಲಾಗಲಿಲ್ಲ ಇದರಿಂದ ಅವರ ಆರ್ಥಿಕ ಜೀವನದಲ್ಲಿ ಎಳ್ಳಷ್ಟೂ ಪ್ರಗತಿಯಾಗಲಿಲ್ಲ ಇವರಿಗೆ ಬ್ರಿಟಿಶರ ದೇಣಿಗೆಯ ರೂಪದಿಂದ ದಯಪಾಲಿಸಿದ ಹಣದಿಂದಲೇ ಜೀವನ ಸಾಗುವಂತೆ ಚಟ ಕಲಿಸಿಬಿಟ್ಟರು. ರಾಜ್ಯವ್ಯವಸ್ಥೆಗೋಸುಗ, ಆ ಪ್ರಾಂತದಲ್ಲಿ ಐದು ಏಜನ್ಸಿಗಳನ್ನು ರಚಿಸಲಾಯಿತು. ಅವುಗಳ ಕಾರ್ಯವು ಬರಿ ಅಲ್ಲಿಯ ಟೋಳಿಗಳ ಮುಖಂಡರಿಗೆ, ಆಗಾಗ ಹಣಕೊಟ್ಟು ಅವರನ್ನು ತಮ್ಮ ಹತೋಟಿಯಲ್ಲಿ ಇಡುವದೇ ಆಗಿತ್ತು ಅಂತೂ ಈ ಪ್ರದೇಶದವರು ಹಿಂದುಸ್ತಾನ, ಅಫಗಾಣಿಸ್ತಾನಗಳ ಗಡಿರಕ್ಷಕರಾಗಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಆಗಿನ ಹಿಂದೀ ಸರಕಾರದವರು ಕೂರ್‍ರ ಪಠಾಣರನ್ನು ಹತೋಟಿಯಲ್ಲಿಡುವದಿದೆ, ರಶಿಯನ್ ಅಂಜಿಕೆಯನ್ನು ದೂರ ಮಾಡುವದಿದೆ, ಎಂದು ನೆವಹೇಳಿ ಸರಹದ್ದಿನಲ್ಲಿ ಸೈನ್ಯಬಲವನ್ನು ಹೆಚ್ಚಿಸಿ ಅಸಂಖ್ಯ ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದ್ದರು, ಪಾಕಿಸ್ತಾನವಾದ ಅನಂತರ ಸಹ ಇದೇ ನೀತಿ ಆಚರಣೆಯಲ್ಲಿದೆ.

ಭಾರತ ವಿಭಜನೆಯ ಬಳಿಕ

ಹಿಂದುಸ್ತಾನ ಇಬ್ಭಾಗವಾದ ಕೂಡಲೆ ಅನಪೇಕ್ಷಿತವಾಗಿ ಕಾಶ್ಮೀರಯುದ್ಧವು ಆರಂಭವಾಯಿತು ಈ ಯುದ್ಧದಲ್ಲಿ ಗುಡ್ಡಗಾಡು ಪ್ರದೇಶದ ಸಾಮಾನ್ಯ ಪಠಾಣರು ಒಂದು ಒಂಭುವರೆ ವರುಷದವರೆಗೆ ಭಾಗವಹಿಸಿದರು. ಈ ಅವಧಿಯಲ್ಲಿ ಪಾಕಿಸ್ತಾನ ಸರಕಾರಕ್ಕೆ ಇವರ ಆರ್ಥಿಕ ಪ್ರಶ್ನೆಯ ಬಗ್ಗೆ ವಿಚಾರಮಾಡುವ ಅವಶ್ಯಕತೆಯೇ ಇರಲಿಲ್ಲ.

ಈಗ ಕಾಶ್ಮೀರ ಯುದ್ಧವು ನಿಂತಿದೆ. ಇಷ್ಟೇ ಅಲ್ಲ, ಈ ಪ್ರಶ್ನೆಯು ಸಹ ಮುಗಿಯುವ ಮಾರ್ಗದಲ್ಲಿದೆ. ಇನ್ನು ಮಾತ್ರ ಈ ಪಠಾಣರ ಆರ್ಥಿಕ ಪ್ರಶ್ನೆಯನ್ನು ಬಿಡಿಸದೆ ಪಾಕಿಸ್ತಾನಕ್ಕೆ ಗತ್ಯಂತರವಿಲ್ಲದಾಗಿದೆ. ಮೊದಲಿನಂತೆ ಇವರಿಗೆ ಹಣ ತೆರುವುದು ಪಾಕಿಸ್ತಾನಕ್ಕೆ ಆಗುವಂತಿಲ್ಲ. ಆದ್ದರಿಂದ ಇದನ್ನು ತನ್ನ ಒಂದು ಅಂಗವನ್ನಾಗಿ ಮಾಡಿಕೊಂಡು ಬಿಡಬೇಕೆಂಬ ನಿರ್ಧಾರ ಮಾಡಿದಂತೆ ತೋರುತ್ತದೆ.

ಅಫಗಾನಿಸ್ತಾನವು ಮಾತ್ರ ಪುಶ್ತು ಭಾಷೆಯನ್ನಾಡುವವರ ದೇಶವು ತುಂಡಾಗುವದಕ್ಕೆ ಎಂದೂ ಸಮ್ಮತಿಸಿರಲಿಲ್ಲ ಬ್ರಿಟಿಶರ ಮುಂದೆ ಅದರ ಆಟವು ನಡೆಯದಿದ್ದರೂ, ಪ್ರಸಂಗ ಬಂದಾಗ ಅದು ತನ್ನ ಈ ಬಯಕೆ ಪೂರೈಸಲು ಹವಣಿಸುತ್ತಿತ್ತು. ಇಷ್ಟೇ ಅಲ್ಲ, ಪರದೇಶದವರ ಸಂಗಡ ಸ್ವತಂತ್ರತೆಯಿಂದ 'ವ್ಯಾಪಾರ ಸಾಗಿಸಲು ಸಮುದ್ರದ ವರೆಗೆ ಮಾರ್ಗ ಮತ್ತು ಒಂದು ಬಂದರದ ಬೇಡಿಕೆಯನ್ನು ಮುಂದೆ ಮಾ

ಡುತ್ತಿತ್ತು. ೧೯೩೮ ರಲ್ಲಿ ಅಫಗಾಣಿಸ್ಥಾನದ ಶಾಲೆಗಳಲ್ಲಿ ಭೂಗೋಲಶಿಕ್ಷಣ ಕೊಡುವಾಗ ಪುಶ್ತು ಭಾಷೆ ಮಾತಾಡುವವರೆಲ್ಲರು ಭಾಷೆ ಸಂಸ್ಕೃತಿಗಳ ದೃಷ್ಟಿಯಿಂದ ಒಂದೇ ಜನಾಂಗದವರಿರುವರೆಂದು ಬಾಲಕರ ಮನದಲ್ಲಿ ಬಿಂಬಿಸಲಾಗುತ್ತಿತ್ತು.

೧೯೪೨ ರಲ್ಲಿ ಇಂಗ್ಲಂಡದ ಅರ್ಥಮಂತ್ರಿಗಳಾದ ಸರ್ ಸ್ಟಾಫರ್ಡ್ ಕ್ರಿಪ್ಸರ ಹಿಂದುಸ್ಥಾನದವರ ಕೂಡ ವಿಚಾರವಿನಿಮಯ ಮಾಡಲು ಆಗಮಿಸಿದಾಗ ಅಫಗಾನರು ಒಂದು ಪತ್ರ ಕಳಿಸಿದ್ದರು.

ಹಿಂದುಸ್ಥಾನದ ಭವಿಷತ್ತನ್ನು ನಿರ್ಣಯಿಸುವಾಗ ವಾಯುವ್ಯ ಸರಹದ್ದ ಪ್ರಾಂತದ ಬಗ್ಗೆ ಪಠಾಣರ ಆಶೆ ಆಕಾಂಕ್ಷೆಗಳನ್ನು ಮರೆಯತಕ್ಕದ್ದಲ್ಲವೆಂದು ಆ ಪತ್ರದ ಅಂಶವಿತ್ತು. ಕ್ರಿಪ್ಸರು ಉತ್ತರಕೊಟ್ಟದ್ದು ಮಾತ್ರ ತಿಳಿಯಲಿಲ್ಲ. ವಾಡಿಕೆಯಂತೆ ಎರಡೂ ದಂಡೆಗಳ ಮೇಲೇ ಕೈಯಿಟ್ಟು ಉತ್ತರ ಕಳಿಸಿರಬೇಕು.

ಹಿಂದುಸ್ಥಾನವು ಇಬ್ಭಾಗವಾಯಿತು ಇದರ ಪರಿಣಾಮವಾಗಿ ರಾಷ್ಟ್ರೀಯ ವೃತ್ತಿಯ ಐಕ ನಬಂಧು ಮತ್ತು ಅವರ ಅನುಯಾಯಿಗಳ ದುಃಸ್ಥಿತಿಯನ್ನು ನಾವು ಮರೆಯುವಂತಿಲ್ಲ. ಸಂಯುಕ್ತ ಹಿಂದುಸ್ಥಾನ ಒಡೆದು ಪಾಕಿಸ್ಥಾನವು ಧರ್ಮ ಮತ್ತು ದ್ವಿರಾಷ್ಟ್ರತತ್ವದ ಮೇಲೆ ನಿರ್ಮಾಣವಾಯಿತಲ್ಲವೇ? ಇಂಥ ಉದಾಹರಣೆಗಳು, ಜಗತ್ತಿನ ರಾಜಕಾರಣದಲ್ಲಿ ಸಿಗುವಂತಿಲ್ಲ. ಕೇವಲ ಮುಸ್ಲಿಂ ರಾಷ್ಟ್ರಗಳಾದ ಅರಬ ಇಜಿಪ್ತ, ಇರಾಣ, ಅಫಗಾಣಿಸ್ಥಾನಗಳಲ್ಲಿ ಸಹ ಇಲ್ಲ.

ಪಾಕಿಸ್ಥಾನ ನಿರ್ಮಾಣವಾದ ಅನಂತರ, ಪಠಾಣರು ಸ್ವಯಂ ನಿರ್ಣಯತತ್ವದ ಮೇಲೆ, ಪಠಾಣಿಸ್ಥಾನವನ್ನು ನಿರ್ಮಿಸಲು ಸರಹದ್ದು ಪ್ರಾಂತ, ಬಲೂಚಿಸ್ಥಾನ, ಡ್ಯೂರೆಂಡ ಲಾಯಿನಿನ ಆಚೆಯಲ್ಲಿನ ಸ್ವತಂತ್ರ ಗುಡ್ಡಗಾಡು ಪ್ರದೇಶ, ಇವುಗಳನ್ನೊಳಗೊಂಡು, ಒಂದು ರಾಷ್ಟ್ರ ನಿರ್ಮಿಸಬೇಕು. ಅದು ಹಿಂದು ಪಾಕಿಸ್ಥಾನಗಳ ಸಂಗಡ ಸ್ನೇಹದಿಂದಿರಬೇಕು. ಎಂಬುದೇ ಪಠಾಣರ ಹೆಬ್ಬಯಕೆ.

ಪಠಾಣರಿಗೆ ಸ್ವಯಂನಿರ್ಣಯಾಧಿಕಾರ

ಪುಶ್ತು ಭಾಷೆಯಾಡುವ ಜನಾಂಗದವರ ಬಗ್ಗೆ ಸ್ವಯಂನಿರ್ಣಯ ತತ್ವದಂತೆ ಆಚರಿಸುವ ಹಕ್ಕು ದೊರೆಯಬೇಕು. ಇದು ಸಿಕ್ಕನಂತರ ಗಡಿ ನಿರ್ಣಯವಾಗಬೇಕು ಎಂಬುದು ಅಫಗಾನರ ಬಯಕೆಯಾಗಿದೆ.

ಸರಹದ್ದು ಪ್ರಾಂತ, ಬಲೂಚಿಸ್ಥಾನಗಳಂತೆ ಸ್ವತಂತ್ರ ಗುಡ್ಡಗಾಡು ಪ್ರದೇಶವನ್ನು ತನ್ನಲ್ಲಿ ಸೇರಿಸಿಕೊಂಡು ಬಿಡಬೇಕೆಂದು ಪಾಕಿಸ್ಥಾನದವರ ಹಂಚಿಕೆಯಾಗಿದೆ. ಈ ಪ್ರಕಾರ ಪಠಾಣ, ಪಾಕಿಸ್ಥಾನ, ಅಫಗಾಣಿಸ್ಥಾನದವರ ಬಯಕೆ ಭಿನ್ನವಾಗಿದೆ.

ಅಫಗಾಣಿಸ್ಥಾನವು ಸ್ವತಂತ್ರ ರಾಷ್ಟ್ರವಿದ್ದದ್ದರಿಂದ ಅದಕ್ಕೆ ತನ್ನ ಬೇಡಿಕೆಗಳನ್ನು ಬಹಿರಂಗವಾಗಿ ಮಂಡಿಸಿ ವಿಚಾರವಿನಿಮಯ ಮಾಡಲು ಯಾವ ಅಡ್ಡಿ ಇದ್ದಿಲ್ಲ. ಆ ಪ್ರಕಾರ ಅದು ಈಗ ಹಿಂದುಸ್ಥಾನದಲ್ಲಿ ಅಫಗಾನರ ರಾಯಭಾರಿಗಳಾದ ಸರದಾರ ನಜೀಬುಲ್ಲಾಖಾನರನ್ನು ಪಾಕಿಸ್ಥಾನದ, ಗವರ್ನರ ಜನರಲ್, ಮುಖ್ಯಮಂತ್ರಿ, ಪರರಾಷ್ಟ್ರಮಂತ್ರಿ ಮುಂತಾದವರ ಕೂಡ ವಿಚಾರ ವಿನಿಮಯ ಮಾಡಲು ೧೯೪೭ ಅನಂತರದಲ್ಲಿ ಕರಾಚಿಗೆ ಕಳಿಸಲಾಗಿತ್ತು. ಇದರಿಂದ ಅನೇಕ ತಪ್ಪು ತಿಳುವಳಿಕೆಗಳು ಅಳಿದುಹೋಗಿ ಎರಡೂ ನೆರೆಯ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧವು ಬೆಳೆಯಬಹುದೆಂದು ಆಶೆ ಮಾಡಲಾಗಿತ್ತು. ಅದು ಸಹ ದಾಟಿಹೋಯಿತು. ಪರಂತು ೧೯೪೮ ನೆಯ ಇಸ್ವಿಯ ಆರಂಭಕ್ಕೆ ಪಾಕಿಸ್ಥಾನದ ಗವರ್ನರ ಜನರಲ್ಲರಾದ, ಖಾಜಾನಾಜೀಮುದ್ದೀನರು ಸರಹದ್ದು ಪ್ರಾಂತಕ್ಕೆ ಭೆಟ್ಟಿಕೊಟ್ಟಾಗ ಸ್ವತಂತ್ರ ಗುಡ್ಡಗಾಡು ಪ್ರಾಂತವು ಪಾಕಿಸ್ಥಾನದ ಒಂದು ಅಂಗವಿರುವದೆಂದು ಸಾರಿದ್ದರಿಂದ ಮತ್ತೆ ಈ ಜಗಳವು ತಲೆಯ ವಿಕೋಪಕ್ಕೆ ಹೋಗಹತ್ತಿದೆ.

ಅಫಗಾನರ ಸಂಶಯ

ಕೆಂಪಂಗಿಯವರನ್ನು ಯುಕ್ತಿ ಶಕ್ತಿ ತನ್ನ ಬಲದಿಂದ ಪಠಾಣಸ್ಥಾನದ ಆಂದೋಲನವನ್ನು ಮುರಿಬಡಿಯುವ ಉದ್ದೇಶ ಪಾಕಿಸ್ಥಾನಕ್ಕಿದೆಯೆಂದು ಅಫಗಾನರಿಗೆ ಸಂಶಯವಿತ್ತು. ಇದಕ್ಕೆ ಖಾಜಾ ನಾಜಿಮುದ್ದೀನರು, ಸ್ವತಂತ್ರ ಗುಡ್ಡಗಾಡು ಪ್ರದೇಶವು ಪಾಕಿಸ್ಥಾನದ ಅಂಗವಾಗಿದೆಯೆಂದು ಸಾರಿದ್ದರಿಂದ ಮತ್ತಷ್ಟು ಪುಟ ಕೊಟ್ಟಂತಾಗಿದೆ. ಇವರಿಬ್ಬರ ಜಗಳದಲ್ಲಿ ಪಾಶ್ಚಾತ್ಯರು ತಮ್ಮ ಕಾಲು ಚಾಚಲು ಹವಣಿಸುತ್ತಿರುವದು ಸಹಜವಿದೆ. ಇಂಥ ಸುಸಂಧಿಯನ್ನು ಅವರು ಕಳೆದುಕೊಳ್ಳುವವರೇ? ಆದರೆ ಪಠಾಣಿಸ್ಥಾನವು ನಿರ್ಮಾಣವಾದರೆ ಇಲ್ಲವೆ, ಖಾನ ಬಂಧುಗಳ ಕೈಯಲ್ಲಿ ರಾಜ್ಯದಾತಳತೆ ಬಂದರೆ ಅವರಿಗೆ ಈ ಸಂಧಿ ಸಾಧಿಸಲು ಅವಕಾಶ ಸಿಗಲಿಕ್ಕಿಲ್ಲೆಂದು ಧಾರಾಳವಾಗಿ ಹೇಳಬಹುದು.

ಜಗಳದ ಮುಕ್ತಾಯವಾಗಲು ಎರಡೇ ಮಾರ್ಗಗಳಿವೆ. ಒಂದು ಯುದ್ಧ, ಎರಡನೆಯದು ಪರಸ್ಪರ ಸಂಶಯ ನಿವಾರಿಸಿಕೊಳ್ಳುವದು. ಪರಂತು ಮೊದಲನೆಯ ಮಾರ್ಗಕ್ಕೆ ಈ ಎರಡೂ ದೇಶಗಳೂ ಸಿದ್ಧವಿಲ್ಲ. ಇನ್ನು ಎರಡನೆಯ ಮಾರ್ಗ ಹಿಡಿಯುವೆ ಗತ್ಯಂತರವಿಲ್ಲ. ಆರಂಭದಲ್ಲಿ ಇದೇ ಮಾರ್ಗ ಸ್ವೀಕರಿಸಲಾಗಿತ್ತೆಂದು ಹೇಳಲಾಗಿದೆ. ಸದ್ಯದ ಪರಿಸ್ಥಿತಿ ನಿರಾಶಾಜನಕವಾಗಿದೆ. ಆದರೂ ಈ ಪ್ರಶ್ನೆಯನ್ನು ಸಂ. ರಾಷ್ಟ್ರಸಂಘಕ್ಕೊಯ್ಯುವದೊಂದೇ ಕೊನೆಯಮಾರ್ಗವಾಗಿ ಉಳಿದಿದೆ. ಒಂದುವೇಳೆ ಈ ಪ್ರಶ್ನೆಯು ಸಂಯುಕ್ತ ರಾಷ್ಟ್ರಸಂಘಕ್ಕೆ ಹೋದಲ್ಲಿ ಸ್ವಯಂನಿರ್ಣಯತತ್ವದಂತೆಯೆ ಅಲ್ಲಿ ನಿರ್ಣಯವಾಗುವದರಲ್ಲಿ ಸಂದೇಹವಿಲ್ಲ. ಈ ಪ್ರಕಾರ ನಿರ್ಣಯವಾದರೆ ಮುಂದಾಗುವದನ್ನು ಹೇಳಲು ಯಾರಿಗೂ ಬರುವಂತಿಲ್ಲವಾದರೂ, ಅಫಗಾನರಿಗೆ ಜಯದ ಆಶೆ ಹೆಚ್ಚಿದೆಯೆಂದು ಮಾತ್ರ ನಾವು ಹೇಳದಿರಲಾರೆವು.

ತುಂಗಭದ್ರಾ ಯೋಜನೆ ಮುಳುಗುವ ಭಾಗದ ಜನರಿಗೇನು ಪರಿಹಾರ?

ತುಂಗಭದ್ರಾ ಕೆರೆಕಟ್ಟುವ ಪ್ರದೇಶದಲ್ಲಿ ಸುಮಾರು ೫೦ ಸಾವಿರ ಜನರು ಹೊಲ ಮನೆ ಮಠಗಳನ್ನು ಕಳೆದುಕೊಳ್ಳಲಿರುವರು. ಇವರಿಗೆ ಸರಕಾರವು ದ್ರವ್ಯ ಸಹಾಯಮಾಡಲು ವಾಗ್ದಾನಮಾಡಿ ಅವುಗಳನ್ನು ಸರಕಾರಿ ಬಾಂಡುಗಳ ಮುಖಾಂತರ ಕೊಡುತ್ತಲಿದೆ. ಇದು ಬಹಳ ಅನ್ಯಾಯ. ಮನೆ ಮಠಗಳನ್ನು ಕಳೆದುಕೊಂಡವರಿಗೆ ಸರಿಯಾದ ನಿವೇಶನಗಳನ್ನೊದಗಿಸಿ ಭೂಮಿಗಳ ಸೌಕರ್ಯ ಮಾಡಿಕೊಡಬೇಕಿತ್ತು. ಆದರೆ ಇದೊಂದನ್ನೂ ಏರ್ಪಡಿಸದೆ ಅವರ ಪಾಡಿಗೆ ಅವರನ್ನು ಬಿಟ್ಟುಕೊಡಬೇಕಾದ ಹಣವನ್ನು ಕೊಡದಿರುವುದು ಸರಕಾರದ ಹಿಂಸೆಯಾಗುತ್ತದೆ. ಇದೆಂತಹ ಸರಕಾರ? ಬರುವ ತಿಂಗಳು ಮುಖ್ಯ ಮಂತ್ರಿಗಳೂ ಇತರ ಮಂತ್ರಿಗಳೂ ಹೊಸಪೇಟೆಗೆ ಇದರ ಇತ್ಯರ್ಥಕ್ಕಾಗಿ ಬಂದಾಗ ಏನು ಮಾಡುವರೋ ಕಾಣಬೇಕು.

ಒಬ್ಬ ರೈತ

● ● ● ● ● ● ● ● ● ● ● ●

ನೋಟೀಸು.

೧೯೪೭ನೇ ಸಂ॥ ಮದ್ರಾಸು ಷಾಪು ಮತ್ತು ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಿಜಿಸ್ಟರುಗಳು ವಗೈರೆ ನಮ್ಮಲ್ಲಿ ದೊರೆಯುತ್ತವೆ.

ವಿಶಲ್ ಪ್ರಿಂಟಿಂಗ್ ಪ್ರೆಸ್,
ತೇರು ಬಜಾರ್, ಬಳ್ಳಾರಿ.

● ● ● ● ● ● ● ● ● ● ● ●

—ಗಾಂಧೀಜಿಯವರ ಅವಶೇಷಗಳು ಹಾಗೂ ಗ್ರಂಥಗಳ ಒಂದು ಪ್ರದರ್ಶನಾಲಯವು ಸದ್ಯದಲ್ಲೇ ನಮ್ಮ ದೇಶದಲ್ಲಿ ಸ್ಥಾಪಿಸಲಾಗುವುದು



ಅಮೇರಿಕೆಯ ಮಿಡಾಸಗಿರಿಯ ಮುಂದೆ

ಬಂಗಾರದ ಬೆಲೆಯೂ ಬಾಡಿದೆ

ನಾಳಿನ ಜುಲಾಯಿ ಒಂದನೆಯ ದಿನಾಂಕದಿಂದ ಮುಂದೆ ಐದು ವರುಷದ ಕಾಲ ಅಮೇರಿಕೆಯ ಫೆಡರಲ್ ಸರಕಾರದ ಆಡಳಿತವು ೪೫೦೦ ಕೋಟಿ ಡಾಲರುಗಳನ್ನು ವೆಚ್ಚಮಾಡುವ ಯೋಜನೆಯನ್ನು ಇಟ್ಟುಕೊಂಡಿದೆ. ಜಗತ್ತಿನಲ್ಲಿ, ೧೪೯೨ ರಲ್ಲಿ ಕೊಲಂಬಸನು ಅಮೇರಿಕೆಯ ಶೋಧ ಮಾಡಿದನಂತರ ಪ್ರಾರಂಭವಾಗಿ ಇಂದಿನವರೆಗೂ ಕಣಿಗಳಲ್ಲಿ ಹೊರಟ ಒಟ್ಟು ಬಂಗಾರದ ಬೆಲೆಯು ೪೦೦೦ ಕೋಟಿ ಡಾಲರು ಬೆಳೆಯಷ್ಟು ಮಾತ್ರ ಆಗುತ್ತದೆ. ೧೪೯೨ ರಿಂದ ಇಲ್ಲಿಯವರಿಗೂ ಜಗತ್ತಿನಲ್ಲಿ ಹೊರಟ ಒಟ್ಟು ಬಂಗಾರದ ಬೆಲೆಗಿಂತಲೂ ೫೦೦ ಕೋಟಿ ಡಾಲರುಗಳ ಹೆಚ್ಚು ಬೆಲೆಯ ವೆಚ್ಚವನ್ನು ಇಂದು ಫೆಡರಲ್ ಸರಕಾರವು ಒಂದು ವರ್ಷದಲ್ಲಿ ಮಾಡಲಿದೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಸರಕಾರವನ್ನು ಒಂದು ವರುಷ ನಡೆಸುವುದು ಇಂತಹ ಅಸಾಧ್ಯ ವೆಚ್ಚದ್ದಾಗಿರುತ್ತದೆ. ಆ ವೆಚ್ಚದ ಹಣದಲ್ಲಿ ಇಂದು ಜಗತ್ತಿನಲ್ಲಿದ್ದ ಎಲ್ಲ ಬಂಗಾರವನ್ನು ಕೊಂಡರೂ ಇನ್ನೂ ಹೆಚ್ಚು ಕೊಳ್ಳುವಷ್ಟು ಡಾಲರಗಳು ಉಳಿಯುತ್ತವೆ. ೧೯೩೩ ರಲ್ಲಿ ಅಮೇರಿಕೆಯ ಒಟ್ಟು ರಾಷ್ಟ್ರೀಯ ಉತ್ಪನ್ನ ಬಂದಷ್ಟಕ್ಕಿಂತಲೂ ಹೆಚ್ಚು ಹಣವು ಇಂದು ಒಂದು ವರ್ಷದ ಸರಕಾರದ ಆಡಳಿತಕ್ಕಾಗಿ ವೆಚ್ಚವಾಗುತ್ತದೆ. ಜಗತ್ತಿನಲ್ಲಿದ್ದ ಒಟ್ಟು ಬಂಗಾರದಲ್ಲಿ ಅರ್ಧಕ್ಕಿಂತಲೂ ಹೆಚ್ಚು ಬಂಗಾರವು ಅಮೇರಿಕೆಯ ಸಂಗ್ರಹದಲ್ಲಿದ್ದರೂ, ಅದರ ಬೆಲೆಯು ಸದ್ಯದ ಸರಕಾರದ ೬ ತಿಂಗಳು ವೆಚ್ಚಕ್ಕೂ ಸಾಲುವಂತಿಲ್ಲ. ಕಡಿಮೆ ಬೀಳುತ್ತದೆ.

ಈಗ ನಾಲ್ಕುನೂರಾ ಐವತ್ತಾರು ವರ್ಷಗಳಿಂದಲೂ ಜಗತ್ತಿನಲ್ಲಿ ಉತ್ಪತ್ತಿಯಾದ ಒಟ್ಟು ಬಂಗಾರದ ಬೆಲೆಗಿಂತಲೂ ಇಂದು ಅಮೇರಿಕೆಯ ಆಡಳಿತದ ಒಂದು ವರ್ಷದ ವೆಚ್ಚ ಹೆಚ್ಚಾಗುತ್ತದೆ. ಹೀಗಾಗಿ ಇಂದು ಅಮೇರಿಕೆಯ ಬೊಕ್ಕಸದಿಂದ ಡಾಲರುಗಳ ಹೊಳೆಯೇ ನಿರಂತರವಾಗಿ ಹರಿಯುತ್ತಲಿರುವದೇ ಹೊರತು ಅದರ ಪ್ರವಾಹದ ತೀವ್ರತೆಯು ಇಳಿಮುಖವಾಗಿರುವುದಿಲ್ಲ.

ಸದ್ಯಕ್ಕೆ ಜಗತ್ತಿನಲ್ಲಿ ಹಣದ ಜೋಡೆ ಜೊತ್ತು ಬಂಗಾರವು ಒಟ್ಟು ಮೂವತ್ತೆಂಟು ನೂರು ಕೋಟಿ ಡಾಲರು ಬೆಲೆಯದಿರುತ್ತದೆ. ಅದರಲ್ಲಿ ಇಪ್ಪತ್ತನಾಲ್ಕುನೂರು ಕೋಟಿ ಡಾಲರು ಬೆಲೆಗಿಂತ ಹೆಚ್ಚಿನ ಬಂಗಾರವು ಅಮೇರಿಕೆಯ ಬಳಿಯಿರುತ್ತದೆ ಈ ಬಂಗಾರವೆಲ್ಲ ನಾಕ್ಸಕೋಟೆಯ ನೆಲಮನೆಯಲ್ಲಿ ಭದ್ರವಾಗಿರಿಸಲಾಗಿದೆ ಇಷ್ಟು ಬಂಗಾರದ ಬೆಲೆಯು ಡಾಲರುಗಳು ಅಮೇರಿಕೆಯ ಫೆಡರಲ್ ಸರಕಾರದ ೬ ತಿಂಗಳ ಆಡಳಿತ ವೆಚ್ಚಕ್ಕೂ ಸಾಲದಷ್ಟಿದೆ.

ಇವನ್ನೆಲ್ಲ ನೋಡುತ್ತಿರಲಿಕ್ಕೆ ಬಂಗಾರಕ್ಕೆ ಇತರ ದೇಶಗಳಲ್ಲಿ ಹಣದ ಹೊಣೆಯಿದ್ದಷ್ಟು ಅಮೇರಿಕೆಯಲ್ಲಿ ಇಲ್ಲವೆಂದು ತಿಳಿದು ಬರುವಂತಿದೆ. ಅಮೇರಿಕೆಯ ಈ ಅವಾಢವ್ಯ ಮಿಡಾಸ ಗಿರಿಯ ಮುಂದೆ ಬಂಗಾರದ ಬೆಲೆಯೂ ಬಾಡಿಹೋಗಿರುತ್ತದೆ.

ಹಣವನ್ನು ಬಂಗಾರಕ್ಕೆ ಪರಿವರ್ತಿಸುವಲ್ಲಿ ೧೯೩೩ ರವರೆಗೂ ಅಮೇರಿಕೆಯು ಬಂಗಾರದ ನೆಲಗಟ್ಟಿನವಳಿಯೇ (ಗೋಲ್ಡ್ ಸ್ಟ್ಯಾಂಡರ್ಡ್) ಕಾರ್ಯ ನಿರ್ವಹಿಸಾಗುತ್ತಿತ್ತು. ಅಂದರೆ ತನ್ನ ಬಳಿ ಡಾಲರ ಇರುವಷ್ಟು ಬೆಲೆಗೆ ಬಂಗಾರವನ್ನು ಕೊಂಡು ಸುರಕ್ಷಿತವಾಗಿ ಸುಸೂತ್ರವಾಗಿ ಸಂಗ್ರಹ ಮಾಡಬಹುದಾಗಿತ್ತು ಆ ಕಾಲದಲ್ಲಿ ಬಂಗಾರವಿದ್ದರೆ ಬೇಕಾದಾಗ ಡಾಲರುಗಳನ್ನು ಪಡೆಯಬಹುದಾಗಿತ್ತು. ಆಗ ಜನರಿಗೆ ಡಾಲರದ ಬೆಲೆಯಬಗ್ಗೆ ಸಂಶಯಬಂದಲ್ಲಿ ೨೦.೬೭ ಡಾಲರುಗಳಿಗೆ ಒಂದು ಔಂಸ ಬಂಗಾರದಂತೆ ಕೊಂಡು ಸಂಗ್ರಹಿಸಬಹುದಾಗಿತ್ತು. ಈ ವ್ಯವಹಾರವು ೧೯೩೩ ರಲ್ಲಿ ಅಮೇರಿಕೆಯಲ್ಲಿ ದೇಶದಾದ್ಯಂತವೂ ನಡದೇ ನಡೆಯುತ್ತಿತ್ತು.

ಆ ಕಾಲದಲ್ಲಿ ವೈಯಕ್ತಿಕವಾಗಿಯೂ ಔದ್ಯೋಗಿಕವಾಗಿಯೂ, ನಾಲ್ವತ್ತೊಂದು ನೂರುಕೋಟಿ ವ್ಯವಹಾರೀ ಹಣವು ಬಳಿಕೆಯಲ್ಲಿತ್ತು. ಅದಕ್ಕೆ ಹೊಣೆಯಾಗಿ, ನಾಲ್ಕು ನೂರು ಕೋಟಿ ಬೆಲೆಯ ಬಂಗಾರವು ಮಾತ್ರ ಅಮೇರಿಕೆಯ ಬೊಕ್ಕಸದಲ್ಲಿತ್ತು.

ಆದರೆ ೧೯೩೩ ರಿಂದೀಚೆಗೆ ಮಾತ್ರ ಡಾಲರುಗಳನ್ನು ಬಂಗಾರಕ್ಕೆ ಮಾರ್ಪಡಿಸಲು ಮುಕ್ತವಾಗಿರಲಿಲ್ಲ. ಅದಲು ಬದಲು ವ್ಯವಹಾರವು ಮಾತ್ರ ಬಂಗಾರದಲ್ಲಿ ಆಗುತ್ತಿತ್ತು. ಅಂತರ್ದೇಶೀಯ ವ್ಯವಹಾರದಲ್ಲಿ ಮಾತ್ರ ಬಂಗಾರದ ನಿಲುವೆಯ ಮೇಲೆ ಬೆಲೆನಿರ್ಧರಿಸಲ್ಪಡುತ್ತಿತ್ತು. ಕೊಳ್ಳುವಿಕೆ ನಡೆಯುತ್ತಿತ್ತು, ಅಲ್ಲದೆ ಬಂಗಾರವು ವೈಯಕ್ತಿಕವಾಗಿ ನಾಗರೀಕನಿಗೆ ಬೆಲೆಗೆ ದೊರೆಯುವ ಧಾತುವಾಗಿರಲಿಲ್ಲ ೧೯೩೪ ರಲ್ಲಿ ಅಮೇರಿಕೆಯ ಸರಕಾರವು ಬಂಗಾರದ ಬೆಲೆಯನ್ನು ಒಂದು ಔಂಸಿಗೆ ಮೂವತ್ತೈದು ಡಾಲರುಗಳಿಗೆ ಏರಿಸಿತು ಆದರೆ ಆ ಬೆಲೆಗೆ ಸಾರ್ವಸಾಮಾನ್ಯರು ಬಂಗಾರವನ್ನು ಕೊಳ್ಳುವಂತಿರಲಿಲ್ಲ

ಹೀಗಾಗಿಯೇ ವವ್ಯಹಾರೀ ಹಣದ ಮೇಲೆ ಇರತಕ್ಕ ಬಂಗಾರದ ಹಿಡಿತವು ಸಡಿಲಾಯಿತು. ನಿಯಮದಂತೆ ವ್ಯವಹಾರೀ ಹಣ, ಹಾಗೂ ಡಿಪಾಜಿಟ್ಟುಗಳ ಬೆಲೆಯಷ್ಟು ಬಂಗಾರವು ಬೊಕ್ಕಸದಲ್ಲಿರಬೇಕಾದರೂ, ಬಂಗಾರದ ಸಂಗ್ರಹವು ಎಷ್ಟೋಪಟ್ಟು ಬೆಳೆದು ಬಿಟ್ಟಿದ್ದರಿಂದ ವ್ಯವಹಾರೀ ಹಣವನ್ನು ದುಪ್ಪಟ್ಟು ತಿಪ್ಪಟ್ಟು ಬೆಳೆಸಿದರೂ ಚಿಂತೆಮಾಡುವ ಕಾರಣವಿರಲಿಲ್ಲ.

ಸದ್ಯಕ್ಕೆ ವ್ಯವಹಾರೀ ಹಣದ ಪೂರೈಕೆಯ ಅಂಕೆಯು ಒಂದುನೂರಾ ಅರವತ್ತಾರು ಅಬ್ಜದಷ್ಟಿದೆ. ಅಂದರೆ ೧೯೩೩ ರ ಅಂಕೆಯು ನಾಲ್ಕುಮಡಿ ಅಂಕೆ ಈಗಿನದಿರುವುದು. ಅದ್ದರಿಂದಲೇ ೧೯೩೩ ರ ವಾರ್ಷಿಕ ರಾಷ್ಟ್ರೀಯ ಉತ್ಪನ್ನಕ್ಕಿಂತಲೂ ಹೆಚ್ಚು ಹಣವನ್ನು ಈ ಬರುವ ವರ್ಷ ಆಡಳಿತದ ವೆಚ್ಚಕ್ಕಾಗಿ ಉಪಯೋಗಿಸಲು ಸಾಧ್ಯವಾಯಿತು. ಲೆಕ್ಕದಂತೆ ಇಪ್ಪತ್ನಾಲ್ಕು ಅಬ್ಜಡಾಲರು ಬೆಲೆಯ ಬಂಗಾರವು ವ್ಯವಹಾರಿಕ ಹಣಕ್ಕೆ ಬೆಂಬಲವಾಗಿ ಸಂಗ್ರಹದಲ್ಲಿದ್ದರೂ, ಯಾವನಿಗೂ ವ್ಯವಹಾರಿಕ ಹಣದಿಂದ ಬಂಗಾರವನ್ನು ಪಡೆಯಲು ಬರುವಂತಿಲ್ಲ.

ಇವೆಲ್ಲವೂ ಅಲ್ಲದೆ ಇನ್ನೂ ಒಂದು ಕಾರಣವೆಂದರೆ ಉಳಿದ ದೇಶಗಳೆಲ್ಲ ಅಮೇರಿಕೆಗೆ ಬಂಗಾರವನ್ನು ಮಾರಿ ಡಾಲರ ಸಂಗ್ರಹವನ್ನು ಬೆಳೆಸುತ್ತಿರುವುದೇ ಆಗಿದೆ, ಜಾಗತಿಕ ಪೇಟೆಯಲ್ಲಿ ಸ್ಪರ್ಧೆ ನಡೆಸಿರುವ ಎಷ್ಟೋ ದೇಶಗಳು, ತಮ್ಮ ವ್ಯವಹಾರೀ ಹಣವನ್ನು ಡಾಲರುಗಳಲ್ಲಿ ಮಾರ್ಪಡಿಸಿಕೊಳ್ಳಲು ಪ್ರಯತ್ನಪಡುತ್ತಲಿವೆ. ಇದೇ ಕಾರಣಕ್ಕಾಗಿಯೇ ಅಮೇರಿಕೆಯಲ್ಲಿ ಬಂಗಾರದ ಬೆಲೆಯು ಬಾಡಿರುತ್ತದೆ. ಆದರೂ ಅಮೇರಿಕೆಯ ಬೊಕ್ಕಸವು, ಡಾಲರ ಬೆಲೆಯಲ್ಲಿ ಹೆಚ್ಚುಕಡಿಮೆಯನ್ನು ಮಾಡುವ ಲಕ್ಷಣವು ಸದ್ಯಕ್ಕಂತೂ ಇಲ್ಲ.

ಜಾಗತಿಕ ಅರ್ಥಲೋಕದಲ್ಲಿ ಬಂಗಾರದ ಸ್ಥಾನಮಾನದಬಗ್ಗೆ ಚರ್ಚೆ ಇನ್ನೂ ನಡೆಯುತ್ತಲೇ ಇದೆ. ಕೆಲವರು ಅಮೇರಿಕೆಯು ಅರ್ಥಲೋಕದಲ್ಲಿ ಬಂಗಾರದ ನಿಲುವೆಗೆ ಪುನಃ ಬರಬಹುದೆಂದು ತರ್ಕಿಸುತ್ತಾರೆ, ಆದರೆ ಈಗ ಸದ್ಯಕ್ಕಂತೂ ಆ ಬಗೆಯ ವ್ಯತ್ಯಾಸವಿಲ್ಲ. ಏಕೆಂದರೆ ಡಾಲರದಲ್ಲಿಯೇ ಸಾರ್ವಜನಿಕರ ನಂಬಿಗೆಯು ಬಲವಾಗಿರುವಾಗ ಬಂಗಾರದಮಾತೇಕೆ? ನಂಬಿಗೆಗಾಗಿಯೇ ಬಂಗಾರವಲ್ಲವೆ?

ಏನಿದ್ದರೂ ಅಮೇರಿಕೆಯ ಸರಕಾರವಂತೂ ಡಾಲರದಬೆಲೆಯ ಹೆಚ್ಚುಕಡಿಮೆ ಮಾಡಲು ಸಿದ್ಧವಿಲ್ಲ. ಏಕೆಂದರೆ ಹೀಗೆ ಮಾಡುವುದರಿಂದ ಜಾಗತಿಕ ಆರ್ಥಿಕ ಪರಿಸ್ಥಿತಿಯ ಮೇಲೆಯೇ ಪರಿಣಾಮವಾದೀತೆಂದು ಅದಕ್ಕೆ ಎನಿಸುತ್ತದೆ

ಆದ್ದರಿಂದ ಬಂಗಾರವು ಬರೀ ನೆಲಮನೆಯಲ್ಲಿಯ ಸಂಗ್ರಹಕ್ಕಾಗಿ, ಡಾಲರದ ತಾತ್ವಿಕ ಬೆಂಬಲಕ್ಕಾಗಿಯೇ ಅಮೇರಿಕೆಯಲ್ಲಿ ಉಪಯೋಗಿಸ್ಪಡುವುದಲ್ಲದೆ ಉಳಿದ ಯಾವ ಬಗೆಯ ಮಹತ್ವವೂ ಬಂಗಾರಕ್ಕೆ ಅಮೇರಿಕೆಯಿಂದ ದೊರೆಯಲಾರದು.

ಹೀಗಿದೆ ಅಮೇರಿಕೆಯ ಅಭಿನವ ಮಿಡಾಸಗಿರಿ ಅಥವಾ ಕುಬೇರಗಿರಿ! ಹೇಗೆ ತೃಪ್ತಿಯು ಮುಂದೆ ಯಾವಬಗೆಯ ಸುಖವೂ ಕ

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚಾರಿತ್ರರಾದ S. S. L. C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ

ಸೆಕ್ರೆಟರಿ

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟ್ಯಾಂಪಿನೊಂದಿಗೆ ಬರೆಯಿರಿ.

ತಾರಾನಾಥ ಆಯುರ್ವೇದ ವಿದ್ಯಾಪೀಠ
P. O. ಸಂಗನಕಲ್ಲು ಬಳ್ಳಾರಿ.

ಚ್ಚಿನ ಬೆಲೆಯದಾಗದೋ ಹಾಗೆ ಮತ್ತು ನಂಬಿಗೆಗಳ ಮುಂದೆ ಯಾವ ಬಂಗಾರಕ್ಕೂ ಹೆಚ್ಚಿನ ಬೆಲೆಬಾರದು. ಇದಕ್ಕೆ ಸದ್ಯದ ಅಮೇರಿಕೆಯೇ ಪ್ರತ್ಯಕ್ಷ ಉದಾಹರಣೆಯಾಗಿರುತ್ತದೆ

—●—

ನೋಟೀಸು

ಮು॥ ರಾ॥ ಶ್ರೀ॥ ಹೊಸಪೇಟೆ
ಡಿ॥ ಮು॥ ಕೋರ್ಟಿನಲ್ಲಿ

O. P. 18/49

Between:—

ಅರ್ಜಿದಾರರು:— 1 ನೀರಾಳು ಪೊಂಪಣ್ಣ ತಂದೆ ಈರಪ್ಪ 2. ನೀರಾಳು ವೀರಭದ್ರಪ್ಪ ತಂದೆ ಈರಪ್ಪ ದೇವಾಂಗ ಮತ, Clerks ಸಾ॥ ಹೊಸಪೇಟೆ ತಾಲೂಕು ಹೊಸಪೇಟೆ.

AND

ರೆಸ್ಪಾಂಡೆಂಟು:— ಹವಳದ ಸಂಗಪ್ಪ

ಅರ್ಜಿದಾರರು ಸಮಸ್ತ ಜನರಿಗೆ ತಿಳಿಸುವದೇನಂದರೆ ಸದರಿ ಮೇಲ್ಕಂಡ ಕೋರ್ಟಿನಲ್ಲಿ S. C. 213/49 ರಲ್ಲಿ ಅರ್ಜಿದಾರರು ತಮ್ಮ ತಕ್ಷಣಾದ ಲೇಟು ನೀರಾಳು ಚನ್ನಬಸಪ್ಪನ ವಾರಸರೆಂದು ಕೋರಿ ಹವಳದ ಸಂಗಪ್ಪನ ಮೇಲೆ ದಾವಾ ಹಾಕಿ ಲೇಟು ಚನ್ನಬಸಪ್ಪನ ಬಾಕಿ ತಮಗೆ ಬರತಕ್ಕದ್ದೆಂದ, ತಾವೆ ಸಮೀಪ ವಾರಸರೆಂದು ಅರ್ಜಿ ಇಟ್ಟುಕೊಂಡಿರುತ್ತಾರೆ. ಸದರಿ ಲೇಟು ಚನ್ನಬಸಪ್ಪಗೆ ಇನ್ನಾರಾದರೂ ಸಮೀಪ ವಾರಸರಿದ್ದಲ್ಲಿ ಸದರಿ ಮೇಲ್ಕಂಡ ಕೋರ್ಟಿನಲ್ಲಿ ತಾ॥ 21—7—49 ಕ್ಕೆ ತಾವಾಗಲಿ ತಮ್ಮ ವಕೀಲರ ದ್ವಾರಾಗಲಿ ಹಾಜರಾಗಿ ತಕರಾರಿಡತಕ್ಕದ್ದೆಂದು ಈ ನೋಟೀಸು ಮೂಲಕ ತಿಳಿಸಲಾಗಿರುತ್ತದೆ.

ಟಿ. ಹೆಚ್. ಎಂ. ಷಡಕ್ಷರಯ್ಯ
ಹೊಸಪೇಟೆ ಅರ್ಜಿದಾರ ವಕೀಲ
6—7—49

ಮೋಟಾರಿನಲ್ಲಿ ಸುಧಾರಣೆ

ಟ್ಯೂಬ್ ರಹಿತ ಟಯರ್

ಮೋಟಾರಿನ ಗಾಲಿಯ ರಬ್ಬರ್ ಟಯರಿನೊಳಗೊಂದು ತೆಳ್ಳನ್ನ ರಬ್ಬರಿನ ಗಾಳಿಚೀಲ ಅಥವಾ ಟ್ಯೂಬ್ ಇರುವದನ್ನು ನೋಡದವರಾರು? ಆದರೆ ಈ ಟ್ಯೂಬಿನ ಸುಖವನ್ನು ಮೋಟಾರಿಟ್ಟುಕೊಂಡವರೇ ಬಲ್ಲರು. ತೆಳ್ಳನ್ನ ಈ ಗಾಳಿಚೀಲದ ಗಾಳಿಯೆಲ್ಲಾದರೂ ಸೋರ ತೊಡಗಿದರೆ ಮತ್ತೆ ಅದನ್ನು ಸರಿಪಡಿಸಿದ ಹೊರತು ಮೋಟಾರು ಸಾಗುವದೇ ಅಸಾಧ್ಯ ಪ್ರಾಯವಾಗಿ ಬಿಡುವದು. ಮೇಲಾಗಿ ಮಾರ್ಗದಲ್ಲಿರುವ ಮೊಳೆ, ಗಾಜಿನ ಚೂರು ಮೊದಲಾದವುಗಳು ಗಾಲಿಗೆ ನಟ್ಟು ನಾಲ್ಕು ಸುತ್ತು ತಿರುಗಿದರೆ ಸಾಕು. ಅದು ಟ್ಯೂಬಿಗೆ ನಾಟಿ ಅದು ತೂತುಬಿದ್ದು ರಥ ನಿಂತೇ ಹೋಗುವದು. ಅಲ್ಲದೆ ಟಯರಿನೊಳಗೊಂದು ಟ್ಯೂಬ್ ಇರುವದರಿಂದ ಇನ್ನೂ ಎಷ್ಟೋ ತಗಳೆಗಳು ಗಂಟುಬೀಳುತ್ತವೆ.

ಆದರೆ ಈಗ ಅಮೇರಿಕೆಯಲ್ಲಿ ಈ ದೋಷಗಳಿಂದ ಬಹಳ ಮಟ್ಟಿಗೆ ಮುಕ್ತವಾದ ಟ್ಯೂಬೇ ಅವಶ್ಯವಿಲ್ಲದ ಟಯರುಗಳು ಈಚೆಗೆ ಉಪಯೋಗಕ್ಕೆ ಬರತೊಡಗಿವೆ. ಪ್ರಸಿದ್ಧ ಗುಡ್‌ರಿಚ್ ಕಂಪನಿಯವರು ಇದನ್ನು ತಯಾರಿಸಿದ್ದು, ಇನ್ನೂ ಎರಡು ಮೂರು ಕಂಪನಿಗಳು ಬೇಗನೆ ಉತ್ಪಾದನೆಯನ್ನು ಪ್ರಾರಂಭಿಸಬಹುದು

ಈ ಹೊಸ ಟಯರುಗಳ ನಿರ್ಮಾಪಕನಾದ ಇಂಜನಿಯರ ಫ್ರಾಂಕ್ ಹರ್‌ಝೋಗನು ಅನೇಕ ವರ್ಷಗಳ ಹಿಂದೆ ಈ ಟ್ಯೂಬ್‌ರಹಿತ ಟಯರುಗಳಿಗಾಗಿ ಪ್ರಯತ್ನ ಪಡತೊಡಗಿದಾಗ ಅಮೇರಿಕನ್ ತಜ್ಞರಲ್ಲಿ ಬಹು ಜನರು ಇದು ಶುದ್ಧ ಕಾಲಹರಣವೆಂದು ಟೀಕಿಸಿದ್ದರು. ಆದರೆ ಹರ್‌ಝೋಗನು ಅದಕ್ಕೆ ಕಿವಿಗೊಡದೆ ಸಾವಿರಾರು ಬಗೆಯ ಎಕರೆಗಳುಳ್ಳ ರಬ್ಬರುಗನ್ನು ಪಯೋಗಿಸಿ ಕೊನೆಗೆ ಕೃತಕೃತ್ಯನಾದ.

ಹರ್‌ಝೋಗನ ವ್ಯವಸ್ಥೆಯಲ್ಲಿ, ಟ್ಯೂಬಿಗೆ ಗಾಳಿ ಹಾಕುವ ಬದಲು ಟಯರಿಗೇ ಗಾಳಿ ಹಾಕಲಾಗುತ್ತದೆ. ಅದಕ್ಕಾಗಿ ಟಯರ್ ಮತ್ತು ಗಾಲಿಯ ಅಂಚು ಅಥವಾ "ರಿಂ" ಸೇರುವಲ್ಲಿ ಈಗ ಟ್ಯೂಬುಗಳಿಗಿರುವಂಥದೇ ವಾಲ್ವ್ ಇರುತ್ತದೆ ಟಯರನ್ನು 'ರಿಂಗೆ' ಒತ್ತಿ ಗಾಳಿ ಹೊರಗೆ ಹೋಗದಂತೆ ಬಿಗಿಯಾಗಿ ಮುಚ್ಚಿಕೊಳ್ಳುವಂತೆ ಟಯರಿನ ಒಳಬಾಯಿ (ಟಯರ್ ಮತ್ತು ರಿಂ ಕೂಡುವಲ್ಲಿ) ರಬ್ಬರ್ ರಿಜ್‌ಗಳಿಂದ (rubber ridge) ಮಾಡಲ್ಪಟ್ಟಿರುತ್ತದೆ ಸ್ಟ್ಯಾಂಡಾರ್ಡ ಆಯಿಲ್ ಕಂಪನಿಯವರು ತಯಾರಿಸಿದ ವಿಶೇಷ ಶಕ್ತಿಶಾಲಿಯಾದ ಬ್ಯುಟೈಲ್‌ರಬ್ಬರಿನಿಂದ ಈ ಟಯರು ನಿರ್ಮಿಸಲ್ಪಟ್ಟಿದೆ. ಸಾಮಾನ್ಯ ರಬ್ಬರಿನ ಒಂದಿಂಚ ದಪ್ಪದ ಪದರಿಗಿರುವಷ್ಟೇ ಬಲ ಇದರ ೯/೧೦ ಇಂಚಿನ ಪದರಿಗಿದೆಯಂತೆ

ಈ ಹೊಸ ಟಯರಿನ ವೈಶಿಷ್ಟ್ಯವೆಂದರೆ ಅದರಲ್ಲಿ ಮೊಳೆ ಕಲ್ಲು ಮೊದಲಾದವು ಚುಚ್ಚಿದ ವಸ್ತುವನ್ನು ಹೊರಗೆಳೆದೊಡನೆ ತೂತು ತಾನಾಗಿಯೆ ಮುಚ್ಚಿಕೊಂಡು ಬಿಡುತ್ತದೆ. ಒಳಗಿನ ಗಾಳಿ ಸೋರುವದಿಲ್ಲ, ಇದಕ್ಕಾಗಿ ಟಯರಿಗೆ ಗಂ ರಬ್ಬರಿನ ಒಂದು ಹೆಚ್ಚಿಗೆ ಪದರಿದೆ.

ಈ ಹೊಸ ಟ್ಯೂಬ್ ರಹಿತ ಟಯರುಗಳ ತಾಳಿಕೆಯೂ ಸಾಮಾನ್ಯ ಟಯರಿಗಿಂತ ಹೆಚ್ಚಾಗಿದೆ, ಅತ್ಯಾಧುನಿಕ ಸಾಮಾನ್ಯ ಟಯರುಗಳು ಸುಮಾರು ೨೫೦೦೦ ಮೈಲುಗಳ ಪ್ರಯಾಣವನ್ನು ತಡೆದುಕೊಂಡರೆ ಈ ಹೊಸ ಟಯರುಗಳಲ್ಲಿ ಕೆಲವು ೪೦೦೦೦ ಮೈಲುಗಳಿಗಿಂತಲೂ ಹೆಚ್ಚು ಪ್ರಯಾಣವನ್ನು ತಾಳಿಕೊಂಡಿವೆ ಅದರಲ್ಲಿ ತುಂಬುವ ಗಾಳಿಯ ಪ್ರಮಾಣ ಸಾಮಾನ್ಯ ಟ್ಯೂಬುಗಳಿಗೆ ಬೇಕಾದಷ್ಟೆ ಇದೆ.

ಇದರ ಬೆಲೆಯಾದರೂ ಈ ಪ್ರಾರಂಭಾವಸ್ಥೆಯಲ್ಲಿ ಕೂಡ ಬಹಳ ಹೆಚ್ಚಿಲ್ಲ ಅದು ಕೊಡುವ ಮೈಲೇಜಿನಿಂದ ಲೆಕ್ಕ ಹಾಕಿದರೆ ಹಳೆ ಟಯರ್ ಟ್ಯೂಬ ಗಳಿಗಿಂತ ನೂರಕ್ಕೆ ೧೦ ರಷ್ಟು ಮಾತ್ರ ಇದರ ಬೆಲೆ ಹೆಚ್ಚು. ಹೆಚ್ಚು ಉತ್ಪಾದನೆಯಾಗುವಾಗ ಬೆಲೆ ಇಳಿಯುವಲ್ಲಿ ಸಂದೇಹವೇ ಇಲ್ಲ

ಆದರೆ ಇದರಲ್ಲಿಯೂ ಕೆಲ ತೊಡಕುಗಳಿಲ್ಲದೆ ಇಲ್ಲ. ಗಾಲಿಯ ರಿಂ ಬಾಗಿದ್ದರೆ ಅಥವಾ ಅದಕ್ಕೆ ಬಹಳ ತುಕ್ಕು (ಜಂಗು) ಹಿಡಿದಿದ್ದರೆ ಗಾಳಿ ಸೋರುವ ಸಂಭವವಿದೆ. ಅಲ್ಲದೆ ಇದಕ್ಕೆ ದೊಡ್ಡ ಗಾಜಿನ ಚೂರು ಅಥವಾ ಕೊಳವೆಯಂಥ ವಸ್ತು ನಾಟಿದರೆ ಗಾಳಿ ಹೋಗಿಬಿಡಬಹುದು.

ಪತ್ರಿಕೋದ್ಯೋಗ

ಜನತೆಯನ್ನು ಸರಿಯಾದದಾರಿಯಲ್ಲಿ ನಡೆಸುವುದರಲ್ಲಿ ಪತ್ರಿಕೆಗಳು ಅತಿ ಪ್ರಾಮುಖ್ಯ ಪಾತ್ರ ನಿರ್ವಹಿಸಬೇಕು

(ಮದರಾಸು ಮಂತ್ರಿ ಭಕ್ತವತ್ಸಲಂರವರ ಅಭಿಪ್ರಾಯ.)

ಭಾರತೀಯ ಪತ್ರಿಕೋದ್ಯೋಗವು ಇತ್ತೀಚೆಗೆ ಕೆಲವು ವರ್ಷಗಳಿಂದ ತುಂಬಾ ಪ್ರಗತಿ ಹೊಂದಿರುವುದಾದರೆ, ಈ ಪ್ರಾಂತದಲ್ಲಿ ಅದು ಅವರ ಪ್ರಯತ್ನದಿಂದೆನ್ನಬಹುದು. ಅವರು ಅವರ ಸ್ವಂತ ಊರುಗಳಲ್ಲಿ ಮಾತ್ರವಲ್ಲದೆ ಹೊರಗೆ ಇತರ ಪ್ರಾಂತಗಳಲ್ಲಿ ಸಹ ತುಂಬಾ ಗಣನೀಯ ಕಾರ್ಯ ನಿರ್ವಹಿಸಿದ್ದಾರೆ. ಈ ಸಂದರ್ಭದಲ್ಲಿ ದಿವಂಗತ ಶ್ರೀ ಚಿಂತಾಮಣಿಯವರನ್ನು ಪ್ರಶಂಸಿಸಲೇ ಬೇಕು. ಅವರು ಅಲಹಾಬಾದಿನಂತಹ ದೂರ ಪ್ರಾಂತದಲ್ಲಿದ್ದುಕೊಂಡು ಭಾರತೀಯ ಪತ್ರಿಕೋದ್ಯೋಗದ ಪ್ರಗತಿಗೆ ಅಪಾರ ಬೆಂಬಲವಿತ್ತಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದ ಸಮಯ ಆಂಧ್ರ ದೇಶದಲ್ಲಿ ಅನೇಕ ಪತ್ರಿಕೋದ್ಯೋಗಿಗಳು ಮುಂದೆ ಬಂದು ಸ್ವರಾಜ್ಯ ಸಾಧನೆಗಾಗಿ ನಾನಾವಿಧ ಸಹಾಯವು ಕಡವೆ. ಯುದ್ಧದಲ್ಲಿ ಈ ದೇಶಭಕ್ತರಲ್ಲಿ ಕೆಲವರು ತಮ್ಮ ಪತ್ರಿಕೆಗಳ ಮೂಲಕ ವಿದೇಶೀಯರೊಡನೆ ಧೈರ್ಯದಿಂದ ಹೋರಾಡಿರುವರು. ಅವರು ಅಧಿಕಾರಿಗಳ ವಿರೋಧಿಗಳಾಗಿ ಅದಕ್ಕೆ ಅಪಾರ ಬೆಲೆತೆತ್ತಿದ್ದಾರೆ. ಹೀಗೆ ಈ ದೇಶಾಭಿಮಾನಿಗಳು ಪತ್ರಿಕೋದ್ಯೋಗಿಗಳು ಜನತೆಯ ಹಾಗೂ ಮಾತೃಭೂಮಿಯ ಸೇವೆ ಮಾಡುವ ಆಸಕ್ತಿಯಲ್ಲಿ ತಮ್ಮನ್ನೂ ತಮ್ಮ ಯಾವತ್ತು ಸುಖಸಂಪತ್ತುಗಳನ್ನೂ ತ್ಯಾಗ ಮಾಡಿರುವರು. ಇದು ನಮ್ಮ ಈ ದೇಶದಲ್ಲಿ ಪತ್ರಿಕೋದ್ಯೋಗದ ಸಂಕ್ಷಿಪ್ತ ಹಿನ್ನೆಲೆಯಾಗಿದೆ. ಈಗ ಹೊಸ ವಾತಾವರಣದಲ್ಲಾದರೂ ಪತ್ರಿಕೆಗಳು ಜನತಾ ಸೇವೆ ಮಾಡುತ್ತಲೇ ಇರಬೇಕಾಗಿದೆ. ನಾವು ಸ್ವಾತಂತ್ರ್ಯವನ್ನು ಗಳಿಸಿರುವೆವು. ಈ ಸ್ವಾತಂತ್ರ್ಯದ ಫಲಗಳನ್ನು ಪೂರ್ಣ ಅನುಭವಿಸಬೇಕಾದರೆ ನಾವು ನಮ್ಮನ್ನು ಸ್ವಸ್ಥೀಕರಿಸಿಕೊಳ್ಳಬೇಕು. ಜನತೆಯನ್ನು ಸರಿಯಾದ ದಾರಿಯಲ್ಲಿ ನಡೆಸುವುದರಲ್ಲಿ ಪತ್ರಿಕೆಗಳು ಅತಿ ಪ್ರಾಮುಖ್ಯ ಪಾತ್ರ ನಿರ್ವಹಿಸಬೇಕಾಗಿದೆ. ಈ ದೇಶದಲ್ಲಿ ವಯಸ್ಕರಿಗೆ ಶಿಕ್ಷಣವೀಯುವ ಶ್ರೇಷ್ಠ ಕಾರ್ಯವನ್ನು ಕೈಗೊಂಡಿರುವ ಪತ್ರಿಕೋದ್ಯೋಗಿಗಳು ನಿಜವಾಗಿಯೂ ಅತಿ ಶ್ರೇಷ್ಠ ಗುರುಗಳಾಗಿರುವರು. ಸಮಾಜದಲ್ಲಿ ವಾರ್ತಾ ಪತ್ರಿಕೆಗಳ ಸ್ಥಾನವೆಲ್ಲಿಯೆಂಬುದು ಪ್ರಪಂಚದಲ್ಲೆಲ್ಲಿಯೂ ಚೆನ್ನಾಗಿ ತಿಳಿದುಕೊಳ್ಳಲಾಗಿದೆ. ಈ ದೇಶದಲ್ಲಿ ಆಯಾಯಾ ಪ್ರದೇಶಗಳ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ಪತ್ರಿಕೆಗಳು ಈ ಅತಿ ಪ್ರಾಮುಖ್ಯ ಹೊಣೆಗಾರಿಕೆಯನ್ನು ವಹಿಸಿಕೊಂಡಿವೆ. ಅದು ಅವುಗಳ ನಿಜವಾದ ಕೆಲಸ. ದೇಶಭಾಷೆಗಳ ಪತ್ರಿಕೆಗಳ ಭವಿತವ್ಯವು ಅತ್ಯುತ್ತಮವಾಗಿದೆಂಬುದನ್ನು ನಾನು ಒತ್ತಿ ಹೇಳಬೇಕಾಗಿಲ್ಲ. ಪತ್ರಿಕೆಗಳು ಜನತೆಗೋಸ್ಕರವಾದರೆ, ಜನತೆಯ ಭಾಷೆಗಳಲ್ಲಿ ಮಾತ್ರವೇ ಅವರ ಸೇವೆ ಮಾಡಲು ಪತ್ರಿಕೆಗಳಿಗೆ ಸಾಧ್ಯವಿದೆ. ಈ ವಿಷಯದಲ್ಲಿ ತುಂಬಾ ಪ್ರಗತಿ ಹೊಂದುತ್ತಿರುವುದು ಒಂದು ಸಮಾಧಾನಕರ ಸಂಗತಿ. ಆದರೆ ದೇಶಭಾಷೆಗಳ ವಾರ್ತಾ ಪತ್ರಿಕೆಗಳನ್ನು ಪ್ರಕಟಿಸುವುದಕ್ಕೆ ಕೆಲವು ಸೌಕರ್ಯಗಳು ಬೇಕಾಗಿವೆ. ದೇಶಭಾಷೆಗಳಲ್ಲಿ ಶಾರ್ಟ್‌ಹೇಂಡ ಟೈಪ್ ರೈಟಿಂಗ್‌ಗಳ ಕಡೆಗೆ ಗಮನ ಕೊಡಬೇಕಾಗಿದೆ. ಇಂತಹ ಅಡಚಣೆಗಳಿಂದ ಬೇಗನೇ ನಾವು ಪಾರಾಗಬಹುದೆಂದು ನಾನು ಆಶಿಸುತ್ತೇನೆ.

ಪತ್ರಿಕೆಗಳ ಕರ್ತವ್ಯ

ವಾರ್ತಾ ಪತ್ರಿಕೆಗಳು ಜನತೆಯ ಪರವಾಗಿ ಅಪಾರ ಜವಾಬ್ದಾರಿಕೆ ಹೊರಬೇಕಾಗಿರುವುದರಿಂದಲೇ ಅವು ಸಮಾಜದಲ್ಲಿ ನಾಲ್ಕನೇ ಸ್ಥಾನವನ್ನು ಪಡೆದಿರುವುದಾಗಿದೆ. ಅದು ಸರಕಾರವಾಗಿರಲಿ, ವಾರ್ತಾ ಪತ್ರಿಕೆಗಳಾಗಿರಲಿ, ಹೇಗಿದ್ದರೂ ಜನತೆಯ ಸೇವೆ ಮಾಡಬೇಕಾದವುಯೆಂಬುದನ್ನು ಮರೆಯಕೂಡದು. ಚುನಾಯಿತ ಸರಕಾರವಾದರೂ ಜನತೆಯ ಅಭಿಪ್ರಾಯ ಹಿತಗಳನ್ನು ಗಮನಿಸದಿದ್ದರೆ, ಅದು ಜನಪ್ರಿಯವಾಗಲಾರದು ಹಾಗೂ ಜವಾಬುದಾರಿಕೆಯಿಂದ ಕೂಡಿರಲಾರದು. ಇದೇ ರೀತಿ ವಾರ್ತಾ ಪತ್ರಿಕೆಯು ಅದನ್ನು ನಡೆಸುವವರ ಅಭಿಪ್ರಾಯ ಹಿತಗಳನ್ನು ಮಾತ್ರ ಗಮನಿಸುವುದಾದರೆ, ಅದು ಜನತೆಯ ಸಂಸ್ಥೆಯಾಗಿರಲಾರದು. ನಾವು ಜನತೆಯ ಸೇವೆ ಮಾಡಬೇಕಲ್ಲದೆ, ಅವನ್ನು ಸ್ವಾರ್ಥಿಯು ಈ ವರ್ತನೆಯಿಂದ ಮುಂದೆ ತನಗೆ ಸಹ ಒಳ್ಳೆದಾಗಲೆಂಬುದನ್ನು ತಿಳಿಕೊಳ್ಳಬೇಕು. ಬೇರೆಯವರನ್ನು ಸ್ವಾರ್ಥಕ್ಕಾಗಿ ಉಪಯೋಗಿಸುವುದಲ್ಲ. ಅಂಥ ಸ್ವಾರ್ಥಿಯು ಈ ವರ್ತನೆಯಿಂದ ಮುಂದೆ ತನಗೆ ಸಹ ಒಳ್ಳೆದಾಗವೆಂಬುದನ್ನು ತಿಳಕೊಳ್ಳಬೇಕು. ಬೇರೆಯವರನ್ನು ಸ್ವಾರ್ಥಕ್ಕಾಗಿ ಉಪಯೋಗಿಸುತ್ತಿರಬೇಕಾಗುತ್ತದೆ. ಆದರೆ ಅವರನ್ನು ಸದಾ ಮೋಸಗೊಳಿಸುತ್ತಿರಲು ಸಾಧ್ಯವಿಲ್ಲ. ಇದನ್ನು ಸರಕಾರವೂ ವಾರ್ತಾ ಪತ್ರಿಕೆಗಳೂ ಮನಗಂಡರೆ, ಅವುಗಳೊಳಗೆ ಎಂದೆಂದಿಗೂ [illegible] ಯಿರಲಾರದು. ಸ್ವತಂತ್ರದೇಶದಲ್ಲಿ ವಾರ್ತಾ ಪತ್ರಿಕೆಗಳು ಹಾಗೂ ಸರಕಾರಗಳೊಳಗೆ ಸೌಹಾರ್ದ ಸಂಬಂಧವಿರಲು ಇದುವೇ ಮುಖ್ಯ. ಸರಕಾರದ ಮಟ್ಟಿಗೆ ಅದು ಟೀಕೆಗಳನ್ನು ಆಕ್ಷೇಪಿಸಕೂಡದು. ಟೀಕೆಗಳನ್ನು ನಾವು ಆಮಂತ್ರಿಸುತ್ತೇವೆ. ಜ್ಞಾನೋದಯ, ಶಿಕ್ಷಣ, ಶ್ರೇಯೋಭಿವೃದ್ಧಿಗಳಿಗೆ ಟೀಕೆಗಳು ಸಹಕರಿಸುತ್ತದೆಂಬುದನ್ನು ನಾವು ತಿಳಿದಿರುವೆವು. ತಪ್ಪು ಮಾಡಲಾರೆವೆಂದು ಯಾರಿಗೂ ಹೇಳಲು ಸಾಧ್ಯವಿಲ್ಲ. ಟೀಕೆಗಳಿಂದ ನಮಗೆ ನಿಜವಾಗಿಯೂ ಪ್ರಯೋಜನವಿದೆ. ಈ ಟೀಕೆಗಳಿಂದ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ನಮಗೆ ಅನುಕೂಲವಾಗುತ್ತದೆ. ಆದರೆ ಟೀಕೆಗಳು ಜನತೆಯ ಹಿತಕ್ಕೋಸ್ಕರ ಇರಲಿಯೆಂಬುದೇ ನನ್ನ ಕೋರಿಕೆ. ಕೆಲವು ವೇಳೆ ಪತ್ರಿಕೆಗಳು ತಮ್ಮ ಸ್ವಂತ ಯಜಮಾನರ, ಸಂಪಾದಕರ ಇಲ್ಲವೇ ಒಂದು ಪಕ್ಷದವರ ಅಭಿಪ್ರಾಯವನ್ನು ಮಾತ್ರ ಪ್ರತಿಬಿಂಬಿಸುತ್ತವೆ. ಒಂದು ಪತ್ರಿಕೆಯು ಎಷ್ಟು ಪ್ರಾಮುಖ್ಯ ಪತ್ರಿಕೆಯಾಗಿದ್ದರೂ, ಮದ್ಯಪಾನ ನಿರೋಧ ಪದ್ಧತಿಯನ್ನು ಕೈಗೊಂಡುದಕ್ಕೋಸ್ಕರ ಸರಕಾರವನ್ನು ಖಂಡಿಸಿದರೆ, ಆ ಪತ್ರಿಕೆಯು ಸೂಚಿಸುವ ಜನಾಭಿಪ್ರಾಯವನ್ನು ಗಮನಿಸಲಾಗುವುದಿಲ್ಲವೆಂದು ಸರಕಾರದ ಮೇಲೆ ತಪ್ಪು ಹಿಡಿಯಲು ಸಾಧ್ಯವಿಲ್ಲ. ಕೆಲವು ಪತ್ರಿಕೆಗಳು ಅಧಿಕಾರವನ್ನು ವಹಿಸಿಕೊಂಡವರ ಮೇಲೆ ವೈಯಕ್ತಿಕ ಅಥವಾ ಜಾತೀಯ ಜಿಗುಪ್ಸೆಯ ಅಪವಾದ ಹೊರಿಸಿ ಅವರನ್ನು ಟೀಕಿಸುತ್ತವೆ. ಈ ಪತ್ರಿಕೆಗಳು ಬೇಕು ಬೇಕೆಂದಾಗಿ ಸರಕಾರದ ಇಚ್ಛೆಗಳನ್ನೂ ವರ್ತನೆಗಳನ್ನೂ ತಪ್ಪಾಗಿ ಪ್ರಚುರಪಡಿಸುತ್ತವೆ. ಕೆಲವು ಪಕ್ಷಗಳ ಪತ್ರಿಕೆಗಳು ತಮ್ಮ ಸ್ವಂತ ಧೋರಣೆಗಳ ಹಾಗೂ ಕಾರ್ಯಕ್ರಮಗಳ ಪ್ರಚಾರಕ್ಕಾಗಿ ಜಾತೀಯ ಬೇಧ ಭಾವಗಳನ್ನು ಹುಟ್ಟಿಸಿ, ಹಿಂಸೆಗೆ ಪ್ರೋತ್ಸಾಹಿಸುವುದನ್ನು ಸಹ ಕಾಣಬಹುದು. ಅಂತಹ ಪತ್ರಿಕೆಗಳ ಅಭಿಪ್ರಾಯವನ್ನು ಜನಪ್ರಿಯ ಸರಕಾರವು ಜನತೆಯ ಅಭಿಪ್ರಾಯವೆಂದು ಅಂಗೀಕರಿಸಲು ಸಾಧ್ಯವಿಲ್ಲ. ಅಲ್ಲದೆ ಪತ್ರಿಕೋದ್ಯೋಗದ ಹೆಸರಿನಲ್ಲಿ ಅಂತಹ ವ್ಯಕ್ತಿಗಳ ನಡತೆಯನ್ನು ಜವಾಬುದಾರಿ ಸರಕಾರಕ್ಕೆ ಗಮನಿಸದಿರಲಿಕ್ಕೆ ಸಹ ಸಾಧ್ಯವಿಲ್ಲ. ವಾರ್ತಾ ಪತ್ರಿಕೆಗಳ ಹಾಗೂ ಪತ್ರಿಕೆಗಳ ಯಜಮಾನರೂ ಸಂಪಾದಕರೂ ಜನತೆಯ ಹಿತವನ್ನು ಮುಂದಿಟ್ಟುಕೊಳ್ಳಬೇಕೆಂದೂ ವಾರ್ತಾ ಪತ್ರಿಕೆ ಜನತಾ ಸರಕಾರಗಳೊಳಗೆ ಸಹಕಾರ ಸುಸಂಘಟನೆಗಳನ್ನುಂಟುಮಾಡುವಂತೆ ಇತರ ಯಾವತ್ತು ಹಿತಗಳನ್ನು ದೂರ ತಳ್ಳಬೇಕೆಂದೂ ನನ್ನ ವಿನತಿಯಾಗಿದೆ. ಜಿಲ್ಲೆಗಳಲ್ಲಿರುವ ಪತ್ರಿಕೆಗಳಿಗೆ ತುಂಬಾ ಅಡಚಣೆಗಳಿವೆ. ಅವುಗಳ ಪ್ರತಿನಿಧಿಗಳ ಹೊಣೆಗಾರಿಕೆಯು ಕಡಮೆದ್ದಲ್ಲ. ಅವುಗಳಿಗೆ ಅವುಗಳ ಸ್ವಂತವಾದ ರಾಜಕೀಯ ಇಲ್ಲವೇ ಸಾಮಾಜಿಕ ಅಭಿ

ಪ್ರಾಯಗಳಿರಬಹುದು. ಆದರೆ, ಆ ವೃತ್ತಪತ್ರಿಕೆಗಳ ಮೂಲಕ ನಿಜವಾದ ವರ್ತಮಾನಗಳನ್ನು ಜನರಿಗೆ ಒದಗಿಸಬೇಕಾಗಿದೆ. ಕೆಲವು ವೇಳೆ ವರ್ತಮಾನಗಳಿಗಾಗಿ ಓಡಾಡುತ್ತಿರುವ ಬಾತ್ಮಿಗಾರರು ಕೊಟ್ಟು ಪ್ರಕಟವಾಗುವ ಸಂಧಿಗಳು ನಂತರ ಶುದ್ಧ ಸುಳ್ಳಾಗಿ ಪರಿಣಮಿಸುತ್ತವೆ. ಪತ್ರಿಕೆಗಳ ಹಿತದೃಷ್ಟಿಯಿಂದ ಆ ರೀತಿ ವರ್ತಿಸುವುದು ಎಂದೆಂದಿಗೂ ಯೋಗ್ಯವಲ್ಲ. ನಮ್ಮ ಉತ್ಸಾಹವು ಕೊನೆಗೆ ನಮ್ಮನ್ನು ಸುಳ್ಳುಗಾರರನ್ನಾಗಿ ಮಾಡಬಾರದು. ಜನತೆಗೆ ಬೇಕಾದ ತಿಳುವಳಿಕೆಯನ್ನುಂಟುಮಾಡುವುದರಲ್ಲಿ ತಾವು ಮಾಡಬೇಕಾದ ಕರ್ತವ್ಯವು ಅಷ್ಟಿಷ್ಟಲ್ಲವೆಂಬುದನ್ನು ಜಿಲ್ಲೆಗಳಲ್ಲಿರುವ ಪತ್ರಿಕೋದ್ಯೋಗಿಗಳು ಮನಗಂಡಿರುವರೆಂಬುದರಲ್ಲಿ ನನಗೆ ಸಂದೇಹವಿಲ್ಲ

ಜಾಹೀರಾತುಗಳ ಮೇಲೆ ತೆರಿಗೆ

ವಾರ್ತಾ ಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳ ಮೇಲೆ ತೆರಿಗೆ ಹೊರಿಸಲು ಸರಕಾರವು ನಿಶ್ಚಯಿಸಿದುದರ ಮೇಲೆ ಟೀಕೆಗಳಿವೆ. ಈ ಅಭಿಪ್ರಾಯವನ್ನು ನನಗೆ ಸೂಚಿಸಿದವರು ಈ ಪ್ರಾಂತದ ಅತಿ ಮುಖ್ಯ ಸಂಪಾದಕರೊಬ್ಬರೆಂದು ನಾನಿಲ್ಲಿ ಹೇಳಬೇಕಾಗಿದೆ. ಈ ತೆರಿಗೆಯ ಬಗ್ಗೆ ಸರಕಾರವು ಒಂದು ಮಸೂದೆಯನ್ನು ತಯಾರಿಸಿ ಪ್ರಕಟಿಸಿದೆ. ಶಾಸನ ಸಭೆಯು ಅದನ್ನು ಚರ್ಚಿಸಿ, ಸೆಲೆಕ್ಟ್ ಸಮಿತಿಗೆ ಕೂಲಂಕುಷ ಪರಿಶೀಲನೆಗಾಗಿ ಒಪ್ಪಿಸುವುದು. ಈ ಹೊಸ ತೆರಿಗೆಯೊಡನೆ ವಾರ್ತಾ ಪತ್ರಿಕೆಗಳ ಮೇಲೆ ಹೇರಿಸಿರುವ ಮಾರಾಟ ತೆರಿಗೆಯನ್ನು ಮುಂದುವರಿಸಬೇಕೋ ನಿಲ್ಲಿಸಬೇಕೋ ಎಂಬ ಪ್ರಶ್ನೆಯು ಇನ್ನೂ ನಿರ್ಣಯವಾಗಲಿಲ್ಲ. ಮಂತ್ರಿಗಳ ಹಾಗೂ ಶಾಸನ ಸಭೆಗಳ ಸದಸ್ಯರ ಕುರಿತು ಯಾವ ಪ್ರಚಾರವನ್ನೂ ಕೊಡಲಾಗದೆಂದು ಮದರಾಸಿನ ಕೆಲವು ಪತ್ರಿಕೆಗಳ ಯಜಮಾನರು ಬೆದರಿಸುವುದರ ಅರ್ಥ ನನಗೆ ತಿಳಿಯುವುದಿಲ್ಲ. ಯಾರೂ ತಮ್ಮ ಸ್ವಂತಕ್ಕಾಗಿ ಪ್ರಚಾರ ಕೊಡಬೇಕೆಂದು ಇಚ್ಛಿಸುವುದಿಲ್ಲ. ಪತ್ರಿಗಳು ಬೇಕಾದ ವಿಷಯಗಳನ್ನು ಪ್ರಕಟಿಸಿ ಜನತೆಯ ಹಿತದ ಕಡೆಗೆ ನೋಡಬೇಕೆಂಬುದೇ ನನ್ನ ಆಶಯ

ಸರಕಾರವು ತನ್ನ ಅಧಿಕಾರವನ್ನು ಕೆಡಿಸಿಕೊಳ್ಳದಿರಲಿ! ಪತ್ರಿಕೋದ್ಯಮವು ಸಹ ಕರ್ತವ್ಯ ಭ್ರಷ್ಟವಾಗದಿರಲಿ! ನಾವೆಲ್ಲರೂ ಜನತೆಯ ಪ್ರಯೋಜನಕ್ಕಾಗಿಯೇ ಕಾರ್ಯ ನಿರತರಾಗೋಣ!!!

—ನ್ಯೂಸ್ ಪ್ರಿಂಟ್ ಸಲಹಾ ಸಮಿತಿಯ ಶಿಫಾರಸಿನ ಮೇರೆಗೆ ನ್ಯೂಸ್‌ಪ್ರಿಂಟ್ (ವೃತ್ತಪತ್ರಕಾಗದ) ನಿಯಂತ್ರಣಾಜ್ಞೆಯನ್ನು ಕೇಂದ್ರ ಸರಕಾರವು 14-6-48 ರಿಂದ ರದ್ದುಗೊಳಿಸುತ್ತದೆ. ಹಿಂದೂಸ್ಥಾನದಲ್ಲಿ ತಿಂಗಳಿಗೆ ಸುಮಾರು 4600 ಟನ್ನುಗಳಷ್ಟು ನ್ಯೂಸ್‌ಪ್ರಿಂಟ್ ವೆಚ್ಚವಾಗುತ್ತದೆ. ಈಗ ಒಟ್ಟು 22,000 ಟನ್ನುಗಳಷ್ಟು ದಾಸ್ತಾನಿದೆ.

ಆಹ್ವಾನ ಪತ್ರಿಕೆ

ಮಹನೀಯರೇ!

ಕಳೆದ 19-7 ನೇ ಇಸ್ವಿ ಜೂನ್ ತಿಂಗಳು 9 ನೇ ತೇದಿಯಲ್ಲಿ ಬಣಜಾರ (ಯನಾಡಿ) ವಿದ್ಯಾರ್ಥಿಗಳು ಸ್ವತಃ ಶ್ರಮಪಟ್ಟು ಉದಾರ ಅಧಿಕಾರಿಗಳ ಸಹಾಯದಿಂದ ಸುರುಮಾಡಿದ ಹಾಸ್ಟಲಿನ ಆಡಳಿತೆಗೆ ನೇಮಿಸಲ್ಪಟ್ಟ ಕಮಿಟಿಮೆಂಬರು ಸ್ವಭಾವಲ ಲಷಯಿಂದ ಕೇವಲ ತಮ್ಮ ಪ್ರಭಾವ ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ಹಾಸ್ಟಲಿನಲ್ಲಿ ಪ್ರವೇಶ ಕೊಟ್ಟು 25, 30 ಮೈಲು ದೂರದಿಂದ ಬಂದ ಮತ್ತು ಹಿಂದಿನಿಂದಲೂ ಇದ್ದ ವಿದ್ಯಾರ್ಥಿಗಳನ್ನು ಈಗ ಹಾಸ್ಟೆಲ್ ನಿಂದ ತೆಗೆದು ಹಾಕಿರುವ. ಇವರನ್ನು ಪುನಃ ಸೇರಿಸಿಕೊಳ್ಳಲು ಪಟ್ಟ ಶತಪ್ರಯತ್ನಗಳು ಫಲಿಸದೆ ಇದುದರಿಂದ ಸುಮಾರು 15 ವಿದ್ಯಾರ್ಥಿಗಳಿಗೆ ಈ ಕೆಳಕಂಡ ಸಮಿತಿಯವರು ಭೋಜನದ ವ್ಯವಸ್ಥೆ ಮಾಡಲಿರುವರು. ಸದ್ರಿ ಸಮಿತಿಯವರು ಷೆಡ್ಯೂಲ್ಡ್-ಕ್ಲಾಸು ಬೋರ್ಡಿಂಗ್ ಹೋಮ್ ಎಂಬ ಹೆಸರಿನಲ್ಲಿ ಒಂದು ಹಾಸ್ಟಲನ್ನು 8-7-49 ಶುಕ್ರವಾರ ಉದಯ 11 ಗಂಟೆಗೆ ಶ್ರೀ ಸರ್ವತಗೌಡರ ಖಣದಲ್ಲಿರುವ ಕಟ್ಟಡದಲ್ಲಿ ಸ್ಥಾಪಿಸುವರು. ಸದರಿ ಹಾಸ್ಟಲಿನ ಪ್ರಾರಂಭೋತ್ಸವವು ಶ್ರೀ ಜಾಗಟಗೇರಿ ಸದ್ಯೋಜಾತಪ್ಪನವರ ಅಮೃತ ಹಸ್ತದಿಂದ ನೆರವೇರಿಸಲಾಗುತ್ತದೆ. ಸದ್ರಿ ಸಮಾರಂಭಕ್ಕೆ ಸರ್ವರು ಆಗಮಿಸಿ ಪ್ರೋತ್ಸಾಹಿಸಬೇಕಾಗಿ ಕೋರುತ್ತೇವೆ.

ಷೆಡ್ಯೂಲ್ಡ್‌ಕ್ಲಾಸ್ ಹಾಸ್ಟೆಲ್ ಸಮಿತಿ ಕೊಟ್ಟೂರು

ಶ್ರೀ ಹೆಚ್. ಬಸಪ್ಪ ಹರಿಜನ ತೂಲಹಳ್ಳಿ ಪ್ರೆಸಿಡೆಂಟ್. ಶ್ರೀ ಜೆ. ಯಂ. ಭಾವಸಿಂಗ್ ನಾಯ್ಕ ಚಿಕ್ಕಜೋಗಿನಹಳ್ಳಿ, ತಾಂಡ ವೈಸ್‌ಪ್ರೆಸಿಡೆಂಟ್ ಶ್ರೀ ಯಲ್. ಸಕ್ರನಾಯ್ಕ ಕಾರ್ಯದರ್ಶಿ. ಶ್ರೀ ಟಿ ಯಸ್. ಗುರುಲಿಂಗಪ್ಪ ಕೊಟ್ಟೂರು ಸದಸ್ಯರು. ಶ್ರೀ ಜಿ. ಶರಣಪ್ಪ ಕೊಟ್ಟೂರು ಸದಸ್ಯರು.

—ಹಿಂದೂಸ್ಥಾನದಲ್ಲಿ ತೀವ್ರ ಬದಲಾವಣೆಗಳಾಗುತ್ತಿವೆ. ಸಂಸ್ಥಾನಗಳು ಅಳಿದು ಹೋಗಿ ಹಿಂದೂಸ್ಥಾನದ ಹೊಸ ಘಟನೆ ಸಿದ್ಧವಾಗುತ್ತಿದೆ ಆರ್ಥಿಕ ವಿಷಯದಲ್ಲಿ ಸಾವಕಾಶ ಬದಲಾವಣೆ ಮಾಡುವ ಧೋರಣೆಯನ್ನು ಅನುಸರಿಸಲಾಗುತ್ತಿದೆ. ಬಂಡವಾಳದಾರರು ಸಂಕುಚಿತ ಧೋರಣೆ ತಾಳಿ ಉತ್ಪಾದನೆ ಹೆಚ್ಚಿಸಲು ಬಂಡವಾಳ ತೊಡಗಿಸುತ್ತಿಲ್ಲ, ಇದು ರಾಷ್ಟ್ರಹಿತಕ್ಕೆ ವಿರೋಧಿಯಾಗಿದೆ. ಹಿಂದೂಸ್ಥಾನವು ಪ್ರಗತಿ ಹೊಂದಿದರೆ ಬಂಡವಾಳದಾರರು ಪ್ರಗತಿ ಹೊಂದುವರು. ಇಲ್ಲವಾದರೆ ಬೇರೆ ಶಕ್ತಿಗಳು ಮುನ್ನುಗ್ಗುವ ಗಂಡಾಂತರವೂ ಇದೆ.

ನೆಹರು

ಸರಕಾರದ ಪ್ರಕಟನ

ಡಿಸ್ಟ್ರಿಕ್ಟ್-ಬೋರ್ಡ್ ಸದಸ್ಯರು

ಈ ಕೆಳಗಿನ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಬರುವ ಸಾಮಾನ್ಯ ಚುನಾವಣೆಗಳಲ್ಲಿ ಆರಿಸಲ್ಪಡುವ ಸದಸ್ಯರು ಸೆಪ್ಟಂಬರ ತಿಂಗಳಲ್ಲಿ ಅಧಿಕಾರ ವಹಿಸುವರು. ವಿಶಾಖಪಟ್ಟಣ ಪೂರ್ವ ಗೋದಾವರಿ, ಪಶ್ಚಿಮಗೋದಾವರಿ ಕೃಷ್ಣ ಗುಂಟೂರು, ತಿರುನಲ್ವೇಲಿ, ಮದುರೈ, ಸೇಲಂ, ನೆಲ್ಲೂರು, ಕಡಪ, ಕರ್ನೂಲು, ಬಳ್ಳಾರಿ, ಅನಂತಪುರ, ತಿರುಚಿರಗಳ್ಳಿ ಕೊಯಂಬತ್ತೂರು ನೀಲಗಿರಿ, ಚೆಂಗಲ್ಪೆಟ್ ಉತ್ತರ ಆರ್ಕಾಟು, ದಕ್ಷಿಣ ಆರ್ಕಾಟು, ತಂಜಾವೂರು, ರಾಮನಾಡ, ಮಲಬಾರು, ದಕ್ಷಿಣಕನ್ನಡ.

ಜಲಜನಕ ಮಿಶ್ರಿತ ಎಣ್ಣೆಯು ಮೊದಲ ಹೆಜ್ಜೆ

ಗುಡ್ಡದಷ್ಟು ಜನಾಭಿಪ್ರಾಯದ ಒತ್ತಾಯದ ನಂತರ ಭಾರತ ಸರಕಾರ ಇದೀಗ ಚಲಿಸತೊಡಗಿವೆ. ಹಲವು ದುರಂತ ಮಾಸಗಳ ನಂತರ ಅದೀಗ 'ವನಸ್ಪತಿ' ತುಪ್ಪದ ವಿರುದ್ಧ ಅರೆಮನಸಿನ ಒಂದು ಕ್ರಮವನ್ನು ತೆಗೆದುಕೊಂಡಿದೆ. ವನಸ್ಪತಿ ಎಣ್ಣೆಯನ್ನು ಉತ್ಪಾದನ ಮಾಡುವ ಕಾರಖಾನೆಗಳೂ ತಮ್ಮ ಉತ್ಪತ್ತಿಯ ಡಬ್ಬಿಗಳ ಮೇಲೆ 'ವನಸ್ಪತಿ' ಅಥವಾ "ವೆಜಿಟೆಬಲ್ ಪ್ರೋಡಕ್ಟ್" ಎಂಬ ಶಬ್ದಗಳನ್ನು ೧೯೪೯ ಆಗಸ್ಟ ೧ ರ ನಂತರ ಉಪಯೋಗಿಸತಕ್ಕದ್ದಲ್ಲವೆಂದು ವಿಧಿಸಲಾಗಿದೆ. ಆ ಸರಕುಗಳನ್ನು ಉತ್ಪಾದಕರು ಸಂದರ್ಭಾನುಸಾರವಾಗಿ 'ಜಲಜನಕ ಮಿಶ್ರಿತ ಶೇಂಗಾ ಎಣ್ಣೆ' ಅಥವಾ 'ಜಲಜನಕ ಮಿಶ್ರಿತ ಶೇಂಗಾ ಮತ್ತು ಕೊಬ್ಬರಿಎಣ್ಣೆ' ಎಂದು ಕರೆಯಬೇಕೆಂದು ಆಜ್ಞಾಪಿಸಲಾಗಿದೆ.

ಇಷ್ಟನ್ನು ಎಷ್ಟೋ ತಿಂಗಳುಗಳ ಹಿಂದೆ ಮಾಡಬಹುದಾಗಿದ್ದರೂ ಈಗಾದರೂ ಮಾಡಿದ್ದು ಒಳ್ಳೆಯದಾಯಿತು. ಆದರೆ ತುಪ್ಪದಲ್ಲಿ ಈ ಸರಕನ್ನು ಬೆರಸಿ ಮಾರದಂತೆ ಮಾಡಿ ಗ್ರಾಹಕರ ಹಿತವನ್ನು ರಕ್ಷಿಸಲು ಮಾತ್ರ ಇದರಿಂದೇನೂ ಸಹಾಯವಾಗದು.

(ಹರಿಜನ) ಜೆ. ಸಿ. ಕು.

—1-7-48 ರಿಂದ ತಿರುವಾಂಕೂರು ಮತ್ತು ಕೊಚ್ಚಿ ಸಂಸ್ಥಾನಗಳು ಒಂದುಗೂಡಿ ಒಂದೇ ಸಂಸ್ಥಾನವಾಗಿ ತಿರುವಾಂಕೂರಿನ ರಾಜರು ಈ ಹೊಸ ಸಂಸ್ಥಾನದ ರಾಜಪ್ರಮುಖರಾಗಿದ್ದಾರೆ. ಈ ಸಂಸ್ಥಾನಗಳ ವಿಲೀನೀಕರಣದಿಂದ ಹಿಂದೂಸ್ಥಾನದ ಸುಮಾರು 600 ಕ್ಕಿಂತಲೂ ಅಧಿಕದೇಶೀಯ ಸಂಸ್ಥಾನಗಳು ಹಿಂದೂಸ್ಥಾನ ಸರಕಾರದ ಅಧೀನಕ್ಕೆ ಬಂದಂತಾಯಿತು.

ಗಾಂಧೀ ಸ್ಮಾರಕ ನಿಧಿಗೆ ಈ ವರೆಗೆ 9 ಕೋಟಿ 28 ಲಕ್ಷ ರೂಪಾಯಿ ಸಂಗ್ರಹವಾಗಿರುತ್ತದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—:0:—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟ ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ್ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ಗ್ಯಾರಾಯಿ ಕ್ಯಾಷ ಸರ್ಟಿಫಿಕೇಟ್‌ಗಳನ್ನು ಈಗ 8—14 3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ

ಡೆಚ್. ಲಿಂಗಾರೆಡ್ಡಿ ಬಿ ಎ. ಬಿ ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್

ಬಿ ವಿ. ಶೇಷಗಿರಿರಾವ್ ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

(1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ ಸರ್ಕಾರದಿಂದ ಮಾನ್ಯ

ಸ್ಥಳ—ನಾರ್ಮಲ್ ಹೈಸ್ಕೂಲ್ ಕಟ್ಟಡ.
ತರಗತಿಗಳು.—ಪ್ರಾರಂಭಿಕ.—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಉನ್ನತ—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ.ಪರೀಕ್ಷೆ ವರ್ಗಗಳ ಅವಧಿ.ಶಾಲಾಶುಲ್ಕ ಇನ್ನಿತರೆ ವಿವರಗಳನ್ನು ವಿದ್ಯಾಲಯದ ಕಛೇರಿಯಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg No M. 4746)

ನವ ಭಾರತ ಬಳ್ಳಾರಿ. 11—7—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri ....

....

....

Printed at Vittal Press, Edited & Published by T. B. Keshava Rao.

JAI-HIND.

ನವಸಂದೇಶ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೧೧ ಜುಲೈ ೧೯೪೯ | ಸಂಚಿಕೆ ೨೬

9-7-49 ರಿಂದ ಪ್ರತಿ ದಿನವೂ 2 ಪ್ರದರ್ಶನಗಳು

★

ಬಳ್ಳಾರಿ

ಪ್ರಭಾತದಲ್ಲಿ

ಅಪನಾ-ದೇಶ್

ತೆಲುಗು ಗೀತೆಗಳ ಹಿಂದೀ ಚಿತ್ರ

●

ಡೈರೆಕ್ಟರು

ವಿ. ಶಾಂತಾರಾಮ

From 9-7-49 Daily 2 Show

At

Prabhat Talkies

Apana-Desh

Hindi picture with Telugu songs

●

Director:

V. SHANTHARAM.

★ ಕಥಾ ಸಂಗ್ರಹ ★

೧೯೪೭ನೇಯ ಆಗಸ್ಟ್ ೧೪-೧೫ ರ ಮಧ್ಯರಾತ್ರಿ ಭಾರತ ಸ್ವಾತಂತ್ರ್ಯೋತ್ಸವವು ಬೊಂಬಾಯಿ ನಗರದಲ್ಲಿ ಅತಿ ವೈಭವದಿಂದ ಮನರಂಜಕ ವಿನೋದಗಳಿಂದ ಅತ್ಯುತ್ಸಾಹದಿಂದ ನೆರವೇರಿತು. ಥಾನಾ ಪ್ರದೇಶದಿಂದ ಬಟ್ಟೆಯ ಬೇಲುಗಳನ್ನು ದೊಡ್ಡ ಪ್ರಮಾಣದಲ್ಲಿ ಹೊರಗೆ ಕಳುಹಿಸುವ ಕಳ್ಳಸಂತೆಯವರ ಗುಂಪನ್ನು ಕಂಡು ಹಿಡಿಯಲು ಬೊಂಬಾಯಿ ಪೋಲೀಸ್ ಗುಪ್ತ ಶಾಖೆಯ ಸಬ್ ಇನ್ಸ್ಪೆಕ್ಟರ್ ಸತೀಶ್‌ರವರಿಗೆ ತನ್ನ ಮೇಲಧಿಕಾರಿಗಳಿಂದಾಜ್ಞೆಯಾಗಿತ್ತು. ಸತೀಶನು ಪೋಲೀಸ್ ದಳದೊಂದಿಗೆ ಆ ಸ್ಥಳವನ್ನು ಸೇರಿ ಕೂಲಿಯವನ ವೇಷದಿಂದ ಹಡಗಿನ ತುಂಬ ಇದ್ದ ಬೇಲುಗಳನ್ನು ಮುಂದೆ ಸಾಗದಂತೆ ತಡೆಯುವನು. ಆತನು ಹೋರಾಟ ನಡೆಸಿ ಈ ಕೆಲಸವನ್ನು ಸಾಧಿಸುವನು. ಅಲ್ಲದೆ ಬಲಾತ್ಕಾರವಾಗಿ ಕರೆದೊಯ್ಯುತ್ತಿದ್ದ ಮೋಹಿನಿ ಎಂಬ ಸ್ತ್ರೀಯನ್ನು ಕೂಡ ರಕ್ಷಿಸುವನು. ಈಕೆಯ ಮೇಲೆ ಸತೀಶನಿಗೆ ಸಂದೇಹವುಂಟಾದರೂ, ಆಕೆಯ ಸ್ಪಷ್ಟ ಜವಾಬು - ದುಃಖಕರವಾದ ಪರಿಸ್ಥಿತಿಯಿಂದ ಸತೀಶ ಮತ್ತು ಸಹೋದ್ಯೋಗ ಜಮೀದ ಖಾನರಿಗೆ ಆಕೆಯ ನಿರಪರಾಧಿತ್ವದ ಬಗ್ಗೆ ಮನವರಿಕೆಯಾಗುತ್ತೆ.

ಮಾರನೆಯ ದಿನ ಸಂಬಂಧಿಸಿದ ತಾಜಮಹಲ್ ಮಿಲ್ಸಿನ ವಿಷಯ ತಿಳಿದು ಅಲ್ಲಿ ಒಟ್ಟಿಯುತ್ಪತ್ತಿಯಾಗಿ ಬೇಲುಗಳ ಮೂಲಕ ಸಾಗಿರಬೇಕೆಂದ ಕೆಲ ನೌಕರರು ಸತೀಶನಿಂದ ಬಂಧಿಸಲ್ಪಡುವರು.

ಸತೀಶ ತಂದೆ ಜಗತ್ ನಾರಾಯಣ ನಿರಪರಾಧಿಯಂತೆ ತೋರುತ್ತಿರುವ ಮೋಹಿನಿ, ಇವರು ಈ ಶಾಸನ ವಿರೋಧ ಚಟುವಟಿಗಳಲ್ಲಿ ಸೇಟ್ ಧನೀರಾಮ್ ಮತ್ತು ತಾಜಮಹಲ್ ಮಿಲ್ಸ ಮಾಲೀಕ ರಾಯ್‌ಸಾಹೇಬ್ ಬನ್ಸಿಧರ ಇವರಿಂದ ತೊಡಗಿಸಲ್ಪಟ್ಟಿದ್ದು - ಇದುವರೆಗೆ ವಕೀಲ ಗಣಪತ್‌ರಾಯ್ ಸಹಾಯಮಾಡುತ್ತಿದ್ದನೆಂಬುದು ಸತೀಶನಿಗೆ ಸ್ವಪ್ನದಲ್ಲೂ ಗೋಚರವಾಗುವಂತಿದ್ದಿ

ಕೆಲ ದಿನಗಳಲ್ಲಿ ಪ್ರಶಂಸನೀಯ ಸೇವೆಗಾಗಿ ಡೆಪ್ಯೂಟಿ ಕಮೀಶನರ್‌ರು ಸತೀಶನನ್ನು ಇನ್ಸ್ಪೆಕ್ಟರಾಗಿಮಾಡಿ - ಕಳ್ಳ ಸಂತೆಯ ವಿರೋಧಿ ಶಾಖೆಯ ಪ್ರತ್ಯೇಕ ಅಧಿಕಾರಿಯನ್ನಾಗಿ ಮಾಡಿದರು. ಈ ದೇಶ ವಿರೋಧೀ ಚಟುವಟಿಕೆಗಳನ್ನು ಹತ್ತಿಕ್ಕಲು ಈ ಕಳ್ಳ ಸಂತೆಯವರನ್ನು ಪೂರಾ ಪತ್ತೆ ಹಚ್ಚಲು ಸತೀಶನಿಗೆ ಇವರಿಂದ ಪ್ರೋತ್ಸಾಹದೊರೆಯಿತು. ಈ ಸಂದರ್ಭದಲ್ಲಿ ಕೆಲವೇ ಸತೀಶನು ಮೋಹಿನಿಯನ್ನು ಭೆಟ್ಟಿಯಾಗುವನು ಈ ಅವಕಾಶಗಳಿಂದ ಸತೀಶ - ಮೋಹಿನಿಯವರ ಪ್ರೇಮವು ಬೆಳೆಯುವುದು. ಈ ಆಕರ್ಷಕ ಮೋಹಿನಿಯೇ ಕಳ್ಳರ ಗುಂಪಿಗೆ ನಾಯಿಕೆಯೆಂಬುದು ಇಲ್ಲಿಯವರೆಗೆ ಸತೀಶನಿಗೆ ಗೊತ್ತಿಲ್ಲ. ಆದರೆ ಸತೀಶನ ಧೈರ್ಯ ಧೃಢ ನಿಶ್ಚಯ ಮತ್ತು ಕಾರ್ಯಕ್ಷಮತೆಗಳಿಂದ ತಪ್ಪಿಸಿಕೊಳ್ಳುತ್ತಿದ್ದ ಕಳ್ಳರ ಗುಂಪಿಗೆ ನಾಯಿಕೆಯು ಹೆಂಗಸೆಂಬು ಗೊತ್ತಾಯಿತು

ಉಳಿದುದನ್ನು ತೆರೆಯಮೇಲೆ ಕಾಣಿರಿ --

ಚೀನದ 'ಯಾದವೀ' ಕಲಹ

ಚೀನದಲ್ಲಿ ಕೋಮಿಂಟಂಗ ಮತ್ತು ಕಮ್ಯೂನಿಸ್ಟ ಕಾಳಗವು ಅವ್ಯಾಹತವಾಗಿ ಸಾಗಿಯೇಯಿದ್ದು, ಕೋಮಿಂಟಂಗ ಸೈನಿಕರು, ಕಮ್ಯೂನಿಸ್ಟ ಸೈನಿಕರ ಹೊಡತದಿಂದ ದಿನದಿನಕ್ಕೂ ಹೈರಾಣವಾಗುತ್ತ ಹಿಂದೋಟ ಕೀಳುತಿದ್ದಾರೆ. ಎಲ್ಲೆಲ್ಲಿ ನೋಡಿದರೂ ಕಮ್ಯೂನಿಸ್ಟರ ಕೈಯೇ ಮೇಲಾಗುತ್ತ ನಡೆದಿರುತ್ತದೆ. ಇತ್ತ, ಇಲ್ಲಿಯವರೆಗೂ ಕೋಮಿಂಟಂಗ ಪಕ್ಷಕ್ಕೆ ನೆರವು ನೀಡುತ್ತಲೇ ಬಂದಿದ್ದ ಅಮಿರಿಕೆಯು, ಈಗ ಮೌನವನ್ನು ತಾಳಿದೆ. ಆದರೂ ಅಮೇರಿಕೆಯ ಜನರ ಮನದಲ್ಲಿ ಸರಕಾರದ ಮನದಲ್ಲಿ, ಈ ಕಮ್ಯೂನಿಸ್ಟ ಪ್ರಾಬಲ್ಯವನ್ನು ಕೊನೆತನಕ ವಿರೋಧಿಸಬೇಕೆಂಬ ಪ್ರವೃತ್ತಿ ಇದ್ದದ್ದು ಕಂಡುಬರುತ್ತದೆ.

ಚೀನದಲ್ಲಿಯ ಕಮ್ಯೂನಿಸ್ಟ ಸರಕಾರಕ್ಕೆ ಮನ್ನಣೆಯನ್ನು ಕೊಡಬಾರದು ಎಂದು ಅಮೇರಿಕೆಯ ಸಿನೇಟಿನ ಇಪ್ಪತ್ತೊಂದು ಜನ ಸದಸ್ಯರು ತಮ್ಮ ಅಂಕಿತ ಹಾಕಿದ ಮನವಿಯೊಂದನ್ನು ಅಮೇರಿಕೆಯ ಅಧ್ಯಕ್ಷ ಟ್ರೂಮನ್ನರಿಗೆ ಒಪ್ಪಿಸಿದ್ದಾರೆ. ಅದರಲ್ಲಿ ಅವರು "ಈಗಿನ ಆಡಳಿತಾಧಿಕಾರಿಗಳು ಕಮ್ಯೂನಿಸ್ಟ ಚೀನಾ ಸರಕಾರಕ್ಕೆ ಮನ್ನಣೆ ಕೊಡುವಬಗ್ಗೆ ವಿಚಾರ ಮಾಡುತ್ತಿರುವದೆಂಬುದನ್ನು ಕೇಳಿ ನಮಗೆ ಬಹಳ ವಿಷಾದವಾಗಿರುತ್ತದೆ. ಸರಕಾರವು ಯಾವದೇತರದಿಂದಲೂ ಕಮ್ಯೂನಿಸ್ಟ ಸರಕಾರಕ್ಕೆ ಮನ್ನಣೆಯನ್ನು ಕೊಡಕೂಡದು. ಸ್ವತಂತ್ರ ಮತ್ತು ಕಮ್ಯೂನಿಸ್ಟರಲ್ಲದ ಚೀನಾ ಸರಕಾರದೊಂದಿಗೆ ಅಮೇರಿಕೆಯು ಮಿತ್ರತ್ವದಿಂದ ಇರುವುದಲ್ಲದೆ ನೆರವನ್ನೂ ನೀಡುವುದು ಎಂದು ಅಮೆರಿಕನ್ನ ಸರಕಾರವು ಜಗತ್ತಿಗೆ ತಿಳಿಯುವಂತೆ ಪ್ರಕಟಿಸಬೇಕು." ಎಂದು ಹೇಳಿದ್ದಾರೆ.

ಇತ್ತ ಬ್ರಿಟನ ಸರಕಾರ ಮೊದಲಾದವರು ಚೀನದ ಕಮ್ಯೂನಿಸ್ಟ ಸರಕಾರದೊಡನೆ ಅದಕ್ಕೆ ಮನ್ನಣೆಕೊಟ್ಟು ವ್ಯವಹಾರವನ್ನು ಸಾಗಿಸಿದೆ. ಅಮೇರಿಕೆಯೂ ಆ ಹಾದಿಯತ್ತಲೇ ನಡೆಯುವ ಲಕ್ಷಣವಿರುವದನ್ನು ಕಂಡೇ ಕೆಲವು ಸಿನೇಟಿನ ಸದಸ್ಯರು ಮೇಲಿನಂತೆ ಅಮೇರಿಕನ್ನ ಸರಕಾರಕ್ಕೆ ಮನವಿ ಒಪ್ಪಿಸಿದ್ದಾರೆ.

ಆದರೆ ಚೀನದಲ್ಲಿ ಏನುಪರಿಸ್ಥಿತಿಯಿದೆ ಎಂಬದನ್ನು ನೋಡಿದರೆ, ಚೀನದ ರಾಷ್ಟ್ರೀಯ ಸರಕಾರವು ಬಹುಬಗೆಯಿಂದಲೂ ಚೀನೀಯರಿಗೆ ಅಪ್ರಿಯವಾಗುತ್ತಲೇ ನಡೆದಿದ್ದು ಸದ್ಯಕ್ಕೆ ಮುಣುಗುನೀರಿಗೆ ಬಂದಿರುವದೆಂದು ವಿಷಾದದಿಂದ ಹೇಳಬೇಕಾಗಿದೆ.

ಜೂನ ತಿಂಗಳಕೊನೆಗೆ ಕಮ್ಯೂನಿಸ್ಟ ಪಡೆಗಳು ಸರಕಾರಿ ಅಥವಾ ಕೋಮಿಂಟಂಗ ಸೈನ್ಯವನ್ನು ಹಿಮ್ಮೆಟ್ಟಿಸುತ್ತಾ "ಫೂಚೊದವರೆಗೂ ಬಂದಿರುತ್ತವೆ. ಸರಕಾರಿ ಸೈನ್ಯವು ಫೂಚೋವನ್ನು ತೆರವುಮಾಡುತ್ತಲಿದೆ. (ಈ ಫೂಚೋ, ಫುಕೀನ್ ಪ್ರಾಂತದ ರಾಜಧಾನಿ) ಫುಕೀನದ ದಂಡೆ ಗುಂಟ ೧೩೦ ಮೈಲು ದೂರದಲಿರುವ ಅಮೋಯಕ್ಕೆ ಹಿಂದೆಸರದಿದೆಯೆಂದೂ ಸುದ್ದಿಯಿದೆ. ಈ ಫೂಚೋ ಪತನವು ರಾಷ್ಟ್ರೀಯ (ಕೋಮಿಂಟಂಗ) ಸೇನಗೆ ಬಲವಾದ ಹೊಡತವಾಗಿರುತ್ತದೆ. ಏಕೆಂದರೆ ಫೂಚೋವು, ಕೋಮಿಂಟಂಗ ಪಕ್ಷದ ಸೈನ್ಯದ ಪ್ರಸಂಗದ ಮುಖ್ಯಕಚೇರಿಯಾಗಿದ್ದು ಕ್ಯಾಂಟನದಿಂದ ಈಶಾನ್ಯಕ್ಕೆ ಕೇವಲನಾನೂರುಮೈಲಿನಮೇಲಿರುತ್ತವೆ.

ಶಾಂಘಾಯಿ ಗೆಲುವಿನಿಂದ ತಮಗೆಬಹಳಷ್ಟು ಲಾಭವಾಗಿದೆಯೆಂದೂ, ಕೋಮಿಂಟಂಗರಿಗೆ ಅದೇಪ್ರಮಾಣದಲ್ಲಿ ಹಾನಿಯಾಗಿದೆಯೆಂದೂ, ಕಮ್ಯೂನಿಸ್ಟ ಕಮಾಂಡರರಾದ ಚೆನ್ ಈ ಹೇಳುತ್ತಾರೆ ಈ ಕಮ್ಯೂನಿಸ್ಟ ಆಕ್ರಮಿತ ಪ್ರದೇಶಗಳ ಬಂದರುಗಳಿಂದ ವಿದೇಶದವರೆಲ್ಲ ತಮ್ಮ ಹಡಗುಗಳನ್ನು ತಿರುಗಿ ಕರೆಸಿಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣವೆಂದರೆ ಕೋಮಿಂಟಂಗದವರು ಕಮ್ಯೂನಿಸ್ಟರಿಗೆ ದಿಗ್ಬಂಧನ ಹಾಕಬೇಕೆಂದುದೇ.

ಸಾರಿಗೆ, ವ್ಯಾಪಾರ ದಿಗ್ಬಂಧನ

ಈ ರೀತಿ ಅನಿಶ್ಚಿತ ಪರಿಸ್ಥಿತಿ ಇರುವುದರಿಂದ ಪರದೇಶೀಯ ವ್ಯಾಪಾರಸ್ಥರು ಚೀನದೊಡನಿರುವ ತಮ್ಮ ವ್ಯಾಪಾರವನ್ನು ಪುನರಪಿ ಪ್ರಾರಂಭಿಸಲು ಎದೆ ಇಲ್ಲದವರಾಗಿದ್ದಾರೆ. ವ್ಯಾಪಾರಸ್ಥರೆಲ್ಲರೂ ಸರಿದು ನಿಲ್ಲುವ ಧೋರಣೆಯನ್ನೇ ಅವಲಂಬಿಸಿದ್ದಾರೆ. ಕನಿಷ್ಟಪಕ್ಷ, ಈ ಕಮ್ಯುನಿಸ್ಟ, ಕೋಮಿಂಟಂಗಗಳಲ್ಲಿ ಯಾರಕೈಮೇಲಾಗುವುದೆಂಬುದು ನಿಶ್ಚಿತವಾಗಿ ತಿಳಿದುಬರುವವರೆಗಾದರೂ ಇದೇ ವೃತ್ತಿಯನ್ನು ವ್ಯಾಪಾರಸ್ಥರು ಅವಲಂಬಿಸಬಹುದಾಗಿದೆ.

ಹೀಗಾಗಿ ಕೋಮಿಂಟಂಗದವರು ದಿಗ್ಬಂಧನವನ್ನು ಯಶಸ್ವಿಯಾಗಿ ಪ್ರಯೋಗಿಸುವುದು ತುಸು ಕಠಿಣವಾದ ಮಾತಾಗಿದೆ ಚೀನದಲ್ಲಿಯ ಅಧಿಕೃತ ವರ್ಗದ ಅಭಿಪ್ರಾಯವಾದರೂ ಇದೇರೀತಿಯದಾಗಿರುತ್ತದೆ ಇನ್ನು ಸೈನ್ಯ ದೃಷ್ಟಿಯಿಂದ ನೋಡಿದರೂ ಈ ಬಗೆಯ ದಿಗ್ಬಂಧನದಿಂದ ಕೋಮಿಂಟಂ ಪಕ್ಷಕ್ಕೆ ಪ್ರಯೋಜನವಾಗುವುದಕ್ಕಿಂತಲೂ ತೊಂದರೆಯೇ ಅಧಿಕವಾಗುವುದೆಂದು ಅಲ್ಲಿಯ ಬಲ್ಲವರ ಅಭಿಪ್ರಾಯವಾಗಿದೆ ಏಕೆಂದರೆ, ಕೋಮಿಂಟಂಗದವರ ಬಳಿ ಸೈನ್ಯಬಲವು ಸಾಕಷ್ಟು ಸಮರ್ಥವಿದ್ದರೂ, ಸಮುದ್ರ ಬಲವು ಬಹಳ ಬಲಹೀನವಾದುದಿರುತ್ತದೆ.

ಫೊರ್ಮೋಸಾ ನಡುಗಡ್ಡೆಯಲ್ಲಿರುವ ತೈವಾನದಿಂದ ಶಾಂಘಾಯಿ ಮೇಲೆ ವಿಮಾನ ದಾಳಿಯನ್ನು ಯಶಸ್ವಿಯಾಗಿ ಈ ಕೋಮಿಂಟಂಗ ಸೈ[illegible]ದ್ದರೂ, ವಿಮಾನ ನಿಲ್ದಾಣಗಳ ಅಭಾವದಿಂದ ಆ ಕಾರ್ಯವು ಸಾಕಷ್ಟು ಪ್ರಮಾಣದಲ್ಲಿ ಸಫಲತೆ ಹೊಂದುವ ಆಶೆಯಿಲ್ಲ. ಇಷ್ಟೇ ಅಲ್ಲದೆ, ಇದರಿಂದ ಟ್ಸೆಂಟಸಿನ್ ಮೊದಲಾದ ಬಂದರಗಳೂ ಗಂಡಾಂತರ ಪ್ರದೇಶಗಳಾಗುವ ಭಯವುಂಟು

ನಿಸರ್ಗ ಕೋಪ

ಕಮ್ಯೂನಿಸ್ಟರು ಮಧ್ಯ ಮತ್ತು ದಕ್ಷಿಣ ಚೀನದ ಆಕ್ರಮಣಕ್ಕೆ ಹಾಕಿದ ಹೊಂಚು ಸಫಲವಾಗುವ ಲಕ್ಷಣವಿಲ್ಲ. ನಿಸರ್ಗವೇ ಅವರ ಮೇಲೆಕೋಪಿಸಿಕೊಂಡಂತೆ ತೋರುತ್ತದೆ. ಏಕೆಂದರೆ ಈಗಲೀಗ ಅಲ್ಲಿ ನೆರೆಹಾವಳಿಯಾಗಿ, ನೂರಕ್ಕೆ 60 ರಷ್ಟು ಅಕ್ಕಿ ಬೆಳೆಯು ನಾಶವಾಗಿ ಹೋಗಿದೆಯಲ್ಲದೆ ಅದೇ ನೆರೆಹಾವಳಿಯ ಪ್ರಭಾವದಿಂದಾಗಿ ಕಮ್ಯೂನಿಸ್ಟರ ಮುನ್ನಡೆಗೆ ತಡೆಯುಂಟಾಗಿರುತ್ತದೆ.

ಜೀವನ "ಭತ್ತದ ಕಣಜ" ವೆನಿಸಿದ ಹುನಾನ ಪ್ರಾಂತದಿಂದ ಬಂದ ವರದಿಯ ಮೇರೆಗೆ ನೂರಕ್ಕೆ ನಾಲ್ವತ್ತರಷ್ಟು ಕೂಡಿಟ್ಟ ಅಕ್ಕಿಯು ಈ ನೆರೆ ಹಾವಳಿಯಿಂದ ಹಾಳಾಗಿಹೋಗಿದೆಯೆಂದೂ, ಲಕ್ಷಗಟ್ಟಲೆ ಒಕ್ಕಲಿಗರು ಮತ್ತು ವ್ಯಾಪಾರಸ್ಥರು ದಿವಾಳಿಗೈದಿದ್ದಾರೆಂದೂ, ತಿಳಿದು ಬರುತ್ತದೆ. ಹುನಾನ ಪ್ರಾಂತದ ಸುಮಾರು ನಾಲ್ಕು ಲಕ್ಷ ಎಕರೆ ಭತ್ತದಭೂಮಿ ನೀರುನಿಂತು ನಿರುಪಯೋಗಿಯಾಗಿದೆ.

ದುರ್ದೈವ

ಚೀನೀಯರ ದುರ್ದೈವದಿಂದ, ತಮ್ಮ ತಮ್ಮಲ್ಲಿಯ ತತ್ವಗಳ ತಿಕ್ಕಾಟ, ಮಿತ್ರರಾಷ್ಟ್ರಗಳ ಉದಾಸೀನ ನೋಟ, ನಿಸರ್ಗದ ಕೋಪಾಟೋಪ, ಮೊದಲಾದವುಗಳಿಂದ ಚೀನವೇ ಜರ್ಜರಿತವಾಗಿ ಹೋಗಿದೆ. ಪ್ರಬಲವಾಗಿರುವ ಚೀನೀ ಕಮ್ಯೂನಿಸ್ಟರು ಸರ್ವಪಕ್ಷೀಯ ಸರಕಾರವನ್ನು ಸ್ಥಾಪಿಸಲಿರುವರೆಂದು ಪೇಕಿಂಗ ಸುದ್ದಿ ಹೇಳುತ್ತದೆ. ಇದೊಂದೇ ಆಶಾದಾಯಕ ಸುದ್ದಿಯೆಂದೂ ಚೀನದ ಯಾದವಿ ಇದರಿಂದ ನಿಲ್ಲಬಹುದೆಂದೂ ಆಶಿಸಬಹುದಾಗಿರುತ್ತದೆ.

—●—

ನೋಟೀಸು.

೧೯೪೭ನೇ ಸಂ|| ಮದ್ರಾಸು ಷಾಪು

ಮತ್ತು

ಎಸ್ಟಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಜಿಷ್ಟರುಗಳು ವಗೈರೆ ನಮ್ಮಲ್ಲಿ ದೊರೆಯುತ್ತವೆ.

ವಿಠಲ್ ಪ್ರಿಂಟಿಂಗ್ ಪ್ರೆಸ್,
ಕೇರು ಬಜಾರ್, ಬಳ್ಳಾರಿ.

ಉಪ್ಪು

ಗಾಂಧೀಜಿಯ ಒತ್ತಾಯದ ಮೇರೆಗೆ, ಉಪ್ಪಿನ ಕರವನ್ನು, ಜನಪ್ರಿಯ ಮುಂದಾಳುಗಳ ಕೈಗೆ ಅಧಿಕಾರ ಬಂದೊಡನೆ ರದ್ದುಗೊಳಿಸಲಾಯಿತು. ಉಪ್ಪಿನ ಉತ್ಪಾದನೆಯ ವೆಚ್ಚದೊಡನೆ ಹೋಲಿಸಲಾಗಿ ಕರದ ಪ್ರಮಾಣ ಅತಿಶಯವಾಗಿದ್ದುದರಿಂದ ಅದನ್ನು ರದ್ದುಗೊಳಿಸಿದಾಗ ಉಪ್ಪು ಅಗ್ಗವಾಗಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಈ ನಿರೀಕ್ಷೆ ಸುಳ್ಳಾದುದರಿಂದ ನಿರಾಶೆಯುಂಟಾಗಿ ದೂರುಗಳು ಧಾರಾಕಾರವಾಗಿ ಬರುತ್ತಿವೆ.

ನನಗೆ ದೊರೆತ ವಿವರಗಳನ್ನು ಅಭ್ಯಸಿಸಿದಾಗ ಆಡಳಿತೆ ವ್ಯವಸ್ಥೆಯಲ್ಲಿ ಕೆಲ ದೋಷಗಳಿದ್ದು, ಅವನ್ನು ಸರಿಪಡಿಸಲು ಸಾಕಷ್ಟು ಲಕ್ಷ್ಯಕೊಟ್ಟಿಲ್ಲವೆಂದು ತೋರಿತು. ಉಪ್ಪಿನಕರ ಬಹಳ ಭಾರವಾಗಿಯೂ ಅಪ್ರಿಯವಾಗಿಯೂ ಇದ್ದರೂ ಉಪ್ಪು ತುಟ್ಟಿಯಾಗಲು ಅದೊಂದೇ ಕಾರಣವಾಗಿರಲಿಲ್ಲ. ಲಿಲಾವಿನ ಮೂಲಕ ಲೈಸನ್ಸ ಕೊಡುವ ಪದ್ಧತಿಯ ಫಲವಾಗಿ ಉಪ್ಪಿನ ವ್ಯಾಪಾರ ಕೆಲವೇ ಜನರ ಗುತ್ತಿಗೆಯಾಗಿ ಬಿಟ್ಟಿದೆ. ಕರದ ವಸೂಲಿಯನ್ನು ಸುಕರವಾಗಿ ಮಾಡುವದೇ ಇದರ ಉದ್ದೇಶವಾಗಿತ್ತು. ಬಂಗಾಲ, ಬಿಹಾರ, ಯುಕ್ತಪ್ರಾಂತಗಳ ಜಮೀನ್‌ದಾರರೂ ಮಧ್ಯಪ್ರಾಂತದ ಮಾಲಗುಜಾರರೂ ಮೊಟ್ಟಮೊದಲು ಭೂಕಂದಾಯವನ್ನು ವಸೂಲು ಮಾಡುವ ಗುತ್ತಿಗೆದಾರರಾಗಿದ್ದಂತೆ ಉಪ್ಪನ್ನು ತಯಾರಿಸಿ ಮಾರುವ ಗುತ್ತಿಗೆಯನ್ನು ಕೆಲವರಿಗೆ ಲೈಸನ್ ಮೂಲಕ ಕೊಡಲಾಗಿದೆ. ದಿನಬಳಿಕೆಯ ಒಂದು ಸರಕಿನ ಮಾರಾಟದ ಹಕ್ಕನ್ನು ಒಬ್ಬ ಗುತ್ತಿಗೆದಾರನಿಗೆ ಗುತ್ತಿಗೆ ಹಿಡಿದಿಡುವದು ಒಂದು ಧರ್ಮಸಿಧಿಯಾಗಿದ್ದರೆ ಕೂಡ ಕೊಟ್ಟರೆ ಆ ಸರಕು ತುಟ್ಟಿಯಾಗುತ್ತದೆ. ಗುತ್ತಿಗೆದಾರನು ವ್ಯಾಪಾರಿಯಾಗಿದ್ದರಂತೂ ಕೇಳುವದೇ ಬೇಡ. ಕರವನ್ನು ರದ್ದುಗೊಳಿಸಿದಾಗಲೇ ಈ ಲೈಸನ್ಸ ಪದ್ಧತಿಯನ್ನೂ ತೆಗೆಯಬೇಕಾಗಿತ್ತು. ಆದರೆ ಇಂದಿಗೂ ಹಾಗೆ ಮಾಡಿದಂತಿಲ್ಲ. ಪರಿಣಾಮವಾಗಿ, ಉಪ್ಪನ್ನು ತಯಾರಿಸುವವನು ಅದನ್ನು ಮಣಕ್ಕೆ ೬ ಆಣೆಯಂತೆ ಮಾರುತ್ತಿದ್ದರೆ ಲೈಸನ್ಸದಾರ ಅಥವಾ ಇಝಾರೇದಾರನಿಗೆ ಮಣಕ್ಕೆ ೧ ರೂಪಾಯಿ ಕೊಡಬೇಕಾಗುತ್ತದೆ. ಮಣಕ್ಕೆ ೬ ಆಣೆಯಾದರೆ ಪೌಂಡಿಗೆ ಒಂದು ಪೈಗಿಂತಲೂ ಕಡಿಮೆ ಬೆಲೆಯಾಗುತ್ತದೆ. ಮಣಕ್ಕೆ ಒಂದು ರೂಪಾಯಿಯೆಂದರೆ ೨॥ ಪೈಯಾಗುತ್ತದೆ.

ಇದಲ್ಲದೆ ಈ ಪದ್ಧತಿಯಲ್ಲಿ ಇನ್ನೊಂದು ಕ್ರಮವನ್ನು ಅನುಸರಿಲಾಗಿದೆ. ಲೈಸನ್ಸದಾರರಿಗೂ ಕರ ವಸೂಲು ಮಾಡಲಿಕ್ಕೂ ಅನುಕೂಲವಾಗಬೇಕೆಂದು ಪ್ರಾದೇಶಿಕ ಪದ್ಧತಿಯನ್ನು ರೂಢಿಗೆ ತರಲಾಗಿದೆ. ಇದರ ಮೂಲಕ ಪ್ರತಿಯೊಬ್ಬ ಲೈಸನ್ಸದಾರನಿಗೆ ಅಥವಾ ಲೈಸನ್ಸದಾರರ ಗುಂಪಿಗೆ ಇಂಥಿಂಥ ಪ್ರದೇಶವೆಂದು ಗೊತ್ತುಪಡಿಸಲಾಗುತ್ತದೆ. ಇದರಲ್ಲಿ ಸಾರ್ವಜನಿಕರ ಅನುಕೂಲವನ್ನು ನೋಡುವದಿಲ್ಲವಾಗಿ ಇದನ್ನು ಪುನರ್ವಿಮರ್ಶೆಮಾಡುವದು ಅವಶ್ಯ. ಉದಾಹರಣೆಗಾಗಿ ಉತ್ತರ ಗುಜರಾಥದ ಮಹಸೇನಾ ಎಂಬ ಊರು ಖರಗೋಡಾ ಕೇಂದ್ರಕ್ಕೆ ತೀರ ಹತ್ತಿರವಾಗಿದ್ದರೂ ಧ್ರಂಗಧ್ರದಂಥ ದೂರ ಸ್ಥಳದಿಂದ ಉಪ್ಪನ್ನು ಸಾಗಿಸಿಕೊಂಡು ಬರಬೇಕಾಗುವದು. ಈ ಪ್ರದೇಶಿಕ ಪದ್ಧತಿಯನ್ನು ಉಳಿಸುವದು ಇನ್ನು ಅವಶ್ಯವುಂಟು ಎಂಬ ಪ್ರಶ್ನೆಯನ್ನು ವಿಚಾರಿಸಬೇಕಾಗಿದೆಲ್ಲಿದ. ಅದು ಅವಶ್ಯವೇ ಆಗಿದ್ದರೆ, ಅದರ ಕ್ಷೇತ್ರಗಳನ್ನು ಜನರಿಗೆ ಅನುಕೂಲವಾಗುವಂತೆ ಮಾರ್ಪಡಿಸಬೇಕು.

ಉಪ್ಪು ತುಟ್ಟಿಯಾಗಲು ಇನ್ನೊಂದು ಕಾರಣವೆಂದರೆ, ಸಾರಿಗೆ ಮತ್ತು ಇತರ ವೆಚ್ಚಗಳು. ಕರವನ್ನು ರದ್ದುಗೊಳಿಸಿದ ನಂತರ ಉಪ್ಪು ತಯಾರಾಗುವ ಸ್ಥಳಗಳಲ್ಲಿ ಅದು ಅಗ್ಗವಾಯಿತು. ಆದರೆ ಅದನ್ನು ಬೇರೆ ಸ್ಥಳಗಳಿಗೆ ಸಾಗಿಸುವಾಗ ಸಾರಿಗೆ ವೆಚ್ಚ, ಸಾಗಿಸುವವರ ಲಾಭಾಂಶ, ಚಿಲ್ಲರೆ ವ್ಯಾಪಾರಿಗಳ ಲಾಭಾಂಶ ಇವೆಲ್ಲವೂ ಉಪ್ಪಿನ ಬೆಲೆಗೆ ಸೇರಿದ್ದರಿಂದ ಈ ಹೆಚ್ಚಿನ ವೆಚ್ಚ ಹಳೆಯ ಕರಕ್ಕಿಂತ ಏನೂ ಕಡಿಮೆಯಾಗಲಿಲ್ಲ. ಈ ವೆಚ್ಚಗಳು ಮಣಕ್ಕೆ ಹದಿನಾಲ್ಕಾಣೆಯಷ್ಟಾಗುವವೆಂದು ಕೇಳುತ್ತೇನೆ. ಆದುದರಿಂದ ಲೈಸನ್ಸದಾರರ ೨॥ ಪೈಯ ಧರ ಇಲ್ಲಿಗೆ ಬರುವಾಗ ಪೌಂಡಿಗೆ ೫ ಪೈಯಾಗಿ ಬಿಡುತ್ತದೆ.

ಇನ್ನು ರೈಲ್ವೆ ಡಬ್ಬಿಗಳ ಕೊರತೆ ಮತ್ತು ಅದರ ಫಲವಾಗಿ ರೈಲ್ವೆಗಳಲ್ಲುಂಟಾದ ದಂಚ ಗುಳಿತನಗಳಿಂದ ಉಪ್ಪು ಕೆಲವೊಂದು ಸ್ಥಳಕ್ಕೆ ಸಕಾಲದಲ್ಲಿ ತಲುಪುವದಿಲ್ಲ. ಅದರಿಂದ ಅಲ್ಲಿ ಕೊರತೆ ಕಳ್ಳಪೇಟೆಗಳಿಗೆ ಎಡೆಯಾಗುತ್ತದೆ. ರೈಲ್ವೆ ಮತ್ತು ಮೋಟಾರು ಸಾರಿಗೆಯಿಂದ ಸರಕುಗಳ ಸಾಗಾಟ ವೇಗದಿಂದಾಗುತ್ತಿದ್ದರೂ ಅವು ಬಂಡಿ ಮೊದಲಾದ ಸ್ಥಾನಿಕ ಸಾರಿಗೆಯ ಸಾಧನಗಳನ್ನು ನಿರ್ಮೂಲ ಮಾಡಿ ವ್ಯಾಪಾರಿಗಳನ್ನೂ ಜನರನ್ನೂ ಬಲಗುಂದಿಸಿವೆ. ಹೊರೆ ಹೊರಲುಪಯೋಗಿಸುತ್ತಿದ್ದ ಕೆಲ ಪ್ರಾಣಿಗಳಂತೂ ಜಾತಿಗೆ ಜಾತಿಯೇ ಇಲ್ಲದಂತಾಗುತ್ತಿವೆ. ರೇಲ್ವೆ ಮತ್ತು ಮೋಟಾರು ಸಾರಿಗೆ ಇಲ್ಲದಿದ್ದ ಕಾಲದಲ್ಲಿ, ಬಂಡಿಗಳು ಎತ್ತುಗಳು, ಹೇಸರಕತ್ತೆಗಳು ಮಾತ್ರವಲ್ಲದೆ ಆನೆಗಳು ಕೂಡ ಸರಕುಗಳ ಸಾಗಾಟಕ್ಕೆ ಉಪಯೋಗಿಸಲ್ಪಡುತ್ತಿದ್ದವು. ಆಗ ಭಾರತದ ಸರಕುಗಳು ಯುರೋಪಿನವರೆಗೂ ಮುಟ್ಟುತ್ತಿದ್ದವು. ಆಧುನಿಕ ಸಾರಿಗೆ ಪದ್ಧತಿ ಮುರಿದು ಬಿದ್ದರೆ, ಎರಡು ಸ್ಥಳಗಳ ನಡುವಣ ಅಂತರ ನೂರು ಮೈಲಿಗಿಂತ ಹೆಚ್ಚಿಲ್ಲದಿದ್ದರೂ ಒಂದು ಸ್ಥಳದಲ್ಲಿ ಧಾರಾಳ ಇನ್ನೊಂದು ಕಡೆ ಕ್ಷಾಮ ಉಂಟಾಗಬಲ್ಲದು, ಇದಕ್ಕೆ ವ್ಯತಿರಿಕ್ತವಾದ ಸ್ಥಿತಿಯನ್ನು ಉಂಟು ಮಾಡಬಹುದು. ಅಂದರೆ ಸಮೃದ್ಧಿಯುಳ್ಳ ಸ್ಥಳಗಳಲ್ಲಿ ಕ್ಷಾಮವನ್ನೂ ದುರ್ಭಿಕ್ಷ ಪ್ರದೇಶದಲ್ಲಿ ಸಮೃದ್ಧಿಯನ್ನೂ ನಿರ್ಮಿಸಲು ಆಧುನಿಕ ಸಾರಿಗೆ ಪದ್ಧತಿಗೆ ಸಾಧ್ಯವಿದೆ. ಹೀಗೆ ಬೇಕಾದ ಜನರಿಗೆ ತಮ್ಮ ಸ್ವಂತ ಪ್ರದೇಶದಲ್ಲಿ ಹಾಲು ಮಾವಿನ ಹಣ್ಣು ಸಿಗದಿದ್ದರೂ ಅಲ್ಲಿಂದಲೆ ಒಯ್ದ ಹಾಲು ಮಾವಿನಹಣ್ಣುಗಳು ಮುಂಬಯಿಯಲ್ಲಿಯೂ ಅಹಮದಾಬಾದದಲ್ಲಿಯೂ ಮನೆಬಾಗಿಲಿಗೇ ಬಂದು ಬೀಳಬಹ

ತಾರಾನಾಥ ಆಯುರ್ವೇದ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚರಿತ್ರರಾದ S. S. L C. ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಪ್ರಾಸ್ಪೆಕ್ಟಸ್‌ಗಾಗಿ 0-3-0 ಸ್ಟಾಂಪಿನೊಂದಿಗೆ ಬರೆಯಿರಿ.

ಸೆಕ್ರೆಟರಿ
ತಾರಾನಾಥ ಆಯುರ್ವೇದ ವಿದ್ಯಾಪೀಠ
P. O. ಸಂಗನಕಲ್ಲು ಬಳ್ಳಾರಿ.

ಎಲ್ಲಾ ಪೋಸ್ಟಾಫೀಸುಗಳಲ್ಲಿ ದೊರೆಯುವವು

BUY
National Savings Certificates

ಭಾರತ ಸರ್ಕಾರ
ಆರ್ಥಿಕ ಶಾಖೆ

ನೇಷನಲ್ ಸೇವಿಂಗ್ಸ್
ಸರ್ಟಿಫಿಕೇಟುಗಳನ್ನು ಕೊಳ್ಳಿರಿ

ನಿಮ್ಮ ಕರ್ತವ್ಯ

ಉಳಿಸುವ ಪ್ರತಿಯೊಂದಾಣೆ ನಿಮ್ಮ ಕುಟುಂಬದ ಆಪದ್ಧನ

●

ಈ ಅಭ್ಯಾಸವೇ ಶ್ರೇಷ್ಠ ಧರ್ಮ, ನಿಜವಾದ ಸಮಾಜಸೇವೆ

●

ಹಣ ಸಂಗ್ರಹವೇ ನಾಡಿನ ಆರ್ಥಿಕ ಭದ್ರತೆ.

●

ಧನದುಳಿತಾಯವೇ ಸ್ವಾವಲಂಬೀ ಜೀವನದ ತಳಹದಿ.

●

ನಿಮ್ಮ ಸಂಗ್ರಹವೇ ನಿಮ್ಮ ಕಲ್ಯಾಣಕಾರಿ ಭವಿಷ್ಯ.

●

ರಾಷ್ಟ್ರದ ಹಣ ಸಂಗ್ರಹದಿಂದಲೇ ರಾಷ್ಟ್ರದ ಪುನರ್ರಚನೆಯು ಸಾಧ್ಯ

ಲಾಭದ ಮಾರ್ಗ

ಎಷ್ಟು ಹಣವಿಡಬಹುದು ?
೫ ರಿಂದ ೨೫೦೦೦ ರೂ ವರೆಗೆ ೫-೧೦-೫೦-೧೦೦-೧೦೦೦ ಮತ್ತು ೫೦೦೦ ಅಂಕಿತದ ಭಾರತ ಸರ್ಕಾರದ ಸರ್ಟಿಫಿಕೇಟುಗಳು. ಆದಕ್ಕೆ ಬಡ್ಡಿ ಎಷ್ಟು?

12 ವರ್ಷಕ್ಕೆ ಶೇಕಡ 4¼
7 „ „ 3½
5 „ „ 3

ನಮಗೆ ಹಣ ಜರೂರಾಗಿ ಬೇಕಾದರೆ ಎಲ್ಲಿ ಹೇಗೆ ಪಡೆಯಬಹುದು?

7 ಮತ್ತು 5 ವರ್ಷದವಧಿಯ ಸರ್ಟಿಫಿಕೇಟುಗಳನ್ನು ಯಾವ ಪೋಸ್ಟಾಫೀಸದಲ್ಲಾಗಲಿ-ಯಾವಾಗಲಾದರೂ ಪಡೆಯಬಹುದು. 12 ವರ್ಷದವುಗಳನ್ನು 18 ತಿಂಗಳ ನಂತರ ಯಾವ ಪೋಸ್ಟಿನಲ್ಲಾಗಲಿ ಬಡ್ಡಿ ಸಮೇತ ಪಡೆಯಬಹುದು.

ಸೇವಿಂಗ್ಸ ಸರ್ಟಿಫಿಕೇಟುಗಳೆಂದರೆ ಬಚ್ಚಿಡುವ ಭಂಗಾರಕ್ಕಿಂತ, ಕರೆನ್ಸಿ ನೋಟುಗಳಿಗಿಂತ ಹೆಚ್ಚಿನ ಬೆಲೆ ನಿತ್ಯವೂ ದೊರಕಿಸುವಂಥವು

ವಿವರಗಳಿಗೆ ಇಂದೇ ಬರೆಯಿರಿ-ಎಮ್. ಉದ್ಧವಾಚಾರ್ ಜಿಲ್ಲಾ ಸಂಘಟಕ, ನ್ಯಾಷನಲ್ ಸೇವಿಂಗ್ಸ ಸ್ಕೀಂ, ಬಳ್ಳಾರಿ

ದು. ಅದೇ ಪ್ರಕಾರದ ಮಧ್ಯಪ್ರಾಂತದ ಉತ್ತಮ ಆಹಾರಧಾನ್ಯಗಳು, ಹಣ್ಣುಹಂಪಲುಗಳು ಇತ್ಯಾದಿಗಳನ್ನು ಮುಂಬಯಿಯಲ್ಲೇ ಕೊಳ್ಳಬೇಕಾದ ಪ್ರಸಂಗವೂ ಇವೆ.

ರೇಲ್ವೆ ಮತ್ತು ಮೋಟಾರು ಸಾರಿಗೆಯ ಸಂಗಡಲೇ, ಇತರ ಸಾರಿಗೆಯ ಸಾಧನಗಳೂ ಇರುವಂತೆ ಒಂದು ವ್ಯವಸ್ಥೆಯಿರಬೇಕು. ಇದನ್ನು ಹೇಗೆ ಸಾಧಿಸಬೇಕೆಂಬುದೇ ಕೂಟ ಪ್ರಶ್ನೆ. ಇವೆರಡೂ ಬಗೆಯ ಸಾರಿಗೆಗಳು ನಮಗೆ ಬೇಕೆಂಬುದು ಸ್ವಯಂವೇದ್ಯವಾಗಿವೆ. ಎಷ್ಟರವರೆಗೆ ನಾವೀ ಸಮಸ್ಯೆಯನ್ನು ಬಗೆಹರಿಸುವದಿಲ್ಲವೋ ಅಷ್ಟರವರೆಗೂ ಸದ್ಯದ ತೊಡಕುಗಳಿಂದ ಪಾರಾಗಲು ಸಾಧ್ಯವಿಲ್ಲ.

ಕಾಂಗ್ರೆಸ್ ಸಮಿತಿಗಳು ಸೇವಾ ಕಾರ್ಯವನ್ನು ಮಾಡಬಯಸುತ್ತಿದ್ದರೆ ಅವು ಈ ಸಮಸ್ಯೆಗಳ ಬಗ್ಗೆ ವಿಚಾರಮಾಡಿ, ಅವುಗಳನ್ನು ಬಿಡಿಸುವಲ್ಲಿ ಸರಕಾರಕ್ಕೂ ಜನತೆಗೂ ಸಹಾಯ ಮಾಡಬಲ್ಲವು. ಉಪ್ಪಿನ ವ್ಯಾಪಾರಿಗಳೂ ಇದರಲ್ಲಿ ಭಾಗವಹಿಸಬಹುದು ಏಕೆಂದರೆ ಲೈಸನ್ಸ್ ಪದ್ಧತಿಯಿಂದ ಅವರಿಗೂ ನಷ್ಟವೇ. ಅನುಭವಶಾಲಿಗಳ ಸಹಾಯದಿಂದ ಈ ಲೋಪದೋಷಗಳು ನಿವಾರಿಸಲ್ಪಟ್ಟರೆ, ಅತ್ಯುತ್ತಮ ಉಪ್ಪು ದೇಶದ ಎಲ್ಲ ಭಾಗಗಳಲ್ಲೂ ಈಗಿನ ತುಟ್ಟಿ ದಿನಗಳಲ್ಲಿ ಕೂಡ ಪೌಂಡಿಗೆ ಆರ್ಧಾಣೆಯಂತೆ ಒದಗಬಹುದೆಂದು ನಾನು ಅಂದಾಜು ಮಾಡಿದ್ದೇನೆ. ರೋಖ (ರಖಂ) ದರಗಳಂತೂ ಇನ್ನೂ ಕಡಿಮೆಯೆ ಆಗುವವು ಈಗಿನ ಪದ್ಧತಿಯಲ್ಲಿ ಕೂಡ ಸರಕಾರದವರು ನಿರ್ಣಯಿಸಿದ ದರಗಳ ಮೇಲೆ ಭಾರತದ ಎಲ್ಲ ಭಾಗಗಳಲ್ಲಿಯೂ ಪೌಂಡಿಗೆ ೭॥ ಯಿಂದ ೯ ಪೈಗೆ ಮಾರುತ್ತಿರಬೇಕು. ಆದರೆ ಸಾರಿಗೆಯ ಲೋಪದೋಷಗಳಿಂದಲೂ ಕಳ್ಳಪೇಟೆಯಿಂದಲೂ ಇಂದು ಹಳ್ಳಿಗಳಲ್ಲಿ ಆ ದರದಲ್ಲಿ ಉಪ್ಪು ದೊರೆಯದಾಗಿದೆ.

ಸರಕಾರದವರು ಲೈಸನ್ಸ ಪದ್ಧತಿಯನ್ನು ತೆಗೆದು ಹಾಕುವದಲ್ಲದೆ ಪ್ರಾದೇಶಿಕ ಪದ್ಧತಿಯನ್ನು ಪುನರ್ವಿಮರ್ಶಿಸಬೇಕಾಗಿದೆಯೆಂದು ತೋರುತ್ತದೆ. ಸರಕಾರದವರು ಸಾರಿಗೆಯ ಸಮಸ್ಯೆಗಳನ್ನು ವಿಚಾರಿಸುತ್ತಿದ್ದರೂ ದೇಶದ ಆವಶ್ಯಕತೆಗಳು ದಿನವೂ ಅತ್ಯಂತ ತೀವ್ರವಾಗುತ್ತಿರುವದರಿಂದ ಅವರು ರೇಲ್ವೆ ಮತ್ತು ಮೋಟಾರು ಸಾರಿಗೆಗಳ ಜತೆಗೆ ಪ್ರಾಣಿಗಳ ಮೂಲಕ ಸಾರಿಗೆ ವ್ಯವಸ್ಥೆ ಮಾಡುವ ವಿಚಾರವನ್ನೂ ಮಾಡಬೇಕು. ಇದು ಎರಡನೆ ಸಂರಕ್ಷಣ ವ್ಯೂಹವೆಂದು ಬಗೆಯತಕ್ಕದ್ದು. ಮೊದಲನೆ ವ್ಯೂಹ ಮುರಿದು ಬಿದ್ದನಂತರ ಎರಡನೆಯನ್ನು ರಚಿಸಿಕೊಳ್ಳುವದು ಮನೆಗೆ ಬೆಂಕಿ ಹತ್ತಿದ ಮೇಲೆ ಬಾವಿ ತೋಡಹೊರಟಂತೆಯೆ. ಪ್ರಥಮ ವ್ಯೂಹ ಸುದೃಢವಾಗಿಯೂ ಕಾರ್ಯಕಾರಿಯಾಗಿಯೂ ಇದ್ದರೂ ಅದು ಮುರಿದು ಬಿದ್ದಿತೆಯೆಂದೇ ಬಗೆದು ಎರಡನೆ ವ್ಯೂಹವನ್ನು ಸಮರ್ಪಕವಾಗಿಟ್ಟಿರುವದು ಯೋಗ್ಯ. ಈ ರೀತಿಯಲ್ಲಿ ಯೋಚಿಸಿದರೆ, ನಾವು ನಮ್ಮ ಪ್ರಾಣಿಬಲವೂ ಸರಿಯಾಗಿರುವಂತೆ ನೋಡಿಕೊಳ್ಳುವದು ಅವಶ್ಯವೆನಿಸುವದು. ಪ್ರಾಣಿಗಳ ಮೂಲಕ ಹೊರೆಸಾಗಿಸುವ ವ್ಯವಸ್ಥೆಯಿಡುವದು ಒಂದು ಮಹತ್ವದ ಕರ್ತವ್ಯವೆಂದು ಸಾರಿಗೆ ಮತ್ತು ಸಂಪರ್ಕಶಾಖೆಯವರು ಎಣಿಸಬೇಕು. ಇದು ರೇಲ್ವೆ, ಮೋಟಾರು, ಹಡಗ ಅಥವಾ ವಿಮಾನ ಮೂಲಕ ಸಾರಿಗೆಯ ವ್ಯವಸ್ಥೆಗಿಂತ ಮಹತ್ವದಲ್ಲಿಯೂ ಕಡಿಮೆಯಲ್ಲ, ಜಟಿಲತೆಯಲ್ಲಿಯೂ ಅಲ್ಲ

'ಹರಿಜನ' ಪತ್ರಿಕೆಯ ಲೇಖ

—●—

ಸಮಾಜವಾದಿಗಳು ಮತ್ತೆ ಕಾಂಗ್ರೆಸ್‌ನಲ್ಲಿ ಬರುವರೇ?

ಜಯಪ್ರಕಾಶ್—ಜವಹರಲಾಲ ಭೇಟಿ (ನವಯುಗದ ಅಭಿಪ್ರಾಯ)

ಹಿಂದೂ ಅವಿಭಕ್ತ ಕುಟುಂಬವೊಂದರಲ್ಲಿ ಹಿರಿಯ ಅಣ್ಣನ ಶಾಂತಿ ಅಥವಾ ಸಾವಧಾನದ ನಡತೆಯು ಆರಿಯದ ಕಿರಿಯ ತಮ್ಮನಿಗೆ ಹಿಡಿಸಲಿಲ್ಲ. ರೆಕ್ಕೆ ಇಲ್ಲದೆಯೇ ಹಾರಬೇಕೆನ್ನುವುದು ಅವನ ಆವೇಶ. ಆದರೆ ಅಣ್ಣನು ರೆಕ್ಕೆ ಬಲಿಯಲಿ ಆಗ ಹಾರಿದರೆ ಆಕಾರವನ್ನು ಮುಟ್ಟುವಿ. ಇಲ್ಲವಾದರೆ ಹಾರಲಾರದೆ ಕೆಳಗೆ ಬೀಳುವಿ ಎಂದ ಬುದ್ಧಿ ಹೇಳುವನು. ಆದರೂ ಅಣ್ಣ ಹಾರಲಾರದ ದುರ್ಬಲನೆಂದು ತೆಗಳಿ ತಮ್ಮನು ಹೊರಗೆ ಬಂದು ಬಿಡುವನು. ಮೊದಲಿನಲ್ಲಿ ಬಿರುಸಾಗಿಯೇ ಗೃಹಕೃತ್ಯ ನಡೆಸುವನು. ಆದರೆ ಬರಬರುತ್ತ ತನ್ನಿಂದ ನಿರ್ವ

ಹಡೆ ನೀಗಲಾರದು. ಅಣ್ಣನಿಗಿಂತ ಹೆಚ್ಚಾಗಿ ಏನೂ ಮಾಡಲಾರನೆಂದ ಮೇಲೆ ತನ್ನ ಮನೆತನದ ದೃಷ್ಟಿಯಿಂದ ಪುನಃ ಅಣ್ಣತಮ್ಮಂದಿರೊಂದಾಗಿಯೇ ಬಾಳಬೇಕೆಂಬ ಆಶೆ ಬರುವುದು. ತಲೆ ತಾಗಿ ಬುದ್ಧಿ ಬರಲಿ ಎಂದೆನ್ನುತ್ತಿದ್ದ ಅಣ್ಣನಿಗೆ ಈ ತಮ್ಮನ ಬರುವಿಕೆಯನ್ನು ಕಂಡು ಆನಂದವಾಗದಿರದು

ಸಮಾಜವಾದಿಗಳು ಕಾಂಗ್ರೆಸ್ಸಿನಿಂದ ಸಿಡಿದುಹೋದ ಸಂದರ್ಭ ಮತ್ತೆ ಬರಬೇಕೆನ್ನುವ ಸಂಧಾನದ ಸಂದರ್ಭ ಇವೆರಡರಲ್ಲೂ ಮೇಲಿನದನ್ನು ಒಂದು ಉಪಮೆಯಾಗಿ ತೆಗೆದುಕೊಳ್ಳಬಹುದು. ಆಚಾರ್ಯ ನರೇಂದ್ರ ದೇವರು ದೇಶದ ವಾಸ್ತವಿಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡಿರುವರು. ಸಮಾಜವಾದಿಯು ಅದೊಂದು ಪ್ರತ್ಯೇಕ ಪಕ್ಷವಾಗಿ ಯಾರಿಗೂ ಯಾವ ಹಿತವನ್ನು ಸಾಧಿಸಲಾರದು. ದೇಶಕ್ಕೆ ಹಿತವಾಗಬೇಕಾದರೆ ಈ ಕಮ್ಯುನಿಸ್ಟರ ಪ್ರಭಾವ ಸದ್ದಿಲ್ಲದಂತೆ ಅಡಗಬೇಕಾಗಿದೆ. ಇದಕ್ಕೆ ಸಂಯುಕ್ತ ಬಲ ಅವಶ್ಯವೆಂಬುದನ್ನು ಗ್ರಹಿಸಿರುವುದು ನಿಜವಾಗಿಯೂ ಮುತ್ಸದ್ದಿತನವಾಗಿದೆ,

ದೇಶವು ಗಂಡಾಂತರ ಪರಿಸ್ಥಿತಿಯಲ್ಲಿದ್ದಾಗ ಕಾಂಗ್ರೆಸ್ಸಿನೊಂದಿಗೆ ಸಹಕರಿಸುವರೆಂಬ ಆಶ್ವಾಸನವನ್ನು ಸಮಾಜವಾದಿಗಳೇ ಕೊಟ್ಟಿದ್ದರು. ಆದರೆ ಇತ್ತೀಚೆಗೆ ಅದನ್ನು ಮರೆತಂತೆ ವರ್ತಿಸಿದಾಗ ಮಾತ್ರ ಸಮಾಜವಾದಿಗಳ ಆಶಯ ನಮಗೆ ಅರ್ಥವಾಗುತ್ತಿಲ್ಲ. ಆದರೆ ಪೂರ್ಣ ದುಡುಕುವುದಕ್ಕೆ ಮುಂಚೆಯೇ ವಿವೇಚನೆಯಿಂದ ವರ್ತಿಸುವ ಲಕ್ಷಣಗಳು ಕಂಡುಬರುತ್ತವೆ. ನಾನು ನಿಜವಾದ ಸಮಾಜವಾದಿ ಎನ್ನುವ ಪಂಡಿತ ನೆಹರೂ ನಾನು ಉಗ್ರ ಸಮಾಜವಾದಿ ಎನ್ನುವ ಜಯಪ್ರಕಾಶ ಇವರಿಬ್ಬರ ಭೇಟಿ ಕಲ್ಕತ್ತಾದಲ್ಲಿ ನಡೆಯಲಿರುವುದು ಕ್ರಿಯಾತ್ಮಕ ಕಾರ್ಯಗಳಿಂದ ದೇಶದ ಹಿತವನ್ನು ಸಾಧಿಸುವವರಿಗೆ ಕಾಂಗ್ರೆಸಿನ ಸುಸ್ವಾಗತ ಎಂದೆಂದೂ ಇದ್ದೇ ಇರುವುದು,

ಸಮಾಜವಾದಿ ಪಕ್ಷದ ಸಂಘಟನೆ

ಭಾಯಿಜಿಯ ಪ್ರಕಾರ ಸಲಹೆಗಳು ಗಾಂಧೀಜಿಯ ಅನುಕರಣೆಮಾಡಿರಿ

—:(0):—

ಪ್ರತ್ಯಕ್ಷ ಕಾರ್ಯ:

ನಮ್ಮೆದುರು ಇರುವ ಪ್ರತ್ಯಕ್ಷ ಕಾರ್ಯಗಳು ಯಾವವು? ಇತಿಹಾಸದ ಈ ಪ್ರವಾಹವನ್ನು ಯೋಗ್ಯದಾರಿಯಲ್ಲಿ ಹೇಗೆ ತರಬಹುದು? ನಮ್ಮ ಪಕ್ಷ ಮತ್ತು ಘಟನೆಯ ವಿಷಯ ಹೇಳುವೆ.

ಜಗತ್ತಿನಲ್ಲಿ ಗಾಂಧೀಜಿಯವರು ಯಶಸ್ವಿಯಾದ ರಾಜಕಾರಣ ಧುರಂಧರರು ಆಗಿದ್ದಾರೆ. ಜಗತ್ತಿನಲ್ಲಿ ತೀರ ಸ್ವಲ್ಪ ಜನರೊಡನೆ ಅವರನ್ನು ಹೋಲಿಸಬಹುದು. ಉದಾಹರಣಾರ್ಥ-ರಶಿಯಾದ ಲೆನಿನ್ ಭಾರತದ ರಾಜಕೀಯ ರಣರಂಗದಲ್ಲಿ ಬಂದೊಡನೆ ಅವರೇನು ಮಾಡಿದರು? ಅವರು ಹಳೆಯ ಕಾಂಗ್ರೆಸನ್ನು ಒರೆಸಿ, ಅದರ ಸ್ಥಳದಲ್ಲಿ ತಮ್ಮ ಕನಸಿನ ಕಾಂಗ್ರೆಸನ್ನು ನಿರ್ಮಿಸಿದರು. ಅವರು ೧೯೨೧-೨೨ ರ ಅಸಹಕಾರದ ಆಂದೋಲನದ ಮೂಲಕ ಕಾರ್ಯಕರ್ತರನ್ನು ತರಬೇತು ಮಾಡಿದರು ಮತ್ತು ಅದಕ್ಕಾಗಿ ಟಿಳಕ ಸ್ವರಾಜ್ಯ ಫಂಡಿನಿಂದ ಆರ್ಥಿಕ ಸಹಾಯವನ್ನು ದೊರಕಿಸಿದರು. ನಾವೂ ಇದರಂತೆ ಮಾಡಬೇಕಾಗಿದೆ, ನಾವು ಒಳ್ಳೇ ಆಸಕ್ತಿಯುಳ್ಳ ಕಾರ್ಯಕರ್ತರ ದಲವೊಂದನ್ನು ನಿರ್ಮಿಸಬೇಕು. ನಾವು ಪ್ರತ್ಯಕ್ಷ ಕಾರ್ಯರಂಗದಲ್ಲಿಳಿದರೆ ದುಡ್ಡಿನ ಕೊರತೆ ಬೀಳಲಿಕ್ಕಿಲ್ಲ.

ಸಮಾಜವಾದದ ಮೇಲೆ ಆಧಾರಭೂತವಾದ ಸಮಾಜವನ್ನು ಕಟ್ಟಬೇಕಾದರೆ, ಸಮಾಜವಾದಿ ಕ್ರಾಂತಿಯನ್ನು ಮಾಡಲು ವಿಶೇಷ ರೀತಿಯಲ್ಲಿ ತರಬೇತಿಹೊಂದಿದ ಜನರು ಬೇಕು, ಅದಕ್ಕೆ ತಕ್ಕ ಸಿದ್ಧತೆಬೇಕು.

ನಾವೆಲ್ಲರೂ ಕಾಂಗ್ರೆಸ ಸಂಸ್ಥೆಯಲ್ಲಿದ್ದ ಕಾರಣ ಕೆಲವೊಂದು ಲೋಪದೋಷಗಳು ನಮ್ಮಲ್ಲಿ ಸೇರಿಕೊಂಡಿವೆ. ಸಾಧಾರಣವಾಗಿ ಕಾಂಗ್ರೆಸಿನವರಿಗೆ ಕೆಲವೊಂದು ದಿನಗಳನ್ನು ಆಚರಿಸುವದು. ಸಭೆಗಳನ್ನು ಏರ್ಪಡಿಸುವದ, ಮೆರವಣಿಗೆ ತೆಗೆಯುವದು, ಅಂದರೆ ಆಂದೋಲನಾತ್ಮಕ ಚಟುವಟಿಕೆಗಳಷ್ಟೆ ಗೊತ್ತು ಇರುತ್ತವೆ. ಇದನ್ನು ನಾವು ಸಾಕುಮಾಡಬೇಕು. ಕಾಂಗ್ರೆಸು ಇಂದಿನವರೆಗೆ ಅನಿಶ್ಚಿತ ಮತ್ತು ಸಂದಿಗ್ಧಮಾರ್ಗದಲ್ಲಿ ಇದೆ. ನಾವು ಇದನ್ನುಬಿಟ್ಟುಬಿಡಬೇಕು. ಉದಾಹರಣೆಗಾಗಿ ಕಾಂಗ್ರೆಸನ್ನು ಇಂಗ್ಲಂಡದಲ್ಲಿಯ ಕೂಲಿಕಾರ ಪಕ್ಷಕ್ಕೆ ಹೋಲಿಸಿ ನೋಡಿರಿ. ಕೂಲಿಕಾರ ಸರಕಾರದವರು ತಾವು ಮೊದಲೆ ತಯಾರಿಸಿದ ಕಾರ್ಯಕ್ರಮಗಳನ್ನು ಮತ್ತು ಧೋರಣೆಯನ್ನು ಯಶಸ್ವಿಯಾಗಿ ಕಾರ್ಯರೂಪದಲ್ಲಿ ತಂದರು. ಅವರು ಬೇರೆ ಬೇರೆ ಸಮಸ್ಯೆಗಳ ಅಭ್ಯಾಸವನ್ನು ಮೊದಲೆ ಮಾಡಿ ಆ ಸಮಸ್ಯೆಗಳನ್ನು ಬಿಡಿಸುವ ವಿವರಗಳನ್ನು ತಯಾರಿಸಿ ಇಟ್ಟಿದ್ದರು.

ಸ್ವತಂತ್ರ ಭಾರತವು ಹೇಗಿರಬೇಕು ಇದರ ಸಿದ್ಧವಾದ ಚಿತ್ರ, ನಕ್ಷೆ ಕಾಂಗ್ರೆಸಿನ ಹತ್ತಿರ ಇಲ್ಲ, ಅಂಥ ಚಿತ್ರವನ್ನು ಕಾರ್ಯರಂಗದಲ್ಲಿ ತರಲು ಬೇಕಾಗುವಂಥ ತರಬೇತಿ ಹೊಂದಿದ ಜನರು ಕಾಂಗ್ರೆಸಿನಲ್ಲಿಲ್ಲ. ಅಭ್ಯಾಸ ಮಾಡಲು ಸೌಕರ್ಯಗಳನ್ನು ಕಾಂಗ್ರೆಸು ಕಲ್ಪಿಸಿಕೊಟ್ಟಿಲ್ಲ. ಇವೆಲ್ಲವುಗಳ ಪರಿಣಾಮವೇನಾಗಿದೆ ಇದು ನೀವೆಲ್ಲರು ಕಾಣುತ್ತಿದ್ದೀರಿ. ಕಾಂಗ್ರೆಸ ಮಂತ್ರಿಮಂಡಲಗಳು ಗೊಂದಲದ ಪರಿಸ್ಥಿತಿಯಲ್ಲಿವೆ. ಮತ್ತು ಏನು ಮಾಡಬೇಕೆನ್ನುವದು ಅವರಿಗೆ ತೋಚುವದಿಲ್ಲ.

ಈ ಲೋಪದೋಷಗಳನ್ನು ನಾವು ತಪ್ಪಿಸಬೇಕು. ನಮ್ಮ ಕಾರ್ಯದ ಪ್ರತ್ಯಕ್ಷ ನಕ್ಷೆ, ಚಿತ್ರ ನಮ್ಮೆದುರು ಇರಬೇಕು. ಅದಕ್ಕಾಗಿ ಬೇರೆ ಬೇರೆ ತರದ ಕೆಲಸ ಮಾಡುವವರನ್ನು ನಾವು ತರಬೇತು ಮಾಡಬೇಕು. ಪ್ರತಿಯೊಬ್ಬ ಕಾರ್ಯಕರ್ತನಿಗೆ ವಿಶಿಷ್ಟ ಕೆಲಸವನ್ನು ಕೊಡಬೇಕು. ಮತ್ತು ಅವನು ಅದರಲ್ಲಿ ತರಬೇತು ಹೊಂದಲೇಬೇಕು ಕೂಲಿಕಾರ ಸಂಘಟನೆ ಮಾಡುತ್ತಿದ್ದರೆ ಅದರ ವಿಷಯ ಎಲ್ಲವನ್ನೂ ತಿಳಿದುಕೊಳ್ಳಬೇಕು. ಅದರಲ್ಲಿರುವ ಬೇರೆ ಬೇರೆ ಶಾಖೆಗಳ ಜ್ಞಾನವನ್ನೂ ಗಳಿಸಬೇಕು ಪ್ರತಿಯೊಂದು ಶಾಖೆಯ ಜ್ಞಾನದಲ್ಲಿ ಒಂದೊಂದು ವೈಶಿಷ್ಟ್ಯವಿದೆ.

ಈಗ ಅತ್ಯಂತ ಮಹತ್ವದ ಕೆಲಸವೆಂದರೆ ಸಮಾಜದ ವರ್ಗಗಳ ಸಮ್ಯಕ್ ಜ್ಞಾನವನ್ನೂ ಮಾಡಿಕೊಳ್ಳುವದು. ಹಳ್ಳಿಯಲ್ಲಿರುವ ವರ್ಗದ ಆಧಾರದ ಮೇಲಿದ್ದ ಸಮಾಜದ ಎಲ್ಲ ಅಂಗೋಪಾಂಗಗಳ ಸಂಪೂರ್ಣ ಅಭ್ಯಾಸ ಮಾಡಿ ಅದರ ಸ್ವರೂಪದ ದರ್ಶನವಾದರೆ ಮಾತ್ರ, ನಮ್ಮ ಧೋರಣೆಯನ್ನು ನಾವು ನಿರ್ಧರಿಸಬಲ್ಲೆವು. ಪ್ರತಿಯೊಂದು ಪ್ರಾಂತದಲ್ಲಿ ಬೌದ್ಧಿಕ ಕೇಂದ್ರ ಒಂದು ಬೇಕು ಮತ್ತು ಈ ಕೇಂದ್ರಗಳಲ್ಲಿ ಆಯಾ ಪ್ರಾಂತದ ವೈಶಿಷ್ಟ್ಯಗಳ ಅಭ್ಯಾಸವಾಗಬೇಕು. ಉದಾಹರಣೆಗಾಗಿ ಒಂದು ಗುಂಪಿನವರು ಕರ್ನಾಟಕದ ಒಕ್ಕಲಿಗರು ಮತ್ತು ಇನ್ನೊಂದು ಗುಂಪಿನವರು ಔದ್ಯೋಗಿಕ ಕೂಲಿಕಾರರ ಸಮಸ್ಯೆಯ ಅಭ್ಯಾಸವನ್ನು ಕೈಕೊಳ್ಳಬಹುದು. ನಿಮ್ಮಲ್ಲಿದ್ದ ಪ್ರಾಧ್ಯಾಪಕರು ಮತ್ತು ಬುದ್ಧಿವಂತ ವಿದ್ಯಾರ್ಥಿಗಳೊಡನೆ ಸಂಪರ್ಕ ಬೆಳಸಿ ಅವರ ಸಹಾಯ ನೀವು ಪಡೆಯಬಹುದು. ಪ್ರತ್ಯಕ್ಷ ಕಾರ್ಯರಂಗದಲ್ಲಿರುವವರು ಅಂಕಿ ಸಂಖ್ಯೆಗಳನ್ನು ಕಲೆಹಾಕಬೇಕು. ಮತ್ತು ಅಭ್ಯಾಸ ಮಾಡುವವರು ತಾತ್ವಿಕ ಭೂಮಿಕೆಯನ್ನು ವಿವರಿಸಬೇಕು.

ವಿಶಿಷ್ಟವಾದ ಕಾರ್ಯಗಳು ಮತ್ತು ಅವನ್ನು ನೆರವೇರಿಸುವ ಬಗೆಗಳ

ಪಕ್ಷದ ಪ್ರತಿಯೊಬ್ಬ ಸಭಾಸದನಿಗೆ ವಿಶಿಷ್ಟವಾದ ಕಾರ್ಯವನ್ನು ಮಾಡಲು ಹೇಳಬೇಕು. ಉದಾಹರಣೆಗಾಗಿ ಕೆಲವರು ಪಕ್ಷಪ್ರಚಾರದಲ್ಲಿ, ಕೆಲವರು ಸಹಕಾರಿ ಚಟುವಟಿಕೆಗಳಲ್ಲಿ, ಕೆಲವರು ಸಾಂಸ್ಕೃತಿಕ ಚಟುವಟಿಕೆ ಮುಂತಾದವುಗಳಲ್ಲಿ ತರಬೇತಿ ಹೊಂದಬಹುದು.



ಯುರೋಪ-ಏಶಿಯಾ

ಅಮೇರಿಕೆಯ ಪ್ರಸಿದ್ಧ ಲೇಖಕರಾದ ಶ್ರೀ ಲುಯಿಫಿಶರ ಇವರ ಲೇಖನದ ಸಾರಾಂಶ - ಸಂಪಾದಕ.

ಏಶಿಯಾದಲ್ಲಿ ತನ್ನ ಕಾಲು ಚಾಚಬೇಕೆಂದು, ರಶಿಯಾವು, ಯುರೋಪದ ಶಕ್ತಿಗಳೊಡನೆ ಈಗ ಒಡಂಬಡಿಕೆಮಾಡಿಕೊಳ್ಳಲು ಇಚ್ಛಿಸುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಆದರೆ ಇದು ಸರಿಯೆಂದು ಕಾಣುತ್ತಿದ್ದರೂ ವಸ್ತುಸ್ಥಿತಿಗೆ ಹೊಂದಿದತಂಥ ಮಾತಾಗಿಲ್ಲ.

ಈ ಮಾತು ನಿಜವೆಂದು ತಿಳಿದರೂ, ಏಶಿಯಾದಲ್ಲಿ ರಶಿಯಾವು ಹೇಗೆ ಕಾಲು ಚಾಚಬಲ್ಲದು? ಶಸ್ತ್ರ ಬಲದಿಂದಲೇ? ಅದು ಅಸಾಧ್ಯ. ಇದಕ್ಕೂ ಮೊದಲು ಅದಕ್ಕೆ ಸಿಕ್ಕ ಸಂಧಿಗಳಲ್ಲಿ ಅದು ತನ್ನ ಶಕ್ತಿಬಲವನ್ನು ಉಪಯೋಗಿಸಲಿಲ್ಲ.

ಯುರೋಪದಲ್ಲಿಯ ತನ್ನ ಹಿಡಿತವನ್ನು ರಶಿಯಾವು ಸಡಲಿಸಿದರೆ, ಯುರೋಪದ ರಾಷ್ಟ್ರಗಳು ಏಶಿಯಾದ ಕಡೆಗೆ ಲಕ್ಷ್ಯಹಾಕುವವು. ಆಗ ರಶಿಯಾಕ್ಕೆ ಏನು ಲಾಭವಾಗುವುದು.?

ಬರ್ಲಿನದ ದಿಗ್ಬಂಧನವನ್ನು ರಶಿಯಾವು ಎತ್ತಿದುದರಲ್ಲಿ ಅದಕ್ಕೆ ಸೋಲೇ ಉಂಟಾಯಿತು. ಇತರ ಶಕ್ತಿಗಳು, ಬರ್ಲಿನದಲ್ಲಿಯ ರಶಿಯಾದ ವಿಭಾಗದಮೇಲೆ ದಿಗ್ಬಂಧನವನ್ನು ನಾಶಮಾಡಲು ವಿಮಾನಗಳನ್ನು ಹಾರಿಸಯತ್ನಿಸಿದವು. ಆಗ ರಶಿಯಾವು ಸುಮ್ಮನೆ ಕುಳಿತಿತ್ತು.

ಯುಗೋಸ್ಲಾವಿಯಾದಲ್ಲಿಯ ಪ್ರತಿಭಟನೆಯ ಪರಿಣಾಮವು ರಶಿಯಾದಮೇಲೆ ಬಹಳವಾಗಿದೆ. ಅದರಿಂದ ರಶಿಯಾದ ಶಕ್ತಿಯು ಯುರೋಪದಲ್ಲಿ ಯಶಸ್ವಿಯಾಗದಂತಹ ವಾತಾವರಣವನ್ನು ಹುಟ್ಟಿಸಿದೆ. ಈ ಬಗ್ಗೆ ರಶಿಯಾವು ಯುಗೋಸ್ಲಾವಿಯವನ್ನು ಶಸ್ತ್ರ ಬಲದಿಂದ ಹಣ್ಣುಮಾಡಲು ಸಮರ್ಥನಿತ್ತು. ಆದರೆ ಹಾಗೆಮಾಡಲಿಲ್ಲ.

೧೯೪೫ ರಲ್ಲಿ ಡಾರ್ಡಾನೆಲಿಸ್‌ವನ್ನು ಸಾಮೂಹಿಕವಾಗಿ ನಮ್ಮ ವಶದಲ್ಲಿಟ್ಟುಕೊಳ್ಳೋಣ ಎಂದು ಸ್ಟಾಲಿನ್ನರು ಟ್ರೂಮನ್ ಮತ್ತು ಅಟ್ಲಿಯವರಿಗೆ ಹೇಳಿದರು. ೧೯೪೬ ರಲ್ಲಿ ರಶಿಯಾವು ತುರ್ಕಿಯು ಕಾರ್ಸ್ ಮತ್ತು ಆರ್ದಹನ್ ಪ್ರಾಂತಗಳನ್ನು ಬಿಡಬೇಕೆಂದು ಒತ್ತಾಯಪಡಿಸಿತು. ಇದನ್ನು ಅಮೇರಿಕೆಯು ಪ್ರತಿಭಟಿಸಿದುದರಿಂದ ರಶಿಯಾವು ಸುಮ್ಮನೆ ಕೂತಿತು.

೧೯೪೬ ರಲ್ಲಿ ರಶಿಯಾವು ತನ್ನ ಸೈನ್ಯವನ್ನು ಇರಾಣದಿಂದ ಹಿಂತೆಗೆದುಕೊಂಡಾಗ ಅದಕ್ಕೆ ಇರಾಣವು ಎಣ್ಣೆಯ ಬಗ್ಗೆ ಕೆಲವು ಸೌಕರ್ಯಗಳನ್ನು ಒದಗಿಸಿತು, ಮತ್ತು ಅಜರಬೈಜಾನದಲ್ಲಿ ರಶಿಯಾವು ತನ್ನ ಬಗಲುಕೂಸಾದಂತಹ ಅಡಳಿತಗಾರರನ್ನು ನಿಯಮಿಸಿಕೊಂಡಿತು ಮುಂದೆ ಈ ಸೌಕರ್ಯವೂ ಉಳಿಯಲಿಲ್ಲ. ಅಜರಬೈಜಾನವೂ ಕೈಬಿಟ್ಟಿತು. ಆಗಲೂ ರಶಿಯಾವು ಸುಮ್ಮನೆ ಕುಳಿತಿತು.

ಚೀನದ ಪರಿಸ್ಥಿತಿ

ಏಶಿಯಾದಲ್ಲಿ ಕೂಡ ರಶಿಯಾವು ಶಸ್ತ್ರ ಬಲದಿಂದ ತನ್ನ ಕಾಲು ಚಾಚಬೇಕೆಂದು ಹವಣಿಸುವ ಚಿಹ್ನೆಗಳಿಲ್ಲ. ಚೀನದಲ್ಲಿ ಅದು ತೀರ ಕಡಿಮೆ ವೆಚ್ಚದಿಂದ ಆ ಜಯವನ್ನು ಸಂಪಾದಿಸಿದೆ. ಆದಕ್ಕೆ ಪಾಶ್ಚಿಮಾತ್ಯ ಪ್ರಜಾಸತ್ತೆಗಳು ಮತ್ತು ಕೌಮಿಂಟಾಂಗದಲ್ಲಿಯ ಪ್ರತಿಭಟನೆಗಾರರು ಸಹಾಯಮಾಡಿದರು. ಇದೇ ರೀತಿಯಿಂದ ರಶಿಯಾವು ಏಶಿಯಾದಲ್ಲಿಯ ಇತರ ಭಾಗಗಳಲ್ಲಿಯೂ ಕಾಲೂರಲು ಇಚ್ಛಿಸಬಹುದು.

ಪ್ರಚಾರದಿಂದ ರಶಿಯಾವು ಯುರೋಪದಲ್ಲಿಯ ಪ್ರಜಾಸತ್ತೆಗಳನ್ನು ಸದೆಬಡೆಯಲು ಯತ್ನಿಸಿತು. ಆದರೆ ಅದು ಸಫಲವಾಗಲಿಲ್ಲ ಮಾರ್ಶಲ ಯೋಜನೆ, ಅಟಲಾಂಟಿಕ ಒಪ್ಪಂದಗಳ ಮೂಲಕ ಯುರೋಪದ ರಾಷ್ಟ್ರಗಳು ಈಗ ಬಲಗೊಂಡಿವೆ. ಮತ್ತು ಕಮ್ಯುನಿಷ್ಟ ಪ್ರಭಾವವು ಅಲ್ಲಿ ದಿನೇ ದಿನೇ ಕಡಿಮೆಯಾಗುತ್ತಿದೆ.

ರಶಿಯಾದಲ್ಲಿಯೇ ಈಗ ಮೊದಲಿನ ಸ್ವಾಸ್ಥ್ಯ ಉಳಿದಿಲ್ಲ ಯುಗೋಸ್ಲಾವಿಯಾದ ಟಿಟೋನ ಪಕ್ಷವು ಅಲ್ಲಿಯೂ ಪ್ರಾರಂಭವಾಗಿದೆ. ಇಂದಿನ ರಶಿಯಾದ ವಾತಾವರಣವನ್ನು ಸೇರದ ಜನರು ಲಕ್ಷಗಟ್ಟಲೆ ಹೊರಬಿದ್ದು ಪತ್ತಿನ ದೇಶದಲ್ಲಿ ಹೋಗಿ ಸೇರಿಕೊಳ್ಳುತ್ತಿದ್ದಾರೆ.

ಜನರೂ ನಂಬಲಿಲ್ಲ

ಪೂರ್ವ ಜರ್ಮನಿಯಲ್ಲಿ ರಶಿಯಾವು ನಡೆಸಿದ ಆಡಳಿತಕ್ಕೆ ಅಲ್ಲಿಯ ಜನತೆಯು ಪ್ರತಿಭಟಿಸಿತು ಪರಕೀಯ ಆಡಳಿತವು ಯಾವ ಜನಾಂಗಕ್ಕೂ ಸೇರದು, ಜರ್ಮನಿಯಲ್ಲಿ ರಶಿಯಾದ ವಿಷಯವಾಗಿ ಬಹಳ ದ್ವೇಷವು ಉಂಟಾಯಿತು. ತದ್ವಿರುದ್ಧವಾಗಿ ಅಮೇರಿಕೆ, ಬ್ರಿಟನ್ನ ಮತ್ತು ಫ್ರಾನ್ಸಗಳು ಜರ್ಮನಿಯ ಜನತೆಯಮೇಲೆ ಚಲೋ ಪರಿಣಾಮನ್ನು ಮಾಡಿವೆ.

ಈ ರೀತಿಯಾಗಿ ರಶಿಯಾವು ಯುರೋಪದಲ್ಲಿಯ ರಾಜಕೀಯ ದೃಷ್ಟಿಯಿಂದ ಹಿಡಿತವನ್ನು ಕಳೆದುಕೊಂಡಿದೆ. ಮತ್ತು ಶಸ್ತ್ರಬಲದಿಂದ ಅದನ್ನು ಸಂಪಾದಿಸಲು ಮನಸ್ಸುಮಾಡುತ್ತಿಲ್ಲ. ಈಗ ಅದು ಮುತ್ಸದ್ದಿತನದಿಂದ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ನೋಡುತ್ತಿದೆ.

ರಶಿಯಾದ ಮುತ್ಸದ್ದಿಗಳು, ಪತ್ರಿಕೆಗಳು ಮತ್ತು ಜನತೆಯು ನಮ್ಮ ದೇಶದ ಪ್ರಭಾವವು ಹೊರಗೆ ಬೀಳದಂತಾಗಿದೆಯೆಂಬುದನ್ನು ಚನ್ನಾಗಿ ಬಲ್ಲವರಾಗಿದ್ದಾರೆ ನಮ್ಮ ಸಂಸ್ಕೃತಿ, ಕಲೆ, ತತ್ವಗಳ ಬಗ್ಗೆ ಅವರಿಗೆ ಆತ್ಮ ವಿಶ್ವಾಸವಿಲ್ಲದಾಗಿದೆ. ಅದು ಇದ್ದರೆ ಅವರು ಅವೆಲ್ಲವುಗಳನ್ನು ಬಯಲಿಗಿಡುತ್ತಿದ್ದರು ಇವೆಲ್ಲವುಗಳನ್ನು ಬಹುಗುಪ್ತವಾಗಿ ಬೆಳೆಸಿಕೊಂಡು ಬರುತ್ತಿದ್ದಾರೆ.

ಏಶಿಯು ದಣಿದಿಲ್ಲ

ಏಶಿಯಾಕ್ಕೆ ಪಶ್ಚಿಮದಲ್ಲಿಯ ಇವೆಲ್ಲ ಸಂಗತಿಗಳು ಸ್ಪಷ್ಟಪಾಠವನ್ನು ಕಲಿಸಿವೆ. ಏಶಿಯಾವು ಯುರೋಪಕ್ಕಿಂತ ಬಡಭಾಗವಾಗಿದೆ ಮತ್ತು ಹಿಂದುಳಿದಿದ್ದಾಗಿದೆ. ಆದರೆ ಅದು ಯುರೋಪದಷ್ಟು ದಣಿದಿಲ್ಲ. ಏಶಿಯಾದ ಪ್ರಾಚೀನ ಸಂಸ್ಕೃತಿಯು ನೆಲೆಯು ಪಶ್ಚಿಮದಲ್ಲಾದಷ್ಟು ದೋಷಗೊಂಡಿಲ್ಲ. ಯುರೋಪದಲ್ಲಿ, ಕನ್ಫ್ಯೂಸಿಯಸ್ ಬುದ್ಧ, ಕ್ರೈಸ್ತ ಮತ್ತು ಗಾಂಧಿಗಳು ಎಂದೂ ಹುಟ್ಟಲಿಲ್ಲ. ತನ್ನ ಆಧ್ಯಾತ್ಮಿಕ ಪರಂಪರೆಯ ಶಕ್ತಿಯಿಂದ, ಮತ್ತು ಜನಹಿತೇಚ್ಛುಗಳಾದ ರಾಷ್ಟ್ರೀಯ ಸರಕಾರಗಳಿಂದ ಹೊಸ ಸಾಮ್ರಾಜ್ಯವಾದೀ ಶಕ್ತಿಗಳಿಗೆ ಏಶಿಯಾವು ಇಂಬುಗೊಡಲಾರದು ಮತ್ತು ಹಳೇ ಸಾಮ್ರಾಜ್ಯತೃಷ್ಣೆಯುಳ್ಳವರನ್ನು ಬೇಗನೆ ಹೊರಗೆ ಹಾಕದೆ ಇರಲಾರದು.

ಪಶ್ಚಿಮವನ್ನು ಅನುಕರಿಸದೆ, ಅದರಿಂದ ಏನಾದರೂ ಛಲೋ ಪದ್ಧತಿಗಳನ್ನು ತೆಗೆದುಕೊಳ್ಳುವುದಕ್ಕೆ ಏಶಿಯಾವು ಹೆದರುವ ಕಾರಣವಿಲ್ಲ. ಜಪಾನವು ಇವುಗಳನ್ನು ಸ್ವೀಕರಿಸಿತು ಮತ್ತು ಅನುಕರಿಸಿತು, ಆದರೆ ಅವುಗಳ ಮೂಲಕ ನಾಶಹೊಂದಿತು. ಹೆನ್ರಿ ಫೋರ್ಡರನ್ನು ಔದ್ಯೋಗಿಕ ಮತ್ತು ಶಾಸ್ತ್ರೀಯ ಅನುಭವಿಕರೆಂದು ಅನುಸರಿಸುವವರಿಗೆ, ಸ್ವಾತಂತ್ರ್ಯದ ಸವಿಯುನ್ನುಣ್ಣುವವರು ಹೆನ್ರಿಫೋರ್ಡ ಮತ್ತು ಮಹಾತ್ಮಾ ಗಾಂಧಿ ಇವರಿಬ್ಬರ ದೃಷ್ಟಿಯ ಸಂಯುಕ್ತ ಉಪಯೋಗವನ್ನು ಹೊಂದುವುದು ಅವಶ್ಯವಿದೆಯೆಂದು ನಾನು ಹೇಳಬಯಸುತ್ತೇನೆ.

ಇದೊಂದು ಕಪಿಲಾಷ್ಠಿ ಯೋಗವೆಂದು ಕೆಲವರು ಭಾವಿಸಬಹುದು. ಗಾಂಧೀಜಿ ಫೋರ್ಡರ ಮತ್ತು ಯಂತ್ರಗಳ ವಿರೋಧಿಗಳಾಗಿದ್ದರೆಂದು ಕೆಲವರು ತಿಳಿದಿದ್ದಾರೆ ಈ ಮಾತು ಸರಿಯಾದುದಲ್ಲ. ನೀವು ಯಂತ್ರಗಳನ್ನೆಲ್ಲ ದ್ವೇಷಿಸುವಿರಾ? ಎಂದು ಗಾಂಧಿಯವರಿಗೆ ಒಮ್ಮೆ ಕೇಳಲಾಯಿತು ಅದಕ್ಕೆ ಉತ್ತರವಾಗಿ ಅವರು ಈ ರೀತಿ ಬರೆದರು. ಈ ಶರೀರವು ಕೂಡ ಒಂದು ಬಹುಸೂಕ್ಷ್ಮವಾದ ಯಂತ್ರವೇ ಆಗಿರುವಾಗ ಯಂತ್ರವನ್ನು ನಾನು ಹೇಗೆ ದ್ವೇಷಿಸಬಲ್ಲೆನು? ನೂಲುವ ರಾಟಿಯು ಒಂದು ಯಂತ್ರವೇ ಆಗಿದೆ. ಒಂದು ಹಲ್ಲುಕಡ್ಡಿಯು ಕೂಡ ಯಂತ್ರವೇ ಸರಿ ಜನರಲ್ಲಿ ಯಂತ್ರದ ಸಲುವಾಗಿ ಇದ್ದ ಹಪಾಪಿತನವನ್ನು ನಾನು ದ್ವೇಷಿಸುತ್ತೇನೆ. ಯಂತ್ರವನ್ನೇ ನಾನು ದ್ವೇಷಿಸುತ್ತಿಲ್ಲ. ನಾನು ಶ್ರಮ ಮತ್ತು ವೇಳೆಯನ್ನು ಉಳಿಸಲು ಇಚ್ಛಿಸುತ್ತೇನೆ. ಆದರೆ ಅದು ಕೆಲವರಿಗೆ ಮಾತ್ರ ಆಗಕೂಡ

ದು, ಸರ್ವರಿಗೂ ಅದರ ಫಲವು ಸಿಗಬೇಕು. ದುಡ್ಡು ಕೆಲವರಲ್ಲಿ ಮಾತ್ರ ಕೂಡಿಬೀಳುವುದು ನನಗೆ ಸೇರುತ್ತಿಲ್ಲ, ಅದು ಸರ್ವರಲ್ಲಿ ಹಂಚಲ್ಪಡಬೇಕು.

ಫೋರ್ಡರಿಂದ ದೇಶವನ್ನು ಕಾಪಾಡಲು ಪಶ್ಚಿಮದಲ್ಲಿ ಗಾಂಧಿಯು ಹುಟ್ಟಿರುವುದಿಲ್ಲ. ಪೂರ್ವದಲ್ಲಿ ಗಾಂಧಿಯಿರುವುದರಿಂದ ಅದು ಫೋರ್ಡರಿಗೆ ಹೆದರುವ ಕಾರಣವಿಲ್ಲ. ಪೂರ್ವವು ತನ್ನ ಪ್ರಾಚೀನ ಮತ್ತು ಅರ್ವಾಚೀನ ಸ್ಥಿತಿಗಳಲ್ಲಿ ವಿಶ್ವಾಸವುಳ್ಳದ್ದಾಗಿದ್ದರೆ ಮತ್ತು ತನಗೇ ತಾನು ವಂಚಿಸಿಕೊಳ್ಳದಿದ್ದರೆ ಅದು ಪಶ್ಚಿಮಕ್ಕೆ ಬೆದರುವ ಆವಶ್ಯಕತೆಯಿಲ್ಲ.

—(?)—

ಕಮ್ಯೂನಿಸ್ಟ ಗಂಡಾಂತರ

ಡಾಕ್ಟರ ಹರ್ಡೀಕರ ಅವರಿಂದ

—:(0):—

ಬಡತನಕ್ಕೆ ಬಲಿಯಾದ ಭೂಮಿಯಲ್ಲಿ ಕಮ್ಯೂನಿಜಂ ಭರದಿಂದ ಬೆಳೆಯುತ್ತದೆ. ಇಂಥ ಭೂಮಿಗೆ ಈಗಿನಂತಹ ಆಡಳಿತದಲ್ಲಿಯ ಅತೃಪ್ತತೆಯು ಹುಲುಸಾದ ಗೊಬ್ಬರವಾಗಿರುತ್ತದೆ. ಅಂತೇ ದರಿದ್ರನಾರಾಯಣರಿಂದ ತುಂಬಿದ ಭರತಭೂಮಿಯು ಕಮ್ಯೂನಿಜಂಕ್ಕೆ ತಕ್ಕ ಕ್ಷೇತ್ರವಾಗಿದೆಯೆನ್ನಲಡ್ಡಿಯಿಲ್ಲ.

ಇತ್ತೀಚೆಗೆ ಬಂಗಾಲದಲ್ಲಿ ಸಂಭವಿಸುತ್ತಲಿದ್ದ ಘಟನೆಗಳನ್ನು ನೋಡಿದವರಿಗೆ, ಓದಿದವರಿಗೆ, ಕ್ರಾಂತಿಕಾರೀ ಸ್ವಭಾವದ ತರುಣ ಬಂಗಾಲಿಗಳು ಬಹುಸಂಖ್ಯೆಯಲ್ಲಿ ಕಮ್ಯೂನಿಸ್ಟ ಪಾರ್ಟಿಗೆ ಸೇರುವುದನ್ನು ಕಾಣಬಹುದಾಗಿದೆ. ಇಲ್ಲಿಯವರೆಗೆ ಇವರಿಂದ ಜರಿಗಿದ ಹಿಂಸೆಯ ಅಪಕೃತಿಗಳು, ಬಂಗಾಲಿಗಳನ್ನೂ ಹಿಂದೀ ಧುರೀಣರನ್ನೂ ಭಾರತದ ಭವಿಷತ್ತಿನ ಬಗ್ಗೆ ವಿಮಂಚಿತರನ್ನಾಗಿಮಾಡಿವೆ. ಬಂಗಾಲದ ಕಮ್ಯುನಿಸ್ಟರು ಭಾರತ ರಾಷ್ಟ್ರಧ್ವಜಕ್ಕೆ, ಸ್ತ್ರೀಯರಿಗೆ ಅಪಮಾನಗೈದಿದ್ದಾರೆ, ವಿರೋಧಿಸಿದವರನ್ನು ಕೊಲೆಗೈದಿದ್ದಾರೆ, ಮನೆ ಆಸ್ತಿಗಳನ್ನು ನಾಶಮಾಡಿದ್ದಾರೆ

ಆಂಧ್ರ ದೇಶದಲ್ಲಿಯೂ ಇವೇ ಕೃತಿಗಳ ಪುನರಾವೃತ್ತಿ ನಡೆದಿದೆ. ಮೊನ್ನೆ ಸುಮಾರು ನೂರೈವತ್ತು ಜನ ಶಸ್ತ್ರಸಜ್ಜಿತ ಕಮ್ಯೂನಿಸ್ಟರು ಗುಂಪುಗಟ್ಟಿ ಈಸ್ವರು ಕಾಂಗ್ರೆಸಿಗರ ಕೊಲೆಗೈದಿದ್ದಾರೆ. ಇವನ್ನೂ ಕೆಲದಿನಗಳ ಮೊದಲು ಕೆಲವು ಕಮ್ಯೂನಿಸ್ಟರು ಆ ಪ್ರಾಂತದ ಒಬ್ಬ ಸೇವಾಲದ ಸಂಘಟಿಕನ ಮನೆಹೊಕ್ಕು ಅವನನ್ನು ಚೆನ್ನಾಗಿ ಥಳಿಸಿದ್ದಾರಲ್ಲದೆ ಅವನ ಕಣ್ಣುಗಳನ್ನೂ ಕಿತ್ತಿದ್ದಾರೆ. ಹೈದ್ರಾಬಾದದ ಹಳ್ಳಿಗಳಲ್ಲಿಯೂ ಇಂತಹ ಅಪಕೃತಿಗಳೇ ನಡೆದಿವೆ. ಕೇರಳ ಪ್ರಾಂತದಲ್ಲಿಯೂ ಇದೇಹಾಡು

ಕಮ್ಯೂನಿಸ್ಟರು ತಮ್ಮ ಧೋರಣೆಯನ್ನು ಬಚ್ಚಿಟ್ಟಿಲ್ಲ. ವರ್ಲ್ಡ ಫೆಡರೇಶನ್ ಆಫ ಟ್ರೇಡ ಯುನಿಯನಿಷ್ಟ ಸಭೆಯ ಕಾಲಕ್ಕೆ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸದ ಶ್ರೀ ಎಸ್. ಎ ಡಾಂಗೆಯವರ ಸ್ಥಾನಕ್ಕೆ ಬಂದ ಸಿಲೋನ ಟ್ರೇಡ್ ಯುನಿಯನ್ನದ ಶ್ರೀ ಎ. ಡಿ ವಿಕ್ರಮಸಿಂಹರು ಒಂದು ಪತ್ರಿಕಾ ಸಂದರ್ಶನದಲ್ಲಿ "ಮಲಯಾ ಮತ್ತು ಬ್ರಹ್ಮದೇಶಗಳಲ್ಲಿ ಕಮ್ಯೂನಿಸ್ಟರು ಸಾಧಿಸಿದುದನ್ನೇ ಭಾರತದಲ್ಲಿ ಸಾಧಿಸಲು ನಾವು (ಕಮ್ಯೂನಿಸ್ಟರು) ಸುದೀರ್ಘ ಪ್ರಯತ್ನ ಪಡುತ್ತಲಿದ್ದೇವೆ" ಎಂದಿದ್ದಾರೆ.

ಈ ಹೇಳಿಕೆಯು ನಿಜವಿದ್ದರೆ ಅದನ್ನು ಯಾರೂ ದುರ್ಲಕ್ಷಿಸತಕ್ಕದ್ದಲ್ಲ

ಭಾರತದಲ್ಲಿ,ಮಾನವೀ ಮತ್ತು ನೈಸರ್ಗಿಕ ಬದುಕಿನ ವಿಕಾಸಕ್ಕಾಗಿ ಮುನ್ನಡೆಯುತ್ತಿರುವ ರಾಷ್ಟ್ರೀಯ ಶಕ್ತಿಯನ್ನು ಒಂದೆ ಜಗ್ಗಿನ ಇಂಥ ವೈರಿಗಳ ನಾಶಕ್ಕಾಗಿ ಎಲ್ಲರು ಕೂಡಲೇ ತಮ್ಮ ಶಕ್ತಿ ಸರ್ವಸ್ವವನ್ನು ಒಟ್ಟುಗೂಡಿಸಬೇಕು. ತಮ್ಮ ತಮ್ಮೊಳಗಿನ ಪಕ್ಷೀಯ ರಾಜಕಾರಣದಿಂದ ಮುಕ್ತರಾಗಬೇಕು. ಮತ್ತು ತಮ್ಮ ತರುಣರನ್ನು ಸಂಘಟಿಸಬೇಕು ಇಲ್ಲದಿದ್ದರೆ ಈ ಕಮ್ಯೂನಿಷ್ಟ ಗಂಡಾಂತರವು ನಮಗೆ ಮುಂದಾದರೂ ತೊಂದರೆ ಕೊಟ್ಟೇಕೊಡುವುದು.

ಆಹಾರ ಭಟ್ಟಿಗಳ ಸಮಸ್ಯೆ

ನಿಯಂತ್ರಣದ ಅಗತ್ಯವಿದೆಯೇ?

ಆಹಾರ ಖಾತೆಯ ಅಧಿಕಾರಿಗಳು ಆಗಾಗ್ಗೆ ಡಿಲ್ಲಿಗೆಹೋಗಿ ನೆಹರೂ ಪಟೇಲರನ್ನು ಕೇಂದ್ರಾಧಿಕಾರಿಗಳನ್ನು ಬೆದರಿಸಿ ಆಹಾರದ ಅಭಾವದಿಂದ ಲಕ್ಷಗಟ್ಟಲೆ ಜನರು ಸಾಯುವರೆಂದು ತಪ್ಪು ಅಂಕೆಗಳನ್ನು ಕೊಟ್ಟು ಅವರನ್ನು ತಪ್ಪುದಾರಿಗೆ ಹಚ್ಚುತ್ತಲಿರುವದು ತಿಳಿದುಬಂದಿದೆ.

ತಂಜಾವೂರು ಬೆಜವಾಡದ ಭಾಗಗಳಲ್ಲಿ ಸಾವಿರಗಟ್ಟಲೆ ಟನ್ನು ಅಕ್ಕಿ ಬೇರೆಕಡೆ ಹೋಗದೆ ಕೊಳೆಯುತ್ತಲಿದೆ. ಧಾನ್ಯಸಂಗ್ರಹದ ಅಗತ್ಯವಿಲ್ಲವಾದರೂ ಸಂಗ್ರಹಮಾಡಿದ ಧಾನ್ಯಾದಿಗಳ ಲಕ್ಷಗಟ್ಟಲೆ ಚೀಲ ಉಪಯೋಗವಿಲ್ಲದೆ ಕೆಡುತ್ತಲಿದೆ, ಬಳ್ಳಾರಿ ಸೆಂಟ್ರಲ್ ಸ್ಟೋರ್ಸದವರ ಅಧೀನದಲ್ಲೇ ೬೦ ಸಾವಿರ ಚೀಲಗಳಷ್ಟು ಧಾನ್ಯವಿದೆ, ಇನ್ನು ಬೇರೆ ನಗರಗಳ ವಿಷಯವೇ ಬೇಡ.

ಈ ಕೃತಕ ಕೊರತೆಯು ಬೊಬ್ಬೆ ಹುಟ್ಟಿಸಿ ತಮ್ಮ ...ವಕರಿಗಳನ್ನು ಮುಂದುವರಿಸುವ ಕಾರಣದಿಂದಲೇ ಈ ಆಹಾರಶಾಖೆಯ ಅಧಿಕಾರಿಗಳು ಸುಳ್ಳು ಅಂಕೆ ಸಂಖೆಗಳನ್ನು ಕೊಟ್ಟು ಆಡಳಿತದ ಅನುಭವವಿಲ್ಲದವರಿಂದ ನಿಯಂತ್ರಣಗಳನ್ನು ಪ್ರಜೆಗಳ ಮೇಲೇರಿಸಿ, ಅವರನ್ನು ಅವರ್ಣನೀಯ ಕಷ್ಟಗಳಿಗೆ ಗುರಿಮಾಡಿರುವರು,

ಮಹಾತ್ಮ ಗಾಂಧಿಯವರ ಪ್ರಭಾವದಿಂದ ನಿಯಂತ್ರಣಗಳನ್ನು ತೆಗೆದಾಗ ಜಿಲ್ಲಾ ಜಿಲ್ಲಾಗಳೊಳಗೆ ಆಹಾರ ಧಾನ್ಯಗಳ ಸಾಗಾಟಕ್ಕೆ ಅವಕಾಶಕೊಟ್ಟು.ಸಾರಿಗೆಯ ವ್ಯವಸ್ಥೆಯನ್ನು ಸರಿಪಡಿಸಿದ್ದರೆ ಇಷ್ಟೊಂದು ತೊಂದರೆಗೆ ಕಾರಣವಾಗುತ್ತಿರಲಿಲ್ಲ. ಇನ್ನು ಬಟ್ಟೆಯದಾದರೂ ಅಷ್ಟೇ ಮಾರ್ಕೆಟದಲ್ಲಿ ಬೇಕಾದಷ್ಟು ಬಟ್ಟೆ ಇದೆ ಕೊಳ್ಳುವವರೇ ಇಲ್ಲ. ಲೈಸನ್ಸ್‌ದಾರರಾದ ಚಿಲ್ಲರೇ ವ್ಯಾಪಾರಿಗಳಲ್ಲಿ ಬಹು ಜನರಿಗೆ ಉಕ್ಸಾನಾಗಿದೆ. ಗಿರಣೀ ಸಂಘದವರು ಕೊಟ್ಟ ಹೇಳಿಕೆಗಳಿಂದ ಲಕ್ಷಗಟ್ಟಲೇ ಬೇಲುಗಳಷ್ಟು ಬಟ್ಟೆ ಮಾರದೆ ಉಳಿದಿದೆ. ಬಟ್ಟೆಗೆ ನಿಯಂತ್ರಣದ ಅಗತ್ಯವಿಲ್ಲವೆಂಬುದನ್ನು ಎಲ್ಲರೂ ಕಂಡಿದ್ದಾರೆ.

ಈ ಕಾರಣ ಕಳ್ಳಸಂತೆ, ನಾರುವವರಿಗೆ ಮಾತ್ರ ಕಠಿಣಶಿಕ್ಷೆಯನ್ನಿಟ್ಟು ಧಾರಾಳವಾದ ಸ್ವೇಚ್ಛಾ ವ್ಯಾಪಾರಕ್ಕೆ ಅವಕಾಶವೀಯಬೇಕಾದುದು ಅಗತ್ಯ ಪ್ರಾಂತೀಯ ಮತ್ತು ಕೇಂದ್ರದ ಮಂತ್ರಿಗಳು ನಿಯಂತ್ರಣಗಳನ್ನು ತೆಗೆಯಲು ಎಲ್ಲಾ ಕಡೆಯಲ್ಲೂ ಬಲವಾದ ಆಂದೋಳನವಾಗಬೇಕು.

ಮಂತ್ರಿಮಂಡಲದ ಕೊಳೆ

ಪೂರ್ವ ಪಂಜಾಬದ ಉದಾಹರಣೆ

ಪೂರ್ವ ಪಂಜಾಬದಲ್ಲಿನ ಕಳ್ಳ ಪೇಟೆಯ ಸೂತ್ರಧಾರರ ಬಗ್ಗೆ ಪ್ರಕಟವಾಗಿರುವ ವರದಿಗಳನ್ನು ನೋಡಿದರೆ ಆಶ್ಚರ್ಯವಾಗುವುದಲ್ಲದೆ ವಿಶೇಷ ವಿಚಿತ್ರವೆನಿಸಿಯೂ ಇದೆ. ಮಂತ್ರಿ ಮಂಡಲದ ಹಿಂದಿನ ಮತ್ತು ಇಂದಿನ ಸದಸ್ಯರೂ ಕಳ್ಳಪೇಟೆಯ ಪೋಷಕರಾಗಿದ್ದರೆಂಬ ಸಂಗತಿ ಸಾಕ್ಷಿ ಪುರಾವೆಗಳಿಂದ ದೃಢಪಡುತ್ತಿದೆ!

ಹಿಂದಿನ ಉಪಮಂತ್ರಿಯೊಬ್ಬನು ತನ್ನ ಡ್ರೈವರ, ಅಡಿಗೆಯವ, ಮತ್ತು ಹುಚ್ಚು ತಮ್ಮನ ಹೆಸರಿನಲ್ಲಿ ಉಕ್ಕನ್ನು ಕೊಂಡುಕೊಳ್ಳುತ್ತಿದ್ದನಂತೆ! ಮತ್ತೊಬ್ಬ ಶಾಸನ ಸಭಾ ಸದಸ್ಯನು ತನ್ನ ತಮ್ಮನ ಹೆಸರಿನಲ್ಲಿ ಉಕ್ಕನ್ನು ತೆಗೆದುಕೊಂಡು ಕಳ್ಳಪೇಟೆಯಲ್ಲಿ ಮಾರುತ್ತಿದ್ದನಂತೆ. ಮುಖ್ಯ ಮಂತ್ರಿ ಭೀಮಸೇನಸಾಚಾರರು ಕಳ್ಳಪೇಟೆಯ ವಿರುದ್ಧ ತೆಗೆದುಕೊಂಡ ಕೆಲವು ಉಗ್ರ ಕ್ರಮಗಳ ಫಲವಾಗಿ ಕೆಲವು ಪ್ರತಿಷ್ಠಿತರೂ ಕಾಣೆಯಾಗಿದ್ದಾರೆ. ಸದ್ಯದ ಮಂತ್ರಿ ಮಂಡಲದ ಓರ್ವ ಸದಸ್ಯನ ವಿಷಯದಲ್ಲೂ ಗುಪ್ತ ವಿಚಾರಣೆಯನ್ನು ನಡೆಸಲು ಹಿಂದುಸ್ಥಾನದ ಉಚ್ಚ ಅಧಿಕಾರಿಯೋರ್ವನು ಅಲ್ಲಿಗೆ ಹೋಗಿರುವನಂತೆ.

"ಕೆಲವೊಂದು ವ್ಯಕ್ತಿಗಳ ಗುಣಹೀನತೆಯಿಂದಾಗಿ ಇಡೀ ಕಾಂಗ್ರೆಸ್ ಸಂಸ್ಥೆಯೇ ಕೊಳೆಭರಿತವಾಗುತ್ತಿದೆಯೆಂದು ಸ್ಪಷ್ಟವಾಗುತ್ತಿದೆ. ಇದಕ್ಕಾಗಿ ಇಂಥ ವ್ಯಕ್ತಿಗಳನ್ನು ಕಾಂಗ್ರೆಸಿನಿಂದ ದೂರವಿಡುವುದಕ್ಕೆ ಯೋಗ್ಯ ಮುಂಜಾಗ್ರತೆಯನ್ನು ತೆಗೆದುಕೊಳ್ಳಬೇಕಾಗಿದೆ. ಅದನ್ನು ಮಾಡದೆ ಇಡೀ ಕಾಂಗ್ರೆಸ್ಸನ್ನೇ ಟೀಕೆಮಾಡುತ್ತ ಕುಳಿತುಕೊಳ್ಳುವುದು ಕಾರ್ಯಕ್ಷಮವೆನಿಸಲಾಗುವುದಿಲ್ಲ" ಎಂದು ಪಂ. ಜವಹರಲಾಲರು ಆಜ್ಞಾಪತ್ರಿಯ ಪಟ್ಟು ಎಲ್ಲಾ ಪ್ರಾಂತಗಳ ಮಂತ್ರಿವರ್ಗದವರಿಗೆ ಬರೆದು ಕಾಂಗ್ರೆಸ್ ಸಂಸ್ಥೆಗಳ ಸಂಬಂಧವನ್ನು ಸದಾ ಇಟ್ಟುಕೊಂಡಿರಲು ತಿಳಿಸಿದ್ದಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ. ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ:—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನವ ಭಾರತ ಬಳ್ಳಾರಿ. 18—7—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0 ತಿಂಗಳಿಗೆ 3—0—0 ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	One Year 5—0—0 Six months 3—0—0 Subscription will not be accepted for less than 6 months.

To

Sri……………………………

……………………………

……………………………

Printed at Vittal Press Bellary Edited & Published T. B. Keshava Rao, Bellary.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರ್ಕಾರದಿಂದ ಮಾನ್ಯ

ಸ್ಥಳ—:ವಾರ್ಡ್‌ಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ:—ವಿಶಾರದ

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M, 4746)

ನ ವ ಭಾ ರ ತ ಬ ಳ್ಳಾ ರಿ. 18—7—49

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press Bellary Edited & Published T. B. Keshava Rao, Bellary.

JAI-HIND.

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೧ ಆಗಸ್ಟ್ ೧೯೪೯ | ಸಂಚಿಕೆ ೨೭

ಹೆಚ್ಚು ಆಹಾರ ಬೆಳೆಯಿರಿ

ರಾಷ್ಟ್ರದ ಹಿತ ಸಾಧಿಸಬೇಕು

ಅಧಿಕ ಆಹಾರದ ಉತ್ಪಾದನೆಯೇ ನಮ್ಮ ದೇಶದಲ್ಲಿ ಅಜ್ಞಾನ ಬಡತನಗಳನ್ನು ನಿವಾರಿಸುವದು

[ಮುಖ್ಯ ಮಂತ್ರಿ ಶ್ರೀ ಪಂಡಿತ್ ನೆಹರು]

ದೇಶದಲ್ಲಿಯ ಬಡತನ, ಅಜ್ಞಾನ, ಪೌಷ್ಟಿಕವಲ್ಲದ ಆಹಾರ ತಿನ್ನುವದು, ಏರಿಕೆಯ ಬೆಲೆಗಳು, ಇವೆಲ್ಲವುಗಳ ಉಚ್ಚಾಟನೆಯ ಒಂದೇ ಒಂದು ಸಾಧನವೆಂದರೆ, ಆಹಾರ ಉತ್ಪಾದನೆಯನ್ನು ಹೆಚ್ಚಿಸುವದು. ಈ ಕಾರ್ಯದಲ್ಲಿ ದೇಶದ ಸ್ತ್ರೀ ಪುರುಷರೆಲ್ಲರೂ ಯುದ್ಧದಲ್ಲಿಯ ಸೈನಿಕರಂತೆ ಅತ್ಯಂತ ಪರಿಶ್ರಮ ವಹಿಸಿ ಕಾರ್ಯ ಮಾಡಿ ರಾಷ್ಟ್ರದ ಹಿತ ಸಾಧಿಸಬೇಕು. ಹೆಚ್ಚು ಆಹಾರ ಉತ್ಪಾದನೆಗಾಗಿ ಎಲ್ಲಿಯೂ ಕಾರ್ಯ ಸ್ವಾತಂತ್ರ್ಯಗಳು ದೊರೆಕಬೇಕು. ೧೯೫೧ರ ನಂತರ ವಿದೇಶಗಳಿಂದ ಆಹಾರ ಧಾನ್ಯದ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಿ ಬಿಡಲು ಸರಕಾರವು ನಿರ್ಧರಿಸಿದೆ. ಈ ನಿರ್ಣಯವನ್ನು ಕಾರ್ಯರೂಪಕ್ಕಿಳಿಸಲು ಇರುವ ಸಾಧಕ-ಬಾಧಕ ಅಂಶಗಳನ್ನೆಲ್ಲ ಸಂಪೂರ್ಣವಾಗಿ ಲಕ್ಷ್ಯದಲ್ಲಿಟ್ಟುಕೊಂಡೇ ನಾವು ಈ ನಿರ್ಣಯವನ್ನು ಕೈಕೊಂಡಿರುವೆವು. ನಾವು ೧೯೫೧ರ ಒಳಗಾಗಿ ಹಿಂದೂಸ್ಥಾನದಲ್ಲಿ ನಾಡಿನ ಜನತೆಗೆ ಸಾಕಾಗುವಷ್ಟು ಆಹಾರ ಉತ್ಪಾದನೆಯಾಗುವಂತೆಯೂ ಈಗ ಜನರಿಗೆ ತೀರ ಅಲ್ಪಪ್ರಮಾಣದ ರೇಷನ್ ದೊರೆಯುವದು ತಪ್ಪಿ ಜನರಿಗೆ ಈಗಿನದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಹಾರಧಾನ್ಯ ಸಿಗುವಂತಾಗಬೇಕೆಂದೂ ಸಂಕಲ್ಪ ಮಾಡಿದೇವೆ. ೧೯೫೧ರ ಒಳಗಾಗಿ ಇವನ್ನು ಸಾಧಿಸಲು ನಾವು ಸಮರ್ಥರಾಗುವೆವೆಂದು ನನಗೆ ಅತಿ ವಿಶ್ವಾಸವಿದೆ. ಆದರೆ ಈ ಕಾರ್ಯದಲ್ಲಿ ನಮ್ಮ ದೇಶದ ಜನರು ಸರಕಾರಕ್ಕೆ ಪೂರ್ತಿ ಸಹಕಾರ [illegible] ಈ ಸಂಕಲ್ಪಸಿದ್ಧಿಗಾಗಿ [illegible] ಈ ವರುಷ ನೂರಕ್ಕೆ ಹತ್ತರಷ್ಟು ಆಹಾರ ಕೊರತೆಯು ಉಂಟಾಗಿದ್ದು, ದೇಶವು ಎದುರಿಸಿದ ಆಪತ್ತುಗಳಿಂದ ಕೊರತೆಯುಂಟಾಗಲು ಕಾರಣವಾಯಿತು. ಈ ಹೆಚ್ಚಿನ ಪ್ರಮಾಣವನ್ನು ಸೇರಿಸಿಕೊಂಡರೂ ೧೯೫೧ರ ವೇಳೆಗಾಗಿ ನಾವು ರಾಷ್ಟ್ರದ ಆಹಾರೋತ್ಪಾದನೆಯನ್ನು ಈಗಿನಂತೆ ಹೆಚ್ಚಿಸಬೇಕಾಗುವದು. ಇದು ಸಾಧಿಸಲಸಾಧ್ಯವಾದುದೆಂದು ನಾನು ಭಾವಿಸಲಾರೆನು.

ಬರುವ ಎರಡು ವರುಷಗಳ ವರೆಗೆ ಅಲ್ಪಾವಧಿ ಆಹಾರೋತ್ಪಾದನೆಯ ಕಾರ್ಯಕ್ರಮಗಳನ್ನು ನಾವು ಕೈಕೊಳ್ಳಬೇಕಾದರೆ ಈಗ ಸಾಗುವಳಿಯಾಗುತ್ತಿರುವ ಭೂಮಿಗಳನ್ನು ಹೆಚ್ಚು ಲಕ್ಷ್ಯ ನೀಡಿ [illegible] ಹೆಚ್ಚು ಆಹಾರ ಬೆಳೆಯುವಂತೆ ಸಾಗುವಳಿ ಮಾಡಬೇಕು.

ಪರರಾಷ್ಟ್ರಗಳೊಡನೆ ಹೋಲಿಸಿ ನೋಡಿದರೆ ನಮ್ಮಲ್ಲಿ ಪ್ರತಿ ಎಕರೆಗೆ ಬೆಳೆಯುವ ಆಹಾರ ಧಾನ್ಯದ ಪ್ರಮಾಣವು ತೀರ ಕಡಿಮೆಯಿರುವದು. ನಾವು ಪ್ರತಿ ಎಕರೆಗೆ ಬರಬೇಕಾದ ಯೋಗ್ಯ ಪ್ರಮಾಣವನ್ನು ಸುಲಭವಾಗಿ ಹೆಚ್ಚಿಸಲು [illegible] ನಾವು ತಿಳಿಯಬಹುದು.

ಪೂರಕ ಆಹಾರ

ಈ ಕಾರ್ಯಕ್ರಮದ ಎರಡನೇ ವಿಷಯವೆಂದರೆ ಪೂರಕ ಆಹಾರಧಾನ್ಯಗಳನ್ನು ಬೆಳೆಯುವದು. ಇದಾದರೂ ಮಹತ್ವದ ವಿಷಯವಾಗಿದೆ. ಆಹಾರಧಾನ್ಯಗಳ ಬದಲು ಗೆಣಸು, ಬಾಳೇಹಣ್ಣು, ಅನಾನಸ ಹಣ್ಣುಗಳನ್ನು ಕೆಲ ಪ್ರಮಾಣದಲ್ಲಿ ಆಹಾರಧಾನ್ಯಗಳಂತೆ ಉಪಯೋಗಿಸಬಹುದು. ಇವುಗಳನ್ನು ಬೆಳೆಯಲು ಸರಕಾರವು ಎಲ್ಲ ಬಗೆಯಿಂದಲೂ ಪ್ರೋತ್ಸಾಹ ಕೊಡುವದು. ಪ್ರಾಂತಿಕ ಸರಕಾರಗಳು ಇವುಗಳನ್ನು ಕೊಂಡು ವಾರದಲ್ಲಿ ಒಂದೆರಡು ದಿನ ಮಟ್ಟಿಗೆ ರೇಶನ್ ಧಾನ್ಯಗಳ ಬದಲು ಕೊಡಬಹುದು.

ಅಕ್ಕಿಯ ಉಪಯೋಗದ ಬಗ್ಗೆ ನಾವು ಎಚ್ಚರ ವಹಿಸಬೇಕು. ಎಲ್ಲರೂ ಗೋದಿ ಮತ್ತು ಅಕ್ಕಿಯನ್ನು ಆದಷ್ಟು ಕಡಿಮೆ [illegible] ಈ ದೇಶದಲ್ಲಿ ಅಕ್ಕಿಯ ಉಪಯೋಗವನ್ನು ಕಡಿಮೆ ಮಾಡುವದು ಅತ್ಯವಶ್ಯವಿದೆ. ಅಕ್ಕಿಯನ್ನು ಪರರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲು ಗೋಧಿಗಿಂತಲೂ ಹೆಚ್ಚು ವೆಚ್ಚ ತಗಲುವದು.

ನಾವು ಅಕ್ಕಿಯ ಉಪಯೋಗ ಕಡಿಮೆಮಾಡುವದು ಅತ್ಯವಶ್ಯವಿರುವಾಗ ಅದನ್ನು ಹೆಚ್ಚಾಗಿ ಉಪಯೋಗಿಸುತ್ತಿರುವದು ಆಶ್ಚರ್ಯದ ಸಂಗತಿ.

ರೈಲ್ವೇ ಕೆಲಸಗಾರರು, ಧಕ್ಕೆ ಕೆಲಸಗಾರರು ಸರಕಾರೀ ಮತ್ತು ಖಾಸಗಿ ನೌಕರರು ಹಾಗೂ ನಾಗರಿಕರು ಆಹಾರೋತ್ಪಾದನೆಯ ಮಹತ್ವದಂಥ ಕಾರ್ಯದಲ್ಲಿ ಸಹಕರಿಸಿ ಕಾರ್ಯ ಮಾಡಬೇಕು. ರೈಲ್ವೇ ನೌಕರರ ಕಾರ್ಯ ಹೆಚ್ಚು ಮಹತ್ವದ್ದಿದೆ ಉಳಿದವರ ಹೊಣೆಯೂ ಸಾಕಷ್ಟಿದೆ.

ಆಹಾರ ಧಾನ್ಯವನ್ನು ನಿರುಪಯುಕ್ತಗೊಳಿಸಬಾರದು. ಸ್ವಲ್ಪವಾದ ಆಹಾರವನ್ನು ಹಾಳು ಮಾಡಬಾರದು. ಭೋಜನ ಸಮಾರಂಭಗಳನ್ನು ನಡಿಸಬಾರದು. ಆಹಾರ ಧಾನ್ಯವನ್ನು ಹಾಳುಮಾಡುವಂತಹ ಸಮಯ ಇನ್ನೊಂದಿಲ್ಲ. ಅದು ಈಗಿನ ಸಮಯದಲ್ಲಿ ಅಸಹ್ಯವೆನಿಸುವದು.

ಲಾರ್ಡ ಬೊಯಿಡ್ ಓರರ ಶಿಫಾರಸುಗಳನ್ನು ಹಿಂದುಸ್ಥಾನ ಸರಕಾರ ಸ್ವೀಕರಿಸಿದೆ. ಅವುಗಳನ್ನು ಕಾರ್ಯರೂಪದಲ್ಲಿ ತರಲು ಶಕ್ತಿಮೀರಿ ಪ್ರಯತ್ನಿಸಲಾಗುವದು.

--ನಮಗೆ ಬೇಕಾದ ಆಹಾರಧಾನ್ಯಗಳನ್ನೆಲ್ಲಾ ನಾವೇ ಬೆಳಸಬೇಕು. ಇಲ್ಲದಿದ್ದರೆ ಬರಗಾಲ ಅಶಾಂತಿಗಳು ತಲೆದೋರಿ ಜನಸಂಖ್ಯೆಯು ತಗ್ಗಿ ಹೋಗಬಹುದು. ಜನರೆಲ್ಲರೂ ಆಹಾರ ಬೆಳಸುವ ಚಳವಳದಲ್ಲಿ ಸೇರಿ ದೇಶವು ಹಿಂದೆ ಬೀಳುವದನ್ನು ತಡೆಯಬೇಕು. ಮೇಲ್ವರ್ಗದ ಜನರೂ ರಾಗಿ, ಜೋಳ ಮೊದಲಾದ ಪೂರಕ ಆಹಾರಗಳನ್ನು ತಿಂದು ಇತರರಿಗೆ ಮಾರ್ಗದರ್ಶಿಯಾಗಬೇಕು. ಹಿಂದೂಸ್ಥಾನವು ಯುದ್ಧಕಾಲದಲ್ಲಿ ಆಹಾರ ಧಾನ್ಯಗಳನ್ನು ತನ್ನಿಷ್ಟದಂತೆಯೇ ಪರದೇಶಗಳಿಂದ ಈಗಲೂ ಆಮದು ಮಾಡುತ್ತಿದೆ. ಇದೇ ತರ ಮುಂದುವರಿಸಲು ಸಾಧ್ಯವಿಲ್ಲ. ಎಷ್ಟು ರಷ್ಟಿಗೆ ಸಾಧ್ಯವಿದ್ದಷ್ಟು ಆಮದನ್ನು ನಾವೇ ನಿಲ್ಲಿಸಬೇಕು. ನಾವಾಗಿ ನಿಲ್ಲಿಸದಿದ್ದರೆ ಅದು ತಾನೇ ನಿಲ್ಲುವದು. ನಾವು ಈ ಚಳವಳವನ್ನು ಯಶಸ್ವಿಯಾಗಿ ನಡೆಸಿದರೆ ಅದು ದೇಶ್ಯ ಸಾಧನವಾಗುವದು ಮಾತ್ರವಲ್ಲ ನಮ್ಮ ಇತರ ಎಲ್ಲಾ ಹೋರಾಟಗಳಿಗೆ ಅದು ಸಹಾಯಕವಾಗುವದು.

ಜಿಲ್ಲಾಬೋರ್ಡ್ ಚುನಾವಣೆಗಳ ವೇಳಾಪತ್ರಿಕೆ.

ಮದರಾಸು ಸರಕಾರದವರು ಪ್ರಕಟಿಸಿರುತ್ತಾರೆ

ವಿಶಾಖಪಟ್ಟಣದ ಹೊರತಾಗಿ ಉಳಿದ ಆಂಧ್ರ ಜಿಲ್ಲೆಗಳಲ್ಲಿ (ಬಳ್ಳಾರಿಯನ್ನೂ ಇದರಲ್ಲಿ ಸೇರಿಸಿದ್ದಾರೆ) ಈ ಪ್ರಕಾರ ಚುನಾವಣೆ ಕಾರ್ಯಕ್ರಮವಿದೆ.

1) ಉಮೇದುವಾರರಿಂದ ನಾಮಕರಣ ಪತ್ರಗಳನ್ನು ತೆಗೆದುಕೊಳ್ಳುವದು ಆಗಸ್ಟ್ ತಿಂಗಳ 9-10 ನೇಯ ತೇದಿ.
2) ನಾಮಿನೇಷನ್ ಪತ್ರಗಳ ಪರಿಶೀಲನೆ- ಆಗಸ್ಟ 11 ನೇಯ ತೇದಿ
3) ಸರಿಯಾದ ನಾಮಿನೇಷನ್ ಪತ್ರಗಳಂಥವುಗಳ ಪ್ರಕಟನೆ ಆಗಸ್ಟ 16 ನೇಯ ತೇದಿ
4) ಪೋಲಿಂಗ ಇದ್ದರೆ ಚುನಾವಣೆ- ಸಪ್ಟಂಬರ 9 ನೇಯ ತಾ||

ನೋಟೀಸು

ಮಾ॥ ರಾ॥ ಹೊಸಪೇಟೆ ಡಿ॥ ಮುಂ॥ ಕೋರ್ಟು

O. P. 24/49

ಲೇಟು ರಾರಾವಿ ವೀರಣ್ಣನ ಬಾಕಿ **ಬರ**ವಮಾಡಿಕೊಳ್ಳಲು ಅರ್ಜಿ–

ಅರ್ಜಿದಾರಳು– ರಾರಾವಿ ಕೇಶವಮ್ಮ ಗಂಡ ವೀರಣ್ಣ, 19 ವರ್ಷ ಈಡಿಗ ಮತ ಯೇಳುಬೆಂಚಿ ತಾ॥ ಬಳ್ಳಾರಿ.

ನೋ ಟೀ ಸು

ಅರ್ಜಿದಾರಳು ಕ್ಯಾನರಾ ಇಂಡಸ್ಟ್ರಿಯಲ್ಸ್ ಅಂಡ್ ಬ್ಯಾಂಕಿಂಗ್ ಸಿಂಡಿಕೇಟು ಹೊಸಪೇಟೆ ಇವರಲ್ಲಿ ಸೇವಿಂಗ್ಸ್ ಬ್ಯಾಂಕು ಅಕೌಂಟಿನಲ್ಲಿ ತನ್ನ ಗಂಡ ಲೇಟು ರಾರಾವಿ ವೀರಣ್ಣನಿಗೆ ಬರಬೇಕಾದ ಮೊತ್ತ ರೂ 1152–6–0 ಪಡೆಯಲು ವಾರಸು ಸರ್ಟಿಫಿಕೇಟನ್ನು ಕೊಡುವಂತೆ ಮೇಲಿನ ಕೋರ್ಟಿಗೆ ಅರ್ಜಿ ದಾಖಲು ಮಾಡಿದ್ದು ಈ ಬಗ್ಗೆ ವಾಯಿದಾ 4-8-49 ಕ್ಕೆ ನೇಮಿಸಿರುವದರಿಂದ ಸದರಿ ತಾರೀಖು ಸದರಿ ವೀರಣ್ಣನ ವಾರಸರುದಾರರು ಯಾರಾದರು ತಕರಾರು ಹಾಜರು ಮಾಡುವುದಾದರೆ ಖುದ್ದಾಗಲಿ ವಕೀಲದ್ವಾರಾಗಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಯಕ್ಸ್‌ಪಾರ್ಟಿ ನಿರ್ಣಯಿಸಲ್ಪಡುತ್ತದೆ.

ಬಳ್ಳಾರಿ **ಟಿ. ಹೆಚ್. ಎಂ.**
24–7–49 **ಪಂಚಾಕ್ಷರಯ್ಯ**
ಬಿ. ಎ, ಬಿ. ಎಲ್. ಅರ್ಜಿದಾರ ವಕೀಲ

ಇಂದಿನ ತರುಣ ವೃಂದದ ಬಗ್ಗೆ ಯೋಗಿ ಅರವಿಂದರ ಅಭಿಪ್ರಾಯ

—(?)—

ಕೆಲವು ವರ್ಷಗಳಿಂದ ಭಾರತ ವರ್ಷದಲ್ಲಿ **ಹ**ಳೆಯತಪೋಭಿ ಭೂತವಾದ ವಂಶದೊಳಗಿಂದ ಒಂದು ಹೊಸ ಅಂಶವು ಅಣಿಗೊಳ್ಳುತ್ತಿರುವದು ಕಂಡುಬರುತ್ತಿದೆ. ಭಾರತಮಾತೆಯು ಹಳೆಯ ಸಂತಾನವು ಧರ್ಮಗ್ಲಾನಿಹಾಗೂ ಅಧರ್ಮಗಳಲ್ಲಿ ಜನ್ಮಗ್ರಹಣಮಾಡಿ ಅದರಂತೆ ಶಿಕ್ಷಣಹೊಂದಿ ಅಲ್ಪಾಯುವೂ ಕ್ಷುದ್ರಾಕಾಂಕ್ಷೆಯೂ, ಸ್ವಾರ್ಥಪರಾಯಣವೂ, ಸಂಕುಚಿತ ಹೃದಯವೂ ಆಗಿಬಿಟ್ಟಿತು. ಅವರೊಳಗೆ ತೇಜಸ್ವಿಗಳಾದ ಅದೆಷ್ಟು ಮಹಾತ್ಮರು ಶರೀರ ಧಾರಣಮಾಡಿ, ಈ ವಿಷಮ ವಿಪತ್ತಿನಕಾಲದಲ್ಲಿ ವಂಶವನ್ನು ಸಂರಕ್ಷಿಸಿದರು. ಆದರೆ ಅವರು ತಮ್ಮ ಶಕ್ತಿಹಾಗೂ ಪ್ರತಿಭೆಗಳಿಂದ ಉಪಯುಕ್ತ ಕರ್ಮಮಾಡಿದೆ, ಕೇವಲ ವಂಶದ ಭಾವೀ ಮಹಾತ್ಮ್ಯ ಹಾಗೂ ವಿಶಾಲವಾದ ಕರ್ಮಕ್ಷೇತ್ರ ಇವನ್ನೇ ನಿರ್ಮಿಸಿದೆ. [illegible] ಪೆಯು ಕಿರಣಮಾಲೆಯು ನಾಲ್ಕು ಕಡೆಗೆ ಉದ್ಭಾಸಿತವಾಗುತ್ತಲಿದೆ. ಭಾರತ ಜನನಿಯ ನವೀನ ಸಂತಾನವು ತಾಯಿತಂದೆಗಳ ಗುಣವನ್ನು ಪಡೆಯದೆ, ಸಾಹಸಿ, ತೇಜಸ್ವಿ ಉಚ್ಚಾಕಾಂಕ್ಷಿ, ಉದಾರ, ಸ್ವಾರ್ಥತ್ಯಾಗಿ ಪರಾರ್ಥಹಾಗೂ ದೇಶಹಿತ ಸಾಧನದಲ್ಲಿ ಉತ್ಸಾಹಿಯೂ ಉಚ್ಚ ಆಕಾಂಕ್ಷಾಪೂರ್ಣವೂ ಆಗುತ್ತಲಿದೆ ಆದಕಾರಣ ಇಂದು ತಂದೆತಾಯಿಗಳ ವಶದಲ್ಲಿರದೆ ಯುವಕಗಣವು ತನ್ನ ಸ್ವತಂತ್ರದಾರಿಯು ಪ್ರಾಂತಸ್ಥವಾಗಿದೆ. ಆದ್ದರಿಂದ ವೃದ್ಧರ ಹಾಗೂ ತರುಣರ ಮತದಲ್ಲಿ ಅನೈಕ್ಯವೂ, ಕಾರ್ಯ ಸಮಯದಲ್ಲಿ ವಿರೋಧವೂ, ಉಪಸ್ಥಿತವಾಗುತ್ತಲಿದೆ. ಈ ದೇವಾಂಶ ಸಂಭೂತರೂ ತರುಣರೂ ಆದ ಸತ್ಯಯುಗ ಪ್ರವರ್ತಕರನ್ನು ವೃದ್ಧರು, ಸ್ವಾರ್ಥಸಂಕುಚಿತತೆಗಳ ಸೀಮೆಯಲ್ಲಿ ಸಂಬದ್ಧವಾಗಿರಿಸಬೇಕೆನ್ನುತ್ತಾರೆ. ತಿಳಗೇಡಿತನದಲ್ಲಿ ಶಕ್ತಿಗೆ ನೆರವಾಗುತ್ತಾರೆ ಆದರೆ ಇಂದಿನ ಯುವಕರು ಮಹಾಶಕ್ತಿ ಸ್ಪಷ್ಟರಾದ ಅಗ್ನಿಯ ಕಿಡಿಗಳಾಗಿದ್ದಾರೆ. "ಹಳೆಯದನ್ನು ಸುಟ್ಟುಹಾಕಿ ನವೀನವನ್ನು ನಿರ್ಮಿಸುವದಕ್ಕಾಗಿ ಉದ್ಯತರಾಗಿದ್ದಾರೆ. ಅವರು ಈಗ ಪಿತೃಭಕ್ತಿಯನ್ನೂ, ಆಜ್ಞಾಧಾನಕತೆಯನ್ನೂ ಸಂರಕ್ಷಿಸಲು ಅಸಮರ್ಥರಾಗಿದ್ದಾರೆ. ಈ ಅನರ್ಥದ ಉಪಶಮನವನ್ನು ಪರಮಾತ್ಮನೇ ಮಾಡಬಲ್ಲನು. ಮಹಾಶಕ್ತಿಯ ಇಚ್ಛೆಯು ಎಂದೂ ವಿಫಲವಾಗಲಾರದು. ಈ ನವೀನ ಸಂತತಿಯು ಏನುಮಾಡಲಿಕ್ಕೆ ಬಂದಿರುವದೋ ಅದನ್ನು ಪೂರ್ಣಗೊಳಿಸದೆ ಹೋಗಬಾರದು. ಈ ನವೀನದೊಳಗೂ ಪುರಾತನದ ಪ್ರಭಾವವು ಅವಶ್ಯವಾಗಿ ಇದೆ. ಅಸತ್ಕೃಷ್ಟ ಸಂತಾನಕ್ರಮದ ದೋಷದಿಂದ ಅಸುರ ಶಿಕ್ಷಣದೋಷದಿಂದ ಅದೆಷ್ಟೋ ಕುಲಾಂಗಾರರೂ ಜನ್ಮಗ್ರಹಣ ಮಾಡುತ್ತಿದ್ದಾರೆ. ಯಾರಿಗೆ ನವಯುಗವನ್ನು ಪ್ರವರ್ತನಗೊಳಿಸುವ ಸಂಧಿ ಸಿಕ್ಕಿದೆಯೋ, ಅವರು ಸಹಾ ಅಂತರ್ನಿಹಿತವಾದ ತೇಜಹಾಗೂ ಶಕ್ತಿ ಇವುಗಳನ್ನು ವಿಕಾಸಗೊಳಿಸುವದರಲ್ಲಿ ಅಸಮರ್ಥರಾಗಿದ್ದಾರೆ ಆದರೂ ನವೀನರ ಒಳಗೆ ಸತ್ಯಯುಗದ ಪ್ರವರ್ತನೆಯ ಒಂದು ಅಪೂರ್ವವಾದ ಲಕ್ಷಣವು ಕಾಣೆಕೊಳ್ಳುತ್ತಿದೆ. ಅದು ಯಾವುದೆಂದರೆ ಅವರ ಧರ್ಮದಲ್ಲಿ ಮತಿಇದೆ. ಹಾಗೂ ಬಹು ಜನರ ಹೃದಯದಲ್ಲಿ ಯೋಗಲಿಪ್ಸೆಯೂ, ಅರ್ಥ ವಿಕಸಿತವಾದ ಯೋಗಶಕ್ತಿಯೂ ವಿದ್ಯಮಾನವಾಗಿವೆ.

ಸಂಗ್ರಾಹಕ
ಚಂದ್ರಶೇಖರಗೌಡ ಪಾಟೀಲ

—ಪಾಕಿಸ್ತಾನ ಪೂರ್ವ ಪಂಜಾಬಕ್ಕೆ ಅಬ್ದುಲ್‌ರಬ್ ನಿಸ್ತಾರವರುಗವರ್ನರರಾಗಿ ನಿಯುಕ್ತರಾಗಿದ್ದಾರೆ. ಐರೋಪಾದ ಸರ್ ಫ್ರಾನ್ಸಿಸ್ ಮುಡಿಯವರು ನಿವೃತ್ತರಾಗಿ ಇಂಗ್ಲೆಂಡಿಗೆ ತೆರಳಿದರು.

ಬಾವಿ ತೋಡುವುದು ಧನಸಹಾಯಕ್ಕೋಸ್ಕರ ಪರಿಷ್ಕೃತ ಶರತುಗಳು

ಸರಕಾರದ ಭಾವಿ ತೋಡಲು ಧನ ಸಹಾಯ ತರುವ 1947–48 ಮತ್ತು 1948–49 ರ ಯೋಜನೆ ಪ್ರಕಾರ ಅರ್ಜದಾರನು ಯಾವ ಆಸ್ತಿಯಲ್ಲಿ ಬಾವಿ ತೋಡಲುನಿಶ್ಚಯಿಸಿರುವನೋ ಆ ಆಸ್ತಿಯನ್ನೂ ಧನಸಹಾಯ ಸಾಲಕ್ಕಾಗಿ ಯಾವ ಆಸ್ತಿಗಳನ್ನು ಜಾಮೀನಾಗಿ ಕೊಟ್ಟಿರುವನೋ ಆ ಆಸ್ತಿಗಳನ್ನೂ ಸ್ಪೆಶಲ್ ರೆವೆನ್ಯೂ ಇನ್‌ಪೆಕ್ಟರರೂ, ಸ್ಪೆಶಲ್ ಡಿಪ್ಯೂಟಿ ತಹಸಿಲ್ದಾರರೂ ಪರೀಕ್ಷಿಸುತ್ತಾರೆ ಮುಂಚಿನ ಯೋಜನೆ ಪ್ರಕಾರ ತೀವ್ರಯೋಜನೆ ಪ್ರಕಾರ ಧನಸಹಾಯ ಕೊಡುವುದಕ್ಕಿಂತಮುಂಚೆಆಸ್ತಿಯನ್ನು ಪರೀಕ್ಷಿಸುತ್ತಿದ್ದಿಲ್ಲ. ಆದರೆ ಅರ್ಜದಾರನು ಸಾಕಷ್ಟು ಸೊತ್ತು ಇರುವವನೋ ಇಲ್ಲವೋ ಎಂಬುದನ್ನು ತಿಳಿಯುವ ಬಗ್ಗೆ ವಿಚಾರಿಸಲಾಗುತ್ತಿತ್ತು ಮಾತ್ರ. ಅರ್ಜಿಗಳನ್ನು ಸಾಮಾನ್ಯವಾಗಿ ಮೂರು ತಿಂಗಳೊಳಗೆ ಉತ್ತರ ಕೊಡಲಾಗುತ್ತದೆ. ಆದರೆ ತೀವ್ರ ಯೋಜನೆಯಪ್ರಕಾರ ಅರ್ಜಿಗಳಿಗೆ ಬೇಗ ಉತ್ತರ ಕೊಡಲಾಗುತ್ತಿತ್ತು ಏಕೆಂದರೆ ಕೂಲಂಕಷ ವಿಚಾರಣೆಯು ಇದ್ದಿಲ್ಲ. ಕಳ್ಳ ಕೆಲಸಗಳನ್ನು ತಪ್ಪಿಸುವಂತೆ ಈಗ ಕೂಲಂಕಷ ವಿಚಾರವು ನಡೆಯುವುದಾಗಿದೆ.

ಬಳ್ಳಾರಿ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

O. S 545/43 E. A 96/49

ಡಿಕ್ರಿಹೋಲ್ಡರ್– ಹೆಚ್ ವೆಂಕಟಪ್ಪಶೆಟ್ಟಿ
ವಿರುದ್ಧ
ಜಡ್ಜ್‌ಮೆಂಟ್‌ಡೆಟರ್ಸ್– ಸುಶೀಲಮ್ಮ ಮತ್ತು ಇತರರು.

ನೋಟೀಸು

ಅನಂತಪುರದ ಜಿಲ್ಲೆಯ ಪೆನಗೊಂಡೆ ಜಿಲ್ಲಾ ಮುನ್ಸೀಫರ ಕೋರ್ಟಿಗೆ ಒ. ಎಸ್. ನಂ 545/43 ರ ಡಿಕ್ರಿಯನ್ನು ವರ್ಗಾಯಿಸಲು ಡಿಕ್ರಿಹೋಲ್ಡರ್‌ರವರು ಇ. ಎ. ನಂ. 96/49 ದಾಖಲು ಮಾಡಿರುತ್ತಾರೆ. 25–8–49 ಕ್ಕೆ ಇದರ ವಿಚಾರಣೆಯ ವಾಯಿದೆಯು ಪ್ರಾ॥ 11 ಗಂಟೆಗಳಿಗಿದೆ. ಜಡ್ಜಮೆಂಟ್‌ಡೆಟರ್ಸ್ ಸುಶೀಲಮ್ಮನಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಲಿ ಅಥವಾ ವಕೀಲರ ಮೂಲಕವಾಗಲಿ ನಿಯತ ಸಮಯಕ್ಕೆ ಹಾಜರಾಗಬೇಕು. ಇಲ್ಲವಾದರೆ ಎಕ್ಸಪಾರ್ಟಿಯಾಗಿ ನಿರ್ಣಯಿಸಲಾಗುವುದು.

ಬಳ್ಳಾರಿ **ಡಿ. ಯಲ್. ಗಂಗಾಧರಶೆಟ್ಟಿ**
29–7–49 ಅಡ್ವೊಕೇಟ್

ಪ್ರಾಚೀನ ಭಾರತದ ರಾಜ್ಯತಂತ್ರಗಳು

ರಾಜನ ಅಧಿಕಾರ ದೈವಾಯತ್ತವಾದರೂ ಆತನು ಧರ್ಮಾಧೀನ

[ಲೇ. ರಾಜಕಾರಣದ ಅಭ್ಯಾಸಿ]

ಪರದಾಸ್ಯವನ್ನು ಆತ್ಮಬಲದಿಂದ ಹರಿದೊಗೆದು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡ ಭಾರತವು ಈಗ ತನ್ನ ಘಟನೆಯನ್ನು ಸಿದ್ಧಪಡಿಸಿಕೊಳ್ಳಲಣಿಯಾಗಿದೆ. ಇದಕ್ಕಾಗಿ ಘಟನಾಸಮಿತಿಯು ನೇಮಕವಾಗಿ ಅದರ ಉಪಸಮಿತಿಯು ಸಿದ್ಧಪಡಿಸಿದ ಘಟನೆಯ ಕರಡಿನ ಚರ್ಚೆ ನಡೆದಿದೆ. ಈ ಬಗ್ಗೆ ಘಟನಾ ಶಾಸ್ತ್ರಜ್ಞರನೇಕರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಈ ಸಮಯದಲ್ಲಿ ಭಾರತದ ಪ್ರಾಚೀನ ಪರಂಪರೆಯೇನಿದೆ, ಅಂದಿನ ಭಾರತೀಯರು ರಾಜ, ಪ್ರಜೆಗಳು ಮುಂತಾದವರ ಸಂಬಂಧದಲ್ಲಿ ಯಾವಬಗೆಯ ಅಭಿಪ್ರಾಯವನ್ನು ತಾಳಿದ್ದರು, ಅವರ ಆ ಪರಂಪರೆಗೆ ಜಗತ್ತಿನ ಇತರ ಪ್ರದೇಶಗಳಲ್ಲಿ ಬೆಂಬಲವಿತ್ತೆ, ಅದನ್ನು ಅವರು ಅನುಸರಿಸುತ್ತಿದ್ದರೂ ಮುಂತಾದ್ದನ್ನು ಸಂಕ್ಷೇಪತಃ ಈ ಬರಹದಲ್ಲಿ ಚರ್ಚಿಸಲಾಗುವದು. ಇದರಿಂದ ಭಾರತದಲ್ಲಿ ಹಿಂದೆ ಯಾವ ಬಗೆಯ ರಾಜ್ಯತಂತ್ರ ನಡೆಯುತ್ತಿತ್ತೆಂಬುದರ ರೂಪರೇಷೆ ಗೊತ್ತಾಗಲು ಅನುಕೂಲವಾಗುವದು.

ಹಿಂದುಸ್ಥಾನದ ಪ್ರಾಚೀನ ರಾಜ್ಯತಂತ್ರವು 'ನಾನು ಅದು, ನೀನು ಇದು, ನಾನು ಆಕಾಶ ನೀನು ಭೂಮಿ' ಎಂದು ಆಚಾರ್ಯನಾದ ಪುರೋಹಿತನು ಅರಸನನ್ನುದ್ದೇಶಿಸಿ ಸಂಬೋಧಿಸಿದ ವಿವಾಹಸೂತ್ರಗಳಲ್ಲಿ ಅಡಕವಾಗಿದೆಂದು ಹೇಳಬಹುದಾಗಿದೆ. ಮಿತ್ರಾವರುಣ, ಇಂದ್ರಾಗ್ನೀ ಅಥವಾ ಇಂದ್ರಬೃಹಸ್ಪತೀ ಇವು ಮಿಥುನಗಳು. ಮಿತ್ರ ಅಗ್ನಿ, ಬೃಹಸ್ಪತಿ, ಬ್ರಹ್ಮ ಇವರು ಆಧ್ಯಾತ್ಮಿಕ ಶಕ್ತಿಯ ಅಧಿಕಾರಿಗಳಾಗಿದ್ದರೆ, ವರುಣ, ಇಂದ್ರಾದಿಗಳು ಕ್ಷಾತ್ರ ತೇಜಸ್ಸಿನ ಪ್ರತೀಕರಾಗಿರುವರು. ಈ ಬಗೆಗೆ ಋಗ್ವೇದದ ಮೊದಲಿನ ಮಂಡಲಗಳಲ್ಲಿ [illegible] ಉಲ್ಲೇಖಗಳಿರುವವು. ಗ್ರೀಕ ಪರಂಪರೆಯಲ್ಲಿಯೂ ಇದೇ ಬಗೆಯ ಉಲ್ಲೇಖವಿದೆ. ರಾಜ್ಯತಂತ್ರದ ಮೂರು ಭಾಗಗಳ ಬ್ರಹ್ಮ, ಕ್ಷತ್ರ, ವಿಶ್ ಎಂಬ ವೇದದಲ್ಲಿಯ ಪರಂಪರೆಗೆ ಅನುಸಾರವಾಗಿದ್ದು ಕ್ಷಾತ್ರಶಕ್ತಿಗಿಂತ ಬ್ರಾಹ್ಮೀ ಶಕ್ತಿಗೆ ಹೆಚ್ಚು ಮಹತ್ವ ಕೊಡಲಾಗಿತ್ತೆಂದು ನಿರ್ವಿವಾದವಾಗಿದೆ.

ರಾಜನು ಧರ್ಮಾಧೀನ

ಪ್ರಾಚೀನ ಭಾರತೀಯ ಸಮಾಜದಲ್ಲಿ ಆಧ್ಯಾತ್ಮಿಕ ಅಧಿಕಾರ ಚಲಾವಣೆಯಲ್ಲಿ ಅರಸನು ಪೃಥ್ವಿಯಲ್ಲಿ ದೇವಸದೃಶನೇ ಆಗಿದ್ದನು. ಪುರೋಹಿತನು ಆಧ್ಯಾತ್ಮ ಶಕ್ತಿಯ ಅಭಿಗಂತೃವಾಗಿದ್ದು ಅರಸನು ಕೇವಲ ಕರ್ತೃವಾಗಿದ್ದನು. ಅಂತೆಯೇ ಪುರೋಹಿತ ಮತ್ತು ಅರಸನು ಒಕ್ಕೊರಲಿನಿಂದಲೇ ಮಾತಾಡುತ್ತಿದ್ದರು. ಅರ್ಥಾತ್ ಪುರೋಹಿತ ಆಡಿದ್ದನ್ನು ಅರಸನು ಕೃತಿಯಲ್ಲಿ ಇಳಿಸುತ್ತಿದ್ದನು. ಇದರಿಂದ ಅರಸನು ಸರ್ವತಂತ್ರ ಸ್ವತಂತ್ರನಿದ್ದನೆಂದು ಹೇಳಲಿಕ್ಕಾಗದು. ತನ್ನ ಮನಸ್ಸಿಗೆ ಬಂದಂತೆ ಅರಸನು ಆದೇಶ ಕೊಡುತ್ತಿರಲಿಲ್ಲ, ಆದರೆ ಸಾಧುವಾದುದನ್ನೇ ಆದೇಶಿಸುತ್ತಿದ್ದನು. ಅಂದರೆ ಅರಸನು ಕೇವಲ ಸಾಧಕನಿದ್ದು ಆತನ ರಾಜನೀತಿ ಇಲ್ಲವೆ ನೀತಿಶಾಸ್ತ್ರದ ಪ್ರಣೇತೃವು ಪುರೋಹಿತನೇ ಅರ್ಥಾತ್ ಧರ್ಮಜ್ಞನೇ ಆಗಿದ್ದನೆಂದು ಗೊತ್ತಾಗುವದು. ಅಂತೆಯೇ ಅರಸನು ತನ್ನ ಮನಸ್ಸಿಗೆ ಬಂದಂತೆ ಮಾತನಾಡಲು ಅಪ್ಪಣೆ ಕೊಡಲು ಅಧಿಕೃತನಿರಲಿಲ್ಲ. ತನ್ನ ಈ ಕರ್ತವ್ಯದಿಂದ ಚ್ಯುತನಾಗದ ಅರಸನೇ ನಿಜವಾದ ಅರಸನು. ಸಾಧುವಾಗಿ ನಡೆಯುತ್ತಿದ್ದ ಅರಸನು ಪ್ರಜನನೆಂದು (ಪಕ್ರ) ಕರೆಯಿಸಿಕೊಳ್ಳಲ್ಪಡುತ್ತಿದ್ದನು.

ಪ್ರಾಚ್ಯ ಪರಂಪರೆಯಲ್ಲಿಯ ಅರಸನು ಆನುವಂಶಿಕವಾಗಿ ದೈವಾಯತ್ತವಾದ ಅರಸೊತ್ತಿಗೆಯನ್ನು ಅನುಭೋಗಿಸುತ್ತಿದ್ದನೇನೊ ನಿಜ. ಅವನೇನು ಘಟನಾತ್ಮಕ ಅಧಿಪತಿಯಾಗಿರಲಿಲ್ಲ. ಬಹುಸಂಖ್ಯ ಪ್ರಜೆಗಳ ಮತ್ತು ಮಂತ್ರಿಮಂಡಲದ ಇಚ್ಛೆಗನುಸಾರವಾಗಿ ನಡೆಯುವ ಘಟನಾತ್ಮಕ ವಿಬಂಧನಗಳಿಗೆ ಅರಸನೂ ಹೀಗಿರಲಿಲ್ಲ. ಹೀಗಿದ್ದರೂ ಅವನು ಸ್ವತಂತ್ರನಾಗಿದ್ದನೆಂದು ಮಾತ್ರ ಹೇಳಲಿಕ್ಕಾಗದು. ತದ್ವಿರುದ್ಧವಾಗಿ ಅವನು ಸಮ್ರಾಜ ರಾಜರಾಜನಿಗೆ ಅಧಿರಾಜನಿಗೆ ಅಧೀನನಾಗಿದ್ದನು. ಅಂದರೆ ಧರ್ಮವೇ ಅರಸೊತ್ತಿಗೆಯ ಮೂಲತತ್ವವಾಗಿದ್ದು ಆ ಧರ್ಮ ಬಂಧನದಿಂದಲೆ ಅವನು ಆಳಬೇಕಾಗಿತ್ತು. ಘಟನಾತ್ಮಕ ಅರಸನು ತನಗೆ ಸಮಾನರಾದವರ ಇಲ್ಲವೆ ತನಗಿಂತ ಕಡಿಮೆ ದರ್ಜೆಯವರ ನಿಯಂತ್ರಣಕ್ಕೊಳಗಾಗದೆ ಇರುವದು. ಆದರೆ ದೈವಯುಕ್ತ ಅರಸೊತ್ತಿಗೆಯನ್ನು ನಡೆಸುವವನು ತನಗಿಂತ ಶ್ರೇಷ್ಠರಾದವರ ನಿಯಂತ್ರಣದ ಇರಬೇಕು. ಧರ್ಮವೊಂದಕ್ಕೇ ಅವರು ಅಧೀನರು. ಧರ್ಮ ಧರ್ಮಜ್ಞರಾದ ಬ್ರಾಹ್ಮಣರ ಹೊರತು ಉಳಿದವರೆಲ್ಲ ಅವನ ಅಧೀನರೆಂದು ಹೇಳಲಾಗಿತ್ತು. ಪರಿಸ್ಥಿತಿಯಲ್ಲಿ ಯಾರ ಆಡಳಿತ ಹೆಚ್ಚು ಸುಖಕರವೆಂಬುದನ್ನು ವಿವರಿಸುವ ಆವಶ್ಯಕತೆಯಿಲ್ಲ.

ಪುರೋಹಿತನ ಲಕ್ಷಣಗಳು

ಈ ಪುರೋಹಿತನು ತ್ರಯೀ ವಿದ್ಯೆಯನ್ನು ಅರಿತವನಾಗಿದ್ದನು. ಅಂದರೆ ಮೂರು ಲೋಕಗಳ ಮತ್ತು ಅವುಗಳ ಅರಸರ ಜ್ಞಾನವು ಅವನಿಗಿರುತ್ತಿತ್ತು. ಭೂರ್ಭುವಸ್ವಃ ಲೋಕಗಳ ಅಧಿಪತಿಗಳ ಅರಿವು ಇರುವದರಿಂದಲೆ ಪುರೋಹಿತನು ತನ್ನ ಆಸ್ಥಾನಕ್ಕೆ ಯೋಗ್ಯನಾಗಿದ್ದನೆಂಬುದು ಅಂದಿನವರ ಅಭಿಪ್ರಾಯ. ವಶಿಷ್ಠ ಮೊದಲಾದವರು ಸುಪ್ರಮಾಣರೆಂದು ಖ್ಯಾತಿ ಪಡೆದಿರುವರು. ಈ ತ್ರಯೀವಿದ್ಯೆಯನ್ನು ಅಭ್ಯಸಿಸಿದವರಿಗೆ ಇಡೀ ರಾಜ್ಯತಂತ್ರದ ಗುಟ್ಟೆಲ್ಲ ಗೊತ್ತಾಗುತ್ತಿತ್ತು. ಇಂಥ ಪುರೋಹಿತನ ನೇತೃತ್ವದಲ್ಲಿ ಅರಸೊತ್ತಿಗೆಯನ್ನು ನಡೆಸುವ ಅರಸನು ಬಹಳ ಶ್ರೇಷ್ಠನಾಗುವವರೆಗೆ ಆಳುತ್ತಿದ್ದನು. 'ಸಪ್ತನವಾರ್ಯತೆ' ಎಂಬುದಾಗಿ ಇಂಥ ರಾಜನಿಗೆ ಉಲ್ಲೇಖಿಸಲಾಗಿದೆ. ಆಕಾಶ ಮತ್ತು ಭೂಮಿಯ ಪ್ರತಿನಿಧಿಗಳಾದ ಪುರೋಹಿತ ಮತ್ತು ರಾಜನ ಈ ದೈವೀ ವಿವಾಹದ ಮುಖ್ಯ ಉದ್ದೇಶವು ರಾಜ್ಯದಲ್ಲಿ ಸುಭಿಕ್ಷವಾಗಬೇಕು. ಅಕಾಲಮೃತ್ಯು ಮುಂತಾದವು ಬರಬಾರದೆಂಬುದಾಗಿದೆ. ಈ ದೈವೀ ವಿವಾಹವು ಮತ್ತು ಯಜ್ಞಪ್ರತಿಕಾಲದ ತ್ಯ ಮತ್ತು ಕ್ಷಾಮಭಾಧೆಯಿಂದ ಸಂರಕ್ಷಿತವಾಗಲು ಇನ್ನುಳಿದಂತಿದ್ದಿತೆಂದು ಹೇಳಲಾಗಿದೆ. ಈ ರೀತಿ ಆಕಾಶ ಮತ್ತು ಪೃಥ್ವಿಯ ದೈವೀ ವಿವಾಹವಾಗುವ ಮೊದಲು ಮಳೆಯಿರಲಿಲ್ಲ. ಬಿಸಿಲಿರಲಿಲ್ಲ. ಪಂಚಮಹಾಭೂತಗಳು ಒಂದಕ್ಕೊಂದು ಸಂಬಂಧವಾಗಿರಲಿಲ್ಲ. ದೇವತೆಗಳೆಲ್ಲ ಲೋಕ ವಿಹ್ವಲರಾಗಿ ಅಗ್ನಿಸಿ ದೇವತೆಗಳನ್ನು ಮೊರೆ ಹೋದರೆ ಆಗ ಆಕಾಶ ಮತ್ತು ಪೃಥ್ವಿಯ ದೈವೀ ವಿವಾಹವಾಯಿತೆಂಬ ಉಲ್ಲೇಖವುಂಟು.

ಮೇಲಿನದನ್ನೆಲ್ಲ ಅವಲೋಕಿಸಿದಾಗ ಇಡೀ ರಾಷ್ಟ್ರದ ಜೀವನ ಮತ್ತು ಸುಖಸಮಾಧಾನ ರಾಜನನ್ನು ಅವಲಂಬಿಸಿತ್ತೆಂದು ಗೊತ್ತಾಗುವದು. ಯಜಮಾನನೆಂದು ರಾಜನು ತನ್ನ ಈ ಪ್ರಾಥಮಿಕ ಕರ್ತವ್ಯವನ್ನು ಮಾಡದಿದ್ದರೆ ಮಳೆ ಬೆಳೆಗಳೆಲ್ಲ ನಾಶವಾಗುವವು. ಅನ್ನಾದ್ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ ಯಜ್ಞಾದ್ಭವತಿ ಪರ್ಜನ್ಯೋ ಯಜ್ಞಃ ಕರ್ಮ ಸಮುದ್ಭವಃ ಎಂದು ಭಗವದ್ಗೀತೆಯಲ್ಲಿ ಹೇಳಿದ್ದು ಯಥಾರ್ಥವಾಗಿದೆ. ಜಗತ್ತಿನ ಸುಖಸಂಪತ್ತಿಗೆ ಯಜ್ಞವೆ ತಳಹದಿಯಾಗಿದೆ. ಧ್ರುವನು ಓರ್ವ ಅರಸನನ್ನು ಕರೆತು ನಿನ್ನ ಕೈಯು ಬಂಗಾರದ ಮಳೆಯನ್ನು ಸುರಿಸಬಹುದು, ಮುಗಿಲು ಅಕ್ಷಯವಾಗಿದೆ, ಪ್ರವಾಹವು ಬತ್ತಿಲ್ಲ, ಯ-

ಜ್ಞದಿಂದ ಮತ್ತೆ ಅವು ಹರಿಯತೊಡಗುವವು ಎಂದು ಹೇಳಿದ್ದು ಮಹಾಭಾರತದ ವನಪರ್ವದಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಅಹಂಕಾರಿ ಅರಸನು ನಾಶಹೊಂದುವನು

ಅರಸರು ಪುರೋಹಿತನೊಡನೆ ಸಹಕರಿಸಿ ಅವನ ಆದೇಶದಂತೆಯೇ ನಡೆದರೆ ಇದೆಲ್ಲ ಸಾಧ್ಯವಾಗುವದು. ಇಂಥ ಅರಸನು ಪ್ರಜಾಪಿತನೆಂದು ಕರೆಯಿಸಿಕೊಳ್ಳುವನು. ಆದರೆ ತದ್ವಿರುದ್ಧವಾಗಿ ಅರಸನು ತನ್ನ ಮನಬಂದಂತೆ ನಡೆದರೆ, ಆಡಳಿತೆಯಲ್ಲಿಯ ಕುಟುಂಬ ಮತ್ತು ಮನೆಯೂ ಎಲ್ಲ ನಾಶವಾಗಿ ಎಲ್ಲೆಲ್ಲಿಯೂ ಅನೃತವು ಪ್ರಸ್ಥಾಪಿತವಾಗುವದು. ಈ ಬಗೆಯ ಅರಸರ ಅಹಂಕಾರದಿಂದ ಅರಸೊತ್ತಿಗೆಯೇ ಕುಸ್ಸಳಿಸಿ ಬಿದ್ದ ಅರಸನು ಅಧೋಗತಿಗಿಳಿದ ಉದಾಹರಣೆಗಳು ಬೇಕಾದಷ್ಟಿರುವವು. ಬೃಹಸ್ಪತಿಯನ್ನು ಛಲಿಸಿದನೋ. ತನ್ನ ಅಹಂಕಾರದಿಂದ ಇಂದ್ರನನ್ನೇ ಪದಚ್ಯುತ ಮಾಡಿದ ನಹುಷ, ಸ್ವಾತಂತ್ರ್ಯ ಮತ್ತು ಸಮಾನಾಧಿಕಾರವನ್ನು ಪಡೆಯುವ ಆಗ್ರಹಕ್ಕಾಗಿ ಸ್ಪರ್ಧೆಯಿಂದ ಕೆಳಗೆ ಬಿದ್ದ ಸೈತಾನನಾದ ಲೂಸಿಫರ, ಇವರ ಕಥೆಗಳು ಸರ್ವಸ್ವತಂತ್ರ ಆಡಳಿತದ ಅರಸನ ಸ್ವೇಚ್ಛಾವರ್ತನೆಯು ಯಾವಾಗಲೂ ನಾಶಕ್ಕೆ ಕಾರಣವೆಂಬುದ ಸ್ಪಷ್ಟವಿದೆ.

ಪರಂಪರಾಗತ ಸಮಾಜದಲ್ಲಿ ದಬ್ಬಾಳಿಕೆ ನಡೆಸುವವನು ಹೊರಗಟ್ಟಲ್ಪಡುವನು ಬಹಿಷ್ಕೃತನಾಗಿರುವನು. ಇಂದ್ರನ ಉಪಾಸನೆಯಲ್ಲಿ ಇದನ್ನು ಕಾಣಬಹುದಾಗಿದೆ. ಇಸ್ಲಾಮದಲ್ಲಿ ಇಬ್ಲಿಸನ ಸಂಬಂಧವಾಗಿಯೂ ಈ ಮಾತನ್ನು ಹೇಳಲಾಗಿದೆ. ಪ್ರಜಾಪೀಡಕನಾದ ಇಂಥ ರಾಜನನ್ನು ತಳ್ಳಿ ಪ್ರಜಾರಂಜಕನಾದ ಅರಸನನ್ನು ಅಭಿಷಿಕ್ತ ಮಾಡುವದು ಪ್ರಾಚೀನ ಪರಂಪರೆ. ಈ ಪರಂಪರೆಯಿಲ್ಲದ ಸಮಾಜದಲ್ಲಿ ಪ್ರಜಾಪೀಡಕ ಅರಸನನ್ನು ಪ್ರಜಾಕ್ರಾಂತಿಯಿಂದ ಕೆಳಗಿನ [illegible] ಸಂಬಂಧರ ಕ್ಕಾಗಿ ಯಾರು ಛಲಿಸಲ್ಪಟ್ಟಿದ್ದರೋ ಅವರೇ [illegible] ತಾವು ಪ್ರಜಾಪೀಡಕರೇ ಆಗುವರು. ಬಹುಸಂಖ್ಯಾತರಾದವರು ಅಲ್ಪಸಂಖ್ಯರನ್ನು ಛಲಿಸುತ್ತಾರೆ. [illegible] ಪ್ರಜಾಪ್ರಭುತ್ವ [illegible] [illegible] ರೆ ಹೋಗುವದರಿಂದ ಒಬ್ಬನಿಗೆ ಅಧಿಕಾರವನ್ನು ಆಕ್ರಮಿಸುವದಕ್ಕೆ ಅವಕಾಶವುಂಟಾಗುವದು. ಅವನೇ ಸರ್ವಾಧಿಕಾರಿಯಾಗಿ ರಾಜ್ಯ ನಡೆಸುತ್ತನು. ಅವನ ಪಟ್ಟ ಪ್ರಜಾಪೀಡಕನೇ ಆಗುವನು. ಅವರು ತನ್ನಂತ ಶ್ರೇಷ್ಠ ಶಕ್ತಿಗೆ ಯಾವ ಮೇರೆಯು ಶಾಬ್ದಿಕ ನಿರ್ಬಂಧಗಳನ್ನು ಕೂಡ ವ್ಯಕ್ತಮಾಡಲಾರ ಸದ್ಭಾವನೆಗಳು ಅವನಲ್ಲಿದ್ದರೂ ತತ್ರ ನಿಗ್ರಹಯೇ ಅವನಲ್ಲಿ ಉಳಿಯದು. ಇಂಥ ಅರಸೊತ್ತಿಗೆಯ ಪರಿಣಾಮ ದಿಂದ ದೇಶದಲ್ಲೆಲ್ಲ ಅನೃತವು ಅವ್ಯವಸ್ಥೆಯೂ ಹಬ್ಬುವದು ನಮ್ಮ ಕಾಲದಲ್ಲಿ ನಾವು ಇದನ್ನೇ ಕಾಣುತ್ತಿದ್ದೇವೆ. ನಾವು ಯಾವುದನ್ನು ನಾಗರಿಕತೆಯೆನ್ನುವೆವೋ ಅದು ಮಾರಕಯಂತ್ರದಂತಿದೆ. ಅದಕ್ಕೆ ಸದ್ಭಾವನೆಯಿಲ್ಲ. ಗೊತ್ತುಗುರಿಗಳಿಲ್ಲ ಎಂದು ಜಲಾಪಿಯಾನಾ ಇವರು ಅಭಿಪ್ರಾಯ ಪಟ್ಟಿರುವರು. ದೈವೀ ಶಕ್ತಿಯನ್ನು ಬಿಟ್ಟು ನ್ಯಾಯವನ್ನು ಬಿಟ್ಟುಕೊಟ್ಟು ಬಲಕ್ಕೇ ಬೆಚ್ಚುವ ಸತ್ತಕಿರ್ಸ್ಪರಿ ಈ ಬಗೆಯ ಪರಿಸ್ಥಿತಿಯುಂಟಾಗುವದು. "ಸೃಷ್ಟಿ ನಿಯಮಗಳನ್ನುಲ್ಲಂಘಿಸಿ ಆಧ್ಯಾತ್ಮಿಕಶಕ್ತಿಗಳನ್ನಲಕ್ಷಿಸಿ ನಡೆಯುತ್ತಿರುವ ಎಲ್ಲ ರಾಜ್ಯತಂತ್ರಗಳು ಅಲ್ಪಾಯುಷಿಗಳಾಗುವರೆಂದು ಜಾರ್ಜ್ ಅಮೇರಿಯುವರು ಅಭಿಪ್ರಾಯಪಟ್ಟಿದ್ದುಂಟು "ಚರ್ಚ ಮತ್ತು ಲೆ" ಇವುಗಳಲ್ಲಿ ವಿಭಜನೆಯಾದರೆ ಸರಕಾರವು ಚರ್ಚನ್ನು ಗುಲಾಮಗಿರಿಯಲ್ಲಿ ನೂಕಿದರೆ ರಾಜ್ಯದಲ್ಲಿ ಅನೃತದ ಪ್ರಸ್ಥಾಪನೆಯಾಗುವದು. ಇದರಿಂದ ಬಗೆ ಬಗೆಯ ಅನರ್ಥಗಳಾಗುವವು.

ಈ ವರೆಗೆ ಅಧಿದೈವತ ಮತ್ತು ಆಧಿರಾಜ್ಯದ ದೃಷ್ಟಿಯಿಂದ ರಾಜ್ಯಶಾಸ್ತ್ರದ ವಿವೇಚನೆಯನ್ನು ಮಾಡಿದ್ದಾಯಿತು. ಇದರಲ್ಲಿ ವ್ಯಕ್ತಿಯನ್ನು ಪ್ರಜೆಯಾಗಿ ಪರಿಗಣಿಸಲಾಗಿದ್ದಿತು. ಆದರೆ ಈ ತತ್ವಕ್ಕೆ ಇನ್ನೊಂದು ಅಂಗವಿದೆ. ಅಂದರೆ ಅಧ್ಯಾತ್ಮ ದೃಷ್ಟಿ. ಈ ದೃಷ್ಟಿಯು ಕೇವಲ ಸಾರ್ವತ್ರಿಕ ಮನಸ್ಥಿತಿ ದಾಗಿರದೆ ಅಂತರಿಕ ಅನುಭವ ಸ್ಥಿತಿಯುದೂ ಆಗಿದೆ. ಈ ವರೆಗಿನ ವಿವೇಚನೆಯಲ್ಲಿ ಮಾನವಪರಮಾತ್ಮನ ಭಾವು ಆಗಿದ್ದನು. ದೈವೀ ಸಂಪ್ರದಾಯವನನ್ನು ಸರಿಸದ್ದರೆ ಈ ಜಗವು ಎಂದಿಗೂ ಸುಖ [illegible]. ಇಲ್ಲಿಯೂ ಉತ್ತತ ಸ್ತರಗಳು ಆದರ್ಶಗಳಾಗಿರತಕ್ಕದ್ದು ಮಾನವನಿಗೆ ಭೌತಿಕ ಮತ್ತು ಅಧ್ಯಾತ್ಮಿಕವೆಂಬ ಎರಡು ಅಂಗಗಳಿದವೆ. ಸರ್ವಶ್ರುತ, ಮೊದಲನೆಯುದು ಇಂದ್ರಿಯಗಳಿಗಧೀನನಾಗಿದ್ದರೆ ಎರಡನೆಯದು ಅಂತಃಸ್ಥವಾಗಿರ ಗಂಭೀರ ಮತ್ತು ವಿವೇಚನಾತ್ಮಕವಾಗಿದೆ. ಮಾನವನ ಪುರುಷಾರ್ಥ [illegible] ನೆಯಾಗಬೇಕಾದರೆ ಅವನ ದೈವೀ ಸಂಬಂಧ ತಿಳಿಯ ಬೇಕು. ಬಾಹ್ಯ ಅರಸನ ಅಂತರ್ [illegible] ಹಿತನೊಡನೆ ಸಂಬಂಧ [illegible]. ಇದು ದೇಶ ಮತ್ತು ಆತ್ಮ [illegible] ಕಲ್ಯಾಣವಾಗಬೇಕಾದರೆ ಮಾನವನ ನಶ್ವರ ನ ಸ್ತುತ ಅಮೃತ ಆತ್ಮಗಳಲ್ಲಿ ಯಾವದು ಆರಿಸಿ ಕೊಂಬದನ್ನವಲಂಬಿಸಿದೆ ಎಂದು ಪ್ಲೇಟೋ ಅನೇಕಸಲ ಹೇಳಿದುಂಟು. ಮಾನವನ ಇಂಥ ದ್ವಾತ್ಮನಾಗಿರುವನು.

ಅಹಂಕಾರಕ್ಕೆಡೆಯಿಲ್ಲ

ಅರ್ಥಪದ್ಧತಿಯೆಂದರೇನು? ಅರಸನು ಆಳತಕ್ಕದ್ದು, ಪ್ರಜೆಗಳಿಂದ ತನಗಿಂತ ಕನಿಷ್ಠರಾದವನೆಂದು ಆಳ್ವಿಡತಕ್ಕದ್ದಲ್ಲ. ಮನೆಯಲ್ಲಿಯೂ ಯಜಮಾನನು ಆಳಬೇಕಲ್ಲದೆ ಕುಟುಂಬದವರ ಆಳಿಕೆಯಲ್ಲಿರಬಾರದು. ಅದರಂತೆ ವಿಷಯಗಳನ್ನು ನಿಯಂತ್ರಿಸಬೇಕಲ್ಲದೆ ಅವುಗಳಿಗೆ ಅಧೀನರಾಗಿರಬಾರದು ಆದರೆ ಯಾವಾಗಲೂ ನಮ್ಮಲ್ಲಿ ಈ ದ್ವಂದ್ವವು ನಡೆದೇ ಇದೆ. ನಾನೇ ಎಲ್ಲವನ್ನು ಮಾಡುವವನು ಎಂಬ ಅಹಂಕಾರವುಂಟಾಗುವದು ವಿಶೇಷ ಮತ್ತು ಅನಾತ್ಮ ಭಾವವೂ ಹೆಚ್ಚುವದು. ತಾನು ದ್ವಾತ್ಮನೆಂಬುದನ್ನೇ ಮಾನವನು ಮರೆತುಬಿಡುವನು. ಅರಸನಾದರೂ ಇದನ್ನು ತಿಳಿದುಕೊಂಡು ಕರ್ತವ್ಯವನ್ನು ಮಾಡತಕ್ಕದ್ದು. ಅಂದರೆ ಮಾತ್ರ ಚಿಂತೆಯಿಂದ ಮುಸುಕಿದ ಜಗತ್ತಿನಲ್ಲಿ ಶಾಂತಿ ಪ್ರಸ್ಥಾಪಿತವಾಗುವದು. ಅರಸನು ಸಾರ್ಥಕ ನಾಮನಾಗುವನು. 'ಮಯಿ ಸರ್ವಾಣಿ ಕರ್ಮಾಣಿ ಸಂನ್ಯಸ್ಯ' ಎಂಬ ಭಾವನೆಯಿಂದ ಅವನು ಆಳುತ್ತಿರುವನು. ಇಂಥ ಅರಸನಿಗೆ, ಅರಸನೇ ಚಿರಾಯು ಆಗು ಎಂದು ಎಲ್ಲರೂ ಹರಸುವರು,

ಈ ರೀತಿಯಾಗಿ ಮಾನವ, ರಾಜರಲ್ಲಿಯ ಅಹಂಭಾವವು ಸ್ವವಿನಾಶಕ್ಕೆ ಕಾರಣವಾಗಿ ವ್ಯಕ್ತಿಯು ಇಲ್ಲವೆ ಸಮಾಜದ ರಾಜಕಾರಣವನ್ನೆ ರಸಾತಳಕ್ಕಿಳಿಸಬಹುದು. ಸ್ವರಾಜ್ಯವು ಆತ್ಮ ಸಂಯಮವನ್ನೆ ಅವಲಂಬಿಸುವದು ಎಂಬುದೇ ಹಿಂದೀ ರಾಜ್ಯ ಪರಂಪರೆಯ [illegible]. ಆಧುನಿಕ ಹಿಂದುಸ್ಥಾನದಲ್ಲಿಯೂ ಈ ಪ್ರಾಚೀನ ರಾಜ್ಯ ಪರಂಪರೆ ಉಳಿದುಕೊಂಡು ಬಂದಿದೆಂದು ಹೇಳಬಹುದು. ಗಾಂಧೀಜಿಯವರು ಕಂಡ ರಾಜಕೀಯ ವಿಜಯವು ಆತ್ಮ ಸಂಯಮದಿಂದಲೆ ಸಾಧ್ಯವು

ಈ ರೀತಿಯಾಗಿ ಅರಸನು ದೈವಾಂಶ ಸ್ತವಾದ ಅರಸೊತ್ತಿಗೆಯನ್ನು ಅನುಭವಿಸತಕ್ಕವನು. ತನ್ನ ಮನುಶಕ್ತಿಗಿಂತ ಹೆಚ್ಚಿನ ಶಕ್ತಿಯಿಂದ ಆಳುವವನು ತದ್ವಿರುದ್ಧವಾಗಿ ತನ್ನ ಶಕ್ತಿಯಿಂದಲೆ ಆಳಹತ್ತಿದರೆ ಅವನು ಸ್ವೇಚ್ಛಾಚಾರಿಯಾಗುವನು, ಅವನನ್ನು ದಾರಿಗೆ ತರಲಿಕ್ಕೆಬೇಕು ಅರಸನಿಗೆ ಅನ್ವಯಿಸುವ ಈ ಮಾತು ಸಾಮಾನ್ಯ ವ್ಯಕ್ತಿಗೂ ಅನ್ವಯಿಸುವದು. ಅವನು ಸ್ವೇಚ್ಛಾಚಾರಿಯಾಗಿ ವರ್ತಿಸದೆ ಅಹಂಕಾರವನ್ನು ಬಿಟ್ಟುಕೊಟ್ಟು ಸದಾಚಾರಿಯಾದರೆ ಮಾತ್ರವೆ ಸ್ತುತಿಗೆ ಪಾತ್ರನಾಗುವನು. ಆದರೆ ತದ್ವಿರುದ್ಧವಾಗಿ ಅವನು ಅಹಂಕಾರಮತ್ತನಾಗಿ ಸ್ವೇಚ್ಛಾಚಾರಿಯಾದರೆ ಎಲ್ಲ ಬಗೆಯ ಅನಾದರಸಿಂದೆಗೆ ಅವನು ಗುರಿಯಾಗುವನು. ಆತ್ಮಸಂಯಮಿಯೇ ಎರಡನೆಯವರನ್ನು ಆಳಬಲ್ಲನು ಆದುದರಿಂದ ಹಿಂದೀ ಪರಂಪರೆಯಲ್ಲಿ ಅರಸೊತ್ತಿಗೆಯೆಂದರೆ ಸರ್ವಾಧಿಕಾರ ಎಂಬುದು ಎಂದಿಗೂ ಒಗ್ಗದು ಎಂಥ ಬಲಿಷ್ಠ ಸಮ್ರಾಟನಾಗಿದ್ದರೂ ಆತ್ಮಸಂಯಮಿಯಾಗಿರದಿದ್ದರೆ ಅವ ಕ್ಯೇಂದ್ರಿಯನಾಗಿದ್ದರೆ ಅವನು ಬೇಗನೆ ನಾಶಹೊಂದುವನು [illegible] ಹಿಂದೀ ಪರಂಪರೆ

ಹಾವಿಗೆ ಕೇಳಿಸುವುದೇ?

ಹಾವಿನ ಬಗ್ಗೆ ನಮ್ಮಲ್ಲಿ ಇದುವರೆಗೆ ಅನೇಕ ತಿಳುವಳಿಕೆಗಳಿವೆ. ಅವಕ್ಕೆ ನಮ್ಮ ಪೂರ್ವಜರು 'ಚಕ್ಷುಶ್ರವ' ಎಂದು ಕರೆದಿದ್ದಾರೆ. ಅಂದರೆ ಅದಕ್ಕೆ ಕಿವಿಗಳಿಲ್ಲದಿರುವದರಿಂದ ಅದು ಕಣ್ಣಿನಿಂದ ಕೇಳುತ್ತದೆ ಎಂಬರ್ಥ. "ಶಿಶುರ್ವೇತ್ತಿ ಪಶುರ್ವೇತ್ತಿ ವೇತ್ತಿ ಗಾನರಸಂ ಫಣೀ" ಎಂಬ ಶ್ಲೋಕದಿಂದ ಸುನಾದವು ಹಾವುಗಳನ್ನು ಕೂಡ ಆನಂದಗೊಳಿಸುವುದೆಂದೂ ಆದ್ದರಿಂದಲೇ ಹಾವುಗಾರನ ಪುಂಗಿಯ ಧ್ವನಿಗೆ ಅವು ತಲೆಯಲ್ಲಾಡಿಸುತ್ತ ಮುಗ್ಧಗೊಳ್ಳುವವೆಂದೂ ಹೇಳಲಾಗಿದೆ. ಹಾವುಗಳು ತಮಗೆ ಅಪಾಯವನ್ನುಂಟುಮಾಡಿದವರ ಬಗ್ಗೆ, ಹೊಟ್ಟೆಯಲ್ಲಿ ಸಿಟ್ಟು ಇಟ್ಟುಕೊಂಡು ಅವರನ್ನು ಸಿಕ್ಕಾಗ ಬೆನ್ನಟ್ಟಿ ಕಡಿಯುವವೆಂದೂ ನಾವು ಕೇಳುತ್ತಿದ್ದೇವೆ. ಈ ಬಗ್ಗೆ ಅಲ್ಲಲ್ಲಿ ಆದ ಘಟನೆಗಳನ್ನು ಕೂಡ ಉದಾಹರಿಸುವವರುಂಟು.

ಯಂತ್ರ, ಮಂತ್ರ, ಔಷಧಗಳನ್ನು ಪ್ರಯೋಗಿಸುವವರು ಈ ಬಗ್ಗೆ ದೊಡ್ಡ ಪ್ರಸ್ತಾಪವನ್ನೇ ಬೆಳೆಸಿದ್ದಾರೆ.

ಈ ಬಗ್ಗೆ ಅನೇಕ ಸಂಶೋಧನೆಗಳು ನಡೆಯುತ್ತಿವೆ. ಒಳಗಡೆ ಒಬ್ಬ ಸಂಶೋಧಕನು 'ಗರುಡನಗೆರೆಯುಳ್ಳವರು ಹಾವುಗಳನ್ನು ನಿರ್ಭಯವಾಗಿ ಹಿಡಿಯುವರು'' ಎಂಬ ಮಾತು ಸುಳ್ಳು ಎಂದು ಸಿದ್ಧಮಾಡಿದ್ದಾನೆ. "ಗರುಡನ ಗೆರೆಯು ಇಲ್ಲವೇ ಇಲ್ಲ. ಮನುಷ್ಯನ ಧೈರ್ಯವೇ ಅವನನ್ನು ಹಾವನ್ನು ಹಿಡಿಯಲು ಸಮರ್ಥನನ್ನಾಗಿ ಮಾಡುತ್ತದೆ. ಹಾವಿನ ಮುಂದೆ ಕೈಯನ್ನು ಭರದಿಂದ ಚಾಚಿದರೆ ಅದು ಹೆದರಿ ಏನೂ ಮಾಡದೆ ಸುಮ್ಮನೆ ಸುಳಿಸುಕೊಳ್ಳುತ್ತದೆ. ಆಗ ಅವನು ಹಿಡಿಯುತ್ತಾನೆ. ಗರುಡನ ಗೆರೆಯುಳ್ಳವನೆಂದು ಹೇಳಿಸಿಕೊಳ್ಳುವವನು, ಕೊನೆಗೊಮ್ಮೆ ಹಾವು ಹಿಡಿಯುವಾಗ ಅದು ಕಡಿಯುವುದರಿಂದಲೇ ಸಾಯುವನೇಕೆ? ಹಿಡಿಯುವುದಕ್ಕೆ ಮಾಡಬೇಕಾದ ಆವಶ್ಯಕಕಾರ್ಯಗಳನ್ನು ಅವರು ಮಾಡಲು ತಪ್ಪುವುದರಿಂದಲೇ ಹಾಗಾಗುತ್ತದೆ'' ಎಂದು ಅವರು ಹೇಳಿದ್ದಾರೆ.

ಹೊಸ ಮಾತುಗಳು

ಮಹಾರಾಷ್ಟ್ರದ ಡಾ. ಖಂಡೇರಾವ ಘೋರಪುರೆ ಎಂಬವರು ಈ ಬಗ್ಗೆ ಹಲಕೆಲವು ಹೊಸ ದೃಷ್ಟಿಯನ್ನು ಕೊಡುವಂತಹ ಮಾತುಗಳನ್ನು ಹೇಳಿದ್ದಾರೆ. ಅವು ಈ ಕೆಳಗಿನಂತಿವೆ:—

"ಹಿಂದುಸ್ಥಾನದಲ್ಲಿ ಪ್ರತಿದಿವಸ, ಹಾವಿನ ಕಡಿತದ ಮೂಲಕ ಸರಾಸರಿ ಒಂದುನೂರು ಜನರು ಸಾಯುತ್ತಿದ್ದಾರೆ. ಇವೆಲ್ಲ ಸಾವುಗಳು ಹಾವಿನ ವಿಷದ ಪರಿಣಾಮದಿಂದಲೇ ಆದಂಥವಲ್ಲ. ಅವರಲ್ಲಿ ಎಷ್ಟೋ ಜನರು ಒಣ ಭೀತಿಯಿಂದ ಮತ್ತು ತಪ್ಪು ತಿಳುವಳಿಕೆಯಿಂದ ಜೀವಕ್ಕೆ ಎರವಾಗುತ್ತಾರೆ. ಈ ಬಗ್ಗೆ ಹಾವುಗಳ ವಿಷಯದಲ್ಲಿ ಜನರಿಗೆ ಯಥಾರ್ಥ ಜ್ಞಾನವಿಲ್ಲದಿರುವುದೇ ಕಾರಣವಾಗಿದೆ.

ಅನೇಕ ಪ್ರಕಾರದ ಹಾವುಗಳಿವೆ. ಅವೆಲ್ಲವೂ ವಿಷಕಾರಿಯಾಗಿಲ್ಲ. ವಿಷಕಾರಿಯಲ್ಲದ ಹಾವು ಎಷ್ಟೇ ದೊಡ್ಡದಿರಲಿ, ಅದು ಕಡಿದರೆ ಮನುಷ್ಯನು ಸಾಯುವುದಿಲ್ಲ. ವಿಷಕಾರಿಯಾದ ಹಾವು ಕಡಿದರೆ ಅದು ಕಡಿದ ಒಂದು ಗಂಟೆಯಿಂದ ಹಿಡಿದು ೨೪ ಗಂಟೆಗಳವರೆಗಿನ ಅವಧಿಯಲ್ಲಿ ಮರಣಸಂಭವಿಸುತ್ತದೆ.

ಹಾವಿನ ಕಡಿತಕ್ಕೆ ಔಷಧ

ಅನೇಕ ದೇಶೀಯ ಔಷಧಗಳು ಮತ್ತು ಉಪಾಯಗಳಿಂದ ಹಾವಿನ ಕಡಿತದ ವಿಷದಿಂದ ಮನುಷ್ಯನನ್ನು ಬದುಕಿಸಲು ಬರುತ್ತದೆ. ಇಂಗ್ರಜಿ ಔಷಧವು ಮಾತ್ರ "ಆ್ಯಂಟಿವ್ಹಿಜನ್ ಇಂಜೆಕ್ಶನ್" ಈ ವಿಷಯದಲ್ಲಿ ರಾಮಬಾಣವಾಗಿದೆ. ಅದು ಎಲ್ಲ ಸರಕಾರೀ ದವಾಖಾನೆಗಳಲ್ಲಿ ಇಡಲ್ಪಟ್ಟಿದೆ. ದೇಶೀಯ ಔಷಧದ ಬಗ್ಗೆ ವಿಶ್ವಾಸವನ್ನು ಇಡುವುದು ಕಠಿಣಕಾರ್ಯ, ಅಂತಹ ವಿಶ್ವಸನೀಯ ಔಷಧವಿದ್ದರೆ ಅದರ ಪ್ರಯೋಗಮಾಡಲು ಅಡ್ಡಿಯಿಲ್ಲ. ಸಂಶಯವಿದ್ದರೆ ಬೇರೆಯಾವುದೇ ಉಪಾಯದಲ್ಲಿ ವೇಳೆಯನ್ನು ಕಳೆಯದೆ ಕೂಡಲೆ, ಕಡಿಸಿಕೊಂಡವನನ್ನು ಸರಕಾರೀ ದವಾಖಾನೆಗೆ ಒಯ್ದು ಆ ಇಂಜೆಕ್ಶನ್ ಕೊಡಿಸುವುದು ಯೋಗ್ಯವಾಗಿದೆ.

ಮಂತ್ರ ತಂತ್ರಗಳನ್ನು ನಂಬುವುದು ಸಮಂಜಸವಲ್ಲ. ಮಂತ್ರ ಹಾಕಿಸಿದ ಮೇಲೂ ಹಾವು ಕಡಿಸಿಕೊಂಡ ಮನುಷ್ಯನು ಮರಣ ಹೊಂದಿದ ಉದಾಹರಣೆಗಳು ಬೇಕಾದಷ್ಟಿವೆ. ಹಲಕೆಲವು ಪ್ರಸಂಗಗಳಲ್ಲಿ ಜನರು ಬದುಕುತ್ತಾರೆ ಅದಕ್ಕೆ ಕಾರಣವೇನೆಂದರೆ, ಮಂತ್ರವಲ್ಲ. ಎಲ್ಲ ಹಾವುಗಳ ಕಡಿತದಿಂದ ಮನುಷ್ಯನು ಸಾಯುವುದಿಲ್ಲ. ಮಂತ್ರ, ಔಷಧಗಳನ್ನು ಉಪಯೋಗಿಸದಿದ್ದರೂ ಕಡಿಮೆ ವಿಷಕಾರಿ ಹಾವುಗಳು ಕಡಿದಾದ ಮನುಷ್ಯನು ಸ್ವಾಭಾವಿಕವಾಗಿ ಬದುಕುತ್ತಾನೆ. ಹೀಗೆ ಬದುಕಿದ ಉದಾಹರಣೆಗಳ ಸಂಬಂಧವಾದ ಯಶಸ್ಸು ವಿನಾಕಾರಣ ಮಂತ್ರಿಕರಿಗೆ ಹೋಗುತ್ತದೆ

ತಪ್ಪು ತಿಳುವಳಿಕೆ

ಹಾವು ನಾದಲುಬ್ಧ ಪ್ರಾಣಿಯೆಂಬುದು ಸುಳ್ಳುಮಾತು ಎಂಬುದು ಇತ್ತೀಚಿನ ಸಂಶೋಧನದಿಂದ ಗೊತ್ತಾಗಿದೆ. ಹಾವುಗಾರನ ಪುಂಗಿಯ ಧ್ವನಿಯ ಮೂಲಕ ಅದು ತಲೆಯಲ್ಲಾಡಿಸುವುದಿಲ್ಲ. ಆ ಪುಂಗಿಯನ್ನು ಎಲ್ಲೆಡೆಗೆ ಅವನು ಅಲ್ಲಾಡಿಸುವುದರಿಂದ ಅದೂ ತಲೆಯಲ್ಲಾಡಿಸುತ್ತಿರುತ್ತದೆ. ಪುಂಗಿ ಏಕೆ? ಯಾವುದೇ ವಸ್ತುವನ್ನು ಅಥವಾ ಬಡಿಗೆಯನ್ನು ಅದರ ಮುಂದೆ ಅಲ್ಲಾಡಿಸಿದರೆ ಅದು ಪುಂಗಿ ಬಾರಿಸುವಾಗ ಮಾಡುವಂತೆಯೇ ತಲೆಯಲ್ಲಾಡಿಸುತ್ತದೆ.

ಕೇಳುವ ಶಕ್ತಿಯು ಹಾವಿಗೆ ಇಲ್ಲವೇ ಇಲ್ಲ. ಅದಕ್ಕೆ ಸ್ಪರ್ಶಜ್ಞಾನವಿದೆ, ಚಕ್ಷುಶ್ರವ ಎಂಬ ಮಾತಿನಲ್ಲಿಯೂ ಇದೇ ಮಾತು ವ್ಯಕ್ತವಾಗುತ್ತದೆ. ಅದು ಕಣ್ಣಿನಿಂದ ಕೇಳುತ್ತದೆಂದರೆ, ಕೇಳುತ್ತಿರದೆ, ದೃಷ್ಟಿಯಿಂದ ಎಡಬಲದ ಘಟನೆಗಳನ್ನು ತಿಳಿದುಕೊಳ್ಳುತ್ತದೆ, ಮೂಕರಹಾಗೆ ಅದು ಸ್ಪರ್ಶಜ್ಞಾನದಿಂದ ಸರ್ವ ವಿಷಯಗಳನ್ನು ತಿಳಿದುಕೊಳ್ಳುತ್ತದೆ. ಭೂಮಿಗೆ ಸಣ್ಣ ಕಟ್ಟಿಗೆಯನ್ನು ಬಡಿದರೂ, ಕಾಲಿನಿಂದ ಸ್ವಲ್ಪ ಬಡಿದರೂ ಅದು ತಿಳಿದುಕೊಳ್ಳುತ್ತದೆ. ಆದರೆ ಅದರ ಹತ್ತರದಲ್ಲಿ ನಗಾರಿಯನ್ನು ಬಾರಿಸಿದರೂ ಅದಕ್ಕೆ ಜ್ಞಾನವಾಗುವುದು.

ಪುಂಗಿಯನ್ನು ಬಾರಿಸಿದರೆ ಅದರ ಧ್ವನಿಯ ಪರಿಣಾಮವು ಅದರ ಮೇಲೆ ಎಳ್ಳಷ್ಟು ಆಗುವದಿಲ್ಲ ಬೇರೆ ಒಂದು ಕೋಣೆಯಲ್ಲಿ ಹಾವನ್ನು ಇಟ್ಟು ಹತ್ತರಿನ ಕೋಣೆಯಿಂದ ಪುಂಗಿಯನ್ನು ಬಾರಿಸಿದರೆ ಅದರ ಜ್ಞಾನವು ಅದಕ್ಕೆ ಆಗುವುದೇ ಇಲ್ಲ.

ಕುನಸು ಹಿಡಿಯುವುದಿಲ್ಲ

ತನಗೆ ಕೇಡು ಮಾಡಿದವರ ಬಗ್ಗೆ ಹಾವು ಮನಸ್ಸಿನಲ್ಲಿ ಕುನಸು ಹಿಡಿದು ಅವರಿಗೆ ಸಮಯ ಸಂಧಿಸಾಧಿಸಿ ಕಡಿಯುವುದೆಂದು ತಿಳಿಯುವುದು ತಪ್ಪು. ಗಾಯಗೊಂಡು ಹೋದ ಹಾವು ತಿರುಗಿಬರದೇ ಇದ್ದ ಉದಾಹರಣೆಗಳು ಬೇಕಾದಷ್ಟಿವೆ.

ಇಂಗ್ರಜಿ-ಔಷಧ

ಈ ಔಷಧವನ್ನು ಸಿದ್ಧಮಾಡುವುದಕ್ಕೆ ಹಾವಿನ ವಿಷವನ್ನು ಮೊದಲು ಸಂಗ್ರಹಿಸುತ್ತಾರೆ. ಅದನ್ನು ಸ್ವಲ್ಪಸ್ವಲ್ಪವಾಗಿ ಕುದುರೆಯ ಮೈಯಲ್ಲಿ ಚುಚ್ಚಿ ಹಾಕುತ್ತಾರೆ. ರಕ್ತದಲ್ಲಿ ಆಯಾಪರಕೀಯ ದ್ರವ್ಯವನ್ನು ಅಳವಡಿಸಿಕೊಂಡು ತಾನು ಆ ದ್ರವ್ಯವ ಅರಗಿಸಿಕೊಂಡ ಹಾಗೆ, ವಿಷದ ಪ್ರಮಾಣವನ್ನು ಬೆಳೆಸುತ್ತ ಆ ಕುದುರೆಯ ಮೈಯಲ್ಲಿ ಹಾಕುತ್ತಾರೆ. ಈ ವಿಧಾನದಿಂದ ಆ ಕುದುರೆಯು, ಒಂದು ಹಾವು ಕಡಿದಾಗ ಬೀಳುವ ವಿಷವನ್ನೆಲ್ಲ ಒಮ್ಮೆಲೇ ಚುಚ್ಚಿದರೂ ಸಾಯದಂತಹ ಅಥವಾ ಆ ವಿಷವನ್ನು ಜೀರ್ಣಿಸಿಕೊಳ್ಳುವಂತಹ ಶಕ್ತಿಯನ್ನು ಪಡೆಯುತ್ತದೆ. ಅಂತಹ ಕುದುರೆಯ ಕುತ್ತಿಗೆಯಲ್ಲಿಯ ರಕ್ತವನ್ನು ತೆಗೆದುಕೊಂಡು ಒಂದು ದ್ರವ್ಯವನ್ನು ಸಿದ್ಧಮಾಡುತ್ತಾರೆ.

ಅದನ್ನು ಹಾವಿನಿಂದ ಕಡಿಯಲ್ಪಟ್ಟವರಿಗೆ ಚುಚ್ಚಿದರೆ, ಹಾವಿನ ವಿಷದ ಮಾರಕತ್ವವನ್ನು ಅದು ಎದುರಿಸಿ, ಆ ಮನುಷ್ಯರನ್ನು ಉದ್ಧರಿಸುತ್ತದೆ. ವಿಷದಿಂದ ವಿಷವನ್ನು ಗೆಲ್ಲುವ ಉಪಾಯವು ಇದಾಗಿದೆ.

ಸಂಶೋಧನೆಗೆ ಮರ್ಯಾದೆಯಿಲ್ಲ. ಅದು ನಡೆದಂತೆ ನುಡಿಗೆ ಹೊಸ ಹೊಸ ಮಾತುಗಳು ತಿಳಿಯುವದು ಖಂಡಿತ. ಈ ಮಾತಿಗ ಅನುಸರಿಸಿ ಹಾವಿನ ವಿಷಯದಲ್ಲಿಯೂ ಅನೇಕ ನವೀನ ವಿಚಾರಗಳು ಮೇಲಿನ ಹೇಳಿಕೆಯಲ್ಲಿ ಕಂಡು ಬರುತ್ತಿವೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಠ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತವೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ್

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

(1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ)

ಮದ್ರಾಸ್ ಸರಕಾರದಿಂದ ಮಾನ್ಯ

ಸ್ಥಳ—ವಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಉನ್ನತ—ವಿಶಾರದ

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು. ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg No M, 4746)

ನವ ಭಾರತ ಬಳ್ಳಾರಿ.

1- 8—49

(Nationalist Weekly)

ಚಂದಾದರಗಳು. Subscription Rates.

ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press Edited & Published bay T, B. Keshava Rao Bellary

JAI-HIND.

ನವಭಾರತ

ಬಳ್ಳಾರಿಯ,
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ. ಜಾಗ್ರತ!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ--
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೮ ಆಗಸ್ಟ್ ೧೯೪೯ | ಸಂಚಿಕೆ ೩೨

ಬಂಗಾಲದಲ್ಲಿ ಸಾರ್ವತ್ರಿಕ ಚುನಾವಣೆ :—

ಇನ್ನು ಆರು ತಿಂಗಳೊಳಗಾಗಿ ಬಂಗಾಲದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರು ನಿಶ್ಚಯಿಸುತ್ತಾರೆ. ಬಂಗಾಲ ಪ್ರಾಂತದಲ್ಲಿ ಕಾಂಗ್ರೆಸಿಗೆ ಸೋಲಾಗುವುದು ಖಂಡಿತವೆಂದು ಬಹುಜನರ [illegible].

ಬಳ್ಳಾರಿ ಸೆಂಟ್ರಲ್ ಕೋಆಪರೇಟಿವ್ ಸ್ಟೋರಿನಲ್ಲಿ ಅಕ್ಕಿಯ ಸಂಗ್ರಹವು ಹೆಚ್ಚಿಗಿಲ್ಲವಾದಕಾರಣ ಮದ್ರಾಸ್ ಸರಕಾರದ ಉತ್ತರದಂತೆ ಒಂದು ತಿಂಗಳ ಭತ್ಯವನ್ನು ಒಂದೇ ಸಲ ಕೊಡುವುದು ಅಸಾಧ್ಯವಿದ್ದವೆಂದು ತಿಳಿಸುತ್ತಾರೆ.

ಚಿಕ್ಕ ಲಕ್ಷ್ಮೀಪುರದ ತಾಂಡ

ಇಲ್ಲಿಯ ಜನರು ಲೇಬರ್ ಶಾಲೆಗಿ ಮತ್ತೆ ಅರ್ಜಿ ಇಟ್ಟುಕೊಂಡಿದ್ದರು. ಶಾಲೆಯ ಕಟ್ಟಡಕ್ಕೆ ಅಲ್ಪಸ್ವಲ್ಪ ಸಹಾಯ ಕೊಡಲು ಅಧಿಕಾರಿಗಳು ಒಪ್ಪಿದ್ದರು ಆದರೆ ಸ್ವಂತ ಕಟ್ಟಡವನ್ನು 3 ತಿಂಗಳೊಳಗಾಗಿ ಕಟ್ಟಿಸಿಕೊಟ್ಟರೆ ಶಾಲೆಯನ್ನು ಮುಂದುವರಿಸುವುದಾಗಿ ಜಿಲ್ಲಾ ವಿದ್ಯಾಧಿಕಾರಿಗಳು ಅಭಿಪ್ರಾಯವನ್ನು ತಿಳಿಸಿದ್ದಾರೆ.

ಸರ್ದಾರ ವಲ್ಲಭಭಾಯಿ ಪಟೇಲರಿಗೆ ಸ್ವಸ್ಥತೆ ಇರುವ ಕಾರಣ ಅವರು ಬೊಂಬಾಯಿಗೆ ಬಂದು ವೈದ್ಯರೋಗಕ್ಕಾಗಿ ಚಿಕಿತ್ಸೆ ತೆಗೆದುಕೊಳ್ಳುವರು.

ಪಂಡಿತ ಜವಹರಲಾಲ ನೆಹರೂರು ಅಮೆರಿಕಾ ಯಾತ್ರೆಯಲ್ಲಿ ತಮ್ಮ ಊರುಗಳನ್ನು ಸಂದರ್ಶಿಸಬೇಕೆಂಬ ವಿನಂತಿಗಳು ಈಗಿಂದಲೇ ಬರುತ್ತಲಿವೆ.

ಜಗತ್ತಿನ ಪ್ರಮುಖ ಕ್ರೀಡಾಂತರ [illegible]ದ ಆಗಾಖಾನರು ತಮ್ಮ ಮಗ [illegible]ಗೊಂಬಿಗೆ ಮದುವೆ [illegible] ಹೋಗುತ್ತಿರಬೇಕಾದರೆ ಪ್ರಾಂಡರು [illegible]ದ ಕವಿಮಾಡಿ ಲಕ್ಷಗಟ್ಟಲೆ ಬೆಲೆಬಾಳುವ [illegible] ವಜ್ರದ ಆಭರಣಗಳನ್ನು ದೋಚಿ[illegible] ಹೋದವೆಂದು ಆಗಾಖಾನರು [illegible] ಮಾಡಿದ್ದಾರೆ.

15—8—1949 ರ ನವಭಾರತದ ಸ್ವಾತಂತ್ರ್ಯ ಸಂಚಿಕೆಯು

ಶ್ರೇಷ್ಠ ಕೃತಿಗಳಿಂದ, ಉತ್ತಮ ಲೇಖಗಳಿಂದ ದೇಶಭಕ್ತರ

ಛಾಯಾಚಿತ್ರಗಳಿಂದ ಸರ್ವಾಂಗ ಸುಂದರವಾಗಿ

ಹೊರಡುವುದು—

ಚಂದಾದಾರರಿಗೆ ಉಚಿತ ಇದೇ

ನವಭಾರತಕ್ಕೆ ಚಂದಾದಾರರಾಗಿರಿ.

TENDER NOTICE.

Sealed tenders are invited by the under signed upto 19—8—49 for the supply of stationery articles for 19-50 for this office use. The details can be had from this office on any working day.

The Panchayat Board, P. G Venkataramanappa,
Kampli. (Dt. Bellary) Executive Officer.

ಟೆಂಡರ್ ನೋಟೀಸು.

ನಮ್ಮ ಆಫೀಸಿಗೆ 1949-50 ರ ವರ್ಷಕ್ಕೆ ಸ್ಟೇಷನರಿ ವಸ್ತುಗಳನ್ನು ಪೂರೈಸಲು ಸೀಲಾದ ಟೆಂಡರುಗಳು 19-8-49 ರ ವರೆಗೆ ಸ್ವೀಕರಿಸಲಾಗುತ್ತವೆ. ನಮ್ಮ ಆಫೀಸಿನಿಂದ ರಜಾವಿಲ್ಲದದಿನ ತಿಳಿಯಬಹುದು.

ಪಂಚಾಯ್ತಿಬೋರ್ಡು, ಕಂಪ್ಲಿ. ಪಿ. ಜಿ. ವೆಂಕಟರಮಣಪ್ಪ,
ಎಕ್ಸಿಕ್ಯೂಟಿವ್ ಆಫೀಸರ.

ಕಸ್ತೂರಿಬಾ ಸ್ಮಾರಕ

ಹರಿಜನಬಾಲಿಕಾ ನಿಲಯ,

ಆದವಾನಿ.

30-7-49 ಕ್ಕೆ ಸರಿಯಾಗಿ 5 30 ಗಂಟೆಗೆ ಶ್ರೀ ಕೆ. ಕರಿಯಪ್ಪನವರಿಂದ ನಿಲಯದ ಪ್ರಾರಂಭೋತ್ಸವವಾಯಿತು. ಹರಿಜನೋದ್ಧಾರದಲ್ಲಿ ಆಸಕ್ತಿ ಇರುವ ಮಹನೀಯರೆಲ್ಲರೂ ಶಕ್ತಿವಂಚನೆ ಇಲ್ಲದೆ ಈ ಸಂಸ್ಥೆಗೆ ಸಹಾಯಮಾಡಲು ವಿನಂತಿ.

ಯಸ್. ಶೇಷಪ್ಪ.
ಕಾರ್ಯದರ್ಶಿ.

ಜಿಲ್ಲಾಬೋರ್ಡು ಚುನಾವಣೆ ಗಡಿಬಿಡಿ.

ಕೆಲ ಉಮೇದುವಾರರ ಹಣಸೂರೆ ಮಾಡಲಿರುವ

ಜಿಲ್ಲಾಬೋರ್ಡು ಚುನಾವಣೆ ಸಮೀಪಿಸಿದಂತೆ ಉಮೇದು[illegible] ಗಡಿಬಿಡಿ ಹೆಚ್ಚುತ್ತಲಿದೆ. ಕಾಂಗ್ರೆಸ್ ಸಮಿತಿಯವರು [illegible] ಪತ್ರದಿಂದ ನಿಲ್ಲಿಸಬಾರದೆಂದು [illegible]. ಆದರೆ ಆಂಧ್ರಕಾಂಗ್ರೆಸ್‌ನವರು ಆದವಾನಿ ರಾಯದುರ್ಗ ಆಲೂರು ತಾಲೂಕುಗಳಲ್ಲಿ [illegible] ಉಮೇದುವಾರರನ್ನು ಆರಿಸಿ ಅವರ ಹೆಸರನ್ನು ಪ್ರಕಟಿಸಿದ್ದಾರೆ. ಜಿಲ್ಲೆಯಲ್ಲೆಲ್ಲಾ ಒಂದೇ ನೀತಿ ಇರಬೇಕೆಂಬ ತತ್ವವನ್ನು ಕಾಂಗ್ರೆಸ್ ಸಂಸ್ಥೆಯವರು ಮರೆತ [illegible]ಕಾಣುತ್ತೆ.

ಆದವಾನಿ–ಆಲೂರು–ಬಳ್ಳಾರಿ ಗುಪ್ಪ ತಾಲೂಕುಗಳ ಕೆಲ ಫಿ[illegible]ಗಳಲ್ಲಿ ಉಮೇದುವಾರರು ಹಣ ಸೂರೆಮಾಡಲು ನಿಶ್ಚಯಿಸಿರು[illegible] ಕಾಣುತ್ತದೆ. ಒಂದೊಂದು ಫಿ[illegible]ದಲ್ಲಿ 3-4 ಜನರು ಸ್ಪರ್ಧಿಸು[illegible]ವುದು ತೋರಿಬರುತ್ತಲಿದೆ– ಹಿಂ[illegible] ದುಕೊಳ್ಳುವ ಅವಧಿಯನಂತರ ಪ[illegible]ತಿಯು [illegible]ವಾಗಿ ಬಲಾಬಲಗಳು [illegible]ಷ್ಟವಾಗುತ್ತವೆ. ಇವಲ್ಲದೆ ಸರಕಾ[illegible]ರವರು ಪ್ರಕಟಿಸಿದಂತೆ ಚುನಾ[illegible] ನಡೆಯುವ ದಿನಕ್ಕೆ ಒಂದು ವಾ[illegible] ಮುಂಚೆ ಊ ಹಿಂದೆ ಗೆದು ಕೆ[illegible] ಬಹುದು. ನಾವು ಈ ಹಿಂದೆ ಹೆ[illegible]ದಂತೆ ಜಿಲ್ಲಾಬೋರ್ಡಿನಲ್ಲಿ ಮಾ[illegible]ಡುವದಾದ ಜನಹಿತಕಾರ್ಯಗಳಾವು ಇಲ್ಲ, ಅಲ್ಲ ಹಣವೂ ಇಲ್ಲ ಮಾಡ[illegible]ಕಾದ ಕಾರ್ಯವೂ ಇಲ್ಲ– ಜಿ[illegible] ಬೋರ್ಡು ಶಾಲೆಗಳಿಗೆ ಸರ್ಕಾರದಿಂದ ನಿಯುತ ಗ್ರಾಂಟ್ ಇದೆ. ರಸ್ತೆ ಕಂ[illegible]ಕ್ಟಗಳನ್ನಾದರೂ ಸಂಪಾದಿಸೋಣ[illegible]ದರ ಅದರ ರಾಜಿಯೇ ಜೇರ್ವ[illegible] ಫೈನೇಸ್ ಡಿಪಾರ್ಟಮೆಂಟ್ ಅಧೀನವಾಗಿದೆ

ಹರಿಜನ ಪತ್ರಿಕೆಯ ಲೇಖ

ಡ್ರಾಯವರ ಕಂಡೆಕ್ಟರ್ ಕೆಲಸಗಳಿಗೆ ಪದವೀಧರರು

ಪ್ರಶ್ನೆ:- ಡ್ರಾಯವರ ಮತ್ತು ಕಂಡಕ್ಟರರ ೫೦೦ ಸ್ಥಳಗಳಿಗಾಗಿ ಪಶ್ಚಿಮ ಬಂಗಾಲ ಸರಕಾರದ ಸಂಪರ್ಕ ಶಾಖೆಯವರು ಪ್ರಕಟನೆ ಕೊಟ್ಟಿದ್ದರೆಂದು ಸುದ್ದಿ. ಸುಮಾರು ೫೦ ಸಾವಿರ ಉಮೇದ್ವಾರರು ಮನವಿ ಮಾಡಿಕೊಂಡವರಲ್ಲಿ ಅನೇಕರು ಪದವೀಧರರಾಗಿದ್ದರು. ಅವರಲ್ಲಿ ೪೯೭೦೦ ಜನರು ನಿರಾಸೆ ಹೊಂದುವದು ಸಹಜ? ಅವರಲ್ಲಿಯೂ ಅನೇಕರು ಪದವೀಧರರಾಗಿರಬಹುದು ವಿಶ್ವವಿದ್ಯಾಲಯ ಶಿಕ್ಷಣದ ವಿಡಂಬನೆಯಲ್ಲವೆ ಇದು? ಇಂಥ ವಿಶ್ವವಿದ್ಯಾಲಯದ ಶಿಕ್ಷಣದ ಉಪಯೋಗವೇನು? ನಾನೊಬ್ಬ ಕಾಲೇಜ ವಿದ್ಯಾರ್ಥಿ ನನ್ನ ಶಿಕ್ಷಣವನ್ನು ನಾನು ಮುಂದೆ ಸಾಗಿಸಬಹುದೊ?

ಉತ್ತರ:- ಸದ್ಯಕ್ಕೆ ವಿಶ್ವವಿದ್ಯಾಲಯಗಳಲ್ಲಿ ಕೊಡುವ ಶಿಕ್ಷಣವು ಕಾಲೇಜುಗಳನ್ನು ತುಂಬುವ ಅನೇಕ ವಿದ್ಯಾರ್ಥಿಗಳಿಗೆ ಒಗ್ಗುವುದಿಲ್ಲೆಂಬುದು ನಿಶ್ಚಿತ. ಅದಕ್ಕಾಗಿ ಯಾವನೊಬ್ಬ ವಿದ್ಯಾರ್ಥಿ ಯೋಗ್ಯನಾಗಿರುವನೋ ಇಲ್ಲವೊ ಅದನ್ನು ನಾನು ಹೇಳಲಾರೆ. ಆದರೆ ವಿಶ್ವವಿದ್ಯಾಲಯ ಶಿಕ್ಷಣದ ಬಗ್ಗೆ ಇಟ್ಟುಕೊಂಡ ತಪ್ಪು ಕಲ್ಪನೆಯನ್ನು ಮಾತ್ರ ನಾನು ಹೋಗಲಾಡಿಸಬಯಸುತ್ತೇನೆ. ಡ್ರಾಯವರ ಮತ್ತು ಕಂಡಕ್ಟರರಷ್ಟೇ ಏಕೆ ಬೀದಿಗಳಲ್ಲಿ ಕಸಗುಡಿಸುವ ಕೆಲಸಕ್ಕಾಗಿ ಕೂಡ ಅರ್ಜಿ ಮಾಡಿಕೊಳ್ಳಲು ಪದವೀಧರರು ನಾಚುವುದೇಕೋ ನನಗೆ ತಿಳಿಯದು? ಎಷ್ಟೇ ಉಚ್ಚ ಶಿಕ್ಷಣವನ್ನು ಪಡೆದಿದ್ದರೂ ಪ್ರಾಮಾಣಿಕವಾದ ಯಾವದೊಂದು ಉದ್ಯೋಗವನ್ನು ಕೈಕೊಳ್ಳಲು ನಾಚಬೇಕಿಲ್ಲ. ಕಬೀರನು ನೆಕಾರನಾಗಿದ್ದನು, ನಾಮದೇವನು ಸಿಂಪಿಗನು, ರಾಯದಾಸನು ಸಮಗಾರನಾಗಿದ್ದನು. ಅವರೆಲ್ಲ ಒಳ್ಳೆ ಶ್ರೇಷ್ಠ ವಿಭೂತಿಗಳಾಗಿದ್ದರು ಮಾಸ್ತರ ಮತ್ತು ಡಾಕ್ಟರ ಪದವಿಗಳನ್ನು ಸ್ವೀಕರಿಸಬೇಕಾಗಿರುವದು ವಿಶ್ವವಿದ್ಯಾಲಯದ ಪದವಿಗೆ ನಾವು ಪ್ರಾರಂಭದ ಸಂಬಳವಿಷ್ಟೆಂದು ಗೊತ್ತುಪಡಿಸಿ ಅವರೊಂದು ಬಗೆಯ ಜೀವನವನ್ನು ನಡೆಸಬೇಕೆಂದು ಸರ್ವ ಸಾಧಾರಣ ಗೊತ್ತುಪಡಿಸಿರುವದರಿಂದ, ಟ್ರಾಮಕಾರನ್ನು ನಡೆಸುವದಾಗಲಿ. ಮೋಟರನ್ನು ನಡೆಸುವದಾಗಲಿ ನನ್ನ ದರ್ಜೆಗೆ ತಕ್ಕದಲ್ಲ ಎಂದು ಭಾವಿಸುತ್ತೇವೆ. ತಮ್ಮ ಸ್ವಂತ ಕಾರನ್ನು ನಡೆಸುವದು ನಾಚಿಕೆಗೇಡಾಗಿರದಿದ್ದರೆ, ತಮ್ಮ ಉಪಜೀವನಕ್ಕಾಗಿ ಎರಡನೆಯವರ ಕಾರನ್ನು ನಡೆಸುವಲ್ಲಿ ಯಾವದೇ ಬಗೆಯ ಅಪಮಾನವಿರಕೂಡದು.

ಕ ಧರ್ಮ ಕಿ. ಘ. ಮಶ್ರೂವಾಲಾ

೯—೭—೪೯

ಕಾಸೀಮ ರಜವಿ

ಹೈದರಾಬಾದದ ರಜಕಾರ ತಂಡದ ಧುರೀಣ ಸಯ್ಯದ ಕಾಸೀಮ ರಜವಿಯ ವಿಚಾರಣೆಯು ೨೭ ನೇ ತಾರೀಕಿನ ದಿವಸ ತಿರುಮಲಗಿರಿ ಬ್ರಿಟಿಶ ಮಿಲಿಟರಿ ಆಸ್ಪತ್ರೆಯ ಕಟ್ಟಡದಲ್ಲಿ ಮೂವರ ವಿಶೇಷ ನ್ಯಾಯ ಮಂಡಲದ ಮುಂದೆ ಪ್ರಾರಂಭವಾಗಿದೆ. ಇಮ್ರೋಜ ಪತ್ರಿಕೆಯ ಸಂಪಾದಕರಾಗಿದ್ದ ಶೋಬುಲ್ಲಾಖಾನರ ಕೊಲೆಯ ಪ್ರಚೋದನೆಯ ಆರೋಪದಿಂದ ವಿಚಾರಣೆ ಪ್ರಾರಂಭವಾಯಿತು. ಈ ಖಟ್ಲೆಯಲ್ಲಿ ಒಟ್ಟಿಗೆ ೬ ಆರೋಪಿಗಳಿದ್ದು ಅವರಲ್ಲಿ ಇಬ್ಬರು ಫರಾರಿಯಾಗಿದ್ದು ಒಬ್ಬನು ಮಾಫಿ ಸಾಕ್ಷಿದಾರನಾಗಿರುವನು. ರಜವಿಯ ಪರವಾಗಿ ಬ್ಯಾರಿಸ್ಟರ ಯಾರ ಜಂಗಬಹಾದ್ದೂರರು ಮುಖ್ಯ ವಕೀಲರೆಂದು ಖಟ್ಲೆ ನಡೆಸುತ್ತಿರುವರು. ಮದರಾಸದ ಪಬ್ಲಿಕ್ ಪ್ರಾಸಿಕ್ಯೂಟರರಾದ ಯತಿರಾಜ ಇವರು ಪಬ್ಲಿಕ್ ಪ್ರಾಸಿಕ್ಯೂಟರರೆಂದು ಕೆಲಸ ಮಾಡುತ್ತಿರುವರು. ಶೋಬುಲ್ಲಾಖಾನರ ರಾಜಕೀಯ ಧೋರಣ ತಮ್ಮ ಸರ್ವಾಧಿಕಾರಿತ್ವಕ್ಕೆ ಭಂಗತರುತ್ತಿರುವದೆಂದು ಕಾಸಿಂರಜವಿ ಅವರ ಕೊಲೆಗೆ ಪ್ರಚೋದನೆ ಕೊಟ್ಟನು. ಇದರಲ್ಲಿ ಅವರು ಮಾಫಿ ಸಾಕ್ಷಿದಾರ ಖಾದರಮೊಹಿಯುದ್ದೀನನ್ನು ವಿಶ್ವಾಸದಲ್ಲಿ ತೆಗೆದುಕೊಂಡರು. ಕೆಲವು ರಜಾಕಾರರ ಸಹಾಯದಿಂದ ಅವರ ಕೊಲೆಮಾಡಲು ವಿಧಿಸಿದರು. ಮತ್ತು ಅವರಿಗೆ ಪಿಸ್ತೂಲು ಕಾಡತೂಸುಗಳನ್ನು ಕೊಟ್ಟರು. ಇದರ ಪರಿಣಾಮವಾಗಿ ೫-೨-೩-೪ನೇ ಆರೋಪಿಗಳು ಶೋಬುಲ್ಲಾಖಾನರಿಗೆ ೧೯೪೭ ಅಗಸ್ಟ ೨೨ಕ್ಕೆ ರಾತ್ರಿ ೧೧-೧೫ ಗಂಟೆಗೆ ಬರಕತಪುರದಲ್ಲಿ ಪ್ರಾಣಾಂತಿಕ ಗಾಯಮಾಡಿದರು ಎಂಬುದು ಈ ಸಂಬಂಧದ ಆರೋಪವಿದೆ. ಹೈದರಾಬಾದಿನ ಕೋರ್ಟಿನ ಭಾಷೆ ಉರ್ದು ಇದ್ದು ವಿಶೇಷ ನ್ಯಾಯಮಂಡಲದ ಭಾಷೆಯು ಇಂಗ್ಲೀಶ ಇರಬೇಕೆಂದು ವಿಧಿಸಲ್ಪಟ್ಟಿದ್ದರಿಂದ ಅವಶ್ಯಕ ಬದಲಾವಣೆಯನ್ನು ಮಾಡಲಾಗುವದು. ಸೂಟಿದಿನಗಳನ್ನು ಬಿಟ್ಟು ಪ್ರತಿದಿನಮುಂಜಾನೆ ೧೦-೩೦ ರಿಂದ ೪-೩೦ರ ವರೆಗೆ ಕೋರ್ಟುಕೆಲಸ ಮಾಡುವದೆಂದು ಸಾರಲಾಯಿತು. ಕಾಸಿಂರಜವಿಯ ಸಲಹೆ ತೆಗೆದುಕೊಳ್ಳಲು ತಮಗೆ ಅವನ ಭೆಟ್ಟಿಯ ಅವಕಾಶ ಕೊಡಬೇಕೆಂದು ವಕೀಲರು ಕೋರ್ಟಿಗೆ ಕೇಳಿಕೊಂಡದ್ದಕ್ಕೆ ಯೋಗ್ಯ ಸವಲತ್ತುಗಳನೆಲ್ಲಾ ಕೊಡಲಾಗುವದೆಂದು ಜೇರಿರಮನ್‌ರು ಆಶ್ವಾಸಿದರು. ಶ್ರೀ ಜೆ ಎ. ಪಿಂಟೋ, ಮಹಮ್ಮದಅಲ್ಲಿಖಾನ ಮತ್ತು ಜಗನ್ನಾಥರಾವ ಇವರು ನ್ಯಾಯಮಂಡಲದ ಸದಸ್ಯರಾಗಿರುವರು. ಇವರೆಲ್ಲ ನ್ಯಾಯಾಧೀಶರು.

ಪ್ರಶ್ನಾವಳಿ

ನಾಟಕ ಕಲೆ

ಸರಕಾರದವರು ನಮ್ಮ ಪ್ರಾಂತದಲ್ಲಿ ನಾಟಕ ಕಲೆಯನ್ನು ಪುನರುಜ್ಜೀವನಗೊಳಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಿ ಅವರು ಕೆಳಗಣ ವಿಷಯಗಳ ಬಗ್ಗೆ ಸೂಕ್ತ ಸಲಹೆಗಳನ್ನೀಯಬೇಕೆಂದು ಕೇಳಿರುವರು.

(1) ನಮ್ಮ ರಂಗಭೂಮಿಯ ಇಂದಿನ ಸ್ಥಿತಿ. ನಮ್ಮ ಪ್ರಾಂತದಲ್ಲಿ ನಾನಾ ಕೇಂದ್ರಗಳಲ್ಲಿ ನಾಟಕಶಾಲೆಗಳನ್ನು ಸ್ಥಾಪಿಸುವ ಅವಶ್ಯವಿರುವ ಕಾರ್ಯಗಳು.

(2) ರಂಗಭೂಮಿಯ ಮೂಲಕ ಪ್ರೌಢರ ಶಿಕ್ಷಣ, ಗ್ರಾಮಸುಧಾರಣೆ ಮುಂತಾದುವುಗಳನ್ನು ಎಷ್ಟರ ಮಟ್ಟಿಗೆ ಸಾಧಿಸಬಹುದು.

(3) ಒಂದು ರಾಷ್ಟ್ರೀಯ ನಾಟಕ ಶಾಲೆಯನ್ನು ಸ್ಥಾಪಿಸಿ, ನಟನ ಕಲೆಯಲ್ಲಿ ಅಭಿರುಚಿಯುಳ್ಳವರನ್ನು ತರಬೇತಿಗೊಳಿಸುವುದು. ಇದನ್ನು ಯಾವ ರೀತಿ ಸಾಧಿಸಬಹುದು.

(4) ನಟನೆ ಮತ್ತು ನಾಟಕದ ಇತರ ಕಲೆಗಳಲ್ಲಿ ತರಬೇತಿಗೊಳಿಸಲು ಸರಕಾರದ ಸಹಾಯ ಎಷ್ಟರಮಟ್ಟಿಗೆ ಬೇಕು?

ಸಾರ್ವಜನಿಕರ ಅಭಿಪ್ರಾಯವನ್ನು ಸಂಗ್ರಹಿಸುವುದಕ್ಕಾಗಿ ಸಮಿತಿಯು ಈ ಕೆಳಗಿನ ಪ್ರಶ್ನಾವಳಿಯನ್ನು ಹೊರಡಿಸಿದೆ ಆಸಕ್ತಿಯುಳ್ಳ ಸಾರ್ವಜನಿಕರು ಪ್ರಶ್ನಾವಳಿಯನ್ನು ಹೊರಡಿಸಿದೆ. ಆಸಕ್ತಿಯುಳ್ಳ ಸಾರ್ವಜನಿಕರು ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ಕಳುಹಿಸಬೇಕಾಗಿ ಅಪೇಕ್ಷಿಸಲಾಗಿದೆ. ಉತ್ತರಗಳನ್ನು ಸೆಕ್ರೆಟರಿ, ಡ್ರೆಮೆಟಿಕ್ ಆರ್ಟ್ಸ್ ರಿವೈವಲ್ ಕಮಿಟಿ, ಸೆಕ್ರೆಟರಿಯಟ್ ಬಿಲ್ಡಿಂಗ್ ಫೋರ್ಟ ಸೇಂಟ್ ಜೋರ್ಜ, ಮದ್ರಾಸು ಎಂಬ ವಿಳಾಸಕ್ಕೆ ಜುಲೈ 25ರ ಒಳಗೆ ಕಳುಹಿಸಬೇಕು ಪ್ರಶ್ನೆಗಳ ಪ್ರತಿಗಳು ಬೇಕಾದಲ್ಲಿ ಕಾರ್ಯದರ್ಶಿಗೆ ಬರೆದು ತರಿಸಿಕೊಳ್ಳಬಹುದು.

ಪ್ರಶ್ನೆಗಳು

—(?)—

ಭಾಗ 1

ಎ.

(1) ನಮ್ಮ ದೇಶದಲ್ಲಿ ನಾಟಕ ಕಲೆಯು ಯಾವ ರೀತಿಯಲ್ಲಿದ್ದಿತು?

(2) ಇಂದು ಅದರ ಸ್ಥಿತಿಯು ಹೇಗಿದೆ? ನಿಮ್ಮ ಅನುಭವದಂತೆ ಯಾವತರಗತಿಯ ಜನರು ಬಹು ಅಂಶ ಪ್ರೇಕ್ಷಕರಿರುತ್ತಾರೆ. ?

(3) ರಂಗಭೂಮಿಯು ಸಾರ್ವಜನಿಕರಿಗೆ ಯಾವರೀತಿ ಪ್ರಯೋಜನಕಾರಿಯಾ

ಪ್ರಥಮ ಭಾರತೀಯ ಸೇನಾಪತಿ

ಜನರಲ್ ಕಾರ್ಯಪ್ಪ

—)0(—

ದಂಡಿನವರೆಂದರೆ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಒಂದು ಬಗೆಯ ಭೀತಿ, ಒಂದು ಬಗೆಯ ದ್ವೇಷ ಆದರೆ ಅದು ಹಳೆಯ ಮಾತಾಗಿದೆ ಆಗಬೇಕು. ಆಗ ನಮ್ಮ ಸ್ವಾತಂತ್ರ್ಯಪೇಕ್ಷೆಯನ್ನು ಹತ್ತಿಕ್ಕುವ ಸಾಧನವಾಗಿದ್ದ ಹಿಂದೀ ಸೈನ್ಯವಿಂದು ನಮ್ಮ ಸ್ವಾತಂತ್ರ್ಯದ ರಕ್ಷಕತನವನ್ನು ವಹಿಸಿಕೊಂಡಿದೆ. ಸುಯೇಜ ಕಾಲುವೆಯ ಪಶ್ಚಿಮಕ್ಕೆ ಸೈನ್ಯವೇ ಅತ್ಯುತ್ತಮ ಸಮರ ಶಕ್ತಿಯೆಂದು ಇಂದು ಧಾರಾಳವಾಗಿ ಹೇಳಬಹುದು ನಾಳೆ ೧೫ರಿಂದ ಈ ಸೈನ್ಯದ ಮುಖ್ಯ ಸೇನಾಧಿಪತ್ಯವನ್ನು ಒಬ್ಬ ಭಾರತೀಯ ಸೇನಾನಿ ವಹಿಸಿಕೊಳ್ಳುವ ಆದರಿಂದಾಚಿಗೆ ಪರಕೀಯ ಶಾಸನದ ಕಿಂಚಿತ್ ಛಾಯೆಯೂ ನಮ್ಮೀ ಭಾರತೀಯ ಸೈನ್ಯದ ಮೇಲೆ ಉಳಿಯದು

ಶತಮಾನಗಳ ದಾಸ್ಯದ ನಂತರ ಈ ಮಹಾರಾಷ್ಟ್ರದ ಸ್ವತಂತ್ರ ಸರಕಾರದ ಸೈನ್ಯದ ಮುಖ್ಯ ಸೇನಾಪತಿಯಾಗುವ ಈ ಪುಣ್ಯಶಾಲಿ ಯಾರು, ಈ ಗೌರವ ಪಾತ್ರ ಯಾರು? ಅವರು ಕೊಡಗಿನವರು, ಕನ್ನಡಿಗರು, ಹೆಸರು ಕಾರ್ಯಪ್ಪ ಎಂದು ನಾವು ಬಲ್ಲೆವು. ಬ್ರಿಟಿಶ ಸೈನ್ಯದಲ್ಲಿ ಸಾಮಾನ್ಯ ತರಗತಿಯಿಂದ ಮೇಲೇರುತ್ತ ಹೋಗಿ ಬ್ರಿಗೇಡಿಯರ್ ದರ್ಜೆಯನ್ನು ಮುಟ್ಟಿದಾಗ ಇವರು ನಮಗೆ ಬಳುವಳಿಯಾಗಿ ಬಂದರೆಂದೂ ನಾವರಿತಿದ್ದೇವೆ ಆದರೆ ಈ ಅನತಿಪ್ರಸಿದ್ಧ ಸೈನಿಕ ಎಂಥ ಮನುಷ್ಯ? ಅವನ ನಡೆನುಡಿ ವಿಚಾರಗಳು ಎಂಥವು

ಹಿಂಸೆ--ಅಹಿಂಸೆ

ವೃತ್ತಪತ್ರಗಳಲ್ಲಿ ಮೊಟ್ಟ ಮೊದಲ ಬಾರಿ ಅವರ ಹೆಸರು ಗಣ್ಯವಾಗಿ ಬೆಳಕಿಗೆ ಬಂದದ್ದು ಭಾರತ ಸ್ವಾತಂತ್ರ್ಯ ಲಾಭವಾದ ಕೆಲ ದಿನಗಳ ನಂತರ, ಲಂಡನ್ನಿನ ಹಿಂದೀಯರ ಮುಂದೆ ಅವರು ಹೇಳಿದರೆಂದು ಹೇಳಲಾದ ಕೆಲ ಮನೆಮಾತುಗಳಿಂದಾಗಿ ಸ್ವತಃ ಗಾಂಧೀಜಿ ಕೂಡ ಅವರ ಮಾತುಗಳನ್ನು ಗಮನಕ್ಕೆ ತೆಗೆದುಕೊಂಡ. ಆ ಬಗ್ಗೆ ಎರಡು ಕಟುಟಿಪ್ಪಣಿಗಳನ್ನಾಡಿದ್ದರು. ಏಕೆಂದರೆ, ಅಹಿಂಸೆಯಲ್ಲಿ ಹುರುಳಿಲ್ಲ, ಭಾರತವನ್ನು ಒಂದುಗೂಡಿಸುವ ಶಕ್ತಿ ಭಾರತೀಯ ಸೈನ್ಯಕ್ಕೆ ಮಾತ್ರ ಇದೆಯೆಂದು ಅವರು ಅಂದಿದ್ದಾಗ ವಾದಿಯಾಗಿತ್ತು, ಅಹಿಂಸೆಯೆ ಸರ್ವಸ್ವವಾಗಿದ್ದ ಗಾಂಧೀಜಿ ಇವನ್ನು ಹೇಗೆ ಪಿಟ್ಟೆನ್ನದೆ ಸೈರಿಸಿಯಾರು?

ಮೃದುಮನಸ್ಕ
ನಿರಹಂಕಾರಿ
ಸೈನಿಕರಿಗೆ ಪರಮಪ್ರಿಯ
ದೇಶಭಕ್ತ

ಆದರೆ ಪ್ರಸಿದ್ಧ ಸುದ್ದಿಗಾರರಾದ ಶ್ರೀ ಪಿ ಡಿ. ಟಂಡನ್ನರು ಕೆಲ ತಿಂಗಳ ಹಿಂದೆ ಅಲಹಾಬಾದಿನಲ್ಲಿ ಜನರಲ್ ಕಾರ್ಯಪ್ಪನವರನ್ನು ಕಂಡಾಗ ಈ ಇಡಿ ಸನ್ನಿವೇಶದ ಮೇಲೆ ಸರಿಯಾದ ಬೆಳಕು ಬಿತ್ತು. 'ಅಕ್ಟೋಬರ್ ೧೯೪೭ರಲ್ಲಿ ನಾನು ಲಂಡನ್ನಿನಲ್ಲಿದ್ದೆನಲ್ಲ,'' ಜನರಲ್ ಕಾರ್ಯಪ್ಪನವರು ಟಂಡನ್ನರಿಗೆ ವಿವರಿಸಿದಂತೆ ''ಆಗ ಭಾರತೀಯರಿತ್ತ ಒಂದು ಚಹಾಕೂಟದಲ್ಲಿ ನಾನು ಮಾತಾಡಬೇಕಾಯಿತು ಆಗ ನಾನೆಂದೆ, ಜನರೇನೋ ತಿಳಿದುಕೊಂಡಿದ್ದಾರೆ, ಹಿಂದೀ ಸೈನ್ಯ ಮೊಟ್ಟೆಸಾಟಿನ ಯೋದ್ಧರಿಂದ ತುಂಬಿಹೋಗಿದೆ ಎಂದು ಆದರಿಂದ ಜನರ ಮನಸು ಸೈನಿಕರ ಬಗ್ಗೆ ಕಲುಷಿತವಾಗಿದೆ. ದೇಶಬಾಂಧವರನ್ನು ಗುಂಡಿಕ್ಕುವದಕ್ಕಾಗಿಯೇ ಅವರ ಅಸ್ತಿತ್ವ. ಅದು ದೇಶದ ಹಣಕಾಸಿನ ಹೃದಯ ಪ್ರದೇಶವನ್ನು ಕೊರೆಯುವ ಹುಣ್ಣು, ಎಂದು ಭಾವಿಸುವರುಂಟು. ಆದರೆ ಇನ್ನಾದರೂ ನಾವು ದೇಶದ ನಿಜವಾದ ಸೇವಕರಲ್ಲೆಂದು ಜನರು ಬಗೆಯದಿರಲೆಂದು ಆಗ್ರಹಪೂರ್ವಕವಾಗಿ ಹಾರೈಸುತ್ತೇನೆ, ಎಂದು ನಾನು ಹೇಳಿದೆ.

''ಅಹಿಂಸೆಯನ್ನು ಕುರಿತು ನಾನಂದುದಿಷ್ಟೆ: ಇಂದಿನ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ, ಒಂದು ರಾಷ್ಟ್ರ ಇನ್ನೊಂದನ್ನು ಸಂಶಯದೃಷ್ಟಿಯಿಂದ ನೋಡುವಾಗ ಭಾರತದ ರಕ್ಷಣೆಗಾಗಿ ಅಹಿಂಸೆಯ ಮೇಲೆ ಹಾಕಿದರೆ ನಡೆಯದೆಂದು ನಮ್ಮೆಣಿಕೆ. ಜಗತ್ತಿನ ಪರಿಸ್ಥಿತಿ ಸುಧಾರಿಸುವವರೆಗೆ ನಾವು ಬಲಿಷ್ಠರೂ ಸುಸಂರಕ್ಷಿತರೂ ಆಗಿರುವದು ಅವಶ್ಯ''

ಗಾಂಧೀ ಸಂದರ್ಶನ

ಇಷ್ಟು ಹೇಳಿ ಕಾರ್ಯಪ್ಪನವರು ಜೇಬಿನಿಂದ ಒಂದು ಕಾಗದದ ಮಡಿಕೆಯನ್ನು ಹೊರಗೆಳೆದರು, ಆಶ್ಚರ್ಯದ ಸಂಗತಿ, ಅದು ಗಾಂಧೀಜಿಯ ಕೈಬರಹದಲ್ಲಿತ್ತು ಲಂಡನ್ನಿನಿಂದ ಬಂದವರೆ ಅವರು ಗಾಂಧೀಜಿಯನ್ನು ಕಂಡು ಮಾತಾಡಿದ್ದರು

ಗಾಂಧೀಜಿಯಬಗ್ಗೆ ಕಾರ್ಯಪ್ಪನವರ ಗೌರವಾದರ ಮುತ್ತಾರದಕಿಂತ ಲೇಶವೂ ಕಡಿಮೆಯಾದುದಲ್ಲ. ಈ ಒಂದು ತುಣುಕು ಕಾಗದವನ್ನು ಅವರು ತಮ್ಮ ಹೃದಯದ ಸಮೀಪದಲ್ಲಿ ಜೋಪಾನವಾಗಿ ಇಟ್ಟುಕೊಂಡಿದ್ದುದೇ ಇದಕ್ಕೆ ಸಾಕ್ಷಿ.

ಅಹಿಂಸಾ ಸೈನ್ಯದ ಆ ಸೇನಾನಿಗೂ ಸಹಿಂಸಾ ಸೈನ್ಯದ ಈ ಸೇನಾನಿಗೂ ಆಗ ಅಷ್ಟಿಷ್ಟು ವಾದವಾದಂತೆ ಕಾಣುತ್ತದೆ. ''ಅಹಿಂಸೆಯ ಮೇಲೆ ನೀವು ಹೇಳಿದಿರೆಂದು ಭಾವಿಸಲಾದ ನುಡಿಗಳ ಬಗ್ಗೆ ನಾನು ಎರಡು ಮಾತು ಬರೆದಿದ್ದೆ, ಗೊತ್ತೆ?'' —ಎಂದು ಗಾಂಧೀಜಿ ಆ ಕಾಗದದ ತುಣುಕಿನ ಮೇಲೆ ಬರೆದಿದ್ದರು. ಅದು ಅವರ ಮೌನದ ದಿನವಾಗಿತ್ತು ಕಾರಣ ಅವರು ಕಾಗದದ ಮೇಲೆ ಪೂರ್ವಪಕ್ಷ ಪ್ರಾರಂಭಿಸಿದ್ದರು.

ಕಾರ್ಯಪ್ಪನವರಿಗೆ ಅದು ಗೊತ್ತಿತ್ತು, ಅವರು ಬಾಪೂಜಿಗೆ ಬಾಗಿ ತಮ್ಮ ಉತ್ತರವನ್ನು ಸಾದರಪಡಿಸಿದರು: ''ನಿಮಗೆ ಗೊತ್ತಿದೆ ಬಾಪೂಜಿ, ಸೈನಿಕ ಜನರೆಂದರೆ ಈ ದೇಶದಲ್ಲಿ ಬಹಳ ಹೀನಾಯ. ಸೈನ್ಯದಲ್ಲಿದ್ದಾರೆಂದಾಕ್ಷಣ ಅವರು ಕನಿಷ್ಠರೆಂದು ಜನ ಬಗೆಯುತ್ತಾರೆ...ನಮ್ಮ ಸೈನ್ಯದಲ್ಲಿ ಶಿಸ್ತುನಿಷ್ಠೆ ಇರುವಂತೆ ನೋಡಿಕೊಳ್ಳುವದು ನಮ್ಮ ಕರ್ತವ್ಯ. ಹೊರಗಿನವರು ಕೈಮಾಡಿದರೆ ದೇಶದ ರಕ್ಷಣೆಗೆ ಅವರು ಸಿದ್ಧರಾಗಿರಬೇಕು. ನಾವಿಷ್ಟು ಮಾಡದೆ ಹೋದರೆ ದೇಶವನ್ನು ಅನಾಥವಾಗಿ ಮಾಡಿದಂತಾದೀತು. ನಿಮ್ಮ ಆಶೀರ್ವಾದದ ಬಲದಿಂದ ಜಗತ್ತೆಲ್ಲವೂ ಅಹಿಂಸಾದೃಷ್ಟಿಯಿಂದ ವಿಚಾರ

ಮಾಡಲು ಕಲಿಯುವವರೆಗೆ, ನಾವು ಬಲಿಷ್ಠವಾದ ಸೈನ್ಯವನ್ನು ರಾಷ್ಟ್ರ ರಕ್ಷಣೆಗೆ ಅಣಿಗೊಳಿಸಬಹುದೆಂದು ನಂಬಿದ್ದೇನೆ"

ಸ್ವಾಭಾವಿಕವಾಗಿ ಗಾಂಧೀಜಿ ಈ ಸೇನಾಪತಿಯೊಡನೆ ಒಡಂಬಡಲಿಲ್ಲ. ಅವರು ನಕ್ಕು ಉತ್ತರ ಬರೆದರು:- "ಇನ್ನೊಮ್ಮೆ ಇದಕ್ಕಿಂತ ಅನುಕೂಲ ಪ್ರಸಂಗದಲ್ಲಿ ಕೂಡಿದಾಗ ಈ ಮಾತು ಚರ್ಚಿಸೋಣವಂತೆ!"

ಆದರೆ ದೈವೇಚ್ಛೆ ಬೇರೆಯೆ ಇತ್ತು. ಅಹಿಂಸೆಯ ಸೇನಾನಿ ಆ ಮೇಲೆ ಭೆಟ್ಟಿಯಾಗುವದು ಸಾಧ್ಯವಾಗಲಿಲ್ಲ. ಆದರೆ ಕಾರ್ಯಪ್ಪನವರು ಗಾಂಧೀಜಿಯ ಆ ಲೇಖನವನ್ನು, ಅವರೊಡನೆ ಕಳೆದ ಆ ಒಂದು ತಾಸಿನ ಅತ್ಯಂತ ಅಮೂಲ್ಯವೆಂದು ಪರಿಗಣಿಸುತ್ತಾರೆ. ಅದೊಂದು ಬಗೆಯ ಶಿಕ್ಷಣವೇ ಆಗಿತ್ತೆಂದು ಅವರೆನ್ನುತ್ತಾರೆ. ಅಹಿಂಸೆಯನ್ನು ಕುರಿತು ಮಹಾತ್ಮರಿಂದ ಅವರು ಹಲವು ಮಾತುಗಳನ್ನು ಕಲಿತುಕೊಂಡರು

ಮೃದು ಸ್ವಾಭಾವಿ

ಸಹಜವಾಗಿ, ಕಾರ್ಯಪ್ಪನವರು ಸಶಸ್ತ್ರ ಬಲದ ಮೇಲಿನ ತಮ್ಮ ವಿಶ್ವಾಸವನ್ನೇನೂ ಕಳೆದುಕೊಂಡಿಲ್ಲ. ಕಳೆದುಕೊಂಡಿದ್ದರೆ ಅವರೀಗ ಏನಾಗಿರುವರೋ ಅದಾಗಿರುತ್ತಿದ್ದಿಲ್ಲವೆನ್ನಿ, ಆದರೆ ಅವರು ಸಶಸ್ತ್ರಬಲದ ವಿಶ್ವಾಸಿಗಳೆಂದಾಕ್ಷಣ ಕ್ರೂರ ಮನುಷ್ಯರೆಂದು ತಿಳಿಯಬಾರದು. ಅವರು ದರ್ಪವನ್ನು ಅರಿಯರು. ಮಾತ್ರವಲ್ಲ, ರಸಿಕರು ಕೂಡ ಅಹುದು.

"ಪಶ್ಚಿಮ ಸೈನ್ಯಾಧಿಪತ್ಯದ ಮುಖ್ಯ ಕಚೇರಿಯನ್ನು ಅಲಹಾಬಾದಿಗೆ ತರಬೇಕೆಂಬ ವಿಚಾರವಿದೆ. ಆದರೆ ಈ ಸೆಕೆಯನ್ನು ಇಳಿಸಲು ಏನಾದರೂ ಮಾಡಲಾರಿರೇನು ನೀವು? ಆಗ ಇದು ದಿವ್ಯಸ್ಥಳವಾದೀತು ನೋಡಿರಿ!" ಎಂದರು ಟಂಡನ್.

ಜನರಲ್ ಕಾರ್ಯಪ್ಪನವರು ಮನವಾರೆ ನಕ್ಕರು. "ಅದು ಸಾಧ್ಯವಾಗಿದ್ದರೆ ಒಂದು ಕೈ ನೋಡುತ್ತಿದ್ದೆವು. ಈ ವಿಜ್ಞಾನಿಗಳು ಏನಾದರೂ ಮಾಡುವರೋ ನೋಡಬೇಕು."

ಮಮತೆಯ ಸೇನಾನಿ

ಕಾರ್ಯಪ್ಪನವರೆಂದರೆ ಸೈನಿಕರಿಗೆ ತುಂಬ ಮಮತೆ-ಸುಮ್ಮನಲ್ಲ. ಕೈಕೆಳಗಿನವರನ್ನು ಅವರು ನಡೆಸಿಕೊಳ್ಳುವ ರೀತಿ ಹಾಗಿದೆ. ಎಷ್ಟೇ ಕೆಳದರ್ಜೆಯ ಸೈನಿಕನಾಗಿರಲಿ ಅವನನ್ನು ಒಳ್ಳೇ ಆತ್ಮೀಯತೆಯಿಂದ ಮಾತಾಡಿಸುತ್ತಾರೆ. ಅವರು ಬೆನ್ನು ಚಪ್ಪರಿಸಿ ಹುರಿದುಂಬಿಸಿ ಕಳಿಸುತ್ತಾರೆ. ಅವರಲ್ಲಿ ಯಾವತರದ ಜಾತೀಯ - ಪ್ರಾಂತೀಯ ಪಕ್ಷಪಾತವೂ ಇಲ್ಲ.

"ನೀವು ಕೊಡಗಿನ ಬ್ರಾಹ್ಮಣರೋ ಬ್ರಾಹ್ಮಣೇತರರೋ?' ಎಂದವರನ್ನು ಕೇಳಿ ನೋಡಿರಿ.

"ಅದೊಂದು ನಾನರಿಯೆ" ಎಂದು ಕಾರ್ಯಪ್ಪನವರು ಒಡನೆ ಉತ್ತರಿಸುವರು "ನಾನು ಹಿಂದೀಯ, ಆದ್ಯಂತ ಹಿಂದೀಯ ನನ್ನ ಜೀವಮಾನದಲ್ಲಿ ಒಂದೇ ಕರ್ತವ್ಯವನ್ನು ಇಟ್ಟುಕೊಂಡಿದ್ದೇನೆ. ಆದೆಂದರೆ ದೇಶಸೇವೆಯನ್ನು ಸೈನಿಕರನ್ನು ನಾನು ಗೆಳೆಯರಂತೆ ನಡೆಸಿಕೊಳ್ಳುತ್ತೇನೆ. ಭಾರತದ ಸೈನ್ಯವನ್ನು ಜಗತ್ತಿನಲ್ಲಿ ಪ್ರಬಲ ಸೈನ್ಯವನ್ನಾಗಿ ಮಾಡಬೇಕೆಂಬದೇ ನನ್ನ ಮಹತ್ವಾಕಾಂಕ್ಷೆ.

ಕಾರ್ಯಪ್ಪನವರಿಗೆ ಹಿಂದೀ ಯುವಕ ಸೈನಿಕರಮೇಲೆ ಪರಿಪೂರ್ಣ ವಿಶ್ವಾಸವಿದೆ. "ಈಗ ಸೈನ್ಯದಲ್ಲಿ ಸೇರುತ್ತಿರುವ ಯುವಕರಬಗ್ಗೆ ಒಮ್ಮೆ ಅಭಿಪ್ರಾಯವೇನು?" ಎಂದು ಕೇಳಿದರೆ ಅವರನ್ನುವರು.

"ಏನು ಕೇಳುತ್ತೀರಿ, ಹಿಂದೀ 'ಜವಾನ'ರು ಪ್ರಚಂಡರು ಸರಳ ಜೀವಿಗಳು, ಸುಲಭ ತೃಪ್ತರು. ಅವರ ದೇಶನಿಷ್ಠೆ ವಿಧೇಯತೆಗಳೂ ಕಡಿಮೆಯಲ್ಲ ರಂಡೇಗಂಡರಿರಾ, ರಣರಂಗಕ್ಕೆ ಹೋದರೆ ಹುಲಿಗಳು, ಹೊರಗೆ ಬಂದರೆ ಕುರಿ ಮರಿಗಳಲ್ಲೋ ನೀವು! ಎಂದು ನಾನು ಅನ್ನುತ್ತಿರುವದುಂಟು, ಅವರಿಗೆ.

"ಒಳ್ಳೆ ಸಜ್ಜನರು ನೋಡ್ರಿ ನಮ್ಮ ಹುಡುಗರು, ನನ್ನ 'ಜವಾನ' ರಿಗಾಗಿ ನಾನು ಬೇಕಾದ ತ್ಯಾಗಮಾಡಲು ಸಿದ್ಧ, ಅವರೂ ನನ್ನನ್ನು ಕೈಬಿಡಲಿಕ್ಕಿಲ್ಲೆಂದು ನನಗೆ ಖಾತ್ರಿಯಿದೆ.

ರಾಜಕಾರಣದಿಂದ ದೂರ

ದೇಶಾಭಿಮಾನ ಇಷ್ಟಿದ್ದರೂ ಜನರಲ್ ಕಾರ್ಯಪ್ಪನವರು ರಾಜಕಾರಣದಿಂದ ಸಾಧ್ಯವಿದ್ದಷ್ಟು ದೂರ ಇರುತ್ತಾರೆ. "ನಮ್ಮನ್ನು ರಾಜಕಾರಣದಲ್ಲಿಎಳೆಯಲಿಕ್ಕೆ ಬೇಕಾದಷ್ಟು ಪ್ರಯತ್ನ ಮಾಡುವವರಿದ್ದಾರೆ, ಆದರೆ ಸೈನ್ಯಕ್ಕೂ ಈ ರಾಜಕಾರಣಕ್ಕೂ ಏನು ಸಂಬಂಧವಿಲ್ಲೆಂದು ನಾನು ಸೀದಾ ಸೀದಾ ಹೇಳಿಬಿಡುತ್ತೇನೆ. ಜನರು ಆರಿಸಿ ಕಳಿಸಿದ ಸರಕಾರದ ಅಜ್ಞಾಧಾರಕರು ನಾವು ಸರಕಾರದ ನಿರ್ಣಯಗಳನ್ನು ಕಾರ್ಯಕಾರಿಯಾಗಿ ಮಾಡುವದು ನಮ್ಮ ಕೆಲಸ ಆ ಪಕ್ಷ ಈ ಪಕ್ಷ ಎಂಬ ಭೇದ ನಮಗಿಲ್ಲ."

ಅವರು ತಮ್ಮ ಸೈನಿಕರಿಗೂ ಅಧಿಕಾರಿಗಳಿಗೂ ಕೊಡುವ ಉಪದೇಶವಿಷ್ಟೆ "ನಮಗೆ ಎರಡೇ 'ಸ್ಥಾನ'ಗಳಿವೆ ಒಂದು ಹಿಂದುಸ್ಥಾನ ಇನ್ನೊಂದು ಫೌಜಿಸ್ಥಾನ. ನಾವು ಮೊದಲು ಹಿಂದೀಯರು ಮತ್ತೂ, ಹಿಂದೀಯರು, ಕೊನೆಯ ಶ್ವಾಸ ಹೋಗುವವರೆಗೂ ಹಿಂದೀಯರು.

ಸುಂದರ ಆಜಾನುಬಾಹು ಜನರಲ್ ಕಾರ್ಯಪ್ಪನವರಿಗೆ ಜನವರಿ 28 ಕ್ಕೆ 49 ವರ್ಷ ತುಂಬುತ್ತವೆ. ಕೊಡಗಿನಲ್ಲಿಯೂ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿಯೂ ವ್ಯಾಸಂಗ ಮಾಡಿದ ಅವರು ವಿಸ್ತಾರವಾದ ಜ್ಞಾನಭಾಂಡಾರವನ್ನು ಸಂಪಾದಿಸಿದ್ದಾರೆಂದು ಅವರೊಡನೆ ತಾಸರ್ಧತಾಸು ಮಾತಾಡಿದಷ್ಟಕ್ಕೆ ತಿಳಿದುಹೋಗುವದು. ಅವರು ಇಂಗ್ಲೀಷ ಹಿಂದುಸ್ತಾನಿ ಎರಡನ್ನೂ ಇಂಗ್ಲೀಷರ ಸ್ವರಭಾವದಲ್ಲಿ ಮಾತಾಡುವರು ಗಾಲ್ಫ, ಕುದುರೆ ಸವಾರಿ ಇವರ ಮೆಚ್ಚುಗೆಯ ಆಟಗಳು ಅಂಚೆ ಚೀಟಿ ಸಂಗ್ರಹದ ಹುಚ್ಚು ಇವೆ ನಮ್ಮ ಸೈನ್ಯದಲ್ಲಿ ಹಲವು ಸುಧಾರಣೆಗಳಾಗಬೇಕೆಂದು ಅವರಿಗೆ ಗೊತ್ತಿದೆ. ಆದರೂ ಅವರು ಆ ಬಗ್ಗೆ ಸರಕಾರದಮೇಲೆ ಅಸಂತೋಷಪಟ್ಟುಕೊಂಡಿಲ್ಲ. ಸರಕಾರವನ್ನು ಎದುರಿಸಿರುವ ಪ್ರಚಂಡ ಸಮಸ್ಯೆಗಳ ಅರಿವು ಅವರಿಗಿದೆ ಇವು ಪರಿಹರಿಸಿಟ್ಟ ಮೇಲೆ ಸೈನ್ಯದ ಸುಧಾರಣೆಗೆ ಅವಕಾಶ ದೊರತೇದೊರೆವುದೆಂದು ಅವರು ನಂಬಿದ್ದಾರೆ.

(ಕರ್ಮವೀರ)

—(o)—

ಗಿದೆ? ಅದು ಏನನ್ನು ಸಾಧಿಸಿದೆ? ಇತ್ತರವರಿಗೆ "ಕಲೆಗಾಗಿ ಕಲೆ" (Art for Arts sake) ಎಂಬ ಧೋರಣೆ ಇಟ್ಟುಕೊಂಡ್ಡಿತೋ? ಬರೀ ಹಣಗಳಿಸುವುದೇ ಆದರ ವುದ್ದೇಶವಾಗಿದೆಯೋ ಅಥವಾ ಬೇರೆ ಏನನ್ನಾದರೂ ಸಾಧಿಸಿದಿಯೋ? ಸಾಧಿಸಿದ್ದರೆ ತಿಳಿಸಿರಿ?

(4) ಇಂದಿನ ರಂಗಭೂಮಿಯು ಬರೀ ಜನರ ಅಭಿರುಚಿಗೆ ಸರಿಯಾಗಿ ವರ್ತಿಸುತ್ತದೋ? ಅಥವಾ ನಾಟಕ ಕಲೆಯನ್ನು ಉನ್ನತಮಟ್ಟಕ್ಕೆ ಒಯ್ಯಲು ಪ್ರಯತ್ನಿಸುತ್ತಿದೆಯೋ?

ಬಿ

(5) ವಯಸ್ಕರ ಶಿಕ್ಷಣವು ಪರಿಪೂರ್ಣವಾಗಲು ನಾಟಕಗಳೇ ಅವಶ್ಯವೇ? ಅವಶ್ಯವೇ? ಅವಶ್ಯವಿದ್ದಲ್ಲಿ ನಾಟಕಗಳು ಯಾವರೀತಿ ವಯಸ್ಕರ ಶಿಕ್ಷಣಕ್ಕೆ ಸಹಾಯ ಮಾಡಬಹುದು.

(6) ಗ್ರಾಮ ಸುಧಾರಣೆ ಮತ್ತು ಸಬಂಧಿಸಿದ ವಿಷಯಗಳಲ್ಲಿ ನಾಟಕವು ಯಾವ ಪಾತ್ರವಹಿಸಬಹುದು? ಹೇಗೆ ಅದು ಸಹಾಯ ಮಾಡಬಹುದು.

(7) ಗ್ರಾಮ ಸುಧಾರಣೆಗೆ ನಾಟಕಗಳು ಸಹಾಯಪಡುವಂತೆ, ಪ್ರತ್ಯೇಕ ಕಾರ್ಯನಿರ್ವಾಹಕ ಮಂಡಳಿಯ ಅವಶ್ಯಕತೆ ಇದೆಯೆ?

(8) ಗ್ರಾಮ ಸುಧಾರಣೆಗೆ ಯಾವ ತರದ ನಾಟಕಗಳು ಉತ್ತಮ? ಅವುಗಳು ಎಂಥಹ ಕಥೆಗಳನ್ನು ಆರಿಸಿಕೊಳ್ಳಬೇಕು.

(9) ಎಷ್ಟು ನಾಟಕ ಗ್ರಂಥಗಳು ನಿಮ್ಮ ಭಾಷೆ ಯಲ್ಲಿ ಇವೆ.

(10) ಇವುಗಳ ಪೈಕಿ (1) ಪೌರಾಣಿಕ ಅಥವಾ ಪುರಾತನಕಥೆಗಳು ಎಷ್ಟು? (2) ಚಾರಿತ್ರಿಕ ಎಷ್ಟು? (3) ಸಮಾಜಿಕ ಅಥವಾರಾಜಕೀಯಕಥೆಗಳುಎಷ್ಟು?

(11) ನಾಟಕಗಳ ವಿಷಯವು ಸಾಮಾನ್ಯವಾಗಿ ಯಾವುದಿರುತ್ತದೆ? (ಬಡತನ ಪ್ರೇಮ, ಪತಿಭಕ್ತಿ ಇತ್ಯಾದಿ.)

(12) ನಾಟಕಗಳು ವಿಫುಲವಾಗಿಬರೆಯಲ್ಪಟ್ಟದ್ದರೂ, ಹಣದ ಅಭಾವದಿಂದ, ಮುದ್ರಿಸಲು ಸಾಧ್ಯವಿಲ್ಲದೆ ಹಾಗೇ ವುಳಿದಿವೆಯೋ? ಅಥವಾ ಅವುಗಳ ಪ್ರಚಾರಕ್ಕೆ ಬೇರೆ ಏನಾದರೂ ತಡೆ ಇದೆಯೋ?

(13) ನಾಟಕಗಳಲ್ಲಿ ಯಾವರುಚಿಯ ಭಾಷೆಯು ಈಗ ಬಳಸಲ್ಪಡುತ್ತಿದೆ? ಭಾಷೆಯು ಬದಲಾಯಿಸಲ್ಪಡ ಬೇಕೆಂದು ನಿಮ್ಮ ಅಭಿಪ್ರಾಯವಿದೆಯೋ? ಯಾವ ರೀತಿಯ ಬದಲಾವಣೆ ಅವಶ್ಯ?

(14) ಗ್ರಾಮ ಸುಧಾರಣೆ ಮತ್ತು ವಯಸ್ಕರ ಶೀಕ್ಷಣಕ್ಕೆ ಎಂಥಹ ನಾಟಕಗಳು ಅವಶ್ಯ? (ಪ್ರಶ್ನೆಯ ಭಾಗ 1 ಬಿ ವಿಭಾಗದ ಪ್ರಶ್ನೆಗಳನ್ನು ನೋಡಿರಿ)

(15) ನಾಟಕ ಬರೆಯುವವರಿಗೆ ಯಾವ ತರದ ಸಹಾಯ ಅವಶ್ಯವಿರುತ್ತದೆ? ಸಲಹೆಗಳನ್ನು ಕೊಡಿ

(15) ನಿಮ್ಮ ಜಿಲ್ಲೆಯಲ್ಲಿ ಎಷ್ಟು ನಾಟಕ ಸಂಘಗಳು ಇವೆ? ಇವುಗಳಲ್ಲಿ ನಾಟಕವನ್ನೇ ವೃತ್ತಿಯನ್ನಾಗಿ ಇಟ್ಟುಕೊಂಡವುಗಳು ಎಷ್ಟು? ಬರೀ ವಿನೋದಕ್ಕಾಗಿ ಸ್ಥಾಪಿಸಿದವುಗಳು ಎಷ್ಟು?

(17) ಅವುಗಳಿಗೆ ಸಾರ್ವಜನಿಕರ ಪ್ರೋತ್ಸಾಹ ಚೆನ್ನಾಗಿ ಇದೆಯೋ?

(18) ಯಾವುದಾದರೂ ನಾಟಕ ಸಂಘಗಳಿಗೆ ಸ್ವಂತ ನಾಟಕ ಶಾಲೆಯು ಇದೆಯೋ? ಅವರು ಅದನ್ನು ಬೇರೆಯವರಿಗೆ ಬಾಡಿಗೆಗೆ ಕೊಡುತ್ತಾರೋ

(19) ನಿಮ್ಮ ಜಿಲ್ಲೆಯಲ್ಲಿ ಎಷ್ಟುಜನ ಚತುರ ನಟನಟಿಯರು ಇದ್ದಾರೆ? ಎಷ್ಟು ಜನಸಮರ್ಥ ದಿಗ್ದರ್ಶಕರು ಇದ್ದಾರೆ? ಅವರ ಹೆಸರು ವಿಳಾಸಗಳನ್ನು ಕೊಡಿರಿ.

(20) ನಟನಟಿಯರನ್ನೂ, ದಿಗ್ದರ್ಶಕರನ್ನೂ ತರಬೇತಿಗೊಳಿಸಲು ಪ್ರತ್ಯೇಕ ಸಂಸ್ಥೆಯು ಅವಶ್ಯವಿದೆಯೋ? ಹಾಗಿದ್ದಲ್ಲಿ ಎಂಥಹ ಸಂಸ್ಥೆ ಅವಶ್ಯ? (i) ಒಂದು ಪ್ರತ್ಯೇಕ ತರಬೇತಿ ಶಾಲೆಯೋ? ಅಥವಾ (ii) ಕೋಲೆಜ್ ಶಿಕ್ಷಣ ಕ್ರಮದ ಒಂದು ವಿಷಯವಾಗಿ? ಅಥವಾ (iii) ವಿಶ್ವವಿದ್ಯಾಲಯದಲ್ಲಿ ಒಂದು ಡಿಪ್ಲೊಮಾ ಶಿಕ್ಷಣವಾಗಿಯೋ?

(21) ಶಾಲೆ, ಕೋಲೇಜುಗಳಲ್ಲಿ ನಾಟಕಗಳನ್ನು ಆಡುತ್ತಾರಯೋ? ಅವುಗಳ ಪ್ರಯೋಜನವೇನಾದರೂ ಇದೆಯೋ?

(22) ನಾಟಕವು ವಿದ್ಯಾರ್ಥಿಗಳಿಗೆ ಬಹಳ ಶ್ರೇಷ್ಠ ತರಗತಿಯ ಸಂಸ್ಕೃತಿಯನ್ನು ಬೋಧಿಸುತ್ತದೆ? ಈ ಮಾತನ್ನು ನೀವು ಒಪ್ಪುತ್ತೀರಾ? ಇದರಿಂದ ವಿದ್ಯಾರ್ಥಿಗಳಿಗೆ ಎಷ್ಟು ಪ್ರಯೋಜನವಿದೆ?

(23) ಪ್ರತಿ, ಶಾಲೆ, ಕಾಲೇಜ್ ಗಳಲ್ಲಿ ಒಂದು ನಾಟಕ ಶಾಲೆ ಇರಬೇಕು.

III ಬಾಗ

(24) ನಿಮ್ಮ ಜಿಲ್ಲೆಯ ದೊಡ್ಡ ಪಟ್ಟಣಗಳ ಲ್ಲೆಲ್ಲಾ ನಾಟಕ ಶಾಲೆಗಳು ಇವೆಯೋ? ಇದ್ದರೆ ಅವುಗಳಲ್ಲಿ ಲೈಟ್ ಸೀನ್, ಸಿನೇರಿ, ಸೆಟ್ಟಿಂಗ್, ಬಣ್ಣದ ಕೋಣೆ, ಇತ್ಯಾದಿಗಳಿಂದ ಸುಸಜ್ಜಿತವಾದವುಗಳು ಎಷ್ಟು

(25) ಇಂಥಹ ಥಿಯೇಟರಗಳನ್ನು ಯೋಗ್ಯ ಬಾಡಿಗೆಗೆ ಇತರರಿಗೆ ಕೊಡುತ್ತಾರೆಯೋ?

(26) ಜನರ ಅವಶ್ಯಕತೆಗಳನ್ನು ಇಂಥಹ ಥಿಯೇಟರ್‌ಗಳು ಪೂರೈಸುತ್ತವೆಯೋ

(27) ನಿಮ್ಮ ಅಭಿಪ್ರಾಯದಲ್ಲಿ ಪ್ರತಿಹಳ್ಳಿಗೂ, ಇಲ್ಲವೆ ಪ್ರತಿ ಫರ್ಕಾಕ್ಕಾದರೂ ಒಂದು ಥಿಯೇಟರ್ ಅವಶ್ಯವಿದೆಯೋ? ಬಯಲಾಟಕ್ಕೆ ಯೋಗ್ಯವಾದದ್ದು ಶಾಲೆ ಸಂಪೂರ್ಣ ಸುಸಜ್ಜಿತವಾದದ್ದು ಇರಬೇಕೆ?

(28) ನಿಮ್ಮ ಅಭಿಪ್ರಾಯದಲ್ಲಿ ಥಿಯೇಟರ ಗಳನ್ನು ಸರಕಾರವೇ ಕಟ್ಟಿಸಿ ಅವುಗಳಿಗೆ ಯೋಗ್ಯಧನ ಸಹಾಯ ಮಾಡುತ್ತಿರಬೇಕು ಎಂದುಇದೆಯೋ

(29)) ನಿಮ್ಮ ಅಭಿಪ್ರಾಯದಲ್ಲಿ ಉತ್ತಮ ತರಗತಿಯ ಥಿಯೇಟರ್ ಎಂದರೆ ಯಾವುದು ಅದು ಹೇಗೆ ಇರಬೇಕು

(30) ಥಿಯೇಟರ್‌ಗಳಲ್ಲಿ ಸೀನ್, ಸಿನೇರಿ) ಸೆಟ್ಟಿಂಗ್ಸ್ ಲೈಟ್ ಕುಳಿತುಕೊಳ್ಳುವ ವ್ಯವಸ್ಥೆಗಳು ಇರಬೇಕು,

VI ಬಾಗ

(31) ಕಾರಾಗೃಹದಲ್ಲಿರುವ ಕೈದಿಗಳಿಗೆ ನಾಟಕಗಳಿಂದ ಉಪಯೋಗವಿದೆಯೇ? ಇದ್ದರೆ ಅವರಿಗೆ ಯಾವ ರೀತಿಯ ನಾಟಕಗಳು ಅವಶ್ಯ?

(32) ಫೇಕ್ಟರಿಗಳಲ್ಲಿ ಕೆಲಸ ಮಾಡುವವರಿಗೆ ನಾಟಕಗಳು ಅವಶ್ಯವಿದೆಯೋ? ಇದ್ದಲ್ಲಿ ಅವರಿಗೆ ಎಂಥಹ ನಾಟಕಗಳು ಬೇಕು?

ರಿಜಿಸ್ಟರ್ಡ ಪ್ರಾಕ್ಟಿಷನರು

ಹಿಂದೀಯ ಔಷಧಿಗಳಿಗೆ ಚಿಕಿತ್ಸೆ ನಡೆಸುವವರೆಂದು ರಿಜಿಸ್ಟ್ರುಮಾಡಿಕೊಂಡ ವೈದ್ಯರು ಎಲ್ಲಾ ರೋಗಗಳ ಬಗ್ಗೆಯೂ ತಾವು ಚಿಕಿತ್ಸೆ ನಡೆಸುವ ಇಲ್ಲನೆ ಪರೀಕ್ಷಿಸುವ ರೋಗಿಳ ವಿಷಯದಲ್ಲಿ ಸರ್ಟಿಫಿಕೇಟು ಕೊಡಬಹುದೆಂದು ಸರಕಾರವು ಅಧಿಕಾರ ಕೊಟ್ಟಿದೆ.

ಹರಿಜನೋದ್ಧಾರ

ಈ ಪ್ರಾಂತದ ಹರಿಜನರ ಏಳಿಗೆಗಾಗಿ ಈ ವರ್ಷ ವೆಚ್ಚಮಾಡಲು ಸರಕಾರವು ಎಂಟು ಲಕ್ಷ ರುಪಾಯಿ ಪ್ರತ್ಯೇಕಿಸಿಟ್ಟಿದೆ. ಈ ಹಣವನ್ನು ವೆಚ್ಚ ಮಾಡುವ ಹೊಣೆಗಾರಿಕೆಯನ್ನು ಹರಿಜನೋದ್ಧಾರ ಸಮಿತಿಗೆ ಒಪ್ಪಿಸಲಾಗಿದೆ ಹಿಂದುಳಿದ ಜಾತಿಗಳ ಏಳಿಗೆಯ ಕುರಿತು ಶೋಧಿಕೊಳ್ಳುವಂತೆ ಸರಕಾರವು ಪ್ರತ್ಯೇಕ ಪ್ರಾಂತಿಕ ಸಮಿತಿಯೊಂದನ್ನು ರಚಿಸಲಿದೆ

ನವಭಾರತಕ್ಕೆ ಚಂದದಾರರಾಗಿರಿ

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—193?

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ		ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು, ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮೆನ್-ಬೋರ್ಡ್ ಆಫ್ ಡೈರೆಕ್ಟರ್ಸ್

ಬಿ. ಪಿ. ಶೇಷಗಿರಿರಾವ್, ಬಿ. ಕಾಂ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.
ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ. ಉನ್ನತ:—ವಿಶಾರದ
ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷೆ ವರ್ಗಗಳ ಅವಧಿ-ಶಾಲಾಶುಲ್ಕ ವಗ್ಯೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ:—ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4749)

ನವ ಭಾರತ ಬಳ್ಳಾರಿ.

(Nationalist Weekly)

8—8—49

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months.

To

Sri..

....

....

Printed at Vittal Press, Edited & Published by T. B Keshava Rao Bellary

ನವಭಾರತ

ಗ್ರಾಮೀಣ ಪತ್ರಿಕೆ.

ಉತ್ತಿಷ್ಠತ! ಜಾಗ್ರತ! ಪ್ರಾಪ್ಯವರಾನ್ನಿಬೋಧತ.

ವರ್ಷ ೧೭ ಸಂಚಿಕೆ ೫	ಸೋಮವಾರ ಆಗಸ್ಟ್ ೧೯೪೯	ಸಂಪಾದಕ ಮತ್ತು ಪ್ರಕಾಶಕ ಟಿ. ವಿ. ಕೇಶವರಾವ್.



ಸ್ವಾತಂತ್ರ್ಯಪ್ರದಾತ ಭಾರತಭಾಗ್ಯವಿಧಾತ

ರಾಷ್ಟ್ರಪಿತ

ಮಹಾತ್ಮ ಗಾಂಧಿಯನ್ನು ಇಂದು ಸ್ಮರಿಸಬೇಕಾದುದು ಸಕಲ ಭಾರತೀಯರ ಕರ್ತವ್ಯ

ಗಾಂಧೀಜಿ ರಾಷ್ಟ್ರದ ಭದ್ರತೆಗಾಗಿ ಹಾಕಿಕೊಟ್ಟ ವಿಧಾಯಕ ಕಾರ್ಯಕ್ರಮಗಳನ್ನು (ಅಂದರೆ ಗ್ರಾಮೋದ್ಧಾರ, ಹರಿಜನ ಸೇವೆ, ರಾಷ್ಟ್ರಭಾಷೆ ಹಿಂದೀ ಪ್ರಚಾರ, ಖಾದಿ, ಸ್ವದೇಶೀ ಪುರಸ್ಕಾರ, ವಗೈರೆ) ಕಾಂಗ್ರೆಸಿಗರು ಮರೆತು ಸ್ವಾರ್ಥ ಲಾಭಗಳಲ್ಲಿ ತೊಡಗಿದ್ದರೂ ನಿಜವಾದ ಕಾರ್ಯಕರ್ತರು ಇವುಗಳಲ್ಲಿ ನಿರತರಾಗಬೇಕು.

ಭಾರತ ಸರ್ಕಾರದ ಮುದ್ರೆ

ಗಾಂಧೀಜಿ ಅಹಿಂಸೆ ಸಮತಾವಾದ ತತ್ವ ಸಾಧನೆಯ ಸ್ಫೂರ್ತಿ

ಜಯಪ್ರಕಾಶರು

ನವೀನ ಭಾರತ ರಚನೆಯ ಕಾರ್ಯದಲ್ಲಿ

ತೊಡಗಿರುವರು.

[illegible], ಕೂಲಿಕಾರರ, ಉತ್ಪಾದಕರ,

ಮತ್ತು ಇತರ ಶೋಷಣೆಯನ್ನು ತಪ್ಪಿಸುವಂತಹ

ನವಭಾರತವ

ನ್ನು ಜಾರಿಯಲ್ಲಿ ತರಲು ಯತ್ನಿಸುತ್ತಿರುವರು.

ಸೋಶಿಯಲಿಸ್ಟ್ ಪಾರ್ಟಿ ಅಥವಾ ಸಮಾಜವಾದಿಪಕ್ಷದ ಸದಸ್ಯರಾಗಿ ರಾಷ್ಟ್ರವನ್ನು ದೃಢಪಡಿಸಿರಿ.

The General Assurance Society Limited.,

Head Office AJMER.

RECOGNISED AS STRONGHOLD OF SERVICE, SAFETY AND SECURITY

THE FIGURES THAT SPEAK

Business in force over	Rs. 13,00,00,000
Total Assets over	Rs. 2,00,00,000
Claims paid over	Rs. 1,63,00,000

For Insurance and Agency Particulars

Please write to:— K. M. RAMACHAR,
Bank Manager
Car Street, BELLARY

ದಿ ಜನರಲ್ ಅಶೂರೆನ್ಸ್ ಸೊಸೈಟಿ ಲಿ.,

(ಮುಖ್ಯ ಕಾರ್ಯಾಲಯ - ಅಜ್ಮೀರ್.)

ಸೇವೆ—ರಕ್ಷಣೆ—ಭದ್ರತೆಗಳಿಗೆ

ಬಲವಾದ ಕೋಟೆಯಂತಿರುವದೆಂದು ಅಂಗೀಕರಿಸಲ್ಪಟ್ಟಿದೆ.

—:ಅಂಕೆ-ಸಂಖ್ಯೆಗಳ ಸಾಕ್ಷಿ :—

ಜಾರಿಯಲ್ಲಿರುವ ಕಾರ್ಯ ಮಿತಿ	ರೂ. ೧೩,೦೦,೦೦,೦೦೦.
ಒಟ್ಟು ಆಸ್ತಿಯ ಭಾಗ	ರೂ ೨,೦೦,೦೦,೦೦೦.
ಸಲ್ಲಿಸಿದ ಕ್ಲೈಮಿನ ಹಣ	ರೂ. ೧,೬೩,೦೦,೦೦೦,

ಜೀವವಿಮೆ ಮತ್ತು ಏಜನ್ಸಿ ವಿವರಗಳಿಗಾಗಿ ದಯವಿಟ್ಟು ಇವರಿಗೆ ಬರೆಯಿರಿ.

ಕೆ. ಯಂ. ರಾಮಾಚಾರ್—ಬ್ಯಾಂಕು ವ್ಯವಸ್ಥಾಪಕ—ತೇರು ಬೀದಿ ಬಳ್ಳಾರಿ.

ಶುದ್ಧ ಮತ್ತು ಸ್ವಚ್ಛ ಎಳ್ಳೆಣ್ಣೆ

Ambati Subbanna & Co., SAMALKOT.

ಅಂಬಾಟಿ ಸುಬ್ಬಣ್ಣ ಅಂಡ್ ಕೊ.,
ಸಾಮಲಕೋಟ.

Pure Gingelly Oil

Can be used for

1. Head for cooling effect
2. Food for taste.
3. Pickles for long duration.

Guaranteed against all adulteration

SEE THE SEAL AND PURCHASE

Sold retail and in our Bottles

ಶುದ್ಧತೆ-ಗುಣದಲ್ಲಿ ಅಪ್ರತಿಮ.

ಅಭ್ಯಂಗನದಲ್ಲಿ ಉಪಯೋಗಿಸಿರಿ
ಕಣ್ಣಿಗೆ - ಮಿದುಳಿಗೆ ತಂಪು

ಆಹಾರದಲ್ಲಿ ರುಚಿ.

ಉಪ್ಪಿನಕಾಯಿಗೆ ಉಪಯೋಗಿಸಿದರೆ
ವರ್ಷಗಳಲ್ಲಿ ಕೆಡುವುದಿಲ್ಲ.

ಗ್ಯಾರಂಟಿ ಕೊಡುತ್ತೇವೆ. ನಮ್ಮ ಸೀಲು ನೋಡಿ ಕೊಳ್ಳಿರಿ
ಚಿಲ್ಲರೆಯಾಗಿಯೂ ನಮ್ಮ ಬಾಟಲಿಗಳಲ್ಲಿ ಮಾರಲಾಗುತ್ತದೆ

Our Bellary Agents

M/s. M. Hussainjee Rao & M. Venkoji Rao,
M/s. V. M. Giri & Sons, Car Street.
Bellary Primary Co-operative Stores.

ನಮ್ಮ ಬಳ್ಳಾರಿ ಏಜಂಟರು

M/s. ಎಂ. ಹುಸೇನ್‌ಜಿರಾವ್, ಎಂ. ವೆಂಕೋಜಿರಾವ್
,, ವಿ. ಎಂ. ಗಿರಿ ಅಂಡ್ ಸನ್ಸ್, ತೇರು ಬೀದಿ.
,, ಬಳ್ಳಾರಿ ಪ್ರಾಯಮರಿ ಕೋ-ಆಪರೇಟಿವ್ ಸ್ಟೋರ್ಸ್.

"ಭಾರತ ಸರಕಾರ ಮತ್ತು ಕೆಲ ಪ್ರಾಂತಿಕ ಸರಕಾರಗಳು ಕಮ್ಯೂನಿಸ್ಟರ ಮೇಲೆ ಯುದ್ಧ ಹೂಡಿಬಿಟ್ಟಿವೆ. ಕೆಲ ವಿಷಯಗಳಲ್ಲಿ ಅವರು ಮಾಡಿದ್ದು ಸಮಂಜಸವೆಂದು ಅರ್ಥಮಾಡಿಕೊಳ್ಳಲಾಗದೆನಿಸಿದರೂ—ವಿಶೇಷತಃ ಅವರ ಹಿಂಸಾಚಾರದ ವಿಷಯದಲ್ಲಿ ಹಾಗೆ ತಿಳಿದುಕೊಳ್ಳಲು ಸಾಧ್ಯವಿಲ್ಲವಾದರೂ ಕೇವಲ ಮಾನವತೆಗೆ ಸಹಜವಾದ ಉದ್ದೇಶದಿಂದ ಅವರು ಕರ್ತವ್ಯ ತತ್ಪರರಾಗಿರವುದರಿಂದ ಬಂಡವಾಳ ಶಾಹಿಯ ಸಂಪೂರ್ಣ ವಿನಾಶನ ಮತ್ತು ಮಾನವರಲ್ಲಿ ಅರ್ಥಸಾಮ್ಯ ಪ್ರತಿಷ್ಠಾಪನೆ ಎಂಬ ಅವರ ತತ್ವಗಳನ್ನು ಯಾವನೇ ಆಗಲಿ ಸ್ವೀಕರಿಸಲೇಬೇಕು. ಮತ್ತು ಸಹಾನುಭೂತಿ ತೋರಬೇಕು. ಅರ್ಥನೀತಿಯಲ್ಲಿ ಪೈಶಾಚಿಕ ಲಾಭದ ಮೇಲೂ ಸಾಮಾಜಿಕ ನೀತಿಯಲ್ಲಿ ಗಂಡಸರು, ಹೆಂಗಸರು ಮತ್ತು ಮಕ್ಕಳು ಇವರನ್ನು ಸಾಮೂಹಿಕವಾಗಿ ಸಂಪೂರ್ಣ ಅಧಃಪತಿತರನ್ನಾಗಿ ಇಡುವುದರ ಮೇಲೂ ನಿಂತ ವ್ಯವಹಾರ ಪದ್ಧತಿಯನ್ನು ಸುಧಾರಿಸಲು ಅವರು ಪ್ರಯತ್ನಿಸುತ್ತಿದ್ದಾರೆ. 'ಸರ್ವೋದಯದ' ಕಾರ್ಯವಾದರೂ ಅದೇ ಅಲ್ಲವೇ? ಅವಕಾಶ ಸಿಕ್ಕಿದಾಗ ಮೇಲಿನ ಭಾವಗಳನ್ನು ಪಡಿಸುವುದು ಪ್ರತಿಯೊಬ್ಬನ ಪವಿತ್ರ ಕರ್ತವ್ಯವಲ್ಲವೆ?"

ಪ್ರಶ್ನೆಯೇ ಸ್ವತಃ ಉತ್ತರವನ್ನು ಸಿದ್ಧಪಡಿಸುತ್ತದೆ. ಸರ್ವೋದಯಕ್ಕೂ ಕಮ್ಯೂನಿಜಮ್ಮಿಗೂ ಇರುವ ಭೇದ ಸಿದ್ಧಿಯಲ್ಲಿಲ್ಲ. ಸಾಧನದಲ್ಲಿದೆ. ಗಾಂಧಿಯವರೇ ಸ್ವತಃ ತಾವು ಹಿಂಸಾರಹಿತ ಕಮ್ಯುನಿಸ್ಟರೆಂದು ಎಷ್ಟೋ ವೇಳೆ ಹೇಳಿದ್ದುಂಟು. ಸಾಮ್ಯವಾದವನ್ನು ಪ್ರಚುರಪಡಿಸಲ್ಲಿ. (ಕಮ್ಯೂನಿಜಂ ತತ್ವ) ಸಾಮ್ಯಧರ್ಮವನ್ನು (ಸಮತ್ವದ ಕರ್ತವ್ಯ ಅಥವಾ ಆಚಾರವನ್ನು) ಪ್ರಚುರಪಡಿಸುತ್ತೇವೆ ಎಂದು ಅವರು ಈ ಭೇದವನ್ನು ವಿಧಾಯಕ ಶೈಲಿಯಲ್ಲಿ ವ್ಯಕ್ತ ಮಾಡಿದ್ದಾರೆ. ಮರಣಪರ್ಯಂತವಾಗಿ ಅವರು ಮಾಡುತ್ತಿದ್ದ ಪ್ರಯತ್ನವೆಂದರೆ ಈ "ಧರ್ಮ"ವನ್ನು ಆಚರಿಸುವುದೇ. ಭಾರತೀಯರಲ್ಲಿಯ ದೀನತಮವರ್ಗದವರೊಡನೆ ತಾವೂ ಒಬ್ಬರೆಂದು ಭಾವಿಸಲು ಅವರು ಪ್ರಯತ್ನಪಟ್ಟರು. ಕೆಲ ತಲೆಮಾರುಗಳವರೆಗೆ ರಾಜ್ಯಭಾರ ಮತ್ತು ರಾಜಕಾರಣಗಳನ್ನು ಒಂದು ವೃತ್ತಿಯನ್ನಾಗಿ ಮಾಡಿಕೊಂಡಿದ್ದ ಮನೆತನದಲ್ಲಿ ಅವರು ಹುಟ್ಟಿದವರು. ಆ ಭವಿತವ್ಯವನ್ನು ಸತ್ಯಗೊಳಿಸದಿರಲಾರದಾದರೂ ಅವರು ಹಾಗೆ ಒಂದು ವೃತ್ತಿಯೆಂದುಕೊಳ್ಳದೆ ಅದರ ಮುಂದಿನದೆನಿಸುವ ವಕೀಲಿಯನ್ನು ಸ್ವೀಕರಿಸಿದರು. ಅವರು ರಸ್ಕಿನ್ನನ ಪ್ರಬಂಧವನ್ನೋದಿ, ತಾವು ವಕೀಲಿಯನ್ನು ಮಾಡಿದರೂ ತಮಗಾಗಿ ಧನಸಂಪಾದನೆ ಮಾಡಲು ಅದನ್ನೊಂದು ಸಾಧನವನ್ನಾಗಿ ಮಾಡಿಕೊಳ್ಳುವುದು ನ್ಯಾಯವಲ್ಲ ಎಂಬುದನ್ನು ಅರಿತುಕೊಂಡರು. ಆದುದರಿಂದ ಅವರು ತಮ್ಮ

ಭೇದ

ಖಾಸಗಿ ಆಸ್ತಿಯನ್ನೆಲ್ಲ ತ್ಯಜಿಸಿಬಿಟ್ಟರು. ಟಾಲ್‌ಸ್ಟಾಯಿಯವರ ಬರಹವನ್ನೂ ಗೀತೆಯನ್ನೂ ಓದಿ, ವಕೀಲಿಯೆಂಬುದು ಒಂದು ಉತ್ಪಾದಕ ವೃತ್ತಿಯಲ್ಲವಾದುದರಿಂದ ತಮ್ಮ ದೇಹಶ್ರಮದಿಂದಲೇ ಏನಾದರೊಂದನ್ನು ಉತ್ಪಾದಿಸಿ ತಮ್ಮ ಹೊಟ್ಟೆಯನ್ನು ತುಂಬಿಕೊಳ್ಳಬೇಕೆಂಬ ಸಿದ್ಧಾಂತಕ್ಕೆ ಬಂದರು. ಆದುದರಿಂದ ವಕೀಲಿಯನ್ನು ಬಿಟ್ಟು ಅವರು ಹೊಲಗದ್ದೆಗಳತ್ತ ತಿರುಗಿ ತಾವೊಬ್ಬ ಒಕ್ಕಲಿಗರೆಂದು ಕರೆದುಕೊಂಡರು. ಒಕ್ಕಲಿಗನಿಗೆ, ಹೇಗೇ ಆಗಲಿ, ಒಂದಿಷ್ಟು ಆಸ್ತಿಯಿರುತ್ತದೆ ಮತ್ತು ಕೈಗಾರಿಕೆಯ ಕಸಬುದಾರನಿಗಿಂತ ಸಾಮಾಜಿಕ ಮತ್ತು ಆರ್ಥಿಕ ಸ್ಥಾನ ಉತ್ತಮವಿರುತ್ತದೆ. ಆದಕಾರಣ, ಅವರೊಬ್ಬ ನೇಯ್ಗೆಕಾರನಾದರು. ಆದರೆ ನೆಯ್ಗೆಕಾರನು ಕೂಲಿಕಾರನಿಗಿಂತ ಮೇಲ್ತರಗತಿಯವನಾಗಿರುತ್ತಾನೆ. ಕೂಲಿಕಾರನು "ಭಂಗಿ"ಗಿಂತ ಮೇಲ್ತರಗತಿಯವನು, ಭಂಗಿಗೆ ಉಪಕರಣಗಳಿಲ್ಲ, ತಾಂತ್ರಿಕ ಕೌಶಲವಿಲ್ಲ, ಜ್ಞಾನವಿಲ್ಲ, ಸಮಾಜದಲ್ಲಿ ಸ್ಥಾನವಿಲ್ಲ. ಆದುದರಿಂದ ಗಾಂಧಿಯವರು ತಮ್ಮನ್ನು ಭಂಗಿಯೆಂದು ಕರೆದುಕೊಂಡು ಅವರೊಟ್ಟಿಗೆ ಬಾಳಲು, ಅವರ ಸ್ನೇಹ ಗಳಿಸಲು ಮತ್ತು ದೀನ ಭ್ರಾತೃಗಳಾದ ಅವರ ಸ್ಥಿತಿಯನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರು.

ಅವನಿಗೆ ಹೆಚ್ಚು ಹೆಚ್ಚು ಸಾಮ್ಯವನ್ನು ಆಚರಿಸುತ್ತ ಹೋದಹಾಗೆ ಅದರಂತೆ ಬದುಕುವುದು ಎಷ್ಟು ಕಷ್ಟ ಎಂಬುದು ಅವರಿಗೆ ಅರಿವಾಯಿತು. ಅದರಲ್ಲಿ ತಾವು ಕೃತಾರ್ಥರಾದೆವೆಂದು ಹೇಳಲು ಸಾಧ್ಯವಾಗಲಿಲ್ಲ. ಆದುದರಿಂದ ಆ ಧ್ಯೇಯವನ್ನು ಸಾಧ್ಯವಾದಮಟ್ಟಿಗೆ ಸಮವೇಗದಿಂದ ಮುಟ್ಟಲು ಪ್ರಯತ್ನಿಸುತ್ತಿರುವಾಗಲೇ ಎತ್ತು ಆಕಳುಗಳಿಗೂ ನಮಗೂ ನಡುವೆ ಇರುವ ಸ್ಥಾನವೈಷಮ್ಯವನ್ನೂ ಅವುಗಳನ್ನು ನಮಗಾಗಿ ಬಳಸಿಕೊಳ್ಳುವುದನ್ನೂ ಸ್ವತಃ ಸಿದ್ಧವೆಂದು ನಾವು ತಿಳಿದುಕೊಂಡಿರುವಂತೆ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳಲ್ಲಿ ವೈಷಮ್ಯವನ್ನೂ ಸ್ವಾರ್ಥಕ್ಕಾಗಿ ಬಳಸುವುದನ್ನೂ ಸ್ವತಃಸಿದ್ಧವೆಂದು ಬಗೆಯುವವರ ಬಗ್ಗೆ ಸಿಟ್ಟುಮಾಡಲು ಅವರಿಗೆ ಮನಸ್ಸು ಬರಲಿಲ್ಲ. "ಗೋಸೇವೆ" ಮತ್ತು ಗೋಸಂತತಿ ಸಂವರ್ಧನದ ಚಟುವಟಿಕೆಗಳಲ್ಲಿ (ಮಾನವನ ಸುಖದ ದೃಷ್ಟಿಯಿಂದ) ಕರುಣೆಯಿಂದ ನಡೆಸಿಕೊಳ್ಳುವುದು ಮತ್ತು ಈ ಪ್ರಾಣಿಗಳನ್ನು ಇನ್ನೂ ಚೆನ್ನಾಗಿ ಬಳಸಿಕೊಳ್ಳುವುದು "ಇಷ್ಟೇ ತಮ್ಮ ಗುರಿಯಾಗಿದೆ. ಹಾಗೇ ಖಾಸಗಿ ಆಸ್ತಿ ವಿಷಮ ಸಾಮಾಜಿಕ

ಕೆಸನ್ನಿವೇಶದಲ್ಲಿ ಬೆಳೆದುಬಂದ ಮಾನವನು ಧನಿಕ ನಿರ್ಧನ ಮತ್ತು ಉನ್ನತ, ಅವನತ ಸ್ಥಿತಿಯಲ್ಲಿರುವ ಜನರ ಅಸ್ತಿತ್ವವನ್ನು ಏಕೆ, ಏನು ಎಂದು ಪ್ರಶ್ನಿಸದೆ ಅದು ಇರುವುದೇ ಹಾಗೆ, ಅನೇಕ ವಾಸ್ತವಿಕ ಸಂಗತಿಗಳಲ್ಲಿ ಅದೂ ಒಂದು ಎಂದು ತಿಳಿದು ವ್ಯವಹರಿಸುತ್ತಾನೆ. ಕಳೆದ ೩೦-೪೦ ವರ್ಷಗಳಿಂದ ಮಾತ್ರ ಈ ಕಲ್ಪನೆಯಲ್ಲಿಯ ಸತ್ಯತೆಯ ಬಗ್ಗೆ ಪ್ರಶ್ನೆ ಹಾಕುವುದು ಭಾರತದಲ್ಲಿ ಆರಂಭವಾಗಿದೆ. ಬುದ್ಧಿಯಲ್ಲಿ ಈ ಕಲ್ಪನೆ ತಕ್ಕಮಟ್ಟಿಗೆ ದುರ್ಬಲವಾಗಿ ನಿಂತರೂ ದೇಶದ ದಂದ್ರತಮ ನಾಗರಿಕನ ಹೃದಯದಲ್ಲೂ ಬಂಡವಾಳಿಗತನದ ಭಾವ ರೂಢಮೂಲವಾಗಿ ಉಳಿದಿದೆ. ಪ್ರತಿಯೊಬ್ಬನೂ ಸಾಧ್ಯವಾದರೆ, ಒಂದಲ್ಲ ಒಂದು ದಿನ ಒಬ್ಬ ಜಮೀನುದಾರ ಇಲ್ಲವೆ ಬಂಡವಾಳಿಗ ಎನಿಸಿ ಕಡೆಯಪಕ್ಷ ದೇಹಶ್ರಮದ ಕೆಲಸವನ್ನಾದರೂ ಮಾಡದೆ ತನ್ನ ಜೀವನವನ್ನು ಸಾಗಿಸಲು ಅನುಕೂಲವಾದ ಪರಿಸ್ಥಿತಿಯನ್ನು ಒದಗಿಸಲು ಆಶಿಸುತ್ತಾನೆ. ಸುಖಕರವಾದ ದೇಹಶ್ರಮರಹಿತವಾದ ಜೀವನವನ್ನು ನಡೆಸುವ ಅವಕಾಶವನ್ನು ಪಡೆಯುವ ಆಸೆ ಒಂದೆಡೆ ಜನರು ಜೀವನ ಮತ್ತು ಸ್ಥಾನಮಾನಗಳ ವಿಷಮತೆಗಳನ್ನು ಗೊಣಗದೆ ಒಪ್ಪಿಕೊಳ್ಳುವಂತೆ ಮಾಡಿದರೆ, ಮತ್ತೊಂದೆಡೆ ಅದನ್ನು ಸಾಧಿಸುವದರಲ್ಲಿ ಆಗಲೇ ತಮಗಿಂತ ಮುಂದೆ ಹೋದವರ ಬಗ್ಗೆ ಅಸೂಯೆ ಪಡುವಂತೆ ಮಾಡುತ್ತದೆ. ಅವರಲ್ಲಿ ಯಾರೂ ಸರಳವಾದ, ಕಷ್ಟಕರವಾದ, ಶ್ರಮಜೀವನವನ್ನು ನಂಬುವವರಾಗಿರುವಾಗ ಒಬ್ಬನು ಬಂಡವಾಳಿಗ, ಮತ್ತೊಬ್ಬ ಕಮ್ಯೂನಿಸ್ಟ ಎಂದು ಹೇಳಿಕೊಂಡರೂ ಅವರಿಬ್ಬರೂ ಐಷಾರಾಮದ "ಗಾದಿ"ಗೆ ಪರಸ್ಪರ ವಿರೋಧಿಗಳಾದ ಇಬ್ಬರು ಹಕ್ಕುದಾರರೆನಿಸುವರು. ಮುಷ್ಕರ ಹೂಡದ ಕೂಲಿಗಾರರನ್ನು ವಿಘಾತಕ ಚಟುವಟಿಕೆಗಳನ್ನು ಮಾಡಲು ಸುಲಭವಾಗಿ ಉತ್ತೇಜಿಸಬಹುದಾದ ಸಂಗತಿಯಿಂದ ಅವರು ತಮ್ಮ ಕೊರಳಿಗೆ ಕಟ್ಟಿದ ಯಂತ್ರವನ್ನು ದ್ವೇಷಿಸುವರು ಎಂದು ತಿಳಿದುಬರುತ್ತದೆ. ಸಿಟ್ಟುಗೊಂಡ ಗೂಳಿಕೂಡ ತನ್ನ ಸೋಣಿನ ಮೇಲೆ ಹೇರಿದ ನೊಗವನ್ನು ಕಂಡು ಹಾಗೇ ಮಾಡುವುದು. ಯಂತ್ರದಲ್ಲಿ ತಾನು ಮಾಡುವ ಕಠಿನ ಕೆಲಸವನ್ನು ಅವನು ದ್ವೇಷಿಸುವುದರಿಂದ, ಮುಷ್ಕರ ಮುಗಿದೊಡನೆಯೋ ತನ್ನ ರೊಟ್ಟಿಯನ್ನು ಉತ್ಪಾದಿಸುವ ಅವನು ಕ್ರುದ್ಧ ನೇತೃಗಳ ಉತ್ತೇಜನದಿಂದ ಉದ್ರಿಕ್ತನಾಗಿ ಒಂದೇ ಏಟಿಗೆ ನಾಶಮಾಡಿಬಿಡುವನು. ಹಾಗೆ ಮಾಡುವುದರಿಂದ ಅವನು ಯುದ್ಧದಲ್ಲಿ ಹೇಗೋ ಹಾಗೆ ಹೆಂಗಸರು, ಗಂಡಸರು ಮತ್ತು ಮಕ್ಕಳನ್ನು ಒಂದೇ ಕೊಲ್ಲುವನು ಇಲ್ಲವೆ ನಿರ್ಬಲರನ್ನಾಗಿ ಮಾಡುವನು. ಆಸ್ತಿ ಅಲ್ಲಿರಲಿ, ಅವನ ಆ ಕೃತ್ಯದಲ್ಲಿ ಜೀವನದ ಬಗ್ಗೆಯೂ ಮನ್ನಣೆಯಿಲ್ಲ. ಮತ್ತು ಅವನ ವರ್ಗಕ್ಕೇ ಸೇರಿದವರಾಗಿರುವವರ ಕಡೆಗೂ ಅವನ ಲಕ್ಷ್ಯವಿಲ್ಲ. ಅವನು

ಪಶುಧರ್ಮವನ್ನು ಆಚರಿಸುತ್ತಿದ್ದರೂ ತಾನು ಕೇವಲ ದಯಾಮಯವಾದ ಒಂದು ಉದ್ದೇಶದಿಂದ ಉತ್ತೇಜಿತನಾದೆನೆಂದು ಸಾರುವನು ಎಲ್ಲಿಯವರೆಗೆ ಮನುಷ್ಯನು ಸುಖಸೌಕರ್ಯಗಳನ್ನೂ ಕೆಲಸ ಮಾಡದೆ ಬದುಕುವುದನ್ನೂ ಜೀವನದ ಧ್ಯೇಯಗಳೆಂದು ತಿಳಿಯುವನೋ ಇಲ್ಲಿಯವರೆಗೆ ತನ್ನ ಈ ಗುರಿಯನ್ನು ಸಾಧಿಸಿಕೊಳ್ಳಲು ಅವನು ಹಿಂಸೆಯನ್ನು ಬಳಸದೆ ಇರಲಾರನು.

ಅಹಿಂಸೆ ಮತ್ತು ಉಪವಭಕ್ಷಣಕ್ಕಾಗಿ ದುಡಿತ ಇದನ್ನು ಕಮ್ಯುನಿಸ್ಟ್ ಚಳವಳಿಯ ಅವಿಭಾಜ್ಯ ಅಂಗವೆಂದು ಸ್ವೀಕರಿಸಿದರೆ ಅದರೊಡನೆ ಜಗಳ ಮಾಡಲು ಯಾವ ಕಾರಣವೂ ಇಲ್ಲ. ಅದು ಇದನ್ನು ತನ್ನ ಧರ್ಮದ ಭಾಗವೆಂದು ಪ್ರಾಮಾಣಿಕತೆಯಿಂದ ಸ್ವೀಕರಿಸಿದರೆ ಮತ್ತು ಹಾಗೆ ಅದು ಸ್ವೀಕರಿಸಿದರೆ ಸರಕಾರವು ಕೇವಲ ತಮ್ಮ ವಿರುದ್ಧ ನಿಂತ ಪಕ್ಷವೆಂದು ಅದನ್ನು ಬಗ್ಗುಬಡಿಯುವುದಕ್ಕಾಗಿ ಅವರ ಮೇಲೆ ಯುದ್ಧ ಹೂಡಿದರೆ ಆ ಕೂಡಲೆ ಧಕ್ಕೆಗೊಳಗಾದ ಹಿತಸಂಬಂಧದವರನ್ನು ಬಿಟ್ಟು ಮಿಕ್ಕ ಎಲ್ಲರ ಬೆಂಬಲವೂ ತಮಗಿದೆ ಎಂಬುದು ಕಮ್ಯುನಿಸ್ಟರಿಗೆ ತಿಳಿದು ಬರುವುದು ಈಗಿರುವ ಬಗೆಯೆಂದರೆ, ಮಾನವ ಜೀವಗಳಿಗೆ ಮತ್ತು ದೇಶದ ಸಂಪತ್ತಿಗೆ ಮೃತ್ಯುವಾಗುವಂತೆ ಒಬ್ಬರ ಹಿಂಸೆ ಇನ್ನೊಬ್ಬರ ಹಿಂಸೆಯ ವಿರುದ್ಧ ಕಾಳಗಕ್ಕಾಗಿ ನಿಂತಿದೆ. ಬಂಡವಾಳ ಶಾಹಿ, ಕಮ್ಯುನಿಜಂ ಮತ್ತು ಇತರ ಎಲ್ಲ ಧ್ಯೇಯವಾದಗಳಿಗೂ ಸರ್ವಸಾಧಾರಣವಾದ ಹೇತ್ವಾಭಾಸವೆಂದರೆ ಭಾಸುರ ಭವಿತವ್ಯ ನಿರೀಕ್ಷಿತವಾದಲ್ಲಿ ಗಂಭೀರವಾದ ಅಪರಾಧಗಳನ್ನು ಸದ್ಯಃ ಮಾಡಬಹುದು ಎಂಬ ತಳಬುಡವಿಲ್ಲದ ಕಲ್ಪನೆಯೇ.

ಕಮ್ಯುನಿಸ್ಟ್ ಚಳವಳಿ ಸಹಾನುಭೂತಿ ತೋರಿಸುವವರು ಅವರನ್ನು ಅಹಿಂಸಾಧರ್ಮಕ್ಕೆ ಪರಿವರ್ತಿಸುವದಾದರೆ ಅವರು ಕೇವಲ ಭಾರತವೊಂದಕ್ಕಲ್ಲದೆ ಇಡೀ ಜಗತ್ತಿಗೂ ಒಂದು ದೊಡ್ಡ ಸೇವೆಯನ್ನು ಸಲ್ಲಿಸಿದಂತಾಗುವುದು. ಕೇಡನ್ನು ಅಹಿಂಸಾತ್ಮಕವಾಗಿ ಪ್ರತಿಭಟಿಸುವ ತಂತ್ರದಿಂದ ಗಾಂಧಿಯವರು ಅನೇಕ ಹಿಂಸಾವಾದಿಗಳು ಹಿಂಸೆಯನ್ನು ತ್ಯಜಿಸುವಂತೆ ಮಾಡುವುದರಲ್ಲಿ ಜಯಶೀಲರಾದರು. ಅವರ ದೇಶಪ್ರೇಮವನ್ನು ಅವರು ಕೊಂಡಾಡಿದರು, ಆದರೆ ಹಿಂಸಾಚಾರಕ್ಕೆ ಸಹಾನುಭೂತಿ ತೋರದಾದರು ಅದೇ ಮೇರೆಗೆ ಕಮ್ಯುನಿಜಮ್ಮಿನ ಬಗ್ಗೆ ಇರುವ ಸಹಾನುಭೂತಿಯು ಹಿಂಸೆಯ ಮೂಲಕ ಕಮ್ಯುನಿಸ್ಟರು ಸಾಧಿಸಬೇಕೆಂದಿರುವ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಗಳನ್ನು ಸಾಧಿಸಲು ಯುಕ್ತವಾದ ಅಹಿಂಸಾತ್ಮಕ ಮಾರ್ಗಗಳನ್ನು ಹುಡುಕುವತ್ತ ನಮ್ಮನ್ನು ಒಯ್ಯಬೇಕು.

ಕಿ. ಘ. ಮಶ್ರುವಾಲಾ

—●—

ತಿಂಗಳಿಗೆ ಒಂದು ರೂ. ಸಂಬಳ

ತಿಂಗಳಿಗೆ ಒಂದೇ ಒಂದು ರೂಪಾಯಿ ನಾಮಮಾತ್ರ ಸಂಬಳದ ಮೇಲೆ ಡಾ. ಜೀವರಾಜ ಮೇಥಾ ಇವರನ್ನು ಆರೋಗ್ಯ ಶಾಖೆಯ ಸಲಹೆಗಾರರನ್ನಾಗಿ ನೇಮಿಸಿದ್ದು ಅತ್ಯಂತ ಸಮಾಧಾನಕರವಾದ ಸಂಗತಿಯಾಗಿದೆ. ಇದೊಂದು ಬಗೆಯ ಹೊಸ ಮಾದರಿಯು, ಉಳಿದ ನೌಕರರಿಗಳಿಗೂ ಯೋಗ್ಯ ಸಂದರ್ಭದಲ್ಲಿ ಇದು ಅನುಕರಿಸಲ್ಪಡಲೆಂದು ಆಶಿಸುತ್ತೇವೆ. ನೇಮಕ ಹೊಂದತಕ್ಕವನು ಮೊದಲೆ ಶ್ರೀಮಂತನಿದ್ದರೆ ಇಲ್ಲವೆ ಬೇರೆ ಸ್ಥಳದಿಂದ ಸಾಕಷ್ಟು ಸಂಬಳವನ್ನು ಪಡೆಯುತ್ತಿದ್ದರೆ ಮತ್ತು ನಿಜವಾಗಿ ಸಂಬಳದ ಅವಶ್ಯಕತೆ ಇಲ್ಲದಿದ್ದರೆ ಪೂರ್ಣತರಬೇತಿ ಹೊಂದಿದ ಇಂಥ ಮನುಷ್ಯನು ದೇಶಕ್ಕೆ ಪುಕ್ಕಟೆ ಸೇವೆಯನ್ನು ಸಲ್ಲಿಸಲು ಸಿದ್ಧನಿದ್ದರೆ, ಅವನ್ನೇಕೆ ತೆಗೆದುಕೊಳ್ಳಬಾರದು? ಅದೊಂದು ನೌಕರಿಯ ಸ್ಥಳವಾಗಿದ್ದು, ಗೌರವದ ಸೇವಕನೆಂದು ನೇಮಕ ಮಾಡುವದರಿಂದ ತೊಂದರೆ ಬರುವಂತಿದ್ದರೆ ನಾಮಮಾತ್ರ ಸಂಬಳವನ್ನು ಗೊತ್ತುಪಡಿಸಬಹುದು. ಗೌರವದ ಅಧಿಕಾರಿಯಾಗುವದರಲ್ಲಿ ಹೆಚ್ಚು ಮರ್ಯಾದೆಯೆಂದೂ ಅದು ಶಕ್ಯವಿಲ್ಲದಿದ್ದರೆ ಆ ಸ್ಥಳಕ್ಕೆ ತಕ್ಕುದಾದ ಸಂಬಳವನ್ನು ಪಡೆಯಬೇಕೆಂಬೂ ಕೆಲವರ ಭಾವನೆ. ಆದರೆ ಡಾ ಜೀವರಾಜ ಮೇಥಾರವರು ಇಂಥ ಯಾವ ದುರಭಿಮಾನಕ್ಕೂ ಒಳಗಾಗದೆ, ನಿಜವಾಗಿ ಏನೂ ಪಡೆಯದೆ ರಾಷ್ಟ್ರದ ಸಂಬಳದ ಸೇವಕನೆಂದು ಕರೆಯಿಸಿಕೊಳ್ಳಲು ಸಿದ್ಧರಾದುದು ಅಭಿನಂದನೀಯವಾಗಿದೆ ಈ ರೀತಿ ನಾಮಮಾತ್ರ ಸಂಬಳ ತೆಗೆದುಕೊಂಡು ಗವರ್ನರ ಮತ್ತು ಉಳಿದ ಮಹತ್ವದ ಸ್ಥಳಗಳನ್ನು ಅಲಂಕರಿಸುವ ವ್ಯಕ್ತಿಗಳು ಸಿಕ್ಕುವ ಸುದಿನಗಳು ಮುಂದೆ ಬರಬಹುದೆಂದು ನಾವು ಆಶಿಸುವ

[ಮಶ್ರುವಾಲಾ]

—●—

ಹಿಂದುಸ್ಥಾನದ ಭವಿತವ್ಯವೂ ಕೃಷಿಕರೂ

ಹಿಂದುಸ್ಥಾನದ ಕೃಷಿಕರು ಈ ಸಂದರ್ಭದಲ್ಲಿ ಮುಂದೆ ಬಂದು 1951 ರೊಳಗೆ ಆಹಾರ ಆಮದುಗಳಿಂದ ಸ್ವತಂತ್ರರಾಗಬೇಕೆಂಬ ಹಿಂದುಸ್ಥಾನ ಸರಕಾರದ ನಿರ್ಧಾರವನ್ನು ನೆರವೇರಿಸಲು ಹೃತ್ಪೂರ್ವಕ ಸಹಾಯ ನೀಡಬೇಕು. ಹಿಂದುಸ್ಥಾನದ ಯಾವತ್ತು ಆದಾಯದಲ್ಲಿ ವರ್ಷಂಪ್ರತಿ ಸುಮಾರು 120 ಕೋಟಿ ರೂಪಾಯಿಗಳಷ್ಟನ್ನು ಆಹಾರ ವಸ್ತುಗಳ ಆಮದಿಗೋಸ್ಕರ ವೆಚ್ಚ ಮಾಡಲಾಗುತ್ತದೆ, ಈ ಹಣವು ಹಿಂದುಸ್ಥಾನದ ಕೃಷಿಕರದ್ದು. ಇದು ಇತರ ದೇಶಗಳ ಕೃಷಿಕರ ಕೈಗೆ ಹೋಗುತ್ತದೆ. ಫಲಿತಾಂಶವೆಂದರೆ ಜನತೆಯ ಅವಶ್ಯಕ ವಸ್ತುಗಳ ತಯಾರಿಕೆಗೋಸ್ಕರ ಬೇಕಾದ ಯಂತ್ರ ಸಲಕರಣೆಗಳನ್ನು ಕೊಂಡುಕೊಳ್ಳಲು ಸಮಯದಲ್ಲಿ ಸರಕಾರವು ಉಪಯೋಗಿಸಬಹುದಾದ ಹಣವು ಜನರಿಗೆ ವಿದೇಶೀ ಆಹಾರಗಳನ್ನು ಕೊಟ್ಟು ಸಾಕುವುದಕ್ಕೋಸ್ಕರ ವೆಚ್ಚವಾಗುತ್ತದೆ. ಕೃಷಿಕರಿಗೆ ಅತ್ಯವಶ್ಯಕವಾಗಿ ಬೇಕಾದ ಕಬ್ಬಿಣವೂ ಉಕ್ಕು ಸಾಕಷ್ಟು ದೊರೆಯುವುದಿಲ್ಲ. ಏಕೆಂದರೆ ನಮ್ಮ ದೇಶದಲ್ಲಿಯೇ ಇದನ್ನು ಹೆಚ್ಚೆಚ್ಚು ತಯಾರಿಸಲು ಸರಕಾರಕ್ಕೆ ಹೆಚ್ಚು ಹಣ ವೆಚ್ಚ ಮಾಡಲು ಸಾಧ್ಯವಾಗುವುದಿಲ್ಲ. ಪರದೇಶಗಳಿಂದ ಆಹಾರ ಧಾನ್ಯ ತರಿಸುವುದು ನಿಂತರೆ, ಕೃಷಿಕರಿಗೆ ದಿನನಿತ್ಯ ಬೇಕಾದ ಇತರ ಹಲವಾರು ವಸ್ತುಗಳ ಅಭಾವವನ್ನು ನಿವಾರಿಸಲು ಸರಕಾರವು ಯತ್ನಿಸುವುದು

ವಿದೇಶೀಯರ ಆಡಳಿತೆಯಿಂದ ನಿಶಸ್ತ್ರ ಹಿಂದುಸ್ಥಾನವು ಸ್ವಾತಂತ್ರ್ಯಗಳಿಸಿಕೊಂಡುದನ್ನು ಇಡೀ ಜಗತ್ತು ಮೆಚ್ಚುಗೆಯಿಂದ ನೋಡುತ್ತಿದೆ. ಇಂದು ಹಿಂದುಸ್ಥಾನವು ಭೂಜನರ ಶ್ರೇಯೋಭಿವೃದ್ಧಿಗೋಸ್ಕರ ಸ್ವಾತಂತ್ರ್ಯವನ್ನು ಉಪಯೋಗಿಸಿಕೊಳ್ಳುವುದೆಂಬುದನ್ನು ಪ್ರಪಂಚವು ನೋಡುತ್ತಿದೆ. ಹಿಂದುಸ್ಥಾನದ ಕೃಷಿಕರು ಸ್ವಾತಂತ್ರ್ಯ ಸಮರದ ಕಾಲದಲ್ಲಿ ಯತ್ನಿಸಿದಂತೆ ಈಗಲೂ ಆಹಾರೋತ್ಪತ್ತಿಯ ಈ ಚಳವಳಿಯಲ್ಲಿ ಸರ್ವತೋಮುಖಯತ್ನ ನಡೆಸುವರೆಂದೂ ಆ ಮೂಲಕ ಗೊತ್ತುಪಡಿಸಿದ ತಾರೀಖಿನೊಳಗೆ ಆಹಾರ ಆಮದುಗಳಿಂದ ವಿಮುಕ್ತರಾದೆವೆಂದು ಪ್ರಪಂಚಕ್ಕೆ ತೋರಿಸಿಕೊಡುವರೆಂದೂ ನಾನು ನಂಬುತ್ತೇನೆ. ಹಿಂದುಸ್ಥಾನದ ಭವಿತವ್ಯವು ಅವರ ಮೇಲೆಯೇ ಹೊಂದಿಕೊಂಡಿದೆ. ಅವರು ಮನಸ್ಸುಮಾಡಿದರೆ ಅವರಿಗೆ ಅವರ ಹಾಗೂ ಹಿಂದುಸ್ಥಾನದ ಪ್ರಜೆಗಳೆಲ್ಲರ ಜೀವನಮಟ್ಟವನ್ನು ಏರಿಸಲು ಸಾಧ್ಯವಿದೆ. ಏಕೆಂದರೆ ಯಾವುದೇ ದೇಶದ ಸಂಪತ್ತು ಮುಖ್ಯವಾಗಿ ಅದರ ಭೂಮಿ ಹಾಗೂ ಉತ್ಪನ್ನಗಳ ಮೇಲೆ ಹೊಂದಿಕೊಂಡಿರುತ್ತದೆ.

ಮಾನ್ಯ ಶ್ರೀ ಜಯರಾಮದಾಸ್ ದೌಲತ್ ರಾಮ್, ಕೇಂದ್ರ ಸರಕಾರದ ಆಹಾರ ಮಂತ್ರಿ.



ಕೂದಲಿನ ಸೌಂದರ್ಯವನ್ನು ಮೃದುತ್ವವನ್ನೂ ಕಾಪಾಡಿ ಕೂದಲಿಗೆ ಆಹಾರದಂತಿರುವ

ನೈಟ್‌ಕ್ವೀನ್ ಹೇರಾಯಿಲ್

(ಶುದ್ಧವಾದ ಕೊಬರಿ ಎಣ್ಣೆಯಲ್ಲಿ ತಯಾರಿಸಲ್ಪಟ್ಟದೆ)

ಎಂಬ ಎಣ್ಣೆಯನ್ನು ಪ್ರತಿದಿನವೂ ಉಪಯೋಗಿಸಿ ಕೂದಲಿನ ಪಟುತ್ವವನ್ನು ಹೆಚ್ಚಿಸಿರಿ.

ಎಲ್ಲಾ ಷಾಪುಗಳಲ್ಲಿ ದೊರೆಯುತ್ತದೆ.

H. S. & Sons, Bellary.

ಭಾರತದಲ್ಲಿ ಪಶುವೈದ್ಯರು

ಭಾರತಕ್ಕೆ ಪಶುವೈದ್ಯನ ಮಹತ್ವ ಎಷ್ಟೆಂದು ತೂಗಬೇಕಾದರೆ ಈ ದೇಶದ ಉತ್ಪನ್ನದಲ್ಲಿ ಮೂರರಲ್ಲಿ ಎರಡಂಶದಷ್ಟು ಪಶುಗಳಿಂದಲೇ ಆಗುವದೆಂದು ಅರಿತರೆ ಸಾಕು. ತಜ್ಞರ ಲೆಕ್ಕಾಚಾರದಂತೆ ನಿಷ್ಪ್ರಯೋಜಕ ಪಶುಗಳನ್ನು ಸಾಕಲು ನಾವು ೭೦ ಕೋಟಿ ರೂಪಾಯಿಗಳನ್ನು ಹಾಳು ಮಾಡುತ್ತಿದ್ದರೂ ಈ ಸ್ಥಿತಿ. ಪಶುತಜ್ಞರು ಮಾತ್ರ ಈ ಪಶುಗಳನ್ನು ಸುಧಾರಿಸಿ ಈ ಅಪಾರ ವ್ಯಯವನ್ನು ಳಿಸಬಲ್ಲರಲ್ಲದೆ, ಈ ನಿಷ್ಪ್ರಯೋಜಕ ಪ್ರಾಣಿಗಳನ್ನು ಪ್ರಯೋಜಕವಾಗಿ ಮಾಡಿ ಅಪಾರ ಲಾಭವನ್ನೂ ಮಾಡಿಕೊಡಬಲ್ಲರು

ನಮ್ಮದು ಕೃಷಿಪ್ರಧಾನ ದೇಶ. ಕೃಷಿಯೂ ದನಕರುಗಳೂ ಅಕ್ಕತಂಗಿ ಇದ್ದಂತೆ. ಅವು ಅನ್ಯೋನ್ಯಾಶ್ರಯವಾಗಿವೆಯಲ್ಲದೆ ಒಂದನ್ನು ಬಿಟ್ಟು ಇನ್ನೊಂದು ಸಾಗಲಾರವು. ಕೃಷಿಯು ಏಳಿಗೆಯಾಗಬೇಕಾದರೆ ಕಾರ್ಯಕ್ಷಮವಾದ ಶ್ರಮಶಕ್ತಿ ಅವಶ್ಯ. ಈ ಚಾಲಕ ಶಕ್ತಿಯ ಮುಖ್ಯ ಆಕರವೇ ಎತ್ತು. ಎತ್ತನ್ನು ಬಿಟ್ಟರೆ ಅಥವಾ ಅದನ್ನು ಅಸಮರ್ಥವಾಗಗೊಟ್ಟರೆ ಕೃಷಿಗೇ ಉಳಿಗಾಲವಿಲ್ಲ. ಪಶುವೈದ್ಯರಿಗೆ ಇಲ್ಲಿ ಅದ್ವಿತೀಯ ಸ್ಥಾನವಿದೆ.

ಮಕ್ಕಳಿಗೂ ದೊಡ್ಡವರಿಗೂ ಪ್ರಕೃತಿದತ್ತವಾದ ಶ್ರೇಷ್ಠವೂ ಪರಿಪೂರ್ಣವೂ ಆದ ಆಹಾರವೆಂದರೆ ಹಾಲು. ಅದು ಪಶುಗಳಿಂದ ದೊರಕುತ್ತದೆ. ಆದರೆ ಡೆನ್ಮಾರ್ಕಿನಲ್ಲಿ ದನಗಳು ಸರಾಸರಿ ದಿನಕ್ಕೆ ಒಂಬತ್ತು ಸೇರು ಹಾಲು ಕರೆಯುತಿರುವಾಗ ನಮ್ಮ ದನಗಳು ಸರಾಸರಿ ಒಂದು ಸೇರಿಗಿಂತಲೂ ಕಡಿಮೆ ಹಿಂಡುತ್ತವೆ. ಕಳೆದ ಯುದ್ಧಕ್ಕಿಂತ ಮೊದಲು ನಾವು ೧೯ ಕೋಟಿ ಪಶುಗಳಿಂದ ಪಡೆಯುತ್ತಿದ್ದಷ್ಟೇ ಹಾಲನ್ನು ಜರ್ಮನಿಯಲ್ಲಿ ಎರಡೂವರೆ ಕೋಟಿ ಅಮೇರಿಕೆಯಲ್ಲಿ ಮೂರುವರೆ ಕೋಟಿ, ಬ್ರಿಟನ್ನಿನಲ್ಲಿ ಏಳೂವರೆ ಕೋಟಿ ಮತ್ತು ರಶಿಯದಲ್ಲಿ ಏಳೇ ಕೋಟಿ ದನಗಳು ಕೊಡುತ್ತಿದ್ದವೆಂದು ತಿಳಿದರೆ ನಾವು ನಾಚಿಕೊಳ್ಳಬೇಕಾಗಿದೆ. ಇಂದು ಭಾರತದಲ್ಲಿ ಹಿಂಡುವ ದನಗಳು ಸರಾಸರಿ ಕೊಡುವಷ್ಟೇ ಹಾಲನ್ನು ಒಂದು ಕಾಲದಲ್ಲಿ ಡೆನ್ಮಾರ್ಕಿನ ದನಗಳೂ ಸಾಮಾನ್ಯವಾಗಿ ಕೊಡುತ್ತಿದ್ದವು. ಆಗಿಂದ ಜನರು ದನಗಳ ಆರೈಕೆಯನ್ನು ಸುಧಾರಿಸತೊಡಗಿದರು. ಈ ಐವತ್ತು ವರ್ಷಗಳೊಳಗೆ ಇಲ್ಲಿಯ ಸಾಮಾನ್ಯ ದನವೊಂದು ಕೊಡುವ ಬೆಣ್ಣೆಯ ಪ್ರಮಾಣ ವರ್ಷಕ್ಕೆ ೮೮ ಪೌಂಡಿನಿಂದ ೩೪೯ ಪೌಂಡಿಗೆ ಅಂದರೆ ಹದಿನಾಲ್ಕರಷ್ಟು ಏರಿದೆ. ಅದೇ ಪ್ರಕಾರ ಬೇರೆ ದೇಶಗಳಲ್ಲಿಯೂ ಎದ್ದು ಕಾಣುವ ಸುಧಾರಣೆಯಾಗಿದೆ. ಇತರ ದೇಶಗಳ ದನಗಳಷ್ಟೇ ಹಾಲನ್ನು ನಮ್ಮವುಗಳೂ ಕೊಡಲಾರವೆಂದು ನಂಬಲು ಕಾರಣವೇನೂ ಇಲ್ಲ.

ಜಗತ್ತಿನಲ್ಲಿರುವ ದನಕರುಗಳಲ್ಲಿ ಮೂರರಲ್ಲೊಂದರಷ್ಟು ಭಾರತದಲ್ಲಿವೆಯಾದರೂ ಇಲ್ಲಿ ತಲಾ ಹಾಲಿನ ಬಳಕೆ ೭ ಔನ್ಸು ಆಗಿದೆ. ಅದೇ ಫ್ರಾನ್ಸಿನಲ್ಲಿ ತಲಾ ೩೦ ಔನ್ಸು ಅಮೇರಿಕೆಯಲ್ಲಿ ೩೫ ಔನ್ಸು, ಬ್ರಿಟನ್ನಿನಲ್ಲಿ ೩೯ ಔನ್ಸು, ನಾರ್ವೆಯಲ್ಲಿ ೪೩ ಔನ್ಸು ಮತ್ತು ನ್ಯೂಝೀಲಂಡಿನಲ್ಲಿ ೫೬ ಔನ್ಸು ಹಾಲನ್ನು ಉಪಯೋಗಿಸಲಾಗುತ್ತದೆ.

ಜನರು ಸರಾಸರಿ ಉಪಯೋಗಿಸುವ ಹಾಲಿನ ಪರಿಮಾಣಕ್ಕೂ ಸರಾಸರಿ ಆಯುರ್ದಾಯಕ್ಕೂ ಏನೋ ಸಂಬಂಧವಿರುವಂತೆ ತೋರುತ್ತದೆ. ಕಡಿಮೆ ಹಾಲು ಉಪಯೋಗಿಸುವ ಭಾರತೀಯನ ಸರಾಸರಿ ಆಯುಷ್ಯ ೨೭ ವರ್ಷವಾದರೆ ಸರಾಸರಿ ೫೬ ಔನ್ಸು ಹಾಲು ಬಳಸುವ ನ್ಯೂಝೀಲಂಡಿನ ಪ್ರಜೆಯ ಆಯುರ್ದಾಯ ೭೦ ವರ್ಷವಾಗಿದೆ.

ಭಾರತದಲ್ಲಿ ಸಾಯುವಷ್ಟು ಶಿಶುಗಳು ಬಹುಶಃ ಬೇರೆಲ್ಲೂ ಸಾಯುವೆಂದು ತೋರುತ್ತದೆ. ಹಾಲಿನ ಬಳಕೆಗೂ ಆಯುರ್ದಾಯಕ್ಕೂ ಇರುವ ಸಂಬಂಧದಂತಹದೇ ಇಲ್ಲಿಯೂ ಇರುವಂತೆ ತೋರುತ್ತದೆ. ಪಶುವೈದ್ಯನಿಗೆ ಇಲ್ಲಿಯೆ ಸ್ಥಾನ: ಏಕೆಂದರೆ ಅವನೊಬ್ಬನೇ ನಮ್ಮ ಪ್ರಜೆಗೆ ಆರೋಗ್ಯಕಾಯನಾಗಿಯೂ ಬುದ್ಧಿಶಾಲಿಯಾಗಿಯೂ ಬೆಳೆಯಲು ನೆರವಾಗಬಲ್ಲನು.

ಭಾರತದ ಕುರಿಯೂ ಕ್ಷೀಣವಾದ್ದು. ಅದರ ಸರಾಸರಿ ತೂಕ ೬೦ ಪೌಂಡೂ ಇಲ್ಲ. ಸರಾಸರಿ ಉಣ್ಣೆಯ ಹುಟ್ಟುವಳಿ ಎರಡು ಪೌಂಡು, ಇದು ತೀರ ಕಡಿಮೆಯು. ಇದರೊಡನೆ ಹೋಲಿಸಿದರೆ ಯುರೋಪಿನ ಕುರಿಗಳು ಉತ್ತಮ ದರ್ಜೆಯವು. ಅವುಗಳ ಸರಾಸರಿ ಜೀವಂತ ತೂಕವು ಉಣ್ಣೆಯ ಹುಟ್ಟುವಳಿಯೂ ಭಾರತದ ಕುರಿಗಿಂತ ಮುಪ್ಪಟ್ಟು ಹೆಚ್ಚಾಗಿದೆ. ಜಗತ್ತಿನಲ್ಲಿರುವ ಕುರಿಗಳಲ್ಲಿ ನೂರಕ್ಕೆ ೬ ಭಾರತದಲ್ಲಿವೆ, ಆದರೆ ಅವು ಕೊಡುವ ಉಣ್ಣೆ ಜಗತ್ತಿನಲ್ಲಿ ನೂರಕ್ಕೆ ಎರಡಂಶದಷ್ಟು ಮಾತ್ರ. ಅರ್ಥಾತ್ ಇಲ್ಲಿಯ ಕುರಿಗಳ ಸಂಖ್ಯೆಯ ಮೇಲೆ ಮೂರು ಪಾಲು ಕಡಿಮೆ ಉಣ್ಣೆ ಉತ್ಪನ್ನವಾಗುತ್ತದೆ. ಇಲ್ಲಿಯೂ ಪಶುವೈದ್ಯನಿಗೆ ಕೆಲಸವಿದೆ. ಅವನು ಈ ಪ್ರಾಣಿಗಳನ್ನು ಇತರ ಮುಂದುವರಿದ ದೇಶಗಳಲ್ಲಿರುವವುಗಳಷ್ಟೇ ಸುಧಾರಿಸಿ ಹೆಚ್ಚು ಉತ್ತಮ ಉಣ್ಣೆಬಟ್ಟೆಗಳ ಹೆಚ್ಚು ಮಾಂಸವನ್ನೂ ಒದಗಿಸಬಲ್ಲನು.

ಆಡು ಮತ್ತು ಕೋಳಿಗಳ ಸಂಗತಿಯೂ ಅಷ್ಟೇ. ಅವುಗಳನ್ನೂ ಸುಧಾರಿಸಬೇಕಾಗಿದೆ. ಅವುಗಳನ್ನು ಸುಧಾರಿಸಿ ಪಶುವೈದ್ಯರು ಹಾಲು ಮತ್ತು ಮೊಟ್ಟೆಗಳನ್ನು ಎಲ್ಲರ ಕೈಯಳವಿಗೆ ತರಬಲ್ಲರು.

ಪ್ರಾಣಿಗಳಿಗೆ ಬರುವ ಕೆಲ ದೊಡ್ಡ ಸೋಂಕು ರೋಗಗಳಿಂದಾಗುವ ಹಾನಿಯನ್ನು ಇನ್ನು ವಿಚಾರಿಸೋಣ.

ದನಕರುಗಳಿಗೆ ಅಂಟುವ ಮೂರು ಮುಖ್ಯ ಪಿಡುಗುಗಳಿವೆ ಅತಿಸಾರ (ರಿಂಡರ್‌ಪೆಸ್ಟ್) ಗುಂಡಿಗೆ (ಎಚ್. ಎಸ್. [ಒಂದು ಬಗೆಯ ಹೃದಯ ವಿಕಾರ]) ಮತ್ತು ಕಾಲು ಬೇನೆ ಬಾಯಿ ಬೇನೆ. ಇವು ಭಾರತಕ್ಕೆ ಅಪಾರ ಹಾನಿಯನ್ನುಂಟುಮಾಡುತ್ತವೆ. ೧೯೩೬-೩೭ ರಲ್ಲಿ ಈ ಬೇನೆಗಳಿಂದ ಆದ ಪಶುಮರಣಗಳ ಸಂಖ್ಯೆಗಳು ಇಂತಿವೆ. ಅತಿಸಾರದಿಂದ ೩೦,೩೦೦, ಗುಂಡಿಗೆ ಬೇನೆಯಿಂದ ೫೬,೪೦೦, ಕಾಲುಬೇನೆ ಬಾಯಿಬೇನೆಯಿಂದ ೧೫,೬೦೦. ನಿಜವಾಗಿ ಈ ಸಂಖ್ಯೆಗಳು ನಿಜ ಸಂಖ್ಯೆಗಳಿಗಿಂತ ಎಷ್ಟೋ ಕಡಿಮೆಯಾಗಿವೆ. ದನಕರುಗಳಿಗೆ ಬರುವ ರೋಗಗಳಿಂದಾದ ಪಶುಮರಣಗಳನ್ನು ಅಧಿಕಾರಿಗಳಿಗೆ ತಿಳಿಸಲೇಬೇಕೆಂಬ ಕಾಯಿದೆಯಿದ್ದ ಬರ್ಮಾದೇಶದ ಒಂದು ಭಾಗದ ಸಂಖ್ಯೆಗಳನ್ನು ನೋಡಿದರೆ ಈ ಮಾತು ಮನವರಿಕೆಯಾದೀತು. ಈ ಸಂಖ್ಯೆಗಳನ್ನು ನಂಬಿದರೆ ದನಕರುಗಳ ಸರಾಸರಿ ಆಯುಷ್ಯ ೭೨ ವರ್ಷವೆಂದು ತೋರಿಬರುವಂತಿತ್ತು. ಆದರೆ ಇದು ಶುದ್ಧ ತಪ್ಪು. ದನಕರುಗಳ ಸರಾಸರಿ ಆಯುಷ್ಯ ೮ ವರ್ಷ, ಮೇಲೆ ಕಂಡುಬಂದ ಆಯುಷ್ಯ ನಿಜ ಆಯುಷ್ಯದ ಒಂಭತ್ತರಷ್ಟಾಗುತ್ತದೆ. ಅಂದ ಮೇಲೆ ನಿಜವಾದ ಪಶುಮರಣದ ಸಂಖ್ಯೆ ಲೆಕ್ಕದಲ್ಲಿ ದಾಖಲಾದ ಸಂಖ್ಯೆಗಿಂತ ಒಂಭತ್ತುಪಟ್ಟು ಇತ್ತೆಂದು ತಿಳಿದುಕೊಳ್ಳಲಡ್ಡಿಯಿಲ್ಲ. ರೈತನಿಗೆ ಅಪ್ರತ್ಯಕ್ಷವಾಗಿ ಇದಕ್ಕಿಂತಲೂ ಹೆಚ್ಚು ಹಾನಿಯಾಗಿರಬೇಕು. ಉದಾಹರಣೆಗಾಗಿ ಕಾಲುಬೇನೆ ಬಾಯಿಬೇನೆಯಿಂದ ಒಂದು ದನ ಸತ್ತರೆ ೯೯ ದನಗಳು ತಾತ್ಕಾಲಿಕವಾಗಿ ನಿರುಪಯುಕ್ತವಾಗಬಹುದು. ಈ ಮೂಲಕ ಸಾಗುವಳಿ ಕೆಲಸ ಸರಿಯಾಗದೆಯೂ ಹಾಲುಕರೆಯುವದು ಕಡಿಮೆಯಾಗಿಯೂ ಅವನಿಗೆ ನಷ್ಟವಾಗುತ್ತದೆ. ಇನ್ನು ಹಲವಾರು ಜ್ಞಾತಾಜ್ಞಾತ ಕ್ಷಯ ಮತ್ತು ಜಂತುಗಳ ರೋಗಗಳಿದ್ದು ಅವುಗಳಿಂದಾಗುವ ಹಾನಿಯೂ ದೊಡ್ಡದೇ ಆಗಿರುತ್ತದೆ. ದನಗಳ ಚರ್ಮವನ್ನು ಕೆಟ್ಟು ಗುಳ್ಳೆಯೆಬ್ಬಿಸುವ ಒಂದು ಜಾತಿಯ ನೊಣಗಳ ಪೀಡೆಯಿಂದ ವರ್ಷಕ್ಕೆ ಒಂದೂವರೆ ಕೋಟಿ ರೂಪಾಯಿ ನಷ್ಟವಾಗುತ್ತದೆಂದು ಅತಿಶಯೋಕ್ತಿಯಿಲ್ಲದೆ ಹೇಳಬಹುದು. ಯುರೋಪಿನಲ್ಲಿ ಈ ರೋಗಗಳನ್ನು ಪೂರ್ತಿಯಾಗಿಯೆ ಉಚ್ಚಾಟನೆ ಮಾಡಿದಂತಿದ್ದು ಅಲ್ಲಿ ಇವುಗಳಿಂದಾಗುವ ಹಾನಿ ತೀರ ಅಲ್ಪ. ಇತರರು ಸಾಧಿಸಿದ್ದ

ತಾರಾನಾಥ ಆಯುರ್ವೇ ವಿದ್ಯಾಪೀಠ ಬಳ್ಳಾರಿ.

Recognised by the Central Board of India Medicine Madras.

ಈ ವಿದ್ಯಾಪೀಠವು ಮದ್ರಾಸು ಸರಕಾರದಿಂದ ಮನ್ನಣೆಯನ್ನು ಪಡೆದಿದೆ. ಕೀ. ಶೇ. ಪಂಡಿತ ತಾರಾನಾಥರಿಂದ ಬಹು ದಿನಗಳವರೆಗೆ ನುರಿತ ಶಿಷ್ಯರೇ ಇಲ್ಲಿ ಪ್ರಾಧ್ಯಾಪಕರು. ಆಯುರ್ವೇದದ ಸಮ್ಯಕ್ ಜ್ಞಾನವನ್ನೂ ಇತರ ಆಧುನಿಕ ಪದ್ಧತಿಗಳ ತುಲನಾತ್ಮಕ ಚಿಕಿತ್ಸಾ ವಿಜ್ಞಾನವನ್ನೂ ಕಲಿಸಲಾಗುವುದು.

ಜನ ಸೇವಾ ಬುದ್ಧಿಯುಳ್ಳ ಸುಶೀಲ ಸಚ್ಚರಿತ್ರರಾದ S. S. L. C, ಮುಗಿಸಿದವರಿಗೆ ಮಾತ್ರ ಪ್ರವೇಶಾರ್ಹತೆ.

ಸೆಕ್ರೆಟರಿ

ಪ್ರಾಸ್ಪೆಕ್ಟಸ್‌ಗಾಗಿ 0-5-9 ಸ್ಟಾಂಪಿನೊಂದಿಗೆ ಬರೆಯಿರಿ.

ತಾರಾನಾಥ ಆಯುರ್ವೇದ ವಿದ್ಯಾಪೀಠ
P. O. ಸಂಗನಕಲ್ಲು ಬಳ್ಳಾರಿ.

ನ್ನು ನಾವು ಸಾಧಿಸಲಾರೆವೆಂದು ನಂಬಲು ಕಾರಣವೇನೂ ಇಲ್ಲ. ಹೀಗೆ ಪಶುವೈದ್ಯನು ಮಾತ್ರ ರೋಗಗಳನ್ನು ದೂರಮಾಡುವದೇ ಮೊದಲಾದ ಕಾರ್ಯಗಳಿಂದ ದೇಶದ ಹಾನಿಯನ್ನು ತಪ್ಪಿಸಬಲ್ಲನೆಂದು ಸ್ಪಷ್ಟವಾಗುತ್ತದೆ.

ಪಶುಗಳಿಂದ ಕ್ಷಯವೇ ಮೊದಲಾದ ಅನೇಕ ರೋಗಗಳು ಮನುಷ್ಯನಿಗೂ ದಾಟುತ್ತವೆ. ವಾಂತಿಭೇದಿ ಮೊದಲಾದ ಹಲವಾರು ರೋಗಗಳು ಹಾಲಿನ ಮೂಲಕ ಒಬ್ಬ ಮನುಷ್ಯನಿಂದ ಇನ್ನೊಬ್ಬನಿಗೆ ದಾಟುವದುಂಟು. ಪಶುವೈದ್ಯರು ಪಶುಗಳ ರೋಗಗಳನ್ನು ನಿವಾರಿಸುವ ಮತ್ತು ಗುಣಪಡಿಸುವ ಮೂಲಕ ಪರಿಶುದ್ಧವಾದ ಹಾಲನ್ನೊದಗಿಸಿ ಮನುಷ್ಯರಲ್ಲಿಯೂ ಈ ರೋಗಗಳ ಬಾಧೆಯನ್ನು ಕಡಿಮೆಮಾಡಬಲ್ಲರು

ಮೇಲೆ ಹೇಳಿದ ಸಂಗತಿಗಳಿಂದ ಭಾರತಕ್ಕೆ ಪಶು ವೈದ್ಯರ ಮಹತ್ವವೆಷ್ಟಿದೆಯೆಂದು ಯಾವನೇ ನಿಷ್ಪಕ್ಷಪಾತಿಗ ಮನವರಿಕೆಯಾಗದಿರದು. ವಸ್ತುತಃ ಭಾರತದ ಸಮೃದ್ಧಿಯ ಕೀಲಿಕೈಯೇ ಪಶುವೈದ್ಯರ ಕೈಯಲ್ಲಿದೆಯೆನ್ನಬಹುದು.

ಹೀಗಿದ್ದರೂ ಎಲ್ಲೆಲ್ಲಿಯೂ ಪಶುವೈದ್ಯರನ್ನು ಕಡೆಗಣಿಸುವದೇ ಕಾಣಬರುತ್ತಿದೆ. ಅವರ ಕಡೆಯೋಗ್ಯ ಲಕ್ಷವನ್ನು ಕೊಡುವವರಿಲ್ಲ. ಬಹುತರವಾಗಿ ಜನರು ಅವರನ್ನು ಕೀಳಾಗಿ ಕಾಣುತ್ತಾರೆ. ಇದೆಲ್ಲ ಅವರ ಯೋಗ್ಯತೆಯನ್ನು ಅರಿಯದ ಜನರ ಅಜ್ಞಾನದ ಪರಿಣಾಮ. ಕೆಲ ಪಶುವೈದ್ಯರುಕೂಡ ತಮ್ಮ ವೃತ್ತಿ ತುಚ್ಛವೆಂದು ತಿಳಿಯುವದುಂಟು. ಈ ವೃತ್ತಿಗೆ ಸೇರಿದ್ದೇ ತಮ್ಮ ದುರದೃಷ್ಟವೆಂದು ಅವರು ಬಗೆಯುತ್ತಾರೆ. ಆದರೆ ಪಶುವೈದ್ಯವು ಆರ್ಥಿಕ ದೃಷ್ಟಿಯಲ್ಲಿ ಅತ್ಯಂತ ಪ್ರಯೋಜನಕಾರಿಯೂ ವಿಜ್ಞಾನ ದೃಷ್ಟಿಯಿಂದ ತುಂಬ ಅರ್ಥವತ್ತಾಗಿಯೂ ಇದೆ. ಆದರೂ ಪಶುವೈದ್ಯರಿಗೆ ಸರಕಾರ ಸರಿಯಾದ ಸಂಬಳ ಕೊಡುತ್ತಿಲ್ಲ.

ಆಗಿ ಹೋದುದಕ್ಕೆ ಕೂಗಿ ಫಲವಿಲ್ಲ. ಭವಿಷ್ಯತ್ತಿನ ಕಡೆ ಆಶಾದೃಷ್ಟಿಯನ್ನಿಡೋಣ ಏಕೆಂದರೆ ಈಗ ಪ್ರಾಮಾಣಿಕ ಜನರು ನಮ್ಮ ರಾಷ್ಟ್ರದ ಸೂತ್ರಧಾರರಾಗಿದ್ದಾರೆ. ಅವರು ಇತ್ತ ಲಕ್ಷಕೊಟ್ಟೇ ಕೊಡುವರು. ಈ ವರೆಗೆ ಅತ್ಯಂತ ಮಹತ್ವದ ಕೆಲಸಗಳೇ ಅತ್ಯಂತ ದುರ್ಲಕ್ಷ್ಯಕ್ಕೊಳಗಾಗಿದ್ದವು. ಆದುದರಿಂದ ಪಶುವೈದ್ಯರು ಎಲ್ಲರಿಗಿಂತ ದುರ್ಲಕ್ಷಿತರಾಗಿದ್ದರು. ಇಂದು ಅವರು ಎಷ್ಟು ತಿರಸ್ಕೃತರಾಗಿದ್ದಾರೆಂದರೆ ಕೆಲವೇಳೆ ಅವರು ತಮ್ಮ ವೃತ್ತಿಯನ್ನು ಪ್ರಕಾಶಪಡಿಸಲು ಕೂಡ ಹಿಂಜರಿಯುತ್ತಾರೆ.

ಮೇಲೆ ಹೇಳಿದ್ದರ ಮೇಲೆ ಪಶುವೈದ್ಯರು ಅತ್ಯಂತ ಮಹತ್ವದ ಸಮಸ್ಯೆಯನ್ನೆದುರಿಸಬೇಕಾಗಿದೆಯೆಂದು ಓದುಗರಿಗೆ ಮನದಟ್ಟಾಗಬಹುದು. ಅವಾವುವೆಂದರೆ

೧ ಹಾಲಿನ ಮತ್ತು ತಜ್ಜನ್ಯ ಪದಾರ್ಥಗಳ ಉತ್ಪತ್ತಿ.

೨. ದನಕರಗಳ ತಳಿಸುಧಾರಣೆ ಮತ್ತು ಕೃಷಿ ಕಾರ್ಯಕ್ಕಾಗಿ ಒಳ್ಳೆ ಎತ್ತುಗಳ ಪೂರೈಕೆ.

೩. ಕುರಿ ಆಡುಗಳ ಸುಧಾರಣೆಯ ಮೂಲಕ ಮಾಂಸದ ಪೂರೈಕೆ

೪. ಕುರಿಗಳ ಸುಧಾರಣೆಯ ಮೂಲಕ ಉಣ್ಣೆಯ ಪೂರೈಕೆ.

೫, ಕೋಳಿಗಳ ಸುಧಾರಣೆಯ ಮೂಲಕ ತತ್ತಿಗಳ ಪೂರೈಕೆ.

೬ ದನಕರುಗಳ ಸಾಂಕ್ರಾಮಿಕ ಮತ್ತು ಇತರ ರೋಗಗಳನ್ನು ಹಿಡಿತಕ್ಕೆ ತರುವದು.

೭. ಮನುಷ್ಯನಿಗೂ ಪಶುಗಳಿಗೂ ಸಾಮಾನ್ಯವಾದ ರೋಗಗಳ ನಿವಾರಣೆ.

೮, ಹಾಲಿನ ಮೂಲಕ ಹಬ್ಬುವ ರೋಗಗಳ ನಿವಾರಣೆ.

೯. ರುಗ್ಣಪಶುಗಳ ಶೂಶ್ರೂಷೆ.

ಇದಲ್ಲದೆ ಗೋಮಾಂಸ ಮತ್ತು ಹಂದಿಯ ಮಾಂಸಗಳನ್ನು ಆವುಗಳ ರೂಢಿಯಿದ್ದವರಿಗೆ ಒದಗಿಸುವ ಕೆಲಸವೂ ಪಶುವೈದ್ಯರ ಪಾಲಿಗೆ ಬರುತ್ತದೆ.

ಇವು ರಾಷ್ಟ್ರಕ್ಕೆ ಮಹತ್ವದ ಸಮಸ್ಯೆಗಳು. ನಮ್ಮ ದೇಶ ಮುಂದುವರಿಯಬೇಕಾದರೆ, ಮತ್ತು ಅದರ ಪ್ರಗತಿ ಶೀಘ್ರವಾಗಬೇಕಾದರೆ, ಅತ್ಯಂತ ಸಮರ್ಥರೂ ಕಾರ್ಯದಕ್ಷರೂ ಆದ ಜನರನ್ನು ಪಶುವೈದ್ಯ ವೃತ್ತಿಯತ್ತ ಒಲಿಸಬೇಕಾಗಿದೆ. ಆದರೆ ದುರ್ದೈವದಿಂದ ಬೇರೆ ಯಾವಲ್ಲಿಯೂ ಎಡೆದೊರೆಯದವರು ಇದನ್ನು ಆಶ್ರಯಿಸುತ್ತಾರೆ, ಸಮರ್ಥರೂ ಕರ್ತೃತ್ವಶಾಲಿಗಳು ಆದವರನ್ನು ಇತ್ತ ಆಕರ್ಷಿಸಲು ಪಶುವೈದ್ಯರ ಅಂತಸ್ತನ್ನು ಏರಿಸಬೇಕು. ರಾಷ್ಟ್ರದ ನಾಯಕರೂ ವಿವಿಧ ಗೋಸೇವಾ ಕಾರ್ಯಕರ್ತರೂ ಈ ವಿಷಯವನ್ನು ಆಸ್ಥೆಯಿಂದ ವಿಚಾರಿಸುವರೆಂದು ಹಾರೈಸುತ್ತೇನೆ.

ಜಿ. ಕರ್ಣೇಲಸಿಂಗ

—●—

ಮರಣದಂಡನೆಯನ್ನು ತೆಗೆದು ಹಾಕುವುದು

ಘಟನಾಸಮಿತಿಯಲ್ಲಿ ಡಾ. ಅಂಬೇಡಕರರು ವ್ಯಕ್ತಪಡಿಸಿದ ಈ ಕೆಳಗಿನ ಅಭಿಪ್ರಾಯನ್ನು ಸಾಮಾನ್ಯವಾಗಿ ಭಾರತೀಯರು ಎಲ್ಲೆಲ್ಲೂ ಪ್ರಶಂಸಿಸದಿರರು. ಕರಾಚಿಯ ಕಾಂಗ್ರೆಸ್ಸಿನ ಸುಪ್ರಸಿದ್ಧ ಠರಾವಿನ ಮೇಲೆಯೇ ಅದು ನಿಂತಿದೆ. ಆದಕ್ಕೆ ಘಟನೆಯಲ್ಲಿ ಸ್ಥಳಕೊಟ್ಟು ಸಮಿತಿಯು ದೇಶದ ಪ್ರತ್ಯಾಶೆಯನ್ನು ಪೂರೈಸುವುದೆಂದು ನಂಬಹುದಾಗಿದೆ, ಆ ವಿಷಯವನ್ನು ಶಾಸನ ಸಭೆಗೆ ಬಿಟ್ಟು ಕೊಡಬಾರದು.

ಈ ದೇಶವು ಅದ್ಯಂತವಾಗಿ ಅಹಿಂಸಾತತ್ವವನ್ನು ನಂಬುತ್ತದೆ, ಅದು ಆದರೆ ಪ್ರಾಚೀನ ಪರಂಪರೆ ಕೆಲವರು ಅದನ್ನು ವ್ಯವಹಾರದಲ್ಲಿ ಆಚರಿಸದಿರಬಹುದು. ಆದರೆ ಎಲ್ಲರೂ ಖಂಡಿತವಾಗಿ ಅಹಿಂಸಾತತ್ವಕ್ಕೆ ಅಂಟಿಕೊಂಡಿದ್ದಾರೆ. ಆದುದರಿಂದ ಮರಣ ದಂಡನೆಯನ್ನು ನಿಶೇಷವಾಗಿ ಕಿತ್ತೊಗೆಯುವುದು ಈ ದೇಶಕ್ಕೆ ಯೋಗ್ಯವಾದುದು.

ನ ವ ಭಾ ರ ತ ಕ್ಕೆ ಚಂದದಾರರಾಗಿರಿ

ಆರ್. ಎಸ್. ಎಸ್.

ಡಾಕ್ಟರ್ ಹರ್ಡೀಕರ ಅವರಿಂದ

ಜನತೆಗೆ ಸುಖ ಸಮಾಧಾನಗಳನ್ನು ಒದಗಿಸುವುದಕ್ಕಾಗಿ ಮತ್ತು ರಾಷ್ಟ್ರದ ಭವಿಷ್ಯವನ್ನು ಸಾಧಿಸುವುದಕ್ಕಾಗಿ ಹೆಣಗುವ ಸರಕಾರಕ್ಕೆ ಸಹಾಯ ಮಾಡಲು, ಸುಸಜ್ಜಿತ ಪದ್ಧತಿಯಿಂದ ಕಾರ್ಯಮಾಡುವ ಮತ್ತು ಸುಸಮರ್ಥ ಸಂಘಟನೆಗಳ ಅತ್ಯಂತ ಅವಶ್ಯಕತೆಯು ಯಾವಾಗಲೂ ಇರುತ್ತದೆ. ಕಾಂಗ್ರೆಸ್ಸು ತನ್ನ ಅನುಯಾಯಿಗಳ ಅಪರಾಧಕ್ಕಾಗಿ ಮುಕ್ತರಿಸುತ್ತಿರುವಾಗ್ಗೆ ದೇಶದ ಆಡಳಿತವನ್ನು ಸಾಗಿಸುತ್ತಿರುವವರ ಬಲವನ್ನು ಬೆಳೆಸುವುದಕ್ಕಾಗಿ ಇಂತಹ ಸಂಸ್ಥೆಗಳು ಬೇಕೆಂಬುದು ಸ್ಪಷ್ಟವಿದೆ.

ಉತ್ತಮ ಸಂಘಟನೆಗಳಿಂದ ಕೂಡಿದ ಮತ್ತು ತಮ್ಮ ದಾರಿಯಲ್ಲಿ ಕೆಲಸ ಮಾಡುತ್ತಿರುವ ಕೆಲವು ಸಂಸ್ಥೆಗಳು ಸದ್ಯಕ್ಕೆ ನಮ್ಮ ದೇಶದಲ್ಲಿ ಇರುವುದು ನಿಜ. ಆದರೆ ಅವುಗಳಲ್ಲಿಯ ಬಹಳ ಸಂಸ್ಥೆಗಳು ಒಂದಿಲ್ಲೊಂದು ರೀತಿಯಿಂದ, ತೀರ ವಿರುದ್ಧ ದಿಸೆಯಲ್ಲಿ ಕಾರ್ಯ ಮಾಡುತ್ತಿರುವುದು ಮತ್ತು ಮೂವತ್ತು ಕೋಟಿಗೆ ಮೇಲ್ಪಟ್ಟ ಜನತೆಗೆ ಸಂಬಂಧಪಟ್ಟ ಆಡಳಿತವನ್ನು ಹಿಡಿದ, ನುರಿತ ಮುಂದಾಳುಗಳ ಕಾಲನ್ನು ಹಿಂದೆ ಜಗ್ಗುತ್ತಿರುವುದು ಖೇದದ ಮಾತಾಗಿದೆ.

ಯಾವದೇ ಸರಕಾರದಿಂದ ತಪ್ಪುಗಳಾಗುವುದು, ಸ್ವಾಭಾವಿಕವಾಗಿದೆ. ವಿಸ್ತಾರವಾದ ದೇಶದ ಆಡಳಿತವನ್ನು ಸಾಗಿಸುವ ಅನುಭವವಿಲ್ಲದ ಮತ್ತು ಶೈಶವಾವಸ್ಥೆಯಲ್ಲಿರುವ ಸ್ವತಂತ್ರ ದೇಶವು ತಪ್ಪುಗಳನ್ನು ಮಾಡುವುದು ದೊಡ್ಡ ಮಾತಲ್ಲ. ಇಂತಹ ತಪ್ಪುಗಳ ಲಾಭ ತೆಗೆದುಕೊಂಡು ಆ ಸರಕಾರದ ವಿರುದ್ಧ ಪ್ರಚಾರಮಾಡುವುದು, ರಾಷ್ಟ್ರದ್ರೋಹವಾಗಿದೆ. ಅದು ಅಕ್ಷಮ್ಯವಾದದ್ದು. ನಮ್ಮೊಳಗೇ ಮತಭೇದಗಳಿದ್ದರೂ, ಹಿಂದೂಸ್ತಾನವನ್ನು ಒಂದು ಸುಖಮಯ ಮತ್ತು ಸುಸಂಪನ್ನವಾದ ರಾಷ್ಟ್ರವನ್ನು ಮಾಡುವ ಸರ್ವಸಾಮಾನ್ಯ ಕಾರ್ಯಕ್ಕಾಗಿ ಎಲ್ಲರೂ ಕೂಡಿಕೊಂಡು ಒಂದೇ ವ್ಯಕ್ತಿಯಂತೆ ಸಾಗುವುದು ನಮ್ಮ ಕರ್ತವ್ಯವಾಗಿದೆ.

ಕಮ್ಯೂನಿಸ್ಟರು ಸಮಾಜವಾದಿಗಳು, ರಾಯಿಸ್ಟರು ಮತ್ತು ಆರ್.ಎಸ್.ಎಸ್.ನವರೂ ಮತ್ತೂ ಇಂತಹ ಅನೇಕ ಇತರ ಸಂಸ್ಥೆಗಳವರೂ ಸದ್ಯದ ಸರಕಾರದ ಮತ್ತು ಕಾಂಗ್ರೆಸ್ಸಿನ ವಿರುದ್ಧ ಹೋಗಿ, ರಾಷ್ಟ್ರಕ್ಕೆ ಅಪಾರ ಹಾನಿ ಮಾಡುತ್ತಿದ್ದಾರೆ. ಇವರ ಮೂಲಕವೇ ಬಂಗಾಲದಲ್ಲಿ ಮತ್ತು ಇತರ ಕಡೆಗಳಲ್ಲಿ ಕೋಲಾಹಲಗಳು ನಡೆದಿವೆ.

ಇಂದು ನಾವು ಆರ್.ಎಸ್.ಎಸ್. ಬಗ್ಗೆ ಗಮನ ಕೊಡಬೇಕಾಗಿದೆ. ಇದರ ಜಾತ್ಯಂಧತೆಯು ಮತ್ತು ಹಿಂಸಾತ್ಮಕ ಕಾರ್ಯದ ಮೂಲಕ, ಅದು ಕಟ್ಟಳೆಗೆಟ್ಟದ್ದೆಂದು ಸಾರಲ್ಪಟ್ಟಿತು. ಮತ್ತು ಅದರ ಅನೇಕ ಸಭಾಸದರು ಸೆರೆಮನೆಗೆ ಕಳಿಸಲ್ಪಟ್ಟಿರೆ. ಈಗ ಅದರ ಮೇಲಿನ ನಿರ್ಬಂಧವು ತೆಗೆಯಲ್ಪಟ್ಟಿದೆ. ಮತ್ತು ಅದರ ಸಭಾಸದರು ಮುಕ್ತಗೊಳಿಸಲ್ಪಟ್ಟಿದ್ದಾರೆ. ಈ ನಿರ್ಬಂಧಗಳನ್ನು ತೆಗೆಯುವಾಗ್ಗೆ, ಚಾಣಾಕ್ಷರಾದ ಕೇಂದ್ರ ಮಂತ್ರಿಗಳು ಆರ್.ಎಸ್.ಎಸ್ ಸಂಸ್ಥೆಯು ಇನ್ನು ಮುಂದೆ ಸರಕಾರದ ನಿರ್ದಿಷ್ಟ ಧೋರಣದ ವಿರುದ್ಧ ಹೋಗುವುದಿಲ್ಲವೆಂಬ ಬಗ್ಗೆ ಮನವರಿಕೆ ಮಾಡಿಕೊಂಡಿರಲಿಕ್ಕೆ ಸಾಕು. ತಮ್ಮ ಕರ್ತವ್ಯದಬಗ್ಗೆ ಪರಿಪೂರ್ಣ ಜ್ಞಾನವುಳ್ಳ, ಉತ್ಕೃಷ್ಟ ವ್ಯಕ್ತಿಯಾದ ಸರದಾರ ಪಟೇಲರು, ದೇಶದ ಬೇಕು ಬೇಡಗಳನ್ನು ಚೆನ್ನಾಗಿ ಬಲ್ಲರು ಮತ್ತು ಯಾರನ್ನು ಬಿಡಬೇಕು ಯಾರನ್ನು ಬಂಧಿಸಬೇಕು ಎಂಬುದನ್ನು ನಿಚ್ಚಳವಾಗಿ ಅರಿತವರಾಗಿರುವರು. ಹಿಂದೂಸ್ಥಾನದ ಭಾವೀ ಸುಂದರ ಚಿತ್ರವನ್ನು ಚಿತ್ರಿಸಲು ತಮ್ಮ ಅಭಿರುಚಿಯ ಮೇರೆಗೆ ಕಾರ್ಯ ಮಾಡಲು ಸಾಕಷ್ಟು ದೂರದೃಷ್ಟಿಯು ಮತ್ತು ಕಲ್ಪನಾಶಕ್ತಿಯು ಇವರಿಗೆ ಇರುವವೆಂಬುದರಲ್ಲಿ ಸಂದೇಹವಿಲ್ಲ. ಪರಿಸ್ಥಿತಿಯ ಸಂಪೂರ್ಣ ಅಭ್ಯಾಸಮಾಡಿ ಮತ್ತು ಸಂಘಟನೆಗಳನ್ನು ವಿಮರ್ಶಿಸಿ ಈಗ ಹಾಕಲ್ಪಟ್ಟ ನಿರ್ಬಂಧಗಳ ಕೆಳಗೆ ಆರ್.ಎಸ್.ಎಸ್. ಕ್ಕೆ ಸ್ವಾತಂತ್ರ್ಯ ಕೊಡುವುದರಿಂದ ದೇಶಕ್ಕೆ ಸಹಾಯವಾಗುವುದೆಂಬ ನಿರ್ಣಯಕ್ಕೆ ಅವರು ಬಂದಿರಬೇಕೆಂದು ನಾನು ತಿಳಿಯುತ್ತೇನೆ. ಆದ್ದರಿಂದ ಆರ್. ಎಸ್. ಎಸ್. ವು ಇಂದು ಸ್ವತಂತ್ರವಾಗಿದೆ.

ಆರ್. ಎಸ್. ಎಸ್.ವು ಈ ಸಂಗತಿಗಳನ್ನು ಗಮನಿಸಬೇಕೆಂದೂ ಮತ್ತು ಹಿಂದೂಸ್ಥಾನದ ಅಭಿವೃದ್ಧಿಗಾಗಿ ನಿಷ್ಠೆಯಿಂದ ಕಾರ್ಯ ಮಾಡಬೇಕೆಂದೂ ನಾನು ಹೇಳಬಯಸುತ್ತೇನೆ. ತನ್ನ ಸಭಾಸದರ ಮುಖಾಂತರ ಜಾತ್ಯಂಧತೆಯನ್ನು ಹಬ್ಬಿಸುವ ಮತ್ತು ದೇಶದ ನಾಯಕರನ್ನು ನಿಂದಿಸುವ ತನ್ನ ಹಳೇ ಅಭ್ಯಾಸಗಳಿಗೆ ಅದು ಅಂಟಿಕೊಳ್ಳಕೂಡದು.

For all your Medical requirements

PATENT & PRESCRIBED

MEDICINES

PLEASE DO VISIT

Dwaraknath Medical Stores

Bangalore Road, BELLARY.

Reasonable Rates & Prompt Delivery.

ನಿಮ್ಮ ಎಲ್ಲಾ ವೈದ್ಯ ಸಂಬಂಧ ಬೇಡಿಕೆ

ಎಲ್ಲಾ ತರದ ಔಷಧ ಸಾಮಗ್ರಿಗಳಿಗೆ

ನಮ್ಮಲ್ಲಿಗೆ ಬಂದು ತೃಪ್ತಿ ಪಡೆಯಿರಿ.

ದ್ವಾರಕನಾಥ ಮೆಡಿಕಲ್ ಸ್ಟೋರ್ಸ್

ಬೆಂಗಳೂರು ರೋಡ್ ಬಳ್ಳಾರಿ.

ನ್ಯಾಯವಾದ ಬೆಲೆ

ನೇತಾಜಿ ಸುಭಾಸ ಚಂದ್ರಬೋಸರು ಜೀವಂತರಿರುವರು

ಸುಭಾಸರ ಅಣ್ಣ ಶರತಬೋಸರ ಹೇಳಿಕೆ.

ಕರ್ನಾಟಕ ಪ್ರಾಂತೀಯ ಯುವಕ ಪರಿಷತ್ತನ್ನು ದಾವಣಗೆರೆಯಲ್ಲಿ ಉದ್ಘಾಟಿಸುತ್ತಾ ಸುಭಾಸರ ಬಗ್ಗೆ ಈ ರೀತಿ ಹೇಳಿದರು

ನೇತಾಜಿ ಸುಭಾಸಚಂದ್ರಬೋಸ್ ಜೀವಂತರಿದ್ದಾರೆ.

ಎಂದೋ ಒಂದು ದಿನ ಭಾರತಕ್ಕೆ ಅವರು ಬರುವರು ವಿಮಾನ ಅಪಘಾತದಲ್ಲಿ ಅವರು ಮರಣಹೊಂದಿದರೆಂಬುದು ಕಟ್ಟು ಕಥೆ. ನಾನು ಕೂನೂರಿನ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿದ್ದಾಗ ಆತನು ಸತ್ತನೆಂಬ ವಾರ್ತೆಯನ್ನು ಕೇಳಿದೆನು ಆದರೆ ನಂಬಲಿಲ್ಲ ನಾನು ಬಿಡುಗಡೆಯಾಗಿ ಹೊರಬಂದ ಮೇಲೆ ವಿಮಾನ ಅಪಘಾತದಲ್ಲಿ ಮರಣ ಹೊಂದಿದ ಅನೇಕ ಕಥೆಗಳನ್ನು ಕೇಳಿದೆ ಆದರೆ ನನಗೆ ವಿಶ್ವಾಸವಾಗಲಿಲ್ಲ ನಾನು ಯೂರೋಪಿಗೆ ಹೋದಾಗ ನೇತಾಜಿಯನ್ನು ಸಂದರ್ಶಿಸಿದೆಂದು ಅನೇಕರು ಅಂದಿದ್ದಾರೆ ಇದು ಸತ್ಯವಲ್ಲ ನನ್ನ ಮಿತ್ರರಾದ ರಾಘವಿ ನೋಂದಪಾಲರಾದರೂ ಈ ಕಥೆಗಳನ್ನು ನಂಬುವುದಿಲ್ಲ. ಯುರೋಪಿನಲ್ಲಿ ನಾನು ಒಬ್ಬ ಪತ್ರಿಕೋದ್ಯೋಗಿಯನ್ನು ಭೆಟ್ಟಿಯಾದೆ ಆ ಕಾಲದಲ್ಲಿ ಆಕೆಯು ಜಪಾನಿನಲ್ಲಿದ್ದಳು ಈ ಮರಣದ ವಿಷಯದ ಪೂರ್ವೋತ್ತರವನ್ನು ಕಂಡು ಹಿಡಿಯಲು ಆಕೆಯು ಬಹು ಪ್ರಯತ್ನಪಟ್ಟಳಾದರೂ ಸಫಲವಾಗಲಿಲ್ಲ ಆಕೆಯು ವರ್ಣಿಸಿದ ಕಥೆಗಳನ್ನು ನಂಬುವುದಿಲ್ಲ

ಈ ಕಾರಣ ನೇತಾಜಿಯು ಜೀವಂತರಿದ್ದು ಶೀಘ್ರದಲ್ಲಿಯೇ ನಮ್ಮ ದೇಶಕ್ಕೆ ಮರಳಿಬರುವರೆಂದು ನನಗೆ ವಿಶ್ವಾಸವಿದೆ

ಹೈದರಾಬಾದು ಸಂಸ್ಥಾನದಲ್ಲಿ ಜಾಗೀರುಗಳನ್ನೆಲ್ಲಾ ರದ್ದು ಮಾಡಲು ತಕ್ಕ ಶಾಸನವು ಏರ್ಪಡುತ್ತಲಿದೆಂದು ಸರ್ಕಾರಿ ವರ್ಗಗಳಿಂದ ತಿಳಿಯಬರುತ್ತಲಿದೆ

S. Krishnamurthy Rao, B. Sc.,

PRINCIPAL AGENT.

New India Assurance Co., Ltd.

BELLARY.

Undertakes Insurance of all kinds i,e;
LIFE, FIRE, MOTOR, ETC. ETC.
The company is noted for promptness in quick settlement of claims. It is one of the biggest Insurance companies operating in Indian Union.

Hollo !!

NarasepalliW orkshops

BELLARY,

Undertake Turning Electric

Welding & Tempering
of
Spare parts of all kinds

Reasonable charges. Trial Solicited

Telegrams **OIL MILLS**

Telephone **57**

ತಾರಾನಾಥ ಆಯುರ್ವೇದ ವಿದ್ಯಾಪೀಠ
(ಸಂಗನಕಲ್, ಬಳ್ಳಾರಿ)
ಸ್ವಾಮಿ ರಾಯಾಚಾರ್ಯ ತಾರಾನಾಥ ಆಶ್ರಮ
—(0)—

ಕೀರ್ತಿಶೇಷ ಪಂಡಿತ ತಾರಾನಾಥರ ಹೆಸರನ್ನು ಕೇಳದೆ ಇದ್ದವರು ಕರ್ನಾಟಕ ಆಂಧ್ರರಲ್ಲಿ ವಿಶೇಷತಃ ನಮ್ಮ ಬಳ್ಳಾರಿಯಲ್ಲಿ ತೀರವಿರಳ. ಸಾಹಿತ್ಯ, ಸಂಗೀತ, ನಾಟ್ಯಾದಿಕಲೆಗಳಿಗಾಗಿ, ವೈದ್ಯ, ವೇದಾಂತ, ವಾಙ್ಮಯ ಶಾಸ್ತ್ರಗಳಿಗಾಗಿ ತಮ್ಮ ಜೀವನವನ್ನೇ ಮೀಸಲಾಗಿರಿಸಿ ಸವೆಸಿದರು ಪಂಡಿತ ತಾರಾನಾಥರು. ಅಂತಃ ಪ್ರಾಂತೀಯದಲ್ಲಿ ಅತಿಸಾಮಾನ್ಯ ವ್ಯಕ್ತಿಗಳಾಗಿ ಫ್ರಾನ್ಸ್, ಇಂಗ್ಲೆಂಡ್ ಮುಂತಾದೆಡೆಗಳಿಂದ ಪಂಡಿತವರ್ಯರನ್ನು ತಾವಿದ್ದಲ್ಲಿಗೇ ಆಕರ್ಷಿಸಿ, ಅವರ ಜ್ಞಾನಲಾಲಸೆಯನ್ನು ತೃಪ್ತಿಗೊಳಿಸಿದರು. ಇವರಿಗಿದ್ದ ಹೂವಿನ ನೆಲೆಯಾಗಿ ನಿಂತದ್ದು ತುಂಗಭದ್ರೆಯ ಹಳ್ಳಿಯೊಂದರಲ್ಲಿ. ಆ ತುಂಗತೀರದಲ್ಲಿಯೇ "ಪ್ರೇಮಾಯತನ"ವೆಂಬ ಆಶ್ರಮವನ್ನು ೧೯೨೧ರಲ್ಲಿ ಸ್ಥಾಪಿಸಿ, ಸಂಸ್ಕೃತಿ ಶಿಕ್ಷಣವನ್ನು ವಿಶೇಷತಃ ಆಯುರ್ವೇದ ತತ್ವಗಳನ್ನು ಕಲಿಸಿ ಜನಸೇವೆ ಮಾಡುತ್ತಾ ಧನಮಾನಗಳಿಸಿ ಸ್ವತಂತ್ರ ಜೀವನವನ್ನು ಸಾಗಿಸುತ್ತಾ ಸ್ವಪರ ಪ್ರಗತಿಯ ಜೀವಿಗಳಾಗುವಂತೆ ಯುವಕ ಯುವತಿಯರಿಗೆ ಈ ಆಶ್ರಮದಲ್ಲಿಯೇ ಶಿಕ್ಷಣ ಕೊಡುತ್ತಿದ್ದರು. ಎಷ್ಟೋ ಕಠಿಣ ಕಾಹಿಲೆಗಳನ್ನು ಗುಣಪಡಿಸಿದ ಜಟಿಲ ಸಮಸ್ಯೆಗಳನ್ನು ಪರಿಹರಿಸಿದ ಕೀರ್ತಿ ಇವರಿಗಿದೆ. ಇಂಥಾ ಮಹನೀಯರು ನಮ್ಮನ್ನಗಲಿ ಏಳೆಂಟು ವರುಷಗಳಾಗುತ್ತ ಬಂತು. ಇವರ ಸ್ಮಾರಕಕ್ಕಾಗಿ ನಿಧಿ ಸಂಗ್ರಹದ ಮಹತ್ಕಾರ್ಯ ಹೆಚ್ಚಾಗಿ ನಡೆಯಲಿಲ್ಲ. ಇದೀಗ ಲಕ್ಷೋಪಲಕ್ಷ ಸ್ಮಾರಕ ನಿಧಿಗಳು ಟ್ರಸ್ಟಿಗಳ ಮುಷ್ಟಿಯಲ್ಲಿಯೇ ಬೇಂಕಿನಲ್ಲಿಯೋ, ನೊಡೆಕಿ ಮಿಡುಕುತ್ತ ಗುನಾಗ ತಾರಾನಾಥ ಸ್ಮಾರಕವು ೧-೮-೪೭ರಲ್ಲಿ ತಾರಾನಾಥ ಆಯುರ್ವೇದ ವಿದ್ಯಾಪೀಠದ ರೂಪವಾಗಿ ಬಳ್ಳಾರಿಯ ಸಮೀಪದಲ್ಲಿರುವ ಸಂಗನಕಲ್ಲಿನಲ್ಲಿ ಸ್ಥಾಪಿತವಾಯಿತು. ಪುರಪ್ರಮುಖರನ್ನೊಳಗೊಂಡ (Registered body) ಈ ಪೀಠದ ವ್ಯವಸ್ಥೆ ಮಾಡಲಾಗಿದೆ.

ತಾರಾನಾಥರ ಧ್ಯೇಯ, ಸ್ಫೂರ್ತಿಗಳನ್ನೇ ಇಂದಿನ ಯುವಕರಿಗೆ ಯಥಯೋಗ್ಯವಾಗಿ ಮೈಗೂಡುವಂತೆ ವಿದ್ಯಾರ್ಥಿಗಳಿಗೆ ತರಬೇತಿ ಕೊಡಲಾಗುತ್ತಿದೆ. ಶಿಕ್ಷಣವು ವೈದ್ಯಪ್ರಧಾನವಾಗಿದ್ದು S. S. L. C. ಮುಗಿದ ವಿದ್ಯಾರ್ಥಿಗಳಿಗೆ ನಾಲ್ಕು ವರುಷಗಳಲ್ಲೇ ಆಯುರ್ವೇದದಲ್ಲಿ ಯೋಗ್ಯ ಮಟ್ಟದ ತಜ್ಞತೆಯನ್ನೂ ವ್ಯವಹಾರಕ್ಕೆ ಬೇಕಾಗುವಷ್ಟು ಎಲೋಪೇಥಿಯನ್ನೂ (Working knowledge of Allopathy) ಮತ್ತು ಬಾಲರೋಗ ಚಿಕಿತ್ಸೆಗೆ ಬೇಕಾಗುವ Bio-chmistry ಯನ್ನು ಕಲಿಸಲಾಗುವದು. ೩೬ ಜನ ವಿದ್ಯಾರ್ಥಿಗಳಿಂದ ಆರಂಭವಾದ ವಿದ್ಯಾಪೀಠದಲ್ಲಿ ಈಗ ೭೦ ಜನರಿದ್ದಾರೆ. ಈ ವಿದ್ಯಾರ್ಥಿಗಳಲ್ಲಿ ೧೦೦ಕ್ಕೆ ಎಂಭತ್ತರಷ್ಟು ದ. ಕನ್ನಡ ಜಿಲ್ಲೆಯವರು. ವಿದ್ಯಾಪೀಠದಿಂದ ಕೊಡಲಾಗುತ್ತಿರುವ ವಿದ್ಯಾರ್ಥಿ ವೇತನಾದಿ ರಿಯಾಯಿತಿಗಳೆಲ್ಲಾ ಹೆಚ್ಚಾಗಿ ಬಳ್ಳಾರಿಯವರಿಗೇ ಮೀಸಲಾಗಿದ್ದರೂ ಕೂಡ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳಲ್ಲಿದ್ದು ವಿಚಾರಣೀಯವೇ. ಇಲ್ಲಿ ವಿದ್ಯಾರ್ಥಿನಿಯರೂ ಕೂಡ ಶಿಕ್ಷಣ ಪಡೆಯುತ್ತಲಿದ್ದಾರೆ. ಮೊದಲಿನವರುಷದ ೬ ತಿಂಗಳಲ್ಲಿ ಹಿಂದಿ, ಸಂಸ್ಕೃತ, ಭಾಷೆಗಳು ಕಡ್ಡಾಯವಾಗಿ ಕಲಿಸಲಾಗುವವು. ಸಂಸ್ಕೃತಿ ಶಿಕ್ಷಣ (cultural training) ಗುಣ ಶಿಕ್ಷಣ (character building) ಗಳಿಗೆ ವಿಶೇಷ ಮಹತ್ವಕೊಡಲಾಗಿದೆ. ಸರ್ವಧರ್ಮ ಸಮನ್ವಯ ಶಿಕ್ಷಣಕ್ಕಾಗಿ ಭಗವದ್ಗೀತಾ, ಕುರಾನ್ ಮತ್ತು ಬೈಬಲ್ ಗ್ರಂಥಗಳ ಸಾರವನ್ನು ಕಲಿಸಲಾಗುತ್ತಿದೆ

ಇಲ್ಲಿಯ ವೈದ್ಯಕೀಯ ಶಿಕ್ಷಣ ಪ್ರಣಾಲಿಯನ್ನು ಗಮನಿಸಿ (All India Ayurveda congress Delhi) ಯವರು ಈ ವಿದ್ಯಾಪೀಠಕ್ಕೆ ಮನ್ನಣೆಕೊಟ್ಟು (Affiliatin) ಆಯುರ್ವೇದ ಕೊಂಗ್ರೆಸವರವಾಗಿ ಜರುಗುವ ಭಿಷಕ್, ವಿಶಾರದ, ಮತ್ತು ಆಚಾರ್ಯ ಪರೀಕ್ಷೆಗಳಿಗೆ ಇಲ್ಲಿಯೇ ಪರೀಕ್ಷಾ ಕೇಂದ್ರ ನಿಟ್ಟಿದ್ದಾರೆ. ಈ ವಿದ್ಯಾಪೀಠದ ಕೊಲೇಜು ಶಿಕ್ಷಣಕ್ಕೆ ಮದ್ರಾಸು ಸರಕಾರದವರು ಸಹಾ ತಮ್ಮ Central board of Indian medicine ದ್ವಾರಾ ಪರಿಶೀಲಿಸಿ Rceognition ಕೊಟ್ಟಿದ್ದಾರೆ. ಅಲ್ಲದೆ ಇಡೀ ಕರ್ನಾಟಕ ಮತ್ತು ರಾಯಲ್ಸೀಮಾಗಳಲ್ಲಿ ಸರಕಾರದಿಂದ ಮನ್ನಣೆ ಪಡೆದ ಆಯುರ್ವೇದ ಮೆಡಿಕಲ್ ಕೊಲೇಜು ಇದಲ್ಲದೆ ಇನ್ನೊಂದಿಲ್ಲ.

ಈ ವಿದ್ಯಾಪೀಠವು ಶಕ್ಯವಿದ್ದಷ್ಟು ಆದಿಮ ವೆಚ್ಚದಲ್ಲಿ, ಕಡಿಮೆ ಹಣದಲ್ಲಿ ಹೆಚ್ಚು ಜ್ಞಾನಾನುಭವಗಳನ್ನು ಉಂಟುಮಾಡಿಸುವ ವಿಧಾನಗಳನ್ನು ಕೈಕೊಳ್ಳುತ್ತಲಿದೆ. ಬಳ್ಳಾರಿಯ ಪುರಪ್ರಮುಖರೂ ವೈದ್ಯಸ್ನೇಹ ಸಂಘಗಳೂ ಯಥಾಶಕ್ತಿ ಸಹಾಯ ನೀಡುತ್ತಾ ಈ ವಿದ್ಯಾಪೀಠದ ಅಂತಸ್ತನ್ನು ಉತ್ತಮಗೊಳಿಸುತ್ತಿರುವುದು ಅತ್ಯಂತ ಪ್ರಶಂಸಾರ್ಹವಾಗಿದೆ.

ಡಾಕ್ಟರ್ ಮೆಕಿನ್ಸೋನ್ ಮುಂತಾದ ಮಹನೀಯರು ಆಂಗ್ಲಾಯುರ್ವೇದ ತತ್ವ ಪ್ರಯೋಗ ರಹಸ್ಯಗಳನ್ನು ಇಲ್ಲಿ ಬೋಧಿಸುತ್ತಿರುವ ಸಂಗತಿ ಅತ್ಯಂತ ಸತ್ಯವಾದುದೇ. ಸರಿ. ಶ್ರೀನಿವಾಸ್ ಕೆ. ಸದಾಶಿವಶಾಸ್ತ್ರಿ B. A. B. L. Advocat ರವರು ಇಲ್ಲಿಯ ವಿದ್ಯಾರ್ಥಿಗಳಿಗೆ ಕಾಯಿದೆ ಜ್ಞಾನವನ್ನು ಉಂಟುಮಾಡಿಕೊಡುತ್ತಿರುವುದು ಮತ್ತು ವಿದ್ಯಾಪೀಠದ ಪ್ರಧಾನಾಂಗಗಳೊಂದಾಗಿರುವ ಸರ್ವೋದಯ ಶಿಕ್ಷಣದ ಭಾರವನ್ನು ಬಳ್ಳಾರಿಯ ಬಾಪೂಜಿಯಂತಿರುವ, ಸರ್ವೋದಯ ಜೀವಿಗಳೇ ಆಗಿರುವ ಶ್ರೀ ಟೇಕೂರು ಸುಬ್ರಮಣ್ಯಂರವರು ನಿರ್ವಹಿಸಿಕೊಳ್ಳುವುದು ಸಂತೋಷದ ಸಂಗತಿ.

ನಮ್ಮ ದೇಶರಾಜ್ಯದ ಆರೋಗ್ಯಭಾಗ್ಯದ ಹೊಣೆಯೇ ತನ್ನ ಪ್ರಾಣವಾಯುವೆಂದು ತಿಳಿದಿರುವ ಈ ಸಂಸ್ಥೆಯು ಈಗಾಗಲೇ ೬ ಹಳ್ಳಿಗಳಲ್ಲಿ ತನ್ನ ಚಿಕಿತ್ಸೆ ಕೇಂದ್ರಗಳನ್ನು ತೆರೆದ ವೈದ್ಯಕೀಯ ಸಹಾಯವನ್ನು ಒ

ABC
ಸಿಟಿ ಲಾಡ್ಜ್
ಊಟದ ಹೋಟೆಲ್, ಬೆಂಗಳೂರು ರೋಡ್, ಬಳ್ಳಾರಿ.

● ಸುಂದರ ವಸತಿಸ್ಥಾನ
● ಗಾಳಿ ಬೆಳಕುಗಳ ಸ್ವಚ್ಛ ರೂಂಗಳು.
● ತಣ್ಣೀರು, ಬಿಸಿನೀರಿನ ಸ್ನಾನ.
● ವ್ಯಾಪಾರ, ಉದ್ಯಮಗಳಿಗೆ ಮಧ್ಯಸ್ಥಳ.
● ರುಚಿ, ಆರೋಗ್ಯಕರ ಭೋಜನ ಮತ್ತು
● ವಿನಯಶೀಲ ನೌಕರವರ್ಗ. ಫಲಹಾರ

ಪರ್ಮಿಟ್ ಕೊಟ್ಟಲ್ಲಿ ಸಂತೋಷ ಕೂಟಗಳಿಗೂ ಅಲ್ಪೋಪಹಾರಗಳಿಗೂ ಬೇಕಾದಂಥ ಪಕ್ವಾನ್ನ ಫಲಾಹಾರಗಳನ್ನು ಸರಿಯಾದ ದರಗಳಿಂದ ಒದಗಿಸುತ್ತೇವೆ

ಬಳ್ಳಾರಿಗೆ ಬಂದರೆ ಇಲ್ಲಿಯೇ ವಸತಿಮಾಡಲು ಮರೆಯಬೇಡಿರಿ.

While at Bellary forget not to stay at
THE BEST BOARDING & LODGING HOUSE
City Lodge, BANGLORE ROAD, BELLARY.

TENDER NOTICE.

Sealed tenders are invited by the under signed upto 19—8—49 for the supply of stationery articles for 49-50 for this office use. The details can be had from this office on any working day.

The Panchayat Board, Kampli. (Dt. Bellary) — P. G Venkataramanappa, Executive Officer.

ಟೆಂಡರ್ ನೋಟೀಸು.

ನಮ್ಮ ಆಫೀಸಿಗೆ 1949-50 ರ ವರ್ಷಕ್ಕೆ ಸ್ಟೇಷನರಿ ವಸ್ತುಗಳನ್ನು ಪೂರೈಸಲು ಸೀಲಾದ ಟೆಂಡರುಗಳು 19-8-49 ರ ವರೆಗೆ ಸ್ವೀಕರಿಸಲಾಗುತ್ತವೆ. ನಮ್ಮ ಆಫೀಸಿನಿಂದ ರಜಾವಿಲ್ಲದ ದಿನ ತಿಳಿಯಬಹುದು.

ಪಂಚಾಯ್ತಿಬೋರ್ಡ್, ಕಂಪ್ಲಿ. — ಪಿ. ಜಿ. ವೆಂಕಟರಮಣಪ್ಪ, ಎಕ್ಸಿಕ್ಯೂಟಿವ್ ಆಫೀಸರ್.

ದಗಿಸುತ್ತಿದೆ. ಮತ್ತು ಶಿಕ್ಷಣದ ಕೊನೆಯ ವರ್ಷದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ೬ ತಿಂಗಳಾದರೂ ಹಳ್ಳಿಗಳಲ್ಲಿರುವ ಕೇಂದ್ರಗಳಲ್ಲಿ ಜನಸೇವೆ ಮಾಡಬೇಕೆಂಬ ನಿಯಮವನ್ನು ಕಡ್ಡಾಯವನಾಡಲಾಗಿದೆ. ಆದಾದನಂತರವೇ ಆ ವಿದ್ಯಾರ್ಥಿಯು ಈ ವಿದ್ಯಾಪೀಠದ L A M P. ಪದವಿಗೆ ಅರ್ಹನಾಗುತ್ತಾನೆ ಅಲ್ಲಿ Epidemies (ಜನಪದವಿಧ್ವಂಸಕ) ರೋಗಗಳು ಹಳ್ಳಿಗಳಲ್ಲಿ ತಲೆದೋರಿದಾಗ ಇಲ್ಲಿಯ ವಿದ್ಯಾರ್ಥಿಗಳು ಅಲ್ಲಿಯೇ ತಮ್ಮ ಕ್ಯಾಂಪು ಹಾಕಿ ಎಲ್ಲಾರೀತಿಯ ಸಹಾಯವನ್ನು ನೀಡುತ್ತಾರೆ. ಮತ್ತು ಕಳೆದ ವರ್ಷ ಪ್ಲೇಗು ಕಾವಲ್ಲಿ ಕೊಲೆರಾಬೇನೆ ತಗಲಿದಾಗ ಅತ್ಯಂತ ಶ್ರದ್ಧೆಯಿಂದ ರೋಗನಿವಾರಣಾಕಾರ್ಯವನ್ನು ನಡೆಯಿಸಿ ಜನತೆಯ ಪ್ರೀತಿಗೆ ಪಾತ್ರರಾಗಿದ್ದಾರೆ.

ಇಲ್ಲಿನ ಶಿಕ್ಷಣದ ಮಟ್ಟವನ್ನು ಇನ್ನೂ ಹೆಚ್ಚಿಸಬೇಕೆಂಬ ಅಭಿಲಾಷೆಯಿಂದ ಇಲ್ಲಿ ಒಂದು ಆಯುರ್ವೇದ ಸಂಶೋಧನಾ ಶಾಖೆಯು ಆರಂಭವಾಗಲಿದೆ ಈಗಾಲೇ ಒಂದು ಡಿಸೆಕ್ಷನ್ ಹಾಲ್ (Dissection Hall) ಕಟ್ಟಿಸುವ ಯೋಜನೆ ಭರದಿಂದ ನಡೆದಿದೆ

ಕರ್ಣಾಟಕಾಂಧ್ರ ಪ್ರೆಸ್ ಪ್ರಪಂಚದವರು ವಿಶೇಷತಃ ಬಳ್ಳಾರಿಯವರು ಅದರಲ್ಲಿಯೂ ನವಭಾರತದವರು ಈ ವಿದ್ಯಾಪೀಠಕ್ಕೆ ತಮ್ಮ ಪ್ರೋತ್ಸಾಹವನ್ನು ಹೆಚ್ಚಾಗಿ ನೀಡುತ್ತಿರುವದು ತುಂಬಾ ಅಭಿನಂದನೀಯ ಈ ಪೀಠದ ಉಪಯುಕ್ತತೆಯನ್ನು (Utility) ಅರಿತು ಜನತೆಯು ಮುಂದೆ ಬಂದು ಉದಾರ ಸಹಾಯನೀಡಿದರೆ ತನ್ನ ಕಾರ್ಯಕ್ಷೇತ್ರವನ್ನು ಇನ್ನೂ ಹೆಚ್ಚಾಗಿ ವಿಸ್ತಾರಗೊಳಿಸಬಹುದು. ಮತ್ತು ಹಾಗೆ ಮಾಡಬೇಕೆಂಬ ಪ್ರಬಲೇಚ್ಛೆಯೇ ಈ ವಿದ್ಯಾಪೀಠದ ಜೀವನದುಸಿರು.

ಜೈ-ಹಿಂದ್

ಹಿಂದೀ ಮಹಾವಿದ್ಯಾಲಯ ಬಳ್ಳಾರಿ

[ಮದ್ರಾಸ್ ಸರ್ಕಾರದಿಂದ ಮಾನ್ಯ]

ಪ್ರಾಥಮಿಕದಿಂದ ವಿಶಾರದವರೆಗೆ ಎಲ್ಲಾ ತರಗತಿಗಳಲ್ಲೂ ಸೆಪ್ಟಂಬರ್ 49 ಮೊದಲನೆಯ ವಾರದಿಂದ ವಿದ್ಯಾರ್ಥಿವಿದ್ಯಾರ್ಥಿನಿಯರನ್ನು ಸೇರಿಸಲಾಗುತ್ತೆ. ತರಗತಿಗಳಿಗೆ ಬೇಕಾದ ಪಾಠ್ಯಪುಸ್ತಕಗಳು ವಿದ್ಯಾಲಯದಲ್ಲೇ ಬಿಕರಿಗೆದೊರೆಯುತ್ತವೆ.

(ಶ್ರೀ ನಾವಿಗ ಕೃಷ್ಣಮೂರ್ತಿಯವರು ಕಮ್ಮರ್ಣೀರದಲ್ಲಿ ಬರೆದ ಲೇಖ)

ಮಸ್ಸೂರಿ

ಮಸ್ಸೂರಿ ಇಂಗ್ಲೀಷರು ಇಲ್ಲಿಗೆ ಬಂ [illegible] ಇಂಗ್ಲೀಷರು [illegible] ತ್ತಿರಲಿಲ್ಲವಂತೆ.

[illegible] ಆಗಿನ [illegible] ಐದು [illegible] ನಲ್ಲಿ ಕೆಲವು ದಿನ ಇದ್ದು [illegible].

[illegible] ವಸ್ತ್ರಧಾರಿಯಾದ [illegible] ಆಗ ನಮ್ಮ [illegible] ಒಂದೊಂದು [illegible]

ಗೆ ಹೋಗಿಬಂದಿದ್ದ. ನಮ್ಮನ್ನು ಪ್ರಯಾಣಿಸಿದ್ದ [illegible] ಇಲ್ಲಿ ಏಕ [illegible] (One way traffic) [illegible] ಮತ್ತು [illegible] ಕೆಳಗೆ [illegible] ಸಿಕ್ಕಿಕೊಳ್ಳುವುದರಿಂದ [illegible] ಮೇಲಕ್ಕೆ [illegible] ರೂ. ಹೀಗೆ [illegible].

ಹಿಮಾಲಯ [illegible]

ನಾವು [illegible] ಗೆ [illegible] ಗಂಟೆ. [illegible] ಇಲ್ಲಿಂದ [illegible] ನಾವು [illegible] ಹೋದೆವು. [illegible] ಕೊಂಡು [illegible] ನಾವು

ನಾಲ್ಕು ಜನರಿದ್ದೆವು. ಸಜ್ಜಿಗೆಯು ಮಾಯಿಸ ಎರಡು ಅಂಬೋಡೆ, ಬ್ರೆಡ್ಡಿನ ತುಣುಕು, ಕಾಫಿ, ಇಷ್ಟಕ್ಕೆ ನಾಲ್ವರಿಗೆ ೮ ರೂ. ಚಾರ್ಜ ಮಾಡಿದ. ಕೂಡಲೆ ನಾವು ಮಸ್ಸೂರಿಯ ಅಕ್ಷಿಗೆ [illegible] ಹೋದೆವು.

ಅಲ್ಲಿಂದ ನಡೆದುಕೊಂಡು ಒಬ್ಬ ಎತ್ತರವಾದ (Gun-Hill) ಕೋವಿಗುಡ್ಡಕ್ಕೆ ಹೋದೆವು. ಸ್ವಾಮಿಯವರು ಮಾತ್ರ ರಿಕ್ಷಾದಲ್ಲಿಯೇ ಬಂದರು. ಕೋವಿಗುಡ್ಡದಿಂದ ಮಸ್ಸೂರಿ, ಲ್ಯಾಂಡರ್ ಮುಂತಾದ ಪ್ರದೇಶಗಳು, ಹಿಮಾಲಯ ಪರ್ವತದ ಶ್ರೇಣಿಗಳು, ಕೇದಾರನಾಥ, ಬದರೀನಾಥ ಶಿಖರಗಳು ಮುಂತಾದವು ಕಂಡವು. ಮಸ್ಸೂರ್ಯ ೧ ಗಂಟೆಯ ಮೇಲಿದ್ದರೂ ತಣ್ಣನೆಯ ಗಾಳಿ ತುಂಬ ಆಹ್ಲಾದಕರವಾಗಿ ಬೀಸುತ್ತಿತ್ತು. ಅಲ್ಲಿಂದ ಕೆಳಗಿಳಿದು ಒಂದು ಸ್ಟಾಲು ಹೋಟೆಲಿನಲ್ಲಿ ಐಸ್ ಕ್ರೀಂ ತಿಂದೆವು ಒಂದೊಂದಕ್ಕೆ ೧ ರೂ. ಸ್ವಾಮೀಜೀಯವರು ಮಾತ್ರ ವಿಶ್ರಾಂತಿ ತೆಗೆದುಕೊಳ್ಳಲು ಕೆರೆಯ ಕಡೆಗೆ ಹೊರಟು ಹೋದರು. ನಾವು ಅಲ್ಲಿಯೇ ಸುತ್ತಾಡುತ್ತಾ ಕೆಲವು ಸುಂದರ ಛಾಯಾಚಿತ್ರಗಳನ್ನು ತೆಗೆದೆವು.

★ G. E. C. ★

BATTREY RADIO
The finest set yet made for all world. All way listening.

ಜಿ. ಇ. ಸಿ. ಬ್ಯಾಟರಿ ರೇಡಿಯೋ
(ಆಕಾಶವಾಣಿ ಯಂತ್ರ ಇಂಗ್ಲೆಂಡಿನಲ್ಲಿ ತಯಾರಿಸಲ್ಪಟ್ಟ ದ)

ನಿಮ್ಮ ಮನೆಯಲ್ಲಿ ಕುಳಿತು
- ಪ್ರಪಂಚದ ಸುದ್ದಿಗಳೆಲ್ಲಾ ಕೇಳಿರಿ
- [illegible] ,,
- ಸುಪ್ರಸಿದ್ಧ ಗಾಯಕರ ವಾದ್ಯಗಳನ್ನು ,,
- ಪ್ರಪಂಚದ [illegible] ಗಳನ್ನು ,,
- ಪ್ರಸಿದ್ಧರಾದ ಉಪನ್ಯಾಸಗಳನ್ನು ,,
- ಹರಿಕಥಾ, ಭಜನೆ [illegible] ಗಳನ್ನು ,,
- ವಾಸ್ತವನ ಪ್ರಧಾನವಾದ ನಾಟಕ ಭಾಗಗಳನ್ನು ,,

ಬ್ಯಾಟರಿಯಿಂದ ನಡೆಯುವುದ. [illegible] ರೇಡಿಯೋ ಬೆಲೆ ಸುಲಭ. ಹೆಚ್ಚಿನ ವಿವರಗಳಿಗೆ ಬರೆಯಿರಿ.

ಏಜೆಂಟ್ಸ್:—
ಜೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಕಾಶ್ಮೀರದ ಅರಕ್
(ಮನೆಯ ವೈದ್ಯ)

ಎಲ್ಲರ ಮನೆಯಲ್ಲೂ ಇರಬೇಕಾದ ಅವಶ್ಯಕ ಔಷಧ



ಮಕ್ಕಳಿಗೆ [illegible] ದಾಹ, ತಲೆನೋವು, ಕೆಮ್ಮು, ನೆಗಡಿ, ಉಬ್ಬಸ, ಅಜೀರ್ಣ, ಶೀತ ಜ್ವರ, ಕ್ರಿಮಿ [illegible] ಕಡಿತಕ್ಕೆ [illegible] ಗುಣಕಾರಿ, ಹೊರಗೂ ಹಚ್ಚಬಹುದು ಮತ್ತು ಒಳಗೂ ತೆಗೆದುಕೊಳ್ಳಬಹುದು. ಅನುಪಾನ ವಿವರವು ಬಾಟಲಿಯಲ್ಲಿ ಇರುವುದು.

ಎಲ್ಲಾ ಷಾಪುಗಳಲ್ಲೂ ದೊರೆಯುತ್ತದೆ.

ಜೆಚ್. ಎಸ್. ಅಂಡ್ ಸನ್ಸ್, ಬಳ್ಳಾರಿ.

ಪ್ರಭಾತದಲ್ಲಿ ಕನ್ನಿಯಿನ್ ಕಾದಲಿ

ಕ ಥಾ ಸಂ ಗ್ರ ಹ

—:X:—

ಸ್ವರ್ಣಪುರಿ ರಾಜನಿಗೆ ಆದಿತ್ಯ, ಚಂದ್ರಿಕೆ ಎಂಬ ಇಬ್ಬರು ಅವಳಿ ಮಕ್ಕಳು. ರಾಜನಿಲ್ಲದ ಸಮಯಕ್ಕೆ ಸೇನಾಧಿಪತಿ ದುರ್ಜಯನು ರಾಜ್ಯವನ್ನಪಹರಿಸಿ ಚಂದ್ರಿಕೆಯನ್ನು ಲಗ್ನವಾಗಲಿಚ್ಛಿಸುವನು. ರಾಜ ಸೇವಕನು ರಾಜಮಕ್ಕಳಿಬ್ಬರನ್ನೂ ಹಡಗುಹತ್ತಿಸಿ ಕಳುಹಿಸಿದಾಗ ತುಫಾನಿನಿಂದ ಹಡಗು ಮುಳುಗಿಹೋಯಿತು. ಚಂದ್ರಿಕೆಯನ್ನು ಬೆಸ್ತರೂ, ಆದಿತ್ಯನನ್ನು ಕ್ಯಾಪ್ಟನ್ ಕಾಪಾಡುವರು. ಬೆಸ್ತರು ಚಂದ್ರಿಕೆಯನ್ನು ಮದುವೆಯಾಗಲು ಸ್ಪರ್ಧಿಸುವರು. ಚಂದ್ರಿಕೆಯು ಪುರುಷ ವೇಷದಿಂದ ತಪ್ಪಿಸಿಕೊಂಡು ವಸಂತಪುರಿ ರಾಜದರ್ಬಾರಿನಲ್ಲಿ ಕಲ್ಯಮಣಿ ಎಂಬ ಹೆಸರಿನಿಂದ ರಾಜಕವಿಯಾಗುವಳು.

ವಸಂತಪುರಿ ರಾಜನು ಘೋಷಾದೇವಿ ಎಂಬ ಸುಂದರಿಯನ್ನು ಪ್ರೇಮಿಸಿ, ಆಕೆಯು ಹಟದಿಂದಿರಲು ಬಾಲಕವಿ ಕಲ್ಯಮಣಿಯನ್ನು ಕಳುಹಿಸುವನು. ಘೋಷಳೆಯು ಕಲ್ಯಮಣಿಯನ್ನು ಪ್ರೇಮಿಸುವಳು. ಇತ್ತ ಆದಿತ್ಯನು ತನ್ನ ಸೋದರಿಯನ್ನು ಹುಡುಕುತ್ತಾ ಅಲಂಕಾರಭೂಪತಿಯನ್ನೋಡಿಸಿ ಘೋಷಳೆಯ ಬಳಿ ಬರುವನು. ಅಲ್ಲಿ ಇವರಿಬ್ಬರಿಗೆ ಪ್ರೇಮ ಉತ್ಪನ್ನವಾಗುವುದು. ಇದನ್ನರಿತ ರಾಜನು ಆದಿತ್ಯನನ್ನು ಕೈದುಮಾಡುವನು.

ಕಲ್ಯಮಣಿಯು ರಜಾ ತೆಗೆದುಕೊಂಡು ಹೋದಂತೆ ಮಾಡಿ ರೂಪವನ್ನು ಬದಲಾಯಿಸುವನು. ರಾಜನು ತಕ್ಷಣ ಪ್ರೇಮಿಸುವನು. ಆದಿತ್ಯ–ಕಲ್ಯಮಣಿ ಒಡಹುಟ್ಟಿದವರಾದದರಿಂದ ಒಂದೇ ರೂಪಿನಿಂದಿರುವರು. ನ್ಯಾಯಾಲಯದಲ್ಲಿ ಘೋಷಾದೇವಿಯನ್ನು ಪ್ರೇಮಿಸಿದ ಆದಿತ್ಯನು–ತಾನು ಕಲ್ಯಮಣಿಯಲ್ಲವೆಂದು ವಾದಿಸುವನು. ಈ ಸಮಯಕ್ಕೆ ಚಂದ್ರಿಕೆಯನ್ನು ಹುಡುಕುತ್ತ ಒಂದು ದುರ್ಜಯನು ಆಕೆಯನ್ನು ಬಲಾತ್ಕಾರದಿಂದ ಕೊಂಡೊಯ್ಯುವನು. ರಾಜನೂ ಇತರರೂ ಚಂದ್ರಿಕೆಯನ್ನು ಬಿಡಿಸುವರು. ಆದಿತ್ಯನೂ ತನ್ನ ತಂಗಿ ಚಂದ್ರಿಕೆಯೊಡನೆ ಕೂಡಿ ಸಂತೋಷಿಸುವರು. ಕಲ್ಯಮಣಿ ಯಾರೆಂಬುದು ರಾಜನಿಗೆ ತಿಳಿಯಲಿಲ್ಲ. ಘೋಷಾ–ಚಂದ್ರಿಕಾ–ಕಲ್ಯಮಣಿ–ಇವರುಗಳ ಅವಸ್ಥೆ ಏನು? ತೆರೆಯಮೇಲೆ ನೋಡಿ ಆನಂದಿಸಿರಿ.

ಉತ್ತಮ ಫಲಹಾರ! **ಭೋಜನ!!** **ವಸತಿಗೃಹ!!!**

ರುಚಿ — ಶುಚಿ — ಸೇವೆ.
ನಮ್ಮ ಧ್ಯೇಯ

ಸ್ಟೇಷನ್ನಿಗೆ ಸಮೀಪ — **ವ್ಯಾಪಾರೀ ಕೇಂದ್ರ**

Vasuvamba Restaurant
&
Amba Bhavan (B) Meals Hotel

ವಾಸುವಾಂಬ ರೆಸ್ಟೋರೆಂಟ್, ಅಂಬಾಭವನ (ಬಿ) ಊಟದ ಹೋಟೆಲ್

● **ಟೀಪಾರ್ಟಿಗಳ ಏರ್ಪಾಟಿನಲ್ಲಿ ಹೆಸರುವಾಸಿ** ●
ಸರ್ಕಾರಿ ನಿಯಮಗಳಿಗೊಳಪಟ್ಟು ಭೋಜನದ ವ್ಯವಸ್ಥೆ ಕೈಗೊಳ್ಳುವೆವು.

Radio-Lectric House
For
Rewinding of all Electrical Works

ರೇಡಿಯೋ-ಲೆಕ್ಟ್ರಿಕ್ ಹೌಸ್
ಬಳ್ಳಾರಿ.
ವಿದ್ಯುತ್ತಿನ ಸಂಬಂಧದ ಎಲ್ಲಾ ಕೆಲಸಗಳಿಗಾಗಿ ನಮ್ಮಲ್ಲಿಗೆ ಬನ್ನಿ

೧೦ ಮಿನಿಟಿನಲ್ಲಿ ಗುಣ
ಉತ್ತಮ ಪೇನ್ ಬಾಮ್
ದಶಗುಣ

225

BELLARY DISTRICT EMPLOYMENT OFFICE

(Govt. of India Ministry of Labour)

ನಿರುದ್ಯೋಗಿಗಳಿಗೆ ಉದ್ಯೋಗಗಳನ್ನು ದೊರಕಿಸುವ ಕಾರ್ಯಾಲಯ

ಉದ್ದೇಶ - ಕಾರ್ಯ ವರದಿ.

ಕೇಂದ್ರದ ಕೂಲಿಕಾರ ಮಂತ್ರಿವರ್ಗದ ಅಧೀನದಲ್ಲಿ ಪ್ರಾಂತೀಯ ಅಧಿಕಾರೀ ವರ್ಗದ ಮೂಲಕ ಬಳ್ಳಾರಿ ನಗರದಲ್ಲಿ ಜಿಲ್ಲಾ ಶಾಖೆಯು ೧೯೪೭ರಲ್ಲಿ ಸ್ಥಾಪಿತವಾಯಿತು. ೧೯೪೭ರಿಂದ ೧೯೪೮ನೆಯ ಏಪ್ರಿಲ್‌ವರೆಗೆ ಸೈನ್ಯದ ವಿವಿಧ ಭಾಗಗಳಿಂದ ನಿವೃತ್ತರಾದವರಿಗೆ ಮಾತ್ರ ರಿಜಿಸ್ಟರ್ ಮಾಡಲಾಗುತ್ತಿತ್ತು. ಕಳೆದ ವರ್ಷದಿಂದ ನಿರುದ್ಯೋಗಿಗಳಾದ ಎಲ್ಲಾ ಜನರ ಹೆಸರನ್ನು ನೊಂದಾಯಿಸಲಾಗುತ್ತಿದೆ. ಜಾತಿ-ಮತ-ಕುಲ-ಲಿಂಗ ಭೇದವಿಲ್ಲದೆ ಪಾಕೀಸ್ಥಾನದಿಂದ ಬಂದವರಷ್ಟರಿಗೇ ಅಲ್ಲದೆ ಎಲ್ಲರಿಗೂ ಉದ್ಯೋಗ ದೊರಕಿಸುವ ಕಾರ್ಯವನ್ನು ಈ ಸಂಸ್ಥೆಯು ಮಾಡುತ್ತಲಿದೆ. ಇದಕ್ಕೆ ಯಾವ ಫೀಯನ್ನೂ ಕೊಡಬೇಕಾಗಿಲ್ಲ. ಉಚಿತವಾಗಿ ಅಕ್ಷರಸ್ಥರನ್ನೂ, ನಿರಕ್ಷರಸ್ಥರನ್ನೂ ರಿಜಿಸ್ಟರ್ ಮಾಡಿಕೊಂಡು ಅವರಿಗೆ ಯೋಗ್ಯವಾದ ಕೆಲಸ ದೊರಕಿಸಲಾಗುತ್ತದೆ. ಡೆಲ್ಲಿಯಲ್ಲಿ ಡೈರೆಕ್ಟರ್ ಜನರಲ್‌ರವರಿದ್ದು ಪ್ರಾಂತದ ಮುಖ್ಯನಗರದಲ್ಲಿ ರೀಜನಲ್ ಡೈರೆಕ್ಟರ್ ಮುಖಾಂತರ ಪ್ರತಿಯೊಂದು ಜಿಲ್ಲೆಯಲ್ಲಿ ಜಿಲ್ಲಾ ಎಂಪ್ಲಾಯ್ಮೆಂಟಾಫೀಸರರ ದ್ವಾರಾ ಈ ಮುಖ್ಯ ಕಾರ್ಯವು ನಡೆಯುತ್ತಲಿದೆ. ಕೂಲಿಕಾರ ಕೆಲಸ-ಜವಾನ ವಾಚ್‌ಮ್ಯಾನ್ ಸಂಖಾ ಸ್ವಿಲ್ಲರ್ ವಗೈರೆ ಚಿಲ್ಲರ ಕೆಲಸಗಳಿಗೆ ಯಾವ ವಿದ್ಯಾಯೋಗ್ಯತೆಯೂ ಅವಶ್ಯಕವಿಲ್ಲ. ಆ ವರ್ಕಿಂತ ಹೆಚ್ಚಿನ ಕೆಲಸಗಳಿಗೆ ಶಾಲೆಯಲ್ಲಿ ಓದಿದ ಪ್ರಮಾಣ ಪತ್ರಗಳೊಂದಿಗೆ ಬರೆಯಬೇಕು ಇಲ್ಲವೇ ಆಫೀಸಿಗೆ ಬಂದು ಎಂಪ್ಲಾಯ್ಮೆಂಟಾಫೀಸರರನ್ನು ಕಾಣಬೇಕು. ನಿಮಗೆ **ಬಳ್ಳಾರಿಗೆ ಬರಲು ಕಷ್ಟವಿದ್ದರೆ ಜಿಲ್ಲಾ ಎಂಪ್ಲಾಯ್ಮೆಂಟಾಫೀಸರರಿಗೆ ನಿಮ್ಮ ಯೋಗ್ಯತೆ ವಗೈರೆ ಕುರಿತು ಒಂದು ಪತ್ರ ಹಾಕಬೇಕು.** ಅವರು ನಿಮ್ಮ ಯೋಗ್ಯತೆಗನುಸಾರವಾಗಿ ಸರಿಯಾದ ಪಟ್ಟಿಯಲ್ಲಿ ಸೇರಿಸಿ ರಿಜಿಸ್ಟರ್ ಮಾಡುವರು. ನಂತರ ಅವರು ಒಂದು ಕಾರ್ಡು ಕೊಡುವರು. ವಿವರಗಳ ಕಾರ್ಡನ್ನು ನೀವು ಭದ್ರವಾಗಿರಿಸಬೇಕು.

ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಆಜ್ಞೆಯಿಂದ ಸರಕಾರದ ವಿವಿಧ ಕಾರ್ಯಾಲಯಗಳಲ್ಲಿನ ಖಾಯಂ ಮತ್ತು ತಾತ್ಕಾಲಿಕ ಸ್ಥಾನಗಳನ್ನು ನಮ್ಮ ಆಫೀಸಿಗೆ ತಿಳಿಸುತ್ತಾರೆ. ಇದೂ ಅಲ್ಲದೆ ಎಂಪ್ಲಾಯ್ಮೆಂಟಾಫೀಸರರು ಆಫೀಸುಗಳಿಗೂ, ಖಾಸಗೀ ಮಾಲೀಕರ ಬಳಿಗೂ ಹೋಗಿ ಖಾಲಿ ಇರುವ ಸ್ಥಾನಗಳ ಯಾದಿಯನ್ನು ತಯಾರಿಟ್ಟಿರುವರು. ಜಿಲ್ಲಾ ಅಧಿಕಾರಿಗಳು - ಜಿಲ್ಲೆಯ ದೂರದೂರ ಭಾಗಗಳಿಗೂ ಹೋಗಿ ಬೇಡಿಕೆಗಳನ್ನು ನಿರೀಕ್ಷಿಸುವರು. ಅವರು ಸಂಚಾರಕ್ಕೆ ಹೋದಾಗಲೂ ರಿಜಿಸ್ಟರ್ ಮಾಡಿಸಬಹುದು. ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸುವ ಭಾರ ಮಾತ್ರ ಇವರದು. ಆದರೆ ಸಂಬಳ - ಕೂಲಿ ವಗೈರೆ, ಕೆಲಸ ಕೊಡುವವರೇ ನಿಶ್ಚಯಿಸುತ್ತಾರೆ. ತಕ್ಕ ಕೆಲಸಗಳಿಗೆ ಸರಿಯಾದ ಮತ್ತು ಯೋಗ್ಯವಾದ ಜನರನ್ನೊದಗಿಸುವ ಭಾರ ಈ ಕಾರ್ಯಾಲಯವು ಹೊತ್ತಿದೆ. ಇದರ ಲಾಭವನ್ನು ಪಡೆಯಬೇಕು. ಕೆಲಸ ಒದಗಿಸುವ ವಿವಿಧ ಉದ್ಯೋಗಗಳಲ್ಲಿ ಕೆಲಸವನ್ನು ಇಲ್ಲಿ ಕೊಟ್ಟಿದೆ.

ಡ್ರೈವರ್ಸ್	ಕಾಂಪೌಂಡರ್	ಸ್ಯಾನಿಟರಿ ಇನ್ಸ್‌ಪೆಕ್ಟರ್	ಸೂಲಗಿತ್ತಿ
ಮೆಕಾನಿಕ್	ಟೈಪಿಸ್ಟ್	ಅಸಿಸ್ಟೆಂಟ್ ಟೀಚರ್	ವ್ಯಾಕ್ಸಿನೇಟರ
ಬಡಗಿ	ಎಲೆಕ್ಟ್ರಿಶಿಯನ್	ಫಾರೆಸ್ಟ್ ಗಾರ್ಡ್	ಪೇಂಟರ್
ಗುಮಾಸ್ತ	ವ್ಯವಸಾಯ ಕೂಲಿ	ಮೇಸ್ತ್ರಿ	ಫಿಟರ್
ಕಾನ್‌ಸ್ಟೇಬಲ್	ಮದ್ಯನಿಷೇಧ ಶಾಖೆಗೆ ಕೆಲಸದವರು	ಗ್ಯಾಂಗ ಮ್ಯಾನ್	
ಉಪಾಧ್ಯಾಯ			

ವರ್ಷ	ರಿಜಿಸ್ಟರಾದವರು		ಕೆಲಸ ದೊರಕಿಸಿದುದು	
	ಗಂಡಸರು	ಹೆಂಗಸರು	ಗಂಡಸರು	ಹೆಂಗಸರು
1947	1202	—	437	—
1948	3166	677	1904	668
1949 ಜುಲೈವರೆಗೆ	3210	252	1509	224

ಹಿಮಾಲಯದ ತಪ್ಪಲಿನಲ್ಲಿ

(ಶ್ರೀ ನಾಡಿಗ ಕೃಷ್ಣಮೂರ್ತಿಯವರು ಕರ್ನಾಟಕರಲ್ಲಿ ಬರೆದ ಲೇಖ)

ನವದೆಹಲಿಯಿಂದ ಕ್ಯಾಂಪಸ್ಟಿ ಕೇವಲ ಮೂರು ತಾಸಿನ ದಾರಿ ಡೆಹರಾಡೂನ್ ಚಕ್ಕಿಗೆ ಹರಿದ್ವಾರದ ಮೇಲೆ ರಾಯ್ವಾಲ ಸ್ಟೇಷ ಬರುತ್ತದೆ ದೆಹಲಿಯಿಂದ ಸಂಜೆ ೭ ಕ್ಕೆ ಬಿಟ್ಟ ಗಾಡಿ ಬೆಳಗ್ಗೆ ೮-೩೦ ಗಂಟೆಗೆ ಡೂನಿಗೆ ಬರುತ್ತದೆ. ಇಲ್ಲಿಯ ಜನ ಡೆಹರಾಡೂನನ್ನು ಪ್ರೀತಿಯಿಂದ ಡೂನ್ ಎಂದು ಕರೆಯುತ್ತಾರೆ. ಇದಲ್ಲದೆ ದೆಹಲಿಯಿಂದ ಬಸ್ಸುಗಳು ಡೂನಿಗೆ ಬರುತ್ತವೆ.

ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ನಿಮಿತ್ತ ನಾವಿದ್ದೆವು. ಜನ ಬಂದು ಇಲ್ಲಿಯ ಪ್ರಕೃತಿ ಸೌಂದರ್ಯ ಸವಿದು ದೇವರು ಪ್ರತ್ಯೇಕವಾಗಿ ಬಂದ ಸೌಂದರ್ಯದ ಜೊತೆಗೆ 'ಹಿಮಾಲಯದ ...'ಯೂ ಡೂನನ್ನು ಆವರಿಸಿಕೊಂಡಿದೆ. ಪಂಚ ಪಾಂಡವರ ಗುರುಗಳಾದ ಆಚಾರ್ಯ ದ್ರೋಣರೂ ಇಲ್ಲಿಯೇ ವಾಸವಾದ್ದರಂತೆ. ಆ ಕಾರಣವೇ ಡೂನಿಗೆ ಕಾರಣ ವಾಗಿ ಡೆಹರಾಡ್ ಈ ನ ಡೆಹರಾಡೂನಾಗಿದೆ. ಸಮುದ್ರ ಮಟ್ಟದಿಂದ ೨೫೦೦ ಅಡಿ ಎತ್ತರದಲ್ಲಿದ್ದು ಇಲ್ಲಿಗೆ ೩೦ ಮೈಲು ದೂರದಲ್ಲಿ ಗಂಗೆ, ಯಮುನೆ, ನದಿಗಳು ಹರಿಯುತ್ತವೆ ಇಲ್ಲಿಯ ಹವೆ ತಂಪಾಗಿದ್ದು ಸಾವಿರಾರು ಜನ ಇಲ್ಲಿ ತಮ್ಮ ಬೇಸಿಗೆಯ ದಿನಗಳನ್ನು ಕಳೆಯುತ್ತಾರೆ. ಇಲ್ಲಿಂದ ೨೨ ಮೈಲಿ ದೂರದಲ್ಲಿಯೇ ಪ್ರಪಂಚ ಪ್ರಸಿದ್ಧವಾದ ಮಸ್ಸೂರಿ ಇರುವುದು. ೭ ಮೈಲಿ ದೂರದಲ್ಲಿ ಸಹಸ್ರಧಾರ ಎನ್ನುವ ಇನ್ನೊಂದು ಸ್ಥಳವಿದೆ.

ಡೆಹರಾಡೂನಿಗೆ ಏಳು ಮೈಲುದೂರದಲ್ಲಿ ಸಹಸ್ರಧಾರವೆಂಬ ಸ್ಥಳವಿದೆ. ಹಿಮಾಲಯದ ಹಸಿರು ತಪ್ಪಲಿನ ಸಣ್ಣ ಗುಡ್ಡ ಪ್ರದೇಶದ ಮಧ್ಯೆ ಸಹಸ್ರಧಾರೆಯಾಗಿ ಹೊಳೆಯಿಂದ ಗಂಗೆ ಬೀಳುತ್ತದೆ. ಅಲ್ಲಿಂದ ಮೇಲಕ್ಕೆ ಸುಮಾರು ... ಕಲ್ಲಿನಲ್ಲಿಯೇ ಆ ದೇವಸ್ಥಾನವನ್ನು ಕೊರೆದಿದ್ದಾರೆ. ಹಿಂದಿನ ಕಾಲದಲ್ಲಿ ಋಷಿಗಳು ವಾಸ ಮಾಡುತ್ತಿದ್ದರಂತೆ ಸಹಸ್ರಧಾರವನ್ನು ನೋಡಲು ಹೋಗುವಾಗ ಆ ಗುಡ್ಡದ ಮೇಲಿರುವ ಒಂದು ದೇವಾಲಯವನ್ನು ದಾಟಬೇಕು. ಅಲ್ಲಿ ಧಾರಾಕಾರವಾಗಿ ಮಳೆ ಬಂದಂತೆ ಬೀಳುತ್ತದೆ ನೀರು. ಅಲ್ಲಿಂದ ಸ್ವಲ್ಪ ಮುಂದೆ ಗುಡ್ಡದಲ್ಲಿ ಒಂದು ಗವಿ ಇದೆ. ಕಲ್ಲಿನ ಕೊರೆತದ ಗುಹೆ ಇದೆ ಇಲ್ಲಿ ಯಾವಾಗಲೂ ಮೇಲಿನಿಂದ ನೀರು ಸಿಂಚಿಸುತ್ತದೆ. 'ಸಹಸ್ರಧಾರ' ನೋಡಿದನಂತರವು ಶ. ಸಂಯುಕ್ತ ಪ್ರಾಂತ್ಯ ಸರಕಾರದವರು ಇತ್ತೀಚೆಗೆ ಒಂದು ... ಹಾದಿಯನ್ನು ಮಾಡಿದ್ದಾರೆ. ಕಾರು ಗುಡ್ಡದ ಕೆಳಗಿನವರೆಗೂ ಹೋಗುತ್ತದೆ.

ಸಹಸ್ರಧಾರದ ಎಡಬಲಗಳಲ್ಲಿ ಗಂಧಕೋತ್ತರಗಳು Sulphar Springs ಎಂಬ ಸರೋವರಗಳಿವೆ. ಗುಡ್ಡದ ಒಳಗೆ ಇರುವ ಗಂಧಕದ ಅದಿರಿನಿಂದ ನೀರು ಹಾಯ್ದು ಬಂದು ಸರೋವರಗಳನ್ನು ಸೇರುತ್ತದೆ. ಕಾಯಿಲೆ ಬಂದ ಜನ ಇಲ್ಲಿ ಹೆಚ್ಚಾಗಿ ಸ್ನಾನಮಾಡುತ್ತಾರೆ ಗಂಧಕದ ವಾಸನೆಯು ಮತ್ತು ... ಸಹಸ್ರಧಾರಕ್ಕೆ ಹೋಗುವ ಗುಡ್ಡದ ಮೇಲೆ ದಾರಿಯ ... ಹಾಗ ... ಮಾಡುವರು. ಹಿಂದೂಸ್ಥಾನದ ಪ್ರಸಿದ್ಧ ಆತನ ... ಹರು ಮಾಹಿತಿ ಬಾಲ ಕಿಶನ್. ಆತ ನಾಲ್ಕು ದಿನಗಳಿಂದ ದಾರಿ ನಡೆಯುತ್ತಾ ದೆಹಲಿಯಲ್ಲಿ ಇರುವ ಒಬ್ಬನೇ ಮಗನನ್ನು ನೋಡಲು ಹೊರಟಿದ್ದ. ಆತ ಗಂಗೋತ್ರಿಯಿಂದ ಹೊರಟದ್ದನಂತೆ ನಮ್ಮ ... ಹಿಂದಿನ ಕೇಂದ್ರ ಶಾಸನ ಸಭಾ ಸದಸ್ಯರಾದ ಶ್ರೀ ಕರಮರಕರರು ಇಲ್ಲಿಯೇ ದೂರಕ ... ಪ್ರಾರಂಭ ... ದ ಎಲ್ಲಾ ಮಾಹಿತಿ ಪಡೆದರು.

THE MEDICAL EMPORIUM

CHEMISTS & DRUGGISTS
BANGALORE ROAD, BELLARY.

Stockists of all Medicines Allopathic & Ayurvedic Surgical instruments etc.

REASONABLE RATES PROMPT DELIVERY TRIAL SOLICITED

ಮೆಡಿಕಲ್ ಎಂಪೋರಿಯಂ

ಔಷಧ ವ್ಯಾಪಾರಿಗಳು

ಬೆಂಗಳೂರು ರಸ್ತೆ, ಬಳ್ಳಾರಿ.

ನಮ್ಮಲ್ಲಿ ಆಯುರ್ವೇದ ಮತ್ತು ಇಂಗ್ಲೀಷ್ ವೈದ್ಯದ ಎಲ್ಲಾ ಔಷಧಗಳು ಸರಿಯಾದ ಮತ್ತು ನ್ಯಾಯವಾದ ಬೆಲೆಗೆ ದೊರೆಯುತ್ತವೆ. ಹೆಸರುವಾಸಿ ಹೊಂದಿದ ಮತ್ತು ಸಿದ್ಧ (Standard) ಔಷಧಗಳು, ಶಸ್ತ್ರಚಿಕಿತ್ಸೆಗೆ ಬೇಕಾದ ವಸ್ತುಗಳು ಕೂಡ ದೊರೆಯುತ್ತವೆ. ಅಡ್ವಾನ್ಸು ಕೊಟ್ಟಲ್ಲಿ ವಿ. ಪಿ. ಮೇಲ್ ಕಳುಹಿಸಲಾಗುತ್ತೆ.

ಸರ್ದಾರ ವಲ್ಲಭಭಾಯಿ ಪಟೇಲರು

ಗುಣಮುಖನಾಗುತ್ತಿದ್ದಾರೆ– ಅಪಾಯದಿಂದ ಪಾರಾದರು

ಭಾರತದ ಗೃಹಶಾಖೆ ಸಂಸ್ಥಾನ ಮಂತ್ರಿಗಳೂ ಉಪಪ್ರಧಾನ ಮಂತ್ರಿಗಳೂ ಆದ ಸರ್ದಾರ ವಲ್ಲಭಭಾಯಿ ಪಟೇಲರು ತೀವ್ರವಾದ ಹೃದ್ರೋಗದಿಂದ ಬಳಲುತ್ತಾ ಅವರ ಪರಿಸ್ಥಿತಿಯು ಚಿಂತಾಜನಕವಾಗಿದ್ದಿತು ಅವರನ್ನು ಚಿಕಿತ್ಸೆಗಾಗಿ ಬಹಳ ಎಚ್ಚರಿಕೆಯಿಂದ ಬೊಂಬಾಯಿಗೆ ಕರೆತರಲಾಯಿತು. ವಿಮಾನವು ಹತ್ತುಸಾವಿರ ಅಡಿ ಮೇಲೆ ಹಾರುತ್ತಿದ್ದರೂ ಸರ್ದಾರರಿದ್ದ ಕ್ಯಾಬಿನ್‌ದಲ್ಲಿ ಭೂಮಿಯ ಮೇಲೆ ಎತ್ತರವು 50 ಅಡಿಗಿಂತಲೂ ಹೆಚ್ಚಿಗೆ ಹೋಗದಂತಿರುವ ವ್ಯವಸ್ಥೆ ಮಾಡಲಾಗಿತ್ತು. ಬೊಂಬಾಯಿಯಲ್ಲಿನ ಶ್ರೇಷ್ಠ ಡಾಕ್ಟರರು ಅವರನ್ನು ಪರೀಕ್ಷಿಸಿ ವಿಸ್ತೃತ ಛಾಯಾಚಿತ್ರವನ್ನು ತೆಗೆದು ಅವರು ಅಪಾಯದಿಂದ ಪಾರಾಗಿರುವರೆಂದು ಹೇಳಿಕೆ ಕೊಟ್ಟರು.

ಸಂಸ್ಥಾನಗಳನ್ನೆಲ್ಲಾ ವಿಲೀನಗೊಳಿಸಿ ಐಕ್ಯಭಾರತದ ಸಂಘಟನೆ ಮಾಡಿದ ಸರ್ದಾರರಿಗೆ ದೇವರು ದೀರ್ಘಾಯುಷ್ಯವನು. ಕೊಡಲಿ.

ಎಲ್ಲಾ ಪೋಸ್ಟಾಫೀಸುಗಳಲ್ಲಿ ದೊರೆಯುವವು

BUY
National Savings Certificates | ಭಾರತ ಸರ್ಕಾರದ ಆರ್ಥಿಕ ಶಾಖೆ | ನೇಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳನ್ನು ಕೊಳ್ಳಿರಿ

ನಿಮ್ಮ ಕರ್ತವ್ಯ

ಉಳಿಸುವ ಪ್ರತಿಯೊಂದಾಣೆ ನಿಮ್ಮ ಕುಟುಂಬದ ಆಪದ್ಧನ

●

ಈ ಅಭ್ಯಾಸವೇ ಶ್ರೇಷ್ಠ ಧರ್ಮ. ನಿಜವಾದ ಸಮಾಜಸೇವೆ

●

ಹಣ ಸಂಗ್ರಹವೇ ನಾಡಿನ ಆರ್ಥಿಕ ಭದ್ರತೆ.

●

ಧನದುಳಿತಾಯವೇ ಸ್ವಾವಲಂಬೀ ಜೀವನದ ತಳಹದಿ.

●

ನಿಮ್ಮ ಸಂಗ್ರಹವೇ ನಿಮ್ಮ ಕಲ್ಯಾಣಕಾರಿ ಭವಿಷ್ಯ.

●

ರಾಷ್ಟ್ರದ ಹಣ ಸಂಗ್ರಹದಿಂದಲೇ ರಾಷ್ಟ್ರದ ಪುನರ್ರಚನೆಯು ಸಾಧ್ಯ

ಲಾಭದ ಮಾರ್ಗ

ಎಷ್ಟು ಹಣವಿಡಬಹುದು ?

೫ ರಿಂದ ೨೫೦೦೦ ರೂ. ವರೆಗೆ ೫-೧೦-೫೦-೧೦೦-೧೦೦೦ ಮತ್ತು ೫೦೦೦ ಅಂಕಿತದ ಭಾರತ ಸರ್ಕಾರದ ಸರ್ಟಿಫಿಕೇಟುಗಳು, ಅದಕ್ಕೆ ಬಡ್ಡಿ ಎಷ್ಟು?

12 ವರ್ಷಕ್ಕೆ ಶೇಕಡ 4⅛
7 ,, ,, 3½
5 ,, ,, 3

ನಮಗೆ ಹಣ ಜರೂರಾಗಿ ಬೇಕಾದರೆ ಎಲ್ಲಿ ಹೇಗೆ ಪಡೆಯಬಹುದು?

7 ಮತ್ತು 5 ವರ್ಷದವಧಿಯ ಸರ್ಟಿಫಿಕೇಟುಗಳನ್ನು ಯಾವ ಪೋಸ್ಟಾಫೀಸದಲ್ಲಾಗಲಿ–ಯಾವಾಗಲಾದರೂ ಪಡೆಯಬಹುದು. 12 ವರ್ಷದವುಗಳನ್ನು 18 ತಿಂಗಳ ನಂತರ ಯಾವ ಪೋಸ್ಟಿನಲ್ಲಾಗಲಿ ಬಡ್ಡಿ ಸಮೇತ ಪಡೆಯಬಹುದು.

ಸೇವಿಂಗ್ಸ ಸರ್ಟಿಫಿಕೇಟುಗಳೆಂದರೆ ಬಚ್ಚಿಡುವ ಭಂಗಾರಕ್ಕಿಂತ, ಕರೆನ್ಸಿ ನೋಟುಗಳಿಗಿಂತ ಹೆಚ್ಚಿನ ಬೆಲೆ ನಿತ್ಯವೂ ದೊರಕಿಸುವಂಥವು.

ವಿವರಗಳಿಗೆ ಇಂದೇ ಬರೆಯಿರಿ-ಎಮ್. **ಉದ್ಧನಾಚಾರ್ ಜಿಲ್ಲಾ ಸಂಘಟಕ, ನ್ಯಾಷನಲ್ ಸೇವಿಂಗ್ಸ ಸ್ಕೀಂ, ಬಳ್ಳಾರಿ**

ಭಾರತದ ಪ್ರಧಾನಮಂತ್ರಿ

ಪಂಡಿತ ಜವಹರಲಾಲ ನೆಹರುರ ಅಮೆರಿಕಾ ಪ್ರಯಾಣ

ಪಂ ನೆಹರುರವರು ಅಕ್ಟೋಬರ್ 11 ಕ್ಕೆ ಭಾರತವನ್ನು ಬಿಟ್ಟು ವಾಷಿಂಗ್ಟನ್‌ನಿಂದ – ನ್ಯೂಯಾರ್ಕ ನಗರವನ್ನು ಅಕ್ಟೋಬರ 14ಕ್ಕೆ ಸೇರಲಿರುವರು ಅವರು ಅಮೆರಿಕಾದಲ್ಲಿ 20 ದಿನಗಳಿದ್ದು ಮುಖ್ಯನಗರಗಳನ್ನೆಲ್ಲಾ ಸಂದರ್ಶಿಸುವರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ಅವರಿಗೆ ಉಪಾಧಿಗಳು ದೊರೆಯಲಿವೆ. ಕೆನಡಾಕ್ಕೆ ಹೋಗಿ ಅಲ್ಲಿ ಎರಡು ದಿನಗಳಿರುವರು ಅಲ್ಲಿನ ಪ್ರಧಾನರಾದ ಮೆಕೆಂಜಿಯವರ ಅತಿಥಿಗಳಾಗಲಿರುವರು. ಅಮೆರಿಕಾದ ರಾಜಾಧ್ಯಕ್ಷರಾದ ಟ್ರೂಮನ್‌ರು ಪಂ ನೆಹರೂರನ್ನು ಸ್ವಾಗತಿಸಲಿದ್ದಾರೆ

ಅಮೆರಿಕಾದ ಭಾರತ ರಾಯಭಾರಿ ಕಚೇರಿಯವರು ನೆಹರೂರ ಕಾರ್ಯಕ್ರಮವನ್ನು ಸಿದ್ಧಗೊಳಿಸುತ್ತಲಿರುವರು. ಬಂದ ಆಹ್ವಾನಗಳಿಗೆಲ್ಲಾ ನೆಹರೂರು ಮನ್ನಣೆ ಕೊಡುವುದಾದರೆ ಅಮೆರಿಕಾದಲ್ಲಿ ಅವರು ಆರು ತಿಂಗಳು ಇರಬೇಕಾಗುತ್ತದೆ. ಇದು ಸಾಧ್ಯವಿಲ್ಲವೆಂಬುವದರಿಂದ ಅದನ್ನು ಸಂಕ್ಷಿಪ್ತಗೊಳಿಸಲಾಗುತ್ತಲಿದೆ. ಅಮೆರಿಕಾದಲ್ಲಿನ ಆಸ್ಪತ್ರೆಗಳನ್ನು ನೋಡಿದರೆ ಜಾತದ ಮೋಟಣ ಅವರ ಆಶಯು ವ್ಯಕ್ತವಾಗುತ್ತದೆ.

Vattam Narayanapah Chetty & Sons

Iron Hardware & Cement Merchants

Bangalore Road, BELLARY.

Stockists The Cement Marketing Co India Ltd.

(for Bellary & Anantapur)

THE ASBESTOS CEMENT LTD

Best steel crow bars and jumpers of all sizes and lengths Mangalore Tiles and other building materials A C Pipes and Fittings are available in large quantities

ವಟ್ಟಂ ನಾರಾಯಣಪ್ಪ ಚೆಟ್ಟಿ ಅಂಡ ಸನ್ಸ್

ಐರನ್ ಹಾರ್ಡವೇರ ಮತ್ತು ಸಿಮೆಂಟ್ ವ್ಯಾಪಾರಿಗಳು,

ಬೆಂಗಳೂರು ರೋಡು, ಬಳ್ಳಾರಿ

ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿಯ ಸಿಮೆಂಟ್ ಬಳ್ಳಾರಿ ಮತ್ತು ಅನಂತಪುರ ಜಿಲ್ಲೆಗಳಿಗೆ ಹಂಚಲಧಿಕಾರ ಹೊಂದಿದವರು

ಅಸ್ಬೆಸ್ಟಾಸ್ ಸಿಮೆಂಟ್ ಲಿಮಿಟೆಡ್‌ದ ನಾಳಗಳು ಮತ್ತು ಇವಕ್ಕೆ ಸಂಬಂಧಿಸಿದ ಚಿಲ್ಲರ ಸಾಮಗ್ರಿ ಉಕ್ಕಿನ ಆರ ಉಕ್ಕಿನ ಜಂಪರ್ ಎಲ್ಲಾ ಸೈಜಿನ ಮಂಗಳೂರು ಹೆಂಚು, ಕಟ್ಟಿಸುವ ಸಾಮಾನು ... ಸರಿಯಾದ ಬೆಲೆಗೆ ದೊರೆಯುತ್ತವೆ

S. V. Setty & Bros.,

BELLARY

Chetty & Subramanyam Bros

(Sole-Proprietors)

ಎಸ್: ವಿ. ಶೆಟ್ಟಿ ಅಂಡ್ ಬ್ರದರ್ಸ ಬಳ್ಳಾರಿ

[ಮಾಲೀಕರು– ಚೆಟ್ಟಿ ಮತ್ತು ಸುಬ್ರಹ್ಮಣ್ಯ ಸೆಟ್ಟರು]

ಸ್ಟೀಲ್ ಉಕ್ಕು ಬೆಳ್ಳಿ ಬಂಗಾರದ ವಸ್ತುಗಳು ನ್ಯಾಯವಾದ ಮತ್ತು ಸರಿಯಾದ ಬೆಲೆಗೆ ದೊರೆಯುತ್ತವೆ ನಮ್ಮ ಹೆಸರಿನ ಹಳೆಯ ವಸ್ತುಗಳನ್ನು ಒಂದಕ್ಕೆ ಕೊಟ್ಟು ಎಕ್ಸ್‌ಚೇಂಜ್ ಕೂಲಿ ಕೆಲಸಕ್ಕೆ ಹೊಸ ವಸ್ತುಗಳನ್ನು ಕೊಡುತ್ತೇವೆ ... ಫೇವರ್‌ಲೂಬ ಜೆನಿತ್ ಕಂಪನಿಯ ಕೈಗಡಿಯಾರ ... ದೊಡ್ಡಗಡಿಯಾರಗಳೂ ಗ್ರಾಮೊಫೋನ್‌ಗಳೂ ... ಗಾಯಕಿಯರ ರಿಕಾರ್ಡುಗಳೂ ... ನಮ್ಮಲ್ಲಿ ... ಒಂದೇ ಸಾರಿ ಸಂದರ್ಶಿಸಿ ಅನುಭವ ಪಡೆಯಿರಿ

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—**ಬಳ್ಳಾರಿ.**

—)0(—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ	
ಒಂದು ವರ್ಷ	,,	ರೂ. 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ	,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಅದಕ್ಕೂ ಮಾಸದ ಕನಿಷ್ಟ ನಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ.

ಹೆಚ್. ಲಿಂಗಾರೆಡ್ಡಿ ಬಿ. ಎ. ಬಿ. ಎಲ್
ಛೇರ್ಮನ್-ಬೋರ್ಡ ಆಫ್ ಡೈರೆಕ್ಟರ್ಸ

ಬಿ. ವಿ. ಶೇಷಗಿರಿರಾವು, ಬಿ. ಕಾಂ.,
ಕಾರ್ಯದರ್ಶಿ.

ಭಾಷಾವಾರ ಪ್ರಾಂತರಚನೆಯ ಸಮಸ್ಯೆ

ಕೂಡಲೆ ಬಗೆಹರಿಸಬೇಕೆಂದು ಜಯಪ್ರಕಾಶರ ಹೇಳಿಕೆ

—0—

ಕಲಕತ್ತಾ- ಭಾಷಾವಾರ ಪ್ರಾಂತರಚನೆಯ ಪ್ರಶ್ನೆಯನ್ನು ತಡಮಾಡದೆ ಬಿಡಿಸಬೇಕೆಂದು ಸಮಾಜವಾದಿ ಧುರೀಣ ಶ್ರೀ ಜಯಪ್ರಕಾಶರು ಪ್ರಾಂತ ಪರಿಷತ್ತಿನಲ್ಲಿ ಹೇಳಿದರು.

ಅನ್ನ, ಬಟ್ಟೆಯ ಸಮಸ್ಯೆಗಳ ಪರಿಹಾರವಾಗುವವರೆಗೆ ಈ ಪ್ರಶ್ನೆಯನ್ನು ಮುಂದೂಡಬೇಕೆಂದು ಸಾಮ್ಯವಾದಿ ಪಕ್ಷವು ಈ ಹಿಂದೆ ಅಭಿಪ್ರಾಯಪಟ್ಟಿತ್ತು. ಆದರೆ ದಿನ ನಿತ್ಯ ಭಾಷಾವಾರ ಪ್ರಾಂತರಚನೆಯಬಗ್ಗೆ ಉದ್ಭವವಾಗುತ್ತಿರುವ ಭಾವನೆಗಳನ್ನು ನೋಡಿದರೆ, ಈ ಪ್ರಶ್ನೆಯನ್ನು ಮುಂದು ಹಾಕದೆ ಈ ಕೂಡಲೆ ಬಗೆಹರಿಸಬೇಕೆಂಬುದೆ ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಎರಡು ಪ್ರಾಂತಗಳ ನಡುವೆ ಏನಾದರೊಂದು ತಂಟೆ ಉತ್ಪನ್ನವಾದರೆ ಉಭಯಪಕ್ಷದ ಪ್ರತಿನಿಧಿಗಳು ಕೂಡಿಕೊಂಡು ಚರ್ಚಿಸಿ, ಸಮಸ್ಯೆಯನ್ನು ಬಗೆಹರಿಸಿಕೊಬೇಕು. ಇವರೂ ಯಾವುದೆ ಒಂದು ಒಡಂಬಡಿಕೆಗೆ ಬರುವದು ಸಾಧ್ಯವಾಗದಿದ್ದರೆ ಜನಮತಗಣನೆ ನಡೆಸಬೇಕು. ಇಲ್ಲವೆ ಪಕ್ಷಾತೀತ ನ್ಯಾಯಮಂಡಳ ಅಥವಾ ಸಮಿತಿಗೆ ವಿಷಯವನ್ನು ಒಪ್ಪಿಸಬೇಕು. ಇದೇ ಅಂಥ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಪ್ರಜಾತಂತ್ರ ಮಾರ್ಗ ಕೂಗುವದು ಜಗಳ ಮಾಡುವದು ಒಬ್ಬರ ತಲೆಯನ್ನು ಇನ್ನೊಬ್ಬರು ಒಡೆಯುವದರಿಂದ ತಂಟೆ ಬಗೆಹರಿಯಲಾರದು. ದ್ವೇಷ ಭಾವನೆಯಿಂದ ದೇಶದ ವಿಭಜನೆಯಾಯಿತು. ಕಾರಣ ಭಾಷಾವಾರ ಪ್ರಾಂತ ಪ್ರಶ್ನೆಯನ್ನು ಕೂಡಲೆ ಬಿಡಿಸಬೇಕು. ಎಂದು ಹೇಳಿದರು,

ಎಡಪಕ್ಷಗಳ ಸಂಘಟನೆಯ ವಿಚಾರವನ್ನೆತ್ತಿಕೊಂಡು, ಎಲ್ಲ ಎಡಪಕ್ಷಗಳು ವಿಸರ್ಜಿಸಲ್ಪಟ್ಟು ಹೊಸ ಪಕ್ಷವೊಂದು ಸ್ಥಾಪಿತವಾಗಬೇಕು, ಸಾಮ್ಯವಾದಿ ಪಕ್ಷವು ಸಹ ಆ ಹೊಸಪಕ್ಷದಲ್ಲಿ ಸೇರಲು ಸಿದ್ಧವಿದೆ. ಬೇರೆ ಪಕ್ಷಗಳು ನಮ್ಮ ಪಕ್ಷದಲ್ಲಿ ಬಂದು ಸೇರಲು ನಾವು ಆಹ್ವಾನಿಸುತ್ತೇವೆ. ಎಂದು ಹೇಳಿದರು.

ಚುನಾವಣೆಯಲ್ಲಿ ಕಾಂಗ್ರೆಸನ್ನು ಸೋಲಿಸುವ ಮಾತೆತ್ತಿ ಕಾಂಗ್ರೆಸನ್ನು ಸೋಲಿಸುವದೆಂದರೆ ಪ್ರತಿಗಾಮಿಗಳೊಡನೆ ಕೈಕೂಡಿಸುವದೆಂದರ್ಥವಲ್ಲ. ರಾಷ್ಟ್ರ ಹಿತದ ದೃಷ್ಟಿಯಿಂದ ಕಾಂಗ್ರೆಸ್ ಸರಕಾರ ಹೋಗಿ ಅಲ್ಲಿ ಸ್ಥಳಕ್ಕೆ ಸಾಮ್ಯವಾದಿ ಸರಕಾರ ಬರಬೇಕು.

ಕಾಂಗ್ರೆಸ್ ಸರಕಾರವು ಇನ್ನು ಮುಂದೆ ಅಧಿಕಾರದಲ್ಲುಳಿದು ಈಗಿನಂತೆ ಆಡಳಿತ ನಡೆಸಿದರೆ ದೇಶದೊಳಗೆ ಅಶಾಂತಿ ಹಬ್ಬುವದು. ಅದಕ್ಕೆ ಕಾಂಗ್ರೆಸ್ ಸರಕಾರವೇ ಹೊಣೆಯಾಗುವದು. ಕಾಂಗ್ರೆಸ್ ರಾಷ್ಟ್ರಕ್ಕೆ ಕೇವಲ ಕಾರ್ಮಿಕರಿಗೆ ಹಾನಿ ಮಾಡುತ್ತಿದೆ ಕಾಂಗ್ರೆಸ್ ಸರಕಾರಗಳು ಬಂಡವಾಳಶಾಹಿ ಪದ್ಧತಿಗೆ ಬೆಂಬಲ ಕೊಡುತ್ತಿವೆ ಆ ಕಾರಣದಿಂದಲೆ ಬಂಗಾಲ ಮತ್ತು ಭಾರತದಲ್ಲಿ ಕಾಂಗ್ರೆಸ್ ಸರಕಾರದ ಬದಲು ಸಾಮ್ಯವಾದಿ ಸರಕಾರ ಸ್ಥಾಪಿಸುವುದು ನಮಗೆ ಬೇಕಾಗಿದೆ ಎಂದೂ ಹೇಳಿದರು.

——

—ಸಾಮೂಹಿಕ ಸಂಘಟನೆಯೇ ಸಾಮವಾದದ ಮೂಲ-ಹಿಂದೂಸ್ಥಾನದಲ್ಲಿ ಇಂಥ ಸಂಘಟನೆಯು ಅವಶ್ಯವಾಗಿದೆ. ಸಮಾಜವಾದಿ ಪಕ್ಷವೂ ವಾಮಪಕ್ಷಗಳ ಸಂಘಟನೆಗಾಗಿ ಶ್ರದ್ಧೆಯಿಂದ ಕೆಲಸಮಾಡುತ್ತಿದೆಯೆಂದು ಜಯಪ್ರಕಾಶರು ಕೂಲಿಕಾರರನ್ನುದ್ದೇಶಿಸಿ ಕಲಕತ್ತೆಯಲ್ಲಿ ಹೇಳಿದರು.

230



Rules for the Display of the National Flag of India

The following rules framed by the Government of India, in consultation with Provincial Governments and others for the display of the National Flag of India, are published for general information and guidance:

Display of the Flag on buildings:

(a) Normally the Flag should be flown only on Important Government buildings, such as High Courts, Secretariats, Commissioner's Offices, Collectorates, Jails and Offices of the District Boards and Municipalities. It should also be flown on the residences of the Ministers (both Central and Provincial) and Chief Commissioners. The Governor General and the Governors have special Flags of their own and they will continue to fly those Flags on their residences;

(b) India's representatives in foreign countries and States should fly the Flag on their residences;

(c) In frontier areas, the Flag may be flown at special places;

(d) Ruling Princes and Raj Pramukhs may also use the Flag on their residences, together with their own State Flags, if they so choose;

(e) The use of the Flag by the Army, Navy and the Air Forces will be Governed by the special rules made for the purpose;

(f) On special occasions, like the Independence Day Celebrations National Week, January 26 and Mahatma Gandhi's Birthday, as well as on any other particular day of National rejoicing, the use of the Flag will be unrestricted.

Display of the Flag on cars:

(a) The Flag may be flown on the cars of the Ministers and Speakers, both Central and Provincial Chief Commissioners and India's Representatives in foreign countries and States;

(b) Ruling Princes and Raj Pramukhs may also use the Flag on their Cars, together with their own State Flags, if they so choose.

(c) The Governor-General and the Governors have their own special Flags. They will continue to use those.

Additional Rules:

(a) Ministers of State of the Central Government will be entitled to display the National Flag on their residences and on their motor cars;

(b) Speakers of Assemblies, both at the Centre and in the Provinces and Presidents of Upper Chambers, where they exist, will be entitled to display the Flag on their residences and also on their cars;

(c) Deputy Ministers of the Central Government will be entitled to fly the Flag on their motor cars, but not on their residences;

(d) Commissioners of Divisions, Deputy Commissioners and Collectors of Districts be entitled to display the Flag on their residences;

(e) Ministers, as well as Presidents of or Speakers of Legislative Chambers of States and Union of States will be entitled to display the Flag on their residences and on their motor cars

---

ಬಳ್ಳಾರಿಯಲ್ಲಿ ಕಾಲೇಜಿನ ಆವಶ್ಯಕತೆ

ವೀರಶೈವ ಕಾಲೇಜಿನ ವ್ಯವಸ್ಥಾಪಕ ಸಮಿತಿಯವರು ಸರ್ಕಾರದ ಧೋರಣೆಯಿಂದ ತಮ್ಮ ಕಾಲೇಜಿನಲ್ಲಿ ಈ ವರ್ಷ ಜೂನಿಯರ್ ಇಂಟರ್ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸೇರಿಸಲಸಮರ್ಥರಾದರು. ಈ ಕಾರಣ ನೂರಾರು ಬಡ ವಿದ್ಯಾರ್ಥಿಗಳಿಗೆ ಉನ್ನತ ವಿದ್ಯಾಭ್ಯಾಸದ ಪ್ರಗತಿ ಕುಂಠಿತವಾಗಿ ... ವಿಷಮವಾದ ನಿರುತ್ಸಾಹವಾಯಿತು. ಮದ್ರಾಸಾಧಿಪತ್ಯದಲ್ಲಿ ಕಾಲೇಜಿಲ್ಲದ ಜಿಲ್ಲೆಯೆಂದರೆ ಬಳ್ಳಾರಿ ಯೊಂದೇ! ದತ್ತ ಮಂಡಲದಲ್ಲೇ ದೊಡ್ಡದಾದ ಈ ... ಣದಲ್ಲಿ 8-10 ಹಾಸ್ಟೆಲ್ ಗಳಿದ್ದು ಬಡವಿದ್ಯಾರ್ಥಿಗಳಿಗೆ ... ದೆ. ಅಲ್ಲದೆ ಬಳ್ಳಾರಿಯಲ್ಲಿ ದೊಡ್ಡ ದೊಡ್ಡ ಕಟ್ಟಡಗಳಿಗೆ ಕೊರತೆಯಿಲ್ಲ. ... ರತರು ಇವುಗಳೆಲ್ಲವನ್ನು ಖಾಲಿಮಾಡಿಸಿ ಕೊಡಬಹುದ ... ಮನಸ್ಸುಮಾಡಿದಲ್ಲಿ ಕಾರ್ಯಸಾಧನೆಯಾಗುವುದು ಸುಲಭ

ಆದರೆ ಎಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳ ಸ್ಥಾಪನೆ ... ಸು ಸರಕಾರದವರು ಕೈಗೊಂಡ ಇತರ ಪ್ರಗತಿಪರ ಕಾರ್ಯಗಳ ... ಬಳ್ಳಾರಿಯನ್ನು ಮರೆತಿರುತ್ತಾರೆ ಇದು ವುದು ಕಂಡು ... ಬಳ್ಳಾರಿಯು ಕರ್ನಾಟಕ ಪ್ರಾಂತದಲ್ಲಿ ಸೇರುವದೆಂಬ ಕಾರಣ ಮದ್ರಾಸ ಆಂಧ್ರ ಮಂತ್ರಿಗಳು ಇಷ್ಟು ... ಮಾಡುವರೆಂದು ಜನರು ... ಕೊಳ್ಳುತ್ತಾರೆ. ಇಂತಹವುಗಳಿಗೂ ಆಸ್ಪದಕೊಡದೆ ಸಂಕುಚಿತ ... ಭಾವನೆಯನ್ನು ದೂರಮಾಡಿ ಜನತೆಯ ನ್ಯಾಯವಾದ ಬೇಡಿಕೆಗಳನ್ನು ... ರವು ಮನ್ನಿಸಬೇಕು.

ಬಳ್ಳಾರಿಯಲ್ಲಿ ಮದರಾಸು ಮಂತ್ರಿಗಳು

ಪ್ರಧಾನಮಂತ್ರಿ ಕುಮಾರಸ್ವಾಮಿ ರಾಜ, ಔದ್ಯೋಗಿಕ ಮಂತ್ರಿ ಶ್ರೀ ... ರಾಮ ರೆಡ್ಡಿಯವರು ಹಗರಿಬೊಮ್ಮನಹಳ್ಳಿ, ತುಂಗಭದ್ರಾಯೋಜನೆ, ... 8-9 ನೆಯ ತಾ ಬಳ್ಳಾರಿ ಸಿರುಗುಪ್ಪ ಆದವಾನಿಗಳನ್ನು 10-11 ನೆ ... ತಾ. ಸಂದರ್ಶಿಸಿ ಮದ್ರಾಸಿಗೆ ತೆರಳಿದರು. ಬಳ್ಳಾರಿಯಲ್ಲಿ ಪುರಸಭೆಯವ ... ಮಾನಪತ್ರಗಳನ್ನು ಸಮರ್ಪಿಸಿದರು, ಸರ್ಕಾರದವರು ಕಾಲೇಜ್ ತೆರೆಯ ... ಕೆಂಬುದನ್ನು ಶಿಫಾರಸು ಮಾಡಲಿದವರು ಒಪ್ಪಿಯ ಮಾಡಿ ಹೇಳಿದರು.

ಕೊಂಚಿ.ಗೇರು (ಹರಪನಹಳ್ಳಿ)

ಇಲ್ಲಿ ಹೊಸದಾಗಿ ಪಂಚಾಯ್ತಿಕೋರ್ಟು ಸ್ಥಾಪಿಸಲ್ಪಟ್ಟು ... ಗ್ ಆಫೀಸರ್ ಶ್ರೀ ವೃಷಭೇಂದ್ರಯ್ಯನವರ ಅಧ್ಯಕ್ಷತೆಯಲ್ಲಿ ಕೋರ್ಟ ... ನಾವಣೆಯು ನಡೆದು ಶ್ರೀ ಎನ್ ಕ್ರಿಷ್ಣಪ್ಪ ಎಂ. ... H B.M ಬಸಲಿಂಗಯ್ಯ. ಎಂ. ರಜಾಕ್ಸಯಾ ಸಾಹೇಬ್ ಮತ್ತು ... ಬಸಪ್ಪ ಇವರು ಸದಸ್ಯರಾಗಿ ಅವಿರೋಧವಾಗಿ ಆರಿಸಲ್ಪಟ್ಟರು.

ವರ್ಣ ವ್ಯವಸ್ಥೆಯ ಬಗ್ಗೆ ಮಹಾತ್ಮಾ ಗಾಂಧಿ ಇವರ ವಿಚಾರಗಳು:

"ಹರಿಜನ" ದಿಂದ

ಈಗೆರಡುಮೂರು ವಾರಗಳಿಂದ "ಕರ್ಮವೀರ" ದಲ್ಲಿ ವರ್ಣಾಶ್ರಮ ಧರ್ಮದ ಬಗ್ಗೆ ವಾದವಿವಾದಗಳು ಪ್ರಕಟವಾಗಿವೆ. ೧೯೩೪ ರಲ್ಲಿ ಮಹಾತ್ಮಾಗಾಂಧಿಯವರು ಬರೆದಿದ್ದ ಈ ವಾರದ 'ಹರಿಜನ' ದಲ್ಲಿ ಪ್ರಕಟವಾಗಿರುವ ಲೇಖದಲ್ಲಿ ಈ ವಿಷಯದಲ್ಲಿ ರಾಷ್ಟ್ರಪಿತನ ಅಮೂಲ್ಯ ವಿಚಾರಗಳನ್ನು ಕಾಣಬಹುದು.

ಆಶ್ರಮ ಪದ್ಧತಿ ಮುರಿದುಬಿದ್ದಂತೆ ವರ್ಣ ವ್ಯವಸ್ಥೆಯೂ ಹಾಳಾಗಿಯೇ ಹೋಗಿದೆ. ಮೊಟ್ಟಮೊದಲು ನಾಲ್ಕು ವರ್ಣಗಳು ಅಥವಾ ವರ್ಗಗಳಿದ್ದವು. ಆದರೆ ಈಗ ಅಸಂಖ್ಯ ಪಂಗಡಗಳು ಅಥವಾ ಒಂದೇ ಪಂಗಡ ಉಳಿದಂತಾಗಿದೆ. ಈಗಿರುವ ಜಾತಿ-ಉಪಜಾತಿಗಳಲ್ಲಿಯೂ ವರ್ಣಗಳಾದರೆ ಅದೊಂದು ವರ್ಣಗಳ ವೈನ್ಯವೇ ಸರಿ. ಅಥವಾ ವರ್ಣಕ್ಕೂ ಜಾತಿಗೂ ಯಾವ ಸಂಬಂಧವೂ ಇಲ್ಲವಾದರೆ ಈಗ ಉಳಿದಿರುವದು ಒಂದೇ ವರ್ಣ-ಅದೇ ಶೂದ್ರ ವರ್ಣ ನಾವೀಗ ಯಾರನ್ನೂ ದೂರ ದೂಡಲಿಲ್ಲ, ಬರಿ ಇದ್ದದ್ದನ್ನು ಇದ್ದಂತೆ ಹೇಳುತಿದ್ದೇವೆ. ಶೂದ್ರರೆಂದರೆ ಪರರ ಸೇವೆ ಮಾಡಿ ಅವರಿಗೆ ಅಧೀನರಾಗಿರುವವರು. ಭಾರತ ಒಂದು ಅಧೀನ ರಾಜ್ಯ ಇದನ್ನು ಗಾಂಧೀಜಿ ೧೯೩೪ ರಲ್ಲಿ ಬರೆದಿದ್ದರು. ಆದುದರಿಂದ ಪ್ರತಿಯೊಬ್ಬ ಭಾರತೀಯನೂ ಶೂದ್ರನೇ. ಕೃಷಿಕನಿಗೆ ತನ್ನ ಭೂಮಿಯ ಮೇಲೆ ಒಡೆತನವಿಲ್ಲ, ವ್ಯಾಪಾರಿ ತನ್ನ ಸರಕುಗಳ ಸ್ವಾಮಿತ್ವವಿಲ್ಲ. ಕ್ಷತ್ರಿಯ ಬ್ರಾಹ್ಮಣ ವರ್ಗಗಳಿಗೆ ಶಾಸ್ತ್ರಗಳಲ್ಲಿ ಹೇಳಿದ ವಿಶಿಷ್ಟ ಗುಣಗಳುಳ್ಳ ಒಬ್ಬನೇ ಬ್ರಾಹ್ಮಣನಾಗಲಿ ಇಂದು ದೊರೆಯಲಾರನೆನ್ನಬಹುದು.

ಉಚ್ಚನೀಚ ಭೇದವಿಲ್ಲ

ವರ್ಣಪದ್ಧತಿಯನ್ನು ಮೊದಲು ಪ್ರವರ್ತಿಸಿದಾಗ ಉಚ್ಚ-ನೀಚತೆಯ ವಿಚಾರವೇ ಇದ್ದಿಲ್ಲೆಂದು ನನ್ನ ಎಣಿಕೆ. ಈ ಜಗತ್ತಿನಲ್ಲಿ ಯಾರು ಉಚ್ಚ, ಯಾರು ನೀಚ? ಅಜ್ಞಾನದಿಂದ ಯಾರಾದರೂ ತಾನು ಉಚ್ಚ ವರ್ಗದವನೆಂದು ಬಗೆಯುತಿದ್ದರೆ ಅವನು ಉಚ್ಚನಲ್ಲ; ನೀಚನೆಂದು ಬಗೆಯುತಿದ್ದರೆ ಅವನು ಬರಿ ಅಜ್ಞಾನಕ್ಕೆ ಬಲಿ ಬಿದ್ದವನು. ಅವನಿಗೆ ಅವನ ಒಡೆಯರು ಹಾಗೆ ಕಲಿಸಿದ್ದಾರೆ ಅಷ್ಟೆ. ಬ್ರಾಹ್ಮಣನೊಬ್ಬನಿಗೆ ಜ್ಞಾನವಿದ್ದರೆ ಸ್ವಾಭಾವಿಕವಾಗಿಯೆ ಜನರು ಅವನನ್ನು ಗೌರವಿಸುತ್ತಾರೆ. ಆದರೆ ಬ್ರಾಹ್ಮಣನು ತನಗೆ ದೊರೆತ ಗೌರವದಿಂದ ಉಬ್ಬಿಹೋಗಿ ತಾನು ಶ್ರೇಷ್ಠ ವರ್ಗದವನೆಂದು ಭಾವಿಸತೊಡಗಿದರೆ ಒಡನೆ ಅವನ ಬ್ರಾಹ್ಮಣ್ಯವೇ ನಷ್ಟವಾಗಿ ಹೋಗುತ್ತದೆ. ಗುಣಕ್ಕೆ ಯಾವಾಗಲೂ ಪೂಜೆ ದೊರೆತೇ ದೊರೆಯುತ್ತದೆ. ಆದರೆ ಗುಣಿಯಾದವನು ಸ್ವಾಹಂಕಾರದಿಂದ ಕೊಬ್ಬಿದರೆ ಜಗತ್ತಿಗೆ ಅವನ ಗುಣಗಳಿಂದೇನೂ ಪ್ರಯೋಜನವುಳಿಯದು. ಎಲ್ಲ ಬಗೆಯ ಪ್ರಾವೀಣ್ಯವೂ ಒಂದು ಬಗೆಯ ಧರ್ಮನಿಧಿ, ಅದನ್ನು ಸಮಾಜದ ಕಲ್ಯಾಣಕ್ಕಾಗಿಯೆ ಉಪಯೋಗಿಸಬೇಕು. ವ್ಯಕ್ತಿಗೆ ಸ್ವಹಿತಕ್ಕಾಗಿಯೇ ಬಾಳುವ ಹಕ್ಕಿಲ್ಲ. ನಿಜವಾಗಿ ಸ್ವಹಿತದೃಷ್ಟಿಯಿಂದ ಬಾಳುವದು ಸಾಧ್ಯವೇ ಇಲ್ಲ. ನಾವು ಸಮಾಜ ಹಿತಕ್ಕಾಗಿ ಬಾಳಿದಾಗಲೆ ಪರಿಪೂರ್ಣ ಸ್ವಹಿತವನ್ನು ಸಾಧಿಸಿದಂತಾಗುತ್ತದೆ.

ಪ್ರಾಚೀನ ಕಾಲದ ಸ್ಥಿತಿಗತಿಗಳೇನೇ ಇದ್ದಿರಲಿ, ಇಂದಿನ ದಿನಗಳಲ್ಲಂತೂ ಯಾರೂ ತಾನೂ ಶ್ರೇಷ್ಠ ವರ್ಗದವನೆಂದುಕೊಂಡು ಜೀವನ ನಡೆಸಲಾರ. ಇಂಥ ಶ್ರೇಷ್ಠರ ವರ್ತ್ಯತೆಯನ್ನು ಸಮಾಜ ಸಾಮಾನ್ಯವಾಗಿ ಕಠಿಣ ಪ್ರಸಂಗಗಳಲ್ಲಿ ಹೊರತು, ಸಹಿಸಿಕೊಳ್ಳುವದಿಲ್ಲ ಜಗತ್ತು ಇಂದು ಪೂರ್ಣ ಪ್ರಜ್ಞೆಯಿಂದ ಕೆಲವಷ್ಟಿಗೆ ಸ್ವೇಚ್ಛಾಚಾರವೂ ಉಂಟಾಗಿರಬಹುದಾದರೂ ಜನಾಭಿಪ್ರಾಯವಿಂದು ಉಚ್ಚನೀಚತೆಯ ತಾರತಮ್ಯವನ್ನು ಒಪ್ಪಲು ಸಿದ್ಧವಿಲ್ಲ. ಉಚ್ಚನೀಚ ಭೇದಗಳಿಗೆ ನಾಲ್ಕು ಮತ್ತೂ ಮೊಳೆತಗಳೂ ಬೀಳುತ್ತಿವೆ. ಎಲ್ಲರ ಆತ್ಮಗಳೂ ಸಮಾನವೆಂಬ ತಿಳಿವಳಿಕೆಗೆ ಮನ್ನಣೆ ದೊರೆಯುತಿದೆ. ನಾವೆಲ್ಲರೂ ಪರಮಾತ್ಮನ ಸೃಷ್ಟಿಯಾಗಿರುವದರಿಂದ ಮೇಲು ಕೀಳಿನ ವಿಚಾರಗಳಿಗೆ ಎಡೆಯೆ ಇಲ್ಲ. ಶ್ರೇಷ್ಠ ಜಾತಿ ಕನಿಷ್ಠ ಜಾತಿಗಳಿಲ್ಲೆಂದು ಹೇಳಿದಾಕ್ಷಣ ನಮ್ಮೆಲ್ಲರ ಯೋಗ್ಯತೆಗಳೂ ಸಮಾನವಾಗಿವೆಯೆಂದಾಗಲಿ ಆಗಿರಬೇಕೆಂದಾಗಲಿ ಅರ್ಥವಿಲ್ಲ. ಎಲ್ಲರಿಗೂ ಸಮಾನ ಯೋಗ್ಯತೆಗಳಾಗಲಿ ಸಮಾನ ಆಸ್ತಿಗಳಾಗಲಿ ಸಮಾನ ಸಂಧಿಗಳಾಗಲಿ ದೊರೆಯುವದಿಲ್ಲ. ಆದರೂ ಎಲ್ಲರೂ ಬಿನ್ನ ಭಿನ್ನ ಸ್ವಭಾವ ಸಾಮರ್ಥ್ಯ ವಯಸ್ಸುಗಳುಳ್ಳ ಅಣ್ಣ ತಂಗಿಯರಂತೆ ಸಮಾನರು.

ಆದುದರಿಂದ ವರ್ಣ ವ್ಯವಸ್ಥೆ ಆಧ್ಯಾತ್ಮಿಕವಾಗಿದ್ದರೆ, ಅದರಲ್ಲಿ ಉಚ್ಚನೀಚ ಭೇದಕ್ಕೆಡೆಯಿಲ್ಲ.

ಜನ್ಮ ಮೂಲ ವರ್ಣ.

ಹೀಗೆ ನಾಲ್ಕು ವರ್ಣಗಳಿವೆ ಮತ್ತು ಅವು ಜನ್ಮ ಮೂಲವಾಗಿವೆ. ಒಬ್ಬಾತನು ಬೇರೊಂದು ವೃತ್ತಿಯನ್ನು ಕೈಕೊಂಡರೆ ಅವನ ವರ್ಣ ಬದಲಾಗಬಲ್ಲದು. ಆದರೆ ವರ್ಣಗಳು ಜನ್ಮಮೂಲವಾಗದಿದ್ದರೆ ವರ್ಣ ವ್ಯವಸ್ಥೆಗೆ ಅರ್ಥವೇ ಇಲ್ಲವಾಗುವದು.

ವರ್ಣಪದ್ಧತಿಯೊಂದು ತಾತ್ವಿಕ ಮತ್ತು ಆರ್ಥಿಕ ವ್ಯವಸ್ಥೆ. ಅದು ಜನ್ಮಾಂತರಗಳ ಮತ್ತು ವಂಶ ಪಾರಂಪರ್ಯದವಾಸನೆಗಳನ್ನು ಅಂಗೀಕರಿಸುತ್ತದೆ. ಎಲ್ಲರೂ ಹುಟ್ಟುವಾಗ ಸಮಾನ ಸಾಮರ್ಥ್ಯದವರಾಗಿಯೂ ಒಂದೇ ಬಗೆಯ ಬಲವಿನವರಾಗಿಯೂ ಇರುವದಿಲ್ಲ. ಪ್ರತಿಯೊಂದು ಮಗುವಿನ ಬುದ್ಧಿಶಕ್ತಿಯನ್ನು ಅಳೆಯಲು ಹೆತ್ತವರಿಂದಲೂ ಸಾಧ್ಯವಿಲ್ಲ. ಸರಕಾರದಿಂದಲೂ ಸಾಧ್ಯವಿಲ್ಲ. ಆದರೆ ಪ್ರತಿಯೊಂದು ಮಗುವೂ ತನ್ನ ಕುಲಕ್ರಮಾಗತವಾದ, ಆವರಣದಿಂದ ಸೂಚಿತವಾದ ಮತ್ತು ಜನ್ಮಾಂತರ ವಾಸನೆಯಿಂದ ನಿರ್ದಿಷ್ಟವಾದ ವೃತ್ತಿಯಲ್ಲಿ ತರಬೇತಿ ಹೊಂದಿದರೆ ಯಾವ ತೊಂದರೆಯೂ ಇಲ್ಲ. ಆಗ ನಿರರ್ಥಕ ಗುಣ ಪರೀಕ್ಷೆಯಲ್ಲಿ ಕಾಲಹರಣ ಮಾಡುವ ಪ್ರಮೇಯವುಂಟಾಗದು. ಆತ್ಮವನ್ನು ದುಷ್ಟವಾಗಿಮಾಡುವ ಸ್ಪರ್ಧೆಗೆಡೆಯಿಲ್ಲ, ಸಮಾಜದಲ್ಲಿ ಸಂತೃಪ್ತಿ ಸಮಾಧಾನಗಳು ನೆಲೆಗೊಂಡು, ಬದುಕಿಗಾಗಿ ಕಾಳಗ ಮಾಡುವ ಆವಶ್ಯಕತೆ ತಪ್ಪುತ್ತದೆ.

ವರ್ಣಸಾಂಕರ್ಯ ಕರ್ಮಸಾಂಕರ್ಯ

ವರ್ಣಪದ್ಧತಿಯಲ್ಲಿ ಉಚ್ಚನೀಚ ಭಾವವನ್ನು ನಿರ್ಮಾಣ ಮಾಡುವ ತತ್ವ ಅಡಕವಾಗಿದೆ. ಚಮ್ಮಾರನಗಿಂತ ಬಡಗಿ ಶ್ರೇಷ್ಠನೆಂದಾದರೆ ಮತ್ತು ಡಾಕ್ಟರನೂ ವಕೀಲನೂ ಅವರಿಬ್ಬರಿಗಿಂತಲೂ ಶ್ರೇಷ್ಠರಾದರೆ, ಯಾರೂ ಸ್ವೇಚ್ಛೆಯಿಂದ ಚಮ್ಮಾರನಾಗಲಿ ಬಡಗಿಯಾಗಲಿ ಆಗಬಯಸಲಿಕ್ಕಿಲ್ಲ; ಎಲ್ಲ ಡಾಕ್ಟರರೋ ವಕೀಲರೋ ಆಗಲು ಹೆಣಗುವರು. ಆ ಸ್ಥಿತಿಯಲ್ಲಿ ಅವರ ಹಾಗೆ ಮಾಡುವದೂ ನ್ಯಾಯವೇ, ಹಾಗೆ ಮಾಡಿದರೆ ಅವರು ಪ್ರಶಂಸಾರ್ಹರೇ ಸರಿ. ಅರ್ಥಾತ್ ಆಗ ವರ್ಣವ್ಯವಸ್ಥೆ ಕೇಡೆಂದು ಬಗೆದು ಅದನ್ನು ರದ್ದುಗೊಳಿಸಬೇಕಾಗುವದು.

ಆದರೆ ಪ್ರತಿಯೊಬ್ಬನೂ ತನ್ನ ತಂದೆಯ ವೃತ್ತಿಯನ್ನೇ ಅವಲಂಬಿಸಬೇಕೆಂದು ಸೂಚಿಸಲ್ಪಟ್ಟಿದ್ದರೂ ಆ ಸೂಚನೆಯೊಡನೆಪ್ರತಿಯೊಂದು ವೃತ್ತಿಯವನೂ ಆ ವೃತ್ತಿಯಿಂದ ತನ್ನ ಜೀವನ ನಿರ್ವಾಹಕ್ಕೆ ಬೇಕಾದಷ್ಟನ್ನೇ ಗಳಿಸಬೇಕೆಂಬ ನಿಯಮವನ್ನೂ ಹಾಕಬೇಕಾಗಿದೆ. ಬಡಗಿ ಚಮ್ಮಾರನಿಗಿಂತ ಹೆಚ್ಚುಗಳಿಸಿದರೆ ಅಥವಾ ವಕೀಲನೋ ಡಾಕ್ಟರನೋ ಆಗಲು ಪ್ರಯತ್ನಿಸುವನು. ಈಗ ನಡೆಯುತಿರುವದಾದರೂ ಇದೇ.ಇದರಿಂದ ದ್ವೇಷ ಬೆಳದಿದೆ, ಮತ್ತು ಡಾಕ್ಟರ ವಕೀಲರ ಸಂಖ್ಯೆಯೂ ಮಿತಿಮೀರಿ ಹೆಚ್ಚಿದೆ.ಸಮಾಜಕ್ಕೆ ಚಮ್ಮಾರನೂ ಬಡಗಿಯೂ ಬೇಕಾಗಿರುವಂತೆ ವಕೀಲನೂ ಡಾಕ್ಟರೂ ಕೂಡ ಬೇಕಾಗಿರಬಹುದು. ಈ ನಾಲ್ಕು ವೃತ್ತಿಗಳನ್ನು ಇಲ್ಲಿ ಉದಾಹರಣೆಗಾಗಿ ಮತ್ತು ತುಲನೆಗಾಗಿ ಮಾತ್ರ ತೆಗೆದುಕೊಳ್ಳಲಾಗಿದೆ. ಸಮಾಜಕ್ಕೆ ಈ ವೃತ್ತಿಯನ್ನು ಅನುಸರಿಸುವವರು ಬೇಕೇ, ಆ ವೃತ್ತಿಯವರು ಬೇಡವೇ ಎಂಬ ಚರ್ಚೆಯಲ್ಲಿ ಕಾಲ ಕಳೆಯುವದು ಅಪ್ರಸ್ತುತ.

ವಿದ್ಯೆ ದ್ರವ್ಯಾರ್ಜನೆಯ ಸಾಧನವಲ್ಲ

ಅಲ್ಲದೆ, ವಿದ್ಯೆ ಅಥವಾ ಜ್ಞಾನವೆಂಬುದೊಂದು ವ್ಯಾಪಾರದ ಸರಕಲ್ಲ, ಅದನ್ನು ಧನಸಂಪಾದನೆಗಾಗಿ ಉಪಯೋಗಿಸಕೂಡದೆಂಬ ತತ್ವವೂ ಈ ವರ್ಣವ್ಯವಸ್ಥೆಯ ಒಂದು ಅಂಗವಾಗಿದೆ. ಆದುದರಿಂದ, ವಕೀಲನೂ ಡಾಕ್ಟರನೂ ಸಮಾಜಕ್ಕೆ ಸೇವೆ ಮಾಡುವುದು ಅವಶ್ಯಕವಾಗಿರುವ ಕಾರಣ, ಅವರು ಅದರಮೂಲಕ ಜೀವನ ನಿರ್ವಾಹಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುವದು ಯೋಗ್ಯವಾದೀತು. ಹಿಂದಿನಕಾಲದಲ್ಲಿ ನಡೆಯುತಿದ್ದುದಾದರೂ ಹೀಗೆಯೆ. ಹಳ್ಳಿಯ ವೈದ್ಯನು ಬಡಗಿಗಿಂತ ಹೆಚ್ಚು ಸಂಪಾದಿಸುತಿದ್ದಿಲ್ಲ, ಒಡಲಿಗೆ ಬೇಕಾದಷ್ಟೇ ದೊರಕಿಸಿಕೊಳ್ಳುತಿದ್ದನು. ಒಂದೇಮಾತಿನಲ್ಲಿ, ಎಲ್ಲ ವೃತ್ತಿಕೈಗಾರಿಕೆಗಳಿಗೂ ಒಂದೇ ಬಗೆಯಾದ ವೇತನ ಪ್ರಮಾಣ ವಿರಬೇಕು. ಅದು ಬರಿ ಜೀವನ ವೇತನವಿರಬೇಕು. ವರ್ಣಗಳ ಸಂಖ್ಯೆ ಇಷ್ಟೆ ಇರಬೇಕೆಂದು ಶಾಸ್ತ್ರವಿಲ್ಲ; ಮನುಷ್ಯನ ಕರ್ತವ್ಯವನ್ನು ನಿರ್ದೇಶಿಸುತ್ತವೆಯೆಂದೇ ಅವುಗಳಿಗೆ ಬೆಲೆ. ವರ್ಣಗಳಸಂಖ್ಯೆಯನ್ನು ನಾವು ಒಂದೊಂದಾಗಲಿ ಹಲವೆಂದಾಗಲಿ ನಮ್ಮ ಮನಸಿಗೆ ತೋರಿದಂತೆ ಹೇಳಬಹುದು. ಧರ್ಮಶಾಸ್ತ್ರಗಳು ನಾಲ್ಕನ್ನು ಮಾತ್ರ ಉಲ್ಲೇಖಿಸಿವೆ. ಆದರೆ ಎಲ್ಲವಕ್ಕೂ ಸಮಾನವಾದ ಮಾನವನ್ನು ಕೊಟ್ಟಮೇಲೆ ಅವು ನಾಲ್ಕಾಗಿದ್ದರೂ ಅಷ್ಟೇ, ಒಂದಾಗಿದ್ದರೂ ಅಷ್ಟೇ.

ಆಶ್ರಮದಲ್ಲಿ ಪುನರುಜ್ಜೀವನಗೊಳಿಸಲು ನಾವು ಪ್ರಯತ್ನಿಸುತ್ತಿರುವ ವರ್ಣಪದ್ಧತಿ ಇದೇ. ಅದರ ಎರಡು ಮುಖ್ಯ ಮೂಲತತ್ವಗಳನ್ನು ನಾನು ಈಗಾಗಲೇ ಉಲ್ಲೇಖಿಸಿದ್ದೇನೆ,- ಅದರಲ್ಲಿ ಉಚ್ಚ ನೀಚ ಭೇದವಿಲ್ಲೆಂಬುದೊಂದು, ಪ್ರತಿಯೊಬ್ಬನಿಗೂ ಜೀವನ ನಿರ್ವಾಹಕ್ಕೆ ಸಾಕಷ್ಟು ವೇತನ ದೊರೆಯಬೇಕು ಮತ್ತು ಆ ಜೀವನ ವೇತನ ಎಲ್ಲರಿಗೂ ಸಮಾನವಾಗಿರಬೇಕೆಂಬುದು ಇನ್ನೊಂದು. ಇವುಗಳಿಗೆ ಮನ್ನಣೆ ದೊರೆತಷ್ಟು ಮಟ್ಟಿಗೆ ಅವು ಸಮಾಜಕ್ಕೆ ಹಿತಕಾರಿಯಾಗುವವು.

ಇಂಥ ಯೋಜನೆಯನ್ನು ಅಂಗೀಕರಿಸಿದರೆ ಜ್ಞಾನಾರ್ಜನೆಗೆ ಯಾವ ಉತ್ತೇಜನವೂ ದೊರೆಯುವದಿಲ್ಲೆಂದು ಅಪೇಕ್ಷಿಸಬಹುದು. ಆದರೆ ಇಂದು ಜ್ಞಾನಾರ್ಜನೆಯ ಹಿಂದಿರುವ ಉದ್ದೇಶವು ಅದನ್ನು ಕಲುಷಿತಗೊಳಿಸುತ್ತಿದೆ. ಅದು ಕಾರಣ ಉತ್ತೇಜನವಿಲ್ಲದಿದ್ದರೆ ಕ್ಷೇಮವೇ ಆದೀತು. ಸೇವಾಬುದ್ಧಿಯುಳ್ಳವನು ಅವಶ್ಯ ವಿದ್ವಜ್ಞಾನವನ್ನು ಸಂಗ್ರಹಿಸಿಯೇ ತೀರುವನು; ಅವನ ಜ್ಞಾನ ಅವನಿಗೂ ಸಮಾಜಕ್ಕೂ ಭೂಷಣಪ್ರಾಯವಾಗುವದು. ಇನ್ನು ದ್ರವ್ಯಾರ್ಜನೆಯ ಆಮಿಷ ಹೋದರೆ, ಶಿಕ್ಷಣದ ಪಠ್ಯವಸ್ತುಗಳಲ್ಲಿಯೂ ಶಿಕ್ಷಣಪದ್ಧತಿಯಲ್ಲಿಯೂ ಸುಧಾರಣೆಯಾಗುವದು. ಈಗ ಜ್ಞಾನದ ದುರುಪಯೋಗ ಬಹಳವಾಗಿ ನಡೆಯುತ್ತಿದೆ. "ಹೊಸ ವ್ಯವಸ್ಥೆ" ಯಲ್ಲಿ ಈದುರುಪಯೋಗ ಕಡಿಮೆಯಾಗುತ್ತದೆ.

ಸತ್-ಸ್ಪರ್ಧೆ

ಆಗಲೂ ನಾನು ಒಳ್ಳೆಯ ಮನಾಗಬೇಕು, ನಾನು ಹೆಚ್ಚು ಸೇವೆ ಮಾಡಬೇಕು ಎಂಬ ಆಕಾಂಕ್ಷೆ ಇದ್ದೇ ಇರುವದು. ಮತ್ತು ಎಲ್ಲರೂ ಸಮಾನವಾದ ಜೀವನ ವೇತನ ಪಡೆಯುವ ಕಾರಣ ಅಸಂತೃಪ್ತಿ, ಅವ್ಯವಸ್ಥೆಗಳಿಗೆ ಎಡೆಯಾಗುವದಿಲ್ಲ

ವರ್ಣಕ್ಕೆ ಈಗ ಹಚ್ಚಲ್ಪಡುತ್ತಿರುವ ಅರ್ಥ ತಪ್ಪು. ಈ ತಪ್ಪು ಅರ್ಥದ ಸ್ಥಾನದಲ್ಲಿ ಮೇಲೆ ಲೇಖಿಸಿದ ತತ್ವಗಳು ಸ್ಥಾಪಿಸಲ್ಪಡಬೇಕು. ಅಸ್ಪೃಶ್ಯತೆ ಹೋಗಬೇಕು. ಸಹಭೋಜನ ಅಂತರ್ಜಾತೀಯ ವಿವಾಹಗಳಿಗೂ ವರ್ಣಕ್ಕೂ ಏನೂ ಸಂಬಂಧವಿಲ್ಲ. ತನಗೆ ಬೇಕಾದವರ ಸಂಗಡ ಉಣ್ಣುವ, ಬೇಕಾದವುಗಳನ್ನು ಮದುವೆಯಾಗುವ ಸ್ವಾತಂತ್ರ್ಯವಿರಬೇಕು. ಸಾಧಾರಣವಾಗಿ ಪ್ರತಿಯೊಬ್ಬನೂ ತನ್ನ ವರ್ಣಕ್ಕೆ ಸೇರಿದ ಹುಡುಗಿಯನ್ನೇ ಮಾಡಿಕೊಳ್ಳುತ್ತಾನೆ. ಆದರೆ ಒಬ್ಬನು ಇನ್ನೊಂದು ವರ್ಣದವಳನ್ನು ಮದುವೆಯಾದರೆ ಅದು ಪಾಪವೆಂದು ಭಾವಿಸತಕ್ಕದ್ದಲ್ಲ. ಯಾರಾದರೊಬ್ಬನ ನಡೆವಳಿ ದಂಡನೀಯವಾಗಿದ್ದರೆ ಆಗ ಅವನಿಗೆ ಸಮಾಜವೇ ಬಹಿಷ್ಕಾರ ಹಾಕುವದಲ್ಲದೆ ಅವನ ವರ್ಣದವರಿಗಲ್ಲ ಆಗ ಸಮಾಜದ ರಚನೆ ಇಂದಿಗಿಂತ ಒಳಿತಾಗುವದು, ಈಗ ಅದನ್ನು ಅಡಗಿಸಿರುವ ಕಲ್ಮಷವೂ ಜಂಭವೂ ತೊಳೆದು ಹೋಗುವವು.

● ಬ್ರಿಟನ್ನಿನ ೩೬೦ ಲಕ್ಷ ಪ್ರಾಯ ಪ್ರಬುದ್ಧ (೧೬ ವರ್ಷ ಮೀರಿದ) ಜನಸಂಖ್ಯೆಯಲ್ಲಿ ೩೧೦ ಲಕ್ಷ ಜನರು ಸಿಗರೇಟು ಅಥವಾ ಹುಕ್ಕಾ ಸೇದುತ್ತಾರೆ. ಗಂಡಸರಲ್ಲಿ ೧೦೦ ಕ್ಕೆ ೮೦ ಜನ ಹೆಂಗಸರಲ್ಲಿ ೧೦೦ ಕ್ಕೆ ೪೦ ಜನ ಧೂಮಪಾನಿಗಳು. ಎಲ್ಲ ವರ್ಗಗಳಲ್ಲಿಯೂ ಈ ವ್ಯಸನ ಸಮಾನ ಪ್ರಮಾಣದಲ್ಲಿ ಹಬ್ಬಿದೆ. ಮದುವೆಯಾಗದವರು ಆದವರೆಂಬ ಭೇದವೂ ಇಲ್ಲ. ೨೫೦ ಲಕ್ಷ ಜನರು ದಿನಕ್ಕೆ ತಲಾ ೪೪ ಸಿಗರೇಟಿನಂತೆ ಸೇದುತ್ತಾರೆ. ಒಬ್ಬ ಗಾಢ ವ್ಯಸನಿಯು ತಾನು ೪೦ ವರ್ಷಗಳಲ್ಲಿ ಎಂಟೊಂಭತ್ತು ಸಾವಿರ ಔನ್ಸು ತಂಬಾಕು ಸೇದಿರಬೇಕೆಂದೂ ಅದರ ವೆಚ್ಚ ೮೦೦ ಪೌಂಡು (ವರ್ಷಕ್ಕೆ ೨೦ ಪೌಂಡು. ೨೬೬ ರೂಪಾಯಿ) ಆಗಿರಬೇಕೆಂದೂ ಲೆಕ್ಕ ಹಾಕಿದ್ದಾನೆ.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ

ಯುದ್ಧ ಸಾಮಗ್ರಿಗಳ ಸಿದ್ಧತೆ

ಕಳೆದ ದ್ವಿತೀಯ ಜಾಗತಿಕ ಮಹಾಯುದ್ಧಕ್ಕೆಂದು-ಬೇಕಾದರೆ ಇದಕ್ಕೆ "ವಿತ್ತಮೇಧ" ವೆಂದೂ ಹೇಳಬಹುದು. ಜಗತ್ತಿನಲ್ಲಿಯೇ ಶ್ರೀಮಂತ ರಾಷ್ಟ್ರವೆನಿಸಿದ ಅಮೇರಿಕೆಯ ಸಂಯುಕ್ತ ಸಂಸ್ಥಾನದ ಪ್ರಜಾಪ್ರಭುತ್ವವಾದೀ ಸರಕಾರವು ಸಿದ್ಧಪಡಿಸಿದ್ದ ಯುದ್ಧ ಸಾಮಗ್ರಿಗಳಲ್ಲಿ ಸದ್ಯಕ್ಕೆ ಉಪಯೋಗೀಸ್ಥಿತಿಯಲ್ಲಿರುವಂತೆ ಉಳಿದವುಗಳ ಬೆಲೆಯು ಸುಮಾರಾಗಿ ೮೭,೨೨೦ ಲಕ್ಷ ಡಾಲರುಗಳಷ್ಟು ಆಗುತ್ತದೆ. ಈ ಸಾಮಗ್ರಿಗಳಲ್ಲಿ ಟ್ಯಾಂಕುಗಳು, ತೋಪುಗಳು ಚಿಕ್ಕಪುಟ್ಟ ಆಯುಧಗಳು, ಮೋಟಾರು ಟ್ರಕ್ಕುಗಳು ಜೀಪವಾಹನಗಳು ಮತ್ತು ಉಳಿದ ಹೋರಾಟದ ಸಾಧನ ಸಾಮಗ್ರಿಗಳು ಬರುತ್ತವೆ. ಯುದ್ಧ ಮುಗಿದೊಡನೆಯೆ ನೋಡಿದರೆ ಈ ಸಾಮಗ್ರಿಗಳ ಸಂಗ್ರಹವು ಸದ್ಯದ ಇಮ್ಮಡಿಯಷ್ಟಿತ್ತು. ಆದರೆ ಅವುಗಳಲ್ಲಿ ಉಪಯೋಗ ನಾಶ ಆತ್ತಿತ್ತ ಕಳಿಸುವಾಗ ಸಂಭವಿಸಿದ ಧಕ್ಕೆ ಮೊದಲಾದವುಗಳಿಂದ ಅರ್ಧಕ್ಕರ್ಧ ನಾಶವಾಗಿ ಹೋಗಿರುತ್ತವೆ.

ಯುದ್ಧವು ಇನ್ನೂ ಒಮ್ಮೆ ಪ್ರಾರಂಭವಾಗುವುದೇ ಆದಲ್ಲಿ, ಆ ೮೭,೨೨೦ ಲಕ್ಷ ಡಾಲರು ಬೆಲೆಯ ಸಂಗ್ರಹದಿಂದ ತನ್ನ ಹದಿನೆಂಟು ಸೈನ್ಯ ವಿಭಾಗಗಳಿಗಾಗಿ ೩೬,೦೦೦ ಲಕ್ಷ ಡಾಲರ ಬೆಲೆಯಷ್ಟು ಈ ಸಾಮಗ್ರಿಗಳನ್ನು ಉಪಯೋಗಿಸಬೇಕಾಗಬಹುದು. ಅವರೂ, ಈ ಸಾಮಗ್ರಿಗಳಿಗೆ ಜತೆಯಾಗಿ ಇನ್ನೂ ಅನೇಕ ಅತ್ಯಾಧುನಿಕ ಆಯುಧ ಶಸ್ತ್ರಾಸ್ತ್ರ ಮೊದಲಾದವುಗಳನ್ನು ಕೂಡಿಸಬೇಕಾಗಿಯೆ ಬರಬಹುದು. ಹೀಗೆ ಭೂಯುದ್ಧ ಸೈನ್ಯಕ್ಕೆ ಕೂಡಿಸಬೇಕಾಗಿರುವ ಸಾಮಗ್ರಿಗಳ ಒಟ್ಟು ಬೆಲೆ ಸುಮಾರು ೫೧,೨೨೦ ಲಕ್ಷ ಡಾಲರುಗಳಷ್ಟಾಗಬಹುದು. 'ಎಮ್ ಡೇ' (ಸೈನ್ಯದಿನ) ಮುಗಿದ ಮರುದಿನವೇ ಮೇಲೆ ಹೇಳಿದಂತೆ ಅಮೇರಿಕನ್ ಸೈನ್ಯವು ಸಾಮಗ್ರಿಗಳಿಂದ ಸಜ್ಜುಗೊಳ್ಳುವದರಲ್ಲಿ ಸಂಶಯವಿಲ್ಲ. ಮೇಲೆ ಹೇಳಿದ ಯುದ್ಧ ಸಾಮಗ್ರಿಗಳ ಬೆಲೆ ಕಟ್ಟುವಾಗ ಯುದ್ಧಕಾಲದಲ್ಲಿ (ದ್ವಿತೀಯ ಜಾಗತಿಕ ಮಹಾಯುದ್ಧ) ಅವುಗಳ ಬೆಲೆ ಹತ್ತು ಎಂದಿಟ್ಟುಕೊಂಡರೆ ಈಗ ಒಂದು ಎಂದು ಹಿಡಿಯಲಾಗಿರುತ್ತದೆ.

ಹೀಗಿದ್ದರೂ ಅಮೇರಿಕೆಯು ತನ್ನ ಮಿತ್ರರಾಷ್ಟ್ರಗಳಿಗೆಲ್ಲ "ಕಡಉತ್ತಿ" ಯ ಒಪ್ಪಂದದ ಪ್ರಕಾರ ಯುದ್ಧ ಸಾಮಗ್ರಿಗಳನ್ನು ಪೂರೈಸಬೇಕಾದಲ್ಲಿ-ಯುದ್ಧಕಾಲದಲ್ಲಿದ್ದ ಸೈನ್ಯಸಂಖ್ಯೆಗೆ ಪೂರೈಕೆ ಮಾಡಬೇಕಾದಲ್ಲಿ ಈ ಸಾಮಗ್ರಿಗಳು ಪೂರೈಕೆಯ ಒಂದು ಹತ್ತಾಂಶ ಮಾತ್ರ ಆಗುವುದು. ಇದರ ಕಾರಣ ಬೇರೆ ಬೇರೆ ಬಗೆಯ ಆಯುಧಗಳು ಒಂದು ಬಗೆಯ ಆಯುಧಗಳು ಸಾಕಷ್ಟಿದ್ದರೆ ಇನ್ನೊಂದು ಬಗೆಯ ಆಯುಧಗಳ ಸಂಗ್ರಹ ಕಡಿಮೆಯಿರುವುದು. ಆದರೆ ಕೇವಲ ಕೆಲವೇ ಹೊಸ ಸೈನ್ಯ ವಿಭಾಗಕ್ಕೆ ಪೂರೈಸುವಷ್ಟು ಕೆಲವು ಬಗೆಯ ಯುದ್ಧ ಸಾಮಗ್ರಿಯಿಲ್ಲ.

ಸಂಗ್ರಹದ ವಿವರಗಳು

ಜಾಗತಿಕ ದ್ವಿತೀಯ ಮಹಾಯುದ್ಧದಲ್ಲಿ ಬೇರೆ ಬೇರೆ ಬಗೆಯ ಟ್ಯಾಂಕುಗಳ ಸಂಗ್ರಹವು ಸಾಕಷ್ಟಿತ್ತು, ಯುದ್ಧದ ಕೊನೆಗೆ ಅಮೇರಿಕೆಯ ಟ್ಯಾಂಕ ಸಂಗ್ರಹವು ೨೫೦೦ ಇದ್ದರೂ, ಸೈನ್ಯದಲ್ಲಿ ಇನ್ನು ೬೮೦೦ ಟ್ಯಾಂಕುಗಳು ಕೆಲಸ ಮಾಡುವ ಸ್ಥಿತಿಯಲ್ಲಿವೆ.

ಅಮೇರಿಕೆಯ ಆವಶ್ಯಕತೆಯು ಮೇರೆಗೆಂದರೆ ೬೭೦ಗಳ ಟ್ಯಾಂಕುಗಳಾದರೆ ಆದರ ಹದಿನೆಂಟು ಭಾಗ ಸೈನ್ಯಕ್ಕೆ ಸಾಕಾಗುವುದು. ಆದ್ದರಿಂದ 'ಕಡಉತ್ತಿ' ಒಪ್ಪಂದಂತೆ ನೆರವು ನೀಡಲು ಇನ್ನು ೯೨೪೭ ಟ್ಯಾಂಕುಗಳು ಉಳಿಯುತ್ತವೆ. ಇದು ಪಶ್ಚಿಮ ಯುರೋಪದ ೨೫ ಸಾವಿರ ಸೈನ್ಯ ವಿಭಾಗಕ್ಕೆ ಸಾಲುವಷ್ಟಾಗುವುದು.

ಟ್ಯಾಂಕ ವಿರೋಧಕ ತುಬಾಕಿಗಳು ಮಾತ್ರ ಸಾಕಷ್ಟಿಲ್ಲ. ೫೭ ರಿಂದ ೯೦ ಮಿಲಿಮೀಟರ ಆಕಾರದ ತುಬಾಕಿಗಳು ಪಶ್ಚಿಮ ಯುರೋಪಕ್ಕೆ ಆವಶ್ಯವಿರುವವು. ಇವು ಪೂರ್ವದಿಂದ ರಶಿಯಾ ಮಾಡಬಹುದಾದ ಆಕ್ರಮಣವನ್ನೆದುರಿಸಲು ಪಶ್ಚಿಮ ಯುರೋಪಕ್ಕೆ ಬೇಕೇ ಆಗಿರುವವು. ಅವುಗಳಲ್ಲಿ ತುಸುಮಾತ್ರ ಅಮೇರಿಕೆಯಿಂದ ಪೂರೈಸಬಹುದಾಗಿರುತ್ತದೆ. ಆದರೆ ೧೦೫ ಮಿಲಿಮೀಟರದ ತೋಪುಗಳು ಮಾತ್ರ ಸಾಕಷ್ಟಿರುತ್ತವೆ. ಸಂರಕ್ಷಣ ದೃಷ್ಟಿಯಿಂದ ಇವಕ್ಕೆ ಅಷ್ಟು ಮಹತ್ವವಿರುವದಿಲ್ಲ.

ವಿಮಾನ ನಿರೋಧಕ ಸಾಮಗ್ರಿಗಳು ಮಾತ್ರ ಬಗೆಬಗೆಯ ಇರುತ್ತವೆ. ಕೆಳಗೇ ಹಾರಾಡುವ ವಿಮಾನ ತಡೆಯುವ ಸಾಮಗ್ರಿಗಳ ಸಂಗ್ರಹ ಅಮೇರಿಕೆಯ ಬಳಿ ಹೇರಳವಾಗಿರುತ್ತದೆ. ಆದರೆ ಸದ್ಯಕ್ಕೆ ಅವಕ್ಕಷ್ಟು ಮಹತ್ವವಿರುವುದಿಲ್ಲ. ಇದಲ್ಲದೆ ಬೇರೆ ಬೇರೆ ಬಗೆಯ ಹಳೆ ಹೊಸ ನಮೂನೆಯ ಆಯುಧ ಸಾಮಗ್ರಿಗಳ ಸಂಗ್ರಹವೂ ಸಾಕಷ್ಟಿರುವುದು.

ಇದರಂತೆ ಟ್ರಕ್ಕುಗಳು ಜೀಪಮೋಟರುಗಳು ಯುದ್ಧಕ್ಕೆ ಬೇಕಾಗುವ ಸಾಮಗ್ರಿಗಳೇ ಆದರೆ ಅಮೇರಿಕೆಯ ಬಳಿ ಸದ್ಯಕ್ಕೆ ಇರುವ ಈ ಸಂಗ್ರಹವು ಸಾಕಷ್ಟಿರದ್ದರಿಂದ ಅವುಗಳನ್ನು ಪಶ್ಚಿಮ ಯುರೋಪವು ಬೇಡಿದಷ್ಟನ್ನೂ ಕಳಿಸುವುದು ಸಾಧ್ಯವಿಲ್ಲ. ಮದ್ದುಗುಂಡು ಮೊದಲಾದ ಸಾಮಗ್ರಿಗಳು ಹೇರಳವಾಗಿವೆ. ಎಲ್ಲ ಬಗೆಯ ಈ ಮದ್ದುಗುಂಡು ಕೂಡಿ ಎಪ್ಪತ್ತು ಲಕ್ಷ ಟನ್ನುಗಳಷ್ಟು ಸಂಗ್ರಹವು ಅಮೇರಿಕೆಯ ಬಳಿಯಲ್ಲಿ ಇರುತ್ತದೆ.

ನಾಲ್ಕು ಸಾವಿರ ಯುದ್ಧ ವಿಮಾನಗಳ ಸಂಗ್ರಹವು ಅಮೇರಿಕೆಯ ಬಳಿಯಿದೆ. ಇದಲ್ಲದೆ ಬಿ. ೨೯ ನಮೂನೆಯ ಎರಡು ಸಾವಿರ ವಿಮಾನಗಳು ಬ್ರಿಟನಕ್ಕೆ ಕಳಿಸಲು ಸಿದ್ಧವಾಗಿ ಅಮೇರಿಕೆಯ ಸಂಗ್ರಹದಲ್ಲಿವೆ.

ಉದ್ದೇಶ

ರಶಿಯಾ ಮತ್ತು ಅಮೇರಿಕೆಗಳ ತಿಕ್ಕಾಟವು ಬಹುದಿನಗಳಿಂದಲೂ ನಡೆದಿರುವುದೇ ಈ ಸಂಗ್ರಹಕ್ಕೆ ಕಾರಣನೆಂದು ತೋರಿ ಬರುತ್ತಿದ್ದರೂ, ಜರ್ಮನಿಯ ಬಗ್ಗೆ ರಶಿಯಾವನ್ನುಳಿದು ಉಳಿದ ಮೂವರ ಕೈವಾಡವೇ ಇದಕ್ಕೆ ಕಾರಣವೆಂದು ಮುಖ್ಯವಾಗಿ ಊಹಿಸಬಹುದಾಗಿದೆ. ಅಮೇರಿಕೆ ಫ್ರಾನ್ಸ ಬ್ರಿಟನಗಳು ಆಟ್ಲಾಂಟಿಕ ಒಪ್ಪಂದದಿಂದ ಪಶ್ಚಿಮ ಯುರೋಪದ ಬಹುತರ ಎಲ್ಲ ರಾಷ್ಟ್ರಗಳನ್ನು ತನ್ನ ಪ್ರಭಾವಳಿಯಲ್ಲಿ ತಂದುಕೊಂಡು ರಶಿಯಾದ ಆಕ್ರಮಣವನ್ನು ಪೂರ್ವ ಸಿದ್ಧತೆಯಿಂದ ಇವೆಲ್ಲರೂ ತಡೆಯುವ ಬಹುದಾಗಿರುತ್ತವೆ. ಇದಲ್ಲದೆ ಪೂರ್ವ ಗೋಲಾರ್ಧದಲ್ಲಿ ರಶಿಯಾವು ಪ್ರಭಾವೀಸ್ಥಾನವನ್ನು ಪಡೆಯುತ್ತಲೆ ನಡೆದಿರುವುದನ್ನು ಚೀನ ಬ್ರಹ್ಮದೇಶ ಮಲಯಾ ಮೊದಲಾದ ಪ್ರಕರಣಗಳಿಂದ ನೋಡುತ್ತಲಿದ್ದ ಅಮೇರಿಕೆಯು ಗುಂಪು ತನ್ನ ಮೊದಲಿನ "ಕಡಉತ್ತಿ" ಯೋಜನೆಯನ್ನು ಜೀವಂತವಿಟ್ಟುಕೊಂಡು ತನ್ನ ಬಲವನ್ನು ಬೆಳೆಸಿಕೊಳ್ಳುವ ಪ್ರಯತ್ನವನ್ನು ನಡೆಸಿರುತ್ತದೆಯೆಂದು ಇಂದಿನ ಆದರ ಆಯುಧ ಸಾಮಗ್ರಿ ಸಾಧನಗಳನ್ನು ಸಂಗ್ರಹಿಸುತ್ತಿರುವುದೇ ಮೊದಲಾದವುಗಳನ್ನು ನೋಡಿದರೆ ತಿಳಿಯಬಹುದು. ಇರದು, ಸಂಸಾರವನ್ನು ಸಾಗಿಸುತ್ತಿರುವುದಲ್ಲದೇ, ಅಷ್ಟೇ ಹುಮ್ಮಸದಿಂದ ಕೆಲಸ ಕಾರ್ಯಗಳಲ್ಲಿ ಆಸಕ್ತಿ ತೋರಿ ಉತ್ಪಾದನೆಯನ್ನು ಹೆಚ್ಚಿಸುವತ್ತ ತನ್ನ ಶಕ್ತಿ ಸರ್ವಸ್ವವನ್ನು ವೆಚ್ಚಮಾಡುತ್ತಲಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ.

ಮೊದಲಿನಷ್ಟೇ ಗಳಿಕೆ, ಮೊದಲಿನಗಿಂತಲೂ ಕಡಿಮೆ ಬಳಿಕೆಯಲ್ಲಿ, ಒಳ್ಳೆಯ ಆಹಾರ ಬಟ್ಟೆ ಬರೆ ಮೊದಲಾದವುಗಳು ಉತ್ತಮ ತರಗತಿಯಲ್ಲಿ ದೊರೆಯುತ್ತಿದ್ದುದರಿಂದ ಅವರ ಜೀವನ ಮಟ್ಟವು ಉಚ್ಚತರಗತಿಯದೂ, ಸಂಪೂರ್ಣ ತೃಪ್ತಿಯುತವಾದದ್ದೂ ಆಗುತ್ತ ನಡೆದಿದೆ. ಹಾಗೆಂದೇ ಇಂದು ಅಮೇರಿಕನ್ನರು, ಸಂಪೂರ್ಣ ಮನದ ಹುಮ್ಮಸು ಆಸ್ಥೆಗಳಿಂದ, ರಾಷ್ಟ್ರ

ದ, ಹಾಗೂ ಅಂತರ ರಾಷ್ಟ್ರಗಳ ವ್ಯವಹಾರದಲ್ಲಿ ಬಿದಿಗೆಯ ಚಂದ್ರ ಬೆಳೆಯುತ್ತಿರುವಂತೆ ಬೆಳೆಯುತ್ತಲೇ ನಡೆದಿದ್ದಾರೆ. ಏಕೆಂದರೆ ಮನುಷ್ಯನಿಗೆ ಹೊಟ್ಟೆ ಬಟ್ಟೆಯ ಚಿಂತೆ ತಪ್ಪಿದಷ್ಟೂ ಅವನಿಗೆ ಪ್ರಗತಿಮಾರ್ಗದ ಮುನ್ನಡೆಯಲ್ಲಿ ಹೆಚ್ಚುಹೆಚ್ಚು ಅವಕಾಶ ದೊರೆಯುತ್ತದೆ. ಈ ಅವಕಾಶದ ಸದುಪಯೋಗವನ್ನು ಮಾಡಿಕೊಳ್ಳುತ್ತಲೇ ಅವನು ಕಲ್ಯಾಣಮಾರ್ಗದಲ್ಲಿ ದಿನದಿನಕ್ಕೂ ಮುಂದಡಿಯಿಟ್ಟು ಜಾಗತಿಕ ಭದ್ರತೆಗಾಗಿ ಪ್ರಯತ್ನಿಸುತ್ತಾನೆ. "ತಾನು ಬಲವಂತನಾದರೆ ಜಗತ್ತೇ ಬೆಂಬಲವಾಗುವುದು" ಎಂಬ ಗಾದೆಯ ಮಾತಿನ ಅರ್ಥವಾದರೂ ಇದೇ ಇರುತ್ತದೆ.

ಮಹಾತ್ಮ ಗಾಂಧಿಯವರಾದರೂ, ದುಂಡುಮೇಜಿನ ಪರಿಷತ್ತಿನ ಕಾಲದಲ್ಲಿ ಇಂಗ್ಲೆಂಡದಲ್ಲಿ ಒಮ್ಮೆ ಇದೇ ಬಗೆಯ ಮಾತನ್ನು ಆಡಿ ತೋರಿಸಿದ್ದರು. ಆಳರಸರ ಜನರೊಮ್ಮೆ ಗಾಂಧಿಯವರನ್ನು "ನೀವೇಕೆ ಇಷ್ಟು ಸ್ವಾತಂತ್ರ್ಯದ ಬಗ್ಗೆ ಹೋರಾಡಿ ದಣಿದುಕೊಳ್ಳುತ್ತಿದ್ದೀರಿ? ಸ್ವಾತಂತ್ರ್ಯವೆಂದರೆ ನಿಮಗೆ ಬೇಕಾಗಿದೆಯಾದರೂ ಏನು? ಈಗ ನಿಮ್ಮ ಸುಖ ಸೌಕರ್ಯಕ್ಕೆ ಏನು ಕಡಿಮೆಯಿದೆ? ಎಂದು ಮುಂತಾಗಿ ಕೇಳಿದ್ದಕ್ಕೆ ಅವರು ಛೇ! ಛೇ! ಸ್ವಾತಂತ್ರ್ಯ ನಮಗೆ ಬೇಕೇ ಆಗಿಲ್ಲ. ನಮ್ಮ ಜನಕ್ಕೆ ಹೊಟ್ಟೆತುಂಬ ಅನ್ನ, ಮೈತುಂಬ ಬಟ್ಟೆ, ತಲೆತುಂಬ ಬುದ್ಧಿ, ಈ ಮೂರರ ಕೊರತೆಯಾಗದಂತೆ ನೀವು ಹೊಣೆಹೊತ್ತರೆ ನಾನು, ಸ್ವಾತಂತ್ರ್ಯದ ಮಾತನ್ನೇ ಎತ್ತುವುದಿಲ್ಲ ಎಂದು ಹಾಸ್ಯರೂಪವಾಗಿ ಹೇಳಿದ್ದರಂತೆ. ಈ ವಾಕ್ಯದಲ್ಲಿಯೂ ಎಂತಹ ನಿತ್ಯಸತ್ಯತೆಯಡಗಿದೆ. ಅನ್ನ ಬಟ್ಟೆ ಬುದ್ಧಿಗಳ ಸಮೃದ್ಧಿಗಾಗಿಯಲ್ಲವೇ ಜಗತ್ತಿನಲ್ಲಿಂದು ಎಲ್ಲ ಬಗೆಯ ಹೋರಾಟಗಳು ನಡೆದಿರುವುದು? ಅದೇ ತೃಪ್ತಿಯಾಯಿತೆಂದರೆ ಹೋರಾಟವೇತಕ್ಕೆ?

ಅವರಂತೆ ಅಮೇರಿಕನ್ನರಿಗಿಂದು ಇಂತಹ ಕಾಲದಲ್ಲಿಯೂ, ಅನ್ನ ಬಟ್ಟೆಗಳ ಅಭಾವ ಸಮಸ್ಯೆ, ಏರಿಕೆಯ ಬೆಲೆಯ ಸಮಸ್ಯೆಗಳನ್ನು ಯಶಸ್ವಿಯಾಗಿ ಬಿಡಿಸುತ್ತ ಮುನ್ನಡೆಯುತ್ತಲಿದ್ದಾರೆ. ಅನ್ನದ ವೆಚ್ಚದ ಪ್ರಮಾಣವು ಅಲ್ಲಿ ದಿನದಿನಕ್ಕೂ ಇಳಿಮುಖವಾಗುತ್ತ ನಡೆದಿರುತ್ತದೆ. ಈ ಕಾರ್ಯದಲ್ಲಿ ಜನತೆಯೂ ಆಡಳಿತೆಯೂ ಕೂಡಿಯೇ ಒಮ್ಮುಖವಾಗಿ ಪ್ರಯತ್ನ ಮಾಡಿದ್ದರಿಂದ ಇಷ್ಟು ಬೇಗನೆ ಯಶಸ್ವಿಗಳಾಗುವುದು ಸಾಧ್ಯವೆಂಬದನ್ನು ಅಮೇರಿಕೆಯು ಇಂದು ಜಗತ್ತಿಗೆ ತೋರಿಸಿದೆ. ಈ ಮಾರ್ಗವು ಉಳಿದವರಿಗೂ ಅನುಕರಣೀಯವಲ್ಲವೆ?

ಹಿಂದುಸ್ತಾನದ ಆಯಾತ ಮತ್ತು ನಿರ್ಯಾತ ವ್ಯಾಪಾರ

೧೯೪೮-೪೯ ರಲ್ಲಿ ಹಿಂದುಸ್ತಾನದ ವಿದೇಶ ಕರಾವಳಿ ವ್ಯಾಪಾರವು ನಿರ್ಯಾತಕ್ಕಿಂತ ಆಯಾತವೇ ಹೆಚ್ಚಾಗಿದ್ದು ೯೫ ಕೋಟಿ ರೂಪಾಯಿಗಳು ಈ ರೀತಿ ಹಿಂದುಸ್ತಾನದಿಂದ ಹೊರಗೆ ಹೋದುವೆಂದು ಇದೀಗ ಪ್ರಸಿದ್ಧವಾದ ಅಂಕಿಗಳಿಂದ ಗೊತ್ತಾಗುತ್ತದೆ. ೧೯೪೮-೪೯ ರಲ್ಲಿ ಒಟ್ಟು ವ್ಯಾಪಾರ ೯೪೧ ಕೋಟಿ ಆಗಿದ್ದು ಹಿಂದಿನ ವರುಷ ಅದು ೮೦೨ ಕೋಟಿ ರೂಪಾಯಿಯದಾಗಿತ್ತು. ಈ ವರುಷದ ವ್ಯಾಪಾರದಲ್ಲಿ ೫೧೮ ಕೋಟಿ ರೂಪಾಯಿಯ ಆಯಾತ ಮತ್ತು ೪೨೩ ಕೋಟಿ ರೂಪಾಯಿಯ ನಿರ್ಯಾತ ವ್ಯಾಪಾರವಿದೆ. ನೂಲು ಜವಳಿ, ಒಣ್ಣ ಕತ್ತರಿ ಸಾಮಾನು ಮೊದಲಾದವುಗಳ ಆಯಾತ ಈ ವರುಷ ಕಡಮೆಯಾಗಿದ್ದರೂ ಯಂತ್ರಸಾಮಾನು, ಬೇಳೆ ಹಾಗು ಹಿಟ್ಟು, ಹತ್ತಿ, ಎಣ್ಣೆ ವಾಹನಗಳು ಲೋಹಗಳು ರಸಾಯನ ಹಾಗು ಔಷಧಗಳ ಆಯಾತವು ಹೆಚ್ಚಿದೆ. ಯಂತ್ರ ಸಾಮಾನುಗಳ ಆಯಾತದಲ್ಲಿಯೇ ೨೧.೭೩ ಕೋಟಿ ರೂಪಾಯಿಗಳು ಹೆಚ್ಚಿಗೆ ಹೋಗಿವೆ. ನಾಗಸ ಸಾಮಾನ, ಚಹಾ, ಜವಳಿ ಹಾಗು ನೂಲು ಈ ವರ್ಷ ಹೆಚ್ಚಾಗಿ ಹೊರಗೆ ಹೋಗಿವೆ. ಸಂಯುಕ್ತ ಸಾಮ್ರಾಜ್ಯ ಮತ್ತು ಅಮೇರಿಕೆಗಳೆ ಹಿಂದುಸ್ತಾನದ ಮುಖ್ಯ ಗಿರಾಕಿಗಳಿದ್ದು ಅವು ಅನುಕ್ರಮವಾಗಿ ೯೭೬೭ ಲಕ್ಷ ಮತ್ತು ೭೦೦೩ ಲಕ್ಷ ರೂಪಾಯಿಗಳ ಸರಕು ಕೊಳ್ಳುತ್ತಿರುವವು. ಅದೇ ರೀತಿ ಹಿಂದುಸ್ತಾನವು ಸಂಯುಕ್ತ ಸಾಮ್ರಾಜ್ಯದಿಂದ ೧೫೨೧೩ ಲಕ್ಷ ಮತ್ತು ಅಮೇರಿಕೆಯಿಂದ ೧೦೪೨೩ ಲಕ್ಷ ರೂಪಾಯಿಗಳ ಸರಕು ಕೊಳ್ಳುವದು. ಉಳಿದ ರಾಷ್ಟ್ರಗಳ ಆಯಾತ ನಿರ್ಯಾತಗಳೂ ಹೆಚ್ಚಿನ ಆಯಾತದ ಅಂಕಿಗಳು ಕಡಮೆಯಾಗಬೇಕಾದರೆ ಹಿಂದುಸ್ತಾನವು ಆಹಾರ ಪದಾರ್ಥಗಳಲ್ಲಿ ಪೂರ್ಣವಾಗಿ ಸ್ವಾವಲಂಬಿಯಾಗಿ ಉಳಿದ ಆವಶ್ಯಕ ಪದಾರ್ಥಗಳನ್ನು ಉತ್ಪಾದಿಸಬೇಕಾಗುವದೆಂದು ಪ್ರತ್ಯೇಕ ಹೇಳಬೇಕಿಲ್ಲ.

ಗಾಂಧಿಜಿ ಜೀವನದಲ್ಲಿ ಕಾಲಕ್ರಮದ ವಿಸಂಗತಿ.

ಗಾಂಧೀಜಿಯ ಜೀವನ ಚರಿತ್ರೆಯಲ್ಲಿ ಕಾಲಕ್ರಮದ ಕೆಲ ವಿಸಂಗತಿಗಳನ್ನು ಲಾಯಿ ಫಿಶರರು ನನ್ನ ಗಮನಕ್ಕೆ ತಂದಿರುವರು. ಅವುಗಳ ಬಗ್ಗೆ ನಾನು ವಿಚಾರ ಮಾಡಿದೆ. ಜನರ ಅವಗಾಹನೆಗಾಗಿ ನಾನು ಅಲ್ಲಿ ಅವನ್ನು ಉದ್ಧರಿಸುತ್ತೇನೆ.

೧ ವಿದ್ಯಾರ್ಜನೆಗಾಗಿ ಮುಂಬಯಿಯಿಂದ ಬಾಪೂ ಇಂಗ್ಲೆಂಡಿಗೆ ಹೊರಟದ್ದು ೧೮೮೭ ಇಸ್ವಿಯಲ್ಲಲ್ಲ ಆದರೆ ಸಪ್ಟಂಬರ ೪ ೧೮೮೮ ಗಾಂಧೀಜಿ ೧೮೮೭ನೇ ಇಸ್ವಿಯಲ್ಲಿ ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ ಪಾಸಾಗಿ ಭಾವನಗರದಲ್ಲಿಯ ಸಾಮಲದಾಸ ಕಾಲೇಜನ್ನು ಸೇರಿದರು. ಅಲ್ಲಿ ೧೮೮೮ನೇ ಜನೆವರಿಯಿಂದ ಎಪ್ರಿಲವರೆಗೆ ಇದ್ದು ಅನಂತರ ೪-೯-೧೮೮೮ಕ್ಕೆ ಇಂಗ್ಲೆಂಡಿಗೆ ತೆರಳಿದರು. ಶ್ರೀ ಎಚ್. ಎಸ್. ಪೋಲಕರು ನನ್ನ ವಿನಂತಿಯ ಮೇರೆಗೆ ಇಂಗ್ಲಂಡಿನಲ್ಲಿ ಈ ಬಗ್ಗೆ ವಿಚಾರ ಮಾಡಿದಾಗ ೧೮೮೮ ನವಂಬರು ೭ನೇ ತಾರೀಕಿಗೆ ಬಾಪೂ 'ಇನ್ನರ ಟೆಂಪಲ್' ದ ವಿದ್ಯಾರ್ಥಿಗಳೆಂದು ಪ್ರವೇಶ ಪಡೆದರೆಂದು ತಿಳಿದು ಬಂದಿತು. ೧೮೯೧ ನೇ ಜೂನ ೧೦ ನೇ ತಾರೀಕಿಗೆ ಅವರು ಬಾರಿಸ್ಟರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ೧೯೨೨ ನೇ ಇಸ್ವಿಯ ನವಂಬರ೧೦ಕ್ಕೆ ವಕೀಲಿ ವೃತ್ತಿಯಿಂದ ತಳ್ಳಿ ಹಾಕಲ್ಪಟ್ಟರು ಲಂಡನ ವಿಶ್ವವಿದ್ಯಾಲಯದಲ್ಲಿ ವಿಚಾರ ಮಾಡಿದಾಗ ೧೮೯೦ ನೇ ಇಸ್ವಿಯ ಜೂನ್ ತಿಂಗಳಲ್ಲಿ ಅವರು ಮ್ಯಾಟ್ರಿಕ್ಯುಲೇಶನ ಪಾಸಾದರೆಂದು ತಿಳಿದು ಬಂದಿತು. ಆದುದರಿಂದ ಅವರು ೧೮೮೮ ರಲ್ಲಿ ಇಂಗ್ಲಂಡಿಗೆ ಪ್ರಯಾಣ ಬೆಳಸಿದಂತೆ ತೋರುತ್ತದೆ."

೨ ಇಂಡಿಯನ್ ಓಪೀನಿಯನ್ ಮೊದಲು ೧೯೦೩ ರಲ್ಲಿ ಮದನಜಿತ್‌ರಿಂದ ಪ್ರಾರಂಭವಾಗಿತ್ತು ಅನಂತರ ೧೯೦೪ ರಲ್ಲಿ ಗಾಂಧೀಜಿಯವರು ಅದನ್ನು ಪೂರ್ಣವಾಗಿ ತಮ್ಮ ವಶಕ್ಕೆ ತೆಗೆದುಕೊಂಡರು. ಕೆಲವರು ೧೯೦೩ ನೇ ಇಸ್ವಿಯೆಂದು ಬರೆದಿದ್ದಾರೆ. ಇನ್ನು ಹಲವು ಕಡೆ ೧೯೦೪ ಎಂದು ಬರೆಯಲಾಗಿದೆ. ಈ ವಿವರಣೆಯಿಂದ ಎಲ್ಲವೂ ಸ್ಪಷ್ಟವಾಗುವದೆಂದು ಎಣಿಸಲಾಗಿದೆ.

೩ ಹಿಂದ ಸ್ವರಾಜ್ಯ ಬರೆದದ್ದೆಂದು? ೨೨—೧೧—೧೯೦೯ ರಲ್ಲಿ ಎಸ್. ಎಸ್. ಕೆಲ್ಡೊನನ್ ಕ್ಯಾಸಲ್ ಎಂಬ ಹಡಗದಲ್ಲಿ ಪ್ರಯಾಣಮಾಡುವಾಗ ಇದನ್ನು ಬರೆದದ್ದು. ೧೯೦೮ ನೇ ಇಸ್ವಿಯಲ್ಲಿ ಬರೆದದ್ದು ಎಂದು ಪುಸ್ತಕದ ಪುನರ್ಮುದ್ರಣದಲ್ಲಿ ಬರೆದದ್ದು ತಪ್ಪಾಗಿದೆ. ಗಾಂಧೀಜಿಯವರ ಗಮನವನ್ನು ಇತ್ತ ಸೆಳೆಯಲು ಅವರು ಅದನ್ನು ಮೇಲೆ ಹೇಳಿದ ಪ್ರಕಾರಕ್ಕೆ ತಿದ್ದಿದರು. ಬೇರೆ ಬೇರೆ ಪುಸ್ತಕಗಳಲ್ಲಿ ವಿವಿಧವಾಗಿ ಮುದ್ರಣವಾಗಿರುವುದನ್ನು ಇದೇ ಅಧಿಕೃತವೆಂದು ತಿದ್ದಿಕೊಳ್ಳಿರಿ.

[ಹರಿಜನದಿಂದ]

ನೋಟೀಸು.

೧೯೪೭ನೇ ಸಂ॥ ಮುದ್ರಾಸು ಷಾಪು

ಮತ್ತು

ಎಸ್ಟ್ಯಾಬ್ಲಿಷ್‌ಮೆಂಟ್ ಆಕ್ಟು

ಅನುಸರಿಸಿ ಪ್ರತಿ ವ್ಯಾಪಾರಸ್ಥರು ಇಡತಕ್ಕ ರಿಜಿಸ್ಟರುಗಳು ವಗೈರ ನಮ್ಮಲ್ಲಿ ದೊರೆಯುತ್ತವೆ.

ವಿಠಲ್ ಪ್ರಿಂಟಿಂಗ್ ಪ್ರೆಸ್,
ತೇರು ಬಜಾರ್, ಬಳ್ಳಾರಿ.

ಆರ್ಥಿಕ ಭದ್ರತೆಯ ಪುನರಾಗಮನ

ಅನಿಶ್ಚಿತ ಪರಿಸ್ಥಿತಿಯಲ್ಲಿ ಸಿಕ್ಕು ಬೀಳಬಾರದೆಂದು ಇಚ್ಛಿಸುವವರೆಲ್ಲರೂ ತಮ್ಮ ಸರಕಾರಕ್ಕೆ ಹಣದ ಕ್ರಯಶಕ್ತಿಯನ್ನು ಸ್ಥಿಮಿತಗೊಳಿಸಲು ಆಗ್ರಹಪೂರ್ವಕವಾಗಿ ಕೇಳತಕ್ಕದ್ದು.

ಹಿಂದೆ ನಡೆದಂತೆ ಬೆಲೆಗಳ ಸಾಮಾನ್ಯ ಮಟ್ಟದಲ್ಲಿ ಏರಿಳಿತಗಳಾದರೆ ಅದರಿಂದ ಹಣದ ಕ್ರಯಶಕ್ತಿಯಲ್ಲಿಯೂ ಹೆಚ್ಚು ಕಡಿಮೆಯಾಗುವದು. ಪದಾರ್ಥಗಳ ಬೆಲೆ ನಿದರ್ಶಕ ಅಂಕಿಯಿಂದ ತಿಳಿದು ಬರುವ ಸಾಮಾನ್ಯ ಬೆಲೆಗಳ ಮಟ್ಟವು ಒಂದು ಸ್ಥಿಮಿತದಲ್ಲಿದ್ದರೆ ಹಣದ ಕ್ರಯಶಕ್ತಿಯಲ್ಲಿ ಹೆಚ್ಚು ಕಡಿಮೆ ಆಗದ.

ಇಂದು ಜಗತ್ತಿನ ಯಾವದೇ ಪ್ರಾಶಸ್ತ್ಯ ಕೊಡಬೇಕಾದ ಅತ್ಯಂತ ಮಹತ್ವದ ಕಾರ್ಯವೆಂದರೆ ಹಣದ ಕ್ರಯಶಕ್ತಿಯನ್ನು ಸ್ಥಿಮಿತಗೊಳಿಸುವದೇ ಆಗಿದೆ. ಇಂಥ ಕ್ರಯಶಕ್ತಿ ಸ್ಥಿಮಿತದಲ್ಲಿದ್ದ ನಾಣ್ಯ ಚಲಾವಣೆ ಪದ್ಧತಿಯಿಂದ ದೇಶವು ಬೆಲೆ ಏರಿಳಿತಗಳಿಗೆ ಗುರಿಯಾಗುವ ನಾಣ್ಯ ಚಲಾವಣೆ ಪದ್ಧತಿಯಿಂದ ಉಂಟಾಗುವ ಅಸಂತುಷ್ಟ, ತೊಂದರೆ ಇವುಗಳಿಂದ ಮುಕ್ತವಾಗುವದು. ನಾವು ಕೊಳ್ಳುವ ಪದಾರ್ಥದ ಬೆಲೆಯು ಮಾನದಿಂದ ನಿತ್ಯವೂ ಬದಲಾಗುವ ಹಣದ ಬೆಲೆಯು ಈಗಿರುವ ಪರಂಪರಾಗತವಾದ ನಾಣ್ಯ ಚಲಾವಣೆ ಧೋರಣದ ಫಲವಾಗಿರುವದು. ಸ್ಥಿಮಿತವಾದ ಕ್ರಯಶಕ್ತಿಯ ನಾಣ್ಯಚಲಾವಣೆ ಪದ್ಧತಿಯಿಂದ ಇದೆಲ್ಲವೂ ಮಾಯವಾಗುವದು.

೧ ನಿಶ್ಚಿತ ಕ್ರಯಶಕ್ತಿಯುಳ್ಳ ಹಣದ ಚಲಾವಣೆ ಪದ್ಧತಿಯಿಂದ ಕೂಲಿಕಾರರಿಗೆ ಹಾಗೂ ನೌಕರರಿಗೆ ತಾವು ಪಡೆಯುವ ಕೂಲಿ ಹಾಗೂ ಸಂಬಳದ ಪ್ರಮಾಣದಂತೆಯೇ ತಮಗೆ ದೊರೆಯುವ ಪದಾರ್ಥಗಳು ಯಾವಾಗಲೂ ದೊರೆಯುವ ಭರವಸೆಯುಂಟಾಗುವದು. ಅವರಿಗೆ ತಮಗೆ ಮೊದಲು ದೊರೆಯುವಷ್ಟೇ ಆಹಾರ, ಬಟ್ಟೆ ವಸತಿ ಸೌಕರ್ಯ, ಇವುಗಳನ್ನು ದೊರಕಿಸಲು ಸಂಬಳ ಏರಬೇಕೆಂದು ಸಂಪು ಹೂಡುವ ಪ್ರಸಂಗವೇ ಉಂಟಾಗದು.

೨ ನಿಶ್ಚಿತ ಕ್ರಯಶಕ್ತಿಯುಳ್ಳ ನಾಣ್ಯ ಪದ್ಧತಿಯಿಂದ ಪಿಂಚಣಿದಾರರಿಗೂ ನಿವೃತ್ತ ನೌಕರರಿಗೂ ತಮ್ಮ ಚಿಕ್ಕ ಉತ್ಪನ್ನದ ಪ್ರಮಾಣಕ್ಕನುಸರಿಸಿ ಮೊದಲಿನಂತೆಯೇ ಪದಾರ್ಥಗಳು ದೊರೆಯುವ ಭರವಸೆಯುಂಟಾಗುವದು. ತೋರಿಕೆಗೆ ಮೊದಲಿನಷ್ಟೇ ಉತ್ಪನ್ನವಿದ್ದರೂ ಕ್ರಮೇಣ ತಾವು ಕೊಳ್ಳುವ ಪದಾರ್ಥಗಳು ಕಡಿಮೆಯಾಗಿ ಅವರು ಅಸಹಾಯ ಸ್ಥಿತಿಗೆ ಇಳಿಯುವದು ತಪ್ಪುವದು

೩ ರೈತನೂ ನಿಶ್ಚಿತ ಕ್ರಯಶಕ್ತಿಯ ನಾಣ್ಯ ಪದ್ಧತಿಯಿಂದ ತನ್ನ ಪದಾರ್ಥಗಳ ಮಾರಾಟದಿಂದ ಬರುವ ಆದಾಯವು ಏರಿಳಿತಗಳಿಗೆ ಒಳಗಾಗದೆ ಉಳಿದು ತಾನು ಕೊಳ್ಳುವ ಪದಾರ್ಥಗಳ ಬಗ್ಗೆ ಮಾಡಬೇಕಾದ ವೆಚ್ಚವೂ ಅದರಂತೆ ಉಳಿಯುವದರಿಂದ ತನ್ನ ಆದಾಯ-ವೆಚ್ಚದ ಅಂದಾಜು ಸರಿಯಾಗಿ ಮಾಡಿಕೊಂಡು ಜೀವನ ಸಾಗಿಸಲು ಸಮರ್ಥನಾಗುವನು.

೪ ಕಂಟ್ರಾಕ್ಟದಾರರು, ಕಾರಖಾನೆದಾರರು, ವ್ಯಾಪಾರಿಗಳು, ಪೇಟೆಯ ಬೆಲೆಗಳಲ್ಲಿ ಏರಿಳಿತಗಳಾಗುವದರಿಂದ ಆಗಬಹುದಾದ ಲಾಭಹಾನಿಯ ಚಿಂತೆಯಿಂದ ಮುಕ್ತರಾಗುವರು. ಅನಿಶ್ಚಿತ ಬೆಲೆಯಿದ್ದರೆ ತಾವು ಮೊದಲು ಮಾಡಿದ ಅಂದಾಜಿನಂತೆ ತೊಡಗಿಸಿದ ಬಂಡವಲಕ್ಕಿಂತ ಹಿಂದಿನಿಂದ ಅದೇ ಕೆಲಸಕ್ಕೆ ಹೆಚ್ಚಿನ ಬಂಡವಲ ತೊಡಗಿಸಬೇಕಾದ ಪ್ರಸಂಗವೂ ಬರಲಾರದು.

೫ ಸರಕಾರಕ್ಕಾದರೂ ನಿಶ್ಚಿತ ಕ್ರಯಶಕ್ತಿಯ ಹಣದ ಚಲಾವಣೆ ಇದ್ದರೆ ಕರಭಾರದಿಂದ ಬರುವ ಉತ್ಪನ್ನವು ಸಾಕಾಗಿ ಬಂದು ಸರಕಾರವು ಆಡಳಿತ ವೆಚ್ಚವನ್ನು ಸುಸೂತ್ರವಾಗಿ ಮಾಡಲು ಸಮರ್ಥವಾಗುವದು.

ಮೇಲಿನ ಕಾರಣಗಳಿಂದ ಆರ್ಥಿಕ ಭದ್ರತೆ ಪುನರಾಗಮನವಾಗಲು ನಿಶ್ಚಿತ ಕ್ರಯಶಕ್ತಿಯ ನಾಣ್ಯಚಲಾವಣೆಯು ಬಳಕೆಯಲ್ಲಿ ಮೊದಲು ಬರಬೇಕಾದದು ಅಗತ್ಯವೆಂದು ಸ್ಪಷ್ಟವಾಗುವದು. ಹಣದ ಕ್ರಯಶಕ್ತಿಯು ಸ್ಥಿಮಿತಗೊಳ್ಳದೆ ಒಕ್ಕಲತನ, ವಾಣಿಜ್ಯ, ಕೈಗಾರಿಕೆ, ಉದ್ದಿಮೆ ಇವುಗಳ ಪ್ರಗತಿ ಸಾಧಿಸುವದು ಅಶಕ್ಯ

ಅತಿಪ್ರಸರಣದಿಂದ ಪೇಟೆಯಲ್ಲಿಯ ಬೆಲೆಗಳು ಮಿತಿಮೀರಿ ಏರುವಂತೆ ಮಾಡುವದೂ ವ್ಯತಿಪ್ರಸರಣದಿಂದ ಪೇಟೆಯಲ್ಲಿಯ ಬೆಲೆಗಳನ್ನು ತಗ್ಗಿಸಲು ಶಕ್ತರಾದವರಿಗೆ ಇಡೀ ದೇಶದ ಔದ್ಯೋಗಿಕ ಚಟುವಟಿಕೆಯನ್ನು ನಿಲ್ಲಿಸಿ ಬಿಡುವ ಅಥವಾ ಅದರ ಪ್ರಗತಿಯನ್ನು ಸಾಧಿಸುವ ಶಕ್ತಿ ಇದ್ದೇ ಇದೆ. ಕವಾಯಿತು ಮಾಡುವ ಸೈನಿಕರಿಗೆ ಆಜ್ಞೆ ಮಾಡುವ ಸೇನಾಪತಿಯಂತೆ ಹಣದ ಚಲಾವಣೆ ನಿಯಂತ್ರಿಸುವ ಸಾಮರ್ಥ್ಯವಿದ್ದವರಿಗೆ ಮನಸ್ಸು ಮಾಡಿದರೆ, ಆದರ ಬೆಲೆಯನ್ನು ಸ್ಥಿಮಿತಗೊಳಿಸಲೂ ಬರುವದು. ಸೆಂಟ್ರಲ ಬ್ಯಾಂಕದ ಚಲಾವಣೆ ಶಾಖೆಯು ಪರಿಮಿತ ಶಕ್ತಿಯನ್ನು ಉಪಯೋಗಿಸಲು ಅಧಿಕಾರವಿದ್ದ ನಾನು ಮನಸ್ಸುಮಾಡಿದರೆ ವ್ಯಾಪಾರಿಗಳನ್ನೂ ನೌಕರರನ್ನೂ ಕಂಗಾಲರನ್ನಾಗಿ ಮಾಡಬಲ್ಲೆ, ಕೂಲಿಕಾರರು, ನಿರುದ್ಯೋಗಿಗಳಾಗಿ ಬೀದಿಯಲ್ಲಿ ಅಲೆಯುವಂತೆ ಮಾಡಬಲ್ಲೆ. ಎಲ್ಲ ಹಡಗು ಕಂಪನಿಗಳ ವ್ಯವಹಾರವನ್ನು ನಿಲ್ಲಿಸಿ ಬಿಡಬಲ್ಲೆ; ಎಲ್ಲ ಕಣಿಗಳಲ್ಲಿಯು ಕೆಲಸನಿಂತು ಅಲ್ಲಿ ನೀರು ತುಂಬಿ ನಿಲ್ಲುವಂತೆ ಮಾಡ

The Rayalaseema Confectionary Works, Bellary.

ದಿ ರಾಯಲಸೀಮ ಕನ್ಫೆಕ್ಷನರಿ ವರ್ಕಸ್, ಬಳ್ಳಾರಿ,

ಸಾಮಾನ್ಯ ಬೆಲೆಯಲ್ಲಿ ಶ್ರೇಷ್ಠ ತರಗತಿಯ ಪೆಪ್ಪರಮೆಂಟು ಮಿಠಾಯಿ ● ●

● ● ಸಣ್ಣ ಡಬ್ಬಿಗಳಲ್ಲೂ-ದೊಡ್ಡದರಲ್ಲೂ ದೊರೆಯುತ್ತವೆ. ಪರೀಕ್ಷಿಸಿ ಲಾಭ ಪಡೆಯಿರಿ.

'ಎ' ಗ್ರೂಪ್	20 ಪೌಂಡು ಡಬ್ಬಿ	25—0—0	5 ರ	4 ಡಬ್ಬಿ	27—0—0
'ಬಿ' ಗ್ರೂಪ್	28 ಪೌಂಡು ಡಬ್ಬಿ	27—0—0	7 ರ	4 ಡಬ್ಬಿ	29—0—0
'ಸಿ' ಗ್ರೂಪ್	(1) 20 ಪೌಂಡು ಡಬ್ಬಿ	30—0—0	5 ರ	4 ಡಬ್ಬಿ	32—0—0
	(2) 20 ಪೌಂಡು ಡಬ್ಬಿ	20—0—0	5 ರ	4 ಡಬ್ಬಿ	22—0—0
'ಡಿ' ಗ್ರೂಪ್	32 ಪೌಂಡು ಡಬ್ಬಿ	31—0—0	7 ರ	4 ಡಬ್ಬಿ	29—0—0
'ಇ' ಗ್ರೂಪ್	28 ಪೌಂಡು ಡಬ್ಬಿ	23—0—0	7 ರ	4 ಡಬ್ಬಿ	25—0—0
'ಎಫ್' ಗ್ರೂಪ್	28 ಪೌಂಡು ಡಬ್ಬಿ	18—0—0	7 ರ	4 ಡಬ್ಬಿ	21—0—0

ಕಾಶ್ಮೀರದಲ್ಲಿ

ಆರೋಗ್ಯ ಪ್ರವಾಸ ಸ್ಥಳಗಳು

ಪ್ರಪಂಚ ವಿಖ್ಯಾತ ಸರೋವರ, ಒರತೆಗಳ ನೆಲೆವೀಡು ಹಾಗೂ ಪ್ರಕೃತಿ ಸೌಂದರ್ಯದ ನಿದರ್ಶನ

ಕಾಶ್ಮೀರವು ಹಿಮ ಬೀಳುತ್ತಿರುವ ಚಳಿಯಿಂದಲೂ, ಬೇಸಿಗೆಯ ಸೊಂಪಾದ ಉಷ್ಣದಿಂದಲೂ ಕೂಡಿರುವುದರಿಂದ ಕಾಶ್ಮೀರ ಕಣಿವೆಯು ಸಂದರ್ಶಕರಿಗೆ ಅತ್ಯುತ್ತಮ ಆರೋಗ್ಯಪ್ರವಾಸ ಸ್ಥಳವಾಗಿ, ಹಲವಾರು ಬಗೆಯ ಆಕರ್ಷಣೆಗಳನ್ನು ಒದಗಿಸುತ್ತದೆ. ಎಂದಾದರೊಮ್ಮೆ ಪ್ರವಾಸ ಮಾಡುವವರಿಗೆ ಅಲ್ಲಿಯ ಅನೇಕ ಸ್ಥಳಗಳು ಹಾಗೂ ಪಿಕ್‌ನಿಕ್‌ಗೆ ಅಡವಿಯ ಊಟ ಯೋಗ್ಯ ಬಯಲುಗಳ ಪರಿಚಯವಾಗಲಿಲ್ಲ. ಇಂತಹ ಅನೇಕ ಸ್ಥಳಗಳಿಗೆ, ಇನ್ನೂ ಮೋಟಾರುಗಳು ಸಾಗುವ ರಸ್ತೆಗಳಿಲ್ಲ. ಆದರೆ ಕಣಿವೆಯು ಅಭಿವೃದ್ಧಿಹೊಂದುತ್ತಿರುವಂತೆ, ದೂರ ದೂರದ ಹಳ್ಳಿಗಳಲ್ಲಿ ಹಿಮಗಳಿಂದಲೂ, ಸಮೃದ್ಧಿಯಾಗಿ ಬೆಳೆದ ಕಾಡುಗಳಿಂದಲೂ ಆವರಿಸಲ್ಪಟ್ಟಿರುವ ಇಂತಹ ಸ್ಥಳಗಳಿಗೆ ಸಹ ಸಂದರ್ಶಕರಿಗೆ ಸುಲಭವಾಗಿ ತಲುಪಲು ತಕ್ಕ ಏರ್ಪಾಡುಗಳಿರುವವು.

ಪಹಲ್ಗಾಂ

ಅತಿ ಜನಪ್ರಿಯವಾದ ಈ ಆರೋಗ್ಯ ಪ್ರವಾಸ ಸ್ಥಳವು ಲಿಡರ್ ಕಣಿವೆಯ ಮಧ್ಯೆ ಲಿಡರ್ ಮತ್ತು ಟನಿನ್ ಎಂಬ ಎರಡು ನದಿಗಳ ಸಂಗಮದ ಬಳಿಯಲ್ಲಿದೆ. ಶ್ರೀನಗರದಿಂದ 52 ಮೈಲು ದೂರದಲ್ಲಿ 7,000 ಅಡಿ ಎತ್ತರದಲ್ಲಿರುವ ಈ ಸ್ಥಳದ ಹವೆಯು ಅತಿ ಆರೋಗ್ಯವರ್ಧಕವಾಗಿಯೂ ಆಕರ್ಷಣೀಯವಾಗಿಯೂ ಸಂತೋಷಪೂರಿತವಾಗಿಯೂ ಇದೆ. ಇದು ಜನರು ವಿರಾಮ ಪಡೆಯಲು ಹೋಗಿ ತಂಗಲು, ಮುಖ್ಯವಾಗಿ ಬೇಸಿಗೆ ಕಾಲದಲ್ಲಿದ್ದು ಬರಲು ಅತಿ ಯೋಗ್ಯವಾಗಿದೆ. ಕ್ಷಯ, ಅಜೀರ್ಣ ಹಾಗೂ ಅಶಕ್ತತೆಯಿಂದ ಸಂಕಷ್ಟಪಡುತ್ತಿರುವವರಿಗೆ ಇಲ್ಲಿಯ ಹವೆಯು ಅತಿ ಗುಣಕಾರಿಯಾಗಿದೆ.

ಗುಲ್ಮಾರ್ಗ್, ಟನ್ಮಾರ್ಗ್

ಶ್ರೀನಗರದಿಂದ 28 ಮೈಲು ಪಶ್ಚಿಮಕ್ಕಿರುವ ಈ ಸ್ಥಳವು ಸಮುದ್ರ ಮಟ್ಟದಿಂದ 8,700 ಅಡಿ ಎತ್ತರದಲ್ಲಿದ್ದು ತೋರಿಕೆಗೆ ಒಂದು ಮೊಗಸಾಲೆಯ ಉಪ್ಪರಿಗೆಯಂತಿದೆ. ಇದನ್ನು ಪೂರ್ವದಲ್ಲಿ "ಗೌರಿ ಮಾರ್ಗ" (ಶಿವನ ಪತ್ನಿ ಗೌರಿಯ ಹಾದಿ) ಯೆಂದು ಕರೆಯಲಾಗುತ್ತಿತ್ತು. ಇದಕ್ಕೆ 16ನೇ ಶತಮಾನದಲ್ಲಿದ್ದ ಚಕ್ ಕುಟುಂಬದ ಯೂಸುಫ್ ಎಂಬ ಅರಸನು 'ಗುಲ್ಮಾರ್ಗ್' ಎಂದು ಹೆಸರಿಟ್ಟನು. ಈ 'ಪುಷ್ಪ ಬಯಲು' ಅನೇಕ ಪ್ರವಾಸಿಕರನ್ನು ಮುಖ್ಯವಾಗಿ ಪರದೇಶಗಳಿಂದ ಆಕರ್ಷಿಸುತ್ತದೆ. ಗುಲ್ಮಾರ್ಗಿನಿಂದ ಒಂದು ಬದಿಯಲ್ಲಿ ನಂಗ ಪ್ರಭಾತ್ ಹಾಗೂ ಇನ್ನೊಂದು ಬದಿಯಲ್ಲಿ ಇಡೀ ಕಣಿವೆಯ ದೃಶ್ಯವು ಅತಿ ಚಲೋದಾಗಿ ತೋರುತ್ತದೆ. ಗುಲ್ಮಾರ್ಗ್ ಗುಡ್ಡವನ್ನು ಸುತ್ತಿರುವ ಏಳು ಮೈಲು ಉದ್ದದ ರಸ್ತೆಯು ಪ್ರಕೃತಿ ಸೌಂದರ್ಯದ ಒಂದು ನೋಟವಾಗಿದೆ. ಗುಲ್ಮಾರ್ಗಿನ ಗುಡ್ಡದ ಬುಡದಲ್ಲಿರುವ ಟನ್ಮಾರ್ಗಿನ ಹವೆಯು ಶ್ವಾಸೋಚ್ಛ್ವಾಸ ಸಂಬಂಧವಾದ ಯಾವತ್ತು ಉಪದ್ರಗಳಿಗೆ ಅತಿ ಉಪಯೋಗಕಾರಿಯಾಗಿದ್ದು ಕ್ಷಯರೋಗಿಗಳಿಗೆ ಕ್ಷೇಮಾರ್ಥಕ ನಿವಾಸವು ಅಲ್ಲಿದೆ. ಶ್ರೀನಗರದಿಂದ ಗುಲ್ಮಾರ್ಗಿಗೆ ಟನ್ಮಾರ್ಗನ್ನು ದಾಟಿಹೋಗಬೇಕು.

ಸೋನಮಾರ್ಗ್

ಶ್ರೀನಗರದಿಂದ ಈಶಾನ್ಯಕ್ಕೆ 51 ಮೈಲು ದೂರದಲ್ಲಿ 8 750 ಅಡಿ ಎತ್ತರದಲ್ಲಿರುವ ಸೋನಮಾರ್ಗ್ ಇಲ್ಲವೇ "ಚಿನ್ನದ ಬಯಲು" ಸಿಂಧ್ ಕಣಿವೆಯಲ್ಲಿರುವ ಇನ್ನೊಂದು ಆರೋಗ್ಯ ಪ್ರವಾಸ ಸ್ಥಳ. ಹಿಮಂಶಿಯ ಬುಡದಲ್ಲಿರುವ ಈ ಸ್ಥಳವು ಅಡವಿ ಊಟವವರಿಗೆ ಅತ್ಯುತ್ತಮವಾದ್ದಾಗಿದೆ.

ಗಂಡಭಾಲ್

ಗಂಡಭಾಲ್ ಎಂಬುದು ಸಿಂಧ್ ವಾಳ ನದಿಯ ದಡದಲ್ಲಿರುವ ಒಂದು ಹಳ್ಳಿ. ಇದು ಶ್ರೀನಗರದಿಂದ ಉತ್ತರ ದಿಕ್ಕಿಗೆ 13 ಮೈಲು ದೂರದಲ್ಲಿ 5220 ಅಡಿ ಎತ್ತರದಲ್ಲಿದೆ. ಪ್ರವಾಸಿಗಳ ಗೃಹ-ದೋಣಿಗಳು ಇಲ್ಲಿ ಸದಾ ಗುಂಪುಗುಂಪಾಗಿ ನಿಂತಿರುತ್ತವೆ. ಇದರ ಬಳಿಯಲ್ಲಿ ಹನುಮಾನ್ ಎಂದು ಕರೆಯಲ್ಪಡುವ ಒಂದು ಒರತೆಯಿದೆ. ಇದರ ನೀರಿಗೆ ಔಷಧ ಗುಣಗಳಿವೆಂದು ಪ್ರಸಿದ್ಧಿ ಇದೆ.

ಬಟೋಟ

ಶ್ರೀನಗರದಿಂದ ದಕ್ಷಿಣಕ್ಕೆ ಸುಮಾರು 140 ಮೈಲು ದೂರದಲ್ಲಿ ಬನಿಹಾಲ್ ರಸ್ತೆಯಲ್ಲಿರುವ ಬಟೋಟ ಎಂಬ ಸ್ಥಳದ ಹವೆಯೂ ಅತಿ ಸೊಂಪಾದುದು. ಬೇಸಿಗೆಯಲ್ಲಿ ಅನೇಕ ಸಂದರ್ಶಕರು ಮುಖ್ಯವಾಗಿ ಪಂಜಾಬಿನವರು ಇಲ್ಲಿಗೆ ಬಂದು ತಮ್ಮ ರಜಾ ದಿನಗಳನ್ನು ಕಳೆಯುತ್ತಾರೆ. ಇದರ ಸಮೀಪ ಒಂದು ಕ್ಷೇಮಾರ್ಥಕ ನಿವಾಸವೂ ಇದೆ.

ಮಾನಸ್ಬಾಲ್

ಮಾನಸ್ಬಾಲ್ ಎಂಬ ಅತಿ ಸುಂದರ ಸರೋವರದ ದಡದ ಮೇಲಿರುವ ಈ ಸ್ಥಳವು ಸಹ ಆರೋಗ್ಯ ಪ್ರವಾಸಕ್ಕೆ ಯೋಗ್ಯವಾದುದು. ಇದು ಶ್ರೀನಗರದಿಂದ ಉತ್ತರಕ್ಕೆ ಸುಮಾರು 30 ಮೈಲು ದೂರದಲ್ಲಿದೆ. ಸರೋವರವು ಒಂದಕ್ಕೊಂದು ಕೂಡಿಕೊಂಡಿರುವ ಸಣ್ಣ ಸಣ್ಣ ಗುಡ್ಡಗಳ ತುದಿಗಳನ್ನು ಸರೋವರದ ಶಾಂತ ಜಲದಲ್ಲಿ ಪ್ರತಿಬಿಂಬಿಸುತ್ತದೆ.

ಸರೋವರಗಳೂ, ಒರತೆಗಳೂ

ಪ್ರಪಂಚದ ಅತಿ ಸುಂದರ ಸರೋವರಗಳಲ್ಲಿಯೂ ಒರತೆಗಳಲ್ಲಿಯೂ ಕೆಲವು ಕಾಶ್ಮೀರದಲ್ಲಿವೆಂದನ್ನಬಹುದು. ವೂಲೂರ್, ದಾಲ್, ಅಂಚಾರ್ ಎಂಬ ಮೂರು ಸರೋವರಗಳು ಪ್ರಪಂಚದಲ್ಲಿಯೇ ಪ್ರಖ್ಯಾತವಾಗಿವೆ. ವೂಲೂರು ಇಡೀ ಏಶಿಯಾ ಖಂಡದಲ್ಲಿಯೇ ಅತಿ ದೊಡ್ಡ ಸ್ವಾಭಾವಿಕ ಸರೋವರವಾಗಿದೆ. ಒರತೆಗಳು ಅನೇಕ ಇವೆ. ಇವೆಲ್ಲವುಗಳ ಜಲದಲ್ಲಿಯೂ ಔಷಧ ಗುಣಗಳಿವೆ.

ಚಾಸ್ಮ-ಇ-ಶಾಹಿ

ಒರತೆಯು ಶ್ರೀನಗರದಿಂದ ಸುಮಾರು 5 ಮೈಲು ದೂರದಲ್ಲಿದೆ. ಇದರ ನೀರು ಹಿಮದಂತೆ ಶೀತವಾಗಿದೆ. ನೀರಿನಲ್ಲಿ ಖನಿಜ ಪದಾರ್ಥ ಹಾಗೂ ಜೀರ್ಣವರ್ಧಕ ಗುಣಗಳಿರುವುದರಿಂದ ಈ ಒರತೆಯು ಪ್ರಖ್ಯಾತಿ ಪಡೆದಿದೆ. ಒರತೆಗೆ ತಾಗಿಕೊಂಡು ಒಂದು ಸುಂದರವಾದ ಉದ್ಯಾನವನವಿದೆ. ಈ ಉದ್ಯಾನ ವನವನ್ನು ಕ್ರಿಸ್ತಶಕ 1632 ರಲ್ಲಿ ಮೊಗಲ್ ಚಕ್ರವರ್ತಿ ಶಹಜಹಾನ್ ನಿರ್ಮಿಸಿದುದಾಗಿದೆ.

ಕೋಕೆರ್ನಾಗ

ಶ್ರೀನಗರದಿಂದ ದಕ್ಷಿಣಕ್ಕೆ 48 ಮೈಲು ದೂರದಲ್ಲಿರುವ ಈ ಸ್ಥಳವು ಅಲ್ಲಿರುವ ಗಂಧಕ ಸತ್ವತುಂಬಿದ ಒರತೆಗಳಿಗಾಗಿ ಪ್ರಖ್ಯಾತಿ ಹೊಂದಿದೆ. ನೀರು ಪರ್ವತಗಳಿಂದ ಹೊರಭರದಿಂದ ಬೀಳುತ್ತದೆ. ಅಸ್ತ್ರ, ಕ್ಷಯ ಮುಂತಾದ ರೋಗಗಳಿಗೆ ಈ ಒರತೆಗೆ ನೀರು ಅತಿ ಗುಣಕಾರಿಗಳಾಗಿವೆ. ಟ್ರೌಟ್ ಎಂ... ಗುಡ್ಡಗಳ ಬದಿಗಳಲ್ಲಿ ಸಿಹಿ ನೀರಿನಲ್ಲಿರು ಮೀನು ಹಿಡಿಯುವುದಕ್ಕೆ ಸಹ ಈ ಸ್ಥಳಕ್ಕೆ ಅನೇಕರು ಬರುತ್ತಾರೆ.

ಬಲ್ಲೆ, ಹಿಂದಿನಿಂದ ಒಂದು ವಾರದ ಅನಂತರ ಅದೇಕೆ ಬಲ ಕಾಸಿನ ಅನಂತರ ಜಗತ್ತಿನಲ್ಲಿ ಹಿಂದೆ ಎಂದೂ ಕಂಡುಬಂದಿರದಂಥ ಸುಭಿಕ್ಷ-ಪರಿಸ್ಥಿತಿಯನ್ನು ನಿರ್ಮಿಸಿ ತೋರಿಸಬಲ್ಲೆ.

—ಸಿಲ್ವಿಯೋ ಗೆಸೆಲ್

(ಫ್ರೀಡಮ್ ಅಂಡ ಪ್ಲೆಂಟೀ, ಜಾನೇವರಿ ಫೆಬ್ರುವರಿ ಗಳ ಸಂಚಿಕೆಯಿಂದ)

The United India Life Assurance Co., Ltd.,

Head Office :- MADRAS. Established :- 1906

Safest & Best

TO INSURE–TO REPRESENT

FOR PARTICULARS WRITE TO:—

The Branch Manager,
The United India Life Assurance Co., Ltd.
BELLARY.

ದಿ. ಯುನೈಟೆಡ್ ಇಂಡಿಯಾ ಲೈಫ್ ಅಶೂರೆನ್ಸ್ ಕಂಪನಿ, ಲಿಮಿಟೆಡ್.

ಸ್ಥಾಪಿತ:- **1906** ಮುಖ್ಯ ಕಾರ್ಯಾಲಯ:- **ಮದ್ರಾಸ್**

ಜೀವವಿಮೆ ಮಾಡಲು, ಪ್ರಾತಿನಿಧ್ಯವನ್ನು ವಹಿಸಲು ಅತಿಶ್ರೇಷ್ಠವೂ,

ಅತಿ ಭದ್ರತೆಯುಳ್ಳದ್ದೂ ಆಗಿದೆ.

ವಿವರಗಳಿಗೆ ಬರೆಯಿರಿ:-

ಬ್ರಾಂಚ್ ವ್ಯವಸ್ಥಾಪಕರು,
ಯುನೈಟೆಡ್ ಇಂಡಿಯಾ ಲೈಫ್ ಅಶೂರೆನ್ಸ್ ಕಂಪನಿ ಲಿಮಿಟೆಡ್
ಬಳ್ಳಾರಿ.

The Canara Industrial & Banking Syndicate, Ltd.

Est. 1925.
Head Office : UDIPI.

—:XX:—

SOME THINGS WORTH SAVING FOR.

Savings may mean some sacrifice for the present. But what a number of things it makes possible. And what a thrill to feel that your planning and sacrifice made it possible! A really good education for your children, a neat little home of your own, a fund of your own money to meet any emergency, the assurance of an independent age. These are a few good things of life that are worth saving for, sacrificing for, waiting for. The best way to save is to open a Savings Bank Account and save regularly. Ask also for our Silver Jubilee Cash Certificates.

T. M. A. PAI,
Chairman & Managing Director.

228

ತಪ್ಪುಗಳ ತಮಾಷೆ

Comedy of Errors

At Prabhat Talkies

ಆಂಧ್ರ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್.

(ಸ್ಥಾಪಿತ 1925)

ಜೀವವಿಮೆಯೊಂದಿಗೆ ಅಗ್ನಿಪ್ರಮಾದ, ಮೋಟಾರು, ನೌಕೆ ಮೊದಲಾದ ಇತರ ವಿಮಾಗಳಿಗೂ ಕೂಡ ಒಳ್ಳೆಯ ಆಕರ್ಷಣೀಯ ಏರ್ಪಾಟುಗಳುಂಟು

1/2 [illegible] 1948 [illegible] 1 [illegible] 8 [illegible] ವರ್ಷಕ್ಕೆ 1000 [illegible]

ಏಜಂಟರಿಗೂ ವ್ಯವಹಾರಿಕರಿಗೂ ನಮ್ಮಲ್ಲಿ ಬಹು ಔದಾರ್ಯವುಂಟು.

ಡಿ. ಬಾಲಕೃಷ್ಣರಾವು
ಇನ್ಸ್‌ಪೆಕ್ಟರ್
[illegible]

ಬಿ. ಸುಬ್ರಹ್ಮಣ್ಯಂ [illegible]
[illegible]
ಕಾರ್ಯದರ್ಶಿ

Bharat Electric Coffee Works
Bangalore Road, BELLARY.

[illegible] quality Coffee pure and [illegible] taste and purpose [illegible] is electrically roasted [illegible] under expert supervision [illegible]

A TRIAL WILL CONVINCE YOU.

ಭಾರತ ಎಲೆಕ್ಟ್ರಿಕ್ ಕಾಫಿ ವರ್ಕ್ಸ್
ಬೆಂಗಳೂರು ರೋಡ್, ಬಳ್ಳಾರಿ

[illegible]

ಒಂದುಸಲ ಪರೀಕ್ಷಿಸಿ ನೋಡಿರಿ.

(Reg. No. M. 4746) NAVABHARAT BELLARY. 15 8 49

ನವಭಾರತ ಬಳ್ಳಾರಿ

(Nationalist Weekly)

ಚಂದಾ ದರಗಳು, Subsciption Rates.

ವರ್ಷಕ್ಕೆ	5-0-0	One year	5-0-0
6 ತಿಂಗಳಿಗೆ	3 0 0	Six months	3 0 0

ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವದಿಲ್ಲ

Subscription will not be accepted for less than 6 months

To

Sri

Printed at Vittal Press. Edited & Published by T. B Keshava Rao.

ನವಭಾರತ

ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆ ಸಂಪಾದಕ ಮತ್ತು ಪ್ರಕಾಶಕ:—ಟಿ. ಜಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೨ ಆಗಸ್ಟ್ ೧೯೪೯ | ಸಂಚಿಕೆ ೨೯

ಧರ್ಮಪ್ರಕಾಶ ವೀರಪ್ಪನವರು

ಬೆಂಗಳೂರಿನ ಶ್ರೀಮಂತ ವರ್ತಕರಾದ ಶ್ರೀ ಎಂ. ಎ. ವೀರಪ್ಪನವರಿಗೆ ಮೈಸೂರು ಮಹಾರಾಜರಿಂದ ಧರ್ಮಪ್ರಕಾಶ ಎಂಬ ಬಿರುದು ಬಂದ ಗೌರವಾರ್ಥಕ್ಕಾಗಿ ಬಳ್ಳಾರಿಯ ಅವರ ಮಿತ್ರರು ಶ್ರೀ ವೀರಪ್ಪನವರಿಗೆ ಸತ್ಕಾರಕೂಟವನ್ನೇರ್ಪಡಿಸಿದ್ದರು, ನವಜೀವನ ವ್ಯಾಯಾಮಶಾಲೆ ಕರ್ನಾಟಕ ಆಂಧ್ರ ಯುವಜನ ಸಂಘದಿಂದ ಮಾನಪತ್ರಗಳರ್ಪಿತವಾದವು.

ಹೊಸಪೇಟೆ

ತುಂಗಭದ್ರಾ ಯೋಜನೆಯಭಾಗದಲ್ಲಿ ಕ್ರೇನ್‌ಯಂತ್ರವು ಕಾಲ್ವೆಯಲ್ಲಿ ಬಿದ್ದುಹೋದಕಾರಣ ಕೂಲಿ ಕಾರ್ಮಿಕರು ಮರಣ ಹೊಂದಿದರು, ಸಂಖ್ಯೆಯು ಇನ್ನೂ ತಿಳಿದುಬಂದಿಲ್ಲ.

ಶ್ರೀಗಳಾದ ಗುತ್ತಿ ಕೋಟಿಪ್ಪ ಯಂ, ಭೀಮಪ್ಪ ದೇಶಿಕಾಚಾರ್ಯ, ಯಸ್.ಸುಬ್ರಹ್ಮಣ್ಯ ಶ್ರೀಮತಿಸಾವಿತ್ರಿಬಾಯಿ, ಜನಾಬ್ ಮಹಮ್ಮದ್‌ಗೌಸ್ ಸಾಹೇಬರು ಇಲ್ಲಿಯ ಕೋಆಪರೇಟಿವ್ ಸ್ಟೋರ್ಸಿನ ಡೈರೆಕ್ಟರುಗಳಾಗಿ ಆರಿಸಲ್ಪಟ್ಟರು,

ಹೊಸಪೇಟೆ ಫಿರ್ಕಾದ ಜಿಲ್ಲಾಬೋರ್ಡು ಸದಸ್ಯರ ಸ್ಥಾನಕ್ಕೆ ಶ್ರೀ ಪಿ ಯಲ್, ನಾರಾಯಣರಾವ್ ಮತ್ತು ಮರಿಸ್ವಾಮಿಯವರು ಸ್ಪರ್ಧಿಸುತ್ತಿರುವರು,

ಶ್ರೀ ಎ. ನಂಜುಂಡಯ್ಯನವರು

'49 ಆಗಸ್ಟ 14ನೆಯ ಭಾನುವಾರ ಶ್ರೀಎ.ನಂಜುಂಡಯ್ಯನವರು ಉದ್ಯೋಗದಿಂದ ನಿವೃತ್ತರಾದರು. ಇವರು ಬಳ್ಳಾರಿ ಜಿಲ್ಲಾಬೋರ್ಡು ಕಾರ್ಯದರ್ಶಿಗಳಾಗಿದ್ದರು,

ಇವರು ಸಹೃದಯತೆ, ನಿಷ್ಪಕ್ಷಪಾತಬುದ್ಧಿ ದಯಾದಾಕ್ಷಿಣ್ಯಗಳಿಂದ ಸರ್ವರೊಡನೆಯು ವರ್ತಿಸಿ, ತಮ್ಮ ಕೆಲಸವನ್ನು ಸಾಮರ್ಥ್ಯದಿಂದಲೂ ಅಸಮಾನ ಯೋಗ್ಯತೆಯಿಂದಲೂ, ನಿರ್ವಹಿಸಿ ಸರ್ವಪಂಗಡಗಳ ಪ್ರೇಮಾದರಗಳಿಗೆ ಪಾತ್ರರಾದರು. ಅದ್ವೈತವಾದಿಗಳಾದರೂ ಪರಧರ್ಮ ಸಹಿಷ್ಣುತೆಯಿಂದ ಭಗವದ್ಗೀತಾದೃಷ್ಟಿಯಿಂದ ಭೂತದಯಾ ಪಶ್ಚಾತ್ತಾಪಗಳಿಗೆಡೆಕೊಡಕೊಟ್ಟವರಿವರು, ಭಗವಂತನು ಇವರಿಗೆ ಆಯುರಾರೋಗ್ಯವನ್ನು ಕೊಟ್ಟು ತಮ್ಮುಳಿದಾಯುಸ್ಸನ್ನು ಸಮಾಜಸೇವೆಗೆ ಎರವಾಗಿಡಲೆಂದು ಪ್ರಾರ್ಥಿಸುತ್ತೇನೆ.

ಭಾರತ ರಾಷ್ಟ್ರಧ್ವಜವನ್ನಿಳಿಸಲಾಯಿತು

ಪಾಕಿಸ್ತಾನ ರಾಜಧಾನಿ ಕರಾಚಿಯಲ್ಲಿ ಇಂಡಿಯಾ ಪ್ರತಿನಿಧಿಗಳು ತಮ್ಮ ಕಟ್ಟಡದಮೇಲೆ ಸ್ವಾತಂತ್ರ್ಯೋತ್ಸವದ ನಿಮಿತ್ತ ಭಾರತರಾಷ್ಟ್ರಧ್ವಜವನ್ನು ಹಾರಿಸಿರುವುದನ್ನು ಸಹಿಸದೆ ಸಾವಿರಾರು ಮುಸಲ್ಮಾನರು ದಂಗೆಯೆಬ್ಬಿಸಿ ಕಲ್ಲುಗಳಿಂದ ಹೊಡೆದು ಭಾರತಧ್ವಜವನ್ನು ಕೆಳಗಿಳಿಸಲು ಕಾರಣರಾದರು, ಪೋಲೀಸರ ಗುಂಡಿನ ಹೊಡೆತದಿಂದ ಒಬ್ಬನು ಮಡಿದನು, ಅಧಿಕಾರಿಗಳು ಬಂದು ಶಾಂತಮಾಡಿದರು

—ಕಾಶ್ಮೀರ ಸಮಸ್ಯೆಯಲ್ಲಿ ಮತ್ತೆ ಬಿಕ್ಕಟ್ಟು ಉತ್ಪನ್ನವಾಗಿಭಾರತ ಪಾಕಿಸ್ತಾನ ಸಂಯುಕ್ತ ಸಭೆಯು ಒಪ್ಪಂದದ ಕರಾರುಗಳನ್ನು ನಿಶ್ಚಯಿಸಲು ಕೂಡುವುದಿಲ್ಲ. ಇದರಿಂದ ಲೇಕ್‌ಸಕ್ಸೆಸ್‌ದಲ್ಲಿ ನಿರಾಶೆಯಾಗಿದೆ.

ರಾಷ್ಟ್ರಭಾಷೆ— ಪರ್ಷಿಯನ್ ಮತ್ತು ನಾಗರಿಲಿಪಿಗಳನ್ನೊಳಗೊಂಡ ಹಿಂದೂಸ್ತಾನಿಯೇ ರಾಷ್ಟ್ರಭಾಷೆಯಾಗಬೇಕೆಂದೂ, ಇದು ಮಹಾತ್ಮಾಗಾಂಧೀಜಿಯವರ ಅಭಿಪ್ರಾಯವಾಗಿತ್ತೆಂದೂ, ಘಟನಾಸಮಿತಿಯ ಮುಸಲ್ಮಾನಸದಸ್ಯರು ವಾದಿಸಿದರು

ಬಳ್ಳಾರಿಯಲ್ಲಿ ಹಿಂದೀ ಪರೀಕ್ಷೆಗಳು

ಬಳ್ಳಾರಿ ಕೇಂದ್ರದಲ್ಲಿ ಆಗಸ್ಟ 20-21-22 ದಿನ ನಡೆದ ದ. ಭಾ. ಹಿಂದೀಪರೀಕ್ಷೆಗಳಿಗೆ ಈ ಪ್ರಕಾರ ಹಿಂದೀ ವಿದ್ಯಾರ್ಥಿಗಳು ಕೂತಿರುವರು ಪ್ರಾರಂಭಿಕ ಮತ್ತು ಉನ್ನತ ಪರೀಕ್ಷೆಗಳಿಗಾಗಿ 30 ಸ್ತ್ರೀಯರು ಕೂತಿರುವರು

ಪ್ರಾಥಮಿಕ 69 ಮಧ್ಯಮಾ 47 ರಾಷ್ಟ್ರಭಾಷಾ 36
ಪ್ರವೇಶಿಕಾ 13 ವಿಶಾರದ 17 ಪ್ರವೀಣ 5 ಒಟ್ಟು 187

ಕಾಂಗ್ರೆಸ್ ವರ್ಕಿಂಗ ಕಮಿಟಿ ದಿನಾಂಕ ೨೩ ಕ್ಕೆ

ಹೊಸದಿಲ್ಲಿ ಈ ಅ ಭಾ .ಕಾಂಗ್ರೆಸ್ ಕಮಿಟಿಯು ಹಿಂದೆ ಪ್ರಸಿದ್ಧಿ ಸಲ್ಪಟ್ಟಮೇರೆಗೆ ಆಗಸ್ಟ 21 ರಂದು ಸೇರಿಯಲಿದ್ದ ಕಾಂಗ್ರೆಸ ವರ್ಕಿಂಗ ಕಮಿಟಿ ಸಭೆಯು ಅಂದು ನೆರೆಯದೆ,ಆಗಸ್ಟ 23 ರಂದು ಡಾ.ರಾಜೇಂದ್ರ ಪ್ರಸಾದರ ಭವನದಲ್ಲಿ ನೆರೆಯುವ

ಸುಲಭ ಸಮಾಜವಾದಿ

ಬಡತನ ಒಂದು ಸಾಮಾಜಿಕ ರೋಗ:—

ಬಡತನದಲ್ಲಿ ಸುಖವಿರುವದಿಲ್ಲೆಂದು ಅದರಿಂದ ನೈತಿಕ ಅಧಃಪಾತವಾಗುತ್ತದೆಂದು ಅವರ ವಿಷಯ ತೀವ್ರ ತಿರಸ್ಕಾರವೆನಿಸುತ್ತದೆ; ಮತ್ತು ಮೇಲಾಗಿ ಈ ಅಧಃಪಾತಕ್ಕೆ ಮಿತಿಯಿಲ್ಲ. ಬಡವರು ಮೆತ್ತಗಿರಬಹುದು ಅದು ವಿನಯದಿಂದಲ್ಲ, ಅವರ ದೈನ್ಯದಿಂದ. ಮಾನ ಅಪಮಾನ ಇವು ಬಡತನದಲ್ಲಿ ಇರುವದೇ ಇಲ್ಲ. ಮೊದಲು ಧನವಂತನಿದ್ದು ಮುಂದೆ ಬಡತನ ಬಂದರೆ ಅವನಲ್ಲಿದ್ದ ಮಾನಾಪಮಾನದ ಕಲ್ಪನೆಗಳು ಬಡತನದ ಬೆಂಕಿಯಲ್ಲಿ ಸುಟ್ಟುಹೋಗುತ್ತವೆ. ಅಲ್ಪ ಲಾಭಕ್ಕಾಗಿ ಬೇಕಾದಂಥ ಅಪರಾಧವನ್ನೆಸಗಲು ಬಡವರು ಹೇಸುವದಿಲ್ಲ. ದೂರದೃಷ್ಟಿ ಮತ್ತು ಮನೋನಿಗ್ರಹಗಳಂತೂ ಬಡತನದಲ್ಲಿ ಸಾಧ್ಯವಿರುವದಿಲ್ಲ.

ದಾರಿದ್ರ್ಯದ ಮೂಲಕ ಆಗುವ ನೈತಿಕ ಅಧಃಪತನದ ಪರಿಚಯವು ಬಡವರಿಗೂ ಬಲ್ಲವರಿಗೂ ಇರುವದರಿಂದ ಅದರ ಚರ್ಚೆ ಮಾಡುವ ಕಾರಣವಿಲ್ಲ. ಆದರೆ ಒಂದು ಮಾತು ಧನಿಕರ ಲಕ್ಷ್ಯದಲ್ಲಿ ಬರುವದಿಲ್ಲ; ಅದೇನೆಂದರೆ ಬಡತನವು ಬಡವರಿಗಿಂತ ಧನಿಕರಿಗೆ ಮತ್ತು ಸಮಾಜಕ್ಕೆ ಹೆಚ್ಚು ಕೇಡು ಮಾಡುತ್ತದೆ ಎಂಬ ಮಾತು. ದಾರಿದ್ರ್ಯವು ಸೋಂಕುರೋಗದಂತೆ ಇದೆ. ಸೋಂಕುರೋಗವು ಒಂದು ಊರಿಂದ ಮತ್ತೊಂದು ಊರಿಗೆ, ದೇಶದ ಒಂದು ತುದಿಯಿಂದ ಇನ್ನೊಂದು ತುದಿಗೆ [illegible]. ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹಬ್ಬಿ ತನ್ನ ಪ್ರಭಾವ ಬೀರುವಂತೆ ಬಡತನದ ದುಷ್ಪರಿಣಾಮಗಳು ಹಬ್ಬುತ್ತವೆ. ಪ್ಲೇಗ್, ಇನ್‌ಫ್ಲುಯೆಂಜಾ, ಮೈಲಿಬೇನೆ ಮೊದಲಾದವು ಮೊದಲು ಬಡವರಿಗೆ ಬರುತ್ತವೆಂಬ ಮಾತು ನಿಜ. ಆದರೆ ಮುಂದೆ ಅಲ್ಲಿಂದ ಅವರ ಬೇನೆ ಸಿರಿವಂತರಿಗೂ ತಾಗದೆ ಹೋಗುವದಿಲ್ಲ. ಬಡತನದ ಮೂಲಕ ಉದ್ಭೂತವಾದ ಗುನ್ಹೆಗಾರಿಕೆಗೆ ಸಿರಿವಂತರೇ ಬಲಿಬೀಳುತ್ತಾರೆ. ಪೋಲೀಸರಿಂದ ಶಿಕ್ಷೆಯ ಸಂರಕ್ಷಣೆಗೆ ದುಡ್ಡು ಹಾಳುಮಾಡುವದಕ್ಕಿಂತ ದಾರಿದ್ರ್ಯನಾಶದ ಉಪಾಯಗಳನ್ನು ಯೋಚಿಸುವದು ಒಳಿತೆಂಬ ಅನುಭವ ಇತ್ತೀಚೆಗೆ ಸುಧಾರಿಸಿದ ರಾಷ್ಟ್ರಗಳಲ್ಲಿ ಬರಹತ್ತಿದೆ. 'ಬಡವರ ಮಕ್ಕಳ ಹೊಲಸು ಚಟ, ಬೈಗಳ ಪ್ರವೃತ್ತಿಯ, ಸಂಸರ್ಗ, ಸಿರಿವಂತರ ಮಕ್ಕಳಿಗೆ ಹತ್ತುವ ಸಂಭವ ಹೆಚ್ಚು. ಬಡ ಹಾಗೂ ಸುಂದರ ಸ್ತ್ರೀಯರಿಗೆ ಕಷ್ಟಪಟ್ಟು ದುಡ್ಡು ಹೆಚ್ಚು ಸಿಗುತ್ತದೆಂಬ ಅನುಭವ ಬಂದರೆ, ಅವರ ಬೇನೆ ಸಿರಿವಂತರ ಶರೀರಕ್ಕೆ ಹತ್ತದೆ ಹೋಗದು. ಅವರ ಸಂಸರ್ಗ ಸಿರಿವಂತರಿಂದ ಅವರ ಹೆಣ್ಣುಮಕ್ಕಳಿಗೆ, ಅವರಿಂದ ಅವರ ಮಕ್ಕಳಿಗೆ ಹೀಗೆ ಮುಂದುವರಿಯುತ್ತದೆ. ಜಗತ್ತು ಒಂದೇ ಕುಟುಂಬವಿದೆಯೆಂದು ಧರ್ಮಗುರುಗಳು ಹೇಳುವ ಮಾತು ಹಾಳು ಹರಟೆಯಲ್ಲ, ಅದು ಎಲ್ಲರ ಅನುಭವಕ್ಕೆ ಬರುವ ಮಾತು ....ಇದಲ್ಲದೆ ಬಡತನವಿರುವ ವರೆಗೆ ತಾವೂ ಬಡವರಾಗಬಹುದೆಂಬ ಅಂಜಿಕೆ ಸಿರಿವಂತರಿಗೆ ಇದ್ದೇ ಇದೆ. ಎರಡನೆಯವರು ಬೀಳಲೆಂದು ಕಡಿದ ತಗ್ಗಿನಲ್ಲಿ ನಾವು ಯಾವಾಗ ಬೀಳಬಹುದೆಂದು ಹೇಳಬರುವಂತಿಲ್ಲ. ಎತ್ತರವಾದ ಸ್ಥಳಕ್ಕೆ ತಾವು ಸಂರಕ್ಷಣೆಗಾಗಿ ಗೋಡೆ ಕಟ್ಟಿಸಿದ್ದರೆ, ಆಡುತ್ತ ನಮ್ಮ ಹುಡುಗರು ಬೀಳಲಿಕ್ಕಿಲ್ಲೆಂದು ಹೇಳಬರುವಂತಿಲ್ಲ. ಬಡತನದ ತಗ್ಗಿಗೆ ಬೇಲಿ ಇಲ್ಲ. ಎಷ್ಟೋ ಸನ್ಮಾನ ಮತ್ತು ಧನವಂತ ಮನೆತನಗಳು ಅಲ್ಲಿ ಬಿದ್ದದ್ದು ನಾವು ನೋಡುತ್ತೇವೆ. ಇನ್ನು ಮುಂದೆ ಅಲ್ಲಿ ಬೀಳುವ ಸರತಿ ನಮ್ಮದಲ್ಲೆಂದು ಎದೆತಟ್ಟಿ ಯಾರು ಹೇಳಬಲ್ಲರು? ಯಾವನೋ ಒಬ್ಬನು ತನ್ನ ಕರ್ಮದಿಂದ ಬಡವನಾದ; ಅವನ ದುಷ್ಕರ್ಮದಿಂದ ಅವನಿಗೆ ಶಿಕ್ಷೆಯಾಯಿತು ಎಂದು ನಾವು ಒಳ್ಳೆ ಹೆಮ್ಮೆಯಿಂದ ಅನ್ನುತ್ತೇವೆ. ಆದರೆ ಇದು ತಪ್ಪು, ಆತ್ಮಘಾತಕತನ, ಯಾಕೆಂದರೆ ಬಡತನದ ಶಿಕ್ಷೆಯಿಂದ ಮನುಷ್ಯನು ಸುಧಾರಿಸುವನೆನ್ನುವ ಮಾತೇ ಸುಳ್ಳು. ಮೇಲೆ ತೋರಿಸಿದಂತೆ ಅವನ ಅಧಃಪಾತವೇ ಹೆಚ್ಚಾಗುತ್ತ ಹೋಗುವದು; ಮತ್ತು ಅದರ ಪರಿಣಾಮಗಳನ್ನು ಸಮಾಜಕ್ಕೆ ಅನುಭವಿಸಬೇಕಾಗುವದು. ಮೋಟರ ಡ್ರೈವರನೊಬ್ಬನು ಕುಡಿದು ಬೇಕಾದಂತೆ ಮೋಟರ ನಡೆಸುತ್ತಿರುವ ತನ್ನ ದುರ್ಗುಣದ ಪ್ರಾಯಶ್ಚಿತ್ತ ಪಡೆಯಲೆಂದು ಸುಮ್ಮನೆ ನೋಡುತ್ತ ನಿಲ್ಲುವದು ಸಾಧ್ಯವಿಲ್ಲ. ಹತ್ತು ನಿಮಿಷದ ಅವಧಿಯಲ್ಲಿ ಇವನು ಹತ್ತಿಪ್ಪತ್ತು ಜನರನ್ನು ಕೊಲ್ಲಬಹುದು, ನೂರಾರು ಜನರ ಕೈಕಾಲು ಮುರಿಯಬಹುದು, ಮತ್ತು ಸಾವಿರಾರು ರೂಪಾಯಿ ಸೊತ್ತನ್ನು ಮಣ್ಣುಪಾಲು ಮಾಡಬಹುದು. ಮಲೇರಿಯಾ ಹಬ್ಬಿಸುವ ಜವಳ, ಹೊಲಸಿನಿಂದ ತುಂಬಿದ ತಿಪ್ಪೆ, ಕುಡಿದು ಓಡಾಡುವ ಪುಂಡ ಇವೆಲ್ಲ 'ಸಾರ್ವಜನಿಕ ಉಪದ್ರವ'ಗಳೆಂದು ಕಾಯದೆಯಲ್ಲಿ ಹೇಳಿದಂತೆ ಬಡತನದ ಬಂದೋಬಸ್ತು ಕೂಡಾ ಮಾಡಲೇಬೇಕು. ಸಮಾಜದಲ್ಲಿ ಬಡತನ ಬರದಂತೆ ನೋಡಿಕೊಳ್ಳಬೇಕು; ಇಷ್ಟೇ ಅಲ್ಲ ಬಡವನಾಗುವದು ಅಸಾಧ್ಯವಾಗಬೇಕು.

೨ ಸಂಪತ್ತಿನ ಅಮಿತ ಬೆಳವಣಿಗೆ

ಸಂಪತ್ತಿಗೆ ಅಕಸ್ಮಾತ್ತಾಗಿ ಬಂದ ಫಲ:—

ಇತ್ತೀಚಿನ ನೂರು ನೂರೈವತ್ತು ವರುಷಗಳಲ್ಲಿ [illegible] ಪ್ರಭುತ್ವದಿಂದಲೂ, ಧನೋತ್ಪಾದನ ಸಾಮರ್ಥ್ಯದಿಂದಲೂ ಮಾನವ ಜಾತಿಗೆ ಇನ್ನು ಸಂಪತ್ತಿನ ಕೊರತೆ ಬೀಳುವ ಕಾರಣವಿಲ್ಲ. ಪೃಥ್ವಿಯ ಸುತ್ತಳತೆ ೨೫೦೦೦ ಮೈಲಿನಷ್ಟು ಇದ್ದರೂ ತೀರ ಕೆಲವು ಶತಮಾನಗಳ ಹಿಂದಿನ ಸಾವಿರ ವರುಷಗಳಲ್ಲಿ ಮನುಷ್ಯರು ಕಪ್ಪೆಗಳಂತೆ ಬಾವಿಯಷ್ಟು ಸಣ್ಣ ಸಣ್ಣ ಸ್ಥಳಗಳಲ್ಲಿ ಇರುತ್ತಿದ್ದರು. ಕಾಲುನಡಿಗೆಯಿಂದ ಎತ್ತಿನ ಚಕ್ಕಡಿಯಲ್ಲಿ, ಬಹಳದೂರವಾದರೆ ಕುದುರೆಗಾಡಿಗಳಲ್ಲಿ ಅಥವಾ ಕುದುರೆಗಳ ಮೇಲೆ ಕೂತು ಕೆಲವೊಂದು ಮೈಲು ಹೋಗುತ್ತಿದ್ದರು. ಒಂದು ಪ್ರಾಂತದಿಂದ ಇನ್ನೊಂದು ಪ್ರಾಂತಕ್ಕೆ ಕಾಳು ಒಯ್ಯುವದೆಂದರೆ, ಹಾದಿ ನೆಟ್ಟಗಿಲ್ಲದಿದ್ದರಿಂದ ಬಹಳ ಕಾಲಾವಧಿ ಹತ್ತಿ ಕಾಳಿಗಿಂತ ಚಕ್ಕಡಿಗಳ ಬಾಡಿಗೆಯೇ ಹೆಚ್ಚಾಗುತ್ತಿತ್ತು. ಅದರಿಂದ ದೇಶದ ಒಂದು ಭಾಗದಲ್ಲಿ ಉತ್ತಮ ಬೆಳೆ ಬಂದಿದ್ದರೂ ಕೊರತೆಯ ಭಾಗಕ್ಕೆ ವಾಹನದ ಅನಾನುಕೂಲತೆಯ ಮೂಲಕ ಒಯ್ಯುವದು ಅಸಾಧ್ಯವಾಗಿ ಅನ್ನ ವಸ್ತ್ರಗಳಿಲ್ಲದೆ ಜನರು ಸಾವಿಗೆ ತುತ್ತಾಗುತ್ತಿದ್ದರು. ಈ ನೂರಾರು ವರುಷಗಳಲ್ಲಿ ಹಾದಿಗಳ ಪರಿಸ್ಥಿತಿ ಸುಧಾರಿಸಿದೆ. ನೌಕಾಯಾನ ಶಾಸ್ತ್ರವು ಬೆಳೆದಿದೆ. ಆಕಾಶಮಾರ್ಗಗಳ ಸೌಕರ್ಯವು ಮನುಷ್ಯನಿಗೆ ದೊರಕಿದೆ. ಅಲ್ಲಲ್ಲಿ ರಾಜಮಾರ್ಗಗಳಾಗಿ ದೇಶದ ಒಂದು ತುದಿಯಿಂದ ಇನ್ನೊಂದು ತುದಿಗೆ ಒಂದು ವಾರದಲ್ಲಿ ಹೋಗುವದು ಸಾಧ್ಯವಾಗಿದೆ. ಒಲೆಯೊಳಗೆ ಬೆಂಕಿ ಹಚ್ಚಿಸಲು ಭೂ ಭೂ ಎಂದು ಊದಿ ಊದಿ ಎದೆ ಒಡೆಯುವ ಪ್ರಸಂಗ ಸಾವಿರಾರು ಮುದುಕಿಯರಿಗೆ ಬರುತ್ತಿತ್ತು. ಆದರೆ ಒಂದು ಗುಂಡಿ (ಸ್ವಿಚ್) ಕೆಳಗೆ ಮಾಡಿದೊಡನೆ ಲಕ್ಷಾವಧಿ ದೀಪಗಳು ಹತ್ತುತ್ತವೆ, ಸಾವಿರಾರು ಚದರ ಮೈಲು ಪ್ರದೇಶದಲ್ಲಿ ಮಧ್ಯರಾತ್ರಿಯಲ್ಲಿ ಮಧ್ಯಾಹ್ನವಿದ್ದಂತೆ ಆಗುತ್ತದೆ, ಲಕ್ಷಗಟ್ಟಲೆ ಕುದುರೆ ಶಕ್ತಿ ಸಹ ಕಡಿಮೆಯೆನಿಸುವ ಯಂತ್ರಗಳು ಜೀವಂತವಿದ್ದಂತೆ ತಮ್ಮಷ್ಟಕ್ಕೆ ತಾವೆ ನಡೆಯುತ್ತವೆ. ಅಡವಿಯಲ್ಲಿಯ ಗಿಡಗಳನ್ನು ಕೊಡ್ಲಿಯಿಂದ ಕಡಿಯುವದು, ಗರಗಸದಿಂದ ಅವನ್ನು ಕೊಯ್ಯುವದು, ಮನೆಗಳಿಗೆ ಬೇಕಾಗುವಂಥ ತೊಲೆ, ಕಂಬಗಳನ್ನು ಅಳತೆಗೆ ತಕ್ಕಂತೆ ಕೊರೆಯುವದು ಇವೆಲ್ಲಕ್ಕೆ ತಿಂಗಳಾವಧಿ ಬೇಕಾಗುತ್ತಿತ್ತು. ಈಗ ಚಿಕ್ಕಮಕ್ಕಳು ಬೆಂಡಿನ ಮನೆ ತಯಾರಿಸುವಂತೆ, ವೇಗದಿಂದ ಅಷ್ಟು ಇಮಾರತುಗಳಿಗೆ, ಉಗಿಬಂಡಿಗಳಿಗೆ, ಮೋಟಾರಿಗೆ ಬೇಕಾಗುವ ಕಟ್ಟಿಗೆಗಳು ಅಲ್ಪಾವಧಿಯಲ್ಲಿ ತಯಾರಾಗುತ್ತಿವೆ. ಮುಗಿಲಿನೊಳಗಿಂದ ಆನೆಕಲ್ಲಿನ ಮಳೆಗರೆಯುವಂತೆ ಬಿಸ್ಕಿಟ್ಸ್, ಕಾಳ್ಮರಿಗಳ ಮಳೆಯು ಸಾವಿರಾರು [illegible] ನಡೆಯುವ [illegible] ಮೇಲೆ ಬೀಳುತ್ತದೆ. ದಿ ಕೊಸ್ಟೀ ನ್ ಕಿ ಸಾವಿರದ ಯಿ ಒಬ್ಬ ಬೂಟ್ಸಿನ ಕಾರ

[illegible] ಕಾಗುವಷ್ಟು ಬೂಟ್ಸು ತಯಾರಿಸುತ್ತಿದ್ದಾನೆ ಮತ್ತು ಇಡಿ ಜಗತ್ತಿಗೆ ಪೂರೈಸುವೆನೆಂಬ ಮಹತ್ವಾಕಾಂಕ್ಷೆ ಇಟ್ಟುಕೊಂಡಿದ್ದಾನೆ. ನೂರಾರು ನೇಕಾರರಿಂದ ನೇಯುವುದಾಗದಷ್ಟು ಅರಿವೆ ಒಂದು ಯಾಂತ್ರಿಕ ಮಗ್ಗದ ಮೇಲೆ ಬರಿ ದೃಷ್ಟಿಯನ್ನಿಟ್ಟು ಒಬ್ಬ ತರುಣಿ ನೇಯಬಲ್ಲಳು. ಇಂಗ್ಲಂಡ ಭಾಗದಲ್ಲಿ ಗಿರಣಿ ಒಡೆಯರು ಒಬ್ಬೊಬ್ಬರೇ ಇಡೀ ಜಗತ್ತಿಗೆ ಅರಿವೆ ಪೂರೈಸುವೆವೆಂದು ಹೇಳುತ್ತಿದ್ದಾರೆ. ಪರ್ವತವನ್ನೇ ಕೈ ಮೇಲೆ ಎತ್ತಿ ಒಯ್ಯುವ ಹನುಮಂತನ ಕಥೆ ಪುರಾಣದಲ್ಲಿಯ ಕಲ್ಪನೆಯ ಹಾರಾಟವಿತ್ತು. ಆದರೆ ಆನೆಯಷ್ಟು ಭಾರದ ಸುತ್ತಿಗೆ, ಮಿಂಚಿನ ಅಥವಾ ಉಗಿ ಶಕ್ತಿಯ ಮೂಲಕ ಲೀಲೆಯಿಂದ ಎತ್ತಲ್ಪಟ್ಟು ಸಾವಿರಾರು ಫೂಟು ಉದ್ದಳತೆಯ ತಗಡನ್ನು ಬಡಿದು ನುಣುಪು ಮಾಡುತ್ತಿವೆ. ಈ ಚಮತ್ಕಾರಗಳು ಬೊಟ್ಟು ಕಚ್ಚುವಂತಹವಿವೆ. ಊರ ಹತ್ತಿರದ ಹೊಲಮೊಳಗಿನ ಕಾಳು ಮನೆಯಲ್ಲಿ ಬಂದು ಬೀಳಬಹುದೋ ಇಲ್ಲವೋ ಎಂಬ ಸಂಶಯವಿತ್ತು. ಆದರೆ ಇವತ್ತು ಅಮೇರಿಕೆಯಿಂದಲೋ ಜಪಾನದಿಂದಲೋ ಚಾಕೊಲೇಟ್ ಬಂದದ್ದು ಎಲ್ಲ ಹಳ್ಳಿಪಳ್ಳಿಗಳಲ್ಲಿ ಸಹ ಚಿಕ್ಕಮಕ್ಕಳು ತಿನ್ನುತ್ತ ಓಡಾಡುತ್ತವೆ. ಕಾನಡಾದಲ್ಲಿ ಬೆಳೆದ ಟೊಮೆಟೊ ಸಾವಿರಾರು ಮೈಲು ದೂರದ ಇಂಗ್ಲಂಡಿನವರ ಹೊಟ್ಟೆಯಲ್ಲಿ ಬಂದು ಬೀಳುತ್ತವೆ. ಇಂಗ್ಲಂಡಕ್ಕೆ ಕರಿಯಲಿಕ್ಕೆ ಹೋದ ಗಂಡ, ಟೆಲಿಫೋನಿನ ಮೇಲೆ ತನ್ನ ಸತಿಯೊಡನೆ ಮಾತನಾಡಿ ತನ್ನ ವಿರಹಾನಲವನ್ನು ಸಂತೈಸುತ್ತಾನೆ ಮತ್ತು ತನ್ನ ಚಿಕ್ಕಮಗುವಿಗೆ ಚುಂಬನ ಸಂದೇಶ ಕಳಿಸುತ್ತಾನೆ.

ಬಹಳ ಸಿರಿವಂತರಿಗಷ್ಟೆ ಈ ಅನುಭವ ಪುಣ್ಣಾಲು ಬರುತ್ತವೆಂದಲ್ಲ. ಮಾನವ ಜಾತಿಯು ಪಡೆದ ಸೃಷ್ಟಿಯ ಮೇಲಿನ ಪ್ರಭುತ್ವ ಮತ್ತು ಸಂಪತ್ತು ನಿರ್ಮಿಸುವ ಶಕ್ತಿ ಅಮರ್ಯಾದಿತವಾಗಿ ಬೆಳೆದುದರಿಂದ, ಈ ಅನುಭವ ತೀರ ಸಾಮಾನ್ಯ ಮನುಷ್ಯರಿಗೆ ಸಹ ಅವರವರ ಜೀವನದಲ್ಲಿ ಬರುತ್ತಿವೆ. ಮುತ್ತಿನ ಚೀಲ ತೆಗೆದುಕೊಂಡು ಪೇಟೆಗೆ ಹೋದರೆ ಹಾಲು ಅಗ್ಗ, ತುಪ್ಪ ಅಗ್ಗ, ಕಾಳು ಅಗ್ಗ, ಅರಿವೆ ಅಗ್ಗ—ಹೇಗೆ ಅಗ್ಗಳತೆಯು ಸುಗ್ಗಿಯೇ ಬಂದಂತೆ ತೋರುತ್ತಿದೆ. ಗಿರಾಕಿಗಳಿಗೆ ಮಾಲು ಕೊಡುವ ಆತುರತೆಯುಳ್ಳವನ್ನು ಕಟ್ಟಿಕೊಂಡು ಅಂಗಡಿಕಾರರು ಸಜ್ಜಾಗಿ ನಿಂತಿದ್ದಾರೆ—ಅನೇಕ, ಪೇಟೆಯು ನಿನ್ನ ಹತ್ತುವಂತೆ "ನಮ್ಮಲ್ಲಿ ಬರ್ರಿ, ನಮ್ಮಲ್ಲಿ ಬರ್ರಿ" ಎಂದು ಗಿರಾಕಿಗಳ ಬೆನ್ನು ಹತ್ತಿರುತ್ತಾರೆ. ಉಗಿಬಂಡಿ—ಮೋಟರುಗಳ ಸೌಕರ್ಯದಿಂದ ಮಡಿವ್ಯಲಿಗೆಯು ಕಲ್ಪನೆಗಳು ಎಷ್ಟಿದ್ದರೂ ಅವನ್ನೂ ಪಡಿಲಿ

[illegible] ಗೋತ್ರಿಯಿಂದ ರಾಮೇಶ್ವರದ ವರೆಗೆ ಎಲ್ಲ ದೇವದೇವತೆಗಳ ದರ್ಶನವನ್ನು ಪಡೆಯುತ್ತಿದ್ದಾರೆ. ಹೊ! ಅವೆಲ್ಲ ಹೋಗಲಿ; ಪೇಟೆಯಲ್ಲಿ ಹೋಗಿರಿ, ಗಿರಣಿಗಳನ್ನು ನೋಡಿರಿ, ಸ್ವದೇಶದಲ್ಲಿಯದಾಗಲಿ, ಪರದೇಶದಲ್ಲಿಯದಾಗಲಿ ಭೋಗಿಸುವ ಸಂಪತ್ತಿನ ಹೊಳೆಯೇ ಹರಿಯುತ್ತಲಿದೆ. ಅಮೇರಿಕೆಯಲ್ಲಿ ಹತ್ತಿಯು ಪೈರು ಬಹಳ ಬರುತ್ತದೆಂದು ಕಡಿಮೆ ಬೆಳೆಯಿರಿ ಎಂದು ಹೇಳುತ್ತಾರೆ. ಇಂಗ್ಲಂಡ ಜಪಾನದಲ್ಲಿ ತಯಾರಾದಬಟ್ಟೆಗಳು ಬಡವರ ಮೈಮೇಲೆ ಸಹ ಬಂದು ಬೀಳಹತ್ತಿವೆ. ಕಾನಡಾದ ಗೋಧಿ ಯುರೋಪಿನ ಜನರ ಬಾಯಲ್ಲಿ ಮತ್ತು ಆಸ್ಟ್ರೇಲಿಯಾದ ಗೋಧಿ ಹಿಂದೀ ಜನರ ಹೊಟ್ಟೆ ಸೇರಲು ಆತುರವಾಗಿವೆ. ಬೇನೆಬೇಸರಿಕೆ ಜಗತ್ತಿನಿಂದ ಓಡಿಹೋಗಬೇಕೆಂದು ರಾಷ್ಟ್ರ ಸಂಘದವರ ಕಮಿಶನ್ ಅತ್ತಿತ್ತ ಓಡಾಡುತ್ತವೆ. ಹೇರಳತೆ, ಎಲ್ಲಿ ಕಡೆ ಹೇರಳತೆ!

—

ಉತ್ತಮ ಗ್ರಂಥಗಳಿಗೆ ಬಹುಮಾನ

ಮದರಾಸು ಸರಕಾರದವರು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ ಬಹುಮಾನ ಕೊಡಿಸುವ ವ್ಯವಸ್ಥೆ ಮಾಡಿರುವ ಸಂದರ್ಭದಲ್ಲಿ ೧೯೪೯ರ ಬಹುಮಾನಗಳಿಗೆ ಮದರಾಸು ಕರ್ನಾಟಕದ ಗ್ರಂಥ ಕರ್ತರು ತಮ್ಮ ಕೃತಿಗಳ ನಾಲ್ಕು ಪ್ರತಿಗಳನ್ನು ಕಾರ್ಯದರ್ಶಿ ಕರ್ನಾಟಕ ಸಂಘ ೧೬, ವೀರಸ್ವಾಮಿ ಪಿಳ್ಳೆ ಬೀದಿ, ಮದರಾಸು ೮ ಎಂಬ ವಿಳಾಸಕ್ಕೆ ೩೦-೯-೪೯ರ ಮೊದಲೆ ಸೇರುವಂತೆ ಕಳುಹಬೇಕಾಗಿ ಪ್ರಾರ್ಥನೆ. ೧೯೪೦ರಿಂದ ಈಚೆಗೆ ಕೆಳಗಿನ ವಿಷಯಗಳಲ್ಲಿ ರಚಿತವಾದ ಗ್ರಂಥಗಳು ಇದಕ್ಕೆ ಅರ್ಹನಿವುಳ್ಳವು

1 ಸಣ್ಣಕತೆ 2 ಜೀವನಚರಿತ್ರೆ
2 ನಾಟಕ 4 ಸಂಶೋಧನೆ
5 ವೈದ್ಯ ಮತ್ತು ಆರೋಗ್ಯ
6 ಕೃಷಿ ಮತ್ತು ಪ್ರಕೃತಿಶಾಸ್ತ್ರ

ಈಶ್ವರಭಟ್ಟ
ಕಾರ್ಯದರ್ಶಿ

ಸ್ವಾತಂತ್ರ್ಯ ದಿನೋತ್ಸವ

— (೧) —

ಬಳ್ಳಾರಿ ಶ್ರೀ ಟಿ. ಸುಬ್ರಹ್ಮಣ್ಯಂರವರು ಕಾಂಗ್ರೆಸ್ ಸರಕಾರದ ಸಮರ್ಥನೆಮಾಡುತ್ತಾ ನಮ್ಮ ಸರಕಾರಕ್ಕೆ ಜನತೆಯ ಬೆಂಬಲ ಕೋರಿದರು. ಗಾಂಧೀಜಿ ಭಾವಚಿತ್ರದ ಮೆರವಣಿಗೆಯನ್ನು ಬೀದಿಗಳ ಮುಖಾಂತರ ತರಲಾಯಿತು.

ಬಿ. ಡಿ. ಎ. ಗ್ರೌಂಡದಲ್ಲಿ ಸೇರಿದ ಸಭೆಯಲ್ಲಿ ಶ್ರೀ ಸತ್ಯನಾರಾಯಣ ಜಯತೀರ್ಥ ವಗ್ಗೈರೆ ಮಹನೀಯರು ಮಾತಾಡಿ ಕಾಂಗ್ರೆಸ್ ಸರಕಾರವನ್ನು ಟೀಕಿಸಿದರು. ಇಲ್ಲಿ ಬಡಹುಡುಗರಿಗೆ ಪಾನಕದ ವಿನಿಯೋಗವಾಯಿತು.

ಸರಕಾರದ ಕಟ್ಟಡಗಳ ಮೇಲೆಲ್ಲಾ ರಾಷ್ಟ್ರಧ್ವಜಾರೋಹಣವಾಗಿತ್ತು. ಪೆರೇಡ್ ಗ್ರೌಂಡದಲ್ಲಿ ಜಿಲ್ಲಾ ಕಲೆಕ್ಟರವರು ಧ್ವಜವಂದನೆ ಗೈದರು.

ಹೊಸಪೇಟೆ— ಪ್ರಾತಃಕಾಲ ರಾಷ್ಟ್ರಧ್ವಜಾರೋಹಣವು ಶ್ರೀ ತಿರುಮಲರಾಯರಿಂದಾಯಿತು. ಸಾಯಂಕಾಲ ಸೇರಿದ ಸಭೆಯಲ್ಲಿ ಶ್ರೀ ತಿರುಮಲರಾಯರಧ್ಯಕ್ಷತೆಯಲ್ಲಿ ಶ್ರೀ ಶಿ ವ ದೇಶಾಯಿಯವರು, ಆರ್ ವಿ ದೇಶಾಯಿ, ಸೈಯದ್ ಇಸ್ಮಾಯಿಲ್ ಮಹಬೂಬ್ ಶಹಜಾದಾ ಇವರು ಸ್ವಾತಂತ್ರ್ಯೋದ್ಯಮ ಗಾಂಧೀಜಿಯ ಪಾತ್ರವನ್ನು ಕುರಿತು ಮಾತಾಡಿದರು. ಅಧ್ಯಕ್ಷರು ಸೋಶಿಯಲಿಸ್ಟ ಪಾರ್ಟಿಗೆ ಸಹಕಾರ ಕೋರಿದರು.

ದಿವಂಗತ ಕೊಂಡಾ ವೆಂಕಟಪ್ಪಯ್ಯನವರು

ಆಗಸ್ಟ ೧೫ ಸ್ವಾತಂತ್ರ್ಯದ ಮಂಗಲ ದಿನ ಅಂದು ಆಂಧ್ರ ದೇಶದ ಗಾಂಧಿ ಪರಲೋಕವಾಸಿಗಳಾದರು!

೮೩ ವರುಷ ತುಂಬಿದ್ದವು ಕೊಂಡಾ ವೆಂಕಟಪ್ಪಯ್ಯನವರಿಗೆ ಆಂಧ್ರ ದೇಶದ ಸ್ವಪ್ನವನ್ನು ಅಂದು ಆಂಧ್ರ ಮಾತೆ ಕಳೆದುಕೊಂಡಳು!

ಆಂಧ್ರ ಮಾತೆಗೊಬ್ಬಳಿಗೇ ಅಲ್ಲ ಭರತ ದೇವಿಯು ಹೆಮ್ಮಗನೊಬ್ಬನನ್ನು ಕಳೆದುಕೊಂಡು ಅಂದು ಕಣ್ಣೀರಿಟ್ಟಳು ಆದರೆ ಕವಿ ಹೇಳಿದ್ದಾನೆ ರಸವೇ ಜನನ, ವಿರಸ ಮರಣ, ಸಮರಸವೆ ಜೀವನ.

ಆಂಧ್ರವೇನ ಭರತ ದೇಶ ಈ ಮಾತನ್ನು ನೆನೆದುಕೊಂಡು ಆವ ವಿಯೋಗವನ್ನು ಸಹಿಸಬೇಕು.

ಕೊಂಡಾ ವೆಂಕಟಪ್ಪಯ್ಯನವರ ಪರಿಚಯ ನಮ್ಮ ಜನತೆಗೆ ಏನೆಂದು ಮಾಡಿಕೊಡೋಣ ನಾವು?

ಗಾಂಧೀ ಭಕ್ತ! ಸರಳ ಸೇವಕ ಕಾಂಗ್ರೆಸ್ ನಿಸ್ಪೃಹ ಜವಾನ ಆದಿ ಜನರಲ್ ಖಾದೀಧಾರಿ ನಿಷ್ಠಾವಂತ ಕಾರ್ಯಕರ್ತ, ನಿಷ್ಕಾಮ ಕರ್ಮಿ, ಇನ್ನೂ ಏನೇನೆಂದು ಕೊಂಡಾ ವೆಂಕಟಪ್ಪಯ್ಯನವರನ್ನು ನಾವು ಹೊಗಳೋಣ!

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕು ಲಿಮಿಟೆಡ್., ಸ್ಥಾಪಿತ—1939

ಮುಖ್ಯ ಕಾರ್ಯಾಲಯ—ಬಳ್ಳಾರಿ.

—]0[—

ಶಾಖೆಗಳು | ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ.

ಬ್ಯಾಂಕು ಸ್ಥಾಯಿ ಠೇವಣಿಗಳು (Fixed Deposits) ಈ ಕೆಳಗಿನ ದರಗಳಂತೆ ತೆಗೆದುಕೊಳ್ಳಲಾಗುತ್ತವೆ

3 ರಿಂದ 9 ತಿಂಗಳವರೆಗೆ ಇಡುವ ಹಣಕ್ಕೆ	ರೂ. 3½%	ವರ್ಷಕ್ಕೆ ಶೇಕಡ
ಒಂದು ವರ್ಷ ,,	ರೂ 4%	,,
ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿ ,,	ರೂ. 4¼	,,

ಚಾಲ್ತಿ ಖಾತೆ (Current Account) 100 ರೂ. ಗಳ ಡಿಪಾಜಿಟ್‌ನಿಂದ ಪ್ರಾರಂಭಿಸಲ್ಪಟ್ಟು ತಿಂಗಳ ಕನಿಷ್ಟ ಸಿಲುವು ಹಣದ ಮೇಲೆ ಶೇಕಡ 1½ ಬಡ್ಡಿ ಕೊಡಲಾಗುತ್ತೆ. ಸೇವಿಂಗ್ಸ ಬ್ಯಾಂಕ್ ಲೆಕ್ಕಗಳನ್ನು 5 ರೂ. ಠೇವಿನಿಂದ ಪ್ರಾರಂಭಿಸಬಹುದು. ಆದಕ್ಕು ಮಾಸದ ಕನಿಷ್ಟ ಸಿಲುವು ಹಣದ ಮೇಲೆ ಶೇಕಡ 2½ ಬಡ್ಡಿ ಇದೆ. 10 ಹತ್ತು ರೂಪಾಯಿ ಕ್ಯಾಷ್ ಸರ್ಟಿಫಿಕೇಟ್‌ಗಳನ್ನು ಈಗ 8—14—3 ಪ್ರಕಾರ ಕೊಂಡು, ಮೂರು ವರ್ಷಗಳ ನಂತರ ಪೂರಾ ಹಣ ಪಡೆಯಬಹುದು. ಎಲ್ಲಾತರದ ಬ್ಯಾಂಕಿಂಗ್ ವ್ಯವಹಾರ ನಡೆಯುತ್ತದೆ

ಹೆಚ್. ಲಿಂಗಾರೆಡ್ಡಿ ಬಿ ಎ ಬಿ. ಎಲ್	ಬಿ ವಿ. ಶೇಷಗಿರಿರಾವ್, ಬಿ. ಕಾಂ.,
ಛೇರ್ಮನ್-ಬೋರ್ಡ್ ಆಫ್ ಡೈರೆಕ್ಟರ್ಸ್	ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ ಬಳ್ಳಾರಿ

[1931ರಲ್ಲಿ ಸ್ಥಾಪಿತ-ಜಿಲ್ಲಾ ಹಿಂದೀ ಪ್ರೇಮೀ ಮಂಡಲದಾಶ್ರಯ ರಿಜಿಸ್ಟರ್ಡ್)

ಮದ್ರಾಸ್ ಸರಕಾರದಿಂದ ಮಾನ್ಯ

ಸ್ಥಳ—:ವಾರ್ಡಲಾ ಹೈಸ್ಕೂಲ್ ಕಟ್ಟಡ.

ತರಗತಿಗಳು:—ಪ್ರಾರಂಭಿಕ:—ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷೆ ಉನ್ನತ—ವಿಶಾರದ

ವೇಳೆ:—ಪ್ರಾತಃಕಾಲ 7ರಿಂದ9 ಸಾಯಂಕಾಲ 6ರಿಂದ 8ರ ವರೆಗೆ ಪಾಠ್ಯಪುಸ್ತಕ-ಪರೀಕ್ಷ ವರ್ಗಗಳ ಅವಧಿ ಶಾಲಾಶುಲ್ಕ ವಗೈರೆ ವಿವರಗಳನ್ನು ವಿದ್ಯಾಲಯದ ಕಾಲದಲ್ಲಿ ಅರಿಯಬಹುದು, ಶಾಲೆಗೆ ಸೇರಲು ಅರ್ಜಿ 0-0-6 ವಿವರ ಪಟ್ಟಿ 0-2-0.

ಪ್ರಧಾನಾಧ್ಯಾಪಕ: --ಹಿಂದೀ ಮಹಾ ವಿದ್ಯಾಲಯ.

NAVA BHARAT BELLARY. (Reg. No M. 4749

ನ. ವ ಭಾ ರ ತ ಬ ಳ್ಳಾ ರಿ.

22- 8—49

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0 6 ತಿಂಗಳಿಗೆ 3—0—0 ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	One Year 5—0—0 Six months 3—0—0 Subscription will not be accepted for less than 6 months

To

Sri...

....

....

Printed at Vittal Press, Edited & Published by T. B Keshava Rao Bellary

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ-
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೯ ಆಗಸ್ಟ ೧೯೪೯ | ಸಂಚಿಕೆ ೩೦

ಅಮೃತವಾಹಿನಿ.

ಪ್ರತಿದಿನದ ಧ್ಯಾನದಿಂದ ಮಾನವನ ಜೀವಿತದಲ್ಲಿ ನವಚೇತನ ಲಭಿಸುವುದು. ತನ್ನೊಳಗೆ ಪರಮಾತ್ಮ ಇದ್ದಾನೆಂಬ ನಂಬುಗೆ ಬೇಕು. ಹೇಡಿತನ ಮತ್ತು ಬೇರೆ ದುಷ್ಟ ನಡವಳಿಕೆಗಳನ್ನು ನೀಗಿಕೊಳ್ಳಲು ನಿಷ್ಕಳಂಕ ಧ್ಯಾನ ಒಂದೇ ಬಲವಾದ ಉಪಾಯ.

ಭಾರತೀಯರು ಹಡಗುಗಳಿಗೆ ಹೊಸಬರಲ್ಲ

ವೇದಕಾಲದಿಂದಲೂ ಸಾಹಸಿಗಳಾದ ನಾವಿಕರು.

ಭಾರತೀಯರು "ಕಾಲಾಪಾನೀ" ಎಂದು ಸಮುದ್ರಯಾನವನ್ನು ನಿಷೇಧಿಸಿದ್ದರೆಂದು ಇತಿಹಾಸ ಪುಸ್ತಕಗಳು ತಿಳಿಸುತ್ತವೆ. ಹೀಗಾಗಿ ಭಾರತದಲ್ಲಿ ನೌಕಾಯಾನವೆಂಬುದೇ ಇದ್ದಿಲ್ಲವೆಂಬ ಭ್ರಾಂತಿ ಮೂಡಲವಕಾಶವಾಗಿದೆ. ಆದರೆ ವಸ್ತುಸ್ಥಿತಿ ಬೇರೆಯೆ. ಇತಿಹಾಸ ಪುಸ್ತಕಗಳಲ್ಲಿ ನಮ್ಮ ಸಮುದ್ರಯಾನ ಸಾಹಸಗಳನ್ನು ಬಣ್ಣಿಸಿರದಿದ್ದರೂ ಏನಿಲ್ಲೆಂದರೂ ಇಪ್ಪತ್ತು ಶತಕಗಳ ಹಿಂದೆ ಕೂಡ ಭಾರತೀಯರಿಗೆ ನೌಕಾಶಾಸ್ತ್ರ ಚೆನ್ನಾಗಿ ಗೊತ್ತಿತ್ತೆಂದೂ ಇಂದಿನ ಎಷ್ಟೋ ಪ್ರಬಲ ರಾಷ್ಟ್ರಗಳು ಅನಾಗರಿಕಾವಸ್ಥೆಯಲ್ಲಿದ್ದಾಗ ನಾವು ಜಗತ್ತಿನ ಪ್ರಮುಖ ಸಮುದ್ರ ಸಾಹಸಿಗಳಾಗಿದ್ದೆವೆಂದೂ ಅನೇಕ ಪ್ರಮಾಣಗಳ ಬಲದಿಂದ ತೋರಿಸಕೊಡಬಹುದು

ಋಗ್ವೇದ ನಿರ್ಮಾಣ ಕಾಲವನ್ನು ಯಾವ ವಿದ್ವಾಂಸನೂ ೪೫೦೦ ವರ್ಷಗಳಿಗಿಂತ ಈಚಿನದೆಂದು ಹೇಳಿಲ್ಲ. ಅದರಲ್ಲಿ ಕೂಡ "ಸಮುದ್ರದಲ್ಲಿರುವ ಹಡಗನ್ನು ದೂರದ ದಡಕ್ಕೆ ಕಳಿಸುವಂತೆ ನಮ್ಮ ಶತ್ರುಗಳನ್ನು ಅಟ್ಟಿಬಿಡು" ಎಂಬುವೇ ಮೊದಲಾದ ಉಲ್ಲೇಖಗಳು ಋಗ್ವೇದದ ಋಷಿಗಳಿಗೆ ಹಡಗುಗಳು ಪರಿಚಿತವಾಗಿದ್ದವೆಂಬದಕ್ಕೆ ಸಾಕ್ಷಿಯಾಗಿವೆ.

ಸಂಸ್ಕೃತ, ಪಾಲಿ ಸಾಹಿತ್ಯಗಳಲ್ಲಿ ಸಪ್ತಸಾಗರಗಳಲ್ಲಿ ಭಾರತೀಯ ನಾವಿಕರ ಸಾಹಸಗಳನ್ನು ವರ್ಣಿಸುವ ಭಾಗಗಳೆಷ್ಟೋ ಸಿಗುತ್ತವೆ. ಹಡಗಿನಲ್ಲಿ ಸರಕುಗಳನ್ನು ಹೇರಿ ದೂರದೇಶಗಳಲ್ಲಿ ವ್ಯಾಪಾರಮಾಡಿ ಹಣ ತರುವ ನಮ್ಮ ವೈಶ್ಯರ ಕತೆಗಳು ಬೇಕಾದಷ್ಟು ದೊರೆಯುತ್ತವೆ. ರಾಮಾಯಣದಲ್ಲಿ ಜಾವಾ (ಯವ) ಮತ್ತು ಸುಮಾತ್ರ ದ್ವೀಪಗಳ ಉಲ್ಲೇಖವಲ್ಲದೆ ಅಯೋಧ್ಯಾಕಾಂಡದಲ್ಲಿ ನೌಕಾಯುದ್ಧದ ವರ್ಣನೆಯೂ ಬರುವದರಿಂದ ಕ್ರಿಸ್ತಶಕಾರಂಭದಮೊದಲೇ ಯುದ್ಧಕ್ಕೂ ಹಡಗುಗಳನ್ನು ಬಳಸುವ ರೂಢಿಯಿತ್ತೆಂಬ ವ್ಯಕ್ತವಾಗುತ್ತದೆ. ಮಹಾಭಾರತದಲ್ಲಿ ಸಹದೇವನು ದ್ವೀಪಾಂತರಗಳ ಮ್ಲೇಚ್ಛರನ್ನು ಗೆದ್ದ ಕತೆಯೂ ಕಥಾಸರಿತ್ಸಾಗರದಲ್ಲಿ ಮಲಯದ ಸಮುದ್ರತೀರಕ್ಕೆ ನಮ್ಮ ಹಡಗುಗಳು ಹೋಗುತ್ತಿದ್ದುದರ ವರ್ಣನೆಯೂ ಕಾಣಬರುವವು

ವಿದೇಶೀಯರ ಸಾಕ್ಷಿ

ವಿದೇಶೀ ಸಾಹಿತ್ಯಗಳಲ್ಲೂ ಭಾರತವೇ ಪೂರ್ವಸಾಗರಗಳ ಒಡೆಯರಾಗಿತ್ತೆಂಬುದನ್ನು ಸಿದ್ಧಪಡಿಸುವ ಉಲ್ಲೇಖಗಳಿವೆ. ಪ್ಲಿನಿ, ಟೋಲೆಮಿ, ಹೆರಡೋಟಸ್ ಮೊದಲಾದವರು ನಮ್ಮ ಸಾಮುದ್ರಿಕ ವಾಣಿಜ್ಯದ ಮಾತೆತ್ತಿದ್ದಾರೆ. ಪ್ರಸಿದ್ಧ ವಿಶ್ವಸಂಚಾರಿ ಮಾರ್ಕೊಪೋಲೋನ ಹೇಳಿಕೆಯ ಮೇರೆಗೆ ೨೦೦-೩೦೦ ಜನ ನಾವಿಕರು ಬೇಕಾಗುವಂಥ ಭಾರೀ ನೌಕೆಗಳನ್ನು ಭಾರತೀಯರು ಉಪಯೋಗಿಸುತ್ತಿದ್ದರು. ತಮಿಳು ಮತ್ತು ಗ್ರೀಕ್—ರೋಮನ್ ಸಾಹಿತ್ಯಗಳಲ್ಲಿ ಚೋಳರಾಜ್ಯದವರು ಕ್ರಿಸ್ತಶಕದ ಆದಿಯ ಶತಕಗಳಲ್ಲಿ ಸಮುದ್ರ ಮೂಲಕ ವ್ಯಾಪಾರನಿರತರಾಗಿದ್ದುದ್ದಕ್ಕೆ ಪ್ರಮಾಣಗಳಿವೆಯೆಂದು ವಿನ್ಸೆಂಟ ಸ್ಮಿತ್ತರು ಹೇಳುತ್ತಾರೆ.

ತೀರ ಇತ್ತೀಚೆಗೆ ಕೂಡ ಭಾರತೀಯ ನೌಕಾಶಿಲ್ಪವು ಸೈರಣೆ ಮತ್ತು ಕಾರ್ಯಕೌಶಲದ ಉತ್ತಮ ಮಾದರಿಗಳಾಗಿದ್ದವೆಂದು ೧೮ ನೆ ಶತಕದ ಲೇಖಕರಾದ ಎಫ್. ಬಲ್ತಾಜರರು ಹೇಳಿದ್ದಾರೆ. ಹಡಗು ಕಟ್ಟುವ ವಿದ್ಯೆಯಲ್ಲಿ ಇಂಗ್ಲೀಷರು ಹಿಂದೀಯರಿಂದ ಎಷ್ಟೋ ಕಲಿತವರೆಂದು ಅವರು ಒಪ್ಪಿದ್ದಾರೆ.

ಕ್ರಿಸ್ತಶಕದ ಪೂರ್ವದಲ್ಲಿಯೂ ಪರ್ಶಿಯ ಅರಬಸ್ತಾನ ಮತ್ತು ಆಫ್ರಿಕೆಗಳಲ್ಲಿ ಮಾತ್ರವಲ್ಲ, ಕಂಬೋಜ, ಜಾವಾ, ಸುಮಾತ್ರ ಮೊದಲಾದ ಬೇರೆಗಳಲ್ಲಿ ಕೂಡ ಭಾರತೀಯರ ವಸತಿಗಳಿದ್ದವೆಂದು ಸಿದ್ಧವಾಗಿರುವಾಗ ನಮ್ಮ ನೌಕಾ ವಿದ್ಯೆಗೆ ಹೆಚ್ಚಿನ ಪ್ರಮಾಣವೇ ಅವಶ್ಯವಿಲ್ಲ. ಬರಿ ಕಾರಾವಳಿ ಹಡಗುಗಳಲ್ಲದೆ ಸಾಗರಮಾರ್ಗಿನ ಹಡಗುಗಳೂ ನಮ್ಮಲ್ಲಿದ್ದವೆಂಬಲ್ಲಿ ಸಂದೇಹವೇ ಇಲ್ಲ.

ದಿವಂಗತ ಮೋತೀಲಾಲ ಸೇಟರು

ಕಂಪ್ಲಿ ಸುಪ್ರಸಿದ್ಧ ವರ್ತಕರೂ, ದಾನಶೂರರು ಆದ ಶೇಟ್ ಮೋತೀಲಾಲರು 24 ತಾ|| ಬಳ್ಳಾರಿಯಲ್ಲಿ ದಿವಂಗತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ರಾಜಸ್ಥಾನದಿಂದ ಬಂದ ವ್ಯಾಪಾರೀ ಪ್ರವೃತ್ತಿಯ ಮಾರ್ವಾಡಿಗಳಲ್ಲೊಬ್ಬರಾದರೂ, ಇಲ್ಲಿಯ ಹಣವನ್ನು ಸೂರೆ ಮಾಡಿ ತಮ್ಮ ದೇಶಕ್ಕೊಯ್ಯುವ ಪ್ರವೃತ್ತಿ ಇವರದಲ್ಲ. ಇಲ್ಲಿಗೆ ಬಂದವರು ಇಲ್ಲಿಯವರಲ್ಲೇ ಸಮರಸರಾದರು. ಸಾರ್ವಜನಿಕ ಕಾರ್ಯಗಳಲ್ಲಿನ ಇವರ ಆಸಕ್ತಿ ಬಡವರ ಮೇಲಣ ಇವರ ಪ್ರೇಮ, ಸೇವಾಬುದ್ಧಿ ಪ್ರಶಂಸನೀಯ. ಅಧಿಕಾರಿಗಳಾಗಲಿ, ಅನಧಿಕಾರಿಗಳಾಗಲಿ ಇವರ ಆಶ್ರಯದಲ್ಲಿ ಒಳ್ಳೆಯ ಉಪಚಾರವನ್ನು ಪಡೆಯುತ್ತಿದ್ದರು. ರಾಜಸ್ಥಾನೀ ಮಾರ್ವಾಡಿಗಳ ಶ್ವೇತಾಂಬರ ಜೈನರ ಲೋಭದ ವಾಸನೆಯೂ ಇವರನ್ನು ಸೋಂಕಿರಲಿಲ್ಲ. ಅಂತೆಯೇ ಅತಿಥಿ ಸತ್ಕಾರದಲ್ಲಿ ಇವರು ಹೆಸರುವಾಸಿ ಪಡೆದಿದ್ದರು. ಯಾರೊಡನೆಯೂ ಹೆಚ್ಚಿಗೆ ಮಾತನಾಡದೆ ಮಿತಭಾಷಿಯಾಗಿ ಕಾರ್ಯದಲ್ಲಿ ಮಗ್ನರಾಗುವುದು ಇವರ ಸ್ವಭಾವ. ಕಂಪ್ಲಿನಗರದಲ್ಲಿ ಹೈಸ್ಕೂಲಾದ ಶ್ರೇಯಸ್ಸಿನ ಬಹುಭಾಗವು ಇವರಿಗೇ ಸಲ್ಲಬೇಕು. ಹೈಸ್ಕೂಲಿನ ಕಟ್ಟಡಕ್ಕಾಗಿ ಇವರು 30 ಸಾವಿರ ರೂಗಳಿಗಿಂತಲೂ ಹೆಚ್ಚಿಗೆ ಕೊಟ್ಟರು. ಯಾವ ಸಾರ್ವಜನಿಕ ಕಾರ್ಯಕರ್ತರಾಗಲಿ ಇವರ ಬಳಿಯಿಂದ ಬರಿಕೈಯಾಗಿ ಹೋಗುತ್ತಿರಲಿಲ್ಲ ಇಂಥ "ಕೊಡುಗೈ" ಇವರದು.

ಹೈದರಾಬಾದು ಪೋಲೀಸ ಚರ್ಯೆಯನಂತರ ಸೇನಾಧಿಪತಿಗಳಿಗೆ ಬೆಳ್ಳಿಯ ಕತ್ತಿಯನ್ನು ಕೊಟ್ಟು ಭಾರತದ ಸರಕಾರದ ಕಾರ್ಯವನ್ನು ಪ್ರಶಂಶಿಸಿದವರಿವರು.

ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಜಾತಿಜಾತಿಗಳ ಹೆಸರಮೇಲೆ ಸ್ಪರ್ಧೆಯು ನಡೆದು ರೊಕ್ಕದ ಸುರಿಮಳೆಯಾಗುತ್ತಿರಬೇಕಾದರೆ ಕಂಪ್ಲಿ ಫಿರ್ಕಾದಿಂದ ಇವರು ಅವಿರೋಧವಾಗಿ ಆರಿಸಿಬಂದದ್ದು, ಮೋತೀಲಾಲರ ಜನಪ್ರಿಯತೆಯನ್ನು ವ್ಯಕ್ತಪಡಿಸುತ್ತದೆ ಇಂಥಹ ಸೇವಾದೃಷ್ಟಿಯ ಶ್ರೀಮಂತರು ರಾಷ್ಟ್ರನಿರ್ಮಾಣದಲ್ಲಿ ಇರಬೇಕಾದುದು ಅಗತ್ಯವಿದ್ದಿತು. ಭಗವಂತನ ಇಚ್ಛೆಯೇ ಬೇರೆ. ದಿವಂಗತರ ಆತ್ಮಕ್ಕೆ ಶಾಂತಿಯು ದೊರೆಯಲಿ.

ಅಷ್ಟೇಕೆ, ಭಾರತೀಯ ನೌಕಾ ಶಿಲ್ಪದ ಮೂಲ ಪುರುಷನಾದ ಅಗಸ್ತ್ಯ ಋಷಿಯನ್ನು ಇಂದಿಗೂ ಜಾವಾ ಮತ್ತು ಜಪಾನುಗಳಲ್ಲಿ ಆರಾಧಿಸುತ್ತಿರುವರು. ಸಮುದ್ರವನ್ನು ಕುಡಿದವನೆಂದು ಇವನ ಕೀರ್ತಿ; ಕುಡಿಯುವಷ್ಟೇ ಲೀಲಾಜಾಲವಾಗಿ ಸಮುದ್ರವನ್ನು ದಾಟಬಲ್ಲ ಹಡಗುಗಳನ್ನು ಈತನು ಕಟ್ಟಿಸಿರಬಹುದೆ ?

ಸಿಂಹಲ ವಿಜಯ

ಚೋಳರ ಚಕ್ರವರ್ತಿಗಳು ನಿಕೋಬಾರ ದ್ವೀಪಗಳಲ್ಲಿ ನಿಲ್ದಾಣಗಳನ್ನು ಸ್ಥಾಪಿಸಿ ಮಲಯದ ಕರಾವಳಿಯ ಮೇಲೂ ಪ್ರಭುತ್ವ ನಡೆಸುತ್ತಿದ್ದರು. ಬಂಗಾಲದ ಶೈಲೇಂದ್ರ ಅರಸರ ಹಡಗು ಪಡೆ ಪ್ರಸಿದ್ಧವಾಗಿತ್ತು. ಸಿಂಹಳವನ್ನು ಜಯಿಸಿದ ವಿಜಯಸಿಂಹ ಶೈಲೇಂದ್ರನು ೧೫೦೦ ಜನರನ್ನು ತುಂಬಿಕೊಂಡು ಹೋಗಬಲ್ಲ ಹಡಗಿನಲ್ಲಿ ಹೋಗಿ ಸಿಂಹಲದ ದಕ್ಷಿಣ ಕಡೆಯಿಂದ ಅದನ್ನು ಮುತ್ತಿದನೆಂದು ಹೇಳಲಾಗಿದೆ.

ಕ್ರಿಸ್ತಪೂರ್ವ ೩ ನೆ ಶತಕದ ಮೌರ್ಯರ ಆಳಿಕೆಯಲ್ಲಿ ಪ್ರಬಲವಾದ ನೌಕಾ ಪಡೆ ನಮಗಿದ್ದುದಕ್ಕೆ ನಾಗರಿಗೆ ಅಶೋಕನು ಬರೆಸಿಕೊಟ್ಟಿದ್ದ ಸಮುದ್ರ ಶಾಸನ ಸಾಕ್ಷಿಯಾಗಿದೆ.

ಕಲ್ಲಿಕೋಟೆಯ ಝುಮೋರಿನರು ಕೆಂಪು ಸಮುದ್ರದವರೆಗಿನ ಸಮುದ್ರ ವಾಣಿಜ್ಯವನ್ನು ನಿಯಂತ್ರಿಸುತ್ತಿದ್ದರು. ಅಬುಲ ಫಜಲಿನ ಮೇರೆಗೆ ಪಶ್ಚಿಮ ಕರಾವಳಿಯ ಥಟ್ಟಾ (ಸಿಂಧ) ರೇವಿನಲ್ಲಿ ೪೦೦೦೦ ಹಡಗುಗಳು ಏಕಕಾಲದಲ್ಲಿ ಬಾಡಿಗೆಗೆ ಸಿದ್ಧವಾಗಿರುತ್ತಿದ್ದವು.

೧೩೨೧ ರಲ್ಲಿ ಫ್ರಯರ್ ಒಡೋರಿಕ್ಕನೆಂಬ ಪ್ರವಾಸಿ ಹಿಂದೀ ಸಾಗರದಲ್ಲಿ ತಾನು ಮಾಡಿದ ಪ್ರಯಾಣದ ವರ್ಣನೆ ಮಾಡಿದ್ದಾನೆ. ೭೦೦ ಜನರನ್ನು ಹೊತ್ತು ಈ ಹಡಗು ನಡೆಸಿದ ಪ್ರವಾಸ ಗುಜರಾಥದ ರಜಪೂತ ನಾವಿಕರ ಸಾಹಸಕ್ಕೆ ಸಾಕ್ಷಿಯಾಗಿದೆಯೆಂದು ಆತ ಪ್ರಶಂಸಿಸಿದ್ದಾನೆ

ಅಕಬರನ ಕಾಲದಲ್ಲಿ ಮೊಗಲರು ಒಂದು ನೌಕಾಶಾಖೆಯನ್ನೇರ್ಪಡಿಸಿದ್ದರು. ಹಡಗು ಕಟ್ಟುವದು, ನಾವಿಕರನ್ನು ತರಬೇತುಗೊಳಿಸುವದು ಮತ್ತು ಕರಾವಳಿಯನ್ನು ಕಾಯುವದು ಅದರ ಕರ್ತವ್ಯಗಳಾಗಿದ್ದುವು.

ಶಿವಾಜಿಯ ಕಾಲದಲ್ಲಿ

ಶಿವಾಜಿಯ ವಿಜಯಕ್ಕೆ ಅವನ ಭೂದಾಳಿಗಳಷ್ಟೇ ಸಮುದ್ರ ದಾಳಿಗಳೂ ನೆರವಾದವು. ವಿಜಯದುರ್ಗ ಕೊಲಾಬಾ, ಸಿಂಧುವರ್ಗ, ರತ್ನಾಗಿರಿ ಅಂಜದ ವಾಲಾ ರೇವುಗಳಲ್ಲಿ ಯುದ್ಧ ಹಡಗುಗಳನ್ನು ಅವನು ಕಟ್ಟಿಸುತ್ತಿದ್ದನು. ಮರಾಠಾ ಹಡಗು ಪಡೆಯ ನಾಯಕರಾದ ಕೋನಾಜಿ ಆಂಗ್ರೆ [illegible] ಕಾಲದಲ್ಲಿ ಆ ಪಡೆ ಬಹಳ ಬಲಶಾಲಿಯಾಗಿ ಕೊಚ್ಚಿಯವರೆಗೂ ತನ್ನ ಪ್ರಭಾವ ತೋರಿಸುತ್ತಿದ್ದನು. ೧೬೫೪ ರಲ್ಲಿ ತುಲಾಜಿಯ ಹಡಗು ಪಡೆಯ ಕೈಯಲ್ಲಿ ಡಚ್ಚರು ದೊಡ್ಡ ಸೋಲನ್ನು ಪಡೆದು ಮದ್ದು ಗುಂಡು ತುಂಬಿದ ಒಂದು ಮತ್ತು ಇನ್ನೆರಡು ಹಡಗುಗಳನ್ನು ಕಳೆದುಕೊಂಡರು.

ಈಚೆಗಿನ ಶತಕಗಳಲ್ಲಿ ನಾವು ದಾಸ್ಯವನ್ನನುಭವಿಸಬೇಕಾಗಿ ಬಂದುದರಿಂದ ನಮ್ಮ ಈ ಹಳೆಯ ಸಂಪ್ರದಾಯದಲ್ಲೊಂದು ಬಿರುಕುಂಟಾಗಿತ್ತು. ಆದರೂ ಬ್ರಿಟಿಶರು ಕೂಡ ಭಾರತಕ್ಕೆ ಹಡಗುಪಡೆಯ ಅವಶ್ಯಕತೆಯನ್ನು ಮನಗಂಡು ಭಾರತೀಯ ನೌಕಾಪಡೆಯನ್ನು ಸ್ಥಾಪಿಸಿದರು. ಅದು ಇತರ ಮುಂದುವರಿದ ದೇಶಗಳ ಹೋಲಿಕೆಯಲ್ಲಿ ಚಿಕ್ಕದೇ ಆದರೂ ೨೦ ಶತಕಗಳವರೆಗೆ ಹಿಂದೀ ಸಾಗರದ ಅಪ್ರತಿಮ ಒಡೆಯರಾಗಿದ್ದರು. ನಮಗೆ ಈ ಸಾಹಸದ ಹಿನ್ನೆಲೆಯಿದೆ. ನಮ್ಮ ಹಡಗುಗಳ ಬಲದಿಂದಲೇ ನಾವು ದೂರ ದೇಶಗಳಲ್ಲಿ ನಮ್ಮ ಸಂಸ್ಕೃತಿಯ ಕುರುಹುಗಳನ್ನು ನಟ್ಟಿದ್ದೇವೆ. ಆ ಪರಂಪರೆಯ ಉಜ್ಜೀವನವಾಗಿ ಭಾರತವು ತಿರುಗಿ ತನ್ನ ಹಳೆಯ ನೌಕಾವೈಭವಕ್ಕೆ ಮರಳುವಂತಾಗಬೇಕೆಂದು ನಮ್ಮ ನಾಯಕರ ಹಿರಿಯಾಸೆ.

(ಹಿಂದುಸ್ತಾನ ಟೈಮ್ಸಿನ ಆಧಾರದಿಂದ)

ಸೋಶ್ಯಾಲಿಝಮ್
ಅಥವಾ
ಸುಲಭ ಸಮಾಜವಾದ

ಸಂಪತ್ತಿನ ಕಡಲಲ್ಲಿ ಬಡತನದ ಬೇಗೆ.

ಧನವೃದ್ಧಿಯ ಲಕ್ಷಣವು ಯಾವುದು ?

ಮನುಷ್ಯನ ನಿರ್ಮಾಣಶಕ್ತಿ ಎಲ್ಲ ಕಡೆಯಿಂದ ಬೆಳೆದಿದೆ ಮತ್ತು ಬೆಳೆಯುತ್ತಲಿದೆ ಆದರೆ ವ್ಯಕ್ತ ಮಾನವಿಸೃಷ್ಟಿಯಲ್ಲಿ ನಮ್ಮ ಅನುಭವವೇನಿದೆ? ಯಾವ ವೈಭವವು ತಳತಳ ಹೊಳೆಯುತ್ತಿದ್ದುದರಿಂದ ಆಕರ್ಷಕವಾಗಿ ಕಂಡಿತ್ತೋ ಮತ್ತು ಹರ್ಷಾತಿಶಯದಿಂದ ಜನರು ಯಾವುದನ್ನು ಅಪ್ಪಿಕೊಂಡರೋ ಅದು ಉರಿಯುವ ಕೆಂಡ, ಬೆಂಕಿಯಲ್ಲಿ ಕೆಂಪಗಾದ ಕಬ್ಬಿಣ ಎನ್ನುವ ಅನುಭವವು ಮಾನವಜಾತಿಗೆ ಯಾಕೆ ಬರುತ್ತಲಿದೆ? ಮನುಷ್ಯನ ಧನೋತ್ಪಾದಕ ಶಕ್ತಿ ಅಮಿತ ಬೆಳೆಯಿತು; ಅದನ್ನು ಅವನೂ ಅಪ್ಪಿಕೊಂಡನು, ಆದರೆ ಅದೇ ಶಕ್ತಿ ಇಂದು ಅವನನ್ನು ನುಂಗಿಬಿಡಲು ಹವಣಿಸಿದಂತೆ ಕಾಣುತ್ತಿದೆ. ಎಂತಹ ವಿಮುತ್ಕಾರವಿದು? ಜೋಗಿಸಲು ಸಾಧ್ಯವಿದ್ದ ಸಂಪತ್ತಿಗೆ ಉಕ್ಕೇರಿಬಂದಿದ್ದರೂ, ಯಾರಿಗೆ ಅದು ಸಿಗಬೇಕೋ, ಅವರಿಗೆ ಅದು ದುರ್ಲಭವಾಗಿದೆ. ತಂಪಾದ ಜಲಾಶಯದ ಮಧ್ಯದಲ್ಲಿ ಕೂತು ದೇಹ ಉರಿಯುವಂತೆ ಅನ್ನವಸ್ತ್ರಗಳ ರಾಶಿಯ ಮಧ್ಯದಲ್ಲಿ ಮನುಷ್ಯನು ಇಂದು ಉಪವಾಸದಿಂದ ಬಳಲುತ್ತಾನೆ; ಬಟ್ಟೆಗಳಿಲ್ಲದೆ ಅರ್ಧನಗ್ನಸ್ಥಿತಿಯಲ್ಲಿ ಓಡಾಡುತ್ತಾನೆ. ಎಂದೂ ಬೆಳೆ ಬೆಳೆಸಿ, ಒಕ್ಕಲಿಗನು ಸಾಲದ ಭಾರದಿಂದ ಸುಗ್ಗಾಗಿ, ಹೊಟ್ಟೆತುಂಬ ತಿಂದು, ಸ್ವಲ್ಪವಾದರೂ ಉಳಿತಾಯ ಮಾಡಲಾರದೆ, ಉತ್ಪನ್ನವೆಲ್ಲವನ್ನು ಸರಕಾರಕ್ಕೆ–ಸಾವಕಾರರಿಗೆ ಕೊಟ್ಟು ಕೊಟ್ಟು ಮತ್ತೂ ಅವನ ಸಾಲ ಹಾಗೆ ಉಳಿಯುತ್ತಿದೆ. ಕಾಳು ಬೆಳೆದ ದೇಶದಿಂದ ಬರಗಾಲ ಪೀಡಿತ ದೇಶಗಳಿಗೆ ಕಾಳುಕಡ್ಡಿ ಒಯ್ಯಲು ಉಗಿಬಂಡಿಗಳಿಂದ ಸುಲಭವಾಯಿತೆಂದು ಮನುಷ್ಯನು ತನ್ನ ಕರ್ತೃತ್ವದ ಹಾಡುಹಾಡುತ್ತಾನೆ; ಆದರೆ ಉಪವಾಸದಿಂದ ಬಳಲುವವರು ಬಂಡಾಯ ಹೂಡಬಾರದೆಂದು ಅವರನ್ನು ಗುಂಡಿನೇಟಿಗೆ ತುತ್ತುಮಾಡಲು ಅವೇ ಉಗಿಬಂಡಿಗಳನ್ನು, ಸೈನಿಕರನ್ನು ಅತ್ತಿಂದಿತ್ತ ಒಯ್ಯಲಿಕ್ಕೆ ಉಪಯೋಗಿಸುವುದನ್ನು ನೋಡಿ ಮಾನವರು ಭಯಭೀತರಾಗಿದ್ದಾರೆ. ಊರವರು ಉಪವಾಸದಿಂದ ಬಳಲುತ್ತಿದ್ದರೂ, ಊರಸಾಹುಕಾರನು ತನ್ನಲ್ಲಿದ್ದ ಕಾಳುಕಡ್ಡಿಯನ್ನು ಹೊರಗೆ ಓಡಿಸಿದ್ದನ್ನು ನೋಡಿದರೂ, ಗುಂಡಿನೇಟಿನ ಭಯದಿಂದ ಬಡವರು ಸುಮ್ಮನೆ ಕೂಡುತ್ತಾರೆ. ಮನುಷ್ಯನ ಶ್ರಮ ಕಡಿಮೆಯಾಗಿದೆ. ಕಡಿಮೆ ಶ್ರಮದಿಂದ ಬೇಕಾದಷ್ಟು ಪದಾರ್ಥಗಳ ಹುಟ್ಟುವಳಿ ಸಾಧ್ಯವಾಗಿದೆ. ಆದರೆ ಜನರಿಗೇಕೆ ಉಪಭೋಗಿಸಲಿಕ್ಕೆ ಸಿಗುವದಿಲ್ಲವು? ಹಿಂದಿನ ಕಾಲದಲ್ಲಿ ಮಳೆಯಿಲ್ಲದೆ ಅಥವಾ ಮಳೆ ಅತಿಯಾಗಿ ಬರಗಾಲದಿಂದ ಸಾವಿರಾರು ಲಕ್ಷಾವಧಿ ಹುಡುಗರೂ, ಮುದುಕರೂ ಬಿಸಿಲಿನಿಂದ ಅಥವಾ ಮಹಾಪೂರಗಳಿಂದ ಸಾಯುತ್ತಿದ್ದರು. ಇದು ಸಹಜ ಮತ್ತು ಸ್ವಭಾವಿಕ ಎಂಬುದು ತಿಳಿಯುವಂತಿದೆ. ಆದರೆ ಇಂದು ಕಣ್ಣೆದುರಿಗೆ ಅನ್ನದರಾಶಿ ಇದ್ದಾಗ ಉಪವಾಸವೇಕೆ? ಕೂಳುಗೇಡಿಗಳ ಕಣ್ಣಿಗೆ ಅನ್ನ ಕಾಣುತ್ತಿದೆ. ಆದರೆ ಹೊಟ್ಟೆಯಲ್ಲಿ ಬೀಳುವದಿಲ್ಲವಲ್ಲ! ಕೆಲವೇ ಮಂದಿ ಬೇಕಾದಷ್ಟು ಉಪಭೋಗಿಸುತ್ತಾರೆ. ಆದರೆ ಅವರು ಉಪಭೋಗವಾಡಿ ಉಳಿದದ್ದಾದರೂ, ಕೂಡುಗೇಳಿ ಅರ್ಧನಗ್ನ ಜನರಿಗ ಏಕೆ ಸಿಗಬಾರದು? ಯಾವನಾದರೊಬ್ಬ ಪುಂಡನು, ಕೇವಲ ಶ್ರೀಮಂತರ ಮನೆಯಲ್ಲಿ ಹುಟ್ಟಿರುತ್ತಾನೆಂದು ಮೋಟಾರಿನಲ್ಲಿ ವಿಹರಿಸುವಾಗ ಲಕ್ಷಾವಧಿ ಜನರು ಕಾಲಲ್ಲಿ ಏನೂ ಇರದೆ ಬಂಗಾಲಲ್ಲೇ ನಡೆಯುತ್ತಾರೆ–ಇದರ ಅರ್ಥವೇನು? ಪ್ರಗತಿಯ ಲಕ್ಷಣಗಳು ಯಾವುವು? ದೊಡ್ಡ ಕಟ್ಟಡ ವಿಮಾನಗಳು

ಕಾರಖಾನೆ, ಉಗಿ ಹಡಗ, ಉದ್ಯಾನ ಮೊದಲಾದವುಗಳು ಪ್ರಗತಿಯ ಲಕ್ಷಣವೆಂದರೆ, ಪ್ರಚಂಡವಾದ ಸೆರೆಮನೆ ಗಬ್ಬಾಳೆಯ ಕಾಳುದೆ, ವಿಮಾನದಿಂದ ಸುರಿಯಲಾದ ಬಾಂಬುಗಳು, ವಿಷವಾಯು, ತೋಫು ಸಬ್‌ಮೆರಿನಗಳಿಂದ ಎಸೆಯಲಾದ ಟಾರ್ಪೆಡೊ, ಮರಣಶಿಕ್ಷೆಗೆ ಕೊಡಲಾದ ವಿದ್ಯುತ್ ಕುರ್ಚಿಗಳು ಇವೆಲ್ಲವಕ್ಕು ಪ್ರಗತಿಯ ಲಕ್ಷಣಗಳೆನ್ನಬೇಕೆ? ಮೊದಲು ಹೇಳಿದವು ಕೆಲವೇ ಸಿರಿವಂತರಿಗೆ ಸಲ್ಲಿದ್ದವು; ಎರಡನೆಯವು ಮಾತ್ರ ಅಸಂಖ್ಯ ಬಡವರಿಗೆ ಸಿಕ್ಕುತ್ತವೆ. ಈ ಬಡವರ ಸಂಖ್ಯೆ ಶ್ರೀಮಂತರ ಎಷ್ಟೋ ಪಟ್ಟು ಇದೆ. ಆದ್ದರಿಂದ ಬಡವರ ದೃಷ್ಟಿಯಿಂದ ಈ ಜಗತ್ತಿನಲ್ಲಿ ಪ್ರಗತಿನಡೆದಿದೆಯೋ, ಅಧೋಗತಿನಡೆದಿದೆಯೋ? ಏನನ್ನಬೇಕು ಇದಕ್ಕೆ?

In the Court of the Small Causes, Bellary.

S. C. No. 174 of 1949.

Between:—

M. Virupakshappa ... Plaintiff.

and

The Bharat Ready Made Manufacturing Co., Bombay } Defendant.

Take notice that the plaintiff has filed the above suit for recovery of Rs. 423-7-0 being damages for breach of contract and for costs of suit and the same is posted to 5-9-49 at 11 a. m. Tee defendant has to appear in person or through his Advocate aud file his written statement. Otherwise, the suit will be disposed off exparte.

D. L. GANGADHARA CHETTY, B. A., B. L.
Advocate for Plaintiff.

ಶೋಕ ಸಭೆ

ಕಂಪ್ಲಿಯಲ್ಲಿ:- ಮೋತೀಲಾಲರ ಮರಣವನ್ನು ಕೇಳಿದೊಡನೆಯೇ ಸರ್ವರೂ ದುಃಖ ಸಂತಪ್ತರಾಗಿ ಅಂಗಡಿಗಳನ್ನು ಮುಚ್ಚಿದರು ಹೈಸ್ಕೂಲ್ ಹೆ.ಮಾ. ವೀರನಗೌಡರಿಗೆ ಸಿಡಿಲು ಬಡಿದಂತಾಗಿ ನಿಶ್ಚೇಷ್ಟರಾದರು. ಶಾಲೆಗಳೂ ಕೂಡ ದುಃಖದಿಂದ ಮುಚ್ಚಿದವು. ಸಭೆಯಾಗಿ ದುಃಖಸೂಚಕ ನಿರ್ಣಯವಾಯಿತು.

ಬಳ್ಳಾರಿಯಲ್ಲಿ:- ೨೧ ನೆಯ ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಸಭೆಯಾಗಿ ದಿವಂಗತರಾದ ಆಂಧ್ರ ಕಾಂಗ್ರೆಸ್ ಮುಖಂಡರಾದ ಕೊಂಡಾ ವೆಂಕಟಪ್ಪಯ್ಯ ಮತ್ತು ಲೇಟ್ ಮೋತೀಲಾಲ ಸೇಟರ ಬಗ್ಗೆ ಬೆಲ್ಲದ ಭೀಮರಾವ್, ಟೇಕೂರು ಸುಬ್ರಹ್ಮಣ್ಯಂ ಮತ್ತು ರಾಜಗೋಪಾಲ ಶೆಟ್ಟರು ಮಾತಾಡಿ ದುಃಖಸೂಚಕ ನಿರ್ಣಯವನ್ನು ಎಲ್ಲರೂ ಎದ್ದು ನಿಂತು ಪಾಸುಮಾಡಿದರು.

— ಹಾಲ್ವಿ —

ಬಳ್ಳಾರಿಜಿಲ್ಲಾ ಹರಿಜನ ವೆಲ್ಫೇರ್ ಕಮಿಟಿಯ ಸಭೆಗೆ ಸದಸ್ಯರಾದ ಶ್ರೀ ಟಿ. ಬಿ. ಕೇಶವರಾಯರು ಈ ತೀರ್ಮಾನವನ್ನು ಕಳುಹಿಸಿರುತ್ತಾರೆ "ಹಾಲ್ವಿ ಲೋಯರ್ ಎಲಿಮೆಂಟರಿ ಶಾಲೆಯನ್ನು ಅತಿಶೀಘ್ರವಾಗಿ ಹೈಯರ್ ಎಲಿಮೆಂಟರಿ ಶಾಲೆಯನ್ನಾಗಿ ಮಾರ್ಪಡಿಸಬೇಕೆಂಬುವ ಶಿಫಾರಸನ್ನು ಮತ್ತೊಮ್ಮೆ ಕಲೆಕ್ಟರವರ, ಡೈರೆಕ್ಟರ್ ಆಫ್ ಹರಿಜನ ವೆಲ್ಫೇರ್‌ಗೆ ಕಳುಹಿಸಬೇಕು. ಹಾಲ್ವಿಯ ಶ್ರೀ ಈಡಿಗ ನರಸಪ್ಪನವರು ಶಾಲೆಯ ಬಡಾವಣೆಗಾಗಿ ಟೆಂಪರರಿ ಶೆಡ್ ಹಾಕಿಸಲು ಒಪ್ಪಿರುವವನ್ನು ಗಮನಿಸಬೇಕು." ಈ ತೀರ್ಮಾನವು ಒರುವತಿಂಗಳ ಸಭೆಯಲ್ಲಿ ಚರ್ಚಿತವಾಗುವದು. ಈ ಊರಿನ ಹರಿಜನರೂ ಇತರ ಬಡಕುಟುಂಬಗಳವರೂ ತಮ್ಮ ಮಕ್ಕಳನ್ನು ಉಚಿತ ವಿದ್ಯಾಭ್ಯಾಸಕ್ಕಾಗಿ ದೂರ ಕಳುಹಿಸುವಂತೆಯೇ ಇಲ್ಲ. 5 ನೆಯ ತರಗತಿ ಮುಗಿಸಿದ ಅನೇಕ ಹುಡುಗರು ಊರಲ್ಲಿ ಅಲೆದಾಡುತ್ತಿರುವರು. ಈ ಪರಿಸ್ಥಿತಿ ಕೊನೆಗಾಣಬೇಕು.

—೧೪೪ ನೆಯ ಶೆಕ್ಷನ್—

ಬಾನವಾಸಪುರ

ಹರಿಜನರು ಬೈಲಾಟ ಮಾಡುವದನವೇ ತಾವೂ ಬೈಲಾಟ ಮಾಡಿಯೇ ತೀರಬೇಕೆಂದು ಸವರ್ಣೀಯರು ಹಟ ಹಿಡಿದಕಾರಣ ಮತ್ತು ಅಲ್ಲಿ ಗಲಭೆ ಸಂಭವಿಸಿದುದರಿಂದ ಗಲಭೆ ಸಂಭವಿಸುವದೆಂದು ಪೋಲೀಸರಿಗೆ ತೋರಿಬಂದುದರಿಂದ ಹರಿಜನರ ಮೇಲೂ ಹಿಂದುಗಳಮೇಲೂ ೧೪೪ ನೆಯ ಕಲಂ ಲಾಗೂಮಾಡಿ ಒಂದು ತಿಂಗಳವರೆಗೆ ಯಾರೂ ಬೈಲಾಟವಾಡಬಾರದೆಂದು ಸಿರುಗುಪ್ಪ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ (20-8-49 ರಿಂದ 20-9-49 ರವರೆಗೆ)

— ಕಾಮಲಾಪುರ —

ಈ ಊರಿನ ಕುಡಿಯುವ ನೀರಿನ ಬಾವಿಯಲ್ಲಿ ಯಾವ ಭೇದವೂ ಇಲ್ಲದೆ ಬ್ರಾಹ್ಮಣ, ವೈಶ್ಯ, ಶೂದ್ರ, ಹರಿಜನರು ನೀರನ್ನು ಬಳಸುತ್ತಿರುವುದು ಬಳ್ಳಾರಿ ಜಿಲ್ಲೆಗೆ ಮಾದರಿಯಾಗಿದೆ. ಹೊಸಪೇಟೆಯ ಹರಿಜನಸೇವಕ ಸಂಘದ ಕಾರ್ಯದರ್ಶಿಗಳಾದ ನರಸಿಂಹದಾಸರು ಬಂದಾಗ ಎಲ್ಲಾ ಹೊಟೆಲ್‌ಗಳಲ್ಲೂ ಹರಿಜನರಿಗೆ ಪ್ರವೇಶದೊರೆಯಿತು. 1946 ರಲ್ಲಿ ಇಲ್ಲಿ ಜಿಲ್ಲಾ ಹರಿಜನರ ಕಾನ್ಫರೆನ್ಸ್ ನಡೆದಿತ್ತು.

ತಾರಾನಾಥ ವಿದ್ಯಾಪೀಠ ಬಳ್ಳಾರಿ.

ಧಾರವಾಡದ ಸಾಲಿ ರಾಮಚಂದ್ರರಾಯರು ಮತ್ತು ಡಿವಿಜನಲ್ ಇಂಜನೀಯರ್ ಶ್ರೀಕಂಠರಾವ್ ಶ್ರೇಷ್ಟಿಯವರು ಸ್ವಾತಂತ್ರ್ಯೋತ್ಸವದ ಶುಭಮುಹೂರ್ತದಲ್ಲಿ ಸಂದರ್ಶನವಿತ್ತರು. ಜಾಹೀರ ಸಭೆಯಾಗಿ ಹರಿಜನಬಾಲಕರಿಗೆ ಅನ್ನವಸ್ತ್ರ ದಾನವಾಯಿತು. ಮದ್ರಾಸ್ ಪ್ರಧಾನಮಂತ್ರಿ ಕುಮಾರಸ್ವಾಮಿರಾಜಾ ರೆವಿನ್ಯೂಮಂತ್ರಿ ಸೀತಾರಾಮರೆಡ್ಡಿ ಯವರು ತಾ ವಿದ್ಯಾಪೀಠವನ್ನು ಸಂದರ್ಶಿಸಿ ಇಲ್ಲಿ ನಡೆದ ಕೆಲಸವನ್ನೀಕ್ಷಿಸಿ ಸಮಾಧಾನ ಪಟ್ಟರು.

ಗದ್ದಿಕೋಡಿಹಳ್ಳಿ.

೧೪ ರ ರಾತ್ರಿ ದೀಪೋತ್ಸವ ಆಗಸ್ಟ್ ೧೫ ರ ಪ್ರಾತಃಕಾಲ ಧ್ವಜಾರೋಹಣ ಜಿ.ಹಿ.ಮು. ಬಸಯ್ಯನವರಿಂದ ಧ್ವಜವಂದನೆ ಯಾಯಿತು. ಮಧ್ಯಾಹ್ನ ಸುಮಾರು 350 ಜನರಿಗೆ ಅನ್ನ ಸಂತರ್ಪಣೆ ನಡೆಯಿತು. ಸಾಯಂಕಾಲ ಬಹಿರಂಗ ಸಭೆಯಲ್ಲಿ ಶ್ರೀ ಚಂದ್ರಶೇಖರಗೌಡ ಪಾಟೀಲರ ಭಾಷಣದನಂತರ ತರುಣರ ಬಳಗದವರಿಂದ ನಾಟಕವು ಜರುಗಿ ಕಾರ್ಯಕ್ರಮ ಮಂತವಾಯಿತು.

ಬಟ್ಟೆಯ ಲೈಸನ್ಸು

ಅಹಮದಾಬಾದು ಬೊಂಬಾಯಿಗಳಲ್ಲಿ ಬಟ್ಟೆಯ ಬೇಲುಗಳು ಖರ್ಚಾಗದೆ ಲಕ್ಷಗಟ್ಟಲೆ ಉಳಿದಿವೆ. ಇದರಿಂದ ಮಿಲ್ ಮಾಲೀಕರು ಮಿಲ್‌ಗಳನ್ನು ಮುಚ್ಚುವೆವೆಂದು ಸರ್ಕಾರಕ್ಕೂ ಕೂಲಿಕಾರರಿಗೂ ನೋಟೀಸು ಕೊಟ್ಟಿರುವರು. ಈ ಕಾರಣ ಕೇಳಿದವರಿಗೆಲ್ಲಾ ಲೈಸನ್ಸ್ ಕೊಟ್ಟು ಬಟ್ಟೆಯ ಸಂಗ್ರಹವನ್ನು ಖರ್ಚುಮಾಡಲು ಸರ್ಕಾರವು ನಿರ್ಣಯಿಸಿದೆ.

ಆಂಧ್ರ ಕರ್ನಾಟಕ ಪ್ರತಿನಿಧಿಗಳು ಡೆಲ್ಲಿಗೆ ಹೋಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯನ್ನು ಕಂಡು ಭಾಷಾವಾರ ಪ್ರಾಂತೀಕರಣ ಮಾಡಬೇಕೆಂದು ಬಿನ್ನವತ್ತಳೆಗಳನ್ನರ್ಪಿಸಿವೆ.

ಹೈದರಾಬಾದದಲ್ಲಿ ಜನತಾ ಸರ್ಕಾರವನ್ನು ಸ್ಥಾಪಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ರಮಾನಂದತೀರ್ಥರು ಹೇಳಿದ್ದಾರೆ ಹೈದರಾಬಾದನ್ನು ಮೂರು ಭಾಗಮಾಡಿ ಆಂಧ್ರ, ಕರ್ನಾಟಕ ಮಹಾರಾಷ್ಟ್ರಗಳಲ್ಲಿ ಕೂಡಿಸಲು ತಮ್ಮ ಅಭ್ಯಂತರ ಇಲ್ಲವಂತೆ.

ಕಲಕತ್ತೆಯಲ್ಲಿ ಮನೆಯನ್ನು ಆಹಾರ ಧಾನ್ಯಗಳ ಸಂಗ್ರಹಕ್ಕೆಂದು ಶೋಧಿಸಹೋದಾಗ ೨೦ ಬಾಂಬುಗಳ ೧೨೦೦ ರಿವಲ್ವರ್ ಬಂದೂಕಗಳು ಕಾರ್ತೂಸಗಳು ದೊರೆತವು. ಪೋಲೀಸರು ವಿಚಾರಣೆ ನಡೆಸಿದ್ದಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ. ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (**Fixed Deposits**):— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಬಿ. ವಿ. ಶೇಷಗಿರಿರಾವ್,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 4746)

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—C	One Year 5—0—0
೬ ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

29—8—49

To

Sri..

....

....

Printed at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:-
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೫ ಸೆಪ್ಟೆಂಬರ್ ೧೯೪೯ | ಸಂಚಿಕೆ ೩೧



ಅಮೃತವಾಹಿನಿ.

ಅಹಿಂಸೆಯು ಹೇಡಿಗಳ ಅಸ್ತ್ರವಲ್ಲ. ಶೂರರ ಅಸ್ತ್ರ. ಶಸ್ತ್ರಾಸ್ತ್ರಗಳ ತಿಳುವಳಿಕೆಯುಲ್ಲದ ಸಿಪಾಯಿಯಿಂದ ಯುದ್ಧದಲ್ಲಿ ಎಷ್ಟು ಹಾನಿಯಾಗುವದೋ ಅದಕ್ಕಿಂತಲೂ ಹೆಚ್ಚು ಹಾನಿ ಅಹಿಂಸೆಯ ಅರ್ಥ ಗೊತ್ತಿಲ್ಲದವನಿಂದಾಗುತ್ತದೆ.

ಉತ್ಪತ್ತಿ ಹೆಚ್ಚಿಸಬೇಕು

ಪ್ರಧಾನಮಂತ್ರಿ ನೆಹರೂರ ಸೂಚನೆ.

—(೦)—

ದಿಲ್ಲಿಯಲ್ಲಿ ಕೂಡಿದ ಪತ್ರಿಕಾಪರಿಷತ್ತಿನಲ್ಲಿ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ವಿವೇಚಿಸುತ್ತ ಮುಖ್ಯಮಂತ್ರಿ ಪಂ ಜವಾಹರಲಾಲರು ಕೆಳಗಿನ ಅಂಶವನ್ನು ಸೂಚಿಸಿದರು:—

"ಹೆಚ್ಚಿನಧಾರಣೆ; ಹೆಚ್ಚಿನ ವೇತನ" ಈ ದುಷ್ಟ ಸುಳಿಯಲ್ಲಿ ನಮ್ಮ ದೇಶವು ಸಿಕ್ಕುಬಿದ್ದಿದೆ. ಉತ್ಪಾದನೆಯು ಹೆಚ್ಚಾಟ ಹೊರತು ಪರದೇಶಗಳೊಡನೆ ನಾವು ಸ್ಪರ್ಧಿಸುವುದು ಶಕ್ಯವಿಲ್ಲ. ಧಾರಣಿಗಳನ್ನಿಳಿಸುವುದೂ ಅಸಾಧ್ಯ. ಅದರಂತೆ ವೇತನಗಳನ್ನಿಳಿಸಲು ಬರುವದಿಲ್ಲ; ಇಳಿಸಲೂ ಬಾರದು. ಇಂಥ ಪರಿಸ್ಥಿತಿಯಲ್ಲಿ ಶಾಸ್ತ್ರೀಯ ಪದ್ಧತಿಯಿಂದ ಉತ್ಪಾದನವನ್ನು ಹೆಚ್ಚಿಸುವದೊಂದೇ ಮಾರ್ಗ.

ಔದ್ಯೋಗೀಕರಣದಲ್ಲಿ ಯಂತ್ರೋಪಯೋಗವು ಹೆಚ್ಚಾದಂತೆ ನಿರುದ್ಯೋಗತನವು ಹೆಚ್ಚಾಗುವದು. ಆದರೆ ಹಾಗೆ ಮಾಡದೆ ಗತ್ಯಂತರವಿಲ್ಲ. ಈ ಪ್ರಸಂಗದಲ್ಲಿ ನಿರುದ್ಯೋಗಿಗಳಾದವರ ಯೋಗಕ್ಷೇಮವನ್ನು ಸರಕಾರವು ವಹಿಸಬೇಕು. ಸದ್ಯ ಶಾಸ್ತ್ರೀಯ ನೆರವು ನಮಗೆ ಅತಿ ಅವಶ್ಯವಾಗಿದೆ. ಮತ್ತು ಉತ್ಪಾದನವನ್ನು ಬೆಳೆಸಿ ಧಾರಣೆಯನ್ನು ಇಳಿಸಬೇಕೆಂಬ ಅಂಶವನ್ನು ಮಜದೂರರ ಮನಸ್ಸಿನಮೇಲೆ ಬಿಂಬಿಸಬೇಕಾಗಿದೆ.

ಐ.ಸಿ.ಎಸ್ ಅಧಿಕಾರಿಗಳಿಗೆ ಶಿಕ್ಷೆ.

ಭಾರತ ಸರ್ಕಾರಕ್ಕೆ ಸಂಬಂಧಿಸಿದ 40 ಲಕ್ಷ ರೂ. ದುರುಪಯೋಗ ಪಡಿಸಿದರಿಂದು ಐ.ಸಿ.ಯಸ್. ಅಧಿಕಾರಿಗಳಾದ ಎಸ್.ಕೆ. ಘೋಷರಿಗೆ 6 ವರ್ಷ ಕಠಿನ ಶಿಕ್ಷೆ. 45 ಲಕ್ಷ ರೂ. ದಂಡವಿಧಿಸಲಾಯಿತು.

ಸೋಶ್ಯಾಲಿಝಮ್

ಅಥವಾ

ಸುಭಿಕ್ಷ ಸಮಾಜವಾದ

ಸಮಾಜದೇಹದ ವಿಚ್ಛೇದನ:-

ಜಗತ್ತಿನಲ್ಲಿ ಮೊದಲಿದ್ದ ಸಂಪತ್ತು ೧೦೦ ಇತ್ತೆಂದು ಕಲ್ಪಿಸಿದರೆ ಇಂದಿನದು ೧೦೦೦ ಅನ್ನಲು ಯಾವ ಅತಿಶಯೋಕ್ತಿ ಇಲ್ಲ. ಯಾವನ ಹತ್ತಿರ ಮೊದಲು ೫ ರಷ್ಟಿತ್ತೋ ಅವನಹತ್ತಿರ ಇಂದು ೧೦ ಅದೆ ಮತ್ತು ಯಾವನ ಹತ್ತಿರ ೯೫ ಇತ್ತೋ ಅವನ ಹತ್ತಿರ ೯೯೦ ಅದೆ. ಇವರಲ್ಲಿ ಇಬ್ಬರ ಸಂಪತ್ತು ಹೆಚ್ಚಾಗಿದ್ದರೂ ಅವರಲ್ಲಿ ಕಾಣುವ ವಿಷಮತೆ ಬಹಳ ಒಡೆದು ಕಾಣುವಂತಿದೆ. ಕೆಲವೊಂದು ಮೇರೆಯಾಚೆಗೆ ಸುಖ — ದುಃಖಗಳೆರಡೂ ಸಾಪೇಕ್ಷವೇ ಇರುತ್ತವೆ. ಎಲ್ಲರ ಪಾಡೂ ಅಷ್ಟೇಇದೆ ಎಂಬ ಮಾತಿನಲ್ಲಿ ಕಾಣುವ ಸುಖ ಇಂದು ಬಹಳ ಕಡಿಮೆಯಾಗಿ, ವೈಷಮ್ಯದ ದುಃಖದ ಧಾರೆಯು, ವಿಷಯುಕ್ತವಾದ ಶಸ್ತ್ರದ ಧಾರೆಯಂತೆ ತೀಕ್ಷ್ಣವೂ ಆಗಿದೆ. ಮತ್ತು ಇಂದು ಸಂಪತ್ತಿನಲ್ಲಾದ ಬೆಳವಣಿಗೆ, ವಿಷಮ ಪ್ರಮಾಣದಲ್ಲಿಯಾದರೂ ಎಲ್ಲರ ಪಾಲಿಗೆ ಇಲ್ಲಿ ಬಂದಿಗೆ? ಹೊಸ ಕಾರಖಾನೆಗಳ ಮೂಲಕ ಯಾರ ಹಳೆ ಉದ್ಯೋಗ ಮುಳುಗಿಹೋದವೋ ಅವರಿಗೆ ಹೊಸ ಹೋರೆ ಸಿಗಲಿಲ್ಲ ಅವರು ನಿರುದ್ಯೋಗದ ಬೇನೆಯಲ್ಲಿ ಸಿಕ್ಕು ಸುಟ್ಟು ಬೂದಿಯಾಗಿದ್ದಾರೆ. ನೌಕರಿ ಸಿಕ್ಕುವರಿಗೆ ಮತ್ತು ಉದ್ಯೋಗವಿದ್ದವರಿಗೆ, ಪಾಶೀ ಶಿಕ್ಷೆಗುರಿಯಾದವನ ಜೀವಿತದ ವಿಷಯ ಇದ್ದ ಅನಿಶ್ಚಿತತೆ ಮತ್ತು ನಿರಾಶೆಯಂತೆ, ಅವರಿಗೂ ತಮ್ಮ ನೌಕರಿ ಮತ್ತು ಉದ್ಯೋಗದ ವಿಷಯ ಅನಿಸುತ್ತದೆ. ಹಾಗಾದರೆ ಇದುವೇ ಈ ಆಧಿಭೌತಿಕ ಪ್ರಗತಿ? ಬಿರುಗಾಳಿಯಿಂದ ರೊಚ್ಚಿಗೆದ್ದ ಸಾಗರವು ನೋಡಲಿಕ್ಕೆ ಮನೋಹರವಾದುದು. ಯಾವ ಕವಿಗಾದರೂ ಅದು ಸ್ಫೂರ್ತಿ ಕೊಡಬಹುದು. ಆದರೆ ಯಾವ ನಾವಿಕನ ನೌಕೆ ಉರುಳಿದ್ದು, ಅವನ ಕಣ್ಣು ಕಿವಿ ಮೂಗುಗಳಲ್ಲಿ ಆ ರೊಚ್ಚಿಗೆದ್ದ ಉಪ್ಪು ಉಪ್ಪಾದ ಕಾವ್ಯರಸ ಸೇರಿದೆಯೋ ಅವನಿಗೆ ಸಮುದ್ರ ದರ್ಶನದಿಂದ ಆನಂದವೇ? ಒಂದೆಡೆ ಲಕ್ಷ್ಮೀಪೂಜನದಲ್ಲಿ ಧಾರೆಯೆರೆದ ಹಾಲಿನ ಪ್ರವಾಹ ಹರಿಯುತ್ತಿದೆ ಮತ್ತು ಇನ್ನೊಂದು ಕಡೆ ಕರುಣ ತಾಯಿಯ ಹೊಟ್ಟೆಯಲ್ಲಿ ಅನ್ನವಿಲ್ಲೆಂದು, ಮೊಲೆಯಲ್ಲಿ ಹಾಲಿಲ್ಲವೆಂದು ಆ ಕರುಣೆಯ ಮಗು ಹಾಲಿನ ಆಸೆಯಿಂದ ಆಶುಷ್ಕ ಸ್ತನ ಎಳೆಯುತ್ತಿದೆ— ತಾಯಿಯ ಪ್ರಾಣವನ್ನೆ ಎಳೆಯುತ್ತಿದೆ. ಹೀಗೇಕೆ? ಮನುಷ್ಯನ ಧನೋತ್ಪಾದನದ ಶಕ್ತಿ ಬೆಳದಾಗ, ಈಶಕ್ತಿ ಎಲ್ಲರಿಗೂ ಸಿಕ್ಕುವದು; ಎಲ್ಲರೂ ಆಕಾಶದಲ್ಲಿ ವಿಹರಿಸುವರು ಮತ್ತು ಬಿಡುವಿನ ಕಾಲದಲ್ಲಿ ನಂದನ ವನದಲ್ಲಿ ಹೋಗಿ ಬರುವಷ್ಟು ಸ್ವರ್ಗ ಸವಿಯಾಪಿಸುವದೆಂದು ಅನಿಸಿತ್ತೇ; ಆದರೆ ಆದ ಚಮತ್ಕಾರ ಬೇರೆಯೇ! ಮಾನವನ ಬೆಳೆದ ಸಾಂಪತ್ತಿಕ ಶಕ್ತಿಯು ಸಮಾಜವನ್ನು ಎತ್ತಿ ಹಿಡಿಯದೆ, ಅಖಿಲ ಮಾನವ ಜಾತಿಯ ಮಧ್ಯೆ ಒಂದು ಕೀಲವಾಗಿ ಪರಿಣಮಿಸಿದೆ. ಸಂಪತ್ತು ಹುಟ್ಟಿಸುವ ಸಾಮರ್ಥ್ಯ ಬೆಳದಂತೆ ಈ ಕೀಲು ಹೆಚ್ಚೆಚ್ಚು ಒಳಗೆ ಹೋಗುತ್ತದೆ ಮತ್ತು ಒಂದು ಕಡೆ ಚೂಪಾಗಿರುವದರಿಂದ, ಅದರ ಮೇಲ್ಭಾಗವು ಸಣ್ಣದಾಗಿ ಹೆಚ್ಚು ಸುದೃಢವಾಗಿದೆ ಮತ್ತು ಕೆಳಭಾಗವು ದೊಡ್ಡದಾಗುತ್ತ ತೀರ ಕೀಳುಪರಿಸ್ಥಿತಿಯಲ್ಲಿ ತೊಳಲಾಡುತ್ತಿದೆ. ಸಮಾಜದ ಎರಡೂ ಭಾಗದಲ್ಲಿಯ ಅಂತರ ಬೆಳೆಯುತ್ತಲಿದೆ. ಇಷ್ಟೇ ಅಲ್ಲದೆ ಈ ಕೀಲು ಜೀವಂತ ಸಮಾಜದ ದೇಹದಲ್ಲಿ ಸೇರಿದೆಯೊರತು ನಿರ್ಜೀವ ಮುಂದಿಗೆಯಲ್ಲಿ ಅಲ್ಲ ಎಂಬಮಾತಿನ ಅರಿವು ಜಜ್ಞಾರಿಗೆ ಇದೆ. ಸಮಾಜದ ಒಂದು ಭಾಗದಲ್ಲಿ ಉತ್ಪನ್ನವಾಗುವ ಜೀವನರಸವು ಇನ್ನೊಂದು ಭಾಗಕ್ಕೆ ಮುಟ್ಟಿ ಅದರ ಬೆಳವಣಿಗೆ ಮತ್ತು ಜೀವಂತ ಉಳಿಯುವ ಕೆಲಸವು ಈ ಕೀಲದಿಂದ ನಿಂತು, ಇಬ್ಭಾಗವಾದ ಸಮಾಜದ ಎರಡೂ ಭಾಗಗಳು ಕೆಲವು ಕಾಲಾವಧಿಯ ಮೇಲೆ ನಾಶವಾಗುವ ಚಿನ್ಹೆಗಳು ಜಾರಿಗೆ ಕಾಣಹತ್ತಿವೆ. "ಬೆಳೆಯುವಧನೋತ್ಪಾದನಶಕ್ತಿ" ಒಂದು ಬಂಗಾರದ ಚೂರಿಯಾಗಿ, ವೈಭವ ಬೆಳೆಸುವ ಬದಲಿಗೆ ಎದೆಯಲ್ಲಿ ಇರಿದು ಸಮಾಜದ ಪ್ರಾಣಹರಣ ಮಾಡುವದೋ ಏನೋ ಎಂಬ ಸಂಶಯ ಎಲ್ಲರಿಗೆ ಬರಹತ್ತಿದೆ. ಆದರೆ ಹೀಗೆ ಏಕೆ ಆಗಹತ್ತಿದೆ? ಹೀಗಾಗಬೇಕೆಂಬುದು ಯಾರ ಇಚ್ಛೆಯೂ ಇಲ್ಲ; ಆದರೂ ಈ ಅನರ್ಥ ಏಕೆ ಬರಲಿದೆ?

ಗತಕಾಲ, ಹೊಸಕಾಲ.

ಗತಕಾಲಕ್ಕಿಂತ ಇಂದು ಹಣ ಉತ್ಪಾದನದ ಮತ್ತು ವಾಹನ ಸೌಕರ್ಯದ ಸಾಧನೆಗಳು ಬೆಳೆದಿದ್ದಂತೂ ನಿಜ; ಆದರೆ ಇದರಿಂದಲೇ ಸ್ವಲ್ಪ ಜನರು ಹೆಚ್ಚೆಚ್ಚು ಸಿರಿವಂತರಾಗುವದು ಮತ್ತು ಬಹುಸಂಖ್ಯೆ ಬಡವರ ಬಡತನ ಹೆಚ್ಚೆಚ್ಚಾಗುವದನ್ನು ನಾವು ಅನುಭವಿಸುತ್ತಿದ್ದೇವೆ. ಇಂದಿನ ಯಂತ್ರಯುಗವನ್ನು ಯಂತ್ರ ಯುಗ ಬರುವ ಮೊದಲಿನ ಕಾಲದೊಡನೆ ಹೋಲಿಸಿ ನೋಡಿದರೆ ಈ ಮಾತು ಸಹಜವಾಗಿ ಹೊಳೆಯುವಂತಿದೆ.

ಹಚ್ಚೊಳ್ಳಿಗೆ ಬಸ್ ಸರ್ವೀಸ್

— ಬೇಕು —

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕು ಹಚ್ಚೊಳ್ಳಿ ಫಿರ್ಕಾದ ಹಳ್ಳಿಗಳು ಸಮುದ್ರ ಮಧ್ಯೆ ದ್ವೀಪಗಳಂತಿವೆ. ಬಳ್ಳಾರಿಯಿಂದ ಸಿರುಗುಪ್ಪೆಗೆ ಬರುವದು ಕಠಿಣವಾಗುವದಿಲ್ಲವಾದರೂ ಈ ಹಳ್ಳಿಗಳನ್ನು ಸೇರುವದು ಬಹಳ ಕಠಿಣ. ನಾಗರಿಕತೆಯ ಇಂಥಾ ಮುಂದುವರಿದ ಕಾಲದಲ್ಲಿ ನಮಗೆ ಬಸ್‌ನ ಅನುಕೂಲವಿಲ್ಲದಿರುವದು ಅನ್ಯಾಯವಾಗಿದೆ. ಕೊನೆಯ ಪಕ್ಷ ಸಿರುಗುಪ್ಪೆಯಿಂದ ಹಚ್ಚೊಳ್ಳಿಗೆ 10 ಮೈಲಿಗಳಾದರೂ ಬಸ್ ಸರ್ವಿಸ್ ಬೇಕು. ಮಳೆಗಾಲದಲ್ಲಿ ಕುಡುದರಹಾಳಿಗೆ ಬಂದು ಬಿಸಿಲುಕಾಲದಲ್ಲಿ ಹಚ್ಚೊಳ್ಳಿವರೆಗೆ ಹೋಗಬಹುದು. ಫ್ಯಾಮಿನ್ ರೋಡ್ ಇದೆ. ಇದನ್ನು ಹೈವೇಸ್‌ನವರು ತೆಗೆದುಕೊಂಡು ಸಾಕಷ್ಟು ರಿಪೇರಿ ಮಾಡಿಸಬೇಕು. ಬಳ್ಳಾರಿ ಜಿಲ್ಲಾ ರೋಡ್ ಟ್ರಾಫಿಕ್ ಬೋರ್ಡಿನ ಸದಸ್ಯರೂ, ಕಡಪಾದ ಅಧಿಕಾರಿಗಳೂ ಇತ್ತಕಡೆಗೆ ಗಮನ ಕೊಟ್ಟು ಈ ಭಾಗಕ್ಕೆ ಸರ್ವಿಸ್ ಏರ್ಪಡಿಸಬೇಕೆಂದು ಕೋರಿಕೆ

ಹಚ್ಚೊಳ್ಳಿ ಡಾ|| ಟಿ ಆರ್ ಶಾಸ್ತ್ರಿ
1-9-49.

ನಮ್ಮಲ್ಲಿಯ

ಕಡ್ಡಿಪೆಟ್ಟಿಗೆಯ ವ್ಯವಸಾಯ

೧೯೩೧ ನೇ ಇಸ್ವಿಯ ವರೆಗೆ ಸ್ವೀಡನ್ ಮತ್ತು ಜಪಾನಗಳ ಮೇಲೆ ಹಿಂದೂಸ್ಥಾನವು ಕಡ್ಡಿಪೆಟ್ಟಿಗೆಗಾಗಿ ಅವಲಂಬಿಸಿತ್ತು. ಆದರೆ ಇಂದು, ಈ ದೇಶವು ತನ್ನ ಅವಶ್ಯಕತೆಯನ್ನು ಪರಿಪೂರಿಸಿಕೊಂಡು ಕೆಲವು ಕಡ್ಡಿಪೆಟ್ಟಿಗೆಗಳನ್ನು ಎಡಬಲದ ದೇಶಗಳಿಗೆ ಕಳಿಸಲು ಸಮರ್ಥವಾಗಿದೆ

ಅಂಡಮಾನ ನಡುಗಡ್ಡೆ

ಅಂಡಮಾನ ನಡುಗಡ್ಡೆಯು ಹಿಂದುಸ್ಥಾನದ ನೈಸರ್ಗಿಕ ಸಂಪತ್ತಿನ ಒಂದು ಮುಖ್ಯವಾಗಿದೆ. ಅದು ದಟ್ಟವಾದ ಅಡವಿಯಿಂದ ತುಂಬಿದೆ. ಅಲ್ಲಿ ನಾನಾ ತರಹದ ಅಮೌಲ್ಯ ಕಟ್ಟಿಗೆ ಬಿದಿರುಗಳು ಸಿಗುತ್ತಿವೆ. ಅದರ ಸುತ್ತಲಿರುವ ಸಮುದ್ರದ ಮೂಲಕ ಮೀನು ಮತ್ತು ಉಪ್ಪಿನ ವ್ಯವಸಾಯವನ್ನು ಬೇಕಾದಷ್ಟು ದೊಡ್ಡ ಪ್ರಮಾಣದಲ್ಲಿ ನಡೆಸಬಹುದಾಗಿದೆ

ಈ ನಡುಗಡ್ಡೆಯಲ್ಲಿ ದೇವದಾರದ ಕಟ್ಟಿಗೆಯು ವಿಪುಲವಾಗಿ ಸಿಗುತ್ತದೆ. ಅದರ ಉಪಯೋಗವನ್ನು ನಮ್ಮಲ್ಲಿಯ ಕಡ್ಡಿಪೆಟ್ಟಿಗೆಯ ಉದ್ಯೋಗವು ಕಳೆದ ಯುದ್ಧದ ಮೊದಲು ಬಹಳವಾಗಿ ಮಾಡಿಕೊಂಡಿತು, ಆ ಯುದ್ಧದಲ್ಲಿ ಈ ನಡುಗಡ್ಡೆಯು ಜಪಾನೀಯರ ಕೈಗೆ ಹೋದದ್ದರಿಂದ ಅದರ ಪ್ರಯೋಜನವು ತಪ್ಪಿ ನಮ್ಮ ಈ ಉದ್ಯೋಗವು ಕೊರತೆಪಟ್ಟಿತು

ಆ ಕಾಲಕ್ಕೆ ಸಂಯುಕ್ತಪ್ರಾಂತ, ಮಲಬಾರ, ಆಸಾಮ, ಬರ್ಮಾ ಮಧ್ಯಪ್ರಾಂತ ಮತ್ತು ಗುಜರಾತ ಪ್ರಾಂತಗಳಲ್ಲಿಯ ಅಡವಿಗಳಲ್ಲಿಯ ಕಟ್ಟಿಗೆಯ ಮೇಲೆ ಈ ಉದ್ಯೋಗವು ಅವಲಂಬಿಸಿಕೊಂಡು ನಾಗಿತು.

ದೇಶದ ವಿಭಾಗಣೆ.

ನಮ್ಮ ದೇಶವು ಪಾಕಿಸ್ಥಾನದಲ್ಲಿ ಕೆಲವು ಪಟ್ಟಿಗೆ ಕಡಿದುಹೋದುದರಿಂದ ಮೊದಲು ಇದ್ದ ಕಡ್ಡಿಪೆಟ್ಟಿಗೆಯ ಕಾರಖಾನೆಗಳಲ್ಲಿ ಕೆಲವು ಆ ಭಾಗದಲ್ಲಿ ಸೇರಿಕೊಂಡವು ಒಂದು ದೊಡ್ಡ ಕಾರಖಾನೆಯೂ ೬ ಸಣ್ಣ ಕಾರಖಾನೆಗಳೂ ಆ ಭಾಗಕ್ಕೆ ಹೋದವು. ಮತ್ತು ಅದರಿಂದ ಹಿಂದುಸ್ಥಾನದಲ್ಲಿ ಹುಟ್ಟುವ ಒಟ್ಟು ಕಡ್ಡಿಪೆಟ್ಟಿಗೆಯ ಉತ್ಪನ್ನದ ನೂರರಲ್ಲಿಯ ೧೦-೧೨ ರಷ್ಟು ಭಾಗವು ಪಾಕಿಸ್ಥಾನದಲ್ಲಿ ಸೇರಿತು.

ನಿಜವಾಗಿ ನೋಡಿದರೆ ಈ ಉದ್ಯೋಗದ ದೃಷ್ಟಿಯಿಂದ ಈ ಮಾತು ಹಾನಿಕರವೇನೂ ಅಲ್ಲ ಏಕೆಂದರೆ ಮೊದಲಿದ್ದ ಉದ್ಯೋಗದ ಪ್ರಮಾಣವು ಇಡೀ ಹಿಂದುಸ್ಥಾನಕ್ಕಾಗಿ ಇತ್ತು. ಕೆಲವು ಭಾಗವೇ ಆಮೇಲೆ ಪಾಕಿಸ್ತಾನಕ್ಕೆ ಹೋದುದರಿಂದ, ಆ ಭಾಗದ ಕಡ್ಡಿಪೆಟ್ಟಿಗೆಯ ಅವಶ್ಯಕತೆಯ ಹೊಣೆಯು ಅಷ್ಟರಮಟ್ಟಿಗೆ ಹಿಂದುಸ್ತಾನಕ್ಕೆ ತಪ್ಪಿತೆಂದೇ ಹೇಳಬೇಕು ಆ ದೃಷ್ಟಿಯಿಂದ, ಆ ಭಾಗಕ್ಕೆ ಹೋದ ಕಾರಖಾನೆಗಳು ಹೆಚ್ಚೇನೂ ಹೋಗಿರುವುದಿಲ್ಲ.

ಅಂಡಮಾನದ ಕಟ್ಟಿಗೆಯ ಪೂರೈಕೆಯು ಪುನಃ ನಮಗೆ ದೊರೆತಾಗಿನಿಂದ ಈ ಉದ್ಯೋಗವು ಭರದಿಂದ ಬೆಳೆಯುತ್ತಿದೆ ಹಿಂದಿನಕಿಂತ ಇಂದು ಹಿಂದುಸ್ಥಾನವು ಹೆಚ್ಚು ಕಡ್ಡಿಪೆಟ್ಟಿಗೆಗಳನ್ನು ಪರದೇಶಗಳಿಗೆ ಕಳಿಸಲು ಸಮರ್ಥವಾಗಿದೆ. ಆದರೆ ಪರದೇಶದ ಕಡ್ಡಿಪೆಟ್ಟಿಗೆಗಳನ್ನು ಯೋಗ್ಯತೆಯಲ್ಲಿ ಹಿಂದೆ ಹಾಕುವಷ್ಟು ಸಿದ್ಧತೆಯು ನಮ್ಮ ಕಡ್ಡಿಪೆಟ್ಟಿಗೆಗಳಲ್ಲಿ ಇನ್ನೂ ಬಂದಿಲ್ಲ. ಹಾಗೆ ಆಗುವವರೆಗೆ ಹೊರಗಿನ ಪೆಟ್ಟಿಗೆಗಳನ್ನು ಅವು ವ್ಯಾಪಿಸುವುದಕ್ಕೆ ಸ್ವಲ್ಪ ತೊಂದರೆಯಿದೆ. ಬರಬರುತ್ತ ಅನುಭವದ ಮೇಲಿಂದ ಜಗತ್ತಿನಲ್ಲಿಯ ಇತರ ಕಡ್ಡಿಪೆಟ್ಟಿಗೆಗಳ ಸರಿಗಟ್ಟುವ, ಅಷ್ಟೇ ಏಕೆ? ಅವುಗಳನ್ನು ಹಿಂದೆ ಹಾಕುವ ಪ್ರಯತ್ನವನ್ನು ಹಿಂದುಸ್ಥಾನವು ಮಾಡಿ ಅದರಲ್ಲಿ ಯಶಸ್ವಿಯಾಗಲು ಏನೂ ಅಭ್ಯಂತರವಿಲ್ಲ.

ಅಂಕಿ ಸಂಖ್ಯೆಗಳು

ಕಡ್ಡಿಪೆಟ್ಟಿಗೆಯ ಉದ್ಯೋಗವು ಹಿಂದುಸ್ತಾನದಲ್ಲಿ ಪ್ರಾರಂಭವಾದುದು ಈಗ ಐವತ್ತು ವರ್ಷಗಳ ಮೊದಲು, ಇದಕ್ಕೆ ಬೇಕಾಗುವ ಮೂಲ ವಸ್ತುಗಳಲ್ಲಿ ಕಟ್ಟಿಗೆಯೇ ಮುಖ್ಯವಾದದ್ದು. ಅದಕ್ಕೆ ಬೇಕಾದ ದೇವದಾರದಂಥಹ ಹಗುರು ಕಟ್ಟಿಗೆಯನ್ನು ದೊರಕಿಸುವುದು ದೊಡ್ಡ

We want quick Conveyance.

To, The Editor Nava Bharat Bellary.

Will you be good enough to draw the attention of the members of the Road Traffic Board and as also the Regional Officer at Cuddapah about our grievance that we are denied the facility of quick conveyance? Hacholli Firca and about 40 villages round about are not linked to Siruguppa by any Bus Service and it is so difficult for us to reach the Taluk Head Quarter. There is a famine road to Hacholli from Siruguppa and we request that any one wishing to run a service may be licensed and help thus rendered. In these days of advanced civilisation it is not too much to hope for this meagre facility. We hope and trust that the authorities will help us.

1st Sep' 49. Dr. T. R. SASTRY,
For Hacholli Public.

ಸ್ವತಂತ್ರ ಭಾರತದ

ಅಂತರಾಷ್ಟ್ರೀಯ ರಾಜಕಾರಣ

ಭಾರತವು ಮೊದಲಿನಿಂದಲೂ ಆಧ್ಯಾತ್ಮವಾದಿಗಳ ಬೀಡು, ಸ್ನೇಹ ಮತ್ತು ಸಹಕಾರಗಳಿಂದಲೇ ಶಾಂತಿಯನ್ನು ಸಾಧಿಸುವ, ಮತ್ತು ಶಾಂತಿಯುತ ಬಾಳನ್ನು ಬಾಳುವ ಜನರ ನಾಡು. ಎಂತಹ ಪರಿಸ್ಥಿತಿಯೇ ಇರಲಿ, ಅವರು ತಮ್ಮ ಶಾಂತಿಯುತ ಬಾಳಿಗೆ ಭಂಗವನ್ನು ತರಬಯಸುವದಿಲ್ಲ. ದಾಸ್ಯದಂತಹ ಕಠಿಣ ಅವಸ್ಥೆಯಲ್ಲಿಯೇ ಶಾಂತಿಯಿಂದ ಬಾಳಿದರು. ದಾಸ್ಯವಿಮೋಚನೆಯ ಹೋರಾಟದಲ್ಲಿಯೂ ಶಾಂತಿಯಿಂದಲೇ ಬೇಕಾದಂತಹ ಬಲಿದಾನವನ್ನು ಮಾಡುವ ಪ್ರಸಂಗವು ಬಂದರೂ ಹೋರಾಡಿ ಕೊನೆಗೆ ಗೆಲುವನ್ನು ಪಡೆದರು. ಅಶಾಂತಿಯುತವಾದುದಾದರೆ ಸ್ವರ್ಗದ ಸಿಂಹಾಸನವಿದ್ದರೂ ಅದು ಅವರಿಗೆ ಬೇಡ. ಶಾಂತಿಗಾಗಿ ಬೇಕಾದಂತಹ ತ್ಯಾಗಗಳನ್ನೂ ಮಾಡಲು ಅವರು ಹಿಂದುಮುಂದು ನೋಡುವವರಲ್ಲ. ಪೀಳಿಗೆ ಪೀಳಿಗೆಗಳಿಂದಲೂ ಭಾರತೀಯರಲ್ಲಿ ಇದೇ ಗುಣವು ಮೂಡಿಬರುತ್ತ ಅದೊಂದು ರಕ್ತಗತವಾದ ಗುಣವಾಗಿ ಹೋಗಿರುತ್ತದೆ.

೧೯೨೦ ರಿಂದ ಮಹಾತ್ಮಾ ಗಾಂಧಿಯವರ ಕೈಯಲ್ಲಿ ಕಾಂಗ್ರೆಸ್ಸಿನ ನಾಯಕ ಸೂತ್ರವು ಹೋದಾಗಿನಿಂದಂತೂ ರಾಜಕಾರಣದಲ್ಲಿಯೂ ಎಲ್ಲಿ ಸುಳ್ಳು, ಕಪಟ, ಮರೆ, ಪಾತಾಳತಂತ್ರತ್ವ ಮೊದಲಾದವುಗಳಿಗೆ ಪ್ರಾಶಸ್ತ್ಯವಿರುವದೋ ಅಂತಹ ರಾಜಕಾರಣದಲ್ಲಿಯೂ ಕೂಡ, ಸತ್ಯ ಪ್ರೀತಿ ಅಹಿಂಸೆಗಳಿಗೇ ಪ್ರಾಧಾನ್ಯತೆ ಬಂದಿತು. ರಾಜಕಾರಣದಲ್ಲಿಯೂ ನಿಷ್ಠುರ ಸತ್ಯವನ್ನೇ ಬಳಸಲಾಗುತ್ತಿತ್ತು. ವೈರಿಗಳನ್ನೂ ಪ್ರೀತಿಸಲು ಕಲಿಸಲಾಗುತ್ತಿತ್ತು. ಎಂತಹ ನಿಕರದ ಪ್ರಸಂಗಗಳಲ್ಲಿಯೂ ಏನೇ ಬಲಿದಾನ ಮಾಡಬೇಕಾಗಿ ಬಂದರೂ ಅಹಿಂಸೆಯನ್ನೇ ಪಾಲಿಸುವುದು. ಮೊದಲಾದ ಶಾಂತಿಸಾಧನ ಮಾರ್ಗಗಳನ್ನು ರಾಜಕಾರಣದಲ್ಲಿ ಧಾರಾಳವಾಗಿ ಉಪಯೋಗಿಸಲು ಪ್ರಾರಂಭವಾಗಿತ್ತು. ಈಗ ಭಾರತವು ಸ್ವತಂತ್ರತೆಯನ್ನು ಪಡೆದು ಮಹಾತ್ಮಾ ಗಾಂಧಿಯವರ ಅನುಯಾಯಿಗಳೇ ರಾಜಕಾರಣದ ಸೂತ್ರವನ್ನು ಧರಿಸಿರುವುದರಿಂದ ಇವೇ ಗುಣಗಳೇ ಇಂದಿನ ಹೊಣೆಗಾರಿಕೆಯ ರಾಜಕಾರಣದಲ್ಲಿಯೂ ಕಾಣಿಸಿಕೊಳ್ಳುವುದನ್ನು ನಾವು ನೋಡಬಹುದಾಗಿರುತ್ತದೆ.

ಮೊನ್ನೆ ಮೊನ್ನೆ ವಸಹಾತು ರಾಷ್ಟ್ರಕೂಟದ ಸಭೆ ಸೇರಿದಾಗ ಅಲ್ಲಿಗೆ ಹೋಗಿದ್ದ ಸ್ವತಂತ್ರ ಭಾರತದ ಪ್ರಧಾನಾಮಾತ್ಯರಾದ ಪಂಡಿತ ಜವಹರಲಾಲ ನೆಹರೂ ಅವರು, ಭಾರತದ ನಿಸ್ವಾರ್ಥತೆಯ ರಾಜಕಾರಣದ ಪ್ರಭಾವವನ್ನು ಪರಕೀಯ ರಾಷ್ಟ್ರಗಳ ಧುರೀಣರ ಮೇಲೆ ಬಹಳ ಪ್ರಭಾವಶಾಲಿಯಾಗುವಂತೆ ಎರಡು ಮೂರು ಸಾರ್ವಜನಿಕ ಭಾಷಣಗಳಲ್ಲಿಯೂ ಸಂಯುಕ್ತ ರಾಷ್ಟ್ರಸಂಘದ ಫ್ರಾನ್ಸದಲ್ಲಿಯ ಅಧಿವೇಶನದಲ್ಲಿಯೂ ಸಾರಿದ್ದಾರೆ. ಬ್ರಿಟಿಷ ಮತ್ತು ಅಮೇರಿಕನ್ ರಾಜಕಾರಣ ಪ್ರಮುಖರು ಮತ್ತು ರಶಿಯಾದ ಧುರೀಣರು ಜಗತ್ತೆಂದರೆ ಬರೀ ಯುರೋಪ ಅಮೇರಿಕೆಗಳಷ್ಟೇ ಎಂಬ ಸಂಕುಚಿತ ಧೋರಣವನ್ನು ತೊರೆದು ವಿಶಾಲ ದೃಷ್ಟಿಯುಳ್ಳವರಾಗಿ, ಆಫ್ರಿಕಾ, ಏಶಿಯಾ ಖಂಡಗಳ ಕಡೆಗೂ ತಮ್ಮ ದೃಷ್ಟಿಯನ್ನು ಹೊರಳಿಸಿ, "ಸರ್ವೇಜನಾ ಸುಖಿನೋಭವಂತು" ಎಂಬ ಜಾಗತಿಕ ದೃಷ್ಟಿಯಿಂದ ಕಾರ್ಯಪ್ರವೃತ್ತವಾದರೆ ಜಗತ್ತಿಗೇ ಯುದ್ಧಭಯವು ತಪ್ಪುವದು. ಮತ್ತು ಜಗತ್ತು ಪ್ರಗತಿಪಥದಲ್ಲಿ ಶಾಂತಿಯಿಂದ ಮುನ್ನಡೆಯಲು ಅನುಕೂಲವಾಗುವುದು ಎಂಬಾಶಯದ ಮಾತುಗಳನ್ನು ಧೀರಗಂಭೀರತೆಯಿಂದೊಡಗೂಡಿ ಮನದಟ್ಟಾಗುವಂತೆ ನಾನಾಸಾರಿ ಹೇಳಿದ್ದಾರೆ.

ಇನ್ನೊಂದು ಕಡೆಗೆ ಪಂಡಿತ ನೆಹರೂ ಅವರೇ, ಭಾರತದ ಅಂತರ್ರಾಷ್ಟ್ರೀಯ ಧೋರಣವನ್ನು ಸ್ಪಷ್ಟಪಡಿಸುತ್ತ ಭಾರತಕ್ಕೆ ಪರಕೀಯರ ಒಂದು ಅಂಗುಲ ನೆಲವನ್ನಾದರೂ ಆದು ಪರಕೀಯರ ಆಕ್ರಮಣಕ್ಕೆ ಗುರಿಮಾಡಲು ಸಿದ್ಧವಿಲ್ಲ ಎಂಬಾಶಯದ ಮಾತುಗಳನ್ನೂ ಹೇಳಿದ್ದಾರೆ. ಭಾರತವು ಇದೇ ದಾರಿಯಿಂದಲೇ ಮುಂದೆಸಾಗಿ, ಪರರಾಷ್ಟ್ರದವರಿಗೆ ತಾನೂ ನೆರವು ನೀಡಿ ಪರರಾಷ್ಟ್ರದವರಿಂದ ತಾನೂ ನೆರವು ಪಡೆದು ಶಾಂತಿ ಸುಖ ಸಮಾಧಾನಯುತವಾದ ಒಂದು ಒಳ್ಳೆಯ ಬಾಳನ್ನು ಬಾಳುವದೇ ಅದರ ಹಿರಿಗುರಿಯಾಗಿರುವದು. ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರವೂ ಈ ಬಗೆಯಾಗಿ ಒಳ್ಳೆಯಬಾಳನ್ನು ಬಾಳತೊಡಗಿದರೆ, ಅಶಾಂತಿಯುದ್ಧಗಳ ಮೂಲಬೇರೇ ಕಡಿದುಹೋಗಿ ಜಗತ್ತು ಉತ್ಕರ್ಷತೆಯಿಂದ ಬಾಳಲು ಅನುವಾಗುವುದು.

ಯಾವದೇ ದೇಶದ ಸದ್ಯದ ಅಂತರರಾಷ್ಟ್ರೀಯ ರಾಜಕಾರಣವನ್ನು ಸೂಕ್ಷ್ಮದೃಷ್ಟಿಯಿಂದ ಪರಿಶೀಲಿಸಿದಲ್ಲಿ ಹೇಳುವುದೊಂದು ಮಾಡುವುದೊಂದು, ಒಳಗೊಂದು ಹೊರಗೊಂದು ಮೊದಲಾದ ರೀತಿನೀತಿಗಳೇ ಎದ್ದು ತೋರುತ್ತವೆಯೆಂಬುದು ತಜ್ಞರು ಅರಿತ ಮಾತೇ ಆಗಿರುತ್ತದೆ. ಈ ಬಗ್ಗೆ ಜಾಗತಿಕ ಶಾಂತಿಸುಖ ಸಮಾಧಾನಗಳ ಹೊಣೆಹೊತ್ತು ಆ ಗುರಿಯತ್ತಲೇ ಸಾಗಿರುತ್ತೇನೆಂದು ಹೇಳಿಕೊಳ್ಳುವ ಸಂಯುಕ್ತ ರಾಷ್ಟ್ರಸಂಘ, ಭದ್ರತಾ ಮಂಡಲಗಳ ಸಭೆಗಳಲ್ಲಿ ನಡೆಯುವ ದೇಶವಿದೇಶಗಳ ಸಮಸ್ಯೆಗಳ ಚರ್ಚೆಯನ್ನೂ, ಅಲವು ದೇಶವಿದೇಶಗಳ ಪ್ರತಿನಿಧಿಗಳು ನಡೆಸುತ್ತಿರುವ ಕೈವಾಡವನ್ನೂ ನೋಡಿದರೆ ಈ ಒಳಗೊಂದು ಹೊರಗೊಂದು ನೀತಿಯು ಅರಿವಾಗದೆ ಇರದು.

ಪೂರ್ವ ಗೋಲಾರ್ಧದಲ್ಲಿ, ಹಿಂದೀ ಮಹಾಸಾಗರದ ಆಯಕಟ್ಟಿನ ಸ್ಥಳದಲ್ಲಿರುವ, ಮತ್ತು ವಿಶಾಲವಾದ ದೇಶವಾದ ಭಾರತವು ಮುಂಬರುವ ರಾಜಕೀಯ ಪ್ರಪಂಚದಲ್ಲಿ, ಅತ್ಯಂತ ಮಹತ್ವದ ಪಾತ್ರವನ್ನು ಅಭಿನಯಿಸುವದಿದೆ. ಸಂಪೂರ್ಣ ಏಶಿಯಾ ಖಂಡದ ರಾಷ್ಟ್ರಗಳ ಮುಂದಾಳುತನವನ್ನು ವಹಿಸಿ, ಜಾಗತಿಕ ಶಾಂತಿಸುಖ ಸಮಾಧಾನಗಳ ದೃಷ್ಟಿಯಿಂದ ಭಾರತವು ಕಾರ್ಯ ಮಾಡಬೇಕಾಗಿದೆ. ಅದಕ್ಕಾಗಿ, ಪೂಜ್ಯ, ಜಗದ್ವಂದ್ಯ ಬಾಪೂಜಿಯವರ ಗರಡಿಯಲ್ಲಿ ಸಿದ್ಧರಾದ, ಪಂಡಿತ ಜವಾಹರಲಾಲ ನೆಹರೂ, ಸರದಾರ ವಲ್ಲಭಭಾಯಿ ಪಟೇಲ, ಚಕ್ರವರ್ತಿ ರಾಜಗೋಪಾಲಾಚಾರ್ಯ ಮೊದಲಾದ ಧುರೀಣರು ಈ ಮಾರ್ಗದತ್ತ ಭರದಿಂದ ಮಾರ್ಗಕ್ರಮಣ ಮಾಡುತ್ತಲಿದ್ದಾರೆ. ಭಾರತವು ತಾನೂ ಒಳಿತಾಗಿ ಬಾಳಬೇಕು. ಉಳಿದ ರಾಷ್ಟ್ರಗಳೂ ಒಳಿತಾಗಿ ಬಾಳುವಂತೆ ನೋಡಿಕೊಳ್ಳಬೇಕು ಎಂಬುದೇ ಭಾರತದ ಅಂತರರಾಷ್ಟ್ರೀಯ ರಾಜಕಾರಣದ ಫಲವೆಂದು ಒಂದೇ ವಾಕ್ಯದಲ್ಲಿ, ಸ್ಥೂಲವಾಗಿ ಹೇಳಬಹುದಾಗಿದೆ.

ಯಾವದೇ ಬಗೆಯ ಸ್ವಾರ್ಥಕ್ಕೆ, ಮಹತ್ವಾಕಾಂಕ್ಷೆಗೆ ಒಳಪಡದೆ ವಿಶಾಲದೃಷ್ಟಿಯಿಂದ, ತಾನೂ ಬಾಳಬೇಕು ಉಳಿದವರನ್ನೂ ಬಾಳಗೊಡಬೇಕು ಎಂಬ ತತ್ವದ ಮೇಲೆ ಯಾವಾಗ ಪ್ರತಿಯೊಂದು ರಾಷ್ಟ್ರಗಳೂ ತಮ್ಮ ನೀತಿಯನ್ನು ಮಾರ್ಪಡಿಸಿಕೊಳ್ಳುವವೋ, ಆಗಲೇ ಜಗತ್‌ಶಾಂತಿಯು ಸಾಧಿಸೀತು. ಈ ಗುರಿಯತ್ತಲೇ ಭಾರತವು ತನ್ನ ಸರ್ವ ಪ್ರಯತ್ನದಿಂದಲೂ ಮುನ್ನಡೆಯ ತೊಡಗಿರುತ್ತದೆ, ಮತ್ತು ಭಾರತದ ಅಂತರರಾಷ್ಟ್ರೀಯ ರಾಜಕಾರಣದ ಗುರಿಯು ಇದೇ ಆಗಿರುತ್ತದೆಯೆಂದು ಹೇಳಬಹುದು.

ಹರಿಜನ ಲೇಖನ

ಮೋಸದ ಔಷಧಗಳು

ಮೋಸದ ಮತ್ತು ಬೀಭತ್ಸ ಜಾಹೀರಾತುಗಳು ಎಂಬ ತಲೆಬರಹದ ಲೇಖನವನ್ನು ಹರಿಜನದಲ್ಲಿ ನೋಡಿ ಓರ್ವ ಡಾಕ್ಟರರು ನನ್ನ ಅವಗಾಹನೆಗಾಗಿ ಇಂಗ್ಲಂಡದ ಪತ್ರಿಕೆಯ ಒಡೆಯರ ಸಂಘದವರು ತಯಾರಿಸಿದ ಗೊತ್ತುವಳಿಯ ಪ್ರತಿಯೊಂದನ್ನು ಕಳಿಸಿದ್ದಾರೆ. ಅದು ಹೀಗಿದೆ:—

"(೧) ಕೆಳಗೆ ಕಾಣಿಸಿದ ರೋಗಗಳಿಗೆ ರಾಮಬಾಣವೆಂದು ಹೇಳಿಕೊಳ್ಳುವ ಜಾಹಿರಾತುಗಳನ್ನು ಸ್ವೀಕರಿಸಕೂಡದು: ಬ್ರಾಯಟ್ಸ ಡಿಸೀಜ, ಕ್ಯಾನ್ಸರ, ಕ್ಷಯ, ಮಧುಮೇಹ, ಅಪಸ್ಮಾರ, ಬೆನ್ನುಹುರಿ ಸಂಬಂಧಿಸಿದ ರೋಗಗಳು, ದೃಷ್ಟಿದೋಷ, ಕುಷ್ಠ, ಜೀರ ಇಳಿಯುವದು, ಸ್ತ್ರೀ

ಕ್ಷ, ಗರ್ಭಪಾತಗೊಳಿಸುವದು ಮೊದಲಾದವುಗಳು.

“೨) ಪತ್ರದ್ವಾರದಿಂದ ವಿವರ ತಿಳಿದು ರೋಗ ನಿದಾನಮಾಡಿ ಚಿಕಿತ್ಸೆ ಕೊಡುವೆವೆಂದು ಹೇಳುವ ಮುದ್ರಿತ ವಿಷಯದ ಮೂಲಕ ಅಥವಾ ಬಾಯಿಮಾತಿನಿಂದ ಪ್ರಸಾರಗೊಳಿಸುವಂತಹರ ಯಾವ ಜಾಹೀರಾತುಗಳನ್ನೂ ಸ್ವೀಕರಿಸಕೂಡದು.

“೩) ಅಧಿಕೃತ ಬ್ರಿಟಿಶ ಚಿಕಿತ್ಸಕರ-ಡಾಕ್ಟರರ ಶಿಫಾರಸು ಪತ್ರಗಳಲ್ಲದೆ ಬೇರೆಯವರ ಶಿಫಾರಸು ಪತ್ರಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು. ಇದರಂತೆ ಯಾರಾದರೂ ವೈಯಕ್ತಿಕವಾಗಿ ಕೊಟ್ಟ ತಮ್ಮ ಸ್ವಂತದ ಅತಿರಂಜಿತವಲ್ಲದ ಶಿಫಾರಸುಗಳನ್ನಲ್ಲದೆ ಉಳಿದವುಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು

“೪) ಮನಸ್ಸಿಗೆ ಭ್ರಮೆಯನ್ನುಂಟು ಮಾಡುವಂತಹ ಸುಳ್ಳು ಮತ್ತು ವಿದ್ರೂಪಗೊಳಿಸಲ್ಪಟ್ಟ ಅತಿವರ್ಣಿತ ಚಿತ್ರಗಳನ್ನು ಜಾಹೀರಾತಿಗಾಗಿ ಸ್ವೀಕರಿಸಕೂಡದು.

“೫) ಒಂದು ಔಷಧವು ವಿಖ್ಯಾತವಾದ ಆಸ್ಪತ್ರೆಯಿಂದಲೋ ಅಧಿಕೃತ ಸ್ಥಾನದಿಂದಲೋ ಬಂದುದೆಂದು ಜನರಿಗೆ ನಂಬಿಗೆ ಹುಟ್ಟಿಸುವಂತಹ ಜಾಹೀರಾತುಗಳನ್ನು ಸ್ವೀಕರಿಸಕೂಡದು. ಹಾಗೆ ಅದು ಇದ್ದುದೇ ನಿಜವಿದ್ದಲ್ಲಿ ಅದನ್ನು ಸಮರ್ಥಿಸಲು ಆಯಾ ಸ್ಥಳಗಳಿಂದ ದೊರಕಿಸಿದ ಪ್ರಮಾಣ ಪತ್ರಗಳನ್ನು ಜೊತೆಗೆ ಇರಿಸಿರಬೇಕು.

“ಮೇಲ್ಕಾಣಿಸಿದ ನಿಯಮಗಳನ್ನು ಇಂಗ್ಲಂಡದಲ್ಲಿನ ಎಲ್ಲ ವೃತ್ತಪತ್ರಿಕೆಗಳೂ ಈಗ ಅನುಸರಿಸುತ್ತಿವೆ.’

ಆ ಡಾಕ್ಟರರು ಮುಂದೆ ಹೀಗೆಂದಿದ್ದಾರೆ “ವೃತ್ತಪತ್ರಿಕೆಗಳ ಒಡೆಯರ ಇದೇ ಬಗೆಯ ಧೋರಣೆಯನ್ನು ಅನುಸರಿಸಿದರೆ ಮತ್ತು ಸರಕಾರವಾದರೂ ಇಂತಹ ಕಾನೂನನ್ನು ಮಾಡುವದಾದರೆ ಅಸಂಖ್ಯಾತ ತಿಳಿಗೇಡಿ ಹಾಗೂ ಬಡಜನರ ಕೋಟ್ಯಾವಧಿ ರೂಪಾಯಿಗಳು ವ್ಯರ್ಥವಾಗಿ ಹಾಳಾಗದೆ ಉಳಿಯುವವು. ಅವರು ಈ ಬಗೆಯ ಮೋಸದ ಜಾಹೀರಾತಿಗೆ ಅತಿ ಸುಲಭವಾಗಿ ಮರುಳಾಗಿ ಬಲಿಬೀಳುತ್ತಾರೆ. ಮೋಸಗಾರರು ತಮ್ಮ ಔಷಧಗಳ ಜಾಹೀರಾತಿನಿಂದ ಅಜ್ಞಜನರನ್ನು ಸುಲಿಯುವರಲ್ಲದೆ ಅವರ ಆರೋಗ್ಯವನ್ನೂ ಸೂರೆಗೊಳ್ಳುತ್ತಾರೆ

“ನಾನೂ ಕ್ಷಯರೋಗದ ಆಸ್ಪತ್ರೆಯಲ್ಲಿ ಮುಖ್ಯ ಚಿಕಿತ್ಸಾಧಿಕಾರಿಯಾಗಿದ್ದೇನೆ. ಈ ಹನ್ನೊಂದು ವರ್ಷಗಳ ನನ್ನ ಅನುಭವದಲ್ಲಿ ಇಂತಹ ಅನೇಕ ಉದಾಹರಣೆಗಳನ್ನು ನಾನು ಕಂಡಿದ್ದೇನೆ. ಅನೇಕ ಕ್ಷಯರೋಗಿಗಳು ಮೋಸಹೋಗಿ ಬಹು ಭಾರವಾದ ಬೆಲೆಯ ಔಷಧ ಕೊಂಡುದುಂಟು. ೬.೭ ತಿಂಗಳು ಹೀಗೆ ಸಿಕ್ಕಿಬಿದ್ದು ಅಲೆದಾಡಿ ಉಪಾಯಗಾಣದೆ ಸಾರ್ವಜನಿಕ ಆಸ್ಪತ್ರೆಗೆ ಆರೋಗ್ಯ ಭಂಗಹೊಂದಿ ಕರುಣಾಜನಕ ಸ್ಥಿತಿಯಲ್ಲಿ ಬರುತ್ತಾರೆ. ಇಂತಹ ಮೋಸಗಾರಿಕೆಯು ಜಾಹೀರಾತುಗಾರರು ಲಂಚಕೊಟ್ಟು ಒಳ್ಳೆ ಆಕರ್ಷಕ ಶಿಫಾರಸು ಪತ್ರಗಳನ್ನು ಕೂಡ ಬರೆಯಿಸಿಕೊಳ್ಳುತ್ತಾರೆ. ಪತ್ರಿಕಾಕರ್ತರು ಇಂತಹ ಜಾಹೀರಾತುಗಳಿಗೆ ಆಸ್ಪದ ಕೊಡದಿದ್ದರೆ ಈ ಮೋಸದ ವ್ಯವಹಾರವನ್ನು ತಡೆಗಟ್ಟಿದ ಶ್ರೇಯಕ್ಕೆ ಪಾತ್ರರಾಗುತ್ತಾರೆ”.

ಡಾಕ್ಟರರು ಬಯಸಿದಂತೆ ಇಂಗ್ಲಂಡದ ಪತ್ರಿಕಾಕರ್ತರ ದಾರಿಯಲ್ಲಿಯೇ ನಮ್ಮ ನಾಡಿನ ಪತ್ರಿಕಾಕರ್ತರೂ ಹೆಜ್ಜೆ ಹಾಕುವರೆಂದು ನಾನು ಆಶಿಸುತ್ತೇನೆ ಸರಕಾರವಾದರೂ ಇಂತಹ ಮೋಸಗಾರಿಕೆಯ ಜಾಹೀರಾತುಗಳನ್ನು ತಡೆಗಟ್ಟಲು ತಕ್ಕ ಉಪಾಯ ಯೋಚಿಸುವದು ಯುಕ್ತವಾಗಿದೆ.

ಕಿಶೋರಲಾಲ ಮಶ್ರೂವಾಲಾ
ಮುಂಬಯಿ

—೦—

ಇಂದಿನ ವಿದ್ಯಾಭ್ಯಾಸ.

ಇಂದಿನ ವಿದ್ಯಾಭ್ಯಾಸ ಪದ್ಧತಿಯಬಗ್ಗೆ ಹಲವರು ಹಲ ವಿಧವಾಗಿ ಹೇಳುತ್ತಾರೆ. ಒಟ್ಟಿನ ಮೇಲೆ ಇದರಿಂದಾದ ಪರಿಣಾಮವೇನೆಂಬುದನ್ನು ಅಮೇರಿಕದ ಇಬ್ಬರು ಮುಖ್ಯ ಶಿಕ್ಷಿಕೆಯರು ಚೆನ್ನಾಗಿ ಹೇಳಿದರು ಡೀನ್ ಮ್ಯಾಕಿಂಟೋಷಳು ತನ್ನ ೨೬ ವರ್ಷಗಳ ಶಿಕ್ಷಣಾನುಭವದಿಂದ ಹೇಳುವುದು ಹೀಗಿದೆ:- ನಮ್ಮ ಅಮೂಲ್ಯ ನಾಗರಿಕತೆಯಿಂದು ತಾನು ಹುಟ್ಟಲು ಕಾರಣವಾದ ಆರಂಭೋತ್ಸವ, ಸ್ವಾತಂತ್ರ್ಯಬುದ್ಧಿ, ಪ್ರತ್ಯುತ್ಪನ್ನ ಮತಿತ್ವಗಳನ್ನು ಸಮೂಲನಾಶಮಾಡಲು ತೊಡಗಿದೆ. ಸರಿ ಅಥವಾ ತಪ್ಪು ಎಂಬುದರ ಬಗ್ಗೆ ಇಂದು ತಾಯ್ತಂದೆಯರಿಗೆ ಒಂದು ನಿರ್ದಿಷ್ಟ ನೀತಿಮಟ್ಟವನ್ನು ಹೇಳಲು ಬರದು ಎಲ್ಲ ಗೊಂದಲ, ಗಲಿಬಿಲಿ, ಗಲಾಟೆ, ವ್ಯಕ್ತಿತ್ವ ಪೋಷಣೆ ಮಾಡುವೆವೆಂದು ಹೋದ ಕೆಲವು ಪ್ರಗತಿಶೀಲ ಶಿಕ್ಷಕ ಶಿಕ್ಷಿಕೆಯರು ಹುಡುಗ ಹುಡುಗಿಯರನ್ನು ಕೃತಕರನ್ನಾಗಿಯೂ ಸ್ವಾರ್ಥಿಗಳನ್ನಾಗಿಯೂ ‘ಅಹಂಭಾವದವರನ್ನಾಗಿಯೂ ತಯಾರುಮಾಡಿದ್ದಾರೆ. ಅದುದರಿಂದ ಇಂದಿನ ನಮ್ಮ ಕರ್ತವ್ಯವೇನಂದರೆ ಸರ್ವವ್ಯಕ್ತಿಸಾಧಾರಣವಾದ ಒಂದು ನೈತಿಕ ಸಾಮರಸ್ಯದ ತತ್ವಪ್ರಣಾಲಿಯನ್ನು ರಚಿಸಿ ಮಕ್ಕಳಿಗೆ ಅದನ್ನು ಕಲಿಸುವುದು. ಹೀಗೆ ಮಾಡಬೇಕಾದರೆ, ಅಧ್ಯಾತ್ಮದ ಗುರಿಯಿಂದ ಮಕ್ಕಳ ಪ್ರಾಪಂಚಿಕತೆ ನಿಯಂತ್ರಿತವಾಗಿ ಸಂಯಮದ ಸಮನ್ವಯ ಜೀವನವೆನಿಸಬೇಕಾದರೆ ಸ್ವತಂತ್ರವಿಚಾರ, ಚರ್ಚೆ ಸ್ವಂತ ಆಚರಣೆ ಇವುಗಳ ಮೂಲಕ ಜ್ಞಾನದ ನೈತಿಕ ಮತ್ತು ಅಧ್ಯಾತ್ಮಿಕ ಮುಖಗಳನ್ನು ಬಿಂಬಿಸುವ ನಡೆನುಡಿಗಳನ್ನು ಶಿಕ್ಷಕ ಶಿಕ್ಷಿಕೆಯರು ಅಳವಡಿಸಿಕೊಳ್ಳಬೇಕು.

ಕುಮಾರಿ ಮ್ಯಾಕಳ ಪ್ರಕಾರ ಹೆಂಗಸಿಗಿಂದು ತನ್ನ ಗುರಿಯೇನೆಂಬುದೇ ತಿಳಿಯದಾಗಿದೆ. ಅವಳು ಜಗನ್ಮಾನ್ಯ ಗುರಿಗಳನ್ನು ಅರಿಯಳು. ಹೀಗಾಗಿ ಅವಳಿಗೆ ಇಹವೂ ಅತೃಪ್ತಿಕರ ಪರವೂ ಅತೃಪ್ತಿಕರ ಎನಿಸಿದೆ. ಈ ನಾಗರಿಕೆಯವರು ಮಕ್ಕಳಿಗೆ ಸರ್ವಜನೀನವೃತ್ತಿಯ ಸಾಮ್ಯದ ಸದಾದರ್ಶನಗಳನ್ನು ಕಲಿಸಬಲ್ಲರೆಂತು. ವೈವಾಹಿಕ ಜೀವನವನ್ನು ಬಿಡದೆ ಸತಿಯು ಪತಿಯ ಕೆಲಸ ಕಾರ್ಯದಲ್ಲಿ ಸಮಭಾಗಿಯಾಗಿ ನಡೆಯುಕೊಂಬ ಸಮಂಜಸಬುದ್ಧಿಯನ್ನು ತಾಳುವಂತೆ ಅವಳಿಗೆ ವಿದ್ಯಾಭ್ಯಾಸ ಮಾಡಬೇಕು. ಇದು ಸಹವಿದ್ಯಾಭ್ಯಾಸದಿಂದ ಸಾಧ್ಯ, ಗಂಡಸರ ಪಾಂಡಿತ್ಯವನ್ನು ಗಳಿಸಲು ಅವರೊಡನೆಯೇ ಓದಬೇಕು ಆದರೆ ಅದು ಅಮಿಷವೆನಿಸಬಾರದು, ಅಷ್ಟೇ, ಅದರಿಂದ ಗಂಡು ಮಕ್ಕಳು ಹೆಣ್ಣುಮಕ್ಕಳು ಇಬ್ಬರೂ ವಿದ್ಯಾವಿಮುಖರಾಗುತ್ತಾರೆ. ಈ ಎಚ್ಚರಿಕೆಯಿಂದ ನಾವು ಮಕ್ಕಳನ್ನು ತರಬೇತು ಮಾಡಿದರೆ ಹೆಂಗಸಿನ ಅದರ ಜೊತೆಗೆ ಆ ಮೂಲಕ ಗಂಡಸಿನ ಬಾಳೂ ಯೋಗ್ಯವಾಗುತ್ತದೆ. ತೃಪ್ತಿಕರವಾಗುತ್ತದೆ. ಹುಡುಗರೊಡನೆ ಸಾಮರಸ್ಯದಿಂದ ನಿರ್ಮಲ ನೀತಿಯಿಂದ ಇರಬಲ್ಲ ವಿದ್ಯಾರ್ಥಿನಿಗೆ ಪ್ರತ್ಯೇಕ ಓದಿಗಿಂತ ಹೆಚ್ಚು ಲಾಭವುಂಟು, ಆದರಿಂದ ಸ್ತ್ರೀಪುರುಷರ ವಿವಿಧ ಮಾನಸಿಕ ಅವ್ಯವಸ್ಥೆ ಅವರಲ್ಲೂ ಹೆಚ್ಚಾಗಿ ಸ್ತ್ರೀಯ ಮೌಢ್ಯ ಇಲ್ಲದಂತಾಗುವದು ಇದಕ್ಕಾಗಿ ಶಿಕ್ಷಕ ಶಿಕ್ಷಿಕೆಯರೂ ತಾಯ್ತಂದೆಗಳೂ ಎಚ್ಚರದಿಂದ ಮೇಲ್ವಿಚಾರಣೆ ನಡೆಸುತ್ತ ಮಕ್ಕಳನ್ನು ನಿಜವಾದ ಮನುಷ್ಯರನ್ನಾಗಿ ಮಾಡಲು ಪ್ರಯತ್ನಿಸಬೇಕು. ಅದೇ ಮಹಾಸುದಿನವಲ್ಲವೆ ಜಗತ್ತಿನ ನಾಗರಿಕತೆಗೆ?

— ಫ್ರಾನ್ಸದೇಶದ ಅಸಂಬ್ಲಿಯಲ್ಲಿ ಭಾರತದಲ್ಲಿನ ಅವರ ಸ್ವಾಸ್ಥ್ಯಗಳನ್ನು ಬಿಟ್ಟುಕೊಡಬೇಕೆಂಬ ಅಭಿಪ್ರಾಯಕ್ಕೆ ಪುಷ್ಟಿಯು ದೊರೆಯಿತು. ಅಧ್ಯಕ್ಷರು ಪಂ. ಜವಹರಲಾಲರು ಯುರೋಪಿಗೆ ಬಂದಾಗ ಅವರೊಡನೆ ಮಾತುಕತೆಯಾಡಿದ ಅಂಶವನ್ನು ವ್ಯಕ್ತಪಡಿಸಿದರು.

— ಜಪಾನದಿಂದ ಬಟ್ಟೆ ಮತ್ತು ಇತರೆ ಸಾಮಗ್ರಿಗಳನ್ನು ಪರದೇಶಗಳಿಗೆ ರಫ್ತು ಮಾಡಿ ಅಲ್ಲಿಯ ಆರ್ಥಿಕ ತಳಹದಿಯನ್ನು ಸರಿಯಾಗಿಡಲು ಜಪಾನನ್ನು ಸ್ವಾಧೀನದಲ್ಲಿಟ್ಟಿರುವ ಅಮೇರಿಕನ್ ಅಧಿಕಾರಿ ಡಗ್ಲಾಸ್ ಮಕಾರ್ಥರ್‌ರವರು ಏರ್ಪಡಿಸಿರುವರು ಮೊದಲಾಗಿ ಗಿರಣಿಯಂತ್ರದ ಸಾಮಾನುಗಳು ಬರಲಿವೆ.

— ಪಾಲಿಸ್ತಾನದಲ್ಲಿ ಸ್ಥಾಪಿತವಾದ ಯಹೂದೀಯ ಸರ್ಕಾರ ಇಸ್ರಾಯಿಲ್ ರಾಷ್ಟ್ರಕ್ಕೆ ಎಲ್ಲೆಡೆಯಿಂದಲೂ ಮನ್ನಣೆ ದೊರೆಯುತ್ತಲಿದೆ. ಅಮೇರಿಕಾದವರು ಯಹೂದೀಯರ ಆರ್ಥಿಕ ಅಭಿವೃದ್ಧಿಗಾಗಿ ೧೦೦ಕೋಟಿ ರೂಗಳ ಸಾಲಕೊಟ್ಟಿರುವರು

ಕೆಲಸವಾಗಿದೆ. ಈ ಉದ್ಯೋಗಕ್ಕೆ ನಮ್ಮಲ್ಲಿ ಇಂದು ಪ್ರತಿ ವರ್ಷಕ್ಕೆ ೬೦ ಲಕ್ಷ ಘನಫೂಟು ಕಟ್ಟಿಗೆಯು ಬೇಕಾಗುತ್ತದೆ.

ಇದಿ ಹಿಂದುಸ್ಥಾನದಲ್ಲಿ ಈಗ ೨೦೦ ಕಡ್ಡಿಪೆಟ್ಟಿಗೆಯ ಕಾರಖಾನೆಗಳಿದ್ದು ಇವುಗಳಲ್ಲಿ ಐದು ಕಾರಖಾನೆಗಳು ಅತ್ಯಾಧುನಿಕ ಯಂತ್ರಗಳಿಂದ ಸುಸಜ್ಜಿತವಾಗಿವೆ ೨೫ ಕಾರಖಾನೆಗಳು ಅರ್ಧ ಮರ್ಧ ಯಂತ್ರದಿಂದ ಉಳಿದ ಕೆಲಸವನ್ನು ಕೈಯಿಂದ ಮಾಡುತ್ತಿವೆ. ಉಳಿದ ಕಾರಖಾನೆಗಳು ಹಳ್ಳಿಯ ಉದ್ಯೋಗದ ಪದ್ಧತಿಯಲ್ಲಿ ಕೆಲಸಮಾಡುತ್ತಿವೆ. ಆ ಮೇಲೆ ಹುಟ್ಟಿದ ಕಾರಖಾನೆಗಳು ದಕ್ಷಿಣ ಹಿಂದುಸ್ಥಾನದಲ್ಲಿಯೇ ಪ್ರಾರಂಭವಾಗಿವೆ.

ಕಳೆದ ೨೫-೩೦ ವರ್ಷಗಳಲ್ಲಿ ಹಿಂದುಸ್ಥಾನದ ಕಡ್ಡಿಪೆಟ್ಟಿಗೆಯ ಉದ್ಯೋಗವು ಭರದಿಂದ ಬೆಳೆಯುತ್ತಿದೆ. ಕೆಲವು ಸ್ವೀಡಿಷ ಕಂಪನಿಗಳು ಇಲ್ಲಿಯೇ ತಮ್ಮ ಕಾರಖಾನೆಗಳನ್ನು ಹಾಕಿದ್ದರಿಂದ ಮತ್ತು ಹಿಂದುಸ್ಥಾನವು ಪರದೇಶಿ ಕಡ್ಡಿಪೆಟ್ಟಿಗೆಗಳ ಮೇಲೆ ಕರಹಾಕಿದ್ದರಿಂದ ಈ ಬೆಳವಣಿಗೆಗೆ ಅವಕಾಶವಾಯಿತು. ಈಗ ಇರುವ ಕಾರಖಾನೆಗಳಿಂದ ಒಟ್ಟು ನಾಲ್ಕು ಕೋಟಿ ಗ್ರೋಸ (ಹನ್ನೆರಡು ಡಝನ್ ಎಂದರೆ ಒಂದು ಗ್ರೋಸ್) ಕಡ್ಡಿಪೆಟ್ಟಿಗೆಗಳು ಹುಟ್ಟುತ್ತಿವೆ.

ಎಲುಬಿನ ಗೊಬ್ಬರ

ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸುವುದು ಬಳಕೆಯಲ್ಲಿ ಇರಬೇಕು. ಎಲುಬಿನ ಗೊಬ್ಬರದ ವಿಷಯವಾಗಿ ಈಗ ಇಲ್ಲಿ ಹೇಳಬೇಕಾಗಿದೆ.

ಎಲುಬಿನ ಗೊಬ್ಬರದ ಅವಶ್ಯಕತೆ ಎಷ್ಟು ಎಂಬುದು ಹೇಳತೀರದು. ಗೊಬ್ಬರದಿಂದ ಬೆಳೆ ಹೆಚ್ಚುತ್ತದೆ. ಮನೆಯಲ್ಲಿ ಸಿಗುವ ಕಸ ಕಡ್ಡಿಗಳನ್ನು ಸಂಗ್ರಹಿಸಿ ದೊಡ್ಡಿಯ ಗೊಬ್ಬರವನ್ನು ತಯಾರಿಸುವುದು ತಿಳಿದ ವಿಷಯವೇ ಆಗಿರುತ್ತದೆ. ಆದರೆ ಇದು ಸಾಲದೇ ಬರುವ ಪ್ರಯುಕ್ತ ಹೊರಗಿನಿಂದ ಗೊಬ್ಬರ ಕೊಳ್ಳಲೇ ಬೇಕಾಗುತ್ತದೆ.

ದೊಡ್ಡಿಯ ಗೊಬ್ಬರವು ನೆಲದಲ್ಲಿ ನೀಗುವುದಿಲ್ಲ. ಕೃತ್ರಿಮ ಗೊಬ್ಬರವು ಹಾಗಲ್ಲ, ಇದು ಹಾಕಿದ ಕೂಡಲೇ ನೆಲದಲ್ಲಿ ಬೆರೆಯುತ್ತದೆ. ಬೇಗನೇ ಕೊಳೆಯುವ ಗೊಬ್ಬರಗಳು ಮತ್ತು ಹಿಂಡಿಯಿಂದ ಸಿಗುವ ಅಂಶಗಳು ಭೂಮಿಗೆ ಸಾಲವು. ಅದನ್ನು ಪೂರೈಸುವುದಕ್ಕೆ ಎಲ್ಲವುಗಳಿಂದ ಮಾಡಿದ ಕೃತ್ರಿಮ ಗೊಬ್ಬರಗಳನ್ನು ಉಪಯೋಗಿಸಬೇಕಾಗುತ್ತದೆ.

ಎಲಬು ಪುಡಿಮಾಡಿದನಂತರವೇ ಅದನ್ನು ನೆಲದಲ್ಲಿ ಸೇರಿಸಲಾಗುವುದಿಲ್ಲ. ಅದಕ್ಕೆ ದೊಡ್ಡ ಯಂತ್ರಗಳು ಬೇಕಾಗುತ್ತವೆ. ರಸಾಯನಿಕ ಪ್ರಯೋಗವೂ ಬೇಕಾಗುತ್ತದೆ. ಇವೆರಡೂ ಕಠಿಣವಾದ ವಿಷಯಗಳು.

ಎಲಬುಗಳನ್ನು ಪುಡಿಮಾಡುವ ಒಂದು ಸುಲಭ ಉಪಾಯವೆಂದರೆ ಎಲುಬನ್ನು ಸುಡುವುದರಿಂದ ಹಗುರವಾಗುತ್ತದೆ ಆಗ ಅದನ್ನು ಪುಡಿಮಾಡಲು ಕಷ್ಟವಿರುವುದಿಲ್ಲ. ಆದರೆ ಎಲುಬನ್ನು ಸುಡುವ ರೀತಿಯನ್ನು ನೋಡಿ ಕಲಿಯಬೇಕು. ಇದು ಬೊಂಬಾಯಿ ಪ್ರಾಂತ್ಯದಲ್ಲಿ ಸರಕಾರದವರಿಂದ ಪ್ರದರ್ಶಿಸಲಾಗುತ್ತಿದೆ. ಅಲ್ಲಿ ಹೀಗೆ ಮಾಡಿದ ಗೊಬ್ಬರವನ್ನು ಭತ್ತದ ಪೈರಿಗೆ ಹಾಕಲಾಗುತ್ತಿದೆ. ಫಸಲು ಉತ್ತಮವಾಗಿ ಬರುತ್ತಿದೆ. ತೋಟಗಳಲ್ಲಿಯೂ ಸಹ ಇದರ ಉಪಯೋಗ ಕಂಡುಬಂದಿದೆ. ಇದರಿಂದ ಹಣ್ಣುಗಳೂ ಸಹ ಒಳ್ಳೆ ಆಕಾರವಾಗುವಂತೆ ಬೆಳೆಯಾಗುತ್ತದೆ.

ಮ||ರಾ||ಶ್ರೀ ಹೊಸಪೇಟೆ ಡಿ|| ಮು|| ಕೋರ್ಟು O.P. 30 49.

ಲೇಟ್ ಆರಾಧ್ಯಮಠದ ಕೊಟ್ರಯ್ಯ ಇವರಿಗೆ ಬರತಕ್ಕ ಬಾಕಿಗಳಬಗ್ಗೆ.

1 ಆರಾಧ್ಯಮಠದ ಚನ್ನಮ್ಮ ಗಂಡ ಕೊಟ್ರಯ್ಯ
2 ,, ಗುರುಸ್ವಾಮಪ್ಪ ತಂದೆ ಕೊಟ್ರಯ್ಯ
3 ,, ಷಡಾಕ್ಷರಪ್ಪ ತಂದೆ ,,
4 ,, ಲೋಕಮೂರ್ತಿ ತಂದೆ ,,

2 ರಿಂದ 4 ಅರ್ಜಿದಾರರ ನಿಗೇವಾನಿ ತಾಯಿ ಚನ್ನಮ್ಮ. ಜಂಗಮರು. ಅಗ್ರಹಾರ, ಕೂಡ್ಲಹಳ್ಳಿ ಮಜರ ತಾ|| ಕೂಡ್ಲಿಗಿ ಅರ್ಜಿದಾರರು

ನೋಟೀಸು.

ಅರ್ಜಿದಾರರು ಲೇಟ್ ಕೊಟ್ರಯ್ಯನವರು ಬೆಂಗಳೂರು ಪ್ರಾವಿಡೆಂಟ್ ಇನ್ಸುರೆನ್ಸು ಕಂಪೆನಿ ಲಿಮಿಟೆಡ್ ಬೆಂಗಳೂರು ಸಿಟಿ ಇವರಲ್ಲಿ ರೂ 500 ಗಳಿಗೆ (ಪಾಲಿಸಿ ನಂ|| 2554) ವಿಮಾ ಮಾಡಿಸಿದ ಮೊತ್ತವನ್ನು ತೆಗೆದುಕೊಳ್ಳಲು ವಾರಸು ಸರ್ಟಿಫಿಕೇಟಿಗೆ ಅರ್ಜಿಕೊಟ್ಟಿರುವದರಿಂದ ಈಬಗ್ಗೆ 15-9-49 ಕ್ಕೆ ವಾಯಿದಾ ಇದ್ದು ತಕರಾರು ಕೊಡಲು ಅಪೇಕ್ಷೆಯುಳ್ಳವರು ಸದ್ರಿ ತಾರೀಖು ಉದಯ 10 ಘಂಟೆಗೆ ಕೋರ್ಟಿಗೆ ಹಾಜರಾಗತಕ್ಕದ್ದು.

ಟಿ. ಷೆಕ್ ಎಂ. ಷಡಾಕ್ಷರಯ್ಯ,
ಬಿ. ಎ. ಬಿ. ಎಲ್.,
ಅರ್ಜಿದಾರರ ವಕೀಲ.
31-8-49.

ಮ||ರಾ||ಹೊಸಪೇಟೆ ಡಿ||ಮು|| ಕೋರ್ಟಿನಲ್ಲಿ

S. C. No. 316/49.

ಸೂಲದಾನಹಳ್ಳಿ ಭರಮಪ್ಪ ವಾದಿ.

Vs.

ಜ್ಯೋತಿಬಸಪ್ಪ ತಂದೆ ಕುರುವತ್ತೆಪ್ಪ ಲಿಂಗಾಯಿತ, ಜವಳಿ ವ್ಯಾಪಾರಿ ಸಾ|| ವೈದೂರು ತಾಲೂಕ ಹರಪನಹಳ್ಳಿ. } ಪ್ರತಿವಾದಿ

ಮೇಲ್ಕಂಡ ನಂಬರಿನಲ್ಲಿ ವಾದಿಯು ಪ್ರತಿವಾದಿಯಮೇಲೆ ತಾ|| 21-6-45 ರಲ್ಲಿ ಪ್ರತಿವಾದಿ ಬರೆಕೊಟ್ಟ ಪ್ರಾಂನೋಟಿನ ಬಾಬ್ತು ಬಾಕಿ 272/- ರೂಪಾಯಿಗಳನ್ನು ಮತ್ತು ಕೋರ್ಟು ಖರ್ಚುಗಳನ್ನು ವಸೂಲು ಮಾಡಿಕೊಳ್ಳಲು ದಾವಾ ದಾಖಲು ಮಾಡಿರುತ್ತಾನೆ. ಸದರಿ ದಾವೆಯು ತಾ|| 13-9-49 ಕ್ಕೆ ವಾಯಿದಾ ಇರುತ್ತದೆ. ಆದಿವಸ ಹಗಲು 10 ಘಂಟೆಗೆ ಸರಿಯಾಗಿ ಪ್ರತಿವಾದಿಯು ಕೋರ್ಟಿಗೆ ಹಾಜರು ಆಗಿ ತನ್ನ ತಕರಾರು ಏನಾದರು ಇದ್ದಲ್ಲಿ ತಿಳಿಸತಕ್ಕದ್ದು. ತಪ್ಪಿದಲ್ಲಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುತ್ತದೆ.

ವಾಯಿದಾ 13-9-49

M. ತಿರುಮಲಾಚಾರ್,
ಹೊಸಪೇಟೆ, ವಾದಿ ವಕೀಲ್
ತಾ|| 31-8-49.

ಸ್ಮಾಲ್‌ಕಾಸ್ ಕೋರ್ಟಿನಲ್ಲಿ ಬಳ್ಳಾರಿ.

S C. No. 398/1949.

ಅಬ್ದುಲ್ ನಬಿ ಖಾನ್ ಪಠಾಣ್ ಬೈ ಜನರಲ್ ಪವರ್ ಆಫ್ ಅಟಾರ್ನಿ ಹೋಲ್ಡರ್ ಅಬ್ದುಲ್ ಖುದಾಸ ಖಾನ್ ಪಠಾಣ್. } ವಾದಿ.

1. ಸಿ. ದುರಗಪ್ಪ
2 ಗೌಳ ಶಿವಣ್ಣ. } ಪ್ರತಿವಾದಿಗಳು

ನೋಟೀಸು.

ವಾದಿಯು ಪ್ರತಿವಾದಿಗಳಮೇಲೆ ರೂ 140/- ಅದರ ಬಡ್ಡಿ ಮತ್ತು ಕೋರ್ಟು ಖರ್ಚುಗಳ ಸಮೇತ ವಸೂಲ್ಮಾಡಿಕೊಳ್ಳಲು ಮೇಲ್ಕಾಣಿಸಿದ ದಾವೆಮಾಡಿದ್ದಾನೆ. ಅದು 6-10-'49 ರದಿನ ಮಾ 11 ಗಂಟೆಗೆ ವಾಯಿದೆಯು ಹಾಕಲಾಗಿದೆ. ಮೊದಲನೆಯ ಪ್ರತಿವಾದಿಯು ಖುದ್ದಾಗಲಿ ಅಥವಾ ವಕೀಲರ ಮೂಲಕವಾಗಲಿ ಹಾಜರಾಗಿ ತನ್ನ ಬಂಧು ಮೂಲಕ ಹೇಳಿಕೆಯನ್ನು ಸಕಾಲದಲ್ಲಿ ಕೊಡದಿದ್ದರೆ ಸದರಿ ಪ್ರತಿವಾದಿಯ ಪರೋಕ್ಷದಲ್ಲಿ (Exparle) ಕಾಯ್ದೆಗನುಸಾರವಾಗಿ ದಾವೆಯು ನಿರ್ಧರಿಸಲ್ಪಡುವದು.

ಡಿ.ಎಲ್. ಗಂಗಾಧರಶೆಟ್ಟಿ

ಬಳ್ಳಾರಿ 2-9-49 | ವಾದಿಯ ಅಡ್ವೊಕೇಟ್,

'ವಿಶಾಖಪಟ್ಟಣದ ಹಡಗು ಕಾರ್ಖಾನೆಯನ್ನು ಸರ್ಕಾರವೇ ನಡೆಸಲು ಕೆಲಕಾಲ ಹಿಡಿಯಬಹುದೆಂದು ಹೇಳಿದ್ದಾರೆ.

—O—

ಕಾಶ್ಮೀರ ಭಾರತದ ಭಿನ್ನಾಭಿಪ್ರಾಯಗಳು ಬಂದಕಾರಣ ಸಂಯುಕ್ತ ರಾಷ್ಟ್ರ ಸಂಘವು ಹೊಸ ಸೂಚನೆಗಳನ್ನು ಕೊಟ್ಟು ಎರಡೂ ರಾಷ್ಟ್ರಗಳು ತಮ್ಮ ಸೈನ್ಯಗಳನ್ನು ಹಿಂದೆಗೆದುಕೊಳ್ಳಬೇಕೆಂದಾಶಿಸಿದೆ.

———

ಕಾಶ್ಮೀರ ಭಾಗವನ್ನಾಕ್ರಮಿಸಿಕೊಂಡ ಪಾಕಿಸ್ತಾನ ಭಾಗದಲ್ಲಿ ಕ್ಷಾಮವುತ್ಪನ್ನವಾಗಿ ಜನರು ಒಂದು ತರಹ ಹುಲ್ಲು ತಿನ್ನುತ್ತಿರುವರೆಂದು ಪ್ರಕಟವಾಗಿದೆ. ಪಾಕಿಸ್ತಾನವು ವಿಮಾನಗಳ ಮೇಲಿಂದ ಆಹಾರಸಾಮಗ್ರಿ ಸಾಗಿಸುತ್ತಿದೆ.

———

ಸ್ತ್ರೀಯರು ಯೋಗ್ಯ ಶಿಕ್ಷಣ ಹೊಂದಿದ್ದರೆ ಸಬ್ ರಿಜಿಸ್ಟ್ರಾರ್ ಸ್ಥಾನಕ್ಕೆ ಅರ್ಹರೆಂದು ಸರ್ಕಾರವು ಸಾರಿದೆ ಅವರು ಕೆಲಸಗಳನ್ನು ಹೊಂದಲು ಇರುವ ಅಯೋಗ್ಯತೆಯನ್ನು ಸರ್ಕಾರವು ದೂರ ಮಾಡಿದೆ.

———

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

[o]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5 - ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:- 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಬಿ. ವಿ. ಶೇಷಗಿರಿರಾವ್,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ - ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY ('Reg. No. M. 4746)

5—9—49

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri..

....

....

Printed ati Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!
ಪ್ರಾಪ್ಯವರಾನ್ನಿಬೋಧತ!!
*
ಸಂಪಾದಕ ಮತ್ತು ಪ್ರಕಾಶಕ:--
ಟಿ. ಬಿ. ಕೇಶವರಾವು.

ವರ್ಷ ೧೭ | ಸೋಮವಾರ ೧೭ ಸೆಪ್ಟೆಂಬರ್ ೧೯೪೫ | ಸಂಚಿಕೆ ೩೭

ನೆಹರೂರವರ ಭಾಷಣ

ನನಗೆ ಆಶ್ಚರ್ಯವಾಗಿದೆ.

- ● -

ಬ್ರಿಟಿಶ ಪ್ರಧಾನಿ ಅಟ್ಲಿ ಅಮೆರಿಕಾದ ಅಧ್ಯಕ್ಷ ಟ್ರೂಮನ್‌ರವರು ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ ಕೈಹಾಕಿದ್ದು ನನಗೆ ಆಶ್ಚರ್ಯವುಂಟುಮಾಡಿದೆ. ಕಾಶ್ಮೀರವು ಎಲ್ಲಾ ವಿಷಯಗಳಲ್ಲೂ ಭಾರತಕ್ಕೆ ಹೊಂದಿಕೊಂಡಿರಬೇಕು ಕಾಶ್ಮೀರದಲ್ಲಿ ಬಹುಸಂಖ್ಯಾಕರು ಮುಸಲ್ಮಾನರಿದ್ದರೂ ಶೇಕ ಅಬ್ದುಲ್ಲಾ ನೇತೃತ್ವದಲ್ಲಿ ಅವರೆಲ್ಲರೂ ಭಾರತದ ಸಂಬಂಧವನ್ನು ಅಪೇಕ್ಷಿಸುತ್ತಲಿದ್ದಾರೆ. ಭಾರತವು ಜಾತ್ಯಾತೀತರಾಷ್ಟ್ರ. ಅದು ಎಲ್ಲ ನಾಗರೀಕರಿಗೂ ಸಮಾನಹಕ್ಕುಗಳನ್ನು ಕೊಟ್ಟಿದೆ.

ಬಳ್ಳಾರಿಜಿಲ್ಲಾ ಬೋರ್ಡು

ಅವಿರೋಧವಾಗಿ ಆರಿಸಿಬಂದವರು.

1. ಆದವಾನಿ ತಾಲೂಕು ಶ್ರೀ ಶಂಕರರೆಡ್ಡಿ ಪೆದ್ದತುಂಬಳಂ
2 ಸಿರುಗುಪ್ಪ ,, ,, ವಿರುಪಾಕ್ಷರೆಡ್ಡಿ ಹಚ್ಚೊಳ್ಳಿಫಿರ್ಕಾ
3. ,, ,, ,, ವೈ ಮಹಾಬಲೇಶ್ವರಪ್ಪ ತೆಕ್ಕಲಕೋಟೆ
4. ,, ,, ,, ಹೆಚ್. ರಾಮಲಿಂಗರೆಡ್ಡಿ ಕರೂರು
5 ಬಳ್ಳಾರಿ ,, ,, ತಿಮ್ಮನಗೌಡು ಕೋಳೂರು.
6. ,, ,, ಶ್ರೀಮತಿ ಸಾವಿತ್ರಿಬಾಯಿ, ಬಳ್ಳಾರಿ ಸ್ತ್ರೀಯರ ಸ್ಥಳಕ್ಕೆ
7. ಹೊಸಪೇಟೆ ,, ಶ್ರೀ ಷಡಕ್ಷರಗೌಡ ಕಾಮಲಾಪುರ
8. ,, ,, ,, ವಿಜಯಾಚಂದ ಮೋತೀಲಾಲ ಕಂಪ್ಲಿ
9 ರಾಯದುರ್ಗ ,, ,, ಬಸವನಗೌಡ ಬೊಮ್ಮನಹಾಳು
10 ಕೂಡ್ಲಿಗಿ ,, ,, ಪಾ. ಸಿದ್ದನಗೌಡ ಗುಡೇಕೋಟೆ
11 ,, ,, ,, ಬಿ. ತಿಪ್ಪಣ್ಣ ದೊಸಹಳ್ಳಿ
12. ,, ,, ,, ಶರಣಯ್ಯ ಚೋರನೂರು
13 ಹರಪನಹಳ್ಳಿ ,, ,, ಸಿದ್ದನಗೌಡ ಹರಪನಹಳ್ಳಿ
14. ,, ,, ,, ರೇವನಗೌಡ ಪಾಟೀಲ ಅರಸಿಕೆರೆ.
15 ,, ,, ,, ಮಂದೇನೂರು ಕೊಟ್ರಬಸಪ್ಪ ಚಿಗಟೇರಿ
16 ಹಗರಿ ,, ,, ವೈ ಸಿದ್ದಲಿಂಗಪ್ಪ ಇಟ್ಟಿಗೆ
17 ,, ,, ,, ಅನ್ನದಾನಗೌಡ ಹಡಗಲಿ
18. ,, ,, ,, ಜಿ ಶಿವಲಿಂಗಪ್ಪ ಹೊಳಲು
19 ,, ,, ,, ಕೆ ಚನಬಸವನಗೌಡ ತಂಬ್ರಹಳ್ಳಿ
20. ,, ,, ,, ವೈ. ಸಿದ್ದಲಿಂಗಪ್ಪ ಇಟ್ಟಿಗೆ.

[ಬಳ್ಳಾರಿಜಿಲ್ಲಾ ಕರ್ನಾಟಕ ಕಾಂಗ್ರೆಸ್‌ನವರು ಉಮೇದ್ವಾರರನ್ನು ನಿಲ್ಲಿಸಲಿಲ್ಲ. 28 ಸ್ಥಳಗಳಿಗಾಗಿ 61 ಉಮೇದ್ವಾರರು ಸ್ಪರ್ಧಿಸಿರುವರು. ಆದವಾನಿ ಆಂಧ್ರ ಕಾಂಗ್ರೆಸ್‌ನವರು 15 ಜನರನ್ನು ನಿಲ್ಲಿಸಿರುವರು ಬರುವ ವಾರ 9 ನೆಯ ತಾ. ನಡೆದ ಚುನಾವಣಾ ಫಲಿತಾಂಶವನ್ನು ಪ್ರಕಟಿಸುವೆವು.]

ಹೆಚ್ಚು ಬೆಳೆಯದಿದ್ದರೆ

ನಾಶ ಖಂಡಿತ.

ಆಹಾರದ ಕೊರತೆಯನ್ನು ಯುದ್ಧದ ಪರಿಸ್ಥಿತಿಯೆಂದೇ ತಿಳಿದು ನಾವು ಹೋರಾಡಬೇಕಾಗಿದೆ. ಹೆಚ್ಚು ಬೆಳೆಸದಿದ್ದರೆ ನಾವ ನಾಶ ಹೊಂದುವುದು ಖಂಡಿತ. ಪ್ರತಿಯೊಬ್ಬ ರೈತನೂ ಧಾನ್ಯವನ್ನೊದಗಿಸುವ ಸರಕಾರದ ಕರ್ತವ್ಯದಲ್ಲಿ ಸಹಕರಿಸಬೇಕು. ಹೆಚ್ಚು ಬೆಳೆಸಿರಿ. ಎಂಬ ಕೂಗೇನೂ ಇಂದಿನದಲ್ಲ. ಕಳೆದ ನಾಲ್ಕೈದು ವರ್ಷಗಳಿಂದಲೂ ಈ ಕೂಗನ್ನು ಕೇಳುತ್ತೇವೆ ಆದರೆ ಜನರಿಗೆ ಬೇಕಾಗುವಷ್ಟನ್ನು ಇನ್ನೂ ಬೆಳೆಸಲಾಗಲಿಲ್ಲ. ವಿದೇಶದಿಂದ ತರಿಸಬೇಕಾಗುವ ಆಹಾರ ಹೆಚ್ಚುತ್ತಲೇ ಸಾಗುತ್ತಿದೆ ಆಹಾರಕ್ಕಾಗಿ ವಿದೇಶಗಳಿಗೆ ಸುರಿಯುತ್ತಿರುವ ಹಣ ವೃದ್ಧಿಸುತ್ತದೆ ಹೀಗೆಯೇ ಸಾಗಿದರೆ, ನಮ್ಮ ಯೋಜನೆಗಳೆಲ್ಲ ಹೇಗೆ ಸಾಗಬೇಕು?

ನಮ್ಮಲ್ಲಿ ಬೆಳೆಯುವ ಆಹಾರದ ಹತ್ತನೆಯ ಒಂದಂಶದಷ್ಟನ್ನು ಮಾತ್ರ ನಾವೀಗ ಹೊರದೇಶಗಳಿಂದ ತರಿಸಬೇಕಾಗಿದೆ ಈ ಅಂಶವನ್ನು ಇಲ್ಲಿಯೇ ಹೆಚ್ಚಿಸಿಕೊಳ್ಳುವುದು ಕಷ್ಟವಾಗಲಾರದೆಂದು ನನ್ನ ಎಣಿಕೆ. ಆಹಾರದ ಹೆಚ್ಚಳಕ್ಕಾಗಿ ನೀರಾವರಿಯ ಮಹಾ ಯೋಜನೆಗಳನ್ನೇನೋ ಸರಕಾರ ಮಾಡಿದೆ. ಆದರೆ, ಅದು ಪೂರ್ತಿಗೊಳ್ಳುವಂಗ ಕೆಲ ವರ್ಷಗಳು ಸಂದು ಹೋಗಬಹುದು. ಆ ತನಕ ಸಿಕ್ಕಷ್ಟು ಸ್ಥಳದಲ್ಲಿ ಸಾಧ್ಯವಾಗುವ ರೀತಿಯಲ್ಲಿ ಆಹಾರವನ್ನು ಬೆಳೆಸಬೇಕು. ಪ್ರತಿಯೊಬ್ಬ ರೈತನೂ ಪಟ್ಟಣವಾಸಿಯೂ ಇದು ರಾಷ್ಟ್ರೀಯ ಕರ್ತವ್ಯವೆಂದು ತಿಳಿದು ದುಡಿಯಬೇಕು ಹೂ ತೋಟಗಳಲ್ಲಿ ತರಕಾರಿಗಳನ್ನು ಬೆಳೆಸಬಹುದು. ಸ್ಥಳವೇನೂ ಇಲ್ಲದಿದ್ದವರು ಪೆಟ್ಟಿಗೆಗಳಲ್ಲಿ ಬೆಳೆಸಬಹುದು. ಪೆಟ್ಟಿಗೆಗಳಲ್ಲಿ ಬೆಳೆಸುವ ಈ ನವೀನ ವಿಧಾನದ ಕುರಿತು ಬೇಗನೆ ಪ್ರಚಾರ ನಡೆಯಲಿದೆ ಹೆಚ್ಚು ಆಹಾರ ಬೆಳೆಸಬೇಕು, ಇಲ್ಲವೆ ನಾಶ ಹೊಂದುವೆವು.

—ಪಂಡಿತ ನೆಹರು.

THE NAVABHARAT
ನವಭಾರತ
ಸಂಪಾದಕ- ಟಿ. ಹೃಷೀಕೇಶರಾವ್

ಹೆಚ್ಚು ಬೆಳೆಯಿರಿ ಎಂಬ ಸರ್ಕಾರದ ಪ್ರಚಾರ.

ಭಾರತ ಪ್ರಧಾನಿಗಳಾದ ಪಂಡಿತ ಜವಹರಲಾಲ ನೆಹರೂರವರು ಜನತೆಗೆ ವಿಜ್ಞಾಪನೆಮಾಡಿ ಹೆಚ್ಚು ಬೆಳೆಯಲು ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದು ಹೇಳಿರುವರು. ಪ್ರಾಂತೀಯ ಮಂತ್ರಿಗಳಾದರೂ, ಅವಕಾಶ ದೊರೆತಾಗಲೆಲ್ಲಾ ಬಹಳ ಗಟ್ಟಿಧ್ವನಿಯಿಂದ ಹೆಚ್ಚು ಬೆಳೆಯಿರಿ ಎಂದು ಕೂಗುತ್ತಿರುವರು.

ದೇಶದಲ್ಲಿ ಆಹಾರ ಕೊರತೆಯಿರುವುದು ಶೇಕಡ ೧೦ ಅಂಶವೆಂದು ಹೇಳಲಾಗಿದೆ. ಆದರೆ ದೇಶದಲ್ಲಿ ಉತ್ಪನ್ನವೆಷ್ಟು? ಬೇಕಾಗಿರುವ ಆಹಾರವೆಷ್ಟು? ಎಂಬ ಅಂಕೆ ಸಂಖ್ಯೆಗಳ ವಿಷಯಕ್ಕೆ ಸತ್ಯವಾದ ಸಮಾಚಾರವು ಹೊರಬೀಳುತ್ತಿಲ್ಲ. ನಮ್ಮ ಅಭಿಪ್ರಾಯವೆಂದರೆ ದೇಶದ ಜನತೆಗೆ ಬೇಕಾದ ಆಹಾರ ದೇಶದಲ್ಲಿ ಇದೆ. ಆಹಾರ ಧಾನ್ಯಗಳ ನಿಯಂತ್ರಣಕ್ಕೊಳಪಟ್ಟು ಕೊಟ್ಟಷ್ಟು ಆಹಾರವನ್ನೇ ನಿಯಂತ್ರಿತ ಕ್ಷೇತ್ರಗಳಲ್ಲಿ ತೆಗೆದುಕೊಳ್ಳುತ್ತಿರುವವೆಂದು ನಂಬಲಸಾಧ್ಯ. ಹೊಟ್ಟೆತುಂಬ ಉಣ್ಣುವ ಜನರು ಕಡಿಮೆ ಬೀಳುವ ಆಹಾರವನ್ನು ಬ್ಲಾಕ್ ಮಾರ್ಕೆಟಿನಲ್ಲಿ ಕೊಳ್ಳುತ್ತಿರುವರೆಂಬುದು ಖಂಡಿತ. ಹಾಗಾದರೆ ಈ ಬ್ಲಾಕ್ ಮಾರ್ಕೆಟಿನ ಧಾನ್ಯವೆಲ್ಲಿಂದ ಬರಬೇಕು? ದೇಶದಲ್ಲಿ ಆಹಾರ ಧಾನ್ಯಗಳ ಕೊರತೆಯಿದೆಯೆಂದು ಧಾನ್ಯ ಸಂಗ್ರಹಣ ಕಾರ್ಯವು ನಡೆದಿದೆಯಷ್ಟೆ. ಉಗ್ರಾಣಗಳಲ್ಲಿ ಧಾನ್ಯದ ಸಾವಿರಾರು ಚೀಲಗಳಲ್ಲಿ ಇಲಿ, ಹೆಗ್ಗಣ ಮತ್ತು ಹುಳಗಳಿಂದ ನಾಶವಾಗುತ್ತಲಿರುವ ಧಾನ್ಯವನ್ನು ತಪ್ಪಿಸಲು ಸರಿಯಾದ ಏರ್ಪಾಟುಗಳಿಲ್ಲ. ಮದುವೆ, ಮುಂಜಿ ವಗೈರೆ ಶುಭ ಕಾರ್ಯಗಳಲ್ಲಿ ಭೋಜನದ ನಿರ್ಬಂಧವನ್ನು 30 ಜನರಿಗಿಟ್ಟಿರುತ್ತಾರೆ. ಆದರೆ ಮದುವೆ ವಗೈರೆ ಶುಭಪ್ರಸ್ತಗಳಲ್ಲಿ ೨೦೦ ಜನರಿಗೆ ಸರಾಸರಿ 2-3 ದಿನಗಳ ವರೆಗೆ ಊಟದ ಏರ್ಪಾಡಿರುತ್ತದೆ. ಈ ಹೆಚ್ಚಿನ ಆಹಾರವೆಲ್ಲಿಂದ ಬರುವುದು? ಈ ಹೆಚ್ಚು ಖರ್ಚಿನ ಪೂರ್ವೋತ್ತರಗಳನ್ನು ತಿಳಿದುಕೊಂಡು ಇದನ್ನು ತಪ್ಪಿಸುವ ವ್ಯವಸ್ಥೆಯಾಗಬೇಕು.

ಬರಿಯ ಪ್ರಚಾರದಿಂದ ಹೆಚ್ಚು ಲಾಭವಾಗಲಾರದು. ಅದಕ್ಕೆ ಸರಿಯಾದ ಆರ್ಥಿಕ ಯೋಜನೆಗಳಾಗಬೇಕು. ಸರ್ಕಾರದವರು ಕೈಗೊಂಡಿರುವ ನೀರಾವರಿ ಯೋಜನೆಗಳು ಕಾರ್ಯರೂಪಕ್ಕೆ ಬರಲು ಕೆಲವರ್ಷಗಳುಬೇಕು, ಹೊಸ ಭಾವಿಗಳನ್ನು ತೆಗೆಯಲು ಸರ್ಕಾರದವರು ಹಣಸಹಾಯ ಮಾಡುತ್ತಿರುವರು. ಆದರೆ ಹಣಪಡೆದವರು ಭಾವಿಗಳನ್ನು ತೆಗೆಸಿರುವರೇ? ತೆಗೆಸಿದಮೇಲೆ ಸದರಿ ಭಾವಿಗಳಿಂದ ಆಹಾರ ಧಾನ್ಯಗಳ ಉತ್ಪತ್ತಿಯಾಗುತ್ತಿರುವುದೇ ಎಂಬವನ್ನು ತಿಳಿಯಲು ವ್ಯವಸ್ಥೆಯಿಲ್ಲ ತಪ್ಪಿತಸ್ಥರಿಗೆ ಶಿಕ್ಷೆಯಿಲ್ಲ. ಈ ಭಾವಿಗಳಿಂದ ಆಗಬೇಕಾದಷ್ಟು ಉತ್ಪನ್ನವಾಗಿಲ್ಲ. ಸರ್ಕಾರದವರು ಭಾವಿಗಳಿಗಾಗಿ ಹಣ ಕೊಟ್ಟನಂತರ ಪರೀಕ್ಷಿಸಿ ತಮ್ಮ ಮನಸ್ಸಿಗೆ ಸಮಾಧಾನವಾಗುವಂತಹ ವಿಚಾರಿಸಿ ನೋಡಬೇಕು. ಭಾವಿಗಳನ್ನು ತೆಗೆಸಲು ಎಷ್ಟು ಉತ್ಸಾಹವಿದೆಯೋ ಅಷ್ಟೇ ಆಸ್ಥೆಯನ್ನು ಕೆರೆಗಳ ರಿಪೇರಿ ಮಾಡಿಸಲು ತೋರಿಸುವುದಾವಶ್ಯಕ. ಸರ್ಕಾರದ ಬಜೆಟದಲ್ಲಿ ಇದಕ್ಕಾಗಿ ಹೆಚ್ಚು ಹಣವನ್ನು ಕಾಯ್ದಿರಿಸಬೇಕು. ವಿಜಯನಗರ ರಾಯರಕಾಲದಿಂದಲೂ ಇರುವ ಸಾವಿರಾರು ಕೆರೆಗಳ ಜೀರ್ಣೋದ್ಧಾರವಾಗಬೇಕಾಗಿದೆ. ಇನ್ನು ನದೀ ಮಾಗಾಣಿಯ ವಿಷಯ: ನದೀ ಕಾಲುವೆಗಳಿಂದ ನೀರಾವರಿಯಾಗುವ ಭೂಮಿಗಳಲ್ಲಿ ರೈತರ ಅಭಾವದಿಂದ ಸಾವಿರಾರು ಎಕರೆ ಭೂಮಿಯು ಪಾಳುಬಿದ್ದಿದೆ. ಅಂದರೆ ರೈತರು ಅಲ್ಲಿ ನೆಲೆಸಲು ಸಾಕಷ್ಟು ಸೌಕರ್ಯಗಳಿಲ್ಲವೆಂದರ್ಥ. ಬಳ್ಳಾರಿ ಜಿಲ್ಲೆಯ ತುಂಗಭದ್ರಾ ಕಾಲುವೆಗಳಿಂದ ನೀರಾವರಿಯಾಗುವ ಮಾಗಾಣಿಯಲ್ಲಿ ಹೊಸಪೇಟೆ ತಾಲೂಕಿನ ನೂರಾರು ಎಕರೆ ಭೂಮಿಯು ಹಾಳುಬೀಳುತ್ತಲಿದೆ. ಬಡರೈತರು ಬೇಸಾಯ ಕೂಲಿಗಳಿಗೆ ಸಾಕಷ್ಟು ಅನುಕೂಲಗಳನ್ನೊದಗಿಸಲು ಅಸಮರ್ಥರಿರುತ್ತಾರೆ. ಅವರಿಗೆ ಮುಖ್ಯವಾಗಿ ವೇತನಗಳುಬೇಕು. ಅಲ್ಲದೆ ಕೆಲಕಾಲಕ್ಕಾದರೂ ಜೀವನದ ಸೌಕರ್ಯಗಳುಬೇಕು. ಇವೆಲ್ಲಾ ಇಲ್ಲದೆ ಕೆಲ ಬಂಗ್ಲೆ ಕಾಂಪೌಂಡುಗಳಲ್ಲಿ ಆಹಾರ ಧಾನ್ಯ ಬೆಳೆಸುವುದರಿಂದ ಉಪಯೋಗವಾಗದು. ಸರ್ಕಾರವು ನಮ್ಮ ಸೂಚನೆಗಳನ್ನು ಅಗತ್ಯವಾಗಿ ಮಾನ್ಯಮಾಡಬೇಕೆಂದು ಕೇಳುತ್ತೇವೆ.

—●—

೧೦೫ ವರ್ಷ ಬದುಕಿದ ಭಾರತೀಯ

ಆಫ್ರಿಕೆಯಲ್ಲಿಯ ಈಸ್ಟರಾಂಡ್ ಭಾಗದಲ್ಲಿ ಹಣ್ಣು ಮತ್ತು ಕಾಯಿಪಲ್ಲೆ ಅಂಗಡಿಯಿಟ್ಟು ವ್ಯಾಪಾರಮಾಡುತ್ತಿದ್ದ, ಚೆಂಗಲರಾಯನ್ ಮೂಡ್ಲೆ ಎಂಬ ಭಾರತೀಯನು ತನ್ನ ೧೦೫ ವರ್ಷದಲ್ಲಿ ಮೊನ್ನೆ ಆಗಸ್ಟ ೨೭ ಆಫ್ರಿಕದ ಬೇನನ್ನ ಎಂಬಲ್ಲಿ ತೀರಿಕೊಂಡನು. ಶ್ರೀ ಮೂಡ್ಲೆ ಅವರು ದಕ್ಷಿಣ ಭಾರತದಲ್ಲಿ ಜನ್ಮಿಸಿದ್ದು ಈಗ ೭೧ ವರ್ಷಗಳ ಹಿಂದೆ ಆಫ್ರಿಕೆಗೆ ಹೋಗಿ ಅಲ್ಲಿಯೇ ನೆಲೆಸಿದ್ದನು. ಇವರಿಗೆ ಹದಿನಾರು ಮಕ್ಕಳು ಎಪ್ಪತ್ತು ಮೊಮ್ಮಕ್ಕಳೂ ಮೂವತ್ತಾರು ಮರಿಮಕ್ಕಳು ಇರುವರಂತೆ

●—

ಇಂಗ್ಲೀಷಿನ ಅಂಕೆ ಗಾಂಧೀ ಶಿಷ್ಯರ ಅಭಿಪ್ರಾಯ

ವರ್ಧಾ- ಭಾರತದಾದ್ಯಂತ, ಎಲ್ಲೆಲ್ಲಿ ಅಂಕಿಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸಲ್ಪಡಬೇಕಾಗಿದೆಯೋ ಅಂಥಲ್ಲೆಲ್ಲ ಅಂತರಾಷ್ಟ್ರೀಯ ಅಂಕೆಗಳನ್ನು ಅಂಗೀಕರಿಸಬೇಕು. ಅಲ್ಲದೆ, ಸಾರ್ವಜನಿಕ ಲೆಕ್ಕಪತ್ರಗಳಿಗಾಗಿ ಅಂತರಾಷ್ಟ್ರೀಯ ಅಂಕೆಗಳನ್ನೇ ಉಪಯೋಗಿಸಬೇಕು. ಮತ್ತು ನಾಗರಿ ಲಿಪಿಯಲ್ಲಿ ಅಚ್ಚಾದ ಇತರ ಪ್ರಕಟನೆಗಳಲ್ಲಿ ಹಿಂದೀ ಅಂಕೆಗಳನ್ನು ಬಳಸಬೇಕು. ಆದರೆ ಅವುಗಳ ರೂಪರೇಷೆಗಳನ್ನು ಒಂದೇ ಮಟ್ಟಕ್ಕೆ ತರಬೇಕು.

ಎಂದು ಸೂಚಿಸುತ್ತ ಮ. ಗಾಂಧೀಯವರ ಸಚಿವ್ಯರಲ್ಲೊಬ್ಬರಾದ ಶ್ರೀ ಕೆ. ಜಿ. ಮಶ್ರುವಾಲಾರವರು. ಇಂದು ಒಂದು ಹೇಳಿಕೆ ಮೂಲಕ ತಿಳಿಸಿದರು.

ಸೋಶ್ಯಾಲಿಝಮ್
ಅಥವಾ
ಸುಲಭ ಸಮಾಜವಾದ

ದುಡ್ಡಿನ ಅನರ್ಥದ ಉತ್ಪತ್ತಿ ಕಾರಣ ಮೀಮಾಂಸೆ

ಯಂತ್ರದಿಂದ ಹಸ್ತವ್ಯವಸಾಯದ ಪರಾಜಯ

ಯಾಂತ್ರಿಕ ಸಾಧನದಿಂದ ಸಂಪತ್ತಿನ ಉತ್ಪಾದನೆಯಾಗಹತ್ತಿತು, ಅದರಿಂದ, ಸ್ವಲ್ಪ ದುಡಿತದಿಂದ ಅಲ್ಪವೆಚ್ಚದಿಂದ ಅಂದವಾದ ವಸ್ತುಗಳ ಹುಟ್ಟುವಳಿಯಾಗಿ ಅವುಗಳನ್ನು ಅಗ್ಗದರದಿಂದ ಮಾರುವದು ಯಂತ್ರದೊಡೆಯರಿಗೆ ಸಾಧ್ಯವಾಗಿದೆ; ಮತ್ತು ಅದಕ್ಕಿಂತ ಕಡಿಮೆ ತರಗತಿಯ ಹುಟ್ಟಿಯಾದ ಹಸ್ತವ್ಯವಸಾಯದ ವಸ್ತುಗಳು ಪೇಟೆಯಲ್ಲಿ ಮಾರಲ್ಪಡದೆ ಈ ಹಸ್ತವ್ಯವಸಾಯಗಾರರ ಉದ್ಯೋಗಗಳು ಮುಳುಗಿದುವು. ಇವರಿಗೆ ಯಂತ್ರಗಳನ್ನು ದೊರಕಿಸಿ ಕಾರಖಾನೆ ತೆಗೆಯಲಿಕ್ಕೆ ಯಾವ ಕಾಯಿದೆಯ ಆತಂಕವಿದ್ದಿಲ್ಲ. ಆದರೆ ಅದು ಅವರಿಗೆ ಸಾಧ್ಯವಿದ್ದಿಲ್ಲ.

ಹಸ್ತವ್ಯವಸಾಯ ಮಾಡುವವರು ದಿನಾಲು ದುಡಿಯಬೇಕು, ತಿನ್ನಬೇಕು; ಮತ್ತು ಮರುದಿವಸ ದುಡಿಯಬೇಕು. ಹೀಗೆ ಜೀವನವನ್ನು ನಡೆಸುವವರಾಗಿದ್ದರು. ಅವರು ಉಪಯೋಗಿಸುವ ಸಾಧನಗಳು ಸಾದಾ ಮತ್ತು ಕಡಿಮೆ ಖರ್ಚಿನವು ಇದ್ದವು; ಮತ್ತು ಅವನ್ನು ನಡೆಸಲಿಕ್ಕೆ ಸಹ ವಿಶೇಷ ಜ್ಞಾನ ಅಥವಾ ಬಹಳ ಕೌಶಲ್ಯದ ಅವಶ್ಯ ಇದ್ದಿಲ್ಲ ಮತ್ತು ಈ ಜ್ಞಾನ ಮತ್ತು ಕೌಶಲ್ಯವು ಪರಂಪರೆಯಿಂದ ಬರುತಿತ್ತು. ಆದ್ದರಿಂದ ಇಂಥ ಕೆಲಸಗಾರರು ಯಂತ್ರದಿಂದ ತಯಾರಾದ ವಸ್ತುಗಳೊಡನೆ ಪೋಟಿ ಮಾಡುವಾಗ ಸೋತುಹೋದರು. ಇವರ ಹತ್ತಿರ ಕೈಕಾಲಿನ ಹೊರತಾಗಿ ಮತ್ತಾವ ಸಾಧನಗಳಿಲ್ಲದ್ದರಿಂದ ದಿನಗೂಲಿಗಾಗಿ ಯಂತ್ರದ ಮಾಲಿಕರ ಕಡೆಗೆ ಹೋದರು. ಈ ಯಂತ್ರದೊಡೆಯರ ಹತ್ತಿರ ಬೇಕಾದಷ್ಟು ಬಂಡವಾಲವಿದ್ದು ಅವರಿಗೆ ಯಂತ್ರಗಳ ಮೇಲೆ ಕೆಲಸಮಾಡಲಿಕ್ಕೆ ಜನರು ಬೇಕಾಗಿತ್ತು. ಕಚ್ಚಾಮಾಲು ಪಡೆಯುವದು, ಅದಕ್ಕೆ ನಗದುಹಣ ತೆರುವದು, ಕೂಲಿಕಾರರಿಗೆ ದಿನಕೂಲಿ ಕೊಡುವದು ಇದೆಲ್ಲ ವೆಚ್ಚ, ಪಕ್ಕಾಮಾಲು ಮಾರಿ ಅದರ ಹಣ ಬರುವುದರ ಮುಂಚೆಯೇ ಮಾಡಬೇಕಾಗುತ್ತಿತ್ತು. ಆದ್ದರಿಂದ ಕಾರಖಾನೆ ಸ್ಥಾಪನೆ ಮಾಡುವದು ಕೇವಲ ಬಂಡವಾಳಗಾರರಿಗೆ ಮಾತ್ರ ಸಾಧ್ಯವಿತ್ತು. ಆದರೆ ಯಂತ್ರಗಳ ಮೂಲಕ ಅಲ್ಲಿ ಬೇಕಾಗುವ ಜನರ ಸಂಖ್ಯೆ ಕಡಿಮೆ ಮತ್ತು ನಿರುದ್ಯೋಗಿಗಳ ಸಂಖ್ಯೆ ಹೆಚ್ಚು, ಇದು ಸ್ವಾಭಾವಿಕವಾಗಿಯೇ ಆಯಿತು. ಆದ್ದರಿಂದ ಕಾರಖಾನೆಗಳಲ್ಲಿ ಕೆಲಸಮಾಡುವ ಕೂಲಿಕಾರರು ತಮ್ಮ ತಮ್ಮಲ್ಲಿ ಸ್ಪರ್ಧೆಮಾಡಿ ಕಡಿಮೆ ಕೂಲಿ ಕೇಳಹತ್ತಿದರು. ಎತ್ತು, ಕತ್ತೆ, ಕುದುರೆ ಇವುಗಳ ವಂಶ ನಾಶವಾಗಬಾರದೆಂದು ಕಷ್ಟಮಾಡಲು ಅವಶ್ಯವಿದ್ದಷ್ಟೇ ಅನ್ನವನ್ನು ಅವುಗಳ ಒಡೆಯರು ಅವಕ್ಕೆ ಹಾಕುತ್ತಾರೆ. ಧನಸಂಚಯ ಪ್ರಶ್ನೆಯಂತೂ ದನಗಳಿಗೆ ಇರುವುದೇ ಇಲ್ಲ. ಅದರಂತೆ ಈ ಕೂಲಿಕಾರರಿಗೆ ಜೀವಂತವಿರುವಷ್ಟು ಮತ್ತು ಅವರ ವಂಶ ಉಳಿಯುವಷ್ಟೆ ಕೂಲಿ ಸಿಗಹತ್ತಿತು ಮತ್ತು ಅಷ್ಟು ಸಹ ಎಲ್ಲರಿಗೂ ಸಿಕ್ಕದೆ ಅನೇಕರು ನಿರುದ್ಯೋಗಿಗಳಾಗಹತ್ತಿದರು. ದಿನಗೂಲಿಯವರ ಅವಸ್ಥೆ ಅಗಸರ ಕತ್ತೆಗಿಂತ ಕಡೆಯಾಗಿತ್ತು. ಒಂದೊಂದು ಕತ್ತೆಗೆ ಕೆಲಸವಿಲ್ಲದಿದ್ದರೆ ಮುಂದೆ ಆದರೂ ಅದು ತನಗೆ ಬೇಕಾಗಬಹುದೆಂದು ಅದರ ಹೊಟ್ಟೆಪಾಡ ವ್ಯವಸ್ಥೆ ಅವನಿಗೆ ನೋಡುವ ಗರಜು ಇದೆ; ಅದಕ್ಕಾಗಿ ಸ್ವಲ್ಪ ವೆಚ್ಚವಾದರೂ ಅವನು ಮಾಡುತ್ತಾನೆ. ಆದರೆ ಇಂಥ ಯಾವ ಒತ್ತಾಯ ಬಂಡವಾಲಗಾರ ಒಡೆಯರ ಮೇಲೆ ಇಲ್ಲ. ಕೂಲಿಕಾರರು ಬೇಡವಾದರೆ ಅವರನ್ನು ಹೊರಗೆ ಹಾಕುವದು ಮತ್ತು ಬೇಕಾದಾಗ ಪೇಟೆಯಲ್ಲಿ ಕೆಲಸವಿಲ್ಲದೆ ನಿಂತವರನ್ನು ಕರೆದು ತರುವುದು ಅವರಿಗೆ ಸಾಧ್ಯವಿದ್ದ ಮಾತು. ಕೂಲಿಕಾರರ ಶ್ರಮದಿಂದ ಆದಷ್ಟು ಹೆಚ್ಚು ಲಾಭಪಡೆಯುವದು ಒಂದೇ ಒಂದು ದೃಷ್ಟಿ ಬಂಡವಾಲಗಾರರದು. ಈ ದೃಷ್ಟಿ ಇರುವದರಿಂದ ಬಂಡವಾಲಶಾಹಿಯ ತವರಾದ ಇಂಗ್ಲಂಡಿನಲ್ಲಿ ಮೊದಲಿನ ೬೦-೭೦ ವರುಷಗಳಲ್ಲಿ ಬರೀ ಗಂಡಸರನ್ನಷ್ಟೇ ಅಲ್ಲ, ಹೆಂಗಸರು ಹುಡುಗರನ್ನು ಸಹ ದಿನಾಲು ಹದಿನೈದು ತಾಸು ದುಡಿಸಿ, ನೂರಾರು, ಸಾವಿರಾರು, ಲಕ್ಷಾವಧಿ ಕುಟುಂಬಗಳು ಬಂಡವಾಳಗಾರರಿಗೆ ಲಾಭಕೊಟ್ಟು, ಹಿಂಡಿ ಹಿಪ್ಪೆಯಾಗಿ ಮಣ್ಣುಪಾಲಾಗಿ ಹೋಗಿವೆ.

ಕೂಲಿ ಬೆಳೆಯಿತು ಎಂದು ಯಂತ್ರ ಹೆಚ್ಚಿದವು ಅಂದರೆ ನಿರುದ್ಯೋಗಿಗಳೂ ಹೆಚ್ಚಿದರು:—

ಮುಂದೆ ಮುಂದೆ ಕೂಲಿಕಾರರ ಸಂಘಗಳಾಗಿ ಕೂಲಿಕಾರರಲ್ಲಿಯ ಸ್ಪರ್ಧೆ ಸ್ವಲ್ಪ ಮಟ್ಟಿಗೆ ಕಡಿಮೆಯಾಯಿತು. ಸರಕಾರವು ಕಾಯಿದೆ ಮಾಡಿಕೊಂಡು ಕೂಲಿಕಾರರ ಜೀವನದ ಮಟ್ಟವನ್ನು ಸುಧಾರಿಸಲು ಮತ್ತು ಕೆಲಸದ ತಾಸುಗಳನ್ನು ಕಡಿಮೆ ಮಾಡಲು ಕಾರ್ಖಾನೆಯ ಒಡೆಯರ ಮೇಲೆ ಬಂಧನಗಳನ್ನು ಹಾಕಿತು. ಇದರಿಂದ ಕೂಲಿಕಾರರ ಜೀವನದ ಮಟ್ಟ ಸ್ವಲ್ಪ ಮಟ್ಟಿಗೆ ಸುಧಾರಿಸಿತು. ಆದರೆ ನಿರುದ್ಯೋಗತನದ ಸಮಸ್ಯೆ ಸೋಂಕು ರೋಗದಂತೆ ದಿನದಿನಕ್ಕೆ ಭಯಂಕರ ಬೆಳೆಯಹತ್ತಿತು. ಯಾಕಂದರೆ ಕೂಲಿಕಾರರ ಸಂಬಳ ಏರಿತು ಮತ್ತು ಅವರ ಜೀವನದ ಮಟ್ಟ ಸುಧಾರಿಸಬೇಕಾಯಿತು; ಇದರಿಂದ ಕಾರ್ಖಾನೆಯೊಡೆಯರ ಧನೋತ್ಪಾದನದ ವೆಚ್ಚವೂ ಹೆಚ್ಚಿತು. ಆದ್ದರಿಂದ ಕೂಲಿಕಾರರಿಗೆ ಕೊಡಬೇಕಾದ ವೇತನಕ್ಕಿಂತ ಕಡಿಮೆ ಖರ್ಚಿನಲ್ಲಿ ಕೆಲಸಮಾಡುವ ಮತ್ತು ಕೂಲಿಕಾರರಿಗಿಂತ ಹೆಚ್ಚು ಕೌಶಲ್ಯದಿಂದ ಕೆಲಸಮಾಡುವ ಯಂತ್ರಗಳನ್ನು ಕಾರ್ಖಾನೆಯೊಡೆಯರು ತಯಾರಿಸಿದರು. ಇದರಿಂದ ಅಂದವಾದ ಅಗ್ಗದ ವಸ್ತುಗಳು ಹೆಚ್ಚಾಗಿ ಸಿದ್ಧವಾದವೇನೋ ನಿಜ; ಆದರೆ ಇದರಿಂದ ಈ ದೇಶಗಳಲ್ಲಿದ್ದ ಹಸ್ತ ವ್ಯವಸಾಯಗಳು ಪ್ರಾಯಃ ಲುಪ್ತವಾದವು; ಮತ್ತು ದಿನದಿನಕ್ಕೆ ಕೂಲಿಕಾರರಸಂಖ್ಯೆ ಬೆಳೆಯಹತ್ತಿ ಹೆಚ್ಚೆಚ್ಚು ಜನ ಕೂಲಿಕಾರರ ವರ್ಗವನ್ನು ಸೇರಿದರು. ವಸ್ತುಗಳ ಉತ್ಪಾದನೆ ಹೆಚ್ಚಾದಷ್ಟು, ದೇಶದಲ್ಲಿ ವೇತನ ಬೆಳೆಯದ್ದರಿಂದ ಉತ್ಪನ್ನವಾದ ವಸ್ತುಗಳಿಗೆ ಸಾಕಷ್ಟು ಗ್ರಾಹಕರು ದೊರೆಯಲಿಲ್ಲ. ಮತ್ತು ಉತ್ಪನ್ನವಾದ ವಸ್ತುಗಳ ಅವಶ್ಯ ಇದ್ದರೂ ಅವನ್ನು ಕೊಳ್ಳುವ ಸಾಮರ್ಥ್ಯವಿಲ್ಲದ್ದರಿಂದ ಅವುಗಳ ಕೊರತೆಯಿಂದ ಬಳಲುವ ಜನರಿದ್ದರೂ, ಅವರ ಇದಿರು ಬಂಡವಾಲಗಾರರು ಆ ವಸ್ತುಗಳಿಗಾಗಿ ಪರದೇಶಗಳಲ್ಲಿ ಪೇಟೆ ಹುಡುಕಲು ಹೊರಟರು. ಸಾವಕಾಶವಾಗಿ ಬಂಡವಾಲಶಾಹಿಯು ಇಂಗ್ಲಂಡ ಬಿಟ್ಟು ಬೇರೆ ದೇಶದಲ್ಲಿ ಹಬ್ಬಲಾರಂಭಿಸಿತು. ಈ ದೇಶಗಳೊಡನೆ ಸ್ಪರ್ಧೆ ಮಾಡುವ ಅವಶ್ಯಕತೆ ಇಂಗ್ಲಂಡಕ್ಕೆ ಉಂಟಾಯಿತು, ವಸ್ತುಗಳ ಮಾರಾಟ ಅಂದರೆ ಆದಷ್ಟು ಅಗ್ಗದರದಲ್ಲಿ ವಸ್ತುಗಳ ಪೂರೈಕೆ ಮಾಡುವ ಅಂತರರಾಷ್ಟ್ರೀಯ ಸ್ಪರ್ಧೆಯ ಮೂಲಕ ಎಲ್ಲ ದೇಶಗಳಲ್ಲಿ ಯಂತ್ರ ಸುಧಾರಣೆ ಹೆಚ್ಚಾಯಿತು. ಮತ್ತು ಕೂಲಿಕಾರರಿಗಿಂತ ಕಡಿಮೆ ಖರ್ಚು ಬರಹತ್ತಿದ್ದರಿಂದ ಕೂಲಿಕಾರರಿಗೆ ಈ ಯಂತ್ರಗಳೊಡನೆ ಸ್ಪರ್ಧೆ ಮಾಡಬೇಕಾಯಿತು, ಇದರಿಂದ ಕೂಲಿಕಾರರ ವೇತನವು ದಿನೇದಿನೇ ಕಡಿಮೆಯಾಗುತ್ತ ಹೊರಟಿತು.

ರೈತರಿಗೆ ಪಂಪುಸೆಟ್

ಬೇಸಾಯಗಾರರಿಗೆ ಸಾಗುವಳಿ ಉದ್ದೇಶಕ್ಕೋಸ್ಕರ ಇಲೆಕ್ಟ್ರಿಕ್ ಪಂಪು ಸೆಟ್ಟಾಗಲೀ ಎಣ್ಣೆ ಇಂಜಿನ್ ಸೆಟ್ಟಾಗಲೀ ಬೇಕೆಂದಾದರೆ, ಜಿಲ್ಲಾ ಎಗ್ರಿಕಲ್‌ಚರಲ್ ಆಫೀಸರಿಗೆ ಅರ್ಜಿ ಮಾಡಬೇಕು. ಅರ್ಜಿ ಫಾರ್ಮಿನ ಪ್ರತಿಗಳು ಸ್ಥಳೀಕ ಎಗ್ರಿಕಲ್ಚರಲ್ ಡೆಮಾನ್‌ಸ್ಟ್ರೇಟರಲ್ಲಾಗಲೀ ಜಿಲ್ಲಾ ಎಗ್ರಿಕಲ್ಚರಲ್ ಆಫೀಸರಲ್ಲಾಗಲೀ ದೊರೆಯುತ್ತವೆ. ಈ ಅರ್ಜಿಗಳನ್ನು ಸಂಬಂಧಪಟ್ಟ ತಾಲೂಕಿನ ತಹಶೀಲ್ದಾರರಿಗೆ ವಿಚಾರಣೆಗೆ ಕಳುಹಿಸಲಾಗುತ್ತದೆ. ತಹಸೀಲ್ದಾರರು ಅರ್ಜಿದಾರನ ಸ್ಥಿತಿಗತಿಗಳನ್ನು ವಿಚಾರಿಸಿ ಅವನಿಗೆ ಕೊಡಬಹುದೋ ಇಲ್ಲವೋ ಎಂದು ನಿಶ್ಚಯಿಸುತ್ತಾರೆ. ಸಂಶಯವಿದ್ದಲ್ಲಿ ಕಲೆಕ್ಟರ ಸಲಹೆ ಕೇಳಲಾಗುತ್ತದೆ. ಅರ್ಜಿಯನ್ನು ಒಪ್ಪಿದರೆ, ಎಗ್ರಿಕಲ್ಚರಲ್ ಡಿಪಾರ್ಟ್‌ಮೆಂಟಿನ ಆಫೀಸರು ಅರ್ಜಿದಾರನ ಆಸ್ತಿಯನ್ನು ಸಂದರ್ಶಿಸಿ ಸ್ಥಳೀಕ ಸ್ಥಿತಿಗತಿಗಳನ್ನು ಪರೀಕ್ಷಿಸುತ್ತಾರೆ. ಅನಂತರ ಅರ್ಜಿದಾರನಿಗೆ ಬೇಕಾಗುವ ಯಂತ್ರ ಹಾಗೂ ಸಲಕರಣೆಗಳ ಬೆಲೆ, ಅವನ್ನು ಸಾಗಿಸುವ ಹಾಗೂ ಸ್ಥಾಪಿಸುವ ವೆಚ್ಚಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕೊಡಲಾಗುತ್ತದೆ. ಇದಕ್ಕೆ ಒಪ್ಪುವದಾದರೆ ಅರ್ಜಿದಾರನು ಪಂಪು ಸೆಟ್ಟನ್ನು ಯಾವ ಆಸ್ತಿಯಲ್ಲಿರಿಸಲು ಇಚ್ಛಿಸುತ್ತಾನೋ ಆ ಆಸ್ತಿಯ ಯಜಮಾನನಲ್ಲವಾದರೆ, ಸರಕಾರವು ಯಜಮಾನನ ಒಪ್ಪಿಗೆಯನ್ನು ಪಡೆಯುತ್ತದೆ. ಯಂತ್ರಸಲಕರಣೆಗಳನ್ನು ಸಾಗಿಸುವದಕ್ಕೆ ಮತ್ತು ಆಸ್ತಿಯಲ್ಲಿ ಅವನು ಸ್ಥಾಪಿಸುವದಕ್ಕೆ ಬೇಕಾದ ವೆಚ್ಚದಲ್ಲಿ ಸ್ವಲ್ಪಾಂಶವನ್ನು ಮುಂಚಿತವಾಗಿ ಕೊಡಬೇಕಾಗಿದೆಯಲ್ಲದೆ, ಯಂತ್ರ ಸಲಕರಣೆಗಳ ಬೆಲೆಯಲ್ಲಿ ಶೇಕಡ 10 ರಷ್ಟಕ್ಕೆ ಮೀರದಷ್ಟು ಮೊಬಲಗನ್ನು ಸಹ ಠೇವಣಾತಿಯಲ್ಲಿಡಬೇಕಾಗಿದೆ. ಈ ಠೇವಣಾತಿಯ ಮೇಲೆ ಬಡ್ಡಿ ಕೊಡಲಾಗುವದಿಲ್ಲ. ಜಿಲ್ಲಾ ಎಗ್ರಿಕಲ್ಚರಲ್ ಆಫೀಸರು ಬಡ್ಡಿ ದೊರೆಯುವ ಭದ್ರತಾಪತ್ರಗಳನ್ನು ಠೇವಣಾತಿಯಾಗಿ ಅಂಗೀಕರಿಸಬಹುದು.

ಯಂತ್ರ ಸಲಕರಣೆಗಳ ಬೆಲೆಯನ್ನು ಮಾಸಿಕ ಇಲ್ಲವೇ ವಾರ್ಷಿಕ ಕಂತುಗಳಲ್ಲಿ ಬಡ್ಡಿ ಸಮೇತ ಮರುಪಾವತಿ ಮಾಡಬೇಕಾಗಿದೆ. ಬೆಲೆ ರೂ 1,500 ಕ್ಕೆ ಮೀರದ ಇಲೆಕ್ಟ್ರಿಕ್ ಮೋಟಾರ್ ಪಂಪು ಸೆಟ್ ಇಲ್ಲವೇ ಬೆಲೆ ರೂ 3,000 ಕ್ಕೆ ಮೀರದ ಎಣ್ಣೆ ಇಂಜಿನ್ ಪಂಪು ಸೆಟ್‌ಗಳಾದರೆ ಮೂರು ವರ್ಷದೊಳಗೂ, ಇತರ ವಿಷಯಗಳಲ್ಲಿ ಸರಕಾರದಿಂದ ಮುಂಚಿತವಾಗಿ ಅನುಮತಿ ಪಡೆದು ಐದು ವರ್ಷದೊಳಗೂ ಸರಕಾರವು ಗೊತ್ತುಪಡಿಸಿದ ಬಡ್ಡಿ ಸಮೇತ ತೆರಬೇಕಾಗಿದೆ. ಒಪ್ಪಿಗೆ ಕರಾರು ಅವಶ್ಯವಿದ್ದಲ್ಲಿ ಆಸ್ತಿ ಯಜಮಾನನ ಒಪ್ಪಿಗೆ, ಮುಂಗಡ ಠೇವಣಾತಿಗಳು ಮೊದಲಾದ ಪ್ರಾಥಮಿಕ ಕೆಲಸಗಳು ಮುಗಿದನಂತರ ಆದಷ್ಟು ಬೇಗನೆ ಸರಕಾರವು ಯಂತ್ರ ಸಲಕರಣೆಗಳನ್ನು ಸ್ಥಾಪಿಸುವ ಏರ್ಪಾಡು ಮಾಡುತ್ತದೆ. ಕೆಲಸ ಮುಗಿದನಂತರ ವೆಚ್ಚದ ಪಟ್ಟಿಯನ್ನು ಅರ್ಜಿದಾರನಿಗೆ ಒಪ್ಪಿಸಲಾಗುತ್ತದೆ. ಠೇವಣಾತಿ ಮೊಬಲಗನ್ನು ಕೊನೆಯ ಒಂದು - ವಾ - ಹೆಚ್ಚಿಗೆ ಕಂತುಗಳಿಗೆ ಸರಿಪಡಿಸಿಕೊಳ್ಳಲಾಗುತ್ತದೆ. ಇಲೆಕ್ಟ್ರಿಕ್ ಪಂಪಿಂಗ್ ಸೆಟ್‌ಗಳನ್ನು ಒದಗಿಸಬೇಕಾದರೆ ಅರ್ಜಿದಾರನು ವಿದ್ಯುತ್ ಸರಬರಾಯಿಗಾಗಿ ಮುಂಚಿತವಾಗಿ ಒಪ್ಪಿಗೆ ಪಡೆಯಬೇಕು. ಯಂತ್ರಸಲಕರಣೆಗಳ ಪೂರ್ಣಬೆಲೆ ತೆರುವವರೆಗೆ ಅವು ಸರಕಾರದ ಸ್ವತ್ತಾಗಿರುವುವು. ಕೆಲವು ಸಂದರ್ಭಗಳಲ್ಲಿ ಅರ್ಜಿದಾರನೇ ಯಂತ್ರವನ್ನು ಸ್ಥಾಪಿಸುವ ಏರ್ಪಾಟುಮಾಡಿಕೊಳ್ಳಬಹುದು. ಆದರೆ ಅದಕ್ಕೆ ಬೇಕಾದ ಹಂಚಿಕೆ ಇತ್ಯಾದಿಗಳನ್ನು ಡೈರೆಕ್ಟರ್ ಆಫ್ ಎಗ್ರಿಕಲ್ಚರ್ ಅವರು ಮಂಜೂರು ಮಾಡಬೇಕಾಗಿದೆ. ಅಲ್ಲದೆ ಸ್ಥಾಪಿಸುವ ಕೆಲಸದ ಮೇಲ್ವಿಚಾರವನ್ನು ಎಗ್ರಿಕಲ್‌ಚರಲ್ ಇಲಾಖೆಯ ಆಫೀಸರು ನಡೆಸಬೇಕಾಗಿದೆ. ದುರುಸ್ತಿ ಹಾಗೂ ಇತರ ಹೆಚ್ಚಿಗೆ ಕೆಲಸವನ್ನು ಎಗ್ರಿಕಲ್ಚರಲ್ ಇಲಾಖೆಯು ಕೈಕೊಳ್ಳುತ್ತದೆ. ಆದರೆ ಅದರ ನಿಜವಾದ ವೆಚ್ಚ ಮತ್ತು ಶೇಕಡ $16\frac{2}{3}$ ರಷ್ಟು ಮೊಬಲಗು ತೆರಬೇಕಾಗಿದೆ. ಮಂಜೂರಾತಿ ಪಡೆದನಂತರ 6 ತಿಂಗಳೊಳಗೆ ಅರ್ಜಿದಾರನು ಯಂತ್ರ ಸ್ಥಾಪಿಸದಿದ್ದರೆ ಆಬಳಿಕ ಅವನು ತಿರುಗಿ ಹೊಸ ಅರ್ಜಿ ಹಾಕಬೇಕಾಗಿದೆ.

ಪಟೇಲ–ನೆಹರೂ.

ಈ ವಾರ ಪಂಡಿತ ನೆಹರೂರವರು ಬೊಂಬಾಯಿಗೆ ಬಂದು ಸರ್ದಾರ ಪಟೇಲರೊಡನೆ ಬಹು ಮುಖ್ಯವಾದ ವಿಷಯಗಳನ್ನು ಚರ್ಚಿಸಿ ದಿಲ್ಲಿಗೆ ಮರಳಿದರು. ಸರ್ದಾರರ ಆರೋಗ್ಯವು ಸುಧಾರಿಸುತ್ತದೆ. ಇನ್ನು 15 ದಿನಗಳಲ್ಲಿ ಡಿಲ್ಲಿಗೆ ಹೋಗುವರು.

ಲೇಟ್ ನಗರೂರು ನಾರಾಯಣರಾಯರ ಸ್ಮಾರಕ.

ಶ್ರೀ ನಾರಾಯಣಯ್ಯಂಗಾರರ ಸೂಚನೆ.

ಲೇಟ್ ನಗರೂರು ನಾರಾಯಣರಾಯರು ಅನೇಕ ವರ್ಷಗಳಕಾಲ ಪುರಸಭಾಧ್ಯಕ್ಷರಾಗಿದ್ದು ಬಳ್ಳಾರಿ ನಗರದ ಸುಧಾರಣೆಯನ್ನು ಅನೇಕವಿಧಗಳಿಂದ ಮಾಡಿರುತ್ತಾರೆ. ನೀರು ಮತ್ತು ವಿದ್ಯುದ್ದೀಪಗಳ ವ್ಯವಸ್ಥೆಯು ಇವರ ಕಾಲದಲ್ಲೇ ಪ್ರಾರಂಭವಾಯಿತು. ರಾಯರು ಪ್ರಾಮಾಣಿಕತೆ ಮತ್ತು ಕರ್ತವ್ಯ ನಿರ್ವಹಣೆಯಲ್ಲಿ ಶ್ರದ್ಧೆನಿಷ್ಠೆಗಳುಳ್ಳವರು. ಇವರ ಹೆಸರಲ್ಲಿ ಸ್ಮಾರಕಗಳಿರಬೇಕೆಂದು ಬಳ್ಳಾರಿಯ ಸುಪ್ರಸಿದ್ಧ ವಕೀಲರಾದ ಶ್ರೀ ಎಂ. ಎ. ನಾರಾಯಣಯ್ಯಂಗಾರ್ಯರು ಸೂಚನೆ ಕಳುಹಿಸಿ ಶಾಲೆ ಮಾರ್ಕೆಟ್ ವಗೈರೆಗಳಿಗೆ ಅವರ ಹೆಸರನ್ನಿಡುವದು ಯುಕ್ತವೆಂದರು. ಮುನಿಸಿಪಲ್ ಕೌನ್ಸಿಲದವರು ಶ್ರೀ ಅಯ್ಯಂಗಾರರ ಸೂಚನೆ ಮಾನ್ಯಮಾಡಿ ಪುರಸಭೆಯಲ್ಲಿ ಅವರ ಭಾವಚಿತ್ರದ ಅನಾವರಣಮಾಡಲು ನಿಶ್ಚಯಿಸಿ ಗೋಶ್ಚನ್ ಪಾರ್ಕನ್ನು ನಾರಾಯಣರಾವ್ ಪಾರ್ಕೆಂದು ಕರೆಯಲು 30–8–'49 ನೆಯ ಮಾಮೂಲು ಸಭೆಯಲ್ಲಿ ತೀರ್ಮಾನಿಸಿದರು.

ಹೊಸಪೇಟೆ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ.

Sc. 307/49

ವಾದಿ:-- ಏ. ಹನುಮಂತಪ್ಪ.

ಪ್ರತಿವಾದಿಗಳು:—

1. ನಾಯಕರ ಹೊನ್ನೂರಪ್ಪ.
2. ನಡುವಲಮನಿ ಹನುಮಂತಪ್ಪ

ಮೇಲ್ಕಾಣಿಸಿದ ನಂಬರಿನ ದಾವೆಯು 23-9-'49 ಕ್ಕೆ ವಾಯಿದೆ ಹಾಕಲಾಗಿದೆ. ಅಂದು ಪ್ರತಿವಾದಿಗಳು, ತಾವಾಗಲಿ ವಕೀಲರ ಮೂಲಕವಾಗಿಯಾಗಲಿ, ಹಾಜರಾಗದಿದ್ದರೆ ಏಕಪಕ್ಷವಾಗಿ (Exparte) ನಿರ್ಣಯವಾಗುವದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಎಂ. ರಂಗನಾಥಾಚಾರ್,
ವಾದಿಯ ವಕೀಲ್.

ಓಂ

ಭಗವಾನ್ ಶ್ರೀ ಅರವಿಂದಯೋಗಿಗಳಧ್ಯಾನ.

ಕಂದ|| ವರಗುರು ಅರವಿಂದ ಮಹಾ ।
ಗುರುವರ ಭಗವಾನ ಭಾವು ಯೋಗಿವರೇಣ್ಯಾ ॥
ಅರವಿಂದದ ವರಕುಸುಮವೆ ।
ಅರಳಿಸಿದಪುದರಿವ ಜಗವನುರೆ ಬೆಳಗಿಪುದ್ಯೆ ॥ ೧ ॥

ಶ್ರೀ ಮಧುರ ಚೆನ್ನಪ್ಪನವರಿಗೆ ಸ್ವಾಗತ ಪಂಚಕುಸುಮಗಳು.

ವಾ|| ಷ|| ಸ್ವಾಗತವು ಶ್ರೀ ಮಧುರ ಚನ್ನರೆ । ಸ್ವಾಗತವು ಶ್ರೀ ಸತ್ಯಶೋಧಕರೆ।
ಸ್ವಾಗತವು ಅರವಿಂದಶಾಲೆಯ ಗ್ರಂಥ ಚಾಲಕರೇ ॥
ಸ್ವಾಗತವು ಪರಮಾರ್ಥ ಸಿದ್ಧರೆ । ಸ್ವಾಗತವು ಶ್ರೀ ಶಾಂತಿನಿಧಿಯರೆ।
ಸ್ವಾಗತವ ಬಾಲಕರು ಬಯಿಪೆವು ಶ್ರೀ ಮಧುರ ಚೆನ್ನಾ ॥ ೧ ॥

ಸ್ವಾಗತವು ಬಹುಭಾಷೆಯಾಣ್ಮರೆ । ಸ್ವಾಗತವು ವರಯೋಗಸಾಧಕ ।
ಸ್ವಾಗತವು ಅರವಿಂದ ಭಗವದ್ಭಕ್ತ ಗುಣಮಣಿಯೇ ॥
ಸ್ವಾಗತವು ಸಾಹಿತ್ಯಶೀಲರೆ । ಸ್ವಾಗತವು ಶ್ರೀಕಾವ್ಯನಿಧಿ ಷು ।
ಸ್ವಾಗತವ ಬಾಲಕರು ಬಯಿಪೆವು ಶ್ರೀ ಮಧುರ ಚೆನ್ನಾ ॥ ೨ ॥

ಬಾಳಿನಲಿ ಬೆಳಕನ್ನು ಕಂಡೈ । ಬಾಳಸಾಧನ ಬಲದಿ ಬೆಳಗಿದೆ ।
ಕಾಳ ರಾತ್ರಿಯು ನೊರೆದೆ ಕಾವ್ಯಾಂಗನೆಯ ನೋಲಿಸಿದೆ ಯೈ ॥
ಬಾಳಶೋಚನ ವಿರವ ನರಿಸಿದೆ । ಮೂಲಗುರು ಸಂದೇಶವನು ಸಿ ।
ಬಾಲರೆಲ್ಲರ ಗುಣಿಸಿ ಹರಸೈ ಶ್ರೀ ಮಧುರ ಚೆನ್ನಾ ॥ ೩ ॥

ನನ್ನಿಯನರಿ ಹುಡುಕುತ್ತ ಬಂದಿರಿ ।
ನನ್ನನಲ್ಲನ ತೂಗಿ ಹಾಡಿದೆ ॥
ಧನ್ಯ ಭಗವಾನ್ ಯೋಗಿಗುರು ಅರವಿಂದರನು ತಿಳಿದೈ ॥
ಪುಣ್ಯಧಾಮದ ಪಾಂಡಿಚೇರಿಯ ದಿನ್ನು ಹಾದಿಯ ಕಾಯುತಿದ್ದೆವು ।
ಕನ್ನಿಗೊಳಿಯರ ಗುಂಪಿನೊಸಗೆಯ ಚನ್ನಮಲ್ಲೀಶಾ ॥ ೪ ॥

ಧನ್ಯವೀ ವಿದ್ಯಾರ್ಥಿ ಸಂಘವು ।
ಧನ್ಯರೀ ಬಳ್ಳಾರಿ ಪೌರರು
ಧನ್ಯಧನ್ಯರಸಾಗಿಸೈ ಎಲ್ಲರನು ಭಾತೃವರ ॥
ಇನ್ನು ಬಾಲಕ ಬಳಗ ಬೆಳೆಯಲಿ ।
ಚೆನ್ನಯೋಗಿಗಳಾಗಿರೆಂದಾವ್ ।
ಪನ್ನಗ ಧರನ ಬೇಡಿಕೊಂಬೆವು ಚೆನ್ನಮಲ್ಲೀಶಾ ॥ ೫ ॥

[ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿ "ಮಧುರ ಚನ್ನ" ರವರು ಬಳ್ಳಾರಿಗೆ ಬಂದಾಗ ಅ. ನಾಗಪ್ಪ ನವರು ಎಲ್ಲರ ಪರವಾಗಿ ಈ ಕವನಗಳನ್ನರ್ಪಿಸಿದರು.]

ಕಂಪೋಸ್ಟು ಗೊಬ್ಬರದ ತಯಾರಿಕೆ.

ಮದ್ರಾಸು ಪ್ರಾಂತ್ಯದ ೬೫ ಟೌನ್ ಮುನಿಸಿಪಾಲಿಟಿಗಳು ಕಂಪೋಸ್ಟು ಗೊಬ್ಬರವನ್ನು ತಯಾರುಮಾಡುತ್ತಿವೆ ಇದರಿಂದ ಸುಮಾರು ೪೩,೦೦೦ ಟನ್‌ಗಳಷ್ಟು ಗೊಬ್ಬರವು ದೊರಕುವ ನಿರೀಕ್ಷಣೆ ಇದೆ

ಭಾರತ ದೇಶದ ಇತರ ಪ್ರಾಂತ್ಯ ಸರಕಾರದವರೂ ಸಹ ಈ ಕೆಲಸದಲ್ಲಿ ನಿರತರಾಗಿದ್ದಾರೆ. ಸಾವಿರಾರು ನಗರಗಳಲ್ಲಿ ಉತ್ಪನ್ನವಾಗುವ ಕಸವನ್ನು ಕಂಪೋಸ್ಟು ಗೊಬ್ಬರವನ್ನಾಗಿ ಮಾಡಬಹುದು. ಹೀಗೆ ಮಾಡದಿರುವುದರಿಂದ ಲಕ್ಷಗಟ್ಟಲೆ ಟನ್‌ಗಳಷ್ಟು ಒಳ್ಳೆಯ ಗೊಬ್ಬರವು ಉತ್ಪನ್ನವಾಗುತ್ತಿಲ್ಲ.

ಪ್ರಾಂತ್ಯ ಸರಕಾರದವರು ಈಗ ಈ ವಿಷಯಕ್ಕೆ ಹೆಚ್ಚಾದ ಗಮನ ಕೊಡುತ್ತಿದ್ದಾರೆ. ಭಾರತ ದೇಶದಲ್ಲಿ ಸುಮಾರು ೪೦೦೦ ನಗರಗಳು ೫೦೦೦ ಜನಸಂಖ್ಯೆ ಉಳ್ಳವುಗಳು. ಇಂತಹ ಊರುಗಳಿಂದ ಒದಗಬಹುದಾದ ಕಂಪೋಸ್ಟು ಗೊಬ್ಬರವು ಸುಮಾರು ೧೦ ಲಕ್ಷ ಟನ್‌ಗಳೆಂದು ಅಂದಾಜಾಗಿದೆ. ಇದರ ಉಪಯೋಗದಿಂದ ಕನಿಷ್ಠಪಕ್ಷ ೧೫ ರಿಂದ ೨೦ ಲಕ್ಷ ಟನ್ ಧಾನ್ಯವು ಹೆಚ್ಚು ಉತ್ಪನ್ನವಾಗುವುದರಲ್ಲಿ ಸಂದೇಹವಿಲ್ಲ.

ಎಲ್ಲಾ ಮುನಿಸಿಪಾಲಿಟಿಗಳಮೇಲೆ ತನಿಖೆಗಾಗಿ ಗೊಬ್ಬರದ ಉತ್ಪತ್ತಿಯನ್ನು ಮಾಡಲು ಸರಕಾರದವರು ವಿಶೇಷ ಅಧಿಕಾರಿಗಳನ್ನು ನೇಮಕ ಮಾಡುತ್ತಿದ್ದಾರೆ.

ಪೂರ್ವ ಪಂಜಾಬಿನಲ್ಲಿ ಸುಮಾರು ೩೦೦ ಹಳ್ಳಿಗಳಲ್ಲಿಯೂ ಕೆಲವು ನಗರಗಳಲ್ಲಿಯೂ ಈ ಕೆಲಸ ಈಗಾಗಲೇ ಪ್ರಾರಂಭವಾಗಿರುತ್ತದೆ. ರಸಾಯನಿಕ ಶಾಸ್ತ್ರಜ್ಞರನ್ನೂ ಇತರ ಸಹಾಯಕರನ್ನೂ ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ. ಹೀಗೆ ಮಾಡಿದುದರ ಫಲವಾಗಿ ಈಗ ೪ ತಿಂಗಳುಗಳಿಂದ ಸುಮಾರು ೪೦ ಸಾವಿರ ಟನ್‌ಗಳಷ್ಟು ಗೊಬ್ಬರ ಉತ್ಪನ್ನವಾಗಿರುತ್ತದೆ.

ಈ ಕೆಲಸಗಳು ಯಶಸ್ವಿಯಾಗಿ ನಡೆಯಲು, ಗೊಬ್ಬರಕ್ಕೆ ಬೇಕಾಗಿರುವ ಕಸಕಡ್ಡಿಗಳನ್ನು ಸರಿಯಾಗಿ ಸಂಗ್ರಹಮಾಡುವುದಕ್ಕೂ ಮುನಿಸಿಪಾಲಿಟಿಗಳು ಸಹಕಾರವನ್ನು ಒದಗಿಸಿಕೊಡಲು ಕಾನೂನುಗಳೂ ಸಹ ಶೀಘ್ರದಲ್ಲಿಯೇ ಜಾರಿಗೆ ಬರುವ ನಿರೀಕ್ಷಣೆ ಇದೆ.

ಮಧ್ಯ ಪ್ರಾಂತ್ಯದಲ್ಲಿ ಈ ಕೆಲಸವನ್ನು ಸರಿಯಾಗಿ ಮಾಡಲು ಶಿಕ್ಷಣ ತರಗತಿಗಳನ್ನು ಸರಕಾರದವರು ಏರ್ಪಡಿಸಿರುತ್ತಾರೆ. ಈಗ ೧೧ ಇಂತಹ ಶಾಲೆಗಳು ನಡೆಯುತ್ತಿವೆ.

ಗವರ್ನರ ಜನರಲ್ ರಾಜಾಜಿಯವರ ಅಭಿಪ್ರಾಯ ಭದ್ರತೆಬೇಕು.

ಹಿಂದುಸ್ತಾನದ ಆಡಳಿತೆಯ ಸೂತ್ರಗಳನ್ನು ವಹಿಸಿಕೊಂಡಿರುವವರೇನೂ ಸರ್ವಾಧಿಕಾರಿಗಳಾಗಿಲ್ಲ. ಅರಾಜಕತೆಗೆ ಕಾರಣವಾಗದಂಥ ಟೀಕೆಯನ್ನೂ ವಿರೋಧವನ್ನೂ ಇವರು ಸ್ವಾಗತಿಸುತ್ತಾರೆ. ಶೈಶವಾವಸ್ಥೆಯ ಈ ಪ್ರಜಾರಾಜ್ಯವು ಅರಾಜಕತೆಯನ್ನಾಗಲೀ ಹಿಂಸೆಯನ್ನಾಗಲೀ ಸಹಿಸಿಕೊಳ್ಳಲಾರದು. ದೇಶದ ಎಲ್ಲಾ ಶಾಸನ ಸಭೆಗಳಲ್ಲಿ ಇಷ್ಟೊಂದು ಬಹುಮತವನ್ನು ಪಡೆದಿರುವದು ನಮ್ಮ ಸರಕಾರಗಳ ತಪ್ಪಲ್ಲ. ವಿರೋಧಿ ಪಕ್ಷವಿದ್ದಲ್ಲೆಲ್ಲ ಅದಕ್ಕೆ ಅಭಿಪ್ರಾಯ ಪ್ರದರ್ಶನಕ್ಕೆ ಸಂಪೂರ್ಣ ಅವಕಾಶ ಕೊಡಲಾಗಿದೆ. ಸರ್ವಾಧಿಕಾರಿತ್ವಕ್ಕೂ ಪ್ರಜಾರಾಜ್ಯಕ್ಕೂ ಇರುವ ಮಹತ್ವದ ಅಂತರವೆಂದರೆ ಇದೇ. ಅಧಿಕಾರಾರೂಢ ಪಕ್ಷವನ್ನು ಕಿತ್ತುಹಾಕಲು ಅವಕಾಶ-ಅಧಿಕಾರಗಳನ್ನು ಪಡೆವುದೇ ಪ್ರಜಾತಂತ್ರದಸಾರವೆಂಬುದು ನಿಜ. ಸರ್ವಸಮ್ಮತವಾದ ನವೀನ ಧೋರಣವೊಂದನ್ನು ಕೃತಿಗಿಳಿಸುವದಕ್ಕಾಗಿ, ಆಧೋರಣೆಯಲ್ಲಿ ನಿಷ್ಠೆಯುಳ್ಳವರಾಗಿ ಅದನ್ನು ಕಾರ್ಯಕಾರಿಯಾಗಿಸುವ ಜನತೆಯನ್ನು ಅಧಿಕಾರ ಪದಕ್ಕೇರಿಸುವದಕ್ಕಾಗಿ ಈ ಅಧಿಕಾರದ ಉಪಯೋಗವಾಗಬೇಕು; ಈ ವೈಯಕ್ತಿಕ ಮಹತ್ವಾಕಾಂಕ್ಷೆಗಳನ್ನು ಈಡೇರಿಸಿ ಕೊಳ್ಳುವದಕ್ಕಾಗಿ ಅಲ್ಲ. ಭದ್ರತೆಯನ್ನೇ ನಾವು ಮುಖ್ಯವಾಗಿ ಗಮನಿಸಬೇಕು ಉತ್ಪಾದನೆ, ಉದ್ಯೋಗ, ಪ್ರಗತಿಗಳಲ್ಲಿ ಸ್ಥಿರತೆ ಬೇಕು. ಇವೆಲ್ಲಕ್ಕೂ ತಳಹದಿಯಾಗಿ ಭದ್ರವಾದ ಸರಕಾರಗಳು ಬೇಕು.

ನ್ಯಾಯಾಂಗ-ಕಾರ್ಯಾಂಗಗಳ ಪ್ರತ್ಯೇಕತೆ

ಮದ್ರಾಸ ಸರಕಾರದ ನಿರ್ಧಾರ

ಮದ್ರಾಸ ತಾ|| ೭—ಮಹಾತ್ಮ ಗಾಂಧೀಜಿಯ ಜನ್ಮದಿನವಾದ ಅಕ್ಟೋಬರ ೨ ರಿಂದ, ಚೆಂಗಲಪೇಟ ಮತ್ತು ಉತ್ತರ ಆರ್ಕಾಟ ಜಿಲ್ಲೆಗಳಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗಗಳನ್ನು ಬೇರ್ಪಡಿಸುವ ಬಗ್ಗೆ ಇಂದು ಮದ್ರಾಸ ಮಂತ್ರಿಮಂಡಲವು ನಿರ್ಧರಿಸಿತು. ಮೊದಲು ಈ ಎರಡು ಜಿಲ್ಲೆಗಳ ಪ್ರಯೋಗವನ್ನು ನೋಡಿಕೊಂಡು ಈ ಯೋಜನೆಯನ್ನು ಮುಂದೆ ಪ್ರಾಂತದ ತುಂಬೆಲ್ಲಾ ಜಾರಿಯಲ್ಲಿ ತರಲಾಗುವುದಂತೆ.

---

೩೩ ಜಾಗೀರುಗಳು ಸರಕಾರದ ವಶಕ್ಕೆ

ಮದ್ರಾಸು, ೬- ಜಮೀಂದಾರಿ ನಿರ್ಮೂಲನ ಕಾಯಿದೆಯ ಮೇರೆಗೆ ಮದ್ರಾಸ್ ಸರಕಾರವು ಪ್ರಾಂತದ ೩೩ ಮುಖ್ಯ ಜಾಗೀರುಗಳನ್ನು ನಾಳೆಯದಿನ ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳುವುದು.

ವಿಜಯನಗರಂ, ಬೊಬ್ಬಿಲಿ, ಪೀಠಾಪುರಂ, ವೆಂಕಟಗಿರಿ, ರಾಮನಾಡು ಮತ್ತು ಶಿವಗಂಗಾ ಜಾಗೀರುಗಳು ಅವುಗಳಲ್ಲಿ ಮುಖ್ಯವಾದವುಗಳು ಪ್ರಾಂತದಲ್ಲಿ ಒಟ್ಟು ೨೮ ಜಾಗೀರುಗಳು ಮತ್ತು ೩,೫೦೦ ಇನಾಂ ಜಾಗೀರುಗಳಿವೆ. ಒಟ್ಟು ಅವುಗಳ ಕ್ಷೇತ್ರ ೧ ಕೋಟಿ ೪೦ ಲಕ್ಷ ಎಕರೆಗಳಷ್ಟಾಗುತ್ತದೆ. ಈ ಕಾಯಿದೆಯ ಮೇರೆಗೆ ಕೊಡಲಾಗುವ ಪರಿಹಾರವು ಸುಮಾರು ೧೫ ಕೋಟಿ ೨೫ ಲಕ್ಷ ರೂಪಾಯಿಗಳಷ್ಟಾಗುವುದೆಂದು ಕಂದಾಯಮಂತ್ರಿ ಮಾನ್ಯ ಹೆಚ್. ಸೀತಾರಾಮರೆಡ್ಡಿಯವರು ಹೇಳಿದರು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[o]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits):–** 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಬಿ. ವಿ. ಶೇಷಗಿರಿರಾವು,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಪ್ರಾಂಸಿಪಾಲ್‌ರಿಗೆ ಬರೆಯಿರಿ

ಪ್ರಿನ್ಸಿಪಾಲ್.

NAVA BHARAT BELLARY. (Reg No. M 4746)

12—9—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

To

Sri..............................

....

....

Printed at Krishna Printing Works. Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪ
*
ಉತ್ತಿಷ್ಠತ! ಜಾಗ್ರತ!
ಪ್ರಾಪ್ಯವರಾನ್ನಿಬೋಧತ!
*
ಸಂಪಾದಕ ಮತ್ತು ಪ್ರಕಾಶಕ
ಟಿ. ಬಿ. ಕೇಶವರಾ

ವರ್ಷ ೧೨ | ಸೋಮವಾರ ೧೯ ಸೆಪ್ಟೆಂಬರ್ ೧೯೪೯ | ಸಂಚಿಕೆ ೩೩

ಬಳ್ಳಾರಿ ಜಿಲ್ಲಾ ಚುನಾವಣಾ ಫಲಿತಾಂಶ

[ಅವಿರೋಧವಾಗಿ ಆರಿಸಿಬಂದ 23 ಹೆಸರುಗಳಲ್ಲಿ ಕಳೆದವಾರ 12-9-'49 ರ ನವಭಾರತ ಪತ್ರಿಕೆಯಲ್ಲಿ ಶ್ರೀ ವೈ. ಶಿದ್ದಲಿಂಗಪ್ಪ - ಇಟ್ಟಿಗಿ ಇವರ ಹೆಸರುತಪ್ಪಾಗಿ ಎರಡುಸಲ ಬಿದ್ದಿದೆ. ಅಲ್ಲದೆ ಕೊಟ್ಟೂರಿನ 1. ಶ್ರೀ ಸದ್ಯೋಜಾತಪ್ಪ 2. ಶ್ರೀ ನಾಗಪ್ಪ (ಹರಿಜನ) ಹರಪನಹಳ್ಳಿಯ 3. ಜನಾಬ್ ಹಯಾತ್‌ಸಾಹೇಬರ ಹೆಸರು ಬಿಟ್ಟಿದೆ - ಪೆದ್ದತುಂಬಳದಲ್ಲಿ ಚುನಾವಣೆ ನಡೆದು ಶ್ರೀ ಶಂಕರ ರೆಡ್ಡಿಯವರು ಆರಿಸಿ ಬಂದರು. ಕಂಪ್ಲಿಯ ಶ್ರೀ ಮೋತೀಲಾಲರು ಗತಿಸಿದಕಾರಣ ಬರುವ ತಿಂಗಳು ಚುನಾವಣೆ ನಡೆಯಲಿದೆ]

ಈ ಕೆಳಗಣ ಮಹನೀಯರು ಚುನಾವಣೆಯಲ್ಲಿ ಗೆದ್ದರು.

ಹರಪನಹಳ್ಳಿ	ತಾಲೂಕು	1.	ಶ್ರೀ ಎಸ್ ಸಿದ್ದಪ್ಪ	ಹಲುವಾಗಲು	ಫಿರ್ಕಾ
ಹೊಸಪೇಟೆ	,,	2	,, ಎಂ. ಪಿ. ಮರಿಸ್ವಾಮಯ್ಯ	ಹೊಸಪೇಟೆ	,,
,,	,,	3.	,, ಕೊಡಾಲು ಶಂಕರಪ್ಪ	ತೋರಣಗಲ್ಲು	,,
ಕೂಡ್ಲಿಗಿ	,,	4.	,, ಆರ್ ಪೊಂಪಣ್ಣ	ಕೂಡ್ಲಿಗಿ	,,
ರಾಯದುರ್ಗ	,,	5.	,, ಪಾಟೀಲ ಸಿದ್ದನಗೌಡ	ರಾಯದುರ್ಗ	,,
,,	,,	6.	,, ಪಿ ಕೇಶಣ್ಣ	ಕಣೇಕಲ್ಲು.	,,
,,	,,	7.	,, ಶೆಟ್ರನಾಗಪ್ಪ	ಹಿರಿಯಾಳು	,,
,,	,,	8	,, ತೊಸ್ನೂರಪ್ಪ (ಹರಿಜನ)	ಕಣೇಕಲ್ಲು	,,
ಬಳ್ಳಾರಿ	,,	9.	,, ಹ. ರಾಯನಗೌಡ	ಬಳ್ಳಾರಿ	,,
,,	,,	10	,, ಕೆ. ದೊಡ್ಡಬಸಪ್ಪ	ಕುರುಗೋಡು	,,
,,	,,	11	,, ಸೈಯದ್ ಅಬ್ದುಲ್ ಖಾದರ್	,,	,,
,,	,,	12	,, ಮುಂಡ್ಲೂರು ಗಂಗಪ್ಪ	ರೂಪನಗುಡಿ	,,
,,	,,	13.	,, ಬಾದಾಪುರದ ದೊಡ್ಡಬಸವನಗೌಡ ಮೋಕ		,,
ಆಲೂರು	,,	13.	,, ಟಿ. ಮಲ್ಲಯ್ಯ (ಹರಿಜನ) ಪೆ. ಹೋತೂರು		,,
,,	,,	15	,, ಪುರುಷೋತ್ತಮರೆಡ್ಡಿ		,,
,,	,,	16.	,, ಗಾದ್ರ ವೀರನಗೌಡ್	ಹೊಳಲಗುಂದಿ	,,
,,	,,	17.	,, ಕೇಶವರೆಡ್ಡಿ	ಆಲೂರು	,,
,,	,,	18.	,, ರಾಘವರೆಡ್ಡಿ	ಚಿಪ್ಪಗಿರಿ	,,
,,	,,	19.	,, ಅಣ್ಣಯ್ಯ (ಕ್ರಿಶ್ಚಿಯನ್)	,,	,,
ಆದವಾನಿ	,,	20.	,, ಜೆ. ಶಿ ಶಿವಪ್ಪರೆಡ್ಡಿ	ನಂದವರಂ	,,
,,	,,	21.	,, ಹಾಲರ್ವಿ ಹನುಮಂತರೆಡ್ಡಿ	ಎಮ್ಮಿಗನೂರು	
,,	,,	22.	,, ಇಬ್ರಾಹಿಂ ಬೇಗ್ (ಮುಸಲ್ಮಾನ್)	,,	
,,	,,	23.	,, ಶಂಕರ ರೆಡ್ಡಿ	ಪೆದ್ದತುಂಬಳಂ	
,,	,,	24.	,, ಸತ್ಯನಾರಾಯಣ ರಾಜು	ಕೋಸಿಗಿ	
,,	,,	25.	,, ಬಿ. ರಂಗನಗೌಡ	ಕಪ್ಪಟಾಳಂ	
,,	,,	26.	,, ವೀರಣ್ಣ	ಆದವಾನಿ	
,,	,,	27.	ಶ್ರೀಮತಿ ರಾಮಲಿಂಗಮ್ಮ		

ರಾಷ್ಟ್ರ ಭಾಷೆ ಜನತೆಯು ಕಲಿಯಬೇಕಾದ ಆವಶ್ಯಕತೆ.

ಡೆಲ್ಲಿಯಲ್ಲಿ ಸಮಾವೇಶವಾದ ಘಟನಾ ಸಮಿತಿಯಲ್ಲಿ ಕಳೆದ ಒಂದು ವಾರದಿಂದ ಚರ್ಚೆಯಲ್ಲಿದ್ದ ರಾಷ್ಟ್ರಭಾಷಾಪ್ರಶ್ನೆಯು ಸಮರ್ಪಕವಾಗಿ ಏಕಾಭಿಪ್ರಾಯದಿಂದ ಇತ್ಯರ್ಥವಾದುದು ಪ್ರಶಂಸನೀಯವಾಗಿದೆ. "ದೇವನಾಗರಿ ಲಿಪಿಯ ಹಿಂದಿಯು ರಾಷ್ಟ್ರ ಭಾಷೆ - 15 ವರ್ಷಗಳ ವರೆಗೆ ಇಂಗ್ಲಿಷ್ ಭಾಷೆಯು ಜಾರಿಯಲ್ಲಿದ್ದು ತದನಂತರ - ಹಿಂದಿಯನ್ನು ಜಾರಿಯಲ್ಲಿ ತರಬೇಕು. ಹಿಂದಿಯನ್ನು ಸರ್ವವ್ಯಾಪಿ ಮಾಡಲು - ಒಂದು ಸಮಿತಿಯನ್ನು ನಿರ್ಮಿಸಬೇಕು ಅಂಕೆ ಸಂಖ್ಯೆಗಳು ಈಗಿರುವಂತೆ ಇಂಗ್ಲೀಷದಲ್ಲಿರಬೇಕೆಂಬುದೇ" ನಿರ್ಣಯದ ಸಾರಾಂಶ.

ಉತ್ತರ ಹಿಂದೂಸ್ಥಾನದಲ್ಲಿ ಹಿಂದಿಗೆ ಸಮೀಪದ ಪಂಜಾಬಿ ರಾಜಸ್ಥಾನಿ ಬಂಗಾಳಿ, ಮರಾಠಿ, ಗುಜರಾತಿ ಭಾಷೆಗಳಿವೆ. ಇವರಿಗೆ ಕಷ್ಟವಾಗುವದಿಲ್ಲ. ದಕ್ಷಿಣ ದೇಶದ ದ್ರಾವಿಡ ಭಾಷಾ ಭಾಷಿಗಳಿಗೆ ಕಲಿಯುವುದು ಸ್ವಲ್ಪ ಹೆಚ್ಚು ಕಾಲ ಹಿಡಿಯಬಹುದು. ಆದರೂ ಕಳೆದ 20 ವರ್ಷಗಳಲ್ಲಿ ದಕ್ಷಿಣ ದೇಶದಲ್ಲಿ ಆಶ್ಚರ್ಯಕಾರಕ ಪ್ರಗತಿಯು ಈ ದಿಶೆಯಲ್ಲಿ ನಡೆದಿದೆ. ವರ್ಷಕ್ಕೆ 60 ಸಾವಿರ ಜನರು ಹಿಂದೀ ಪರೀಕ್ಷೆಗಳಿಗೆ ಕೂಡುತ್ತಲಿರುವರು. ಸಾಮಾನ್ಯವಾಗಿ ಎಲ್ಲಾ ಹೈಸ್ಕೂಲ್‌ಗಳಲ್ಲಿ ಹಿಂದಿಯು ಪ್ರವೇಶವಾಗಿದೆ. ಇನ್ನು ಸರ್ಕಾರದವರು ಇದಕ್ಕೆ ಹೆಚ್ಚು ಪ್ರೋತ್ಸಾಹ ಕೊಟ್ಟು ಕೋರ್ಟು ಕಛೇರಿಗಳಲ್ಲಿ ಕ್ರಮೇಣ ಇದನ್ನು ಜಾರಿಯಲ್ಲಿ ತರುವ ವ್ಯವಸ್ಥೆ ಮಾಡಿಸಬೇಕು.

ಜನತೆಯು ಮಾತೃಭಾಷೆಯನ್ನು ನೋಡಲು ಕಲಿತು ಸಾಕಷ್ಟು ಪ್ರಗತಿಹೊಂದಿ ರಾಷ್ಟ್ರಭಾಷೆಯನ್ನು ಕಲಿಯಲು ಅನುಕೂಲಗಳೇರ್ಪಡಿಸಲಾಗಿವೆ. ಶಿಕ್ಷಣ ಕ್ರಮದಲ್ಲಿ ಇನ್ನೂ ಕ್ರಾಂತಿಯಾಗಬೇಕಾಗಿದೆ. ಈ ನಿರ್ಣಯದ ನಂತರ ಈ ವಿಷಯದಲ್ಲಿ ಸಾಕಷ್ಟು ಉತ್ಸಾಹ ಹುಟ್ಟಬಹುದೆಂದು ಆಶಿಸಲಾಗಿದೆ.

ಅಮೇರಿಕೆಯ ಸ್ನೇಹ
ಜವಹರಲಾಲರ ಭೇಟಿ

ಮುಂದಿನ ತಿಂಗಳು ಪ್ರಧಾನ ಮಂತ್ರಿ ಪಂಡಿತ ನೆಹರೂರವರು ಅಮೇರಿಕೆಗೆ ಹೋಗಲಿಲ್ಲದ್ದಾರಷ್ಟೇ! ಮುಂಬರುವ ಈ ಸ್ನೇಹ ಸಂದರ್ಶನದ ದ್ಯೋತಕವಾಗಿ ಎಂಬಂತೆ ಅಮೇರಿಕಾ ದೇಶ ಈಗಾಗಲೆ ತನ್ನ ಪಾಲಿನ ವಿಶ್ವಾಸ ಮನ್ನಣೆಗಳನ್ನು ವ್ಯಕ್ತ ಪಡಿಸುತ್ತಿರುವುದೇ ಸಂತೋಷದ ಸಂಗತಿ.

ಜನರಲ್ ಕಾರ್ಯಪ್ಪನವರಿಗೆ ಅಮೇರಿಕಾ "ಲೀಜನ್ ಆಫ್ ಮೆರಿಟ್" ಪದವಿಯನ್ನು ಕೊಟ್ಟು ಗೌರವಿಸಿತು. ಹಿಂದುಸ್ಥಾನ ಸೈನ್ಯ ಖಾತೆಯ ಇತಿಹಾಸದಲ್ಲಿ ಇದೊಂದು ಅಪೂರ್ವ ಸಂಗತಿ.

ಈಗ ಪಂಡಿತ ನೆಹರೂರವರ ಪಾಲಿಗೊಂದು ಮನ್ನಣೆಯ ಪಟ್ಟವನ್ನು ಸ್ವೀಕರಿಸುವ ಸಂದರ್ಭವನ್ನು ಅಮೇರಿಕಾ ದೇಶ ಮುಂದೆ ಮಾಡಿದೆ.

ಅಮೇರಿಕಾ ದೇಶದಲ್ಲಿ ನೆಹರೂರವರು ಕೊಡುವ ಮೂರು ಮಹತ್ವದ ಸಂದರ್ಶನಗಳಲ್ಲಿ ಒಂದು ಕೊಲಂಬಿಯ ವಿಶ್ವವಿದ್ಯಾನಿಲಯ! ಯುನೈಟೆಡ್ ಸ್ಟೇಟ್ಸಿನ ಸಂದರ್ಶನದ ಕಾಲದಲ್ಲಿ ನೆಹರೂರವರು ಕೋಲಂಬಿಯದ ವಿಶ್ವವಿದ್ಯಾಲಯದಲ್ಲಿ ಮಾತನಾಡಲಿರುವರು.

ಆಗ ವಿಶ್ವವಿದ್ಯಾಲಯವು ಹಿಂದುಸ್ಥಾನದ ಪ್ರಥಮ ಮುಖ್ಯ ಮಂತ್ರಿ ನೆಹರೂರವರಿಗೆ "ಡಾಕ್ಟರ್ ಆಫ್ ಲಾಜ್" ಕಾಯಿದೆ ಪಂಡಿತರು ಎಂದು ಪದವಿಯನ್ನು ಕೊಡಲಿರುವದು. ವಿಶ್ವವಿದ್ಯಾಲಯದ ಅಧ್ಯಕ್ಷರಾದ ಜನರಲ್ ಡ್ವಾಯಿಟ್ ಐಸೆನ್‌ಹೋವರ್ ಈ ಪದವಿಯನ್ನು ನಮ್ಮ ಮಂತ್ರಿಗಳಿಗೆ ಅರ್ಪಿಸುವರು.

ನ್ಯೂಯಾರ್ಕ ಪಟ್ಟಣದಲ್ಲಿ ಮ್ಯಾರಿಂಗಸೈಡ್ ದಿನ್ನೆಯ ಮೇಲೆ ಗಗನವನ್ನು ಚುಂಬಿಸಲು ನಿಂತಂತೆ ನಿಂತಿರುವ ಕೋಲಂಬಿಯ ವಿಶ್ವವಿದ್ಯಾನಿಲಯವು ಅಮೇರಿಕಾ ದೇಶದ ಅತ್ಯಂತ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ಕೋಲಂಬಿಯಾ ವಿಶ್ವವಿದ್ಯಾನಿಲಯ ಬಹಳ ಕಾಲದಿಂದಲೂ ವಿದ್ಯಾ ಸಂಸ್ಕೃತಿಯುತವರು ಮನೆಯಾಗಿ ಕಲೆ ವಿಜ್ಞಾನಗಳ ಆಗರವಾಗಿ ತನ್ನ ಘನತೆಯನ್ನೂ ಕೀರ್ತಿಯನ್ನೂ ಕಾಯ್ದುಕೊಂಡು ಬಂದಿದೆ. ಎಲ್ಲ ವಿಜ್ಞಾನ ವಿಷಯಗಳ ಮೇಲೆಯೂ ಇಲ್ಲಿ ಶಿಕ್ಷಣ ಕೊಡಲಾಗುವದು. ಈ ವಿಶ್ವವಿದ್ಯಾಲಯದ ೬೯ ಕಟ್ಟಡಗಳಲ್ಲಿ ವೃತ್ತಪತ್ರಿಕೋದ್ಯಮದ ಬಗ್ಗೆ ಮಾತ್ರವೇ ಶಿಕ್ಷಣವನ್ನು ಕೊಡಲಾಗುವದು. ಈ ಶಾಖೆಯ ವಾಚನಾಲಯವು ಅತ್ಯಂತ ಮಹತ್ವದ್ದಾಗಿರುವುದು. ?

೧೭೫೪ ರಲ್ಲೇ ಸ್ಥಾಪಿತವಾದ ಕೋಲಂಬಿಯ ಕಾಲೇಜಿನ ಸುತ್ತು ಮುತ್ತಲೂ ಬೆಳೆದಿರುವ ಈ ಕೋಲಂಬಿಯ ವಿಶ್ವವಿದ್ಯಾಲಯವು ಹಿಂದುದೇಶದ ಪ್ರಧಾನ ಮಂತ್ರಿಗಳವರಿಗೆ ಕೊಡಲಿರುವ ಪದವೀದಾನದ ಸಂಭ್ರಮದಲ್ಲಿ ಉಭಯ ರಾಷ್ಟ್ರಗಳ ಸ್ನೇಹ ಸೌಹಾರ್ದ ಸಂದೇಶವನ್ನು ಕಾಲ ಕಾಲಕ್ಕೂ ವಿಸ್ತರಿಸುವಂತಾಗಲಿ ಎಂದು ನಾವು ಹಾರಯಿಸುತ್ತೇವೆ

— —

ಹೆಚ್ಚುಮಕ್ಕಳು ಬೇಡ ಸಂತತಿನಿರೋಧ
ಸಿನೆಮಾದಲ್ಲಿ ಚಿತ್ರದಿಂದ ಪ್ರಚಾರ

ಭಾರತ ಸರ್ಕಾರದ ಚಿತ್ರ ಶಾಖೆಯವರು "ಯೋಜನಾಬದ್ಧ ಮಾತಾಪಿತೃತ್ವ" ಎಂಬ ಹೆಸರಿನ ಚಿತ್ರದ ಮೂಲಕ ದೇಶದಲ್ಲಿ ಸಂತತಿ ನಿರೋಧ ಪ್ರಚಾರವನ್ನು ಕೈಕೊಂಡಿದ್ದಾರೆ. ಮಹಾತ್ಮ ಗಾಂಧಿಯವರು ಬ್ರಹ್ಮಚರ್ಯ ಮಾರ್ಗಕ್ಕೆ ಪುರಸ್ಕಾರ ಕೊಟ್ಟಿದ್ದರು. ಇಂದ್ರಿಯ ನಿಗ್ರಹದಿಂದ ಸಂತತಿ ನಿರೋಧ ಮಾಡಹೋಗುವುದು ಈಗಿನ ಪ್ರಪಂಚದಲ್ಲಿ ಕನಸಿನಮಾತು ಹೆಚ್ಚಿನಮಕ್ಕಳೂ ಆಗಬಾರದು. ವಿಷಯ ಸುಖವೂ ಬೇಕು ಎಂಬುದೇ ಸರಾಸರಿ ಮನುಷ್ಯನ ಇಚ್ಛೆ ಈ ಕಾರಣ ಕೃತಕ ಪದ್ಧತಿಗಳಿಂದಾದರೂ ಸಂತತಿನಿರೋಧ ಮಾಡಹೋಗುವುದವಶ್ಯವೆಂಬುದನ್ನು ತಜ್ಞರು ನಂಬಿದ್ದಾರೆ

ಭಾರತದ ಜನಸಂಖ್ಯೆ ಪ್ರತಿವರ್ಷ 50 ಲಕ್ಷದಷ್ಟು ಹೆಚ್ಚುತ್ತಿದೆ ಇದು ಹೀಗೆ ಹೆಚ್ಚುತ್ತ ಹೋದರೆ ದೇಶದಲ್ಲಿ ದಾರಿದ್ರ್ಯ ಹೆಚ್ಚಿ ಕೆಟ್ಟ ಪರಿಣಾಮಗಳಿಗೆ ಕಾರಣವಾಗುತ್ತೆ. ಬಡವರಿಗೆ ಮಕ್ಕಳು ಹೆಚ್ಚು ಎಂಬುದು ಹಳೆಯ ಮಾತಾಗಬೇಕು ಸಂತತಿ ನಿರೋಧದ ಸಕ್ರಮ ದುಷ್ಕ್ರಮಗಳ ಬಗ್ಗೆ ಸಂಪೂರ್ಣ ವಿವರಗಳನ್ನು ತಜ್ಞರಿಂದ ಬರೆಯಿಸಿ ಸರಿಯಾದ ಪ್ರಚಾರಕ್ಕೆ ಏರ್ಪಡಿಸುವ ವ್ಯವಸ್ಥೆ ಯಾಗಬೇಕು.

———

ದಕ್ಷಿಣ ಚೀನಾಕ್ಕೆ ಗಂಡಾಂತರ.

ಚುಂಕಿಂಗ್ ಸಮೀಪದಲ್ಲಿರುವ ಕುನ್ಮಿಂಗ್ ನಗರದಲ್ಲಿ ರಾಷ್ಟ್ರೀಯ ಸರಕಾರದ ವಿರುದ್ಧ ಬಂಡಾಯವೆದ್ದಿರುವ ಕಾರಣ ಇಡೀ ದಕ್ಷಿಣ ಚೀನವೆಲ್ಲಾ ಕಮ್ಯೂನಿಸ್ಟರ ವಶವಾಗುವದೆಂದು ನಂಬಿದ್ದಾರೆ.

ಬಳ್ಳಾರಿ ಸಾಬ್‌ಕಾಸ್ ಕೋರ್ಟಿನಲ್ಲಿ.

S C. No 273/49.

Between.

ಕೋಗಿಲೆತೋಟ ಚನ್ನಾರೆಡ್ಡಿ S o ಕೇಶವರೆಡ್ಡಿ

ಕಾಪು- ವಯಸ್ಸು 50, ಜಿರಾಯ್ತು- ಸಾ॥ ಕೋಗಿಲೆತೋಟ. ಆಲೂರು ತಾ॥

ಎದುರು

ಕುರುಬರ ಹಂಪಯ್ಯ S/o ಅಯ್ಯಣ್ಣ ಕುರುಬ-ವಯಸ್ಸು 30- ಜಿರಾಯ್ತು, ಸಾ॥ ಕೋಗಿಲತೋಟ, ಆಲೂರು ತಾ॥

ವಾದಿಯ ಪರ ನೋಟೀಸು.

ಮೇಲ್ಕಾಣಿಸಿದ ನಂಬರಿನಂತೆ ವಾದಿಯು, ಪ್ರತಿವಾದಿಯಾದ ನಿಮ್ಮಮೇಲೆ ಪ್ರಾಮಿಸರಿ ನೋಟಿನ ಬಾಕಿ ಬಾಬತು ರೂ. 200-0-0 ಕ್ಕೆ ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾನೆ ಸದರಿ ನಂಬರಿನ ವಾಯಿದೆ 13-10-49 ಕ್ಕೆ ಇರುತ್ತದೆ, ಆದಿನ ನೀವಾಗಲಿ, ನಿಮ್ಮ ಪರ ವಕೀಲರಾಗಲಿ ಬಂದು ಕೋರ್ಟಿಗೆ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸತಕ್ಕದ್ದು. ಇಲ್ಲವಾದರೆ ನಿಮ್ಮ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಯಾಗುವದೆಂದು ಈ ಮೂಲಕ ತಿಳಿಸಲಾಗುತ್ತದೆ.

ಓ. ಪ್ರಹ್ಲಾದರಾವು,
ವಾದಿ ವಕೀಲು

—

ವಿದ್ಯಾರ್ಥಿಗಳಿಗೆ ಪಂ. ನೆಹರೂರವರ ಹಿತೋಕ್ತಿ.

ಹೊಸದಿಲ್ಲಿ ವಿದ್ಯಾರ್ಥಿಗಳು ವೈಯಕ್ತಿಕವಾಗಿ ರಾಜಕಾರಣದಲ್ಲಿ ಭಾಗ ವಹಿಸುವದಲ್ಲದೆ, ತಮ್ಮ ಮನಸ್ಸಿಗೆ ಬಂದ ರಾಜಕೀಯ ಪಕ್ಷಸಂಗಡಗಳಲ್ಲಿಯೂ ಸೇರಿಕೊಳ್ಳಬಹುದು ಆದರೆ ವಿದ್ಯಾರ್ಥಿ ಚಟುವಟಿಕೆ ಎಂದು ಸಾರ್ವತ್ರಿಕವಾಗಿ ಹೇಳಬೇಕೆಂದರೆ- ವಿದ್ಯಾರ್ಥಿಗಳೆಂದೂ ರಾಜಕೀಯದಲ್ಲಿ ಸೇರದೆ, ತಮ್ಮ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದುವರಿಯಬೇಕು. ಎಂಬುದಾಗಿ ಮುಖ್ಯ ಮಂತ್ರಿ ಪಂ. ನೆಹರೂರವರು ದಿಲ್ಲಿ ಪ್ರಾಂತೀಯ ವಿದ್ಯಾರ್ಥಿ ಕಾಂಗ್ರೆಸ್ಸಿನ ವಾರ್ಷಿಕ ಸಭೆಯಲ್ಲಿ ಮಾತನಾಡುತ್ತ ಹೇಳಿದರು.

ನವಭಾರತಕ್ಕೆ ಚಂದಾದಾರರಾಗಿರಿ.

ಉಪ್ಪಿನ ಕರ

ಪ್ಯಾರೇಲಾಲರ ಹರಿಜನ ಲೇಖ.

ಪ್ರಶ್ನೆ. ಮೊದಲು ಘಟನೆಯಲ್ಲಿ ಸೇರ್ಪಡೆಮಾಡಿದ್ದ ಉಪ್ಪಿನ ಕರದ ಮೇಲಿನ ಬಹಿಷ್ಕಾರವನ್ನು ಉಲ್ಲೇಖಿಸದೆ ಬಿಟ್ಟುದರಿಂದ ಘಟನಾ ಸಮಿತಿಯು ಲೋಕೇಚ್ಛೆಗೂ ಗಾಂಧಿಯವರು ಸಾಧಿಸಲು ಸೊಂಟಕಟ್ಟಿನಿಂತ ಗುರಿಗೂ ಭಂಗ ತಂದಂತಾಗಲಿಲ್ಲವೆ?

ಉತ್ತರ:

ಇದಕ್ಕಾಗಿ ಘಟನಾಸಮಿತಿಯನ್ನು ನಿಂದಿಸುವುದು ತಪ್ಪೆನಿಸುತ್ತದೆ. ಆ ಬಹಿಷ್ಕಾರದ ಅನುಲ್ಲೇಖಕ್ಕೆ ಶಾಸನಕರ್ತರಿಗೆ ಉಪ್ಪಿನಮೇಲೆ ಕರ ಹೇರಲು ಅನುಮತಿಸಲಾಗಿದೆ. ಎಂದು ಅರ್ಥವಾಗುವುದಿಲ್ಲ. ಪಂಡಿತ ಜವಹರಲಾಲ ನೆಹರು ಹೇಳಿದಂತೆ ಉಪ್ಪಿನ ಕರದ ಹಿಂದಿರುವ ಇತಿಹಾಸವು ಯಾವ ಸರಕಾರಕ್ಕಾಗಲಿ ಅದನ್ನು ಪುನಃ ಹೇರುವುದಕ್ಕೆ ಮುಂಚೆ ಬಹಳ ವಿಚಾರಮಾಡಲು ಹಚ್ಚುತ್ತದೆ. ಆದರೆ ಆ ಕರವನ್ನು ಮತ್ತೆ ಹೇರುವಂಥ ಸಂದರ್ಭ ಮುಂದೆಲ್ಲಿಯಾದರೂ ಬಂದರೆ, ಮುಂದಿನ ಪೀಳಿಗೆಯವರು ಹಾಗೆ ಮಾಡದಂತೆ ಅವರ ಕೈ ಕಟ್ಟಿಹಾಕುವದು ಅಯುಕ್ತವೇ ಸರಿ. ಯಾಕೆಂದರೆ, ಒಬ್ಬ ಸದಸ್ಯರು ಎಂದುದನ್ನೇ ಈಗ ಉದಾಹರಣೆಗೆ ತೆಗೆದುಕೊಳ್ಳೋಣ: ಅದು ಕರಮುಕ್ತವಾಗಿರುವದರಿಂದ ಭಾರತದಲ್ಲಿಯ ಉಪ್ಪಿನ ತಯಾರಿಕೆಯ ಮೇಲೆ ವಿದೇಶೀಯ ಉಪ್ಪು ಒಮ್ಮೆಗೆ ದಾಳಿ ಗದಾಭಿಘಾತ ಮಾಡಿಬಿಡಬಹುದು; ಆಗ ಭಾರತದ ಉಪ್ಪಿಗಾಗಿಯೇ ವಿದೇಶೀಯ ಉಪ್ಪಿನ ಮೇಲೆ ಕರ ಹೇರಬೇಕಾಗಬಹುದು. ಅದೇ ಮೇರೆಗೆ ಈ ವಿಧದ ಕರವನ್ನು ಸಮರ್ಥಿಸುವ ಇನ್ನಿತರ ಆಕಸ್ಮಿಕ ಸನ್ನಿವೇಶಗಳು ಒದಗಿಬರಬಹುದು. ಯಾವ ಸರಕಾರದವರೂ ಗಂಭೀರವಾಗಿ ವಿಚಾರಮಾಡದೆ ಈ ಕರವನ್ನು ಹೇರುವ ಕೆಲಸಕ್ಕೆ ಕೈಹಾಕರು. ೧೯೩೦ ರಲ್ಲಿ ಗಾಂಧಿಯವರು ಹೂಡಿದ ಚಳವಳಿಯ ದೆಸೆಯಿಂದ ಮಾತ್ರ ಉಪ್ಪಿನ ಕರದಬಗ್ಗೆ ವಿರೋಧ ಭಾವನೆ ಜನರಲ್ಲಿ ಉಂಟಾಯಿತು ಮತ್ತು ಕೇವಲ ಗಾಂಧಿಯವರಿಗಾಗಿಯೇ ಈ ಆಹಾರಪದಾರ್ಥವು ಕರರಹಿತವಾಗಬೇಕು ಎಂದು ಇಂದಿನ ಪೀಳಿಗೆ ತಿಳಿದುಕೊಂಡಿರಬಹುದು. ಇದು ತಪ್ಪು ಅಭಿಪ್ರಾಯ. ಉಪ್ಪಿನ ಕರ ಎಂದಿನಿಂದಲೂ ಅಪ್ರಿಯವಾಗಿಯೇ ಆಗಿತ್ತು. ಅದನ್ನು ಮೊದಲನೆಯ ಬಾರಿಗೆ ಹೇರಿದ್ದು ೧೮೭೦ ರಲ್ಲಿ. ಅಂದಿನಿಂದಲೂ ಅದು ಅಸಂತೋಷಕರವೆನಿಸುತ್ತ ಬಂದಿದೆ. ಇದಕ್ಕಾಗಿ ನಾಡಿನ ನಾನಾ ಭಾಗಗಳಲ್ಲಿ ಗಂಭೀರವಾದ ದಂಗೆಗಳೆದ್ದವು. ವಕೀಲಿಯಲ್ಲಿ ಸರ್ ಫಿರೋಜ್‌ಶಾ ಮೆಹತಾ ಅವರಿಗೆ ಪ್ರಮುಖಸ್ಥಾನವನ್ನು ಕೊಟ್ಟ ಸ್ವರಕ್ಷಣ ಚಟ್ಟಿಗಳಾದರೂ ಹೊಸದಾಗಿ ಹಾಕಿದ ಉಪ್ಪಿನಕರದ ಗಲಭೆಗಳಿಗೆ ಸಂಬಂಧಿಸಿದುವೇ ಆಗಿದ್ದವು. ಅದನ್ನು ಅರ್ಧದಷ್ಟಕ್ಕಾದರೂ ಇಳಿಸಲು ಸುಮಾರು ೬೦ ವರ್ಷಗಳೂ ಪೂರ್ತಿಯಾಗಿ ತೆಗೆದು ಹಾಕಲು ಮತ್ತೆ ೧೫ ವರ್ಷಗಳೂ ಹಿಡಿದವು. ಸ್ವಾತಂತ್ರ್ಯದ ಹಾದಿ ಎಷ್ಟು ತೊಂಡ ಗುಂಡಿ ಏರುತಗ್ಗುಗಳಿಂದ ಕೂಡಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸ್ವಾತಂತ್ರ್ಯ ಸಂಗ್ರಾಮದ ಸತ್ಯಾಗ್ರಹಿ ಯೋಧನಿಗೆ ಚಿಂತಿಸಲು ಕಾರಣವಿಲ್ಲ. ಸಮರ್ಥನೀಯ ಕಾರಣಗಳಿಲ್ಲದೆ ಅದನ್ನು ಮತ್ತೆ ಹೊರಿಸಲು ಮುಂದಿನ ಸರಕಾರವೊಂದು ಬಯಸಿದರೆ ಅವನು ಪುನಃ ಪುನಃ ಆ ರಣಾಹ್ವಾನವನ್ನು ಸ್ವೀಕರಿಸಲು ಸಿದ್ಧನಿರಬೇಕು

— —

ಮು॥ರಾ॥ಶ್ರೀ ಹೊಸಪೇಟೆ ಮುನ್ಸಿಫ್ ಕೋರ್ಟಿನಲ್ಲಿ
S. C. 368 49

ವಾದಿ—ಎ. ನಾರಾಯಣ ಭಟ್ಟ, ಹರಪನಹಳ್ಳಿ.

ಪ್ರತಿವಾದಿ—ಮೈಲಾರ ಚನಬಸಪ್ಪ, ತಂದೆ ಶಂಕರಪ್ಪ, ಹರಪನಹಳ್ಳಿ.

ಮೇಲಿನ ನಂಬರಿನಲ್ಲಿ ವಾದಿ ನಿಮ್ಮ ಮೇಲೆ ನೀವು ಬರೆದುಕೊಟ್ಟ ರೂ ೨೦೦ ಪ್ರೊನೋಟಿನ ಬಾಬತು ಅಸಲು, ಬಡ್ಡಿ, ಖರ್ಚುಗಳ ವಸೂಲಿಗಾಗಿ ದಾವಾ ಮಾಡಿರುತ್ತಾರೆ. ಸದರಿ ನಂಬರು 23-9-49 ಕ್ಕೆ ವಾಯಿದೆ ಬಿದ್ದಿರುತ್ತದೆ. ನಿಮಗೆ ಆಕ್ಷೇಪಣೆ ಇದ್ದಲ್ಲಿ ಸದರಿ ದಿವಸ ನೀವಾಗಲಿ, ನಿಮ್ಮ ವಕೀಲರಾಗಲಿ ಸಕಾಲಕ್ಕೆ ಬಂದು ಹಾಜರಾಗಿ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ಏಕಪಕ್ಷ (Exparte) ನಿರ್ಣಯವಾಗುವದೆಂದು ಈ ಮೂಲಕ ತಿಳಿಸಲಾಗಿದೆ.

10-9-49. ಹೊಸಪೇಟೆ. | B. ಗೋವಿಂದಾಚಾರ್, ವಾದಿಯ ವಕೀಲರು.

— —

ನಿರುದ್ಯೋಗಿಗಳಿಗೆ ಉದ್ಯೋಗ

31-8-49 ಕ್ಕೆ ಕೊನೆಯಾಗುವ ವಾರದಲ್ಲಿ ಜಿಲ್ಲಾ ಎಂಪ್ಲಾಯ್ಮೆಂಟಾಫೀಸದಲ್ಲಿ 155 ಜನರ ರಜಿಸ್ಟರಾಗಿ ಅವರಲ್ಲಿ 34 ಸ್ತ್ರೀಯರಿದ್ದರು. ಈ ವಾರ 103 ಜನರಿಗೆ ಕೆಲಸ ಕೊಡಿಸಲಾಯಿತು.

ಬಳ್ಳಾರಿ ಸ್ಮಾಲ್ ಕಾಸ್ ಕೋರ್ಟಿನಲ್ಲಿ
S. C. No. 508 49.

ವಾದಿ—ಸರೋಜಮ್ಮ

ಪ್ರತಿವಾದಿ ಮಿರಜಾ ಕೊತ್ವಾಲಸಿಂಗ್ ನೇಟಿವ್ ಡಾಕ್ಟರ್, ಬಳ್ಳಾರಿ.

ಇದರಿಂದ ಮೇಲೆ ಕಂಡ ಪ್ರತಿವಾದಿಗೆ ತಿಳಿಸುವದೇನಂದರೆ –

ನಿಮ್ಮ ಮೇಲೆ ವಾದಿಯು ರೂ. 76-9-0 ಮತ್ತು ಖರ್ಚುಗಳಬಗ್ಗೆ ದಾವಾಮಾಡಿದ್ದಾಳೆ. ವಾಯಿದೆ 7-10-49 ಕ್ಕೆ ಹಾಕಲಾಗಿದೆ. ನಿಮಗೇನಾದರು ತಕರಾರು ಇದ್ದಲ್ಲಿ ಸದರಿ ತೇದಿ ಹಗಲು 11 ಘಂಟೆಗೆ ಸ್ವತಃ ಆಗಲಿ ಏಜಂಟರ ದ್ವಾರ ಆಗಲಿ ವಕೀಲರ ದ್ವಾರವಾಗಲಿ ಹಾಜರಾಗಿ ತಕರಾರು ತಿಳಿಸಬೇಕು. ಇದಕ್ಕೆ ತಪ್ಪಿದಲ್ಲಿ ದಾವಾ ಏಕಪಕ್ಷವಾಗಿ ತೀರ್ಮಾನಿಸಲಾಗವುದು.

ಬಳ್ಳಾರಿ, 10-9-49. | ಪಿ. ವೆಂಕೋಬಾಚಾರ್ಯ, ಎಂ.ಎ. ಎಲ್ ಎಲ್. ಬಿ ವಾದಿಯ ವಕೀಲರು

—

ಸೋಷಲಿಸ್ಟ್ ಪಾರ್ಟಿ ಮೆಂಬರು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಜಯಶೀಲರಾದರು.

ಸೋಷಲಿಸ್ಟ್ ಪಾರ್ಟಿ ಮೆಂಬರಾದ ಕಾಮ್ರೇಡ್ ಎನ್. ಶಿವಪ್ಪನವರು ಸ್ವತಂತ್ರ ಹುರಿಯಾಳಾಗಿ ಹಲವಾಗಲು ಸರ್ಕಲ್ ಹರಪನಹಳ್ಳಿ ತಾಲೂಕು ಸದಸ್ಯರ ಬಳ್ಳಾರಿ ಜಿಲ್ಲಾ ಬೋರ್ಡ್ ಚುನಾವಣೆಗೆ ನಿಂತು ಬಲವಾದ ವಿರೋಧವಿದ್ದರೂ, ಜಯಶೀಲರಾಗಿ ಬಂದಿರುತ್ತಾರೆ. ಬಳ್ಳಾರಿ ಜಿಲ್ಲಾ ಸೋಷಲಿಸ್ಟ್ ಪಾರ್ಟಿ ಹಲವಾಗಲು ಸರ್ಕಲ್‌ನ ಮತದಾರರಿಗೆ ನಮ್ಮ ಪಾರ್ಟಿಗೂ, ನಮ್ಮ ಪಾರ್ಟಿ ಮೆಂಬರನಿಗೂ, ತೋರಿದ ಸಹಾಯ ಸಹಾನುಭೂತಿಗಳಿಗೂ, ಇದರಲ್ಲಿ ಸಹಾಯಮಾಡಿದ ಎಲ್ಲ ಸ್ನೇಹಿತ ವರ್ಗಕ್ಕೂ ಅಭಿನಂದನೆಗಳನ್ನರ್ಪಿಸುತ್ತದೆ.

ಪಿಯಾನೋ ಒಂದು ದೊಡ್ಡ ಪೀಡೆ.

"ಪಿಯಾನೋ ಒಂದು ಗೊಗ್ಗರ ದನಿಯ ಹೊಲಸುವಾದ್ಯ. ದೇಶದಲ್ಲಿ ಇರುವ ಎಲ್ಲ ಪಿಯಾನೋಗಳನ್ನು ಒಟ್ಟುಗೂಡಿಸಿ ಬೆಂಕಿ ಹಚ್ಚಿ ಬಿಡಬೇಕು" ಎಂದು ಭಾರತದ ಕಮಾಂಡರ್‌ಇನ್‌ಚೀಫ್, ಜನರಲ್ ಕೆ. ಎಂ. ಕರಿಯಪ್ಪ ಅವರು ದಿಲ್ಲಿಯಲ್ಲಿ ಅಖಿಲಭಾರತ ಸಂಗೀತ ಸಮಾಜದ ಗುಂಪಿನ ಗೋಷ್ಠಿಯಲ್ಲಿ ಭಾಷಣ ಮಾಡುತ್ತ ಹೇಳಿದ್ದಾರೆ.

ಸೋಶ್ಯಾಲಿಝಮ್

ಅಥವಾ

ಸುಲಭ ಸಮಾಜವಾದ

ಜಗತ್ತಿಗೆ ಸಾಮ್ರಾಜ್ಯ ಶಾಹಿಯ ಸಂಕಟ :—

ಕೂಲಿಕಾರರ ಅಸಂತೋಷ ಮತ್ತು ರಾಷ್ಟ್ರ ರಾಷ್ಟ್ರಗಳಲ್ಲಿ ನಡೆದ ವ್ಯಾಪಾರ ಸ್ಪರ್ಧೆ ಇವುಗಳ ಪರಿಣಾಮ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಸಂಘಟನೆಗಳ ಮೇಲೆ ವಿಪರೀತವಾಯಿತು. ಬಂಡವಾಲಗಾರರು ತಮ್ಮ ತಮ್ಮ ದೇಶಗಳಲ್ಲಿನ ಶಾಸನ ಸಂಸ್ಥೆಗಳಲ್ಲಿ ತಮ್ಮ ಪ್ರಭಾವವನ್ನು ಬೀರಿ, ಕೂಲಿಕಾರರ ಚಳವಳಿಯ ರಾಜಕೀಯ ಸ್ವಾತಂತ್ರ್ಯವನ್ನು ಕೊನೆಗಾಣಿಸಿದರು. ಯಂತ್ರದಿಂದ ನಡೆಯುವ ಕಾರ್ಖಾನೆಗಳಲ್ಲಿ ತಯಾರಾಗುವ ವಸ್ತುಗಳ ಸಲುವಾಗಿ ಕಚ್ಚಾ ಮಾಲು ದೊರಕಿಸುವದಕ್ಕಾಗಿ ಪರದೇಶಗಳಿಗೆ ಹೋಗಬೇಕಾಗುತ್ತದೆ; ಮತ್ತು ಪಕ್ಕಾ ಮಾಲಿಗಾಗಿ ವಿದೇಶ ಪೇಟೆಗಳನ್ನು ದೊರಕಿಸುವ ಆವಶ್ಯಕತೆ ಇರುತ್ತದೆ. ಇದಕ್ಕಾಗಿ ನಡೆಯುತ್ತಿದ್ದ ಅಂತರ ರಾಷ್ಟ್ರೀಯ ಸ್ಪರ್ಧೆ ದೇಶದೇಶಗಳ ನಡುವೆ ನಡೆದ ಈ ಆರ್ಥಿಕ ಸ್ಪರ್ಧೆಯಲ್ಲಿ ಬಂಡವಾಲಶಾಹಿಯ ಅಂಕಿತದಲ್ಲಿರುವ ಸರಕಾರಗಳು ಕೂಡಿಕೊಂಡವು ಮತ್ತು ಕಚ್ಚಾ ಮತ್ತು ಪಕ್ಕಾ ಮಾಲಿನ ಪೇಟೆಗಳನ್ನು ಪಡೆಯುವದಕ್ಕಾಗಿ, ಆರ್ಥಿಕ ಉತ್ಪಾದನೆಯಲ್ಲಿ ಹಿಂದುಳಿದ ದೇಶಗಳನ್ನು ಪಾರತಂತ್ರ್ಯದಲ್ಲಿ ನೂಕಿದವು. ಹಿಂದುಳಿದ ಈ ರಾಷ್ಟ್ರಗಳಮೇಲೆ ಒಂದ ಪಾರತಂತ್ರ್ಯದ ಮೂಲಕ ಆಯಾ ರಾಷ್ಟ್ರಗಳ ರಾಜಕೀಯ ಮತ್ತು ಆರ್ಥಿಕಜೀವನವು ಕೊನೆಗೊಂಡಿತು. ಬಂಡವಾಲಶಾಹಿ ರಾಷ್ಟ್ರಗಳಲ್ಲಿ ನಿರ್ಮಿತವಾದ ಮಾಲು ಈ ದೇಶಗಳಲ್ಲಿ ನುಗ್ಗಿ, ಅಲ್ಲಿದ್ದ ಹಸ್ತವ್ಯವಸಾಯದಿಂದ ಸಿದ್ಧವಾದಮಾಲನ್ನು ಹೊರಗಟ್ಟಿ, ಆಯಾ ದೇಶಗಳಲ್ಲಿಯ ಹಸ್ತ ವ್ಯವಸಾಯಗಳು ನಾಶವಾದವು. ಮತ್ತು ಪರದೇಶಿಮಾಲಿನ ನುಗ್ಗುವಿಕೆಯಿಂದ ದೇಶದಲ್ಲಿಯ ಸಂಪತ್ತೆಲ್ಲ ತೊಳೆದು ಹೋಯಿತು. ಪರಕೀಯ ಸತ್ತಾಧೀಶರ ಶಾಸನ ಸಂಸ್ಥೆಯೂ ಲೂಟಿ ಮಾಡಹತ್ತಿತ್ತು. ಹಸ್ತವ್ಯವಸಾಯಗಳು ಮುಳುಗಿದ್ದರಿಂದ ನಿರುದ್ಯೋಗಿತನ ಬೆಳೆಯಿತು ಮತ್ತು ಆರ್ಥಿಕಸ್ವಾತಂತ್ರ್ಯವು ಕೊನೆಗಂಡಿತು. ಅದರಂತೆ ಪರಕೀಯ ಅಧಿಕಾರದ ಅಥವಾ ಸಾಮ್ರಾಜ್ಯಶಾಹಿಯ ಬಂಡಗಲ್ಲು ತಲೆಯಮೇಲೆ ಕೂತು ಈ ದೇಶಗಳ ರಾಜಕೀಯ ವಿಕಾಸವೂ ಕೊನೆಗಂಡಿತು.

ಈ ಸೋತ ಮತ್ತು ದುಃಖಕ್ಕೀಡಾದ ದೇಶಗಳ ಮೂಲಕ ರಾಜ್ಯದಾಡಳಿತ ಸಾಗಿಸುವ ಬಂಡವಾಲಶಾಹಿ ರಾಷ್ಟ್ರಗಳ ಮೇಲೂ ಒಂದು ಹೊಸ ಸಂಕಟ ಬಂದಿತು. ಅಂಕಿತ ರಾಷ್ಟ್ರದೊಳಗಿಂದ ಬಂದ ಸಾಂಪತ್ತಿಕ ಪ್ರವಾಹದಿಂದ ಬಂಡವಾಲಶಾಹಿ ರಾಷ್ಟ್ರದ ಜನರ—ಕೂಲಿಕಾರರು ಸಹ—ಜೀವನ ನೆಟ್ಟಗಾಯಿತು; ಇದು ನಿಜ; ಆದರೆ ಇದರಿಂದಲೆ ಕಾರ್ಖಾನೆಯೊಡೆಯರ ವೆಚ್ಚವೂ ಬಹಳ ಬೆಳೆಯಿತು. ಇದರ ವಿರುದ್ಧ ಹಿಂದುಳಿದ ದೇಶಗಳಲ್ಲಿಯ ಕೂಲಿಕಾರರು ಬಡವರು, ಅವರಲ್ಲಿ ನಿರುದ್ಯೋಗಿತನ ಹೆಚ್ಚು; ಆದ್ದರಿಂದ ಅವರಿಗೆ ಕಡಿಮೆ ವೇತನ ಕೊಡಬೇಕಾಗುವದು; ಕಚ್ಚಾಮಾಲು ಅಲ್ಲೇ ತಯಾರಾಗುವದು ಮತ್ತು ಮೇಲಾಗಿ ಪಕ್ಕಾ ಮಾಲಿನ ಗ್ರಾಹಕರೂ ಅವರೇ; ಇದೆಲ್ಲ ಬಂಡವಾಲದಾರರಿಗೆ ತೋರದೆ ಹೋಗಲಿಲ್ಲ. ಆದ್ದರಿಂದ ಇವರು ತಮ್ಮ ತಮ್ಮ ದೇಶಗಳಲ್ಲಿ ಕಾರ್ಖಾನೆಗಳನ್ನು ಸುರು ಮಾಡದೆ, ಅಂಕಿತರಾಷ್ಟ್ರಗಳಲ್ಲಿ ಕಾರ್ಖಾನೆಗಳನ್ನು ತೆಗೆದರು. ಇದರಿಂದ ಬಂಡವಾಲಶಾಹಿ ರಾಷ್ಟ್ರಗಳಲ್ಲಿ ನಿರುದ್ಯೋಗಿತನ ಹೆಚ್ಚಾಗ ಹತ್ತಿತು. ಅದರಂತೆ ಹಿಂದುಳಿದ ದೇಶದ ಜನಸಂಖ್ಯೆ ಬೆಳೆಯಹತ್ತಿತು ಮತ್ತು ಅಲ್ಲಿಯ ವೇತನದ ಪ್ರಮಾಣ ಬೆಳೆಯಲಿಲ್ಲ; ಇದರಿಂದ ಈ ಅಂಕಿತ ರಾಷ್ಟ್ರಗಳಲ್ಲಿಯೂ ನಿರುದ್ಯೋಗಿತನ ಬೆಳೆಯಿತು.

ಈ ಅನರ್ಥದ ಕಾರಣ:—

ಈ ಜಾಗತಿಕ ಅನರ್ಥದ ಕಾರಣವು ಮೇಲೆ ಹೇಳಿದ ಮಾತುಗಳಲ್ಲಿ ಸೂಕ್ಷ್ಮ ದೃಷ್ಟಿಯಿಂದ ನೋಡುವವರಿಗೆ ಕಂಡುಬರುವದು. ಇಂದು ಜಗತ್ತಿನಲ್ಲಿ ಪಸರಿಸಿದ ಸಮಾಜವ್ಯವಸ್ಥೆಗೆ ಸಾಮಾನ್ಯವಾಗಿ ಬಂಡವಾಲಶಾಹಿ ಎಂದು ಕರೆಯುತ್ತಾರೆ. ಹೊಲ, ಕಾರಖಾನೆ, ಗನಿ, ಉಗಿಹಡಗ, ಉಗಿಬಂಡಿ ಮುಂತಾದ ಧನೋತ್ಪಾದನ ಸಾಧನೆಗಳೆಲ್ಲ ಕೆಲವೇ [illegible]ರ ಕೈಯಲ್ಲಿ ಇವೆ; ಆದ್ದರಿಂದ ಈ ಸಮಾಜ ವ್ಯವಸ್ಥೆಗೆ ಬಂಡವಾಲಶಾಹಿ ಎಂಬ ಹೆಸರು. ಈ ಪ್ರಪಂಚ ಸಾಧನಗಳಿಂದ ತಯಾರಾದ ವಸ್ತುಗಳ ಅಗ್ಗ ಮಾರಾಟದೊಡನೆ, ಹಸ್ತವ್ಯವಸಾಯದಿಂದ ಮಾಡಿದ ವಸ್ತುಗಳು ಉಳಿಯುವದು ಸಾಧ್ಯವಿಲ್ಲ. ಹಸ್ತ ವ್ಯವಸಾಯಗಳು ಮುಳುಗಿ ಹೋಗುತ್ತವೆ. ಹಸ್ತ ವ್ಯವಸಾಯಿಗಳು ತಮ್ಮ ವ್ಯವಸಾಯ ಕಳಕೊಂಡು ಬಂಡವಾಲಶಾಹಿಯವರ ಬಾಗಿಲಲ್ಲಿ ದಿನಗೂಲಿ ಬೇಡಲಿಕ್ಕೆ ಹೋಗಬೇಕಾಗುತ್ತದೆ. ಹೀಗೆ ಬಹುಸಂಖ್ಯಾಕರ ನಾಡಿಗಳು ಬಂಡವಾಲಗಾರರ ಕೈಯಲ್ಲಿ ಸಿಕ್ಕಿರುವದರಿಂದ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ಬಂಡವಾಲಗಾರ ವರ್ಗವೇ ಜಗತ್ತಿನ ಒಡೆತನ ಪಡೆದುದರಿಂದ, ಸಹಜವಾಗಿಯೇ ಈ ಸಮಾಜ ವ್ಯವಸ್ಥೆಗೆ ಬಂಡವಾಲಶಾಹಿ ಎಂಬ ಹೆಸರು ಬಂದಿದೆ.

ಹೊಲಗಳು, ಕಾರಖಾನೆಗಳು, ಗನಿಗಳು, ಸಾರಿಗೆ ಸೌಕರ್ಯದ ಸಾಧನ ಮೊದಲಾದವುಗಳು, ಅಂದರೆ ಜಗತ್ತಿನಲ್ಲಿ ಬಂಡವಾಲವು ಖಾಸಗಿ ಒಡೆಯರ ಅಧೀನದಲ್ಲಿ ಮತ್ತು ಸ್ವಾಮಿತ್ವದಲ್ಲಿ ಇರುವದೇ ಈ ಸಮಾಜ ವ್ಯವಸ್ಥೆಯ ವೈಶಿಷ್ಟ್ಯವು. ಆದರೆ ಇದೇ ವೈಶಿಷ್ಟ್ಯದ ಮೂಲಕ ಇಡೀ ಮಾನವ ಜಾತಿಗೆ ಸಂಕಟ ಒದಗಿದೆ. ಅದು ಹೇಗೆ ನೋಡುವ. 'ಧನ' ಎಂಬ ಹೆಸರಿನಿಂದ ಕರೆಯಲ್ಪಡುವ ವಸ್ತುಗಳನ್ನೆಲ್ಲ 'ಭೋಗ್ಯಧನ' ಮತ್ತು 'ನಿರ್ಮಾಣಕಧನ' ಎಂಬ ಎರಡು ರೀತಿಯಲ್ಲಿ ವಿಭಾಗಿಸಬಹುದು. ಕಾಳು, ಕಡ್ಡಿ, ಪುಸ್ತಕ,

---

ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ.

S. C. 363/49.

ಗೌಡ್ರ ಗೂಳಪ್ಪ ಸಾ. ಮಹದೇವಪುರ ತಾ॥ ಕೂಡ್ಲಿಗಿ — ವಾದಿ

Vs.

ಗೌಡ್ರ ಗಂಗನಗೌಡ್, ಸಾ॥ ಹಿರೇಕೆರೆಯಾಗನಹಳ್ಳಿ ತಾ॥ ಕೂಡ್ಲಿಗಿ — ಪ್ರತಿವಾದಿ

ತಾ॥ 2-6-43 ರಲ್ಲಿ ಪ್ರತಿವಾದಿಯು ವಾದಿಗೆ ಬರಕೊಟ್ಟ ಬಾಂಡಿನ ಮೇರೆಗೆ ಬಾಕಿಯಾಗಿರುವ 540 ಸೇರು ರಾಗಿಯನ್ನು ಅಥವಾ ಅದರ ಬೆಲೆ (ರು. 140/- ನ್ನು ವಸೂಲು ಮಾಡಲು ವಾದಿಯು ದಾವೆ ಮಾಡಿರುವನು. ತಕರಾರು ಏನಾದರೂ ಇದ್ದರೂ ಪ್ರತಿವಾದಿಯು ಖುದ್ದಾಗಲೀ, ವಕೀಲರ ದ್ವಾರ ಆಗಲೀ ತಾ॥ 24-9-49 ಮುಂಜಾನೆ 10 ಗಂಟೆಗೆ ಕೋರ್ಟಿನಲ್ಲಿ ಹಾಜರಾಗಬೇಕು. ತಪ್ಪಿದಲ್ಲಿ ವಾದಿ ಕೋರಿದಂತೆ ಎಕ್ಸ್ ಪಾರ್ಟಿ ಡಿಕ್ರಿ ಮಾಡಲಾಗುವದು.

ಹೊಸಪೇಟೆ 15-9-49 — ಶೆಟ್ಟಿ ರಂಗರಾವ್ ವಾದಿ ವಕೀಲು.

ಅರಿವೆ, ಸಿನೇಮಾ ಮುಂತಾದವು ಭೋಗ್ಯಧನ; ಯಾಕೆಂದರೆ ಮನುಷ್ಯನ ಉಪಭೋಗದತ್ತ ಇವುಗಳ ವಿನಿಯೋಗವಾಗುತ್ತದೆ. ಆದರೆ ಮುಂದೆ ಬಿತ್ತುವದಕ್ಕಾಗಿ ಒಕ್ಕಲಿಗನು ಬದಿಗಿಡುವ ಬೀಜ, ನೇಗಿಲು, ಎತ್ತು ಮೊದಲಾದವು, ಮುದ್ರಣ ಯಂತ್ರ ಮತ್ತು ಇತರ ಸಾಹಿತ್ಯ, ಗಿರಣಿಗಳು ಮೊದಲಾದ ವಸ್ತುಗಳ ಪ್ರತ್ಯಕ್ಷ ಉಪಭೋಗ ಮನುಷ್ಯ ಮಾಡುವದಿಲ್ಲ. ಇವೆಲ್ಲವೂ ಧನೋತ್ಪಾದನದ ಸಾಧನಗಳು. ಉಗಿಬಂಡಿ ಮೊದಲಾದವು ಎರಡು ಜಾತಿಯವು ಅವೆ. ಒಟ್ಟಿನಲ್ಲಿ ಧನವು ಎರಡು ಜಾತಿಯದೆಂದು ಸ್ಥೂಲಮಾನದಿಂದ ಅನ್ನಲು ಏನೂ ಅಡ್ಡಿ ಇಲ್ಲ. ಅವುಗಳಲ್ಲಿ ಭೋಗ್ಯಧನವು ಭೋಗಿಸಿ, ಭೋಗಿಸಿ ಇಲ್ಲದಂತಾಗುವದು ಮತ್ತು ಉತ್ಪಾದಕ ಧನದ ಸಹಾಯದಿಂದ ಮತ್ತೆ ಭೋಗ್ಯ ಧನವು ನಿರ್ಮಿಸಲಾಗುವದು. ಉತ್ಪಾದಕ ಧನವೂ ಸಹ ಸವೆದು ಅದರಲ್ಲಿಯೂ ಹೊಸ ಹುಟ್ಟುವಳಿಯಾಗುವದು. ಈ ಕಾರ್ಯವು ನಡೆದಾಗ 'ಉತ್ಪಾದಕಧನ' ಅಂದರೆ 'ಉತ್ಪಾದನ ಸಾಧನ'ಗಳಲ್ಲಿ ಸುಧಾರಣೆಯಾಗ ಹತ್ತಿತೆಂದರೆ ಇವೆರಡರ ಸಹಾಯದಿಂದ ಎರಡೂ ಜಾತಿಯ ಧನವನ್ನು ಹೆಚ್ಚಾಗಿ ಉತ್ಪನ್ನ ಮಾಡುವದು ಮನುಷ್ಯನಿಗೆ ಸಾಧ್ಯವಾಗುತ್ತದೆ. ಆದರೆ ಮಾನವ ಜಾತಿಗೆಲ್ಲ ಸಾಕಾಗಿ ಉಳಿಯುವಷ್ಟು ಧನ ಹುಟ್ಟಿದರೆ, ಬೇಕಾದಷ್ಟೇ ನಿರ್ಮಿಸಿ ಅಷ್ಟು ಪ್ರಮಾಣದಲ್ಲಿ ಕೆಲಸ ಸಮಯ ಕಡಿಮೆ ಮಾಡುವದು ಯೋಗ್ಯವೂ ಶಕ್ಯವೂ ಇದೆ. ಈ ವರುಷ ನಾನು ಸುಧಾರಿಸಿದ ನೇಗಿಲು, ಕೃತ್ರಿಮಗೊಬ್ಬರ, ಯಂತ್ರ ಮೊದಲಾದವುಗಳನ್ನು ಉಪಯೋಗಿಸಿದ್ದರಿಂದ, ಹೋದವರುಷಕ್ಕಿಂತ ಕಾಳು ಕಟ್ಟು ಮುಪ್ಪಟ್ಟು, ಅಂದರೆ ೩೦೦ ಮಣ ಬಂದಿತು, ಅಂದರೆ ನನಗೆ ಹೋದ ವರುಷಕ್ಕಿಂತ ಮುಪ್ಪಟ್ಟು ಜನರನ್ನು ಪೋಷಿಸಲು ಬರುವದು ಅಥವಾ ಒಂದು ವರುಷ ಭೂಮಿಯನ್ನು ಪಡಕೆಡವಿ ಕೆಲಸ ಮಾಡುವವರನ್ನು ಕೆಲಸ ಮಾಡದೆ ಹಾಗೆ ಇಟ್ಟುಕೊಳ್ಳಲಿಕ್ಕೆ ಬರುವದು. ಈ ತರ್ಕವು ಯೋಗ್ಯವಿದೆಯೆಂದು ತಿಳಿದುಕೊಂಡರೆ ಕಳೆದ ೨೫-೩೦ ವರುಷಗಳಲ್ಲಿ ಜಗತ್ತಿನಲ್ಲಿಯ ಧನೋತ್ಪಾದನವು ದುಪ್ಪಟ್ಟಾಗಿದ್ದರಿಂದ, ಮನುಷ್ಯನ ಜೀವನಪುಷ್ಟಿ ಅಷ್ಟರ ಮಟ್ಟಿಗೆ ಬೆಳೆದಿರಬೇಕು ಅಥವಾ ಸರಾಸರಿ ಜಗತ್ತಿನಲ್ಲಿಯ ಕೆಲಸದ ತಾಸುಗಳು, ಕೂಲಿ ಕಡಿಮೆಯಾಗದೆ ಅಥವಾ ನಿರುದ್ಯೋಗತನ ಬೆಳೆಯದೆ ಅರ್ಧದಷ್ಟು ಆಗಿರಬೇಕು ಎಂಬ ಅನುಮಾನವು ಹೊರಡುತ್ತದೆ. ಆದರೆ ನಿಜಸ್ಥಿತಿಯು ಇದರ ವಿರುದ್ಧ ಇದ್ದದ್ದು ಕಂಡುಬರುತ್ತದೆ, ಕೋಟ್ಯವಧಿ ಜನರು ಕೆಲಸವಿಲ್ಲದೆ ಉಪವಾಸದಿಂದ ಬಳಲುವ ಪರಿಸ್ಥಿತಿಯಲ್ಲಿ ಇದ್ದದ್ದು ಕಂಡುಬರುತ್ತದೆ. ಹೀಗೆ ಏಕಾಗಬೇಕು? ಜಗತ್ತಿನಲ್ಲಿ ಒಟ್ಟಿಗೆ ಎಲ್ಲ ಮನುಷ್ಯರ ಕೆಲಸದ ಅವಧಿ ಕಡಿಮೆಯಾಗಬೇಕು; ಆದರೆ ದುಡಿಮೆ ಕಡಿಮೆಯಾಗಬಾರದು. ಇದು ಯೋಗ್ಯವೂ ತರ್ಕಶುದ್ಧವೂ ಎಂದು ಕಾಣಿಸಿದಾಗ ಸಹ, ನಿರುದ್ಯೋಗತನವು ಸೋಂಕುರೋಗದಂತೆ ಜಗತ್ತಿನ ತುಂಬ ಹಬ್ಬಿದುದರ ಕಾರಣವೇನು? ಬಂಡವಾಲಗಾರರು ಅನ್ನುತ್ತಾರೇನಂದರೆ ತಯಾರು ಮಾಡಿದ ಮಾಲು ಮಾರಾಟವಾಗಲೊಲ್ಲದು; ಆದ್ದರಿಂದ ಕಾರಖಾನೆ ಬಂದು ಇಡಬೇಕಾಗುತ್ತದೆ; ಅದರಿಂದ ನಿರುದ್ಯೋಗತನ ಬೆಳೆಯುತ್ತದೆ. ಇದು ಇರಲಿ, ಆದರೆ ಮಾಲು ಮಾರಾಟ ಏಕೆ ಆಗುವದಿಲ್ಲ? 'ನಿರುದ್ಯೋಗತನ ಮತ್ತು ಕಡಿಮೆ ವೇತನ ಇವುಗಳ ಮೂಲಕ ಮಾಲು ಮಾರಾಟ ಆಗುವದಿಲ್ಲ.' ಇದರ ಅರ್ಥ ಇಷ್ಟೆ. ಮಾಲು ಮಾರಾಟವಾಗುವದಿಲ್ಲೆಂದು ನಿರುದ್ಯೋಗತನ ಬೆಳೆಯುತ್ತದೆ. ಮತ್ತು ನಿರುದ್ಯೋಗತನ ಬೆಳೆವದರಿಂದ ಮಾಲು ಮಾರಾಟ ಆಗುವದಿಲ್ಲ' ಇಂಥ ಒಂದು ಪರಸ್ಪರ ವಿಸಂಗತಿ ಇದ್ದ ಉತ್ತರವು ಮೇಲಿನ ಪ್ರಶ್ನೆಗೆ ಕೊಡಬೇಕಾಗುತ್ತದೆ. ಆದರೆ ಉತ್ತರವನ್ನು ಕುರಿತು ಸ್ವಲ್ಪ ಆಳವಾಗಿ ವಿಚಾರಿಸಿದರೆ ಅದರಲ್ಲಿದ್ದ ವಿಸಂಗತಿ ಮಾಯವಾಗುವದು. ಒಮ್ಮೆ ಯಾವ ದುಡ್ಡು, ಕೂಲಿ, ಕಂಬಳಿ, ವೇತನ ಮೊದಲಾದ ರೂಪಗಳಲ್ಲಿ ಕೆಲಸ ಮಾಡುವವರ ಕೈ ಸೇರುತ್ತದೋ ಅದೇ ದುಡ್ಡು ಮತ್ತೆ 'ಕ್ರಯ--ಶಕ್ತಿ' ರೂಪ ಹೊಂದಿ ಕೂಲಿಕಾರ, ಕಾರಕೂನರ ಕೈಯಿಂದ ವಸ್ತು ನಿರ್ಮಿಸುವ ಒಡೆಯರ ಕೈ ಸೇರುತ್ತದೆ. ಇವರಿಬ್ಬರ ನಡುವೆ ಕೆಲವು ಜನ ಇರಬಹುದು ಆದರೆ ಸ್ಥೂಲಮಾನದಿಂದ ಕೂಲಿಕಾರ ಕಾರಕೂನ ಮೊದಲಾದವರು ದುಡಿದ ವೇತನವನ್ನು ಮತ್ತೆ ತಿರುಗಿಕೊಟ್ಟು ಒಡೆಯರ ಕಡೆಯಿಂದ ವಸ್ತುಗಳನ್ನು ಪಡೆಯುತ್ತಾರೆ ಅನ್ನಲು ಅಡ್ಡಿ ಇಲ್ಲ. ವಸ್ತುಗಳ ಒಡೆಯರು ತಾವು ತಯಾರಿಸಿದ ಎಲ್ಲ ವಸ್ತುಗಳನ್ನು ಮಾರಾಟಕ್ಕೆ ಕಳಿಸುವದಿಲ್ಲ. ಮೇಲೆ ಹೇಳಿದಂತೆ, 'ಉತ್ಪಾದನೆ ಮಾಡುವ' ವರ್ಗಕ್ಕೆ ಹೊಂದಿದ ವಸ್ತುಗಳನ್ನು ಇಟ್ಟು 'ಭೋಗ್ಯ' ವಸ್ತುಗಳನ್ನಷ್ಟೇ ಗ್ರಾಹಕರ ಇದಿರು ಇಡುತ್ತಾರೆ. ಈ 'ಭೋಗ್ಯ' ವಸ್ತುಗಳೆಲ್ಲ ಖರ್ಚು ಆದರೆ ಮಾತ್ರ ಹೊಸ ವಸ್ತುಗಳನ್ನು ಒಡೆಯರು ನಿರ್ಮಿಸುವರು. ಉತ್ಪಾದನವಾದ ಎಲ್ಲ ವಸ್ತುಗಳು ಖರ್ಚು ಆಗುವ ಬಗೆಯೇನು? ಆ 'ಭೋಗ್ಯ' ವಸ್ತುಗಳ ಬೆಲೆಯಷ್ಟು ದುಡ್ಡು ಕಾರಕೂನರು, ಕೂಲಿಕಾರರು ಮುಂತಾದ ಕ್ರಯಮಾಡುವವರ ಕೈಯಲ್ಲಿ ಸಿಕ್ಕರೆ ಮಾತ್ರ ಅವರು ಅವನ್ನೆಲ್ಲ ಕೊಳ್ಳುವರು; ಆದರೆ ಬಂಡವಾಲಶಾಹಿ ವ್ಯವಸ್ಥೆಯಲ್ಲಿ ಇದಾಗುವದಿಲ್ಲ.

ಜಗತ್ತಿನಲ್ಲಿ ಕಾರಕೂನರ ಕೂಲಿಕಾರರ ಮೊದಲಾದವರ ವೇತನ, ಕೂಲಿ ಮೊದಲಾದವು ಅವರಿಗೆ ಭೋಗ್ಯ ವಸ್ತುಗಳನ್ನು ಕೊಳ್ಳಲು ಶಕ್ಯವಿದ್ದಷ್ಟು ಇರಬೇಕು ಎಂಬ ತತ್ವದ ಮೇಲೆ ನಿಶ್ಚಯಿಸಲಾಗುವದಿಲ್ಲ. ಅವರಿಗೆ ಆದಷ್ಟು ಕಡಿಮೆ ಸಂಬಳ ಕೊಟ್ಟು ಹೆಚ್ಚು ವಸ್ತುಗಳ ನಿರ್ಮಾಣವಾಗುವ ಧೋರಣೆ ಬಂಡವಾಲಗಾರರದು. ಯಂತ್ರಗಳಲ್ಲಿ ಆದ ಸುಧಾರಣೆಯಿಂದಾಗಿ ಹೆಚ್ಚು ವಸ್ತುಗಳು ಆಗುವದು ಸಾಧ್ಯವಾಗಿ ಕೂಲಿಕಾರರ ಗರಜು, ಜನಸಂಖ್ಯೆ ಮತ್ತು ಕೂಲಿಕಾರರ ಸಂಖ್ಯೆಯ ಪ್ರಮಾಣದಲ್ಲಿ ಕಡಿಮೆಯಾಗಹತ್ತಿತ್ತು. ಇದರಿಂದ ಕೂಲಿಕಾರರಲ್ಲಿ ಸ್ಪರ್ಧೆಯುಂಟಾಗಿ ಅವರ ವೇತನದ ಪ್ರಮಾಣ ಕಡಿಮೆಯಾಗುತ್ತಾ ನಡೆಯಿತು ಮತ್ತು ನಿರುದ್ಯೋಗತನ ಬೆಳೆಯುತ್ತಾ

ಬಳ್ಳಾರಿ ಸ್ಮಾಲ್ ಕೋರ್ಟು ಜಡ್ಜಿ ಕೋರ್ಟಿನಲ್ಲಿ.

S C. No 45½/49.

Between.

ದಿ ಬಿ. ಬಿ. ಹೆಚ್. ಎಂ. ಬಿ ಸಿ- ಫಂಡು
Vs. ಎಸ್. ನಾಗಪ್ಪ ಮತ್ತು ಇತರರು

1. ಎಸ್. ನಾಗಪ್ಪ ತಂದೆ ತಿಮ್ಮಪ್ಪ ಪೀ ಯನ್ ಡಿಸ್ಟ್ರಿಕ್ಟ ಬೋರ್ಡು ಆಫೀಸು, ಬಳ್ಳಾರಿ.
2. ಎಂ. ಕೊಂಡಪ್ಪ, ತಂದೆ ಪಣ್ಣು ಪಿಸ್ಟ್ ಲ್ಯಾಂಡ್ ಲಾರ್ಡ, ಬಳ್ಳಾರಿ.
3. ಗಡ್ಡಿ ಕೇಪಣ್ಣರಪ್ಪ ತಂದೆ ಶಿದ್ದಪ್ಪ, ಲ್ಯಾಂಡ್ ಲಾರ್ಡ, ಬಳ್ಳಾರಿ ಇವರಿಗೆ

ನೋಟೀಸು ಮೂಲಕ ತಿಳಿಸುವದೇನಂದರೆ:--

ಬಿ. ಬಿ. ಹೆಚ್. ಎಂ. ಬಿ. ಸಿ. ಫಂಡು ಲಿಮಿಟೆಡ್‌ನವರು ತಮಗೆ ಬರಬೇಕಾದ ರೂ. 247-1-4 ಬಾಕಿ ಖರ್ಚುಗಳಿಗಾಗಿ ದಾವಾಮಾಡಿದ್ದು ಅದರ ವಾಯಿದೆಯು 6-10-1949 ಕ್ಕೆ ಹಾಕಲಾಗಿದೆ ಅದಿನ ಮುಂಜಾನೆ 11 ಗಂಟೆಗೆ ನೀವು ಖುದ್ದಾಗಲಿ ಅಥವಾ ವಕೀಲರ ದ್ವಾರವಾಗಲಿ ಹಾಜರಾಗಿ ನಿಮ್ಮ ಆಕ್ಷೇಪಣೆಗಳನ್ನು ತಿಳಿಸದಿದ್ದರೆ ಏಕಪಕ್ಷವಾದ ನಿರ್ಣಯ ವಾಗುವದೆಂದು (Exparte) ತಿಳಿಯಬೇಕು.

ಕೆ. ಕೇಶವರಾವ್,
ವಕೀಲು.

ನಡೆಯಿತು; ಆದ್ದರಿಂದ ಬಂಡವಾಲಗಾರರ ವಸ್ತುಗಳು ವೆಚ್ಚವಾಗುವದಿಲ್ಲ; ಪರಿಣಾಮವಾಗಿ ನಿರುದ್ಯೋಗತನ ಬೆಳೆಯುತ್ತದೆ; ಕೂಲಿ ಕಡಿಮೆಯಾಗುತ್ತದೆ; ಮತ್ತೆ ವಸ್ತುಗಳ ನಿರ್ಮಾಣವಾಗುವದಿಲ್ಲ. ಇದರಿಂದ ಬಂಡವಾಲಗಾರರ ಕಾರ್ಖಾನೆಯು ಪ್ರಗತಿ ನಿಂತು ಬಿಡುತ್ತದೆ. ವಸ್ತುಗಳ ನಿರ್ಮಿತಿಗಾಗಿ ಮಾಡಲಾದದುಡಿತದ ಮೊಬಲಗೆಂದು ಕೊಡಲಾದ ದುಡ್ಡು, ಕ್ರಯ ಶಕ್ತಿರೂಪದಿಂದ ಮಾಲು ಕೊಳ್ಳುತ್ತದೆ. ಈ ಸಾಮಾನ್ಯ ತತ್ವವನ್ನು ನೆನಪಿನಲ್ಲಿಟ್ಟರೆ, ಮತ್ತು ಬಂಡವಾಲಗಾರರ ಧೋರಣೆಯು, ಕಡಿಮೆ ವೇತನ ಕೊಟ್ಟು ಹೆಚ್ಚು ವಸ್ತು ನಿರ್ಮಿತಿ ಮಾಡಿಸುವದೂ, ವೇತನವೆಂದು ಕೊಟ್ಟದ್ದಕ್ಕಿಂತ ಹೆಚ್ಚಾಗಿದ ವಸ್ತುಗಳು ಲಾಭವೆಂದು ಗಳಿಸಬೇಕು ಎಂಬುವದದೆ ಎಂಬುವದನ್ನು ಅರಿತರೆ, ಬಂಡವಾಲಶಾಹಿಯು ಆರಂಭದಲ್ಲಿಯೇ ವಸ್ತುಗಳ ಅಪಾರ ಸಂಚಯವಾಗಿ, ಮೇಲೆ ಹೇಳಿದಂತೆ ಮಾರದೆ ಉಳಿದ ವಸ್ತುಗಳ ರಾಶಿಯಾಗಿ ಬಂಡವಾಲಶಾಹಿಯ ಪ್ರಗತಿ ಕುಂಠಿತವಾಗಬೇಕಿತ್ತು; ಆದರೆ ಒಂದು ವಿಶೇಷ ಕಾರಣದ ಮೂಲಕ ಹೀಗೆ ಆಗಲಿಲ್ಲ. ಆಕಾರಣವೆಂದರೆ ಹೀಗೆ ಆಗಲಿಲ್ಲ. ಆ ಕಾರಣವೆಂದರೆ ಹೀಗೆ ಅದೆ:- ಬಂಡವಾಲ ಶಾಹಿಯ ಯಾಂತ್ರಿಕ ಉತ್ಪಾದನೆಯಾದದ್ದು ಮೊದಲು ಇಂಗ್ಲಂಡದಲ್ಲಿ. ಇವರು ನಿರ್ಮಿಸಿದ ಅಗ್ಗ ಮತ್ತು ಅಂದವಾದ ವಸ್ತುಗಳಿಗೆ ಕಾರಖಾನೆಗಳಲ್ಲಿ ಕೆಲಸ ಮಾಡುವವರಲ್ಲದೆ ಹೆಚ್ಚಿನ ಗ್ರಾಹಕರು ಬೇಕಾಗಿದ್ದರು. ಹಸ್ತ ವ್ಯವಸಾಯದಿಂದ ನಿರ್ಮಿತವಾದ ವಸ್ತುಗಳನ್ನು ತೆಗೆದುಕೊಳ್ಳುವವರೆಲ್ಲರೂ ಈ ವಸ್ತುಗಳ ಹೆಚ್ಚಿನ ಗ್ರಾಹಕರಾದರು. ಇದರಿಂದ ಹಸ್ತ ವ್ಯವಸಾಯಿಗಳ ಉದ್ಯೋಗ ಮಣ್ಣುಪಾಲಾಗಿ ಹೋಗಿ, ಹಸ್ತ ವ್ಯವಸಾಯ ಮಾಡುವವರೆಲ್ಲ ಕ್ರಮೇಣ ಬಂಡವಾಲ ಶಾಹಿಯವರ ಕೈಯೊಳಗಿನ ಆಳಾದರು. ಹೀಗೆ ಇಂಗ್ಲಂಡದಲ್ಲೆಲ್ಲ, ಒಂದೆಡೆಗೆ ಕಾರಖಾನೆಯ ಒಡೆಯರು ಮತ್ತು ಇನ್ನೊಂದು ಕಡೆ ಕೂಲಿಕಾರರು, ಹೀಗೆ ಜನರು ಸಾಮಾನ್ಯವಾಗಿ ವಿಭಾಗಿಸಲ್ಪಟ್ಟರು. ಆದರೆ ಈ ಕೂಲಿಕಾರರು ಕಾರಖಾನೆಯಲ್ಲಿ ನಿರ್ಮಿತವಾದ ವಸ್ತುಗಳನ್ನೆಲ್ಲ ತಕ್ಕೊಳ್ಳಲು ಶಕ್ತರಾಗಲಿಲ್ಲ. ಆದ್ದರಿಂದ ಮತ್ತೆ ಉಳಿದ ವಸ್ತುಗಳನ್ನೆಲ್ಲ ಹಿಂದೂಸ್ಥಾನ, ಚೀನಾ ಮುಂತಾದ ಹಿಂದುಳಿದ ದೇಶಕ್ಕೆ ಕಳಿಸಲಾಯಿತು. ಇಲ್ಲಿದ್ದ ಹಸ್ತವ್ಯವಸಾಯದಿಂದ ಉತ್ಪಾದಿತವಾದ ವಸ್ತುಗಳ ಗ್ರಾಹಕರನ್ನೆಲ್ಲ ತಮ್ಮ ಕಡೆ ಸೆಳೆದುಕೊಂಡು ಆ ವಿದೇಶ ಬಂಡವಾಲಗಾರರು, ಈ ದೇಶಗಳಲ್ಲಿನ ಹಸ್ತವ್ಯವಸಾಯವನ್ನು ಕೊನೆಗಾಣಿಸಿದರು. ಇಲ್ಲಿಯ ಹಸ್ತವ್ಯವಸಾಯಿಗಳು ಆ ಯಾ ದೇಶಗಳಲ್ಲಿ ಹೊರಟ ಹೊಸ ಕಾರಖಾನೆಗಳಲ್ಲಿ ಕ್ರಮೇಣ ಕೂಲಿಕಾರರಾಗಿ ದುಡಿಯಹತ್ತಿದರು. ಇದೇ ಮೇರೆಗೆ ಮುಂದಿರುವ ದೇಶಗಳಲ್ಲಿ ಮತ್ತು ಹಿಂದುಳಿದ ದೇಶಗಳಲ್ಲಿ ಬಂಡವಾಲ ಶಾಹಿಯು ಬೆಳೆದು, ಜಗತ್ತಿನಲ್ಲಿ ಒಂದು ಕಡೆ ಧನೋತ್ಪಾದನ ಸಾಧನೆಗಳ ಒಡೆಯರು ಅಥವಾ ಬಂಡವಾಲಗಾರರು ಮತ್ತು ಇನ್ನೊಂದುಕಡೆ ಇವರ ಕೈಯಲ್ಲಿ ದುಡಿಯುವ ಕೂಲಿಕಾರರು ಮತ್ತು ಉದ್ಯೋಗವಿಲ್ಲದೆ ಬಡಾಡುವವರು ಹೀಗೆ ವಿಭಾಗಗಳಾದವು. ಮೊದಲು ಮೊದಲು ಬಂಡವಾಲಗಾರರಿಗೆ ಹಸ್ತವ್ಯವಸಾಯದ ವಸ್ತುಗಳನ್ನು ಕೊಳ್ಳುವ ಗ್ರಾಹಕರು ಸಿಗುತ್ತಿದ್ದರು. ಆದರೆ ಈ ಬಂಡವಾಲಗಾರರು ಇಡೀ ಜಗತ್ತಿನ ತುಂಬ ಹಬ್ಬಿದುದರಿಂದ ಹೊಸ ಗ್ರಾಹಕರು ಸಿಗುವದು ಕಠಿಣವಾಗಹತ್ತಿತು, ಹಸ್ತವ್ಯವಸಾಯಿಗಳೆಲ್ಲಜಗತ್ತಿನಲ್ಲಿಮಣ್ಣುಪಾಲಾದಮೇಲೆ, ಆ ಕೆಲಸ ಮಾಡುವವರೆಲ್ಲ ಬಂಡವಾಲಗಾರರ ಕೂಲಿಯಾಳಾದ ಮೇಲೆ ಹೊಸ ಗ್ರಾಹಕರು ಸಿಗುವದು ಸಂಪೂರ್ಣವಾಗಿ ಬಂದಾಗುವದು ಅಥವಾ ಗಾಂಧೀಜಿಯವರಂಥ ಹಟವಾದಿಗಳಾದರೂ ಹಳೇ ವ್ಯವಸಾಯವನ್ನು ನಡೆಸೇಕೀರುವನೆಂದು ನಿರ್ಧರಿಸಿದರೆ ಅವರ (ಹಸ್ತ ವ್ಯವಸಾಯಿಗಳ) ಗ್ರಾಹಕರು ಬಂಡವಾಲಗಾರರತ್ತ ಹೋಗಲಿಕ್ಕಿಲ್ಲ. ಹೀಗೆ ಕ್ರಮೇಣ ಬಂಡವಾಲಗಾರರ ಮಾಲು ಮಾರದಿದ್ದರೆ ಕೊನೆಗೆ ಬಂಡವಾಲಶಾಹಿ-ಕಾರಖಾನೆ ನಡೆಸುವದನ್ನು ಬಂದು ಮಾಡುವದು ಅವಶ್ಯವಾಗುವದು. ಹೀಗೆ ಬಂಡವಾಲ ಶಾಹಿ ಕೊನೆಗಾಣುವವರೆಗೆ ಅಂತಃಸ್ಪರ್ಧೆ ಮತ್ತು ಅಂತಃಕಲಹಗಳ ಮೂಲಕ ಜಗತ್ತಿನಲ್ಲಿ ಎಷ್ಟು ಹಾನಿ ಯಾಗುವದೋ ಏನೋ!

ಲಾಭ ಬಡಕತನವನ್ನು ತಡೆಯುವ ದೊಂದೇ ಉಪಾಯ:—

ಜಗತ್ತಿನಲ್ಲಿ ಧನವನ್ನು ನಿರ್ಮಿಸುವ ಸಾಧನೆಗಳನ್ನೆಲ್ಲ ಬಂಡವಾಲಗಾರರ ಕೈಯೊಳಗಿಂದ ಕಸಿದು ಅವುಗಳ ಮೇಲಿದ್ದ ಖಾಸಗಿ ಒಡೆತನವನ್ನು ತೊಡೆದು ಹಾಕಿ ಸಮಾಜವು ಅವನ್ನೆಲ್ಲ ಪಡೆಯಬೇಕು ಮತ್ತು ಎಲ್ಲರ ಹಿತಕ್ಕಾಗಿ ಅವನ್ನು ಉಪಯೋಗಿಸಬೇಕೆಂದು ಸಮಾಜಸತ್ತಾವಾದಿಗಳು ಅನ್ನುತ್ತಾರೆ. ಖಾಸಗಿ ಬಂಡವಾಲಗಾರರು ಕೂಲಿಕಾರರಿಗೆ, ನಿರ್ಮಾಣವಾದ ವಸ್ತುಗಳ ಬೆಲೆಗಿಂತ ಕಡಿಮೆ ಕೂಲಿಕೊಟ್ಟು, ಆ ಕೂಲಿ ಕಳೆದುಳಿದ 'ಉಳಿತಾಯ' ಗಳಿಸುವದಕ್ಕಾಗಿ ಉತ್ಪಾ[illegible] ರಿಂದಲೇ ಮೇಲೆ ವಿವರಿಸಿದ ಅನರ್ಥ ಪರಂಪರೆ ಉತ್ಪನ್ನವಾಗುತ್ತದೆ; ಆದರೆ ಈ 'ಉಳಿತಾಯ ದೊರಕಿ' ಯನ್ನಿಡದೆ ಕೂಲಿಕಾರರಿಗೆಹೆಚ್ಚು ವೇತನಕೊಡಿರೆಂದು ಬಂಡವಾಲಗಾರರಿಗೆ, ಒಡೆಯರಿಗೆ ಹೇಳಿದರೆ ಅವರು ತಮ್ಮ ತಮ್ಮ ಉತ್ಪಾದನ ಕಾರ್ಯವನ್ನು ಬಂದು ಮಾಡುವರು. ಆದ್ದರಿಂದಲೆ ಸಮಾಜವು ಅಂದರೆ ಸಮಾಜದ ಪ್ರತಿನಿಧಿಯಾದ ಸರಕಾರವೂ ಉಗಿಬಂಡಿ, ಕಾರ್ಖಾನೆ, ಬ್ಯಾಂಕುಗಳು ಒಕ್ಕಲುತನ ಇವೇ ಮೊದಲಾದ ಧನೋತ್ಪಾದಕ ಸಾಧನೆಗಳನ್ನು ವಶಮಾಡಿಕೊಂಡು ಇಡೀ ಸಮಾಜಕ್ಕೆ ಉಪಭೋಗ್ಯ ವಸ್ತುಗಳು ಯಾವಾಗಲೂ ಲಭಿಸುವಂತೆ ಕೂಲಿ. ವೇತನ, ಸಂಬಳ ಇವುಗಳನ್ನು ಕೊಡಬೇಕು ಮತ್ತು ಉತ್ಪಾದನದ ವಿಷಯದಲ್ಲಿ ಇದೇ ಧೋರಣೆ ವಹಿಸಬೇಕೆಂದು ಸಾಮಾನ್ಯ ವಾದಿಗಳ ಹೇಳಿಕೆ ಇದಕ್ಕೆ ಖಾಸಗಿ ಬಡತನದ ನಾಶ, ಬಂಡವಾಲಶಾಹಿಯನಾಶ ಅನ್ನುವದುಂಟು.

ಮ॥ರಾ॥ಶ್ರೀ ಬಳ್ಳಾರಿ ಜಿಲ್ಲಾ ಕೋರ್ಟಿನಲ್ಲಿ.

O. P. 473/49.

ಕೊಂಡಣ್ಣನ ಮಗನಾದ ಕಡಿಯೂಲ ಹನುಮಂತಪ್ಪ ವಯಸ್ಸು 44 ವರ್ಷಗಳು ಪೆಡಕಂಟಿಕಾವು, ಜಿರಾಯ್ತಿ ಮುರಡಿ ಹನುಮಾಪುರ ಗ್ರಾಮ ರಾಯದುರ್ಗ ತಾಲೂಕು ಅವಿಭಕ್ತ ಕುಟುಂಬದ ಮ್ಯಾನೇಜರು .... ಅರ್ಜದಾರ.

ನೋಟೀಸು.

ಅರ್ಜದಾರನ ಅವಿಭಕ್ತ ತಮ್ಮನಾದ ದಿವಂಗತ ಮು.ಸಲಪ್ಪನು ದಿ ಜೆನರಲ್ ಅಷ್ಯೂರೆನ್ಸ್ ಸೊಸೈಟಿ ಹೆಡ್ ಆಫೀಸು ಆಜ್ಮೀರ್‌ನಲ್ಲಿ ಹಾಕಿದ ಮರಣ ಫಂಡಿನ ಮೊತ್ತ 3000 ರು (ಅಕ್ಷರದಲ್ಲು ಮೂರು ಸಾವಿರ ರೂಪಾಯಿಗಳು) ತಾನು ವಸೂಲು ಮಾಡಲು ಪ್ರತ್ಯರ ಕೊಡಬೇಕೆಂದ ಮೇಲಿನ ಕೋರ್ಟಿನಲ್ಲಿ Indian Succession Act ಕೆಳಗೆ ಅರ್ಜಿ ಹಾಕಿರುತ್ತಾನೆ ಸದರಿ ಅರ್ಜಿಯು 13-10-49 ಕ್ಕೆ ನಾಯಿದಾ ಇದೆ ಇದರ ವಿಷಯ. ಯಾರಿಗಾದರೂ ತಕರಾರು ಇದ್ದಲ್ಲಿ ಖುದ್ದಾಗಲಿ ವಕೀಲುದ್ವಾರಾ ಆಗಲಿ ತಕರಾರು ಹಾಜರು ಮಾಡತಕ್ಕದ್ದು ತಪ್ಪಿದಲ್ಲಿ ಏಕಪಕ್ಷ (Exparte) ತೀರ್ಮಾನಿಸಲ್ಪಡುವುದು.

ಬಳ್ಳಾರಿ, ಕೆ. ವಿಜಯರಾವು,
16-9-49 ಅರ್ಜದಾರನ ಅಡ್ವಕೇಟ

ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ

ಎಸ್. ಕಿ. 387/49

ಅಂಗಡಿ ವೀರಪ್ಪ ತಂದೆ ಶಿವಪ್ಪ, 38, ವೀರಶೈವ, ಜಿರಾಯ್ತಿ, ಆನಂದದೇವನಹಳ್ಳಿ, ಹಡಗಲಿ ತಾ॥ .... ವಾದಿ.

Vs.

ನಾರಾಯಣ ದೇವರಕೆರಿ ಪತ್ತಾರ್ ಕಾಳಪ್ಪ ತಂದೆ ವೀರಪ್ಪ, 45, ಪತ್ತಾರ, ಅಕ್ಕಾಲಿ, ಅಂಕಸಮುದ್ರ, ಹಡಗಲಿತಾ॥ .. ಪ್ರತಿವಾದಿ

ವಾದಿ ಪ್ರತಿವಾದಿಮೇಲೆ ರು153-4-0 ದಾವಾ ಮಾಡಿರುತ್ತಾನೆ. ಪ್ರತಿವಾದಿ 23-9-49 ನೆ ತೇದಿ ಹಗಲು 11 ಘಂಟೆಗೆ ಖುದ್ದಾಗಲಿ ವಕೀಲರ ದ್ವಾರಾ ಆಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ Exparte ಡಿಕ್ರಿ ಆಗುತ್ತದೆ.

ಹೊಸಪೇಟೆ ಎ. ಆರ್. ಕೃಷ್ಣರಾವ್,
14-9-49. ಅಡ್ವೊಕೇಟ್

ಹೊಸಪೇಟೆಯ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ

ಎಸ್. ಕಿ. 378/49

ಜೋಯ್ಸಿ ನರಸಿಂಹಾಚಾರು ತಂದೆ ಹನುಮಂತಾಚಾರು, ಮೇನೇಜರ್ ಬ್ರಾಹ್ಮಣ, ಇನಾಂ, ಹೊಸಪೇಟೆ. ... ವಾದಿ

Vs.

ಮೈಲಾರ್ ಕಾಡಪ್ಪಯ್ಯ ಒಡೆಯರ್ ತಂದೆ ವೆಂಕಪ್ಪಯ್ಯ ಒಡೆಯರ್ ಮೇಜರ್ ಕ್ಷತ್ರಿಯ, ಮೈಲಾರ ದೇವಸ್ಥಾನದ ಟ್ರಸ್ಟಿ ಮೈಲಾರ. ಹೂವಿನಹಡಗಲಿ ತಾ॥ .... ಪ್ರತಿವಾದಿ.

ವಾದಿ ಪ್ರತಿವಾದಿಮೇಲೆ ರು95-14-6 ದಾವಾ ಮಾಡಿರುತ್ತಾನೆ. ಪ್ರತಿವಾದಿ 24-9-49 ನೇ ತೇದಿ ಹಗಲು 11 ಘಂಟೆಗೆ ಖುದ್ದಾಗಲಿ ವಕೀಲದ್ವಾರಾ ಆಗಲಿ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ Exparte ಡಿಕ್ರಿ ಆಗುತ್ತದೆ.

ಹೊಸಪೇಟೆ ಎ. ಆರ್ ಕೃಷ್ಣರಾವ್,
13-9-44. ವಾದಿಯ ಅಡ್ವೊಕೇಟ್.

ಮಹಾತ್ಮ ಗಾಂಧಿಯ ಹಂತಕನಾದ ನಾಥುರಾಮ ವಿನಾಯಕ ಗೋಡಸೇನ ಗಲ್ಲಿಗೇರಿಸುವ ಅವಧಿಯನ್ನು ಮುಂದೆ ಹಾಕಬೇಕೆಂದು ವಕೀಲರು ಅರ್ಜಿ ಇಟ್ಟಿದ್ದಾರೆ ಪ್ರೀವಿ ಕೌನ್ಸಿಲಕ್ಕೆ ಅಪೀಲು ಮಾಡಿಕೊಳ್ಳಲಾಗಿದೆ.

ಹೈದರಾಬಾದಿನಲ್ಲಿಯೂ ಜಮೀಂದಾರಿಗಳ ನಿರ್ಮೂಲನ

ಹೈದರಾಬಾದಿನಲ್ಲಿ 17 ದೊಡ್ಡ ಜಹಗೀರುಗಳಿವೆ. ಇವುಗಳನ್ನು ವಶಪಡಿಸಿಕೊಳ್ಳಲು ಸರ್ಕಾರವು ನಿಶ್ಚಯಿಸಿದೆ. ಪನಪರ್ತಿ ಸಂಸ್ಥಾನವು ಕಳೆದ 440 ವರ್ಷಗಳಿಂದ ಸ್ವತಂತ್ರ, ವಿದ್ವತ್ತು 'ಈಗ ಬದಲಾವಣೆ ಬಹಳ ಅವಶ್ಯಕ" ವೆಂದು ಅಲ್ಲಿನ ರಾಜರಾದ ರಾಜಾರಾಮೇಶ್ವರರಾಯರು ಹೈದರಾಬಾದ್ ಅರಮನೆ ದರ್ಬಾರದಲ್ಲಿ ಮೇಜರ್ ಜನರಲ್ ಚೌಧರಿಯವರಿಗೆ ರಾಜ್ಯಭಾರ ಸೂತ್ರಗಳನ್ನರ್ಪಿಸಿ ಕೀಲಿಕೈ ಸಂಸ್ಥಾನದ ಮುದ್ರೆಗಳನ್ನು ಒಪ್ಪಿಸಿದರು.

ಮದ್ರಾಸ್ ತಮಿಳರದು

ತಮಿಳು ಪ್ರಾಂತದ ಮುಖ್ಯರಾದ ಸುಬ್ರಹ್ಮಣ್ಯಂ ಕಾಮರಾಜ್ ನಾಡಾರ್ ರಾಮಸ್ವಾಮಿ ರೆಡ್ಡಿಯಾರ್, ಬಾರತಿ ಪಕ್ಷದವರು ಮದ್ರಾಸ್ ನಗರವು ತಮಿಳರಿಗೆ ಸೇರಬೇಕೆಂದು ಹೇಳಿಕೆ ತೆಗೆದು ಕಾಂಗ್ರೆಸ್ ಪರಿಷತ್ತಿಗೆ ಸೂಚಿಸಿದ್ದಾರೆ. ಮದ್ರಾಸ್ ಜಿಲ್ಲಾ ಕಾಂಗ್ರೆಸ್ ಕಮಿಟಿಯೂ ಈ ಅರ್ಥದ ನಿರ್ಣಯ ಮಾಡಿದೆ.

ಇಂಡಿಯಾ - ಭಾರತ

ನೂತನ ಘಟನೆಯನ್ವಯ, ಇಂಗ್ಲೀಷಿನಲ್ಲಿ ನಮ್ಮ ದೇಶವನ್ನು ಇಂಡಿಯಾ ವೆಂದೂ, ಹಿಂದಿ ಮತ್ತು ಭಾರತ ಭಾಷೆಗಳಲ್ಲಿ 'ಭಾರತ' ವೆಂದು ಕರೆಯಬೇಕೆಂದೂ ಕಾಂಗ್ರೆಸ್ ಪಾರ್ಟಿಯು ನಿರ್ಣಯಿಸಿದೆ.

ಜಮೀಂದಾರರಿಗೆ ಪರಿಹಾರ

ಮದ್ರಾಸ್ ಪ್ರಾಂತದ ಜಮೀಂದಾರಿಗಳನ್ನು ನಿರ್ಮೂಲನಮಾಡಿ ಸರ್ಕಾರವು ಅವುಗಳನ್ನ ವಶಪಡಿಸಿಕೊಂಡಿದೆ. ಅವರಿಗೆ ಕೊಡುವ ಪರಿಹಾರ ದ್ರವ್ಯದ ನೀತಿಯು ನಿಶ್ಚಯವಾಗಿಲ್ಲ. ಆದರೂ ಅವರು ತಮ್ಮ ಭೂಮಿಗಳನ್ನು ಸರ್ಕಾರಕ್ಕೆ ಒಪ್ಪಿಸಿರುವ ಕಾರಣ ಅವರಿಗೆ ಕೆಲಭಾಗ ಮುಂಗಡ ಹಣ ಕೊಡಲು ತಾತ್ಕಾಲಿಕ ಸೌಲಭ್ಯವನ್ನು ಒದಗಿಸುವವರಿದ್ದಾರೆ.

ಆಹಾರ ಧಾನ್ಯಗಳನ್ನುಳಿಸಲು ಉಪವಾಸ ಮಾಡಿರಿ

ಎಂಬ ಪ್ರಚಾರವು ಉತ್ತರದಲ್ಲಿ ಪ್ರಾರಂಭವಾಗಿದೆ. ಹೊಟ್ಟೆತುಂಬ ಆಹಾರವು ಸಿಗದಾಗ ಉಪವಾಸವನ್ನು ಹೇಗೆ ಆಚರಿಸಬೇಕೋ ತಿಳಿಯದಾಗಿದೆ. ಅಹಮ್ಮದಾಬಾದಿನಲ್ಲಿ 14 ಸಾವಿರ ವಸತಿಗಾರರು ತಮ್ಮ ಅಕ್ಕಿಯ ಸೀದಾ ಬಿಟ್ಟುಕೊಟ್ಟಿದ್ದಾರೆ. ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಸುವದೊಂದೇ ಉಪಾಯವೆಂದು ತೋರುತ್ತದೆ.

ಹರಿಜನರ, ಗುಡ್ಡಗಾಡು ನಿವಾಸಿಗಳ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಧಾರೆಯೆರೆದಿರುವ ಠಕ್ಕರ ಬಾಪಾರ 80 ನೆಯ ವರ್ಷವರ್ಧಂತಿಯು ನವಂಬರ್ 29 ಕ್ಕೆ ಇದೆ; ನೆಹರು-ಪಟೇಲ - ರಾಜೇಂದ್ರ ಪ್ರಸಾದ -ಅಂಬೇಡ್ಕರ್ - ಪಟ್ಟಾಭಿಯವರು - ಅವರ ದೀರ್ಘಾಯುರಾರೋಗ್ಯವನ್ನು ಕೋರಲು ದೇಶಕ್ಕೆ ಬಿನ್ನವಿಸಿದ್ದಾರೆ.

ತ್ರಿಪುರಾ ಸಂಸ್ಥಾನವು ಭಾರತಸರ್ಕಾರದ ವಶಕ್ಕೆ ಬಂದು ಅವರೇ ಅಲ್ಲಿ ರಾಜ್ಯಭಾರ ವನ್ನೇರ್ಪಡಿಸುವರು.

ಕಾಶ್ಮೀರ:—ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಭಾರತ ಪ್ರಧಾನಿ ನೆಹರೂರ ಪತ್ರವನ್ನು ಅಮೇರಿಕಾದ ಅಧ್ಯಕ್ಷ ಟ್ರೂಮನ್ನರಿಗೆ ತಲಪಿಸಿದರು. ಕಾಶ್ಮೀರದ ಪ್ರಶ್ನೆಯು ಮತ್ತೆ ಭದ್ರತಾ ಮಂಡಲದಲ್ಲಿ ಚರ್ಚೆಗೆ ಬರಬಹುದು.

ಇಂಡೋನೇಷಿಯಾದ ಸ್ವಾತಂತ್ರ್ಯದ ಘಟನೆಯು ಇಷ್ಟರಲ್ಲಿಯೇ ತಯಾರಾಗಲಿದೆ. ಹೇಗದಲ್ಲಿ ಇದರ ಚರ್ಚೆಯು ಕೊನೆಯಮೆಟ್ಟಕ್ಕೆ ಮುಟ್ಟಿದೆ.

ಬಳ್ಳಾರಿ ಜಿಲ್ಲಾ ಹರಿಜನ ಸಲಹೆ ಸಮಿತಿಯ ಸಭೆಯು 27 ಕ್ಕೆ ಇದ್ದು ಮುಖ್ಯ ವಿಷಯಗಳು ನಿರ್ಣಯವಾಗಲಿವೆ

ಅಕ್ಟೋಬರ್ ಕೊನೆಯ ವಾರದಲ್ಲಿ ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ನಡೆಯುವದೆಂದೂ ತಿಳಿದುಬಂದಿದೆ.

ಪುಸ್ತಕ ಭಂಡಾಗಾರಗಳಿಗೆ ಧನ ಸಹಾಯ.

ಡಿಸ್ಟ್ರಿಕ್ಟ್ ಬೋರ್ಡು, ಮುನಿಸಿಪಲ್ ಕೌನ್ಸಿಲ್, ಪಂಚಾಯತ್ ಬೋರ್ಡು, ಗ್ರಾಮ ಸಂಘಗಳು ನಡೆಸಿಕೊಂಡು ಬರುವ ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಕೆಲವು ಶರತ್ತುಗಳ ಮೇಲೆ ಧನ ಸಹಾಯ ಕೊಡುವಂತೆ ಸರಕಾರವು 1949-50 ರ ಬಡ್ಜೆಟಿನಲ್ಲಿ ಒಂದು ಲಕ್ಷ ರೂಪಾಯಿ ಪ್ರತ್ಯೇಕಿಸಿಟ್ಟಿದೆ.

ಘಟನಾ ಸಮಿತಿಯ ನಿರ್ಣಯ

ದೇವನಾಗರಿ ಲಿಪಿಯ ಹಿಂದಿಯು ರಾಷ್ಟ್ರಭಾಷೆಯಾಗಬೇಕು. ಮುಂದಿನ 15 ವರ್ಷಗಳಲ್ಲಿ ಹಿಂದಿ ಭಾಷೆಯನ್ನು ಸರ್ವತ್ರ ಜಾರಿಯಲ್ಲಿ ತರಲು ಯತ್ನಗಳಾಗಬೇಕು. ಅಂಕೆ-ಸಂಖ್ಯೆಗಳು ಈಗಿರುವಂತೆ - ಅಂತರಾಷ್ಟ್ರೀಯ ಪದ್ಧತಿಯದಾಗಿರಬೇಕು. ಎಂದು ಡೆಲ್ಲಿಯ ಘಟನಾ ಸಮಿತಿಯು ನಿರ್ಣಯವನ್ನು ಮಾಡಿತು.

ಪಂಡಿತ ನೆಹರೂರವರ ವರ್ಧಂತಿ.

ಬರುವ ನವಂಬರ್ 14 ಕ್ಕೆ ಭಾರತ ಪ್ರಧಾನಿ ಪಂಡಿತ ನೆಹರುರವರಿಗೆ 60 ವರ್ಷ ತುಂಬುತ್ತೆ. ಅವರು ಅಕ್ಟೋಬರ್ 11 ಕ್ಕೆ ಅಮೇರಿಕಾಕ್ಕೆ ತೆರಳುವರಿದ್ದಾರೆ. ಅವರು ನವಂಬರ್ 14 ರೊಳಗಾಗಿ ಭಾರತಕ್ಕೆ ಹಿಂದಿರುಗಿ, ಇಲ್ಲಿ ಜನ್ಮೋತ್ಸವದೊಳಗೆ ಭಾಗ ವಹಿಸ ಬೇಕೆಂದು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರು ಕೋರಿದ್ದಾರೆ. ಇದಕ್ಕೆ ಅವರು ಒಪ್ಪಬಹುದು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ಸಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5 - ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:--- 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ್.

ಬಿ. ವಿ. ಶೇಷಗಿರಿರಾವು,
ಕಾರ್ಯದರ್ಶಿ,

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಜಿಸ್ಟರ್ಡ್.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ --- ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 4746)

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

19- 9- -49

To

Sri..

....

....

Printed at Krishna Printing Works, Edited & Published by T. B. Keshava Rao.

JAI—HIND

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ಸಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೨೬ ಸೆಪ್ಟೆಂಬರ್ ೧೯೪೯ | ಸಂಚಿಕೆ ೩೪

ಸೋಶಿಯಲಿಸ್ಟ್-ಕಾಂಗ್ರೆಸ್ ಹೋರಾಟ

ಸೋಶಿಯಲಿಸ್ಟರಿಗೆ ಎಲ್ಲಾ ಸ್ಥಾನಗಳಲ್ಲಿಯೂ ಜಯ

ಬೊಂಬಾಯಿ ಮುನಿಸಿಪಾಲಿಟಿಯ ಉಪ ಚುನಾವಣೆಗಳಲ್ಲಿ ಸೋಶಿಯಲಿಸ್ಟರು ಕಾಂಗ್ರೆಸ್ ನೊಡನೆ ಹೋರಾಡಿ ಎಲ್ಲಾ ಸ್ಥಾನಗಳಲ್ಲೂ ಜಯ ಪಡೆದರು. ಚುನಾವಣಾ ಫಲಿತಾಂಶವು ಈ ಕೆಳಗಿನಂತಿದೆ.

1)	ಶ್ರೀ ವಿ. ಬಿ. ವರಾಸ್ಕರ್	(ಸೋಶಿಯಲಿಸ್ಟ್)	2803
	,, ಕೆ. ಬಿ. ಕುಬಾಳ್	(ಕಾಂಗ್ರೆಸ್)	2579
2)	,, ಎಂ. ವಿ. ಘೋಂಡೆ	(ಸೋಶಿಯಲಿಸ್ಟ್)	2413
	,, ವಿ. ಬಿ. ಪೈಕಲ್	(ಕಾಂಗ್ರೆಸ್)	1991
3)	,, ಎ. ಎ. ಕಿನಾಯ್	(ಸೋಶಿಯಲಿಸ್ಟ್)	2426
	,, ಜಿ. ಯಂ. ಭೋಸ್ಲೆ	(ಕಾಂಗ್ರೆಸ್)	2289
4)	,, ಪಿ. ಕೆ. ಅತ್ರೆ	(ಸೋಶಿಯಲಿಸ್ಟ್)	1788
	,, ಜಿ. ಜಿ. ಕಸ್ತೂರ್	(ಕಾಂಗ್ರೆಸ್)	1709

ಈಗ ಬೊಂಬಾಯಿ ಮುನಿಸಿಪಾಲಿಟಿಯ 117 ಸ್ಥಾನಗಳಲ್ಲಿ ಸೋಶಿಯಲಿಸ್ಟರು 31 ಸ್ಥಾನಗಳನ್ನು ಸಂಪಾದಿಸಿದಂತಾಯಿತು. 46 ಕಾಂಗ್ರೆಸಿಗರಿದ್ದಾರೆ. ಉಳಿದವರು ಸ್ವತಂತ್ರರು.

ಹರಿಜನೋದ್ಧಾರ

ಸಮಿತಿ ಸಲಹೆಗಳಿಗೆ ಸರ್ಕಾರದ ಅಂಗೀಕಾರ

1947 ರಲ್ಲಿ ಮದ್ರಾಸ್ ಸರ್ಕಾರವು ಒಂದು ಸಮಿತಿಯನ್ನು ನಿರ್ಮಿಸಿತು. ಹರಿಜನೋದ್ಧಾರಕ್ಕಾಗಿ ತೆಗೆದಿಟ್ಟ ಒಂದು ಕೋಟಿ ರೂಪಾಯಿಗಳನ್ನು ಯಾವರೀತಿಯಲ್ಲಿ ಖರ್ಚುಮಾಡಬೇಕು? ಈ ಸಂಬಂಧ ಸರ್ಕಾರದ ಶಾಸನಗಳು ಯಾವ ರೀತಿಯಲ್ಲಿ ಜಾರಿಗೆ ಬಂದಿವೆ? ಹರಿಜನರ ಉನ್ನತಿಗಾಗಿ ಯಾವ ಯೋಜನೆಗಳನ್ನು ಸ್ವೀಕರಿಸಬೇಕು? ಮತ್ತಿತರ ವಿಷಯಗಳನ್ನು ಕೇಳಿತು. 1948 ರಲ್ಲಿ ಸಮಿತಿಯು ತನ್ನ ಸಲಹೆಗಳನ್ನೊಪ್ಪಿಸಿತು. ಮಂತ್ರಿವರ್ಗದ ಉಪಸಮಿತಿಯು ಈ ಸಲಹೆಗಳನ್ನು ಪರಿಶೀಲಿಸಿದ ನಂತರ ಮಂತ್ರಿವರ್ಗದವರು ಈ ಕೆಳಗಣ ನಿರ್ಣಯಗಳಿಗೆ ಬಂದಿದ್ದಾರೆ.

(1) ಪ್ರತಿಜಿಲ್ಲೆಯಲ್ಲಿ ಈಗ ಜಿಲ್ಲಾ ಹರಿಜನ ವೆಲ್ಫೇರಾಫೀಸರಾಗಿರುವರು ಡೆಪ್ಯೂಟೀ ತಹಶೀಲ್ದಾರ್ ಗ್ರೇಡಿನವರು. ಅವರ ಬದಲು ಇನ್ನುಮೇಲೆ ಸೀನಿಯರ್ ತಹಶೀಲ್ದಾರ್‌ರವರು ಈ ಸ್ಥಾನಕ್ಕೆ ಬರಲಿರುವರು. ಕೆಲಸ ಹೆಚ್ಚಿರುವ 8 ಜಿಲ್ಲೆಗಳಲ್ಲಿ ಡೆಪ್ಯೂಟೀ ಕಲೆಕ್ಟರ್ ಗ್ರೇಡಿನವರು ಈ ಕೆಲಸವನ್ನು ನಿರ್ವಹಿಸುವರು. ಮದ್ರಾಸ್‌ದಲ್ಲಿರುವ ಡೈರೆಕ್ಟರ್‌ರವರಿಗೆ ಒಬ್ಬ ಡೆಪ್ಯೂಟಿ ಕಲೆಕ್ಟರ್‌ರ ಸಹಾಯವನ್ನೊದಗಿಸಲಾಗುವುದು.

(2) ಸರ್ಕಾರದವರು ತೆಗೆದಿಟ್ಟ ಒಂದು ಕೋಟಿ ರೂಪಾಯಿ ಹಣವು ಮದ್ರಾಸ್ ನಗರ ಮತ್ತು ಪ್ರಾಂತದಲ್ಲಿನ ಮುನಿಸಿಪಾಲಿಟಿ ನಗರಗಳನ್ನು ಬಿಟ್ಟು ಇತರ ಎಲ್ಲಾ ಹಳ್ಳಿ ಪ್ರದೇಶಗಳಿಗೆ (ಎಷ್ಟೇ ಜನಸಂಖ್ಯೆಯ ಎಷ್ಟೇ ಸಣ್ಣ ಹಳ್ಳಿಯಿರಲಿ) ವಿನಿಯೋಗಿಸಲಾಗುವದು. ಸರ್ಕಾರದವರು ವರ್ಷವರ್ಷವೂ ಕೊಡುತ್ತಲಿರುವ ವಿದ್ಯಾರ್ಥಿವೇತನ ಹಾಸ್ಟೆಲ್ ಗ್ರ್ಯಾಂಟ್ ಅಲ್ಲದೆ ಇನ್ನು ಹೆಚ್ಚಾದ ಮೊಬಲಗು ಕೋಟಿ ರೂ. ಫಂಡಿನಿಂದ ಬಳಸಲಾಗುವದು. ಹರಿಜನೋದ್ಧಾರ ಕೆಲಸವು ಎಲ್ಲಾ ಜಿಲ್ಲೆಗಳಲ್ಲೂ ಸಮಾನವಾಗಿ ಕೈಗೊಳ್ಳಲಾಗುತ್ತೆ.

(3) ಮನೆ ಕಟ್ಟಿಸಿಕೊಳ್ಳಲು ನಿವೇಶನಗಳು:— ಈ ಜಾಗಗಳನ್ನು ಗದ್ದೆಯ ಭೂಮಿ ಆದರೆ 3 ಶೆಂಟು ಖುಷ್ಕಿ ಆದರೆ 5 ಶೆಂಟು ಪ್ರಕಾರ ಮನೆಯಿಲ್ಲದ ಪ್ರತಿಯೊಬ್ಬ ಕುಟುಂಬೀಕನಿಗೆ ಉಚಿತವಾಗಿ ಒದಗಿಸಲಾಗುವುದು. (ಕೊಡಲು ಅಥವಾ ಕೊಳ್ಳಲು ಶಕ್ತಿ ಇರುವವರನ್ನು ಹೊರತಾಗಿ) ಹರಿಜನ ಕುಲದಿಂದ ಬೇರೆ ಕುಲಗಳಿಗೆ ಹೋದವರು ಸಹ ಈ ಲಾಭವನ್ನು ಪಡೆಯಲರ್ಹರು. ಸರ್ಕಾರದವರು ಮನೆ ಕಟ್ಟಿಸಿಕೊಳ್ಳುವ ಸಮಸ್ಯೆಗೆ ಪ್ರಥಮ ಸ್ಥಾನವನ್ನು ಕೊಡಲಿದ್ದಾರೆ.

(4) ಹರಿಜನ ಕೇರಿಗಳ ಸಮೀಪ ಭಾವಿ ತೆಗೆಸುವ ಕಾರ್ಯವು ಇನ್ನು ಮುಂದೆಯೂ ಸಾಗುವುದು. ಇನ್ನು ಮೇಲೆ ಕೇರಿಯವರಿಷ್ಟು ಹಣ ಕೊಡಬೇಕೆಂದು ಕೇಳುವುದಿಲ್ಲ. ಕೇರಿಗಳ ಸ್ವಚ್ಛತೆಗೆ ಗಮನ ಕೊಡಲಾಗುವುದು. ಕೇರಿಗಳಿಗೆ ಹೋಗುವ ರಸ್ತೆ, ರಿಪೇರಿ, ನೀರುಹೋಗಲು ಚರಂಡಿ, ಪಾಯಿಖಾನೆ, ಚರ್ಮ ಹದ ಮಾಡಲು ಸ್ಥಳ ಮತ್ತು ಸ್ಮಶಾನಕ್ಕೆ ಸ್ಥಳ ಒದಗಿಸಲಾಗುವುದು.

(5) ಹರಿಜನರಿಗೆ ಪ್ರತ್ಯೇಕ ಶಾಲೆಗಳೂ ಮಧ್ಯಾನ್ಹದ ಊಟವೂ ಈಗಿರುವಂತೆ ಮುಂದೆಯೂ ಜಾರಿಯಲ್ಲಿರುವುದು

(6) ಶಾಲೆ ಕಾಲೇಜುಗಳಲ್ಲಿ ಯೋಗ್ಯ ಹರಿಜನ ವಿದ್ಯಾರ್ಥಿಗಳಿಗೆ ಶಾಲಾ ಫಲ್ಸ್ ಇಲ್ಲದಂತೆ ಮಾಡುತ್ತೆ. ಕಲಾಶಾಲೆಗಳಲ್ಲಿ ಓದುವವರಿಗೆ ಸಾಕಷ್ಟು ವಿದ್ಯಾರ್ಥಿವೇತನ ಕೊಡಲಾಗುತ್ತೆ. ಹೈಸ್ಕೂಲಿನಲ್ಲಿರುವ ಎಲ್ಲಾ ಹರಿಜನ ವಿದ್ಯಾರ್ಥಿನಿಯರಿಗೆ ವೇತನ ಕೊಡಲಾಗುತ್ತೆ ಮುಂಜೂರಾದ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳ ಬೋರ್ಡಿಂಗ್ ಗ್ರ್ಯಾಂಟ್ ಹೆಚ್ಚಿಸಲಾಗುತ್ತೆ.

(7) ಹರಿಜನರೊಳಗಿನ ವರ್ಗ ವರ್ಗಗಳ ಭೇದಗಳನ್ನು ತೊಲಗಿಸಲು ಸರ್ಕಾರವು ಸಿವಿಲ್ ಡಿಸಬಿಲಿಟೀಸ್ ಆಕ್ಟ್ ಪರಿವರ್ತಿಸಲು ಸಿದ್ಧವಿಲ್ಲ

(8) ಹರಿಜನರಲ್ಲದ ಸರ್ಕಾರದ ಪಟ್ಟಿಪ್ರಕಾರ ಇರುವ ಇತರ ಹಿಂದುಳಿದ ವರ್ಗಗಳವರಿಗೆ ಉದ್ಧಾರಕ್ಕಾಗಿ ಸರ್ಕಾರವು ಬೇರೆ ಏರ್ಪಾಟು ಮಾಡುವುದು.

ಈ ವರ್ಷದಲ್ಲಿ ಹಿಂದೂಸ್ಥಾನ ಪ್ರಜಾರಾಜ್ಯವು ಸ್ಥಾಪಿತವಾಗಿ ನಮ್ಮನಾಡಿನ ಚರಿತ್ರೆಯಲ್ಲಿ ಹೊಸ ಅಧ್ಯಾಯವು ಪ್ರಾರಂಭವಾಗುತ್ತದೆ. ಒಂದು ಸಂಧಿಕಾಲವು ಮುಗಿದು ಇನ್ನೊಂದು ಪ್ರಾರಂಭವಾಗುತ್ತದೆ. ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅನೇಕರ ಧ್ಯೇಯವಾದ ಪ್ರಜಾರಾಜ್ಯದ ತಳಹದಿಯನ್ನು ನಾವು ಸಾವಧಾನದಿಂದ ಹಾಕುತ್ತಿದ್ದೇವೆ. ನಾವು ಯಾವದೊಂದು ಪ್ರಾಂತ - ಪ್ರದೇಶದ, ಪಕ್ಷ -ಸಂಗಡದ ಹಿತವನ್ನೇ ಗಮನಿಸದೆ ಇಡೀ ಹಿಂದುಸ್ಥಾನದ ಕಲ್ಯಾಣವನ್ನೇ ಚಿಂತಿಸುತ್ತ ಸಕಲರ ಅಭಿವೃದ್ಧಿಗಾಗಿಯೆ ನಾವು ಹೆಣಗಬೇಕಾಗುತ್ತದೆ. ಅನೇಕ ಹೊಣೆಗಾರಿಕೆಗಳನ್ನು ಹೊರುತ್ತಿರ್ವ ಬಹುಜನ ಸಮಾಜದ ಸನ್ಮತಿಯನ್ನೇ ದೇಶದ ಭವಿತವ್ಯವು ನಂಬಿಕೊಂಡಿರುವದರಿಂದ ಅದನ್ನೂ ಗಮನಿಸಬೇಕಾಗುತ್ತದೆ. ಆರ್ಥಿಕ ದುಸ್ಥಿತಿಯಿಂದ ಇಡೀ ದೇಶದ ಮೇಲೈ, ಅದರಲ್ಲಿಯೂ ಮಧ್ಯಮ ವರ್ಗದವರ ಮೇಲೆ, ವಿಶೇಷ ಪರಿಣಾಮವಾಗಿದೆ. ಈ ದುರ್ದೈವವು ನಮ್ಮ ಪಾಲಿಗಷ್ಟೇ ಇರದೆ ಜಗತ್ತಿನ ಬಹುಭಾಗದವರಿಗೂ ಇದ್ದದ್ದು ಕಂಡುಬರುತ್ತದೆ. ನಾವು ಕೈಕೊಳ್ಳಬಹುದಾದ ಆರ್ಥಿಕ ಅಥವಾ ಯಾವದೇ ಧೋರಣವು ದೇಶದಲ್ಲಿ ಶಾಂತತೆ ಸುವ್ಯವಸ್ಥೆ ಇದ್ದರೆ ಮಾತ್ರ ಸಫಲವಾಗಬಲ್ಲದು ಅರಾಜಕತೆಯಿಂದ ಹಿಂದುಸ್ಥಾನದ ಪಕ್ಷಪಂಗಡಗಳಲ್ಲಿ ಅನೇಕ ಮತಭೇದಗಳು ಕಂಡುಬರುತ್ತವೆ. ವಿಶೇಷ ಟೀಕೆಯೂ ಆತ್ಮನಿಂದೆಯೂ ಕಂಡುಬರುತ್ತಿವೆ. ಈ ಟೀಕೆ ಆತ್ಮನಿಂದೆಗಳು ಕಾರ್ಯಹಾನಿಯನ್ನು ಮಾಡದಿದ್ದರೆ ಸದಾ ಸ್ವಾಗತಾರ್ಹವಾಗಿವೆ. ಇಂದು ಹಿಂದೂಮಾತೆಯು ತನ್ನ ಪುತ್ರರಿಂದ ಕೃತಿಯನ್ನಪೇಕ್ಷಿಸುತ್ತಾಳೆ.

ಪಂ. ನೆಹರು—

ಆಹಾರ ಸ್ವಾವಲಂಬಿಗಳಾಗಿರಿ ಗವರ್ನರರ ಸಂದೇಶ.

ನಮಗೆ ಅತ್ಯಾವಶ್ಯಕವಾಗಿ ಬೇಕಾಗಿರುವ ಆಹಾರದ ವಿಷಯದಲ್ಲಿ ಹಿಂದುಸ್ಥಾನವನ್ನು ಸ್ವಾವಲಂಬಿಯಾಗಿ ನಾವಿನ್ನೂ ಮಾಡಲಿಲ್ಲ. ಜೀವನದ ಅತ್ಯಲ್ಪ ಆವಶ್ಯಕ ವಸ್ತುಗಳಿಗೋಸ್ಕರ ನಾವು ಇನ್ನೂ ಪರದೇಶಗಳಮೇಲೆ ಹೊಂದಿಕೊಂಡಿರಬೇಕೆಂದರೆ, ಸ್ವಾತಂತ್ರ್ಯಕ್ಕೆ ಅರ್ಥವಿಲ್ಲ. ನಮ್ಮ ದೇಶದ ಪ್ರಜೆಗಳಲ್ಲಿ ಬಹುಮಂದಿ ದಿನಕ್ಕೆ ಒಂದು ಊಟವನ್ನಾದರೂ ಪಡೆಯುವದಿಲ್ಲವೆಂದರೆ, ಸ್ವಾತಂತ್ರ್ಯವು ನಿರರ್ಥಕ. ನಮ್ಮರಾಷ್ಟ್ರಧುರೀಣರು ಇತ್ತೀಚೆಗೆ ಮಾಡಿದ ವಿನಂತಿಗಳನ್ನು ನೀವೆಲ್ಲರೂ ಕೇಳಿರುವಿರಿ. ಈ ದೇಶದಲ್ಲಿ ಬೇಕಾದ ಆಹಾರದ ವಸ್ತುಗಳೆಲ್ಲವನ್ನೂ 1951 ರೊಳಗೆ ನಾವೇ ಉತ್ಪತ್ತಿ ಮಾಡಿಕೊಳ್ಳಬೇಕೆಂದು ನಿಶ್ಚಯಿಸಲಾಗಿದೆ. ದುರದೃಷ್ಟದಿಂದ ನಮ್ಮ ಪ್ರಾಂತವು ಕೊರತೆ ಪ್ರಾಂತವಾಗಿರುವುದರಿಂದ ನಮ್ಮನ್ನು ಸಾಕುವದಕ್ಕೆ ನಾವು ಪರರ ಮೇಲೆ ಅವಲಂಬಿಸಿಕೊಂಡಿರಬೇಕಾಗಿದೆ. ಆಹಾರೋತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿನಮ್ಮ ಸರಕಾರವು ರಚಿಸಿದ ಯೋಚನೆಗಳು ಈಗಾಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಆದರೆ ಸರಕಾರವು ಮಾತ್ರವಲ್ಲ ನಮ್ಮಲ್ಲಿ ಪ್ರತಿಯೊಬ್ಬರೂ ಸಹಾಯ ನೀಡಬೇಕು. ನಮ್ಮಲ್ಲಿ ಹಲವರು ತಂತಮ್ಮ ಮನೆ ಅಂಗಳ, ಖಾಲಿಸ್ಥಳ, ತೋಟ, ಗದ್ದೆಗಳನ್ನು ಈವರಿಗೆ ಗಮನಿಸಲಿಲ್ಲವೆಂಬುದು ನಿಜ. ಈ ಸ್ಥಳಗಳಲ್ಲಿ ಯಾವುದಾದರೂ ಆಹಾರ ವಸ್ತುವನ್ನು ಬೆಳೆಯಿಸಲು ಆರಂಭಿಸಬೇಕು. ನಮ್ಮ ಹೊಲಗಳನ್ನೂ ನಮ್ಮ ಆಹಾರದ ಉತ್ಪತ್ತಿಯನ್ನು ಹೆಚ್ಚಿಸುವುದು ನಮ್ಮ ಇಂದಿನ ಮುಖ್ಯ ಕರ್ತವ್ಯವೆಂಬುದನ್ನು ಎಲ್ಲರೂ ಮರೆಯದಿರಲಿ! ಅಧಿಕೋತ್ಪಾದನೆಯೇ ನಮ್ಮ ಇಂದಿನ ಆದರ್ಶವಾಗಿರಲಿ!!

—ಕೃಷ್ಣಕುಮಾರಸಿಂಹಜೀ ಭವಸಿಂಹಜೀ,
ಮದ್ರಾಸ್ ಗವರ್ನರು.

ಬಳ್ಳಾರಿ ಸ್ಮಾಲ್ ಕಾಸ್ ಕೋರ್ಟಿನಲ್ಲಿ

S. C. 296/49

Between:

ಹೆಚ್. ಪಿ. ವೀರಾರೆಡ್ಡಿ s/o ಮಲ್ಲಾರೆಡ್ಡಿ 40 ಸಂ|| ಕಾಪು ಜಿರಾಯಿತು, ಹರ್ದಗೇರಿ, ಆಲೂರು ತಾ||
ವಾದಿ

Vs.

ಪೆದ್ದ ನರಸಯ್ಯ s/o ಮಾಚಲ ಭೀಮಯ್ಯ 51 ವಯಸ್ಸು, ವೈಶ್ಯ ಜಿರಾಯಿತು, ಮಲಪನಗುಡಿ ಹೊಸಪೇಟೆ ತಾ||
ಪ್ರತಿವಾದಿ.

ವಾದಿಯು, ಪ್ರತಿವಾದಿಯಾದ ನಿಮ್ಮ ಮೇಲೆ ಪ್ರಾಮಿಸರಿ ನೋಟಿನ ಬಾಬತು ಬಾಕಿ ರೂ. 136-0-0 ಕ್ಕೆ ದಾವಾ ದಾಖಲು ಮಾಡಿರುತ್ತಾನೆ. ಸದರಿ ನಂಬರಿನ ವಾಯ್ದೆ 12-10-'49 ಕ್ಕೆ ಇರುತ್ತದೆ. ವಾಯ್ದೆಗೆ ನೀವಾಗಲಿ ನಿಮ್ಮವರ ವಕೀಲರಾಗಲಿ ಹಾಜರಾಗಿ ಆಕ್ಷೇಪಣೆಗಳನ್ನು ತಿಳಿಸದಿದ್ದರೆ ನಿಮ್ಮ ಮೇಲೆ ಎಕ್ಸಪಾರ್ಟ ಡಿಕ್ರಿ ಕೊಡಲಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್. ರಾಮಲಿಂಗಾರೆಡ್ಡಿ,
ವಾದಿ-ವಕೀಲರು.

ಚಿಕ್ಕಮ್ಯಾಗಳಗೆರೆ(ಹರಪನಹಳ್ಳಿ)

ದಿನಾಂಕ 17-9-'49 ರಲ್ಲಿ ಗ್ರಾಮದ ವತಿಯಿಂದ ಕಟ್ಟಿಸಲ್ಪಟ್ಟ ನೂತನ ಶಿಲಾಮಂದಿರದ ಪ್ರವೇಶೋತ್ಸವವನ್ನು ನೆರವೇರಿಸಲಾಯಿತು. ಮಧ್ಯಾಹ್ನ 1 ಗಂಟೆ ಧ್ವಜಾರೋಹಣ ನೂತನ ಶಿಲಾಭವನದ ಎದುರಿನಲ್ಲಿ ಮಾಡಲಾಯಿತು. ನಗರ ಸಂಕೀರ್ತನೆಯಾದ ಮೇಲೆ ನಾಲ್ಕು ಗಂಟೆ ವೇಳೆಗೆ ದಾವಣಗೆರೆ ಶ್ರೀ ಶಿವಾನಂದಯ್ಯ ಸ್ವಾಮಿಯವರ ಅಮೃತಹಸ್ತದಿಂದ ನೂತನ ಶಿಲಾಕಟ್ಟಡವು ತೆರೆಯಲಾಯಿತು. ದಾವಣಗೆರೆ ನಗರ ಸಭೆಯ ಉಪಾಧ್ಯಕ್ಷರಾದ ಶ್ರೀಮಾನ್ ಕೆ. ವೀರಭದ್ರಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು. ಕಮ್ಮತ್ತಹಳ್ಳಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಪಿ. ಎಂ. ಸಿದ್ಧಲಿಂಗಯ್ಯನವರ ಸ್ವಾಗತಪತ್ರ ಮೇಲೆ ಶ್ರೀ ಶಿವಾನಂದಯ್ಯ ಸ್ವಾಮಿಯವರು, ಭಾವೀ ವಕೀಲರಾದ ಶ್ರೀ ಕೆ. ಪಿ. ಪಾಟೇಲರು, ತೌಡೂರು ಮುಖ್ಯ ಉಪಾಧ್ಯಾಯರಾದ ಕೆ. ಜೀವಣ್ಣನವರು, ಉಚ್ಚಂಗಿದುರ್ಗದ ಶಾಲಾ ಮುಖ್ಯೋಪಾಧ್ಯಾಯರಾದ ಜಿ. ನಣ್ಣಬಸಪ್ಪನವರು ಮತ್ತು ಈ ಎಲ್ಲಾ ಕಾರ್ಯಗಳಿಗೆ ಕಾರ್ಯಕರ್ತರಾದ ಹರಪನಹಳ್ಳಿ ರೇಂಜ ಶಾಲಾ ವಿದ್ಯಾಧಿಕಾರಿಗಳಾದ ಶ್ರೀಮಾನ್ ಎ. ಶಾಂತವೀರಪ್ಪನವರು ವಿದ್ಯಾ ಮತ್ತು ಗ್ರಾಮಾಭಿವೃದ್ಧಿಯ ಮೇಲೆ ಭಾಷಣ ಮಾಡಿದನಂತರ ಅಧ್ಯಕ್ಷರ ಅಮೋಘವಾದ ಭಾಷಣವಾದ ಮೇಲೆ ಸಭೆಯು ಮಂಗಳದೊಡನೆ ಮುಕ್ತಾಯವಾಯಿತು.

ಬಳ್ಳಾರಿ ಉಪಾಧ್ಯಾಯರಿಗೆ ಕಲಾಶಿಕ್ಷಣ

23 ನೆಯ ದಿನಾಂಕ ಬಳ್ಳಾರಿಯ ಟ್ರೇನಿಂಗ್ ಶಾಲೆಯಲ್ಲಿ ಉಪಾಧ್ಯಾಯರಿಗಾಗಿ ಕಲಾಶಿಕ್ಷಣ (Craft training) ವರ್ಗವು 15 ದಿನಗಳಿಗಾಗಿ ಡಿವಿಜನಲ್ ಇನ್ಸಪೆಕ್ಟರ್ ಶ್ರೀ ಎ. ಪದ್ಮನಾಭರೆಡ್ಡಿಯವರಿಂದ ಪ್ರಾರಂಭವಾಯಿತು. ಜಿಲ್ಲಾ ವಿದ್ಯಾಧಿಕಾರಿಗಳು ಶಿಕ್ಷಣ ಮಹತ್ವದ ಬಗ್ಗೆ ಭಾಷಣಮಾಡಿದರು. ಬಳ್ಳಾರಿ ರೇಂಜಿನ ಸೀನಿಯರ್ ಡೆಪ್ಯುಟಿ ಇನ್ಸಪೆಕ್ಟರವರ ಆಧಿಪತ್ಯದಲ್ಲಿ ವರ್ಗವು ನಡೆಯುತ್ತಿದ್ದು ವರ್ಗದಲ್ಲಿ ಸುಮಾರು 100 ಉಪಾಧ್ಯಾಯರು, ಅಧ್ಯಾಪಿಕೆಯರಿದ್ದಾರೆ.

ನವಭಾರತಕ್ಕೆ
ಚಂದಾದಾರರಾಗಿರಿ.

ಭಾರತ ಪ್ರಧಾನಿ ಪಂಡಿತ ನೆಹರೂರ ಸ್ವಾತಂತ್ರ್ಯ ಸಂದೇಶ.

ಎರಡು ವರುಷಗಳ ಹಿಂದೆ ಈ ಕೆಂಪು ಕೋಟೆಯಲ್ಲಿ ನಾನು ರಾಷ್ಟ್ರೀಯ ಪತಾಕೆ ಹಾರಿಸಿದ್ದೇನೆ. ಆ ಮೇಲಿನ ಎರಡು ವರುಷಗಳೆಂದರೆ ಪ್ರಾರಂಭವಾದ ಹಿಂದುಸ್ಥಾನದ ಅತಿ ಪುರಾತನ ಕಾಲದಿಂದ ಮಹಾ ಚರಿತ್ರೆಗೆ ಇನ್ನೆರಡುವರುಷಗಳು ಸೇರಿದಂತಾಯಿತು. ಈ ಎರಡು ವರುಷಗಳಲ್ಲಿ ನಾವು ಅನೇಕ ಸೋಲು ಗೆಲವುಗಳನ್ನು ಕಂಡಿದ್ದೇವೆ ಸುಖದುಃಖಗಳನ್ನು ಅನುಭವಿಸಿದ್ದೇವೆ. ನಾವು ಅಳಿದರೂ ನಾವುಮಾಡಿದ ಉತ್ತಮ ಕಾರ್ಯಗಳು ಅಚ್ಚಳಿಯದೆ. ಉಳಿಯುವುವು ಹಾಗೆಯೇ ವಂಶಗಳು ಬಾಳಿ ಅಳಿದರೂ ಹಿಂದುಸ್ಥಾನವು ಅಜರಾಮರವಾಗಿ ಉಳಿಯುವುದು.

ಬದುಕಿ ಬಾಳಬೇಕು

ಅನೇಕ ದೊಡ್ಡ ಪ್ರಶ್ನೆಗಳು ನಮ್ಮನ್ನು ಎದುರಿಸುತ್ತಿವೆ. ಈಪ್ರಶ್ನೆಗಳನ್ನು ಬಗೆಹರಿಸುವವರೆಗೆ ನಮ್ಮ ಪ್ರಯತ್ನಗಳನ್ನು ನಿಲ್ಲಿಸಲು ಸಾಧ್ಯವಿಲ್ಲ. ನಮ್ಮ ಉದ್ದೇಶದಂತೆ ದೇಶದ ಕೋಟಿಗಟ್ಟಲೆ ಜನರು ತೃಪ್ತರಾಗಬೇಕು. ಉದ್ದೇಶಪೂರ್ವಕ ಬದುಕಿ ಬಾಳಬೇಕು.

ಇಂತಹ ಮಹಾದಿನದಲ್ಲಿ ಎಲ್ಲಾ ಸಮಸ್ಯೆಗಳಿಂದಲೂ ದೂರವಾಗಿದ್ದು ನಮ್ಮ ದೇಶದಲ್ಲಿ ಹಾಗೂ ಪ್ರಪಂಚದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ನೋಡುವುದು ಚೆನ್ನಾಗಿದೆ. ನಾವು ಕ್ಷಣಕಾಲ ನಮ್ಮ ಚಿಕ್ಕ ಚಿಕ್ಕ ತೊಂದರೆಗಳನ್ನೂ ಸಮಸ್ಯೆಗಳನ್ನೂ ಮರೆತು ದೇಶದಲ್ಲಿ ಪಚಲಿತವಾಗುತ್ತಿರುವ ಪ್ರಾಮುಖ್ಯ ಶಕ್ತಿಯ ಕುರಿತು ವಿಚಾರಿಸುವುದು ಯುಕ್ತವಾಗಿದೆ.

ಸ್ನೇಹ ಪರಸ್ಪರ್ಧೆ

ನಮ್ಮದೇಶದ ಭಾಗ್ಯ ವಿಧಾತನೊಬ್ಬನು ಮೂವತ್ತು ವರುಷಗಳ ಹಿಂದೆ ನಮ್ಮ ದಾರಿಯನ್ನು ಬೆಳಗಿಸಿದ್ದನು. ಆ ಪ್ರಕಾಶವೇ ನಮ್ಮ ಮನೋ ಹೃದಯಗಳನ್ನೂ ಬೆಳಗಿಸಿತು. ಅಲ್ಲದೆ ಸಾವಿರಾರು ಜನರು ತಮ್ಮ ಸ್ವಂತ ತೊಂದರೆಗಳನ್ನಾಗಲಿ ಗೃಹಕೃತ್ಯದ ಕಷ್ಟನಷ್ಟಗಳನ್ನಾಗಲಿ, ಆಸ್ತಿಪಾಸ್ತಿ ಹೆಂಡತಿ ಮಕ್ಕಳೆಂದು ಎಲ್ಲವನ್ನೂ ಲೆಕ್ಕಿಸದೆ ಆತನ ಕರೆಗೆ ಓ ಎಂದರು. ಸ್ವಂತಲಾಭದ ಇಲ್ಲವೇ ಲಾಭ ಅಧಿಕಾರಗಳ ಪ್ರಶ್ನೆಯೇ ಇದ್ದಿಲ್ಲ. ಇವರೊಳಗೆ ದೇಶಸೇವೆಯನ್ನು ಯಾರು ಯಶಸ್ವಿಯಾಗಿ ಕೈಕೊಳ್ಳುವರೆಂದು ಕೇವಲಸ್ನೇಹ ಪರಸ್ಪರ್ಧೆಮಾತ್ರ ನಡೆಯುತ್ತಿತ್ತು. ದೇಶವನ್ನು ಸ್ವತಂತ್ರಗೊಳಿಸುವುದೇ ನಮ್ಮೆಲ್ಲರ ಅತ್ಯಾಸಕ್ತಿಯಾಗಿತ್ತು.

ಸ್ವತಂತ್ರಭಾರತದ ಧ್ರುವತಾರೆಯು ನಮ್ಮನ್ನು ಮುಂದೆ ಸಾಗಿಸಿದೆ. ರಾಷ್ಟ್ರೀಯ ಸ್ವಾತಂತ್ರ್ಯವು ಮಾತ್ರ ನಮ್ಮ ಕನಸಲ್ಲ ಬಡತನ, ಹಾಗೂ ನಮ್ಮ ಕೋಟಿ ಗಟ್ಟಲೆ ಜನರ ಸಂಕಷ್ಟಗಳು ನಮ್ಮ ಹೃದಯವನ್ನು ತುಂಬಿಕೊಳ್ಳುತಿವೆ. ನಾವು ಕೊನೆಯಲ್ಲಿ ರಾಜಕೀಯ ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಆದರೂ ಇತರ ಸ್ವಾತಂತ್ರ್ಯಗಳನ್ನು ಇನ್ನೂ ಪಡೆದಿಲ್ಲ. ಈ ಸಂದರ್ಭದಲ್ಲೇ ಅನೇಕ ಹೊಸ ಸಮಸ್ಯೆಗಳು ತಲೆ ದೋರಿದುವು. 60 ಲಕ್ಷ ಜನರು ನಿರ್ಗತಿಕರಾಗಿ ವಲಸೆ ಬಂದರು. ನಾವು ಈ ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಿದೆವು. ಅನೇಕ ತಪ್ಪುಗಳನ್ನೂ ಮಾಡಿದೆವು ಯಾರಾದರೂ ಈ ವಿಷಯಗಳನು ಪರ್ಯಾಲೋಚಿಸಿ ನೋಡಿದರೆ ನಮ್ಮ ಪ್ರಗತಿಯನ್ನು ಅಲ್ಲಗಳೆಯರು.

ಸ್ವಾವಲಂಬತನ

ನಾವು ನಿಶ್ಶಸ್ತ್ರರಾಗಿ ಶಾಂತತೆಯಿಂದ ಬಲಿಷ್ಠವಾದ ಸಾಮ್ರಾಜ್ಯವನ್ನು ಹೊರಗಿನವರ ಸಹಾಯವಿಲ್ಲದೆ ನಮ್ಮನ್ನೇ ನಾವು ನಂಬಿಕೊಂಡು ಎದುರಿಸಿದ್ದೇವೆ. ನಮಗೆ ನಮ್ಮ ನಾಯಕರಲ್ಲಿ ನಂಬುಗೆ ಇತ್ತು. ನಮ್ಮ ದೇಶದಲ್ಲಿ ವಿಶ್ವಾಸವಿತ್ತು. ಆತ್ಮಭರವಸೆ ಇತ್ತು. ಹೊರಗಿನ ಪ್ರಪಂಚಕ್ಕೆ ನಾವು ಅಶಕ್ತರೆಂದು ಕಂಡಿದ್ದರೂ ಅಂದು ನಮಗೆ ಅಂತಹವಿಶ್ವಾಸ ಆತ್ಮ ಶಕ್ತಿಗಳು ಇದ್ದುವೆಂದಾದರೆ ಇಂದು ನಾವು ಸ್ವತಂತ್ರರಾಗಿ ಮಹಾ ದೇಶವೇ ನಮ್ಮ ಬೆಂಬಲಕ್ಕಿರುವಾಗ ಭೀತಿಏನು? ಹಾಗಿರುವಾಗ ನಾವು ನಮ್ಮ ನಂಬುಗೆಯನ್ನು ಏಕೆ ಬಿಡಬೇಕು? ಆತ್ಮವಿಶ್ವಾಸವನ್ನು ತಗ್ಗಿಸಬೇಕು? ನಮಗೆ ಆರ್ಥಿಕ ಸಮಸ್ಯೆಯಂತಹ ಅನೇಕ ಮಹಾ ಸಮಸ್ಯೆಗಳು ಎದುರಿಸತಕ್ಕವಾಗಿವೆ ಎಂಬುದೇನೋ ನಿಜ. ಆದರೆ ಇದಕ್ಕಿಂತಲೂ ಮಹತ್ತಾದ ಸಮಸ್ಯೆಯನ್ನು ನಾವು ಹಿಂದೆ ಎದುರಿಸಿದ್ದೇವೆ. ಹಾಗಿದ್ದರೆ ಇವನ್ನೇಕೆ ಎದುರಿಸಲಾರೆವು? ಹಾಗಿದರೆ ನಮ್ಮ ಮನಸ್ಸೆಲ್ಲಾ ಚಿಕ್ಕ ಚಿಕ್ಕ ವಿಷಯಗಳ ಕಡೆ ? ಕಷ್ಟಗಳ ಕಡೆಗೂ ಸಾಗಿ ಮುಖ್ಯ ವಿಷಯಗಳನ್ನೇ ಮರೆಯುತ್ತೇವೆ ಎನ್ನಲೆ?

ಹೃದಯ ವೈಶಾಲ್ಯಬೇಕು

ನಮ್ಮ ದೇಶವು ಜಗತ್ತಿನಲ್ಲೇ ದೊಡ್ಡ ದೇಶವಾಗಿದೆ. ಕೇವಲ ಪರಿಮಾಣದಲ್ಲಿ ಮಾತ್ರವಲ್ಲ. ಇತರ ವಿಷಯಗಳಲ್ಲೂ ಮಹಾ ದೇಶವಾಗಿದೆ. ನಾವು ಈ ವಿಶಾಲವಾದ ದೇಶದ ಪ್ರಜೆಗಳಾಗಿದ್ದೇವೆ. ನಾವು ಈ ಹೆಸರಿಗೆ ತಕ್ಕವರಾಗಬೇಕಾದರೆ ನಮ್ಮ ಹೃದಯವೂ ವಿಶಾಲವಾಗಿರಬೇಕು. ಅಲ್ಪವ್ಯಕ್ತಿಗಳು ಮಹಾಯತ್ನಗಳನ್ನು ಎದುರಿಸಲಾರರು. ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ದೇಶಕ್ಕಾಗಿರುವ ತನ್ನ ಕರ್ತವ್ಯವನ್ನು ಮಾಡಲಿ. ನಮ್ಮ ಜನರ ಹಿತವನ್ನು ಸಾಧಿಸಲಿ. ಇತರರ ಕಡೆಗೆ ಹೆಚ್ಚು ಕರ್ತವ್ಯಶೀಲರಾಗಿದ್ದರೂ ಚಿಂತೆ ಇಲ್ಲ ಕೆಲವರು ಯಾವ ಕೆಲಸವನ್ನೂ ಮಾಡದೆ ಇತರರನ್ನು ಟೀಕಿಸುವುದೇ ತಮ್ಮ ಅಭ್ಯಾಸವಾಗಿ ಮಾಡಿಕೊಂಡಿದಾರೆ. ಇಂತಹ ಟೀಕೆಗಳಿಂದ ಅಸಹಕಾರ ಬುದ್ಧಿಯಿಂದ ಏನೂ ಲಾಭವಿಲ್ಲ. ಆದುದರಿಂದ ನಾವು ಭೂ ಸೈನ್ಯ, ನೌಕಾ ಸೈನ್ಯ ಅಥವಾ ವಿಮಾನ ದಳದಲ್ಲಿರಲಿ ಇಲ್ಲವೇ ಇತರ ಸರಕಾರಿ ಕೆಲಸಗಳಲ್ಲಿರಲಿ ಸ್ತ್ರೀ ಪುರುಷರೆನ್ನದೆ ಪ್ರತಿಯೊಬ್ಬರೂ ತಮ್ಮ ಜನಾಂಗದ ಸೇವೆಯನ್ನು ಸೇವಾಬುದ್ಧಿಯಿಂದ ಮಾಡಬೇಕು ಭಿನ್ನಭಿನ್ನ ಶಕ್ತಿ ಸಾಮರ್ಥ್ಯಗಳಿಂದ ಕೂಡಿದ ನಮ್ಮ ದೇಶದ ಅಸಂಖ್ಯಾತ ಜನರು ತಮ್ಮ ಕೆಲಸವನ್ನು ಸರಿಯಾಗಿ ಮಾಡಿ ಚಿಕ್ಕಚಿಕ್ಕ ವಿಷಯಗಳನ್ನು ಮರೆತು ಇತರರೊಡನೆ ಸಹಕರಿಸಲಿ ಶಸ್ತ್ರಹೀನರಾಗಿ ಅಸಹಾಯಕರಾಗಿ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಶಾಂತರೀತಿಯಿಂದ ಹೋರಾಡಿದ ದಿನಗಳನ್ನು ಸ್ಮರಿಸಬೇಕೆ? ನಮ್ಮಲಿ ಸ್ಫೂರ್ತಿ ಚೇತನಗಳನ್ನು ಹುಟ್ಟಿಸಿದ ಮಹಾನಾಯಕರೊಬ್ಬರಿದ್ದರು. ಇವರಲ್ಲದೆ ಇತರ ನಾಯಕರೂ ಇದ್ದರು. ಆದರೆ ಚೆನ್ನಾಗಿ ಪರಿಶೀಲನೆ ಮಾಡಿದರೆ ನಮ್ಮ ದೇಶದ ಭೂರಿಜನರೇ ಈ ಸಂಗ್ರಾಮದ ಕಷ್ಟನಷ್ಟಗಳನ್ನು ಸಹಿಸಿದವರು ಅವರಿಗೆ ತಮ್ಮ ದೇಶದಲಿ ಪ್ರೀತಿ ಇತ್ತು. ನಾಯಕರಲಿ ವಿಶ್ವಾಸವಿತ್ತು. ತಮ್ಮನ್ನೇ ತಾವು ಆಶ್ರಯಿಸಿರುವುದರಲ್ಲಿ ಭರವಸೆ ಇತ್ತು. ಇಂದು ನಮ್ಮ ಒಳಶತ್ರುಗಳನ್ನೂ ಹೊರಗಿನ ಶತ್ರುಗಳನ್ನೂ ಎದುರಿಸಲು ನಮ್ಮಲ್ಲಿ ಹೆಚ್ಚಿನ ಬಲವಿದೆ. ಹೀಗಿರುವಾಗ ಕೆಲವರು ವೃಥಾ ದೂಷಣೆಮಾಡಿ ಸ್ತಬ್ಧರಾಗುವರೆಂದರೆ ಆತ್ಮ ವಿಶ್ವಾಸವನ್ನೇ ಕಳೆಕೊಂಡಂತೆ ಯಲ್ಲವೆ?

ವಿದೇಶ ಧೋರಣೆ

ನಮ್ಮ ವಿದೇಶ ಧೋರಣೆಯಲ್ಲಿ ನಾವು ನಿರ್ದಿಷ್ಟವಾದ ಯಾವ ಅಧಿಕಾರ ಕೂಟವನ್ನು ಸೇರಲಾರೆವೆಂದು ಸಾರಿದ್ದೇವೆ ಆದರೆ ಎಲ್ಲಾ ದೇಶಗಳೊಡನೆಯೂ ಮೈತ್ರಿಯಿಂದಲು ವ್ಯವಹರಿಸುವೆವೆಂದು ಹೇಳಿದ್ದೇವೆ. ಜಗತ್ತಿನಲ್ಲಿ ನಮ್ಮ ಸ್ಥಾನವೆಂದರೆ ನಮ್ಮದೇಶದ ಐಕಮತ್ಯ ಶಕ್ತಿ. ಆರ್ಥಿಕ ಹಾಗೂ ಇತರ ಪರಿಸ್ಥಿತಿಗಳ ಸುಧಾರಣೆ, ಭಾರತದ ಭೂರಿಜನರ

ಉನ್ನತಿ ಇವನ್ನು ನಾವೆಷ್ಟು ಸಾಧಿಸಿದ್ದೇವೆ ಎಂಬುದನ್ನು ಆಶ್ರಯಿಸಿಕೊಂಡಿದೆ ಈ ಪ್ರಯತ್ನವು ನಮ್ಮಿಂದ ಸಂಪೂರ್ಣವಾಗಲಾರದು. ಏಕೆಂದರೆ ಇದೊಂದು ಭಗೀರಥ ಪ್ರಯತ್ನವಾಗಿದೆ. ಆದರೂ ನಾವುಮುಂದುವರಿದರೆ ಮುಂದೆಮುಗಿಸುವವರಿಗೆ ಸುಲಭವಾಗಬಹುದು.

ಒಂದು ಜನಾಂಗದ ಕೆಲಸವು ಮುಗಿಯುವದೆಂದಿಲ್ಲ. ಜನರು ಹುಟ್ಟುತ್ತಾರೆ ಸಾಯುತ್ತಾರೆ. ಒಂದು ವಂಶದ ಮೇಲೆ ಇನ್ನೊಂದು ವಂಶವು ಬರುತ್ತಿದೆ. ಆದರೆ ಜನಾಂಗದ ಜೀವನ ಸಾಗುತ್ತಾ ಇರುತ್ತದೆ ನಾವು ಯಾವಾಗಲೂ ಕೆಲವು ಕೆಲವು ಮುಖ್ಯವಿಷಯಗಳನ್ನು ನೆನೆಯಬೇಕು. ನಮ್ಮ ಪ್ರತಿಜ್ಞೆಗಳು ಎಷ್ಟಿದ್ದರೂ ನಮ್ಮ ಧೋರಣೆಯು ಹೇಗಿದ್ದರೂ ದೇಶದಲ್ಲಿ ಶಾಂತಿ ಇಲ್ಲದಿದ್ದರೆ ನಾವು ಸ್ವಲ್ಪ ಮಾತ್ರ ಸಾಧಿಸಬಲ್ಲೆವು. ನಮ್ಮ ದೇಶದಲ್ಲಿ ಕೆಲವರು ತಪ್ಪುದಾರಿಯಲ್ಲಿ ನಡೆಸಲ್ಪಟ್ಟವರಿದ್ದಾರೆ. ಅವರು ಹಿಂಸಾಸಕ್ತರಾಗಿ ದೇಶವನ್ನು ಯುದ್ಧಕ್ಷೇತ್ರಮಾಡಲು ಯತ್ನಿಸುತ್ತಿರುವರು. ಕೆಲಸಲ ಅವರು ಬಾಂಬು ಎಸೆಯುವರು ಇಂತಹ ಜನಾಂಗ ದ್ರೋಹ ಚಟುವಟಿಕೆಗಳನ್ನು ಏನೂ ಬುದ್ಧಿ ಇಲ್ಲದವನಾದರೂ ಹೇಗೆ ಆಲೋಚಿಸುವನೆಂಬುದೇ ಆಶ್ಚರ್ಯವಾಗುತ್ತಿದೆ. ಇಂತಹ ಹಿಂಸಾಕೃತ್ಯಗಳಿಂದ ಏನೂ ಲಾಭವಾಗದು. ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸುದು ಬದಲಾಗಿ ಇನ್ನಷ್ಟು ಹಾಳಾಗಬಹುದು. ಆದುದರಿಂದ ಧೋರಣೆಯು ಹೇಗಿದ್ದರೂ ದೇಶದಲ್ಲಿ ಶಾಂತಿಸ್ಥಾಪನೆ ಮಾಡುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಪ್ರಗತಿಯ ಮಾತೇ ಇಲ್ಲ

ಜನರಿಗೆ ಕಾನೂನುಗಳನ್ನು ಬದಲಾಯಿಸಲು ಏಕೆ, ಸರಕಾರಗಳನ್ನೇ ಕಿತ್ತೊಗೆಯಲು ಅಧಿಕಾರವಿದೆ. ನಿಮಗೆ ಅಂತಹ ಹಕ್ಕಿದೆ ಅದನ್ನು ಶಾಂತರೀತಿಯಿಂದ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಉಪಯೋಗಿಸಬಹುದು. ಆದರೆ ಹಿಂಸಾಮಾರ್ಗವನ್ನನುಸರಿಸುವರಿಗೆ ಪ್ರಜಾಪ್ರಭುತ್ವದಲ್ಲಿ ಸಂಬಂಧವೇ ಇಲ್ಲವೆನ್ನಬೇಕು. ಇವರ ಹಾದಿ ಹಿಡಿದರೆ ಎಲ್ಲೆಲ್ಲಿಯೂ ಗಲಭೆಯಾದೀತು. ಜನಜೀವನವೇ ಅಧೋಗತಿಗಿಳಿದೀತು ಪ್ರಗತಿಯ ಮಾತೇ ಇಲ್ಲವಾದೀತು ನೂರಾರು ವರ್ಷಗಳವರೆಗೆ ಜನರ ಕಷ್ಟನಷ್ಟಗಳ ಹೊರೆ ಕಮ್ಮಿಯಾಗದೆ ಉಳಿದೀತು.

ಭದ್ರತೆ - ರಕ್ಷಣೆ

ಹಿಂಸೆಯನ್ನು ಬೋಧಿಸುವವರೇ ಹಿಂಸಾಚಾರದಲ್ಲಿ ನಿರತರಾದವರೊಡನೆ ಸೇರಿಕೊಳ್ಳುವದೆಂದರೆ ಇನ್ನಷ್ಟು ಆಶ್ಚರ್ಯವಾಗುತ್ತಿದೆ ಅವರು ಚುನಾವಣೆಯನ್ನು ಜಯ ಎಂಬ ದೃಷ್ಟಿಯಿಂದ ನೋಡುತ್ತಾರೆ. ದೇಶಕ್ಕಾಗಿ ಹಾಗೂ ಜನರಿಗಾಗಿ ದುಡಿಯುವದು ಚುನಾವಣೆ ಅಥವಾ ಪಕ್ಷಗಳಿಗಿಂತ ದೊಡ್ಡದೆಂದು ತಿಳಿಯುವದಿಲ್ಲ ಚುನಾವಣೆಯಲ್ಲಿ ಜಯಿಸುವದಕ್ಕಿಂತಲೂ ನಮ್ಮನ್ನು ಎದುರಿಸುವ ಸಮಸ್ಯೆಗಳು ಮಹತ್ವದವು. ನಮ್ಮ ಚಿಕ್ಕ ಚಿಕ್ಕ ಉದ್ದೇಶಗಳ ಸಾಧನೆಗೆ ಹಿಂದುಸ್ಥಾನವನ್ನೂ ಅದರ ಜನತೆಯನ್ನೂ ನಾವು ಮರೆತರೆ ನಾವು ನಮ್ಮ ದೇಶವನ್ನು ನಮ್ಮ ಅಲ್ಪವಿಷಯಗಳಿಗಾಗಿ ಹೊರತಳ್ಳಿದ ಅಪರಾಧಕ್ಕೆ ತುತ್ತಾಗುತ್ತೇವೆ. ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ ಹಿಂದುಸ್ಥಾನ ಹಾಗೂ ಅದರ ಜನರ ಭದ್ರತೆ, ರಕ್ಷಣೆ, ಪ್ರಗತಿ, ಸಂಪತ್ತು ಇವುಗಳ ಕುರಿತಾದ ಸಮಸ್ಯೆಯೇ ಮೊತ್ತಮೊದಲನೆಯದೆಂದು ತಿಳಿಯಬೇಕು ನಾನು ನನ್ನೊಳಗೆ ಹೋರಾಡುವದನ್ನು ಬಿಟ್ಟರೇನೇ ಇದು ಸಾಧ್ಯವಾಗಬಹುದು

ಸಹಾಯಬೇಕು

ನಾವು ನಮ್ಮ ಚಿಕ್ಕ ಸಮಸ್ಯೆಗಳಲ್ಲೇ ಮಗ್ನರಾಗದೆ ದೊಡ್ಡ ದೊಡ್ಡ ಸಮಸ್ಯೆಗಳನ್ನು ಮೊದಲು ಬಗೆಹರಿಸಿಕೊಳ್ಳಬೇಕು. ಇತರರ ಮೇಲೆ ಭಾರಹಾಕಿ ಕುಳಿತಿರದೆ ನಾವೇ ಸ್ವತಂತ್ರರಾಗಿ ಕಾರ್ಯ ನಿರ್ವಹಿಸಬೇಕು ಪ್ರಪಂಚದೊಡನೆಯೇ ನಾವು ಮಿತ್ರರಾಗಿರಬೇಕೆಂಬುದು ಮಾತ್ರ ನಮ್ಮ ಗುರಿಯಲ್ಲ ಜಾತಿ ಪಂಗಡ ಮತ ಧರ್ಮ ಭೇದವಿಲ್ಲದೆ ನಮ್ಮ ದೇಶದ ಪ್ರತಿಯೊಬ್ಬನ ಸಹಾಯ ಹಾಗೂ ಹಿತೇಚ್ಛೆಯು ನಮಗೆ ದೊರೆಯಬೇಕು. ನಾವು ಜಗತ್ತಿನ ಯಾವ ಮೂಲೆಯಿಂದ ಬೇಕಾದರೂ ಸಹಾಯ ಪಡೆಯಬಹುದು ಆದರೆ ಮೊತ್ತಮೊದಲು ನಮ್ಮ ಕಾಲಮೇಲೆ ನಾವು ನಿಲ್ಲಬೇಕು. ಇತರರ ಸಹಾಯಕ್ಕಾಗಿ ಯಾವಾಗಲೂ ಬಾಯಿ ತೆರೆಯುವವರು ನಿರ್ಬಲರಾಗಿ ನಿಷ್ಪ್ರಯೋಜಕರಾಗುತ್ತಾರೆ.

ಎಲ್ಲರೊಡನೆ ಸ್ನೇಹ

ನಾವು ಯಾವದೇಶದೊಡನೆಯೂ ವಿರೋಧವಿಟ್ಟುಕೊಳ್ಳಬಾರದು. ಇತರರ ವಿಷಯಗಳಲ್ಲಿ ಕೈ ಹಾಕುವದು ನಮ್ಮ ಧರ್ಮವಲ್ಲ. ಪ್ರತಿಯೊಂದು ಜನಾಂಗವೂ ತನ್ನ ದೇಶದ ಧೋರಣೆಯಿಂದ ಸಾಗಲಿ. ಹಾಗೆಯೇ ಇತರರೂ ನಮ್ಮ ವಿಷಯದಲ್ಲಿ ಕೈ ಹಾಕುವದನ್ನು ನಾವು ಸಹಿಸೆವು. ಆದುದರಿಂದ ನಾವು ಜಗತ್ತಿನಲ್ಲಿರುವ ಇಂದಿನ ಯಾವ ಶಕ್ತಿ ಯೋಜನೆಯೂ ಸೇರುವದಿಲ್ಲವೆಂದು ನಿರ್ಧರಿಸಲಾಯಿತು ನಾವು ನಮ್ಮ ಪಕ್ಕೇ ಇದ್ದು ಎಲ್ಲರೊಡನೆ ಸ್ನೇಹದಿಂದಿರಲು ಯತ್ನಿಸೋಣ. ನಾವು ನಮ್ಮ ದಾರಿಯಲ್ಲೇ ಪ್ರಗತಿಹೊಂದಬೇಕೆಂದು ಬಗೆದಿದ್ದೇವೆ. ಏಕೆಂದರೆ ನಮ್ಮ ದೇಶದ ದೃಷ್ಟಿಯಿಂದ ಇದು ಅತ್ಯಂತ ಭದ್ರವಾಗಿದೆ. ಅಲ್ಲದೇ ಜಗತ್ತಿನ ಶಾಂತಿಗೆ ನಮ್ಮ ದಾರಿಯೇ ಉತ್ತಮವಾದುದೆಂದು ತಿಳಿದಿದ್ದೇವೆ ಪ್ರಪಂಚ ಯುದ್ಧವೆಂದರೆ ತಿರುಗಿ ಮಹಾ ಪ್ರಳಯವನ್ನೇ ತಂದೊಡ್ಡೀತು. ಇದರಿಂದ ನಾವು ಶಾಂತಿಯ ಬಗ್ಗೆ ಅತ್ಯಂತ ಗಮನಕೊಡುತ್ತಿದ್ದೇವೆ. ಇದರಿಂದಲೇ ನಮ್ಮ ವಿದೇಶ ಧೋರಣೆಯು ಹೀಗಿದೆ.

ಭಯಂಕರ ಕ್ರಾಂತಿ

ಆಶ್ಯಾಖಂಡವು ಮಹಾಕ್ರಾಂತಿಯ ರೀತಿನೀತಿಗಳ ಮೂಲಕ ಸಾಗುತ್ತಿದೆ. ಇತರರ ದೇಶದಲ್ಲಾದಂತೆ ನಮ್ಮ ದೇಶದಲ್ಲೂ ಅನೇಕ ಕ್ರಾಂತಿಕಾರಕ ಬದಲಾವಣೆಗಳಾಗಿವೆ. ಆಶ್ಯಾಖಂಡದ ಇನ್ನೊಂದು ಭಾಗದಲ್ಲಿ ಹೋರಾಟ ತಿಕ್ಕಾಟಗಳು ನಡೆಯುತ್ತಿವೆ. ಹೀಗೆ ಹಿಂಸಾಚಾರಗಳು ನಡೆಯುತ್ತಿದ್ದರೆ, ದೇಶವು ನಿರ್ಬಲವಾಗಿ ಪ್ರಗತಿ ಶೂನ್ಯವಾಗುವುದರಲ್ಲಿ ಸಂದೇಹವಿಲ್ಲ ಪೂರ್ವ ಆಶ್ಯದಲ್ಲಿ ಪುರಾತನ ದೇಶವೊಂದು ಮಹಾ ಭಯಂಕರವಾದ ಕ್ರಾಂತಿಯನ್ನು ಅನುಭವಿಸುತ್ತಿದೆ. ನಮ್ಮ ವೈಯುಕ್ತಿಕ ಪ್ರತಿಕ್ರಿಯೆಗಳೇನಿದ್ದರೂ ನಾವು ಇತರರ ವಿಷಯದಲ್ಲಿ ಕೈಹಾಕಲು ನಾವು ಇಚ್ಛಿಸುವುದಿಲ್ಲ. ಇದೇ ನಮ್ಮ ಧೋರಣೆಯಾಗಿದೆ. ಪ್ರತಿದೇಶ ಹಾಗೂ ಜನತೆಗೆ ತಾನು ಆರಿಸಿಕೊಂಡ ದಾರಿಯಲ್ಲೇ ಸಾಗಲು ಸ್ವಾತಂತ್ರ್ಯವಿರಬೇಕು. ಅದರ ಭವಿಷ್ಯವನ್ನು 'ರೂಪಿಸಿಕೊಳ್ಳುವುದು ಅದಕ್ಕೇ ಸಂಬಂಧಿಸಿದ್ದು. ಹೊರಗಿನ ಯಾವ ಪ್ರಯತ್ನವಾದರೂ ಅದು ದುಷ್ಪರಿಣಾಮವನ್ನು ತಾರದೆ ಇರಲಾರದು. ಒಂದು ದೇಶವು ಇನ್ನೊಂದು ದೇಶಕ್ಕೆ ಸ್ವಾತಂತ್ರ್ಯವನ್ನು ಕೊಡಲಾರದು. ಸ್ವಾತಂತ್ರ್ಯವು ಆಯಾಯ ದೇಶದಲ್ಲಿ ಹುಟ್ಟಬೇಕು, ಪ್ರಪಂಚದಲ್ಲಿ ನಾನಾಬಗೆಯ ಪದ್ಧತಿಗಳಿವೆ ಒಂದನ್ನು ತುಳಿದು ಇನ್ನೊಂದನ್ನು ಹೇರಿಸುವದು ನ್ಯಾಯವಲ್ಲ. ಆದುದರಿಂದ ಪ್ರಪಂಚವಿಚಾರವನ್ನು ಸರಿಯಾಗಿ ತಿಳಕೊಂಡು ಎಲ್ಲರೊಡನೆ ಸ್ನೇಹಭಾವದಿಂದ ವರ್ತಿಸಬೇಕಾಗಿದೆ.

ಜನರ ಪ್ರಯತ್ನ

ನಮ್ಮ ಘಟನಾಸಮಿತಿಯು ದೇಶದ ನ್ಯಾಯಾಂಗ ರಚಿಸಲು ದುಡಿಯುತ್ತಿದೆ ನಮ್ಮ ದೇಶವು 'ರಿಪಬ್ಲಿಕ್' ತರದ ರಾಜನೀತಿಯ ಉಡಿಗೆಯನ್ನು ಧರಿಸಲಿದೆ. ಆದರ ಕಾನೂನುಗಳೂ ರಾಜ್ಯಾಂಗಗಳೂ ತಮ್ಮಷ್ಟಕ್ಕೇ ದೇಶವನ್ನು ಉತ್ತಮ ಸ್ಥಿತಿಗೆ ತರಲಾರವು. ಜನರ ಪ್ರಯತ್ನವೇ ದೇಶದ ಅಭಿವೃದ್ಧಿಗೆ ಕಾರಣ. ನಮ್ಮ ದೇಶದ ಭವಿಷ್ಯವು ಮಹತ್ತಾದುದೆಂದು ನನಗೆ ತುಂಬ ಭರವಸೆಇದೆ. ದೇಶಕ್ಕೆ ಸ್ನೇಹಬಲ ಬೇಕಾಗಿದ್ದರೂ ಅದರ ನಿಜವಾದ ಬಲವೆಂದರೆ ಜನರು ಶಿಸ್ತು, ಪರಿಪಾಲನೆಯಿಂದ ತಮ್ಮ ಕರ್ತವ್ಯಗಳನ್ನು ಸಾಗಿಸುತ್ತಿದ್ದರೆ ಬಡತನವು ನಿರ್ನಾಮವಾಗಿ ಸ

ನೆತ್ತಿ ಹೆತ್ತಬೇಕಾದರೆ ಕಷ್ಟಪಟ್ಟು ದುಡಿಯಲೇ ಬೇಕು. ಆದುದರಿಂದ ನಮ್ಮಲ್ಲಿ ಪ್ರತಿಯೊಬ್ಬನೂ ಚೆನ್ನಾಗಿ ಕೆಲಸಮಾಡಬೇಕು. ನಾವು ಸ್ವಾತಂತ್ರ್ಯವನ್ನು ಪಡೆದು ವಿಶ್ರಾಂತಿ ಪಡೆಯುವ ಸಮಯವಾಗಿ ಅಲ್ಲ. ಪಡೆದ ಸ್ವಾತಂತ್ರ್ಯವನ್ನು ಪ್ರತಿಯೊಬ್ಬನಿಗೂ ತಲುಪುವಂತೆ ದುಡಿಯುವುದೇ ಸ್ವಾತಂತ್ರ್ಯ ಸಂಪಾದನೆಯ ಉದ್ದೇಶ. ಸ್ವಯಂ ಬುದ್ಧಿಯಿಂದ ಸ್ವಯಂ ಸೇವಕನಾಗಿ ದುಡಿಯುವುದಕ್ಕೂ ದಾಸ್ಯದಲ್ಲಿ ಪರರ ಆಜ್ಞಾನುಸಾರವಾಗಿ ದುಡಿಯುವುದಕ್ಕೂ ಬಹಳ ವ್ಯತ್ಯಾಸವಿದೆ. ನಮ್ಮ ಮುಂದಿನ ಸ್ತ್ರೀಪುರುಷರೆನ್ನದೆ ಸ್ವತಂತ್ರ್ಯ ಪ್ರಜೆಗಳಾಗಿ ದುಡಿದು ಭಾರತದ ಮುಂದಿನ ಭವಿಷ್ಯಕ್ಕೆ ಅಸ್ತಿವಾರ ಹಾಕಬೇಕಾಗಿದೆ. ಇಂತಹ ಕೆಲಸದಲ್ಲಿ ಸಂತೋಷವಿದೆ. ನಾವಳಿದರೂ ನಮ್ಮ ಕೆಲಸಗಳು ಸಾಕ್ಷಿಗಳಾಗಿ ಚಿರಕಾಲ ಉಳಿಯುವವು.

ಆಹಾರದ ಸಮಸ್ಯೆ

ಇಂದಿನ ನಮ್ಮ ಪ್ರಮುಖ್ಯ ಸಮಸ್ಯೆಯೆಂದರೆ ಆಹಾರ ಧಾನ್ಯಗಳ ಬೆಳೆಯನ್ನು ಹೆಚ್ಚಿಸುವದು. ಹಬ್ಬ ಹುಣ್ಣಿವೆಗಳಲ್ಲಿ ಔತಣ ಮಾಡಿ ಹಾಳುಮಾಡುವವನ್ನು ಬಿಡಬೇಕು. ಯಾವ ರೀತಿಯಿಂದಲೂ ಆಹಾರದ ಕಣವನ್ನು ಹಾಳು ಮಾಡಬಾರದು. ಈ ವಿಷಯದಲ್ಲಿ ನೀವು ಸಹಾಯ ಮಾಡಿದರೆ ಆಹಾರದ ಸಮಸ್ಯೆಮಾತ್ರವಲ್ಲ ಇತರ ಅನೇಕ ಸಮಸ್ಯೆಗಳನ್ನು ಬಗೆಹರಿಸಿ ಕೊಳ್ಳಬಹುದು. ನಮ್ಮ ಇತರ ಸಮಸ್ಯೆಗಳೂ ಪಕ್ಷ ಭೇದಗಳೂ ಕೆಲದಿನ ಕಾಯಬಹುದು. ಎಲ್ಲಕ್ಕಿಂತಲೂ ಹೆಚ್ಚಿಂದರೆ ಹಿಂದುಸ್ಥಾನ ಈ ಪರಿಸ್ಥಿತಿಯನ್ನು ಯಾವಾಗಲೂ ಕಣ್ಣು ಮುಂದೆ ಕಂಡಂತೆ ಭಾವಿಸುತ್ತಿರುವುದು. ಹಿಂದುಸ್ಥಾನವು ಪ್ರಯತ್ನಿಸುತ್ತಿದೆ ನಾವೆಲ್ಲಾ ಹೋದಮೇಲೆಯೂ ಅದು ಮುಂದೆ ಸಾಗುತ್ತಿರುವದು. ಆದುದರಿಂದ ಆಹಾರವಿಷಯದ ಈ ಮಹಾಯಜ್ಞದಲ್ಲಿ ನಿರತರಾಗಿ ಭಾರತ ಹಾಗೂ ಪ್ರಪಂಚದ ಸೇವೆಮಾಡೋಣ.

ರೂಪಾಯಿ ಬೆಲೆ ಇಳಿಸಿದರು

[ಪಿ. ಬಿ. ಕೇಶವರಾವು]

ಭಾರತ ಸರ್ಕಾರವು ರೂಪಾಯಿ ಬೆಲೆಯನ್ನಿಳಿಸುವ ಪ್ರಸಂಗ ಒದಗಿತು. ಪ್ರಪಂಚದಲ್ಲಿನ ಸುಮಾರು ಅರ್ಧದಷ್ಟು ದೇಶಗಳು ತಮ್ಮ ತಮ್ಮ ದೇಶದ ಹಣದ ಬೆಲೆಯನ್ನಿಳಿಸಿವೆ. ಅದಕ್ಕೆ ಪ್ರಪಂಚದ ಅಧಿಕಾಂಶ ಭಂಗಾರದ ಸಂಗ್ರಹವನ್ನಿಟ್ಟಿರುವ ಅಮೇರಿಕಾದೇಶವು ತನ್ನ ಅವಲಂಬಿಸಿದ ದೇಶಗಳಿಗೆ ಹೀಗೆ ಮಾಡಲು ಒತ್ತಾಯಪಡಿಸಿತು ಪ್ರತಿಯೊಂದು ದೇಶಕ್ಕೂ ಕಾಗದದ ನಾಣ್ಯಕ್ಕೆ ಬೆಂಬಲವಾಗಿ ಲೋಹನಾಣ್ಯವು ಬೇಕು. ಲೋಹಗಳಲ್ಲಿ ಶ್ರೇಷ್ಠವಾದುದು ಭಂಗಾರ. ಯಾವದೇಶದಲ್ಲಿ ಸಾಕಷ್ಟು ಭಂಗಾರವಿಲ್ಲವೋ, ಆ ದೇಶವು ಸಾಮಾನ್ಯ ದೇಶವೆಂದು ಗಣಿಸಲಾಗುತ್ತದೆ. ಈ ಕಾರಣದಿಂದಲೇ ಭಂಗಾರದ ಒಡೆತನವನ್ನಿಟ್ಟುಕೊಂಡ ಅಮೆರಿಕಾ ಆರ್ಥಿಕರೀತಿಯಲ್ಲಿ ಪ್ರಪಂಚವನ್ನಾಳುತ್ತಲಿದೆ

ಮೊಟ್ಟಮೊದಲು ಇಂಗ್ಲೆಂಡದಲ್ಲಿ ಅಧಿಕ ಬಿಕ್ಕಟ್ಟಿಂಟಾಗಿ ಡಾಲರ್ ಕ್ರೈಸಿಸ್ ಅಂದರೆ ಭಂಗಾರದ ಅಭಾವ ವೊದಗಿತು. ಆಗ ಇಂಗ್ಲೆಂಡಿನ ಆರ್ಥಿಕ ಮಂತ್ರಿಯು ಸರ್ ಸ್ಟಾಫರ್ಡ ಕ್ರಿಪ್ಸ ಅಮೆರಿಕಾಕ್ಕೆ ಹೋಗಿ ಅಮೆರಿಕಾ ಸರ್ಕಾರದ ಸಲಹೆ ಕೇಳಬೇಕಾಯಿತು. ಇಂಥಾ ಬಿಕ್ಕಟ್ಟಿನ ಸಂದರ್ಭದಲ್ಲೂ, ಅಮೆರಿಕಾವು ಬೇರೆ ದೇಶಗಳಿಗೆ ಸಹಾಯ ಒದಗಿಸುವ ಔದಾರ್ಯವನ್ನು ಬದಿಗಿಟ್ಟು ತನ್ನ ಸ್ವಲಾಭಕ್ಕಾಗಿ ಹೆಚ್ಚಿನ ಅವಕಾಶವನ್ನೊದಗಿಸುವ ಹೊಂಚುಹಾಕಿತು. ಇಗ್ಲೆಂಡಿಗೆ ತನ್ನ ಹಣದ ಬೆಲೆಯನ್ನಿಳಿಸಲು ಒತ್ತಾಯಪಡಿಸಿತು. ಇಂಗ್ಲೆಂಡಿಗೆ ಹೊಂದಿಕೊಂಡ (Common Wealth Countries) ದೇಶಗಳೆಲ್ಲೆಲ್ಲಾ ಬೆಲೆಯು ಕಡಮೆಯಾಗಬೇಕಾಯಿತು. ಅಂದರೆ ಇನ್ನು ಮೇಲೆ ಅಮೆರಿಕಾ ದೇಶದಿಂದ ಕೊಳ್ಳುವ ಮಾಲಿಗೆ ಇಂಗ್ಲೆಂಡು ಮತ್ತು ಇತರ ದೇಶಗಳು ಹೆಚ್ಚುಹಣ ಕೊಡಬೇಕು, ಆದರೆ ಅಮೆರಿಕಾವು ಇತರ ದೇಶಗಳಿಂದ ತರಿಸುವ ಮಾಲಿಗೆ ಕಡಮೆ ಖರ್ಚುಮಾಡಿದರಾಯಿತು. ಅಂದರೆ ಪ್ರಪಂಚದಿಂದ ಹೊನ್ನಿನ ಹೊಳೆಯು ಅಮೆರಿಕಾಕ್ಕೆ ಇನ್ನು ಹೆಚ್ಚು ಹೆಚ್ಚಾಗಿ ಪ್ರವಹಿಸಬೇಕು. ಕೊಡುವುದು ಸ್ವಲ್ಪ ತೆಗೆದುಕೊಳ್ಳುವುದು ಹೆಚ್ಚು ಎಂಬ ತತ್ವದಿಂದ ಅಮೆರಿಕಾವು ತನ್ನ ದೇಶವನ್ನು ಸಂಪತ್ಸಮೃದ್ಧಿಮಾಡಿ ಕೊಳ್ಳುತ್ತಲಿದೆ.

ಪಾಕಿಸ್ಥಾನವು ತನ್ನ ಹಣದ ಬೆಲೆಯನ್ನಿಳಿಸಲಿಲ್ಲ ಪಾಕಿಸ್ತಾನದ 100 ರೂ. ಗಳಿಗೆ ಹಿಂದುಸ್ತಾನದ 144 ರೂ. ಕೊಡಬೇಕು. ಪಾಕಿಸ್ತಾನದಿಂದ ತರಿಸುವ ಮಾಲಿಗೆ ಇನ್ನುಮೇಲೆ ಶೇಕಡ 44 ಭಾಗ ಹೆಚ್ಚಿಗೆ ಕೊಡಬೇಕಾಗುತ್ತದೆ. ಪಾಕಿಸ್ತಾನವು ಕೊಡುವ ಹಣ ಕಡಮೆಯಾಯಿತು. ಇದರಿಂದ ಬೆಲೆಯಿಳಿಸಿದ ದೇಶಗಳ ವಿದ್ವೇಷವನ್ನು ಪಾಕಿಸ್ತಾನವು ಕಟ್ಟಿಕೊಂಡಿತು. ಇನ್ನುಮೇಲೆ ಪಾಕಿಸ್ತಾನಕ್ಕೆ ಕಳುಹಿಸುವ ಮಾಲಿನಮೇಲೆ ಯಾವುದಾದರೊಂದು ಸುಂಕಹೇರಬೇಕಾಗುತ್ತದೆ. ಪಾಕಿಸ್ತಾನದ ಈ ನೀತಿಯು ವಿವೇಕಶೂನ್ಯವಾದುದೆಂದು ಸ್ವಲ್ಪಸಮಯದಲ್ಲೇ ಗೋಚರವಾಗದಿರದು.

ಜಗತ್ತೇ ಆರ್ಥಿಕ ಕಷ್ಟದಲ್ಲಿದೆ. ಎಲ್ಲಾ ಕಡೆಯೂ ಆಹಾರ ಸಮಸ್ಯೆಯು ಬಾಧಿಸುತ್ತಲಿದೆ. ಹೆಚ್ಚು ಉತ್ಪತ್ತಿ ಮಾಡದಿದ್ದರೆ ನಾಶವಾಗುವುದು ಖಂಡಿತ ಎಲ್ಲಾ ದೇಶಗಳ ಎಲ್ಲಾ ಜನರು ಹೆಚ್ಚು ಉತ್ಪನ್ನಮಾಡಿ ತಮ್ಮ ತಮ್ಮ ಜನಾಂಗವನ್ನು ನಾಶದಿಂದ ಸಂರಕ್ಷಣೆ ಮಾಡಬೇಕು.

ಮಳೆಯಿಂದ ಅನಾಹುತ.

ಈ ವಾರ ದಕ್ಷಿಣ ದೇಶದಲ್ಲಿ ಮಳೆಯಿಂದ ಅನಾಹುತವಾದ ವರದಿಗಳು ಬಂದಿವೆ. ಕರ್ನೂಲು ನಗರದಲ್ಲಿ 10 ಇಂಚು ಮಳೆಯಾಗಿ ಹೆಂದರಿ ಮತ್ತು ತುಂಗಭದ್ರಾನದಿಗಳು ಕಲೆತು ಊರಲ್ಲಿ ನೀರುನುಗ್ಗಿ ಅನೇಕ ಮನೆಗಳು ಬಿದ್ದು ಹೋದವು. ಬೊಂಬಾಯಿಯಲ್ಲಿ ಕಳೆದ 25 ವರ್ಷಗಳಿಂದಲೂ ಆಗದ ಮಳೆಯಾಗಿ ಬೀದಿಗಳಲ್ಲಿ ನೀರು ತುಂಬಿತು. ಬಳ್ಳಾರಿಯಲ್ಲಿ 4 ಇಂಚು ಮಳೆಯಾಗಿ ಅನೇಕ ಮನೆಗಳು ಬಿದ್ದಿವೆ. ಸಿರುಗುಪ್ಪೆಯಲ್ಲಿ ಮನೆಗಳು ಬಿದ್ದಿವೆ. ಹರಿಜನರಿಗೆ ಪರಿಹಾರವು ಆವಶ್ಯಕವಾಗಿದೆ.

ಶ್ರೀ ಬಿ. ವಿ. ಶೇಷಗಿರಿರಾವ್

ರಾಯಲಸೀಮೆಯ ಬ್ಯಾಂಕಿನ ಸಂಸ್ಥಾಪಕರೂ ಮುಖ್ಯ ಸಂಚಾಲಕರೂ ಆದ ಶ್ರೀ ಬಿ. ವಿ. ಶೇಷಗಿರಿರಾಯರು ರಾಜಿನಾಮೆಯನ್ನು ಕೊಟ್ಟರೆಂದೂ ಅದು ಸ್ವೀಕೃತವಾಯಿತೆಂದೂ ತಿಳಿದುಬಂದಿದೆ. ಈಗಿನ ಕಾರ್ಯದರ್ಶಿಗಳು ಶ್ರೀ ಪಿ. ವಿ. ಸುಬ್ಬಾರಾವು.

ಜಿಂಕ್‌ಶೀಟ್‌ಗಾಗಿ ಯಾರಿಗೆ ಬರೆಯಬೇಕು?

ಹಳ್ಳಿಗಳವರು ಜಿಂಕ್‌ಶೀಟುಗಳಿಗಾಗಿ ವ್ಯಥೆ ಪಡುತ್ತಿರುವರು. ಸಂಬಂಧಿಸಿದ ಹಳ್ಳಿಗಳವರು ಸದರಿ ತಾಲೂಕ ತಹಶೀಲ್ದಾರರವರ ಮೂಲಕ ಕಲೆಕ್ಟರ ದ್ವಾರಾ ಈ ಕೆಳಗಿನವರಿಗೆ ಅರ್ಜಿ ಹಾಕಿ ಕೊಳ್ಳಬೇಕು. ಅವರೂ

ಡೈರೆಕ್ಟರ್ ಆಫ್ ಕಂಟ್ರೋಲ್ಡ್ ಕಮೊಡಿಟೀಸ್

ಮೌಂಟ್‌ರೋಡ್, ಮದ್ರಾಸು.

ತಹಶೀಲ್ದಾರರು ಸದರಿ ಹಳ್ಳಿಗಳವರ ಬೇಡಿಕೆಯ ತಥ್ಯಾಂಶವನ್ನು ತಿಳಿದು ಕಲೆಕ್ಟರರವರಿಗೆ ಕಳುಹಿಸುವರು. ಕಲೆಕ್ಟರವರು ಮದ್ರಾಸಿಗೆ ಅರ್ಜಿ ಕಳುಹಿಸಿದ ನಂತರ ಫಲಾನಿ ವರ್ತಕರಿಂದ ಕೊಳ್ಳಬಹುದೆಂಬ ಪರ್ಮಿಟ್ ಬರುತ್ತದೆ.

ಆಟಂ ಬಾಂಬು ಹಳೆಯದಾಯಿತು

"ಹೊಸದೊಂದು ವನಸ್ಪತಿ ಶೋಧವಾಗಿದ್ದು, ಈ ದ್ರವ್ಯದ ಏಳೇ ಅಂಶಗಳು ಜಗತ್ತಿನಲ್ಲಿಯ ಸಕಲರನ್ನು ಕೊಲ್ಲಲು ಸಮರ್ಥವಾಗಿರುತ್ತವೆ. ಈ ದ್ರವ್ಯದ ಮುಂದೆ ಆ್ಯಟಂಬಾಂಬು ಹಳೆಯ ಅಸ್ತ್ರವಾದಂತಾಯಿತು" ಎಂದು ಜಾಗತಿಕ ಆರೋಗ್ಯಸಂಸ್ಥೆಯ ಡೈರೆಕ್ಟರ ಜನರಲ್ ಡಾ. ಜ್ರೊಕಚಿ ಶೇಲ್ಮರು ಸ್ವಿಟ್ಸರಲಂಡದ ಸೇಂಟಸೀಗಃ ಎಂಬಲ್ಲಿ ಹೇಳಿದ್ದರು

ಅಮೇರಿಕೆಯ "ಗುಪ್ತ" ಆಯುಧ

ಅಮೇರಿಕನ್ನರಿಂದ ಅತ್ಯಾಧುನಿಕ ಗುಪ್ತ ಆಯುಧವೆಂದೂ, ಬೆಳಗಾಗುವಷ್ಟರಲ್ಲಿಯೇ ಯುದ್ಧವನ್ನು ಮುಗಿಸಿಬಿಡುವ ಸಾಮರ್ಥ್ಯವುಳ್ಳದ್ದೆಂದೂ, ಹೇಳಲಾಗುತ್ತಿರುವ "ಜರ್ಮನ್‌ಬಾಂಬು" ಅಂತಹ ಶಕ್ತಿಯುಳ್ಳದ್ದೆಂದು ನಂಬಲು ಸಪಾಸ್ತ್ರೀಯ ಆಧಾರವಿಲ್ಲೆಂದು ಲಂಡನದ ಒಬ್ಬ ವಿಜ್ಞಾನಿ ಬರೆಹಗಾರರು ಬರೆಯುತ್ತಾರೆ.

ನಾಟಕಾಭಿನಯ ಬೇಡವೇ?

ಕೃಷ್ಣ ಜಿಲ್ಲೆಯಲ್ಲಿ ಸಬ್‌ಡಿವಿಜನಲ್ ಮೇಜಸ್ಟ್ರೇಟರಿಂದ ಲೈಸೆನ್ಸು ಪಡೆಯದೆ ಸಾರ್ವಜನಿಕ ವಿನೋದದ ಯಾವ ಸ್ಥಳದಲ್ಲಿಯೂ ನಾಟಕ ಅಭಿನಯಸಲು ಕೂಡದೆಂದು ಸರಕಾರವು ಅಪ್ಪಣೆ ಕೊಟ್ಟಿದೆ,

ಇದು ಏನು ವಿಚಿತ್ರ?

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ. ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡ್‌ಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ—ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರೆ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M 4746)

26—9—49

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri...

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವ. ೧೨ | ಸೋಮವಾರ ೩ ಅಕ್ಟೋಬರ್ ೧೯೪೯ | ಸಂಚಿಕೆ ೩೮

ಬಳ್ಳಾರಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಪದವಿಯ ಆಶಾಕಾಂಕ್ಷಿಗಳು

(ಚಿತ್ರಗುಪ್ತ)

ಬಳ್ಳಾರಿ ಜಿಲ್ಲಾ ಬೋರ್ಡಿನ 49 ಸ್ಥಾನಗಳಲ್ಲಿ ಇರುವ ಮೋಕೀಜಾಲ ಸೇರಿದ ಸ್ಥಾನವು ಇನ್ನು ಕೆಲದಿನಗಳಲ್ಲಿ ತುಂಬಲಿದೆ. ಸಾಮಾನ್ಯವಾಗಿ ಈ ಸ್ಥಾನಕ್ಕೆ ಸ್ಪರ್ಧೆ ಇರಬಹುದು. ಈ ಚುನಾವಣೆಗಳ ವಿಶೇಷವೆಂದರೆ ಜಿಲ್ಲೆಯ ಪ್ರಮುಖ ಜನಾಂಗಗಳಲ್ಲೊಂದಾದ ಲಿಂಗಾಯತ ವರ್ಗವು ಅರ್ಧದಷ್ಟು ಸದಸ್ಯರ ಸ್ಥಳಗಳನ್ನು ಆಕ್ರಮಿಸಿದೆ. ಈಗ 24 ಸದಸ್ಯರಿದ್ದಾರೆ. ಕಾಂಗ್ರೆಸ್ಸು ಸ್ಥಳವೂ ಕೂಡ ದೊರೆಯಬಹುದು, ಆದರೂ ಅಧ್ಯಕ್ಷರಾಗಲು ಆ ವರ್ಗದಿಂದಲೇ ಉಮೇದುವಾರರು ಹುಟ್ಟಬೇಕೆಂಬಷ್ಟು ಜಾತೀಯ ವಾದಿಗಳು ಸದಸ್ಯರಲ್ಲಿ ಕಡಮೆ. ನಾವು ಇಲ್ಲಿ ಒಂದು ಸತ್ಯಾಂಶವನ್ನು ಗಮನಿಸಬೇಕಾಗಿದೆ. ಈಗ ಆರಿಸಿಬಂದಿರುವ ಸದಸ್ಯರಲ್ಲಿ ಅಧಿಕ ಸಂಖ್ಯಾಕರು ಹೊಸಬರು, ಜಿಲ್ಲಾ ರಾಜಕೀಯ ರಂಗಕ್ಕೆ ಅಪರಿಚಿತರು. ನಿಯಮ ನಿಬಂಧನೆ ಅಧಿಕಾರಗಳೊಡನಾಟ, ಪತ್ರ ವ್ಯವಹಾರಕ್ಕೆ ಪರಾವಲಂಬಿಗಳು. ಹೀಗಾಗಿ ಅಧ್ಯಕ್ಷ ಪದವಿಯ ಸ್ಥಾನಕ್ಕೆ ಅರ್ಹರು ಕಡಮೆ ಸಂಖ್ಯೆಯಲ್ಲಿದ್ದಾರೆಂಬುದನ್ನು ಒಪ್ಪಿಕೊಳ್ಳಲೇ ಬೇಕು. ಜಾತಿ ಜಾತಿ ಬಂಧನಗಳು ಈ ನವೀನಯುಗದಲ್ಲಿ ಎಷ್ಟೇ ಕಿತ್ತು ಹಾಕಲ್ಪಟ್ಟಿದ್ದರೂ ಈಗಿನ ಜಿಲ್ಲಾಬೋರ್ಡು ಸದಸ್ಯರಲ್ಲಿ ಒಂದು ನಿರ್ದಿಷ್ಟ ವರ್ಗದವನಾಗದಿದ್ದರೆ ಅವನಿಗೆ ಅಧ್ಯಕ್ಷ ಸ್ಥಾನವು ದೊರೆಯುವುದಸಾಧ್ಯವೆಂಬ ಭಾವನೆ ಬೇರೂರಿ ಹೋಗಿಬಿಟ್ಟಿದೆ. ಈ ಕಾರಣಗಳಿಂದ ಜಿಲ್ಲಾ ರಾಜಕೀಯರಂಗ ಮಂಚದಮೇಲೆ ಪ್ರಮುಖವಾಗಿ ಬರುವವರೂ ಕಡಮೆ. ಒಂದ 3-4 ಜನ ಸೂರ್ಯ ಪ್ರಕಾಶದಲ್ಲಿ ಸ್ಪಷ್ಟವಾಗಿ ಕಾಣುತ್ತಾರೆ. ಇದಕ್ಕಾಗಿ ಬುದ್ಧಿ ಮತ್ತಾದ ಊಹೆ (intelligeet Anticipation) ಯು ಅನಾವಶ್ಯಕ.

ಬಹಳ ಕಾಲದಿಂದ ಪೂರ್ವ ತಾಲೂಕು ಪಶ್ಚಿಮ ತಾಲೂಕುಗಳಲ್ಲಿ ಸ್ಪರ್ಧೆಯು ನಡೆಯುತ್ತಲಿದೆ. ಬಳ್ಳಾರಿಯ ಲೇಟ್ ಗೋಪಾಲ ಸ್ವಾಮಿ ಮೊದಲಿಯಾರವರು 12 ವರ್ಷಗಳ ಕಾಲ ಆಳಿದರು. ಅವರಿಗೆ ಪಶ್ಚಿಮ ತಾಲೂಕುಗಳವರೂ ಸಹ ಸಹಾಯ ಮಾಡಿದರು. ಶ್ರೀ ಮಹಾಬಲೇಶ್ವರಪ್ಪನವರು ರಾಜಕೀಯಕ್ಕಿಳಿದಮೇಲೆ ಈ ಸಾಂಪ್ರದಾಯಗಳಲ್ಲೂ ಆಯ್ಕೆಯ ಪದ್ಧತಿಗಳಲ್ಲೂ ಕ್ರಾಂತಿಯಾಯಿತು.

ಪೂರ್ವ ತಾಲೂಕುಗಳ ಸದಸ್ಯರು ತಾವು ಅಲ್ಪ ಸಂಖ್ಯಾಕರೆಂಬ ಭಾವನೆಯನ್ನಿಟ್ಟುಕೊಂಡಿದ್ದರೂ ಅಧ್ಯಕ್ಷರ ಆಯ್ಕೆಯಲ್ಲಿ ಅವರದು ಪ್ರಾಮುಖ್ಯ ಪಾತ್ರವುಂಟು.

ಸ್ಪರ್ಧೆ ಇರುವಾಗ ಅಲ್ಪಸಂಖ್ಯಾಕ ಸದಸ್ಯರ ಗುಂಪು ಬಹು ಮುಖ್ಯ ಭಾಗವನ್ನು ವಹಿಸಿ ತಲೆ ಕೆಳಗು ಮಾಡುವ ಅಭಿನಯ ಮಾಡುವದುಂಟು. ಹೀಗಾಗಿ ಸ್ಪರ್ಧೆಗೆ ನಿಂತಿರುವ ಮಹಾಶಯರು ವಿಶೇಷ ಬೆಣ್ಣೆ ಹಚ್ಚಬೇಕಾದ ಕೆಲಸ ಯಾವ ಪಾರ್ಟಿಗೂ ಸಂಬಂಧಿಸದ ಈ ಅಲ್ಪಸಂಖ್ಯಾಕರ ದಳಕ್ಕೆಂಬುದು ಅನುಭವದಿಂದ ವೇದ್ಯವಾಗುತ್ತದೆ. ಈ ಕಾರಣ ಪೂರ್ವತಾಲೂಕುಗಳ ಪ್ರಬಲ ಮತ್ತು ಶ್ರೀಮಂತ ಸದಸ್ಯರು 4-5 ಜನ ಅಥವಾ 8-10 ಜನರು ಒಂದು ದಳದಲ್ಲಿದ್ದರೆಂದರೇ ಅಧ್ಯಕ್ಷರಾಗಲಿರುವರು ಅವರನ್ನು ನಿಕೃಷ್ಟ ದೃಷ್ಟಿಯಿಂದ ನೋಡಬರುವಂತಿಲ್ಲ.

ಜಿಲ್ಲಾ ಬೋರ್ಡು ಅಧ್ಯಕ್ಷ ಚುನಾವಣೆ ನಡೆಯಬೇಕಾದಾಗಲೆಲ್ಲಾ ಪೂರ್ವ ತಾಲೂಕುಗಳವರ ನಿರ್ದಿಷ್ಟ ಅಭಿಪ್ರಾಯವೇ ವ್ಯಕ್ತವಾಗುವ ಕಾರಣ ಅವರನ್ನು ವಿಶ್ವಾಸದಲ್ಲಿಡಬೇಕಾದುದು ಅಗತ್ಯವೆಂಬುದನ್ನು ಬೇರೆ ಹೇಳಬೇಕಿಲ್ಲ. ಪೂರ್ವ ತಾಲೂಕುಗಳವರು ತಮ್ಮ ಪ್ರಾಮುಖ್ಯತೆಯನ್ನು ಗಮನಿಸಿ ತಮಗೆ ಭಾವ್ಯ ಇಲ್ಲದಿದ್ದರೂ ಪ್ರತಿಯೊಂದು ಸ್ಪರ್ಧೆಯಲ್ಲೂ ತಮ್ಮ ಉಮೇದುವಾರರನ್ನು ರಾಜಕೀಯಕ್ಕಾಗಿ ಇಡುವರು ಸ್ಪರ್ಧಿಸುವರು. ಈಗಿನ ಸಂದರ್ಭದಲ್ಲಿ ಉದಾಹರಣಾರ್ಥವಾಗಿ ತೆಗೆದುಕೊಂಡರೆ ಶ್ರೀ ಬ... ಹಾಳು ರಂಗನಗೌಡರಗಿಂತ ಶ್ರೀ ರಾಮಲಿಂಗಾರೆಡ್ಡಿಯವರಿಗೆ ಪೂರ್ವದಲ್ಲಿ ಹೆಚ್ಚಿನ ಬೆಂಬಲವಿದೆಯನ್ನೋಣ. ಏಕೆಂದರೆ ರೆಡ್ಡಿಜನರ ಅಭಿಪ್ರಾಯದಲ್ಲಿ ರಂಗನಗೌಡರಾದ್ದು ಆಂಧ್ರಕಿಂತ ಕರ್ನಾಟಕಕ್ಕೆ ಹೆಚ್ಚಿನ ಪುರಸ್ಕರ್ತರಾದದ್ದು, ಅವರಿಗೆ ಸರಿಬಂದಿರಲಿಕ್ಕಿಲ್ಲ. ನಿಜವಾಗಿ ಪ್ರಾಂತೀಕರಣವಾದಾಗ ಈ ಬಲಾಬಲಗಳು ತಿಳಿಯುತ್ತವೆ. ಇದು ಇರಲಿ. ಪೂರ್ವಭಾಗದಲ್ಲಿ ಆಂಧ್ರ ಕರ್ನಾಟಕ ಕಲ್ಮಷವಿದ್ದೇ ಇದೆ. ಅಲ್ಲಿ ಆಂಧ್ರ ಕಾಂಗ್ರೆಸ್ ಕೆಲಸ ಮಾಡುತ್ತಿರುವ ವರೆಗೂ ಇದು ಇದ್ದೇ ಇರುತ್ತೆ. ಎಮ್ಮಿಗನೂರಿನ ಜಿಲ್ಲಾ ಬೋರ್ಡು ಚುನಾವಣೆಯಲ್ಲೂ ಈ ಪ್ರಚಾರವಾಗಿ ಶ್ರೀ ಹನುಮಂತರೆಡ್ಡಿಯವರು ಆರಿಸಿಬಂದು ಶ್ರೀ ಎಂ. ಸ್ವಸೋಮಪ್ಪನವರು ಸೋತರು. ಕಾರಣಗಳು ಬೇರೆ ಇದ್ದರೂ ಈ ಪ್ರಚಾರವನ್ನು ಯಾರೂ ಅಲ್ಲಗಳೆಯಬಾರದು.

ಶ್ರೀ ರಂಗನಗೌಡರು - ಕರ್ನಾಟಕ ಏಕೀಕರಣದ ಪುರಸ್ಕರ್ತರು. ಅತ್ಯಂತ ವಿರೋಧ ವಾತಾವರಣದಲ್ಲಿ ಇವರು ಕೆಲಸ ಮಾಡಿದವರಿದ್ದಾರೆ. ಕನ್ನಡಿಗರ ಆದರಕ್ಕೆ ಪಾತ್ರರಿರುವರು. ಇವರ ತ್ಯಾಗವೂ ಸೇವಾಬುದ್ಧಿಯೂ ಪ್ರಶಂಸನೀಯ. ಇಷ್ಟೇ ದೇಶ ತರುಣರಾಗಿ ಸಾಕಷ್ಟು ವಿದ್ಯಾ ಸಂಸ್ಕೃತಿ ಉಂಟು. ಆದರೂ ಈ ಕಸಬಿಗೆ ಹೊಸಬರಾದ ಕಾರಣವೂ ಎಲ್ಲರಿಗೂ ಗೊತ್ತಿರುವ ಕಾರಣದಿಂದಲೂ ಜಿಲ್ಲಾ ಅಧ್ಯಕ್ಷ ಪದವಿಯನ್ನು ಸಂಪಾದಿಸಿಕೊಳ್ಳಲು ತಮ್ಮ ಪರವಾದ ಕನ್ನಡ ಬಂಧುಗಳ ಮನ ಒಲಿಸುವಷ್ಟು ತಾಕತ್ ಯಾ ಇಂಗ್ಲೀಷ್ ಶಬ್ದದ ಪುಲ್ (pull) ಇವರಲ್ಲಿ ಅಭಾವವಾಗಿದೆ. ಈ ದಿಶೆಯಲ್ಲಿ ಪ್ರಯತ್ನಪಟ್ಟರೂ ಲಾಭವಿಲ್ಲವೆನ್ನಬಹುದು.

ಶ್ರೀ ರಾಮಲಿಂಗಾರೆಡ್ಡಿಯವರು ಹರ್ದಿಗೆರೆ ಶೈವ ಸಾಂಪ್ರದಾಯದ ರೆಡ್ಡಿಗಳಾಗಿ ತಮ್ಮ ಕುಟುಂಬಗಳಲ್ಲಿ ಶೈವ ಪದ್ಧತಿ ಆಚಾರಗಳನ್ನಿಟ್ಟುಕೊಂಡು ಶುದ್ಧ ಕನ್ನಡ ಮಾತಾಡುತ್ತಿದ್ದರೂ ರಾಯಲಸೀಮ

ಮಹಾಸಭೆ - ರಾಯಲಸೀಮ ಮಹಾಜನ ಸಭೆಗಳ ಗಲಾಟೆಯಿಂದ - ಧೋರಣೆಗಳಿಂದ ಏಕೀಕರಣ ಪುರಸ್ಕರ್ತರಿಗೆ ದೂರವಿರುತ್ತಾರೆಂದು ಜನರೆಂದುಕೊಳ್ಳುತ್ತಾರೆ. ಬಳ್ಳಾರಿಯ ಆದರಣೀಯ ತರುಣ ವಕೀಲರಾಗಿ ಚಾತುರ್ಯ ವಿಚಕ್ಷಣೆ |ಹೊಂದಿ ಅಧ್ಯಕ್ಷ ಪದವಿಯನ್ನು ಯೋಗ್ಯವಾಗಿ ನಿರ್ವಹಿಸಿಕೊಂಡು ಹೋಗುವ ಸಾಮರ್ಥ್ಯವಿದ್ದರೂ ಪಶ್ಚಿಮ ತಾಲೂಕುಗಳ ಬಹು ಸಂಖ್ಯಾಕ ಸದಸ್ಯರ ಆದರಕ್ಕೆ ಪಾತ್ರರಾಗುವುದು ಕಠಿಣ ಸಮಸ್ಯೆ. ಈದಿನಗಳಲ್ಲಿ ಒಂದೇ ದಿಕ್ಕಿಗೆ ಬೀಸುತ್ತಲಿದೆ.

ಶ್ರೀ ಬಾಚಿಗೊಂಡನಹಳ್ಳಿ ಚನ್ನಬಸವನಗೌಡರು ತರುಣ ಕಾಂಗ್ರೆಸ್ ಕಾರ್ಯಕರ್ತರು. ಮದ್ರಾಸ್ ವಿಶ್ವವಿದ್ಯಾಲಯದ ಪದವೀಧರರು. ಹಡಗಲೀ ತಾಲೂಕಿನ ತಮ್ಮ ಭಾಗದ ಹರಿಜನ ಮತ್ತು ಇತರವಿಧಾಯಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಬಹಳ ಇವರು ಬಡವರು ಅಧ್ಯಕ್ಷ ಪದವಿಗಾಗಿ ಪ್ರಥಮತಃ ಪಶ್ಚಿಮ ತಾಲೂಕುಗಳನ್ನು ಗಟ್ಟಿಮಾಡೋಣವೆಂದು ಹೊರಟಾಗ ಹರಪನಹಳ್ಳಿಯ ಧುರೀಣರು (member makers) ತಮ್ಮ ತಾಲೂಕಿನ ಪರವಾಗಿ ಶ್ರೀ .... ಯವರಿಗೆ ಮಾತು ಕೊಟ್ಟರೆಂದು ಸುದ್ದಿ ಹೊರಟಿತು. ಇವರು ಎಲ್ಲಾ ಸದಸ್ಯರ ಸಂಬಂಧವನ್ನು ಎಲ್ಲಿಯವರೆಗೆ ಇಟ್ಟುಕೊಂಡಿರುವರು. ಪೂರ್ವ ತಾಲೂಕಿನವರ ಆದರಕ್ಕೆ ಎಷ್ಟು ಪಾತ್ರರೆಂಬುದು ನಮಗೆ ತಿಳಿಯದ ಮಾತು. ಜಿಲ್ಲಾ ಬೋರ್ಡು ವಾತ್ರೆಯಲ್ಲಿ ಇನ್ನೂ !ಬೇಳೆ ಬೆಂದಿಲ್ಲ ಬೇಳೆ ಬೆಂದಾಗ ಈ ವಿಷಯದಲ್ಲಿ ಹೆಚ್ಚು ಪ್ರಕಾಶ ಹಾಕಬಹುದು.

ಇನ್ನು ಶ್ರೀ ಮಹಾಬಲೇಶ್ವರಪ್ಪನವರ ವಿಷಯ. ಇವರು ಎರಡು ಟರ್ಮು ಜಿಲ್ಲಾ ಬೋರ್ಡು ಅಧ್ಯಕ್ಷ ಪದವಿಯನ್ನು ದಕ್ಷತೆಯಿಂದ ನಿರ್ವಹಿಸಿದ್ದಾರೆ. ಅಧಿಕಾರಿಗಳಲ್ಲಿ ಆದರಕ್ಕೆ ಪಾತ್ರರು. ಸಾರ್ವಜನಿಕದಲ್ಲಿ ರಾಜಕೀಯದಲ್ಲಿ ಹಿಂದಿನಿಂದಲೂ ಭಾಗವಹಿಸುತ್ತ ಬಂದಿದ್ದಾರೆ. ಬಳ್ಳಾರಿ ಜಿಲ್ಲೆಯ ಮೂಲೆಮೂಲೆಯ ವ್ಯಕ್ತಿ ವೈಶಿಷ್ಟ್ಯ, ರಾಜಕೀಯ ಚಲನವಲನಗಳನ್ನು ಬಲ್ಲವರಿವರು. ಬಳ್ಳಾರಿ ವೀರಶೈವ ಕಾಲೇಜಿನ ಸಂಸ್ಥಾಪಕರಲ್ಲೊಬ್ಬರಿವರು. ಜಿಲ್ಲಾಬೋರ್ಡಿಗೆ ಅವಿರೋಧವಾಗಿ ಆರಿಸಿ ಬಂದರು. ಚುನಾವಣೆಯಾದೊಡನೆಯೇ ಸದಸ್ಯರ ಊರುಗಳಿಗೆ ಹೋಗಿ ವ್ಯಕ್ತಿಶಃ ಅಭಿನಂದನೆ ಮಾಡಿಬಂದರು. ಆಂಧ್ರ-ಕನ್ನಡ ಭಾಷೆಗಳಲ್ಲಿ ನಿಪುಣರು. ಕರ್ನಾಟಕ ಛೇಂಬರ್ ಆಫ್ ಕಾಮರ್ಸದ ಅಧ್ಯಕ್ಷರಿದ್ದರೂ ಅಧಿಕಾರ ಸಮತೋಲನ (Balance of power) ಕಾರ್ಯದಲ್ಲಿ ಚತುರರಿದ್ದಾರೆ. ವ್ಯಕ್ತಿತ್ವವಿದೆ. ಗಾಂಭೀರ್ಯವಿದೆ. ಇವೆರಡನ್ನೂ ಸದಾಚಾರಿಯಲ್ಲಿಡಲು ಸಾಕಷ್ಟು ಸಾಧನ ಸೌಕರ್ಯಗಳಿವೆ ಇವರೂ ಅಧ್ಯಕ್ಷ ಪದವಿಯನ್ನು ಕೆಲ ಸಾರ್ವಜನಿಕ ಕಾರ್ಯ ಸಾಧನೆಗಾಗಿ ಅಪೇಕ್ಷಿಸುತ್ತಿರುವುದು ಸ್ವಾಭಾವಿಕವಾಗಿದೆ. ಇವರ ಛಾನ್ಸಸ್ ಅಧ್ಯಕ್ಷ ಪದವಿಗೆ ಹೇಗಿವೆಯೆಂಬುದನ್ನು ಸದಸ್ಯರೆಲ್ಲಾ ಬಲ್ಲರು.

ಪಶ್ಚಿಮದ ಅಧ್ಯಕ್ಷ:- ಪೂರ್ವದ ಉಪಾಧ್ಯಕ್ಷರ ಪದ್ಧತಿಯು ಕೆಲವರ್ಷಗಳಿಂದ ಜಾರಿಯಲ್ಲಿ ಬಂದಿದೆ. ಈ ಸಲವೇನಾಗುತ್ತೋ ನೋಡಬೇಕು. ಅಲ್ಪಸಂಖ್ಯಾಕರ ಹಕ್ಕು ಬಾಧ್ಯತೆಗಳಿಗೆ ಲೋಪಬಾರದಂತೆ ಜಾತೀಯತೆಗೆ ಎಡೆಗೊಡದಂತೆ ಜಿಲ್ಲೆಯ ಸಮಸ್ತ ವ್ಯವಹಾರಗಳನ್ನೂ ನಿರ್ವಹಿಸಿಕೊಂಡು ಹೋಗಬೇಕಾದುದು ಎಲ್ಲರ ಕರ್ತವ್ಯ.

ಕಮ್ಯೂನಿಷ್ಟ ಪಕ್ಷವು ಮದ್ರಾಸದಲ್ಲಿ ಅಕ್ರಮ ಸಂಸ್ಥೆಯಾಯಿತು. ಪ್ರಾಂತದ ಆಂಧ್ರ - ತಮಿಳು - ಕರ್ನಾಟಕ ಕೇರಳ ಸಂಸ್ಥೆಗಳು ಅಕ್ರಮವೆಂದು ಸರಕಾರದಿಂದ ಸಾರಲಾಗಿದೆ. ಸಾರ್ವಜನಿಕ ಸುರಕ್ಷಿತತೆಗೆ ಭಂಗ ಬರುವದೆಂದು ಸರ್ಕಾರದಭಿಪ್ರಾಯ.

ಈ ವರ್ಷ ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನವಿಲ್ಲ

ಹೊಸದಿಲ್ಲಿ:- ಅ. ಭಾ. ರಾಷ್ಟ್ರೀಯ ಕಾಂಗ್ರೆಸ್ಸಿನ ಬಹಿರಂಗ ಅಧಿವೇಶನವು ಈ ವರ್ಷದಲ್ಲಿ ಸೇರುವದಿಲ್ಲ ಬರುವ ವರ್ಷದ ಪ್ರಥಮ ತ್ರೈಮಾಸಿಕದಲ್ಲಿ ಸೇರಬಹುದಾದ ಲಕ್ಷಣವಿದೆ ಎಂದು ತಿಳಿಯುತ್ತದೆ.

ಕಾಂಗ್ರೆಸಿಗೆ ಪ್ರಾಥಮಿಕ ಸದಸ್ಯರನ್ನು ಮಾಡುವ ಕಾರ್ಯವು ಇದೇ ಅಕ್ಟೋಬರದೊಳಗಾಗಿ ಮುಗಿಯುವದಿಲ್ಲ ಅಲ್ಲದೆ ಕಾಂಗ್ರೆಸ ಚುನಾವಣೆ ಕಾರ್ಯವು ಡಿಸೆಂಬರ ದೊಳಗಾಗಿ ಮುಗಿಯುವದಿಲ್ಲವಾದ ಕಾರಣ ಈ ವರ್ಷ ಕಾಂಗ್ರೆಸಿನ ಬಹಿರಂಗ ಅಧಿವೇಶನವನ್ನು ಸೇರಿಸಲು ಸಾಧ್ಯವಾಗುವದಿಲ್ಲ.

ಕಾಂಗ್ರೆಸಿಗೆ ಪ್ರಾಥಮಿಕ ಸದಸ್ಯರನ್ನು ಮಾಡಿಕೊಳ್ಳುವ ಕಾರ್ಯವನ್ನು ಇದೇ ಅಕ್ಟೋಬರ ೩೧ ರೊಳಗಾಗಿ ಮುಗಿಸಬೇಕು ಎಂದು ಅ. ಭಾ. ಕಾಂಗ್ರೆಸ ಸಮಿತಿಯು ಎಲ್ಲಾ ಕಾಂಗ್ರೆಸ ಸಮಿತಿಗಳಿಗೆ ತಿಳಿಸಿದೆ.

ಕಳೆದ ವರ್ಷ ಕಾಂಗ್ರೆಸಿನ ಬಹಿರಂಗ ಅಧಿವೇಶನವು ಜಯಪುರದಲ್ಲಿ ೧೯೪೮ ಡಿಸೆಂಬರದಲ್ಲಿ ಸೇರಿತ್ತು.

ಪಂಡಿತ ನೆಹರೂರವರ ಅಮೇರಿಕಾ ಪ್ರಯಾಣ

ಹೊಸದಿಲ್ಲಿ:- ಮುಖ್ಯಮಂತ್ರಿ ಪಂಡಿತ ನೆಹರೂರವರು ಅಕ್ಟೋಬರ ಆರನೆಯ ತಾರೀಕಿನಂದು ಪುಣೆಗೆ ಬಂದು ಅಲ್ಲಿ ಪುಣೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ರಾಷ್ಟ್ರೀಯ ಸೈನಿಕ ಶಾಲೆಯವರನ್ನುದ್ದೇಶಿಸಿ ಭಾಷಣ ಮಾಡಲಿರುವರು.

—:—

ಕಾಶ್ಮೀರ ಸಮಿತಿ ದಿಲ್ಲಿಯಲ್ಲಿ

ಹೊಸದಿಲ್ಲಿ:- ಕಾಶ್ಮೀರ ಸಮಯ ಇತ್ತೀಚಿನ ಪರಿಸ್ಥಿತಿಯನ್ನು ಭದ್ರತಾ ಮಂಡಳಕ್ಕೆ ವರದಿ ಮಾಡಲು ನಿಶ್ಚಯಿಸಿದರು ಸಂ. ರಾ ಸಂಘದ ಕಾಶ್ಮೀರ ಸಮಿತಿಯು ಇಂದು ಕರಾಚಿಯಿಂದ ಇಲ್ಲಿಗೆ ಬಂದಿದೆ. ಸಮಿಯು ಸೋಮವಾರ ಮುಖ್ಯಮಂತ್ರಿ ಪಂಡಿತ ನೆಹರೂರವರನ್ನು ಭೆಟ್ಟಿಯಾಗಬಹುದು ಎರಡು ದಿನಗಳ ನಂತರ ಸಮಿತಿಯು ಆವಾಕ್ಕೆ ತೆರಳಿ ಅಲ್ಲಿ ತನ್ನ ವರದಿಯನ್ನು ತಿಳಿಸುವದು.

—

ಬೆಂಗಳೂರಿಗೆ ಜಯಪ್ರಕಾಶರ ಆಗಮನ

ಬೆಂಗಳೂರು ಸಾಮ್ಯವಾದಿ ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿ ಹಾಗೂ ಸಾಮಾನ್ಯ ಮಂಡಳದ ಅಧಿವೇಶನಗಳಿಗಾಗಿ ಶ್ರೀ ಜಯಪ್ರಕಾಶ ನಾರಾಯಣರು ಇಂದು ಇಲ್ಲಿಗೆ ಆಗಮಿಸಿದ್ದಾರೆ ಅವರೊಂದಿಗೆ ಅವರ ಪತ್ನಿ ಶ್ರೀಮತಿ ಪ್ರಭಾವತಿಯವರೂ ಬಂದಿದ್ದಾರೆ.

ಶ್ರೀ ಜಯಪ್ರಕಾಶರನ್ನು ವಿಮಾನ ನಿಲ್ದಾಣದಲ್ಲಿ ಈ ಅಧಿವೇಶನಗಳ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ಸಿ. ಕೆ ರೆಡ್ಡಿ ಮತ್ತು ಇತರ ಸದಸ್ಯರು ಸ್ವಾಗತಿಸಿದರು. ಮೈಸೂರ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರೂ ವಿಮಾನ ನಿಲ್ದಾಣದಲ್ಲಿ ಶ್ರೀ ಜಯಪ್ರಕಾಶರನ್ನು ಸ್ವಾಗತಿಸಲು ಹಾಜರಿದ್ದರು.

ಸಾಮ್ಯವಾದಿ ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿಯ ಅಧಿವೇಶನವು ಇಂದಿನಿಂದ ೧೫ ದಿನಗಳವರೆಗೆ ನಡೆಯುವದು ಸಾಮಾನ್ಯ ಅಧಿವೇಶನವು ಬರುವ ತಿಂಗಳ ಪ್ರಾರಂಭದಲ್ಲಿ ಸೇರುವದು ಸಾಮ್ಯವಾದಿ ಪಕ್ಷದ ಧ್ಯೇಯ ಧೋರಣಗಳನ್ನು ನಿರ್ಧರಿಸುವದೇ ಈ ಅಧಿವೇಶನಗಳ ಕಾರ್ಯವಾಗಿದೆ.

ಆಟಮ್ ಬಾಂಬು

ಇತ್ತೀಚಿನ, ರಾಜಕಾರಣದ ಕ್ಷೇತ್ರದ ಮುಖ್ಯ ಮಾತೆಂದರೆ ಆಟಮ್ ಬಾಂಬು, ಆಗಿದೆ. ಅದರಮೇಲಿನ ಇಂದಿನ ಯಾವುದೊಂದು ರಾಷ್ಟ್ರದ ಶಕ್ತಿ ಸಾಮರ್ಥ್ಯಗಳು ಅಳೆಯಲ್ಪಡುತ್ತವೆ.

ಅಂತೆಯೇ ಈ ಬಾಂಬಿನ ರಚನೆಯ ಕ್ರಮ ಮತ್ತು ಜ್ಞಾನಗಳನ್ನು ಇಂದು ತಿಳಿದು ಕೊಳ್ಳಲು ಜಗತ್ತಿನಲ್ಲಿಯ ಸರ್ವ ರಾಷ್ಟ್ರಗಳು ಯತ್ನಿಸುತ್ತವೆ. ಸದ್ಯಕ್ಕೆ ಅಮೇರಿಕೆಯಲ್ಲಿ ಮಾತ್ರ ಈ ಜ್ಞಾನದ ಗೌಪ್ಯವು ಭದ್ರವಾಗಿ ಕಾಯ್ದಿರಿಸಲ್ಪಟ್ಟಿದೆ. ಮತ್ತು ಅದರ ಸಹಾಯದಿಂದ ಸಿದ್ಧಮಾಡಿದ ಬಾಂಬುಗಳೂ ಆ ದೇಶದ ವಶದಲ್ಲಿ ಇವೆ. ಅಂತಹ ಕೆಲವು ಬಾಂಬುಗಳನ್ನು ಅದು ಕಳೆದ ಯುದ್ಧದ ಕಾಲದಲ್ಲಿ ಜಪಾನದ ಮೇಲೆ ಒಗೆದು ಪ್ರಕಟ ಮಾಡಿತು.

ಈ ಜ್ಞಾನದ ಶೋಧ.

ಜಾಗತಿಕ ಪ್ರಭುತ್ವವನ್ನು ಸಂಪಾದಿಸಲು ಸಹಾಯಮಾಡಲಿದ್ದ ಈ ಶಕ್ತಿಯನ್ನು ಸಂಪಾದಿಸುವ ವಿಷಯದಲ್ಲಿ ನಡೆದ ಸ್ಪರ್ಧೆ ಮತ್ತು ಆತುರಗಳು ಸ್ವಾಭಾವಿಕವಾದುವೇ ಆಗಿದ್ದವು

ಕಳೆದ ಯುದ್ಧದ ಮೊದಲೇ ಜರ್ಮನಿ ಮತ್ತು ಬ್ರಿಟನ್ನುಗಳು ಈ ಬಾಂಬಿನ ಶೋಧದ ಬಗ್ಗೆ ಬಹುದಾರಿಯನ್ನು ಕ್ರಮಿಸಿದವು. ಅದರ ವಾಸನೆಯು ಆಗ ಅಮೇರಿಕೆಯು ತನ್ನ ಕೆಲವು ಶಾಸ್ತ್ರಜ್ಞರನ್ನು ಬ್ರಿಟನ್ನಿಗೆ ಕಳುಹಿಸಿ ಅಲ್ಲಿಯ ಶಾಸ್ತ್ರಜ್ಞರೊಡನೆ ಆ ಬಗ್ಗೆ ಚರ್ಚೆಮಾಡಿ ಜ್ಞಾನ ಸಂಪಾದಿಸಿಕೊಂಡು ಬರಲು ಹೇಳಿತು. ಆ ಶಾಸ್ತ್ರಜ್ಞರು ಅಲ್ಲಿಂದ ತಿರುಗಿಬಂದು'' ಬ್ರಿಟನ್ನವು ಈ ಬಗ್ಗೆ ಬಹಳ ಮುಂದೆ ಹೋಗಿದೆ" ಎಂದು ವರದಿ ಮಾಡಿದರು.

ಆಗ, ಆಗಿನ ಅಮೇರಿಕೆಯ ಅಧ್ಯಕ್ಷರಾಗಿದ್ದ ರೂಝವೆಲ್ಟರವರು ಚರ್ಚಿಲ್ಲರಿಗೆ ಬರೆದು— ಸರ್ವತ್ರರೂ ದೊರೆತ ಈ ಕ್ಷೇತ್ರದಲ್ಲಿಯ ಸಂಶೋಧನೆಯು ಸಾಮೂಹಿಕವಾಗಿ ನಡೆಯಲಿ ಮತ್ತು ಅದು ಅಮೇರಿಕೆಯಲ್ಲಿಯೇ ನಡೆಯಲಿ.'' ಎಂದು ಹೇಳಿದರು. ಆ ಮಾತಿಗೆ ಚರ್ಚಿಲ್ಲರು ಒಪ್ಪಿಕೊಂಡರು.

ಇದರ ಪರಿಣಾಮದಿಂದ ಆ ಕಾರ್ಯವು ಮುಂದುವರಿಯಿತು. ಫ್ರಾನ್ಸ ದೇಶವು ಇದರಲ್ಲಿ ಭಾಗವಹಿಸಿದ್ದಿಲ್ಲ ಆದರೆ ಅಲ್ಲಿಯ ಈ ವಿಷಯದ ತಜ್ಞರಾದ ಡಾ॥ ಜೋಲಿಯೆಟ್ ಕ್ಯೂರೀ ಇವರು ತಮ್ಮ ಕೆಲವು ಸಂಗಡಿಗ ತಜ್ಞರನ್ನು ಕರೆದುಕೊಂಡು ಫ್ರಾನ್ಸದಿಂದ ಯಾರಿಗೂ-ಹೇಳದೆ ಕೇಳದೆ ಗುಪ್ತರೀತಿಯಿಂದ ಅಮೇರಿಕೆಗೆ ಬಂದಿಳಿದರು. ಸಂಶೋಧನೆಯ ಕಾರ್ಯವು ಇವರೆಲ್ಲರ ಪರಿಶ್ರಮದಿಂದ ಸಂಪೂರ್ಣವಾಯಿತು. ಮುಂದೆ ಆ ಜ್ಞಾನದ ಸಹಾಯದಿಂದ ಬಾಂಬುಗಳನ್ನು ಸಿದ್ಧಮಾಡುವ ಕಾರ್ಯವು ಕೈಕೊಳ್ಳಲ್ಪಡುವುದು ಉಳಿಯಿತು.

ಇಷ್ಟೊತ್ತಿಗೆ ಅಮೇರಿಕೆಯ ದೃಷ್ಟಿಯಲ್ಲಿ ವ್ಯತ್ಯಾಸ ಉಂಟಾಯಿತು. ಈ ಕಾರ್ಯಕ್ಕೆ ೭೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಬೇಕಾಗಿ ಒಂದದೊಂದ, ಅದಕ್ಕೆ ಅನುಕೂಲವಾಯಿತು ಇಷ್ಟು ಹಣವನ್ನು ತಾನೇ ಕೊಡಬೇಕಾಗುವದೆಂಬುದು ಮತ್ತು ಇತರ ರಾಷ್ಟ್ರಗಳಲ್ಲಿ ಅದಕ್ಕೆ ಬೇಕಾದ ಶಕ್ತಿಯಿಲ್ಲವೆಂಬುದು ಅದಕ್ಕೆ ಚೆನ್ನಾಗಿ ಗೊತ್ತಿತ್ತು. ಆ್ಯಟಮ್ ಬಾಂಬಿನಂತಹ ಪ್ರಬಲ ಶಕ್ತಿಯ ಜ್ಞಾನವನ್ನು ಇತರ ರಾಷ್ಟ್ರಗಳಿಗೆ ಹತ್ತಗೊಡದಂತೆ ತಾನೇ ಸಂಪಾದಿಸುವದರಲ್ಲಿ ಇರುವ ಮಹತ್ವವೂ ಅದಕ್ಕೆ ಗೊತ್ತಿಲ್ಲದೇ ಇರಲಿಲ್ಲ.

ಆದ್ದರಿಂದ ಈ ಮಟ್ಟಕ್ಕೆ ಬಂದಕೂಡಲೆ ಅದು ಮುಂದಿನ ಕಾರ್ಯಕ್ಕಾಗಿ ಅಮೇರಿಕೆಯವರಲ್ಲದ ತಜ್ಞರನ್ನು ಒಳಗೆ ಸೇರಿಸಿಕೊಳ್ಳಲೇ ಇಲ್ಲ ಮುಂದೆ ತನ್ನ ಜನರನ್ನೇ ಇಟ್ಟುಕೊಂಡು ಆ ಬಾಂಬುಗಳನ್ನು ಸಿದ್ಧಮಾಡಿಕೊಂಡಿತು ಮತ್ತು ಆ ವಿಷಯದ ಜ್ಞಾನವನ್ನು ಬಹು ಭದ್ರವಾದ ಗೌಪ್ಯದಲ್ಲಿ ಇಟ್ಟುಕೊಂಡಿತು.

ಚರ್ಚಿಲ್ಲರು ಚಡಪಡಿಸಿದರು

ತಮ್ಮ ತಜ್ಞರನ್ನು ಹೊರಗೆ ಇಟ್ಟು, ಅಮೇರಿಕೆಯು ಆ ಕಾರ್ಯವನ್ನು ಮುಂದೆ ಸಾಗಿಸಿದ ವಿಷಯವು ಚರ್ಚಿಲ್ಲರಿಗೆ ತಿಳಿಯುತ್ತಲೇ ಅವರಿಗೆ ಆಶ್ಚರ್ಯ, ದುಃಖ ಮತ್ತು ಸಿಟ್ಟುಗಳೆಲ್ಲವೂ ಒಂದೇ ಕಾಲಕ್ಕೆ ಆದವು ಆದರೆ ಆ ಬಗ್ಗೆ ಅವರಿಗೆ ಏನೂ ಮಾಡುವದಿದ್ದಿಲ್ಲ. ಮತ್ತು ಮಾಡಲು ಬರುವಂತೆಯೂ ಇದ್ದಿಲ್ಲ ಆಗ ಅವರು ಅಮೇರಿಕೆಯ ಶ್ರೀ ಹ್ಯಾರೀ ಹಾಪ್ ಕಿನ್ಸ್ ಎಂಬವರಿಗೆ ಬರೆದು ಹೀಗೇಕಾಯಿತೆಂದು ಕೇಳಿದರು. ಹಾಪ್ಕಿನ್ಸರು ಚರ್ಚಿಲ್ಲರಿಗೆ ಉತ್ತರ ಕೊಡುವಾಗ ಯಾವ ಕಠೋರ ಶಬ್ದಗಳನ್ನೇನು ಉಪಯೋಗಿಸಲಿಲ್ಲ ಆದರೆ "ಈ ನಿರ್ಬಂಧದಲ್ಲಿ ಹೊಸದು ಮತ್ತು ವಿಚಿತ್ರವಾದುದೇನೂ ಇಲ್ಲ'' ಎಂದು ಮಾತ್ರ ಅವರು ತಿಳಿಸಿದರು

ಹೀಗಾದರೂ ಚರ್ಚಿಲ್ಲರು ಆ ರೀತಿಯ ಅಪಮಾನ ಮತ್ತು ಅಸಹಾಯಸ್ಥಿತಿಗಳನ್ನು ಮುಚ್ಚುಮರೆಯಲ್ಲಿಯೇ ಇಟ್ಟುಕೊಂಡು ಸಾಗಿದ್ದರು. ಇಂಗ್ಲಂಡವು ಪೂರ್ವದ ವೈಭವದಲ್ಲಿ ಇದ್ದರೆ ಈ ವಿಷಯದಲ್ಲಿ ಬೇಕಾದ ರೀತಿಯಲ್ಲಿ ಅಮೇರಿಕೆಯ ವಿರುದ್ಧ ಅದು ಪ್ರತಿಭಟಿಸಬಹುದಾಗಿತ್ತು. ಆದರೇ ಜಾಗತಿಕ ಯುದ್ಧದಲ್ಲಿ ಪಾರಾಗುವ ಕಾರ್ಯವು. ಅಮೇರಿಕೆಯೊಡನೆ ವಿರೋಧ ಕಟ್ಟಿಕೊಂಡರೆ ತನ್ನಿಂದ ಸ್ವತಂತ್ರವಾಗಿ ಸಾಧ್ಯವಿಲ್ಲವೆಂಬುದು ಅದಕ್ಕೆ ಚೆನ್ನಾಗಿ ಗೊತ್ತಿದ್ದುದರಿಂದ ಸುಮ್ಮನೆ ಮನಸ್ಸಿನಲ್ಲಿಯೇ ಹಲ್ಲುಕಡಿಯುತ್ತ ಇದುವರೆಗೆ ಕುಳಿತುಕೊಂಡಿದೆ.

ಇತರರ ಜ್ಞಾನ

ಅಮೇರಿಕೆಯ ಈ ತರಹದ ವೃತ್ತಿಯಿಂದ ಜಾಗತಿಕ ಇತರ ರಾಷ್ಟ್ರಗಳು ನಿರಾಶೆಗೊಂಡಿವೆ ಆದರೂ ಅವು ಸ್ವತಂತ್ರವಾಗಿ ಆ್ಯಟಮ್ ಬಾಂಬಿನ ಶೋಧದ ಕಾರ್ಯವನ್ನು ಸಾಗಿಸುವದನ್ನು ಮರೆತಿಲ್ಲ. ಎಲ್ಲಕಡೆಗೆ ಈ ಶೋಧದ ಕಾರ್ಯವು ಇಂದು ಒಳ್ಳೇಭರದಿಂದ ನಡೆದಿದೆ. ಈ ಕಾರ್ಯಕ್ಕೆ ಯುರೇನಿಯಮ್ ಮತ್ತು ಥೋರಿಯಮ್ ವಸ್ತುಗಳು ಮುಖ್ಯವಾಗಿ ಬೇಕಾಗುತ್ತವೆ. ಅವುಗಳನ್ನು ಶೋಧಿಸುವ ಕಾರ್ಯವು ಇಂದು ಎಲ್ಲ ದೇಶಗಳಲ್ಲಿಯೂ ನಡೆದಿದೆ. ಈ ವಸ್ತುಗಳನ್ನು ಹುಡುಕುವದೂ ಕಠಿಣವಿಲ್ಲ. ಮತ್ತು ಅವು ಜಗತ್ತಿನ ಸರ್ವಭಾಗಗಳಲ್ಲಿಯೂ ಸಿಗುವಂತಿವೆ.

ಆದರೆ ಮುಖ್ಯ ಸಂಗತಿಯೆಂದರೆ ಈ ಕಾರ್ಯಕ್ಕೆ ಬೇಕಾಗುವ ಅಪಾರ ಹಣ. ಅಷ್ಟು ದುಡ್ಡನ್ನು ಅಮೇರಿಕೆಯನ್ನು ಬಿಟ್ಟರೆ ಜಗತ್ತಿನಲ್ಲಿಯ ಇತರ ಯಾವದೇ ದೇಶವು ಸೇರಿಸಲು ಸಮರ್ಥವಾಗಿಲ್ಲ ಆದ್ದರಿಂದ ಈ ಸಂಬಂಧದ ಜ್ಞಾನವು ಯಾವದೇ ದೇಶಕ್ಕೆ ತಿಳಿದರೂ ಅದು ಬಾಂಬನ್ನು ಸಿದ್ಧಮಾಡೀತೆಂದು ಹೇಳಲು ಬರುವಂತಿಲ್ಲ. ಬಾಂಬಿನ ಬಗ್ಗೆ ಅಸಾಧ್ಯತೆಯು ಚೆನ್ನಾಗಿ ಎಗೆತ್ತಾಗುತ್ತಿದ್ದರೂ ಆಟಮ್ ಶಕ್ತಿಯ ಉಪಯೋಗವು ಮನುಷ್ಯನ ಜೀವನದ ಅನೇಕ ಇತರ ಕಾರ್ಯಗಳಿಗೆ ಉಪಯೋಗ ಬೀಳುತ್ತಿರುವದರಿಂದ ಅದಕ್ಕಾಗಿಯಾದರೂ ಆ ಶಕ್ತಿಯನ್ನು ದೊರಕಿಸುವುದು ಜನರ [illegible] ಸರ್ವ

ದೇಶಗಳು ಇಂದು ಹಾತೊರೆಯುತ್ತಿವೆ. ಅವು ಅದನ್ನು ನಾಳೆ ಅವು ಅಮೇರಿಕೆಯಿಂದಲೇ ಸಂಪಾದಿಸಬೇಕಾಗುವದು. ಆಗ ಆ ಶಕ್ತಿಯ ಮಾರಾಟವು ಇಂದಿನ ಸೀದಾ ಪದ್ಧತಿಗಿಂತಲೂ ಅನಿಷ್ಟರೀತಿಯಲ್ಲಿ ನಡೆಯದೆ ಇರಲಾರದು. ಅದರ ಮೂಲಕ ಜಗತ್ತಿನ ಸರ್ವ ದೇಶಗಳಿಂದ ದುಡ್ಡಿನ ಪ್ರವಾಹವೇ ಅಮೇರಿಕೆಗೆ ಹರಿಯುವಂತಾಗುವುದೆಂಬ ಮಾತನ್ನು ಕಂಡು ಇತರ ರಾಷ್ಟ್ರಗಳು ಇಂದು ಚಡಪಡಿಸುತ್ತಿವೆ ಮತ್ತು ಆ ಶಕ್ತಿಯನ್ನು ತಮ್ಮಲ್ಲಿಯೇ ಹುಟ್ಟಿಸಿಕೊಳ್ಳಲು ಮುಚ್ಚು ಪ್ರಯತ್ನ ನಡೆಸಿವೆ.

ಹಿಂದುಸ್ಥಾನ, ಜರ್ಮನಿ ರಶಿಯಾ, ಇಂಗ್ಲಂಡಗಳೇ ಮೊದಲಾದ ಸರ್ವದೇಶಗಳಲ್ಲಿ ಇಂದು ಈ ಪ್ರಯತ್ನವು ನಡೆದಿದೆ. ನಾಳೆ ಈ ಪ್ರಯತ್ನದಿಂದ ಇಂದಿನ ಆ್ಯಟಮ್ ಬಾಂಬಿಗಿಂತ ಭೀಕರವಾದ ಒಂದು ಸಾಧನವು ಸಿದ್ಧವಾದರೂ ಅದರಲ್ಲಿ ಆಶ್ಚರ್ಯವೇನೂ ಇಲ್ಲವೆಂದು ಶಾಸ್ತ್ರಜ್ಞರು ಅಭಿಪ್ರಾಯಪಡುತ್ತಿದ್ದಾರೆ.

ಅಮೇರಿಕೆಗೂ ಸುಖವಾಗಲಾರದು

ಎಲ್ಲರನ್ನೂ ವಂಚಿಸಿ ಆ್ಯಟಮ್ ಬಾಂಬಿನ ರಹಸ್ಯವನ್ನು ತನ್ನ ಕಡೆಗೇ ಇಟ್ಟುಕೊಳ್ಳುವದರಿಂದ ಅಮೇರಿಕೆಗೂ ಲಾಭವಾಗಲಾರದು ಎಂಬುದು ಜಾಗತಿಕ ಮತವಾಗಿದೆ. ಆ್ಯಟಮ್ ಬಾಂಬಿನ ಸಹಾಯದಿಂದ ಯುದ್ಧಮಾಡುವದು ಜಗತ್ತನ್ನು ಹಾಹಾ ಅನ್ನುವದರಲ್ಲಿಯೇ ಮುಗಿಸಿ ಬಿಡುವ ಕಾರ್ಯವಾದುದರಿಂದ ಅದರ ಉಪಯೋಗವನ್ನು ಮಾಡುವ ಪ್ರಸಂಗವು ಅಷ್ಟು ಮುಂದೂಡುವದರಲ್ಲಿಯೇ ಜಗತ್ತು ಕಾಲ ಕಳೆಯ ಬೇಕಾಗುವದೆಂದು ತಜ್ಞರ ಅಭಿಪ್ರಾಯವಿದೆ. ಅದ್ದರಿಂದ ಈ ಶಕ್ತಿಯು ವಿನಾಶಕ ಕಾರ್ಯಕ್ಕೆ ಯಾವ ಕಾಲಕ್ಕೂ ಉಪಯೋಗಿಸಲ್ಪಡದಂತೆ ಜಾಗತಿಕ ನಿರ್ಬಂಧವನ್ನು ಹಾಕಬೇಕೆಂದು ತಜ್ಞರು ಹೇಳುತ್ತಿದ್ದಾರೆ.

ಆದರೆ ಇಂದು ಆ ದೂರದೃಷ್ಟಿಯ ವಾತಾವರಣವೆ ಉಳಿದಿರುವದಿಲ್ಲ ಮತ್ತು ಜಗತ್ತಿನ ಆಗು ಹೋಗುಗಳ ಮೇಲಿನ ಪ್ರಭುತ್ವವು ಯಾರ ಕೈಯಲ್ಲಿಯೂ ಉಳಿದಿರುವುದಿಲ್ಲ. ಎಲ್ಲರೂ ತಮ್ಮ ತಮ್ಮ ಮನಸ್ಸು ಬಂದಂತೆ ವರ್ತಿಸುತ್ತಿದ್ದಾರೆ. ಎಲ್ಲಕ್ಕೂ ಬಲಿಷ್ಠ ಮತ್ತು ಸುಸಂಪನ್ನ ದೇಶವಾದ ಅಮೇರಿಕೆಯೇ ಈ ಶಕ್ತಿಯನ್ನು ತನ್ನಲ್ಲಿ ಇಟ್ಟುಕೊಂಡು ಕುಳಿತಿರುವಾಗ ಅದರ ಎದುರು ಹೋಗಿ ನಿಲ್ಲುವವರು ಇಂದು ಯಾರು ಇಲ್ಲ.

ಮತ್ತು ಒಂದು ರೀತಿಯಿಂದ ನೋಡಿದರೆ ಇಂತಹ ಅಂಜಿಕ್ಯ ಶಕ್ತಿಯು ಅಮೇರಿಕೆಯ ಕೈಯಲ್ಲಿ ಇದ್ದರೇ ಜಗತ್ತಿನ ದೃಷ್ಟಿಯಿಂದ ಒಂದು ಕ್ಷೇಮಕರವಾದ ಸಂಗತಿ ಎಂದು ಅನೇಕರು ತಿಳಿಯುತ್ತಿದ್ದಾರೆ ಏಕೆಂದರೆ ಅಮೇರಿಕೆಯು ಅಂತಹ ದುಷ್ಟ ಪ್ರವೃತ್ತಿಯ ದೇಶವಲ್ಲ. ತನ್ನ ಸ್ವಾರ್ಥಕ್ಕೆ ಅಡ್ಡ ಬರುವದನ್ನು ಅದು ಸಹಿಸಲಿಕ್ಕಿಲ್ಲ. ಆದರೆ ಎರಡನೆಯವರ ಮೇಲೆ ಸುಮ್ಮನೆ ಕಾಲು ಕೆದರುವ ವೃತ್ತಿಯು ಅವರಲ್ಲಿ ಇಲ್ಲ. ಇಂದಿನ ತನ್ನಸ್ಥಿತಿಯು ಉಳಿದರೆ ಸಾಕು ಎಂದು ಅದು ಇಂದು ಇಚ್ಛಿಸುತ್ತಿದೆ.

ರೂಪಾಯಿಯ ಬೆಲೆಯ ಇಳಿತ ಅದರ ಅರ್ಥ— ಪರಿಣಾಮಗಳು

"ರೂಪಾಯಿಯ ಬೆಲೆ ಇಳಿಯಿತು" ಎಂಬ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿ ಒಮ್ಮೆಲೇ ಅನೇಕರು ಹೌಹಾರಿದರಂತೆ. ಬ್ಯಾಂಕುಗಳಲ್ಲಿಟ್ಟಿದ್ದ ತಮ್ಮ ಹಣದ ಗತಿಯೇನಾಯಿತು? ನೂರಕ್ಕೆ ೩೦ ರಷ್ಟು ಇಳಿಯಿತಂತಲ್ಲಾ? ಹಾಗಾದರೇನು? ನಮ್ಮ ನೂರು ರೂಪಾಯಿಗೆ ೭೦ ರೇ ದೊರೆಯುವುದೆ?

ಕೆಲವರು ಬ್ಯಾಂಕುಗಳಿಗೆ ಓಡಿದರಂತೆ. ಆದರೆ ಅಲ್ಲಿ ಅವರಿಗೆ ಮುಚ್ಚಿದ ಬಾಗಿಲು ಎದುರಾಯಿತು. ತಾ ೧೯, ೨೦, ೨೧ ಈ ಮೂರು ದಿನ ಬ್ಯಾಂಕುಗಳಿಗೆ ರಜೆಯೆಂದು ಅಲ್ಲಿ ನೋಟೀಸು ಹಚ್ಚಿತ್ತು. ಠೇವಣಿದಾರರಿಗೆ ಇನ್ನಷ್ಟು ಗಾಬರಿಯಾಯಿತು.

ಆದರೆ ಅವರ ಗಾಬರಿ ನಿಷ್ಕಾರಣವಾಗಿತ್ತು. ಬ್ಯಾಂಕಿನಲ್ಲಿಟ್ಟ ಹಣವಾಗಲಿ ನಮ್ಮ ಕೈಯಲ್ಲಿದ್ದ ರೊಕ್ಕವಾಗಲಿ ಈ ಬೆಲೆ ಇಳಿತಕ್ಕೆ ಗುರಿಯಾಗುವುದಿಲ್ಲ. ನಮ್ಮ ರೂಪಾಯಿಗೆ ಹದಿನಾರೇ ಆಣೆ, ಆಣೆಗೆ ಹನ್ನೆರಡೇ ಪೈ (ಅಥವಾ ಪೈಗಳಿಂದ ಕೆಲಸಮಾಡದಿರುವ ಈ ಕಾಲದಲ್ಲಿ ನಾಲ್ಕೇ ಬಿಲ್ಲೆಗಳನ್ನಿರಿಸಬೇಕಾದರೆ) ಬೆಲೆ ಉಳಿಯುತ್ತದೆ. ಯಾರೂ ತಮ್ಮ ಹಣದ ಬೆಲೆಯನ್ನು ಕುರಿತು ಚಿಂತಿಸಬೇಕಾಗಿಲ್ಲ.

ಹಾಗಾದರೆ ಏನಿದೆಲ್ಲ ಗೊಂಜಿ?

ಇದೊಂದು ಅರ್ಥಶಾಸ್ತ್ರೀಯ ಹಣಕಾಸಿನ ಕಸರತ್ತು ಅಷ್ಟೇ! ಆದರೆ ಈ ಕಸರತ್ತಿನ ಪ್ರತ್ಯಕ್ಷ ಪರಿಣಾಮ ಈಗಲೇ ನಮ್ಮ ಮೇಲೆ ಆಗದಿದ್ದರೂ ಕೆಲದಿನಗಳ ನಂತರ ಅಪ್ರತ್ಯಕ್ಷವಾಗಿ ಆಗಬಹುದು. ಅದ್ದರಿಂದ ಅದನ್ನು ನಾವು ಅರಿತುಕೊಳ್ಳಲು ಪ್ರಯತ್ನಿಸೋಣ

ಜಗತ್ತಿನಲ್ಲಿ ಒಂದೊಂದು ರಾಜ್ಯದಲ್ಲಿ ಒಂದೊಂದು ನಾಣ್ಯ ಚಲಾವಣೆಯಲ್ಲಿದೆ. ನಮ್ಮಲ್ಲಿ ರೂಪಾಯಿ, ಬ್ರಿಟನ್ನಿನಲ್ಲಿ ಪೌಂಡು ಅಮೇರಿಕೆಯಲ್ಲಿ ಡಾಲರು, ಫ್ರಾನ್ಸಿನಲ್ಲಿ ಫ್ರಾಂಕು ಇತ್ಯಾದಿ. ಈ ರಾಷ್ಟ್ರಗಳಲ್ಲಿ ಪರಸ್ಪರ ವ್ಯಾಪಾರವಾಗುವಾಗ ಸಹಜವಾಗಿ ಇಂಥ ದೇಶದ ಇಂತಿಷ್ಟು ನಾಣ್ಯಗಳಿಗೆ ಇಂಥ ರಾಷ್ಟ್ರದ ಇಂತಿಷ್ಟು ನಾಣ್ಯಗಳು ಎಂದು ವಿನಿಮಯದರ ಗೊತ್ತಾಗುತ್ತಿರುತ್ತದೆ. ಉದಾಹರಣೆಗಾಗಿ ಬ್ರಿಟನ್ನಿನ ಪೌಂಡಿಗೆ ಅಮೇರಿಕೆಯ ೪.೦೩ ಡಾಲರು ಅಮೇರಿಕೆಯ ಒಂದು ಡಾಲರಿಗೆ ಭಾರತದ ೩.೩೦ ರೂಪಾಯಿ ಯೆಂದು (ಮೊನ್ನೆ ತಾ. ೧೯ ಕ್ಕಿಂತ ಮೊದಲು) ವಿನಿಮಯದರವಿತ್ತು. ಅಂದರೆ ನಾವು ರೂ ೩.೩೦ ಬೆಲೆಯ ಸಾಮಾನುಗಳನ್ನು ಅಮೇರಿಕೆಗೆ ಒದಗಿಸಿದರೆ ಅವರು ನಮ್ಮ ಲೆಕ್ಕಕ್ಕೆ ೧ ಡಾಲರು ಜಮಾ ಹಿಡಿದು ಅಲ್ಲಿ ಒಂದು ಡಾಲರು ಬೆಲೆ ಬಾಳುವ ಸಾಮಾನು ಕಳಿಸುತ್ತಾರೆ.

ಆದರೆ ಈಗ ನಮಗೆ ೧ ಡಾಲರು ಬೆಲೆಯ ಸಾಮಾನುಗಳು ಬೇಕಾದರೆ ನಾವು ಅಮೇರಿಕೆಗೆ ೪.೭೬ ರೂಪಾಯಿ (ಅಥವಾ ಅಷ್ಟು ಸಾಮಗ್ರಿ) ಕೊಡಬೇಕಾಗುವದು. ರೂಪಾಯಿಯ ಬೆಲೆ ಇಳಿಸಿದ್ದರ ಮುಖ್ಯ ಫಲ ಇದು.

ಇದು ನಮಗೆ ನಷ್ಟವಲ್ಲವೆ? ನಾವೇಕೆ ಹೀಗೆಮಾಡಬೇಕಿತ್ತು?

ಹೌದು ನಷ್ಟವೇನೋ ನಿಜ. ಆದರೆ ಉಪಾಯ ವಿರಲಿಲ್ಲ.

ಎರಡು ಪ್ರದೇಶಗಳು.

ಜಗತ್ತಿನಲ್ಲಿ ವ್ಯಾಪಾರ ವ್ಯವಹಾರವೆಲ್ಲ ಇಂದು ಮುಖ್ಯವಾಗಿ ಎರಡು ಪಂಗಡಗಳಲ್ಲಿ ನಡೆಯುತ್ತದೆ. ಒಂದು ಬ್ರಿಟನ್ನಿನ ಪಂಗಡದಲ್ಲಿ, ಇನ್ನೊಂದು ಅಮೇರಿಕೆಯ ಪಂಗಡದಲ್ಲಿ. ದೊಡ್ಡ ಸಾಮ್ರಾಜ್ಯ ಕಟ್ಟಿ ಇಡಿ ಜಗತ್ತಿನ ನಾಯಕಸ್ಥಾನದಲ್ಲಿ ಮೆರೆಯುತ್ತಿದ್ದ ಬ್ರಿಟನ್ನಿನ ಸಂಗಡ ಅನೇಕ ರಾಷ್ಟ್ರಗಳ ವ್ಯಾಪಾರ ವ್ಯವಹಾರ ಸಂಬಂಧ ತಳಕು ಬಿದ್ದಿದ್ದು, ಅದಿನ್ನೂ ಹಾಗೆಯೆ ಉಳಿದಿದೆ. ಆದರೆ ಒಂದನೆ ಮಹಾಯುದ್ಧದ ನಂತರ ಉತ್ಕರ್ಷಕ್ಕೆ ಬಂದು ಈಗ ಅದ್ವಿತೀಯ ಸಂಪತ್ತಿನಿಂದ ಮೆರೆಯುತ್ತಿರುವ ಅಮೇರಿಕೆಯ ಪ್ರಭಾವ ವಲಯದಲ್ಲಿ ಅನೇಕ ದೇಶಗಳ ವ್ಯಾಪಾರ ವ್ಯವಹಾರ ತಳಕು ಬಿದ್ದಿದೆ. ಮೊದಲಿನ ಗುಂಪು ಸ್ಟರ್ಲಿಂಗ್ ಪ್ರದೇಶ, ಎರಡನೆಯದು ಡಾಲರ ಪ್ರದೇಶ ಎಂದು ಕರೆಯಲಾಗುತ್ತಿದೆ. ಭಾರತ ಸ್ಟರ್ಲಿಂಗ್ ಪ್ರದೇಶದಲ್ಲಿ ಸೇರಿದ ರಾಜ್ಯ ನಮ್ಮ ಐತಿಹಾಸಿಕ ಸಂಬಂಧವೇ ಹಾಗಿದೆ ಅದರಿಂದ ಬ್ರಿಟನ್ನಿನ

ಪೌಂಡು ನಾಣ್ಯಕ್ಕೆ ಬರುವ ಸುಖದುಃಖಗಳು ನಮ್ಮ ರೂಪಾಯಿಯ ಮೇಲೂ ಪರಿಣಾಮ ಮಾಡಿಯೆ ಮಾಡುತ್ತವೆ.

ಮೊನ್ನೆ ಬ್ರಿಟನ್ನಿನ ಸರಕಾರ ಅಮೇರಿಕೆಯ ಸಂಗಡ ದೀರ್ಘವಾದ ಮಾತುಕತೆ ನಡೆಸಿ ಪೌಂಡಿನ ಬೆಲೆಯನ್ನು ತಗ್ಗಿಸಿತು ಅಂದರೆ ಒಂದು ಪೌಂಡಿಗೆ ೪.೦೩ ಡಾಲರೆಂದಿದ್ದುದನ್ನು ೨.೮೦ ಡಾಲರೆಂದು ಬದಲಾಯಿಸಿತು. ಅದರ ಬೆನ್ನುಹತ್ತಿ ನಾವೂ ಅಷ್ಟೇ ಪ್ರಮಾಣದಲ್ಲಿ ಅಂದರೆ ಡಾಲರಿಗೆ ೩.೩೨ ರೂಪಾಯಿ ಬೆಲೆಯೆಂದಿದುದನ್ನು ೪.೭೬ ರೂಪಾಯಿಯೆಂದು ಮಾಡಬೇಕಾಯಿತು.

ಬ್ರಿಟನ್ನಾದರೂ ಹೀಗೇಕೆ ಮಾಡಿತು? ಮತ್ತು ಸ್ವತಂತ್ರರಾದ ನಾವೂ ಬ್ರಿಟನ್ನು ಮಾಡಿದಾಕ್ಷಣ ಹೀಗೇಕೆ ಮಾಡಬೇಕಿತ್ತು? ಎಂದು ನೀವು ಸಹಜವಾಗಿ ಕೇಳುವಿರಿ.

ಬ್ರಿಟನ್ನಿನ ಕ್ರಮಕ್ಕೆ ಕಾರಣವಿಷ್ಟೇ: ಬ್ರಿಟನ್ನು ಈಗ ಮುದಿ ಸಿಂಹದಂತಾಗಿದೆ ಆ ಎರಡು ಮಹಾಯುದ್ಧಗಳಿಂದ ಅದರ ಬಲ ಕುಂದಿದೆ. ಮೊನ್ನೆಯ ಮಹಾಯುದ್ಧದಲ್ಲಂತೂ ಜರ್ಮನ್ ಬಾಂಬುಗಳಿಂದ ಅದರ ಉದ್ಯಮಗಳಿಗೆ ವಿಪರೀತ ಹಾನಿಯಾಯಿತು. ಬ್ರಿಟನ್ನು ಎಷ್ಟು ಬಲಿಷ್ಠವಾಗಿದ್ದರೂ ಅದು ಆಹಾರಾದಿ ಸಾಮಗ್ರಿಗಳಿಗೂ ತನ್ನ ಉದ್ಯಮಗಳಿಗೆ ಬೇಕಾದ ಕಚ್ಚಾ ಸರಕುಗಳಿಗೂ ವಿದೇಶಗಳನ್ನೇ ಅವಲಂಬಿಸಬೇಕಾಗಿದೆ. ಅದಕ್ಕೆ ಅಮೇರಿಕೆಯ ಪ್ರಭಾವ ಕ್ಷೇತ್ರದಿಂದಲೇ ಬಹಳ ಸಾಮಗ್ರಿಗಳು ಬೇಕಾಗುತ್ತವೆ. ಆದರೆ ಅದಕ್ಕೆ ಕೊಡುವಷ್ಟು ಹಣ ಬ್ರಿಟನ್ನಿನಲ್ಲಿಲ್ಲ. ಈ ವರೆಗೇನೋ ಅಮೇರಿಕೆ ಕೊಟ್ಟ ಸಾಲ ಮತ್ತು ಧರ್ಮದ ಬಲದಿಂದಲೂ ಬ್ರಿಟನ್ನಿನಲ್ಲಿದ್ದ ಚಿನ್ನದ ಸಂಗ್ರಹವನ್ನು ಕರಗಿಸಿಯೂ ದಿನ ಸಾಗಿತು. ಆದರೆ ಹೀಗೇ ಎಷ್ಟು ದಿನ ಸಾಗೀತು? ಬ್ರಿಟನ್ನು ಗಾಬರಿಯಾಯಿತು. ಡಾಲರ ಕ್ಷೇತ್ರದಿಂದ ಸಾಮಗ್ರಿ ತರಿಸುವದನ್ನು ನಿಲ್ಲಿಸಿದರೆ ಬ್ರಿಟನ್ನಿನ ಜನರು ತುಂಬ ಕಷ್ಟನಷ್ಟ ಬವಣೆಗಳನ್ನು ಅನುಭವಿಸಬೇಕಾದೀತು. ಅದು ಸಾಧ್ಯವಿರಲಿಲ್ಲ.

ವ್ಯಾಪಾರ ಹೆಚ್ಚಿಸುವ ಉಪಾಯ

ಇನ್ನೊಂದು ಉಪಾಯವೆಂದರೆ ಡಾಲರ ಕ್ಷೇತ್ರಕ್ಕೆ ಬ್ರಿಟನ್ನಿನಲ್ಲಿ ತಯಾರಾದ ಸಾಮಾನುಗಳನ್ನು ಕಳಿಸುವುದು. ಈವರೆಗೆ ಬ್ರಿಟನ್ನಿನ ಸಾಮಾನುಗಳನ್ನು ಡಾಲರ ಕ್ಷೇತ್ರದಲ್ಲಿ ಕೇಳುವವರಿಲ್ಲದಾಗಿತ್ತು. ಏಕೆಂದರೆ ಹಳೆಯ ರೀತಿಯಿಂದಲೇ ಕಾರಖಾನೆಗಳನ್ನು ನಡೆಸುತ್ತಿದ್ದ ಬ್ರಿಟನ್ನರ [illegible] ಹೆಚ್ಚು. [illegible] ಸಾಮಾನುಗಳ [illegible] ರೂ ಬೆಲೆ ಹೆಚ್ಚೆಂದು ನಿಮಗೂ ಗೊತ್ತಿದೆ. ಆದರೆ ತುಟ್ಟಿ ಸಾಮಾನುಗಳನ್ನು ಕೊಳ್ಳಲು ಅಮೇರಿಕನ್ನರು ಸಿದ್ಧರಿಲ್ಲ. ಅಂದಮೇಲೆ ಗಿರಾಕಿ ಬರಬೇಕಾದರೆ ಅಮೇರಿಕೆಯಲ್ಲಿ ಅವು ಅಗ್ಗವಾಗುವಂತೆ ಮಾಡಬೇಕಾಯಿತು. ಹಾಗಾದರೆ ಅದರಿಂದ ಡಾಲರ ಕ್ಷೇತ್ರದಲ್ಲಿ ತಮ್ಮ ವ್ಯಾಪಾರ ಹೆಚ್ಚಾದೀತು ಎಂದು ಅವರ ಆಶೆ.

ಇದರಲ್ಲಿ ಬ್ರಿಟನ್ನಿನ ಲೆಕ್ಕಾಚಾರ ಹೀಗೆ: ನಿಮ್ಮಲ್ಲಿ ಒಂದು ಚೀಲ ಜೋಳವಿದೆಯೆಂದು ತಿಳಿಯಿರಿ. ರೂಪಾಯಿಗೆ ನಾಲ್ಕು ಸೇರಿನಂತೆ ಮಾರಿದರೆ ನಿಮಗೆ ಚೀಲದಮೇಲೆ ೫ ರೂಪಾಯಿ ಲಾಭವಿದೆಯೆಂದು ತಿಳಿಯಿರಿ. ಆದರೆ ಅದರಲ್ಲಿ ನಿಮ್ಮ ಅರ್ಧಚೀಲಕ್ಕೂ ಗಿರಾಕಿ ಬರಲಿಲ್ಲವಾದರೆ ಲಾಭ ಎರಡೂವರೆ ರೂಪಾಯಿಯೇ ಆದೀತು. ಆದರೆ ಸ್ವಲ್ಪ ಬೆಲೆ ತಗ್ಗಿಸಿದರೆ ಇಡೀ ಚೀಲವೂ ಮಾರಿ ಹೋಗಬಹುದು. ಆಗ ನಿಮಗೆ ನಾಲ್ಕು ರೂಪಾಯಿ ಲಾಭವಾಗುವದು. ಅರ್ಧಚೀಲ ಮನೆಯಲ್ಲಿ ಉಳಿಸಿಕೊಂಡು ಅಷ್ಟರ ಬೆಲೆಯನ್ನೂ ಕಳೆದುಕೊಳ್ಳುವದಕ್ಕಿಂತ ಇಡೀ ಚೀಲ ಮಾರಿ ಸ್ವಲ್ಪ ಕಡಿಮೆ ಲಾಭ ಮಾಡಿಕೊಳ್ಳುವದು ಲೇಸಲ್ಲವೆ? ಹಾಗೆಯೆ ಬ್ರಿಟನ್ನಿನ ಲೆಕ್ಕ. ಅಗ್ಗವಾಗಿ ಸಾಮಾನು ಮಾರಿ ಲಾಭದ ಪ್ರಮಾಣ ಕಡಿಮೆಯಾದರೂ ಪರಿಮಾಣ ಹೆಚ್ಚಿಸಿಕೊಳ್ಳುವುದು ಜಾಣತನವೆಂದು ಅದು ಭಾವಿಸಿದೆ.

ಇದಲ್ಲದೆ, ಬ್ರಿಟಿಶ ಸಾಮಗ್ರಿಗಳು ಗಿರಾಕಿಯಿಲ್ಲದೆ ಬಿದ್ದರೆ ನಿರುದ್ಯೋಗ ಬೆಳೆದು ದೇಶಕ್ಕೆ ಕಷ್ಟವೊದಗೀತೆಂದೂ ಅದು ಬೆದರಿತು.

ಈಗ ಸಾಮಾನಿನ ಬೆಲೆಯನ್ನು ಇಳಿಸಿದರೆ ಬ್ರಿಟನ್ನಿನ ಒಳನಾಡಿನಲ್ಲಿಯೂ ಅದು ಅಗ್ಗವಾಗಿ ಗಲಾಟೆ ಯುಂಟಾಗುತ್ತಿತ್ತು. ಬ್ರಿಟನ್ನಿಗೆ ಬೇಕಾಗಿದ್ದುದು ಅಮೇರಿಕೆಯ ಪೇಟೆಯಲ್ಲಿ ವ್ಯಾಪಾರ. ಅದಕ್ಕಾಗಿ ನೇರವಾಗಿ ಅಮೇರಿಕೆಯ ನಾಣ್ಯದ ಡಾಲರಿನ ಸಂಬಂಧದಲ್ಲಿ ಅದು ಅದು ತನ್ನ ಪೌಂಡಿನ ಬೆಲೆ ತಗ್ಗಿಸಿತು. ಇದರ ಪರಿಣಾಮವೇನಾಗುವುದೆಂದು ನೋಡೋಣ.

ಅಮೇರಿಕೆಗೆ ಅದು ಮೊದಲು ಒಂದು ಪೌಂಡು ಬೆಲೆಯ ಸಾಮಾನು ಕಳಿಸಿದ್ದರೆ ಅದು ೪ ಡಾಲರು ೩ ಸೆಂಟಿಗೆ ಮಾರುತ್ತಿತ್ತು. ಈಗ ಪೌಂಡಿನ ಬೆಲೆ ಇಳಿಸಿದ್ದರಿಂದ ಅದೇ ಸಾಮಾನು ಅಮೇರಿಕೆಯಲ್ಲಿ ೨.೮೦ ಡಾಲರಿಗೆ ಮಾರುತ್ತದೆ. ಅಂದರೆ ನೂರಕ್ಕೆ ೩೦ ರಷ್ಟು ಅಗ್ಗವಾಗುತ್ತದೆ. ಆಗ ಬ್ರಿಟಿಶ ಸಾಮಗ್ರಿಗಳಿಗೆ ಗಿರಾಕಿ ಬಹಳ ಬಂದೀತು ಮೊದಲಿಗಿಂತಲೂ ಹೆಚ್ಚು ಹಣ ಡಾಲರು ರೂಪದಲ್ಲಿ ಬಂದೀತು. ಆಗ ಬೇಕಾದಷ್ಟು ಅಮೇರಿಕನ್ ಸಾಮಾನುಗಳನ್ನು ಬ್ರಿಟನ್ನು ತರಿಸಿಕೊಳ್ಳಲನುಕೂಲವಾದೀತು.

ಈಗ ಭಾರತವೂ ತನ್ನ ರೂಪಾಯಿಯ ಬೆಲೆ ಡಾಲರಿನ ಸಂಬಂಧದಲ್ಲಿ ಇಳಿಸಿದೆ. ಬ್ರಿಟನ್ನಿನ ಆರ್ಥಿಕ ಪದ್ಧತಿಯೊಡನೆ ನಮ್ಮ ಸಂಬಂಧ ಬಹುಕಾಲದಿಂದ ಇದೆ. ಆದ್ದರಿಂದ ಬ್ರಿಟನ್ನಿನ ಪೌಂಡಿನ ಬೆಲೆ ಇಳಿಸಿದೊಡನೆ ನಾವೂ ರೂಪಾಯಿಯ ಬೆಲೆ ಇಳಿಸಬೇಕಾಯಿತು. ಯುರೋಪಿನ ಮತ್ತು ಏಶಿಯದ ಇನ್ನೂ ಅನೇಕ ರಾಷ್ಟ್ರಗಳು ನಮ್ಮಂತೆಯೇ ಮಾಡಿವೆ. ಹೀಗೆ ಮಾಡದಿದ್ದರೆ ಅಮೇರಿಕೆಯಲ್ಲಿ ನಮ್ಮ ಸಾಮಗ್ರಿಗಳು ಮೊದಲಿನಷ್ಟೇ ಬೆಲೆಗೆ ಮಾರಿದರೂ ಬೇರೆ ಎಲ್ಲ ಯುರೋಪಿಯನ ಮತ್ತು ಏಶಿಯರಾಷ್ಟ್ರಗಳಲ್ಲಿ ಅವು ತುಂಬ ತುಟ್ಟಿಯಾಗುತ್ತಿದ್ದವು. ಆದರಿಂದ ನಮ್ಮ ವ್ಯಾಪಾರ ಹಾಳಾಗುತ್ತಿತ್ತು. ಬೆಲೆ ಇಳಿಸಿದ್ದರಿಂದ ನಾವು ಅಮೇರಿಕೆಯಲ್ಲಿ ನಮ್ಮ ಸಾಮಗ್ರಿಗಳನ್ನು ಅಗ್ಗವಾಗಿ ಮಾರಿದಂತಾಗುತ್ತಿದ್ದರೂ ಉಳಿದ ದೇಶಗಳಲ್ಲಿ ಮೊದಲಿನ ಬೆಲೆಗೇ ಮಾರಿದಂತಾಗುತ್ತದೆ. ಈಗ ನಮ್ಮಂತೆ ತಮ್ಮ ನಾಣ್ಯಗಳನ್ನು ಬ್ರಿಟನ್ನಿನ ಮಟ್ಟಕ್ಕೇ ಬೆಲೆ ಇಳಿಸಿದ ಹದಿನೈದು ರಾಷ್ಟ್ರಗಳಿವೆ. ಅವುಗಳ ಸಾಲಲ್ಲಿ ನಾವು ಸೇರದಿದ್ದರೆ ಏಕಾಂಗಿಗಳಾಗಿ ಸಾಗಬೇಕಾಗುತ್ತಿತ್ತು. (ಕರ್ಮವೀರ)

ನ್ಯಾಯಾಂಗ ಪ್ರತ್ಯೇಕಿಸುವ ಪ್ರಯೋಗ
ಮದ್ರಾಸ ಪ್ರಾಂತಿನ ಎರಡು ಜಿಲ್ಲೆಗಳಲ್ಲಿ

ಮದ್ರಾಸ— ಮದ್ರಾಸ ಸರಕಾರವು ಉತ್ತರ ಆರ್ಕಾಟ, ಚೆಂಗಲಪಟ ಈ ಎರಡು ಜಿಲ್ಲೆಗಳಲ್ಲಿ ನ್ಯಾಯಾಂಗವನ್ನು ಪ್ರತ್ಯೇಕಿಸುವ ನಿರ್ಧಾರ ಮಾಡಿದ್ದು ಈ ಪ್ರಯೋಗವು ಯಶಸ್ವಿಯಾದರೆ ಇದೇ ಯೋಜನೆಯನ್ನು ಇತರ ಜಿಲ್ಲೆಗಳಿಗೂ ಅನ್ವಯಿಸಲಾಗುವದು. ಈ ಬಗ್ಗೆ ಇವೆರಡೂ ಜಿಲ್ಲೆಗಳಲ್ಲಿ ಪ್ರತ್ಯೇಕವಾಗಿ ಓರ್ವ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಹಾಗೂ ಅವರ ಕೈಕೆಳಗೆ ಪ್ರತಿ ಜಿಲ್ಲೆಗೆ ೩೪ರಂತೆ ಮ್ಯಾಜಿಸ್ಟ್ರೇಟ ಅಧಿಕಾರಿಗಳನ್ನು ನೇಮಿಸಲಾಗಿದೆ. ಜಿಲ್ಲೆಯ ಕಂದಾಯ ಶಾಖೆಯ ಆಡಳಿತವನ್ನು ಈಗಿರುವ ಜಿಲ್ಲಾ ಕಲೆಕ್ಟರರು ನೋಡಿಕೊಳ್ಳುವರು.

ನವಭಾರತಕ್ಕೆ
ಚಂದಾದಾರರಾಗಿರಿ.

ಸ್ವರ್ಗಸ್ಥ ವೇದಾಂತಂರವರು.

ಶ್ರೀ ಕೆ. ಯಸ್. ವೇದಾಂತಂರವರು ಬಳ್ಳಾರಿ ಮುನಿಸಿಪಲ್ ಹೈಸ್ಕೂಲಿನಲ್ಲಿ 31 ವರ್ಷಗಳಕಾಲ ಅಧ್ಯಾಪಕ ವೃತ್ತಿಯಲ್ಲಿದ್ದು ಮುಖ್ಯೋಪಧ್ಯಾಯರಾಗಿ ಕಳೆದ ಮಾರ್ಚ '49 ರಲ್ಲಿ ನಿವೃತ್ತರಾದರು. ಇವರು ವಿದ್ಯಾಸಂಬಂಧೀ ಚಟುವಟಿಕೆಗಳಲ್ಲಿ ಭಾಗವಹಿಸಿ ಸಮರ್ಥ ಅಧ್ಯಾಪಕರಿದ್ದು ಜನ ಪ್ರಿಯರಾಗಿದ್ದರು. ಇವರು ಕಳೆದ ಶನಿವಾರ ಹೃದ್ರೋಗದಿಂದ ತಮ್ಮ 56 ನೆಯ ವಯಸ್ಸಿನಲ್ಲಿ ದಿವಂಗತರಾದರು. 4 ಜನ ಗಂಡು ಮಕ್ಕಳು, 3 ಹೆಣ್ಣು ಮಕ್ಕಳಿದ್ದಾರೆ. ಇವರ ಕುಟುಂಬಕ್ಕೆ ಸಮಾಧಾನವನ್ನೂ, ಮೃತರ ಆತ್ಮಕ್ಕೆ ಶಾಂತಿಯನ್ನು ಭಗವಂತನು ದಯಪಾಲಿಸಲಿ.

ಮದ್ರಾಸಿನಲ್ಲಿ ಮಹಾತ್ಮ ಗಾಂಧಿಯವರ ಸ್ಮಾರಕವನ್ನು ಸಮುದ್ರ ತೀರದಲ್ಲಿ 79 ಅಡಿಯ ಸ್ತೂಪವಾಗಿ ನಿರ್ಮಿಸುವರು. ಈ ಸ್ತೂಪದ ಬಳಿ ಸ್ನಾನ ಘಟ್ಟವನ್ನು ನಿರ್ಮಿಸಲಾಗುವದು.

....

ಶ್ರೀ ಸತ್ಯವಂತ ರಾಯರ ಮನೆಯಲ್ಲಿ ಶೋಧ

ಬಳ್ಳಾರಿ ವಕೀಲರಾದ ಶ್ರೀ ಎಂ. ವಿ. ಸತ್ಯವಂತರಾಯರ ಮನೆಯನ್ನು 27 ನೇಯ ತಾ. ರಾತ್ರಿ ಪೋಲೀಸರು ಶೋಧಿಸಿದ ತೆಂದೂರ ಪ್ಯಾಕ್ಟರಿ ಸಂಬಂಧಿಸಿದ ಸಾಹಿತ್ಯವನ್ನು ಕೊಂಡೊಯ್ದು ರೆಂದೂ ತಿಳಿದು ಬಂದಿದೆ.

ಬಳ್ಳಾರಿಯಲ್ಲಿ ನಾಡಹಬ್ಬದ ದಿನಾಚರಣೆಯು ನಡೆದಿದೆ. ಕಳೆದವಾರ ಶ್ರೀ ಅ ನಂಜಪ್ಪ ನವರು ಕರ್ನಾಟಕ ಏಕೀಕರಣದ ಮೇಲೆ ಮಾತಾಡಿದರು

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (**Fixed Deposits**):— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ್.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY.

(Reg No. M 4746)

3—10—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.......................................
....
....

Printed at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೩ | ಸೋಮವಾರ ೧೦ ಅಕ್ಟೋಬರ ೧೯೪೯ | ಸಂಚಿಕೆ ೩೭

ಗಾಂಧಿ ಜಯಂತಿ

ಮಹಾತ್ಮ ಗಾಂಧಿ ಜಯಂತಿಯು ಬಳ್ಳಾರಿ, ಹೊಸಪೇಟೆ ಮತ್ತು ಜಿಲ್ಲೆಯ ಇತರ ಸ್ಥಳಗಳಲ್ಲಿ ವೈಭವದಿಂದ ನಡೆಯಿತು. ಪ್ರಾತಃಕಾಲ ಧ್ವಜವಂದನೆ-ಸಾಯಂಕಾಲ ಸಭೆಗಳೇರ್ಪಟ್ಟಿದ್ದವು. ಹೊಸಪೇಟೆಯಲ್ಲಿ ಸಾಯಂಕಾಲ ಅಲಂಕೃತ ಕಾರಿನಲ್ಲಿ ಮೆರವಣಿಗೆಯಾಗಿ ಮಜದೂರ ಮೈದಾನದಲ್ಲಿ ಶ್ರೀ ತಿರುಮಲರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಇಸ್ಮಾಯಿಲ್, ವಕೀಲ್ ಗೋವಿಂದಾಚಾರ್, ಬಾಣದ ಜಂಬಪ್ಪ ಇವರ. ಗಾಂಧೀಜಿಯ ಸೂತ್ರವನ್ನು ಅರುಹಿದರು. ಕಾಂಗ್ರೆಸ್ ಸಂಸ್ಥೆಯಲ್ಲಿ ಗಾಂಧೀಜಿ ಹೆಸರಿನಲ್ಲಿ ನಡೆಯುತ್ತಿರುವ ಅತ್ಯಾಚಾರವನ್ನು ಅಧ್ಯಕ್ಷರು ಖಂಡಿಸಿದರು. ಹರಿಜನ ಕೇರಿಯಲ್ಲಿ ಶ್ರೀ ದುರುಗಪ್ಪ ಮ್ಯುನಿಸಿಪಲ್ ಕೌನ್ಸಿಲರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಹರಿಜನೋದ್ಧಾರದ ಮೇಲೆ ಕನಕಪ್ಪ ಮತ್ತು ತಿರುಮಲರಾಯರು ಭಾಷಣ ಕೊಟ್ಟರು.

ಬಳ್ಳಾರಿಯಲ್ಲಿ ಶ್ರೀ ವಿ. ಯಂ. ಗಿರಿಯವರಧ್ಯಕ್ಷತೆಯಲ್ಲಿ ಶ್ರೀ ನೇತ್ರಳ್ಳಿ ಸಂಜೀವರಾವ್, ಟಿ. ಸುಬ್ರಹ್ಮಣ್ಯಂ, ವ್ಯವಸಾಯ ಖಾತಾ ಮಂತ್ರಿ ಎ. ಬಿ. ಶೆಟ್ಟರು ಗಾಂಧಿಜಿ ತತ್ವಗಳ ಮೇಲೆ ಮಾತಾಡಿದರು. ಶ್ರೀ ಟಿ ಬಿ. ಕೇಶವರಾಯರು ಗಾಂಧಿಜಿ ಹೆಸರ ಮೇಲೆ ಕಾಂಗ್ರೆಸ್ ಸಂಸ್ಥೆಯಲ್ಲಿ ನಡೆಯುತ್ತಿರುವ ಕೃತ್ಯಗಳನ್ನು ಸಂಕ್ಷಿಪ್ತವಾಗಿ ವಿವರಿಸಿ ಕಾಂಗ್ರೆಸ್ಸನ್ನು ಗಾಂಧಿಜಿ ಆದೇಶದ ಪ್ರಕಾರಕ್ಕೆ ವಿಸರ್ಜಿಸಬೇಕೆಂದರು.

—— o ——

ನೀಲಗುಂದ

೨ನೆಯ ತಾ. ಮಹಾತ್ಮರ ಜಯಂತಿ ಆಚರಿಸಲ್ಪಟ್ಟಿತು. ನಗರ ಸಂಕೀರ್ತನೆ ಭಾವ ಚಿತ್ರದ ಮೆರವಣಿಗೆಯ ನಂತರ ರಾತ್ರಿಯ ಬಹಿರಂಗ ಸಭೆಯಲ್ಲಿ ಮಹಾತ್ಮರ ಜೀವನ ಚರಿತ್ರೆ - ತತ್ವಗಳನ್ನು ಕುರಿತು ಶ್ರೀ ಗಳಿಡ ಎನ್. ಸಿದ್ದಪ್ಪ- ಶಾಂತವೀರಪ್ಪ - ಚನ್ನಪ್ಪ ಬಣಗಾರ ಈ ಮಹನೀಯರು ಭಾಷಣ ಕೊಟ್ಟರು. ಬಹುಮತದಿಂದ ಜಿಲ್ಲಾ ಬೋರ್ಡು ಸದಸ್ಯರಾಗಿ ಆರಿಸಿ ಬಂದ ಶ್ರೀ ಸಿದ್ದಪ್ಪನವರ ಸತ್ಕಾರ ಸಮಾರಂಭವೇರ್ಪಡಿಸಲಾಗಿತ್ತು.

--ಚಂದ್ರ ಗ್ರಹಣ:--
ಅದರ ಪರಿಣಾಮಗಳು

—[:]—

ಶ್ರೀ ಜ್ಯೋತಿ ಮಾರ್ತಾಂಡ ಪಂ. ಶಂಕರ ಶಾಸ್ತ್ರಿ ಯವರು ಹೀಗೆ ಬರೆಯುತ್ತಾರೆ- ೭ ನೇಯ ತಾ. ಸೂರ್ಯೋದಯ ನಂತರ ಚಂದ್ರ ಗ್ರಹಣವು ಪ್ರಾರಂಭವಾಯಿತು. ದಕ್ಷಿಣ ದೇಶದಲ್ಲಿ ದೃಷ್ಟಿಗೋಚರವಾಗಲಿಲ್ಲ ಆದ್ದರಿಂದ ಸ್ನಾನಾಧಿಕಾರ್ಯಗಳನ್ನು ಮಾಡುವ ಅವಶ್ಯಕತೆ ಇದ್ದಿಲ್ಲ.

ಈ ಗ್ರಹಣದ ಫಲವು ೪ ತಿಂಗಳವರೆಗೆ ಸಂಭವಿಸುವದು ಸಾಂಪತ್ತಿಕ ಸ್ಥಿತಿ ಸಂಬಂಧದಲ್ಲಿ ದುರವಸ್ಥೆ ಉತ್ಪನ್ನವಾಗಿ ಅಧಿಕಾರಾರೂಢ ಪಕ್ಷಕ್ಕೆ ತೊಂದರೆಯ ಯೋಗವಿದೆ. ಅಲ್ಲದೆ ಪರರಾಷ್ಟ್ರ ಸಂಬಂಧದಲ್ಲಿ ಬಿಕ್ಕಟ್ಟು ಉತ್ಪನ್ನವಾಗುವ ಸಂಭವವುಂಟು. ನೆಪ್ಚೂನನ ಅಶುಭ ಯೋಗದಿಂದ ರಾಷ್ಟ್ರದಸಂಪತ್ತು ಕಡಿಮೆಯಾಗುವ ಸಂಭವವಿದ್ದು ವಿಶೇಷವಾಗಿ ಇದರ ಪರಿಣಾಮವು ಪಂಜಾಬದಲ್ಲಿ ತೋರುವದು ಗ್ರಹಣ ಪೂರ್ವದಲ್ಲಿ ಅಥವಾನಂತರದಲ್ಲಿ ಬಹಳ ಮಳೆಯಾಗುವದು. ವಾಸ್‌ನ ಅಂಚೆ ತಂತಿ ಶಾಖೆಗಳಿಗೆ ಈ ಗ್ರಹಣವು ಅನಿಷ್ಟಕರವಾಗಿದ್ದು ಸಣ್ಣ ಹುಡುಗರ ಮೃತ್ಯು ಸಂಖ್ಯೆಯೂ ಹೆಚ್ಚಾಗಬಹುದು ರಾಜ ಪುರುಷ ಅಥವಾ ಪ್ರಸಿದ್ಧ ವ್ಯಕ್ತಿಗೆ ಗಂಡಾಂತರ ಪ್ರಾಪ್ತವಾಗುವ ಯೋಗವಿದ್ದು ಕಾಲವಶವೂ ಆಗಬಹುದು. ಪಾರ್ಲಿಮೆಂಟಿನಲ್ಲಿ ತೀವ್ರ ಮತ ಭೇದವುಂಟಾಗುವದು.

ಈ ಗ್ರಹಣವು ಶಾಸ್ತ್ರೀಯದ ಭಾಗ್ಯಸ್ಥಾನಕ್ಕೆ ಆಗುವದರಿಂದ ಅದರ ಗೌರವ ಪ್ರಹಳಿಯ ಇದರ ಮನೀಷೆ ಪೂರ್ಣವಾಗುವ ಯೋಗವಿದೆ. ಯುದ್ಧ ಭೀತಿಯೂ ತೋರುವದು ಈ ಗ್ರಹಣದ ಕಾಲದಲ್ಲಿ ಮುಖ್ಯ ಮಂತ್ರಿಗಳಾದ ಪಂ ನೆಹರೂರವರು ಅಮೇರಿಕಗೆ ಪ್ರಯಾಣ ಬೆಳೆಸುವದರಿಂದ ಅವರಿಗೆ ಪ್ರಚಂಡ ಯಶಸ್ಸು ಸಿಗುವದು ಮತ್ತು ಅನಪೇಕ್ಷಿತ ಕಾರ್ಯ ಸಿದ್ಧಿಯಿಂದ ಹಿಂದುಸ್ಥಾನದ ಪ್ರತಿಷ್ಠೆ ಬೆಳೆಯುವದು ಪಾಕಿಸ್ಥಾನದ ಅಧಿಪತಿಯು ವ್ಯಯದಲ್ಲಿರುವನಾದ್ದರಿಂದ ಭದ್ರತಾ ಮಂಡಳದ ಪ್ರಯತ್ನಕ್ಕೆ ಯಶದ ಯೋಗವಿಲ್ಲ ಈ ಗ್ರಹಣ ಕಾಲದಿಂದ ಮುಂದೆ ಕೆಲವು ದಿವಸ ಸರದಾರ ಪಟೇಲರ ಪ್ರಕೃತಿ ಬಗ್ಗೆ ಕಾಳಜಿ ವಹಿಸಬೇಕಾಗುವದು.

ಆಧುನಿಕ ಸ್ತ್ರೀಯರ ಧ್ಯೇಯಗಳು

ಮೇಲಿನ ತಲೆಬರಹದ ಕೆಳಗೆ ಕರ್ನಾಟಕದ ತಾ. ೧೯ ರ ಸಂಚಿಕೆಯಲ್ಲಿ ಕುಮಾರಿ ಶಕುಂತಲಾ ಅವರು ಬರೆದ ಲೇಖನವನ್ನೋದಿದಾಗ ಆಧುನಿಕ ಸ್ತ್ರೀಯರೆನಿಸುವವರ ತಲೆಯಲ್ಲಿ ಸೇರಿಕೊಂಡ ಕೆಲ ತಪ್ಪು ತಿಳುವಳಿಕೆಗಳ ಬಗ್ಗೆ ಕನಿಕರ ವುಂಟಾಯಿತು. ನಾನೇನೂ "ನ ಸ್ತ್ರೀಸ್ವಾತಂತ್ರ್ಯ ಮರ್ಹತಿ" ವಾದಿಯಲ್ಲ ಆದರೂ ಶ್ರೀ ಮತಿ ಶಕುಂತಲಾ ಅವರು ಹೇಳಿದ ಹಾದಿಯಲ್ಲಿ ಆಧುನಿಕ ಸ್ತ್ರೀಯರು ಹೊರಟಿದ್ದಾರೆ ಅವರು ಗಂಡಾಂತರದ ಕಡೆಗೆ ಧಾವಿಸುತ್ತಿದ್ದಾರೆಂದು ನನಗನಿಸುತ್ತದೆ. ಮೊದಲನೆಯದಾಗಿ ಪುರುಷ ದ್ವೇಷದೊಡನೆ ಸ್ತ್ರೀಯರ ಚಳವಳ ನಡೆಸುವದರ ಪರಿಣಾಮವನ್ನು ಅವರ ಮನ ಗಂಡಂತಿಲ್ಲ. ಪುರುಷನ ಸ್ವಾರ್ಥದಿಂದಾಗಲಿ ಸ್ತ್ರೀಯ ಅಜ್ಞಾನದಿಂದಾಗಲಿ ಸ್ತ್ರೀ ಶತಮಾನಗಳಿಂದ ಪುರುಷನ ದಾಸಿಯಾಗಿದ್ದಾಳೆನ್ನುವ ಅವರ ಆರೋಪ ವೃಥಾರೋಪವೇ ಸರಿ. ಸ್ತ್ರೀಯು ದಾಸಿಯಾಗಿದ್ದರೆ ಅದು ಅವಳ ಅಜ್ಞಾನದಿಂದೆಷ್ಟೋ ಅಷ್ಟೇ ಪುರುಷನ ಅಜ್ಞಾನನಿಂದಲೂ ಇರಬಹುದು ಸ್ತ್ರೀಗೆ ಎಲ್ಲ ಅಜ್ಞಾನದ ಸೌಕರ್ಯವನ್ನು ಕೊಟ್ಟು, ಪುರುಷನಿಗೆ ಎಲ್ಲ ಸ್ವಾರ್ಥದ ಹೊಣೆಯನ್ನೀಯುವದು ಅಪಾಯಕರ ಪಕ್ಷಪಾತವಾಗಿದೆ. ಮುಖ್ಯವಾಗಿ ಭಾರತೀಯ ಪುರುಷರ ಮೇಲೆ ಈ ಆರೋಪ ತೀರ ಅನ್ಯಾಯದ್ದು ಇಂಗ್ಲಂಡಿನಲ್ಲಿ ಈ ಶತಕದ ಆರಂಭದಲ್ಲಿ ಸ್ತ್ರೀಯರು ಮತಾಧಿಕಾರಕ್ಕಾಗಿ ಸತ್ಯಾಗ್ರಹ ಹೂಡಬೇಕಾಗಿ ಬಂದಿದ್ದರೆ, ಭಾರತದಲ್ಲಿ ಅವರು ಕೇಳದೆಯೇ ಅದು ದೊರಕುರುವುದಕ್ಕೆ ಸ್ತ್ರೀಯರ ಹೋರಾಟಕ್ಕಿಂತಲೂ ಪುರುಷರ ಔದಾರ್ಯವೇ ಕಾರಣವೆಂದು ಯಾವ ನ್ಯಾಯವಾದಿ ಸ್ತ್ರೀಯಾದರೂ ಒಪ್ಪದಿರಳು.

ಪುರುಷನಿಗೆ ಸ್ವಾರ್ಥವನ್ನು ಆರೋಪಿಸಬಹುದಾದರೆ ಸ್ತ್ರೀಗೆ ಖಂಡಿತವಾಗಿ ಮೈಗಳ್ಳತನ ಮತ್ತು ಹೊಣೆಗೇಡಿತನಗಳನ್ನು ಆರೋಪಿಸಬಹುದು. ವೇದಕಾಲದಲ್ಲಿ ಸ್ತ್ರೀಯರು ಮಂತ್ರ ದ್ರಷ್ಟಾರರಾಗಬಲ್ಲವರಾಗಿದ್ದಾರೆ ಮುಂದೆ ಅಜ್ಞಾನದ ಕುಂಡದಲ್ಲಿ ಅವರೇಕೆ ಮುಳುಗಿದರು?

ವ್ಯವಹಾರದ, ವಿದ್ಯೆಯ ಆವಶ್ಯಕತೆಯಿಲ್ಲ ಗಂಡಸಿಗೆ ಮನೆಯಲ್ಲಿದ್ದು ಗಂಡಸು ತಂದು ಹಾಕಿದ್ದನ್ನು ಒಂದಿಷ್ಟು ಅಟ್ಟು ಒದಿಸಿದರೇ ತನ್ನ ಕಾರ್ಯವಾಯಿತೆಂದು ಹೆಂಗಸು ಆಲಸ್ಯ ಮಾಡಿರಬೇಕು.

ಈ ಭಾವ ಇಂದಿಗೂ ಸ್ತ್ರೀಯರಲ್ಲಿ ಕಾಣಸಿಗುತ್ತದೆ. ಇಂದಿಗಾದರೂ ಅನೇಕ ಆಧುನಿಕಸ್ತ್ರೀಯರ ಸ್ತ್ರೀ ಸ್ವಾತಂತ್ರ್ಯದ ಕಲ್ಪನೆಯೆಂದರೆ, ಪುರುಷನ ಹಣದಿಂದ ಅಲಂಕಾರ ಮಾಡಿಕೊಂಡು, ವ್ಯಾನಿಟೀ ಬ್ಯಾಗ್ ಹಿಡಿದುಕೊಂಡು ಸಭೆ ಸಮ್ಮೇಲನಗಳೆಂಬ ಹರಟೆಯ ಕಟ್ಟೆಗಳಲ್ಲಿ ಕಾಲ ಕಳೆಯುವದೆಂದೇ ಇದೆ. ಅವರು ತಂದೆಯ ಆಸ್ತಿಯಲ್ಲಿ ಪಾಲು ಕೇಳಲು ಮುಂದಾಗುತ್ತಾರಾದರೂ ಸಂಪದುತ್ಪಾದನೆಯ ಮೂಲಕ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ಸಿದ್ಧರಾಗಿಲ್ಲ. ಗಂಡಸರಂತೆ ನೂರಾರು ಜನರಲ್ಲಿ ಬೆರೆತು ತಮ್ಮ ಮತ್ತು ಕುಟುಂಬದ ಉದರಂಭರಣ ಕಾರ್ಯದಲ್ಲಿ ನೆರವಾಗುತ್ತಿರುವ ಶ್ರಮಜೀವಿ ವರ್ಗದ ಸ್ತ್ರೀಯರು ಮೇಲಿನ ವರ್ಗಗಳ ಪರಾವಲಂಬ "ಆಧುನಿಕ ಸ್ತ್ರೀ" ಯರಂತೆ ಸ್ವಾತಂತ್ರ್ಯದ ಕೂಗೆಬ್ಬಿಸುತ್ತಿಲ್ಲ. ಅವರಿಗೆ ಸ್ವಾತಂತ್ರ್ಯವಿದ್ದೇ ಇದೆ. ಹೊಣೆಯಿಲ್ಲದ ಹಕ್ಕುಗಳನ್ನು ಸ್ತ್ರೀಯರಿಗೆ ಕೊಡಲು ಸ್ತ್ರೀ ದಾಕ್ಷಿಣ್ಯಶಾಲಿಗಳು ಕೂಡ ಮುಂದಾಗಲಾರರು. ಸಭೆ ಸಮ್ಮೇಲನಗಳು ಸಾಮಾಜಿಕ ಕಾರ್ಯಗಳೇ ಮೊದಲಾದವುಗಳಿಗೆ ಮಾತ್ರವಲ್ಲ, ಗಂಡಸಿಗೆ ಆರೋಪಿಸಲ್ಪಡುವ ಸ್ವಚ್ಛಂದ ಕಾಮಜೀವನಕ್ಕೆ ಕೂಡ ಸ್ತ್ರೀಯರಿಗೆ ಅನುಮತಿ ಕೊಡಲು ನಾನು ಸಿದ್ಧನಿದ್ದೇನೆ ಆದರೆ ಇದು ಪುರುಷನೊಡನೆ ಸ್ಪರ್ಧೆಗೆ ಹೇತುವಾದೀತು. ಆಗ ಅವಳು ಆ ಸ್ಪರ್ಧೆಯಲ್ಲಿ ಪುರುಷನಿಂದ ಯಾವ ದಾಕ್ಷಿಣ್ಯವನ್ನೂ ನಿರೀಕ್ಷಿಸಕೂಡದು. ಕೌಟುಂಬಿಕ ಜೀವನದಲ್ಲಿ ಎರಡು ಲಿಂಗಗಳ ಆನರಿಡ ಏಕಪ್ರಮಾಣದ್ದಾಗಿರುವದರಿಂದ ಅವಳು ಪುರುಷನಷ್ಟೇ ಹೊಣೆ ಹೊರಲು ಸಿದ್ಧಳಾಗಲಿ. ಈಗಿರುವ ಸ್ಥಿತಿಯಲ್ಲಿ ಕೇವಲ ಶಯ್ಯಾಗೃಹವಿಮೂಢನಾದ ಗಂಡನೆಂಬ ಪೆದ್ದನು ತನ್ನ ಸರ್ವಸ್ವವನ್ನೂ ತನ್ನ "ಗೃಹಲಕ್ಷ್ಮಿ"ಗಾಗಿ ಚಿನ್ನದ ಪಂಜರ ಮತ್ತು ಪೀತಾಂಬರದ ಅವಗುಂಠನಗಳ ರಚನೆಯಲ್ಲಿ ಪೋಲು ಮಾಡುತ್ತಿದ್ದಾನೆ.

ಸ್ತ್ರೀಯು ಗೃಹೇತರ ಕಾರ್ಯಗಳಿಗೆ ಮನಸುಕೊಟ್ಟರೆ ಮಕ್ಕಳ ಪಾಲನೆ ಸರಿಯಾಗಿ ನಡೆಯಲಿಕ್ಕಿಲ್ಲ, ಅಥವಾ ನಡೆದೀತೆಂಬುದು ಅಭಿಪ್ರಾಯದ ಮಾತು. ಆ ಬಗ್ಗೆ ನನಗೆ ಚಿಂತೆಯಿಲ್ಲ. ಸ್ವಲ್ಪವೇ ಕಾಲದಲ್ಲಿ ಸಮಾಜ ಅದಕ್ಕೆ ತಕ್ಕ ಉಪಾಯವನ್ನು ಸಿದ್ಧಪಡಿಸೀತೆಂಬ ಭರವಸೆ ನನಗುಂಟು ಇಲ್ಲದಿದ್ದರೆ ಗಂಡಸೇ ಆ ಕೆಲಸಕ್ಕೆ ಕೈ ಕೊಟ್ಟರೆ ತಪ್ಪೇನು? ಆ ಬಗ್ಗೆ ನಾನೇನು ನಾಚುವದಿಲ್ಲ.

ಶಾಂತಿಯನ್ನು ಸ್ಥಾಪಿಸುವ ಸಾಮರ್ಥ್ಯ ಸ್ತ್ರೀಯರಲ್ಲೇ ಇದೆಯೆಂಬುದು ಒಣಡಂಭದಮಾತು. ಇತಿಹಾಸವನ್ನೋದಿದವರಿಗೆ ಸ್ತ್ರೀಯರೇ ಅಸಂಖ್ಯ ಯುದ್ಧಗಳ ಬೀಜಗಳನ್ನು ಬಿತ್ತಿದರಲ್ಲದೆ ಅವುಗಳನ್ನು ಅತ್ಯಂತ ಹಿಂಸ್ರವಾಗಿ ಮಾಡುವಲ್ಲಿ ಸಕ್ರಿಯವಾಗಿ ಕೆಲಸ ನಡೆಸಿದರೆಂದು ಗೊತ್ತಾಗುತ್ತದೆ. ಮಹಾಭಾರತದಿಂದ ಹಿಡಿದು ೧೮೫೭ ಹಿಂದಿ ಸ್ವಾತಂತ್ರ್ಯ ಸಮರದ ವರೆಗೆ ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ದೊರಕಿಸಬಹುದು. ೧೮೫೭ ರ ದಂಗೆ ಅಯಶಸ್ವಿಯಾಗಲು ದಿಲ್ಲಿಯಲ್ಲಿಯ ವೀರ ಮಹಿಳೆಯರು ತಮ್ಮ ಗಂಡಂದಿರನ್ನು ಜರೆದು ನಿಶ್ಚಿತ ಮುಹೂರ್ತಕ್ಕಿಂತ ಒಂದು ದಿನ ಮೊದಲೇ ಯುದ್ಧ ಪ್ರಾರಂಭಿಸುವಂತೆ ಮಾಡಿದ್ದೂ ಕಾರಣವಾಯಿತೆಂದು ತಿಳಿಯುತ್ತದೆ. ಇಂದಿಗೂ ಸಮವಸ್ತ್ರದ ಮೇಲಿನ ಸ್ತ್ರೀಯರ ಮೋಹ ಜಗತ್ಪ್ರಸಿದ್ಧವಾಗಿದೆ.

ಮೇಲೆ ನಾನು ಕೆಲ ಕ್ರೂರವಾದ ಮಾತುಗಳನ್ನು ಹೇಳಿದ್ದೇನೆ ಆದರೆ ಸ್ವಪ್ನದಲ್ಲಿ ನಡೆಯುವವರನ್ನು ಒಳಿತಾಗಿ ಕುಲುಕದಿದ್ದರೆ ಅವರು ಹೊಂಡದಲ್ಲಿ ಬೀಳಬಹುದಾಗಿದೆ. ಸ್ತ್ರೀಯರಿಗಿರುವ ಅಸಂಖ್ಯ ಕುಂದು ಕೊರತೆಗಳನ್ನು ನೀಗಿಸುವುದು ಸಮಾಜ ಪ್ರಗತಿಗೆ ಅವಶ್ಯವೆಂದು ನನಗೆ ಗೊತ್ತು. ಆದರೆ ಅದಕ್ಕೆ ಪುರುಷನನ್ನು ಬೈಯುವದಾಗಲಿ ಈಗಿದ್ದ ವ್ಯವಸ್ಥೆಯಲ್ಲಿ ಕ್ರಾಂತಿಕಾರರ ಬದಲಾವಣೆಗಳನ್ನು ಮಾಡುವುದಾಗಲಿ ಸರಿಯಾದ ಉಪಾಯವಲ್ಲ. ಇದರಿಂದ ದೇಶದ ಪ್ರತಿಯೊಂದು ಕುಟುಂಬವೂ ಮುರಿದು ಬಿದ್ದು ಅನಾಹುತವಾದೀತು. ರಾಷ್ಟ್ರ ರಾಷ್ಟ್ರ, ಜಾತಿ ಜಾತಿಗಳ ನಡುವಣ ದೋಷಾರೋಪಣೆಗಳಿಗಿಂತಲೂ ಇದರ ಫಲ ಭಯಂಕರವಾದೀತು. ಮತ್ತು ಅದರ ದುಷ್ಫಲಗಳ ಜ್ವಾಲೆ ಹಿಂದುಳಿದ ಹೆಂಗಸನ್ನೇ ಹೆಚ್ಚು ಪಾಲು ತಟ್ಟಬಹುದು. ಸ್ತ್ರೀ ಸ್ವಾತಂತ್ರ್ಯವನ್ನು ಮೆಲ್ಲ ಮೆಲ್ಲನೆ ರೂಪಿಸಬೇಕಾಗಿದೆ. ಇಲ್ಲದಿದ್ದರೆ ಸ್ವಾತಂತ್ರ್ಯದ ಹೊಣೆ ಹಕ್ಕುಗಳ ತಿರುಳಿನ ಅನುಭವವಿಲ್ಲದ ಸ್ತ್ರೀಯರಿಗೆ ಅವು ಗಂಟಲಲ್ಲಿ ಇಳಿಯದ ಕಡುಬು ಆದೀತು.

ನವಭಾರತಕ್ಕೆ

ಚಂದಾದಾರರಾಗಿರಿ.

ಇಂದಿರಾ ಆನೆಗೆ ಗಾಯ

ಹಡಗದಿಂದ ಇಂದು ಇಳಿಸಿಕೊಳ್ಳುತ್ತಿದ್ದಾಗ ಅದು ಜಾರಿಬಿದ್ದುದರಿಂದ ಅದರ ಕಿವಿಯ ಒಳ ಸಣ್ಣ ಗಾಯವಾಗಿದೆ.

—

ಪಂ. ಜವಹರಲಾಲರು ಅಮೇರಿಕಾಕ್ಕೆ ಹೋಗುವ ಮುನ್ನ ಯುದ್ಧ ವಿದ್ಯಾಪೀಠದ ಶಂಕು ಸ್ಥಾಪನೆಯನ್ನು ಪೂನಾದಲ್ಲಿ ನೆರವೇರಿಸಿದರು.

—

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಅಸಲ್, ನಂಬರು 71/49

ಮೋಕ ಪೂಡಪ್ಪರು ಒಸಣ್ಣ— ವಾದಿ

ಮತ್ತು

೧. ಕೆ. ಜಿ ಬಾಲಕೃಷ್ಣಪ್ಪ ನಾಯಕ ವಾರು

೨. ವೀರತಿಮ್ಮಣ್ಣನಾಯಕ.

ಪ್ರತಿವಾದಿಗಳು

ಈ ನಂಬರಿನಲ್ಲಿ ಕೋರ್ಟು ವುಕ್ತುರ ಪ್ರಕಾರ ಎರಡನೆ ಪ್ರತಿವಾದಿಗೆ ದಾವಾ ಸಮನು ಕಾಪುರ ಇರುವ ಮನೆಯ ಮೇಲೆ ಜಾರಿ ಮಾಡುವದಕ್ಕಾಗಿ 4-11-1949 ನೆಯ ತೇದಿಗೆ ವಾಯಿದೆ ಹಾಕಿರುತ್ತಾರೆ. ಆಕ್ಷೇಪಣೆ ಮಾಡುವವರು ಇದ್ದರೆ ಸದರಿ ಮೇಲ್ಕಂಡ ತಾರೀಖಿಗೆ ಖುದ್ದಾಗಲಿ ವಕೀಲರ ದ್ವಾರವಾಗಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಗೈರುಹಾಜರಿನಲ್ಲಿ ಉತ್ತರವು ಮಾಡಲ್ಪಡುವುದು ತಿಳಿಯಿರಿ.

ಬಳ್ಳಾರಿ 6-10-49 | ಯಸ್. ಶ್ರೀನಿವಾಸಯ್ಯ ರ್‌ ವಾದಿ ವಕೀಲರು

—( )—

ದಿವಂಗತ

ಶ್ರೀ ಮೊಲಗವೇಲಿ ಲಕ್ಷ್ಮೀರೆಡ್ಡಿ

—— o ——

ಬಳ್ಳಾರಿ ಜಿಲ್ಲಾ ಆಲೂರು ತಾಲೂಕು ಮೊಲಗವೇಲಿ ಗ್ರಾಮದ ಶ್ರೀ ಲಕ್ಷ್ಮೀರೆಡ್ಡಿಯವರು ಕಳೆದ 4 ನೆಯ ತಾ|| ಬಳ್ಳಾರಿಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಜಿಲ್ಲೆಯ ದೊಡ್ಡ ಭೂ ಮಾಲೀಕರಲ್ಲೊಬ್ಬರಾಗಿ ದೊಡ್ಡ ಶ್ರೀಮಂತರಾಗಿದ್ದರೂ ಅತ್ಯಂತ ಸರಳಸ್ವಭಾವದವರಾಗಿ ಜಗವ ದ್ಭಕ್ತರಾಗಿದ್ದರು. ಇವರ ಕುಟುಂಬಕ್ಕೆ ಸಮಾಧಾನವೂ ಆತ್ಮಕ್ಕೆ ಶಾಂತಿಯೂ ದೊರೆಯಲಿ.

ಲಿಯಾಕತರ ಮಾಸ್ಕೋ ಯಾತ್ರೆ

ಬೇಗಮ ಲಿಯಾಕತರ ಕೈವಾಡವೆ ?

ಭಾರತ ಮಾಡಿದ್ದಕ್ಕೆ ವಿರುದ್ಧವಾದುದೇನನ್ನಾದರೂ ಮಾಡುವುದು ಪಾಕಿಸ್ತಾನಕ್ಕೆ ರೂಢಿ ಬಿದ್ದು ಹೋಗಿದೆ. ಅದಕ್ಕೆ ಅದೀಗ ಒಂದು ಚಟವೇ ಆಗಿಬಿಟ್ಟಿದೆ. ಜಿನ್ನಾರ ಕಾಲದ ಮುಸ್ಲಿಂಲೀಗ್ ಗತ್ತುಗಾರಿಕೆಯು ತಳಹದಿ. ಆದುದರಿಂದ ಭಾರತದ ಮುಖ್ಯ ಮಂತ್ರಿ ಜವಾಹರಲಾಲರು ನಾಳೆ ಅಕ್ಟೋಬರದಲ್ಲಿ ಅಮೇರಿಕೆಗೆ ಭೆಟ್ಟಿ ಕೊಡುತ್ತಿರುವಾಗ ಪಾಕಿಸ್ತಾನದ ಮುಖ್ಯ ಮಂತ್ರಿ ಲಿಯಾಕತಲ್ಲಿಖಾನರು ಮಾಸ್ಕೋಕ್ಕೆ ಹೋಗುವುದು ಶಾಸ್ತ್ರೋಕ್ತವಾಗಿಯೆ ಇದೆ. ಅವರು ನವಂಬರದಲ್ಲಿ ಮಾಸ್ಕೋಕ್ಕೆ ಹೋಗುವರು.

ಭಾರತದ ಆಗ್ನೇಯ ಏಶಿಯದ ನಾಯಕತ್ವಕ್ಕೆ ಗಾಣ ಹಾಕುತ್ತಿದೆಯೆಂಬ ಚಿಂತೆಯಿಂದ ಪಾಕಿಸ್ತಾನ ಮಧ್ಯ ಪೂರ್ವದ ತನ್ನ ಬಲೆಯನ್ನು ಬೀಸಿದೆ. ಮಧ್ಯ ಪೂರ್ವದಲ್ಲಿ ಅರಬ ರಾಷ್ಟ್ರಗಳು "ಪ್ರತಿಗಾಮಿ" ಯೆಂದು ಮುದ್ರೆ ಹಾಕಿದ ರಶಿಯಕ್ಕೆ ಪಾಕಿಸ್ತಾನದೊಡನೆ ಏನು ಮಂತ್ರಾಲೋಚನೆಯೋ ಯಾರುಬಲ್ಲ ? ಆದರೆ ಬದ್ಧ ವಿರುದ್ಧ ಧ್ಯೇಯಗಳಿಗೆ ವಿಧೇಯರಾಗಿದ್ದರೂ ಪಾಕಿಸ್ತಾನದ ಮುಂದಾಳುಗಳು ರಾಜ ಕಾರಣದಲ್ಲಾಗಲಿ ವಿದೇಶ ಸಂಬಂಧದಲ್ಲಾಗಲಿ ಅನುಸರಿಸುವ ರೀತಿ ನೀತಿಗೂ ಮಾಸ್ಕೋದ್ದಕ್ಕೂ ತುಂಬಾ ಸಾಮ್ಯವಿರುವದು, ಈ ಗೆಳೆತನಕ್ಕೆ ಕಾರಣ ವಾಗಿರಬಹುದೇನೊ.

ಆದರೆ ಈ ಭೆಟ್ಟಿಯ ವ್ಯವಸ್ಥೆ ಹೇಗೆ ಹೊಂದಲಾಯಿತೆಂಬ ಬಗ್ಗೆ ಲಂಡನ್ನಿನಲ್ಲಿ ಸ್ವಾರಸ್ಯವಾದ ವೃತ್ತಾಂತವೊಂದು ಹಬ್ಬಿದೆಯೆಂದು ಇಲಾ ಸೇನರು "ಹಿಂದುಸ್ತಾನ ಟೈಮ್ಸ್" ಪತ್ರಿಕೆಯಲ್ಲಿ ಬರೆಯುತ್ತಾರೆ. ಮೋಹನಾಂಗಿ ಬೇಗಮ ಲಿಯಾಕತರಿಗೇ ಇದರ ಕೀರ್ತಿ ಸಲ್ಲಬೇಕಂತೆ. ತಮ್ಮ ಗಂಡನೊಡನೆ ನಾನಾ ದೇಶಗಳ ಸಂಚಾರದಲ್ಲಿ ಪಾಶ್ಚಾತ್ಯ ದೇಶಗಳನ್ನೆಲ್ಲ ಗೆದ್ದ ಬೇಗಮ ಸಾಹೇಬರು ಮಾಸ್ಕೋ ವಿಜಯವನ್ನು ಮುಗಿಸಿ ಬಿಡಬೇಕೆಂದು ನಿರ್ಣಯಿಸಿರಬೇಕು. ಈಚೆಗೆ ತೆಹರಾನ (ಇರಾಣ) ಕ್ಕೆ ಅವರು ಭೆಟ್ಟಿಕೊಟ್ಟಾಗ ಒಬ್ಬ ಉಚ್ಚ ರಶಿಯನ್ ರಾಜ್ಯಭಾರಾಧಿಕಾರಿಯ ಮುಂದೆ ಅವರು ತಮ್ಮ ಸಂಚಾರದ ಅನುಭವಗಳನ್ನು ಹೇಳುತ್ತಿರುವಾಗ್ಗೆ ಅವನು ಸಹಜವಾದ ಸ್ತ್ರೀ ದಾಕ್ಷಿಣ್ಯದಿಂದ "ಇಷ್ಟೆಲ್ಲ ದೇಶ ಸುತ್ತಿದ್ದಿರಂತೆ, ನಮ್ಮ ಮಾಸ್ಕೋಕ್ಕೇಕೆ ಒಮ್ಮೆ ಬರಬಾರದು" ಎಂದನಂತೆ. ಕೊಕ್ಕೆಯನ್ನು ನುಂಗಿದ ಮೀನವನ್ನು ಬೇಗಮ ಸಾಹೇಬರು ಬಿಟ್ಟಾರೇ ? ಒಡನೆ ಅವರು ಅವನನ್ನು ಸಿಕ್ಕಿಸಿ "ನೀವು ಕರೆಯಬಾರದೇಕೆ ? " ಎಂದು ಕೇಳಿ, "ನೀವು ಕರೆದರೆ ನಾವು ಬರದಿರುತ್ತೇವೆಯೆ ? " ಎಂದುಬಿಟ್ಟರು. ಆ ಅಧಿಕಾರಿ "ಹಾಗೆಯೆ ಆಗಲಿ" ಎಂದನಂತೆ.

ಹೀಗೆ ಸ್ಟಾಲಿನ್ನರಿಗೆ ಸೂಚನೆ ಹೋಯಿತು. ಒಡನೆ ಆಗಲೆ ಲಿಯಾಕತ ದಂಪತಿಗಳನ್ನು ಕರೆಯಲು ಅವರಿಗೆ ಇಷ್ಟವಿರಲಿಲ್ಲ. ಕಾರಣ ಅಗಸ್ಟ ೧೫ ಕ್ಕೆ ಬರೋಣಾಗಬೇಕೆಂದು ಆಮಂತ್ರಣ ಹೋಯಿತು. ಆ ದಿನ ಅವರು ಬರಲಾರರೆಂದು ಸ್ಟಾಲಿನ್ನರಿಗೆ ಗೊತ್ತೇ ಇತ್ತು. ನಿರೀಕ್ಷಿಸಿದಂತೆ ನಿರಾಕರಣೆಯ ಉತ್ತರ ಬಂದ ಮೇಲೆ ರಶಿಯನ್ ಛಳಿಯ ರುಚಿ ತೋರಿಸಲೆಂದು ನವಂಬರಕ್ಕೆ ಅವರ ಸ್ವಾಗತ ದಿನ ನಿರ್ಧರಿಸಲ್ಪಟ್ಟಿತು. ಆದರೆ ಬೇಗಮ ಸಾಹೇಬರು ಅದಕ್ಕೆ ಬೆದರಲಿಲ್ಲ. ಆದ್ದರಿಂದ ಲಿಯಾಕತ ದಂಪತಿಗಳು ರಾಜಭಾರ ಚತುರರ ಮಹಾಪರಿವಾರಗಣ ಸಮೇತರಾಗಿ ಮಾಸ್ಕೋಕ್ಕೆ ವಿಜಯಂಗೈಯುವವರಿದ್ದಾರೆ.

—(o)—

ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

ಎಸ್. ತಿ. 386 49

ಮಯುಡುಗಿಲ್ಲು ಮಠದಕೊಟ್ಟೂರು ಕರೂರು ವೀರಭದ್ರಪ್ಪ ತಂದೆ ಅಜ್ಜಪ್ಪ 45. ವೀರಶೈವ ಜಿರಾಯ್ತ ಹೊಸಪೇಟೆ ತಾ||
ವಾದಿ

ಮುಷ್ಟಿ ಭೀಮಪ್ಪ ತಂದೆ ಕಣಿವೆಪ್ಪ 45 ವಾಲ್ಮೀಕಿ ಜಿರಾಯ್ತ ಹೊಸಪೇಟೆ ತಾ||
ಪ್ರತಿ ವಾದಿ

ವಾದಿ ಪ್ರತಿವಾದಿಯ ಮೇಲೆ ರೂ.256-3-0 ಗೆ ದಾವಾ ಮಾಡಿರುತ್ತಾನೆ. ಪ್ರತಿವಾದಿ 15-10-49 ನೆ ತೇದಿ ಹಗಲು 11 ಘಂಟೆಗೆ ಖುದ್ದಾಗಲಿ ವಕೀಲರ ದ್ವಾರ ಆಗಲಿ ಕೋರ್ಟಿಗೆ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ Exparte ಡಿಕ್ರಿ ಆಗುತ್ತದೆ.

ಹೊಸ ಪೇಟೆ 4-10-49 } ಎ.ಆರ್. ಕೃಷ್ಣರಾವ ವಾದಿಯ ಅಡ್ವಕೇಟ.

ದರಗಳನ್ನೇರಿಸುವವರಿಗೆ ಬಾರಕೋಲಿನ ಪೆಟ್ಟು

ಡಾ|| ಪಟ್ಟಾಭಿಯವರ ಹೇಳಿಕೆ

ಮದ್ರಾಸ– "ರೂಪಾಯಿಯ ಮೌಲ್ಯ ವಿಚ್ಛೇದನವಾಗಿರುವದರಿಂದ ಸರಕುಗಳ ಬೆಲೆ ಏರಿದರೆ ವಿಶೇಷಾಜ್ಞೆಯ ಮೂಲಕ ವಿಶೇಷ ಮಾಜಿಸ್ಟ್ರೇಟರನ್ನು ನೇಮಿಸಿ ದರಗಳನ್ನೇರಿಸುವವರನ್ನು ಸಾರ್ವಜನಿಕ ರಸ್ತೆಗಳಲ್ಲಿ ನಿಲ್ಲಿಸಿ ಬಾರಕೋಲಿನಿಂದ ಹೊಡೆಸಬಹುದಲ್ಲದೆ ಮತ್ತೇನನ್ನೂ ಮಾಡಬಾರದು. ಆಗ ತಂತಾನೆ ದರಗಳು ಸ್ಥಿರಗೊಳ್ಳುವವು. ಹಾಗೆ ಮಾಡದಿದ್ದರೆ ಈಗಾಗಲೇ ಸಾವಿರ ಕಷ್ಟಗಳಿಗೆ ಇನ್ನೊಂದನ್ನು ಸೇರಿಸಿದಂತಾಗುವದು" ಎಂದು ಕಾಂಗ್ರೆಸ ಅಧ್ಯಕ್ಷ ಡಾ|| ಪಟ್ಟಾಭಿ ಸೀತಾರಾಮಯ್ಯನವರು ಇಂದಿಲ್ಲಿ ಹೇಳಿದರು

—)(—

ಟೋಕಿಯೋಕ್ಕೆ ಇಂದಿರೆಯ ಆಗಮನ

ಟೋಕಿಯೋ–ಹಿಂದುಸ್ತಾನ ಮುಖ್ಯಮಂತ್ರಿ ಪಂ. ನೆಹರೂರವರು ಜಪಾನಿ ಮಕ್ಕಳಿಗಾಗಿ ಕಾಣಿಕೆಯಾಗಿ ಕೊಟ್ಟ ೧೫ ವರ್ಷಗಳ ಹೆಣ್ಣಾನೆ ಇಂದಿರಾ ಇಂದು ಇಲ್ಲಿಗೆ ಬಂದು ತಲುಪಿದೆ ಎರಡೂವರೆ ಟನ್ನು ಭಾರವುಳ್ಳ ಇಂದಿರೆಯನ್ನು ಟೋಕಿಯೋದ ಪ್ರಾಣಿ ಸಂಗ್ರಹಾಲಯಕ್ಕೆ ರಾತ್ರಿಯ ಶಾಂತ ವಾತಾವರಣದಲ್ಲಿ ಕರೆದೊಯ್ಯಲಾಗುವದು. ಇಂದಿರೆಯು ದಾರಿಯಲ್ಲಿ ಬಂಗಾಲ ಉಪಸಾಗರದಲ್ಲಿರುವಾಗ ಅಸ್ವಸ್ಥಳಾಗಿದ್ದಳೆಂದು ಮಲಕಾದ ಸಮೀಪಕ್ಕೆ ಬಂದಾಗ ಸುಧಾರಿಸಿದಳೆಂದೂ ಅದರೊಡನೆ ಬಂದ ಅಧಿಕಾರಿಗಳು ಹೇಳಿದರು. ಸಿಯಾಮು ಸರಕಾರವು ಕೊಡ ಮಾಡಿದ ಗಂಡಾನೆ ವಸಂತ ಮಾಸದಲ್ಲಿ ಇಲ್ಲಿಗೆ ಬರಲಿದೆ.

---][—

ಡಾ. ಸಿ. ಆರ್. ರೆಡ್ಡಿ.

ಮೈಸೂರು-- ಡಾ ಸಿ. ಆರ್ ರೆಡ್ಡಿಯವರು ತಿಂಗಳಿಗೆ ೨೫೦೦ ರೂ. ಸಂಬಳದಮೇಲೆ ೪ ವರ್ಷಗಳ ವರೆಗೆ ಮೈಸೂರು ವಿಶ್ವ ವಿದ್ಯಾಲಯದ ಪ್ರೊ. ಚಾನ್ಸಲರಾಗಿ ನೇಮಿಸಿಕೊಳ್ಳಲ್ಪಟ್ಟಿರುವರೆಂದು ತಿಳಿಯುತ್ತದೆ.

ರೂಪಾಯಿ ಬೆಲೆ ಇಳಿತ
ಕೇಂದ್ರ ಅರ್ಥಿಕ ಮಂತ್ರಿಯ ಸಲಹೆಗಳು

— —

ಬ್ರಿಟಿಷ್ ಕಾಮನ್ ವೆಲ್ತದ ಅರ್ಥಿಕ ಮಂತ್ರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಬ್ರಿಟಿಷ್ ಸರ್ಕಾರವು ಪೌಂಡ ಬೆಲೆ ಇಳಿಸಿದ ಕಾರಣ ನಾವೂ ರೂಪಾಯಿಯ ಬೆಲೆ ಇಳಿಸಬೇಕಾಯಿತು. ಅರ್ಥಸಚಿವರ ಪರಿಷತ್ತಿನ ಸೂಚನೆಗಳನ್ನು ಮೀರಿ ಬ್ರಿಟಿಷ ಸರ್ಕಾರವು ವರ್ತಿಸಿದೆ. ಈ ಪರಿಸ್ಥಿತಿಯನ್ನು ಎದುರಿಸಲು ಈ ಕೆಳಗಣ ಸೂಚನೆಗಳನ್ನು ಕೊಡುತ್ತೇನೆ ಎಂದು ಕೇಂದ್ರ ಸಭೆಯಲ್ಲಿ ಅರ್ಥಿಕ ಮಂತ್ರಿ ಜಾನ್ ಮಥಾಯಿಯವರು ಹೇಳಿದರು. ಅವರ ಸೂಚನೆಗಳು ಹೀಗಿವೆ.

ವಿದೇಶಿ ನಾಣ್ಯಗಳ ವೆಚ್ಚವನ್ನು ಅದಷ್ಟು ಕಡಿಮೆ ಮಾಡತಕ್ಕದ್ದು (೨) ಬೆಲೆ ಏರಿಕೆಯನ್ನು ತಗ್ಗಿಸತಕ್ಕದ್ದು (೩) ವಿದೇಶಿ ನಾಣ್ಯಗಳನ್ನು ಹೆಚ್ಚು ಸಂಪಾದಿಸತಕ್ಕದ್ದು (೪) ಹಣ ಉಳಿತಾಯದ ಯೋಜನೆಯನ್ನು ಜೋರಿನಿಂದ ಸಾಗಿಸಬೇಕು (೫) ಯುದ್ಧ ಲಾಭದ ಕರಾಕರಣೆ ವಿಷಯದಲ್ಲಿ ವರ್ತಕರು ತಾವೇ ನಿರ್ಣಯಕ್ಕೆ ಬರಬೇಕು. (೬) ಸರಕಾರದ ನಿತ್ಯದ ಹಾಗೂ ಭಂಡವಲ ವೆಚ್ಚದಲ್ಲಿ ಈ ವರುಷ ೪೦ ಕೋಟಿ ರೂ. ಹಾಗೂ ಮುಂದಿನ ವರುಷ ೮೦ ಕೋಟಿ ರೂ ಕಡಿಮೆ ಮಾಡತಕ್ಕದ್ದು. (೭) ನಿರ್ಯಾತ ಜಕಾತಿ ಹೇರತಕ್ಕದ್ದು ಮತ್ತು (೮) ಬೆಲೆಗಳನ್ನು ನೂರಕ್ಕೆ ಹತ್ತರಷ್ಟು ಇಳಿಸತಕ್ಕದ್ದು.

ರೂಪಾಯಿಯ ಬೆಲೆಯನ್ನು ಇಳಿಸುವದಕ್ಕೆ ಕೆಳಗಿನ ಕಾರಣಗಳು ಮುಖ್ಯವಾಗಿದ್ದವು:-

(೧) ಹಿಂದುಸ್ತಾನದ ನಿರ್ಯಾತವ್ಯಾಪಾರದಲ್ಲಿ ಮುಕ್ಕಾಲು ಪಾಲು ಸ್ಟರ್ಲಿಂಗ ರಾಷ್ಟ್ರಗಳೊಡನಿರುತ್ತದೆ. ನಾವು ರೂಪಾಯಿಯ ಬೆಲೆ ಇಳಿಸದಿದ್ದರೆ ಈ ವ್ಯಾಪಾರಕ್ಕೆ ಧಕ್ಕೆಯಾಗುತ್ತಿತ್ತು. (೨) ಇದರಿಂದ ನಮ್ಮ ಆಯಾತ ವ್ಯಾಪಾರಕ್ಕೂ ಹಾನಿಯಾಗುತ್ತಿತ್ತು. (೩) ಕಾಲಹರಣ ಮಾಡಿದ್ದರೆ ಪೇಟೆಯಲ್ಲಿ ಅಲ್ಲೋಲ ಕಲ್ಲೋಲವುಂಟಾಗುತ್ತಿತ್ತು. (೪) ನಾವು ಸ್ಟರ್ಲಿಂಗ ರಾಷ್ಟ್ರಗಳ ಮಾಲಿಕೆಯಲ್ಲಿರುವವರೆಗೆ ಅವರ ಹೆಜ್ಜೆಯಲ್ಲಿ ಹೆಜ್ಜೆಯನ್ನಿಡಬೇಕಾಗುವದು.

ರೂಪಾಯಿಯ ಮತ್ತು ಪೌಂಡಿನ ನಡುವೆ ಬಿಡಲಾರದ ಸಂಬಂಧವಿದೆಯೆಂದು ಹೇಳಲಾಗುತ್ತದೆ. ಇದು ಸುಳ್ಳು. ಹಿಂದಕ್ಕೆ ಅದರ ಸ್ಥಿತಿ ಇತ್ತು. ಈಗ ಇರುವದಿಲ್ಲ. ರಿಝರ್ವ ಬ್ಯಾಂಕು ಈಗ ಬೇಕಾದ ವಿದೇಶ ನಾಣ್ಯಗಳಲ್ಲಿ ವ್ಯವಹಾರ ಮಾಡಬಹುದಾಗಿದೆ. ಹೀಗಿದ್ದರೂ ಸ್ಟರ್ಲಿಂಗ ಪ್ರದೇಶದಲ್ಲಿ ನವೇಕೆಂದು ಕೇಳಬಹುದು. ಅದಕ್ಕೆ ಕಾರಣವಿದೆ. ಸ್ಟರ್ಲಿಂಗ ರಾಷ್ಟ್ರಗಳು ಸಂಪಾದಿಸುವ ಡಾಲರುಗಳನ್ನೆಲ್ಲ ಒಂದೆಡೆ ಸಂಗ್ರಹಿಸಿ, ಎಲ್ಲರೂ ತಮಗೆ ಬೇಕಾದಷ್ಟು ಬಳಸುತ್ತವೆ. ಇಂಗ್ಲಂಡದ ನಂತರ ಈ ನಿಧಿಯಿಂದ ಹೆಚ್ಚು ಹಣ ಪಡೆಯುವ ರಾಷ್ಟ್ರವೆಂದರೆ ಹಿಂದುಸ್ತಾನವೇ. ಈಗ ಸಿಡಿದು ಹೋದರೆ ಈ ಸವಲತ್ತೂ ಹೋಗುವದು. ಆದುದರಿಂದ ಸದ್ಯಕ್ಕೆ ಸ್ಟರ್ಲಿಂಗ ಪ್ರದೇಶದಲ್ಲಿ ಉಳಿಯುವದು ನಮಗೆ ಹಿತಕರವಾಗಿರುವದು.

ಪಾಕಿಸ್ತಾನದ ಪರಿಸ್ಥಿತಿ

ಪಾಕಿಸ್ತಾನವು ನಮ್ಮಂತೆ ಬೆಲೆ ಇಳಿಸದೇ, ತನ್ನ ರೂಪಾಯಿಯ ಬೆಲೆಯನ್ನು ಎತ್ತರಿಸಿರುವದು. ಅದರಿಂದ ಘರ್ಷಣವುಂಟಾಗಿರುತ್ತದೆ. ಅದಕ್ಕೆ ಪಾಕಿಸ್ತಾನವೇ ಕಾರಣವಲ್ಲದೆ ನಾವಲ್ಲ. ಪಾಕಿಸ್ತಾನ ಮತ್ತು ಹಿಂದುಸ್ತಾನದ ಕೊಡತಕ್ಕೊಳ್ಳುವ ವ್ಯವಹಾರವು ಪೌಂಡುಗಳಲ್ಲಿ ಬಗೆಹರಿಸಲ್ಪಡಬೇಕೆಂದು ಒಪ್ಪಿಕೊಳ್ಳಲಾಗಿರುವದರಿಂದ ನಾವು ಪೌಂಡಿನ ಇಳಿದ ಬೆಲೆಯಂತೆ ನಮ್ಮ ರೂಪಾಯಿಯ ಬೆಲೆಯನ್ನು ಇಳಿಸಿರುತ್ತೇವೆ. ಪಾಕಿಸ್ತಾನವು ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿರುವದರಿಂದ ಇಂದಿನ ಬಿಕ್ಕಟ್ಟಿಗೇ ಅದೇ ಕಾರಣವಾಗಿರುವದು. ಈ ಬಿಕ್ಕಟ್ಟನ್ನು ಬಗೆಹರಿಸಲು ಬೇಗನೆ ಸಭೆ ಸೇರಲಿರುವದು.

ಪಾಕಿಸ್ತಾನದ ನಿರ್ಣಯವು ವಿಷಾದಕರವಿರುತ್ತದೆ. ಇಂಥ ನಿರ್ಣಯ ಕೈಕೊಳ್ಳಲು ಅವಕ್ಕೆ ಅನುಕೂಲವಾದ ಪರಿಸ್ಥಿತಿ ಇರುವದೇ? ಅದೂ ಇಲ್ಲ. ತನ್ನ ಸೆಣಬು ಹಾಗೂ ಹತ್ತಿಯನ್ನು ಬೇಕಾದವರು ಕೊಳ್ಳುವರೆಂಬ ಹೆಮ್ಮೆಯಿಂದ ಹಾಗೂ ತನ್ನ ಆಯಾತದ ಬೇಡಿಕೆ ಕಡಿಮೆ ಇರುವದರಿಂದ ಅದು ಹೀಗೆ ಮಾಡಿದೆಯೆಂದು ಹೇಳಬಹುದು. ಅದರ ವಿದೇಶ ವ್ಯಾಪಾರ ಈಗ ಅನುಕೂಲವಿದ್ದಷ್ಟು ಮುಂದೆ ಉಳಿಯುವದು ಶಕ್ಯವಿಲ್ಲ. ಯಾಕೆಂದರೆ ಅದು ತನ್ನ ಅಭಿವೃದ್ಧಿಯ ಯೋಜನೆಗಳನ್ನು ವಿಸ್ತರಿಸಿದಂತೆ ಹೆಚ್ಚು ಯಂತ್ರಗಳನ್ನು ಆಯಾತ ಮಾಡಬೇಕಾಗುತ್ತದೆ. ಇತ್ತ ಹಿಂದುಸ್ತಾನವು ಸೆಣಬು ಮತ್ತು ಹತ್ತಿಗಾಗಿ ಬೇರೆ ಕಡೆ ತಿರುಗಬಹುದು. ಅದು ಸಾಧ್ಯವೂ ಇದೆ. ಅಲ್ಲದೆ ೧೯೫೦ ರಿಂದ ಅದು ನಮಗೆ ಸಾಲದ ಕಂತುಗಳನ್ನು ಕೊಡಲು ಪ್ರಾರಂಭಿಸಬೇಕಾಗುವದು. ಆಗ ಅದರ ವಿದೇಶ ವ್ಯಾಪಾರ ತಲೆಕೆಳಗಾಗುವದು. ಆದುದರಿಂದ ಪಾಕಿಸ್ತಾನದ ರೂಪಾಯಿಯ ಹೊಸ ಬೆಲೆ ಬಹಳ ಕಾಲ ಬಾಳಲಾರದೆಂದು ಉಳಿದ ತಜ್ಞರಂತೆ ನಾನೂ ನಂಬಿರುತ್ತೇನೆ.

ಪಾಕಿಸ್ತಾನದ ನಿರ್ಣಯವೇನಿದ್ದರೂ ನಾವು ನಮ್ಮ ನಿರ್ಣಯವನ್ನು ಎಂದಿಗೂ ಬದಲಿಸುವದಿಲ್ಲ (ಹರ್ಷೋದ್ಗಾರ).

ಚರ್ಚಿಲ್ಲರು ನಮ್ಮ ಸ್ಟರ್ಲಿಂಗುಗಳಲ್ಲಿ ಕೆಲ ಭಾಗವನ್ನು ಮುಳುಗಿಸಬೇಕೆಂಬ ಮಾತನ್ನು ಎತ್ತಿದ್ದರು. ಆದರೆ ಅಂಥ ಸೂಚನೆಯನ್ನು ನಾವು ಶಕ್ತಿಮೀರಿ ಪ್ರತಿಭಟಿಸುತ್ತೇವೆಂದು ಹೇಳಬಯಸುತ್ತೇನೆ.

——

ಹೊಸಪೇಟೆ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

ಒ. ಯಸ್. 251/49.

ಜೋಗಿ ಕಲ್ಲುಮಠದ ಶರಣಯ್ಯ ತಂದೆ ಶಿದ್ದಯ್ಯ 32 ಲಿಂಗಾಯತ ಟೀಚರ್ ತಾಯರ್ಕನಹಳ್ಳಿ ಕೂಡ್ಲಿಗಿ ತಾ||	ವಾದಿ
ದೇವರಮ, ದೊಡ್ಡವೀರಣ್ಣ ತಂದೆ ಈರಣ್ಣ 45 ಲಿಂಗಾಯತ ಜರಾಯ್ತ ವಲಸಿ ಕೂಡ್ಲಿಗಿ ತಾ||	ಪ್ರತಿವಾದಿ

ವಾದಿ ಪ್ರತಿವಾದಿ ಮೇಲೆ ರೂ. 463 1–5 ಗೆ. ದಾವಾ ಮಾಡಿರುತ್ತೇನೆ. ಪ್ರತಿವಾದಿ 15–10–49 ನೆ ತೇದಿ ಹಗಲು 11 ಘಂಟೆಗೆ ಖುದ್ದಾಗಲಿ ವಕೀಲರ ದ್ವಾರ ಆಗಲಿ ಕೋರ್ಟಿಗೆ ಹಾಜರು ಆಗದಿದ್ದರೆ ಪ್ರತಿವಾದಿ ಮೇಲೆ Exparte ಡಿಕ್ರಿ ಆಗುತ್ತದೆ.

ಹೊಸಪೇಟೆ | V. L. ನಾರಾಯಣರಾವ್
ವಾದಿ ವಕೀಲರು.

4-10-49.

—[ ]—

ಜವಹರಲಾಲರನ್ನು 10-10-49 ನೆಯ ಸೋಮವಾರ ಪ್ರಾತಃಕಾಲ ಬ್ರಿಟಿಷ್ ಮಂತ್ರಿ ಅಟ್ಲಿಯವರು ತಮ್ಮ ಭವನದಲ್ಲಿ ಸ್ವಾಗತಿಸಲಿರುವರು.

——

ಮದ್ರಾಸ್ ಸರ್ಕಾರವು ವೃತ್ತ ಪತ್ರಿಕೆಗಳ ಮೇಲೆ ಹೇರಬೇಕೆಂದು ಯೋಚಿಸಿದ್ದ ಜಾಹಿರಾತ ಕರದ ಯೋಜನೆಯನ್ನು ಬಿಟ್ಟುಕೊಟ್ಟರು. ಈ ವಿಷಯವು ಕೇಂದ್ರದ ಅಡಳಿತಕ್ಕೆ ಹೋಗಿದೆ.

ಬಳ್ಳಾರಿ ಜಿಲ್ಲಾ ಹರಿಜನ ಸೇವಕ ಸಂಘ

ಸದಸ್ಯ ಪತ್ರ ಶಾಖೆ:....

೧) ನಾನು ಮಾನವ-ಮಾನವರಲ್ಲಿ ಅಸ್ಪೃಶ್ಯತೆಯನ್ನು ನಂಬುವದಿಲ್ಲ. ಅದನ್ನು ನಿವಾರಿಸಲು ಸರ್ವ ವಿಧಗಳಿಂದ ಯತ್ನಿಸುತ್ತೇನೆ. ಹರಿಜನ ಮತ್ತು ಸವರ್ಣಹಿಂದೂಗಳಲ್ಲಿನ ಸರ್ವವಿಧದ ತಗಾದೆಗಳನ್ನು ಶಾಂತಿ ಸಮಾಧಾನಗಳಿಂದ ಬಿಡಿಸಲು ಯತ್ನಿಸುತ್ತೇನೆ.

೨) ಹರಿಜನರ ಸಾಮಾಜಿಕ, ನೈತಿಕ, ಆರ್ಥಿಕ ಮತ್ತು ಎಲ್ಲಾ ಅಭಿವೃದ್ಧಿಗಾಗಿ ನನ್ನ ಶಕ್ತ್ಯಾನುಸಾರ ಸಹಾಯ ಮಾಡುತ್ತೇನೆ.

೩) ಹಿಂದೂ ಸಮಾಜದಲ್ಲಿ ಅದರಲ್ಲಿಯೂ ಹರಿಜನರಲ್ಲಿರುವ ಬಸವಿ ಪದ್ಧತಿ, ಸತ್ತದನದ ಮಾಂಸವನ್ನು ತಿನ್ನುವುದು, ಯೋಗ್ಯತಿಮೀರಿ ಸಾಲಮಾಡುವುದು ಯಾ ಖರ್ಚುಮಾಡುವುದು ವಗೈರೆ ಅನಾಚಾರ ಮತ್ತು ದುರಾಚಾರಗಳನ್ನು ತಪ್ಪಿಸಲು ಯತ್ನಿಸುತ್ತೇನೆ.

೪) ಹರಿಜನೋದ್ಧಾರಕ್ಕಾಗಿ ಸರ್ಕಾರದವರು ಜಾರಿಯಲ್ಲಿ ತಂದಿರುವ ಮತ್ತು ತರಲಿರುವ ಎಲ್ಲಾ ನಿಯಮ ನಿಬಂಧನೆಗಳನ್ನು ಜಾರಿಗೆತರಲು ಸಹಾಯಮಾಡಿ ಇತರ ಹಿಂದೂ ವರ್ಗಗಳಿಗಿರುವ ಹಕ್ಕುಗಳನ್ನು ಹರಿಜನರೂ ಸಹ ಸಮಾನ ರೀತಿಯಲ್ಲಿ ಅನುಭವಿಸಲು ನಾನು ನಿರ್ದಾಕ್ಷಿಣ್ಯವಾಗಿ ಕೃಷಿ ಮಾಡುತ್ತೇನೆ.

೫) ಹರಿಜನ ಸೇವಕ ಸಂಘದವರೊಡನೆ ಯಾವಾಗಲೂ ಸಹಕರಿಸಲು ಸಿದ್ಧನಿದ್ದು ಸಂಘದ ಘಟನೆ ನಿಯಮ ನಿಬಂಧನೆಗಳಿಗೆ ಒಳಪಟ್ಟಿರುತ್ತೇನೆ.

ಬಳ್ಳಾರಿಯಲ್ಲಿ ಮಾನ್ಯ ಗೋಪಾಲ ರೆಡ್ಡಿಯವರು

—()—

ಮದ್ರಾಸ್ ಸರ್ಕಾರದ ಆರ್ಥಿಕ ಮಂತ್ರಿಗಳಾದ ಮಾನ್ಯ ಗೋಪಾಲರೆಡ್ಡಿಯವರು 8 ನೆಯ ತಾ. ಬಳ್ಳಾರಿಗೆ ಆಗಮಿಸಿದರು. ಅಂದು ರಾಯದುರ್ಗ ತಾಲೂಕು ರೈತರ ಶಿಷ್ಟಮಂಡಲವನ್ನು ಅವರು ಕಂಡು ಅವರ ಬೇಡಿಕೆಗಳನ್ನು ಕೇಳಿಕೊಂಡರು. ಅನಂತರ ಬಸ್ ಮಾಲೀಕರು ತಮ್ಮ ಕಷ್ಟಗಳನ್ನು ನಿವೇದಿಸಿದರು. ಹಿಂದಿ ಮಹಾವಿದ್ಯಾಲಯವನ್ನು ಸಂದರ್ಶಿಸಿ ಮುನಿಸಿಪಲ್ ಹೈಸ್ಕೂಲಿನಲ್ಲಿ ಪುರಸಭೆಯ ಮಾನಪತ್ರವನ್ನು ಸ್ವೀಕರಿಸಿದರು. ಸಾಯಂಕಾಲ ಕಲ್ಚರಲ್ ಅಕಾಡೇಮಿಯ ನೇತೃತ್ವದಲ್ಲಿ ಶ್ರೀ ಸುಬ್ರಹ್ಮಣ್ಯಂರವರ ಭಾಷಣ ಏರ್ಪಟ್ಟಾಗ ತಾವು ಅಧ್ಯಕ್ಷತೆಯನ್ನು ವಹಿಸಿ ತಮ್ಮ ಅಭಿಪ್ರಾಯಗಳನ್ನು ಕೊಟ್ಟರು. ಬಳ್ಳಾರಿಗೆ ಕಾಲೇಜು ಬೇಕೆಂಬುದಾಗಿ ನಾಗರಿಕರ ಶಿಷ್ಟಮಂಡಳವೊಂದು ಅವರನ್ನು ಭೇಟಿಯಾಗಿ ಎಲ್ಲಾಅಂಶಗಳನ್ನು ತಿಳಿಯಹೇಳಿದರು.

ಬೆಂಗಳೂರಿನ ಸಮಾಜವಾದಿ ಪರಿಷತ್ತು

ಬೆಂಗಳೂರಿನಲ್ಲಿ ಕಳೆದ ೧೫ ದಿನಗಳಿಂದ ನಡೆಯುತ್ತಲಿರುವ ಸಮಾಜವಾದಿ ಕಾರ್ಯಕಾರೀ ಸಮಿತಿ ಸಭೆ ಮತ್ತು ಕಾರ್ಯಕರ್ತರ ಸಮ್ಮೇಳನಕ್ಕಾಗಿ ಗೆಳೆಯರಾದ ಶಿವದೇಸಾಯಿ, ಆರ್. ವಿ. ದೇಸಾಯಿ, ರಿಯಾಜುದ್ದೀನ್, ರಾಜಗೋಪಾಲ್, ರಘುಪತಿ ವಗೈರೇಯವರು ಬಳ್ಳಾರಿ ಪ್ರತಿನಿಧಿಗಳಾಗಿ ಹೋಗಿದ್ದಾರೆ.

—[ ]—

ಬಸ್‌ಗಳ ಅನಾನುಕೂಲತೆ

ಬಸ್‌ಗಳಿಗೆ ಕೊಡುವ ಪೆಟ್ರೋಲ್ ಪ್ರಮಾಣವು ಕಡಮೆ ಯಾದಕಾರಣ ಪ್ರಯಾಣದ ಸರ್ವೀಸುಗಳನ್ನು ಕಡಿಮೆಯಾಗಿ ಪ್ರಯಾಣಿಕರಿಗೆ ಬಹಳ ತೊಂದರೆಯಾಗಿದೆ. ಪೆಟ್ರೋಲ್ ಕೊಡುತ್ತೇವೆ. ಗ್ಯಾಸ್ ಪ್ಲಾಂಟ್ ತೆಗೆಯಿರಿ ಎಂದು ಹೇಳಿದ ಸರ್ಕಾರವು ಮತ್ತೆ ಗ್ಯಾಸ್ ಪ್ಲಾಂಟ್‌ಗಳಿಗೆ ಹೋಗಲು ತಿಳಿಸುತ್ತದೆ. ಇದ್ದ ಬಸ್‌ಗಳ ಕಾಟ ಮತ್ತೆ ಬಂದು ಕಟ್ಟಿಗೆಯ ಅಭಾವ ಮತ್ತೆ ಪ್ರಾರಂಭವಾಗಲಿದೆ.

ಭಂಗಾರದ ಬೆಲೆಯ ಪರಿಳಿತ

ರಿಸರ್ವ ಬ್ಯಾಂಕ್ ಆಫ್ ಇಂಡಿಯಾದವರು ಬೊಂಬಾಯಿಂದ ಹತ್ತುಸಾವಿರ ತೊಲ ಭಂಗಾರವನ್ನು ಮಾರಲಿಚ್ಛಿಸಿದುದರಿಂದ ಭಂಗಾರವು 116 ರಿಂದ 109 ಕ್ಕೆ ಇಳಿಯಿತು. ಬೆಳ್ಳಿಯನ್ನು ಕೂಡ ಮಾರಲಿದ್ದಾರೆ.

—

ಫಾರೆಸ್ಟ್ ಭೂಮಿಗಳನ್ನು ಮಾಡುವವರಿಗೆ ಸೂಚನೆ

ಬಳ್ಳಾರಿ ಜಿಲ್ಲೆಯಲ್ಲಿ ಅನೇಕ ಹರಿಜನರೂ ಬಡವರೂ ಅಜ್ಞಾನದಿಂದ ಫಾರೆಸ್ಟ ಭೂಮಿಗಳನ್ನು ಹೊಕ್ಕು ಬೇಸಾಯ ಮಾಡಿ ಫಾರೆಸ್ಟಧಿಕಾರಿಗಳಿಂದ ದಂಡಕ್ಕೆ ಗುರಿಯಾಗುತ್ತಲಿರುವರು. ಗಿಡಗಳಿಲ್ಲದಿರುವ ಫಾರೆಸ್ಟಭಾಗವನ್ನು ಅವರ ನಿಯಮಗಳಿಗನುಸಾರವಾಗಿ ಸಾಗುಮಾಡಲು ರೈತರೊಪ್ಪಿದರೆ ಕೆಲ ಡಿಪಾಜಿಟ್ ಹಣವಿಟ್ಟರೆ ಸಂಬಂಧಿಸಿದ ಅಧಿಕಾರಿಗಳಪ್ಪಣೆ 5 ವರ್ಷಗಳ ವರೆಗೆ ದೊರೆಯುತ್ತದೆ. ಜಿಲ್ಲಾ ಹರಿಜನ ಸೇವಕ ಸಂಘದ ಕಾರ್ಯದರ್ಶಿ ಶ್ರೀ ಕೇಶವರಾಯರಿಂದ ವಿವರಗಳನ್ನರಿಯಬಹುದು.

ಶ್ರೀ ಸುಭಾಸಚಂದ್ರಬೋಸರು ರೇಡಿಯೋ ಸಂದೇಶ ಕೊಡುವರೇ ?

ಅಕ್ಟೋಬರ್ ೨೧ ನೆಯ ತಾ॥ ರಾತ್ರಿ ೯ ಗಂಟೆಗೆ ಪೀಪಿಂಗ್ ರೇಡಿಯೋದಿಂದ ಶ್ರೀ ಸುಭಾಸ ಬಾಬುಗಳು ಭಾರತೀಯರಿಗೆ ತಮ್ಮ ಸಂದೇಶವನ್ನು ಕೊಡಲಿರುವರೆಂದು ಹೊಸದಿಲ್ಲಿಯ 'ನೇತಾಜಿ' ದಿನಪತ್ರಿಕೆಯು ಪ್ರಸಿದ್ಧಿಸಿದೆ.

ನೆಹರೂರವರ ಅಮೆರಿಕಾ ಯಾತ್ರೆ

ಭಾರತದ ಮುಖ್ಯ ಪ್ರಧಾನರಾದ ಪಂಡಿತ ಜವಹರಲಾಲ ನೆಹರೂರವರು ಅಮೆರಿಕಾಕ್ಕೆ ಹೊರಟು ಶನಿವಾರ ರಾತ್ರಿ ಲಂಡನ್ನನ್ನು ತಲಪಿದರು. ಇವರು ಹೊರಡುವ ಮುನ್ನ ಪೂನಾ ನಗರದ ಸಮೀಪ ಭಾರತ ಸೈನ್ಯದ ಅಕಾಡಮಿ ಕಟ್ಟಡದ ಶಂಕುಸ್ಥಾಪನೆ ಮಾಡಿದರು.

ಆನೆಗುಂದಿ ಸಂಸ್ಥಾನ

ಬಳ್ಳಾರಿ ಜಿಲ್ಲೆಗೆ ಹೊಂದಿಕೊಂಡು ತುಂಗಭದ್ರಾದ ಉತ್ತರ ತೀರದಲ್ಲಿರುವ ಮತ್ತು ಹಂಪಿಗೆ 3 ಮೈಲಿಯುಳ್ಳಿರುವ ಆನೆಗುಂದಿ ಸಂಸ್ಥಾನದ ಆಡಳಿತವನ್ನು ಹೈದರಾಬಾದದ ಮಿಲಿಟರಿ ಸರ್ಕಾರವು ವಹಿಸಿ ಕೊಂಡಿತು. ಇಲ್ಲಿಯ ರಾಜರು ವಿಜಯನಗರದ ರಾಯರ ವಂಶದವರು

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5 - ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ಮಾರ್ಗಬ್ಬಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೀಷ್ಮ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M 4746)

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು		Subscription Rates	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

10—10—49

To

Sri..............................

....

....

Printed at Krishna Printing Works, Edited & Published by T. B. Keshava Rao

JAI-HIND

ಜಯಹಿಂದ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:-
ಟಿ. ಬಿ. ಕೇಶವರಾವ.

ವರ್ಷ ೧೨ | ಸೋಮವಾರ ೧೭ ಅಕ್ಟೋಬರ್ ೧೯೪೯ | ಸಂಚಿಕೆ ೩೮

ನಮ್ಮ ಉನ್ನತಿಯೆಂತು ?

ಡಾ. ಹರ್ಡೀಕರ ಅವರಿಂದ

ವಿಶೇಷವಾಗಿ ಆತ್ಮೀಯತೆಯುಳ್ಳ ಹಾಗೂ ಈ ವಾರಪತ್ರಿಕೆ [ಜಯ ಹಿಂದ ಕನ್ನಡ ವಾರಪತ್ರಿಕೆ] ಯನ್ನು ನಿಯಮಿತವಾಗಿ ಓದುವ ನನ್ನ ಗೆಳೆಯರು, ತಮಗೆ ಬಿಡುವು ದೊರೆತಾಗ, "ಜಯ ಹಿಂದ" ದಲ್ಲಿಯ ನನ್ನ ಲೇಖನಗಳ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬರೆದು ವ್ಯಕ್ತಮಾಡುತ್ತಾರೆ. ಅವರಲ್ಲಿ ಕೆಲವರು ನಮ್ಮ ಮುಂದಿನ ಕಾರ್ಯದ ಬಗ್ಗೆ ಹಲವು ಸೂಚನೆಗಳನ್ನು, ದೇಶದಲ್ಲಿ ಆ ಬಗ್ಗೆ ಸಮಾನ ವಿಚಾರಗಳುಳ್ಳ ಎಲ್ಲ ಜನರೊಡನೆ ಸಂಪರ್ಕ ಬೆಳೆಸಿಕೊಳ್ಳಲು ನನಗೆ ಕೇಳಿಕೊಂಡಿರತ್ತಾರೆ. ಅವರ ಓಲೆಗಳನ್ನೆಲ್ಲ ಓದಿಕೊಂಡಿದ್ದರೂ ಅವರು ಮಾಡಿದ ಸೂಚನೆಗಳ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಮಾಡಿರುವುದಿಲ್ಲ.

" 'ಜಯ ಹಿಂದ' ದಲ್ಲಿಯ ನಿಮ್ಮ ಮೊದಲ ಪ್ರಕಟದ ಬರೆಹವು ನನ್ನ ಕಂಗಳಲ್ಲಿ ನೀರು ತರಿಸಿತು. ಅದರ ಬಗ್ಗೆ ಹೇಗೆ ಹೊಗಳಿಕೆಯನ್ನು ವ್ಯಕ್ತಪಡಿಸಬೇಕೆಂಬುದು ನನಗೆ ತಿಳಿಯದಾಗಿದೆ. ಜನರಲ್ಲಿ, ವಿಶೇಷವಾಗಿ ಕಾಂಗ್ರೆಸಿಗರಲ್ಲಿ ಆ ನಿಮ್ಮ ಲೇಖನದಲ್ಲಿಯ ಹೃದಯಸ್ಪರ್ಶಿಯಾದ ಮಾತುಗಳನ್ನು ತಿಳಿದುಕೊಳ್ಳುವಂತಹ ಪವಿತ್ರ ವೃತ್ತಿಯು ಇದ್ದೀತೆಂದು ನಾನು ಭಾವಿಸಿದ್ದೆನು.

ಕಾಂಗ್ರೆಸ ಸ್ಥಿತಿ

" ಕಾಂಗ್ರೆಸ ಆಡಳಿತದಲ್ಲಿ ನಮ್ಮ ದುರ್ದೈವೀ ದೇಶದೊಳಗೆ ಸಾಮಾನ್ಯವಾಗಿ ಎಲ್ಲ ಕಡೆಗೂ, ಅಧಃಪತನವೂ, ಕೆಡುಕುತನವೂ, ತುಂಬಿ ಹೋಗಿದೆ. ಕಾಂಗ್ರೆಸ್ಸು ಮತ್ತೊಮ್ಮೆ ತನ್ನ ಮೊದಲಿನ ಪಾವಿತ್ರ್ಯ, ತ್ಯಾಗ ಸೇವೆಗಳ ಶಿಖರಕ್ಕೆ ಏರುವುದೋ? ಕಾಡಿನಲ್ಲಿಯ ಒಂಟಿ ನರಿಯಂತೆ, ನೀವೊಬ್ಬರು ಮಾತ್ರವೇ ಆ ಬಗ್ಗೆ ಕೂಗೆಬ್ಬಿಸಿದ್ದೀರಿ. ಈ ಕೂಗಿಗೆ ನೀವು ಒಬ್ಬರೇ ಒಂದು ಸಾರ್ವತ್ರಿಕವಾದ ಮೂರ್ತಸ್ವರೂಪವನ್ನು ತಂದುಕೊಡಬಹುದೇ ?

" ದೇಶದಲ್ಲೆಲ್ಲ ನಿಮ್ಮಂತಹವೇ ಆದ ಅನೇಕ ಕಾಂಗ್ರೆಸಿಗರಿದ್ದಾರೆ. ಅವರೆಲ್ಲ ವೈಯಕ್ತಿಕವಾಗಿಯೇ ಯೋಚಿಸುತ್ತಾರೆ; ಮಾತಾಡುತ್ತಾರೆ; ಬರೆಯುತ್ತಾರೆ. ಹೀಗಾಗಿ ಆ ವಿಚಾರಕ್ಕೆ ಆ ಮಾತಿಗೆ ಆ ಬರಹಕ್ಕೆ ಸಾಮರ್ಥ್ಯ ಬರದಾಗಿದೆ. ಆದ್ದರಿಂದ ನೀವು ಅಂಥ ಕಾಂಗ್ರೆಸಿಗರೊಡನೆ ಸಂಬಂಧ ಬೆಳೆಸಿಕೊಂಡರೆ, ನಿಮ್ಮ ಕೂಗಿಗೆ ಒಂದು ಮೂರ್ತಸ್ವರೂಪ ಬಂದು, ಹೊಸ ರೂಪ, ಒಂದು ಹೊಸ ಧ್ವನಿ ಕೊಡಲು ಸಾಧ್ಯವಾದೀತು. ಏನೆಂದರೂ, ಕಾಂಗ್ರೆಸ ರಾಜ್ಯದಲ್ಲಿ ಸುಧಾರಣೆಯಾಗಬೇಕೆಂದೇ ನಾವೆಲ್ಲ ಹಾತೊರೆಯುವವರಾಗಿದ್ದೇವೆ. ತನ್ನ ವೈಯಕ್ತಿಕವಾದ ಕ್ಷಣಿಕ ಚಿಕ್ಕ ಪುಟ್ಟ ವಿವಾದಗಳನ್ನೆಲ್ಲ ಬದಿಗಿಟ್ಟು ನಮ್ಮೆಲ್ಲರ ಅಂತರಾತ್ಮವೂ ಸುಧಾರಣೆಯ ಮಾರ್ಪಾಡಿಗಾಗಿ ಕುದಿಯುತ್ತಿದೆ."

ಸ್ವನಿರ್ಮಿತ ದಾರಿ

ಕಾಂಗ್ರೆಸ್ ಸಂಸ್ಥೆಯಲ್ಲಿ ಸುಧಾರಣೆಯಾಗಬೇಕೆಂದು ಹಾತೊರೆಯುವ ಹಲವು ಕಾಂಗ್ರೆಸಿಗರಿದ್ದಾರೆಂದು ನನ್ನ ಮಿತ್ರರು ಹೇಳುವುದು ನಿಜವಾದ ಮಾತಾಗಿರುತ್ತದೆ. ಆದರೆ ಸದ್ಯಕ್ಕೆ ಆ ಬಗ್ಗೆ ಏನನ್ನು ಮಾಡುವುದೂ ಅಶಕ್ಯವೆಂದು ನನಗೆನಿಸುತ್ತದೆ. ದೇಶದಲ್ಲಿ ಕಾಂಗ್ರೆಸ ಕಾರ್ಯಕರ್ತರಿಂದು ಎಲ್ಲೆಡೆಗಳಲ್ಲಿಯೂ ಅಧಿಕಾರದಲ್ಲಿದ್ದಾರೆ; ಮತ್ತು ತಾವು ಗೈಯುತ್ತಿರುವ ಅಪರಾಧಗಳ ಅರಿವು ಅವರಿಗಿನ್ನೂ ಹೊಳೆಯದಾಗಿದೆ. ಹೀಗಾಗಿ ಅವರಿಂದು ತಮ್ಮ ಕೃತಿಗಳಿಂದ ತಾವೇ ಕೋಡಿ ಕೊಂಡೇ ಕೊಳ್ಳಿಯುತ್ತಿದ್ದಾರೆ.

ಜಾಗತಿಕ ಶಕ್ತಿಗಳಿಂದ ನಿರ್ಮಾಣವಾಗುತ್ತಲಿದ್ದ ಹೊಸ ಪ್ರಸಂಗ ಘಟನೆಗಳಿಂದ ಸನಿಹದಲ್ಲಿಯೇ ಅವರ ಕಣ್ಣುಗಳು ತೆರೆದಾವೆಂದು ನಾನು ಆಶಿಸುತ್ತೇನೆ. ಹೀಗಾದಬಳಿಕ ಅವರು ಪಶ್ಚಾತ್ತಾಪಪಡುವರು ಮತ್ತು ತಮ್ಮ ದಾರಿಯನ್ನು ಸರಿಪಡಿಸಿಕೊಳ್ಳುವರು. ಈ ಪುನರ್ನಿರ್ಮಾಣದ ಯಾವುದೇ ಕೃತಿಯೂ ಸದ್ಯಕ್ಕೆ ತಪ್ಪಾಗಿ ತಿಳಿದುಕೊಳ್ಳಲ್ಪಡುವುದೆಂದೂ ವಿಪರೀತವಾಗಿ ಭಾವಿಸಲ್ಪಡುವುದೆಂದೂ ನನಗೆ ಗೊತ್ತಿರುವುದರಿಂದಲೇ ನಾನು ಏನನ್ನೂ ಮಾಡ ಬಯಸುವದಿಲ್ಲ.

ಕಾಂಗ್ರೆಸ್ಸಿಗರ ಅಧೋಗತಿ

ಅದೇ ಮಿತ್ರರು ಇನ್ನೊಂದು ಸಾರೆ ಹೀಗೆ ಬರೆದಿದ್ದಾರೆ.

" ಕಾಂಗ್ರೆಸ ಸಂಸ್ಥೆಯನ್ನು ಭದ್ರವಾದ ತಳಹದಿಯ ಮೇಲೆ ನಿಲ್ಲಿಸುವ ಮಾರ್ಗ ಮತ್ತು ಸಾಧನಗಳ ಬಗ್ಗೆ ನಾವು ಪರಸ್ಪರ ಚರ್ಚೆ ಮಾಡಿದ್ದೇವೆ. ನಮಗೆ ನಿಶ್ಚಿತವಾದ ಪರಿಹಾರ ಮಾರ್ಗವು ಸಾಧ್ಯವಾಗಿಲ್ಲ. ಇದಕ್ಕೆ, ಅಧಿಕಾರದಲ್ಲಿದ್ದ ಕಾಂಗ್ರೆಸ್ಸಿಗರ ಹಾಗೂ ಅಧಿಕಾರದಲ್ಲಿರದ ಕಾಂಗ್ರೆಸ್ಸಿಗರ ನಡುವಿನ ಭಿನ್ನ ಅಭಿಪ್ರಾಯಗಳ ತುಮುಲವೇ ಕಾರಣವಾಗಿರುತ್ತದೆ. ಕಾಂಗ್ರೆಸ್ಸಿಗರ ದೈನಂದಿನ ರಾಜಕೀಯ ಹಾಗೂ ನೈತಿಕ ಜೀವನದಲ್ಲಿ ಎಲ್ಲ ಬಗೆಯಿಂದಲೂ ಅಧಃಪತನವಾಗಿದೆ. ಸಾರ್ವತ್ರಿಕ ನೈತಿಕ ಮಟ್ಟವನ್ನು ಉದ್ಧರಿಸುವುದು ಹೇಗೆ? ಇದೊಂದು ದೊಡ್ಡ ಪ್ರಶ್ನೆಯಾಗಿರುತ್ತದೆ. ಅನೈತಿಕತೆಯು ಜಾರುಗುಂಡಿಯಮೇಲೆ ಅಳವು ಮೀರಿದ ವೇಗದಿಂದ ಧಾವಿಸುತ್ತಲಿದೆ. ಅವನ್ನು ಹಿಡಿತದಲ್ಲಿ ತರುವುದು ಸದ್ಯಕ್ಕೆ ಅಳುಕಿದ್ದ ಕಾಂಗ್ರೆಸ ಜನರಿಂದಲಾಗಲಿ ಅಥವಾ ಕಾಂಗ್ರೆಸ ಸಂಸ್ಥೆಯಲ್ಲಿಯ ಅಧಿಕಾರ ಜನರಿಂದಾಗಲಿ ಅಸಾಧ್ಯವಾಗಿರುತ್ತದೆಂದೇ ಎನಿಸುತ್ತದೆ. ಈ ಕೊಳೆಯಿಂದ ಪಾರಾಗುವಂತಹ ಆಚರಣೀಯ ಸೂಚನೆಗಳನ್ನು ಮಾಡುವವರೂ ಯಾರೂ ಇದ್ದಂತಿಲ್ಲ."

ಉನ್ನತಿಯ ದಾರಿ

ಸಾರ್ವತ್ರಿಕ ನೈತಿಕಮಟ್ಟದ ಉದ್ಧಾರ ಮಾಡುವದು ನನ್ನ ಈ ಮಿತ್ರರ ಆಶಯ

ವಾಗಿದೆ. ನಾವಿಂದು ಶೀಲಭ್ರಷ್ಟರಾಗಿದ್ದೇವೆ. ನಮ್ಮ ಚಾರಿತ್ರ್ಯದಲ್ಲಿ ಸುಧಾರಣೆಯಾದಾಗಲೇ ಉದ್ಧಾರವು ಸಾಧ್ಯವಾಗುವುದು. ನಮ್ಮಲ್ಲಿಯ ನೀತಿಮತ್ತೆಯ ಅಭಾವದಿಂದಲೇ ನಾವು ಬಹಳ ತೊಂದರೆ ಪಟ್ಟಿದ್ದೇವೆ ಮತ್ತು ಪಡುತ್ತಲಿದ್ದೇವೆ. ಅದನ್ನು ನಾವು ಮೊದಲು ದೊರಕಿಸಿಕೊಳ್ಳಲು ಪ್ರಯತ್ನಿಸೋಣ. ನಮ್ಮ ಮನಃಪ್ರವೃತ್ತಿಯನ್ನು ಮಾರ್ಪಡಿಸಲಿಕ್ಕೆ ಹೆಣಗೋಣ. ಆಬಳಿಕ ನಮ್ಮ ನಡತೆ ರೀತಿಗಳು ನಿಷ್ಟಯವಾಗಿ ಮೇಲ್ಪಟ್ಟದವಾಗುವವು ಮತ್ತು ಕಾಂಗ್ರೆಸ ಸಂಸ್ಥೆಯು ತಾನು ಕಳೆದುಕೊಳ್ಳುತಿದ್ದ ಸ್ಥಾನಮಾನಗಳನ್ನು ಪುನಃ ದೊರಕಿಸಬಹುದು

ಕಾಂಗ್ರೆಸಿಗರು ಇದ್ದ ಪರಿಸ್ಥಿತಿಯನ್ನು ತಿಳಿದುಕೊಂಡು ತಮ್ಮ ಉನ್ನತಿಯನ್ನು ತಾವೇ ಮಾಡಿಕೊಳ್ಳಬೇಕು. ಈ ಸಂಬಂಧದಲ್ಲಿ ಸಹಾಯ ಮಾಡುವದು ಶಕ್ಯವಿಲ್ಲ. "ಉದ್ಧರೇದಾತ್ಮ ನಾತ್ಮಾನಂ ಆತ್ಮಾನಾಮವಸಾದಯೇತ್। ಆತ್ಮೈವ ಹ್ಯಾತ್ಮನೋ ಬಂಧುಃ ಆತ್ಮೈವರಿಪುರಾತ್ಮನಃ॥ ಈ ಭಗವದ್ವಚನವನ್ನು ಕಾಂಗ್ರೆಸಿಗರು ಮರೆತಿರುವರೋ?

ಕನ್ನಡಿಗರನ್ನೇ ಆರಿಸಿರಿ.

ಈ ಕೆಳಗಿನ ಪ್ರಕಟಿನೆಯನ್ನು ಪ್ರಕಟಿಸಲು ಕಳುಹಿಸಿದ್ದಾರೆ.

೨೪-೧೦-೪೯ ದಿನಾಂಕ ಜರುಗಲಿರುವ ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆ ವಿಷಯದಲ್ಲಿ ಕನ್ನಡಿಗ ಅಭ್ಯರ್ಥಿಯನ್ನು ಪೋಟಿಯಿಲ್ಲದೆ, ಒಬ್ಬರನ್ನೇ [illegible]ಮತದಿಂದ ತೀರ್ಮಾನಿಸಲು ಜಿಲ್ಲಾ ಬೋರ್ಡು ಸದಸ್ಯರ ಸಭೆಯನ್ನು ದಿನಾಂಕ ೧೯-೧೦-೪೯ ಮಧ್ಯಾಹ್ನ ೩ ಘಂಟೆಗೆ ಬಳ್ಳಾರಿ ವೀರಶೈವ [illegible] ಏರ್ಪಡಿಸಿಯುತ್ತದೆ. ಆದ ಪ್ರಯುಕ್ತ ತಾವೆಲ್ಲರು ದಯವಿಟ್ಟು ಸಭೆಗೆ ಹಾಜರಾಗಿ ಈ ಕಾರ್ಯವನ್ನು ನೆರವೇರಿಸುವದಾಗಿ ಕೋರುತ್ತೇವೆ.

೧ ಗೌಡರ ಬಸವನಗೌಡ ನೆಲ್ಲಗುಂದಿ
೨ ಯಳವ ಲ್ಲೀಶಪ್ಪ, ಅನವಾನಿ
೩. ಬಿ. ಯಂ. ಪಂಚಾಕ್ಷರಯ್ಯ, ಹನ್ಸಿನಹಳ್ಳಿ
೪ ವೈ. ಗಾದಿಲಿಂಗನಗೌಡ ಮುದ್ದಿಗನೂರು
(ಬಳ್ಳಾರಿ ಜಿಲ್ಲಾ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷ)
೫ ಯಜಮಾನ ಶಾಂತರುದ್ರಪ್ಪ,
ಬಳ್ಳಾರಿ.

ನವಭಾರತಕ್ಕೆ
ಚಂದಾದಾರರಾಗಿರಿ.

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ

ಎಸ್. ಎ. ನಂ. 492/49,

ವಾದಿ:— ಮೈನರ್ ರುದ್ರಣ್ಣ by next friend ತಾಯಿ ಪರ್ವತಮ್ಮ ಕಣೆಕಲ್ಲು ರಾಯದುರ್ಗ ತಾ||

ಪ್ರತಿವಾದಿ:— ಬಸಣ್ಣ s/o ಕರಿನಾಗಪ್ಪ ಬಳ್ಳಾರಿ.

ಮೇಲ್ಕಾಣಿಸಿದ ನಂಬರಿನಲ್ಲಿ ವಾದಿ ಪ್ರಾಮಿಸರಿ ನೋಟಿನ ಪ್ರಕಾರ ನಿಮ್ಮಿಂದ ರೂ 118-7-0 ಬಡ್ಡಿ ಖರ್ಚಿನಸಮೇತ ವಸೂಲಿ ಮಾಡಿಕೊಳ್ಳಲು ದಾವಾ ದಾಖಲು ಮಾಡಿದ್ದಾನೆ. ಅದರ ವಾಯಿದೆ 3-11-19 ಕ್ಕೆ ಇದೆ. ಆ ದಿವಸ ನೀವಾಗಲಿ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ಆಕ್ಷೇಪಣೆ ತಿಳಿಸದಿದ್ದರೆ ಏಕಪಕ್ಷ ತೀರ್ಮಾನವಾಗಲಿದೆಯೆಂದು ಈ ಮೂಲಕ ತಿಳಿಸಲಾಗಿದೆ.

ಬಿ. ವಿ. ರಾಮಕೃಷ್ಣರಾವ್
ವಾದಿ ವಕೀಲ.

....

ಹೊಸ ಚುನಾವಣೆಗಳು ಯಾವಾಗ ?

ಹೊಸದಿಲ್ಲಿ:- ಪ್ರಾಂತಗಳಿಂದ ಬಂದಿರುವ ವರದಿಗಳ ಪ್ರಕಾರ, ಹೊಸ ಸಾರ್ವತ್ರಿಕ ಚುನಾವಣೆಗಳು ೧೯೫೦-೫೧ನೇ ಚಳಿಗಾಲದಲ್ಲಿ ಜರುಗುವ ಆಶೆ ಇದೆ ಎಂದು ಅಧ್ಯಕ್ಷ ಡಾ ರಾಜೇಂದ್ರ ಪ್ರಸಾದರು ಇಂದು ಘಟನಾ ಸಮಿತಿಯಲ್ಲಿ ಹೇಳಿದರು.

೧೯೫೦ ನವೆಂಬರ ಮತ್ತು ೧೯೫೧ ಫೆಬ್ರುವರಿ ಅಥವಾ ಮಾರ್ಚ ತಿಂಗಳ ನಡುವೆ ಅವು ಜರುಗಬಹುದೆಂದೂ ಅವರು ತಿಳಿಸಿದರು. ಸಾರ್ವತ್ರಿಕ ಚುನಾವಣೆಗಳನ್ನು ಜರುಗಿಸುವದಕ್ಕೆ ಅವಧಿಯ ನಿರ್ಬಂಧ ಹಾಕಬೇಕೆಂಬ ಶ್ರೀ ಸಂತಾನಂರ ಸೂಚನೆಯ ಮೇಲೆ ಚರ್ಚೆ ನಡೆದಾಗ ಅಧ್ಯಕ್ಷರು ಮೇಲಿನಂತೆ ಹೇಳಿದರು.

....

ಸಮಾಜವಾದಿ ಶ್ರೀ ಅಚ್ಯುತ ಪಟವರ್ಧನರ ಭಾಷಣ

ಆತ್ಮಶಕ್ತಿಯ ಬಲದಿಂದಲೇ ನಿಜವಾದ ಸ್ವರಾಜ್ಯ - ಗಾಂಧಿಜಿಯವರ ಮಾರ್ಗದರ್ಶನ.

"ಭಾರತದ ಜನತೆಯಲ್ಲಿ ಸುಷುಪ್ತವಾದ ಮಾನವತೆಯು ಮಹಾತ್ಮಾ ಗಾಂಧಿಯವರ ಪುಣ್ಯ ಪ್ರಭಾವದಿಂದ ಜಾಗ್ರತವಾಗಿ ಸ್ವತಂತ್ರ್ಯವನ್ನು ಸಂಪಾದಿಸಿತು. ಅದು ಮತ್ತೆ ಸುಷುಪ್ತವಾದೀತೇ? ನಮ್ಮ ಜಾಗ್ರತವಾದ ಮಾನವತೆಯು ಮತ್ತೆ ಸುಷುಪ್ತವಾಗಲಾರದು. ಅದರಲ್ಲಿ ನಮಗೆ ವಿಶ್ವಾಸವಿದೆ. ಜನತೆಯು ತಮ್ಮಲ್ಲಿಯ ಈ ಆತ್ಮಶಕ್ತಿಯ ಬಲದಿಂದಲೇ ನಿಜವಾದ ಸ್ವರಾಜ್ಯವನ್ನು ಸ್ಥಾಪಿಸಬೇಕು ಎಂದು ಸಮಾಜವಾದೀ ಪಕ್ಷದ ಮುಖಂಡರಾದ ಶ್ರೀ ಅಚ್ಯುತ ಪಟವರ್ಧನರು ಹುಬ್ಬಳ್ಳಿಯ ನಗರ ಸಭೆಯ ಆಟ್ಟದಮೇಲೆ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ಹೇಳಿದರು. ಧಾರವಾಡ ಸಮಾಜವಾದೀ ಕಾರ್ಯಕರ್ತರಾದ ಡಾ. ಭಾಸ್ಕರರಾವ ಗೋಖಲೆಯವರು ಅಧ್ಯಕ್ಷತೆ ವಹಿಸಿದ್ದರು

ಶ್ರೀ ಗೋಖಲೆಯವರು ಅತಿಥಿಗಳ ಪರಿಚಯ ಮಾಡಿಕೊಟ್ಟನಂತರ ಶ್ರೀ. ಪಟವರ್ಧನರು ಭಾಷಣವನ್ನು ಪ್ರಾರಂಭಿಸಿ ಬ್ರಿಟಿಶರು ಹೋದಂದಿನಿಂದ ನಮಗೆ ಸ್ವಾತಂತ್ರ್ಯ ದೊರೆತಿದ್ದರೂ ಸ್ವರಾಜ್ಯ ದೊರೆತಿಲ್ಲ. ಈಗ ಎರಡು ವರುಷಗಳಲ್ಲಿ ನಾನಾ ತೊಂದರೆ ಅಡಚಣೆಗಳು ಹೆಚ್ಚುತ್ತಲೇ ಇವೆ. ಜನತೆಯಲ್ಲಿ ಸ್ವರಾಜ್ಯದ ಬಗ್ಗೆ ಇದ್ದ ಆಶೋತ್ತರಗಳೆಲ್ಲ ಕ್ರಮಕ್ರಮವಾಗಿ ಮಾಯವಾಗಿ ಅವುಗಳ ಸ್ಥಳದಲ್ಲಿ ನಿರಾಶೆಯು ನೆಲೆಯೂರಹತ್ತಿದೆ ಕಾಂಗ್ರೆಸಿನ ತಪಃ ಪ್ರಭಾವ ಈಗ ಮುಗಿದು ಹೋಗಿದೆ ಅವರು ಅಧಿಕಾರಾರೂಢವಾದಂದಿನಿಂದ ಅವರಲ್ಲಿ ತ್ಯಾಗಬುದ್ಧಿ ಕ್ಷೀಣವಾಗಹತ್ತಿದೆ. ಜನತೆಯ ಸೇವೆ ಮಾಡುವ ಶಕ್ತಿ ಕಾಂಗ್ರೆಸ್ಸಿನಲ್ಲಿ ಉಳಿದಿಲ್ಲ.

ಬ್ರಿಟಿಶರಲ್ಲಿದ್ದ ಅಧಿಕಾರವು ನಾಲ್ಕು ಭಾಗವಾಗಿ ಹಸ್ತಾಂತರವಾಯಿತು. (೧) ಪಾಕಿಸ್ತಾನ, (೨) ಸಂಸ್ಥಾನಿಕರು, (೩) ಬಂಡವಳಗಾರರು, (೪) ಹಿಂದೀಜನರ. ಈ ರೀತಿ ನಮಗೆ ಬಂದ ನಾಲ್ಕಾಂಶ ಅಧಿಕಾರದಿಂದಲೇ ನಾವು ಪೂರ್ಣವನ್ನು ಸಾಧಿಸಬೇಕಾಗಿದೆ. ಸರದಾರ ಪಟೇಲರ ಚತುರ ನೀತಿಯ ಪರಿಣಾಮವಾಗಿ ಸಂಸ್ಥಾನಿಕರು ಮಾಯವಾದರು ಸಂಸ್ಥಾನಿಕರನ್ನು ಮರ್ದಿಸಿದಂತೆಯೇ ನಮ್ಮ ಸರಕಾರವು ಬಂಡವಾಳಗಾರರನ್ನು ನಾನಾ ಉಪಾಯಗಳನ್ನು ಯೋಚಿಸಿ ಮರ್ದಿಸಬೇಕು. ಅದರ ಹೊರತು ಜನತೆಗೆ ನಿಜವಾದ ಸ್ವರಾಜ್ಯ ದೊರೆಯಲಾರದು.

ಶಸ್ತ್ರಕ್ಕಿಂತ ಬಲವಾದ ಶಕ್ತಿಯೊಂದಿದೆ ಇದಕ್ಕೆ ನಾವು ಆತ್ಮಶಕ್ತಿ, ಸತ್ಯಶಕ್ತಿ ಇಲ್ಲವೆ ಜನತಾಶಕ್ತಿ ಎನ್ನಬಹುದು ಇದು ಎಂತಹ ಹಿಟ್ಲರಶಾಹಿಯನ್ನು ಸದೆಬಡೆಯ ಬಲ್ಲದೆಂದು ಮಹಾತ್ಮರು ನಮಗೆ ಕಲಿಸಿದ್ದಾರೆ. ಜನತೆಗೆ ಇಂದು ಕಾಂಗ್ರೆಸ್ಸಿನಲ್ಲಿ ಅವಿಶ್ವಾಸವುಂಟಾಗಿಲ್ಲ. ಆದರೆ ತಮ್ಮಲ್ಲಿಯ ಆತ್ಮ ವಿಶ್ವಾಸವನ್ನೇ ಕಳೆ

ಕೊಂಡಿದ್ದಾರೆ ಸಮಾಜವಾದವೆಂದರೆ ಒಮ್ಮೆಲೇ ಅಂಜುತ್ತಾರೆ. ಸಮಾಜವಾದಿಗಳು ಚಿಕ್ಕ ಪುಟ್ಟಸ್ಥಾನಿಕ ವ್ಯಾಪಾರಸ್ಥರನ್ನು ಸಹ ನಿರ್ಮೂಲಗೊಳಿಸುವರೆಂಬ ಭಾವನೆ ತುಂಬಿಕೊಂಡು ಅವರೆಲ್ಲರೂ ಟಾಟಾ ಬಿರ್ಲಾರಂತಹರ ರಕ್ಷಣೆಗಾಗಿ ಕೂಗೆಬ್ಬಿಸುತ್ತಾರೆ. ಆದರೆ ನಿಜವಾದ ಪರಿಸ್ಥಿತಿ ಹಾಗಿಲ್ಲ ಪ್ರತಿಯೊಂದು ವ್ಯವಹಾರದಲ್ಲಿ ಪ್ರಾಮಾಣಿಕತೆ ಇರಬೇಕು. ಲಾಭ ಹಾನಿಗಳೆಡೆಗೆ ಲಕ್ಷ್ಯವಿರದೆ ಜನತೆ ಹಾಗೂ ರಾಷ್ಟ್ರದ ಹಿತದ ದೃಷ್ಟಿಯಿಂದ ಪ್ರತಿಯೊಬ್ಬನೂ ದುಡಿಯಬೇಕು ಇದೇ ನಮ್ಮ ಧ್ಯೇಯ

ಬ್ರಿಟಿಶರು ಹೋದದ್ದರಿಂದ ನಮ್ಮಲ್ಲಿ ಸ್ವರಾಜ್ಯ ಸ್ಥಾಪನೆಯಾದಂತಾಗಲಿಲ್ಲ. ಕರ್ತೃತ್ವ ಹಾಗೇ ಉಳಿದಿದೆ. ಇಂದಿನ ಸಮಾಜದಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕು. ಅದರಲ್ಲಿ ನವಶಕ್ತಿಯನ್ನು ತುಂಬಬೇಕು. ಲೋಕತಂತ್ರ ಸಮಾಜವನ್ನು ನಾವು ನಿರ್ಮಿಸಬೇಕು ಸಮಾಜದಲ್ಲಿಯ ಕರ್ತೃತ್ವಶಕ್ತಿಗೆ ನವರೂಪಕೊಡುವದೇ ನಮ್ಮ ಉದ್ದೇಶ" ಎಂದು ಮುಂತಾಗಿ ಹೇಳಿದರು.

—(O)—

ಬೆಲೆ ಕಡಿತವನ್ನು
ಅರಿಸಿಕೊಳ್ಳೋಣ

——

ತನ್ನ ದಾರಿಯಲ್ಲಿ ಅಕಸ್ಮಾತ್ ಬಂದ ಎಲ್ಲ ಅಡೆತಡೆಗಳನ್ನು ಹೇಗೆ ದಾಟಿ ಪಾರಾಗಬೇಕೆಂಬುದನ್ನು ತಿಳಿದವನು ಮಾತ್ರ ಬದುಕಬಲ್ಲನು ಮತ್ತು ಸುಖದ, ತೃಪ್ತಿಯ ಹಾಗೂ ಉತ್ಕರ್ಷದ ಬಾಳನ್ನು ಬಾಳಬಲ್ಲನು. ಇದು ವ್ಯಕ್ತಿಗೆ ಅನ್ವಯಿಸುವಂತೆ, ಉತ್ಸಾಹಪೂರ್ಣ ಜನರಿಂದ ತುಂಬಿದ ದೇಶಕ್ಕೂ ಸಂಬಂಧಿಸುವದು. ಆದ್ದರಿಂದ ತನ ದಾರಿಯಲ್ಲಿ ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ ಬಂದ ಎಲ್ಲ ತೊಂದರೆ ತೊಡಕುಗಳನ್ನು ಮೀರಿ ನಿಲ್ಲಬಲ್ಲ ರೀತಿಗಳನ್ನು ಬಲ್ಲ ದೇಶವು ಮಾತ್ರ ಚಿರಂಜೀವಿಯಾಗಿಯೂ, ಸ್ವತಂತ್ರವಾಗಿಯೂ, ಉತ್ಕರ್ಷಪೂರ್ಣವಾಗಿಯೂ ಬಾಳಬಲ್ಲದು.

ನಮ್ಮ ರೂಪಾಯಿಯ ಬೆಲೆ ಕಡಿತವು ಇಂದು, ನಮಗೆ ಅನೇಕ ತೊಂದರೆಗಳನ್ನೊಡ್ಡುವಂತೆ ಮಾಡಿದೆ ಕೆಲವು ಅರ್ಥಶಾಸ್ತ್ರಜ್ಞರು, ಈ ರೂಪಾಯಿಯ ಬೆಲೆ ಕಡಿತದಿಂದ ಭಾರತವು ತೊಂದರೆಗೊಳಗಾಗುವದೆಂದು ಹೇಳುತ್ತಾರೆ; ಕೆಲವು, ಸ್ಟರ್ಲಿಂಗ ಕ್ಷೇತ್ರದೊಳಗಿನ ಉಳಿದ ಸರಕಾರಗಳೊಡನೆ ಸರಿಸಮ ಹೆಜ್ಜೆಯನ್ನಿಕ್ಕುವ ನಮ್ಮ ಸರಕಾರದ ಈ ಧೋರಣವನ್ನು ಹೊಗಳುತ್ತಾರೆ.

ಈ ಬೆಲೆ ಕಡಿತದಿಂದಾಗುವ ಲಾಭ ಹಾನಿಗಳೇನೇ ಇರಲಿ, ನಾನು ಮಾತ್ರ ಇದು ನಮ್ಮ ಮತ್ತು ನಮ್ಮ ದೇಶದ ಒಳಿತಿಗಾಗಿಯೇ ಆಗಿದೆಯೆನ್ನುತ್ತೇನೆ. ನಮ್ಮ ಉಳಿದ ಕೊರತೆ ಬೇಕುಗಳೇನೇ ಇದ್ದರೂ ದುರ್ದೈವದಿಂದ, ದಿನದ ಅನ್ನಕ್ಕಾಗಿಕೂಡ, ನಾವು ಪರರನ್ನು ಅತಿಯಾಗಿ ಅವಲಂಬಿಸುವ ಚಟಕ್ಕೆ ಬಿದ್ದೇವೆ. ಪರಾವಲಂಬನವು ಮನುಷ್ಯನನ್ನು ಸೋಮಾರಿ, ಕೈಕಾಲುಗೇಡಿ, ಪುಕ್ಕನನ್ನಾಗಿ ಮಾಡುತ್ತದೆ. ನಾವು ಅದೇ ಸ್ಥಿತಿಗಿಳಿದಿದ್ದೇವೆ. ಮಾನವ ಜೀವನಕ್ಕೆ ಅವಶ್ಯವಿರುವ ಆಹಾರ, ಮತ್ತು ಇತರ ಸಾಮಗ್ರಿಗಳನ್ನು ಅಮೇರಿಕೆಯು ನಮಗೆ ಪೂರೈಕೆ ಮಾಡುತ್ತದೆ. ಮುಂದೆಯೂ ಹೀಗೆಯೇ ಆಗುವದಾದಲ್ಲಿ ಹಾಗೂ ನಮ್ಮ ಬೇಕುಗಳಿಗಾಗಿ ಇಂಗ್ಲಂಡದಂತಹ ದೇಶಗಳನ್ನು ನಾವು ಅವಲಂಬಿಸಬೇಕಾದಲ್ಲಿ— ದೇವರು ಕಾಯಲಿ— ಭಾರತವು ಪುನಃ ರಾಜಕೀಯವಾಗಿ ಅಲ್ಲದಿದ್ದರೂ ಆರ್ಥಿಕವಾಗಿ ದಾಸ್ಯ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ. ಈ ಪರಿಸ್ಥಿತಿಯನ್ನು ತಡೆಯುವದು ಅವಶ್ಯವಿದೆ.

ಈ ರೂಪಾಯಿಯ ಬೆಲೆಕಡಿತದಲ್ಲಿಯ ಕಾಣದ ಕೈಯೊಂದರ ಕೃತಿ ನನಗೆ ಕಂಡು ಬರುತ್ತಲಿದೆ. ಇದರಿಂದ ಇನ್ನೇನಲ್ಲದಿದ್ದರೂ ನಾವು ಚಟುವಟಿಕೆಯುಳ್ಳವರೂ ಉತ್ಸಾಹಿಗಳೂ, ಧೈರ್ಯಶಾಲಿಗಳೂ ಆಗಿ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯವನ್ನು ಪಡೆಯಬೇಕು ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಹೆಚ್ಚು ಹೆಚ್ಚಾಗಿ ಉತ್ಪಾದನೆಯನ್ನು ಮಾಡಬೇಕು; ಮತ್ತು ನಾವು ಸ್ವತಂತ್ರವಾಗಿ ಸುಖವಾಗಿ, ತೃಪ್ತಿಯಿಂದ ಜೀವಿಸಲು ಬರುವಂತೆ ದೇಶವನ್ನು ಬೆಳೆಸಬೇಕು. ನಾವು ನಮಗೆ ಅವಶ್ಯವಿರುವ ಕಾಳು, ಹತ್ತಿ ಸೆಣಬು ಮತ್ತು ಉಳಿದ ಪದಾರ್ಥಗಳನ್ನು ಹೆಚ್ಚು ಹೆಚ್ಚಾಗಿ ಉತ್ಪಾದಿಸದಂತೆ ತೀವ್ರವಾಗಿ ನಾವು ಈ ಬೆಲೆಕಡಿತದಿಂದಾದ ಪರಿಸ್ಥಿತಿಯನ್ನು ಎದುರಿಸಿ ಪಾರಾಗಬಲ್ಲೆವು. ಈ ಕಾರ್ಯದಲ್ಲಿ, ಮೂಲಧನವಂತರು, ಉದ್ಯಮೆದಾರರು, ವ್ಯಾಪಾರಿಗಳು, ಕೂಲಿಕಾರರು, ಕೆಲಸಗಾರರು, ಹಾಗು ಉಳಿದವರೆಲ್ಲರು ಪರಸ್ಪರ ಸಹಕರಿಸಿ, ಒಗ್ಗಟ್ಟಿನಿಂದ ಕೆಲಸಮಾಡಿ ಭಾರತದ ಇಂದಿನ ಹೆಸರು ಕೀರ್ತಿಗಳಿಗೆ ಕಲಂಕ ತಟ್ಟದಂತೆ ನೋಡಿಕೊಳ್ಳಬೇಕು.

ಕೆಲಸಗಾರರು ಮತ್ತು ಒಡೆಯರು ಇಬ್ಬರೂ ಕುಂಬಿಯಮೇಲೆ ಕುಳಿತು ಚಿಕ್ಕ ಪುಟ್ಟ ಲಾಭದಸಲುವಾಗಿ ಪರಸ್ಪರ ವಾದಿಸುವದನ್ನು ಮತ್ತು ಜಗಳಾಡುವುದನ್ನು ತೊರೆದಿಡಬೇಕು. ತಮ್ಮತಮ್ಮೊಳಗಿನ ಅಲಸಗಳನ್ನು ಭದ್ರಪಡಿಸಿಕೊಂಡು ಹಗಲು ರಾತ್ರಿ ಕೆಲಸ ಸಾಗಿಸಿ, ದೇಶದೊಳಗಿನ ಬಳಕೆಗೂ, ದೇಶದ ಹೊರಗಿನ ವ್ಯಾಪಾರಕ್ಕೂ ಸಾಕಷ್ಟು ಸಾಮಗ್ರಿಗಳನ್ನು ಉತ್ಪಾದಿಸಲು ದುಡಿಯಬೇಕು.

ಪಂಡಿತ ನೆಹರೂರಿಗೆ
ಸಂಭ್ರಮದ ಸ್ವಾಗತ

——

ಪಂಡಿತ ನೆಹರೂರವರು ಲಂಡನ್ನಿನಲ್ಲಿ ಬ್ರಿಟಿಷ್ ಮುಖ್ಯ ಮಂತ್ರಿಗಳ ಅತಿಥಿಗಳಾಗಿ ಒಂದುದಿನ ಇದ್ದು ನಂತರ ಅಮೇರಿಕಾಕ್ಕೆ ಅಧ್ಯಕ್ಷ ಟ್ರೂಮನ್ನರ ವಿಮಾನದಲ್ಲಿ ತಮ್ಮ ಮಗಳಾದ ಶ್ರೀಮತಿ ಇಂದಿರಾ ಗಾಂಧಿಯವರೊಂದಿಗೆ ಒದಗಿದರು. ಕಾರ್ಯದರ್ಶಿ ಮತ್ತು ಪರಿವಾರದವರೂ ಇದ್ದಾರೆ. ಅಧ್ಯಕ್ಷ ಟ್ರೂಮನ್ನರು ಭೋಜನ ಸಮಾರಂಭವನ್ನೇರ್ಪಡಿಸಿದ್ದರು ಇಡೀ ಅಮೇರಿಕಾದ ವೃತ್ತಪತ್ರಗಳು ಪ್ರಶಂಸಾತ್ಮಕ ಲೇಖನಗಳನ್ನು ಪ್ರಕಟಿಸಿವೆ. ಅಮೇರಿಕಾದಲ್ಲಿನ ಭಾರತೀಯರು ನೆಹರೂರ ಸಂದರ್ಶನದಿಂದ ಅತ್ಯಂತ ಆನಂದ ಭರಿತರಾಗಿದ್ದಾರೆ.

ಶ್ರೀ ಪಂಪಾಪತಿ ವಿರುಪಾಕ್ಷಸ್ವಾಮಿಯ

★ ನೂತನ ರಥ ನಿರ್ಮಾಣ ನಿಧಿ ★

ಹಂಪೆ — ಹೊಸಪೇಟೆ.

ಭಕ್ತಾಭಿಮಾನಿಗಳಲ್ಲಿ ವಿಜ್ಞಾಪನೆ :—

ಮಹಾಶಯರೇ !

ಪ್ರತಿ ವರ್ಷದಂತೆ ಇದೇ ವಿರೋಧಿ ನಾಮ ಸಂ। ಚೈತ್ರ ಶು॥ ಹುಣ್ಣಿಮೆಯಲ್ಲೂ ಕನ್ನಡರಾಜ್ಯ ರಕ್ಷಾಮಣಿ ಎನಿಸಿದ ಶ್ರೀ ಹಂಪೆಯ ಪಂಪಾಪತಿ ವಿರೂಪಾಕ್ಷಸ್ವಾಮಿಯ ರಥೋತ್ಸವವು ಲಕ್ಷಾವಧಿ ಯಾತ್ರಿಕರ ಪ್ರೇಕ್ಷಣೀಯ ಜನಸಮುದಾಯದಲ್ಲಿ ಅತ್ಯಂತ ವಿಜೃಂಭಣೆಯಿಂದ ಜರುಗಿ ಸಂತೋಷವನ್ನುಂಟುಮಾಡಿತು. ನಾವೆಲ್ಲರೂ ಈ ಸಂತೋಷದ ಭರದಲ್ಲಿರುತ್ತಿರುವಾಗಲೇ ಚೈತ್ರ ಬ॥ ೪ ಶನಿವಾರ ದುರ್ದೈವವಶಾತ್ ಶ್ರೀ ಪಂಪಾಪತಿಯ ಮಹಾರಥಕ್ಕೆ ಅಗ್ನಿಸ್ಪರ್ಶವಾಗಿ ಭಸ್ಮೀಭೂತವಾದ ದುರಂತವನ್ನು ಕುರಿತು ನೀವೆಲ್ಲರೂ ಕಂಡು ಕೇಳಿ ಅರಿತುಕೊಂಡಿರಬಹುದು. ಉತ್ಸವೇಚ್ಛೆ ಹಾಗಿರುವಾಗ ಆ ಪುರಾತನ ರಥವನ್ನು ಉಳಿಸಿಕೊಳ್ಳಲು ಮನುಷ್ಯಮಾತ್ರರಾದ ನಾವು ಮಾಡಿದ ಪ್ರಯತ್ನವೆಲ್ಲ ವ್ಯರ್ಥವಾಯಿತು. ನಮ್ಮ ನಾಡಿಗೆ ಇದೊಂದು ಅನಿಷ್ಟ ಸೂಚಕ ಪ್ರತೀಕವೆಂದು ಬಹುಜನರ ಮನಸ್ಸಿಗೆ ಕಳವಳ ಉಂಟಾಗಿರುವದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಆಸ್ತಿಕರಾದ ನಾವು ಭೀತಿಗೊಂಡು ಸುಮ್ಮನೆ ಕೂಡ್ರುವದು ನೀತಿಯಲ್ಲ. ದೇವರ ಮನಸ್ಸಿಗೆ ಒಂದಾನೊಂದು ಆಗದೆ ಹೋಯಿತು. ಇದೊಂದು ನಮ್ಮ ಭಕ್ತಿ ಶಕ್ತಿಗಳ ಸತ್ವ ಪರೀಕ್ಷೆಯ ಸಮಯವೆಂದು ತಿಳಿದು ಮುಂದಿನ ಕರ್ತವ್ಯವನ್ನು ನಿರ್ಧರಿಸಿ ಕೃತಾರ್ಥರಾಗುವ.

ಸ್ವರ್ಣ ವೃಷ್ಟಿಯನ್ನು ಸುರಿಸಿ ಜಗತ್ಪ್ರಸಿದ್ಧ ವಿಜಯನಗರ ಸಾಮ್ರಾಜ್ಯವನ್ನು ಕಟ್ಟಿ ಆಳಿದ ವಿದ್ಯಾರಣ್ಯಗುರು ಪರಂಪರೆಯಲ್ಲಿ ಬೆಳೆದು ಪೀಠಾಚಾರ್ಯ ಪಂಕಜ ರೆಂದೆನಿಸಿಕೊಳ್ಳುವ ನನಗೆ ಒಂದು ಚಿಕ್ಕ ತೇರಿನ ರಥವನ್ನು ಮತ್ತೊಮ್ಮೆ ಕಟ್ಟಿ ನಿಲ್ಲಿಸುವದೇನು ದೊಡ್ಡ ಕೆಲಸವಾಗಲಿಕ್ಕಿಲ್ಲ. ಆದರೆ ಕಾಲಮಾನಸ್ಥಿತಿ ಬಹು ಸೂಕ್ಷ್ಮವಾಗಿರುವ ಕಾರಣ ಎಲ್ಲರ ಎಲ್ಲರೀತಿಯ ಸಹಾಯವಿಲ್ಲದೆ ಯಾವ ಕೆಲಸವೂ ಜಯಪ್ರದವಾಗಿ ಕೊನೆಗೊಳ್ಳುವುದು ಶಕ್ಯವಿಲ್ಲ. ಬಡವರು ಬಲ್ಲಿದರೆಂಬ ಭೇದಭಾವವಿಲ್ಲದೆ ಎಲ್ಲಾ ಭಕ್ತಾಭಿಮಾನಿಗಳ ಸುಮನೋರಥವೇ ಶ್ರೀ ಪಂಪಾಪತಿಯ ನೂತನ ಮಹಾರಥವಾಗಿ ಅವತಾರಮಾಡಬೇಕೆಂಬುದೆ ನನ್ನ ಹಾರೈಕೆ.

ಈಗಿನ ವಸ್ತುಸ್ಥಿತಿಯನ್ನು ಲಕ್ಷಿಸಿ ಪಂಪಾಕ್ಷೇತ್ರದ ಘನತೆಗೆ ತಕ್ಕ ಸರ್ವಾಂಗಸುಂದರವಾದ ಒಂದು ಹೊಸ ತೇರು ನಿರ್ಮಾಣವಾಗಿ ಅದರ ಪ್ರತಿಷ್ಠಾಪನೆ, ಶಾಂತಿ ಸಮಾರಾಧನೆ ಮುಂತಾದ ಕಾರ್ಯ ಕಲಾಪಗಳಿಗೆ ಒಟ್ಟು ಒಂದು ಲಕ್ಷರೂಪಾಯಿಗಳ ಧನ ಸಂಗ್ರಹವಾಗಬೇಕೆಂದು ತಜ್ಞರು ಅಂದಾಜುಮಾಡಿದ್ದಾರೆ. ಆ ಪೈಕಿ ಈವರೆಗೆ ಸುಮಾರು ಹತ್ತು ಸಾವಿರದಷ್ಟು ಹಣ ಮಾತ್ರ ಕೂಡಿದೆ. ಆದ ಕೆಲಸಕ್ಕಿಂತಲು ಆಗಬೇಕಾದ ಕೆಲಸವೆ ಮುಖ್ಯವಾದುದಿದೆ. ಮುಂಬರುವ ಚೈತ್ರ ಶು॥ ಪ್ರತಿಪದದೊಳಗಾಗಿ ನೂತನ ರಥ ನಿರ್ಮಾಣಕಾರ್ಯವು ಸಂಪೂರ್ಣವಾಗಲೇ ಬೇಕೆಂಬ ಗುರಿಯನ್ನು ಮರೆಯದೆ ಕೊಡುಗೈ ದೊರೆಗಳಾದ ನೀವೆಲ್ಲರೂ ಧಾರಾಳವಾಗಿ ಧನ ಸಹಾಯವನ್ನು ನೀಡಿ ಇಹಲೋಕ ಕಲ್ಯಾಣ ಕಾರಕವಾದ ಪುಣ್ಯ ಕಾರ್ಯದಲ್ಲಿ ಭಾಗಿಗಳಾಗಿ ಶ್ರೀ ಪಂಪಾಪತಿ ವಿರೂಪಾಕ್ಷಸ್ವಾಮಿಯ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕೆಂದು ಬಯಸುವ,

ಇಂತು ಸರ್ವ ಶ್ರೇಯೋಭಿಲಾಷಿಗಳು,
ಧರ್ಮಕರ್ತರುಗಳಾದ–

ಶ್ರೀ ಶಂಕರ ಭಾರತಿ
ಸ್ವಾಮಿಗಳು

[ಹಣದ ಸಹಾಯ ಮಾಡುವವರು ಶ್ರೀ ಶಂಕರ ಭಾರತಿ ಸ್ವಾಮಿಗಳು ಹಂಪೆ-ಹೊಸಪೇಟೆ ಮಾರ್ಗ- ಈ ವಿಳಾಸಕ್ಕೆ ಹಣ ಕಳುಹಿಸಲು ಕೋರಿದೆ]

ಮ॥ ರಾ॥ ಶ್ರೀ॥ ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ

O. P 36 49

ಮೈನರ 1. ಈಶಪ್ಪ 2. ಮಾನಪ್ಪ 3. ಶ್ರೀಧರ ಇವರ ನಿಗೇವಾನಿ ತಾಯಿ ಆಕ್ಸಾಲಿ ಈರಮ್ಮ 4 ಈರಮ್ಮ ಸಾ॥ ಕೊಟ್ಟೂರು. .... ಅರ್ಜಿದಾರರು

ಮೇಲಿನ ಅರ್ಜಿಯಲ್ಲಿ ಅರ್ಜಿದಾರರ ಲೇಟ್ V M. ನೀಲಕಂಠ ಎಂಬಾತಗೆ ಯುನೈಟೆಡ್ ಲೈಫ್ ಅಸ್ಯೂರೆನ್ಸ ಕಂಪನಿ Ltd. ಮದರಾಸು ಇವರಿಂದ Policy No. 88333ರ ಕಳಿಸಿ ಬರತಕ್ಕ ರೂ 1000 ಕ್ಕೆ ವಾರ್ಸ ಸರ್ಟಿಫಿಕೆಟ್ಟು (Succession certificate) ಕೊಡಲು ಕೋರಿರುತ್ತಾರೆ ಸದ್ರಿ ಲೇಟು ನೀಲಕಂಠಪ್ಪ 1 ರಿಂದ 3 ಅರ್ಜಿದಾರರ ತಂದೆಯು ಇದಕ್ಕೆ ಯಾರಾದರೂ ಆಕ್ಷೇಪಣೆ ಮಾಡುವುದಾದಲ್ಲಿ 29-10-49 ಕ್ಕೆ 10 ಘಂಟೆಗೆ ಕೋರ್ಟಿನಲ್ಲಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ Succession Certificate ಅರ್ಜಿದಾರರಿಗೆ ಕೊಡಲಾಗುವುದು.

ಎಸ್. ಶೇಷಗಿರಿಯಾಚಾರ್
ಹೊಸಪೇಟೆ, ಅಡ್ವಕೇಟು
11-10-49.

- (೦) -

ಸಿಮೆಂಟ್ ಬೇಡುವವರಿಗೆ ಮುಖ್ಯ ಸೂಚನೆ

ಹಳ್ಳಿಗರು ತಮಗೆ ಅವಶ್ಯಕವಾಗಿ ಬೇಕಾದ ಸಿಮೆಂಟಿಗಾಗಿ ಎಲ್ಲಿ ಕೇಳಬೇಕೆಂದು ತಿಳಿಯದೆ ವ್ಯಥೆಪಡುತ್ತಿರುವರು. ಆ ಹಳ್ಳಿ ಇರುವ ತಾಲೂಕ್ ತಹಶೀಲ್ದಾರರು ೨೦ ಚೀಲಗಳವರೆಗೂ ಪರ್ಮಿಟ್ ಕೊಡುವರು. ೨೦ ಚೀಲಗಳಿಗಿಂತ ಹೆಚ್ಚು ಬೇಕಾದಲ್ಲಿ ದಿ ಅಸಿ. ಸಿಮೆಂಟ್ ಕಂಟ್ರೋಲರ್ 9 ಮಾಂಟ್ ರೋಡ್ ಮದ್ರಾಸ್ ಈ ವಿಳಾಸಕ್ಕೆ ಕಟ್ಟಡದ ಪ್ಲಾನ್ ಮತ್ತು ವೇದಿಕೆಯನ್ನು ಕಳುಹಿಸಿದಲ್ಲಿ ಬೇಕಾದ ಸಿಮೆಂಟ್ ದೊರೆಯುತ್ತದೆ. ಈಗಿನ ಸಿಮೆಂಟ್ ಬೆಲೆ ಚೀಲಕ್ಕೆ ರೂ. 4-9-0 ಮತ್ತು ಸೇಲ್ಸ್‌ಟ್ಯಾಕ್ಸ್

ನವಭಾರತದ ಹಿತೈಷಿಗಳಲ್ಲಿ

.... ವಿಜ್ಞಾಪನೆ ....

ಬಳ್ಳಾರಿ ಜಿಲ್ಲೆಯ ವೃತ್ತ ಪತ್ರಿಕೋದ್ಯಮದಲ್ಲಿ **ನವಭಾರತಕ್ಕೆ** ಮನ್ನಣೆ ಸಿಗಬೇಕಾದುದು ಅವಶ್ಯಕವಾಗಿದೆ. ೧೯೩೦-೩೧ ರಲ್ಲಿ ಜಿಲ್ಲೆಗಾಗಿ **ಕರ್ನಾಟಕ ಕೇಸರಿ** ಎಂಬ ವಾರಪತ್ರಿಕೆಯು ಪ್ರಾರಂಭವಾಗಿ ೧೯೩೨ ರ ಕರಾಳ ಶಾಸನಗಳಿಗೆ ಗುರಿಯಾಯಿತು. ಅಲ್ಲಿಂದ ಮತ್ತೆ ಕಾಂಗ್ರೆಸ್ ರಾಜ್ಯಭಾರವು ಬರುವವರೆಗೆ ಅಂದರೆ ೧೯೩೭ ರ ವರೆಗೆ ಪತ್ರಿಕೆಯ ಪುನರಾರಂಭಕ್ಕೆ ಅಪ್ಪಣೆಯು ದೊರೆಯಲಿಲ್ಲ. ಮುದ್ರಣಾಲಯವನ್ನು ಬೇರೆ ಕೆಲಸಗಳಿಗಾಗಿ ತೆಗೆದಿಡೋಣವೆಂದರೂ ಜಿಲ್ಲಾ ಮ್ಯಾಜಿಸ್ಟ್ರೇಟರು ಉತ್ತರ ಕೊಡಲಿಲ್ಲ.

೧೯೩೭ ರಿಂದ 'ನವಭಾರತ' ವಾರ ಪತ್ರಿಕೆಯು ವಿಶೇಷ ವಿಘ್ನಗಳಿಲ್ಲದೆ ನಡೆಯುತ್ತಲಿದೆ. ಬಡ ಹಳ್ಳಿಗರ ರೈತರ- ಹರಿಜನರ- ಸರ್ವ ಸಂಗಡಗಳ ಸೇವೆಯನ್ನು ನಿಸ್ವಾರ್ಥ ದೃಷ್ಟಿಯಿಂದ ನಿರ್ಭಿಡೆಯಿಂದ ಮಾಡುತ್ತಿರುವ ಕಾರಣವೇ ಈ ಪತ್ರಿಕೆಯು ಜನಾದರಕ್ಕೆ ಪಾತ್ರವಾಗಿದೆ. ಸಂಪಾದಕರು ಸ್ವಾತಂತ್ರ್ಯೋದ್ಯಮದಲ್ಲಿ ಭಾಗ ವಹಿಸಿ ತಮ್ಮ ಪತ್ನಿಯೊಂದಿಗೆ ಜೈಲು ವಾಸ ಭೋಗಿಸಿರುವುದೂ, ಅವರು ಬಡವರಿಗಾಗಿ ದುಡಿಯುತ್ತಿರುವದೂ, ಎಲ್ಲರಿಗೂ ತಿಳಿದ ವಿಷಯವಾಗಿದೆ. ಬಡವರಸೇವೆ, ಒಳ್ಳೆಯ ಅರ್ಥಿಕ ತಳಹದಿಯಮೇಲೆ ಸಂಪತ್ತಿನ ವಿಭಜನೆ, ಭಾರತ ರಾಷ್ಟ್ರದ ಧೃಡತೆಗಾಗಿ ನವಭಾರತವು ಹೆಣಗುತ್ತಲಿದೆ. ಭಾಷಾವಾರ ತತ್ವದಮೇಲೆ ರಾಷ್ಟ್ರ ವಿಭಜನೆಗೆ ಪುಷ್ಟಿ ಕೊಟ್ಟು, ಪ್ರಾಂತಗಳ ನಿರ್ಮಾಣವು ಮೈಸೂರನ್ನೊಳಗೊಂಡ ಬೃಹತ್ಕರ್ನಾಟಕ ನಿರ್ಮಾಣವಾಗಬೇಕೆಂದು'ನವಭಾರತ'ವು ಪ್ರತಿಪಾದಿಸುತ್ತಲಿದೆ.

ಹೀಗೆ ರಾಷ್ಟ್ರಪ್ರಗತಿಗಾಗಿ **"ಜನಸೇವೆಯೇ ಜನಾರ್ದನಸೇವೆ"**ಯ ಪಾತ್ರೆಯವನ್ನಿಟ್ಟುಕೊಂಡ 'ನವಭಾರತಕ್ಕೆ' ಕೊರತೆಯೆಂದರೆ ಮುದ್ರಣಾಲಯದ್ದು. ಸ್ವಂತ ಮುದ್ರಣವಿಲ್ಲದೆ ಸಂಪಾದಕರು ಕಳೆದ ೧೨ ವರ್ಷಗಳಲ್ಲಿ ಬಹಳ ಕಷ್ಟನಷ್ಟಗಳಿಗೆ ಗುರಿಯಾಗಿರುತ್ತಾರೆ. ಸಾರ್ವಜನಿಕ ಕಾರ್ಯಗಳಿಗೆಲ್ಲಾ ಸಹಕಾರಿಯಾದ ವೃತ್ತಪತ್ರಿಕೋದ್ಯಮವನ್ನು ಬೆಳಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಕಾರಣ 'ನವಭಾರತ' ಕ್ಕಾಗಿ ಒಂದು ಮುದ್ರಣಾಯಂತ್ರವನ್ನು ಕೊಡಿಸಲು ನಿಮ್ಮ ಕೈಲಾದ ಸಹಾಯ ಮಾಡಬೇಕೆಂದು ನಾವು ಬಳ್ಳಾರಿಜಿಲ್ಲಾ ಜನತೆಯನ್ನು ವಿನಯದಿಂದ ಕೋರುತ್ತೇವೆ.

ಶೀಘ್ರದಲ್ಲೇ ಸಂಪಾದಕ ಮಂಡಳಿಯೂ ವ್ಯವಸ್ಥಾಪಕ ಸಮಿತಿಯೂ ಏರ್ಪಟ್ಟಾಗಿ 'ನವಭಾರತ' ವು ಎಲ್ಲಾ ವಿಷಯಗಳಲ್ಲೂ ಸರ್ವಾಂಗ ಸುಂದರವಾಗುವುದು. ಈಗ ಸದ್ಯಕ್ಕೆ ೩ ವಿಧದ ಸದಸ್ಯರ ಯೋಜನೆ ಮಾಡಲಾಗಿದೆ.

೧೦೦ ರೂ. ಕೊಡುವವರು ರಾಜಪೋಷಕರು - ಅವರಿಗೆ ಜೀವಾವಧಿ 'ನವಭಾರತ' ಪತ್ರಿಕೆ ಉಚಿತವಾಗಿ ದೊರೆಯುತ್ತದೆ.

೫೦ ರೂ. ಅರ್ಪಿಸುವವರು - ೫ ವರ್ಷ 'ನವಭಾರತವು' ಉಚಿತವಾಗಿ ದೊರೆಯುತ್ತದೆ.

೨೫ ಕೊಡುವವರು ಪೋಷಕರು - ೨ ವರ್ಷಗಳವರೆಗೆ 'ನವಭಾರತ' ವು ಉಚಿತವಾಗಿ ಕೊಡಲಾಗುತ್ತದೆ.

೧೦ ಸಾಮಾನ್ಯ ಪೋಷಕರು - ಇದು ವಾರ್ಷಿಕವಿದೆ.

ಹೀಗೆ ಸದಸ್ಯರಾಗುವವರ ಹೆಸರನ್ನು ಕೃತಜ್ಞತಾಪೂರ್ವಕವಾಗಿ ಪತ್ರಿಕೆಯಲ್ಲಿ ಕಾಣಿಸಲಾಗುತ್ತದೆ. ಈ ಯೋಜನೆಯು ಹೊಸದಲ್ಲ. ೧೨ ವರ್ಷಗಳ ಸೇವೆ ಸಲ್ಲಿಸಿ ಜನತೆಯ ಮುಂದೆ ಬರಲಾಗಿದೆ. ಈ ಕಾರಣ ಎಲ್ಲರು ಕೊಡುಗೈಯಿಂದ ಸಹಾಯ ಮಾಡಲು ನಾವು ಕೋರುತ್ತೇವೆ.

[ಇದಕ್ಕೆ ಜಿಲ್ಲೆಯ ವಿವಿಧ ತಾಲೂಕುಗಳ ಪ್ರಮುಖರು ಸಹಿ ಮಾಡಿದ್ದಾರೆ.]

ಶಾಸನ ಸಭ್ಯರಿಗೂ ಅವರ ಬಂಧುಗಳಿಗೂ ಕಂಟ್ರೋಲ ಸಾಮುಗ್ರಿಗಳಿಗಾಗಿ ಪರ್ಮಿಟ-ಯಾ- ಲೈಸನ್ಸುಗಳನ್ನು ಕೊಡಬಾರದೆಂದು ಸರ್ಕಾರದ ಅಪ್ಪಣೆಯಾಗಿದೆ. ಬಟ್ಟೆ ಮತ್ತು ನೂಲಿನ ವ್ಯಾಪಾರಕ್ಕೆ ಇದು ಅನ್ವಯಿಸುವದಿಲ್ಲ. ಅಲ್ಲದೆ ಈ ಹಿಂದೆ ಕೊಟ್ಟವುಗಳನ್ನು ರದ್ದು ಮಾಡಲಾಗುವದಿಲ್ಲ.

[ಈ ಹಿಂದೆ ಕೊಟ್ಟ ಲೈಸೆನ್ಸ್ - ಯಾ - ಪರ್ಮಿಟ್‌ಗಳನ್ನು ರದ್ದುಮಾಡಿದ್ದರೆ ಚನ್ನಾಗಿತ್ತು.

[ಸಂಪಾದಕ.]

ಪಂಡಿತ ನೆಹರೂರವರು ಅಮೆರಿಕಾ ಶಾಸನ ಸಭೆಗಳಲ್ಲಿ ಹೆಸರಾದ "ಕಾಂಗ್ರೆಸ್" ನ್ನು ಸಂಬೋಧಿಸುತ್ತಾ ಅಮೆರಿಕಾ ಸ್ನೇಹ ಸಂಪಾದನೆಯನ್ನು ಕೋರಿ ಪಾರಸ್ಪರಿಕ ಸಹಾಯವು ಅಗತ್ಯವೆಂದರು.

....

ನೌಕರಿ ಬೇಡುವ ಹರಿಜನರಿಗೆ ಸೂಚನೆ.

ಡೆಲ್ಲಿಯಲ್ಲಿ ಕೆಲಸಮಾಡಲಿಚ್ಛಿಸುವ ಯೋಗ್ಯ ಮತ್ತು ಶಿಕ್ಷಿತ ಹರಿಜನರು ತಮ್ಮ ಹೆಸರುಗಳನ್ನು ಬಳ್ಳಾರಿಯಲ್ಲಿ ರಿಜಸ್ಟರ್ ಮಾಡಿಸಬೇಕು,

---

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[o]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-8 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಪ್ರೆಸಿಡೆಂಟ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 4746)

17—10—49

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವದಿಲ್ಲ.	Subscription will not be accepted for less than 6 months

To

Sri..................................

....

....

Printed at Krishna Printing Works. Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨	ಸೋಮವಾರ ೨೪ ಅಕ್ಟೋಬರ ೧೯೪೯	ಸಂಚಿಕೆ ೩೯

The Parvathinagar Govt. Servants' Co-operative House Building Society Ltd.,

No. Y 424, BELLARY.

Sealed Tenders will be received by the President of the above Society upto 3 P. M. on 25-11-49 for the construction of 4 types of residential buildings costing approximately Rs. 4 lakhs Tenders should be in the prescribed form which together with the conditions of contract can be had from the Secretary at his Office on payment of Rs 3 .

BELLARY. | D VENKATESAN
15- 10—49 | President

ದಿ ಪಾರ್ವತಿನಗರ ಗವರ್ನಮೆಂಟ್ ಸರ್ವೆಂಟ್ಸ್ ಕೋಆಪರೇಟಿವ್ ಹೌಸ್ ಬಿಲ್ಡಿಂಗ್ ಸೊಸೈಟಿ ಲಿಮಿಟೆಡ್,

ನಂ. Y. 424, ಬಳ್ಳಾರಿ.

ಸುಮಾರು 4 ಲಕ್ಷ ರೂ ಬೆಲೆಬಾಳುವ 4 ನಮೂನೆ ಮನೆಗಳನ್ನು ನಮ್ಮ ನಿವೇಶನದಲ್ಲಿ ಕಟ್ಟಿಸಲು 25-11-1949 ನೆಯ ತಾ॥ ಮಧ್ಯಾಹ್ನ 3 ಗಂಟೆವರೆವಿಗೆ ಸೀಲಾದ ಟೆಂಡರುಗಳು ಮೇಲ್ಕಾಣಿಸಿದ ಸೊಸೈಟಿ ಅಧ್ಯಕ್ಷರಿಂದ ಸ್ವೀಕರಿಸಲಾಗುತ್ತವೆ ಟೆಂಡರುಗಳು ನಿಯಮಿತ ಫಾರಂದಲ್ಲಿರಬೇಕು ಕಂಟ್ರಾಕ್ಟ್ ಶರ್ತುಗಳು ಆಫೀಸ ಸೆಕ್ರೆಟರಿ-ಯಾ-ಕಾರ್ಯದರ್ಶಿಯವರಿಂದ 3/- ರೂ. ಕೊಟ್ಟು ಪಡೆಯಬಹುದು.

ಬಳ್ಳಾರಿ. | ಡಿ. ವೆಂಕಟೇಶನ್
15—10—1949 | ಅಧ್ಯಕ್ಷ

ಅಮೇರಿಕಾದಲ್ಲಿ ಪಂಡಿತ ನೆಹರೂರವರು

ಪಂಡಿತ ನೆಹರೂರವರು ಅಮೇರಿಕಾದ ಪ್ರೆಸಿಡೆಂಟರೂ ಅಲ್ಲಿಯ ಅಧ್ಯಕ್ಷರಾದ ಟ್ರೂಮನ್‌ರವರು ತಮ್ಮ ಅಧಿಕಾರಿ ಮತ್ತು ಸೈನ್ಯಮುಖ್ಯರೊಂದಿಗೆ ಅದ್ಭುತ ಸ್ವಾಗತವನ್ನಿತ್ತರು. ಅಧ್ಯಕ್ಷರ ಮನೆಯಲ್ಲಿ ಅಂದು ತಂಗಿ, ಮರುದಿನ ತಮ್ಮ ರಾಯಭಾರಿ ಕಛೇರಿಗೆ ಹೋದರು. ಅಲ್ಲಿ ವಾಷಿಂಗ್ಟನ್ ನಗರದಲ್ಲಿನ ಭಾರತೀಯರ ಸಂದರ್ಶನವಾಯಿತು. ನ್ಯೂಯಾರ್ಕ ನಗರದಲ್ಲಿನ ಸ್ವಾಗತವು ಯುದ್ಧದಲ್ಲಿ ಜಯಶಾಲಿಗಳಾಗಿ ಬಂದ ಸೇನಾಧಿಪತಿ ಐಸನ್ ಹವರಿಗೆ ಸಲಿಸಮಾನವಾಗಿದ್ದಿತು. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಅವರಿಗೆ ಪದವೀದಾನಸಮಾರಂಭವಾಯಿತು. ಅಲ್ಲಿಯ ಛಾನ್ಸಲರ್‌ರವರು ೨೦೦ ವರ್ಷಗಳಲ್ಲಿ ಇಂಥಾ ವ್ಯಕ್ತಿಯು ಬಂದಿದ್ದಿಲ್ಲವೆಂದರು. ನೆಹರೂರವರು ಎಲ್ಲಾಕಡೆಗಳಲ್ಲೂ ಭಾರತದ ಸೌಹಾರ್ದತೆಯನ್ನು ಸೂಚಿಸುವ ಭಾಷಣವಿತ್ತರು. ತಾವು ಯಾವುದೊಂದು ರಹಸ್ಯ, ಅಥವಾ ವಿಶಿಷ್ಟಕಾರ್ಯಕ್ಕಾಗಿ ಬಂದಿಲ್ಲವೆಂದು ವೃತ್ತಪ್ರತಿನಿಧಿಗಳ ಸಭೆಯಲ್ಲಿ ತಿಳಿಸಿದರು. ಅಮೇರಿಕಾದಲ್ಲಿ ಇನ್ನು ಒಂದು ತಿಂಗಳು ಕಾಲ ಇರಬಹುದೆಂದು ಕಾಣುತ್ತೆ.

THE Nava Bharat

EDITOR—T. B. KESHAVA RAO.

DISABILITIES OF HARIJANS

(1) Harijans and Employment Exchange.

While all classes of Hindus, muslims, christians and Anglo-Indians are freely registered in the Employment Exchange, only Harijans are asked to obtain certificates of identity either from the Dt. Collector or the legislator. It is not clear and therefore open to doubt as to why the Ministry of Labour, Central Govt. thought it fit to enforce strictly this ante-diluvian, bureaucratic and invidious rule on Harijans for whose uplift they say, they have pledged their moral and material support. The Collector and legislators are such busybodies that an approach to them by an ill-clad and miserable Harijan job seeker is next only to impossibility and it is practically closing the door to Harijans to enter services. The Harijans must be registered just as any other class of Hindus and any false pesonification or misrepresentation to get a job should be sternly dealt with when discovered The Dt. Employment Officer must fully be empowered to register all Harijans on personal satisfaction and he must have his discretion without any reference to the Collector or the legislators who after all, cannot be expected to know all people from all parts of the Dt If D. E. O. wants he can consult the local gentlemen, village officials, Harijan Sevak Sanghams or the Congress Committees during his rounds, when he registers all people excepting Harijans even if he sees them living in their colonies.

Sooner this anomaly goes, better it is for the good name of Govt We hope & trust that Sri Jagjivan Ram will immediately pass orders removing this disability on Harijan job seekers.

(2) Harijan Students & Poverty Certificates.

Because the Govt. has realised that the average Harijan is poor, they have exempted them from payment of school fees in middle and Highe Schools & Colleges in Madras Presidency. But knowingly or unkowingly the old clause in British Regime is retained and the heads of institutions demand poverty cer-

ಕಮ್ಯೂನಿಸ್ಟರಿಗೆ ಭಾರತ ಸರ್ಕಾರದ ಎಚ್ಚರಿಕೆ

"ಯಾವುದೇ ಧೋರಣೆಯ ಪರವಾಗಲೀ ತತ್ವಬೋಧನೆಯ ಪರವಾಗಲೀ ಶಾಂತರೀತಿಯಿಂದ ಹಾಗೂ ಪ್ರಜಾಸತ್ತಾತ್ಮಕವಾಗಿ ಪ್ರಚಾರ ನಡೆಸುವುದಕ್ಕೆ ಹಿಂದುಸ್ಥಾನ ಸರಕಾರವು ಅತ್ಯಧಿಕ ಸಲಿಗೆ - ಸ್ವಾತಂತ್ರ್ಯ ಕೊಟ್ಟಿರುತ್ತದೆ, ಆದರೆ ಯಾವ ಪಕ್ಷ ಸಂಗಡವಾದರೂ. ಅದರ ರಾಜಕೀಯ ಭಾವನೆಯು ಯಾವ ತರದಾಗಿದ್ದರೂ, ಧ್ವಂಸ ಕಾರಕ ಮತ್ತು ಹಿಂಸಾತ್ಮಕ ವರ್ತನೆಗಳಿಗಾಗಿ ಉಪದೇಶ ಮಾಡಲಿಕ್ಕೆ, ಹುರಿದುಂಬಿಸಲಿಕ್ಕೆ ಇಲ್ಲವೇ ವ್ಯವಸ್ಥೀಕರಿಸುವುದಕ್ಕೆ ಬಿಡಲು ಸಾಧ್ಯವಿಲ್ಲ ಹಾಗೂ ಬಿಡಲಿಕ್ಕಿಲ್ಲ. ಅಕ್ರಮ - ಅನ್ಯಾಯಗಳನ್ನು ಸರಕಾರವು ತನ್ನ ಯಾವತ್ತು ಶಕ್ತಿ ಸಾಮರ್ಥ್ಯಗಳಿಂದ ಪ್ರತಿಭಟಿಸಲು ನಿರ್ಧರಿಸಿದೆ. ಈ ಕಾರ್ಯದಲ್ಲಿ ಹಿಂದುಸ್ಥಾನದ ಪ್ರಜೆಗಳೆಲ್ಲರೂ ಹೃತ್ಪೂರ್ವಕ ಸರಕಾರಕ್ಕೆ ಬೆಂಬಲಗಳನ್ನೀಯುವರೆಂದು ಸಂಪೂರ್ಣ ಭರವಸೆಯಿದೆ.

ಬಳ್ಳಾರಿ ಜಿಲ್ಲಾ ಕೋರ್ಟಿನಲ್ಲಿ
O.P. No. 479/49.

ನಾಗಮ್ಮ .... ಅರ್ಜಿದಾರಳು

Vs.

ತಿಪ್ಪಮ್ಮ ವಗೈರಾ .... ಕೌಂಟರು ಅರ್ಜಿದಾರರು

ಇದರಿಂದ ಸಕಲರಿಗೆ ತಿಳಿಸುವದೇನೆಂದರೆ ಮೈನರು ದೇವರಿಂಟಿ ನಾಗಪ್ಪ ನಿಗೇವಾನ್ ತಾಯಿ ನಾಗಮ್ಮನನ್ನು ಸದರೀ ಮೈನರ ಹುಡುಗನಿಗಾಗಿಯೂ ಅವನ ಆಸ್ತಿಗೆ ಸಹಾ ಸದರಿ ನಾಗಮ್ಮನನ್ನು ಗಾರ್ಡಿಯನ್ ಆಗಿ ಯೇರ್ಪಾಟು ಮಾಡುವದಕ್ಕೆ 9-11-49 ಕ್ಕೆ ಹಾಕಿರುತ್ತಾರೆ. ಆಕ್ಷೇಪಣೆಯುಳ್ಳವರು ಸದರಿ ತೇದಿ 11 ಘಂಟೆಗೆ ಕೋರ್ಟಿಗೆ ಖುದ್ದಾಗಲಿ ವಕೀಲು ದ್ವಾರಾ ಆಗಲಿ ಹಾಜರು ಆಗತಕ್ಕದು ಯಿಲ್ಲದಿದ್ದಲ್ಲಿ ನಿಮ್ಮ ಗೈರಹಾಜರುನಲ್ಲಿ ಪುಕ್ತರವು ಮಾಡಲ್ಪಡುತ್ತದೆ.

ಬಳ್ಳಾರಿ, 15-10-49. ಕೆ. ಶ್ರೀನಿವಾಸಾಚಾರ್ಯರು, ಅರ್ಜಿದಾರಳ ವಕೀಲು.

ನವಭಾರತಕ್ಕೆ
ಚಂದಾದಾರರಾಗಿರಿ.

ಹಣ್ಣು - ತರಕಾರಿ

ನಮ್ಮ ಆಹಾರದ ಸಮಸ್ಯೆಯನ್ನು ಬಗೆಹರಿಸುವ ಪ್ರಾಮುಖ್ಯ ಸಾಧನ

ಹಣ್ಣು ಮತ್ತು ತರಕಾರಿಗಳನ್ನು ಅನೇಕ ದಿನಗಳವರೆಗೆ ಹಾಳಾಗದಂತೆ ಇರಿಸುವುದು ಇಂದಿನ ಪರಿಸ್ಥಿತಿಯಲ್ಲಿ ಅತ್ಯಂತ ಲಾಭದಾಯಕವಾಗಿದೆ. ಪೋಷಕ ವಸ್ತುಗಳ ಕುರಿತು ಸಂಶೋಧನೆ ನಡೆಸಿದಾಗ ಹಣ್ಣು ತರಕಾರಿಗಳೂ ಆರೋಗ್ಯವಂತ ದೃಢಕಾಯರಾಗಿ ಬಾಳಬೇಕಾದರೆ ಅವಶ್ಯಕವಾದುವೆಂದು ತಿಳಿಯಬಾಗಿದೆ. ಇವುಗಳಲ್ಲಿ ಖನಿಜ ಸತ್ವಗಳು ತುಂಬಿರುತ್ತವೆ ಅನ್ನಸತ್ವಗಳೂ ಸೇರಿರುತ್ತವೆ. ಆದುದರಿಂದ ಉತ್ತಮವಾದ ಪೌಷ್ಟಿಕ ಆಹಾರದಲ್ಲಿ ಇವುಗಳನ್ನು ಸೇರಿಸಿಕೊಳ್ಳಬೇಕು. ಹಾಗೆಂದು ಹಣ್ಣುಗಳಾಗಲಿ ಎಲ್ಲಾ ಕಾಲಗಳಲ್ಲಿ ದೊರೆಯುವದಿಲ್ಲ. ಆದುದರಿಂದ ಇವುಗಳನ್ನು ಹಾಳಾಗದಂತೆ ಭದ್ರವಾಗಿರಿಸಿದರೆ ಬೇಕಾದಾಗ ಉಪಯೋಗಿಸಬಹುದು. ಅಲ್ಲದೆ ಕೆಲವು ಕಡೆ ಹಣ್ಣುಗಳು ಯಥೇಚ್ಛವಾಗಿ ದೊರೆತು ಉಪಯೋಗಿಸುವವರಿಲ್ಲದೆ ಹಾಳಾಗುವುದುಂಟು. ಈ ರೀತಿ ಹಾಳಾಗುವುದನ್ನು ತಡೆಯಲು ಹಣ್ಣುಗಳನ್ನು ಗಾಳಿಯಾಡದ ಡಬ್ಬಿಗಳಲ್ಲಿ ತುಂಬಿ ಮುಚ್ಚುವದು. ರಸ ತೆಗೆದು ಇಲ್ಲವೇ ರಸಾಯನ ತಯಾರಿಸಿ ಭದ್ರವಾಗಿರಿಸುವುದೂ ಜಗತ್ತಿನಲ್ಲೆಲ್ಲಾ ತಿಳಿದ ಸಂಗತಿಯಾಗಿತ್ತು ಹೀಗೆ ಹಣ್ಣು - ತರಕಾರಿಗಳನ್ನು ಹಾಳಾಗದಂತೆ ಇರಿಸಲಾಗುತ್ತಿತ್ತು. ಹಣ್ಣು ತರಕಾರಿಗಳಲ್ಲದೆ ಮೀನು ಮಾಂಸ, ಹಾಲು, ಬೆಣ್ಣೆ ಇತ್ಯಾದಿಗಳನ್ನು ಡಬ್ಬಿಯಲ್ಲಿ ತುಂಬುವದು ರೂಢಿಯಲ್ಲಿದೆ. ಡಬ್ಬಿಯಲ್ಲಿ ತುಂಬುವ ವಿಧಾನವೇ ಹಾಳಾಗುವ ವಸ್ತುಗಳನ್ನು ಭದ್ರವಾಗಿರಿಸಲು ಬಳಕೆಯಲ್ಲಿದ್ದುದಾಗಿದೆ

ಅಮೇರಿಕ, ಆಸ್ಟ್ರೇಲಿಯ, ಇಂಗ್ಲಂಡ್ ಮೊದಲಾದೆಡೆಗಳಲ್ಲಿ ಈ ಕೈಗಾರಿಕೆಯು ಯಶಸ್ವಿಯಾಗಿ ನಡೆಯುತ್ತಿದೆ ಇಲ್ಲಿಯ ಜನರ ಜೀವನ ಮಟ್ಟವು ಅತ್ಯಂತ ಸುಧಾರಿಸಿರುವದರಿಂದ ಭದ್ರವಾಗಿರಿಸಿದ ಹಣ್ಣುಗಳೇ ಆಹಾರದಲ್ಲಿ ಪ್ರಾಮುಖ್ಯ ಸ್ಥಾನ ಪಡೆಯುತ್ತಿವೆ

ನಮ್ಮ ದೇಶದಲ್ಲಿ ಈ ಕೈಗಾರಿಕೆಯು ಇತ್ತೀಚಿಗೆ ಆರಂಭವಾಯಿತಷ್ಟೆ. ಅದರಲ್ಲೂ ಮದರಾಸು ಪ್ರಾಂತದಲ್ಲಿ ಇದು ಇನ್ನೂ ಬಾಲ್ಯಾವಸ್ಥೆಯಲ್ಲಿದೆ. ಇದೀಗ ಪ್ರಾಂತದಲ್ಲಿ ಒಂದೆರಡು ಕಾರ್ಖಾನೆಗಳು ಮಾತ್ರ ಹಣ್ಣುಗಳನ್ನು ತುಂಬಿಸಿಡುವ ಹಾಗೂ ಜೆಲ್ಲಿ, ಸಕ್ವೇಸ್, ಜಾಮ್ ಇತ್ಯಾದಿಗಳನ್ನು ತಯಾರಿಸುತ್ತಿವೆ. ಇದು ನಿಜವಾಗಿಯೂ ಶೋಚನೀಯ ವಿಷಯವಾಗಿದೆ. ಏಕೆಂದರೆ ಮದರಾಸು ಪ್ರಾಂತದಲ್ಲಿ ಬೆಳೆಯುವಷ್ಟು ವಿಸ್ತಾರದಲ್ಲಿ ಮಾವು, ಮುಸುಂಬಿ, ಕಿತ್ತಳೆ, ಲಿಂಬೆಹಣ್ಣುಗಳು ಹಿಂದುಸ್ಥಾನದಲ್ಲಿ ಬೇರಾವ ಪ್ರಾಂತದಲ್ಲೂ ಬೆಳೆಯುವುದಿಲ್ಲ ಆದುದರಿಂದ ಇಲ್ಲಿ ಈ ಕೈಗಾರಿಕೆಯು ಅಭಿವೃದ್ಧಿಹೊಂದುವುದು ಅತ್ಯವಶ್ಯಕವಾಗಿದೆ. ಕಳೆದ ಆರು ವರುಷಗಳಿಂದ ಮದರಾಸು ಸರಕಾರವು ಹೆಚ್ಚು ಉಳಿಯುವ ಹಣ್ಣುಗಳನ್ನು ಹಾಳಾಗದಂತೆ ಉಳಿಸುವ ರೀತಿಯನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಕಡಪ ಜಿಲ್ಲೆಯ ಕೋಡೂರಿನ ಸರಕಾರದ 'ಫಲೋತ್ಪತ್ತಿ ಸಂಶೋಧನಾಗಾರ' (ಫ್ರೂಟ್ ಪ್ರೊಡಕ್ಟ್ಸ್ ರಿಸರ್ಚ್ ಲೇಬೊರೆಟರಿ) ಕೃಷಿ ಇಲಾಖೆಯ ಕೈಕೆಳಗೆ ಪ್ರಾಂತದ ಮುಖ್ಯ ಹಣ್ಣುಗಳನ್ನೆಲ್ಲಾ ಭದ್ರವಾಗಿರಿಸಲು ಪ್ರಯತ್ನಿಸುತ್ತದೆ.

ನಮ್ಮ ಪ್ರಾಂತದಲ್ಲಿ ಹೆಚ್ಚಾಗಿ ದೊರೆಯುವ ಹಣ್ಣುಗಳೆಂದರೆ ಮಾವು, ಬಾಳೆಹಣ್ಣು, ಕಿತ್ತಳೆ ಜಾತಿಗೆ ಸೇರಿದ ಹಣ್ಣು ಇವೇ ಆಗಿವೆ. ಇತರ ಹಣ್ಣುಗಳಲ್ಲಿ ಹಲಸಿನಹಣ್ಣು, ಅನಾನಸು, ಪಪ್ಪಾಯಿ, ಮೆಲನ್; ದ್ರಾಕ್ಷೆ ಇವೆಲ್ಲಾ ಡಬ್ಬಿಯಲ್ಲಿ ತುಂಬಿಸಿದರೆ ಹೆಚ್ಚು ಸಮಯ ಉಳಿದು ನಮ್ಮ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಅನುಕೂಲವಾಗಬಹುದು.

ಕೆಲಸಕ್ಕೆ ಬಾರದ ದನಗಳು

"ಮುದಿಯಾಗಿ ಉತ್ಪಾದಕ ಶಕ್ತಿಯಿಲ್ಲದ ದನಗಳೆಂದರೆ ವಯೋವೃದ್ಧರಾದ ಹೆತ್ತವರಂತೆ ಅವುಗಳನ್ನು ವಿನಾಶಗೊಳಿಸಲು ಸಾಧ್ಯವಿಲ್ಲ. ಉತ್ತಮ ಜಾನುವಾರುಗಳನ್ನು ಹುಟ್ಟಿಸುವ ದೃಷ್ಟಿಯಿಂದ ಹಾಗೂ ಪೋಲಿಕರಿಗೆ ದೊರೆಯಬಾರದೆಂಬ ಅಭಿಪ್ರಾಯದಿಂದ ಕರೆಯುವ ದನಗಳಿಂದ ಬತ್ತಿದ ದನಗಳನ್ನು ಬೇರಾ ಹುಲ್ಲು ಸುಲಭವಾಗಿ ಅಗ್ಗ ಬೆಲೆಗೆ ದೊರೆಯುವಲ್ಲಿ 'ಗೋಸದನ'ಗಳನ್ನು ಏರ್ಪಡಿಸಿ ಸಾಕಬೇಕು. ದನಗಳು ಸತ್ತರೂ ಉಪಯೋಗಕ್ಕೆ ಬೀಳುವ ಪ್ರಾಣಿಗಳು. ಅವು ಸತ್ತಾಗ ಹದ್ದು ಕಾಗೆಗಳಿಗೆ ಕುತ್ತಾಗಿಸದೆ ಚರ್ಮ ಸುಲಿಸಿ ಅವುಗಳ ಎಲುಬುಗಳನ್ನು ಗೊಬ್ಬರವಾಗಿ ಉಪಯೋಗಿಸಬೇಕು."

—ಸರ್ ದಾತಾರ ಸಿಂಗ್

ಬಳ್ಳಾರಿಜಿಲ್ಲಾ ಕರ್ನಾಟಕ ಕಳಾ ಸಮಿತಿಯವರ ನವೀನ ನಾಟಕ ಪ್ರಯೋಗ

ಕಳಾ ಸೇವೆಗಾಗಿಯೇ ಮುಂದುವರಿದು ಡಿ. ಟಿ. ರಾಘವಾಚಾರ್ಯರಿಂದ ಪ್ಲಾಟು ಹಾಕಲ್ಪಟ್ಟ ಜೋಳದ ರಾಶಿ ದೊಡ್ಡನಗೌಡರಿಂದ ರಚಿಸಲ್ಪಟ್ಟ ಹನ್ನೆರಡನೆಯ ಶತಮಾನದ ನೈತಿಕ, ಧಾರ್ಮಿಕ, ಸಾಮಾಜಿಕ, ರಾಜಕೀಯ ಸಮ್ಮೇಲನದ ಕ್ರಾಂತಿ "ಕ್ರಾಂತಿ ಪುರುಷ ಬಸವಣ್ಣ" ಎಂಬ ನಾಟಕವನ್ನು ಜಿಲ್ಲೆಯ ಸಮರ್ಥ ನಟರೊಂದಿಗೆ ಈಗೆರಡು ತಿಂಗಳಿಂದಲೂ ಅವಿಶ್ರಾಂತ ಅಭ್ಯಾಸಗೈದು 27-10-49 ಗುರುವಾರ ಹೊಸಪೇಟೆಯ ಚಿತ್ರಮಂದಿರದಲ್ಲಿ ಪ್ರದರ್ಶಿಸಲ್ಪಡುವದು. ಕಳಾಸಮಿತಿಯವರ ಅಪೂರ್ವ ಸಾಹಸ ಪ್ರಯೋಗದ ಈ ಸುಯೋಗವನ್ನು ಕಳೆದುಕೊಳ್ಳಲಾರರೆಂದು ಆಶಿಸುವ

ಕೇಂದ್ರಕಚೇರಿ | ತೈ ಯಂ ಚಂದ್ರಯ್ಯ
18-10-49. | ಗೌ. ಕಾರ್ಯದರ್ಶಿ.

ಅಮೆರಿಕಾದಲ್ಲಿ ಗಾಂಧಿ ಸ್ಮಾರಕ.

ಅಮೇರಿಕದ ನ್ಯಾಯ ವಿಧಾಯಕ ಸಭೆಯು ಅಮೇರಿಕದಲ್ಲಿ ಗಾಂಧಿಜೀ ಸ್ಮಾರಕವನ್ನೇರ್ಪಡಿಸುವ ಮಸೂದೆಯನ್ನು ಅಂಗೀಕರಿಸಿದೆ. ವಾಶಿಂಗ್ಟನಿನಲ್ಲಿ ಸ್ಥಾಪಿಸುವ ಈ ಸ್ಮಾರಕಕ್ಕೆ ಸುಮಾರು 10,000,000 ಡಾಲರುಗಳಷ್ಟು ವೆಚ್ಚವಾಗಬಹುದು. ಸಾರ್ವಜನಿಕ ವಂತಿಗೆಯಿಂದ ಈ ಸ್ಮಾರಕವನ್ನು ಸ್ಥಾಪಿಸಲಾಗುವುದು.

ಹೊಸಪೇಟೆ ಡಿ॥ ಮುನ್ಸಿಫ್ ಕೋರ್ಟಿನಲ್ಲಿ.

S. C. 423/49.

ಪಾಂಡ್ರಿಗಿ ಸುಬ್ರಹ್ಮಣ್ಯ ಶೆಟ್ರು ಹೊಸಪೇಟೆ. .... } ವಾದಿ.

Vs

ಚಕ್ರದಳ್ಳಿ ಮಕ್ತುಂಸಾಬು ನಾಗೇನಹಳ್ಳಿ. } ಪ್ರತಿವಾದಿ

ಮೇಲಿನ ನಂಬರಿನಲ್ಲಿ ವಾದಿಯು ನಿನ್ನ ಮೇಲೆ ಕಾಳಗಟ್ಟಿ ಮಾಗಾಣೆ ಸಾಗು ಮಾಡಿದ ಬಾಬತು ರೂ. 120-0-0 ಗಳನ್ನು ವಸೂಲಿ ಮಾಡಲು ದಾವಾ ದಾಖಲು ಮಾಡಿರುತ್ತಾನೆ ಸದರಿ ನಂಬರು 29-10-49 ಕ್ಕೆ ವಾಯಿದೆ ಬಿದ್ದಿರುತ್ತದೆ. ಕಾರಣ ಸದರಿ ದಿವಸಕ್ಕೆ ಬಂದು ಹಾಜರಾಗದಿದ್ದಲ್ಲಿ ನಿನ್ನ ಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

ಹೆಚ್. ಗೋವಿಂದಾಚಾರು
ವಾದಿಯ ಅಡ್ವಕೇಟ್.

tificates in prescribed form signed by only magistrates and judges and not even the legislators, before students are admitted to particular classes. During june every year hundreds of students are admitted & Harijan Sevak Sanghs find it hard to obtain poverty certificates from magistrates. Similarly the Head Master or the Principal of the institution must be empowered to apply for scholarship for Harijans without obtaining poverty certificates signed by magistrates.

(3) Teacher's Training and Surety.

The candidate to be admitted to either Elementary Higher Grade Teacher's Training Course or Secondary Grade Teacher's Training Course has got to furnish two sureties and the concerned Tahasildar has to certify that sureties are solvents - It is difficult for Harijan candidates to secure sureties They must be exempted from furnishing sureties and poverty certificates.

(4) The forest department & Harijans.

For the first time we are made aware of kumri-cultivation in Reserve Forests. The D. F O. is good enough to enlighten us in regard to it and has issued necessary instructions to his subordinates. The forester, his guards and watchers continue to harass Harijans, Lambanis and other poor people as can be seen in two specific instances i.e., Kumathi Village Kudligi Tq. and Kandikere Tanda Harapanahalli Tq In the former a Penalty of Rs. 300/- was demanded without reference to the D. F. O. who when made aware of it was surprised and in the latter case the Ranger with his band of enthusiastic subordinates was threatening the destruction of crops if he is not satisfied

There is scanty rain fall of about 20" annually in Bellary Dt. where we do not find much of forest or growth of trees. Many reserve lands are barren and fit for cultivation and the Forest Dept will do well to heed the advice of the Govt and wherever possible help "Grow more Food."

It is true that we must preserve Forest wealth the decadence of which is responsible for not only scanty rain fall but the scarcity of fire wood. But we would appeal to the Conservator of Forests and D. F. O. to summon all their subordinates for 2 or 3 Week's trainig to teach them better manners, and to be civil and Courteous to the ignorant village folk. It is also necessary to give them training as to how they should popularise 'Kumri cultivation' i, e Food crops & side by side grow forest vegetation. We hope and trust that things will improve in this direction

ರೇಷನ್ ಕಾರ್ಡು

ಕಾರ್ಡುದಾರರು ರೇಶನ್ ಪ್ರದೇಶವನ್ನು ತಾತ್ಕಾಲಿಕವಾಗಿ ಇಲ್ಲವೇ ಶಾಶ್ವತವಾಗಿ ಬಿಟ್ಟು ಹೋಗುವಾಗ, ತಮ್ಮ ರೇಶನ್ ಕಾರ್ಡುಗಳು ರೇಶನಿಂಗ್ ಆಫೀಸರರಿಗೆ ಒಪ್ಪಿಸುವುದರ ಬದಲಿಗೆ ತಮ್ಮ ಮಿತ್ರರಿಗಾಗಲೀ ಸಂಬಂಧೀಕರಿಗಾಗಲೀ ಇಲ್ಲವೇ ರೇಶನ್ ಅಂಗಡಿದಾರರಿಗಾಗಲೀ ಕೊಡುವ ಸಂಗತಿಗಳು ಸರಕಾರದ ಅವಗಾಹನೆಗೆ ಬಂದಿವೆ. ಇದು ಅಕ್ರಮವಾದುದಲ್ಲದೆ, ಸಮಾಜ ವಿರುದ್ಧವಾದದು ಇದರಿಂದ ಅಕ್ರಮವಾಗಿ ಹೆಚ್ಚಿಗೆ ರೇಶನ್ ವಸ್ತು ತೆಗೆದುಕೊಳ್ಳುವಂತಾಗುತ್ತದೆ. ಆದುದರಿಂದ ಮೇಲೆ ಹೇಳಿದ ಸಂದರ್ಭಗಳಲ್ಲಿ ರೇಶನ್ ಕಾರ್ಡುಗಳನ್ನು ಸಂಬಂಧಪಟ್ಟ ಸರ್ಕಲ್ ರೇಶನಿಂಗ್ ಆಫೀಸರರಿಗೆ ಒಪ್ಪಿಸಬೇಕೆಂದು ಎಚ್ಚರಿಸಲಾಗಿದೆ. ಹಾಗೆ ಮಾಡಲು ತಪ್ಪಿದರೆ ಅವರ ಮೇಲೆ ದಾವೆ ಮಾಡಲಾಗುವುದು. ಕಾರ್ಡುಗಳನ್ನು ಸರ್ಕಲ್ ರೇಶನಿಂಗ್ ಆಫೀಸರಿಗಲ್ಲದೆ ಅಂಗಡಿಗಾರರಿಗಾಗಲೀ, ರೇಶನಿಂಗ್ ಆಫೀಸಿನಲ್ಲಿರುವ ಇತರರಿಗಾಗಲೀ ಕೊಡಕೂಡದು.

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ.

S. C. 339 49.

ಈಶ್ವರ ಗೌಡು .... ವಾದಿ.

Vs

ಗೊಳಗುಂದಿ ಪಂಪಣ್ಣ ... ಪ್ರತಿವಾದಿ

ಮೇಲ್ಕಂಡ ಕೋರ್ಟಿನಲ್ಲಿ ವಾದಿಯು, ಪ್ರತಿವಾದಿಯಿಂದ ರು 233-7-0 ನ್ನು ಕೋರ್ಟು ಖರ್ಚುಗಳ ಸಹಿತ ಬರಮಾಡಿಕೊಳ್ಳಲು ದಾವಾ ದಾಖಲು ಮಾಡಿರುತ್ತಾನೆ. ಸದ್ರಿ ಸಂಬಂಧ ಪ್ರತಿವಾದಿಯು ನೋಟೀಸಿಗಾಗಿ 27-10-49 ತೇದಿಗೆ ವಾಯಿದಾ ಹಾಕಲ್ಪಟ್ಟಿದೆ. ತಕರಾರು ಮಾಡುವದಿದ್ದರೆ ಸದ್ರಿ ತೇದಿ ದಿನ ಮೇಲ್ಕಂಡ ಕೋರ್ಟಿನಲ್ಲಿ ಉದಯ 10 ಘಂಟೆಗೆ ಹಾಜರಾಗಿ ತನ್ನ ತಕರಾರನ್ನು ಹಾಜರು ಮಾಡಬೇಕು. ಇಲ್ಲವಾದರೆ ಯಕ್ಸ್‌ಪಾರ್ಟಿ ಡಿಕ್ರಿ ಮಾಡೋಣವಾಗುತ್ತದೆಂದು ತಿಳಿಯಬೇಕು.

ಬಳ್ಳಾರಿ, 17-10-49. ಪಿ. ವೆಂಕಟ ಸುಬ್ಬರಾವು, ವಾದಿ ವಕೀಲು.

ಸಂಸ್ಕೃತಕ್ಕೆ ಪ್ರಮುಖಸ್ಥಾನ.

ಬಳ್ಳಾರಿ ಸನ್ಮಾರ್ಗ ಸಮಾಜ ಮಂದಿರದಲ್ಲಿ 23-9-49 ರಿಂದ 3-10-49 ರ ವರಗೆ ಗೀರ್ವಾಣ ಭಾಷೋತ್ಸವವು ಜಿಲ್ಲಾ ಜಡ್ಜ ಕನ್ನಂಟಾಬುಗಳಿಂದ ಪ್ರಾರಂಭವಾಗಿ ವಿಜೃಂಭಣೆಯಿಂದ ನೆರವೇರಿತು. ಶ್ರೀ ಎಂ. ಯಸ್. ಶ್ರೌತಿ ಪ್ಯೆವೇಸ್ ಇಂಜನಿಯರ್‌ರವರು ಕೊನೆಯದಿನ ಅಧ್ಯಕ್ಷರಾಗಿದ್ದರು

ಸಂಸ್ಕೃತ ಭಾಷೆಯು ಪೂರ್ಣತೆ ಸಾಹಿತ್ಯ ಸಂಪತ್ತಿ ಅಧ್ಯಾತ್ಮಿಕ ಬೆಲೆಯನ್ನು ಲಕ್ಷ್ಯದಲ್ಲಿಟ್ಟು ಮತ್ತು ಭಾಷೆಗಳ ಮಾತೃಸ್ಥಾನವನ್ನು ಗಮನಿಸಿ ಅದಕ್ಕೆ ಭಾರತ ಸರ್ಕಾರವು ಅಧ್ಯಯನ ಪ್ರಣಾಲಿಯಲ್ಲಿ, ರಾಜ್ಯಭಾರ ಕ್ರಮದಲ್ಲಿ ಮುಖ್ಯಸ್ಥಾನವನ್ನು ಕೊಡಬೇಕೆಂದೂ ತೀರ್ಮಾನಿಸಲಾಯಿತು. ಆದರಿಂದ ಜಗತ್ತಿನಲ್ಲಿ ಶಾಂತಿಯಾಗುವದೆಂದರು.

ಬಳ್ಳಾರಿ ಸ್ಮಾಲ್‌ಕಾಸ್ ಕೋರ್ಟಿನಲ್ಲಿ.
S. C. 506 49.

ಕಾವಲಿ ಸಂಜಪ್ಪ .... ವಾದಿ
Vs.
ಗೊಲ್ಲ ಅದ್ದಂಕಿ ಫಕೀರಪ್ಪ ... ಪ್ರತಿವಾದಿ.

—: ನೋಟೀಸು :—

ಆಲೂರು ತಾಲೂಕು ದೌಲತಾಪುರದ ಪೆದ್ದ ಯಲ್ಲಪ್ಪನ ಮಗನಾದ ಕಾವಲಿ ಸಂಜಪ್ಪನು ಆಲೂರು ತಾಲೂಕು ಚಿಪ್ಪಗಿರಿ ನಾಗಪ್ಪನಮಗ ಗೊಲ್ಲ ಅದ್ದಂಕಿ ಪೆದ್ದ ಫಕೀರಪ್ಪನಮೇಲೆ ಪ್ರತಿವಾದಿಯು 16-7-1946ರಲ್ಲಿ ಬರೆದುಕೊಟ್ಟ ಪ್ರೋನೋಟಿನ ಸಂಬಂಧ ರೂ 177-14-9 ಖರ್ಚು ಸಮೇತ ವಸೂಲಿ ಮಾಡಿಕೊಳ್ಳಲು ದಾವಾ ದಾಖಲು ಮಾಡಿದ್ದಾನೆ ಅದರ ವಾಯಿದೆಯು 10-11-49 ಕ್ಕೆ ಹಾಕಲಾಗಿದೆ ಅಂದು ಪ್ರತಿವಾದಿಯು ಖುದ್ದಾಗಲಿ ವಕೀಲರ ಮೂಲಕವಾಗಲಿ ಹಾಜರಾಗದಿದ್ದರೆ ದಾವೆಯು ಪರೋಕ್ಷವಾಗಿ ನಿರ್ಣಯವಾಗುವುದು.

ಎಂ ಎಸ್. ಪದ್ಮನಾಭರಾವ್,
ವಾದಿಯ ಅಡ್ವೊಕೇಟ್.

— ಆದವಾನಿ —

ಎಂ. ಎ. ರಹಿಮಾನ್ ಎಂಬ ಆದವಾನಿಯ ರೈತನು ಪರ್ಮಿಟಿಲ್ಲದೆ ಆಹಾರ ಧಾನ್ಯ ಆಮದು ಮಾಡಿದುದಕ್ಕೋಸ್ಕರ ರೂ. 200 ಜುಲುಮಾನೆ ವಿಧಿಸಲಾಗಿದೆ. ಜುಲುಮಾನೆ ಕೊಡದಿದ್ದರೆ ಒಂದು ತಿಂಗಳ ಕಠಿಣ ಸಜೆ.

ಎಸ್.ಎಸ್.ಎಲ್.ಸಿ. ಪರೀಕ್ಷೆ

ಹಾಯರ್ ಎಲಿಮೆಂಟರಿ ಗ್ರೇಡ್ ಟ್ರೇಂಡ್ ಅಧ್ಯಾಪಕರು, ಉಪಾಧ್ಯಾಯವೃತ್ತಿಯ ಇತರರೂ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಖಾಸಗಿ ಉಮೇದುವಾರರಾಗಿ ಕುಳಿತುಕೊಳ್ಳುವ ರಿಯಾಯತಿಯನ್ನು 1953 ನೇ ಮಾರ್ಚಿವರೆಗೆ ಮುಂದರಿಸಲಾಗಿದೆ.

ಮದ್ರಾಸು ಪ್ರಾಂತದಲ್ಲಿ ಜನರಿಗೆ ನ್ಯಾಯವಾದ ಬೆಲೆಗೆ ಔಷಧಿಗಳು ದೊರೆಯುವಂತೆ ಮಾಡುವ ಉದ್ದೇಶದಿಂದ ನಮ್ಮ ಸರಕಾರವು ಕೇಂದ್ರ ಸರಕಾರವನ್ನು ಅನುಸರಿಸಿ ಒಂದು "ಔಷಧಿ ನಿಯಂತ್ರಣ ವಿಶೇಷ ಶಾಸನ''ವನ್ನು 3-10-49 ರಂದು ಪ್ರಕಟಿಸಿದೆ. ಈ ಶಾಸನ ಪ್ರಕಾರ ಈ ಪ್ರಾಂತದಲ್ಲಿ ಔಷಧಿಗಳ ವಿಕ್ರಯ, ಪೂರೈಕೆ ಹಾಗೂ ವಿತರಣೆಗಳು ನಿಯಂತ್ರಿಸಲ್ಪಡುವವು.

ಬಳ್ಳಾರಿಗೆ ಸರಿಹದ್ದು ಸಮಿತಿಯೇ ?

ಆಂಧ್ರ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎನ್. ರಂಗಾರವರು ಕೇಳ್ಕರ್ ಅವಾರ್ಡದ ತಳಹದಿಯನ್ನನುಸರಿಸಿ ಸರಹದ್ದು ಸಮಿತಿಯನ್ನು ರಚಿಸಿ ಆಂಧ್ರಭಾಗಗಳು ಇಂಥಹವೇ ಎಂಬುದನ್ನು ನಿರ್ದಿಷ್ಟವಾಗಿ ನಿರ್ಣಯಿಸಲಿರುವರೆಂದು ಗುಂತಕಲ್ಲಿಗೆ ಹೋದ ಬಳ್ಳಾರಿಯ ಹಿಂದೂ ಸುದ್ದಿಗಾರರು ಬರೆದಿದ್ದಾರೆ. ಸರಹದ್ದು ಸಮಿತಿಯ ಅರ್ಥವೆಂದರೆ ಕರ್ನಾಟಕ ಆಂಧ್ರ ಎರಡೂ ಪ್ರಾಂತೀಯ ಕಾಂಗ್ರೆಸ್ ಸಮಿತಿಯವರು ಪರಸ್ಪರ ಒಪ್ಪಿ ಸಮಿತಿಯ ಸದಸ್ಯರನ್ನಾರಿಸಿ ನಿರ್ಣಯಿಸುವುದು. ಇಲ್ಲವಾದರೆ ಏಕಪಕ್ಷೀಯವಾಗುವದು. ಆಲೂರು ಆದವಾನಿ ರಾಯದುರ್ಗ ಈ 3 ತಾಲೂಕುಗಳಷ್ಟೇ ಅಲ್ಲದೆ ಇನ್ನು ಅನಂತಪುರದ ಕೆಲ ಕನ್ನಡ ಭಾಗಗಳೂ ಕರ್ನಾಟಕಕ್ಕೆ ಸೇರಬೇಕೆಂಬ ಉದ್ದೇಶವಿಟ್ಟಿರುವ ಕ. ಪ್ರಾಂ. ಕಾಂಗ್ರೆಸ್ ಸಮಿತಿಯು ಕೇಳ್ಕರ ಅವಾರ್ಡದ ತಳಹದಿಯನ್ನು ಹೇಗೆ ಒಪ್ಪುವುದು ?

ಶ್ರೀ ನಿಜ ಲಿಂಗಪ್ಪನವರು ಇದಕ್ಕೆ ಏನುತ್ತರ ಕೊಡುವರು? ಇಂಥಾ ಸಮಿತಿಯ ರಚನೆಗೆ ಶ್ರೀ ನಿಜ ಲಿಂಗಪ್ಪನವರು ದಿಲ್ಲಿಯಲ್ಲಿ ತಮ್ಮ ಒಪ್ಪಿಗೆ ಕೊಟ್ಟಿರುವರೆಂದು ಶ್ರೀ ರಂಗಾರವರು ಗುಂತಕಲ್ಲಿನಲ್ಲಿ ತಮ್ಮ ಮಿತ್ರರಿಗೆ ಹೇಳಿದರು ಇದು ನಿಜವಾದರೆ ಬಳ್ಳಾರಿ ಜಿಲ್ಲೆಯ ಪೂರ್ವ ತಾಲೂಕುಗಳಲ್ಲಿ ಆಂಧ್ರರ ಭಾಗವು ಇದೆಯೆಂಬುದನ್ನು ಒಪ್ಪಿಕೊಂಡಂತಾಯಿತಲ್ಲವೇ? ಇದರ ಸ್ಪಷ್ಟೀಕರಣವನ್ನು ಮಾಡಿದರೆ ಒಳ್ಳೆಯದು.

ನ್ಯಾಯಾಂಗ ಮತ್ತು ಆಡಳಿತ

ನ್ಯಾಯಾಂಗ ಮತ್ತು ಆಡಳಿತ ಶಾಖೆಯನ್ನು ಬೇರ್ಪಡಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಬಳ್ಳಾರಿ ಅನಂತಪುರ ಜಿಲ್ಲೆಗಳಿಗಾಗಿ ಗುತ್ತಿಯಲ್ಲಿಡುವ ಯೋಜನೆಯು ಪ್ರಕಟವಾಗಿದ ನಂತರ ಮಧ್ಯವರ್ತೀ ಪ್ರದೇಶವಾದ ಗುಂತಕಲ್ಲಿ ನಲ್ಲಿರಿಸಬೇಕೆಂಬ ಏರ್ಪಾಟಿದೆ. ಸರ್ಕಾರದವರು ಹೀಗೇಕೆ ಮಾಡಿದರೋ ತಿಳಿಯ ಬರುವಂತಿಲ್ಲ. ಬಳ್ಳಾರಿಯು ಎಲ್ಲಾ ವಿಷಯಗಳಲ್ಲೂ ಅನುಕೂಲವಿದ್ದು ಸರ್ಕಾರಿ ಕಟ್ಟಡಗಳೆಷ್ಟೋ ಖಾಲಿ ಇವೆ. ಪ್ರಥಮದಿಂದಲೂ ಬಳ್ಳಾರಿಯಮೇಲೆ ವಕ್ರದೃಷ್ಟಿ ಇರುವುದು ರಾಜಕೀಯ ಕಾರಣಗಳಿಗಾಗಿ; ಮತ್ತು ಬಳ್ಳಾರಿಯು ಕರ್ನಾಟಕ ಪ್ರಾಂತಕ್ಕೆ ಹೋಗುವದೆಂಬ ಭಾವನೆಗಾಗಿ ಎಂಬುದು ಸ್ಪಷ್ಟವಾಗಿದೆ.

ಬಳ್ಳಾರಿ ಜಿಲ್ಲಾಬೋರ್ಡು ಅಧ್ಯಕ್ಷರ ಚುನಾವಣೆಯು ಇಂದು (24-10-49) ಇದೆ. ಕರ್ನಾಟಕ ಏಕೀಕರಣಕ್ಕೆ ಪುಷ್ಟಿ ಕೊಡುವವರನ್ನೇ ಆರಿಸಬೇಕೆಂದು ಸಾಧ್ಯವಾದಮಟ್ಟಿಗೆ ಸರ್ವಾನುಮತದಿಂದ ವೋಟಿಯಿಲ್ಲದೆ ಒಬ್ಬರನ್ನೆ ಆರಿಸಬೇಕೆಂದೂ ಬಹು ಸದಸ್ಯರ ಅಭಿಪ್ರಾಯವಾಗಿದೆ.

ರಾಷ್ಟ್ರಭಾಷೆಯಾದ ಹಿಂದಿಯನ್ನು ಈಗಿನ ಶಿಕ್ಷಣ ಪ್ರಣಾಳಿಯ ಪ್ರಕಾರ ಯಾವ ತರಗತಿಯಿಂದಾರಂಭಿಸಬೇಕು ಹಾಗೂ ಅದನ್ನು ಯಾವ ಲಿಪಿಯಲ್ಲಿ ಕಲಿಸಬೇಕು. ಪ್ರಾಥಮಿಕ 4–5 ತರಗತಿಗಳಲ್ಲಿ ಹಿಂದಿಯನ್ನು ಮಾತೃಭಾಷಾಲಿಪಿಯಲ್ಲೇ ಕಲಿಸಬಹುದೇ ವಗೈರೆ ವಿಚಾರಿಸಿ ತಮ್ಮ ಅಭಿಪ್ರಾಯವನ್ನು ತಿಳಿಸಲು ಮದ್ರಾಸ ಸರ್ಕಾರವು ಒಂದು ಸಮಿತಿಯನ್ನು ನಿರ್ಮಿಸಿದೆ.

ಕ್ಯಾಂಟನ್ ನಗರದ ಪತನವಾದನಂತರ ಚೀನದ ಕೆಂಪು ಸೈನ್ಯವು ಹಾಂಗ್‌ಕಾಂಗ ನಗರವನ್ನು ಸಮೀಪಿಸುತ್ತಲಿದೆ. ಇನ್ನು ಚೀನದ ದಕ್ಷಿಣದಲ್ಲಿ ಸ್ವಲ್ಪಭಾಗ ಉಳಿದಂತಾಯಿತು, ಹಿಂದಿನ ಅಧ್ಯಕ್ಷರಾದ ಚೆಂಗ್ ಕೈಶೇಕರು ಫಾರ್ಮೋಸಾ ದ್ವೀಪಕ್ಕೆ ಹೋಗಿದ್ದಾರೆ.

ಆಂಧ್ರಪ್ರಾಂತಕ್ಕೆ ತಿರುಪತಿಯನ್ನು ರಾಜಧಾನಿಯನ್ನಾಗಿ ಮಾಡುವದರಿಂದ ಯಾವ ಭಾಗದಿಂದಲೂ ವಿರೋಧವು ಬರಲಿಕ್ಕಿಲ್ಲವೆಂದು ಆಂಧ್ರ ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಂಗಾರವರು ಹೇಳಿದರೆಂದು ಸುದ್ದಿಗಾರರು ತಿಳಿಸುತ್ತಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆ ಅನೇಕ ಸ್ಥಳಗಳಲ್ಲಿ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ರಿಂದ ಪ್ರಾರಂಭಿಸಿ ಶೇ. 1½ ರ ಬಡ್ಡಿ. ಸೇವಿಂಗ್ಸ್ ಬ್ಯಾಂಕ್ 5/- ರಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (**Fixed Deposits**):- 3 ತಿಂಗಳಿನಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ್

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮಿಮಂಡಲದ ಆಶ್ರಯದಲ್ಲಿ, ರಜಿಸ್ಟರ್.]

ಮದ್ರಾಸ ಸರ್ಕಾರದಿಂದ ಮಾನ್ಯತೆಪಡೆದಿದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ - ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 46)47

24—10—49

ನವ ಭಾರತ ಬಳ್ಳಾರಿ.

(**Nationalist Weekly**)

ಚಂದಾದರಗಳು.		Subscription Rates.	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri...

Pirnted at Krishna Printing Works, Edited & Published by T. B. Keshava Rao

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೩೧ ಅಕ್ಟೋಬರ್ ೧೯೪೯ | ಸಂಚಿಕೆ ೪೦

ಹಿಂದೀ ಮಹಾವಿದ್ಯಾಲಯ — ಬಳ್ಳಾರಿ.

ಉತ್ತೀರ್ಣರಾದ ಪರೀಕ್ಷೆಗಳ ಫಲಿತಾಂಶ.

ಬಳ್ಳಾರಿ ಕೇಂದ್ರದಿಂದ ಈ ಕೆಳಗೆ ಕಾಣಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಮದ್ರಾಸ್ ದ ಭಾ. ಹಿ. ಸಭೆಯ ಫಿಬ್ರವರಿ 1949 ರ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವರು.

(1) ರಾಷ್ಟ್ರಭಾಷಾ ಪ್ರವೀಣ:--

1	ಕೆ. ಯಂ. ಶಿರಮಾರಾವ್	ಸಮಾಜ ವಿಜ್ಞಾನ.
2.	ಕೆ ಕೃಷ್ಣಮಾಚಾರಿ	,,
3.	ಆರ್. ವಿಜಯೇಂದ್ರ ಶರ್ಮ	ಪ್ರಾಂತೀಯ ಭಾಷೆ.
4.	ಕೆ. ಯಂ. ರೇವಣ್ಣ	,,
5.	ಪಿ. ಯಂ. ಪಂಚಾಕ್ಷರಿ ಶರ್ಮ	,,
6.	ರೇವತೀದೇವಿ	ಪ್ರಾಚೀನ ಹಿಂದಿ.

2. ರಾಷ್ಟ್ರ ಭಾಷಾ ವಿಶಾರದ

1. ಬಿ. ಎಸ್. ರಾಘವಾಚಾರ್
2. ಎಂ. ಮಲ್ಲಪ್ಪ
3. ಬಿ. ಆರ್ ಯಶೋದ
4. ಬಿ. ರಾಮರಾವ್
5. ಗು. ಜಯಲಕ್ಷ್ಮಿ ರೆಡ್ಡಿ
6. ಬಿ. ಆರ್. ಭೀಮರಾವ್
7. ಯಂ. ರಾಮರಾವ್
8. ಶಶಿಕಲಾಭಟ್
9. ಪದ್ಮ ರಂಗಯ್ಯ ಗುಪ್ತ

(3) ಪ್ರವೇಶಿಕ

1. ಕೊಲಹಳ್ಳಿ ಶೆಟ್ರ ನಿಜಲಿಂಗಪ್ಪ
2. ಬಿ. ಶೇಷೋಜಿ
3. ವೈದ್ಯ ಜಿ ಯಂ ಸೋಮನಾಥ ಶಾಸ್ತ್ರಿ
4. ಬಿ. ನೀಲಾರೆಡ್ಡಿ
5. ಯಂ. ಗುರುಪಾದಯ್ಯ.

ಬಳ್ಳಾರಿ ಜಿಲ್ಲಾ ಸೋಷಿಯಲಿಸ್ಟ್ ಪಾರ್ಟಿ

ಕಾರ್ಯಕಾರೀ ಸಮಿತಿಯ ಸಭೆಯು ನಾಬ್ ರಿಯಾಜುದ್ದೀನರ ಅಧ್ಯಕ್ಷತೆಯಲ್ಲಿ ಮುಬಾರಕ್ ಥಿಯೇಟರದಲ್ಲಿ ಕಳೆದ ಭಾನುವಾರ ಪ್ರಾತಃಕಾಲ ಕಾರ್ಮಿಕರ ಲಕ್ಷ್ಮಣ ಮಾರ್ಕಯವರ ಧನದಿಂದಾದ ದುಃಖವನ್ನು ವ್ಯಕ್ತಪಡಿಸಿಲಾಯಿತು. ಮಧ್ಯಾಹ್ನ ತುಂಗಭದ್ರಾ ಯೋಜನೆಯಿಂದ ಮುಳುಗುವ ಹಳ್ಳಿಗಳವರ ಪುನರ್ನಿವೇಶನ ವ್ಯವಸ್ಥೆಯಲ್ಲಿ ತಕ್ಕ ಸೌಕರ್ಯಗಳನ್ನು ದೊರಕಿಸುವ ಕಾರ್ಯವನ್ನು ಶಿವಪ್ರಕಾಶಾನಂದನಾಥರಿಗೆ ಒಪ್ಪಿಸುವ ಮತ್ತು ತುಂಗಭದ್ರಾ ಕಾರ್ಮಿಕರ ಪರಿಸ್ಥಿತಿಯ ಬಗ್ಗೆ ವರದಿಯನ್ನು ಆರ್. ವಿ ದೇಶಾಯಿಯವರು ದೊರಕಿಸುವ ತೀರ್ಮಾನಗಳಾದವು.

ಗೆಳೆಯ ಶ್ರೀ ಎನ್. ಶಿದ್ದಪ್ಪನವರಧ್ಯಕ್ಷತೆಯಲ್ಲಿ ಸಾಯಂಕಾಲ ಸಾಂಬಮೂರ್ತಿ ಮೈದಾನದಲ್ಲಿ ಸಭೆ ಸೇರಿ ಶಿವಪ್ರಕಾಶ್, ಆರ್. ವಿ. ದೇಶಾಯಿ, ರಾಜಗೋಪಾಲರು ಪಾರ್ಟಿಧ್ಯೇಯ ರೈತರ ಮತ್ತು ಕೂಲಿಕಾರರ ಸಮಸ್ಯೆಗಳ ವಿಷಯಕ್ಕೆ ಭಾಷಣ ಕೊಟ್ಟರು. ಅಧ್ಯಕ್ಷರು ಗಾಂಧೀಜಿಯವರ ಮಾರ್ಗದಲ್ಲಿ ನಡೆಯಬೇಕೆಂದರು.

ಮಳೆಯಿಂದ ಮನೆಬಿದ್ದ ಮಾಲಿಕರಿಗೆ ಪರಿಹಾರ.

ಮದ್ರಾಸ್ ಸರಕಾರದವರು ಬಳ್ಳಾರಿ ಜಿಲ್ಲೆಯಲ್ಲಿ ಮಳೆಯಿಂದಾದ ಅನಾಹುತಕ್ಕಾಗಿ 50 ಸಾವಿರ ರೂ. ಕೊಟ್ಟಿರುವರು. ಆದವಾನಿ ಭಾಗಕ್ಕಾಗಿಯೇ ಕಲೆಕ್ಟರವರು 20 ಸಾವಿರ ರೂ. ತೆಗೆದಿಟ್ಟಿರುವರು. ಪೀಡಿತ ಜನರಿಗಾಗಿ ಮನೆ ಕಟ್ಟಿಸಿಕೊಳ್ಳಲು 1000 ತಾಳೆಮರಗಳನ್ನು ಕೊಟ್ಟಿದ್ದಾರೆ.

ಬಳ್ಳಾರಿ ಜಿಲ್ಲಾ ಬೋರ್ಡು ಅಧ್ಯಕ್ಷ ಚುನಾವಣೆ.

ಶ್ರೀ. ವೈ. ಮಹಾಬಲೇಶ್ವರಪ್ಪನವರ ವಿಜಯ.

ಬಳ್ಳಾರಿ ಜಿಲ್ಲಾ ಕಲೆಕ್ಟರ್ ಶ್ರೀ ಎನ್. ವಿ. ಸುಗವನಂ ಅಯ್ಯರ್‌ರವರು 24 ನೆಯ ತಾ. ಅಧ್ಯಕ್ಷ ಚುನಾವಣೆಯನ್ನು ನಡೆಸಿದರು. ಅಧ್ಯಕ್ಷರಾ ಸದಸ್ಯರಾ ಪ್ರತಿಜ್ಞೆಗಳನ್ನು ತೆಗೆದುಕೊಂಡನಂತರ ಚುನಾವಣಾಕ್ರಮವಾರಂಭವಾಯಿತು. 49 ಸದಸ್ಯರು ಹಾಜರಿದ್ದರು. ಶ್ರೀ ಮಹಾಬಲೇಶ್ವರಪ್ಪನವರನ್ನು ಶ್ರೀ ಮುಂಡ್ಲೂರು ಗಂಗಪ್ಪನವರು ಸೂಚಿಸಿ, ರಾಂಪುರದ ಪೊಂಪಣ್ಣನವರು ಅನುಮೋದಿಸಿದರು. ಶ್ರೀ ಕೆ. ಚೆನ್ನಬಸವನಗೌಡರನ್ನು ಶ್ರೀ ಜಿ. ಶಿವಲಿಂಗಪ್ಪನವರು ಸೂಚಿಸಿ, ಎಂ. ಮರಿಸ್ವಾಮಯ್ಯನವರು ಅನುಮೋದಿಸಿದರು. ಶ್ರೀ ಹೆಚ್. ರಾಮಲಿಂಗಾ ರೆಡ್ಡಿಯವರನ್ನು ಶ್ರೀ ಬಿ. ಶಂಕರರೆಡ್ಡಿಯವರು ಸೂಚಿಸಿ ಶ್ರೀ ಕೆ. ಬಸವನಗೌಡರು ಅನುಮೋದಿಸಿದರು. ಮೊದಲನೆಯ ಕಾಂಡದಲ್ಲಿ ಮಹಾಬಲೇಶ್ವರಪ್ಪನವರಿಗೆ 23, ಚನಬಸವನಗೌಡರಿಗೆ 10 ಶ್ರೀ ರಾಮಲಿಂಗಾ ರೆಡ್ಡಿಯವರಿಗೆ 13 ಮತಗಳು ಬಿದ್ದವು. ಶ್ರೀ ಚನಬಸಪ್ಪನಗೌಡರ ಹೆಸರು ಕಡಿಮೆಯದಾಗಿಂದ ತೆಗೆದು ಹಾಕಲಾಯಿತು. ಎರಡನೆಯ ಕಾಂಡದಲ್ಲಿ ಶ್ರೀ ಮಹಾಬಲೇಶ್ವರಪ್ಪ ಶ್ರೀ ರಾಮಲಿಂಗಾ ರೆಡ್ಡಿಯವರಿಬ್ಬರೇ ಉಳಿದು ಮೊದಲನೆಯವರಿಗೆ 35 ಶ್ರೀ ರೆಡ್ಡಿಯವರಿಗೆ 12 ಮತಗಳುಬಿದ್ದವು. ಕಲೆಕ್ಟರವರು ಶ್ರೀ ಮಹಾಬಲೇಶ್ವರಪ್ಪನವರು ಗೆದ್ದರೆಂದೂ ಅವರು ಜಿಲ್ಲಾಬೋರ್ಡು ಅಧ್ಯಕ್ಷರಾದರೆಂದೂ ಅಧಿಕೃತವಾಗಿ ಸಾರಿದರು. ವಿಜಯಿಗಳಿಗೆ ಹೂವಮಾಲೆಗಳೂ ಧನ್ಯವಾದಗಳೂ ಸಮರ್ಪಿತವಾದವು. 'ಔಟ್' ಗಳು ಗಗನದಲ್ಲಿ ಲೆಕ್ಕವಿಲ್ಲದೆ ಹಾರಿದವು. ಶ್ರೀ ಮಹಾಬಲೇಶ್ವರಪ್ಪನವರು ಅಧಿಕಾರ ಸೂತ್ರಗಳನ್ನು ವಹಿಸಿದರು.

ರಾ ಯ ಲ ಸೀ ಮೆ ಯ
ಔದ್ಯೋಗಿಕ ಸಹಕಾರ ಮತ್ತು ವ್ಯವಸಾಯ ವಸ್ತು ಪ್ರದರ್ಶನ,
ಅ ನ ಂ ತ ಪು ರ.

[18—11—1949 ರಿಂದ 22—11—1949 ರ ವರೆಗೆ]

ಇಂದಿನ ಪ್ರದರ್ಶನವು ರಾಯಲಸೀಮೆ ಜಿಲ್ಲೆಗಳಾದ ಬಳ್ಳಾರಿ, ಅನಂತಪುರ, ಕರ್ನೂಲು, ಕಡಪಗಳಲ್ಲಿ ಇದುವರೆಗೆ ಜರುಗಿರುವುದಿಲ್ಲ. ನವಂಬರ್ '49 ರಂಗಳ ಮೂರನೆಯ ವಾರದಲ್ಲಿ ಅಂದರೆ 18 11—'49 ರಿಂದ 22—11—'49 ರ ವರೆಗೆ ಅನಂತಪುರ ನಗರದಲ್ಲಿ ನಡೆಯಲಿರುವ ಈ ಪ್ರದರ್ಶನದಿಂದ ಗ್ರಾಮೋದ್ಯೋಗಗಳ ಅಭಿವೃದ್ಧಿ, ಪರಸ್ಪರ ಸಹಕಾರ ಮತ್ತು ವ್ಯವಸಾಯ ಪ್ರಗತಿಗೆ ಮಿಗಿಲಾದ ಉತ್ತೇಜನವು ದೊರೆಯುವುದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ರಾಯಲಸೀಮೆಯ ಆರ್ಥಿಕಾಭಿವೃದ್ಧಿಯನ್ನು ಕೋರಿ ಅದರ ಪುನರುದ್ಧಾರದಲ್ಲಿ ಆಸಕ್ತರಾದ ಮಾನನೀಯರು ಈ ಪ್ರದರ್ಶನದಲ್ಲಿ ಭಾಗವಹಿಸಿ ಎಲ್ಲ ವಿಧದ ಸಹಾಯ ಸಹಕಾರಗಳನ್ನು ಮಾಡಿ ಇದನ್ನು ಯಶಸ್ವಿಗೊಳಿಸುವರೆಂದು ಆಶಿಸಲಾಗಿದೆ.

ಈ ಪ್ರದರ್ಶನಕ್ಕಾಗಿ ವಸ್ತುಗಳನ್ನು ಕಳಿಸ ಬಯಸುವವರು ಮತ್ತು ವಸ್ತುಗಳನ್ನು ವಿಕ್ರಯಿಸಲಿಚ್ಛಿಯುಳ್ಳರು 5-11-49 ರೊಳಗಾಗಿ ಈ ಕೆಳಗಿನವರಿಗೆ ಬರೆದು ವಿವರಣೆ ಪಡೆಯಬೇಕು. ಪ್ರದರ್ಶನವು ಆಂಧ್ರ ಪ್ರಾಂತಿಕ ಸಹಕಾರಿಗಳ ಮಹಾ ಸಭೆಯ ಆವರಣದಲ್ಲಿ ನಡೆಯುವುದು

ಪ್ರದರ್ಶನದ ಸ್ಟಾಲುಗಳ ಬಾಡಿಗೆ ಎಲ್ಲ ದಿನಗಳಿಗೆ ಕೂಡಿ ಹೀಗಿದೆ.

ಹೋಟಲುಗಳಿಗೆ	ಸ್ಟಾಲು ಒಂದಕ್ಕೆ	ರೂ.	50—0—0.
ಸೋಡ ಫ್ಯಾಕ್ಟರಿ	,,	,,	20 0- 0
ಔದ್ಯೋಗಿಕ ವಸ್ತು ವಿಕ್ರಯ ವರ್ತಕರಿಗಾಗಿ	,,	,,	15- 0 0

ಅನಂತಪುರ
21 10 49

ಕಾರ್ಯದರ್ಶಿ,
ಜಿಲ್ಲಾ ಇಂಡಸ್ಟ್ರಿಯಲ್ ಆಫೀಸರು,
ಅನಂತಪುರ

ರಾಯಲಸೀಮ ಮಹಾಸಭೆ.

ಬಳ್ಳಾರಿ ಜಿಲ್ಲಾ ಸ್ಥಾಯಿ ಸಮಿತಿಯ ಸಭೆಯು 23-10-49 ನೆಯ ಭಾನುವಾರ ಪ್ರಭಾತ ಚಿತ್ರಮಂದಿರದಲ್ಲಿ ಶ್ರೀ ಎ. ಪೀರಾಸ್ವಾಮಿ ಅಡ್ವೊಕೇಟ್ ಇವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿ ಈ ಕೆಳಗಣ ತೀರ್ಮಾನಗಳಾದವು.

ಸಂತಮ ಮಹಾ ಸಭೆಯು ನಂದ್ಯಾಲದಲ್ಲಿ ಶ್ರೀ ನೀಲಂ ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಕೂಡಿ ಸರ್ಕಾರ ಜಿಲ್ಲೆಗಳ ನಾಯಕರು ರಾಯಲಸೀಮೆಯವರೊಂದಿಗೆ ಶ್ರೀ ಬಾಗ್ ಒಡಂಬಡಿಕೆಯನ್ನು ಸಂಘಿಗೆ ಬಾರದೆ ಅವಿಶ್ವಾಸಕ್ಕೆ ಗುರಿ ತರುವಂತೆ ಮಾಡಿ ಪೂರ್ಣ ಅಪಕೀರ್ತಿಯಾದರೆ ಪ್ರತ್ಯೇಕ ಪ್ರಾಂತವನ್ನು ಕೋರುವ ವಿಷಯ.

ಆಂಧ್ರ ಪ್ರಾಂತಾಂದೋಲನದಿಂದ ರಾಯಲಸೀಮೆಯ ವರು ದೂರವಿರಬೇಕೆಂದೂ ಸ್ಥಾಯೀ ಸಮಿತಿ ಸಿಣಿಯ ರಾಯಲಸೀಮೆಯ ವರಿಗೆ ಹೊಸ ರಚನೆಯಲ್ಲಿ ಪ್ರಾಸ್ಯ ಸ್ಥಾನವು ದೊರೆಯುವದರಿ ಆಂಧ್ರಪ್ರಾಂತ ರಚನೆಯಲ್ಲಿ ತಮಗೆ ಉತ್ಸಾಹವಿಲ್ಲೆಂದು ಘೋಷಿಸುವ ವರಿಗೆ ರಾಯಲ ಸೀಮೆಯ 99 ಜನ ಶಾಸನಸಭ್ಯರು ಸಹಿಮಾಡಿ ಒಪ್ಪಿಸಿದ ಮರಳಿ ಇವುಗಳನ್ನೆಲ್ಲಾ ಲಕ್ಷದಲ್ಲಿಟ್ಟು ಈಗಲೂ ಸರ್ಕಾರ ಜಿಲ್ಲೆಗಳವರಿಗೆ ಮತ್ತು ರಾಯಲ್‌ಸೀಮೆಯವರಿಗ ರಾಜಿಯಿಲ್ಲಂದೂ ಹೊಸಘಟನೆಯಲ್ಲಿ ಜನಸಂಖ್ಯಾ ಪ್ರಕಾರ ಪ್ರತಿನಿಧ್ಯವು ಕೊಡಲಾಗಿರುವ ಕಾರಣ ಆಂಧ್ರ ಪ್ರಾಂತೀಯ ಶಾಸನಸಭೆಯಲ್ಲಿ ರಾಯಲ ಸೀಮೆಗಳವರನ್ನು ಕೇಳುವವರಿಲ್ಲದಂತಾಗುವದೆಂದೂ ಇದರಿಂದ ಶ್ರೀ ಬಾಗ್ ಒಡಂಬಡಿಕೆ ಸತ್ತು ಹೋದಂತಾಗಿರುವದೆಂದೂ ಈ ಸಭೆಯಭಿಪ್ರಾಯಪಡುತ್ತದೆ

ರಾಯಲ ಸೀಮೆಯ ಆರ್ಥಿಕಾಭಿವೃದ್ಧಿಗೆ ದೊಡ್ಡಪ್ರಾಂತದಲ್ಲಿ ಪ್ರಥಮ ಸ್ಥಾನವು ದೊರೆಯುವದಾಗಲಿ ಅದರಿಂದ ಸಣ್ಣಪ್ರಾಂತದಲ್ಲಿ ಆರ್ಥಿಕವಾಗಿ ಅಸಾಧ್ಯವೆಂಬುದು ಸಭೆಗೆ ಮನವರಿಕೆಯಾಗಿದೆ. ಹೈಕೋರ್ಟ್ ಮತ್ತು ರಾಜಧಾನಿಗಳ ವಿಷಯಕ್ಕೆ ಒಡಂಬಡಿಕೆಯಿಲ್ಲ. ಈ ವಿಷಯದಲಿ ಸರ್ಕಾರ ಮುಖಂಡರನು ನಂಬುವಂತಿಲ್ಲ

ಅಣುಬಾಂಬಿನ ಉತ್ಪನ್ನದಿಂದ ಜಗತ್ತಿಗೆ ಶಾಂತಿ ಇಲ್ಲ
ರಾಜಾಜಿ ಭಾಷಣ

ಹೊಸದಿಲ್ಲಿ ಯುಕ್ತ ರಾಷ್ಟ್ರ ಸಂಘ ದಿನಾಚರಣೆ ನಿಮಿತ್ತ ಅ. ಭಾ. ಆಕಾಶವಾಣಿ ದಿಲ್ಲಿ ಕೇಂದ್ರದಿಂದ ಹಿಂದುಸ್ಥಾನದ ಗವರ್ನರ ಜನರಲ್‌ರಾದ ಶ್ರೀ ರಾಜಗೋಪಾಲಾಚಾರಿಯವರು ಭಾಷಣ ಮಾಡಿ ಹಿಂದುಸ್ಥಾನದ ಜನತೆ ಹಾಗೂ ಸರಕಾರ ಇವರ ಪರವಾಗಿ ಯು. ರಾ. ಸಂಘದಲ್ಲಿ ಹಿಂದುಸ್ಥಾನದ ನಿಷ್ಠೆಯನ್ನು ವ್ಯಕ್ತಪಡಿಸಿದರು

ಜಗತ್ತಿನಲ್ಲಿ ಯುದ್ಧವನ್ನು ಕೊನೆಗಾಣಿಸಿ ಶಾಂತಿ ಪ್ರಸ್ಥಾಪನೆಮಾಡಿ ಸುಖ ಸಮೃದ್ಧಿಗಳ ಹೊಸಮನ್ವಂತರ ಸ್ಥಾಪಿಸಿಮಾಡಲು ಯುಕ್ತರಾಷ್ಟ್ರ ಸಂಘವನ್ನು ಎಲ್ಲಾ ಸರ್ಕಾರಗಳೂ ಕೂಡಿ ರಚಿಸಿದವು ಆದರೆ ದೈರ್ವದಿಂದ ಮಾನವ ಕೋಟಿಯನ್ನು ಇತ್ತೀಚೆಗೆ ಭೀತಿಯು ಮೊದಲಿಗಿಂತಲೂ ಹೆಚ್ಚಾಗಿ ಆವರಿಸಿದೆ ಯುದ್ಧವನ್ನು ಬಹಿಷ್ಕರಿಸಬೇಕೆಂದು ಯು. ರಾ. ಸಂಘವು ಆದೆಷ್ಟೋ ಪರಿಶ್ರಮ ಪಟ್ಟರೂ ಇನ್ನು ಆದಿಸೆಯಲ್ಲಿ ಅದಕ್ಕೆ ಯಶ ಪ್ರಾಪ್ತಿಯಾಗಿಲ್ಲ.

ಹಿಂಸಾಚರಣೆಯು ಅಧರ್ಮ ಕೃತ್ಯವೆಂದು ಜನರಲ್ಲಿ ಭಾವನೆಯುಂಟಾಗಿದೆ. ಜನರು ಹಾಗೂ ರಾಷ್ಟ್ರಗಳು ಬೇಕಾಬಿಟ್ಟಿ ಯುದ್ಧಕ್ಕಾಗಿ ಪ್ರಚೋದಿತರಾಗುವದು ನಿಲ್ಲದಿದ್ದರೆ. ಅಂತರರಾಷ್ಟ್ರೀಯ ವಿಷಯಗಳ ಚರ್ಚೆಗಳು ಬಿಕ್ಕಟ್ಟಿನಿಂದ ಸಾಗುವಂತಾಗದಿದ್ದರೆ ಯುದ್ಧ ಪ್ರವೃತ್ತಿಗೆ ಬಹಿಷ್ಕಾರ ಹಾಕಬೇಕೆಂಬ ವಿಚಾರಕ್ಕೆ ಯಶದೊರೆಯಲಾರದ ಹಿಂದೆ ರಾಷ್ಟ್ರಗಳು ಸ್ವಾತ್ರ ಬಲಸಂವರ್ಧನೆ ಮಾಡಿಕೊಂಡಿದ್ದವು ಇಂದ ಬಲಸಂವರ್ಧನೆಯಿಂದ ಯುದ್ಧವನ್ನು ತಪ್ಪಿಸ ಪಡು ಶಕ್ಯವಾಗಿಲ್ಲ ಇಂದ ಶಸ್ತ್ರಾಸ್ತ್ರ ಬಲಜೆಳೆಸ ಪದರಿಂದ ಬೇರೆ ಬೇರೆ ರಾಷ್ಟ್ರಗಳ ಶಕ್ತಿಯಲ್ಲಿ ಸ್ಪರ್ಧೆ ಮೆಯಾಗಬಹುದು ಇದರಿಂದ ಯುದ್ಧವನ್ನು ತಪ್ಪಿಸುಪದು ಅವುಗಳಿಗೆ ಶಕ್ಯವಾಗದೆ ಯುದ್ಧ ಪ್ರಾರಂಭವಾದಾಗ ಶಸ್ತ್ರಾಸ್ತ್ರ ಸಿದ್ಧತೆಯಿಂದ ಹೆಚ್ಚಿನ ಭೀಕರ ಪರಿಣಾಮಗಳು ಮಾತ್ರ ಸಂಭವಿಸುವವು.

ಅಣುಬಾಂಬಿನ ರಚನೆಯಲ್ಲಿ ನಾ ಮುಂದೆ ನೀನುಮುಂದೆ ಎಂದು ರಾಷ್ಟ್ರಗಳು ಸಿದ್ಧತೆ ನಡೆಸಬೇಕಾಗುವದು ಎಂದು ಉತ್ಕಟ ರಾಜಕೀಯ ವರ್ಗಗಳು ಘೋಷ್ಟ

ಇದಕ್ಕೂ ಅನಿಷ್ಟಸುದ್ದಿ ಈ ಜಗತ್ತಿಗೆ ಬೇರೊಂದಿಲ್ಲ. ಹಿಂದೆ ಶಸ್ತ್ರಾಸ್ತ್ರ ಉತ್ಪಾದನೆ ಹೆಚ್ಚಿಸಿದ್ದರಿಂದ ಯುದ್ಧವನ್ನು ತಪ್ಪಿಸುವದಾಗಿಲ್ಲವೆಂಬ ಅನುಭವ ಕಣ್ಮುಂದೆ ಇರುವಾಗ ಈಗ ಅಣುಬಾಂಬಿನ ಉತ್ಪಾದನೆ ಹೆಚ್ಚಿಸುವದರಿಂದ ಯುದ್ಧವನ್ನು ತಪ್ಪಿಸಲು ಶಕ್ಯವಾಗುವದೆಂದು ಭಾವಿಸಲು ಆಧಾರಗಳಿಲ್ಲ. ಮಾನವ ಕುಲದ ಸಂಹಾರ ಮಾಡುವ ಈ ಭಯಂಕರವಾದ ಅಣುಬಾಂಬು ತಯಾರಿಸಿ ಹುಚ್ಚರಂತೆ ಅದನ್ನು ಉಪಯೋಗಿಸುವದರಿಂದ ಆಗುವ ಅನರ್ಥಗಳನ್ನು ತಪ್ಪಿಸಲು ನಾವು ಸಮರ್ಥರಾಗಬಾರದೆ? ಅಣುಬಾಂಬನ್ನು ಯಾವ ರಾಷ್ಟ್ರವೂ ತಯಾರಿಸದಂತಹ ಕಾಲವು ಬಂದು ಅದು ಹೇಳ ಹೆಸರಿಲ್ಲದಂತೆ ಆಗಬೇಕು. ಅದನ್ನು ಕತೆಗಳಲ್ಲಿ ಮಾತ್ರ ವರ್ಣಿಸಿ ಹೇಳುವಂಥ ಕಾಲ ಬರಬೇಕು ಎಂದು ನಾನು ದೇವರಲ್ಲಿ ಪ್ರಾರ್ಥಿಸುವೆ.

ಹಿಂದುಸ್ತಾನದ ಜನತೆ ಹಾಗೂ ಸರಕಾರದ ಪರವಾಗಿ ನಾನು ಯುಕ್ತರಾಷ್ಟ್ರ ಸಂಘದಲ್ಲಿ ಹಿಂದುಸ್ತಾನದ ನಿಷ್ಠೆಯನ್ನು ಪುನರುಚ್ಚರಿಸುವೆ. ಈ ಸಂಘದ ಕಾರ್ಯದಲ್ಲಿ ಇದೆಷ್ಟೋ ನಿರಾಶೆಯುಂಟಾಗುವ ಸನ್ನಿವೇಶಗಳು ಬರಲಿ, ಎಷ್ಟೋ ತೊಂದರೆಗಳುದ್ಭವಿಸಲಿ, ಅದು ಜಾಗತಿಕ ಶಾಂತಿ ಪ್ರಸ್ಥಾಪನೆಯ ಕಾರ್ಯದಲ್ಲಿ ಮುಂದುವರೆಯುವ ಆತ್ಮಶಕ್ತಿಯನ್ನು ಪಡೆಯಲೆಂದು ಹಾರೈಸುವೆನು. ರಾ. ಸಂಘದ ಸದಸ್ಯ ರಾಷ್ಟ್ರಗಳಲ್ಲಿ ಎಷ್ಟೇ ಪ್ರಬಲ ದ್ವೇಷವಿದ್ದರೂ ಅದರ ಕುಂದುಕೊರತೆಗಳನ್ನು ಮೀರಿ ಯಶ ಸಂಪಾದಿಸುವಂಥ ಶಕ್ತಿಯನ್ನು ಈ ಸಂಘವು ಸಂಪಾದಿಸಲೆಂದೂ ಅದು ತನ್ನದೇ ಆದ ಆತ್ಮಶಕ್ತಿಯನ್ನು ಬೆಳೆಸಿಕೊಂಡು ತನ್ನ ಗುರಿಸಾಧಿಸಲು ಸಮರ್ಥವಾಗಲೆಂದೂ ಹಾರೈಸುವೆ

ಸಿಮೆಂಟ ಉತ್ಪನ್ನ ಹೆಚ್ಚಿಸಿರಿ ಬೆಲೆ ತಗ್ಗಿಸಿರಿ

ಭಾರತದ ೨೧ ಸಿಮೆಂಟ ಕಾರ್ಖಾನೆಗಳ ಮಾಲೀಕರನ್ನು ಕುರಿತು ಭಾಷಣ ಮಾಡುತ್ತಾ ಕೇಂದ್ರದ ಔದ್ಯೋಗಿಕ ಮಂತ್ರಿಗಳಾದ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಸಿಮೆಂಟ ಉತ್ಪನ್ನವನ್ನು ಹೆಚ್ಚಿಸಲು, ಬೆಲೆಯನ್ನು ತಗ್ಗಿಸಲು, ಹಂಚುವ ಒಳ್ಳೆ ವ್ಯವಸ್ಥೆಯನ್ನೇರ್ಪಡಿಸಲು ಕೇಳಿಕೊಂಡರು. ಈ ಕಾರ್ಖಾನೆಗಳು ಮೊದಲನೆಯ ಅರ್ಧ ವರ್ಷದಲ್ಲಿ 9,50,000 ಟನ್ನು ಸಿಮೆಂಟ್ ಉತ್ಪನ್ನ ಮಾಡಿವೆ. ಇವುಗಳ ಉತ್ಪಾದನ ಶಕ್ತಿಯು ವರ್ಷಕ್ಕೆ ೧೮ ಲಕ್ಷ ಟನ್.

ಜವಹರ - ಪಟ್ಟಾಭಿ - ವರದಿ ಪ್ರಕಾರ ಆಂಧ್ರಪ್ರಾಂತ ನಿರ್ಮಾಣವಾಗಿ ಮದ್ರಾಸ್ ಕಳೆದುಕೊಳ್ಳುವುದಾದರೆ ತೆಲುಗರಿಗೆ ಎಂಥಾ ಭಯಂಕರ ನಷ್ಟವೆಂಬುದನ್ನು, ಈ ಸಭೆಯು ಗಾಬರಿಯಿಂದ ವ್ಯಕ್ತಪಡಿಸುತ್ತದೆ. ಈ ಕಾರಣ ಶಾಸನ ಸಭ್ಯರಿಗೂ ಅದರಲ್ಲೂ ರಾಯಲಸೀಮೆಯವರಿಗೂ ಶೀಘ್ರ ಪ್ರಾಂತ ನಿರ್ಮಾಣದಿಂದ ಎಷ್ಟು ಹಾನಿ ಇದೆಯೆಂಬುದನ್ನು ಮದ್ರಾಸ್ ಸರ್ಕಾರಕ್ಕರುಹಿ ಪ್ರಾಂತನಿರ್ಮಾಣ ಪ್ರಶ್ನೆಯನ್ನು ಶಾಂತವಾತಾವರಣದಲ್ಲಿ ಆಲೋಚಿಸಲು ಬೇಡುತ್ತದೆ.

ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳಿಗೆ ಪ್ರಾಂತನಿರ್ಮಾಣವನ್ನು ಈಗಲೇ ಕೈಗೊಳ್ಳಬಾರದೆಂದೂ ಪ್ರಾಂತಸಂಬಂಧ ವೈಷಮ್ಯವು ಪ್ರಕೋಪಕ್ಕೆ ಹೋಗಿದೆಯೆಂದೂ ಈ ಸಭೆಯು ಸೂಚಿಸುತ್ತದೆ.

ಅಧ್ಯಕ್ಷರು ಈ ನಿರ್ಣಯವನ್ನು ಭಾರತ ಮುಖ್ಯ ಮಂತ್ರಿ ಉಪಮಂತ್ರಿ ಪ್ರಾಂತೀಯ ಮುಖ್ಯಮಂತ್ರಿ ಸದಸ್ಯರಿಗೆಲ್ಲಾ ಕಳುಹಿಸಲು ನಿರ್ಣಯವಾಯಿತು

ಕೂಲಿಕಾರರು ಹೋರಾಡಬೇಕು

ಭಾಯಿ ಜಯಪ್ರಕಾಶರ ಹೇಳಿಕೆ.

ಸಮಾಜವಾದಿ ಧುರೀಣರಾದ ಜಯಪ್ರಕಾಶ ನಾರಾಯಣರವರು ಈ ಆಯ್ ಆರ್ ಕೆಲಸಗಾರರ ಸಂಘದ ಲಖನೌ ಅಲಹಾಬಾದ ಶಾಖೆಗಳ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸದಸ್ಯರ ಪ್ರಶ್ನೆಗಳಿಗೆ ಉತ್ತರ ಕೊಡುತ್ತ ಹಿಂದುಸ್ತಾನದಲ್ಲಿಯ ಕೂಲಿಕಾರರೂ ರಾಜಕೀಯ ಅಧಿಕಾರಕ್ಕಾಗಿ ಹೋರಾಟ ಸಾಗಿಸುವ ಕಾಲವು ಈಗ ಬಂದಿರುವದೆಂದು ಹೇಳಿದರು.

ಹೊಟ್ಟೆಯ ಹೋರಾಟ ಹಾಗು ರಾಜಕೀಯ ಅಧಿಕಾರದ ಹೋರಾಟ ಇವು ಒಂದಕ್ಕೊಂದು ಸಂಲಗ್ನವಿರುವವು. ಆದ್ದರಿಂದ ಕೂಲಿಕಾರರು ತಮ್ಮ ಸಂಘಗಳ ಮುಖಾಂತರ ಹೋರಾಟ ಸಾಗಿಸಿ ರಾಜಕೀಯ ಅಧಿಕಾರವನ್ನು ಗಳಿಸಿಕೊಳ್ಳಬೇಕು. ಅದನ್ನು ಗಳಿಸಿಕೊಂಡಲ್ಲಿ ಹೊಟ್ಟೆಯ ಪ್ರಶ್ನೆ ತಂತಾನೆ ಬಿಡುವದು

ಪಂ. ಜವಾಹರಲಾಲ ನೆಹರೂರವರು ಉತ್ತರ ಅಮೇರಿಕೆಯ ಕ್ಯಾನಡಾದಲ್ಲಿ ತಮ್ಮ ಕಾರ್ಯಕ್ರಮವನ್ನು 3 ದಿನಗಳವರೆಗೆ ಸಾಗಿಸಿದರು. ಪೂರ್ವದಲ್ಲಿ ಅವರ ಸಹಪಾಠಿಗಳಾಗಿದ್ದ ಲಾರ್ಡ ಅಲೆಕ್ಸಾಂಡರರ (ಕ್ಯಾನಡಾದ ಗವರ್ನರ್) ಆತಿಥ್ಯವನ್ನು ಸ್ವೀಕರಿಸಿ ಪಾರ್ಲಿಮೆಂಟದಲ್ಲಿ ಭಾರತ ನಿಲುಮೆಯನ್ನು ಸ್ಪಷ್ಟೀಕರಿಸಿದರು

ಕೇಂದ್ರ ಪ್ರಭುತ್ವ ಖರ್ಚಿನಲ್ಲಿ 1950-51 ರ ಅಂದಾಜಿನ ಪ್ರಕಾರ ವಲ್ಲಭಭಾಯಿ ಪಟೇಲರ ಆದೇಶದ ವ್ಯಯ 80 ಕೋಟಿ ರೂಪಾಯಿಗಳ ಕಡಿತವಾಗಲು ನಿಶ್ಚಯವಾಗಿದೆ.

ಬಳ್ಳಾರಿ ನಗರಕ್ಕೆ ನಿರಾಶ್ರಿತರ ಆಗಮನ - ಸಹಾಯ ಮಾಡಿರಿ.

ಸಿಂಧ ಪ್ರಾಂತದಿಂದ ಸಮಸ್ತ ಆಸ್ತಿಪಾಸ್ತಿಗಳನ್ನು ಕಳಕೊಂಡು ಹೊರದೂಡಲ್ಪಟ್ಟ ನಿರಾಶ್ರಿತರ ಸುಮಾರು ೨೫ ಕುಟುಂಬಗಳು ಬಳ್ಳಾರಿಗೆ ಬಂದಿವೆ. ಇವರನ್ನು ರಾಣಿಛತ್ರ ಹಳೆಯ ಮುನಿಸಿಪಲ್ ಆಫೀಸುಗಳಲ್ಲಿ ಇಡಲಾಗಿದೆ. ಇವರಲ್ಲಿ ಮಧ್ಯಮ ವರ್ಗದವರೂ ಎಲ್ಲವನ್ನು ಕಳೆದುಕೊಂಡ ಶ್ರೀಮಂತರೂ ಇದ್ದಾರೆ. ಇವರಿಗೆ 8-10 ದಿನಗಳು ಸರ್ಕಾರವು ಅನ್ನ ಕೊಟ್ಟು ನಂತರ ಅವರಿಗೆ ಯೋಗ್ಯವಾದ ಕೆಲಸಗಳಲ್ಲಿ ತೊಡಗಿಸಲಿದೆ

ಈ ಕಾರಣ ಸಾರ್ವಜನಿಕರು ಎಲ್ಲವನ್ನು ಕಳೆದುಕೊಂಡ ಈ ನಿರಾಶ್ರಿತರಿಗೆ ಸರ್ವವಿಧದ ಸಹಾಯ ಮಾಡಲು ಕೋರಲಾಗಿದೆ.

ಬಳ್ಳಾರಿ ಕಲೆಕ್ಟರರು ಬಶೀರ- ಮುನೀರರ ಆಸ್ತಿಯ ವಶಪಡಿಸಿಕೊಂಡರು

ಕಾಲುಬಾಜಾರದ ಜನಾಬ್ ಅಬ್ದುಲ್ ಸತ್ತಾರವರ ಮಕ್ಕಳಾದ ಬಶೀರ್ ಮತ್ತು ಮುನೀರ್ ಎಂಬುವರು. ಪಾಕಿಸ್ತಾನಕ್ಕೆ ಹೋಗಿ ನೆಲೆಸಿದ ಕಾರಣ ಅವರ ಆಸ್ತಿಯನ್ನು (ಬಂಗಲೆಗಳು) ಕಲೆಕ್ಟರವರು ವಶಪಡಿಸಿಕೊಂಡರು. ಇವರು ಬಂಗಳೂರಿನಲ್ಲಿ ಮಿಲಿಟರಿ ಕಂಟ್ರಾಕ್ಟರಾಗಿ ಹೇರಳವಾದ ಧನ ಸಂಪಾದನೆ ಮಾಡಿದ್ದರು.

ಕಾಶ್ಮೀರ ಜಗಳದಲ್ಲಿ ಈಜಿಪ್ತವು ಮಧ್ಯಸ್ತಿಕೆ ವಹಿಸಬೇಕೆಂಬುದನ್ನು ನೆಲ ಮಧ್ಯಪಶಿಯಾ ವರ್ಗಗಳಲ್ಲಿ ಹೇಳಲಾಗುತ್ತಿದೆ.

ಶೀಘ್ರದಲ್ಲಿ ಆಂಧ್ರ ಪ್ರಾಂತ ರಚನೆ?

ಮದ್ರಾಸ— ಆಂಧ್ರಪ್ರಾಂತ ರಚನೆಯ ಚಳವಳಿಯು ಕೊನೆಯ ಘಟ್ಟಕ್ಕೆ ಬಂದಿದ್ದು ಸದ್ಯದಲ್ಲೇ ಸೇರಲಿರುವ ಪ್ರಾಂತಿಕ ಕಾಂಗ್ರೆಸ ಸಮಿತಿ ಮತ್ತು ಸರಕಾರದ ಸಭೆಗಳಲ್ಲಿ ಈಬಗ್ಗೆ ನಿರ್ಣಯ ಕೈಕೊಳ್ಳಲ್ಪಡುವದೆಂದು ತಿಳಿಯುತ್ತದೆ

ನವಂಬರ ೮ ನೆಯ ತಾರೀಖಿನ ದಿನ ಬೆಜವಾಡಾದಲ್ಲಿ ಆಂಧ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯು ಸಭೆ ಸೇರಲಿದೆ. ಮದ್ರಾಸ ನಗರವನ್ನು ಬಿಟ್ಟು ಆಂಧ್ರ ಪ್ರಾಂತಿಕ ಕಾಂಗ್ರೆಸ ಸಮಿತಿಯು ಒಪ್ಪಬೇಕೆಂದು ತಾನು ಮಾಡಿರುವ ಸೂಚನೆಗೆ ಮನ್ನಣೆ ದೊರಕಿಸಬೇಕೆಂದು ತ್ರಿಮೂರ್ತಿ ಸಮಿತಿಯು ಆಂಧ್ರ ಪ್ರಾಂತಿಕ ಕಾಂಗ್ರೆಸ ಅಧ್ಯಕ್ಷರಾದ ಪ್ರೊಫೆಸರ ರಂಗಾ ಅವರಿಗೆ ಆದೇಶವನ್ನಿತ್ತಿದೆಯೆಂದು ಹೇಳಲಾಗುತ್ತದೆ.

ಇಂಥ ಗೊತ್ತುವಳಿಯೊಂದನ್ನು ಆಂಧ್ರ ಪ್ರಾಂತಿಕ ಕಾಂಗ್ರೆಸ ಸಮಿತಿ ಸ್ವೀಕರಿಸಬಹುದೆಂದು ನಿರೀಕ್ಷಣೆಯಿದೆ. ಇನ್ನೈದು ವರ್ಷಗಳವರೆಗೆ ಮದ್ರಾಸ ನಗರವು ಆಂಧ್ರ ಪ್ರಾಂತದ ರಾಜಧಾನಿಯಾಗಬಹುದೆಂದು ಹೇಳಲಾಗಿದೆ. ಈಗಿನ ಮದ್ರಾಸ ಪ್ರಾಂತವು ಉತ್ತರ ಮತ್ತು ದಕ್ಷಿಣ ಪ್ರಾಂತವಾಗಿ ವಿಭಾಗಿಸಲ್ಪಟ್ಟು ಉತ್ತರ ಭಾಗವು ಆಂಧ್ರಪ್ರಾಂತವಾಗುವದು.

ಈ ತಿಂಗಳ ಕೊನೆಯಲ್ಲಿ ತಮಿಳುನಾಡು ಕಾಂಗ್ರೆಸ ಸಮಿತಿಯು ಸಭೆ ಸೇರಲಿದೆ ನವಂಬರ ೧೫ ನೇಯ ತಾರೀಖಿನೊಳಗಾಗಿ ಮದ್ರಾಸ ಸರಕಾರದ ಅಭಿಪ್ರಾಯವನ್ನು ತಿಳಿಸಬೇಕೆಂದು ಮದ್ರಾಸ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳಲಾಗಿದೆ. ಆಂಧ್ರಪ್ರಾಂತ ರಚನೆಯಬಗ್ಗೆ ಗವರ್ನರ ಜನರಲ್ಲರು ನವಂಬರ ೧೫ ನೇಯ ತಾರೀಖಿನಂದು ವಿಶೇಷಾಜ್ಞೆಯನ್ನು ಹೊರಡಿಸಬಹುದೆಂದು ಆಂತ ವರ್ಗಗಳು ಅಭಿಪ್ರಾಯಪಟ್ಟಿವೆ.

—

ಕಲ್ಕತ್ತೆಯಲ್ಲಿ ೨೭ ಸಾವಿರ ಕಾರ್ಪೋರೇಶನದ ನೌಕರಿಯಲ್ಲಿ ೨೪ ಸಾವಿರ ಜನರು ಹೆಚ್ಚಿನ ವೇತನ ತುಟ್ಟಿ ಭತ್ತೆಗಳಿಗಾಗಿ ೨೨ ಸೇರಿ. ತಾ॥ದಿಂದ ಮುಷ್ಕರ ಹೂಡಿರುತ್ತಾರೆ ತಲಾ ೫ ರೂ, ಹೆಚ್ಚಿಸಲು ಕೇಳುತ್ತಿರುವರು.

ಹಾಳ್ಕಿ (ಆದವಾನಿ)

ಈ ತಿಂಗಳ ಆದಿಯಲ್ಲಿ ಶ್ರೀ ಪರಮದೊಡ್ಡಪ್ಪನವರ ನರಸಪ್ಪನವರು ಮೃತರಾದದ್ದು ಬಹಳ ವಿಷಾದಕರವಾಗಿದೆ. ಬಡವರ, ಹರಿಜನರ, ಉದ್ಧಾರಕ್ಕಾಗಿ ಇವರು ಶಕ್ತ್ಯಾನುಸಾರ ಸಹಾಯಮಾಡಿದ್ದರು. ಇಲ್ಲಿಯ ಪ್ರಾಥಮಿಕ ಶಾಲೆಯು ಉನ್ನತ ಪಾಠಶಾಲೆಯಾಗಿ ಮಾರ್ಪಾಟಾಗಲು ಈ ಹಳ್ಳಿಗರ ಕೂಗನ್ನು ಮದ್ರಾಸ್ ಸರ್ಕಾರದ ಡೈರೆಕ್ಟರ್ ಆವ್ ಹರಿಜನ ವೆಲ್ಫೇರ್ ರವರಿಗೆ ಮುಟ್ಟಿಸಲು ಸಾಹಸಮಾಡಿದರು. ಉನ್ನತ ಪಾಠಶಾಲೆಯಾಗುವ ಮೊದಲೇ ಅವರು ತೀರಿಕೊಂಡದ್ದು ವ್ಯಸನಕರವಾಗಿದೆ. ಹೀಗೆ ವಿದ್ಯಾಪ್ರೇಮಿಗಳೂ ಗ್ರಾಮದ ಹಿತಚಿಂತಕರೂ ಆಕಸ್ಮಿಕವಾಗಿ ಮರಣ ಹೊಂದಿದ್ದು ದೈವಲೀಲೆ. ಭಗವಂತನು ಮೃತರಆತ್ಮಕ್ಕೆ ಶಾಂತಿಯನ್ನೂ ಕುಟುಂಬೀಕರಿಗೆ ಧೈರ್ಯ ಸಮಾಧಾನಗಳನ್ನು ಈಯಲೆಂದು ಪ್ರಾರ್ಥಿಸುತ್ತೇವೆ.

ಇದೇನು ಅನ್ಯಾಯ ?

ಕೇಂದ್ರ ಸರಕಾರದ ಆಜ್ಞೆಯನ್ವಯ ಮದ್ರಾಸ್ ಪ್ರಾಂತಿಕ ಸರಕಾರದವರು ಕೆಲ ಜಿಲ್ಲೆಗಳಲ್ಲಿ ಸ್ಥಿರಾಸ್ತಿಗಳನ್ನು ಜಿಲ್ಲಾ ಕಲೆಕ್ಟರವರ ಅಪ್ಪಣೆ ಇಲ್ಲದೆ ಮಾರಬಾರದೆಂದೂ ಆಜ್ಞೆಮಾಡಿದ್ದಾರೆ ಪಾಕಿಸ್ತಾನಕ್ಕೆ ಗುಳೇ ಹೋದ ಮುಸಲ್ಮಾನರ ಆಸ್ತಿಗಳು ಕಳ್ಳತನದಿಂದ ಮಾರಾಟವಾಗಬಹುದೆಂಬ ಭಯದಮೇಲೆ ಹೀಗೆ ಮಾಡಿರಬೇಕೆಂದು ಊಹಿಸ ಬೇಕಾಗುತ್ತದೆ. ರಿಜಿಸ್ಟರ್ ಆಗಬೇಕಾದರೆ ರಿಜಿಸ್ಟ್ರಾರರಿಗೆ ಆದುಗುಳೇ ಹೋದಮುಸಲ್ಮಾನರ ಆಸ್ತಿಯಲ್ಲವೆಂಬುದನ್ನು ನಿರ್ದರ್ಶಿಸುವ ಅಧಿಕಾರವಿದ್ದರೆ ಸಾಕು ಇಲ್ಲವೇ ವಿಕ್ರಯಪತ್ರದಲ್ಲಿ ಆಕರ್ತ ಹಾಕಿ ಅಂಥಾ ಆಸ್ತಿಯಿದ್ದರೆ ಕ್ರಯವು ರದ್ದಾಗುವದೆಂಬುದನ್ನು ಸೂಚಿಸಿದರಾಯಿತು. ಈ ಕಷ್ಟವೆಲ್ಲಾ ತಪ್ಪುತ್ತದೆ.

ಜಿಲ್ಲೆಯ 9 ತಾಲೂಕುಗಳವರೆಲ್ಲಾ ಕಲೆಕ್ಟರರ ಬಳಿ ಬಂದು ಸರ್ಟಿಫಿಕೇಟ್ ತೆಗದುಕೊಂಡು ಹೋಗಬೇಕೆಂದರೆ ಬರುವಪಾರ್ಟಿಗಳಿಗೂ ಕಷ್ಟ ಕಲೆಕ್ಟರವರಿಗೂ ಅತಿಯ ತೊಂದರೆಗೆ ಕಾರಣವಾಗುತ್ತದೆ. ಜಿಲ್ಲೆಯ ಎಲ್ಲಾಜನರ ಪರಿಚಯವು ಕಲೆಕ್ಟರರಿಗೆ ಹೇಗಿರುತ್ತೆ ? ಅವರು ತಮ್ಮಕೆಳ ಅಧಿಕಾರಿಗಳಿಂದ ಅಂದರೆ ಡಿಪ್ಯುಟಿ ಕಲೆಕ್ಟರ್ ತಹಶೀಲ್ದಾರ್ ರೆವಿನ್ಯೂಇನ್ಸ್ಪೆಕ್ಟರ್ ಮತ್ತು ಗ್ರಾಮೋದ್ಯೋಗಿಗಳಿಂದಲಿಯಬೇಕಾಗುತ್ತದೆ. ಇಷ್ಟುಮಾರ್ಗಗಳನ್ನು ಕ್ರಮಿಸಲು ಎಷ್ಟುಕಾಲ, ವ್ಯಯ,ಶ್ರಮೆಯಾಗುತ್ತದೆ.?

ಸರ್ಕಾರದವರು ಕೂಡಲೇ ತಕ್ಕ ಪರಿವರ್ತನೆಯನ್ನು ಮಾಡಿ ಗುಳೇಹೋದ ಮುಸಲ್ಮಾನರ ಆಸ್ತಿಗಳ ಬಗ್ಗೆ ಭದ್ರತೆ ಮಾಡಿ ಸಾರ್ವಜನಿಕರ ಲೇವಾದೇವಿ ವ್ಯವಹಾರಗಳಿಗೆ ತೊಂದರೆ ಇಲ್ಲದಂತೆ ಮಾಡುವರೆಂದು ಆಶಿಸುತ್ತೇವೆ.

— —

ಮು॥ ರಾ॥ ಶ್ರೀ॥ ಹೊಸಪೇಟೆ ಡಿ॥ ಮು॥ ಕೋರ್ಟಿನಲ್ಲಿ.

O. S. 336/49

ಶ್ರೀ ವೆಂಕಟರಮಣಸ್ವಾಮಿ ಪರ್ಮನೆಂಟು ಭಂಡಾರ ಲಿಮಿಟೆಡ್ by its Secretary,

ಟಿ. ಶ್ರೀನಿವಾಸಮೂರ್ತಿ. ಹರ್ಪನಹಳ್ಳಿ. .... ವಾದಿ

Vs.

ಆಳ್ವಚೆರ್ರು ಸುಬ್ರಮಣ್ಯಂ, ಕೊಟ್ಟೂರು. ವಗೈರಾ....ಪ್ರತಿವಾದಿಗಳು.

ವಾದಿ ಮೇಲಿನ ನಂಬರಿನಲ್ಲಿ ನಿನ್ನ ಮೇಲು ಯೇರ್ರ ನಾಗಯ್ಯ ಮತ್ತು S.C. ಸುಬ್ಬಯ್ಯ ಯಿವರಗಳಮೇಲು ರೂ. 1043-12-0 ಕ್ಕೆ ದಾವಾ ಮಾಡಿರುತ್ತಾರೆ. ಸದ್ರಿ ದಾವಾ 7-11-49 ಕ್ಕೆ ವಾಯಿದಾ ಇರುತ್ತದೆ. ನಿನಗೆ ಏನಾದರೂ ಆಕ್ಷೇಪಣೆ ಯಿದ್ದಲ್ಲಿ ಸದ್ರಿ ವಾಯಿದಾಕ್ಕೆ ಹಾಜರಾಗತಕ್ಕದ್ದು. ಯಿಲ್ಲದಿದ್ದಲ್ಲಿ (Exparte) ಡಿಕ್ರಿ ಆಗುತ್ತದೆ.

ಹೆಚ್. ಗೋವಿಂದಾಚಾರ್,
ಅಡ್ವೊಕೇಟು.

ಮಹಾತ್ಮಗಾಂಧಿ ಹಂತಕರು

ಆಪಟೆ-ಗೋಡಸೆಯವರಿಗೆ ತಾ॥ ೧೫ ಕ್ಕೆ ಗಲ್ಲು

ಹೊಸದಿಲ್ಲಿ— ಮಹಾತ್ಮಗಾಂಧಿ ಕೊಲೆ ಖಟ್ಲೆಯಲ್ಲಿ ದೇಹಾಂತ ಶಿಕ್ಷೆಗೆ ಗುರಿಯಾಗಿರುವ ನಥೂರಾಮ ಗೋಡಸೆ ಹಾಗು ಆಪಟೆಯವರನ್ನು ನವಂಬರ ೧೫ ರಂದು ಗಲ್ಲಿಗೇರಿಸಲು ಹುಕುಮು ಹೊರಟಿದೆಂದು ತಿಳಿಯುತ್ತಿದೆ. ಗೋಡಸೆಯು ತನಗೆ ಕ್ಷಮೆ ಬೇಕಿಲ್ಲವೆಂದೂ ತಾನು ಶಿಕ್ಷೆ ಅನುಭವಿಸಲು ಸಿದ್ಧನಿರುವದಾಗಿಯೂ ಸರಕಾರಕ್ಕೆ ತಿಳಿಸಿರುವನೆಂದೂ ತಿಳಿಯುತ್ತದೆ.

ಪಂ. ಜವಾಹರಲಾಲ ನೆಹರು ಕಾನಡಾ ಸಂಚಾರದ ಮುಕ್ತಾಯ.

ನ್ಯೂಯಾರ್ಕ — "ಇಂದಿಲ್ಲ ನಾಳೆ ಜಾಗತಿಕ ಸರಕಾರವನ್ನು ಸ್ಥಾಪಿಸದಿದ್ದರೆ, ಜಾಗತಿಕ ಆತ್ಮಹತ್ಯ ನಿಶ್ಚಿತ" ಹೀಗೆಂದು ಕಾನಡಾ ಸಂಚಾರದಿಂದ ತಿರುಗಿಬಂದ ಪಂ ಜವಹರಲಾಲ ನೆಹರು ಅವರು ಹೆರಾಲ್ಡ ಟ್ರಿಬ್ಯೂನ ಪತ್ರಿಕೆಯವರು ಸೇರಿಸಿದ ಸಭೆಯನ್ನುದ್ದೇಶಿಸಿ ಮಾತಾಡುತ್ತ ಹೇಳಿದರು,

ಪಂ ಜವಹರಲಾಲರವರು ಈ ಚಿಕ್ಕ ಭಾಷಣವನ್ನು ಚಿಕಾಗೋದಿಂದ ಬಂದಾಕ್ಷಣವೇ ಯಲ್ಲಿ ಮಾಡಿದರು ಮತ್ತು ಸಭಿಕರು ನ್ಯೂಯಾರ್ಕದ ವಾಲ್ಡಾರ್ಫ ಆಸ್ಟೋರಿಯಾ ಹೋಟಲದ ವಿಶಾಲವಾದ ನೃತ್ಯಶಾಲೆಯಲ್ಲಿ ಕುಳಿತು ಕೇಳಿದರು.

ಪರಸ್ಪರಾವಲಂಬಿಯಾಗಿರುವ ಜಾಗತಿಕ ಸಮಸ್ಯೆಗಳು ಇದನ್ನೇ ಸೂಚಿಸುತ್ತವೆ. ಅದನ್ನು ಅಲಕ್ಷಿಸುವದರಿಂದ ಗಂಡಾಂತರವಿದೆಯೆಂದೂ ಪಂಡಿತ ನೆಹರೂ ಅವರು ಹೇಳಿದರು

ಪಂ ಜವಾಹರಲಾಲರು ಮುಂದುವರಿದು ಮತ್ತೂ ಹೇಳಿದ್ದೇನಂದರೆ:-

"ಜಾಗತಿಕ ಸಮಸ್ಯೆಗಳ ಪರಸ್ಪರಾವಲಂಬನವೆಂದರೆ, ಜಗತ್ತಿನ ಎಲ್ಲ ರಾಷ್ಟ್ರಗಳು ಒಂದನ್ನೊಂದು ಅವಲಂಬಿಸಿರುತ್ತವೆ ಒಂದಾದರೂ ರಾಷ್ಟ್ರವು ದೂರಸಿದ್ದು ಪ್ರತ್ಯೇಕವಾಗಿ ನಿಲ್ಲಲಾರದು ಮತ್ತು ಯುದ್ಧ ಹಾಗೂ ಶಾಂತಿಯ ಸಮಸ್ಯೆಯನ್ನು ತನ್ನ ತಕ್ಕೆ ತಾನೇ ಬಿಡಿಸಲಾರದು ಜಾಗತಿಕ ತಳಹದಿಯ ಮೇಲೆ ಸಹಕರಿಸಿದರೆ ಮಾತ್ರ ಇದು ಸಾಧ್ಯ ಆದುದರಿಂದ ನಾವೆಲ್ಲರೂ ಅನಿವಾರ್ಯವಾಗಿ ಒಂದು ಜಾಗತಿಕ ಕ್ರಮ ಜಾಗತಿಕ ಸರಕಾರದ ಕಡೆಗೆ ಸಾಗುತ್ತಿದ್ದೇವೆ.

ಇಂದಿಲ್ಲ ನಾಳೆ ಜಾಗತಿಕ ಸರಕಾರ ಒಗುವದರಲ್ಲಿ ಸಂಶಯವಿಲ್ಲ ಇಲ್ಲದಿದ್ದರೆ ಜಾಗತಿಕ ಆತ್ಮಹತ್ಯ ನಿಶ್ಚಿತ. ಆದರೆ ಆ ಗುರಿಯ ಕಡೆಗೆ ನಾವು ಸಾವಧಾನವಾಗಿ ಹೆಜ್ಜೆ ಇಡಬೇಕು ಭಯವನ್ನು ಬಿಟ್ಟು ಪರಸ್ಪರ ದ್ವೇಷವನ್ನು ನಾಶ ಮಾಡಿದರೆ ಈ ಎರಡು ಶಕ್ತಿಗಳಲ್ಲಿ ಅವುಗಳ ಘರ್ಷಣೆಯಿಂದಾಗುವ ಅಪಾಯವನ್ನು ಅರಿತರೆ ಜಗತ್ತಿನ ಬದಿಕವನ್ನು ನಿರ್ಣಯಿಸುತ್ತಲಿರುವದು

ಜಾಗತಿಕ ಸರಕಾರ ಬರುವದರಲ್ಲಿ ನನಗಂತೂ ಸಂಶಯವಿಲ್ಲ ಆದರೆ ಅದನ್ನು ಸ್ವಾಗತಿಸಲು ಮಾನವನ ಮನಸ್ಸು ಇನ್ನೂ ಸಿದ್ಧವಿರದ್ದರಿಂದ ಕೆಲಕಾಲ ಹಿಡಿಯಬಹುದು

ಆರ್ಥಿಕ ಪರಸ್ಪರಾವಲಂಬನವು ಇಂದು ಎದ್ದು ಕಾಣುತ್ತಿದೆ. ಕಾರಣ ಆರ್ಥಿಕ ಸಹಕಾರವನ್ನು ಎಲ್ಲರೂ ಬಯಸುತಿದ್ದಾರೆ.

ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಗೆ ಸಹಾಯ ಮಾಡಬೇಕೆನ್ನುವ ಅಧ್ಯಕ್ಷ ಟ್ರೂಮನ್ನರ ಯೋಜನೆಯನ್ನು ನಾನು ಸ್ವಾಗತಿಸುತ್ತೇನೆ. ಯಾಕೆಂದರೆ ಅದರಿಂದ ಇಂದಿನ ಆರ್ಥಿಕ ದುಸ್ಥಿತಿ ಅದೆಷ್ಟೋ ಕಡಿಮೆಯಾಗುತ್ತಿದೆ

ಮಾನವನ ಮನೋದೌರ್ಬಲ್ಯವು ಜಾಗತಿಕ ಸರಕಾರ ಸ್ಥಾಪನೆಗೆ ಅಡ್ಡಿಯಾಗಿರುವದು ಆರ್ಥಿಕ ತೊಂದರೆಯು ನಿವಾರಣೆಯಾಗಿ, ಸೌಹಾರ್ದ ಬೆಳೆದರೆ ಮನಃಪ್ರವೃತ್ತಿ ಅನುಕೂಲವಾಗುವದರಲ್ಲಿ ಸಂಶಯವಿಲ್ಲ.

ಈ ಮಹಾಕಾರ್ಯದಲ್ಲಿ ಹಿಂದುಸ್ಥಾನವು ಶಕ್ತಿಮೀರಿ ಸಹಾಯಮಾಡುವದು ಜಾಗತಿಕ ಸಹಕಾರದ ತಳಹದಿಯ ಮೇಲೆಯೇ ನಮ್ಮ ರಾಷ್ಟ್ರೀಯತೆ ನಿಂತಿರುತ್ತದೆ. ಜಗತ್ತಿನಲ್ಲಿರುವ ಎಲ್ಲ ಪ್ರಗತಿಪರ ಶಕ್ತಿಗಳೂ ಸಹಕರಿಸುವವೆಂದು ಆಶಿಸುತ್ತೇನೆ

ಪೆಟ್ರೋಲ ಹಾಗು ಚಿಮಣಿ ಎಣ್ಣೆಯ ಬೆಲೆ ಏರುವದು ಪೌಂಡು ವಿಚ್ಛೇದನದ ಪರಿಣಾಮ

ಹೊಸದಿಲ್ಲಿ—ಪೆಟ್ರೋಲ ಹಾಗು ಚಿಮಣಿ ಎಣ್ಣೆಯ ಬೆಲೆಯನ್ನು ನವಂಬರ ತಾ. ೧ ರಿಂದ ಏರಿಸಲಾಗುವದೆಂದು ತಿಳಿಯುತ್ತದೆ.

ಪೌಂಡು ವಿಚ್ಛೇದನದ ಪರಿಣಾಮವಾಗಿ ಪೆಟ್ರೋಲಿನ ಬೆಲೆಯನ್ನು ಗ್ಯಾಲನ್ನಿಗೆ ಮೂರಾಣೆಯಂತೆ ಹಾಗೂ ಚಿಮಣಿ ಎಣ್ಣೆಯನ್ನು ಒಂದು ಬಾಟಲಿಗೆ ಅರ್ಧಾಣೆಗಿಂತಲೂ ಸ್ವಲ್ಪ ಕಡಿಮೆಯಂತೆ ಏರಿಸಲಾಗುವದು.

ಪೆಟ್ರೋಲಿನ ಪೂರೈಕೆಯು ಈ ವರ್ಷದ ಕೊನೆಯವರೆಗೆ ಈಗಿನಂತೆಯೇ ಇರುವದು ಆದರೆ ಹೊಸವರ್ಷದ ತ್ರೈಮಾಸಿಕದಲ್ಲಿ ಮಾತ್ರ ಈ ಪ್ರಮಾಣವು ತಗ್ಗಬಹುದೆಂದು ಅಂದಾಜು ಮಾಡಲಾಗಿದೆ.

ಗ್ಯಾಲನ್ನಿಗೆ ಮೂರಾಣೆಯಂತೆ ಹೆಚ್ಚು ಬೆಲೆ ಕೊಟ್ಟು ಪೆಟ್ರೋಲನ್ನು ಮೊದಲಿನಷ್ಟು ಪ್ರಮಾಣದಲ್ಲಿಯೇ ವಿದೇಶಗಳಿಂದ ತರಿಸುತ್ತಿದ್ದರೆ ೩ ಕೋಟಿ ರೂ ಗಳಷ್ಟು ಹೆಚ್ಚು ವೆಚ್ಚ ಬರಬಹುದು. ಈ ಹಣವನ್ನು ಉಳಿಸುವ ಸಲುವಾಗಿ ನಮ್ಮ ಆಯಾತವನ್ನು ತಗ್ಗಿಸಬೇಕಾಗಿದೆ.

ಅಖಿಲ ಭಾರತ ಮಹಿಳಾ ಸಭೆ ಬಳ್ಳಾರಿ ಶಾಖೆ ಕರ್ನಾಟಕ ಪ್ರಾಂತೀಯ ಸಭ

ಬಳ್ಳಾರಿ ನಗರದಲ್ಲಿ ನವಂಬರ್ 1949 ನೆಯ 5-6 ನೆಯ ತಾ. ಶನಿವಾರ, ಭಾನುವಾರ ಅಖಿಲಭಾರತ ಮಹಿಳಾಸಭೆಯ ಬಳ್ಳಾರಿಶಾಖೆಯ ಆಶ್ರಯದಲ್ಲಿ ಕರ್ನಾಟಕ ಪ್ರಾಂತೀಯ ಮಹಿಳಾಸಭೆಯು ಶ್ರೀಮತಿ ಸುಪ್ರಸಿದ್ಧ ಕಾರ್ಯಕರ್ತೆಯರಾದ ಪೆದ್ದವಾಡ ಕಾಮೇಶ್ವರಮ್ಮನವರ ಅಧ್ಯಕ್ಷತೆಯಲ್ಲಿ ಸಮಾವೇಶವಾಗಲಿದೆ. ಸ್ತ್ರೀಯರ ಅಭಿವೃದ್ಧಿಯನ್ನು ಕುರಿತು ಅನೇಕ ಸಮಸ್ಯೆಗಳು ಚರ್ಚಿಸಲ್ಪಟ್ಟು ನಿರ್ಣಯಗಳಾಗಲಿವೆ ಕರ್ನಾಟಕದ ಎಲ್ಲಾಭಾಗಗಳಿಂದಲೂ ಅದರಲ್ಲೂ ಜಿಲ್ಲೆಯ ಎಲ್ಲಾ ತಾಲೂಕುಗಳಿಂದಲೂ ಪ್ರತಿನಿಧಿಗಳು ಆಗಮಿಸಿ ಈ ಸಭೆಯನ್ನು ಯಶಸ್ವಿ ಮಾಡಲು ಕೋರಿಕೆ.

ಡಾಕ್ಟರ್ ಮಿಸಸ್ ಜಿ ಕೆ. ವ್ಯಾಕಿನಾನ್
ಅಧ್ಯಕ್ಷೆ.

ಡಾ. ಎಸ್ ಲಕ್ಷ್ಮಿದೇವಿ,
ಕಾರ್ಯದರ್ಶಿ.

ಪಂ ನೆಹರೂರವರ – ಅಮೇರಿಕ ಕಾನಡಾ ಯಾತ್ರೆಯಿಂದ ಭಾರತಕ್ಕೆ ಬೇಕಾಗುವಷ್ಟು ಗೋಧಿ ದೊರೆಯಬಹುದೆಂದು ಊಹಿಸಲಾಗಿದೆ. ಇಲ್ಲಿಯ ಸಮಾಜಗಳು ಬಹಳವಾಗಿ ಗೋಧಿಯನ್ನು ಕಳುಹಿಸುವರು. ಅವರು ಮೊದಲು ಗೋಧಿಯನ್ನು ಕಳುಹಿಸಿ ನಮ್ಮ ಹಣಕ್ಕಾಗಿ 3-4 ವರ್ಷ ಕಾಯುವರು.

ಚರ್ಚಿಲ್ಲರ ಗದ್ಗದ ಕಣ್ಣೀರು !
ನೆಹರೂರಂಥ ಮಹಾಪುರುಷ ನಾನಾಗುತ್ತಿದ್ದಿಲ್ಲ.

ಪಂಡಿತ ಜವಹರಲಾಲ ನೆಹರೂರವರು ಬಾಗಶವು ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿಯೇ ಉಳಿಯುವರೆಂಬ ನಿಶ್ಚಯವಾದ ತಕ್ಷಣವೇ ಕನ್‌ಸರ್ವೇಟಿವ್ ಪಾರ್ಟಿಯ ಇಬ್ಬರು ಸದಸ್ಯರು ಈ ಸುದ್ದಿಯನ್ನು ತಮ್ಮ ನಾಯಕ ಚರ್ಚಿಲ್ಲರಿಗೆ ಸಲ್ಲಿ ಹೇಳಿದರು. ಚರ್ಚಿಲ್ಲರು ಬಾರ ಹಿತಶತ್ರುಗಳಾಗಿ ನಾಯಕರಿಗೆ ಹಿಂಸೆ ಕೊಟ್ಟಿದ್ದರು. ಅವರು ಗದ್ಗದಸ್ವರದಿ "ನಾನು ನೆಹರೂರ ಸ್ಥಾನದಲ್ಲಿದ್ದರೆ ಅಷ್ಟು ಮಹಾಪುರುಷ ನಾಗುತ್ತಿದ್ದಿಲ್ಲ" ಎಂದರು ".

ಬಳ್ಳಾರಿ ಸ್ಥಾಯೀ ಕಲೆಕ್ಟರ್ ಅಲಾರ್ಡಿಸ್‌ರವರು ಇಂಗ್ಲೆಂಡಿನಲ್ಲುಳಿದು ಮತ್ತೆರಡು ತಿಂಗಳ ರಜಾ ಬೇಡಿದಕಾರಣ ಈಗಿರುವ ಶ್ರೀ ಎನ್. ವಿ. ಸುಗವನಂ ಅಯ್ಯರ್‌ರವರೇ ಜಿಲ್ಲಾ ಭಾಜರ್ನದಲ್ಲಿರುವರು.

ಆದವಾನಿಯು ಸಂಪತ್ಸಮೃದ್ಧ ಸ್ಥಳವಾಗಿರುವ ಕಾರಣ ಬಳ್ಳಾರಿಗೆ ಬಂದ ನಿರಾಶ್ರಿತರಲ್ಲಿ ಕೆಲವರನ್ನು ಅಲ್ಲಿಗೂ ಕಳುಹಿಸಬೇಕೆಂದು ಕೆಲ ಸೂಚನೆಗಳು ಬಂದಿವೆ.

ಮಧ್ಯಸ್ಥಿಕೆ

ಪೂರ್ವ ಪಶ್ಚಿಮ ರಾಷ್ಟ್ರಗಳು ಅಂದರೆ ರಷ್ಯಾ ಅಮೇರಿಕಾಗಳಲ್ಲಿನ ಭಿನ್ನ ಭೇದಗಳನ್ನಳಿಸಿ ರಾಜಿಮಾಡಿ ಶಾಂತಿ ಪ್ರಸ್ಥಾಪಿಸಲು ಭಾರತ ಪ್ರಧಾನರಾದ ಪ. ಜವಹರಲಾಲರನ್ನು ಕೋರಬೇಕೆಂಬ ಸೂಚನೆಗಳು ಬಂದವೆ.

ಅಕ್ಕಿಯು ಹೊರತಾಗಿ ಜೋಳ ನವಣೆ ಸಜ್ಜೆ ನಗ್ಗೆರೆ ಧಾನ್ಯಗಳಿಗೆ ಕಂಟ್ರೋಲ್ ಇರಬಾರದೆಂದೂ ಜಿಲ್ಲೆಜಿಲ್ಲೆಗಳೊಳಗೆ ಸಾಗಾಟವಿದ್ದರೆ ಪರಿಸ್ಥಿತಿಯು ಉತ್ತಮಗೊಳ್ಳುವದೆಂದೂ ರೈತರ ಅಭಿಪ್ರಾಯವಿದೆ. ಈಗ ಬೆಳೆಯು ಒಳ್ಳೆಯದಿದ್ದು ಸ್ಟೋರುಗಳಲ್ಲಿ ಸಂಗ್ರಹವೂ ಚನ್ನಾಗಿದೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[o]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits)**:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 46)47

31—10—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri..

....

....

Printed at Krishna Printing Works, Edited & Published by T B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗ್ರತ!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೭ ನವಂಬರ್ ೧೯೪೯ | ಸಂಚಿಕೆ ೪೨

ಬಳ್ಳಾರಿ ಜಿಲ್ಲಾ ಬೋರ್ಡು

ಪ್ರಕಟನೆ.

ಆದವಾನಿ ಡೆಪ್ಯೂಟಿ ಸಂಚಾಯತಿ ಆಫೀಸರವರ ಆಫೀಸಿಗೆ ಕುರ್ಚಿ, ಮೇಜು ವಗೈರೆ ಸಾಮಾನುಗಳನ್ನು ಸಪ್ಲಯಿಮಾಡುವುದಕ್ಕೆ ಸೀಲುಮಾಡಿದ ಟೆಂಡರುಗಳನ್ನು 10-11-49 ನೇ ತಾರೀಖು ಸಾಯಂಕಾಲ 4 ಗಂಟೆಗಳವರಿಗೂ ಕಳುಹಿಸಬಹುದು. ಸಾಮಾನುಗಳ ವಿವರಗಳನ್ನು ಬಳ್ಳಾರಿ ಜಿಲ್ಲಾ ಬೋರ್ಡು ಆಫೀಸಿನಲ್ಲಿ ಆಫೀಸಿನ ವೇಳೆಯಲ್ಲಿ ಪಡೆಯಬಹುದು.

ವೈ. ಮಹಾಬಲೇಶ್ವರಪ್ಪ,
ಅಧ್ಯಕ್ಷ ಡಿ. ಬೋರ್ಡು

ಹಿಂದೀ ಮಹಾವಿದ್ಯಾಲಯ — ಬಳ್ಳಾರಿ.

ಪ್ರಾರಂಭಿಕ ಪರೀಕ್ಷೆಗಳ ಫಲಿತಾಂಶ.

1949 ನೆಯ ಫೆಬ್ರವರಿ ತಿಂಗಳಲ್ಲಿ ನಡೆದ ದ. ಭಾ. ಹಿ ಪ್ರ. ಸಭೆಯ ಪ್ರಾರಂಭಿಕ ಪರೀಕ್ಷೆಗಳಲ್ಲಿ ಬಳ್ಳಾರಿ ಕೇಂದ್ರದಿಂದ ಈ ವಿದ್ಯಾರ್ಥಿಗಳು ತೇರ್ಗಡೆ ಹೊಂದಿರುವರು.

೧ ಪ್ರಾಥಮಿಕ

1 ಯಸ್ ಅಂಬುಜಮ್ಮ ಪ್ರಥಮಶ್ರೇಣಿ
2 ಯಮ್. ವಿ. ರಾಮಸ್ವಾಮಿ ,,
3. ಯಸ್. ಮಲ್ಲಿಕಾರ್ಜುನಪ್ಪ ,,
4. ಬಿ. ಕೋಟಮ್ಮ ದ್ವಿತೀಯ
5. ಎ. ಪಂಕಜಾ ,,
6. ಜಿ. ಬಸಮ್ಮ ,,
7 ರೋಡಾ ಎನ್ ಸೇಥನಾ ,,
8. ಹೆಚ್ ಸಾವಿತ್ರಮ್ಮ ,,
9. ಬಿ ಸರ್ಮದಾಬಾಯಿ ,,
10 ಎ. ಸುವಿತ್ರಾಬಾಯಿ ,,
11. ಕೆ. ಪೊಂಪಣ್ಣ ,,
12 ಯಂ. ರಾಜಶೇಖರ್ ,,
13 ಜಿ ಯಂ. ಈಶ್ವರಯ್ಯ ,,
14 ಯಂ. ವಿ. ರಾಮಾಚಾರ್ ,,
15 ಬಿ. ಸತ್ಯನಾರಾಯಣಶೆಟ್ಟಿ ,,
16. ನಾ. ರುದ್ರನಗೌಡ ಹರಗಿನಡೋಣಿ
17. ಕೆ. ಬಾಬಾಶಾಸ್ತ್ರಿ ,,
18. ಕಲ್ಮೇಶ್ವರರಾವು ,,
19. ಬಿ. ಕೆ. ಶ್ರೀನಿವಾಸಮೂರ್ತಿ ,,
20. ಪಿ ರಂಗಬಾಬು ,,
21. ಪಿ. ಪಾಂಡುರಂಗಾಚಾರ್ ,,
22. ಎ ಹನುಮಂತಪ್ಪ ,,
23. ಕೆ. ಪಂಪಾಪತಿ ,,
24. ಕೆ ವೀರಭದ್ರಯ್ಯ ,,

೨ ಮಧ್ಯಮಾ

1 ಸಿ. ಯಮುನಾಬಾಯಿ
2 ಸಿ. ಯಂ ಸರೋಜಿನಿ
3. ಸಿ. ಯಂ. ವಿಮಲಾ
4. ವಿ. ಸಾವಿತ್ರಿ
5. ಡಿ. ನರಸಮ್ಮ
6 ಮುಲ್ಲಾ ಖಾಜಾಮೀನ್
7. ಕೆ. ಸೋಮಶೇಖರ್
8. ಪಿ ರಾಮುಲು
9. ಯ. ಲ್ ಅಂಥೋನಿರೆಡ್ಡಿ
10. ಆರ್ ಸೂರ್ಯನಾರಾಯಣ
11. ಯಂ. ವಿ. ಸುಬ್ಬಾರೆಡ್ಡಿ
12. ಕೆ. ವೆಂಕಟರಾವ್
13 ಯಸ್. ಲಕ್ಷ್ಮಣ್
14. ಕೆ. ವಿ. ಶಂಕರಸುಬ್ರಹ್ಮಣ್ಯಂ
15. ಕೆ. ವಿಠಲಮೂರ್ತಿ
16. ಕೆ. ಷಣ್ಮುಖಶಾಸ್ತ್ರಿ
17. ಕೆ. ತಿಪ್ಪಯ್ಯಪ್ಪ
18. ಕೆ. ಎ. ಸುಂದರಮ್ಮ
19 ಬಿ. ಬುಗ್ಗಯ್ಯ
20. ಅಬ್ದುಲ್ ಗಫೂರ್
21 ಬಿ. ಗೋಪಿನಾಥ್
22. ಜೋಗೇಂದ್ರ ಕುಮಾರ್
23. ಟಿ. ಪೊಂಪನಗೌಡ್

೩ ರಾಷ್ಟ್ರ ಭಾಷಾ

1. ಬಿ. ಶ್ರೀನಿವಾಸರಾವ್
2. ಜಿ. ಹನುಮಂತಶಾಸ್ತ್ರಿ
3. ಕೆ. ಮಹದೇವಶಾಸ್ತ್ರಿ
4. ಮ ಸಾಂಬಶಿವಶಾಸ್ತ್ರಿ
5. ಕೆ. ಹೆಚ್. ಯಂ. ಶ್ರೀಕಂಠಯ್ಯ
6. ಜಿ. ಪಾಂಡುರಂಗಪ್ಪ
7. ಯಂ. ಮರಿಸ್ವಾಮಿ
8. ಓಂಪ್ರಕಾಶ
9. ಎ. ದೇವಕಮ್ಮ
10. ಪಿ. ಲೋಕಮ್ಮ
11. ಬಿ. ಪಾರ್ವತಮ್ಮ
12 ಕಲಾವತಿ

ಒಂದು ಬುದ್ಧಿಮಾತು

ನಮ್ಮ ಅಸ್ವಚ್ಛತೆ

ಇದೊಂದು ದೊಡ್ಡ ಸಮಸ್ಯೆ ಯೆಂಬುದನ್ನು ನಾನು ಬಲ್ಲೆ. ನಮ್ಮ ಜನರ ಎಷ್ಟೋ ರೂಢಿ ಚಟಗಳು ಶಬ್ದದಿಂದ ಹೇಳಲು ಬಾರದಷ್ಟು ಕೆಟ್ಟವಾಗಿವೆ. ಆದರೂ ಅವು ಚಟವಾಗಿ ಬೇರೂರಿಕೊಂಡು ಬಿಟ್ಟಿವೆ. ಏನು ಮಾಡಿದರೂ ಹೋಗವು. ಹೋದಲ್ಲೆಲ್ಲ ಒಂದಿಲ್ಲೊಂದು ರೂಪದಲ್ಲಿ ಅಸ್ವಚ್ಛತೆಯು ನನ್ನ ಕಣ್ಣಿಗೆ ಬೀಳುತ್ತದೆ. ಯಾವುದೇ ಅನುಮಾನವಿಲ್ಲದೆ ನಾವು ರಸ್ತೆಗಳನ್ನು ಹೊಲಸು ಮಾಡುತ್ತೇವೆ. ಸ್ವಚ್ಛತೆಯ ಗಂಧವಿದ್ದವನಿಗೆ ಮುಂಜಾನೆ ರಸ್ತೆಗಳಲ್ಲಿ ಹಾಯ್ದಾಡುವದು ಅಸಾಧ್ಯವೆನಿಸುವದು. ಮನುಷ್ಯರು ಓಡಾಡುವಂಥ ಸ್ಥಳಗಳಲ್ಲಿ ಮತ್ತು ಏಕಾಂತದಲ್ಲಿ ಮಾಡಬೇಕಾದ ನೈಸರ್ಗಿಕ ಕಾರ್ಯವನ್ನು ಈಡೇರಿಸುತ್ತ ಜನ ರಸ್ತೆಯ ಎಡಬಲಕ್ಕೆ ಸಾಲಾಗಿ ಕುಳಿತಿರುತ್ತಾರೆ. ತಮ್ಮ ಹದ್ದಿನಲ್ಲಿ ಎಲ್ಲೆಲ್ಲಿಯೂ ಹೊಲಸಿಲ್ಲದಂತೆ ಮಾಡುವದು ಲೋಕಲ್ ಬೋರ್ಡ ಮುನಿಸಿಪಾಲಿಟಿಗಳ ಮುಖ್ಯ ಕೆಲಸವಾಗಬೇಕು. ಪಟ್ಟಣಗಳಲ್ಲಿ ಇರಬೇಕಾದರೆ, ಸಂಘಟಿತ ಜೀವನವನ್ನು ಸಾಗಿಸಬೇಕಾದರೆ, ಆರೋಗ್ಯವನ್ನೂ ಬುದ್ಧಿಸಾಮರ್ಥ್ಯವನ್ನೂ ಹೆಚ್ಚಿಸಬೇಕಾದರೆ ನಾವು ಒಂದಿಲ್ಲೊಂದು ದಿನ ಅಸ್ವಚ್ಛತೆಯಿಂದ ಪಾರಾಗಲೇಬೇಕು. ಅದಷ್ಟು ಬೇಗನೆ ಅದರಿಂದ ಪಾರಾಗುವದು ಒಳಿತಲ್ಲವೆ?

—ಮಹಾತ್ಮಾ ಗಾಂಧಿ

ನವಭಾರತಕ್ಕೆ

ಚಂದಾದಾರರಾಗಿರಿ.

ಬಳ್ಳಾರಿ ಕನ್ನಡ ನಾಟಕ ಕಳಾಸಮಿತಿ

ಯಶಸ್ವಿ ನಾಟಕ ಪ್ರದರ್ಶನ —

ಬಳ್ಳಾರಿ ಜಿಲ್ಲಾ ಕನ್ನಡ ನಾಟಕ ಕಳಾ ಸಮಿತಿಯವರು 27-10-49 ಹೊಸಪೇಟೆಯ ಚಿತ್ರಮಂದಿರದಲ್ಲಿ ಶ್ರೀ ಮಾನ್ ಗದಗ ಗರುಡ ಸದಾಶಿವರಾಯರ ನೇತೃತ್ವದಲ್ಲಿ "ಕ್ರಾಂತಿಪುರುಷ ಬಸವಣ್ಣ. ನಾಟಕವನ್ನು ಯಶಸ್ವಿಯಾಗಿ ಪ್ರದರ್ಶಿಸಿದರು ಪ್ರೇಕ್ಷಕರು ಕಿಕ್ಕಿರಿದು ನಾಟಕ ಭವನವನ್ನು ಅಲಂಕರಿಸಿದ್ದಲ್ಲದೆ ಅನೇಕರು ಸ್ಥಲಾಭಾವದಿಂದ ನಿರುತ್ಸಾಹದಿಂದ ಹಿಂದಿರುಗಬೇಕಾಯಿತು. ನಾಟಕದ ಪಿರಾಮದಲ್ಲಿ ಶ್ರೀ ಗರುಡರು ಉಚಿತವಾದ ತಮ್ಮ ಅನುಭವ ವಾಣಿಯಿಂದ ನಾಟಕದ ವಿಷಯ... 29-10-49 ರಂದು ... ಶ್ರೀ ... ನಾಟಕವನ್ನು ... ಯಶಸ್ವಿಯಾಗಿ ಪ್ರದರ್ಶಿಸಲಾಯಿತು ಅನೇಕರಿಗೆ ಟಿಕೆಟ್ಟುಗಳು ಸಿಕ್ಕದೆ ಹಿಂದಿರುಗಬೇಕಾಯಿತು. ಸಮಿತಿಯು ಈ ನಾಟಕ ಪ್ರದರ್ಶನಗಳಲ್ಲಿ ಸಹಾಯ ಸಹಕಾರ ವಿತ್ತವರಿಗೆಲ್ಲಾ ಸಮಿತಿಯು ಕೃತಜ್ಞತೆಯ ಧನ್ಯವಾದಗಳು.

ಹಚ್ಚೊಳ್ಳಿ ಮಾನ್ಯರಿಗೆ ಗೌರವ ಬಿರುದು ಸಮರ್ಪಣೆ

ನಮ್ಮ ಬಳ್ಳಾರಿಜಿಲ್ಲಾ ಸಿರುಗುಪ್ಪ ತಾಲೂಕು ಹಚ್ಚೊಳ್ಳಿಗ್ರಾಮದಲ್ಲಿರುವ ಶ್ರೀಮಾನ್ ಹಚ್ಚೊಳ್ಳಿ ಜೋಯಿಸ್ ವಿದ್ವಾನ್ 1 ಹನುಮಂತಾಚಾರ್ಯರಿಗೂ ಸದ್ರಿ ಗ್ರಾಮದ ಲೋಕಲ್ ಡಿಸ್ಪೆನ್ಸರಿ ಡಾಕ್ಟರಾದ ಶ್ರೀ ರಾಮಚಂದ್ರ ಶಾಸ್ತ್ರಿಗಳವರಿಗೂ "ಪೂರ್ವ ಗೋವರ್ಧನಾಚಾರ್ಯ ಪೀಠಾಧೀಶ್ವರ ಅನಂತ ಶ್ರೀಮದ್ ಜಗದ್ಗುರು ಶಂಕರಾಚಾರ್ಯ ಯೋಗೀಶ್ವರಾನಂದ ಮಹಾರಾಜರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲ ಭಾರತ ವಿದ್ವನ್ಮಾನ್ಯ ಅಯೋಧ್ಯಾ" ಪಟ್ಟಣದಲ್ಲಿರುವ ತರ್ಕ, ವೇದಾಂತ, ವ್ಯಾಕರಣ, ವೈದ್ಯ ಜ್ಯೋತಿಷ ಮುಂತಾದ ಸಕಲ ಶಾಸ್ತ್ರ ಪಾರಂಗತರಾದ ಮಹಾವಿದ್ಯಾ ಸಭೆಯಲ್ಲಿ 1-10-1949, ರಂದು ವಿಜಯದಶಮೀ ಉತ್ಸವಕಾಲದಲ್ಲಿ 1 ನೇ ಯವರಿಗೆ "ದೈವಜ್ಞಭೂಷಣ ಎಂಬ ಬಿರುದನ್ನೂ ಪ್ರತಿಷ್ಠಾಪತ್ರವನ್ನು 2 ನೆ ಯವರಿಗೆ "ಭಿಷಗ್ರತ್ನ ಎಂಬ ಬಿರುದಿನ ಪ್ರಶಸ್ತಿ ಪತ್ರವನ್ನರ್ಪಿಸಿ ಸನ್ಮಾನಮಾಡಿದ್ದಾರೆ.

ಬಸವಿಯರಾಗಿ ಬಿಟ್ಟದ್ದಕ್ಕೆ ಶಿಕ್ಷೆ: ಹೊಸಪೇಟೆ

(ನಮ್ಮ ಸ್ವಂತ ಸುದ್ದಿಗಾರರಿಂದ)

ಈ ತಾಲೂಕು ನಾರಾಯಣ ದೇವರ ಕೆರೆ ಗ್ರಾಮದಲ್ಲಿ ವಾಲ್ಮೀಕರು ಕೆಲವರು ತಮ್ಮ ಮಕ್ಕಳನ್ನು "ಬಸವಿ" ಗಳಾಗಿ ಬಿಟ್ಟಿದ್ದಾರೆಂದು ಆ ಗ್ರಾಮದ ಶ್ರೀ ಬಿ. ಕೆ. ಹನುಮಂತಪ್ಪ ಯೆಂಬಾತನು ಅರ್ಜಿ ಕೊಟ್ಟಿದ್ದನು ಇಲ್ಲಿಯ ಅಡಿಷನಲ್ ಫಸ್ಟ್ ಕ್ಲಾಸು ಮೇಜಿಸ್ಟ್ರೇಟ್ ಆದ ಶ್ರೀ ಡಿ. ಶ್ರೀನಿವಾಸರಾವು ಯವರು ಕೇಸನ್ನು ವಿಚಾರಿಸಿ "ಬಸವಿ"ಗಳಾಗಿ ಬಿಟ್ಟ ಮುವ್ವರು ಕನ್ನೆಯರಿಗೆ ಒಬ್ಬರಿಗೆ 200 ರೂಪಾಯಿಗಳ ದಂಡವನ್ನು ವಿಧಿಸುತ್ತಾ ತಾವು "ಬಸವಿ"ಗಳಾಗಿ ಬಿಟ್ಟ ಆ ಹೆಂಗಸರಿಗೆ ಬಂಧು ವರ್ಗದವರಿಗೆ ಮತ್ತು ನ್ಯಾಯಸ್ಥಾನಕ್ಕೆ ... ಪ್ರೋಟ್ಸು ಹತ್ತು ಮಂದಿ ಪುರುಷರಿಗೆ ... ತಿಂಗಳು ಕಠಿನ ಸಜಾ ವಿಧಿಸುತ್ತಾ ಮೊನ್ನೆನ ದಿವಸ ತೀರ್ಪು ಹೇಳಿದರು.

ಹೊಸಪೇಟೆ ಡಿ|| ಮುನ್ಸಿಫ್ ಕೋರ್ಟಿನಲ್ಲಿ.

S. C. 423 49

ಮಂಡ್ರಿಗಿ ಸುಬ್ರಹ್ಮಣ್ಯ ಆಚಾರು ಹೊಸಪೇಟೆ. ವಾದಿ.

Vs

ಚಿಕ್ಕಪಲ್ಲಿ ಮುಕ್ತುಂಸಾಬು | ಪ್ರತಿ
ನಾಗೇನಹಳ್ಳಿ | ವಾದಿ

ಮೇಲಿನ ನಂಬರಿನಲ್ಲಿ ವಾದಿಯು ನಿನ್ನ ಮೇಲೆ ಕಾಗದಗಟ್ಟೆ ಮಾಗಾಣೆಸಾಗು ಮಾಡಿದ ಬಾಬತು ರೂ 120-0-0 ಗಳನ್ನು ವಸೂಲಿ ಮಾಡಲು ದಾವಾ ದಾಖಲು ಮಾಡಿರತ್ತಾನೆ ಸದರಿ ನಂಬರು 12—11—49 ಕ್ಕೆ ವಾಯ್ದೆ ಬಿದ್ದಿರುತ್ತದೆ ಕಾರಣ ಸದರಿ ದಿವಸಕ್ಕೆ ಒಂದು ಹಾಜರಾಗದಿದ್ದಲ್ಲಿ ನಿನ್ನ ಮೇಲೆ ಎಕ್ಸಪಾರ್ಟಿ ಡಿಕ್ರಿ ಆಗುತ್ತದೆ.

ಹೆಚ್. ಗೋವಿಂದಾಚಾರು
ವಾದಿ ಅಡ್ವಕೇಟ್

ವಿಚಿತ್ರ ಸಂಘಟನೆ

ಈ ತಾಲೂಕು ಕೊಂಡನಾಯಕನಹಳ್ಳಿ ಯೆಂಬುವ ಗ್ರಾಮದಲ್ಲಿ ಒಬ್ಬ ಮಹಮ್ಮದೀಯನ ಮನೆ ಮುಂಭಾಗದ ಅಂಗಳದಲ್ಲಿ ಹಿಂದಿನ ನಾಲ್ಕುದಿನಗಳಿಂದಲು ಆಕಸ್ಮಾತ್ತಾಗಿ ಆಗಾಗೆ ಚಿಕ್ಕಚಿಕ್ಕ ಕಲ್ಲುಗಳು ಬೀಳುತ್ತಾಯಿವೆ. ಈ ಕಲ್ಲುಗಳು ಯಾವಕಡೆಯಿಂದ ಬರುತ್ತಾವೆಂಬುವ ವಿಷಯವನ್ನು ಕಂಡು ಹಿಡಿಯಲು ಆ ಗ್ರಾಮಸ್ಥರೆಲ್ಲರು ಪ್ರಯತ್ನ ಪಟ್ಟರು. ಆದರೂ ಇದರ ರಹಸ್ಯ ಗೊತ್ತಾಗಲಿಲ್ಲ. ಮೊನ್ನೆ ನಡುವಸದಿಂದ ಈ ಕಲ್ಲುಗಳು ಮನೆ ಪ್ರೊಳಭಾಗದಲ್ಲಿ ಸಹಿತ ಬೀಳಲು ಪ್ರಾರಂಭಿಸಿ ಒಬ್ಬ ಹುಡುಗನಿಗೆ ಸ್ವಲ್ಪ ಗಾಯವಾಗಿರುತ್ತದೆ. ಕಾರಣ ಈ ಕುಟುಂಬೀಕರು ಬಹಳ ಭೀತಿಪಟ್ಟಿರುತ್ತಾರೆ. ಕಾರಣ ಇದಕ್ಕೆ ನಿವಾರಣೋಪಾಯವೆಂಬುದನ್ನು ಈ ಪತ್ರಿಕಾ ಪಾಠಕರಲ್ಲಿ ಯಾರಾದರೂ ತಿಳಿದಿದ್ದರೇ ತಿಳಿಸಲು ಪ್ರಾರ್ಥಿಸುತ್ತೇನೆ

ವೇದಿ. ಶ್ರೀರಾಮುಲು

ಕಾಶಿಯಲ್ಲಿ ಬುದ್ಧ ಶಿಷ್ಯರ ಅವಶೇಷಗಳು

ವಿಜಯನಗರ ಅರಮನೆಯಲ್ಲಿ ದರ್ಶನದ ವ್ಯವಸ್ಥೆ

ಕಾಶಿ ೩- ಬುದ್ಧ ಶಿಷ್ಯರಾದ ಸಾರೀ ಪುತ್ರ ಹಾಗೂ ಮೊಗ್ಗಲಾಯನರ ಪವಿತ್ರಾವಶೇಷಗಳನ್ನು ವಿಜಯನಗರ ಅರಮನೆಯಲ್ಲಿ ಭಕ್ತರ ಸಂದರ್ಶನಕ್ಕಾಗಿ ವಿಶೇಷಾಲಂಕೃತವಾದ ವ್ಯಾಸಪೀಠದ ಮೇಲೆ ಮಂಡಿಸಲಾಗಿದೆ. ಕಳೆದ ವರ್ಷ ಗಾಂಧೀಜಿಯವರ ಅವಶೇಷಗಳನ್ನು ಈ ಸ್ಥಾನದಿಂದ ಕೇವಲ ಹತ್ತು ಅಡಿ ದೂರದಲ್ಲಿ ಜನರ ಸಂದರ್ಶನಕ್ಕಾಗಿ ಇಡಲಾಗಿತ್ತು.

ಬುದ್ಧ ಬಿಕ್ಕುಗಳು ಸೂಕ್ತ ಪಠಣ ಮಾಡುತ್ತಿದ್ದರು. ದರ್ಶನಕ್ಕೆಂದು ಬಂದವರು ಅವಶೇಷಗಳಿಗೆ ಪುಷ್ಪಗಳನ್ನರ್ಪಿಸಿದ್ದರು.

ಈ ಅವಶೇಷಗಳನ್ನು ಸ್ವಾಗತಿಸುವ ಕಾಲಕ್ಕೆ ನಂ ಜವಹರಲಾಲರ ಬರಲು ಡಾ. ಬಿ. ವಿ. ಕೇಸಕರರು ಉಪಸ್ಥಿತರಿದ್ದರು. ಈ ಅವಶೇಷಗಳನ್ನು ಸಕಲ ಗೌರವಗಳಿಂದ ಕಲಕತ್ತೆಯಿಂದ ತರಲಾಯಿತು.

ಚಿನ್ನದ ಪೆಟ್ಟಿಗೆಯಲ್ಲಿರುವ ಈ ಅವಶೇಷಗಳನ್ನು ಗವರ್ನರ ಮೋದಿಯವರು ರಥದಿಂದ ಹೊರಗೆ ತಂದರು ತೋಪುಗಳ ಸಲಾಮಿ ಜರುಗಿತು 'ಜನ ಗಣ ಮನ' ಗೀತೆಯೂ ಮಿಲಿಟರಿ ಬ್ಯಾಂಡಿನವರಿಂದ ನುಡಿಸಲ್ಪಟ್ಟಿತು.

ಈ ಸತ್ಕಾರ ಸಮಾರಂಭದ ಕಾಲಕ್ಕೆ ಸಿಂಹಳದ ರಾಯ.ಕಮೀಶನರ ಎಚ್. ಪಿ. ಕುಮಾರಸ್ವಾಮಿಗಳೂ ಬ್ರಹ್ಮೀ ರಾಯಭಾರಿ ಮಾಂಗಗ್ಯೀ ಅವರೂ ಇದ್ದರು. ಲೀ ರಕ್ಷರಕ್ಕಿಯಿಂದ ಇವರು ಪವಿತ್ರಾವಶೇಷಗಳನ್ನು ಸಂದ ಶಿಷ್ಯಮಂಡಳದಲ್ಲಿ ಸಿಕ್ಕಿಮದ ರಾಜಕುಮಾರ, ರಾಜಕುಮಾರಿ ನೇಪಾಳದ ಮೋಗಿ ಪರ್ವಜ್ಯೋತಿ ಪ್ರೊ. ಜಾಂಗ ಪ್ರೊ. ಡಾ. ಎಸ್. ಸಿ. ಚಟರ್ಜಿ ಮುಂತಾದವರಿದ್ದರು.

ನಂತರ ಈ ಅವಶೇಷಗಳ ಮೆರವಣಿಗೆ ನಡೆಯಿತು.

ರಷ್ಯಾದ ಕ್ರಾಂತಿಕಾರೀ ಲೇಖಕ ಮ್ಯಾಕ್ಸಿಂಗಾರ್ಕಿ ಕತೆಯ ಆಧಾರ

ಹೊಟ್ಟೆಗಾಗಿ

[ಜಂಸು ಹಿಂದ]

ಸಣ್ಣವನಿದ್ದಾಗ ನಾನು ಕೆಲವು ಹುಡುಗರೊಂದಿಗೆ ಬೇಸಿಗೆಯ ಬಿಸಿಲಿನಲ್ಲಿ ವಸಂತಕಾಲದ ಸಂತೋಷ ಸಮಯಗಳಲ್ಲಿ, ಆದಿತ್ಯವಾರದ ದಿನಗಳಲ್ಲಿ ಅನೇಕ ಸಲ ಅಕ್ಕ ಪಕ್ಕದಲ್ಲಿಯ ಅಡವಿಯ ಪ್ರದೇಶಗಳಿಗಾಗಲೀ, ಸುಂದರ ವನಗಳಿಗಾಗಲಿ, ವಿಹಾರಕ್ಕೆಂದು ಹೋಗುವ ರೂಢಿ ಇತ್ತು. ಅವರೊಂದಿಗೆ ಅವರಲ್ಲಿ ಅನೇಕರು ನನಗಿಂತಲೂ ಚಿಕ್ಕವರು ಬೆರೆತು ಕಾಲಕಳೆಯುವುದೆಂದರೆ ಅದೊಂದು ಬಗೆಯ ಆನಂದ ಹುರುಪು ಹುಟ್ಟ ನನಗೆ.

ಹುಡುಗರಿಗೂ, ವಿಶಾಲವಾದ ಪ್ರದೇಶಗಳಿಗೆ ಪ್ರಶಾಂತ ವಾತಾವರಣದಲ್ಲಿ ನಗರದ ಕೃತ್ರಿಮ ಜೀವನದಿಂದ ನಿಸರ್ಗದ ನಡುವೆ ಕಾಲ ಕಳೆಯುವುದೆಂದರೆ ಅವರೆದೆ ಕುಣಿಯುತ್ತಿತ್ತು. ತಮ್ಮ ಮನೆಗಳಿಂದ ತಿಂಡಿ ತಿನಿಸುಗಳನ್ನು ಮಾಡಿಸಿಕೊಂಡು ನನ್ನೊಂದಿಗೆ ಬಂದು ಸೇರುತ್ತಿದ್ದರು. ನಾನೂ ಅನುಕೂಲವಾದಾಗ ರುಚಿಕರವಾದ ಪದಾರ್ಥಗಳನ್ನೂ ಕೊಂಡು ಅವರೊಂದಿಗೆ ಹೊರಡುತ್ತಿದ್ದೆ. ಇವರ ಅಮಾಯಕ ಹೃದಯಗಳ ಮುಗ್ಧತೆಯನ್ನು ಕಂಡು ನನಗೆ ಅವರು ಕೋಮಲ ಜೀವಿಗಳಾದ ಚಿಗುರಿದ ಮರಿಗಳಂತೆ ಕಾಣುತ್ತಿದ್ದರು. ಅವರು ನಾನು ಕರೆದುಕೊಂಡು ಹೋದತ್ತ ಒಂದು ಸಂತೋಷದಿಂದ ಇರುತ್ತಿದ್ದರು. ವಸಂತಬರುವ ಎಳೆತನವೂ, ಸೊಬಗೂ, ಹೊಸತನವೂ, ಈ ಹುಡುಗರಿಗೆ ಎಲ್ಲಿಯೂ ಇಲ್ಲದ ಹರುಷವನ್ನು ತಂದುಕೊಡುತ್ತಿದ್ದುದರಿಂದ ಆನಂದದಲ್ಲಿ ಪ್ರೇಮದೆ ತುಸು ಖವದುತ್ತಿದ್ದರು.

ನಾವು ಬೆಳಗಿನಲ್ಲಿ ಪೂಜಾ ಮಂದಿರದ ಗಂಟೆಗಳು ಮೆಲ್ಲನೆ ಬಾರಿಸುತ್ತಿರಲು, ಊರಿನಿಂದ ಹೊರಟು ನಮ್ಮ ನಿರ್ದಿಷ್ಟ ಸ್ಥಳಗಳನ್ನು ಸೇರುತ್ತಿದ್ದೆವು ನಡುಹಗಲಿನವರೆಗೂ ಆಟವಾಡಿ ದಣಿದು ಹುಡುಗರೆಲ್ಲರೂ ಒಂದೆಡೆ ಸೇರಿ ಮಧ್ಯಾಹ್ನದ ಊಟ ಮುಗಿಸಿದನಂತರ ಅನೇಕ ಚಿಕ್ಕ ಹುಡುಗರು ನಿದ್ದೆ ಮಾಡುತ್ತಿದ್ದರು. ಸ್ವಲ್ಪ ವಯಸ್ಸಾದವರು ನನ್ನ ಸುತ್ತಲೂ ಗುಂಪಾಗಿ ಸೇರಿ ಮನರಂಜಕವಾದ ಕತೆಯೊಂದನ್ನು ಹೇಳಬೇಕೆಂದು ತೊಂದರೆ ಪಡಿಸುತ್ತಿದ್ದರು. ತೊಂದರೆ ಎಂತಹದು? ನನಗೂ ಅವರೊಂದಿಗೆ ನಾನು ಹೇಳುವ ಕತೆಯನ್ನು ಕಿವಿಯಿಂದ ಕೇಳುವುದೆಂದರೆ ಅದೊಂದು ಬಗೆಯ ಸುಖ. ಇವರ ನಡುವೆ ನನಗೆ ಎಲ್ಲಿಯೂ ಇಲ್ಲದ ಪ್ರಾಮುಖ್ಯತೆ ಬಂದೊದಗಿದುದು ನನ್ನ ಜೀವನದಲ್ಲಿಯ ಅತಿ ಆನಂದಮಯ ವಿಷಯವೆಂದೆನಿಸಿತು. ನಾನು ನಮ್ಮ ವಯಸ್ಸಿನ [ಇಷ್ಟಮಿತ್ರರನ್ನು] ಮರೆತು ಅವರೊಂದಿಗೆ ಬೆರೆತಾಗ ನಾನೊಬ್ಬ ದೊಡ್ಡ ಮನುಷ್ಯನಾದೆನಲ್ಲವೆಂಬ ಹೆಮ್ಮೆ ನನ್ನನ್ನು ಅನೇಕ ಸಲ ಆವರಿಸುತ್ತಿತ್ತು.

ನಗರದ ವಾತಾವರಣದಿಂದ ದೂರ ಬಂದ ನಮಗೆ ಇಲ್ಲಿಯ ನಿಸರ್ಗ ಸೌಂದರ್ಯವನ್ನು ನೋಡಿ ನಮ್ಮ ಹೃದಯಗಳು ಅರಳುತ್ತಿದ್ದವು. ಮೇಲೆ ನೀಲಿ ಗಗನ, ಸುತ್ತಲೂ ಹಸುರಿನ ಗುತ್ತಿಗಳು, ಎಲ್ಲೆಲ್ಲಿಯೂ ಗಿಳಿಗಳ ಚಿಲಿಬಿಲಿ ಇಂಪಾದ ಸ್ವರ, ಇವೆಲ್ಲ ನಮಗುಂಟುಮಾಡಿದ ಆನಂದ ಅವರ್ಣನೀಯ.

ನೀಲಿ ಬಣ್ಣದ ಆಕಾಶದಲ್ಲಿ ಮೋಡಗಳು ಮೆಲ್ಲನೆ ನೀರಿನಲ್ಲಿ ಈಜುವಂತೆ ಸಾಗುತ್ತಿರಲು ಸೂರ್ಯನನ್ನು ಸಮೀಪಿಸಿದ ಕೂಡಲೇ ಕರಗಿ ಮಾಯವಾಗುವ ದೃಶ್ಯ ಹೃದಯಕ್ಕೆ ಹುಮ್ಮಸನ್ನೀಯುತ್ತಿತ್ತು. ಹುಡುಗರಿಗೆ ಅದೊಂದು ಬಗೆಯ ವಿನೋದ.

ಇವೆಲ್ಲದರ ನಡುವೆ ನನ್ನ ದುಃಖಗಳನ್ನು ಅನೇಕ ಸಲ ಮರೆತು, ವಾರಕ್ಕೊಮ್ಮೆ ಇಂತಹ ಸುಖದ ಅವಕಾಶ ದೊರೆಯುತ್ತಿದ್ದುದು ನನ್ನ ಸುದೈವವೆಂದು ಹಿಗ್ಗುತ್ತಿದ್ದೆ.

ಈ ಬಗೆಯಾಗಿ ಒಂದು ದಿನ ಹುಡುಗರ ಜತೆಯಲ್ಲಿ ನಮ್ಮ ಈ ಆದಿತ್ಯವಾರದ ಕಾರ್ಯಕ್ರಮಕ್ಕೆಂದು ಊರ ಕೊನೆಗೆ ಬಂದ ಸಮಯದಲ್ಲಿ, ನನ್ನ ಮಟ್ಟಿಗೆ ಪೂರ್ವ ಅಪರಿಚಿತ ಬಾಲಕನು ಒಂದು ಹುಡುಗರ ಗುಂಪಿನಲ್ಲಿ ಸೇರಿಕೊಂಡನು. ಅವನೊಬ್ಬ ಅನಾಥ ಬಾಲಕನಂತೆ ಕಂಡುಬಂದನು. ಹರಿದು ಹೋದ ಅಂಗಿ, ಕೆದರಿದ ಗುಂಗುರು ಕೂದಲು, ಒಣಗಿದ ದೇಹ, ಕಪ್ಪಾದ ಅವನ ಮುಖ, ಅವನಲ್ಲಿ ಹಾಗೆ ಕಾಣಿಸಿಕೊಂಡ ದರಿದ್ರತನವನ್ನು ಹೊರಚೆಲ್ಲಿ ತೋರಿಸುವಂತಿತ್ತು. ಯಾವುದೋ ವಿಷಾದದ ವಿಷಯ ಅವನ ಯೋಚನಾ ಲಹರಿಯನ್ನು ಕಡೆದಂತೆನಿಸಿತು. ಆಳಕ್ಕೆ, ಆಳಕ್ಕೆ ಕುಗ್ಗಿದ ಅವನ ಕಣ್ಣುಗಳು ಉಬ್ಬಿದ್ದವು. ಕೆಂಪಾದ ಅವನ ಕಣ್ಣುಗಳು, ಹಸಿವಿನಿಂದ ಕಾತರಗೊಂಡ ಆದೀನ ವದನ, ಹೃದಯವನ್ನೇ ಕಲಕುತ್ತಿತ್ತು. ಅವನು ನಿಂತ ಭಂಗಿ ವಿಚಿತ್ರ ರೀತಿಯಾಗಿದ್ದಿತು. ಮೈಯಲ್ಲಿ ನಿಲ್ಲುವುದಕ್ಕೂ ಶಕ್ತಿ ಇಲ್ಲದಂತೆ ಕಂಡುಬಂತು. ಅವನೊಬ್ಬ "ಜ್ಯೂ" ಪಂಗಡದವನು.

ಹುಡುಗರ ಗುಂಪಿನಿಂದ ಮತ್ತೊಂದು ಕಡೆಗೆ ಸಾಗಿ ಅಲ್ಲಿಂದ ದೂರಸರಿದು ನಿಂತನು. ಅವನು ಭಯಗೊಂಡಂತೆನಿಸಿತು.

“ಹಿಡಿಯಿರಿ ಅವನನ್ನು ಅವನೇ ಜ್ಯೂ ಆತನನ್ನು ಹಿಡಿಯಿರಿ” ಎಂದು ಹುಡುಗರು ಚೀರಿದರು.

ಅವರ ಗಲಾಟೆ, ಚೀರಾಟ, ಹಾಸ್ಯದ ಲಹರಿ, ಇವುಗಳಿಗೆ ಅವನು ಸ್ವಲ್ಪ ಬೆದರಿದರೂ, ಚೇತರಿಸಿಕೊಂಡು ತನ್ನ ಕಣ್ಣುಗಳಿಂದ ಅವರನ್ನು ಸಮಾಧಾನ ಮಾಡುತ್ತ ಸ್ವಲ್ಪ ತಡೆಯಿರಿ ನಿಮಗೇನಾದರೂ ತಮಾಷೆಯ ಹೊಸ ನೋಡಲು ಮನಸ್ಸಿದೆಯೆ? ನಿಮ್ಮೊಡನೊಂದು ಆಟವನ್ನು ಆಡಿ ತೋರಿಸುವೆ” ಎಂದು ಕೇಳಿಕೊಂಡ.

ಇವನು ಅವರ ಕಾಟ ತಪ್ಪಿಸಿಕೊಳ್ಳುವುದಕ್ಕೆ ಮಾಡಿದ ಹಂಚಿಕೆಯೆಂದು ನೆನೆದ ಸಣ್ಣ ಹುಡುಗರು ಅವನು ಆಟ ಮಾಡಲೆಂದು ದೂರ ಸರಿದು ನಿಂತರು ದೊಡ್ಡವರು ಇವನೇನೋ ಮೋಸವನ್ನು ಮಾಡಲು ಬಂದಿರುವನೆಂದು ಸುಮ್ಮನೇ ನೋಡುತ್ತ ನಿಂತರು. ನಮ್ಮ ಕೆಲವು ಹುಡುಗರು ತಮ್ಮ ಸಂದೇಹ ಒಂದು ವೇಳೆ ಯಾರು ಎಲ್ಲರ ಮುಖದಲ್ಲಿಯೂ ಮೂಡಿತ್ತು.

ಎಲ್ಲ ಹುಡುಗರು ಒಂದೇ ಧ್ವನಿಯಲ್ಲಿ “ಆಗಲಿ ತೋರಿಸು, ನಿನ್ನ ಆಟ” ಎಂದು ಹೇಳಿದರು.

ಆ ಹುಡುಗನು ಎತ್ತರವಾಗಿಯೂ ತೆಳುವಾಗಿಯೂ, ಬೆಳೆದ ತನ್ನ ದೇಹವನ್ನು ಹಿಂಬದಿಗೆ ಬಿಲ್ಲಿನಂತೆ ಬಾಗಿಸಿ, ತನ್ನ ಕೈ ಕಾಲುಗಳ ಮೇಲೆ ನಿಂತನು. ಬಿಲ್ಲಿನಂತೆ ಬಾಗಿದ ಅವನ ದೇಹ ತೆಳುವಾಗಿತ್ತು.

ಅನಂತರ ಎರಡು ಕೈಗಳ ಮೇಲೆ ತನ್ನೆಲ್ಲ ಶರೀರವನ್ನು ನಿಲ್ಲಿಸಿದನು. ಇದು ಎರಡನೆಯ ನೋಟ. ಮುಂದೆ ತನ್ನ ಕೈಗಳ ಮೇಲೆಯೇ ನಿಂತಲ್ಲೇ ಭಂಗಿಯಲ್ಲಿ ಗಿರಿಗಿರಿ ತಿರುಗಿದ. ತೆಳುವಾದ ಅವನ ಬಿಳಿಚಿದ ಒಣಗಿದ ದೇಹದಲ್ಲಿಯ ರಕ್ತವು ವೇಗದಿಂದ ಹರಿಯುತ್ತಿರುವಂತೆನಿಸಿತು. ಇಷ್ಟೆಲ್ಲ ಸಾಗಿಸುವ ವೇಳೆಗೆ ಅವನು ಬೆವರತೊಡಗಿದ. ತೊಟ್ಟಿದ್ದ ಹರಕು ಅಂಗಿ ಒದ್ದೆಯಾಗಿತ್ತು. ಆ ಹುಡುಗನು ಈ ಕಸರತ್ತಿನ ಕೆಲಸ ಮಾಡುವ ಸಮಯದಲ್ಲಿ ತನ್ನನ್ನು ನೋಡುತ್ತ ನಿಂತ ಹುಡುಗರ ಕಡೆಗೆ ನಗುತ್ತಿದ್ದನು. ಅವನ ನಗುವಿನ ನೋಟದಲ್ಲಿ ಸಂಕಟದ ನೋವಿತ್ತು. ಹಸಿವು, ದಾಹದ, ಕಳವಳವಿತ್ತು

ಹೃದಯದಲ್ಲಾಗುತ್ತಿದ್ದ ವೇದನೆಯು ಹೊರಸುತ್ತಿತ್ತು.

ಇದರ ಅರಿವು, ನೋಡುವ ಹುಡುಗರಿಗಾದರೂ ಹೇಗೆ ತಿಳಿಯಬೇಕು? ಅವನ ಆಟವನ್ನು ಮೆಚ್ಚಿ ಚಪ್ಪಾಳೆಯಿಕ್ಕುವ ಬಾಲಕರ ಗುಂಪು ತಾತ್ಕಾಲಿಕವಾಗಿ ಅವನಿಗೆ ಸೊಗಸೆನಿಸಿದರೂ, ಅವನಿಗೆ ಉಂಟಾಗುತ್ತಿದ್ದ ಮನೋವಿಕಾರ ನನಗೆ ಸ್ಪಷ್ಟವಾಗಿ ತಿಳಿದುಬರುತ್ತಿತ್ತು. ಅಸಂತೃಪ್ತ ಹೃದಯದಿಂದ ಅವನು ಸಂಕಟ ಪಡುತ್ತಿದ್ದನು. ನೊಂದ ಹೃದಯದ ವೇದನೆಯೇನೆಂಬುವುದನ್ನು ತಿಳಿದ ನನಗೆ ಗೋಚರವಾಗುತ್ತಿತ್ತು.

ಕೂಡಲೇ ಅವನು ತನ್ನ ಆಟವನ್ನು ಮುಗಿಯಿಸಿ, ಗೆಲುವಿನ ಮುಖದಿಂದ ಹುಡುಗರನ್ನು ಸಮೀಪಿಸಿ, ಕೈ ಚಾಚುತ್ತ "ನನಗೇನಾದರೂ ಕೊಡಿ" ಎಂದು ಹೇಳಿದನು.

"ಹುಡುಗರು ಎಲ್ಲರೂ ಮೌನದಿಂದ ಅವನನ್ನು ದುರದುರನೆ ನೋಡಿದರು.

"ರೊಕ್ಕವನ್ನು ಬೇಡುವಿಯಾ"?

"ಅಹುದು"

"ಚನ್ನಾಯಿತು!"

"ಹಣಕ್ಕಾಗಿ ನೀನು ಈ ಆಟವನ್ನು ತೋರಿಸಿದ್ದರೆ, ನಮಗೆಲ್ಲಿ ಬೇಕಾಗಿತ್ತು. ನಾವು ನಿನ್ನಂತೆ ಮಾಡಿ ತೋರಿಸಬಲ್ಲೆವು ಯಾರಾದರೂ ಹಣ ಕೊಡುವವರಿದ್ದಾರೆ?.

ಇವನು ಹಣ ಬೇಡುವುದು ಹುಡುಗರಿಗೆ ಅಸಹ್ಯವೆನಿಸಿತು. ಬಾಯಿ ಬಂದಂತೆ ಹಗಟಿಕೊಳ್ಳುತ್ತ ಹೊಲಗದ್ದೆಗಳ ಕಡೆ ನಡೆದರು ಹುಡುಗರು. ಅವರ ಕೈ ಬರಿದಾಗಿದ್ದವು. ಅವರಲ್ಲಿ ಹಣವಿರಲಿಲ್ಲ. ನನ್ನ ಕಿಸೆಯಲ್ಲಿ ಕೇವಲ ಹನ್ನೆರಡಾಣೆಗಳಿದ್ದವು. ಅವನ ಕೈಯಲ್ಲಿ ನಾಲ್ಕಾಣೆಯನ್ನಿಡಲು ಆದರದಿಂದ ಸ್ವೀಕರಿಸುತ್ತ. "ಬಹಳ ಉಪಕಾರವಾಯಿತು" ಎಂದು ಹೇಳಿದನು.

ಅವನು ಬಂದ ಹಾದಿಯನ್ನು ಹಿಡಿದು ಹೋಗುತ್ತಿರುವಾಗ ಅವನ ಬೆನ್ನು ನನಗೆ ಕಾಣಿಸಿತು. ಕೆಂಪು ರಕ್ತದ ಹನಿಗಳಿಂದ ತೊಟ್ಟ ಅಂಗಿಯ ಎಡ ತೋಳಿನ ಹಿಂದಿನ ಭಾಗ ತೊಯ್ದಿತ್ತು. ಅದನ್ನು ಕಂಡು ಗಾಬರಿಗೊಂಡೆ.

ಅವನನ್ನು ತಡೆದು "ಅದೇನು?" ಎಂದು ಆ ರಕ್ತ ಸಂಚಿತವಾದ ಭಾಗವನ್ನು ತೋರಿಸುತ್ತ ಕೇಳಿದೆ.

"ಅದುವೆ? ಏನು ಇಲ್ಲ. ಕೆಲವು ದಿನಗಳ ಹಿಂದೆ ಊಸ್ಸರ್ ರಜೆಯಲ್ಲಿ ಬೇರೊಂದು ಕಡೆ ಹಗ್ಗದ ಮೇಲೆ ಆಟವಾಡುತ್ತಿದ್ದಾಗ ಬಿದ್ದು ಪೆಟ್ಟಾಯಿತು. ನನಗೆ ಗಾಯಗಳಾಗಿದ್ದವು. ತಂದೆಯವರು ಮನೆಯಲ್ಲಿ ಇನ್ನೂ ಮಲಗಿರುವರು. ನನಗೆ ಗುಣವಾದುದರಿಂದ ಕೆಲವು ಕಾಸು ಗಳಿಸಲೆಂದು ಹೊರಬಿದ್ದೆ" ಎಂದು ನಗುತ್ತ ಹೇಳಿದ; ಆ ನಗೆ ಕೆಂಪು ರಕ್ತದ ನಗೆ ಅದು!

ಹತ್ತಿರ ಸರಿದು, ಅವನ ಅಂಗಿಯನ್ನು ಬಯಲು ಮಾಡಿ ನೋಡಿದೆ. ಎಡಗಡೆಯ ತೋಳಭುಜದಿಂದ ತೊಡೆಯವರೆಗೆ ಕಪ್ಪು ವರ್ಣದ ಕಲೆಬಂದಿತ್ತು. ಗಾಯವು ಅದೇ ತಾನೆ ಮಾಯತೊಡಗಿತ್ತು. ಮೇಲಿನ ಪಕ್ಕಳೆ ಇನ್ನೂ ಸುಲಿದಿರಲಿಲ್ಲ. ಜೀವಿಸುವ ಆಸೆಯಿಂದ, ನರಳುವ ತಂದೆಯ ಆರೈಕೆಗಾಗಿ, ಆಟವನ್ನು ಆಡುವಾಗ ಆಗಾಯದ ಪಕ್ಕಳೆ ಒಡೆದು ಕೆಂಪು ರಕ್ತವು ಸುರಿಯುತ್ತಿತ್ತು. ಅದು ನನ್ನ ಕಣ್ಣಿಗೆ ಬೀಳಲು "ಏನೂ ಪರವಾ ಇಲ್ಲ ನನಗೆ ಈಗ ಏನೂ ನೋವು ಇಲ್ಲ. ಸ್ವಲ್ಪ ತಿಂಡಿ, ಮಾತ್ರ" ಎಂದು ಆ ಹುಡುಗನು ಮತ್ತೆ ನಗುತ್ತ ಹೇಳಿದನು. ಅವನ ತಾಳ್ಮೆಗೆ ನಾ ಸಾಶ್ಚರ್ಯಗೊಂಡೆ.

ನಾನು ಅವನ ಧೈರ್ಯಕ್ಕೆ ಬೆರಗಾಗಿ ಸುಮ್ಮನೇ ದುರದುರನೆ ನೋಡುತ್ತ ನಿಂತುಬಿಟ್ಟೆ.

ಮತ್ತೆ ಅವನು ಮಾತನ್ನು ಮುಂದುವರಿಸುತ್ತ, ತನ್ನೆದೆಯಲ್ಲಿಯ ನೋವನ್ನು ಮುಚ್ಚಿಡುತ್ತ, ಗಂಭೀರ ಮುಖಮುದ್ರೆಯಿಂದ ಹೀಗೆ ಹೇಳಿದ:-

"ನನ್ನ ಹೊಟ್ಟೆಗಾಗಿ ಈಗ ನಾನು ದುಡಿಯುತ್ತಿಲ್ಲ; ತಂದೆಯ ಆರೈಕೆಗಾಗಿ. ನನ್ನ ಜಾತಿಯೆಂದರೆ ಎಲ್ಲರೂ ದ್ವೇಷಿಸುವರು. ನಾವು ಜ್ಯೂ ಜಾತಿಯವರು. ಬಿಕ್ಷೆಬೇಡುವದು ತಪ್ಪೆಂದು ತಿಳಿದ ನಾನು ಬೇನೆಯ ನೋವಿನಿಂದ ನರಳುತ್ತಿರುವ ತಂದೆಯ ಜೀವನಕ್ಕೆಂದು ನಾನು ಈರೀತಿ ದುಡಿಯಬೇಕಾಗಿದೆ, ಕ್ಷಮಿಸಿ. ತಮಗೆ ಶ್ರಮವಾಯಿತು. ನಿಮ್ಮುಪಕಾರ ಮರೆಯಲಾರೆ. ನಾನಿನ್ನು ಬರುತ್ತೇನೆ ನಮಸ್ಕಾರ".

ನಗು ನಗುತ್ತ ಈ ಮಾತುಗಳನ್ನು ಕೇಳಿ, ಎತ್ತರವಾದ ಶ್ರೀಮಂತರ ಮನೆಗಳು ಇವನ ದೈನ್ಯತೆಯನ್ನು ಕಂಡು ತಾತ್ಸಾರದಿಂದ, ತುಚ್ಛ ರೀತಿಯಿಂದ ನೋಡುತ್ತಿರಲು, ತನ್ನ ಹಾದಿಯನ್ನು ಹಿಡಿದು ಆ ಹುಡುಗ ಹೊರಟು ಹೋದ.

ಇದೆಲ್ಲವೂ ಬಹಳ ಸಾಧಾರಣ, ಮತ್ತು ಕೇವಲ ಸಾಮಾನ್ಯ ವಿಷಯವೇ ಆದರೆ ನನ್ನ ಬಹು ಕಷ್ಟದ ದಿನಗಳಲ್ಲಿ, ಈ ಎಳೆಹುಡುಗನ ನೆನಪು ಅನೇಕ ಸಲ ಬರುತ್ತಿತ್ತು. ಅದನ್ನು ಬಹು ಅಕ್ಕರೆಯಿಂದ ನೆನಪು ಮಾಡಿಕೊಳ್ಳುತ್ತಿದ್ದೆ.

....

ಶ್ರೀ ಬಿ. ರಂಗನಗೌಡರು ಉಪಾಧ್ಯಕ್ಷರೇ?

ಬಳ್ಳಾರಿ ಜಿಲ್ಲಾಬೋರ್ಡಿಗೆ ಉಪಾಧ್ಯಕ್ಷರಾಗಿ ಶ್ರೀ ಬಿ. ರಂಗನಗೌಡರನ್ನು ಆರಿಸಬೇಕೆಂದು ಬಹು ಸಂಖ್ಯಾಕ ಸದಸ್ಯರು ನಿರ್ಣಯಿಸಿರುವರೆಂದು ವಿಶ್ವಸನೀಯವಾಗಿ ತಿಳಿದು ಬಂದಿದೆ.

ತಿಪ್ಪೆ ಗೊಬ್ಬರ ಏಕೆ ತಯಾರಿಸಬೇಕು?

ಒಕ್ಕಲಿಗನೊಬ್ಬನ ಪ್ರಶ್ನೆಯಿದು, ತಿಪ್ಪೆ-ಗೊಬ್ಬರ ಏಕೆ ತಯಾರಿಸಬೇಕು? ಕಸಕೊಳೆಗಳನ್ನು ತಿಪ್ಪೆಗಳಲ್ಲಿ ಒಟ್ಟದೆ ನೆಟ್ಟಗೆ ಹೊಲಕ್ಕೆ ಒಯ್ದು ಹಾಕಿಬಿಟ್ಟರಾಯಿತಲ್ಲ ಗೊಬ್ಬರ ತಯಾರಿಸುತ್ತ ಏಕೆ ಕೂಡ್ರಬೇಕು, ಎಂಬುದು ಅವನ ಸಂಶಯ. ಗೊಬ್ಬರಮಾಡದೆ ಹಾಗೆ ಕಸಕೊಳೆಗಳನ್ನು ಹೊಲಕ್ಕೆ ಹಾಕಿದರೆ ಶ್ರಮವೂ ಉಳಿಯುವದು, ವೇಳೆಯೂ ಉಳಿಯುವದು ಎಂದುಅವನ ಲೆಕ್ಕ. ಆದರೆ ಈ ಮಾರ್ಗ ಸರಿಯಲ್ಲ. ಹೀಗೆ ಮಾಡಿದರೆ ಲಾಭಕ್ಕಿಂತ ಹಾನಿಯೇ ಹೆಚ್ಚು. ಹೀಗೇಕೆ ಮಾಡಬಾರದು, ಗೊಬ್ಬರ ತಯಾರಿಸುವದು ಏಕೆ ಅವಶ್ಯವಿದೆಂಬುದನ್ನು ಈ ಲೇಖದಲ್ಲಿ ವಿವರಿಸಲಾಗಿದೆ.

'ತಿಪ್ಪೆ ಗೊಬ್ಬರವನ್ನು ತಯಾರಿಸುವದರ ಅವಶ್ಯಕತೆ ಏನಿದೆ? ಕಸಕಡ್ಡಿಯಿಂದ ಗೊಬ್ಬರವನ್ನು ತಯಾರಿಸಲು ಕೆಲಮಟ್ಟಿಗೆ ಶ್ರಮ ಪಡಬೇಕಾಗುವದು. ಕಸಕಡ್ಡಿಗಳು ಕೊಳೆತು ಗೊಬ್ಬರವು ತಯಾರಾಗುವದಕ್ಕೆ ಕೆಲವು ತಿಂಗಳುಗಳು ಹಿಡಿಯುವವು. ಇದರ ಬದಲು ಕಸ-ಕಡ್ಡಿಯನ್ನು ನೆರವಾಗಿ ಹೊಲಕ್ಕೆ ಹಾಕಬಾರದೇಕೆ? ಇದರಿಂದ ದುಡಿತದ ಹಾಗು ವೇಳೆಯ ಉಳಿತಾಯ ವಾಗುವದಿಲ್ಲವೇ?' ಎಂದು ಓರ್ವ ರೈತನ ಪ್ರಶ್ನೆ.

ಒಕ್ಕಲತನ ಸುಧಾರಣೆಗೆಂದು ತನಗೆ ಹೇಳಿಕೊಟ್ಟ ಯಾವದೇ ಉಪಾಯದಿಂದ ಉಂಟಾಗುವ ಲಾಭ-ಹಾನಿಗಳನ್ನು ಪ್ರತಿಯೊಬ್ಬ ರೈತನು ತೂಗಿ ನೋಡುವದು ಅವಶ್ಯವಿದೆ. ಮೇಲಿನ ಪ್ರಶ್ನೆಗೆ ಉತ್ತರವೆಂದೂ ಹಾಗು ಒಕ್ಕಲಿಗರ ಅವಗಾಹನೆಗಾಗಿ ಕಸ ಕೊಳೆಯಿಂದ ತಿಪ್ಪೆ ಗೊಬ್ಬರ ತಯಾರಿಸುವದರ ಮಹತ್ವವೆಷ್ಟೆಂಬದನ್ನು ಇಲ್ಲಿ ವಿವರಿಸಲಾಗಿದೆ.

ಹೊಲಕ್ಕೆ ಗೊಬ್ಬರವೆಂದು ಕಸ-ಕಡ್ಡಿಯನ್ನು ನೇರವಾಗಿ ಹಾಕಬಾರದೆಂಬ ಮಾತಿನಲ್ಲಿ ಒಂದು ಮಹತ್ವದ ಸಂಗತಿ ಇದೆ ಈ ಕಸಕಡ್ಡಿಯಲ್ಲಿ ಹುಲ್ಲು ಮತ್ತು ಇತರ ಕೆಲಸಕ್ಕೆ ಬಾರದ ಸಸ್ಯಾದಿಗಳ ಬೀಜಗಳು ಕೂಡಿರುವವು. ಪಟ್ಟಣದ ಕಸ ಹಾಗು ದಡ್ಡಿಯ ಸಗಣಿ ಪಾತ್ರಗಳಲ್ಲಿ ಇಂಥ ಬೀಜಗಳು ಅಧಿಕ ಪ್ರಮಾಣದಲ್ಲಿ ಮಿಶ್ರವಾಗಿರುವವು. ಹೊಲಗಳಿಗೆ ಇಂಥ ಕಸಕೊಳೆಯನ್ನು ನೇರವಾಗಿ ಸಾಗಿಸಿದರೆ ಆ ಬೀಜಗಳು ಭೂಮಿಯಲ್ಲಿ ಬೆರೆಯುವದರಿಂದ ಹೊಲದಲ್ಲಿ ಹೆಚ್ಚು ಕಸ ಬೆಳೆಯುವದು. ಅದನ್ನು ಕಿತ್ತಿ ಹೊಲ ಹಸನು ಮಾಡಲು ಹೆಚ್ಚು ವೇಳೆ ಮತ್ತು ಶ್ರಮ ವಹಿಸಬೇಕಾಗುವದು.

ಆದರೆ ಕಸಕೊಳೆಯನ್ನು ಒತ್ತಟ್ಟಿಗೆ ಕೂಡುಹಾಕಿ ಗೊಬ್ಬರ ತಯಾರಿಸುವಾಗ ಕಾವಿನಿಂದ ಅದರಲ್ಲಿ ಮಿಶ್ರವಾದ ಕಸದ ಬೀಜಗಳು ನಾಶವಾಗುವವು. ಸ್ವಲ್ಪ ಶ್ರಮ ಹಾಗು ವೇಳೆ ಹಿಡಿದರೂ ಚಿಂತೆ ಇಲ್ಲ, ಗೊಬ್ಬರ ತಯಾರಿಸಿ ಹೊಲಕ್ಕೆ ಹಾಕುವದೇ ಲಾಭದಾಯಕ ಇದರಿಂದ ಕಳೆತೆಗೆಯುವವರ ಶ್ರಮ ಮತ್ತು ವೇಳೆಯ ಉಳಿತಾಯವಾಗುವದು.

ಹೇಸಿಕೆ ಗೊಬ್ಬರ

ಕೆಲವು ಸ್ಥಳಗಳಲ್ಲಿ ಗೊಬ್ಬರದಂತೆ ಹೇಸಿಗೆಯನ್ನು ನೇರವಾಗಿ ಹೊಲಕ್ಕೆ ಹಾಕುವ ರೂಢಿ ಇದೆ. ಇದು ಅಪಾಯಕರ ಹೇಸಿಗೆಯಲ್ಲಿ ಮಾರಿಬೇನೆ (ಕಾಲರಾ), ವಿಷಮ ಜ್ವರ, ಅತಿಸಾರ ಮುಂತಾದ ರೋಗಗಳ ಕ್ರಿಮಿಗಳ ಸೇರಿರುವ ಸಂಭವವಿರುವದರಿಂದ ಆರೋಗ್ಯದ ದೃಷ್ಟಿಯಿಂದ ಇದು ತೀರ ಅನಿಷ್ಟ. ಆದ್ದರಿಂದ ಹೇಸಿಕೆಯಿಂದ ಗೊಬ್ಬರ ತಯಾರಿಸಿ ಆಮೇಲೆ ಅದನ್ನು ಹೊಲಕ್ಕೆ ಹಾಕುವದು ಅವಶ್ಯವಿದೆ

ನಿರುಪಯುಕ್ತ ಪದಾರ್ಥಗಳು

ಸಾಮಾನ್ಯವಾಗಿ ಊರ ಕಸದಲ್ಲಿ ಕಾಜು ತಗಡಿನ ತುಂಡು, ಕೊಗಲು, ಚೀನಿಮಣ್ಣಿನ ಪಾತ್ರೆಗಳ ತುಣುಕುಗಳು ಇವೇ ಮುಂತಾದವು ಕೂಡಿಕೊಂಡಿದ್ದು ಸೋಸಿ ಇಲ್ಲವೆ ಕೈಯಿಂದ ಆರಿಸಿ ಅವುಗಳನ್ನು ತೆಗೆದುಗೆಯುವದು ದುಸ್ತರವಿದೆ ಗೊಬ್ಬರ ತಯಾರಿಸಿದನಂತರ ಈ ಅಂಶಗಳನ್ನು ಸಾರಣಿ ಇಲ್ಲವೆ ಇತರ ಸಾಧನೆಗಳಿಂದ ಬೇರ್ಪಡಿಸಬಹುದು

ಬೆಳೆಯ ಪಸಲು

ವಿಚಾರವಿಲ್ಲದೆ ಹೊಲಕ್ಕೆ ಒಣ ಹುಲ್ಲು, ಇಲ್ಲವೆ ಹಚ್ಚನೆ ಹಸುರನ್ನು ಹಾಕಿದರೆ ಅದರಿಂದ ಬೆಳೆಯ ಪಸಲು ಹೆಚ್ಚುವದಿಲ್ಲ. ಇದರಿಂದ ಬೆಳೆಗಳಿಗೆ ನೈಟ್ರೋಜನ್ ದೊರೆಯದು ಅದೇ ಹುಲ್ಲಿನಿಂದ ಗೊಬ್ಬರ ತಯಾರಿಸಿದರೆ ಅದು ಭೂಮಿಯಲ್ಲಿಯ ನೈಟ್ರೋಜನ್ ಅಂಶವನ್ನು ಹೆಚ್ಚಿಸುವದು ಚನ್ನಾಗಿ ಕೊಳೆತು ತಯಾರಾದ ಗೊಬ್ಬರದಿಂದ ಪಟ್ಟುವಳಿ ಹೆಚ್ಚುವದು.

ಕೊಳೆತ ಗೊಬ್ಬರ

ಹೊಲಕ್ಕೆ ಕಸಕೊಳೆಯನ್ನು ನೇರವಾಗಿ ಹಾಕಿದರೆ ಅದು ಮಣ್ಣಿನಲ್ಲಿ ಕೊಳೆತು ಗೊಬ್ಬರವಾಗುವದಕ್ಕೆ ನಾಲ್ಕಾರು ತಿಂಗಳುಗಳು ಬೇಕಾಗುವವು ಅಂದರೆ ಈ ಅವಧಿಯಲ್ಲಿ ಬೆಳೆಗೆ ಅದರಿಂದ ಯಾವ ಪ್ರಯೋಜನವೂ ಆಗುವದಿಲ್ಲ ಈ ಅವಧಿಯಲ್ಲಿ ಮಳೆ ಬೀಳದಿದ್ದರೆ ಗೊಬ್ಬರವೆಂದು ಹಾಕಿದ ಅಂಶವು ಹಸಿಯದೆ ಹಾಗೇ ಉಳಿಯುವದು

ಹೊಲವು ಸಿದ್ಧವಾಗಿರಬೇಕು

ಗೊಬ್ಬರವನ್ನು ಹಾಕುವದಕ್ಕೆ ಹೊಲವನ್ನು ಹದಗೊಳಿಸಬೇಕಾಗುವದು ದಡ್ಡಿಯ ಕಸಕೊಳೆ (ಸಗಣಿ, ಮಲಮೂತ್ರ, ಕಸಕೊಳೆ) ಯನ್ನು ಪ್ರತಿದಿನ ಕೂಡಿಸಬೇಕಾಗುವದು ಮತ್ತು ಹೊಲಕ್ಕೆ ಗೊಬ್ಬರ ಹಾಕುವ ಸಮಯ ಬರುವವರೆಗೆ ಅದನ್ನು ಎಲ್ಲಿಯಾದರೂ ಒಂದುಕಡೆ ಸಂಗ್ರಹಿಸಿಡಬೇಕಾಗುವದು ಪ್ರತಿದಿನ ಕಸಕೊಳೆಯನ್ನು ಹೊಲಕ್ಕೆ ಹಾಕುವದು ಶಕ್ಯವಿಲ್ಲದ ಮಾತು ಮೇಲೆ ಹೇಳಿದಂತೆ ಕಸಕೊಳೆಯನ್ನು ಸಂಗ್ರಹಿಸುವ ಶ್ರೇಷ್ಠ ಉಪಾಯವೆಂದರೆ ಅದರಿಂದ ಗೊಬ್ಬರ ತಯಾರಿಸುವದಾಗಿದೆ.

ಮಣ್ಣು ಹಾಗು ನೀರು

ದೊಡ್ಡ ಪ್ರಮಾಣದಲ್ಲಿ ಕಸಕೊಳೆಯನ್ನು ಮಣ್ಣಿನಲ್ಲಿ ಬೆರಸಿದರೆ ಅದು ಕೊಳೆಯುವದಕ್ಕೆ ಮಣ್ಣಿನಲ್ಲಿಯ ಬಹಳಷ್ಟು ಹಸಿಯನ್ನು ಹೀರಿಕೊಳ್ಳುವದು. ಮಳೆಯ ಅಭಾವವಿರುವ ಇಲ್ಲವೆ ಸಾಧಾರಣ ಮಳೆಯಾಗುವ ಪ್ರದೇಶಗಳಲ್ಲಿ ಈ ಪದ್ಧತಿಯನ್ನು ಅನುಸರಿಸಿದರೆ ಅದರಿಂದ ಹಾನಿಯುಂಟಾಗುವದು ಖಂಡಿತ

ಸರಲ ಮಾರ್ಗ

ಕಸಕೊಳೆಯಿಂದ ಗೊಬ್ಬರ ತಯಾರಿಸುವದ ಸರಲ ದಾರಿ. ಗೊಬ್ಬರ ತಯಾರಿಕೆಯಲ್ಲಿ ಅಲ್ಪಸ್ವಲ್ಪ ಅನ್ನ ಧನವುಳ್ಳ ಒಕ್ಕಲಿಗನು ಕೂಡ ಅದನ್ನು ತಯಾರಿಸಬಲ್ಲನು ಹೀಗೆ ತಯಾರಿಸಲ್ಪಟ್ಟ ಗೊಬ್ಬರದಲ್ಲಿ ನೈಟ್ರೋಜನ್ ಅಂಶವು ಅಧಿಕ ಪ್ರಮಾಣದಲ್ಲಿದ್ದು ಅದನ್ನು ಹೊಲಕ್ಕೆ ಹಾಕುವದರಿಂದ ಬೆಳೆಯ ಪಸಲು ಹೆಚ್ಚುವದೆ ಹೊರತು ಅಪಾಯವಾಗದು.

[ ]

ಅಮೇರಿಕಾದಲ್ಲಿ

ಇನ್ನಾರಿಗೂ ಸಿಗದ ಗೌರವ

ಪಂ. ನೆಹರೂರಿಗೆ

— —

ಸಾನ್‌ಫ್ರಾನ್ಸಿಸ್ಕೋ ತಾ. ೩ - ಸಾನ್‌ಫ್ರಾನ್ಸಿಸ್ಕೋ ನಗರದ ಮೇಯರ ಮತ್ತು ನಾಗರಿಕರ ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲ ನೆಹರೂರ ಸತ್ಕಾರವಾಗಿ ಏರ್ಪಡಿಸಿದ ಸಭೆಯಲ್ಲಿ ಅವರಿಗೆ ಸಾನಫ್ರಾನ್ಸಿಸ್ಕೋ ನಗರದ ಗೌರವ ನಾಗರಿಕತ್ವವನ್ನಿತ್ತು ಗೌರವಿಸಿದರು. ಈ ಅಪೂರ್ವವಾದ ಗೌರವವನ್ನು ಅವರಿಗೆ ನೀಡಿದ ಬಗ್ಗೆ ಒಂದು ಮಾನ ಪತ್ರವನ್ನು ಅರ್ಪಿಸಲಾಯಿತು

ಈ ಮಾನಪತ್ರವನ್ನು ಅರ್ಪಿಸುವದು ಕೊನೆಯವರೆಗೂ ಒಳ್ಳೇ ಗುಪ್ತವಾಗಿಡಲಾಗಿತ್ತು.

ನಗರದ ಪ್ರತಿಯೊಬ್ಬನು ಸಭೆ ಮುಗಿದ ನಂತರ ಇಂಥ ಗೌರವ ಪತ್ರವನ್ನು ಈ ನಗರದಿಂದ ಬೇರೆಯಾವವ್ಯಕ್ತಿಯೂ ಪಡೆದಿಲ್ಲವೆಂದು ಹೇಳಿದನು.

ಬೋಹಿಮಿಯನ್ ಕ್ಲಬ್ಬಿನಲ್ಲಿ ಏರ್ಪಡಿಸಿದ ಸತ್ಕಾರ ಸಭೆಯು ಮೊದಲು ನಿಶ್ಚಿತಗೊಳಿಸಿದ ಕಾರ್ಯಕ್ರಮದಂತೆ ಕೊನೆಗೊಳ್ಳಲು ಕೆಲವು ನಿಮಿಷಗಳಿರಲು ಸತ್ಕಾರ ಸಮಿತಿಯ ಅಧ್ಯಕ್ಷರಾದ ಎಲ್. ಪಿ. ಗೇನ್ಸಬರೋರವರು ಎಲ್ಲರಿಗೂ ಆಶ್ಚರ್ಯವಾಗುವಂತೆ ಮಾನಪತ್ರ ಅರ್ಪಿಸುವ ಸಂಗತಿಯನ್ನು ಜಾಹೀರಪಡಿಸುತ್ತಾ ಹೀಗೆ ಹೇಳಿದರು.

ಇಂದು ಪಂಡಿತ ನೆಹರೂರು ತಮ್ಮ ಭಾಷಣದಲ್ಲಿ ಮನುಷ್ಯನಲ್ಲಿರಬೇಕಾದ ಶ್ರೇಷ್ಠಗುಣಗಳನ್ನು ಕುರಿತು ಹೇಳಿದರು. ಪಂಡಿತ ನೆಹರೂರು ಈ ಶ್ರೇಷ್ಠ ಗುಣಗಳ ಪ್ರತೀಕರಾಗಿದ್ದಾರೆ. ಆದುದರಿಂದ ಸಾನಫ್ರಾನ್ಸಿಸ್ಕೋ ನಗರದ ನಾಗರಿಕರು ಪಂಡಿತ ನೆಹರೂರು ಈ ನಗರಕ್ಕೆ ಆಗಮಿಸಿದ ಬಗ್ಗೆ ಅವರಿಗೆ ತಮ್ಮ ಕೃತಜ್ಞತೆಗಳನ್ನರ್ಪಿಸಲು ನಿರ್ಧರಿಸಿ ಗೌರವ ಸೂಚಕವಾದ ಈ ಮಾನಪತ್ರವನ್ನರ್ಪಿಸುವರು.

'ನಿಮ್ಮ ಆಗಮನದಿಂದ ಸಾನಫ್ರಾನ್ಸಿಸ್ಕೋ ನಾಗರಿಕರಿಗೆ ಅತ್ಯಾನಂದವಾಗಿದೆ. ಅವರು ಹೃತ್ಪೂರ್ವಕವಾಗಿ ನಿಮಗೆ ಸ್ವಾಗತ ನೀಡುವರು.

ನಿಮ್ಮ ಘನತೆಯು ದೇಶದ ಗಡಿಗೆ ಮರ್ಯಾದಿತವಾಗಿಲ್ಲ. ನಿಮ್ಮನ್ನು ಜಾಗತಿಕ ನಾಗರಿಕನೆಂದು ಹೇಳಬಹುದು. ನಿಮ್ಮ ನೀತಿಯು ಮಹಾತ್ಮಾ ಗಾಂಧಿಯವರ ತತ್ವಗಳನ್ನು ಪ್ರಚಾರಗೊಳಿಸುವಲ್ಲಿ ಶ್ರೇಷ್ಠರಾದವರೆಂದು ನಿಮ್ಮ ಹೆಸರು ಅಜರಾಮರವಾಗಿ ಉಳಿಯುವದು. ಮಹಾತ್ಮಾ ಗಾಂಧಿಯವರು ತಾವು ರಾಷ್ಟ್ರೀಯರಾಗಿದ್ದರೂ ತಮ್ಮ ರಾಷ್ಟ್ರೀಯತ್ವವು ಜಗತ್ತಿನಷ್ಟೇ ವಿಶಾಲವಾದುದು ಎಂದು ಹೇಳಿದ್ದನ್ನು ಉಲ್ಲೇಖಿಸದಿರಲಾರೆವು

ಇಂದು ಮಾನವ ಕೋಟಿಯು ಜಗತ್ತಿನಲ್ಲಿಯ ಶ್ರೇಷ್ಠ ಪ್ರಮುಖರಲ್ಲಿ ನೀವೊಬ್ಬರೆಂದೂ ನೀವು ನಿಮ್ಮ ದೇಶವೂ ಜಗತ್ತಿನಲ್ಲಿ ಶಾಂತಿ ಹಾಗೂ ಸಮೃದ್ಧಿಯ ಪ್ರಸ್ಥಾಪನೆಯ ಮಹತ್ಕಾರ್ಯದಲ್ಲಿ ಸಹಕರಿಸುವಿರೆಂದೂ ನಂಬಿದೆ. ನಿಮ್ಮ ಬಗ್ಗೆ ಹಾಗೂ ನೀವು ಪ್ರತಿನಿಧೀಕರಿಸುವ ರಾಷ್ಟ್ರದ ಬಗ್ಗೆ ನಮ್ಮಲ್ಲಿರುವ ಆದಾರ ಭಾವದ ಆದಾರದ್ಯೋತಕವೆಂದು ನಿಮಗೆ ಸಾನಫ್ರಾನ್ಸಿಸ್ಕೋ ನಗರದ ನಾಗರಿಕತ್ವವನ್ನು ಕೊಡಲಾಗಿದೆ.

ಈ ನಗರದ ಗಣ್ಯ ಸಮಾಜದ ಸದಸ್ಯರೆಂದು ಯಾವಾಗಲೂ ನಿಮಗೆ ನಮ್ಮ ಸ್ವಾಗತವಿದೆ ಇದೆ.'' ಈ ಮಾನಪತ್ರವನ್ನು ಭಗವದ್ಗೀತೆಯ ೮ನೇ ಅಧ್ಯಾಯದ ೧೫ ನೇ ಶ್ಲೋಕ ಬರೆದು ಮಂಗಲಗೊಳಿಸಿದೆ.

ಪಂಡಿತ ನೆಹರೂರು ಮಾನಪತ್ರವನ್ನು ಸ್ವೀಕರಿಸಿ ''ಈ ಗೌರವದಿಂದ ನನ್ನ ಕಂಠ ಬಿಗಿದು ಬಂದಿದೆ ಹಿಂದೂಸ್ತಾನಕ್ಕೆ ನೀವು ನನ್ನಮೂಲಕ ಈ ಗೌರವವನ್ನು ಸಲ್ಲಿಸುತ್ತಿರುವಿರೆಂದು ನಾನು ಭಾವಿಸುವೆ ನೀವು ನನ್ನ ವಿಷಯವಾಗಿ ಒಳ್ಳೇ ಅಭಿಪ್ರಾಯ ವ್ಯಕ್ತಮಾಡಿದ ಬಗ್ಗೆ ನಿಮ್ಮ ಆಭಾರಿಯಾಗಿರುವೆ ಮಹಾತ್ಮಾಗಾಂಧಿಯವರ ಪ್ರಭಾವ ಹಾಗೂ ಹಿಂದುಸ್ತಾನದ ಜನತೆ ನನ್ನಲ್ಲಿ ಇಟ್ಟ ವಿಶ್ವಾಸ ಹಾಗೂ ಪ್ರೇಮ ಇವುಗಳ ಫಲವಾಗಿ ನನ್ನಲ್ಲಿ ನಿಮಗೆ ಇಂದು ನೀವು ಉಲ್ಲೇಖಿಸಿರುವ ಯೋಗ್ಯತೆ ಕಾಣುತ್ತಿರಬಹುದು ನಿಜವಾಗಿಯೂ ಗೌರವ ಯಾರಿಗಾದರೂ ಸಲ್ಲಬೇಕಿದ್ದರೆ ಅದು ಹಿಂದುಸ್ತಾನದ

ಬಳ್ಳಾರಿಗೆ 11 ಮೈಲಿ ದೂರದಲ್ಲಿರುವ ಹಗರಿ ವ್ಯವಸಾಯ ಕೇಂದ್ರದಲ್ಲಿ 'ಫೀಲ್ಡ ಮೆನ್'ರ ಉದ್ಯೋಗಗಳು ಖಾಲಿ ಇವೆ. ಎಸ್. ಎಸ್. ಎಲ್. ಸಿ. ಪ್ಯಾಸಾಗಿ 18 ವರ್ಷಗಳಿಗಿಂತ ಹೆಚ್ಚಿನ ವಯಸ್ಸುಳ್ಳವರು ಅರ್ಜಿಹಾಕಿಕೊಳ್ಳಬಹುದು. ಸಂಬಳ 45 + ಅಲೋಯನ್ಸ್.

ಸರ್ದಾರ ವಲ್ಲಭಭಾಯಿ ಪಟೇಲರ ಜಯಂತಿ

ಸರ್ದಾರ ಪಟೇಲರ 74 ನೇಯ ಹುಟ್ಟು ಹಬ್ಬದ ಸಮಯದಲ್ಲಿ–ಭಾರತದ ಎಲ್ಲಾ ಕಡೆಗಳಿಂದಲೂ ಅಭಿನಂದನ ಪರ ಸಂದೇಶಗಳು ಬರುತ್ತಲಿವೆ. ಸರ್ದಾರರು ತಮ್ಮ ಸಂದೇಶದಲ್ಲಿ ಹೀಗೆ ಹೇಳಿರುವರು ನಮ್ಮ ನಾಯಕನಾದ ಪಂಡಿತ ನೆಹರೂರಿಗೆ ನನ್ನ ದೇಹದಲ್ಲಿ ಉಸಿರಿರುವ ವರೆಗೂ ಸಹಾಯ ಮಾಡುತ್ತೇನೆ ಆತನು ತನ್ನ ಶಕ್ತಿಯಿಂದ ಅಮೇರಿಕಾದಲ್ಲಿ ಭಾರತ ಗೌರವವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವನು ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಆಹಾರ ಸಮಸ್ಯೆಯ ಬಿಕ್ಕಟ್ಟನ್ನು ಬಿಡಿಸಲು ಪ್ರತಿಯೊಬ್ಬರೂ ಸಹಾಯ ಮಾಡಬೇಕಲ್ಲದೆ ಒಡಕಿನ ಮಾತುಗಳನ್ನಾಡಬಾರದು.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/– ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ್ ಬ್ಯಾಂಕ್ 5 – ನಿಂದ ಪ್ರಾರಂಭಿಸಿ ಶೇ 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/– ಪಡೆಯಬಹುದು.

<u>ಸ್ಥಾಯಿ ಠೇವಣಿಗಳು (Fixed Deposits)</u>:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

<u>ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/– ಶುಲ್ಕ</u> — <u>ಉನ್ನತ ವರ್ಗಗಳಿಗೆ ಮಾಸಿಕ 5/– ಶುಲ್ಕ</u>

ಮಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ <u>ವಿಶಾರದ — ಪ್ರಚಾರಕ</u> ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೀಘ್ನ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg No. M. 46)47

7- 11 -49

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ		Subscription will not be accepted for less than 6 months	

To

Sri.... ....

....

....

Printed at [illegible] Printing Works [illegible] & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೧೪ ನವೆಂಬರ್ ೧೯೪೯ | ಸಂಚಿಕೆ ೪೨

ಪ್ರಕಟಣೆ.

ಇದರಿಂದ ಸರ್ವರಿಗೂ ತಿಳಿಸುವದೇನಂದರೆ ಲೇಟು ಕಾಳಶೆಟ್ಟಿ ಅರೂಢಪ್ಪನ ಈ ಷೆಡ್ಯೂಲ್ ದಾಖಲಾ ಮನೆ ಸೇರಿದ್ದು, ಇತನ ಸಂಪೂರ್ಣ ಹಕ್ಕು ಸ್ವಾಧೀನಾನುಭವದಲ್ಲಿದ್ದು. ಆತ ಗತಿಸಿ ಹೋದ ನಂತರ ಆತನ ವಾರಸದಾರರಾದ ಕಾಳಶೆಟ್ಟಿ (1) ಅರೂಢಪ್ಪನಮಗ ಪಂಪಣ್ಣ (2) ಹಂಪಯ್ಯನಮಗ ಅರೂಢಪ್ಪ, (3) ಗುರುಬಸಪ್ಪನಮಗ ಈಶ್ವರಪ್ಪ ಯಿ ಮೂರು ಮಂದಿ ಸದ್ರಿ ಲೇಟು ಅರೂಢಪ್ಪನ ಪುತ್ತರ ವಾರಸರಾಗಿ ಯಿರುತ್ತಾರೆ ಆದಕಾರಣ ಅವರಿಗೆ ಸೇರತಕ್ಕದ್ದಾಗಿದೆ. ಹಾಲಿ ಸದರಿ ಮನೆ ಅರೂಢಪ್ಪನ ಅಕ್ಕ ಚಿನವಾಲದ ಬಸವ್ವನ ಸ್ವಾಧೀನದಲ್ಲಿ ಯಿರುವದರಿಂದ ಆಕೆಯೂ ಸದ್ರಿ ಮನೆಯನ್ನು ಉತ್ತರ ವಾರಸರಾದ ನಮ್ಮಗೆ ಸೇರಕೂಡದೆಂಬ ದುರುದ್ದೇಶದಿಂದ ಆಯಕ ಅಥವಾ ವಿಕ್ರಯದಮೂಲಕ ಅನ್ಯಾಕ್ರಾಂತ ಮಾಡಲು ಪ್ರಯತ್ನಗಳ ಮಾಡುತ್ತಾ ಇರುವದಾಗಿ ತಿಳಿದು ಬಂದು ಇರುತ್ತದೆ. ಆದಕಾರಣ ಯಿ ನೋಟೀಸ ಮೂಲಕ ನಾವು ತಿಳಿಸುವದೇನಂದರೆ ಸದ್ರಿ ಮನೆಯನ್ನು ಅನ್ಯಾಕ್ರಾಂತಮಾಡಲು ಚಿನವಾಲದ ಬಸವ್ವಗೆ ಹಕ್ಕುಯಿರುವದಿಲ್ಲ ವೆಂತಲು ಹಾಗೆ ವಿಕ್ರಯ ಅಥವಾ ಆಯಕ ಬರಿಸಿಕೊಂಡರೆ ನ್ಯಾಯಸ್ಥಾನದಲ್ಲಿ ಆ ಪ್ರಕಾರ ಚೆಲ್ಲುವದಿಲ್ಲ ವೆಂತಲು ತಿಳಿಸೋಣವಾಗಿದೆ. ಯಾರಾದರೂ ಸದ್ರಿ ಬಸವ್ವ ಕಡೆಯಿಂದ, ಆಯಕವಾಗಲಿ ವಿಕ್ರಯವಾಗಲಿ ಬರಿಸಿಕೊಂಡರೆ ಅವರ ಸದ್ರಿ ಪತ್ರದ ರದ್ದಿಗಾಗಿ ದಾವಾ ದಾಖಲು ಮಾಡಿ ಖರ್ಚುಗಳ ಸಹಿತ ಅದನ್ನು ರದ್ದುಪಡಿಸಲಾಗುವದೆಂದು ಯಿದರ ಮೂಲಕ ತಿಳಿಸೋಣವಾಗಿದೆ

ಷೆಡ್ಯೂಲ್

ಬಳ್ಳಾರಿ ಜಿ|| ಬಳ್ಳಾರಿ ತಾ|| ಸೇರಿದ ಬಳ್ಳಾರಿ ಕಸಬಾ ಟೌನ್ನಲ್ಲಿರುವ ಹುಲ್ಲಿನ ಬಜಾರದಲ್ಲಿ ದಕ್ಷಿಣ ಭಾಗದ ಸಂದಿನಲ್ಲಿ 12 ವಾರ್ಡು ಮುನಿಸಿಪಲ್ ಡೋರ್ ನಂ 78 ಇದಕ್ಕೆ ಚೆಕ್ಕುಬಂದಿ ಪೂ|| ಸಂದು ಪ" ಗುಜರಿ ಸಿದ್ದಯ್ಯನಮನೆ ಉ|| ವಡ್ಡಿನ ಸೋಮಪ್ಪನ ಮನೆ ದ|| ಶೀತಲಾಂಶೆಟ್ಟಿ ಮನೆ ಯಿ ಮಧ್ಯಯಿರ್ವ ಪೂ||ಪ|| 10 ಗಜ ಉ||ದ|| 9 ಗಜ ಯಿರ್ವ ಮಾಳಿಗೆಮನೆ

ಬಳ್ಳಾರಿ 13-10-49 | ಕಾಳಶೆಟ್ಟಿ ಪಂಪಣ್ಣ, ಕಾಳಶೆಟ್ಟಿ ಅರೂಢಪ್ಪ, ಕಾಳಶೆಟ್ಟಿ ಈಶ್ವರಪ್ಪ.

ಪಂ. ಜವಾಹರಲಾಲರು ಕಮ್ಯುನಿಸ್ಟ ವಿರೋಧಿಗಳು !

ಡೇಲಿ ಟೆಲಿಗ್ರಾಫದ ಲೇಖ

ಲಂಡನ ೪—ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲ ನೆಹರು ಅವರು ನಿಜವಾಗಿ ಕಮ್ಯುನಿಸ್ಟ ವಿರೋಧಿಗಳಾಗಿರುತ್ತಾರೆಂದು ಡೇಲಿ ಟೆಲಿಗ್ರಾಫ ಪತ್ರಿಕೆಯಲ್ಲಿ ಪ್ರಕಟವಾದ ವಿಶೇಷ ಲೇಖದಲ್ಲಿ ಹೇಳಲಾಗಿದೆ.

ಗೋಡಸೆ ಆಪ್ಟೆಯವರಿಗೆ .... ಗಲ್ಲು ....

ಹೊಸದಿಲ್ಲಿ—ಮಹಾತ್ಮ ಗಾಂಧಿ ಕೊಲೆಯ ಸಂಬಂಧದಲ್ಲಿ ದೇಹಾಂತ ಶಿಕ್ಷೆಗೆ ಗುರಿಯಾಗಿರುವ ನಥೂರಾಮ ಗೋಡಸೆ ಮತ್ತು ನಾರಾಯಣ ಆಪಟೆ ಇವರ ಪರವಾಗಿ ಮಾಡಿಕೊಳ್ಳಲಾಗಿದ್ದ ಕ್ಷಮಾಯಾಚನೆಯ ಅರ್ಜಿಗಳನ್ನು ಗವರ್ನರ ಜನರಲ್ಲರು ತಿರಸ್ಕರಿಸಿರುವರು. ಕಾರಣ ಅವರಿಬ್ಬರನ್ನು ಅಂಬಾಲಾ ತುರಂಗದಲ್ಲಿ ತಾ|| ೧೫ ರಂದು ಗಲ್ಲಿಗೇರಿಸಲಾಗುವದು.

ಮುಂಬೈ ಲಕ್ಷಾಧಿಪತಿಗೆ ಶಿಕ್ಷೆ

ಮುಂಬೈ ೭— ೪೦ ಪೌಂಡುಗಳಿಗಿಂತ ೨೨ ಹೆಚ್ಚಿದ್ದ ಸಕ್ಕರೆ ಸಂಗ್ರಹವನ್ನು ತಿಳಿಸದೆ ಇದ್ದುದಕ್ಕಾಗಿ ಶ್ರೀ ರಾಧೇಶ್ಯಾಮ ಮೋರಾರ್ಕಾ ಎಂಬ ಲಕ್ಷಾಧಿಪತಿಯನ್ನು ಒಂದು ದಿನದ ಸಾದಾ ಶಿಕ್ಷೆ ಹಾಗು ೫೦ ರೂಗಳ ದಂಡಕ್ಕೆ ಗುರಿಪಡಿಸಲಾಯಿತು.

ಆದವಾನಿ

ಅಂಧ್ರ-ಕರ್ನಾಟಕ ಗಡಿ

೬-೧೧-೪೯ ನೆಯ ದಿನಾಂಕ ಆಂಧ್ರ ಕರ್ನಾಟಕ ಗಡಿ ಸಂಬಂಧವಾಗಿ ಸಮಾವೇಶವಾದ ಉಪಸಮಿತಿಗಳು ಪರಸ್ಪರ ಒಡಂಬಡಿಕೆ ಇಲ್ಲದೆ ವಿಸರ್ಜಿತವಾದವು. ಬಳ್ಳಾರಿಯ ವಿಷಯಕ್ಕಷ್ಟೇ ಚರ್ಚಿಸಬೇಕೆಂಬುವನ್ನು ಕನ್ನಡಸಮಿತಿಯು ಒಪ್ಪಲಿಲ್ಲ.

ಕಲ್ಕತ್ತೆಯಲ್ಲಿ ಕಮ್ಯುನಿಸ್ಟರ ಹಾವಳಿ

ಪೋಲೀಸರ ಮೇಲೆ ಬಾಂಬು

ಕಲಕತ್ತೆ ೭— ಇಂದು ಮಧ್ಯಾಹ್ನ ಮೆಡಿಕಲ್ ಕಾಲೇಜಿನ ಹತ್ತರ ಹೊರಟ ಒಂದು ಮೆರವಣಿಗೆಯಲ್ಲಿಯ ಕೆಲವರು ಪೋಲೀಸರ ಮೇಲೆ ಎರಡು ಬಾಂಬುಗಳನ್ನೊಗೆದದ್ದರಿಂದ ಓರ್ವ ಪೋಲೀಸ ಸಬ್ ಇನ್ಸ್ಪೆಕ್ಟರ ಮತ್ತು ಐವರು ಕಾನ್ಸ್ಟೇಬಲರು ಗಾಯಗೊಂಡಿದ್ದಾರೆ.

ಕಮ್ಯುನಿಸ್ಟ ಪ್ರಭಾವೀ ವಿದ್ಯಾರ್ಥಿ ಸಂಘದವರು ಯುನಿವರ್ಸಿಟಿ ಕಂಪೌಂಡಿನಲ್ಲಿ ಸಭೆಸೇರಿಸಿ ನಂತರ ಅಲ್ಲಿಂದ ಮೆರವಣಿಗೆ ಹೊರಡಿಸಿದರು, ಆ ಮೆರವಣಿಗೆಯು ಮೆಡಿಕಲ್ ಕಾಲೇಜಿನ ಹತ್ತಿರ ಬಂದಾಗ ಅವರಲ್ಲಿಯ ಕೆಲವರು ಪೋಲೀಸ ವ್ಯಾನಿನ ಮೇಲೆ ಎರಡು ಬಾಂಬುಗಳನ್ನೆಸೆದದ್ದರಿಂದ ಓರ್ವ ಪೋಲೀಸ ಸಬ್ ಇನಸ್ಪೆಕ್ಟರನೂ ಐವರು ಕಾನ್ಸ್ಟೇಬಲರೂ ಗಾಯಗೊಂಡರು. ಪೋಲೀಸರು ಅಶ್ರುವಾಯುವನ್ನುಪಯೋಗಿಸಲು ಜನರು ಚದುರಿದರು. ಆದರೆ ಸಂದಿಗೊಂದಿಗಳಲ್ಲಿ ಮತ್ತು ಮೆಡಿಕಲ್ ಕಾಲೇಜಿನಲ್ಲಿ ಮತ್ತೆ ಗುಂಪುಗೂಡಿ ಅಲ್ಲಿಂದ ಅನೇಕ ಬಾಂಬುಗಳನ್ನೆಸೆದರು. ಪೋಲೀಸರು ಮತ್ತೆ ಅಶ್ರುವಾಯುವನ್ನುಪಯೋಗಿಸಿದರಲ್ಲದೆ ರಸ್ತೆಯ ಮೇಲಿನ ಜನರನ್ನು ಚದುರಿಸಲು ಲಾಠಿಚಾರ್ಜ ಮಾಡಬೇಕಾಯಿತು.

ನಿನ್ನೆ ಉತ್ತರ ಕಲಕತ್ತೆಯಲ್ಲಿಯ ಕೆಲ ನಗರಿಗರ ಮತ್ತು ವಿದ್ಯಾರ್ಥಿಗಳ ಮೆರವಣಿಗೆಯನ್ನು ಚದುರಿಸಲು ಪೋಲೀಸರು ಅಶ್ರುವಾಯು ಮತ್ತು ಲಾಠಿಚಾರ್ಜನ್ನು ಉಪಯೋಗಿಸಿದ್ದರ ನಿಷೇಧಾರ್ಥ ಇಂದು ಈ ಸಭೆ ಮೆರವಣಿಗೆಗಳನ್ನೇರ್ಪಡಿಸಲಾಗಿತ್ತೆಂದು ತಿಳಿಯುತ್ತದೆ.

ಕಳ್ಳತನದಿಂದ ಭಟ್ಟಿ ಸಾರಾಯಿ ಇಳಿಸುವವನ್ನು ತಪ್ಪಿಸಿ ಅಪರಾಧಿಗಳನ್ನು ಗೊತ್ತು ಹಚ್ಚಲು 142 ಪಾನನಿರೋಧ ಪ್ರಚಾರಕರನ್ನು ನೇಮಿಸಲಾಗುವದೆಂದು ಮದರಾಸಿನ ಮಂತ್ರಿ ಗೋಪಾಲರೆಡ್ಡಿಯವರು ಹೇಳಿದರು.

ಶಿಕ್ಷಿತನೆಂದರೆ ಹೊಣೆಯರಿತವನು

ಶಿಕ್ಷಣ ಶಿಕ್ಷಿತ ಎಂಬ ಶಬ್ದಗಳನ್ನು ನಾವು ಉಪಯೋಗಿಸುತ್ತೇವೆ ಮತ್ತು ಅಶಿಕ್ಷಿತನಿಗಿಂತ ಸುಶಿಕ್ಷಿತನಿಗೆ ನಾವು ಹೆಚ್ಚು ಬೆಲೆ ಕೊಡುತ್ತಿರುತ್ತೇವೆ.

ನಮ್ಮ ಶಿಕ್ಷಣದ ವ್ಯಾಖ್ಯೆಯು ಬಹು ಮರ್ಯಾದಿತವಾಗಿದೆ. ಓದು ಬರೆಯಲು ಬಲ್ಲವರಿಗೆ ನಾವು ಶಿಕ್ಷಣ ಪಡೆದವರು ಅಥವಾ ಶಿಕ್ಷಿತರೆನ್ನುತ್ತೇವೆ. ಅದರಲ್ಲಿಯೂ ಹೆಚ್ಚಿನ ಪರೀಕ್ಷೆಗಳನ್ನು ಕೊಟ್ಟವರಿಗೆ ಸುಶಿಕ್ಷಿತರೆಂದು ಕರೆಯುತ್ತೇವೆ.

ಆದರೆ ಮಾನವನು ಹೆಚ್ಚಿನ ಅನುಭವವನ್ನು ಪಡೆದಂತೆ ಈ ಶಿಕ್ಷಣದ ವ್ಯಾಖ್ಯೆಯನ್ನು ತಿದ್ದಿಕೊಳ್ಳುತ್ತ ಬಂದಿದ್ದಾರೆ. ಶಿಕ್ಷಣವೆಂದರೆ ಕೇವಲ ಓದು ಬರೆಯುವುದಲ್ಲ, ಸಾರಾಸಾರ ನಿರ್ಣಯವನ್ನು ಮಾಡುವ ಶಕ್ತಿಯನ್ನು ಹೊಂದುವುದು ಮತ್ತು ತನ್ನ ಹೊಣೆಗಾರಿಕೆಯನ್ನು ಅರಿತು ವರ್ತಿಸುವ ಮನಃಪ್ರವೃತ್ತಿಯನ್ನು ಪಡೆಯುವುದು ಎಂಬುದನ್ನು ಅವನು ಬಲ್ಲನು.

ಇಂದಿನ ಕೋಲಾಹಲ

ಓದು ಬರಹವನ್ನು ಪ್ರಜೆಗಳಿಗೆ ಕಲಿಸುವ ವಿಷಯದಲ್ಲಿ ಜಗತ್ತಿನ ಬೇರೆ ಬೇರೆ ರಾಷ್ಟ್ರಗಳು ಹೆಚ್ಚು ಕಡಿಮೆ ಪ್ರಗತಿ ಹೊಂದಿವೆ. ಅಂಕೆ ಸಂಖ್ಯಾ ತಜ್ಞರು ಈ ವಿಷಯದ ನಿಜ ಸ್ಥಿತಿಯನ್ನು ಪ್ರಸಿದ್ಧ ಮಾಡುತ್ತಿದ್ದಾರೆ. ಅವುಗಳ ಮೇರೆಗೆ, ಜಗತ್ತಿನಲ್ಲಿ ಅರ್ಧದಕ್ಕಿಂತ ಹೆಚ್ಚು ಜನರು ನಿರಕ್ಷರಿಗಳಾಗಿದ್ದಾರೆಂಬುದು ತಿಳಿಯುತ್ತದೆ. ಏಶಿಯಾದ ಬೇರೆ ಬೇರೆ ರಾಷ್ಟ್ರಗಳ ಸ್ಥಿತಿಯನ್ನು ನೋಡಿದರೆ, ಜಪಾನದಲ್ಲಿ ನೂರಕ್ಕೆ ೯೯ ಜನರು ಓದು ಬರಹ ಬಲ್ಲವರಾಗಿದ್ದಾರೆ, ತುರ್ಕಸ್ತಾನದ ಪಟ್ಟಣಗಳಲ್ಲಿ ನೂರಕ್ಕೆ ೬೦, ಹಳ್ಳಿಗಳಲ್ಲಿ ೪೦, ಫಿಲಿಪಾಯಿನ್ಸಗಳಲ್ಲಿ ನೂರಕ್ಕೆ ೫೨, ಚೀನದಲ್ಲಿ ೫೦, ಹಿಂದುಸ್ತಾನದಲ್ಲಿ ೧೦.

ಆದರೆ ಈ ಶಿಕ್ಷಿತ, ಅಶಿಕ್ಷಿತತನದ ಮೇಲೆ ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ದೇಶವು ತನ್ನ ಪ್ರಜೆಗಳನ್ನು ಸುಖಶಾಂತಿಗಳೊಡನೆ ಇಡಲು ಶಕ್ತವಾಗಿಲ್ಲವೆಂಬುದನ್ನು ಧಾರಾಳವಾಗಿ ಹೇಳಬಹುದು. ಯಾವುದೇ ದೇಶದ ಜನರು, ಒಂದು ಪ್ರಶ್ನೆಯು ಮುಂದೆ ಬಂದಾಗ್ಗೆ ಅದರ ಬಗ್ಗೆ ಯೋಗ್ಯಾಯೋಗ್ಯತೆಯನ್ನು ನಿರ್ಣಯಿಸಿ ವರ್ತಿಸಲು ಇಂದು ಶಕ್ತರಾಗಿಲ್ಲ. ಪಕ್ಷ ಸಂಘಟನಗಳ ನೆಳವಿಗೆ ಸಿಗುವವರೇ ಬಹಳವಾಗಿದ್ದಾರೆ. ನಾನಾ ಎನ್ನುವ ಸುಶಿಕ್ಷಿತರೂ ಕೂಡ ಈ ಪಾಕ್ಷಿಕ ರಾಜಕಾರಣದಿಂದ ಮುಕ್ತರಾಗಿಲ್ಲ. ತಿರುಗಿ ಹೇಳಿದರೆ ಅವರು ಈ ತಿಕ್ಕಾಟಕ್ಕೆ ಹೆಚ್ಚು ಜಾಣತನದೊಡನೆ ಎಣ್ಣೆ ಹೊಯ್ಯುತ್ತಿದ್ದಾರೆಂದು ಹೇಳಬಹುದು. ಜಗತ್ತಿನಲ್ಲಿಯ ಅತಿ ಮುಂದರಿದ ರಾಷ್ಟ್ರಗಳು, ಕೂಡ ಇದೇ ರೀತಿ ವರ್ತಿಸುತ್ತಿರುವಾಗ ಅವುಗಳ ಶಿಕ್ಷಿತ ಪ್ರಜೆಗಳ ಪ್ರಯೋಜನವೇನು ?

ಶಿಕ್ಷಿತನೆಂದರೆ ಯಾರು ?

ಆದ್ದರಿಂದ ನಮಗೆ ಬೇಕಾದುದು ಇಂದು ಕೇವಲ ಅಕ್ಷರಜ್ಞಾನವಲ್ಲ. ಅದರಿಂದಲೂ ಸ್ವಲ್ಪ ಪ್ರಯೋಜನವಿದೆ. ಆದರೆ ಅಷ್ಟೇ ಆದರೆ ಅದರ ಪ್ರಯೋಜನಕ್ಕಿಂತ ಅಪ್ರಯೋಜನವೇ ಹೆಚ್ಚಾಗುತ್ತದೆ. ಆದರೂ ಅದೊಂದು ಮಾನವನ ಉನ್ನತಿ ಸಾಧನೆಯ ಮಾರ್ಗವಾದ್ದರಿಂದ ಅದನ್ನು ನಾವು ಸಂಪಾದಿಸಬೇಕೆಂಬುದು ಅವಾಸ್ತವವಾದ ಮಾತೇನೂ ಅಲ್ಲ. ಜಗತ್ತಿನ ಇತರ ರಾಷ್ಟ್ರಗಳು ಈ ಸಂಬಂಧದಿಂದ ಮಾಡಿಕೊಂಡಿರುವ ಪ್ರಗತಿಗೆ ತೂಗುವಷ್ಟು ಏಳ್ಗೆಯನ್ನು ಭಾರತವೂ ಮಾಡಿಕೊಳ್ಳುವುದು ಅವಶ್ಯವಿದೆ. ನಮ್ಮ ಕೈಯಲ್ಲಿಯೇ ನಮ್ಮ ದೇಶದ ಹಣೆಯ ಬರೆಹವನ್ನು ಬರೆಯುವ ಸ್ವಾತಂತ್ರ್ಯವುಳ್ಳ ನಾವು ಈಗ ಈ ಗುರಿಯನ್ನು ಸಾಧಿಸಿಕೊಳ್ಳಲು ಕಷ್ಟವಾಗುವಂತಿಲ್ಲ ಮತ್ತು ಇಂದಿನ ನಮ್ಮ ದೇಶದ ವಿದ್ಯಾಭಾಗವು ಈ ದಿಶೆಯಿಂದ ಭರದಿಂದ ಹೆಜ್ಜೆಯಿಡುತ್ತದೆ.

ಕೇವಲ ಇಷ್ಟರಿಂದಲೇ ನಾವು ತೃಪ್ತರಾಗುವಂತಿಲ್ಲ. ಈ ಮಾತು ನಮ್ಮ ಮುಂದಾಳುಗಳಿಗೆ ತಿಳಿದಿದೆ. ಆದ್ದರಿಂದ ಅವರು ಈಗ 'ಸಮಾಜದ ಶಿಕ್ಷಣ'ವನ್ನು ಜನತೆಗೆ ಕೊಡುವ ಏರ್ಪಾಡು ನಡೆಸಿದ್ದಾರೆ. ಪ್ರೌಢರಿಗೆ ಶಿಕ್ಷಣಕೊಡುವ ಕಾರ್ಯದಕಡೆಗೂ ಅವರು ಹೆಚ್ಚಿನ ಲಕ್ಷ್ಯವನ್ನು ಪೂರೈಸುತ್ತಿದ್ದಾರೆ. ಏಶಿಯಾದ ಹಳ್ಳಿಗಳಲ್ಲಿ ಸಾಕ್ಷರತಾ ಪ್ರಸಾರವನ್ನು ಕೈಕೊಳ್ಳುವ ವಿಚಾರಮಾಡುವುದಕ್ಕಾಗಿ ಯುಕ್ತರಾಷ್ಟ್ರ ಸಂಘದಪರವಾಗಿ ಮೈಸೂರಲ್ಲಿ ಇದೇ ತಿಂಗಳ ೨ ನೇ ತಾರೀಖಿಗೆ ಕೂಡಿದ "ಏಶಿಯಾ ಶಿಕ್ಷಣ ಪರಿಷತ್ತ"ನ್ನು ಉದ್ಘಾಟಿಸುತ್ತ, ಹಿಂದುಸ್ತಾನದ ಶಿಕ್ಷಣ ಮಂತ್ರಿಗಳಾದ ಮೌ. ಆಝಾದರು "ಪ್ರೌಢಶಿಕ್ಷಣವೆಂದರೆ ಸಾಕ್ಷರತಾ ಪ್ರಸಾರವಲ್ಲ'' ಎಂಬ ಮಾತನ್ನು ಹೇಳಿದ್ದಾರೆ.

ಈ ಮಾತು ಬಹಳ ಬೋಧಪ್ರದವಾಗಿದೆ. ಅಕ್ಷರ ಜ್ಞಾನವೂ ನಮ್ಮ ಜನರಿಗೆ ಸಾರ್ವತ್ರಿಕವಾಗಿ ಆಗಬೇಕು. ಅದರ ಜೊತೆಗೆ, ಜನರು ತಮ್ಮ ಅಧಿಕಾರ, ಬಾಧ್ಯತೆಗಳನ್ನು ಮತ್ತು ತಮ್ಮ ಮೇಲೆ ಇರುವ ಹೊಣೆಯನ್ನು ತಿಳಿದುಕೊಳ್ಳುವಂತಾಗಬೇಕು. ಅವರೇ ನಿಜವಾದ ಶಿಕ್ಷಿತರೆಂದು ಕರೆಯಲ್ಪಡಲು ಅರ್ಹರಾಗುವರು.

ಶಾಂತಿ ಸ್ಥಾಪನೆ

ಜಗತ್ತು ಇಂದು ಚಿಂತಾಸಾಗರದಲ್ಲಿ ಮುಳುಗಿದೆ. ಅದಕ್ಕೆ ಶಾಂತಿಯು ಎಲ್ಲಿಯೂ ಬೆಟ್ಟಿಯಾಗಲೊಲ್ಲದು. ಹುಡುಕಿದಷ್ಟು ಅದು ಹೆಚ್ಚು ಅದೃಶ್ಯವಾಗಹತ್ತಿದೆ.

ಅಂದಮೇಲೆ ಆ ಶಾಂತಿಯು ಇಲ್ಲವೆಂದಾದರೂ ಆಗಬೇಕು, ಅಥವಾ ಅದನ್ನು ಹುಡುಕಲು ನಾವು ತಪ್ಪುದಾರಿಯಿಂದ ಯತ್ನಿಸುತ್ತಿದ್ದೇವೆ. ಎಂದಾದರೂ ನಿರ್ಧಾರವಾಗಬೇಕು.

ಶಾಂತಿಯು ಇಲ್ಲವೇ ಇಲ್ಲವೆಂದು ಹೇಳಲು ಬರಲಾರದು. ಏಕೆಂದರೆ ಜಗತ್ತು ಮತ್ತು ಅದರಲ್ಲಿಯ ಜನರು ಶಾಂತಿಯನ್ನು ಈಮೊದಲು ಕಂಡಿದ್ದಾರೆ. ಅದು ಇತ್ತಕಡೆಗೆ ಇಲ್ಲದಂತಾಗಿದೆ. ಅದಕ್ಕೆ ಅನೇಕ ಸಂಗತಿಗಳು ಕಾರಣವಾದದ್ದನ್ನು ನಾವು ಚೆನ್ನಾಗಿ ಬಲ್ಲೆವು.

ಆದ್ದರಿಂದ ನಾವು ಈಗಿನ ದಾರಿಯನ್ನು ಬಿಟ್ಟುಕೊಟ್ಟು ನಿಜವಾದ ದಾರಿಯಿಂದ ಶಾಂತಿಯನ್ನು ದೊರಕಿಸಬೇಕಾಗಿದೆ. ಇಂದಿನ ದಾರಿಯು ಕೇವಲ ಅಕ್ಷರ ಜ್ಞಾನದ ಶಿಕ್ಷಿತರ ಹಾದಿಗೆ. ಆದ್ದರಿಂದಲೇ ನಾವು ಶಾಂತಿಯನ್ನು ಹುಡುಕುವ ಗುರಿಯನ್ನು ಮುಂದಿಟ್ಟುಕೊಂಡು ಅಶಾಂತಿಯ ಕಡೆಗೆ ಮುತ್ತಿಷ್ಟು ಹೋಗುತ್ತಿದ್ದೇವೆ.

ಕೇವಲ ಅಕ್ಷರ ಜ್ಞಾನದ ಪಂಡಿತರ ಈ ದಾರಿಯನ್ನು ಈಗ ಬಿಟ್ಟುಕೊಡುವುದು ಅವಶ್ಯವಾಗಿದೆ. ಸಾರಾಸಾರ ವಿಚಾರವಂತರ ಮತ್ತು ತನ್ನ ಹೊಣೆಯರಿತವರ ಶಿಕ್ಷಿತ ತರುಣರೊಡನೆ ನಾವು ಈಗ ನಮ್ಮ ಅಶಾಂತಿಯ ಕೊಡಕನ್ನು ಹರಿದೊಗೆಯಬೇಕಾಗಿದೆ.

ಅಂತಹ ಹೊಣೆಗಾರ ಸುಶಿಕ್ಷಿತರು ಜಗತ್ತಿನಲ್ಲಿ ಹೆಚ್ಚಾದ ದಿನವೇ ಶಾಂತಿಯ ಉಗಮವಾಗುವುದು. ಇಂದು ಜನತೆಯನ್ನು ಕಷ್ಟಪರಂಪರೆಗಳ ತಿರುಗಣಿಯಲ್ಲಿ ಎಳೆಯುತ್ತಿರುವ ಮುಖಂಡರು ಮೂಲೆಗುಂಪಾಗದೆ ಆ ಶಾಂತಿಯು ಕಾಣಲಾರದು. ಅವರನ್ನು ಬದಿಗೆ ಸರಿಸುವ ಕಾರ್ಯವು ಇಂದಿನ ಬರಿ ಅಕ್ಷರ ಜ್ಞಾನದಿಂದ ಸಾಧಿಸಿಲ್ಲ. ನಿಜವಾದ ಹೊಣೆಯನ್ನರಿತ ಶಿಕ್ಷಿತರು ಹೆಚ್ಚಾಗಲಿ ಮತ್ತು ಜಗತ್ತಿಗೆ ಮಾರ್ಗ ತೋರಿಸಲಿ.

ಅಖಿಲ ಭಾರತ ಮಹಿಳಾ ಸಭೆ ಬಳ್ಳಾರಿ ಶಾಖೆ

ಕರ್ನಾಟಕ ಪ್ರಾಂತೀಯ ಸಭೆ.

ಈ ಸಭೆಯು ಆಂಧ್ರ ಕನ್ನಡ ಭಾಷೆಗಳ ಜ್ಞಾತ ಶ್ರೀಮತಿ ಪೆದ್ದವಾಡ ಕಾಮೇಶ್ವರಮ್ಮನವರ ಅಧ್ಯಕ್ಷತೆಯಲ್ಲಿ 5-6 ನೆಯ ತಾ. ನಡೆದು ಈ ಕೆಳಗೆ ಕಾಣಿಸಿದರ್ಥದ ತೀರ್ಮಾನಗಳಾದವು.

ಶ್ರೀಮತಿ ಸರೋಜಿನಿ, ಕೊಂಡಾ ವೆಂಕಟಪ್ಪಯ್ಯನವರ ನಿಧನಕ್ಕಾಗಿ ದುಃಖ ಸೂಚಕ ತೀರ್ಮಾನವಾಯಿತು. ಹೆಚ್ಚು ಆಹಾರ ಬೆಳೆಯು ಮಿತ ಖರ್ಚುಮಾಡಲು ಸರ್ಕಾರದ ಪ್ರಚಾರ ಕಾರ್ಯದಲ್ಲಿ ಸಹಾಯಮಾಡಲು ನಿಶ್ಚಯವಾಯಿತು. ಹಳ್ಳಿ ಭಾಗದಲ್ಲಿ ವೈದ್ಯಕೀಯ ಸೌಕರ್ಯವಿಲ್ಲವಾದಕಾರಣ ದಾದಿ, ಸೂಲಗಿತ್ತಿಯರ ಶಿಕ್ಷಣಕ್ಕಾಗಿ ಸರ್ಕಾರದವರು ಏರ್ಪಡಿಸಬೇಕು. ಯಾವ ಕಾರ್ಖಾನೆಗಳಲ್ಲಿ 100 ಜನರಿಗಿಂತ ಹೆಚ್ಚು ಹೆಂಗಸರಿರುತ್ತಾರೋ ಅಲ್ಲಿ ಶುಚಿತ್ವ ಆರೋಗ್ಯದ ಏರ್ಪಾಟಾಗಿ ಮಕ್ಕಳ ಪೋಷಣೆಗೆ ಗಮನಕೊಡಬೇಕು. ಬಳ್ಳಾರಿ ನಗರವು ಬೆಳೆಯುತ್ತಿದ್ದು ಅನೇಕ ಹೈಸ್ಕೂಲುಗಳಿರುವದರಿಂದ ಇಲ್ಲಿ ಪ್ರಥಮ ಶ್ರೇಣಿಯ ಕಲಾಶಾಲೆ-ಯಾ-ಕಾಲೇಜಾಗಬೇಕು. ಹೋಟೆಲುಗಳಿಗೆ ಹೆಚ್ಚು ಆಹಾರ ಪದಾರ್ಥಗಳನ್ನಾಗಲಿ, ಹಾಲನ್ನಾಗಲಿ ಒದಗಿಸಬಾರದು.

ಪಾಠಶಾಲೆಯ ಬಡಮಕ್ಕಳಿಗೆ ಮಧ್ಯಾಹ್ನದ ಊಟಕೊಡಬೇಕು. ಮತ್ತು ವೈದ್ಯಕೀಯ ಸಹಾಯವನ್ನು ಉಚಿತವಾಗಿ ಒದಗಿಸಬೇಕು. ವರದಕ್ಷಿಣೆ, ಕನ್ಯಾದಕ್ಷಿಣೆಯ ಪದ್ಧತಿಯನ್ನು ಪ್ರತಿಭಟಿಸಿ ಅಂಥಾ ಮದುವೆಗಳನ್ನು ಎಲ್ಲಾ ಸ್ತ್ರೀಯರೂ ಬಹಿಷ್ಕರಿಸಬೇಕು. ಸಹಕಾರ ಸಂಘಗಳಿಗೆ ಸ್ತ್ರೀಯರು ಪ್ರೋತ್ಸಾಹಿಸಬೇಕು.

ದೇವದಾಸಿ ಪದ್ಧತಿ ಹೋಗಬೇಕು

ದೇವದಾಸಿ ಪದ್ಧತಿಯಿಂದ ಶಾಸನವಾಗಿರುವದಾದರೂ ದೂರಪ್ರದೇಶಗಳಲ್ಲಿ ಅಪರಾಧವಾದರೆ ಅದನ್ನು I ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿಗೆ ತಿಳಿಸಿ ಕೇಸು ಮಾಡಿ ಅಪರಾಧಿಗಳನ್ನು ಶಿಕ್ಷಿಸಹೋಗುವ ಆಸಕ್ತಿಯುಳ್ಳವರು ಕಡಮೆ. ಈ ಕಾರಣ ಈ ಅಪರಾಧವು ಕಾಗ್ನಿಸಬಲ್ ಅಂದರೆ ತಿಳಿದೊಡನೆ ಪೋಲೀಸರೇ ಅವರ ಮೇಲೆ ತಕ್ಕ ಚರ್ಯೆ ತೆಗೆದುಕೊಳ್ಳುವಂತಾಗಬೇಕು. ನಾಲ್ಕೀಕ ಸಂಘದ ನಾಯಕತ್ವದಲ್ಲಿ ಶ್ರೀಗಳಾದ ದೇವೇಂದ್ರಪ್ಪ, ಮುಕ್ಕಂಣ, ಬಿ. ಕೆ. ಹನುಮಂತಪ್ಪ ಮತ್ತು ಇತರ ಅನೇಕ ಮಹಾಶಯರು ಈ ದಿಶೆಯಲ್ಲಿ ದುಡಿಯುತ್ತಿರುವುದು ಪ್ರಶಂಸನೀಯ. ಇವರಿಗೆ ಬೆಂಬಲ ಕೊಡಬೇಕಾದುದು ಮತ್ತು ಪಶ್ಚಿಮ ತಾಲೂಕುಗಳಲ್ಲಿ ಈ ಹಾನಿಯನ್ನು ನಿಲ್ಲಿಸಬೇಕಾದುದು ಸ್ತ್ರೀಯರ ಅದರಲ್ಲೂ ಮಹಿಳಾಸಭೆಯವರ ಕರ್ತವ್ಯವಾಗಿದೆಯೆಂದು ಶ್ರೀ ಟಿ.ಬಿ. ಕೇಶವರಾಯರು ಬರೆದು ಕಳುಹಿಸಿದ ತೀರ್ಮಾನವನ್ನು ಅಧ್ಯಕ್ಷಿಣಿಯವರಾದ ಶ್ರೀಮತಿ ಪೆದ್ದವಾಡ ಕಾಮೇಶ್ವರಮ್ಮನವರು ಕೇಳಿಕೊಂಡು ಅಧ್ಯಕ್ಷಸ್ಥಾನದಿಂದ ಈ ತೀರ್ಮಾನವನ್ನಿಟ್ಟು ಸರ್ವಾನುಮತದಿಂದ ಪಾಸುಮಾಡಿದರು.

ಚಲಚಿತ್ರ ನಟಿಗೆ ೭ ವರುಷ ಸಶ್ರಮ ಶಿಕ್ಷೆ

ಮುಂಬಯಿಯ ೨೪ ವರುಷದ ಓರ್ವ ಚಲಚ್ಚಿತ್ರ ನಟಿಯಾದ ಕುಮಾರಿ ಕಿಶೋರಿ ಅಹ್ಲಾದಿತ್ತ ಮತ್ತು ಅವಳ ಇಬ್ಬರು ಸೇವಕರಿಗೆ ಶ್ರೀ ಡಿ. ಎಸ್. ನಾಡಕರ್ಣಿ ಎಂಬ ಓರ್ವ ಪೋಲೀಸ ಸಬ್ ಇನ್ಸಪೆಕ್ಟರರನ್ನು ಮರಣಕ್ಕೆ ಗುರಿಪಡಿಸಿದ ಬಗ್ಗೆ ಬೃಹನ್ಮುಂಬಯಿಯ ಸೆಷನ್ಸ್ ಜಡ್ಜರಾದ ಶ್ರೀ ಎ.ಬಿ ಹೊನ್ನಾವರರು ೭ ವರುಷಗಳ ಸಶ್ರಮಶಿಕ್ಷೆ ವಿಧಿಸಿದರು. ಮೂರನೇ ಸೇವಕನನ್ನು ನಿರ್ದೋಷಿಯೆಂದು ಬಂಧಮುಕ್ತಗೊಳಿಸಲಾಯಿತು.

ವರಳಿ ಸಮುದ್ರ ದಂಡೆಯ ಮೇಲೆಯಿರುವ ಕಿಶೋರಿಯ ಮನೆಯ ಅಂಗಳದಲ್ಲಿ ಶ್ರೀ ನಾಡಕರ್ಣಿಯವರು ಕಳೆದ ಫೆಬ್ರುವರಿ ೮ ನೇ ತಾರೀಖಿನ ದಿವಸ ಸ್ಮೃತಿತಪ್ಪಿ ಬಿದ್ದದ್ದು ಕಂಡು ಬಂದಿತು. ಅವರನ್ನು ಆಸ್ಪತ್ರೆಗೆ ಸಾಗಿಸಿದನಂತರ ಅಲ್ಲಿಯೇ ನಿಧನ ಹೊಂದಿದರು. ಶ್ರೀ ನಾಡಕರ್ಣಿಯವರು ಮದ್ಯದ ಅಮಲಿನಲ್ಲಿದ್ದಾಗ ಕಿಶೋರಿಯು ತನ್ನ ಇಬ್ಬರು ಸೇವಕರ ಸಹಾಯದಿಂದ ಅವರನ್ನು ಮೊದಲನೇ ಅಂತಸ್ತಿನ ಕಿಡಿಕಿಯೊಳಗಿಂದ ಹೊರಗೆ ಒಗೆದಳೆಂದು ಆರೋಪ ವಿಡಲಾಗಿತ್ತು.

ಮದ್ಯನಿಷೇಧಕ್ಕಾಗಿ ತಾಲೂಕಿಗೊಬ್ಬರಂತೆ ಮದ್ರಾಸ್ ಪ್ರಾಂತದಲ್ಲಿ 462 ಜನ ಪ್ರಚಾರಕರ ನಿಯುಕ್ತಿಮಾಡಲಾಗುವುದೆಂದು ಪ್ರಕಟವಾಗಿದೆ. ಇದಕ್ಕಾಗಿ ಸರ್ಕಾರದಿಂದ 5 ಲಕ್ಷ ರೂ. ಖರ್ಚಾಗಲಿದೆ. ಇದರಿಂದ ಎಷ್ಟು ಉಪಯೋಗವಾಗುವದೆಂಬುದು ಜನರಿಗೆ ಗೊತ್ತು.

ಹೊಸಪೇಟೆಯ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

O. P. 38/49

ಜಾಲಿ ಸಿದ್ಧಲಿಂಗಮ್ಮ—ಅರ್ಜಿದಾರಳು
ಜಾಲಿ ಸಂಬಣ್ಣ—ಎದುರು.

ಅರ್ಜಿದಾರಳು ತನ್ನ ಗಂಡನಾದ ಜಾಲಿ ಲಿಂಗಪ್ಪನ ಹೆಸರಲ್ಲಿರುವ ಪಾಲಿಸಿಯ ಹಣವನ್ನು ವಸೂಲಿಮಾಡಿಕೊಳ್ಳಲು ವಾರಸು ಸರ್ಟಿಫಿಕೇಟಿಗಾಗಿ ಅರ್ಜಿ ಇಟ್ಟಿದ್ದು, ಅದರ ವಿಚಾರಣೆಯು 26-11-'49 ಕ್ಕೆ ಇದೆ. ಇದರಲ್ಲಿ ಯಾರಿಗಾದರೂ ಆಸಕ್ತಿ ಇದ್ದರೆ, ತಾವಾಗಲಿ, ತಮ್ಮ ವಕೀಲರ ಮೂಲಕವಾಗಲಿ ಹಾಜರಾಗಿ ಆಕ್ಷೇಪಣೆಗಳನ್ನು ತಿಳಿಸಬೇಕು. ಇಲ್ಲವಾದರೆ ಎಕ್ಸ್‌ಪಾರ್ಟಿಯಾದ ವಿಚಾರಣೆಯು ನಡೆದು ನಿರ್ಣಯವು ಕೈಗೊಳ್ಳಲಾಗುವುದು.

ಎಂ. ರಂಗನಾಥಾಚಾರ್,
ಅರ್ಜಿದಾರಳ ವಕೀಲ್

ಮೈಸೂರು ಕಾಂಗ್ರೆಸ್ ಪಾರ್ಟಿ ಮತ್ತು ಪ್ರಜಾಪ್ರತಿನಿಧಿ ಸಭೆಗಳಲ್ಲಿ ಮೈಸೂರು ಪ್ರತ್ಯೇಕವಾಗುಳಿಯಬೇಕೆಂಬ ತೀರ್ಮಾನವಾದ ಕಾರಣ ಕರ್ನಾಟಕದಲ್ಲಿ ಅಸಮಾಧಾನವಾಗಿದೆ. ಮೈಸೂರನ್ನು ಕರ್ನಾಟಕದಲ್ಲಿ ವಿಲಯನಗೊಳಿಸಲು ಎಲ್ಲಾಕಡೆಯಿಂದಲು ಮಹಾರಾಜರಿಗೆ ತಂತಿಗಳು ಹೋಗುತ್ತಲಿವೆ.

— ಗೋಧಿ —

ಗೋಧಿಯನ್ನು ಅನಿವಾರ್ಯವಾಗಿ ಎಲ್ಲರಿಗೂ ಹಂಚುವ ವ್ಯವಸ್ಥೆಯಾಗಲಿದೆಯೆಂದು ಗೊತ್ತಾಗಿದೆ.

ಧಾರವಾಡದಲ್ಲಿ 1950 ನೆಯ ಜನವರಿಯಿಂದ ರೇಡಿಯೋ ಕೇಂದ್ರವೊಂದು ಸ್ಥಾಪಿತವಾಗಲಿದೆ.

ಮೈಸೂರು ಸಹಿತ ಕರ್ನಾಟಕ ಪ್ರಾಂತವಾಗಿ ಮೈಸೂರರಸರು ಘಟನಾತ್ಮಕ ಗವರ್ನರರಾಗುಳಿಯಬೇಕೆಂದು ಅರಸೀಕೆರೆಯಲ್ಲಿ ಕೂಡಿದ ಸರ್ವ ಪಕ್ಷೀಯ ಸಮ್ಮೇಳನದಲ್ಲಿ ತೀರ್ಮಾನವಾಗಿದೆ.

ನವಭಾರತಕ್ಕೆ
ಚಂದಾದಾರರಾಗಿರಿ.

ಸೋಶ್ಯಾಲಿಝಮ್

ಅಥವಾ

ಸುಲಭ ಸಮಾಜವಾದ

ಮಿತವ್ಯಯದಿಂದ ಈ ಅನರ್ಥವು ತಪ್ಪಬಹುದೇ ?

ಬಡವರ ದುಂದುಗಾರಿಕೆ: —

ಬಡವರ ದುಂದುಗಾರಿಕೆ ಮಾಡಿ ತಮ್ಮ ಮೇಲೆ ಬಡತನವನ್ನು ತಂದುಕೊಳ್ಳುತ್ತಾರೆಂದು ಕೆಲವರು ಅನ್ನುತ್ತಾರೆ. ಬಡವರು ವೆಚ್ಚಮಾಡುವ ತಮ್ಮ ಸಂಪತ್ತನ್ನು ಅರಿತು ವೆಚ್ಚಮಾಡಿದರೆ ಅವರಿಗೆ ಬಡತನ ಬರುವ ಅಥವಾ ಅನಿಸುವ ಕಾರಣವಿಲ್ಲೆಂದು ಅವರ ಅಭಿಮತ. ಇದರ ವಿರುದ್ಧ, ಬೇಕಾದಷ್ಟು ಸಿರಿವಂತನಿದ್ದರೂ ಅವನು ದುಂದುಗಾರಿಕೆ ಮಾಡಲು ನಿಶ್ಚಯಿಸಿದರೆ ಒಂದು ಕ್ಷಣದಲ್ಲಿ ಅವನ ಮೇಲೆ ಬಡತನ ಕಡಿದುಕೊಂಡು ಬೀಳದೆ ಇರಲಾರದು. ಕುವತ್ತು ಇರದೆ ಬಡವರು ಮದುವೆಗಾಗಿ, ಸತ್ತವರ ಸಲುವಾಗಿ, ಮತ್ತು ಮಕ್ಕಳ ಲಹರಿಗಾಗಿ ಒಂದೊಂದು ಪ್ರಸಂಗದಲ್ಲಿ ಇಡೀ ಆಯುಷ್ಯದಲ್ಲಿ ದುಡಿದದ್ದನ್ನೆಲ್ಲ ಹಾಳು ಮಾಡಿ ಬಿಡುತ್ತಾರೆ. ನಾಟಕ ಸಿನೆಮಾ ಗೃಹಗಳು ಬಡವರಿಂದ ತುಂಬಿರುತ್ತವೆ. ದೊಡ್ಡ ದೊಡ್ಡ ಕ್ಷೇತ್ರ ಗುಡಿ ಮೊದಲಾದವುಗಳೆಲ್ಲ ಬಹ್ವಂಶ ಬಡವರ ದುಡ್ಡಿನಿಂದಲೇ ನಡೆದಿರುತ್ತವೆ. ಉಗಿಬಂಡಿ ಮೋಟಾರು ಇವುಗಳ ಉತ್ಪನ್ನ ಬಡವರಿಂದಲೇ. ಅವಿಚಾರದಿಂದ ನಡೆದು ಬಡವರು ರೋಗಗಳನ್ನು ತಮ್ಮ ಮೇಲೆ ಎಳೆದುಕೊಳ್ಳುತ್ತಾರೆ ಮತ್ತು ಅದರಿಂದ ಡಾಕ್ಟರರ ಜೇಬು ತುಂಬುತ್ತಾರೆ. ಶೆರೆ-ಸೇಂದಿಗಳನ್ನು ಕುಡಿಯುವವರು ಬಡವರೇ ಇದ್ದು ಇವರ ವ್ಯಸನಗಳಿಂದ ಗುತ್ತೇದಾರರು ಲಕ್ಷಾಧೀಶರಾಗುತ್ತಾರೆ. ಇದನ್ನೆಲ್ಲ ಬಡವರು ಬಿಟ್ಟರೆ ಅವರು ಬಡತನದಲ್ಲಿ ತೊಳಲಾಡುವ ಕಾರಣವಿಲ್ಲ. ಮತ್ತು ನಡುನಡುವೆ ಬರುವ ನಿರುದ್ಯೋಗತನವೂ ದುಃಸಹನವಾಗಲಿಕ್ಕಿಲ್ಲ; ಹೀಗಿದೆ ಈ ಆಕ್ಷೇಪಕರ ಹೇಳಿಕೆ.

ವ್ಯಕ್ತಿಯ ಖರ್ಚಿನಿಂದ ಸಮಾಜದ ಪೋಷಣೆ.

ಬಡವರ ಮೇಲೆ ಹೀಗೆ ಆಕ್ಷೇಪವನ್ನೆತ್ತುವವರಲ್ಲಿ ಸಮಾಜದಲ್ಲಿಯ ಜಾಣರೆಂಬುವವರು ಇದ್ದಾರೆ. ಇದರಿಂದ ಅವರ ತಪ್ಪು ತಿಳುವಳಿಕೆಯು ಹೊರಬೀಳುತ್ತದೆ. ವ್ಯಸನ ಮತ್ತು ದುರ್ಗುಣದ ನಿಮಿತ್ತ ಆದ ವೆಚ್ಚದ ವಿಷಯ ಯಾರೂ ಏನೂ ಅನ್ನುವಂತಿಲ್ಲ ಅಥವಾ ಅದನ್ನು ಸಮರ್ಥಿಸುವಂತಿಲ್ಲ. ಆದರೆ ಮದುವೆಯಂಥ ಆನಂದೋತ್ಸವಕ್ಕೆ ವ್ಯಸನ ಅಥವಾ ದುರ್ಗುಣ ಅನ್ನಬಹುದೇ? ಮತ್ತು ಇದರಿಂದ ಸಮಾಜಕ್ಕೆ ಬಡತನವೇಕೆ ಬರಬೇಕು ? ಒಬ್ಬ ವ್ಯಕ್ತಿಯ ಹತ್ತಿರವಿದ್ದ ನೂರು ರೂಪಾಯಿಗಳನ್ನು ಅವನು ಮದುವೆಯಲ್ಲಿ "ದುಂದುಗಾರಿಕೆ" ಮಾಡಿದರೆ, ಇದರಿಂದ ಆ ವ್ಯಕ್ತಿ ಬಡವನಾಗುವದು ಮೇಲೆಯೇ ಕಾಣುತ್ತದೆ. ಆದರೆ ಸಮಾಜದ ದೃಷ್ಟಿಯಿಂದ ನೋಡಿದರೆ ಬೇರೆ ನೋಟವು ಕಂಡುಬರುವದು. ಮದುವೆಯಲ್ಲಿ ನೂರು ರೂಪಾಯಿ ಖರ್ಚು ಆದವು ಎಂದರೇನು? ಕಿರಾಣಿ ಅಂಗಡಿಯವನಿಂದ ತುಪ್ಪ, ಬೆಲ್ಲ, ಕಾಳುಕಡಿ, ಅರಿವೆ ಅಂಗಡಿಯವನಿಂದ ಅರಿವೆ, ಬಜಂತ್ರಿಯವರ ಉದ್ಯೋಗ, ಮಂಟಪ ಹಾಕಿದವರ ವ್ಯವಸಾಯ, ಭಟ್ಟರವೇದ ವಿದ್ಯೆ, ಅಕ್ಕಸಾಲಿಗರ ಆಭರಣ ಕೌಶಲ್ಯ ಮೊದಲಾದವುಗಳಿಗೆಲ್ಲ ಈ ವ್ಯಕ್ತಿಯ ನೂರು ರೂಪಾಯಿ ವೆಚ್ಚವಾದವು. ಅಂದರೆ ಅವರಿಗೆಲ್ಲ ವೇತನ ಸಿಕ್ಕಿತು ಎಂಬರ್ಥವಾಗಲಿಲ್ಲವೇ ? ಈ ವ್ಯಕ್ತಿಯೊಬ್ಬ ಒಕ್ಕಲಿಗನೆಂದು ತಿಳಿಯುವ. ಅಂದರೆ ಯಾವ ಯಾವ ಜನರಿಗೆ ಈ ಒಕ್ಕಲಿಗನ ಖರ್ಚಿನಿಂದ ಕೂಲಿ ಕುಂಬಳಿ ಸಿಕ್ಕಿತೋ ಅವರೆಲ್ಲ ತಮತಮ್ಮ ಮನೆಯ ಮದುವೆಗಳಲ್ಲಿ ವೆಚ್ಚಮಾಡಿದರೆ ಒಕ್ಕಲಿಗನು ಬೆಳೆದ ಬೆಳೆಗೆ ಇವರೆಲ್ಲರು ಗ್ರಾಹಕರಾಗುವದಿಲ್ಲವೇ? ಇದರಂತೆ ಸಮಾಜದಲ್ಲಿಯ ಎಲ್ಲ ವ್ಯಕ್ತಿಗಳು ವೆಚ್ಚಮಾಡಿದರೆ ಎಲ್ಲರ ಕೈಯಲ್ಲಿ ದುಡ್ಡು ಬಂದು ಸಮಾಜದಲ್ಲಿ ಎಲ್ಲರಿಗೂ ಗ್ರಾಹಕರು ದೊರೆತು ಎಲ್ಲರ ವೇತನವು ಬೆಳೆಯುವದು. ತದ್ವಿರುದ್ಧ ಸಮಾಜದಲ್ಲಿಯ ಬಹು ಸಂಖ್ಯಾಕರು ಮಿತವ್ಯಯದಿಂದ ದುಡ್ಡನ್ನು ಭೂಮಿಯಲ್ಲಿ ಹುಗಿದು ಇಟ್ಟರೆ ಸಮಾಜದಲ್ಲಿ ಉತ್ಪಾದನವಾಗುವ ವಸ್ತುಗಳಿಗೆ ಮತ್ತು ದುಡಿಮೆಗೆ ಗ್ರಾಹಕರಿಲ್ಲದಂತಾಗಿ ವಿನ ಕೂಲಿ ಕಡಿಮೆಯಾಗುವದು.

ಅಲ್ಲರಿ, ಹಾಗಾದರೆ ಬ್ಯಾಂಕುಗಳಲ್ಲಿ ದುಡ್ಡಿಡಿರಿ !

ಬಡವರು ದುಡ್ಡನ್ನು ಹುಗಿದು ಇಡದೆ ಬ್ಯಾಂಕಿನಲ್ಲಿಟ್ಟರೆ ಕೂತಕೂತಲ್ಲೆ ಅವರಿಗೆ ಬಡ್ಡಿ ಸಿಕ್ಕಿ ಬಂಡವಲಗಾರರಿಗೂ ಕಾರಖಾನ ಬೆಳೆಯಿಸಲಿಕ್ಕೆ ಅನುಕೂಲವಾಗುವದು. ಹೀಗೆ ಕೆಲವರಿಗೆ ಅನಿಸುತ್ತದೆ. ಸುಶಿಕ್ಷಿತ ಮಧ್ಯಮ ವರ್ಗದವರಿಗೆ ವಿಶೇಷವಾಗಿ ಹೆಣ್ಣುಮಕ್ಕಳಿಗೆ ಅದರಲ್ಲಿ ಬ್ಯಾಂಕುಗಳಲ್ಲಿ ದುಡ್ಡಿಟ್ಟು ಬಡ್ಡಿ ಗಳಿಸುವದರಲ್ಲಿ ಸ್ವಾಭಿಮಾನ ಮತ್ತು ಭೂಷಣವಿದೆಯೆಂದು ಅನಿಸುತ್ತದೆ.

ಗಂಡನು ಪ್ರಾಧ್ಯಾಪಕನಾಗಿ, ಹೆಂಡತಿಯು ಶಿಕ್ಷಿತೆಯಾಗಿ ಹಗಲಿರಳು ದುಡಿದು ಹೆಚ್ಚೆಚ್ಚು ದುಡ್ಡು ವಿತ್ತ ಗಳಿಸಬೇಕು; ಸಮಾಜದಲ್ಲಿ ಹೆಚ್ಚಿನ ಮಾನ ಮಾನ್ಯತೆ ಸಿಗುವಂತೆ ಅಚ್ಚುಕಟ್ಟುತನದಿಂದ ಆಡಂಬರದಿಂದ ಇರಬೇಕು; ಆದರೆ ವೆಚ್ಚ ಮಾತ್ರ ಕಡಿಮೆ ಮಾಡಬೇಕು; ತುಪ್ಪ ತಿನ್ನುವದನ್ನು ಕಡಿಮೆಮಾಡಿ, ಮುಖ ನಿಸ್ತೇಜವಾಗುತ್ತದೆಂದು ಕಡಿಮೆ ಬೆಲೆಯ ಜಪಾನಿ ಸ್ನೋ ಮತ್ತು ಪಾವುಡರ್ ಹಚ್ಚಬೇಕು; ಬಂಗಾರದ ಒಡವೆಯ ಬದಲು ಹೂವಿನ ಅಥವಾ ಸೆಲ್ಯೂಲಾಯಿಡದ ಆಭರಣಗಳನ್ನು ಹಾಕಬೇಕು; ಅತಿಥಿಗಳು ಬಂದರೆ ಅವರಿಗೆ ಖಾನಾವಳಿ ಹಾದಿ ತೋರಿಸಬೇಕು; ಮಕ್ಕಳು ಆಗದಂತೆ ನೋಡಿಕೊಳ್ಳಬೇಕು; ತೀರ 'ಇಬ್ಬರೇ ಇಬ್ಬರು' ಇರಬೇಕು; ಬ್ಯಾಂಕಿನಲ್ಲಿಯ ಬಡ್ಡಿಗೆ ಬಡ್ಡಿ ಬರುವಂತೆ ಮತ್ತೆ ಬಡ್ಡಿ ಜಮಾ ಮಾಡಬೇಕು; ಇದು ಸಿರಿವಂತನಾಗುವ ರಾಜಮಾರ್ಗವೆಂದು ಮಧ್ಯವರ್ಗದ ಬಹು ಸಂಖ್ಯಾಕರ ನಂಬುಗೆ. ಈ ವರ್ಗದ ಹೆಣ್ಣುಮಕ್ಕಳು ತಮ್ಮ ಗಂಡಂದಿರು ಹೆಚ್ಚು ಖರ್ಚು ಮಾಡದಂತೆ ನೋಡಿಕೊಳ್ಳುತ್ತಾರೆ ಮತ್ತು ಅವರ ಬೆನ್ನು ಹತ್ತಿ ತಿರುಗಾಡುತ್ತಾರೆ. ಬ್ಯಾಂಕಿನಲ್ಲಿಯ ಖಾತೆ ಇಬ್ಬರ ಹೆಸರಲ್ಲೆ ಇಡಿಸುತ್ತಾರೆ ಮತ್ತು ತಮ್ಮ ದುಡ್ಡಿನ ಸಂಗತಿ ಬಿಚ್ಚಿಬಿಟ್ಟು ನೆರೆಹೊರೆಯ ಹೆಣ್ಣುಮಕ್ಕಳ ದುಡ್ಡು ತಮಗಿಂತ ಹೆಚ್ಚಾಗಿದೆಯೋ ಕಡಿಮೆ ಇದೆಯೋ ಎಂಬುದನ್ನು ಒಳ್ಳೆ ಗುಪ್ತರೀತಿಯಿಂದ ತಿಳಿದುಕೊಳ್ಳುತ್ತಾರೆ.

ಕಳ್ಳಮನೋವೃತ್ತಿಯೊಡನೆ ಇರುವ ಸಾಮ್ಯ:-

ಆದರೆ ಇದು ಆರೋಗ್ಯವಾದ ಮನೋವೃತ್ತಿಯು. ಇದು ಒಂದುವೇಳೆ ಪ್ರಾಮಾಣಿಕವಿದ್ದರೂ, ಸಮಾಜದ ದೃಷ್ಟಿಯಿಂದ ಕಳ್ಳರ ಮನೋವೃತ್ತಿಯಂತಿದೆ.

ಊರೊಳಗಿನ ಜನರೆಲ್ಲರೂ ತಮ್ಮ ತಮ್ಮ ಮನೆಗಳ ಬಾಗಿಲು ಕಿಡಕಿಗಳನ್ನು ತಿಜೋರಿಯ ಬಾಗಿಲುಗಳನ್ನು ತೆರೆದಿಟ್ಟು ಮಲಗಿದರೆ, ತಾವು ಅಲ್ಲಿಟ್ಟ ಧನವನ್ನು ಲೂಟಿಮಾಡಿ ಶ್ರೀಮಂತರಾಗುವೆವು ಮತ್ತು ತಮ್ಮ ಮನೆಯ ಬಾಗಿಲು, ತಿಜೋರಿಗಳನ್ನು ಭದ್ರವಾಗಿ ಇಡುವೆವು ಎಂದು ೮-೧೦ ಕಳ್ಳರು ಅನ್ನುವಂತೆ, ಮಧ್ಯಮ ವರ್ಗದ ಮಿತವ್ಯಯಗಳ ಮಾತಾಗಿದೆ. ನಿಜವಾಗಿ ಈ ಕಳ್ಳರ ಮನಸಿನಲ್ಲಿದ್ದಂತೆ ಎಲ್ಲರೂ ನಡೆದರೆ ಅವರ ಯೋಚನೆ ಫಲಕಾರಿಯಾಗುವದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಆದರೆ ಒಮ್ಮೆಲೆ ಶ್ರೀಮಂತರಾಗುವ ಈ ಮಾರ್ಗ ಎಲ್ಲರಿಗೂ ಹೊಳೆಯದೆ ಹೋಗಲಾರದು ಮತ್ತು ಆಮೇಲೆ ಎಲ್ಲರೂ ತಮ್ಮ ತಮ್ಮ ಮನೆಗೆ ಕೀಲಿಹಾಕಿ ಬಂದೋಬಸ್ತುಮಾಡಿ, ರಾತ್ರಿ ಎರಡನೆಯವರ ಮನೆಯ ಮೇಲೆ ಏರಿಹೋಗಲು ನಿಶ್ಚಯಿಸಿದರೆ, ಊರೊಳಗಿನ ಎಲ್ಲ ಜನರೂ ಜಾಗ್ರತರಾಗಿರುವರು ಮತ್ತು ಒಂದು ರಾತ್ರಿಯಲ್ಲಿ ಶ್ರೀಮಂತನಾಗುವ ಕನಸು ಕನಸಾಗಿಯೇ ಉಳಿಯುವದು. ಬ್ಯಾಂಕಿನಲ್ಲಿ ದುಡ್ಡಿಟ್ಟು ಸಿರಿವಂತನಾಗಬೇಕೆಂಬುವವರ ಸ್ಥಿತಿ ಹೀಗೆಯೇ ಇದೆ.

ಬಡ್ಡಿ ಎಲ್ಲಿಂದ ಬರುತ್ತದೆ:-

ತೋಟದಲ್ಲಿದ್ದ ಗಿಡಗಳಿಗೆ ಹಣ್ಣು ಬರುವಂತೆ ಅಥವಾ ಕೋಳಿ ತತ್ತಿ ಹಾಕುವಂತೆ ಬ್ಯಾಂಕಿನಲ್ಲಿಟ್ಟ ದುಡ್ಡಿಗೆ ಬಡ್ಡಿ ಬರುವದಿಲ್ಲ. ಭೂಮಿಯಲ್ಲಿ ಬೀಜ ಬಿತ್ತಿದಂತೆ ಬ್ಯಾಂಕಿನಲ್ಲಿ ದುಡ್ಡನ್ನು ಬಿತ್ತುವದಿಲ್ಲ; ಅಥವಾ ಕೋಳಿತತ್ತಿಯಮೇಲೆ ಕೂತು, ತಾವು ಕೊಟ್ಟು ಮರಿ ತಯಾರಿಸುವಂತೆ, ಬ್ಯಾಂಕಿನಲ್ಲಿದ್ದ ಕಾರಕೂನರು, ಮ್ಯಾನೇಜರರು ಕೂತು ಬಡ್ಡಿ ನಿರ್ಮಿಸುವದಿಲ್ಲ. ಬ್ಯಾಂಕಿನಲ್ಲಿದ್ದ ದುಡ್ಡು ಅದು ಠೇವು ಎಂದು ಒಂದದ್ದೇ ಇರಲಿ, ಪಾಲು ಎಂದೇ ಇರಲಿ ಅಥವಾ ಸಾಲ ರೂಪದಿಂದಿರಲಿ, ಅದನ್ನು ಧನೋತ್ಪಾದಕ ವರ್ಗದವರಿಗೆ ಸಾಲವೆಂದು ಕೊಡಲಾಗುತ್ತದೆ; ಅವರ ಸಹಾಯದಿಂದ ದುಡಿಯುವವರೆಲ್ಲರನ್ನು ಒಂದೆಡೆ ತಂದು ದುಡ್ಡು ಉತ್ಪನ್ನವಾಗುತ್ತದೆ ಮತ್ತು ಆ ದುಡ್ಡಿನೊಳಗಿಂದ ಬಡ್ಡಿಸಹಿತ ಸಾಲ ತಿರುಗಿ ಕೊಟ್ಟಮೇಲೆ, ಬ್ಯಾಂಕಿನವರು ತಮ್ಮ ಆಡಳಿತೆಯ ವೆಚ್ಚ, ಲಾಭ ತೆಗೆದುಇಟ್ಟು ಠೇವು ಇಡುವವರಿಗೆ ಬಡ್ಡಿ ಕೊಡುತ್ತಾರೆ. ಅಂದರೆ ಯಾವನಾದರೊಬ್ಬನು ಬ್ಯಾಂಕಿನಲ್ಲಿ ದುಡ್ಡು ಇಟ್ಟರೆ, ಅದನ್ನು ಮತ್ತೆ ಯಾರಾದರೂ ಸಾಲವೆಂದು ಪಡೆದು, ಹತ್ತು ಜನರಿಗೆ ದಿನಗೂಲಿ ಕೊಟ್ಟು, ಅವರಿಗೆ ದುಡಿಯಲಿಕ್ಕೆ ಹಚ್ಚಿ, ಅವರಿಂದ ನಿರ್ಮಾಣವಾದ ದುಡ್ಡಿನಿಂದ, ಪಡೆದು ತಂದ ಸಾಲವನ್ನು ಬಡ್ಡಿ ಸಹಿತ ಬ್ಯಾಂಕಿಗೆ ತಿರುಗಿ ಕೊಡುತ್ತಾರೆ. ಈ ಧನೋತ್ಪಾದನ ಮಾನವನಾದರು ಸಹ, ತಾನು ನಿರ್ಮಾಣಿಸಿದ ವಸ್ತುಗಳನ್ನು ಮಾರಿದರೆ ಮಾತ್ರ ಬ್ಯಾಂಕಿಗೆ ತಿರುಗಿ ಹಣ ಸಲ್ಲಿಸುವನು. ಈ ಮಾಲು ಮಾರಾಟವಾಗುವದೆಂದರೆ ಜನ. ಯಾರಾದರೂ ಕೊಳ್ಳಬೇಕು. ಸಾರಾಂಶವೆಂದರೆ, ಸಮಾಜವು ಮಿತವ್ಯಯದಿಂದ ಇರದೆ ಖರ್ಚ ಮಾಡುತ್ತ ಇದ್ದರೆ ಮಾತ್ರ ಸಮಾಜದಲ್ಲಿ ದುಡ್ಡಿನ ಬೇಡಿಕೆ ಬರುವದು ಮತ್ತು ವ್ಯಯಿಸಿದು ದುಡಿದರೆ ದುಡ್ಡು ಉತ್ಪನ್ನವಾಗುವದು. ಪ್ರತಿಯೊಬ್ಬ ವ್ಯಕ್ತಿಯು ಮಿತವ್ಯಯಮಾಡಿ ಮತ್ತು ತಾನು ದುಡಿಯದೆ ಬ್ಯಾಂಕಿನಲ್ಲಿದ್ದ ದುಡ್ಡಿನಮೇಲೆ ಬಡ್ಡಿ ತಿನ್ನುತ್ತ ಕೂಡಬೇಕೆಂದರೆ ಸ್ವಪ್ನ ಹಾಂವೆಲ್ಲ ನಿಂತುಹೋಗುವದು.

ಭಾರತ - ಅಮೇರಿಕಾಗಳಲ್ಲಿ ಸೌಹಾರ್ದ

ಪಂ. ಜವಹರಲಾಲರ ಅಭಿಪ್ರಾಯ

ನ್ಯೂ ಯಾರ್ಕ ತಾ. ೭ - ನನ್ನ ಈ ಅಮೇರಿಕೆಯ ಸಂದರ್ಶನದ ಇತರ ಪರಿಣಾಮವೇನೇ ಆಗಲಿ ಹಿಂದುಸ್ಥಾನ-ಅಮೇರಿಕೆಗಳಲ್ಲಿಯ ಸೌಹಾರ್ದ ಸಂಬಂಧವು ಮಾತ್ರ ಖಂಡಿತವಾಗಿ ಸುಧಾರಿಸುವದೆಂದು ನಾನು ನಂಬಿದ್ದೇನೆ ಎಂದು ಪಂ. ಜವಾಹರಲಾಲರು ಇಂದು ಸುದ್ದಿಗಾರರ ಸಭೆಯಲ್ಲಿ ಹೇಳಿದರು.

ಈ ಸಂದರ್ಶನವು ಅದ್ಭುತವಾಗಿ, ಮೇಧಾ ಶಕ್ತಿಗೆ ಚಾಲನ ಕೊಡುವಂಥದಾಗಿದೆ. ಅಮೇರಿಕನ್ನರು ಕಷ್ಟಾಳುಗಳಾಗಿದ್ದಂತೆ ಭಾವನಪ್ರಧಾನರೂ ಆಗಿದ್ದಾರೆ. ಈ ನನ್ನ ಸಂದರ್ಶನದಿಂದ ಹಿಂದುಸ್ಥಾನ ಅಮೇರಿಕೆಗಳಲ್ಲಿ ಪರಸ್ಪರ ಪರಿಚಯಕ್ಕೆ ಹೆಚ್ಚು ಆಸ್ಪದವಾಗಿರುವದರಿಂದ ಉಭಯ ರಾಷ್ಟ್ರಗಳ ಸಂಬಂಧದ ಮೇಲೆ ಮೂಲಭೂತ ಪರಿಣಾಮವಾಗದಿರದು.

ನಾನು ಹಿಂತಿರುಗಲೇ ಬೇಕಾದ್ದರಿಂದ ಈಗ ಸ್ವದೇಶಕ್ಕೆ ಮರಳುತ್ತಿದ್ದೇನೆ. ಅಲ್ಲಿ ನನಗಾಗಿ ಬೇರೆ ಕರ್ತವ್ಯ ಕಾದಿದೆ.

ನಿಜವಾಗಿ ನಾನು ಇಲ್ಲಿಂದ ತೆರಳಬೇಕಾಗಿದ್ದುದಕ್ಕೆ ವಿಷಾದಹೊಂದಿದ್ದೇನೆ. ಅಮೇರಿಕೆಯ ಕೊಡವಾಗಿದ

ಗೋಧಿಯ ಮೊದಲೇ ಕಂತು ಭಾರತಕ್ಕೆ ಯಾವಾಗ ಬರುವದೆಂದು ಕೇಳಲಾಗಿ ನನಗೇನೂ ಗೊತ್ತಿಲ್ಲ ಆ ಬಗ್ಗೆ ಮಾತುಕತೆ ನಡೆದಿದೆ ಇನ್ನೂ ಕೊನೆಯ ನಿರ್ಣಯಕ್ಕೆ ಬಂದಿಲ್ಲ'' ಎಂದು ಉತ್ತರಿಸಿದರು.

ಕಾಶ್ಮೀರದ ಸಮಸ್ಯೆಯನ್ನು ಯುಕ್ತ ರಾಷ್ಟ್ರ ಸಂಘದ ಚೌಕಟ್ಟಿನಲ್ಲಿಯೇ ಪರಿಹರಿಸಲಾಗುವದೆಂದು ನಂಬಿದ್ದೇನೆ. ಈ ಸಮಸ್ಯೆಯು ಶಾಂತರೀತಿಯಿಂದ ಪರಿಹರಿಸಲ್ಪಡಬೇಕೆಂದು ಹಿಂದುಸ್ಥಾನ-ಪಾಕಿಸ್ತಾನಗಳು ಪ್ರಕಟನೆ ಹೊರಡಿಸಬೇಕೆಂದು ಕೇಳಿಕೊಳ್ಳಲಾಗಿದೆಂದರು.

ಹಿಂದುಸ್ಥಾನವು ಕೇವಲ ತನ್ನ ಬಂಡವಳವನ್ನು ನೆಚ್ಚಿ ಕುಳಿತರೆ ದೇಶದ ಪ್ರಗತಿಯು ಬಹಳ ಮಂದವಾಗಿ ಸಾಗುವದು ಇತ್ತೀಚೆಗೆ ಹಿಂದುಸ್ಥಾನದಲ್ಲಿ ಕುಬೇರಪುತ್ರರ ಬೇರೆ ಬೇರೆ ವರ್ಗಗಳು ಕಳೆಯುತ್ತಿವೆ. ಈ ಮೊದಲು ಉದ್ಯೋಗಗಳಲ್ಲಿ ಹಣತೊಡಗಿಸುತ್ತಿದ್ದವರ ಹತ್ತರ ಈಗ ಹಣ ಕಡಿಮೆಯಾಗಿದೆ ಮತ್ತು ಆ ಹಣವೀಗ ಹೆಚ್ಚು ಜನರಲ್ಲಿ ಹಂಚಿ ಹೋಗಿ ಇವರಿಗೆ ಹಣವನ್ನು ಉದ್ಯೋಗದಲ್ಲಿ ತೊಡಗಿಸುವ ಪ್ರವೃತ್ತಿ ಇಲ್ಲವಾಗಿದೆ.

ಚೀನದ ಕಮ್ಯುನಿಷ್ಟ ಸರಕಾರಕ್ಕೆ ಮನ್ನಣೆ ಕೊಡುವಿರಾ ಎಂದು ಕೇಳಲು ಚೀನದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನು ದುರ್ಲಕ್ಷಿಸಲು ಬಾರದಂತಾಗಿದೆ ಎಂದು ಉತ್ತರಿಸಿದರು.

ಇಸ್ರಾಯಿಲ ಸರಕಾರಕ್ಕೆ ಹಿಂದುಸ್ಥಾನವು ಮನ್ನಣೆಕೊಡುವದೇ ಎಂದು ಪ್ರಶ್ನಿಸಲು ಇಸ್ರಾಯಿಲ ಸರಕಾರವೀಗ ಪ್ರತ್ಯೇಕವಾಗಿ ಆಡಳಿತೆ ನಡೆಸುತ್ತಿರುವದರಿಂದ ಸಂದೇಹಾಸ್ಪದ ಸ್ಥಿತಿಯಲ್ಲಿ ಉಳಿದಿಲ್ಲ. ಔಪಚಾರಿಕವಾಗಿ ನಾವು ಆ ಸರಕಾರಕ್ಕೆ ಮನ್ನಣೆಯಿತ್ತಿಲ್ಲವಾದರೂ ಅವರೊಡನೆ ಸೌಹಾರ್ದದಿಂದಿದ್ದೇವೆ. ನಾವೇನು ಅರಬ ವಿರೋಧಿಗಳೂ ಅಲ್ಲ ಎಂದು ತಿಳಿಸಿದರು.

ಹಿಂದುಸ್ಥಾನ ಸರಕಾರವು ಗಾಂಧೀಜಿಯವರ ಕೊಲೆಗಡಕರನ್ನು ಗಲ್ಲಿಗೇರಿಸುವದೋ ಎಂದು ವಿಚಾರಿಸಲಾಗಿ, ಈಬಗ್ಗೆ ಕೆಲವು ಅಮೇರಿಕನ್ನರು ನಿನ್ನೆಯೆ ಪತ್ರ ಬರೆದಿದ್ದಾರೆ. ಮರಣ ದಂಡನೆಯನ್ನು ನಿರ್ಮೂಲವಾಗಿಸಬೇಕೆಂದು ಕೆಲ ದಿನಗಳ ಹಿಂದೆ ಹಿಂದೀಯರು ಕೇಳುತ್ತಿದ್ದರು. ಆದರೆ ಚಿಕ್ಕ ಪುಟ್ಟ ಅಪರಾಧಗಳಿಗಾಗಿ ಅಪರಾಧಿಗಳನ್ನು ಗಲ್ಲಿಗೇರಿಸುತ್ತಿದ್ದಾಗ ನಮ್ಮ ಶ್ರೇಷ್ಠ ಧುರೀಣರಾದ ಗಾಂಧೀಜಿಯನ್ನು ಘಾತಿಸಿದವನನ್ನು ಅಪವಾದಾತ್ಮಕವಾಗಿ ಬಿಟ್ಟು ಕೊಡುವದು ನ್ಯಾಯದೃಷ್ಟಿಯಿಂದ ಸರಿಯಾಗಲಾರದು" ಎಂದರು.

ಹಿಂದುಸ್ತಾನದಲ್ಲ ಕೂಲಿಕಾರ ಮುತ್ತಿಕರ ಧುರೀಣರನ್ನು ಸ್ಥಾನಬದ್ಧತೆಯಲ್ಲಿಟ್ಟಿರುವ ಬಗ್ಗೆ ಕೇಳಲಾಗಿ "ನಮ್ಮಲ್ಲಿ ವಿಚಾರಣೆಯಿಲ್ಲದೆ ಸ್ಥಾನಬದ್ಧತೆಯಲ್ಲಿಡಲ್ಪಟ್ಟವರು ಕಮ್ಯುನಿಸ್ಟರಾಗಿಲ್ಲ. ಆದರೆ ಜಾತಿ ದ್ವೇಷದ ಕೈವಾರಿಗಳಾಗಿದ್ದಾರೆ. ಇತರ ಕೂಲಿಕಾರ ಧುರೀಣರನ್ನು ಬಂಧಿಸಿದ್ದಾದರೂ ಅವರು ಹಿಂಸಾಚಾರಕ್ಕಿಳಿದ್ದರಿಂದ ಸಂಪು ಮುಂತಾದ ವಿಧ್ವಂಸಕ ಕಾರ್ಯಗಳಲ್ಲಿ ತೊಡಗಿದ್ದರಿಂದ ಹಿಂದುಸ್ತಾನ ಸರಕಾರವು ಈ ಉಪಾಯಗಳನ್ನು ಕೈಕೊಂಡಿದ್ದಿಲ್ಲವಾದರೆ ನಮ್ಮ ದೇಶದಲ್ಲಿ ಅರಾಜಕತೆ ಉಂಟಾಗುತ್ತಿತ್ತು" ಎಂದು ಸ್ಪಷ್ಟೀಕರಿಸಿದರು.

ಇಂಡೋಚೀನದ ಪ್ರಶ್ನೆಯನ್ನು ಅಲ್ಲಿಯ ಜನರೇ ಬಗೆಹರಿಸಬೇಕೆ ಹೊರತು ಒತ್ತಾಯದಿಂದ ಯಾವ ನಿರ್ಣಯವನ್ನು ಹೇರಲಿಕ್ಕಾಗದು ಎಂದೂ ತಿಳಿಸಿದರು.

ಬಳ್ಳಾರಿ ಜಿಲ್ಲಾ ಬೋರ್ಡು
— ಅಧ್ಯಕ್ಷ —
ಶ್ರೀ ವೈ. ಮಹಾಬಲೇಶ್ವರಪ್ಪ
—ನವರಿಗೆ ಸತ್ಕಾರ—

ಕಂಪ್ಲಿಯಲ್ಲಿ:— ಈ ಊರಿನ ಅಡ್ವೊಕೇಟರಾದ ಶ್ರೀವರ್ಮ ಈಶ್ವರಪ್ಪನವರಧ್ಯಕ್ಷತೆಯಲ್ಲಿ ತಾ|| ಮಿಯಾಚಂದ ಹೈಸ್ಕೂಲಿನಲ್ಲಿ ಸತ್ಕಾರ ಸಮಾರಂಭವು ಏರ್ಪಾಟಾಗಿ ಪ್ರಮುಖ ನಾಗರೀಕರೆಲ್ಲಾ ಆಗಮಿಸಿದ್ದರು. ಚಹಾಪಾನ, ಫಲಾಹಾರ ಛಾಯಾಚಿತ್ರದ ನಂತರ ಶ್ರೀಗೌಡ ವೆಂಕೋಬರಾಯರು ಹಿಂದಿನ ಇತಿಹಾಸವನ್ನೆಲ್ಲಾ ತಿಳಿಸಿ ಮಹಾಬಲೇಶ್ವರಪ್ಪನವರು ಜಿಲ್ಲೆಗಾಗಿ ಮಾಡಿದ ಸೇವೆ ಅದರಲ್ಲೂ ಕಂಪ್ಲಿಗಾಗಿ ಕುರುಗೋಡು ರಸ್ತೆ ಹೈಸ್ಕೂಲ್ ಸ್ಥಾಪನೆಗೆ ಸಹಾಯಮಾಡಿದುದನ್ನು ವಿವರಿಸಿ ಇವರಿಂದ ಬಳ್ಳಾರಿಯ ವೀರಶೈವ ಕಾಲೇಜಿನ ಅಸ್ತಿತ್ವವುಳಿಯುವದರಲ್ಲಿ ಸಂಶಯವಿಲ್ಲೆಂದರು ಪ್ರಸೂತಿಕೇಂದ್ರ ಪಶು ಆಸ್ಪತ್ರೆ, ತುಂಗಭದ್ರಾ ಸೇತುವೆಗಳನ್ನು ನೋಡುವ ಶುಭದಿನಗಳು ಬರಲೆಂದು ಹಾರೈಸಿದರು

ಕಲ್ಗುಡಿ ರಾಚಪ್ಪನವರು ಮಹಾಬಲೇಶ್ವರಪ್ಪನವರ ಯಶಸ್ಸು ಕನ್ನಡದ ಯಶಸ್ಸೆಂದೂ, ಅವರ ಹಿರಿಮೆಯಿಂದೂ ಬಳ್ಳಾರಿಯ 3 ತಾಲೂಕುಗಳು ಕನ್ನಡವಿದ್ದು ಕನ್ನಡನಾಡಿಗೇ ಸೇರಬೇಕೆಂದೂ ಇದನ್ನು ಸಾಧಿಸುವ ಶ್ರೇಯವು ಮಹಾಬಲೇಶ್ವರಪ್ಪನವರಿಗೇ ಸಲ್ಲಬೇಕೆಂದು ಕೋರಿದರು.

ಜನಾಬ್ ನಬಿಸಾಹೇಬರು ಶಾಲೆಗಳು ಕ್ಷೀಣಸ್ಥಿತಿಯಲ್ಲಿದ್ದು ಅವುಗಳ ಅಭಿವೃದ್ಧಿಯು ಈಗಿನ ಅಧ್ಯಕ್ಷರ ಹಯಾಮುದಲ್ಲಾಗಲೆಂದರು.

ಶ್ರೀ ಬಿ.ವಿ. ವಿಶ್ವನಾಥಸಿಂಗರು ಈಗಿನ ಅಧ್ಯಕ್ಷರ ಹಿತವನ್ನು ಕೋರಿ ಅಧಿಕಾರಗಳು ಕಡಮೆ ಇದ್ದರೂ, ಸಾಕಷ್ಟು ಉಪಯೋಗವಾದೀತೆಂದರು.

ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಶ್ರೀ ವೀರನಗೌಡರು ವರದಿಯನ್ನೋದಿ ಶಾಮಿಯಾಚಂದರ ಆಕಸ್ಮಿಕ ಮರಣಕ್ಕೆ ಅತೀವ ದುಃಖಸೂಚಿಸಿ ಶ್ರೀ ಮಹಾಬಲೇಶ್ವರಪ್ಪ, ನಾಗನಗೌಡ ಡೈರೆಕ್ಟರ್ ಸದಾಶಿವರೆಡ್ಡಿಗಳ ಸಹಾಯ ಸಹಕಾರಗಳಿಂದ ಶಾಲೆಯು ಪ್ರಗತಿಗೈದಿದುದನ್ನು ಈಗಿರುವ 278 ಸಂಖ್ಯೆಗೆ ಇದರೇ ಕಾರಣವೆಂದರು.) ಬಡವಿದ್ಯಾರ್ಥಿಗಳನಿದಿ ಹಾಸ್ಟೆಲ್ ಸ್ಥಗಿತವಾಗಿವೆ. ಇವು ಪುನರುದ್ಧಾರವಾಗಬೇಕು ಶಾಲೆಯ ಆಟಪಾಟಾದಿಗಳಿಗೆ 3½ ಎಕರೆ ಭೂಮಿ ಸಿಗಬೇಕು ಇದಕ್ಕೆ ಎಲ್ಲರ ಸಹಕಾರ ಬೇಕೆಂದರು.

ಶ್ರೀ ಅಮರನಾಥಶಾಸ್ತ್ರಿಗಳು ಒಂದು ಚಿಕ್ಕ ಲೇಖವನ್ನೋದಿ ಏಕೀಕರಣ ಸಾಧ್ಯವಾಗಿ ಬೌದ್ಧಿಕಶಕ್ತಿಗಳಿಗೆ ಪ್ರಾಶಸ್ತ್ಯವು ದೊರೆಯಲೆಂದು ತಿಳಿಸಿದರು.

ಶ್ರೀ ಬಿ. ಕೃಷ್ಣಾಚಾರ್ಯರು ಪ್ರಾಥಮಿಕ ಶಾಲೋಪಾಧ್ಯಾಯರ ಸಂಬಳಗಳು ಸರಿಯಾಗಿ ಬರಲಿಕ್ಕೆ ವ್ಯವಸ್ಥೆಯು ಈಗಿನ ಅಧ್ಯಕ್ಷರಿಂದ ಆಗಲೆಂದು ಕೋರಿದರು.

ಶ್ರೀ ವೈ. ನಾಗೇಶಶಾಸ್ತ್ರಿಯವರು ವೀರಶೈವ ಕಾಲೇಜಿನ ಪ್ರಗತಿಯೋಭಿವೃದ್ಧಿಯು ಶ್ರೀ ಮಹಾಬಲೇಶ್ವರಪ್ಪನವರಿಂದಲೇ ಆದೀತೆಂದು ಅಭಿಪ್ರಾಯಪಟ್ಟು ವ್ಯವಹಾರದಲ್ಲಿ ಕಾರ್ಯಸಾಧನೆಯಲ್ಲಿ ಇವರು ಅದ್ವಿತೀಯರೂ, ಚಾಣಾಕ್ಷರೂ ಇರುವರೆಂದರು.

ಶ್ರೀ ವೈ. ಮಹಾಬಲೇಶ್ವರಪ್ಪನವರು ಇವಕ್ಕೆಲ್ಲಾ ಪ್ರತ್ಯುತ್ತರವೀಯುತ್ತಾ ಮಿತ್ರ ವೆಂಕೋಬರಾಯರ ವಾತ್ಸಲ್ಯ ಪ್ರೋತ್ಸಾಹಗಳಿಗೂ, ವಿಶ್ವನಾಥ ಸಿಂಗರ ಮಿತ್ರ ಸಹಕಾರಗಳಿಗೂ, ಊರಿನ ಅನೇಕರ ಸೌಹಾರ್ದತೆಗೂ ತಮ್ಮ ಕೃತಜ್ಞತಾ ಪೂರ್ವಕ ವಂದನೆಗಳನ್ನರ್ಪಿಸಿದರು. ಪ್ರಾದೇಶಿಕ ಶಾಲೆಗಳಲ್ಲಿ ಕನ್ನಡ ಪ್ರಸಾರ ರಸ್ತೆಗಳ ರಿಪೇರಿ ಪ್ರಾಥಮಿಕ ಶಾಲೋಪಾಧ್ಯಾಯರ 9 ತಿಂಗಳ ಸಂಬಳ ಒಂದೇ ಸಲಕೊಟ್ಟದ್ದು ಮೊಸಮೂಸವೂಸರಿಯಾಗಿ ಕೊಡುವ ಏರ್ಪಾಟು ಕನ್ನಡ ಏಕೀಕರಣಕ್ಕಾಗಿ ದುಡಿಯುತ್ತಿರುವ ವಿಷಯ ಮನನೀಯವಾಗಿಹೇಳಿ, ಕಂಪ್ಲಿ ಪ್ರಗತಿಗಾಗಿ ಕಂಪ್ಲಿಯವರು ದುಡಿಯಬೇಕೆಂದು ಹೇಳಿ ಜಿಲ್ಲೆಗೆಲ್ಲಾ ಬೇಕಾದ ವೀರಶೈವ ಕಾಲೇಜಿಗೆ ಎಲ್ಲರ ಸಹಕಾರ ಬೇಡಿದರು. ವಂದನಾರ್ಪಣ ಜನ ಗಣ ಮನದಿಂದ ಮುಗಿಯಿತು.

ಸಿರಗುಪ್ಪೆಯಲ್ಲಿ

ಶ್ರೀ ಷಣ್ಮುಖಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯ ಕಾರ್ಯಕಲಾಪಗಳು ಪ್ರಾರಂಭವಾದವು. ಉಪಾಹಾರ ಛಾಯಾ ಚಿತ್ರಗಳ ನಂತರ ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಎಂಬ ನಾಡಗಾನದಿಂದಾರಂಭವಾಯಿತು, ವ್ಯಾಯಾಮ ಶಾಲೆ. ಪುರಜನರ ಪರವಾಗಿ ಪುಷ್ಪಮಾಲೆಗಳರ್ಪಿತವಾದವು. ಶ್ರೀ ಓಬಳಶಾಸ್ತ್ರಿಗಳು ಪರಿಚಯಮಾಡಿದರು. ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಎಂ. ದೊಡ್ಡನಗೌಡರು ಪುರಜನರ ಪರವಾಗಿ ಮಾನಪತ್ರವನ್ನೋದಿದರು. ಸಿರಗುಪ್ಪೆಯವರು 30 ಸಾವಿರ ರೂ ಕೊಟ್ಟು 20 ಸಾವಿರ ರೂ. ಕಟ್ಟಡಕ್ಕಾಗಿ 10 ಸಾವಿರ ರೂ. 3 ವರ್ಷಗಳ ಖರ್ಚಿಗೆ ಕಟ್ಟಡಕ್ಕೆ 1 ಲಕ್ಷ ರೂ. ಬೇಕು. ಹಿಂದೆ ಸರ್ಕಾರದಿಂದ ಸಾಕಷ್ಟು ಗ್ರಾಂಟುತರಿಸಿಕೊಡಿರಿ. ಹೀಗೆ ಆಸ್ಪತ್ರೆಗೆ ಸಹಾಯ ಮಾಡಿಸಿರಿ ಎಂಬುದೇ ಮಾನಪತ್ರದ ಮುಖ್ಯಾಂಶ

ಶ್ರೀ ಮಹಾಬಲೇಶ್ವರಪ್ಪ
ನವರ ಪ್ರತ್ಯುತ್ತರ

ನನ್ನನ್ನು ಗೌರವಿಸಿದುದಕ್ಕಾಗಿ ಪುರಜನರಿಗೂ ವ್ಯಾಯಾಮ ಶಾಲಾ ಕಾರ್ಯಕರ್ತರಿಗೂ ನನ್ನ ಅಭಿನಂದನೆ. ನೀವು ಹೈಸ್ಕೂಲಿಗಾಗಿ ಕೊಟ್ಟದೇಣಿಗೆಯಿಂದ ನನಗೆ ಸಂತೋಷವಾಗಿದೆ. ನಾನು ಮದ್ರಾಸಿಗೆ ಹೋದಾಗ ಬಡಜಿಲ್ಲೆಗೆ ಹೆಚ್ಚಿನ ಸಹಾಯಮಾಡಲು ಕೇಳಿ ಸಾಕಷ್ಟು ಆಶ್ವಾಸನ ಪಡೆದಿದ್ದೇನೆ. ನೀವು ಪ್ರಾರಂಭಿಕ ಸಹಾಯ ಮಾಡಿದವರಿದ್ದು ಸರ್ಕಾರದ ಸಹಾಯಕ್ಕೆ ಯೋಗ್ಯವಿರುವಿರಿ. ಡೈರೆಕ್ಟರ್ ಸದಾಶಿವರೆಡ್ಡಿಯವರು ಸಹಾಯ ಮಾಡಲು ಸಾನು ಭೂತಿಯುಳ್ಳವರು

ಹಾಗೆ ಆಸ್ಪತ್ರೆಗೆ ಜಿಲ್ಲಾಬೋರ್ಡಿನಲ್ಲಿ ಹಣವಿಡಿದೆ. ಊರಿನ ಉದಾರವಂತರು ಮುಂದೆ, ಬರಬೇಕು. ನೀವು ಮೊದಲು ಸಿದ್ಧರಾಗದೆ ಸರ್ಕಾರದ ಗ್ರಾಂಟು ಕೇಳುವದು ಅಷ್ಟು ಚನ್ನಾಗಿರುವುದಿಲ್ಲ. ಸ್ವಾತಂತ್ರ್ಯ ಪ್ರದಾನವಾದನಂತರ ಸರ್ಕಾರಕ್ಕೆ ಬಹಳ ಕಷ್ಟ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ನಿಮ್ಮ ಆದರಾತಿಥ್ಯ ಸಮ್ಮಾನಪತ್ರಕ್ಕೆ ನಿಮಗೆ ಕೃತಜ್ಞತಾಪೂರ್ವಕ ವಂದನೆ.

ಶ್ರೀ ಓಬಳ ಶಾಸ್ತ್ರಿಗಳು ವಂದನಾರ್ಪಣೆ ಮಾಡಿದರು.

—

ಆಂಧ್ರರು ಮದ್ರಾಸ್ ಬಿಟ್ಟುಕೊಟ್ಟರು ?

ಆಂಧ್ರ ಕಾಂಗ್ರೆಸ್ ಸಮಿತಿಯ ನಿರ್ಣಯ

—

10 ನೆಯ ತಾ. ಬೇಜವಾಡದಲ್ಲಿ ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎನ್. ಜಿ. ರಂಗಾರವರ ಅಧ್ಯಕ್ಷತೆಯಲ್ಲಿ ಜನ ಹರ ಪಟೇಲ ನೇತೃತ್ವದ ವರದಿಯನ್ನು ಸ್ವೀಕರಿಸುವ ಮದ್ರಾಸ್ ನಗರವನ್ನು ಬಿಟ್ಟುಕೊಡುವ ನಿರ್ಣಯವು ಸ್ವೀಕೃತವಾಯಿತು. ಕೂಡಲೇ ಆಂಧ್ರ ಪ್ರಾಂತವನ್ನು ನಿರ್ಮಿಸಬೇಕೆಂದೂ ಆಂಧ್ರ ಪ್ರಾಂತದ ರಾಜಧಾನಿಯು ನಿರ್ಣಯಿಸಲ್ಪಡುವವರೆಗೂ ಮದ್ರಾಸ್ ನಗರದಲ್ಲೇ ರಾಜಧಾನಿಯನ್ನು ನಡೆಸಲು ಅಪ್ಪಣೆ ಕೊಡಬೇಕೆಂದೂ ಕೇಳಿಕೊಳ್ಳಲಾಯಿತು. ಈ ನಿರ್ಣಯವು ಸಾಧಾರಣ ಸಭೆಯ ಸ್ವೀಕೃತಿಗಾಗಿ ಇಡಲಾಗಿದೆ.

ಆಂಧ್ರ ಪ್ರಾಂತವು ಬಳ್ಳಾರಿಯ ಸಮೇತವಾಗಿ 11 ಜಿಲ್ಲೆಗಳನ್ನು ಕೂಡಿಸಿ ನಿರ್ಮಿಸಲು ಕೇಳಿಕೊಳ್ಳಲಾಯಿತು.

—

ಆಂಧ್ರ ಪ್ರಾಂತ ನಿರ್ಮಾಣ ಆದವಾನಿ ಆಲೂರ ರಾಯದುರ್ಗಗಳೆಲ್ಲಿ ?

ಆಂಧ್ರ ಪ್ರಾಂತಿಯ ಕಾಂಗ್ರೆಸ್ ಸಮಿಯವರೂ, ಸಾಧಾರಣ ಸಭೆಯೂ ತ್ರಿಮೂರ್ತಿಗಳ ವರದಿಯನ್ನೊಪ್ಪಿ ವಿವಾದಾಸ್ಪದವಲ್ಲದ ಆಂಧ್ರ ಭಾಗಗಳನ್ನೊಳಗೊಂಡ ಆಂಧ್ರ ಪ್ರಾಂತವನ್ನು ನಿರ್ಮಿಸಬೇಕೆಂದೂ, ಆಂಧ್ರ ರಾಜಧಾನಿಯು ನಿಶ್ಚಿತವಾಗುವವರೆಗೂ ಮದ್ರಾಸಿನಿಂದಲೇ ಆಂಧ್ರ ಪ್ರಾಂತದ ರಾಜ್ಯಾಡಳಿತವು ಸಾಗಬೇಕೆಂದೂ ತೀರ್ಮಾನಿಸಿದ್ದಾರೆ. ಆ ತೀರ್ಮಾನದಲ್ಲಿ ಕೇಳ್ಕರರ ಅವಾರ್ಡದ ಪ್ರಕಾರಕ್ಕೆ ಆದವಾನಿ ಆಲೂರ ರಾಯದುರ್ಗಗಳನ್ನು ಆಂಧ್ರದಲ್ಲಿ ಸಮಾವಿಷ್ಟಗೊಳಿಸಿದ್ದಾರೆ.

ಶ್ರೀ ನರಸಿಂಹ ಚಿಂತಾಮಣಿ ಕೇಳ್ಕರರು 1921 ರಲ್ಲಿ ಬಳ್ಳಾರಿ ಮತ್ತು ಆದವಾನಿ ನಗರಗಳನ್ನು ಮಾತ್ರ ಸಂದರ್ಶಿಸಿ, ತಮ್ಮ ತೀರ್ಪುಕೊಟ್ಟಿದ್ದಾರೆ. ಅದು ಆಗಿನ ಜನಗಳಿಗಾಗಿ ಅಸ್ಥಾಯೀರೂಪದಿಂದ ಹೆಚ್ಚೆಂದರೆ 10 ವರ್ಷಗಳಿಗಾಗಿ ಕೊಟ್ಟ ತೀರ್ಪು. ತೀರ್ಪುಕೊಟ್ಟು ಇಲ ವರ್ಷಗಳು ಗತಿಸಿ ಹೋಗಿವೆ ಕೇಳ್ಕರರು ಹಳ್ಳಿಯಭಾಗಗಳನ್ನು ಸಂದರ್ಶಿಸಲಿಲ್ಲ. ಜನತೆಯ ಭಾಷೆ ವ್ಯವಹಾರಗಳನ್ನು ಗಮನಿಸಲಿಲ್ಲ. ಜನಾಭಿಪ್ರಾಯವನ್ನು ಕೇಳಲಿಲ್ಲ [illegible] ಆಧಾರವೆಂದರೆ [illegible] ಮತ್ತು ತಪ್ಪು ಸಂಖ್ಯೆಗಳಿಂದ ಕೂಡಿದ ಸೆನ್ಸಸ್ಸಿನ ಜನಗಣತಿಯ ಲೆಕ್ಕಗಳು ಅವರಾದರೂ ತಮ್ಮ ವರದಿಯಲ್ಲಿ ಇಡೀ ಜಿಲ್ಲೆಯನ್ನು ಕರ್ನಾಟಕಕ್ಕೆ ಕೊಟ್ಟರೂ ಅನ್ಯಾಯವಾಗುವುದಿಲ್ಲೆಂದಿದ್ದಾರೆ.

ಜಿಲ್ಲೆಯನ್ನ ವಿಭಜಿಸುವುದು ತಪ್ಪು

ಬಳ್ಳಾರಿಯ, ಆದವಾನಿ, ಆಲೂರು ರಾಯದುರ್ಗಗಳನ್ನು ಆಂಧ್ರಕ್ಕೆ ಜನಗಣನೆ ಜನಾಭಿಪ್ರಾಯವನ್ನು ತೆಗೆದುಕೊಳ್ಳದೆ ಸೇರಿಸುವದು ಅನ್ಯಾಯ ಮತ್ತು ದೌರ್ಜನ್ಯದ ಕೆಲಸವಾಗುತ್ತೆ ಜಿಲ್ಲೆಯ ಇತರ ತಾಲೂಕುಗಳಿಂತ ಈ ತಾಲೂಕುಗಳದು ಭಿನ್ನ ಸಂಸ್ಕೃತಿಯಲ್ಲ. ಭಿನ್ನ ವ್ಯವಹಾರಗಳಿಲ್ಲ. ಈ ಪೂರ್ವ ಪ್ರದೇಶದ ಕೆಲಭಾಗಗಳ ಜನರು ಕನ್ನಡ ಮತ್ತು ತೆಲುಗು ಭಾಷೆಗಳೆರಡರಲ್ಲೂ ಪರಿಚಿತರಿದ್ದು ನಿತ್ಯವ್ಯವಹಾರದಲ್ಲಿ ಉಪಯೋಗಿಸುತ್ತಿರುವುದು ತಪ್ಪೆ? ಈ ವಿಚಾರದಲ್ಲಿ ಮತಾಭಿಪ್ರಾಯವನ್ನು ತೆಗೆದುಕೊಂಡಾಗ ನಿಜತ್ವವು ಬೈಲಿಗೆ ಬೀಳುತ್ತದೆ. ಪೂರ್ವತಾಲೂಕುಗಳ ಕೆಲಭಾಗಗಳಲ್ಲಿ ತೆಲುಗನ್ನು ಶುದ್ಧಾಂಗವಾಗಿ ಅರಿಯದ ಎಷ್ಟೋ ಹಳ್ಳಿಗಳೂ ಹಳ್ಳಿಗರೂ ಇದ್ದಾರೆ ಸಾರ್ವಜನಿಕ ಕಾರ್ಯಕರ್ತರು ಏಕೀಕರಣ ಸೇವಕರು ಮನೆ ಮನೆಗಳಿಗೆ ಹೋಗಿ ನಿಜವಾದ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸಿರುತ್ತಾರೆ

ಈಗ ಕನ್ನಡಿಗರ ಕರ್ತವ್ಯವೆಂದರೆ ಅವರು ಆಂದೋಳನವನ್ನು ಹೂಡಿ ತಮ್ಮ ಆತ್ಮಗೌರವನ್ನು ಕಾಪಾಡಿಕೊಳ್ಳಬೇಕು ಸರ್ವವಿಧದಿಂದ ಯತ್ನಿಸಬೇಕು. ಜಿಲ್ಲೆಯನ್ನು ಇಬ್ಭಾಗ ಮಾಡುವುದರಿಂದ ಯಾರಿಗೂ ಸುಖವಿಲ್ಲ. ಆದವಾನಿಯವರು ಬಳ್ಳಾರಿಗೆ ಬರುವುದು ಹತ್ತಿರವಿರುತ್ತಾಗಲಿ ಅನಂತಪುರವು ಬಹಳ ದೂರವಾಗುತ್ತೆ ಅನೇಕ ದೃಷ್ಟಿಗಳಿಂದ - ಇದರಿಂದ ಲಾಭವಿದೆ. ಜಿಲ್ಲೆಯ ಐಕಮತ್ಯವನ್ನು ಕಾಪಾಡಿಕೊಳ್ಳಬೇಕಾದುದು ಕನ್ನಡಿಗರಿಗೆ ಎಷ್ಟು ಸ್ವಾರ್ಥಲಾಭವಿದೆಯೋ ಅದಕ್ಕಿಂತಲೂ 10 ಪಟ್ಟು ಹೆಚ್ಚಾಗಿ ಆಂಧ್ರರಿಗಿದೆಯೆಂಬುದನ್ನು ಕಾಣಬೇಕು - ಒಂದಾನೊಂದು ಕಾಲಕ್ಕೆ ಬಳ್ಳಾರಿ ಅನಂತಪುರ ಭಾಗಗಳಿಗೆ ಒಬ್ಬ ಕಲೆಕ್ಟರವರೇ - ಬಳ್ಳಾರಿಯಲ್ಲಿರುತ್ತಿದ್ದರು - ಬ್ರಿಟಿಷ್ ಸರಕಾರವು ಕನ್ನಡ ಆಡಳಿತಾನುಕೂಲಕ್ಕಾಗಿ ಭಾಷಾ ಪ್ರದೇಶಗಳನ್ನು ಹರಿದು ಹಂಚಿ ಕೃತ್ರಿಮ ಪ್ರಾಂತಗಳನ್ನು ಮಾಡಿತು ಈಗಿನ ಪ್ರಾಂತ ನಿರ್ಮಾಣದಲ್ಲಿ ಜನತೆಯ ಪ್ರತಿನಿಧಿಗಳ ರಾಜ್ಯಭಾರದಲ್ಲಿ ಇಂಥಾ ಅನ್ಯಾಯಗಳಾಗದಂತೆ ಪ್ರತಿಭಟಿಸುವದು ಜಿಲ್ಲೆಯ ಸಮಸ್ತ ಹಿತೈಷಿಗಳ ಕರ್ತವ್ಯ.

—

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದಿಲ್ಲಿಯಲ್ಲಿ 16 ನೆಯ ತಾ. ಸಮಾವೇಶವಾಗುವುದು. ಅಂದು ಆಂಧ್ರಪ್ರಾಂತ ನಿರ್ಮಾಣದ ಬಗ್ಗೆ ನಿರ್ಣಯವನ್ನು ಕೈಗೊಳ್ಳಲಾಗುವುದು

—

ಮಧುರೆಯಲ್ಲಿ ಲೂಟಿ ಬಾಂಬುಗಳ ಉಪಯೋಗ

10 ನೆಯ ತಾ. ಗುರುವಾರ ರಾತ್ರಿ ಮೀನಾಕ್ಷಿ ದೇವಸ್ಥಾನದ ಹತ್ತರ 4-6 ದೊಡೆ ಕೋರರು ಒಂದು ಸರಾಫಂಗಡಿ ಹೊಕ್ಕು 6-7 ಸಾವಿರ ಬೆಲೆಬಾಳುವ ಆಭರಣಗಳನ್ನು ಹೊತ್ತು ಕೊಂಡುಹೋದರು. ಬಾಂಬುಗಳನ್ನೆಸೆದು ಎಲ್ಲರನ್ನೂ ಭಯಗೊಳಿಸಿದರು

—

ಸಂಯುಕ್ತ ಪ್ರಾಂತವನ್ನು ಆರ್ಯಾವರ್ತವೆಂದು ಕರೆಯಬೇಕೆಂದು ಪ್ರಾಂತೀಯ ಮಂತ್ರಿವರ್ಗವು ಶಿಫಾರಸು ಮಾಡಿದೆ.

—

ಪಂಡಿತ ನೆಹರೂರವರು ಹಿಂದೂಸ್ಥಾನಕ್ಕೆ ಹಿಂದಿರುಗಿ ಬರಬೇಕಾದರೆ ಜೋರ್ಡನ್, ಲೆಬನಾನ್ ಮತ್ತು ಸಿರಿಯಾ ಮುಂತಾದ ಅರಬ್ ದೇಶಗಳನ್ನು ಸಂದರ್ಶಿಸುವರೆಂದು ತಿಳಿದುಬಂದಿದೆ.

—

ಅಖಂಡ ಕರ್ನಾಟಕ ಪ್ರಾಂತ

-: ರಚನೆ :-

ಕೇಂದ್ರಸರಕಾರ ಮತ್ತು ಅಖಿಲ ಭಾರತ ಕಾಂಗ್ರೆಸ್‌ಕಾರ್ಯಕಾರಿ ಸಮಿತಿಗೆ ಒತ್ತಾಯ ಮಾಡುವ ಕರ್ನಾಟಕ ಪ್ರಾಂತವು ಆಗದಿದ್ದರೆ ಬಲವಾದ ಚಳವಳಿ ಗೊಳ್ಳುವ ನಿರ್ಣಯವನ್ನು ಕೆ. ಪಿ. ಸಿ. ಸಿ. ಸಭೆಯು ದಾವಣಗೆರೆಯಲ್ಲಿ ಶ್ರೀ ನಿಜಲಿಂಗಪ್ಪನವರಧ್ಯಕ್ಷತೆಯಲ್ಲಿ ನಿಶ್ಚಯಿಸಿತು.

—: ಚಿಮ್ನಿಎಣ್ಣೆ :—

೧೯೪೩ ರಿಂದ ಈಚೆಗೆ ಎಂದೂ ತರಿಸದಷ್ಟು ಚಿಮ್ನಿಎಣ್ಣೆಯನ್ನು ತರಿಸಿ ಭಾರತದಲ್ಲಿ ಚಿಮ್ನಿಎಣ್ಣೆಯ ಪೂರೈಕೆಯನ್ನು ಹೆಚ್ಚಿಸಲಾಗುವದೆಂದು ಸರಕಾರದ ವರ್ತಕ ಶಾಖೆಯ ಪ್ರಕಟನೆಯು ಹೊರಟಿದೆ.

ಭಾರತರಾಜ್ಯ ಘಟನೆಯ ತೃತೀಯ ವಾಚನದ ಪ್ರಾರಂಭವು 14-11-49 ರಿಂದ ದಿಲ್ಲಿಯಲ್ಲಿ ಪ್ರಾರಂಭವಾಗಲಿದೆ.

ಪಾಕಿಸ್ತಾನದ ಗೋಧಿ ಬೇಕಿಲ್ಲ.

ಪಾಕಿಸ್ತಾನವು ತಾನು ಕೊಡಮಾಡಿದ 1 ಲಕ್ಷ 75 ಸಾವಿರ ಟನ್ನು ಗೋಧಿಗೆ ಈಗ ರೂಪಾಯಿ ಬೆಲೆ ಹೆಚ್ಚಿಸಿದ ಕಾರಣ ಹೆಚ್ಚಿಗೆ ಕೊಡಬೇಕಾಗಿದೆ. ಈ ಕಾರಣ ಗೋಧಿಯ ಬೆಲೆ ಇಳಿಸುವವರೆಗೆ ಅದನ್ನು ಕೊಳ್ಳುವಂತಿಲ್ಲ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[o]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ರಿಂದ ಪ್ರಾರಂಭಿಸಿ ಶೇ. 1½ ರೂ. ಬಡ್ಡಿ ಸೇವಿಂಗ್ಸ ಬ್ಯಾಂಕ್ 5 - ರಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು

ಸ್ಥಾಯಿ ಠೇವಣಿಗಳು **(Fixed Deposits)**:— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ್.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 46)47

14—11—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.		Subscription Rates.	
ವರ್ಷಕ್ಕೆ	5—0—0	One Year	5—0—0
6 ತಿಂಗಳಿಗೆ	3—0—0	Six months	3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.		Subscription will not be accepted for less than 6 months	

To

Sri...............................
....
....

Printed at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!
+
ಸಂಪಾದಕ ಮತ್ತು ಪ್ರಕಾಶಕ:
ಟಿ. ಬಿ. ಕೇಶವರಾವ್

ವರ್ಷ ೧೨ | ಸೋಮವಾರ ೨೧ ನವಂಬರ್ ೧೯೪೯ | ಸಂಚಿಕೆ ೪೩

ಪಂ. ಜವಾಹರಲಾಲ

ಲೇಖಕರು — ಶ್ರೀ ಜೆ. ಬಿ. ಕೃಪಲಾನಿ
[ಹಿಂದಿನ ಕಾಂಗ್ರೆಸ್ ಅಧ್ಯಕ್ಷ].

ಜವಾಹರಲಾಲರನ್ನು ಈಗ ಮೂವತ್ತು ವರ್ಷಗಳಿಂದ ನಾನು ಬಲ್ಲೆ. ನಮ್ಮ ಇತಿಹಾಸದ ಈ ಉತ್ಕ್ರಾಂತಿಕವೂ ಚರಿತ್ರಾರ್ಹವೂ ಆದ ಅವಧಿಯಲ್ಲಿ ಬಹುಕಾಲ ನಾನೂ ಅವರೂ ಸಮೀಪ ಸಹಕಾರದಿಂದ ಕೆಲಸ ಮಾಡಬೇಕಾಗಿತ್ತು. ಅವರು ಇಂದಿನ ಉಜ್ವಲ ಕೀರ್ತಿಶಿಖರಕ್ಕೇರುವುದನ್ನು ನಾನು ಮಗ್ನನಾಗಿ ನೋಡಿದ್ದೇನೆ. ಅವರ ರಾಜಕೀಯ ಜೀವನದ ಪ್ರಾರಂಭಾವಸ್ಥೆಯಲ್ಲಿ ನಾವಿಬ್ಬರೂ ಸಹಚರರಾಗಿದ್ದುದೇ ಬಹಳ. ಆನಂದಭವನದ ಆತಿಥ್ಯವನ್ನು ನಾನೆಷ್ಟೋ ಬಾರಿ ಅನುಭವಿಸಿದ್ದೇನೆ. ಆಗ ಅವರು ಕಾಂಗ್ರೆಸ್ಸಿಗರಲ್ಲಿ ತೀವ್ರಗಾಮಿಯೆಂದು ಪ್ರಸಿದ್ಧರಾಗಿದ್ದರೇ, ನಾನು ಬಾಪೂವಿನ ನೇತೃತ್ವವನ್ನು ನಿಸ್ಸಂದಿಗ್ಧವಾಗಿ ಒಪ್ಪುವವರಲ್ಲೊಬ್ಬನಾಗಿದ್ದರೂ ಸಂಪ್ರದಾಯವಾದಿಗಳ ವರ್ಗದಲ್ಲಿ ಪಾಖಂಡನೆಂದು ಹೆಸರಾಗಿದ್ದೆ. ಆದುದರಿಂದ ನಮ್ಮಿಬ್ಬರಲ್ಲಿ ಗೆಳೆತನ ಬೆಳೆಯಿತು. ಅವರ ಯೌವನದ ಹುರುಪನ್ನು ಅವರ ಬಿಚ್ಚುಹೃದಯದ ಮನೋಹರ ನಡವಳಿಯನ್ನು ಈಗ ಕಾಂಗ್ರೆಸ್ ಸ್ವಯಂಸೇವಕರೆಂದು ತಿರಸ್ಕಾರಪೂರ್ವಕವಾಗಿ ಕರೆಯಲ್ಪಡುತ್ತಿರುವ ಜನರೊಡನೆ ಅವರ ತಾದಾತ್ಮ್ಯವನ್ನು, ಜನಸಾಮಾನ್ಯರ ಬಗೆಗಿರುವ ಅವರ ಕನಿಕರವನ್ನು ನಾನು ಬಹಳ ಮೆಚ್ಚಿದೆ. ಅವರ ವರ್ಗಕ್ಕೆ ಸಹಜವಾದ ದರ್ಪದುರಹಂಕಾರಗಳನ್ನು ಮರೆತು ಜನರೊಡನೆ ಅವರು ಬೆರೆಯುತ್ತಿದ್ದ ಬಗೆಯೂ ನನಗೆ ಪ್ರಿಯವಾಯಿತು. ಕೆಲ ವಿಶಿಷ್ಟ ಪ್ರಶ್ನೆಗಳನ್ನು ಕುರಿತು ನಮ್ಮಲ್ಲಿ ತೀವ್ರ ಮತಭೇದವಿದ್ದರೂ ಬಾಪೂವಿನ ಮೇಲಿನ ನಿಷ್ಠೆ ನಮ್ಮನ್ನು ಒಂದಾಗಿ ಬಿಗಿದಿತ್ತು. ಇಂದಿಗೂ ನನ್ನಲ್ಲಿ ಅವರ ಬಗ್ಗೆ ಅದೇ ಹಳೆಯ ಆದರವೇ ಇದೆ

ಕಾರ್ಯನಿಷ್ಠ, ದಯಾಳು

ಅವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಎರಡು ಬಾರಿ ನಾನು ಅದರ ಮುಖ್ಯ ಕಾರ್ಯದರ್ಶಿಯಾಗಿದ್ದೆ. ಅವರೊಡನೆ ಕೆಲಸ ಮಾಡುವುದೆಂದರೆ ಒಂದು ಆನಂದವಾಗಿತ್ತು. ಅವರು ಕ್ರಮವಾಗಿ, ಮನಃಪೂರ್ವಕವಾಗಿ, ಮೈಮರೆದು ದುಡಿಯುವವರು, ತುಂಬ ದಯಾಳುಗಳು. ನಾನು ಬಲ್ಲ, ಕಾಂಗ್ರೆಸ್ ಅಧ್ಯಕ್ಷರಲ್ಲೇ ಅ.ಭಾ. ಕಾರ್ಯಾಲಯದ ಕೆಲಸದಲ್ಲಿಯೂ

ಸಂಘಟನೆಯಲ್ಲಿಯೂ ಅವರಷ್ಟು ಆಸ್ಥೆ ವಹಿಸಿದ ಬೇರೊಬ್ಬರನ್ನು ಕಾಣೆ. ಅಲಹಾಬಾದಿನಲ್ಲಿದ್ದಾಗಲೆಲ್ಲ ಕಚೇರಿಗೆ ನಿತ್ಯವೂ ತಪ್ಪದೆ ಬಂದೇ ಬರುತ್ತಿದ್ದರು. ಆದರೂ ಕಚೇರಿಯ ದೈನಂದಿನ ಕಾರ್ಯಗಳಲ್ಲಾಗಲಿ ಶಿಸ್ತಿನಲ್ಲಾಗಲಿ ಅವರು ಅಕಾರಣವಾಗಿ ಕೈಹಾಕುತ್ತಿರಲಿಲ್ಲ. ಅವರು ತುಂಬ ಶೀಘ್ರಕೋಪಿಗಳೆಂದು ಜಗತ್ತಿಗೇ ಗೊತ್ತಿದೆ. ಆದರೂ ಅವರು ಅಷ್ಟೇ ಶೀಘ್ರವಾಗಿ ಪಶ್ಚಾತ್ತಾಪವನ್ನೂ ವ್ಯಕ್ತಗೊಳಿಸುವರೆಂದು ಅವರನ್ನು ಬಹುಕಾಲದಿಂದ ಬಲ್ಲವರೆಲ್ಲ ಚನ್ನಾಗಿ ಅರಿತಿದ್ದಾರೆ. ಅವರು ಉದಾರ ಪ್ರವೃತ್ತಿಯವರು, ನ್ಯಾಯಪ್ರಿಯರು. ತಮ್ಮದು ತಪ್ಪೆಂದು ಗೊತ್ತಾದಾಗ ಅವರು ಹಿರಿತನದಿಂದ ಅದನ್ನು ಒಪ್ಪಿಕೊಂಡು ತಡಮಾಡದೆ ಕ್ಷಮೆ ಬೇಡುವರು. ಅಂದಾಕ್ಷಣ ಅವರು ಅಂಥ ತಪ್ಪನ್ನು ಮತ್ತೊಮ್ಮೆ ಮಾಡುವದರಲ್ಲಿ ಅವರ ಆವೇಶ ಬೇರೆ. ತಮ್ಮ ಸ್ವಂತದ ಸಿಡಿಮಿಡಿಗಳನ್ನು ಕುರಿತು ಅವರು ನಿಶ್ಶಂಕೆಯಿಂದ ಪರಿತಾಪವನ್ನು ವ್ಯಕ್ತಗೊಳಿಸುವರಾದರೂ ರಾಜಕೀಯ ವಿವೇಕದಲ್ಲಿ ತಾವು ಎಡವಿದುದನ್ನು ಒಪ್ಪಿಕೊಳ್ಳುವುದು ಮಾತ್ರ ವಿರಳ. ತಮ್ಮ ಮಾನವರಗುಣಗಳ ಬಗ್ಗೆ ಇದ್ದಷ್ಟು ಆತ್ಮವಿಶ್ವಾಸ ತಮ್ಮ ರಾಜಕೀಯ ಪ್ರಾವೀಣ್ಯದ ಬಗ್ಗೆ ಅವರಲ್ಲಿಲ್ಲದಿರುವುದೇ ಇದಕ್ಕೆ ಕಾರಣವೋ ಏನೋ. ತಮ್ಮ ರಾಜಕೀಯ ಪ್ರಮಾದಗಳನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲದೆ ಅವು ಹಿಮಾಲಯದಂಥ ತಪ್ಪುಗಳೆಂದು ಎತ್ತಿತೋರಿಸುತ್ತಿದ್ದ ಬಾಪೂವಿಗೂ ಇವರಿಗೂ ಇದೇ ದೊಡ್ಡ ಅಂತರ. ಅವರಲ್ಲಿ ರಾಜಕೀಯ ಗುಣಕ್ಕಿಂತಲೂ ಶ್ರೇಷ್ಠವಾದ ಮಾನವ ಗುಣಗಳಿರುವುದು ಪ್ರಶಂಸನೀಯವೇ ಸರಿ. ಬಾಪೂವಿನಲ್ಲಿದ್ದಂತೆ ಮಾನವನ ಸೌಜನ್ಯದಷ್ಟೇ ರಾಜಕೀಯ ಶ್ರೇಷ್ಠತೆ ಜವಾಹಿರರಲ್ಲಿದ್ದಿದ್ದರೆ ಇನ್ನೆಷ್ಟು ಚನ್ನಾಗಿರುತ್ತಿತ್ತು, ಅಷ್ಟೇ.

ಸೆರೆಮನೆಯಲ್ಲಿ

ಮೂರು ವರ್ಷ ಕಾಲ ನಮ್ಮಿಬ್ಬರನ್ನೂ ಒಟ್ಟಾಗಿ ಅಹಮ್ಮದನಗರದ ಕೋಟೆಯಲ್ಲಿ ಬಂಧಿಸಿಟ್ಟಿದ್ದರು. ಜವಾಹರರಂಥ ಸದಾ ಚೈತನ್ಯಯುಕ್ತರೂ ಕಾರ್ಯಕರ್ತರೂ ರಾಜಕೀಯ ಕೋಲಾಹಲದಲ್ಲಿ ಪಳಗಿದ

ನೆಸಂ ಆದ ಮನುಷ್ಯ ಬಂಧನ ಕಾಲದಲ್ಲಿ ಸಿಡುಕನೂ ವಿಷಣ್ಣನೂ ಆಗಬಹುದೆಂದು ಯಾರಾದರೂ ಬಗೆಯಬಹುದು ಆದರೆ ಜವಾಹಿರಲಾಲರು ಈ ಹೊಸ ಅನರ [illegible] ಬೇಗನೆ ಹೊಂದಿಕೊಂಡು ಬಿಟ್ಟರು. ವಸ್ತುತಃ ಅಕೋಟೆಯ ನಿರ್ದಿಷ್ಟ [illegible]ಗಳ ಮಬ್ಬನ್ನು [illegible]ಸಿ ಅವರಿಗೊಂದು ಹೊಸ ಬೆಳಕನ್ನೇ ಅವರು ನೀಡಿದರೆಂದು ಹೇಳಬಹುದು, ನಮ್ಮ ಗುಂಪಿಗೆ ಅವರು ಆತ್ಮಪ್ರಾಯರಾಗಿದ್ದರು. ದೈಹಿಕ ನಕ್ತಿ [illegible] ಅವರು ತಮ್ಮ ಸಮಯವನ್ನು ಪ್ರಯೋಜನಕರವಾಗಿ ಉಪಯೋಗಿಸಿಕೊಂಡರು. ಅವರ ಅಗಾಧ ಕೌತುಕಗಳೂ [illegible]ನ್ನೂ ನಮ್ಮ ಒತ್ತಾಯದ ಸಮಷ್ಟಿ ಜೀವನಕ್ಕೆ ಒಂದು ಬಲವನ್ನೂ ರಮಣೀಯತೆಯನ್ನೂ ಒದಗಿಸಿಕೊಟ್ಟವು. ಅವರಿಗೆ ಓದುವ ಹುಚ್ಚು ಹೆಚ್ಚು. ಆದರೂ ನಮ್ಮ ಸೆರೆ ಜೀವನದ ಎಲ್ಲ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಲು ಅವರು ಬೇಗನೇ ವೇಳೆ ದೊರಕಿಸಿಕೊಳ್ಳುತ್ತಿದ್ದರು. ತೋಟಗಾರಿಕೆಯಲ್ಲಿ ಅವರಿಗೆ ಹಿರಿದಾದ ಆಸಕ್ತಿ. ತಮ್ಮ ಪಾಕಶಾಸ್ತ್ರ ಪ್ರಾವೀಣ್ಯದ ಅಂದರೆ ಮುಖ್ಯವಾಗಿ ತತ್ತಿಯನ್ನು ಕರಿಯುವ ಬಗ್ಗೆ ಅವರು ತುಂಬ ಅಭಿಮಾನಪಡುತ್ತಿದ್ದರು. ಅವರು ಸಸ್ಯ[illegible] ವೈಚಿತ್ರ್ಯದಲ್ಲಿ ಧೀರ. ಅವರು ಹುಡುಗನಂತೆ ನಗಬಲ್ಲರು, ಮತ್ತು ವಿನೋದವನ್ನು ಅದು ಅವರನ್ನೇ ಕುರಿತಾಗಿದ್ದರೂ ಸವಿಯಬಲ್ಲರು. ನವ [illegible] ಜನರ ಕೋಪಕ್ಕೆ ಅವರು [illegible]ಕಿನವರಂತೆ [illegible] ಒಳಗಿಂದೊಳಗೆ ಅವರು ಸಹಜ ಶೀಲರು, ಮಿತಿಮೀರಿ ನಹನಶೀಲರೆಂದರೂ ತಪ್ಪಾಗದು. [illegible] ಮಾತಿನಲ್ಲಿ [illegible] ಬಂದ ತತ್ವಸಿದ್ಧಾಂತಗಳ [illegible] ತುಂಬಿಕೊಂಡಿದ್ದರೂ ಅದು ಅಂತರಿಕ ಪರಮತ ಸಹಿಷ್ಣುತೆಯ ಹೊರಚಿಪ್ಪು ಮಾತ್ರ; ಪದೇಪದೇ ಉಗಿಯುವ ಅವರ ಸಿಡುನುಡಿಗಳೂ ದರ್ಪವಾಕ್ಯಗಳೂ ವ್ಯ[illegible]ಮವಾದ, ದೌರ್ಬಲ್ಯಕ್ಕೆ [illegible]ಹುದಾದ, ಒಳತಿರುಳನ್ನು ರಕ್ಷಿಸುವ ಕವಚಗಳವು. ಅಗರ್ಭ ಶ್ರೀಮಂತರಾಗಿ ಜನಿಸಿದ ಅವರಲ್ಲಿ ಗರ್ವವಿಲ್ಲದಿದ್ದುದೆ ಆಚೇ ಆಶ್ಚರ್ಯದ ಸಂಗತಿಯೆನಿಸುತ್ತಿತ್ತು. ನೆಹ್ರೂ ಅವರಂಥ ಮಹಾವ್ಯಕ್ತಿಗೆ ಇನ್ನು ಬೇರೇನಿದೆ?

ಸ್ಪಂದ ಚರಿತ್ರ

ಮೂವತ್ತು ವರ್ಷಗಳ ಹಿಂದೆಯೂ ಅವರು ಹೆಚ್ಚು ಕಡಿಮೆ ಇಂದಿನಂತೆಯೇ ಇದ್ದರು--ಅವರ ನಡತೆ ಮೋಹಕವಾಗಿದ್ದರೂ ಸಹಜ, ಪ್ರಜಾತಂತ್ರ [illegible]ವಾಗಿದ್ದರೂ ಸ್ವಚ್ಛಂದವರ್ತಿ, ನಿರ್ದಿಷ್ಟವಾದರೂ ಆತ್ಮೀಯ, ವಾದದಲ್ಲಿ ನಿಷ್ಠುರವಾದರೂ ಕೃತಿಯಲ್ಲಿ ಸಿಸಿತ ಅವರ ಮನಸ್ಸು ತುಂಬ ಸುಗ್ರಾಹಿಯಾಗಿತ್ತು. ಹೊಸ ಕಲ್ಪನೆಗಳೂ ಶಬ್ದಜಾಲವೂ ಅವರನ್ನು ಸುಲಭವಾಗಿ ಮೋಹಿಸಿಬಿಡುತ್ತಿದ್ದವು.

ಆ ಕಾಲದಲ್ಲಿ ಎರಡು ಪ್ರಭಾವಗಳು ಉಚ್ಛ್ರಾಯದಲ್ಲಿದ್ದವು--ಯುರೋಪಿನಲ್ಲಿ ಸಾಮ್ಯವಾದ ಮತ್ತು ಭಾರತದಲ್ಲಿ ಗಾಂಧಿ. ಸಹಜವಾಗಿಯೇ ಅವರು ಎರಡೂ ಪ್ರಭಾವಗಳಿಗೆ ಮಾರುಹೋದರು ಸಿದ್ಧಾಂತದಲ್ಲಿ ಸಾಮ್ಯವಾದಕ್ಕೆ, ಆಚರಣೆಯಲ್ಲಿ ಗಾಂಧಿಗೆ. [illegible] ಹೊಂದಾಣಿಕೆಯ [illegible]ದವು, ಎರಡೂ ವ್ಯಕ್ತಿತ್ವ ಪೂರ್ಣವಾದವು. ಎರಡನ್ನೂ ನವ ಸ್ವರೂಪದ [illegible]ದು [illegible] ಈ [illegible] ಅವರ [illegible] ಸಲ್ಲ ಅವರ [illegible] ಸಮ ವರ್ಗವಿಲ್ಲ. ಅವರ ಬುದ್ಧಿಯ [illegible] ತ್ತ [illegible] ಮತ್ತು ಬುದ್ಧಿಯನ್ನು [illegible] ಅನೇಕ [illegible] ಪೂರ್ವದ [illegible] ವರ್ಗಗಳ ಜನರಿಗೆ ಪ್ರಿಯವಾಗುತ್ತದೆ; ಇನ್ನೊಂದೆಡೆ ನಾ[illegible] ಬುದ್ಧಿಯನ್ನು [illegible]ವಾಗಿ ಮಾಡಿ [illegible] ಕ[illegible]ಶಕ್ತಿಗೆ ಜಗ್ಗುತ್ತದೆ. [illegible] ಅವರನ್ನು [illegible] ಜಗವಲ್ಲ.

ಅವರ [illegible] ಗೆಳೆತನಕ್ಕೆ ನಕ್ಕ [illegible] ಪ್ರಜಾತಂತ್ರಗಳಲ್ಲಿ [illegible] ಅವರು [illegible] ಇಲ್ಲ. ಅವರು [illegible] ಮಾ[illegible]ವೂ ಇಲ್ಲ, ನಂಬಿಕೆ [illegible] ಕೊಡುವುದೂ ಇಲ್ಲ. ದುರ್ಬಲತನದಿಂದ ಅವರಲ್ಲಿ [illegible] ಯೋಗ್ಯತಾ ನಿರ್ಣಯ [illegible] ಕಡಿಮೆಯಾಗಿರುವುದರಿಂದ ಅವರು [illegible] ರನ್ನು [illegible] ಸಿಕೊಳ್ಳಲಿಲ್ಲ. [illegible] ವಾಗಿ ಅವರು [illegible]ಕ್ಕೆ ಈಡಾಗುತ್ತಾರೆ. ಅವರು [illegible] ಮನ[illegible]; [illegible] ಪ್ರತಿಸ್ಪರ್ಧಿಯಾದ [illegible] ತೂ ತಿರಿಯ ಹೋಯಿತು. ಬಾಪು ಕೂಡ [illegible] ಬಾಪು [illegible] ಇಂಗಿತವನ್ನು ತತ್‌ಕ್ಷಣ ಕಂಡುಹಿಡಿಯ ಬಲ್ಲವರಾಗಿದ್ದಾರೆ, ಜವಾಹರರು ಹಾಗಿಲ್ಲ. ಬಾಹ್ಯಾಡಂಬರಕ್ಕೂ ಬೌದ್ಧಿಕ [illegible] ತ್ಕಾರಕ್ಕೂ ಅವು [illegible] ಸುಲಭವಾಗಿದ್ದರೂ--ಅವರು [illegible] ಹೋಗುತ್ತಾರೆ. ಅನೇಕ [illegible] ಬೀರುವ ಕಲೆಯಲ್ಲಿ [illegible] ಅವರೇ ಥಳಕಿಗೆ ಮರುಳಾಗುವುದೀಗ ವಿದ್ಧ. ಅಮೇರಿಕೆಯ "ಟೈಮ್" ಪತ್ರಿಕೆಯಲ್ಲಿ ಬಂದ ಅವರ ವ್ಯಕ್ತಿ ಚಿತ್ರಣದಲ್ಲಿ ಈ ಕೆಳಗಿನ ಮಾತುಗಳನ್ನು ನೋಡಿ ನಾನು ಕೌತುಕಪಟ್ಟೆ "ಅವರ ಈಗಿನ ಆಪ್ತ ಮಿತ್ರರು ದಿಲ್ಲಿಯ ವಿದೇಶೀ ವಸತಿಗಳಲ್ಲಿರುವವರು.... ಉಚ್ಚಸರಕಾರಿ ವರ್ಗಗಳಲ್ಲಿ, ಬ್ರಿಟಿಶ ವಿಶ್ವವಿದ್ಯಾಲಯಗಳ ಪದವಿಗಳಿಗೆ ಬ್ರಿಟಿಶರ [illegible] ಕಾಲದಲ್ಲಿದ್ದ ದರ್ಶನಕ್ಕಿಂತಲೂ ಇಂದು ಹೆಚ್ಚು ಬೆಲೆಯುಂಟು" ಇದು ನನಗರಿಯದ [illegible] ಏಕೆಂದರೆ ಜವಾಹರರು [illegible] ಸತ್ತಿರುವುದೇ ಕಡಿಮೆ. ನನಗೆ ಅವರನ್ನು ಭೆಟ್ಟಿಯಾಗುವ [illegible] ದೊರೆಯುವುದು ಅಪೂರ್ವ"

ಸರ್ವಪ್ರಿಯ

ಅವರು [illegible] ದಲ್ಲಿ ಇದು ಅನಿವಾರ್ಯವೇ ಆಗಿತ್ತು. ಜನತೆಗೆ ಅವರಲ್ಲಿ ನಂಬಿಕೆಯಿತ್ತು. ಬಾಪುವಿಗೂ ಅವರಲ್ಲಿ ಪ್ರೀತಿ ವಿಶ್ವಾಸಗಳಿದ್ದವು. ಅವರ ಪ್ರಸಿದ್ಧಿ ವಿದೇಶಗಳಲ್ಲಿ ಕೂಡ ಹಬ್ಬಿದೆ, ಅಲ್ಲಿಯೂ ಅವರು ಗೌರವಿತರಾಗಿದ್ದಾರೆ. ಇದೇ ಈಗ ಸ್ವಾತಂತ್ರ್ಯ ಸಂಪಾದಿಸಿರುವ ಭಾರತೀಯರು ನಾವು [illegible]ರ ಅವರಿಗೆ ನವ [illegible] ಪಾತ್ರರಾದರೆ ಹೆಮ್ಮೆಪಡುತ್ತೇನೆ.

ಅಪ್ಪಿ [illegible] ಅವರು ಜಾತ್ಯತೀತ ಮನೋವೃತ್ತಿಯನ್ನು ನೋಡಿ ಅವರಲ್ಲಿ ವಿಶ್ವಾಸವಿಡುತ್ತಾರೆ. ಬ್ರಿಟಿಶರು ತಮ್ಮ ಸಂಸ್ಥೆಯಿಂದ ಪ್ರಥಮಹಿತರಾದ ಅವರಲ್ಲಿ [illegible]ವನ್ನು ತೋರುತ್ತಾರೆ; ಸಾಮ್ಯವಾದಿಗಳು ಇವರನ್ನು ತಮ್ಮಲ್ಲೇ ಒಬ್ಬನೆಂದು ಬಗೆಯುತ್ತಾರೆ; [illegible] ಅವರ ಗದ್ದರಣೆಯು [illegible] ಇದೆ. ಹೀಗೆ ಅವರನ್ನು [illegible] ಎಲ್ಲ ಪರಸ್ಪರ ವಿರೋಧ ಹಿತಸಂಬಂಧಗಳು ಸಮಾಧಾನ ಹೊಂದಿವೆ. ಆದರೆ ಅವರು ನಮ್ಮ ಮುಖ್ಯ ಮಂತ್ರಿಗಳಾದುದಕ್ಕೆ ನಾನೆಷ್ಟು ಸಂತೋಷಪಟ್ಟರೂ ನನಗೆ ಅವರನ್ನು ಕಂಡು ನಿಜವಾಗಿ ಕನಿಕರವಾಗುತ್ತದೆ. ಏಕೆಂದರೆ ಅವರ ಮುಂದಿರುವ ಅಪ್ರತಿಮವಾದಂಥ [illegible] ನಿರ್ಣಯ ನೀತಿಗಳಲ್ಲಿದ್ದರೂ ನಿಷ್ಠುರ ಚಿತ್ತವೂ ಉಕ್ಕಿನ ಮನೋದಾರ್ಢ್ಯವೂ ಬೇಕೇ ಬೇಕು ಅನೇಕ ವರ್ಷಗಳ ಹಿಂದೆ ಅವರೇ "ಮಾಡರ್ನ್ ರಿವ್ಯೂ" ಪತ್ರಿಕೆಯಲ್ಲಿ ಗುಪ್ತನಾಮದಿಂದ ಸ್ವಚರಿತ್ರವನ್ನು ಚಿತ್ರಿಸುತ್ತ ಬರೆದಿದ್ದರು: '[illegible] ಸಾಧನೆಯಲ್ಲಿ ಅವರಿಗಿರುವ ಪ್ರಚಂಡ ಛಲ [illegible] ಕಟ್ಟುವ [illegible] ಮಂದಗತಿಯನ್ನು ಸಹಿಸುವುದು ಕಷ್ಟ. ಪ್ರಜಾತಂತ್ರದ ಬಾಹ್ಯ[illegible]ವನ್ನು ಹಾಗೆಯೇ ಇರಗೊಟ್ಟರೂ ಅದನ್ನು ತಪ್ಪಿಸೈನಿಕ ಅವರು ಎಗ್ಗಿಲ್ಲದೆ [illegible]ಬಲ್ಲವರು' ತಮ್ಮ ಚರಿತ್ರ ವಿಶ್ಲೇಷಣದಲ್ಲಿ ತಾವೇ ಬರೆದಂತೆ ಅವರಿಂದು ನಡೆದಿದ್ದರೆ! ಅವರಿಗೆ ಹಿಂದೆ ಅಪ್ರಿಯವಾದುದರಲ್ಲಾಗಲಿ ಇಂದು ಅಪ್ರಿಯವಾಗಿರುವುದಲ್ಲಾಗಲಿ ಯಾವುದನ್ನು ಕಿತ್ತೊಗೆಯಲು ಅವರಿಂದಾಗಿಲ್ಲ.

ಕೃಷಿಕರ ಜೀವನ

ಶ್ರೀ ಎಂ. ಗೋವಿಂದರಾವ್ ಎಂ.ಎ., ಬಿ.ಓ.ಎಲ್. ಮದ್ರಾಸು ವಿಶ್ವವಿದ್ಯಾಲಯ.

" ಎದ್ದೊಂದು ಗಳಿಗೇಲಿ ಯಾರ್‍ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೊಳೆ—ಭೂಮಿತಾಯ
ಎದ್ದೊಂದು ಗಳಿಗೇಲಿ ನೆನೆದೇನ. "

ಮಂಗಳಕರವಾದ ಸುಪ್ರಭಾತ; ತಂಗಾಳಿಯು ಎತ್ತೆತ್ತಲೂ ಸುಳಿಯುತ್ತಿದೆ. ಪೂರ್ವದಿಗಂತವು ಕೆಂಬಣ್ಣದಿಂದ ಶೋಭಿಸುತ್ತಲಿದೆ. ಎಲೆಗಳ ಮರೆಯಲ್ಲಿ ಮುದುಗಿಕೊಂಡಿರುವ ಹಕ್ಕಿಗಳು ರೆಕ್ಕೆಗಳನ್ನು ಬಡಿಯುತ್ತ ಮಂಜುಳ ನಿನಾದವನ್ನು ಗೈಯುತ್ತಿವೆ. ಅವುಗಳ ಸುಸ್ವರವನ್ನು ಕೇಳಿ ಎಚ್ಚರಗೊಂಡ ಹಳ್ಳಿಯ ರೈತರು ಕಣ್ಣುಜ್ಜಿಕೊಂಡು, ದೇವರ ಸ್ತೋತ್ರವನ್ನು ಮಾಡಲು ತೊಡಗಿದ್ದಾರೆ. ಪ್ರಕೃತಿಯ ಶೋಭೆಯನ್ನು ಕಂಡು ಅವರು ಉತ್ಸಾಹಭರಿತರಾಗಿದ್ದಾರೆ. ಹಕ್ಕಿಗಳ ಇಂಪಾದ ಗಾಯನದೊಂದಿಗೆ ತಮ್ಮ ಮಧುರವಾದ ಕಂಠಧ್ವನಿಯನ್ನು ಕೂಡಿ ಹಾಡ ತೊಡಗಿದ್ದಾರೆ. ಸಾಮಾನ್ಯವಾಗಿ ಪ್ರತಿಯೊಂದು ಹಳ್ಳಿಗೂ ಒಬ್ಬ ದೇವರಿದ್ದಾನೆ. ಆ ದೇವರ ನಾಮಸ್ಮರಣೆಯನ್ನು ಮಾಡುವ ರೈತರು ತಮಗೆ ಆಹಾರವನ್ನು ಕೊಟ್ಟು ಕಾಪಾಡಿದ ಭೂಮಿತಾಯಿಯನ್ನು ಮರೆಯುವದಿಲ್ಲ. ನಮ್ಮ ರೈತರಿಗೆ ಎಲ್ಲ ದೇವರಿಗಿಂತ ಭೂಮಿ ತಾಯಿಯೇ ಹೆಚ್ಚು. ಅವರು ಬಿತ್ತುವಾಗ, ಬೆಳೆಯುವಾಗ ದೇವರನ್ನು ಕಾಣುವರು. ಪ್ರಾರ್ಥನೆಯನ್ನು ಮುಗಿಸಿಕೊಂಡು, ತಮ್ಮ ಪಾಲಿಗೆ ಒಂದ ಅಂಬಲಿಯನ್ನು ಕುಡಿದು, ಶ್ರಮಸಾಧ್ಯವಾದ ಕೆಲಸಗಳಿಗೆ ಅವರು ಸಿದ್ಧರಾಗುತ್ತಾರೆ. ಬೆಳಗ್ಗೆ ಎದ್ದು ಹೊಲಗದ್ದೆಗಳಿಗೆ ಹೋದರೆ ಸಾಮಾನ್ಯವಾಗಿ ಸಂಜೆಯವರೆಗೂ ಅವರು ಮನೆಗೆ ಹಿಂತಿರುಗುವುದಿಲ್ಲ. ಅಲ್ಲಿಯೇ ಅವರ ಊಟ; ಅಲ್ಲಿಯೇ ಅವರ ವಿಶ್ರಾಂತಿ. ಭೂಮಿಯೇ ಅವರ ದೇವರು; ಅದೇ ಅವರ ಸರ್ವಸ್ವ. ಭೂಮಿತಾಯಿಯನ್ನು ನಂಬಿದರೆ ಕೇಡಿಲ್ಲವೆಂಬುದು ಅವರ ದೃಢವಾದ ನಂಬಿಕೆ. ಭಗವಂತನಲ್ಲಿ ಭಕ್ತಿ ವಿಶ್ವಾಸಗಳನ್ನಿಟ್ಟು ಅವರು ದುಡಿಯುವರು. ಬೆಳೆಯು ಅಧಿಕವಾದರೆ ದೇವರು ಕೊಟ್ಟನೆಂದು ಸಂತೋಷ ಪಡುವರು. ಬೆಳೆ ಕಡಿಮೆಯಾದರೆ ತಲೆಯಮೇಲೆ ಕೈಯಿಟ್ಟು ಮಾತ್ರ ಅವರು ಕುಳಿತುಕೊಳ್ಳುವುದಿಲ್ಲ. ಅವರು ಆಶಾವಾದಿಗಳು. ಹೊಟ್ಟೆಗಿಲ್ಲದೆ ಮೂರುದಿನ ಉಪವಾಸ ಬಿದ್ದರೂ ನಿರಾಶೆಯಿಂದ ಅವರು ಜೋಲು ಮುಖ ಹಾಕುವದಿಲ್ಲ. ಎಂತಹ ಕಠಿಣವಾದ ಮತ್ತು ನಿಕೃಷ್ಟವಾದ ಕೆಲಸವನ್ನು ಮಾಡುತ್ತಿದ್ದರೂ ಅವರು ಉತ್ಸಾಹದಿಂದ ಹಾಡುತ್ತ ಕಾಲಯಾಪನೆ ಮಾಡುವರು. ಕಷ್ಟಜೀವಿಗಳಾದರೂ ಅವರ ಜೀವನದಲ್ಲಿ ಆನಂದವಿದೆ; ತೃಪ್ತಿ ಇದೆ. ಫಲಾಪೇಕ್ಷೆಯಿಲ್ಲದೆ ಅವರು ದುಡಿಯುತ್ತಿರುವರು. ತಾವು ಪಡೆದುದನ್ನು ಇತರರಿಗೂ ಹಂಚಿ ಅನುಭವಿಸುವರು. ಅವರು ಕೇವಲ ಸ್ವಾರ್ಥಪರರಲ್ಲ, ಪರೋಪಕಾರ ಬುದ್ಧಿಯೂ ಅವರಲ್ಲಿದೆ. ತಮ್ಮ ಸುಖಜೀವನಕ್ಕೆ ನೆರವಾದವರನ್ನು ಅವರು ಎಂದೂ ಮರೆಯುವಂತಿಲ್ಲ. ಹಳ್ಳಿಯ ಐಗಳು ಜೋಯಿಸರು ಬಡಗಿ, ಅಕ್ಕಸಾಲಿಗ, ಮಡಿವಾಳ ಮತ್ತು ಕ್ಷೌರಿಕ ಇವರೆಲ್ಲ ರೈತರಿಗೆ ಒಂದಲ್ಲ ಒಂದು ವಿಧದಿಂದ ಸಹಾಯವನ್ನೀಯುವವರಾಗಿದ್ದಾರೆ. ಆದುದರಿಂದ ತಾವು ಬೆಳೆದುದರಲ್ಲಿ ಅವರಿಗೂ ಪಾಲನ್ನು ಕೊಟ್ಟು ರೈತರು ತಮ್ಮ ಕೃತಜ್ಞತೆ, ಸೌಹಾರ್ದತೆ, ಔದಾರ್ಯ ಮುಂತಾದ ಸುಗುಣಗಳನ್ನು ವ್ಯಕ್ತಪಡಿಸುವರು.

ಗ್ರಾಮೋದ್ಧಾರವೇ ದೇಶೋದ್ಧಾರ

ಹೀಗಿದ್ದರೂ ನಮ್ಮ ಕೃಷಿಕರ ಜೀವನದ ಮಟ್ಟ ಬಹಳ ಕೀಳು; ಅರೆಹೊಟ್ಟೆಗೆ ಅಥವಾ ಬೆತ್ತಲೆಯಾಗಿ ನಮ್ಮ ದೇಶದಲ್ಲಿರುವಷ್ಟು ಜನರು ಇನ್ನು ಯಾವ ನಾಗರಿಕ ದೇಶದಲ್ಲಿಯೂ ಇಲ್ಲ. 'ರೈತರ ವಾರ್ಷಿಕ ವರಮಾನ ಬಹಳ ಕಡಮೆ; ಅದರಿಂದ ಜೀವನ ಮಾಡುವುದು ಬಹುಕಷ್ಟ!' ಎಂಬ ಕೂಗು ಎಲ್ಲಾ ಕಡೆಗಳಿಂದಲೂ ಕೇಳುತ್ತಿದೆ. ನಮ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚು; ಹಳ್ಳಿಗಳೇ ನಮ್ಮ ದೇಶದ ಬೆನ್ನುಮೂಳೆಯಂತಿವೆಯೆಂದರೂ ತಪ್ಪಾಗದು. ಹಳ್ಳಿಯ ಜನರೆಲ್ಲ ಕೃಷಿಯಿಂದಲೇ ಜೀವಿಸತಕ್ಕವರು. ಆದುದರಿಂದ ನಮ್ಮ ದೇಶದ ಉನ್ನತಿಯಾಗಲೀ ಅವನತಿಯಾಗಲೀ ಹಳ್ಳಿಯ ಕೃಷಿಕರನ್ನು ಹೊಂದಿಕೊಂಡಿದೆ. ಅವರು ದುರ್ಭಿಕ್ಷವಿಲ್ಲದೆ, ಹೊಟ್ಟೆ ತುಂಬ ಉಂಡು ನೆಮ್ಮದಿಯಾಗಿದ್ದರೆ, ದೇಶದಲ್ಲಿ ಶಾಂತಿಯು ನೆಲೆಸುವದು; ಅವರು ಹೊಟ್ಟೆ ಬಟ್ಟೆಗೆ ಗತಿಯಿಲ್ಲದೆ ನಡೆಯುತ್ತಿದ್ದಾರೆ. ಒಂದಲ್ಲ ಒಂದು ದಿನ ದೇಶದಲ್ಲಿ ಕ್ರಾಂತಿಯುಂಟಾಗುವದರಲ್ಲಿ ಸಂದೇಹವಿಲ್ಲ. ಆದುದರಿಂದ ದೇಶೋದ್ಧಾರ ಮಾಡುವ ಹೊರೆಯನ್ನು ಹೊತ್ತ ಯಾವ ಸರಕಾರದವರೂ ರೈತರ ಸುಖಕಷ್ಟಗಳನ್ನು ಅಲಕ್ಷ್ಯ ಮಾಡುವಂತಿಲ್ಲ. ಗ್ರಾಮೋದ್ಧಾರವೇ ದೇಶೋದ್ಧಾರಕ್ಕೆ ಮೂಲವೆಂಬುದನ್ನು ಎಲ್ಲರೂ ಚೆನ್ನಾಗಿ ತಿಳಿದುಕೊಂಡು ಹಳ್ಳಿಗಳ ಉನ್ನತಿಗಾಗಿ ಪ್ರಯತ್ನ ಪಡುವುದು ಅವರ ಕರ್ತವ್ಯವಾಗಿದೆ.

ಆದರೆ ರೋಗವನ್ನರಿಯದೆ ಔಷಧವನ್ನು ಮಾಡುವುದು ಹೇಗೆ? ಹಳ್ಳಿಯ ಕೃಷಿಕರ ಜೀವನ ಕ್ರಮವನ್ನು ತಿಳಿಯದೆಯೇ ಅವರ ಉದ್ಧಾರಕ್ಕಾಗಿ ಪ್ರಯತ್ನಿಸುವದು ನೀರಿನ ಮೇಲೆ ಮಾಡಿದ ಹೋಮದಂತಾಗುವದು. ಅವರ ಕುಂದುಕೊರತೆಗಳನ್ನು ಚೆನ್ನಾಗಿ ತಿಳಿದುಕೊಂಡೇ ಅವುಗಳ ನಿವಾರಣೆಗೆ ಪ್ರಯತ್ನಿಸಬೇಕು. ಮಾನವನ ಜೀವನದಲ್ಲಿ ವಿದ್ಯಾಭ್ಯಾಸಕ್ಕೆ ಅತಿ ಮಹತ್ವದ ಸ್ಥಾನವಿದೆ. ಆದುದರಿಂದ ಹಳ್ಳಿಯವರಿಗೆ ಎಂತಹ ವಿದ್ಯಾಭ್ಯಾಸವು ದೊರಕುತ್ತದೆಂಬುದನ್ನು ನಾವು ಮೊಟ್ಟಮೊದಲು ವಿಚಾರ ಮಾಡಬೇಕಾಗಿದೆ. ಕೃಷಿಕರಲ್ಲಿ ಹೆಚ್ಚಿನ ಮಂದಿ ಬಡವರಾಗಿದ್ದಾರೆ. ಅವರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಿ, ತಕ್ಕ ವಿದ್ಯಾಭ್ಯಾಸವನ್ನು ಮಾಡಿಸುವುದಕ್ಕೆ ಅನುಕೂಲತೆಗಳಿಲ್ಲ. ಹೀಗಾಗಿ ಹಳ್ಳಿಯ ಹುಡುಗರು ನಿರಕ್ಷರಕುಕ್ಷಿಗಳಾಗುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಹೋಗಲಾಡಿಸುವದಕ್ಕಾಗಿ ಸರಕಾರದವರು ಹಳ್ಳಿಗಳಲ್ಲಿ ಶಾಲೆಗಳನ್ನು ಹೆಚ್ಚಿಸುತ್ತಿದ್ದಾರೆ. ಇಷ್ಟು ಮಾಡಿದರೆ ಮಾತ್ರ ಸಾಲದು. ವಿದ್ಯಾಭ್ಯಾಸದಲ್ಲಿ ಹಳ್ಳಿಯವರಿಗೆ ಅಭಿರುಚಿಯುಂಟಾಗುವಂತೆ ಮಾಡಬೇಕು. ಅವರು ಕಲಿತ ವಿದ್ಯೆಯಿಂದ ಅವರಿಗೆ ಏನಾದರೂ ಪ್ರಯೋಜನ ದೊರೆಯುವಂತೆಯೂ ಮಾಡಬೇಕು.

ಅಜ್ಜ ನೆಟ್ಟ ಆಲದ ಮರ

ಸಾಮಾನ್ಯವಾಗಿ ಹಳ್ಳಿಯವರು ತಮ್ಮ ಮಕ್ಕಳನ್ನು ವಿದ್ಯೆ ಕಲಿತು ಬುದ್ಧಿವಂತರಾಗುವುದಕ್ಕಾಗಿ ಶಾಲೆಗೆ ಕಳುಹಿಸುತ್ತಿಲ್ಲ. ಕೆಲವು ಮಕ್ಕಳು ಮನೆಯಲ್ಲಿ ಮಾಡುವ ಚೇಷ್ಟೆಯನ್ನು ತಾಳಲಾರದೆ ತಂದೆತಾಯಿಗಳು ಅವರನ್ನು ಶಾಲೆಗೆ ಅಟ್ಟುತ್ತಾರೆ. ಇನ್ನು ಕೆಲವು ಮಕ್ಕಳು ತಮಗೆ ಮನೆಯಲ್ಲಿ ಬೇರೇನು ಕೆಲಸವಿಲ್ಲದಿರುವಾಗ ಮಾತ್ರ ಶಾಲೆಗೆ ಬರುತ್ತಾರೆ. ತಂದೆತಾಯಿಗಳು ಅವರ ವಿದ್ಯಾಭ್ಯಾಸದ ವಿಚಾರವನ್ನು ತಲೆಗೆ ಹಚ್ಚಿಕೊಳ್ಳುವುದೇ ಇಲ್ಲ. ಮಕ್ಕಳು ಶಾಲೆಗೆ ಬಂದ ದಿವಸ ಬರುತ್ತಾರೆ; ಬಾರದಿದ್ದ ದಿವಸ ಇಲ್ಲ.

ಈ ವರ್ಷ ಬಂದರೆ ಮುಂದಿನ ವರ್ಷ ಬರುತ್ತಾರೆಂಬ ನಿಶ್ಚಯವೂ ಇಲ್ಲ. ಅವರು ಪಡೆದ ವಿದ್ಯೆಯಿಂದ ಏನಾದರೂ ಪ್ರಯೋಜನ ಹೊಂದಿದರೆ ಅವರಲ್ಲಿ ಸ್ವಾಭಾವಿಕವಾಗಿ ಹೆಚ್ಚು ವಿದ್ಯೆ ಪಡೆಯಬೇಕೆಂಬ ಕುತೂಹಲ ವುಂಟಾಗುವದು. ಕೃಷಿಕರಿಗೆ ಕೃಷಿಗೆ ಸಂಬಂಧಪಟ್ಟ ವಿದ್ಯೆಯನ್ನು ಹೆಚ್ಚಾಗಿ ಕಲಿಸುವುದರಿಂದ ಪ್ರಯೋಜನವುಂಟು. ನಮ್ಮ ಕೃಷಿಕರು 'ಅಜ್ಜ ನೆಟ್ಟ ಆಲದಮರ' ವೆಂಬಂತೆ ಹಳೆಯ ಸಂಪ್ರದಾಯಗಳನ್ನೇ ಬಲವಾಗಿ ಹಿಡಿದುಕೊಂಡಿರುತ್ತಾರೆ. ವಿಜ್ಞಾನ ಯುಗದ ಸೋಂಕು ಇನ್ನೂ ಹಳ್ಳಿಗಳ ಕಡೆಗೆ ಸುಳಿದಿಲ್ಲ. ಆದುದರಿಂದ ಯಾವ ತರದ ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಯಿಸಬೇಕು; ಯಾವ ತರದ ಬೀಜವನ್ನು ಬಿತ್ತಬೇಕು; ಯಾವ ಗೊಬ್ಬರವನ್ನು ಹಾಕಬೇಕು; ಭೂಮಿಯನ್ನು ಫಲವತ್ತಾಗಿ ಮಾಡುವುದಕ್ಕೆ ಹೇಗೆ ಉಳಬೇಕು; ಯಾವ ತರದ ನೇಗಿಲನ್ನು ಉಪಯೋಗಿಸಬೇಕು; ಹೆಚ್ಚು ಲಾಭ ಪಡೆಯಬೇಕಾದರೆ ಯಾವ ಪೈರನ್ನು ಬೆಳೆಸಬೇಕು- ಇತ್ಯಾದಿ ವಿಷಯಗಳನ್ನು ಕೃಷಿಕರು ತಿಳಿದುಕೊಳ್ಳುವುದು ಅಗತ್ಯ. ಇಷ್ಟು ಜ್ಞಾನವನ್ನು ಅವರು ಸಂಪಾದಿಸಿ ತದನುಸಾರವಾಗಿ ನಡೆದರೆ ಅವರ ಆರ್ಥಿಕ ಪರಿಸ್ಥಿತಿಯು ಸುಧಾರಿಸುವದರಲ್ಲಿ ಸಂದೇಹವಿಲ್ಲ. ಆದರೆ ಸಂದೇಹಗಳಲ್ಲಿ ಇಷ್ಟು ಜ್ಞಾನವನ್ನೂ ಪಡೆಯುವುದಕ್ಕೆ ಸಾಧ್ಯವೇ? ಸಾಧ್ಯವಾಗಲಾರದು. ಅವರು ಸಾಮಾನ್ಯ ತಿಳುವಳಿಕೆಯನ್ನು ಶಾಲೆಗಳಲ್ಲಿ ಸಂಪಾದಿಸಿದರೆ, ಕೃಷಿ ಇಲಾಖೆಯವರು ಈ ವಿಶೇಷ ಜ್ಞಾನವನ್ನು ಅವರಿಗೆ ಒದಗಿಸಿ ಕೊಡಬಹುದು.

ಅಧಿಕಾಹಾರ ಉತ್ಪತ್ತಿ

ದಿನೇದಿನೇ ಹೆಚ್ಚಾಗುತ್ತಿರುವ ಜನಸಂಖೆಗೆ ಬೇಕಾದ ಅಧಿಕ ಉತ್ಪತ್ತಿಯನ್ನು ಎರಡು ವಿಧಗಳಿಂದ ಪಡೆಯಬಹುದು. ಮೊದಲನೆಯದಾಗಿ ಈಗ ಸಾಗುವಳಿಯಲ್ಲಿರುವ ಭೂಮಿಯಿಂದಲೇ ಉತ್ಕೃಷ್ಟವಾದ ಕೃಷಿಕ್ರಮದಿಂದಲೂ ಉತ್ತಮವಾದ ಬೀಜಗಳ ಬಿತ್ತುವಿಕೆಯಿಂದಲೂ, ಒಳ್ಳೆಯ ಗೊಬ್ಬರದ ಉಪಯೋಗದಿಂದಲೂ ಪಡೆಯಬಹುದು. ಎರಡನೆಯದಾಗಿ ಹೊಸ ನೀರಾವರಿ ಯೋಜನೆಗಳ ಸಹಾಯದಿಂದ ಬೇರೆ ಭೂಮಿಯನ್ನು ಸಾಗುವಳಿಮಾಡುವುದಕ್ಕೆ ಸಿದ್ಧಗೊಳಿಸಬಹುದು. ನಮ್ಮ ಸರಕಾರದವರು ಈ ಎರಡು ತರದ ಪ್ರಯತ್ನದಿಂದ ಬರುವ 1951 ರೊಳಗಾಗಿ ಆಹಾರ ಪದಾರ್ಥಗಳ ಅಭಾವವನ್ನು ನಿವಾರಿಸಬೇಕೆಂದಿರುವರು. ಈ ಉದ್ಯಮದಲ್ಲಿ ನೆರವಾಗುವುದು ಪ್ರತಿಯೊಬ್ಬ ಕೃಷಿಕನ ಪವಿತ್ರ ಕರ್ತವ್ಯವಾಗಿದೆ.

ನಮ್ಮ ಕೃಷಿಕರ ಜೀವನದ ಮಟ್ಟವು ಏರಬೇಕಾದರೆ ಅದಕ್ಕೆ ತಕ್ಕ ಆರ್ಥಿಕ ಉತ್ಪತ್ತಿಯು ಬೇಕು. ಸುಖದ ಬಾಳಿಗೆ ಸಂಪತ್ತು ಅಗತ್ಯ. ಹೊಟ್ಟೆತುಂಬ ಆಹಾರ ದೊರೆಯದಿದ್ದರೆ ಜನರಿಗೆ ಹೇಗೆ ತಾನೆ ಗಟ್ಟಿಮುಟ್ಟಾದ ದೇಹವುಂಟಾದೀತು? ಅವರ ಬುದ್ಧಿಯು ಹೇಗೆ ತಾನೆ ಚುರುಕಾದೀತು? ಅವರಿಗೆ ಹೇಗೆ ತಾನೆ ಕೆಲಸಮಾಡುವ ಹುರುಪು ಹುಟ್ಟುವುದು? ಆದುದರಿಂದ ಆರ್ಥಿಕ ಸುಧಾರಣೆಯು ಮಾನವನ ಉನ್ನತಿಗೆ ಮೂಲ ಸಾಧನವೆಂಬುದನ್ನು ಮರೆಯಬಾರದು, ನಮ್ಮ ಕೃಷಿಕರು ಮುಖ್ಯವಾಗಿ ಕೃಷಿಯಿಂದಲೇ ಜೀವಿಸುವದಾದರೂ ಬೇರೆ ಕೈಗಾರಿಕೆಗಳನ್ನು ಅವರು ಕೈಕೊಳ್ಳುವುದಿಲ್ಲವೆಂದು ತಿಳಿಯಬಾರದು ಮಳೆಗಾಲದಲ್ಲಿ ಅವರಿಗೆ ಸ್ವಲ್ಪ ಬಿಡುವು ದೊರಕುತ್ತದೆ. ಆಸಮಯದಲ್ಲಿ ಅವರು ಬೇರೆಬೇರೆ ಗುಡಿ ಕೈಗಾರಿಕೆಗಳನ್ನು ಕೈಕೊಳ್ಳುವರು. ಹುರಿಹಗ್ಗ ಮಾಡುವುದು, ಚಾಪೆ ಹೆಣೆಯುವುದು, ನೂಲುವುದು, ಬಟ್ಟೆ ಮಾಡುವುದು ಮುಂತಾದ ಕೆಲಸಗಳನ್ನು ಹಳ್ಳಿಯವರು ಕೈಕೊಂಡು ತಮ್ಮ ಆರ್ಥಿಕ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳುವರು.

ಬಡತನಕ್ಕೆ ಕಾರಣ ಅಜ್ಞಾನ

ಹಳ್ಳಿಯವರ ಬಡತನಕ್ಕೆ ಅವರ ಅಜ್ಞಾನವೇ ಮುಖ್ಯ ಕಾರಣವೆನ್ನಬಹುದು. ರೈತರು ತಮ್ಮ ತಮ್ಮ ವಸ್ತುಗಳನ್ನು ಬಹಳ ಹೆಚ್ಚುಬೆಲೆಗೆ ತೆಗೆದುಕೊಳ್ಳುವರು. ಕೆಲವು ವೇಳೆ ಅವರು ಕೊಟ್ಟ ಸಾಮಾನನ್ನೇ ತಿರುಗಿ ಪಡೆಯಬೇಕಾದರೆ ಎರಡರಷ್ಟು ಬೆಲೆ ಕೊಡಬೇಕಾಗಿ ಬರುವುದು ಅವರಲ್ಲಿ ಬಂಡವಾಳವಿಲ್ಲದಿರುವುದೇ ಇದಕ್ಕೆ ಕಾರಣ.

ಭಾರತೀಯರೇ ಒಂದು ಕಾಲದಲ್ಲಿ ಸೊಬಗಿನಿಂದಲೂ ಸೊಂಪಿನಿಂದಲೂ ಸಂಪತ್ತಿನಿಂದಲೂ ಪೆಂಪುವಡೆದಿದ್ದರು. ನಮ್ಮೀ ಭಾರತ ಭೂಮಿಯು ಇಂದು ದುಃಖ ಯಾತನೆಗಳ ನೆಲೆವೀಡಾಗಿರುವುದು. ಸೊರಗಿ ಕೊರಗುತ್ತಿರುವ ಮಾತೆಯ ಮೊರೆಯನ್ನು ಕೇಳಿ ಆಕೆಯ ಉದ್ಧಾರಕ್ಕಾಗಿ ಪ್ರಯತ್ನಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಲ್ಲವೇ? ನಮ್ಮ ಭಾರತಮಾತೆಯು ತನ್ನ ಪೂರ್ವ ವೈಭವವನ್ನು ಮರಳಿ ಪಡೆಯಬೇಕಾದರೆ, ನಮ್ಮ ಹಳ್ಳಿಗಳ ಉದ್ಧಾರವಾಗಬೇಕು; ನಮ್ಮ ರೈತರ ವಾರ್ಷಿಕ ವರಮಾನವು ಹೆಚ್ಚಬೇಕು, ಸ್ವದೇಶೀ ಕೈಗಾರಿಕೆಗಳ ಪಾಲನೆ, ವ್ಯವಸಾಯಾಭಿವೃದ್ಧಿ, ವಿವೇಕಯುಕ್ತವಾದ ವಿದ್ಯಾಪ್ರಸಾರ, ಬಂಡವಾಳ ಒದಗಿಸಿ ಕೊಡುವಿಕೆ- ಇವೇಮುಂತಾದ ಉಪಾಯಗಳಿಂದ ರೈತರ ಬಡತನವನ್ನು ಹೋಗಲಾಡಿಸಬಹುದು.

ಹಳ್ಳಿಯ ಜನರ ಬಡತನಕ್ಕೆ ಇನ್ನು ಹಲವು ಕಾರಣಗಳಿವೆ ಅವರಲ್ಲಿ ರೂಢಿಯಾಗಿ ಬಂದಿರುವ ಕೆಲವು ದುರಭ್ಯಾಸಗಳು ಅವರ ಆರೋಗ್ಯವನ್ನು ಕೆಡಿಸಿ, ಅವರನ್ನು ಕಷ್ಟಕ್ಕೆ ಗುರಿಪಡಿಸುತ್ತವೆ. ಇವುಗಳನ್ನು ಎರಡು ವಿಧವಾಗಿ ವಿಂಗಡಿಸಬಹುದು. ಬೀಡಿ, ಚುಟ್ಟಾ, ಸಿಗರೇಟು, ತಂಬಾಕು ಮುಂತಾದುವುಗಳನ್ನು ಸೇವಿಸುವುದು ಮೊದಲನೆಯ ಗುಂಪಿಗೆ ಸೇರುತ್ತದೆ. ಈ ದೋಷವು ತಂದೆಯಿಂದ ಮಗನಿಗೆ ಪರಂಪರೆಯಾಗಿ ಬರುತ್ತದೆ. ಎರಡನೆಯ ತರದ ದೋಷವು ತಿಳುವಳಿಕೆಯಿಲ್ಲದೆ ಸಹವಾಸ ಗುಣದಿಂದ ಬೆನ್ನಟ್ಟಿ ಬಂದುದು ಜೂಜು, ವ್ಯಭಿಚಾರ, ದುಂದುಗಾರಿಕೆ, ಮುಂತಾದುವು ಈ ಎರಡನೆಯ ಗುಂಪಿಗೆ ಸೇರುತ್ತವೆ. ಈ ದೋಷಗಳು ಹಳ್ಳಿಗಳಲ್ಲಿ ಮಾತ್ರವೇ ಅಲ್ಲ, ಪಟ್ಟಣಗಳಲ್ಲೂ ನಾಯಿ ಕೊಡೆಯಂತೆ ಹಬ್ಬಿರುವುವು. ಇವುಗಳಿಂದ ಹೃದಯ ದುರ್ಬಲವಾಗುವುದು. ಮಾನಸಿಕ ಶಕ್ತಿ ಕುಗ್ಗುವುದು; ಕೆಮ್ಮು ಮತ್ತು ಕಫ ವೃದ್ಧಿಯಾಗುವುದು; ಹಣ ನಾಶವಾಗುವುದು. ಇವು ಕಡಿಮೆಯಾಗದ ಹೊರತು ಜನರ ಆರೋಗ್ಯ ಉತ್ತಮವಾಗುವುದಿಲ್ಲ. ಹಳ್ಳಿಗಳಲ್ಲಿ ತೋರಿ ಬರುವ ಇನ್ನೊಂದು ಮುಖ್ಯವಿಷಯವೇನೆಂದರೆ ಜನರು ಸಣ್ಣ ಸಣ್ಣ ಜಗಳಗಳಿಗಾದರೂ ಕೋರ್ಟು, ಕಚೇರಿಗಳನ್ನು ಹತ್ತಿ ಮನೆ ಹಾಳು ಮಾಡಿಕೊಳ್ಳುವರು. ಈ ಅವಿವೇಕ, ಅನಾಚಾರ, ಅನ್ಯಾಯ, ಅನಾದರಣೆ ಮುಂತಾದುವು ತೊಲಗಿ ಹೋಗಬೇಕಾದರೆ ಅವರಿಗೆ ಯೋಗ್ಯ ವಿದ್ಯಾಭ್ಯಾಸ ದೊರೆಯಬೇಕು.

ನಮ್ಮ ರೈತರಲ್ಲಿ ಕಂಡುಬರುವ ಗುಣದೋಷಗಳನ್ನು ಸ್ವಲ್ಪಮಟ್ಟಿಗೆ ತಿಳಿದುದೂ ಇನ್ನೂ ಹೆಚ್ಚಿನ ವಿಷಯಗಳನ್ನು ತಿಳಿಯಬೇಕಾದರೆ ಹಳ್ಳಿಯ ಸಾಹಿತ್ಯವನ್ನು ಪರಿಶೀಲಿಸಬೇಕು. ಅಲ್ಲಿ ಅವರು ನಮಗೆ ಹೇಳಬೇಕಾಗಿರುವುದನ್ನು ಸ್ಪಷ್ಟವಾಗಿ, ಸುಲಭವಾಗಿ, ನೀತಿಮಾರ್ಗಯುತವಾಗಿ ಹೇಳಿರುತ್ತಾರೆ. ಜೀವನ ಕಷ್ಟನಷ್ಟಗಳನ್ನು, ರಾಗದ್ವೇಷಗಳನ್ನು, ಸುಖದುಃಖಗಳನ್ನು, ನಯಭಯಗಳನ್ನು ನೇರವಾಗಿ, ಸರಳವಾಗಿ, ಕೊಂಕು, ಅತಿಶಯೋಕ್ತಿ ಯಾವುದೂ ಇಲ್ಲದೆ ಹಾಡಿರುತ್ತಾರೆ. ಅವರ ಸಂಸ್ಕೃತಿಯ ತಿರುಳು ಅವರ ಹಾಡುಗಳಲ್ಲಿ ಅಡಗಿರುತ್ತದೆ. ಅವುಗಳಲ್ಲಿ ಅನುಭವದ ಮಾತುಗಳು ತುಂಬಿವೆ ಅವರು ಹೇಳಿರುವ ಮಾತುಗಳು ಇಂದಿಗೂ ಗಾದೆಗಳಾಗಿ ಎಲ್ಲ ಕಾಲಕ್ಕೂ, ಎಲ್ಲ ಸ್ಥಳಕ್ಕೂ ಅನ್ವಯವಾಗುವಂತಿವೆ. ಆ ಗಾದೆಗಳಲ್ಲಿ ಹೆಚ್ಚಿನವುಗಳು ಅವರ ಜೀವನಕ್ಕೆ ಸಂಬಂಧಪಟ್ಟವುಗಳು, 'ಕೈ ಕೆಸರಾದರೆ ಬಾಯಿ ಮೊಸರು'; 'ಕಡಹುಟ್ಟಿ ಬಡವ

ಕೆಟ್ಟ', 'ಸಾಲಕ್ಕೆ ಕೊನೆಯಿಲ್ಲ, ಆಲಕ್ಕೆ ಹೂವಿಲ್ಲ'; 'ಅಟ್ಟಕ್ಕಿ ಇದ್ದಾಗ ಹುಟ್ಟಕ್ಕಿ ಹಂಗೇನು' ಮುಂತಾದ ಗಾದೆಗಳು ಅವರ ಜೀವನಕ್ಕೆ ನೇರವಾಗಿ ಸಂಬಂಧ ಪಟ್ಟಿದ್ದು ಅದನ್ನು ಪ್ರತಿಬಿಂಬಿಸತಕ್ಕವು ಗಳಾಗಿವೆ.

ನಮ್ಮ ಕರ್ತವ್ಯ

ಇಂತಹ ವಿಶಿಷ್ಟ ಸಂಸ್ಕೃತಿಯನ್ನು ಪಡೆದ ನಮ್ಮ ರೈತರ ಜೀವನದ ಮಟ್ಟವನ್ನು ಏರುವಂತೆಮಾಡಿ, ಹಳ್ಳಿಗಳ ಉದ್ಧಾರವಾಗುವಂತೆಯೂ ಪ್ರಯತ್ನಿಸುವುದು ಪ್ರತಿಯೊಬ್ಬ ಭಾರತೀಯನ ಪವಿತ್ರ ಕರ್ತವ್ಯವಾಗಿದೆ.

ಬಳ್ಳಾರಿ ಜಿಲ್ಲಾ ಬೋರ್ಡು ಸಭೆ

(1) ಭಾರತದ ಪ್ರಧಾನ ಮಂತ್ರಿಗಳ 61 ನೆಯ ವರ್ಧಂತಿಯ ಇಂದು ಇದ್ದು ಅವರಿಗೆ ಶ್ರೇಯವನ್ನು ಕೋರುವ, ಮತ್ತು ಆಯುರಾರೋಗ್ಯವನ್ನು ಕೋರುವ ನಿರ್ಣಯವಾಯಿತು.

(2) 30 ವರ್ಷಗಳು ಪ್ರಾಮಾಣಿಕವಾಗಿ ಜಿಲ್ಲಾ ಬೋರ್ಡು ಕಾರ್ಯದರ್ಶಿಗಳಾಗಿ ದುಡಿದು ನಿವೃತ್ತರಾದ ಶ್ರೀ ನಂಜುಂಡಯ್ಯನವರನ್ನು ಅಭಿನಂದಿಸಿ ಅವರಿಗೆ ಯಶವನ್ನು ಕೋರುವ ವಾಯಿತು.

(3) ಬಳ್ಳಾರಿ ಸಿರುಗುಪ್ಪೆ ತಾಲೂಕುಗಳಲ್ಲಿ ಮಳೆಯಿಂದಾದ ಅನರ್ಥಕ್ಕೆ 5 ಸಾವಿರ ರೂ. ಕೊಡಲು ಬಳ್ಳಾರಿ R. D. O. ರು ಕೇಳಿದರು. ಹಣವಿಲ್ಲದ ಕಾರಣ ತಿರಸ್ಕೃತವಾಯಿತು.

ಜಿಲ್ಲಾ ಬೋರ್ಡು ಉಪಾಧ್ಯಕ್ಷರು. ಶ್ರೀ ಬಿ. ರಂಗನಗೌಡರ ಸರ್ವಾನುಮತ ಚುನಾವಣೆ

14-11-49 ದಿನಾಂಕ ಶ್ರೀ ವೈ ಮಹಾಬಲೇಶ್ವರಪ್ಪನವರ ಅಧ್ಯಕ್ಷತೆಯಲ್ಲಿ ಕೂಡಿದ ಜಿಲ್ಲಾಬೋರ್ಡು ಸಭೆಯಲ್ಲಿ ಶ್ರೀ ಶೆಟ್ಟರ ನಾಗಪ್ಪನವರು ಸೂಚಿಸಿ ಶ್ರೀ ಚನಬಸವನಗೌಡರು ಅನುಮೋದಿಸಿದ ಶ್ರೀ ಬಿ. ರಂಗನಗೌಡರು (ಬದನೆಹಾಳು) ಸರ್ವಾನುಮತದಿಂದ ಜಿಲ್ಲಾ ಬೋರ್ಡು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಶ್ರೀ ರಂಗನಗೌಡರು ಸದಸ್ಯರನ್ನೆಲ್ಲಾ ವಂದಿಸುತ್ತ "ಗಡಿನಾಡ ಕನ್ನಡಿಗನೊಬ್ಬನಿಗೆ ತೋರಿದ ಮಮತೆ ಸಹಕಾರಗಳಿಗೆ ತಾವು ಕೃತಜ್ಞರಿರುವರೆಂದೂ ಇಂಥಾ ಐಕ್ಯಭಾವನೆ ಸರ್ವಸಮತ್ವಬುದ್ಧಿಯು ಎಲ್ಲಾ ಕಾಲಕ್ಕೂ ಪ್ರದರ್ಶಿತವಾಗಲೆಂದೂ ಆಶಿಸಿದರು.

ಶರಣಾರ್ಯರ ರಥೋತ್ಸವ ಕಾನಾಮಡವು

'ವಿರೋಧಿನಾಮ ಸಂವತ್ಸರದ ಮಾರ್ಗಶಿರ ಶು॥ ದಶಮಿ, ಮಂಗಳವಾರ (ತಾ 29-11-49) ರಲ್ಲಿ ಮಹಾಕ್ಷೇತ್ರ ಕಾನಾಮಡುವಿನಲ್ಲಿ 'ಶ್ರೀ ಶರಣಾರ್ಯರ ರಥೋತ್ಸವ ಪ್ರಯುಕ್ತ ಸಮಸ್ತ ಭಕ್ತ ಸಮುದಾಯವೂ ಆ ಸಮಯಕ್ಕೆ ಆಗಮಿಸಬೇಕಾಗಿ ಮನವಿ.

ಓರ್ವ ಸ್ವಾಗತಾರ್ಥಿ

'ಶಾಂತಿ'

ಅಂದು ಮಂಗಳವಾರ
ಮಂಗಳೆಯ ಲಾಲಿ
ಸೆಂದು ಹಿಂಗಿತು ಮನದ
ದಳ್ಳುರಿಯದಾರ —
ಬಾಂಗೆರೆಯ ಅಂಗಳದಿ
ಚುಕ್ಕೆಗಳ ಹರಿಸೆ
ಸಂಗಡದಿ ತಂಗದಿರ
ತಂಗಾಳಿ ಚರಿಸೆ
ಬಾನುಬೊಕ್ಕಸದಿಂದ
ಇಂದುಮಣಿ ಮಡಲಿಂದ
ಸುಧೆಇತ್ತ ಸುರಿದಿತ್ತು
ಕಾನು ಮಡುವಿನೊಳಂದು,
ಎನ್ನ ಮನಗನ್ನಡಿಯು
ಬಿಂಬಿಸಲಿ ನಿನಕಾಂತಿ
ಪಂದನೆಯು, ಓ ಮೂನ್ಯ
'ತುಂಬಿ' ಸೀ ಕೊಳೆ—ಶಾಂತಿ

ಆಂಧ್ರ ಪ್ರಾಂತ ನಿರ್ಮಾಣವು ಕೂಡಲೇ ಆಗಬೇಕೆಂದು–ಕಾಂಗ್ರೆಸ್ ಕಾರ್ಯಕಾರಿಸಮಿತಿಯು ಭಾರತ ಸರಕಾರಕ್ಕೆ ಶಿಫಾರಸು ಮಾಡಿರುವ ಕಾರಣ ಆಂಧ್ರ ಪ್ರಾಂತ ರಚನೆಯು ಶೀಘ್ರದಲ್ಲೇ ಆಗಲಿದೆಯೆಂಬ ವಿಶ್ವಾಸವು ಎಲ್ಲೆಡೆಗೂ ಹಬ್ಬಿದೆ.

ಭಾರತದ ರಾಜ್ಯಘಟನೆಯ ತೃತೀಯ ವಾಚನವು ಈ ವಾರಮುಗಿಯುವದರಲ್ಲಿದ್ದು-1950 ನೆಯ ಜನವರಿ 29ಕ್ಕೆ ಹೊಸಘಟನೆಯು ಜಾರಿಗೆ ಬರಲಿದೆ.

ನವಭಾರತಕ್ಕೆ
ಚಂದಾದಾರರಾಗಿರಿ.

ನೆಹರು ಜನ್ಮ ದಿನೋತ್ಸವ

14 ನೆಯ ದಿನಾಂಕ ಉಪಾಧ್ಯಾಯ ಶಿಕ್ಷಣ ಶಾಲೆಯಲ್ಲಿ ಪ್ರಾತಃಕಾಲ ಧ್ವಜವಂದನೆಯಾಗಿ–ಊರಬೀದಿಗಳಲ್ಲಿ ನೆಹರೂ ಭಾವಚಿತ್ರದ ಮೆರವಣಿಗೆಯು ಶಾಲಾ ವಿದ್ಯಾರ್ಥಿಗಳಿಂದಾಯಿತು. ಸಾಯಂಕಾಲ ಶ್ರೀ ಕೆ. ಪಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ಜರಿಗಿ ಶ್ರೀ ರಮೇಶರವರು ತೆಲುಗಿನಲ್ಲಿ ಜಿ. ಹೆ. ಶಾಸ್ತ್ರಿಗಳು ಹಿಂದಿಯಲ್ಲಿ ನೆಹರೂರ ಗುಣಗಾನ ಮಾಡಿದರು. ನೆಹರೂ ರಾತ್ರಿ ಪಾಠಶಾಲೆಯ ಉದ್ಘಾಟನೆಯು D. E. O. ರಿಂದ ನೆರವೇರಿ–ಪ್ರಯಜರು ಇದರ ಲಾಭವನ್ನು ಪಡೆಯಲು ಕೇಳಲಾಯಿತು.

ಬಳ್ಳಾರಿಯ ಸಮಾಚಾರ

ಸತ್ಕಾರ:—ವೀರಶೈವ ಕಾಲೇಜಿನ ಆವರಣದಲ್ಲಿ 14 ನೆಯ ತಾ॥ ಸಾಯಂಕಾಲ ಶ್ರೀ ವೈ. ಮಹಾಬಲೇಶ್ವರಪ್ಪನವರಿಗೆ ಬಳ್ಳಾರಿ ಪಟ್ಟಣಿಗರ ಸತ್ಕಾರ ಸಮಾರಂಭವೇರ್ಪಟ್ಟು ಅವರು ಬಹುಮತದಿಂದ ಅಧ್ಯಕ್ಷರಾದುದಕ್ಕೆ ಅಭಿನಂದನಾಪರ ಭಾಷಣಗಳಾದುವು ಅವರು ಸಮಯೋಚಿತ ಸೂಕ್ತವಾದುತ್ತರ ವಿತ್ತರು.

ಕರ್ನಾಟಕ ಏಕೀಕರಣ:—

ಬಳ್ಳಾರಿ ಜಿಲ್ಲಾ ಬೋರ್ಡು ಸಭೆಯಲ್ಲಿ (14-11-49) ಇಡೀ ಬಳ್ಳಾರಿ ಜಿಲ್ಲೆಯನ್ನೊಳಗೊಂಡ ಮೈಸೂರು ಮತ್ತು ಇತರ ಕನ್ನಡ ಭಾಗಗಳನ್ನೊಳಗೊಂಡ ಕರ್ನಾಟಕ ಪ್ರಾಂತರಚನೆಯು ಶೀಘ್ರದಲ್ಲೇ ಆಗಬೇಕೆಂಬು ಪ್ರಾಂತೀಯ ಮತ್ತು ಕೇಂದ್ರೀಯ ಸರಕಾರಗಳನ್ನು ಎಚ್ಚರಿಸುವ ತೀರ್ಮಾನವೂ ೨೮ ವಿರೋಧಿ ೧೩ ಮತಗಳಿಂದ ನಿರ್ಣಯವಾಯಿತು. ಜಿಲ್ಲಾ ಬೋರ್ಡಿಗೆ ರಾಜಕೀಯ ಸಂಬಂಧವಿಲ್ಲವೆಂತಲೂ, ಈ ನಿರ್ಣಯವು ನಿಯಮ ಬಾಹ್ಯವೆಂತಲೂ ಕೆಲವರು ವಾದಿಸಿದರು. ಅಧ್ಯಕ್ಷರು "ಎಚ್ಚರಿಕೆ" ಎಂಬ ಶಬ್ದವನ್ನು ತೆಗೆದು ಹಾಕಲು ಅಪೀಲ್ ಮಾಡಿದರು ನಿರರ್ಥಕವಾಯಿತು.

ಹರಿಜನ ವಿದ್ಯಾರ್ಥಿನಿಲಯಗಳ ವ್ಯವಸ್ಥಾಪಕರ ಸಭೆಯು ಶ್ರೀ ಪಿ. ಎಲ್. ಗಂಗಾಧರಶೆಟ್ಟಿ ಅಧ್ಯಕ್ಷತೆಯಲ್ಲಿ ಸಮಾವೇಶವಾಗಿದ್ದಿತು. ಬಾಲಕರಿಗೆ ಹೆಚ್ಚಿನ ರೇಷನ್ ಕೊಡಬೇಕು. ಹಳ್ಳಿಗಳ ಪ್ರದೇಶದಲ್ಲಿ ಶಾಲಿಕ್ಕೆ ಸರಿಯಾಗಿ ಕಾಳು ಒದಗಿಸುವ ವ್ಯವಸ್ಥೆಯಾಗಬೇಕು ಹಾಸ್ಟಲುಗಳಿಗೆ ಬೇಕಾದ ಫಾರಂ ಪುಸ್ತಕಗಳನ್ನು 5 ವರ್ಷಕ್ಕಾಗಿ ಪ್ರಸಿದ್ಧಿಸಲು ಶ್ರೀ ವೆಂಕೋಬರಾಯರಿಗೆ ಅಧಿಕಾರ ಕೊಡಲಾಯಿತು.

ಮೊದಲದೆಯು ಕೆಂಶಿನ ಗ್ರಾಂಟನ್ನು ಜರ್ಗ ದಲ್ಲಿ ಕೊಟ್ಟರೆ ಉತ್ತಮ. ಇಲ್ಲವಾದರೆ ಆರ್ಥಿಕ ಕಷ್ಟ ಒದಗಂತೆ ಕಲಿಕ್ಟರವರು ತಮ್ಮ ಹಣದಿಂದ ಪ್ರಯೊಂದು ಹಾಸ್ಟೆಲ್‌ಗೆ ಒಂದು ಟೇಬಲ್, ಕುರ್ಚಿ, ಒಂದು ಉದ್ದವಾದ ಬೆಂಚನ್ನು - ಕೊಡಿಸಬೇಕೆಂದು ತೀರ್ಮಾನಗಳಾದವು.

—

೧೦೦ ರೂ. ನೋಟುಗಳನ್ನು ರದ್ದು ಪಡಿಸುವದಿಲ್ಲ

೧೦೦ ರೂ. ನೋಟುಗಳು ರದ್ದಾಗುವ ವೆಂಬ ಹಾರಿಕೆಯ ಸುದ್ದಿಯನ್ನು, ಅಲ್ಲಲ್ಲಿ ಹಬ್ಬಿಸಿರುವರು. ಆದರೆ ಇದು ನಿರಾಧಾರವಾದುದು—ರಿಸರ್ವ ಬ್ಯಾಂಕಿನವರು ಒಂದು ಪ್ರಕಟನೆ ಹೊರಡಿಸಿ ನೂರು ರೂ ನೋಟುಗಳನ್ನು ರದ್ದು ಪಡಿಸುವದಿಲ್ಲೆಂದು ಹೇಳಿದ್ದಾರೆ.

ಪಾಕಿಸ್ತಾನ ರೂಪಾಯಿಯ ಬೆಲೆಯು ಸರಕಾರದವರು ನಿಗದಿಮಾಡಿದ್ದ 144 ರಿಂದ 116 ಕ್ಕಿಳಿದು ಈಗ 105 ಭಾರತದ ರೂಪಾಯಿಗೆಗಿಳಿದಿದೆ. ಅಂದರೆ ಸರಕಾರದವರ ಕೃತಕ ಬೆಲೆಗೆ ಉಪಯೋಗವಿಲ್ಲದಂತಾಯಿತು.

—

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

[೦]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ್ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (Fixed Deposits):— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ. ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 46)47

21—11—49

ನವಭಾರತ ಬಳ್ಳಾರಿ.

(Nationalist Weekly)

ಚಂದಾದರೆಗಳು.	Subscription Rates.
ವರ್ಷಕ್ಕೆ 5—0—0 6 ತಿಂಗಳಿಗೆ 3—0—0 ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	One Year 5—0—0 Six months 3—0—0 Subscription will not be accepted for less than 6 months

To

Sri............ ....

....

....

Printed at Krishna Printing Works, Edited & Published by T. B. Keshava Rao.

JAI-HIND

ನವಭಾರತ

ಬಳ್ಳಾರಿಯ
ಜಿಲ್ಲಾ ರಾಷ್ಟ್ರೀಯ ವಾರಪತ್ರಿಕೆ.

ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!

ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೨೮ ನವಂಬರ್ ೧೯೪೯ | ಸಂಚಿಕೆ ೪೪

ಮದ್ರಾಸಿನ ಕರ್ನಾಟಕ
— ಸಂಘ —

ಮದ್ರಾಸಿನ ಕರ್ನಾಟಕ ಸಂಘದ ಆಶ್ರಯದಲ್ಲಿ ೨೦-೧೧-೪೯ ಭಾನುವಾರ ಸಂಜೆ ಶ್ರೀ ಗೋರೂರು, ಬಿ.ವಿ. ಸುಂದರರಾಜ ಅಯ್ಯಂಗಾರ್ ಅವರು 'ಉತ್ತರ ಭಾರತ ಕ್ಷೇತ್ರಗಳ ಮಹಿಮೆ' ಯ ಕುರಿತು ಪಂಡಿತ್, ಯ. ಕಿ. ಶ್ರೀರಾಮಾಚಾರ್ಯ ಅವರ ಅಧ್ಯಕ್ಷತೆಯಲ್ಲಿ ಭಾಷಣ ವಿತ್ತರು. ಸಭಿಕರು ಅವರೊಂದಿಗೆ ಭಾರತವನ್ನು ಸುತ್ತಿಬಂದಂತೆ ಅನುಭವಪಟ್ಟರೆನ್ನಬಹುದು. ಉತ್ತರ ಭಾರತವನ್ನು ನಾಲ್ಕುಬಾರಿ ಸುತ್ತಿಬಂದ ಅವರು ಅಲ್ಲಲ್ಲಿ ಕಂಡ ಮತ್ತು ಅನುಭವಿಸಿದ ಸ್ಥಳ ವಿಶೇಷಣ–ಜನರ ರೀತಿ ನೀತಿ–ವ್ಯವಸ್ಥೆ ಅವ್ಯವಸ್ಥೆ ಮೊದಲಾದ ವಿಚಾರಗಳನ್ನು ಹಿರಿಯರೂ, ಕಿರಿಯರೂ, ಮಹಿಳೆಯರೂ, ತಿಳಿದುಕೊಳ್ಳಬೇಕಾದ ರೀತಿಯಲ್ಲಿ ವಿವರಿಸಿದರು. ಇಂತಹ ವಿಚಾರಗಳನ್ನು ತಿಳಿದುಕೊಳ್ಳುವ ಅವಶ್ಯಕತೆ ನೆರೆದವರು ಮನಗಂಡರು. ದೀರ್ಘ ಭಾಷಣದ ಬಳಿಕ ಬೆಂಗಳೂರಿನ ಶ್ರೀ ಸಿ. ವಿ. ಸುಂದರರಾಜಾರಾವ್ ಅವರ ಪುತ್ರಿ ಶ್ರೀಮತಿ ಶಕುಂತಳಾರಾಜಾರಾವ್ ಅವರು ಸಭಿಕರಿತ್ತ ಲೆಖ್ಖಗಳಿಗೆಲ್ಲಾ ಸರಿಯಾದ ಉತ್ತರಿಸುತ್ತಿರುವುದನ್ನು ಕಂಡು ಎಲ್ಲರೂ ಆಶ್ಚರ್ಯಪಟ್ಟರು. ೧೯೪೯ ನೇ ವರ್ಷದ ಹಿಂದಿನ ಎಲ್ಲಾ ಸಂವತ್ಸರಗಳ ದಿನಾಂಕವನ್ನು ಸೂಚಿಸಿದಲ್ಲಿ ಸರಿಯಾದ ವಾರದ ಹೆಸರನ್ನು ಹೇಳುತ್ತಿದ್ದರು. ಇದನ್ನು ಯಾವ ರೀತಿಯಲ್ಲಿ ಕಂಡುಕೊಳ್ಳುವುದೆಂಬುದನ್ನು ಸರಿಯಾದ ಪ್ರೋತ್ಸಾಹ ಕೊಟ್ಟು ಸರಕಾರವಾಗಲಿ ಯಾರಾದರೊಬ್ಬ ಮಹನೀಯರಾಗಲಿ ವಿಚಾರಿಸಿಕೊಳ್ಳುವುದರಿಂದ ಜನತೆಗೆ ತುಂಬಾ ಉಪಕಾರವಾಗುವುದಲ್ಲದೇ ಸುಲಭೋಪಾಯದಲ್ಲಿ ಲೆಖ್ಖಮಾಡಲು ಕಂಡು ಹಿಡಿದ ಕನ್ನಡಿತಿ ಅಥವಾ ಕನ್ನಡಿಗನ ಬಗ್ಗೆ ನಾವೆಲ್ಲರೂ ಹೆಮ್ಮೆ ಪಟ್ಟುಕೊಳ್ಳಬಹುದೆನ್ನಲಡ್ಡಿಯಿಲ್ಲ.

ಕರ್ನಾಟಕ ಏಕೀಕರಣ ಸಂಘದ ತೀರ್ಮಾನ
ಅಖಂಡ ಕರ್ನಾಟಕ ರಚನೆ.
ಇಲ್ಲವೇ ಹೋರಾಟ

ಕರ್ನಾಟಕ ಏಕೀಕರಣ ಸಂಘದ ಆಶ್ರಯದಲ್ಲಿ ಶ್ರೀ [illegible] ಮಹಾಬಲೇಶ್ವರ ಪ್ರಸನ್ನರಧ್ಯಕ್ಷತೆಯ ಹೈ-ಕರ್ನಾಟಕ ಪ್ರಾಂತೀಯ ಸಭೆಯ... ಸರ್ವಾನುಮತವಾಗಿ ಈ ವರ್ಷದ ಕೊನೆಯೊಳಗಾಗಿ ಕರ್ನಾಟಕ ಪ್ರಾಂತ ರಚನೆ ಆಗದಿದ್ದರೆ ಜನತಾ ಆಂದೋಲನ ಮತ್ತು ಹೋರಾಟವು ಖಂಡಿತವೆಂದು ವ್ಯಕ್ತಪಡಿಸಲಾಯಿತು. ಮೈಸೂರು ಮಹಾರಾಜರು ಸಿಂಹಾಸನ ತ್ಯಾಗಮಾಡಿ ಅಖಂಡ ಕರ್ನಾಟಕ ರಚನೆಯ ಮಾರ್ಗವನ್ನು ಸುಗಮಮಾಡಬೇಕೆಂದರು. ಮದ್ರಾಸ್ ಬೊಂಬಾಯಿ ಶಾಸನ ಸಭಾಸದಸ್ಯರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಕೃತಿಯನ್ನು ನಿಷೇಧಿಸಲು ಹೊರಬೀಳಲು ಕರ್ನಾಟಕ ಕಾಂಗ್ರೆಸ್ ಆದೇಶ ಕೊಡಲೇ ಬೇಕೆಂದು ಕೇಳಿಕೊಳ್ಳಲಾಯಿತು. ಏಕೀಕರಣ ಕಾರ್ಯಕ್ಕಾಗಿ ೧೦ ಲಕ್ಷ ಧನವು ಬೇಕಾಗಿದ್ದು ಸಭೆಯಲ್ಲಿ ೨೧ ಸಾವಿರ ವಾಗ್ದಾನವಾಯಿತು. ಶ್ರೀ ಮಹಾಬಳೇಶ್ವರಪ್ಪನವರು, ಶಾಂತಪ್ಪನವರು ಯಳಮಲಿ ಶಿರೂರ ಶ್ರೀ ರಾಘವೇಂದ್ರರಾಯರು ತಲಾ ಸಾವಿರ ರೂ.ಗಳ ವಾಗ್ದಾನ ಮಾಡಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಪಾಗಡಿಯವರು ಮಾತಾಡಿ ಧರ್ಮಸಂಕಟ ಪರಿಸ್ಥಿತಿ ಇದೆಯೆಂದು ಹೇಳಿದರು. ......

ಹೆಂಗಸರಿಗೆ ಹೊಸ ಉದ್ಯೋಗ

ಹೆಂಗಸರಿಗೆ ಉದ್ಯೋಗದ ಹೊಸ ಕ್ಷೇತ್ರಗಳನ್ನು ಒದ..... ಸಲುವಾಗಿ ಉದ್ಯೋಗ ವಿನಿಮಯ ಕೇಂದ್ರದವರು ಬುಕ್ ಬೈಂಡಿಂಗ್, ಕಂಪೋಸಿಂಗ್, ಮೊನೊ ಮತ್ತು ಲಿನೋ-ಟೈಪಿಂಗ್ ಮೊದಲಾದ ಮುದ್ರಣಕ್ಕೆ ಸಂಬಂಧಿಸಿದ ಕೆಲಸಗಳಲ್ಲಿ 50 ಹೆಂಗಸರಿಗೆ ತರಬೇತಿ ಕೊಡುವ ಏರ್ಪಾಡು ಮಾಡಿದ್ದಾರೆ. [illegible] ತರಬೇತು ಹೊಂದಿದ [illegible] ಈ 50 ಮಂದಿಗೂ ಮದ್ರಾಸಿನಲ್ಲಿರುವ ಸರಕಾರಿ ಮುದ್ರಣಾಲಯದಲ್ಲಿ ಕೆಲಸ ದೊರೆಯುವುದು.

ಬಳ್ಳಾರಿ ಜಿಲ್ಲೆಯನ್ನು ಇಬ್ಭಾಗಿಸ ಬಾರದು
ನಾಗರಿಕರ ನಿಷೇಧ

೨೦ ನೇಯ ದಿನಾಂಕ ಸಾಂಬಮೂರ್ತಿ ಮೈದಾನದಲ್ಲಿ ಜಿಲ್ಲಾ ಕರ್ನಾಟಕ ಏಕೀಕರಣ ಸಂಘದ ಪರವಾಗಿ ಸೇರಿದ್ದ ಸಭೆಯಲ್ಲಿ ಬಳ್ಳಾರಿ ಜಿಲ್ಲೆಯು ಪೂರ್ಣ ಕನ್ನಡ ಜಿಲ್ಲೆಯಿದ್ದು ಅದರ ಯಾವ ಭಾಗವನ್ನಾಗಲಿ ಆಂಧ್ರಪ್ರಾಂತಕ್ಕೆ ಸೇರಿಸಬಾರದೆಂದೂ - ನೂತನ ರಾಜ್ಯಘಟನೆಯಲ್ಲಿ ಮೈಸೂರನ್ನೊಳಗೊಂಡು ಮಹಾಕರ್ನಾಟಕ ಪ್ರಾಂತದ ನಾಮನಿರ್ದೇಶವಾಗಬೇಕೆಂದೂ - ಜನಮತಕ್ಕೆ ವಿರೋಧವಾಗಿ ನಡೆದಲ್ಲಿ ಪರಿಸ್ಥಿತಿಯು ಹದಮೀರಬಹುದೆಂದೂ ಗೊತ್ತುವಳಿಗಳಾದವು.

ಈ ಸಭೆಯ ಅಧ್ಯಕ್ಷತೆಯನ್ನು ಶ್ರೀ ಗಂಗಾವತಿ ನರಸಿಂಗರಾಯರು ವಹಿಸಿದ್ದರು. ಶ್ರೀಗಳಾದ ಕೇ. ಶಾಂತಪ್ಪ, ಡಿ. ಯಚ್ ವೆಂಕೋಬರಾವ್, ಬಿ ಎಂ ಮರುಳಸಿದ್ದಯ್ಯ, ರೇವಣಸಿದ್ದಪ್ಪ, ಹುಂಡೇಕಾರ ಪಾಟೀಲ, ಟಿ. ಯಚ್ ಎಂ. ಚಂದ್ರಶೇಖರಶಾಸ್ತ್ರಿ ಯವರು ಮಾತಾಡಿ ಕಾಂಗ್ರೆಸ್ ವರಿಷ್ಠರು ಆಂಧ್ರರ ಒತ್ತಾಯಕ್ಕೆ ಮರುಳಾಗಿ ಕರ್ನಾಟಕಕ್ಕೆ ಮಹದನ್ಯಾಯ ಮಾಡಿರುವರೆಂದರು. ಇದನ್ನು ಪ್ರತಿಭಟಿಸಲು ಕನ್ನಡಿಗರಾದ ಕಾಂಗ್ರೆಸಿಗರು ಕಾಂಗ್ರೆಸ್ ಸಂಸ್ಥೆಯನ್ನು ತ್ಯಜಿಸಿ ಸತ್ಯಾಗ್ರಹ ಹೂಡಬೇಕೆಂದರು. ಪೂರ್ವ ತಾಲೂಕುಗಳ ಪರವಾಗಿ ಜಿಲ್ಲಾ ಬೋರ್ಡ ಉಪಾಧ್ಯಕ್ಷರಾದ ಶ್ರೀ ಬ. ರಂಗನಗೌಡರು ಮಾತಾಡಿ ತಮ್ಮ ಹೋರಾಟದಲ್ಲಿ ಎಲ್ಲರೂ ಬೆಂಬಲ ನೀಡಬೇಕೆಂದೂ [illegible] ಪಡುತ್ತಿರುವ ಆದವಾನಿ–ಆಲೂರು–ರಾಯದುರ್ಗ ತಾಲೂಕುಗಳು ಕನ್ನಡಿಗರ ಯುದ್ಧ ಭೂಮಿಯಾಗಬೇಕೆಂದೂ ಸಾರಿದರು.

ಅಧ್ಯಕ್ಷರು ಭಾಷಣ ಕರ್ತರ ಆವಿಕಾರ ಮನೋವೃತ್ತಿಯನ್ನು ಪ್ರಶಂಸಿಸಿ ಇಂಥ ಸಮಯದಲ್ಲಿ ಕನ್ನಡಿಗರ ಒಕ್ಕಟ್ಟು ಅವಶ್ಯಕವೆಂದರು. ಗೊತ್ತುವಳಿಗಳ ನಕಲನ್ನು ಕಾಂಗ್ರೆಸ್ ವರಿಷ್ಠರು ಪ್ರಾಂತೀಯ ಮತ್ತು ಕೇಂದ್ರೀಯ ಅಧಿಕಾರಿಗಳಿಗೆ ಕಳುಹಿಸಲಾಗಿದೆ

ಉತ್ತಮ ಗ್ರಂಥಗಳಿಗೆ —ಬಹುಮಾನ—

—o—

ಮದ್ರಾಸು ಸರಕಾರವು ಕನ್ನಡದ ಉತ್ತಮ ಗ್ರಂಥಗಳಿಗೆ ಬಹುಮಾನ ಕೊಡುವ ಸಂದರ್ಭದಲ್ಲಿ ಸ್ಪರ್ಧೆಗೆ ಬರುವ ಪುಸ್ತಕಗಳನ್ನು ಸ್ವೀಕರಿಸುವ ಅವಧಿಯನ್ನು ಸಾಕಷ್ಟು ಪುಸ್ತಕಗಳನ್ನು ಬಂದಿಲ್ಲವಾದ್ದರಿಂದ ಡಿಶಂಬರ ೧೫ ನೇ ದಿನಾಂಕದ ವರೆಗೆ ಮುಂದುವರಿಸಲಾಗಿದೆ. ಕೃಷಿ ಮತ್ತು ಪ್ರಕೃತಿಶಾಸ್ತ್ರ ಸಾಕಷ್ಟು ಪುಸ್ತಕಗಳು ಬಾರದಿರುವುದರಿಂದ, ಐದನೇ ತರಗತಿಗಿಂತ ಕೆಳತರಗತಿಯ ವಿದ್ಯಾರ್ಥಿಗಳಿಗೆ ಸರಿಹೊಂದುವ ಶಿಶುಸಾಹಿತ್ಯವನ್ನು ಸ್ವೀಕರಿಸಲಾಗುವುದು. ಎಲ್ಲಾ ಪುಸ್ತಕಗಳು ೧೯೪೦ ರ ನಂತರವೇ ಪ್ರಕಟವಾದವುಗಳಿರತಕ್ಕದ್ದು. ಕೆಳಗೆ ಕಾಣಿಸಿದ ವಿಭಾಗದ ಪುಸ್ತಕಗಳ ನಾಲ್ಕು ಪ್ರತಿಯಂತೆ—ಕಾರ್ಯದರ್ಶಿ, ಕರ್ನಾಟಕ ಸಂಘ ೧೬, ವೀರ ಸ್ವಾಮಿ ಪಿಳ್ಳೆ ಬೀದಿ ಮದ್ರಾಸ್ ೮. ಇವರಿಗೆ ಕಳುಹಿಸಬೇಕು

1 ಸಣ್ಣಕತೆ 2 ನಾಟಕ 3 ಜೀವನ ಚರಿತ್ರೆ 4 ಸಂಶೋಧನೆ 5 ವೈದ್ಯ ಮತ್ತು ಆರೋಗ್ಯ 6 ಶಿಶುಸಾಹಿತ್ಯ

ಗ್ರಂಥಕರ್ತರೆಲ್ಲರೂ ನಮ್ಮೊಡನೆ ಸಹಕರಿಸುವದಾಗಿ ನಂಬುತ್ತೇನೆ.

ಈಶ್ವರಭಟ್ಟ—ಕಾರ್ಯದರ್ಶಿ.

.... ದಿವಂಗತ .... ಕುಡತಿನಿ ರಾಮರಾವ್

ಕು. ರಾಮರಾಯರು ತಮ್ಮ 76 ನೆಯ ವಯಸ್ಸಿನಲ್ಲಿ 11 ನೆಯ ತಾ॥ ಸ್ವರ್ಗಸ್ಥರಾದರು. ಜಿಲ್ಲಾಬೋರ್ಡು ತಾಲೂಕು ಬೋರ್ಡಗಳಲ್ಲಿ ಉಪಾಧ್ಯಕ್ಷರಾಗಿದ್ದರು ಜಿಲ್ಲಾ ಎಡುಕೇಶನಲ್ ಕೌನ್ಸಿಲ್ ಟೆಂಪಲ್ ಕಮಿಟಿಗಳ ಅಧ್ಯಕ್ಷರಾಗಿ ಸಹಕಾರೀ ಸಂಘಗಳ ಚಾಲಕರಾಗಿದ್ದರು ಸನ್ಮಾರ್ಗ ಸಮಾಜದ ಸಂಬಂಧವು ಯಾವಾಗಲೂ ಸಾಮೀಪ್ಯವಿತ್ತು. ಜಿಲ್ಲಾ ಬೋರ್ಡು ಸನ್ಮಾರ್ಗ ಸಮಾಜದಲ್ಲಿ ದುಃಖಸೂಚಕ ತೀರ್ಮಾನಗಳಾದವು ಕಳೆದ ಅರ್ಧ ಶತಮಾನದಿಂದ ಸಾರ್ವಜನಿಕ ಸೇವಕರಾಗಿ ದುಡಿದ ಇವರ ಆತ್ಮಕ್ಕೆ ಶಾಂತಿ ದೊರೆಯಲಿ.

ಬಳ್ಳಾರಿ

ಎಂ. ವೆಂಕಟಸ್ವಾಮಿ ಎಂಬ ಕಂಟ್ರಾಕ್ಟರನು ಪರ್ಮಿಟಿಲ್ಲದೆ 6 ಚೀಲ ಅಕ್ಕಿ, 55 ಚೀಲ ಹುರಿಯಕ್ಕಿ, 6 ಚೀಲ ಭತ್ತ ದಾಸ್ತಾನು ಮಾಡಿದುದಕ್ಕೋಸ್ಕರ ರೂ. 200 ಜುಲಮಾನೆ ವಿಧಿಸಲಾಗಿದೆ.

ರೇಲ್ವೆಯಲ್ಲಿ ನಾಲ್ಕು ತರಗತಿಗಳು

ಡಿಸೆಂಬರ ಒಂದನೇ ದಿನಾಂಕದಿಂದ ನಾಲ್ಕು ವರ್ಗಗಳು ಜಾರಿಯಲ್ಲಿ ಬರುವವು. ಅವು ಯಾವವೆಂದರೆ,—1 ನೇ ವರ್ಗ, 2 ನೇ ವರ್ಗ, 2 ನೇ ಸಾಮಾನ್ಯ ವರ್ಗ, ಮತ್ತು ಮೂರನೆಯ ವರ್ಗ.

ಎರಡನೇ ವರ್ಗವು ಹಿಂದಿನ ಎರಡನೇ ವರ್ಗದಂತಾಗುವದು. ಅದರಲ್ಲಿ ಮಲಗಿ ಪ್ರವಾಸ ಮಾಡುವದಕ್ಕೆ ಅವಕಾಶವಿದೆ. ಎರಡನೆಯ ಸಾಮಾನ್ಯ ವರ್ಗವು ಹಿಂದಿನ ಇಂಟರ ವರ್ಗಕ್ಕಿಂತ ಸುಧಾರಿಸಿದ್ದಾಗುವದು.

ಈ ವರ್ಷ ಜನವರಿಯಿಂದ ಪ್ರಾರಂಭಿಸಿದ ಮೂರು ವರ್ಗದ ಪದ್ಧತಿಯು ಟೀಕೆಗೆ ಗುರಿಯಾಗಿತ್ತು ಇನ್ನು ಅದು ನಿಲ್ಲುವದೆಂದು ಆಶಿಸಲಾಗಿದೆ.

ಮೊದಲನೇ ಮತ್ತು ಎರಡನೆಯ ವರ್ಗದ ದರಗಳು ಮೈಲಿಗೆ 24 ಹಾಗೂ 14 ಪೈ ಉಳಿಯುವವು! ಕಳೆದ ವರುಷ ಈದರಗಳು 30 ಮತ್ತು 16 ಪೈ ಇದ್ದವು.

ವ್ಯಾಗೀನುಗಳ ಪೂರೈಕೆ ಸುಕರವಾಗಿರುವದರಿಂದ ಯಾವ ಬಂದರದಲ್ಲಿಯೂ ಸರಕುಗಳು ಕೂಡಿ ಬಿದ್ದಿಲ್ಲ.

ಕಬ್ಬಿಣ, ಉಕ್ಕು, ಸಿಮೆಂಟು ಮೊದಲಾದವುಗಳ ಸಾಗಣೆಗೆ ವಿಶೇಷ ಸಹಾಯ ಮಾಡಲಾಗಿದೆ.

ಇಂಜನುಗಳು–1947 ಸಪ್ಟಂಬರದಿಂದ 1951 ಮಾರ್ಚ ಕೊನೆಯವರೆಗೆ ನಮಗೆ ಪರದೇಶಗಳಿಂದ 800 ಇಂಜನುಗಳು ಬರಬೇಕಾಗಿದ್ದು ಈಗಾಗಲೇ 200 ಬಂದಿವೆ.

ಚಿತ್ತರಂಜನ ಇಂಜಿನ ಕಾರಖಾನೆಯಲ್ಲಿ 1950-51 ರಲ್ಲಿ ಇಂಜಿನಗಳ ಉತ್ಪಾದನೆ ಪ್ರಾರಂಭವಾಗಲಿದ್ದು ಆ ವರುಷ ಇಂಜಿನುಗಳು ತಯಾರಾಗುವವು.

ಹೊಸ ಗಾಡಿಗಳು ಲೋಹದಿಂದ ತಯಾರಿಸಲಾಗುವವು.

ಅನಂತಪುರ ಕಾಲೇಜಿನ ವಿದ್ಯಾರ್ಥಿಗಳನ್ನು ಅಲ್ಲಿನ ಸ್ತ್ರೀಯರ ವಿದ್ಯಾರ್ಥಿನಿಲಯದ ವಾರ್ಷಿಕೋತ್ಸವಕ್ಕೆ ಬಿಡಲಿಲ್ಲೆಂಬ ಕಾರಣದಿಂದ ಮುಷ್ಕರ ಹೂಡಿದ್ದಾರೆ. ಶ್ರೀ ಸುಬ್ರಹ್ಮಣ್ಯ ಶರ್ಮ ಮತ್ತು ವೆಂಕೋಬರಾವ್ ಇವರನ್ನು ಪ್ರಿನ್ಸಿಪಾಲರು ಹೊರಗೆಹಾಕಿದ್ದರು ಆದರೆ ರಾಜಿಯಾದ ಕಾರಣ ಈಗ ಶಾಂತ ವಾತಾವರಣವಿದೆ.

ನವಭಾರತಕ್ಕೆ ಚಂದಾದಾರರಾಗಿರಿ.

ಜವಹರಲಾಲ ಸ್ವಾಗತ

[ಹಿಂದಿನ ಸಂಚಿಕೆಯಿಂದ]

ವಿದೇಶಗಳಲ್ಲಿ ಕೂಡಿಸಿದ ಕೀರ್ತಿ ಕಿರೀಟ ಪ್ರಭೆಯನ್ನು ಬೀರುತ್ತ ಅವರಿಂದು ಬರುತ್ತಿದ್ದಾರೆ. ಅವರನ್ನು ನಾವು ಪ್ರೀತಿಸುತ್ತೇವೆ. ಅವರ ವ್ಯಕ್ತಿತ್ವದ ಪ್ರಚಂಡ ಪ್ರಭಾವವನ್ನು ಕಂಡು ಹಿಗ್ಗುತ್ತೇವೆ ಆದರೆ ಕೀರ್ತಿಯು ಥಳಕು ಕಾಮನಬಿಲ್ಲಿನ ಬಣ್ಣಗಳಂತೆ; ಅದು ಚಿರಂತನವಲ್ಲ. ಜವಾಹರರ ಕೀರ್ತಿವೃಕ್ಷದ ಬೇರುಗಳು ಭಾರತದ ವಾಸ್ತವಸ್ಥಿತಿಯ ಕಠೋರ ಭೂತಲದಲ್ಲಿ ನಟ್ಟಿರಬೇಕು. ತಾವು ಕೊಟ್ಟ ವಿಪುಲ, ಧೀರ ವಾಗ್ದಾನಗಳನ್ನೂ ಅವರು ಪೂರ್ತಿಗೊಳಿಸಬೇಕಾಗಿದೆ. ಅವರ ಆಡಳಿತೆಯ ಅಸಾಮರ್ಥ್ಯವನ್ನೂ ಭ್ರಷ್ಟತೆಯನ್ನೂ ದೂರೀಕರಿಸಿ ಸರಕಾರ ಅಂದದ್ದನ್ನು ಮಾಡಿ ತೋರಿಸಲು ಸಜ್ಜಾಗಿದೆಯೆಂದು ತೋರಿಸಿಕೊಡಬೇಕಾಗಿದೆ. ಸರದಾರರಂಥ ಸಮರ್ಥ, ಧೀರ ಸಂಗಾತಿ ಅವರಿಗೆ ದೊರೆತಿರುವಾಗ ಅವರಿಬ್ಬರೂ ಸೇರಿ, ಜನರೀಗ ವಿಷಾದದಿಂದ ಎಂದೂ ಆಗಲಾರದೆಂದು ಬಗೆಯಲಾರಂಭಿಸಿರುವ ಕಾರ್ಯಗಳನ್ನು ಮಾಡಿ ತೋರಿಸಬಲ್ಲರು. ಜವಾಹರಲಾಲರ ಗತದಿನಗಳು ಯಶೋವೈಭವದಿಂದ ಮೆರೆಯುತ್ತಿವೆ. ಅವರಲ್ಲಿ ಪ್ರಬಲವಾದ ಇಚ್ಛಾಶಕ್ತಿಯಿದ್ದರೆ ಅವರ ಭವಿಷ್ಯತ್ತು ಉಜ್ವಲವೇ ಆಗಿದೆ. ಅದನ್ನು ಸಾಧಿಸಲು ಅವರು ಚಿರಕಾಲ ಬಾಳಲಿ. ಶತಂಜೀವೇತ ಶರದಾಂ॥

ಬಾವಿಗಳಿಗೆ ಧನಸಹಾಯ ಕೆರುವ 1947-48, 1948-49, 1949-50 ನೇ ಇಸವಿಗಳ ಪ್ರಕಾರ ಸಪ್ಟಂಬರ ತಿಂಗಳ ಅಖೈರವರೆಗೆ ಈ ಪ್ರಾಂತದಲ್ಲಿ ಸುಮಾರು 23,4+1 ಬಾವಿಗಳು ತೋಡಲ್ಪಟ್ಟಿವೆಯೆಂದು ವರದಿಯಾಗಿದೆ. ಇದರ ಫಲವಾಗಿ 29,693 ಎಕ್ರೆಗಳಷ್ಟು ಭೂಮಿಗಳನ್ನು ಸಾಗುವಳಿ ಯೋಗ್ಯವನ್ನಾಗಿ ಮಾಡಿ, 12,830 ಟನ್ನುಗಳಷ್ಟು ಹೆಚ್ಚಿಗೆ ಆಹಾರಧಾನ್ಯ ಬೆಳೆಸಲ್ಪಟ್ಟಿದೆ. ಈ ಅಂಕೆ ಸಂಖ್ಯೆಗಳಲ್ಲಿ ತೀವ್ರಯೋಜನೆ ದತ್ತ ಮಂಡಲ ಲೆಕ್ಕಗಳ ಪರಿಷ್ಕೃತ ಯೋಜನೆಯು ಮೊದಲಾದ ಇತರ ಯೋಜನೆಗಳ ಪ್ರಕಾರ ಸಾಗುವಳಿಮಾಡಿದ ವಿಸ್ತೀರ್ಣವು ಸೇರಿಲ್ಲ. 1949-50 ನೇ ಯೋಜನೆಯು ಗಳೆದ ಏಪ್ರೆಲ್ ತಿಂಗಳಲ್ಲಿ ಆರಂಭಿಸಲ್ಪಟ್ಟಿದೆ.

ಸಾಮಾಜಿಕಶಿಕ್ಷಣಕ್ಕೆ ಪ್ರಥಮಸ್ಥಾನ

ಶತಶತಮಾನಗಳಿಂದ ರೂಢಿಯಾದ ಜಾಡ್ಯವನ್ನು ಹೊಡೆದೋಡಿಸಬೇಕಾಗಿದೆ

[ಹಿಂದುಸ್ಥಾನ ಸರಕಾರದ ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಬುಲ್ ಕಲಂ ಅಜಾದರು ಇತ್ತೀಚೆಗೆ ಮೈಸೂರಲ್ಲಿ ಸೇರಿದ ಯುಕ್ತ ರಾಷ್ಟ್ರ ಸಂಘದ ಶೈಕ್ಷಣಿಕ, ವೈಜ್ಞಾನಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯ ಪರವಾಗಿ ಕೂಡಿದ ಗ್ರಾಮ ಶಿಕ್ಷಣ ಪರಿಷತ್ತನ್ನು ಉದ್ಘಾಟಿಸುತ್ತ, ಹಿಂದುಸ್ಥಾನವು ಸಾಮಾಜಿಕ ಶಿಕ್ಷಣಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುವದಾಗಿ ಸಾರಿದರು.] ಯಾವದೊಂದು ರಾಷ್ಟ್ರದ ಪ್ರಗತಿ, ಸಮುದಭಿವೃದ್ಧಿ, ಹಿತಸಂವರ್ಧನೆ ಮೊದಲಾದವು ನಾಗರಿಕನ ಗುಣಾವಗುಣಗಳನ್ನು ಹಾಗೂ ನಾಗರಿಕನ ಗುಣಗಳು ಅವನ ಲಕ್ಷಣಗಳನ್ನು ಅವಲಂಬಿಸಿರುತ್ತವೆ. ಪ್ರಜಾಪ್ರಭುತ್ವದ ಪ್ರಗತಿಗೆ ವಿಚಾರಶೀಲ ಮತದಾರರು ಅವಶ್ಯವಿರುವದರಿಂದ ಮಕ್ಕಳ ಶಿಕ್ಷಣಕ್ಕಿಂತ ಪ್ರೌಢರ ಶಿಕ್ಷಣಕ್ಕೆ ಮಹತ್ವವಿದೆ. ಈ ಶಿಕ್ಷಣ ಕಾರ್ಯಕ್ಕೆ 20 ಲಕ್ಷ ಶಿಕ್ಷಕರು ಬೇಕಾಗಿದ್ದು, ಸುಶಿಕ್ಷಿತರನ್ನು ಒತ್ತಾಯದಿಂದ ಕೆಲಸಕ್ಕೆ ಹಚ್ಚುವ ವಿಚಾರ ಮಾಡಲಾಗುತ್ತಿದೆ.

ಇಂದಿನ ನಾಗರಿಕರು ನಾಳಿನ ನಾಗರಿಕರ ಶಿಕ್ಷಣದ ಮಹತ್ವವನ್ನು ಈಗಲೇ ಅರಿಯದಿದ್ದರೆ ನಾಡು ಪ್ರಗತಿ ಹೊಂದಲಾರದು. ಈ ವಿಷಯದಲ್ಲಿ ಏಶಿಯದ ರಾಷ್ಟ್ರಗಳು ಬಹಳ ಹಿಂದುಳಿದಿರುತ್ತವೆ. ಜಪಾನದಲ್ಲಿ ಮಾತ್ರ ನೂರಕ್ಕೆ 99 ರಷ್ಟು ಸಾಕ್ಷರರಿದ್ದಾರೆ. ತುರ್ಕಸ್ಥಾನದ ನಗರಗಳಲ್ಲಿ ನೂರಕ್ಕೆ 60 ರಷ್ಟು ಹಾಗು ಹಳ್ಳಿಗಳಲ್ಲಿ 40 ರಷ್ಟು ಸಾಕ್ಷರರಿದ್ದಾರೆ. ಫಿಲಿಫಾಯಿನದ ಈ ಅಂಕೆ 52 86 ರಷ್ಟಿರುವದು. ಸಿಂಹಳ, ಥಾಯಿಲಂಡ, ಬ್ರಹ್ಮದೇಶ ಮತ್ತು ಚೀನದಲ್ಲಿಯೂ ಪ್ರಗತಿ ಇದೆ ಆದರೆ ಕೇವಲ ಅಂಕೆ ಪ್ರಮಾಣದಿಂದ ಸಂತೋಷಪಡುವ ಹಾಗಿಲ್ಲ. ಚೀನದಲ್ಲಿ ಅರ್ಧದಷ್ಟು ಸಾಕ್ಷರರಿದ್ದರೂ ನಿರಕ್ಷರರ ಸಂಖ್ಯೆ 125,000,000 ಇರುತ್ತದೆ.

ಹಿಂದುಸ್ಥಾನದಲ್ಲಿ 1941 ರ ಜನಗಣತಿಯ ಪ್ರಕಾರ 19 ಕೋಟಿ ಪ್ರೌಢರಲ್ಲಿ 17,000,000 ಜನರು ಮಾತ್ರ ಓದು ಬರಹ ಬಲ್ಲವರಿದ್ದಾರೆ. ಅಂದರೆ ನೂರಕ್ಕೆ 10 ಕ್ಕಿಂತ ಕಡಿಮೆ ಸಾಕ್ಷರರಿದ್ದಾರೆ. ಈ ಅಸ್ವಸ್ಥಕರ ಪರಿಸ್ಥಿತಿಯ ನಿವಾರಣೆಗೆ ನಮ್ಮ ಸರಕಾರವು ಪ್ರಥಮ ಪ್ರಾಶಸ್ತ್ಯ ಕೊಡಲಿದೆ

ಮಾನವತ್ವ ಬೆಳೆಯಬೇಕು

ವಿಜ್ಞಾನದ ಪ್ರಗತಿಯ ಪರಿಣಾಮವಾಗಿ ಮಾನವ ಜನಾಂಗಕ್ಕೆ ಕೇಡು ಒದಗಿರುವದು. ಜೀವನವನ್ನು ಉಜ್ವಾಟನೆಗೊಳಿಸದೆ ಶಾಂತಿ ಸಾಧ್ಯವಿಲ್ಲ. ಮಾನವನಲ್ಲಿ ತಿಳುವಳಿಕೆ ಹೆಚ್ಚಿಸಿ ಇದನ್ನು ಸಾಧಿಸಬಹುದಾಗಿದೆ. ಮಾನವನಲ್ಲಿ ಮನುಷ್ಯತ್ವ ಬೆಳೆಸಲು ಸಾಮಾಜಿಕ ಶಿಕ್ಷಣ ಬೇಕು. ಹಿಂದುಸ್ಥಾನವು ಅದಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡುವುದಕ್ಕೆ ಇದೇ ಮುಖ್ಯ ಕಾರಣ. ಪ್ರೌಢ ಶಿಕ್ಷಣದಿಂದ ಮಾನವನಲ್ಲಿ ಜ್ಞಾನೋದಯವಾಗುವದಲ್ಲದೆ, ಕೈಗಾರಿಕೆಗಳ ಪರಿಚಯವೂ ಆಗುತ್ತದೆ. ಅವನು ಸ್ವಚ್ಛತೆಯನ್ನು ಕಲಿಯುತ್ತಾನೆ. ಆಗ ಅವನು ಶಾಂತಿಯ ಪ್ರಗತಿಗೆ ಸಹಾಯ ಮಾಡಬಲ್ಲನು.

ಸಾಮಾಜಿಕ ಶಿಕ್ಷಣ

ಸಾಮಾಜಿಕ ಶಿಕ್ಷಣ ಕೊಡುವಲ್ಲಿ ನಮ್ಮ ಅನೇಕ ಸಮಸ್ಯೆಗಳಿರುತ್ತವೆ. ಶತಶತಮಾನಗಳಿಂದ ರೂಢಿಯಾದ ಜಾಡ್ಯವನ್ನು ಹೊಡೆದೋಡಿಸುವ ಮಾರ್ಗವನ್ನು ಶೋಧಲು ಸೂಚಿಸಬೇಕಾಗುವದು. ಆದುದರಿಂದ ಓದು ಬರಹದ ಜೊತೆಗೆ ಅವನಿಗೆ ಆಸ್ಥೆ ಇದ್ದ ಇನ್ನಿತರ ವಿಷಯಗಳ ಸಾಮಾನ್ಯ ಜ್ಞಾನವನ್ನು ಮಾಡಿಕೊಡಬೇಕಾಗುವದು ಅತ್ಯವಶ್ಯವಿರುವ. ಇಂಥ ಶಿಕ್ಷಣಕೊಡುವ ಬವಲರಿಕೆ ನಮ್ಮಲ್ಲಿದ್ದರೂ ಏಶಿಯಾದಲ್ಲಿ, ಅದರಂತೆ ಹಿಂದುಸ್ಥಾನದಲ್ಲಿ ಶಿಕ್ಷಕರನ್ನು ದೊರಕಿಸುವದು ಕಷ್ಟ ಸಾಧ್ಯವಾಗಿರುತ್ತದೆ. ಶಿಕ್ಷಣ ಕಾರ್ಯದಲ್ಲಿ ಮಕ್ಕಳಿಗಿಂತ ಪ್ರೌಢರ ಕಡೆಗೆ ಲಕ್ಷ್ಯ ಕೊಡಬೇಕಾಗುವದು. ಆದುದರಿಂದ ಹೆಚ್ಚು ಶಿಕ್ಷಕರು ಬೇಕಾಗುತ್ತಾರೆ. ಹಿಂದುಸ್ಥಾನದಲ್ಲಿ ನೂರಕ್ಕೆ 12½ ರಷ್ಟಿರುವ ಮಕ್ಕಳ ಶಿಕ್ಷಣಕ್ಕೆ 10 ಲಕ್ಷ ಶಿಕ್ಷಕರು ಬೇಕು. ಅದೇ ಪ್ರಮಾಣದಿಂದ ಲೆಕ್ಕ ಹಾಕಿದರೆ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಪ್ರೌಢರಿಗಾಗಿ 40 ಲಕ್ಷ ಶಿಕ್ಷಕರಾದರೂ ಬೇಕು. ಪ್ರೌಢರಿಗೆ ಶಿಕ್ಷಣ ಕೊಡಲು ಹೆಚ್ಚು ಶಿಕ್ಷಕರು ಬೇಕೆಂಬುದನ್ನು ಗಮನಿಸಿದರೆ ಈ ಅಂಕೆ 50 ಲಕ್ಷ ಮುಟ್ಟಬಹುದು. ಆದರೆ ಪ್ರೌಢ ಶಿಕ್ಷಣದ ಅವಧಿ ಕಡಿಮೆ ಇರುವದರಿಂದ ಕನಿಷ್ಠ 10 ಲಕ್ಷ ಶಿಕ್ಷಕರಾದರೂ ಬೇಕು. ಇವರ 10 ಲಕ್ಷ ಮಕ್ಕಳಿಗಾಗಿ ಇನ್ನೊಂದು 10 ಲಕ್ಷ ಹೀಗೆ 20 ಲಕ್ಷ ಶಿಕ್ಷಕರನ್ನು ಎಲ್ಲಿಂದ ತರಬೇಕು? ಮೊದಲನೆಯದಾಗಿ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಉಪಯೋಗಿಸಬೇಕೆಂದಿರುವೆವು. ಎರಡನೆಯದಾಗಿ ಮ್ಯಾಟ್ರಿಕ್ ಪರೀಕ್ಷೆ ಪಾಸಾದ ಪ್ರತಿಯೊಬ್ಬನೂ ಕೆಲಕಾಲ ಈ ಶಿಕ್ಷಣ ಕಾರ್ಯವನ್ನು ಕೈಕೊಳ್ಳುವಂತೆ ಒತ್ತಾಯ ಮಾಡಬೇಕೆಂಬ ವಿಚಾರವಿದೆ. ಆದಾಗ್ಯೂ ಇನ್ನೂ ಕಡಿಮೆಯಾಗುವ ಜನರನ್ನು ತುಂಬಿಕೊಳ್ಳುವದು ಕಷ್ಟಸಾಧ್ಯ. ಮೇಲಾಗಿ ಮ್ಯಾಟ್ರಿಕ್ ಪಾಸಾಗುವ ಯುವಕರಿಂದ ಶಿಕ್ಷಣ ಕಾರ್ಯವು ಸಾಗುವದೇ? ಎಂಬ ಪ್ರಶ್ನೆಗಳನ್ನೂ ಪರಿಷತ್ತು ವಿಚಾರಿಸಬೇಕು. ಒಮ್ಮೆ ಸಾಕ್ಷರರಾದವರು ಪುನಃ ನಿರಕ್ಷರರಾಗದಂತೆ ನೋಡಿಕೊಳ್ಳುವದೂ ಅವಶ್ಯವಿರುತ್ತದೆ.

ಈ ಶಿಕ್ಷಣಕ್ಕೆ ಸಹಾಯವಾಗುವ ಸಾಧನೋಪಾಯಗಳನ್ನು ಪರಿಷತ್ತು ಸೂಚಿಸಬೇಕು. ಪ್ರೌಢ ಶಿಕ್ಷಣದಲ್ಲಿ ಈ ಪರಿಷತ್ತು ಪ್ರಗತಿಯ ಮೈಲುಗಲ್ಲಾಗುವದೆಂದು ನಾನು ಆಶಿಸುತ್ತೇನೆ.

ಧಾರವಾಡದಲ್ಲಿ ಔದ್ಯೋಗಿಕ ಪ್ರದರ್ಶನವು

ಧಾರವಾಡ ಜಿಲ್ಲಾ ಲೋಕಲ್ ಬೋರ್ಡಿನ ಆಶ್ರಯದಲ್ಲಿ ಐದನೆಯ ಅಖಿಲ ಕರ್ನಾಟಕ ಔದ್ಯೋಗಿಕ ಮತ್ತು ಒಕ್ಕಲುತನ ಪ್ರದರ್ಶನವನ್ನು ಏರ್ಪಡಿಸಬೇಕೆಂದು ಗೊತ್ತು ಮಾಡಲ್ಪಟ್ಟಿದೆ. ಪ್ರದರ್ಶನದ ಕಾರ್ಯದಲ್ಲಿ ಕೆಲಸಮಾಡಲು ಸ್ಥಳಿಕ ಕಮಿಟಿಯೊಂದನ್ನು ನೇಮಿಸಲಾಗಿದೆ. ಶ್ರೀಯುತ ಆರ್. ಎಸ್. ಹುಕ್ಕೇರಿಕರ, ಎಮ್.ಎ., ಎಲ್ ಎಲ್. ಬಿ, ಇವರು ಚೇರಮನ್ನರಾಗಿದ್ದಾರೆ. ಶ್ರೀಯುತ ಚಂದ್ರವದನ ದೇಸಾಯಿಯವರು ಕೋಶಾಧ್ಯಕ್ಷರಾಗಿಯೂ ಮತ್ತು ಶ್ರೀಯುತ ನರಸಿಂಹ ದಾಬಡೆ, ವ ಅಂದಾನೆಪ್ಪ, ಕಮದಿಯವರು ಗೌರವ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ. ಸನ್ ೧೯೫೦ ನೇ ಇಸ್ವಿ ಫೆಬ್ರುವರಿ ತಿಂಗಳ ಮೂರನೆ ವಾರದಲ್ಲಿ ಪ್ರದರ್ಶನವು ಜರುಗುವದು. ಪ್ರದರ್ಶನ ಕಮಿಟಿಯು ತನ್ನ ಕೆಲಸವನ್ನು ಈಗಲೇ ಸುರುಮಾಡಿದೆ

—ನರಸಿಂಹ ದಾಬಡೆ

ಧಾರವಾಡ ಗೌರವ ಕಾರ್ಯದರ್ಶಿ

ತಾ॥ ೧೫-೧೧-೪೯

ಐದನೇಯ ಅಖಿಲ ಕರ್ನಾಟಕ ಔದ್ಯೋಗಿಕ ಮತ್ತು ಒಕ್ಕಲುತನದ ಪ್ರದರ್ಶನ, ಧಾರವಾಡ.

ಗೋಡ್ಸೆ, ಆಪ್ಟೆ (ಗಾಂಧಿಜಿ ಹಂತಕರು) ಇವರಿಗೆ ಅಂಬಾಲಾ ತುರಂಗದಲ್ಲಿ 15 ನೆಯ ಪ್ರಾತಃಕಾಲ ಗಲ್ಲಾಗಿ ಅಲ್ಲಿಯೇ ದಹನಕ್ರಿಯೆಯು ಹಿಂದೂಧರ್ಮ ಪದ್ಧತಿಯ ಪ್ರಕಾರವಾಯಿತು. ಅವರ ಅಸ್ಥಿಗಳನ್ನು ಸಿಂಧೂನದಿಯಲ್ಲಿ ಕಲೆಸಲಾಯಿತು.

ಭಾರತದ ಕೂಲಿಕಾರರು

["ಅಮೇರಿಕನ್ ಫೆಡರೇಷನಿಸ್ಟ" ದಲ್ಲಿಯ ಶ್ರೀ. ಬ್ರೌನರ ಲೇಖದ ಆಧಾರದಿಂದ]

ಸುಮಾರು ಎರಡು ನೂರು ವರುಷಗಳಿಂದ ದಾಸ್ಯ ವಿಮೋಚನೆಗಾಗಿ ಬಿಳಿಯರ ಸಾಮ್ರಾಜ್ಯದೊಡನೆ ಭಾರತವು ಹೋರಾಡಿ ಕೊನೆಗೆ ಸ್ವಾತಂತ್ರ್ಯವನ್ನು ಪಡೆದು ಎರಡು ವರುಷಗಳಾಗಿ ಹೋದವು. ಈ ಸುದೀರ್ಘಕಾಲದ ದಾಸ್ಯದಲ್ಲಿಯ ಘಟನೆಗಳ ಪರಿಣಾಮವು ಸದ್ಯದ ಜೀವನದಲ್ಲಿಯೂ ಪ್ರತಿಬಿಂಬಿತವಾಗುವುದು ಸಹಜವೆಂದೇ ಹೇಳಬಹುದು. ಬಹುಕಾಲದಿಂದಲೂ ಪರಕೀಯರ ವಸಾಹತು ರಾಜ್ಯ ಹಾಗೂ ಸಾಮ್ರಾಜ್ಯವಾದಗಳೊಡನೆ ಹೋರಾಡಿದ ಘಟನೆಗಳಿಂದ ಮನಸಿನಮೇಲಾದ ಪರಿಣಾಮವನ್ನು ಕೂಡಲೇ ಅಳಿಸಿಬಿಡುವುದು ಅಸಾಧ್ಯದ ಮಾತು. ಪರಕೀಯರ, ಬಿಳಿಯರ ವಿಷಯದಲ್ಲಿ ಸಂಶಯ, ವಿರೋಧ, ವರ್ಣದ ತೀವ್ರತರ ಭಾವನೆ ಮೊದಲಾದ ಗುಣಗಳ ಪರಿಣಾಮವು ಸದ್ಯದ ರಾಜಕೀಯ ವಿಚಾರ ಪ್ರಣಾಲಿಯ ಹಾಗೂ ಕಾರ್ಯಕ್ರಮಗಳಲ್ಲಿ ಕಂಡುಬರುವುದನ್ನು ನೋಡಬಹುದು.

ಅಂದು-ಇಂದು

ಬಹುಕಾಲದಿಂದಲೂ ಕಾಂಗ್ರೆಸ್ ಸಂಸ್ಥೆಯ-ಪಕ್ಷದ ಸರಕಾರವು ಈಗ ನಡೆದೇ ಇರುತ್ತದೆ-ರಾಷ್ಟ್ರದ ಬಂಧವಿಮೋಚನೆಯ ಈ ದೊಡ್ಡ ಐತಿಹಾಸಿಕ ಆಂದೋಲನದಲ್ಲಿ ಪ್ರಮುಖ ಪಾತ್ರವಹಿಸಿ ಗೆಲುವನ್ನು ಪಡೆಯಿತು. ಹೋರಾಟದ ಕಾಲದಲ್ಲಿ ಎಲ್ಲ ಬಗೆಯ ಜನ, ಸಂಘ, ಸಂಸ್ಥೆಗಳನ್ನು ಜಾತಿ, ವರ್ಣ, ಭೇದಗಳಿಲ್ಲದೆ ಒಳಗೊಂಡು ಒಬ್ಬ ವೈರಿಯ ವಿರುದ್ಧ ಒಂದಾಗಿ ಹೋರಾಡಿದ ಪ್ರಣಾಲಿಯು ಸದ್ಯಕ್ಕೆ ಭಾರತವನ್ನು ಆಳಬಲ್ಲುದಾಗಿತ್ತು. ಆದರೆ ಹೋರಾಟದ ಕಾಲವು ಮುಗಿದೊಡನೆ ಉದ್ದೇಶವು ಸಫಲವಾದುದರಿಂದ ಆ ಒಕ್ಕಟ್ಟು ಒಂದುತನಗಳು ಮುಂದೆ ಉಳಿಯಲಿಲ್ಲ.

ಭಾರತವು ಸ್ವತಂತ್ರವಾದೊಡನೆಯೇ ಹಿಂದು ಮುಸ್ಲಿಂ ಜಾತೀಯತೆಯ ಬೇಗೆಯು ಭರದಿಂದ ಹಬ್ಬಿತು. ಈ ಬೇಗೆಯಲ್ಲಿ ಸಾವಿರಗಟ್ಟಲೆ ಜನರ ಪ್ರಾಣಹಾನಿಯಾಯಿತಷ್ಟೇ ಅಲ್ಲದೆ, ಸಾರ್ವತ್ರಿಕ ಅವ್ಯವಸ್ಥೆ ಗೊಂದಲಗಳಿಗೂ ಕಾರಣವಾಗಿ ಸರಕಾರದ ತಲೆ ತಿಂದಿತು. ದೇಶದ ಇಬ್ಭಾಗವು "ನಿರ್ವಾಸಿತ" ಸಮಸ್ಯೆಗೆ ಕಾರಣವಾಯಿತು.

ಸುಮಾರು ಎಪ್ಪತ್ತು ಲಕ್ಷ ಹಿಂದೀಯರು ಪಾಕಿಸ್ತಾನದಿಂದ ಹೊರದೂಡಲ್ಪಟ್ಟು ಭಾರತದಲ್ಲಿ ಇಂದು ಬದುಕಲು ಪ್ರಯತ್ನಪಡುತ್ತಲಿದ್ದಾರೆ. ಭಾರತದ ಜನಜೀವನದಲ್ಲಿಯ ಆರ್ಥಿಕ ಕೆಳಮಟ್ಟ ಹಾಗೂ ಕಷ್ಟ ಕಾರ್ಪಣ್ಯಗಳು-ಅವು ನೂರಾರು ವರುಷಗಳಿಂದ ಅಸ್ತಿತ್ವದಲ್ಲಿದ್ದರೂ-ಇಂದು ಸ್ವತಂತ್ರ ಭಾರತ ಸರಕಾರದ ತಲೆಕೆಡಿಸುವ ವಿಷಯಗಳಾಗಿರುತ್ತವೆ. ಸರಕಾರಕ್ಕೆ ಇದೊಂದು ಸಮಸ್ಯೆಯಾಗಿ ಕುಳಿತಿದೆ. ಒಂದುಕಾಲಕ್ಕೆ ಜನತೆಯ ಈ ಬಡತನದ ಕಷ್ಟ, ಕಾರ್ಪಣ್ಯಗಳೇ ಸ್ವಾತಂತ್ರ್ಯ ದೊರಕಿಸಲು ಕಾರಣವಾದಂತೆ ಈಗ ಸ್ವತಂತ್ರ ಭಾರತ ಸರಕಾರದ ವಿರೋಧೀ ಆಂದೋಲನಕ್ಕೆ ಪೂರಕ ಬರುವ ಹುಚ್ಚು ಹೊಳೆಯಾಗಲಿವೆ. ಇವೇ ಸಂಗತಿಗಳು ಭಾರತದ ಪ್ರಜಾಪ್ರಭುತ್ವ ತತ್ವದ ಸರಕಾರವನ್ನು ಸರಿಯಾಗಿ ನಡೆಗೊಡಿಸದ ಆತಂಕಗಳಾಗಿರುತ್ತವೆ.

ಪರಿಣಾಮಗಳು

ಇವೆಲ್ಲ ಆಗಿನ ಮತ್ತು ಈಗಿನ ಘಟನೆಗಳು ಮಜದೂರ ಆಂದೋಲನದ ಮೇಲೆ ಪರಿಣಾಮ ಮಾಡದೆ ಇಲ್ಲ. ಈ ಟ್ರೇಡ್ ಯೂನಿಯನ್ ಆಂದೋಲನವು ಪ್ರಾಯಶಃ ಜಾಗತಿಕ ಪ್ರಥಮ ಯುದ್ಧಾನಂತರದ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಭಾರತದಲ್ಲಿ ಪ್ರಾರಂಭವಾಯಿತು. ಆಗ ಕೂಲಿಕಾರ ಲೋಕದಲ್ಲಿ ಭಾರತ ಸ್ವಾತಂತ್ರ್ಯ, ರಶಿಯಾದ ಕ್ರಾಂತಿ, ಸಮತಾವಾದ ಈ ಮೂರು ವಿಷಯಗಳು ಸುತ್ತಾಡುತ್ತಿದ್ದವು. ಮುಷ್ಕರಗಳು, ಸಣ್ಣ ಪುಟ್ಟ ಗೊಂದಲಗಳೂ ಸಂಭವಿಸುತ್ತಿದ್ದವು. ಆದರೆ ಆಗ ಕೂಲಿಕಾರರಲ್ಲಿ ತಕ್ಕ ಸಂಘಟನೆ ಮಾತ್ರ ಇದ್ದಿದ್ದಿಲ್ಲ. ಪರಕೀಯರ ಹಿಡಿತ, ಜಾತಿ ಧರ್ಮಗಳ ತೊಡಕು, ಅಜ್ಞಾನ, ಬಹು ಭಾಷೆ ಪ್ರದೇಶ, ಇವೇ ಮೊದಲಾದವುಗಳು ಕೂಲಿಕಾರ ಸಂಘಟನೆಗೆ ತೊಡಕಾಗಿದ್ದವು.

ಬಳಿಕ ಅಖಿಲಭಾರತ ಟ್ರೇಡ ಯೂನಿಯನ್ ಆಂದೋಲನವು ಪ್ರಾರಂಭವಾಯಿತು. ಈ ಆಂದೋಲನವು ಕಲಿತವರಿಂದ ಹಾಗೂ ಉದ್ಯೋಗೀ ಜನರಿಂದಲೇ ಪ್ರಾರಂಭಿಸಲ್ಪಟ್ಟಿತು. ಧರ್ಮ ಪ್ರಸಾರದ ಅಥವಾ ಸಾಮಾಜಿಕ ಹಿತ ಪ್ರಚಾರದ ಕಾರ್ಯದಲ್ಲಿಯಂತೆಯೇ ಈ ಕೂಲಿಕಾರ ಆಂದೋಲನದಲ್ಲಿಯೂ "ಉಪದೇಶಕರ" ತಂಡವೇ ಈ ಕಾರ್ಯವನ್ನು ಭರದಿಂದ ಮುಂದೆ ಸಾಗಿಸಿ ಭಾರತದ ಕೂಲಿಕಾರ ಆಂದೋಲನವು ಪ್ರಾಯಶಃ ಸೋಶಿಯಾಲಿಜಂ, ಕಮ್ಯೂನಿಜಂ, ಗಾಂಧಿಯಿಜಂ ಈ ಮೂರು ಇಜಂಗಳ ತಳಹದಿಯ ಮೇಲೆಯೇ ಪ್ರಸಾರವಾಗುತ್ತ ನಡೆಯಿತು.

"ಕೂಲಿಕಾರರ ಸ್ವರ್ಗ"ವೆಂದು ಕರೆಯಲಾಗುತ್ತಿರುವ ರಶಿಯಾದ ಕಮ್ಯೂನಿಜಂ ಪ್ರಣಾಲಿಯೇ ಹೆಚ್ಚು ಪ್ರಭಾವದಿಂದ ಕೂಲಿಕಾರ ಜಗತ್ತಿನಲ್ಲಿ ಆಕರ್ಷಕವಾಯಿತು. ಕಾರ್ಲಮಾರ್ಕ್ಸ, ಲೆನಿನ್ ಸ್ಟ್ಯಾಲಿನ್ನರೇ ಇನ್ನೂ ಭಾರತದ ಕೆಲಸಗಾರರ ಮೈಯೊಳಗಿನ ಬಿಡಿಸಿದ ದೆವ್ವವಾಗಿರುವುದನ್ನು ಕಾಣಬಹುದು.

ಹೀಗೆ ಕೂಲಿಕಾರರ ಆಂದೋಲನವು ಪ್ರಾರಂಭವಾದರೂ, ಭಾರತದಲ್ಲಿ ಸುಮಾರು ನೂರಕ್ಕೆ ಎಪ್ಪತ್ತೈದರಕ್ಕಿಂತಲೂ ಹೆಚ್ಚಿದ್ದ ಒಕ್ಕಲತನದ ಉದ್ಯೋಗದಲ್ಲಿ ದುಡಿಯುತ್ತಿರುವ ಕೆಲಸಗಾರರ ಬಗ್ಗೆ ಏನೂ ನಡೆಯದಿದ್ದುದೂ ಮತ್ತು ಅವರು ಇನ್ನೂ ಅಸಂಘಟಿತರಾಗಿದ್ದುದೂ ಆಶ್ಚರ್ಯದ ಸಂಗತಿಯೇ ಸರಿ. ಹೊಲದ ಕೆಲಸಗಾರರಾದ ಇವರಲ್ಲಿ ಅನೇಕರು ಹೊಲವಿಲ್ಲದವರಾಗಿದ್ದಾರೆ; ಕಿತ್ತೆಸೆಯಲ್ಪಟ್ಟಿದ್ದಾರೆ. ಇಷ್ಟೇ ಅಲ್ಲದೆ ಮೊದಲೇ ಕೆಲಸ ದೊರೆಯಲಾರದ ಸ್ಥಿತಿಗಿಳಿದು ಪಟ್ಟಣಗಳಲ್ಲಿ ಬಂದು ತುಂಬಿಕೊಂಡು ಕೆಲಸ ದೊರೆಯದೆ ಒದ್ದಾಡುತ್ತಲಿದ್ದಾರೆ.

ಇದರ ಪರಿಣಾಮವಾಗಿಯೇ ಇಂದು ಕಾರಖಾನೆಗಳಲ್ಲಾಗಲಿ, ಹೊಲಗಳಲ್ಲಾಗಲಿ "ಉತ್ಪಾದನೆ"ಯ ಕೊರತೆ ಭಾರತೀಯರನ್ನೂ ಭಾರತ ಸರಕಾರವನ್ನೂ ಪೀಡಿಸುತ್ತಲಿದೆ. ಒಂದು ಕಾಲಕ್ಕೆ ಬ್ರಿಟಿಶರು ನಮ್ಮಲ್ಲಿಯ ಔದ್ಯೋಗೀಕರಣವನ್ನು ಹಿಂದೆಳೆವುದನ್ನು ಹಳಿಯುತ್ತಿದ್ದ ನಮ್ಮಲ್ಲಿಯೇ ಅದೇ ಬಗೆಯ ಒಂದು ದೊಡ್ಡ ಜನಜಂಗುಳಿ (ಅರ್ಥಾತ್ ಅವರು ಶ್ರೀಮಂತರು) ಯನ್ನು ಕಾಣಬಹುದಾಗಿದೆ.

ಟ್ರೇಡ್ ಯೂನಿಯನ್ನುಗಳು

೧೯೪೧ ರಲ್ಲಿ ಅಂತರರಾಷ್ಟ್ರೀಯ ಕೂಲಿಕಾರ ಸಂಘದಿಂದ ಭಾರತವು ಔದ್ಯೋಗೀಕ ರಾಷ್ಟ್ರವೆಂದು ಅಂಗೀಕರಿಸಲಾಯಿತು. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ ಸಂಸ್ಥೆ ಮೈದಾಳಿತು. ಜಾಗತಿಕ ದ್ವಿತೀಯ ಮಹಾಯುದ್ಧಕಾಲದಲ್ಲಿ ಇದು ಸಂಪೂರ್ಣವಾಗಿ ಕಮ್ಯೂನಿಸ್ಟ ಕೈವಶವಾಯಿತು. ಲೆನಿನ್ನನು ಹೇಳಿದಂತೆ "ಟ್ರೇಡ್ ಯೂನಿಯನ್ನುಗಳು ಕಮ್ಯೂನಿಜಂದ ಪಾಠಶಾಲೆಗಳು" ಆದವು. ಏಕೆಂದರೆ ಆಗ ಕಾಂಗ್ರೆಸ್ ಹಾಗೂ ಸೋಶಿಯಾಲಿಸ್ಟ ಧುರೀಣರು ಬಹುಶಃ ಸೆರೆಮನೆವಾಸದಲ್ಲಿದ್ದರು. ಕಮ್ಯೂನಿಸ್ಟರ ಕುಣಿದಾಟಕ್ಕೆ, ಅವರು ಯುದ್ಧಕ್ಕೆ ನೆರವು ನೀಡಬೇಕೆಂಬ ಮತದವರಾದ್ದರಿಂದ, ಬ್ರಿಟಿಶರೂ ಢೋಲನ್ನು ಬಾರಿಸಿದರು.

ಯುದ್ಧಕಾಲದಲ್ಲಿಯೇ "ಇಂಡಿಯನ್ ಫೆಡರೇಶನ್ ಆಫ ಲೇಬರ್" ಎಂಬ ಸಂಸ್ಥೆಯೂ ಪೈದಾಯಿತು. ರಾಯಿಟರು ಇದರ ಸೂತ್ರಧಾರರಾಗಿದ್ದರು. ಇವರು ಕಮ್ಯೂನಿಸ್ಟರಾಗಿದ್ದರೂ, ಯುದ್ಧಕ್ಕೆ ನೆರವು ನೀಡುವವರಾಗಿದ್ದಾರೆ.

೧೯೪೫ ರಲ್ಲಿ ಕಾಂಗ್ರೆಸ್ ಧುರೀಣರೆಲ್ಲ ಸೆರೆಮನೆಯಿಂದ ಹೊರಗೆ ಬಂದ ಬಳಿಕಂತೂ ಅ. ಭಾ. ಟ್ರೇ. ಯೂ. ಕಾಂಗ್ರೆಸ್ಸು ಕಮ್ಯೂನಿಸ್ಟರ ಕೈಯಲ್ಲಿ ಶುದ್ಧ ರಾಜಕೀಯ ಆಯುಧವಾಯಿತು. ೧೯೪೭ ರಲ್ಲಿ ಕಾಂಗ್ರೆಸ್ ಧುರೀಣರು ಅಖಿಲ ಭಾರತ ನ್ಯಾಶನಲ್ ಟ್ರೇಡಯೂನಿಯನ್ ಕಾಂಗ್ರೆಸ್ಸನ್ನು ಸ್ಥಾಪಿಸಿದರು. ಅದೇ ವರುಷವೇ ಸೋಶಿಯಾಲಿಸ್ಟರು ಕಾಂಗ್ರೆಸ್ ಪಾರ್ಟಿಯಿಂದ ಈ ಕಾರಣಕ್ಕಾಗಿ ಸಿಡಿದು ಬೇರೆ ಹೋದರು. ಆದರೂ ರಾಷ್ಟ್ರೀಯ ದೃಷ್ಟಿಯಿಂದ ಅ. ಭಾ. ಟ್ರೇ. ಯೂ. ಕಾಂಗ್ರೆಸ್ಸ ಪಕ್ಷಪಾತವೆಂದು ಬಗೆದು ತಮ್ಮ ಅನುಯಾಯಿಗಳಿಗೆ ಅದರಿಂದ ಹಿಂದೆಗೆಯಲು ಹೇಳಿದರು. ಹೀಗೆ ಕಾಂಗ್ರೆಸ್ ಹಾಗೂ ಕಮ್ಯೂನಿಸ್ಟರಿಬ್ಬರಿಂದಲೂ ದೂರ ಸಿಡಿದ ಸೋಶಿಯಾಲಿಸ್ಟರು "ಹಿಂದ್ ಮಜದೂರ ಸಭಾ" ಎಂಬ ಹೆಸರಿನಲ್ಲಿ ಕೂಲಿಗಾರರ ಸಂಸ್ಥೆಯನ್ನು ನಡೆಸುವರಾಗಿದರು ಇದು ಆದುದು ೧೯೪೮ ರಲ್ಲಿ. ಇವರಲ್ಲಿಯೂ ಕ್ರಾಂತಿಕಾರಕ ಸೋಶಿಯಾಲಿಸ್ಟ ಮತ್ತು ಕಮ್ಯೂನಿಸ್ಟರು ಕೂಡಿಕೊಂಡು ಶ್ರೀ ಮೃಣಾಲಕಾಂತಿ ಬೋಸರ ನೇತೃತ್ವದಲ್ಲಿ "ಯುನಾಯಿಟೇಡ್ ಟ್ರೇಡ ಯೂನಿಯನ್ ಫೆಡರೇಶನ" ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಹೀಗೆ ಭಾರತದಲ್ಲಿ ನಾಲ್ಕು ಟ್ರೇಡ ಯೂನಿಯನ್ ಫೆಡರೇಶನ್‌ಗಳು ಹುಟ್ಟಿದವು. ಈ ನಾಲ್ಕು ಸಭಾಸದರ ಸಂಖ್ಯೆಯು ಈ ರೀತಿಯಾಗಿದೆ. ಐ. ಎನ್. ಟಿ. ಯು. ಸಿ ಹದಿನಾರು ಲಕ್ಷ, ಹಿಂದ ಮಜದೂರ ಸಭಾ ಆರು ಲಕ್ಷ, ಯುನಾಯಿಟೆಡ್ ಟ್ರೇಡ ಯೂನಿಯನ್ ಫೆಡರೇಶನ್ ಮೂರು ಲಕ್ಷಕ್ಕೆ ಮೀರಿಬಿಟ್ಟಿದೆ. ಎ. ಆಯ್. ಟಿ. ಯು. ಸಿ. ಸುಮಾರು ಒಂಬತ್ತು ಲಕ್ಷವೆಂದು ಹೇಳುತ್ತಿದ್ದರೂ ಅದೀಗ ಮೂರು ಲಕ್ಷಕ್ಕಿಳಿದಿದೆ. ಹೀಗಿದ್ದರೂ, ಮೂವತ್ತು ಕೋಟಿ ಜನಸಂಖ್ಯೆಯ ಭಾರ[illegible]ತೀಯ ಟ್ರೇಡ ಯೂನಿಯನ್ನಿನ ಸದಸ್ಯರ ಒಟ್ಟು ಇಪ್ಪತ್ತೈದು ಲಕ್ಷ ಮಾತ್ರ ಎಂದು ಹೇಳಬಹುದು. [illegible] ಇತರ [illegible] ಕೆಲಸಗಾರರ ಸಂಖ್ಯೆ [illegible]. ಇವರ ಸಂಖ್ಯೆ [illegible] ಕೋಟಿ. ಔದ್ಯೋಗಿಕ [illegible]ದಲ್ಲಿ ಇವರ ಸಂಖ್ಯೆಯು ಸುಮಾರು ಐವತ್ತು ಲಕ್ಷ ಮಾತ್ರ. ಉಳಿದವರೆಲ್ಲರೂ ಒಕ್ಕಲುತನದ ಕೆಲಸಗಾರರು.

ಬೆಳವಣಿಗೆ

ಭಾರತದಲ್ಲಿ ಅಲ್ಲಲ್ಲಿಯ ಪಟ್ಟಣಗಳಲ್ಲಿ ಈ ಟ್ರೇಡ್ ಯೂನಿಯನ್ ಸೆಂಟರುಗಳಿದ್ದರೂ, ಒಂದೇ ಉದ್ಯಮದ ಕೆಲಸಗಾರರ "ನ್ಯಾಶನಲ್ ಫೆಡರೇಶನ್" ಕೂಡಾ ಬರುವುದು ಕ್ವಚಿತ್ತೆಂದೇ ಹೇಳಬೇಕು. ರೇಲ್ವೆ ಹಾಗೂ [illegible] ಯ್ಯುವ ಕೆಲಸಗಾರರ ನ್ಯಾಶನಲ್ ಟ್ರೇಡ ಯೂನಿಯನ್ ಫೆಡರೇಶನ್ನುಗಳಿದ್ದರೂ ಉಳಿದ ಉದ್ಯೋಗಗಳ ಕೆಲಸಗಾರರ ಫೆಡರೇಶನ್ನುಗಳ [illegible] ವಾಗಿ ಬುದ್ಧಿ [illegible] ಕಾರ್ಯಕರ್ತರ ಕೊರತೆಯೇ ಕಾರಣ. ಈ ಯೂನಿಯನ್ನುಗಳಲ್ಲಿ ಕೆಲಸ ಮಾಡುವ ಬುದ್ಧಿವಂತ ಕಾರ್ಯಕರ್ತರು. ಇದರಿಂದ ತಮ್ಮ ಜೀವನವನ್ನು ಸಾಗಿಸಲು ಸಂಘದಲ್ಲಿ ದುಡಿಯುವವರ ಕೊರತೆಗೆ ಕಾರಣವೆಂದು ಕಂಡು ಬಂದಿದೆ

ಈ ಆಂದೋಲನದಿಂದ ಕೂಲಿಕಾರರ ಜಗತ್ತಿನಲ್ಲಿ, ಈಗಿನ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿಯೂ, ಸುಧಾರಣೆಗಳು ನಡೆದು ಅವರ ಜೀವನವು ಸುಖದಲ್ಲಿ ಸಾವಕಾಶವಾಗಿಯೂ, ಸಾಗಿರುತ್ತದೆ. ಎಷ್ಟೋ ಕಾರ್ಖಾನೆಗಳಲ್ಲಿ, [illegible] ಮನೆ, ಮನರಂಜನಾ ಸಂಘಗಳು, ಔಷಧೋಪಚಾರ ಶಾಲೆ, ಶಿಶು ಶಾಲೆ ಮೊದಲಾದವುಗಳು ಪ್ರಾರಂಭವಾಗಿವೆ. ಕೂಲಿಕಾರರಿಗಾಗಿ ಮನೆಕಟ್ಟುವ ಕಾರ್ಯವೂ ನಡೆದಿರುತ್ತದೆ.

ಹಾರಯಿಕೆ

ಈ ಎಲ್ಲ ಕಾರ್ಯಗಳಿಂದ, ಟ್ರೇಡ ಯೂನಿಯನ್ನಿನ ಮುಖ್ಯ ಉದ್ದೇಶವಾದ, ಮಾಲಿಕರ ಹಾಗೂ ಒಡೆಯರ ನಡುವೆ ನಿಜವಾದ ಸಂಬಂಧವು ಮಾತ್ರ ಸಾಧಿಸ[illegible] [illegible] ಈ [illegible] ಪ್ರಗತಿಪರವಾಗಿಯೇ ಬೆಳೆಯುತ್ತ ನಡೆದಿದೆಯೆಂದು ಧಾರಾಳವಾಗಿ ನುಡಿಯಬಹುದು. ಅಲ್ಲದೆ ಸದ್ಯಕ್ಕೆ ಅಧಿಕಾರದಲ್ಲಿದ್ದ ಕಾಂಗ್ರೆಸ ಪಕ್ಷವೂ, ಈ ಆಯ್. ಎನ್. ಟಿ. ಯು. ಸಿ. ಗೆ ಬಹಳ ಬೆಂಬಲಕೊಡುತ್ತಿರುವುದಲ್ಲದೆ. ದೇಶದ ಏಳ್ಗೆಗೆ ಇದೊಂದು ಅವಶ್ಯ ಆಂದೋಲನವೆಂದು ಬಗೆದಿರುವದೆ. ಆಯ್. ಎನ್. ಟಿ. ಯು. ಸಿ. ಯು ಸ್ವತಂತ್ರವಾಗಿ ಸ್ವಾವಲಂಬಿಯಾಗಿ, ಕೂಲಿಕಾರರ ಜಗತ್ತಿನ ಹಿತಸಂಬಂಧಗಳನ್ನು ರಕ್ಷಿಸಲು ಹೆಣಗಾಡುವ ಸಂಸ್ಥೆಯಾಗಬೇಕು. ಇದರಿಂದಲೇ "ಟ್ರೇಡ ಯೂನಿಯನ್"ದ ನಿಜವಾದ ಉದ್ದಿಷ್ಟವು ಸಫಲವಾಗುವುದು. ಈ ದಿಶೆಯತ್ತ ಈಗಾಗಲೇ ಕಾರ್ಯ ನಡೆಸಿದ್ದ ಟ್ರೇಡ ಯೂನಿಯನ್ ಸಂಸ್ಥೆಗಳು, ಕೂಲಿಕಾರರ, ಒಡೆಯರ ಹಾಗೂ ಯೂನಿಯನ್ ಕಾರ್ಯಕರ್ತರ ಸ್ನೇಹ ಸಹಕಾರಗಳಿಂದ ಉತ್ತರೋತ್ತರ ಅಭಿವೃದ್ಧಿ ಪಡೆದು ಕಾರ್ಮಿಕರ ಕಲ್ಯಾಣಕ್ಕಾಗಿಯೇ [illegible] ವಿಷಯದಲ್ಲಿ ಸಂಶಯವಿಲ್ಲ

ಹೊಸಪೇಟೆಯ ಜಿಲ್ಲಾ ಮುನ್ಸಿಫರ ಕೋರ್ಟಿನಲ್ಲಿ.

ಒ. ಯಸ್. 311/49

[illegible] ಹಿಂದಲ ಮುದಿಮಲ್ಲಪ್ಪ ... ವಾದಿ

Vs.

1) ಕಾಪ್ಪರದ ಸಂಜಪ್ಪ
2) ಕಮ್ಮತ್ ಚನ್ನಬಸಪ್ಪ } ಪ್ರತಿವಾದಿಗಳು
3) ಕಮ್ಮತ್ ಶಿದ್ದಲಿಂಗಪ್ಪ
4) ಕಮ್ಮತ್ ಬಸಪ್ಪ.

3 ಮತ್ತು 4 ಪ್ರತಿವಾದಿಗಳು ವಟ್ಟಿ [illegible] ತಾ|| [illegible] ನಂಬರಿನಲ್ಲಿ ವಾದಿ I A. 735 48 O. S. 136 48 ನಂಬರಿನಲ್ಲಿ [illegible] ದಾವಾ ಮಾಡಿರುತ್ತಾನೆ. 3 ಮತ್ತು 4 ಪ್ರತಿವಾದಿಗಳು 30-11-49 ನೇ ತೇದಿ ಹಗಲು 11 ಗಂಟೆಗೆ ಖುದ್ದಾಗಲಿ ವಕೀಲರದ್ವಾರವಾಗಲಿ ಹಾಜರಾಗದಿದ್ದರೆ ದಾವೆಯಲ್ಲಿ ಅವರಮೇಲೆ ಎಕ್ಸಪಾರ್ಟ ಆರ್ಡರಾಗುತ್ತದೆ.

ಎ. ಆರ್. ಕೃಷ್ಣರಾವ್,
ವಾದಿಯ ಅಡ್ವೊಕೇಟು.

ಬಳ್ಳಾರಿ ಸ್ಮಾಲ್ ಕಾಸ್ ಕೋರ್ಟಿನಲ್ಲಿ

S C 611.49

ಸಂಗನಕಲ್ಲು B. ವೀರನಗೌಡ ಬಳ್ಳಾರಿ. ....ವಾದಿ

ಬಾಲಿಕರ ಬೆಂಡೆನಾಗಪ್ಪ,
ಮೋಕ-ಗೋನಹಾಳು. ....ಪ್ರತಿವಾದಿ

— ಪ್ರತಿವಾದಿಗೆ ನೋಟೀಸು —

ಮೇಲಿನ ನಂಬರಿನಲ್ಲಿ ವಾದಿಯು— ಪ್ರತಿವಾದಿಯಾದ ನಿಮ್ಮ ಮೇಲೆ ನೀವು [illegible] ಬಾಕಿಗಾಗಿ ದಾವಾಮಾಡಿರುತ್ತಾನೆ. ಸದರಿ ವಾಯಿದೆಯು 30-11-'49 ಕ್ಕೆ ಹಾಕಲಾಗಿದೆ. ಆದಿನ ಖುದ್ದಾಗಲಿ ವಕೀಲರಮೂಲಕವಾಗಲಿ ನೀವು ಹಾಜರಾಗದಿದ್ದರೆ ನಿಮ್ಮಮೇಲೆ ಎಕ್ಸಪಾರ್ಟ ಡಿಕ್ರಿಯಾಗುವದೆಂದು ಈ ಮೂಲಕ ತಿಳಿಸಲಾಗಿದೆ.

ಜಿ. ಶ್ರೀಧರಮೂರ್ತಿ,
ವಾದಿಯ ಅಡ್ವೊಕೇಟ್, ಬಳ್ಳಾರಿ.

27 ನೆಯ ತಾ. ಆದವಾನಿಯಲ್ಲಿ ಹರ ಕಾಳಿವಾಚರಿಸಲ್ಪಟ್ಟ ಕರ್ನಾಟಕ ಏಕೀಕರಣ ಸಂಘದ ಅಧ್ಯಕ್ಷತೆಯಲ್ಲಿ ಸಭೆ ಏರ್ಪಡಿಸಲಾಗಿತ್ತು.- ಆದವಾನಿ- ಆಲೂರು- ರಾಯದುರ್ಗಗಳನ್ನು ಆಂಧ್ರದಲ್ಲಿ ಸೇರಿಸಬಾರದೆಂಬುದೇ ಸಭೆ ಮತ್ತು ಆಂದೋಳನದ ಉದ್ದೇಶ.

——

ಹಿಂದುಸ್ಥಾನದ ರೈಲ್ವೆಸ್ಟೇಷನ್ನುಗಳಲ್ಲಿ ಇನ್ನು ಮೇಲೆ ರಾಷ್ಟ್ರಭಾಷೆ ಹಿಂದಿಯಲ್ಲಿ ಊರಹೆಸರು, ಬರೆಯಲಾಗುವುದು ಇಂಗ್ಲೀಷಿಗೆ ದ್ವಿತೀಯ ಸ್ಥಾನ ಕೊಡಲಾಗುವುದು.

....

ಭಾರತದಲ್ಲಿ ಪ್ರತಿವರ್ಷ ಕ್ಷಯರೋಗಕ್ಕೆ ೫ ಲಕ್ಷಜನರು ತುತ್ತಾಗುತ್ತಿರುವರೆಂದೂ-ನಿವಾರಣೆಗಾಗಿ ಕೋಟಿಗಟ್ಟಲೆ ರೂ. ಗಳ ಅವಶ್ಯಕತೆಯಿದೆಯೆಂದೂ ಶ್ರೀಮತಿ ರಾಜಕುಮಾರಿ ಅಮೃತಕೌರರು ಇಂದಿಲ್ಲಿ ಕ್ಷಯರೋಗಿಗಳ ಕಾರ್ಯಕರ್ತರ ಏಳನೆಯ ಪರಿಷತ್ತನ್ನು ಪ್ರಾರಂಭಿಸುತ್ತ ಹೇಳಿದರು.

—:—

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

[೦]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (**Fixed Deposits**):— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ. ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ. ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 46)47

ನವಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

28—11—49

To

Sri.............. ವಾಚನಾಲ...
...ಗ ಕಾಂಗ್ರೆ...
...ಕ್ಷ ಧುರೀ...
...ಸದಲ್ಲಿಗ್ದರು.
...ಕ್ಕೆ, ಅವರು ...
......ಬು ಮುತದ...
....

Pirnted at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವ್.

ವರ್ಷ ೧೨ | ಸೋಮವಾರ ೫ ಡಿಸೆಂಬರ್ ೧೯೪೯ | ಸಂಚಿಕೆ ೪೫

ಸರ್ವತೋಮುಖ ಔದ್ಯೋಗೀಕರಣವಿಲ್ಲದೆ ಆರ್ಥಿಕ ಅಭಿವೃದ್ಧಿ ಸಾಧಿಸದು

----- ೦ -----

ಔದ್ಯೋಗೀಕರಣ ಪಿತಾಮಹ ವಿಶ್ವೇಶ್ವರಯ್ಯನವರ ತಜ್ಞವಾಣಿ

—●—

ಮೊನ್ನೆ ಹೈದರಾಬಾದಿನಲ್ಲಿ ನಡೆದ ಅ. ಭಾ. ಕಾರಖಾನೆದಾರರ ಸಂಘದ ವಿಶೇಷ ಅಧ್ಯಕ್ಷ ಪೀಠದಿಂದ ಅದರ ಸ್ಥಾಯೀ ಅಧ್ಯಕ್ಷರಾದ ಸರ್ ಎಮ್. ವಿಶ್ವೇಶ್ವರಯ್ಯನವರು, ಭಾರತದ ಔದ್ಯೋಗೀಕರಣಕ್ಕೆ ಐದು ಅಥವಾ ಹತ್ತು ವರ್ಷಗಳ ಯೋಜನೆಯನ್ನು ತಯಾರಿಸುವ ಆವಶ್ಯಕತೆಯನ್ನು ಒತ್ತಿ ಹೇಳಿ, ಸಾಧಕ ಬಾಧಕಗಳನ್ನು ಪರಿಶೀಲಿಸಿ ತಕ್ಕ ಯೋಜನೆಯನ್ನು ಸಿದ್ಧಪಡಿಸಿಟ್ಟುಕೊಂಡಿದ್ದರೆ, ಬಂಡವಾಳ ಒದಗಬಹುದಂತೆ ಕಾರ್ಯರೂಪಕ್ಕೆ ತರಬಹುದು ಎಂದರು.

ಅವರ ಭಾಷಣದ ಮುಖ್ಯ ಅಂಶಗಳು ಹೀಗಿವೆ: —

೧. ಬಂಡವಾಳ ಒದಗಿಸಿಕೊಳ್ಳುವ ರೀತಿ

ಭಾರತೀಯ ಔದ್ಯೋಗೀಕರಣಕ್ಕೆ ಬಂಡವಾಳ ಒದಗಿಸಿಕೊಳ್ಳುವುದೇ ಮುಖ್ಯವಾದುದು. ಇದಕ್ಕಾಗಿ ಹಣವಂತರು ತಮ್ಮ ಹಣದ ಚೀಲವನ್ನು ಸಡಲಿಸುವಂತೆ ಮನವೊಲಿಸಬೇಕು. ಇದಾಗದಿದ್ದರೆ ಅಮೇರಿಕೆಯಿಂದ, ಇಂಗ್ಲೆಂಡ್ ಸಂತೆ, ಬಂಡವಾಳವನ್ನು ಒದಗಿಸಿಕೊಳ್ಳಬೇಕು.

೨. ಔದ್ಯೋಗಿಕ ಕುಶಲರ ಒದಗು

ವಿದೇಶಗಳಿಂದಲೇ ಡಿಗ್ರಿ ಪಡೆದು ಬಂದ ಅನೇಕ ಭಾರತೀಯ ಮೇಧಾವಿಗಳು, ಉದ್ಯೋಗಗಳಲ್ಲೂ ಇತರ ಖಾಸಗಿ ಸಂಸ್ಥೆಗಳಲ್ಲೂ ಇದ್ದಾರೆ ಇವರ ಸೇವೆಯನ್ನು ಸರಕಾರವು ಒದಗಿಸಿಕೊಳ್ಳಬೇಕು. ನಿಪುಣರನ್ನು ಶೋಧಿಸಿ ತೆಗೆದು, ಉತ್ತೇಜನ ಕೊಡಲು ಸರ್ಕಾರವು ಪ್ರಯತ್ನ ಮಾಡುತ್ತಿಲ್ಲ. ಜಾಹೀರಾತುಗಳನ್ನು ಕೊಟ್ಟು ಬಂದ ಜಾಹೀರಾತುಗಳನ್ನು ಸ್ವೀಕರಿಸುವುದು ಇಲ್ಲ. ತಿರಸ್ಕರಿಸುವುದು ಇವರಲ್ಲೇ ಮಗ್ನವಾಗಿದೆ. ಇದು ಗುಲಾಮಗಿರಿಯಿಂದ ಬೆಳೆದು ಬಂದ ಒಂದು ಮೋಡಿ ಪರಂಪರೆ. ಸರ್ವಸಾಧಾರಣ (ಅಗ್ಗದಲ್ಲಿ ದೊರೆಯುವ) ಭಾರತೀಯ ಔದ್ಯೋಗಿಕ ನಿಪುಣರನ್ನೇ ಸಾಮಾನ್ಯವಾಗಿ ತೆಗೆದುಕೊಳ್ಳುತ್ತಿರುವುದರಿಂದ ಪರದೇಶಗಳಲ್ಲಿ ನಿಪುಣರು ಮಾಡಿ ತೋರಿಸಿದಂಥ ಸಾಹಸ ಕೃತಿಗಳನ್ನು ಮಾಡಲು ಅಸಮರ್ಥವಾಗಿವೆ. ವಿದೇಶಗಳಲ್ಲಿ, ಔದ್ಯೋಗೀಕರಣ ಸಂಸ್ಥೆಗಳು ವಿಜ್ಞಾನಶಾಲೆಗೆ ಹೋಗಿ, ಬುದ್ಧಿವಂತರೆನಿಸಿಕೊಂಡ ವಿದ್ಯಾರ್ಥಿಗಳನ್ನು ಗೊತ್ತುಹಿಡಿದವರು ಡಿಗ್ರಿ ಪಡೆಯುದಕ್ಕಿಂತ ಮುಂಚೆಯೇ ಅವರನ್ನು ಕೆಲಸಕ್ಕೆ ಸೇರಿಸಿಕೊಂಡು ಉತ್ತೇಜನ ಕೊಡುತ್ತಾರೆ ಇದು ಸರಕಾರ ಗಮನಿಸತಕ್ಕ ವಿಷಯ.

೩. ಖಾಸಗಿ ಉದ್ಯಮಗಳಿಗೆ ಸರ್ಕಾರ ಸಾಕಷ್ಟು ಉತ್ತೇಜನ ಕೊಡಲಿಲ್ಲ

ಪ್ರಮುಖ ಕೈಗಾರಿಕೆಗಳಾದ ಆಟೋಮೊಬೈಲ್, ಸೈಕಲ್ ಉದ್ಯೋಗಕ್ಕೆ ಸರ್ಕಾರ ಸಹಾಯ ಮಾಡಿ, ಇವುಗಳಿಗಾಗಿ ಪರದೇಶಕ್ಕೆ ಹರಿಯುತ್ತಿರುವ ಹೊನ್ನಿನ ಹೊಳೆಯನ್ನು ತಡೆಹಿಡಿಯಬೇಕಾಗಿತ್ತು

೪. ಮಡಿ ಮಡಿ ಎಂದು ಕೂಡುವ ಹೊತ್ತಲ್ಲ ಇದು

ಔದ್ಯೋಗಿಕ ರಾಷ್ಟ್ರೀಕರಣ, ಡಿವಿಡೆಂಡ್ಸ್ ಮೇಲೆ ಹತೋಟಿ, ಮದ್ಯಪಾನ ಪ್ರತಿಬಂಧ ಮುಂತಾದವುಗಳನ್ನು ಇನ್ನು ಸ್ವಲ್ಪ ಕಾಲ ಮುಂದೂಡಬೇಕು. ಇವು ಮತ್ತು ಇಂತಹ ಇತರ ಆದರ್ಶ ಕ್ರಮಗಳು, ಎಲ್ಲಿಯವರೆಗೆ ದೇಶದಲ್ಲಿ ಅರ್ಧ ಹೊಟ್ಟೆ ಅಥವಾ ಹಸಿವಿನ ತಾಂಡವ ನೃತ್ಯ ನಡೆಯುವದೋ, ಮತ್ತು ಎಲ್ಲಿಯವರೆಗೆ ಬಹುತಾಂಶ ಜನರು ನಿರಕ್ಷರರಾಗಿರುವರೋ, ಅಲ್ಲಿಯವರೆಗೆ ಪ್ರಯೋಜನಕಾರಿಗಳಾಗವು.

೫. ದೇಶದ ಭದ್ರತೆಗಾಗಿ ಮುಂಜಾಗ್ರತೆ ವಹಿಸಬೇಕು

ದೇಶದ ಭದ್ರತೆಗೆ ಗಂಡಾಂತರ ಬಾರದಂತೆ ತಕ್ಕ ಮುಂಜಾಗ್ರತೆಯ ಉಪಕ್ರಮಗಳನ್ನು ತೆಗೆದುಕೊಳ್ಳಲು, ಒಂದು ತಜ್ಞರು ಹಾಗೂ ಮುಂದಾಳುಗಳಿಂದ ಕೂಡಿದ ಸಮಿತಿಯನ್ನು ರಚಿಸಬೇಕು. ದೇಶಕ್ಕೆ ಗಂಡಾಂತರವನ್ನುಂಟು ಮಾಡುವ ಪರಿಸ್ಥಿತಿಗಳು ಯಾವುವೆಂದರೆ:—

೧) ಆದಾಯದಲ್ಲಿ ಬಡಾವಣೆಯಿಲ್ಲದೆ, ಪ್ರಜೋತ್ಪತ್ತಿಯನ್ನು ಹೆಚ್ಚಿಸುವದು.

೨) ಪರದೇಶಗಳ ಆಕ್ರಮಣದಿಂದ ದೇಶವನ್ನು ಸಂರಕ್ಷಿಸಲು ಮಾಡಿಕೊಂಡಿರುವಂಥ ಅಪೂರ್ಣಸಿದ್ಧತೆ.

೩) ಯುದ್ಧ ಸಂಭವಿಸಿದಲ್ಲಿ, ದೇಶಕ್ಕೆ ಸಿಗದೇ ಇರಬಹುದಾದ ಪೆಟ್ರೋಲ, ಮಿನರಲ್ ಆಯಿಲ್‌ಗಳ ನ್ಯೂನತೆಯಿಂದುಂಟಾಗುವ ಪರಿಸ್ಥಿತಿ.

೬. ರಾಷ್ಟ್ರದ ಆತ್ಮಗೌರವಕ್ಕೆ ಧಕ್ಕೆಉಂಟಾಗುವಂಥ ಪ್ರಚಾರ ಬೇಡ

ಸತ್ಯಾಗ್ರಹ, ಶಾಂತಿ, ಅಹಿಂಸೆಗಳನ್ನು ಭಾರತದಲ್ಲಿ ಉಪದೇಶಿಸುತ್ತಿದೆ ದೇಶದ ಸ್ವತಂತ್ರತೆಯನ್ನು ಕಾಯ್ದುಕೊಳ್ಳಲು.

ಪ್ರಜೆಗಳು ಶಕ್ತರಾಗಿರುವಂತೆ, ಸಂರಕ್ಷಣೆಗಾಗಿ ಜೀವದ ಹಂಗು ತೊರೆದು ಕಾದಲು ರಾಷ್ಟ್ರದ ಆತ್ಮ ಗೌರವಕ್ಕೆ ಅವಶ್ಯವಿರುವ ಪೌರುಷಕ್ಕೆ ಧಕ್ಕೆ ತಗಲದಂತೆ, ಈ ತತ್ವಗಳ ಪ್ರಚಾರವನ್ನು ಅವಶ್ಯಕ್ಕಿಂತ ಹೆಚ್ಚು ಉಪದೇಶಿಸಬಾರದು. ನೀವು [illegible] ರಿಗಳಾಗಿದ್ದರೆ ಮಾತ್ರ, ತೋಳವು ತಿನ್ನುತ್ತದೆ, ಎಂದು ಬೆಂಜಮಿನ್ ಫ್ರಾಂಕ್ಲಿನ್ ಹೇಳಿದ್ದನ್ನು ಸರಕಾರ ಗಮನಿಸಲಿ.

೭. ಯುದ್ಧಸಿದ್ಧತೆ ನಡೆಸಿದಂತೆ, ಪ್ರಾಂತಗಳು, ಔದ್ಯೋಗೀಕರಣಕ್ಕೆ ಸ್ಪರ್ಧಿಸಲಿ

ಛಿದ್ರ ವಿಚ್ಛಿದ್ರವಾದ ಭಾರತವನ್ನು ಸಂಘಟಿತ ಭಾರತವನ್ನಾಗಿ ಮಾಡಿದ್ದು ಒಂದು ಮಹಾ ಸಾಧನೆ. ಆದರೆ ಇದರಿಂದ ಒಂದು ಕೊರತೆಯೂ ಉಂಟಾಗಿದೆ ಒಕ್ಕೂಟ ಭಾವದಿಂದ ಸಮಾನಾಧಿಕರಣದಿಂದ ಪ್ರಾಂತಗಳಲ್ಲಿನ ಪರಸ್ಪರ ಔದ್ಯೋಗೀಕರಣ ಸ್ಪರ್ಧೆಗೆ, ಸಾಹಸ ಕೃತ್ಯಗಳಿಗೆ ತಣ್ಣೀರೆರಚಿದಂತಾಯಿತು. ಹೇಗೆ ಯುದ್ಧಕಾಲದಲ್ಲಿ ಪ್ರಾಂತಗಳು, ಸಂಸ್ಥಾನಗಳು, ತಮ್ಮ ತಮ್ಮ ನೈಸರ್ಗಿಕ ಸಿರಿ ಸಂಪತ್ತನ್ನು ಶಕ್ತಿಮೀರಿದ ಪ್ರಯತ್ನದಿಂದ ತಯಾರಿಸಿದ ಸಂಪತ್ತನ್ನಾಗಿ ಮಾಡಿಕೊಂಡವೋ, ಹಾಗೆಯೇ, ಈಗಲೂ ಮಾಡುವಂತೆ, ಪ್ರಾಂತಗಳಿಗೆ ಆರ್ಥಿಕ, ಅಭಿವೃದ್ಧಿ ಯೋಜನೆಗಳ ಬಗ್ಗೆ ಸ್ವಾತಂತ್ರ್ಯ ಕೊಟ್ಟು ಉತ್ತೇಜನಕೊಡುವ ವಿಷಯವನ್ನು ಸರಕಾರ ಪರಿಶೀಲಿಸಬೇಕು.

೮. ಸದ್ಯದ ಬಡತನ ಅಸಹಾಯಕತೆಯು ನಿರ್ಮೂಲವಾಗಲು ಇರುವ ಮುಖ್ಯ ಉಪಾಯವೆಂದರೆ, ಔದ್ಯೋಗೀಕರಣ, ಹಾಗೂ ಸಂಘಟಿತ ಆರ್ಥಿಕ ಚಟುವಟಿಕೆಗಳು.

— —

ಕೊಲೆ:— ನಿಜಾಮ ರೈಲ್ವೆಯ ಇಂಜನಿಯರರಾದ ಎಸ್. ಬಿ. ಸಹಗಲ್ ರವರು [illegible] ಮತ್ತು ಚಂಕಾದ್ರಿ [illegible] ಗಳ ಮಧ್ಯೆ - ಕಮ್ಯೂನಿಸ್ಟರು ಅವರನ್ನು ಗಾಡಿಯಿಂದಿಳಿಸಿ [illegible] ಕೊಂದಿರುವರು ಎಂಜಿನ್ ಡ್ರೈವರ್ ಮತ್ತು ಇತರರನ್ನು ಓಡಿಸಿ ಎಂಜಿನ್ ಕೆಡಿಸಿ ಹೋಗಿರುವರು ಅವರ ಶವವನ್ನು ಹೈದರಾಬಾದಿಗೆ ಒಯ್ದು ಅಲ್ಲಿ ಅಂತ್ಯ ಸಂಸ್ಕಾರವಾಯಿತು.

—○—

ಮದ್ರಾಸ್ ಪ್ರದೇಶ ಕಾಂಗ್ರೆಸ್ [illegible] ವಿಭಾಗ ಸಮಿತಿಯಲ್ಲಿ ಕನ್ನಡಿಗ [illegible] ಸ್ಥಾನ ಬೇಕೆಂದು [illegible]. ಪಿ. ಸಿ. ಸಿ [illegible] ಕಾರ್ಯದರ್ಶಿಗಳು ಒಂದು ಹೇಳಿಕೆ [illegible] ಬಿಟ್ಟಿರುತ್ತಾರೆ.

ನೂರು ಶಿಶುಗಳ ಆಹುತಿ ಕತ್ತೆ ಕಿರುಬಗಳಿಗೆ

ಬೇಟೆಗಾರರನ್ನೇ ಬೇಟೆಮಾಡಬಲ್ಲ ಪ್ರಾಣಿಗಳ ದಾಳಿ !

———

ಸಂಯುಕ್ತ ಪ್ರಾಂತದ ಬಾರಬಂಕಿ ಹತ್ತಿರ ಹಳ್ಳಿಗಳ ಮೇಲೆ ತಂಡ-ತಂಡ ಕತ್ತೆಕಿರುಬಗಳು ದಾಳಿ ಮಾಡಿ, ಐದು ತಿಂಗಳಲ್ಲಿ ನೂರರಷ್ಟು ಶಿಶುಗಳನ್ನು ಎತ್ತಿಕೊಂಡು ಹೋಗಿ ತಿಂದುಹಾಕಿದವು.

ಇಲ್ಲಿಯ ಜನ ಸಾಧಾರಣವಾಗಿ ಹೊರಗೆ ಮಲಗುವರು. ಈ ಪ್ರಾಣಿಗಳು ಸಾಮಾನ್ಯವಾಗಿ, ಮಧ್ಯರಾತ್ರಿ ಹಾಗೂ ನಸುಕಿನ ನಡುವೆ, ಮುಂದೆಕಟ್ಟಿಕೊಂಡು, ಕಳ್ಳರಂತೆ ಬಂದು ಆಕಸ್ಮಾತ ದಾಳಿ ಮಾಡುತ್ತವೆ, ಮಲಗಿದ್ದ ಚಿಕ್ಕವಯಸ್ಕರನ್ನು ಮುತ್ತಿ ಕಚ್ಚಿಕೊಂಡು ಓಡುತ್ತವೆ. ಕತ್ತಲೆಯಲ್ಲಿ ಸುದ್ದಿಲ್ಲದೆ ಬಂದು, ಮಕ್ಕಳನ್ನು ಕಚ್ಚಿ ಹಿಡಿದು ಓಡಿದಾಗಲೇ ಆ ಮಕ್ಕಳ ಹೃದಯ ಬೇಧಕ ಚೀತ್ಕಾರದಿಂದ ಪಾಲಕರಿಗೆ ಎಚ್ಚರ! ಆದರೆ ಆ ಹೊತ್ತಿಗೆ ಕೈ ಮೀರಿರುತ್ತದೆ; ಮಕ್ಕಳು ಹೋಗಿ ಬಿಟ್ಟಿರುತ್ತವೆ.

ಕತ್ತಲೆಯಲ್ಲಿ ಪೊದೆ ಪೊದೆಗಳಲ್ಲಿ ಹಾದು ಅವುಗಳನ್ನು ಹಿಂಬಾಲಿಸುವದು ಅಸಾಧ್ಯ. ಧೈರ್ಯವೂ ಆಗುವದಿಲ್ಲ. ಕತ್ತೆಕಿರುಬಗಳ ಧ್ವನಿ ಒಂದು ತರಹ ಕೇಕೆ ಹಾಕಿ ನಗುತ್ತಿರುವ ಧ್ವನಿಯಂತಿರುವದರಿಂದ, ಆ ಭೀಕರ ಕತ್ತಲೆಯಲ್ಲಿ ಎಂತಹ ಧೈರ್ಯಸ್ಥನಿಗೂ ನಡುಕ ಹುಟ್ಟದೇ ಇರಲಾರದು ಆದರೂ ಮಕ್ಕಳ ಮೇಲಿನ ಪ್ರೇಮದಿಂದ ಈ ಸಾಹಸಕ್ಕೆ ಹೋದ ಕೆಲವರ ಮೇಲೆ ನೂರಾರು ಕತ್ತೆ-ಕಿರುಬಗಳು ಬಿದ್ದು ತಿಂದವಂತೆ! ಈ ಕತ್ತೆ-ಕಿರುಬಗಳು, ಮಕ್ಕಳನ್ನು ಬಾಯಲ್ಲಿ [illegible] ಕೊಂಡು ೬ ಅಡಿ ಎತ್ತರದ [illegible] ಗಳನ್ನು ದಾಟಬಲ್ಲವಂತೆ

ಈಗ ಹಳ್ಳಿಗರು ಬಾಗಿಲು, ಚಿಲಕಗಳನ್ನು ಭದ್ರವಾಗಿ ಹಾಕಿಕೊಂಡು ಮಲಗುತ್ತಾರೆ ಆದರೂ ಈ ಪ್ರಾಣಿಗಳು ಧೈರ್ಯದಿಂದ ನುಗ್ಗಿ [illegible] ಪ್ರಯತ್ನ ಮಾಡುತ್ತವಂತೆ. ಇಲ್ಲಿಯವರೆಗೆ ಈ ಪ್ರಾಣಿಗಳನ್ನು ಬೇಟೆಯಾಡುವದರಲ್ಲಿ ಯಾರೂ ಸಮರ್ಥರಾಗಿಲ್ಲವಂತೆ.

———

ನವಭಾರತಕ್ಕೆ

ಚಂದಾದಾರರಾಗಿರಿ.

ಬದನೆಹಾಳು [ಆದವಾನಿ]

ಗ್ರಾಮ ಕೇಂದ್ರ ಕರ್ನಾಟಕ ಏಕೀಕರಣ ಸಂಘದ ಕಾರ್ಯಕಾರೀ ಅಧಿವೇಶನವು ಶ್ರೀ ರಾಜನಗೌಡರಧ್ಯಕ್ಷತೆಯಲ್ಲಿ ಸಮಾವೇಶವಾಗಿ ಈ ಕೆಳಗಿನ ಠರಾವುಗಳಾದವು.

(೧) ಆಂಧ್ರ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಬಳ್ಳಾರಿಜಿಲ್ಲೆಯ 3 ತಾಲೂಕುಗಳು ನಿರ್ವಿವಾದವುಗಳೆಂದು ಕೇಳ್ಕರರ ಅವಾರ್ಡ ಪ್ರಕಾರಕ್ಕೆ ಠರಾವು ಪಾಸು ಮಾಡಿದುದನ್ನು ಒಪ್ಪಿರುವದು ಮದ್ರಾಸ್ ಮಂತ್ರಿ ಮಂಡಲವನ್ನು ಈ ಸಭೆಯು ನಿಷೇಧಿಸುತ್ತಾ J.V.P. ವರದಿಯಲ್ಲಿ ಕಾಣಿಸಿರುವಂತೆ ಇವು ವಾದಗ್ರಸ್ತ ಪ್ರದೇಶಗಳೆಂದು ಈ ಸಭೆಯು ಸ್ಪಷ್ಟಪಡಿಸುತ್ತದೆ

೨) ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳನ್ನು ಜನಾಭಿಪ್ರಾಯದ ಬೆಂಬಲವಿಲ್ಲದೆ ಆಂಧ್ರಪ್ರಾಂತದಲ್ಲಿ ಸೇರಿಸಿದರೆ ಬಾಪೂಜಿಯವರ ಮಾರ್ಗದಂತೆ ಬಲವಾದ ಆಂದೋಳನವಾಗುವುದು

೩) ನವಂಬರ್ ೧ಳ ನೆಯ ತೇದಿ ಬಳ್ಳಾರಿ ಜಿಲ್ಲಾ ಬೋರ್ಡಿನಲ್ಲಾದ ಠರಾವಿನ, ೨೩ ನೆಯ ದಿನಾಂಕ ಹುಬ್ಬಳ್ಳಿ ವಣಿಕ್ ಸಂಘದ ಆಶ್ರಯದಲ್ಲಾದ ಠರಾವಿನ ಮತ್ತು ೨೭ ನೆಯ ತಾ ಆದವಾನಿಯ ಸಭೆಯಲ್ಲಾದ ಠರಾವುಗಳಿಗೆ (ಕರ್ನಾಟಕ ಏಕೀಕರಣ) ಈ ಸಭೆಯು ಬೆಂಬಲವೀಯುತ್ತದೆ.

———

ಬೊಂಬಾಯಿ ಕೋರ್ಟ್ಯಾಧೀಶ್ವರರಾದ ಸರ್ ಕರೀಂಬಾಯಿ, ಇಬ್ರಾಹಿಂ, ಅವರ ಪತ್ನಿ ಮತ್ತು ಮಗನನ್ನು ಪಾಕಿಸ್ತಾನದಿಂದ ಪರ್ಮಿಟ್ ಇಲ್ಲದೆ ಪ್ರವೇಶಮಾಡಿದರೆಂಬ ಅಪಾದನೆಯಮೇಲೆ ಬಂಧಿಸಿ ಜಾಮೀನಿನಮೇಲೆ ಬಿಟ್ಟಿರುವರು. ಅವರು ಪಾಕಿಸ್ತಾನಕ್ಕೆ ನೆಲೆಸಲು ಹೋಗಿ, ಅಲ್ಲಿ ಸರಿಬರದೆ, ಕೊಲಂಬೋ ಮಾರ್ಗದಿಂದ ವಿಮಾನ ಮೂಲಕ ಬೊಂಬಾಯಿಗೆ ಬಂದಿದ್ದರು.

———

[illegible] ಮಪುರ, ಬನಾರಸ, ತೆಹರಿ, ಗಢವಾಲ ಮೊದಲಾದ ಸಂಸ್ಥಾನಗಳು ಸಂಯುಕ್ತ ಸಂಸ್ಥಾನದಲ್ಲಿ ಲೀನವಾಗಲು ಡಿಸಂಬರ್ 1 ರಿಂದ ನಿಶ್ಚಯವಾಗಿದೆ

———

ಹೈದರಾಬಾದಿನಲ್ಲಿ ಮಿಲಿಟರಿ ಆ- [illegible] ಕೊನೆಗೊಂಡು, ಇಂಡಿಯಾ ಸರ್ಕಾರದ ಎಂ. ಕೆ. ವೆಲ್ಲೋಡಿಯವರು [illegible] ಸೂತ್ರಗಳನ್ನು ವಹಿಸಿಕೊಂಡಿದ್ದಾರೆ

ಸೋಶ್ಯಾಲಿಝಮ್

ಅಥವಾ

ಸುಲಭ ಸಮಾಜವಾದ

ಧನಿಕರ ಧನದ ಅಪವ್ಯಯ, ಅ-ಭೋಗ ಮತ್ತು ಆ-ವ್ಯಯ

ಧನಿಕರ, ಸಿರಿವಂತರ ಖರ್ಚು:

ಆದರೆ ದುಡ್ಡು ವೆಚ್ಚಮಾಡುವದರಿಂದ ಸಮಾಜದಲ್ಲಿ ಧನೋತ್ಪಾದನವಾಗುತ್ತದೆ ಮತ್ತು ದುಡ್ಡಿನ ಹಂಚುವಿಕೆ ಕೂಡ ಆಗುತ್ತದೆಂಬುದನ್ನು ಮನ್ನಿಸಿ ಧನಿಕರ ಹತ್ತಿರ ದುಡ್ಡು ಹೆಚ್ಚಾಗಿ ಇರುತ್ತದೆ ಮತ್ತು ಅವರು ದುಂದುಗಾರಿಕೆ ಮಾಡುತ್ತಾರೆ. ಅದ್ದರಿಂದ ಸಮಾಜದಲ್ಲಿ ಧನೋತ್ಪಾದನವೂ, ಧನ ಹಂಚುವಿಕೆಯೂ ಆಗುವದಿಲ್ಲವೋ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಿರಿವಂತರು ಬೇಕಾದಷ್ಟು ದುಡ್ಡು ಖರ್ಚಿಸುತ್ತಾರೆ—ಇದು ನಿಜ. ದೊಡ್ಡದೊಡ್ಡ ಸೌಧಗಳನ್ನು ಕಟ್ಟುತ್ತಾರೆ; ಚಾಲುಗಳನ್ನು ಹಾಕಿಸುತ್ತಾರೆ. ಇದರಿಂದ ಕಟ್ಟಡಗಳ ಉದ್ಯೋಗ ಬೆಳೆದು, ಕಟ್ಟಡ ಕಟ್ಟುವವರಿಗೆಲ್ಲ ಕೆಲಸ ಸಿಗುತ್ತದೆ. ಇದರಿಂದ ಅರಿವೆ ಆಟ, ಚೈನಿ, ವ್ಯಸನ ಮೊದಲಾದ ನೂರಾರು ತರದ ವೆಚ್ಚಮಾಡುವ ಬಗೆಗಳವೆ. ಅವುಗಳಿಂದ ಆಯಾ ವಸ್ತುಗಳನ್ನು ನಿರ್ಮಿಸುವವರಿಗೆ ವೇತನ ದೊರೆಯುವದು ನಿಜ

ಧನದ ಅಪವ್ಯಯ:

ಆದರೆ ಖರ್ಚು ಎಂದು ಮಾಡಲ್ಪಟ್ಟ ಈ ವ್ಯಯವು ಬಹಳಷ್ಟು ಅಪವ್ಯಯವೇ ಇರುತ್ತದೆ. ಧನಿಕರ ವೆಚ್ಚಮಾಡುವ ರೀತಿ ಹೇಗಿರುವದು? ಅನ್ನ-ವಸ್ತ್ರ, ಮನೆಮಾರು, ಶಿಕ್ಷಣ ಮತ್ತು ಔಷಧ ಮೊದಲಾದವುಗಳಿಗಾಗಿ ಖರ್ಚುಮಾಡುತ್ತಾರೆ. ಮತ್ತು ಇದು ಯೋಗ್ಯವಾದ ವೆಚ್ಚ. ಆದರೆ ಧನೋತ್ಪಾದನ ಮತ್ತು ಚೈನಿದೆಸೆಯಿಂದ ಮಾಡುವ ಖರ್ಚಿನಲ್ಲಿ ಅಪವ್ಯಯದ ಭಾಗವೇ ಹೆಚ್ಚಾಗಿ ಇರುತ್ತದೆ. ಯಾವದಾದರೊಂದು ಊರಲ್ಲಿ ಜನವಸತಿ ಬೆಳೆಯಹತ್ತಿದ ಕೂಡಲೇ ಬಾಡಿಗೆಯು ಉತ್ಪನ್ನ ಬೆಳೆಯ ಹತ್ತುವದರಿಂದ, ಧನಿಕರು ಚಾಲು ಕಟ್ಟಿಸುತ್ತಾರೆ. ಸ್ಪರ್ಧೆಯಲ್ಲಿ ಚಾಲುಗಳ ಸಂಖ್ಯೆ ಬೆಳೆಯುತ್ತದೆ; ಆದರೆ ಈ ಚಾಲುಗಳಲ್ಲಿ ಇರಲು ಸಾಕಷ್ಟು ಬಾಡಿಗೆ ಕೊಡುವ ಸಾಮರ್ಥ್ಯ ಬಡವರಲ್ಲಿ ಇರದ್ದರಿಂದ, ಅವರು ಹಾಂವಾಳದ ಗೂಡಿನಂತಿರುವ ಹಳೆಯ ಚಾಲುಗಳಲ್ಲಿರುತ್ತಾರೆ ಮತ್ತು ಈ ಹೊಸ ಚಾಲುಗಳು ಬರಿದಾಗಿ ಉಳಿಯುತ್ತವೆ. ಇದರ ಬದಲು ಧನಿಕರ ಹತ್ತಿರ ಚಾಲು ಕಟ್ಟುವಷ್ಟು ದುಡ್ಡು ಇರದಿದ್ದರೆ, ಅವರು ಇಷ್ಟು ಕಾಲ ಕಟ್ಟಿಸುವ ಗೋಜಿಗೆ ಹೋಗುತ್ತಿದ್ದಿಲ್ಲ ಮತ್ತು ಉಳಿದ ಹಣವು ಬಡವರಿಗೆ ಅವರ ದುಡಿಮೆಗೆ ಪ್ರತಿಫಲವೆಂದು ದೊರೆತಿದ್ದರೆ, ಅವರಿಗೆ ಈ ಚಾಲುಗಳ ಬಾಡಿಗೆ ಕೊಟ್ಟು ಇರಲು ಅನುಕೂಲವಾಗುತ್ತಿತ್ತು ಮತ್ತು ಬರಿದಾಗಿ ಉಳಿಯುತ್ತಿದ್ದಿಲ್ಲ.

ಪರತಂತ್ರ ರಾಷ್ಟ್ರದಲ್ಲಿಯ ಧನಿಕರ ಖರ್ಚು:

ಆರ್ಥಿಕ ದೃಷ್ಟಿಯಿಂದ ಹಿಂದುಳಿದ ಅಥವಾ ರಾಜಕೀಯ ದೃಷ್ಟಿಯಿಂದ ಪರತಂತ್ರವಾದ ದೇಶಗಳಲ್ಲಿಯ ಧನಿಕರು ಮಾಡುವ ಧನದ ಅಪವ್ಯಯ-ವಂತೂ ವಿಶೇಷ ಮಹತ್ವದ್ದಿದೆ. ಧನವನ್ನು ವೆಚ್ಚ ಮಾಡುವಾಗ ರಾಷ್ಟ್ರೀಯ ದೃಷ್ಟಿ ಇಡುವದೆಂದರೆ, ವಸ್ತುಗಳನ್ನು ಕೊಳ್ಳುವಾಗ ಆ ವಸ್ತು ಉತ್ಪಾದನವಾಗಲಿಕ್ಕೆ ಅನುವಾದ ಕೆಲಸಗಾರರ ಕೂಲಿ ನಮ್ಮಲ್ಲಿಯವರಿಗೆ ದೊರೆಯುತ್ತದೋ ಇಲ್ಲವೋ ಇದನ್ನು ನೋಡಿ ವಸ್ತುಗಳನ್ನು ಕೊಳ್ಳುವದು. ಈ ದೃಷ್ಟಿಯಿಂದ ವಸ್ತು ಸ್ವಲ್ಪ ಸಪ್ಪೆ ಇದ್ದರೂ, ಎಡರಿದ್ದರೂ ಸ್ವದೇಶಿ ವಸ್ತು ಕೊಳ್ಳುವದು ಯುಕ್ತವಾದದ್ದು. ಇದರಂತೆ ಬಂಡವಾಲು ನೇರಿಸುವಾಗಾಗಲಿ, ವಿಮಾ ಇಳಿಸುವಾಗಾಗಲಿ ಈ ದೃಷ್ಟಿಯನ್ನು ಇಡುವದು ಒಳಿತು. ಆದರೆ ಇಂಥ ದೃಷ್ಟಿ ಧನಿಕರಲ್ಲಿರುವದು ವಿರಳ. ಅಂದ ಮತ್ತು ಅಗ್ಗ ವಸ್ತು ಬೇಕೆಂದು ಅವರು ಪರದೇಶಿ ವಸ್ತುಗಳನ್ನೇ ಕೊಳ್ಳುವರು ಮತ್ತು ಹೆಚ್ಚು ಲಾಭವಾಗಬೇಕೆಂದು ಅಲ್ಲಿ ತಮ್ಮ ಬಂಡವಾಲವನ್ನು ನೇರಿಸುವರು. ಹಿಂದುಸ್ಥಾನದಲ್ಲಿ ಹೆಚ್ಚಾಗಿ ಸಿರಿವಂತರಾಗಿದ್ದ ವರ್ಗ—ವಿಶೇಷತಃ ಸಂಸ್ಥಾನಿಕರು, ಇಂಗ್ಲೆಂಡಿನಲ್ಲಿ ಹೋಗಿ ದುಂದುಗಾರಿಕೆ ಮಾಡುವ ದುಡ್ಡನ್ನು ಇಲ್ಲಿ ವೆಚ್ಚಮಾಡಿದರೆ ಹಿಂದುಸ್ಥಾನದ ಆರ್ಥಿಕ ಏಳ್ಗೆ ಒಡೆದು ಕಾಣುವಷ್ಟು ಆಗುವದು; ಇಷ್ಟೊಂದು ಹಣ ಅಲ್ಲಿ ಅವರು ಚೈನಿಗಾಗಿ, ಜೂಜಾಟದಲ್ಲಿ ಮತ್ತು ವಸ್ತು ಕೊಳ್ಳುವದರಲ್ಲಿ ಮಾಡುವ ಖರ್ಚು ಇದೆ.

ಭೋಗವಿಲ್ಲದೆ ಕೊಳೆತು ಹೋಗುವ ವಸ್ತುಗಳು.—

ಸಿರಿವಂತರ ಖಾಸ ಆರಾಮು, ಆಟ, ಚಟ ವ್ಯಸನ ಮೊದಲಾದವುಗಳ ಬಗೆ ಇದು. ಗಾದಿ, ಗಿರದಿ, ಖುರ್ಚಿ, ಮಂಚ, ಮೋಟಾರು, ದಿವಾಣಖಾನೆ, ಆಟದಬೈಲು ಇವುಗಳೆಲ್ಲವುಗಳ ಮೇಲೆ ಸಿರಿವಂತರು ಬಹಳ ದುಡ್ಡು ಖರ್ಚುಮಾಡುತ್ತಾರೆ. ಇವೆಲ್ಲವು ಯೋಗ್ಯವಿದ್ದಷ್ಟು ಉಪಯೋಗವಾಗಿಯೆ ತೀರಬೇಕೆಂದು ನಿಶ್ಚಯಿಸಿದರೆ, ಈಗ ಇವನ್ನು ಉಪಯೋಗಿಸುತ್ತಿರುವ ಸಿರಿವಂತರ ನೂರಾರು ಪಟ್ಟು ಜನರನ್ನು ಬಾಡಿಗೆಯಿಂದ ತರಬೇಕಾಗುವದು. ಆದರೆ ನಿಜ ಸ್ಥಿತಿ ಹೀಗೆ ಆಗುವದಿಲ್ಲ. ಮೋಟಾರುಗಳನ್ನು ತೊಳೆದು, ಒರಸಿ ಇಡುವದು, ತೋಟಗಳನ್ನು ಅಚ್ಚುಕಟ್ಟಾಗಿ ಇಡುವದು, ದಿವಾನಖಾನೆಗಳನ್ನು ದಿನಾಲು ಸ್ವಚ್ಛಮಾಡುವದು, ಗಾದಿ ಗಿರದಿಗಳ ಮೇಲಿದ್ದ ಧೂಳಿ ಝಾಡಿಸಿ ಇಡುವದು, ಇಷ್ಟೇ ಈ ವಸ್ತುಗಳ ಉಪಯೋಗವಾಗಿ, ಮೊಗಲ ಬಾದಶಹರ ಅಂತಃಪುರದಲ್ಲಿಯ ಸಾವಿರಾರು ಸ್ತ್ರೀಯರು ತಮ್ಮ ಪತಿಯ ಪ್ರಥಮ ದರ್ಶನಕ್ಕಾಗಿ ಇಡೀ ಜನ್ಮ ಹಾದಿಕಾಯ್ದು ಮಣ್ಣುಪಾಲಾಗಿ ಹೋಗುತ್ತಿದ್ದಂತೆ ಈ ವಸ್ತುಗಳೆಲ್ಲ ತಮ್ಮ ಒಡೆಯನ ಪಾದಧೂಳಿಯ ಹಾದಿ ಕಾಯ್ದು ಮಣ್ಣುಪಾಲಾಗಿ ಹೋಗುತ್ತಿದ್ದಂತೆ ಈ ವಸ್ತುಗಳೆಲ್ಲ ತಮ್ಮ ಒಡೆಯನ ಪಾದಧೂಳಿಯ ಹಾದಿಕಾಯ್ದು ಜೀರ್ಣವಾಗಿ ಹೋಗುತ್ತವೆ. ಆದರೆ ಇತ್ತ ಅಸಂಖ್ಯ ಬಡಜನರಿಗೆ, ಖಾಸ ಆರಾಮದ ವಸ್ತುಗಳಂತೂ ದೂರೇ ಉಳಿದವು; ಜೀವನಾವಶ್ಯಕ ವಸ್ತುಗಳ ಅಭಾವವೇ ಇರುತ್ತದೆ. ಯಾಕಂದರೆ ಅವರಲ್ಲಿ ಶ್ರಮಶಕ್ತಿಯೇ ಇರುವದಿಲ್ಲ. ಇನ್ನು ಧನಿಕರ ಹತ್ತಿರ ಉಪಭೋಗಿಸದೆ ಇರುವಷ್ಟು ವಸ್ತುಗಳನ್ನು ಕೊಳ್ಳುವಷ್ಟು ದುಡ್ಡಿದ್ದರೆ ಅದು ಬಡವರಿಗೆ ವೇತನರೂಪವಾಗಿ ಸಿಕ್ಕಿದ್ದರೆ, ಈ ಧನಿಕರಲ್ಲಿದ್ದ ವಸ್ತುಗಳು, ಮೊಗಲರ ಅರಸಿಯರಂತೆ ವ್ಯರ್ಥವಾಗಿ ಹೋಗುತ್ತಿದ್ದಿಲ್ಲ. ಮತ್ತು ಬಡವರಿಗೆ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವ ಶಕ್ತಿ ಬಂದು ಅವರು ಸುಖದಲ್ಲಿರುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ, ಸಿರಿವಂತರಲ್ಲಿ ಉಪಭೋಗವಾಗಲು ಶಕ್ಯವಿಲ್ಲದಷ್ಟು ವಸ್ತುಗಳು ಇವೆ. ಮತ್ತು ಬಡವರಿಗೆ ಜೀವನಕ್ಕೆ ಅವಶ್ಯವಿದ್ದಷ್ಟು ಕೊಳ್ಳಲು ಸಹ ಶಕ್ತಿ ಇಲ್ಲ ಇವರು ಉಪವಾಸದಿಂದಿದ್ದರೂ ಸಹ ಅತ್ತ ರಾಶಿರಾಶಿಯಾಗಿ ವಸ್ತುಗಳು ನಾಶವಾಗಿ ಹೋಗುತ್ತವೆ. ಪಟ್ಟಣಗಳಲ್ಲಿ ನೂರಾರು ಎಕರೆ ಭೂಮಿ ಸಿರಿವಂತರ ಹೆಸರಿನಲ್ಲಿ ಬಿದ್ದಿರುತ್ತದೆ

ದೊಡ್ಡ ದೊಡ್ಡ ಬಂಗಲೆ, ಸಾಧನಗಳೆಲ್ಲ ಮತ್ತು ಇವರ ಭೆಟ್ಟಿ ಸಹ ಆಗುವದಿಲ್ಲ; ಧನಿಕರ ದುಡ್ಡು ಭೋಗವಾಗದೆ ಹೋಗುತ್ತದೆ. ಆದರೆ ಬಡವರಿಗೆ ಇರಲಿಕ್ಕೆ ಮನೆಗಳಿಲ್ಲ; ಅವರ ಮಕ್ಕಳು ಬೀದಿಗಳ ಮೇಲೆ ಆಡುತ್ತಾರೆ, ಮಲಗುತ್ತಾರೆ ಮತ್ತು ಬಡವರ ಮನೆಗಳಿಗೆ, ಔಷಧಾಲಯಗಳಿಗೆ ಸ್ಥಳ ಸಿಕ್ಕುವದಿಲ್ಲ.

ಧನದ ಅಪವ್ಯಯ:—

ಇಲ್ಲಿಯ ವರೆಗೆ ಧನಿಕರ ಧನದ ಅಪವ್ಯಯ ಮತ್ತು ಅ-ಭೋಗದ ವಿಷಯ ಹೇಳಿದ್ದಾಯಿತು. ಇದಕ್ಕಿಂತ ಮಹತ್ವದ ಸಂಗತಿಯೆಂದರೆ ದುಡ್ಡಿನ ಅಪವ್ಯಯ; ಸಾಮರ್ಥ್ಯದ ದೃಷ್ಟಿಯಿಂದ ನೋಡಿದರೆ ಆಗಬೇಕಾದಷ್ಟು ಖರ್ಚು ಧನಿಕರು ಮಾಡುವದಿಲ್ಲ. ಬಡವರ ಕಣ್ಣು ಕುಕ್ಕುವಷ್ಟು ಖರ್ಚು ಸಿರಿವಂತರು ಜಗತ್ತಿನಲ್ಲಿ ಮಾಡುತ್ತಿರುವಾಗ ಈ ಮಾತು ಸೋಜಿಗವನ್ನುಂಟುಮಾಡುವಂಥದ್ದು. ಆದರೆ ಅದು ನಿಜವಿದೆ. ಜಗತ್ತಿನ ಪ್ರತಿಯೊಂದು ದೇಶದಲ್ಲಿ ಧನವರ್ಗದವರ ಹತ್ತಿರ ಎಷ್ಟು ಧನ ಸಂಚಯವಾಗಿದೆಯೆಂದರೆ, ಅದನ್ನವರು ಉಪಯೋಗ ಮಾಡುವ ಸಾಮರ್ಥ್ಯಕ್ಕೆ ಹೋಲಿಸಿದರೆ ಅತೀವವಾಗಿದೆ. ಮನುಷ್ಯನ ಉಪಭೋಗಶಕ್ತಿ ಎಷ್ಟೇ ಬೆಳೆದರೂ ಅದಕ್ಕೆ ಮಿತಿ ಇದೆ; ಆದರೆ ಒಮ್ಮೆ ಅವನಿಗೆ ದುಡ್ಡು ಸಿಗಲಿಕ್ಕೆ ಹತ್ತಿದರೆ ಮಾತ್ರ ಬಂಡವಾಲಶಾಹಿಯಲ್ಲಿ ಅದಕ್ಕೊಂದು ಮಿತಿಯಿಲ್ಲ. ಆದ್ದರಿಂದ ಭೋಗಶಕ್ತಿಯ ಪ್ರಮಾಣವು ದುಡ್ಡಿನ ವೇಗದೊಡನೆ ಓಡುವಂತಿಲ್ಲ. ಒಬ್ಬನಿಗೆ ದಿನಾಲು ಅರ್ಧ ಶೇರು ಅಥವಾ ಒಂದು ಶೇರು ಅಕ್ಕಿ ಬೇಕಾಗುತ್ತದೆ. ಮತ್ತು ಅವನಿಗೆ ಐವತ್ತು ರೂಪಾಯಿ ಪಗಾರ ಎಂದು ತಿಳಿಯುವ. ಅವನಿಗೆ ೫೦೦ ರೂಪಾಯಿ ಪಗಾರ ಆದರೆ ಅವನು ತಿನ್ನುವ ಪ್ರಮಾಣ ಹತ್ತುಪಟ್ಟು ಬೆಳೆಯುವದಿಲ್ಲ. ಅಥವಾ ಅವನ ಮೇಲೆ ಅವಲಂಬಿಸಿ ಇರುವವರು ಹತ್ತುಪಟ್ಟು ಬೆಳೆಯುವದಿಲ್ಲ. ಅವನು ತನ್ನ ಜೀವನ, ಮಕ್ಕಳ ಶಿಕ್ಷಣ ಕ್ರಮ, ಮನರಂಜನ ದ್ರವ್ಯಗಳಲ್ಲಿ ಹೆಚ್ಚು ಖರ್ಚು ಮಾಡಬಹುದು. ಆದರೆ ೫೦೦ ರೂಪಾಯಿ ಪಗಾರದವನ ಕತೆ ಅಂತ ಮೇಲೆ ಹತ್ತು ಸಾವಿರ ಒಂದು ಲಕ್ಷ, ಹತ್ತು ಲಕ್ಷ ದಾಟಿಯುವದು ? ಈ ದುಡ್ಡು ಉಪಭೋಗ್ಯ ವಸ್ತುಗಳ ಕ್ರಯದಲ್ಲಿ ಆಗುವಂತಿದೆ. ಇದು ತಿಜೋರಿಯಲ್ಲಿಯೇ ಬಿದ್ದು ಉಳಿಯುವದಿಲ್ಲ; ಇದು ನಿಜ. ಇದು ಬ್ಯಾಂಕಿಗೆ ಹೋಗಿ ಅಲ್ಲಿಂದ ಬಂಡವಾಲುಗಾರರ ಕೈ ಸೇರಿ ಕಾರಖಾನೆ ನಡೆಸುವವರಲ್ಲಿ ಉಪಯೋಗವಾಗುತ್ತಿರಬಹುದು. ಆದರೆ ಪೇಟೆಯಲ್ಲಿ ವಸ್ತುಗಳ ಮಾರಾಟವಿಲ್ಲೆಂದು ಅವು ರಾಶಿರಾಶಿಯಾಗಿ ಬಿದ್ದಿವೆ; ಮತ್ತು ವಸ್ತು ಕೊಳ್ಳಲು ಸಾಧ್ಯವಿಲ್ಲೆಂದು ಲಕ್ಷಾವಧಿ ಜನರು ಮಳೆಯಲ್ಲಿ, ಗಾಳಿಯಲ್ಲಿ, ಬಿಸಿಲಲ್ಲಿ, ಚಳಿಯಲ್ಲಿ ನಿಂತಿದ್ದರೆ; ಉಪವಾಸದಿಂದ ಬಳಲುತ್ತಿದ್ದಾರೆ; ಇಂಥ ಕಾಲದಲ್ಲಿ ಬಂಡವಾಲವು ಇನ್ನಷ್ಟು ಹೆಚ್ಚಾದರೂ ಅದರ ಉಪಯೋಗವೇನೂ ಇಲ್ಲ. ಇದರಿಂದ ಅಪಾಯವಾಗುವ ಭಯವೇ ಹೆಚ್ಚು. ಹೊಸಹೊಸ ಮತ್ತು ಸುಧಾರಿಸಿದ ಶಾಸ್ತ್ರೀಯ ಪದ್ಧತಿಗಳನ್ನು ಅಮಲಿನಲ್ಲಿ ತರಲಿಕ್ಕೆ ಇದರಿಂದ ಬೇಕಾದಷ್ಟು ಬಂಡವಾಲು ಸಿಕ್ಕುತ್ತದೆ. ಒಮ್ಮೆಲೆ ಬಹಳ ಖರ್ಚು ಆದದ್ದು ಕಂಡು ಬಂದರೂ, ದೀರ್ಘಕಾಲದ ಲೆಕ್ಕ ಹಿಡಿದರೆ ಕೂಲಿಕಾರರ ಸಂಖೆ ಕಡಿಮೆಯಾಗಿ ಕೂಲಿಕಾರರ ವೇತನ ಮತ್ತು ಯಂತ್ರದ ಖರ್ಚು ಒಟ್ಟಿನಲ್ಲಿ ಕಡಿಮೆಯಾಗುತ್ತದೆ. ಯಂತ್ರ ಸುಧಾರಿಸಲು ಸುರುವಿಗೆ ಬೇಕಾಗುವ ಹೆಚ್ಚಾದ ದುಡ್ಡು ಬಂಡವಾಲಗಾರರಿಂದ ದೊರೆಯುತ್ತದೆ ಮತ್ತು ಇದರಿಂದ ಯಂತ್ರದ ಬೆಳವಣಿಗೆಯಾಗುತ್ತದೆ. ಆದರೆ ಯಂತ್ರದ ಮೂಲಕ ಕೂಲಿಕಾರರ ಸಂಖೆ ಕಡಿಮೆಯಾಗಿ ನಿರುದ್ಯೋಗತನ ಬೆಳೆದು, ಕ್ರಯ ಶಕ್ತಿ ಕಡಿಮೆಯಾಗುತ್ತದೆ ಮತ್ತು ಯಂತ್ರದ ಉತ್ಪಾದಿತವಾದ ವಸ್ತುಗಳು ಮಾರಾಟವಾಗದೆ ಉಳಿಯುತ್ತವೆ ಅಂದರೆ ಕೊನೆಗೆ ಧನಿಕವರ್ಗದವರು ಭೋಗಿಸಿದೆ ಉಳಿದ ದುಡ್ಡು ಬಂಡವಾಲವಾಗಿ ಪರಿಣಮಿಸಿದರೂ ಒಂದು ರೀತಿ ಸಮಾಜದ ಪ್ರಗತಿಗೆ ಅಡ್ಡಿಯಾಗಿ, ಸಂಕಟವಾಗಿ ನಿಲ್ಲುತ್ತದೆ.

—....

ಹೊಸಪೇಟೆಯ ಜಿಲ್ಲಾ ಮುನ್ಸೀಫರ ಕೋರ್ಟಿನಲ್ಲಿ

ಒ. ಪಿ. ನಂ 40 49

[ದಿವಂಗತ ಮೈಲಾರದ ಗುರುಲಿಂಗಪ್ಪನವರಿಗೆ ಬರಬೇಕಾದ ಇನ್ಶೂರನ್ಸ ಬಾಕಿ ಬಾಬ್ತು]

ಅರ್ಜದಾರಳು:- ಮೈಲಾರದ ಪುಟ್ಟವ್ವ

ಮೇಲಿನ ಅರ್ಜಿಯಲ್ಲಿ ಅರ್ಜದಾರಳು ತನ್ನ ಗಂಡ ಲೇಟು ಮೈಲಾರ ಗುರುಲಿಂಗಪ್ಪನು ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರನ್ಸ್ ಕಂಪನಿ ಲಿಮಿಟೆಡ್ ಇವರಲ್ಲಿ 1000 -ರೂ ಗಳ ಮೊತ್ತಕ್ಕೆ ವಿಮಾ ಮಾಡಿಸಿದ್ದನು, ಸದರಿ ಹಣ 1032 + 0 ಬರ ಮಾಡಿಕೊಳ್ಳಲು ವಾರಸ ಸರ್ಟಿಫಿಕೇಟ್‌ಗಾಗಿ ಅರ್ಜಿ ದಾಖಲು ಮಾಡಿದ್ದಾಳೆ. ಸದರಿ ಪಾಲಿಸಿ ನಂಬರ್ 623500 ಇರುತ್ತದೆ ಸದರಿ ಒ. ಪಿ. ನಂ 40,49 ರ ವಾಯಿದೆಯು 20-12-49 ಕ್ಕೆ ಇದೆ. ಯಾರಿಗಾದರೂ ಈ ವಿಷಯದಲ್ಲಿ ತಕರಾರು ಇದ್ದರೆ ಸದರಿ ವಾಯಿದೆಗೆ ಸ್ವತಃ ಆಗಲಿ, ವಕೀಲರ ದ್ವಾರವಾಗಲಿ ಹಾಜರಾಗಿ ತಕರಾರು ದಾಖಲು ಮಾಡಬಹುದು. ಇಲ್ಲದ ಪಕ್ಷದಲ್ಲಿ ಸದರಿ ಅರ್ಜಿ ಪರೋಕ್ಷವಾಗಿ (Exparte) ತೀರ್ಮಾನಿಸಲ್ಪಡುವುದು.

ಟಿ. ಎಚ್. ಎಂ. ಶ್ರೀಕರಯ್ಯ
ಹೊಸಪೇಟೆ 1-12 49 | ಹೆಚ್. ವೀರಭದ್ರಯ್ಯ
ಅಡ್ವೊಕೇಟರ್ಸ್

ಭಾರತವು ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಅಪ್ರತಿಮ ಹೋರಾಟವನ್ನು ಸಾಗಿಸಿದೆ ಅವರನ್ನು ರಾಷ್ಟ್ರಪಿತರೆಂದು ನಾವು ಗೌರವಿಸುತ್ತೇವೆ. ಅವರು ಭಾರತದ ಮೇಲೆ ಅದರಲ್ಲೂ ವಿಶೇಷವಾಗಿ ಸದ್ಯದ ಪೀಳಿಗೆಯ ಮೇಲೆ ತಮ್ಮ ವ್ಯಕ್ತಿತ್ವದ ಪ್ರಭಾವವನ್ನು ಬಹುವಾಗಿ ಬೀರಿದ್ದಾರೆ. ಆದ್ದರಿಂದ ನಾವು ಜಾಗತಿಕ ರಂಗದಡೆಗೆ ಹೊರಳಿ ನಮ್ಮ ವಿದೇಶ ಧೋರಣೆಯನ್ನು ರೂಪಿಸುವಾಗ ನಮಗೆ ಮಹಾತ್ಮರಿತ್ತ ವ್ಯಾವಹಾರಿಕವಾದ ಆದರ್ಶವಾದದಿಂದ ಅಸ್ಪೃತ್ತರಾಗುತ್ತೇವೆ. ಭಾರತವು ಜಾಗತಿಕ ರಾಜಕಾರಣದಲ್ಲಿ ಯಶಸ್ವಿ ಪಾತ್ರವನ್ನು ವಹಿಸಬೇಕಾಗಿದೆ. ಅದು ಈ ವರೆಗೆ ಅನುಸರಿಸುತ್ತ ಬಂದಿರುವ ತನ್ನ ಆದರ್ಶಗಳಂತೆಯೇ ವರ್ತಿಸುವದು. ಮತ್ತು ಸಹಕಾರ, ರಾಷ್ಟ್ರೀಯ ಸ್ವಾತಂತ್ರ್ಯ, ಜಾಗತಿಕ ವ್ಯವಸ್ಥೆಗೆ ಸೋಪಾನವಾಗುವಂಥ ಅಂತರಾಷ್ಟ್ರೀಯತ್ವದ ಬೆಳವಣಿಗೆ ಎಲ್ಲ ರಾಷ್ಟ್ರ ಹಾಗೂ ಜನತೆಯಲ್ಲಿ ಸಮತೆ ಮತ್ತು ಕೋಟ್ಯಂತರ ದೀನ ದಲಿತರ ದುಃಖ ನಿವಾರಣೆ ಇವೇ ನಾವು ಅನುಸರಿಸುತ್ತ ಬಂದಿರುವ ಆದರ್ಶಗಳಾಗಿವೆ. ನಾವೀಗ ರಾಜಕೀಯ ಸ್ವಾತಂತ್ರ್ಯವನ್ನು ಸಂಪಾದಿಸಿದ್ದು ಈ ಧ್ಯೇಯ ಸಾಧನೆಗಾಗಿಯೇ ಎಂದು ಎಣಿಸುತ್ತಿದ್ದೇವೆ.

—ನೆಹರು

ಬಳ್ಳಾರಿ ಜಿಲ್ಲೆಯನ್ನು ವಿಚ್ಛೇದಿಸಬಾರದು

ಶ್ರೀ ವೈ. ಮಹಾಬಲೇಶ್ವರಪ್ಪ ನವರ ಪ್ರಕಟಣೆ

ಕರ್ನಾಟಕ ವಣಿಕ ಸಂಘ ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘ, ಬಳ್ಳಾರಿ ಜಿಲ್ಲಾಬೋರ್ಡ್ ಈ ಸಂಸ್ಥೆಗಳ ಅಧ್ಯಕ್ಷರೂ ಬಳ್ಳಾರಿ ವೀರಶೈವ ಕಾಲೇಜಿನ ಸಂಸ್ಥಾಪಕರಲ್ಲೊಬ್ಬರೂ ಆದ ಶ್ರೀ ವೈ. ಮಹಾಬಲೇಶ್ವರಪ್ಪನವರು,

ಒಂದು ಪ್ರಕಟನೆ ಹೊರಡಿಸಿ ಕಾಂಗ್ರೆಸ್ ಕಾರ್ಯ ಸಮಿತಿಯವರು ಆಂಧ್ರ ಪ್ರಾಂತ ರಚನೆ ಮಾಡಲು ಹಿಂದುಸ್ಥಾನ ಸರಕಾರಕ್ಕೆ ಶಿಫಾರಸು ಮಾಡಿದ ಬಗ್ಗೆ ಸಂತೋಷ ಪ್ರದರ್ಶನ ಮಾಡಿ ೨ ಕೋಟಿ ಕನ್ನಡಿಗರ ಬೇಡಿಕೆಯಾದ ಕರ್ನಾಟಕ ಪ್ರಾಂತ ರಚನೆಯನ್ನು ಮುಖ್ಯ ಮಂತ್ರಿಗಳಾದ ಪಂಡಿತ ನೆಹರೂರು ಹಾಗೂ ಉಪಮುಖ್ಯ ಮಂತ್ರಿಗಳಾದ ಸರದಾರ ಪಟೇಲರು ಸಹಾನುಭೂತಿಯಿಂದ ಪರಾಮರ್ಶಿಸಿ ಆಂಧ್ರಪ್ರಾಂತದೊಡನೆಯೇ ಕರ್ನಾಟಕ ಪ್ರಾಂತ ರಚನೆಯನ್ನು ಮಾಡಬೇಕೆಂದು ಬಿನ್ನವಿಸಿದ್ದಾರೆ. ಬಳ್ಳಾರಿ ಜಿಲ್ಲೆಯನ್ನು ವಿಚ್ಛೇದನ ಮಾಡಲು ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯ ಸಲಹೆ ಪಡೆಯದೆ ಯೋಜನೆ ಮಾಡಿದ್ದು ಶ್ರೀ ವೈ ಮಹಾಬಲೇಶ್ವರಪ್ಪನವರು ಪ್ರತಿಭಟಿಸಿ ಆಂಧ್ರರು ಬಳ್ಳಾರಿ ಜಿಲ್ಲೆಯ ಗೊಡವೆಗೆ ಬರಬಾರದೆಂದು ಸೂಚಿಸಿದ್ದಾರೆ.

ಮೈಸೂರ ಮಹಾರಾಜರು ಕರ್ನಾಟಕ ಏಕೀಕರಣದ ಮಾರ್ಗದಲ್ಲಿ ಅಡ್ಡ ಬರುವರೆಂದು ನನಗನಿಸುವದಿಲ್ಲ ಮೈಸೂರು ಸರಕಾರದ ಉದ್ದೇಶವಾದರೂ ಕಾಲ ಪ್ರವಾಹದ ಎದುರು ಸಾಗುವದು ಇರಲಾರದು ಎಂದು ನನ್ನ ಧೃಡವಾದ ಭಾವನೆ ಇದೆ. ಪ್ರಜಾ ಪ್ರಭುತ್ವದ ರಾಜ್ಯ ಪದ್ಧತಿಯಲ್ಲಿ ಯಾವದೇ ಪಕ್ಷವು ಜನತೆಯ ಇಚ್ಛೆಯ ವಿರುದ್ಧವರ್ತಿಸಿ ಅಧಿಕಾರವನ್ನು ತನ್ನ ಕೈಯಲ್ಲಿ ಚಿರಕಾಲ ಉಳಿಸಿಕೊಳ್ಳಲು ಆಶಿಸಲಾರದು ಮೈಸೂರು ಮಹಾರಾಜರಿಗೂ ಮೈಸೂರ ಸರಕಾರರಿಗೂ ಈ ಪ್ರಸಂಗದಲ್ಲಿ ಕರ್ನಾಟಕ ಏಕೀಕರಣ ಸಾಧಿಸಲು ಮೈಸೂರು ಸಂಸ್ಥಾನವನ್ನು ಒಕ್ಕೂಟ ಕರ್ನಾಟಕದಲ್ಲಿ ಲೀನಗೊಳಿಸಲು ತಾವು ಸಿದ್ಧರಿರುವದಾಗಿ ಸಾರಿ ಮೈಸೂರ ಹಾಗು ಒಕ್ಕೂಟ ಕರ್ನಾಟಕದ ಜನತೆಯ ಪ್ರೀತಿ, ವಿಶ್ವಾಸ, ಕೃತಜ್ಞತೆಯನ್ನು ಗಳಿಸಿಕೊಳ್ಳಬೇಕೆಂದು ನಾನು ಒಕ್ಕೂಟ ಕರ್ನಾಟಕ ಜನತೆಯ ಪರವಾಗಿ ಪ್ರಾರ್ಥಿಸುತ್ತೇನೆ.

ಇಡೀ ಬಳ್ಳಾರಿ ಜಿಲ್ಲೆಯು ಕರ್ನಾಟಕಕ್ಕೆ ಸೇರಬೇಕಾದ ಪ್ರದೇಶವಾಗಿದ್ದು ಅದನ್ನು ವಿಚ್ಛೇದಿಸಿ ಆಂಧ್ರ ಪ್ರಾಂತದಲ್ಲಿ ಆಂಧ್ರ ಪ್ರದೇಶವೆಂದು ಕೆಲಭಾಗವನ್ನು ಸಾರಿರುವ ಯೋಜನೆಯನ್ನು ಕೆ. ಪಿ. ಸಿ. ಸಿ. ಯೊಡನೆ ವಿಚಾರ ವಿನಿಮಯ ಮಾಡದೆ ಏಕಪಕ್ಷೀಯವಾಗಿ ಮದ್ರಾಸ್ ಸರಕಾರವು ಸಾರಿದ್ದು ಖಂಡನಾರ್ಹವಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುವ ಜನಸಂಖ್ಯೆಯನ್ನು ನೋಡಿದರೆ ಅದು ಕರ್ನಾಟಕ ಪ್ರಾಂತಕ್ಕೆ ಸೇರಬೇಕಾದ್ದು ನ್ಯಾಯವಾದುದು. ಕರ್ನಾಟಕ ಪ್ರಾಂತ ರಚನೆಯಾಗುವವರೆಗೆ ಈ ಜಿಲ್ಲೆಯನ್ನು ಇಡಿಯಾಗಿಯೇ ಇಡುವದು ಯೋಗ್ಯ. ಬಳ್ಳಾರಿ ಜಿಲ್ಲೆಯಲ್ಲಿ ಆಂಧ್ರರಿಗೆ ತಮ್ಮ ಪ್ರದೇಶವಿದೆ ಎಂದು ಅನಿಸಿದರು ಅವರು ಗಡಿ ನಿರ್ಣಾಯಕ ಸಮಿತಿಗೆ ಒಪ್ಪಿ ಅದರ ನಿರ್ಣಯ ಹೊರ ಬೀಳುವವರೆಗೆ ಕಾಯಬೇಕು. ಇದನ್ನು ಬಿಟ್ಟು ಏಕಪಕ್ಷೀಯವಾಗಿ ಬಳ್ಳಾರಿ ಜಿಲ್ಲೆಯನ್ನು ವಿಚ್ಛೇದಿಸಿ ಕೆಲಭಾಗ ಆಂಧ್ರಕ್ಕೆ ಸೇರಿಸುವ ಧೋರಣವನ್ನು ಅನುಸರಿಸಬಾರದಾಗಿಯೂ ಬಳ್ಳಾರಿ ಜಿಲ್ಲೆಯ ಬಗ್ಗೆ ಈರೀತಿ ದುಡುಕ ಬಾರದಾಗಿಯೂ ಆಂಧ್ರರಿಗೆ ನಾನು ಬಿನ್ನವಿಸುವೆ, ಎಂದೂ ಅವರು ತಮ್ಮ ಪ್ರಕಟನೆಯಲ್ಲಿ ಹೇಳಿದ್ದಾರೆ.

ನೀಲಗುಂದ (ಹರಪನಹಳ್ಳಿ)

ಹಿಂದ್ ಕಿಸಾನ ಪಂಚಾಯ್ತಿ ಆದೇಶದಂತೆ ರೈತದಿನಾಚರಣೆಯು ಕಳೆದ ಆದಿತ್ಯವಾರ ಆಚರಿಸಲಾಯಿತು. ಪ್ರಭಾತಫೇರಿ, ಧ್ವಜಾರೋಹಣ, ಮೆರವಣಿಗೆಯಾಯಿತು. ರಾಷ್ಟ್ರೀಯ ಧ್ವಜವು ಸಾಥಿ ವಿರುಪಾಕ್ಷಪ್ಪನವರ ಕಡೆಯಿಂದಲು ಸಮಜವಾದಿ ಧ್ವಜವು ಪಾಟೀಲ ಸಿದ್ದನಗೌಡ ಇವರಿಂದಲೂ ಏರಿಸಲ್ಪಟ್ಟಿವು. ಬಳ್ಳಾರಿ ಜಿಲ್ಲಾಬೋರ್ಡು ಸದಸ್ಯರಾದ ಸಾಥಿ ಸಿದ್ದಪ್ಪನವರಧ್ಯಕ್ಷತೆಯಲ್ಲಿ ಆರಾತ್ರಿ ಬಹಿರಂಗ ಸಭೆಯು ಏರ್ಪಟ್ಟು ಶ್ರೀಗಳಾದ ಸಿದ್ದನಗೌಡ ವಿರುಪಾಕ್ಷಪ್ಪ ಮೊದಲಾದವರು ಜನತೆಯ ಕುಂದು ಕೊರತೆಗಳ ವಿಷಯದಲ್ಲಿ ಭಾಷಣ ಕೊಟ್ಟರು.

ಬರುವ ಋತುವಿನಲ್ಲಿ ಸಕ್ಕರೆ ಉತ್ಪತ್ತಿಯನ್ನು ಪರಮಾವಧಿ ಮಿತಿಗೇರಿಸುವುದಕ್ಕೆ ಹಿಂದುಸ್ಥಾನ ಸರಕಾರವು ಸಕ್ಕರೆ ಕಾರಖಾನೆಗಳಿಗೆ ಸುಂಕವನ್ನು ತಗ್ಗಿಸಲು ನಿಶ್ಚಯಿಸಿರುತ್ತದೆ. ಮಣಕ್ಕೆ ಸುಮಾರು ಮುಕ್ಕಾಲಾಣೆಯಷ್ಟು ಸುಂಕ ತೆರಿಗೆಯು ಕಡಿಮೆಯಾಗುವದು. 1949-50 ರಲ್ಲಿ 1948-49 ರಲ್ಲಿದ್ದುದಕ್ಕಿಂತ ಶೇಕಡ 5 ಕ್ಕಿಂತ ಹೆಚ್ಚಿಗೆ ಸಕ್ಕರೆ ತಯಾರಾಗುವ ಕಾರಖಾನೆಗಳಿಗೆ ಈ ಹೆಚ್ಚಿಗೆ ಪ್ರಮಾಣದ ಬಗ್ಗೆ ಮೇಲಿನ ರಿಯಾಯಿತಿ ದೊರೆಯುತ್ತದೆ. ಇದಲ್ಲದೆ ಈ ಹೆಚ್ಚಿಗೆ ಪ್ರಮಾಣಕ್ಕನುಸಾರವಾಗಿ ಬರುವ ವರ್ಷದಲ್ಲಿ ಕಾರಖಾನೆಗಳಿಗೋಸ್ಕರ ಕಬ್ಬಿಣ, ಉಕ್ಕು, ಇದ್ದಲು, ಸಿಮೆಂಟು ಮೊದಲಾದ ವಸ್ತುಗಳನ್ನು ಒದಗಿಸುವದರಲ್ಲಿ ಆದ್ಯತೆ ಕೊಡಲಾಗುತ್ತದೆ.

ಬಳ್ಳಾರಿ ವೀರಶೈವ ಕಾಲೇಜು

ಶ್ರೀ ವೈ. ಮಹಾಬಲೇಶ್ವರಪ್ಪನವರ ಯತ್ನಗಳಿಂದ-ಬಳ್ಳಾರಿ ವೀರಶೈವ ಕಾಲೇಜಿನ ಪುನರುದ್ಧಾರವಾಗಿ 1950 ರಲ್ಲಿ ಜೂನಿಯರ್ ಇಂಟರ್ ವರ್ಗಕ್ಕೆ ವಿದ್ಯಾರ್ಥಿಗಳನ್ನು ಸೇರಿಸುವ ಕಾರ್ಯವು ಆರಂಭವಾಗಲಿದೆಯೆಂದು ಕೇಳಲು ಹರ್ಷಿಸುತ್ತೇವೆ.

ಕಲಾ ಶಾಲೆಯ ಕಟ್ಟಡಕ್ಕಾಗಿ ಸರ್ಕಾರದವರು ಕೊಡಬಯಸಿದ ಹಣವು ಯಾ ಅದರ ಭಾಗವು ಬಂದೊಡನೆ ಬಳ್ಳಾರಿ ಕಂಟೋನ್ಮೆಂಟ್ ಸ್ಟೇಶನ್ನದ ಎದುರಿನ 100 ಎಕರೆಗಳ ವಿಶಾಲ ಬಯಲಲ್ಲಿ ಕಟ್ಟಡವಾರಂಭವಾಗಲಿದೆಯೆಂದು ಶ್ರೀ ಮಹಾಬಲೇಶ್ವರಪ್ಪನವರು ವೃತ್ತ ಪತ್ರಿಕೆಗಳಿಗೆ ಹೇಳಿಕೆ ಕೊಡುತ್ತ ಕಾಲೇಜಿನ ಸ್ಥಾಯಿ ಪ್ರಯತ್ನಗಳ ಬಗ್ಗೆ ಆಶ್ವಾಸನ ಕೊಟ್ಟರು.

ಬಳ್ಳಾರಿ ಜಿಲ್ಲೆಯ ಇಬ್ಭಾಗ ಸತ್ಯಾಗ್ರಹವೇ?

ಬಳ್ಳಾರಿ:— ಕಳೆದ ವಾರ ಬಳ್ಳಾರಿಯಲ್ಲಾದ ಸಭೆಯಲ್ಲಿ ಶ್ರೀ ಕೊ. ಚನಬಸಪ್ಪ ಮುತ್ತಿಜರರು ಆಂಧ್ರ ಪ್ರಾಂತದೊಡನೆ ಕರ್ನಾಟಕ ಪ್ರಾಂತದ ನಿರ್ಮಾಣವೂ ಆಗಬೇಕೆಂದೂ; ಬಳ್ಳಾರಿ ಜಿಲ್ಲೆಯನ್ನು ಇಬ್ಭಾಗ ಮಾಡಬಾರದೆಂದೂ ಹಾಗಾದರೆ ಕಾಂಗ್ರೆಸ್ ಸರಕಾರದ ವಿರುದ್ಧ ಸತ್ಯಾಗ್ರಹ ಮಾಡಬೇಕಾಗುವದೆಂದೂ ವಗೈರೆ ಹೇಳಿದರು.

ಇಲ್ಲಿನ ಬಹಿರಂಗಸಭೆಯಲ್ಲಿ ಭಾಷಣಕಾರರು ಕರ್ನಾಟಕ ಪ್ರಾಂತದ ನಿರ್ಮಾಣದ ಅವಶ್ಯಕತೆಯನ್ನು ಕುರಿತು ಯುಕ್ತಿಯುಕ್ತ ವಾದಗಳನ್ನು ಮಂಡಿಸಿದರು.

ಬಳ್ಳಾರಿ-ಆದವಾನಿ ಸಭೆಗಳಲ್ಲಿ ಕನ್ನಡ ಸಾಹಿತಿಗಳಾದ ಶ್ರೀ ಅ. ನ. ಕೃಷ್ಣರಾಯರು ಕರ್ನಾಟಕ ಏಕೀಕರಣದ ಅವಶ್ಯಕತೆಯನ್ನು ಕುರಿತು ಹೃದಯಂಗಮವಾಗಿ ಹೇಳಿದರು.

ಚೀನದ ದಕ್ಷಿಣ ಪ್ರದೇಶದ ರಾಜಧಾನಿ ಚುಂಕಿಂಗ್‌ದ ಪತನವಾಯಿತು. ಚೆಂಗ್ ನಿ-ಶೇ-ಕರ ಸೈನಿಕರು-ಫಾರ್ಮೋಸಾ ದ್ವೀಪಕ್ಕೆ ಓಡಿದರು. ಅವರ ಸೈನ್ಯಗಳು ಇಂಡೋಚೀನದಲ್ಲಿ ಆಶ್ರಯ ಪಡೆಯಬಹುದೆಂದು ಕಮ್ಯೂನಿಸ್ಟ ಸರ್ಕಾರವು ಮಗ್ಗುಲ ದೇಶಗಳಿಗೆಲ್ಲಾ ಎಚ್ಚರಿಕೆ ಕೊಟ್ಟಿದೆ.

ಹರಿಜನರಿಗೆ ಮನೆಗಳ ಜಾಗಾ

ಹರಿಜನರಿಗೆ ಮನೆಗಳ ಜಾಗಾಗಳನ್ನು ಜಾಗ್ರತೆ ಆಕ್ರಮಿಸಲು ಎಲ್ಲಾ ಜಿಲ್ಲೆಗಳಲ್ಲಿ ಡೆಪ್ಯುಟಿ ಕಲೆಕ್ಟರವರನ್ನು ನಿಯಮಿಸಿರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿ ಸೀನಿಯರ್ ತಹಶೀಲ್ದಾರರಾದ ಶ್ರೀ ಅನಂತಶಯನಂರವರು ನಿಯುಕ್ತರಾಗಿದ್ದಾರೆ.

ಎಷ್ಟೋ ಕಷ್ಟಗಳು ಬಂದರೂ 1950 ರಿಂದ ಆಹಾರ ಸಾಮಗ್ರಿಗಳನ್ನು ಪರದೇಶಗಳಿಂದ ತರಿಸುವದಿಲ್ಲೆಂದು ಭಾರತ ಮಂತ್ರಿಗಳಾದ ಪಂಡಿತ ನೆಹರೂರು ಸಾರಿರುವರು.

ಕೃತರು ಮದ್ರಾಸ್ ಸರ್ಕಾರಕ್ಕೆ ತಮ್ಮ ಒಂದು ವರ್ಷದ ತೆರಿಗೆಯನ್ನು ಸಾಲರೂಪವಾಗಿ ಕೊಡಬೇಕೆಂದೂ ಅದರಿಂದ ಅಭಿವೃದ್ಧಿ ಯೋಜನೆಗಳಿಗಾಗಿ 6 ಕೋಟಿ ರೂ. ದೊರೆಯುವುದೆಂದೂ ಆರ್ಥಿಕ ಮಂತ್ರಿಗಳು ಸೂಚಿಸಿರುತ್ತಾರೆ.

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[o]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ. ಬಡ್ಡಿ ಸೇವಿಂಗ್ಸ ಬ್ಯಾಂಕ್ 5 - ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10,- ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits):**— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

ಹಿಂದೀ ಮಹಾ ವಿದ್ಯಾಲಯ, ಬಳ್ಳಾರಿ,

[1931 ಸ್ಥಾಪಿತ. ಬಳ್ಳಾರಿ ಜಿಲ್ಲಾ ಹಿಂದೀ ಪ್ರೇಮೀಮಂಡಲದಾಶ್ರಯದಲ್ಲಿ, ರಿಜಿಸ್ಟರ್ಡ.]

ಮದ್ರಾಸ್ ಸರ್ಕಾರದಿಂದ ಮಾನ್ಯತೆ ಇದೆ.

ಪ್ರಾರಂಭಿಕ ವರ್ಗಗಳಿಗೆ ಮಾಸಿಕ 3/- ಶುಲ್ಕ — ಉನ್ನತ ವರ್ಗಗಳಿಗೆ ಮಾಸಿಕ 5/- ಶುಲ್ಕ

ವಾರ್ಡಲಾ ಹೈಸ್ಕೂಲ್ ಕಟ್ಟಡದಲ್ಲಿ ಪ್ರಾತಃಕಾಲ-ಸಾಯಂಕಾಲ ಹಿಂದೀ ಕಾಲೇಜ್‌ದ ವರ್ಗಗಳು ನಡೆಯುತ್ತಿವೆ ವಿಶಾರದ — ಪ್ರಚಾರಕ ವರ್ಗಗಳಲ್ಲದೆ ಪ್ರಾರಂಭಿಕ ವರ್ಗಗಳಿಗೂ ಪ್ರವೇಶವಿದೆ. ವರ್ಗಗಳಿಗೆ ಸಂಬಂಧಿಸಿದ ಪಾಠ್ಯ ಪುಸ್ತಕಗಳು ವಿದ್ಯಾಲಯದಲ್ಲಿ ದೊರೆಯುತ್ತವೆ ಒಳ್ಳೆಯ ಪುಸ್ತಕಭಂಡಾರವಿದೆ. ಶ್ರೇಷ್ಠ ವಾರಪತ್ರಿಕೆ, ಮಾಸಪತ್ರಿಕೆಗಳು ಲಭ್ಯ ಇತರ ವಿವರಗಳಿಗೆ ಸ್ಟಾಂಪಿಟ್ಟು ಬರೆಯಿರಿ.

ಪ್ರಿನ್ಸಿಪಾಲ್.

NAVA BHARAT BELLARY. (Reg. No. M. 46)47

5—12—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.......................................

....

....

Printed at Krishna Printing Works. Edited & Published by T. B. Keshava Rao.

JAI-HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕರು:
ಟಿ. ಬಿ. ಕೇಶವರಾವ್

... ೧೨ | ಸೋಮವಾರ ೧೨ ಡಿಸೆಂಬರ್ ೧೯೪೯ | ಸಂಚಿಕೆ ೪೬

ಸರಕಾರದ ಶಾಸನಗಳು
ಕಾರ್ಯರೂಪದಲ್ಲಿ ಬರಲಿ

ಶ್ರೀ ಬಿ. ಯಂ. ಅಜ್ಜಯ್ಯನವರು ಹೀಗೆ ಬರೆದಿರುವರು.

ಜನತೆಯ ತಪ್ಪು-ಕಡೆಗಳನ್ನು ತಿದ್ದಿ ವ್ಯವಸ್ಥಿತವಾದ ಸಮಾಜ, ಶಾಂತಿ, ಸುವ್ಯವಸ್ಥೆಗಳನ್ನು ಕಾಯ್ದುಕೊಂಡು ಬರಲು ಸರಕಾರವು ಮದ್ಯನಿಷೇಧ, ಲಂಚಗೋಳಿತನ, ಕಳ್ಳಪೇಟೆ, ನಿಯಂತ್ರಣ, ದೇವದಾಸಿ ಬಿಲ್, ಪ್ರಾಣಿಬಲಿ ವಗೈರೆ ವಿಷಯಗಳಲ್ಲಿ ಕಾನೂನು ಮಾಡಿದೆ. ಆದರೆ ಇವುಗಳನ್ನು ಜಾರಿಗೆ ತರುವುದರಲ್ಲಿ ಸರ್ಕಾರೀ ಅಧಿಕಾರಸ್ಥರೇ ತಪ್ಪು ದಾರಿ ಹಿಡಿದಿರುವರೆಂಬುದನ್ನು ಎಲ್ಲರೂ ಬಲ್ಲರು. ಜನತೆಯು ತಪ್ಪುದಾರಿ ಹಿಡಿದರೆ ಸರ್ಕಾರದ ಮೂಲಕ ಅದರ ತಪಯಾಗಬಲ್ಲುದು. ಆದರೆ ಸರ್ಕಾರಿ ಅಧಿಕಾರಿಗಳ ತಪ್ಪಿತಗಳು ಗೋಚರಕ್ಕೆ ಬಂದರೂ ಅದರ ಸುಧಾರಣೆಯಾಗಿಲ್ಲ. ಅಂಥ ಲಕ್ಷಣಗಳೂ ತೋರಿಬರುತ್ತಲಿಲ್ಲ. ಸರಕಾರಿ ಅಧಿಕಾರಿಗಳ ತಪ್ಪಿತಗಳನ್ನು ಕುರಿತು ಮೇಲಧಿಕಾರಿಗಳಿಗೆ ತಿಳಿಯಪಡಿಸಿದರೂ ತಕ್ಕ ಪರಿಹಾರವಾಗಿಲ್ಲ. ಇಂಥ ರಾಜ್ಯಭಾರದ ವ್ಯವಸ್ಥೆಯು ಯಾವಾಗಲೂ ಇದ್ದಿಲ್ಲವೆಂದು ಹೇಳಬಹುದು.

ಉದಾಹರಣಾರ್ಥವಾಗಿ ಬರುವ ಶ್ರಾವಣಮಾಸದಲ್ಲಿ ಪ್ರಾಣಿಗಳ ವಧೆಯು ಎಲ್ಲಾ ಕಡೆಯಲ್ಲೂ ದೇವತೆಗಳ ಮುಂದೆ ಆಗಲಿದೆ. ಆಹಾರ ಕುಟಾಗ್ರತೆಯ ಈ ಕಾಲದಲ್ಲಿ ವ್ಯರ್ಥವಾಗಿ ಅನ್ನವನ್ನು ಚೆಲ್ಲುವುದೂ, ದೇವರ ಹೆಸರಿನಲ್ಲಿ ಪ್ರಾಣಿವಧೆ ಮಾಡುವುದೂ, ಶಾಸನದಿಂದ ಬಹಿಷ್ಕೃತವಿದ್ದರೂ, ಅಧಿಕಾರಿಗಳು ನೋಡಿಯೂ, ನೋಡದಂತಿದ್ದು ಚರ್ಯೆ ತೆಗೆದುಕೊಳ್ಳುವದಿಲ್ಲ. ಸರ್ಕಾರದ ಸಹಾಯವಿಲ್ಲದೆ ಸುಧಾರಕರು ನಿಸ್ಸಹಾಯರಾಗಿರುವರು. ಸಂಪಾದಕರಾದ ತಾವು ಮಾರ್ಗದರ್ಶನ ಮಾಡಿರಿ.

[ಬ್ರಿಟಿಷ್ ಸರ್ಕಾರದ ಕಾಲದಲ್ಲಿ ಅಧಿಕಾರಿಗಳ ಲೋಪ, ದೋಷಗಳನ್ನು ತಿಳಿಸಿದರೆ, ವಿಚಾರಣೆಯಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗುತ್ತಿತ್ತು. ಸುಳ್ಳು ಅಪಾದನೆ ಮಾಡಿದ್ದಾದರೆ ಅವರನ್ನೂ ಬಿಡುತ್ತಿರಲಿಲ್ಲ. ಏನೇ ಆಗಲಿ, ಸಂಬಂಧಿಸಿದಧಿಕಾರಿಗಳಿಂದ "ವಿಚಾರಣೆಯಲ್ಲಿದೆ. ವಿಚಾರಣೆಯ ನಂತರ ಫಲಿತಾಂಶ ತಿಳಿಸುತ್ತೇವೆ" ಎಂದಾದರೂ ಉತ್ತರ ಸಿಗುತ್ತಿತ್ತು. ಈಗ ಸಾರ್ವಜನಿಕಾಭಿಪ್ರಾಯಕ್ಕೆ ಗೌರವವಿಲ್ಲದಂತಾಗಿದೆ. ಕಾರ್ಯಕರ್ತರ ಅರ್ಜಿಗಳನ್ನಾಗಲಿ ಅಪಾದನೆಗಳನ್ನಾಗಲಿ ಕೇಳುವವರಿಲ್ಲದಂತಾಗಿದೆ. ಒಂದಲ್ಲ, ನೂರು ಅರ್ಜಿ ಹಾಕಲಿ, "ಝುಂ" ಎನ್ನುವದಿಲ್ಲ. ಹಣಸ್ಥನಿಗೂ, ಬಂಡವಲಗಾರನಿಗೂ ಅನುಕೂಲವಾದ ಈ ರಾಜ್ಯಭಾರ ವ್ಯವಸ್ಥೆಯು ಬದಲಾವಣೆಯಾಗಿ, ಸಮಾಜವಾದೀ (ಸೋಶಿಯಲಿಸ್ಟ್) ಸರ್ಕಾರವು ಬರುವವರೆಗೂ ನಿರ್ಧನಿಗಳಿಗೂ ಕೂಲಿಕಾರರಿಗೂ, ಬಡರೈತನಿಗೂ ಮುಕ್ತಿ ಇಲ್ಲ.
—ಸಂಪಾದಕ]

ರಾಘವ ಸ್ಮಾರಕ ಮಂದಿರ

ಮದ್ರಾಸ್ ಹೈಕೋರ್ಟಿನ ಪ್ರಧಾನ ನ್ಯಾಯಾಧೀಶರಾದ ಶ್ರೀ ಪಿ. ವಿ. ರಾಜಮನ್ನಾರರವರು, ಮದ್ರಾಸ್ ರೆವಿನ್ಯೂ ಮಂತ್ರಿ ಶ್ರೀ ಹೆಚ್. ಸೀತಾರಾಮರೆಡ್ಡಿಯವರಧ್ಯಕ್ಷತೆಯಲ್ಲಿ ಬಳ್ಳಾರಿ, ಅನಂತಪುರ ರಸ್ತೆಯ ಬಲಭಾಗ (ಕೋಟೆಗುಡ್ಡದ ಹತ್ತಿರ) ರಾಘವ ಸ್ಮಾರಕ ಮಂದಿರದ ಶಂಕುಸ್ಥಾಪನೆಯನ್ನು ಕಳೆದ ಭಾನುವಾರ ನೆರವೇರಿಸಿದರು. ಶ್ರೀ ಧಾಯಪ್ಪನವರು ವರದಿಯನ್ನೋದಿ ಸಂಗ್ರಹೀತವಾದ ಹಣದ ಲೆಕ್ಕ ಕೊಟ್ಟರು. 21 ಸಾವಿರ ಹಣದ ಜೊತೆಗೆ 70 ಸಾವಿರ ರೂ ಬೇಕಾಗುವದೆಂದರು. ಶ್ರೀ ರಾಜಮನ್ನಾರ್ ಮತ್ತು ಶ್ರೀ ಸೀತಾರಾಮರೆಡ್ಡಿಯವರು ರಾಘವಾಚಾರ್ಯರ ಗುಣಗಾನ ಮಾಡಿದರು. ಶ್ರೀ ಗದಗ ಜೋಳದರಾಶಿ ದೊಡ್ಡನಗೌಡರು, ಸಂಜೀವಮೂರ್ತಿ ಮತ್ತು ರಾಮಸ್ವಾಮಿಯವರು ತಮ್ಮ ಕವಿತೆಗಳನ್ನೋದಿದರು.

ನವಭಾರತಕ್ಕೆ
ಚಂದಾದಾರರಾಗಿರಿ.

— ಸಾಹಿತ್ಯಹಬ್ಬ —

ಡಿಸೆಂಬರ್ 13-14 ನೆಯ ತೇದಿಗಳಲ್ಲಿ ಹರಪನಹಳ್ಳಿ ತಾಲೂಕು ಚನ್ನಾಪುರದ ಮಹಾಸ್ವಾಮಿಯ ಜಾತ್ರೆಯ ಅಂಗವಾಗಿ ಸಾಹಿತ್ಯಕೂಟ ಉಪಾಧ್ಯಾಯ ಸಮ್ಮೇಳನ, ಗ್ರಾಮಾಭಿವೃದ್ಧಿ ಸಭೆ ಜನಪದ ಸಾಹಿತ್ಯ ಗೋಷ್ಠಿ ಕೋಲುಪದ ಲಾವಣಿ ಭಜನೆ, ಸಂಗೀತ, ಪುರಾಣ, ಪ್ರವಚನ ಮೊದಲಾದ ಕಾರ್ಯಕ್ರಮಗಳ ಏರ್ಪಾಟಿದೆ. ಬಳ್ಳಾರಿ ಮತ್ತು ಇತರ ಕಡೆಗಳಿಂದ ಸಾಹಿತಿಗಳು ಬರಲಿದ್ದಾರೆ. ಈ ಕಾರಣ ಸರ್ವರೂ ದಯಮಾಡಿಸಿ ಈ ಸಭೆಯನ್ನು ಯಶಸ್ವಿಗೊಳಿಸಲು ಕೋರಿಕೆ.

ಬಳ್ಳಾರಿ ಜಿಲ್ಲೆ ಇಬ್ಭಾಗವಾಗಬಾರದು.

ರೈತರು ಮದ್ರಾಸ್ ಸರ್ಕಾರಕ್ಕೆ ಕೊಡಬೇಕಾದ ಒತ್ತಾಯದ ಸಾಲ

ಆರ್ಥಿಕ ಮಂತ್ರಿಗಳಿಗೆ ಸೂಚನೆ

ಅನ್ಯಾಯದ ಪರಮಾವಧಿ

ಮದ್ರಾಸಿನ ಆರ್ಥಿಕ ಮಂತ್ರಿಗಳಾದ ಶ್ರೀ ಬಿ. ಗೋಪಾಲರೆಡ್ಡಿಯವರು ಒಂದು ಸೂಚನೆ ತಂದು ವಾರ್ಷಿಕವಾಗಿ 10/- ರೂ. ಗಿಂತಲೂ ಹೆಚ್ಚಿನ ವಾರ್ಷಿಕ ತೆರಿಗೆ ಕೊಡುವ ರೈತರು ತಾವು ಕೊಡುವ ಒಂದು ವರ್ಷದ ತೆರಿಗೆಯಷ್ಟನ್ನು ಮದ್ರಾಸ್ ಸರ್ಕಾರಕ್ಕೆ ಒತ್ತಾಯದಿಂದ ಸಾಲಕೊಡಬೇಕೆಂದು ಹೇಳಿದ್ದಾರೆ. ಈ ಸೂಚನೆಗೆ ಕೇಂದ್ರ ಸರ್ಕಾರದ ಸಮ್ಮತಿ ದೊರೆತಿರುವದೆಂದೂ ಈ ಭಾಗ ಸುಮಾರು ಆರು ಕೋಟಿ ರೂಪಾಯಿಗಳು ಸರ್ಕಾರದ ಅಭಿವೃದ್ಧಿ ಯೋಜನೆಗಳಿಗ್ಯಾಗಿ ದೊರೆಯಲಿರುವದೆಂದೂ ಊಹಿಸಲಾಗಿದೆ. ತಾವು ಬೆಳೆಯುವ ಧಾನ್ಯಗಳಿಗೆ ಒಳ್ಳೆಯ ಬೆಲೆಯು ದೊರೆಯುತ್ತಿರುವದೆಂದೂ, ರೈತರು ಸುಖ-ಸಂಪತ್ತಿಗಳಿಂದ ಕೂಡಿರುವರೆಂದೂ, ಆರ್ಥಿಕ ಮಂತ್ರಿಗಳ ಅಭಿಪ್ರಾಯ

ಮೊದಲು ರೈತರಿಂದ ಒತ್ತಾಯದ ಸಾಲ ಪಡೆಯಬೇಕಾದರೆ ಸರಕಾರವು ಆರ್ಥಿಕವಾಗಿ ಸಾಕಷ್ಟು ದೃಡವಿಲ್ಲೆಂಬುದು ವ್ಯಕ್ತಪಡುತ್ತದೆ. ಹಿಂದಿನ ಕಾಲಗಳಲ್ಲಿ ಸರಕಾರಿ ಸಾಲವು ಪ್ರಕಟವಾದ ಕೆಲ ಗಂಟೆಗಳಲ್ಲಿಯೇ ಕೆಲ ಸಾಹುಕಾರೀ ಜನರಿಂದಲೇ ಸಂಗ್ರಹವಾಗುತ್ತಲಿತ್ತು. ಆದರೆ ಈಗ ಆ ಪರಿಸ್ಥಿತಿಯು ಉಳಿದಿಲ್ಲ. ಸರಕಾರವು ಮದ್ಯನಿಷೇಧದಂಥ ಆರ್ಥಿಕ ಯೋಜನೆಗಳನ್ನು ಇಡೀ ಪ್ರಾಂತಕ್ಕೆ ಅನ್ವಯಿಸಿ ೨೦ ಕೋಟಿ ರೂ ಗಳ ನಷ್ಟ ಮಾಡಿಕೊಂಡಿದೆ. ಮದ್ರಾಸಿಗೆ ಸಾಲ ದೊರೆಯದೆಂದು ಕೇಂದ್ರದವರು ತಿಳಿಸಿ ಬಿಟ್ಟಿದ್ದಾರೆ. ಹೀಗಾಗಿ ಅವರ ನಿತ್ಯ ಖರ್ಚುಗಳನ್ನು ಸಾಗಿಸಲು ಮತ್ತೆ ರೈತರ ಮೇಲೆಯೇ ಬೀಳಬೇಕಾಗಿದೆ.

ರೈತನ ಹೊರೆಯು ನಿತ್ಯವೂ ಹೆಚ್ಚುತ್ತಲಿದೆ. ಬೆಳೆಯುವುದೂ ಸ್ವಲ್ಪ ಬೆಳೆದ ಧಾನ್ಯಗಳು ದೊರೆಯುವುದೂ ಸ್ವಲ್ಪ ಬಹುತಾಂಶ ರೈತರು ತಮ್ಮ ಹೊಟ್ಟೆಗಾಗುವಷ್ಟು ಕೂಡ ಬೆಳೆಯುವದಿಲ್ಲ. ಇಷ್ಟರಮೇಲೆ ಪ್ರೊಕ್ಯೂರ್‌ಮೆಂಟ್, ಕಂಟ್ರೋಲ್‌ಗಳಿಂದ ಅವನ ಖರ್ಚಿಗೂ ದೊರೆಯುವುದು ಕಷ್ಟ. ಸೇಲ್ಸ್‌ಟ್ಯಾಕ್ಸ ಹೊರೆಯು ಎಲ್ಲಾ ಸಾಮಾನ್ಯ ಜನತೆಯೇ ತರಬೇಕಾಗಿದೆ. ಸರ್ಕಾರವು ವಿಧಿಸುತ್ತಿರುವ ತೆರಿಗೆಯ ಹೊರೆಯೆಲ್ಲಾ ಬಡ ರೈತರಮೇಲೆ ಹೆಚ್ಚು ಬೀಳುತ್ತಲಿದೆ ನಿತ್ಯ ಜೀವನದ ಶ್ರೇಣಿ ಅಧಿಕವಾಗಿ ಜೀವನ ಸಾಗಿಸುವ ಬೆಳೆಯುತ್ತಲಿದೆ. ಬಂದದ್ದು ಸಾಲುವದಿಲ್ಲ.

ಇಂತ ವಿಘಾತಕ ಯೋಜನೆಗೆ ಕೇಂದ್ರ ಸರಕಾರವು ಹೇಗೆ ಸೂಚನೆ ಇತ್ತಿತೋ, ನಮಗೇ ಪರಮಾಶ್ಚರ್ಯ ಉಂಟುಮಾಡಿದೆ. ದೇಶವನ್ನು ಅನಾಯಕತ್ವದೆಡೆಗೆ ಒಯ್ಯಲು, ಕಮ್ಯೂನಿಸ್ಟರ ಪ್ರಚಾರಕ್ಕೆ ಬೆಂಬಲ ಕೊಡಲು ಇದರಿಂದ ಸಹಾಯ ದೊರೆಯಬಹುದೆಂದು ನಮ್ಮ ಭಯವಿದೆ ಇಂಥ ಘಾತಕ ಸೂಚನೆಯನ್ನು ಜಾರಿಯಲ್ಲಿ ತರದಿರಲು ನಮ್ಮ ಸೂಚನೆ. ಏಕೆಂದರೆ ಇದು ಅನ್ಯಾಯದ ಪರಮಾವಧಿಯಾಗಲಿದೆ

ಆಂಧ್ರ ದೇಶದಲ್ಲಿ ನೆರೆಹಾವಳಿ

ಆಂಧ್ರ ದೇಶದ ಕೆಲವು ಭಾಗಗಳಲ್ಲಿ ಇತ್ತೀಚೆಗೆ ಸುಂಟರಗಾಳಿಯಿಂದ ಸಂಭವಿಸಿದ ಭಯಂಕರ ಅನಾಹುತವು ನನ್ನನ್ನು ತುಂಬಾ ಚಿಂತೆಗೊಳಪಡಿಸಿದೆ. ಭಾರೀ ಮಳೆ, ಗುಡ್ಡಗಳಿಂದ ಇಳಿದ ನೆರೆನೀರು, ಸಮುದ್ರದಿಂದೆದ್ದು ಬಂದ ಪ್ರಚಂಡ ಅಲೆ, ಬಿರುಗಾಳಿಗಳಿಂದ ಕರ್ನೂಲು, ಗುಂಟೂರು, ಕೃಷ್ಣ, ಗೋದಾವರಿ ಜಿಲ್ಲೆಗಳೂ ಇತರ ಕೆಲವು ಪ್ರದೇಶಗಳೂ ಧ್ವಂಸವಾಗಿವೆ. ಸುಮಾರು ಒಂದು ಸಾವಿರ ಸ್ತ್ರೀ ಪುರುಷರು ಮುಳುಗಿರುವರು. ಸಾವಿರಾರು ದನಕರುಗಳು ನೀರು ಪಾಲಾಗಿವೆ. ಅಸಂಖ್ಯಾತ ಮನೆಗಳು ಬಿದ್ದಿವೆ. ದಕ್ಷಿಣ ಭಾರತದ ಧಾನ್ಯ ಕಣಜಗಳಂತಿದ್ದ ಕೃಷ್ಣ, ಗೋದಾವರಿ ಜಿಲ್ಲೆಗಳು ಸಂಪೂರ್ಣ ನೆಲಸಮವಾಗಿ ಅಲ್ಲಿಗೆ ಹೊರಗಿನಿಂದ ಆಹಾರ ಕಳುಹಿಸಬೇಕಾಗಿದೆ.

ಮದ್ರಾಸು ಸರಕಾರವು ಪರಿಸ್ಥಿತಿಯನ್ನು ಸುಧಾರಿಸಲು ತಕ್ಕ ಏರ್ಪಾಡು ಮಾಡುತ್ತಿದೆ. ಆದರೆ ಅಪಾರ ನಾಶ-ನಷ್ಟ ಸಂಭವಿಸಿರುವುದರಿಂದ ಹಿಂದುಸ್ಥಾನದ ಎಲ್ಲಾ ಕಡೆಗಳಿಂದಲೂ ಸಹಾಯ ಕೊಡಬೇಕಾಗಿದೆ. ಈಗ ಅಲ್ಲಿ ಸಾರಿಗೆಗೆ ತುಂಬಾ ಕಷ್ಟವಾಗಿರುವುದರಿಂದ ಉಪವಾಸ ಸಂಕಷ್ಟಗಳನ್ನು ಕ್ಷಿಪ್ರದಲ್ಲಿ ನಿವಾರಿಸಬೇಕು. ನೆಲಸಮವಾದ ಈ ಜಿಲ್ಲೆಗಳ ಸಹಾಯಕ್ಕೆ ಹಿಂದುಸ್ಥಾನದ ಲ್ಲೆಲ್ಲಿಯೂ ವಾಸಿಸುವ ಜನರು ಮುಂದೆ ಬರುವರೆಂದು ನಾನು ನಂಬುತ್ತೇನೆ.

ಈ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗೋಸ್ಕರ ಎಲ್ಲಾ ಸಹಾಯಗಳನ್ನೂ ಮದ್ರಾಸಿನ ಗವರ್ನರಿಗೆ ಕಳುಹಿಸಬೇಕು. ಆಂಧ್ರದಲ್ಲಿ ಪರಿಹಾರಕ್ಕೋಸ್ಕರ ಪ್ರತ್ಯೇಕಿಸಿದ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಸಹ ಅವರು ಕಳುಹಿಸಬಹುದು.

—ಪಂಡಿತ ಜವಾಹರಲಾಲ್ ನೆಹರು—

ಸೊಂಡೂರು ಸಂಸ್ಥಾನದ ವಿದ್ಯಾಮಂದಿರ ಹೈಸ್ಕೂಲಿನ ಹನ್ನೊಂದನೆ ತರಗತಿಯ ವಿದ್ಯಾರ್ಥಿಗಳು 1950 ನೇ ಮಾರ್ಚಿಯಲ್ಲಿ ಜರಗುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವಂತೆ ನಮ್ಮ ಸರ್ಕಾರವು ಒಪ್ಪಿಗೆ ಕೊಟ್ಟಿದೆ.

ಪಂಚಾಯತ್ ಬೋರ್ಡ್ ಸದಸ್ಯರು

1920 ನೇ ಲೋಕಲ್ ಬೋರ್ಡು ಶಾಸನದನ್ವಯ ರಚಿಸಲ್ಪಟ್ಟ ಪಂಚಾಯತ್ ಬೋರ್ಡುಗಳ ಸದಸ್ಯರ ಅಧಿಕಾರಾವಧಿಯನ್ನು 1—2—1950 ರವರೆಗೆ ಮುಂದುವರಿಸಲಾಗಿದೆ.

ನಮ್ಮ ಪ್ರಾಂತದಲ್ಲಿ ಹೊಸತಾಗಿ ತೆರೆಯಲ್ಪಟ್ಟ ಎಲಿಮೆಂಟರಿ ಟ್ರೈನಿಂಗ್ ಶಾಲೆಗಳಲ್ಲಿ ಈವರೆಗೆ ಜೂನಿಯರ್ ವಿದ್ಯಾರ್ಥಿಗಳಿಗೆ ವೇತನ (ಸ್ಟೈಪೆಂಡ್ ದೊರೆಯುತ್ತಿದ್ದಿಲ್ಲ. ಈ ಕಷ್ಟವನ್ನು ಸರಕಾರವು ನಿವಾರಿಸಿ ಅವರಿಗೂ ವೇತನ ಕೊಡಬಹುದೆಂದು ಅಪ್ಪಣೆಕೊಡಲಾಗಿದೆ.

ನವಭಾರತಕ್ಕೆ ಚಂದಾದಾರರಾಗಿರಿ.

ರಾಷ್ಟ್ರೀಯ ಉಳಿತಾಯ

[ಸರದಾರ ವಲ್ಲಭಭಾಯಿ ಪಟೇಲರು]

ನಮ್ಮ ಹೊರೆಯು ಎಷ್ಟು ಭಾರವಾಗಿದೆ, ನಮ್ಮ ಜವಾಬ್ದಾರಿಕೆಗಳು ಎಷ್ಟು ಭಿನ್ನವಾಗಿವೆ ಎಂದು ಬೇರೆ ಹೇಳಬೇಕಾಗಿಲ್ಲ. ನಮ್ಮನ್ನು ಎದುರಿಸುವ ಪರಿಸ್ಥಿತಿಗಳ ಕಠಿಣತೆಯ ಕುರಿತು ಇನ್ನೊಮ್ಮೆ ಒತ್ತಿ ಹೇಳಬೇಕಾಗಿದೆ. ಕಾಗದಗಳಲ್ಲೇ ಯೋಜನೆಗಳನ್ನು ತಯಾರಿಸುವ ಕಾಲವು ಕಳೆಯಿತು. ಆದರ್ಶ ಜೀವನದ ಕನಸು ಕಾಣುತ್ತಾ ಕುಳಿತುಕೊಳ್ಳುವ ಕಾಲವೂ ದಾಟಿತು. ಇಂದಿನ ಕಠಿಣ ವಿಷಯಗಳೊಡನೆ ನಾವು ಜೀವಿಸಬೇಕಾಗಿದೆ. ನೈಜ ವಾತಾವರಣದಲ್ಲಿ ನಾವು ಆಲೋಚಿಸಿ ಕೆಲಸ ಮಾಡಬೇಕಾಗಿದೆ. ಈಗ ಹಸಿದವನಿಗೆ ಮುಂದೆ ಎಂದಾದರೂ ಅಧಿಕ ವೇತನ ಕೊಡುವುದರಿಂದ ಫಲವಿಲ್ಲ. ಹಾಗೆಯೇ ಕಳವಳವನ್ನುಂಟು ಮಾಡುವ ಅಭಿಪ್ರಾಯಗಳಿಂದ ಈಗಾಗಲೇ ಉದ್ರೇಕಗೊಂಡ ಮನಸ್ಸನ್ನು ತುಂಬಿಸುವುದರಿಂದಲೂ ಪ್ರಯೋಜನವಿಲ್ಲ. ನಿರ್ದಿಷ್ಟವಾದ ಧೋರಣೆಗಳಿಗೆ ಹಾಗೂ ಸ್ಪಷ್ಟವಾದ ನಿಶ್ಚಿತ ಕಾರ್ಯಗಳಿಗೆ ಇದೇ ಸಮಯವಾಗಿದೆ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಭಾಗವಹಿಸಲು ನಿಮ್ಮೆಲ್ಲರನ್ನು ಕೇಳುತ್ತಿದ್ದೇನೆ.

ಕೃಷಿಕರ ಸಹಾಯ ಬೇಕು

ಕಳೆದ ಮೂರು ವರುಷಗಳಲ್ಲಿ ನಮ್ಮ ದೇಶದ ವಿವಿಧ ಜವಾಬ್ದಾರಿಕೆಗಳಲ್ಲಿ ನಾನು ಭಾಗವಹಿಸಿ ಸ್ವಾತಂತ್ರ್ಯ ಹೋರಾಟದ ಸುಖದುಃಖಗಳನ್ನು ತಿಳಿದಿದ್ದೇನೆ. ನಮಗೆ ಹೊಟ್ಟೆಗೊದಗಲು ಬೇಕಾದ ಆಹಾರ - ಬಟ್ಟೆಬರೆಗಳಲ್ಲಿ ನಮ್ಮ ದೇಶವು ಸ್ವಯಂಪೂರ್ಣವಾಗಬೇಕೆಂದು ಎದೆಬಡದೆ ಒತ್ತಿ ಹೇಳುತ್ತದೆ. ನಾವು ಆಹಾರೋತ್ಪತ್ತಿಗಾಗಿ ಕೋಟಿಗಟ್ಟಲೆ ಹಣ ಸುರಿದಿದ್ದೇವೆ. ಆದರೆ ಹೊರಗಿನಿಂದ ನಾವು ತರಿಸುತ್ತಿರುವ ಆಹಾರ ಸಾಮಗ್ರಿಗಳು ಅಷ್ಟೇನೂ ಕಮ್ಮಿಯಾಗಿಲ್ಲ. ಈ ವಿಷಯದಲ್ಲಿ ವಿದೇಶಿ ನಾಣ್ಯ ಚಲಾವಣೆ ಹಾಗೂ ಉಳಿತಾಯದ ಕುರಿತು ನಾವು ಪಡುವ ಕಷ್ಟವು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಇದು ಸಾಲದೆಂಬಂತೆ ಸಕ್ಕರೆಯ ಕೊರತೆಯೂ ಒಂದು ಕಷ್ಟವಾಗಿ ಪರಿಣಮಿಸಿದೆ. ಈವರೆಗೆ ಇಷ್ಟು ತೊಂದರೆಯಾಗಿದ್ದಿಲ್ಲ. ಸಕ್ಕರೆ ದಾಸ್ತಾನುಗಳನ್ನು ಸಾಧೀನ ಪಡಿಸಿ [illegible] ವಿತರಣೆಯಲ್ಲಿ ನಿಯಂತ್ರಣವನ್ನು ಜಾರಿಗೆ ತಂದುದು ಸರಿ [illegible] ಎಂದು ನಾನು ಹೇಳಬಯಸುವುದಿಲ್ಲ. ಆದರೆ ಈ ರೀತಿ ಸಕ್ಕರೆ ದೊರೆಯದಂತೆ ಮಾಡಿದವರನ್ನು ಖಂಡಿಸಲು [illegible] ಗಳೇ ದೊರೆಯುವದಿಲ್ಲ. ಬರುವ ಕಬ್ಬಿನ ಕೊಯ್ಲಿನ ಕಾಲದವರೆಗೆ ಪರಿಸ್ಥಿತಿಯು ಸುಧಾರಿಸಬಹುದೆಂದು ನನಗೆ ತೋರುವುದಿಲ್ಲ. ದೇವರ ದಯೆಯಿಂದ ಆ ಕಾಲವು ಹೆಚ್ಚು ದೂರದಲ್ಲಿಲ್ಲ. ಆಗ ಸಾಕಷ್ಟು ಸಕ್ಕರೆ ದೊರೆಯುವುದು. ಅವರಿಗೆ ಶಾಂತರೀತಿಯಿಂದ ಈ ಕಷ್ಟವನ್ನು ಎಲ್ಲರೂ ಸಹಿಸಿಕೊಳ್ಳಬೇಕೆಂದು ಮಾತ್ರ ಕೇಳಬಲ್ಲೆ. ಈ ಅನುಭವದಿಂದ ಮುಂದೆ ಎಂದೂ ಇಂತಹ ಪರಿಸ್ಥಿತಿಯು ಸಂಭವಿಸದಂತೆ ಮಾಡಿದರೆ ನಮಗೊಂದು ಲಾಭವೇ ಆಯಿತೆನ್ನಬೇಕು. ಹೀಗಾಗಬೇಕಾಗಿದ್ದರೆ ಕೃಷಿಕರೂ ಇತರರೂ ಒಟ್ಟಾಗಿ ಸಹಕರಿಸಬೇಕು.

ಕೃಷಿಯ ಅಭಿವೃದ್ಧಿಗೆ ನೂರಾರು ನೀರಾವರಿ ಯೋಜನೆಗಳನ್ನು ತಯಾರಿಸಲಾಗಿದೆ. ಕೃಷಿಗೆ ಯೋಗ್ಯವಾದ ಸಾವಿರಾರು ಎಕರೆ ಜಮೀನುಗಳು ಉಳುವವರಿಗಾಗಿ ಕಾಯುತ್ತಿವೆ. ಈಗ ಬೇಸಾಯ ನಡೆಯುತ್ತಿರುವ ಪ್ರದೇಶಗಳಲ್ಲೂ ಈಗಿಗಿಂತ ಹೆಚ್ಚಿನ ಬೆಳೆ ತೆಗೆಯಲು ಪ್ರಯತ್ನ ಮಾಡಬೇಕಾಗಿದೆ. ನಾವೊಂದು ದೊಡ್ಡ ಸುಧಾರಣೆಯ ಕಾರ್ಯಕ್ರಮವನ್ನು ಕೈಕೊಳ್ಳಲಿದ್ದೇವೆ. ಅದಕ್ಕೆ ಪರದೇಶದಿಂದ ಸಾಲವಾಗಿ ಪಡೆಯುವ ಹಣವು ಉಪಯೋಗಿಸಲ್ಪಡುವುದು. ಅದಲ್ಲದೆ ಆಹಾರೋತ್ಪತ್ತಿಗಾಗಿ ನಡೆಯುವ ಯೋಜನೆಗಳಿಗೆ ಸಹಾಯಕೊಡುವ ಕಾರ್ಯಕ್ರಮಗಳಿವೆ. ಈ ಎಲ್ಲಾ ವಿಷಯಗಳನ್ನು ನಾವು ಪರ್ಯಾಲೋಚಿಸಿದರೆ, 'ಇಂದಿನ ಆರ್ಥಿಕ ಪರಿಸ್ಥಿತಿಯು ಹೇಗಿದ್ದರೂ ನಮಗೆ ಬೇಕಾದಷ್ಟು ನಾವೇ ಬೆಳೆಸಿಕೊಂಡು ವಿದೇಶದ ಕೃಷಿಕರಿಗೂ ಕೊಡುವ ಲಾಭವನ್ನು ತಡೆಯಬಹುದು.

ಕರ್ತವ್ಯ ಭ್ರಷ್ಟರಾಗಕೂಡದು

ಕಳೆದ ಮೂರು ವರುಷಗಳಲ್ಲಿ ನಾವು ಆಹಾರ ಧಾನ್ಯಗಳಿಗಾಗಿ ಪರದೇಶಕ್ಕೆ ಕೊಟ್ಟ ಹಣವು ನಮ್ಮಲ್ಲೇ ಉಳಿಯುತ್ತಿದ್ದರೆ ಪಾಕಿಸ್ತಾನದಿಂದ ಬಂದ ನಿರ್ಭಾಗ್ಯರಾದ ನಮ್ಮ ಸೋದರ ಸೋದರಿಯರನ್ನೆಲ್ಲಾ ಸರಿಯಾಗಿ ಪುನರ್ನಿವೇಶನಗೊಳಿಸಬಹುದಿತ್ತು. ಇನ್ನೂ ಅವರು ನಮ್ಮ ಸಹಾಯಕ್ಕಾಗಿ ಬಾಯ್ತೆರೆಯುತ್ತಿದ್ದಾರೆ. ಇಷ್ಟೇ ಅಲ್ಲ. ಸರಿಯಾದ ಮನೆಮಾರಿಲ್ಲದೆ ಇನ್ನೂ ಬಡತನದ ಕೆಸರಲ್ಲಿ ಹೊರಳುತ್ತಿರುವ ನಮ್ಮ ದೇಶದ ಲಕ್ಷಗಟ್ಟಲೆ ಕುಟುಂಬಗಳನ್ನು ನೆನೆದರೆ ಹೃದಯವೇ ಒಡೆಯುತ್ತಿದೆ. ಅವರನ್ನು ಕಣ್ಣಾರೆ ನೋಡುತ್ತಿರುವವರು ತಾವು ಅಂತಹರ ಕಷ್ಟನಿವಾರಣೆಗಾಗಿ ಎಷ್ಟೋ ಯತ್ನಿಸುತ್ತಿದ್ದೇವೆಂದು ತಮ್ಮನ್ನೇ ಪ್ರಶ್ನಿಸಿಕೊಳ್ಳಲಿ. ಅಂತಹರು ತಾವೂ ಸಹಾಯ ಹೊಂದದೆ ಆಹಾರ ವಿಷಯದಲ್ಲಿ ಸ್ವಯಂಪೂರ್ಣವಾಗುವಂತೆ ಮಾಡಲು ನಮಗೂ ಸಹಾಯ ಮಾಡದೆ ಕರ್ತವ್ಯ ಭ್ರಷ್ಟರಾಗುತ್ತಿರುವದನ್ನು ನೋಡುತ್ತಿದ್ದೇವೆ.

ನಾವು ಯಾವಾಗಲೂ ಭಾರತದ ಸಂಸ್ಕೃತಿಯ ವಿಷಯ ಮಾರುದ್ದ ಭಾಷಣ ಮಾಡುತ್ತೇವೆ. ಭಾರತೀಯ ನಾಗರಿಕತೆಯ ಕುರಿತು ಬಹಳ ಮಾತಾಡುತ್ತೇವೆ. ಆದರೆ ಆ ಸಂಸ್ಕೃತಿ - ನಾಗರಿಕತೆಗಳ ಗುಣಗಳ ಕುರಿತು ಎಂದೂ ಮಾತೆತ್ತುವುದಿಲ್ಲ. ಬಡವರ ಉದ್ಧಾರ, ನೆರೆಹೊರೆಯವರೊಡನೆ ಪರಸ್ಪರ ಸಹಕಾರ' ನಿರ್ಗತಿಕರಿಗೆ ಸಹಾಯ, ದಲಿತರ ಮೇಲೆ ಕರುಣೆ ಇವುಗಳ ವಿಷಯ ಕ್ಷಣ ಹೊತ್ತಾದರೂ ಆಲೋಚಿಸುವುದಿಲ್ಲ. ನಮ್ಮಂತಹ ಪುರಾತನ ಗುಣಗಳಲ್ಲಿ ಎಷ್ಟೆಲ್ಲಾ ನಮ್ಮಲ್ಲಿವೆಯೆಂದು ನಮ್ಮನ್ನೇ ನಾವು ಪ್ರಶ್ನಿಸಿಕೊಳ್ಳೋಣ. ನಾವು ನಿಜವಾಗಿಯು ಪ್ರಾಮಾಣಿಕರೆಂದಾದರೆ ಯಾರು ಸರಕಾರಕ್ಕೊಪ್ಪಿಸುವ ಪ್ರತಿಕಾಳಿಗೆ ವರ್ತಕದಷ್ಟು ಪ್ರತಿಫಲವನ್ನು ಬಯಸುವರೋ, ಯಾರು ತಮ್ಮ ನೆರೆಮನೆಯವರೂ ಉಪವಾಸದಿಂದ ನರಳುತ್ತಿರುವಾಗಲೂ ಕಣ್ಣಾರೆ ನೋಡಿ ಸುಮ್ಮನಿರುವರೋ, ಯಾರು ತಮ್ಮ ಜಮೀನಿನ ಪ್ರತಿಯಂಗುಲದಲ್ಲಿಯೂ ಬೆಳೆ ಬೆಳೆಸಲು ಪ್ರಯತ್ನಿಸುವುದಿಲ್ಲವೋ ಅಂತಹರನ್ನು ಸಮಾಜ ದ್ರೋಹಿಗಳೆಂದು ಕೈಯೆತ್ತಿ ತೋರಿಸೋಣ. ಭೂಮಿಯನ್ನು ಬಂಜರು ಬಿಡುವುದು ಮಾತ್ರವಲ್ಲ, ಅದರಲ್ಲಿ ಆಹಾರಗಳ ಬೆಳೆಯು ಹಾಳಾಗಿ ಹೋಗಲು ಎಡೆಕೊಡುವವರೂ, ತಮ್ಮ

ಜಮೀನಿನ ಪ್ರತಿಯೊಂದು ಅಂಗುಲ ಭೂಮಿಯನ್ನೂ ಆಹಾರ ಧಾನ್ಯಗಳ ಬೆಳೆಗೆ ಉಪಯೋಗಿಸದಿರುವವರೂ ಅಂತಹರ ಸಾಲಿಗೆ ಸೇರಿದವರೆನ್ನಲು ಹಿಂಜರಿಯದಿರೋಣ.

ನಾವು ಗಾಂಧೀ ಭಕ್ತರೇ ?

ನಮ್ಮ ಅನುಕೂಲಕ್ಕೆ ತಕ್ಕಂತೆ ಮಾತ್ರ ಗಾಂಧೀಜಿಯವರ ಹೆಸರನ್ನು ಉಪಯೋಗಿಸಿ ಕೊಳ್ಳುವುದಕ್ಕಾಗಿಯೇ ನಾವಿರುವುದೇ ? ಗಾಂಧೀಜೀ ತತ್ವಗಳನ್ನು ಪ್ರತಿದಿನವೂ ಮೀರಿನಡೆಯುತ್ತ ಅವರ ತತ್ವಗಳಲ್ಲಿ ನಂಬಿಗಸ್ತರೆಂದು ಹೇಳಿಕೊಳ್ಳುವ ಗಾಂಧೀ ಭಕ್ತರು ಹೇಗೆ 'ಇದನ್ನು ಹೊಂದಿಸಿಕೊಳ್ಳುವವರೆಂದು ಪ್ರಶ್ನಿಸಬೇಕಾಗಿದೆ.

ಕೃಷಿಕರು ಕಷ್ಟಪಟ್ಟು ಕೆಲಸಮಾಡಬೇಕು. ತಮ್ಮ ಕೆಲಸದಿಂದ ದೊರೆಯುತಕ್ಕ ಸಂಪೂರ್ಣ ಪ್ರತಿಫಲವನ್ನು ಪಡೆಯಲು ದುಡಿಯಬೇಕು. ತನ್ನಿಂದಕೊಡಲು ಸಾಧ್ಯವಿದ್ದ ಪರಮಾವಧಿ ಧಾನ್ಯಗಳನ್ನು ಸರಕಾರಕ್ಕೆ ಒಪ್ಪಿಸಿ ಕನಿಷ್ಠ ಮಿತಿಯ ಧಾನ್ಯವನ್ನು ಮಾತ್ರ ಉಳಿಸಿಕೊಳ್ಳಬೇಕು. ಸರಕಾರವು ಆಹಾರೋತ್ಪತ್ತಿಯ ಕುರಿತು ಕೈಕೊಂಡ ಕಾರ್ಯಕ್ರಮಗಳಲ್ಲಿ ಕೃಷಿಕರೆಲ್ಲಾ ನೆರವಾಗಬೇಕು. ಹಾಗಾದರೆ ಪೂರೈಕೆ ಹಾಗೂ ಆಹಾರ ಧಾನ್ಯಗಳ ಬೇಡಿಕೆಗಳನ್ನು ಸಮತೂಕದಲ್ಲಿರಿಸಬಹುದು ಕೃಷಿಮಾಡಲ್ಪಡುವ ಎಲ್ಲಾ ಜಮೀನುಗಳಲ್ಲೂ ಆಹಾರ ಧಾನ್ಯಗಳನ್ನೇ ಬೆಳೆಸಬೇಕು.

"ಮಹಾಕ್ಷೇಮ ನಿಧಿ"

ಕೈಗಾರಿಕೋದ್ಯಮಿಗಳು, ವ್ಯಾಪಾರಿಗಳು, ಮಜೂರರು ಎಂದು ಪ್ರತಿಯೊಬ್ಬರೂ ಈ ಪರಿಸ್ಥಿತಿಯಲ್ಲಿ ಸಹಾಯಮಾಡಬೇಕು ನಮ್ಮ ಆಹಾರ ಧಾನ್ಯಗಳ ಪೂರೈಕೆ ಹಾಗೂ ಬೇಡಿಕೆಗಳನ್ನು ಸಮತೂಕದಲ್ಲಿರಿಸಲು ಎಲ್ಲರೂ ಪ್ರಯತ್ನಿಸಬೇಕಾಗಿದೆ. ಸರಕಾರ ಕೈಗಾರಿಕೆ, ಮಜೂರ ವರ್ಗ ಇವೆಲ್ಲಾ ದೇಶಸೇವಾ ಸ್ಫೂರ್ತಿಯಿಂದ ವರ್ತಿಸಬೇಕಾಗಿದೆ. ನಮಗೆಲ್ಲರಿಗೂ ದೇಶದ ಅವಶ್ಯಕತೆಯ ಕುರಿತು ತಿಳಿದಿರಬೇಕು. ಎಲ್ಲರಿಗೂ ಅಪಾಯಕರವಾದ ನಾವು ನಮ್ಮೊಳಗಿನ ಭೇದಗಳನ್ನು ಮರೆತು ಏಕಮುಖವಾಗಿ ಹೋರಾಡುವೆವೋ ಹಾಗೆಯೇ ಇಂದಿನ ಪರಿಸ್ಥಿತಿಯನ್ನು ಎದುರಿಸಲು ಒಗ್ಗಟ್ಟಾಗಿ ಸಿದ್ಧರಾಗಬೇಕು. ದೇಶ ಹಾಗೂ ವಿದೇಶಗಳಲ್ಲಿ ವೆಚ್ಚ ಮಾಡಬೇಕಾದ ಹಣಕ್ಕಾಗಿ ನಾವೊಂದು ಮಹಾ ಕ್ಷೇಮ ನಿಧಿಯನ್ನೇ ರಚಿಸಬೇಕಾಗಿದೆ. ಅದಕ್ಕೆ ನಾವೆಲ್ಲರೂ ನಮ್ಮ ಶಕ್ತ್ಯನುಸಾರ ಕೊಡಬೇಕಾಗಿದೆ. ಈ ನಿಧಿಯು ನಮ್ಮ ದೇಶದ ಉದ್ಧಾರ ಕಾರ್ಯಗಳಲ್ಲಿ ಬಂಬಲ ವಾಗುವುದು. ಅದರಿಂದ ನಮ್ಮೆಲ್ಲರ ಜೀವನವು ಸುಖಮಯವಾಗುವುದು.

ರಾಷ್ಟ್ರ ಚಕ್ರ ತಿರುಗಬೇಕು

ದೇಶವು ಸಾಲದಲ್ಲಿ ಮುಳುಗಿದರೆ ಅಭಿವೃದ್ಧಿ ಹೊಂದುವವರಾರು ? ದೇಶವು ಅಭಿವೃದ್ಧಿ ಹೊಂದಿದರೆ ಯಾರಿಗೆ ಕೆಡುಕಾಗುವುದು? ನಮ್ಮ ಸುಷ್ಟುನಾದ ಭಾವನೆ ವಿಚಾರಗಳು ಹಾಗೆಯೇ ಇರಲಿ. ನಮ್ಮ ಕೈಗಾರಿಕೋದ್ಯಮಿಗಳು ತಮ್ಮ ಯಂತ್ರಗಳಿಂದ ಹಾಗೂ ಕಾರ್ಖಾನೆಗಳಿಂದ ದೊರೆಯತಕ್ಕಷ್ಟು ಉತ್ಪತ್ತಿಯನ್ನು ದೊರಕಿಸಲಿ. ಕೈಗಾರಿಕೋದ್ಯಮಿಗಳಿಗೆ ಸಹಾಯಮಾಡಲು ಮಜೂರರೆಲ್ಲಾ ಮುಂದಾಗಬೇಕು ನಮ್ಮ ರಾಷ್ಟ್ರ ಚಕ್ರವು ಯಾವ ಎಡೆತಡೆಗಳೂ ಇಲ್ಲದೆ ಎಡಬಿಡದೆ ತಿರುಗಬೇಕು. ಪರಸ್ಪರ ಅಪರಾಧ ಹೊರಿಸುವುದರಿಂದ ಪ್ರಯೋಜನವಿಲ್ಲ. ವ್ಯಾಪಾರಿಗಳು ಉತ್ಪತ್ತಿಯಾದ ಸಾಮಗ್ರಿಗಳು ಗಿರಾಕಿಗಳಿಗೆ ಆದಷ್ಟು ಕಮ್ಮಿ ವೆಚ್ಚದಲ್ಲಿ ಕಷ್ಟವಿಲ್ಲದೆ ದೊರೆಯುವಂತೆ ಮಾಡಬೇಕು. ವ್ಯಾಪಾರಿಗಳಿಗೆ ನಿಜವಾಗಿ ದೊರೆಯಬೇಕಾದ ಲಾಭವು ದೊರೆಯಬೇಕೆಂಬುದರಲ್ಲಿ ಸಂದೇಹವಿಲ್ಲ. ಆದರೆ ತಮಗೆ ದೊರೆಯತಕ್ಕುದಕ್ಕಿಂತ ಹೆಚ್ಚಾಗಿ ತೆಕ್ಕೊಳ್ಳುವುದಂದರೆ ದೇಶ ದ್ರೋಹವೆಂದೇ ಹೇಳಬಹುದು. ಬಾರದು ವೇಳೆ ಜನತೆಗಾಗಿ ತಮ್ಮ ಲಾಭದಲ್ಲಿ ಸ್ವಲ್ಪ ಭಾಗವನ್ನು ತ್ಯಾಗ ಮಾಡಬೇಕಿದ್ದರೂ ಅದನ್ನು ಸಂತೋಷದಿಂದ ತ್ಯಾಗ ಮಾಡಬೇಕು.

ಖರ್ಚಿಗಿಂತ ಹೆಚ್ಚಾಗಿ ಹಣವುಳ್ಳವರು ಇಂದು ಒತ್ತಾಸೆ ಮಾಡಬೇಕಾಗಿದೆ ನಮ್ಮ ದೇಶವು ಸ್ವಾಭಾವಿಕವಾಗಿಯೇ ದುಂದುಗಾರ ಜನಾಂಗವಲ್ಲ. ಉಳಿಸುವುದೇ ನಮ್ಮ ಜನರ ಅಭ್ಯಾಸವಾಗಿದೆ ನಾವು ಉಳಿಸಿದ ಪ್ರತಿಯೊಂದು ಪೈಯನ್ನೂ ಜನಾಂಗ ರಚನಾ ಕಾರ್ಯಗಳಿಗಾಗಿ ಉಪಯೋಗಿಸಲು ಸರಕಾರಕ್ಕೆ ಒಪ್ಪಿಸಬೇಕು.

——

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ್ ಬ್ಯಾಂಕ್ 5 - ನಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10 - ಪಡೆಯಬಹುದು.

ಸ್ಥಾಯಿ ಠೇವಣಿಗಳು **(Fixed Deposits):**— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ.

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ್

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

NAVA BHARAT BELLARY. (Reg. No. M 46)47

12—12—49

ನವ ಭಾರತ ಬಳ್ಳಾರಿ.

(Nationalist Weekly)

ಚಂದಾದರಗಳು.	Subscription Rates.
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ	Subscription will not be accepted for less than 6 months

To

Sri......................................

....

....

Pirnted at Krishna Printing Works, Edited & Published by T. B. Keshava Rao

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿಕೆ.
*
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
*
ಸಂಪಾದಕ ಮತ್ತು ಪ್ರಕಾಶಕ:—
ಟಿ. ಬಿ. ಕೇಶವರಾವು.

ವರ್ಷ ೧೨ | ಸೋಮವಾರ ೧೯ ಡಿಸೆಂಬರ್ ೧೯೪೯ | ಸಂಚಿಕೆ ೪೭

ಸಮಾಜವಾದಿ ಪಕ್ಷದ ಉದ್ದೇಶ

ಶ್ರೀ ಜಯಪ್ರಕಾಶರ ಭಾಷಣ

ಹೈದರಾಬಾದ ೧೪- ಸಮಾಜವಾದಿ ಪಕ್ಷದ ಧುರೀಣರಾದ ಶ್ರೀ ಜಯಪ್ರಕಾಶ ನಾರಾಯಣರು ಸಪತ್ನೀಕರಾಗಿ ವಿಮಾನದಿಂದ ಇಲ್ಲಿಗೆ ಆಗಮಿಸಿದರು. ಹಕೀಮ ಪೇಟ ವಿಮಾನ ನಿಲ್ದಾಣದಲ್ಲಿ ಶ್ರೀ ಜಯಪ್ರಕಾಶ ನಾರಾಯಣರನ್ನು ೧೦ ಸಾವಿರ ಜನರು ಸ್ವಾಗತಿಸಲು ನೆರೆದಿದ್ದರು.

ಶ್ರೀ ಜಯಪ್ರಕಾಶ ನಾರಾಯಣ ದಂಪತಿಗಳನ್ನು ಸಿಕಂದರಾಬಾದ-ಹೈದರಾಬಾದ ರಾಜಬೀದಿಗಳಲ್ಲಿ ವೈಭವದ ಮೆರವಣಿಗೆಯಿಂದ ಕರೆತರಲಾಯಿತು. ಶ್ರೀ ಜಯಪ್ರಕಾಶ ನಾರಾಯಣರು ಹೈದರಾಬಾದ ಸಂಸ್ಥಾನದಲ್ಲಿ ಒಂದು ವಾರದ ವರೆಗೆ ಸಂಚಾರ ಮಾಡಲಿದ್ದಾರೆ.

ಸಾರ್ವಜನಿಕ ಸಭೆಯಲ್ಲಿ ಭಾಷಣ

ಹೈದರಾಬಾದ ನಗರದಲ್ಲಿ ಇತಿಹಾಸ ಪ್ರಸಿದ್ಧವಾದ ಫತ್ತೆ ಮೈದಾನದಲ್ಲಿ ೫೦ ಸಾವಿರ ಜನರ ಸಾರ್ವಜನಿಕ ಸಭೆಯಲ್ಲಿ ಇಂದು ರಾತ್ರಿ ಶ್ರೀ ಜಯಪ್ರಕಾಶ ನಾರಾಯಣರು ಭಾಷಣ ಮಾಡುತ್ತ "ಹೈದರಾಬಾದ ಸಂಸ್ಥಾನವನ್ನು ಇದ್ದಕ್ಕಿದ್ದಂತೆ ಇರುವದಾದರೆ ನಿಜಾಮರ ಅಸ್ತಿತ್ವಕ್ಕೆ ಪೂರ್ಣ ಮಾಡಿಕೊಟ್ಟಂತೆ ಹೈದರಾಬಾದ ಸಂಸ್ಥಾನವು ಪ್ರತಿಗಾಮಿಗಳ ಕೇಂದ್ರವಾಗಲು ಆಸ್ಪದ ಕೊಟ್ಟಂತೆ ಎಂದು ಹೇಳಿದರು.

ಜನರ ಸಮಾಜವಾದಿ ಪಕ್ಷಕ್ಕೆ ಬೆಂಬಲ ಕೊಟ್ಟರೆ ಒಂದು ವರ್ಷದೊಳಗಾಗಿ ಸಮಾಜವಾದೀ ಸರಕಾರ ಸ್ಥಾಪನೆಯಾಗುವದು. ಇಷ್ಟೇ ಅಲ್ಲ ಹಿಂದುಸ್ಥಾನದಲ್ಲಿ ಒಂದೇ ವರ್ಷದಲ್ಲಿ ಸಮಾಜವಾದೀ ಆರ್ಥಿಕ ವ್ಯವಸ್ಥೆ ಜಾರಿಯಲ್ಲಿ ತರಲಾಗುವದು ಎಂದೂ ಅವರು ಹೇಳಿದರು.

ಹಿಂದುಸ್ಥಾನ ಸರಕಾರವು ರಾಜ, ಮಹಾರಾಜ, ನಿಜಾಮರಿಗೆ ಕೋಟ್ಯಾಂತರ ರೂಪಾಯಿಗಳನ್ನು ನಷ್ಟಾರ್ಥವೆಂದು ಕೊಡುತ್ತಿದೆ. ಈ ಹಣವನ್ನೇ ಔದ್ಯೋಗಿಕ ಪ್ರಗತಿಗಾಗಿ ಬಳಸಬೇಕು. ಪಂಡಿತ ನೆಹರೂರು ವಿದೇಶದ ಬಂಡವಲನ್ನು ಹಿಂದುಸ್ಥಾನದಲ್ಲಿ ಸ್ವಾಗತಿಸುವದು ಅಚ್ಚರಿಯ ಮಾತು ಎಂದು ಅವರು ಹೇಳಿದರು.

ಜಮೀನುದಾರೀ ನಿರ್ಮೂಲನ ಮಾಡಿ ಸರಕಾರವು ರೈತರಿಗೆ ಭೂಮಿಗಳನ್ನು ಕೊಡಿಸುವಾಗ ಜಮೀನುದಾರರಿಗೆ ಪ್ರತಿಫಲ ಕೊಡುವುದನ್ನು ನಾನು ಒಪ್ಪಲಾರೆ. ಜಮೀನುದಾರರಿಗೆ ಪ್ರತಿಫಲ ಕೊಡುವ ತತ್ವಕ್ಕೆ ನನ್ನ ವಿರೋಧವಿದೆ

ಹಿಂದುಸ್ಥಾನದಲ್ಲಿಯ ಎಲ್ಲ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಿದರೆ ಅದರಿಂದ ಬರುವ ಲಾಭದಲ್ಲಿ ಶಾಲೆ, ಆಸ್ಪತ್ರೆ ಇವುಗಳನ್ನು ನಡಿಸಿ ಜನರಿಗೆ ಹೆಚ್ಚಿನ ಸೌಲಭ್ಯ ಒದಗಿಸಿ ಕೊಡಬಹುದು. ಸಮಾಜವಾದಿ ಪಕ್ಷವು ಅಧಿಕಾರಕ್ಕೆ ಬಂದರೆ ಈಗ ರಚಿಸಲಾದ ಹಿಂದುಸ್ಥಾನದ ರಾಜ್ಯಘಟನೆಯನ್ನು ದಬ್ಬಿಗೊಳಿಸಿ ಸಮಾಜಿಕ ನ್ಯಾಯ ದೊರಕಿಸಿ ಕೊಡುವಂಥ ಹೊಸ ಘಟನೆಯನ್ನು ರಚಿಸುವದು

ಕಾಂಗ್ರೆಸ ಸರಕಾರವು ಆರ್ ಎಸ್ ಎಸ್ ದವರ ಬಗ್ಗೆ ಅನುಸರಿಸಿದ ಧೋರಣೆ ನೋಡಿದರೆ ಅದುವಂದು ಜಾತೀಯ ಸಂಸ್ಥೆಯಾಗುತ್ತಿದೆ. ಎಂದೆನಿಸುವದು ಮುಸಲ್ಮಾನರು ಸಮಾಜವಾದಿ ಪಕ್ಷವನ್ನು ಸೇರಬೇಕು. ಬಡವರಾದ ಹಿಂದೂ ಜನರು ಕಾಂಗ್ರೆಸ್ಸಿನಲ್ಲಿ ಉಳಿಯುವದು ಅಶಕ್ಯವೆನಿಸುತ್ತಿದೆ. ಹಿಂದುಸ್ಥಾನದಲ್ಲಿಯ ಕಮ್ಯುನಿಸ್ಟರು ದೇಶ ದ್ರೋಹಿಗಳು ಅವರು ತಮ್ಮ ದೇಶವನ್ನು ಮರೆತು ಮಾಸ್ಕೋದತ್ತ ನೋಡುತ್ತಿರುವರು ಎಂದು ಮುಂತಾಗ ೨॥ ತಾಸುಗಳ ವರೆಗೆ ಭಾಷಣ ಮಾಡಿದರು.

ಶ್ರೀ ಜಯಪ್ರಕಾಶ ನಾರಾಯಣರು ಹೈದರಾಬಾದ ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರಾದ ಸ್ವಾಮಿ ರಮಾನಂದ ತೀರ್ಥರಲ್ಲಿ ಉಪಹಾರ ಮಾಡಿದರು.

ಬಳ್ಳಾರಿ ಸ್ಮಾಲ್ ಕಾಸ್ ಕೋರ್ಟಿನಲ್ಲಿ

S. C 678/49

Between

H. ವೆಂಕಟರೆಡ್ಡಿ ಬಿ O ರಾಮರೆಡ್ಡಿ 60 ವಯಸ್ಸು-ಕಾಪು-ವ್ಯಾಪಾರ, ಆದವಾನಿ ....ವಾದಿ

Vs

1) ನಾಗೇಂದ್ರಮ್ಮ w O ಲೇಟು ಬಳಗೋಟಪ್ಪ.

2) ಮುದ್ದನಗೌಡ S O ಲೇಟು ಬಳಗೋಟಪ್ಪ.

ಕಾಪು-ಜಿರಾಯ್ತಿ- ಸಾ॥ ಕೊರ್ಲಗುಂದಿ- ಬಳ್ಳಾರಿ ತಾಲೂಕು.

....ಪ್ರತಿವಾದಿ

ಪ್ರತಿವಾದಿಗಳಿಗೆ ನೋಟೀಸು

ಮೇಲ್ಕಾಣಿಸಿದ ನಂಬರಿನಲ್ಲಿ ವಾದಿ ಹತ್ತರ ಮೊದಲನೇ ಪ್ರತಿವಾದಿ ಗಂಡ, ಎರಡನೆಯ ಪ್ರತಿವಾದಿಯ ತಂದೆಯಾದ ಲೇಟು ಬಳಗೋಟಪ್ಪನು ಲೇವಾದೇವಿ ಮಾಡಿ ರೂ. 158-10-9 ಕ್ಕೆ ಪ್ರಾಮಿಸರಿ ನೋಟು ಬರೆದು ಕೊಟ್ಟಿರುತ್ತಾನೆ. ಸದರಿ ಪ್ರತಿವಾದಿ ತೀರಿ ಹೋಗಿರುವ ಕಾರಣ ನಿಮ್ಮನ್ನು ಪ್ರತಿವಾದಿಗಳನ್ನಾಗಿ ಸೇರಿಸಿ ನಿಮ್ಮಿಂದ ದಾವಾ ಮೊತ್ತ ರೂ. 183 6-9 ಬರಮಾಡಿ ಕೊಳ್ಳಲು ವಾದಿಯು ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾನೆ. ವಾಯಿದೆಯು 22-12-49 ಕ್ಕೆ ಇದೆ. ಆದಿನ ವಾಯಿದೆಗೆ ನೀವಾಗಲಿ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ನಿಮ್ಮ ತಕರಾರು ತಿಳಿಸದಿದ್ದರೆ ನಿಮ್ಮ ಮೇಲೆ ಎಕ್ಸಪಾರ್ಟೆ ಡಿಕ್ರಿಮಾಡಲಾಗುವುದು.

ಹೆಚ್. ರಾಮಲಿಂಗಾರೆಡ್ಡಿ
ವಾದಿ ವಕೀಲರು

ಸಸ್ಯಗಳಲ್ಲಿ 'ಕಾಮಧೇನು'

ತೆಂಗಿನಕಾಯಿ

'ಕಾಮಧೇನು'ವು ಇಚ್ಛಿಸಿದ್ದನ್ನು ಕೊಡುವುದು. ತೆಂಗಿನಕಾಯಿಯು ಹಾಗೆಯೇ. ಆದುದರಿಂದಲೇ ಹಿರಿಯರು ಇದನ್ನು 'ಕಲ್ಪವೃಕ್ಷ'ವೆಂದು ಕರೆದರು. ಆಹಾರದಲ್ಲಿ, ಆರೋಗ್ಯದಲ್ಲಿ, ಅನುದಿನದ ನೂರಾರು ಉಪಯೋಗಗಳಲ್ಲಿ, ಅಲಂಕಾರದಲ್ಲಿ-ಎಲ್ಲದರಲ್ಲಿಯೂ ತೆಂಗಿನಕಾಯಿಯು ವಿಶೇಷ ಮಹತ್ವ ಪಡೆದಿದೆ. ಸಮುದ್ರ ಕರಾವಳಿಯ ಪ್ರದೇಶಗಳಲ್ಲಿ ದ್ವೀಪಗಳಲ್ಲಿ ಇದು ಧಾರಾಳವಾಗಿ ಬೆಳೆಯುವುದು. ಹಿಂದೂದೇಶದಲ್ಲಿ ತೆಂಗಿನಕಾಯಿಯನ್ನು ಉಪಯೋಗಿಸದ ಮನೆಗಳೇ ಇಲ್ಲವೆನ್ನಬಹುದು.

ಬೆಳವಣಿಗೆಗೆ ತಕ್ಕ ಹವಾಗುಣ

ಇದರ ಮರವು ಪ್ರಾಯಶವಾಗಿ ನೀರು ಮತ್ತು ಹೋಯುಗೆಯಿಂದ ತುಂಬಿದ ಪ್ರದೇಶಗಳಲ್ಲಿ ಬೆಳೆಯುತ್ತದೆ. ಇಂಥ ಸ್ಥಳವು ಸಮುದ್ರದ ದಡದಲ್ಲಿರುವುದರಿಂದ ಬೊಂಬಾಯಿ, ಮದ್ರಾಸು ಮತ್ತು ಬಂಗಾಳದಲ್ಲಿ ಇದರ ಮರಗಳು ಸಿಗುತ್ತವೆ. ದಕ್ಷಿಣ ಹೈದರಾಬಾದಿನಲ್ಲೂ ಇದರ ಉತ್ಪತ್ತಿಯಾಗುತ್ತದೆ.

ತೆಂಗಿನ ಮರವು 7-8 ವರ್ಷಗಳ ಅನಂತರ ಫಲ ಕೊಡಲು ಯೋಗ್ಯವಾಗುತ್ತದೆ. ಇದಕ್ಕೆ ಗೆಲ್ಲುಗಳಿಲ್ಲ. ಮರವು ನೆಟ್ಟಗೆ ಬಹಳ ಎತ್ತರ ಬೆಳೆಯುತ್ತದೆ. ಅದರ ಶಿಖರದಲ್ಲಿ ಬಹಳ ದೊಡ್ಡ ಎಲೆಗಳಿರುತ್ತವೆ. ಎಲೆಗಳ ಅಡಿಯಲ್ಲಿ ತೆಂಗಿನ ಕಾಯಿಗಳು ಆಗುತ್ತವೆ.

ವಸಂತ ಋತುವಿನಿಂದ ಆರಂಭವಾಗಿ ಗ್ರೀಷ್ಮ ಋತುವಿನ ಅಂತ್ಯದ ತನಕ ತೆಂಗಿನ ಕಾಯಿಯ ಹೂ ಬಿಡುತ್ತದೆ. ಈ ಹೂಗಳು ಅತ್ಯಂತ ಸುಂದರವಾಗಿ ಹಳದಿ ಬಣ್ಣದಿಂದ ಕೂಡಿರುತ್ತವೆ. ಮಳೆಗಾಲವು ಪ್ರಾರಂಭವಾಗುತ್ತಲೇ ಹೂವಿನಿಂದ ಕಾಯಿಯು ಆಗುತ್ತದೆ. ಕಾಯಿಯು ಮೊದಲು ಹಸುರು ಬಣ್ಣವಾಗಿದ್ದು ಪಕ್ವವಾದ ಮೇಲೆ ಕಂದುಬಣ್ಣವಾಗುತ್ತದೆ.. ತೆಂಗಿನ ಕಾಯಿಯು ಹಿಂದೂ ಧರ್ಮಶಾಸ್ತ್ರಗಳಲ್ಲಿ ಮಂಗಲ ಕಾರಕವೆಂದು ಎಣಿಸಲ್ಪಟ್ಟಿದೆ. ಪ್ರತಿ ಒಂದು ಶುಭ ಕಾರ್ಯದಲ್ಲೂ ಇದನ್ನು ಭೇಟಿಯ ರೂಪದಲ್ಲಿ ಕೊಡುತ್ತಾರೆ; ಅಥವಾ ಇದನ್ನು ಪೂಜಿಸುತ್ತಾರೆ.

ಈ ಫಲದ ರಕ್ಷಣೆಗಾಗಿ ಪ್ರಕೃತಿಯು ಇದರ ಮೇಲೆ ಎರಡು ಗಟ್ಟಿಯಾದ ಆವರಣವನ್ನು ತೊಡಿಸಿಬಿಟ್ಟಾಳೆ. ಎಲ್ಲಕ್ಕಿಂತ ಮೇಲೆ ಜಟೆಗಳ ಆವರಣ, ಆ ಜಟೆಯ ಆವರಣವನ್ನು ತೆರೆದ ಮೇಲೆ ಬಹಳ ಕಠಿಣವಾದ ಕಪಾಲಾಸ್ಥಿಯಂಥ ಆವರಣವಿದೆ. ಇದನ್ನು ತೆಗೆದು ಮೇಲೆ ನಡುವಿನಿಂದ ತಿರುಳಿನ ಚೆಂಡು ಹೊರಡುತ್ತದೆ. ಈ ಚೆಂಡಿನಲ್ಲಿ ನೀರೂ ಇದೆ. ಈ ಹಣ್ಣಿನಲ್ಲಿ ಹಸಿವೆ ಬಾಯಾರಿಕೆ ಎರಡನ್ನೂ ನೀಗಿಸುವ ಶಕ್ತಿಯಿದೆ.

ತೆಂಗಿನ ಕಾಯಿಯ ಉಪಯೋಗ

ಮೊದಲು ಕೊಲಂಬಸನು ಭಾರತವನ್ನು ಹುಡುಕುತ್ತ ಭಾರತದ ಗಡಿಯಲ್ಲಿ ಇಳಿದಾಗ ಅವನಿಗೆ ಮತ್ತು ಅವನ ಸಂಗಡಿಗರಿಗೆ ಬಹಳ ಹಸಿವೆ ಮತ್ತು ಬಾಯಾರಿಕೆಯಾಯಿತು. ಆ ವಿದೇಶಿಗಳ ಹಸಿವೆ, ಬಾಯಾರಿಕೆಯನ್ನು ತಣಿಸಿದ ಶ್ರೇಯವು ಈ ಫಲಕ್ಕೇ ಇದೆ. ಕೊಲಂಬಸನು ಈ ಅಪೂರ್ವ ಫಲವನ್ನು ನೋಡಿ ಬಹಳ ವಿಸ್ಮಿತನಾಗಿ ಪ್ರಸನ್ನನಾದನು. ಏಕೆಂದರೆ ಒಂದೇ ಫಲದಲ್ಲಿ ತಿನ್ನಲೂ ಕುಡಿಯಲೂ ಸಿಕ್ಕುತ್ತದೆ. ಸ್ವದೇಶಕ್ಕೆ ಮರಳುವಾಗ ಅವನು ಕೆಲವು ತೆಂಗಿನ ಕಾಯಿಗಳನ್ನು ತನ್ನ ಸಂಗಡ ತೆಗೆದುಕೊಂಡು ಹೋದನು.

ಆಯುರ್ವೇದಿಕ ಮತದಂತೆ ಎಳತು ತೆಂಗಿನ ಕಾಯಿ (ಸೀಯಾಳ) ಶೀತಲವೂ ಹೊತ್ತಾಗಿ ಜೀರ್ಣವಾಗುವಂಥದೂ, ತೃಪ್ತಿಕಾರಕವೂ, ವೀರ್ಯ ವರ್ಧಕವೂ, ವಾಯು ಪಿತ್ತ ಮತ್ತು ರಕ್ತದ ವಿಕಾರಗಳನ್ನು ದೂರಮಾಡಿ ದಾಹನಾಶಕವೆಂದೂ ತಿಳಿಯಲ್ಪಟ್ಟಿದೆ.

ವರ್ಷಕಾಲ ಅಥವಾ ಶೀತಕಾಲದಲ್ಲಿ ಒಣಗಿದ ತೆಂಗಿನಕಾಯಿಗಳ (ಕೊಪ್ಪರ) ಖೀರಿಯನ್ನು ಮಾಡಿ ತಿನ್ನುವುದರಿಂದ ಪುಷ್ಟಿಯಾಗುತ್ತದೆ. ಅಶಕ್ತರಾದವರಿಗೆ, ಶರೀರದಲ್ಲಿ ಮಾಂಸ ಕಡಿಮೆಯಿದ್ದವರು ಕೇವಲ ಅಸ್ಥಿಪಂಜರ ಮಾತ್ರ ಉಳಿದವರು ಈ ಖೀರನ್ನು 1–2 ಮಾಸಗಳ ವರೆಗೆ ನಿತ್ಯವೂ ಅಥವಾ ಒಂದು ದಿನ ಬಿಟ್ಟು ಸೇವಿಸಬೇಕು.

ಒಣಗಿದ ತೆಂಗಿನಕಾಯಿಯನ್ನು ತೆಗೆದುಕೊಂಡು ಬಹಳ ಸಣ್ಣ ಚೂರುಗಳನ್ನಾಗಿ ಮಾಡಬೇಕು. 1 ಛಟಾಂಗ ತೆಂಗಿನಕಾಯಿಯ ಚೂರುಗಳಲ್ಲಿ ಒಂದು ಸೇರು ಎಮ್ಮೆಯ ಹಾಲನ್ನು ಹಾಕಿ ಮಂದವಾದ ಬೆಂಕಿಯ ಮೇಲೆ ಬೇಯಿಸಬೇಕು. ಖೀರಿನಂತಾಗಿ ಬರುವಾಗ ಅದರಲ್ಲಿ ಎರಡು ತೊಲೆ ಉತ್ತಮವಾದ ತುಪ್ಪವನ್ನು ಎರಡು ರತ್ತಿ ಉತ್ತಮವಾದ ಕಾಶ್ಮೀರ ಕೇಸರವನ್ನೂ, ನಾಲ್ಕು ರತ್ತಿ ಸಣ್ಣ ಏಲಕ್ಕಿಯ ಸಣ್ಣದಾದ ಪುಡಿಯ ಚೂರ್ಣವನ್ನು ಬೆರಸಿ ಕೆಳಗಿಳಿಸಬೇಕು. ಬಿಸಿ ಆರಿದ ನಂತರ ತಿನ್ನಬೇಕು.

ಈ ಖೀರನ್ನು ತಿಂದರೆ ಪುಷ್ಟಿಯಾಗುತ್ತದೆ, ಶಾರೀರಕ ಮತ್ತು ಮಾನಸಿಕ ಬಲವು ಹೆಚ್ಚುತ್ತದೆ, ಆಯಾಸ ಪರಿಹಾರವಾಗುತ್ತದೆ, ವೀರ್ಯ ಪುಷ್ಟಿಯಾಗುತ್ತದೆ, ಶರೀರದ ರಕ್ತ ಪರಿಭ್ರಮಣ ಕ್ರಿಯೆಯು ನೆಟ್ಟಗಾಗುತ್ತದೆ.

ಔಷಧಿಯಾಗಿಯೂ ಸೇವಿಸಬಹುದು

ಯಾವ ಸ್ತ್ರೀಯರ ಅಥವಾ ಪುರುಷರ ಸೊಂಟದಲ್ಲಿ ನೋವಿದೆಯೋ, ಅವರು ರಾತ್ರಿ ಮಲಗುವಾಗ, ತೆಂಗಿನಕಾಯಿಯ (ಒಣಗಿದ) ಅರ್ಧ ಭಾಗವನ್ನು ಚೆನ್ನಾಗಿ ಜಜ್ಜಿ, ಬೆಲ್ಲ ಸೇರಿಸಿ ಹಾಲಿನೊಂದಿಗೆ ಸೇವಿಸಬೇಕು. 4 . 5 ದಿನಗಳಲ್ಲೇ ಅವರ ಸೊಂಟನೋವು ವಾಸಿಯಾಗುವುದು ಒಂದು ಮಾಸದ ತನಕ ಸೇವಿಸಿದ ಅನಂತರ ನೋವು ಸಂಪೂರ್ಣವಾಗಿ ನಿಂತು ಶರೀರದ ಎಲ್ಲಾ ಪ್ರಕಾರದ ದುರ್ಬಲತೆಯು ನಷ್ಟವಾಗಿ ಶರೀರದಲ್ಲಿ ಶಕ್ತಿಯ ಸಂಚಾರವಾಗುವದು.

ತೆಂಗಿನಕಾಯಿಯ ನೀರು ಬಾಯಾರಿಕೆಯನ್ನು ಅಡಗಿಸುವದಕ್ಕೆ ಒಂದು ವಿಶೇಷ ಪದಾರ್ಥವಾಗಿದೆ, ಪಿತ್ತದ ಮತ್ತು ದಾಹಯುಕ್ತ ಜ್ವರಗಳಲ್ಲಿ ಬಹಳ ಬಾಯಾರಿಕೆಯಾಗುತ್ತದೆ. ಆಗ ತೆಂಗಿನ ಕಾಯಿಯ ನೀರು ಅದನ್ನು ಶಾಂತ ಮಾಡುವುದರಲ್ಲಿ ಸಫಲವಾಗುತ್ತದೆ. ಮೂತ್ರವೂ ಚೆನ್ನಾಗಿ ಆಗುತ್ತದೆ. ರೋಗದ ಎಷ್ಟು ಬೇಕಾದರೂ ಇದನ್ನು ಕೊಡಬಹುದು.

ಅನೇಕ ತೆಂಗಿನ ಕಾಯಿಗಳ ಒಳಗೆ ಒಂದು ವಿಶೇಷ ತರದ ಹೂವಿರುತ್ತದೆ. ಇದಕ್ಕೆ ಸಾಧಾರಣವಾಗಿ ಜನರು ಗರ್ಭ

ಸ್ಥಾಪಕವೆಂದು ಹೇಳುತ್ತಾರೆ. ಈ ಹೂಗಳನ್ನು ತಿಂದರೆ ಕಾರಣಾಂತರದಿಂದ ಗರ್ಭಿಣಿಯರಾಗದ ಸ್ತ್ರೀಯರು ಗರ್ಭಿಣಿಯರಾಗುವರು. ಆದರೆ ಇದು ನಿಜವಲ್ಲ. ಇದರ ಪ್ರಯೋಗಮಾಡಿದ ಮೇಲೆ ಕೇವಲ ನೂರಕ್ಕೆ 25 ಸ್ತ್ರೀಯರಿಗೆ ಮಾತ್ರ ಇದರಿಂದ ಲಾಭವಾಗಿದೆ. ಆ 25 ಸ್ತ್ರೀಯರ ವಿಷಯವಾಗಿ ಖಂಡಿತವಾಗಿ ಇದರಿಂದಲೇ ಅಥವಾ ಬೇರೆ ಔಷಧಿಯಿಂದಲೇ ಎಂಬುದಾಗಿ ನಿಶ್ಚಿತವಾಗಿ ಹೇಳಲಸಾಧ್ಯ ಏಕೆಂದರೆ ಇದರೊಂದಿಗೆ ಅವರಿಗೆ ಬೇರೆ ಔಷಧಿಗಳನ್ನು ಕೂಡ ಕೊಟ್ಟಿದ್ದರು.

ತೆಂಗಿನ ಎಣ್ಣೆಯು ಕೂದಲುಗಳನ್ನು ಉದ್ದವಾಗಿಯೂ, ನಯವಾಗಿಯೂ, ಸುದೃಢವನ್ನಾಗಿ ಮಾಡುತ್ತದೆ. ಯಾವದಾದರೂ ರೋಗದಿಂದ ಕೂದಲು ಉದುರತೊಡಗಿದರೆ, ಅವನು ಪ್ರತಿದಿನ ನೆಲ್ಲಿಯ ರಸದೊಟ್ಟಿಗೆ ಅಥವಾ ಒಣಗಿದ ನೆಲ್ಲಿಯ ನೀರಿನಿಂದ ತಲೆಯನ್ನು ತೊಳೆದು ತೆಂಗಿನ ಎಣ್ಣೆಯನ್ನು ತಲೆಗೆ ಹಚ್ಚಬೇಕು. ಅವಶ್ಯವಾಗಿ ಲಾಭವಾಗುವುದು.

ತೆಂಗಿನ ಮರದಿಂದ 800 ಬಗೆಯ ಉಪಯೋಗಗಳಿವೆ—ಎಂಬುದಾಗಿ ಹಿರಿಯರು ಹೇಳುವರು ಒಂದು ವಸ್ತುವಿನಿಂದ ಇಷ್ಟು ಉಪಯೋಗಗಳು ಪ್ರಪಂಚದಲ್ಲಿ ಇನ್ನಾವುದಕ್ಕೂ ಇಲ್ಲ.

—"ಸುವಾಸಿನಿ", ಮಂಗಳೂರು

—○—

ರೇಶನ್ ವಸ್ತುವನ್ನು ಗುಟ್ಟಿನಲ್ಲಿ ಉಪಯೋಗಿಸುವುದು

1947 ನೇ ರೇಶನಿಂಗ್ ನಿಯಮ ಪ್ರಕಾರ ಅಧಿಕಾರ ಪಡೆಯದ ಹೋಟೆಲು ಇತ್ಯಾದಿ ಸ್ಥಾಪನೆಗಳು ತಿಂಡಿತಿನಸು ತಯಾರಿಸುವ ಬಗ್ಗೆ ರೇಶನ್ ವಸ್ತುಗಳನ್ನು ಗುಟ್ಟಾಗಿ ಉಪಯೋಗಿಸುವುದು ಸರಕಾರದ ಅವಗಾಹನೆಗೆ ಬಂದಿದೆ ಅಧಿಕಾರ ಪಡೆಯದ ಸ್ಥಾಪನೆಗಳು ರೇಶನ್ ವಸ್ತುಗಳನ್ನು ಉಪಯೋಗಿಸುವುದು ಹಾಗು ಅವುಗಳಿಂದ ತಯಾರಿಸಿದ ತಿಂಡಿಗಳನ್ನು ಮಾರುವುದು. ಮುಖ್ಯವಾಗಿ ಆಹಾರ ಕೊರತೆಯು ಕಠಿಣವಾಗಿರುವ ಈ ಸಮಯದಲ್ಲಿ ಎಷ್ಟುಮಾತ್ರ ಯೋಗ್ಯವಿಲ್ಲ. ರೇಶನಿಂಗ್ ನಿಯಮ ಪ್ರಕಾರ ರೇಶನ್ ಪರ್ಮಿಟನ್ನಾಗಲೀ ಅಧಿಕಾರವನ್ನಾಗಲೀ ಪಡೆಯದ ಹೋಟೆಲು ಇತ್ಯಾದಿ ಸ್ಥಾಪನೆಗಳ ಯಜಮಾನರು ರೇಶನ್ ವಸ್ತುವಿನಿಂದ ಯಾವ ಆಹಾರವನ್ನಾದರೂ ತಯಾರಿಸಲಿಕ್ಕೆ, ವಿಕ್ರಯಿಸಲಿಕ್ಕೆ - ವಾ - ವಿಕ್ರಯಿಸಲು ಯತ್ನಿಸಲಿಕ್ಕೆ, ಸ್ಥಾಪನೆಯಲ್ಲಾದರೂ ಇತರ ಕಡೆಯಲ್ಲಾದರೂ ಕೂಡದೆಂದು ಸರಕಾರವು ನಿರ್ಬಂಧಕಾಜ್ಞೆ ಇತ್ತಿದೆ. ಈ ಅಪ್ಪಣೆ ಉಲ್ಲಂಘಿಸುವರು ಶಿಕ್ಷೆಗೆ ಗುರಿಯಾಗುವರು.

....—....

ಬಳ್ಳಾರಿ ಡಿಸ್ಟ್ರಿಕ್ಟ್ ಮುನ್ಸೀಫರ ಕೋರ್ಟಿನಲ್ಲಿ

ಒ. ಪಿ. 392/49

Between

ಹೆಚ್. ತಿಮ್ಮಾರೆಡ್ಡಿ S/O ಭೀಮರೆಡ್ಡಿ 36 ಕಾಪು ವ್ಯಾಪಾರಿ ಆದವಾನಿ

....ವಾದಿ

Vs

ರುದ್ರಗೌಡು S/O ದೊಡ್ಡನಗೌಡು ಲಿಂಗಾಯ್ತು ಜಿರಾಯ್ತಿ ರಾಮದುರ್ಗ (ಆಲೂರು ತಾಲೂಕು)

...ಪ್ರತಿವಾದಿ

ಪ್ರತಿವಾದಿಗೆ ನೋಟೀಸು

ವಾದಿಯು ಹತ್ತಿರ ಪ್ರತಿವಾದಿಯು ಶೇವಾದೇವಿ ಮಾಡಿ 19-9-46 ಕ್ಕೆ ವಾದಿಯ ಹೆಸರಿನಲ್ಲಿ ಪ್ರಾಮಿಸರಿ ನೋಟು ರೂ. 669-1-0 ಕ್ಕೆ ಬರೆದು ಕೊಟ್ಟಿರುತ್ತಾನೆ. ಸದರಿ ಮೊತ್ತದ ಮೇಲೆ ವಾದಿಯು ಈ ಕೋರ್ಟಿನಲ್ಲಿ ದಾವಾ ದಾಖಲು ಮಾಡಿರುತ್ತಾನೆ. ಸದರಿ ನಂಬರಿನ ವಾಯಿದೆ 27-12-49 ಕ್ಕೆ ಇರುತ್ತದೆ. ವಾಯಿದೆಗೆ ನೀವಾಗಲಿ ನಿಮ್ಮ ಪರ ವಕೀಲರಾಗಲಿ ಹಾಜರಾಗಿ ನಿಮ್ಮ ತಕರಾರು ಕೋರ್ಟಿಗೆ ತಿಳಿಯಪಡಿಸತಕ್ಕದ್ದು. ಇಲ್ಲವಾದಲ್ಲಿ ನಿಮ್ಮ ಮೇಲೆ ಎಕ್ಸಪಾರ್ಟಿಯಾಗಿ ಡಿಕ್ರಿ ಕೊಡಲಾಗುವುದು.

ಹೆಚ್. ರಾಮಲಿಂಗಾರೆಡ್ಡಿ
ವಾದಿ ವಕೀಲರು

——

ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಕಳೆದ ಭಾನುವಾರ (11-12-49) ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಾಧಾರಣ ಸಭೆಯು ಶ್ರೀ ಟಿ. ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ಹೊಸಪೇಟೆಯಲ್ಲಿ ಸಮಾವೇಶವಾಗಿದ್ದಿತು. ಆಂಧ್ರ ಪ್ರಾಂತ ನಿರ್ಮಾಣದಿಂದ ಬಳ್ಳಾರಿ ಜಿಲ್ಲೆಯ ಆಲೂರು ಆದವಾನಿ ರಾಯದುರ್ಗ ತಾಲೂಕುಗಳಿಗೆ ಕರ್ನಾಟಕ ದೃಷ್ಟಿಯಿಂದ ಹಾನಿ ಒದಗಿದ ವಿಷಯವು ದೀರ್ಘ ಚರ್ಚೆಗೆ ಗುರಿಯಾಗಿ ಅನೇಕರು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ನಿಲುವೆಯನ್ನು ಸಮರ್ಥಿಸಿದರು.

ಕರ್ನಾಟಕ ಪ್ರಾಂತ ನಿರ್ಮಾಣವು ಶೀಘ್ರವಾಗಿ ಆಗಬೇಕು. ಈ ಬಗ್ಗೆ ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ತಕ್ಕ ಚರ್ಯೆಗೆ ತೆಗೆದುಕೊಳ್ಳಬೇಕು.

ಈಗಿನ ವರೆಗೆ ರಾಜೀನಾಮೆ ಕೊಟ್ಟವರೆಲ್ಲರನ್ನು ಅಭಿನಂದಿಸಲಾಯಿತಲ್ಲದೆ ಶ್ರೀ ಹಾ. ಸೀತಾರಾಮರೆಡ್ಡಿ, ಗೋವಿಂದದಾಸರೂ ರಾಜಿನಾಮೆ ಕೊಡಬೇಕೆಂದು ಸೂಚಿತವಾಯಿತು. ಆಂಧ್ರ ಪ್ರಾಂತನಿರ್ಮಾಣ ಸಮಿತಿಯಲ್ಲಿ ಕನ್ನಡಿಗನಿಗೆ ಸ್ಥಾನ ದೊರೆಯಬೇಕು. ಬಳ್ಳಾರಿ ಜಿಲ್ಲೆಯ 3 ತಾಲೂಕು, ಅನಂತಪುರ ಕರ್ನೂಲಿನ ಕನ್ನಡ ಭಾಗಗಳನ್ನು ಒತ್ತಾಯದಿಂದ ಆಂಧ್ರ ಪ್ರಾಂತಕ್ಕೆ ಸೇರಿಸುವುದಾದರೆ ವಿರೋಧ ಕಾರ್ಯಕ್ರಮವನ್ನು ಕೆ. ಪಿ. ಸಿ. ಸಿ. ಯು ಸೂಚಿಸಬೇಕು.

ರೈತರಿಗೆ ಸಾಲಕೊಡುವುದು

ವ್ಯವಸಾಯದ ಇಲಾಖೆಯು ರೈತರಿಗೆ ತಮ್ಮ ಸ್ವಂತ ಆಡವಿನ ಮೇಲೆ ಸಾಲವನ್ನು ಕೊಡುತ್ತಿದ್ದಾರೆ. ಇದು ಎರಡು ತರಹದಾಗಿದೆ:—

(ಅ) ಬಡ್ಡಿಯಿಲ್ಲದೆ:—ಶೇರ್ಗೆ 15 ರಷ್ಟು ರೂ. 80 ವರೆಗೂ—ಆಹಾರದ, ಮೇವಿನ ಹುರುಳಿ ಗೊಬ್ಬರದ ಬೀಜಗಳನ್ನು ಕೊಂಡುಕೊಳ್ಳುವುದಕ್ಕೆ ಮತ್ತು ಬೇರೆ ಗೊಬ್ಬರಗಳನ್ನು ಕೊಂಡುಕೊಳ್ಳುವುದಕ್ಕೆ.

(ಆ) ಬಡ್ಡಿಯಿದ್ದು:— ಶೇರ್ಗೆ 5 ರಷ್ಟು; ರೂ. 100 ಗ ಮಿಂಚದ ಕೃಷಿ ಉಪಕರಣ ಮತ್ತು ಯಂತ್ರಗಳನ್ನು ಕ್ರಯಕ್ಕೆ ಪಡಕೊಳ್ಳುವುದಕ್ಕೆ

ಟಿಪ್ಪಣಿ:—ನೀಲಗಿರಿ ಜಿಲ್ಲೆ ರೈತರಿಗೆ ಮೇಲೆ ಹೇಳಿರುವ (ಅ) ವಿಭಾಗದಲ್ಲಿನ ಸಾಲಪರಿಮಾಣವನ್ನು ರೂ. 250 ಗೆ ಏರಿಸಿದೆ.

ಇಲಾಖೆಯು ಕೊಡುವ ಸಾಲವು 10 ರೂ. ಸಾಮಾನ್ಯ ಭಾಗ್ಯಗಳಾಗಿರಬೇಕು. ಈ ಸಾಲಗಳನ್ನು ಮಂಜೂರು ಮಾಡುವದಕ್ಕೆ ಜಿಲ್ಲೆಯ ವ್ಯವಸಾಯ ಅಸಿಸ್ಟಂಟರಿಗೆ ಅಧಿಕಾರವನ್ನು ಕೊಡಲ್ಪಟ್ಟಿದೆ ... ಬೆಳೆಗೆ ಪಡೆದ ಸಾಲವನ್ನು ಎರಡು ವರ್ಷಗಳೊಳಗೆ ಕಂತಾಗಿ ಸಲ್ಲಿಸಬೇಕು.

ಬೇಸಾಯಗಾರರು ಇನ್ನೂ ಹೆಚ್ಚು ಸಾಲವನ್ನು ಪಡೆಯಬೇಕಾದರೆ, ತಹಸೀಲ್ದಾರರನ್ನು ಭೇಟಿಮಾಡಬೇಕು ಇಂತಹ ಸಾಲ ಅಚಲವಾದ ಸೊತ್ತಿನ ಮೇಲೆ ಅಥವಾ ಇನ್ನಿತರ ಭದ್ರವುಳ್ಳ ಆಡವಿನ ಮೇಲೆ ಕೊಡಲ್ಪಡುವುದು. ಈ ಕೆಲಸಕ್ಕೆ ಬಡ್ಡಿ ಉಂಟು

ವಿವರಗಳಿಗೆ ನಿಮ್ಮ ತಾಲ್ಲೂಕು ವ್ಯವಸಾಯ ಪ್ರದರ್ಶಕರನ್ನು ಭೇಟಿಮಾಡಿ :

ಶ್ರೀ ರಾಘವ ಸ್ಮಾರಕ ನಾಟ್ಯಭವನದ ಶಂಕುಸ್ಥಾಪನೆಯಲ್ಲಿ

ಶ್ರೀ ದೊಡ್ಡನಗೌಡ ಜೋಳದರಾಶಿ ಇವರೋದಿದ

ರಾಘವರ ನವಿನೆನಪು

೧

ನೋಡಲೊಮ್ಮೆ ಮಾನದಮಾಡಿ ಮುಗ್ಧಗೊಳಿಪ ವೇಷರೂಪು
ಕೇಳ್ವೊಡೊಮ್ಮೆ ಕಿವಿಯನಿಂಬುವ ರಸಿಕ ಜಾಣತನದ ಮಾತು
ಕೂಡಿಕಳೆಯ ಮನಸಿನೊಳಾಡೆ ಯಮ್ಮ ಕನವೆ ಸೂರಿಗೈವ
ಮೋಡಿಕಾರ ಮೋಜುಗಾರ ಮಾನ್ಯನೆಮ್ಮ ರಾಘವಂ||

೨

ಹಿರಿಯನಲ್ಲ ಕಿರಿಯನಲ್ಲ ಹಿರಿಯ ಕಿರಿಯ ತನವ ಬಲ್ಲ
ಬಲ್ಲೆನೆಂಬ ಗರ್ವವಿಲ್ಲ ಗರ್ವಿಗಳೊನಾಡ ಒಲ್ಲ
ಒಲ್ಲೆನೆಂಬ ಹಠವದಿಲ್ಲ ಇದ್ದರದನು ತೋರಲೊಲ್ಲ
ಎಲ್ಲರೊಡನೆ ಸಮದಿನಕ್ಕು ನಲಿವನೆಮ್ಮ ರಾಘವಂ||

೩

ನಾಟಕಗಳೆ ತನ್ನ ಕಾಯ ನಟನೆ ತನ್ನ ಜೀವದುಸಿರು
ನಾಟ್ಯ ರಂಗಭೂಮಿ ತನ್ನ ಪೂಜೆಗೈವ ದೇವನಿಲಯ
ನಟರೆ ತನ್ನ ಬಂಧು ಬಳಗ ನಟನೆ ತನ್ನ ಹಿರಿಯ ಸುಖವು
ನಾಟಕ ಸಂಸಾರಿ ನಮ್ಮ ನಾಡರತ್ನ ರಾಘವಂ||

೪

ಮೂಡಲೆಮ್ಮ ನಾಟ್ಯಕಲೆಯ ಪಡುವಣದೋಳ್ ಬೇರಿವರಿದ
ನಾಟ್ಯರಂಗದೋಳ್ ಕುಲೀನ ಸ್ತ್ರೀಯರೊಲಿಸಿ ತಂದು ನಲಿದ
ನಾಡದನಿಯ ಕೂಗಿ ತಂದು ನಾಟ್ಯಕಳಾಪೂರ್ಣನೆಂದು
ನಾಟ್ಯಕಲೆಯ ಕ್ರಾಂತಿಕಾರ ಧೀರನೆಮ್ಮ ರಾಘವಂ||

೫

ಕಲೆಯೊಳಾಳು ಬಾಳಿಕಲೆಯು ಭೇದವಿಲ್ಲವೆಂಬ ಸತ್ಯ-
ಸುಲಭದಿಂದ ತನ್ನ ಬಾಳಿನಲ್ಲಿ ತೋರಿ ನಟರಿಗೊರೆದ
ನಿಲ್ಲದೆಲ್ಲಿ ಸಾಗುತಿತ್ತು ನಾಟ್ಯಕಲೆಯು ಜ್ಯೋತಿ ಬೆಳಗಿ
ನಲ್ಮೆಯಿಂದ ಕಲೆಗೆ ಬಾಳ ನಿತ್ತ ಧನ್ಯ ರಾಘವಂ||

೬

ನ್ಯಾಯವಾದಿಯಾಗಿ ಗಳಿಸಿ ನಾಟ್ಯಕಲೆಗೆ ವೆಚ್ಚಗೈದ
ಆಯುವಿರುವ ತನಕ ದುಃಖವೆಂಬುದರಿಯ ನಾದರೊಂದು
ನೋವು ಮನದಿ ಅದುವೆ ನಾಟ್ಯಶಾಲೆಯಿಲ್ಲವೆಂಬ ಚಿಂತೆ
ತೀರದಿರಲು ಕಡೆಗೆ ಯಮ್ಮ ಗತ್ತು ಪೋದ ರಾಘವಂ||

೭

ಆತನಿತ್ತು ಪೋದ ಚಿಂತೆ ಯಮ್ಮ ಚಿತ್ತ ವೆಳ್ಳಕದಡಿ
ಕ್ರಾಂತಿಗೈದು ಕಾರ್ಯರಂಗ ಕಳೆದು ತಂದು ನಿಲಿಸಿ ತಂದು
ಅಂದಿನಿಂದ ಮುಂದಗಮನದಿಂದೆ ನಡೆದು ಬಂದ ಕಾರ್ಯ
ವಿಂದು ಶಾಂತಿದಾಯಿತಾಹ ನೋಡಿ ನಲಿವ ರಾಘವಂ||

೮

ಬದುಕಿ ಸಾಯುವವರು ಹಲರು ಸತ್ತು ಬದುಕುವವರು ಕೆಲರು
ಅವರೊಳೀತ ಸತ್ತು ಬದುಕಿ ಕೀರ್ತಿಕಾಯದಿಂದಲಿರುವ
ಶುದ್ಧ ಕಲಾಜೀವಿಯಾಗಿ ಎಲ್ಲಜನರ ಮನದಿ ಸುಳಿವ
ನಿತ್ಯನಲ್ಲಿ ಇಲ್ಲಿ ನಾಟಕ ಮಾಡಿ ನಲಿವ ರಾಘವಂ||

೯

ಇಂದಿನಿಂದಲಿಲ್ಲಿ ಇರುವ ನಾಟ್ಯಭವನ ರೂಪಿನಿಂದೆ
ಕಂದಿ ಬಾಡುವ ನಾಟ್ಯಕಲೆಯು ಕುಂದು ಕೊರತೆನೀಗಿ ಸುತ್ತಿ
ಬಂದವರ ತನ್ನ ಹೃದಯ ಮಂದಿರದೋಳ್ ಕುಣಿಸಿ ನಗುವ
ಆಪರಾವು ಭವನರೂಪು ಪೂರ್ಣಗೈಯಬೇಕು ನೋಡ||

೧೦

ಇಂದು ರಾಘವಗಿಂತ ರೂಪ ಭವನ ಶಂಕುಸ್ಥಾಪನೆಯಂ
ಗೈದ ಮಾನ್ಯ ರಾಜಮಾನ್ಯಾರ್ ಮಂತ್ರಿ ಸೀತಾರಾಮರೆಡ್ಡಿ
ಇವರ ಪೂರ್ವಪುಣ್ಯವೆನಿತೊ? ರಾಮೇಶನ ಕೃಪೆಯದಾಯ್ತು
ರಾಘವ ಸ್ಮಾರಕ ಭವನವಾಗಿ ನಿತ್ಯ ಬೆಳಗಲಿ||

ನಿಯಂತ್ರಣಗಳು ರಾಷ್ಟ್ರಕ್ಕೆ ಹಾನಿಕರ

ಗಾಂಧಿ ಶಿಷ್ಯ ಶ್ರೀ ಕುಮಾರಪ್ಪನವರ ಹೇಳಿಕೆ

ಮಹಾತ್ಮಾ ಗಾಂಧಿಯವರ ಪ್ರಿಯ ಶಿಷ್ಯರಾದ ಶ್ರೀ ಜೆ. ಸಿ. ಕುಮಾರಪ್ಪನವರು ಸೂರತ್ತಿನ ಪತ್ರಿಕೋದ್ಯೋಗಿಗಳ ಸಂಘದಲ್ಲಿ ಮಾತಾಡುತ್ತ ಈ ಕೆಳಗಿನಂತೆ ಹೇಳಿದರು.

ಕಾಂಗ್ರೆಸ್ಸು ಇಂದು ಅಧಿಕಾರದಲ್ಲಿ ಮೆರೆಯುತ್ತಿರುವದರಿಂದ ಮಹಾತ್ಮಾ ಗಾಂಧಿಯವರ ತತ್ವಗಳಲ್ಲಿ ಅವರ ವಿಶ್ವಾಸ ಕ್ಷೀಣವಾಗುತ್ತಿದೆ. ಗಾಂಧಿ ತತ್ವದ ದ್ರೋಹಿಗಳಾಗಿದ್ದವರು ಇಂದು ಕಾಂಗ್ರೆಸ್ಸಿನ ಹೆಸರಿನಲ್ಲಿ ಆಳುತ್ತಿದ್ದಾರೆ. ಅವರಿಗೆ ಆರ್ಥಿಕ ಬಿಕ್ಕಟ್ಟನ್ನು ಬಿಡಿಸುವದಾಗಿಲ್ಲ. ಜನತೆಯ ಪರಿಸ್ಥಿತಿಯು ಸುಧಾರಿಸುವದರ ಬದಲು ಎರಡು ವರ್ಷಗಳ ಹಿಂದಿನದಕ್ಕಿಂತಲೂ ಕೆಟ್ಟಿದೆ. ಲಂಚ ಗುಳಿತನ ಮೊದಲಾದವುಗಳು ಅವ್ಯಾಹತವಾಗಿ ಸಾಗಿವೆ. ಜನತೆಯು ನಿರಾಶೆಗೊಳ್ಳುತ್ತಿದೆ. ಕಾಂಗ್ರೆಸ್ಸಿನಲ್ಲಿ ಅದಕ್ಕಿದ್ದ ವಿಶ್ವಾಸವು ಕ್ರಮೇಣ ತಗ್ಗುತ್ತಿದೆ.

ನಿಯಂತ್ರಣಗಳು

ಸದ್ಯದ ರಾಜ್ಯಘಟನೆಯು ಭಾರತದ ಜನಜೀವನವನ್ನು ಬಿಂಬಿಸುತ್ತಿಲ್ಲ. ಅದು ಬ್ರಿಟಿಶ ಸಾಮ್ರಾಜ್ಯವಾದಿಗಳು ಮಾಡುತ್ತಿದ್ದ ದುಷ್ಕೃತಿಗಳನ್ನು ಅಜರಾಮರವಾಗಿ ಉಳಿಸುವ ಕಾಗದ ಪತ್ರವಲ್ಲದೆ ಬೇರೇನೂ ಅಲ್ಲ. ಇಂದಿನ ಮಂತ್ರಿಮಂಡಲವಾದರೂ ಬ್ರಿಟಿಶ ಮಾದರಿಯಾಗಿದೆ. ವಿದೇಶ ನೀತಿ ಸಂರಕ್ಷಣೆ ಹಾಗು ಸೈನ್ಯ ಪಡೆಗಳಿಗೆ ಇಂದು ಮಹತ್ವಕೊಡಲಾಗುತ್ತಿದೆ. ಭಾರತೀಯರ ಜೀವಾಳದಂತಿರುವ ಒಕ್ಕಲತನಕ್ಕೆ ಸಾಕಷ್ಟು ಪ್ರಾಧಾನ್ಯ ಕೊಟ್ಟಿಲ್ಲ ನಿಯಂತ್ರಣಗಳಿಂದ ರಾಷ್ಟ್ರಕ್ಕೆ ಧಕ್ಕೆ ತಟ್ಟುತ್ತಿದೆ. ಆದರೂ ಆಡಳಿತೆಯ ಕೆಲ ನೌಕರ ಶಾಹಿ ಜನರಿಗೆ ನಿಯಂತ್ರಣಗಳು ಬೇಕಾಗಿರುವುದರಿಂದ ಅವುಗಳನ್ನು ಹಾಗೆಯೆ ಇರಿಸಲಾಗಿದೆ, ನಿಯಂತ್ರಿತ ಬೆಲೆ

ಗೆ ವಸ್ತುಗಳನ್ನು ಕೊಳ್ಳಲು ನಿರಾಕರಿಸಿ ಜನತೆಯು ಕಳ್ಳಪೇಟೆಯಲ್ಲಾದರೂ ಅವುಗಳನ್ನು ಕೊಳ್ಳಬೇಕೆಂದು ನನ್ನ ಸಲಹೆ ಆಡಳಿತೆಯನ್ನು ನಿಯಂತ್ರಿಸುವ ಸಾಮರ್ಥ್ಯ ಸರಕಾರಕ್ಕಿಲ್ಲ. ಅದಕ್ಕಾಗಿಯೆ ಅವರು ಆಡಳಿತೆಯ ಬೆನ್ನನ್ನು ಚಪ್ಪರಿಸುತ್ತಿರುವರು ಸಧ್ಯದ ಧೋರಣೆ ಹಾಗು ಕೃತಿಗಳು ಯಾರ ಮನಸ್ಸಿಗೆ ಬಂದಿಲ್ಲವೊ ಅಂಥವರೊಡನೆ ಕೂಡಿ ಸರಕಾರವು ಕಲಸ ಸಾಗಿಸಿದೆ."

ಔದ್ಯೋಗಿಕ ಶಾಂತಿ

ಡಾ. ಕುಮಾರಪ್ಪನವರು ಕೆಲ ಪ್ರಶ್ನೆಗಳಿಗೆ ಉತ್ತರ ಕೊಡುತ್ತ "ಲಾಭದಲ್ಲಿ ಒಂದು ಪಾಲನ್ನು ಕೂಲಿಕಾರರಿಗೆ ಕೊಡುವದರಿಂದ ಔದ್ಯೋಗಿಕ ಶಾಂತಿಯು ದೊರೆಯುವದಿಲ್ಲ. ಕೂಲಿಕಾರರ ಸಂಘಗಳು ಸಧ್ಯಕ್ಕೆ ಅನುಸರಿಸುತ್ತಿರುವ ರೀತಿ ಮಾದರೂ ಸರಿಯಾಗಿಲ್ಲ. ಕೂಲಿಕಾರರ-ಉದ್ದಿಮೆದಾರರ ಸಂಬಂಧಕ್ಕೆ ಮಾನವ್ಯದ ತಳಹದಿಯಿರಬೇಕು. ಕೂಲಿಕಾರರ ಸಂಘಗಳು ಕೂಲಿಕಾರರ ಹಕ್ಕುಗಳನ್ನು ಪ್ರತಿಪಾದಿಸುವ ಬದಲು ಕೂಲಿಕಾರರಿಗೆ ಅವರವರ ಕರ್ತವ್ಯಗಳೇಗೆನೆಂಬದನ್ನು ತಿಳಿಸಿ ಹೇಳಬೇಕು. ಇದುವೇ ಗಾಂಧಿಪದ್ಧತಿ ಕಮ್ಯುನಿಸ್ಟ ಹಾಗು ಸೋಶಲಿಸ್ಟರ ಪದ್ಧತಿಗಳು ಇದನ್ನು ಹೇಳುವದಿಲ್ಲ. ತನ್ನ ಹಕ್ಕುಗಳನ್ನು ಮಾತ್ರ ಕೂಲಿಕಾರನು ಪ್ರತಿಪಾದಿಸುವದರಿಂದ ಉದ್ದಿಮೆದಾರನಿಗೂ ಅವನಿಗೂ ಘರ್ಷಣೆಯಾಗುವದು ಸ್ವಾಭಾವಿಕ ತಪ್ಪು ಹೊಣೆ ಹಾಗೂ ಕರ್ತವ್ಯಗಳನ್ನು ಅರಿತ ಕೂಲಿಕಾರರು ಉದ್ದಿಮೆದಾರರಿಗೆ ಅವರ ಕರ್ತವ್ಯಗಳ ಅರಿವನ್ನುಂಟು ಮಾಡಿಕೊಡಬಲ್ಲರು. ಇಷ್ಟಾದಾಗ ಮಾತ್ರ ನಿಜವಾದ ಶಾಂತಿ ನೌಕರವರ್ಗಗಳು ಲಭಿಸಬಲ್ಲವು. ಅದರ ಕೂಲಿಯನ್ನು ಇಲ್ಲವೆ ತುಟ್ಟಿ ಭತ್ಯೆಯನ್ನು ಎಷ್ಟೆ ಹೆಚ್ಚಿಸಿದರೂ ಇದು ಸಾಧ್ಯವಾಗದು" ಎಂದರು.

"ಒಕ್ಕಲತನದ ಮೇಲೆ ಅವಲಂಬನವು ಕಡಿಮೆಯಾಗಿ ಜನತೆಯು ಉದ್ದಿಮೆಗಳಲ್ಲಿ ತೊಡಗುವದು ಅವಶ್ಯವಿದೆ" ಜನಸಂಖ್ಯೆಯ ನಿಯಂತ್ರಣವು ಅವಶ್ಯವಿದೆ ಯಾವದೂ ವ್ಯವಸ್ಥಿತ ರೀತಿಯಲ್ಲಿ ಉತ್ಪಾದನೆಯು ಸಾಗಿದರೆ ಜನಸಂಖ್ಯೆಯು ಎಷ್ಟು ಹೆಚ್ಚಿದರೂ ತೊಂದರೆಯಾಗುವದಿಲ್ಲ.

ಮೂರನೇ ಮಹಾಯುದ್ಧದ ಬೀಜ

ಸರಕಾರವು ಸೂಚಿಸಿರುವ ಔದ್ಯೋಗೀಕರಣದಿಂದ ಯಾವ ಲಾಭವೂ ಇಲ್ಲ. ಇದು ಒಕ್ಕಲತನದ ಭೂಮಿಯ ಮೇಲಿನ ಒತ್ತಡವನ್ನು ಹೆಚ್ಚಿಸುವದು ದಿನ ದಿನಕ್ಕೆ ಹೆಚ್ಚುತ್ತಿರುವ ಗಿರಣಿಗಳನ್ನು ಹತೋಟಿಯಲ್ಲಿಡುವದು ಸಧ್ಯದ ಪರಿಸ್ಥಿತಿಯಲ್ಲಿ ಅವಶ್ಯವಿದೆ. ಹಳ್ಳಿಯ ಜೀವನವು ಕೆಡದಂತೆ ಮಾಡಬೇಕಾಗಿದ್ದರೆ ಉದ್ದಿಮೆಗಳ ವಿಕೇಂದ್ರೀಕರಣವಾಗಬೇಕು.

ಇನ್ನು ಸ್ಟರ್ಲಿಂಗಿನ ಮೌಲ್ಯವಿಚ್ಛೇದನದ ಪ್ರಶ್ನೆ. ಸ್ಟರ್ಲಿಂಗಿನ ಮೌಲ್ಯ ವಿಚ್ಛೇದನಮಾಡಿ ಬ್ರಿಟಿಶ ಅರ್ಥಖಾತೆಯ ಮಂತ್ರಿ ಸರ್ ಸ್ಟಾಫರ್ಡ ಕ್ರಿಪ್ಸರು ಮೂರನೆ ಮಹಾಯುದ್ಧದ ಬೀಜವನ್ನೇ ಬಿತ್ತಿರುವರು. ಮುಂದಿನ ಯುದ್ಧದಲ್ಲಿ ಮೂರು ಪಂಗಡಗಳು ಭಾಗವಹಿಸುವವು ಅವಾವೆಂದರೆ ಬ್ರಿಟನ, ಅಮೇರಿಕೆ ಮತ್ತು ಹಿಂದು ಅಮೇರಿಕೆಯ ಪೇಟೆಗಳನ್ನು ಆರಕರ್ಷಿಸುವದೇ ಸ್ಟರ್ಲಿಂಗ ಮೌಲ್ಯವಿಚ್ಛೇದನದ ಉದ್ದೇಶವಾಗಿದೆ. ಪೇಟೆಗಳನ್ನು ವಿದೇಶಿಯರು ಆಕ್ರಮಿಸುವದನ್ನು ರಾಜಕಾರಣಿಗಳು ಸಹಿಸಬಹುದು ಆದರೆ ವ್ಯಾಪಾರಸ್ಥನು ಎಂದಿಗೂ ಸಹಿಸುವದಿಲ್ಲ" ಎಂದರು

--●--

—|| ಅರಿಕೆ ||—

ತುಂಗಭದ್ರಾ ಪ್ರಾಜೆಕ್ಟಿನ ಪರಿಣಾಮವಾಗಿ ಮುಳುಗಲಿರುವ ಮುವತ್ತಾರು ಗ್ರಾಮಗಳ ನಾಗರಿಕ ರೈತ ಮಹಾಶಯರಲ್ಲಿ ಬಿನ್ನಹ
ಗೌರವ ನಾಗರಿಕ ರೈತ ಬಾಂಧವರೇ ಒ ಗೊಡಿರಿ ?
ಪತಿರಿ. ಮುಕರ್ತವ್ಯ ಶೀಲರಾಗಿರಿ ??

ನಿಮ್ಮ ಮುಂದಿನ ಬಾಳಿನ ಸಂಪತ್ತಿನ ನಿಲುಮೆಯ ತಳಹದಿಯನ್ನು ಹಾಕಲು ಭಾರತ ಸ್ವಾತಂತ್ರ್ಯದ ಕಡು ಅಧ್ವರ್ಯುಗಳೂ, ಪೂಜ್ಯ ಗಾಂಧೀಜಿಯವರ ತತ್ವಾನ್ವಯಿಗಳೂ ನೇಪಾಳ ಸ್ವಾತಂತ್ರ್ಯಾಪೇಕ್ಷೆಯ ಮುಖಂಡರೂ ರೈತರಿಗಾಗಿ ತಮ್ಮ ದೇಹವನ್ನೇ ಮುಡುಪಿಟ್ಟವರೂ, ಆದ ಶ್ರೀ ಡಾ. ರಾಮಮನೋಹರ ಲೋಹಿಯಾರವರು, ಜನವರಿ ಒಂದನೇ ವಾರದಲ್ಲಿ ಪ್ರಾಜೆಕ್ಟಿನಿಂದೊದಗಿದ ತೊಡಕನ್ನು ಬಿಡಿಸಲು ಬರುವರು.

ಶ್ರೀ ಡಾ ಲೋಹಿಯಾರವರ ಅಧ್ಯಕ್ಷತೆಯಲ್ಲಿ ಮುವತ್ತು ಸಾವಿರ ಜನರ ಮುಂದಿನ ಬಾಳಿನ ಬಾಳುವಿಕೆಯ ನೆಲಗಟ್ಟನ್ನು ಕಟ್ಟಲು ನಾರಾಯಣದೇವರಕೇರಿ ಗ್ರಾಮದಲ್ಲಿ ಪರಿಷತ್ತು ಜರುಗುವದು. ಪರಿಷತ್ತಿಗೆ ಮುವ್ವತ್ತಾರು ಗ್ರಾಮಗಳ ಜನರೆಲ್ಲರೂ ನಿಮ್ಮ ಜೀವನದಲ್ಲಿ ಇಂದಿರುವ ಅನಾನುಕೂಲ ತೊಡಕುಗಳನ್ನು ವಿವರವಾಗಿ ಮುಂದಿಡಲು ಒಟ್ಟುಗೂಡಿರಿ, ವರ್ಣ, ವರ್ಗ, ಪಕ್ಷ, ಗಂಡು, ಹೆಣ್ಣು, ಹಿರಿ. ಕಿರಿತನಗಳನ್ನು ಬದಿಗಿಟ್ಟು ಸಿದ್ಧರಾಗಿರಿ. ಮುವತ್ತಾರು ಗ್ರಾಮಗಳ ಪ್ರತಿಫಲದ ಯೋಜನೆಯ ಪರಿಷತ್ತಿಗೆ ಮುಂದೆ ಬರುವ ಪ್ರತಿನಿಧಿಗಳಾಗಿರಿ. ಧನ ಸಹಾಯ ನೀಡಿರಿ ನಿಮ್ಮ ಮುಂದಿನ ಬಾಳು ಬಹು ಕಠಿಣವಾಗಿದೆ. ಈ ತೊಡಕನ್ನು ಎದುರಿಸಿ ನಿವಾರಿಸು ಹೆಗಲು ಕೊಟ್ಟು ನಿಲ್ಲಲು ಎಲ್ಲರೂ ಒಂದು ಗೂಡಿ ಮುವತ್ತು ಸಾವಿರ ಜನರೂ ಬಂದು ಮುಂದಿನ ಬಾಳಿನ ಬೆಳಕನ್ನು ಕಾಣಿರಿ. ಫಲ ಮುತ್ತು ಕೀರ್ತಿಗಳಿಸಿರಿ.

ಪರಿಷತ್ತನ್ನು ಯಶಸ್ವಿಗೊಳಿಸಲು ಸಹಕಾರ ನೀಡಿರೆಂದು ಆಶಿಸುವ

ಅಗಳಿ ಕಂಪೌಂಡು
ಹೊಸಪೇಟೆ
12-12-49

ಸ್ವಾಮಿ ಶಿವಪ್ರಕಾಶನಂದನಾಥ
ಅಧ್ಯಕ್ಷ
ಜಿಲ್ಲಾ ಹಿಂದ್ ಕಿಸಾನ್ ಪಂಚಾಯತ್
ಸೋಶಿಯಾಲಿಸ್ಟ ಪಾರ್ಟಿ.

ವಿ. ಸೂ— ಶ್ರೀ ಡಾ. ಲೋಹಿಯಾರವರ ಬರುವಿಕೆಯ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ದಿ. ೧೮-೧೨-೪೯ ಆದಿತ್ಯವಾರ ಸಾ॥ ೩ ಘಂಟೆಗೆ ಅಗಳಿ ಕಂಪೌಂಡಿನಲ್ಲಿ ಸ್ವಾಗತ ಸಮಿತಿ ಮಾಡುತ್ತದೆ. ಗ್ರಾಮದ ಮುಂದಾಳುಗಳು ಮಾತ್ರ ೧೮-೧೨-೪೯ ಕ್ಕೆ ಹೊಸಪೇಟೆಗೆ ಬರಬೇಕಾಗಿ ವಿನಂತಿ.

ನವಭಾರತಕ್ಕೆ
ಚಂದಾದಾರರಾಗಿರಿ

Unique picture !! Wonderful Scenes !!!

Gemini's

STRANGE BROTHERS

in Telugu From 12—1—1950

AT PRABHAT .... ಪ್ರಭಾತದಲ್ಲಿ

ಜೆಮಿನಿಯವರ

ಅಪೂರ್ವ ಸಹೋದರರು

ಅದ್ಭುತ ವಾಕ್ಪಟ | ತೆಲುಗಿನಲ್ಲಿ 12—1—50 ರಿಂದ | ಆಶ್ಚರ್ಯಕರ ದೃಶ್ಯಗಳು

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ನಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ ಬ್ಯಾಂಕ್ 5/- ರಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (**Fixed Deposits**):— 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮೆನ್, ಬೋರ್ಡ್ ಆಫ್ ಡೈರೆಕ್ಟರ್ಸ

ಸಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

NAVA BHARAT BELLARY. (Reg. No. M. 46)47

19—12—49

ನವಭಾರತ ಬಳ್ಳಾರಿ.

(**Nationalist Weekly**)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri.....................................

....

....

Pirnted at Krishna Printing Works, Edited & Published by T. B. Keshava Rao.

JAI—HIND

ನವಭಾರತ

ಬಳ್ಳಾರಿಯ
ಉಜ್ವಲ ರಾಷ್ಟ್ರೀಯ ವಾರಪತ್ರಿ
ಉತ್ತಿಷ್ಠತ! ಜಾಗ್ರತ!!
ಪ್ರಾಪ್ಯವರಾನ್ನಿಬೋಧತ!!!
ಸಂಪಾದಕ ಮತ್ತು ಪ್ರಕಾಶಕ-
ಟಿ. ಬಿ. ಕೇಶವರಾವ್

ವರ್ಷ ೧೨ | ಸೋಮವಾರ ೨೬ ಡಿಸೆಂಬರ್ ೧೯೪೯ | ಸಂಚಿಕೆ ೪೮

೧೯೫೧ ರಿಂದ ಆಹಾರ ಧಾನ್ಯ ತರಿಸುವುದಿಲ್ಲ

—:-

1951 ರ ನಂತರ ... ಧಾನ್ಯಗಳನ್ನು ಎಲ್ಲಿಂದಾದರೂ ಆಹಾರ ... ಗಳನ್ನು ಆಮದು ಮಾಡಬಾರದೆಂಬ ನಿರ್ಧಾರವನ್ನು ಸರಕಾರವು ಮಾಡಿದೆ. ಆಹಾರ ವಸ್ತುಗಳ ಆಮದುಗಳ ಮೇಲೆ ಹಿಂದೂಸ್ಥಾನವು ಅವಲಂಬಿಸಿಕೊಂಡಿರುವವರೆಗೆ ಅದಕ್ಕೆ ಇತರ ದೇಶಗಳ ಒತ್ತಡದಿಂದ ನಿಜವಾಗಿಯೂ ಸ್ವತಂತ್ರವಾಗಿರಲು ಸಾಧ್ಯವಿಲ್ಲ. 1951 ರ ನಂತರ ಆಹಾರ ಧಾನ್ಯಗಳ ಕೊರತೆಯಿದ್ದರೆ ಅದನ್ನು ಜನರು ಧೈರ್ಯದಿಂದ ಸಹಿಸಿಕೊಳ್ಳಬೇಕು. ಆಹಾರ ಕ್ಷೇತ್ರದಲ್ಲಿ ಹಿಂದೂಸ್ಥಾನವು ಸಂಕಷ್ಟಕಾಲವನ್ನು ದಾಟಿದೆಯೋ ಎಂದು ನನಗೆ ಇನ್ನೂ ಹೇಳಲು ಸಾಧ್ಯವಿಲ್ಲ. ಆದರೆ ದೇಶವನ್ನು ಸ್ವಯಂಪೂರ್ಣಗೊಳಿಸ ನಡೆಸುತ್ತಿರುವ ಕೆಲಸವನ್ನು ಕಂಡು ನಾನು ಸಂತೋಷಪಡುತ್ತೇನೆ.

—ಪಂ. ಜವಾಹರಲಾಲ್ ನೆಹರು

... —....

ಗೌ|| ರಾ|| ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S. C. 514-49.

ಕಲ್ಲಕಲ್ಲಿ ತಿಮ್ಮಪ್ಪ 16 ನಾಗಲಾಪುರ ತಾ|| ಹೊಸಪೇಟೆ. — ವಾದಿ.

ಮತ್ತು

ಮಾಸ್ತೇರ ನಾಗಪ್ಪ ತಂದೆ ತಿಮ್ಮಪ್ಪ, 56 ನಾಗಲಾಪುರ ತಾ|| ಹೊಸಪೇಟೆ.

—ಪ್ರತಿವಾದಿ.

ನೋಟೀಸು

ನಿಮ್ಮ ಮೇಲೆ ವಾದಿಯು ರೂ 167-7-0 ಮೊತ್ತಕ್ಕೆ ಮೇಲಿನ ದಾವೆ ತಂದಿದ್ದು ಸದ್ರಿ ದಾವೆ ಒಗ್ಗೆ ನಿರ್ಣಯಿಸಲು 23-12-49 ಕ್ಕೆ ಹಾಕಿಯಿದೆ. ಆದ್ದರಿಂದ ಮುದ್ದತಿಗೆ ವಕೀಲ್ ದ್ವಾರಾಗಲಿ ಹಾಜರಾಗದಿದ್ದಲ್ಲಿ ನಿಮ್ಮ ಮೇಲೆ ಎಕ್ಸ್ ಪಾರ್ಟಿ ತೀರ್ಪಾಗುವುದು.

ಬಳ್ಳಾರಿ ಎಚ್. ಎಂ. ಪಂಚಾಕ್ಷರಯ್ಯ
16-12-49. ವಾದಿ ವಕೀಲ್.

ಪ್ರಾಂತೀಕರಣ
ಬಳ್ಳಾರಿ ಪುರಸಭೆಯ ತೀರ್ಮಾನ

ಬಳ್ಳಾರಿ ಮುನಿಸಿಪಾಲಿಟಿಯು 16 ನೇ ದಸರ ... ಬಳ್ಳಾರಿ ಜಿಲ್ಲಾ ಆಂಧ್ರ ಪ್ರಾಂತದಲ್ಲಿ ಸೇರುವುದು ಹಿತಕರವೆಂದೂ ಅದಕ್ಕೆ ತಕ್ಕ ತೀರ್ಮಾನವನ್ನು ಮಾಡಬೇಕೆಂದೂ ಒಂದು ಸಹಿಮಾಡಿದ ಪತ್ರವನ್ನು ಪುರಸಭೆಗೆ ಕಳುಹಿಸಿದ್ದು ಅದರ ... 21-12-49 ... ಸಭೆಯಲ್ಲಿ ತೆಗೆದುಕೊಳ್ಳಲಾಗಿತ್ತು. ಬಹುಜನ ಪ್ರೇಕ್ಷಕರು ಸೇರಿ ಗಲಾಟೆ ಮಾಡಬಹುದೆಂಬ ಭಯದಿಂದ ಪೋಲೀಸರನ್ನು ಕರೆಸಿಕೊಂಡಿದ್ದರು.

ಅನೇಕ ಕನ್ನಡ ಸದಸ್ಯರು- ಈ ತೀರ್ಮಾನವು ನಿಯಮ ಒದ್ದವಲ್ಲವೆಂದೂ ರಾಜಕೀಯದ್ದೆಂದೂ ಪುರಸಭೆಗೆ ರಾಜಕೀಯವು ಸಂಬಂಧಿಸಿಲ್ಲವೆಂದೂ ವಾದಿಸಿದರು. ಆದರೂ-ಆಂಧ್ರದ ಪುರಸ್ಕರ್ತರ ಸದಸ್ಯರು ಈ ತೀರ್ಮಾನವನ್ನು ಪುಷ್ಟಿಕರಿಸಿದರು. ಬಳ್ಳಾರಿಯು ಆಂಧ್ರದಲ್ಲಿರಬೇಕೆಂಬ ತೀರ್ಮಾನವು 15 ವಿರೋಧ 10 ರಿಂದ ಪಾಸಾಯಿತು.

The General Assurance Society Ltd. [Estd 1907]
(H. O. AJMEER)
ದಿ. ಜನರಲ್ ಅಶೂರೆನ್ಸ್ ಸೊಸೈಟಿ ಲಿಮಿಟೆಡ್. [ಮುಖ್ಯಕಾರ್ಯಾಲಯ, ಅಜ್ಮೀರ]
ಸ್ಥಾಪನೆ 1907

Recognised as stronghold of Service Safety and Security.

The figures that speak

Total Assets over 3 crores
Total claims paid over 3 crores

For insurance and agency particulars
Please write to:-
K. M. Ramachar, *Branch Manager*,
Car Street, **Bellary**

ಸೇವೆ, ಧೃಡತೆ ಮತ್ತು ಭದ್ರತೆಗಳ ಕೋಟೆಯಂತಿರುವ ನಮ್ಮ ಕಂಪನಿಯಲ್ಲೇ ವಿಮೆಮಾಡಿರಿ.

ಈ ಅಂಕಿಗಳೇ ಸಾಕು:-

ಒಟ್ಟು ಆಸ್ತಿ 3 ಕೋಟಿ ರೂ. ಮೀರಿದೆ
ಒಟ್ಟು ಪಕ್ಕಿನ ಹಣ ಸಲ್ಲಿಸಿರುವುದು 3 ಕೋಟಿ ರೂ. ಮೀರಿದೆ

ವಿಮೆ ಮತ್ತು ಏಜನ್ಸಿವಿವರಗಳಿಗಾಗಿ ಕೆಳಗಿನವರಿಗೆ ಬರೆಯಿರಿ.
ಕೆ. ಯಂ. ರಾಮಾಚಾರ್, ಬ್ರಾಂಚ್ ಮೇನೇಜರ್
ತೇರು ಬಜಾರ, ಬಳ್ಳಾರಿ.

ಚೀನದಲ್ಲಿಯ "ಯಾದವಿ" ಕಲಹ

ಚೀನದಲ್ಲಿಂದು, ಚಿಯಾಂಗರ ಚೀನೀ ರಾಷ್ಟ್ರೀಯ ಪಕ್ಷದ ಸರಕಾರವೂ ಅವರ ಸಾಮರ್ಥ್ಯವೂ ತೀರ ಮುಣುಗುನೀರಿಗೆ ಬಂದಿರುವುದೆಂದು ಚಿಯಾಂಗರ ಮತ್ತು ಅವರ ಸರಕಾರದ ಆಗಾಗಿನ ಸ್ಥಾನಾಂತರಗಳಿಂದ ಊಹಿಸಬಹುದಾಗಿದೆ. ಚೀನೀ ಕಮ್ಯೂನಿಸ್ಟ ಪಕ್ಷದವರ ಕೈಯೂ ಅನೇ ಪ್ರಮಾಣದಲ್ಲಿ ಮೇಲಾಗುತ್ತ ನಡೆದಿರುವದೆಂಬುದು ಇದರಿಂದ ವ್ಯಕ್ತವಾಗುತ್ತದೆ. ಚೀನೀ ಕಮ್ಯೂನಿಸ್ಟ ಸರಕಾರದ ಪ್ರಮುಖನಾದ ಮಾವೊತ್ಸೆತಂಗನು ಸಮಗ್ರ ಚೀನದ ಮೂರು ನಾಲ್ಕಾಂಶಕ್ಕಿಂತ ಹೆಚ್ಚಿನ ಪ್ರದೇಶವನ್ನು ಕೈವಶ ಪಡಿಸಿಕೊಂಡು ಮುಂದರಿಯುತ್ತಿದ್ದಾನೆ. ಚಿಯಾಂಗ ಕೈಶೇಕರು ಅದರಂತೆಯೇ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಪಲಾಯನ ಸೂತ್ರವನ್ನು ಹಿಡಿಯುತ್ತಿದ್ದಾರೆ. ಕಮ್ಯೂನಿಸ್ಟ ಪ್ರಾಬಲ್ಯವು ಚೀನದಲ್ಲಿ ಆಗಬಾರದೆಂದು ಒಳಹೇತುವಿನಿಂದ ಚೀನದ ರಾಷ್ಟ್ರೀಯ ಸರಕಾರಕ್ಕೆ ಮತ್ತು ಅದರ ಅಧ್ವರ್ಯುಗಳಾದ ಚಿಯಾಂಗರಿಗೆ ಅಮೇರಿಕೆಯು ಬೇಕಾದಷ್ಟು ನೆರವನ್ನು ನೀಡುತ್ತಾ ಬಂದಿತು. ಅದರ ಪರಿಣಾಮವು "ಆಯುಷ್ಯ ತೀರದವನಿಗೆ ಔಷಧ ಕೊಡಿಸಿದಂತೆ" ವ್ಯರ್ಥವಾಯಿತೆಂದು ಇಂದು ಹೇಳಲಾಗುತ್ತದೆ. ಹೀಗಾಗುವುದಕ್ಕೆ ಕಾರಣವೇನಿರಬಹುದು? ಇದಕ್ಕೆ ಸರಿಯಾದ ಉತ್ತರವನ್ನು ಕಂಡು ಹಿಡಿಯಬೇಕಾದರೆ, ಚೀನದ ಪೂರ್ವೇತಿಹಾಸವನ್ನು ನಾವು ಅವಲೋಕಿಸಬೇಕಾಗುತ್ತದೆ.

ಪೂರ್ವೇತಿಹಾಸ

ಚೀನದ ಸಾಮ್ರಾಜ್ಯವು ಛಿನ್ನ ಭಿನ್ನವಾಗುವಂತೆ ಪಾಶ್ಚಾತ್ಯರೇ ಮೊದಲಿನಿಂದಲೂ ಪ್ರಯತ್ನ ನಡೆಸುತ್ತ ಬಂದಿದ್ದಾರೆಂಬುದು ಚೀನದ ಇತಿಹಾಸ ಬಲ್ಲವರಿಗೆ ಅರಿತ ಮಾತಾಗಿದೆ. ರಶಿಯಾಕ್ಕಿಂತಲೂ ಮೊದಲಿಗೇ, ಬ್ರಿಟನ್ ಫ್ರಾನ್ಸ, ಜರ್ಮನಿಗಳು, ಚೀನದ ಬೇರೆ ಬೇರೆ ಭಾಗಗಳಲ್ಲಿ ತಮ್ಮ "ವಸಾಹತ" ಹಾಕಿ ತಮ್ಮ ತಂತ್ರಗಾರಿಕೆಯಿಂದ ಅನೇಕ ಬಗೆಯ ದೂರ ದೃಷ್ಟಿಯ ಅಧಿಕಾರಗಳನ್ನು ಸಂಪಾದಿಸಿಕೊಂಡು, ಚೀನದ ಆಯಕಟ್ಟಿನ ಸ್ಥಳಗಳಲ್ಲೆಲ್ಲ ತಮ್ಮ "ಸೈನಿಕ ಠಾಣೆ"ಗಳನ್ನು ಪ್ರಸ್ಥಾಪಿಸಿದರು. ಅಲ್ಲದೆ ಚೀನ ಸಾಮ್ರಾಜ್ಯವು "ಹರಿವೆ ಒಡೆದು ಹಂಚಾಗುವಂತೆ" ಮಾಡಲು ಪ್ರಯತ್ನ ನಡೆಸುತ್ತ ಅದು ಕೊನೆಯದಾಗಿ ಒಡೆದು ಹೋಗುವ ದಾರಿಯನ್ನು ಬಹು ಆತುರತೆಯಿಂದ ಕಾಯುತ್ತಲಿದ್ದರು. ಏಕೆಂದರೆ ಆ ಸಾಮ್ರಾಜ್ಯವು ಒಡೆದೊಡನೆಯೆ, ಮೊದಲೇ ಪ್ರಯೋಗಿಸಲಾಗಿದ್ದ ತಮ್ಮ ಬೇದನೀತಿ"ಯನ್ನು ಇನ್ನೂ ಅಷ್ಟು ಮುಂದುವರಿಸಿ ಸಮಗ್ರ ಚೀನವನ್ನೇ ತಮ್ಮ ತಮ್ಮೊಳಗೆ ಹಂಚಿಕೊಂಡು ಅದನ್ನು ಕೆಳಂತರ ಮಾಡಬೇಕೆಂದು ಅವರು ಮೊದಲೇ ಹೊಂಚು ಹಾಕಿದ್ದಾರೆ.

ಇವರ ಕೃತಿಗಳು ರಾಷ್ಟ್ರಭಕ್ತರಾದ ಜಾಣಾಕ್ಷರೂ, ದೂರದರ್ಶಿಗಳೂ, ಆದ ಕೆಲವು ಚೀನೀಯರಿಗೆ ತಿಳಿಯದೆ ಇರಲಿಲ್ಲ. ತಮ್ಮ ಈ ಕೃತಿಗಳ ಪರಿಣಾಮವಾಗಿಯೇ, ಈ ಬ್ರಿಟನ್, ಫ್ರಾನ್ಸ, ಜರ್ಮನಿಗಳು, ಚೀನದ ಜನತೆಯ ದ್ವೇಷವನ್ನು ಸಂಪಾದಿಸಿಕೊಂಡವು. ಚೀನೀಯರು ಯಾವಾಗಲೂ ಇವರನ್ನು ಸಂಶಯ ದೃಷ್ಟಿಯಿಂದಲೇ ನೋಡಲಾರಂಭಿಸಿದರು. ಇವರ ಮಾತಿನಲ್ಲಿ ನಂಬಿಗೆ ಉಳಿಯದಾಯಿತು. ದ್ವೇಷವು ತೀಕ್ಷ್ಣಕ್ಕೇರಿತು. "ಬಾಕ್ಸರ ಪ್ರತಿಭಟನೆ"ಯು ಸಂಭವಿಸಲಿಕ್ಕೆ ಇದೇ ಕಾರಣವಾಯಿತಲ್ಲದೆ, ಇವರಿಗೆ ಚೀನೀಯರಿಂದ ಬೇರೆ ಬೇರೆ ಕಡೆಗೂ ಸಾಕಷ್ಟು ಪ್ರತಿಭಟನೆಗಳನ್ನು ಎದುರಿಸಬೇಕಾಗಿ ಬಂದಿತು.

ಏಶಿಯಾ ಖಂಡದಲ್ಲಿಯೂ ಬಹುದೂರದ ವರೆಗೆ ತನ್ನ ಪ್ರದೇಶವನ್ನು ಚಾಚಿಕೊಂಡಿದ್ದ ರಶಿಯಾ ದೇಶವಾದರೂ, ೧೯ ನೆಯ ಶತಮಾನದ ಕೊನೆಯ ಭಾಗದಲ್ಲಿ ಏಶಿಯಾದಲ್ಲಿ ತಾನುಗೆದ್ದ ದೇಶಗಳನ್ನು ಆಕ್ರಮಿಸುತ್ತ ತನ್ನ ಸಾಮ್ರಾಜ್ಯವನ್ನು ಪಾಸಿಫಿಕ್ ಮಹಾಸಾಗರದ ವರೆಗೂ ಹಬ್ಬಿಸಿತ್ತು. ಆಗ ರಶಿಯಾ ಚೀನ ಸಾಮ್ರಾಜ್ಯದಿಂದ, ಕೆಲವು ರೇಲ್ವೆ ಅನುಕೂಲತೆಗಳನ್ನು, ಮಂಚೂರಿಯಾ ಮತ್ತು ಉತ್ತರ ಚೀನದಲ್ಲಿ ದೊರಕಿಸಿಕೊಂಡಿತ್ತು. ಆದರೆ ಪಾಶ್ಚಾತ್ಯಮನೋವೃತ್ತಿಯ ಜಪಾನವು ಆಗ ಮಂಚೂರಿಯಾದಲ್ಲಿ ತನ್ನ ಚಂಚು ಪ್ರವೇಶಮಾಡಿ ರಶಿಯಾವನ್ನು ಪ್ರತಿಭಟಿಸಿತು. ಇದರ ಪರಿಣಾಮವಾಗಿಯೇ "ರೂಸೋ ಜಪಾನ" ಯುದ್ಧವಾಗಿ ಜಪಾನವು ರಶಿಯಾವನ್ನು ಸಂಪೂರ್ಣ ಹಿಮ್ಮೆಟ್ಟಿಸಿತು. ಆಗಲೇ ರಶಿಯಾವು ಚೀನದಿಂದ ಸಂಪೂರ್ಣವಾಗಿ ಅಗಲಬೇಕಾಯಿತು.

ಸಮಕಾಲೀನ ಕ್ರಾಂತಿ

ಇದೇ ಕಾಲಕ್ಕೆ, ಇತ್ತ ಚೀನದಲ್ಲಿಯೂ ಒಂದು ಕಾಲಕ್ಕೆ, ಹೊಸ ಹೊಸ ವಿಚಾರ ಪ್ರಣಾಲಿಗಳು ಮೂಡಿ ಎರಡೂ ದೇಶಗಳಲ್ಲಿಯೂ ಉತ್ಕ್ರಾಂತಿಯಾಯಿತು. ೧೯೧೭ರಲ್ಲಿ ಸೋವಿಯೇಟರು ರಶಿಯಾದಲ್ಲಿ ಅಧಿಕಾರಕ್ಕೆ ಬಂದ ಬಳಿಕ "ಸಾಮ್ರಾಜ್ಯವಾದ"ವನ್ನು ಓತಪ್ರೋತವಾಗಿ ವಿರೋಧಿಸುತ್ತೇವೆಂದು ಸಾರಿದ್ದಲ್ಲದೆ, ಏಶಿಯಾ ಖಂಡದಲ್ಲಿಯ ತಮ್ಮ ಎಲ್ಲ ವಸಹತುಗಳಿಗೂ ರಿಪಬ್ಲಿಕ್ ಹಕ್ಕುಗಳನ್ನು ಸಾರಿದರು ಮತ್ತು ತಮ್ಮ ಈ ವಸಾಹತಗಳ ನೆರೆಹೊರೆಯ ಪ್ರದೇಶಗಳಲ್ಲಿಯೂ ಇದೇ ಬಗೆಯ ಕ್ರಾಂತಿಯು ಉದ್ಭವಿಸಲೆಂದು ಪ್ರಚಾರ ಕಾರ್ಯವನ್ನು ಕೈಕೊಂಡರು. ಆ ಕಾಲಕ್ಕೇ ಸೋವಿಯೆಟ ರಶಿಯಾ ಚೀನಕ್ಕೆ ಶ್ರೀ ಮಾ. ನವೇಂದ್ರ ನಾಥರಾಯ, ಮತ್ತು ಶ್ರೀ ಬೋರೋಡಿನ್ ಅವರನ್ನು ಆ ಕಾರ್ಯಕ್ಕಾಗಿ ಕಳಿಸಿತು. ಅದೇ ವೇಳೆಗೆ ಚೀನದಲ್ಲಿಯೂ ಡಾ. ಸನ್ ಎತ್. ಸೇನರ ನಾಯಕತ್ವದಲ್ಲಿ "ರಾಷ್ಟ್ರೀಯ ಕ್ರಾಂತಿಯು ಪ್ರಾರಂಭವಾಯಿತು.

ಆದರೆ ಮುಂದೆ ಇವೆರಡು ರಾಷ್ಟ್ರಗಳ (ಚೀನ ಮತ್ತು ರಶಿಯಾ) ಕ್ರಾಂತಿ ದಿಶೆಯಲ್ಲಿ ಮಾರ್ಪಾಟಾಗಿ ಹೋಯಿತು. ಚೀನವು ಜಪಾನದ ಹಾಗೂ ಪಾಶ್ಚಾತ್ಯರ ಪ್ರಭಾವಕ್ಕೆ ಸಿಕ್ಕಿ, ಹಿಂಜರಿದು ಕೊಂಡಂತಾಗಿ ತಮ್ಮ ರಾಷ್ಟ್ರೀಯ ಸರಕಾರದ ಬಲವರ್ಧನೆಗಾಗಿಯೇ ಸಕಲವನ್ನು ಪಣಕ್ಕೆ ಹಚ್ಚಿದರು. ಇತ್ತ ರಶಿಯಾದಲ್ಲಿಯೂ ಲೆನಿನ್ನನ ನಂತರ ಅಧಿಕಾರಾರೂಢ ಪಕ್ಷವಾದ ಸ್ಟಾಲಿನ್ ಪಕ್ಷದವರೂ, ತಮ್ಮ "ಜಗತ್ಕ್ರಾಂತಿ"ಯ ವಿಚಾರವನ್ನು ಬದಿಗಿರಿಸಿಬಿಟ್ಟರು; ಟ್ರಾಟಸ್ಕಿಯನ್ನು ಗಡಿಪಾರು ಮಾಡಿದರು; ಮತ್ತು ತಮ್ಮ ಸೋವಿಯಟ್ ಸರಕಾರವನ್ನು ಬಲಪಡಿಸಿಕೊಳ್ಳಲೆಂದೇ ತಮ್ಮ ಸರ್ವಸ್ವವನ್ನು ಪಣಕ್ಕೆ ಹಚ್ಚಿದರು. ಆ ಬಳಿಕ ಬಹುಕಾಲದ ವರೆಗೂ ಚೀನ ಮತ್ತು ರಶಿಯಾಗಳು ಒಂದೇ ಭೂಮಿಕೆಯ ರಂಗದ ಮೇಲೆ ಒಂದಕ್ಕೊಂದು ಭೆಟ್ಟಿಯಾಗುವ ಹಾಗೂ ಕೂಡಿ ಕಾರ್ಯಮಾಡುವ ಸಂದರ್ಭವೇ ಒದಗಿ ಬರಲಿಲ್ಲ.

ಆ ಬಳಿಕ

ತಮ್ಮ ತಮ್ಮ ಸರಕಾರವನ್ನು ಬಲಪಡಿಸಿಕೊಳ್ಳುವ ಕಾರ್ಯದಲ್ಲಿ, ರಶಿಯಾ ದಿನ ದಿನಕ್ಕೆ ಹೆಚ್ಚು ಪ್ರಗತಿಯನ್ನು ಸಾಧಿ

ಸುತ್ತ ಒಲಿಷ್ಟನಾಗುತ್ತ ನಡೆಯಿತು. ಚೀನವು ಮಾತ್ರ, ಜಪಾನೀಯರ ಆಕ್ರಮಣವೃತ್ತಿ, ಮತ್ತು ತನ್ನೊಳಗಿನ ಒಳಜಗಳ ಇವುಗಳ ಪರಿಣಾಮದಿಂದ ದಿನ ದಿನಕ್ಕೆ ಕ್ಷೀಣವಾಗುತ್ತಲೇ ನಡೆಯಿತು. ದ್ವಿತೀಯ ಜಾಗತಿಕ ಮಹಾಯುದ್ಧದಲ್ಲಿ "ಮಿತ್ರಪಕ್ಷ"ದಲ್ಲಿದ್ದ ರಶಿಯಾ ಜಪಾನದೊಡನೆ ಹೋರಾಡಿ, ಅವನ್ನು ಚೀನದಿಂದ ಕಾಲು ಕೀಳಿಸಿತಲ್ಲದೆ ಮಂಚೂರಿಯಾವನ್ನು ಮುಕ್ತ ಮಾಡಿತು. ಇದರ ಪ್ರಭಾವವು ಚೀನೀಯರ ಮೇಲೆ ಒಳ್ಳೆಯ ಪರಿಣಾಮ ಮಾಡಿತು.

ಚೀನದಲ್ಲಿ ಕಮ್ಯೂನಿಸ್ಟ ಮತ್ತು ರಾಷ್ಟ್ರೀಯ ಪಕ್ಷಗಳಲ್ಲಿ ಈ ರೀತಿಯಾಗಿ ತಿಕ್ಕಾಟವು ಪ್ರಾರಂಭವಾಗಿ ಕದನಗಳು ನಡೆಯುತ್ತಿತ್ತು. ಕಮ್ಯೂನಿಸ್ಟರ ಸೈನ್ಯದಲ್ಲಿ ಸರಿಯಾದ ಸಾಮಗ್ರಿ ಪೂರೈಕೆಯ ಕೊರತೆಯಿದ್ದರೂ, ರಾಷ್ಟ್ರೀಯ ಸೈನ್ಯವನ್ನು ಅದು ಎದುರಿಸಿ ಸೋಲಿಸುತ್ತಲೇ ನಡೆಯಿತು. ಕಮ್ಯೂನಿಸ್ಟ ಪ್ರಭಾವದಿಂದಲೂ ರಾಷ್ಟ್ರೀಯ ಪಕ್ಷದ ಅಧಿಕಾರಿಗಳ ಲಂಚಗಾರಿಕೆ ಸ್ವಾರ್ಥ ಮೊದಲಾದವುಗಳಿಗೆ ಹೇಸಿ ಹೋದ ಜನತೆಯ ಬೆಂಬಲದಿಂದಲೂ ಚೀನದಲ್ಲಿ ಕಮ್ಯೂನಿಷ್ಟರ ಕೈಯೇ ಮೇಲಾಗತೊಡಗಿತು. ರಶಿಯಾ ಇದರಲ್ಲಿ ಪ್ರತ್ಯಕ್ಷ ರೀತಿಯಿಂದ ಕಮ್ಯೂನಿಸ್ಟರಿಗೆ ಯಾವ ಬಗೆಯಿಂದಲೂ ನೀಡದೆ ಇದ್ದರೂ ಅದರ ನೈತಿಕ ಬೆಂಬಲವು ಮಾತ್ರ ಕಮ್ಯೂನಿಸ್ಟರಿಗೆ ಇದ್ದೇ ಇತ್ತೆಂದು ಧಾರಾಳವಾಗಿ ಹೇಳಬಹುದು.

ಚೀನದಲ್ಲಿ ಮಾವೋನ ಸಂಚಾಲನದಿಂದ ನಡೆದ ಪುನರ್ರಚನಾ ಯೋಜನೆಯನ್ನು ನೋಡಿದರೆ ಅದೇನು ಸಂಪೂರ್ಣವಾಗಿ ಕಮ್ಯೂನಿಸಂ ಪ್ರೇರಿತವೆಂದು ಹೇಳಬರುವಂತಿಲ್ಲ. ಭೂಮಿ, ಸೀಮೆ ಮೊದಲಾದ ಆಸ್ತಿಗಳಲ್ಲಿ ವೈಯಕ್ತಿಕ ಒಡೆತನವೂ, ಉದ್ಯೋಗ ವ್ಯವಹಾರಗಳಲ್ಲಿ ಚಿಕ್ಕ ಪುಟ್ಟ ವ್ಯಕ್ತಿಗತ ಒಡೆತನವೂ ಅಲ್ಲಿ ಧಾರಾಳವಾಗಿ ನಡೆದೇ ಇವೆ. ಕೆಲವರು ಇದಕ್ಕೆ 'ಯುದ್ಧಕ್ಕೆಯ್ದುವ ಮೊದಲು ಕುರಿಯನ್ನು ಮೇಯಿಸಿದಂತೆ" ಎಂದು ಅಭಿಪ್ರಾಯಪಟ್ಟರೂ, ಚೀನದಲ್ಲಿ ಕಮ್ಯೂನಿಸ್ಟರ ಗೆಲುವಿಗೆ ಮಾವೋನ ಸಾಮರ್ಥ್ಯವೇ ಕಾರಣವೆಂಬುದನ್ನು [illegible] ಮಾವೋ ಸರಕಾರವು ಹೀಗೆ-ಅಂದರೆ ಕಮ್ಯೂನಿಸ್ಟ ತತ್ವಕ್ಕೆ ಸಲ್ಲದ ಕಾರ್ಯವನ್ನು-ಏಕೆ ಮಾಡುತ್ತಿರಬಹುದೆಂಬುದರ ಅರ್ಥವಾಗಿಲ್ಲ. ಇನ್ನು ಮಾವೋ ಮತ್ತು ಆತನ [illegible] ಸೈನ್ಯವು ನಿಜವಾಗಿಯೂ ಸೋವಿಯಟ್ ಪ್ರಣಾಲಿಗೇ ಸಂಪೂರ್ಣವಾಗಿ ತಿರುಗಿದರೆ, ಅದರ ಹೊಣೆಗಾರಿಕೆಯು ಬಿದ್ದ ಚಿಯಾಂಗರನ್ನೆಬ್ಬಿಸಲು ಪ್ರಯತ್ನಿಸುತ್ತಿರುವ ಪಾಶ್ಚಾತ್ಯ ಸರಕಾರಗಳ ಮೇಲೆಯೇ ಅಪ್ರತ್ಯಕ್ಷವಾಗಿಯಾದರೂ ಬೀಳದಿರಲಾರದು. ಬಹುಕಾಲದಿಂದಲೂ ಚೀನವು ಯುದ್ಧಪೀಡಿತ ರಾಷ್ಟ್ರವಾಗಿದ್ದು ತನ್ನ ಉರ್ಜಿತಾವಸ್ಥೆಗೆ ಪ್ರಯತ್ನಪಡಲು ಅದಕ್ಕೆ ಅವಕಾಶವೇ ಇಲ್ಲದಾಗಿದೆ. ಇನ್ನು ಮುಂದಾದರೂ, ಈ ಅಂತರ್ಯುದ್ಧದಿಂದ ಚೀನವು ನಿವೃತ್ತವಾಗುವುದೇ ಎಂದು ನೋಡಬೇಕಾಗಿದೆ.

—○—

ಬಳ್ಳಾರಿ ಜಿಲ್ಲೆಯು ಇಬ್ಭಾಗವಾಗಬಾರದು

ಕನ್ನಡಿಗರ ಕರ್ತವ್ಯ

ಬಳ್ಳಾರಿ ಜಿಲ್ಲೆಯ ಆದವಾನಿ, ಆಲೂರು, ರಾಯದುರ್ಗ ಈ ಮೂರು ತಾಲೂಕುಗಳನ್ನು ಒಟ್ಟಿಗೆ ಗಣನೆ ಮಾಡಿದರೆ ಕನ್ನಡಿಗರು ಅಧಿಕ ಸಂಖ್ಯಾಕರಾಗಿರುವ ಅಂಶವು ಸ್ಪಷ್ಟವಾಗಿದೆ. ಕೇಳ್ಕರ್‌ರವರು ಮೂರು ತಾಲೂಕುಗಳ ಜನಗಣನೆ ನಡೆಸಲಿಲ್ಲ. ಜನಾಭಿಪ್ರಾಯ ತೆಗೆಯಲಿಲ್ಲ. ಬಳ್ಳಾರಿಯಲ್ಲೊಂದಿನ, ಆದವಾನಿಯಲ್ಲೊಂದು ದಿನವಿದ್ದು ತಮ್ಮ ತೀರ್ಪನ್ನು ಕೊಟ್ಟರು. ಆಂಧ್ರ ಕಾಂಗ್ರೆಸ್ಸಿಗೆ ಸದರಿ 3 ತಾಲೂಕುಗಳನ್ನು [illegible] 1921 ರಿಂದ 1931 ರ ವರೆಗೆ ಅಲ್ಲಿ ಯಾವ ಆಂಧ್ರ ಕಾಂಗ್ರೆಸ್ ಸಮಿತಿಗಳೂ ಇರಲಿಲ್ಲ. ಕೇಳ್ಕರರ ನಿರ್ಣಯದ ಅವಧಿಯು ೧೦ ವರ್ಷವಿದೆ. 1931 ರ ನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು [illegible] ನ್ಯಾಯಸಮಿತಿಯನ್ನು ನಿರ್ಮಿಸಿ ಸತ್ಯಾಂಶಗಳನ್ನು ಅರಿಯಬೇಕಿತ್ತು. ಕನ್ನಡಿಗರ [illegible] ಆದವಾನಿ [illegible] ರಾಯದುರ್ಗಗಳಲ್ಲಿ ನಿರ್ವಿವಾದವಾಗಿ [illegible] ಯಾವ ಆಧಾರದ ಮೇಲೆ ಹೇಳುತ್ತಾರೆ?

ದೆಹಲಿಯಿಂದ ಬರುತ್ತಿರುವ ವರದಿಗಳಿಂದ ಕೇಂದ್ರ ಸರಕಾರವು ಬಳ್ಳಾರಿ ಜಿಲ್ಲೆಯನ್ನು ಇಬ್ಭಾಗಿಸಲು ಇಚ್ಛಿಸುತ್ತಿಲ್ಲ. ಪೂರ್ವ ತಾಲೂಕುಗಳಲ್ಲಿ ವಾಸಿಸುತ್ತಿರುವ ಅಲ್ಪಸಂಖ್ಯಾಕರಾದ ಆಂಧ್ರರೇ ಬಳ್ಳಾರಿಯನ್ನು ಬಿಟ್ಟು ಹೋಗಲು ಇಚ್ಛಿಸುತ್ತಿರುವುದಿಲ್ಲ. ಬಳ್ಳಾರಿಯ ಸಂಬಂಧವನ್ನೇ ಬೇಡುತ್ತಾ ಕೇಂದ್ರ ಸರಕಾರಕ್ಕೆ ನಿತ್ಯವೂ ಅರ್ಜಿ ತಾರುಗಳ ಮೂಲಕ ತಿಳಿಸುತ್ತಿರುವರು.

ಈ ಕಾರಣ ಇಂಥಾ ಪರ್ವಸಮಯದಲ್ಲಿ ಈ ಮೂರು ತಾಲೂಕುಗಳ ಪ್ರತಿನಿಧಿ ಮಂಡಲವು ಡೆಲ್ಲಿಗೆ ಹೋಗಿ ಕಾಂಗ್ರೆಸ್ ವರಿಷ್ಠರಲ್ಲಿ ನಿಜಾಂಶಗಳನ್ನು ವೇದ್ಯದ ಮಾಡಿ - ಜಿಲ್ಲೆಯನ್ನು ಇಬ್ಭಾಗ ಮಾಡದಂತೆ ಬಲವಾದ ಚಳವಳಿ ಹೂಡಬೇಕು

[illegible]

ಬಳ್ಳಾರಿ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

ಒ. ಪಿ. ನಂ 610/49

ವಾರಸ ಸರ್ಟಿಫಿಕೇಟು ಪಡೆಯುವ ವಿಷಯಕ್ಕೆ

ಹಿರೇಭಾ. ವಿ. ಮುಸಾಲಿ ಆದವಾನಿ

— ಅರ್ಜದಾರ.

ಮತ್ತು

1. ಎಂ ಶ್ರೀನಿವಾಸರಾವ್ ಮತ್ತು 4 ಇತರರು.

ಕೌಂಟರ್ ಪಿಟಿಷನರ್ರು.

ನೋಟೀಸು

ಮೇಲ್ಕಾಣಿಸಿದ ನಂಬರಿನಲ್ಲಿ ಅರ್ಜದಾರಳಾದ ಹಿರೇಭಾಯಿ ಮುಸಾಲೆಯ [illegible] ಗೋಪಾಲರಾವ್ ಎಂ. ಎ. ರು. 2-7-'48 ನೆಯ ದಿನ ಗತಿಸಿರುವರು. ಆತನು ಜೀವ ವಿಮೆಯಾದ [illegible] ಇನ್ಷೂರೆನ್ಸ್ ಕಂಪನಿ ಲಿಮಿಟೆಡ್‌ನವರ ಪಾಲಿಸಿ ನಂಬರ್ 413456, [illegible] ನಂಬರ್ 241 ಮೇರೆಗೆ ಬರತಕ್ಕ ರೂ 3357-14-0 ತನಗೆ ದಕ್ಕಿಸಲು ಸದರಿ ಮೊಕ್ತವನ್ನು ಕೊಡಿಸಬೇಕೆಂದು ಮೇಲಿನ ಕೋರ್ಟಿನಲ್ಲಿ ವಾರಸ ಸರ್ಟಿಫಿಕೇಟ್ ಕೇಳಿದ್ದಾಳೆ. ಇದರ ತಾರೀಖು 7-1-1950 ಕ್ಕೆ ಇದ್ದು, ಆ ದಿನ ಸದ್ರಿ ಲೇಟ್ ಗೋಪಾಲರಾಯರ ಸಂಬಂಧೀಕರ್‍ಯಾರಾದರೂ ಇದ್ದರೆ, ಹಾಜರಾಗಿ ತಮ್ಮ ಆಕ್ಷೇಪಣೆ ತಿಳಿಸಬೇಕು. ಇಲ್ಲವಾದರೆ ಸದರಿ ಪಾರ್ಟಿಯನ್ನು ಕೋರ್ಟಿನವರು ಎಕ್ಸ್‌ಪಾರ್ಟಿ ಮಾಡಿ ಮೇಲಿನ ಅರ್ಜಿಪ್ರಕಾರಕ್ಕೆ ವಾರಸು ಸರ್ಟಿಫಿಕೇಟ್ ಕೊಡುವುದಾಗುತ್ತೆಂದು ಈ ಮೂಲಕ ಎಲ್ಲರಿಗೂ ತಿಳಿಸೋಣವಾಗಿದೆ.

ಬಿ.ವಿ. ರಾಮಕೃಷ್ಣರಾವ್,
ಅರ್ಜದಾರರ ವಕೀಲು.

ಬಳ್ಳಾರಿ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ

ಒ. ಪಿ. ನಂ. 609/1949

ಲೇಟ್ ಶಿ. ಲೋಕಯ್ಯನಾಯುಡುರವರಿಗೆ ಬರಬೇಕಾದ ಸಾಲದ ಮೊತ್ತದ ಸಂಬಂಧ.

1. ಪಾಂಡುರಂಗನಾಯುಡು
2. ವೇಣುಗೋಪಾಲನಾಯುಡು
3. ಬಾಬುನಾಯುಡು
4. ಪುಷ್ಪವತಿ.

—ಅರ್ಜಿದಾರರು.

ಮೈನರ್ಸ್

ಬೈಗಾರ್ಡಿಯನ್ ಶಿ. ವೆಂಕಟರತ್ನಂ ನಾಯುಡು.

ಯು.ಎಸ್.ಎಂ. ರೈಲ್ವೆ ಅಧಿಕಾರಿಗಳಿಂದ ತಮ್ಮ ತಂದೆ ಶಿ. ಲೋಕಯ್ಯನಾಯುಡುರವರಿಗೆ ಬರಬೇಕಾದ ಪ್ರಾವಿಡೆಂಟು ಫಂಡ್ ಮೊತ್ತದಲ್ಲಿ 3/4 ಭಾಗವನ್ನು ವಸೂಲಿಮಾಡಲು ಮೇಲ್ಕಾಣಿಸಿದ 4 ಮೈನರು ಅರ್ಜಿದಾರರ ಪರವಾಗಿ ಅವರ ಪೋಷಕ ಶಿ. ವೆಂಕಟರತ್ನಂನಾಯುಡು ವಾರಸು ಸರ್ಟಿಫಿಕೇಟಿಗಾಗಿ ಅರ್ಜಿ ಇಟ್ಟಿರುತ್ತಾನೆ. ಆ ಅರ್ಜಿಯು 27-12-'49ಕ್ಕೆ ವಾಯಿದೆ ಹಾಕಲಾಗಿದೆ. ಅರ್ಜಿದಾರರಿಗೆ ಸದರಿ ಸರ್ಟಿಫಿಕೇಟ್ ಕೊಡಲು ಯಾರದಾದರೂ ಆಕ್ಷೇಪಣೆ ಇದ್ದಲ್ಲಿ ಅವರು ತಾವಾಗಲಿ ವಕೀಲರ ಮೂಲಕವಾಗಲಿ ಬಂದು ಆಕ್ಷೇಪಣೆ 27-12-49ಕ್ಕೆ ಪ್ರಾ. 11 ಗಂಟೆಗೆ ಕೋರ್ಟಿನಲ್ಲಿ ತಿಳಿಸಬೇಕು. ಇಲ್ಲವಾದರೆ ಅದು ಏಕಪಕ್ಷವಾಗಿ ನಿರ್ಣಯವಾಗುವುದು.

ಟಿ. ರಾಮಚಂದ್ರರಾವ್,
ಅಡ್ವೊಕೇಟ್.
ಅರ್ಜಿದಾರರ ಗಾರ್ಡಿಯನ್ ಪರವಾಗಿ

ರೇಶನಿಂಗ ಅಧಿಕಾರಿಗೆ ಮನೆಯಲ್ಲಿ ಪ್ರವೇಶದ ಅಧಿಕಾರ ಸರ್ಕಾರದ ಆಜ್ಞೆ

—o—

ಮದರಾಸು ರೇಶನಿಂಗ್ ಆಜ್ಞೆಯನ್ನು ತಿದ್ದುಪಡಿಮಾಡಿದ ಪ್ರಕಾರ ರೇಶನಿಂಗ್ ಆಫೀಸರು ಅಥವಾ ಅವರಿಂದ ಅಧಿಕಾರ ಹೊಂದಿದವರು ತಮ್ಮ ಅಧಿಕಾರ ವಲಯದಲ್ಲಿ ಯಾವ ಮನೆಯೊಳಗಾದರೂ ಪ್ರವೇಶಿಸಿ, ಜಡ್ತಿ ನಡಿಸಬಹುದು. ಆದರೆ ಮನೆಯಲ್ಲಿರುವವರು ಸಾಮಾಜಿಕ ಧಾರ್ಮಿಕ ರೀತಿ. ರಿವಾಜುಗಳಿಗೆ ಗಮನಕೊಡಬೇಕು. ನ್ಯಾಯವಾದ ಎಲ್ಲಾ ಸಮಯಗಳಲ್ಲಿ ಈ ಜಡ್ತಿ ನಡಿಸಿ ರೇಶನಿಂಗ್ ವಸ್ತುಗಳ ದಾಸ್ತಾನು, ರೇಶನ್ ದಾಖಲೆ, ಪುಸ್ತಕ, ಲೆಕ್ಕಪತ್ರ ಇತ್ಯಾದಿಗಳನ್ನು ಪರೀಕ್ಷಿಸಬಹುದು. ಹಾಗೂ ಸ್ವಾಧೀನಪಡಿಸಬಹುದು. ವಾಹನ, ದೋಣಿ, ಮನುಷ್ಯ, ವಾ ಪ್ರಾಣಿಯನ್ನು ನಿಲ್ಲಿಸಿ ಹುಡುಕಬಹುದು. ಅವಶ್ಯವಾದ ಎಲ್ಲಾ ಪ್ರಶ್ನೆಗಳನ್ನು ಕೇಳಬಹುದು. ಹಾಗೂ ದಾಖಲೆಗಳನ್ನು ಹಾಜರು ಪಡಿಸುವಂತೆ ಹೇಳಬಹುದು. ಆದುದರಿಂದ ಅಂಥ ಆಫೀಸರರಿಗೆ ಪ್ರತಿಯೊಬ್ಬನು ಮನೆಯೊಳಗೆ ಪ್ರವೇಶಿಸಲು ಬಿಡಬೇಕಲ್ಲದೆ, ಅವರು ಅವರ ಕೆಲಸ ನಿರ್ವಹಿಸಲಿಕ್ಕೆ ಬೇಕಾದವಾ-ಅವರು ಅದಕ್ಕಾಗಿ ಕೇಳುವ ಎಲ್ಲಾ ಸೌಕರ್ಯಗಳನ್ನು ಕೊಡಬೇಕಾಗಿದೆ.

ಶ್ರೀ ಲಿಂಗಾರೆಡ್ಡಿಯವರ ವಿರೋಧ

ಆಂಧ್ರರನ್ನು ನಂಬುವಂತಿಲ್ಲ

ಶ್ರೀ ಜೆಚ್ ಲಿಂಗಾರೆಡ್ಡಿಯವರು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿ ಶ್ರೀ ಕಳಾ ವೆಂಕಟರಾಯರ ಅಸಂಬದ್ಧ ಮತ್ತು ಅಸತ್ಯ ಪೂರ್ಣ ಅಂಶಗಳ ಹೇಳಿಕೆಯನ್ನು ಖಂಡಿಸುತ್ತಾ ಆಂಧ್ರ ಮುಖಂಡರನ್ನು ನಂಬಬಹುವಂತಿಲ್ಲವೆಂದೂ, ರಾಯಲಸೀಮೆಯ ಆರ್ಥಿಕಾಭಿವೃದ್ಧಿಗಾಗಿ ಅವರು ಏನೂ ಶ್ರಮಿಸಿಲ್ಲವೆಂದೂ ಶ್ರೀ ಬಾಗ್ ಸಂಧಿಯು ಸ್ವಪ್ನದ ಹಣ್ಣೆಂದೂ ಈ ಕಾರಣ ರಾಯಲಸೀಮೆ ಜಿಲ್ಲೆಗಳು ಆಂಧ್ರದಲ್ಲಿ ಸೇರದೆ ಹಾಗೆಯೇ ಉಳಿಯುವುದು ಹಿತಕರವೆಂದೂ ವೃತ್ತಪತ್ರಗಳಿಗೆ ಒಂದು ಹೇಳಿಕೆ ಕೊಟ್ಟಿರುವರು.

ಮದ್ರಾಸಿಗೆ ಆಂಧ್ರ ಕರ್ನಾಟಕ ಶಿಷ್ಟಮಂಡಳ

ಬಳ್ಳಾರಿ ಪ್ರಶ್ನೆ

—O—

ಬಳ್ಳಾರಿ ಪುರಸಭಾಧ್ಯಕ್ಷರಾದ ಶ್ರೀ ಮುಂಡ್ಲೂರು ಗಂಗಪ್ಪನವರ ಅಧ್ಯಕ್ಷತೆಯಲ್ಲಿ ಬಳ್ಳಾರಿಯು ಆಂಧ್ರ ಪ್ರಾಂತಕ್ಕೆ ಹೊಂದಿರಬೇಕೆಂಬುದನ್ನು ಮದ್ರಾಸ್ ಸರ್ಕಾರಕ್ಕೆ ತಿಳಿಯಪಡಿಸಲು ಕೆಲ ಆಂಧ್ರ ಸದಸ್ಯರು ಪ್ರಯಾಣ ಬೆಳೆಸಿದರು.

ಹಾಗೆಯೇ ಇಡೀ ಬಳ್ಳಾರಿ ಜಿಲ್ಲೆಯು ಪೂರ್ಣ ಕನ್ನಡ ಪ್ರದೇಶವಾದ ಕಾರಣ ಇದನ್ನು ಪೂರ್ಣಘಟಕವಾಗುಳಿಸಿ ಮದ್ರಾಸ್‌ದಿಂದ ಆಳಿಕೆಯನ್ನು ನಡಿಸಿ ಕರ್ನಾಟಕ ಪ್ರಾಂತ ನಿರ್ಮಾಣ ಕಾಲಕ್ಕೆ ಅದನ್ನು ಕರ್ನಾಟಕದಲ್ಲಿ ಸೇರಿಸಬೇಕೆಂದು ಮದ್ರಾಸ್ ಸರ್ಕಾರಕ್ಕೆ ತಿಳಿಯಪಡಿಸಲು ಕನ್ನಡಿಗರ ಶಿಷ್ಟಮಂಡಳವೂ ಮದ್ರಾಸಿಗೆ ತೆರಳಿತು.

—:—

ಬಳ್ಳಾರಿ ಜಿಲ್ಲೆಯ ಪೂರ್ವ ತಾಲೂಕುಗಳ ನಾಗರಿಕ ರೈತ ಮಹಾಶಯರಲ್ಲಿ ಅರಿಕೆ.

ತುಂಗಭದ್ರಾ ಪ್ರಾಜೆಕ್ಟಿನ ಕೆಳಗಡೆ ಇರುವ, ಹೊಸಪೇಟೆ, ಬಳ್ಳಾರಿ, ಆಲೂರು ಆದೋನಿ ತಾಲೂಕುಗಳಲ್ಲಿ ವೇಲ್ಲ ಜಿಯ ನೀರಾವರಿ "ಕಬ್ಬು, ನೆಲ್ಲು" ಬೆಳೆಯುವ ಪ್ರದೇಶಗಳನ್ನು ಮಾಡಿಕೊಡಲು ಪ್ರಾಜೆಕ್ಟಿನ ಕೆಳ ಪ್ರದೇಶದ ರೈತರು ಮತ್ತು ರೈತಮುಖಂಡರೂ ಅಥವಾ ಪ್ರಾದೇಶಿಕ ಮುಖಂಡರೂ ಪ್ರತಿನಿಧಿಗಳೂ ದಿ ೨-೧-೫೦ ಸೋಮವಾರ ನಾರಾಯಣ ದೇವರಕೆರೆ (ಹೊಸಪೇಟೆಗೆ ೯ ಮೈಲು) ಭಾರತದ ಸುಪ್ರಸಿದ್ಧ ಮುಖಂಡರಾದ ಶ್ರೀ ಡಾ. ರಾಮಮನೋಹರ ಲೋಹಿಯಾರವರ ಅಧ್ಯಕ್ಷತೆಯಲ್ಲಿ ಜರುಗುವ ಕಿಸಾನ್ (ರೈತಪಕ್ಷಕ್ಕೆ) ನಿಮ್ಮ ಹಕ್ಕಿನ ಬೇಡಿಕೆಯನ್ನು ಸೂಚಿಸಲು ಬರಬೇಕೆಂದು ಹಿಂದ ಕಿಸಾನ ಪಂಚಾಯ್ತಿ ಅಧ್ಯಕ್ಷರು ಸೂಚಿಸುತ್ತಾರೆ.

....

ಚನ್ನಾಪುರ (ಹರಪನಹಳ್ಳಿ) ಜಾತ್ರೆಯ ಕಾಲದಲ್ಲಿ

ಜನಜಾಗೃತೆಗಾಗಿ ಶ್ರೀ ಶಿವರುದ್ರಯ್ಯನವರು 13-14 ನೇ ತಾ॥ ಕೆಲ ಸಭೆಗಳನ್ನೇರ್ಪಡಿಸಿದರು. ಶ್ರೀ ರೇವನಗೌಡರು (ಜಿಲ್ಲಾಬೋರ್ಡು ಸದಸ್ಯರು) ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕೊ. ಚನಬಸಪ್ಪನವರು ಕರ್ನಾಟಕ ಏಕೀಕರಣದ ವಿಷಯದಲ್ಲಿ, ಶ್ರೀ ಮಠದ ಬಸಯ್ಯನವರು ಬಸವಾದಿ ಪ್ರಮಥರ ವಚನ ಸಾರಗಳ ವಿಷಯದಲ್ಲಿ, ಶ್ರೀ ಚಂದ್ರಶೇಖರಯ್ಯನವರು, ಹರಿಶ್ಚಂದ್ರ ಕಾವ್ಯದ ಸೊಬಗಿನ ಸಂಪತ್ತಿಯನ್ನು ಕುರಿತು ಭಾಷಣ ಕೊಟ್ಟರು. ಶ್ರೀ ಸಂಗಣ್ಣನವರು ಜನಪದ ಸಾಹಿತ್ಯ ಅದರ ಲಾಲಿತ್ಯ-ಸಹಜತೆ-ನಿಷ್ಕಾಪಟ್ಯಗಳನ್ನು ಕುರಿತು ಮಾತಾಡಿದರು. ಶ್ರೀ ದೇವೇಂದ್ರಪ್ಪನವರು ಸಮಾಜದ ಕುಂದು ಕೊರತೆ ಕುರಿತು ಹಾಸ್ಯಯುಕ್ತ ವಚ ಭಜನೆ ಲಾವಣಿಯ ನಂತರ ಕಾರ್ಯಕಲಾಪಗಳು ಮುಗಿದವು.

—:—

ಹೆಂಗಸರಿಗೆ ಕೆಲಸ

ಒರಿಸ್ಸಾ ಸರಕಾರವು ಕನ್ನ ಯಾವತ್ತು ಉದ್ಯೋಗ ಸ್ಥಾನಗಳಿಗೆ ಹೆಂಗಸರನ್ನು ನೇಮಿಸುವುದಕ್ಕೆ ಅಣಿ ಮಾಡಬೇಕೆಂದು ನಿಶ್ಚಯಿಸಿದೆ

ಕರ್ನಾಟಕ ತರುಣ ಸಂಘ,
ಹರಪನಹಳ್ಳಿ.

ಡಿಶಂಬರ್ 28-29 ನೆಯ ದಿನಾಂಕಗಳಲ್ಲಿ ಕನ್ನಡ ಸಾಹಿತ್ಯೋತ್ಸವವು ಜರುಗಲಿದೆ.

ಉದ್ಘಾಟಕರು: ಶ್ರೀ ಸಾಧು ಲಕ್ಷ್ಮೀನರಸಿಂಹಶರ್ಮಾ

ಮುಖ್ಯ ಅತಿಥಿಗಳು: ಶ್ರೀ ಪಾಂಡುರಂಗರಾವ್,
ಮತ್ತು ಪತ್ನಿ ಶ್ರೀಮತಿ ಶಕುಂತಲಾಬಾಯಿ.

ಸ್ಥಳ: ಬೋರ್ಡು ಹೈಸ್ಕೂಲ್, ಹರಪನಹಳ್ಳಿ.

!! ಎಲ್ಲಾ ಸಾಹಿತಿಗಳಿಗೆ ಪ್ರೇಮದ ಕರೆಯುಂಟು !!

ಬಳ್ಳಾರಿ ಜಿಲ್ಲೆಯ ಐಕ್ಯತೆ ಒಮ್ಮತದ ಅಗತ್ಯ

ಆಂಧ್ರ ಪ್ರಾಂತೀಕರಣದ ಕಾರ್ಯದಲ್ಲಿ ಬಳ್ಳಾರಿ ಜಿಲ್ಲೆಯನ್ನೊಡೆದು ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳು ವಿವಾದಾಸ್ಪದವುಗಳಲ್ಲವೆಂದೂ, ಕೇಳ್ಕರರ ಅವಾರ್ಡಿನ ಪ್ರಕಾರ ಆಂಧ್ರ ಪ್ರಾಂತದಲ್ಲಿ ಸೇರಬೇಕೆಂದೂ, ಆಂಧ್ರ ಮುಖಂಡರು ನಿಶ್ಚಯಿಸಿದ್ದಾರೆ. ಈ ತತ್ವದ ಪ್ರಕಾರಕ್ಕೆ ವಿಭಜನಾ ಸಮಿತಿಯೂ ಚರ್ಯೆಯನ್ನು ಕೈಗೊಳ್ಳುವಂತಿದೆ. ಈ ತಿಂಗಳ 31 ನೆಯ ತಾರೀಖಿಗೆ ವಿಭಜನಾ ಸಮಿತಿಯ ಶ್ರೀ ಗೋಪಾಲರೆಡ್ಡಿ ಮತ್ತು ಭಕ್ತವತ್ಸಲಂ ಈ ಇಬ್ಬರು ಮಂತ್ರಿಗಳು ಬರತಕ್ಕವರಿದ್ದು 'ಕನ್ನಡದ ತಾಲೂಕುಗಳ ಆಡಳಿತವು ಹೇಗೆ ನಡೆಯಬೇಕೆಂಬುದರ ಬಗ್ಗೆ ಜನಾಭಿಪ್ರಾಯವನ್ನು ಪಡೆಯುವರಂತೆ.

ಆದವಾನಿ, ಆಲೂರು, ರಾಯದುರ್ಗ ತಾಲೂಕುಗಳ ಜನತೆಯ ಬಹು ಸಂಖ್ಯಾಕ ಅಭಿಪ್ರಾಯವೂ, ಬಳ್ಳಾರಿಯನ್ನು ಬಿಟ್ಟು ಹೋಗಬಾರದೆಂದೇ ಇದೆ. ಈ ವಿಷಯಕ್ಕೆ ಆಂಧ್ರ ಕರ್ನಾಟಕದ ಭೇದವಿಲ್ಲ. ಆಂಧ್ರರೂ ಮತ್ತು ಕನ್ನಡಿಗರೂ ಕೂಡಿಯೇ ಜಿಲ್ಲಾದ ಇಬ್ಭಾಗವಾಗಬಾರದೆಂಬಭಿಪ್ರಾಯವುಳ್ಳವರಿದ್ದು ಇಡೀ ಜಿಲ್ಲೆಯು ಮದ್ರಾಸ್ ಘಟಕದಲ್ಲಿಯೇ ಉಳಿಯಬೇಕೆಂದು ಸಂಕಲ್ಪಿಸಿರುತ್ತಾರೆ.

ಆದರೆ ರಾಜಕೀಯ ಮತ್ತು ಸ್ಥಾನಿಕ ಪರಿಸ್ಥಿತಿಗಳಿಂದ ಕೆಲ ಆಂಧ್ರರು ಇಡೀ ಬಳ್ಳಾರಿ ಜಿಲ್ಲೆಯು ಕರ್ನಾಟಕಪ್ರಾಂತವಾಗುವವರೆಗೆ ಆಂಧ್ರಪ್ರಾಂತಕ್ಕೆ ಹೊಂದಿಕೊಂಡಿರಬೇಕೆಂದು ವಾದಿಸುತ್ತಾರೆ. ಅಂಥಾ ತೀರ್ಮಾನವುಳ್ಳ ಬಳ್ಳಾರಿ ಪುರಸಭೆಯಲ್ಲಿ ಪಾಸಾಗಿ ಬಳ್ಳಾರಿ ಜಿಲ್ಲಾ ಬೋರ್ಡಿನವರಿಂದ ಕರ್ನಾಟಕ ಪ್ರಾಂತೀಕರಣದ ಬಗ್ಗೆ ಸ್ವೀಕೃತವಾದ ತೀರ್ಮಾನದ ಪ್ರ[illegible]ಸಿದ್ದರು.

ಈಗಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ಬಳ್ಳಾರಿ ಜಿಲ್ಲೆಯ ಐಕ್ಯತೆಯನ್ನುಳಿಸಲು ಆಂಧ್ರ ಕರ್ನಾಟಕರು ಸರಲಿ ಒಮ್ಮತವಾಗಬೇಕಾದುದು ಸರ್ವ ಹಿತಗಳ ದೃಷ್ಟಿಯಿಂದ ಹಿತಕರವಾಗಿದೆ. ಹೀಗೆಯೇ ವೈಮನಸ್ಸವನ್ನು [illegible] ಹೋಗುವುದು ಯಾವ ಸಂಗತಿಗೂ ಒಳ್ಳೆಯದಲ್ಲ. ಈಗಿನ ಸಂದರ್ಭದಲ್ಲಿ ಯಾರು ನಿಜವಾದ ಪ್ರತಿನಿಧಿಗಳೆಂದು ಮದ್ರಾಸ್ ಸರ್ಕಾರಕ್ಕೆ ತಿಳಿಯಬರಲಿಲ್ಲ. ತಪ್ಪುಮಾತುಗಳ ಮೇಲೆ ತಪ್ಪುಮಾತುಗಳು [illegible] ಕರ್ನಾಟಕಕ್ಕೆ ಪರವಾಗಿ ಹೋಗುತ್ತಲಿವೆ.

ಹಿಂದಿನ ಇತಿಹಾಸವನ್ನೋದಿದರೆ ಅಂತಃಕಲಹಗಳಿಂದ ಪರಾಕ್ರಮಣವಾದದ್ದೂ, ದೇಶ ಸಂಪತ್ತಿಯು ಕ್ಷೀಣಿಸಿದ್ದೂ ಚನ್ನಾಗಿ ತಿಳಿಯಬರುತ್ತಿದೆ. ಬಳ್ಳಾರಿ ಜಿಲ್ಲೆಯನ್ನೊಡೆಯುವುದು ಯಾರಿಗೂ ಹಿತಕರವಲ್ಲವೆಂಬುದನ್ನು ಸರ್ವ ಪಕ್ಷ ಸಂಘಗಳು ಸ್ವೀಕರಿಸಿವೆ. ಈ ಕಾರಣ ಬಳ್ಳಾರಿ ಜಿಲ್ಲೆಯ ಐಕ್ಯತೆಯನ್ನು ಕಾಪಾಡಿ ಇದನ್ನು ತಾತ್ಕಾಲಿಕವಾಗಿ ಮದ್ರಾಸ್ ಘಟಕದಲ್ಲಿರಿಸಲು ಸರ್ವರೂ ಪ್ರಯತ್ನಿಸಬೇಕೆಂದು ನಮ್ಮ ಬೇಡಿಕೆ.

ಮಾ॥ ರಾ॥ ಹೊಸಪೇಟೆ ಡಿ॥ ಮುಂ॥ ಕೋರ್ಟಿನಲ್ಲಿ

O. S. 359/49

(1) K. ಮಲ್ಲಮ್ಮ
(2) ಭಾವಿ ಸರ್ವಮಂಗಳಮ್ಮ
........ವಾದಿಗಳು

ಮತ್ತು

(1) ಹಲಗಪ್ಪನವರ ದೊಡ್ಡಹಲಗಪ್ಪ
(2) ,, ಸಣ್ಣ ಹಲಗಪ್ಪ.
(3) ,, ಚಂದ್ರಮೌಳೆಪ್ಪ.
........ಪ್ರತಿವಾದಿಗಳು

ವಾದಿಗಳ ಹೆಸರಲ್ಲಿ ಪ್ರತಿವಾದಿಗಳು 28-9-45 ರಲ್ಲಿ Rs. 1500 ಕ್ಕೆ ಬರೆದು ಕೊಟ್ಟ ಪ್ರಾಮಿಸರಿ ನೋಟಿನ ಬಾಕಿ ವಸೂಲು ಮಾಡಲು ಮೇಲಿನ ದಾವೇ ಮಾಡಿರುತ್ತದೆ. ಪ್ರತಿವಾದಿಗಳು 29-12-49 ತಾರೀಕು 10 ಘಂಟೆಗೆ ಕೋರ್ಟಿನಲ್ಲಿ ಹಾಜರು ಆಗಿ ತಮ್ಮ ತಕರಾರನ್ನು ತಿಳಿಸಬಹುದು. ತಪ್ಪಿದಲ್ಲಿ ದಾವಾ ಬಾಕಿಗೆ ಡಿಕ್ರಿ ಆಗುತ್ತದೆ.

ಹೊಸಪೇಟೆ 23-12-49 | ಸೊಂಡೂರು ಶೇಷಗಿರಿ ಆಚಾರು ವಕೀಲು

....

1950 ನೇ ಜನವರಿ 26 ರಂದು ಹಿಂದುಸ್ಥಾನವು ಸಂಪೂರ್ಣ ಸ್ವತಂತ್ರವಾಗುವ ಸಮಾರಂಭದ ಸ್ಮಾರಕಕ್ಕಾಗಿ ಸರಕಾರವು ಪ್ರತ್ಯೇಕ ಟಪಾಲು ಸ್ಟಾಂಪುಗಳನ್ನು ಹೊರಗೆ ತರಲಿದೆ. ಹಿಂದೀಯರ ಆನಂದ, ಅವರ ಕೃಷಿ ಹಾಗೂ ಗುಡಿ ಕೈಗಾರಿಕೆ ಮೊದಲಾದ ಮುಖ್ಯ ಕಸುಬುಗಳನ್ನು ಚಿತ್ರಿಸಲಾಗುವುದು.

Unique picture !! Wonderful Scenes !!!

Gemini's

STRANGE BROTHERS

in Telugu From 12—1—1950

AT PRABHAT ... ಪ್ರ ಭಾ ತ ದ ಲ್ಲಿ

ಜೆ ಮಿ ನಿ ಯ ವ ರ

ಅಪೂರ್ವ ಸಹೋದರರು

ಅದ್ಭುತ ವಾಕ್ಪಟ | ತೆಲುಗಿನಲ್ಲಿ 12—1—50 ರಿಂದ | ಆಶ್ಚರ್ಯಕರ ದೃಶ್ಯಗಳು

The Rayalaseema Bank Ltd., H. O. Bellary.

ದಿ ರಾಯಲಸೀಮ ಬ್ಯಾಂಕ್ ಲಿಮಿಟೆಡ್ — ಬಳ್ಳಾರಿ. [ಸ್ಥಾಪಿತ 1939]

—[೦]—

ಮದ್ರಾಸ್ ಮತ್ತು ರಾಯಲಸೀಮೆಯ ಮುಖ್ಯ ಸ್ಥಳಗಳಲ್ಲೆಲ್ಲಾ ನಮ್ಮ ಶಾಖೆಗಳಿವೆ. ಕರೆಂಟ್ ಅಕೌಂಟ್ ಯಾ ಚಾಲ್ತಿ ಖಾತೆ 100/- ರಿಂದ ಪ್ರಾರಂಭಿಸಿ ಶೇ. 1½ ರೂ ಬಡ್ಡಿ ಸೇವಿಂಗ್ಸ್ ಬ್ಯಾಂಕ್ 5/- ರಿಂದ ಪ್ರಾರಂಭಿಸಿ ಶೇ. 2½ ಬಡ್ಡಿ ಪಡೆಯಬಹುದು. ಕ್ಯಾಷ್ ಸರ್ಟಿಫಿಕೇಟ್‌ಗಳನ್ನು 8-14-3 ಕೊಂಡು ಮೂರು ವರ್ಷಗಳನಂತರ ಪೂರಾ 10/- ಪಡೆಯಬಹುದು.

ಸ್ಥಾಯಿ ಠೇವಣಿಗಳು (Fixed Deposits):--- 3 ತಿಂಗಳುಗಳಿಂದ 9 ತಿಂಗಳಿಗೆ ಶೇಕಡ 3½% ಒಂದು ವರ್ಷಕ್ಕೆ ಶೇಕಡ 4% ಎರಡು ವರ್ಷಕ್ಕಿಂತ ಹೆಚ್ಚಿಗೆ 4¼% ಈ ಪ್ರಕಾರ ಬಡ್ಡಿ ಕೊಟ್ಟು ಸ್ವೀಕರಿಸುತ್ತೇವೆ

ಹೆಚ್. ಲಿಂಗಾರೆಡ್ಡಿ ಬಿ.ಎ.ಬಿ.ಎಲ್.
ಛೇರ್ಮನ್, ಬೋರ್ಡ್ ಆಫ್ ಡೈರೆಕ್ಟರ್ಸ್.

ಪಿ. ವಿ. ಸುಬ್ಬಾರಾವು ಬಿ.ಎ.,
ಕಾರ್ಯದರ್ಶಿ.

NAVA BHARAT BELLARY. (Reg. No. M. 40)47

26—12—49

ನ ವ ಭಾ ರ ತ ಬ ಳ್ಳಾ ರಿ.

(Nationalist Weekly)

ಚಂದಾದರಗಳು.	Subscription Rates
ವರ್ಷಕ್ಕೆ 5—0—0	One Year 5—0—0
6 ತಿಂಗಳಿಗೆ 3—0—0	Six months 3—0—0
ಆರು ತಿಂಗಳ ಕಡಿಮೆ ಚಂದಾ ಸ್ವೀಕರಿಸುವುದಿಲ್ಲ.	Subscription will not be accepted for less than 6 months

To

Sri..................................

....

....

Printed at Krishna Printing Works, Edited & Published by T. B. Keshava Rao.